
ದಾಸೋಹಸಿರಿ



ದಾಸೋಹ ಸಿರಿ


ದಾಸೋಹ ಸಿರಿ







ಶ್ರೀ ಸಿದ್ಧಗಂಗಾಕ್ಷೇತ್ರಾಧ್ಯಕ್ಷ
ಶ್ರೀ ಮನ್ನಿರಂಜನ ನಿರಾಭಾರಿ ಪ್ರಣವಸ್ವರೂಪಿ
ಡಾ. ಶಿವಕುಮಾರಮಹಾಸ್ವಾಮಿಗಳ ಸನ್ನಿಧಿಯಲ್ಲಿ
ಅವರ ವಜ್ರಮಹೋತ್ಸವ ಸಮಾರಂಭದಂದು
“ದಾಸೋಹ ಸಿರಿ” ಮಹಾ ಸಂಪುಟ ಅರ್ಪಣೆ





ಶ್ರೀಗಳವರ ವಜ್ರಮಹೋತ್ಸವದ ಸವಿನೆನಪಿನ ಬೃಹತ್ ವಿದ್ಯಾರ್ಥಿ ನಿಲಯ



ದಾಸೋಹ ಸಿರಿ

ಪ್ರಧಾನ ಸಂಪಾದಕರು

ಪಂ. ಚನ್ನಪ್ಪ ಎರೆಸೀಮೆ

ಸಂಪಾದಕರು

ಟಿ.ಆರ್. ಮಹಾದೇವಯ್ಯ

ಹೆಚ್.ವಿ. ವೀರಭದ್ರಯ್ಯ

ಬಿ. ವೀರಭದ್ರಯ್ಯ

ಪ್ರಕಾಶಕರು

ಹಳೆಯ ವಿದ್ಯಾರ್ಥಿ ಸಂಘ

ಶ್ರೀ ಸಿದ್ಧಗಂಗಾಕ್ಷೇತ್ರ, ತುಮಕೂರು

೧೯೯೨

DASOHA SIRI A commemoration volume, dedicated to His Holiness Sri Sri Shivakumara Swamiji on his Diamond Jubilee Celebrations, 1997. Chief Editor Sri Channappa Yeresime, published by Old Students Association, Sri Siddaganga Kshetra, Tumkur. 1997 Pages : 582 + XVI: Rs 250/-

ಬೆಲೆ : ರೂ. 250/-

Art : M. J. Khoparde
Srikant Badiger

ವಿ.ಸೂ. ಇಲ್ಲಿನ ಲೇಖನಗಳಲ್ಲಿರುವ ಅಭಿಪ್ರಾಯಗಳಿಗೆ ಲೇಖಕರೇ ಹೊಣೆ

Printed at

M/S GEETANJALI PRINTERS,
No 5 M S Ramaiah Industrial Estate
Gokul Extension, Bangalore - 560 054
Ph 3344037

ತ್ರಿವಿಧ ದಾಸೋಹಿ ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷ

ಶ್ರೀ ಮ. ನಿ. ಪ್ರ. ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ

ವಜ್ರಮಹೋತ್ಸವ ಸಮಿತಿ ಹಾಗೂ ಹಳೆಯ ವಿದ್ಯಾರ್ಥಿ ಸಂಘಗಳು ಅರ್ಪಿಸಲಿರುವ

'' ದಾಸೋಹ ಸಿರಿ '' ಗ್ರಂಥ ಸಂಪಾದಕ ಸಮಿತಿ

ಗೌರವಾಧ್ಯಕ್ಷರು

ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
ಉತ್ತರಾಧಿಕಾರಿಗಳು
ಶ್ರೀ ಸಿದ್ಧಗಂಗಾ ಕ್ಷೇತ್ರ

ಅಧ್ಯಕ್ಷರು

ಡಾ. ಎಮ್.ಎನ್. ಚನ್ನಬಸಪ್ಪ

ಉಪಾಧ್ಯಕ್ಷರು

ಪ್ರೊ. ಜಿ. ಪರಮೇಶ್ವರಪ್ಪ
ಡಾ. ಎಸ್. ಶಿವಪ್ಪ
ಶ್ರೀ ಪಿ.ಎಸ್. ಪುಟ್ಟಶಂಕರಯ್ಯ

ಪ್ರಧಾನ ಸಂಪಾದಕರು

ಪಂಡಿತ ಚನ್ನಪ್ಪ ಎರೇಸೀಮೆ

ಸಂಪಾದಕರು

ಶ್ರೀ ಟಿ.ಆರ್. ಮಹಾದೇವಯ್ಯ
ಶ್ರೀ ಹೆಚ್.ವಿ. ವೀರಭದ್ರಯ್ಯ
ಶ್ರೀ ಬಿ. ವೀರಭದ್ರಯ್ಯ

ಸಲಹಾ ಸಮಿತಿ

ಶ್ರೀ ಜಿ. ನಾರಾಯಣ
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ
ಶ್ರೀ ಗೊ.ರು. ಚನ್ನಬಸಪ್ಪ
ಡಾ. ಎಂ. ಚಿದಾನಂದ ಮೂರ್ತಿ
ಡಾ.ಎಸ್. ವಿದ್ಯಾಶಂಕರ್

ಸದಸ್ಯರು

ವಿದ್ವಾನ್ ಬಿ.ಗಂಗಪ್ಪ
ಶ್ರೀ ಎಸ್. ಸಿದ್ಧಗಂಗಯ್ಯ
ಶ್ರೀ ಜಿ. ನಂಜಪ್ಪ
ಶ್ರೀ ಪಿ.ವಿ. ಹುಚ್ಚವೀರಯ್ಯ
ಶ್ರೀ ಸಿ.ಎಸ್. ಸಿದ್ಧಲಿಂಗಯ್ಯ
ಶ್ರೀ ಹೆಚ್.ಬಿ. ಗಂಗಾಧರಯ್ಯ
ವಿದ್ವಾನ್ ಎಂ. ಮಲ್ಲವೀರಯ್ಯ
ವಿದ್ವಾನ್ ಪಿ.ಎನ್. ಚಂದ್ರಶೇಖರಯ್ಯ
ವಿದ್ವಾನ್ ಎಸ್.ಪಿ.ಶಿವಶಂಕರ
ವಿದ್ವಾನ್ ಕೆ. ಬಸವರಾಜು
ಪ್ರೊ. ಬಿ. ಗಂಗಾಧರಯ್ಯ
ಶ್ರೀ ಕೆ. ವೀರಭದ್ರಯ್ಯ
ಶ್ರೀ ಸಾಸಲು ನಂಜುಂಡಪ್ಪ
ಶ್ರೀ ಕೆ. ಎಸ್. ಶಂಕರಯ್ಯ
ಡಾ. ಪಿ.ಎಸ್. ರೇಣುಕಾರಾಧ್ಯ

ಸಂಚಾಲಕರು

ಶ್ರೀ ಕೆ. ಹೆಚ್. ಶಿವರುದ್ರಯ್ಯ
ಶ್ರೀ ಎಂ. ರೇಣುಕಾರಾಧ್ಯ

ಶ್ರೀ ಉದ್ದಾನ ಶಿವಯೋಗಿಗಳು

ಪ್ರಕಾಶಕರ ನುಡಿ

ಶ್ರೀ ಸಿದ್ಧಗಂಗಾ ಎಂಬ ನೆನಹು ಮನಕ್ಕೆ ಬಂದೊಡನೆಯೆ ಕಣ್ಣಿಗೆ ಕಟ್ಟುವ ಅದರ ದಾಸೋಹತನದ ಅಭೂತಪೂರ್ವ ಅಸಾಧಾರಣ ಚಿತ್ರ ಎಂಥವರನ್ನೂ ಮೂಕವಿಸ್ಮಿತಗೊಳಿಸುತ್ತದೆ. ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಈ ಅವಿಮುಕ್ತ ಕ್ಷೇತ್ರಕ್ಕೆ, ಇಲ್ಲಿನ ಜಾತ್ರೆಗೆ, ಇತರ ಉತ್ಸವಾದಿಗಳಿಗೆ ಬಂದವರಿಗೆಲ್ಲ ಉಚಿತ ಪ್ರಸಾದಾದಿಗಳಿಂದ ಉಪಚರಿಸುವ ಮತ್ತು ಇಲ್ಲಿರುವ ನಾಲ್ಕೈದು ಸಾವಿರ ಸಮಸ್ತ ಕೋಮಿನ ಬಡವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಅಶನ, ವಸತಿಗಳನ್ನು ಉಚಿತವಾಗಿ ಕೊಟ್ಟು ಪೋಷಿಸುವ ಈಗಿನ ಕ್ಷೇತ್ರಾಧ್ಯಕ್ಷರೂ, ಅನಿಮಿತ್ತ ಬಂಧುಗಳೂ ಆಗಿರುವ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ನೂತನ ರಾಷ್ಟ್ರೀಯ ನಿರ್ಮಾಣ ಕಾರ್ಯದಲ್ಲಿ ಆದರ್ಶಪ್ರಾಯರೆನಿಸಿದ್ದಾರೆ, ಜಗತ್ಪ್ರಸಿದ್ಧ ಸಂನ್ಯಾಸಿಗಳೆನಿಸಿದ್ದಾರೆ, ತ್ರಿಕಾಲ ಲಿಂಗನಿಷ್ಠಾಗರಿಷ್ಠರೆನಿಸಿದ್ದಾರೆ, ಶಿವಯೋಗ ದುರಂಧರರೆನಿಸಿದ್ದಾರೆ, ತ್ರಿವಿಧ ದಾಸೋಹಿ ಎನಿಸಿದ್ದಾರೆ.

ದಿನಾಂಕ ೩.೩.೧೯೩೦ ರಂದು ಈ ಮಹಾಕ್ಷೇತ್ರದ ಉತ್ತರಾಧಿಕಾರಿಗಳಾಗಿ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ತಮ್ಮ ಗುರುಗಳಾದ ಶ್ರೀ ಉದ್ದಾನ ಶಿವಯೋಗಿಗಳ ಆಶೀರ್ವಾದಕವಚ ತೊಟ್ಟು, ಕಾರ್ಯಕ್ಷೇತ್ರಕ್ಕೆ ಧುಮುಕಿ ಸಾಧಿಸಿದ ಸಾಧನೆ ಊಹಾತೀತ. ಇವರು ವಿದ್ಯಾರ್ಥಿಗಳನ್ನು ಸಾಕಿ ಸಲಹಿದುದು ಅನೇಕ ಮುಖಗಳಲ್ಲಿ. ತಾಯಿಯಂತೆ ಹೊತ್ತು ಹೊತ್ತಿಗೆ ಅನ್ನ ನೀರು ನೆಳಲು ಇತ್ತಿದ್ದಾರೆ, ಗುರುವಾಗಿ ಪಾಠಪ್ರವಚನ ಮಾಡಿದ್ದಾರೆ. ಮಾನವನು ಉದ್ಧಾರವಾಗುವುದಕ್ಕೆ ಇದಕ್ಕಿಂತ ಬೇರೆ ಇನ್ನೇನು ಬೇಕು ? ಈ ಕಾರುಣ್ಯದ ಫಲವಾಗಿ ಅವರು ವಿದ್ಯಾರ್ಥಿಗಳ ಹೃದಯಕಮಲ ಮಧ್ಯದ ಆರಾಧ್ಯಮೂರ್ತಿಗಳೆನಿಸಿದ್ದಾರೆ. ತಂದೆ ತಾಯಿ, ಬಂಧುಬಳಗ ಎಲ್ಲಾ ಆಗಿದ್ದಾರೆ. ಇಲ್ಲಿ ಓದಿ ಹೋದ ಹಳೆಯ ವಿದ್ಯಾರ್ಥಿಗಳು ತಮ್ಮ ಒಂದು ಸಂಘ ಕಟ್ಟಿ ಅದಕ್ಕೆ 'ಹಳೆಯ ವಿದ್ಯಾರ್ಥಿ ಸಂಘ' ವೆಂದು ಹೆಸರಿಸಿ, ತನ್ಮೂಲಕ ಮಾತೃಸಂಸ್ಥೆಗೆ ಕೈಲಾದ ಸೇವೆ ಮಾಡುತ್ತ ಬಂದಿದ್ದಾರೆ. ಪೂಜ್ಯರ ಸುವರ್ಣಮಹೋತ್ಸವದ ಸಂದರ್ಭದಲ್ಲಿ (೧೯೮೦) 'ಸಿದ್ಧಗಂಗಾಶ್ರೀ' ಎಂಬ ಭವ್ಯ ಸಂಪುಟವನ್ನು ಪೂಜ್ಯಪಾದರಿಗೆ ಅರ್ಪಿಸಿದ್ದನ್ನು ಈ ಸಂದರ್ಭದಲ್ಲಿ ನೆನೆಯುತ್ತೇವೆ. ಶ್ರೀಗಳವರ ಸುಮಾರು ೬೭ ವರ್ಷಗಳ ನಿರಂತರ ಸೇವೆಯ ಲಾಭ ಪಡೆದ ಅಸಂಖ್ಯ ಭಕ್ತವರ್ಗ. ಅಭಿಮಾನಿಗಳ ಬಳಗ ಮತ್ತು ಹಳೆಯ ವಿದ್ಯಾರ್ಥಿ ಸಮೂಹ ೧೯೯೭ರ ಮಾರ್ಚ್‌ನಲ್ಲಿ ರಾಷ್ಟ್ರೀಯ ಮಟ್ಟದ ವಜ್ರ ಮಹೋತ್ಸವವನ್ನು ಆಚರಿಸಿ ತಮ್ಮನ್ನೇ ತಾವು ಗೌರವಿಸಿಕೊಳ್ಳುವ ಸುವರ್ಣಾವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿ ರಾಷ್ಟ್ರಮಟ್ಟದ ವಜ್ರಮಹೋತ್ಸವ ಸಮಿತಿ ಅತ್ಯಂತ ಶ್ರದ್ಧೆಯಿಂದ ಕಾರ್ಯಮಾಡಿ ಶ್ರೀಗಳವರಿಗೆ ಅತಿಪ್ರಿಯವೆನಿಸಿರುವ ನಿತ್ಯದಾಸೋಹ ಗೃಹ, ವಿದ್ಯಾರ್ಥಿನಿಲಯಗಳನ್ನು ಸುಮಾರು ಆರು ಕೋಟಿ ರೂಪಾಯಿಗಳ ಖರ್ಚಿನಿಂದ ನಿರ್ಮಿಸಿದ್ದಾರೆ. ಶ್ರೀಮಠದ ಇತಿಹಾಸದಲ್ಲಿ ಸ್ಥಿರವಾಗಿ ನಿಲ್ಲಿಸುವಂತಹ ಈ ಎರಡೂ ಭವ್ಯಭವನಗಳನ್ನು ಅರ್ಪಿಸುವುದರ ಮೂಲಕ ಕೃತಾರ್ಥರಾಗುವವರಾಗಿದ್ದಾರೆ. ವಜ್ರಮಹೋತ್ಸವ ಸಮಿತಿಯ ಸೂಚನೆಯ ಮೇರೆಗೆ ಹಳೆಯ ವಿದ್ಯಾರ್ಥಿ ಸಂಘ ಒಂದು ಸಂಪಾದಕ ಸಮಿತಿಯನ್ನು ರಚಿಸಿ, ನೆನಪಿನ ಮಹಾವಜ್ರಸಂಪುಟವನ್ನು ಹೊರತಂದಿದೆ. ಈ ಮಹಾಸಂಪುಟಕ್ಕೆ 'ದಾಸೋಹ ಸಿರಿ' ಎಂಬ ಹೆಸರಿಡಲಾಗಿದೆ. ಇದನ್ನು ಪೂಜ್ಯರಿಗೆ ವಜ್ರಮಹೋತ್ಸವ ಶುಭಗಳಿಗೆಯಲ್ಲಿ ಕೃತಜ್ಞತಾಭಾವದಿಂದ ಅರ್ಪಿಸುವ ಸಂಕಲ್ಪ ಮಾಡಲಾಗಿದೆ.

ವಜ್ರಮಹೋತ್ಸವ ಸಮಿತಿ ಮತ್ತು ಹಳೆಯ ವಿದ್ಯಾರ್ಥಿ ಸಂಘ ಇವುಗಳ ಸಂಯುಕ್ತ ಪ್ರಯತ್ನದ ಫಲವಾಗಿ ಹೊರಬಂದಿರುವ ಈ ಗ್ರಂಥ ನಿರ್ಮಾಣಕ್ಕೆ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಉತ್ತರಾಧಿಕಾರಿಗಳಾದ ಶ್ರೀ ಸಿ.ಪ್ರ. ಸಿದ್ಧಲಿಂಗ ಮಹಾಸ್ವಾಮಿಗಳವರ ನೇತೃತ್ವದಲ್ಲಿ ರಚಿತವಾದ ಸಂಪಾದಕ ಸಮಿತಿಯಲ್ಲಿ ಪ್ರಧಾನ ಸಂಪಾದಕರಾಗಿ ಪಂಡಿತ ಚನ್ನಪ್ಪ ಎರೆಸೀಮೆ ಅವರು ಇರಬೇಕೆಂದೂ, ಸಂಪಾದಕರಾಗಿ ಶ್ರೀ ಟಿ.ಆರ್. ಮಹಾದೇವಯ್ಯನವರು, ಶ್ರೀ ಹೆಚ್.ವಿ. ವೀರಭದ್ರಯ್ಯನವರು ಮತ್ತು ಶ್ರೀ ಬಿ. ವೀರಭದ್ರಯ್ಯನವರು ಇರಬೇಕೆಂದು ಗೊತ್ತಾಯಿತು. ಸಂಪಾದಕ ಸಮಿತಿ ಶ್ರಮವಹಿಸಿ 'ದಾಸೋಹ ಸಿರಿ' ಎಂಬ ಅತ್ಯುತ್ತಮ ಗ್ರಂಥ ನಿರ್ಮಿಸಿದ್ದಾರೆ. ಉತ್ತಮ ವಿಷಯಗಳು, ಒಳ್ಳೆಯ ಮುದ್ರಣ ವಿನ್ಯಾಸ, ಸೂಕ್ತ ಚಿತ್ರಗಳ ಅಳವಡಿಕೆಯಿಂದ ದಿವ್ಯ - ಭವ್ಯವೆಂಬಂತೆ ಹೊರಬಂದಿದೆ. ಸಂಪಾದಕ ಸಮಿತಿಯ ಸದಸ್ಯರೆಲ್ಲರಿಗೂ ಈ ಕಾರಣವಾಗಿ ಧನ್ಯವಾದಗಳು. ಸಂಚಾಲಕರಾಗಿ ಶ್ರೀ ಕೆ.ಹೆಚ್. ಶಿವರುದ್ರಯ್ಯ, ಶ್ರೀ ಎಂ. ರೇಣುಕಾರಾಧ್ಯ ಅವರ ಸೇವೆಯೂ ಸ್ತುತ್ಯಾರ್ಹ.

ಕೊನೆಯದಾಗಿ ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಗೀತಾಂಜಲಿ ಪ್ರೆಸ್ ಮಾಲೀಕರಾದ ಶ್ರೀ ಜಿ. ನಾಗಸುಂದರ ಅವರು ಮತ್ತು ನಸುಕು ಬಡ ವರ್ಗದವರಿಗೆ ಧನ್ಯವಾದಗಳು. ಈ ಮಹಾಕಾರ್ಯದಲ್ಲಿ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಸಹಾಯ ಮಾಡಿದ ಎಲ್ಲ ಮಹನೀಯರಿಗೆ ಕೃತಜ್ಞತೆಗಳು. ಪರಮಪೂಜ್ಯ ಶ್ರೀ ಶ್ರೀ ಸ್ವಾಮಿಗಳವರಿಗೆ ಅರ್ಪಿಸಲು ಭಯ ಭಕ್ತಿಯಿಂದ ರಚನೆ ಮಾಡಿದ ಈ ಗ್ರಂಥ ಸರ್ವಜನರ ಮನೋಬುದ್ಧಿಗಳನ್ನು ಬೆಳಗುವಂತಾಗಲೆಂದು ಹಾರೈಸುತ್ತೇನೆ.

ಡಾ. ಎಂ.ಎನ್. ಚನ್ನಬಸಪ್ಪ
ಪ್ರಧಾನ ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ಶ್ರೀ ಸಿದ್ಧಗಂಗಾ ಕ್ಷೇತ್ರ

೨೦ನೇ ಮಾರ್ಚ್ ೧೯೯೭

ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ

ವಜ್ರಮಹೋತ್ಸವ ಸಮಿತಿಯ ವರದಿ

ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಶ್ರೀ ಶ್ರೀ ಉದ್ದಾನ ಶಿವಯೋಗಿಗಳವರ ಶಿಷ್ಯರಾಗಿ, ಶ್ರೀ ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರತ್ವದ ಹೊಣೆಗಾರಿಕೆಯನ್ನು ದಿನಾಂಕ ೩.೩.೧೯೩೦ ರಂದು ವಹಿಸಿಕೊಂಡರು. ಅಂದಿನಿಂದ 'ಸಮಾಜ ಸೇವೆಯೇ ಶಿವಪೂಜೆ', 'ಕಾಯಕವೇ ಕೈಲಾಸ' ಎಂಬ ತತ್ವನಿಷ್ಠೆಯನ್ನು ತಮ್ಮ ನಡೆನುಡಿಗಳಿಂದ ಸಾಧಿಸಿ ಅಖಂಡ ಅರುವತ್ತೇಳು ಸಂವತ್ಸರಗಳುದ್ದಕ್ಕೂ ವಿವಿಧಮುಖ ಸೇವೆ ಸಲ್ಲಿಸಿ, ಈಗಿನ ೮೯ ವರ್ಷಗಳ ವೃದ್ಧಾಪ್ಯದಲ್ಲಿಯೂ, ತರುಣರನ್ನು ನಾಚಿಸುವಂತಹ ಚಟುವಟಿಕೆಯಿಂದ ಸಕಲ ಜೀವಾತ್ಮರಿಗೆ, ಮುಖ್ಯವಾಗಿ ಬಡವರಿಗೆ, ದಲಿತರಿಗೆ, ದರಿದ್ರರಿಗೆ ಲೇಸನ್ನುಂಟುಮಾಡುತ್ತ ಅಭೂತಪೂರ್ವವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇಂತಹ ವಿಭೂತಿಪುರುಷರ ಸೇವಾ ಘನತೆಯನ್ನು ಗುರುತಿಸಿದ ಭಕ್ತ ಸಮುದಾಯ ಮತ್ತು ಅಭಿಮಾನಿಗಳ ಬಳಗ ಹಾಗೂ ಹಳೆಯ ವಿದ್ಯಾರ್ಥಿ ಸಂಘದವರು ವಜ್ರಮಹೋತ್ಸವ ಮಹಾಸಮಾರಂಭವನ್ನು ಭಕ್ತಿಯಿಂದ ಆಚರಿಸುವ ಮೂಲಕ ತಮ್ಮನ್ನೇ ತಾವು ಗೌರವಿಸಿಕೊಳ್ಳಬೇಕೆಂದೂ, ಮಹೋತ್ಸವ ಸಮಯದಲ್ಲಿ ಪೂಜ್ಯರಿಗೆ ಅತ್ಯಂತ ಪ್ರಿಯವೆನಿಸಿದ ಜ್ಞಾನ ದಾಸೋಹ, ಅನ್ನ ದಾಸೋಹಗಳಂತಹ ಕೆಲವು ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸನ್ನಿಧಿಯವರಿಗೆ ಅರ್ಪಿಸುವ ಸತ್‌ಸಂಕಲ್ಪಗಳನ್ನು ಮಾಡಿದರು.

ಮೇಲ್ಕಂಡ ವಜ್ರಮಹೋತ್ಸವ ಸಮಿತಿಯು ಭಕ್ತ ಸಮೂಹದ, ಅಭಿಮಾನಿಗಳ, ಶ್ರೀ ಮಠದಿಂದ ಉಪಕೃತರಾದ ಯಾವತ್ತೂ ಸಮಾಜಗಳ ಜನಮನೋಭಿಲಾಷೆಗಳನ್ನು ಶ್ರೀ ಶ್ರೀಗಳವರ ಅವಗಾಹನೆಗೆ ತಂದಾಗ, ಅವರು ಈಗಾಗಲೆ ರಜತ ಮಹೋತ್ಸವ, ಸುವರ್ಣಮಹೋತ್ಸವಗಳು ಜರುಗಿವೆ; ಈಗ ವಜ್ರಮಹೋತ್ಸವದ ಅವಶ್ಯಕತೆಯಿಲ್ಲ ಎಂದು ತಿಳಿಸಿದರು. ಆಗ ಸಮಿತಿಯವರು ''ಭಕ್ತ ಸಮೂಹ ಪೂಜ್ಯ ಮಹಾಸ್ವಾಮಿಗಳವರ ಲೋಕೋತ್ತರ ಸೇವಾಘನತೆಯನ್ನು ನೆನೆದು ವಜ್ರಮಹೋತ್ಸವವನ್ನು ಆಚರಿಸಿ, ಆ ಸಂದರ್ಭದಲ್ಲಿ ಮಠದಲ್ಲಿರುವ ಬೃಹತ್ ವಿದ್ಯಾರ್ಥಿ ಸಮೂಹಕ್ಕೆ ಮತ್ತು ಕ್ಷೇತ್ರಕ್ಕೆ ಬರುವ ಭಕ್ತವೃಂದಕ್ಕೆ ಉಪಯೋಗವಾಗುವಂತಹ ಕಾರ್ಯಗಳನ್ನು ಕೈಗೆತ್ತಿಕೊಂಡು ಮಾಡಿ ಮುಗಿಸಿ ಸನ್ನಿಧಿಯಲ್ಲಿ ಅರ್ಪಣೆ ಮಾಡುವ ಘನೋದ್ದೇಶವಿಟ್ಟುಕೊಂಡಿದ್ದಾರೆ. ಅವರ ಆ ಕಾಣಿಕೆಗಳೆಂದರೆ ಎರಡುನೂರು ಕೊಠಡಿಗಳುಳ್ಳ ಒಂದು ಬೃಹತ್ ವಿದ್ಯಾರ್ಥಿ ನಿಲಯ ಹಾಗೂ ಏಕಕಾಲದಲ್ಲಿ ಸುಮಾರು ೩೦೦೦ ಜನ ಕುಳಿತು ಊಟ ಮಾಡುವಂತಹ ಸರ್ವಸೌಲಭ್ಯಗಳುಳ್ಳ ಒಂದು ಪ್ರಸಾದ ನಿಲಯ ಮತ್ತು ಇನ್ನಿತರ ನೂತನ ನೀರು ಸರಬರಾಜು ಹಾಗೂ ಒಳಚರಂಡಿ ಸೌಲಭ್ಯಗಳೇ ಮೊದಲಾದ ಕಾರ್ಯಕ್ರಮಗಳನ್ನು ಕೈಕೊಳ್ಳುವ ಉದ್ದೇಶವಿಟ್ಟುಕೊಂಡಿದ್ದಾರೆ ಎಂದು ಕಳಕಳಿಯಿಂದ ಪ್ರಾರ್ಥಿಸಿ, ವಜ್ರಮಹೋತ್ಸವಾಚರಣೆಗೆ ಒಪ್ಪಿಗೆ ಪಡೆಯಲಾಯಿತು. ಅಲ್ಲದೆ ಅದರ ಸೋಲ್ ಟ್ರಸ್ಟಿಗಳಾಗಿ ತಾವೇ ಇರಬೇಕೆಂದು ನಾವು ಮಾಡಿದ ತೀರ್ಮಾನಗಳನ್ನು ಹೇಳಿ ಅವರ ಒಪ್ಪಿಗೆಯನ್ನೂ ಪಡೆಯಲಾಯಿತು.

ಈ ಉದ್ದೇಶದಿಂದ ''ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವಜ್ರಮಹೋತ್ಸವ ಪ್ರತಿಷ್ಠಾನ' ಎಂಬ ಸಂಸ್ಥೆಯನ್ನು ರಚಿಸಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಕರಕಂಜಸಂಜಾತರೇ ಆಗಿರುವ ಶ್ರೀ ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳನ್ನು ಗೌರವಾಧ್ಯಕ್ಷರನ್ನಾಗಿಯೂ, ಪದ್ಮಭೂಷಣ ಡಾ. ಎಂ.ಸಿ. ಮೋದಿ ಅವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ.ಎಸ್. ಮುದ್ದಪ್ಪ, ಐ.ಎ.ಎಸ್. (ನಿ) ಅವರನ್ನು ಕಾರ್ಯಾಧ್ಯಕ್ಷರನ್ನಾಗಿಯೂ, ಶ್ರೀ ಶಿ.ಸಿ. ಹಸಬಿ, ಐ.ಪಿ.ಎಸ್. (ನಿ) ಅವರನ್ನು ಕಾರ್ಯದರ್ಶಿಗಳನ್ನಾಗಿಯೂ ಹಾಗೂ ಶ್ರೀ ಟಿ.ಕೆ. ನಂಜುಂಡಪ್ಪ, ಎಂ.ಎ., ಬಿ.ಎಲ್. ಅವರನ್ನು ಖಜಾಂಚಿಯನ್ನಾಗಿಯೂ ನಿಯಮಿಸಿ ಕಾರ್ಯಪ್ರವೃತ್ತರಾದರು.

ಸದರಿ ಧ್ಯೇಯೋದ್ದೇಶ ಮತ್ತು ಕಾರ್ಯಕ್ರಮಕ್ಕನುಗುಣವಾಗಿ ಶ್ರೀ ಕ್ಷೇತ್ರದಲ್ಲಿ ದಿನಾಂಕ ೩.೬.೧೯೯೧ ರಂದು ನೆರವೇರಿದ

ಮಹಾಸಭೆಯಲ್ಲಿ " ಶ್ರೀ ಸಿದ್ಧಗಂಗಾಮಠ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ ವಜ್ರಮಹೋತ್ಸವ ಪ್ರತಿಷ್ಠಾನ" ಎಂಬ ಟ್ರಸ್ಟನ್ನು ರಿಜಿಸ್ಟರ್ ಮಾಡಿಸಲಾಯಿತು. ಈ ಗುರುತರವಾದ ಕಾರ್ಯವಲ್ಲಿ ಉಪಯುಕ್ತ ಸಲಹೆ ಸೂಚನೆಗಳನ್ನು ಕೊಟ್ಟು ಈ ಕಾರ್ಯ ಯಶಸ್ವಿಯಾಗಿ ನೆರವೇರುವಂತೆ ಮಾಡಿದವರಲ್ಲಿ ಶ್ರೀಮಠದ ಹಳೆಯ ವಿದ್ಯಾರ್ಥಿಗಳ ಸೇವೆ ಅತಿ ಮಹತ್ವದ್ದಾಯಿತು. ಅವರಲ್ಲೂ ಶ್ರೀಮಠದ ಹಳೆಯ ವಿದ್ಯಾರ್ಥಿಗಳೇ ಆಗಿದ್ದ ಶ್ರೀಮಾನ್ ಎಲ್. ರೇವಣಸಿದ್ದಯ್ಯ, ಐ.ಪಿ.ಎಸ್. ಅವರ ಶ್ರದ್ಧೆ- ನಿಷ್ಠೆಗಳಿಂದ ಕೂಡಿದ ಭಕ್ತಿಭಾವಗಳು ವರ್ಣನೆಗೆ ನಿಲುಕದಂಥವಾಗಿದ್ದವು. ಬಾಲ್ಯದಲ್ಲಿ ತಮ್ಮನ್ನೆಲ್ಲ ತಿದ್ದಿ ತೀಡಿ ವಾತ್ಸಲ್ಯ ತೋರಿ ಸಲಹಿದ ಶ್ರೀಗುರುಗಳ ಬಗೆಗೆ ಮಾತನಾಡುವಾಗ ಕೇಳುವವರ ಕಣ್ಣುಗಳು ಹನಿಗೂಡುವಂತೆ ಮಾಡಿದರು, ಗದ್ಗದಿತರಾದರು. ಆ ಸನ್ನಿವೇಶ ಮಾತಿಗೆ ನಿಲುಕದ್ದಾಗಿತ್ತೆಂದು ಹೇಳಿದರೆ ಸಾಕು.

ವಜ್ರಮಹೋತ್ಸವದ ಸಂಬಂಧವಾಗಿ ಪೂರ್ವಭಾವಿಯಾಗಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶ್ರೀಮಠದ ಭಕ್ತರ, ಶ್ರೇಯೋಭಿಲಾಷಿಗಳ, ಅಭಿಮಾನಿಗಳ ಮತ್ತು ಹಳೆಯ ವಿದ್ಯಾರ್ಥಿಗಳ ಒಂದು ಬೃಹತ್ ಸಭೆಯನ್ನು ದಿನಾಂಕ ೯.೬.೧೯೯೧ ಬೆಳಿಗ್ಗೆ ಆಗಿನ ಕೃಷಿ ಮತ್ತು ತೋಟಗಾರಿಕೆ ಸಚಿವರಾದ ಶ್ರೀ ಜಿ. ಪುಟ್ಟಸ್ವಾಮಿಗೌಡರ ಅಧ್ಯಕ್ಷತೆಯಲ್ಲಿ ನಡೆಯುವಂತೆ ಸಂಘಟಿಸಲಾಯಿತು. ಆ ದಿನ ಸೇರಿದ ಬಹುದೊಡ್ಡ ಸಭೆಯಲ್ಲಿ ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಂದು ನೂರಕ್ಕೂ ಹೆಚ್ಚು ಸಂಖ್ಯೆಯ ಕೊಠಡಿಗಳ ನಿರ್ಮಾಣಕ್ಕೆ ಬೇಕಾಗುವ ಧನವನ್ನರ್ಪಿಸುವ ಆಶ್ವಾಸನೆ ಸಭೆಯಿಂದ ಬಂದಿತು. ಇದನ್ನು ಕಂಡು ವಜ್ರಮಹೋತ್ಸವ ಸಮಿತಿಯ ಪದಾಧಿಕಾರಿಗಳಾದ ನಾವು ಉತ್ಸಾಹಾಧಿಕ್ಯದಿಂದ ವಜ್ರಮಹೋತ್ಸವದ ಧ್ಯೇಯೋದ್ದೇಶಗಳನ್ನು ಈಡೇರಿಸುವ ವಿಷಯವಲ್ಲಿ ಯಶಸ್ಸುಂಟಾಗುತ್ತದೆಂಬ ಭರವಸೆಯಿಂದ ಬೀಗಿದೆವು.

ಈ ಸಭೆಗೆ ದಾವಣಗೆರೆಯಿಂದ ಬಂದಿದ್ದ ಶ್ರೀ ಶಾಮನೂರು ಶಿವಶಂಕರಪ್ಪನವರು ತಾವು ವಿದ್ಯಾರ್ಥಿನಿಲಯದ ಆರು ಕೊಠಡಿಗಳ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುವುದಷ್ಟೇ ಅಲ್ಲ, ತಮ್ಮ ಅನೇಕ ಮಿತ್ರರುಗಳು ಕೂಡಿ ಒಟ್ಟು ಇಪ್ಪತ್ತೈದು ಕೊಠಡಿಗಳ ವೆಚ್ಚವನ್ನು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದು ನಮ್ಮನ್ನು ಪುಳಕಿತಗೊಳಿಸಿಬಿಟ್ಟಿತು. ಮಾತಿನಂತೆ ಅವರು ಕೆಲವೇ ದಿನಗಳಲ್ಲಿ ತಮ್ಮ ವಂತಿಕೆಯನ್ನು ಸಂದಾಯಗೊಳಿಸಿ ನಮ್ಮಲ್ಲಿ ನೂತನೋತ್ಸಾಹವನ್ನು ತಂದುಕೊಟ್ಟರೆಂದು ಹೇಳಲಡ್ಡಿಯಿಲ್ಲ. ಅವರ ಸೇವೆಯನ್ನು ನಾವು ಎಷ್ಟು ಶ್ಲಾಘಿಸಿದರೂ ಕಡಿಮೆಯೇ.

ಇದೇ ರೀತಿಯಲ್ಲಿ ಹಲವಾರು ಸಭೆ ಸಮಾರಂಭಗಳನ್ನು ವಜ್ರಮಹೋತ್ಸವ ಸಮಿತಿಯು ಬೆಂಗಳೂರು - ತುಮಕೂರು ಇತ್ಯಾದಿ ಕಡೆಗಳಲ್ಲಿ ಮಾಡಿ, ಭಕ್ತವರ್ಗಗಳಿಂದ ಧನಸಹಾಯ ಕೋರಲಾಯಿತು ಹಾಗೂ 'ಹಳೆಯ ವಿದ್ಯಾರ್ಥಿ ಸಂಘ'ವು ಧನ ಸಂಗ್ರಹವಲ್ಲಿ ವಿಶೇಷ ಆಸಕ್ತಿವಹಿಸಿ ಕಾರ್ಯಪ್ರವೃತ್ತವಾಯಿತು. ಇವಲ್ಲದೆ ವಜ್ರಮಹೋತ್ಸವದ ಕಾರ್ಯಕ್ರಮಗಳೆಲ್ಲ ತೀವ್ರಗತಿಯಲ್ಲಿ, ವ್ಯವಸ್ಥಿತ ರೀತಿಯಲ್ಲಿ ನಡೆಯುವ ಉದ್ದೇಶದಿಂದ ಹೀಗೆ ಜಿಲ್ಲಾವಾರು ಅಧ್ಯಕ್ಷರನ್ನು ನಿಯಮಿಸಲಾಯಿತು : ೧. ತುಮಕೂರು ಗ್ರಾಮಾಂತರ ಜಿಲ್ಲೆ - ಶ್ರೀ ಸಾಗರನಹಳ್ಳಿ ರೇವಣ್ಣನವರು, ಮಾಜಿ ಮಂತ್ರಿ, ೨. ತುಮಕೂರು ನಗರ - ಶ್ರೀ ಎನ್.ಆರ್. ಜಗದೀಶ್‌ರವರು, ಕೈಗಾರಿಕೋದ್ಯಮಿಗಳು, ೩. ಬೆಂಗಳೂರು - ಶ್ರೀ ಡಿ.ಎಂ. ಚಂದ್ರಶೇಖರ್‌ರವರು, ನಿವೃತ್ತ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು, ಬೆಂಗಳೂರು, ೪. ಚಿಕ್ಕಮಗಳೂರು - ಶ್ರೀ ಎ.ಎಂ. ಬಸವೇಗೌಡರು, ಕಾಫಿ ಪ್ಲಾಂಟರ್, ೫. ಹಾಸನ - ಶ್ರೀ ಬಿ. ಶಿವಕುಮಾರ್‌ರವರು, ಕಾಫಿ ಪ್ಲಾಂಟರ್, ೬. ಶಿವಮೊಗ್ಗ - ಡಾ. ಬಿ. ಶಿವಪ್ಪನವರು, ಖ್ಯಾತ ವೈದ್ಯರು, ೭. ಕೋಲಾರ - ಶ್ರೀ ಎಸ್.ಆರ್. ಪ್ರಭಾಕರ್‌ರವರು, ನಿವೃತ್ತ ಬಿ.ಇ.ಎಮ್.ಎಲ್. ಸೀನಿಯರ್ ಜನರಲ್ ಮ್ಯಾನೇಜರ್.

ವಜ್ರಮಹೋತ್ಸವ ಸಮಿತಿಯವರು ತಾವು ಕೈಕೊಂಡ ಕಾರ್ಯನಿರ್ವಹಣೆಗಾಗಿ ಶ್ರೀ ಕೆ.ಎಚ್. ಕುಲಕರ್ಣಿ, ಆರ್ಕಿಟೆಕ್ಟ್ ಅವರನ್ನು ಮತ್ತು ಶ್ರೀ ಜಿ.ಎಚ್. ಬಸವರಾಜ, ಸ್ಟ್ರಕ್ಚರಲ್ ಇಂಜಿನಿಯರ್ ಅವರುಗಳನ್ನು ನೇಮಿಸಿಕೊಂಡು ಅವರಿಂದ ಮೇಲೆ ಕಾಣಿಸಿದ ಎರಡೂ ಮಹಾಕಟ್ಟಡಗಳ ನೀಲನಕ್ಷೆಯನ್ನು ತಯಾರಿಸಲಾಯಿತು. ಕುಲಕರ್ಣಿ ಆರ್ಕಿಟೆಕ್ಟ್ ಮತ್ತು ಸ್ಟ್ರಕ್ಚರಲ್ ಇಂಜಿನಿಯರ್‌ರಾದ ಬಸವರಾಜರವರು ತಮ್ಮ ಕಾರ್ಯವನ್ನು ಅತ್ಯಂತ ಶ್ಲಾಘ್ಯ ರೀತಿಯ ಕ್ರಿಯೆಯಿಂದ ಜನಮನವನ್ನು ಗೆದಿದ್ದಾರೆ. ಇವರಲ್ಲದೆ ತಾಂತ್ರಿಕ ಸಲಹೆಗಾಗಿ ಶ್ರೀ ಎನ್.ಎಂ ನಾಗರಾಜಯ್ಯ, ನಿವೃತ್ತ ಸೂಪರಿಂಟೆಂಡ್ ಇಂಜಿನಿಯರ್,

ಕರ್ನಾಟಕ ಲೋಕೋಪಯೋಗಿ ಇಲಾಖೆ ಅವರನ್ನು, ಶ್ರೀ ಕೆ.ಪಿ. ಸಕ್ರಪ್ಪ, ನಿವೃತ್ತ ಡೆಪ್ಯೂಟಿ ಚೀಫ್ ಇಂಜಿನಿಯರ್, ಕೆ.ಇ.ಬಿ. ಅವರನ್ನೂ (ಆನರರಿಯಾಗಿ) ಕಾರ್ಯನಿರ್ವಹಿಸಲು ವಿನಂತಿಸಿಕೊಂಡು ಒಪ್ಪಿಗೆ ಪಡೆಯಲಾಯಿತು. ಇವರಿಬ್ಬರ ಸೇವೆಯೂ ಅತ್ಯಂತ ಶ್ಲಾಘನೀಯ. ಇದಲ್ಲದೆ ಈ ಕೆಳಗೆ ನಮೂದಿಸಿದ ಮಹನೀಯರನ್ನೊಳಗೊಂಡ ಒಂದು ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಿ, ಅವರ ಸಲಹೆಯಂತೆ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು.

ತಾಂತ್ರಿಕ ಸಲಹಾ ಸಮಿತಿ

ಸರ್ವಶ್ರೀ

ಬಿ.ಎಸ್. ಮುದ್ದಪ್ಪ
ಶಿ.ಸಿ. ಹಸಬಿ
ಡಾ. ಎಂ.ಎನ್. ಚನ್ನಬಸಪ್ಪ
ಎನ್.ಎಂ. ನಾಗರಾಜಯ್ಯ
ಎ.ಎ. ಶಾಂತಮಲ್ಲಪ್ಪ
ಪ್ರೊ. ಜಿ. ಪರಮೇಶ್ವರಪ್ಪ
ಪ್ರೊ. ಎಂ. ವೃಷಭೇಂದ್ರಸ್ವಾಮಿ
ಪ್ರೊ. ಬಿ. ಗಂಗಾಧರಯ್ಯ
ಡಾ. ಪಿ.ಎಸ್. ರೇಣುಕಾರಾಧ್ಯ
ಡಿ. ಚಂದ್ರಶೇಖರಯ್ಯ
ಪ್ರೊ. ಎಂ.ಎಸ್. ಬಸವರಾಜಯ್ಯ
ಕೆ.ಪಿ. ಸಕ್ರಪ್ಪ
ಕೆ.ಹೆಚ್. ಕುಲಕರ್ಣಿ
ಜಿ.ಹೆಚ್. ಬಸವರಾಜು
ಡಾ. ಬಿ. ಶಿವಪ್ಪ
ಬಿ.ಎಸ್. ದೇವರಾಜ್

ಇದಾದ ನಂತರ ನಿಯಮಾವಳಿಯ ಪ್ರಕಾರ ಪ್ರಿ ಕ್ವಾಲಿಫಿಕೇಷನ್ ಟೆಂಡರ್ ಕರೆದು, ಪ್ರಸಾದ ನಿಲಯ ಹಾಗೂ ವಿದ್ಯಾರ್ಥಿ ನಿಲಯ ಈ ಎರಡೂ ಕಟ್ಟಡ ಕೆಲಸಗಳ ನಿರ್ಮಾಣ ಕಾರ್ಯವನ್ನು ಒಪ್ಪಿಸಲಾಯಿತು. ಇವುಗಳ ಶಂಕುಸ್ಥಾಪನೆಯ ಕಾರ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ದಿನಾಂಕ ೧೬.೨.೧೯೯೨ ರ ಶುಭದಿನದಂದು ನೆರವೇರಿತು. ಭಾರತದ ಘನತೆವೆತ್ತ ಅಂದಿನ ಉಪರಾಷ್ಟ್ರಪತಿಗಳಾದ ಡಾ. ಶಂಕರ ದಯಾಳ್ ಶರ್ಮಾ ಅವರು ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನೂ ಮತ್ತು ಅಂದಿನ ಲೋಕಸಭಾಧ್ಯಕ್ಷರಾದ ಶ್ರೀ ಶಿವರಾಜ ಪಾಟೀಲರು ಪ್ರಸಾದ ನಿಲಯದ ಶಂಕುಸ್ಥಾಪನೆಯನ್ನೂ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಖುರ್ಷಿದ್ ಆಲಂಖಾನ್‌ರವರು ವಹಿಸಿದ್ದರು.

ಕಟ್ಟಡಗಳ ನಿರ್ಮಾಣ ಹಂತದಲ್ಲಿ ಅನೇಕ ರೀತಿಯ ಅಡಚಣೆಗಳು, ಮುಖ್ಯವಾಗಿ ಆರ್ಥಿಕ ಅಡಚಣೆ ಸಹಜವಾಗಿ ಉಂಟಾದರೂ ಅದೆಲ್ಲ ಭಕ್ತವರ್ಗದವರ, ಗಣ್ಯದಾನಿಗಳ, ಹಳೆಯ ವಿದ್ಯಾರ್ಥಿ ಸಂಘದವರ, ಶ್ರೀಮಠದ ವಿದ್ಯಾಸಂಸ್ಥೆಗಳ ಸಿಬ್ಬಂದಿ ವರ್ಗದವರ, ಉದಾರ ಹೃದಯಿಗಳ ನೆರವು, ಧನ ಸಹಾಯ ಮೊದಲಾದವುಗಳಿಂದ ಪರಿಹಾರಗೊಂಡು ಪವಾಡ ಸದೃಶವಾಗಿ ಯಾವುದೋ ಶಕ್ತಿಯೇ ಅದೃಶ್ಯಹಸ್ತದಿಂದ ನಮಗೆ ಹಣವನ್ನೊದಗಿಸುತ್ತದೆಯೋ ಎನ್ನಿಸುವಂತೆ ಒದಗಿ ನಮ್ಮ ಆತಂಕ ಪರಿಹಾರವಾಗುತ್ತಿತ್ತು.

ನಮ್ಮ ಮಟ್ಟಿಗೆ ಹೇಳುವುದಾದರೆ ಈ ಎರಡೂ ಕಟ್ಟಡಗಳ ನಿರ್ಮಾಣ ಒಂದು ಪವಾಡವಾಗಿಯೇ ನಮಗೆ ಕಾಣಿಸುತ್ತಿವೆ. ಏಕೆಂದರೆ ಶ್ರೀಗಳವರು ತಾವು ಹಣವನ್ನು ಯಾರಿಂದಲೂ ಕೇಳುವುದಿಲ್ಲ ಎಂದು ಮೊದಲೇ ತಿಳಿಸಿಬಿಟ್ಟಿದ್ದರಿಂದ ಕೋಟಿ ಕೋಟಿ ರೂಪಾಯಿಗಳನ್ನು ಸಮಿತಿಯೇ ಸಂಗ್ರಹಿಸಿಕೊಂಡು ಈ ಬೃಹತ್ ಯೋಜನೆಯ ಕಾರ್ಯನಿರ್ವಹಿಸುವುದು ಹೇಗೆ ಎಂಬ ಚಿಂತೆ ಅನೇಕ ಸಲ ನಮಗೆದುರಾಗಿದೆ. ಚಿಂತಿಸುತ್ತಿದ್ದಂತೆ ಯಾವುದೋ ವ್ಯಕ್ತಿಯಿಂದ ಅನಿರೀಕ್ಷಿತವಾಗಿ ದಾನದ ಹಣ ಬಂದು ನಮ್ಮ ಚಿಂತೆಯನ್ನು ಪರಿಹರಿಸಿ ಬಿಡುತ್ತಿತ್ತು. ಇಂಥ ಅನುಭವ ಅನೇಕ ಸಲ ನಮ್ಮನ್ನು ರೋಮಾಂಚನಗೊಳಿಸಿವೆ. ಇದಕ್ಕೊಂದು ನಿದರ್ಶನ ಕೊಡಬೇಕೆಂದರೆ ಕೈಯಲ್ಲಿ ದುಡ್ಡೇ ಇಲ್ಲದೆ ತೊಂದರೆ ಅನುಭವಿಸುವ ಸಮಯದಲ್ಲಿದ್ದಾಗ, ಅಧ್ಯಕ್ಷರಾದ ಡಾ.

ಎಂ.ಸಿ. ಮೋದಿ ಅವರೊಡನೆ ಉದ್ಯಮಪತಿಗಳಾದ ಶ್ರೀ ಸೀತಾರಾಮ ಜಿಂದಾಲ್ ಅವರ ಬಳಿಗೆ ನೆರವು ಕೇಳಲು ಹೋದೆವು. ಅವರಿಗೆ ಬಂದ ವಿಷಯವನ್ನೆಲ್ಲ ತಿಳಿಸಿದಾಗ ಅವರು "ಅಲ್ಲಿ ನಿಜವಾಗಿ ಐದುಸಾವಿರ ಬಡವಿದ್ಯಾರ್ಥಿಗಳಿರುವರೇ? ನಾನು ಬಂದು ನೋಡುತ್ತೇನೆ" ಎಂದು ಹೇಳಿ ಮುದ್ದಾಂ ತಾವೇ ಮಠಕ್ಕೆ ದಿನಾಂಕ ೩.೨.೮೨ ರಂದು ಬಂದು ಭೇಟಿ ಕೊಟ್ಟರು. ಸ್ವಾಮಿಗಳ ಸರಳವೂ, ಆಡಂಬರ ರಹಿತವೂ ಆದ ನಡೆನುಡಿಗಳನ್ನು, ವೃದ್ಧಾಪ್ಯದಲ್ಲಿಯೂ ಶಾಂತಿಯಿಂದ ಶೋಭಿಸುವ ಮುಖಮಂಡಲಗಳನ್ನು ಕಂಡು ಚಕಿತರಾದರು. ವಿದ್ಯಾರ್ಥಿಗಳ ಸಮೂಹ, ಪಾಕಶಾಲೆ, ಚಿಕ್ಕ ಚಿಕ್ಕ ಮಕ್ಕಳ ಚಟುವಟಿಕೆ, ಸಾಮೂಹಿಕ ಪ್ರಾರ್ಥನೆಯ ಶಿಸ್ತು, ಶ್ರೀಗಳವರು ಮಕ್ಕಳಿಗೆ ಬೋಧಿಸುವ ರೀತಿ ಮೊದಲಾದ ಕಾರ್ಯಕ್ರಮಗಳನ್ನು ಕಂಡು ''ನಾನು ಇನ್ನೊಂದು ಇಂಥ ಸಂಸ್ಥೆಯನ್ನು ಎಲ್ಲೂ ಕಾಣಲಿಲ್ಲ'' ಎಂಬ ಉದ್ಗಾರದೊಡನೆ ಹಿಂದುಮುಂದು ನೋಡದೆ ಸ್ಥಳದಲ್ಲೇ ಹನ್ನೊಂದು ಲಕ್ಷ ರೂಪಾಯಿಗಳ ವಾಗ್ದಾನ ಮಾಡಿದರು. ಕೆಲವೇ ದಿನದಲ್ಲಿ ಹಣವನ್ನು ಕೊಟ್ಟು ಕೆಲಸ ಕಾರ್ಯಗಳು ನಡೆಯುವಂತೆ ಮಾಡಿದರು; ಇತರ ದಾನಿಗಳಿಗೂ ಮಾರ್ಗದರ್ಶಿಗಳಾದರು.

ಇನ್ನೊಂದು ಸಲ ಹಣದ ತೀವ್ರ ಕೊರತೆಯಿಂದ ಏನು ಮಾಡಬೇಕೆಂಬ ಚಿಂತೆಯಲ್ಲಿದ್ದೆವು. ಇದ್ದಕ್ಕಿದ್ದಂತೆ ಬೆಂಗಳೂರಿನಿಂದ ಒಂದು ಪತ್ರ ಬಂತು. ಅದನ್ನು ಬರೆದವರು ಡಾ. ಎಚ್. ಸುಶೀಲಮ್ಮ ಎಂಬ ವೃದ್ಧೆ. ಅವರು ಯಾರಿಗೂ ಗೊತ್ತಿಲ್ಲದಂತೆ ಪ್ರಸಾದ ನಿಲಯದ ನಿರ್ಮಾಣಕ್ಕೆ ಹತ್ತು ಲಕ್ಷ ರೂಪಾಯಿ ಕೊಡುತ್ತೇನೆಂದು ಬರೆದದ್ದಲ್ಲದೇ ಮುಂದೆ ಕೆಲವೇ ದಿನಗಳಲ್ಲಿ ಪತ್ರದಲ್ಲಿ ತಿಳಿಸಿದಂತೆ ಗೌಪ್ಯವಾಗಿಯೇ ಹತ್ತು ಲಕ್ಷ ರೂಪಾಯಿ ಕೊಟ್ಟ ಘಟನೆ ನಮ್ಮನ್ನು ಮೂಕವಿಸ್ಮಿತರನ್ನಾಗಿಸಿತು. ನಮ್ಮ ಪಾಡಿಗಂತೂ ಈ ಘಟನೆ ಈ ದಾಸೋಹ ಕ್ಷೇತ್ರದ ಸ್ಥಾನ ಮಹಿಮೆ ಎನ್ನಿಸಿದ್ದಂತೂ ನಿಜ.

ಶ್ಲಾಘ್ಯವಾದ ಇನ್ನೊಂದು ಘಟನೆಯನ್ನಿಲ್ಲಿ ಹೇಳಲೇಬೇಕು. ಶ್ರೀಮಠದ ಹಳೆಯ ವಿದ್ಯಾರ್ಥಿಗಳೂ, ಉದಾರಿಗಳೂ ಎನಿಸಿರುವ ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯರು ನಮ್ಮೆಲ್ಲರಿಗೂ ಆನಂದಾಶ್ಚರ್ಯವಾಗುವ ರೀತಿಯಲ್ಲಿ ಆರು ಕೊಠಡಿಗಳ ನಿರ್ಮಾಣಕ್ಕೆ ಬೇಕಾಗುವ ಹಣ ಎರಡು ಲಕ್ಷ ಹತ್ತು ಸಾವಿರ ರೂಪಾಯಿಗಳನ್ನು, ಪ್ರಸಾದ ನಿಲಯಕ್ಕೆ ಹದಿನೈದು ಸಾವಿರ ರೂಪಾಯಿಗಳನ್ನು ಮತ್ತು ಪ್ರಸಾದ ನಿಲಯದ ಮುಂಭಾಗದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಶ್ರೀಗಳವರ ಪ್ರತಿಮೆಯ ಸಮಗ್ರ ವೆಚ್ಚವನ್ನು ಭರಿಸಲು ವಾಗ್ದಾನ ಮಾಡಿದರು. ಇಷ್ಟೇ ಅಲ್ಲದೆ ಪುನಃ ಪ್ರಸಾದ ನಿಲಯದ ಒಂದು ಅಂಕಣಕ್ಕೆ ತಗಲುವ ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಡಲು ಒಪ್ಪಿದ್ದಲ್ಲದೆ ತಮ್ಮ ಆಪ್ತ ಬಂಧುಗಳಾದ ಮುಂಬೈಯ ವಾಣಿಜ್ಯೋದ್ಯಮಿಗಳಾದ ಶ್ರೀ ವಿ.ಬಿ. ರಾಜು ಅವರಿಂದ ಪ್ರಸಾದ ನಿಲಯಕ್ಕೆ ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಡಿಸಿದುದು ಅತ್ಯಂತ ಶ್ಲಾಘ್ಯ ಕೊಡುಗೆಗಳೆನಿಸಿವೆ. ಇವೆಲ್ಲ ನಾವು ದುಡ್ಡಿನ ಕೊರತೆಯಿಂದ ತೊಂದರೆಯನ್ನು ಅನುಭವಿಸುವಾಗಿನ ಪವಾಡ ಸದೃಶ ಘಟನೆಗಳೇ ಆಗಿವೆ.

ಇನ್ನೊಂದು ಸಲ ಹಣದ ಕೊರತೆಯುಂಟಾದಾಗ ತುಮಕೂರು ಎಸ್.ಐ.ಟಿ. ಸಂಸ್ಥೆಯ ಮಾಜಿ ಪ್ರಿನ್ಸಿಪಾಲ್ ಪ್ರೊ. ಜಿ. ಪರಮೇಶ್ವರಪ್ಪನವರು ತಮ್ಮ ಯಾವತ್ತೂ ಕಾರ್ಯಕ್ರಮಗಳನ್ನು ಬದಿಗೊತ್ತಿ ಅಮೇರಿಕಾ ದೇಶಕ್ಕೆ ಹೋಗಿ ಅಲ್ಲಿನ ಭಕ್ತರ ಮನವೊಲಿಸಿ ಅವರಿಂದ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿ ದೇಣಿಗೆ ಪಡೆದು ಬಂದು ಸಮಿತಿಗೆ ಸಲ್ಲಿಸಿದುದು ಅತ್ಯಂತ ಶ್ಲಾಘನೀಯ ಅಂಶವೆನಿಸಿದೆ.

ನಿರ್ಮಾಣ ಹಂತದಲ್ಲಿ ವಜ್ರಮಹೋತ್ಸವ ಸಮಿತಿ ಪದಾಧಿಕಾರಿಗಳು ಹಾಸನ, ಬಾಳ್ಳುಪೇಟೆ, ಸಕಲೇಶಪುರ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ತುಮಕೂರು, ಬೆಂಗಳೂರು, ಚಳ್ಳಕೆರೆ ಇನ್ನೂ ಅನೇಕ ಊರುಗಳ ಕಡೆಗೆ ಹೋದಾಗ ಅಭೂತಪೂರ್ವ ಸ್ವಾಗತದೊಂದಿಗೆ ಕೂಡಿದ ಧನ ಸಹಾಯ ಸಂಗ್ರಹವಾದ ರೀತಿ ಆಯಾಯ ಸ್ಥಳಗಳ ಭಕ್ತವರ್ಗದವರ ಅಸೀಮ ಭಕ್ತಿಯ ನಡೆನುಡಿಗಳಿಗೆ ಬರೆದ ಭಾಷ್ಯದಂತಿತ್ತೆಂದು ಸಾಹಿತ್ಯದ ಮಾತಿನಲ್ಲಿ ಹೇಳಬಹುದು. ಕೇವಲ ಭಕ್ತರ, ಉದಾರಿಗಳ ದಾನದ ಹಣದಿಂದ ಬೃಹತ್ ಪ್ರಮಾಣದ ಕಟ್ಟಡಗಳನ್ನು ಕಟ್ಟುವುದು ಕಷ್ಟಸಾಧ್ಯ. ಆದರೆ ಸಿದ್ಧಗಂಗಾ ಕ್ಷೇತ್ರದ ಮಟ್ಟಿಗೆ ಅವರು ಬೇಡುವ ಸ್ವಾಮಿಗಳಲ್ಲ, ಅವರಂತೆ ಬೇಡಿಸಿಕೊಳ್ಳುವ ಭಕ್ತರೂ ಅವರಿಗೆ ಇಲ್ಲ ಎನ್ನುವುದನ್ನು ಸಾಬೀತುಗೊಳಿಸಿದೆ.

ಕೊನೆಯದಾಗಿ ನಮಗೆ ಮಠದ ಸಿಬ್ಬಂದಿ ವರ್ಗ, ಹಳೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ನಾವು ಕೈಕೊಂಡ ಕಾರ್ಯದಲ್ಲಿ ಭಾಗಿಗಳಾಗಿದ್ದಾರೆ. ಈ ಎರಡು ಬೃಹತ್ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ವಹಿಸಿಕೊಂಡ ಶ್ರೀ ಟಿ.ಕೆ. ಚಂದ್ರಶೇಖರ್‌ರವರು, ನಿರ್ಮಾಣ ಹಂತದಲ್ಲಿ ಹಲವಾರು ಅಡೆತಡೆಗಳು ಬಂದರೂ ಕಟ್ಟಡದ ರಚನೆಯಲ್ಲಿ ಯಾವುದೇ ಚ್ಯುತಿ ಇಲ್ಲದೆ ಸುಭದ್ರ ಹಾಗೂ ಸುಂದರವಾಗಿ ನಿರ್ಮಾಣ ಮಾಡಿರುತ್ತಾರೆ. ಅತ್ಯಂತ ಸುಂದರ ಹಾಗೂ ಸುಭದ್ರವಾದ ಈ ಬೃಹತ್ ಕಟ್ಟಡಗಳ ರಚನೆಯಲ್ಲಿ ವಿದ್ಯಾರ್ಥಿನಿಲಯದ ಕಾರ್ಯ ನಿರ್ವಹಣೆ ವಹಿಸಿಕೊಂಡ ಇಂಜಿನಿಯರ್‌ಗಳಾದ ಡಾ. ಪಿ.ಎಸ್. ರೇಣುಕಾರಾಧ್ಯ ಮತ್ತು ಎಸ್.ವಿ. ಶ್ರೀ ದಿನೇಶ್ ಹಾಗೂ ಪ್ರಸಾದ ನಿಲಯದ ಕಾರ್ಯ ನಿರ್ವಹಣೆಯನ್ನು ಹೊತ್ತ ಇಂಜಿನಿಯರ್‌ಗಳಾದ ಪ್ರೊ. ಎಂ. ವೃಷಭೇಂದ್ರಸ್ವಾಮಿ ಮತ್ತು ಶ್ರೀ ಹೆಚ್.ಡಿ. ಶರ್ಮಾ ಹಾಗೂ ಅವರ ಸಹೋದ್ಯೋಗಿಗಳ ಸೇವೆಯನ್ನು ಎಷ್ಟು ಶ್ಲಾಘಿಸಿದರೂ ಕಡಿಮೆಯೆ.

ಇದೇ ಸಮಯದಲ್ಲಿ ಉದಾರವಾಗಿ ಧನ ಸಹಾಯ ಮಾಡುತ್ತ ಬಂದ ಅನೇಕ ಮಹನೀಯರುಗಳ ಔದಾರ್ಯವನ್ನು ಶ್ಲಾಘಿಸುವುದಲ್ಲದೆ ಸ್ಮರಿಸುತ್ತಿದ್ದೇವೆ. ಸಾವಿರಾರು ಜನ ಯಥಾಶಕ್ತಿ ಈ ಮಹಾಕಾರ್ಯದಲ್ಲಿ ಧನ ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ಶ್ರೀ ಸಿದ್ಧಲಿಂಗೇಶ್ವರರು ಆಯುರಾರೋಗ್ಯಾದಿ ಸೌಭಾಗ್ಯವನ್ನು ಕರುಣಿಸಲೆಂದು ಹಾರೈಸುತ್ತೇವೆ. ವೈಯಕ್ತಿಕವಾಗಿ ಅವರೆಲ್ಲರ ಹೆಸರುಗಳನ್ನು ಹೇಳುವುದು ಇಲ್ಲಿ ಅಸಾಧ್ಯ. ಬೇರೊಂದು ಕಡೆಯಲ್ಲಿ ವೈಯಕ್ತಿಕ ಹೆಸರು, ದಾನದ ಮೊತ್ತ, ಊರು ಇತ್ಯಾದಿ ಹೇಳಲಾಗುವುದು. ಮತ್ತೊಮ್ಮೆ ನಮ್ಮ ಈ ಮಹಾಕಾರ್ಯದಲ್ಲಿ ವಿವಿಧ ರೀತಿಯಲ್ಲಿ ನೆರವಾದ ಎಲ್ಲರಿಗೂ ನಾವು ಧನ್ಯವಾದ ಸಮರ್ಪಿಸುತ್ತೇವೆ.

ಇಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ ಇತಿಹಾಸ ಪ್ರಸಿದ್ಧವಾದ ಈ ವಜ್ರಮಹೋತ್ಸವ ಸಮಾರಂಭದಲ್ಲಿ ಪರಮ ಪೂಜ್ಯರಿಗೆ ಅರ್ಪಿಸಲು ಒಂದು ಸಂಭಾವನಾ ಗ್ರಂಥವನ್ನು ನಿರ್ಮಿಸಿಕೊಡಲು ಹಳೆಯ ವಿದ್ಯಾರ್ಥಿ ಸಂಘಕ್ಕೆ ಕೇಳಿಕೊಂಡೆವು. ಸಂಘವು ಸಂತೋಷದಿಂದ ಒಪ್ಪಿ "ದಾಸೋಹ ಸಿರಿ" ಎಂಬ ಗ್ರಂಥವನ್ನು ಅಣಿಗೊಳಿಸಿ ಮಹೋಪಕಾರ ಮಾಡಿದೆ.

ಸಮಿತಿ ಪದಾಧಿಕಾರಿಗಳು

ಟಿ.ಕೆ. ನಂಜುಂಡಪ್ಪ	ಶಿ.ಸಿ. ಹಸಬಿ	ಜಿ.ಎಸ್. ಮುದ್ದಪ್ಪ	ಪದ್ಮಭೂಷಣ ಡಾ. ಎಂ.ಸಿ. ಮೋದಿ
ಖಜಾಂಚಿ	*ಕಾರ್ಯದರ್ಶಿ*	*ಕಾರ್ಯಾಧ್ಯಕ್ಷರು*	*ಅಧ್ಯಕ್ಷರು*

ಸಂಪಾದಕೀಯ

ಶ್ರೀ ಸಿದ್ಧಗಂಗಾ ಕ್ಷೇತ್ರ ಇಂದು ಕರ್ನಾಟಕವಷ್ಟೇ ಏಕೆ ಭಾರತದಲ್ಲಿಯೇ ಪ್ರಸಿದ್ಧಿ ಪಡೆದ ಒಂದು ಅವಿಮುಕ್ತ ಕ್ಷೇತ್ರ. ಆರೇಳುನೂರು ವರ್ಷಗಳ ಇತಿಹಾಸ ಹಿನ್ನೆಲೆಯನ್ನುಳ್ಳ ಈ ಕ್ಷೇತ್ರ ಈಗಿನ ಮೈಸೂರು ಜಿಲ್ಲೆಯ ಚಾಮರಾಜನಗರದ ಸಮೀಪ ಹರದನಹಳ್ಳಿ ಶೂನ್ಯಸಿಂಹಾಸನಾಧಿಪತಿಗಳಿಂದ ಸ್ಥಾಪಿಸಲ್ಪಟ್ಟ ಒಂದು ದಾಸೋಹ ಮಠ. ಈ ಶತಮಾನದಲ್ಲಿ ಈ ಮಠದ ಕೀರ್ತಿ, ಗೌರವಗಳು ಕ್ಷೇತ್ರಾಧಿಪತಿಗಳಾದ ಶ್ರೀ ಮ.ನಿ.ಪ್ರ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದಲೂ, ಅಭೂತಪೂರ್ವ ದಾಸೋಹತನದಿಂದಲೂ ಮಹತ್ತರವಾದ ದಾಖಲೆ ಸ್ಥಾಪಿಸಿದ್ದಾರೆನ್ನಬಹುದು. ನಾಡಿನ ಲಕ್ಷೋಪಲಕ್ಷ ಜನಗಳ ಹೊಟ್ಟೆ, ನೆತ್ತಿಗಳನ್ನು ನೋಡಿ, ಅವರ ಬದುಕಿಗೊಂದು ನೆಲೆ ಬೆಲೆಯನ್ನುಂಟುಮಾಡಿದ್ದಾರೆ. ಈ ಪುಣ್ಯಕ್ಷೇತ್ರದಲ್ಲಿ ಹಿಂದೆ ಆಗಿಹೋದ ಅಟವೀಶ್ವರ ಮಹಾಸ್ವಾಮಿಗಳು, ಉದ್ದಾನ ಮಹಾಸ್ವಾಮಿಗಳು ಕೈಕೊಂಡಿದ್ದ ದಾಸೋಹ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಶತಾಧಿಕ, ಸಹಸ್ರಾಧಿಕಗೊಳಿಸಿ ಇಂದು ನಾಲ್ಕೈದು ಸಾವಿರ ವಿದ್ಯಾರ್ಥಿಗಳಿಗೆ ಅನ್ನ, ನೀರು, ನೆಳಲು ಮತ್ತು ಶಿಕ್ಷಣ ಕೊಡತಕ್ಕ ತಾಣಗಳನ್ನು ನಿರ್ಮಿಸಿ ಜಗತ್ತಿನ ಗಮನ ಸೆಳೆದಿದ್ದಾರೆ. ಸಂನ್ಯಾಸಿಧರ್ಮ ಕ್ರಿಯಾಮುಖಿವಾದರೆ ಏನನ್ನು ಸಾಧಿಸಬಹುದೆಂಬುದಕ್ಕೆ ಈ ಕ್ಷೇತ್ರ ಒಂದು ಜ್ವಲಂತ ಉದಾಹರಣೆ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ದಿನಾಂಕ ೩.೩.೧೯೩೦ರಂದು ಉದ್ದಾನ ಶಿವಯೋಗಿಗಳವರಿಂದ ಈ ಮಠದ ಉತ್ತರಾಧಿಕಾರ ಪಡೆದು ಮುಂದೆ ೧೯೪೧ ರಲ್ಲಿ ತಮ್ಮ ಗುರುಗಳು ಲಿಂಗೈಕ್ಯರಾದ ಮೇಲೆ, ಮಠದ ಪೂರ್ಣ ಜವಾಬ್ದಾರಿಯನ್ನು ಇಂದಿನವರೆಗೆ ಅಖಂಡವಾಗಿ ೬೭ ವರ್ಷ ಕಾಲ ಬಿಡುವಿಲ್ಲದ ಪರಿಶ್ರಮದಿಂದ ರಾಷ್ಟ್ರೀಯ ಸೇವೆಯನ್ನು ನಿಷ್ಕಾಪಟ್ಯದಿಂದ ಮಾಡಿ ಮುಗಿಸಿದ್ದಾರೆ.

ಭಕ್ತವರ್ಗ ಇಂಥ ಪುಣ್ಯಪುರುಷರ ವಜ್ರಮಹೋತ್ಸವವನ್ನು ಆಚರಿಸಿ, ಆ ಸಮಯದಲ್ಲಿ ಅವರಿಗೆ ಒಂದು ಬೃಹತ್ ವಿದ್ಯಾರ್ಥಿನಿಲಯವನ್ನು ಹಾಗೂ ಭವ್ಯ ದಾಸೋಹ ಭವನವನ್ನು ಅರ್ಪಿಸಿ ಕೃತಾರ್ಥರಾಗಲು ಕಾರ್ಯೋನ್ಮುಖರಾಗಿದ್ದಾರೆ. ಈ ಕಾರಣಕ್ಕಾಗಿ ಜಗತ್ಪ್ರಸಿದ್ಧ ನೇತ್ರವೈದ್ಯ ಡಾ. ಎಂ.ಸಿ. ಮೋದಿ ಅವರ ಅಧ್ಯಕ್ಷತೆಯಲ್ಲಿ ಶ್ರೀ ಶಿವಕುಮಾರಸ್ವಾಮಿಗಳ ವಜ್ರಮಹೋತ್ಸವದ ಪ್ರತಿಷ್ಠಾನ ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಕಾರ್ಯಪ್ರವೃತ್ತರಾಗಿದ್ದಾರೆ. ಕಾರ್ಯಾಧ್ಯಕ್ಷರಾಗಿ ಶ್ರೀ ಬಿ.ಎಸ್. ಮುದ್ದಪ್ಪ, ಐ.ಎ.ಎಸ್.(ನಿ) ಅವರೂ, ಕಾರ್ಯದರ್ಶಿಗಳಾಗಿ ಶ್ರೀ ಶಿ.ಸಿ. ಹಸಬಿ, ಐ.ಪಿ.ಎಸ್.(ನಿ) ಅವರೂ ಮತ್ತು ಖಜಾಂಚಿಗಳಾಗಿ ಶ್ರೀ ಟಿ.ಕೆ. ನಂಜುಂಡಪ್ಪ ಎಂ.ಎ., ಎಲ್‌ಎಲ್.ಬಿ. ಅವರು ಈ ಮಹಾಕಾರ್ಯವನ್ನು ಶ್ರದ್ಧಾಭಕ್ತಿ, ವಿಶ್ವಾಸಗಳಿಂದ ಮಾಡಿ ಮುಗಿಸಿದ್ದಾರೆ.

೧೯೯೬ನೆಯ ಮಾರ್ಚ್ ೨೨,೨೩,೨೪ ಈ ಮೂರು ದಿನಗಳು ವೈಭವದಿಂದ ವಜ್ರಮಹೋತ್ಸವ ನೆರವೇರಿಸಲು ಭಕ್ತವರ್ಗ, ಹಳೆಯ ವಿದ್ಯಾರ್ಥಿಗಳ ಸಂಘ, ಅಭಿಮಾನಿಗಳ ಬಳಗ ಉತ್ಸಾಹಗೊಂಡಿವೆ. ರಾಷ್ಟ್ರಪತಿಗಳು ವಿದ್ಯಾರ್ಥಿನಿಲಯವನ್ನೂ, ಪ್ರಧಾನ ಮಂತ್ರಿಗಳು ದಾಸೋಹ ಗೃಹವನ್ನೂ ಉದ್ಘಾಟಿಸಲಿದ್ದಾರೆ. ಶ್ರೀ ಸನ್ನಿಧಿಯವರಿಗೆ ಈ ಸಮಯದಲ್ಲಿ ಭಕ್ತಿಕಾಣಿಕೆಯಾಗಿ ಗ್ರಂಥವೊಂದನ್ನು ಅರ್ಪಿಸಲು ಹಳೆಯ ವಿದ್ಯಾರ್ಥಿ ಸಂಘ ಘನವಿದ್ವಾಂಸರಾದ ಶ್ರೀ ಟಿ.ಆರ್. ಮಹಾದೇವಯ್ಯ, ಶ್ರೀ ಹೆಚ್.ವಿ. ವೀರಭದ್ರಯ್ಯ ಹಾಗೂ ಶ್ರೀ ಬಿ. ವೀರಭದ್ರಯ್ಯ ಮುಂತಾದವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ಮಾಡಿ, ಒಪ್ಪಿಸಿದುದರ ಫಲವಾಗಿ ಈ ಎಲ್ಲ ವಿದ್ವಾಂಸರು ಶ್ರಮವಹಿಸಿ "ದಾಸೋಹ ಸಿರಿ" ಎಂಬ ಅನ್ವರ್ಥನಾಮದ ಮಹಾಗ್ರಂಥ ನಿರ್ಮಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಭಿನಂದನ . ಗೌರವ ಗ್ರಂಥಗಳದೇ ಒಂದು ಪರಂಪರೆ ಬೆಳೆದು ಬಂದಿದೆ. ನಾಡು ನುಡಿಗಳಿಗೆ ನಿಸ್ವಾರ್ಥವಾಗಿ ದುಡಿದ ಮಹನೀಯರನ್ನು ಸನ್ಮಾನಿಸಲು ರೂಪುಗೊಳ್ಳುವ ಇಂಥ ಸಾಂದರ್ಭಿಕ ಸಂಪುಟಗಳು ನಾಡಿನ ಇತಿಹಾಸದ ಭಾಗಗಳಾಗಿರುತ್ತವೆ. ಜೊತೆಗೆ ಅದರಲ್ಲಿ ಸೇರ್ಪಡೆಯಾಗುವ ಸಂಶೋಧನಾತ್ಮಕ ಹಾಗೂ ವೈಚಾರಿಕ ಲೇಖನಗಳು ಅವುಗಳನ್ನು ಉತ್ತಮ ಪರಾಮರ್ಶನ ಗ್ರಂಥಗಳನ್ನಾಗಿಸಿವೆ. ಸಿದ್ಧಗಂಗೆಯ ಪೂಜ್ಯರ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅವರಿಗೆ ಅರ್ಪಿಸಿದ "ಸಿದ್ಧಗಂಗಾಶ್ರೀ" ಅಂಥ ಗೌರವಗ್ರಂಥಗಳಲ್ಲಿ ಮುಕುಟಮಣಿಯಾಗಿದೆ ಎಂಬುದು ಬಲ್ಲವರ ಮಾತು. ಇದೀಗ ಪೂಜ್ಯರ ವಜ್ರಮಹೋತ್ಸವ ಸಂದರ್ಭದಲ್ಲಿ ಎರಡು ಭವ್ಯ ಕಟ್ಟಡಗಳ ಜೊತೆಗೆ ದಾಸೋಹ ಸಿರಿಯಂಥ ಅಕ್ಷರಸೌಧವನ್ನು ಅರ್ಪಿಸುವ ಪುಣ್ಯ ನಮ್ಮದಾಗಿದೆ. ಆ ಮಹಾಗ್ರಂಥ ರೂಪುಗೊಳ್ಳಲು ಕಾರಣರಾದವರೆಲ್ಲರ ಉಪಕಾರವನ್ನು ಸ್ಮರಿಸುವುದು ನಮ್ಮ ಕರ್ತವ್ಯ.

ಪ್ರಥಮತಃ ಸಂಪಾದಕ ಸಮಿತಿಯ ಸದಸ್ಯರ ಸಲಹೆ ಸೂಚನೆಗಳಿಗೆ ನಾವು ಆಭಾರಿಯಾಗಿದ್ದೇವೆ. ಅನೇಕ ವಿದ್ವಾಂಸರು, ಕವಿಗಳು, ಗಣ್ಯ ಮಹನೀಯರು, ಲೇಖನ ಕವನಗಳನ್ನು ಕಳಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಚನ್ನಬಸಪ್ಪ ಮತ್ತು ಇತರ ಪದಾಧಿಕಾರಿಗಳ ನೆರವು ಮತ್ತು ಪ್ರೋತ್ಸಾಹಗಳನ್ನು ಮನಸಾರೆ ನೆನೆಯುತ್ತೇವೆ. ಇದರಂತೆ ವಜ್ರಮಹೋತ್ಸವ ಸಮಿತಿಯ ಪದಾಧಿಕಾರಿಗಳಿಗೆಲ್ಲ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಈ ಮಹಾಸಂಪುಟವನ್ನು ಸುಂದರವಾಗಿ, ಶ್ರದ್ಧಾಪೂರ್ವಕವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ನಗರದ ಖ್ಯಾತ ಮುದ್ರಕರಾದ ಗೀತಾಂಜಲಿ ಪ್ರೆಸ್ ಮಾಲೀಕರಾದ ಶ್ರೀ ಜಿ. ನಾಗಸುಂದರ, ಶ್ರೀ ಅಶಿತ್ ದೇಸಾಯಿ ಹಾಗೂ ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆಗಳು.

ಬೆಂಗಳೂರು
೨೨.೩.೧೯೯೭

ಸಂಪಾದಕ ಮಂಡಳಿಯ ಪರವಾಗಿ,
ಚನ್ನಪ್ಪ ಎರೆಸೀಮೆ
ಪ್ರಧಾನ ಸಂಪಾದಕ

ಪರಿವಿಡಿ

ಪ್ರಕಾಶಕರ ನುಡಿ

ವಜ್ರಮಹೋತ್ಸವ ಸಮಿತಿಯ ವರದಿ

ಸಂಪಾದಕೀಯ

1. ಶ್ರೀ ಕ್ಷೇತ್ರ ಮತ್ತು ಶ್ರೀ ಶ್ರೀಗಳು

1. ಶ್ರೀ ಸಿದ್ಧಗಂಗಾ ಕ್ಷೇತ್ರ - ಹೆಚ್.ವಿ. ವೀರಭದ್ರಯ್ಯ 3
2. ಶ್ರೀ ಶಿವಕುಮಾರ ಸ್ವಾಮಿಗಳ ಜೀವನ - ಸಾಧನೆ - ಹೆಚ್.ವಿ. ವೀರಭದ್ರಯ್ಯ 12
3. ರಜತಮಹೋತ್ಸವ ವರದಿ - ಎಂ. ರೇಣುಕಾರಾಧ್ಯ 21
4. ಸುವರ್ಣಮಹೋತ್ಸವ ವರದಿ - ಬಿ. ವೀರಭದ್ರಯ್ಯ 24

2. ಶುಭ ಹಾರೈಕೆಗಳು

ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಗಳು, ಪೇಜಾವರಮಠ, ಉಡುಪಿ. 33

ಜಗದ್ಗುರು ಬಾಲಗಂಗಾಧರನಾಥ ಸ್ವಾಮಿಗಳು, ಆದಿಚುಂಚನಗಿರಿ. 34

ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು, ಶ್ರವಣಬೆಳಗೊಳ. 35

ಶ್ರೀ ವೀರೇಂದ್ರ ಹೆಗ್ಗಡೆಯವರು, ಧರ್ಮಸ್ಥಳ. 36

ಶ್ರೀ ರಾಘವೇಂದ್ರ ಮಹಾಸ್ವಾಮಿಗಳು, ಮಲ್ಲಾಡಿಹಳ್ಳಿ. 37

ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ವಾರಣಾಸಿ. 38

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು, ಚಿತ್ರದುರ್ಗ. 39

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮೈಸೂರು. 40

ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಹುಬ್ಬಳ್ಳಿ. 41

ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ. 43

ಶ್ರೀ ಚನ್ನಬಸವ ಪಟ್ಟದೇವರು, ಭಾಲ್ಕಿ. 44

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಸಿರಿಗೆರೆ. 46

ಜಗದ್ಗುರು ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು, ಮುಂಡರಗಿ. 49

ಶ್ರೀ ವಿಜಯಮಹಾಂತ ಶಿವಯೋಗಿಗಳು, ಇಳಕಲ್. 52

3. ನಾ ಕಂಡ ಶ್ರೀಕ್ಷೇತ್ರ ಹಾಗೂ ಶ್ರೀಶ್ರೀಗಳು

ಧ್ಯೇಯ ತಪಸ್ವಿ - ಎಸ್. ನಿಜಲಿಂಗಪ್ಪ 55

ಬಸವತತ್ತ್ವಾರಾಧಕರು - ಬಿ.ಡಿ. ಜತ್ತಿ 57

ದಿವ್ಯ ಚೇತನ - ವೀರೇಂದ್ರ ಪಾಟೀಲ್ 58

ಕಾರುಣ್ಯ ಹೃದಯಿ - ಡಿ.ಎಂ. ಚಂದ್ರಶೇಖರ್ 59

ದಾರಿ ದೀಪ - ಡಾ. ಡಿ.ಎಂ. ನಂಜುಂಡಪ್ಪ 60

	ಅಸಾಮಾನ್ಯ ದಾಸೋಹಿ	- ಕೆ. ಶಿವರಾಮ ಕಾರಂತ	64
	ಆಚಾರವಿಚಾರ ಸಂಗಮ	- ಪ್ರೊ. ಎಸ್.ಕೆ. ರಾಮಚಂದ್ರರಾವ್	66
	ಮಹಾ ಋಷಿ	- ಎಚ್.ಎಲ್. ನಾಗೇಗೌಡ	68
	ಸಿದ್ಧಗಂಗೆಯ ಸಿದ್ಧಪುರುಷ	- ಡಾ. ಕೆ.ಟಿ. ಪಾಂಡುರಂಗಿ	69
	ಮಹಾತಪಸ್ವಿ	- ಶ್ರೀಮತಿ ಶಾಂತಾದೇವಿ ಮಾಳವಾಡ	70
	ಸಿದ್ಧಗಂಗೆಯ ನೆನಪುಗಳಲ್ಲಿ	- ಡಾ. ಜಿ.ಎಸ್. ಶಿವರುದ್ರಪ್ಪ	74
	ಸಿದ್ಧಗಂಗೆಯ ಬೆಳಗು	- ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ	78
	ಶರಣ ಸಂಸ್ಕೃತಿಯ ಬ್ರಹ್ಮಕಮಲ	- ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ	86
	ಸಾವಿರದ ಗುಟ್ಟು ಇಲ್ಲಿದೆ	- ಹೊ.ವೆ. ಶೇಷಾದ್ರಿ	87
	ಆಪದ್ಬಾಂಧವ	- ಕೃ. ಸೂರ್ಯನಾರಾಯಣರಾವ್	91
	ದೃಢಸಂಕಲ್ಪದ ಶ್ರೀಗಳು	- ಕೆ.ಎಂ. ರುದ್ರಪ್ಪ	95
	ನಡೆದಾಡುವ ದೇವರು	- ನ್ಯಾಯಮೂರ್ತಿ ಕೆ.ಬಿ. ನಾವದಗಿ	103
	ತಪೋಧನ ಮಹಾಜಂಗಮ	- ಡಾ. ಸೂರ್ಯನಾಥ ಕಾಮತ್	107
	ಆರಾಧ್ಯದೈವ	- ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯ	109
	ವಜ್ರಾದಪಿ ಕುಸುಮಾದಪಿ	- ಹೆಚ್. ಗಂಗಾಧರನ್	111
	ಅಪೂರ್ವ ದರ್ಶನ	- ಸಗರ ಕೃಷ್ಣಾಚಾರ್ಯ	120
	ಸಮಗ್ರ ಕ್ರಾಂತಿಯ ಪ್ರಯೋಗಶಾಲೆ	- ಚಂದ್ರಶೇಖರ್ ಧೂಳೇಕರ್	122
	ಶ್ರೀ ಸಿದ್ಧಗಂಗೆಯ ಕೀರ್ತಿ	- ಸಿ. ಸೋಮಶೇಖರ್	125
	ದಾಸೋಹ ಕ್ಷೇತ್ರ	- ಪಂ. ಕೆ.ಪಿ. ಶಿವಲಿಂಗಯ್ಯ	127
4.	**ಶ್ರೀ ಸಾಹಿತ್ಯ**		
೧.	ಶ್ರೀಗಳವರಿಗೆ ಅರ್ಪಿಸಿದ ಕೆಲವು ಬಿನ್ನವತ್ತಳೆಗಳು		135
೨.	ಶ್ರೀವಾಣಿಗಳು		141
೩.	ಶ್ರೀಗಳ ದೃಷ್ಟಾಂತ ಕಥೆಗಳು	- ವಿದ್ವಾನ್ ಕೆ. ಬಸವರಾಜು	146
೪.	ಶ್ರೀಗಳ ನುಡಿಕೋಶ		152
೫.	ಶ್ರೀಗಳವರ ಲೇಖನಗಳು		154
೬.	ಶ್ರೀಗಳವರ ಜೀವನದ ಪ್ರಮುಖ ಘಟನೆಗಳು		171
೭.	ಶ್ರೀ ಕ್ಷೇತ್ರದ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು	- ವಿದ್ವಾನ್ ಪಿ.ಎಸ್. ಚಂದ್ರಶೇಖರಯ್ಯ	175
5.	**ಕವನ ನಮನ**		
	ಮೌನವೇ ಸಾರುತಿದೆ	- ಶಾಂತರಸ	181
	ಸಿದ್ಧಗಂಗೆಯ ಮಡಿಲು	- ಈರಪ್ಪ ಎಂ. ಕಂಬಳಿ	182
	ದಿವದ ಕರಣ	- ಸಿ.ಪಿ.ಕೆ.	183
	ಸಿದ್ಧಗಂಗೆಯ ಸಿದ್ಧ	- ಡಾ. ದೇವೇಂದ್ರ ಕುಮಾರ ಹಕಾರಿ	183
	ಸಿದ್ಧಗಂಗೆಯ ಸಿದ್ಧಪುರುಷ	- ಡಾ. ಕೆ.ಆರ್. ಸಂಧ್ಯಾರೆಡ್ಡಿ	184

ಶತಮಾನಂ ಭವ - ಹೆಚ್. ಗಂಗಾಧರನ್ 184
ಶಿವಶರಣ ನಿನಗೆ ನಮನ - ಲಿಂಗಣ್ಣ ಸತ್ಯಂಪೇಟೆ 185
ಮೂರು ವಚನ ಕಾಣಿಕೆ - ಅನ್ನದಾನಯ್ಯ ಪುರಾಣಿಕ 186
ಶ್ರೀಗುರುವಿಗೆ ನಮೋ - ಡಾ. ಕಮಲಾ ಹಂಪನಾ 187
ಬ್ರಹ್ಮವನ ವಿಹಾರಿ - (ಪುಲಿಕೇಶಿ) ಕೆ.ಪಿ. ಶಿವಲಿಂಗಯ್ಯ 188
ಸಿದ್ಧಗಂಗಾ - ದೊಡ್ಡಬಾಣಗೆರೆ ಪ್ರಕಾಶಮೂರ್ತಿ 188
ಕಾರುಣ್ಯಮೂರ್ತಿ - ಜೆ. ಶಾರದಾ ರಾಜಶೇಖರ್ 189
ಗುರುಕುಲ ಗಾಥಾ - ಕಯ್ಯಾರ ಕಿಞ್ಞಣ್ಣ ರೈ 190
ಬಹುರೂಪಿ - ಡಾ. ಕೆ. ಮುದ್ದಣ್ಣ 191
ಶ್ರೀ ಸಿದ್ಧಗಂಗೆಯ ಶ್ರೀ ಚರಣದಲ್ಲಿ - ಡಾ. ಜಿ.ಎಸ್. ಶಿವರುದ್ರಪ್ಪ 192

6. ಗೋಸಲ ಪರಂಪರೆ

1. ಗೋಸಲ ಸಿದ್ಧೇಶ್ವರರು - ಒಂದು ಅಧ್ಯಯನ - ಪ್ರೊ. ಸಿ. ಮಹಾದೇವಪ್ಪ 195
2. ಗೋಸಲ ಪರಂಪರೆಯ ಮಹಾಬೆಳಗು - ಪಂ. ಚನ್ನಪ್ಪ ಎರೆಸೀಮೆ 230
3. ಗೋಸಲಪೀಠ ಪರಂಪರೆಯ ಸಾಹಿತ್ಯ - ಡಾ. ಬಿ.ಆರ್. ಹಿರೇಮಠ 248
4. ಬೋಳ ಬಸವೇಶ್ವರರು - ಒಂದು ಸ್ಥೂಲ ಅಧ್ಯಯನ - ಡಾ. ವೀರಣ್ಣ ರಾಜೂರ 253

7. ENGLISH SECTION

1. A brief history of Sri Siddaganga Math - Dr. M.N.Channabasappa 267
2. Portrait of a Swamy - K.S.Radhakrishana 279
3. Sri Basaveswara - biography - Dr. R.C.Hiremath 282
4. Veerashaivism & Buddhism - Dr. H. Thipperudraswamy 298
5. The Path of Shatstshala - Prof. B.Virupakshappa 308

8. ಮಠ ಮತ್ತು ಸಮಾಜ

1. ಮಠ - ಒಂದು ಅಧ್ಯಯನ - ಷಣ್ಮುಖಯ್ಯ ಅಕ್ಕೂರಮಠ 329
2. ವೀರಶೈವ ಮಠಗಳ ಪರಿಕಲ್ಪನೆ - ಡಾ ಸಂಗಮೇಶ ಸೌದತ್ತಿಮಠ 336
3. ಮಠಮಾನ್ಯಗಳ ಸಾಮಾಜಿಕ ಹೊಣೆ - ಜ.ಹೊ. ನಾರಾಯಣ ಸ್ವಾಮಿ 345
4. ವೀರಶೈವ ಮಠಗಳ ಸುಧಾರಣೆಯ ಕೆಲವು ಕಾರ್ಯಗಳು - ಡಾ. ಎಚ್.ಎಂ.ಮರುಳಸಿದ್ಧಯ್ಯ 351
5. ಎಚ್ಚೆತ್ತ ವೀರಶೈವ ಎತ್ತ ಸಾಗಿದೆ ? - ಡಾ. ಎ.ಎಲ್. ಶಿವರುದ್ರಪ್ಪ 365
6. ವಚನ ಚಳುವಳಿ - ಒಂದು ಸಾಮಾಜಿಕ ಆಂದೋಲನವಾಗಿ - ಡಾ. ಪಿ.ವಿ. ನಾರಾಯಣ 371

9. ವಿವಿಧ ವೀರಶೈವ ಮಠಗಳ ಕೊಡುಗೆಗಳು

1. ರಂಭಾಪುರಿ ರೇಣುಕಾಚಾರ್ಯ ಪೀಠ - ವಿದ್ವಾನ್ ಜಿ.ವಿ. ಶಿವಸ್ವಾಮಿ 379
2. ಜಂಗಮವಾಡಿ ಮಠ, ಕಾಶಿ - ಡಾ.ವಿ.ಶಿವಾನಂದ 390
3. ಶ್ರೀ ಶೈಲ ನಿಡುಮಾಮಿಡಿ ಪೀಠ - ಎಂ.ಜಿ.ನಾಗರಾಜ್ 406
4. ಶಿವಯೋಗ ಮಂದಿರ - ಗೌ.ಮ. ಉಮಾಪತಿ ಶಾಸ್ತ್ರಿ 426
5. ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ - ಟಿ.ಆರ್.ಮಹಾದೇವಯ್ಯ 434

6. ಮೂರು ಸಾವಿರ ಮಠ, ಹುಬ್ಬಳ್ಳಿ - ಪ್ರೊ. ಕೊಟ್ರೇಶ್ ಆರಾಧ್ಯಮಠ 443
7. ತೋಂಟದಾರ್ಯ ಮಠ, ಗದಗ - ಸದಾನಂದ ಕನವಳ್ಳಿ 446
8. ತರಳಬಾಳು ಮಠ, ಸಿರಿಗೆರೆ - ರಾ. ವೆಂಕಟೇಶ ಶೆಟ್ಟಿ 452
9. ಸುತ್ತೂರು ಮಠ, ಮೈಸೂರು - ಪ್ರೊ. ಕೆ.ವೀರಭದ್ರ 459
10. ಅನ್ನದಾನೇಶ್ವರ ಮಠ, ಮುಂಡರಗಿ - ಮಹಾಲಿಂಗ ಯಾಳಗಿ 466
11. ಮುರುಘಾಮಠ, ಧಾರವಾಡ - ಪ್ರೊ. ಪಂಚಾಕ್ಷರಿ ಹಿರೇಮಠ 473
12. ಗವಿಮಠ, ಕೊಪ್ಪಳ - ಮಲ್ಲಿಕಾರ್ಜುನ ಹಿರೇಮಠ 478
13. ನಾಗನೂರು ಮಠ, ಬೆಳಗಾವಿ - ಡಾ. ಚೆನ್ನಕ್ಕ ಪಾವಟೆ 482
14. ಶಿವಯೋಗೀಶ್ವರ ಮಠ, ಅಥಣಿ - ಲೀಲಾದೇವಿ ಆರ್. ಪ್ರಸಾದ್ 494
15. ಶರಣಬಸವೇಶ್ವರ ಮಹಾ ಸಂಸ್ಥಾನ, ಗುಲ್ಬರ್ಗ - ಡಾ. ಎಸ್.ಎಂ. ಹಿರೇಮಠ 497
16. ಹಿರೇಮಠ, ಭಾಲ್ಕಿ - ಡಾ. ವೀರೇಂದ್ರ ಸಿಂಪಿ 501
17. ಬಂಥನಾಳ ಮಠ - ಈಶ್ವರಚಂದ್ರ ಚಿಂತಾಮಣಿ 507
18. ಗವಿಮಠ, ಮುಳಗುಂದ - ಟಿ.ಆರ್.ಮಹಾದೇವಯ್ಯ 513
19. ಕೊಟ್ಟೂರುಸ್ವಾಮಿಮಠ, ಹೊಸಪೇಟೆ - ಡಾ. ಬಸವರಾಜ ಮಲಶೆಟ್ಟಿ 517
20. ಸರ್ಪಭೂಷಣ ಮಠ, ಬೆಂಗಳೂರು - ಡಾ. ಡಿ.ಪಿ. ಪರಶಿವಮೂರ್ತಿ 520
21. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರ - ಆರ್.ಎಂ.ಬಸವಲಿಂಗಯ್ಯ 525
22. ಶರಣಾರ್ಯ ದಾಸೋಹ ಮಠ, ಕಾಸಾಮಡುಗು - ಡಾ.ಎಸ್.ಎಂ. ವೃಷಭೇಂದ್ರ ಸ್ವಾಮಿ 528
23. ಫಕೀರೇಶ್ವರ ಮಠ, ಶಿರಹಟ್ಟಿ - ಡಾ.ಬಿ.ವಿ. ಶಿರೂರ 532
24. ದೇಗುಲ ಮಠ, ಕನಕಪುರ - ಬಿ.ಸಿ. ವೀರಪ್ಪ 537
25. ಕೊಡಗಿನ ವೀರಶೈವ ಮಠಗಳು - ಎಂ.ಜಿ.ನಾಗರಾಜ್ 543

10. ಅನುಬಂಧ

1. ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ವಿವಿಧ ಶಾಲಾಕಾಲೇಜುಗಳ ಪಟ್ಟಿ - 568
2. ನಕ್ಷೆಗಳು - ಅ. ಶ್ರೀ ಸಿದ್ಧಗಂಗೆಯ ಪರಿಸರ - 570
ಆ. ಶ್ರೀ ಸಿದ್ಧಗಂಗಾ ಕ್ಷೇತ್ರದ ವ್ಯಾಪ್ತಿ - 572
3. ಶ್ರೀ ಮಠದ ನಿತ್ಯದ ದಾಸೋಹದ ಖರ್ಚಿನ ಸ್ಥೂಲ ವಿವರ - 576
4. ಈ ಗ್ರಂಥದ ಲೇಖಕರ ವಿಳಾಸಗಳು. - 578

ಸ್ತೋತ್ರ

ಸರ್ವಲೋಕೋಪಕಾರಾಯ । ಯೋದೇವಃ ಪರಮೇಶ್ವರಃ ॥
ಚರತ್ಯತಿಥಿ ರೂಪೇಣ । ನಮಸ್ತೆ ಜಂಗಮಾತ್ಮನೇ ॥
ಅವಾಚ್ಯಾತ್ಮಸ್ವರೂಪಾಯ । ಶಿವಭಾವಪ್ರದಾಯಿನೇ ॥
ನಮಃ ಸದ್ಗುರುನಾಥಾಯ । ಷಟ್‌ಸ್ಥಲಬ್ರಹ್ಮಮೂರ್ತಯೇ॥

ಗುರುಸಿದ್ಧಲಿಂಗ ಕರುಣಾಪಾಂಗ ಭವಭಂಗ
ಗುರುಸಿದ್ಧಲಿಂಗೇಂದ್ರ ನತಜನಾಂಬುಧಿಚಂದ್ರ
ಗುರುಸಿದ್ಧಲಿಂಗಾರ್ಯ ವೀರವ್ರತಾಚಾರ ಚರ್ಯ ಸೌಂದರ್ಯ ವೀರ್ಯ ॥
ಗುರುಸಿದ್ಧಯತಿರಾಜ ಜಿತಮಾಯ ಚಿತ್ಕಾಯ
ಗುರುಸಿದ್ಧಲಿಂಗಯ್ಯ ಯೋಗಿಜನ ಹೃಚ್ಛಯ್ಯ
ಗುರುಸಿದ್ಧಲಿಂಗೇಶ ಸುಜ್ಞಾನ ಸಂಕಾಶ ಜಯ ಜಯಾ ಕಾಶ ಕೇಶ ॥

- ಸಿದ್ಧೇಶ್ವರ ಪುರಾಣ ೯ - ೫೪


ಶ್ರೀ ಗುರು ಮೂರ್ತಿ ಮಂತ್ರಮಯ ಮದ್ಗುರುಮೂರ್ತಿ ಪವಿತ್ರ ಮೂರ್ತಿ ದಿ-1
ವ್ಯಾಗಮಮೂರ್ತಿ ಸತ್ಯಮಯ ಸದ್ಗುರುಮೂರ್ತಿ ಸುಭದ್ರ ಮೂರ್ತಿ ಭ-1
ಕ್ತ್ಯಾಂಗ ವಿಚಾರ ಮೂರ್ತಿ ಕರುಣಾಕರ ಮೂರ್ತಿ ವಿಲಾಸ ಮೂರ್ತಿ ಲಿಂ
ಗಾಂಗ ಸುಸಿದ್ಧಲಿಂಗ ಘನ ಮೂರ್ತಿಯದೀಗೆ ಮಹೋತ್ಸವಂಗಳಂ ॥

ಷಟ್‌ಸ್ಥಲ ವಲ್ಲಭ-೧-೪

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯ
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎನುತಿರ್ದೆನಯ್ಯ
ಎನಗಿದೇ ಮಂತ್ರ, ಎನಗಿದೇ ಜಪ
ಕೂಡಲ ಸಂಗಮದೇವಾ ನೀನೇ ಬಲ್ಲೆ ಎಲೆ ಲಿಂಗವೇ.

ಭವ ಬಂಧನ ದುರಿತಂಗಳ ಗೆಲುವೊಡೆ
ಓಂ ನಮಃ ಶಿವಾಯ ಶರಣೆಂದಡೆ ಸಾಲದೆ ?
ಹರಹರ ಶಂಕರ, ಶಿವಶಿವ ಶಂಕರ
ಜಯಜಯ ಶಂಕರ ಶರಣೆನ್ನುತ್ತಿದ್ದೇನೆ
ಎನ್ನ ಪಾತಕ ಪರಿಹರ,
ಕೂಡಲ ಸಂಗಮದೇವ ಶರಣೆನ್ನುತ್ತಿದ್ದೇನೆ.

- ಬಸವಣ್ಣ



ಶ್ರೀ ಸಿದ್ಧಗಂಗಾ ಮಾತೆ



[illegible]



ಶ್ರೀ ಉದ್ದಾನ ಶಿವಯೋಗಿಗಳು



ಶ್ರೀಕ್ಷೇತ್ರ ಮತ್ತು ಶ್ರೀಶ್ರೀಗಳು

ಶ್ರೀ ಸಿದ್ಧಗಂಗಾ ಕ್ಷೇತ್ರ

ಶ್ರೀ ಶಿವಕುಮಾರ ಸ್ವಾಮಿಗಳ ಜೀವನ - ಸಾಧನೆ

ರಜತ ಮಹೋತ್ಸವ ವರದಿ

ಸುವರ್ಣ ಮಹೋತ್ಸವ ವರದಿ

ಶ್ರೀ ಸಿದ್ಧಗಂಗಾ ಕ್ಷೇತ್ರ

- ಹೆಚ್.ವಿ. ವೀರಭದ್ರಪ್ಪ

ಶ್ರೀ ಸಿದ್ಧಗಂಗಾ ಮಠ ಕರ್ನಾಟಕದ ಒಂದು ಪುಣ್ಯಕ್ಷೇತ್ರ. ಈ ಕ್ಷೇತ್ರದ ಪರಂಪರೆ ಮಹಿಮಾಪೂರ್ಣ, ಪರಮ ಪವಿತ್ರ. ೧೨ನೆಯ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಹೊಂಗಿರಣದಂತೆ ಕಂಗೊಳಿಸುತ್ತಿರುವ ಶ್ರೀ ಸಿದ್ಧಗಂಗಾ ಕ್ಷೇತ್ರವು ದಾಸೋಹದ ಮಹಾಮನೆ. ಬಂದವರಿಗೆ ದಾಸಭಾವದಿಂದ ಶಕ್ತ್ಯನುಸಾರ ಪ್ರಸಾದ ವಿತರಿಸುವ ಜಂಗಮ ಕ್ಷೇತ್ರ. ಮಕ್ಕಳ ಕ್ಷೀರಾಗಾರ, ಅಧ್ಯಾತ್ಮಯೋಗದ ಅನುಭಾವ ಮಂಟಪ, ಧರ್ಮ ಸಂದೇಶದ ದಿವ್ಯಧಾಮ. ಕಾಯಕ ತತ್ತ್ವದ ಕ್ರಿಯಾಕೇಂದ್ರ. ಜ್ಞಾನ ಪ್ರಸಾರದ ಮಹಾವಿದ್ಯಾಲಯ.

ಶ್ರೀ ಸಿದ್ಧಗಂಗಾ ಕ್ಷೇತ್ರವು ಸಮಕಾಲೀನ ಸಾಮಾಜಿಕ ಪ್ರಜ್ಞೆಯ ಸಮರ್ಥ ಧರ್ಮಪೀಠ. ಈ ಪೀಠದ ಆಶ್ರಯದಲ್ಲಿ ಅರಳಿದ ಲಕ್ಷಾಂತರ ಆಸ್ತಿಕರು, ಧರ್ಮಾಭಿಮಾನಿಗಳು, ವಿದ್ಯಾರ್ಥಿಗಳು ಸಾತ್ವಿಕ ಜೀವನದ ಮಾರ್ಗ ಕಂಡುಕೊಂಡಿದ್ದಾರೆ. 'ಸಿದ್ಧಗಂಗಾ' ಎಂಬ ಹೆಸರೇ ಮಂತ್ರ ಪೂರ್ಣ! ಪರಿಶುದ್ಧಾತ್ಮರ ದಿವ್ಯತಪಸ್ಸು, ಶ್ರದ್ಧೆ ಮತ್ತು ನಿಷ್ಠೆಗಳ ಭದ್ರಬುನಾದಿಯ ಮೇಲೆ ನೆಲೆಗೊಂಡಿರುವ ಪವಿತ್ರ ಕ್ಷೇತ್ರ.

ಶ್ರೀ ಸಿದ್ಧಗಂಗಾ ಕ್ಷೇತ್ರವು ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಬೆಂಗಳೂರಿನಿಂದ ಶ್ರೀ ಕ್ಷೇತ್ರಕ್ಕೆ ೬೬ ಕಿ.ಮೀ.ಗಳು. ಈಗ ಬೆಳೆದು ನಿಂತಿರುವ ತುಮಕೂರು ವ್ಯಾಪ್ತಿಗೆ ಸೇರಿ ಆ ನಗರದ ಮುಕುಟಮಣಿಯಂತಿದೆ.

ಶರಣರು ಮೆಟ್ಟಿದ ಧರೆ - ಸಿದ್ಧಗಂಗಾ

ಸುಮಾರು ಅರುನೂರು ವರ್ಷಗಳ ಹಿಂದೆ ಶ್ರೀ ಸಿದ್ಧಗಂಗಾ ಮಠ ಸ್ಥಾಪನೆಯಾಯಿತು. ಸ್ಥಾಪಿಸಿದವರು ಶ್ರೀ ಗೋಸಲ ಸಿದ್ಧೇಶ್ವರರು. ಇವರು ಹರದನಹಳ್ಳಿಯಲ್ಲಿ ಸ್ಥಾಪಿಸಲ್ಪಟ್ಟ ಶೂನ್ಯಸಿಂಹಾಸನದ ಪ್ರಭುಗಳು. ಇವರು ಸಿದ್ಧಗಂಗಾ ಕ್ಷೇತ್ರವನ್ನು ತಮ್ಮ ಒಂದು ವಸಾಹತನ್ನಾಗಿ ಮಾಡಿಕೊಂಡು ಧರ್ಮ ಪ್ರಸಾರ ಮಾಡಿದರು. ಮುಂದೆ ಇವರ ಪರಂಪರೆಯ ಶಂಕರಪ್ರಭು, ಚನ್ನಬಸವೇಶ್ವರರು, ಸಿದ್ಧಲಿಂಗೇಶ್ವರರುಗಳ ತಪೋ ಭೂಮಿಯೆನಿಸಿತು. ತೋಂಟದ ಸಿದ್ಧಲಿಂಗೇಶ್ವರರು ಈ ಪರಂಪರೆಯಲ್ಲಿ ಅತ್ಯಂತ ಪ್ರಭಾವಶಾಲಿ ಶಿವಯೋಗೀಶ್ವರರೆನಿಸಿದರು. ಇವರ ಪ್ರಭಾವದಿಂದ ಕರ್ನಾಟಕದ ಉದ್ದಗಲಕ್ಕೆ ಅನೇಕ ಜಂಗಮ ಪರಂಪರೆಗಳು ಬೆಳೆದವು. ಇವರು ಅಖಿಲ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಸಂಚಾರ ಮಾಡುತ್ತ ಧರ್ಮ ಜಾಗೃತಿಯನ್ನುಂಟು ಮಾಡಿದರು. ಸಿದ್ಧಲಿಂಗೇಶ್ವರರ ಸಂಚಾರದ ಉದ್ದೇಶ ಅಂದಿನ ಜನತೆಯ ಮೌಢ್ಯವನ್ನು ನಿವಾರಿಸಿ ಅವರಲ್ಲಿ ಧರ್ಮಬುದ್ಧಿಯನ್ನು ಜಾಗೃತಗೊಳಿಸುವುದು, ಕೃಷಿ ಮೊದಲ್ಗೊಂಡು ಅನೇಕ ಕಾರ್ಯಗಳಲ್ಲಿ ಜನತೆಯನ್ನು ತೊಡಗಿಸುತ್ತ ಸಾಮಾಜಿಕ ಸುವ್ಯವಸ್ಥೆಗೊಳಿಸುವುದು, ದೀನ ದಲಿತರ ಆಚಾರಶುದ್ಧಿ, ವಿಚಾರ ಜಾಗೃತಿ, ತತ್ತ್ವಶಾಸ್ತ್ರದಲ್ಲಿ ಆಸಕ್ತಿಯನ್ನುಂಟುಮಾಡಿ ಸರ್ವತೋಮುಖ ಅಭಿವೃದ್ಧಿಗೆ ಹೆಣಗಿದುದು ಕಂಡು ಬರುತ್ತದೆ. ಆದುದರಿಂದ ಇಂದಿಗೂ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಅನೇಕ ಮಠ ಮಾನ್ಯಗಳನ್ನು ಇವರೂ ಇವರ ಶಿಷ್ಯವರ್ಗದವರೂ ಸ್ಥಾಪಿಸಿದುದನ್ನು ಕಾಣಬಹುದಾಗಿದೆ. ಇಂಥ ಮಠಗಳಲ್ಲಿ ಸಿದ್ಧಗಂಗಾ ಮಠದ ಪ್ರಾಶಸ್ತ್ಯ ಗಣನೀಯವಾದುದು.

ಸಿದ್ಧಗಂಗಾ ಎಂಬ ಹೆಸರು ಬರಲು ಕಾರಣವನ್ನು ಹೀಗೆ ಹೇಳಲಾಗುತ್ತಿದೆ : ಶ್ರೀ ಗೋಸಲ ಸಿದ್ಧೇಶ್ವರರ ಸಮಕಾಲೀನರಾದ ನೂರೆಂಟು ಸಂತರು ಶ್ರೀ ಸಿದ್ಧಗಂಗಾ ಬೆಟ್ಟದ ಗುಹೆಗಳಲ್ಲಿ ತಪಸ್ಸು ಮಾಡುತ್ತಿದ್ದರು. (ಗೋಸಲ ಎಂದರೆ ಪರ್ವತವಾಸಿ ಎಂದರ್ಥ. ಗೋಸ್ಥಲಿಗಳಾದ ತಪಸ್ವಿಗಳಿಂದ 'ಗೋಸಲ' ಬಂದಿದೆ ಎನ್ನುತ್ತಾರೆ.) ಅವರಲ್ಲಿ ತುಂಬ ವೃದ್ಧರಾದ ತಪಸ್ವಿಗಳೊಬ್ಬರಿಗೆ ರಾತ್ರಿವೇಳೆ ಬಾಯಾರಿಕೆಯಾಗಿ ಶಕ್ತಿ ಕುಂದಿದಂತಾಯಿತಂತೆ. ಅಂಥ ಸಂದರ್ಭದಲ್ಲಿ ಶ್ರೀ ಗೋಸಲ ಸಿದ್ಧೇಶ್ವರರನ್ನು ಸ್ಮರಿಸಲು ಅವರು ಪ್ರತ್ಯಕ್ಷರಾಗಿ ತಮ್ಮ ಕೈಯಿಂದ ಬಂಡೆಯನ್ನು ಬಗಿಯಲು ಗಂಗೋದ್ಭವವಾಯಿತಂತೆ. ಆ ಜಲವನ್ನು ಕೊಟ್ಟು ವೃದ್ಧ ತಪಸ್ವಿಗಳಿಗೆ ಪ್ರಾಣದಾನ ಮಾಡಿದರೆಂಬ ನಂಬಿಕೆ. ಶ್ರೀ ಗೋಸಲ ಸಿದ್ಧೇಶ್ವರರ ತಪೋನಿಷ್ಠೆಯ ಸಿದ್ಧಿರೂಪವಾಗಿ ಉದ್ಭವವಾದ ಗಂಗೆಯೇ 'ಸಿದ್ಧಗಂಗೆ' ಅಥವಾ ಸಿದ್ಧಪುರುಷರ ಪ್ರಭಾವ ಕಾರಣವಾಗಿ ಉದ್ಭವಿಸಿದ ಗಂಗೆಯೇ ಸಿದ್ಧಗಂಗೆ. ಈ ಹೆಸರಿನಿಂದಲೇ ಇದು ಇಂದು ಶ್ರೀ ಸಿದ್ಧಗಂಗಾ ಕ್ಷೇತ್ರವೆಂದು ಲೋಕ ವಿಖ್ಯಾತವಾಗಿದೆ.

ಶ್ರೀ ಗೋಸಲ ಸಿದ್ಧೇಶ್ವರರ ಅನಂತರ ಶ್ರೀ ಮಠದ ಪರಂಪರೆಯಲ್ಲಿ ಅನೇಕ ಶಿವಯೋಗಿಗಳು ಇಲ್ಲಿ ಆಗಿ ಹೋಗಿದ್ದಾರೆ. ೧೮ನೆಯ ಶತಮಾನದಿಂದೀಚೆಗೆ ಮುಖ್ಯರಾದವರು ಶ್ರೀ ನಂಜುಂಡಸ್ವಾಮಿಗಳು (೧೭೮೪-೧೮೨೦), ಶ್ರೀ ರುದ್ರಸ್ವಾಮಿಗಳು (೧೮೨೦-೧೯೫೩), ಶ್ರೀ ಸಿದ್ಧಲಿಂಗ ಸ್ವಾಮಿಗಳು (೧೮೫೩-೧೯೧೦), ಶ್ರೀ ಉದ್ಧಾನಸ್ವಾಮಿಗಳು (೧೯೦೦-೧೯೪೧), ಮತ್ತು ಶ್ರೀ ಮರುಳಾರಾಧ್ಯ ಸ್ವಾಮಿಗಳು (೧೯೨೪-೧೯೩೦) ಇತ್ಯಾದಿ.

ಶ್ರೀ ಸಿದ್ಧಲಿಂಗ ಸ್ವಾಮಿಗಳವರ (೧೮೫೩-೧೯೧೦) ಅಧಿಕಾರ ಸಮಯದಲ್ಲಿ ಉತ್ತರ ಪ್ರದೇಶದಿಂದ ದಯಮಾಡಿಸಿದ ಶ್ರೀ ಮುಪ್ಪಿನ ಸ್ವಾಮಿಗಳವರೂ ಹಾಗೂ ಶ್ರೀ ಅಟವೀ ಸ್ವಾಮಿಗಳವರೂ ಶ್ರೀ ಕ್ಷೇತ್ರದಲ್ಲಿ ಕೆಲವು ಕಾಲ ನಿಂತು ತಮ್ಮ ಶಿವಯೋಗಾನುಷ್ಠಾನವನ್ನು ನಡೆಸುತ್ತಾ ದಾಸೋಹಾದಿ ಅನೇಕ ರಚನಾತ್ಮಕ ಕಾರ್ಯಗಳನ್ನೆಸಗಿ ಮಠವನ್ನು ಅಭಿವೃದ್ಧಿಗೊಳಿಸುತ್ತ ಬಂದರು. ಆ ವ್ಯವಸ್ಥೆ ಇಂದು ನಿಬ್ಬೆರಗುಗೊಳಿಸುವಂತೆ ಬೃಹತ್ ಪ್ರಮಾಣದಲ್ಲಿ ನಡೆದಿರುವುದನ್ನು ನೋಡುವ ಭಾಗ್ಯ ನಮ್ಮದು.

ಶ್ರೀ ಉದ್ಧಾನ ಸ್ವಾಮಿಗಳು

ಶ್ರೀ ಉದ್ಧಾನ ಸ್ವಾಮಿಗಳು ಯೌಗಿಕ ಮಹಾತೇಜಸ್ವಿಗಳು, ತಪೋನಿಷ್ಠರು, ಶಾಪಾನುಗ್ರಹ ಸಮರ್ಥರು. 'ಇಟ್ಟರೆ ವರ ಕೊಟ್ಟರೆ ಶಾಪ' ಎಂಬಂತೆ ಬಾಳಿದವರು. ದೂರದರ್ಶಿಗಳು, ದಯಾಪರರು. ತಮಗಿಂತ ಹಿಂದಿನ ಯೋಗೀಶ್ವರರಿಂದ ಪ್ರಾರಂಭಿಸಲ್ಪಟ್ಟು ದಾಸೋಹಾದಿ ಕ್ರಿಯೆಗಳನ್ನು ಮುಂದುವರಿಸಿದುದಲ್ಲದೆ ೧೯೧೭ ರಲ್ಲಿ ಸಂಸ್ಕೃತ ಪಾಠಶಾಲೆಯನ್ನು, ಉಚಿತ ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದರು. ಇದರಿಂದಾಗಿ ಶ್ರೀ ಕ್ಷೇತ್ರದಲ್ಲಿ ದಾಸೋಹದ ಇನ್ನೊಂದು ಮುಖವಾದ ಜ್ಞಾನದಾಸೋಹ ಪ್ರಾರಂಭವಾಯಿತು. ಆ ಕಾಲದಲ್ಲಿ ಎಲ್ಲ ಜಾತಿಯವರಿಗೂ ಆಶ್ರಯ ನೀಡಿ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನಾಗಿ ಪ್ರಾರಂಭಿಸಿದ್ದು ಶ್ರೀಶ್ರೀಗಳವರ ವಿಶಾಲದೃಷ್ಟಿಯನ್ನೂ, ವಿಶ್ವಭ್ರಾತೃತ್ವವನ್ನೂ ಸೂಚಿಸುತ್ತದೆ. ಬಹುಶಃ ಭಾರತದಲ್ಲಿ ಪ್ರಥಮತಃ ಸಂಸ್ಕೃತಾಧ್ಯಯನವನ್ನು ಎಲ್ಲ ಜಾತಿ, ಮತ, ಪಂಥದವರು ಓದಬಹುದೆಂದು ನುಡಿದು ನಡೆದು ತೋರಿಸಿದ್ದು ಈ ಕ್ಷೇತ್ರ. ಪ್ರತಿ ವರ್ಷವೂ ಶಿವರಾತ್ರಿಯ ಕಾಲದಲ್ಲಿ ಶ್ರೀ ಕ್ಷೇತ್ರದಲ್ಲಿ ಹತ್ತು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆಯು ಇವರ ಕಾಲದಲ್ಲಿಯೇ ಕ್ರಿ.ಶ. ೧೯೦೯-೧೦ ನೆಯ ವರ್ಷದಲ್ಲಿ ಪ್ರಾರಂಭವಾಯಿತು. ಇಂದು, ಇಡೀ ಕರ್ನಾಟಕದ ಉದ್ದಗಲದಲ್ಲಿ ಶ್ರೀ ಕ್ಷೇತ್ರದ ಜಾತ್ರೆ ಎಲ್ಲರ ಮನೆಮಾತಾಗಿದ್ದು ಜಾತ್ರೆ ಸಂದರ್ಭದಲ್ಲಿ ಸೇರುವ ಜನರಿಗೆಲ್ಲಾ ದಾಸೋಹ ನಡೆಸುವ ವೈಶಿಷ್ಟ್ಯವನ್ನು ಅಭೂತಪೂರ್ವವಾಗಿ ಬೆಳೆಸಿಕೊಂಡು ಬಂದಿದೆ. ಅದು ನೋಡುವ ಕಣ್ಣುಗಳಿಗೆ ಹಬ್ಬ. ಕಲ್ಯಾಣದ ಬಸವಣ್ಣನವರ ದಾಸೋಹವನ್ನು ಸ್ಮರಣೆಗೆ ತರುವ ಅಪರೂಪದ ದೃಶ್ಯ. ಶ್ರೀ ಕ್ಷೇತ್ರವನ್ನು ತಮ್ಮ ತಪಸ್ಸು, ನಿಷ್ಠೆಗಳಿಂದ ಬೆಳಗಿಸಿ ತಮ್ಮ ಮಹಿಮೆಯನ್ನು ಪೂರೈಸಿದ ಶ್ರೀ ಉದ್ಧಾನ ಶಿವಯೋಗಿಗಳು ಲಿಂಗೈಕ್ಯರಾದದ್ದು ದಿನಾಂಕ ೧೧.೧.೧೯೪೧ ರಲ್ಲಿ.

ಶ್ರೀ ಮರುಳಾರಾಧ್ಯರು

ಶ್ರೀ ಉದ್ಧಾನ ಶಿವಯೋಗಿಗಳವರ ಕರಕಮಲಸಂಜಾತರಾಗಿ ೧೯೨೪ರಲ್ಲಿ ಶ್ರೀ ಮಠದ ಉತ್ತರಾಧಿಕಾರಿಗಳೆಂದು ನಿಯೋಜಿತರಾದ ಶ್ರೀ ಮರುಳಾರಾಧ್ಯರು ಇದ್ದದ್ದು ಅಲ್ಪಕಾಲ. ಸಾತ್ವಿಕತೆಯೇ ಮೂರ್ತೀಭವಿಸಿದಂತಿದ್ದ ಅವರು ೧೯೩೦ರಲ್ಲಿ ಲಿಂಗೈಕ್ಯರಾದರು.

ಶ್ರೀ ಶಿವಕುಮಾರಸ್ವಾಮಿಗಳು

ಈಗ ಶ್ರೀ ಮಠದ ಅಧ್ಯಕ್ಷರಾಗಿರುವ ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀ ಉದ್ಧಾನ ಸ್ವಾಮಿಗಳವರಿಂದ ೩.೩.೧೯೩೦ ರಂದು ನಿರಂಜನ ಜಂಗಮ ಚಿಹ್ನಾಂಕಿತ ವಿರಕ್ತಾಶ್ರಮ ದೀಕ್ಷೆಯನ್ನು ಪಡೆದು ಆ ಗುರುಗಳ ಸೇವೆಯನ್ನು ಶ್ರದ್ಧಾಭಕ್ತಿ ವಿಶ್ವಾಸಗಳಿಂದ ಮಾಡುತ್ತ, ಅವರು ಲಿಂಗೈಕ್ಯರಾದ ನಂತರ ೧೧.೧.೧೯೪೧ ರಿಂದ ಶ್ರೀ ಮಠದ ಸರ್ವ ಅಧಿಕಾರವನ್ನು ವಹಿಸಿಕೊಂಡು ತಮ್ಮ ಕಾರ್ಯ ಕ್ಷೇತ್ರವನ್ನು ಶತಾಧಿಕವಾಗಿ ಬೆಳೆಸುತ್ತ ಬಂದಿರುತ್ತಾರೆ. ಶ್ರೀ ಕ್ಷೇತ್ರವು ಕಳೆದ ಅರವತ್ತು ವರ್ಷಗಳಲ್ಲಿ ಶ್ರೀ ಪೂಜ್ಯ ಪಾದರ ನೇತೃತ್ವದಲ್ಲಿ ಅದ್ಭುತವಾದ, ಅಭೂತಪೂರ್ವ ಅಭಿವೃದ್ಧಿಯನ್ನು ಸಾಧಿಸಿರುವುದನ್ನು ಕಾಣಬಹುದು. ವಿರಕ್ತ ಶ್ರೇಷ್ಠರಾದರೂ ಲೋಕಜ್ಞರಾದ ಶ್ರೀಗಳವರು ಆಧುನಿಕ ಶಿಕ್ಷಣದ ಅವಶ್ಯಕತೆಯನ್ನರಿತು ಶ್ರೀ ಮಠವನ್ನು ಜ್ಞಾನವಿಜ್ಞಾನಗಳ ಮಹಾಕೇಂದ್ರವನ್ನಾಗಿ

ರೂಪಿಸಿದ್ದಾರೆ. ಶ್ರೀ ಕ್ಷೇತ್ರದಲ್ಲಿ ಅನೂಚಾನವಾಗಿ ನಡೆದು ಬಂದಿರುವ ಅನ್ನದಾನದ ಜೊತೆಗೆ ಸಂಸ್ಕೃತ ಪಾಠಶಾಲೆಯಾಗಿ ೧೯೧೭ರಲ್ಲಿ ಪ್ರಾರಂಭವಾಗಿದ್ದ ಸಂಸ್ಥೆಯನ್ನು ೧೯೬೨ರಲ್ಲಿ ಸಂಸ್ಕೃತ ಕಾಲೇಜನ್ನಾಗಿ ಪರಿವರ್ತಿಸಿ ಇಡೀ ರಾಷ್ಟ್ರದಲ್ಲಿಯೇ ಬೃಹತ್ ಸಂಸ್ಕೃತ ಸಂಸ್ಥೆಯನ್ನಾಗಿ ನಿರ್ಮಾಣ ಮಾಡಿದ ಕಾರಣ ಪುರುಷರಾಗಿದ್ದಾರೆ. ಶ್ರೀ ಕ್ಷೇತ್ರದ ವಿದ್ಯಾರ್ಥಿಗಳಲ್ಲಿ ಜಾತಿ, ಮತ, ಭೇದವಿಲ್ಲದೆ ಬಹಳ ಮಂದಿ ಸಂಸ್ಕೃತಾಭ್ಯಾಸ ಮಾಡುತ್ತಾರೆ. ಅವರು ಭಾರತೀಯ ಸಂಸ್ಕೃತಿಯನ್ನು ಜೀವನ ವಿಧಾನವನ್ನಾಗಿ ಅಳವಡಿಸಿಕೊಂಡಿರುವ ಶ್ರೀಗಳ ಸಾನಿಧ್ಯದಲ್ಲಿ ರಾಷ್ಟ್ರದೃಷ್ಟಿಯಿಂದ ಅವಶ್ಯವಾಗಿರುವ ಶಿಸ್ತು, ಸಂಯಮ, ಕಾಯಕ ಸದ್ಭಾವ, ಸಮತಾಭಾವ ಹಾಗೂ ಶ್ರಮಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುತ್ತಾರೆ.

''ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳೂ ತ್ರಿವಿಧ ದಾಸೋಹ ಮೂರ್ತಿಗಳೂ, ಮಹಾಮಹಿಮರೂ ಆದ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ ನಿಲುವನ್ನು ಆ ಸಿದ್ಧಲಿಂಗೇಶ್ವರನೇ ಬಲ್ಲನಲ್ಲದೆ ನಮ್ಮಂಥವರು ಬಲ್ಲೆವೆಂದು ಸೊಲ್ಲಿಸಲಾದೀತೆ! ಮಾತು ಸೋತು ಶರಣಾಗತವಾಗುತ್ತದೆ ಶ್ರೀಗಳವರ ಸನ್ನಿಧಿಯಲ್ಲಿ.! ಮಾತಿಗೆ ಮೀರಿದ ವ್ಯಕ್ತಿತ್ವ ಅವರದು'' ಎನ್ನುತ್ತಾರೆ ಡಾ. ಸಿದ್ಧಯ್ಯಪುರಾಣಿಕರು. ಮುಂದುವರಿದು ಅವರು ''ಈ ಸರ್ವಾಂಗ ಲಿಂಗಿಯಲ್ಲಿ ಯಾವುದನ್ನು ಮೆಚ್ಚುವುದೆಂದು ದಿಗ್ಭ್ರಮೆಯಾಗುತ್ತದೆ. ನಿಶ್ಚಿತ ಜ್ಞಾನವನ್ನೇ! ನಿರ್ಮಲ ಕ್ರಿಯೆಯನ್ನೇ! ಉಜ್ವಲ ವೈರಾಗ್ಯವನ್ನೇ! ಶಮ ದಮಾದಿ ದೈವೀ ಸಂಪತ್ತನ್ನೇ! ಬಹು ಭಾಷಾ ಪಾರಂಗತಿಯನ್ನೇ! ಪವಿತ್ರ ಜೀವನವನ್ನೇ! ಸಕಲ ಜೀವರಾಶಿಗಳನ್ನೂ ತನ್ನ ತೆಕ್ಕೆಯಲ್ಲಿ ಒಳಗೊಳ್ಳುವ ಅಪಾರ ಅನುಕಂಪವನ್ನೇ! ಬೆಕ್ಕಸ ಬೆರಗುಗೊಳಿಸುವ ಶಿಕ್ಷಣಸಂಸ್ಥೆಗಳ ಸಂಸ್ಥಾಪನೆಯನ್ನೇ ! ಪಂಡಿತ ಪಾಮರರಿಬ್ಬರನ್ನೂ ಏಕಪ್ರಕಾರವಾಗಿ ಮೆಚ್ಚಿಸುವ ಮಾತುಗಾರಿಕೆಯನ್ನೇ! ವೈಜ್ಞಾನಿಕ ದೃಷ್ಟಿಯನ್ನೇ! ಆಧ್ಯಾತ್ಮಿಕ ಔನ್ನತ್ಯವನ್ನೇ! ಸ್ವಧರ್ಮನಿಷ್ಠೆ ಪರಧರ್ಮ ಸಹಿಷ್ಣುತೆಗಳನ್ನೇ! ಕವಿ ಕಲಾವಿದ ವಿದ್ವಾಂಸರಿಗೆ ನಿರಂತರ ನೀಡುತ್ತಿರುವ ಆಶ್ರಯವನ್ನೇ! ಸಾಹಿತ್ಯ ಸಂಸ್ಕೃತಿಗಳ ಪೋಷಣೆಯನ್ನೇ! ಸಂಘಟನಾ ಶಕ್ತಿಯನ್ನೇ, ಶಿವಮಂತ್ರ ಸಿದ್ಧಿಯನ್ನೇ, ಎಷ್ಟು ಜನರು ಬಂದು ಬೇಡಿ ಕಾಡಿದರೂ, ಎಂಥ ವಿಘ್ನಗಳು ಎದುರಾದರೂ ಎಳ್ಳಷ್ಟೂ ಬೇಸರ, ಮುನಿಸು, ದಣಿವುಗಳನ್ನು ತೋರದ ಸದಾ ಸುಪ್ರಸನ್ನವದನವನ್ನೇ, ಬಹು ವಿಷಯ ಪರಿಣತಿಯನ್ನೇ! ಜಗಳಗಳನ್ನು ಬಗೆಹರಿಸುವ ವ್ಯವಹಾರ ಕುಶಲತೆಯನ್ನೇ! ದಿನದಿನವೂ ಎಣಿಕೆಯಿಲ್ಲದಂತೆ ಬರುವ ಭಕ್ತರ ವೈಯಕ್ತಿಕ ಸಮಸ್ಯೆಗಳಿಂದ ಆರಂಭಿಸಿ ದಾಸೋಹ, ವಿದ್ಯಾರ್ಥಿನಿಲಯ, ಶಾಲೆ ಕಾಲೇಜುಗಳ ಜಟಿಲ ಸಮಸ್ಯೆಗಳು ಎಲ್ಲವನ್ನೂ ಲೀಲಾಜಾಲವಾಗಿ ಪರಿಹರಿಸುವ ಪರಮಾದ್ಭುತವನ್ನೇ! ಉದ್ಧರಣೆಗಳನ್ನು ಬರೆಯುವುದರಿಂದ ಸರ್ವೋದ್ಧಾರದ ಸಮಗ್ರ ಪ್ರಯೋಜನಗಳವರೆಗೆ ಸರ್ವ ಕಾರ್ಯಗಳಲ್ಲಿಯೂ ಒಡಮೂಡುವ ಕಾಯಕ ನಿಷ್ಠೆಯನ್ನೇ! ಗಡಿಯಾರವೂ ನಾಚಿಕೊಳ್ಳುವಂತಹ ಸಮಯ ಪರಿಪಾಲನೆಯನ್ನೇ! ಕರಣ ವಿಜಯ, ಜಿತೇಂದ್ರಿಯತ್ವಗಳನ್ನೇ! ಆಲೋಚಿಸಿದನಿತೂ ಅಪಾರವಾಗಿ ತೋರುವ ಈ ಆಧ್ಯಾತ್ಮ ಸೂರ್ಯರ ಅಗಾಧವಾದ, ಅವರ್ಣನೀಯವಾದ ವ್ಯಕ್ತಿತ್ವದ ಎಲ್ಲ ಅಂಶಗಳನ್ನೂ ಗುರುತಿಸಿ ಅವುಗಳ ಒಟ್ಟು ಬೆಲೆಯನ್ನು ಕಟ್ಟಬಲ್ಲವರಾರು!'' ಎಂಬುದಾಗಿ ನುಡಿದಿದ್ದಾರೆ. ಅಂತೆಯೇ ''ಕಾಶಿ, ಶ್ರೀಶೈಲ ಮೊದಲಾದ ಪುಣ್ಯಕ್ಷೇತ್ರಗಳು ನಮ್ಮ ಕ್ಷೇತ್ರಗಳಲ್ಲ, ಪರಮಪೂಜ್ಯ ಶಿವಕುಮಾರ ಸ್ವಾಮಿಗಳವರ ಸುಜ್ಞಾನ ಶ್ರೀ ಪಾದವೇ ಸುಕ್ಷೇತ್ರವಾಗಿದೆ ನಮಗೆಲ್ಲ'' ಎಂಬ ಇಲಕಲ್ಲಿನ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನದ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳವರ ನುಡಿಗಳು ಅರ್ಥಪೂರ್ಣವಾಗಿವೆ.

ಶ್ರೀ ಸಿದ್ಧಲಿಂಗ ಸ್ವಾಮಿಗಳು.

ದಿನಾಂಕ ೩೦.೩.೧೯೮೮ ರಂದು ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳವರ ಕರಕಮಲ ಸಂಜಾತರಾಗಿ ಆಚಾರ ವಿಚಾರ ಸಮನ್ವಿತರಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಮಠದ ಉತ್ತರಾಧಿಕಾರಿಗಳಾಗಿ ವಿಧ್ಯುಕ್ತವಾಗಿ ನೇಮಕಗೊಂಡು ಸೇವಾಪಥದಲ್ಲಿ ಮುಂದುವರಿಯುತ್ತಿದ್ದಾರೆ.

ಯಾತ್ರಿಕರ ಪುಣ್ಯಕ್ಷೇತ್ರ - ''ಶ್ರೀ ಸಿದ್ಧಗಂಗಾ''

ಶ್ರೀ ಕ್ಷೇತ್ರದ ಮಹಿಮೆಯನ್ನರಿತ ಭಕ್ತಾದಿಗಳು ಪ್ರತಿನಿತ್ಯ ಸಹಸ್ರ ಸಂಖ್ಯೆಯಲ್ಲಿ ಸಂದರ್ಶಿಸುತ್ತಿರುವುದನ್ನೀಗ ವೀಕ್ಷಿಸಬಹುದಾಗಿದೆ. ಶ್ರೀ ಕ್ಷೇತ್ರದ ಅಧಿದೇವತೆ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಹಾಗೂ ಗಂಗಾಮಾತೆಯ ದರ್ಶನ ಮಾಡಿ,

ಸೇವೆ ಸಲ್ಲಿಸಿ ಪೂಜ್ಯಪಾದರ ಆಶೀರ್ವಾದ ಪಡೆದು ಧನ್ಯಭಾವದಿಂದ ತೆರಳುತ್ತಾರೆ. ದಿನನಿತ್ಯ ಬರುವ ಯಾತ್ರಾರ್ಥಿಗಳಿಗೆಲ್ಲಾ ಉಚಿತ ಊಟ ವಸತಿಗಳು ಶ್ರೀ ಮಠದಿಂದಲೇ ನಡೆಯುವ ವ್ಯವಸ್ಥೆಯಿದೆ.

ಪ್ರತಿವರ್ಷವೂ ಮಹಾಶಿವರಾತ್ರಿ ಸಮಯದಲ್ಲಿ ನಡೆಯುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆಗೆ ದೇಶದೆಲ್ಲೆಡೆಗಳಿಂದ ಭಕ್ತಾದಿಗಳು ಬರುತ್ತಾರೆ, ಸೇವೆಯಲ್ಲಿ ತೊಡಗುತ್ತಾರೆ. ಜಾತ್ರೆಗೆ ಆಗಮಿಸುವ ಎಲ್ಲರಿಗೂ ಪ್ರತಿದಿನವೂ ಊಟದ ವ್ಯವಸ್ಥೆಯಿರುತ್ತದೆ. ಹೀಗೆ ಆಗಮಿಸುವ ಭಕ್ತರ ಸಂಖ್ಯೆ ಸರಾಸರಿ ದಿನವೊಂದಕ್ಕೆ ೫೦-೭೦ ಸಾವಿರವಿದ್ದು ಅಷ್ಟೂ ಜನಕ್ಕೆ ಪ್ರಸಾದ ವಿತರಿಸುವ ಪವಾಡವನ್ನು ನೋಡಿ ಧನ್ಯರಾಗುವವರೆಷ್ಟೋ ಮಂದಿ. ಗ್ರಾಮೀಣ ಬಂಧುಗಳಿಗೆ ತಮ್ಮ ಜಾನುವಾರುಗಳನ್ನು ಮಾರಾಟ ಮಾಡಲು ಜಾತ್ರೆ ಒಳ್ಳೆಯ ಅವಕಾಶ ಕಲ್ಪಿಸಿಕೊಡುತ್ತದೆ. ಆಗ ದಿನದ ಖರ್ಚು ೫೦-೭೦ ಸಾವಿರ ರೂಪಾಯಿಗಳಾಗುತ್ತವೆ. ಜೊತೆಗೆ ದನಕರುಗಳಿಗೆ ವಿಮೆಯನ್ನೂ ಸಹ ಶ್ರೀ ಮಠದ ವತಿಯಿಂದಲೇ ಮಾಡಿಸಲಾಗುತ್ತದೆ. ಇದರಿಂದಾಗಿ ಜನ ಕಲ್ಯಾಣಕ್ಕಾಗಿ ನಡೆಯುವ ಶ್ರೀ ಮಠದ ಇಂಥ ಯೋಜನೆಗಳಿಂದ ಭಾವುಕರಾದ ಯಾತ್ರಾರ್ಥಿಗಳ ಭಕ್ತಿ ಶ್ರದ್ಧೆಗಳು ವೃದ್ಧಿಯಾಗುತ್ತವೆ. ಈ ಕಾಲದಲ್ಲಿ ಜನ ಮನರಂಜನೆಗಾಗಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀಮಠದಿಂದ ಸಂಯೋಜಿತವಾಗಿರುತ್ತವೆ. ಜೊತೆಗೆ ವ್ಯವಸಾಯ ಕೈಗಾರಿಕಾ ವಸ್ತು ಪ್ರದರ್ಶನ ವ್ಯವಸ್ಥಿತವಾಗಿ ರೂಪುಗೊಂಡು ಗ್ರಾಮಾಂತರ ಪ್ರದೇಶದ ಜನರ ಜ್ಞಾನಾಭಿವೃದ್ಧಿಗೆ ಸಹಾಯಕವಾಗಿದೆ.

ಶಿಕ್ಷಣ ಕೇಂದ್ರ ಶ್ರೀ ಸಿದ್ಧಗಂಗಾ

ಶಿಕ್ಷಣ ಸುಸಂಸ್ಕೃತ ಜನಾಂಗ ನಿರ್ಮಾಣದ ಮೂಲ ಬಂಡವಾಳ. ಸಮಾಜದ ಉತ್ತಮ ಲಕ್ಷಣ ಲಭ್ಯವಾಗುವುದು ಶಿಕ್ಷಣದಿಂದ. ವಿದ್ಯಾವಿಹೀನರಾದವರು ಪಶುವಿಗೆ ಸಮಾನ. ಜ್ಞಾನಕ್ಕೆ ಸಮನಾದುದು ಬೇರೊಂದಿಲ್ಲವೆಂಬುದನ್ನು ಮನಗಂಡ ಶ್ರೀಮಠದ ಪರಂಪರೆಯಲ್ಲಿ ಬಂದ ಸ್ವಾಮಿಗಳು ಶಿಕ್ಷಣ ಕೇಂದ್ರವನ್ನಾಗಿ ರೂಪಿಸಲು ಶ್ರಮಿಸಿದ್ದಾರೆ. ಅದರಲ್ಲಿಯೂ ದೀನ ದಲಿತರಾದ, ಅನಾಥರಾದ ದೇಶದ ಎಲ್ಲಾ ಭಾಗದ ಎಲ್ಲಾ ಕೋಮಿನ ವಿದ್ಯಾರ್ಥಿಗಳ ವೈವಿಧ್ಯಮಯ ಶಿಕ್ಷಣಕ್ಕೆ ಸಮಾನಾವಕಾಶವನ್ನು ಕಲ್ಪಿಸಿಕೊಟ್ಟಿರುವ ಶ್ರೀ ಸಿದ್ಧಗಂಗಾ ಗುರುಕುಲವು ರಾಷ್ಟ್ರೀಯ ಹಾಗೂ ಧಾರ್ಮಿಕ ಐಕ್ಯತೆಗಳ ಸಂಕೇತವಾಗಿ ಇಡೀ ದೇಶಕ್ಕೆ ಮಾದರಿಯಾಗಿದೆ, ಆದರ್ಶಪೂರ್ಣವಾಗಿದೆ. ವರ್ಗ, ವರ್ಣ, ವಯ, ಭಾಷೆಗಳ ಭೇದ ಇಲ್ಲಿಲ್ಲ.

ಶ್ರೀಕ್ಷೇತ್ರದಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆ, ಎರಡು ಪ್ರೌಢಶಾಲೆಗಳು, ಶಿಕ್ಷಕ ತರಬೇತಿ ಸಂಸ್ಥೆ, ಸಂಸ್ಕೃತ ಕಾಲೇಜು, ವಾಣಿಜ್ಯ ವಿದ್ಯಾಸಂಸ್ಥೆ, ಅಂಧ ಮಕ್ಕಳ ಪಾಠಶಾಲೆ, ಸಂಗೀತ ಪಾಠಶಾಲೆ ನಡೆಯುತ್ತಿದ್ದು ಪ್ರಸ್ತುತ ೪೫೦೦ ವಿದ್ಯಾರ್ಥಿಗಳು ಉಚಿತವಾಗಿ ಶ್ರೀಮಠದ ಅಶನ ವಸತಿಗಳ ಆಶ್ರಯ ಪಡೆದಿರುತ್ತಾರೆ. ಬಹುಶಃ ಒಂದೇ ಕಡೆಯಲ್ಲಿ ಉಚಿತ ಅಶನ ವಸತಿ ಸೌಕರ್ಯದಿಂದ ಕೂಡಿದ ಮಠ ಭಾರತದಲ್ಲಿ ಕಾಣಸಿಗುವುದು ದುರ್ಲಭವೆನಿಸಿದೆ ಎನ್ನಬಹುದು. ಇದಲ್ಲದೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯೆಂಬ ಅಭಿಧಾನದಲ್ಲಿ ನಾಡಿನ ವಿವಿಧ ಭಾಗಗಳಲ್ಲಿ ನಗರ ಗ್ರಾಮೀಣ ಪ್ರದೇಶಗಳಲ್ಲಿ, ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ತಾಂತ್ರಿಕ ಮಹಾವಿದ್ಯಾಲಯ, ಔಷಧ ವಿಜ್ಞಾನ ಕಾಲೇಜು, ಶಿಕ್ಷಕ ತರಬೇತಿ ಸಂಸ್ಥೆ, ಶಿಕ್ಷಣ ಮಹಾವಿದ್ಯಾಲಯ, ಪೂರ್ವ ಪ್ರಾಥಮಿಕ ಪಾಠಶಾಲೆಗಳು ನಡೆಯುತ್ತಿದ್ದ ಅವುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿನಿಲಯಗಳೂ ಸೇವಾ ಕಾರ್ಯದಲ್ಲಿ ನಿರತವಾಗಿವೆ. (ವಿವರಗಳಿಗೆ ಮುಂದಿನ ಪುಟಗಳನ್ನು ಗಮನಿಸಿ.) ಇವುಗಳಲ್ಲಿ ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ (ಎಸ್.ಐ.ಟಿ.) ಮುಕುಟ ಮಣಿಯಂತೆ ರಾರಾಜಿಸುತ್ತಿದ್ದು ದೇಶದ ಎಲ್ಲಾ ರಾಜ್ಯಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಟ್ಟಿರುವ ಭಾರತದಲ್ಲಿ ಪ್ರಚಲಿತವಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ತನ್ನ ವೈಶಿಷ್ಟ್ಯದಿಂದ ಉತ್ತಮ ವಿದ್ಯಾಸಂಸ್ಥೆಯೆಂಬ ಖ್ಯಾತಿ ಪಡೆದಿದೆ. ೧೯೮೮ನೆಯ ಮಾರ್ಚ್ ದಿನಾಂಕ ೧ ಮತ್ತು ೨ ರಂದು ವೈಭವದಿಂದ ಬೆಳ್ಳಿ ಹಬ್ಬವನ್ನಾಚರಿಸಿ ಮುನ್ನಡೆಯುತ್ತಿದೆ. ಶ್ರೀ ಮಠದ ಹೆಮ್ಮೆಯ ಶಿಕ್ಷಣ ಸಂಸ್ಥೆಯೆನಿಸಿದೆ ಎಸ್.ಐ.ಟಿ.

ಬಸವತತ್ವ ಪ್ರಯೋಗಶಾಲೆ ಶ್ರೀ ಸಿದ್ಧಗಂಗಾ

ಪರಮ ಪವಿತ್ರ ಶ್ರೀ ಕ್ಷೇತ್ರ ಸಿದ್ಧಗಂಗೆಯ ಜಂಗಮ ಚೈತನ್ಯಲಿಂಗವಾಗಿರುವ, ತ್ರಿವಿಧ ದಾಸೋಹಮೂರ್ತಿಗಳೂ, ಬಸವಾದಿ ಪ್ರಮಥರ ಮಹಾಸಂದೇಶಕ್ಕೆ ಪ್ರತ್ಯಕ್ಷ ಪ್ರಯೋಗ ಶಾಲೆಯಾದವರೂ ನುಡಿಲಿಂಗ ನಡೆಲಿಂಗವಾಗಿ ವಿಶ್ವವನ್ನು ಮುನ್ನಡೆಯಿಸಬಲ್ಲ ಕರ್ತಾರನ ಕಮ್ಮಟವಾದವರೂ ಆದ ಪೂಜ್ಯ ಶ್ರೀ. ಡಾ. ಶಿವಕುಮಾರ ಮಹಾಸ್ವಾಮಿಗಳವರ ಪವಿತ್ರಜ್ಞಾನ ಪ್ರಸಾದ

ದರ್ಶನಾಕಾಂಕ್ಷಿಗಳಾಗಿ ನಿತ್ಯ ಸಹಸ್ರಾರು ಭಕ್ತಾದಿಗಳು ಶ್ರೀಕ್ಷೇತ್ರಕ್ಕೆ ಬರುತ್ತಾರೆ. ಈ ಕ್ಷೇತ್ರದಲ್ಲಿ ದಾಸೋಹವು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಯಾತ್ರಾರ್ಥಿಗಳಿಗೂ ನಡೆಯುತ್ತದೆ. ಶಿವಯೋಗಿಗಳ ಸತ್ಯಶುದ್ಧಕಾಯಕದಿಂದ ಬಂದ ಪವಿತ್ರ ಗಳಿಕೆ, ಇಲ್ಲಿ ದಾಸೋಹದ ಮೂಲಕ ಸಮಾಜಕ್ಕೆ ಹರಿದು ಹೋಗುತ್ತದೆ. ಸಿದ್ಧಗಂಗೆಯ ಪ್ರಸಾದದಲ್ಲಿ ಬಸವಾದಿ ಶರಣರು ವಾಸವಾಗಿದ್ದಾರೆ ಎಂದು ಇಲಕಲ್ಲಿನ ಪೂಜ್ಯ ಶ್ರೀ ಮಹಾಂತಸ್ವಾಮಿಗಳು ಅಪ್ಪಣೆ ಕೊಡಿಸಿದ್ದಾರೆ. ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಬದುಕು ಒಂದು ಮಹಾನ್ ದಾರಿದೀಪವಾಗಿದೆ. ಸದಾ ಕಾಯಕ, ಸದಾ ಸರಳ ಜೀವನ, ಸದಾ ಅವ್ಯಕ್ತ ಸೇವೆ. ನಿರಂತರ ದಾಸೋಹಗಳಿಂದ ಪೂಜ್ಯ ಮಹಾಸ್ವಾಮಿಗಳವರು ಕಣ್ಣೆದುರಿನ ಕೈಲಾಸವಾಗಿದ್ದಾರೆ. ಪೀಠಾರೋಹಣದ ನಿರಂತರ ಆರು ದಶಕಗಳ ಅವರ ದುಡಿಮೆಯ ಫಲವಾಗಿ ಇಂದು ಸಿದ್ಧಗಂಗೆ ಪ್ರಪಂಚದಲ್ಲಿಯೇ ಅತ್ಯುನ್ನತ ಆಧ್ಯಾತ್ಮ ಶಿಕ್ಷಣ ಶಾಲೆಯಾಗಿ ತಲೆಯೆತ್ತಿ ನಿಂತಿದೆ ಎನ್ನುವ ಪೂಜ್ಯ ಶ್ರೀ ಮಹಾಂತಸ್ವಾಮಿಗಳವರ ಅಪ್ಪಣೆಯಲ್ಲಿ ಸತ್ಯದರ್ಶನವಿದೆ.

ಇಲ್ಲಿನ ದಾಸೋಹಕ್ಕೆ ತಗಲುವ ಖರ್ಚನ್ನು ಲೆಕ್ಕ ಹಾಕುವುದಾದರೆ ಸುಮಾರು ನೂರಾರು ವರ್ಷಗಳ ಹಿಂದೆ ಈ ಕ್ಷೇತ್ರದಲ್ಲಿ ಹತ್ತಿದ ಒಲೆ ಆರದಿರಲಿ ಎಂದು ಶ್ರೀ ಅಟವೀ ಸ್ವಾಮಿಗಳು ಶ್ರೀ ಸಿದ್ಧಲಿಂಗೇಶ್ವರರಲ್ಲಿ ಮಾಡಿದ ಪ್ರಾರ್ಥನೆಯು ಸದಾ ಕಾರ್ಯರೂಪದಲ್ಲಿರುವುದನ್ನು ಭಕ್ತಾದಿಗಳ, ಯಾತ್ರಾರ್ಥಿಗಳ, ಮಹಾಜನರ ಅವಗಾಹನೆಗೆ ತರಬಹುದಾಗಿದೆ. ೪೦೦೦ ವಿದ್ಯಾರ್ಥಿಗಳನ್ನೊಳಗೊಂಡ ಉಚಿತ ವಿದ್ಯಾರ್ಥಿ ನಿಲಯ, ಹತ್ತಾರು ಶಿಕ್ಷಣ ಸಂಸ್ಥೆಗಳು ಹಾಗೂ ಪ್ರತಿದಿನ ಬರುವ ಯಾತ್ರಿಕರಿಗೆ ದಾಸೋಹ ಇವೆಲ್ಲವನ್ನು ನಡೆಸುವ ಜವಾಬ್ದಾರಿ ಹೊತ್ತಿರುವ ಶ್ರೀ ಕ್ಷೇತ್ರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಾರ್ವಜನಿಕರಿಗೆ ತಿಳಿಯಬಪಡಿಸುವುದು ಸೂಕ್ತವೆನಿಸುತ್ತದೆ.

ಶ್ರೀ ಮಠ ವೀರಶೈವ ಪರಂಪರೆಯ ವಿರಕ್ತಮಠವಾಗಿದ್ದು, ಗಣನೀಯವಾದ ಸ್ಥಿರಾಸ್ತಿಯನ್ನು ಹೊಂದಿಲ್ಲ. ಇರುವ ಅಲ್ಪ ಸ್ವಲ್ಪ ಜಮೀನಿನಿಂದ ಬರುವ ಉತ್ಪತ್ತಿಯು ಶ್ರೀ ಕ್ಷೇತ್ರದಿಂದ ನಡೆಯುತ್ತಿರುವ ಕಾರ್ಯಕಲಾಪಗಳಿಗೆ ಒಂದೆರಡು ತಿಂಗಳ ಮಟ್ಟಿಗೆ ಸಾಕಾದೀತು. ಆದ್ದರಿಂದ ಮಹಾಜನಗಳ ಉದಾರ ಕೊಡುಗೆ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಾಯಸಹಕಾರಗಳು ಶ್ರೀ ಮಠದ ಸಂಪನ್ಮೂಲ. ಶ್ರೀ ಮಠದಲ್ಲಿ ಯಾವುದರಲ್ಲಿಯೂ ದುಂದು ವೆಚ್ಚವಿಲ್ಲ. ದೀನ ದಲಿತರ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿ ಇಟ್ಟಿರುವ ಪೂಜ್ಯಪಾದರ ನೇತೃತ್ವದಲ್ಲಿ ಶ್ರೀ ಕ್ಷೇತ್ರದಲ್ಲಿ ಖರ್ಚಾದ ಪ್ರತಿ ಪೈಸೆಯೂ ಉದ್ದೇಶಿತ ಫಲವನ್ನು ತರುತ್ತಿದೆ. ಹಾಗಾಗಿ ಮಹಾಜನಗಳು ಆತ್ಮಸಂತೋಷ ಹಾಗೂ ತೃಪ್ತಿಯಿಂದ ಶ್ರೀಮಠಕ್ಕೆ ಸಹಾಯ ಮಾಡಲು ಮುಂದೆ ಬಂದಿದ್ದಾರೆ, ಬರುತ್ತಿದ್ದಾರೆ.

ಶ್ರೀಕ್ಷೇತ್ರದ ಸಂದರ್ಶನಕ್ಕೆ ಬರುವ ಯಾತ್ರಾರ್ಥಿಗಳ ಗಮನಕ್ಕೆ ಬರುವ ಸಾಮಾನ್ಯ ದೃಶ್ಯವೆಂದರೆ ಶ್ರೀ ಮಠದಲ್ಲಿ ಕಿಕ್ಕಿರಿದು ತುಂಬಿರುವ ವಿದ್ಯಾರ್ಥಿಗಳ ಕೋಣೆಗಳು, ಹಜಾರಗಳು, ಗದ್ದುಗೆ, ಶಾಲಾ ಕಾಲೇಜುಗಳ ಆವರಣಗಳು, ಇದಕ್ಕೆ ಕಾರಣ ಶ್ರೀ ಮಠದ ಆಶ್ರಯ ಬಯಸಿ ಬರುವ ಬಡ ವಿದ್ಯಾರ್ಥಿಗಳು ಲೆಕ್ಕವಿಲ್ಲದ ಸಂಖ್ಯೆ. ಅವರೆಲ್ಲರಿಗೂ ಒಳ್ಳೆಯ ವ್ಯವಸ್ಥೆ ಮಾಡಬೇಕೆಂಬ ಆಕಾಂಕ್ಷೆ ಪೂಜ್ಯ ಶ್ರೀಗಳವರಿಗೆ. ಮಹಾತ್ಮ ಗಾಂಧಿಯವರು ಕಲ್ಪಿಸಿಕೊಂಡಿದ್ದ ಸಮಾಜವಾದವನ್ನು ಶ್ರೀ ಕ್ಷೇತ್ರ ಸಿದ್ಧಗಂಗಾದಲ್ಲಿ ಪೂರ್ಣ ಕಾರ್ಯರೂಪದಲ್ಲಿ ಕಾಣಬಹುದು. ಪೂಜ್ಯ ಶ್ರೀ ಶ್ರೀಗಳೂ ವಿದ್ಯಾರ್ಥಿಗಳ ಜೊತೆಯಲ್ಲಿಯೇ ವಾಸಿಸುತ್ತಾರೆ.

ಶ್ರೀ ಮಠದ ಸಾಂಸ್ಕೃತಿಕ ಚಟುವಟಿಕೆಗಳು

ಶ್ರೀ ತೋಂಟದಾರ್ಯ ವಿದ್ಯಾವರ್ಧಿನೀ ಸಭಾ

೧೯೩೦ ರಲ್ಲಿ ಸ್ಥಾಪಿತವಾದ ಈ ಸಂಘ ವಿದ್ಯಾರ್ಥಿಗಳಿಗಾಗಿ ರೂಪಿತವಾಗಿ ಲೇಖನ, ಭಾಷಣ, ಕಾವ್ಯವಾಚನ, ವಚನ ಸ್ಪರ್ಧೆಗಳನ್ನೇರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿರುವ ವಿವಿಧ ಅಭಿರುಚಿಗಳನ್ನು ಸೂಕ್ತರೀತಿಯಲ್ಲಿ ಅರಳಿಸಲು ಸಹಾಯವಾಗಿದೆ. ಸಂಘವು ಶ್ರೀ ಪೂಜ್ಯಪಾದರ ಅಧ್ಯಕ್ಷತೆಯಲ್ಲಿ ಕ್ರಿಯಾಶೀಲವಾಗಿದೆ.

ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿ

ಪ್ರತಿಭಾವಂತರಾದ ಅಧ್ಯಾಪಕ, ಸಿಬ್ಬಂದಿ, ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಕಲೆಯನ್ನು ಸದುಪಯೋಗಮಾಡಿಕೊಳ್ಳುವ

ದೃಷ್ಟಿಯಿಂದ ಜನ್ಮ ತಾಳಿ ಈ ಮಂಡಳಿ ಶ್ರೀಮಠದ ಜಾತ್ರೆಯ ಕಾಲದಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಲ್ಲಿ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ಅನೌಪಚಾರಿಕ ಶಿಕ್ಷಣ ಪ್ರಸಾರದಲ್ಲಿ ಮಹತ್ವದ ಪಾತ್ರವಹಿಸಿದೆ. ನಾಟಕಗಳನ್ನಾಡುವುದು ಹಣಗಳಿಕೆಯ ಉದ್ದೇಶದಿಂದಲ್ಲ. ಪ್ರತಿಯಾಗಿ ಜನರಲ್ಲಿ ಧಾರ್ಮಿಕ ಹಾಗೂ ರಾಷ್ಟ್ರೀಯ ಮನೋಭಾವವನ್ನು ರೂಢಿಸಲು ಶ್ರಮಿಸುತ್ತಿದೆ. ಈವರೆವಿಗೆ ಮಂಡಳಿಯಿಂದ ಪ್ರದರ್ಶಿತವಾಗಿರುವ ಭಕ್ತ ಮಾರ್ಕಂಡೇಯ, ಎಚ್ಚಮ ನಾಯಕ, ರಾಜಶೇಖರ ವಿಲಾಸ ಮತ್ತು ಜಗಜ್ಯೋತಿ ಬಸವೇಶ್ವರ ನಾಟಕಗಳು ಲಕ್ಷಾಂತರ ಜನರ ಮೆಚ್ಚುಗೆ ಗಳಿಸಿವೆ. ಅದರಲ್ಲೂ ಜಗಜ್ಯೋತಿ ಬಸವೇಶ್ವರ ನಾಟಕವಂತೂ ರಾಜ್ಯದ ಹತ್ತಾರು ಜಿಲ್ಲೆಗಳಲ್ಲಿ ೩೮೭ ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪ್ರದರ್ಶಿತವಾಗಿ ದಾಖಲೆ ಸ್ಥಾಪಿಸಿದೆ. ಮಂಡಳಿ ಪರಿಪೂರ್ಣ ಸ್ವಾವಲಂಬಿಯಾಗಿದ್ದು ರಂಗ ಸಲಕರಣೆಗಳನ್ನು ಹೊಂದಿದೆ.

ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ; ಶ್ರೀ ಸಿದ್ಧಗಂಗಾ ಪ್ರಕಾಶನ

ಸಾಹಿತ್ಯ ಪ್ರಕಾಶನ ಕ್ಷೇತ್ರದಲ್ಲೂ ಶ್ರೀಮಠ ಸೇವೆ ಸಲ್ಲಿಸುತ್ತ ಬಂದಿದೆ. ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಿಚಾರಗಳನ್ನೊಳಗೊಂಡ ಗ್ರಂಥಗಳನ್ನು ಪ್ರಕಟಿಸುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಈ ಪ್ರಕಾಶನಗಳು ಇದುವರೆಗೆ 'Sri Basaveswara and his contemporaries' ಎಂಬ ಇಂಗ್ಲೀಷ್ ಗ್ರಂಥ ಮತ್ತು ಅದರ ಕನ್ನಡಾನುವಾದ ''ಶ್ರೀ ಬಸವೇಶ್ವರ ಮತ್ತು ಅವರ ಸಮಕಾಲೀನರು'' ಎಂಬುದನ್ನೂ ''ಸುಭಾಷಿತ ಕುಸುಮಾಂಜಲಿ'' ಎಂಬ ಸಂಕಲನ ಗ್ರಂಥವನ್ನೂ, ''ಕರ್ಮಯೋಗಿ ಸಿದ್ಧರಾಮ'' ಎಂಬ ನಾಟಕ ಮತ್ತು ''ಪೌರುಷ ಪಾಂಚಜನ್ಯ'' ಎಂಬ ಕವನ ಸಂಕಲನ ಇವುಗಳನ್ನೂ ಪ್ರಕಟಿಸಿದೆ. ಶ್ರೀ ಸಿದ್ಧಗಂಗಾ ಪ್ರಕಾಶನದ ಹೆಸರಿನಲ್ಲಿ ''ಕರ್ತಾರನ ಕಮ್ಮಟ'', ''ಶಿವಯೋಗಿ ಉದ್ಧಾನ ಯತೀಶ್ವರ', ''ವಚನಗಂಗಾ'' ಮತ್ತು ''ವಚನಬಿಲ್ವ'' ಕೃತಿಗಳನ್ನು ಪ್ರಕಟಿಸಿದೆ.

ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿಗಳ ಸಂಘ

ಶ್ರೀಮಠದ ಆಶ್ರಯ ಪಡೆದು ವಿದ್ಯಾವಂತರಾಗಿ ದೇಶ ವಿದೇಶಗಳ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಸ್ರಾರು ಮಂದಿ ಹಳೆಯ ವಿದ್ಯಾರ್ಥಿಗಳು ಒಟ್ಟುಗೂಡಿ ಮಾತೃಸಂಸ್ಥೆಗೆ ತಮ್ಮ ಅಳಿಲು ಸೇವೆಯನ್ನು ಮಾಡುವ ಉದ್ದೇಶದಿಂದ ೧೯೫೫ನೇ ಅಕ್ಟೋಬರ್ ೪ ರಂದು ಈ ಸಂಘವನ್ನು ಸ್ಥಾಪಿಸಿದರು. ಅಂದಿನಿಂದ ಸಂಘವು ಪ್ರಗತಿಪಥದಲ್ಲಿ ಮುನ್ನಡೆದು ಗಣನೀಯ ಚಟುವಟಿಕೆಗಳನ್ನು ಹಮ್ಮಿಕೊಂಡು ಬಂದಿದೆ. ಜಾತ್ರೆಯ ಕಾಲದಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ವ್ಯವಸ್ಥೆಗೊಳಿಸುವುದು, ಸಿದ್ಧಗಂಗಾ ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು ಸಂಘದ ಅಮೂಲ್ಯ ಸೇವಾಕ್ಷೇತ್ರಗಳಾಗಿವೆ. ಜೊತೆಗೆ ಪರಮ ಪೂಜ್ಯ ಶ್ರೀ ಶ್ರೀಗಳವರ ಪೀಠಾರೋಹಣದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ ''ಸಿದ್ಧಗಂಗಾಶ್ರೀ'' ಬೃಹತ್ ಅಭಿನಂದನಾ ಗ್ರಂಥ ಪ್ರಕಟಣೆಯು ಸಂಘ ಮಾಡಿರುವ ಚಿರಂತನ ಸೇವಾ ದಾಖಲೆಯಾಗಿದೆ.

ಸಂಘದ ಶಾಖೆಗಳಾಗಿ ಬೆಂಗಳೂರು, ಮೈಸೂರುಗಳಲ್ಲಿರುವ ಶ್ರೀಮಠದ ಹಳೆಯ ವಿದ್ಯಾರ್ಥಿಗಳು ಸಂಘಗಳನ್ನು ಸ್ಥಾಪಿಸಿದ್ದಾರೆ. ಅವು ಸತತ ಕ್ರಿಯಾಶೀಲವಾಗಿ ಶ್ರದ್ಧೆಯಿಂದ ಕೆಲಸ ಮಾಡುತ್ತಿವೆ.

'ಸಿದ್ಧಗಂಗಾ' ಮಾಸಿಕ ೧೯೬೫ ರಲ್ಲಿ ಪ್ರಾರಂಭ

ಶ್ರೀ ಮಠದ ಸೇವೆಗೆ ಬಹುಮುಖಗಳು. ಪತ್ರಿಕೋದ್ಯಮವೂ ಅವುಗಳಲ್ಲಿ ಒಂದು. ಪತ್ರಿಕೆಯ ಉದ್ದೇಶ ಧಾರ್ಮಿಕ ಶಿಕ್ಷಣ ಪ್ರಸಾರ, ಸಾಮಾಜಿಕ ಆರೋಗ್ಯ ನೈರ್ಮಲ್ಯಗಳ ಸಾಧನೆ. ಶ್ರೀ ಮಠದ ಮುಖವಾಣಿಯಾಗುವಂತೆ ಪತ್ರಿಕೆ ಪ್ರಕಟವಾಗಬೇಕೆಂಬ ಸದುದ್ದೇಶ. ತ್ರೈಮಾಸಿಕವಾಗಿ ಪ್ರಾರಂಭವಾದ 'ಸಿದ್ಧಗಂಗಾ' ಮಾಸಿಕವಾಗಿ ಮುನ್ನಡೆದು ಬೆಳ್ಳಿಹಬ್ಬ ಆಚರಿಸುವ ಉತ್ಸಾಹದಲ್ಲಿದೆ. ಕರ್ನಾಟಕ ರಾಜ್ಯದ ಅಕಾಡೆಮಿಯಿಂದ ನಿರಂತರ ೨೫ ವರ್ಷಗಳು ನಡೆದು ಬಂದಿದ್ದಕ್ಕಾಗಿ ಪ್ರಶಸ್ತಿಗಳಿಸಿ ಹೆಗ್ಗಳಿಕೆಯನ್ನು ಸಾಧಿಸಿದೆ. ಬೋಧಪ್ರದವಾದ ಪತ್ರಿಕೆ ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕ ಲೇಖನಗಳ ಜೊತೆಗೆ ಪೂಜ್ಯ ಶ್ರೀಶ್ರೀಗಳವರ ಶ್ರೀವಾಣಿಯೊಂದಿಗೆ, ಶ್ರೀಗಳವರ ಕಾರ್ಯಕ್ರಮಗಳ ಪರಿಚಯದೊಂದಿಗೆ, ಶ್ರೀ ಕ್ಷೇತ್ರವಾರ್ತೆಯನ್ನೊಳಗೊಂಡು ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ಹಳೆಯ ವಿದ್ಯಾರ್ಥಿಗಳ ಹೆಮ್ಮೆಯ ಪ್ರಕಟಣೆ 'ಸಿದ್ಧಗಂಗಾ.'

ವಸ್ತು ಪ್ರದರ್ಶನ

ಹಳೆಯ ವಿದ್ಯಾರ್ಥಿಗಳ ಸಂಘ ಮತ್ತೊಂದು ಸ್ತುತ್ಯಾರ್ಹ ಸೇವಾಮುಖಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ವ್ಯವಸ್ಥೆ. ಶ್ರೀ ಮಠದಲ್ಲಿ ನಡೆಯುವ ಶಿವರಾತ್ರಿ ಸಂದರ್ಭದ ಶ್ರೀ ಸಿದ್ಧಲಿಂಗೇಶ್ವರ ಜಾತ್ರಾ ಕಾಲದಲ್ಲಿ ನಡೆಯುವ ವಸ್ತು ಪ್ರದರ್ಶನ ೧೫ ದಿನಗಳ ಕಾಲ ತೆರೆದಿರುತ್ತದೆ. ಈ ವಸ್ತು ಪ್ರದರ್ಶನದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಅನೇಕ ಇಲಾಖೆಗಳು ಮಳಿಗೆಗಳನ್ನೂ ತೆರೆದು ಸಹಕರಿಸುತ್ತ ಬರುತ್ತಿವೆ. ಜೊತೆಗೆ ಖಾಸಗಿ ಉದ್ಯಮಿಗಳೂ ತಮ್ಮ ಸಂಸ್ಥೆಗಳ ಮಳಿಗೆಗಳನ್ನೂ ತೆರೆದು ಸಹಕಾರ ನೀಡುತ್ತಾ ಬಂದಿದ್ದಾರೆ. ಇದರಿಂದಾಗಿ ಲಕ್ಷಾಂತರ ಗ್ರಾಮೀಣ ಜನರಿಗೆ ಲಾಭವಾಗುತ್ತಿದೆ.

ಪೂಜ್ಯ ಶ್ರೀಗಳವರ ಆಶೀರ್ವಾದ ಮತ್ತು ಶ್ರೀಕ್ಷೇತ್ರದ ಅಧ್ಯಾಪಕ, ಸಿಬ್ಬಂದಿ ವರ್ಗದವರ ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಜರುಗುವ ವಸ್ತು ಪ್ರದರ್ಶನದ ಯಶಸ್ಸಿಗೆ ಹಳೆಯ ವಿದ್ಯಾರ್ಥಿಗಳ ಸಂಘ ವಿಶೇಷವಾಗಿ ಆಸಕ್ತಿ ವಹಿಸುತ್ತಿದೆ.

ಶಿಬಿರ, ಸಮ್ಮೇಳನಗಳು

ಆಧುನಿಕ ನಾಗರಿಕತೆಯ ನಡುವೆ ಸದ್ದುಗದ್ದಲವಿಲ್ಲದೆ ನಿಸರ್ಗದ ನಡುವೆ ಇರುವ ಶ್ರೀಕ್ಷೇತ್ರದಲ್ಲಿ ವರ್ಷದುದ್ದಕ್ಕೂ ಹಲವು ಹನ್ನೊಂದು ಧಾರ್ಮಿಕ, ಶೈಕ್ಷಣಿಕ, ಕ್ರೀಡಾ ಶಿಬಿರ, ಸಮ್ಮೇಳನಗಳು ನಡೆಯುತ್ತಿರುತ್ತವೆ. ಇವುಗಳಿಗೆ ಬರುವ ಪ್ರತಿನಿಧಿಗಳಿಗೆ ಭೋಜನ ಮತ್ತು ವಸತಿ ಸೌಕರ್ಯಗಳು ಪೂಜ್ಯ ಶ್ರೀಗಳವರ ನೇತೃತ್ವದಲ್ಲಿ ವ್ಯವಸ್ಥಿತ ರೀತಿಯಲ್ಲಿ ಒದಗಿಸಲ್ಪಡುತ್ತದೆ.

೧೯೬೩ನೇ ಡಿಸೆಂಬರ್ ೨೮ ರಿಂದ ೩೦ರ ವರೆಗೆ ೪೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳವು ನಡೆಯಿತು. ಅದರ ವ್ಯವಸ್ಥೆಯನ್ನು ನಾಡಿನ ನಾನಾ ಮೂಲೆಗಳಿಂದ ಬಂದಿದ್ದ ವಿದ್ವಾಂಸರು ಮೆಚ್ಚಿದರು. ೧೯೪೭ನೇ ಜನವರಿಯಲ್ಲಿ ೧೧ ಮತ್ತು ೧೨ ರಂದು ಅಖಿಲ ಕರ್ನಾಟಕ ಶಿಕ್ಷಣ ಸಮ್ಮೇಳನವು ಜರಗಿತು. ೧೯೮೫ರ ಅಕ್ಟೋಬರ್‌ನಲ್ಲಿ ಇಲಕಲ್ ಶ್ರೀ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನದ ಶರಣ ಸಿದ್ಧಾಂತ ವಿದ್ಯಾಪೀಠದ ಒಂದು ವಾರದ ಶಿವಾನುಭವ ತರಬೇತಿ ಶಿಬಿರ ಅತ್ಯಪೂರ್ವವಾಗಿ ನಡೆಯಿತು. ಜೊತೆಗೆ ಪ್ರತಿವರ್ಷವೂ ಜನವರಿ ೧೪ರಂದು ಅಥವಾ ಸಂಕ್ರಾಂತಿಯಂದು ಪರಮ ಪೂಜ್ಯ ಶಿವಯೋಗಿ ಶ್ರೀ ಉದ್ದಾನಸ್ವಾಮಿಗಳ ಪುಣ್ಯಾರಾಧನೆ ಹಾಗೂ ಗ್ರಾಮಾಂತರ ಬಸವ ಜಯಂತಿ ವಾರ್ಷಿಕ ಸಮಾರೋಪ ಸಮಾರಂಭಗಳು ವೈಶಿಷ್ಟ್ಯಪೂರ್ಣವಾಗಿ ನಡೆಯುತ್ತದೆ. ನವರಾತ್ರಿ ಸಂದರ್ಭದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಂತೂ ಕಣ್ಮನಗಳಿಗೆ ಹಬ್ಬವನ್ನುಂಟುಮಾಡುತ್ತವೆ. ಇವೆಲ್ಲವುಗಳಿಗೆ ಮುಕುಟಪ್ರಾಯವೆನ್ನುವಂತೆ ಶ್ರೀಮಠದ ದೇವಶಿಲ್ಪಿ ಬಸವ ಸಂದೇಶದ ಹರಿಕಾರರಾದ ಪರಮಪೂಜ್ಯ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ ಜನ್ಮದಿನಾಚರಣೆಯ ಸಮಾರಂಭ ನಾಡಿನೆಲ್ಲೆಡೆಗಳಿಂದ ಹಳೆಯ ವಿದ್ಯಾರ್ಥಿಗಳನ್ನೂ, ಭಕ್ತಾದಿಗಳನ್ನೂ, ಅಭಿಮಾನಿಗಳನ್ನೂ ಆಕರ್ಷಿಸುವ ಬೃಹತ್ ಪ್ರಮಾಣದ ಮಹೋನ್ನತ ಕಾರ್ಯಕ್ರಮವಾಗಿ ರೂಪಗೊಳ್ಳುತ್ತ ನಡೆದಿದೆ. ಶ್ರಾವಣಮಾಸಾದಿ ವಿಶೇಷ ಸಂದರ್ಭಗಳಲ್ಲಿ ಕೀರ್ತನೆ, ಶರಣರ ಪುರಾಣ ಪ್ರವಚನಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ಗ್ರಾಮಾಂತರ ಬಸವ ಜಯಂತಿ

ಶ್ರೀ ಮಠವನ್ನು ವಿಶ್ವದ ಶ್ರೇಷ್ಠ ಸಮತಾವಾದಿಯಾಗಿ, ದಲಿತೋದ್ಧಾರಕರಾಗಿ, ವಿಚಾರವಾದಿಯಾಗಿ ೧೨ನೇ ಶತಮಾನದಲ್ಲಿ ಆಗಿಹೋದ ಬಸವಣ್ಣನವರ ತತ್ತ್ವಶಾಸ್ತ್ರದ ಪ್ರಯೋಗಶಾಲೆಯನ್ನಾಗಿ ನಿರ್ಮಾಣಮಾಡಿರುವ ಪೂಜ್ಯ ಶ್ರೀಗಳವರು ತಾವು ಅರಿತು, ಆಚರಿಸಿ, ಅರ್ಥವನ್ನು ಮನಗಂಡು ಬಸವತತ್ತ್ವಗಳು ಸಮಾಜದ ಇಂದಿನ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲುವೆಂಬ ವಿಶ್ವಾಸದಿಂದ ಬಸವ ಜಯಂತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ೧೯೭೯ರಿಂದ ಆಚರಣೆಗೆ ತಂದಿದ್ದಾರೆ. ಇದೊಂದು ವಿನೂತನ ವೈಶಿಷ್ಟ್ಯಪೂರ್ಣ ಯೋಜನೆ. ದಿನದ ಇಪ್ಪತ್ನಾಲ್ಕು ಘಂಟೆಗಳು ನಿರಂತರವಾಗಿ ಬಸವ ಸ್ಮರಣೆಯಲ್ಲಿ ತೊಡಗುವ ಪವಿತ್ರ ಸಮಾರಂಭ. ಇದರ ಅಂಗವಾಗಿ ಬಸವಣ್ಣನವರ ಭಾವಚಿತ್ರದ, ವಚನ ಗ್ರಂಥಗಳ ಉತ್ಸವ; ಉಪನ್ಯಾಸ, ಪ್ರಸಾದ ವ್ಯವಸ್ಥೆ, ಶರಣ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಸಾಹಿತಿಗಳಿಗೆ ಸನ್ಮಾನ, ವಚನ ಸಾಹಿತ್ಯದ ಬಸವಾದಿ ಶರಣರನ್ನು ಕುರಿತು ಸಾಹಿತ್ಯದ ಪ್ರಕಟಣೆ ಮುಂತಾದುವುಗಳ ಜೊತೆಗೆ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶನವಿರುತ್ತದೆ. ಈ ಉದ್ದೇಶಕ್ಕಾಗಿಯೇ ಶ್ರೀ ಮಠದ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಂಶುಪಾಲರು, ವಿದ್ಯಾರ್ಥಿಗಳನ್ನೊಳಗೊಂಡು ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿಯನ್ನು

ಸಂಸ್ಥಾಪಿಸಿ ಪರಮ ಪೂಜ್ಯರು ಗಣನೀಯ ಪ್ರಮಾಣದ ಹಣವನ್ನು ವಿನಿಯೋಗಿಸಿದ್ದಾರೆ. ಇದುವರೆಗೆ ೩೮೭ ಗ್ರಾಮಗಳಲ್ಲಿ ಬಸವ ಜಯಂತಿ ನಡೆದಿದೆ. ಪೂಜ್ಯ ಶ್ರೀಗಳವರ ಸೇವಾ ಸಂಕಲ್ಪದ ಶಿವಬೆಳಕನ್ನು ಪ್ರಸರಿಸುತ್ತಿದೆ. ಗ್ರಾಮಾಂತರ ಜನಜೀವನದಲ್ಲಿ ವಿಚಾರ ಸ್ವಾತಂತ್ರ್ಯವನ್ನು ಹೆಚ್ಚಿಸಿದೆ. ವೈವಿಧ್ಯಮಯ ಮನರಂಜನೆಗೊಳಿಸಿದೆ. ಉತ್ತಮ ಜೀವನ ವಿಧಾನ ರೂಪಿಸಿದೆ.

ಶ್ರಮದಾನ

ಶ್ರೀ ಕ್ಷೇತ್ರದ ಪ್ರತಿ ವಿದ್ಯಾರ್ಥಿಯೂ ವಾರಕ್ಕೆರೆಡು ದಿವಸಗಳು ಸಾಯಂಕಾಲ ವಿವಿಧ ಕೆಲಸ ಕಾರ್ಯಗಳಲ್ಲಿ ತೊಡಗುವುದು ಸಂಸ್ಥೆಯ ನಿಯಮ. ಗಿಡಗಳಿಗೆ ನೀರು ಹಾಕುವುದು, ಶ್ರೀ ಕ್ಷೇತ್ರದ ಆವರಣವನ್ನು ಸ್ವಚ್ಛಗೊಳಿಸುವುದು, ಕಟ್ಟಡ ನಿರ್ಮಾಣಕ್ಕೆ ಬೇಕಾದ ಕಲ್ಲು, ಮಣ್ಣು ಸಾಗಿಸುವುದು, ಸುಗ್ಗಿಯ ಕಾಲದಲ್ಲಿ ಬೆಳೆ ಕಟಾವು ಮಾಡುವುದು, ಒಕ್ಕಣೆ ಮಾಡುವುದು ಇತ್ಯಾದಿ ಕೆಲಸಗಳಲ್ಲಿ ಶ್ರಮವಹಿಸುವುದು ಶ್ರೀ ಮಠದ ನಿಯಮಗಳಲ್ಲಿ ಸೇರಿದೆ. ಪೂಜ್ಯ ಶ್ರೀಗಳವರಾದಿಯಾಗಿ ಅಧ್ಯಾಪಕರೂ, ಸಿಬ್ಬಂದಿ ವರ್ಗದವರೂ ಶ್ರಮದಾನ ಕಾರ್ಯಗಳಲ್ಲಿ ಭಾವಹಿಸುತ್ತಾರೆ. ಸೇವಾಭಾವನೆಯಿಂದ ಸ್ವಸಂತೋಷದಿಂದ ನಡೆಯುವ ಈ ಕೆಲಸ ಕಾರ್ಯಗಳ ಮೂಲಮಂತ್ರ ಕಾಯಕವೇ ಕೈಲಾಸವೆಂಬ ಶ್ರೀ ಮಠದ ಧ್ಯೇಯವಾಕ್ಯ.

ಈ ಶ್ರಮದಾನದಿಂದ ವಿದ್ಯಾರ್ಥಿಗಳಿಗೆ ಆಗುವ ಪ್ರಯೋಜನಗಳು ಹಲವು. ಮೊದಲನೆಯದಾಗಿ ತನ್ನನ್ನು ಸಾಕಿ ಸಲಹುತ್ತಿರುವ ಮಾನ್ಯ ಸಂಸ್ಥೆಗೆ ತನ್ನ ಕೈಲಾದಮಟ್ಟಿಗೆ ಸೇವೆ ಸಲ್ಲಿಸುತ್ತಿರುವೆನೆಂಬ ತೃಪ್ತಿ. ಎರಡನೆಯದಾಗಿ ದೈಹಿಕ ಶ್ರಮದಿಂದ ಲಭ್ಯವಾಗುವ ಶರೀರ ದಾರ್ಢ್ಯ ಹಾಗೂ ಮನಸ್ಸಿನ ಉಲ್ಲಾಸ. ಮೂರನೆಯದಾಗಿ ದೇಶದ ಮುನ್ನಡೆಗೆ ಆತಂಕವಾಗಿರುವ ಬಿಳೀಕಾಲರ್ ಮನೋಭಾವದ ಉಚ್ಚಾಟನೆ. ಈ ರೀತಿಯಾಗಿ ಶ್ರೀ ಕ್ಷೇತ್ರದ ಶ್ರಮಜೀವನದಿಂದ ವಿದ್ಯಾರ್ಥಿಯು ಪುಟವಿಟ್ಟ ಚಿನ್ನದಂತಾಗಿ ರಾಷ್ಟ್ರದ ಹೆಮ್ಮೆಯ ಆಸ್ತಿಯಾಗುತ್ತಾನೆ. ಇಷ್ಟೆಲ್ಲಾ ಜವಾಬ್ದಾರಿಯನ್ನು ಹೊತ್ತಿರುವ ಪೂಜ್ಯ ಶ್ರೀಗಳು ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ತೊಡಗಿರುತ್ತಾರೆ. ಶ್ರೀಗಳವರು ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತಾರೆ. ಅವರಿಗೆ ಪಾಠ ಹೇಳುತ್ತಾರೆ. ಬಂದ ಯಾತ್ರಿಕರಿಗೆ ದರ್ಶನಕೊಟ್ಟು ಕಷ್ಟ ಸುಖಗಳನ್ನು ವಿಚಾರಿಸಿ ಪರಿಹಾರ ಸೂಚಿಸುತ್ತಾರೆ. ಸಂಸ್ಥೆಯ ಸೇವಾ ಕಾರ್ಯಗಳ ಖರ್ಚು ವೆಚ್ಚಗಳ ಪೂರೈಕೆಗಾಗಿ ಧನಧಾನ್ಯ ಸಂಗ್ರಹಣಕ್ಕಾಗಿ ಸಂಚಾರ ಕೈಗೊಳ್ಳುತ್ತಾರೆ. ಶ್ರೀಗಳವರನ್ನು ಆಹ್ವಾನಿಸಿ ಅನೇಕ ಸಂಘ ಸಂಸ್ಥೆಗಳು ಅವರ ಆಶೀರ್ವಚನವನ್ನು ಪಡೆಯುತ್ತವೆ. ಶ್ರೀಗಳವರು ೧೯೬೯ ಜೂನ್ ೨ ಮತ್ತು ೩ ರಂದು ಮುಂಬಯಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ೧೮ನೇ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಗಳು ಅಧ್ಯಕ್ಷರಾಗಿಯೋ, ಸದಸ್ಯರಾಗಿಯೋ ಇರುವ ಶಿಕ್ಷಣ ಇಲಾಖೆಯ ಅನೇಕ ಸಮಿತಿಗಳು ಶ್ರೀಗಳವರ ಅನುಭವದ ಉಪಯೋಗವನ್ನು ಪಡೆಯುತ್ತವೆ. ಆದರೆ ಶ್ರೀಗಳವರಿಗೆ ಮಾಡಿದೆನೆಂಬುದು ಮನದಲ್ಲಿ ಹೊಳೆಯದ ಭಾವನೆ. ದಿನದ ೧೦ ಘಂಟೆಗಳನ್ನು ವೈವಿಧ್ಯಮಯ ಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಗಳವರಿಗೆ ಒಂದು ಕಾರ್ಯದ ನಂತರ ಇನ್ನೊಂದು ಕಾರ್ಯ ಕೈಕೊಳ್ಳುವುದೇ ವಿರಾಮವೆಂದು ಲೋಕಕ್ಕೆ ಸಾರುತ್ತಿದ್ದಾರೆ. ಇದನ್ನು ಅವರು ಕ್ರಿಯಾಯೋಗವೆನ್ನುತ್ತಾರೆ.

ಇಷ್ಟೆಲ್ಲಾ ಜವಾಬ್ದಾರಿಗಳನ್ನು ಹೊತ್ತಿರುವ ಶ್ರೀಶ್ರೀಗಳವರಿಗೆ ಅಧ್ಯಾಪಕರು, ಸಿಬ್ಬಂದಿ ವರ್ಗದವರು ಉತ್ಸಾಹದಿಂದ ಮತ್ತು ಮುಕ್ತ ಮನಸ್ಸಿನಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ವೇಳಾನಿಯಮ ಸೀಮಿತವಾದುದಲ್ಲ. ಪೂಜ್ಯ ಶ್ರೀಗಳು ಅನುಸರಿಸುತ್ತಿರುವ ಗುರುಪಥವೇ ಆದರ್ಶ. ಸಕಲ ಜೀವರಿಗೆ ಲೇಸನ್ನು ಬಯಸುವುದೇ ಶ್ರೀಮಠದ ಹಾರೈಕೆ.

ನಾಡಿನ ಭಕ್ತಾದಿಗಳು, ಅಭಿಮಾನಿಗಳು, ಹಳೆಯ ವಿದ್ಯಾರ್ಥಿಗಳು ಪರಮ ಪೂಜ್ಯ ಶ್ರೀಗಳವರ ಸೇವಾ ಮಹಿಮೆಯನ್ನು ಗಮನಿಸಿ ೧೯೫೭ರಲ್ಲಿ ರಜತ ಮಹೋತ್ಸವವನ್ನು, ೧೯೮೨ ರಲ್ಲಿ ಸುವರ್ಣಮಹೋತ್ಸವವನ್ನು ವೈಭವಪೂರ್ಣವಾಗಿ ಆಚರಿಸಿ ಭಕ್ತಿ ಗೌರವಗಳನ್ನು ಸಮರ್ಪಿಸಿ ಕೃತಕೃತ್ಯವಾಗಿದ್ದು ಇದೀಗ ವಜ್ರಮಹೋತ್ಸವಾಚರಣೆಯತ್ತ ಮುನ್ನಡೆದಿದ್ದಾರೆ.

೧೯೯೨ರಲ್ಲಿ ವಜ್ರ ಮಹೋತ್ಸವಾಚರಣೆಗಾಗಿ ರಾಜ್ಯ ಮಟ್ಟದ ಸಮಿತಿಯನ್ನು ರೂಪಿಸಲಾಗಿದ್ದು, ಶ್ರೀ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳು ಗೌರವಾಧ್ಯಕ್ಷರಾಗಿ, ಪದ್ಮಭೂಷಣ ಡಾ.ಎಂ.ಸಿ.ಮೋದಿಯವರು ಅಧ್ಯಕ್ಷರಾಗಿ, ನಿವೃತ್ತ ಐ.ಎ.ಎಸ್.ಅಧಿಕಾರಿಗಳಾದ ಶ್ರೀ ಬಿ.ಎಸ್.ಮುದ್ದಪ್ಪನವರು ಕಾರ್ಯಾಧ್ಯಕ್ಷರಾಗಿ, ನಿವೃತ್ತ ಐ.ಪಿ.ಎಸ್. ಅಧಿಕಾರಿಗಳಾದ ಶ್ರೀ ಎಸ್.ಎಸ್.ಹಸಬಿಯವರು ಕಾರ್ಯದರ್ಶಿಗಳಾಗಿ, ಶ್ರೀ ಟಿ.ಕೆ.ನಂಜುಂಡಪ್ಪನವರು ಕೋಶಾಧ್ಯಕ್ಷರಾಗಿ ಮತ್ತು ಅನೇಕ

ಗಣ್ಯರು ಸದಸ್ಯರಾಗಿ ಮುನ್ನಡೆದಿದ್ದಾರೆ. ರಾಜ್ಯದಾದ್ಯಂತ ಭಕ್ತಾದಿಗಳು ಹಾಗೂ ಶ್ರೀ ಮಠದ ಹಳೆಯ ವಿದ್ಯಾರ್ಥಿಗಳು ಉದಾರವಾಗಿ ಕಾಣಿಕೆಯನ್ನು ಕೊಡುತ್ತಿದ್ದಾರೆ. ಐದಾರು ಕೋಟಿ ರೂಪಾಯಿಗಳ ಬೃಹತ್ ಯೋಜನೆಯ ಅಂಗವಾಗಿ ಭವ್ಯಸ್ಮಾರಕಗಳೆನ್ನುವಂಥ ಬೃಹತ್ ಭೋಜನ ಶಾಲೆ ನಿರ್ಮಾಣದ ಮುಕ್ತಾಯ ಘಟ್ಟದಲ್ಲಿವೆ. ನಾಡಿನಲ್ಲೆಲ್ಲೂ ಇಷ್ಟೊಂದು ಭವ್ಯವ್ಯವಸ್ಥೆ ಕಾಣುವುದು ತುಂಬಾ ವಿರಳ. ಇಲ್ಲವೆಂದರೂ ಅತಿಶಯೋಕ್ತಿಯಲ್ಲ. ಶತಮಾನಗಳ ಕಾಲ ಉಳಿದು ಬರುವಂಥ ಚಿರಂತನ ಸೇವಾ ನಿದರ್ಶನಗಳು ಈ ಭವ್ಯ ಕಟ್ಟಡಗಳು. ಮುಂಬರುವ ವಜ್ರಮಹೋತ್ಸವ ಸಮಾರಂಭದಲ್ಲಿ ಸೇವಾ ಮಣಿಹಕ್ಕೆ ಅರ್ಪಿತವಾಗಲಿವೆ.

ಶ್ರೀ ಮಠದಲ್ಲಿ ನೋಡಬೇಕಾದ ಸ್ಥಳ ಪರಿಚಯದ ಬಗೆಗೆ ಎರಡು ಮಾತು. ಬೆಟ್ಟದ ಮೇಲಿರುವ ಶ್ರೀ ಸಿದ್ಧಲಿಂಗೇಶ್ವರ ಹಾಗೂ ಶ್ರೀ ಗಂಗಾಮಾತೆಯವರ ದೇವ ಮಂದಿರಗಳು ಪ್ರಶಾಂತ ಪ್ರಕೃತಿ ಮಧ್ಯದಲ್ಲಿ ಕಂಗೊಳಿಸುತ್ತಿವೆ. ಬೆಟ್ಟದ ಬುಡದಲ್ಲಿಯೇ ಹಳೆಯ ಮಠವಿದೆ. ಪಕ್ಕದಲ್ಲಿಯೇ ಪೂಜ್ಯ ಶಿವಯೋಗಿ ಶ್ರೀ ಉದ್ದಾನಸ್ವಾಮಿಗಳವರ ಗದ್ದುಗೆ ಜಾಗೃತ ಸ್ಥಾನವಾಗಿದೆ. ಪಕ್ಕದಲ್ಲಿಯೇ ಶ್ರೀಶ್ರೀಗಳವರ ಶಿವಯೋಗಮಂದಿರ ನಿರ್ಮಾಣವಾಗುತ್ತಿದೆ. ಹಿಂಭಾಗದಿಂದ ಮುಂದೆ ಸಾಗಿದರೆ ಮತ್ತೊಂದು ಕಟ್ಟಡ ಕೆಂಪ ಹೊನ್ನಯ್ಯನವರು ಕಟ್ಟಿಸಿರುವ ಭವ್ಯವಾದ ಅತಿಥಿಗೃಹ. ನೋಡಬೇಕಾದ ಮುಖ್ಯ ಕಟ್ಟಡಗಳೆಂದರೆ ವಿದ್ಯಾರ್ಥಿನಿಲಯ, ಪ್ರಸಾದ ವಿತರಣಾ ಮಂದಿರಗಳ ಭವ್ಯತೆ. ಅಲ್ಲಿಯೇ ಒಳಭಾಗದಲ್ಲಿ ಪೇರಿಸಿರುವ ಬೃಹತ್ ಗಾತ್ರದ ಪಾತ್ರೆ ಪರಡಿಗಳು. ಒಳಗೊಂದು ಗದ್ದುಗೆ. ಅದು ಶ್ರೀ ಮುಪ್ಪಿನ ಸ್ವಾಮಿಗಳದು. ಮಹಾನವಮಿ ಮಂಟಪ. ಪಕ್ಕದಲ್ಲಿ ಶ್ರೀ ಮರುಳಾರಾಧ್ಯರ ಗದ್ದುಗೆ, ಹಿಂಭಾಗಕ್ಕೆ ಅನತಿ ದೂರದಲ್ಲಿ ಗೋಶಾಲೆ, ಮಠದ ಮುಂಭಾಗದಲ್ಲಿ ಪೂಜ್ಯ ಶ್ರೀಗಳವರ ಕಾರ್ಯಾಲಯ, ಎದುರಿಗೆ ಯಾತ್ರಾರ್ಥಿಗಳಿಗೆ ದರ್ಶನ ಕೊಡುವ, ಉದ್ಧರಣೆಗಳನ್ನು ನೀಡುವ ದಾಸೋಹ ಗೃಹದ ಮುಂಭಾಗದಲ್ಲಿರುವ ಪವಿತ್ರಮಂಚ, ಶ್ರೀ ಅಟವೀ ಸ್ವಾಮಿಗಳ ಗದ್ದುಗೆ, ಶ್ರೀ ಮಠಕ್ಕೆ ಬರುವಾಗ ಎಡಭಾಗದಲ್ಲಿ ಶ್ರೀ ದರ್ಶನ ಮಂಟಪ, ಬಲಭಾಗದಲ್ಲಿ ಸಿದ್ಧಗಂಗಾ ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯಾಲಯ, 'ಸಿದ್ಧಗಂಗಾ' ಮಾಸಿಕದ ಕಾರ್ಯಾಲಯ, ಶ್ರೀ ಸಿದ್ಧಲಿಂಗೇಶ್ವರ ಮುದ್ರಣಾಲಯ, ಮತ್ತೆ ಅವುಗಳ ಎದುರು ಭಾಗಕ್ಕೆ ಅಕ್ಕಿ ಗಿರಣಿ. ಮಗ್ಗುಲಿಗೇ ಅಂಧ ಮಕ್ಕಳ ಪಾಠಶಾಲೆ, ಮುಂದೆ ಬೃಹತ್ ಕಲ್ಯಾಣಿ, ಅದಕ್ಕೆ ಎದುರಾಗಿ ಬೃಹತ್ ಕಲ್ಯಾಣ ಮಂಟಪ. ಎಲ್ಲಕ್ಕೂ ಮೊದಲೇ ಕಣ್ಣಿಗೆ ಕಾಣುವ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಮಹಾಪಾಠಶಾಲೆ, ಗೋಶಾಲೆಯ ಸಮೀಪ ಜನರಲ್ ಹಾಸ್ಟೆಲ್, ಕ್ಯಾತ್ಸಂದ್ರದ ಕಡೆಯಿಂದ ಬರುವಾಗ ಕಾಣುವ ವಸತಿಗೃಹಗಳು, ಶ್ರೀ ಬಸವೇಶ್ವರ ಉಪಾಧ್ಯಾಯ ತರಬೇತಿ ಸಂಸ್ಥೆ, ವಸ್ತು ಪ್ರದರ್ಶನದ ವಿಶಾಲ ಆವರಣ, ಶ್ರೀ ಮಠದ ಪರಿಸರವನ್ನು ಸದಾ ತಂಪಾಗಿಟ್ಟಿರುವ ತೋಟಗಳು. ಎಲ್ಲವೂ ಶಿವಮಯ, ಬೇಸತ್ತ ಮನಸ್ಸಿಗೆ ಆನಂದ ಕೊಡುವ ಶಾಂತ ವಾತಾವರಣ.

ಜನರು ನೋಡಲೇಬೇಕಾದ ಶ್ರೀ ಮಠದ ಚೇತೋಹಾರಿ ಪವಿತ್ರ ರಮಣೀಯ ದೃಶ್ಯ ಪೂಜ್ಯಶ್ರೀಗಳವರ ಸಾನಿಧ್ಯದಲ್ಲಿ ಐದು ಸಾವಿರ ವಿದ್ಯಾರ್ಥಿಗಳು ಸಮವಸ್ತ್ರಧಾರಿಗಳಾಗಿ ಕುಳಿತು ಸಂಜೆ ಮುಂಜಾನೆಯಲ್ಲಿ ಮಾಡುವ ಸಾಮೂಹಿಕ ಪ್ರಾರ್ಥನಾ ಸಭೆ. ಅದೊಂದು ಅವಿಸ್ಮರಣೀಯ ಅನುಭವ.

ಶ್ರೀ ಶಿವಕುಮಾರಸ್ವಾಮಿಗಳ ಜೀವನ - ಸಾಧನೆ

ಹೆಚ್.ವಿ. ವೀರಭದ್ರಯ್ಯ

ಯಾವ ಮಾತುಗಳಿಂದ ಬಿಡಿಸಿ ಹೇಳಲಿ ಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ತ್ಯಾಗ ಜೀವನವನ್ನು. ''ಮಾತು ಮನಗಳಿಂದತ್ತತ್ತ ಮೀರಿದ ಆ ವ್ಯಕ್ತಿತ್ವದ ದಿವ್ಯಮಾನವ'' ನಿಜವನರಿದ ನಿಶ್ಚಿಂತ, ಮರಣವ ಗೆಲಿದ ಮಹಂತ, ಪರಮವನೊಳಕೊಂಡ ಪರಿಣಾಮಿ, ಬಯಲಲೊದಗಿದ ಭರಿತ, ನಿರಾಳವನೊಳಕೊಂಡ ಸಹಜ. ಶ್ರೀ ಸಿದ್ಧಗಂಗಾ ಮಠದ ಇತಿಹಾಸದಲ್ಲಿ ಬೆಳಕಿನ ಯುಗವನ್ನು ನಿರ್ಮಾಣ ಮಾಡಿದ ನಿರ್ಮಲ ಮೂರ್ತಿ. ಇಂಥ ಪರಮಾನುಭವಿಗಳ, ಮಹಾಮಹಿಮರ ಶ್ರೀ ಕ್ಷೇತ್ರಾಧ್ಯಕ್ಷತೆಯ ವಜ್ರಮಹೋತ್ಸವವು ಅಭೂತ ಪೂರ್ವವಾಗಿ ಜರುಗಲಿದೆ. ಅದು ಶತ ಶತಮಾನಗಳವರೆಗೆ ಅವಿಸ್ಮರಣೀಯವಾಗಿ ಉಳಿದುಬರಬೇಕೆಂಬ ಭಕ್ತಕೋಟಿಯ ಹಂಬಲ ಬೃಹತ್ ಸ್ಮಾರಕಗಳ ರೂಪದಲ್ಲಿ ಅಂದರೆ ರಾಷ್ಟ್ರದಲ್ಲೆಲ್ಲೂ ಕಾಣದ ಭವ್ಯ ವಿದ್ಯಾರ್ಥಿನಿಲಯ ಹಾಗೂ ಸುವಿಶಾಲ ಪ್ರಸಾದ ನಿಲಯಗಳಾಗಿ ಎದ್ದು ನಿಂತಿವೆ.

ಇದೊಂದು ವಿಚಿತ್ರಯುಗ. ರಾಜಕಾರಣಿಗಳ, ಅಧಿಕಾರ ಹೊತ್ತು ಮೆರೆಯುವವರ ಒಡನಾಟವನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ವಿಮಾನಗಳಲ್ಲಿ ಜಗತ್ತಿನುದ್ದಗಲಕ್ಕೂ ಸ್ವಿಸ್ ಸ್ವಿಸ್ ಎಂದು ಮಿಡತೆಗಳಂತೆ ಹಾರುತ್ತ, ತಮ್ಮ ಎರವಲು ಪ್ರಭಾವವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಬದುಕುತ್ತಿರುವ ಅಪಾರವಾದ ''ಸನ್ಯಾಸಿ''ಗಳೊಂದು ಕಡೆ. ಕಾಯಕ ದಾಸೋಹಗಳನ್ನೇ ವೃತ್ತಿಯನ್ನಾಗಿ ಮಾಡಿಕೊಂಡು, ತಾನು ಸಮಾಜ ಸೇವೆಯನ್ನು ಮಾಡುತ್ತಿದ್ದೇನೆಂಬ ಕಿಂಚಿತ್ತೂ ಅಹಂಕಾರವಿಲ್ಲದ, ಹಾಗೆಂದುಕೊಳ್ಳುವುದೇ ಒಂದು ಭ್ರಮೆ ಎಂದು ಭಾವಿಸಿ, ಪ್ರೀತಿಯೇ ಉಸಿರಾದ ಶ್ರೀ ಶಿವಕುಮಾರಸ್ವಾಮಿಗಳಂಥ ಕೈ ಬೆರಳೆಣಿಕೆಗೆ ಸಿಗುವ ಸಾಧು ಸಂತರೊಂದು ಕಡೆ. ನಮ್ಮ ಪುರಾಣ ಪ್ರಪಂಚದಲ್ಲಿ ಕಾಣಬರುವ ರಾಕ್ಷಸರಿಗೆ, ಮಹಾಕಾವ್ಯಗಳಲ್ಲಿ ರಾಮಾಯಣ, ಮಹಾಭಾರತಗಳಂಥವುಗಳಲ್ಲಿ ಎದುರಾಗುವ ದುಷ್ಟ ಪಾತ್ರಗಳಿಗೆ, ಬಸವಾದಿ ಶರಣರಿಗೆ ಸದಾ ಕಿರುಕುಳವನ್ನು ಕೊಡುತ್ತಿದ್ದ ಮಂಚಣ್ಣ ಮುಂತಾದವರಿಗೆ, ಚರಿತ್ರೆಯಲ್ಲಿ ಆಗಿ ಹೋದ ನಯವಂಚಕ ದ್ರೋಹಿಗಳಿಗೆ ಮರೆಯಲ್ಲಿ ಹೇಳಿ ಕೊಡುವಂಥ ಇಂದಿನ ಜನರ ಮಧ್ಯದಲ್ಲಿ ಶ್ರೀ ಶಿವಕುಮಾಸ್ವಾಮಿಗಳಂಥವರು ''ನಿರ್ಮಲಾಂತಃ ಕರಣವುಳ್ಳ ದಾರ್ಶನಿಕರು ಇರುವ ಯಾವ ಸ್ಥಾನಕ್ಕೇ ಆಗಲಿ ತಮ್ಮ ಪ್ರಭೆಯ ಅಂತಃಸತ್ವವನ್ನು ನೀಡಿ ಅದು ಬೆಳಗುವಂತೆ ಮಾಡಬಲ್ಲರು'' ಎಂಬುದೇ ಬಾಳಿಗೊಂದು ಭರವಸೆಯನ್ನೀಯುವ ಆಶಾದೀಪ.

ಶ್ರೀ ಶಿವಕುಮಾರಸ್ವಾಮಿಗಳದು ಎತ್ತರದ ನಿಲುವು. ವಿಶಾಲವಾದ ಹಣೆಯಲ್ಲಿ ಭಸ್ಮಭೂಷಿತರಾದವರು. ಹೊಳೆ ಹೊಳೆವ ಕಣ್ಣುಗಳು ಕಾರುಣ್ಯರಸದ ಕಾರಂಜಿಗಳು, ಚಂದ್ರಗಾವಿಯ ಶುಭ್ರ ಕಫಿನಿ, ಮುಂಡೇಚೌಕ, ''ಮತ್ತೊಂದು ಕೇಳದಂತಿರುವ'' ಕಿವಿಮುಚ್ಚಿದ ಶಿರೋವಸ್ತ್ರ, ಹೃದಯವೇ ಹರಿವ ನದಿ, ಸೇವೆಯೊಂದೇ ಜೀವನದ ಧ್ಯೇಯವೆಂದು ಸಾರುವ ಕಾಲಲ್ಲಿ ಮೆಟ್ಟಿದ ಪಾದುಕೆಗಳು. ಇಲ್ಲಿ ಸಲ್ಲುವುದು ಹೇಗೆ ಎಂದು ಚಿಂತಿಸುತ್ತ ಸದಾ ಬಾಗಿದ ತಲೆ. ಬೆಟ್ಟವೇ ನಡೆದು ಬರುತ್ತಿದೆಯೋ ಎನ್ನುವಂಥ ಗಂಭೀರ ನಡಿಗೆ, ಮಾತು ಲಿಂಗನುಡಿ ''ಕೂಡಲಸಂಗನ ಶರಣರು ಮಾತನಾಡಿದರೆ ಲಿಂಗವ ಕಾಣಬಹುದು'' ಎಂಬ ಅನುಭಾವ ವಾಣಿ.

''ಕನ್ನಡ ನಾಡಿನ ಸಂನ್ಯಾಸಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಶಿವಕುಮಾರಸ್ವಾಮಿಗಳು ಅತ್ಯಂತ ಎತ್ತರಕ್ಕೇರಿದವರು. ಪ್ರಾಯಶಃ ಇಡೀ ಭರತಖಂಡದಲ್ಲಿಯೆ ಇಂಥವರು ಅಪರೂಪ ಎನ್ನಬಹುದು. ಪೌರಾಣಿಕ ಭಾಷೆಯನ್ನು ಬಳಸುವುದು ದೋಷವಾಗದಿದ್ದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು ಇಪ್ಪತ್ತನೆಯ ಶತಮಾನದ ಬಸವೇಶ್ವರರು''.

ಶ್ರೀ ಶಿವಕುಮಾರಸ್ವಾಮಿಗಳು ಜನಿಸಿದ್ದು ವೀರಾಪುರದಲ್ಲಿ. ಅದು ಮಾಗಡಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಪುಟ್ಟ ಗ್ರಾಮ. ಪ್ರಕೃತಿ ಪರಿಸರದಲ್ಲಿ ''ಸುಮ್ಮನೆ'' ಉಸಿರಾಡುತ್ತಿರುವ ಹಳ್ಳಿ. ಆ ಹಳ್ಳಿಯ ಬಳ್ಳಿಯಲ್ಲಿ ಅರಳಿದ ಶಿವಲಿಂಗಪುಷ್ಪ ಶಿವಣ್ಣ. ತಂದೆ ಪಟೇಲ್ ಹೊನ್ನೇಗೌಡರು. ತಾಯಿ ಗಂಗಮ್ಮ. ಅವರ ಹದಿಮೂರನೆಯ ಅಮೃತ ಫಲ ಶಿವಣ್ಣ. ವೀರಾಪುರದ ಬಹುದಿನಗಳ ನಿಷ್ಕಾಮ ತಪಸ್ಸಿನ ಪರಿಣಾಮವಾಗಿ ದಿನಾಂಕ ೧.೪.೧೯೦೮ ರಂದು ಶಿವಣ್ಣ ''ನಡೆನುಡಿಯ ಕಲ್ಪವೃಕ್ಷ'' ವಾಗಿ ಹುಟ್ಟಿಬಂದುದು. ಶಿವಗಂಗೆಯ ಪ್ರಭಾವ ಪರಿಸರದಲ್ಲಿ ಬೆಳೆಯುತ್ತ ಬಂದದ್ದು. ''ತಂದೆ,

ತಾಯಿ, ಅಣ್ಣ ಕೆಂಪ ನಂಜಪ್ಪ - ಈ ಮೂವರು ವ್ಯಕ್ತಿಗಳ ಆದರ್ಶ ಮುಪ್ಪುರಿಗೊಂಡು ಶಿವಣ್ಣನ ಬಾಲ್ಯದ ಸಾರವತ್ತಾದ ಸಂಸ್ಕಾರ ವಿಶೇಷಗಳು ಅವರ ಮುಂದಿನ ಜೀವನದ ದಿಕ್ಕನ್ನೇ ಬದಲಾಯಿಸುವ ಮಹಾದರ್ಶಗಳಾದವು.'' ಕ್ರಿಯಾಶೀಲ ಹೆಜ್ಜೆಗಳು. ಸ್ನೇಹಕ್ಕೆ ಇನ್ನೊಂದು ಹೆಸರು. ಆ ಬಾಲವೃದ್ಧರಿಗೂ ಪ್ರೀತಿಯ ಬಾಲಕ. ಧ್ಯಾನ, ಪೂಜೆ, ಸೇವೆಗಳಲ್ಲಿ ತುಂಬು ಆಸಕ್ತಿ. ಬಾಲ್ಯ ಸಹಜವಾದ ಆಟಪಾಠಗಳು. ''ಸಹಜಯೋಗ''ಕ್ಕೆ ಸರಿಯಾದ ಅಪ್ರಜ್ಞಾಪೂರ್ವಕ ನಡವಳಿಕೆ. ಅಪೂರ್ವ ಚೇತನವಾಗಿ ಅರಳುವ ಪ್ರಯತ್ನ. ಶಿವಣ್ಣ ಹೊಲವನ್ನು ಉತ್ತ, ಗೊಬ್ಬರ ಹೊತ್ತ, ದನ ಕಾದ. ಕೆರೆಯಲ್ಲಿ ಈಜಿದ, ಮರಹತ್ತಿ ಆಟವಾಡಿದ, ಹಲಸಿನ ಹಣ್ಣು ಕಿತ್ತು ಜೊತೆಗಾರರೊಡನೆ ತಿಂದ, ಕುದುರೆ ಹತ್ತಿದ, ಅವರೆಕಾಯಿ ಸುಟ್ಟು ತಿಂದ, ಆಲೇಮನೆಯಲ್ಲಿ ದುಡಿದ, ಕಬ್ಬಿನ ಹಾಲು ಕುಡಿದ, ಬೆಲ್ಲ ತಿಂದ, ಜನರಿಗೆ ಹಾಲು ಬೆಲ್ಲ ಹಂಚಿದ, ತಾಯಿ ಎದೆ ಹಾಲನ್ನು ಐದು ವರ್ಷದವರೆಗೂ ಕುಡಿದ ಪುಣ್ಯಾತ್ಮ.

ಶಿವಣ್ಣ ಓದಲು ಆರಂಭಿಸಿದ್ದು, ವೀರಾಪುರ ಮತ್ತು ಪಕ್ಕದ ಪುಟ್ಟಹಳ್ಳಿ ಪಾಲನಹಳ್ಳಿಯಲ್ಲಿ; ಅದೂ ಕೂಲಿಮಠದಲ್ಲಿ. ಅಭ್ಯಾಸದಲ್ಲಿ ಪಾದರಸ. ಬಲು ಚೂಟಿ. ತನ್ನ ಎಂಟನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಮಮ್ಮಲ ಮರುಗಿದ. ನಾಗವಲ್ಲಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಂದುವರಿಯಿತು. ಎ.ವಿ. ಸ್ಕೂಲಿನ ಪ್ರತಿಭಾವಂತ ವಿದ್ಯಾರ್ಥಿ. ತಾಯಿಯಾಗಿ ಪೊರೆದಳು ಹಿರಿಯಕ್ಕ ಪುಟ್ಟಹೊನ್ನಮ್ಮ, ಆ ತಾಯಿ ನೀಡಿದ ತುಪ್ಪ ಬೊಗಸೆ ಬೊಗಸೆ ತುಂಬಿ ಸವಿದ. ವ್ಯಾಸಂಗದಲ್ಲಿ ಇನ್ನಿಲ್ಲದ ಶ್ರದ್ಧೆ. ೧೯೧೯ ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗಳಲ್ಲಿ ತೇರ್ಗಡೆ. ಪರೀಕ್ಷೆಗಾಗಿ, ಜಿಟ್ಟಿದ್ದ ಜುಟ್ಟಿಗೆ ಎಚ್ಚರವಾಗಲೆಂದು ಮಲಗುವಾಗ ಹುರಿ ಕಟ್ಟಿಕೊಂಡು ಓದಿದ. ನಾಗವಲ್ಲಿಯ ''ಗ್ರಾಮಾಂತರ ಪ್ರದೇಶದ ಮೇಧಾವಿ ವಿದಾರ್ಥಿ''. ೧೯೨೨ ರಲ್ಲಿ ತುಮಕೂರಿನ ಗೌರ್ನಮೆಂಟ್ ಹೈಸ್ಕೂಲ್ ಸೇರಿದ. ಅಣ್ಣ ಲಿಂಗಪ್ಪ ಜೊತೆಗೆ. ಕೆಂಬಳಲಿನ ಕಾಳಪ್ಪ ಜೀವದ ಗೆಳೆಯನಾದ. ಕನಕಪುರ ದೇಗುಲ ಮಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಲಿಂಗಸ್ವಾಮಿಗಳು ಸಿದ್ಧಗಂಗೆಯ ಕೀರ್ತಿ, ಶ್ರೀ ಉದ್ದಾನ ಶಿವಯೋಗಿಗಳ ಮಹಿಮೆಗಳಿಂದ ಆಕರ್ಷಿತ, ಸಿದ್ಧಗಂಗೆಯ ಪ್ರಕೃತಿಯ ಅನಂತ ಸೌಂದರ್ಯ ಕಂಡು ಬೆಕ್ಕಸ ಬೆರಗು. ಉದ್ದಾನ ಸ್ವಾಮಿಗಳನ್ನು ಕಂಡರೆ ಭಯ, ಭಕ್ತಿ. ಶ್ರೀಮಠದ ಉತ್ತರಾಧಿಕಾರಿಗಳಾಗಿ ನಿಯೋಜಿತರಾಗಿದ ಶ್ರೀ ಮರುಳಾರಾಧ್ಯರ ಆತ್ಮೀಯತೆ. ೧೯೨೬ ರಲ್ಲಿ ಮೆಟ್ರಿಕ್ಯುಲೇಷನ್ ಪಾಸು. ಈ ಮಧ್ಯೆ ತುಮಕೂರಿಗೆ ಪ್ಲೇಗಿನ ಹಾವಳಿ. ಶಿವಣ್ಣ ಉದ್ದಾನಸ್ವಾಮಿಗಳಲ್ಲಿ ಪ್ರಾರ್ಥಿಸಿಕೊಂಡ, ಆಶ್ರಯ ಕೇಳಿದ. ಶ್ರೀಗಳು ''ಸಾಧ್ಯವಾಗುವುದಿಲ್ಲ'' ಎಂದು ಬಿಟ್ಟರು. ಶೆಟ್ಟಿಹಳ್ಳಿಯಲ್ಲಿ ಕೊಠಡಿ ಹಿಡಿದು ಅಡುಗೆ ಮಾಡಿಕೊಂಡು ವ್ಯಾಸಂಗ ಮುಂದುವರಿಸಬೇಕಾಯಿತು. ಇದನ್ನು ಕೇಳಿದ ಉದ್ದಾನ ಶಿವಯೋಗಿಗಳು ತಮ್ಮ ಮಠದಲ್ಲಿ ಆಶ್ರಯ ನೀಡಿದರು. ಶ್ರೀಮಠದಲ್ಲಿ ''ಕಾಳಪ್ಪ, ಶಿವಣ್ಣ, ಮರುಳಾರಾಧ್ಯರು ಈ ಮೂವರೂ ತ್ರಿಪುಟಿಯಂತಾದರು. ''ಸ್ನೇಹದಿಂದ ಮುಪ್ಪುರಿಗೊಂಡರು''. ಮಠದ ಪರಿಸರದಲ್ಲಿ ''ಶಿವಣ್ಣ ಶಿವಣ್ಣ'' ಎಂಬ ಹೆಸರು ಪ್ರತಿಧ್ವನಿತವಾಗತೊಡಗಿತು. ವೀರಾಪುರದ ಶಿವಣ್ಣ ಉತ್ತಮ ವಿದ್ಯಾರ್ಥಿ, ತೇಜಶ್ಶಾಲಿ, ಸಂಸ್ಕೃತಿ ಸಂಪನ್ನ, ಸಂಯಮಿ, ಸತ್ಶೀಲ, ಸದಾಚಾರಿ, ಲಿಂಗಪೂಜಾನಿಷ್ಠ, ಸುಸ್ನೇಹಿ, ಕರ್ತವ್ಯಕುಶಲನೆನಿಸಿಕೊಂಡ. ಬೆಳೆಯ ಸಿರಿ ಮೊಳಕೆಯಲ್ಲಿ ನೋಡು ಎಂಬಂತಾಗಿ ಅರಳುತ್ತ ನಡೆದ.

ಸಿದ್ಧಗಂಗಾಮಠದ ಸಮಸ್ತರ ಮನವನ್ನು ಗೆದ್ದುಕೊಂಡು ಶಿವಣ್ಣನವರು ತುಮಕೂರಿನಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ತೋಟದಪ್ಪನವರ ವಿದ್ಯಾರ್ಥಿನಿಲಯದ ಆಶ್ರಯ ಪಡೆದರು. ೧೯೨೭ ರಿಂದ ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಯಾದರು. ನಾಗರಿಕತೆಯಿಂದಾಗಿ ಜನತೆ ಪಾಶ್ಚಾತ್ಯ ಜೀವನ ವಿಧಾನಕ್ಕೆ ತಮ್ಮನ್ನು ಮಾರಿಕೊಳ್ಳುತ್ತಿದ್ದ ಕಾಲ. ಆದರೆ ಶಿವಣ್ಣನವರು ಈ ವೇಳೆಗಾಗಲೇ ಸಿದ್ಧಗಂಗಾಮಠದ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದರು. ಸ್ನಾನ, ಪೂಜೆಗಳಾಗದ ಹೊರತು ನೀರನ್ನು ಬಾಯಿಗೆ ಹಾಕುತ್ತಿರಲಿಲ್ಲ. ಆಚಾರಸಂಹಿತೆಯ ವಿಚಾರಶುದ್ಧಿಯನ್ನು ಅಳವಡಿಸಿಕೊಂಡಿದ್ದರು. ಹೋಟೆಲಿನ ಮುಖ ನೋಡಲಿಲ್ಲ. ಕಾಫಿಯನ್ನೆಂದೂ ಕುಡಿಯಲಿಲ್ಲ. ಜಿಹ್ವಾ ಚಪಲದಿಂದ ದೂರ ಉಳಿದರು. ಸಂಗಡಿಗರ ಮೇಲೆ ಪ್ರಭಾವ ಬೀರುತ್ತ ಬಂದರು. ವಿರಾಮ ಕಾಲವನ್ನು ಉದ್ದಾನಸ್ವಾಮಿಗಳ ಸಂಕೀರ್ತನೆ, ಸ್ಮರಣೆ, ಆಧ್ಯಾತ್ಮವಿಚಾರಗಳಿಗಾಗಿ, ಪ್ರಾಣಮಿತ್ರರಾದ ಮರುಳಾರಾಧ್ಯರ ವಾತ್ಸಲ್ಯ ಗುಣಗಾನದಲ್ಲಿ ಅರ್ಥಪೂರ್ಣವಾಗಿಸಿಕೊಳ್ಳುತ್ತಿದ್ದರು. ಕಾಲೇಜಿನ ಪ್ರಾಧ್ಯಾಪಕ ವರ್ಗದಲ್ಲಿಯೂ ಪ್ರಿಯವ್ಯಕ್ತಿಗಳೆನಿಸಿದರು. ಎ.ಆರ್. ಕೃಷ್ಣಶಾಸ್ತ್ರಿಗಳು, ಟಿ.ಎಸ್. ವೆಂಕಣ್ಣಯ್ಯನವರು ಶಿವಣ್ಣನವರ ಆಚಾರ ವಿಚಾರಗಳನ್ನು ಶ್ಲಾಘಿಸುವಂತಾಯಿತು.

ರಜಾಕಾಲದಲ್ಲಿ ವೀರಾಪುರಕ್ಕೆ ಅಲ್ಲಿಂದ ಸಿದ್ಧಗಂಗೆಗೆ ಬಂದು ಬಿಡುತ್ತಿದ್ದರು. ಶ್ರೀ ಮಠದತ್ತ ಶಿವಣ್ಣನವರನ್ನು ಸೆಳೆಯುತ್ತಿದ್ದ ವಿಶೇಷ ಶಕ್ತಿ ಶ್ರೀ ಮರುಳಾರಾಧ್ಯರ ನಿರ್ವ್ಯಾಜ ಸ್ನೇಹ ಮತ್ತು ಉದ್ದಾನ ಶಿವಯೋಗಿಗಳ ಮೇರುಸದೃಶ ವ್ಯಕ್ತಿತ್ವ.

ಶಿವಣ್ಣನವರು ಆಲಸಿಗಳಲ್ಲ, ಕ್ರಿಯಾಶೀಲರು. ಅವರೊಂದು ''ಉತ್ಸಾಹದ ಬುಗ್ಗೆ''. ವಿರಾಮವೆಂದರೆ ಅವರು ನೀಡುವ ವ್ಯಾಖ್ಯಾನ ಹೀಗಿದೆ : ''ಒಂದು ಕೆಲಸ ಮಾಡಿ ಮುಗಿಸಿ ಇನ್ನೊಂದು ಕೆಲಸ ಮಾಡುವುದಕ್ಕೆ ತೊಡಗುವುದು''. ಬಾಲ್ಯೋಚಿತ ಚಟುವಟಿಕೆಗಳನ್ನು ದಾಟಿದ ಸತ್ಕ್ರಿಯಚಾರ ಸಂಪನ್ನ ಶಿವಣ್ಣನವರು ಸುಖ ದುಃಖಗಳನ್ನು ಸಮಾನವಾಗಿ ಕಾಣುವ ಮನೋಸ್ಥಿತಿಯನ್ನು ತಂದುಕೊಂಡಿದ್ದರು : ವಿನಯ ಸೌಜನ್ಯಗಳ ಗಣಿಯಾದರು. ವಿದ್ಯಾವಂತ ಅವಿದ್ಯಾವಂತರೆಂದು ಭೇದವೆಣಿಸರು. ಕಾಯಕ ಸದ್ಭಾವಿಗಳನ್ನು ಕಂಡು ಗೌರವಿಸಿದರು.

ಶಿವಣ್ಣನವರು ಸೆಂಟ್ರಲ್ ಕಾಲೇಜಿನಲ್ಲಿ ಓದಿದ್ದು ವಿಜ್ಞಾನ. ಜೀವನಕ್ಕೆ ಅಳವಡಿಸಿಕೊಂಡದ್ದು ಅಧ್ಯಾತ್ಮ. ಬಿ.ಎ. ಪರೀಕ್ಷೆಗಾಗಿ ಸಿದ್ಧತೆ ನಡೆಸಿದ ಸಂದರ್ಭ. ದಾರುಣ ವಾರ್ತೆಯೊಂದು ಧಾವಿಸಿ ಬಂತು, ಶ್ರೀ ಮರುಳಾರಾಧ್ಯರು ಲಿಂಗೈಕ್ಯರಾದರೆಂದು. ೧೯೩೦ನೇ ಜನವರಿ ೧೬ನೇ ದಿನಾಂಕವದು. ನಂಬಲಾರದ ಮಾತು. ನಂಬಲೇ ಬೇಕಾದ ಕಟುಸತ್ಯ. ಅಂತರಂಗ ಹೊಯ್ದಾಡಿತು. ಓಡಿಬಂದರು ಶ್ರೀ ಮಠಕ್ಕೆ. ಮರುಳಾರಾಧ್ಯರ ಲಿಂಗದೇಹವನ್ನು ಕಂಡು ಬಿಕ್ಕಿ ಬಿಕ್ಕಿ ಅತ್ತರು. ಶರೀರ ಅನಿತ್ಯವೆಂಬುದನ್ನು ಮನಗಂಡರು. ಕರ್ತವ್ಯಮುಖಿಗಳಾಗಿ ಸಮಾಧಿಕ್ರಿಯೆಯಲ್ಲಿ ಭಾಗವಹಿಸಿದರು.

''ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ''. ಮರುಳಾರಾಧ್ಯರ ಸಮಾಧಿಕ್ರಿಯೆ ಮುಗಿಯುತ್ತಿರುವಾಗ ಪಿಸು ಧ್ವನಿ ಎಲ್ಲೆಲ್ಲೂ ಹರಡುತ್ತಿತ್ತು. ಶಿವಣ್ಣನವರೇ ಈ ಕ್ಷೇತ್ರದ ಉತ್ತರಾಧಿಕಾರಕ್ಕೆ ಯೋಗ್ಯರೆಂದು'' ಆ ವೇಳೆಗೆ ಶ್ರೀ ಉದ್ದಾನ ಶಿವಯೋಗಿಗಳು ಕಾಣಿಸಿಕೊಂಡರು. ಜನಸಾಗರದ ಮಧ್ಯೆ ಆಧ್ಯಾತ್ಮಮೇರು ನುಡಿಯಿತು. ''ಶಿವಣ್ಣನವರೇ, ನೀವು ಈ ಮಠದ ಉತ್ತರಾಧಿಕಾರವನ್ನು ವಹಿಸಿಕೊಂಡು ಸಿದ್ಧಲಿಂಗೇಶ್ವರರ ಪ್ರತಿನಿಧಿಗಳಾಗಿ ಇತೋಪ್ಯತಿಶಯವಾಗಿ ಈ ದಾಸೋಹ ಕ್ಷೇತ್ರದ ಗುರುತರ ಹೊಣೆಗಾರಿಕೆಯನ್ನು ವಿಶೇಷ ಶಕ್ತಿ ಸಾಮರ್ಥ್ಯದಿಂದ ನಡೆಸಿಕೊಂಡು ಹೋಗಬೇಕೆಂಬುದು ಸಮಸ್ತ ಭಕ್ತರಭಿಲಾಷೆ, ಸಿದ್ಧಲಿಂಗೇಶ್ವರರ ಆಜ್ಞೆ. ನಮ್ಮ ಇಚ್ಛೆ. ಯಾವುದನ್ನು ಯೋಚಿಸದೆ ನಮಸ್ಕಾರ ಹಾಕಿ ಬಿಡಿ''. ಶಿವಣ್ಣನವರು ಆ! ಊ! ಎನ್ನಲಿಲ್ಲ. ಉದ್ದಾನ ಗುರು ಚರಣದ ಮೇಲೆ ತಲೆಯಿಟ್ಟು ತಮ್ಮನ್ನು ಒಪ್ಪಿಸಿಕೊಂಡರು. ಈ ಸಾತ್ವಿಕ ಭಕ್ತಿಯ ಸನ್ನಿವೇಶ ಕಂಡ ಜನಸ್ತೋಮ ಹರಹರ ಮಹದೇವ ಎಂದು ಜಯಕಾರ ಮಾಡಿತು. ಶಿವಣ್ಣನವರು ಶ್ರೀ ಶಿವಕುಮಾರಸ್ವಾಮಿಗಳಾಗಿ ಬೆಂಗಳೂರಿಗೆ ಹಿಂತಿರುಗಿದರು. ಪ್ರಾಧ್ಯಾಪಕರು ಸಂತೋಷಿಸಿದರು. ಎ.ಆರ್. ಕೃಷ್ಣಶಾಸ್ತ್ರಿಗಳು ಶ್ಲಾಘನೆಯ ಮಳೆಗರೆದರು. ಆದರೆ ಹೆತ್ತ ತಂದೆಗೆ ಅಸಮಾಧಾನ. ತಮ್ಮ ಆಸೆ ಆಕಾಂಕ್ಷೆಗಳೆಲ್ಲ ನುಚ್ಚು ನೂರಾದವೆಂಬ ನೋವು. ಮಗನನ್ನು ಕಂಡು ನಿರ್ಧಾರ ಬದಲಿಸಬೇಕೆಂದು ಬೆಂಗಳೂರಿಗೆ ಬಂದು ಬೇಡಿದರು. ಆಗಲೂ ''ನನ್ನ ದಾರಿ ನನಗೆ, ನಿಮ್ಮ ದಾರಿ ನಿಮಗೆ, ಕೊಟ್ಟ ಮಾತನ್ನು ಬದಲಿಸಲಾರೆ'' ನೆಂದರು ಶ್ರೀ ಶಿವಕಮಾರಸ್ವಾಮಿಗಳು. ''ನಮ್ಮನ್ನು ನೀವು ಹೆತ್ತು ಹೊತ್ತು ಇದುವರೆಗೆ ವಾತ್ಸಲ್ಯವಿಟ್ಟು ಸಲಹಿದ್ದೀರಿ, ಅದಕ್ಕಾಗಿ ನಿಮಗೆ ಚಿರಋಣಿ'' ಎಂದು ಕೃತಜ್ಞತೆಯನ್ನರ್ಪಿಸಿದರು. ತಂದೆ ಹೊನ್ನೇಗೌಡರು ತಮ್ಮನ್ನು ಕೇಳದೆ ಶ್ರೀಮಠಕ್ಕೆ ತಮ್ಮ ಮಗನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡ ಉದ್ದಾನ ಶಿವಯೋಗಿಗಳ ಬಗ್ಗೆಕೋಪ ಮಾಡಿಕೊಂಡದ್ದು ಒಂದು ದುರದೃಷ್ಟ ಪ್ರಸಂಗ।

ದಿನಾಂಕ ೩.೩.೧೯೩೦ ರಂದು ಪೂಜ್ಯ ಶ್ರೀ ಉದ್ದಾನ ಶಿವಯೋಗಿಗಳು ಶ್ರೀ ಶಿವಕುಮಾರಸ್ವಾಮಿಗಳಿಗೆ ಶ್ರೀ ಮಠದ ನಿರಂಜನ ಜಂಗಮಾಧಿಕಾರವನ್ನು ಆಶೀರ್ವದಿಸಿದರು. ೧೩೦೦ ರಲ್ಲಿ ಶ್ರೀ ಗೋಸಲ ಸಿದ್ಧೇಶ್ವರರಿಂದ ಪ್ರಾರಂಭವಾದ ಶ್ರೀ ಸಿದ್ಧಗಂಗಾಮಠದ ಜಂಗಮ ಪುಂಗವರ ಮಾಲಿಕೆಯ ಅನರ್ಘ್ಯ ಶಿವರತ್ನವಾಗಿ ಶ್ರೀಗಳವರು ಸೇರಿದರು. ಶ್ರೀ ಸಿದ್ಧಗಂಗಾ ತಪೋಭೂಮಿಯ ಸುಮಾರು ಏಳುನೂರು ವರ್ಷಗಳ ಅಖಂಡ ತಪಸ್ಸಿನ ಫಲವಾಗಿ ಶ್ರೀ ಶಿವಕುಮಾರಸ್ವಾಮಿಗಳು ಉದಯವಾದರು. ಪ್ರಾರಂಭವಾಯಿತು ಉದ್ದಾನಪ್ಪನವರ ಉಗ್ರಪರೀಕ್ಷೆ. ನೂರು ಉಳಿಯ ಪೆಟ್ಟು, ಒಂದು ಲಿಂಗವೆಂಬಂತೆ ಶ್ರೀ ಶಿವಕುಮಾರಸ್ವಾಮಿಗಳವರಿಗೆ ಬೀಳತೊಡಗಿತು. ಆದರೆ ಅದಕ್ಕೆ ಅಳುಕಲಿಲ್ಲ, ಅಂಜಲಿಲ್ಲ. ''ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ ಸಲಹು'' ಎಂದೇ ಬೇಡಿದರು. ''ವಜ್ರ ಕಾಠಿಣ್ಯ ಕುಸುಮ ಕೋಮಲ''ರಾದ ತಮ್ಮ ಗುರು ಉದ್ದಾನ ಶಿವಯೋಗಿಗಳ ಕಠಿಣ ಕಮ್ಮಟದಲ್ಲಿ ''ಏರಿದರೆ ಅರಿವಾಗಿ, ಇಳಿದರೆ ಕ್ರಿಯಾಗಿ'' ಮುನ್ನಡೆದರು. ಶ್ರೀಮಠದ ದಾಸೋಹ ವ್ಯವಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಗೆ ಹೆಗಲು ಕೊಟ್ಟರು ಶಿವಕುಮಾರ ಸ್ವಾಮಿಗಳು. ಮಠಕ್ಕಿದ್ದದ್ದು ಅತ್ಯಂತ ಅಲ್ಪ

ಸಂಪತ್ತು. ೧೬ ಎಕರೆ ಜಮೀನು, ಅದರ ಉತ್ಪನ್ನವೂ ಕಡಿಮೆ. ಬೆಂಗಳೂರಲ್ಲಿದ್ದ ಕೆಲವು ಮನೆಗಳ ಅಲ್ಪ ಸ್ವಲ್ಪ ಬಾಡಿಗೆ. ಸರ್ಕಾರದ ಕೊಂಚ ಅನುದಾನ. ಆದರೆ ಖರ್ಚು ಮಿತಿಮೀರಿ ಬೆಳೆಯುತ್ತಿತ್ತು. ಉದ್ದಾನ ಸ್ವಾಮಿಗಳದು ಬಲು ಹಿಡಿತದ ಕೈ. ಕೈ ಬಿಚ್ಚಿ ಕೊಡುತ್ತಿರಲಿಲ್ಲ. ದುಡಿದೇ ವಿನಿಯೋಗಿಸಬೇಕಾಗಿತ್ತು. ಮೂವತ್ತು ಮೈಲಿ ನಡೆದು ಭಕ್ತರ ಮನೆಗೆ ಹೋಗಿ ಕಾಣಿಕೆ ತರಬೇಕಾಗಿತ್ತು. ಶ್ರೀಮಠದ ಉಪ್ಪು ಹುಳಿಗೂ ಹಣವಿಲ್ಲದಂತಾಗುತ್ತಿತ್ತು. ಗುರುಗಳದು ನಕಾರಾತ್ಮಕ ಪ್ರತಿಕ್ರಿಯೆ. ''ಕೊರಳಲಿ ಕಟ್ಟಿದ ಬೆಂಡು ಕಾಲಲಿ ಕಟ್ಟಿದ ಗುಂಡು'' ಎಂಬಂತಹ ಪರಿಸ್ಥಿತಿ. ಮಠದ ಸ್ವಾಮಿಯಾಗುವವರಿಗೆ ಕಷ್ಟ ನಷ್ಟದ ಪರಿಚಯವಾಗಬೇಕೆಂಬುದು ಉದ್ದಾನ ಸ್ವಾಮಿಗಳ ದೂರದೃಷ್ಟಿ. ''ಶಿಷ್ಯನ ಕೈ ಬರಿದಾಗಬಾರದು, ಕೈಯಲ್ಲಿ ಹಣ ಹೆಚ್ಚಾಗಲೂ ಬಾರದು'' ಎಂಬ ಧ್ಯೇಯ. ಗುರುಗಳ ಕಠೋರ ವರ್ತನೆ ಕೃಪಾವಿಶೇಷವೆಂದೇ ಶ್ರೀ ಶಿವಕುಮಾರ ಸ್ವಾಮಿಗಳು ನಂಬಿದರು. ನಂಬಿ ನಡೆದರು. ದಾಸೋಹ ಕಾರ್ಯ, ವಿದ್ಯಾರ್ಥಿ ನಿಲಯ, ಸಂಸ್ಕೃತ ಪಾಠಶಾಲೆಗಳು ನಿರಂತರವಾಗಿ ನಡೆಯತೊಡಗಿದವು. ಗುರುಕಾರುಣ್ಯ ಯಾವ ರೂಪದಲ್ಲಿ ಯಾವಾಗ ಒದಗಿ ಬರುತ್ತದೆಂಬುದನ್ನು ಬಲ್ಲವರಾರು? ಶ್ರೀಮಠಕ್ಕೆ ಶ್ರೀ ಶಿವಕುಮಾರಸ್ವಾಮಿಗಳಿಗೆ ಚೇಳೂರಿನ ಚಿಕ್ಕಣ್ಣನ ರೂಪದಲ್ಲಿ ನಡೆದು ಬಂದಿತು. ಉದ್ದಾನ ಸ್ವಾಮಿಗಳಿದ್ದ ದಿನಗಳಲ್ಲಿಯೆ ಒದಗಿಬಂತು. ಚಿಕ್ಕಣ್ಣ ಏಳುನೂರು ರೂ.ಗಳ ನೋಟುಗಳನ್ನು ತಂದುಕೊಟ್ಟ. ಮತ್ತೊಮ್ಮೆ ನಾಲ್ಕು ಸಾವಿರ ರೂ. ತಂದಿತ್ತ. ತನ್ನದೆಲ್ಲವನ್ನೂ ಮಠಕ್ಕೆ ಅರ್ಪಿಸಿದ. ಆ ಹಣವೇ ಶ್ರೀ ಶಿವಕುಮಾರಸ್ವಾಮಿಗಳಿಗೆ ಮೂಲ ಬಂಡವಾಳವಾಯಿತು. ಮುದಿಗೆರೆ ಲಿಂಗಮ್ಮ ೨೫೦೦ ರೂ. ಅರ್ಪಿಸಿದರು. ಶ್ರೀಮಠದಲ್ಲಿಯೇ ಇದ್ದು ಶಿವಾಧೀನರಾದರು. ಸಾಯುವಾಗ ತನ್ನಲ್ಲಿದ್ದ ಬೆಳ್ಳಿ ನಾಣ್ಯ ಮತ್ತು ಕೊಂಚ ಬಂಗಾರವನ್ನು ಸ್ವಾಮಿಗಳಿಗರ್ಪಿಸುವಂತೆ ಹೇಳಿ ಕಣ್ಮುಚ್ಚಿದರು. ಆ ತಾಯಿಯ ಸ್ಮರಣಾರ್ಥ ನಿರ್ಮಾಣವಾದದ್ದು ''ಲಿಂಗಮ್ಮನ ಭಕ್ತಿ ಕಟ್ಟಡ''. ಉದ್ದಾನಶಿವಯೋಗಿಗಳ ಕಮ್ಮಟದಲ್ಲಿ ಹನ್ನೊಂದು ವರ್ಷ ತರಬೇತಿ ಪಡೆದ ಶ್ರೀ ಶಿವಕುಮಾರ ಸ್ವಾಮಿಗಳು ತಾ. ೧೧.೧.೧೯೪೧ ರಂದು ಕಣ್ಣೀರ ಕೋಡಿ ಹರಿಸಿದರು. ಗುರುಗಳ ವಿಯೋಗದಿಂದ ತಾಯಿಯನ್ನಗಲಿದ ಕರುವಾದರು. ಉದ್ದಾನಶಿವಯೋಗಿಗಳು ಮರ್ತ್ಯದ ಮಣಿಹವನ್ನು ಪೂರೈಸಿ ಲಿಂಗದೊಳಗಾದರು. ಗುರುಗಳ ಆರಾಧನೆಯನ್ನು ಮಾಡಲು ಅಧಿಕ ಹಣದ ಆವಶ್ಯಕತೆ ಇತ್ತು. ಕೈಯಲ್ಲಿದ್ದುದು ಕೇವಲ ಮುನ್ನೂರು ಮಾತ್ರ. ಗುರುವಿನ ನೆರವು ''ಸಾಸವೆ ಮೇಲೆ ಸಾಗರ ಹರಿದಂತೆ'' ಹರಿದು ಬಂದಿತು. ಬೆಂಗಳೂರಿನ ವಣಿಕ ಭಕ್ತರು ಮುಂದೆ ಬಂದು ಉದ್ದಾನಸ್ವಾಮಿಗಳ ಶಿವಗಣಾರಾಧನೆಯನ್ನು ಬೃಹತ್ ಪ್ರಮಾಣದಲ್ಲಿಯೇ ನಡೆಸಿಕೊಟ್ಟರು. ಶ್ರೀಗಳವರು ಸಂದೇಹಿಗಳಲ್ಲ. ಆತ್ಮವಿಶ್ವಾಸಿಗಳು. ಲಿಂಗನಿಷ್ಠಾಶುದ್ಧರು. ಪರುಷಶಕ್ತಿ ಸಂಪನ್ನರು. ಸಾವಿರಾರು ಘಟನೆಗಳು, ಸಮಾರಂಭಗಳು, ಉತ್ಸವಗಳು ಶ್ರೀಮಠದಲ್ಲಿ ನಡೆಯುತ್ತಲೇ ಇರುತ್ತವೆ. ಎಲ್ಲವೂ ಸಾವಿರಾರು ಜನಕೋಟಿ ಸಮಾವೇಶಗಳೇ. ಅವೆಲ್ಲ ದಾಸೋಹವಿಲ್ಲದೇ ಇದ್ದದ್ದೆಂದೂ ಇಲ್ಲ. ಶ್ರೀಗಳವರನ್ನು ವಿಚಾರಿಸಿದರೆ ಈ ಕುರಿತು ''ನನಗಂತೂ ಒಂದೂ ಗೊತ್ತಾಗುವುದಿಲ್ಲ. ಇಷ್ಟೊಂದು ಬೃಹತ್ ಪ್ರಮಾಣದ ಖರ್ಚು ವೆಚ್ಚಗಳು ಶಿವಕೃಪೆಯಿಂದ ನಡೆದು ಹೋಗುತ್ತವೆ'' ಎನ್ನುತ್ತಾರೆ. ಇಲ್ಲಿ ಕೊಡುವವ ಸಂಗ, ಕೊಳ್ಳುವವ ಸಂಗಮದೇವ, ಅಂದರೆ ಕೊಡುವವನು ಶಿವ, ವಿತರಣೆ ಮಾಡುವವನು ಶಿವ. ಹಾಗಿರುವಾಗ ನಮಗೇಕೆ ಅದರ ಗೊಡವೆ? ಶ್ರೀ ಶಿವಕುಮಾರಸ್ವಾಮಿಗಳು ಮಾಡಿದೆನೆಂಬುದು ಮನದಲ್ಲಿಯೂ ಹೊಳೆಯದ ಮಹಂತರು. ಶ್ರೀ ಸಿದ್ದಗಂಗಾಮಠದ ದಾಸೋಹ ನಡೆ ಅನ್ಯಾದೃಶ, ಕಂಡರಿಯದ್ದು, ಕೇಳಿ ತಿಳಿಯದ್ದು.

ದಾಸೋಹ ಕ್ರಿಯೆ ನಿರಹಂಕಾರದ ನಿಚ್ಚಳ ಸೇವೆ. ಸೇವೆಯೆಂಬುದು ಸುಮುಖವಾದದ್ದಲ್ಲ. ನೂರಾರು ಪರೀಕ್ಷೆಗಳನ್ನು ಎದುರಿಸುವಂಥದು. ''ತನುವನಲ್ಲಾಡಿಸಿ ನೋಡುವಂಥದು, ಮನವನಲ್ಲಾಡಿಸಿ ಬಿಡುವಂಥದು''. ಆತ್ಮವಿಶ್ವಾಸದ ಶುದ್ಧ ಭಕ್ತಿಯಿದ್ದಾಗ ಮಾತ್ರ ತುಂಬಿ ಬಂದೀತು. ಶ್ರೀ ಮಠ ಎದುರಿಸಿದ ಅಗ್ನಿಪರೀಕ್ಷೆಗಳು ಒಂದಲ್ಲ, ಎರಡಲ್ಲ. ೧೯೬೬ ರಲ್ಲಿ ರಾಜ್ಯದಲ್ಲಿ ತಲೆದೋರಿದ ಭೀಕರ ಕ್ಷಾಮ ಶ್ರೀಮಠದ ಸತ್ವವನ್ನೇ ಪಣಕ್ಕಿಟ್ಟಿತು. ಸಾವಿರಾರು ವಿದ್ಯಾರ್ಥಿಗಳನ್ನು ಪೋಷಿಸುವ ಶ್ರೀಗಳು ಹಲವಾರು ಸಂಖ್ಯೆಯಲ್ಲಿ ಹಸಿದು ಮಠದ ಪ್ರಸಾದಕ್ಕೆ ಮಕ್ಕಳು ಮರಿ ಸಹಿತ ಬರುವ ಜನತೆಯನ್ನು ಸಲಹುವ ಗುರುತರವಾದ ಸಮಸ್ಯೆ ತಲೆದೋರಿತು. ಹಸಿದವರನ್ನು ಕಂಡು ಹೃದಯ ಕಲಕಿ ಶ್ರೀಗಳವರ ಕರುಳು ಕರಗಿತು. ಎದೆಯೊಡ್ಡಿ ಎದ್ದು ನಿಂತರು. ಬಂದವರಿಗೆಲ್ಲಾ ಪ್ರಸಾದ ನೀಡಿದರು. ಅಡಿಗೆಯ ಸಿಬ್ಬಂದಿಯೊಂದಿಗೆ ತಾವೂ ಸನ್ನದ್ಧರಾದರು. ಮುದ್ದೆ ತಿರುವಿದರು, ಅನ್ನ ಬಸಿದರು, ಸಾರು ಕೂಡಿಸಿದರು, ಎಲೆ ಕೊಡಿಸಿದರು, ತಾವೇ ಬಗ್ಗಿ ನೀಡಿದರು. ಜಂಗಮ ನೀಡಿತು.

ಸಮಾಜ ತೃಪ್ತಿಯಿಂದ ತೇಗಿತು. ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು, ಆಹಾರ ಮಂತ್ರಿಗಳಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ಬಂದು ನೋಡಿದರು: ಬೆಕ್ಕಸ ಬೆರಗಾದರು: ಶ್ರೀಗಳವರನ್ನು ಅಭಿನಂದಿಸಿದರು. ಪ್ರತಿ ತಿಂಗಳೂ ನೂರು ಮೂಟೆ ಗೋದಿ ನೀಡಿ ಸಹಕರಿಸಿದರು. ಗೊಮ್ಮಟನಿಗೆ ಗಿಂಡಿಯಲ್ಲಿ ಅಭಿಷೇಕವಾದಂತೆ ಅಷ್ಟೇ ದಾಸೋಹ ಮುಂದಾಯಿತು. ''ಉಂಡು ತೇಗಿತು ಲೋಕ ಕೊಂಡಾಡಿ ದಾಸೋಹ ಕಂಡ ಕಂಡಲ್ಲಿ ನಿನ ಮಾತು'' ಎಂದಿತು ಜನಪದ.

ಸಿದ್ಧಗಂಗೆಯ ಜಾತ್ರೆ ಶ್ರೀಮಠದ ವೈಶಿಷ್ಟ್ಯಗಳಲ್ಲೊಂದು. ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳ ವಿನೂತನ ಸಂಗಮ ಅನೌಪಚಾರಿಕ ಶಿಕ್ಷಣ ಪ್ರದಾನ ಮಾಡುವ ವ್ಯವಸ್ಥೆ ಪೂಜ್ಯ ಶ್ರೀ ಉದ್ದಾನಶಿವಯೋಗಿಗಳವರಿಂದ ಪ್ರಾರಂಭವಾದ ಶ್ರೀ ಸಿದ್ಧಲಿಂಗೇಶ್ವರರ ಈ ಜಾತ್ರೆ ಇಂದು ರಾಜ್ಯ ನೆರೆರಾಜ್ಯಗಳ ಆಸ್ತಿಕ ಬಂಧುಗಳನ್ನು ಆರ್ಷಿಸುತ್ತಿರುವ ಸುಪ್ರಸಿದ್ಧ ಧಾರ್ಮಿಕ ಸಾಮಾಜಿಕ ಉತ್ಸವ. ಇಲ್ಲಿ ಹಲವು ಹನ್ನೊಂದು ಉತ್ಸವಗಳು, ಮುತ್ತಿನ ಪಾಲಿಕಿ, ಬೆಳ್ಳಿ ಪಾಲಿಕಿ, ರಥೋತ್ಸವ, ತೆಪ್ಪೋತ್ಸವ, ಪಂಚಬ್ರಹ್ಮೋತ್ಸವ, ಜಾನುವಾರುಗಳ ಪ್ರದರ್ಶನ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ಇತ್ಯಾದಿ. ಜಾತ್ರೆಗೆ ಬರುವ ಎಲ್ಲರಿಗೂ ಊಟದ ವ್ಯವಸ್ಥೆ. ಹಲವಾರು ಕಡೆ ಕೊಪ್ಪಲುಗಳು. ಪ್ರಸಾದದ ಸಿದ್ಧತೆ, ಶ್ರೀಗಳವರ ಮೇಲ್ವಿಚಾರಣೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಶ್ರೀಗಳವರು ಬೆಳಗಿನಿಂದ ಸಂಜೆಯವರೆಗೆ ನಡೆದಾಡುತ್ತಲೇ ಇರುತ್ತಾರೆ. ''ಹರಿವ ನದಿಗೆ ಮೈಯೆಲ್ಲ ಕಾಲು ತಾನೇ?''. ಹತ್ತು ಹದಿನೈದು ಸಾವಿರಕ್ಕೂ ಹೆಚ್ಚು ಜಾತ್ರಾರ್ಥಿಗಳು. ಅವರೆಲ್ಲಾ ಪ್ರಸಾದ ಸವಿದೇ ಹೋಗುತ್ತಾರೆ. ಅದ್ಭುತಕ್ಕೆ ಶಬ್ದಕೋಶದಲ್ಲಿ ಅರ್ಥ: ಸಿದ್ಧಗಂಗೆಯಲ್ಲಿ ವಿವರಣೆ. ಜಾತ್ರಾ ಸಿದ್ಧತೆಗಾಗಿ ಶ್ರೀಗಳವರು ಮೂರು ತಿಂಗಳು ಮುಂಚೆಯೇ ಸಿದ್ಧತೆ ನಡೆಸುತ್ತಾರೆ. ಕೊಡಲಿ ಹಿಡಿದು ಸೌದೆ ತರಲು ಹೊರಡುತ್ತಾರೆ. ದವಸ, ಧಾನ್ಯಗಳ ಸಜ್ಜುಗೊಳಿಸುತ್ತಾರೆ ಪಾತ್ರೆ, ಪರಡಿ ಬೆಸುಗೆ, ಕಲಾಯಿ, ರಿಪೇರಿ ನಡೆಸುತ್ತಾರೆ. ಸಾಂಬಾರ ಪುಡಿಗಾಗಿಯೇ ಸುಮಾರು ಒಂದು ಲಕ್ಷ ರೂ. ಖರ್ಚು ಬರುತ್ತದೆ. ಅಕ್ಕಿ, ರಾಗಿ, ಬೇಳೆ, ಬೆಲ್ಲ, ಸಕ್ಕರೆ, ತರಕಾರಿ, ಊಟದ ಎಲೆ, ಪಟುಂತಾವುಗಳಿಗೆಷ್ಟಾಗಬಹುದೆಂದು ಅನೂಹ್ಯವಲ್ಲವಾದರೂ ಸರ್ಕಾರಕ್ಕೂ ಸವಾಲು ಹಾಕುವಂಥದು. ಉತ್ಸವಗಳ ದಿನಗಳಲ್ಲಿ ಸಿಹಿಯೂಟ ಬೇರೆ. ಜಾತ್ರೆಗೆಲ್ಲ ಊಟ ನೀಡುವ ಶ್ರೀಗಳು ಊಟ ಮಾಡುವುದು ಯಾವಾಗ ಎಂಬುದೇ ಅರ್ಥವಾಗದ ರಹಸ್ಯ. ಯಾವಾಗ ಪೂಜೆ ಮಾಡುತ್ತಾರೋ? ಯಾವಾಗ ಪ್ರಸಾದ ಮಾಡುತ್ತಾರೋ? ಯಾವಾಗ ನಿದ್ದೆ ಮಾಡುತ್ತಾರೋ? ಅಡಿಗೆ ಮನೆಯಲ್ಲಿರುತ್ತಾರೆ, ದೇವರ ಉತ್ಸವಗಳ ಮುಂದೆ ನಡೆದಿರುತ್ತಾರೆ, ವಸ್ತು ಪ್ರದರ್ಶನದಲ್ಲಿ, ಸಮಾರಂಭದಲ್ಲಿ ಆಸೀನರಾಗಿರುತ್ತಾರೆ, ಗ್ರಾಮೀಣ ಬಂಧುಗಳ ಜತೆ ಸಂಭಾಷಿಸುತ್ತಾರೆ, ಹಳೆಯ ವಿದ್ಯಾರ್ಥಿಯ ಹೆಸರಿಡಿದು ಯೋಗಕ್ಷೇಮ ವಿಚಾರಿಸುತ್ತಿರುತ್ತಾರೆ. ಎತ್ತೆತ್ತ ನೋಡಿದರತ್ತತ್ತ ಶ್ರೀಗಳವರೇ ಸುಳಿದಾಡುತ್ತಿರುತ್ತಾರೆ. ಸಿದ್ಧಗಂಗೆಯ ಜಾತ್ರೆ ೧೯೦೫ ರಲ್ಲಿ ಆರಂಭವಾಯಿತೆಂದು ದಾಖಲೆಯಿಂದ ತಿಳಿದು ಬರುತ್ತದೆ. ಅವಿಚ್ಛಿನ್ನವಾಗಿ ಇಂದೂ ನಡೆದು ಬರುತ್ತಿದೆ. ಅಂದು ವಿದ್ಯುದ್ದೀಪಗಳಿರಲಿಲ್ಲ. ಇಂದು ಬೆಳಕಿನ ಲೋಕವೇ ಸೃಷ್ಟಿಯಾಗಿರುತ್ತದೆ. ಜನಜಾಗೃತಿಗೆ, ಸಂಘಟನೆಗೆ ಉತ್ಸವಗಳು ಅಗತ್ಯ. ಜಾತ್ರೆಗೆ ಬರುವ ಭಕ್ತಾದಿಗಳು ಅಳಿಲ ಸೇವೆ ಮಳಲ ಭಕ್ತಿ ಎಂಬಂತೆ, ದವಸಧಾನ್ಯಗಳನ್ನು ತರುತ್ತಾರೆ. ಹಳೆಯ ವಿದ್ಯಾರ್ಥಿಗಳು ತಮ್ಮ ಸಾಮಾಜಿಕ ಸ್ಥಾನವನ್ನು ಬದಿಗಿಟ್ಟು ಸೇವಾಕಾಂಕ್ಷಿಗಳಾಗಿ ದುಡಿಯುತ್ತಾರೆ. ದಾಸೋಹ ಮಣಿಹದಲ್ಲಿ ಪಾಲ್ಗೊಳ್ಳುತ್ತಾರೆ.

''ಶ್ರೀ ಶಿವಕುಮಾರಸ್ವಾಮಿಗಳು ಒಂದು ಧಾರ್ಮಿಕ ಮಠದ ಮುಖ್ಯಸ್ಥರು. ಅವರು ಕರ್ನಾಟಕದ ಶಕ್ತಿಶಾಲೀ ಜನಾಂಗವೊಂದರ ಗುರುಗಳೂ ಹೌದು. ಅನೇಕ ವ್ಯಕ್ತಿಗಳಿಗೆ ಇಂಥ ಪೂಜ್ಯಸ್ಥಾನ ದೊರಕಿದ ಕೂಡಲೇ ಅವರು ಇತರರ ಸಿಲುಕಿಗೆ ಸಿಗದಂತಾಗಿ ಬಿಡುವ ಸನ್ನಿವೇಶಗಳೇ ಬಹಳ. ಶ್ರೀ ಶಿವಕಮಾರ ಸ್ವಾಮಿಗಳಿಗಾದರೋ ತಾವು ಅಲಂಕರಿಸಿರುವ ಉನ್ನತ ಸ್ಥಾನದ ಸಲುವಾಗಿ ಜಗದ ಭವಿಗಳ ನೋವು ನಲಿವುಗಳಿಂದ ದೂರವಾಗಿದ್ದೇನೆ ಎಂಬ ಭಾವನೆ ಬಂದಿಲ್ಲ. ಜನ ಸಾಮಾನ್ಯರ ನೋವು ನಲಿವುಗಳಿಂದ ದೂರವಾಗಿರುವ ಕಾರಣದಿಂದಲೇ ನಾನು ಪೂಜ್ಯನಾಗಿದ್ದೇನೆ ಎಂಬ ಅಹಂಭಾವ ಬಂದಿಲ್ಲ''. ಅಷ್ಟೇ ಅಲ್ಲ, ಶ್ರೀಗಳವರಿಗೆ ಏಕಾಂತವೆಂಬುದೇ ಇಲ್ಲ. ಅವರ ಬದುಕೆಲ್ಲ ಲೋಕಾಂತಕ್ಕಾಗಿಯೇ ಮೀಸಲು. ಯಾವುದೇ ಸಂದರ್ಭದಲ್ಲಿ ಅವರನ್ನು ಒಬ್ಬ ಸಾಮಾನ್ಯನೂ ನೇರವಾಗಿ ದರ್ಶನ ಮಾಡಬಲ್ಲ. ಬೇರೆ ಮಠಾಧಿಪತಿಗಳನ್ನು ನೋಡುವುದಾದರೆ ಅಪ್ಪಣೆ ಪಡೆದು ನೋಡುವಂತಹ ಪದ್ಧತಿ ಶ್ರೀಗಳವರದಲ್ಲ. ಬಸವಣ್ಣನವರ ಮನೆಗೆ ಬಾಗಿಲೇ ಇರಲಿಲ್ಲವೆನ್ನುವ ಮಾತೊಂದಿದೆ, ನಿಜವಿರಬೇಕು. ಬಸವಣ್ಣನವರನ್ನೇ ಆದರ್ಶವಾಗಿಟ್ಟುಕೊಂಡಿರುವ ಶ್ರೀಗಳವರನ್ನು ನೋಡಿದ ಯಾರಿಗಾದರೂ ತಿಳಿದೀತು ಆ ಮಾತಿನ ಸತ್ಯ.



ನೆನಪಿನಾಳದಲ್ಲಿ ಶ್ರೀಗಳು



ಪ್ರಸನ್ನಚಿತ್ತ ಶ್ರೀಗಳು



ಶ್ರೀಗಳು - ವಿವಿಧ ಮುಖಗಳಲ್ಲಿ



ಶ್ರೀಗಳು - ವಿವಿಧ ಮುಖಮುದ್ರೆಗಳಲ್ಲಿ



ಶ್ರೀಗಳು - ಪೂಜಾರಸಮಗ್ನಚಿತ್ತರಾಗಿ



ಶ್ರೀಗಳು - ಸಕಲಜೀವರಿಗೆ ಲೇಸನೇ ಬಯಸುವ ಮುಖ ಮುದ್ರೆಗಳಲ್ಲಿ



ಶ್ರೀಗಳು - ನಿರಾಳ ನಿಲುವು



ಶ್ರೀಗಳು - ಪ್ರಫುಲ್ಲಚಿತ್ತ

''ಇತ್ತೀಚಿನ ಕರ್ನಾಟಕದ ಇತಿಹಾಸದಲ್ಲಿ ಯಾರೂ ನೋಡದಂಥ ಸಮಾಜ ಸೇವೆಯನ್ನು ಶ್ರೀಗಳವರು ಮಾಡಿದ್ದಾರೆ. ಲಕ್ಷಾಂತರ ಹಸಿದ ಮಂದಿಗೆ ಅನ್ನವಿಕ್ಕಿ ಹೊಟ್ಟೆಯ ಸಿಟ್ಟನ್ನು ತಂಪು ಮಾಡಿದ್ದಾರೆ. ರಾಜ್ಯ ನಡೆಸುತ್ತಿರುವ ವಿಶ್ವವಿದ್ಯಾನಿಲಯಗಳಿಗೂ ನಾಚಿಕೆಯಾಗಬೇಕು, ಅಂತಹ ವಿದ್ಯಾಸಂಸ್ಥೆಗಳನ್ನು ಕಟ್ಟಿ ಅಜ್ಞಾನಾಂಧಕಾರದ ಅಳಿವಿಗೆ ಹೆಣಗಿದ್ದಾರೆ. ಎಂಥ ವಿದ್ಯಾಸಂಸ್ಥೆಗಳನ್ನು ಕಟ್ಟಿದ್ದಾರೆ, ಅಲ್ಲಿಯ ಗುಣಮಟ್ಟ ಎಂಥದ್ದು ಎಂದರೆ, ಹೊಸದಾಗಿ ಸಂಸ್ಥೆಗಳನ್ನು ಕಟ್ಟಬಯಸುವವರು ಸಿದ್ಧಗಂಗೆಯ ವಿದ್ಯಾಸಂಸ್ಥೆಗಳಂತಿರಬೇಕು ನಾವು ಪ್ರಾರಂಭಿಸುವ ಸಂಸ್ಥೆಗಳು ಎಂದು ಬಯಸುತ್ತಾರೆ.''

೧೯೧೭ ರಲ್ಲಿ ಪೂಜ್ಯ ಶ್ರೀ ಉದ್ದಾನ ಶಿವಯೋಗಿಗಳವರಿಂದ ಪ್ರಾರಂಭವಾದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆಯನ್ನು ಸಂಸ್ಕೃತ ಕಾಲೇಜಾಗಿ ಪರಿವರ್ತಿಸುವುದರೊಂದಿಗೆ ಶಿಕ್ಷಣ ಕ್ಷೇತ್ರದ ಸೇವಾ ದಿಗಂತವನ್ನು ವಿಸ್ತರಿಸುತ್ತ ನಡೆಯಲಾರಂಭಿಸಿದರು. ೧೯೪೪ ರಲ್ಲಿ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಪ್ರೌಢಶಾಲಾ ಸ್ಥಾಪನೆ ಮಾಡಿದಂದಿನಿಂದ, ಗ್ರಾಮಾಂತರ ಪ್ರದೇಶದಲ್ಲಿ ಪ್ರೌಢಶಾಲೆಗಳನ್ನು ತೆರೆಯುವುದರ ಮೂಲಕ ಸಾಕ್ಷರತೆಯ ದೀಪ ಹಚ್ಚುತ್ತ ಬಂದರು. ೧೯೬೩ ರಲ್ಲಿ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯನ್ನು ರೂಪಿಸಿ ಸಿದ್ಧಗಂಗಾ ತಾಂತ್ರಿಕ ಕಾಲೇಜು (ಎಸ್.ಐ.ಟಿ.), ಪ್ರಥಮದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ಔಷಧ ವಿಜ್ಞಾನ ಕಾಲೇಜು, ನರ್ಸಿಂಗ್ ಕಾಲೇಜು, ಉಪಾಧ್ಯಾಯ ತರಬೇತಿ ಕಾಲೇಜುಗಳು, ಶಿಕ್ಷಣ ಮಹಾ ಕಾಲೇಜು, ಮಾಧ್ಯಮಿಕ ಶಾಲೆಗಳು, ಪೂರ್ವ ಪ್ರಾಥಮಿಕ ಶಾಲೆಗಳು, ಅಂಧ ಮಕ್ಕಳ ಶಾಲೆ, ವಾಣಿಜ್ಯ ಶಾಲೆ, ಸಂಗೀತ ಪಾಠಶಾಲೆ, ಮುಂತಾಗಿ ಒಂದು ನೂರಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಶಿಕ್ಷಣ ಪ್ರಸಾರವಲ್ಲಿ ಸದ್ದಿಲ್ಲದ ಕ್ರಾಂತಿ ಮಾಡಿದ ಕೀರ್ತಿ ಶ್ರೀಗಳವರದ್ದಾಗಿದೆ. ಒಂದು ವಿಶ್ವ ವಿದ್ಯಾಲಯವಾಗುವ ಎಲ್ಲ ಲಕ್ಷಣಗಳನ್ನೂ ಪಡೆದುಕೊಂಡಿದೆ. ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯೊಂದು ಹಿಮಾಲಯ ಸದೃಶ ಔದಾರ್ಯವುಳ್ಳದ್ದು. (ವಿವರಗಳಿಗೆ ಅನುಬಂಧದಲ್ಲಿರುವ ಪಟ್ಟಿ ನೋಡಿ.)

ಕಾಯಕ ಮತ್ತು ದಾಸೋಹ ತತ್ವಗಳು ಶರಣರು ಜಗತ್ತಿಗೆ ಕೊಟ್ಟ ಅಮೂಲ್ಯ ಸಂಪತ್ತು. ಜಂಗಮಶೀಲವಾದ ಈ ತತ್ವಗಳ ಆಚರಣೆ ಶ್ರೀ ಶಿವಕುಮಾರಸ್ವಾಮಿಗಳ ನಿತ್ಯಪೂಜೆ, ಅವರ ದೀರ್ಘ ಜೀವನವನ್ನೂ ವ್ಯಾಪಿಸಿಕೊಂಡಿರುವ ಈ ಅನುಪಮ ಕಾಯಕ - ದಾಸೋಹಗಳು ಆಧುನಿಕ ಜೀವನಕ್ಕೆ ತಾರಕ ಮಂತ್ರಗಳು. ಶ್ರೀಗಳವರಿಗೆ ಕಾಯಕದಲ್ಲಿ ಮೇಲು ಕೀಳೆಂಬುದೇ ಇಲ್ಲ. ಅವರು ಕಲ್ಲು ಹೊರುತ್ತಿರಲಿ, ನೀರು ಹಾಯಿಸುತ್ತಿರಲಿ, ಮುದ್ದೆ ಕೂಡಿಸುವುದಾಗಲಿ, ಹೊಲ ಗದ್ದೆಗಳಲ್ಲಿ, ಪೈರು ಪಚ್ಚೆ ಕಟಾವು ಮಾಡುವುದಿರಲಿ, ಸೌದೆ ಸೀಳುವುದಾಗಲಿ, ಉದ್ಧರಣೆಗಳನ್ನು ಬರೆಯುವುದಾಗಲಿ, ಪತ್ರ ವ್ಯವಹಾರ ಮಾಡಲಿ, ಸಭೆ ಸಮಾರಂಭಗಳಲ್ಲಿ ಉಪನ್ಯಾಸ ನೀಡುವುದಾಗಲಿ ಎಲ್ಲವೂ ಸಮಾನ. ''ಆವಾವ ಕಾಯಕವ ಮಾಡಿದೊಡೂ ಬಸವೇಶ ಆವಗಂ ಶರಣರನು ಸೇವಿಪೆನು ಬಸವೇಶ'' ಎಂಬುದೊಂದೇ ನಿಷ್ಠೆ. ಶ್ರೀಗಳವರು ಹತ್ತು ಜನರಿರುವ ಸಭೆಯಾಗಲೀ, ಹತ್ತು ಸಾವಿರವಿರುವ ಬೃಹತ್ ಸಮಾವೇಶವಾಗಲೀ ಪ್ರವಚನಕ್ಕೆ ನಿಂತರೆ ಅದೊಂದು ಅಮೃತದ ಸೆಲೆ. ಸಾಮಾನ್ಯರೂ ತಲೆದೂಗುವಂತೆ, ವಿದ್ವಾಂಸರೂ ಬೆರಗಾಗುವಂತೆ ಮಾತನಾಡುತ್ತಾರೆ. ಅವರ ಮಾತುಗಳೆಂದರೆ ಬಸವಣ್ಣನವರ, ಮಹಾತ್ಮ ಗಾಂಧೀಜಿಯವರ, ಅರವಿಂದ ಘೋಷರ, ಅಥಣಿ ಶಿವಯೋಗಿಗಳ ದರ್ಶನವಾಗುವ ಪವಿತ್ರ ಯಾತ್ರೆ. ಸಂಸ್ಕೃತದ ಶ್ಲೋಕಗಳು, ಇಂಗ್ಲೀಷಿನ ಕೊಟೇಶನ್‌ಗಳು, ಜನಪದ ಮುಕ್ತಕಗಳು, ಶರಣರ ಅನುಭಾವದ ನುಡಿಗಳು ತುಂಬಿ ತೊನೆಯುತ್ತ ಸಾಗುವ ಶಾಂತ ಪ್ರಶಾಂತ ಜೀವನದಿ. ''ಬಿರುಗಾಳಿ ಬೀಸಿ ಮರ ಮುರಿಯುವಂತಲ್ಲ, ತಂಗಾಳಿ ಬೀಸಿ ಪರಿಮಳ ಸೂಸಿದಂತೆ''. ಅದು ಶಿವಾನುಭವದ ಬೆಳಕು. ಅದೆಷ್ಟೊಂದು ಸ್ವಾನುಭವದ ನುಡಿಗಳು, ಪ್ರಮಥರ ದೃಷ್ಟಾಂತಗಳು, ದೇಶಭಕ್ತರ ಉದಾಹರಣೆಗಳು, ತ್ಯಾಗಜೀವಿಗಳ ನಿದರ್ಶನಗಳು, ಋಷಿಮುನಿಗಳ ಸುಭಾಷಿತಗಳು, ಅನುಭವಿಗಳ ಕಿವಿಮಾತುಗಳು ಅವರ ಮಾತುಗಳಲ್ಲಿ ಅರಳುತ್ತವೆ! ಇನ್ನೊಂದು ರಹಸ್ಯ ಶ್ರೀಗಳವರನ್ನು ಕುರಿತು : ಸಭೆ ಸಮಾರಂಭಗಳಲ್ಲಿ ಬೇರೆಯವರು ಮಾತನಾಡುವಾಗ ಅವರು ಕಣ್ಮುಚ್ಚಿ ಕುಳಿತಿರುತ್ತಾರೆ. ಸಭಿಕರಿಗೆ ಸ್ವಾಮಿಗಳು ನಿದ್ದೆ ಮಾಡುತ್ತಿದ್ದಾರೆ ಎಂಬ ಭಾವನೆ. ಆದರೆ ಶ್ರೀಗಳು ಆಶೀರ್ವಚನಕ್ಕೆ ಪ್ರಾರಂಭಿಸಿದರೆ ಸಾಕು ಅಲ್ಲಿಯವರೆಗೆ ಮಾತನಾಡಿದೆಲ್ಲರ ಮಾತುಗಳನ್ನೂ ಸಮೀಕ್ಷೆ ಮಾಡುತ್ತ ಮುಂದುವರಿದಾಗ ಸಭೆ ಮಂತ್ರಮುಗ್ಧವಾಗುತ್ತದೆ. ಶ್ರೀಗಳವರ ಕಂಠಸಿರಿಯಂತೂ ಅತಿ ಮಧುರ, ಅಷ್ಟೇ ಗಂಭೀರ. ಇನ್ನೊಂದು ಗುಟ್ಟು : ಶ್ರೀಗಳವರ ಆದರ್ಶವೆನ್ನುತ್ತೀರಾ? ಸಭೆಗೆ ತೋರಿಸುವ ಗೌರವವೆನ್ನಬಹುದೆ, ಸಭೆಯನ್ನು ದೇವರೆಂದೇ ಪರಿಭಾವಿಸಿರಬಹುದೆ? ''ತನಗಿಂತ ಕಿರಿಯರಿಲ್ಲ'' ಎಂಬ ವಿನಯಾಚರಣೆಯೆನ್ನಲೆ? ೯೯ರ ತುಂಬು ವಯಸ್ಸಿನಲ್ಲಿಯೂ ಸಭೆಯಲ್ಲಿ ಮಾತನಾಡುವಾಗ ನಿಂತೇ ಮಾತನಾಡುತ್ತಾರೆ. ನಿನ್ನೆ

ಪೋನ್ನೆ ಮಠಾಧಿಪತಿಗಳಾದವರೂ, ಅದೂ ಇಂಥ ತಪೋವೃದ್ಧರು ಉಪಸ್ಥಿತರಿರುವ ಸಂದರ್ಭಗಳಲ್ಲಿಯೂ ಕುಳಿತು ಮಾತನಾಡುವುದನ್ನು ಕಂಡೂ ಶ್ರೀ ಶಿವಕುಮಾರ ಸ್ವಾಮಿಗಳು ಎಲ್ಲ ಸ್ವಾಮಿಗಳವರಿಗೆ ಶರಣೆಂದು ಮಾತು ಪ್ರಾರಂಭಿಸುವ ಆದರ್ಶ ಪರಿಪಾಲಿಸಿಕೊಂಡು ಬಂದಿದ್ದಾರೆ.

ಶ್ರೀಗಳವರ ದಿನಚರಿಯೊಂದು ವಿಸ್ಮಯ. ಅವರು ಮಧ್ಯರಾತ್ರಿ ಕಳೆದ ನಂತರ ೨.೧೫ಕ್ಕೆ ಏಳುತ್ತಾರೆ. ಅಧ್ಯಯನ ಕೊಂಚ ಕಾಲ. ಅನಂತರ ಶೌಚಾದಿ ನಿತ್ಯಕರ್ಮಗಳು. ತದನಂತರ ೩.೩೦ರ ವೇಳೆಗೆ ಪೂಜಾಗೃಹ ಪ್ರವೇಶ. ಕೊಂಚ ಕಾಲ ಏಕಾಂತ ಧ್ಯಾನ. ಯಾರಿಗೂ ಪ್ರವೇಶವಿಲ್ಲ. ಅನಂತರ ಅರ್ಚನಾದಿಗಳ ಆರಂಭ. ವೇದಮಂತ್ರಗಳ, ಶರಣರ ವಚನಗಳ, ಕೈವಲ್ಯದ ಹಾಡುಗಳ, ಭಕ್ತಿಗೀತೆಗಳ ಮಂಗಳ ಗೇಯಲೋಕ. ಹತ್ತಾರು ಭಕ್ತರ ನಡುವೆ ಗುರು ಲಿಂಗ ಜಂಗಮಾಚರಣೆ. ಮಾತು ಮನಗಳು ಮೂಕವಾಗುವ ಅನುಭಾವದ ಪವಿತ್ರ ಜಗತ್ತು ಅಲ್ಲಿ. ಇಷ್ಟಲಿಂಗಾರ್ಚನೆಯ ನಂತರ ಪ್ರಸಾದ ಸ್ವೀಕಾರ. ಪ್ರಸಾದ ವಿತರಣೆಯ ಸಮಯದಲ್ಲಿ ತುಂಬುಕಂಠದ ಅನುಭಾವದ ಹಾಡುಗಳು. ಶ್ರೀಗಳವರೇ ಹಾಡುತ್ತಾರೆ. ಕೇಳುವುದೊಂದು ಅವಿಸ್ಮರಣೀಯ ಭಾಗ್ಯ. ಪ್ರಸಾದದಲ್ಲಿ ರುಚಿಯನರಸದ ಶರಣನಿಷ್ಠೆ. ಸ್ವೀಕಾರದಲ್ಲಿ ಅತಿ ಸಂಯಮ. ಮಿತಾಹಾರ. ಒಂದಿಷ್ಟು ಹಣ್ಣು. ಅದೂ ಒಂದು ಅಥವಾ ಎರಡು ತೊಳೆ. ಸಹಪಂಕ್ತಿ ಪ್ರಸಾದ ಪದ್ಧತಿ. ಭಕ್ತ ಜಂಗಮ ಕೂಡಿ ಸ್ವೀಕರಿಸುವ ಸತ್ಪರಂಪರೆ. ೫.೩೦ಕ್ಕೆ ಪೂಜಾಗೃಹದಿಂದ ''ಕಾಯಕ''ದತ್ತ ಗಮನ. ಕಾರ್ಯಾಲಯಕ್ಕೆ ಆಗಮನ. ಮುಂಜಾನೆಯ ಪ್ರಾರ್ಥನಾ ಸಭೆ. ಸಾಮೂಹಿಕವಾಗಿ ನಾಲ್ಕು ಸಹಸ್ರ ವಿದ್ಯಾರ್ಥಿಗಳು ಮಾಡುವ ಪ್ರಾರ್ಥನೆಯಲ್ಲಿ ಉಪಸ್ಥಿತರು. ಐದು ಹತ್ತು ನಿಮಿಷಗಳ ಆಶೀರ್ವಚನ, ಅದೂ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿಷಯಗಳಿಗೆ ಸಂಬಂಧಿಸಿದಂತೆ. ಅನಂತರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಜೊತೆ ಹೊಲ ಗದ್ದೆಗಳ, ಕಟ್ಟಡ ನಿರ್ಮಾಣಗಳ ಪರಿಶೀಲನೆ, ಪತ್ರವ್ಯವಹಾರಗಳ ಪರಾಂಬರಿಕೆ, ಶಾಸಕರ, ಸಚಿವರ, ಮುಖಂಡರ ಭೇಟಿಯಿದ್ದಲ್ಲಿ ಅವರೊಂದಿಗೆ ರಾಷ್ಟ್ರದ, ರಾಜ್ಯದ ಆಗು ಹೋಗುಗಳ ಪರಾಮರ್ಶೆ. ವಿವಿಧ ಮಠಗಳಿಂದ ಬಂದ ಹರಗುರು ಚರಮೂರ್ತಿಗಳೊಡನೆ ಧಾರ್ಮಿಕ ಆಧ್ಯಾತ್ಮಿಕ ಚಿಂತನೆ, ವಿದ್ವಾಂಸರುಗಳೊಂದಿಗೆ ಚರ್ಚೆ, ನೂರಾರು ಭಕ್ತರಿಗೆ ಯಂತ್ರಧಾರಣೆ, ಪ್ರವಾಸ ಕಾರ್ಯಕ್ರಮಗಳಿಗೆ ಸಮಯ ಪಾಲನೆಯೊಂದಿಗೆ ಭಾಗವಹಿಸುವ ನಿಷ್ಠೆ. ಮಧ್ಯಾಹ್ನದ ಪೂಜೆ, ಪ್ರಸಾದ, ಮತ್ತೆ ಸೇವಾ ಕಾರ್ಯಗಳು, ಸಂಜೆ ಸಾಮೂಹಿಕ ಪ್ರಾರ್ಥನೆ. ''ನೋಡಲು ಕಣ್ಣು ಸಾಲವು, ಕೇಳಲು ಕಿವಿ ಸಾಲವು'' ಎನ್ನುವಂತಹ ಭಕ್ತಿಲೋಕದ ಮಧ್ಯೆ ಮಂಡಿಸುವ ಶ್ರೀಗಳವರು ''ಧರೆಗಿಳಿದ ಭಗವಂತ'', ''ನಡೆದಾಡುವ ದೇವಾಲಯ, ನುಡಿದಾಡುವ ದೇವರು'' ಎಂಬ ಭಕ್ತರ ನುಡಿಗಳಿಂದ ಅಲಂಕೃತರಾಗುವುದೊಂದು ಹೆಚ್ಚಲ್ಲ. ಸಹಸ್ರ ಸಂಖ್ಯೆಯಲ್ಲಿ ಬರುವ ಕ್ಷೇತ್ರಾರ್ಥಿಗಳೊಂದಿಗೆ ಯಾವ ಹಮ್ಮು ಬಿಮ್ಮು ಇಲ್ಲದೆ ಬೆರೆತು ಬೆಳಗುವ ಶ್ರೀಗಳವರು ರಾತ್ರಿ ೯.೩೦ ಗಂಟೆಗೆ ಪೂಜೆ ಪ್ರಸಾದ ಸ್ವೀಕರಿಸಿ ಗ್ರಾಮಾಂತರ ಬಸವ ಜಯಂತಿ ಯೋಜನೆಯ ಪ್ರಮುಖ ಮುಖವಾದ ಜಗಜ್ಯೋತಿ ಬಸವೇಶ್ವರ ನಾಟಕದ ರಿಹರ್ಸಲ್‌ಗಳಲ್ಲಿ ಭಾಗವಹಿಸುತ್ತಾರೆ. ಪಾತ್ರಗಳ ಆಯ್ಕೆ, ನಿರ್ದೇಶನಕ್ಕೆ ಸಲಹೆ, ಸಾಹಿತ್ಯ ಸಹಾಯ, ಸಂಗೀತ ಸಹಕಾರ, ಭಾಷಾಶುದ್ಧಿ, ರಂಗ ಪರಿಕರಗಳಂಥ ವಿಚಾರಗಳಲ್ಲಿ ತೊಡಗುತ್ತಾರೆ. ರಾತ್ರಿ ೧೧ ಕ್ಕೆ ಪವಡಿಸುವ ಮೊದಲು ನಿಜಗುಣರ, ಸಪ್ಪಣ್ಣಪ್ಪನವರ, ಮುಪ್ಪಿನಾರ್ಯರ, ಬಸವಣ್ಣನವರ ಸಾಹಿತ್ಯಾಧ್ಯಯನ ಮಾಡಿ, ನಿದ್ರಾಮುದ್ರೆಗೆ ತೆರಳುತ್ತಾರೆ. ಅದೆಂತಹ ನಿದ್ರೆ! ''ಶರಣ ನಿದ್ರೆಗೈದರೆ ಜಪ ಕಾಣಿರೋ'' ಎಂದಿರುವುದು ಶ್ರೀಗಳವರಂಥವರ ಯೋಗನಿದ್ರೆಯನ್ನು ಕಂಡೇ ಇರಬೇಕು, ಅಲ್ಲವೇ? (ದಿನಚರಿಯ ವಿವರಕ್ಕೆ ಅನುಬಂಧವನ್ನು ನೋಡಿ)

ಶ್ರೀ ಶಿವಕುಮಾರಸ್ವಾಮಿಗಳು ಶ್ರೀಮಠದ ಧರ್ಮಾಧಿಕಾರ ಸ್ವೀಕಾರ ಮಾಡಿದಾಗ ಶ್ರೀಮಠಕ್ಕೆ ಇದ್ದದ್ದು ೧೬ ಎಕರೆ ಭೂಮಿ; ಮುನ್ನೂರು ರೂ.ಗಳು; ಅರವತ್ತು ಮಂದಿ ವಿದ್ಯಾರ್ಥಿಗಳು. ಪೂಜ್ಯರ ಕರ್ತೃತ್ವ ಶಕ್ತಿ ಅಸದೃಶವಾದುದು. ಇಂದು ನಾಲ್ಕುಸಾವಿರದೆಂಟುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಶ್ರೀಗಳವರು ವೀರಶೈವ ವಿರಕ್ತಮಠದ ಅಧಿಕಾರಿಗಳಾಗಿದ್ದರೂ ಸಿದ್ಧಗಂಗಾಮಠವನ್ನು ''ಭವಿ-ಭಕ್ತ''ರೆನ್ನದೆ ಎಲ್ಲರ ಮಠವನ್ನಾಗಿಸಿರುವ ಪುಣ್ಯಪುರುಷರು, ಮಾನವೀಯತೆಯ ಪರಮಾರಾಧಕರು. ಅವರ ದಯಾಳತ್ವದ ವಿವರಣೆಗೆ ಸಾವಿರ ಪುಟಗಳು, ಸಂಪುಟಗಳು ಸಾಕಾಗಲಾರವು. ಮೇಲಾಗಿ ಅವರಂಥ ರಾಷ್ಟ್ರಚಿಂತಕ ವಿರಕ್ತ ಸ್ವಾಮಿಗಳು ಇನ್ನೊಬ್ಬರಿರಲಾರರು. ಸಿದ್ಧಗಂಗಾ ಮಠ ಇಂದು ಬೃಹತ್ಪ್ರಮಾಣದಲ್ಲಿ ಬೆಳೆದಿದೆ ; ಶ್ರೀಗಳವರು ಬೆಳೆಸಿದ್ದಾರೆ. ತಮ್ಮ ಕಾಯಕ ದಾಸೋಹ ಪ್ರೇಮದಿಂದ, ತ್ಯಾಗ ಜೀವನದಿಂದ, ರಾಷ್ಟ್ರನಕ್ಷೆಯಲ್ಲಿ ಗೌರವಾನ್ವಿತ ಸ್ಥಾನ ಪಡೆದಿದೆ.

ರಾಷ್ಟ್ರನಾಯಕರು ಭೇಟಿ ಕೊಟ್ಟಿದ್ದಾರೆ. ಕ್ಷೇತ್ರದ ಸೇವಾ ಕಾರ್ಯಗಳನ್ನು ಕಂಡು ಮನಸಾರೆ ಮೆಚ್ಚಿ ನುಡಿದಿದ್ದಾರೆ . ಸಹಾಯ ಸಹಕಾರ ನೀಡಿದ್ದಾರೆ. ಎಲ್ಲಕ್ಕೆ ಕಾರಣರು ಶ್ರೀ ಶಿವಕುಮಾರ ಸ್ವಾಮಿಗಳು. ಇಷ್ಟಾಗಿಯೂ ''ಶ್ರೀ ಶಿವಕುಮಾರಸ್ವಾಮಿಗಳು ಬಿರುದು ಬಾವಲಿಗಳ ಪರಮಪೂಜ್ಯರಲ್ಲ''; ಪ್ರಶಸ್ತಿ ಪುರಸ್ಕಾರಗಳಿಗೆ ಮನಸೋತವರಲ್ಲ. ಕರ್ನಾಟಕ ಸರ್ಕಾರ ಶ್ರೀ ಡಿ. ದೇವರಾಜ ಅರಸು ಪ್ರತಿಷ್ಠಾನದ ಪ್ರಶಸ್ತಿ ನೀಡಲು ಮುಂದೆ ಬಂದಾಗ ಸೌಜನ್ಯದಿಂದ ನಿರಾಕರಿಸಿದ ನಿರ್ವಿಕಾರ ಚಿತ್ತರು. ಶ್ರೀಗಳವರಿಗೆ ಭಾರತರತ್ನ ಪ್ರಶಸ್ತಿ ಕೊಡಬೇಕು, ನೊಬೆಲ್ ಬಹುಮಾನ ಬರಬೇಕು ಎಂದೆಲ್ಲಾ ಅಭಿಮಾನಿಗಳು ಅಂದಾಗಲೆಲ್ಲಾ ಶ್ರೀಗಳವರು ''ಹೊಗಳಿ ಹೊನ್ನಶೂಲದಲಿಕ್ಕದಂತೆ ಮಾಡು'' ಎಂದು ಲಿಂಗಪೂಜೆಯಲ್ಲಿ ನಿರತರಾಗುತ್ತಾರೆ, ಸೇವೆಯಲ್ಲಿ ತೊಡಗುತ್ತಾರೆ.

ಶ್ರೀ ಶಿವಕುಮಾರಸ್ವಾಮಿಗಳು ಸಮಾಜ ವಿಜ್ಞಾನಿಗಳು. ನಿಷ್ಕ್ರಿಯವಾಗುತ್ತಿರುವ ಸಮಾಜದ ಜಾಗೃತಿಯಾಗಿ ಹಗಲಿರುಳು ಚಿಂತಿಸುತ್ತ ಬಂದವರು. ಸಂಘಟನೆಯ ಮೂಲಕ ಸತ್ಕಾರ್ಯದತ್ತ, ಸಚ್ಚಿಂತನೆ ಮಾಡುವತ್ತ ಕ್ರಿಯಾಶೀಲ ಸಮಾಜ ನಿರ್ಮಾಣಕ್ಕೆ ಹೆಜ್ಜೆ ಇಟ್ಟವರು. ಗ್ರಾಮಾಂತರ ಬಸವ ಜಯಂತಿ ಯೋಜನೆ ಶ್ರೀಗಳವರು ಸಾಧಿಸಿಕೊಂಡು ಬಂದಿರುವ ಅದ್ಭುತ ಸಾಧನೆಯಲ್ಲೊಂದು. ೧೯೭೬ ರಲ್ಲಿ ಪ್ರಾರಂಭವಾದ ಈ ಯೋಜನೆಯ ಮೂಲಕ ರಾಜ್ಯದ ೬೮೯ ಗ್ರಾಮಗಳಲ್ಲಿ ಬಸವ ಜಯಂತಿ ಆಚರಣೆಯ ಮುಖೇನ ಜನತೆ ಕ್ರಿಯಾಶೀಲವಾಗಬೇಕು; ಮಾನವಶಕ್ತಿಯ ಸದುಪಯೋಗವಾಗಬೇಕು; ನೈತಿಕ ಸಂಪನ್ನತೆ ಅಭಿವೃದ್ಧಿಯಾಗಬೇಕು; ದುಡಿಮೆ ಹೆಚ್ಚಬೇಕು, ಪರಾವಲಂಬನೆ ನಿಲ್ಲಬೇಕು, ಬಸವಾದಿ ಶರಣರು ಆಚರಿಸಿ ತೋರಿಸಿದ ಜೀವನ ಮೌಲ್ಯಗಳ ಪುನರುತ್ಥಾನವಾಗಬೇಕು; ನಮ್ಮ ಹಿರಿಯರ ಆದರ್ಶಗಳು ಮತ್ತೆ ಬೆಳಗಬೇಕು; ಜಾತಿ ಮತಭೇದ ಬೇಡ, ನೀತಿ ನಿಯತ್ತುಗಳು ಬೇಕು. ಯುವ ಜನಾಂಗ ವಿಚಾರಶೀಲರಾಗಿ ಆಚಾರಶುದ್ಧಿಯುಳ್ಳವರಾಗಿ ಮುಂದೆ ಬರಬೇಕು ಎಂಬುದಾಗಿ ಸಂಘಟನಾ ಯಾತ್ರೆಯ ಸದ್ಭಾವದ ಬೆಳೆಯನ್ನು ಬೆಳೆಯುತ್ತಿರುವುದು ಶ್ರೀಗಳವರ ಅಮೂಲ್ಯವಾದ ಕೊಡುಗೆ. ಜನತೆಯನ್ನು ಸಂಸ್ಕಾರವಂತರನ್ನಾಗಿಸುವ ಈ ಯೋಜನೆಯಲ್ಲಿ ವಿದ್ವಾಂಸರನ್ನು, ಅನುಭಾವಿಗಳನ್ನು, ಪ್ರಾಧ್ಯಾಪಕರನ್ನು, ಸಚಿವರನ್ನು, ಶಾಸಕರನ್ನು, ಅಧಿಕಾರಿಗಳನ್ನು, ಸಾಹಿತಿಗಳನ್ನು, ಕಲಾವಿದರನ್ನು, ಸಮಾಜದ ಗಣ್ಯರನ್ನು, ಉಳ್ಳವರನ್ನು, ಶ್ರಮಿಕರನ್ನು, ಬುದ್ಧಿಜೀವಿಗಳನ್ನು, ವಿದ್ಯಾರ್ಥಿಗಳನ್ನು ಶ್ರೀಗಳವರು ಬೆನ್ನಿಗೆ ಕಟ್ಟಿಕೊಂಡು ದಿನ, ವಾರ, ಹಗಲು, ಇರುಳೆನ್ನದೆ ಸೇವಾಮುಖಿಗಳಾಗಿರುವುದು ನಾಡಿನ ಪುಣ್ಯ, ಸಮಾಜದ ಭಾಗ್ಯ. ಇಲ್ಲೊಂದು ಹೇಳಲೇಬೇಕಾದ ಮಾತು: ಜಗಜ್ಜ್ಯೋತಿ ಬಸವೇಶ್ವರ ನಾಟಕ ಒಂಭತ್ತು ಗಂಟೆಗಳು ಪೂರ್ಣ ಪ್ರದರ್ಶಿತವಾಗುವ ದೊಡ್ಡ ದೃಶ್ಯ ಮಾಧ್ಯಮ. ಶ್ರೀಗಳು ನಾಟಕದ ಉದ್ದಕ್ಕೂ ಕಣ್ತೆರೆದು ನಾಟಕ ನೋಡುತ್ತಿರುತ್ತಾರೆ. ೬೮೯ ನಾಟಕಗಳನ್ನೂ ನೋಡಿದ್ದಾರೆ. ನಾಟಕದ ಮಧ್ಯದಲ್ಲಾಗುವ ನ್ಯೂನತೆಗಳನ್ನೂ, ಬದಲಾವಣೆಗಳನ್ನೂ ತಿದ್ದುತ್ತಾರೆ. ಕಲಾವಿದರಿಗೆ ಸಲಹೆ ಸೂಚನೆ ನೀಡುತ್ತಾರೆ. ಅವರಿಗೆ ಇದು ನಾಟಕವಾಗಿರದೆ ಬಸವಣ್ಣನವರ ಆತ್ಮಾನುಸಂಧಾನವಾಗಿರುವಂತೆ ಭಾಸವಾಗುತ್ತದೆ. ಹತ್ತು ಹದಿನೈದು ಸಾವಿರ ಪ್ರೇಕ್ಷಕರನ್ನು ಬಸವ ಸಂದೇಶದತ್ತ ಈ ಮೂಲಕ ಕರೆದೊಯ್ಯುತ್ತಾರೆ ಶ್ರೀಗಳು.

''ಶರಣ ಮೇಳ'' ಯೋಜನೆ ಶ್ರೀಗಳವರ ಮತ್ತೊಂದು ಸೇವಾ ಮುಖ. ಯಾರಾದರೂ ಲಿಂಗೈಕ್ಯರಾದ ಸಂದರ್ಭದಲ್ಲಿ ನಡೆಸುವ ಶಿವಗಣಾರಾಧನೆ ಸಂದರ್ಭಗಳಲ್ಲಿ ಅನುಭಾವಿಗಳನ್ನು ಆಹ್ವಾನಿಸಿ ಜೀವನದ ಸಾರ್ಥಕತೆಗಾಗಿ ಪ್ರವಚನಗಳನ್ನು ಏರ್ಪಡಿಸುವುದರ ಮೂಲಕ ಸತ್ಸಂಗ, ಸಚ್ಚಿಂತನೆಗಳಲ್ಲಿ ಗೃಹಸ್ಥರು ತೊಡಗಬೇಕೆಂಬುದನ್ನು ತಿಳಿಸುತ್ತಾರೆ.

ಶ್ರೀಮಠದಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಚರ್ಚಾಗೋಷ್ಠಿ, ವಿಚಾರ ಸಂಕಿರಣ, ಶಿಬಿರಾದಿಗಳನ್ನು ಏರ್ಪಡಿಸುತ್ತಾರೆ. ಪ್ರತಿ ವರ್ಷ ತಮ್ಮ ಪೂಜ್ಯ ಗುರುಗಳಾದ ಶ್ರೀ ಉದ್ದಾನ ಶಿವಯೋಗಿಗಳವರ ಪುಣ್ಯಾರಾಧನೆ, ಬಸವ ಜಯಂತಿ ಆಚರಣೆಗಳನ್ನು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕಾರ್ಯಕ್ರಮಗಳನ್ನಾಗಿ ಪರಿವರ್ತಿಸುತ್ತಾರೆ. ಭಕ್ತಾದಿಗಳು; ಹಳೆಯ ವಿದ್ಯಾರ್ಥಿಗಳು, ಶ್ರೀಮಠದ ಶಿಕ್ಷಣ ಸಂಸ್ಥೆಗಳಲ್ಲಿರುವ ಸಿಬ್ಬಂದಿ ವರ್ಗದವರು ಪ್ರತಿವರ್ಷ ಬೃಹತ್ ಪ್ರಮಾಣದಲ್ಲಿ ''ಗುರುವಂದನ'' - ಶ್ರೀಗಳವರ ಜನ್ಮ ದಿನಾಚರಣೆಯನ್ನು ಆಚರಿಸುವಾಗ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಪ್ರೇರೇಪಿಸುತ್ತಾರೆ. ಸಮಾಜದ ಸೇವೆಯಲ್ಲಿ ನಿರತರಾದ ವಿವಿಧ ಕ್ಷೇತ್ರದ ಗಣ್ಯರನ್ನು ಆಹ್ವಾನಿಸಿ ಸನ್ಮಾನಿಸುತ್ತಾರೆ. ವಿವಿಧ ಮಠಾಧೀಶರನ್ನು ಆಹ್ವಾನಿಸಿ ಭಕ್ತಾದಿಗಳಿಗೆ ಅವರ ಸೇವಾಕಾರ್ಯಗಳನ್ನು ಪರಿಚಯಿಸುತ್ತಾರೆ. ಪ್ರೀತ್ಯಾದರಗಳಿಂದ ಗೌರವಿಸಿ ಬೀಳ್ಕೊಡುತ್ತಾರೆ.

ಶ್ರೀ ಶಿವಕುಮಾರಸ್ವಾಮಿಗಳವರು ಭುವನದ ಭಾಗ್ಯ. ಇಪ್ಪತ್ತನೆಯ ಶತಮಾನ ಕಾಣುತ್ತಿರುವ ಅಪೂರ್ವ ಚೇತನ. ಇಂಥ ''ಪರಿಪೂರ್ಣ''ರನ್ನು ಕಂಡ ನಾಡಿನ ವಿಚಾರಶೀಲರು, ಹೃದಯವಂತರು, ಪವಿತ್ರ ಜೀವನದ ತಪಸ್ವಿ, ಪ್ರಭಾವೀ ಸಂನ್ಯಾಸಿ, ನಿರಾಡಂಬರಮೂರ್ತಿ, ಕಾಯಕಯೋಗಿ, ಸಿದ್ಧಗಂಗಾ ಸಿದ್ಧಗುರು, ಸಮನ್ವಯ ಯೋಗಿ, ಆಧುನಿಕ ಕುಲಪತಿ, ಸನಾತನ ಧರ್ಮ ಪ್ರದೀಪ, ಕರ್ತೃತ್ವ ಶಕ್ತಿಯ ಶ್ರೀಮಂತ ಸಾಕಾರ, ದೊಡ್ಡದೀಪ, ದೇವಪುರುಷ, ಮಹಾನ್ ಸಾಧಕ, ಅನ್ನದಾನ, ವಿದ್ಯಾದಾನಗಳ ಸಂಗಮ, ಬಸವತತ್ವದ ಪ್ರಯೋಗಶಾಲೆಯನ್ನಾಗಿಸಿದ ಧೀಮಂತ, ಮೌನಚೇತನ ಶಕ್ತಿ, ಸಿದ್ಧಗಂಗೆಯ ಬೆಳಕು, ಜಂಗಮಪುರುಷ'' ಎಂದೆಲ್ಲಾ ಭಕ್ತಸ್ತವ ಕುಸುಮಾಂಜಲಿಯನ್ನರ್ಪಿಸಿದರೆ, ಕರ್ನಾಟಕ ವಿಶ್ವ ವಿದ್ಯಾಲಯ ಪೂಜ್ಯರ ಸೇವಾ ಮಣಿಹವನ್ನು ಮನಗಂಡು ೧೯೬೫ ರಲ್ಲಿ ''ಡಾಕ್ಟರ್ ಆಫ್ ಲೆಟರ್ಸ್'' ಗೌರವ ಪದವಿಯನ್ನರ್ಪಿಸಿ ವಿಶ್ವವಿದ್ಯಾಲಯಗಳ ಇತಿಹಾಸದಲ್ಲಿಯೇ ಹೊಸ ಹೆಜ್ಜೆಯನ್ನಿಟ್ಟು, ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡು ಸಂತೋಷಿಸಿದ್ದು ಇಲ್ಲಿ ಸ್ಮರಣಾರ್ಹ. ನಾಡಿನ ಭಕ್ತಕೋಟಿ ಶ್ರೀಗಳವರ ದಿವ್ಯಜೀವನವನ್ನು ಗುರುತಿಸಿ ೧೯೭೨ ರಲ್ಲಿ ರಜತ ಮಹೋತ್ಸವವನ್ನು, ೧೯೮೨ ರಲ್ಲಿ ಸುವರ್ಣ ಮಹೋತ್ಸವವನ್ನು ಅಭೂತಪೂರ್ವವಾಗಿ ಆಚರಿಸಿ ಭಕ್ತಿ ಸಮರ್ಪಣೆ ಮಾಡಿ ಕೃತಾರ್ಥವಾಯಿತು. ಶ್ರೀಗಳವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ೩೦.೩.೧೯೮೮ ರಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರನ್ನು ಆಶೀರ್ವದಿಸಿ ಮಠಾಧಿಪತಿಗಳಿಗಿರಬೇಕಾದ ಅರ್ಹತೆ, ಪಾವಿತ್ರ್ಯತೆ, ಕ್ರಿಯಾಶುದ್ಧಿ, ಹೃದಯವಂತಿಕೆಗಳ ತರಬೇತಿಯನ್ನು ನೀಡುತ್ತಿದ್ದಾರೆ.

''ಪರಮ ಪಾವನ ಶ್ರೀ ಕ್ಷೇತ್ರ ಸಿದ್ಧಗಂಗೆಯ ಜಂಗಮ ಚೈತನ್ಯ ಲಿಂಗವಾಗಿರುವ, ತ್ರಿವಿಧ ದಾಸೋಹ ಮೂರ್ತಿಗಳೂ, ಬಸವಾದಿ ಪ್ರಮಥರ ಸಂದೇಶಕ್ಕೆ ಪ್ರತ್ಯಕ್ಷ ಪ್ರಯೋಗಶಾಲೆಯಾದವರೂ ನುಡಿಲಿಂಗ - ನಡೆ ಲಿಂಗವಾಗಿ ವಿಶ್ವವನ್ನು ಮುನ್ನಡೆಯಿಸಬಲ್ಲ ಕರ್ತಾರನ ಕಮ್ಮಟ ಸಿದ್ಧಪುರುಷರು ಎನಿಸಿದವರು'' ಪೂಜ್ಯ ಶ್ರೀ ಡಾ. ಶಿವಕುಮಾರ ಸ್ವಾಮಿಗಳು. ''ಕಾಶಿ, ಶ್ರೀಶೈಲ ಮೊದಲಾದ ಪುಣ್ಯಕ್ಷೇತ್ರಗಳು ನಮ್ಮ ಕ್ಷೇತ್ರವಲ್ಲ, ಪರಮ ಪೂಜ್ಯ ಶಿವಕುಮಾರ ಮಹಾಸ್ವಾಮಿಗಳವರ ಸುಜ್ಞಾನ ಶ್ರೀಪಾದವೇ ಸುಕ್ಷೇತ್ರವಾಗಿದೆ ನಮಗೆಲ್ಲ. ಪೂಜ್ಯ ಶಿವಕುಮಾರ ಅಪ್ಪಗಳವರು ತಮ್ಮ ಅರುಹಿನ ಎತ್ತರದಿಂದ, ಅನುಭವದ ಬಿತ್ತರದಿಂದ ಚಲಿಸುತ್ತಿರುವ ದೇವಾಲಯವಾಗಿದ್ದಾರೆ'' ಮತ್ತು ''ಆನೆಯನೇರಿಕೊಂಡು ಹೋಗುವ, ಕುದುರೆಯನೇರಿಕೊಂಡು ಹೋಗುವ, ಕುಂಕುಮ ಕಸ್ತೂರಿಯನ್ನು ಪೂಸಿಕೊಂಡು ಹೋಗುವ, ಸತ್ಯದ ನಿಲುವನರಿಯದೇ ಹೋದ'' ಬಯಲ ಡಂಬಕರಿಗೆ ಇಂದು ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳವರ ಬದುಕು ಒಂದು ಮಹಾನ್ ದಾರಿದೀಪವಾಗಿದೆ.

''ಈ ದಿನಗಳು ಪವಾಡದ ದಿನಗಳಲ್ಲ. ಬಹುಮಂದಿ ಪವಾಡಗಳನ್ನು ನಂಬುವುದಿಲ್ಲ. ಹೀಗಿದ್ದರೂ ನೀವು ದಿಟವಾದ ಪವಾಡವೊಂದನ್ನು ಕಣ್ಣಾರೆ ಕಂಡ ಮೇಲೆಯೇ ನಂಬಬೇಕೆನ್ನುವ ಜಾತಿಯವರಾದರೆ, ಬೆಂಗಳೂರನಿಂದ ತುಮಕೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಎಪ್ಪತ್ತು ಕಿ.ಮೀ. ದೂರದಲ್ಲಿರುವ ಸಿದ್ಧಗಂಗೆಯೆಂಬ ಸಣ್ಣ ಹಳ್ಳಿಗೆ ಬನ್ನಿ. ಒಂದು ಸಾಧನೆಯೇ ಪವಾಡವಾದ ಪರಮಪೂಜ್ಯ ಡಾ. ಶಿವಕುಮಾರ ಸ್ವಾಮಿಗಳನ್ನು ಕಂಡು ಧನ್ಯರಾಗಿ.''

(ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಅನೇಕ ಮೂಲಗಳಿಗೆ ಋಣಿಯಾಗಿದ್ದೇನೆ.)

ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ರಜತಮಹೋತ್ಸವ

ವೇದ ಮತ್ತು ಸಂಸ್ಕೃತ ಮಹಾಪಾಠಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳ ಸುವರ್ಣ ಮಹೋತ್ಸವ ಸಂಕ್ಷಿಪ್ತ ವರದಿ

(೨೬-೫-೧೯೭೨ ರಿಂದ ೨೮-೫-೧೯೭೨ರ ವರೆಗೆ)

ಎಂ. ರೇಣುಕಾರಾಧ್ಯ

ಶ್ರೀ ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರಿಗಳಾಗಿ ಪೂಜ್ಯ ಶ್ರೀ ಉದ್ದಾನ ಶಿವಯೋಗಿಗಳಿಂದ ೩-೩-೩೦ ರಂದು ಅನುಗ್ರಹೀತರಾದ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ಗುರುಗಳ ಲಿಂಗೈಕ್ಯಾನಂತರ ೧೯೪೧ ರಲ್ಲಿ ಕ್ಷೇತ್ರಾಧಿಪತಿಗಳಾದರು. ಅವರು ೩೧ ವರ್ಷಗಳ ದೀರ್ಘಕಾಲ ಶ್ರೀಮಠದ ಸೇವಾಮಣಿಹವನ್ನು ನಾನಾ ಮುಖವಾಗಿ ಹೆಚ್ಚಿಸಿದರು. ಅವರ ಈ ಮಹಾಸೇವೆಯನ್ನು ಮನಗಂಡ ಭಕ್ತ ಸಮೂಹ ಅವರಿಗೆ ಅಭಿನಂದನೆ ಸಲ್ಲಿಸಲು ತೀರ್ಮಾನಿಸಿತು. ಸ್ವಾಗತ ಸಮಿತಿಯೊಂದು ರಚನೆಗೊಂಡು ಶ್ರೀಮಾನ್ ಕೆ. ತಿಪ್ಪೇರುದ್ರಯ್ಯನವರು ಅಧ್ಯಕ್ಷರಾಗಿ, ಶ್ರೀ ಎಚ್.ಬಿ. ಪುಟ್ಟಸ್ವಾಮಪ್ಪನವರು ಕಾರ್ಯದರ್ಶಿಗಳಾಗಿದ್ದರು.

ಪೂಜ್ಯರ ಸಂನ್ಯಾಸ ಸ್ವೀಕಾರದ ಬೆಳ್ಳಿಹಬ್ಬದ ಜೊತೆಗೆ, ನಾಡಿನಲ್ಲಿ ಸಂಸ್ಕೃತ ಭಾಷಾಭ್ಯಾಸ ಮತ್ತು ವೇದಾಧ್ಯಯನವನ್ನು ಸರ್ವರೂ ಮಾಡುವ ಮುಕ್ತ ಅವಕಾಶವನ್ನು ಬಹು ಹಿಂದಿನಿಂದ ಒದಗಿಸಿದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮಹಾಪಾಠಶಾಲೆ, ವೇದ ಮಹಾಪಾಠಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳ ಸುವರ್ಣ ಮಹೋತ್ಸವವನ್ನು ನಡೆಸಲೂ ಸಹ ತೀರ್ಮಾನಿಸಿದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ಏರ್ಪಟ್ಟಿದ್ದವು.

೨೬-೫-೭೨ ರ ಸಂಜೆ ರಾಜ್ಯಪಾಲರಾದ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು, ರಾಜ್ಯದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರ ಅಧ್ಯಕ್ಷತೆಯಲ್ಲಿ ರಜತಮಹೋತ್ಸವ ಸ್ಮಾರಕ ಶ್ರೀ ಶಿವಕುಮಾರ ಸ್ವಾಮಿ ಸಾರ್ವಜನಿಕ ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರವನ್ನು ಉದ್ಘಾಟಿಸಿದರು. ಆ ನಂತರ ನಡೆದ ಸಮಾರಂಭ ಅಭೂತಪೂರ್ವವಾಗಿತ್ತು. ಲಕ್ಷೋಪಲಕ್ಷ ಜನ ನೆರೆದು ಸಮಾರಂಭ ಯಶಸ್ವಿಯಾಯಿತು.

''ಸಂನ್ಯಾಸಿಯ ಧರ್ಮ ಬಹು ಸತ್ವದಿಂದ ಕೂಡಿದುದು. ಅದು ಕ್ರಿಯಾಮುಖವಾಗಿ ಹೊರಹೊಮ್ಮಿದರೆ ಅಘಟಿತ ಘಟನೆಯೆನಿಸುತ್ತದೆ. ಸಂನ್ಯಾಸಿಗಳು ಇತರರಿಗಿಂತ ಅಧಿಕತಮವಾದ ಕ್ರಿಯಾಶೀಲರೆಂಬುದಕ್ಕೆ ಶ್ರೀ ಶಿವಕುಮಾರ ಸ್ವಾಮಿಗಳು ಸಾಧಿಸಿರುವ ಈ ಸಾಧನೆಯೇ ಸಾಕ್ಷಿ. ಸೇವಾ ಕ್ಷೇತ್ರ ೨೫ ವರ್ಷದ ಅವಧಿಯಲ್ಲಿ ಇಷ್ಟೊಂದು ಪ್ರಗತಿಯನ್ನು ಸಾಧಿಸಿರುವುದು ಸಾಮಾನ್ಯ ಸಂಗತಿಯಲ್ಲ. ಶ್ರೀ ಬಸವೇಶ್ವರರ ದಿವ್ಯಾದೇಶಗಳನ್ನು ತಲೆಯ ಮೇಲೆ ಧರಿಸಿ ಅದನ್ನು ಶ್ರೀಗಳು ಲೋಕಕ್ಕೆ ಸಾರಿದ್ದಾರೆ. ಶ್ರೀ ಬಸವೇಶ್ವರರ ಬಗೆಗೆ ಈಗೀಗ ಉತ್ತರ ಭಾರತದಲ್ಲಿ ಪ್ರಚಾರ ನಡೆಯುತ್ತಿದೆ. ಬಸವೇಶ್ವರರು ವಿಶ್ವವಿಭೂತಿಗಳು. ಅವರ ಅನುಯಾಯಿಗಳಾಗಿ ಅವರ ತತ್ವಗಳನ್ನು ಕಾರ್ಯರೂಪಕ್ಕೆ ತರಲು ಹೊರಟಿರುವ ಶ್ರೀ ಸ್ವಾಮಿಗಳವರಿಗೆ ನಾಡು ಕೃತಜ್ಞವಾಗಿರಬೇಕು. ಇಂಥ ಮಹಿಮಾಪುರುಷರ ಮಾರ್ಗದರ್ಶನ ನಾಡಿಗೆ, ರಾಷ್ಟ್ರಕ್ಕೆ ಸದಾ ಬೇಕು. ಶ್ರೀ ಶ್ರೀಗಳವರ ೨೫ ವರ್ಷಗಳ ಸಾಧನೆಯ ಪರಿಣಾಮವಾಗಿ ಸಮಾಜಕ್ಕಾದ ಅಪಾರ ಲಾಭವನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ಶ್ರೀಗಳವರ ತಪಸ್ಸು ದೀರ್ಘವಾಗಿ ಬೆಳೆದು ತನ್ಮೂಲಕ ನಾಡಿನ ಹಿತರಕ್ಷಣೆಯಾಗಲೆಂದು ಬೇಡುತ್ತೇನೆ'' ಎಂದು ರಾಜ್ಯಪಾಲರಾದ ಘನತೆವೆತ್ತ ಶ್ರೀ ಮೋಹನಲಾಲ್ ಸುಖಾಡಿಯಾ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಡಿ. ದೇವರಾಜ ಅರಸರು ''ಇಂದು ನಾವು ನವಭಾರತ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದೇವೆ. ನಾವು ಹೇಗೆ ಮಾಡಿದರೆ ಎಲ್ಲ ಜನರ ಹಿತ ಸಾಧನೆಯಾದೀತೆಂಬ ಬಗ್ಗೆ ಬಹಳ ಜಿಜ್ಞಾಸೆ ನಡೆಯುತ್ತಿದೆ. ಇಂಥ ಸಂದಿಗ್ಧ ಸಮಯದಲ್ಲಿ ದೊಡ್ಡವರು, ಅನುಭವಿಗಳು, ಸರ್ವರ ಹಿತರಕ್ಷಣೆಯಲ್ಲಿ ತೊಡಗಿರುವ ಶ್ರೀ ಸ್ವಾಮೀಜಿಯವರಂಥ ಮಹಾತ್ಮರು ನಮಗೆ ಮಾರ್ಗದರ್ಶನ ಮಾಡಬೇಕಾಗಿದೆ. ಹಿಂದಿನ ಬಸವಣ್ಣನವರಂಥ ವಿಭೂತಿ ಪುರುಷರು ಹೇಳಿದುದನ್ನು ಹುಡುಕಿ

ಕಾರ್ಯಗತಗೊಳಿಸಲು ಸರ್ಕಾರ ಯತ್ನಿಸುತ್ತಿದೆ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮಹಿಮಾಶಾಲಿಗಳು. ಎಲ್ಲಾ ಸಮಾಜದ ಹಿತವನ್ನು ಮೊದಲಿನಿಂದಲೂ ಮಾಡಿಕೊಂಡು ಬಂದವರು. ನಮ್ಮ ನಾಡಿನಲ್ಲೇಷ್ಟೇ ಏಕೆ ಬೇರೆ ನಾಡಿನಲ್ಲೂ ಶ್ರೀ ಸಿದ್ಧಗಂಗಾ ಸಂಸ್ಥೆಯಂಥ ಇನ್ನೊಂದು ಸಂಸ್ಥೆ ನನ್ನ ಕಣ್ಣಿಗೆ ಬಿದ್ದಿಲ್ಲ. ಸಮಾಜಕ್ಕಾಗಿ, ರಾಷ್ಟ್ರಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆದು ಸೇವಾಮನೋಭಾವದಿಂದ ವರ್ತಿಸುವ ಇಂಥ ಮಹಿಮಾ ಪುರುಷರ ಮಾರ್ಗದರ್ಶನ ನಮಗೆ ಬೇಕು. ಇಂಥ ಸ್ವಾಮಿಗಳನ್ನು ಪಡೆದ ನಮ್ಮ ನಾಡು ಧನ್ಯವೇ ಸರಿ. ಅವರ ಇಪ್ಪತ್ತೈದು ವರ್ಷಗಳ ತಪಸ್ಸಿನ ಫಲವಾಗಿ ಸರ್ವಸಮಾಜಗಳಿಗಾಗಿರುವ ಉಪಕಾರ ಅಷ್ಟಿಷ್ಟಲ್ಲ. ಅದನ್ನು ಜ್ಞಾಪಿಸಿಕೊಂಡು ಈಗ ನಾವೆಲ್ಲ ಸೇರಿ ರಜತಮಹೋತ್ಸವ ಆಚರಿಸುತ್ತಿರುವುದು ಅವಶ್ಯವೂ, ಸೂಕ್ತವೂ ಆಗಿದೆ'' ಎಂದರು.

ಪೂಜ್ಯರಿಗೆ ಬಿನ್ನವತ್ತಳೆ ಸಮರ್ಪಿಸಿ, ಹೂಮಳೆಗರೆಯಲಾಯಿತು. ಸ್ವಾಮಿಗಳು ಭಕ್ತ ಸಮುದಾಯ ನೀಡಿದ ಸನ್ಮಾನಕ್ಕೆ ಉತ್ತರ ನೀಡುತ್ತಾ ತಮ್ಮ ಗುರುಗಳ ಮಾರ್ಗದರ್ಶನವನ್ನು ಹಾಗೂ ಅವರ ಸತ್ಯ ಸಂಕಲ್ಪವನ್ನು ನೆನೆದರು. ನಮ್ಮ ಗುರುಗಳು ೧೯೧೭ ರಲ್ಲಿ ಸಾರ್ವಜನಿಕ ಮಕ್ಕಳ ಯೋಗ ಕ್ಷೇಮದ ದೃಷ್ಟಿಯಿಂದ ಒಂದು ಉಚಿತ ವಿದ್ಯಾರ್ಥಿ ನಿಲಯವನ್ನು ತೆರೆದರು. ಆಗ ಸರಕಾರ ಸಾರ್ವಜನಿಕ ಉಚಿತ ವಿದ್ಯಾರ್ಥಿ ನಿಲಯಗಳನ್ನು ತೆರೆಯಲು ಮುಂದೆ ಬರುತ್ತಿದ್ದಿಲ್ಲ. ಬೇರೆ ಬೇರೆ ಕೋಮಿನವರು ತಮ್ಮ ತಮ್ಮ ಕೋಮಿನ ವಿದ್ಯಾರ್ಥಿ ನಿಲಯಗಳನ್ನು ತೆರೆಯುತ್ತಿದ್ದ ಕಾಲವದು. ಇಂಥ ಕಾಲದಲ್ಲಿ ಪೂಜ್ಯರು ''ಸರ್ವೇ ಜನಾಃ ಸುಖಿನೋ ಭವಂತು'' ಎಂಬ ಆರ್ಯೋಕ್ತಿಯನ್ನು ಸಾರ್ಥಕಗೊಳಿಸಿದರು. ಅದೇ ಕಾಲದಲ್ಲಿ ಉಚಿತ ವಿದ್ಯಾರ್ಥಿ ನಿಲಯ, ಸಂಸ್ಕೃತ ವೇದ ಪಾಠಶಾಲೆಯನ್ನು ತೆರೆದರು. ಆ ಕಾಲಕ್ಕೆ ಸಂಸ್ಕೃತ ಅಧ್ಯಯನ ಮಾಡಲು ಸರ್ವರೂ ಯೋಗ್ಯರೆಂದು ಘೋಷಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಸಂಸ್ಕೃತ ವಿದ್ಯಾಭ್ಯಾಸ ನೀಡಿದ್ದು ಸಾಮಾನ್ಯ ವಿಷಯವಲ್ಲ. ನಾವು ಅವರ ಮಾರ್ಗದರ್ಶನದಲ್ಲೇ ಅವರ ಅನುಗ್ರಹವನ್ನು ತಲೆಯ ಮೇಲೆ ಹೊತ್ತು ನಮ್ಮ ಕಾರ್ಯವನ್ನು ತ್ರಿಕರಣಶುದ್ಧಿಯಿಂದ ನಡೆಯಿಸಿಕೊಂಡು ಬರುತ್ತಿದ್ದೇವೆ. ನಮಗೆ ಸರ್ವರ ಯೋಗ ಕ್ಷೇಮವನ್ನು ಕೋರುವುದು ಮುಖ್ಯವಾದ ಕೆಲಸ. ಸರ್ವಲೋಕೋಪಕಾರವನ್ನು ಬಯಸುವುದೇ ಜಂಗಮದ ಧರ್ಮ. ಶಿವಶರಣರು ಒಂದು ಕೋಮಿನವರಲ್ಲ, ವಿವಿಧ ಕೋಮಿನವರು. ಲಿಂಗಧರ್ಮದ ಮಾಧ್ಯಮದಿಂದ ಒಂದಾದವರು. ಕಾಯಕಕ್ಕೆ ವಿಶೇಷ ಮಹತ್ವ ಕೊಟ್ಟು ಅಭಿಶಾಪದಂತಿದ್ದ ದಾರಿದ್ರ್ಯವನ್ನು ಓಡಿಸಲು ಶ್ರಮಿಸಿದವರು. ನಾವು ಅವರ ದಿವ್ಯಾದೇಶಗಳನ್ನು ಕಾರ್ಯರೂಪಕ್ಕೆ ತರಲು ಹೊರಟವರು. ಅವರು ಕಾಯಕಕ್ಕೆ ಕೊಟ್ಟ ಅರ್ಥಬಾಹುಳ್ಯ ದೊಡ್ಡದು. ಅದನ್ನು ಇಂದಿನ ಜನಾಂಗ ಕಾರ್ಯರೂಪಕ್ಕೆ ತಂದಿದ್ದರೆ ಈಗಿನ ವಿಪ್ಲವಗಳೇ ರಾಷ್ಟ್ರಕ್ಕೆ, ಜಗತ್ತಿಗೆ ಉಂಟಾಗುತ್ತಿದ್ದಿಲ್ಲ. ಇಂದು ಜನಾಂಗ ಸ್ವಾರ್ಥಕ್ಕೋಸುಗ ಧರ್ಮವನ್ನು ಬಳಸಿಕೊಳ್ಳುತ್ತಿದೆ. ಮುಗ್ಧರಾದ ಜನಗಳ ದುರ್ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದು ಅಭಿವೃದ್ಧಿಶೀಲವಾದ ಯಾವ ರಾಷ್ಟ್ರಕ್ಕೂ ಭೂಷಣವಲ್ಲ. ಸಾಮಾನ್ಯ ಜನದ ಅಜ್ಞಾನವನ್ನು ದುರುಪಯೋಗಪಡಿಸಿಕೊಂಡು ಸ್ವಾರ್ಥ ಸಾಧಿಸುವ ಮನೋವೃತ್ತಿಯನ್ನು ನಮ್ಮ ಜನ ಕೈಬಿಟ್ಟಾಗ ನಮಗೆ ಕಲ್ಯಾಣವಾಗುವುದು. ನಮ್ಮ ಮಠದಲ್ಲಿ ಜಾತೀಯತೆಯ ಸೋಂಕು ಇಲ್ಲ. ಈ ಮಠಕ್ಕೆ ಎಲ್ಲ ಕೋಮಿನವರೂ ಭಕ್ತರಾಗಿದ್ದಾರೆ. ತಮ್ಮ ಸೇವೆಯನ್ನು ತನುಮನಧನದ ಮೂಲಕ ಸಲ್ಲಿಸಿದ್ದಾರೆ. ಬಸವಾದಿ ಪ್ರಮಥರು ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸಿದವರು. ಅವರ ದಿವ್ಯಾದರ್ಶದಂತೆ ನಮ್ಮ ನಡೆ, ಎಲ್ಲರಿಗೂ ನಮ್ಮ ಬುದ್ಧಿವಾದವೂ ಅದೇ....ಎಂದು ಮುಂತಾಗಿ ಸಾಗಿದ ಆಶೀರ್ವಾಣಿ ಅಖಂಡ ಜನಸ್ತೋಮದ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ ೨೭-೫-೭೨ ರಂದು ಬೆಳಿಗ್ಗೆ ರಜತಮಹೋತ್ಸವದ ಅಂಗವಾಗಿ ಸಾಹಿತ್ಯ ಸಮ್ಮೇಳನ ನಡೆಯಿತು. ನಿಡುಮಾಮಿಡಿಯ ಜಗದ್ಗುರು ಡಾ. ಜಚನಿ ಯವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ದೇ. ಜವರೇಗೌಡ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಅನಂತರ ನಡೆದ ಧರ್ಮದ ಪ್ರೇರಣೆ ಕುರಿತ ವಿಚಾರ ಸಂಕಿರಣದಲ್ಲಿ ಡಾ. ಹಂಪ. ನಾಗರಾಜಯ್ಯನವರು 'ಜೈನ ಸಾಹಿತ್ಯ' ಕುರಿತು, ಡಾ. ಎಲ್. ಬಸವರಾಜು ಅವರು 'ವಚನ ಸಾಹಿತ್ಯ' ಕುರಿತು,

ಡಾ. ಜಿ. ವರದರಾಜರಾವ್ ಅವರು 'ವೈಷ್ಣವ ಸಾಹಿತ್ಯ' ಕುರಿತು, ಡಾ. ಜಿ.ಎಸ್. ಶಿವರುದ್ರಪ್ಪನವರು 'ಆಧುನಿಕ ಸಾಹಿತ್ಯ' ಕುರಿತು ಮಾತನಾಡಿದರು.

ರಜತಮಹೋತ್ಸವದ ಅಂಗವಾಗಿ ಸರ್ವಧರ್ಮ ಸಮ್ಮೇಳನವೊಂದು ಏರ್ಪಟ್ಟಿತ್ತು. ಖ್ಯಾತ ವಿದ್ವಾಂಸ ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಹುಬ್ಬಳ್ಳಿ ಮೂರು ಸಾವಿರಮಠದ ಜಗದ್ಗುರುಗಳು ಸಮ್ಮೇಳನವನ್ನು ಉದ್ಘಾಟಿಸಿದರು. ವಿಶ್ವಶಾಂತಿಗೆ ವಿವಿಧ ಧರ್ಮಗಳ ಕೊಡುಗೆಯ ವಿಷಯದ ಮೇಲೆ ವಿದ್ವಾಂಸರು ಮಾತನಾಡಿದರು. ಬೌದ್ಧ ಧರ್ಮದ ಬಗ್ಗೆ ಶ್ರೀ ಎಚ್.ವಿ. ಶ್ರೀರಂಗರಾಜ್, ಇಸ್ಲಾಂ ಧರ್ಮದ ಬಗ್ಗೆ ಶ್ರೀ ವಜಾಸುದ್ದೀನ್, ಕ್ರೈಸ್ತ ಧರ್ಮದ ಬಗ್ಗೆ ರೆ. ಫಾದರ್ ಪಿಂಟೊ , ಹಿಂದೂ ಧರ್ಮದ ಬಗ್ಗೆ ಡಾ. ಎಂ. ಚಿದಾನಂದಮೂರ್ತಿಯವರು, ವೀರಶೈವದ ಬಗ್ಗೆ ಶ್ರೀ ಕರಿಬಸಪ್ಪನವರು ಮಾತನಾಡಿದರು.

೨೭-೫-೬೬ರ ಸಂಜೆ ಮಹಿಳಾಗೋಷ್ಠಿಯೊಂದು ನಡೆಯಿತು. ರಾಜ್ಯ ಸಚಿವೆ ಶ್ರೀಮತಿ ಇವಾವಾಚ್ ಅಧ್ಯಕ್ಷತೆಯಲ್ಲಿ ವಿಧಾನಸಭಾಧ್ಯಕ್ಷೆಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಉದ್ಘಾಟನೆ ಮಾಡಿದರು. ಗೋಷ್ಠಿಯಲ್ಲಿ ಭಾಗವಹಿಸಿದ ರತ್ನಾ ಸ್ವಾಮಿರಾವ್, ಕಮಲಾ ಹಂಪನಾ, ಶಾಂತಾದೇವಿ ಮಾಳವಾಡ, ಲೀಲಾದೇವಿ ಆರ್. ಪ್ರಸಾದ್ ಮೊದಲಾದ ಮಹಿಳೆಯರು ಧರ್ಮರಕ್ಷಣಾ ಕಾರ್ಯದಲ್ಲಿ ಎಷ್ಟರಮಟ್ಟಿಗೆ ಕರ್ತವ್ಯಶೀಲರಾಗಬೇಕೆಂಬ ಬಗ್ಗೆ ಮಾತನಾಡಿದರು.

೨೮-೫-೬೬ ರಂದು ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ ಜರುಗಿತು. ಅಂದು ಮಂತ್ರಿವರ್ಯ ಶ್ರೀ ಹುಚ್ಚಮಾಸ್ತಿಗೌಡರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಸಭಾಧ್ಯಕ್ಷತೆಯನ್ನು ಮಂತ್ರಿ ಹೆಚ್. ಸಿದ್ಧವೀರಪ್ಪನವರು ವಹಿಸಿದ್ದರು. ಪುಣ್ಯಪುರುಷರ ನೆಲೆವೀಡಾದ ಶ್ರೀ ಸಿದ್ಧಗಂಗಾಕ್ಷೇತ್ರದ ಮಹತ್ವವನ್ನು, ಅದು ಸಮಾಜ ಜೀವನದಲ್ಲಿ ಉಂಟುಮಾಡಿದ ಜಾಗೃತಿಯನ್ನು ಕೊಂಡಾಡಿದರಲ್ಲದೆ, ಎಲ್ಲಾ ಸಮಾಜ ಬಂಧುಗಳ ಮಕ್ಕಳಿಗೆ ಇಲ್ಲಿ ದೊರೆಯುತ್ತಿರುವ ಅನುಕೂಲಗಳು ಶ್ಲಾಘನೀಯವಾದವು ಎಂದರು. ಶ್ರೀ ಬಿ.ಎಸ್. ಹನುಮಂತೇಗೌಡರು, ಟಿ. ತಾರೇಗೌಡರು, ಬಿ.ಎನ್. ಕೇಶವಯ್ಯಂಗಾರ್ ಅವರು, ಹೆಚ್. ಗಂಗಾಧರನ್ ಅವರು ಶ್ರೀ ಕ್ಷೇತ್ರದ ಮತ್ತು ಶ್ರೀಗಳವರ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದರು. ಸಮಾರೋಪ ಭಾಷಣ ಮಾಡಿದ ಶ್ರೀ ವೀರೇಂದ್ರ ಪಾಟೀಲರು ಧರ್ಮಜಾಗೃತಿ ಸಮಾಜ ಜಾಗೃತಿಯೇ ಆಗಿದೆ. ಬಸವೇಶ್ವರರೇ ಮೊದಲಾದವರು ಮಾಡಿದ ಕ್ರಾಂತಿ ಒಂದು ಸಮಾಜದ ಉದ್ಧಾರದ ಕ್ರಾಂತಿಯಲ್ಲ, ಅದು ಸರ್ವ ಜನಾಂಗದ, ದೀನ ದಲಿತರ ಉದ್ಧಾರಕ್ಕೆ ಹೆಣಗಿದ ಮಹಾಕ್ರಾಂತಿ. ಇಂದು ಇಲ್ಲಿ ಸಿದ್ಧಗಂಗೆಯ ಪೂಜ್ಯರು ಶೋಷಣೆರಹಿತವಾದ ಸಮಾಜ ರಚನೆಗೆ ಅವಶ್ಯಕವಾದ ವಿದ್ಯಾದಾನವನ್ನು ಶ್ರೀ ಕ್ಷೇತ್ರದಲ್ಲಿ ನಡೆಸುತ್ತಿದ್ದಾರೆ. ಇಂದಿನ ದಿನಗಳಲ್ಲಿ ಜನ ಧರ್ಮಶ್ರದ್ಧೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ಭೂಷಣವಲ್ಲ. ಧರ್ಮ ಸಂಸ್ಥೆಗಳು ಅಂಥ ಜನತೆಯನ್ನು ತಿದ್ದುವ ಪ್ರಮುಖ ಕೇಂದ್ರಗಳು. ಅಂಥ ಮಹಾಸಂಸ್ಥೆಯ ಪೂಜ್ಯರ ಬೆಳ್ಳಿಹಬ್ಬದ ಸಂದರ್ಭದಲ್ಲಿ ಅವರಿಗೆ ನಾವು ಕೃತಜ್ಞತೆ ಸಲ್ಲಿಸುತ್ತಿದೆ ಎಂದರು.

೨೮-೫-೬೬ ರಂದು ಮಧ್ಯಾಹ್ನ ಶಿವಾನುಭವ ಸಮ್ಮೇಳನವೊಂದು ಏರ್ಪಟ್ಟಿತ್ತು. ಸುತ್ತೂರು ಸಂಸ್ಥಾನದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸಮ್ಮೇಳನವನ್ನು ಉದ್ಘಾಟಿಸಿದರು. ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಮಹಾಸ್ವಾಮಿಗಳು ಸಮ್ಮೇಳನ ಅಧ್ಯಕ್ಷತೆ ವಹಿಸಿದ್ದರು. ಗೋಷ್ಠಿಯಲ್ಲಿ ಪಂಡಿತರತ್ನ ಬಿ. ಶಿವಮೂರ್ತಿ ಶಾಸ್ತ್ರಿ, ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ, ಪಂ. ನಾಗಭೂಷಣ ಶಾಸ್ತ್ರಿ, ಡಾ.ಹೆಚ್. ತಿಪ್ಪೇರುದ್ರಸ್ವಾಮಿ, ಶ್ರೀ ಕರಿಬಸವ ಸ್ವಾಮಿಗಳು ಮೊದಲಾದವರು ವಿಚಾರ ಪರಿಪ್ಲುತ ಭಾಷಣ ಮಾಡಿದರು.

ಹೀಗೆ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಬೆಳ್ಳಿಹಬ್ಬದ ಸಮಾರಂಭವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಹರಗುರು ಚರಮೂರ್ತಿಗಳು, ಮಂತ್ರಿ ಮಹೋದಯರು, ಅಧಿಕಾರಿಗಳು, ಭಕ್ತ ಸಮುದಾಯ ಅದರಲ್ಲಿ ಪಾಲ್ಗೊಂಡು ಕೃತಾರ್ಥತೆಯನ್ನು ಪಡೆಯಿತು.

ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ

ಸುವರ್ಣ ಮಹೋತ್ಸವದ ಸಂಕ್ಷಿಪ್ತ ವರದಿ

(೨೪.೪.೮೨ ರಿಂದ ೨೬.೪.೮೨)

- ಬಿ. ವೀರಭದ್ರಯ್ಯ

ಶ್ರೀ ಸಿದ್ಧಗಂಗಾ ಕರ್ನಾಟಕದ ಒಂದು ಪುಣ್ಯಕ್ಷೇತ್ರ. ಶರಣರ ಅವಿಮುಕ್ತ ತಾಣ. ಈ ಕ್ಷೇತ್ರದ ಪರಂಪರೆ ಮಹಿಮಾಪೂರ್ಣ, ಪರಮ ಪವಿತ್ರ. ಹನ್ನೆರಡನೆಯ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಹೊಂಗಿರಣದಂತೆ ಕಂಗೊಳಿಸುತ್ತಿರುವ ಶ್ರೀ ಸಿದ್ಧಗಂಗಾ ಕ್ಷೇತ್ರವು ದಾಸೋಹದ ಮಹಾಮನೆ, ಆಧ್ಯಾತ್ಮಯೋಗದ ಅನುಭಾವ ಮಂಟಪ, ಧರ್ಮ ಸಂದೇಶದ ದಿವ್ಯಧಾಮ. ಕಾಯಕ ತತ್ವದ ಕ್ರಿಯಾಕೇಂದ್ರ, ಜ್ಞಾನ ಪ್ರಸಾರದ ಮಹಾ ವಿದ್ಯಾಲಯ.

ಶ್ರೀ ಕ್ಷೇತ್ರವು ಸಮಕಾಲೀನ ಸಾಮಾಜಿಕ ಪ್ರಜ್ಞೆಯ ಧರ್ಮಪೀಠ. ಈ ಪೀಠದ ಆಶ್ರಯದಲ್ಲಿ ಲಕ್ಷಾಂತರ ಆಸ್ತಿಕರು, ಧರ್ಮಾಭಿಮಾನಿಗಳು, ವಿದ್ಯಾರ್ಥಿಗಳು, ಸಾತ್ವಿಕ ಜೀವನದ ಮಾರ್ಗ ಕಂಡುಕೊಂಡಿದ್ದಾರೆ. ಸಿದ್ಧಗಂಗಾ ಎಂಬ ಹೆಸರೇ ಮಂತ್ರಪೂರ್ಣ. ಅಪಾರ ತಪಸ್ಸು, ಶ್ರದ್ಧೆ ಮತ್ತು ನಿಷ್ಠೆಗಳ ಭದ್ರ ಬುನಾದಿಯ ಮೇಲೆ ನೆಲೆಗೊಂಡಿರುವ ದಿವ್ಯಕ್ಷೇತ್ರ ಶ್ರೀ ಸಿದ್ಧಗಂಗಾ.

ಶ್ರೀ ಕ್ಷೇತ್ರದ ಸೇವಾ ಇತಿಹಾಸದಲ್ಲಿ ಬೆಳಕಿನ ಯುಗವನ್ನು ನಿರ್ಮಾಣ ಮಾಡಿದ ಕಾರಣಿಕಪುರುಷರು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು. ಅವರ ಸೇವಾ ಜೀವನದಲ್ಲಿ ಐವತ್ತು ವರ್ಷಗಳು ತುಂಬಿದ ಶುಭ ಸಂದರ್ಭದಲ್ಲಿ ಭಕ್ತಾದಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಮಿಗಿಲಾಗಿ ನಾಡು ಭಕ್ತಿ ಶ್ರದ್ಧೆಗಳಿಂದ ೨೪.೪.೮೨ ರಿಂದ ೨೬.೪.೮೨ ರವರೆಗೆ ಮೂರು ದಿನಗಳು ಅತ್ಯುತ್ಸಾಹದಿಂದ 'ನಭೂತೋ ಭವಿಷ್ಯತಿ' ಎಂಬಂತೆ ಆಚರಿಸಿದ ಸುವರ್ಣ ಮಹೋತ್ಸವ ಅವಿಸ್ಮರಣೀಯ ಹಾಗೂ ಶ್ರೀಮಠದ ದಾಸೋಹ ಪರಂಪರೆಯಲ್ಲಿ ಪ್ರಮುಖ ಮೈಲಿಗಲ್ಲು.

ದಕ್ಷಿಣ ಭಾರತದ ಎಲ್ಲ ದಾರಿಗಳೂ ಸಿದ್ಧಗಂಗೆಯ ಕಡೆಗೆ ಮುಖ ಮಾಡಿದುವು. ಕರ್ನಾಟದ ಮೂಲೆ ಮೂಲೆಗಳಿಂದ ಭಕ್ತಕೋಟಿ ಧಾವಿಸಿತು. ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಿಂದ ಆಸ್ತಿಕ ಬಂಧುಗಳು ಆಗಮಿಸಿದರು. ಬಣ್ಣ, ಭಾಷೆಗಳನ್ನು ಲೆಕ್ಕಿಸದೆ ಭಾವೈಕ್ಯ ಮಹಾಸಂಗಮವೆನಿಸಿತು ಉತ್ಸವ. ಒಂದು ಜಾತಿ, ಮತ, ಕುಲ, ಕೋಮಿಗೆ ಸೀಮಿತವಾಗದೆ ಸರ್ವ ಜನಾಂಗದ ಸುಂದರ ತೋಟವಾಯಿತು. ಬಸವತತ್ವ ಪ್ರಯೋಗಶಾಲೆಯಾದ ಶ್ರೀ ಮಠ ಕಾಯಕ ದಾಸೋಹ ತತ್ವಗಳನ್ನು ಎತ್ತಿಹಿಡಿದು ಶರಣಸಂದೇಶವನ್ನು ಹತ್ತೂ ದಿಕ್ಕಿಗೆ ಬಿತ್ತರಿಸಿತು. ಪರಮ ಪೂಜ್ಯ ಶ್ರೀ ಶ್ರೀಗಳವರ ಸೇವಾ ಕೈಂಕರ್ಯ ಲಕ್ಷ ಲಕ್ಷ ಕೊರಳುಗಳಿಂದ ಮುಕ್ತ ಪ್ರಶಂಸೆಯ ಸೇವಾ ಶಾಸನವನ್ನೇ ದಾಖಲಿಸಿತು. ಸುವರ್ಣ ಮಹೋತ್ಸವ ಮರೆಯಲಾಗದ ಮಂಗಳ ಸಮಾರಂಭವಾಯಿತು. ಕವಿಗಳು ಅದನ್ನು ಕುರಿತು ಕಾವ್ಯ ಬರೆದರು. ಅಭಿಮಾನಿಗಳು ತುಂಬು ಹೃದಯದಿಂದ ಹಿಗ್ಗಿ ನುಡಿದರು. ಮನೆ ಮನೆಯ ಮಾತಾಯಿತು. ರಾಜ್ಯದೆಲ್ಲೆಡೆಯಲ್ಲಿ ಹೆಂಗಳೆಯರು ನೀಡಿದ ಪ್ರಚಾರವಂತೂ ಯಾವ ಪತ್ರಿಕೆಯವರೂ ನೀಡಲಾರದಂಥ ಅಭೂತಪೂರ್ವ ಸೇವೆಯೆನಿಸಿತು. ದಿನಾಂಕ ೨೪.೪.೮೨ ರಂದು ಶನಿವಾರ ಪ್ರಾತಃಕಾಲ ೬ ಘಂಟೆ. ಪರಮಪೂಜ್ಯ ಶ್ರೀ ಶ್ರೀಗಳವರಿಗೆ ಭಕ್ತಿಪೂರ್ವಕ ಸ್ವಾಗತ - ಮಂಗಳ ಕಳಶ ಪೂರ್ಣಕುಂಭದೊಡನೆ. ಉತ್ಸವ ಅಭೂತಪೂರ್ವ. 'ಶ್ರೀ ಉದ್ದಾನ ಶಿವಯೋಗಿ ಮಂಟಪ'ಕ್ಕೆ ಆಗಮನ. ೭ ಘಂಟೆಗೆ ಷಟ್‌ಸ್ಥಳ ಧ್ವಜಾರೋಹಣ. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಮೂರುಸಾವಿರ ಮಠ ಹುಬ್ಬಳ್ಳಿಯವರಿಂದ. ಉತ್ಸವ ಮಂಟಪದಲ್ಲಿ ಭಕ್ತಕೋಟಿಯಿಂದ ಪರಮಪೂಜ್ಯ ಶ್ರೀ ಶ್ರೀಗಳವರ ಪಾದಪೂಜೆ. ರಾಷ್ಟ್ರಪತಿಗಳ ಆಗಮನ. ವೇದಘೋಷ, ಪೂರ್ಣಕುಂಭ ಮಂಗಳವಾದ್ಯಗಳೊಡನೆ ಸ್ವಾಗತ. ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ತಿಪ್ಪೇರುದ್ರಯ್ಯನವರಿಂದ ಸ್ವಾಗತ. ಕಾರ್ಯಕ್ರಮಗಳ ಪ್ರಾರಂಭ.

೨೪.೪.೮೨ ರಿಂ ೨೬.೪.೮೨ರ ಮೂರು ದಿನಗಳು ಒಟ್ಟು ಎಂಟು ಅಧಿವೇಶನಗಳಲ್ಲಿ ವಿವಿಧ ಕಾರ್ಯಕ್ರಮಗಳು, ಗೋಷ್ಠಿಗಳು ನಡೆದವು. ಪರಮಪೂಜ್ಯ ಶ್ರೀ ಶ್ರೀಗಳವರ ಸುವರ್ಣ ಮಹೋತ್ಸವ ಸ್ಮಾರಕ ಆಸ್ಪತ್ರೆ ಶಂಕುಸ್ಥಾಪನೆ ೨೪.೪.೮೨

ರಂದು ಘನತೆವೆತ್ತ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರಿಂದ ನಡೆಯಿತು. ರಾಷ್ಟ್ರಪತಿಯವರು "ಪರಮಪೂಜ್ಯ ಶ್ರೀ ಶ್ರೀ ಸ್ವಾಮೀಜಿಯವರಿಗೆ ತಮ್ಮ ತ್ಯಾಗ ಮತ್ತು ಸಮರ್ಪಣಾ ಭಾವದಿಂದ ಸಮಾಜಕ್ಕೆ ಸಲ್ಲಿಸಿದ ಸೇವೆ ನೆನಪಿಗಾಗಿ ನಿರ್ಮಿಸಲು ಉದ್ದೇಶಿಸಿರುವ "ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಲು ನನಗೆ ಅಪಾರ ಸಂತೋಷ ಉಂಟಾಗಿದೆ" ಎನ್ನುತ್ತ, "ಬದಲಾಯಿಸುತ್ತಿರುವ ಸಮಕಾಲೀನ ಯುಗಗಳಲ್ಲಿಯೂ ನಮ್ಮ ಪ್ರಾಚೀನ ಜ್ಞಾನ ಸಂಪತ್ತನ್ನು ಸಮಾಜದ ಮೇಲ್ಮೆಗಾಗಿ ಹೇಗೆ ಅಳವಡಿಸಿ ಆಚಾರಕ್ಕೆ ತರಬಹುದೆಂಬುದನ್ನು ಶ್ರೀ ಸಿದ್ಧಗಂಗಾ ಮಠದ ಶ್ರೀ ಶ್ರೀ ಶಿವಕುಮಾರ ಸ್ವಾಮಿಯವರಲ್ಲಿ ನಾವು ಕಾಣಬಹುದಾಗಿದೆ. ಈ ಮಠವು ತನ್ನದೇ ಆದ ಶಿವಯೋಗಿಗಳ, ಸಿದ್ಧಪುರುಷರ ಭವ್ಯಪರಂಪರೆಯನ್ನು ಹೊಂದಿದೆ. ಅಂತಹ ದೈವೀಪುರುಷರ ಸಾಲಿಗೆ ಸೇರಿದ ಶ್ರೀ ಶ್ರೀ ಸ್ವಾಮೀಜಿಯವರು ಶ್ರೀ ಮಠದ ಆಧ್ಯಾತ್ಮಿಕ ಸಾಧನೆಯ ಕೇಂದ್ರವಾಗಿ ಬೆಳೆದುದು ಅಲ್ಲದೆ, ಸಾಮಾಜಿಕ ಸೇವೆಯ ಬೃಹತ್ ಸಂಸ್ಥೆಯಾಗಿಯೂ ವಿಸ್ತರಿಸಿದ್ದಾರೆ. ಪೂಜ್ಯ ಸ್ವಾಮೀಜಿಯವರು ಯಾವ ಮಠದ ಉತ್ತರಾಧಿಕಾರಿಯಾಗಿ ದೀಕ್ಷಾಬದ್ಧರಾದರೋ ಈ ಮಠದ ಸೇವಾ ವ್ಯಾಪ್ತಿಯನ್ನು ಕೇವಲ ಒಂದು ಮತಕ್ಕೆ ಅಥವಾ ಒಂದು ಪಥಕ್ಕೆ ಸೀಮಿತಗೊಳಿಸಬಹುದಾಗಿತ್ತು. ಆದರೆ ಆಳವಾದ ಚಿಂತನೆ ಮತ್ತು ದೃಷ್ಟಿ ವೈಶಾಲ್ಯತೆಗಳಿಂದ ಸಕಲ ಜನಹಿತಕ್ಕಾಗಿ ದುಡಿಯುವ ತತ್ವನಿಷ್ಠರಾಗಿದ್ದಾರೆ. ದೇಶ ಇಂದು ಕೋಮು ಪ್ರತ್ಯೇಕತಾ ಭಾವಗಳಿಂದ ತುಂಬಿ ತುಳುಕುತ್ತಿರುವಾಗ ಪೂಜ್ಯ ಸ್ವಾಮೀಜಿಯವರ ಸೇವೆಯನ್ನು ಮೀರಿ ನಿಲ್ಲುವಂಥ ಅಮೋಘವಾದ ಕಾರ್ಯ ಬೇರೊಂದಿಲ್ಲ ಎಂಬ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತ ಈ ಪವಿತ್ರ ಕ್ಷೇತ್ರದಲ್ಲಿ ನಡೆದಿರುವ ಅಮೋಘ ಸೇವಾಕಾರ್ಯಗಳನ್ನು ಕಂಡು ನಾನು ವಿಸ್ಮಿತನಾಗಿದ್ದೇನೆ. ಉನ್ನತ ಮಟ್ಟದ ಕರ್ತೃತ್ವ ಶಕ್ತಿ ಮತ್ತು ತ್ಯಾಗಬುದ್ಧಿಯ ಆದರ್ಶ ವ್ಯಕ್ತಿಗಳು ಸಮಾಜದ ಎಲ್ಲಾ ವರ್ಗದ ಜನರ ಸಹಕಾರ ಗಳಿಸಿ ಎಂತಹ ಮಹತ್ಕಾರ್ಯವನ್ನು ಸಾಧಿಸಿ ಸಾಮಾಜಿಕ ಹಿತವನ್ನುಂಟುಮಾಡಬಹುದೆಂಬುದಕ್ಕೆ ಶ್ರೀ ಕ್ಷೇತ್ರವು ಸಾಕ್ಷಿಯಾಗಿದೆ. ಭಗವಾನ್ ಬಸವೇಶ್ವರರ ದಿವ್ಯಮಂತ್ರವಾದ ಕಾಯಕದಿಂದ ಮುಕ್ತಿ ಎಂಬುದು ಶ್ರೀಮಠದಲ್ಲಿ ಜೀವಂತವಾಗಿ ಬೆಳಗುತ್ತಿರುವುದನ್ನು ಕಾಣಬಹುದು" ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯದ ರಾಜ್ಯಪಾಲರಾದ ಘನತೆವೆತ್ತ ಶ್ರೀ ಗೋವಿಂದ ನಾರಾಯಣ ಅವರು ಮಾತನಾಡುತ್ತ ನಾನು ಕಳೆದ ಐದು ವರ್ಷಗಳಿಂದಲೂ ಕರ್ನಾಟಕದ ರಾಜ್ಯಪಾಲನಾಗಿ ಶ್ರೀ ಸಿದ್ಧಗಂಗಾ ಕ್ಷೇತ್ರದ ಮತ್ತು ಶ್ರೀ ಶಿವಕುಮಾರ ಸ್ವಾಮಿಗಳವರ ಹಲವು ವಿಧದ ಕಾರ್ಯ ಚಟುವಟಿಕೆಗಳನ್ನು ನೋಡಿದ್ದೇನೆ. ಶ್ರೀ ಕ್ಷೇತ್ರವು ಐದು ಶತಮಾನಗಳಿಂಲೂ ತನ್ನದೇ ಆದ ಪರಂಪರಾನುಗತ ವ್ಯಕ್ತಿತ್ವವನ್ನುಳಿಸಿಕೊಂಡು ಬಂದಿರುವ ಧಾರ್ಮಿಕ ಕೇಂದ್ರವಾಗಿದೆ. ಶ್ರೀ ಶಿವಕುಮಾರಸ್ವಾಮಿಗಳವರು ಜ್ಞಾನ ಹಾಗೂ ಕರ್ಮಯೋಗಗಳಲ್ಲಿಯೂ ಮಹಾಸಿದ್ಧಿಯನ್ನು ಪಡೆದ ಸಿದ್ಧಪುರುಷರು. ಹೊಸ ಜಗತ್ತನ್ನೇ ಸೃಷ್ಟಿಸಿದ ನಿಷ್ಕಾಮ ಕರ್ಮಯೋಗಿ. ಈ ನಿಷ್ಕಾಮ ಕರ್ಮದ ಬಲದ ಯೋಗದಿಂದ ಶ್ರೀ ಶ್ರೀಗಳವರು ಇಡೀ ಜನತೆಗೆ ಮಾರ್ಗದರ್ಶನ ನೀಡುತ್ತಲಿದ್ದಾರೆ. ಶ್ರೀ ಕ್ಷೇತ್ರವು ನಮ್ಮ ಭರತಖಂಡದ ಪ್ರಾಚೀನ ಸಂಸ್ಕೃತಿ ಹಾಗೂ ಧರ್ಮದ ಕೇಂದ್ರವಾಗಿದೆ. ಜನತೆಯಲ್ಲಿ ಜಾಗೃತಿಯನ್ನುಂಟುಮಾಡುತ್ತಿದೆ. ಶ್ರೀಗಳವರು ಕಳೆದ ೫೦ ವರ್ಷಗಳಿಂದ ತಮ್ಮ ಅವಿರತವಾದ ಕಾಯಕ ನಿಷ್ಠೆಯಿಂದ ಶ್ರೀ ಕ್ಷೇತ್ರವನ್ನು ಸುಪ್ರಸಿದ್ಧ ವಿದ್ಯಾಕೇಂದ್ರವನ್ನಾಗಿ ಮಾಡಿದ್ದಾರೆ. ಈ ಪುಣ್ಯಪುರುಷರ ನೇತೃತ್ವದಲ್ಲಿ ಶೈಕ್ಷಣಿಕ ಕ್ರಾಂತಿಯೇ ಇಲ್ಲಿ ನಡೆದಿದೆ. ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ನಿತ್ಯ ದಾಸೋಹ ಸೇವೆ ನಡೆದಿದೆ ಇಲ್ಲಿ. ದಾಸೋಹ ಎಂದರೆ ಸಮಾಜದ ಸಂಪತ್ತನ್ನು ಸಮಾಜದ ಅಭಿವೃದ್ಧಿಗೇ ವಿನಿಯೋಗಿಸುವುದೆಂದರ್ಥ. ಅದು ಇಲ್ಲಿ ಅಕ್ಷರಶಃ ಸತ್ಯವಾಗಿ ಪರಿಣಮಿಸಿದೆ. ಅನ್ನ ಜ್ಞಾನ ದಾಸೋಹದ ಇಂಥ ಪದ್ಧತಿಯನ್ನು ನೋಡಿದರೆ ನಮ್ಮ ಪ್ರಾಚೀನ ಭಾರತೀಯ ಸಂಪ್ರದಾಯದ ಗುರುಕುಲಗಳಾದ ನಲಂದ, ತಕ್ಷಶಿಲಾ ವಿಶ್ವವಿದ್ಯಾಲಯಗಳು ನೆನಪಿಗೆ ಬರುತ್ತವೆ. ಆ ದೃಷ್ಟಿಯಿಂದ ಹೇಳುವುದಾದರೆ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಆಧುನಿಕ ಕುಲಪತಿ. ಶ್ರೀ ಸಿದ್ಧಗಂಗಾ ಕ್ಷೇತ್ರವು ಅಂತಹ ಗುರುಕುಲಗಳಲ್ಲಿ ಒಂದಾಗಿದೆ. ಶ್ರೀಗಳವರ ಸೇವೆಯನ್ನು ಗಮನಿಸಿ ಸುವರ್ಣ ಮಹೋತ್ಸವವನ್ನಾಚರಿಸುತ್ತಿರುವುದು ಸಮಯೋಚಿತವಾಗಿದೆ. ಪೂಜ್ಯರ ದರ್ಶನಾಶೀರ್ವಾದಗಳು ಮತ್ತು ಸಾರ್ವಜನಿಕ ಸೇವೆ ಬಹು ದಿನದವರೆಗೆ ಮುಂದುವರಿಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಪರಮ ಪೂಜ್ಯ ಶ್ರೀ ಶ್ರೀಗಳವರಿಗೆ ಅರ್ಪಿಸಿದ ಅಭಿನಂದನಾ ಬೃಹತ್ ಗ್ರಂಥ "ಸಿದ್ಧಗಂಗಾಶ್ರೀ"ಯನ್ನು (ಸಂಪಾದಕರು ಚೆನ್ನಪ್ಪ ಎರೆಸೀಮೆ ಮತ್ತು ಟಿ.ಆರ್. ಮಹಾದೇವಯ್ಯ) ಬಿಡುಗಡೆ ಮಾಡಿದ ರಾಜ್ಯದ ಮುಖ್ಯ ಮಂತ್ರಿಗಳಾದ

ಶ್ರೀ ಆರ್. ಗುಂಡೂರಾಯರು ಶ್ರೀ ಸಿದ್ಧಗಂಗಾ ಸ್ವಾಮೀಜಿಯವರು ಕೈಗೊಂಡ ಕಾರ್ಯಕ್ರಮಗಳು ಅನೇಕ. ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಶ್ರೀ ಸ್ವಾಮಿಗಳವರ ಕೊಡುಗೆ ಅಪಾರವಾದುದು. ಶೂನ್ಯ ಸಂಪಾದನೆಯ ಪರಂಪರೆಯಲ್ಲಿ ಬೆಳೆದು ಬಂದ ಈ ಕ್ಷೇತ್ರದಲ್ಲಿ ದಿನನಿತ್ಯ ನಡೆಯುತ್ತಿರುವ ದಾಸೋಹವಾಗಲಿ, ಶೈಕ್ಷಣಿಕ ಸೇವಾ ಚಟುವಟಿಕೆಗಳಾಗಲಿ ಎಲ್ಲವನ್ನೂ ಮೆಚ್ಚುವಂತಹುದು. ಇಷ್ಟೇ ಏಕೆ ಅದಕ್ಕೆ ಸರಿಸಮಾನವಾಗಿ ಕಾರ್ಯ ಪ್ರವಾಹಗಳು ಕಡಿಮೆಯೆಂದರೆ ಅತಿಶಯೋಕ್ತಿ ಅಲ್ಲ. ಅಭಿನಂದನಾ ಗ್ರಂಥಗಳಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದ ಮತ್ತು ಪೂಜ್ಯ ಸ್ವಾಮಿಗಳವರ ಕಾರ್ಯ ಚಟುವಟಿಕೆಗಳನ್ನು ಕುರಿತು ವಿಸ್ತಾರವಾದ ಇತಿಹಾಸವಿದೆ. ಅನೇಕ ದೃಷ್ಟಿಕೋನಗಳಿಂದ ಈ ಕ್ಷೇತ್ರವನ್ನು ನೋಡಿದ ವಿದ್ವಾಂಸರ ಬರಹಗಳು ಇವೆ. ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತ ಒಬ್ಬ ವ್ಯಕ್ತಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತನ್ನ ಭಕ್ತಕೋಟಿಯ ಸಹಕಾರದಿಂದ ಏನನ್ನು ಸಾಧಿಸಬಹುದು ಎನ್ನುವ ನಿದರ್ಶನ ಇಲ್ಲಿದೆ. ಈ ಗ್ರಂಥ ಇತರ ಸಂಘ ಸಂಸ್ಥೆಗಳಿಗೆ ಸ್ಫೂರ್ತಿ ನೀಡಲಿ ಎಂದು ಮಾತನಾಡಿದರು.

ಇಂಥ ಒಂದು ವಿಶಾಲವಾದ ಜನ ಸಮೂಹ ಕೂಡಿರುವಂಥ ಈ ಸುಂದರ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ಬಹುಶಃ ನನ್ನ ಜೀವನದಲ್ಲಿಯೇ ಮೊದಲನೆಯದು ಎಂದು ಮಾತು ಪ್ರಾರಂಭಿಸಿದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೇಂದ್ರ ಸರಕಾರದ ನೌಕಾಯಾನ ಮತ್ತು ಸಾರಿಗೆ ಸಚಿವರಾದ ಶ್ರೀ ವೀರೇಂದ್ರ ಪಾಟೀಲರು. ಮುಂದುವರಿದು ಪೂಜ್ಯ ಸ್ವಾಮೀಜಿಯವರು ಈ ಕ್ಷೇತ್ರದಲ್ಲಿ ಕಳೆದ ೫೦ ವರ್ಷಗಳಿಂದ ಅನ್ನ ದಾಸೋಹ, ಜ್ಞಾನದಾಸೋಹ ಅವಿರತವಾಗಿ ನಡೆಸಿಕೊಂಡು ಬಂದಿದ್ದಾರೆ. ಇಂಥ ಒಂದು ಇತಿಹಾಸ ಕರ್ನಾಟಕದಲ್ಲಿ ಯಾರೂ ಮಾಡಿರಲಿಲ್ಲ ಅನ್ನಿಸುತ್ತದೆ. ಇವತ್ತು ಒಂದು ಹೊಸ ಅಧ್ಯಾಯ ಪ್ರಾರಂಭಮಾಡಿದಾರೆ. ಅದು ೨೦೦ ಹಾಸಿಗೆಯ ಒಂದು ಆಸ್ಪತ್ರೆ. ಕೊನೆಯ ಹಂತಕ್ಕೆ ಅದು ೮೦೦ ಹಾಸಿಗೆಯ ಹಂತಕ್ಕೆ ಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇಡೀ ಕರ್ನಾಟಕದ ಜನತೆ ಹೆಮ್ಮೆಪಡುವಂಥ ಮಾತನ್ನು ಹೇಳಬಯಸುತ್ತೇನೆ. ನಿಮಗೆ ಗೊತ್ತಿದೆ ಈ ಮಠದ ಆಸ್ತಿ ಏನು ಅಂತಾ. ಅದು ಜನತೆ ಸ್ವಾಮೀಜಿಯವರಿಗೆ ಜನ ಸಾಮಾನ್ಯರ ಸಹಯೋಗ, ಸಹಕಾರ ಸಿಗಲಾರದೇ ಹೋಗಿದ್ದರೆ ಇಂಥಾ ಒಂದು ಮಹತ್ ಸಾಧನೆ ಮಾಡಲಿಕ್ಕೆ ಆಗುತ್ತಾ ಇರಲಿಲ್ಲ. ಗೌರವಾನ್ವಿತ ರಾಷ್ಟ್ರಪತಿಗಳು ಆಸ್ಪತ್ರೆ ಕಟ್ಟಡಕ್ಕೆ ಅಸ್ತಿಭಾರ ಹಾಕಿದ್ದಾರೆ. ಅದು ಶಾಶ್ವತವಾಗಿ ನಿಲ್ಲುವಂಥದ್ದು ಎಂದು ನನ್ನ ಮನಸ್ಸಿನಲ್ಲಿ ಬೇರೂರಿದೆ. ಶ್ರೀಗಳವರು ಇಲ್ಲಿಯವರೆಗೂ ಯಾವ ಕೆಲಸಕ್ಕೆ ಕೈ ಹಾಕಿದರೂ ಆ ಕೆಲಸ ಸಿದ್ಧಿಯಾಗಿದೆಯೇ ಹೊರತು ಆ ಕೆಲಸ ನಿರಾಶೆ ಮಾಡಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವಿದ್ಯಾಕ್ಷೇತ್ರದಲ್ಲಿ ಅಪ್ರತಿಮ ಸೇವೆ ಮಾಡಿದ್ದಾರೆ ಸ್ವಾಮೀಜಿಯವರು. ಬಹುಶಃ ಅದಕ್ಕೆ ಇನ್ನೊಂದು ನಿದರ್ಶನ ಸಿಗಲಿಕ್ಕೆ ಸಾಧ್ಯವಿಲ್ಲವೇನೋ ಅನ್ನುವಷ್ಟು ಸೇವೆ ಮಾಡಿದ್ದಾರೆ ಎಂದು ಪ್ರಶಂಸನೀಯ ಮಾತುಗಳನ್ನಾಡಿದರು.

ರಾಜ್ಯದ ಆರೋಗ್ಯ ಸಚಿವರಾದ ಶ್ರೀ ಅಬ್ದುಲ್ ಸಮದ್‌ರವರು ಮಾತನಾಡುತ್ತ "ಶ್ರೀ ಸ್ವಾಮೀಜಿಯವರ ಹೆಸರಿನ ಆಸ್ಪತ್ರೆ ಗ್ರಾಮಾಂತರ ಜನತೆಯ ಅಭಿವೃದ್ಧಿಗಾಗಿ ಕೊಡುವ ಕೊಡುಗೆಯಾಗಿದೆ ಎಂದರಲ್ಲದೆ ಶ್ರೀ ಕ್ಷೇತ್ರವು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಿಯಾಗಿ ರೂಪುಗೊಳ್ಳಲೆಂದು" ಆಶಿಸಿದರು.

೨೪.೪.೮೨ ರಂದು ನಡೆದ ಮಹಿಳಾಗೋಷ್ಠಿಯ ಉದ್ಘಾಟನೆಯನ್ನು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷೆಯರಾದ ಶ್ರೀಮತಿ ಬಸವರಾಜೇಶ್ವರಿಯವರು ಮಾಡಿದರು. "ರಾಷ್ಟ್ರ ಜೀವನದಲ್ಲಿ ಮಹಿಳೆಯರ ಪಾತ್ರ" ಎಂಬ ವಿಷಯವಾಗಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು, ಶ್ರೀಮತಿ ಪಂಕಜಾ ಮೂರ್ತಿಯವರು, ಶ್ರೀಮತಿ ಟಿ. ನೀಲಾಂಬಿಕೆಯವರು, ಶ್ರೀಮತಿ ಸುಲೋಚನಾದೇವಿ ಆರಾಧ್ಯರವರು, ಶ್ರೀಮತಿ ಲಿಡಿಯಾ ಮಿತ್ರ ಅವರು ಮಾತನಾಡಿದ ಗೋಷ್ಠಿಯ ಸಮಾರೋಪ ಭಾಷಣವನ್ನು ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಮಾಡಿದ ಸಂರ್ಭದಲ್ಲಿ ಮುಖ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಶಿಕ್ಷಣ ಸಚಿವೆಯರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ, ಶಿಶುಕಲ್ಯಾಣ ಸಚಿವೆಯರಾದ ಶ್ರೀಮತಿ ಮನೋರಮಾ ಮಧ್ವರಾಜ್, ಶ್ರೀಮತಿ ವರಲಕ್ಷ್ಮಿ ಗುಂಡೂರಾವ್ ಅವರುಗಳು ಭಾಗವಹಿಸಿ ಗೋಷ್ಠಿಯ ಯಶಸ್ಸಿಗೆ ಸಹಕಾರ ನೀಡಿದರು.

೨೪.೪.೮೨ ರಂದು "ಶ್ರೀ ಸಿದ್ಧಲಿಂಗೇಶ್ವರ ವೇದ ಹಾಗೂ ಸಂಸ್ಕೃತ ಕಾಲೇಜು ಮತ್ತು ಉಚಿತ ವಿದ್ಯಾರ್ಥಿ ನಿಲಯ"ಗಳ ವಜ್ರ ಮಹೋತ್ಸವಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯದ ಸಹಕಾರ ಸಚಿವರಾದ ಶ್ರೀ ಹೆಚ್.ಸಿ. ಶ್ರೀಕಂಠಯ್ಯ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಮಹೋತ್ಸವದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯದ ಶಿಕ್ಷಣ ಸಚಿವರಾದ ಶ್ರೀ ಜಿ.ಬಿ. ಶಂಕರರಾವ್ ಅವರು ನೆರವೇರಿಸಿದರು. ಸ್ಮರಣ ಸಂಚಿಕೆಯ ಬಿಡುಗಡೆಯನ್ನು ಲೋಕಸಭಾ ಸದಸ್ಯರಾದ ಶ್ರೀ ಕೆ. ಲಕ್ಕಪ್ಪನವರು

ಮಾಡಿದರು. ಡಾ. ಸಿದ್ಧಯ್ಯ ಪುರಾಣಿಕರು ಉಪನ್ಯಾಸ ನೀಡುತ್ತ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳೂ, ತ್ರಿವಿಧ ದಾಸೋಹ ಮೂರ್ತಿಗಳೂ, ಮಹಾಮಹಿಮರೂ ಆದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ನಿಲುವನ್ನು ಆ ಸಿದ್ಧಲಿಂಗೇಶ್ವರನೇ ಬಲ್ಲನಲ್ಲದೆ ನಮ್ಮಂಥವರು ಬಲ್ಲೆವೆಂದು ಸೊಲ್ಲಿಸಲಾದೀತೆ? ಮಾತು ಸೋತು ಶರಣಾಗತವಾಗುತ್ತದೆ ಶ್ರೀಗಳವರ ಸನ್ನಿಧಿಯಲ್ಲಿ. ಮಾತಿಗೆ ಮೀರಿದ ದಿವ್ಯ ವ್ಯಕ್ತಿತ್ವ ಅವರದು. ಇಂಥವರೊಬ್ಬರು ಇಂದೂ ನಮ್ಮ ಮಧ್ಯದಲ್ಲಿರುವುದೇ ನಮ್ಮೆಲ್ಲರ ಪರಮ ಭಾಗ್ಯ ಎಂದು ಮುಕ್ತಕಂಠದಿಂದ ಭಕ್ತಿನುಡಿಗಳನ್ನಾಡಿದರು. ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ. ಕೆ. ಕೃಷ್ಣಮೂರ್ತಿಯವರು "ಇಡೀ ಭಾರತದ ಎಲ್ಲ ಕಡೆ ಸುತ್ತಾಡಿ ಬಂದ ಮೇಲೆ ಇದೊಂದು ಇತರರಿಗೆ ಮಾದರಿಯಾಗುವಂಥ ಗುರುಕುಲ ಇಲ್ಲಿದೆ ಎಂದು ಸ್ಪಷ್ಟವಾಗಿದೆ. ಇಲ್ಲಿ ಶ್ರೀ ಪಾದಂಗಳವರಲ್ಲಿ ಹತ್ತು ಕೋಟಿಯವರೆಗೆ ಖರ್ಚು ಬರಬಹುದಾದಂತಹ ದೊಡ್ಡ ಸಂಸ್ಥೆಗಳನ್ನು ಕೊಡಬಲ್ಲಂಥ ಮಹತ್ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದಾರೆ. ಇದು ಪವಾಡವಲ್ಲವೆ? ಪವಾಡವಲ್ಲವೆಂದು ಹೇಳತಕ್ಕವರು ಇಲ್ಲಿ ಬಂದು ನೋಡಿದರೆ ಪವಾಡವೋ ಅಲ್ಲವೋ ಅವರೇ ಮನಗಾಣಬಹುದು. ಕಾಶಿಗೆ ಹೋಗಿ ಬಂದಿದ್ದೇನೆ ನಾನು. ಇವತ್ತು ಇಲ್ಲಿ ಸಿದ್ಧಗಂಗೆ ಇದೆ. ಗುರುಕುಲ ಇದೆ. ಗುರುಕುಲ ಅಂದರೆ ಗುರುಗಳ ಜೊತೆಯಲ್ಲಿ ಇರುವುದು ಎಂದರ್ಥ. ಇಲ್ಲಿ ವಿದ್ಯಾರ್ಥಿಗಳ ನಡೆ, ನುಡಿ, ಆಚರಣೆ, ಮನಸ್ಸು ಎಲ್ಲಾ ಸುಸಂಸ್ಕೃತವಾಗಿರುತ್ತೆ. ಚಿತ್ತ ಶುದ್ಧವಾಗದೆ ಭಕ್ತಿ ಇಲ್ಲ. ಯಾವ ಜ್ಞಾನವೂ ಇಲ್ಲ. ಸಂಸ್ಕೃತಾಭ್ಯಾಸ ಪರಂಪರಾಗತವಾಗಿ ಕಾಶಿಯಲ್ಲಿ ಲೋಪವಾದರೂ ನಮ್ಮ ಕರ್ನಾಟಕದ ಕಾಶಿಯಾಗಿ ಉದ್ಯತವಾಗಿ ಉಳಿಯುವಂತೆ ಮಾಡಿದ ಮಹಾಸ್ವಾಮಿಗಳ ಬಗ್ಗೆ ಇಡೀ ಕರ್ನಾಟಕದ ಜನರಲ್ಲಿ ಇರತಕ್ಕ ಆದರ ಗೌರವಗಳನ್ನು ಈ ಸಂರ್ಭದಲ್ಲಿ ಸೂಚಿಸುವುದಕ್ಕೋಸ್ಕರ ಬಂದಿದ್ದೇನೆ" ಎಂದು ಶ್ರೀ ಕ್ಷೇತ್ರದಲ್ಲಿ ಸಂಸ್ಕೃತಾಭ್ಯಾಸಕ್ಕೆ ಮಾಡಿರುವ ವ್ಯವಸ್ಥೆಯನ್ನು ತುಂಬುಹೃದಯದಿಂದ ಶ್ಲಾಘಿಸಿದರು. ಲೋಕಸಭಾ ಸದಸ್ಯರಾದ ಶ್ರೀ ಎಸ್.ಎನ್. ಪ್ರಸನ್ನಕುಮಾರ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಎಂ.ಎನ್. ವಿಶ್ವನಾಥಯ್ಯ ಅವರುಗಳು ಮುಖ್ಯಅತಿಥಿಗಳಾಗಿ ಉತ್ಸವದ ಯಶಸ್ಸಿಗೆ ಸಹಕರಿಸಿದರು.

೨೫.೪.೮೨ರ ಭಾನುವಾರ ಪ್ರಾತಃಕಾಲ ಧರ್ಮಸಮ್ಮೇಳನ ಸಮಾವೇಶಗೊಂಡಿತ್ತು. ಚಿತ್ರದುರ್ಗ ಚಿನ್ಮೂಲಾದ್ರಿ ಬೃಹನ್ಮಠಾಧ್ಯಕ್ಷರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದ ಸಮ್ಮೇಳನದ ಉದ್ಘಾಟನೆಯನ್ನು ಉಡುಪಿಯ ಶ್ರೀ ಪೇಜಾವರ ಮಠಾಧೀಶರಾದ ಶ್ರ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದಂಗಳವರು ನೆರವೇರಿಸಿ ಕೊಡುತ್ತ 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ವಿಷಯವನ್ನು ಕುರಿತು ವಿದ್ವತ್ಪೂರ್ಣವಾದ ವ್ಯಾಖ್ಯಾನ ನೀಡಿದರು. ಸಮ್ಮೇಳನಲ್ಲಿ ಮೈಸೂರಿನ ಬ್ರಹ್ಮತಂತ್ರ ಸ್ವತಂತ್ರ ಅಭಿನವ ರಾಮಾನುಜ ಶ್ರೀ ಶ್ರೀ ಪರಕಾಲ ಮಠಾಧೀಶರು, ಹುಬ್ಬಳ್ಳಿಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು, ಶ್ರೀ ಆದಿ ಚುಂಚನಗಿರಿ ಕ್ಷೇತ್ರದ ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳವರು, ಸಿರಿಗೆರೆ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಹಾಮಠದ ಅಧ್ಯಕ್ಷರಾದ ಜಗದ್ಗುರು ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಸುತ್ತೂರು ಸಂಸ್ಥಾನದ ಜಗದ್ಗುರು, ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು, ಶ್ರೀ ನಿಡುಮಾಮಿಡಿ ಶ್ರೀಶೈಲ ಜಗದ್ಗುರು ಸಂಸ್ಥಾನಮಠದ ಜಗದ್ಗುರು ಡಾ. ಜ.ಚ.ನಿ. ಅವರು, ತಮ್ಮಡಿಹಳ್ಳಿ ಮಠಾಧ್ಯಕ್ಷರಾದ ಶ್ರೀ ಮನ್ನಿರಂಜನ ಸ್ವರೂಪಿ ಶ್ರೀ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ಸಮ್ಮುಖವನ್ನಿತ್ತು ಧರ್ಮ ರಕ್ಷಣೆಯ ಆವಶ್ಯಕತೆಯನ್ನು ಪ್ರತಿಪಾದಿಸಿದರು. ಪೂಜ್ಯ ಶ್ರೀ ಶರಣಬಸಪ್ಪ ಅಪ್ಪ, ಗುಲ್ಬರ್ಗ ಅವರು, ರಾಜ್ಯದ ಲೋಕೋಪಯೋಗಿ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪ ಅವರು, ರಾಜ್ಯದ ಅರಣ್ಯ ಸಚಿವರಾದ ಶ್ರೀ ಜಿ. ವರದೇಗೌಡ ಅವರು ಅತಿಥಿಗಳಾಗಿ ಭಾಗವಹಿಸಿದರು.

೨೫.೪.೯೬ರ ಸಂಜೆ ನಡೆದ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಭಾರತದ ಮಾಜಿ ಉಪರಾಷ್ಟ್ರಪತಿಗಳಾದ ಶ್ರೀ ಬಸಪ್ಪ ದಾನಪ್ಪ ಜತ್ತಿಯವರು ಸಮಾರೋಪ ಭಾಷಣ ನೀಡಿದರು. ಶ್ರೀ ವೀರೇಂದ್ರ ಪಾಟೀಲರು ಸಮ್ಮುಖ ನೀಡಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ಶ್ರೀ ಜಾಫರ್ ಷರೀಫ್ ಅವರು ವಹಿಸಿದ್ದ ಸಂದರ್ಭದಲ್ಲಿ ಕೇಂದ್ರ ವಾಣಿಜ್ಯ ರಾಜ್ಯ ಸಚಿವರಾದ ಶ್ರೀ ಶಿವರಾಜ್ ವಿ. ಪಾಟೀಲರು ವಿದ್ವಾಂಸರುಗಳಿಗೆ ಸನ್ಮಾನ ಮಾಡಿದರು. ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಶ್ರೀ ಕೆ. ಮಲ್ಲಣ್ಣ, ರಾಜ್ಯದ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾದ ಶ್ರೀ ಎನ್.

ಧರ್ಮಸಿಂಗ್, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾದ ಶ್ರೀ ಮಾಣಿಕರಾವ್ ಎಸ್. ಪಾಟೀಲರು ಭಾಗವಹಿಸಿದ್ದರು. ಮುಖ್ಯ ಭಾಷಣಕಾರರಾದ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ಮಾತನಾಡುತ್ತ ಐವತ್ತು ವರುಷಗಳ ಕಾಲ ಸಂನ್ಯಾಸಾಶ್ರಮ, ಐವತ್ತು ವರ್ಷಗಳ ಕಾಲ ಅನೇಕ ವಿದ್ಯಾಮಂದಿರಗಳ ಸ್ಥಾಪನೆ, ಅವಿರತವಾಗಿರತಕ್ಕಂಥ ದಾಸೋಹ, ಪ್ರತಿ ಕ್ಷಣದಲ್ಲೂ ಕೂಡ ಜನಾನುಕಂಪನ, ಧರ್ಮ ಪ್ರಚಾರ ಈ ಐದೂ ಗುಣಗಳೂ ಕೂಡಿ ಶ್ರೀ ಶ್ರೀ ಸ್ವಾಮಿಗಳವರಲ್ಲಿ ಮೂರ್ತೀಭವಿಸಿದಂತೆ ನನಗೆ ಕಂಡು ಬರುತ್ತದೆ. ಇಂತಹ ವ್ಯಕ್ತಿ ತುಮಕೂರು ಜಿಲ್ಲೆಯಲ್ಲಲ್ಲ, ಕರ್ನಾಟಕ ನಾಡಿನಲ್ಲಿಯಲ್ಲ, ಇಡೀ ಭಾರತದಲ್ಲಿ ದೊರಕತಕ್ಕದ್ದು ಅಪೂರ್ವ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದ್ಭುತವಾದ ಶಕ್ತಿ ತಮ್ಮ ಜೀವಿತ ಕಾಲದಲ್ಲಿ ಧನ್ಯತೆಯನ್ನು, ಕೃತಕೃತ್ಯತೆಯನ್ನು ಪಡೆದಂತಹ ಮಹಾವ್ಯಕ್ತಿ, ಯೋಗಿ ಮತ್ತು ಭಕ್ತನ ಲಕ್ಷಣಗಳನ್ನು ಪಡೆದು ಮೂರ್ತಿವೆತ್ತ ಸ್ವಾಮಿಗಳು ಶಿವಕುಮಾರ ಸ್ವಾಮಿಗಳವರು. ನನ್ನ ಹೃದಯವಲ್ಲಿ ಮೀಟುತ್ತಾ ಇರುವ ಕೃತಜ್ಞತೆಯ ಭಾವವನ್ನು ಈ ಮಾತಿನ ಮೂಲಕ ಶ್ರೀಗಳವರಲ್ಲಿ ಸಮರ್ಪಣೆ ಮಾಡುತ್ತಿದ್ದೇನೆ ಎಂದರು.

೨೬.೪.೮೨ರ ಸೋಮವಾರ ಪ್ರಾತಃಕಾಲದ ಅಧಿವೇಶನ ಬಸವ ಜಯಂತ್ಯುತ್ಸವವಾಗಿ ಭಕ್ತಿ ಶ್ರದ್ಧೆಗಳಿಂದ ಆಚರಿಸಲ್ಪಟ್ಟಿತು. "ಎತ್ತೆತ್ತ ನೋಡಿದತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದೆಡೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಾಯಿತ್ತು" ಎಂಬಂತೆ ಶ್ರೀಮಠದಲ್ಲಿ ಬಸವ ಸಂದೇಶದ ಅನುರಣನವೇ ಮೊಳಗಿತು.

ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ರಾಜ್ಯದ ಕಂದಾಯ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು "ಮಹಾತ್ಮಾ ಬಸವಣ್ಣನವರ ತತ್ತ್ವಜ್ಞಾನವು ಮಾಡಿದಂತಹ ತ್ಯಾಗವು ಇಡೀ ಮಾನವ ಕುಲದ ಉದ್ಧಾರಕ್ಕಾಗಿ ಮಾಡಿದಂತಹುದು. ಅದು ಯಾವುದೇ ಒಂದು ಗುಂಪಿಗಾಗಿ ಯಾವುದೇ ಒಂದು ವಿಶಿಷ್ಟವಾದಂತಹ ಸಂಕುಚಿತ ಧಾರ್ಮಿಕವಾಗಿ ಮಾಡಿದಂಥ ತತ್ತ್ವಜ್ಞಾನವಲ್ಲ. ಅವರು ಕೊಟ್ಟಂತಹ ತತ್ತ್ವಜ್ಞಾನದಿಂದ ಇಡೀ ಮಾನವ ಜನಾಂಗದ ಕಲ್ಯಾಣವಾಗಬೇಕು. ಅವರ ಸಂದೇಶ ನಿಜವಾಗಲೂ ಮನುಷ್ಯರಾಗಿ ಬದುಕಬೇಕು ಎಂಬ ಆಶೆಯಿಂದ ಕೊಟ್ಟಂತಹ ತತ್ತ್ವವಾಗಿದೆ. ಬಸವಣ್ಣನವರು ಕೊಟ್ಟಂತಹ ಧರ್ಮದಲ್ಲಿ ಅಸಮಾನತೆಯಿಲ್ಲ. ಅನ್ಯಾಯ ಕಾಣದು. ದೇಶ ಉಳಿಸುವ ದೃಷ್ಟಿ ಬಸವಣ್ಣನವರ ತತ್ತ್ವಗಳಲ್ಲಿದೆ. ದೇಶ ಮುಖ್ಯ. ದೇಶ ಉಳಿದರೆ ಧರ್ಮ ಉಳಿಯುತ್ತದೆ. ಧರ್ಮ ಉಳಿದರೆ ನಾವೆಲ್ಲ ಉಳಿಯುತ್ತೇವೆ. ಬಸವಣ್ಣನವರು ಆಗಿ ಹೋಗಿ ೮೦೦ ವರ್ಷಗಳು ಸಂದಿದ್ದರೂ ಅವರ ಸಂದೇಶ ಇಂದೂ ಪ್ರಸ್ತುತ" ಎಂದು ನುಡಿದರು. ರಾಜ್ಯದ ಹಣಕಾಸು ಸಚಿವರಾದ ಶ್ರೀ ವೀರಪ್ಪ ಮೊಯಿಲಿಯವರು ಅಧಿವೇಶನವನ್ನು ಉದ್ಘಾಟಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಆರ್.ಸಿ. ಹಿರೇಮಠ ಅವರು ವಿದ್ವತ್ಪೂರ್ಣವಾದ ಉಪನ್ಯಾಸ ನೀಡಿದರು. ಅಂತೆಯೇ ಪ್ರೊ. ಎಸ್.ಎಸ್. ಮಾಳವಾಡರ ಉಪನ್ಯಾಸವೂ ಸಭಿಕರ ಮನ ಗೆದ್ದಿತು. ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರಾದ ಶ್ರೀ ಖಾದ್ರಿ ಶಾಮಣ್ಣನವರು ಬಸವ ತತ್ತ್ವಗಳ ಪ್ರಚಾರದ ಅಗತ್ಯತೆಯನ್ನು ಒತ್ತಿ ಹೇಳಿದರು. ಡಾ. ಎಂ.ಎಸ್. ಸುಂಕಾಪುರರು ಮಾತನಾಡುತ್ತ "ಬಸವಣ್ಣನವರ ವಚನಗಳಲ್ಲಿ ಎಲ್ಲಿಯೂ ಜಾತಿಯ ಪ್ರಸ್ತಾಪವಿಲ್ಲ. ಆದರೆ ಮನುಷ್ಯ ಬದುಕಬೇಕು; ಮಾನವ ಶರಣನಾಗಿ ಬದುಕಬೇಕು; ಒಳ್ಳೆಯವನಾಗಿ ಬದುಕಬೇಕು; ನಾಲ್ಕು ಜನಕ್ಕೆ ಬೇಕಾಗಿ ಬದುಕಬೇಕು ಎನ್ನುತ್ತ ಮುಂದುವರಿದು ಸಮಾಜದಲ್ಲಿ ಎಲ್ಲರೂ ದುಡಿಯಬೇಕು, ಯಾವಾಗಲೂ ದುಡಿಯುತ್ತ ಇರಬೇಕು ಎಂದು ಬಸವಣ್ಣನವರು ಹೇಳಿದರು. ಅದಕ್ಕಾಗಿ ವಿಶಿಷ್ಟವಾದಂತಹ ಪದ ಪ್ರಯೋಗಮಾಡಿ ಅಲ್ಲಿ ಕಾಯಕ-ದಾಸೋಹ ಎಂದರು. ಹೆಣ್ಣುಮಕ್ಕಳ ಉದ್ಧಾರಕ್ಕಾಗಿ ಸಾಕಷ್ಟು ಹೆಣಗಿದರು. ಹರಿಜನರ ಏಳ್ಗೆಗಾಗಿ ಶ್ರಮಿಸಿದರು. ಬಸವ ಜಯಂತಿಯಲ್ಲಿ ಅಣ್ಣನವರ ವಚನಗಳನ್ನು ಉದಾಹರಿಸಿದರೆ ಸಾಲದು. ವಚನಗಳ ಆದೇಶ ಆಚರಣೆಗೆ ಬರಬೇಕು: ಆಗ ಸುಂದರ ಶರಣ ಸಮಾಜ ನಿರ್ಮಾಣವಾದೀತು" ಎಂದು ವಿಶ್ಲೇಷಿಸಿದರು. ಸಮಾರಂಭದಲ್ಲಿ ರಾಜ್ಯದ ಸಣ್ಣ ನೀರಾವರಿ ಸಚಿವರಾದ ಶ್ರೀ ಎಂ.ಜೆ. ಸದ್ಯೋಜಾತ ಅವರು ಮತ್ತು ತೋಟಗಾರಿಕೆ ರಾಜ್ಯ ಸಚಿವರಾದ ಶ್ರೀ ಕೆ. ಯಂಕಟಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು.

೨೬.೪.೮೨ರ ಸೋಮವಾರ ಎಡನೆಯ ಅಧಿವೇಶನ ಶಿವಾನುಭವ ಗೋಷ್ಠಿಯಾಯಿತು. ಧಾರವಾಡ ಮುರುಘಾಮಠದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಮಹಾಂತ ಶಿವಯೋಗಿಗಳು ಗೋಷ್ಠಿಯನ್ನು ಉದ್ಘಾಟಿಸಿದ, ಶಿವಸಂದರ್ಭದ ನೇತೃತ್ವ ಹುಬ್ಬಳ್ಳಿ ಮೂರು ಸಾವಿರ ಮಠದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ

ಮಹಾಸ್ವಾಮಿಗಳದಾಗಿದ್ದು, ಸಿರಿಗೆರೆ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು. ಹೊಸಪೇಟೆ ಕೊಟ್ಟೂರು ಸಂಸ್ಥಾನ ಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಜಗದ್ಗುರು ಸಂಗನಬಸವ ಸ್ವಾಮಿಗಳು, ಬೆಂಗಳೂರು ಸರ್ಪಭೂಷಣ ಮಠದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ವೇದಾಂತಚಾರ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಮೈಸೂರು ಕುಂದೂರು ಮಠದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಇಮ್ಮಡಿ ಶಿವಬಸವ ಮಹಾಸ್ವಾಮಿಗಳವರು ಶಿವಾನುಭವವನ್ನು ಕುರಿತು ಉಪನ್ಯಾಸ ಮಾಡಿದರು. ಒಟ್ಟಿನಲ್ಲಿ "ಮನದ ಮೈಲಿಗೆಯ ಕಳೆವೊಡೆ ಕೂಡಲ ಚನ್ನಸಂಗನ ಶರಣರೊಡನೆ ಅನುಭಾವವ ಮಾಡೆಂಬರು" ಎನ್ನುವಂತೆ ಗೋಷ್ಠಿ ತುಂಬಿ ಬಂತು.

ಪರಮ ಪೂಜ್ಯ ಮಹಸ್ವಾಮಿಗಳವರು ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭಗಳನ್ನೊಳಗೊಂಡಂತೆ ಎಲ್ಲ ಗೋಷ್ಠಿಗಳ ಅಂತ್ಯದಲ್ಲಿ ಆಶೀರ್ವಚನ ನೀಡುವುದರ ಮೂಲಕ ನೆರೆದ ಭಕ್ತಕೋಟಿಯ ಹೃನ್ಮನಗಳಲ್ಲಿ ಆಧ್ಯಾತ್ಮಿಕತೆಯ ಶ್ರೇಷ್ಠತೆಯನ್ನು ಬಿತ್ತಿದರು. "ಲೌಕಿಕದ ಜೀವನ ಪರದ ಜೀವನಕ್ಕೆ ನಿಚ್ಚಣಿಕೆಯಾಗಬೇಕು" ಎಂಬುದನ್ನು ಒತ್ತಿ ಹೇಳಿದರು. "ನಮ್ಮ ಗುರುಗಳ ಆಶೀರ್ವಾದದಿಂದ ಇದುವರೆಗೂ ಆಗಿರುವ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ನಾಡಿನ ಭಕ್ತಾದಿಗಳು ಈ ಸಮಾರಂಭವನ್ನು ಏರ್ಪಾಟು ಮಾಡಿದ್ದಾರೆ. ಅದು ಸಂತೋಷವನ್ನು ತಂದಿದೆ. ಈ ವೇದಿಕೆ ಕೇವಲ ಹೊಗಳಿಕೆಗೆ ಪರ್ಯವಸಾನವಾಗದೆ ಸೇವೆ ಸಲ್ಲಿಸಿದವರಿಗೆ ತೃಪ್ತಿಯನ್ನು ತಂದಿದೆ. ಈ ಬೃಹತ್ ಸಮಾರಂಭವನ್ನು ನೋಡಿದರೆ ಈ ಸಂಸ್ಥೆಯ ಮೇಲೆ ನಾಡಿನ ಜನತೆ ಇಟ್ಟಿರುವ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸುತ್ತದೆ. ಮಠಗಳು, ಧರ್ಮ ಸಂಸ್ಥೆಗಳು ಉಳಿಯಬೇಕು, ಬೆಳೆಯಬೇಕು. ಅವುಗಳ ಸೇವೆ ಜನತೆಗೆ ಬೇಕು. ಅದನ್ನು ಸರ್ಕಾರ ಸ್ವಾಗತಿಸುತ್ತಿದೆ. ಈ ಮಾತು ನಮ್ಮ ಭರತಖಂಡದ ಇತಿಹಾಸವನ್ನು ಅಧ್ಯಯನ ಮಾಡಿದವರಿಗೆ ಹೊಸದೇನಲ್ಲ. ಭರತಖಂಡದ ಸಂಸ್ಕೃತಿ ನಾಗರಿಕತೆಗಳು ಅತ್ಯುತ್ಕೃಷ್ಟವಾದವುಗಳು.

ಪ್ರಾಚೀನ ಸಂತರ ಆಧ್ಯಾತ್ಮಿಕ ಕೊಡುಗೆಯೇ ಭಾರತವು ಜಗತ್ತಿನಲ್ಲಿ ಗಣ್ಯವಾಗಲು ಕಾರಣ. ಆಧ್ಯಾತ್ಮಿಕತೆ, ಲೌಕಿಕವನ್ನು ಉದಾಸೀನ ಮಾಡಬೇಕಿಲ್ಲ. ಜೀವನ ಪರಿಪೂರ್ಣತೆಯ ವ್ಯವಸ್ಥೆಯ ಬೋಧನೆಯ ಗುರಿ ಅದಕ್ಕಿದೆ. ಜಗತ್ತಿನ ಹಲವು ರಾಷ್ಟ್ರಗಳು ನಾಗರೀಕತೆಯ ಸೋಂಕನ್ನು ಕಾಣದಿದ್ದಾಗ ಭಾರತೀಯರು ಆಧ್ಯಾತ್ಮಿಕತೆಯ ತಳಹದಿಯ ಮೇಲೆ ನಾಗರಿಕತೆ ಮತ್ತು ಸಂಸ್ಕೃತಿಯ ಔನ್ನತ್ಯವನ್ನು ತಲುಪಿದ್ದರು; ಇಡೀ ವಿಶ್ವದ ಜನತೆಯ ಕಲ್ಯಾಣವನ್ನು ಬಯಸುತ್ತಿದ್ದರು. ಮಾನವ ಮಾನವನಾಗಿ ಬಾಳ್ವಿಕೆ ಮಾಡುವ ಕಲೆಯನ್ನು ಕಲಿತು ಇತರರಿಗೆ ಬೋಧಿಸಿದರು. ಈ ದಿಸೆಯಲ್ಲಿ ಮಠಗಳು ಮಹತ್ತರ ಪಾತ್ರವನ್ನು ವಹಿಸಿವೆ. ನಮ್ಮ ರಾಷ್ಟ್ರದ ಈ ರೀತಿಯಾದ ಘನತೆ ಗೌರವಕ್ಕೆ ಸಹಸ್ರಾರು ಸಂತರ ಮಹಾಪುರುಷರ ಸಾಧನೆ ಸಿದ್ಧಿ ಆಶೀರ್ವಾದಗಳೇ ಮುಖ್ಯ ಕಾರಣ. ಅರವಿಂದರು ಒಂದು ಕಡೆ ಹೀಗೆ ಹೇಳಿದ್ದಾರೆ. "ಆಧ್ಯಾತ್ಮಿಕ ಹಿನ್ನೆಲೆ ಇಲ್ಲದ ಜೀವನ ಸಂಪೂರ್ಣ ಜೀವನವಾಗದು" ಎಂದಿದ್ದಾರೆ. ನಮ್ಮ ಪೂಜ್ಯ ಗುರುಗಳು ೧೯೧೭ ನೆಯ ಇಸ್ವಿಯಲ್ಲಿಯೇ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ ಮಾರ್ಗ ತೋರಿಸಿದ್ದಾರೆ; ಎಲ್ಲ ಸಮಾಜದ ಸೇವೆ ಮಾಡಿದ್ದಾರೆ. ಪರಮಾತ್ಮನ ಕೃಪೆ ದೊಡ್ಡದು. ನಮ್ಮ ಪೂಜ್ಯ ಗುರುಗಳ ಆಶೀರ್ವಾದ, ನಿಮ್ಮೆಲ್ಲರ ಸಹಕಾರದಿಂದ ಈ ಸಂಸ್ಥೆ ಈ ಪ್ರಮಾಣದ ಸೇವೆ ಸಲ್ಲಿಸಲು ಸಾಧ್ಯವಾಯಿತು. ರಾಷ್ಟ್ರಪತಿಗಳು ಬಿಡುವು ಮಾಡಿಕೊಂಡು ಈಗ ಸಮಾರಂಭವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿರುವುದು ತುಂಬಾ ಸಂತೋಷವನ್ನುಂಟು ಮಾಡಿದೆ. ಇಷ್ಟು ಹೇಳಿ ಪರಮಾತ್ಮನು ಎಲ್ಲರಿಗೂ ಮಂಗಳವನ್ನುಂಟುಮಾಡಲೆಂದು ಕೋರಿ ಮುಕ್ತಾಯ ಮಾಡುತ್ತೇನೆ" ಎಂದು ಆಶೀರ್ವದಿಸಿದರು.

ಸುವರ್ಣ ಮಹೋತ್ಸವವು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಸಂಯೋಜಿತವಾಗಿದ್ದುದು ವಿಶೇಷ. ವೀರಗಾಸೆ, ಡೊಳ್ಳು ಕುಣಿತ, ಕಂಸಾಳೆಗಳಂಥ ಜನಪದ ಕಲೆಗಳ ಆಕರ್ಷಕ ಪ್ರದರ್ಶನ ಜನಮನವನ್ನು ಸೂರೆಗೊಂಡರೆ ಧರ್ಮಭೂಮಿ ನೃತ್ಯ ನಾಟಕ, ಶ್ರೀ ಸಿದ್ಧಲಿಂಗೇಶ್ವರ ಮಹಾತ್ಮೆ, ಶ್ರೀ ಜಗಜ್ಯೋತಿ ಬಸವೇಶ್ವರ ನಾಟಕಗಳು ಪ್ರೇಕ್ಷಕರನ್ನು ಶರಣಲೋಕಕ್ಕೆ ಕೊಂಡೊಯ್ದು ಭಾವಮುಗ್ಧರನ್ನಾಗಿಸಿದುವು ಜನಪದ ಗೀತೆಗಳು, ಭಕ್ತಿ ಗೀತೆಗಳು ಸುಶ್ರಾವ್ಯವಾಗಿ ಶ್ರೇಷ್ಠ ಗಾಯಕರಿಂದ ಮೂಡಿ ಬಂದವು. ಮೂರು ದಿನಗಳು ಸಾಂಸ್ಕೃತಿಕ ಹಬ್ಬದ ಪರಿಸರವನ್ನುಂಟುಮಾಡಿ ಸಮಾರಂಭದ ಯಶಸ್ಸಿಗೆ ಸಹಕರಿಸಿದ್ದು ಅವಿಸ್ಮರಣೀಯ.

ಶ್ರೀ ಶ್ರೀ ಗಳವರ ದಿನಚರಿ

೧. ಬೆಳಗಿನ ಜಾವ ೨.೧೫ಕ್ಕೆ ನಿದ್ರೆಯಿಂದ ಜಾಗೃತಿ

೨. ....."....... ೨.೪೫ರವರೆಗೆ ಶರಣರ ಸಂತರ ತತ್ವ ಪಠಣ

೩. ...."....... ೩.೦೦ರವರೆಗೆ ಶೌಚ ಸ್ನಾನಾದಿ ನಿತ್ಯವಿಧಿ

೪ ....."....... ೩.೦೦ ರಿಂದ ೫.೩೦ ಘಂಟೆಯವರೆಗೆ ಶಿವಪೂಜೆ, ಲಘು ಪ್ರಸಾದ ಸ್ವೀಕಾರ

೫. ....."....... ೫.೩೦ ರಿಂದ ೬.೦೦ ಮುಂಜಾನೆ ಸಾಮೂಹಿಕ ಪ್ರಾರ್ಥನೆ.

೬. ಬೆಳಿಗ್ಗೆ ೬.೧೫ ರಿಂದ ೭.೧೦ ರವರೆಗೆ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಮತ್ತು ಸಂಸ್ಕೃತ ಪಾಠ ಬೋಧನೆ

೭. ....."....... ೭.೧೦ ರಿಂದ ೭.೪೦ ರವರೆಗೆ ವಿವಿಧ ದಿನಪತ್ರಿಕೆಗಳ ವೀಕ್ಷಣೆ

೮. ....."....... ೭.೪೦ ರಿಂದ ೮.೪೦ ರವರೆಗೆ ಪತ್ರ ವ್ಯವಹಾರ

೯. ...."....... ೮.೪೦ ರಿಂದ ೯.೦೦ ರವರೆಗೆ ಟಪಾಲು ಪರಿಶೀಲನೆ

೧. ....."....... ೯.೦೦ ರಿಂದ ೯.೧೦ ರವರೆಗೆ ಪ್ರಸಾದ ವ್ಯವಸ್ಥೆಯ ಪರಿಶೀಲನೆ

೧೧. ....."....... ೯.೧೦ ರಿಂದ ೯.೩೦ ರವರೆಗೆ ಶ್ರೀ ಕ್ಷೇತ್ರದ ಕಾರ್ಯ ವೀಕ್ಷಣೆ

೧೨. ....."....... ೯.೩೦ ರಿಂದ ೧೧.೩೦ ರವರೆಗೆ ಸ್ವತಃ ಶ್ರೀಗಳೇ ಪತ್ರಗಳಿಗೆ ಉತ್ತರಿಸುವುದು

೧೩. ....."....... ೧೧.೩೦ ರಿಂದ ೧೧.೪೫ ರವರೆಗೆ ವಿದ್ಯಾರ್ಥಿಗಳ ಊಟದ ವ್ಯವಸ್ಥೆಯ ಪರಿಶೀಲನೆ

೧೪. ......"...... ೧೧.೪೫ ರಿಂದ ೧೨.೦೦ರವರೆಗೆ ಕಾರ್ಯಾಲಯದಲ್ಲಿ ಭಕ್ತಾದಿಗಳಿಗೆ ಸಂದರ್ಶನ

೧೫. ಮಧ್ಯಾಹ್ನ ೧೨.೦೦ ರಿಂದ ೧.೦೦ ಮಂಚದ ಹತ್ತಿರ ಯಂತ್ರಧಾರಣೆ

೧೬. ....."....... ೧.೦೦ ರಿಂದ ೨.೩೦ ಭಕ್ತಾದಿಗಳಿಗೆ ಸಂದರ್ಶನ ಹಾಗೂ ಕಾರ್ಯಾಲಯದಲ್ಲಿ ಕಾರ್ಯಮಗ್ನತೆ

೧೭. ....."....... ೨.೩೦ ರಿಂದ ೩.೩೦ ಪೂಜೆ ಮತ್ತು ಪ್ರಸಾದ ಸ್ವೀಕಾರ

೧೮. ....."...... ೩.೩೦ ರಿಂದ ೫.೩೦ ಕಾರ್ಯಾಲಯದಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಪರಿಶೀಲನೆ

೧೯. ....."...... ೫.೩೦ ರಿಂದ ೫.೪೫ ಪ್ರಸಾದ ಸಿದ್ಧತೆಯ ಪರಿಶೀಲನೆ

೨೦. ಸಂಜೆ ೫.೪೫ ರಿಂದ ೬.೩೦ ಗದ್ದೆ, ತೋಟ, ಕಟ್ಟಡ ಕೆಲಸಗಳ ಮೇಲ್ವಿಚಾರಣೆ

೨೧. ....."...... ೬.೩೦ ರಿಂದ ೭.೦೦ ವಿದ್ಯಾರ್ಥಿಗಳ ಸಾಮೂಹಿಕ ಪ್ರಾರ್ಥನೆಯಲ್ಲಿ

೨೨. ರಾತ್ರಿ ೭.೦೦ ರಿಂದ ೭.೧೫ ವಿದ್ಯಾರ್ಥಿಗಳಿಗೆ ಆಶೀರ್ವಚನ

೨೩. ....." ...... ೭.೧೫ ರಿಂದ ೭.೪೫ ಭಕ್ತಾದಿಗಳ ಸಂದರ್ಶನ ಹಾಗೂ ಕಾರ್ಯಾಲಯಗಳ ಕಾರ್ಯ ಪರಿಶೀಲನೆ

೨೪. ....." ...... ೭.೪೫ ರಿಂದ ೮.೦೦ ಪ್ರಸಾದ ನಿಲಯದ ವ್ಯವಸ್ಥೆಯ ವೀಕ್ಷಣೆ.

೨೫. ....."....... ೮.೦೦ ರಿಂದ ೮.೩೦ ಕಾರ್ಯಾಲಯದ ವ್ಯವಹಾರ

೨೬. ....."....... ೮.೩೦ ರಿಂದ ೮.೪೫ ಶರಣರ ತತ್ವಪಠಣ

೨೭. ....."....... ೮.೪೫ ರಿಂದ ೯.೦೦ ಸ್ನಾನ

೨೮. ....."....... ೯.೦೦ ರಿಂದ ೯.೩೦ ಪೂಜೆ ಹಾಗೂ ಲಘು ಪ್ರಸಾದ ಸ್ವೀಕಾರ

೨೯. ....."....... ೯.೩೦ ರಿಂದ ೧೦.೩೦ ನಾಟಕದ ಅಭ್ಯಾಸ ಮೇಲ್ವಿಚಾರಣೆ

೩೦. ....."....... ೧೦.೩೦ ರಿಂದ ೧೦.೪೫ ದಿನಚರಿ ಬರೆಯುವುದು.

೩೧. ....."....... ೧೧ ಗಂಟೆಗೆ ನಿದ್ರಾಮುದ್ರೆ.

ಈ ಮಧ್ಯೆ ಬಿಡುವು ಮಾಡಿಕೊಂಡು ಭಕ್ತರ ಹಾಗೂ ಸಾರ್ವಜನಿಕರ ಕೋರಿಕೆಯ ಮೇಲೆ ಪೂಜೆ, ಸಮಾರಂಭಗಳಲ್ಲಿ ಭಾಗವಹಿಸುವುದು. ಗ್ರಾಮಾಂತರ ಬಂಧುಗಳ ಬಗೆಹರಿಯದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುವುದು....ಇತ್ಯಾದಿ.

ಶುಭ ಹಾರೈಕೆಗಳು

ಹೆಮ್ಮೆಯ ಪೀಠಾಧಿಪತಿಗಳು - ಶ್ರೀ ವಿಶ್ವೇಶ್ವರತೀರ್ಥ ಸ್ವಾಮಿಗಳು, ಉಡುಪಿ

ಶಿವಕಾರುಣ್ಯ ಸ್ವರೂಪರು - ಜ. ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು, ಆದಿಚುಂಚನಗಿರಿ

ದೀನದಲಿತರ ದೀಪ - ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳ

ಕ್ರಿಯಾಸಿದ್ಧ ಶಿವಯೋಗಿಗಳು - ಶ್ರೀ ಡಿ. ವೀರೇಂದ್ರ ಹೆಗಡೆ, ಧರ್ಮಸ್ಥಳ

ಮಾಡಿಯೂ ಮಾಡದಂತಿರುವ ಮಹಾಮಾನವ - ಶ್ರೀ ರಾಘವೇಂದ್ರ ಸ್ವಾಮಿಗಳು, ಮಲ್ಲಾಡಿಹಳ್ಳಿ

ಸರಳ ಜೀವನ, ಉಚ್ಚ ವಿಚಾರದ ಶ್ರೀಗಳು - ಜ.ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ವಾರಣಾಸಿ

ಆದರ್ಶಗಳೇ ರೂಪವೆತ್ತ ಶ್ರೀಗಳು - ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು, ಚಿತ್ರದುರ್ಗ

ಲಿಂಗ ನಡೆ, ಲಿಂಗ ನುಡಿಯ ಶ್ರೀಗಳು - ಜ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಸುತ್ತೂರು

ಪರಮಪಾವನ ಶ್ರೀ - ಜ. ಶ್ರೀ ಗಂಗಾಧರರಾಜಯೋಗೀಂದ್ರ ಮಹಾಸ್ವಾಮಿಗಳು, ಹುಬ್ಬಳ್ಳಿ

ಸ್ವಾಮಿಕುಲ ಕಲಶ - ಜ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ

ತ್ರಿವಿಧ ದಾಸೋಹಮೂರ್ತಿ - ಶ್ರೀ ಚನ್ನಬಸವ ಪಟ್ಟದ ದೇವರು, ಭಾಲ್ಕಿ

ಸ್ಥಿತಪ್ರಜ್ಞ - ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಸಿರಿಗೆರೆ

ಹಿರಿಯ ಮಹಾಚೇತನ - ಜ. ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು, ಮುಂಡರಗಿ

ಬಸವ ಚೇತನ - ಶ್ರೀ ಮಹಾಂತ ಶಿವಯೋಗಿಗಳು, ಇಳಕಲ್

ಶ್ರೀ ವಿಶ್ವೇಶತೀರ್ಥ ಸ್ವಾಮೀಜೀ
ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ

ಹೆಮ್ಮೆಯ ಪೀಠಾಧಿಪತಿಗಳು

ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಯವರ ವಜ್ರ ಮಹೋತ್ಸವವು ನಡೆಯಲಿರುವುದನ್ನು ತಿಳಿದು ನಮಗೆ ಅತ್ಯಂತ ಸಂತಸವಾಗಿದೆ. ಶ್ರೀ ಶಿವಕುಮಾರ ಸ್ವಾಮೀಜಿಯವರಿಗೂ ನಮಗೂ ಕಳೆದ ಅನೇಕ ವರುಷಗಳಿಂದ ಅತ್ಯಂತ ನಿಕಟ ಆತ್ಮೀಯ ಸಂಬಂಧವು ಬೆಳೆದುಕೊಂಡು ಬಂದಿದೆ. ಅವರ ಅತ್ಯದ್ಭುತವಾದ ಶೈಕ್ಷಣಿಕ ಸೇವಾಕಾರ್ಯದಿಂದ ಸ್ಫೂರ್ತಿಯನ್ನು ಪಡೆದ ಮಠಾಧಿಪತಿಗಳಲ್ಲಿ ನಾವೂ ಒಬ್ಬರೆಂದು ನಿಸ್ಸಂಕೋಚವಾಗಿ ಹೇಳಬಯಸುತ್ತೇವೆ. ಜಾತಿ ಮತ ಭೇದವಿಲ್ಲದೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾದಾನ, ಅನ್ನದಾನಗಳನ್ನು ನೀಡಿ, ಶ್ರೀಗಳವರು ಅಪೂರ್ವ ದಾಖಲೆಯನ್ನೇ ನಿರ್ಮಿಸಿದ್ದಾರೆ. ಅನೇಕಾನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಅಪಾರ ಸಂಖ್ಯೆಯಿಂದ ಭಕ್ತರಿಗೆ, ವಿದ್ಯಾರ್ಥಿಗಳಿಗೆ ದಾಸೋಹಗಳನ್ನು ನೆರವೇರಿಸಿ ಕನ್ನಡ ನಾಡಿನ ಹೆಮ್ಮೆಯ ಪೀಠಾಧಿಪತಿಗಳೆನಿಸಿದ ಶ್ರೀ ಶಿವಕುಮಾರ ಸ್ವಾಮಿಗಳು ಸಿದ್ಧಗಂಗೆಯಿಂದ ವಿದ್ಯೆಯ ಶುದ್ಧಗಂಗೆಯನ್ನೇ ನಾಡಿನಲ್ಲಿ ಹರಿಸಿದ್ದಾರೆ. ಈ ಶುಭ ಸಂದರ್ಭದಲ್ಲಿ ಶ್ರೀ ಸ್ವಾಮೀಜಿಗಳಿಗೆ ನಮ್ಮ ಹಾರ್ದಿಕ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು

ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ವಿಜಯನಗರ, ಬೆಂಗಳೂರು - ೫೬೦೦೪೦.

ಶಿವಕಾರುಣ್ಯ ಸ್ವರೂಪರು

ಸಕಲ ಜೀವಾವಳಿಗೆ ಲೇಸನೇ ಬಯಸಿ ಶಿವಕಾರುಣ್ಯ ಸ್ವರೂಪರಾದ ಆತ್ಮೀಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳವರಿಗೆ ಅವರ ವಜ್ರಮಹೋತ್ಸವ ಸಂದರ್ಭದಲ್ಲಿ ಭಕ್ತರು ಮತ್ತು ಶಿಷ್ಯವೃಂದ ಅಭಿನಂದನ ಗ್ರಂಥವೊಂದನ್ನು ಸಮರ್ಪಿಸಲಿರುವುದನ್ನು ತಿಳಿದು ನಮಗೆ ಬಹಳ ಸಂತೋಷವಾಯಿತು. ಸೇವಾ ಕ್ಷೇತ್ರದಲ್ಲಿ ಭಕ್ತಿಯನ್ನೇ ಬಿತ್ತಿ, ಭಕ್ತಿಯನ್ನೇ ಉಂಡು ಶಿವಾನುಭಾವಿಗಳಾದ ಮಹಾಸ್ವಾಮಿಗಳವರಿಗೆ ಅಭಿನಂದನೆಯನ್ನರ್ಪಿಸುವುದಕ್ಕಿಂತ ಅಭಿವಂದನೆಯನ್ನರ್ಪಿಸುವುದು ಹೆಚ್ಚು ಅರ್ಥವತ್ತಾದುದು. ಕೆಲವರು ಎಲ್ಲ ಬಿಟ್ಟೆವೆಂಬರು, ಆದರೆ ಬಿಟ್ಟೆವೆಂಬ ಭಾವ ಬಿಡಲಿಲ್ಲ. ನಿತ್ಯ ಬೆಳಗುವ ಸೂರ್ಯನಂತೆ ಲೋಕ ಕಲ್ಯಾಣ ಕಾರ್ಯಗಳನ್ನು ಮಾಡಿಯೂ ಮಾಡದಂತಿರುವ ಶ್ರೀ ಸ್ವಾಮಿಗಳವರ ಪರಿಯು ಅಚ್ಚರಿಕರ. ಕಲ್ಯಾಣ ಕ್ರಾಂತಿಯ ನಂತರ ಪ್ರಭುದೇವರ ಆಧ್ಯಾತ್ಮ, ಬಸವಣ್ಣನವರ ದಾಸೋಹ, ಚೆನ್ನಬಸವಣ್ಣನವರ ಜ್ಞಾನ, ಶಿವಶರಣರ ಕಾಯಕಗಳಿಗೆ ಶ್ರೀ ಸ್ವಾಮಿಗಳವರು ಅಪೂರ್ವ ಸಂಗಮ. ಇಂದು ಕಲಾಧರನ ಮುಡಿಗೆ ಕಳೆ ತರಲರ್ಹವಾದ ಈ ದೇವಕುಸುಮ ಕರ್ನಾಟಕದಲ್ಲಿ ಬೆಳಗಿದುದು ಕನ್ನಡಿಗರ ಪುಣ್ಯ.

ಗ್ರಾಮೀಣ ಬಡಜನರುದ್ಧಾರ ಶಿಕ್ಷಣ ಕೊಡುವುದರಿಂದ ಮಾತ್ರ ಸಾಧ್ಯವೆಂಬುದನ್ನು ಮನಗಂಡ ಶ್ರೀ ಸ್ವಾಮಿಗಳವರು ಶಿಕ್ಷಣ ಪ್ರಸಾರಕ್ಕೆ ಹೆಚ್ಚು ಒತ್ತುಕೊಟ್ಟು ನಾನಾ ಹಂತದ ನೂರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಇವುಗಳಿಂದ ಸಹಸ್ರಾರು ಕುಟುಂಬಗಳು ನೆಮ್ಮದಿಯನ್ನು ಪಡೆದಿವೆ. ಇವರ ಸಂಸ್ಥೆಗಳು ಅನೇಕ ವಿದ್ವಾಂಸರನ್ನು ಹಾಗೂ ದಕ್ಷ ಆಡಳಿತಗಾರರನ್ನು ದೇಶಕ್ಕೆ ಕೊಟ್ಟಿವೆ. ತಮ್ಮ ಆಶ್ರಮದಲ್ಲಿ ನಾಲ್ಕೈದು ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಅಶನ, ವಸತಿಗಳನ್ನು ಕೊಟ್ಟು ಶಿಕ್ಷಣ ಸೌಕರ್ಯವನ್ನು ಕಲ್ಪಿಸಿರುವುದು ಸಾಹಸದ ಸಂಗತಿ. ಗ್ರಾಮೀಣ ಬಡಜನತೆಗೆ ಶಿಕ್ಷಣವು ಎಟುಕದಿದ್ದ ಕಾಲದಲ್ಲಿ ಶಿಕ್ಷಣ ಯೋಜನೆಯನ್ನು ಹಮ್ಮಿಕೊಂಡು ಹಲವು ದಶಕಗಳಕಾಲ ಶ್ರಮಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದವರಲ್ಲಿ ಇವರೇ ಮೊತ್ತ ಮೊದಲಿಗರೆಂದರೆ ತಪ್ಪಾಗಲಾರದು. ಇವರ ಯೋಜನೆಯು ಎಲ್ಲಾ ಮಠಗಳಿಗೂ ಅನುಕರಣೀಯವಾದುದು. ಶ್ರೀ ಸ್ವಾಮಿಗಳವರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಭುತ್ವ ಪಡೆದ ದೊಡ್ಡ ವಿದ್ವಾಂಸರಾಗಿದ್ದಾರೆ. ಸರಳವೂ ಸುಂದರವೂ ತತ್ತ್ವಪೂರ್ಣವೂ ಆದ ಇವರ ಉಪನ್ಯಾಸಗಳು ಜನಪ್ರಿಯವೂ, ಬೋಧಪ್ರದವೂ ಆಗಿವೆ. ಚಿತ್ತಾಪಹಾರಕಾಃ ಗುರವಃ ಎಂಬ ಮಾತೊಂದುಂಟು. ಇವರು ತಮ್ಮ ನಿಷ್ಕಳಂಕ ಸೇವಾಕಾರ್ಯಗಳಿಂದ ಜನತೆಯ ಹೃನ್ಮನಗಳನ್ನು ಗೆದ್ದುಕೊಂಡಿದ್ದಾರೆ. ಇವರು ಚಿತ್ತದ ಅಪಹಾರಕರು ಮಾತ್ರರಲ್ಲ; ಚಿತ್ತದ ತಾಪಹಾರಕರೂ ಹೌದು. ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಇಂತಹ ಗುರುಗಳ ಅಗತ್ಯವಿದೆ. ವಯೋವೃದ್ಧರೂ, ಜ್ಞಾನವೃದ್ಧರೂ, ಆತ್ಮೀಯರೂ ಆದ ಇವರ ಬಗ್ಗೆ ನಮಗೆ ಬಹಳ ಅಭಿಮಾನವುಂಟು.

ನೀವು ಹೊರತರಲಿರುವ ಅಭಿನಂದನ ಗ್ರಂಥದಲ್ಲಿ ಶ್ರೀ ಸ್ವಾಮಿಗಳವರ ಆದರ್ಶಗಳು ಪ್ರತಿಬಿಂಬಿಸಲೆಂದೂ, ನಡೆಸಲಿರುವ ಸಮಾರಂಭವು ಚೆನ್ನಾಗಿ ನಡೆಯಲೆಂದೂ ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ
ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು

ಶ್ರೀ ಗೊಮ್ಮಟೇಶಾಯ ನಮಃ
ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು
ಜಗದ್ಗುರು ಕರ್ಮಯೋಗಿ ಸ್ವಸ್ತಿ ಶ್ರೀ
ಶ್ರವಣಬೆಳಗೊಳ ಮಠ
ಕರ್ನಾಟಕ - ೫೭೩ ೧೩೫.

ದೀನದಲಿತರ ದೀಪ

ಪ್ರಶಾಂತ ವಾತಾವರಣ ಆಧ್ಯಾತ್ಮಿಕತೆಯ ಪರಿಸರದಲ್ಲಿ ಕಂಗೊಳಿಸುತ್ತಲಿರುವ ಸಿದ್ಧಗಂಗಾ ಕ್ಷೇತ್ರದಲ್ಲಿ ಸಹಸ್ರ ಸಹಸ್ರ ಸಂಖ್ಯೆಯ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಶಿಕ್ಷಣ ಪಡೆದು ಹಾಗೂ ಪಡೆಯುತ್ತ ಜೀವನದಲ್ಲಿ ಯಶಸ್ಸನ್ನು ಗಳಿಸುತ್ತಲಿರುವುದು ಹಾಗೂ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಲಿರುವ ವಿವಿಧ ಧಾರ್ಮಿಕ ಹಾಗೂ ಶೈಕ್ಷಣಿಕ, ನೈತಿಕ ಚಟುವಟಿಕೆಗಳು, ವೈಶಿಷ್ಟ್ಯವನ್ನು ಪ್ರತಿಬಿಂಬಿಸುವ ನಿರ್ಮಲ ದರ್ಪಣಗಳಾಗಿವೆ. ಪ್ರತಿದಿನವೂ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹವನ್ನು ನಿರಂತರವೂ ನಡೆಸುತ್ತಲಿರುವ ಕ್ಷೇತ್ರದ ಅನ್ನದಾನ ಸುವ್ಯವಸ್ಥೆಯು ಅತ್ಯಂತ ಆದರ್ಶವಾದುದಾಗಿದೆ. ಈ ಎಲ್ಲ ಸುವ್ಯವಸ್ಥೆಗೂ ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರೇ ಕಾರಣರಾಗಿರುವುದಲ್ಲದೆ ಸಮಾಜೋದ್ಧಾರಕ್ಕಾಗಿ, ದೀನದಲಿತರ ಕಲ್ಯಾಣಕ್ಕಾಗಿ, ವಿದ್ಯಾರ್ಥಿವೃಂದದ ಸುಂದರ ಭವಿಷ್ಯ ನಿರ್ಮಾಣಕ್ಕಾಗಿ ನಿರಂತರವೂ ಕಾರ್ಯೋನ್ಮುಖರಾಗಿ ಹಾಗೂ ತತ್ವ ಸಿದ್ಧಾಂತ ಆಧ್ಯಾತ್ಮಿಕತೆಯ ನೆಲಗಟ್ಟಿನ ಮೇಲೆ ಸುಂದರ ಸಹೃದಯ ಸಮಾಜ ನಿರ್ಮಾಣಕ್ಕಾಗಿ ಕಳೆದ ಅರವತ್ತೈದು ವರ್ಷಗಳಿಂದ ಸಮರ್ಪಣ ಭಾವದಿಂದ ಅಹರ್ನಿಶಿ ಶ್ರಮಿಸುತ್ತಾ ಅಕ್ಷರಶಃ ಚರಿತಾರ್ಥಗೊಳಿಸಿರುವುದನ್ನು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಅಂಕಿತಗೊಳಿಸಿರುವುದು ಅತ್ಯಂತ ಸಮಂಜಸವಾಗಿದೆ. ಇಂದು ಅವರು ನಡೆಸುತ್ತಿರುವ ೧೨೦ಕ್ಕೂ ಹೆಚ್ಚಿನಸಂಖ್ಯೆಯ ಶಿಕ್ಷಣ ಸಂಸ್ಥೆಗಳು ಅವರ ವಿಶಾಲ ಹೃದಯದ ಜ್ವಲಂತ ಸಾಕ್ಷಿಗಳಾಗಿವೆ. ಪ್ರಸಕ್ತ ಸಮಯದಲ್ಲಿ ಶ್ರೀ ಸಿದ್ಧಗಂಗಾ ಮಠದ ವರ್ತಮಾನ ಪೀಠಾಧ್ಯಕ್ಷರಾದ ಡಾ. ಶ್ರೀ ಶ್ರೀಶ್ರೀ ಶಿವಕುಮಾರ ಸ್ವಾಮಿಗಳವರ ವಜ್ರ ಮಹೋತ್ಸವವನ್ನು ನಡೆಸುತ್ತಲಿರುವುದು ಹಾಗೂ ಈ ಸಮಾರಂಭದಲ್ಲಿ ವಿನಯಾಂಜಲಿಯಾಗಿ ಸ್ಮರಣ ಸಂಚಿಕೆಯನ್ನು ಪ್ರಕಟಿಸುತ್ತಲಿರುವುದು ಅತ್ಯಂತ ಸಂತಸದ ವಿಷಯವಾಗಿರುತ್ತದೆ. ಈ ಎಲ್ಲ ಮಂಗಲಕಾರ್ಯಗಳು ಅತ್ಯಂತ ಸುಂದರ ಹಾಗೂ ಯಶಸ್ವಿಯಾಗಲೆಂದು ಆಶಿಸುತ್ತೇವೆ.

ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಡಿ. ವೀರೇಂದ್ರ ಹೆಗ್ಗಡೆ
ಧರ್ಮಸ್ಥಳ - ೫೭೪ ೨೧೬
ಕರ್ನಾಟಕ ರಾಜ್ಯ

ಕ್ರಿಯಾಸಿದ್ಧ ಶಿವಯೋಗಿಗಳು

ವನಸಿರಿಯ ಶಿಲಾಮಯ ಬೆಟ್ಟಗಳ ನಡುವೆ ಪ್ರಶಾಂತ ವಾತಾವರಣದಲ್ಲಿ ಮೈದಾಳಿರುವ, ತುಮಕೂರ ಬಳಿಯ ಶ್ರೀ ಸಿದ್ಧಗಂಗಾಮಠ ನಮ್ಮ ನಾಡಿನ ಜಾಗೃತ ಹಾಗೂ ಕ್ರಿಯಾಶೀಲ ಧರ್ಮಕ್ಷೇತ್ರಗಳಲ್ಲಿ ಜನಮಾನ್ಯವಾಗಿದೆ. ಈ ಕ್ಷೇತ್ರದ ಕ್ರಿಯಾಶೀಲ ಅಧಿಪತಿಗಳಾದ ಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ೭೫ ವರ್ಷಗಳಿಂದ ನಿರಂತರವಾಗಿ ನಡೆದ ಯೋಜನೆಗಳು ಪವಾಡಸದೃಶವಾಗಿವೆ.

ಶ್ರೀಗಳವರು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರವನ್ನೇ ಸೃಷ್ಟಿಸಿದ ಮಹಾಂತರು. ನಾಡಿನ ಮಕ್ಕಳಿಗೆ ಅಪರಿಪರೆನ್ನದೆ, ಸಾಮೂಹಿಕ ದೃಷ್ಟಿಯಿಂದ, ಅಕ್ಷರವಿದ್ಯೆಯೊಂದಿಗೆ ಒಳ್ಳೆಯ ನಡೆ ನುಡಿಗಳ ಉತ್ತಮ ಸಂಸ್ಕಾರವನ್ನು ನಿತ್ಯದ ಪ್ರವಚನಗಳ ಮೂಲಕ ನೀಡುತ್ತಿರುವುದು ಅಸ್ವಾದ್ಯವೆನಿಸಿದೆ. ಸುಸಂಸ್ಕೃತ ಆತ್ಮಬಲವಂತ ಸದಾಚಾರಿ ತರುಣ ಪೀಳಿಗೆಯಿಂದಲೇ ಮಹಾ ನಾಡಿನ ಭವಿಷ್ಯ ಉಜ್ವಲವಾದೀತೆಂದು ಬಗೆದ ಶ್ರೀಗಳವರು ಈ ದಿಶೆಯಲ್ಲಿ ಧಾರ್ಮಿಕ ಗುರುಗಳಿಗೆ ಹೊಸ ಪದ್ಧತಿಯನ್ನು ತೋರಿದ ಮಹನೀಯ ಶಿವಯೋಗಿಗಳು.

ದಾಸೋಹಂಭಾವದ ಪ್ರಸಾದ ವಿನಿಯೋಗದ ಜೊತೆಗೆ ಪೂಜ್ಯರು ಕ್ಷೇತ್ರಕ್ಕೆ ಬಂದ ಭಕ್ತರ ಯೋಗಕ್ಷೇಮವನ್ನು ವಿಚಾರಿಸಿ, ಅವರಲ್ಲಿ ಉನ್ನತ ವಿಚಾರಗಳ ಸಂಸ್ಕಾರ ಮೂಡಿಸುವ ಕ್ರಾಂತಿ ಅನನ್ಯವಾಗಿದೆ. ಶ್ರೀಗಳವರ ಪ್ರಸನ್ನ ಮುಖದಿಂದ ದಿವ್ಯ ವಾಣಿಯಾಗಿ ಬಂದ ಹಿತನುಡಿಗಳು ಭಕ್ತರಿಗೆ ಅಭಯದ ವರದಾನವಾಗಿ ಪರಿಣಮಿಸುತ್ತಿವೆ.

ಕೃಷಿ ಉದ್ಯಮಗಳಲ್ಲದೆ, ಆಧುನಿಕ ತಾಂತ್ರಿಕ ಶಿಕ್ಷಣಕ್ಷೇತ್ರದಲ್ಲಿಯೂ ಶ್ರೀಗಳವರ ವಿಶಾಲ ಯೋಜನೆಗಳು ಕಾರ್ಯಗತವಾಗಿ ನಾಡಿನ ಬಹುಮುಖ ಏಳಿಗೆಗೆ ಕಾರಣವಾಗಿದೆ. ಶ್ರೀಮಠದಲ್ಲಿ ನವೀನವಾಗಿ ರೂಪುಗೊಂಡ ಅನ್ನದಾಸೋಹ ಮಂದಿರ ಶ್ರೀಗಳವರ ಲೋಕಹಿತದ ಬೃಹತ್ ಯೋಜನೆಗಳ ಸಂಕೇತವಾಗಿದೆ.

ಶ್ರೀಗಳವರು ಶ್ರೀ ಕ್ಷೇತ್ರ ಧರ್ಮಸ್ಥಳದ ಜನೋಪಯೋಗಿ ಕಾರ್ಯಗಳನ್ನುಕಂಡು ಅಭಿಮಾನ ತಾಳಿ ಸಂತಸಗೊಂಡ ಸಂತರು. ದ.ಕ. ಜಿಲ್ಲೆಯ ಉಜಿರೆಯಲ್ಲಿ ಶ್ರೀ ಕ್ಷೇತ್ರ ಪ್ರಾರಂಭಿಸಿದ ಶ್ರೀ ಮಂಜುನಾಥೇಶ್ವರ ಮಹಾವಿದ್ಯಾಲಯದ ಶಿಲಾನ್ಯಾಸವನ್ನಿಸಿ ಹರಸಿದ ಮೇಲೆ ಅದರ ರಜತ ಮಹೋತ್ಸವದಲ್ಲಿಯೂ ೧೯೯೧ರಲ್ಲಿ ಆಗಮಿಸಿ ಕಾರ್ಯಕ್ರಮಗಳಿಗೆ ಕಳೆದುಂಬಿದುದು ಸ್ಮರಣೀಯ ಪ್ರಸಂಗ.

ಪೂಜ್ಯರು ವಿಶ್ವಮಾನವ ಧರ್ಮದ ಪರಮಾದರ್ಶಗಳನ್ನು ಸ್ವತಃ ಆಚರಣೆಯಲ್ಲಿ ತಂದು, ಪ್ರವಚನ ನೀಡಿ ಜನರನ್ನು ಆ ಹೆದ್ದಾರಿಯಲ್ಲಿ ಮುಂದೆ ಸಾಗುವಂತೆ ಪ್ರೇರಣೆ ನೀಡುತ್ತಿರುವುದು ನಾಡಿನ ಪುಣ್ಯ.

ಶ್ರೀಗಳವರ ಶಿವಯೋಗದ ತಪೋಮಯ ಜೀವನದಲ್ಲಿ ವಯೋಮಾನವನ್ನು ಮೀರಿದ ಚೈತನ್ಯ, ನಿತ್ಯ ನವೀನವಾಗಿದೆ. ಇಂಥ ಗುರುವರ್ಯರ ವಜ್ರ ಮಹೋತ್ಸವದಲ್ಲಿ ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿ ಸಂಘದವರು ಸಂಸ್ಮರಣ ಸಂಪುಟ ಪ್ರಕಟಿಸುತ್ತಿರುವುದು ಸ್ತುತ್ಯರ್ಹ ಕಾಣಿಕೆ.

ಪೂಜ್ಯರು ನೂರು ವಸಂತಗಳನ್ನು ಲೋಕ ಕಲ್ಯಾಣಕ್ಕಾಗಿ ಕಂಡು, ನಾಡಿನ ಧಾರ್ಮಿಕ ಕೇಂದ್ರಗಳ ಕಾರ್ಯಕರ್ತರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಡಿ. ವೀರೇಂದ್ರ ಹೆಗ್ಗಡೆ

ರಾಘವೇಂದ್ರ ಸ್ವಾಮಿಗಳು,
ಅನಾಥ ಸೇವಾಶ್ರಮ,
ಮಲ್ಲಾಡಿಹಳ್ಳಿ, ಜಿಲ್ಲಾ : ಚಿತ್ರದುರ್ಗ.

ಮಾಡಿಯೂ ಮಾಡದಂತಿರುವ ಮಹಾ ಮಾನವ

ಕರ್ನಾಟಕದ ಹೃದಯಾವಿಷ್ಟ ಸತ್ಸಂಕಲ್ಪದ ಸಾಕಾರ ಮೂರ್ತಿಯಾಗಿ, ಜ್ಞಾನಗಂಗೆ ಹಾಗೂ ಕ್ರಿಯಾಗಂಗೆಯರ ಸಂಗಮದಂತೆ ಕಂಗೊಳಿಸುತ್ತಿರುವ ಪವಿತ್ರ ಕ್ಷೇತ್ರವೇ ಸಿದ್ಧಗಂಗೆ. ಇಲ್ಲಿ ಜ್ಞಾನ ಭಂಡಾರವಿದೆ, ಸತ್ಕರ್ಮಾಚರಣೆ ಇದೆ, ಮಾನವಧರ್ಮ ಪ್ರೋಜ್ವಲವಾಗಿದೆ. ಐಹಿಕಾಮುಷ್ಮಿಕಗಳೆರಡರ ಸಾರ್ಥಕ್ಯವಿದೆ. ವಿದ್ಯೆಯ ತೌರು, ಸದ್ಧರ್ಮದ ನೆಲೆವೀಡು ಈ ಕ್ಷೇತ್ರ.

ಕ್ಷೇತ್ರದ ಜೀವಕೇಂದ್ರ ಶಕ್ತಿಯ ಮೂಲಸ್ರೋತ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಆಳವಾದ, ಅಪಾರವಾದ ಪಾಂಡಿತ್ಯ, ಅನುಭವದ ರಸಗಟ್ಟಿ ಎನ್ನಿಸುವ ಆತ್ಮಜ್ಞಾನ, ಜನಸೇವೆಯ ಅವಿರತ ನಿರ್ವಹಣೆಯ ಅಖಂಡ ದೀಕ್ಷೆ, ಸದಿಚ್ಛೆಯ ಮಹಾಶಕ್ತಿ ಎಂದರೆ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ೮೮ ವಸಂತಗಳನ್ನು ಕಂಡಿರುವ ಈ ಉದ್ದಾಮ ಚೇತನ ನಾಡಿನ ಬಹಳಷ್ಟು ಖ್ಯಾತ ವಿದ್ವಾಂಸರಿಗೆ ಸ್ಫೂರ್ತಿಯ ಚಿಲುಮೆ. ೧೯೩೦ ರಲ್ಲಿ ಶ್ರೀ ಶ್ರೀ ಉದ್ಧಾನ ಶಿವಯೋಗಿಗಳಿಂದ ಅನುಗ್ರಹಿತರಾಗಿ ಸಿದ್ಧಗಂಗಾಮಠದ ಪೀಠಾಧ್ಯಕ್ಷರಾಗಿ, ಮಠದ ಸರ್ವತೋಮುಖ ಅಭಿವೃದ್ಧಿಯ ಚಾಲಕ ಶಕ್ತಿಯಾಗಿರುವುದು ಶ್ರೀ ಮಠದ ಪುಣ್ಯ, ನಾಡಿನ ಮಹಾ ಭಾಗ್ಯ.

ಡಾ. ಶಿವಕುಮಾರ ಸ್ವಾಮಿಗಳು ಭಾವುಕರು, ದಯಾಶೀಲರು, ಆಧ್ಯಾತ್ಮ ಸಾಧಕರು ಹಾಗೂ ಉನ್ನತಸ್ತರದ ಅನುಭಾವಿಗಳು. ಅಚ್ಚಳಿಯದ ರಾಷ್ಟ್ರಪ್ರೇಮಿ. ಶ್ರೀ ಸ್ವಾಮಿಗಳು ಗ್ರಾಮೀಣ ಜನಸೇವೆಯನ್ನು ದೀಕ್ಷಾವ್ರತದಂತೆ ಸಲ್ಲಿಸುತ್ತಿದ್ದಾರೆ. ರಾಷ್ಟ್ರದ ಸಂಸ್ಕೃತಿಯ ಸಾರವಿರುವುದೇ ಸಂಸ್ಕೃತ ಭಾಷೆಯಲ್ಲಿ. ಹಾಗೂ ಸನಾತನ ವೇದ ವಾಙ್ಮಯದಲ್ಲಿ; ಹೀಗೆಂದೇ ಮಠದಲ್ಲೊಂದು ವೇದ ಪಾಠಶಾಲೆ ಪ್ರಾರಂಭವಾಯಿತು. ಇಲ್ಲಿ ತರಬೇತಿ ಪಡೆದ ವಿದ್ವನ್ಮಣಿಗಳು ನಾಡಿನ ಉದ್ದಗಲಕ್ಕೂ ಅಪಾರ ಸಂಖ್ಯೆಯಲ್ಲಿದ್ದಾರೆ.

"ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆವೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ"

ಎಂಬ ಸರ್ವಜ್ಞಮೂರ್ತಿಯ ಅಮರವಾಣಿ ಶ್ರೀ ಮಠದಲ್ಲಿ ಸಾಕಾರವಾಗಿ ಮೈದಳೆದಿದೆ. ಪ್ರತಿದಿನವೂ ಆರುಸಾವಿರ ಜನಕ್ಕೆ ನಿತ್ಯ ದಾಸೋಹವನ್ನಿಡುವುದು ಹುಡುಗಾಟದ ಮಾತಲ್ಲ. ಇದಕ್ಕೆ ಅಪಾರ ಭಾವಶುದ್ಧಿ ಬೇಕು. ವಿಶುದ್ಧ ಸಂಕಲ್ಪಸಿದ್ಧಿ ಬೇಕು. ಅಖಂಡ ಕ್ರಿಯಾಸಿದ್ಧಿ ಬೇಕು. ಇವೆಲ್ಲವೂ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಲ್ಲಿ ಯಥೇಚ್ಛವಾಗಿವೆ. ಇಲ್ಲಿ ಇದೀಗ ತೊಂಭತ್ತಕ್ಕೂ ಅಧಿಕ ಸಂಖ್ಯೆಯಲ್ಲಿರುವ ವಿವಿಧ ಶಿಕ್ಷಣ ಸಂಸ್ಥೆಗಳು ಶ್ರೀ ಶ್ರೀಗಳ ವಿದ್ಯಾಭಿಲಾಷೆ, ವಿದ್ಯಾಪ್ರಸಾರ, ವಿದ್ಯಾಪಕ್ಷಪಾತಗಳಿಗೆ ಜ್ವಲಂತ ಸಾಕ್ಷಿಗಳಾಗಿವೆ.

ನಾಡಿನ ಲಕ್ಷಾಂತರ ಜನರು ಈ ಸಂಸ್ಥೆಯಿಂದ ಉಪಕೃತರಾಗಿದ್ದಾರೆ. ಕೋಟ್ಯಂತರ ಜನ ಈ ಕ್ಷೇತ್ರದಿಂದ ಬೆಳೆದವರಾಗಿ, ಶ್ರೀ ಶ್ರೀ ಸ್ವಾಮಿಗಳ ಹೆಸರನ್ನು ನಿತ್ಯ ತಾರಕಮಂತ್ರವನ್ನಾಗಿ ಜಪಿಸುತ್ತಾರೆ. ಅರವತ್ತೈದು ವರ್ಷಗಳ ಈ ಸಾರ್ಥಕ ಸಾಧನೆ ಕೇವಲ ದೀನದಲಿತರಿಗಾಗಿ ನಿಸ್ವಾರ್ಥ ಮನೋಭಾವವೇ ಮೈವೆತ್ತಿದಂತಿರುವ ಶ್ರೀ ಶ್ರೀ ಸ್ವಾಮಿಗಳವರ ಭವಿಷ್ಯದ ಯೋಜನೆಗಳೆಲ್ಲವೂ ಕೈಗೂಡಲಿ, ಅವರ ಅನುಗ್ರಹ ಆಶೀರ್ವಾದಗಳು ನಾಡಿಗೆ ಚಿರಕಾಲ ದೊರೆಯುವಂತಾಗಲಿ ಎಂದು ನನ್ನ ಹಾರೈಕೆ. ಅನಾಥಸೇವಾಶ್ರಮದ ಬಗೆಗೆ ಶ್ರೀ ಸ್ವಾಮಿಗಳಿಗೆ ಮೇರುಸದೃಶ ಅಭಿಮಾನ. ನನಗೂ ಈ ಕ್ಷೇತ್ರದ ಬಗ್ಗೆ, ಶ್ರೀ ಸ್ವಾಮಿಗಳ ಬಗ್ಗೆ ಹೃದಯ ಪೂರ್ವಕವಾದ ಪರಿಭಾವನೆ. ಅಪಾರವಾದ ಪ್ರೇಮ.

- ಶುಭಂ -

ಶ್ರೀ ೧೦೦೮ ಜಗದ್ಗುರು

ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ

ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನ,

ಜಂಗಮವಾಡಿ ಮಠ, ವಾರಣಾಸಿ.

ಸರಳ ಜೀವನ - ಉಚ್ಚ ವಿಚಾರ ಶ್ರೀಗಳು.

ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳವರ ವಜ್ರ ಮಹೋತ್ಸವವನ್ನು ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಿರುವುದು ತಿಳಿದು ಮಹದಾನಂದವಾಯಿತು.

ಶ್ರೀ ಸ್ವಾಮಿಗಳವರು ಅನ್ನದಾಸೋಹ ಮತ್ತು ಜ್ಞಾನದಾಸೋಹದಲ್ಲಿ ಇಡೀ ಕರ್ನಾಟಕದಲ್ಲಿಯೇ ಹೆಸರುವಾಸಿಯಾಗಿದ್ದಾರೆ. ಅವರ ಸರಳ ಜೀವನ ಹಾಗೂ ಉಚ್ಚ ವಿಚಾರಗಳು ಜಗತ್ತಿಗೆ ಮಾರ್ಗದರ್ಶಕಗಳಾಗಿವೆ. ಸ್ಮರಣ ಸಂಪುಟದಲ್ಲಿಯ ಶ್ರೀ ಸ್ವಾಮಿಗಳವರ ವ್ಯಕ್ತಿತ್ವ ಮತ್ತು ಕರ್ತೃತ್ವವನ್ನು ಆಧರಿಸಿ ಬರೆದಿರುವ ಎಲ್ಲ ಲೇಖನಗಳು ಲೋಕೋಪಯೋಗಿಯಾಗಲಿ; ಶ್ರೀ ಕಾಶೀ ವಿಶ್ವನಾಥ - ಅನ್ನಪೂರ್ಣೆಯ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಅನುಗ್ರಹದಿಂದ ಶ್ರೀ ಸ್ವಾಮಿಗಳವರು ಶತಾಯುಷಿಗಳಾಗಲಿ ಹಾಗೂ ಅವರ ಉಭಯ ವಿಧ ದಾಸೋಹವು ನಿರಂತರವಾಗಿ ನಡೆಯುತ್ತಿರಲಿ.

ಈ ಕಾರ್ಯದಲ್ಲಿ ತನು - ಮನ - ಧನಗಳಿಂದ ಸೇವೆ ಸಲ್ಲಿಸುತ್ತಿರುವ ಸಮಸ್ತ ಸದ್‌ಭಕ್ತರಿಗೆ ಅನಂತ ಮಂಗಲಾಶೀರ್ವಾದಗಳು.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು
ಶ್ರೀ ಮುರುಘರಾಜೇಂದ್ರ ಬೃಹನ್ಮಠ,
ಚಿತ್ರದುರ್ಗ - ೫೭೭ ೫೦೨
ದೂರವಾಣಿ : ೨೨೨೫೦

ಆದರ್ಶಗಳೇ ರೂಪವೆತ್ತ ಶ್ರೀಗಳು

ಕರ್ನಾಟಕದ ಧಾರ್ಮಿಕ ಕ್ಷೇತ್ರಗಳಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರವು ತನ್ನದೇ ಆದ ಹಿರಿಮೆಯನ್ನು ಹೊಂದಿದೆ. ಶ್ರೀ ಕ್ಷೇತ್ರದ ಅನ್ನದಾಸೋಹ ಜಗತ್ಪ್ರಸಿದ್ಧವಾದ ವ್ಯವಸ್ಥೆಯಾಗಿದೆ. ಇದಕ್ಕೆ ಕಾರಣರು ವಯೋವೃದ್ಧರೂ, ಜ್ಞಾನವೃದ್ಧರೂ, ವಾಗ್ಮಿಗಳೂ ತ್ರಿವಿಧ ದಾಸೋಹಮೂರ್ತಿಗಳೂ, ಕಾಯಕಯೋಗಿಗಳೂ ಆದ ಶ್ರೀ ಮ.ನಿ.ಪ್ರ. ಡಾ|| ಶ್ರೀ ಶಿವಕುಮಾರ ಮಹಾಸ್ವಾಮಿಗಳವರು. ಮಠದಿಂದ ಘಟವಲ್ಲ, ಘಟದಿಂದ ಮಠ ಎಂಬ ಮಾತನ್ನು ಸಾಬೀತುಮಾಡಿ ತೋರಿದ್ದಾರೆ; ಮಠಾಧೀಶರಿಗೆಲ್ಲ ಆದರ್ಶಪ್ರಾಯರಾಗಿದ್ದಾರೆ.

ಧರ್ಮಗುರು ಬಸವಣ್ಣನವರ ಮಹಾಮೌಲ್ಯಗಳಾದ ಸತ್ಯ - ಶುದ್ಧ - ಕಾಯಕ ದಾಸೋಹಗಳನ್ನು ಅನುಷ್ಠಾನಕ್ಕೆ ತಂದ ಮಹಾಕೀರ್ತಿ ಶ್ರೀಗಳವರದು. ಬಡ ವಿದ್ಯಾರ್ಥಿಗಳ ಪಾಲಿಗಂತೂ ಶ್ರೀಗಳು ಎಂದೂ ಕುಂದದ ಚಿಲುಮೆಯಾಗಿದ್ದಾರೆ. ಒಡಲಿಂದ ಹಣ್ಣಾಗಿದ್ದರೂ ಹದಿಹರೆಯದವರೂ ನಾಚುವಂತೆ ಪಾದರಸ ಗುಣವುಳ್ಳವರಾಗಿದ್ದಾರೆ.

ಶ್ರೀಗಳಲ್ಲಿ ವಿಶೇಷ ಮಹತ್ವ ಪಡೆದಿರುವ ಅಂಶಗಳೆಂದರೆ ಸಮಯ ಪ್ರಜ್ಞೆ, ಸಮಾಜ ಪ್ರಜ್ಞೆ ಮತ್ತು ಕಾಯಕ ಪ್ರಜ್ಞೆಗಳು. ಈ ಪ್ರಜ್ಞೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಅವರ ಸಾಮಾಜಿಕ ಕಳಕಳಿ ಪ್ರಶಂಸನೀಯ. ಸಮಾಜಕ್ಕೆ ತಮ್ಮನ್ನೇ ಅರ್ಪಿಸಿಕೊಂಡಿರುವ ಸಮರ್ಪಣಾಭಾವ ಅನುಕರಣೀಯ.

ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದ ತುಮಕೂರು ಜಿಲ್ಲೆಯನ್ನು ಶಿಕ್ಷಣ ಕೇಂದ್ರವನ್ನಾಗಿ ಮಾಡಿದ ಶ್ರೇಯಸ್ಸು ಶ್ರೀಗಳಿಗೆ ಸಲ್ಲುತ್ತದೆ. ರಾಜ್ಯದ ಹಲವು ಹಳ್ಳಿಗಾಡಿನಲ್ಲಿ ಅನೇಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಜ್ಞಾನದಾಸೋಹವನ್ನು ನೀಡಿ ಜನರ ಬದುಕನ್ನು ರೂಪಿಸಿರುವ ರೂವಾರಿಯಾಗಿದ್ದಾರೆ.

ಹೀಗೆ ಆದರ್ಶಗಳೇ ರೂಪವೆತ್ತ ಶ್ರೀಗಳು ಬಸವಾದಿ ಪ್ರಮಥರ ಆಶೀರ್ವಾದದಿಂದ ಇನ್ನೂ ಬಹು ಕಾಲ ಆರೋಗ್ಯದಿಂದ ಇದ್ದು ನಾಡಿನ ಸಕಲ ಜೀವರಾಶಿಗಳನ್ನು ಹರಸುತ್ತಿರಲೆಂದು ಈ ಸಂದರ್ಭದಲ್ಲಿ ಆಶಿಸುತ್ತೇವೆ.

ಇಂತಹ ಪೂಜ್ಯರ ವಜ್ರಮಹೋತ್ಸವ ಆಚರಿಸುವುದು ನಾಡಿನ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಕರ್ತವ್ಯ ನಿರತರಾಗಿರುವ ಅಭಿಮಾನಿಗಳ ತಂಡ ಅವರ ಗೌರವಕ್ಕೆ ತಕ್ಕಂತೆ ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸಿ ಭಕ್ತಾದಿಗಳಿಗೆಲ್ಲ ಸಂತೋಷ ಉಂಟುಮಾಡಲೆಂದು ಹಾರೈಸುತ್ತೇವೆ.

ಮೊಕ್ಕಾಂ : ಬಸವತತ್ತ್ವ ಕೇಂದ್ರ,
ಬೆಂಗಳೂರು.

ಇತಿ ಬಸವ ಸ್ಮರಣೆಗಳು

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಶ್ರೀ ವೀರಸಿಂಹಾಸನ ಮಠ,
ಸುತ್ತೂರು ಸಂಸ್ಥಾನ,
ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠ,
ರಾಮಾನುಜ ರಸ್ತೆ, ಮೈಸೂರು - ೪

ಲಿಂಗ ನಡೆ, ಲಿಂಗ ನುಡಿಯ ಶ್ರೀಗಳು

ನಾಡಿನ ಪುಣ್ಯಚೇತನರೂ ಪರಮತಪೋಧನರೂ ಆದ ಸಿದ್ಧಗಂಗಾಶ್ರೀಗಳವರ ಅಮೃತ ಮಹೋತ್ಸವವನ್ನು ಅಪೂರ್ವ ಸಂಭ್ರಮೋತ್ಸಾಹಗಳಿಂದ ಭಕ್ತಸ್ತೋಮವು ಆಚರಿಸಲಿರುವುದು ಸಂತೋಷದಾಯಕ ಸಂಗತಿಯಾಗಿದೆ. ಅಪಾರ ಶ್ರದ್ಧಾ ಭಕ್ತಿ ಗೌರವಗಳ ಅದ್ಭುತ ಸಂಗಮವೆನಿಸಿದ ಆ ಉತ್ಸವದ ಸವಿನೆನಪಿಗಾಗಿ ಬೆಲೆಯುಳ್ಳ ಬೃಹದ್ಗ್ರಂಥವೊಂದನ್ನು ಸಮರ್ಪಿಸುತ್ತ ಶ್ರೀಗಳವರನ್ನು ಅಭಿವಂದಿಸುತ್ತಿರುವುದು ಅತ್ಯಂತ ಉಚಿತವಾಗಿದೆ.

ನಿರ್ಮಲಾಂತಃಕರಣರೂ, ನಿರಂಜನಮೂರ್ತಿಗಳೂ, ಸಿದ್ಧಗಂಗೆಯ ಸಿದ್ಧಪುರುಷರೂ ಆದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಶ್ರೀ ಕ್ಷೇತ್ರದ ಸೇವಾಕ್ಷೇತ್ರಗಳನ್ನು ಎಲ್ಲ ಕಡೆಗೂ ವಿಸ್ತರಿಸುತ್ತಾ, ವಿಶ್ವಧರ್ಮದ ಏಳ್ಗೆಗಾಗಿ ಸಮಸ್ತ ಮಾನವ ಜನಾಂಗದ ನೆಮ್ಮದಿಯ ಬಾಳ್ವೆಗಾಗಿ ನಿಸ್ವಾರ್ಥಭಾವದಿಂದ ಅವಿಶ್ರಾಂತವಾಗಿ ಅಹರ್ನಿಶಿ ಶ್ರಮಿಸುತ್ತಿರುವುದು ತುಂಬಾ ಶ್ಲಾಘನೀಯವಾಗಿದೆ. ಲಿಂಗಪೂಜಾ ತಪೋನಿಷ್ಠರೂ, ಶರಣ ತತ್ವಾನುಷ್ಠಾನ ಗರಿಷ್ಠರೂ, ತ್ರಿವಿಧ ದಾಸೋಹಿಗಳೂ ಆದ ಶ್ರೀಗಳವರು ಲಿಂಗದ ನಡೆ ಲಿಂಗದ ನುಡಿಗಳುಳ್ಳವರಾಗಿ ತಮ್ಮ ಸುದೀರ್ಘ ಆಯುಷ್ಯವನ್ನು, ಅಖಿಲ ತಪಶ್ಶಕ್ತಿಯನ್ನು ಮನುಕುಲದ ಉದ್ಧಾರಕ್ಕಾಗಿ ಧಾರೆಯೆರೆಯುತ್ತಿರುವುದು ಹರ್ಷದಾಯಕವಾಗಿದೆ.

"ಪಶ್ಯೇಮ ಶರದಶ್ಶತಂ, ಜೀವೇಮ ಶರದಶ್ಶತಂ" ಎಂಬ ಉಪನಿಷದ್ವಾಣಿಯಂತೆ ಶ್ರೀಗಳವರು ಶತಾಯುಷಿಗಳಾಗಿ ಇನ್ನೂ ಹೆಚ್ಚು ಕಾಲ ಈ ನಾಡಿಗೆ ಬೆಳಕು ಬೀರಲೆಂದೂ, ಅಮೃತ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ಅವರಿಗೆ ಅರ್ಪಿತವಾಗುತ್ತಿರುವ ಅಭಿನಂದನ ಗ್ರಂಥವೂ ಮೌಲಿಕವಾಗಿದ್ದು ಸಾಹಿತ್ಯ ಸಂಸ್ಕೃತಿಗಳ ಧರ್ಮದರ್ಶನಗಳ ದಿವ್ಯಾಮೃತವನ್ನೊಳಗೊಂಡ ಚೇಂಗೊಡವಾಗಿ ತುಂಬಿ ಬರಲೆಂದೂ ಹಾರೈಸುತ್ತೇನೆ.

ಇತ್ಯಾಶಿಷಃ

ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಶ್ರೀ ಮನ್ಮಹಾರಾಜ ನಿರಂಜನ ಶ್ರೀ ಜಗದ್ಗುರು
ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು,
ಮೂರುಸಾವಿರಮಠ,
ಹುಬ್ಬಳ್ಳಿ.

ಪರಮ ಪಾವನಶ್ರೀ

ಸಿದ್ಧಗಂಗೆಯ ಮೂರ್ತಿ
ಸಿದ್ಧಗಂಗೆಯ ಜ್ಯೋತಿ
ಸಿದ್ಧ ಸುಕುಮಾರ ಬೆಳಗಿಸಿಹನು ನಾಡಿನಲಿ
ಶುದ್ಧ ಸಂಸ್ಕೃತಿಯ ಪೂರ್ಣಜ್ಞ.

ಪರಮ ಪಾವನ ಶ್ರೀ ಸಿದ್ಧಗಂಗಾ ಕ್ಷೇತ್ರಾಧಿಪತಿಗಳಾದ, ತ್ರಿವಿಧ ದಾಸೋಹಮೂರ್ತಿಗಳಾದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ವಜ್ರ ಮಹೋತ್ಸವವನ್ನಾಚರಿಸುತ್ತಿರುವ ಸಂಗತಿ ತಿಳಿದು ನಮಗೆ ಅತೀವ ಸಂತಸವೆನಿಸಿದೆ.

ಪರಮಪೂಜ್ಯ ಶ್ರೀ ಗೋಸಲ ಸಿದ್ಧೇಶ್ವರರಿಂದ ಸಂಸ್ಥಾಪಿಸಲ್ಪಟ್ಟ ಈ ಪುಣ್ಯ ಕ್ಷೇತ್ರದಲ್ಲಿ ಶ್ರೀ ಶ್ರೀ ಉದ್ಧಾನ ಶಿವಯೋಗಿಗಳವರಿಂದ ಅಧಿಕಾರ ಪಡೆದ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಅಧಿಕಾರಾವಧಿಯ ಈ ೬೫ ವಸಂತಗಳಲ್ಲಿ ಶ್ರೀ ಕ್ಷೇತ್ರದ ಸರ್ವಾಂಗೀಣ ಪ್ರಗತಿಯೊಂದಿಗೇ, ನಾಡಿನ ಜನಮನದ ಉದ್ಧಾರಕ್ಕಾಗಿ ಅಹರ್ನಿಶಿ ಶ್ರಮಿಸಿದವರು.

ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿಗಳವರು ನಮ್ಮ ಶ್ರೀ ಜಗದ್ಗುರು ಮೂರುಸಾವಿರ ಮಠದೊಂದಿಗೆ ಮಧುರ ಬಾಂಧವ್ಯವನ್ನಿರಿಸಿಕೊಂಡ ಹಿರಿಯ ಚೇತನ. ಆಮಂತ್ರಣ ಸ್ವೀಕರಿಸಿ ಹಲವಾರು ಕಾರ್ಯಕ್ರಮಗಳಿಗೆ ದಯಮಾಡಿಸಿ, ನಮ್ಮನ್ನು ಶ್ರೀ ಕ್ಷೇತ್ರ ಸಿದ್ಧಗಂಗಾಕ್ಕೆ ಆಮಂತ್ರಿಸಿ ನಮ್ಮ ಮೇಲೆ ಪ್ರೀತಿ ತೋರಿಸಿದವರು. ಅವರು ಶ್ರೀ ಸಿದ್ಧಗಂಗಾ ಮಠದ ಇತಿಹಾಸದಲ್ಲಿ ಬೆಳಕಿನ ಯುಗವನ್ನೇ ನಿರ್ಮಾಣ ಮಾಡಿದರು. ಬಂದ ಕಷ್ಟಗಳನ್ನೆಲ್ಲ ಅವರು ಅಕ್ಷರಶಃ ಧೀರೋದಾತ್ತವಾಗಿ ಎದುರಿಸಿ ಗೆದ್ದವರು.

ಅವರ ಪ್ರೀತಿಯ ಕ್ಷೇತ್ರ ಶಿಕ್ಷಣ ಪ್ರಸಾರದ ಜೊತೆಗೆ ಮಹಾದಾಸೋಹ. ಅಂತೆಯೇ ನೂರಿಪ್ಪತ್ತರಷ್ಟು ಶಿಕ್ಷಣ ಸಂಸ್ಥೆಗಳು ಅವರ ದಣಿವರಿಯದ ಬದುಕಿನ ಸಾಧನೆಗಳಾಗಿ ಅನೇಕರ ಬಾಳ್ವೆಳಕಿಗೆ ಕಾರಣವಾಗಿವೆ. ಮಾನವೀಯತೆಯ ಮಂಗಳಕಾರರಾದ ಅವರ ಸಾಧನೆಗಳಿಗೆ ಕೊನೆಯಿಲ್ಲ. ಅವರ ಚಿತ್ತಭಿತ್ತಿಯಲ್ಲಿ ಇದೀಗ ಮತ್ತೆ ಭವ್ಯ ವಿದ್ಯಾರ್ಥಿನಿಲಯ, ಭವ್ಯ ಭೋಜನಶಾಲೆಗಳ ನಿರ್ಮಾಣ ಕಾರ್ಯ ನೆಲೆನಿಂತಿದೆ. ಹಸಿದೊಡಲಿಗೆ ಅನ್ನ, ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ ಜ್ಞಾನದಾಸೋಹ ಹೀಗೆ ಅವರದು ಅವಿರತ ತ್ರಿವಿಧ ದಾಸೋಹದ ಸತ್ಕಾರ್ಯ. ತನ್ಮೂಲಕ ಕ್ಷೇತ್ರದೇವತೆ ಶ್ರೀ ಶಿವಯೋಗಿ ಸಿದ್ಧಲಿಂಗೇಶ್ವರ ಪೂಜೆಯನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ಕೈಗೊಂಡವರು. ಜನಹಿತಕಾರ್ಯವೇ ಸ್ವಾಮಿ ಪೂಜೆಯೆಂದು ಬಲವಾಗಿ ನಂಬಿದವರು.

ಇಷ್ಟೊಂದು ಇಳಿವಯಸ್ಸಿನಲ್ಲೂ ಅವರಲ್ಲಿನ ಅದಮ್ಯ ಚೈತನ್ಯ, ದಣಿವರಿಯದ ದುಡಿಮೆ ಎಂತಹವರಲ್ಲೂ ನವಚೇತನ ತುಂಬಬಲ್ಲುದು. ಅವರ ಬದುಕೊಂದು ಅನುಕರಣೀಯ. ಅವರು ಜಾತಿ ಮತ ಕುಲ ಪಂಗಡಗಳ ಭೇದಗಳನ್ನು ದಾಟಿ ನಿಂತವರು. ಅಂತೆಯೇ ಇಂದು ಸಿದ್ಧಗಂಗಾ ಮಠವು ನಾಡಿನ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ರಂಗಗಳಲ್ಲಿ ಎದ್ದು ಕಾಣುವ ಕ್ಷೇತ್ರವಾಗಿದೆ. ಲೋಕ ಕಲ್ಯಾಣದಲ್ಲಿ ಆತ್ಮಕಲ್ಯಾಣವನ್ನು ಕಾಣುತ್ತಿರುವ ಅವರು ಸಮಕಾಲೀನ ಸಮಾಜದ ಭಾಗ್ಯ. ಅವರೊಂದಿಗಿನ ನಮ್ಮ ಒಡನಾಟವು ಅಭಿಮಾನದ ಸಂಗತಿ.

ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರದು ಪ್ರಾಚೀನ ವೇದದಿಂದ ಮತ್ತು ತತ್ವಜ್ಞಾನದಿಂದ ಹಿಡಿದು ಅತ್ಯಾಧುನಿಕ ತಂತ್ರಜ್ಞಾನದವರೆಗೆ ವಿಸ್ತಾರವಾದ ಶಿಕ್ಷಣ ಪ್ರಸಾರ ಕಾರ್ಯವಾಗಿದೆ. ೮೮ ವಸಂತಗಳ ಪುಣ್ಯ ಬದುಕಿನ ಶ್ರೀಗಳವರು ದೈವಭಕ್ತಿ, ಜೀವದಯೆ, ಆಧ್ಯಾತ್ಮ ಸಾಧನೆಗಳ ದಿವ್ಯ ಸ್ವರೂಪಿಗಳಾಗಿದ್ದಾರೆ. ದೀನರು ಹಾಗೂ ಹಳ್ಳಿಗಾಡಿನ ಜನರ ಬದುಕನೆತ್ತರಿಸಲು ಅವರ ಜೀವ ಹಣ್ಣಾಗಿದೆ. ಅಂತೆಯೇ ಅವರು ಗ್ರಾಮೀಣ ಜನರ ಪುಣ್ಯದ ಕಣ್ಣಾಗಿದ್ದಾರೆ. ಅವರ ಕಾರುಣ್ಯದ ದೃಷ್ಟಿಗೆ ಬಿದ್ದವರೆಲ್ಲ ಉದ್ಧಾರವಾಗಿದ್ದಾರೆ. ಶ್ರೀಗಳವರು ಒಂದು ಮೌನ ಸಾಮಾಜಿಕ ಕ್ರಾಂತಿಯ ಕಾರಣಪುರುಷರಾಗಿದ್ದಾರೆ.

ನಾವು ಕಂಡಂತೆ ಶ್ರೀ ಶ್ರೀಗಳವರು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಆಧ್ಯಾತ್ಮಿಕ ಪುರುಷರು. ಅಂತೆಯೇ ಅವರು ಶ್ರೀ ಸಿದ್ಧಗಂಗಾ ಕ್ಷೇತ್ರವನ್ನು ಕ್ರಿಯಾತ್ಮಕ ಆಧ್ಯಾತ್ಮಿಕ ಕೇಂದ್ರವನ್ನಾಗಿ ರೂಪಿಸಿದವರು. ವೇದ ಮತ್ತು ಸಂಸ್ಕೃತ ಪಾಠಶಾಲೆ ಪ್ರಾರಂಭಿಸುವ ಮೂಲಕ ಸೇವಾ ಸಮರ್ಪಣೆಯ ಶ್ರೀಕಾರ ಹಾಕಿದ ಅವರು ವಿದ್ಯಾರ್ಥಿ ನಿಲಯವನ್ನು ಜಗತ್ಪ್ರಸಿದ್ಧಗೊಳಿಸಿದರು. ಅದಕ್ಕಾಗಿ ಅವರು ಶ್ರೀಗಂಧದಂತೆ ಜೀವ ತೆಯ್ದವರು. ನಮಗೆ ಹಲವಾರು ಸಂದರ್ಭಗಳಲ್ಲಿ ಅನೇಕ ಅಮೂಲ್ಯ ಸಲಹೆ ಸೂಚನೆ ನೀಡಿದ ಹಿರಿಯರು.

ನಾವು ಕಂಡಂತೆ ಶ್ರೀಗಳವರದು ಅದ್ಭುತ ಸಂಘಟನಾ ಸಾಮರ್ಥ್ಯ. ಅವರ ಜನಹಿತ ಕಾರ್ಯಗಳು ದಿಗ್ಭ್ರಮೆಗೊಳಿಸುತ್ತವೆ. ಅವರು ಒಂದು ವ್ಯಕ್ತಿ ಅಲ್ಲ. ಒಂದು ಶಕ್ತಿ. ತಮ್ಮ ಗುರು ಪರಂಪರೆಯ ಸತ್ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದವರು. ಮಾನವ ಸಮುದಾಯಕ್ಕೆ ಅವರು ಕಳೆದ ೭೫ ವರ್ಷಗಳಿಂದಲೂ ನಿಸ್ವಾರ್ಥ ಮತ್ತು ನಿಷ್ಠೆಯ ಸೇವೆಯನ್ನು ತ್ರಿಕರಣಪೂರ್ವಕವಾಗಿ ಸಲ್ಲಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ಅವರ ಆಧ್ಯಾತ್ಮ ಚಿಂತನೆ ಅರ್ಥಪೂರ್ಣವಾದುದು.

ಶ್ರೀಗಳು ಸದಾಕಾಲವೂ ಶ್ರೀ ಸಿದ್ಧಗಂಗಾ ಮಠವನ್ನು ಜನ ಸಮುದಾಯದ ಮಠವನ್ನಾಗಿಸಿದವರು. ಇಲ್ಲಿನ ಪ್ರತಿಯೊಂದು ಸೇವಾ ಕಾರ್ಯದಲ್ಲೂ ಜನ ಸಾಮಾನ್ಯರ ಪಾಲಿರುತ್ತದೆ. ಸಾಮಾನ್ಯರಿಂದ ಹಿಡಿದು ಶ್ರೀಮಂತರವರೆಗೂ ಅದರಲ್ಲಿ ಪಾಲ್ಗೊಂಡಿದ್ದಾರೆ. ಇವರೆಲ್ಲರನ್ನೂ ಸಮಾನತೆಯಿಂದ ಕಂಡ ವಾತ್ಸಲ್ಯಮೂರ್ತಿ ಅವರು. ನೋಡಿದ ಕೂಡಲೇ ಭಕ್ತಿ ಭಾವಗಳನ್ನು ಎಂತಹವರಲ್ಲೂ ಉಂಟುಮಾಡಬಲ್ಲ ದಿವ್ಯವ್ಯಕ್ತಿತ್ವ ಅವರದು.

ಶ್ರೀಗಳವರ ವಜ್ರ ಮಹೋತ್ಸವವನ್ನು ಅತ್ಯಂತ ಕ್ರಿಯಾತ್ಮಕವಾಗಿಸಿ, ಸದಾ ಸ್ಮರಣೀಯವಾಗಿಸಲು ಶ್ರೀ ಸಿದ್ಧಗಂಗಾ ಕ್ಷೇತ್ರದ ಸದ್ಭಕ್ತರು ಪೂಜ್ಯರ ಅಪೇಕ್ಷೆಯಂತೆ ಹಲವಾರು ವಿಧಾಯಕ ಕಾರ್ಯಗಳನ್ನು ಕೈಗೊಂಡಿರುವುದು ಅತ್ಯಂತ ಸೂಕ್ತ ಹಾಗೂ ಸಕಾಲಿಕವಾಗಿದೆ. ಶ್ರೀಗಳವರ ಸಾಮಾಜಿಕ ಕಳಕಳಿ, ತ್ಯಾಗ, ಪರಿಶ್ರಮಗಳಿಗೆ ಸಮಾಜವು ಈ ತೆರನಾಗಿ ಋಣ ತೀರಿಸುವುದು ಒಂದು ಮಹಾಭಾಗ್ಯವೇ ಆಗಿದೆ. ಅದು ನಮಗೆ ಅತೀವ ಹರ್ಷವನ್ನು, ನೆಮ್ಮದಿಯನ್ನುಂಟುಮಾಡಿದೆ.

ಜನೋಪಯೋಗಿ ಕಾರ್ಯಗಳ ಅನುಷ್ಠಾನದ ಮೂಲಕ ಆಚರಿಸಲಿರುವ ಈ ವಜ್ರಮಹೋತ್ಸವಕ್ಕೆ ನಾವು ಸರ್ವರೀತಿಯ ಶುಭ ಕೋರುತ್ತೇವೆ. ತನ್ನಿಮಿತ್ತವಾಗಿ ಹಮ್ಮಿಕೊಳ್ಳಲಿರುವ ಎಲ್ಲಾ ಕಾರ್ಯಕ್ರಮಗಳೂ ಸುಂದರವಾಗಿ ಜರುಗಲಿ. ಕರುಣಾಮಯಿ ಹುಬ್ಬಳ್ಳಿ ಪುರದೊಡೆಯ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಹಾಗೂ ಶ್ರೀ ಸಿದ್ಧಗಂಗಾ ಕ್ಷೇತ್ರಾಧಿಪತಿ ಶ್ರೀ ಸ್ವಾಮಿ ಸಿದ್ಧಲಿಂಗೇಶ್ವರರ ಕೃಪಾಶೀರ್ವಾದದಿಂದ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿಗಳವರು ಶತವಸಂತಗಳಾಚೆಗಿನ ಪವಿತ್ರ ಬದುಕನ್ನು ಬಾಳಲೆಂದು ಈ ಮೂಲಕ ನಾವು ಸದಮಲಾಂತಃಕರಣದಿಂದ ಶುಭ ಹಾರೈಸುತ್ತೇವೆ. ಶ್ರೀ ಶ್ರೀಗಳವರ ದಿವ್ಯಾನುಭವದ ಜಾಗೃತಶಕ್ತಿ ನಮ್ಮೆಲ್ಲರನ್ನು ಎಚ್ಚರಿಸಲಿ.

ಇತಿ ಶಿವಂ

ಶ್ರೀ ಗುರು ಬಸವಲಿಂಗಾಯನಮಃ

ಶ್ರೀ ಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ - ಗದಗ

ಸ್ವಾಮಿ ಕುಲಕಲಶ

ಸಿದ್ಧಗಂಗಾ ಶ್ರೀಗಳು ಎಂದಾಕ್ಷಣ ತಕ್ಷಣ ಸ್ಮರಣೆಗೆ ಬರುವುದು ಆಜಾನುಬಾಹು ಎತ್ತರ, ಕಾಷಾಯ ನಿಲುವಂಗಿ ಧರಿಸಿದ, ಧೀರ ನಿಲುವಿನ ವ್ಯಕ್ತಿತ್ವ, ಭಸ್ಮೋದ್ಧೂಳನಗೊಂಡ ತುಂಬುಮುಖ, "ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ" ಎಂಬುದರ ಅರ್ಥದ ಸಾರ್ಥಕತೆ ಶ್ರೀಗಳಲ್ಲಿಯೇ ಕಾಣಬೇಕು. "ನಿಮ್ಮ ನೆನದಾಗಲೇ ಉದಯ, ನಿಮ್ಮ ಮರೆವಾದಾಗಲೇ ಅಸ್ತಮಾನ" ಎಂಬ ವಚನೋಕ್ತಿ ಇಂತಹ ವಿಭೂತಿ ಪುರುಷರನ್ನು ಕುರಿತೇ ಹೇಳಿರಬೇಕು. ಬಸವಾದಿ ಪ್ರಮಥರ ಪರಂಪರೆಯ ವಿರಕ್ತ ಸ್ವಾಮಿಗಳು ಹೇಗಿರಬೇಕು ಎಂಬುದಕ್ಕೆ ತಾವೇ ಒಂದು ಉದಾಹರಣೆಯಾಗಿ, ವಿರಕ್ತ ಮಠಗಳು ಹೇಗಿರಬೇಕು ಎಂಬುದಕ್ಕೆ ತಮ್ಮ ಮಠವನ್ನೇ ಮಾದರಿಯನ್ನಾಗಿಸಿದ ಪೂಜ್ಯರು ಸ್ವಾಮಿಗಳಿಗೆ ಸ್ವಾಮಿಗಳು.

ಒಂದು ಗುಡಿಸಲಿನ ದೀಪದಂತೆ ಪ್ರಾರಂಭವಾದ ಸಿದ್ಧಗಂಗಾ ಕ್ಷೇತ್ರದ ಕಾರ್ಯಗಳು ಇಂದು ಡಾ. ಶಿವಕುಮಾರ ಸ್ವಾಮಿಗಳ ಕಾಲದಲ್ಲಿ ಹಲವು ಹನ್ನೊಂದಾಗಿ ಸೂರ್ಯ ಪ್ರಕಾಶದಷ್ಟು ಉಜ್ವಲವಾಗಿ ಬೆಳಗುವುದರ ಹಿಂದೆ ಶ್ರೀಗಳ ಸತತಪರಿಶ್ರಮ, ಸಾಮಾಜಿಕ ಕಳಕಳಿ, ಮಾನವೀಯ ಅನುಕಂಪ ಎದ್ದು ಕಾಣುತ್ತಿದೆ. ಕೇವಲ ಎಂಭತ್ತು ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಪ್ರಸಾದ ನಿಲಯ ಇಂದು ನಾಲ್ಕುಸಾವಿರಕ್ಕೂ ಮಿಕ್ಕು ವಿದ್ಯಾರ್ಥಿಗಳಿಗೆ ಆಶ್ರಯ ಒದಗಿಸುತ್ತಿದೆ. ಶಿಶುವಿಹಾರದಿಂದ ಉನ್ನತ ಆಧುನಿಕ ತಾಂತ್ರಿಕ ಶಿಕ್ಷಣದವರೆಗೆ ತೊಂಭತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಯಿಸುತ್ತಿರುವುದು ಪವಾಡ ಸದೃಶ ಕಾರ್ಯವೆನ್ನಬೇಕು. ಇದೆಲ್ಲ ಹೇಳಿದರೆ ನಂಬುವಂತಹದಲ್ಲ, ಅವರು ಪ್ರತ್ಯಕ್ಷ ಮಾಡುತ್ತಿದ್ದಾರೆಂದು ನಂಬಬೇಕಷ್ಟೇ.

ಇಡೀ "ಸ್ವಾಮಿ ಕುಲಕ್ಕೆ" ಕಲಶಪ್ರಾಯವಾದ ಶ್ರೀಗಳ ಸಾಧನೆ, ರೋಮಾಂಚನವನ್ನುಂಟುಮಾಡುವಂತಹದು. ಮಕ್ಕಳಿಗೆ ಸ್ಕೂಲ ಪಾಠ ಮಾಡುವುದಿರಲಿ, ಪ್ರತಿನಿತ್ಯ ಮಠಕ್ಕೆ ಬಂದ ನೂರಾರು ಪತ್ರಗಳಿಗೆ ಉತ್ತರ ಬರೆಯುವುದಿರಲಿ, ಸಂದೇಶ ಕಳಿಸುವುದಿರಲಿ, ರಾಷ್ಟ್ರಮಟ್ಟದ ರಾಜಕೀಯ ಧುರೀಣರ ಸಭೆಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡುವುದಿರಲಿ, ಎಲ್ಲದರಲ್ಲೂ ಒಂದೇ ರೀತಿಯ ಲವಲವಿಕೆ, ಸರಳತೆ, ಸಹಜತೆಗಳನ್ನು ಬಣ್ಣಿಸಲು ಶಬ್ದಗಳಿಲ್ಲ. ಮಾತು - ಮನಂಗಳನ್ನು ಮೀರಿದ ವ್ಯಕ್ತಿತ್ವ ಹೊಂದಿದ ಶ್ರೀಗಳು ನಮ್ಮ ದಿನಮಾನದ, ನೂತನ ರೂಪದಲ್ಲಿರುವ ಪುರಾತನರು.

ಓಂ ಗುರು ಬಸವಲಿಂಗಾಯ ನಮಃ

ಶ್ರೀ ಚನ್ನಬಸವ ಪಟ್ಟದ ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ,
ಬೀದರ ಜಿಲ್ಲೆ.

ತ್ರಿವಿಧ ದಾಸೋಹ ಮೂರ್ತಿ ಶ್ರೀ ಸಿದ್ಧಗಂಗಾ ಶ್ರೀಗಳು

ಅಪ್ಪ ಬಸವಣ್ಣನವರ ವಾಣಿಯಂತೆ ಅನುಭಾವ ಎನ್ನುವುದು ನೆಲದ ಮರೆಯ ನಿಧಾನ. ಅನುಭಾವ ಎನ್ನುವುದು ಅಂತರಂಗದ ರತ್ನ....! ಅನುಭಾವ ಎಂಬುದು ಶಿಶುಕಂಡ ಕನಸಿನಂತೆ. ಇದು ಆತ್ಮವಿದ್ಯೆ. ತಾನಾರೆಂಬುದನ್ನು ಈ ವಿದ್ಯೆ ತೋರುವುದು ಬರೀ ಶಾಸ್ತ್ರಜಾಲದ ಶಿಕ್ಷಣ ವಿದ್ಯೆಯಲ್ಲ. ಆತ್ಮವಿದ್ಯೆಯಿಂದ ಮಾತ್ರ ಜಗತ್ಕಲ್ಯಾಣ, ಜನಕಲ್ಯಾಣ ಸಾಧ್ಯ ಎಂಬುದನ್ನು ಮನಗಂಡು ಅರಿವು ಆಚಾರ ಅನುಭಾವಗಳ ಸಂಗಮವಾಗಿ ಚರಜಂಗಮರಾಗಿ ಸೇವೆಗೈಯುತ್ತಿರುವವರು ತುಮಕೂರು ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು.

ಪೂಜ್ಯ ಶ್ರೀಗಳು ೧೯೩೦ ರಲ್ಲಿ ಸಂನ್ಯಾಸದೀಕ್ಷೆ ಪಡೆದು ೧೯೪೧ ರಲ್ಲಿ ಮಠಾಧ್ಯಕ್ಷರಾಗಿ ಅಂದಿನಿಂದ ಇಂದಿನವರೆಗೆ ತ್ರಿವಿಧದಾಸೋಹ ಮಾಡುತ್ತ ದೀನ ದಲಿತರ ಉದ್ಧಾರಗೈಯುತ್ತಿದ್ದಾರೆ. ಮಾತೃಹೃದಯಿಗಳಾಗಿರುವ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ತಮ್ಮ ಆಧ್ಯಾತ್ಮಿಕ ಅನುಭಾವದ ನುಡಿಗಳಿಂದ ಈ ಪ್ರಭಾ ವಲಯದಲ್ಲಿ ಅಸಂಖ್ಯಾತ ನಾಸ್ತಿಕ ಹೃದಯಗಳನ್ನು ಕೂಡ ಪರಿವರ್ತನೆಗೈದು ಅವರ ಹೃದಯ ಬಟ್ಟಲೊಳಗೆ ಭಕ್ತಿರಸವನ್ನು ತುಂಬಿ ಸನ್ಮಾರ್ಗ ತೋರಿದ್ದಾರೆ, ತೋರುತ್ತಲೇ ಇದ್ದಾರೆ. ಕಳೆದ ೭೫ ವರ್ಷಗಳಿಂದ ಪೂಜ್ಯಶ್ರೀಗಳು ಗೈದ ಸೇವೆಯನ್ನು ಸ್ಮರಿಸಿಕೊಳ್ಳಲು ಅವರ ಸಂನ್ಯಾಸ ಸ್ವೀಕಾರದ "ವಜ್ರ ಮಹೋತ್ಸವ"ವನ್ನು ಶ್ರೀ ಮಠದ ಹಳೆಯ ವಿದ್ಯಾರ್ಥಿಗಳು ಹಾಗೂ ಭಕ್ತರು ಆಚರಿಸಲು ನಿರ್ಧರಿಸಿರುವುದು ಸೂಕ್ತ ಹಾಗೂ ಸ್ತುತ್ಯವಾಗಿದೆ. ಶ್ರೀಗಳವರು ಸಮಾಜದ ಸರ್ವರಂಗದಲ್ಲಿಯೂ ಸುಧಾರಣೆ ಮಾಡಿರುತ್ತಾರೆ. ನಿಸ್ವಾರ್ಥ ಹಾಗೂ ನಿಷ್ಠೆಯಿಂದ ಸೇವೆಗೈದಿದ್ದಾರೆ. ಪೂಜ್ಯರ ಸಾಧನೆ ದೃಷ್ಟಿ ಹಾಗೂ ಶಬ್ದಗಳಿಗೆ ನಿಲುಕದು. ಆದರೂ ವಜ್ರ ಮಹೋತ್ಸವದ ಈ ಸಂದರ್ಭದಲ್ಲಿ ನಾಲ್ಕು ನುಡಿಪುಷ್ಪಗಳನ್ನು ಶ್ರೀಗಳ ಪಾದಕ್ಕರ್ಪಿಸುತ್ತಿದೆವು.

ಪಂಕದಲ್ಲಿ ಬಿದ್ದ ಮುಗ್ಧ ಪಶುವಿನಂತೆ ಲಕ್ಷಾಂತರ ಜನರು ಶಂಕೆಯಲ್ಲಿ ತೊಳಲುತ್ತಿರುವಾಗ ಕರುಣೆಯಿಂದ ಅವರ ಕೈಹಿಡಿದು ಮೇಲೆತ್ತಿದವರು. ಬಡವರ ದಲಿತರ ಮತ್ತು ಗ್ರಾಮೀಣ ಜನಸಮುದಾಯದ ಸೇವೆಯನ್ನೇ ತಮ್ಮ ಉಸಿರಾಗಿಸಿಕೊಂಡ ಪೂಜ್ಯ ಶ್ರೀಗಳು ಕರುಣ ಹೃದಯಿ, ತ್ಯಾಗಮಯಿಗಳು.

ಪೂಜ್ಯ ಶ್ರೀಗಳ ಕಾರ್ಯವ್ಯಾಪ್ತಿ ಅತ್ಯಂತ ವಿಶಾಲವಾದದ್ದು. ಶ್ರೀಗಳ ಅನುಭಾವದ ಸವಿಯುಂಡ ಲಕ್ಷಾಂತರ ಭಕ್ತರ ಹೃದಯಗದ್ದುಗೆಯ ಮೇಲೆ ಇವರೇ ಸಾಕ್ಷಾತ್ ದೇವರಾಗಿ ವಿರಾಜಿಸುತ್ತಿದ್ದಾರೆ. ಪೂಜ್ಯರು ನಿಷ್ಕಾಮ ಕರ್ಮಿಗಳಾಗಿ ಸೇವೆಗೈಯುತ್ತಿರುವ ತಪೋಮೂರ್ತಿಗಳು. ಧರ್ಮ, ಅಧ್ಯಾತ್ಮದ ಜ್ಯೋತಿಯನ್ನು ಮನ ಮನಕ್ಕೆ ಮನೆ ಮನೆಗೆ ಮುಟ್ಟಿಸುತ್ತಿರುವ ಧರ್ಮ ಪ್ರವರ್ತಕರು. ದಿನನಿತ್ಯ ಆರು ಸಾವಿರಕ್ಕೂ ಅಧಿಕ ಜಂಗಮರಿಗೆ ತ್ರಿವಿಧ ದಾಸೋಹ ಮಾಡುವ ದಾಸೋಹ ಮೂರ್ತಿಗಳು.

ಇಡೀ ಜಗತ್ತಿನ ಜನರು ಅಜ್ಞಾನ, ಅಂಧಶ್ರದ್ಧೆ, ಮೂಢಾಚಾರಗಳ ಅಂಧಕಾರದಲ್ಲಿ ಮುಳುಗಿದ್ದಾಗ ಧರ್ಮಜ್ಯೋತಿಯ ಪ್ರಕಾಶದಿಂದ ಪಾವನಗೊಳಿಸಿದ ಭರತ ಖಂಡದ ವಿಭೂತಿ ಪುರುಷರಲ್ಲೊಬ್ಬರಾದ ಪೂಜ್ಯರು ಮಹಾತಪಸ್ವಿಗಳಾಗಿದ್ದಾರೆ. ದಿನನಿತ್ಯ ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಸಾಕಿ, ಸಲುಹಿ, ಗುರುಪ್ರಸಾದವನ್ನು ಉಣಿಸಿ, ತಮ್ಮ ಅಮೃತವಾಣಿಯಿಂದ ತಣಿಸಿ ವಿದ್ಯಾ ಪ್ರಸಾರಗೈಯುತ್ತಿರುವ ಶ್ರೀಗಳ ಮಹಾಕರ್ತೃತ್ವ ಶಕ್ತಿಯನ್ನು ಎಷ್ಟು ಕೊಂಡಾಡಿದರೂ ಅತಿಶಯೋಕ್ತಿಯಾಗದು.

ಪೂಜ್ಯರ ಸಾಧನೆಯನ್ನು ಕಂಡು ನಾಡಿನ ಗಣ್ಯರು, ರಾಷ್ಟ್ರಪತಿ, ಮುಖ್ಯಮಂತ್ರಿ, ಆದಿಯಾಗಿ, ಅನೇಕ ವಿದ್ವಾಂಸರು, ಸಾಹಿತಿಗಳು, ಪೂಜ್ಯ ಸ್ವಾಮಿಗಳು, ಅನುಭಾವಿಗಳು ಸ್ವತಃ ತಾವೇ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಆಗಮಿಸಿ ಇಲ್ಲಿಯ ಭಾವೈಕ್ಯತೆಯ ದಿವ್ಯದರ್ಶನ, ಕಲ್ಯಾಣಮಯ ಪರಿಸರದ ದೃಶ್ಯ ನೋಡಿ ನಲಿದಾಡಿ ಮುಕ್ತ ಕಂಠದಿಂದ ಕೊಂಡಾಡಿದ್ದಾರೆ.

ಪರಮ ಪೂಜ್ಯ ಶ್ರೀ ಗೋಸಲ ಸಿದ್ಧೇಶ್ವರ ಶಿವಯೋಗಿಗಳು ಸ್ಥಾಪಿಸಿರುವ ಈ ಸಿದ್ಧಗಂಗಾ ಮಠವು ದಕ್ಷಿಣ ಭಾರತದ ಒಂದು ಹೆಮ್ಮೆಯ ಧಾರ್ಮಿಕ ಹಾಗೂ ಆಧ್ಯಾತ್ಮದ ಕೇಂದ್ರವಾಗಿದೆ. ಈ ಕ್ಷೇತ್ರ ನಿಸರ್ಗ ಸೌಂದರ್ಯದ ಮಡಿಲಲ್ಲಿರುವುದರಿಂದ ಇಲ್ಲಿ ಸದಾ ಹಚ್ಚ ಹಸಿರಿನ ವಾತವರಣವಿರುತ್ತದೆ. ಅಂತೆಯೇ ಲಕ್ಷಾಂತರ ಯಾತ್ರಾರ್ಥಿಗಳಿಗೆ ಆಕರ್ಷಣೆ ಮಾಡುವಂಥ ಶಾಂತಿಧಾಮ ಇದಾಗಿದೆ.

ಅಂಗ ಮೇಲೆ ಲಿಂಗವಿರುವವರೆಲ್ಲರನ್ನೂ ಸಂಗಮನಾಥ ಎಂಬೆ ಎನ್ನುವ ಬಸವವಾಣಿಯನ್ನು ಪೂಜ್ಯರು ಅಕ್ಷರಶಃ ಅಳವಡಿಸಿಕೊಂಡಿದ್ದಾರೆ. ಇವನಾರವ, ಇವನಾರವನೆನ್ನದೆ, ಇವ ನಮ್ಮವ ಇವ ನಮ್ಮವನೆಂದು ಎಲ್ಲರನ್ನೂ ಇಂಬಿಟ್ಟುಕೊಂಡು ಆಶ್ರಯ ನೀಡಿದವರು ಸಿದ್ಧಗಂಗಾ ಮಠದ ಶ್ರೀಗಳು. ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ ಜಲವೊಂದೇ ಶೌಚಾಚಮನಕ್ಕೆ ಕುಲವೊಂದೇ ತನ್ನತಾನರಿದವಂಗೆ ಎಂಬ ಮಾತನ್ನು ಪೂಜ್ಯ ಶ್ರೀಗಳು ಸಾಕಾರಗೊಳಿಸಿ, ಬಸವ ಜ್ಯೋತಿಯ ಬೆಳಕಿನಲ್ಲಿ ಲಕ್ಷಾಂತರ ಅಸ್ಪೃಶ್ಯ ಜನತೆಯ ಬದುಕನ್ನು ಪ್ರಜ್ವಲಮಾನವಾಗಿ ಬೆಳಗಿಸುತ್ತಲಿದ್ದಾರೆ. ಆತ್ಮಕುಲ ಒಂದೇ ಒಂದು. ಜಾತಿ ಎಂಬುದು ಕತ್ತಲೆಯಿದ್ದಂತೆ. ಧರ್ಮವು ಜ್ಯೋತಿಯಂತೆ. ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ ಎಂಬ ಸರ್ವಜ್ಞ ಶರಣರ ಪ್ರಶ್ನೆಯನ್ನು ಪೂಜ್ಯರು ಪುನರುಚ್ಚರಿಸಿ ಜಾತೀಯತೆಯ ತಿಮಿರವನ್ನು ತೊಡೆದು ಹಾಕಿ ಬಸವಜ್ಯೋತಿಯನ್ನು ಬೆಳಗಿಸುತ್ತ ಸಮತಾ ಪತಾಕೆಯನು ಬಾನೆತ್ತರಕ್ಕೆ ಹಾರಿಸುತ್ತಿದ್ದಾರೆ.

ದಲಿತರನ್ನು, ಹಿಂದುಳಿದ ವರ್ಗದವರೆಲ್ಲರನ್ನೂ ಕೂಡಲ ಸಂಗಮದೇವನ ಮಹಾಮನೆಯ ಮಕ್ಕಳೆಂದು ಭಾವಿಸಿ ಶ್ರೀ ಮಠದಲ್ಲಿ ಎಲ್ಲ ಮಕ್ಕಳಿಗೆ ಉಚಿತ ಪ್ರಸಾದ ಹಾಗೂ ವಸತಿ ಸೌಕರ್ಯ ಒದಗಿಸಿ ಅವರ ಭವಿಷ್ಯ ರೂಪಿಸುತ್ತಿದ್ದಾರೆ. ಕಳೆದ ೭೫ ವರ್ಷಗಳಿಂದ ಪೂಜ್ಯಶ್ರೀಗಳು ನಿಸ್ವಾರ್ಥ ಹಾಗೂ ಶ್ರದ್ಧೆಯಿಂದ ಗೈದ ಜಂಗಮಸೇವೆ ಅಪಾರ ಅನುಪಮ. ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಸಂನ್ಯಾಸ ದೀಕ್ಷೆ ಪಡೆದಾಗ ಕೇವಲ ೮೦ ವಿದ್ಯಾರ್ಥಿಗಳು ಶ್ರೀಮಠದ ಪಾಠಶಾಲೆಯಲ್ಲಿ ಓದುತ್ತಿದ್ದರು. ಆದರೆ ಇಂದು ಐದು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವುದು ಪೂಜ್ಯರ ಮಹತ್ಸಾಧನೆಗೆ ಜ್ವಲಂತ ಸಾಕ್ಷಿಯಾಗಿದೆ. ಜಂಗಮ ತೃಪ್ತಿಯೇ ಲಿಂಗಪೂಜೆ. ಜಂಗಮ ದಾಸೋಹವೇ ದೇವಧಾಮ. ಈ ಎಲ್ಲ ವಚನಗಳ ಅರ್ಥವು ಶ್ರೀ ಸಿದ್ಧಗಗಾ ಮಠದಲ್ಲಿ ಸಾಕಾರರೂಪ ತಾಳಿದೆ.

ಇಲ್ಲಿಯ ಸಿದ್ಧಲಿಂಗೇಶ್ವರರ ಯಾತ್ರಾ ಮಹೋತ್ಸವವು ಪ್ರತಿವರುಷ ಶಿವರಾತ್ರಿ ಸಂದರ್ಭದಲ್ಲಿ ೧೦ ದಿವಸಗಳ ಕಾಲ ನಡೆಯುತ್ತದೆ. ಈ ಜಾತ್ರಾ ಸಮಯದಲ್ಲಿ ಪ್ರತಿದಿನ ೧ ಲಕ್ಷಕ್ಕಿಂತ ಅಧಿಕ ಜನ ಭಕ್ತಾದಿಗಳು ಅನ್ನ ಪ್ರಸಾದ ಹಾಗೂ ಜ್ಞಾನ ಪ್ರಸಾದವನ್ನು ಸ್ವೀಕರಿಸುತ್ತಿದ್ದಾರೆ. ದಿನನಿತ್ಯ ಒಂದು ಲಕ್ಷ ಜನರಿಗೆ ಅನ್ನದಾಸೋಹ, .ಜ್ಞಾನದಾಸೋಹ ಮಾಡುವುದೆಂದರೆ ಇದೊಂದು ಪೂಜ್ಯರ ಪವಾಡ ಹಾಗೂ ಈ ಶತಮಾನದ ಅದ್ಭುತವೆಂದೇ ಹೇಳಬೇಕಾಗುತ್ತದೆ.

ದಯವೇ ಧರ್ಮದ ಮೂಲವೆಂದರುಹಿ, ಸಕಲ ಜೀವಾತ್ಮರಿಗೆ ಲೇಸನು ಬಯಸಿ ಸರ್ವಜನರ ಸುಖ, ಶಾಂತಿ, ನೆಮ್ಮದಿಗಾಗಿ ಅಹೋರಾತ್ರಿ ಶ್ರಮಿಸುತ್ತಿರುವ ೮೮ ವರ್ಷದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ನೂರು ವರುಷಕ್ಕಿಂತ ಹೆಚ್ಚುಕಾಲ ಬಾಳಿ ಜ್ಯೋತಿಯಂತೆ ಜಗತ್ತಿಗೆ ಬೆಳಕು ನೀಡುತ್ತ ಪ್ರಜ್ವಲಿಸಲಿ ಎಂದು ಈ ವಜ್ರ ಮಹೋತ್ಸವದ ಸುಸಂದರ್ಭದಲ್ಲಿ ಶುಭ ಹಾರೈಸುತ್ತೇವೆ.

ಇತಿ

ಶ್ರೀ ಚನ್ನಬಸವ ಪಟ್ಟದೇವರು

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಪಟ್ಟಾಧ್ಯಕ್ಷರು, ಶ್ರೀಮಠ ಸಾಣೇಹಳ್ಳಿ

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.

ಸ್ಥಿತ ಪ್ರಜ್ಞ

ಏಳೆಂಟು ವರ್ಷಗಳ ಹಿಂದಿನ ಘಟನೆ ಕಡೂರು ತಾಲ್ಲೂಕಿನ ಬಿಸಲೆರೆ ಗ್ರಾಮದಲ್ಲಿ ಒಂದು ಧಾರ್ಮಿಕ ಸಮಾರಂಭ. ಅದರ ಅಧ್ಯಕ್ಷತೆ ಶ್ರೀ ಸಿದ್ಧಗಂಗಾಕ್ಷೇತ್ರದ ಶ್ರೀ ಡಾ. ಶಿವಕುಮಾರ ಸ್ವಾಮಿಗಳವರದು. ಅಂದು ಬೆಳಗಿನಿಂದ ಸಂಜೆಯವರೆಗೆ ಬೇರೆ ಬೇರೆ ಉಪನ್ಯಾಸಕರ ಉಪನ್ಯಾಸ, ಸ್ವಾಮಿಗಳವರ ಆಶೀರ್ವಚನ. ನಮ್ಮದು ಮಧ್ಯಾಹ್ನ ಮೂರು ಘಂಟೆಗೆ ನಿಗದಿಯಾಗಿತ್ತು. ಸಕಾಲಕ್ಕೆ ಸರಿಯಾಗಿ ನಾವು ಆ ಊರಿಗೆ ಹೋದೆವು. ಊರ ಬೀದಿಗಳಲ್ಲಿ ತಳಿರು ತೋರಣಗಳಿದ್ದರೂ ನಮ್ಮನ್ನು ಸ್ವಾಗತಿಸುವವರ ಸುದ್ದಿಯಿಲ್ಲ. ಎಲ್ಲೆಡೆ ಶ್ಮಶಾನ ಮೌನ. ಅವರಿವರನ್ನು ಕೇಳಿಕೊಂಡು ಕಾರ್ಯಕ್ರಮದ ವೇದಿಕೆಗೆ ಬಂದರೆ ಅಲ್ಲಿಯೂ ಹೆಚ್ಚು ಜನರಿಲ್ಲ. ಕಾರ್ಯಕ್ರಮ ಇಲ್ಲವೇ ? ಯಾಕೆ ಜನರಿಲ್ಲ ? ಏನಾಗಿದೆ ಎಂದು ಆಶ್ಚರ್ಯದಿಂದ ಕೇಳಿದೆವು. ಕಾರ್ಯಕ್ರಮ ಇದೆ. ಬೆಳಿಗ್ಗೆ ಸಿದ್ಧಗಂಗಾ ಸ್ವಾಮಿಗಳು ಬಂದವರು ಕಾರಿನಿಂದ ಕೆಳಗಿಳಿಯಲಿಲ್ಲ. ಕಾರ್ಯಕರ್ತರು ಸ್ವಾಗತಿಸಿ ಕರೆತರುವ ಮೊದಲೇ ಸಿಟ್ಟಿನಿಂದ ವಾಪಸ್ ಹೋದರಂತೆ. ಮತ್ತೆ ಅವರನ್ನು ಕರೆದುಕೊಂಡು ಬರಲು ಸಿದ್ಧಗಂಗೆಗೆ ಹೋಗಿದ್ದಾರೆ. ಸ್ವಾಮಿಗಳು ಬರಲು ಒಪ್ಪಿದ್ದಾರಂತೆ. ಅವರು ಬಂದ ನಂತರವೇ ಕಾರ್ಯಕ್ರಮ ಪ್ರಾರಂಭವಾಗುವುದು ಎಂದು ಅಲ್ಲಿದ್ದ ಹಿರಿಯರೊಬ್ಬರು ಹೇಳಿದರು.

ಸಿದ್ಧಗಂಗಾ ಶ್ರೀಗಳವರು ತುಂಬಾ ಸಮಾಧಾನದ ಸ್ವಭಾವದವರು; ಶಾಂತಮೂರ್ತಿಗಳು. ಅಂಥವರು ಸಿಟ್ಟಿಗೇಳುವಂಥ ಯಾವ ಘಟನೆ ನಡೆಯಿತು ? ಎಂದು ಆ ಹಿರಿಯರನ್ನು ಕೇಳಿದೆವು. ಕೆಲವು ಯುವಕರು ಸ್ವಾಮಿಗಳಿಗೆ ಬೇಸರವಾಗುವಂತೆ ನಡೆದುಕೊಂಡರೆಂಬ ಊಹಾಪೋಹಗಳಿವೆ. ಖಚಿತ ಸಂಗತಿ ಏನೆಂದು ಯಾರಿಗೂ ಗೊತ್ತಿಲ್ಲ. ಕರೆಯಲು ಹೋಗಿರುವವರು ಬಂದ ನಂತರವೇ ಸತ್ಯವೇನೆಂದು ತಿಳಿಯಬೇಕು ಎಂದು ಉತ್ತರಿಸಿದರು. ವಿಷಯ ಏನೇ ಇರಲಿ, ಅವರು ಬರುವವರೆಗೆ ಸುಮ್ಮನೆ ಕೂರುವುದು ಬೇಡ. ಕಾರ್ಯಕ್ರಮ ಪ್ರಾರಂಭಿಸೋಣ ಎಂದು ಹೇಳಿ ಅಲ್ಲಿದ್ದ ಮಕ್ಕಳಿಂದ ಹಾಡುಗಳನ್ನು ಹೇಳಿಸಲಾರಂಭಿಸಿದೆವು. ಹಾಡು ಕೇಳಿ ಜನರು ತಾವಾಗಿಯೇ ಬಂದು ಕೂರಲಾರಂಭಿಸಿದರು. ಸದ್ದಿಲ್ಲದೆ ಸಭೆ ಪ್ರಾರಂಭವಾಯಿತು. ಉಪನ್ಯಾಸಕರು ತಮ್ಮ ಉಪನ್ಯಾಸದಿಂದ ಜನಮನವನ್ನು ಸೂರೆಗೊಂಡರು. ಸಭೆ ಪ್ರಾರಂಭವಾದ ಒಂದೂವರೆ ಘಂಟೆಯ ನಂತರ ಸಿದ್ಧಗಂಗಾ ಶ್ರೀಗಳವರು ದಯಮಾಡಿಸಿದರು. ಅವರ ಆಗಮನದಿಂದ ಜನರಲ್ಲಿ ಮಿಂಚಿನ ಸಂಚಾರವಾದಂತಾಯಿತು. ಸಭಿಕರೆಲ್ಲರೂ ಹರ್ಷೋದ್ಗಾರದಿಂದ ಚಪ್ಪಾಳೆ ತಟ್ಟಿದರು. ಸಭೆಗೆ ಜೀವ ಬಂದಂತಾಯಿತು. ಏನೂ ನಡೆದಿಲ್ಲವೇನೋ ಎಂಬಂತೆ ಶಾಂತವಾಗಿ ಕಾರ್ಯಕ್ರಮ ಮುಂದುವರೆಯಿತು.

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ
ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು.
ಸತ್ಯವೆಂಬ ಕೊರಲಗಸೆ ಕಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ, ಕೂಡಲ ಸಂಗಮದೇವಾ.

ಬಸವಣ್ಣನವರ ಈ ವಚನದ ಭಾವದಂತೆ ಸತ್ಯಮಾರ್ಗ ಹಿಡಿದ ಆ ಭಕ್ತರು ಗುರುಗಳ ಮನಸ್ಸನ್ನು ಒಲಿಸಿ ಅವರನ್ನು ಮತ್ತೆ ತಮ್ಮೂರಿಗೆ ಕರೆತರುವಲ್ಲಿ ವಿಜಯಶಾಲಿಗಳಾಗಿದ್ದರು. ಅಂದಿನ ಸಭೆಯಲ್ಲಿ ಸಿದ್ಧಗಂಗಾ ಸ್ವಾಮಿಗಳು ಏನು ಹೇಳುತ್ತಾರೆ, ಹೇಗೆ ಮಾತನಾಡುತ್ತಾರೆ ? ಎಂಬ ಕುತೂಹಲ ಜನರಿಗಿತ್ತು. ಸ್ವಾಮೀಜಿಯವರು ಎದ್ದು ನಿಂತರು. ಸಭೆ ನಿಶ್ಶಬ್ದ. ಶ್ರೀಗಳವರು ತಮ್ಮ ಕಂಚಿನ ಕಂಠದಿಂದ ಆಡಿದ ನುಡಿಗಳು ಬೋಧಪ್ರದವಾಗಿದ್ದುವು. ಇಂದು ಜಗತ್ತಿಗೆ, ಜನರಿಗೆ ಶಾಂತಿ ಬೇಕಾಗಿದೆ. ಆ

ಶಾಂತಿ ದೊರೆಯುವುದು ಬಸವಣ್ಣ ಮತ್ತು ಅವರ ಸಮಕಾಲೀನ ಶರಣರ ವಚನ ಸಾಹಿತ್ಯದ ಅಧ್ಯಯನ, ಅನುಷ್ಠಾನದಿಂದ ಮಾತ್ರ. ಇವನಾರವನೆನ್ನದೆ ಇವ ನಮ್ಮವನೆನ್ನುವ ಮಧುರ ಆತ್ಮೀಯತೆ ಸರ್ವರಲ್ಲಿಯೂ ಬೆಳೆದು ಬರಬೇಕು. ಆಗ ಜಾತೀಯತೆಯ ದುರ್ಭಾವನೆಗಳು ಮರೆಯಾಗುತ್ತವೆ. ಶಾಂತಿ ಕದಡಲು ಜಾತೀಯ ದುರ್ಭಾವನೆಗಳೇ ಕಾರಣ. ಆದುದರಿಂದ ಜಾತೀಯತೆಯ ದುರ್ಭಾವನೆಗಳನ್ನು ಮನದಿಂದ ಕಿತ್ತೆಸೆದು, ಸೌಹಾರ್ದದಿಂದ ಎಲ್ಲರೂ ಒಂದಾಗಿ ಬಾಳಬೇಕು. ಕಾಗೆ ಕೋಳಿಗಳಿಂದಲೂ ಮಾನವ ಕಲಿಯಬೇಕಾದುದು ಸಾಕಷ್ಟಿದೆ. ಶರಣರು ಕಾಯಕವೇ ಕೈಲಾಸ ಎಂದರು. ಅಂಥ ಕಾಯಕ ಶ್ರದ್ಧೆ ಜನರಲ್ಲಿ ಬರಬೇಕು. ಆತ್ಮಸಾಕ್ಷಾತ್ಕಾರಕ್ಕೆ ಇಷ್ಟಲಿಂಗ ಪೂಜೆಯನ್ನು ಶ್ರದ್ಧೆಯಿಂದ ಮಾಡಬೇಕು. ಆಗ ಜನರಿಗೆ ಶಾಂತಿ ದೊರೆತು ಜಗತ್ತಿನಲ್ಲಿ ಶಾಂತಿ ನೆಲೆಸುತ್ತದೆ ಎಂಬ ಸ್ವಾಮೀಜಿಯವರ ನುಡಿಮುತ್ತುಗಳು ಜನರನ್ನು ಮಂತ್ರಮುಗ್ಧರನ್ನಾಗಿಸಿದವು.

ಬೆಳಗಿನ ಕಹಿ ಘಟನೆಯ ಪ್ರಸ್ತಾಪ ಅಪ್ಪಿತಪ್ಪಿಯೂ ಶ್ರೀಗಳವರ ಮಾತಿನಲ್ಲಿ ಬರಲಿಲ್ಲ. ಅವರ ಆಶೀರ್ವಚನದಲ್ಲಿ ಆವೇಶವಾಗಲಿ, ಉದ್ವೇಗವಾಗಲಿ ಇರಲಿಲ್ಲ. ಸುಮಾರು ಒಂದು ತಾಸು ನಿರರ್ಗಳವಾಗಿ ಮಾತನಾಡಿ ಜನರ ಮನಸ್ಸು ತಿಳಿಯಾಗುವಂತೆ, ವಿಚಾರ ಪುಷ್ಪಗಳು ಅರಳುವಂತೆ ಮಾತನಾಡಿದರು. ಸಭೆಯುದ್ದಕ್ಕೂ ಅವರು ಕಣ್ಣುಮುಚ್ಚಿ ಕೂತಿದ್ದರು. ನಿಂತು ಮಾತನಾಡುವಾಗಲೂ ಕಣ್ಣುಗಳು ಮುಚ್ಚಿದ್ದವು. ಸ್ವಾಮೀಜಿಯವರಿಗೆ ಆಯಾಸವಾಗಿರುವುದರಿಂದ ಕಣ್ಣು ಮುಚ್ಚಿರಬಹುದೆಂಬ ಭಾವ ಜನರಿಗೆ ಬಂದಿರಬಹುದು. ಆದರೆ ನಾವು ಹಲವು ಸಭೆಗಳಲ್ಲಿ ಗಮನಿಸಿರುವಂತೆ ಅದು ಅವರ ಸಹಜ ಸ್ವಭಾವ. ಅವರ ಉತ್ಸಾಹಕ್ಕೆ ವಿಚಾರಗಳಿಗೆ ದಣಿಲಿಕೆ ಎಂಬುದು ಇಲ್ಲವೇ ಇಲ್ಲ. ಬಹುಶಃ ಅವರು ಹೊರಗಣ್ಣನ್ನು ಮುಚ್ಚಿ ಒಳಗಣ್ಣನ್ನು ಸದಾ ತೆರೆದು ಶಿವನೊಡನೆ ಅನುಸಂಧಾನ ಮಾಡುತ್ತಿರಬೇಕು. ಹಾಗಾಗಿಯೇ ಅವರ ನಾಲಗೆಯಿಂದ ಒರಟು ಪದಗಳು ಬರುವುದು ತುಂಬಾ ಅಪರೂಪ. ನಾವು ಹಲವಾರು ಸಂದರ್ಭಗಳಲ್ಲಿ ಪೂಜ್ಯ ಸ್ವಾಮೀಜಿಯವರನ್ನು ತುಂಬಾ ಹತ್ತಿರದಿಂದ ನೋಡಿದ್ದೇವೆ. ಅವರ ಸ್ವಭಾವವನ್ನು ಗಮನಿಸಿದ್ದೇವೆ. ಅವರು ಸ್ಥಿತಪ್ರಜ್ಞರು, ಸಮಾಧಾನ ಚಿತ್ತದವರು, ಮುಗ್ಧ ಮನೋಭಾವದವರು. ಮಾತೃಹೃದಯಿಗಳು, ಮಕ್ಕಳ ಮನಸ್ಸುಳ್ಳವರು.

ಸ್ವಾಮೀಜಿಯವರು ಅಧ್ಯಯನಶೀಲರು. ಜನಪರ ಕಳಕಳಿಯುಳ್ಳವರು. ಒಮ್ಮೆ ಅನಿರೀಕ್ಷಿತವಾಗಿ ಸಿದ್ಧಗಂಗಾ ಶ್ರೀಮಠಕ್ಕೆ ಹೋಗಿದ್ದೆವು. ಪೂಜ್ಯರು ಭಕ್ತರೊಂದಿಗೆ ವಿಚಾರ ವಿನಿಮಯ ಮಾಡುತ್ತ ಕೂತಿದ್ದರು. ಒಬ್ಬ ತಾಯಿ ತನ್ನ ಮಗುವಿನ ಅನಾರೋಗ್ಯದ ವಿಚಾರ ತಿಳಿಸಿ ತಾವು ಆಶೀರ್ವದಿಸಬೇಕೆಂದು ಬೇಡಿಕೊಂಡಳು. ಸ್ವಾಮೀಜಿಯವರು ತಾಳ್ಮೆಯಿಂದ ಆ ತಾಯಿಯ ಮಾತುಗಳನ್ನು ಕೇಳಿ "ದೇವರು ಒಳ್ಳೆಯದು" ಮಾಡಲಿ ಎಂದು ವಿಭೂತಿ ಗಟ್ಟಿಯನ್ನು ಆ ತಾಯಿಗೆ ನೀಡಿದರು. ಆ ತಾಯಿ ಆನಂದಬಾಷ್ಪ ಸುರಿಸುತ್ತಾ ನಮಸ್ಕರಿಸಿ ಎದ್ದು ಹೋದಳು. ಅಲ್ಲಿದ್ದ ಬಹು ಜನರು ತಮ್ಮ ತೊಂದರೆಗಳನ್ನು ಹೇಳಿಕೊಂಡು ಪೂಜ್ಯರಿಂದ ಆಶೀರ್ವಾದ ಪಡೆಯುತ್ತಿದ್ದರು. ಸ್ವಾಮೀಜಿಯವರು ಬೇಸರಗೊಳ್ಳದೆ ಭಕ್ತರನ್ನು ಸಾಂತ್ವನಗೊಳಿಸುವ ವಿಧಾನ ಬೆರಗುಗೊಳಿಸುವಂತಿತ್ತು. ಅವರು ಆಳವಾದ ಅಧ್ಯಯನ ಮಾಡಿದ್ದರೂ ಅದರ ಪ್ರದರ್ಶನ ಮಾಡದೆ, ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ ಇತರ ಸ್ವಾಮಿಗಳವರಿಗೆ ಮಾರ್ಗದರ್ಶನವೀಯುವಂತಹುದಾಗಿದೆ.

ಯೋಗ್ಯವ್ಯಕ್ತಿಗೆ ಸಮಾಜ ಸೇವೆಯ ಸದವಕಾಶಗಳು ಲಭ್ಯವಾದರೆ ಏನೆಲ್ಲಾ ಮಾಡಬಹುದೆಂಬುದಕ್ಕೆ ಡಾ. ಶ್ರೀ ಶಿವಕುಮಾರ ಸ್ವಾಮಿಗಳವರು ಸಾಕ್ಷಿಯಾಗಿದ್ದಾರೆ. ಮನುಷ್ಯನಿಗೆ ಅನ್ನಕ್ಕಿಂತ ಅರಿವು ಮುಖ್ಯ ಎಂಬುದನ್ನರಿತ ಶ್ರೀಗಳವರು ಅನ್ನ ದಾಸೋಹದೊಂದಿಗೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಸಹಸ್ರ ಸಹಸ್ರ ಮಕ್ಕಳಿಗೆ ಜ್ಞಾನ ದಾಸೋಹ ನೀಡಿ ಅವರ ಬಾಳಿಗೆ ಬೆಳಕಾಗಿರುವುದು ಮಹತ್ವದ ಘಟನೆಗಳಲ್ಲೊಂದು. ಸಾಂಪ್ರದಾಯಿಕ ಶಿಕ್ಷಣದೊಂದಿಗೆ ನೈತಿಕ ಶಿಕ್ಷಣವನ್ನು ಶ್ರೀಗಳವರು ನೀಡುತ್ತಿರುವುದು ಅನುಕರಣೀಯವಾದುದಾಗಿದೆ. ಸಾಮೂಹಿಕ ಪ್ರಾರ್ಥನೆಯಲ್ಲಿ ತಾವೂ ಭಾಗವಹಿಸಿ ಮಕ್ಕಳ ಮನಸ್ಸನ್ನು ಹದಗೊಳಿಸುವ ವಿಧಾನ ನಮ್ಮ ಗಮನ ಸೆಳೆದ ಪ್ರಮುಖ ಅಂಶವಾಗಿದೆ. ಅಂತೆಯೇ ಬಸವಾದಿ ಶಿವಶರಣರ ವಿಶ್ವಮಾನ್ಯ ಸಂದೇಶಗಳನ್ನು ನಾಟಕ ಆಶೀರ್ವಚನದ ಮೂಲಕ ಜನಮನದಲ್ಲಿ ಬಿತ್ತುತ್ತಿರುವ ಕಾರ್ಯ ನಮಗೆ ಹೆಚ್ಚಿನ ಖುಷಿ ಕೊಟ್ಟಿದೆ. ವ್ಯಕ್ತಿ ತನ್ನನ್ನು ತಾನು ಸಮಾಜ ಸೇವೆಗೆ ಸಮರ್ಪಿಸಿಕೊಂಡರೆ ಭಕ್ತರು ತ್ರಿಕರಣಪೂರ್ವಕವಾಗಿ ಏನೆಲ್ಲವನ್ನು ಧಾರೆಯೆರೆಯಲು ಹಿಂದೆ ಮುಂದೆ ನೋಡುವುದಿಲ್ಲ ಎಂಬುದಕ್ಕೆ ಸಿದ್ಧಗಂಗಾ ಮಠದ ಉತ್ತರೋತ್ತರ ಬೆಳವಣಿಗೆ ನಿದರ್ಶನವಾಗಿದೆ.

ಐತಿಹಾಸಿಕ ಮಹತ್ವ ಪಡೆದಿರುವ ಸಿದ್ಧಗಂಗಾ ಕ್ಷೇತ್ರ ಡಾ. ಶ್ರೀ ಶಿವಕುಮಾರ ಸ್ವಾಮಿಗಳವರ ನೇತೃತ್ವದಲ್ಲಿ ಹೊಸ ಆಯಾಮ ಪಡೆದಿರುವುದನ್ನು ಯಾರೂ ಮರೆಯುವಂತಿಲ್ಲ. ಸಿದ್ಧಗಂಗಾ ಕ್ಷೇತ್ರಕ್ಕೆ ಸುಂದರ ಪರಿಸರ ಒಂದು ವರವಾಗಿ ಪರಿಣಮಿಸಿದರೆ ಅದಕ್ಕೆ ಪೂರಕವಾಗಿ ಗುರು ಪರಂಪರೆಯಿದೆ. ಹೀಗಾಗಿ ಸಿದ್ಧಗಂಗೆ ನಾಡಿನ ಉದ್ದಗಲಕ್ಕೂ ಹೆಸರುವಾಸಿಯಾಗಿದೆ. ಕರ್ನಾಟಕದ ಮಠ ಪೀಠಗಳು ಅನ್ನದಾಸೋಹದ ಜೊತೆಯಲ್ಲಿ ಜ್ಞಾನದಾಸೋಹಕ್ಕೆ ನೀಡುತ್ತ ಬಂದಿರುವ ಪ್ರೋತ್ಸಾಹ ಇತಿಹಾಸದ ಪುಟಗಳಲ್ಲಿ ದಾಖಲಿಸುವಂತಹುದಾಗಿದೆ. ಅಂಥ ಮಠಗಳಲ್ಲಿ ಸಿದ್ಧಗಂಗಾ ಪೀಠಕ್ಕೆ ವಿಶೇಷ ಮಹತ್ವವಿದೆ. ಅಲ್ಲಿ ಪ್ರತಿದಿನ ಸಹಸ್ರಾರು ವಿದ್ಯಾರ್ಥಿಗಳು ಪ್ರಸಾದ ಸ್ವೀಕರಿಸಿ ಬಾಳಿಗೆ ಬೆಳಕು ಪಡೆಯುತ್ತಿದ್ದಾರೆ. ಒಮ್ಮೊಮ್ಮೆ ಉಂಡ ಮನೆಗೆ ದ್ರೋಹ ಬಗೆಯುವ ಕೃತಘ್ನ ಜನರಿಂದಾಗಿ ಸ್ವಾಮೀಜಿಯವರು ನೋವುಣ್ಣುವ ಸಂದರ್ಭಗಳು ಬಂದಿದ್ದರೂ ಅವರು ಸ್ತುತಿನಿಂದೆಗಳು ಶಿವಪ್ರಸಾದವೆಂದು ಭಾವಿಸಿ ತಮ್ಮ ಸೇವೆಯನ್ನು ಯಥಾರೀತಿ ಮುಂದುವರಿಸಿರುವುದು ಗಮನಾರ್ಹ.

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠಕ್ಕೂ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳವರಿಗೂ ಮೊದಲಿನಿಂದಲೂ ತುಂಬಾ ವಿಶ್ವಾಸ. ಅದರಲ್ಲೂ ನಮ್ಮ ಪರಮಾರಾಧ್ಯ ಗುರುಗಳಾಗಿದ್ದ ಲಿಂ|| ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಬಗ್ಗೆ ಸಿದ್ಧಗಂಗಾ ಶ್ರೀಗಳವರಿಗೆ ವಿಶೇಷ ಒಲವು. ಅದು ಕಾರಣವೇ ಬಹುತೇಕ ತರಳಬಾಳು ಹುಣ್ಣಿಮೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಅಮೃತವಾಣಿಯ ಮೂಲಕ ಭಕ್ತರ ಬದುಕಿಗೆ ಬೆಳಕು ಕರುಣಿಸಿದ್ದಾರೆ. ನಮ್ಮ ಲಿಂ. ಗುರುಗಳವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನುಡಿದ ನುಡಿಗಳು ಉಭಯತರ ಪ್ರೀತಿ ವಿಶ್ವಾಸಗಳ ದ್ಯೋತಕಗಳಾಗಿವೆ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಸಮಯಪ್ರಜ್ಞೆ, ಸಮಯ ಪೋಷಣೆಯ ಪ್ರತೀಕ. ಲಿಂಗೈಕ್ಯ ಮಹಾಸ್ವಾಮಿಗಳವರ ಜೀವನ ಶರಣ ಧರ್ಮದ ಪ್ರಯೋಗಶಾಲೆ, ಯಾವ ಶರಣಧರ್ಮ ಜಗತ್ತಿಗೆ ಬೇಕಾಗಿದೆಯೋ, ಮನುಕುಲ ಆ ಧರ್ಮವನ್ನು ಆಶ್ರಯಮಾಡಿ ಉದ್ಧಾರವಾಗಬೇಕಾಗಿದೆಯೋ, ವಿಶ್ವಶಾಂತಿ ಸ್ಥಾಪಿತವಾಗಬೇಕಾಗಿದೆಯೋ ಅಂಥಾ ಧರ್ಮವನ್ನು ತಾವೂ ಮೈಗೂಡಿಸಿಕೊಂಡು, ಜೀರ್ಣಿಸಿಕೊಂಡು ಅಂಥ ಧರ್ಮವನ್ನು ಪ್ರಚಾರ ಮಾಡುವ ಸಲುವಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಂಥ ಮಹಾಶಯರು.

ಲಿಂಗೈಕ್ಯ ಮಹಾಸ್ವಾಮಿಗಳವರು ಹೃದಯವಂತಿಕೆ ಉಳ್ಳಂಥ ವ್ಯಕ್ತಿ. "ಹೃದಯವಂತಿಕೆ" ಅವರ ಜೀವನ ತತ್ವ. ಹಾಗಂದ್ರೇನು ? ಯಾರು ಕೆಳಗೆ ಬಿದ್ದಿದ್ದಾರೋ, ಶೋಷಿತರೋ, ತಿರಸ್ಕೃತರೋ ಅವರಿಗೆ ಆತ್ಮವಿಶ್ವಾಸ ತುಂಬಲು ಪ್ರಯತ್ನಶೀಲರಾಗಬೇಕು. ಜೀವನ ಒಂದು ಮಹಾ ವರ, ಅದನ್ನು ಪ್ರೀತಿ ಮಾಡಬೇಕು; ಅದನ್ನು ಪಾಲನೆ ಮಾಡಬೇಕು. ಇದೇ ಪ್ರಕಾರವಾಗಿ ಜೀವನ ಮಹಾ ವರ ಅನ್ನುವ ತತ್ವವನ್ನು ಸಾಮಾನ್ಯ ಜನತೆಯಲ್ಲಿ, ದೀನರಲ್ಲಿ, ದಲಿತರಲ್ಲಿ ಬಿದ್ದುಹೋಗಿದ್ದವರಲ್ಲಿ, ಮಾನವತ್ವ ಕಳೆದುಕೊಂಡಿದ್ದವರಲ್ಲಿ ತುಂಬಿದರು. ಸ್ಫೂರ್ತಿಯನ್ನು ಉಂಟುಮಾಡಿದರು. ಆತ್ಮವಿಶ್ವಾಸವನ್ನು ತಂದುಕೊಟ್ಟರು.... ಅವರು ಜೀವನ ಕಲಾ ಪೋಷಕರಾಗಿ ಮಹತ್ತರವಾದಂಥ ಕ್ರಾಂತಿಯನ್ನು ಮಾಡಿದರು.... ಒಂದು ಧ್ಯೇಯಸಾಧನೆಗೋಸ್ಕರ ಹಲವಾರು ಸಂಸ್ಥೆಗಳನ್ನು ಕೊಟ್ಟಿದ್ದಾರೆ; ಜನಜಾಗೃತಿ ಉಂಟುಮಾಡಿದ್ದಾರೆ..... ಅವರು ಮಾನವೀಯ ಅನುಕಂಪ ಮತ್ತು ಅಚಲವಾಗಿರತಕ್ಕಂಥಾ ಧೈರ್ಯವುಳ್ಳವರಾಗಿದ್ದರು. ಅವರು ಇಡೀ ಮನುಕುಲಕೆ ನೀಡಿರುವ ವಿಶ್ವಾಸದ ಕೊಡುಗೆಯನ್ನು ಯಾರೂ ಮರೆಯುವಂತಿಲ್ಲ. ಈ ಮಾತುಗಳು ಶ್ರೀ ಡಾ|| ಶಿವಕುಮಾರ ಸ್ವಾಮಿಗಳವರಿಗೂ ಅನ್ವಯಿಸುವಂಥವುಗಳಾಗಿವೆ. ಭಾರತೀಯ ಪರಂಪರಾಗತ ಸಂಸ್ಕೃತಿಯ ಸಾಕಾರಮೂರ್ತಿಗಳಾಗಿರುವ ಪೂಜ್ಯರು ಶತಮಾನಗಳ ಕಾಲ ಆರೋಗ್ಯದಿಂದ ಬದುಕಿ ಸಮಾಜಕ್ಕೆ ಮಾರ್ಗದರ್ಶನ ನೀಡುವಂತಾಗಲಿ ಎಂದು ಬಸವಾದಿ ಶಿವಶರಣರಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಶ್ರೀ ನಿ.ಪ್ರ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು

ಸಂಸ್ಥಾನಮಠ, ಮುಂಡರಗಿ, ಜಿಲ್ಲಾ : ಧಾರವಾಡ

ಮಹಾಚೇತನ

ಲೇಸೆನಿಸಿಕೊಂಡು ಐದು ದಿನ ಬದುಕಿದಡೇನು
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು
....
ಕೂಡಲ ಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದಡೆ ಸಾಲದೇ ? ೧

ಮರ್ತ್ಯಲೋಕ ಕರ್ತಾರನ ಕಮ್ಮಟ. ಇಲ್ಲಿ ಲೇಸೆನಿಸಿಕೊಂಡು ಐದು ದಿನಗಳಲ್ಲ, ನಾಲ್ಕು ದಿನಗಳಲ್ಲ, ಮೂರಲ್ಲ, ಎರಡಲ್ಲ, ಕೊನೆ ಪಕ್ಷ ಕೂಡಲ ಸಂಗನ ಶರಣರ ವಚನದಲ್ಲಿ ಒಂದು ದಿನ ಬದುಕಿದರೂ ಸಾಕು ಎನ್ನುತ್ತಾರೆ ಮಹಾನುಭಾವಿ ಬಸವಣ್ಣನವರು. ಸಾರ್ಥಕಬದುಕಿನ ಮರ್ಮ ಇಲ್ಲಿದೆ.

ವಿಶ್ವಸಾಹಿತ್ಯದಲ್ಲಿ ಕವಿ, ಯೋಗಿ, ಲೌಕಿಕ-ಪಾರಮಾರ್ಥಿಕ ಜ್ಞಾನಿಗಳೆನಿಸಿದ, ಅನುಭಾವಿಗಳಾದ ನಿಜಗುಣರೂ ಸಹ "ಶಾಂತರೊಸೆದಹುದೆಂದು ಬಣ್ಣಿಸುವ ವರ್ತನ"ವನ್ನೇ ಶಿವನಲ್ಲಿ ಬೇಡಿದ್ದಾರೆ. ಹುಟ್ಟು-ಸಾವುಗಳ ಮಧ್ಯದ ಬದುಕು ಲೇಸಿನದಾಗಬೇಕು. ಇದುವೇ ಮಾನವನ ಮಹಾಮಣಿಹ. ಇಂಥ ಬದುಕನ್ನು ಬದುಕಲು ಎಲ್ಲರಿಗೂ ಸಾಧ್ಯವಾಗದು. ಕೆಲವರು ಇಂಥ ಲೇಸಿನ ಬದುಕನ್ನು ಬದುಕಲೆಂದೇ ಬಂದವರು. ಇನ್ನು ಎರಡನೆ ವರ್ಗದವರು ಇಂಥ ಬದುಕನ್ನು ಬಯಸಿಯೂ ಅದನ್ನು ಸಾಧಿಸಲಾರದವರು. ಇನ್ನು ಹಲವರು ಲೇಸಿನ ಬದುಕನ್ನು ಅರಿಯದೆ ಅಂಧಕಾರದಲ್ಲಿ ಮುಳುಗಿದ್ದು ತನ್ನ ಸಮೀಪದವರನ್ನು ಅಂಥ ಅಜ್ಞಾನಾಂಧಕಾರದಲ್ಲಿ ಮುಳುಗಿಸಿ ಹೋಗುವವರು ಇದ್ದೂ ಸತ್ತಂತೆಯೇ ಸರಿ. ಉತ್ತಮರು ತಮ್ಮ ಲೇಸಿನ ಬದುಕನ್ನು ತೋರಿ ಇತರರನ್ನು ಬದುಕುವಂತೆ ಆಶಿಸುತ್ತಾರೆ. ಅಂಥ ಅನುಕೂಲತೆಯನ್ನು ಒದಗಿಸಿಕೊಡುವ ಪುಣ್ಯಾತ್ಮರಾಗುತ್ತಾರೆ. ಆ ಸಾಲಿನಲ್ಲಿ ತುಮಕೂರು ಜಿಲ್ಲೆಯ ಸುಕ್ಷೇತ್ರ ಸಿದ್ಧಗಂಗಾ ಮಠಾಧೀಶರಾದ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳು ಗೋಚರಿಸುತ್ತಾರೆ.

ತೋಂಟದ ಸಿದ್ಧಲಿಂಗ ಯತಿಗಳು ಒಲಿದು ಪಾದವಿರಿಸಿದ ನೆಲೆ ಸಿದ್ಧಗಂಗೆ. ಬೆಟ್ಟದಲ್ಲಿ ಗಂಗೆ ತರಿಸಿದ ತಾಣವೆ ಸಿದ್ಧಗಂಗೆ. ಗೋಸಲ ಚನ್ನಬಸವರ ಕರಕಮಲ ಸಂಜಾತರಾದ ಸಿದ್ಧೇಶ್ವರ ಅಥವಾ ಸಿದ್ಧಲಿಂಗರೇ ಸಿದ್ಧಗಂಗೆಯ ಸಂಸ್ಥಾಪಕರು. ಮಹಿಮರ ಪಾದಸ್ಪರ್ಶದಿಂದ ಪಾವನವಾದ ಸಿದ್ಧಗಂಗಾಮಠವು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದುದು. ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವಾದ ಸಿದ್ಧಗಂಗಾ ಮಠವು ಕನ್ನಡನಾಡಿನಲ್ಲಿ ಅತ್ಯಂತ ಖ್ಯಾತಿ ಪಡೆದಿದೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಗ್ರಾಮಾಂತರ ಮಕ್ಕಳ ಭವಿಷ್ಯವನ್ನು ರೂಪಿಸಿದೆ. ಅವರ ಬಾಳಿನಲ್ಲಿ ಬೆಳಗಿದ ನಂದಾದೀಪವಾಗಿದೆ. ಈ ನಂದಾದೀಪಕ್ಕೆ ಸವೆಯದ ಸ್ನೇಹವನ್ನೆರೆದವರು ಉದ್ದಾನಶಿವಯೋಗಿಗಳು. ಆಧ್ಯಾತ್ಮಿಕ ಉನ್ನತ ಸಾಧನೆಯಲ್ಲಿ ಮುನ್ನಡೆದ ಹಿಂದಿನ ಮಹಾಂತರು ಲೌಕಿಕ ಜಂಜಡಗಳಲ್ಲಿ ಸಿಲುಕದೆ ತಾತ್ವಿಕ ಬದುಕಿನಲ್ಲಿ ಒಂದಾದವರು. ಸಿದ್ಧಿ ಪಡೆದವರು. ಪೂಜ್ಯ ಉದ್ದಾನೇಶ್ವರರು ಬೆಳಗಿಸಿದ ಜ್ಯೋತಿಯನ್ನು ನಂದದಂತೆ ಪ್ರಜ್ವಲಿಸಿದ ಪ್ರಖ್ಯಾತಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರದು.

---

೧. ಬ.ಷ. ವಚನಗಳು - ಸಂ. ಡಾ. ಆರ್. ಸಿ. ಹಿರೇಮಠ ವಚನ - ೧೫೪

೨. ಕೈವಲ್ಯ ಪದ್ಧತಿ ನೀತಿಕ್ರಿಯಾಚರ್ಯಸ್ಥಲ ಪದ್ಯ - ೧೯

ಗೀತವ ಬಲ್ಲಾತ ಜಾಣನಲ್ಲ! ಮಾತ ಬಲ್ಲಾತ ಜಾಣನಲ್ಲ.

ಜಾಣನು, ಜಾಣನು
ಆತ ಜಾಣನು ; ಲಿಂಗವ ನೆರೆ ನಂಬಿದಾತ,
ಆತ ಜಾಣನು ; ಜಂಗಮಕ್ಕೆ ಧನವ ಸವೆಸುವಾತ,
ಆತ ಜಾಣನು ; ಜವನ ಬಾಯಲು ಬಾಲವ ಕೊಯ್ದು ಹೋದಾತ,
ಆತ ಜಾಣನು ; ನಮ್ಮ ಕೂಡಲ ಸಂಗನ ಶರಣನು.   ೨

ಮಾನವತಾವಾದಿ ಬಸವಣ್ಣನವರು ಪ್ರತಿಪಾದಿಸಿದಂತೆ ನಿಜವಾದ ಜಾಣತನ ಶಿವಕುಮಾರ ಸ್ವಾಮಿಗಳಲ್ಲಿದೆ. ವಸ್ತುತಃ ಲೌಕಿಕದಲ್ಲಿ ಗೀತವ ಬಲ್ಲಾತನೂ ಜಾಣನಲ್ಲ, ಮಾತುಗಾರಿಕೆಯುಳ್ಳಾತನೂ ಜಾಣನಲ್ಲ. ಈ ಜಾಣತನ ಉಪಜೀವನಕ್ಕೆ ಕಾರಣವಾದುದು.

ಉಪಜೀವನ ಹೇಗೋ ನಡೆಯುತ್ತದೆ. ಆದರೆ ಆತ್ಮತೃಪ್ತಿ, ಆತ್ಮವಿಕಾಸದ ಮಾರ್ಗವನ್ನು ಅರಿಯಬಲ್ಲವನು ಜಾಣನೆನಿಸುತ್ತಾನೆ. ಈ ದಿಶೆಯಲ್ಲಿ ಗುರುವಿತ್ತ ಇಷ್ಟಲಿಂಗವನ್ನು ನೆರೆ ನಂಬಬೇಕಾಗುವುದು. ಲಿಂಗಾನುಸಂಧಾನದಿಂದ ಆತ್ಮ ಸಂತೃಪ್ತಿ ದೊರೆಯುವುದಲ್ಲದೆ ಸತ್ ಸಂಕಲ್ಪ ಸಿದ್ಧಿಯುಳ್ಳವನಾಗುತ್ತಾನೆ. ಅಂತೆಯೇ ಬಸವಣ್ಣನವರು, "ಜಾಣನು ಜಾಣನು, ಆತ ಜಾಣನು; ಲಿಂಗವ ನೆರೆ ನಂಬಿದಾತ" ಎಂದು ದ್ವಿರುಕ್ತಿಯಲ್ಲಿ ಜಾಣತನವನ್ನು ಪ್ರಕಟಿಸಿದರು. ಲಿಂಗನಿಷ್ಠೆ ಶಿವಭಕ್ತನ ಜಾಣ್ಮೆಯನ್ನು ಹೆಚ್ಚಿಸುತ್ತದೆ. ಈ ಲಿಂಗನಿಷ್ಠೆಯೊಂದಿಗೆ ಜಂಗಮಾರಾಧನೆಯನ್ನು ಮಾಡಬೇಕಾಗುವದು. ಜಂಗಮವು ಲಿಂಗದ ಪ್ರಾಣ, ಲಿಂಗದ ಮುಖವೆನಿಸಿದೆ. ಜಂಗಮಕ್ಕಾಗಿ ತನ್ನ ಸಂಪತ್ತನ್ನು ಸವೆಸಬೇಕು. ಧನದ ವ್ಯಾಮೋಹವನ್ನು ಜಂಗಮ ದಾಸೋಹದಿಂದ ಹೋಗಲಾಡಿಸಲು ಸಾಧ್ಯವಾಗುವುದು. ತನು ಮನಗಳನ್ನು ಲಿಂಗಪೂಜೆಗೆ ಸಲಿಸುವಂತೆ ಧನವನ್ನು ಜಂಗಮ ದಾಸೋಹಕ್ಕೆ ಸಲಿಸುವುದರಿಂದ ಅದರ ಸಾರ್ಥಕತೆ ಲಭಿಸುವುದು. ಇಷ್ಟಲಿಂಗವು ಇಚ್ಛಿತವಾದುದನ್ನೇ ಕರುಣಿಸುತ್ತದೆ. ಎಲ್ಲ ಅನಿಷ್ಟಗಳನ್ನು ಪರಿಹರಿಸುತ್ತದೆ. ಅದಕ್ಕಾಗಿ ಜಂಗಮ ಪುಂಗವ ಅಲ್ಲಮ ಪ್ರಭುಗಳು -

ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ,
ಲಿಂಗವನರಿದ ಬಳಿಕ ಏನನರಿದಡೆಯೂ ಫಲವಿಲ್ಲ
ಸರ್ವಕಾರಣ ಲಿಂಗವಾಗಿ
ಲಿಂಗವನೆ ಅರಿದರಿದು ಲಿಂಗ ಸಂಗವನೆ ಮಾಡುವ
ಸಂಗಸುಖದೊಳೋಲಾಡುವ ಗುಹೇಶ್ವರಾ.   ೪

ಎಂದು ಅನುಭವಪೂರ್ವಕ ಪ್ರತಿಪಾದಿಸಿದ್ದಾರೆ. ಇಷ್ಟಲಿಂಗ ವಿಜ್ಞಾನವನ್ನು ಇಷ್ಟಲಿಂಗದ ಘನತೆಯನ್ನು ತಿಳಿಯದೆ ಏನೆಲ್ಲ ತಿಳಿದರೂ ಅದು ಫಲಕಾರಿಯಲ್ಲ; ಪ್ರಯೋಜಕವೂ ಅಲ್ಲ. ಈ ಲಿಂಗತತ್ತ್ವವನ್ನು ಅರಿತ ಬಳಿಕ ಮತ್ತೇನನ್ನೂ ಅರಿವ ಹವ್ಯಾಸ ಬೇಕಿಲ್ಲ. ಆ ಫಲವಾಗಿ ಏನೆಲ್ಲವನ್ನು ಸಾಧಿಸಲು ಸಾಧ್ಯವಾಗುವುದು. ಲಿಂಗವು ಸರ್ವಕ್ಕೂ ಕಾರಣವೆನಿಸಿದೆ. ಇಂಥ ಲಿಂಗದ ನೆಲೆಕಲೆಗಳನ್ನು ಅರಿತು ಅಳವಡಿಸಿಕೊಂಡು ನಿತ್ಯ ತಪ್ಪದೆ ಲಿಂಗಾನುಸಂಧಾನ ಮಾಡುವುದರಿಂದ ಅಘಟಿತ ಘಟನೆಯನ್ನು ಮಾಡಲು ಸಾಧ್ಯ. ಮೇಲೆ ವಿವರಿಸಿದಂತೆ "ಆತ ಜಾಣನು, ಜವನ ಬಾಯಲು ಬಾಲವ ಕೊಯ್ದು ಹೋದಾತ" ಯಮನ ಶಿಕ್ಷೆಯನ್ನು ಮೀರಿ ನಿಂತಾತನೆ ಜಾಣನೆನಿಸುತ್ತಾನೆ. ಅಂದರೆ ಹುಟ್ಟು-ಸಾವುಗಳನ್ನು ಕಡೆಗಾಣಿಸುವ ಶಕ್ತಿ ಇಷ್ಟಲಿಂಗಾನುಸಂಧಾನದಿಂದ ಲಭಿಸುವದು. ಇದನ್ನರಿತ ಶಿವಕುಮಾರ ಸ್ವಾಮಿಗಳು ತಪ್ಪದೆ ಇಷ್ಟಲಿಂಗಪೂಜೆಯನ್ನು ಗೈದರು. ಶಿವಯೋಗವನ್ನು ಸಾಧಿಸಿದರು. ಶಿವಕಳೆಯನ್ನು ಪಡೆದರು. ಸಮಾಜಕ್ಕೆ ಶಿವಭಾವವನ್ನೇ ಕರುಣಿಸಿದರು. ಸಕಲರ ಕಲ್ಯಾಣವನ್ನು ಬಯಸಿದರು.

ಕ್ರಿ.ಶ. ೧೯೩೦ ರಲ್ಲಿ ತಮ್ಮ ಉತ್ತರಾಧಿಕಾರಿಗಳಾದ ಮರುಳಾರಾಧ್ಯರು ಶಿವೈಕ್ಯರಾದ ಬಳಿಕ ಅವರ ಶಿವ ಸಮಾಧಿಯು

ಅಲ್ಲಮ ಪ್ರಭುದೇವರ ವಚನಗಳು ಸಂ. ಡಾ. ಆರ್.ಸಿ.ಹಿರೇಮಠ. ವಚನ ೧೨೩೪

ನಡೆಯುತ್ತಿದ್ದಂತೆ ಮಹಿಮರಾದ ಉದ್ದಾನಶಿವಯೋಗಿಗಳಿಗೆ ಬಿ.ಎ. ಪದವಿಯನ್ನು ಅಭ್ಯಸಿಸುತ್ತಿದ್ದ ಶಿವಣ್ಣನು ಕಣ್ಣಿಗೆ ಬೀಳುತ್ತಾನೆ. ಯಾವ ಕಾರ್ಯ ಕಾರಣವಿಲ್ಲದೆ ಶಿವ ಸಂಕಲ್ಪದಂತೆ ಉದ್ದಾನೇಶನ ಕೃಪಾಕಟಾಕ್ಷ ಶಿವಣ್ಣನಿಗೆ ಲಭಿಸುತ್ತದೆ. ತಂದೆ ತಾಯಿಗಳ ಅಪ್ಪಣೆಯಿಲ್ಲದೆ ಸದ್ಗುರುವಿನ ಅಪ್ಪಣೆಯನ್ನು ಮೀರಲಾರದೆ ಬಯಸದೆ ಬಂದ ಭಾಗ್ಯ ಗುರುಕಾರುಣ್ಯ ಅಪಾರವಾದುದು, ಅನುಪಮವಾದುದು. ಅಂತೆಯೇ ಅವರಿಂದ ಅಘಟಿತ ಘಟನೆ ಜರುಗುವುದರಲ್ಲಿ ಅಚ್ಚರಿಯಿಲ್ಲ. ಈ ಶಿವಣ್ಣನೇ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು,

ಪ್ರಕೃತಿ ಸ್ತ್ವಾಂ ನಿಯೋಕ್ಷ್ಯತಿ ೫

ಪ್ರಕೃತಿಯೇ ಮಾನವನನ್ನು ಒತ್ತಾಯದಿಂದ ತನ್ನಿಷ್ಟದಂತೆ ಕೆಲಸ ಮಾಡಿಸಿಕೊಳ್ಳುತ್ತದೆ ಎಂದು ಅರ್ಜುನನಿಗೆ ತಿಳಿಸಿದ ಸಂಗತಿ ಸತ್ಯವಾಗಿದೆ. ಆತ್ಮರತ್ನ ಪರೀಕ್ಷಕರಾದ ಉದ್ದಾನ ಯತಿಗಳು ತಮ್ಮ ಉತ್ತರಾಧಿಕಾರಿ ತಮ್ಮ ಸಂಕಲ್ಪವನ್ನು ನೆರವೇರಿಸಬಲ್ಲವನನ್ನು ಗುರುತಿಸಿದ್ದು ಸಾಮಾನ್ಯ ಮಾತಲ್ಲ. ಅದು ಶಿವಯೋಗಿಗೆ ಮಾತ್ರ ಸಾಧ್ಯ.

ಶ್ರೀ ಶಿವಕುಮಾರ ಮಹಾಸ್ವಾಮಿಗಳು ಗಣಿತ ಮತ್ತು ಭೌತವಿಜ್ಞಾನವನ್ನು ಅಭ್ಯಸಿಸಿದ್ದರೂ ಹಳೇಬೇರಾದ ಶಿವಲಿಂಗ ನಿಷ್ಠೆಯನ್ನು ಬಿಡಲಿಲ್ಲ. ಹಳೇಬೇರನ್ನು ಗಟ್ಟಿಗೊಳಿಸಿ ಹೊಸಚಿಗುರೆನಿಸಿದ ಲೌಕಿಕ ಶಿಕ್ಷಣಗಳಿಗೆ ಸಂಪೂರ್ಣವಾಗಿ ಆಶ್ರಯ ನೀಡುತ್ತಾರೆ. ಆ ಫಲವಾಗಿ ಸಿದ್ಧಗಂಗಾ ಮಠವು ವೇದ ಮತ್ತು ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ, ಕಲೆ, ವಿಜ್ಞಾನ, ವಾಣಿಜ್ಯ, ತಾಂತ್ರಿಕ, ವೈದ್ಯಕೀಯ, ಹತ್ತು ಹಲವು ಶಿಕ್ಷಣ ಸಂಸ್ಥೆಗಳ್ನು ತೆರೆದು, ಅಷ್ಟೇ ದಕ್ಷತೆಯಿಂದ ಮುನ್ನಡೆಸಿದುದು ಅವರ ಕರ್ತವ್ಯ ದಕ್ಷತೆಯ ಪ್ರತೀಕವಾಗಿದೆ. ಆ ಎಲ್ಲ ವಿದ್ಯಾರ್ಥಿಗಳಿಗೆ ವಸತಿ ಹಾಗೂ ಪ್ರಸಾದ ವ್ಯವಸ್ಥೆ ಮಾಡಿದ ಕರುಣಾಳು ಎನಿಸಿದ್ದಾರೆ. ಐದು ಸಾವಿರ ವಿದ್ಯಾರ್ಥಿಗಳಿಗೆ ಪ್ರಸಾದ ವಿತರಣೆಯಾಗುವ ಮಹಾಕಾರ್ಯ ಅಲ್ಪರಿಂದ ಊಹಿಸುವುದು ಕಷ್ಟ. ಪ್ರತಿನಿತ್ಯ ಕ್ಷೇತ್ರಕ್ಕೆ ಸಂದರ್ಶನವಿತ್ತವರನ್ನು ಕೂಡಿಸಿದರೆ ೫-೬ ಸಾವಿರ ಜನ ಪ್ರಸಾದ ಸ್ವೀಕರಿಸುತ್ತಾರೆಂಬುದು ಮಹಾಪವಾಡವೇ ಸರಿ.

ಇಲ್ಲಿಯವರೆಗೆ ೧೧೭ ಶಿಕ್ಷಣ ಸಂಸ್ಥೆಗಳನ್ನು ಸಂಸ್ಥಾಪಿಸಿ ಸರಕಾರಕ್ಕೆ ಪ್ರತಿಯಾಗಿ ತಮ್ಮ ಆಡಳಿತ ವ್ಯವಸ್ಥೆಯನ್ನು ಚೆನ್ನಾಗಿ ನಡೆಸಿದ್ದನ್ನು ನೋಡಿದವರೆಲ್ಲ ಮಂತ್ರಮುಗ್ಧರಾಗುವುದು ಸಹಜ. ಇಷ್ಟಕ್ಕೆ ತೃಪ್ತರಾಗದೆ ಇನ್ನೂ ಹಲವು ಯೋಜನೆಗಳನ್ನು ರೂಪಿಸಿ ಕಾರ್ಯತತ್ಪರರಾಗುತ್ತಿರುವುದರ ಹಿಂದೆ ಶ್ರೀಗಳ ಅದಮ್ಯ ಉತ್ಸಾಹ ವ್ಯಕ್ತವಾಗುತ್ತದೆ. ಸಮಯನಿಷ್ಠೆ, ಶಿಸ್ತು, ಆಚಾರ ಪರಿಪಾಲನೆ, ಆಧ್ಯಾತ್ಮ ಚಿಂತನೆಗಳೊಂದಿಗೆ ಭಕ್ತರ ಕಲ್ಯಾಣವನ್ನು ಬಯಸುವುದು ಶ್ರೀಗಳವರ ದೈನಂದಿನ ಬದುಕು.

೧೯೭೪ ರಿಂದ ಸಿದ್ಧಗಂಗಾ ಮಠಕ್ಕೆ ೨ - ೩ ಸಲ ಸಂದರ್ಶನವಿತ್ತು ಶ್ರೀಗಳನ್ನು ಹಾಗೂ ಸಂಸ್ಥೆಗಳನ್ನು ನಿರೀಕ್ಷಿಸಲಾಯಿತು. ೧೯೮೯ ರಿಂದ ಶ್ರೀಗಳೊಡನೆ ಸಮೀಪ ಪರಿಚಯವಾಯಿತು. ದಿ. ೩.೪.೧೯೯೪ ರಂದು ನಡೆದ ಪೂಜ್ಯರ ೮೭ ನೆಯ ಜನ್ಮದಿನೋತ್ಸವ ಹಾಗೂ ಶ್ರೀ ಗುರುವಂದನ ಮಹೋತ್ಸವವು ನಮ್ಮ ನೇತೃತ್ವದಲ್ಲಿ ಸಮಾವೇಶಗೊಂಡುದು ನಮ್ಮ ಸುಕೃತವೆಂದೇ ಭಾವಿಸುತ್ತೇವೆ. ಆ ಸಂದರ್ಭದಲ್ಲಿ ಆಗಮಿಸಿದ ಮಂತ್ರಿ ಮಾನ್ಯರ, ಗಣ್ಯರ ಸಮ್ಮುಖದಲ್ಲಿ ಅನೇಕ ಪ್ರತಿಷ್ಠಿತರಿಗೆ ಸನ್ಮಾನ ಸಮಾರಂಭ ವೈಭವಪೂರ್ಣವಾಗಿ ನಡೆದುದನ್ನು ಕಂಡು ಅತ್ಯಂತ ಸಂತಸವಾಯಿತು. ಡಾ. ಶಿವಕುಮಾರ ಮಹಾಸ್ವಾಮಿಗಳ ದಿವ್ಯವ್ಯಕ್ತಿತ್ವಕ್ಕೆ ಶಿಷ್ಯಬಳಗ ಸಲ್ಲಿಸುತ್ತಿರುವ ಅಭಿನಂದನೆ ಅತ್ಯಂತ ಸಮೀಚೀನವಾದುದು. ಪೂಜ್ಯ ಶ್ರೀಗಳು "ಶತಂಜೀವ ಶರದೋ ವರ್ಧಮಾನ" ಎನ್ನುವಂತೆ ಶತಶರತ್ಕಾಲಗಳನ್ನು ಕಂಡು ಸಮಾಜದ ಕಲ್ಯಾಣಕ್ಕೆ ಕಾರಣರಾಗಲೆಂದು ತುಂಬು ಹೃದಯದಿಂದ ಆಶಿಸುತ್ತೇವೆ.

ಸಕಲರಿಗೆ ಲೇಸಾಗಲಿ

೫. ಭಗವದ್ಗೀತೆ ೧೮ - ೫೯

ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು
ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ,
ಇಲಕಲ್ಲ, ಜಿಲ್ಲಾ : ವಿಜಾಪುರ.

ಬಸವ ಚೇತನ

ಸಕಲ ಜೀವರಾಶಿಗಳ ಲೇಸು ಬಯಸಿದ, ಮಾನವ ಕುಲದ ಕಲ್ಯಾಣಕ್ಕಾಗಿ ಅರಿವು-ಆಚಾರ-ಅನುಭಾವ ತಳಹದಿಯ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ ವಿಶ್ವಗುರು ಬಸವಣ್ಣನವರ ೧೨ನೇ ಶತಮಾನದ ಕಾಯಕ ದಾಸೋಹ 'ಪ್ರಸಾದ ತತ್ತ್ವ' ಸಿದ್ಧಾಂತ ಸಂಸ್ಕೃತಿ ಪರಂಪರೆಯನ್ನು ೨೧ನೇ ಶತಮಾನದಲ್ಲಿ ಕ್ರಿಯಾಶೀಲವಾಗಿ ನಡೆಸುತ್ತಿರುವ ಪೂಜ್ಯಪಾದರಾದ ಪರಮಪೂಜ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರು ಬಸವಚೇತನ ಸ್ವರೂಪಿಗಳಾಗಿದ್ದಾರೆ.

ಪರಮಪೂಜ್ಯ ಡಾ. ಶಿವಕುಮಾರ ಮಹಾಶಿವಯೋಗಿಗಳು ಶುದ್ಧ ಪ್ರಸಾದ - ಸಿದ್ಧಪ್ರಸಾದ - ಪ್ರಸಿದ್ಧ ಪ್ರಸಾದವನ್ನು ಸಿದ್ಧಗಂಗಾ ಮಠದ ಮೂಲಕ ಎಡೆಮಾಡುತ್ತಾ ತ್ರಿವಿಧ ದಾಸೋಹಮೂರ್ತಿಗಳಾಗಿದ್ದಾರೆ.

ಪೂಜ್ಯ ಶ್ರೀಗಳವರು ವಯೋವೃದ್ಧರೂ, ಜ್ಞಾನವೃದ್ಧರೂ, ಅನುಭಾವವೃದ್ಧರೂ ಆಗಿದ್ದಾರೆ. ಅವರ ತನು, ಮನ, ಭಾವಂಗಳಲ್ಲಿ ಬಸವತತ್ತ್ವ ತುಂಬಿ ಪ್ರವಹಿಸುತ್ತಿದೆ. ಬಸವಗುರು ಅವರಿಗೆ ಮಂತ್ರ ಪುರುಷ; ಬಸವ ಸಂದೇಶ ಅವರ ಬಾಳಿನ ಉಸಿರಾಗಿದೆ.

ಪೂಜ್ಯರ ಬಾಳು - ಲಿಂಗಮಯವಾಗಿದೆ. ಪೂಜ್ಯರು ನಡೆಲಿಂಗ, ನುಡಿಲಿಂಗವಾಗಿದ್ದಾರೆ. ಕೂಡಲ ಸಂಗನ ರಾಜತೇಜದಲ್ಲಿಪ್ಪ ಪೂಜ್ಯರು ಲಿಂಗಮೆಚ್ಚಿ ಅಹುದಹುದೆನ್ನುವಂತೆ ಅನುಭಾವ ನೀಡುತ್ತಾರೆ. ಪೂಜ್ಯರ ಜೀವನ ಸಾಧನೆಗಳು ನಾಡಿನ ಮಠಾಧಿಪತಿಗಳಿಗೆ ಆದರ್ಶ ಹಾಗೂ ಅನುಕರಣೀಯವಾಗಿವೆ. ಪೂಜ್ಯರು ನಾಡಿನ ಗುರು ಜಗದ್ಗುರುಗಳಿಗೆ, ಮಠ ಪೀಠಾಧಿಪತಿಗಳಿಗೆಲ್ಲ ಬಸವ ಜ್ಯೋತಿ ಸ್ವರೂಪರಾಗಿದ್ದಾರೆ.

ಧರ್ಮಪಿತ ವಿಶ್ವಗುರು ಬಸವಣ್ಣನವರ ಕೃಪೆಯು ನಿರಂತರವಾಗಿರಲೆಂದು ಪ್ರಾರ್ಥಿಸುತ್ತಾ, ಪೂಜ್ಯರು ನೂರೊಂದು ಕಾಲ ಮೇಲ್ಪಟ್ಟು ಪ್ರಪಂಚಕ್ಕೆ ಆಶೀರ್ವದಿಸುತ್ತಿರಲೆಂದು ಕೋರುತ್ತೇವೆ.

ಶರಣು ಶರಣಾರ್ಥಿಗಳು

ನಾ ಕಂಡಂತೆ ಶ್ರೀಕ್ಷೇತ್ರ ಮತ್ತು ಶ್ರೀಶ್ರೀಗಳು

ಧ್ಯೇಯ ತಪಸ್ವಿ	-	ಎಸ್. ನಿಜಲಿಂಗಪ್ಪ
ಬಸವತತ್ತ್ವಾರಾಧಕರು	-	ಬಿ.ಡಿ. ಜತ್ತಿ
ದಿವ್ಯಚೇತನ	-	ವೀರೇಂದ್ರ ಪಾಟೀಲ್
ಕಾರುಣ್ಯಹೃದಯಿ	-	ಡಿ.ಎಂ. ಚಂದ್ರಶೇಖರ್
ದಾರಿದೀಪ	-	ಡಾ. ಡಿ.ಎಂ. ನಂಜುಂಡಪ್ಪ
ಅಸಾಮಾನ್ಯ ದಾಸೋಹಿ	-	ಡಾ. ಕೆ. ಶಿವರಾಮ ಕಾರಂತ
ಆಚಾರ ವಿಚಾರ ಸಂಗಮ	-	ಎಸ್.ಕೆ. ರಾಮಚಂದ್ರರಾವ್
ಮಹಾಋಷಿ	-	ಎಚ್.ಎಲ್. ನಾಗೇಗೌಡ
ಸಿದ್ಧಗಂಗೆಯ ಸಿದ್ಧಪುರುಷ	-	ಡಾ. ಕೆ.ಟಿ. ಪಾಂಡುರಂಗಿ
ಮಹಾತಪಸ್ವಿ	-	ಶ್ರೀಮತಿ ಶಾಂತಾದೇವಿ ಮಾಳವಾಡ
ಸಿದ್ಧಗಂಗೆಯ ನೆನಪುಗಳಲ್ಲಿ	-	ಡಾ. ಜಿ.ಎಸ್. ಶಿವರುದ್ರಪ್ಪ
ಸಿದ್ಧಗಂಗೆಯ ಬೆಳಕು	-	ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ
ಶರಣಸಂಸ್ಕೃತಿಯ ಬ್ರಹ್ಮಕಮಲ	-	ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ
ಸಾವಿರದ ಗುಟ್ಟು ಇಲ್ಲಿದೆ	-	ಹೊ.ವೆ. ಶೇಷಾದ್ರಿ
ಆಪತ್ಬಾಂಧವ	-	ಕೃ. ಸೂರ್ಯನಾರಾಯಣರಾವ್
ದೃಢಸಂಕಲ್ಪದ ಶ್ರೀಗಳು	-	ಕೆ.ಎಂ. ರುದ್ರಪ್ಪ
ನಡೆದಾಡುವ ದೇವರು	-	ನ್ಯಾಯಮೂರ್ತಿ ಕೊ.ಬ. ನಾವದಗಿ
ತಪೋಧನ ಮಹಾಜಂಗಮ	-	ಡಾ. ಸೂರ್ಯನಾಥ ಕಾಮತ್
ಆರಾಧ್ಯದೈವ	-	ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯ
ವಜ್ರಾದಪಿ...ಕುಸುಮಾದಪಿ	-	ಹೆಚ್. ಗಂಗಾಧರನ್
ಅಪೂರ್ವ ದರ್ಶನ	-	ಸಗರ ಕೃಷ್ಣಾಚಾರ್ಯ
ಸಮಗ್ರಕ್ರಾಂತಿಯ ಪ್ರಯೋಗಶಾಲೆ	-	ಚಂದ್ರಶೇಖರ್ ಧೂಳೇಕರ್
ಶ್ರೀ ಸಿದ್ಧಗಂಗೆಯ ಕೀರ್ತಿ	-	ಸಿ. ಸೋಮಶೇಖರ್
ದಾಸೋಹಕ್ಷೇತ್ರ	-	ಪಂ. ಕೆ.ಪಿ. ಶಿವಲಿಂಗಯ್ಯ

ಧ್ಯೇಯ ತಪಸ್ವಿ

ಎಸ್. ನಿಜಲಿಂಗಪ್ಪ

ಅದು ಎಂದೂ ಮರೆಯದ, ಮರೆಯಲಾಗದ, ಮರೆಯಬಾರದ ಹಾಗೂ ಅತ್ಯಂತ ಸಂತೋಷಕರವಾದ, ಸಂಪೂರ್ಣ ತೃಪ್ತಿ ತರುವ, ಆನಂದದಾಯಕ ದೃಶ್ಯ. ಸುಮಾರು ಐದುಸಾವಿರ ವಿದ್ಯಾರ್ಥಿಗಳು ಒಟ್ಟಿಗೆ ಸೇರಿ, ಸಮವಸ್ತ್ರ ಧರಿಸಿ, ಒಂದು ಸಭಾಂಗಣದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಅವರ ಎದುರಿನಲ್ಲಿ ಶ್ರೀ ಸ್ವಾಮಿಗಳವರು ಮಕ್ಕಳಿಗೆ ಬೋಧನೆ ಮಾಡಿದರು. ಇದು ಮೇಲೆ ಹೇಳಿದ ಅನುಭವ. ವೈಶಿಷ್ಟ್ಯವೇನೆಂದರೆ ಆ ಮಕ್ಕಳೆಲ್ಲರೂ ಅತ್ಯಂತ ಬಡಕುಟುಂಬದವರು. ಮತ್ತೊಂದು ವೈಶಿಷ್ಟ್ಯವೆಂದರೆ ಅವರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅನಾಥರು, ಬಹುಶಃ ತಂದೆ ತಾಯಿಗಳು ಯಾರೆಂದು ಅರಿಯದವರೂ ಇದ್ದರೆಂದು ನನ್ನ ಆಲೋಚನೆ. ಇದಕ್ಕಿಂತ ಹೆಚ್ಚಿನ ವೈಶಿಷ್ಟ್ಯವೆಂದರೆ ಹಾಗೂ ಎಲ್ಲರೂ ಅನುಸರಿಸಬೇಕಾದ ವೈಶಿಷ್ಟ್ಯವೆಂದರೆ ಆ ಮಕ್ಕಳು ಎಲ್ಲ ಜಾತಿಯವರು, ಎಲ್ಲ ಕೋಮಿನವರು, ವೀರಶೈವರು, ಬ್ರಾಹ್ಮಣರು, ನಾಯಕರು, ಕುರುಬರು, ಮೇಲಾಗಿ ಹರಿಜನರು, ಜೊತೆಗೆ ಅಲ್ಪಸಂಖ್ಯಾತರು ಅಂದರೆ ಮುಸಲ್ಮಾನರು, ಕ್ರಿಶ್ಚಿಯನ್ನರು - ಇವರ ಮಕ್ಕಳೂ ಇದ್ದುದು.

ಇಂತಹ ಸಂಸ್ಥೆ ಹಾಗೂ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಡೆಸತಕ್ಕ ವಿದ್ಯಾರ್ಥಿನಿಲಯ ಹಿಂದುಸ್ತಾನದ ಬೇರೆಲ್ಲೂ ಇರುವ ಸಂಭವ ಇಲ್ಲ. ನಾನು ಹಿಂದೂಸ್ತಾನವನ್ನಲ್ಲದೆ, ಅರ್ಧ ಪ್ರಪಂಚವನ್ನು ಸುತ್ತಿದ್ದೇನೆ. ಅಲ್ಲಿ ಎಲ್ಲೂ ಇಂತಹ ಸಂಸ್ಥೆ ಕಂಡು ಬರಲಿಲ್ಲ. ಆದ್ದರಿಂದಲೇ ಆ ದಿನ ಕಂಡ ದೃಶ್ಯ ನನಗೆ ಎಂದೂ ಮರೆಯಲಾಗದುದು.

ಆ ಮಕ್ಕಳಿಗೆ ಬೋಧಿಸಿದ ಗುರುಗಳು ಮತ್ತಾರೂ ಅಲ್ಲ, ಶ್ರೀ ಸಿದ್ಧಗಂಗಾ ಮಠದ ಪೂಜ್ಯಗುರುಗಳಾದ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿಗಳವರು.

ಸುಮಾರು ೮೦ ವರ್ಷಗಳ ಕೆಳಗೆ ಶ್ರೀಗಳ ಗುರುಗಳಾಗಿದ್ದ ಶ್ರೀ ಶ್ರೀ ಉದ್ಧಾನ ಶಿವಯೋಗಿ ಸ್ವಾಮಿಗಳು ಇದಕ್ಕೆ ಅತ್ಯಂತ ಚಿಕ್ಕ ಸ್ವರೂಪದಲ್ಲಿ ಅಸ್ತಿಭಾರ ಹಾಕಿ, ಕೇವಲ ೨೦ ವಿದ್ಯಾರ್ಥಿಗಳಿಗೆ ಜಾತಿ ಕೋಮುಗಳ ಭೇದವಿಲ್ಲದೆ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದ್ದು, ಈಗಿನ ಸ್ವಾಮಿಗಳು ಸುಮಾರು ೬೬ ವರ್ಷಗಳ ಕೆಳಗೆ ಅವರಿಂದ ಅದರ ಉತ್ತರಾಧಿಕಾರಿಯಾಗಿ ನೇಮಿಸಲ್ಪಟ್ಟು, ಆ ಚಿಕ್ಕ ಸಂಸ್ಥೆಯನ್ನು ಈಗಿನ ಅತ್ಯಂತ ದೊಡ್ಡದಾದ ಹಾಗೂ ಇನ್ನೆಲ್ಲೂ ಕಾಣಸಿಗದ ದೊಡ್ಡ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ. ಇವರ ಶ್ರೀ ಸಿದ್ಧಗಂಗಾ ಮಠವು ಸುತ್ತಲಿನ ಪ್ರದೇಶದಲ್ಲಿ ಪ್ರಸಿದ್ಧವಾಗಿದ್ದು, ಬಹಳ ಭಕ್ತಾದಿಗಳಿದ್ದರೂ, ಬಾಕಿ ದೊಡ್ಡ ದೊಡ್ಡ ಜಗದ್ಗುರುಗಳ ಮಠಗಳಿಗೆ ಇರುವ ಅಥವಾ ಇದ್ದ ಕೋಟ್ಯಂತರ ರೂಪಾಯಿಗಳ ಆಸ್ತಿಯಾಗಲೀ, ಲಕ್ಷಾಂತರ ರೂಪಾಯಿಗಳ ಆದಾಯವಾಗಲೀ ಇರಲಿಲ್ಲ. ಡಾ. ಶಿವಕುಮಾರ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ, ಸಮಾಜಕ್ಕೆ ವಿದ್ಯಾಭ್ಯಾಸದ ಅನಿವಾರ್ಯ ಅವಶ್ಯಕತೆಯನ್ನು ಅರಿತು, ಪ್ರಾರಂಭದಲ್ಲಿ ಹಳ್ಳಿಗಳಿಗೆ ಎತ್ತಿನ ಗಾಡಿಗಳಲ್ಲಿ ಪ್ರಯಾಣ ಮಾಡಿ, ಧಾನ್ಯಗಳನ್ನು ಸಂಗ್ರಹಿಸಿ ಈ ಸಂಸ್ಥೆಯನ್ನು ಬೆಳೆಸಲು ಪ್ರಾರಂಭ ಮಾಡಿದರು. ಇವರೊಬ್ಬರೇ ಒಬ್ಬರ ಪ್ರಯತ್ನ, ಸಾಹಸ, ನಿಷ್ಠೆ, ಧ್ಯೇಯ ಸಾಧನೆಗಳ ಫಲವಾಗಿ ಈ ದಿನ ಹಿಂದುಸ್ತಾನಕ್ಕೆಲ್ಲ ಮಾದರಿಯಾಗುವಂತಹ ಸಂಸ್ಥೆ ಎನಿಸಿದೆ.

ಸುಮಾರು ಎರಡು ವರ್ಷಗಳ ಕೆಳಗೆ ನಾನು ಹೋದಾಗ ಐದಾರು ಕೋಟಿ ರೂ.ಗಳ ಯೋಜನೆಗಳ ಫಲವಾಗಿ ವಿದ್ಯಾರ್ಥಿಗಳಿಗಾಗಿ ಕಟ್ಟಡಗಳು ಬೆಳೆಯುತ್ತಿದ್ದವು. ಅದನ್ನು ನೋಡಿದ ನನಗೆ, ಒಬ್ಬ ವ್ಯಕ್ತಿ ಯೋಗ್ಯ ಧ್ಯೇಯ ನಿಷ್ಠೆಗಳಿಂದ ಸಮಾಜ ಸೇವೆಗಾಗಿ ಸೊಂಟಕಟ್ಟಿ ನಿಂತರೆ ಏನಾದರೂ ಸಾಧಿಸಬಹುದು, ಎಷ್ಟಾದರೂ ಸಾಧಿಸಬಹುದು ಎಂಬುದಕ್ಕೆ ಇದು ಒಂದು ಭವ್ಯ ಉದಾಹರಣೆಯಾಗಿ ಕಂಡಿತು.

ಶ್ರೀ ಸ್ವಾಮಿಗಳ ಏಕಮೇವ ಪ್ರಯತ್ನದ ಫಲವಾಗಿ ನೂರಾರು ವಿದ್ಯಾಸಂಸ್ಥೆಗಳು - ಪ್ರಾಥಮಿಕ ಶಾಲೆಗಳಿಂದ ಆರಂಭವಾಗಿ ತಾಂತ್ರಿಕ ಕಾಲೇಜುಗಳವರೆಗೆ ಯಶಸ್ವಿಯಾಗಿ, ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿವೆ. ಇಲ್ಲಿಯ ಸಹಸ್ರಾರು ವಿದ್ಯಾರ್ಥಿಗಳಾಗಿ, ಯೋಗ್ಯ ನಾಗರಿಕರಾಗಿ, ನಾನಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಹಳೆಯ ವಿದ್ಯಾರ್ಥಿಗಳ ಸಂಖ್ಯೆ ಸಾವಿರಾರು. ಹಾಲಿ ಅವರೆಲ್ಲರೂ ಪ್ರಯತ್ನಪಟ್ಟು, ತಮ್ಮ ಕೃತಜ್ಞತೆಗಳನ್ನು ಸಲ್ಲಿಸುವ ಸಲುವಾಗಿ ಶ್ರೀಗಳವರ ವಜ್ರ ಮಹೋತ್ಸವವನ್ನು ಯೋಗ್ಯ ರೀತಿಯಲ್ಲಿ

ನೆರವೇರಿಸಲು ತೀರ್ಮಾನಿಸಿರುವುದು ಸ್ವಾಭಾವಿಕ ಹಾಗೂ ಒಪ್ಪತಕ್ಕ ಮಾತು. ಇದು ಅವರ ಕರ್ತವ್ಯ ನಿಷ್ಠೆಯನ್ನು, ಶ್ರೀಗಳವರಿಗೆ ಸಲ್ಲಿಸಬೇಕಾದ ಕೃತಜ್ಞತೆಯನ್ನು ಎತ್ತಿ ತೋರಿಸುತ್ತದೆ.

ಇದೇ ಸಂದರ್ಭದಲ್ಲಿ ಒಂದು ಸ್ಮರಣ ಸಂಪುಟವನ್ನು ಹೊರತರುತ್ತಿರುವುದು ಅತ್ಯಂತ ಶ್ಲಾಘನೀಯ. ಶ್ರೀ ಮಠದಲ್ಲಿ ಪ್ರತಿದಿನ ಐದಾರು ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಭೋಜನ, ಬಟ್ಟೆ ವಗೈರೆ ಒದಗಿಸುತ್ತಿರುವುದಲ್ಲದೆ ಮಠದ ಆಶ್ರಯದಲ್ಲಿ ದಿನವೂ ಸಾವಿರಾರು ಜನರಿಗೆ ನಿತ್ಯವೂ ದಾಸೋಹವು ನಡೆಯುತ್ತಲೇ ಇದೆ. ಈ ಕಾರ್ಯಕ್ರಮಗಳೆಲ್ಲ ಯಶಸ್ವಿಯಾಗಿ ನಡೆಯುತ್ತಿರುವುದು ಸ್ವಾಮಿಗಳ ತಪಸ್ಸಿನ ಪ್ರಭಾವ.

ಶ್ರೀಗಳವರು ಸಾಕಷ್ಟು ವಯಸ್ಕರಾಗಿ, ಶರೀರ ಮುಪ್ಪಾಗಿರುವಂತೆ ಕಂಡರೂ ಅವರ ಧ್ಯೇಯ ಸಾಧನೆ, ಸಮಾಜ ಸೇವೆಯಲ್ಲಿರಬೇಕೆಂಬ ಉತ್ಸಾಹ ಎಳ್ಳಷ್ಟೂ ಕಡಿಮೆಯಾಗಿಲ್ಲ. ಯುವಕರಿಗಿಂತ ಯುವಕರಾಗಿ ದುಡಿಯುವ ಶಕ್ತಿ, ಸಾಹಸ ಸ್ಪಷ್ಟವಾಗಿ ಕಾಣುತ್ತಿದೆ.

ಇದೆಲ್ಲವನ್ನೂ ಸ್ಮರಿಸಿದಾಗ ಶ್ರೀಗಳವರು ಇನ್ನೂ ಬಹುಕಾಲ ಆರೋಗ್ಯದಿಂದಿದ್ದು, ಅವರು ಕೈಕೊಂಡಿರುವ ಎಲ್ಲ ಕೆಲಸ ಕಾರ್ಯಗಳೂ ಯಶಸ್ವಿಯಾಗಿ ನೆರವೇರಲೆಂದು, ಅವರ ಸೇವಾ ಹಾಗೂ ಸಾಧನ ಕ್ಷೇತ್ರವು ವಿಸ್ತಾರವಾಗುತ್ತ ಬೆಳೆಯಲೆಂದು ಭಕ್ತಿಪೂರ್ವಕವಾಗಿ ಹಾರೈಸುತ್ತೇನೆ.

ಬಸವತತ್ತ್ವಾರಾಧಕರು

ಡಾ. ಬಿ.ಡಿ. ಜತ್ತಿ

ಪರಮಪೂಜ್ಯ ಶ್ರೀಗಳವರ ವಜ್ರಮಹೋತ್ಸವ ಸಂದರ್ಭದಲ್ಲಿ ತಾವು ಅಭಿನಂದನಾ ಸಂಪುಟವನ್ನು ಹೊರತರಲಿರುವುದು ಸಂತೋಷದ ಸಂಗತಿ.

ಪೂಜ್ಯ ಶ್ರೀಗಳು ಬಡ ವಿದ್ಯಾರ್ಥಿಗಳಿಗೆ ಜಾತಿ ಭೇದವಿಲ್ಲದೆ ದಾಸೋಹದ ವ್ಯವಸ್ಥೆ ಮಾಡಿದ್ದಾರೆ. ಬಡ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೪ ಸಾವಿರಕ್ಕೂ ಹೆಚ್ಚಾಗಿ ಇರಬಹುದು. ಇವರು ಬಡ ವಿದ್ಯಾರ್ಥಿಗಳಿಗೆ ಅನ್ನ ದಾಸೋಹ ಮಾಡುವುದರಿಂದ ವಿಯಾರ್ಥಿಗಳಿಗ ಜ್ಞಾನ ಸಂಪಾದಿಸಲು ಅವಕಾಶ ದೊರಕುವುದು. ಇದಲ್ಲದೆ ಇಂದಿನ ವಿದ್ಯಾರ್ಥಿಗಳು ಮುಂದಿನ ನಾಗರಿಕರು. ಇವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ತಮ್ಮ ಕುಟುಂಕ್ಕೆ ಸಹಾಯ ಮಾಡುವುದಲ್ಲದೆ ಸಮಾಜಕ್ಕೂ ಸಹಾಯ ಮಾಡಬಹುದು. ಇದರಿಂದ ಒಳ್ಳೆಯ ಸಮಾಜವನ್ನು ಕಟ್ಟಲು ಸಹಾಯವಾಗುವುದು.

ಇವರು ಅನೇಕ ವರ್ಷಗಳಿಂದ, ಅನೇಕ ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬಂದು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾಜಕ್ಕೆ ಅಮೋಘ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಇವರು ಧರ್ಮಕ್ಷೇತ್ರದಲ್ಲಿಯೂ ಅನೇಕ ಮಹತ್ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಅದರಲ್ಲಿ ವಿಶೇಷವಾಗಿ ಬಸವಣ್ಣನವರ ಮತ್ತು ಶಿವಶರಣರ ತತ್ವಗಳನ್ನು ಪ್ರಚಾರ ಮಾಡುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಇವರು ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ ಮತ್ತು ಮಾಡುತ್ತಲೂ ಇದ್ದಾರೆ.

ಇವರಿಗೆ ಪರಮಾತ್ಮನು ದೀರ್ಘ ಆಯುಷ್ಯ ಮತ್ತು ಆರೋಗ್ಯವನ್ನು ಕೊಟ್ಟು ಇವರಿಂದ ಇನ್ನೂ ಹೆಚ್ಚಿನ ಸಮಾಜ ಸೇವೆಯನ್ನು ಮಾಡಲು ಸಾಮರ್ಥ್ಯವನ್ನು ಕೊಡಲಿ ಎಂದು ಪ್ರಾರ್ಥಿಸುವೆ.

ದಿವ್ಯಚೇತನ

ವೀರೇಂದ್ರ ಪಾಟೀಲ್

ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಮಠಗಳು ವಿದ್ಯಾಪ್ರಸಾರಕ್ಕಾಗಿ ತುಂಬಾ ಪ್ರಯತ್ನ ನಡೆಸುತ್ತಿವೆ. ಶ್ರೀ ಸಿದ್ಧಗಂಗಾ ಮಠ ಇವುಗಳಲ್ಲಿ ಅಗ್ರಗಣ್ಯ ಮತ್ತು ವಿಶಿಷ್ಟವಾದದ್ದು. ಯಾವುದೇ ಧರ್ಮ ಜಾತಿ ಕುಲ ಭೇದವಿಲ್ಲದೇ ಅನಾಥ ಮಕ್ಕಳಿಗೆ ಅನ್ನ-ಆಸರೆ-ವಿದ್ಯೆ ನೀಡಿ ಅವರ ಬಾಳು ಹಸನಾಗಲು ಕಾರಣವಾದ ಸಿದ್ಧಗಂಗಾ ಮಠದ ಪಾತ್ರ ಅಪೂರ್ವವಾದುದು.

ಇದಕ್ಕೆ ಕಾರಣ ಶ್ರೀ ಶಿವಕುಮಾರ ಸ್ವಾಮೀಜಿಯವರು, ಸಿದ್ಧಗಂಗಾ ಕ್ಷೇತ್ರ ಬೇರೆಯಲ್ಲ, ಶ್ರೀ ಶಿವಕುಮಾರ ಸ್ವಾಮಿಗಳು ಬೇರೆಯಲ್ಲ. ಶ್ರೀ ಶಿವಕುಮಾರ ಸ್ವಾಮಿಗಳಲ್ಲದೇ ಸಿದ್ಧಗಂಗೆಯಿಲ್ಲ. ಸುಮಾರು ನಾಲ್ಕು ದಶಕದಳಿಂದ ಶ್ರೀ ಶಿವಕುಮಾರ ಸ್ವಾಮಿಗಳನ್ನು ಬಲ್ಲ ನನಗೆ ಈಗಲೂ ಅವರು ಒಮ್ಮೊಮ್ಮೆ ನಿಗೂಢ. ಒಬ್ಬ ವ್ಯಕ್ತಿ ತನ್ನ ಜೀವಿತ ಕಾಲದಲ್ಲಿ ಇಂತಹ ಅಪೂರ್ವ, ಅದ್ಭುತ ಕಾರ್ಯ ನಡೆಸಲು ಸಾಧ್ಯವೇ ಒಂದು ವೇಳೆ ಇದು ಸಾಧ್ಯವಿದ್ದಲ್ಲಿ, ಅವರು ಸಾಧಾರಣ ಮಾನವರಲ್ಲ, ದೇವಸ್ವರೂಪಿಗಳಾಗಿರಬೇಕು ಅನ್ನಿಸುತ್ತದೆ.

ಆದರೆ ಶ್ರೀ ಸ್ವಾಮೀಜಿಯವರೊಡನೆ ಮಾತನಾಡುವಾಗ ನಮ್ಮ ಅವರ ನಡುವೆ ದೇವರು ಮನುಷ್ಯರಿಗಿರುವ ಅಂತರ ಇದೆ ಎನ್ನಿಸುವುದಿಲ್ಲ. ಯಾವುದೆ ಸಮಸ್ಯೆ ತೊಂದರೆಗಳಿಗೆ ತನ್ನದೇ ಆದ ರೀತಿಯಲ್ಲಿ ಸಮಾಧಾನ ನೀಡುವ, ಮಾರ್ಗದರ್ಶನ ಮಾಡುವ ಈ ವ್ಯಕ್ತಿ ಖಂಡಿತ ನಮ್ಮಂತೆ ಅಲ್ಲ, ವರು ಒಂದು ಅಪೂರ್ವ, ಅಸಾಧಾರಣ ದಿವ್ಯಶಕ್ತಿ ಎನ್ನಿಸುತ್ತದೆ.

ಶ್ರೀ ಸ್ವಾಮೀಜಿಯವರ ಅಪಾರ ಜ್ಞಾನ ಚಿಂತನೆ ಸಹನೆ, ಶ್ರಮ-ಉತ್ಸಾಹ-ದೃಢತೆ ಎಲ್ಲರಿಗೂ ತಿಳಿದದ್ದೆ. ಕರ್ನಾಟಕ ರಾಜ್ಯಾದ್ಯಂತ ಜೋಳಿಗೆ ಹಿಡಿದು ಕಾಣಿಕೆ ಪಡೆದು ಅದನ್ನು ಸಮಾಜದ ಸರ್ವರ ಏಳಿಗೆಗಾಗಿ ನಿತ್ಯ ಜ್ಞಾನದಾಸೋಹ-ನಿತ್ಯ ಅನ್ನ ದಾಸೋಹವನ್ನು ನಡೆಸುತ್ತಿರುವ ದಿವ್ಯಚೇತನವನ್ನು ಪಡೆದಿರುವ ಕರ್ನಾಟಕ, ಭಾರತ ಧನ್ಯ.

ನನಗೆ ತಿಳಿದಿರುವ ಮಟ್ಟಿಗೆ ಒಬ್ಬ ವ್ಯಕ್ತಿ ಏಕಾಂಗಿಯಾಗಿ ಲಕ್ಷಾಂತರ ಜನರಿಗೆ ಅನ್ನ-ಆಸರೆ-ವಿದ್ಯೆ ನೀಡುತ್ತಿರುವ ಉದಾಹರಣೆ ಕರ್ನಾಟಕದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿ ಎಲ್ಲೂ ಇಲ್ಲ ಎಂದೆನಿಸುತ್ತದೆ. ಎಂತಹ ಅಡೆ ತಡೆಗಳಿಗೂ ಹಿಂಜರಿಯದೆ ಸಮಾಜದ ರಾಷ್ಟ್ರದ ಅಭ್ಯುದಯಕ್ಕಾಗಿ ಸದಾ ಚಿಂತಿಸುತ್ತಿರುವ ಅವರ ಸರಳತೆ, ಮಾನವೀಯತೆ, ಕ್ರಿಯಾಶೀಲತೆಗೆ ನಾನು ಮಾರು ಹೋಗಿದ್ದೇನೆ.

ಅವರು ಸಿದ್ಧಗಂಗಾ ಮಠದ ಮೂಲಕ ಮಾಡಿರುವ ಶೈಕ್ಷಣಿಕ ಸಾಧನೆಗೆ ಸಾಟಿಯಿಲ್ಲ. ಇಂದು ಭಾರತ ದೇಶಾದ್ಯಂತ, ಅಷ್ಟೇ ಏಕೆ ಜಗತ್ತಿನಾದ್ಯಂತ ಶ್ರೀ ಸಿದ್ಧಗಂಗಾ ಮಠದಲ್ಲಿ ವಿದ್ಯೆ ಪಡೆದ ಅಸಂಖ್ಯಾತ ಜನರಿದ್ದಾರೆ.

ರಾಜ್ಯ-ರಾಷ್ಟ್ರ-ವಿಶ್ವ ಒಂದು ಪರ್ವಕಾಲದಲ್ಲಿದೆ. ಎಲ್ಲಾ ಬಗೆಯ ಒತ್ತಡಗಳು, ನಾವು ನಂಬಿದ ಮೌಲ್ಯಾಂಶ ನಾಶದಿಂದ ಒಂದು ರೀತಿಯ ಮಂಕು ಕವಿದಿದೆ. ನಮ್ಮ ಬಗ್ಗೆ ನಮಗೆ ನಂಬಿಕೆ ಉಳಿದಿಲ್ಲ. ಇಂತಹ ಸನ್ನಿವೇಶದಲ್ಲಿ ದೈವೀಸ್ವರೂಪರಾದ ಶ್ರೀ ಶಿವಕುಮಾರ ಸ್ವಾಮಿಗಳ ಚಿಂತನೆ, ಮಾರ್ಗದರ್ಶನ ನಮಗೆ ದಾರಿದೀಪ ಹಾಗೂ ಆಶಾಕಿರಣ. ಸಿದ್ಧಗಂಗೆಯ ಈ ದಿವ್ಯಚೇತನ ನಮಗೆ ಸದಾಕಾಲ ದಾರಿ ತೋರಲಿ ಎಂದು ಪ್ರಾರ್ಥಿಸುತ್ತೇನೆ.

ಕಾರುಣ್ಯ ಹೃದಯಿ

ಡಿ.ಎಂ. ಚಂದ್ರಶೇಖರ್

ಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳನ್ನು ಅನೇಕ ಸಭೆ ಸಮಾರಂಭಗಳಲ್ಲಿ ನೋಡಿದ್ದೇನೆ. ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಹೋಗಿ ಅವರ ದರ್ಶನ ಮತ್ತು ಆಶೀರ್ವಾದಗಳನ್ನು ಪಡೆದಿದ್ದೇನೆ.

ಶ್ರೀ ಸಿದ್ಧಗಂಗಾ ಕ್ಷೇತ್ರದ ಮತ್ತು ಪೂಜ್ಯ ಶ್ರೀ ಶ್ರೀಯವರ ಬಗ್ಗೆ ನನ್ನ ನೆನಪಿನಲ್ಲಿ ನಿಲ್ಲುವುದು ಶಾಲಾ ಕಾಲೇಜುಗಳು ಪ್ರಾರಂಭವಾಗುವುದಕ್ಕೆ ಕೆಲವು ದಿನಗಳು ಮುಂಚಿತವಾಗಿ ನಾನು ಆ ಕ್ಷೇತ್ರದಲ್ಲಿ ನೋಡಿದ್ದು.

ತಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂಬ ಆಕಾಂಕ್ಷೆಯುಳ್ಳ ಗ್ರಾಮಾಂತರ ಬಡಜನರು ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಆ ಮಕ್ಕಳ ಬಟ್ಟೆ ಬರೆಗಳ ಪೆಟ್ಟಿಗೆಗಳ ಸಹಿತ ಶ್ರೀ ಕ್ಷೇತ್ರಕ್ಕೆ ಬರುತ್ತಾರೆ. ಅವರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವಂತೆ ಪ್ರಾರ್ಥಿಸುತ್ತಾರೆ.

ಶ್ರೀ ಕ್ಷೇತ್ರದ ಉಚಿತ ವಿದ್ಯಾರ್ಥಿನಿಲಯದ ಕೋಣೆಗಳಲ್ಲಿ ಇರುವ ಸ್ಥಳಾವಕಾಶಕ್ಕಿಂತ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಯಾವಾಗಲೂ ಇರುತ್ತಾರೆ. ಬಹು ಕುಟುಂಬಗಳ ಚರಿತ್ರೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವುದಕ್ಕೆ ಮೊದಲು ಸಾರಿ ಈ ವಿದ್ಯಾರ್ಥಿಗಳು ಬಂದಿರುತ್ತಾರೆ. ಅವರಿಗೆ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಅವಕಾಶವಿಲ್ಲವಿದ್ದರೆ ಹೆಚ್ಚಿನ ವಿದ್ಯಾಭ್ಯಾಸ ಮಾಡಿಸಲಾರರು.

ಗ್ರಾಮಾಂತರ ಬಡಜನರ ಬಗ್ಗೆ ಹೆಚ್ಚಿನ ಸಹಾನುಭೂತಿ ಮತ್ತು ವಿದ್ಯೆಯ ಬಗ್ಗೆ ಅಪಾರ ಒಲವು ಇರುವ ಕರುಣಾ ಹೃದಯರಾದ ಶ್ರೀ ಶ್ರೀಯವರು ಈ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ನೀಡಿ ಹೇಗಾದರೂ ವಿದ್ಯಾರ್ಥಿನಿಲಯವನ್ನು ನಡೆಸೋಣ ಎಂದು ಆ ಬಡ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸಿದ್ದೇ ಅಪರೂಪ.

ಗಗನಕ್ಕೇರಿರುವ ಈಗಿನ ಆಹಾರ ಪದಾರ್ಥಗಳ ಬೆಲೆಗಳಲ್ಲಿ ಶ್ರೀಮಠದ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿದರೆ ಈ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿರುವುದು ಒಂದು ಪವಾಡವೇ ಸರಿ.

ದಾರಿದೀಪ

ಡಾ. ಡಿ.ಎಂ. ನಂಜುಂಡಪ್ಪ

ತ್ರಿವಿಧ ದಾಸೋಹಿ ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದರ್ಶನವನ್ನು ಮೊದಲನೇ ಬಾರಿಗೆ ನಾನು ಪಡೆದದ್ದು ೧೯೬೫ ರಲ್ಲಿ. ಅದು ಕರ್ನಾಟಕ ವಿಶ್ವ ವಿದ್ಯಾನಿಲಯವು ಶ್ರೀಗಳವರಿಗೆ ಗೌರವ ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿದ ಘಟಿಕೋತ್ಸವ ಸಂದರ್ಭದಲ್ಲಿ. ಜಾತಿ, ಮತ, ಧರ್ಮಗಳ ಎಲ್ಲೆ ಮೀರಿ ಅನ್ನ ಹಾಗೂ ಜ್ಞಾನ ದಾಸೋಹಗಳನ್ನು ನಡೆಸುತ್ತಿರುವುದು ಹಾಗೂ ಮಾನವ ಕಲ್ಯಾಣಕ್ಕಾಗಿ ಧರ್ಮಪ್ರಚಾರ ಮಾಡುತ್ತಿರುವುದು ಸಿದ್ಧಗಂಗಾ ಕ್ಷೇತ್ರದ ವೈಶಿಷ್ಟ್ಯ. ಕಳೆದ ೭೫ ವರ್ಷಗಳಿಂದಲೂ ನಡೆದು ಬಂದಿರುವ ಈ ಪವಿತ್ರ ದಾಸೋಹದ ಮತ್ತು ಮೌಲ್ಯಾಧಾರಿತ ಪ್ರಯೋಜನ ಪಡೆಯುವವರ ಸಂಖ್ಯೆ ಸಾವಿರಾರು. ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದಿರುವ ಸಾಧನೆ ಸಿದ್ಧಿಗಳಿಗೆ ಕಾರಣಕರ್ತೃಗಳಾದ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಇದಕ್ಕೆ ಕಾರಣ ಕರ್ತೃಗಳಾಗಿದ್ದರೂ ಇಂತಹ ಮಹತ್ ಸಾಧನೆಗಳನ್ನು ಸಾಧಿಸಿಲ್ಲ ಎನ್ನುವವರಂತೆ, ನಿರಾಡಂಬರ ಹಾಗೂ ಸದ್ದು ಇಲ್ಲದ ಕಾಯಕದಲ್ಲಿ ನಿರತರಾಗಿದ್ದಾರೆ. ಕಾರ್ಯ ನಿರ್ವಹಣೆಯೇ ಪೂಜೆ ಎಂಬ ಶ್ರೀ ಬಸವೇಶ್ವರರ ಮಾತನ್ನು ಎಲ್ಲಾ ಅರ್ಥದಲ್ಲಿಯೂ ಕಾರ್ಯಕ್ಕೆ ತಂದಿರುವ ದಿವ್ಯಜ್ಯೋತಿಯಂತೆ ಶ್ರೀಗಳು ಬೆಳಗುತ್ತಿದ್ದಾರೆ.

ಮೂಲತಃ ನಾನು ಸುತ್ತೂರು ಮಠದ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರಿನಲ್ಲಿ ನಡೆಸುತ್ತಿದ್ದ ಉಚಿತ ವಿದ್ಯಾರ್ಥಿನಿಲಯದಲ್ಲಿ ೧೯೪೮ - ೫೨ ರಲ್ಲಿ ಆಶ್ರಯ ಪಡೆದು ಅವರ ಆಶೀರ್ವಾದದಿಂದ ಬೆಳೆದು ಸೇವೆ ಸಲ್ಲಿಸುತ್ತಿರುವೆನಾದರೂ, ಶ್ರೀ ಸಿದ್ಧಗಂಗಾ ಕ್ಷೇತ್ರದ ಅಧ್ಯಕ್ಷರಾದ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ ಆಶೀರ್ವಾದದಲ್ಲಿಯೂ ನಾನು ಬೆಳೆದು ಬಂದಿದ್ದೇನೆ ಎಂದರೆ ತಪ್ಪಾಗಲಾರದು. ಈಗ್ಗೆ ೩೦ ವರ್ಷಗಳ ಹಿಂದೆ ಅವರನ್ನು ಕರ್ನಾಟಕದ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಶ್ರೀಗಳಿಗೆ ಗೌರವಾರ್ಥ ಡಾಕ್ಟರೇಟ್ ಪದವಿ ಸ್ವೀಕರಿಸುವ ಸಂದರ್ಭದಲ್ಲಿ ಕಂಡಾಗ ಅದು ಏನೋ ಒಂದು ಊಹೆಗೂ ಮೀರಿದ ಮಹಾನ್ ಶಕ್ತಿ ಅವರ ಉಜ್ವಲ ನೇತ್ರಗಳಿಂದ ಬಂದ ಅನುಭವ ನನಗಾಯಿತು. ಧರ್ಮಗುರುಗಳಾದ ಶ್ರೀಗಳವರು ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ತಂದೆ ತಾಯಿಗಳಾಗಿ ಅವರ ಪ್ರಗತಿಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಆ ಮುಖೇನ ಭಗವಂತನ ಸೇವೆಯನ್ನು ಸಾಧಿಸಿರುವ ಮಹಾಸ್ವಾಮಿಗಳವರ ಒಂದು ದರ್ಶನದಿಂದ ನನ್ನ ಮನಸ್ಸಿನಲ್ಲಿ ಪಾವಿತ್ರ್ಯತೆಯ ಮತ್ತು ಜನರ ಸೇವೆ ಮಹತ್ವದ ಛಾಯೆ ಮೂಡಿ ಬಂದಿದ್ದು ನನಗೆ ಅರಿವೇ ಇಲ್ಲದ ಘಟನೆ. ಆ ದಿನ ಮಹಾಸ್ವಾಮಿಗಳವರು ಗೌರವ ಪದವಿಯನ್ನು ಸ್ವೀಕರಿಸುತ್ತಾ ಉತ್ತರ ರೂಪದಲ್ಲಿ ಹೇಳಿದ ಸಂದೇಶ ಪ್ರಾಮಾಣಿಕ ಹಾಗೂ ಮಾನವೀಯತೆಗೆ ಸ್ಪಂದಿಸಿದ ಮಹಾನ್ ವ್ಯಕ್ತಿ ಮತ್ತು ದೈವಾಂಶ ಸಾಕ್ಷಾತ್ಕಾರ ಹೊಂದಿದವರಿಂದ ಬಂದ ಸನಾತನ ಧರ್ಮದ ಪರಾಕಾಷ್ಠೆಯ ಸಿಂಹವಾಣಿಯಂತಿತ್ತು. ಮನಸ್ಸಿನ ಅಂತರಾಳದಿಂದ ಶಾಂತಿಯ ನೆಲೆಗಾಗಿ ಪರದಾಡುತ್ತಿದ್ದ ವಿದ್ಯಾರ್ಥಿಗಳು ಹಾಗೂ ಅಂದು ನೆರೆದಿದ್ದ ಜನಸ್ತೋಮಕ್ಕೆ ಬಂದ ಮಾತುಗಳು ಗರ್ಜನೆಯ ಕಂಠದಿಂದ ಹೊರಡದಿದ್ದರೂ, ಅವು ಅತ್ಯಂತ ಮಧುರವಾಗಿದ್ದುದು ಆಶ್ಚರ್ಯವೆನಿಸಲಿಲ್ಲ. ಕಠೋರ ತಪಸ್ಸನ್ನು ಆಚರಿಸುವ ಶ್ರೀಗಳವರ ದೈವಾನುಭವದ ಅಮೃತವಾಗಿತ್ತು. ಒಂದು ಜಾತ್ಯತೀತ ಸಮಾಜವಾದಿ ಹಾಗೂ ಮಾನವ ಕುಲಕ್ಕೆ ಕ್ರಾಂತಿಕಾರಿ ಎನಿಸಿದ ಮಹತ್ ಸಾಧನೆಯನ್ನು ಹೊತ್ತು ತಪಸ್ಸು ಮತ್ತು ಧರ್ಮಗುರುಗಳ ಹಿಮಾಲಯದಂತಹ ಜವಾಬ್ದಾರಿಯನ್ನು ಎಳ್ಳಷ್ಟೂ ಶ್ರಮವಿಲ್ಲದೆ ಹೊತ್ತಿದ್ದು ಶ್ರೀಗಳವರ ಬೆನ್ನು ಸ್ವಲ್ಪಮಟ್ಟಿಗೆ ಬಾಗಿದೆಯೇನೋ ಎಂಬ ಭಾವನೆ ಅನಿವಾರ್ಯವಾಯಿತು. ಅವರ ಪಾಂಡಿತ್ಯ, ಧರ್ಮ ಬೋಧನೆಯ ವೈಚಾರಿಕತೆ, ಸತ್ಯವನ್ನು ಅರಿಯಲು ಸದಾ ಅಂತರ್ಮುಖಿಯಾಗಿ ಶ್ರಮಜೀವಿಗಳ ಸೂಕ್ತ ಅವಶ್ಯಕತೆಯನ್ನು ಅರಿತು ಪ್ರಯತ್ನಿಸುವಂತಹ ಸ್ಫೂರ್ತಿ ಅವರಿಂದ ಹೊಮ್ಮಿ ಬರುತ್ತಿತ್ತು. ಆ ತತ್‌ಕ್ಷಣ ನನಗೆ ಹೊಳೆದದ್ದು ಶ್ರೀ ಸಿದ್ಧಗಂಗಾ ಕ್ಷೇತ್ರದ ಮಹಾಸ್ವಾಮಿಗಳವರು ಮತ್ತು ಕರ್ನಾಟಕದ ಇತರ ವೀರಶೈವ ಮಠಗಳ ಜಗದ್ಗುರುಗಳು ಜಾತ್ಯತೀತತೆಯನ್ನು ಜಾರಿಗೆ ತರುವಲ್ಲಿ ಮತ್ತು ವಿದ್ಯಾ ದಾಸೋಹ ಹಾಗೂ ಅನ್ನ ದಾಸೋಹದ ಮೂಲಕ ದಾರಿ ಕಾಣದ ಯುವಕರಿಗೆ, ಗ್ರಾಮೀಣ ಪ್ರದೇಶದ

ಕಡುಬಡವರಿಗೆ ಮಹಾಶಕ್ತಿಯನ್ನು ತುಂಬುವಲ್ಲಿ ಅತ್ಯಂತ ಪ್ರಭಾವಕಾರಿ ಪಾತ್ರವನ್ನು ವಹಿಸಿರುವುದು ದೈವನಿಯಮಿತವಲ್ಲದೆ ಮತ್ತೇನು? ಎಂಬ ಸತ್ಯದ ಅರಿವು. ಕರ್ನಾಟಕದ ಧಾರ್ಮಿಕ ಮಠಗಳ ಇತಿಹಾಸದಲ್ಲಿ ನಾವು ಉನ್ನತವಾದ ಸೇವೆಯ ರೂಪವನ್ನು ವೀರಶೈವ ಮಠಗಳ ಸಾಧನೆಯಲ್ಲಿ ಕಾಣುತ್ತೇವೆ. ಮಾನವ ಸಮುದಾಯವನ್ನು ಬದುಕಿಸಿ, ಆ ಮುಖೇನ ಸ್ವರ್ಗಕ್ಕಿಂತಲೂ ಮಿಗಿಲಾದ ತಾಯಿನಾಡಿನ ಸೇವೆಗೆ ಯುವಕರಿಗೆ ತರಬೇತಿ ಹಾಗೂ ನಿಯಮಪಾಲನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಅವಕಾಶವನ್ನು ಉಂಟುಮಾಡುವ ಈ ತಪಸ್ವಿಗಳ ತ್ಯಾಗ ಹಾಗೂ ಮಾನವೀಯತೆಯ ಏಕೀಕರಣದ ದೂರದೃಷ್ಟಿಯನ್ನು ಎಷ್ಟು ವರ್ಣಿಸಿದರೂ ಸಾಲದು.

ನಾನು ನನ್ನ ಬಿ.ಎ. ಆನರ್ಸ್ ಪದವಿ ಅಭ್ಯಾಸಕ್ಕಾಗಿ ಮೈಸೂರಿನಲ್ಲಿರುವ ಮಹಾರಾಜ ಕಾಲೇಜಿಗೆ ೧೯೪೮ ರಲ್ಲಿ ಹೋದಾಗ ಬೇರೆ ಯಾವ ನಗರಗಳಲ್ಲಿಯೂ ಇಂತಹ ವಿದ್ಯಾಭ್ಯಾಸಕ್ಕೆ ಅವಕಾಶವಿರಲಿಲ್ಲ. ನನ್ನ ಅಜ್ಞಾನದಿಂದಲೋ ಏನೋ ನನಗೆ ಶ್ರೀ ಸಿದ್ಧಗಂಗಾ ಕ್ಷೇತ್ರದ ಸ್ವಾಮಿಗಳವರು ಒದಗಿಸುವ ಅನುಕೂಲಗಳ ಬಗ್ಗೆ ತಿಳಿದಿರಲಿಲ್ಲ. ಆದ್ದರಿಂದ ಸತತವಾಗಿ ಅವರ ಆಶೀರ್ವಾದವನ್ನು ಪಡೆಯಬಹುದಾದ ಅವಕಾಶಗಳು ನನ್ನ ಪಾಲಿಗೆ ಕಡಿಮೆಯಾದವು. ಇದನ್ನು ಸರಿತೂಗಿಸಲು ನನಗೆ ಸಿಕ್ಕ ಕೆಲವು ಸಂದರ್ಭಗಳಲ್ಲಿ ಶ್ರೀಗಳವರ ಕಾಯಕ ಮತ್ತು ಜನತೆಯ ಬಗ್ಗೆ ಕಳಕಳಿಯನ್ನು ಮೆಚ್ಚಿ ಅವರಿಗೆ ನನ್ನ ಪ್ರಾರ್ಥನಾ ಪೂರ್ವಕ ಗೌರವಗಳನ್ನು ದೂರದಿಂದಲೇ ಅರ್ಪಿಸಿಕೊಂಡು ಬಂದಿದ್ದೇನೆ. ಈ ಸಂದರ್ಭದಲ್ಲಿ ಓರ್ವ ಖ್ಯಾತ ಕವಿ ವ್ಯಕ್ತಿ ಎಷ್ಟು ಋಣಿ ಎಂಬುದನ್ನು ಮನುಷ್ಯನ ಬಾಳನ್ನು ವರ್ಣಿಸುತ್ತಾ ಅದು 'ಋಣದ ರತ್ನಗಣಿ' ಎಂದು ಹೇಳಿರುವ ಮಾತು ಜ್ಞಾಪಕಕ್ಕೆ ಬರುತ್ತದೆ. ಇದನ್ನು ನೆನೆದರೆ ಧನ್ಯತೆಯ ಹಾಗೂ ಕೃತಜ್ಞತೆಯ ಅನುಭವ ನಮ್ಮನ್ನು ತುಂಬಿಕೊಳ್ಳುತ್ತದೆ. ಬಾಳಿಗೆ ನೆರವು ಮತ್ತು ಬೆಳಕನ್ನು ಕೊಡುವ ಶ್ರೀ ಸಿದ್ಧಗಂಗಾ ಕ್ಷೇತ್ರದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಕಾರ್ಯತತ್ಪರತೆ, ದಿವ್ಯತೆ ಮತ್ತು ನಿರಂತರವಾದ ನೆಮ್ಮದಿಯ ತಾಣವಾಗಿದೆ.

ಬಹಳ ದಿನಗಳ ಅನಂತರ ನಡೆದ ಘಟನೆಗಳನ್ನು ನಾನು ಇಲ್ಲಿ ಸ್ಮರಿಸಲು ಇಚ್ಛಿಸುತ್ತೇನೆ. ಒಮ್ಮೆ ನಾನು ಕರ್ನಾಟಕ ಸರ್ಕಾರದ ಯೋಜನಾ ಮತ್ತು ಸಾಂಸ್ಥಿಕ ಹಣಕಾಸಿನ ಆಯುಕ್ತ ಹಾಗೂ ಸರ್ಕಾರದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಶ್ರೀಗಳವರ ಇಚ್ಛೆಯಂತೆ ಅವರ ಆಶ್ರಯದಲ್ಲಿ ನಡೆಯುತ್ತಿರುವ ತಾಂತ್ರಿಕ ವಿಜ್ಞಾನ ಕಾಲೇಜಿನ ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದೆ. ಶ್ರೀಗಳವರು ಅಧ್ಯಕ್ಷತೆ ವಹಿಸಿದ್ದರು. ಅವರ ಸಮ್ಮುಖದಲ್ಲಿ ವಿದ್ಯಾರ್ಥಿ ಸಂಘದ ಸಮುದಾಯವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಸ್ವಲ್ಪ ಕಷ್ಟವೇನೋ ಎಂದು ಎನ್ನಿಸಿತು. ಆದರೆ ಅವರನ್ನು ನೋಡುತ್ತಲೇ ಬಂದ ಸ್ಫೂರ್ತಿ ನನ್ನ ಕೆಲಸವನ್ನು ಹಗುರ ಮಾಡಿತು. ವಿದ್ಯಾರ್ಥಿಗಳಿಗೆ ಮೌಲ್ಯಗಳ ಬಗ್ಗೆ ಅದರಲ್ಲಿಯೂ ಸಹನೆ, ಪಾವಿತ್ರ್ಯತೆ, ಸಂಯಮ, ತ್ಯಾಗ, ಕರುಣೆ, ದಾನ ಮುಂತಾದ ಅಂಶಗಳನ್ನು ಒಳಗೊಂಡ ಮೌಲ್ಯಗಳನ್ನು ವಿದ್ಯಾರ್ಥಿಗಳು ಮೊದಲಿನಿಂದಲೂ ಅವರ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನು ಹೇಳುತ್ತಿದ್ದಂತೆಯೇ ಶ್ರೀಗಳವರು ನನ್ನ ಮಾತು ಸೂಕ್ತ ಎಂಬ ಅರ್ಥವನ್ನು ಕೊಡುವಂತೆ ತಮ್ಮ ತಲೆದೂಗಿಸುತ್ತಿದ್ದರು. ಇಂತಹ ಮೌಲ್ಯಾಧಾರಿತ ಶಿಕ್ಷಣದ ಕ್ರಮವನ್ನು ಜಾರಿಗೆ ತರುವಲ್ಲಿ ನಮ್ಮ ದೇಶ ಹಾಗೂ ನಮ್ಮ ಶಿಕ್ಷಣತಜ್ಞರು ಅಯಶಸ್ವಿಯಾಗಿದ್ದಾರೆ. ವಿಶ್ವ ವಿದ್ಯಾನಿಲಯದ ಶಿಕ್ಷಣದಲ್ಲಿ ಅವಶ್ಯಕವಾಗಿ ಇರಬೇಕಾದ ಮೌಲ್ಯಗಳ ಜ್ಞಾನ ಇಲ್ಲದಿರುವ ಸನ್ನಿವೇಶದಲ್ಲಿ ಶ್ರೀ ಶ್ರೀ ಸಿದ್ಧಗಂಗಾ ಕ್ಷೇತ್ರಗಳಂತಹ ಮಠಗಳಲ್ಲಿ ಅದರಲ್ಲೂ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಆಶ್ರಯದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಈ ಮೌಲ್ಯಾಧಾರಿತ ಶಿಕ್ಷಣಕ್ಕೆ ಅವಶ್ಯಕ ವಾತಾವರಣ ಇರುವುದು ಒಂದು ಮಹತ್ವದ ಸಂಗತಿ ಎಂಬ ಅರಿವು ನನಗಿತ್ತು. ಆಶೀರ್ವಚನ ರೂಪದಲ್ಲಿ ಅಧ್ಯಕ್ಷ ಭಾಷಣ ಮಾಡುವಾಗ ಶ್ರೀ ಸ್ವಾಮಿಗಳವರು ಮೌಲ್ಯಗಳ ಮಹತ್ವವನ್ನು ವಿಸ್ತರಿಸಿ, ಅವು ಅವಿಭಾಜ್ಯವೆಂದೂ, ಎಲ್ಲಾ ಕಾಲಕ್ಕೂ, ಎಲ್ಲಾ ಜನರಿಗೂ ಅನ್ವಯಿಸುವ ಮಾತುಗಳೆಂದೂ ಅವಕ್ಕೆ ಕಾಲದ ಪರಿಮಿತಿ ಇಲ್ಲವೆಂದೂ ಆ ಮೌಲ್ಯಗಳನ್ನು ಬಳಸಿಕೊಳ್ಳುವುದಲ್ಲದೆ ತಮ್ಮ ಕಾರ್ಯದಲ್ಲಿ ಅವನ್ನು ಅಳವಡಿಸಿಕೊಳ್ಳಬೇಕೆಂದು ಕರೆ ಕೊಟ್ಟರು. ಇಂದಿನ ಮೌಲ್ಯರಹಿತ ಸಮಾಜ ಮತ್ತು ಮೌಲ್ಯರಹಿತ ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಆಗಬೇಕೆಂದು ಇಚ್ಛಿಸುವವರ ಸಂಖ್ಯೆ ಬಹಳ. ಆದರೆ ಇದಕ್ಕೆ ಬೇಕಾದ ಪರಿಸರ ಮತ್ತು ರಚನಾತ್ಮಕ ಮಾರ್ಗದರ್ಶನ ಕೊಡುವಂತಹ ಭೀಷ್ಮರು ಬೇಕು. ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಪಡೆದಿರುವ ಶ್ರೀ ಸಿದ್ಧಗಂಗಾ ಕ್ಷೇತ್ರ ಬರೀ ಅಂತಹ ಭೀಷ್ಮಕ್ಷೇತ್ರವಾಗಿರುವುದಲ್ಲದೆ ಸಮಾಜದಲ್ಲಿ

ಶಾಂತಿ ಸಂಯಮಗಳು ರೂಪವೆತ್ತಿರುವ ವ್ಯಕ್ತಿಯಿಂದ ''ನಾನು'' ಎಂಬ ಅಹಂಭಾವವನ್ನು ಬಿಟ್ಟು ''ವಿಕಸಿತ'' ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಿಶ್ರಾಂತವಾಗಿ ಸ್ಫೂರ್ತಿ ನೀಡುವ ಗಂಗಾಕ್ಷೇತ್ರವಾಗಿದೆ.

ಮತ್ತೊಂದು ಘಟನೆ ಅದು ಶ್ರೀಗಳವರು ನಡೆಸುತ್ತಿರುವ ತಾಂತ್ರಿಕ ವಿಜ್ಞಾನ ಕಾಲೇಜಿನಲ್ಲಿ ಉದ್ಭವಿಸಿದ ಯುವಕರ ಸಮಸ್ಯೆ ಬಗ್ಗೆ. ಅವರ ಕಾಲೇಜಿನಲ್ಲಿ ''ರ್‍ಯಾಗಿಂಗ್'' ವಿಕೃತ ಪಿಡುಗಿನ ಹಾವಳಿಯನ್ನು ಅನುಭವಿಸುತ್ತಿದ್ದ ಸಮಯ. ಶ್ರೀಗಳವರು ಇಂತಹ ಒಂದು ದುಷ್ಕರ್ಮ ನಡೆಯುತ್ತಿದ್ದುದನ್ನು ಬುಡ ಸಮೇತ ಕಿತ್ತೊಗೆಯಬೇಕೆಂಬ ನಿರ್ಧಾರದಿಂದ ವಿದ್ಯಾರ್ಥಿಗಳೆಲ್ಲರ ಒಂದು ಸಮಾವೇಶವನ್ನು ಏರ್ಪಡಿಸಿದ್ದು ಅದರಲ್ಲಿ ನನ್ನನ್ನು ಭಾಗವಹಿಸಲು ಆಹ್ವಾನಿಸಿದ್ದರು. ಆ ಸಂದರ್ಭದಲ್ಲಿ ಮಾತನಾಡಿದ ನಾನು ರ್‍ಯಾಗಿಂಗ್ ಬೆಳೆದು ಬರುವುದಕ್ಕೆ ಅನೇಕ ಕಾರಣಗಳುಂಟು. ಅದರಲ್ಲಿ ಮುಖ್ಯವಾದವು ತಂದೆ ತಾಯಿಗಳ ಪ್ರೇಮ ವಿಶ್ವಾಸದ ಕೊರತೆ, ಜೀವನದ ಗುರಿಯನ್ನು ಅರಿಯದಿರುವ ಸನ್ನಿವೇಶ, ಮೌಲ್ಯರಹಿತ ಸಮಾಜ, ವಿದ್ಯಾಭ್ಯಾಸ ಮುಗಿದ ನಂತರ ಎದುರಿಸಬೇಕಾದ ಅನಿಶ್ಚಿತ ವಾತಾವರಣ, ನಿರುದ್ಯೋಗದ ಭಯಂಕರ ಸಮಸ್ಯೆ ಮುಂತಾಗಿ ವಿಶ್ಲೇಷಿಸಿ, ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಬಂದಿರುವ ಸಂಸ್ಕೃತಿಯ ಬಗ್ಗೆ ಹಾಗೂ ವಾಸ್ತವಸ್ಥಿತಿಯ ಪ್ರಸ್ತಾಪ ಮಾಡಿದೆ. ಒಂದು ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮಲ್ಲಿ ಅಡಗಿರುವ ಕ್ರಿಯಾಶಕ್ತಿಯ ಬಗ್ಗೆ ಅರಿವು ಇಲ್ಲದೆ ಕಾಲಹರಣೆಗೆ ಒಂದು ಅವಕಾಶ ಕೊಡುವ ಅಸಂಸ್ಕೃತ ಮತ್ತು ಅನಾಗರೀಕ ನಡವಳಿಕೆಯ 'ರ್‍ಯಾಗಿಂಗ್' ಅನ್ನು ಬಿಂಡಿಸಿ ಈ ಘಳಿಗೆಯಿಂದ ಇದನ್ನು ಬೇರು ಸಮೇತವಾಗಿ ತಮ್ಮ ಮನಸ್ಸಿನಿಂದ ವಿದ್ಯಾರ್ಥಿಗಳು ಕಿತ್ತೊಗೆಯಬೇಕೆಂದು ಶ್ರೀಗಳವರು ಗರ್ಜಿಸಿದರು. ಇದಕ್ಕೆ ಬೇಕಾದಂತಹ ಶಬ್ದಕ್ಕಿಂತಲೂ ವೇಗವಾಗಿ ಚಲಿಸುವ ಮನಸ್ಸಿನ ಮೇಲಿನ ನಿಯಂತ್ರಣ ಶ್ರೀಗಳವರ ಆಶೀರ್ವಾದ ಶಕ್ತಿಯಿಂದ ಬರಬಲ್ಲದು.

ಅವರ ಆಧ್ಯಾತ್ಮಿಕ ಶಕ್ತಿಯ ಮುಂದೆ ವಿದ್ಯಾರ್ಥಿಗಳಲ್ಲಿ ಎಲ್ಲಿಯೋ ಬಂದು ಸೇರಿಕೊಂಡ ದೌರ್ಜನ್ಯದ ನಡವಳಿಕೆ ಸುಟ್ಟು ಭಸ್ಮವಾದೀತು ಎಂಬ ವಿಶ್ವಾಸ ನನಗೆ ಬಂತು. ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಜೀವನದಲ್ಲಿ ಸಾಧಿಸಬೇಕಾದ ಗುರಿ ಒಂದು ಉಂಟು. ಅದಕ್ಕಾಗಿ ನಾವೆಲ್ಲರೂ ಜನ್ಮ ತಾಳಿದ್ದೇವೆ. ಇಂತಹ ಪವಿತ್ರ ಕರ್ತವ್ಯವನ್ನು ಮರೆತು ಹೇಡಿಯಂತೆ ಓಡಿ ಹೋಗುವ ಮನೋಭಾವನೆಗಳನ್ನು ತಡೆಗಟ್ಟಿ ಹಿಡಿತದಲ್ಲಿಟ್ಟು ಜ್ಞಾನಾರ್ಜನೆ ಮಾಡುವುದಕ್ಕೆ ಮತ್ತು ವಿಕಸಿತ ವ್ಯಕ್ತಿತ್ವವನ್ನೂ, ನಡತೆಯನ್ನೂ ರೂಪಗೊಳಿಸುವುದು ಸಾಧ್ಯ. ಸಾಧು ಸಂತರು ಮಾಡಿರುವ ಸೇವೆ ಮತ್ತು ಅದರ ಫಲ ಇದಕ್ಕೆ ಸಾಕ್ಷಿ. ಶ್ರೀ ಸ್ವಾಮಿ ವಿವೇಕಾನಂದರು ಹೇಳಿರುವಂತೆ 'ಯಾರು ಇತರರಿಗಾಗಿ ಬದುಕುತ್ತಾರೋ ಅವರು ಮಾತ್ರ ಬದುಕಿದಂತೆ ; ಇತರರು ಬದುಕಿದ್ದರೂ ಸತ್ತಿರುವಂತೆ' ಎಂಬ ಮಾತನ್ನು ಎಲ್ಲರೂ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದು. ಸಮಾಜ ಸೇವೆಯ ಮೂಲಕ ಮತ್ತು ಬಡ ಜನರ ಸೇವೆಯ ಮೂಲಕ ವ್ಯಕ್ತಿಯಲ್ಲಿರುವ ದೈವಿಕ ಶಕ್ತಿಯನ್ನು ರೂಪಿಸಿಕೊಂಡು ಜನರ ಹಿತಕ್ಕಾಗಿ ದುಡಿಯುವುದಕ್ಕೆ ಬೇಕಾದ ಎಲ್ಲ ಶಕ್ತಿ ನೆರವು ಅಂತರಾತ್ಮದಿಂದ ಬರಬಲ್ಲದು. ಪಾರಮಾರ್ಥಿಕ ವಿಷಯಗಳ ಬಗ್ಗೆ ಹಿಡಿತವಿಟ್ಟು ಆಧ್ಯಾತ್ಮಿಕವಾಗಿ ಬೆಳೆಯಲು ಪ್ರಯತ್ನಿಸಬೇಕು. ''ಬಹಳ ಕಾಲ ನಿದ್ದೆಯಲ್ಲಿದ್ದೀರಿ. ಸಾಕು ಈ ನಿದ್ದೆ. ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲಬೇಡಿ'' ಎಂಬ ವಿವೇಕಾನಂದರ ಸಿಂಹವಾಣಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲಾಯಿತು. ಶ್ರೀಗಳವರು ತಮ್ಮ ಆಶೀರ್ವಚನದಲ್ಲಿ ವಿದ್ಯಾರ್ಥಿಗಳಿಗೆ ಹೇಳಿದರು : ನೀವು 'ರ್‍ಯಾಗಿಂಗ್'ನಂತಹ ವಿಕೃತ ಪಿಡುಗಿನಿಂದ ಹೊರ ಬರಲು 'ಅಂತರ್‌ಮುಖಿಗಳಾಗಬೇಕು' (ಟರ್ನ್ ಯುವರ್ ಮೈಂಡ್ ಇನ್‌ವರ್ಡ್). ಇದರಿಂದ ನಿಮ್ಮ ಅಜ್ಞಾನದಿಂದ ಪ್ರಚೋದಿತವಾದ ಅನಾಗರಿಕ ನಡವಳಿಕೆ ನಾಶವಾಗಲು ಬೇಕಾಗುವ ಶಕ್ತಿ ನಿಮಗೆ ಬರುತ್ತದೆ.'' ಇದನ್ನು ಮೆಲುಕು ಹಾಕಿದ ನಾನು ಶ್ರೀಗಳಂಥವರ ಮಹಾಪುರುಷರು ಗ್ರಾಮೀಣ ಪ್ರದೇಶಗಳ ಬಡವರ ಬಂಧು ; ಬಡವರ ಮತ್ತು ಬಿದ್ದವರ ಏಳಿಗೆಗಾಗಿ ಕರ್ಪೂರದಂತೆ ತನ್ನನ್ನೇ ಸುಟ್ಟುಕೊಂಡು ಬೆಳಕನ್ನು, ಭಕ್ತಿ ಮತ್ತು ಪ್ರಗತಿಯ ಮಾರ್ಗದರ್ಶನವನ್ನು ತೋರಿಸುವವರು. ಆ ಸಂದರ್ಭದಲ್ಲಿ ಶರಣರು ಮಹಾಪುರುಷರ ಬಗ್ಗೆ ಹೇಳಿರುವ ಮಾತು ಅರ್ಥಗರ್ಭಿತ :

''ಪುಣ್ಯದಂತೆ ಬಪ್ಪರು. ಜ್ಞಾನದಂತೆ ಇಪ್ಪರು.
ಮುಕ್ತಿಯಂತೆ ಹೋಹರು. ನೋಡಯ್ಯಾ
ಉರಿಲಿಂಗದೇವ ನಿಮ್ಮ ಶರಣರು''.

ಕೊನೆಯ ಮಾತು : ಇದ್ದಕ್ಕಿದ್ದಂತೆ ಒಂದು ದಿನ ಶ್ರೀಗಳವರ ಇಚ್ಛೆಯಂತೆ ಅವರ ಸಂಸ್ಥೆಯಲ್ಲಿ ಗೌರವಾರ್ಥ ಸೇವೆಯನ್ನು ಸಲ್ಲಿಸುತ್ತಿರುವ ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಜಿ.ಎಸ್. ಮುದ್ದಪ್ಪನವರು ಮತ್ತು ನಿವೃತ್ತ ಐ.ಪಿ.ಎಸ್. ಅಧಿಕಾರಿ ಶ್ರೀ ಹಸ್ಸಿ ಅವರು ರಾಜ್ಯ ಯೋಜನೆ ಮಂಡಲಿಯ ನನ್ನ ಕಛೇರಿಗೆ ಬಂದು ಶ್ರೀಗಳವರು ಇಷ್ಟರಲ್ಲೇ ನಡೆಯಲಿರುವ ಸಿದ್ಧಗಂಗಾ ಕ್ಷೇತ್ರದ ವಾರ್ಷಿಕ ಸಮಾರಂಭವೊಂದರಲ್ಲಿ ನಿಮ್ಮನ್ನು ನೀವು ಮಾಡಿರುವ ಸೇವೆಗಾಗಿ ಗೌರವಿಸಬೇಕೆಂದು ಇಚ್ಛೆ ವ್ಯಕ್ತಗೊಳಿಸಿರುವುದಾಗಿಯೂ, ಅದಕ್ಕಾಗಿ ನಾನು ಆ ಸಂದರ್ಭದಲ್ಲಿ ಭಾಗವಹಿಸಿ ಅದನ್ನು ಸ್ವೀಕರಿಸಬೇಕೆಂದು ತಿಳಿಸಿದರು. ಶ್ರೀಗಳವರಿಂದ ಬರುವ ಎಲ್ಲಾ ಕರೆಗಳು ದೈವಾನುಗ್ರಹದಿಂದ ಬರುವ ಸನ್ನಿವೇಶವೆಂದು ತಿಳಿದು ನಡೆದ ನನಗೆ ಇದು ಮತ್ತೊಮ್ಮೆ ಅವರ ಆಶೀರ್ವಾದವನ್ನು ಪಡೆಯುವ ಮತ್ತು ಅವರಿಗೆ ನನ್ನ ಪ್ರಾರ್ಥನಾಪೂರ್ವಕ ಗೌರವಗಳನ್ನು ಅರ್ಪಿಸುವ ಅವಕಾಶವೆಂದು ಭಾವಿಸಿ ಆ ಸಮಾರಂಭದಲ್ಲಿ ನಾನು ಭಾಗವಹಿಸಲು ಒಪ್ಪಿದೆನು. ನನ್ನಂತಹ ಚಿಕ್ಕವ್ಯಕ್ತಿಯ ಅಳಿಲುಸೇವೆಯನ್ನು ಗುರುತಿಸಿ ನಾನು ಸಮಾಜಕ್ಕೆ ಕೊಡಬೇಕಾದ ವಿವರಣೆಯನ್ನು ಕೊಡುವ ಸಂದರ್ಭವನ್ನು ಒದಗಿಸಿದ್ದಕ್ಕಾಗಿ ಶ್ರೀಗಳವರಿಗೆ ನಾನು ಚಿರ ಋಣಿಯಾಗಿದ್ದೇನೆ. ಆ ಸಂದರ್ಭದಲ್ಲಿ ಭಾಗವಹಿಸಿ ನಾನು ಮಾತನಾಡುವಾಗ ಈ ಕೆಳಗಿನ ಮಹಾತ್ಮ ಗಾಂಧಿಯವರು ಹೇಳಿದ್ದ ಜೀವನ ತತ್ವದ ಬಗ್ಗೆ ಪ್ರಸ್ತಾಪಿಸಿದೆನು. ಗಾಂಧೀಜಿಯವರು ಹೇಳಿದರು :

ತತ್ವರಹಿತ ರಾಜಕೀಯ.
ದುಡಿಮೆ ಇಲ್ಲದ ಸಂಪತ್ತು.
ನೀತಿಹೀನ ವಾಣಿಜ್ಯ.
ಶೀಲವಿಲ್ಲದ ಶಿಕ್ಷಣ.
ಆತ್ಮಸಾಕ್ಷಿ ರಹಿತ ಭೋಗ.
ಮಾನವೀಯತೆ ಇಲ್ಲದ ವಿಜ್ಞಾನ.
ತ್ಯಾಗವಿಲ್ಲದ ಸೇವೆ.
ಇವೆಲ್ಲವೂ ಪಾಪಕಾರ್ಯಗಳು.

ಇವುಗಳ ನಿರ್ಮೂಲನ ಆಗದ ಹೊರತು ಸಮಾಜ ಉದ್ಧಾರವಾಗುವುದಿಲ್ಲ. ಶ್ರೀಗಳವರಿಂದ ನಡೆಯುತ್ತಿರುವ ಧರ್ಮ ಬೋಧನೆ, ಅನ್ನ ದಾಸೋಹ, ಜ್ಞಾನ ದಾಸೋಹದಿಂದ ಇಂತಹ ಸಾಧನೆಯಾಗಬಲ್ಲದು. ಶ್ರೀಗಳರು ಚಿಂತನೆ, ಬೋಧನೆ, ಆಚರಣೆಯಲ್ಲಿ ನಮಗೆ ಮಾರ್ಗದರ್ಶನ ನೀಡಿದ್ದಾರೆ ; ಅಷ್ಟೇ ಅಲ್ಲ. ಪ್ರತಿ ಹೆಜ್ಜೆಯಲ್ಲಿಯೂ ಅವರು ಕೈ ಹಿಡಿದೂ ಮುಂದೆ ನಡೆಸುತ್ತಿದ್ದಾರೆ. ಅವರ ದಿವ್ಯದರ್ಶನ ಮತ್ತು ಆಶೀರ್ವಚನ ಎಂದೆಂದಿಗೂ ಬತ್ತದಂತಿರಲಿ ಎಂಬ ಮನೋಭಾವ ನನ್ನಲ್ಲಿ ಉಕ್ಕಿ ಬರುತ್ತಿತ್ತು. ಅದರ ಪರಿಣಾಮವಾಗಿ ನನಗೆ ಜೀವನದ ಬಗ್ಗೆ ಮತ್ತೊಮ್ಮೆ ಅರಿವಿನ ಜ್ಞಾಪನ ಪತ್ರ ಕೊಟ್ಟಂತಾಯ್ತು. ಶ್ರೀ ಡಿ.ವಿ. ಗುಂಡಪ್ಪನವರು 'ಮಂಕುತಿಮ್ಮನ ಕಗ್ಗ'ದಲ್ಲಿ ಬರೆದಂತೆ,

ಗೌರವಿಸು ಜೀವನವ, ಗೌರವಿಸು ಚಿಂತನವ.
ಆರದೋ ಜಗವೆಂದು ಭೇದವೆಣಿಸದಿರು.
ಹೋರುವುದೇ ಜೀವನ ಸಮೃದ್ಧಿಗೋಸುಗ
ನಿನ್ನ ದಾರಿಯಾತ್ಮೋನ್ನತಿಗೆ.

ಇಂತಹ ಚಿಂತನದ ಪ್ರೇರಣಾ ಶಕ್ತಿ ಶ್ರೀಗಳವರ ಆಶೀರ್ವಚನದಿಂದ ನನಗೆ ಬಂದಿದ್ದು ನನ್ನ ಪುಣ್ಯವೆಂದೇ ನಂಬಿದ್ದೇನೆ. ನೆರೆದಿದ್ದ ಭಾರೀ ಜನಸ್ತೋಮ ಶ್ರೀಗಳವರಿಗೆ ತಮ್ಮ ಭಕ್ತಿ ಗೌರವ, ಪ್ರೀತಿಯನ್ನು ತೋರಿಸಲು ಶ್ರೀಗಳವರ ಪಾದಸ್ಪರ್ಶಕ್ಕಾಗಿ ಪ್ರವಾಹದಂತೆ ಮುಂದೆ ನುಗ್ಗಿ ಬರುತ್ತಿತ್ತು. ಅದರಲ್ಲಿ ನಾನೊಬ್ಬನಾಗಿ ಶ್ರೀಗಳವರ ಪಾದ ಮುಟ್ಟಿ ನಮಸ್ಕರಿಸಿದೆ ; ನನ್ನ ಕೃತಜ್ಞತೆಯನ್ನು ಅರ್ಪಿಸಿದೆ ; ಅವರ ಆಶೀರ್ವಾದವಿರಲಿ ಎಂದು ಪ್ರಾರ್ಥಿಸಿದೆ. ಇಂತಹ ಸನ್ನಿವೇಶದಿಂದ ಋಗ್ವೇದವಲ್ಲಿ ಹೇಳಿರುವಂತೆ 'ಎಲ್ಲಾ ದಿಕ್ಕಿನಿಂದಲೂ ಸದ್ಭಾವನೆಗಳು ನಮಗೆ ಬರಲಿ' ಎಂಬ ಪ್ರಾರ್ಥನೆ ಅಂದು ನೆರೆದಿದ್ದವರ ಹೃದಯವನ್ನೆಲ್ಲ ತುಂಬಿತ್ತು. ಅದೊಂದು ವರ್ಣನೆಗೆ ಮೀರಿದ ಅಪೂರ್ವ ದೃಶ್ಯವಾಗಿತ್ತು.

ಅಸಾಮಾನ್ಯ ದಾಸೋಹಿ

ಕೆ. ಶಿವರಾಮ ಕಾರಂತ

ಯಾವುದೇ ಸಂಸ್ಥೆ ಅಥವಾ ಸಮೂಹ ತನ್ನ ವಜ್ರ ಮಹೋತ್ಸವವನ್ನು ಆಚರಿಸುತ್ತಿದೆ ಎಂದರೆ ಅದು ಸಾರ್ವಜನಿಕರ ಸಲುವಾಗಿ ಬೆಳೆಯಿಸಿಕೊಂಡು ಬಂದ ವಿವಿಧ ಸಂಘ ಸಂಸ್ಥೆ, ಚಟುವಟಿಕೆ ಮೊದಲಾದ ಏರ್ಪಾಟುಗಳ ಸುದೀರ್ಘ ಇತಿಹಾಸವೇ ಸರಿ.

ಇದೇ ವರ್ಷ ನಾನು ನನ್ನ ಮಿತ್ರರೊಂದಿಗೆ ಸಿದ್ಧಗಂಗಾದ ಬೃಹನ್ಮಠಕ್ಕೂ ಹೋಗಿದ್ದೆ. ಅಲ್ಲಿನ ವಯೋವೃದ್ಧ ಸ್ವಾಮೀಜಿಯವರನ್ನೂ ಭೇಟಿಯಾಗಿದ್ದೆ. ನನ್ನ ಕಣ್ಣಿನ ಮುಂದೆ ಅಲ್ಲಿನ ಸಾರ್ವಜನಿಕ ಸಭೆಯಲ್ಲಿ ಅಸಂಖ್ಯಾತ ಬಾಲಕ, ಬಾಲಕಿಯರು ಶಾಂತಿಯಿಂದ ಕುಳಿತುಕೊಂಡಿದ್ದ ದೃಶ್ಯ ಬೆರಗು ಬರಿಸಿತ್ತು. ತುಸುವೇ ದೂರದಲ್ಲಿ ಅಂಥ ಸಾವಿರಾರು ವಿದ್ಯಾರ್ಥಿಗಳ ಸಲುವಾಗಿ ನಿರ್ಮಾಣಗೊಳ್ಳುತ್ತಿದ್ದ ತೀರ ಆಧುನಿಕ ವಾಸ್ತುವೊಂದನ್ನು ಕಂಡಿದ್ದೆ. ಅಂತಹ ಇನ್ನೊಂದು ವಿದ್ಯಾರ್ಥಿನಿಲಯ ಅಲ್ಲಿ ಇರದೆ ಇದ್ದ ಕಾಲವೂ ಒಂದಿತ್ತು. ಈ ನೆನಪನ್ನೇ ನಾನು ತಂದುಕೊಳ್ಳಲು ಬಯಸುತ್ತೇನೆ.

೧೯೨೪ರ ಸುಮಾರಿಗೆ ನಾನು "ವಸಂತ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದ ಕಾಲ. ಆಗ ನಾನು ತುಮಕೂರಿಗೆ ಅಂಬಾಪ್ರಸಾದಿಕ ನಾಟಕ ಮಂಡಲದ ಜತೆಯಲ್ಲಿ ಹೋಗಿದ್ದೆ. ಅವರು ನಾನು ಬರೆದಿದ್ದ ಒಂದೆರಡು ನಾಟಕಗಳನ್ನು ಆಡುತ್ತಿದ್ದ ಕಾಲ ಅದು. ಆ ಬಡ ನಾಟಕ ಸಂಸ್ಥೆಯ ಸಲುವಾಗಿ ಆಗಾಗ ಅವರ ಪ್ರದರ್ಶನಗಳ ಜತೆಯಲ್ಲಿ ತೆರಳುತ್ತಿದ್ದೆ. ಇಂಥ ಒಂದು ಸಂದರ್ಭದಲ್ಲಿ ನಾನು ತುಮಕೂರಿನಲ್ಲಿ ಅಂಬಾಪ್ರಸಾದಿಕ ನಾಟಕ ಮಂಡಲಿಯ ಬಿಡಾರದಲ್ಲಿದ್ದೆ. ಆ ಕಾಲದಲ್ಲಿ ನನಗೆ ತುಮಕೂರಿನ ನಾಲ್ಕಾರು ಮಂದಿ ಗಣ್ಯರು, ವಕೀಲರುಗಳ ಪರಿಚಯವಾಗಿತ್ತು. ರಂಗ ಐಯ್ಯಂಗಾರರು, ಸೆಟ್ಲೂರರು, ರಾಮರಾವ್ ಮೊದಲಾದ ಕೆಲವರ ಪರಿಚಯ ನನಗಾಗಿತ್ತು. ಆ ಪ್ರದೇಶದ ನೆನಪು ಇಷ್ಟು ದೀರ್ಘಕಾಲದ ಬಳಿಕವೂ ನನಗೆ ಉಳಿಯಲು ಕಾರಣ, ನಾನು ತುಮಕೂರಿನ ಸ್ಮಶಾನದ ಬಳಿಯ ಆವರಣದಲ್ಲಿ ಕುಳಿತುಕೊಂಡು ಏಳೆಂಟು ದಿನ "ನಂದನಾರ್" ಸಂತನನ್ನು ಕುರಿತು ಒಂದು ನಾಟಕವನ್ನು ಬರೆದಿದ್ದೆ.

ಮುಂದೆ ಕಾಲಾನಂತರ ಸಿದ್ಧಗಂಗಾ ಮಠದವರ ಕೃಪಾದದಿಂದ ತುಮಕೂರಿನಲ್ಲಿ ಹಲ ಕೆಲವು ಆಧುನಿಕ ವಿದ್ಯಾಸಂಸ್ಥೆಗಳು ಮೇಲೆ ಬರತೊಡಗಿದವು. ಎರಡೋ, ಮೂರೋ ಬಾರಿ ಈ ವಿದ್ಯಾಸಂಸ್ಥೆಗಳ ವಾರ್ಷಿಕೋತ್ಸವಗಳಲ್ಲಿ ನಾನು ಭಾಗಿಯಾಗಿದ್ದೇನೆ. ಈ ಕಾಲಕ್ಕಿಂತ ಮುಂಚೆ ತುಮಕೂರಿನ ಬಳಿಯ 'ಕ್ಯಾತಸಂದ್ರ' ನಿರಾಕಾರದ ಒಂದು ಹಳ್ಳಿಯಾಗಿತ್ತು. ಇಂದು ಇಲ್ಲಿನ ಮಹಾ ವಿದ್ಯಾಸಂಸ್ಥೆಗಳು, ಅಸಂಖ್ಯ ವಿದ್ಯಾರ್ಥಿಗಳ ಸಂಖ್ಯೆ ಬೆರಗು ಬರಿಸುವ ರೂಪ ತಾಳಿವೆ. ಅರವತ್ತು ವರ್ಷಗಳಿಗಿಂತ ಹಿಂದೆ ನಾನು ಈ ಊರಲ್ಲಿ ಅಲೆದಾಡಿದ್ದೆ. ಇದೇ ಊರಿನ ತೋತಾಪುರಿ ಮಾವಿನ ಕಾಯಿಯನ್ನು ಸವಿದ ನೆನಪು ಇನ್ನೂ ಉಳಿದಿದೆ. ಇಂದಿನ ಈ ಕ್ಷೇತ್ರ ಬಳಿಯ ನಗರವಾದ ತುಮಕೂರನ್ನು ತನ್ನಲ್ಲಿ ಅರಗಿಸಿಕೊಂಡ ಆಧುನಿಕ ನಗರವಾಗಿದೆ. ಸಾಲದುದಕ್ಕೆ ಇಲ್ಲಿ ಹಿಂದುಸ್ಥಾನ ಮೆಶಿನ್ ಟೂಲ್ಸ್‌ನ ಗಡಿಯಾರದ ಕಾರ್ಖಾನೆಯೂ ಸ್ಥಾಪನೆಯಾಗಿದೆ. ಆದರೆ, ಈ ಕ್ಷೇತ್ರಕ್ಕೆ ನೂರು ಪಾಲು ವೈಭವ ಉಂಟಾಗುವ ಶಕ್ತಿ ಬಂದುದು ಈ ಸಿದ್ಧಗಂಗಾ ಕ್ಷೇತ್ರದ ಸ್ವಾಮೀಜಿಯವರ ಉದಾರ, ವಿಶಾಲ ದೃಷ್ಟಿಯಿಂದ. ಸಾವಿರಾರು ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯ, ಭಾವೀ ಜೀವನ ವಿಕಾಸದ ಒಂದು ಬೃಹತ್ ಕ್ಷೇತ್ರವಾದುದು ಇಲ್ಲಿನ ಸ್ವಾಮೀಜಿಯವರ ಅನುಗ್ರಹದಿಂದ.

ನಾಡಿನ ಮೂಲೆ ಮೂಲೆಗಳಿಂದ ಅನಾಥರನ್ನು ಬರಮಾಡಿಕೊಂಡು, ಅವರಿಗೆಲ್ಲ ಅನ್ನದಾನದ ಜತೆಯಲ್ಲಿ ಜ್ಞಾನವನ್ನೂ



ಬೆಳಗಿನ ಪೂಜಾನಂತರ ಶ್ರೀಮಠದ ಕಾರ್ಯಾಲಯಕ್ಕೆ



ಕಾರ್ಯಾಲಯದಲ್ಲಿ ದೈನಂದಿನ ಕಾರ್ಯಮಗ್ನತೆ



ಮಠದ ಮುಂಭಾಗದ ಪೀಠದಲ್ಲಿ



ಕಾರುಣ್ಯ ದೃಷ್ಟಿ



ಪ್ರಸನ್ನತೆ



ಸಂವಾದ



ನಗೆಯ ಚೆಲುವು



ಎಚ್ಚರದ ಹೆಜ್ಜೆ



ಗಾಢ ಚಿಂತನೆ



ದೂರದೃಷ್ಟಿ



ಆಳವಾದ ಚಿಂತನೆಯಲ್ಲಿ



ಆರಂಬ ಮಾಡುವೆನಯ್ಯ ಗುರುಲಿಂಗ ಜಂಗಮಕ್ಕೆಂದು



ನೇರದೃಷ್ಟಿ



ಮುಗುಳ್ನಗೆ



ಅಭಿಪ್ರಾಯವನ್ನಾಲಿಸುವಿಕೆ

ಆಶೀರ್ವಚನ





ಚಿಂತನೆಯಲ್ಲಿ



ಪ್ರಾಸಾದಿಕ ವಾಣಿ




ಮನವುಕ್ಕಿ ಬಂದ ನಗೆ



ಗ್ರಂಥಾವಲೋಕನ



ಆಲೋಚನಾ ನಿಮಗ್ನತೆ



ಪ್ರಸನ್ನ ವದನ



ಹೂವಿನ ಹೊರೆಯಲ್ಲಿ



ಸುಗಂಧ ಪುಷ್ಪಮಾಲಾಧರ



ಭಕ್ತಿಯ ಭಾರ



ಗುಲಾಬಿ ಮಾಲಾಧರ



ಪೂಜಾರಸಮಗ್ನತೆ



ಸಾರ್ವಜನಿಕ ದರ್ಶನಪೀಠದಲ್ಲಿ



ನಾರಿಕೇಳದ ಮೇಲೆ ಮಂತ್ರ

ಕಚೇರಿಯಲ್ಲಿ
ಸಮಾಲೋಚನೆ



ದಾನಮಾಡುತ್ತಿರುವ ದೃಶ್ಯವಂತೂ ನನ್ನ ಪಾಲಿಗೆ ಅಸಾಮಾನ್ಯ ನೋಟವೆನಿಸಿದೆ. ಅಸಂಖ್ಯಾತ ಬಡಬಗ್ಗರ ಇಹದ ಅವಶ್ಯಕತೆಗಳನ್ನು ಪೂರೈಸುತ್ತಿರುವುದು ಮಾತ್ರವಲ್ಲ, ಅವರ 'ಪರ'ವನ್ನು ಸಹ ಈ ತಾವಿಗೆ ಋಣಿಯನ್ನಾಗಿ ಮಾಡುತ್ತಿರುವ ಕರ್ಮಭೂಮಿ ಇದಾಗಿದೆ.

ಈ ಸಂಸ್ಥೆ ನಮ್ಮ ನಾಡಿನ ವೀರಶೈವ ಪಂಥೀಯರ ಸಂಸ್ಥೆಯಾದರೂ, ಯಾವೊಂದು ಜಾತಿ, ಮತದ ತಾರತಮ್ಯ ತೋರಿಸದೆ ವಿದ್ಯಾರ್ಥಿಗಳ ಪೋಷಣೆ, ಶಿಕ್ಷಣ, ಭಾವನೆಗಳನ್ನು ಬೆಳೆಯಿಸುತ್ತ ಬಂದಿದೆ. ಎಲ್ಲೆಲ್ಲಿ ಸಾರ್ವಜನಿಕ ಸಂಸ್ಥೆಗಳು ಹೀಗೆ ಅದ್ಭುತ ಪ್ರಮಾಣದಲ್ಲಿ ಕಂಡು ಬರುತ್ತವೆಯೋ, ಅವುಗಳ ಬಗ್ಗೆ ನಾನೇ ಆಗಲಿ, ನನ್ನಂಥವರಾಗಲಿ ಸಂತೋಷ ಪಡೆಯಲೇ ಬೇಕು. ನಮ್ಮ ನಾಡಿನ ಅನ್ಯ ಮತೀಯ ಆಚಾರ್ಯರುಗಳು ಈ ವೀರಶೈವ ಪಂಥೀಯ ಸಂಸ್ಥೆಗಳನ್ನು ಯಾಕೆ ಅನುಕರಿಸುತ್ತಲಿಲ್ಲ ಎಂದು ನನಗೆ ಅನಿಸುತ್ತಿದೆ. ಈ ಸಂಸ್ಥೆಗಳ ಇಂತಹ ಸಾರ್ವಜನಿಕ ಸೇವೆಯ ಬಗ್ಗೆ ನಾನು ಹಲವಾರು ಸಾರ್ವಜನಿಕ ಸಭೆಗಳಲ್ಲಿಯೂ ಉಲ್ಲೇಖಿಸಿದ್ದೇನೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಅನ್ಯ ಮತೀಯ ಸಂಸ್ಥೆಗಳನ್ನು ನೋಡುವಾಗ, ಅವುಗಳ ಸ್ವಾರ್ಥಪರ, ಮತೀಯ ಸಂಕುಚಿತ ದೃಷ್ಟಿ, ತಮ್ಮ ಪೋಷಣೆಯನ್ನು ಕೇವಲ ಸ್ವಪಂಥೀಯರ ಸಲುವಾಗಿ ಮಾತ್ರ ಉಳಿಸಿಕೊಂಡಿರುವುದನ್ನು ಕಾಣಬಹುದು.

ಸಿದ್ಧಗಂಗಾ ಕ್ಷೇತ್ರದ ಸಾಧನೆಗೆ ನನ್ನಂತಹ ಒಬ್ಬ ಲೇಖಕನ ಪ್ರಶಂಸೆ ಬೇಕಾಗಿಯೇ ಇಲ್ಲ ಎಂಬಷ್ಟು ದೊಡ್ಡ ಸಾಧನೆ ಅವರದಾಗಿದೆ.

ಆಚಾರ ವಿಚಾರ ಸಂಗಮ

ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸಂನ್ಯಾಸಿಗಳಿಗೊಂದು ಸ್ಥಾನವಿದೆ. ತಮ್ಮ ಮೋಕ್ಷವನ್ನು ಬಯಸಿ ಲೋಕ ವ್ಯವಹಾರವನ್ನು ಬದಿಗಿರಿಸಿದವರೆಂದು ಮಾತ್ರವಲ್ಲ, ಈ ಲೋಕದ ಸುಖ ಸಂಪತ್ತನ್ನೂ ಬಯಸದೆ ನಿಂತವರೆಂದು ಮಾತ್ರವಲ್ಲ, ಲೋಕ ಸಂಗ್ರಹವೇ ಬದುಕಿನ ಸಾರ್ಥಕತೆಯೆಂದು ಬಗೆದವರೆಂದು. ಉಳಿದ ಆಶ್ರಮಗಳಲ್ಲಾದರೆ ಸ್ವಾರ್ಥವನ್ನು ಬಿಡುವಂತಿಲ್ಲ, ಪರೋಪಕಾರವನ್ನೇ ಪ್ರಧಾನವಾಗಿ ಕೈಗೊಳ್ಳುವಂತಿಲ್ಲ. ಬದುಕಿನ ಜಂಜಡದಿಂದ ದೂರ ನಿಂತ ಸಂನ್ಯಾಸಿ ಸಮಾಜಕ್ಕೆ ಸಲ್ಲಿಸಿರುವ ಸೇವೆಯನ್ನು ಗಮನಿಸಿಯೇ ನಮ್ಮವರು ಸಂನ್ಯಾಸಿಗಳಿಗೆ ವಿಶೇಷವಾದ ಮನ್ನಣೆ ನೀಡಿದ್ದಾರೆ.

ಇತಿಹಾಸದುದ್ದಕ್ಕೂ ಸಂನ್ಯಾಸಿಗಳಿಂದ ಮಾರ್ಗದರ್ಶನ ದೊರೆತಿರುವ ದಾಖಲೆಯಿದೆ. ಮಠವೆನ್ನುವ ಮಾತಿಗೆ 'ಛಾತ್ರಾದಿ ನಿಲಯ' ವೆಂದೇ ಮೂಲಾರ್ಥ; ಎಂದರೆ ವಿದ್ಯಾರ್ಥಿಗಳಿಗೆ ಆಸರೆಯಾಗುವ ಸಂಸ್ಥೆ. ನಮ್ಮ ನಾಡಿನಲ್ಲಿ ಕಾಳಾಮುಖರು ವಿದ್ಯಾಸಂಸ್ಥೆಗಳನ್ನು ಗುಡಿಗಳಿಗೆ ಹೊಂದಿಕೊಂಡಂತೆ ಏರ್ಪಡಿಸಿದರಲ್ಲವೆ ? ಘಟಿಕಾಸ್ಥಾನಗಳಲ್ಲಿ ವಿದ್ಯಾರ್ಥಿಗಳಿಗೆ ಅನ್ನ ವಸತಿಗಳನ್ನೂ ಶಿಕ್ಷಣವನ್ನೂ ಒದಗಿಸುತಿದ್ದ ದಾಖಲೆಗಳಿಲ್ಲವೆ ? ಮಠವೆಂದರೆ ನೆರೆಹೊರೆಯ ಜನಕ್ಕೆ ಗೌರವಾಸ್ಪದವಾದುದು ಹೀಗೆಯೇ. ಆದರೆ ಬರಬರುತ್ತ ಸಂನ್ಯಾಸಿಗಳ ದೃಷ್ಟಿ ಬದಲಾಯಿತು, ಮಠಗಳ ಪ್ರಯೋಜನ ಮಾರ್ಪಟ್ಟಿತು. ಅಲ್ಲಿಯೂ ಸ್ವಾರ್ಥ ಧಾರಾಳವಾಗಿ ಪ್ರವೇಶಮಾಡಿತು. ಇಂದಿನ ಸ್ಥಿತಿ ಯಾರಿಗೆ ತಿಳಿಯದು ? ಬಹುಮಟ್ಟಿಗೆ ಸಂನ್ಯಾಸಿಗಳು ಸಮಾಜಕ್ಕೆ ಹೊರೆಯೇ ಆಗಿದ್ದಾರಲ್ಲವೆ ?

ಇಂಥ ಪರಿಸ್ಥಿತಿಯಲ್ಲೂ ಸಂನ್ಯಾಸಕ್ಕೆ ಗೌರವವನ್ನು ಉಳಿಸಿಕೊಟ್ಟಿರುವವರು ಕೆಲವರಿದ್ದಾರೆ, ನಮ್ಮ ಪುಣ್ಯ. ಅವರಿಂದ ಸಮಾಜಸೇವೆ ಸಾಗಿ ಬಂದಿದೆ. ಇಂಥ ವಿರಳರಲ್ಲಿ ನಮ್ಮ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು ಅಗ್ರಗಣ್ಯರು. ಸಂನ್ಯಾಸಿಗಳಾಗಿ ತಮ್ಮ ಮುಕ್ತಿಯನ್ನು ಸಾಧಿಸಿಕೊಳ್ಳುವ ತವಕವಿದ್ದರೂ, ಧರ್ಮ ಸಂರಕ್ಷಣೆ ತಮ್ಮ ಆದ್ಯಕರ್ತವ್ಯವೆಂದು ಬಗೆದು ಅದಕ್ಕಾಗಿ ಅನೇಕ ವಿಧವಾದ ಶ್ರಮವನ್ನು ವಹಿಸಲು ಟೊಂಕಕಟ್ಟಿ ನಿಂತರು. ಧರ್ಮಕ್ಕೆ ಪ್ರಧಾನವಾದ ಆಸರೆಯೆಂದರೆ ಅನ್ನ, ವಿದ್ಯೆ. ಇವೆರಡರ ಕಡೆಗೂ ಇವರ ವಿಶೇಷ ಗಮನ ಹರಿಯಿತು. ಸಿದ್ಧಗಂಗಾ ಮಠ ಪ್ರಸಿದ್ಧವಾದುದು ಅನ್ನದಾನದಿಂದ, ವಿದ್ಯಾದಾನದಿಂದ. ಇದರಿಂದಾಗಿ ವ್ಯವಹಾರವನ್ನು ಕೈಬಿಡುವಂತಿಲ್ಲವಾಯಿತು. ಅಧಿಕಾರ, ಆಡಳಿತ, ಉದ್ಯೋಗ, ರಾಜಕಾರಣ, ಗಳಿಕೆ, ವಿತರಣೆ, ಒತ್ತಾಸೆ ಹೀಗೆ ಹಲವು ಒತ್ತಡಗಳು ಎರಗಿಬರುವಾಗ ವ್ಯಕ್ತಿತ್ವದ ಶುದ್ಧಿಗೆ ಸಂಚಕಾರ ಬರುವುದು ಸಹಜವೇ. ಆದರೆ. ನಮ್ಮ ಸ್ವಾಮಿಗಳು ಹರಿಯುವ ನೀರಿನಲ್ಲಿ ಕಲ್ಲಾಗಿ ನಿಂತಿದ್ದಾರೆ ; ಸುತ್ತಲೂ ಬೀಸುವ ಗಾಳಿ ಇವರನ್ನು ಕದಲಿಸಿಲ್ಲ. ಎಷ್ಟೇ ಅಡ್ಡಿ ಆತಂಕಗಳು, ಎಡರು ತೊಡರುಗಳು ಬಂದರೂ ಅವಿಚಲಿತರಾಗಿ ಉಳಿದಿದ್ದಾರೆ.

ಸಂಕಲ್ಪ ಶುದ್ಧಿಯಿದ್ದಮೇಲೆ, ಶೀಲ ಶುದ್ಧಿಯಿರುವಾಗ ಯಾವ ಅಂಜಿಕೆ, ಏನು ಅಳುಕು ? ಅವರ ಬದುಕಿನುದ್ದಕ್ಕೂ ಅವರಿಗೆ ಬೆಂಬಲವಾಗಿ ಬಂದಿರುವುದು ಅವರ ಧರ್ಮನಿಷ್ಠೆ. ರಾಮಾಯಣದಲ್ಲಿ ಶ್ರೀರಾಮನನ್ನು ಕಾಪಾಡಿದುದು ಯಾವ ದೈವ, ಯಾವ ರಾಜತಂತ್ರ, ಯಾವ ಸಂಪತ್ತು, ಯಾರ ಪ್ರಭಾವ ? ಕೌಸಲ್ಯೆ ಹೇಳುವಂತೆ, ರಾಮನು ಧೃತಿಯಿಂದ, ನಿಯಮದಿಂದ ಯಾವ ಧರ್ಮವನ್ನು ಪಾಲಿಸಿಕೊಂಡನೋ ಅದೇ ಧರ್ಮ ಅವನನ್ನು ಕಾಪಿಟ್ಟಿತು. ಸ್ವಾಮಿಗಳ ವ್ಯಕ್ತಿತ್ವ ಉಜ್ವಲವಾಗಿರುವುದೂ, ಅವರ ಸಾಹಸ ಊರ್ಜಿತವಾಗಿರುವುದೂ ಇಂತಹ ಧರ್ಮ ರಕ್ಷಣೆಯಿಂದಲೇ. ಅವರಿಂದ ಸಮಾಜಕ್ಕೆ ಸಂದಿರುವ ಸೇವೆ ಅವರು ನಂಬಿಕೊಂಡು ಬಂದಿರುವ ಧರ್ಮದ ಒಂದು ಮುಖ ಅಷ್ಟೆ.

ಗೃಹಸ್ಥರಾದರೆ ಜಾತಿ, ಮತ, ಪಂಗಡ, ಪಕ್ಷ, ಬುಡಕಟ್ಟು, ಕುಲ, ನೆಲ, ಕಾಲ ಇವನ್ನೆಲ್ಲ ಮರೆಯುವುದು ಕಷ್ಟ. ಇವನ್ನೆಲ್ಲ ಮೀರಿದವನು ತಾನೆ ಸಂನ್ಯಾಸಿ ? ಇವುಗಳ ವಾಸನೆಯಾಗಲಿ ಅಂಟಿಕೊಂಡಿದ್ದರೆ ಅದೆಂಥ 'ಸಂನ್ಯಾಸ' - ಎಲ್ಲ ಪ್ರಾಣಿಗಳಿಗೂ ಸಮನಾಗಿ ಅಭಯವನ್ನು ನೀಡುವುದು ಸಂನ್ಯಾಸ ವಿಧಿಗಳಲ್ಲಿ ಮೊದಲನೆಯದು. ಯಾವ ಬಗೆಯ ಪಕ್ಷಪಾತವೂ ಇಲ್ಲದಿರುವುದೇ ಅಭಯದ ಅಂತರಾರ್ಥ. ಈ ದೃಷ್ಟಿಯನ್ನು ನಮ್ಮ ಸ್ವಾಮಿಗಳು ಉಳಿಸಿಕೊಂಡು ಬಂದು, ಸಂನ್ಯಾಸಕ್ಕೆ ದಿಟವಾದ ಅರ್ಥವನ್ನು

ಮೈಗೂಡಿಸಿಕೊಂಡಿದ್ದಾರೆ. ಅವರು ನಡೆಸುತ್ತಿರುವ ಅನ್ನದಾನ ವಿದ್ಯಾದಾನಗಳಲ್ಲಿ ಯಾವೊಂದು ಸಂಕುಚಿತ ಭಾವನೆಯನ್ನೂ ಕಾಣಲಾರೆವು. ಹೃದಯ ವೈಶಾಲ್ಯ ಅವರ ವ್ಯಕ್ತಿತ್ವದಲ್ಲಿ ಹಾಸು ಹೊಕ್ಕಾಗಿ ಸೇರಿ ಬಂದಿರುವ ವಿವರ.

ಸಂಪ್ರದಾಯ ವಿದ್ಯೆ, ಆಧುನಿಕ ವಿದ್ಯೆ ಎರಡನ್ನೂ ಸಮನಾಗಿಯೇ ನಿರ್ವಹಿಸುವುದು ಕಷ್ಟ. ವಿದ್ಯಾದಾನ ಮಾಡುವ ಸಂಸ್ಥೆಗಳು ಯಾವುದಾದರೊಂದನ್ನು ಹಿಡಿದು ಇನ್ನೊಂದನ್ನು ಕೈಬಿಡುವುದು ವಾಡಿಕೆ. ಇದನ್ನೇ ನಾವು ಕಾಣುತ್ತಿದ್ದೇವಲ್ಲವೆ ? ಆದರೆ ನಮ್ಮ ಸ್ವಾಮಿಗಳು ಆಧುನಿಕಯುಗಕ್ಕೆ ಅಗತ್ಯವಾದ ವಿದ್ಯೆಯನ್ನು ಒದಗಿಸುತ್ತಿರುವಾಗಲೂ ಸಂಪ್ರದಾಯದಿಂದ ಬಂದ ಧರ್ಮ ಪ್ರಮುಖವಾದ ವಿದ್ಯೆಯ ಅಗತ್ಯವನ್ನು ಚೆನ್ನಾಗಿ ಮನಗಂಡು ಅದಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾಗುತ್ತ ಬಂದಿದ್ದಾರೆ. ಅವರ ಮಠದಲ್ಲೇ ಸದಾಚಾರನಿಷ್ಠೆಗೆ ಮೊದಲ ಪಟ್ಟ. ವ್ಯಕ್ತಿತ್ವ ಬೆಳೆಯುವುದೇ ಆಚಾರದಿಂದ, ಆಚಾರವನ್ನು ಕೆಡಿಸಿಕೊಂಡರೆ ಮತ್ತೇನನ್ನು ಗಳಿಸಿಕೊಳ್ಳುವೆವು ? ಇದು ಸ್ವಾಮಿಗಳ ಎಣಿಕೆ.

ಶ್ರೀ ಸಿದ್ಧಗಂಗಾ ಕ್ಷೇತ್ರದ ಹೆಗ್ಗಳಿಕೆಗೆ ಸ್ವಾಮಿಗಳೇ ಆಧಾರಸ್ತಂಭ. ಅಲ್ಲಿ ನಾವು ಕಾಣುವುದು ರುಚಿ ಶುಚಿಗಳ ಸಮ್ಮಿಳನವನ್ನು, ಆಚಾರ ವಿಚಾರಗಳ ಸಮನ್ವಯವನ್ನು, ಪ್ರಾಚೀನ - ಪ್ರಸ್ತುತಗಳ ಸಂಯೋಜನವನ್ನು. ಇವು ಸ್ವಾಮಿಗಳ ವ್ಯಕ್ತಿತ್ವದಲ್ಲಿರುವ ವಿವರಗಳೇ ; ಕ್ಷೇತ್ರದಲ್ಲಿ ಹೊರಹೊಮ್ಮಿ ಹೆಮ್ಮರವಾಗಿ ಬೆಳೆದು ನಿಂತಿವೆ. ಸಂಸ್ಥೆಗೊಂದು ವ್ಯಕ್ತಿತ್ವ ಮೂಡಿಬರಬೇಕೆಂದರೆ ಹಿನ್ನೆಲೆಯಲ್ಲಿರುವ ವ್ಯಕ್ತಿಯ ಸತ್ವ ಇರಬೇಕಲ್ಲವೆ ? ವ್ಯಕ್ತಿಯ ಸಂಸ್ಕೃತಿಯೇ ಸಂಸ್ಥೆಯಲ್ಲಿ ಮುಪ್ಪುರಿಗೊಂಡು ಕಾಣುತ್ತದೆ. ಈ ಕ್ಷೇತ್ರದಲ್ಲಿ ನಡೆಯುವ ಅಪರಿಮಿತ ದಾಸೋಹವಾಗಲಿ, ಸಡಗರದ ಸಂಭ್ರಮವಾಗಲಿ, ಸದ್ದುಗದ್ದಲವಿಲ್ಲದೆ ಸಾಗಿಬರುತ್ತಿರುವ ಸಂಸ್ಕೃತ ಶಿಕ್ಷಣವಾಗಲಿ, ವೇದವಿದ್ಯೆಯಾಗಲಿ, ಕ್ಷೇತ್ರದ ವತಿಯಿಂದ ಮೇಲೆದ್ದುಕೊಂಡು ಮೆರೆಯುತ್ತಿರುವ ನೂರಾರು ವಿದ್ಯಾಸಂಸ್ಥೆಗಳಾಗಲಿ, ಶ್ರೀ ಶ್ರೀಗಳವರ ಅಪೂರ್ವ ವ್ಯಕ್ತಿತ್ವದ ಕೆಲವು ಅಭಿವ್ಯಕ್ತಿಗಳಷ್ಟೆ.

ಇಂಥ ಮಹನೀಯರನ್ನು ಪಡೆದುಕೊಂಡ ನಾಡು ಧನ್ಯವಲ್ಲವೆ ? ಇಂಥವರನ್ನು ಕಣ್ಣಾರೆ ಕಂಡು, ಅವರ ಮಾತನ್ನು ಕಿವಿಯಾರೆ ಕೇಳಿ, ಅವರ ಸೇವಾ ಸಮಯದಲ್ಲೇ ಬದುಕಿರುವ ನಮ್ಮ ಪುಣ್ಯ ಎಷ್ಟೆಂದು ಹೇಳೋಣ ? ಹಿಂದಿನ ಕಾಲದಲ್ಲಿ ಜನಕಾದಿಗಳು ಕರ್ಮನಿಷ್ಠೆಯಿಂದಲೇ ಸಂಸಿದ್ಧಿಯನ್ನು ಪಡೆದರೆಂದು ಕೇಳಿದ್ದೇವೆ. ಅಂತಹ ಕರ್ಮನಿಷ್ಠೆಯನ್ನೇ ಈಗ ನಾವು ಶ್ರೀ ಶ್ರೀಗಳವರಲ್ಲಿ ಕಾಣುತ್ತಿದ್ದೇವೆ ; ಅವರು ಪಡೆದಿರುವ ಸಂಸಿದ್ಧಿಗೂ ಸಾಕ್ಷಿಗಳಾಗಿದ್ದೇವೆ.

ಸಾತ್ವಿಕತೆಯೇ ಮೈವೆತ್ತುಬಂದಂತೆ ಇರುವವರು ; ಜಾಗ್ರತವಾದ ಚೇತನ ; ಸಂನ್ಯಾಸಕ್ಕೆ ಸಹಜವಾಗಿರಬೇಕಾದ ಶಾಂತಭಾವ. ಆದರೆ ಅವರ ಸಾಹಸ, ಅವರ ಉದ್ಯಮ, ಅವರ ಶಿಸ್ತು ಯಾರನ್ನಾದರೂ ಬೆರಗುಗೊಳಿಸುವಂಥದು. ಅವರು ಸಂತರೂ ಹೌದು, ಸಾಹಸಿಗಳೂ ಹೌದು. ಅವರಲ್ಲಿ ಸ್ಥೈರ್ಯವೂ ಇದೆ, ಸಂಯಮವೂ ಇದೆ. ಆಧ್ಯಾತ್ಮಿಕವಾದ ಒಲವಾದರೂ ರಾಷ್ಟ್ರಹಿತವನ್ನು ಕುರಿತಂತೆ ಕಳಕಳಿಯೂ ಇದೆ. ಜನರನ್ನು ಮೇಲೆತ್ತುವುದಕ್ಕಾಗಿಯೇ ತಮ್ಮ ಜನ್ಮ ಒದಗಿರುವುದೆಂಬ ವಿಶ್ವಾಸವೂ ಅವರಲ್ಲಿದ್ದೀತು ; ನನಗಂತೂ ಅವರು ಈ ಕೆಲಸಕ್ಕಾಗಿಯೇ ಹುಟ್ಟಿ ಬಂದಿರುವರೆಂಬ ನಂಬಿಕೆಯಿದೆ. 'ಚಿಕೀರ್ಷುರ್ಲೋಕಸಂಗ್ರಹಂ' ಎಂಬ ಗೀತೋಕ್ತಿಯಿಲ್ಲವೆ ?

○

ಮಹಾಋಷಿ

ಎಚ್.ಎಲ್. ನಾಗೇಗೌಡ

ಇಲ್ಲಿಗೆ ಸುಮಾರು ೩೦ ವರ್ಷಗಳ ಹಿಂದೆ ನಾನು ರಾಜ್ಯದ ಕಾರ್ಮಿಕ ಇಲಾಖೆ ಮುಖ್ಯಾಧಿಕಾರಿಯಾಗಿದ್ದಾಗ ಚನ್ನಪಟ್ಟಣದಲ್ಲಿ ಒಂದು ಸಮಾರಂಭ ನಡೆಯಿತು. ಆ ಸಮಾರಂಭಕ್ಕೆ ಸಿದ್ಧಗಂಗಾ ಕ್ಷೇತ್ರದ ಶ್ರೀ ಶಿವಕುಮಾರ ಸ್ವಾಮಿಗಳು ಆಗಮಿಸಿದ್ದರು. ನಾನೂ ಹೋಗಿದ್ದೆ. ನಾನು ಆಗ ಏನು ಮಾತಾಡಿದೆನೋ ಕಾಣೆ. ಶ್ರೀಗಳು ದೇವರು ಹಾಗೂ ಧಾರ್ಮಿಕ ವಿಷಯಗಳಲ್ಲದೆ ಬೇರೇನೂ ಮಾತಾಡಿರಲಾರರು. ಸಮಾರಂಭ ಮುಗಿದು ಹೊರಡಬೇಕು ಆಗ ಶ್ರೀಗಳು ನನಗೆ ತಿಳುವಳಿಕೆ ಹೇಳುವ ಉದ್ದೇಶದಿಂದಲೋ ಏನೋ "ನೀವು ಜ್ಯೂಲಿಯಸ್ ಹಕ್ಸ್‌ಲಿಯ Man the unknown ಎಂಬ ಪುಸ್ತಕ ಓದಿ" ಎಂದರು. ಅಂದಿನಿಂದ ಆ ಪುಸ್ತಕಕ್ಕಾಗಿ ಹೋದ ಕಡೆಯಲ್ಲೆಲ್ಲಾ ಹುಡುಕುತ್ತಿದ್ದೇನೆ. ಅದು ಇನ್ನೂ ಸಿಕ್ಕಿಲ್ಲ. ಶ್ರೀಗಳು ಕೇವಲ ಭಾರತೀಯರು ಬರೆದ ಗ್ರಂಥಗಳನ್ನಲ್ಲದೆ ಇಂಗ್ಲೀಷಿನಲ್ಲಿ ಬರೆದ ಗ್ರಂಥಗಳನ್ನು ಓದಿಕೊಂಡಿದ್ದಾರೆಂಬುದು ಅವರು ನನಗೆ ಹೇಳಿದ ಮಾತಿನಿಂದ ಸ್ಪಷ್ಟವಾಯಿತು.

ಶ್ರೀಗಳು ಕಾವಿ ಬಟ್ಟೆ ಧರಿಸಿದ್ದರೂ ಅದನ್ನು ತೊಡುವ ರೀತಿಯಲ್ಲಿ ಸಾಮಾನ್ಯರಂತೆ ಕಾಣುತ್ತಾರೆ. ಎತ್ತರವಾದ ನಿಲುವು, ಯಾವಾಗಲೂ ತಲೆ ತಗ್ಗಿಸಿಕೊಂಡು ಮಾತಾಡುವ ರೀತಿ, ಹೇಳುವುದನ್ನು ಅವರದೇ ಆದ ರೀತಿಯಲ್ಲಿ ಹೇಳುವ ಬಗೆ ವಿಶಿಷ್ಟವಾದದ್ದೆಂದು ಹೇಳಬೇಕು.

ಅನಂತರ ಒಂದೆರಡು ಸಮಾರಂಭಗಳಲ್ಲಿ ಅವರನ್ನು ನೋಡಿದ್ದೇನೆ. ಅವರ ವಿಚಾರಗಳನ್ನು ಗಮನಿಸಿದ್ದೇನೆ. ಅವರ ಮಾತಿನಲ್ಲಿ ಅಂಥ ಮೋಡಿ ಏನೂ ಇಲ್ಲ. ಆದರೂ ಅವರು ಸದಾ ಲೋಕ ಕಲ್ಯಾಣಕ್ಕಾಗಿ ಚಿಂತನೆ ನಡೆಸುತ್ತಾರೆಂಬುದರಲ್ಲಿ ಸಂದೇಹವಿಲ್ಲ.

ಈ ಮಹಾ ಪುರುಷರು ಕಳೆದ ಸುಮಾರು ೭೦ ವರ್ಷಗಳಿಂದ ತಮ್ಮ ತಪೋಭೂಮಿಯಾದ ಸಿದ್ಧಗಂಗಾ ಕ್ಷೇತ್ರವನ್ನು, ತಮ್ಮ ಅಗಣಿತ ಕೆಲಸಗಳ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಸಾಧಿಸಿರುವ ಕೆಲಸ ಇಡೀ ದೇಶವೇ ಮೆಚ್ಚುವಂಥಾದ್ದು. ಕಲಿಯುಗದಲ್ಲಿಯೂ ಋಷಿಗಳಿಗೆ ಅಭಾವವೇನಿಲ್ಲ. ಅಂತಹ ಮಹಾ ಋಷಿ ಶ್ರೀ ಶಿವಕುಮಾರ ಸ್ವಾಮಿಗಳು. ಒಂದೇ, ಎರಡೇ ಅವರ ಸಾಧನೆಗಳು. ಅವರು ಕೇವಲ ಬೋಧನೆಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ಸೀಮಿತಗೊಳಿಸದೆ ತ್ರಿವಿಧ ದಾಸೋಹ ಹಾಗೂ ದೀನ ದಲಿತರ ಉದ್ಧಾರಕ್ಕಾಗಿ ದೀಕ್ಷೆ ತೊಟ್ಟಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ನಾಲ್ಕೈದು ಸಾವಿರ ಗ್ರಾಮೀಣ ಮಕ್ಕಳಿಗೆ ಅನ್ನ ವಸತಿಯ ನೆರಳಾಗಿ, ತೊಂಬತ್ತೈದು ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮಾಡಿ, ವಿದ್ಯಾದಾನ ಮಾಡುತ್ತಿದ್ದಾರೆ. ಒಂದು ಸರ್ಕಾರ ಮಾಡಬಹುದಾದ ಕೆಲಸಗಳನ್ನು ಅವರು ಮಾಡಿ ತೋರಿಸಿದ್ದಾರೆ. ಬೇರೆಲ್ಲ ಮಠಗಳಿಗೆ ಮೇಲ್ಪಂಕ್ತಿಯಾಗಿದ್ದಾರೆ. ಇವರಿಂದ ಪಡೆದ ಸ್ಫೂರ್ತಿಯಿಂದಲೋ ಎಂಬಂತೆ ಶ್ರೀ ಆದಿ ಚುಂಚನಗಿರಿ ಕ್ಷೇತ್ರದ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಎರಡು ಶತಮಾನಗಳಲ್ಲಿ ಸಾಧಿಸಬಹುದಾದ್ದನ್ನು ಕೇವಲ ೨೦ ವರ್ಷಗಳಲ್ಲಿ ಸಾಧಿಸಿದ್ದಾರೆ.

ಈ ಸಿದ್ಧಪುರುಷರನ್ನೂ ಅವರ ತಪೋಭೂಮಿಯನ್ನೂ ನೋಡುವ ಉದ್ದೇಶದಿಂದ ನಾನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷನಾಗಿದ್ದಾಗ ಕ್ಷೇತ್ರಕ್ಕೆ ಹೋಗಿದ್ದೆ. ಕ್ಷೇತ್ರವನ್ನೆಲ್ಲಾ ವಿವರವಾಗಿ ನೋಡಿದೆ. ನಂತರ ಈ ಮಹಾ ಕರ್ಮಯೋಗಿಯ ದರ್ಶನ ಮಾಡಿದೆ. ನಾನು ಅವರಲ್ಲಿ "ಇಲ್ಲಿ, ಈ ಕ್ಷೇತ್ರದಲ್ಲಿ ತಾವು ಒಂದು ಜಾನಪದ ಕಲಾ ಮಹೋತ್ಸವ ನಡೆಸಿಕೊಡಬೇಕು" ಎಂದು ಕೇಳಿದೆ. ಅವರು ಉತ್ತರವನ್ನೇ ಕೊಡಲಿಲ್ಲ, ಯೋಚನೆ ಮಾಡುತ್ತಲೇ ಕುಳಿತರು. ಶ್ರೀ ಕ್ಷೇತ್ರದ ಮುಂದಿನ ಪೀಠಾಧಿಕಾರಿಯ ಬಗ್ಗೆ ಆಗ್ಗೆ ಗೊಂದಲ ಉಂಟಾಗಿತ್ತು. ಅವರ ಮನಸ್ಸು ಹರ್ಷವಾಗಿರಲಿಲ್ಲ. ದೊಡ್ಡವರು ಏನಾದರೂ ವಾಗ್ದಾನ ಮಾಡಿದರೆ ಅದರಂತೆ ನಡೆಯಲೇಬೇಕಷ್ಟೆ. ಆ ವಾಗ್ದಾನ ಮಾಡುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಈ ಕಾರಣ ನಾನು ಅಲ್ಲಿಯ ಪರಿಸ್ಥಿತಿ ತಿಳಿಯಾಗಲಿ, ಅನಂತರ ಮತ್ತೆ ಇದನ್ನು ಪ್ರಸ್ತಾಪಿಸೋಣ ಎಂದು ಅವರಿಗೆ ನಮಸ್ಕಾರ ಮಾಡಿ ಹಿಂದಿರುಗಿದೆ.

ಈ ಯೋಗ ಪುರುಷರು ಸುಮ್ಮನೆ ಕುಳಿತುಕೊಳ್ಳುವ ವ್ಯಕ್ತಿಯಲ್ಲ. ಇನ್ನೂ ಹತ್ತಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಹಲವಾರು ಕೋಟಿ ರೂಪಾಯಿಗಳ ವೆಚ್ಚ ಬೇಕಾಗುತ್ತದೆ. ಅವನ್ನು ಮುಗಿಸುವುದಕ್ಕೆ ನಾಡಿನ ಏಳಿಗೆಗೆ ದುಡಿಯುತ್ತಿರುವ ಈ ಮಹಾಪುರುಷರಿಗೆ ನೆರವಾಗಿ ನಿಲ್ಲುವುದು ನಮ್ಮೆಲ್ಲರ ಕರ್ತವ್ಯವೆಂದು ಹೇಳಬೇಕಾಗಿಲ್ಲ.

ಸಿದ್ಧಗಂಗೆಯ ಸಿದ್ಧಪುರುಷ

ಡಾ. ಕೆ.ಟಿ. ಪಾಂಡುರಂಗಿ

ಸಿದ್ಧಗಂಗಾ ಕ್ಷೇತ್ರವು ಪ್ರಾಚೀನ ಕಾಲದ ಗುರುಕುಲ ಮತ್ತು ಆಧುನಿಕ ವಿಶ್ವವಿದ್ಯಾನಿಲಯ ಇವುಗಳ ಮಧುರ ಸಮಾಗಮವಾಗಿರುವ ವಿದ್ಯಾಕೇಂದ್ರ ಮತ್ತು ಆಧ್ಯಾತ್ಮಕೇಂದ್ರ. ಸುಂದರವಾದ ಬೆಟ್ಟದ ಪರಿಸರದಲ್ಲಿ ಇರುವ ಈ ಸ್ಥಾನವು ಸುಂದರವಾದ ನಿಸರ್ಗದ ಹಿನ್ನೆಲೆಯನ್ನು ಪಡೆದಿದೆ. ವಿದ್ಯಾದಾನ, ಅನ್ನದಾನಗಳ ನೆಲೆಯಾದ ಈ ಸ್ಥಾನ ನಿರಂತರವಾಗಿ ಜನೋಪಕಾರ ಕಾರ್ಯಗಳಲ್ಲಿ ನಿರತರಾದ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಪವಿತ್ರವಾದ ಆಶ್ರಮವಾಗಿದೆ. ಆಧುನಿಕ ವಿಶ್ವವಿದ್ಯಾನಿಲಯಗಳಲ್ಲಿ ಇಂಥ ಆಧ್ಯಾತ್ಮಿಕ ನಾಯಕರು ಇಲ್ಲದೇ ಇರುವುದರಿಂದ ಅವು ಸಂಸ್ಕೃತಿಯಿಲ್ಲದ ಕೇವಲ ಹೊಟ್ಟೆಪಾಡಿನ ವಿದ್ಯಾಕೇಂದ್ರಗಳಾಗಿವೆ. ಆದರೆ ಆಧ್ಯಾತ್ಮಿಕ ನಾಯಕರನ್ನು ಪಡೆದ ಸಿದ್ಧಗಂಗಾ ಕ್ಷೇತ್ರದಲ್ಲಂತು ಪ್ರತಿಯೊಂದು ಕಾರ್ಯ ಚಟುವಟಿಕೆಯಲ್ಲಿಯೂ ಸಂಸ್ಕೃತಿ, ವಿನಯ, ಮಾನವೀಯ ಮೌಲ್ಯಗಳು ಹಾಸುಹೊಕ್ಕಾಗಿ ಕಂಡು ಬರುತ್ತವೆ. ಇಲ್ಲಿಗೆ ಬರುವ ವಿದ್ವಾಂಸರು ಇದೊಂದು ಉತ್ತಮ ಸಂಸ್ಕೃತಿ ಕೇಂದ್ರ, ವಿದ್ಯಾಕೇಂದ್ರ ಎಂದು ಮನಗಂಡು ಹೋಗುತ್ತಾರೆ. ಇಲ್ಲಿಗೆ ಬರುವ ರಾಜಕೀಯಸ್ಥರು, ಅಧಿಕಾರಿಗಳು ನಮ್ರಭಾವದಿಂದ ಇಲ್ಲಿಯ ಕಾರ್ಯಕ್ರಮದಲ್ಲಿ ಸಮರಸರಾಗಿ, ಹರ್ಷಚಿತ್ತರಾಗಿ ಹೋಗುತ್ತಾರೆ. ಇಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಕೇವಲ ವಿದ್ಯೆಯನ್ನು ಮಾತ್ರ ಗಳಿಸದೆ ಸುಸಂಸ್ಕೃತ ನಾಗರಿಕರಾಗಿ ಜೀವನದ ಪ್ರವಾಹವನ್ನು ಪ್ರವೇಶಿಸುತ್ತಾರೆ.

ಈ ಮಹಾಸಂಸ್ಥೆಯ ಕೇಂದ್ರಶಕ್ತಿ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು. ಇವರ ನಡೆ, ನುಡಿ, ಮುಖಮುದ್ರೆ, ಕಾರ್ಯಸರಣಿ ಎಲ್ಲವೂ ಗಂಭೀರವಾದವು. ಸುಮಾರು ನಲ್ವತ್ತು ವರ್ಷಕಾಲ ನಾನು ಇವರೊಡನೆ ಸಂಪರ್ಕವುಳ್ಳವನಾಗಿದ್ದೇನೆ. ಹೊಸ ಕರ್ನಾಟಕ ರಾಜ್ಯವಾದ ಮೇಲೆ ರಾಜ್ಯದ ಸಂಸ್ಕೃತ ಬೋರ್ಡಿಗೆ ಧಾರವಾಡದ ಕರ್ನಾಟಕ ಕಾಲೇಜದ ಪ್ರತಿನಿಧಿಯಾಗಿ ನಾನು ನಿಯಮಿತನಾದೆನು. ಬೆಂಗಳೂರಿನ ಡಿ.ಪಿ.ಐ. ಆಫೀಸಿನಲ್ಲಿ ಆಗಿನ ಡಿ.ಪಿ.ಐ. ಶ್ರೀ ದೇವೇಗೌಡರ ಅಧ್ಯಕ್ಷತೆಯಲ್ಲಿ ಈ ಬೋರ್ಡಿನ ಮೊದಲನೆಯ ಸಭೆಯು ಸೇರಿದಾಗ ನನಗೆ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಪ್ರಥಮ ದರ್ಶನವಾಯಿತು. ಸಭೆಯಲ್ಲಿಯ ಅವರ ತೂಕದ ಮಾತುಗಳು, ಸಂಸ್ಕೃತದ ಅಭಿವೃದ್ಧಿಯಲ್ಲಿರುವ ಆಸಕ್ತಿ, ಸಮಾಜದ ಎಲ್ಲವರ್ಗದವರಿಗೂ ಸಂಸ್ಕೃತ ಜ್ಞಾನವನ್ನು ಮುಟ್ಟಿಸಬೇಕು ಎಂಬ ಕಳಕಳಿ ನನ್ನ ಮನಸ್ಸಿನಲ್ಲಿ ಅವರ ವಿಷಯದಲ್ಲಿ ತುಂಬ ಗೌರವವನ್ನು ಉಂಟು ಮಾಡಿದವು. ಮುಂದೆ ನಾನು ೧೯೬೩ ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದ ಮೇಲೆ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆಯುವ ಕಾಳಿದಾಸ ಜಯಂತಿ, ಸಂಸ್ಕೃತೋತ್ಸವ, ವಿದ್ವದ್ಗೋಷ್ಠಿ ಹೀಗೆ ಅನೇಕ ಕಾರ್ಯಗಳಲ್ಲಿ ಭಾಗವಹಿಸುತ್ತ ಬಂದಿದ್ದೇನೆ. ಈ ಎಲ್ಲ ಸಂದರ್ಭಗಳಲ್ಲಿಯೂ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ ಶಾಂತ ಗಂಭೀರವಾದ ವ್ಯಕ್ತಿತ್ವ, ಸಂಘಟನಾ ಸಾಮರ್ಥ್ಯ, ವಿದ್ಯಾರ್ಥಿಗಳ ಮೇಲೆ ಇರುವ ವಾತ್ಸಲ್ಯ, ಸಾಮಾನ್ಯ ವ್ಯಕ್ತಿಯಿಂದ ಆರಂಭಿಸಿ ಅತಿ ಗಣ್ಯವ್ಯಕ್ತಿಗಳವರೆಗೆ ಎಲ್ಲರಲ್ಲಿಯೂ ಆತ್ಮೀಯ ಭಾವನೆಯನ್ನುಂಟುಮಾಡುವ ರೀತಿ, ನನ್ನನ್ನು ಆಕರ್ಷಿಸಿದೆ. ಇದು ಮುಖ್ಯವಾಗಿ ಗ್ರಾಮಾಂತರ ಪ್ರದೇಶದಿಂದ ಬರುವವರಿಗೆ ವಿದ್ಯೆಯನ್ನು ಒದಗಿಸುವ ಕೇಂದ್ರ ಎಂಬುದು ಇವರ ವೈಶಿಷ್ಟ್ಯ. ಇಂಥ ಒಂದು ಕೇಂದ್ರವು ಈ ಭಾಗದಲ್ಲಿ ಇಲ್ಲದಿದ್ದರೆ ಎಷ್ಟೋ ಬಡಕುಟುಂಬದ ಮಕ್ಕಳು ವಿದ್ಯೆಯೇ ಇಲ್ಲದಂತಾಗುತ್ತಿತ್ತು. ಸರಕಾರದ ಪ್ರಯತ್ನ ಸಮಾಜದ ಪ್ರಯತ್ನ, ಅದರಲ್ಲಿಯೂ ಧರ್ಮಗುರುಗಳ ಪ್ರಯತ್ನ ವಿದ್ಯಾ ಪ್ರಸಾರವನ್ನೂ, ಸಂಸ್ಕೃತಿಯ ಪ್ರಸಾರವನ್ನೂ ಬಡವರಿಗೆ ವಿದ್ಯಾದಾನವನ್ನೂ ಹೆಚ್ಚು ಸಮರ್ಥವಾಗಿ ಮಾಡಬಲ್ಲದು ಎಂಬುದಕ್ಕೆ ಈ ಕೇಂದ್ರ ಒಂದು ಉತ್ತಮ ನಿದರ್ಶನವಾಗಿದೆ.

ದೇಶದ ವಿವಿಧ ಭಾಗಗಳಲ್ಲಿ ಆರ್ಯ ಸಮಾಜದವರು, ರಾಮಕೃಷ್ಣಾಶ್ರಮದವರು ನಡೆಸುವ ವಿದ್ಯಾಕೇಂದ್ರಗಳಿವೆ. ಆದರೆ ಗ್ರಾಮಾಂತರ ಪ್ರದೇಶದವರಿಗೆ ಬಡ ಕುಟುಂಬದವರಿಗೆ ಸಿದ್ಧಗಂಗಾ ಕ್ಷೇತ್ರದಲ್ಲಿ ಇರುವಷ್ಟು ಅವಕಾಶ ಅಲ್ಲಿ ಕಂಡುಬರುವುದಿಲ್ಲ. ಒಂದು ವಿದ್ಯಾ ಸಂಸ್ಥೆಯ ಕಾರ್ಯ ಧೋರಣೆಯು ಅಲ್ಲಿಯ ಮುಖಂಡನ ಜೀವನ ಮೌಲ್ಯದ ಕಲ್ಪನೆಯನ್ನು ಅವಲಂಬಿಸಿರುತ್ತದೆ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ ಜೀವನ ಮೌಲ್ಯದ ದೃಷ್ಟಿಯು ವಿಶಾಲವಾದ ಮಾನವೀಯ ಮೌಲ್ಯಗಳ ತಳಹದಿಯುಳ್ಳದ್ದಾಗಿದೆ. ಆಧ್ಯಾತ್ಮಿಕ ತತ್ವಗಳ ತಳಹದಿಯುಳ್ಳದ್ದಾಗಿದೆ, ಸಕ್ರಿಯವಾಗಿದೆ, ರಚನಾತ್ಮಕವಾಗಿದೆ ಎಂಬುದು ಈ ಸಂಸ್ಥೆಯ ಪ್ರತಿಯೊಂದು ಕಾರ್ಯದಲ್ಲಿಯೂ ಕಂಡು ಬರುತ್ತದೆ. ಇಂಥ ಮಹನೀಯರ ವಜ್ರ ಮಹೋತ್ಸವವನ್ನು ಆಚರಿಸುವುದು ಮುಂದಿನ ಜನಾಂಗಕ್ಕೆ ಮಾರ್ಗದರ್ಶಕವಾಗುತ್ತದೆ. ಇಂದಿನ ಜನಾಂಗಕ್ಕೆ ಮಾರ್ಗದರ್ಶಕವಾಗುತ್ತದೆ. ಈ ಚಿಕ್ಕ ಲೇಖನದ ಮುಖಾಂತರ ಇದರಲ್ಲಿ ಭಾಗಿಯಾಗಲು ನನಗೆ ತುಂಬ ಸಂತೋಷವಾಗುತ್ತದೆ.

ಮಹಾತಪಸ್ವಿ

ಶಾಂತಾದೇವಿ ಸ. ಮಾಳವಾಡ

ನಾಲ್ವತ್ತು ವರುಷಗಳ ಹಿಂದೆ ಸಿದ್ಧಗಂಗಾ ಕ್ಷೇತ್ರದ ಪರಿಚಯ ಈ ಭಾಗದ ಜನರಿಗೆ ಹೆಚ್ಚಾಗಿ ಇರಲಿಲ್ಲ, ತೋಂಟದ ಸಿದ್ಧಲಿಂಗೇಶ್ವರರ ಪರಮ ಭಕ್ತರಾದ, ನವಿಲುಗುಂದ ಗವಿಮಠಾಧ್ಯಕ್ಷ ಮ.ನಿ.ಪ್ರ. ಬಸವಲಿಂಗಸ್ವಾಮೀಜಿಯವರ ಬಗೆಗೆ ನನಗೂ ನನ್ನ ಯಜಮಾನರಿಗೂ ಭಕ್ತಿಗೌರವವಿತ್ತು. ಅವರ ದರ್ಶನವಾದಾಗಲೆಲ್ಲ ಸಿದ್ಧಗಂಗೆಗೆ ಹೋಗಿ ಬರಲು ನಮ್ಮಿಬ್ಬರಿಗೆ ಹೇಳುತ್ತಿದ್ದರು. ೧೯೪೫ರ ಸುಮಾರಿಗೆ ನಾವಿಬ್ಬರೂ ಬೆಂಗಳೂರಿಗೆ ಹೋಗಬೇಕೆಂದು ಮಾಡಿದ್ದೆವು. ಆಗ ಪೂಜ್ಯ ಬಸವಲಿಂಗಸ್ವಾಮೀಜಿಯವರು ಮನೆಗೆ ದಯಮಾಡಿಸಿದ್ದರು. ನಾವು ಬೆಂಗಳೂರಿಗೆ ಹೋಗುವುದಿದೆ ಎಂದಾಗ ಪೂಜ್ಯರು ಹಾಗಿದ್ದರೆ ನೀವು ಮೊದಲು ಸಿದ್ಧಗಂಗೆಗೆ ಹೋಗಿರಿ, ನಾನು ಅಲ್ಲಿಯ ಸ್ವಾಮೀಜಿಯವರಿಗೆ ಪತ್ರ ಬರೆಯುವೆ ಎಂದು ಹೇಳಿದರು.

ಪೂಜ್ಯರ ಇಚ್ಛೆಯಂತೆ ನಾವಿಬ್ಬರೂ ಸಿದ್ಧಗಂಗೆಗೆ ಹೋದೆವು. ಹೋಗಿ ಗಿಡಮರಗಳ ಮಧ್ಯದಲ್ಲಿ, ಬೆಟ್ಟದ ಅಡಿಯಲ್ಲಿ ಸಿದ್ಧಗಂಗಾ ಕ್ಷೇತ್ರವನ್ನು ಕಂಡೆವು. ಹೋದೊಡನೆ, ನಿಮಗೆ ವಾಸಿಸಲು ಕೋಣೆ ಬೇಕೆ ? ಸ್ನಾನ ಮಾಡಿರಿ, ಬೆಟ್ಟಕ್ಕೆ ಹೋಗಿ ದೇವರ ದರ್ಶನ ಪಡೆದು ಬನ್ನಿರಿ, ಪ್ರಸಾದ ಸ್ವೀಕರಿಸಿರಿ ಎಂದು ಅಲ್ಲಿದ್ದವರು ಹೇಳಿದರು. ಬೇರೆ ತೀರ್ಥಕ್ಷೇತ್ರಗಳಂತೆ, ಇಲ್ಲಿ ವ್ಯಾಪಾರಿ ಮನೋಭಾವವಿರಲಿಲ್ಲ. ವಿನಯ, ಸೇವಾಭಾವನೆ ಕಂಡು ಅಚ್ಚರಿ ಎನಿಸಿತು. ಅಷ್ಟರಲ್ಲಿ ಮಠದ ವ್ಯವಸ್ಥಾಪಕರು ಬಂದರು. ' ಪೂಜ್ಯ ಸ್ವಾಮೀಜಿಯವರು ಊರಲ್ಲಿ ಇಲ್ಲ. 'ಅವರು ಹೋಗುವ ದಿವಸ ನವಿಲುಗುಂದ ಶ್ರೀಗಳವರ ಪತ್ರ ಬಂದಿತ್ತು, ನಿಮಗೆ ಎಲ್ಲ ವ್ಯವಸ್ಥೆ ಮಾಡಲು ಪೂಜ್ಯರು ತಿಳಿಸಿದ್ದಾರೆ' ಎಂದರು, ಕೋಣೆಯೊಂದನ್ನು ಕೊಟ್ಟರು. ನಾವಿಬ್ಬರೂ ಸ್ನಾನಮಾಡಿ ಬೆಟ್ಟದ ಮೇಲೆ ಹೋದೆವು. ನಿಸರ್ಗ ಸೊಬಗಿನ ಮಧ್ಯದಲ್ಲಿ, ಕಲ್ಲು ಬಂಡೆಯ ಮೇಲೆ ನಿರ್ಮಿತವಾದ ದೇವಾಲಯಕ್ಕೆ ಹೋದೆವು. ಅರ್ಚಕರಾದ ಗಂಗಾಧರದೇವರು, ಭಕ್ತಿಪೂರ್ವಕ ಸಿದ್ಧಲಿಂಗೇಶ್ವರನಿಗೆ ಅಭಿಷೇಕ ಮಾಡಿದರು. ಎದುರಿಗಿರುವ ಪವಿತ್ರ ಗಂಗಾ ಮಾತೆಗೆ ಕುಂಕುಮಾರ್ಚನೆ ಮಾಡಿದರು. ಅಲ್ಲಿಯೆ ಇದ್ದ ಅಮ್ಮನವರ ಗವಿಯಲ್ಲಿ, ಲಿಂಗಪೂಜೆ ಮಾಡಿಕೊಳ್ಳಲು ಸ್ಥಳವನ್ನು ತೋರಿಸಿದರು, ಯಜಮಾನರ ಹಳ್ಳಿಯಲ್ಲಿ ಕನ್ನಡ ಶಾಲೆ ಮಾತ್ರ ಇದ್ದುದರಿಂದ ಅವರು ಹೈಸ್ಕೂಲ ಶಿಕ್ಷಣದಿಂದ ಎಂ.ಎ. ಆಗುವವರೆಗೆ ಮನೆಯಿಂದ ದೂರ, ಬೇರೆ ಬೇರೆ ಊರುಗಳಲ್ಲಿದ್ದು ಶಿಕ್ಷಣ ಪಡೆದುದರಿಂದ ವೀರಶೈವ ಸಂಸ್ಕಾರಕ್ಕೆ ಹೆಚ್ಚಿನ ಅವಕಾಶವಿರಲಿಲ್ಲ. ತೋರಿಕೆಗೆ ಪೂಜೆಮಾಡಿಕೊಳ್ಳುವ ಜನರನ್ನು ಕಂಡು ಲಿಂಗಪೂಜೆಯ ಬಗೆಗೆ ಆಸ್ಥೆಯಿರಲಿಲ್ಲ.

''ಅರುಹ ತೋರಲು ಕುರುಹ ಕೊಟ್ಟೊಡೆ ಅರುಹನೇ ಮರೆತು ಕುರುಹ ಪೂಜಿಸುವ
ಹೆಡ್ಡರ ನೋಡೆಂದ ನಮ್ಮ ಅಂಬಿಗರ ಚೌಡಯ್ಯ''

ಎಂಬ ಅನುಭವ ಅವರದಾಗಿತ್ತು. ನಾವಿಬ್ಬರೂ ಅಲ್ಲಿ ಕುಳಿತು ಲಿಂಗಾರ್ಚನೆ ಮಾಡಿಕೊಂಡೆವು. ಆ ಸ್ಥಳದಲ್ಲಿ ಶತಮಾನಗಳಿಂದ ತಪೋನಿಧಿಗಳಾದ ಹರದನಹಳ್ಳಿ ಗೋಸಲೇಶ್ವರ, ಚೆನ್ನಬಸವೇಶ್ವರ, ತೋಂಟದ ಸಿದ್ಧಲಿಂಗೇಶ್ವರರಂಥ ಮಹಾತಪಸ್ವಿಗಳು ಅನುಷ್ಠಾನಗೈದ ಪಾವನಕ್ಷೇತ್ರ ಎಂಬುದು ನಂತರ ತಿಳಿಯಿತು. ಅಲ್ಲಿ ಲಿಂಗಪೂಜೆಗೆ ಕುಳಿತೊಡನೆ ಏಕಾಗ್ರತೆ, ಸಹಜವೆನಿಸಿತು, ಅಂತರಂಗ ಆನಂದಭರಿತವಾಯಿತು.

''ಕಣ್ಣಾಳ ನೋಟ, ಹೃದಯದ ಧ್ಯಾನ, ಮನದಲ್ಲಿ ಮಾತನಾಡುತಿರ್ದೆನಯ್ಯ;
ಜೇನ ಮಳೆಗಳು ಕರೆದವು ಅಮೃತಕಳೆಗಳು ಸುರಿದವು
ಕೂಡಲ ಸಂಗಮದೇವರೆಂಬ ರಸಸಾಗರದೊಳಗೆ ಓಲಾಡುತಿರ್ದೆನಯ್ಯಾ''

ಎಂಬ ಅನುಭವ ಹೀಗೆ ಇರಬೇಕು ಎಂದೆನಿಸಿತು. ಅಂದಿನಿಂದ ನನ್ನವರು ಲಿಂಗಪೂಜಾ ನಿಷ್ಠರಾದರು. ಸಂತೃಪ್ತಭಾವನೆಯಿಂದ ಬೆಟ್ಟವನ್ನಿಳಿದು ಬಂದೆವು. ಎಲ್ಲೆಡೆ ವಿದ್ಯಾರ್ಥಿ ಸಮೂಹವನ್ನು ಕಂಡೆವು. ಹಳೆಯ ಮಠದಲ್ಲಿ ಪ್ರಸಾದ ಸೇವಿಸಿದೆವು. ಆ ದಿನದ ಪ್ರಸಾದದೊಂದಿಗೆ, ಅನ್ನ, ಅಂದೇ ಬೆಣ್ಣೆಕಾಯಿಸಿ ಸಿದ್ಧಗೊಳಿಸಿದ ತುಪ್ಪದ ಸವಿಯನ್ನು ಇಂದಿಗೂ ಮರೆತಿಲ್ಲ. ಮತ್ತೊಮ್ಮೆ ಬಂದು ಪೂಜ್ಯ ಸ್ವಾಮೀಜಿಯವರ ದರ್ಶನ ಪಡೆಯುವದಾಗಿ ಹೇಳಿ ಬೆಂಗಳೂರಿಗೆ ಹೋದೆವು.

ಹಲವಾರು ಸಲ 'ಮತ್ತೊಮ್ಮೆ ಸಿದ್ಧಗಂಗಾ ಕ್ಷೇತ್ರಕ್ಕೆ ಹೋಗಬೇಕು; ಪೂಜ್ಯರ ದರ್ಶನ ಪಡೆಯಬೇಕು' ಎಂದೆನಿಸಿದರೂ ಸಾಧ್ಯವಾಗಿರಲಿಲ್ಲ, ೧೯೫೦ರ ಸುಮಾರಿಗೆ ಬೆಂಗಳೂರಿಗೆ ಹೋದಾಗ ಪಿ. ಮಲ್ಲಿಕಾರ್ಜುನಪ್ಪ ದಂಪತಿಗಳೂ, ನಾವಿಬ್ಬರೂ ಕೂಡಿ ಸಿದ್ಧಗಂಗೆಗೆ ಹೋದೆವು. ಶರಣರು ಮೆಟ್ಟಿದ ಪಾವನ ಭೂಮಿಯಲ್ಲಿ ಪೂಜ್ಯ ಶಿವಕುಮಾರ ಸ್ವಾಮೀಜಿಯವರ ದರ್ಶನವನ್ನು ಅವರ ಆಫೀಸಿನಲ್ಲಿ ಮೊದಲ ಸಲ ಪಡೆದೆವು. ಇಂಗ್ಲೀಷ್, ಸಂಸ್ಕೃತ, ಕನ್ನಡ ಸಾಹಿತ್ಯದ ಮೇಲಿನ ಅವರ ಪ್ರಭುತ್ವ, ಕಾರ್ಯದಕ್ಷತೆ, ಲೋಕಾನುಭವ, ಶಿವಾನುಭವಗಳನ್ನು ಕಂಡು ಬೆರಗಾದೆವು. ಸರ್ವಜೀವಾತ್ಮರಿಗೆ ಲೇಸನ್ನು ಬಯಸುವ ವಿಶಾಲ ಮನೋಭಾವನೆ, ದೀನ - ದಲಿತರ ಬಗೆಗಿನ ಮಾನವೀಯ ಅನುಕಂಪ, ಸಮಾಜವನ್ನು ಸುಧಾರಿಸಬೇಕೆಂಬ ಹಂಬಲ, ರಾಷ್ಟ್ರಪ್ರೇಮ, ನಾಡು - ನುಡಿಗಳ ಮೇಲಿನ ಅಭಿಮಾನ ಅವರ ಪ್ರತಿಯೊಂದು ಮಾತಿನಲ್ಲಿಯೂ ಎದ್ದು ತೋರುತ್ತಿತ್ತು. ಪೂಜ್ಯರ ಮಾತೆಂಬುದು ಜ್ಯೋತಿರ್ಲಿಂಗವೆನಿಸಿತು. ಅರ್ಧಗಂಟೆ ನಮ್ಮೊಂದಿಗೆ ಮಾತನಾಡಿದರು. ನಾವೆಲ್ಲ ಭಕ್ತಿಯಿಂದ ಶಿರಬಾಗಿ ನಮಸ್ಕರಿಸಿದೆವು. ಒಂದು ದಿನ ಅಲ್ಲಿದ್ದೆವು. ಪವಿತ್ರ ವಾತಾವರಣ, ಪೂಜ್ಯರ ವ್ಯಕ್ತಿತ್ವದ ಹಿರಿಮೆಯನ್ನು ಕಂಡು ಅನುಕೂಲವಾದಾಗಲೆಲ್ಲ ಸಿದ್ಧಗಂಗೆಗೆ ಹೋಗಿ ಪೂಜ್ಯರ ದರ್ಶನ ಪಡೆಯುತ್ತಿದ್ದೆವು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಬೆಟ್ಟದ ಮೇಲಿನ ಅಮ್ಮನವರ ಗವಿಯಲ್ಲಿಯೂ ಹಲವಾರು ಜನ ವಿದ್ಯಾರ್ಥಿಗಳು ಸಹ ವಾಸಿಸುತ್ತಿದ್ದರು. ಅಧ್ಯಾತ್ಮ ಚೇತನದ ಪೂಜಾಗೃಹ ಇಲ್ಲದಾಯಿತು.

ಆಧುನಿಕ ಸೌಕರ್ಯವುಳ್ಳ ಅತಿಥಿಗೃಹ ಸಿದ್ಧವಾದ ಮೇಲೆ, ಅಲ್ಲಿ ವಾಸಿಸುವ ಏರ್ಪಾಡನ್ನು ಪೂಜ್ಯ ಶಿವಕುಮಾರ ಸ್ವಾಮೀಜಿಯವರು ಒದಗಿಸಿಕೊಟ್ಟರು. ಹಳೆಯ ಮಠದ ಜೀರ್ಣೋದ್ಧಾರವಾಗಿತ್ತು. ವಿದ್ಯಾರ್ಥಿಗಳಿಗಾಗಿ ವಸತಿಗೃಹಗಳು - ಶಿಕ್ಷಣ ಸಂಸ್ಥೆಗಳೂ ಬೆಳೆಯುತ್ತಲಿದ್ದವು. ಪೂಜ್ಯರ ಅನುಮತಿ ದೊರೆತರೆ ಬೆಳಿಗ್ಗೆ ಅವರೊಂದಿಗೆ ಲಿಂಗಾರ್ಚನೆ ಮಾಡಿಕೊಳ್ಳಬಹುದೆಂದು ಪರಿಚಿತರೊಬ್ಬರು ಹೇಳಿದರು. ಪೂಜ್ಯರನ್ನು ಕೇಳಿದಾಗ ಅನುಮತಿಯೂ ದೊರೆಯಿತು. ಬೆಳಿಗ್ಗೆ ಸ್ನಾನಮಾಡಿ ನಾಲ್ಕುವರೆ ಗಂಟೆಗೆ ಹಳೆಯ ಮಠದಲ್ಲಿರಬೇಕು ಎಂದು ಹೇಳಿದುದಲ್ಲದೆ, ಅಲ್ಲಿದ್ದ ಶಿಷ್ಯರೊಬ್ಬರಿಗೆ ನಮ್ಮನ್ನು ಪೂಜಾಗೃಹಕ್ಕೆ ಕರೆದುಕೊಂಡು ಬರಲು ತಿಳಿಸಿದರು. ನಾವಿಬ್ಬರೂ ಸ್ನಾನಮಾಡಿ ಪೂಜ್ಯರು ಹೇಳಿದ ವೇಳೆಗೆ ಹೋದೆವು. ಪೂಜ್ಯರು ನಿತ್ಯ ಬೆಳಿಗ್ಗೆ ೨.೩೦ಕ್ಕೆ ಏಳುವರೆಂದೂ ಸ್ವಾಧ್ಯಾಯದ ನಂತರ ಸ್ನಾನಮಾಡಿ ಪೂಜೆಗೆ ಕುಳಿತುಕೊಳ್ಳುವರೆಂದೂ ತಿಳಿಯಿತು. ೪.೩೦ರ ವೇಳೆಗೆ ಪೂಜ್ಯರು ಲಿಂಗಪೂಜೆಯಲ್ಲಿ ಮಗ್ನರಾಗಿದ್ದರು. ಧೂಪದ ಸುವಾಸನೆ, ಹೂವಿನ ಪರಿಮಳದಿಂದ ಪ್ರಸನ್ನ ವಾತಾವರಣ ನಿರ್ಮಿತವಾಗಿತ್ತು, ಸ್ವಲ್ಪ ವೇಳೆಯ ನಂತರ ಪೂಜ್ಯರು ನಮ್ಮನ್ನು ತಮ್ಮ ಎದುರು ಪೂಜೆಗೆ ಕುಳಿತುಕೊಳ್ಳಲು ಹೇಳಿದರು. ನಾವಿಬ್ಬರೂ ನಮ್ಮ ಲಿಂಗವನ್ನು ಅಂಗೈಯಲ್ಲಿರಿಸಿಕೊಂಡು ಕುಳಿತೆವು. ಪೂಜ್ಯರ ಎತ್ತರದ ನಿಲುವು, ಭಸ್ಮಭೂಷಿತ ವದನ, ರುದ್ರಾಕ್ಷಿ ಧಾರಣೆ, ಅಂಗೈಯಲ್ಲಿ ಲಿಂಗಧಾರಿಗಳಾಗಿದ್ದರು, ಶಿವಯೋಗದಾನಂದದಿಂದ ಪ್ರಸನ್ನವದನರಾಗಿದ್ದರು. ಸಾಕ್ಷಾತ್ ಪ್ರಭುದೇವರನ್ನೇ ಕಂಡಂತಾಯಿತು.

"ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯ ಬೆಳಗು

ಶಿವಯೋಗದನುಭಾವ ಏಕಾರ್ಥವಾಗಿ ಗುಹೇಶ್ವರಾ ನಿಮ್ಮ ಶರಣನು ಅನುಪಮಸುಖಿಯಾಗಿರ್ದನು"

ಎಂಬ ಪ್ರಭುದೇವರ ವಚನ ನೆನಪಾಯಿತು. ದೈವೀಆನಂದವನ್ನು ಪಡೆದವರ ದರ್ಶನ ಇತರರಿಗೂ ಆನಂದವನ್ನೊದಗಿಸುತ್ತದೆ. ಶ್ರೀಗಳವರು ನಮ್ಮ ಲಿಂಗಕ್ಕೆ ಮಜ್ಜನ ಮಾಡಿಸಿ, ಭಸ್ಮಧರಿಸಿದರು. ನಮ್ಮಿಬ್ಬರ ಹಣೆಗೂ ಭಸ್ಮಧರಿಸಿದರು. ಲಿಂಗಕ್ಕೆ ಹೂವುಪತ್ರಿಗಳನ್ನೇರಿಸಿದರು. ಪೂಜ್ಯರು ಮತ್ತೆ ಶಿವಯೋಗದಾನಂದದಲ್ಲಿ ಮಗ್ನರಾದರು. ನಾವು ಅಂಗೈ ಲಿಂಗದಲ್ಲಿ ದೃಷ್ಟಿಯನ್ನಿರಿಸಿದೆವು. ಈ ಸ್ಥಳದಲ್ಲಿಯೂ ಹಿಂದಿನ ಶ್ರೀಗಳು ಅನುಷ್ಠಾನಗೈದಿದ್ದರು. ಈಗಿನವರೂ ಮಹಾತಪಸ್ವಿಗಳು. ಇವರೆಲ್ಲ ಪೂಜೆಯ ಪುಣ್ಯಪ್ರಭಾವದಿಂದ ಆ ಸ್ಥಳ ಅವಿಮುಕ್ತ ಕ್ಷೇತ್ರವಾಗಿದೆ. ಲಿಂಗಪೂಜೆಯಾದೊಡನೆ ಶ್ರೀಗಳವರಿಗೆ ನಮಸ್ಕರಿಸಿ ಹೊರಬಂದೆವು. ಹೊರಗೆ ಇಡ್ಲಿ - ಸಿಹಿ ಚಟ್ನಿ, ಖಾರದ ಚಟ್ನಿ ಪ್ರಸಾದ ದೊರೆಯಿತು, ಉತ್ತರ ಕರ್ನಾಟಕದಲ್ಲಿ ಸಿಹಿ ಚಟ್ನಿ ಗೊತ್ತಿಲ್ಲ, ಮನಕ್ಕೆ ಲಿಂಗಪೂಜೆಯ ಆನಂದ, ದೇಹಕ್ಕೆ ರುಚಿಕರ ಪ್ರಸಾದ ದೊರೆಯಿತು. ಬೆಟ್ಟಕ್ಕೆ ಹೋಗಿ ದೇವರ ದರ್ಶನ ಪಡೆದು ಧಾರವಾಡಕ್ಕೆ ಮರಳಿದೆವು. ಮನದ ತುಂಬ ಸಿದ್ಧಗಂಗೆಯ ನೆನಪು ತುಂಬಿತ್ತು.

೧೯೭೨ರಲ್ಲಿ ಪೂಜ್ಯ ಶಿವಕುಮಾರ ಸ್ವಾಮೀಜಿಯವರ ಪಟ್ಟಾಧಿಕಾರದ ಬೆಳ್ಳಿಹಬ್ಬಕ್ಕೆ ನಾವಿಬ್ಬರೂ ಭಾಷಣಕ್ಕೆ ಆಹ್ವಾನಿತರಾಗಿದ್ದೆವು. ಆ ಸಮಾರಂಭದ ಸವಿನೆನಹಿಗಾಗಿ ಪೂಜ್ಯರಿಗೆ ಸಾಹಿತ್ಯದ ಕಿರುಕಾಣಿಕೆ ಅರ್ಪಿಸಬೇಕೆಂಬ ಇಚ್ಛೆ

ನನಗಾಯಿತು. ನನ್ನವರು ಪ್ರೋತ್ಸಾಹಿಸಿದರು. ಅಕ್ಕಮಹಾದೇವಿಯ ಒಂದೊಂದು ವಚನಗಳ ಆಧಾರದಿಂದ ಕೆಲವು ಸಣ್ಣ ಕಥೆಗಳನ್ನು ಬರೆದಿದ್ದೆ, ಅವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ೧೫ ದಿನಗಳಲ್ಲಿ ಪುಟ್ಟ ಪುಸ್ತಕ ಪ್ರಕಟವಾಯಿತು. ಪೂಜ್ಯರಿಗೆ ಅರ್ಪಿತವಾಯಿತು, ಧನ್ಯತೆಯ ಭಾವ ನನ್ನದಾಯಿತು. ಬೆಳ್ಳಿಹಬ್ಬದ ಉತ್ಸವ ವೈಭವ ಪೂರ್ಣವಾಗಿತ್ತು, ಸಿದ್ಧಗಂಗಾ ಕ್ಷೇತ್ರದ ಹಳೆಯ ವಿದ್ಯಾರ್ಥಿಗಳು, ಭಕ್ತರು ಕೂಡಿ ಏರ್ಪಡಿಸಿದ ಕಾರ್ಯಕ್ರಮಕ್ಕೆ ಲಕ್ಷಾವಧಿ ಜನ ಸೇರಿದ್ದರು. ಅಂದು ಪೂಜ್ಯರು ಮಾಡಿದ ಭಾಷಣ ಹೃದಯಸ್ಪರ್ಶಿಯಾಗಿತ್ತು.

೧೯೮೨ರಲ್ಲಿ ಸಿದ್ಧಗಂಗೆಯ ಸಂಸ್ಕೃತ ಮತ್ತು ವೇದ ಮಹಾಪಾಠಶಾಲೆಗಳ ವಜ್ರಮಹೋತ್ಸವ ನೆರವೇರಿತು. ಆಗ ನಮಗೆ ಹೋಗಲಾಗಲಿಲ್ಲ. ಆ ಸಂದರ್ಭದಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದ ಹಳೆಯ ವಿದ್ಯಾರ್ಥಿ ಸಂಘಗಳವರು, ವಜ್ರಮಹೋತ್ಸವದ ಕಾಲಕ್ಕೆ ಅರ್ಪಿಸಿದ ಸುವರ್ಣ ಸಂಪುಟ ಗಾತ್ರದಲ್ಲಿ, ಪಾತ್ರದಲ್ಲಿ ಹಿರಿದಾಗಿದೆ. ೧೨೫೦ ಪುಟಗಳ "ಸಿದ್ಧಗಂಗಾ ಶ್ರೀ" ಕನ್ನಡ ಸಾಹಿತ್ಯದಲ್ಲಿಯೆ ದೊಡ್ಡ ಕೊಡುಗೆಯಾಗಿದೆ. ಈ ವೇಳೆಗೆ ಪೂಜ್ಯರು ಪೀಠಾಧಿಕಾರಿಗಳಾಗಿ ೫೦ ವರುಷ ಸಂದಿದುದರಿಂದ ಈ ಗ್ರಂಥಕ್ಕೆ "ಸುವರ್ಣ ಸಂಪುಟ" ಎಂದುದು ಅರ್ಥಪೂರ್ಣವಾಗಿದೆ. ಬಹಳ ಒಳ್ಳೆಯ ಮನುಷ್ಯನಿಗೆ ಬಂಗಾರದಂಥ ಮನುಷ್ಯ ಎನ್ನುವ ರೂಢಿಯಿದೆ. ಅದರಂತೆ "ಸಿದ್ಧಗಂಗಾ ಶ್ರೀ" ಬಂಗಾರದಂಥ ಪುಸ್ತಕವಾಗಿದೆ. ಒಬ್ಬ ಮನುಷ್ಯ ಆಯುಷ್ಯದುದ್ದಕ್ಕೂ ಈ ಗ್ರಂಥವನ್ನು ಓದಬಹುದಾಗಿದೆ. ಕ್ಷೇತ್ರಶ್ರೀ, ದರ್ಶನಶ್ರೀ, ಸಾಹಿತ್ಯಶ್ರೀ, ಕಲಾಶ್ರೀ, ಕವಿಕಾಣಿಕೆಗಳನ್ನೊಳಗೊಂಡ ಪಂಚರತ್ನಗಳನ್ನು ಕಾಣಬಹುದಾಗಿದೆ. ಈ ಕಾರ್ಯಕ್ರಮವೂ ಅದ್ದೂರಿಯಿಂದ ನಡೆಯಿತು.

ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿಯವರ ಕಾಯಕ - ದಾಸೋಹ ಕಾರ್ಯ ಅಪೂರ್ವವಾಗಿದೆ, ಕಾಯಕ - ದಾಸೋಹ ಶಬ್ದಗಳ ತಿರುಳುಗಳನ್ನರಿಯಬೇಕು ಎನ್ನುವವರು ಸಿದ್ಧಗಂಗೆಗೆ ಹೋಗಬೇಕು. ಒಂದು ದಿನ ಪೂಜ್ಯರ ಕಾರ್ಯವೈಖರಿಯನ್ನು ಕಾಣಬೇಕು, ೪ ಸಾವಿರ ವಿದ್ಯಾರ್ಥಿಗಳು, ೨ ಸಾವಿರ ಭಕ್ತರಿಗೆ ನಿತ್ಯ ಅನ್ನದಾಸೋಹ ನಡೆಸುತ್ತಿರುವುದನ್ನು ನೋಡಬೇಕು. ಆಗ ಆ ಶಬ್ದಗಳ ಅರ್ಥವಾಗುತ್ತದೆ. ವಿಜ್ಞಾನಯುಗದಲ್ಲಿ ಪವಾಡಸದೃಶ ಕಾರ್ಯ ನಡೆಯುತ್ತಿರುವುದನ್ನು ಕಂಡವರು ಮೂಕವಿಸ್ಮಿತರಾಗುತ್ತಾರೆ. ಸಿದ್ಧಗಂಗಾಮಠ ಲಕ್ಷಗಟ್ಟಲೆ ಆಸ್ತಿಯಿದ್ದ ಮಠವಲ್ಲ, ಪೂಜ್ಯರು ಮಠದ ಆಸ್ತಿಯಿಂದ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವರಲ್ಲ. ಮಹಾ ತಪಸ್ವಿಗಳಾದ ,ಹಿಂದಿನ ಪೀಠಾಧಿಕಾರಿ ಉದ್ದಾನ ಶಿವಯೋಗಿಗಳವರ ಕರಸಂಜಾತರು. ಉದ್ದಾನ ಶಿವಯೋಗಿಗಳವರು ಮಹಾ ದಾರ್ಶನಿಕರು. ತಮ್ಮ ಅಂತಶ್ಚಕ್ಷುವಿನ ಮೂಲಕ, ಶ್ರೀ ಶಿವಕುಮಾರ ಸ್ವಾಮೀಜಿಯವರ ದಿವ್ಯಚೇತನವನ್ನರಿತಿದ್ದರು. ಆದರೂ ಅವರಿಗೆ ಲೋಕಾನುಭವವಾಗಬೇಕೆಂದು ೧೯೩೮ ರಿಂದ ೪೧ ರವರೆಗೆ ದಾಸೋಹ ಕಾರ್ಯವನ್ನೊಪ್ಪಿಸಿ ಹಲವಾರು ಬಗೆಯಿಂದ ಅವರನ್ನು ಪರೀಕ್ಷಿಸಿ, ಒರೆಗೆ ಹಚ್ಚಿ, ಚೊಕ್ಕ ಚಿನ್ನವನ್ನು ಮಾಡಿ ನಾಡಿಗಿತ್ತರು. ಪೂಜ್ಯ ರಾಮಕೃಷ್ಣ ಪರಮಹಂಸರು ಐಕ್ಯರಾಗುವಾಗ ತಮ್ಮ ಆಧ್ಯಾತ್ಮ ಶಕ್ತಿಯನ್ನು ಸ್ವಾಮಿ ವಿವೇಕಾನಂದರಿಗಿತ್ತಂತೆ. ಶ್ರೀ ಉದ್ದಾನ ಶಿವಯೋಗಿಗಳು ತಮ್ಮ ಆಧ್ಯಾತ್ಮ ಶಕ್ತಿಯನ್ನು ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ಧಾರೆ ಎರೆದರು. ಗುರುಕೃಪೆ, ತಪೋಭೂಮಿ, ಶಿವಕುಮಾರ ಸ್ವಾಮೀಜಿಯವರ ಕಾಯಕ ನಿಷ್ಠೆ, ದಾಸೋಹಂಭಾವಗಳು ಒಂದುಗೂಡಿದುದರಿಂದ, ಇಲ್ಲಿ 'ಕಾಯಕವೇ ಕೈಲಾಸ'ವಾಗಿದೆ. ಶಿಕ್ಷಣ ದಾಸೋಹ, ಜ್ಞಾನದಾಸೋಹ, ಅನ್ನದಾಸೋಹಗಳೆಂಬ ತ್ರಿವಿಧ ದಾಸೋಹಗಳು ನದಿಯ ಪ್ರವಾಹದಂತೆ ಸಾಗಿದೆ.

ಆಹಾರ ಧಾನ್ಯದ ಬೆಲೆ ಗಗನಕ್ಕೇರಿದೆ. ಜೀವನ ಮೌಲ್ಯದ ಬೆಲೆ ಪಾತಾಳಕ್ಕಿಳಿಯುತ್ತಿದೆ. ಇಂಥ ಕಠಿಣ ಪರಿಸ್ಥಿತಿಯಲ್ಲಿ, ಇಳಿ ವಯಸ್ಸಿನಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿಯವರು 'ಸೋಹಂ, ಶಿವೋಹಂ' ಎಂಬ ದ್ವಂದ್ವವನಳಿದು ದಾಸೋಹ ನಡೆಸುತ್ತಿರುವುದು ಅಚ್ಚರಿಯ ಅದ್ಭುತ ಕೆಲಸವಾಗಿದೆ. ಶಿಕ್ಷಣ ಸಂಸ್ಥೆ, ದಾಸೋಹಗಳ ಕೆಲಸ ಕಾರ್ಯಗಳಲ್ಲಿ ಪೂಜ್ಯರಿಗೆ ದಿನದ ೨೦ ಗಂಟೆ ಸಮಯ ಸಾಲುವುದಿಲ್ಲ. ಅದರಲ್ಲಿ ತ್ರಿಕಾಲ ಪೂಜೆ ನಿಯಮಿತವಾಗಿ ಸಾಗುತ್ತದೆ. ನಿತ್ಯ ಬರುವ ಸಾವಿರಾರು ಜನರಿಗೆ ಆಶೀರ್ವದಿಸುತ್ತ ಅವರ ಕ್ಷೇಮ ಸಮಾಚಾರ ವಿಚಾರಿಸುತ್ತಾರೆ. ಸದಾ ಸಮಾಜದ ಅಭ್ಯುದಯದ ಚಿಂತೆಯ ಜೊತೆಗೆ ವಿದ್ಯಾರ್ಥಿಗಳು ಸತ್ಯ, ಸದಾಚಾರಿಗಳಾಗಿರುವಂತೆ ನೋಡಿಕೊಳ್ಳುತ್ತಾರೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶ್ರೀಗಳವರು ವಿಶಾಲ ಹೃದಯದವರಾಗಿದ್ದಾರೆ.

"ಹೆಣ್ಣಿಂಗೆ ಬಂದಾತನಲ್ಲ, ಹೊನ್ನಿಂಗೆ ಬಂದಾತನಲ್ಲ, ಅಶನಕ್ಕೆ ಬಂದಾತನಲ್ಲ, ವ್ಯಸನಕ್ಕೆ ಬಂದಾತನಲ್ಲ.
ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಿಪಥವ ತೋರಬಂದನಯ್ಯಾ ಪ್ರಭುದೇವರು."

ಎಂದು ಚನ್ನಬಸವಣ್ಣನವರು ಹೇಳಿದಂತೆ ಶ್ರೀ ಶಿವಕುಮಾರ ಸ್ವಾಮೀಜಿಯವರು ಜನ ಸಮೂಹವನ್ನು ಭಕ್ತಿಪಥದತ್ತ ಸಾಗಿಸುತ್ತಿದ್ದಾರೆ. ವಿದ್ಯಾರ್ಥಿಗಳನ್ನು ಕತ್ತಲೆಯಿಂದ ಬೆಳಕಿನತ್ತ ಮುನ್ನಡೆಸುತ್ತಿದ್ದಾರೆ. ಇಲ್ಲಿ ಶಿಕ್ಷಣ ಪೂರೈಸಿದ ಸಾವಿರಾರು ಜನ ವಿದ್ಯಾರ್ಥಿಗಳು, ರಾಜ್ಯದ ಹಲವಾರು ಭಾಗದಲ್ಲಿ ಹಿರಿಯ ಅಧಿಕಾರಿಗಳಾಗಿದ್ದಾರೆ. ಅವರಲ್ಲಿ ಧಾರ್ಮಿಕ ಭಾವನೆ, ಒಳ್ಳೆಸಂಸ್ಕಾರ ಉಳಿದು ಬಂದಿದೆ. ಅದಕ್ಕೆ ಶ್ರೀಗಳವರ ಕೃಪೆ, ಭಕ್ತವಾತ್ಸಲ್ಯವೇ ಕಾರಣ.

ಸಿದ್ಧಗಂಗೆಯಲ್ಲಿ ಜಾತ್ರೆಯನ್ನು ಪ್ರಾರಂಭಿಸಬೇಕು., ತೇರ ಎಳೆಯಬೇಕು. ಜಾತ್ರೆಗೆ ಬಂದ ಭಕ್ತರು ಪ್ರಸಾದ ಸೇವಿಸಿ ಸಂತೃಪ್ತರಾಗಬೇಕು ಎಂಬ ಸಂಕಲ್ಪ ಶ್ರೀ ಉದ್ದಾನ ಶ್ರೀಗಳವರದಾಗಿತ್ತು. ಅವರ ಸಂಕಲ್ಪಶಕ್ತಿ ಬಲವಾಗಿತ್ತು. ಆಗ ಮಠದ ಆದಾಯ ಬಹಳ ಕಡಿಮೆಯಿತ್ತು. ೧೯೦೫ ರಲ್ಲಿ ಪೂಜ್ಯರ ಸಂಕಲ್ಪ, ಸಿದ್ಧಿಯನ್ನು ಪಡೆಯಿತು. ಜಾತ್ರೆ ಪ್ರಾರಂಭವಾಯಿತು. ಜಾತ್ರೆಗೆ ಬರುವ ಸಾವಿರಾರು ಜನರಿಗಾಗಿ ೬ - ೭ ಸ್ಥಳಗಳಲ್ಲಿ ದಾಸೋಹದ ವ್ಯವಸ್ಥಾ ಮಾಡಿದ ಶ್ರೀ ಉದ್ದಾನ ಶಿವಯೋಗಿಗಳವರು, ಒಂದೊಂದು ಊರ ಭಕ್ತರಿಗೆ ಒಂದೊಂದು ದಾಸೋಹದ ವ್ಯವಸ್ಥೆಯನ್ನು ಒಪ್ಪಿಸಿದರಂತೆ. ಆ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ. ಪ್ರಾರಂಭದಲ್ಲಿ ಸಾವಿರಾರು ಜನ ಜಾತ್ರೆಗೆ ಬರುತ್ತಿದ್ದರೆ, ಈಗ ಲಕ್ಷಾವಧಿ ಜನ ಕೂಡುತ್ತಾರೆ, ಬಂದವರೆಲ್ಲ ಪ್ರಸಾದ ಸೇವಿಸುತ್ತಾರೆ.

ಶಿವರಾತ್ರಿಯ ದಿವಸ ತೇರು, ಮರುದಿವಸ ಬೆಳ್ಳಿಪಾಲಿಕೆಯಲ್ಲಿ ಉತ್ಸವಮೂರ್ತಿಯ ಮೆರವಣಿಗೆ ವೈಭವದಿಂದ ನೆರವೇರುತ್ತದೆ. ಒಕ್ಕಲುತನ ಪ್ರದರ್ಶನ, ದನದ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮಗಳು ವೈವಿಧ್ಯಮಯವಾಗಿ ನಡೆಯುತ್ತವೆ. ಶಿವರಾತ್ರಿಯ ದಿನ ಸಿದ್ಧಗಂಗಾ ಜಾತ್ರೆ ಎಂಬುದನ್ನರಿಯದೆ, ನಾವಿಬ್ಬರೂ ಬೆಂಗಳೂರಿಗೆ ಹೊರಟವರು ಪೂಜ್ಯರ ದರ್ಶನಕ್ಕೆಂದು ಕಾರಿನಲ್ಲಿ ಸಿದ್ಧಗಂಗೆಗೆ ಬಂದೆವು. ರಾಷ್ಟ್ರೀಯ ಹೆದ್ದಾರಿಯಿಂದ ಮಠದವರೆಗೆ ಬರುವುದು ಅಸಾಧ್ಯವೆನ್ನುವಷ್ಟು ಜಾತ್ರೆಯ ಜನ ಸೇರಿದ್ದರು. ಕಾಲ್ನಡಿಗೆಯಲ್ಲೆ ಪೂಜ್ಯರು ಇದ್ದ ಸ್ಥಳದವರೆಗೆ ಬರಲು ಒಂದು ಗಂಟೆ ಬೇಕಾಯಿತು. ಮತ್ತೊಂದು ಸಲ ಸಿದ್ಧಗಂಗೆಗೆ ಹೋದಾಗ ಅಮಾವಾಸ್ಯೆಯ ದಿನವಾಗಿತ್ತು. ಆಗ ಪೂಜ್ಯರು ದಾಸೋಹದ ಮನೆಯ ಮುಂದಿನ ಕಟ್ಟೆಯ ಮೇಲೆ ಭಸ್ಮಭೂಷಿತರಾಗಿ ಕುಳಿತಿದ್ದರು. ನೂರಾರು ಜನ ಪೂಜ್ಯರ ಸುತ್ತಲೂ ಸೇರಿದ್ದರು. ದೈಹಿಕ, ಮಾನಸಿಕ ಅಸ್ವಾಸ್ಥದಿಂದ ಬಳಲುತ್ತಿದ್ದವರು ಭಕ್ತಿ, ಶ್ರದ್ಧೆಗಳಿಂದ ಪೂಜ್ಯರ ಬಳಿ ಬಂದು ಯಂತ್ರ ಕಟ್ಟಿಸಿಕೊಳ್ಳುತ್ತಿದ್ದರು. ವೈಚಾರಿಕ ಭಾವನೆಯ ಶ್ರೀಗಳವರು ಯಂತ್ರ ಕಟ್ಟುವುದನ್ನು ಕಂಡು ನಮಗೆ ಅಚ್ಚರಿಯಾಯಿತು. ಪ್ರತಿ ಅಮಾವಾಸ್ಯೆಯ ದಿವಸ ಪೂರ್ವಕಾಲದಿಂದಲೂ ನಡೆದುಕೊಂಡು ಬಂದಿರುವ ಯಂತ್ರಧಾರಣೆ ಮಾಡುವ ಪೀಠದ ಮೇಲೆ ಕುಳಿತು, ಪೂಜ್ಯರು ದೇವರ ಕೃಪೆಯನ್ನವಲಂಬಿಸಿ, ಶುಭ ಹಾರೈಕೆಯೊಂದಿಗೆ, ತಮ್ಮ ಆಧ್ಯಾತ್ಮ ಶಕ್ತಿಯನ್ನೊಂದುಗೂಡಿಸಿ ಯಂತ್ರ ಕಟ್ಟುವುದರಿಂದ ಭಕ್ತಿ ಶ್ರದ್ಧೆಯಿಂದ ಬಂದ ಭಕ್ತರು ಗುಣಮುಖರಾದ ಸಾವಿರಾರು ಉದಾಹರಣೆಗಳಿವೆ. "ಯಂತ್ರಧಾರಣೆ ಪೂಜ್ಯರ ಹಿಂದಿನ ತಲೆಮಾರಿನಿಂದ ಬಂದ ಸಂಪ್ರದಾಯವಾಗಿದೆ. ಅಂತಃಕರುಣ ಶುದ್ಧಿಯಿಂದ ಮಾಡಿದ ಕೆಲಸಗಳು ಫಲಪ್ರದವಾಗುತ್ತವೆ. ಈ ಕೆಲಸ ಬಾಹ್ಯ ಮಂತ್ರಾದಿಗಳಿಂದ ಆಗುವಂತಹದ್ದಲ್ಲ" ಎಂಬುದು ಪೂಜ್ಯರ ಅಭಿಪ್ರಾಯ.

"ಮುಖದಲ್ಲಿ ಮಂತ್ರ, ಹೃದಯದಲ್ಲಿ ಧ್ಯಾನ. ಪ್ರಾಣದಲ್ಲಿ ಲಿಂಗನೆನಹು ಕರಿಗೊಂಡ
ಶಿವಾತ್ಮ ಶರಣ ಹೃದಯವೇ ಪರಮೇಶ್ವರನಿಗೆ ನಿವಾಸಸ್ಥಾನ"

ಎಂದು ಸಿದ್ಧಲಿಂಗೇಶ್ವರ ವಚನದಲ್ಲಿದೆ. ಸಿದ್ಧಲಿಂಗೇಶ್ವರನ ವಾಸಸ್ಥಾನವಾಗಿರುವ ಶ್ರೀಗಳವರ ದೇಹವೇ ದೇವಾಲಯವಾಗಿದೆ, ಎಂದೇ ಅಸಾಧ್ಯ ಸಾಧಕರಾಗಿದ್ದಾರೆ. ಪೂಜ್ಯರು ಇಂದಿನ ವಿಜ್ಞಾನಯುಗದಲ್ಲಿ ಯಾವುದನ್ನೂ ನಂಬದೆ ತರ್ಕಲೋಕದಲ್ಲಿ ವಿಹರಿಸುವವರು,

"ಅರ್ಪಣೆಯು ಅನುಭಾವ । ಹೆಪ್ಪುಗಟ್ಟಿತು ಲೋಕ,
ಬೆಪ್ಪಾತು ನಾಕ ಕಾಯಕದ । ಹಾಲ್ಗೊಳೆಯ
ತೆಪ್ಪ ದಾಸೋಹ ತೇಲುತಲಿ".

೨೧ನೇ ಶತಮಾನದತ್ತ ಹೆಜ್ಜೆ ಹಾಕುತ್ತ ಸಾಗಿರುವ ಅದ್ಭುತವನ್ನು ಕಣ್ಣಾರೆ ಕಾಣಬೇಕು. ಪವಿತ್ರ ಸಿದ್ಧಗಂಗಾ ಕ್ಷೇತ್ರವನ್ನು ನೋಡಬೇಕು. ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿಯವರ ದರ್ಶನ ಪಡೆಯಬೇಕು.

ಸಿದ್ಧಗಂಗೆಯ ನೆನಪುಗಳಲ್ಲಿ

ಡಾ. ಜಿ.ಎಸ್. ಶಿವರುದ್ರಪ್ಪ

ಇದ್ದಕ್ಕಿದ್ದಂತೆ ಯಾವುದೋ ಅಸ್ಪಷ್ಟವಾದ ಸದ್ದಿನಿಂದ ನನಗೆ ಎಚ್ಚರವಾಯಿತು. ಅರೆತೆರೆದ ಕಣ್ಣುಗಳಿಗೆ ಗೋಚರವಾದದ್ದು ಮಬ್ಬುಗತ್ತಲು. ಆ ಕತ್ತಲೆಗೆ ಕಂಡಿಹೊಡದಂತಿದ್ದ ಒಂದೆರಡು ಕಿಟಕಿಗಳ ಚೌಕಟ್ಟುಗಳ ಆಕಾರಗಳು, ಅದರಾಚೆಗೆ ಎತ್ತರವಾಗಿ ಕೊಂಬೆಗಳನ್ನು ಚಾಚಿಕೊಂಡ ಮರ. ಮರದ ಕೊಂಬೆ ರೆಂಬೆಗಳಲ್ಲಿ ಗಾಳಿಗೆ ಮರ್ಮರಿಸುವ ಎಲೆಗಳ ನಿಬಿಡತೆ, ಆ ಮರದ ಕೆಳಗೆ ಯಾರದೋ ಹೆಜ್ಜೆಯ ಸದ್ದು. ಅದು ಬರೀ ಹೆಜ್ಜೆಗಳ ಸದ್ದಲ್ಲ, ಹಾಗಾಗಿದ್ದರೆ ಅವು ಟಕ್ ಟಕ್ ಎಂದು ಒಂದು ಅನುಕ್ರಮದಲ್ಲಿ ಸದ್ದು ಮಾಡುತ್ತಿರಲಿಲ್ಲ. ನನ್ನನ್ನು ಎಚ್ಚರಿಸಿದ್ದು ಇದೇ ಟಕ್ ಟಕ್ ಟಕ್ ಎಂದು ಛಂದೋಬದ್ಧವಾಗಿ ಹೊರಟ ಸದ್ದು. ಅದು ಮರದ ಕೆಳಗಿಂದಲೇ ಹಾದು ಪಕ್ಕದ ದೇವಸ್ಥಾನದ ಕಡೆಯಿಂದ. ಹಳೆಯಮಠದ ಕಡೆ ನಿಧ ನಿಧಾನವಾಗಿ ಕ್ಷೀಣಿಸುತ್ತ ಹೋಗುತ್ತಿತ್ತು. ಅದು ನಾನು ಚಿಕ್ಕಂದಿನಲ್ಲಿ ರಾತ್ರಿಯ ಕಥನದ ಸಂದರ್ಭದಲ್ಲಿ ನಮ್ಮೂರ ಮರಿಯಪ್ಪನ ಬಾಯಿಂದ ಕೇಳಿದ 'ಜಡೆಮುನಿಯ' ಹೆಜ್ಜೆಯ ಸದ್ದೇ ಇರಬಹುದು ಎನ್ನಿಸಿ ಎದ್ದು ಕುಳಿತೆ. ಅದೇ ವೇಳೆಗೆ ಕಿಟಕಿಗಳಿಗೆ ಸಮಾನಾಂತರವಾಗಿ ಚಾಚಿಕೊಂಡ ಮರದ ಕೊಂಬೆಗಳ ನಡುವೆ ಕೀಚ್ ಕೀಚ್ ಎನ್ನುತ್ತ ಪಟ ಪಟನೆ ರೆಕ್ಕೆ ಬಡಿಯುವ ಹಕ್ಕಿಗಳ ಸದ್ದು ಪ್ರಾರಂಭವಾಗಿ ನನ್ನ ಮೈ ಬೆವರಿತು. ನನ್ನ ಅಕ್ಕ ಪಕ್ಕದಲ್ಲಿ, ನಾಲ್ವತ್ತಡಿ ಉದ್ದ, ಹದಿನೈದಡಿ ಅಗಲದ ಮಹಡಿಯ ಮೇಲಣ ಕೊಠಡಿಯ ಉದ್ದಕ್ಕೂ ಮಲಗಿದ ನನ್ನ ಸಹಪಾಠಿಗಳಲ್ಲಿ ಯಾರನ್ನಾದರೂ ಎಬ್ಬಿಸೋಣವೇ ಅನ್ನಿಸಿತು. ಒಂದು ವೇಳೆ ಎಬ್ಬಿಸಿ, ಇದೇನು ಸದ್ದು ಎಂದು ಕೇಳೋಣವೇ. ಹಾಗೆ ನೋಡಿದ್ದಾದರೆ ಇವನೆಂಥ ಪುಕ್ಕಲು ಆಸಾಮಿ ಎಂದು ಹಾಸ್ಯ ಮಾಡಬಹುದೋ ಏನೋ ಎಂದು ಉಸಿರು ಬಿಗಿಹಿಡಿದು ಸುಮ್ಮನೆ ಕೂತೆ. ಮರದ ಕೊಂಬೆಗಳ ನಡುವೆ ಹಕ್ಕಿಗಳ ರೆಕ್ಕೆಯ ಪಟ ಪಟ ಸದ್ದು ಇದ್ದಕ್ಕಿದ್ದಂತೆ ಸ್ತಬ್ಧವಾಯಿತು. ಮತ್ತೆ ಗಾಳಿಗೆ ಜೋಲಿಹೊಡೆಯುವ ಮರದ ಕೊಂಬೆಗಳ ಜೀಕುದನಿ. ನಾನು ಸ್ವಲ್ಪ ಹೊತ್ತಿನ ಕೆಳಗೆ ಹೇಳಿದ ಟಕ್ ಟಕ್ ಶಬ್ದ ಕ್ರಮೇಣ ದೂರ ದೂರಕ್ಕೆ ಹೋಯಿತು. ನಿದ್ದೆ ಬಾರದ ನಾನು ಮತ್ತೇನು ಪ್ರಾರಂಭವಾದೀತೋ ಎಂಬ ಕುತೂಹಲದಿಂದ ಆಲಿಸಿದೆ. ಅನತಿ ದೂರದಲ್ಲಿ, ಗುಡ್ಡದ ಮೇಲಣ ಗುಡಿಗೆ ಹೋಗುವ ಮೆಟ್ಟಿಲ ದಾರಿಯ ಎರಡೂ ಬದಿಗೆ ಬೆಳೆದ ಮರಗಳಲ್ಲಿ ಎಂಥೆಂಥವೊ ಹಕ್ಕಿಗಳು, ಬಗೆ ಬಗೆಯ ದನಿಗೈಯತೊಡಗಿದವು. ಈಚೆ ಬದಿಯ ಗದ್ದುಗೆಯ ಬಾಗಿಲನ್ನು ತೆರೆದು ಅದರೊಳಗನ್ನು ಗುಡಿಸುವ ಸದ್ದು ಕೇಳಿ, ಇನ್ನು ಮನುಷ್ಯ ವ್ಯಾಪಾರ ಶುರುವಾಯಿತೆಂಬ ಸಮಾಧಾನ ಮನಸ್ಸನ್ನು ತುಂಬಿತು. ದೂರದಲ್ಲಿ ಕ್ಯಾತ್ಸಂದ್ರದ ಹತ್ತಿರ ಹಾದು ಹೋದ ರೈಲು ಕಂಬಿಗಳ ಮೇಲೆ ಗೂಡ್ಸ್ ಗಾಡಿಯೊಂದು ಗುಡುಗುಡು ಶಬ್ದ ಮಾಡಿಕೊಂಡು, ದೂರ ದೂರಕ್ಕೆ ಹೋದ ಶಬ್ದ ಸ್ವಲ್ಪ ಹೊತ್ತು ಅನುರಣಿತವಾಯಿತು. ಇದೋ ಇಲ್ಲೇ ಆ ಪಕ್ಕದ ದೇವಸ್ಥಾನದಲ್ಲಿ ಯಾರೋ ಘಂಟೆ ಬಾರಿಸುತ್ತಿದ್ದಾರೆ. ಘಂಟೆಯ ಸದ್ದು ಅಲೆಅಲೆಯಾಗಿ ಆವರಣವನ್ನೆಲ್ಲ ತುಂಬಿಕೊಳ್ಳುತಿದೆ. ತದನಂತರದ ಮೌನದಲ್ಲಿ ಇದ್ದಕ್ಕಿದ ಹಾಗೆ ಹತ್ತಿರದ ಸಂಸ್ಕೃತ ಪಾಠಶಾಲೆಯಿಂದ ವೇದಘೋಷದ ಒಕ್ಕೊರಲಿನ ಸುಸ್ವರ ತರಂಗ ತರಂಗವಾಗಿ ವ್ಯಾಪಿಸುತ್ತ, ಪ್ರಪ್ರಾಚೀನ ಋಷ್ಯಾಶ್ರಮದ ನೆನಪುಗಳನ್ನು ಮನಸ್ಸಿನಲ್ಲಿ ರೇಖಿಸುತ್ತ ಒಂದು ಬಗೆಯ ಪಾವಿತ್ರ್ಯದ ಭಾವನೆ ಪರಿಸರವನ್ನೆಲ್ಲ ಪಾವನಗೊಳಿಸುತ್ತಿದೆ. ಮೂಡಣ ಬಾನು ಈ ಎಲ್ಲ ಘಟನಾ ಪರಂಪರೆಗಳ ಜತೆಗೆ, ತನ್ನ ತಾಮಸವನ್ನು ಕಳೆದುಕೊಳ್ಳುತ್ತ ಕ್ರಮೇಣ ಕಾಂತಿಯುಕ್ತವಾಗತೊಡಗಿದೆ. ಈ ಬೆಳಗು ತೆರೆಯುತ್ತಿರುವ ಅರುಣೋದಯದ ಹೊಂಬೆಳಕಿನಲ್ಲಿ, ಎದುರಿಗೆ ಕೂತ ಸಿದ್ಧಗಂಗೆಯ ಗುಡ್ಡ ತನ್ನ ಅಮೂರ್ತತೆಯನ್ನುಳಿದು, ಮೂರ್ತವಾದ ಆಕಾರಕ್ಕೆ ಹಿಂದಿರುಗುತ್ತಿದೆ. ಆ ಗುಡ್ಡ, ಗುಡ್ಡದ ಮೇಲಿನ ಬಂಡೆಗಳು, ದೇವಸ್ಥಾನಕ್ಕೆ ಹತ್ತಿ ಹೋಗುವ ಮೆಟ್ಟಿಲ ಸಾಲುಗಳು, ಅವುಗಳ ಇಕ್ಕೆಲದಲ್ಲೂ ಬೆಳೆದು ನಿಂತ ಮರಗಳು ಎಲ್ಲವೂ ಸ್ಪಷ್ಟವಾಗುತ್ತ, ಕಣ್ಣು ಇನ್ನೂ ಮೇಲಕ್ಕೆ ಹೋದರೆ, ಸಿದ್ಧಗಂಗೆಯ ದೇವಸ್ಥಾನ ಮತ್ತು ಅದರ ಗೋಪುರದ ಮೇಲೆ ಹಾರಾಡುತ್ತ ಎಲ್ಲರನ್ನೂ ಕೈ ಬೀಸಿ ಕರೆಯುವ ಕಾವಿಯ ಬಣ್ಣದ ಬಾವುಟ ಕಣ್ಣನ್ನು ಸೆಳೆಯುತ್ತದೆ. ಇಡೀ ಸಿದ್ಧಗಂಗಾಕ್ಷೇತ್ರ ಮತ್ತು ಅದರ ಬದುಕು ದೈನಂದಿನ ಚಟುವಟಿಕೆಗಳಿಗೆ ಸಿದ್ಧವಾಗುತ್ತಿದೆ.

ಸುಮಾರು ಅರ್ಧಶತಮಾನದಷ್ಟು ಹಿಂದಿನ ಒಂದು ಮುಂಬೆಳಗಿನ ಈ ಚಿತ್ರ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ನಾನು ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿಯಾಗಿ ಇದ್ದ ಮೂರು ವರ್ಷಗಳ ಕಾಲಮಾನದಲ್ಲಿ ಇಂಥ ಎಷ್ಟೋ

ಬೆಳಗುಗಳು ನನ್ನ ಮನಸ್ಸನ್ನು ತುಂಬಿಕೊಂಡಿದೆ. ಋಷ್ಯಾಶ್ರಮ ಸದೃಶವಾದ ಈ ವಾತಾವರಣ ನನ್ನ ಎಳೆಯಂದಿನ ಬದುಕಿನ ಮೇಲೆ ಮೂಡಿರುವ ಪರಿಣಾಮ ಅವಿಸ್ಮರಣೀಯವಾದದ್ದು. ಅದೊಂದು ಬೆಳಗಿನ ಜಾವ, ಈ ಕ್ಷೇತ್ರದ ವಿದ್ಯಾರ್ಥಿನಿಲಯದ ಮೇಲ್ಮಹಡಿಯ ಉದ್ದನೆಯ ಕೊಠಡಿಯಲ್ಲಿ ಮಲಗಿದ್ದ ನನ್ನನ್ನು ಎಚ್ಚರಿಸಿದ ಆ ಟಿಕ್ ಟಿಕ್ ಎಂಬ ಛಂದೋಗತಿಯ ಹೆಜ್ಜೆ ಸದ್ದು, ಅನಂತರ ನನಗೆ ಅಭ್ಯಾಸವಾಯಿತು. ಆ ಸದ್ದು ಬೇರಾವುದೂ ಅಲ್ಲ. ಬೆಳಗಿನ ಝಾವ ನಾಲ್ಕು ಘಂಟೆಗೇ ಎದ್ದು, ತಮ್ಮ ಸ್ನಾನ ಧ್ಯಾನಾದಿಗಳಿಗೆ ಹಳೆಯ ಮಠದ ಕಡೆಗೆ ಹೋಗುವ ಸಿದ್ಧಗಂಗಾ ಮಠಾಧ್ಯಕ್ಷರಾದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಹಾವಗೆಯ ಸದ್ದು.

ನಿಖರವಾಗಿ ಹೇಳಬೇಕೆಂದರೆ ೧೯೪೧ ರಿಂದ ೧೯೪೪ರ ವರೆಗಿನ ಕಾಲ ನನ್ನ ಹೈಸ್ಕೂಲಿನ ಕೊನೆಯ ವರ್ಷದ ಹಾಗೂ ಇಂಟರ್ ಮೀಡಿಯೇಟ್‌ನ ಎರಡು ವರ್ಷಗಳ ವಿದ್ಯಾರ್ಥಿ ದೆಸೆಯಲ್ಲಿ, ನಾನಿದ್ದದ್ದು ಸಿದ್ಧಗಂಗೆಯಲ್ಲಿ. ನಾನು ಹೋಗಬೇಕಾದ ಶಾಲೆಕಾಲೇಜುಗಳಿದ್ದದ್ದು, ಇಲ್ಲಿಗೆ ಮೂರೂವರೆ ಮೈಲಿ ದೂರದ ತುಮಕೂರಿನಲ್ಲಿ. ತುಮಕೂರಿನಲ್ಲಿ ಅನುಕೂಲಕರವಾದ ವಿದ್ಯಾರ್ಥಿನಿಲಯವೊಂದು ಇದ್ದರೂ, ದೊಡ್ಡವರ ಶಿಫಾರಸಿನ ಪತ್ರದ ಬೆಂಬಲ ದೊರೆಯದ ನನ್ನ ಹಾಗೂ ನನ್ನಂಥ ಅನೇಕರಿಗೆ ಸಿದ್ಧಗಂಗೆಯೇ ಶರಣು, ಅತ್ಯಂತ ಬಡತನದ ಹಿನ್ನೆಲೆಯಿಂದ ಬಂದ ನನ್ನಂಥವರಿಗೆ, ಅಂದು ಪೂಜ್ಯ ಶ್ರೀಗಳು ಆಶ್ರಯ ನೀಡದೆ ಹೋಗಿದ್ದರೆ, ನನ್ನ ಬದುಕು ಏನಾಗುತ್ತಿತ್ತೋ ಹೇಳಲು ಬಾರದು. ನನಗೆ ನೆನಪಿರುವಂತೆ ವಿವಿಧ ಶಾಲೆ ಕಾಲೇಜುಗಳಲ್ಲಿ ಓದುವ ನಾಲ್ಕುನೂರಕ್ಕೂ ಮೀರಿದ ಸಂಖ್ಯೆಯ ವಿದ್ಯಾರ್ಥಿಗಳು ಅಂದು ನನ್ನ ಜತೆಗಿದ್ದರು. ಈಗ ಆ ಸಂಖ್ಯೆ ಅದರ ೧೦-೧೧ ರಷ್ಟಿದೆ ಎಂದು ಕೇಳಿದ್ದೇನೆ. ಅಂದು ನಾನು ಬೆಳಿಗ್ಗೆ ಎಂಟೂವರೆಯ ಹೊತ್ತಿಗೆ ಸಿದ್ಧವಾದಷ್ಟು ಪ್ರಸಾದವನ್ನು ಉಂಡು, ಹೈಸ್ಕೂಲು ಕಾಲೇಜುಗಳಿಗೆ ಹೋಗುವ ಕೆಲವು ಜತೆಗಾರರೊಂದಿಗೆ, ಮೂರೂವರೆ ಮೈಲಿದೂರದ ತುಮಕೂರಿಗೆ ದಿನವೂ ಪಾದಯಾತ್ರೆ ಮಾಡುತ್ತಿದ್ದೆ. ಮೋಟಾರಿಗೋ ರೈಲಿಗೋ ತೆರಲು ಕೈಯಲ್ಲಿ ಕಾಸಿಲ್ಲದ ನಾವು, ತುಮಕೂರಿಗೆ ಹೋಗುವ ಹೆದ್ದಾರಿಯನ್ನು ಬಿಟ್ಟು, ಬೆಳೆದ ಹೊಲಗಳ ನಡುವಣ ಅಡ್ಡದಾರಿಗಳನ್ನು ಹಿಡಿದು ನಡೆದರೆ, ಹತ್ತು ಹತ್ತೂವರೆಯ ಹೊತ್ತಿಗೆ ಶಾಲೆ ಕಾಲೇಜುಗಳನ್ನು ತಲುಪುತ್ತಿದ್ದೆವು. ಮತ್ತೆ ಸಂಜೆ ನಾಲ್ಕೂವರೆ ಐದಕ್ಕೆ ಹೊರಟು, ಮತ್ತೆ ಅದೇ ಮೂರುವರೆ ಮೈಲಿಗಳ ದಾರಿಯನ್ನು ತುಳಿದು ಸಿದ್ಧಗಂಗೆಯನ್ನು ತಲುಪುವ ಹೊತ್ತಿಗೆ ಹೊತ್ತು ಮುಳುಗಿರುತ್ತಿತ್ತು. ಕೈ ಕಾಲು ಮುಖ ತೊಳೆದುಕೊಂಡು, ಪುಟ್ಟ ಹಣೆ ತುಂಬ ವಿಭೂತಿ ಪಟ್ಟೆ, ಬಳಿದುಕೊಂಡು, ದಟ್ಟಿ ಪಂಚೆ ಉಟ್ಟುಕೊಂಡು ಮೇಲೆ ಟವಲ್ ಹೊದ್ದುಕೊಂಡು ಸುಮಾರು ನಾಲ್ಕುನೂರು ವಿದ್ಯಾರ್ಥಿಗಳೂ ಸಂಜೆ ಏಳು ಗಂಟೆಯ ವೇಳೆಗೆ, ಮಠದ ವಿಸ್ತಾರವಾದ ಅಂಗಳದಲ್ಲಿ ದಿನವೂ ಪ್ರಾರ್ಥನೆಗೆ ಕೂಡುವ ದೃಶ್ಯ ನಿಜವಾಗಿಯೂ ನೋಡಬೇಕಾದದ್ದು. ಆ ಸಾಮೂಹಿಕ ಪ್ರಾರ್ಥನೆಯ ನಿಯಂತ್ರಕರಾದ ಕೇಂದ್ರ ವ್ಯಕ್ತಿ ಶ್ರೀ ಸ್ವಾಮೀಜಿಯವರೆ, ಕಾವೀ ನಿಲುವಂಗಿಯುಟ್ಟು, ಕಾವಿಯ ರುಮಾಲನ್ನು ಬಿಗಿಯಾಗಿ ತಲೆಗೆ ಸುತ್ತಿದ, ದಟ್ಟವಾದ ವಿಭೂತಿಯ ಲಲಾಟದ ಕೆಳಗೆ ಹೊಳೆಯುವ ಕಣ್ಣುಗಳ, ಜಟ್ಟಿಯ ಮೈಕಟ್ಟಿನ ಸ್ವಾಮಿಗಳು ಆ ಪ್ರಾರ್ಥನಾ ಸಭೆಯನ್ನು ನಿರ್ವಹಿಸುತ್ತಿದ್ದ ರೀತಿ ಅವರ್ಣನೀಯವಾದದ್ದು. ಸುಮಾರು ಒಂದು ಗಂಟೆಯ ಆ ಸಾಮೂಹಿಕ ಪ್ರಾರ್ಥನೆ, ಬೆಟ್ಟದ ತಪ್ಪಲಿನ ಸಂಜೆಯ ಪ್ರಶಾಂತವಾತಾವರಣದಲ್ಲಿ ಭೋರ್ಗರೆಯುವ ಕಡಲ ತೆರೆಗಳಂತೆ, ಏರಿಳಿಯುತ್ತ ಗಾಢವಾದ ಪ್ರಭಾವ ವಲಯವೊಂದನ್ನು ನಿರ್ಮಿಸುತ್ತಿತ್ತು. ಪ್ರಾರ್ಥನೆಯ ನಂತರ ನಾವೆಲ ನಮ್ಮ ನಮ್ಮ ಊಟದ ತಟ್ಟೆಗಳನ್ನು ತೆಗೆದುಕೊಂಡು ಊಟದ ಶಾಲೆಯ ಕಡೆಗೆ ಧಾವಿಸುತ್ತಿದ್ದೆವು. ಊಟವಾದ ನಂತರ ಆ ಮಠದ ಆವರಣದ ಬೇರೆ ಬೇರೆಯ ಕಟ್ಟಡಗಳ ವಸತಿಗಳಿಗೆ ಹಿಂದಿರುಗಿ ನಮ್ಮ ಪಾಠ ಪ್ರವಚನಗಳಿಗೆ ತೊಡಗುತ್ತಿದ್ದೆವು.

ಊಟದ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಕ್ಷೇತ್ರಕ್ಕೆ ದಿನವೂ ಬಂದು ಹೋಗುವ ಎಲ್ಲರಿಗೂ. ಯಾವ ಜಾತಿ ಮತ ಧರ್ಮಗಳ ಎಣಿಕೆಯೂ ಅಲ್ಲಿರಲಿಲ್ಲ. ಈ ಬಗೆಯಾಗಿ ಎಲ್ಲ ಜಾತಿ ಮತದವರಿಗೂ ಅವಕಾಶ ಕಲ್ಪಿಸಿದ ಉದಾರತೆಯ ನಿಲುವನ್ನು ಪ್ರತಿಪಾದಿಸಿದ ಈ ಸಂಸ್ಥೆ ಇಡೀ ಕರ್ನಾಟಕದಲ್ಲಿ ಬಹುಶಃ ಇದೊಂದೇ. ಯಾವತ್ತಿನಿಂದಲೋ, ಇಲ್ಲಿನ ಸಂಸ್ಕೃತ ಪಾಠಶಾಲೆಯ ಶಿಕ್ಷಣಕ್ಕಾಗಿಯೋ ಅಥವಾ ಅನ್ಯಕಾರ್ಯ ನಿಮಿತ್ತಾಗಿಯೋ ಬಂದ ಮಡಿ ವರ್ಗದವರಿಗೂ, ಮಠದಿಂದ ಅಕ್ಕಿ ಬೇಳೆ ಇತ್ಯಾದಿಗಳನ್ನು ಪಡಿಯಾಗಿ ಪಡೆದುಕೊಂಡು, ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ಊಟ ಮಾಡುವ ಹಾಗೂ ವಾಸಿಸುವ ಅವಕಾಶ ಇಲ್ಲಿದೆ. ಇನ್ನುಳಿದ ಯಾರು ಬಂದರೂ ಯಾವ ಹೊತ್ತಿಗೆ ಬಂದರೂ ಪೂಜೆಗೆ, ದರ್ಶನಕ್ಕೆ, ಮಕ್ಕಳಿಗೆ ಸ್ವಾಮೀಜಿಯ

ಕೈಯಿಂದ ಅಂತ್ರ ಕಟ್ಟಿಸುವುದಕ್ಕೆ, ದೇವಸ್ಥಾನದ ಹರಕೆಗೆ ಅಥವಾ ಇನ್ನಾವುದೇ ಕೆಲಸಕ್ಕೆ - ಅವರಿಗೆಲ್ಲ ಸ್ವಾಮಿಗಳು ಹೇಳುವುದು ಒಂದೇ ಮಾತು. 'ಊಟ ಮಾಡಿಕೊಂಡು ಹೋಗಿ'. ''ಶಿವಗಂಗೆಯ ನೋಟ ಸಿದ್ಧಗಂಗೆಯ ಊಟ'' ಎನ್ನುವುದು ಜನಬಳಕೆಯ ಗಾದೆ ಮಾತಾಗಿ ಹೋಗಿದೆ. ಯಾವಾಗ ನೋಡಿದರೂ ಹಗಲೂ ರಾತ್ರಿ ಅಡುಗೆ ಮನೆಯ ಒಲೆಗಳು ಉರಿಯುತ್ತಲೇ ಇರುತ್ತವೆ. ದೊಡ್ಡ ದೊಡ್ಡ ಉಬ್ಬನೆಯ ಮರದ ಕೊರಡುಗಳು ಉರಿವ ಒಲೆಯ ಬಾಯೊಳಗೆ ಚಾಚಿಕೊಂಡೇ ಇರುತ್ತವೆ. ಆಳೆತ್ತರದ ದೊಡ್ಡ ದೊಡ್ಡ ಕೊಳಗಗಳಲ್ಲಿ ಅಡುಗೆ ಬೇಯುತ್ತಲೇ ಇರುತ್ತದೆ. ಕೆಲವು ಹಳೆಯ ಮಂದಿ ಹೇಳುತ್ತಾರೆ : 'ಸಿದ್ಧಗಂಗಾ ಮಠದ ಅಡುಗೆ ಮನೆಯ ಬೆಂಕಿ ಎಂದೂ ಆರಿಯೇ ಇಲ್ಲ' ಎಂದು. ಜನ ಮೂರು ಹೊತ್ತೂ ಬರುತ್ತಾರೆ. ಬೆಟ್ಟದ ಮೇಲಿನ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿಂದ ಬಂದು ಸ್ವಾಮಿಗಳಿಗೆ ಅಡ್ಡ ಬೀಳುತ್ತಾರೆ. ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಾರೆ. ಅನಂತರ ಊಟ ಮಾಡಿಕೊಂಡೇ ತಮ್ಮ ತಮ್ಮ ದಾರಿಗಳನ್ನು ತುಳಿಯುತ್ತಾರೆ. ಒಂದೊಂದು ಸಲ ರಾತ್ರಿ ಹತ್ತು ಹನ್ನೊಂದರವರೆಗೂ ಊಟದ ಪಂಕ್ತಿ ನಡೆದೇ ಇರುತ್ತದೆ. ನಾನು ವಿದ್ಯಾರ್ಥಿಯಾದ ಕಾಲದ ನೆನಪನ್ನೇ ನಿರೂಪಿಸುವುದಾದರೆ, ಹಲವು ಸಲ ರಾತ್ರಿ ನಾವೆಲ್ಲ ನಮ್ಮ ಓದುಗಳನ್ನು ಮುಗಿಸಿ ಮಲಗಲು ಸಿದ್ಧವಾಗುತ್ತಿದ್ದ ಹೊತ್ತಿನಲ್ಲೂ ಈ ಕೂಗನ್ನು ಅಥವಾ ಘೋಷಣೆಯನ್ನು ಕೇಳಿದ್ದೇನೆ : 'ಊಟ ಮಾಡೋರ್‍ಯಾರಾದರೂ ಇದ್ರೆ ಬರ್ರಪ್ಪಾ'.

ನನಗನಿಸುತ್ತಿತ್ತು ಇಷ್ಟೊಂದು ಜನಕ್ಕೆ, ಹೀಗೆ ಬಂದು ಹೋಗುವವರಿಗೆಲ್ಲ ಊಟಕ್ಕೆ ಹಾಕುತ್ತಾರಲ್ಲ, ಜತೆಗೆ ದಿನವೂ ಊಟ ಮಾಡುವ ಬಹುಸಂಖ್ಯೆಯ ವಿದ್ಯಾರ್ಥಿಗಳೂ ಇದ್ದಾರಲ್ಲ. ಇವರಿಗೆಲ್ಲ ಹೀಗೆ ನಿರಂತರವಾಗಿ ಅಡುಗೆ ಮಾಡಿ ಬಡಿಸುವ ಈ ವ್ಯವಸ್ಥೆಗೆ ಹಣ, ದವಸಧಾನ್ಯ ಎಲ್ಲಿಂದ ಬರುತ್ತದೆ? ಈ ಬಗ್ಗೆ ಯಾರಾದರೂ ಸ್ವಾಮಿಗಳನ್ನು ಕೇಳಿದರೆ ''ಶಿವ ನಡೆಸುತ್ತಾನೆ'' ಎಂದು ಅವರು ಕೊಡುತ್ತಿದ್ದ ಮುಗುಳ್ನಗೆಯ ಉತ್ತರ. ಮಠದ ಸುತ್ತಮುತ್ತ ಮಠಕ್ಕೆ ಸೇರಿದ ಒಂದಷ್ಟು ಹೊಲಗಳೇನೋ ಇದ್ದವು. ಸುಗ್ಗಿಯ ಕಾಲದಲ್ಲಿ ವಿದ್ಯಾರ್ಥಿಗಳಾದ ನಾವೂ ಕೊಯ್ಯುವ, ತೆನೆಕಟ್ಟುವ ಹಾಗೂ ಕಣಗಳಿಗೆ ಸಾಗಿಸುವ ಕೆಲಸವನ್ನೂ ಮಾಡಿದ್ದೇವೆ. ಆಗ ನಮ್ಮ ಜತೆಗೆ ಸ್ವಾಮಿಗಳೂ ಕೆಲಸಕ್ಕೆ ಸೇರುತ್ತಿದ್ದರು. ಮಠದ ಎಷ್ಟೋ ಕಟ್ಟಡಗಳು ನಿರ್ಮಾಣವಾಗುತ್ತಿದ್ದಾಗಲೂ, ಸ್ವಾಮಿಗಳೂ ಕಲ್ಲು ಹೊತ್ತು ಕೂಲಿಗಳ ಜತೆ ಕೆಲಸ ಮಾಡುತ್ತಿದ್ದುದನ್ನು ಕಂಡು ನಾನು ಬೆರಗಾಗಿದ್ದೇನೆ. ಇಂಥ ಕಟ್ಟುವ ಹಾಗೂ ಸಲಹುವ ಕಾಯಕ ಸಾಮಾನ್ಯವಾದುದೇನೂ ಅಲ್ಲ. ಮಠಕ್ಕೆ ನಿಷ್ಠರಾದ ತುಮಕೂರಿನ ಹಾಗೂ ಮಲೆನಾಡಿನ ಶ್ರೀಮಂತ ವರ್ತಕರೂ ಮಠದ ಈ ಸಾಮಾಜಿಕ ಕಾರ್ಯಗಳಿಗೆ ನೆರವಾಗುವಂಥವರೇ. ಅನೇಕ ಊರುಗಳಿಂದ ರೈತರು ತಾವಾಗಿಯೇ ಗಾಡಿಗಳ ತುಂಬ ದವಸ ಧಾನ್ಯಗಳನ್ನು ಹೇರಿಕೊಂಡು ಬಂದು ಮಠಕ್ಕೆ, ಅದು ದಾಸೋಹಕ್ಕೆ ಕಾಣಿಕೆ ಎಂದು ಒಪ್ಪಿಸಿ ಹೋಗುತ್ತಿದ್ದುದನ್ನು ನಾನೇ ಕಂಡಿದ್ದೇನೆ. ಅದಕ್ಕೆ ಕಾರಣ ಪೂಜ್ಯ ಸ್ವಾಮಿಗಳ ವ್ಯಕ್ತಿತ್ವ ಹಾಗೂ ಅವರು ಕೈಕೊಂಡ ಜನಪರ ಕಾರ್ಯಗಳೇ. ಬಹುಶಃ ಹನ್ನೆರಡನೆಯ ಶತಮಾನದ ಬಸವಣ್ಣನವರ ಕಾಲದಲ್ಲಿ ಭಕ್ತರ ಸಾಧನೆಗೆ, ಜಂಗಮರ ದಾಸೋಹಕ್ಕೆ, ಅಂದಿನ ಸಮಾಜದ ನೆರವು ಹೀಗೆಯೇ ಒದಗಿರಬಹುದು. ಇಲ್ಲಿ ಮುಂದುವರಿಯುತ್ತಿರುವುದೂ ಅದೇ ಪರಂಪರೆಯೇ. ಇದು ನಿಜವಾದ ಅರ್ಥದ ಕಾಯಕ. ಜನದ ಯೋಗಕ್ಷೇಮ ತತ್ಪರವಾದ ತಪಸ್ಸು. ತಪಸ್ಸೆಂದರೆ ತನ್ನೊಬ್ಬನ ಆತ್ಮಸಾಧನೆಗೆ ಯಾವುದೋ ಬೆಟ್ಟ ಬಂಡೆಯ ಗುಹೆಯೊಳಗೆ ಕೂತು ಮಾಡುವ ಧ್ಯಾನವಲ್ಲ. ಸಮಷ್ಟಿಯ ಯೋಗಕ್ಷೇಮವನ್ನು ಸಹಿಸಿಕೊಂಡು ಅವರಿಗಾಗಿ ಹಾಗೂ ಅವರ ಜತೆಗೆ ದುಡಿಯುವ ಕಾಯಕ. ವ್ಯಷ್ಟಿಯ ಚಿಂತನೆ ಹಾಗೂ ಸಿದ್ಧಿಗಳೇನಿದ್ದರೂ ಸಮಷ್ಟಿಯ ಕಲ್ಯಾಣಕ್ಕೆ ಎನ್ನುವ ಸದ್ದುಗದ್ದಲವಿರದ ಸಾಧನೆಯೇ ಸ್ವಾಮಿಗಳ ಬದುಕಿನ ಶ್ರೀ ಸೂತ್ರ. ಇಂಥದೊಂದು ವ್ಯಕ್ತಿತ್ವದ ಹಾಗೂ ಪರಿಸರದ ಆಶ್ರಯವಿಲ್ಲದಿದ್ದರೆ, ನನ್ನಂಥ ಅಸಂಖ್ಯಾತರು ಶಿಕ್ಷಣವನ್ನು ಪಡೆದು ಒಂದು ವ್ಯಕ್ತಿತ್ವವನ್ನು ಗಳಿಸಿಕೊಳ್ಳಲು ಖಂಡಿತ ಸಾಧ್ಯವಾಗುತ್ತಿರಲಿಲ್ಲ.

ಈ ಮಹಾಕ್ಷೇತ್ರದ ಮಠದ ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಸ್ಥಾಪಿತವಾಯಿತೆಂದು ತಿಳಿದು ಬರುತ್ತದೆ. ಬಸವಣ್ಣನವರ ಕಲ್ಯಾಣ ಕ್ರಾಂತಿಯ ಅನಂತರದ ಎರಡು ಶತಮಾನಗಳ ಕಾಲದಲ್ಲಿ ಅದೇ ಕಾಯಕ ಚೈತನ್ಯ ಇಲ್ಲಿ ಪುನರ್ಭವಗೊಂಡು, ಸಂವಾದಿಯಾದ ಪರಂಪರೆಯೊಂದನ್ನು ಇಲ್ಲಿ ನಿರ್ಮಿಸಿದೆ. ಅದರ ಪ್ರತೀಕದಂತಿರುವ ಶ್ರೀ ಶಿವಕುಮಾರ ಸ್ವಾಮಿಗಳು, ಈ ಕ್ಷೇತ್ರದಲ್ಲಿ ಸಂನ್ಯಾಸದೀಕ್ಷೆಯನ್ನು ವಹಿಸಿಕೊಂಡು ಇದೀಗ ಅರುವತ್ತೈದು ವರ್ಷಗಳಾಗಿವೆ. ಸೆಂಟ್ರಲ್ ಕಾಲೇಜಿನ ಪದವೀಧರರಾದ ಸ್ವಾಮಿಗಳು ಈ ಮಠದ ಕಾರ್ಯಕ್ಷೇತ್ರವನ್ನು ಶಿಕ್ಷಣದ ಸಂವರ್ಧನೆಗೆ ವಿಸ್ತರಿಸಿದ ರೀತಿ

ಅಪೂರ್ವವಾಗಿದೆ. ಈ ಹೊತ್ತಿಗೆ ಅವರು ಕರ್ನಾಟಕದಾದ್ಯಂತ ನಡೆಸುತ್ತಿರುವ ಶಾಲೆ ಕಾಲೇಜುಗಳ ಸಂಖ್ಯೆ ಸುಮಾರು ೯೧ಕ್ಕೂ ಮೀರಿದೆ. ಸಿದ್ಧಗಂಗಾ ಕ್ಷೇತ್ರವೊಂದರಲ್ಲಿಯೆ ವಿವಿಧ ಶಿಕ್ಷಣದ ಹಂತಗಳಲ್ಲಿ ಅಭ್ಯಾಸ ಮಾಡುತ್ತ ಉಚಿತ ಊಟ ವಸತಿ ಸೌಲಭ್ಯಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೪೫೫೦ಕ್ಕೂ ಮೀರಿದೆ ಅನ್ನುವುದು ದಂಗುಬಡಿಸುವ ಸಂಗತಿಯಾಗಿದೆ. ಈ ಎಲ್ಲ ಜವಾಬ್ದಾರಿಗಳ ನಡುವೆಯೂ ಪೂಜ್ಯ ಸ್ವಾಮಿಗಳು ಸಮಾನಾಂತರವಾದ ಅಧ್ಯಯನದ ಮೂಲಕ ಭಾರತೀಯ ಹಾಗೂ ಪಾಶ್ಚಾತ್ಯ ತತ್ವಜ್ಞಾನವನ್ನು ಅರಗಿಸಿಕೊಂಡು, ತತ್ವ, ಧರ್ಮ ಇತ್ಯಾದಿಗಳನ್ನು ಕುರಿತು ತೌಲನಿಕವಾಗಿ ಸಮೀಕ್ಷಿಸುತ್ತ ನಿರರ್ಗಳವಾಗಿ ಮಾತನಾಡಬಲ್ಲರು. ಗಾಂಧೀಜಿ ಬೋಧಿಸಿದ ತ್ಯಾಗ, ಸೇವೆ, ಶ್ರಮದಾನ, ಜಾತ್ಯತೀತತೆ, ಇತ್ಯಾದಿಗಳನ್ನು ಕುರಿತು ನಮ್ಮ ನಾಯಕರುಗಳು ದೊಡ್ಡ ದನಿಯಲ್ಲಿ ಧ್ವನಿವರ್ಧಕಗಳ ಮುಂದೆ ಕೇವಲ ಈವರೆಗೂ ಘೋಷಿಸುತ್ತ ಬಂದಿದ್ದಾರೊ, ಆ ಎಲ್ಲ ಮೌಲ್ಯಗಳನ್ನೂ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ನಿಶ್ಯಬ್ದವಾಗಿ ಕೃತಿಗೆ ಇಳಿಸಿ ತೋರಿಸಿದವರು ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು. ನಿಜವಾದ ಯುಗಪರಿವರ್ತನೆಯ ನಿಶ್ಯಬ್ದ ಸಾಹಸದಲ್ಲಿ ತೊಡಗಿದ ತಾವು ಎಂಥ ಅದ್ಭುತವಾದ ಸಾಧನೆಗಳನ್ನು ಸಾಧಿಸಿದ್ದೇವೆ ಎಂಬ ಯಾವ ಅರಿವೂ ಇಲ್ಲದವರೆಂಬಂತೆ ತೋರುವ ಶ್ರೀ ಶಿವಕುಮಾರ ಸ್ವಾಮಿಗಳ ನಿರಾಡಂಬರವಾದ ಹಾಗೂ ಸದ್ದಿಲ್ಲದ ಕಾಯಕ, ನಿಸರ್ಗ ಸಹಜವಾದ ವ್ಯಾಪಾರಗಳಂತೆ, ಪರಮ ನಿರಪೇಕ್ಷಕ ಭಾವದಲ್ಲಿ ಇಂದಿಗೂ ಕ್ರಿಯಾಶೀಲವಾಗಿದೆ.

ನನ್ನ ಎಳೆಯಂದಿನ ಬದುಕಿನಲ್ಲಿ, ಇಂಥ ವ್ಯಕ್ತಿತ್ವದ ಹಾಗೂ ಇಂಥ ಪರಿಸರದ ಪ್ರಭಾವದಲ್ಲಿ ನಾನು ನನ್ನ ಜೀವನವನ್ನು ರೂಪಿಸಿಕೊಂಡದ್ದು ನನ್ನ ಸುದೈವವೆಂದೇ ತಿಳಿದಿದ್ದೇನೆ. ನನ್ನ ಕವಿತೆಯ ಹಕ್ಕಿ ಮೊದಲು ರೆಕ್ಕೆ ಬಿಚ್ಚಿದ್ದು ಈ ಬಂಡೆ ಬೆಟ್ಟಗಳ, ಹಸಿರು ಹೊಲ - ಗದ್ದೆಗಳ, ಗುಡಿ - ಗೋಪುರಗಳ, ಬೆವರು ಸಂತೋಷಗಳ, ಸರಳ ಸಾಧಾರಣ ಸಂಗಾತಿಗಳ ಹಾಗೂ ಸಾಧು ಸಂತರ ನೆನಪನ್ನು ತರುವ ಪೂಜ್ಯ ಸ್ವಾಮಿಗಳ ಪ್ರಶಾಂತ ವಾತಾವರಣದಲ್ಲಿ. ಈ ಪರಿಸರಕ್ಕೆ ನಾನೆಷ್ಟು ಋಣಿ ಎಂಬುದನ್ನು ನೆನೆದರೆ, ಧನ್ಯತೆಯ ಹಾಗೂ ಕೃತಜ್ಞತೆಯ ಭಾವವೊಂದು ನನ್ನ ಮನಸ್ಸನ್ನು ತುಂಬಿಕೊಂಡು, ನನ್ನನ್ನು ನಿರಂತರವಾದ ಎಚ್ಚರವೊಂದರಲ್ಲಿ ನಿಲ್ಲಿಸುತ್ತದೆ.

'ಎನಿತು ಜನ್ಮದಲ್ಲಿ ಎನಿತು ಜೀವರಿಗೆ
ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನಗಣಿಯೋ !

ಸಿದ್ಧಗಂಗೆಯ ಬೆಳಗು

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಡಾ. ಶಿವಕುಮಾರ ಸ್ವಾಮಿಗಳು ಪ್ರಧಾನವಾಗಿ ಎರಡು ಮುಖವಾಗಿ ಕ್ರಿಯಾಶಾಲಿಗಳಾಗಿದ್ದಾರೆ. ಒಂದು ಮುಖ - ಸಿದ್ಧಗಂಗೆಯ ಪೀಠದ ಅಧ್ಯಕ್ಷರಾಗಿ, ಸಮಾಜ, ಧರ್ಮ,ಆಧ್ಯಾತ್ಮಿಕತೆಗಳಿಗೆ ಸಂಬಂಧಿಸಿದ್ದು. ಇನ್ನೊಂದು ಮುಖ ಸಿದ್ಧಗಂಗೆಯ ಮಠಾಧ್ಯಕ್ಷರಾಗಿ ಆಡಳಿತ ನಿರ್ವಹಣೆಗೆ ಸಂಬಂಧಿಸಿದುದು. ಒಂದು ಅಂತರಂಗದ ಬದುಕಿಗೆ ಸಂಬಂಧಿಸಿದ್ದು ಎಂದರೆ, ಇನ್ನೊಂದು ಬಹಿರಂಗದ ಬದುಕಿಗೆ ಸಂಬಂಧಿಸಿದ್ದು.

ಸಾಮಾನ್ಯರಲ್ಲಿ ಇಂಥ ಸಂದರ್ಭಗಳಲ್ಲಿ ಅಂತರಂಗದ ಬದುಕೇ ಬೇರೆ. ಬಹಿರಂಗದ ಬದುಕೇ ಬೇರೆ ಆಗಿಬಿಡುವುದುಂಟು. ಅಷ್ಟೇ ಅಲ್ಲ. ಅಂತರಂಗ ಬಹಿರಂಗಗಳಿಗೆ ನಿರಂತರವಾಗಿ ಘರ್ಷಣೆಯುಂಟಾಗಿ ವ್ಯಕ್ತಿ ಅನೇಕ ಸಂದಿಗ್ಧತೆಗಳಿಗೆ ಗುರಿಯಾಗುವುದೂ ಉಂಟು. ಈ ಮಾತನ್ನು ಹೇಳುವುದಕ್ಕೆ ಕಾರಣ ಮಠಾಧಿಪತಿಯಾದವರು ಒಂದು ಧರ್ಮಕ್ಕೆ ಸೇರಿದವರಾದ್ದರಿಂದ ಅವರು ಎಷ್ಟೆಷ್ಟು ಸಂಪನ್ನರು, ಆರ್ಥಿಕವಾಗಿ ಸುಭದ್ರರು ಹಾಗೂ ಸಶಕ್ತರು ಆಗುತ್ತಾರೋ ಅಷ್ಟಷ್ಟು ಅನ್ಯಧರ್ಮೀಯರ ಗುಮಾನಿಯ ದೃಷ್ಟಿಗೆ ಹಾಗೂ ಈರ್ಷೆಗೆ ಗುರಿಯಾಗುವುದುಂಟು. ಜೊತೆಗೆ ಅದೇ ಧರ್ಮದಲ್ಲಿದ್ದ ಜನರು ತಮ್ಮಲ್ಲಿ ಅನೇಕರು ತಮ್ಮ ವೈಯಕ್ತಿಕವಾದ ಆಕಾಂಕ್ಷೆಗಳು ಈಡೇರದ ಕಾರಣ ಮಠದ ವಿರೋಧಿಗಳಾಗುವುದೂ ಉಂಟು. ಇಂಥ ಸಂದರ್ಭಗಳು ವ್ಯವಹಾರದಲ್ಲಿ ತಪ್ಪುವಂಥವಲ್ಲ. ಸಿದ್ಧಗಂಗೆಯೂ ಇಂಥ ಕೆಲವು ಸಂದಿಗ್ಧಗಳನ್ನು ಹಾಗೂ ಬಿಕ್ಕಟ್ಟುಗಳನ್ನು ಎದುರಿಸಿದೆ. ದಾಸೋಹಕ್ಕೆಂದು ಎಷ್ಟೋ ವರ್ಷಗಳ ಹಿಂದೆ ಹೊತ್ತಿಸಿದ ಒಲೆಯ ಬೆಂಕಿ ಇಂದಿಗೂ ಆರಿಲ್ಲ. ಅಂಥ ನಿರಂತರ ನಿತ್ಯ ದಾಸೋಹ ಇಲ್ಲಿ ಅನೇಕ ದಶಕಗಳಿಂದ ನಡೆದು ಬಂದಿರುವ ಅದ್ಭುತವನ್ನು ಕಂಡು ಕರುಬಿದ ಜನ ಸ್ವಾಮೀಜಿಯವರು ಮಠದಲ್ಲಿ ಕಳ್ಳನೋಟುಗಳನ್ನು ಮುದ್ರಿಸುತ್ತಿದ್ದಾರೆ ಎಂದು ಆರೋಪಿಸಿದ್ದೂ ಉಂಟು. ಈ ಮಠ ಒಂದು ಕೋಮಿಗೆ ಸೇರಿದ ಮಠ. ಈ ಸ್ವಾಮಿ ಕೋಮುವಾದಿ ಎಂದು ಸ್ವಾಮೀಜಿ ಹೆಸರಿಗೆ ಕಳಂಕ ಹಚ್ಚುವ ಪ್ರಯತ್ನವು ನಡೆದದ್ದು ಉಂಟು. ಇದರ ಜೊತೆಯಲ್ಲೇ ಈ ಮಠ ರಾಜಕೀಯದಲ್ಲಿ ತೊಡಗಿದೆ ಎಂದು ಆರೋಪಿಸಿದವರೂ ಉಂಟು. ಆಶ್ಚರ್ಯವೆಂದರೆ ಈ ಆರೋಪಗಳು ಎಷ್ಟು ಅಬ್ಬರದಿಂದ ಜನರಲ್ಲಿ ಪ್ರಸಾರಗೊಂಡವೋ ಅಷ್ಟೇ ವೇಗದಲ್ಲಿಯೇ ಕರಗಿ ಹೋದವು. ಸಿದ್ಧಗಂಗೆಯ ಸ್ವಾಮೀಜಿಯವರ ವ್ಯಕ್ತಿತ್ವದ ಎದುರು ಇವೆಲ್ಲ ಟೀ ಕಪ್ಪಿನಲ್ಲಿ ಎದ್ದ ಬಿರುಗಾಳಿಗಳು ಅಷ್ಟೆ. ಅದಕ್ಕೆ ಕಾರಣಗಳು ಇರದಿರಲಿಲ್ಲ.

ಅರವತ್ತೈದು ವರ್ಷಗಳಿಗೂ ಮೀರಿದ ದೀರ್ಘಾವಧಿಯಲ್ಲಿ ಮಠಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ ಮಾಡಿದ ಅನಿವಾರ್ಯತೆಯಲ್ಲಿ ಉದ್ಯೋಗಾಕಾಂಕ್ಷಿಗಳಾಗಿ ಬಂದವರು, ಮಹತ್ವಾಕಾಂಕ್ಷೆಯಿಂದ ಬಂದವರು ಸ್ವಂತ ಲಾಭಗಳಿಗಾಗಿ ಹಾತೊರೆಯುವವರೂ ಸಹಜವಾಗಿಯೇ ವಸ್ತುನಿಷ್ಠ ತೀರ್ಮಾನಗಳಾದಾಗ ಮತ್ಸರಗ್ರಸ್ತರೂ, ಅತೃಪ್ತರೂ ಮಾನವರ ಸಂಬಂಧಗಳಲ್ಲಿ ಏರುಪೇರುಗಳಾಗುವುದು ಸಹಜವೇ. ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಯತ್ನಿಸುವ ಮಕ್ಕಳ ಪೋಷಕರು ಶುಲ್ಕ ವಿನಾಯತಿಯ ದುರ್ಲಾಭದ ಯತ್ನಗಳಲ್ಲಿ ವಿಫಲರಾದಾಗ ಸಾಕಷ್ಟು ಕಿರಿಕಿರಿಗೊಳಗಾಗಿ ತೊಡಕುಗಳನ್ನೊಡ್ಡುವುದೂ ಉಂಟು.

ಆದರೆ ಸ್ವಾಮೀಜಿಯವರ ವ್ಯಕ್ತಿತ್ವ ಇಂಥವುಗಳನ್ನು ಯಶಸ್ವಿಯಾಗಿ ಹಾಯ್ದು ಬಂದಿದೆ. ಎಷ್ಟೋ ವೇಳೆ ದ್ವೇಷದ ದಳ್ಳುರಿಯನ್ನು ಎದುರಿಸಿದೆ. ಅಂಥ ಸಂದರ್ಭಗಳು ಸ್ವಾಮೀಜಿಯವರನ್ನು ಉದ್ರೇಕಗೊಳಿಸಿಲ್ಲ. ಮಾನವಸ್ವಭಾವದ ಈ ಮುಖವನ್ನು ಕಂಡು ಮರುಗಿದೆ. "ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದೊಡೆಂತಯ್ಯ, ಸಮುದ್ರದ ತಡಿಯಲೊಂದು ಮನೆಯ ಮಾಡಿ, ನೆರೆತೊರೆಗಳಿಗೆ ಅಂಜಿದೆಡೆಂತಯ್ಯ, ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ. ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು ಚನ್ನಮಲ್ಲಿಕಾರ್ಜುನಯ್ಯ" ಎಂದು ಹೇಳುವ ಅಕ್ಕನ ಅನುಭವ ಇಂಥ ಸಂದರ್ಭಗಳಲ್ಲಿ ಅವರ ವ್ಯಕ್ತಿತ್ವದ ಘನತೆಯನ್ನು ಏರಿಸುತ್ತದೆ.

ಸಿದ್ಧಗಂಗೆಯ ಸ್ವಾಮೀಜಿ, ಸ್ವಾಮೀಜಿ ಹೇಗೋ ಹಾಗೆಯೇ ಮಠದ ವ್ಯವಹಾರಗಳ ಆಡಳಿತಾಧ್ಯಕ್ಷರೂ ಹೌದು. ಅವರು ಇಲ್ಲಿಯ ಎಲ್ಲ ಸಂಸ್ಥೆಗಳ ಆಡಳಿತದ ಜವಾಬ್ದಾರಿಯನ್ನು ವಹಿಸಿದಂತವರು. ಅವರು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳು, ಅನಾಥಾಲಯಗಳು ಹಾಗೂ ವಿದ್ಯಾರ್ಥಿ ನಿಲಯಗಳು ಸಂಖ್ಯೆಯಲ್ಲಿ ವಿಪುಲವಾದವು. ಡಾ. ಶಿವಕುಮಾರ ಸ್ವಾಮಿಗಳು

ಮಠಾಧ್ಯಕ್ಷರಾಗುವುದಕ್ಕೆ ಮೊದಲಿದ್ದ ಸ್ವಾಮಿಗಳು ಸಿದ್ಧಗಂಗೆಯನ್ನು ಸಂಸ್ಕೃತ ಕಲಿಸುವ ಕೇಂದ್ರವಾಗಿ ಮಾಡಿದ್ದರು. ತಮ್ಮ ಅಳವಿಗೆ ತಕ್ಕಂತೆ ದಾಸೋಹವನ್ನು ನಡೆಸುತ್ತಿದ್ದರು. ಜೊತೆಗೆ ಸಿದ್ಧಗಂಗೆಯನ್ನು ಧಾರ್ಮಿಕ ಹಾಗೂ ಶಿಕ್ಷಣಗಳೆರಡರ ಕೇಂದ್ರವಾಗಿ ಮಾಡಬೇಕೆಂಬ ಸಂಕಲ್ಪದಿಂದ ಕೂಡಿದ್ದರು. ಆ ಸ್ವಾಮೀಜಿಗಳ ಮತ್ತೊಂದು ಮಹತ್ವದ ಸಾಧನೆಯೆಂದರೆ ಬೆಂಗಳೂರಿನಲ್ಲಿ ತೋಟದಪ್ಪನವರ ಛತ್ರದಲ್ಲಿದ್ದು ಬಿ.ಎ. ಮಾಡಿದ್ದ ಶಿವಣ್ಣನನ್ನು ಸಿದ್ಧಗಂಗೆಯ ಮಠಾಧೀಶನನ್ನಾಗಿ ಮಾಡಿದ್ದು. ಶಿವಣ್ಣ ಶಿವಕುಮಾರ ಸ್ವಾಮೀಜಿಯಾದ ಮೇಲೂ ಉದ್ದಾನ ಸ್ವಾಮಿಗಳು ಶಿವಕುಮಾರ ಸ್ವಾಮಿಗಳನ್ನು ಒಂದಲ್ಲ ಹತ್ತಾರು ಸಲ ಪರೀಕ್ಷೆಗೊಡ್ಡಿ ಶಿವಕುಮಾರ ಸ್ವಾಮಿಗಳ ಅರ್ಹತೆಯನ್ನು ಖಾತರಿಪಡಿಸಿಕೊಂಡದ್ದು. ಈ ಸಂಗತಿಗಳ ಬಗ್ಗೆ ಡಾ. ಶಿವಕುಮಾರ ಸ್ವಾಮಿಗಳೆ ಬಹಳಷ್ಟು ಉಲ್ಲೇಖ ಮಾಡಿರುವುದುಂಟು. "ನಿನ್ನ ನಚ್ಚಿದೆನೆಂದರೆ ತನುವಿನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು. ಧನವನಲ್ಲಾಡಿಸಿ ನೋಡುವೆ ನೀನು. ಇವೆಲ್ಲಕಂಜದಿದ್ದರೆ ಭಕ್ತಿಕಂಪಿತ ನೀನು ಕೂಡಲ ಸಂಗಮದೇವಯ್ಯಾ". ಉದ್ದಾನ ಶಿವಯೋಗಿಗಳು ಹೀಗೆಯೇ ಶಿವಕುಮಾರ ಸ್ವಾಮಿಗಳ ತನುವನ್ನು ಮನವನ್ನು ಸಾಕಷ್ಟು ಬಲವಾಗಿಯೇ ಅಲ್ಲಾಡಿಸಿ ನೋಡಿದರು. ಧನವನಲ್ಲಾಡಿಸುವುದಕ್ಕೆ ಧನವೇ ಇರಲಿಲ್ಲ. ಆದರೆ ತನು ಮನಗಳ ಗುಣಗಳು ಎತ್ತರಕ್ಕೇರಿದಾಗ ಎಂಥ ಒಂದು ಅಸಮಾನ ಶಕ್ತಿಗೆ ಕಾರಣವಾಗಬಹುದು ಎಂಬುದಕ್ಕೆ ಶಿವಕುಮಾರ ಸ್ವಾಮಿಗಳು ಮಠಾಧ್ಯಕ್ಷರಾದ ಆರಂಭದ ದಿನಗಳೇ ಸಾಕ್ಷಿ. ಪವಾಡ ಎನ್ನುವಂತೆ ಜನರಿಂದ ಮಠಕ್ಕೆ ಆರ್ಥಿಕವಾಗಿ ಬಲ ಬರತೊಡಗಿತು.

ಶಿವಕುಮಾರ ಸ್ವಾಮಿಗಳು ಕಾಯಕ ತತ್ವದಲ್ಲಿ ಪೂರ್ಣ ನಂಬಿಕೆಯಿಟ್ಟಿದ್ದ ಶರಣ ಪಂಥದವರು. ಜೊತೆಗೆ ತನ್ನ ಬದುಕು ಸಮಾಜಕ್ಕಾಗಿ ಅರ್ಪಿತವಾದದ್ದು ಎಂಬುದನ್ನು ಪೂರ್ಣವಾಗಿ ಅರ್ಥಮಾಡಿಕೊಂಡ ವ್ಯಕ್ತಿಗಳು. ಇದರಿಂದಾಗಿ ಅವರ ಬದುಕು ಒಂದು ತಪಸ್ಸಿನಂತೆ. ಅವರ ದೈನಂದಿನ ವ್ಯವಹಾರ ಆರಂಭವಾಗುವುದೇ ದೀಪ ಮುಹೂರ್ತದಲ್ಲಿ. ದೀಪ ಮುಹೂರ್ತದಲ್ಲಿ ಆ ಮುಹೂರ್ತವಾದುದು ಎಂಥದು? ಅರವಿಂದರು ಹೇಳುವಂತೆ "It was the hour before the gods awake". ಅಂಥ ಮುಹೂರ್ತದಲ್ಲಿ ಎದ್ದು ಶೌಚಾದಿಗಳನ್ನು ಮುಗಿಸಿ ಯೋಗಮಗ್ನರಾಗುವುದು, ಯೋಗಕ್ರಿಯೆಯಾದ ಮೇಲೆ ಪೂಜೆ, ಆ ಪೂಜೆಯಾದರೂ ಎಂಥದ್ದು ? ಹರಿಹರನ ಬಸವರಾಜ ರಗಳೆಯಲ್ಲಿ ಭಕ್ತಿಯ ಉನ್ಮಾದದಿಂದ ವರ್ಣಿಸುತ್ತಾನಲ್ಲ ಅಂಥದ್ದು ಪೂಜೆ. ಆ ಪೂಜಾ ಸಮಯದಲ್ಲಿ ಓತಪ್ರೋತವಾಗಿ ಗಂಗಾ ಪ್ರವಾಹದಂತೆ ಹರಿಯುವ ಶಿವಶರಣರ ವಚನಗಳು ಹಾಗೂ ತತ್ವ ಪದಗಳು. ಅವುಗಳನ್ನು ಹಾಡಿಕೊಳ್ಳುತ್ತಾ ಇಷ್ಟಲಿಂಗ ಪೂಜಾ ಕ್ರಿಯೆಯಲ್ಲಿ ಶಿವಯೋಗ ಸಂತೃಪ್ತಿಯನ್ನು ಪಡೆಯುವುದು. ಅನಂತರ ಅಲ್ಪ ಉಪಹಾರ ಜೊತೆಗೆ ಒಂದು ಮಿಳ್ಳೆ ಹಾಲು ಬೆರೆಸಿದ ಬೇವಿನ ರಸದ ಕಷಾಯ. ಇಷ್ಟಾದರೆ ದೈನಂದಿನ ಕ್ರಿಯೆಗೆ ಸಿದ್ಧವಾಗಿ ಮಠದ ಆಡಳಿತದ ನಿರ್ವಹಣೆಗೆಂದು ಸಿದ್ಧರಾಗುವುದು. ಅಷ್ಟು ಹೊತ್ತಿಗೆ ತಮ್ಮನ್ನು ದರುಶನ ಮಾಡಲು ಬರುವ ಭಕ್ತಾದಿಗಳು ಹಾಗೂ ಸಂದರ್ಶಕರು, ಸಮಾಜದ ಗಣ್ಯರು, ಇವರೊಂದಿಗೆ ಮಾತುಕತೆ. ಒಮ್ಮೊಮ್ಮೆ ದೂರದೂರದ ಊರಿನಿಂದ ಭಕ್ತಾದಿಗಳು ಸ್ವಾಮೀಜಿಯವರ ಸಂದರ್ಶನಕ್ಕೆ ಇಂಥ ವೇಳೆಯಲ್ಲಿಯೇ ಬರುವುದುಂಟು.

ನನಗೆ ನೆನಪಿದ್ದಂತೆ ಒಂದು ದಿನ ಬೆಳಿಗ್ಗೆ ಸುಮಾರು ೮ ಘಂಟೆಯಿರಬಹುದು. ಉಲ್ಲಸಿತರಾಗಿದ್ದ ಸ್ವಾಮಿಗಳು ತಮ್ಮ ಕಾಲೇಜಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಆಗ ಇದ್ದ ಗುರುಗಳ ಪಾಠ ವೈಖರಿಯನ್ನು ನೆನೆನೆನೆದು ಆಸ್ವಾದಿಸುತ್ತಿದ್ದರು. ಒಂದು ಸಂದರ್ಭದಲ್ಲಿ ತಮ್ಮ ಆಂಗ್ಲಭಾಷೆಯ ಪ್ರಾಧ್ಯಾಪಕರು ಪಾಠ ಮಾಡುವ ವೈಖರಿಯನ್ನು ತಿಳಿಸುತ್ತಿದ್ದರು. ಆ ಪ್ರಾಧ್ಯಾಪಕರು ಪಾಠ ಮಾಡುವ ಕ್ರಮ ಎಷ್ಟು ಕ್ರಿಯಾಶಾಲಿಯಾದದ್ದು ಎಂದರೆ, ಒಂದು ಭೂತದ ಪ್ರವೇಶವನ್ನು ಕುರಿತ ದೃಶ್ಯವನ್ನು ಅಭಿನಯಿಸುತ್ತಾ "Here enters the ghost" ಎಂದು ತರಗತಿಯೊಳಗೆ ಪ್ರವೇಶಿಸುತ್ತಿದ್ದ ಭಾವಪೂರ್ಣತೆಯನ್ನೂ, ಅದೇ ಭೂತ ತನ್ನ ಪಾತ್ರವನ್ನು ನಿರ್ವಹಿಸಿ ಮುಗಿಸುತ್ತಿದ್ದಂತೆ "Here exits the ghost" ಎಂದು ತರಗತಿಯಿಂದಾಚೆ ನಡೆದು ಹೋಗುತ್ತಿದ್ದ ದೃಶ್ಯವನ್ನು ನೆನೆದು ಆ ಕಾಲದ ಅಧ್ಯಾಪಕರ ವೈಶಿಷ್ಟ್ಯವನ್ನು ಹೇಳಿ ಸುಖಿಸುತ್ತಿದ್ದರು. ಈ ಸಂಭ್ರಮದ ಸಂದರ್ಭದಲ್ಲಿಯೇ ಮಠದ ಮೇಲ್ವಿಚಾರಕ ಒಬ್ಬ ಬಂದು ಗುರುಗಳಿಗೆ ಅಡ್ಡ ಬಿದ್ದು, ಸ್ವಾಮೀಜಿ ತಮ್ಮ ದರ್ಶನಕ್ಕೆ ಉತ್ತರ ಕರ್ನಾಟಕದಿಂದ ಬಂದ ದೊಡ್ಡ ಭಕ್ತರ ತಂಡವೇ ಕಾಯುತ್ತಿದೆ, ಎನ್ನುತ್ತಿದ್ದಂತೆಯೇ ಏನೂ ಆಗಿಲ್ಲವೆಂಬಂತೆ ತಾವು ಮಾತಾಡುತ್ತಿದ್ದವರ ಜೊತೆಗೆ "ಆಯ್ತು ಮತ್ತೊಮ್ಮೆ ವಿಚಾರ ಮಾಡೋಣ" ಎಂದು ಬಂದ ಭಕ್ತಾದಿಗಳ ಕಡೆಗೆ ತಮ್ಮ ಗಮನವನ್ನು ಹರಿಸಿದರು. ಈ ಒಂದು ಘಟನೆ ಸ್ವಾಮೀಜಿಯವರ ವ್ಯಕ್ತಿತ್ವದ ಹಲವು ಗುಣಗಳನ್ನು ವ್ಯಂಜಿಸುತ್ತದೆಂಬುದು ನನ್ನ ಭಾವನೆ. ಸಾಂಸ್ಕೃತಿಕ ಮಹತ್ವದ ಘಟನೆಗಳ

ಸ್ಥಿತಿಯಲ್ಲಿ ಸಂಭ್ರಮಿಸುವ ಅವಕಾಶವಿದ್ದರೂ ಮಠದ ಸ್ವಾಮಿಯಾದ ತಾವು ವೈಯಕ್ತಿಕವಾದ ಸಂತೋಷಕ್ಕಿಂತಲೂ ಮೊದಲು ಗಮನ ಹರಿಸಬೇಕಾದ್ದು ಸಾಮಾಜಿಕ ಕರ್ತವ್ಯದತ್ತ ಎಂಬುದನ್ನು ಇದು ಸೂಚಿಸುತ್ತದೆ. ಅಷ್ಟೇ ಅಲ್ಲ "ನೋಡಿ ಇಂತವರೆಲ್ಲರ ಅಗತ್ಯಕ್ಕಾಗಿ ನಾನು ಎಷ್ಟೊಂದು ಕಷ್ಟಪಡಬೇಕಾಗಿದೆ" ಎನ್ನುವ ಮನೋವೃತ್ತಿಯಲ್ಲ ಅವರದು. ಸಮಾಜದ ಜವಾಬ್ದಾರಿಯನ್ನು ವಹಿಸಿಕೊಂಡವರು ನಿರ್ವಹಿಸಲೇ ಬೇಕಾದ ಜವಾಬ್ದಾರಿ ಎನ್ನುವ ಕರ್ತವ್ಯದ ದೃಷ್ಟಿ ಜೊತೆ ಜೊತೆಗೇ ಅದರಲ್ಲೂ ಸಂತೋಷಪಡುಸುವ ಪ್ರವೃತ್ತಿ. ಅಲ್ಲಿರುವುದನ್ನೇ ಗಮನಿಸಬೇಕು. ಇಂಥ ಕಡೆಯೇ ವೈಯಕ್ತಿಕವಾದ ಬದುಕು ಮತ್ತು ಸಾಮಾಜಿಕವಾದ ಜವಾಬ್ದಾರಿ ಇವುಗಳ ಮಧ್ಯೆ ಹೊಂದಾಣಿಕೆ ತಪ್ಪುವುದು. ಸಾಮಾನ್ಯರಲ್ಲಿ ಇಂಥ ಸಂದರ್ಭಗಳು ಅಸಹನೆಗೆ ಕಾರಣವಾದರೆ ಅಸಾಮಾನ್ಯರಲ್ಲಿ ವ್ಯಕ್ತಿತ್ವದ ಮಾಗುವಿಕೆಗೆ ಕಾರಣವಾಗುತ್ತದೆ. ಸಂದರ್ಶಕರನ್ನು ನೋಡಿಯಾದ ಮೇಲೆ ಸ್ವಾಮೀಜಿಯವರು ಮಾಡುವ ಕಾರ್ಯ ಅಂದಿನ ಕಾರ್ಯಕ್ರಮಗಳ ಕಡೆಗೆ ಲಕ್ಷ್ಯವಹಿಸುವುದು. ಭಕ್ತಾದಿಗಳಲ್ಲಿಗೆ ಪಾದಪೂಜೆಗೆ ಹೋಗುವ ಅಥವಾ ಒಪ್ಪಿಕೊಂಡ ಸಭಾ ಕಾರ್ಯಕ್ರಮಗಳಿಗೆ ಹೋಗುವ ಸಿದ್ಧತೆ. ಅಲ್ಲಿಂದ ಈ ಮಧ್ಯೇ ಸಮಯ ಉಳಿದರೆ ಎರಡು ಪ್ರಮುಖಕಾರ್ಯಗಳ ಕಡೆಗೆ ಅವರ ಲಕ್ಷ್ಯ ಹೊರಳುತ್ತದೆ. ದಾಸೋಹ ವ್ಯವಸ್ಥೆ ಹೇಗಾಗಿದೆ ಎಂಬುವರ ಪರಿಶೀಲನೆ ಮಾಡುವುದು; ಹಾಗೆಯೇ ದಾಸೋಹಕ್ಕೆ ಅಗತ್ಯವಾದ ಸಾಮಗ್ರಿಗಳಿವೆಯೇ ಎಂಬುದನ್ನು ಗೊತ್ತುಮಾಡಿಕೊಳ್ಳುವುದು. ಅಲ್ಲಿಂದ ಹೊರಕ್ಕೆ ಬಂದರೆ ಪಕ್ಕದಲ್ಲೇ ಹಳೆಯ ಕಾಲದ ದೊಡ್ಡ ಮಂಚವೆಂಬಂತಿರುವ ಒಂದು ಉನ್ನತ ಪೀಠವಿದೆ. ಭಕ್ತಾದಿಗಳು ಬಂದಿದ್ದರೆ ಆ ಪೀಠದಲ್ಲಿ ಕುಳಿತು ಯಂತ್ರ ಮಂತ್ರಗಳನ್ನು ಮಾಡುವುದು. ಇದೇನು ಸ್ವಾಮೀಜಿ ಇಂಥ ಕುರುಡು ನಂಬಿಕೆಯವರೇ ಎಂದು ಬೆರಗುಗೊಳಿಸಬೇಕಾದ ಅಗತ್ಯವಿಲ್ಲ. ಏನೂ ಅರಿಯದ ಮುಗ್ಧರು ಸಂಕಷ್ಟಗಳಲ್ಲಿ ಸಿಲುಕಿ ನಂಬಿ ಬಂದಾಗ ಅವರಿಗೆ ಒಂದು ಭರವಸೆಯನ್ನು ಕೊಡುವ ಕ್ರಮ ಅಷ್ಟೇ ಇದು. ಬೇರೊಂದು ಸಂದರ್ಭದಲ್ಲಾದರೆ ಆ ಭಕ್ತಾದಿಗಳಿಗೆ ಇಂಥ ಮೂಢ ನಂಬಿಕೆಗಳ ಬಗ್ಗೆ ತಿಳುವಳಿಕೆ ಹೇಳುವುದೂ ಉಂಟು. ನಂಬಿಕೊಂಡು ಬಂದ ಜನರಿಗೆ ಅವರ ನಂಬಿಕೆಯನ್ನು ಕಿತ್ತು ವೈಚಾರಿಕ ಶಕ್ತಿಯನ್ನು ನೀಡುವವರೆಗೆ ಮುಗ್ಧರ ನಂಬಿಕೆಯನ್ನು ವೈಚಾರಿಕತೆಯ ಹೆಸರಿನಲ್ಲಿ ದಿಗ್ಭ್ರಾಂತಿಗೆ ಗುರಿ ಮಾಡುವುದು ಸೂಕ್ತವಲ್ಲ ಎಂಬುದು ಸ್ವಾಮೀಜಿಯವರ ದೃಷ್ಟಿ.

ಅಲ್ಲಿಂದ ಮುಂದಿನ ಕಾರ್ಯ ಮಠಕ್ಕೆ ಸಂಬಂಧಿಸಿದ ಹೊಲ, ಗದ್ದೆ, ತೋಟಗಳ ಕಡೆಗೆ. ಆರಂಭದಲ್ಲಾದರೆ ಶಿಕ್ಷಣ ಸಂಸ್ಥೆಗಳಿಗಾಗಿ ಕಟ್ಟಡಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಸ್ವಾಮೀಜಿಯವರೇ ಅಲ್ಲಿಂದ ಭಕ್ತರು ಮತ್ತು ವಿದ್ಯಾರ್ಥಿಗಳೊಂದಿಗೆ ಮಣ್ಣು ಕಲಸಿದ್ದು, ಕಲ್ಲು ಹೊತ್ತದ್ದು ಉಂಟು. ಸ್ವಾಮೀಜಿಯೇ ಕಾಯಕದಲ್ಲಿದ್ದಾರಲ್ಲ ಎಂದು ವಿದ್ಯಾರ್ಥಿಗಳು ಹಾಗೂ ಭಕ್ತರು ಸಂಭ್ರಮೋತ್ಸಾಹಗಳಿಂದ ಈ ಕಾಯಕದಲ್ಲಿ ಪಾಲ್ಗೊಂಡದ್ದು ಉಂಟು. ಈಗ ಮಠದ ಆರ್ಥಿಕ ಸ್ಥಿತಿ ಸುಧಾರಿಸಿದ್ದು ಇಂಥ ಕಾಯಕದ ಜವಾಬ್ದಾರಿ ಅಷ್ಟಾಗಿ ಇಲ್ಲ. ಆದರೆ ತೋಟಗಳ ಕಡೆಗೆ ಹೊರಟರೆ ದೀರ್ಘದೇಹಿಯಾದ ಶ್ರೀ ಶಿವಕುಮಾರ ಸ್ವಾಮಿಗಳು ಉದ್ದಗಾಲು ಹಾಕಿ ನಡೆದರೆ ಜೊತೆಯವರು ಓಡಬೇಕು ಅಷ್ಟೆ. ಈ ಓಡಾಟದ ಸಮಯದಲ್ಲಿಯೇ ಆಡಳಿತ ವ್ಯವಹಾರಗಳ ಚರ್ಚೆ ಕೂಡ ! ಮತ್ತೆ ಆದೇಶಗಳು ಕೂಡ ! ಮತ್ತೆ ಸ್ವಾಮೀಜಿ ಇವೆಲ್ಲವನ್ನು ಮುಗಿಸಿ ಬಂದರೆ ಮತ್ತೊಮ್ಮೆ ಪೂಜೆ ಅಲ್ಪಾಹಾರ ಮತ್ತೆ ಅಧ್ಯಯನ. ಸ್ವಾಮೀಜಿಯವರು ಸದಾ ಅಧ್ಯಯನಶೀಲರು. ಆ ಅಧ್ಯಯನ ಶೀಲತೆಗೆ ಅವರ ಸ್ಮರಣಶಕ್ತಿ ಹಾಗೂ ಏಕಾಗ್ರಚಿತ್ತತೆಗಳು ಜೊತೆಗೂಡಿವೆ. ಯಾವುದೇ ಭಾಷಣಕ್ಕೆ ಅವರು ಒಪ್ಪಿಕೊಂಡರೂ ಆಯಾ ವೇದಿಕೆಗೆ ಸಂಬಂಧಿಸಿದ ವಿಷಯದಲ್ಲಿಯೇ ಮಾತನಾಡುವುದು ಸ್ವಾಮೀಜಿಯವರ ಕ್ರಮ. ಅದಕ್ಕಾಗಿ ಅವರು ನಡೆಸುವ ಅಧ್ಯಯನ ಕೂಡ ಗಮನಾರ್ಹವಾದದ್ದು.

ಈ ಸಂದರ್ಭದಲ್ಲಿ ಸ್ವಾಮೀಜಿಯವರು ಮಠಾಧೀಶರಾದ ಆರಂಭದ ದಿನಗಳಲ್ಲಿ ನಡೆದ ಒಂದು ಘಟನೆ ಸ್ಮರಣಾರ್ಹ ಎಂಬುದು ನನ್ನ ಭಾವನೆ. ಮಠದ ಪೀಠದಲ್ಲಿ ಕೂರುತ್ತಿದ್ದಂತೆಯೇ ಸ್ವಾಮೀಜಿಗಳು ಮಾಡಿದ ಮೊದಲ ಕಾರ್ಯ ಒಬ್ಬ ದಕ್ಷ ಪಾದ್ರಿಯನ್ನು ಕರೆಸಿ ಕ್ರಿಶ್ಚಿಯನ್ ಧರ್ಮದ ಆಳವಾದ ಅರಿವನ್ನು ಪಡೆದುಕೊಂಡದ್ದು. ಹೀಗೆಯೇ ಸಮರ್ಥಮೌಲ್ವಿಗಳಿಂದ ಇಸ್ಲಾಂ ಧರ್ಮ ಮತ್ತು ಹಜರತ್ ಮಹ್ಮದ್ ಪೈಗಂಬರರುಗಳ ಬಗ್ಗೆ ತಿಳಿದುಕೊಂಡದ್ದು. ಇದೇ ರೀತಿ ಬೇರೆ ಬೇರೆ ದರ್ಶನಗಳನ್ನು ಪರಿಚಯಿಸಿಕೊಂಡರು.

ಒಬ್ಬ ವ್ಯಕ್ತಿ ಬೆಳೆಯಬೇಕಾದರೆ ಅವನ ಮನಸ್ಸು ಎಲ್ಲಾ ಧರ್ಮಗಳಿಗೂ ತೆರೆದುಕೊಂಡ ಬಾಗಿಲಾಗಿರಬೇಕು. ಆ



ಶ್ರೀಗಳವರು ಮತ್ತು ಶೃಂಗೇರಿ ಶ್ರೀಗಳವರು



ಶ್ರೀಗಳವರು - ಸಿರಿಗೆರೆ ಜಗದ್ಗುರುಗಳು - ಬೇಲಿಮಠದ ಶ್ರೀಗಳು




ಶ್ರೀ ಎಸ್.ಆರ್. ಬೊಮ್ಮಾಯಿ, ಸಿರಿಗೆರೆ ಜಗದ್ಗುರುಗಳು, ಶ್ರೀಗಳವರು, ಸಾಣೇಹಳ್ಳಿ ಶ್ರೀಗಳು



ಪೇಜಾವರದ ಶ್ರೀಗಳು, ಶ್ರೀಗಳವರು, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು



ಚಿತ್ರದುರ್ಗದ ಜಗದ್ಗುರುಗಳು, ಶ್ರೀಗಳವರು



ಇಲಕಲ್ ಶ್ರೀಗಳು, ಶ್ರೀಗಳವರು



ಸುತ್ತೂರು ಜಗದ್ಗುರುಗಳು, ಶ್ರೀಗಳವರು, ಚಿತ್ರದುರ್ಗದ ಶ್ರೀಗಳವರು




ಕರ್ನಾಟಕ ವಿಶ್ವವಿದ್ಯಾಲಯ ಶ್ರೀಗಳವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದ ಸಂದರ್ಭ : ಪ್ರೊ. ಛಾನ್ಸಲರ್ ಶ್ರೀ ಎಸ್.ಆರ್. ಕಂಠಿ, ಶ್ರೀಗಳವರು, ಡಾ. ಗಜೇಂದ್ರಗಡಕರ್, ಛಾನ್ಸಲರ್ ಶ್ರೀ ವಿ.ವಿ. ಗಿರಿ, ವೈಸ್ ಛಾನ್ಸಲರ್ ಡಾ. ಡಿ.ಸಿ. ಪಾವಟೆ



ಶ್ರೀಗಳವರಿಂದ ಮುಖ್ಯಮಂತ್ರಿ ಶ್ರೀ ಗುಂಡೂರಾಯರಿಗೆ ಸನ್ಮಾನ



ಶ್ರೀಗಳವರಿಂದ ರಾಷ್ಟ್ರಪತಿ ಶ್ರೀ ವಿ.ವಿ. ಗಿರಿಯವರಿಗೆ ಸನ್ಮಾನ



ಶ್ರೀಗಳವರು ಮತ್ತು ರಾಷ್ಟ್ರಪತಿ ಡಾ. ನೀಲಂ ಸಂಜೀವರೆಡ್ಡಿ ಅವರು



ಉಪರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮ, ಶ್ರೀಗಳವರು



ರಾಜ್ಯಪಾಲ ಶ್ರೀ ಗೋವಿಂದ ನಾರಾಯಣ, ಶ್ರೀಗಳವರು, ಡಾ. ನೀಲಂ ಸಂಜೀವರೆಡ್ಡಿ ಅವರು



ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಶ್ರೀಮಠಕ್ಕೆ ಭೇಟಿಕೊಟ್ಟ ಸಂದರ್ಭ



ಶ್ರೀಗಳವರಿಂದ ಮುಖ್ಯಮಂತ್ರಿ ಶ್ರೀ ದೇವರಾಜು ಅರಸು ಅವರಿಗೆ ಸನ್ಮಾನ



ಹುಬ್ಬಳ್ಳಿ ಶ್ರೀಗಳು, ಶ್ರೀಗಳವರು, ಶ್ರೀ ಜೆ.ಬಿ. ಮಲ್ಲಾರಾಧ್ಯರು, ಶ್ರೀ ವೀರಪ್ಪ ಮೊಯ್ಲಿ ಅವರು



ಶ್ರೀಗಳವರು ಶ್ರೀಶೈಲಕ್ಷೇತ್ರಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ : ಜಗದ್ಗುರು ವಾಗೀಶ ಶಿವಾಚಾರ್ಯರು, ಶ್ರೀಗಳು

ಬಾಗಿಲುಗಳಿಂದ ಎಷ್ಟೆಷ್ಟು ಬೆಳಕು ಹರಿದು ಬರುತ್ತದೆಯೋ ಅಷ್ಟಷ್ಟು ಆ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶವಾಗುತ್ತದೆ ಎಂಬುದನ್ನು ಅರಿತವರು ಅವರು. ಹೀಗೆ ಎಲ್ಲ ಧರ್ಮದ ತಿರುಳುಗಳನ್ನು ಹೀರಿದವರು. ಸ್ವಾಮೀಜಿಗಳ ವ್ಯಕ್ತಿತ್ವ ತನ್ನ ಮೂಲ ಸೆಲೆಯನ್ನು ಕಂಡುಕೊಳ್ಳುವುದು ಶರಣರ ದರ್ಶನಗಳಲ್ಲಿಯೇ. ಅದರಲ್ಲಿ ಬಸವಣ್ಣನ ವ್ಯಕ್ತಿತ್ವವಂತೂ ಸ್ವಪ್ನ ಜಾಗ್ರತ್-ಸುಷುಪ್ತಿಗಳಲ್ಲೆಲ್ಲ ತುಂಬಿಕೊಂಡ ಒಂದು ಚೈತನ್ಯ. ಆದ್ದರಿಂಲೇ ಸ್ವಾಮೀಜಿ ಸಮಾಜದ ಕೆಲವರ ವಿರೋಧವನ್ನು ಲೆಕ್ಕಕ್ಕೆ ತರದೆ ಲಿಂಗದೀಕ್ಷೆಯನ್ನು ಬಯಸಿದ ಅನೇಕ ಕುಟುಂಬಗಳ ಜನರುಗಳನ್ನು ಅವರ ಅಪೇಕ್ಷೆ ಪ್ರಾಮಾಣಿಕವೆಂಬುದನ್ನು ಗುರುತಿಸಿಕೊಂಡ ಮೇಲೆ ಲಿಂಗದೀಕ್ಷೆಯನ್ನು ನೀಡಿ ಶರಣ ಧರ್ಮಕ್ಕೆ ಸೇರಿಸಿಕೊಂಡರು. ಈ ಸಂದರ್ಭದಲ್ಲಿ ಸ್ವಾಮೀಜಿಯವರ ದೃಷ್ಟಿಯಲ್ಲಿರುವ ಹೊಂದಾಣಿಕೆಯ ಗುಣ ಅವರು ಜನಜೀವನದೊಂದಿಗೆ ಇರಿಸಿಕೊಂಡ ಆರೋಗ್ಯಕರವಾದ ದೃಷ್ಟಿಗೆ ಕಾರಣವಾಗಿದೆ.

ಸುಮಾರು ಐದನೆಯ ದಶಕದಲ್ಲಿಯೇ ಮಠದ ವಾತಾವರಣದಲ್ಲಿ ಅಶನವಸನಗಳನ್ನು ನೀಡುತ್ತಿದ್ದ ಈ ದಾಸೋಹದ ಮಠ ಶರಣರ ಮಠಗಳ ವಾತಾವರಣವನ್ನು ಬೆಳೆಸಿಕೊಂಡೇ ಬಂದಿತು. ಎರಡು ಊಟಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪ್ರಸಾದ ಸ್ವೀಕಾರಕ್ಕೆ ಮುನ್ನ ಬಸವಣ್ಣನವರ ವಚನವನ್ನು, ಸಪ್ಪಣ್ಣನವರ ತತ್ವಪದವನ್ನು, ಮುಪ್ಪಿನ ಷಡಕ್ಷರಿ ಅಥವಾ ನಿಜಗುಣರ ತತ್ವಪದಗಳನ್ನು ಹಾಡಬೇಕಾಗಿತ್ತು. ಈ ಮಠದ ವಿದ್ಯಾರ್ಥಿಯಾಗಿದ್ದ ಡಾ. ಶಿವರುದ್ರಪ್ಪನವರು ಆ ಕಾಲದಲ್ಲಿ ಹೇಳುತ್ತಿದ್ದ ಸರ್ಪಭೂಷಣ ಶಿವಯೋಗಿಗಳ ಸ್ವರವಚನವೊಂದನ್ನು ಸಪ್ಪಣ್ಣ ಶಿವಯೋಗಿ ಕೃತಿಯಲ್ಲಿ ನೆನಪು ಮಾಡಿಕೊಡುತ್ತಾರೆ. ಇನ್ನು ಸಂಜೆ ಎಲ್ಲಾ ವಿದ್ಯಾರ್ಥಿಗಳು ಸೇರುವ ಒಂದು ಸಾಮೂಹಿಕ ಪ್ರಾರ್ಥನಾ ಸಭೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಿಂದ ಮಠದ ವಿದ್ಯಾರ್ಥಿ ನಿಲಯಗಳ ಎಲ್ಲ ವಿದ್ಯಾರ್ಥಿಗಳು ತುಂಡು ಪಂಚೆಯುಟ್ಟು ಮೇಲೊಂದು ಹೊದಿಕೆ (ಟವಲ್) ಯನ್ನು ಹೊದ್ದು ಪ್ರಾರ್ಥನಾ ಮಂತ್ರಗಳನ್ನು ಉಚ್ಚರಿಸುತ್ತಿದ್ದರೆ ಅವು ಎದುರಿಗಿರುವ ಸಿದ್ಧಗಂಗೆಯ ಬೆಟ್ಟದ ಶ್ರೇಣಿಯಲ್ಲಿ ಪ್ರತಿಧ್ವನಿಗೊಳ್ಳುವ ಆ ದೃಶ್ಯ ಅವಿಸ್ಮರಣೀಯವಾದುದು. ಹೊರಗಿನಿಂದ ಬಂದ ಅನೇಕ ವಿದೇಶೀಯರು ಈ ದೃಶ್ಯಕ್ಕೆ ಬೆರಗಾಗಿ ಹೋದದ್ದನ್ನು ದಾಖಲಿಸಿದ್ದಾರೆ. ಅವರಿಗೆ ಇಂಥ ಸಾವಿರಾರು ವಿದ್ಯಾರ್ಥಿಗಳ ಸಾಮೂಹಿಕ ಪ್ರಾರ್ಥನೆ ಒಂದು ಪವಾಡದಂತೆಯೇ ಕಂಡಿದೆ. ಈ ಪ್ರಾರ್ಥನೆಯಾದ ಮೇಲೆ ಸ್ವಾಮೀಜಿಯವರು ಒಂದು ಹದಿನೈದು ನಿಮಿಷಗಳ ಉಪನ್ಯಾಸ ಮಾಡುವುದೂ ಒಂದು ಪದ್ಧತಿ.

ಹರಿಹರನ ಬಸವರಾಜದೇವರಗಳೆ, ಮಹಾದೇವಿಯಕ್ಕನ ರಗಳೆ ಇವುಗಳಲ್ಲಿ ಮತ್ತೆ ಮತ್ತೆ ಸಾಮೂಹಿಕ ಶಿವಪೂಜೆಯ ಚಿತ್ರಗಳು ಬರುತ್ತವೆ. ಶಿವಗೋಷ್ಠಿಗಳ ವಿವರಗಳು ಬರುತ್ತವೆ. ಸಾಮೂಹಿಕ ಶಿವಪೂಜೆಗಳ ಆ ಚಿತ್ರಣದ ಪ್ರಾತ್ಯಕ್ಷಿಕೆ ಬೇಕೆನ್ನುವವರು ಬೇರೆ ಎಲ್ಲೂ ಹೋಗಬೇಕಾಗಿಲ್ಲ. ಡಾ. ಶಿವಕುಮಾರ ಸ್ವಾಮಿಗಳ ಶಿವಪೂಜೆಯನ್ನು ನೋಡಿದರೆ ಸಾಕು. ಮಠದಲ್ಲಿ ಮಾಡುವ ಶಿವಪೂಜೆ ಮಠದ ಉಳಿದ ಸ್ವಾಮೀಜಿಗಳು ಪಾಲ್ಗೊಂಡರೆ ಭಕ್ತಾದಿಗಳ ಮನೆಯಲ್ಲಿ ಶಿವಪೂಜೆಗೆ ಕುಳಿತರೆ ಗಂಡು ಹೆಣ್ಣು ಆದಿಯಾಗಿ ಮಕ್ಕಳೂ ಸೇರಿ ಶಿವಪೂಜೆಗೆ ಕುಳಿತುಕೊಳ್ಳುತ್ತಾರೆ. ಸ್ವರವಚನಗಳನ್ನು ಹಾಡುತ್ತಾ ವಚನಗಳನ್ನು ಹೇಳುತ್ತಾ ಶಿವಪೂಜಾ ನಿರತರಾದ ಸ್ವಾಮೀಜಿಯವರು ಇಷ್ಟಲಿಂಗವನ್ನು ಎಡಗೈಯಲ್ಲಿ ಹಿಡಿದು ಪೂಜೆಗೆ ಕುಳಿತರೆಂದರೆ ಶಿವಪೂಜೆಯನ್ನು ಮಾಡುವ ಇತರರೆಲ್ಲ ತಮ್ಮ ತಮ್ಮ ಇಷ್ಟಲಿಂಗಗಳ ಪೂಜೆಯನ್ನು ಮುಗಿಸಿ ಸ್ವಾಮೀಜಿಗಳತ್ತ ನೋಡಿದರೆ ಅವರಿನ್ನೂ ಇಷ್ಟಲಿಂಗಾನುಸಂಧಾನದಲ್ಲಿಯೇ ಶಿವಯೋಗ ಸಿದ್ಧರಾಗಿರುತ್ತಾರೆ. ಆಶ್ಚರ್ಯವೆಂದರೆ ಸ್ವಾಮೀಜಿಯವರೆ ಒಂದು ಲಿಂಗವಾದಂತೆ, ಭಕ್ತಾದಿಗಳು ಆರತಿಯನ್ನೆತ್ತಿ `ಜ್ಯೋತಿ ಬೆಳಗುತಿದೆ' ಹಾಡನ್ನು ಹಾಡಬೇಕು. ಆ ಹಾಡಿನ ಕೊನೆಯ ಚರಣ ಮುಗಿಯುವಷ್ಟರಲ್ಲಿ ಮಾತು ಮನಂಗಳಿಂದತ್ತತ್ತ ಮೀರಿದ ನಿರುಪಾಧಿಕ ಪರಂಜ್ಯೋತಿ ರೂಪತಾಳಿ ಲೋಕಕ್ಕೆ ಇಳಿದಂತೆ ಸ್ವಾಮೀಜಿಯವರು ಪೂಜೆಯನ್ನು ಮುಗಿಸಿ ಕಣ್ತೆರೆಯುತ್ತಾರೆ.

ಮಠದಲ್ಲಿ ಆಶ್ರಯ ಪಡೆದ ವಿದ್ಯಾರ್ಥಿ ಸಮುದಾಯದ ವಿವರಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅಂಗವಿಹೀನರಿಗಾಗಿ ನಡೆಸುವ ಹಾಗೂ ಇತರ ಎಲ್ಲಾ ವಿದ್ಯಾರ್ಥಿಗಳಿಗಾಗಿ ನಡೆಸುವ ಉಚಿತ ಪ್ರಸಾದ ನಿಲಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಒಂದು ಜಾತಿಗೆ ಸೇರಿದವರಲ್ಲ: ಒಂದು ಪ್ರದೇಶಕ್ಕೂ ಸೇರಿದವರಲ್ಲ. ಪ್ರಾಥಮಿಕ ಹಂತದಿಂದ ಪದವಿ, ಬಿ.ಎಡ್., ತಾಂತ್ರಿಕ ಜ್ಞಾನ, ನ್ಯಾಯಶಾಸ್ತ್ರ ಇವುಗಳವರೆಗೆ ಓದುವ ವಿದ್ಯಾರ್ಥಿಗಳ ಸಂಖ್ಯೆ ಮೂರು ಸಾವಿರವನ್ನು ಮೀರಿದ್ದು, ಈ ವಿದ್ಯಾರ್ಥಿನಿಲಯಗಳಲ್ಲಿ ಯಾವ ಯಾವ ವರ್ಗದ ವಿದ್ಯಾರ್ಥಿಗಳು ಇದ್ದಾರೆಂಬುದರ ವಿವರವಾದ ಪಟ್ಟಿಕೆಗಳು ಇವೆ. ಸ್ಥೂಲವಾಗಿ ೧೯೬೭ ರಿಂದ ಇಂದಿನವರೆಗೆ ಅಲ್ಲಿ ಇದ್ದ ವಿವಿಧ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ

ಶ್ರೀ ಕ್ಷೇತ್ರದಲ್ಲಿ ೧೯೯೬-೯೭ನೆಯ ಸಾಲಿನಲ್ಲಿ ಅಶನ ವಸತಿ ಸೌಕರ್ಯ ಪಡೆದು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ

೧. ಜಿಲ್ಲಾವಾರು

೧	ಬೆಂಗಳೂರು ನಗರ ಜಿಲ್ಲೆ	೨೧೪
೨	ಬೆಂಗಳೂರು ಗ್ರಾಮಾಂತರ ಜಿಲ್ಲೆ	೩೪೯
೩	ಬೀದರ	೮೮
೪	ವಿಜಾಪುರ	೫೦
೫	ಬಳ್ಳಾರಿ	೯೨೮
೬	ಬೆಳಗಾವಿ	೬
೭	ಚಿಕ್ಕಮಗಳೂರು	೧೧೭
೮	ಚಿತ್ರದುರ್ಗ	೧೮೫
೯	ಧಾರವಾಡ	೨೫೦
೧೦	ಗುಲಬರ್ಗಾ	೨೯೮
೧೧	ಹಾಸನ	೩೧೭
೧೨	ಕೊಡಗು	೧೪
೧೩	ಕೋಲಾರ	೨೩೪
೧೪	ಮೈಸೂರು	೭೬
೧೫	ಮಂಡ್ಯ	೧೧೯
೧೬	ರಾಯಚೂರು	೫೫೬
೧೭	ಶಿವಮೊಗ್ಗ	೧೪೦
೧೮	ತುಮಕೂರು	೨೬೬
೧೯	ಉತ್ತರ ಕನ್ನಡ	೨
೨೦	ದಕ್ಷಿಣ ಕನ್ನಡ	೪
೨೧	ಆಂಧ್ರ ಪ್ರದೇಶ	೩೦
೨೨	ತಮಿಳುನಾಡು	೨
	ಒಟ್ಟು	೪೨೮೬

೨. ಜಾತಿವಾರು

೧	ವೀರಶೈವ	೨೧೯೭
೨	ಒಕ್ಕಲಿಗ	೪೫೧
೩	ಕುರುಬ	೩೬೦
೪	ರೆಡ್ಡಿ	೮೬
೫	ನಾಯಕ	೮೧
೬	ಬೋವಿ	೪೨
೭	ಬಲಿಜಿಗ	೪೫
೮	ಕುಂಚಟಿಗ	೪೪
೯	ಮುಸ್ಲಿಂ	೩೫
೧೦	ಆದಿಕರ್ನಾಟಕ	೩೯
೧೧	ಆದಿದ್ರಾವಿಡ	೧೯
೧೨	ವೈಶ್ಯ	೨೯
೧೩	ಜೇಡ	೨೦
೧೪	ಬ್ರಾಹ್ಮಣ	೧೪
೧೫	ದೇವಾಂಗ	೨೪
೧೬	ವಿಶ್ವಕರ್ಮ	೩೨
೧೭	ಕುಂಬಾರ	೩೨
೧೮	ಮಡಿವಳ	೨೫
೧೯	ಈಡಿಗ	೨೩
೨೦	ಭಜಂತ್ರಿ	೧೧
೨೧	ಲಂಬಾಣಿ	೧೯
೨೨	ಗಾಣಿಗರು	೧೫
೨೩	ಕುರುಹಿನಸೆಟ್ಟಿ	೧೨
೨೪	ಪಂಚಾಳ	೬
೨೫	ಬಡಿಗ	೭
೨೬	ಕಮ್ಮ	೧೦
೨೭	ಮರಾಠಿ	೧೦
೨೮	ಇತರ ಜಾತಿ	೫೦೧

ಶ್ರೀ ಸಿದ್ಧಲಿಂಗೇಶ್ವರ ಅನಾಥಾಲಯ ಮತ್ತು ಉಚಿತ ವಿದ್ಯಾರ್ಥಿ ನಿಲಯ, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ
1994-95 ಮತ್ತು 1995-96ನೇ ಸಾಲಿನಲ್ಲಿ ಸೇರಿದ ವಿದ್ಯಾರ್ಥಿಗಳ ವರ್ಗವಾರು ಮತ್ತು ಜಾತಿವಾರು ಪಟ್ಟಿ

	1994-95				1995-96			
ಕ್ರ.ಸಂ.	ವರ್ಗ	ಶಾಲೆಗಳು	ಕಾಲೇಜ್	ಒಟ್ಟು	ವರ್ಗ	ಶಾಲೆಗಳು	ಕಾಲೇಜ್	ಒಟ್ಟು
1.	ವರ್ಗ - 1 [11 ಜಾತಿ]	106	08	114	ವರ್ಗ - 1 [18 ಜಾತಿ]	213	23	236
2.	ವರ್ಗ - 2 [52 ಜಾತಿ]	769	92	861	ವರ್ಗ - 2 [35 ಜಾತಿ]	628	64	692
3.	ವರ್ಗ 3 [12 ಜಾತಿ]	2678	473	3151	ವರ್ಗ 3 [13 ಜಾತಿ]	2474	413	2887
4.	ವರ್ಗ 4 [5 ಜಾತಿ]	61	3	64	ವರ್ಗ - 4 [6 ಜಾತಿ]	46	4	50
5.	ಪರಿಶಿಷ್ಟ ಜಾತಿ [13 ಜಾತಿ] ಜಾತಿ	152	20	172	ಪರಿಶಿಷ್ಟ ಜಾತಿ [10 ಜಾತಿ]	134	15	149
6.	ಪರಿಶಿಷ್ಟ ಪಂಗಡ [3 ಜಾತಿ]	98	15	113	ಪರಿಶಿಷ್ಟ ಪಂಗಡ [3 ಜಾತಿ]	83	8	91
	ಒಟ್ಟು	3864	661	4475		3578	527	4105

ಶ್ರೀಮಠದ ವಿದ್ಯಾಸಂಸ್ಥೆಗಳ ಸಂಖ್ಯೆ ಮತ್ತು ಇತರ ಮಾಹಿತಿ

	1994-95	1995-96
1. ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಮಹಾಪಾಠಶಾಲೆ, ಶ್ರೀ ಸಿದ್ಧಗಂಗಾ ಮಠ, ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ :	3589	3395
ಮಠ ಹೊರತು, ನಮ್ಮ ವಿದ್ಯಾರ್ಥಿ ನಿಲಯ ಇತರೆ ಸಂಸ್ಕೃತ ಪಾಠಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ :	1014	1163
2. ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ (ರಿ.) ಶ್ರೀ ಸಿದ್ಧಗಂಗಾ ಮಠ, ಇದರ ವತಿಯಿಂದ ಪ್ರಾಥಮಿಕ ಪೂರ್ವ ಶಾಲೆಯಿಂದ ತಾಂತ್ರಿಕ ಮಹಾವಿದ್ಯಾಲಯದವರೆಗೆ ನಡೆಯುತ್ತಿರುವ ವಿದ್ಯಾ ಸಂಸ್ಥೆಗಳ ಸಂಖ್ಯೆ : (ಸಂಸ್ಕೃತ ಶಾಲಾ ಕಾಲೇಜುಗಳ ಸಹಿತ)	96 ಸಂಸ್ಥೆಗಳು	102 ಸಂಸ್ಥೆಗಳು
3. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ :	34166	34522
4. ಒಟ್ಟು ನೌಕರರ ಸಂಖ್ಯೆ :	1749	1760
5. ಗ್ರಂಥ ಭಂಡಾರಗಳಲ್ಲಿರುವ ಒಟ್ಟು ಗ್ರಂಥಗಳ ಸಂಖ್ಯೆ	244567	244963
೬. ವಾರ್ಷಿಕ ವೆಚ್ಚ	ರೂ. 7,11,62,422 00	ರೂ. 8,03,60,112 00

ಈ ವಿದ್ಯಾರ್ಥಿ ಸಮುದಾಯಕ್ಕೆಲ್ಲಾ ಒಂದೇ ರೀತಿಯ ಊಟ ಮತ್ತು ವಸತಿಯ ವ್ಯವಸ್ಥೆಯಿದೆ. ಇದರ ಜೊತೆಗೆ ಮಠಕ್ಕೆ ಬರುವವರ ಆ ಸಂಖ್ಯೆ ಎಷ್ಟೇ ಇರಲಿ ಅವರ ದಾಸೋಹದ ಕಾರ್ಯ ನಡೆದೇ ಇರುತ್ತದೆ.

ಸುಮಾರು ಮೇ ತಿಂಗಳ ಒಂದು ಸಂಜೆ ಇರಬೇಕು. ತುಮಕೂರಿನಿಂದ ಬೆಂಗಳೂರಿಗೆ ಹೊರಟ ನಾವು ಸ್ವಾಮೀಜಿಯವರಿದ್ದರೆ ನೋಡಿ ಹೋಗೋಣವೆಂದು ಹೋದೆವು. ನಮ್ಮ ದುರದೃಷ್ಟಕ್ಕೆ ಸ್ವಾಮೀಜಿಯವರು ಯಾವುದೋ ಕಾರ್ಯಕ್ರಮಕ್ಕೆ ಬೇರೆ ಊರಿಗೆ ಹೋಗಿದ್ದರು. ಆದರೆ ಅಲ್ಲಿ ನಮಗೊಂದು ಆಶ್ಚರ್ಯ ಕಾದಿತ್ತು. ನೂರಾರು ಜನ ಹುಡುಗರು ಪುಟ್ಟ ಟ್ರಂಕು ಅಥವಾ ಚೀಲದೊಂದಿಗೆ ಅಲ್ಲಿರುವ ಕಟ್ಟಡಗಳ ಜಗುಲಿಗಳ ಮೇಲೆಲ್ಲಾ ಕುಳಿತಿದ್ದರು. ಇಷ್ಟೊಂದು ಸಂಖ್ಯೆಯ ಆ ಮಕ್ಕಳು ಎಲ್ಲಿಂದ ಬಂದರು ? ಎಂಬುದು ನಮ್ಮ ಕುತೂಹಲ. ಸ್ವಲ್ಪ ಹೊತ್ತಿನಲ್ಲಿಯೇ ಸ್ವಾಮೀಜಿಯವರ ಕೋಣೆಯ ಮೇಲ್ವಿಚಾರಣೆ ನೋಡಿಕೊಳ್ಳುವ ಬಾಲಕನೊಬ್ಬ ನಮ್ಮನ್ನು ಮಠದೊಳಕ್ಕೆ ಸ್ವಾಗತಿಸಲು ಬಂದ. ನಾವು "ನಮ್ಮ ಸ್ವಾಗತದ ವಿಚಾರ ಹಾಗಿರಲಿ ಮತ್ತೆ ನಮ್ಮ ಕಾಫಿ ತಿಂಡಿಯ ವ್ಯವಸ್ಥೆಯು ಅಲ್ಲಿರಲಿ, ಮೊದಲು ಈ ಹುಡುಗರೆಲ್ಲಾ ಯಾರು ? ತಿಳಿಸಿ" ಎಂದೆವು. "ಸಾರ್ ಇವರೆಲ್ಲಾ ಮಠಕ್ಕೆ ಸೇರಲು ಬಂದಿದ್ದಾರೆ. ಇನ್ನೇನು ಶಿಕ್ಷಣ ವರ್ಷ ಆರಂಭವಾಗುತ್ತದೆಯಲ್ಲವೆ ?" ಎಂದರು. ನಮ್ಮ ಕುತೂಹಲ ಇನ್ನಷ್ಟು ಹೆಚ್ಚಿತು. ಸುಮಾರು ೮ - ೧೦ ವರ್ಷದ ಒಬ್ಬ ಹುಡುಗನನ್ನು ಪ್ರಶ್ನಿಸಿದೆ "ನಿನ್ನ ಹೆಸರೇನು?" ಎಂದು. ಕರೀಮನೋ ರಹೀಮನೋ ಎಂದು ಹೇಳಿದ್ದ ನೆನಪು. "ಎಲ್ಲಿಂದ ಬಂದದ್ದು?" ಎಂದರೆ ಅವನು ಕೊಟ್ಟ ಉತ್ತರ ಇನ್ನೂ ಬೆರಗುಗೊಳಿಸುವಂತಹದ್ದು. "ರಾಯಚೂರಿನಿಂದ" ಎಂದ. "ಈ ಮಠ ನಿನಗೆ ಹೇಗೆ ಗೊತ್ತು ?" ಎಂದರೆ, "ನಮ್ಮ ದೊಡ್ಡಪ್ಪನ ಮಗ ಇಲ್ಲೇ ಓದಿದ್ದಂತೆ ಸಾರ್, ಅವನ ಮಾರ್ಗದರ್ಶನದಂತೆ ಇಲ್ಲಿಗೆ ಬಂದಿದ್ದೇನೆ" ಎಂದ. "ನಿನಗಿಲ್ಲಿ ಪರಿಚಯದವರು ಯಾರಿದ್ದಾರೆ ? ಯಾರಿಂದ ಪತ್ರ ತಂದಿದ್ದೀಯ" ಎಂದಾಗ ಮೌನಿಯಾದ, ನಗೆಯೊಂದೇ ಅದಕ್ಕೆ ಉತ್ತರವೆಂಬಂತೆ ನಕ್ಕುಬಿಟ್ಟ. ಪಕ್ಕದಲ್ಲಿದ್ದ ಇನ್ನೊಬ್ಬ ಹುಡುಗ ನಮ್ಮ ಪ್ರಶ್ನೆಗೆ ತಾನಾಗಿ ಉತ್ತರಿಸಿದ "ಮಠಕ್ಕೆ ಸೇರುವುದಕ್ಕೆ ಶಿಫಾರಸ್ಸೇತಕ್ಕೆ ಸಾರ್ ?" ಎಂದು. ಆತ ಮುಂದುವರಿಸಿದ "ದಾಸೋಹದ ಮಠ ಇದು". ತೀರ ಲೌಕಿಕದೃಷ್ಟಿಯ ನಮ್ಮ ಕಪಾಳಕ್ಕೆ ಪಟಾರನೆ ಹೊಡೆದಂತೆನಿಸಿತು. ಯಾರು ಬಂದರೂ ಇಲ್ಲಿ ದಾಸೋಹ ಇದ್ದೇ ಇದೆ. ಹೀಗಿದ್ದಾಗ ನಾವಾದರೂ ಏಕೆ ಚಿಂತಿಸಬೇಕು. ಮುಗ್ಧನಾದ ಆತ ಹೇಳಿದ್ದು ನಿಜ ! ಬಂದವರಿಗೆಲ್ಲ ದಾಸೋಹ ನಡೆಯುವಾಗ ಬಡ ವಿದ್ಯಾರ್ಥಿಗಳಿಗೆ ಅವಕಾಶವಿಲ್ಲವಾದೀತೆ ? ಊಟದ ಚಿಂತೆಯಿಲ್ಲ, ವಸತಿಗೇನು ಮಾಡುವುದೆನ್ನಿಸಬಹುದು. ಮಠದ ಸುತ್ತ ಧರ್ಮ ಛತ್ರಗಳಿಲ್ಲವೇ! ಪಡಸಾಲೆಗಳಿಲ್ಲವೇ! ನಿಜವೇ ಆಶ್ರಯವೆಂದು ನಿಜವಾಗಿ ಹಾತೊರೆಯುವವರಿಗೆ ಇವೆಲ್ಲ ಅವಕಾಶಗಳಿರುವುದು ತನಗೆ ತಾನೇ ವೇದ್ಯವಾಗುತ್ತದೆ. ನಮ್ಮಂಥ ಬಿಗಿ ಗಾಂಭೀರ್ಯದ ಜನಕ್ಕಷ್ಟೆ ಇಂತಹ ಸಂಗತಿಗಳು ಸಮಸ್ಯೆಯಾಗುವುದು. ಬಡವರಿಗೆ ಆಶ್ರಯವಾಗಲು ಬಾಗಿಲು ತೆರೆದು ಕುಳಿತ ಈ ಮಠಕ್ಕೆ ಓದಲು ಬರುವ ವಿದ್ಯಾರ್ಥಿ ಆಶ್ರಯ ಕೋರಲು ಬರಬೇಕಾದರೆ ಆ ವಿದ್ಯಾರ್ಥಿಗಿರುವ ಎರಡು ಅರ್ಹತೆಗಳು ಎಂದರೆ ಒಂದು ಬಡತನ, ಎರಡನೆಯದು ಓದಿನಲ್ಲಿರುವ ಆಸಕ್ತಿ. ಇವೆರಡರ ಜೊತೆಗೆ ಮಠದ ಶಿಸ್ತನ್ನು ಆ ವಿದ್ಯಾರ್ಥಿ ಪಾಲಿಸಿದರೆ ಸಾಕು. ಒಂದರ್ಥದಲ್ಲಿ ಒಂದು ಪುಟ್ಟ ಕರ್ನಾಟಕವನ್ನೆ ಇಲ್ಲಿ ಓದುವ ವಿದ್ಯಾರ್ಥಿ ಸಮುದಾಯದಲ್ಲಿ ಕಾಣಬಹುದು. ಅವರಲ್ಲಿ ಹೊಲೆಯ, ಬೆಸ್ತ, ದೊಂಬಿದಾಸ, ಗೊಲ್ಲ, ಬೇಡ, ಅಗಸ, ಗಾಣಿಗ, ಕ್ಷತ್ರಿಯ, ಮುಸಲ್ಮಾನ, ವೈಷ್ಣವ ಹೀಗೆ ಎಲ್ಲ ಜಾತಿಯವರು ಇದ್ದಾರೆ. ಅವರೆಲ್ಲರೂ ಊಟ ಮಾಡುವುದು ಒಂದೇ ಪಂಕ್ತಿಯಲ್ಲಿ. ವಾಸಿಸುವುದು ಒಟ್ಟಿಗೆ. "ಸಹನಾವವತು, ಸಹನೌಭುನಕ್ತು, ಸಹವೀರ್ಯಂ ಕರವಾವಹೈ, ತೇಜಸ್ವಿನಾ ವಧೀತಮಸ್ತು, ಮಾ ವಿದ್ವಿಷಾವಹೈ, ಓಂ ಶಾಂತಿಃ ಶಾಂತಿಃ ಶಾಂತಿಃ" ಎಂಬ ಶಾಂತಿ ಮಂತ್ರವನ್ನು ನಾವು ಆಗಾಗ ಉಚ್ಚರಿಸುತ್ತಿರುತ್ತೇವೆ. ಇಲ್ಲಿ ಮಠದಲ್ಲಿ ದಿನವೂ ಈ ವಿದ್ಯಾರ್ಥಿ ಸಮುದಾಯ ಈ ಶಾಂತಿ ಮಂತ್ರವನ್ನು ಕಾರ್ಯರೂಪಕ್ಕೆ ಸದ್ದಿಲ್ಲದೆ ತರುತ್ತಿದೆ.

ಈ ಮಠದಲ್ಲಿ ದಾಸೋಹದ ಪ್ರಯೋಜನವನ್ನು ಪಡೆದವರು ಒಬ್ಬಿಬ್ಬರಲ್ಲ. ಡಾ. ಶಿವರುದ್ರಪ್ಪ, ಡಾ. ಎಲ್. ಬಸವರಾಜು, ಆಸ್ಥಾನ ವಿದ್ವಾನ್ ನಂಜುಂಡಾರಾಧ್ಯ, ಹೀಗೆ ಈ ಮಠದ ದಾಸೋಹದ ಸವಿಯನ್ನುಂಡವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಮಠದ ಕೊರತೆ ಸ್ವಾಮೀಜಿಯವರಿಗೂ ಮತ್ತೆ ಮತ್ತೆ ಮಾನಸಿಕವಾದ ನೋವಿಗೆ ಕಾರಣವಿದದ್ದು ಎಂದರೆ ವೀರಶೈವ ವಿದ್ಯಾರ್ಥಿಗಳಿಗೆಂದೇ ಪ್ರತ್ಯೇಕವಾಗಿರುವ ಒಂದು ಭೋಜನಶಾಲೆ. ಇದನ್ನವರು ತೊಡೆದುಹಾಕಲು ಇನ್ನೂ ಸಾಧ್ಯವಾಗಿಲ್ಲ. ಆದರೆ ವೀರಶೈವ ವಿದ್ಯಾರ್ಥಿಗಳು ಬೇರೆಯವರೊಡನೆ ಸಹ ಪಂಕ್ತಿಯಲ್ಲಿರಲು ಯಾವ ಅಡಚಣೆಯೂ ಇಲ್ಲ. ಒಂದು ಧರ್ಮದ

ಗುರುತಾಗಿರುವ ಸಿದ್ಧಗಂಗೆಯ ಸ್ವಾಮೀಜಿಯವರು ಎಷ್ಟೇ ಎಲ್ಲ ಧರ್ಮಗಳನ್ನು ಗೌರವಿಸಿದರೂ ಸಮಾನವಾಗಿ ಕಂಡರೂ, ಈಗೀಗ ವೀರಶೈವ ವಿದ್ಯಾರ್ಥಿಗಳು ಪ್ರತ್ಯೇಕವಾಗಿಯೇ ಊಟ ಮಾಡುವ ಸೌಲಭ್ಯವನ್ನು ತೆಗೆದು ಹಾಕಲು ಸಾಧ್ಯವಾಗಿದೆ. ಇಂಥ ಸಂದರ್ಭದಲ್ಲಿ ಪೋಷಕರ ಆಗ್ರಹಕ್ಕೆ ಗುರಿಯಾಗದಂತಿರುವ ಮಠದ ಲೌಕಿಕ ಪ್ರಜ್ಞೆಗೂ ಸ್ವಾಮೀಜಿಯವರ ಬಸವಜ್ಞಾನ ಬದುಕಿನ ಆದರ್ಶಕ್ಕೂ ತಾಳಿಕೆಯಾಗದೆ ಹೋಗದಿರುವ ತೊಡಕು ಇದೆ. ಇದೊಂದು ಸಾಮಾಜಿಕವಾದ ಅನಿವಾರ್ಯ ರೋಗವಂತಾಗಿರುವುದು ನಮ್ಮ ನೆಮ್ಮದಿಯನ್ನು ಕೆಡಿಸುತ್ತದೆ, ಇರಲಿ. ಮಠದಲ್ಲಿ ನೆರವು ಪಡೆದ ವಿದ್ಯಾರ್ಥಿಗಳು ಎಷ್ಟೋ ಸಂದರ್ಭದಲ್ಲಿ ಎಷ್ಟೊಂದು ನಿರ್ಗತಿಕರಾಗಿರುತ್ತಾರೆಂದರೆ ಬೇಸಿಗೆಯ ರಜೆಯ ಅವಧಿಯಲ್ಲಿ ತಮ್ಮ ಊರುಗಳಿಗೆ ಹೋಗಿ ಬರುವ ಬಸ್ ಪ್ರಯಾಣದ ವೆಚ್ಚಕ್ಕೂ ಗತಿಯಿರುವುದಿಲ್ಲ. ಪ್ರತಿದಿನ ಸ್ವಾಮೀಜಿ ಈ ವಿದ್ಯಾರ್ಥಿಗಳಿಗೆ ಪಾಠ ಹೇಳುವುದುಂಟಲ್ಲ. ಹಾಗೆಯೇ ಪ್ರಾರ್ಥನಾ ಸಮಯದಲ್ಲಿ ಗಮನಿಸುವುದೂ ಉಂಟಲ್ಲ, ಜೊತೆಗೆ ಅವರ ಪ್ರಸಾದದ ಸಮಯದಲ್ಲಿ ಸ್ವಾಮೀಜಿಗೆ ಪ್ರಿಯವಾದ ಕೆಲಸವೆಂದರೆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತ ಊಟ ಮಾಡುತ್ತಿರುವ ವಿದ್ಯಾರ್ಥಿಗಳನ್ನು ವಿಚಾರಿಸಿಕೊಳ್ಳುತ್ತ ಇಡೀ ಪ್ರಸಾದ ನಿಲಯದ ಸುತ್ತ ಓಡಾಡುವುದು. ಇಂಥ ಸಂದರ್ಭಗಳಲ್ಲಿ ಸ್ವಾಮೀಜಿಯವರಿಗೆ ಯಾರು ಯಾರ ಸ್ಥಿತಿ ಹಾಗೂ ಊರು, ಓದುವ ಮಟ್ಟ ಇವೆಲ್ಲ ಅರಿವಾಗುತ್ತದೆ. ಆದ್ದರಿಂದಲೇ ಪ್ರತಿ ವಿದ್ಯಾರ್ಥಿ ರಜೆಯಲ್ಲಿ ಊರಿಗೆ ಹೋಗಬೇಕಾದರೆ ಅಥವಾ ಯಾವುದಾದರೂ ತುರ್ತಿನಿಂದ ಊರಿಗೆ ಹೋಗಬೇಕಾದರೆ ಆತನ ಬಳಿ ಇರುವ ಮಠ ಕೊಟ್ಟ ಸಣ್ಣ ಟಿಪ್ಪಣಿ ಪುಸ್ತಕದಲ್ಲಿ ಸ್ವಾಮೀಜಿಯವರ ಅನುಮತಿ ಪಡೆಯಬೇಕು. ಹೀಗೆ ಊರಿಗೆ ಹೋಗಿ ಬರುವ ಎಷ್ಟೋ ವಿದ್ಯಾರ್ಥಿಗಳ ಪ್ರಯಾಣ ವೆಚ್ಚವನ್ನು ಸ್ವಾಮೀಜಿಯವರೆ ಭರಿಸಿದ್ದು, ಭರಿಸುತ್ತಿರುವುದು, ಇಂಥ ಘಟನೆಗಳಿಂದ ವಿದ್ಯಾರ್ಥಿಗೂ ಮತ್ತು ಮಠಕ್ಕೂ ಬಾಂಧವ್ಯ ಎಷ್ಟು ಗಾಢವಾಗುತ್ತದೆಂದು ಹೇಳಬೇಕಾದ ಅಗತ್ಯವಿಲ್ಲ. ಇಂಥವರಲ್ಲಿ ಒಬ್ಬ ವಿದ್ಯಾರ್ಥಿಗೆ ಸಂಬಂಧಿಸಿದ್ದು. ಈ ಘಟನೆ ಸಮಾಜದ ಕೆಳವರ್ಗಕ್ಕೆ ಸೇರಿದ ವಿದ್ಯಾರ್ಥಿ ಓದಿದ್ದು ಇಲ್ಲೇ. ಉಚಿತ ಊಟ, ವಸತಿ ಪಡೆದು ಬಿ.ಇ. ಪದವೀಧರನಾದ ಆ ವ್ಯಕ್ತಿ ಇಂಜಿನಿಯರ್ ಹುದ್ದೆಗೂ ನೇಮಕಗೊಂಡ. ಆತ ಆಯ್ಕೆ ಶ್ರೇಣಿಯ ಹುದ್ದೆಯೊಂದಕ್ಕೆ ಅರ್ಜಿಹಾಕಬೇಕಾದ ಸಂದರ್ಭವೊದಗಿತು: ಯಾರಿಂದ ಶಿಫಾರಸು ಪತ್ರ ತರುವುದು ಎಂದು ಆತ ಯೋಚಿಸಿದ. ಕೊನೆಗೆ ಏನು ಇಷ್ಟು ಮುಂದುವರಿಯಲು ಕಾರಣರಾದ ಸ್ವಾಮೀಜಿಯವರಲ್ಲಿ ತನಗೊಂದು ಶಿಫಾರಸ್ಸು ಪತ್ರ ಬೇಕೆಂದು ಕೇಳಿಕೊಂಡ. ಸ್ವಾಮೀಜಿಯವರಿಗೆ ಪರಿಚಿತವಾದ ಮುಖವೇ ಅದು. ಅಷ್ಟೇ ಅಲ್ಲ ಮಠದಲ್ಲಿದ್ದಾಗ ತನ್ನ ಸಾತ್ವಿಕ ಗುಣದಿಂದ ಹಾಗೂ ಅಧ್ಯಯನಶೀಲತೆಯಿಂದ ಸ್ವಾಮೀಜಿಗಳ ಗಮನವನ್ನು ಸೆಳೆದಿದ್ದಾತ. ಸಂತೋಷದಿಂದಲೇ ಶಿಫಾರಸ್ಸು ಪತ್ರವನ್ನು ಕೊಟ್ಟು ಆಶೀರ್ವದಿಸಿದರು. ಆತ ಆಯ್ಕೆಯಾದುದಷ್ಟೇ ಅಲ್ಲ, ಅತ್ಯುನ್ನತ ಸ್ಥಾನಕ್ಕೂ ಏರಿದ. ಹಾಗೆ ಉನ್ನತ ಅಧಿಕಾರಕ್ಕೆ ಬಂದಮೇಲೆ ತನ್ನದೇ ಆದ ಒಂದು ಮನೆಯನ್ನು ಕಟ್ಟಿಸಿಕೊಂಡ.

ಹೊಸಮನೆ ರೂಪುಗೊಳ್ಳುತ್ತಿದ್ದಂತೆ ಆತನಿಗೂ, ಆತನ ಮಡದಿಗೂ ತಮ್ಮ ಅಭ್ಯುದಯಕ್ಕೆ ಕಾರಣರಾದ ಸ್ವಾಮೀಜಿಯೇ ಗೃಹಪ್ರವೇಶಕ್ಕೆ ಬರಬೇಕು. ಬಂದು ಪಾದಪೂಜೆಯಲ್ಲ, ಅಲ್ಲಿ ಶಿವಪೂಜೆಯನ್ನು ಮಾಡಬೇಕು ಎಂಬುದು ಅವರ ಬಯಕೆಯಾಗಿತ್ತು. ಹೇಗೆ ಇದನ್ನು ಸ್ವಾಮೀಜಿಯವರಲ್ಲಿ ಬಿನ್ನವಿಸಿಕೊಳ್ಳುವುದು ? ಎಷ್ಟೋ ದಿನ ದಂಪತಿಗಳಿಬ್ಬರು ಸ್ವಾಮೀಜಿಗಳಲ್ಲಿ ಇದನ್ನು ನಿವೇದಿಸಿಕೊಳ್ಳುವುದು ಹೇಗೆ ? ಎಂದು ಮುಜುಗರಪಟ್ಟುಕೊಂಡರು. ಒಂದು ದಿನ ತಡೆಯಲಾಗದೆ, ದಂಪತಿಗಳು ಬಂದು ಸ್ವಾಮೀಜಿಗಳ ಪಾದಗಳಿಗೆ ಅಡ್ಡಬಿದ್ದರು. ಹಾಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದಂತೆಯೇ ತಮ್ಮ ಅನುಗ್ರಹವಾಗಬೇಕೆಂದು ಬೇಡಿಕೊಂಡರು. ಅಷ್ಟೇ ಅಲ್ಲ ನಮ್ಮ ಹೊಸ ಮನೆಯಲ್ಲಿ ತಮ್ಮ ಶಿವಪೂಜೆಯಾಗಬೇಕು ಎಂದರು. ಸ್ವಾಮೀಜಿ ನಗುತ್ತ ಪಾದಪೂಜೆಯಾದರೆ ಸಾಲದೇ ? ಎಂದರು. ಆದರೆ ದಂಪತಿಗಳು ಹಠ ಬಿಡಲಿಲ್ಲ. ಸ್ವಾಮೀಜಿ ತಾವು ಆ ಮನೆಯಲ್ಲಿ ಶಿವಪೂಜೆ ಮಾಡಲೇಬೇಕು. ಇಲ್ಲದಿದ್ದರೆ ನಾವು ಆ ಮನೆಯನ್ನೇ ಪ್ರವೇಶಿಸುವುದಿಲ್ಲ ಎಂದು ಹಠ ಹಿಡಿದು ಕುಳಿತರು. ಸ್ವಾಮೀಜಿ ನಕ್ಕರು. ಸ್ವಲ್ಪ ಕಾಲ ಮೌನವಾದರು. ಅನಂತರ ಆಯಿತು ಮೇಲಕ್ಕೇಳಿ, ನಾವು ಅಲ್ಲೇ ಪೂಜೆಯನ್ನು ಮಾಡಿಕೊಳ್ಳುತ್ತೇವೆ. ಆಗಬಹುದಲ್ಲ ಎಂದರು. ನಮ್ಮ ಜನ್ಮ ಸಾರ್ಥಕವಾಯಿತು ಎಂದು ಅವರು ಅನ್ನುತ್ತಿದ್ದಂತೆ ಸ್ವಾಮೀಜಿ ಮುಂದುವರಿಸಿದರು. ನಾವು ಶಿವಪೂಜೆಯನ್ನೇನೋ ಮಾಡುತ್ತೇವೆ: ಆದರೆ ಒಂದು ಷರತ್ತಿನ ಮೇಲೆ ಎಂದರು. ದೃಢವಾಗಿ ಅದೇನೇ ಶರತ್ತಾಗಲಿ ಪಾಲಿಸುತ್ತೇವೆ ಸ್ವಾಮೀಜಿ ಎಂದು ಹೇಳಿದರು. ಸ್ವಾಮೀಜಿಯ ಶರತ್ತು ಬೇರೆ ಏನೂ ಆಗಿರಲಿಲ್ಲ. ನೀವು ಆ ಮನೆಯಲ್ಲಿ ಮಾಂಸಾಹಾರ ಮಾಡುವುದಿಲ್ಲ ಎಂದು ಭರವಸೆ ಕೊಟ್ಟರೆ ಸಾಕು ಎಂಬುದಾಗಿತ್ತು. ಆ ಶರತ್ತಿನ ಹಿಂದೆ ಜಾತಿಯ ಕಟ್ಟುಪಾಡಿರಲಿಲ್ಲ. ಮನುಷ್ಯನ ಆಚಾರವನ್ನು ಶ್ರೀಮಂತಗೊಳಿಸುವ ಆಶಯ ಮಾತ್ರ ಇತ್ತು. ಈ ಘಟನೆಯನ್ನು ಉಲ್ಲೇಖಿಸುವುದರ ಉದ್ದೇಶ ಇಷ್ಟೇ ಸ್ವಾಮೀಜಿಯವರು ತಮ್ಮ ತಪಸ್ಸು, ಜ್ಞಾನ, ವ್ಯಕ್ತಿತ್ವದ ಔನ್ನತ್ಯ, ಸಾಮಾಜಿಕ ಸೇವೆ ಇವುಗಳಿಂದ ಇಡೀ ಕರ್ನಾಟಕ ಏಕೆ, ಭಾರತದ

ಗಮನವನ್ನೇ ಸೆಳೆದವರು. ಮಠಕ್ಕೆ ಭೇಟಿ ನೀಡಿದ ಅನೇಕರು ಮಠದ ಬಗ್ಗೆ ಆಡಿರುವ ಹಾಗೂ ಸ್ವಾಮೀಜಿಯವರನ್ನು ಕುರಿತು ತೋರಿರುವ ಗೌರವದ ಸಂದರ್ಭಗಳನ್ನು ಪಟ್ಟಿ ಮಾಡುತ್ತ ಹೋಗುವುದು ಇದರ ಉದ್ದೇಶವಲ್ಲ. ಅವರ ವ್ಯಕ್ತಿತ್ವ ಎಂಥ ಗೌರವವನ್ನು ಸದಾ ಪಡೆಯಲು ಯೋಗ್ಯವಾಗಿತ್ತು ಎಂಬುದನ್ನು ಸೂಚಿಸುವುದು.

ತುಮಕೂರಿನಲ್ಲಿ ಪ್ರಸಿದ್ಧರಾಗಿದ್ದ ವಕೀಲರಲ್ಲಿ ಎಚ್.ಎಸ್. ವೆಂಕಟರಾಮಯ್ಯನವರೂ ಒಬ್ಬರು. ವಕೀಲಿಯಲ್ಲಿ ಪ್ರಸಿದ್ಧಿಯಾಗಿದ್ದಂತೆ ಅವರು ಹಲವಾರು ಧಾರ್ಮಿಕ ಸಂಘಟನೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದ್ದವರು. ಸ್ವಾಭಿಮಾನಕ್ಕೆ ಹೆಸರಾಗಿದ್ದ ಅವರು ಚಿನ್ಮಯ ಮಿಷನ್‌ನ ಸ್ಥಳೀಯ ಉಪಾಧ್ಯಕ್ಷರೂ ಆಗಿದ್ದರು. ಒಂದು ದಿನ ತುಮಕೂರಿಗೆ ಭೇಟಿ ನೀಡಿದ್ದ ಚಿನ್ಮಯಾನಂದರು ವಕೀಲರನ್ನು ಕುರಿತು ನಿಮ್ಮ ಸಿದ್ಧಗಂಗೆ ಸ್ವಾಮೀಜಿಗಳನ್ನು ನೋಡಬೇಕಲ್ಲ ಎಂದರಂತೆ. ವೆಂಕಟರಾಮಯ್ಯನವರಿಗೆ ಇದು ಆಶ್ಚರ್ಯವನ್ನೇನು ಉಂಟುಮಾಡಲಿಲ್ಲ. ದೇಶ ವಿದೇಶಗಳಲ್ಲಿ ಗೀತೋಪದೇಶವನ್ನು ನೀಡಿ ತಮ್ಮ ವಾಗ್ಮಿತೆಗೆ ಹಾಗೂ ಆತ್ಮವಿದ್ವತ್ತಿಗೆ ಖ್ಯಾತರಾಗಿದ್ದ ಚಿನ್ಮಯಾನಂದ ಸ್ವಾಮಿಗಳು ಹಲವು ಸಲ ಸಿದ್ಧಗಂಗೆಯ ಸ್ವಾಮೀಜಿಗಳ ಬಗ್ಗೆ ಅನ್ಯರು ತೋರುತ್ತಿದ್ದ ಗೌರವ ಹಾಗೂ ಪ್ರಶಂಸೆಗಳ ಬಗ್ಗೆ ನಿಜವಾಗಿಯೂ ಕುತೂಹಲಗೊಂಡಿದ್ದವರು. ಆದ್ದರಿಂದಲೇ ಇಷ್ಟು ಹತ್ತಿರಕ್ಕೆ ಬಂದವೇಳೆ ಸ್ವಾಮೀಜಿಯವರನ್ನು ನೋಡದಿದ್ದರೆ ಹೇಗೆ ಎನ್ನಿಸಿತು. ವಕೀಲರು ತಟ್ಟನೆ ಮಠವನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಸ್ವಾಮೀಜಿಗಳಿರುವುದನ್ನು ಖಾತರಿಪಡಿಸಿಕೊಂಡು ಚಿನ್ಮಯಾನಂದಜೀಯವರನ್ನು ಮಠಕ್ಕೆ ಕರೆದುಕೊಂಡು ಹೋದರು. ಇಬ್ಬರು ಸ್ವಾಮೀಜಿಯವರು ಪರಸ್ಪರ ಗೌರವಪೂರ್ವಕವಾಗಿ ನಮಸ್ಕರಿಸಿ ಆಸನಾಸೀನರಾದ ಮೇಲೆ ಮಾನ್ಯ ವೆಂಕಟರಾಮಯ್ಯನವರು ಸಿದ್ಧಗಂಗೆಯ ಸ್ವಾಮೀಜಿಯವರ ಪಾದಗಳ ಬಳಿ ಬಾಗಿ ಸಾಷ್ಟಾಂಗ ಪ್ರಣಾಮ ಮಾಡಿದರು. ಎಷ್ಟೋ ಹೊತ್ತು ಸ್ವಾಮೀಜಿಗಳಿಬ್ಬರು ಇಂದಿನ ಬದುಕಿಗೆ ಅಗತ್ಯವಾದ ಮೌಲ್ಯಗಳ ಬಗ್ಗೆ ಮಾತಾಡಿ ಹೊರಟರು. ವೆಂಕಟರಾಮ್ಯನವರನ್ನು ಕುರಿತು ``ಏನು ಸ್ವಾಮಿ ಚಿನ್ಮಯಾನಂದರಿಗೆ ಮಾಡದ ಸಾಷ್ಟಾಂಗ ನಮಸ್ಕಾರ ಈ ಸ್ವಾಮಿಗಳಿಗೆ'' ಎಂದಾಗ ಅವರು ಹೇಳಿದ್ದು ಹೀಗೆ "ಅವರು ಪೀಠದ ಅಧ್ಯಕ್ಷರು ಎಂಬುದಕ್ಕಲ್ಲ ಈ ನಮಸ್ಕಾರ. ಬಾಲ್ಯದಿಂದ ಸ್ವಾಮೀಜಿಯವರ ಜೀವನವನ್ನು ಕುತೂಹಲದಿಂದ ಗಮನಿಸುತ್ತ ಬಂದಿದ್ದೇನೆ. ಅಭಿಮಾನ ವರ್ಧಿಸುವಂತೆ ಬದುಕಿದ ಜೀವ ಅದು. ಆ ಮಹಾನ್ ವ್ಯಕ್ತಿತ್ವಕ್ಕೆ ನನ್ನ ಆ ಗೌರವ".

ಸ್ವಾಮೀಜಿ ಅನೇಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿದವರು. ಆ ಸಮಿತಿಗಳ ಸದಸ್ಯರಾಗಿದ್ದಾಗ ತಾನು ಸ್ವಾಮೀಜಿ ಎಂದು, ಎಂದೂ ಗರ್ವಪಡದವರು. ಆ ಸಮಿತಿಯಲ್ಲಿ ತನ್ನ ಕರ್ತವ್ಯವೇನು ಎಂಬುದನ್ನಷ್ಟೇ ನಿರ್ವಂಚನೆಯಿಂದ ನಿರ್ದಾಕ್ಷಿಣ್ಯವಾಗಿ ನಿರ್ವಹಿಸಿದವರು. ಅವರಿಗೆ ನಾನು ಸ್ವಾಮೀಜಿ ಎನ್ನುವ ಗತ್ತು ಎಂದೂ ಬರಲಿಲ್ಲ. ನಾನೂ ಒಬ್ಬ ಸದಸ್ಯನಲ್ಲವೆ ಎಂಬ ತಾತ್ಸಾರ ಭಾವನೆಯೂ ಇರಲಿಲ್ಲ. ಕಾಯಕ ಧರ್ಮವನ್ನು ಕೃತಿಗಿಳಿಸಿದ ಈ ಜೀವಕ್ಕೆ ಪೂಜೆಯಷ್ಟೇ ಪವಿತ್ರವಾದದ್ದು ಯಾವುದೇ ಕ್ರಿಯೆಯಾದರೂ.

ಸಂಸ್ಕೃತಿಗೆ ಸಂಬಂಧಿಸಿದ ಸಮಿತಿಯೊಂದರಲ್ಲಿ ಸ್ವಾಮೀಜಿಯವರು ಪಾಲ್ಗೊಂಡಿದ್ದಾಗ ಯಾವುದೋ ಒಂದು ವಿಷಯದ ಚರ್ಚೆಯಲ್ಲಿ ಇಬ್ಬರು ಸದಸ್ಯರ ಮಾತಿಗೆ ಮಾತು ಬೆಳೆದು ವಾಗ್ವಾದ ಆಸ್ಫೋಟಕ ಸ್ಥಿತಿಯನ್ನು ಮುಟ್ಟಿತು. ಇವರು ಅವರನ್ನು, ಅವರು ಇವರನ್ನು ವೈಯಕ್ತಿಕವಾಗಿ ಟೀಕಿಸುವುದಕ್ಕೆ ಆರಂಭಿಸುವ ಹಂತ ಅದು. ಆಗ ಸ್ವಾಮೀಜಿಯವರು ಮಧ್ಯೇ ಪ್ರವೇಶಿಸಿ ಮುಗುಳ್ನಕ್ಕು ನುಡಿದರಂತೆ "ಇದು ಸಂಸ್ಕೃತಿಗೆ ಸಂಬಂಧಿಸಿದ ಸಭೆ ಅಲ್ಲವೆ, ನಿಮ್ಮಂಥವರೇ ಇದನ್ನು ಮರೆತುಬಿಟ್ಟರೆ ಹೇಗೆ ?" ತಟ್ಟನೆ ಆ ಹೇಮಾ ಹೇಮಿಗಳಿಗೆ ಚರ್ಚೆ ತಮ್ಮ ಕೈ ಮೀರುತ್ತಿರುವುದರ ಅರಿವಾಗಿ ನಕ್ಕು ಸುಮ್ಮನಾದರಂತೆ. ಆ ಹೇಮಾಹೇಮಿಗಳು ಬೇರೆ ಯಾರೂ ಅಲ್ಲ, ದಿವಂಗತ ದೇವುಡು ನರಸಿಂಹ ಶಾಸ್ತ್ರಿಗಳು ಹಾಗೂ ದಿವಂಗತ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರು.

ಸ್ವಾಮೀಜಿಯವರ ವ್ಯಕ್ತಿತ್ವದ ಹಿರಿಮೆಯನ್ನು ಧ್ವನಿಸುವ ಅನೇಕ ಸಂಗತಿಗಳಿವೆ. ಅವುಗಳಲ್ಲಿ ಒಂದನ್ನು ಮಾತ್ರ ಉಲ್ಲೇಖಿಸಿ ವಿರಮಿಸುತ್ತೇನೆ.ಮೈಸೂರು ಹಾಗೂ ಕೆ.ಆರ್.ಪೇಟೆಯಲ್ಲಿ ಪ್ರವಚನ ಮುಗಿಸಿ ಸ್ವಾಮೀಜಿಯವರು ಹೊರಟಾಗ ಇವರ ವ್ಯಕ್ತಿತ್ವದ ಘನತೆಗೆ ಮಾರುಹೋದ ಕೆ.ಆರ್. ಪೇಟೆಯ ಜನ ತಮ್ಮಲ್ಲಿದ್ದ ಸುಮಾರು ನೂರು ಎಕರೆಗಳಷ್ಟು ಜಮೀನನ್ನು ಸ್ವಾಮೀಜಿಯವರು ವಹಿಸಿಕೊಂಡು ಸಿದ್ಧಗಂಗಾ ಮಠದ ಶಾಖೆಯನ್ನು ತೆರೆಯಲೆಂದು ಬಿನ್ನವಿಸಿದರು. ಸ್ವತಂತ್ರ ಸಿದ್ಧಲಿಂಗೇಶ್ವರರು ಅನುಷ್ಠಾನ ಮಾಡಿದ ಪ್ರದೇಶ ಅದು. ಯಾರಿಗಾದರೂ ಆ ಆಸ್ತಿಯನ್ನು ವಹಿಸಿಕೊಳ್ಳುವ ಆಸೆ ಆಗಲೇಬೇಕು. ಆದರೆ ವಿರಕ್ತರಾದ ಸ್ವಾಮೀಜಿ ಆ ಮಾತನ್ನು ಕೇಳಿ ನಕ್ಕುಬಿಟ್ಟರು. ಇಷ್ಟು ದೂರದ ಈ ಜಮೀನನ್ನು ನೋಡಿಕೊಳ್ಳುವ ವ್ಯವಹಾರದ ಭಾರ ನಮಗೇಕೆ? ನಿಮಗದು ಬೇಡವಾಗಿದ್ದರೆ ಹತ್ತಿರದ ಮಠವೊಂದಕ್ಕೆ ಬಿಟ್ಟುಬಿಡಿ ಎಂದು ಬಿಟ್ಟರು. ಕೊಟ್ಟಿದ್ದನ್ನು ಸ್ವೀಕರಿಸಿದ ಮಹಾನುಭಾವ ಎಂದು ಹೆಮ್ಮೆಗೊಳ್ಳಲು ಭಕ್ತಾದಿಗಳ ಔದಾರ್ಯಕ್ಕೆ ಬೆರಗಾದರು. ಮತ್ತೆ ನಸು ನಗುತ್ತಲೇ ನಿರಾಕರಿಸಿ ಮಠಗಳಿರುವುದು ಆಸ್ತಿಗಳನ್ನು ಕೂಳ್ಳೆ ಹೊಡೆಯುವುದಕ್ಕಲ್ಲವೆಂಬುದನ್ನು ಧ್ವನಿಸಿಬಿಟ್ಟರು.

ಶರಣ ಸಂಸ್ಕೃತಿಯ ಮಹಾ ಬ್ರಹ್ಮ ಕಮಲ

ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ

ಭವ್ಯ ಪರಂಪರೆಯ ಸಂಸ್ಕೃತಿ ಕರ್ನಾಟಕ. ವಿಶೇಷಾರ್ಥದಲ್ಲಿ ಒಂದು ಶಿವಲಿಂಗ ಶರಣ ಸಾಮ್ರಾಜ್ಯ, ಲಿಂಗ ಸಂಸ್ಕೃತಿಯ ಬೀಡು, ಅಂಗ - ಲಿಂಗ ಅಂದರೆ ಲೌಕಿಕ - ಆಗಮಿಕ ಸಮನ್ವಯದ ನೆಲೆವೀಡು. ದೇವರು ಮಾನವರಾಗಿ ಬಂದ ಅಥವಾ ಮಾನವರೇ ದೇವರಾದ, ಲೌಕಿಕ ಜಗತ್ತನ್ನೇ ದೇವಲೋಕವನ್ನಾಗಿಸಿದ ಮಾನವೀಯ ಪವಾಡ ನಿರಂತರವಾಗಿ ನಡೆಯುತ್ತಿರುವ ನಾಡು. ಶಿವ ವೀರಭದ್ರ - ಷಣ್ಮುಖ ಉಪಾಸನೆ ವಿಕಾಸವಾಗಿ, ಲಿಂಗೋದ್ಭವಾಚಾರ್ಯ ಪರಂಪರೆ ಬೆಳಗಿ, ಆತ್ಮಲಿಂಗೋದ್ಭವರಾದ ಬಸವ, ಚೆನ್ನಬಸವ, ಪ್ರಭುದೇವ, ಸಿದ್ಧರಾಮ, ಅಕ್ಕಮಹಾದೇವಿಯರ ಶರಣ ಪರಂಪರೆ ನಿರಂತರವಾಗಿ ಬೆಳೆದು ತೋಂಟದ ಸಿದ್ಧಲಿಂಗ ....ಅಖಂಡೇಶ್ವರ ಶಿವಯೋಗಿ ಪರಂಪರೆಯ ಮಾನವ ಕಲ್ಯಾಣ ಭಕ್ತಿಯ ಬಳ್ಳಿಯಾಗಿ ಬೆಳೆದು, ನಿಜಗುಣ....ಸರ್ಪಭೂಷಣ...ಅಥಣಿ ಶಿವಯೋಗಿ ಮುಂತಾದ ಅನುಭಾವಿಗಳ ಪುಷ್ಪ - ಫಲ - ಬೀಜಗಳು ಚೆಲ್ಲವರಿದು, ಮುರುಘ, ಮೂರುಸಾವಿರ, ಸುತ್ತೂರು, ಕೊಟ್ಟೂರು ಬಸವ, ಹಾನಗಲ್ಲು ಕುಮಾರ, ಶಿವಯೋಗ ಮಂದಿರ ಮುಂತಾದ ಮಠ ಕ್ಷೇತ್ರ ಸಂಸ್ಥಾನಗಳ ಧರ್ಮ ಸಾಮ್ರಾಜ್ಯ ಜನತೆಯ ಜೀವನ ಸಂಸ್ಕೃತಿಯನ್ನು ಶತಶತಮಾನಗಳಿಂದ ರೂಪಿಸುತ್ತಾ ಪ್ರಭಾವಿಸುತ್ತಾ ಬಂದಿರುವ ಸಮಗ್ರ ಇತಿಹಾಸ ಅತ್ಯಂತ ರಮಣೀಯವಾದುದು. ಈ ಧರ್ಮ - ಸಂಸ್ಕೃತಿ - ಇತಿಹಾಸದ ಸಮಗ್ರ ಸಂಪುಟಗಳ ರಚನೆ ಬರಲಿರುವ ಇಪ್ಪತ್ತೊಂದನೆಯ ಶತಮಾನದ ಪ್ರಥಮ ಕೊಡುಗೆಯಾಗಬೇಕಾಗಿದೆ. ಶ್ರೀ ಸಿದ್ಧಗಂಗಾ ಕ್ಷೇತ್ರದಿಂದ ಇದು ಸಾಧ್ಯವಾಗಲೆಂಬುದು ಅಭಿಮಾನಿಗಳ ಹಾರೈಕೆ.

ಇಂಥ ವೀರಶೈವ ಸಂಸ್ಕೃತಿ ಕ್ಷೇತ್ರದ ಲಿಂಗಮುದ್ರೆ ಕಲ್ಲುಗಳು ಇರುವ ಗಡಿ ಕ್ಷೇತ್ರಗಳನ್ನೂ ಗುರುತಿಸಬಹುದಾಗಿದೆ. ಕರ್ನಾಟಕದ ಉತ್ತರದ ಗಡಿಯಲ್ಲಿ ಕಲಬುರ್ಗಿಯ ಶರಣಬಸವ, ಸೊಲ್ಲಾಪುರದ ಸಿದ್ಧರಾಮ, ಪಶ್ಚಿಮದ ಗಡಿಯಲ್ಲಿ ಉಳವಿಯ ಚೆನ್ನಬಸವೇಶ್ವರ, ಸಾವಳಗಿಯ ಶಿವಲಿಂಗೇಶ್ವರ, ನಿಡಸೋಸಿಯ ನಿಜಲಿಂಗೇಶ್ವರ, ಪೂರ್ವದ ಗಡಿಯಲ್ಲಿ ಬಳ್ಳಾರಿ - ಹೊಸಪೇಟೆಯ ಕೊಟ್ಟೂರು ಬಸವ, ಉರವಕೊಂಡೆಯ ಕರಿಬಸವೇಶ, ಗೂಳೂರಿನ ನಿಡುಮಾಮಿಡಿಯ ಕರಿವೃಷಭೇಂದ್ರ, ಅಂತೆಯೇ ದಕ್ಷಿಣದ ಗಡಿಯಲ್ಲಿ ಮಲೆಯ ಮಹದೇಶ್ವರ, ಸುತ್ತೂರು ಶಿವರಾತ್ರೀಶ, ಮಾದಾಪುರ ಮರುಳಸಿದ್ಧ ಮುಂತಾದ ಮಹಾ ಮಹಿಮರ ಆತ್ಮಲಿಂಗ ಮುದ್ರೆಯಿರುವ ಗಡಿಕಲ್ಲುಗಳನ್ನು ಕಾಣುತ್ತೇವೆ. ಇನ್ನು ನಡುನಾಡಿನಲ್ಲಿ ಕಲ್ಯಾಣ, ಉಜ್ಜಯಿನಿ, ಬಾಳೆಹೊನ್ನೂರು, ಕಲ್ಯಾಣ, ಕೂಡಲ ಸಂಗಮ, ಹಂಪಿ, ಎಡೆಯೂರು, ಅಥಣಿ, ಕೊಪ್ಪಳ, ಸಿರಿಗೆರೆ, ಬೆಳಗಾವಿ, ನಾಗನೂರು, ಮುಂಡರಗಿ, ಹಾವೇರಿ, ಬೆಂಗಳೂರಿನ ನಿಡುಮಾಮಿಡಿ, ನಿಜಗುಣ, ಸರ್ಪಭೂಷಣ ಮುಂತಾದ ಆಧುನಿಕ ವೀರಶೈವ ಸಂಸ್ಕೃತಿ ಕೇಂದ್ರಗಳಲ್ಲಿ ಇಂದು ಅತ್ಯಂತ ಮಹತ್ವದ ಸ್ಥಾನದಲ್ಲಿರುವ ಉದ್ದಾನ ಶಿವಯೋಗಿ....ಶ್ರೀ ಶಿವಕುಮಾರ ಪರಂಪರೆಯ ಸಿದ್ಧಗಂಗಾ ಕ್ಷೇತ್ರ ಅಖಿಲ ಭಾರತ ಕೀರ್ತಿಯ ವಿಶಿಷ್ಟ ಕ್ಷೇತ್ರವಾಗಿದೆ. ಸಮಗ್ರ ವೀರಶೈವ ಶರಣ ಸಂಸ್ಕೃತಿಯ ಪುಣ್ಯಕ್ಷೇತ್ರಗಳಲ್ಲೊಂದಾಗಿದೆ. ಆದರ್ಶ ಜೀವನ ಶಿಕ್ಷಣ - ಸಮನ್ವಯ ಸಹಬಾಳ್ವೆಯ ಸಂಕೇತವಾಗಿದೆ. ವಜ್ರಮಹೋತ್ಸವದ ಪುಣ್ಯಭಾಗಿಗಳಾದ ಪೂಜ್ಯ ಡಾ. ಶಿವಕುಮಾರ ಮಹಾಸ್ವಾಮಿಗಳು ಈ ಶಿವಯೋಗಿ ಶರಣ ಪರಂಪರೆಯ ಪ್ರತೀಕರಾಗಿದ್ದಾರೆ. ಸಿದ್ಧಗಂಗೆಯ ಕಲ್ಲುಬೆಟ್ಟಗಳಲ್ಲಿ ಮಾನವತ್ವದ ಶಿಕ್ಷಣ - ಆತ್ಮಶಿಕ್ಷಣ ಬೃಹದೀಶ್ವರ ದೇವಾಲಯ ನಿರ್ಮಿಸಿದ ಸ್ಥಪತಿ - ಸ್ಥಾನಪತಿಗಳಾಗಿದ್ದಾರೆ. ಜನಮನದ ಆರಾಧ್ಯದೈವವಾಗಿದ್ದಾರೆ. ಮಾನವೋದ್ಧಾರದ ಮಹಾಪ್ರಯೋಗ ಮಾಡಿದ ಕರ್ನಾಟಕದ ಶಿವಶರಣ ಸಂಸ್ಕೃತಿಯ ಸಾಕ್ಷಿಭೂತರಾಗಿರುವ, ನಮ್ಮ ನಡುವೆ ನಡೆದಾಡುವ "ಮಾನವ ಮಹಾದೇವ"ರಾಗಿದ್ದಾರೆ. ಶಿವಶರಣ ಪರಂಪರೆಯ ಸಹಸ್ರದಳ ಕಮಲವನದಲ್ಲಿ ಶತಮಾನಕ್ಕೊಮ್ಮೆ ಅರಳುವ "ಮಹಾಬ್ರಹ್ಮಕಮಲ ಪುಷ್ಪ"ವಾಗಿದ್ದಾರೆ. ಪರಮ ಪೂಜ್ಯ ಡಾ. ಶಿವಕುಮಾರ ಸ್ವಾಮಿಗಳವರು, ಶತಾಯುಷಿಗಳಾಗಿ ಬಾಳಿ ನಮ್ಮನ್ನು ಆಶೀರ್ವದಿಸಲಿ. ಇಂದಿನ ಈ ವಜ್ರಮಹೋತ್ಸವ ಶ್ರೀಗಳವರಿಗೆ ವಜ್ರರಕ್ಷೆಯಾಗಲೆಂದು ಹಾರೈಸುತ್ತೇನೆ.

ಸಾವಿರದ ಗುಟ್ಟು ಇಲ್ಲಿದೆ

ಹೊ.ವೆ. ಶೇಷಾದ್ರಿ

"ಶ್ರೀ ಸಿದ್ಧಗಂಗೆ" ಮತ್ತು "ಶ್ರೀ ಶಿವಕುಮಾರ ಸ್ವಾಮಿಗಳು" ಇವೆರಡೂ ಹೆಸರುಗಳು ಎಷ್ಟೊಂದು ಗಾಢವಾಗಿ ಪರಸ್ಪರ ಹೆಣೆದುಕೊಂಡಿವೆ ಎಂದರೆ, ಒಂದನ್ನು ಬಿಟ್ಟು ಇನ್ನೊಂದನ್ನು ಕಲ್ಪಿಸಲೂ ಸಾಧ್ಯವಾಗದು. ಅಷ್ಟೇಕೆ, ಸಿದ್ಧಗಂಗೆಯ ಹೆಸರು ಕರ್ನಾಟಕವಲ್ಲಿ ಮನೆಮನೆಯ ಶ್ರದ್ಧೆಯ ಮಾತಾಗಿರುವುದೂ, ಪೂಜ್ಯ ಸ್ವಾಮಿಗಳ ತಪಸ್ಸು ಸಾಧನೆಗಳ ಪುಣ್ಯ ಪ್ರಭಾವದ ಫಲವಾಗಿಯೇ. ಸಂಸ್ಕೃತದಲ್ಲಿ ಒಂದು ನಾಣ್ಣುಡಿ ಇದೆ. "ಅರ್ಚಕಸ್ಯ ಪ್ರಭಾವೇನ ಶಿಲಾ ಭವತಿ ಶಂಕರಃ" - ಶಿಲೆಯೊಂದು ಶಂಕರನಾಗುವುದು, ಅದರಲ್ಲಿ ದೈವತ್ವವನ್ನು ತುಂಬಬಲ್ಲಂತಹ ನಿಸ್ಸೀಮ ಆರಾಧಕನಿಂದಾಗಿಯೇ. ಯಾವುದೇ ಒಂದು ಜಾಗಕ್ಕೆ, ಜಲಧಾರೆಗೆ ಪಾವಿತ್ರ್ಯ ಲಭಿಸುವುದು ಅದು ತಪಸ್ವಿಗಳ ತಾಣ ಪರಿಸರವೆಂದೇ. ಗಂಗೆಯು ಶಂಕರನ ಜಟೆಯಿಂದ ಇಳಿದು, ಜನ್ಹು ಋಷಿಯ ತೊಡೆಯಿಂದ ಹೊರಬಂದು, ಭಗೀರಥನ ಘೋರತಪಸ್ಸಿನಿಂದ ಇಳೆಗೆ ಬಂದಳೆಂದೇ ಅವಳಿಗೆ ಅಂಥ ಅಪೂರ್ವ ಪಾವಿತ್ರ್ಯ, ದೈವತ್ವ.

ಶ್ರೀ ಸಿದ್ಧಗಂಗೆಯ ಮಹಿಮೆಯಲ್ಲಿ ಇನ್ನೊಂದು ವೈಶಿಷ್ಟ್ಯವೂ ಇದೆ. ಭಾರತದ ಚಿರಂಜೀವತ್ವದ ರಹಸ್ಯವೂ ಇದರಲ್ಲಿ ಅಡಗಿದೆ. ಸರ್ ಮಹಮದ್ ಇಕ್ಬಾಲ್‌ರು (ಮುಸ್ಲಿಂ ಪ್ರತ್ಯೇಕವಾದದ ಪ್ರವಾದಿಯಾಗುವ ಮುನ್ನ) ಒಮ್ಮೆ ಇದೇ ಮಹಿಮೆಯ ಕುರಿತು ಹಾಡಿದ್ದರು :

ಯೂನಾನ ಮಿಶ್ರ ರೋಮ ಸಬ ಮಿಟಗಯೇ ಜಹಾಂಸೇ
ಕುಛ ಬಾತ್ ಹೈ ಕೀ ಹಸ್ತಿ ಮಿಟತೀ ನಹೀ ಹಮಾರೀ

ಗ್ರೀಸ್, ಈಜಿಪ್ಟ್, ರೋಮ್ ಇವೆಲ್ಲವೂ ಈ ಲೋಕದಿಂದಲೇ ಅಳಿದು ಹೋದವು. ಆದರೆ ನಮ್ಮಲ್ಲಿ ಅದೇನೋ ಒಂದು ಸಂಗತಿ ಇದೆ. ಅದು ಮಾತ್ರ ಅಳಿಯದಂತೆ ಉಳಿದುಕೊಂಡೇ ಬಂದಿದೆ.

ಆ 'ಒಂದು ಸಂಗತಿ', ಆ 'ಮಹಿಮೆ' ಯಾವುದು ?

ಕೆಲವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಪ್ರವಾಸಕ್ಕೆ ಹೋಗಿದ್ದಾಗಿನ ಪ್ರಸಂಗ. ಶ್ರೀ ಸುನೀಲ್ ಮುಖರ್ಜಿ ಎನ್ನುವ ವ್ಯಕ್ತಿ ಭೆಟ್ಟಿಯಾಗಲು ಬಂದ. ಪ್ರಖರ ವಿಚಾರವಾದಿ. ನಕ್ಸಲ್ ಆಂದೋಳನ ಪ್ರಾರಂಭದ ಹತ್ತು ಪ್ರಮುಖ ಚಿಂತಕರ ಪೈಕಿ ಒಬ್ಬ. ಕಲ್ಕತ್ತ ವಿಶ್ವವಿದ್ಯಾನಿಲಯದ ಸ್ವರ್ಣಪದಕ ವಿಜೇತ ಸ್ನಾತಕ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರ ಸಂಪರ್ಕಕ್ಕೆ ಬಂದು ರಾಮಾಯಣ ಭಗವದ್ಗೀತೆ ಭಾಗವತಗಳ ಆಳವಾದ ಅಧ್ಯಯನ ಮಾಡಿ, ಹಿಂದುತ್ವ ನಿಷ್ಠನಾಗಿ ಹೊಸ ಅವತಾರ ತಾಳಿದವ. ಅವನು ನನ್ನನ್ನು ಕೇಳಿದ ಪ್ರಶ್ನೆಯೂ ಇದೇ "ಪ್ರಪಂಚದ ಹತ್ತು ಹಲವು ಸಮಾಜಗಳ-ಸಂಸ್ಕೃತಿಗಳ ಏಳುಬೀಳುಗಳ ಕತೆಯನ್ನೆಲ್ಲಾ ನಾನು ಅರೆದು ಕುಡಿದಿದ್ದೇನೆ. ಮುಸ್ಲಿಮರ ಮತ್ತು ಐರೋಪ್ಯರ ದಾಳಿಗೆಸಿಕ್ಕ ಅನೇಕ ದೇಶಗಳು- ಧರ್ಮಗಳು ಕೆಲವೇ ದಶಕಗಳಲ್ಲಿ ನಾಮಾವಶೇಷವಾಗಿರುವುದನ್ನೂ ಓದಿದ್ದೇನೆ. ಆದರೆ ಭಾರತದ ಮೇಲೆ ೮೦೦ ವರ್ಷಗಳ ಸತತ ಮುಸ್ಲಿಂ ದಾಳಿ, ಅನಂತರ ಇಂಗ್ಲಿಷರ ದಾಸ್ಯ - ಇವುಗಳನ್ನು ಅರಗಿಸಿಕೊಂಡು ಹಿಂದೂ ಸಮಾಜವು ಇಂದಿಗೂ ಜೀವಂತವಾಗಿ ತಲೆ ಎತ್ತಿ ನಿಂತಿದೆಯಲ್ಲ, ಇದರ ರಹಸ್ಯವೇನು ?"

ಹಿಂದುಸ್ಥಾನದ ಹಿಂದೂ ಸಮಾಜದ ಚರಿತ್ರೆಯನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಅಭ್ಯಸಿಸಿದವರಿಗೆ ಇದೊಂದು ರಹಸ್ಯವೇನೂ ಅಲ್ಲ. ತೆರೆದ ಪುಸ್ತಕದಷ್ಟು ಅದರ ನಿಚ್ಚಳ ಸತ್ಯ ಕಣ್ಣಿಗೆ ಹೊಡೆಯುತ್ತದೆ. ಅಂತಹ ಮೃತ್ಯುಂಜಯ ಸಮಾಜ ಮೈತಳೆಯಲು ಸಾಧ್ಯವಾದದ್ದು ಅದರ ಸನಾತನ ಧಮದ ನೆಲೆಗಟ್ಟಿನ ಕಾರಣದಿಂದಾಗಿ. ಒಂದು ಕಾಲದಲ್ಲಿ 'ನೇಪಲ್ಸ್‌ನ್ನು ನೋಡಿ ಸಾಯಿ' ಎನ್ನುವಷ್ಟು ವಿಶ್ವವಿಖ್ಯಾತವಾಗಿದ್ದ ರಾಜಧಾನಿಗಳೂ, ಮಹಾನ್ ಚಿಂತಕರ ನೆಲೆವೀಡಾಗಿದ್ದಂಥ ದೇಶಗಳೂ, ಅವುಗಳ ನಾಗರೀಕತೆಯ ವೈಭವ - ಅಟ್ಟಹಾಸಗಳೂ ಇವೆಲ್ಲವೂ ಕಟ್ಟಲ್ಪಟ್ಟಿದ್ದು ಅಲ್ಲಲ್ಲಿನ 'ರಾಜ್ಯ'ಗಳ ಬಲದ ಮೇಲೆ, ಅಲ್ಲಲ್ಲಿನ ಅಧಿಕಾರಿಗಳು, ರಾಜ್ಯಕರ್ತರು, ಸೇನಾಬಲ - ಹಣಬಲಗಳ ಮೇಲೆ. ಯಾವ ರಾಷ್ಟ್ರ ಜೀವನದಲ್ಲಿ ಕೇವಲ ಅಧಿಕಾರ - ಹಣ - ಐಹಿಕ ಸುಖ ವೈಭವಗಳಷ್ಟೆ ಜನಜೀವನದ ಮುಖ್ಯ ತಿರುಗಣೆಯಾಗುವುವೋ, ಅಲ್ಲಿ ಒಳಕಚ್ಚಾಟ - ಬಡಿದಾಟಗಳು ತಪ್ಪಿದ್ದಲ್ಲ, ಭ್ರಷ್ಟಾಚಾರ - ಅನಾಚಾರಗಳಿಗೆ ಎಣೆಯೇ ಇರದು. ಜನರಲ್ಲಿನ ಸ್ವಾರ್ಥಪರತೆ - ದೇಶದ್ರೋಹಗಳು ವೈರಿಗಳಿಗೆ ದೇಶ ರಕ್ಷಣೆಯ ಕೋಟೆಯ ಹೆಬ್ಬಾಗಿಲನ್ನೇ ತೆರೆದಾವು. ಪರದೇಶಗಳ - ಪರಮತಗಳ ದಾಳಿಯನ್ನು ಎದುರಿಸುವ ಕಸುವು ಅಂತಹ ಜನರಲ್ಲಿ

ಉಳಿಯುವುದಾದರೂ ಎಂತು? ಖ್ಯಾತ ವಿಶ್ವಇತಿಹಾಸಕಾರ ಅರ್ನಾಲ್ಡ್ ಟಾಯನ್‌ಬೀ ನೀಡಿರುವ ನಿಷ್ಕರ್ಷೆಯೂ ಇದೇ. ಇದುವರೆವಿಗೆ ಪ್ರಪಂಚದಲ್ಲಿ ತಲೆ ಎತ್ತಿದ್ದ ೨೮ ನಾಗರಿಕತೆಗಳ ಏಳುಬೀಳುಗಳ ಕತೆಯನ್ನು ಅವನು ಚಿತ್ರಿಸಿದ್ದಾನೆ. ಚರಿತ್ರೆಯ ಕಸದ ಬುಟ್ಟಿಗೆ ಎಸೆಯಲ್ಪಟ್ಟಿರುವ ಈ ಪೈಕಿ, ಹೆಚ್ಚಿನ ಮಟ್ಟಿನ ನಾಗರಿಕತೆಗಳು ಕೊನೆಯುಸಿರು ಎಳೆದದ್ದು ಮುಖ್ಯವಾಗಿ ಅವುಗಳ ಒಳ ದೌರ್ಬಲ್ಯದ ಫಲವಾಗಿಯೇ. ಹೊರಗಿನ ಆಕ್ರಮಣಗಳು ಯಶಸ್ವಿಯಾಗಲೂ ಅದೇ ಕಾರಣ ಎನ್ನುವ ವಿಶ್ವ ಚರಿತ್ರೆ ನೀಡುವ ಎಚ್ಚರಿಕೆಯ ಗಂಟೆ ಅವನು ಬಾರಿಸಿದ್ದಾನೆ.

ಭಾರತದ ಉನ್ನತಿ - ಅವನತಿಗಳ ಪಾಠವೂ ಇದೇ. ಎಂದೆಂದೂ, ಎಲ್ಲೆಲ್ಲಿ, ನಮ್ಮ ಸಮಾಜವು ಒಳಗುದಿಗಳಿಂದ, ತಿಕ್ಕಾಟ - ಕಚ್ಚಾಟಗಳಿಂದ ಅಶಕ್ತವಾಯಿತೋ ಅಲ್ಲಲ್ಲಿನ ಜನ ಪರದಾಳಿಗೆ ಈಡಾದರು. ಹೀಗಾಗಿ ನಮ್ಮ ದೇಶದ ಭಾರಿ ಭಾರಿ ಭಾಗಗಳೇ ನಮ್ಮ ತಾಯ್ನೆಲದಿಂದ ತುಂಡಾಗಿ ಬೇರೆಯಾದವು. ಆದರೆ ಬಹುಮಟ್ಟಿನ ಸಮಾಜ ಇಂದಿಗೂ ಹಿಂದುತ್ವದ ಪತಾಕೆ ಎತ್ತಿ, ಜಗತ್ತಿನೆದುರು ಗಟ್ಟಿಯಾಗಿ ಭಾರಿ ಆಲದ ಮರದಂತೆ ನಿಂತಿದೆ. ಇದರ ಕಾರಣ, ನಮ್ಮ ಸನಾತನ ಧರ್ಮದ ಬೇರುಗಳಿಂದ ಜೀವರಸವನ್ನು ಅದು ಹೀರುತ್ತಲೇ ಬಂದಿವೆ. ಅನ್ಯಾನ್ಯ ಪಂಥ ಸಂಪ್ರದಾಯಗಳ ರೂಪದಲ್ಲಿ ತನ್ನ ಬಿಳಲುಗಳನ್ನು ನೆಲ ಚಾಚಿ ಅವುಗಳಿಂದಲೂ ತನ್ನ ಪ್ರಾಣಶಕ್ತಿಯನ್ನು ವರ್ಧಿಸಿಕೊಳ್ಳುತ್ತಲೇ ಬಂದಿದೆ ಎಂದೇ ಯೋಗಿ ಅರವಿಂದರೂ ಹೇಳಿದರು. " ಹಿಂದು ರಾಷ್ಟ್ರವು ಸನಾತನ ಧರ್ಮದೊಂದಿಗೇ ಏಳುತ್ತದೆ, ಅದರೊಂದಿಗೇ ಬೀಳುತ್ತದೆ."

'ಧರ್ಮ' ಎಂದರೆ ಯಾವುದೇ ಒಂದು ವಿಶಿಷ್ಟ 'ಮತ', 'ಪಂಥ' ಮಾತ್ರ ಅಲ್ಲ. ಜೀವಾತ್ಮ ಪರಮಾತ್ಮರ ನಡುವಣ ಏಕಾತ್ಮ ಭಾವದ ಅರಿವು - ಅನುಭವಗಳನ್ನು ತಂದುಕೊಡುವ ಅಸಂಖ್ಯ ಮಾರ್ಗಗಳು ಅವು. ಧರ್ಮದ್ದು ಇದು ಒಂದು ಮುಖ, ಮುಖ್ಯವಾದ ಮುಖವೇ. ಆದರೆ ಧರ್ಮದ ಸಾಮಾಜಿಕ ಮುಖವೂ ಒಂದಿದೆ. ಮೊದಲನೆಯದು 'ವ್ಯಕ್ತಿ ಧರ್ಮ'. ಇದು 'ಸಮಾಜಧರ್ಮ'. ಪಾರಮಾರ್ಥಿಕ ಜೀವನದಂತೆಯೇ, ಐಹಿಕ ಜೀವನದಲ್ಲಿಯೂ ವ್ಯಕ್ತಿ - ಸಮಾಜಗಳ ನಡುವಣ ಏಕಾತ್ಮತೆಯ ಅನುಭೂತಿಯನ್ನೂ ಇಂದು ಕೊಡುವ ಜೀವನ ರಚನೆ ಅದು. ಅಂತಹ ಜೀವನ ರಚನೆ ಯಾವುದೇ ಒಳ ವಿರಸ -ವಿರೋಧಗಳಿಗೆ ತುತ್ತಾಗದಂತೆ ಎಲ್ಲ ವ್ಯಕ್ತಿಗಳಲ್ಲಿ ಆವಶ್ಯಕವಾದ ಸಮರಸ ಬಾಳ್ವೆಗಾಗಿ ವಿಧಿಸುವ ಸಂಸ್ಕಾರಗಳ ಸಂಹಿತೆ ಅದು. 'ಧರ್ಮ' ಶಬ್ದದ ಅರ್ಥವೇ ಅದು. 'ಧಾರಣಾತ್ ಧರ್ಮ ಮಿತ್ಯಾಹುಃ ಧರ್ಮೋ ಧಾರಯತಿ ಪ್ರಜಾಃ' ಸಮಾಜವನ್ನು - ಅಷ್ಟೇಕೆ ಇಡೀ ಸೃಷ್ಟಿಯನ್ನು ಎತ್ತಿಹಿಡಿದು ಸಂರಕ್ಷಣೆ ಮಾಡುವುದೇ ಧರ್ಮ. ಧರ್ಮ 'ಧೃ' ಧಾತುವಿನಿಂದ ಬಂದದ್ದು. 'ಧೃ' ಎಂದರೆ ಜೋಡಿಸುವ ಗುಣ.

ಈ ರೀತಿಯ ಧರ್ಮ ಸಂಸ್ಕಾರಕರಿಂದಾಗಿಯೇ ಹಿಂದೂ ಸಮಾಜವು ಸಾವಿರಾರು ವರ್ಷಗಳಿಂದ ತನ್ನ ನಿತ್ಯ ಬಾಳುವೆಯನ್ನು ತಾನೇ ನಿರ್ವಹಿಸಿಕೊಂಡು ಹೋಗುತ್ತಾ ಬಂದಿದೆ. ತನ್ನ ಮೇಲಿನ ರಾಜಕೀಯ ಪ್ರಭುತ್ವದಲ್ಲಿ ಏರುಪೇರುಗಳಾದರೂ ಅದರ ಹೊಡೆತಕ್ಕೆ ಸಿಕ್ಕಿ ಸಮಾಜ ವೃಕ್ಷದ ಕೊಂಬೆರೆಂಬೆಗಳು ಒಂದಿಷ್ಟು ಕಡಿದು ಬಿದ್ದರೂ ಅದರ ಬೇರುಗಳು ಮಾತ್ರ ಅಭಂಗವಾಗಿ ಉಳಿದುಕೊಂಡೇ ಬಂದಿವೆ. ನಮ್ಮ ರಾಷ್ಟ್ರವನ್ನು ನಾಶಗೊಳಿಸಬೇಕೆಂದು ಬಂದ ಪ್ರತಿಯೊಬ್ಬ ಆಕ್ರಮಣಕಾರರಿಗೂ ಈ ಮಾತು ನಮ್ಮ ರಾಷ್ಟ್ರದ ಆಂತರಿಕ ಚೈತನ್ಯ ಸೆಲೆ ಚೆನ್ನಾಗಿ ಗೊತ್ತಿತ್ತು ಎಂದೇ ರಾಕ್ಷಸರು ದಾಳಿ ಇಡುತ್ತಿದ್ದುದು ಋಷಿ - ಮುನಿಗಳ ಆಶ್ರಮದ ಮೇಲೆ. ರಾಕ್ಷಸರ ವಿಧ್ವಂಸ ತಾಂಡವದಿಂದ ಋಷಿ ಆಶ್ರಮಗಳನ್ನು ಕಾಪಾಡಿ, ರಾಕ್ಷಸರನ್ನು `ಮರ್ದನ ಮಾಡಲೆಂದು ವಿಶ್ವಾಮಿತ್ರ ಋಷಿಯು ದಶರಥ ಮಹಾರಾಜರನ್ನು ರಾಮ ಲಕ್ಷ್ಮಣರನ್ನು ತನ್ನೊಂದಿಗೆ ಕಳುಹಿಸಿಕೊಡಬೇಕೆಂದು ಕೇಳಿದ್ದು. ರಾಜಗುರು ವಸಿಷ್ಠ ಋಷಿಯು ಅದನ್ನು ಸಮರ್ಥಿಸಿ ಕಳುಹಿಸಿಕೊಟ್ಟದ್ದು ಇದೇ ಕಾರಣಕ್ಕಾಗಿ. ಅಯೋಧ್ಯೆಯನ್ನು ರಕ್ಷಿಸುವ ಕೆಲಸ, ಅಯೋಧ್ಯೆಯನ್ನು ಆದರ್ಶ "ರಾಮರಾಜ್ಯ"ವನ್ನಾಗಿ ಮಾಡಬೇಕಾದ ಕೆಲಸ ವಿಶ್ವಾಮಿತ್ರ ಋಷಿ ಮಾಡುತ್ತಿದ್ದಾರೆ, ಎಂಬುದು ವಸಿಷ್ಠರಿಗೆ ಗೊತ್ತಿತ್ತು. ಕಳೆದ ಎರಡು - ಎರಡೂವರೆ ಸಾವಿರ ವರ್ಷಗಳಲ್ಲಿ ನಮ್ಮ ದೇಶದ ಮೇಲೆ ಎರಗಿಬಂದ ಹೂಣ-ಕುಶಾನ-ಶಕ - ಮುಸಲ್ಮಾನ ಆಕ್ರಮಕರೂ ಇದೇ ನೀತಿ ಅನುಸರಿಸಿದರು. ಇಲ್ಲಿನ ದೇವಾಲಯ, ತಪೋವನ, ವಿಶ್ವವಿದ್ಯಾಲಯ ಕೇಂದ್ರಗಳು, ಬುದ್ಧ ವಿಹಾರಗಳು ಇವು ಆಹುತಿಯಾದವು. ಕಡೆಯದಾಗಿ ಬಂದ ಆಂಗ್ಲರು ಇವರೆಲ್ಲರಿಗಿಂತಲೂ ಧೂರ್ತರು. ಲಕ್ಷಾಂತರ ಹಳ್ಳಿಗಳಲ್ಲಿ ಬೇರೂರಿದ್ದ ಸ್ವಾವಲಂಬನೆಯ - ಧರ್ಮನಿಷ್ಠ ಸಮಾಜ ರಚನೆಯನ್ನು ಬುಡಮೇಲು ಮಾಡಿದರು. ವಿದ್ಯಾಪ್ರಸಾರ, ಆರೋಗ್ಯ, ಕೃಷಿ ಅರಣ್ಯ, ಉದ್ಯೋಗ, ಕೈಗಾರಿಕೆ, ದೇವಾಲಯ, ಇತರೇ ಜೀವನಾವಶ್ಯಕ ವಿಷಯಗಳು ಇವೆಲ್ಲವನ್ನೂ ಒಂದೊಂದು ಗ್ರಾಮವೂ ಗ್ರಾಮ ಸಂಕುಲವೂ ತಾನೇ ನಿರ್ವಹಿಸಿಕೊಂಡು ಹೋಗುತ್ತಿತ್ತು. ಹೀಗಾಗಿ ಈ ಎಲ್ಲ ರಂಗಗಳಲ್ಲೂ ವಿಶ್ವದಲ್ಲೇ ಅತ್ಯುತ್ತಮ ಮಟ್ಟವನ್ನು ನಮ್ಮ ಜನ ತಲುಪಿದ್ದರು. ಇದರಲ್ಲಿ ಸರಕಾರದ ಸಹಾಯವಾಗಲೀ, ಕೈವಾಡವಾಗಲೀ ಯಃಕಿಂಚಿತ್ತೂ ಇರಲಿಲ್ಲ. ಎಂದರೆ ಆಳರಸರ ಕೃಪೆ - ಅವಕೃಪೆಗಳಿಗೆ ಅವಕಾಶವೇ ಇರದಿದ್ದಂತಹ ಜೀವನ ವ್ಯವಸ್ಥೆ ಇದಾಗಿತ್ತು. ಅಂದಿನ ರಾಜ್ಯಧರ್ಮದ ಎಂದರೆ ಸಂವಿಧಾನದ ರಚನೆಯೇ ಹಾಗಿತ್ತು. ರಾಜ್ಯ ವ್ಯವಸ್ಥೆಯಲ್ಲಿ ವಿಧಿಸಲಾಗಿದ್ದ ನಿಯಮಗಳಲ್ಲಿ ಎಲ್ಲಕ್ಕಿಂತ

ಕಡಿಮೆ ಅಧಿಕಾರವಿದ್ದುದು ರಾಜನಿಗೆ, ಎಲ್ಲಕ್ಕಿಂತ ಹೆಚ್ಚಿನ ಅಧಿಕಾರಗಳು ಇದ್ದುದು ಪ್ರಜೆಗಳಿಗೆ ಎಂದೇ ಅದು ನಿಜಕ್ಕೂ ನೂರಕ್ಕೆ ನೂರು ಭಾಗ ಸ್ವಾವಲಂಬಿ - ಸ್ವಾಯತ್ತ - ಸಮಾಜ, ಪ್ರಜಾಪ್ರಭುತ್ವ ಎನಿಸಿತ್ತು ಎಂದೇ ವಿಶ್ವವಿಖ್ಯಾತ ಚರಿತ್ರಕಾರ ವಿಲ್ ಡ್ಯೂರಂಟ್ ಬರೆದ ನಾವು ಪಾಶ್ಚಾತ್ಯರು ಪ್ರಜಾತಂತ್ರದ ಓನಾಮ ಕಲಿತದ್ದು, ಭಾರತದ ಪಂಚಾಯಿತಿ ಪದ್ಧತಿಯಿಂದ.

ಭಾರತವು ಮತ್ತೊಮ್ಮೆ ತನ್ನ ಸ್ವಾಭಾವಿಕ ಜೀವನ ಸ್ಥೈರ್ಯವನ್ನು ಪಡೆಯಬೇಕಾದರೆ ತನ್ನೊಳಗಿನ ಅದೇ ಪ್ರಾಚೀನ ಸಂಜೀವಿನಿ ಜೀವನ ತತ್ವವನ್ನು ಎಚ್ಚರಗೊಳಿಸಿಕೊಳ್ಳಬೇಕು. ಎಂದರೆ, 'ಸರಕಾರ ಅಲ್ಲ', 'ಸಂಸ್ಕಾರಯುಕ್ತ ಸಮಾಜ'ದ ಆಧಾರದ ಮೇಲೆ ನಮ್ಮ ರಾಷ್ಟ್ರಜೀವನವನ್ನು ಕಟ್ಟಿ ನಿಲ್ಲಿಸಬೇಕು. ಬಹು ಹಿಂದಿನಿಂದಲೂ ನಮ್ಮ ಸಮಾಜವನ್ನು ಸಕಲ ವಿಧ ಸತ್ ಸಂಸ್ಕಾರಗಳಿಂದ ಸಾಮಾಜಿಕವಾಗಿ - ಸಾಂಸ್ಕೃತಿಕವಾಗಿ - ಆಧ್ಯಾತ್ಮಿಕವಾಗಿ ಪರಿಪುಷ್ಟಿಗೊಳಿಸುತ್ತಾ ಬಂದಿರುವ ಸಂಸ್ಕಾರ ಕೇಂದ್ರಗಳನ್ನು ಮತ್ತೊಮ್ಮೆ ಚೈತನ್ಯಮಯಗೊಳಿಸಬೇಕು. ಏಕೆಂದರೆ ಅವೇ ನಮ್ಮ ಸಮಾಜದ ನಿಜವಾದ ಶಕ್ತಿ ಕೇಂದ್ರಗಳು.

ಶ್ರೀ ಸಿದ್ಧಗಂಗೆಯ ಮಹತ್ವ ಇರುವುದೇ ಈ ನಿಟ್ಟಿನಲ್ಲಿ. ಯಾವುದೇ ಪ್ರತಿಫಲದ ನಿರೀಕ್ಷೆಯೂ ಇಲ್ಲದಂತೆ ಪ್ರಾಚೀನ ಗುರುಕುಲದ ಪರಂಪರೆಯ ಮಾದರಿಯಲ್ಲಿ ಸಮಾಜದ ನವಪೀಳಿಗೆಗೆ ಊಟ - ವಸತಿ - ಶಿಕ್ಷಣ ಸಂಸ್ಕಾರಗಳನ್ನು ನೀಡುತ್ತಿರುವ ಬಹು ಪ್ರಭಾವಿ ಶಕ್ತಿಪೀಠ ಇದು. ಇಲ್ಲಿನ ಧಾರ್ಮಿಕ ಪರಿಸರದಲ್ಲಿ ಪೂಜ್ಯ ಸ್ವಾಮೀಜಿಯವರ ಪಾವನ ಸಾನ್ನಿಧ್ಯದಲ್ಲಿ ಸುಮಾರು ಐದು ಸಹಸ್ರ ಬಾಲಕರು ಬೆಳೆಯುತ್ತಿರುವ ದೃಶ್ಯ ಎಂತಹವರ ಹೃದಯವನ್ನಾದರೂ ಪುಳಕಗೊಳಿಸುವಂತಹದು. ಸರಕಾರದ ಕೃಪೆಯ ಸೋಂಕೂ ಇಲ್ಲದೆ, ಸ್ವಾಮೀಜಿಯವರ ಪುಣ್ಯಪ್ರಭಾವದಿಂದಾಗಿ ಸಿದ್ಧಗಂಗೆಗೆ ಸಮಾಜದ ಶ್ರದ್ಧಾಮಯ ಸಹಾಯಧಾರೆಯಿಂದಲೇ ನಡೆಯುವ ಗುರುಕುಲ. ಯಾವುದೇ ಜಾತಿಮತ ಭೇದವಿಲ್ಲದೆ ಅಗತ್ಯವಿರುವಂತಹರೆಲ್ಲರಿಗೆ ಆತ್ಮೀಯತೆಯಿಂದ ಬರಮಾಡಿಕೊಳ್ಳುವ ಸೇವಾಧಾಮ.

ತಮ್ಮ ವಿಶಿಷ್ಟ ಮತಕ್ಕೆ - ಮತಸ್ಥರಿಗೆ ಮಾತ್ರ ಪ್ರವೇಶ - ಪ್ರೋತ್ಸಾಹ ನೀಡುವಂತಹ ಮಠಗಳಂತೂ ಇಂದು ಸರ್ವೇ ಸಾಮಾನ್ಯ. ಆದರೆ ಒಟ್ಟು ಭಾರತ - ಒಟ್ಟು ಸಮಾಜ ಇವುಗಳ ಬಗೆಗೆ ಶ್ರದ್ಧೆ ಭಕ್ತಿಗಳನ್ನು ಬೆಳೆಸುವ ತಾಣ, ಈ ಸಿದ್ಧಗಂಗೆ. ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವ ಇತರೇ ಸಂಘ ಸಂಸ್ಥೆಗಳಿಗೂ ಪೂಜ್ಯ ಸ್ವಾಮೀಜಿಯವರ ಕ್ರಿಯಾಶೀಲ ಆಶೀರ್ವಾದ ಸದಾ ಸಿದ್ಧ. ಎಂದೇ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲಿನ ಅವರ ನಿಸ್ಸೀಮ ವಾತ್ಸಲ್ಯವು ಸಂಘದ ಎಲ್ಲ ಹಿರಿಯ ಕಿರಿಯರಿಗೆ ಎಂದೂ ತಪ್ಪದ ದೊಡ್ಡ ಆಸರೆ. ಧರ್ಮ - ದೇಶಭಕ್ತಿ - ವಿಜ್ಞಾನಗಳ ಸುಂದರ ತ್ರಿವೇಣಿ ಸಂಗಮದಂತಿರುವ ಸ್ವಾಮೀಜಿಯವರ ಪ್ರವಚನ ಆಧುನಿಕ ಯುವಕರ ಬುದ್ಧಿ ಹೃದಯಗಳನ್ನು ತಟ್ಟಿ ಎಬ್ಬಿಸಬಲ್ಲಂತಹದು. ನಮ್ಮೆಲ್ಲ ಸಂಘ ಬಂಧುಗಳ ಅನುಭವ ಇದು.

ಯಾವುದೇ ಸಂಸ್ಥೆ - ವ್ಯವಸ್ಥೆಯ ಪ್ರಾಣ ಅದರ ಮುಖ್ಯಸ್ಥರ ಸ್ವಂತದ ನಿಸ್ವಾರ್ಥ - ತ್ಯಾಗಮಯ ಮೇಲ್ಪಂಕ್ತಿಯಲ್ಲಿದೆ. ಶ್ರೀ ಸಿದ್ಧಗಂಗೆಯ ಪ್ರಾಣಶಕ್ತಿಯ ರಹಸ್ಯವೂ ಇದೇ. ಸ್ವಾಮಿಜಿಯವರ ಸ್ವಂತದ ಕಠೋರ ತಪಸ್ವೀ ಜೀವನ, ನುಡಿದಂತೆ ನಡೆಯುವಂತಹ ಮಹಾತೇಜಸ್ವಿ ಚೇತನ, ಸಿದ್ಧಗಂಗೆಯಲ್ಲಿ ಒಮ್ಮೆ ಜರುಗಿದ ಸಂಘ ಶಿಬಿರದ ಶಿಕ್ಷಾರ್ಥಿಗಳಿಗೆ ಅವರ ಪ್ರವಚನ ಪ್ರಾರಂಭವಾಗುತ್ತಿದ್ದಂತೆ ಮಳೆರಾಯನೂ ಬಿರುಸಿನಿಂದ ಹಾಜರಾದ. "ಭಾಷಣ ನಿಲ್ಲಿಸಬೇಕೇ ?" ಎಂದು ಅವರು ಕೇಳಿದರು. "ಬೇಡ, ನಿಮ್ಮಿಂದ ಕೇಳುವ ಸುಯೋಗ ತಪ್ಪಬಾರದು. ದಯವಿಟ್ಟು ಮುಂದುವರೆಸಿ" ಎಂದೆವು. ಸುಮಾರು ೪೦ - ೪೫ ನಿಮಿಷಗಳ ಕಾಲ ಮಳೆಯೂ ಭಾಷಣವೂ ಜತೆಜತೆಗೇ ಭೋರ್ಗರೆದವು. ಸ್ವಯಂಸೇವಕರು ಗೇಣೆತ್ತರದ ನೀರಲ್ಲಿ ಕುಳಿತೇ ಭಾಷಣ ಆಲಿಸಿದರು. ಸ್ವಾಮೀಜಿಯವರೂ ಮಳೆಯಲ್ಲಿ ತೊಯ್ದರೆಂದು ಬೇರೆಯಾಗಿ ಹೇಳಬೇಕೇ.? ಅಂತಹುದೇ ಇನ್ನೊಂದು ಸಂಘ ಶಿಬಿರದಲ್ಲಿ 'ಮಾತೃಅರ್ಚನಾ' ಕಾರ್ಯಕ್ರಮ ವೀಕ್ಷಿಸಲು ಸ್ವಾಮಿಜಿಯವರೂ ಸ್ವಯಂಸೇವಕರೊಂದಿಗೆ ಬಂದು ಕುಳಿತರು. ದೇಶ ತುಂಡಾದ ದುರಂತವನ್ನು ಕಣ್ಣಿಗೆ ಕಟ್ಟಿಸುವಂತಹ ಹೃದಯ ಹಿಂಡುವ ಸಚಿತ್ರ ಕಾರ್ಯಕ್ರಮ ಅದು. ಅದನ್ನು ಕಂಡು ಹೊರಗೆ ಬರುತ್ತಿದ್ದಂತೆ ಸ್ವಾಮೀಜಿ ಭಾವುಕರಾಗಿ ಹೇಳಿದರು :

"ಈ ಮೊದಲಿಗೆ ದೇಶ ತುಂಡಾಯಿತು, ಪಾಕಿಸ್ತಾನ ಜನ್ಮತಾಳಿತು, ಎನ್ನುವ ಕತೆ ಎಲ್ಲ ಕೇಳಿದ್ದೆ, ಓದಿದ್ದೆ. ಆದರೆ ನಮ್ಮ ಮಾತೃಭೂಮಿಯ ಎಂತೆಂತಹ ಆಯಕಟ್ಟಿನ - ಪವಿತ್ರವಾದ ದೊಡ್ಡ ದೊಡ್ಡ ಭಾಗಗಳೇ ಕೈಬಿಟ್ಟುಹೋದವು. ಸುಂದರವಾಗಿ ಅಖಂಡವಾಗಿದ್ದ ಭಾರತ ಮಾತೆ ಇಂದು ಅದೆಷ್ಟು ವಿರೂಪಳಾಗಿ ಕಾಣುತ್ತಾಳೆ ಎಂಬುದನ್ನು ಕಂಡೆ. ಈ ದೃಶ್ಯಗಳನ್ನು ನೋಡುತ್ತಿದ್ದಂತೆ ಒಂದೆರಡು ನಿಮಿಷ ನನ್ನ ಮೈ ಎಚ್ಚರವೇ ತಪ್ಪಿತು". ಎಂಥ ಉತ್ಕಟ ದೇಶಭಕ್ತಿ ! ಅಂತಹರ ಸಾನ್ನಿಧ್ಯ ಎಲ್ಲ ಬಾಲಕ ಯುವಕರಿಗೆ ಜೀವಂತ ರಾಷ್ಟ್ರಭಕ್ತಿಯ ಪಾಠ ! ಎಂದೇ, ಭಾರತದ ಚಿರಂಜೀವತ್ವವನ್ನು ಉಳಿಸುವಂತಹ ರಾಷ್ಟ್ರಧರ್ಮದ ಒಂದು ಪ್ರಭಾವಿಯಾದ ಜಾಗರಣ ಕೇಂದ್ರ ಸಿದ್ಧಗಂಗೆಯಾಗಿರುವುದರಲ್ಲಿ ಅಚ್ಚರಿ ಏನು ?

ಆಪದ್ಬಾಂಧವ

ಕೃ. ಸೂರ್ಯನಾರಾಯಣರಾವ್

'ಆಪದ್ಬಾಂಧವ' ಈ ಶಬ್ದವನ್ನು ಪೂಜ್ಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ಕುರಿತು ಸಹಸ್ರಾರು ವಿದ್ಯಾರ್ಥಿಗಳು, ನಾನಾ ರೀತಿಯ ಗೃಹಸ್ಥರು, ನಾನಾ ಸನ್ನಿವೇಶಗಳಲ್ಲಿ ಅವರಿಂದ ಸಹಾಯ ಪಡೆದು ಸುಖಿಗಳಾದವರು ನೂರಾರು ಬಾರಿ ಹೇಳಿರಬಹುದು. ಮುಂದೆಯೂ ಹೇಳಬಹುದು. ಅದು ತುಂಬಾ ಸಹಜವೂ ಹೌದು.

ಆದರೆ ಹಿಂದು ಸಂಘಟನೆಯೊಂದರ ಕಾರ್ಯಕರ್ತನಾಗಿ ಈ ಮಾತನ್ನು ನಾನು ಬರೆಯುವಾಗ ನಾನು ವ್ಯಕ್ತಿಗತವಾಗಿ ಏನನ್ನೂ ಬರೆಯುತ್ತಿಲ್ಲ. ಹಿಂದು ಸಮಾಜದ ಕುರಿತಾಗಿ ಸ್ವಾಮೀಜಿಯವರ ದೃಷ್ಟಿ ಏನೆಂಬುದನ್ನು ವಿವರಿಸಲು ಈ ನಾಲ್ಕಾರು ವಿಷಯಗಳನ್ನು ಬರೆಯುವೆ. ಹಿಂದು ಸಮಾಜವು ತನ್ನೊಳಗಿನ ಭಿನ್ನತೆಯನ್ನು ಬದಿಗಿಟ್ಟು, ಆತ್ಮವಿಸ್ಮೃತಿಯನ್ನೂ ತೆಗೆದುಹಾಕಿ, ಒಟ್ಟಾಗಿ ಒಂದಾಗಿ ಬಾಳಬೇಕು. ಮತ್ತೊಮ್ಮೆ ವಿಶ್ವಗುರುವಾಗಿ ಲೋಕಕ್ಕೆ ಶಾಂತಿಯಿಂದ ಬಾಳುವ ದಾರಿಯನ್ನು ತೋರಬೇಕು ಎಂಬುದು ಪೂಜ್ಯ ಸ್ವಾಮೀಜಿಯವರ ಅಂತರಾಳದ ಬಯಕೆ. ಅಂತಹ ಉದಾತ್ತ ಬಯಕೆಯನ್ನು ಪೂರ್ಣ ಮಾಡಲು ಯತ್ನಿಸುವ ಯತ್ನಿಸುತ್ತಿರುವ ವ್ಯಕ್ತಿಗಳಿರಲಿ, ಸಂಸ್ಥೆಗಳಿರಲಿ ಅವರಿಗೆ ಸ್ವಾಮೀಜಿ ಸದಾ ಬೆಂಬಲ ನೀಡಿದವರು. ರಾಷ್ಟ್ರೀಯ ಸ್ವಯಂಸೇವಕ ಸಂಘವು ಅಂತಹ ಪ್ರಯತ್ನಗಳಲ್ಲಿ ಅಸಾಮಾನ್ಯವಾದುದು, ಅದ್ವಿತೀಯವಾದುದು, ಎಂದು ಅವರ ನಂಬಿಕೆ. ಹಾಗಾಗಿ ಸಂಘಕಾರ್ಯಕ್ಕೆ ಯಾವುದೇ ಅಡ್ಡಿ ಬರಬಾರದು. ಬಂದರೆ ಅದನ್ನು ನಿವಾರಿಸಲು ತಾವು ಸಿದ್ಧರಾಗಿ ಮುಂದಾಗಬೇಕು ಎಂಬುದು ಅವರ ನೀತಿ. ಅವರ ಈ ನೀತಿಯನ್ನು ಪ್ರತ್ಯಕ್ಷ ಅನುಭವಿಸಿದವರಾಗಿ ನಾನು "ಆಪದ್ಬಾಂಧವ" ಎಂಬ ಶಬ್ದವನ್ನು ಉಪಯೋಗಿಸುತ್ತಿರುವೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ ಇಂದು - ಅಂದು

ರಾಷ್ಟ್ರೀಯ ಸ್ವಯಂಸೇವಕ ಸಂಘವಿಂದು ವಿಶ್ವವ್ಯಾಪಕವಾಗಿ, ಸರ್ವಮಾನ್ಯವಾಗಿರುವ ಹಿಂದು ಸಂಘಟನೆ. ಈ ಶತಮಾನದ ಕೊನೆಯ ಈ ಭಾಗದಲ್ಲಂತೂ ಪ್ರಪಂಚಕ್ಕೆ ಸುಖ ಕೊಡುವೆವೆಂದು ಭಾರಿ ಅಬ್ಬರದ ಪ್ರಚಾರ ನಡೆಸಿದ್ದ ಕಮ್ಯುನಿಸಂ, ಕ್ಯಾಪಿಟಲಿಸಂಗಳು ಸೋತು ದುರ್ಬಲವಾಗುತ್ತಿರುವಾಗ, ಹಿಂದುತ್ವಕ್ಕೆ ಹಿಂದು ಜೀವನ ಶೈಲಿಗೆ ಎಲ್ಲರ ಆದರ ಸಿಗುತ್ತಿದೆ. ಹಿಂದುತ್ವಕ್ಕೆ ಈ ಗೌರವ ಸಿಗುವಲ್ಲಿ ಸಂಘದ ಪಾತ್ರ ಬಹು ಮಹತ್ವದ್ದು. ಹಿಂದುತ್ವ ಎಂದರೆ ಒಂದು ಜಾತಿಯಲ್ಲ; ಒಂದು ಪ್ರದೇಶವೂ ಅಲ್ಲ; ಅದು ಮಾನವತೆಗೆ ಪರ್ಯಾಯವಾದ ಮತ್ತೊಂದು ಹೆಸರು. ಪ್ರಪಂಚದ ಒಳಿತಿಗಾಗಿ ನಮ್ಮ ಪ್ರಾಚೀನ ಋಷಿಮುನಿಗಳು ನಿಸ್ವಾರ್ಥವಾಗಿ, ನಿರ್ವ್ಯಾಜಪ್ರೇಮದಿಂದ, ತಮ್ಮ ತಪಸ್ಸಿನ ಮೂಲಕ ರೂಪಿಸಿದ ಜೀವನತತ್ವಗಳು, ಜೀವನಸೂತ್ರಗಳೇ ಹಿಂದುತ್ವ. ಅವನ್ನು ಮಾನವಧರ್ಮ ಎನ್ನಬಹುದು; ಹಿಂದು ಧರ್ಮ ಎನ್ನಬಹುದು. ಹಿಂದುತ್ವದ ಕುರಿತಾದ ಈ ವ್ಯಾಪಕ ದೃಷ್ಟಿಯನ್ನು ಹೀಗೇ ಉಳಿಸಿ ಎಲ್ಲರಿಗೆ ತಿಳಿಸಲು ಸಂಘವು ಮಾಡುತ್ತಿರುವ ಯತ್ನ ಅಪಾರ. ಅದರ ಶಾಖೆಗಳು, ಕಾರ್ಯಕರ್ತರು ಇಂದು ಪ್ರಪಂಚದ ನೂರಾರು ದೇಶಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ತಮ್ಮ ನಿಷ್ಕಳಂಕ ಸ್ನೇಹ, ನಿರಂತರ ಕಾರ್ಯಶೀಲತೆ, ನಿಸ್ವಾರ್ಥ ನಿಷ್ಕಪಟ ಜೀವನ ಶೈಲಿಗಳಿಂದ ಎಲ್ಲ ದೇಶದ ಎಲ್ಲ ಜನರ ಮನವನ್ನು ಗೆದ್ದಿದ್ದಾರೆ. ಭಾರತದ ಎಲ್ಲ ತಪಸ್ವಿ, ಜ್ಞಾನಿ, ಸಂತ, ಮಹಾತ್ಮರು ಇದನ್ನು ಸಮರ್ಥಿಸಿ ಆಶೀರ್ವದಿಸುತ್ತಿದ್ದಾರೆ.

ಆದರೆ ೫೦ರ ೬೦ರ ದಶಕ ಹಾಗಿರಲಿಲ್ಲ. ಆಗ ಸಂಘದ ಕುರಿತಾಗಿ ಎಲ್ಲರ ಮನದಲ್ಲಿ ನಾನಾ ಭ್ರಮೆಗಳು. ಹಿಂದು ಸಂಘಟನೆ ಎಂದ ಕೂಡಲೇ ಜಾತೀಯ, ಗಾಂಧೀಜಿ ಅವರ ಕೊಲೆಗಾರರು ಎಂದು ಪ್ರತಿಕ್ರಿಯಿಸುವಷ್ಟು ವಿರೋಧಿಗಳ ಪ್ರಚಾರ ನಡೆಯುತ್ತಿತ್ತು. ರಾಷ್ಟ್ರನೇತಾರ ಎನ್ನಿಸಿಕೊಳ್ಳುವ ಪ್ರತಿಯೊಬ್ಬ ರಾಜಕೀಯ ನಾಯಕನೂ ಸಂಘವನ್ನು ದೂರುತ್ತಾ, ತಿರಸ್ಕರಿಸುತ್ತಾ, ನಾಶಮಾಡಲು ಯತ್ನಿಸುತ್ತಿದ್ದ ಕಾಲ ಅದು. ಅಂತಹ ದಿನಗಳಲ್ಲಿ 'ಹಿಂದು' 'ಹಿಂದು ಸಂಘಟನೆ' ಎಂಬ ಶಬ್ದಗಳನ್ನು ಉಚ್ಚರಿಸಲೂ ಜನ ಹೆದರುತ್ತಿದ್ದರು. ಅಂತಹ ದಿನಗಳಲ್ಲಿ ಹಿಂದು ಸಂಘಟನೆಗೆ ಮಾನ್ಯತೆ ತಂದುಕೊಡಲು, ಸಂಘಕ್ಕೆ ಬೆಂಬಲ ನೀಡಲು ಮುಂದಾದ ತಪೋಬಲ ಪೂಜ್ಯ ಸ್ವಾಮೀಜಿಯವರದು.

ಸಂಘಶಿಕ್ಷಾ ವರ್ಗಗಳು

೧೯೬೦ರ ಸಂಘಶಿಕ್ಷಾವರ್ಗ : ಪೂಜ್ಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳನ್ನು ಭೇಟಿಯಾಗಿ ವರ್ಗಕ್ಕಾಗಿ ಸಿದ್ದಗಂಗಾ

ಕ್ಷೇತ್ರದಲ್ಲಿ ಅನುಕೂಲ ಮಾಡಿಕೊಡಬೇಕೆಂದು ಅವರಲ್ಲಿ ವಿನಂತಿಸಿದೆ. ಸ್ವಾಮೀಜಿ ಸಹಜ ಮುಗುಳ್ನಗೆಯಿಂದ ಒಪ್ಪಿಗೆ ಇತ್ತರು. ಆಗಿನ ದಿನಗಳಲ್ಲಿ ಕರ್ನಾಟಕ ವಿದ್ಯಾಇಲಾಖೆಯ ಸುತ್ತೋಲೆಯೊಂದು ಎಲ್ಲೆಡೆ ಚರ್ಚೆಯ ವಿಷಯವಾಗಿತ್ತು. ಶಿಕ್ಷಣಕ್ಕೆ ಸಂಬಂಧಿಸದ ಯಾವುದೇ ಚಟುವಟಿಕೆ ವಿದ್ಯಾಸಂಸ್ಥೆಗಳಲ್ಲಿ ನಡೆಯಬಾರದು ಎಂದು. ಹಾಗಾಗಿ ಪ್ರಾರಂಭದಲ್ಲಿ ನಮ್ಮ ವಿನಂತಿ ಕೇಳಿದಾಗ ಸ್ವಾಮೀಜಿ ಅವರಿಗೆ ದೊಡ್ಡ ಚಿಂತೆ. ಇಂದಿನ ಸರ್ಕಾರದ ನೀತಿ - ಯಾವುದೋ ಅಧಿಕಾರಿಯ ದುಡುಕು ಎಲ್ಲ ಸೇರಿ ತಾವು ಮೂರುಸಾವಿರ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಉಚಿತ ಊಟ ವಸತಿ ವಿದ್ಯಾಭ್ಯಾಸಗಳಿಗೆ ಯಾವ ತೊಂದರೆಯೂ ಆಗಬಾರದು. ಹೇಗೆ ಮಾಡುವುದು ? ಸ್ವಾಮೀಜಿ ಚಿಂತಿಸುತ್ತಿದ್ದಾಗ ನಾನೊಂದು ಮಾತು ಹೇಳಿದೆ, "ಸ್ವಾಮೀಜಿ, ತಮಗೇ ತಿಳಿದಿರುವಂತೆ ಸಂಘದ ಕೆಲಸ ಧರ್ಮರಕ್ಷಣೆಯ ಕೆಲಸ. ಆದರೆ ಇಂದಿನ ಸರ್ಕಾರ ಹಾಗೂ ಹಲವು ಆಧುನಿಕವೆಂದು. ಕರೆದುಕೊಳ್ಳುವ ಶಕ್ತಿಗಳು ಧರ್ಮನಾಶನಕ್ಕೆ ಸಂಚು ಹೂಡಿ ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತಿವೆ. ಧರ್ಮರಕ್ಷಣೆಯ ಕಾರ್ಯ ನಡೆಯಬಾರದೆಂದು ಅವರಿಚ್ಛೆ. ತಾವಾದರೋ ಸಂತರು, ಧರ್ಮಗುರುಗಳು, ತ್ಯಾಗ ಸಾಹಸಗಳದ್ದೇ ಪ್ರತೀಕವಾದ ಕಾವಿಯನ್ನೂ ಧರಿಸಿದ್ದೀರಿ. ನಾವು ಧರ್ಮರಕ್ಷಣೆಯ ಕಾರ್ಯಮಾಡುತ್ತಾ ನಮ್ಮ ಕಾರ್ಯಕ್ಕೆ ತಮ್ಮ ಸಹಕಾರ, ಸಹಯೋಗವನ್ನು ಕೋರುತ್ತಿದ್ದೇವೆ. ಧರ್ಮರಕ್ಷಕರಾದ, ಕಾವಿ ಧರಿಸಿರುವ ಸ್ವಾಮಿಗಳೇನಾದರೂ ಈ ಸಂದರ್ಭದಲ್ಲಿ ಹಿಂದೆ ಹೋದರೆ ಧರ್ಮವನ್ನು ಯಾರು ಉಳಿಸಬೇಕು ? ತಾವಂತೂ ಸಮರ್ಥರು. ತಾವೇ ಏನಾದರೂ ದಾರಿ ಕಂಡುಹಿಡಿಯಬೇಕು". ಸ್ವಾಮೀಜಿ ಮುಗುಳ್ನಕ್ಕರು. ''ಆಗಲಿ ಯೋಚನೆ ಮಾಡಿ ಹೇಳುತ್ತೇನೆ" ಎಂದು ಹೇಳಿ ಒಂದೆರಡು ದಿನದಲ್ಲೇ ಸಂಘ ಶಿಕ್ಷಾವರ್ಗವನ್ನೂ ನಡೆಸಲು ಅನುಮತಿ ನೀಡಿ "ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ" ಎಂದರು. ಸಂಘಶಿಕ್ಷಾವರ್ಗಕ್ಕೆ ಎಲ್ಲ ಅನುಕೂಲಗಳನ್ನೂ ಮಾಡಿಕೊಟ್ಟರು.

ಎರಡು ವರ್ಷದ ನಂತರದ ಪ್ರಸಂಗ. ಸಂಘಶಿಕ್ಷಾವರ್ಗ ಬೇರೊಂದು ಶಾಲೆಯಲ್ಲಿ ನಡೆಯಬೇಕೆಂದು ನಿರ್ಧಾರ ಆಗಿತ್ತು. ಆದರೆ ಆ ವರ್ಷ ಶಾಲೆಗಳ ಪರೀಕ್ಷೆಗಳು ಮುಂದೂಡಲ್ಪಟ್ಟವು. ಆ ಶಾಲೆಯ ಅಧಿಕಾರಿಗಳು ಅದೇ ದಿನಗಳಲ್ಲಿ ಪರೀಕ್ಷೆ ಇರುವುದರಿಂದ ತಮ್ಮ ಶಾಲೆಯಲ್ಲಿ ಈ ಬಾರಿ ವರ್ಗ ನಡೆಸುವುದು ಸಾಧ್ಯವಾಗದೆಂದು ಬಹಳ ಸಂಕೋಚದಿಂದ ಹೇಳಿದರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಪ್ರಾಂತೀಯ ಕಾರ್ಯಕಾರಿ ಮಂಡಲಿಯ ಬೈಠಕ್‌ಗೆ ಈ ಸುದ್ದಿ ಬಂತು. ಮುಂದೇನು ? ಇಡೀ ರಾಜ್ಯದಲ್ಲಿ ಎಲ್ಲ ಶಾಲೆಗಳಲ್ಲೂ ಇದೇ ಪ್ರಶ್ನೆ. ೫೦೦ - ೬೦೦ ಜನ ಒಂದು ತಿಂಗಳು ವರ್ಗ ನಡೆಸಲು ವಸತಿ, ನೀರು, ಮೈದಾನ ಇತ್ಯಾದಿ ಅನುಕೂಲ ಮತ್ತೆಲ್ಲಿದೆ ? ಆ ಬೈಠಕ್‌ನಲ್ಲಿ ಸ್ಥಾನದ ಬಗ್ಗೆ ನಿರ್ಣಯವಾಗಿ ಪ್ರಾಂತದೆಲ್ಲೆಡೆಗೆ ಸೂಚನೆ ಕಳುಹಿಸುವುದು ಅನಿವಾರ್ಯವೂ ಆಗಿತ್ತು. ಆ ಸ್ಥಿತಿಯಲ್ಲಿ ಎಲ್ಲರಿಗೂ ಸಿದ್ಧಗಂಗೆಯ ನೆನಪು ಸಹಜವಾಗಿ ಆಯ್ತು. ಅಲ್ಲಿ ಮಾತ್ರ ಪರೀಕ್ಷೆಗೆ ತೊಂದರೆ ಆಗದಂತೆ ಶಿಬಿರ ನಡೆಸುವುದು ಸಾಧ್ಯ. ಆದರೆ ಸಿದ್ಧಗಂಗೆಗೆ ಹೋಗಿ ಸ್ವಾಮೀಜಿಯವರನ್ನೂ ಕಂಡು ಚರ್ಚಿಸುವಷ್ಟು ಸಮಯಾವಕಾಶವಿಲ್ಲ. ಆದ್ದರಿಂದ ದೂರವಾಣಿಯ ಮೂಲಕವೇ ಸ್ವಾಮೀಜಿಯವರನ್ನು ಸಂಪರ್ಕಿಸುವ ಯತ್ನ ನಡೆಯಿತು. ಸ್ವಾಮೀಜಿ ಅವರಿಗೆ ಆಗ ಜಾತ್ರೆಯ ಗಲಾಟೆ. ಸಹಸ್ರಾರು ಭಕ್ತರಿಂದ ಸುತ್ತುವರಿದಿದ್ದ ಸ್ವಾಮಿಜಿ ಅವರು ಅವರಿಂದ ಬಿಡಿಸಿಕೊಂಡು ದೂರವಾಣಿ ಬಳಿ ಬಂದರು. ನಾನು ನಮ್ಮ ಪರಿಸ್ಥಿತಿಯನ್ನು ಅವರಿಗೆ ಅರಿಕೆ ಮಾಡಿಕೊಂಡು, ತಾವು ದಾರಿತೋರಬೇಕು ಎಂದು ವಿನಂತಿಸಿದಾಗ "ನೀವು ಯಾವ ಚಿಂತೆಯನ್ನೂ ಮಾಡಬೇಡಿ. ಇಲ್ಲೇ ಬನ್ನಿ. ಶಿಬಿರ ಮಾಡಿ. ಪರೀಕ್ಷೆ ಮತ್ತು ಶಿಬಿರ ಎರಡಕ್ಕೂ ಯಾರಿಗೂ ಬಾಧೆಯಾಗದಂತೆ ವ್ಯವಸ್ಥೆ ಮಾಡೋಣ" ಎಂದು ಹೇಳಿ ನಮಗಿದ್ದ ದೊಡ್ಡ ಆತಂಕವನ್ನು ದೂರ ಮಾಡಿದ್ದರು. ಹಿಂದು ಸಮಾಜದ ರಕ್ಷಣೆಗಾಗಿ ಅವರ ಮನದಲ್ಲಿದ್ದ ಪ್ರಥಮ ಆಸಕ್ತಿಯನ್ನು ಎಲ್ಲರೂ ಭಕ್ತಿಗೌರವಗಳಿಂದ ಕೊಂಡಾಡಿದೆವು.

ಉಡುಪಿ ವಿಶ್ವಹಿಂದು ಪರಿಷತ್ ಸಮ್ಮೇಳನ

೧೯೬೯ರ ಡಿಸೆಂಬರ್‌ನಲ್ಲಿ ಉಡುಪಿಯಲ್ಲಿ ವಿಶ್ವಹಿಂದು ಪರಿಷತ್ತಿನ ಪ್ರಥಮ ಪ್ರಾಂತೀಯ ಅಧಿವೇಶನ ನಡೆಯಿತು. ಅದರ ಕುರಿತು ಸಮಾಲೋಚನೆಗಾಗಿ ಪೂಜ್ಯ ಸ್ವಾಮೀಜಿಯವರ ಸನ್ನಿಧಿಗೆ ಹೋಗಿದ್ದೆ. ನನ್ನಿಂದ ಪರಿಷತ್ತಿನ ಬಗ್ಗೆ ಹಾಗೂ ಸಮ್ಮೇಳನದ ಬಗ್ಗೆ ವಿವರಗಳನ್ನು ಕೇಳಿಕೊಂಡ ನಂತರ ಸ್ವಾಮೀಜಿಯವರು ಈ ಕಾರ್ಯ ಅತ್ಯಂತ ಮಹತ್ವದ್ದು ಆಗಲೇಬೇಕಾದ್ದು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿ ಪ್ರೋತ್ಸಾಹಿಸಿದ್ದಷ್ಟೇ ಅಲ್ಲ ಸಮ್ಮೇಳನ ಯಶಸ್ವಿಯಾಗಲು ಅತ್ಯಂತ ಪರಿಣಾಮಕಾರಿಯಾದ ಅನೇಕ ಸಲಹೆಗಳನ್ನು ನೀಡಿದರು. ನಂತರ ಉಡುಪಿಯ ಸಮ್ಮೇಳನಕ್ಕೆ ಆಗಮಿಸಿ ಸಂಪೂರ್ಣವಾಗಿ ಅಲ್ಲಿದ್ದು ಅಲ್ಲಿನ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿದರು. ಅಲ್ಲಿ ಅವರು ನೀಡಿದ ಆಶೀರ್ವಾದಪರ ಭಾಷಣ, ಭಾಗವಹಿಸಿದ್ದ ಸಹಸ್ರಾವಧಿ

ಪ್ರತಿನಿಧಿಗಳಿಗೆ ಪ್ರೇರಣೆ ನೀಡಿತು; ಹಿಂದು ಸಂಘಟನೆಯ ಕಾರ್ಯಕರ್ತರಿಗೆ ಅತ್ಯಂತ ಮಹತ್ವದ ಆಧಾರವಾಯ್ತು. "ನಮ್ಮಲ್ಲಿನ ಭಿನ್ನ ಭಿನ್ನ ಸಂಪ್ರದಾಯಗಳು ಹಿಂದುತ್ವದ ಏಕತೆಗೆ ಅಡ್ಡಿಯಾಗಲಾರವು. ಈ ಸಂಪ್ರದಾಯಗಳನ್ನೆಲ್ಲ ಅಳಿಸಿಹಾಕಲು ಸಾಧ್ಯವಿಲ್ಲ. ಅದು ಹಿತವೂ ಅಲ್ಲ. ಸಂಪ್ರದಾಯಗಳನ್ನು ಉಳಿಸಿಕೊಂಡೇ ಏಕತೆಯನ್ನು ಸಾಧಿಸಬೇಕು, ಸಾಧಿಸಲು ಬರುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಗುರುತಿಸುವುದೇ ನಮ್ಮ ಧರ್ಮದ ವೈಶಿಷ್ಟ್ಯ. ಇದನ್ನು ನಾವಿಂದು ಪ್ರತ್ಯಕ್ಷ ಸಾಧಿಸಿ ತೋರಿಸಬೇಕಾಗಿದೆ.

ಧರ್ಮವು ನಮ್ಮ ಜನರನ್ನು ತೇಜೋಹೀನರಾಗಿ, ನಿಷ್ಕ್ರಿಯರನ್ನಾಗಿ ಮಾಡಿದೆ ಎಂದು ಕೆಲವರು ಆಕ್ಷೇಪಿಸುವುದುಂಟು. ಇದು ಸರ್ವಥಾ ಸರಿಯಲ್ಲ. ನಿಜವಾಗಿ ನೋಡಿದರೆ, ಧರ್ಮವನ್ನು ಕಡೆಗಣಿಸಿರುವುದೇ ನಮ್ಮ ಅವನತಿಗೆ ಕಾರಣ. ಹಿಂದು ಧರ್ಮವನ್ನು ನಾವು ಸರಿಯಾಗಿ ತಿಳಿದು ಆಚರಿಸಿದಾಗಲೇ ನಮ್ಮ ಜೀವನವು ವೀರ್ಯವತ್ತಾಗುತ್ತದೆ, ರಸವತ್ತಾಗುತ್ತದೆ. ತೇಜೋವಂತವಾಗುತ್ತದೆ."

ಈ ರೀತಿ ಸಂಘದ ಕಾರ್ಯಕ್ಕೆ, ವಿಶ್ವಹಿಂದು ಪರಿಷತ್ತಿನ ಕಾರ್ಯಕ್ಕೆ ಅದೇ ರೀತಿ ಹಿಂದು ಸಮಾಜದ ಸಂಘಟನೆ, ಸಂರಕ್ಷಣೆ ಹಾಗೂ ಸಂವರ್ಧನೆಯ ಎಲ್ಲ ಕಾರ್ಯಗಳಿಗೆ ಸ್ವಾಮೀಜಿಯವರ ಸಮರ್ಥ ಬೆಂಬಲ ಸಹಕಾರ, ನೇತೃತ್ವಗಳು ಅಖಂಡವಾಗಿ, ನಿರಂತರವಾಗಿ ಹರಿದು ಬಂದಿದೆ. ಮಠದಿಂದ ನಡೆಸಲಾಗುತ್ತಿರುವ ತುಮಕೂರಿನ ಇಂಜಿನಿಯರಿಂಗ್ ಕಾಲೇಜ್, ಪಾಲಿಟೆಕ್ನಿಕ್ ಕಟ್ಟಡಗಳನ್ನು ಸಂಘದ ಶಿಬಿರಗಳಿಗಾಗಿ ಅನೇಕ ಬಾರಿ ತೆರವು ಮಾಡಿಕೊಟ್ಟಿದ್ದಾರೆ. ಯಾವುದೇ ರೀತಿಯ ಹಿಂದು ಕಾರ್ಯಗಳಿಗೆ ಸ್ವಾಮೀಜಿಯವರ ಬಳಿ ಹೋದಾಗಲೂ ಸ್ವಾಮೀಜಿಯವರು ಅತ್ಯಂತ ಕಳಕಳಿಯಿಂದ, ಆಸಕ್ತಿಯಿಂದ ನೆರವು ನೀಡಿ, ಭಾಗವಹಿಸಿ ಆಶೀರ್ವದಿಸಿದ್ದಾರೆ.

ಜ್ಞಾನಯೋಗಿ - ಕರ್ಮಯೋಗಿ

ಅವರೊಡನೆ ನಡೆಸುವ ಪ್ರತಿ ಸಂಭಾಷಣೆಯೂ ತುಂಬ ಬೋಧಪ್ರದ. ದೇಶದ ಇಂದಿನ ಪರಿಸ್ಥಿತಿ ಹಾಗೂ ಸಮಾಜವು ಎದುರಿಸುತ್ತಿರುವ ನಾನಾ ಸಮಸ್ಯೆಗಳನ್ನು ಪ್ರಸ್ತಾಪಿಸುವಾಗ ಅವರ ಹೃದಯ ಕರಗಿ ಮಾತು ತುಂಬ ಭಾವಪೂರಿತವಾಗುತ್ತದೆ. ಇಂದಿನ ದುರವಸ್ಥೆ ಸರಿಹೋಗಲೇ ಬೇಕು. ದೇಶದ ಜನರಲ್ಲಿ ವಿಶೇಷವಾಗಿ ತರುಣರಲ್ಲಿ ದೇಶಭಕ್ತಿ ಹಾಗೂ ಚಾರಿತ್ರ್ಯಗಳನ್ನು ನಿರ್ಮಿಸಬೇಕು. ಅಂತಹವರ ಸಂಘಟನೆಯಾಗಿ, ಅವರದ್ದೇ ನೇತೃತ್ವ ದೇಶಕ್ಕೆ ಸಿಗುವಂತಾಗಬೇಕು ಎಂದು ಸ್ವಾಮಿಜಿ ಒತ್ತಿ ಒತ್ತಿ ಹೇಳುತ್ತಾರೆ. ಅದನ್ನು ಕೇಳುತ್ತಿರುವಾಗ, ಕೇಳುವವರೂ ಭಾವಪರವಶರಾಗುವಷ್ಟು ಅವರ ಮಾತು ಅಂತಃಕರಣವನ್ನು ಕಲಕುತ್ತದೆ; ಮಾತು ಮೌನವಾಗುತ್ತದೆ. ಅವರೊಬ್ಬ ಶ್ರೇಷ್ಠ ಜ್ಞಾನಿ.

ಅದೇ ರೀತಿ ಅವರೊಬ್ಬ ವಾಸ್ತವವನ್ನರಿತ ಕರ್ಮಯೋಗಿಯೂ ಹೌದು. ಭಾರತವು ಅಗಾಧ ಪ್ರಕೃತಿ ಸಂಪತ್ತು, ಅಸಾಮಾನ್ಯ ಬುದ್ಧಿ, ಜನಬಲಗಳನ್ನು ಪಡೆದೂ ಹಿಂದುಳಿದಿರುವ ದೇಶ. ಇಲ್ಲಿನ ದೀನದಲಿತರ ಸ್ಥಿತಿ ಸುಧಾರಿಸಬೇಕು. ಎಲ್ಲರೂ ಆತ್ಮಗೌರವದಿಂದ ಬಾಳುವ ಮನೋಬಲವನ್ನು ಗಳಿಸಬೇಕು. ವಿದ್ಯೆ, ವಿವೇಕ ಹಾಗೂ ಸಾಮಾಜಿಕ ಸ್ವಾಭಿಮಾನಗಳು ಸರ್ವಸಾಮಾನ್ಯನಲ್ಲೂ ಬೆಳೆದಾಗಲೇ ದೇಶದ ಪ್ರಗತಿ ಸಾಧ್ಯ ಎಂಬುದು ಅವರ ಚಿಂತನೆ. ಅದಕ್ಕಾಗಿ ವಿದ್ಯಾರ್ಥಿಗಳಲ್ಲಿ ಯಾವುದೇ ಜಾತಿ, ಅಂತಸ್ತುಗಳನ್ನು ಪರಿಗಣಿಸದೆ ಸರ್ವರಿಗೂ ವಿದ್ಯಾದಾನಮಾಡುವ ಅವರ ಸತ್ಸಂಕಲ್ಪದ ಮೂರ್ತಸ್ವರೂಪವೇ ಇಂದು ಬೃಹದಾಕಾರವಾಗಿ ಬೆಳೆದು ನಿಂತಿರುವ ಸಿದ್ಧಗಂಗಾ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿದ್ಯಾಸಂಸ್ಥೆಗಳು. ಈ ವಿದ್ಯಾಸಂಸ್ಥೆಗಳಲ್ಲಿ ಬಾಲವಾಡಿಗಳಿಂದ ಪ್ರಾರಂಭಿಸಿ ಪದವಿಯವರೆಗೆ ನಿರಂತರ ಕಲಿಯಬಹುದಾದ ವಿದ್ಯಾಸಂಸ್ಥೆಗಳಿವೆ. ಸಂಸ್ಕೃತ ಪಾಠಶಾಲೆ, ವೇದ ಪಾಠಶಾಲೆಗಳಿವೆ. ಆಧುನಿಕ ವೈಜ್ಞಾನಿಕ ವಿಷಯಗಳೆಲ್ಲವನ್ನೂ ಕಲಿಸುವ ಇಂಜಿನಿಯರಿಂಗ್, ಪಾಲಿಟೆಕ್ನಿಕ್‌ಗಳಿವೆ. ಎಲ್ಲ ಸಂಸ್ಥೆಗಳೂ ಸಮಾಜದ ಒಂದೊಂದು ಅವಶ್ಯಕತೆಯನ್ನು ಪೂರೈಸುತ್ತಾ ಸಮಾಜಕ್ಕೆ ಶಕ್ತಿ ತುಂಬುತ್ತಿವೆ.

ಅಪೂರ್ವ ಗುರುಕುಲ

ಶ್ರೀ ಸಿದ್ಧಗಂಗಾ ಕ್ಷೇತ್ರವಂತೂ ಒಂದು ವಿಶಾಲ ಗುರುಕುಲ. ವಿದ್ಯಾದಾನ, ಅಭಯದಾನ, ಜ್ಞಾನದಾನಗಳು ಇಲ್ಲಿ ಸತತವಾಗಿ ನಡೆದಿದೆ. ಇಲ್ಲಿನ ಅನ್ನದಾನವೂ ಪ್ರಸಿದ್ಧ. ವಿದ್ಯಾರ್ಥಿಗಳು ಮಾತ್ರವಲ್ಲ, ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆಲ್ಲ ದಾಸೋಹದ ವ್ಯವಸ್ಥೆ ಮಾಡಿದ್ದಾರೆ. ವಸತಿ ವ್ಯವಸ್ಥೆಯೂ ಇದೆ. ಹೀಗೆ ಆರ್ತರಿಗೆ, ಭಕ್ತರಿಗೆ, ಜ್ಞಾನಿಗಳಿಗೆ, ವಿದ್ಯಾರ್ಥಿಗಳಿಗೆ, ಜಿಜ್ಞಾಸುಗಳಿಗೆ ಆಶ್ರಯ ನೀಡಿ, ದಾರಿತೋರುವ ಈ ಕ್ಷೇತ್ರ ಅತ್ಯಂತ ಪ್ರಭಾವೀ ಗುರುಕುಲವಾಗಿದೆ. ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು, ವ್ಯವಸ್ಥಾಪಕರು ಹಾಗೂ ಕರ್ಮಚಾರಿಗಳೂ ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಾ ಸ್ವಾಮೀಜಿಯವರ ಮನವನ್ನರಿತು ವ್ಯವಹರಿಸುತ್ತಿದ್ದಾರೆ.

ನಮ್ಮ ದೇಶ ಅಖಂಡವಾಗಬೇಕು, ಸಮೃದ್ಧವಾಗಬೇಕು. ವಿಶ್ವಕ್ಕೆ ದಾರಿ ತೋರಿ, ಸುಖ ನೀಡಿ ರಕ್ಷಣೆ ನೀಡುವಂತ ಸಮರ್ಥವಾಗಬೇಕು. ಇದು ಸ್ವಾಮೀಜಿಯವರ ಪ್ರತಿ ನುಡಿಯಲ್ಲಿ ಪ್ರತಿ ನಡೆಯಲ್ಲಿ ವ್ಯಕ್ತವಾಗುತ್ತಿರುವ ಅಂಶ. ೧೯೬೦ರ ಸಂಘಶಿಕ್ಷಾವರ್ಗದಲ್ಲಿ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಮಾತೃಅರ್ಚನಾ' ಎಂಬ ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮವನ್ನು ಸ್ವಾಮೀಜಿಯವರು ನೋಡಬೇಕೆಂದು ಅವರನ್ನು ವಿಶೇಷವಾಗಿ ಆಮಂತ್ರಿಸಿತ್ತು. ಆಗಿನ ಸರಕಾರ್ಯವಾಹರಾಗಿದ್ದ ಮಾನ್ಯ ಶ್ರೀ ಏಕನಾಥಜೀ ರಾನಡೆಯವರೂ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮೊದಲಿನ ಅಖಂಡ ಭಾರತ ಅಂದರೆ ಬ್ರಹ್ಮದೇಶ, ಸಿಂಹಳ ಇತ್ಯಾದಿ ಎಲ್ಲರನ್ನೂ ಒಳಗೊಂಡ ಚಿತ್ರವಿತ್ತು. ಆಗಿನ ದಿನಗಳಲ್ಲಿ ಭಾರತ ಹೇಗೆ ಜಗದ್ವಂದ್ಯವಾಗಿತ್ತು ಎಂಬ ವಿವರಣೆಯನ್ನು ಕೊಡಲಾಯಿತು. ನಂತರ ನಮ್ಮ ದೌರ್ಬಲ್ಯದಿಂದ, ಸ್ವಾರ್ಥದಿಂದ ಒಂದೊಂದು ಭಾಗವೂ ಹೇಗೆ ಪ್ರತ್ಯೇಕವಾಯಿತು, ನಂತರ ೧೯೪೭ ರಲ್ಲಿ ಪಂಜಾಬ, ಬಂಗಾಲಗಳನ್ನು ವಿಭಜನೆಮಾಡಿ ಕೊಟ್ಟೆವು. ನಂತರ ಚೀನದೊಡನೆ, ಪಾಕಿಸ್ತಾನದೊಡನೆ ಆದ ಯುದ್ಧಗಳಲ್ಲಿ ಟಿಬೆಟ್ - ಕಾಶ್ಮೀರದ ಮೂರನೆ ಒಂದು ಭಾಗ ಇತ್ಯಾದಿಗಳನ್ನು ಭಾರತ ಕಳೆದುಕೊಂಡಿತು - ಎಂಬ ವಿವರಗಳನ್ನು ಹೇಳುತ್ತಿದ್ದಂತೆ ಒಂದೊಂದು ಭಾಗವೂ ಭಾರತದಿಂದ ಕಳಚಿ ಬೀಳುವ ದೃಶ್ಯಾವಳಿ ಅದು. ಒಂದೊಂದು ಭಾಗವೂ ಮುರಿಮುರಿದು ಬಿದ್ದಂತೆ ಹೃದಯವೇ ಕಳಚಿಬಿದ್ದಂತಹ ನೋವು. ಕೊನೆಗೆ ಇಂದು ನಾವು ಕಾಣುವ ಹರಕು, ಮುರುಕು ಭಾರತದ ದೃಶ್ಯ. ನೋಡುನೋಡುತ್ತಾ ಸ್ವಾಮೀಜಿ ಭಾವಪರವಶರಾದರು, ಗಂಭೀರರಾದರು. ಕಾರ್ಯಕ್ರಮ ಮುಗಿಯಿತು. ಒಂದು ಮಾತನ್ನೂ ಆಡದೆ ಶಾಂತರಾಗಿ, ಭಾರವಾದ ಹೃದಯದಿಂದ ಎದ್ದು ಹೊರಟು ಹೋದರು. ಮಾರನೆಯ ದಿನ ಭೇಟಿ ಆದಾಗ 'ಎಲ್ಲವೂ ತಿಳಿದಿರುವ ವಿಷಯಗಳೇ. ಆದರೆ ನಿನ್ನೆ ಒಂದೊಂದು ಭಾಗವೂ ಉದುರಿ ಬೀಳುವ ದೃಶ್ಯವನ್ನು ನೋಡುವುದು ಹೃದಯವಿದ್ರಾವಕವಾಗಿತ್ತು. ಮನಸ್ಸಿಗೆ ಅತೀವ ವೇದನೆಯಾಗುತ್ತಿತ್ತು. ಕೊನೆಯಲ್ಲಿ ಛಿದ್ರವಿಚ್ಛಿದ್ರವಾದ ಈಗಿನ ಭಾರತದ ದೃಶ್ಯ ಮುಂಚಿನ ಅಖಂಡ ಭಾರತದ ಚಿತ್ರ ಎರಡನ್ನೂ ಒಟ್ಟಾಗಿ ಕಂಡಾಗ ದುಃಖವನ್ನೂ ಕಣ್ಣೀರನ್ನೂ ತಡೆಯುವುದೇ ಕಷ್ಟವಾಯಿತು. ಅಸಹನೀಯ ಕರಾಳ ದೃಶ್ಯ, ಆದರೆ ಅತ್ಯಂತ ಪರಿಣಾಮಕಾರಿ ಕಾರ್ಯಕ್ರಮ' ಎಂದು ಹೇಳುವಾಗಲೂ ಮತ್ತೆ ಭಾವುಕರಾದರು.

ಇಂತಹ ತತ್ವಜ್ಞಾನಿ, ಕರ್ಮಯೋಗಿ, ಧರ್ಮನಿಷ್ಠ, ರಾಷ್ಟ್ರನಿಷ್ಠ ಆಪದ್ಬಾಂಧವರ ಸ್ಮರಣೆಯೇ ಆನಂದದಾಯಕ.

ದೃಢ ಸಂಕಲ್ಪದ ಶ್ರೀಗಳು

ಕೆ.ಎಂ. ರುದ್ರಪ್ಪ

ಕರ್ನಾಟಕದ ಧಾರ್ಮಿಕ ಕ್ಷೇತ್ರಗಳಲ್ಲಿ ಸಿದ್ಧಗಂಗೆಯು ಇತಿಹಾಸ ಪ್ರಸಿದ್ಧವಾದುದು. ಇದು ಗೋಸಲ ಸಿದ್ದೇಶ್ವರರು ಮತ್ತು ಸಿದ್ಧಲಿಂಗೇಶ್ವರರು ತಪಸ್ಸು ಮಾಡಿದ ತಾಣವಾದ್ದರಿಂದ ಇದೊಂದು ಪರಮ ಪವಿತ್ರವಾದ ಹಾಗೂ ಜಾಗೃತ ಸ್ಥಳವೆಂದು ಪ್ರಸಿದ್ಧಿ ಪಡೆದಿದೆ.

ಬಸವಣ್ಣನವರ ತರುವಾಯ ವೀರಶೈವ ಧರ್ಮವನ್ನು ಪ್ರಖರಗೊಳಿಸಿದವರೆಂದರೆ ಬೇಲೂರಿನಲ್ಲಿ ಹೊಯ್ಸಳ ಸಾಮ್ರಾಜ್ಯದ ಪ್ರಧಾನಿಯಾಗಿದ್ದ ಕೆರೆಯ ಪದ್ಮರಸರು, ವಿಜಯನಗರದ ಪ್ರೌಢದೇವರಾಯ ಮತ್ತು ಆತನ ಪ್ರಧಾನಿ ಲಕ್ಕಣ ದಂಡೇಶರೆಂದು ಹೇಳಬಹುದು. ಸಿದ್ಧಲಿಂಗೇಶ್ವರರು ಇಡೀ ದಕ್ಷಿಣ ಭಾರತವನ್ನೆಲ್ಲಾ ಸುತ್ತಿ ಧರ್ಮ ಪ್ರಚಾರ ಮಾಡಿದ್ದಲ್ಲದೆ ಅಲ್ಲಲ್ಲಿ ವೀರಶೈವ ಮಠಗಳನ್ನು ಸ್ಥಾಪಿಸಿದರು. ಆ ಕಾಲದಲ್ಲಿ ಸಿದ್ಧಗಂಗಾ ಮಠವು ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ಊಹಿಸಬಹುದು. ಕಾಲಗತಿಯಿಂದ ಅದು ಕೆಲವು ಕಾಲ ಮಂಕಾಯಿತಾದರೂ ೧೯ನೇ ಶತಮಾನದಲ್ಲಿ ಅದಕ್ಕೆ ಎರಡು ಉಂಬಳಿ ಗ್ರಾಮಗಳಿದ್ದುದು ಸರ್ಕಾರೀ ದಾಖಲೆಗಳಿಂದ ತಿಳಿದು ಬರುತ್ತದೆ. ಆ ಗ್ರಾಮಗಳು ಹೇಗೆ ಮಠದ ಕೈ ತಪ್ಪಿಹೋದವೋ ತಿಳಿಯದು. ಹೀಗಿರುವಲ್ಲಿ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬೆಳಗಾಂ ಕಡೆಯಿಂದ ಅಟವೀಸ್ವಾಮಿಗಳೆಂಬುವರು ಸಿದ್ಧಗಂಗಾ ಮಠಕ್ಕೆ ಬಂದು ನೆಲಸಿ ಅದನ್ನು ಅಭಿವೃದ್ಧಿ ಪಡಿಸಿದರು. ಅನಂತರ ತುಮಕೂರಿನ ನಂಜುಂಡ ಶಿವಯೋಗಿಗಳು ಅಟವೀ ಸ್ವಾಮಿಗಳ ಶಿಷ್ಯರಾಗಿದ್ದುಕೊಂಡು ಅನೇಕ ಗ್ರಂಥಗಳನ್ನು ರಚಿಸಿದ್ದಲ್ಲದೆ ಕಲೆ, ಸಂಗೀತ, ಸಾಹಿತ್ಯಾದಿಗಳಿಗೆ ಅಮೂಲ್ಯ ಕೊಡುಗೆ ನೀಡಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅಟವಿ ಸ್ವಾಮಿಗಳು ಮಹಾಮಹಿಮರೂ, ತಪೋನಿಷ್ಠರೂ ಆಗಿದ್ದರು. ಅವರ ಕಾಲದಲ್ಲಿಯೇ ಆ ಮಠದಲ್ಲಿ ದಾಸೋಹ ಮತ್ತು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅಂಕುರಾರ್ಪಣೆಯಾಯಿತು. ಆ ಕಾಲದಲ್ಲಿ ಮಠದಲ್ಲಿ ಶ್ರದ್ಧಾಪೂರ್ವಕವಾಗಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದ ಲಕ್ಕೂರು ರುದ್ರಪ್ಪನೆಂಬುವವರ ಅತ್ಯದ್ಭುತ ಶಕ್ತಿಗಳನ್ನರಿತು ಅವರನ್ನು ೧೯೦೧ ರಲ್ಲಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿದ ಅಟವೀ ಸ್ವಾಮಿಗಳು ಅದೇ ವರ್ಷ ಲಿಂಗೈಕ್ಯರಾದರು.

ಉದ್ದಾನ ಸ್ವಾಮಿಗಳು ಹೆಚ್ಚು ವಿದ್ಯಾವಂತರಲ್ಲದಿದ್ದರೂ ಅವರೊಬ್ಬರು ಪ್ರಬಲ ಇಚ್ಛಾಶಕ್ತಿಯನ್ನು ಹೊಂದಿದ್ದ ಅಸಾಧಾರಣ ಸನ್ಯಾಸಿಗಳಾಗಿದ್ದರು. ಅವರು ಶಿವಯೋಗವಿದ್ಯೆಯಲ್ಲಿ ಪರಿಣತರಾಗಿ ವಾಕ್‌ಸಿದ್ಧಿಯನ್ನು ಪಡೆದಿದ್ದರು. ಭವ್ಯಾಕಾರದ ಮೂರ್ತಿಯಾಗಿ ಮೇಲುನೋಟಕ್ಕೆ ಒರಟಾಗಿ ಕಂಡರೂ ಅವರು ಮೆದು ಹೃದಯದ ಸಾಕಾರ ಮೂರ್ತಿಗಳಾಗಿದ್ದರು. ಇವರು ಹೇಳಿದ್ದು ನಡೆಯುವುದೆಂಬ ಭಾವನೆ ಎಲ್ಲರಲ್ಲಿಯೂ ಮೂಡಿತ್ತು. ಇದರಿಂದಾಗಿ ಜನರು ಇವರನ್ನು ಭಯ, ಭಕ್ತಿಯಿಂದ, ಗೌರವದಿಂದ ಕಂಡು ನಡೆದುಕೊಳ್ಳುತ್ತಿದ್ದರು. ಇವರ ಕಾಲದಲ್ಲಿ ದಾಸೋಹವು ನಿರಂತರವಾಗಿ ನಡೆಯತೊಡಗಿತು. ೧೯೦೫ ರಲ್ಲಿ ಇವರು ಮಠದ ಆವರಣದಲ್ಲಿ ದನಗಳ ಪರಿಷೆ (ಜಾತ್ರೆ) ಯನ್ನು ಪ್ರಾರಂಭಿಸಿದ್ದಲ್ಲದೆ ಜಾತ್ರೆಗೆ ಬಂದವರಿಗೆಲ್ಲ ಊಟೋಪಚಾರದ ವ್ಯವಸ್ಥೆಗಾಗಿ ಅಲ್ಲಲ್ಲಿ ಕೊಪ್ಪಲುಗಳನ್ನು ನಿರ್ಮಿಸಿ ಅವುಗಳ ಮೇಲ್ವಿಚಾರಣೆ, ಊಟದ ವ್ಯವಸ್ಥೆಯನ್ನು ಕೆಲವು ಗ್ರಾಮದವರಿಗೆ ನಿಗದಿ ಮಾಡಿದರು. ಆಹಾರ ಪದಾರ್ಥಗಳು, ಪಾತ್ರೆ ಪಡಗಗಳನ್ನು ಮಠದಿಂದಲೇ ಒದಗಿಸುವ ಕ್ರಮವನ್ನು ಜಾರಿಗೆ ತಂದರು. ಅವರು ಹಾಕಿಕೊಟ್ಟ ಕಟ್ಟುಪಾಡು ಈಗಲೂ ಹಾಗೆಯೇ ಇದೆ. ಆದರೆ ಆ ಕಾಲಕ್ಕೆ ಊಟೋಪಚಾರಕ್ಕೆ ಸಾವಿರಗಟ್ಟಲೆ ಜನರು ಬರುತ್ತಿದ್ದರು. ಈಗ ಲಕ್ಷಗಟ್ಟಲೆ ಬರುತ್ತಾರೆ. ಉದ್ದಾನ ಸ್ವಾಮಿಗಳವರ ಕಾಲದಲ್ಲಿ ಆರ್ಥಿಕ ಪರಿಸ್ಥಿತಿಯೂ ವೃದ್ಧಿಗೊಂಡಿತು. ಮಠದ ಆವರಣದಲ್ಲಿ ಕೊಳವನ್ನು ನಿರ್ಮಿಸಿದರು. ಅನೇಕ ಕಟ್ಟಡಗಳು ಎದ್ದವು. ಕಾಣಿಕೆ ಹಣದ ಸದ್ವಿನಿಯೋಗವಾಗಬೇಕೆಂದು ಆಲೋಚಿಸಿ ಅಧಿಕೃತವಾದ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಅದಕ್ಕೆ ಸರ್ಕಾರದ ಮಂಜೂರಾತಿಯನ್ನು, ಗ್ರಾಂಟನ್ನು ಪಡೆದರು. ಇವರು ಎಲ್ಲಾ ಕೋಮಿನ ವಿದ್ಯಾರ್ಥಿಗಳಿಗೂ ಪ್ರವೇಶ ನೀಡಿ ಹಿಂದುಳಿದ ವರ್ಗದವರು ಸಹ ಕಲಿಯುವ ಅವಕಾಶ ಕಲ್ಪಿಸಿಕೊಟ್ಟರು. ಇದು ಇವರ ವಿಶಾಲ ದೃಷ್ಟಿಗೆ ನಿದರ್ಶನವಾಗಿದೆ. ಇದರ ಜೊತೆಗೆ ೧೯೧೭ ರಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ನೂತನ ವಿದ್ಯಾಭ್ಯಾಸ ಪದ್ಧತಿಗೆ ಅಡಿಗಲ್ಲು ಹಾಕಿದರು. ಪಂಡಿತ ಚನ್ನಪ್ಪ ಎರೇಸೀಮೆಯವರು ಉದ್ದಾನ ಶಿವಯೋಗಿಗಳ ಚರಿತ್ರೆಯನ್ನು ಮನೋಜ್ಞವಾಗಿ 'ಸಿದ್ಧಗಂಗಾಶ್ರೀ' ಗ್ರಂಥದಲ್ಲಿ ನಿರೂಪಿಸಿದ್ದಾರೆ. ಇದು ಪ್ರೌಢವಾಗಿದ್ದು ವಿದ್ವನ್ಮಣಿಗಳಿಗೆ ರಸದೌತಣ ನೀಡಬಲ್ಲುದು.

ಹಾಸನ ಜಿಲ್ಲೆಯ ಮಲೆನಾಡಿನ ವೀರಶೈವರು ಹಿಂದಿನ ಕಾಲದಿಂದಲೂ ಧರ್ಮನಿಷ್ಠೆಗೂ, ಆತ್ಮಾಭಿಮಾನಕ್ಕೂ ಹೆಸರಾದವರು , ಉದಾರಿಗಳು ಹಾಗೂ ಸೌಜನ್ಯಶೀಲರು. ಸಕಲೇಶಪುರ ತಾಲ್ಲೂಕು ಬೆಳ್ಳೂರು ಕುಟುಂಬವೊಂದು ಬಹುಕಾಲದಿಂದಲೂ ಸುಸಂಸ್ಕೃತಿಗೆ ಹೆಸರಾಗಿದೆ. ಈ ಮನೆತನದಲ್ಲಿ ಈ ಶತಮಾನದ ಆದಿಯಲ್ಲಿ, ದೇವಪ್ಪಗೌಡರೆಂಬುವವರು ಗಣ್ಯತೆ ಪಡೆದು ವಿಚಾರಶೀಲರಾಗಿ ಸಮಾಜದ ಬಗ್ಗೆ ಚಿಂತನೆ ನಡೆಸುತ್ತಿದ್ದರು. ಆ ಕಾಲದಲ್ಲಿ ಬ್ರಹ್ಮಪಿಶಾಚಿಯೊಂದು ಆಗಿಂದಾಗ್ಗೆ ಇವರ ಮೈದುಂಬಿ ಕಾಟಕೊಡುತ್ತಿತ್ತು. ಇದು ಅವರ ಹಿರಿಯ ಸಹೋದರರಾದ ನಂಜೇಗೌಡರಿಗೂ, ಬಂಧು ಬಾಂಧವರಿಗೂ ತುಂಬಾ ವ್ಯಸನ ತಂದಿತು. ದೇವಪ್ಪಗೌಡರನ್ನು ಸಿದ್ಧಗಂಗಾಮಠಕ್ಕೆ ಕರೆದುಕೊಂಡುಹೋದಮೇಲೆ ಮಠಾಧ್ಯಕ್ಷರಾಗಿದ್ದ ಅಟವೀಸ್ವಾಮಿಗಳ ಅನುಶಾಸನದಂತೆ ಮಠದಲ್ಲಿ ಸೇವೆಮಾಡಿಕೊಂಡಿದ್ದ ಲಕ್ಕೂರಿನ ರುದ್ರಪ್ಪ ಎಂಬುವವರು ದೇವಪ್ಪಗೌಡರನ್ನು ಈ ಸಂಕಟದಿಂದ ಪಾರು ಮಾಡಿದರು. ಅಂದರೆ, ಬ್ರಹ್ಮಪಿಶಾಚಿಯು ವಿಮೋಚನೆಗೊಂಡು ಇವರನ್ನು ಬಿಟ್ಟು ಹೋಯಿತು. ಈ ಘಟನೆಯನ್ನು ನೋಡಿ ಕೌತುಕಗೊಂಡ ಅಟವೀಸ್ವಾಮಿಗಳು ಲಕ್ಕೂರು ರುದ್ರಪ್ಪನು ಸಾಮಾನ್ಯನಲ್ಲವೆಂದೂ, ಮಹಿಮಾ ಪುರುಷನೆಂದೂ ಭಾವಿಸಿ ಅವರಿಗೆ ಜಂಗಮದೀಕ್ಷೆ ನೀಡಿ ಉದ್ದಾನಸ್ವಾಮಿಗಳೆಂದು ನಾಮಕರಣಮಾಡಿ ಅವರನ್ನು ಸಿದ್ಧಗಂಗೆಯ ಪೀಠಾಧಿಪತಿಗಳನ್ನಾಗಿ ಮಾಡಿ ದೇಶ ಸಂಚಾರ ಮಾಡುತ್ತಾ ತೊಟ್ಟಿಲು ಕೆರೆಯಲ್ಲಿ ಬಯಲಾದರು. ಈ ಘಟನೆಯನ್ನು ದೇವಪ್ಪಗೌಡರೇ ವರ್ಣಿಸುತ್ತಾ ಉದ್ದಾನ ಸ್ವಾಮಿಗಳನ್ನು ಸ್ಮರಿಸುತ್ತಿದ್ದನ್ನು ನಾನು ನೋಡಿದ್ದೇನೆ ಮತ್ತು ಇವರ ಬಾಯಿಯಿಂದಲೇ ಸ್ವತಃ ಕೇಳಿದ್ದೇನೆ. ಆದ್ದರಿಂದ ಇದನ್ನು ನಂಬಲೇಬೇಕಾಗಿದೆ.

ಈ ಘಟನೆಯು ಕರ್ಣಾಕರ್ಣಿಕೆಯಾಗಿ ಮಲೆನಾಡಿನಲ್ಲೆಲ್ಲಾ ಪ್ರಚಾರವಾದ ಮೇಲೆ ಅನೇಕರು ಉದ್ದಾನ ಸ್ವಾಮಿಗಳ ಆಶೀರ್ವಾದ ಪಡೆಯಲು ಅವರು ಮಂತ್ರಿಸಿಕೊಟ್ಟ ಭಸ್ಮ ತರಲು, ಯಂತ್ರ ಕಟ್ಟಿಸಿಕೊಂಡು ಬರಲು ಹೋಗುತ್ತಿದ್ದರು. ಬೆಳ್ಳೂರು ದೇವಪ್ಪಗೌಡರು ಮತ್ತು ಅವರ ಬಂಧುಗಳ ಮನೆಗೆ ಉದ್ದಾನ ಸ್ವಾಮಿಗಳು ಪೂಜೆಗೆ ಆಗಿಂದಾಗ್ಗೆ ಬರುತ್ತಿದ್ದುದರಿಂದ ಅವರಿಗೆ ಮಲೆನಾಡಿನ ಸಂಪರ್ಕ ಬೆಳೆಯಲು ಕಾರಣವಾಯಿತು. ಅವರು ಆಲೂರು ತಾಲ್ಲೂಕು ಪಾಳ್ಯ ಹೋಬಳಿ ಜೋಡಿ ಹೊನ್ನವಳ್ಳಿ ಗ್ರಾಮವನ್ನು ಖರೀದಿಸಿ ಪಡೆದು, ಅಲ್ಲಿನ ತರಿ ಜಮೀನನ್ನು ಗುತ್ತಿಗೆಗೆ ಕೊಟ್ಟು, ಮಠಕ್ಕೆ ವರ್ಷಂಪ್ರತಿ ನೂರಾರು ಪಲ್ಲ ಭತ್ತ ಬರುವಂತೆ ಏರ್ಪಡಿಸಿದ್ದರಿಂದ ಅವರು ಹೆಚ್ಚಿನ ರೀತಿಯಲ್ಲಿ ದಾಸೋಹ ನಡೆಸಲು ಅನುಕೂಲವಾಯಿತು. ಉದ್ದಾನ ಸ್ವಾಮಿಗಳ ಪ್ರೇರೇಪಣೆ ಮೇರೆಗೆ ದೇವಪ್ಪಗೌಡರು ಮಲೆನಾಡು ವೀರಶೈವರ ಮುಂದಾಳುಗಳಾಗಿ ನಿಂತು, ಸಕಲೇಶಪುರದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಅದು ಸುವ್ಯವಸ್ಥೆಯಿಂದ ನಡೆಯುವಂತೆ ನೋಡಿಕೊಂಡರು. ಇದರಿಂದ ಮಲೆನಾಡಿನಲ್ಲಿ ವಿದ್ಯಾಪ್ರಸಾರವಾಗಲು ತುಂಬಾ ಸಹಾಯವಾಯಿತು. ಉದ್ದಾನ ಸ್ವಾಮಿಗಳ ಸ್ಪರ್ಶದಿಂದ ಸಂಸ್ಕಾರ ಹೊಂದಿದ ದೇವಪ್ಪಗೌಡರು ಮೈಸೂರು ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿಯೂ ಸಕಲೇಶಪುರದ 'ಬೆಂಚ್ ಮ್ಯಾಜಿಸ್ಟ್ರೇಟ್' ಆಗಿಯೂ ಸೇವೆ ಸಲ್ಲಿಸಿ ಕೀರ್ತಿಶಾಲಿಗಳಾದರು. ಆ ಕಾಲದಲ್ಲಿಯೇ ನನ್ನ ಬಂಧುಗಳಾದ ಹೆಬ್ಬಸಾಲೆ ಹೆಚ್.ಬಿ. ಪುಟ್ಟಸ್ವಾಮಪ್ಪನವರು ಉದ್ದಾನಸ್ವಾಮಿಗಳವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಪದವೀಧರರಾದರು. ಇವರೂ ಮತ್ತು ಮಾಗಡಿ ತಾಲ್ಲೂಕು ವೀರಾಪುರದ ಶಿವಣ್ಣನವರೂ ಗುಬ್ಬಿ ತೋಟದಪ್ಪನವರ ಹಾಸ್ಟೆಲ್‌ನಲ್ಲಿ ಒಂದೇ ಕೊಠಡಿಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದರು. ಇಬ್ಬರೂ ಅತ್ಯುತ್ತಮ ನಡತೆಯುಳ್ಳವರಾಗಿ, ಆಚಾರಶೀಲರಾಗಿ, ಆದರ್ಶ ವಿದ್ಯಾರ್ಥಿಗಳಾಗಿದ್ದ ವಿಷಯವನ್ನು ಅವರ ಸಮಕಾಲೀನರು ಹೆಮ್ಮೆಯಿಂದ ವರ್ಣಿಸುತ್ತಿದ್ದರು.

ಹೀಗೆ ಸಿದ್ಧಗಂಗಾ ಮಠಾಧ್ಯಕ್ಷರಾಗಿ ಪರಿಶೋಭಿಸುತ್ತಾ ಪವಾಡ ಪುರುಷರೆಂದೇ ಹೆಸರಾಗಿದ್ದ ಉದ್ದಾನ ಸ್ವಾಮಿಗಳು ಮರುಳಾರಾಧ್ಯ ಎಂಬುವವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದರು. ಘನ ವಿದ್ವಾಂಸರೂ, ಸುಸಂಸ್ಕೃತರೂ ಆಗಿದ್ದ ಮರುಳಾರಾಧ್ಯರಿಗೆ ವೀರಾಪುರದ ಶಿವಣ್ಣನವರನ್ನು ಹೆಬ್ಬಸಾಲೆ ಪುಟ್ಟಸ್ವಾಮಪ್ಪನವರನ್ನು ಕಂಡರೆ ತುಂಬಾ ಪ್ರೀತಿ. ಆಗಿಂದಾಗ್ಗೆ ಸಿದ್ಧಗಂಗಾ ಮಠಕ್ಕೆ ಹೋಗುತ್ತಿದ್ದ ಇವರಿಬ್ಬರನ್ನೂ ಮರುಳಾರಾಧ್ಯರು ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು. ವಿಧಿಲೀಲೆ ಮರುಳಾರಾಧ್ಯರು ಹಠಾತ್ತನೆ ವಿಧಿವಶರಾದರು. ಅವರ ಅಂತ್ಯಕ್ರಿಯೆಗೆ ಶಿವಣ್ಣನವರೂ, ಪುಟ್ಟಸ್ವಾಮಪ್ಪನವರೂ ಹೋಗಿ ವಿಧಿವತ್ತಾಗಿ ಕ್ರಿಯಾ ಸಮಾಧಿ ಮಾಡಲು ತಮ್ಮ ಸೇವೆಯನ್ನು ಸಲ್ಲಿಸಿದರು. ೧೬-೧-೧೯೬೦ ರಲ್ಲಿ ನಡೆದ ಮರುಳಾರಾಧ್ಯರ ಅಂತ್ಯಕ್ರಿಯೆಗೆ ಭಾರಿ ಜನಸ್ತೋಮ ಸೇರಿತ್ತು.

ಅಂತ್ಯಕ್ರಿಯೆಯ ಕೊನೇ ಘಟ್ಟದಲ್ಲಿ ಸಮಾಧಿಯ ಮೇಲೆ ಜಂಗಮರ ಪಾದಪೂಜೆ ನಡೆಯುವುದು ಸಂಪ್ರದಾಯ. ಅದು ನಡೆಯುತ್ತಿರುವಾಗ ಸಿದ್ಧಗಂಗಾ ಮಠಕ್ಕೆ ಉತ್ತರಾಧಿಕಾರಿ ಯಾರು ಆಗಬೇಕೆಂಬ ಬಗ್ಗೆ ಜನರು ತಮ್ಮ ತಮ್ಮ ಅಭಿಪ್ರಾಯವನ್ನು ಅಕ್ಕಪಕ್ಕದವರೊಡನೆ ಚರ್ಚಿಸುತ್ತಿದ್ದಾರೆ. ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ದಾವೂದ್ ಸಾಹೇಬರು ಕುತೂಹಲಭರಿತರಾಗಿ ಎಲ್ಲಾ ಕಡೆಯೂ ಓಡಾಡುತ್ತಾ ಒಟ್ಟಾರೆ ಅಭಿಪ್ರಾಯವನ್ನು ಸಂಗ್ರಹಿಸಿದ್ದರಲ್ಲಿ ಶಿವಣ್ಣನವರ ಹೆಸರೇ ಕೇಳಿ ಬರುತ್ತಿದೆ. ಇದನ್ನು ನೇರವಾಗಿ ಶಿವಣ್ಣನವರಿಗೆ ಯಾರೂ ತಿಳಿಸಲಿಲ್ಲವಾದರೂ ಅವರ ಮನಸ್ಸಿನಲ್ಲಿಯೂ ಇದು ಸುಳಿದು ಹೋಗಿತ್ತೆಂದು ಬಲ್ಲವರು ಹೇಳುತ್ತಾರೆ. ಈ ಸನ್ನಿವೇಶದಲ್ಲಿ ಬೆಟ್ಟದ ಕಡೆಯಿಂದ ಉದ್ಧಾನ ಸ್ವಾಮಿಗಳು ಶರವೇಗದಲ್ಲಿ ಬಂದು ಸಮಾಧಿ ಬಳಿ ನಿಲ್ಲುತ್ತಾರೆ. ಎಲ್ಲೆಲ್ಲೂ ನಿಶ್ಶಬ್ದ ಆವರಿಸುತ್ತದೆ. ಸಮಾಧಿಯ ಸುತ್ತಾ ಕರ್ಪೂರ ಧಗಧಗನೆ ಉರಿಯುತ್ತಿದೆ. ಊದುಗಡ್ಡಿ ಸಾಂಬ್ರಾಣಿ ಹೊಗೆಯಿಂದ ಪರಿಸರ ಪರಿಮಳಯುಕ್ತವಾಗಿದೆ. ಎಲ್ಲರೂ ಉದ್ಧಾನ ಸ್ವಾಮಿಗಳು ಏನು ಅಪ್ಪಣೆ ಕೊಡಿಸುತ್ತಾರೋ ಕೇಳಬೇಕೆಂಬ ಕಾತುರದಲ್ಲಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ಉದ್ಧಾನ ಸ್ವಾಮಿಗಳು 'ಶಿವಣ್ಣಾ, ನೀನೇ ಸಿದ್ಧಗಂಗಾ ಮಠದ ಉತ್ತರಾಧಿಕಾರಿ. ಸಾಷ್ಟಾಂಗ ನಮಸ್ಕಾರ ಮಾಡಿ ಒಪ್ಪಿಗೆಕೊಡು' ಎಂದು ಶಿವಣ್ಣವರಿಗೆ ಆಜ್ಞೆ ನೀಡುತ್ತಾರೆ. ಶಿವಣ್ಣನವರು ಉದ್ಧಾನ ಸ್ವಾಮಿಗಳ ಆಜ್ಞಾಧಾರಕರಾಗಿ ಸಾಷ್ಟಾಂಗ ನಮಸ್ಕಾರ ಮಾಡುವುದರ ಮೂಲಕ ತಮ್ಮ ದೃಢನಿಶ್ಚಯ ಮಾಡಿ ಒಪ್ಪಿಗೆ ಕೊಟ್ಟೇ ಬಿಡುತ್ತಾರೆ. ಶಿವಣ್ಣನವರು ತಮಗರಿವಿಲ್ಲದಂತೆಯೇ ಸನ್ಯಾಸಿ ಜೀವನದ ವಜ್ರ ಕವಚವನ್ನು ತೊಟ್ಟೇ ಬಿಡುತ್ತಾರೆ. ಇದು ಮಿಂಚಿನ ವೇಗದಲ್ಲಿ ನಡೆದುಹೋಗುತ್ತದೆ. ಜನಸ್ತೋಮ ಸ್ತಂಭೀಭೂತರಾಗುತ್ತಾರೆ. ಎಲ್ಲಾ ದೈವಲೀಲೆ, ಇದೊಂದು ಸ್ಮರಣೀಯ ಘಟನೆ.

ತಮ್ಮ ಮಗ ಪದವೀಧರನಾಗಿ ಸರ್ಕಾರದ ಉನ್ನತ ಹುದ್ದೆಯನ್ನಲಂಕರಿಸಿ, ಸದ್ಗೃಹಸ್ಥನಾಗಿ ಮನೆತನದ ಕೀರ್ತಿ ಗೌರವಗಳನ್ನು ಹೆಚ್ಚಿಸಿ ಅಭಿವೃದ್ಧಿಯನ್ನು ಸಾಧಿಸುತ್ತಾನೆಂಬ ಕನಸು ಕಾಣುತ್ತಿದ್ದ ಪಟೇಲ್ ಹೊನ್ನಪ್ಪವರಿಗೆ ತಮ್ಮ ಮಗನ ವರ್ತನೆ ಸರಿಕಾಣದೆ ಪರಿತಪಿಸಿದರು. ಶಿವಣ್ಣನವರ ಬಂಧುಗಳೂ ಚಿಂತಾಕ್ರಾಂತರಾದರು. ಅವರೆಲ್ಲಾ ಶಿವಣ್ಣನವರು ಸಿದ್ಧಗಂಗಾ ಮಠದ ಉತ್ತರಾಧಿಕಾರಿಯಾಗುವುದನ್ನು ತಡೆಗಟ್ಟುವ ಸೂಚನೆಗಳು ಕಂಡುಬಂದವು. ಆದರೆ ಶಿವಣ್ಣನವರ ಮನಸ್ಸು ಅಚಲವಾಗಿತ್ತು. ಇದನ್ನೆಲ್ಲಾ ಸೂಕ್ಷ್ಮವಾಗಿ ಗ್ರಹಿಸಿ ಶಿವಣ್ಣನವರು ಬೆಂಗಳೂರಿನಿಂದ ಉದ್ಧಾನ ಸ್ವಾಮಿಗಳಿಗೆ ಪತ್ರ ಬರೆದು ತಮಗೆ ಶೀಘ್ರವಾಗಿಯೇ ಜಂಗಮದೀಕ್ಷೆ ನೀಡಿ ಉತ್ತರಾಧಿಕಾರಿ ಪಟ್ಟ ನೆರವೇರಿಸಿದರೆ ತಮಗೆ ಬಂಧುಗಳು ಕಾಟ ಕೊಡುವುದನ್ನು ನಿಲ್ಲಿಸುವರೆಂದು ತಿಳಿಸಿಯೇ ಬಿಟ್ಟರು. ಇದರ ಪರಿಣಾಮವಾಗಿ ದಿನಾಂಕ ೩-೩-೧೯೩೦ ರಂದು ಶಿವಣ್ಣನವರು ಶಿವಕುಮಾರಸ್ವಾಮಿಗಳೆಂಬ ಶುಭನಾಮದಿಂದ ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರಿಗಳಾಗಿ ಪಟ್ಟಾಭಿಷಿಕ್ತರಾದರು. ದೈವ ಸಂಕಲ್ಪ ನೆರವೇರಿತು.

ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ನೆನಪಿನಲ್ಲಿಡುವುದು ಅಗತ್ಯವಾಗಿದೆ. ವೀರಾಪುರದ ಪಟೇಲ್ ಹೊನ್ನಪ್ಪನವರು ಸಾಮಾನ್ಯ ಮನುಷ್ಯರೇನಲ್ಲ. ಗ್ರಾಮ ಪಟೇಲರಾಗಿ, ದೊಡ್ಡ ವ್ಯವಸಾಯಗಾರರಾಗಿ, ವಿದ್ಯಾವಿನಯಸಂಪನ್ನರಾಗಿ ಎಂಟು ಗಂಡು ಮಕ್ಕಳು, ಐದು ಹೆಣ್ಣುಮಕ್ಕಳ ತಂದೆಯಾಗಿ ಸುತ್ತಣ ಗ್ರಾಮದವರಿಗೆಲ್ಲಾ ತುಂಬಾ ಬೇಕಾದವರಾಗಿ ಗಣ್ಯತೆ ಸಂಪಾದಿಸಿದ್ದರು. ಅವರು ಕ್ರಿಯಾಶೀಲರೆಂದೂ, ಪ್ರಾಮಾಣಿಕರೆಂದೂ ಹೆಸರು ಪಡೆದಿದ್ದಲ್ಲದೆ ಮನಸ್ಸಿನ ಕ್ಲೇಶಕ್ಕೊಳಗಾದವರಿಗೂ, ಸಂತಾನವಿಹೀನರಿಗೂ ಭಸ್ಮ ನೀಡುತ್ತಿದ್ದರು. ಇದರಿಂದ ಅನೇಕರಿಗೆ ಪರಿಹಾರ ಒದಗಿತ್ತಂತೆ. ಹೀಗಿರುವಾಗ ಉದ್ಧಾನ ಸ್ವಾಮಿಗಳು ತಮಗೊಂದು ಮಾತು ತಿಳಿಸದೆ ಏಕಾಏಕಿ ಈ ರೀತಿ ಮಾಡಿದರಲ್ಲಾ ಎಂದು ಅವರ ಮೇಲೂ ಅಸಮಾಧಾನಪಟ್ಟುಕೊಂಡು ಉದ್ಧಾನ ಸ್ವಾಮಿಗಳು ತಮ್ಮನ್ನು ನೋಡಲು ವೀರಾಪುರಕ್ಕೆ ಬಂದಾಗ ಊರಿನಲ್ಲಿ ಇರದೇ ಹೋದುದರಲ್ಲಿ ಯಾವ ಅಸಹಜತೆಯೂ ಇಲ್ಲ. ಇದು ಅವರಿಗೆ ಇದ್ದ ಪುತ್ರವಾತ್ಸಲ್ಯದ ದ್ಯೋತಕವೂ ಹೌದು. ಆದರೆ ಇದನ್ನೆಲ್ಲಾ ನೋಡಲು ಶಿವಣ್ಣನವರ ತಾಯಿ ಗಂಗಮ್ಮನವರು ಆಗ ಇರಲಿಲ್ಲ. ಶಿವಣ್ಣನು ಎಂಟು ವರ್ಷದ ಹುಡುಗನಾಗಿರುವಾಗಲೇ ಅವರು ಶಿವನ ಪಾದ ಸೇರಿದ್ದರು.

ಶ್ರೀ ಶಿವಕುಮಾರ ಸ್ವಾಮಿಗಳು ಸನ್ಯಾಸಿಗಳಾಗಿಯೇ ಸೆಂಟ್ರಲ್ ಕಾಲೇಜಿಗೆ ಹೋಗಿ ಅಂತಿಮ ಬಿ.ಎ. ಪರೀಕ್ಷೆಗೆ ಕೂತು ಬರೆದು ಬಂದರು. ಇದು ಬಹು ದೊಡ್ಡ ಸುದ್ದಿಯಾಗಿ ತಾಯಿನಾಡು, ವಿಶ್ವಕರ್ನಾಟಕ ಮತ್ತು ಇಂಗ್ಲಿಷ್ ಪತ್ರಿಕೆಯಾದ ಡೈಲಿ ಪೋಸ್ಟಿನ ಮುಖಪುಟದಲ್ಲಿ ವರದಿಯಾಯಿತು.

ಶ್ರೀ ಎಂ.ಕೃಷ್ಣ ಅವರು ಶ್ರೀ ಶಿವಕುಮಾರ ಸ್ವಾಮಿಗಳನ್ನು ಆಧುನಿಕ ವಿವೇಕಾನಂದ ಎಂದು ಹೇಳುತ್ತಿದ್ದರು. ಮೊದಲ ಸಲ ಶ್ರೀ ಎ.ಎಂ. ಸಿದ್ಧಯ್ಯನವರ ಸಂಗಡ ಶ್ರೀ ಶಿವಕುಮಾರ ಸ್ವಾಮಿಗಳನ್ನು ಸಿದ್ಧಗಂಗೆಯಲ್ಲಿ ಕಂಡಾಗ ಶ್ರೀ ಶಿವಕುಮಾರ

ಸ್ವಾಮಿಗಳವರು ಮಧ್ಯಾಹ್ನದ ಪೂಜೆ ಪೂರೈಸಿ ಆಫೀಸಿನಲ್ಲಿದ್ದರು. ಶ್ರೀಗಳವರು ಪ್ರಸನ್ನವದನರಾಗಿ ತುಂಬಾ ಶಾಂತಚಿತ್ತರಾಗಿದ್ದರು. ನಮ್ಮನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನಾವು ಶ್ರೀಗಳವರಿಗೆ ದೀರ್ಘದಂಡ ಪ್ರಣಾಮ ಸಲ್ಲಿಸಿ ಪುಷ್ಪಹಾರ ಹಾಕಿ ಹಣ್ಣುಗಳನ್ನರ್ಪಿಸಿದೆವು. ಸಿದ್ದಯ್ಯನವರು ನನ್ನನ್ನು ಶ್ರೀಗಳವರಿಗೆ ಪರಿಚಯಿಸಿಕೊಟ್ಟರು. ನನ್ನ ವಿಚಾರವನ್ನು ಸಕಲೇಶಪುರದ ಕಡೆಯವರಿಂದ ತಮಗೆ ತಿಳಿದಿದೆ ಎಂದು ಶ್ರೀಗಳು ಅಪ್ಪಣೆ ಕೊಡಿಸಿದರು. ಅವರ ದರ್ಶನಕ್ಕೆ ಜನರು ಬಂದು ಹೋಗುತ್ತಿದ್ದರು. ನಮ್ಮನ್ನು ಕುಳಿತುಕೊಳ್ಳಲು ಹೇಳಿದರು. ನಾವಿಬ್ಬರೂ ಖಾದೀಧಾರಿಗಳಾಗಿದ್ದು ಅವರಿಗೆ ಸಂತೋಷ ನೀಡಿದಂತೆ ನಮಗೆ ಭಾಸವಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ನಮಗೆ ಹಾಲು ಬಾಳೆಹಣ್ಣು ಬಂತು. ನಾನು ಎಂ. ಕೃಷ್ಣ ಅವರ ಬಗ್ಗೆ ಮಾತನಾಡಿ ಅವರು ಶ್ರೀಗಳವರಿಗೆ ಪ್ರಣಾಮಗಳನ್ನು ಅರ್ಪಿಸಿದ್ದನ್ನು ಅರಿಕೆ ಮಾಡಿಕೊಂಡೆನು. ಎಂ. ಕೃಷ್ಣ ತುಂಬಾ ಸತ್ಯಸಂಧನೂ, ಮಾನವೀಯ ಗುಣವುಳ್ಳ ಸ್ವಾವಲಂಬಿ ಪುರುಷನೆಂದು ಶ್ರೀಗಳು ಹೇಳಿದ್ದು ನನಗೂ ನಿಜವಾಗಿ ಕಂಡಿತು. ಅನಂತರ ಶ್ರೀಗಳು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಭಾವಪರವಶರಾಗಿ ಮಾತನಾಡಿದ್ದಲ್ಲದೆ, ಅವರ ಸತ್ಯಾನ್ವೇಷಣೆಯ ಫಲವಾಗಿ ಕಾಂಗ್ರೆಸ್ಸಿಗೆ ನೈತಿಕ ಶಕ್ತಿ ಉಂಟಾಗಿ ಸತ್ಯಾಗ್ರಹ ಚಳುವಳಿಗೆ ಬೆಂಬಲ ಸಿಕ್ಕುತ್ತಿದೆಯೆಂದು ಅಪ್ಪಣೆ ನೀಡಿದರು. ರಾಷ್ಟ್ರ ಪ್ರೇಮವು ವಿದ್ಯಾರ್ಥಿಗಳಲ್ಲಿಯೂ ಉಕ್ಕುತ್ತಿರುವುದು ಶುಭದ ಸೂಚನೆಯೆಂದು ಹೇಳಿದರು. ಅವರ ರಾಷ್ಟ್ರ ಪ್ರೇಮ ಮತ್ತು ವಿದ್ಯಾರ್ಥಿಗಳ ಬಗ್ಗೆ ಆಡಿದ ಪ್ರೋತ್ಸಾಹದ ಮಾತುಗಳು ನಮಗೆ ಸ್ಫೂರ್ತಿ ನೀಡಿದವು. ನಾನು ಕಾನೂನು ವಿದ್ಯಾಭ್ಯಾಸಕ್ಕೆ ಹೋಗಬೇಕೆಂದಿರುವುದನ್ನು ಶ್ರೀಗಳವರಿಗೆ ವಿಜ್ಞಾಪಿಸಿದೆನು. ಅವರು ಸಂತೋಷಪಟ್ಟು ನನಗೆ ಶುಭ ಹಾರೈಸಿದರು.

ಹಾಸನ ಜಿಲ್ಲೆಯ ಮಲೆನಾಡಿನಲ್ಲೆಲ್ಲಾ ಸುತ್ತಾಡಿದ್ದೇನೆ. ಎಲ್ಲೆಲ್ಲಿಯೂ ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳ ಪ್ರಭಾವ ಇದ್ದುದು ಗೊತ್ತಾಯಿತು. ವೀರಶೈವರ ಮನೆಗಳ ಶಿವಪೂಜಾ ಕೋಣೆಗಳಲ್ಲಿಯೂ ಕೆಲವು ಒಕ್ಕಲಿಗರ ಮನೆಯ ಜಗಲಿಯಲ್ಲಿಯೂ ಶ್ರೀಗಳವರ ಫೋಟೋಗಳು ರಾರಾಜಿಸುತ್ತಿದ್ದವು. ಮಲೆನಾಡಿನ ಜನರು ಶ್ರೀ ಶಿವಕುಮಾರ ಸ್ವಾಮಿಗಳವರ ಪ್ರಭಾವಕ್ಕೆ ಒಳಗಾಗಿರುವುದು ಎದ್ದು ಕಾಣುತ್ತಿತ್ತು. ಧಾರ್ಮಿಕ ಜಾಗೃತಿಯಾಗಿರುವುದನ್ನು ನೋಡಿ ನಿಬ್ಬೆರಗಾದೆನು.

ಸಕಲೇಶಪುರ ತಾಲ್ಲೂಕು ಎಸಳೂರು ಪೇಟೆಯ ವೈ. ಧರ್ಮಪ್ಪನವರು ಆಗ ಪ್ರಸಿದ್ಧ ವಕೀಲರೂ, ಪ್ರಭಾವಶಾಲಿ ರಾಜಕಾರಣಿಯಾಗಿ ಹಾಸನದಲ್ಲಿ ಮಿಂಚುತ್ತಿದ್ದರು. ಅವರು ಚಿತ್ರದುರ್ಗದ ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರನ್ನು ಬಿಟ್ಟು ಬೇರೆ ಯಾರನ್ನೂ ಒಪ್ಪುತ್ತಿರಲಿಲ್ಲ. ಆದರೆ ಶ್ರೀ ಶಿವಕುಮಾರ ಸ್ವಾಮಿಗಳು ವೈ. ಧರ್ಮಪ್ಪನವರನ್ನು ತಮ್ಮ ನಡೆ ನುಡಿ, ಶೀಲ ಸೌಜನ್ಯಗಳಿಂದ ಪರಿವರ್ತಿಸಿದರು. ಅನಂತರ ಮಠಾಧಿಪತಿಗಳಲ್ಲಿಯೇ ಶ್ರೀ ಶಿವಕುಮಾರ ಸ್ವಾಮಿಗಳು ಕಲಶ ಪ್ರಾಯರೆಂದು ಧರ್ಮಪ್ಪನವರು ಸಭೆ, ಸಮಾರಂಭಗಳಲ್ಲಿ ಮುಕ್ತಕಂಠದಿಂದ ಹೊಗಳಲಾರಂಭಿಸದರು. ಅವರು ಜಿಲ್ಲಾ ಬೋರ್ಡು ಅಧ್ಯಕ್ಷರಾಗಿ ಮಲೆನಾಡಿಗೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ಅದನ್ನು ಮಲೆನಾಡಿನ ಜನ ಈಗಲೂ ನೆನಪಿಸಿಕೊಳ್ಳುತ್ತಾರೆ.

ಉದ್ದಾನ ಸ್ವಾಮಿಗಳು ಮಲೆನಾಡಿನ ಹತ್ತಾರು ಮನೆಗಳಿಗೆ ವರ್ಷಂಪ್ರತಿ ಪೂಜೆಗೆ ಬರುತ್ತಿದ್ದರು. ಶ್ರೀ ಶಿವಕುಮಾರ ಸ್ವಾಮಿಗಳ ಕಾಲದಲ್ಲಿ ಅದು ಇನ್ನೂ ವಿಸ್ತಾರವಾಯಿತು. ಮಲೆನಾಡಿನ ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕುಗಳಲ್ಲದೆ ಅದು ಹಾಸನ ಹೊಳೇನರಸೀಪುರ ತಾಲ್ಲೂಕುಗಳ ನೂರಾರು ಗ್ರಾಮಗಳಿಗೂ ಹರಡಿತು. ಶ್ರೀಗಳವರ ಶಿವಪೂಜೆ ಆದ ನಂತರ ಸಭೆ ಸಮಾರಂಭಗಳು ಏರ್ಪಡತೊಡಗಿದವು. ಸಮಾರಂಭಗಳಲ್ಲಿ ಶ್ರೀಗಳು ಸಮಾಜ ಜೀವನದ ನೈತಿಕ ವಿಷಯಗಳಿಂದ ಹಿಡಿದು ವೀರಶೈವ ಧರ್ಮದ ಮೂಲ ತತ್ವಗಳು, ಬಸವಣ್ಣನವರು ನಡೆಸಿದ ಕ್ರಾಂತಿ, ಶರಣ ಧರ್ಮ, ಕಾಯಕ ನಿಷ್ಠೆ, ಆತ್ಮ ಸಾಕ್ಷಾತ್ಕಾರದವರೆಗೆ ವಿವಿಧ ವಿಷಯದ ಬಗ್ಗೆ ಭಾಷಣ ಮಾಡಿ ಜನರನ್ನು ಸುಸಂಸ್ಕೃತರನ್ನಾಗಿ ಮಾಡುವ ದಿಸೆಯಲ್ಲಿ ಒಂದು ಆಂದೋಲನವನ್ನೇ ಮಾಡಿದರೆನ್ನಬಹುದು. ಶ್ರೀಗಳವರು ಜಗದ್ಗುರು ಮುಂತಾದ ಉಪಾಧಿಗಳನ್ನು ಹೊಂದದೆ ಅಟ್ಟಹಾಸ ವೈಭವಗಳ ಪ್ರತೀಕವಾದ ಅಡ್ಡ ಪಲ್ಲಕ್ಕಿ ಉತ್ಸವಗಳನ್ನು ನಿರಾಕರಿಸಿ, ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ಕೊಟ್ಟು ಜನರ ಬಾಳು ಹಸನು ಮಾಡುವುದಕ್ಕಾಗಿ ಸರಳ ಸುಂದರವಾದ ಕಾರ್ಯಕ್ರಮಗಳ ಏರ್ಪಾಟಿಗೆ ಪ್ರೋತ್ಸಾಹ ನೀಡುತ್ತಿದ್ದುದು ಜನರಿಗೆ ಚೆನ್ನಾಗಿ ಹಿಡಿಸಿತು. ಧಾರ್ಮಿಕ ಗುರುಗಳಲ್ಲಿ ಇವರು ಆದರ್ಶ ಪ್ರಾಯರೆಂದು ವೀರಶೈವರೇ ಅಲ್ಲದೆ ಪ್ರತಿಯೊಂದು ಕೋಮಿನವರೂ ಇವರ ಬಗ್ಗೆ ಗೌರವ ತಾಳುವಂತಾಯಿತು. ಇವರ ಸದ್ವಿವೇಕ, ಪರಮತ ಸಹಿಷ್ಣುತೆ, ಮಾನವ ಪ್ರೇಮ ಎಲ್ಲಾ

ಜನಾಂಗದವರಿಗೂ ಮೆಚ್ಚುಗೆ ಆದವು. ಕಾವಿ ಕಫನಿತೊಟ್ಟು, ತಲೆಗೆ ಪಾವುಡ ಧರಿಸಿ, ಕಾಲಿಗೆ ಅವುಗೆ ಮೆಟ್ಟಿ, ಭವ್ಯ ನಿಲುವಿನ, ಅಪೂರ್ವ ತೇಜಸ್ಸಿನ ಈ ಮಠಾಧೀಶರು ಈ ರೀತಿಯಲ್ಲಿ ಮಲೆನಾಡಿನ ಜನರ ಆರಾಧ್ಯ ದೈವವಾಗುವುದರಲ್ಲಿ ಆಶ್ಚರ್ಯವಿಲ್ಲ.

ಶ್ರೀಗಳವರ ಪಾದಸ್ಪರ್ಶದಿಂದ ಮಂಕು ಕವಿದಿದ್ದ ಅನೇಕ ಗಣ್ಯ ಮನೆತನಗಳು ಚೇತರಿಸಿಕೊಂಡವು. ಇವುಗಳಲ್ಲಿ ಬೇಲೂರು ತಾಲ್ಲೂಕು ನಾರ್ವೆ ಮನೆತನವೂ ಒಂದು. ಹಿಂದೆ ಮೈಸೂರು ಒಡೆಯರು, ಹೈದರ್, ಟಿಪ್ಪುಸುಲ್ತಾನ್ ಕಾಲದಿಂದಲೂ ಮೂವತ್ತಾರು ಹಳ್ಳಿಗಳಿಗೆ ನಾಡುಪಟೇಲರಾಗಿದ್ದು ಈ ಮನೆತನದವರು ಶೂರರೂ ಪರಾಕ್ರಮಿಗಳೂ, ನ್ಯಾಯನಿಷ್ಠರಾಗಿ ಬಾಳಿದ ಆ ಪ್ರದೇಶ ನಾರ್ವೆ ಗ್ರಾಮದಲ್ಲಿ ಭವ್ಯವೂ ಸುಂದರವೂ ಆಗಿ ತನ್ನ ಗತಕಾಲದ ವೈಭವವನ್ನು ಸ್ಮರಣೆಗೆ ತರುತ್ತಿರುವವರ ಮನೆಯನ್ನು ಈಗಲೂ ನಾವು ನೋಡಬಹುದು. ಈ ಶತಮಾನದ ಆದಿಯಲ್ಲಿ ಮಲೇರಿಯಾ ಹಾವಳಿಯಿಂದಲೂ, ಆರ್ಥಿಕ ಪರಿಸ್ಥಿತಿಯಿಂದಲೂ ಆ ಮನೆತನವು ನೆಲಕಚ್ಚಿತ್ತು. ಶ್ರೀ ಸಿದ್ಧಗಂಗಾ ಮಠಾಧೀಶರಾದ ಶ್ರೀ ಶಿವಕುಮಾರ ಸ್ವಾಮಿಗಳವರ ಕೃಪಾಶೀರ್ವಾದದಿಂದಲೂ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ವೈ. ಧರ್ಮಪ್ಪನವರ ಸಹಾಯದಿಂದಲೂ ಕಾಂಗ್ರೆಸ್ಸಿನ ಮುಂದಾಳುಗಳಾದ ಎ.ಜಿ. ರಾಮಚಂದ್ರರಾವ್ ಮತ್ತು ನನ್ನ ಬೆಂಬಲದಿಂದಲೂ ಅದು ಪುನರುಜ್ಜೀವನಗೊಂಡಿತು. ಇದಕ್ಕೆಲ್ಲಾ ಆ ಮನೆತನದ ಯಜಮಾನರಾದ ನಾಡು ಪಟೇಲ್ ಮಹಾಂತಗೌಡರು ಮತ್ತು ಅವರ ಸಹೋದರರು ಮಾಡಿದ ಯತ್ನ, ನಡೆಸಿದ ಕಾರ್ಯಕ್ರಮಗಳೇ ಮುಖ್ಯ ಕಾರಣಗಳಾಗಿವೆ. ನಾರ್ವೆಯಲ್ಲಿ ಹತ್ತಾರು ಸಮಾರಂಭಗಳು, ಉದ್ಘಾಟನಾ ಕಾರ್ಯಗಳು, ಸಾಂಸ್ಕೃತಿಕ ಸಭೆಗಳು ನಡೆದಿವೆ. ಅನೇಕ ಸಮಾರಂಭಗಳು ಶ್ರೀಗಳವರ ನೇತೃತ್ವದಲ್ಲಿಯೇ ನಡೆದಿವೆ. ಆ ಸಂದರ್ಭಗಳಲ್ಲೆಲ್ಲ ಶ್ರೀಗಳವರಿಗೆ ಬಿನ್ನವತ್ತಳೆ, ವಿಜ್ಞಾಪನಾ ಪತ್ರಗಳನ್ನು ಅರ್ಪಿಸಲಾಗಿದೆ. ಅವುಗಳನ್ನು ಅವಲೋಕಿಸಿದರೆ ಶ್ರೀಗಳವರು ಮಲೆನಾಡಿನಲ್ಲಿ ಮಾಡಿರುವ ಅದ್ಭುತ ಪರಿವರ್ತನೆ ತಿಳಿದುಬರುತ್ತದೆ. ಇವೆಲ್ಲಾ ಅವರು ಮಾಡಿದ ಮನನೀಯ ಭಾಷಣದ ಪರಿಣಾಮಗಳು.

ಸಾಮಾಜಿಕ ಪ್ರಜ್ಞೆಯು ಮಠಗಳಿಗಿರಬೇಕೆಂಬುದು ಶ್ರೀಗಳವರ ನಿಲುವು. ಬರೇ ಪೂಜಾನುಷ್ಠಾನ, ಉತ್ಸವಗಳಿಗೆ ಮಠಗಳು ಸೀಮಿತವಾಗದೆ ರಾಷ್ಟ್ರಕಟ್ಟುವ ಕೆಲಸದಲ್ಲಿ ಮಠಗಳು ಮುಂದಾಗಬೇಕೆಂಬ ದೃಷ್ಟಿಯಿಂದಲೇ ಶ್ರೀಗಳವರು ದಾಸೋಹದ ಜೊತೆಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಜನರನ್ನು ವಿದ್ಯಾವಂತರನ್ನಾಗಿ ಮಾಡುವುದರ ಮೂಲಕ ಅವರನ್ನು ಉತ್ತಮ ನಾಗರಿಕರನ್ನಾಗಿ ಮಾಡಲು ಅಹರ್ನಿಶಿ ಶ್ರಮಿಸುತ್ತಿರುವುದು ಕಣ್ಣಿದ್ದವರಿಗೆ ಕಾಣಿಸುತ್ತದೆ.

ಉದ್ಯಾನ ಸ್ವಾಮಿಗಳ ಪ್ರೇರಣೆಯಂತೆ ತೋಟದ, ಗದ್ದೆ ಎಸ್ಟೇಟಿನ ಬೆಳ್ಳೂರು ದೇವಪ್ಪಗೌಡರು ಸಮಾಜದ ಪರವಾಗಿ ಸಕಲೇಶಪುರದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಅದು ೧೯೫೦ರ ದಶಕದಲ್ಲಿ ಕುಂಟುತ್ತಾ ನಡೆಯುತ್ತಿತ್ತು. ಅದನ್ನು ವ್ಯವಸ್ಥಿತವಾಗಿ ನಡೆಸಲು ಯಾರೂ ಮುಂದೆ ಬಾರದಿದ್ದ ಕಾರಣ ಸಮಾಜದ ಮುಖಂಡರು ಅದನ್ನು ಸಿದ್ಧಗಂಗಾ ಮಠಕ್ಕೆ ವಹಿಸಲು ಆಲೋಚಿಸಿದರು. ಆ ಸಂಸ್ಥೆಯ ವಿಶಿಷ್ಟ ಹಕ್ಕುಗಾರಿಕೆಯೂ ಶ್ರೀಗಳವರಿಗೆ ಇಲ್ಲದೇ ಹೋದರೆ ಅದರ ಅಭಿವೃದ್ಧಿಯಾಗುವುದಿಲ್ಲವೆಂಬ ಸಲಹೆಯನ್ನು ಶ್ರೀಗಳವರು ಒಪ್ಪಿದರು. ಅದರಂತೆ ಸಮಾಜದ ಪ್ರತಿನಿಧಿಗಳು ಆ ಸಂಸ್ಥೆಯ ಸಂಪೂರ್ಣ ಮಾಲಿಕತ್ವವನ್ನು ರಿಜಿಸ್ಟರ್ಡ್ ಪತ್ರದ ಮೂಲಕ ಶ್ರೀಗಳವರಿಗೆ ವರ್ಗಾಯಿಸಿ ಕೊಟ್ಟಿರುತ್ತಾರೆ. ಸಮಾಜದವರ ಉದಾಸೀನದಿಂದ ಹತ್ತಾರು ವರ್ಷಗಳಾದರೂ ವಿದ್ಯಾರ್ಥಿನಿಲಯದ ಖಾತೆಯು ಶ್ರೀಗಳವರ ಹೆಸರಿಗೆ ಆಗಿರಲಿಲ್ಲ. ನಾನು ವಕಾಲತ್ತು ಹಾಕಿ ಶ್ರೀಗಳವರ ಹೆಸರಿಗೆ ಅನಂತರ ಖಾತೆ ಮಾಡಿಸಿಕೊಡಲಾಯಿತು. ಈಗ ಮಲೆನಾಡು ವೀರಶೈವ ಸಂಘದವರು ಕೆಲವು ವರ್ಷಗಳಿಂದ ಲಕ್ಷಾಂತರ ರೂಪಾಯಿಗಳನ್ನು ವರ್ಷಂಪ್ರತಿ ಸಂಗ್ರಹಿಸಿ ಸಾಮೂಹಿಕ ವಿವಾಹ ಮತ್ತು ಬಸವ ಜಯಂತಿ ಕಾರ್ಯಕ್ರಮ ನಡೆಸಲು ಶ್ರೀಗಳವರ ಪ್ರೋತ್ಸಾಹವೇ ಕಾರಣವಾಗಿದೆ.

ಶಿಲ್ಪಕಲಾ ವೈಭವದ ನೆಲೆಬೀಡಾದ ಬೇಲೂರಿನಲ್ಲಿ ಹೊಯ್ಸಳರ ಕಾಲದಲ್ಲಿ ಕೆರೆಯ ಪದ್ಮರಸರು ಪ್ರಧಾನಿಯಾಗಿ ವೀರಶೈವ ಕವಿಗಳಾದ ಹರಿಹರ, ರಾಘವಾಂಕರಿಗೆ ಆಶ್ರಯ ಇತ್ತುದಲ್ಲದೆ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಆದರೆ ಬೇಲೂರಿನಲ್ಲಿ ಈಗ ವೀರಶೈವರ ಸ್ಥಿತಿ ತುಂಬಾ ಹೀನಾಯವಾಗಿದೆ. ಇದನ್ನು ಮನಗಂಡು ೧೯೩೯ ರಲ್ಲಿ ಚಿಕ್ಕಮಗಳೂರಿನ ಪ್ರೊಫೆಸರ್ ಪಟೇಲ್ ದೇವಪ್ಪಗೌಡರು ಮತ್ತು ಮೇದೂರು ರಾಮೇಗೌಡರು ಬೆಂಬಲವಿತ್ತರು. ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ದಿವಾನರಾಗಿದ್ದ ಸರ್ ಮಿರ್ಜಾರವರು ಶಂಕುಸ್ಥಾಪನೆ ಮಾಡಿದರು. ಈ ವಿದ್ಯಾರ್ಥಿನಿಲಯವನ್ನೂ ಸಹ ಸಮಾಜದ ಪ್ರತಿನಿಧಿಗಳು ರಿಜಿಸ್ಟರ್ಡ್

ಪತ್ರದ ಮೂಲಕ ಸಿದ್ಧಗಂಗಾ ಶ್ರೀಗಳವರಿಗೆ ವರ್ಗಾಯಿಸಿ ಕೊಟ್ಟಿದ್ದಾರೆ. ಅನೇಕ ವರ್ಷಗಳು ಕಳೆದಿದ್ದರೂ ಶ್ರೀಗಳವರ ಹೆಸರಿಗೆ ಈ ಸ್ವೊತ್ತಿನ ಖಾತೆ ಆಗಿರಲಿಲ್ಲ. ಸಮಾಜದ ಕೆಲವು ದುಷ್ಟ ಶಕ್ತಿಗಳನ್ನು ಉಪಯೋಗಿಸಿಕೊಂಡು ಮಠಾಧೀಶರೊಬ್ಬರು ಇದರ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಉದ್ಯುಕ್ತರಾದರು. ಇದು ನನಗೆ ಗೊತ್ತಾಗಿ ಶ್ರೀಗಳವರ ಪರ ವಕಾಲತ್ತು ಹಾಕಿ ಖಾತೆಯನ್ನು ಶ್ರೀಗಳವರ ಹೆಸರಿಗೆ ಮಾಡಿಸಿಕೊಟ್ಟಿರುತ್ತೇನೆ. ಈ ವಿದ್ಯಾರ್ಥಿನಿಲಯದ ಖಾಲೀ ಜಾಗವನ್ನು ಸರ್ಕಾರದವರು ಅಕ್ವೈರ್ ಮಾಡಿಕೊಳ್ಳಲು ಎರಡು ಸಾರಿ ಪ್ರಯತ್ನಿಸಿದಾಗ ಸ್ಥಳದ ಶಾಸಕರಾದ ಬಿ.ಹೆಚ್. ಲಕ್ಷ್ಮಣಯ್ಯನವರ ಸಹಾಯ ಪಡೆದು ಅದು ಆಗದಂತೆ ಮಾಡಿರುತ್ತೇನೆ. ಈ ವಿದ್ಯಾರ್ಥಿನಿಲಯದ ಆವರಣದಲ್ಲಿ ಸಮಾಜದ ಉಪಯೋಗಕ್ಕಾಗಿ ಒಂದು ಕಲ್ಯಾಣಮಂಟಪ ಆಗಬೇಕಾಗಿದೆ. ಇವೆಲ್ಲಾ ಆಗಬೇಕಾದರೆ ಶ್ರೀಗಳವರು ಒಂದು ಟ್ರಸ್ಟನ್ನು ನಿರ್ಮಿಸುವುದು ಸೂಕ್ತವೆಂಬುದು ನನ್ನ ಭಾವನೆ.

ಡಿ. ದೇವರಾಜ ಅರಸರ ಮಂತ್ರಿಮಂಡಳದಲ್ಲಿ ವಿದ್ಯಾ ಸಚಿವರಾಗಿದ್ದ ಎಂ. ಮಲ್ಲಿಕಾರ್ಜುನ ಸ್ವಾಮಿಯವರು ವಿಧಾನಸಭೆಯಲ್ಲಿ ಒಂದು ಹೇಳಿಕೆ ನೀಡಿ ಸಿದ್ಧಗಂಗಾ ಮಠದ ವಿದ್ಯಾರ್ಥಿ ನಿಲಯದಲ್ಲಿ ಆಹಾರ ವಿತರಣೆಯಲ್ಲಿ ತಾರತಮ್ಯ ನಡೆಯುತ್ತಿರುವುದಲ್ಲದೆ ಹಿಂದುಳಿದ ವರ್ಗದ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಹೀನಾಯವಾಗಿ ಕಾಣಲಾಗುತ್ತಿರುವುದರಿಂದ ಆ ವಿದ್ಯಾರ್ಥಿ ನಿಲಯದ ಬಡ ಹುಡುಗರಿಗೆ ಕೊಡುತ್ತಿರುವ ಗ್ರಾಂಟನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಪರ್ಯಾಲೋಚಿಸುತ್ತಿದೆ ಎಂಬ ಗಂಭೀರ ಆರೋಪ ಹೊರಿಸಿ ಮಾತನಾಡಿದ್ದರು. ಆ ಸಮಯದಲ್ಲಿ ತಿಪಟೂರು ಕ್ಷೇತ್ರದ ಶಾಸಕ ಟಿ.ಎಂ. ಮಂಜುನಾಥ್ ಮತ್ತು ನಾನು ಅದನ್ನು ತೀವ್ರವಾಗಿ ಪ್ರತಿಭಟಿಸಿ ಸಚಿವರ ಆಪಾದನೆ ಪೂರ್ವಾಗ್ರಹ ಪೀಡಿತವಾದುದೆಂದೂ, ಆಧಾರ ರಹಿತವಾದುದೆಂದು ತಿಳಿಸಿ, ಮಠದ ವಿದ್ಯಾರ್ಥಿ ನಿಲಯದಲ್ಲಿ ಎಲ್ಲರಿಗೂ ಏಕರೀತಿಯಲ್ಲಿ ಆಹಾರ ವಿತರಣೆ ನಡೆಯುತ್ತಿರುವ ಸಂಗತಿಯನ್ನು ಸಭೆಗೆ ಕಳಿಸಿದ್ದೆವು. ಆದರೆ ಸಚಿವರ ಈ ಹೇಳಿಕೆಯು ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನೋಡಿ ಶ್ರೀ ಶಿವಕುಮಾರ ಸ್ವಾಮಿಗಳು ತುಂಬಾ ನೊಂದುಕೊಂಡರು. ಪತ್ರಿಕಾ ಗೋಷ್ಠಿಯನ್ನು ಕರೆದು ತಾವು ಇನ್ನು ಮುಂದೆ ಗ್ರಾಂಟು ತೆಗೆದುಕೊಳ್ಳುವುದಿಲ್ಲವೆಂದು ಘೋಷಿಸಿಯೇ ಬಿಟ್ಟರು. ಎರಡು ಮೂರು ವರ್ಷ ಗ್ರಾಂಟು ಇಲ್ಲದೆ ಜೋಳಿಗೆಯ ಬಲದಿಂದಲೇ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದರು.

ಆಗಲೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲಿಲ್ಲ. ಒಂದು ವರ್ಷ ಕ್ಷಾಮದ ಪರಿಸ್ಥಿತಿ ಒದಗಿದ್ದುದರಿಂದ ಹೊರಗಿನಿಂದ ಮಠದ ದಾಸೋಹಕ್ಕೆ ಬರುವವರ ಸಂಖ್ಯೆ ಜಾಸ್ತಿ ಆಯಿತು. ಇದನ್ನೆಲ್ಲಾ ಸರಿದೂಗಿಸಲು ಶ್ರೀಗಳು ಹಗಲಿರುಳು ಕಷ್ಟ ಪಡುವುದನ್ನು ನೋಡಲಾಗದೆ ಆಡಳಿತಾಧಿಕಾರಿಗಳಾಗಿದ್ದ ಶ್ರೀ ಜಿ. ನಂಜಪ್ಪನವರು ಈ ವಿಷಯವನ್ನು ನನಗೆ ತಿಳಿಸಿದರು. ನಾನು ಆ ವಿಚಾರವನ್ನು ಮುಖ್ಯಮಂತ್ರಿ ದೇವರಾಜ ಅರಸರಲ್ಲಿ ಪ್ರಸ್ತಾಪಿಸಿದೆನು. ಅವರು ಮಠದ ಪರವಾಗಿ ಭಕ್ತಾದಿಗಳಿಂದಲಾದರೂ ಮನವಿ ಬಂದರೆ ಅದನ್ನು ಪರಿಗಣಿಸಿ ಪರಿಹಾರ ನೀಡುವ ಭರವಸೆ ನೀಡಿದರು. ನಾನು ಮನವಿಯನ್ನು ತಯಾರಿಸಿ ರುಜು ಹಾಕಿದ್ದಲ್ಲದೆ ಸುಮಾರು ೩೫ ಶಾಸಕರ ಸಹಿ ಪಡೆದು ಆಡಳಿತಾಧಿಕಾರಿಗಳ ಕೈಗೆ ನೀಡಿದೆನು. ಅವರು ಅದನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಿ ಬಾಕಿಯಾಗಿದ್ದ ಮೊಬಲಗು ಪ್ರಸಕ್ತ ಸಾಲಿನ ಗ್ರಾಂಟು ಹಣ ಒಟ್ಟು ೧೪ ಲಕ್ಷ ರೂ.ಗಳನ್ನು ಸರ್ಕಾರದಿಂದ ವಿದ್ಯಾರ್ಥಿ ನಿಲಯಕ್ಕೆ ಪಡೆದರು. ಇದು ಶ್ರೀಗಳವರಿಗೆ ತಿಳಿದಿದೆ. ಈ ಸಮಯದಲ್ಲಿ ಆಡಳಿತಾಧಿಕಾರಿಗಳಾಗಿದ್ದ ಜಿ. ನಂಜಪ್ಪನವರ ಸಮಯಪ್ರಜ್ಞೆ, ಕರ್ತವ್ಯ ದೃಷ್ಟಿ, ಮಠಕ್ಕೆ ನಿಷ್ಠಾಪೂರ್ವಕವಾಗಿ ಸಲ್ಲಿಸಿದ ಸೇವೆಯು ಅಭಿನಂದನೀಯವಾದುದು.

ಇನ್ನು ಶ್ರೀ ಶಿವಕುಮಾರ ಸ್ವಾಮಿಗಳವರ ಘನತೆ ಗೌರವಗಳನ್ನು ಹೆಚ್ಚಿಸಿರುವ ಕೆಲವು ಪ್ರಕರಣಗಳನ್ನು ಹೇಳಿ ಈ ಲೇಖನವನ್ನು ಮುಕ್ತಾಯಗೊಳಿಸುತ್ತೇನೆ.

ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದ ಮಂಜಯ್ಯ ಹೆಗ್ಗಡೆಯವರು ೧೯೫೦ರಲ್ಲಿ ಮಹಾನವಾವಳಿ ಉತ್ಸವವನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಶ್ರೀ ಶಿವಕುಮಾರ ಸ್ವಾಮಿಗಳನ್ನು ಧರ್ಮಸ್ಥಳಕ್ಕೆ ಆಹ್ವಾನಿಸಿ ಅವರ ಪಾದಪೂಜೆ ಮಾಡಿ ಉತ್ಸವವನ್ನಾರಂಭಿಸಿದರು. ಇದು ಕೆಲವು ಮಠಾಧಿಪತಿಗಳು ಹುಬ್ಬೇರಿಸುವಂತಾಯಿತು. ಅಷ್ಟ ಮಠದ ಸ್ವಾಮಿಗಳೊಬ್ಬರು ಮಂಜಯ್ಯ ಹೆಗ್ಗಡೆಯವರನ್ನು ಈ ವಿಚಾರದಲ್ಲಿ ಪ್ರಶ್ನಿಸಿದ್ದಕ್ಕೆ ಮಂಜಯ್ಯ ಹೆಗ್ಗಡೆಯವರು ಮಂಜುನಾಥ ಸ್ವಾಮಿಯ ಪ್ರೇರಣೆಯಂತೆ ಶ್ರೀ ಶಿವಕುಮಾರ ಸ್ವಾಮಿಗಳವರನ್ನು ಕರೆಸಿ ಪಾದಪೂಜೆ ಮಾಡಿದುದಾಗಿ ಉತ್ತರಿಸಿದ್ದನ್ನು ನಾನು ಬಲ್ಲೆನು.

ನಾನು ಆ ಸಂದರ್ಭದಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಮತ್ತು ಕರ್ನಾಟಕ ಏಕೀಕರಣ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಕರ್ನಾಟಕದ ಏಕೀಕರಣವನ್ನು ಪ್ರತಿಪಾದಿಸಿ ನಾನು ಮಾತನಾಡಿದ್ದು ಇತಿಹಾಸಕ್ಕೆ ಸೇರಿ ಹೋಗಿದೆ.

೧೯೬೪ ರಲ್ಲಿ ಬೊಂಬಾಯಿ ನಗರದ ಷಣ್ಮುಗಾನಂದ ಹಾಲಿನಲ್ಲಿ ನಡೆದ ೧೮ನೇ ಅ. ಭಾ. ವೀರಶೈವ ಮಹಾ ಸಮ್ಮೇಳನಕ್ಕೆ ಶ್ರೀ ಶಿವಕುಮಾರ ಸ್ವಾಮಿಗಳು ಅಧ್ಯಕ್ಷರಾಗಿದ್ದರು. ಇದನ್ನು ಕೇಂದ್ರದ ಗೃಹಮಂತ್ರಿಗಳಾಗಿದ್ದ ವೈ.ಬಿ. ಚವ್ಹಾಣರು ಉದ್ಘಾಟಿಸಿದರು. ಸಿರಿಗೆರೆಯ ಹಿಂದಿನ ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳು ಆ ಸಮಾರಂಭದ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷ ಭಾಷಣವು ಚಿಕ್ಕದಾದರೂ ತುಂಬ ಗಹನ ವಿಷಯಗಳನ್ನೊಳಗೊಂಡಿತ್ತು. ಈ ಸಮ್ಮೇಳನದಿಂದ ಹೊರನಾಡು ವೀರಶೈವರಿಗೆ ತುಂಬ ಪ್ರಯೋಜನವಾಯಿತಲ್ಲದೆ ಶ್ರೀ ಶಿವಕುಮಾರ ಸ್ವಾಮಿಗಳು ಏರಿರುವ ಎತ್ತರಕ್ಕೆ ಇದು ನಿದರ್ಶನವಾಯಿತು.

ಸಿದ್ಧಗಂಗಾಮಠದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು ಮಾಡುತ್ತಿರುವ ಕೆಲಸಗಳನ್ನು ನೋಡುವ ಬಯಕೆ ಶೃಂಗೇರಿ ಪೀಠದ ೩೫ನೇ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರಿಗೆ ಉಂಟಾದ ಮೇಲೆ ಅವರು ಸಿದ್ಧಗಂಗಾ ಮಠಕ್ಕೆ ಆಗಮಿಸಿ ಅಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಗಳನ್ನು, ಸಂಸ್ಕೃತ ಕಾಲೇಜು ಮತ್ತು ವಿದ್ಯಾರ್ಥಿಗಳು ಮಾಡುವ ಸಾಮೂಹಿಕ ಪ್ರಾರ್ಥನೆಯನ್ನು ನೋಡಿ ತುಂಬಾ ಹರ್ಷಪಟ್ಟರು. ಅಲ್ಲದೆ ಶ್ರೀ ಶಿವಕುಮಾರ ಸ್ವಾಮೀಜಿಯವರನ್ನು ಶೃಂಗೇರಿ ಮಠಕ್ಕೆ ಆಹ್ವಾನಿಸಿ ಅವರನ್ನು ಗೌರವಿಸಿದರು. ಇಲ್ಲಿಯವರೆಗೆ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿ ಜಗದ್ಗುರುಗಳು ವೀರಶೈವ ಮಠಕ್ಕೆ ಭೇಟಿ ನೀಡಿದುದಾಗಲಿ,ವೀರಶೈವ ಮಠಾಧಿಪತಿಗಳನ್ನು ಶೃಂಗೇರಿ ಮಠಕ್ಕೆ ಆಹ್ವಾನಿಸಿ ಗೌರವಿಸಿದ್ದಾಗಲೀ ಇರಲಿಲ್ಲ. ಇಂತಹ ಮಹೋನ್ನತ ಗೌರವ ಶ್ರೀ ಶಿವಕುಮಾರ ಸ್ವಾಮಿಗಳವರಿಗೆ ಲಭಿಸಿದ್ದು ಅವರ ಘನತೆ ಗೌರವಗಳು ಇಡೀ ರಾಷ್ಟ್ರಕ್ಕೆ ಗೊತ್ತಾಯಿತು.

ಇನ್ನು ಸಿದ್ಧಗಂಗಾ ಮಠಕ್ಕೆ ಭೇಟಿ ಇತ್ತ ರಾಷ್ಟ್ರ ನಾಯಕರು, ಮಠಾಧಿಪತಿಗಳು, ರಾಜಕೀಯ ಮುತ್ಸದ್ದಿಗಳು, ಸಮಾಜ ಸೇವಕರು, ಸಾಹಿತಿಗಳಿಗೆ ಲೆಕ್ಕವಿಲ್ಲ. ರಾಷ್ಟ್ರಪತಿ ಸಂಜೀವರೆಡ್ಡಿ, ಉಪರಾಷ್ಟ್ರಪತಿ ಬಿ.ಡಿ. ಜತ್ತಿ, ಶಂಕರ್ ದಯಾಳ್ ಶರ್ಮ, ರಾಷ್ಟ್ರ ನಾಯಕ ಹಾಗೂ ಹಿರಿಯ ರಾಜಕೀಯ ಮುತ್ಸದ್ದಿ ಎಸ್. ನಿಜಲಿಂಗಪ್ಪ, ಕೇಂದ್ರ ಸಚಿವರಾದ ವೀರೇಂದ್ರ ಪಾಟೀಲ್, ಸಿ.ಕೆ. ಜಾಫರ್ ಷರೀಫ್, ರಾಜ್ಯಪಾಲರುಗಳಾದ ವಿ.ವಿ. ಗಿರಿ, ಧರ್ಮವೀರ, ಮೋಹನ್‌ಲಾಲ್ ಸುಖಾಡಿಯಾ, ಪಿ. ವೆಂಕಟಸುಬ್ಬಯ್ಯ ಮುಂತಾದವರೂ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿ, ಕೆ. ಹನುಮಂತಯ್ಯ, ಡಿ. ದೇವರಾಜ ಅರಸು, ರಾಮಕೃಷ್ಣ ಹೆಗ್ಗಡೆ, ಹೆಚ್.ಡಿ. ದೇವೇಗೌಡ ಮುಂತಾದವರು, ಮಿಗಿಲಾಗಿ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರೂ, ಅವರ ಹಿರಿಯ ಧರ್ಮ ಪತ್ನಿ ಸತ್ಯಪ್ರೇಮ ಕುಮಾರಿಯವರೂ, ಸುತ್ತೂರು, ಸಿರಿಗೆರೆ, ಮೂರುಸಾವಿರ ಮಠ, ತೋಂಟದಾರ್ಯಮಠ, ಚಿತ್ರದುರ್ಗದ ಮುರುಘಾಮಠ, ಆನಂದಪುರದ ಮುರುಘಾಮಠ, ಚಿತ್ತರಗಿ ಮಹಂತೇಶ ಮಠ, ಬೆಳಗಾವಿಯ ನಾಗನೂರು ಮಠ ಹಾಗೂ ಧಾರವಾಡದ ಹಾವೇರಿ ಪೇಟೆಯ ಮುರುಘಾಮಠ ಮುಂತಾದ ಪ್ರತಿಷ್ಠಿತ ಮಠಾಧೀಶರೂ, ನೂರಾರು ಮಂತ್ರಿ ಮಹೋದಯರೂ ಲೋಕಸಭೆಯ ಸ್ಪೀಕರ್ ಶಿವರಾಜ ಪಾಟೀಲರೂ, ಡೆಪ್ಯುಟಿ ಸ್ಪೀಕರ್ ಎಸ್. ಮಲ್ಲಿಕಾರ್ಜುನಯ್ಯನವರೂ, ಕೈಗಾರಿಕೋದ್ಯಮಿಗಳಾದ ಜಿ.ಡಿ. ಬಿರ್ಲಾ, ಕಲ್ಯಾಣಿ ಸಿಂಡಿಕೇಟ್ ಸದಸ್ಯರಾಗಿದ್ದ ಪಾಟೀಲ್ ಪುಟ್ಟಪ್ಪನವರ ಪ್ರಬಲ ಪ್ರಯತ್ನವೂ, ಮಾಮ್ಲೆ ದೇಸಾಯಿ, ಪಿ.ಎಂ. ನಾಡಗೌಡ, ಚೆ.ಬಿ.ಮಲ್ಲಾರಾಧ್ಯ ಮತ್ತು ಈ ಲೇಖಕನ ಬೆಂಬಲವೂ ಕಾರಣವಾಗಿದೆ. ಇಂತಹ ಗೌರವಕ್ಕೆ ಪಾತ್ರರಾದ ಮಠಾಧಿಪತಿಗಳಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳೇ ಪ್ರಥಮರಾಗಿದ್ದಾರೆ.

ಇನ್ನು ಇವರು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸುತ್ತಿರುವ ಬಸವ ಜಯಂತಿ ಕಾರ್ಯಕ್ರಮಗಳು, ಬಸವೇಶ್ವರ ನಾಟಕ ಪ್ರಯೋಗಗಳು ಅದ್ವಿತೀಯವೆನಿಸಿವೆ. ಈ ಬಗ್ಗೆ ಶ್ರೀಗಳವರ ಕಳಕಳಿ, ನಿಷ್ಠೆ, ಬಸವಣ್ಣನವರ ಬಗ್ಗೆ ಅವರಿಗಿರುವ ಗೌರವಗಳು ವರ್ಣಿಸಲಸದಳವಾಗಿವೆ.

ಅತ್ಯುತ್ತಮ ವಾಗ್ಮಿಗಳೂ, ಸಾಹಿತಿಗಳೂ ಆದ ಶ್ರೀ ಶಿವಕುಮಾರ ಸ್ವಾಮಿಗಳು ೧೯೬೩ ರಲ್ಲಿ ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನ (೪೪ನೇ ಸಮ್ಮೇಳನ) ವನ್ನು ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆಸುವಂತೆ ಕನ್ನಡ ಸಾಹಿತ್ಯ ಪರಿಷತ್ತಿನವರನ್ನು ಜಿಲ್ಲಾ ಸಾಹಿತಿಗಳನ್ನು ಆಹ್ವಾನಿಸಿದರು. ರಂಗನಾಥ ಶ್ರೀನಿವಾಸ ಮುಗಳಿಯವರ ಅಧ್ಯಕ್ಷತೆಯಲ್ಲಿ ನಡೆದ ಆ ಸಮ್ಮೇಳನದ ಸಂಪೂರ್ಣ

ಯಶಸ್ಸಿಗೆ ಶ್ರೀ ಶಿವಕುಮಾರ ಸ್ವಾಮಿಗಳವರು ಬಹಳವಾಗಿ ಶ್ರಮಿಸಿದರು. ಸಿದ್ಧಗಂಗೆಯ ಆದರ ಆತಿಥ್ಯಗಳಿಂದ ಅಲ್ಲಿ ನೆರೆದಿದ್ದ ಕನ್ನಡ ಸಾಹಿತಿಗಳೆಲ್ಲಾ ಸಂತುಷ್ಟರಾದರು. ಬಂದಿದ್ದ ಪ್ರತಿನಿಧಿಗಳಿಗೆ ಊಟ, ವಸತಿ ಸೌಕರ್ಯವನ್ನು ಬಹು ತೃಪ್ತಿಕರವಾಗಿ ಮಾಡಿದ್ದಲ್ಲದೆ ರಂ. ಶ್ರೀ. ಮುಗಳಿಯವರು, ಅವರ ಧರ್ಮಪತ್ನಿ ಹಾಗೂ ಅವರ ಕುಟುಂಬ ವರ್ಗದವರಿಗೆ ಮಠದ ಅತಿಥಿ ಗೃಹದಲ್ಲಿ ಬಿಡಾರ ಮಾಡಿಸಿ ಅವರ ಯೋಗಕ್ಷೇಮವನ್ನು ಸ್ವತಃ ಶ್ರೀಗಳವರೇ ನೋಡಿಕೊಂಡದ್ದನ್ನು ಮುಗಳಿಯವರು ತಮ್ಮ ಮುಕ್ತಾಯ ಭಾಷಣದಲ್ಲಿ ಪ್ರಸ್ತಾಪಿಸಿ ಶ್ರೀಗಳವರಿಗೆ ಕೃತಜ್ಞತೆ ಅರ್ಪಿಸಿದರು. ಶ್ರೀಗಳವರ ಔದಾರ್ಯ ಹಾಗೂ ಸಾಹಿತ್ಯ ಪ್ರೇಮವನ್ನು ಮುಗಳಿಯವರೂ, ಆ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಎಲ್ಲಾ ಸಾಹಿತಿಗಳೂ ಬಹಳ ಕಾಲ ಹೋದ ಕಡೆಗಳಲ್ಲೆಲ್ಲಾ ಪ್ರಶಂಸೆ ಮಾಡಿ ಮಾತನಾಡಿದರು. ಹೀಗಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕೀರ್ತಿ ಪ್ರಸರಿಸಿತು.

ನಾನು ಸಿದ್ಧಗಂಗೆಯಲ್ಲಿ ನಡೆದ ಅನೇಕ ಸಮಾರಂಭಗಳಲ್ಲಿ ಭಾಗವಹಿಸಿದ್ದೇನೆ. ನಾಲ್ಕಾರು ಸಭೆಗಳಲ್ಲಿ ಭಾಷಣ ಮಾಡಿರುತ್ತೇನೆ. ಸಿದ್ಧಗಂಗಾ ಮಠಾಧ್ಯಕ್ಷರು ಕರ್ನಾಟಕದ ಏಕೀಕರಣಕ್ಕೆ ನಾನು ಹೋರಾಟ ನಡೆಸುತ್ತಿದ್ದಾಗ ಬೆಂಬಲ ನೀಡಿ ಆಶೀರ್ವದಿಸಿರುತ್ತಾರೆ.

ಶ್ರೀ ಶಿವಕುಮಾರ ಸ್ವಾಮಿಗಳು ಎಲ್ಲಾ ಕೆಲಸಗಳನ್ನು ತಾವೇ ಮಾಡುವುದರಿಂದ ಅವರಿಗೆ ಗ್ರಂಥ ರಚನೆ ಮಾಡುವುದಕ್ಕಾಗಲೀ, ತಮ್ಮ ಜ್ಞಾನಾನುಭವಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ವಿದೇಶಗಳಲ್ಲಿ ಪ್ರವಾಸ ಮಾಡುವುದಕ್ಕಾಗಲೀ ಕಾಲಾವಕಾಶವೇ ಸಿಕ್ಕಿಲ್ಲ. ಇದರಿಂದ ಕನ್ನಡ ನಾಡಿಗೂ,ಸಮಾಜಕ್ಕೂ ತುಂಬ ನಷ್ಟವಾಗಿದೆ. ಆದ್ದರಿಂದ ಶ್ರೀಗಳು ತಮ್ಮ ಒಳನೋಟದಿಂದ ಉತ್ತಮ ಸಮಾಜ ಸೇವಕರನ್ನು ಗುರುತಿಸಿ ಅವರಿಗೆ ಕೆಲವು ಜವಾಬ್ದಾರಿಗಳನ್ನು ಹೊರಿಸಿ ತಮ್ಮ ಕಾರ್ಯ ಬಾಹುಳ್ಯವನ್ನು ಕಡಿಮೆ ಮಾಡಿಕೊಂಡು ಗ್ರಂಥ ರಚನೆಗೆ ತೊಡಗಿದರೆ ಸಮಾಜಕ್ಕೆ ಮಹೋಪಕಾರವಾಗುತ್ತದೆ. ಬಿಡುವು ಕಲ್ಪಿಸಿಕೊಂಡು ಪರದೇಶಗಳಿಗೂ ಹೋಗಿ ಬರಬಹುದಾಗಿದೆ.

ಶ್ರೀ ಶಿವಕುಮಾರ ಚರಿತಂ ಎಂಬ ಒಂದು ಶ್ರೇಷ್ಠ ಗ್ರಂಥವನ್ನು ಷಟ್ಪದಿಯಲ್ಲಿ ಪಿ. ಬಸವಣ್ಣನವರು ರಚಿಸಿ ಶ್ರೀಗಳವರ ಸಿದ್ಧಿ ಸಾಧನೆಗಳನ್ನು ಸಾದ್ಯಂತ ನಿರೂಪಿಸಿರುತ್ತಾರೆ. ಈಗ ಪಿ. ಬಸವಣ್ಣನವರು ಸನ್ಯಾಸ ಸ್ವೀಕರಿಸಿ ಕುಮಾರ ನಿಜಗುಣರಾಗಿ ಪ್ರಜ್ವಲಿಸುತ್ತಿದ್ದಾರೆ.

ಒಟ್ಟಿನಲ್ಲಿ ಧಾರ್ಮಿಕ ಮಠಾಧೀಶರೊಬ್ಬರು ಈ ಪರಿ ದೃಢಸಂಕಲ್ಪದಿಂದ ಎಂಥ ಅದ್ಭುತ ಸಾಧಿಸಬಲ್ಲರೆಂಬುದಕ್ಕೆ ಸಿದ್ಧಗಂಗಾ ಮಠಾಧ್ಯಕ್ಷರಾಗಿ ೧೯೩೦ ರಿಂದಲೂ ಪರಿಶೋಭಿಸುತ್ತಿರುವ ಶ್ರೀ ಶಿವಕುಮಾರ ಸ್ವಾಮಿಗಳವರೇ ಜ್ವಲಂತ ಉದಾಹರಣೆಯಾಗಿದ್ದಾರೆ. ಅವರ ಅಮೋಘ ಕೆಲಸಗಳು ನಿರ್ಬಾಧಿತವಾಗಿ ಚಿರಕಾಲ ಮುಂದುವರೆಯಲೆಂದು ಪರಶಿವನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ನಡೆದಾಡುವ ದೇವರು

ನ್ಯಾಯಮೂರ್ತಿ ಕೊ.ಬ. ನಾವದಗಿ

ಶ್ರೀ ಸಿದ್ಧಗಂಗಾ ಕ್ಷೇತ್ರದ ಪುಣ್ಯಮಠಗಳಂತಹ ಧರ್ಮ ಹಾಗೂ ಅಧ್ಯಾತ್ಮದ ಕೇಂದ್ರಗಳು, ನಿರಾಶೆಯಿಂದ ಆವೃತವಾದ ವಾತಾವರಣದಲ್ಲಿ ಆಶಾಕಿರಣವನ್ನು ಹೊತ್ತಿಸಿ, ಕರಾಳವಾದ ಗಾಢಾಂಧಕಾರ ಹೊಂದಿದ ರಾತ್ರಿಯಲ್ಲಿ, ತೇಜಸ್ಸು ಓಜಸ್ಸಿನಿಂದ ಪ್ರಜ್ವಲಿಸುವ ಪ್ರಖರತೆಯ ತಾರೆಗಳಾಗಿ, ಸ್ಥಿರವಾದ, ಭದ್ರವಾದ ಬುನಾದಿಯ ಮೇಲೆ ನಿಂತು, ಜನತೆಗೆ ಸನ್ಮಾರ್ಗದಲ್ಲಿ, ಪರಸ್ಪರ ಆದರ ಗೌರವಗಳೊಂದಿಗೆ, ಭ್ರಾತೃತ್ವದ ಆದರ್ಶದ ಅಡಿಯಲ್ಲಿ ಬದುಕುವಂತೆ, ಚೇತನ ನೀಡುವ ಸ್ಫೂರ್ತಿಸೆಲೆಗಳಾಗಿ, ಸಮಾಜದಲ್ಲಿ ಶಾಂತಿ ನೆಮ್ಮದಿ ಸೌಹಾರ್ದತೆ ನೆಲೆಸಿ ಜನತೆಗೆ ಸುಖ, ಸಂತೋಷ ತರಲು ಬೇಕಾದ ಸ್ಥೈರ್ಯ, ಧೈರ್ಯ, ದೃಢತೆಯನ್ನು ಕೊಡುವ ಕೊಡುಗ್ಯೆಕೇಂದ್ರಬಿಂದುಗಳಾಗಿ ಕಾರ್ಯಮಾಡಿದ ಸಂಗತಿಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಂತಹ ಮಠಗಳು ಸಂಕುಚಿತ ದೃಷ್ಟಿಯನ್ನು ಹೊಂದಿ, ಕೇವಲ ಜಾತಿ ಮತಗಳ ಪ್ರಸಾರದ ಕೇಂದ್ರಗಳಾಗದೆ, ಧರ್ಮಸಂಸ್ಥಾಪನೆಯ ಅಸದೃಶ ಆಗರಗಳಾಗಿ ಕೆಲಸ ಮಾಡಿದ್ದು ಎಲ್ಲರೂ ಒಪ್ಪಲೇ ಬೇಕಾದ ಮಾತು. ಕರ್ನಾಟಕದಲ್ಲಿಯ ಮಠಗಳು ಕನ್ನಡ ನಾಡಿನ ಸಂಸ್ಕೃತಿಯ ಸರ್ವತೋಮುಖ ಅಭ್ಯುದಯಕ್ಕೆ ಅನೇಕ ಕ್ಷೇತ್ರಗಳಲ್ಲಿ ವೈವಿಧ್ಯಮಯವಾದ ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾದ ಆಧಾರದ ಮೇಲೆ ಅದ್ವಿತೀಯ ಸೇವೆ ಮಾಡಿವೆ. ಕನ್ನಡ ನಾಡಿನ ಸಾಹಿತ್ಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಪಂಚದಲ್ಲಿ ಈ ಮಠಗಳ ಕೊಡುಗೆ ಅಪಾರ, ಅಮೋಘ ಹಾಗೂ ಆದರ್ಶಪ್ರಾಯವಾದುದು. ಈ ದೃಷ್ಟಿಯಿಂದ ಶ್ರೀ ಸಿದ್ಧಗಂಗಾ ಮಠದ ಹುಟ್ಟು ಬೆಳವಣಿಗೆ, ಅದು ಇಲ್ಲಿಯವರೆಗೆ ಕ್ರಮಿಸಿ ಬಂದ ದಾರಿ, ಸಮಾಜದ ಒಳಿತಿಗಾಗಿ ಅದು ಮಾಡಿದ ಕಾರ್ಯಗಳ ಮೇಲೆ ಕ್ಷ - ಕಿರಣ ಹಾಯಿಸಿದಾಗ ಲೋಕ ಉದ್ಧಾರಕ್ಕಾಗಿ, ಲೋಕ ಕಲ್ಯಾಣಕ್ಕಾಗಿ ಶ್ರೀಮಠ ಮಾಡಿದ ಅಪ್ರತಿಮ, ಅದ್ಭುತ ಹಾಗೂ ಪವಾಡ ಸದೃಶವಾದ ಸೇವೆಯ ಅರಿವಾಗದೇ ಇರದು.

ಸುಕ್ಷೇತ್ರ ಶ್ರೀಮಠದ ಸತ್ಸಂಪ್ರದಾಯ ಭರಿತ, ಸಮೃದ್ಧವಾದ ಹುಟ್ಟು ಬೆಳವಣಿಗೆ, ಅದು ಸಾಧಿಸಿದ ಪ್ರಗತಿ, ಮುಟ್ಟಬೇಕೆಂದು ಹಾಕಿಕೊಂಡ ಗುರಿಯ ಸಂಕಲ್ಪಸಾಧನೆಯಲ್ಲಿಯ ಅದರ ಸಿದ್ಧಿಯ ಸಿಂಹಾವಲೋಕನ ಮಾಡಿದಾಗ, ಪೂಜ್ಯ ಶ್ರೀಗಳವರ ಹಿಂದಿನ ಗುರುಗಳು ವಿಶ್ವಮಾನ್ಯ ಮೌಲ್ಯಗಳನ್ನು ಆಳವಾಗಿ ಅಳವಡಿಸಿಕೊಂಡ ಜಗತ್ತಿನ ಧರ್ಮಗಳ ವಿಸ್ತಾರವಾದ ಕ್ಷೇತ್ರಗಳಲ್ಲಿ ತನ್ನ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿಯುವ. ಅಪೂರ್ವ ಸಾಧನೆಯನ್ನು ಸಿದ್ಧಿಸಿಕೊಂಡ, ಪರಿಪೂರ್ಣವಾದ ವೀರಶೈವ ಧರ್ಮದ ಸತ್ಪರಂಪರೆಯನ್ನು ರಕ್ಷಿಸಿ ಪೋಷಿಸಿ ಬೆಳೆಸುವ ಕಠಿಣವಾದ ಕಾರ್ಯದ ಜೊತೆಗೆ, ಆದರ್ಶವಾದ ಮತ್ತು ಅನುಕರಣೀಯವಾದ ವೀರಶೈವ ಧರ್ಮದ ತತ್ವಗಳ ಶ್ರದ್ಧೆ ಅನುಷ್ಠಾನಕ್ಕೆ ಅವಿಶ್ರಾಂತವಾಗಿ ಹೆಣಗಿದುದನ್ನು ನಾವು ಕಾಣದೆ ಇರೆವು.

ವೀರಶೈವ ಸೈದ್ಧಾಂತಿಕ ತತ್ವ, ಪ್ರಸಾದ ಸದ್ಭಾವ, ಗುರು ಲಿಂಗ ಜಂಗಮ ಪ್ರಸಾದ ವೀರಶೈವರ ಸಂಪತ್ತು. ಈ ಅಧ್ಯಾತ್ಮಿಕ ಸಂಪತ್ತು ಗಳಿಸಲು ಆಚಾರ ಅಗತ್ಯ. ವೀರಶೈವರಿಗೆ ಆಚಾರವು ಪರಮ ಧರ್ಮವೂ ಹೌದು. ಪರಶಿವನ ಪ್ರತ್ಯಕ್ಷ ರೂಪವೂ ಹೌದು. ಸದಾಚಾರ ಸುಕಾರ್ಯಗಳಿಂದಲೇ ಆಧ್ಯಾತ್ಮಿಕ ಸಂಪತ್ತಿನ ಗಳಿಕೆ ಸಾಧ್ಯ. ಯೋಗಿಗಳಲ್ಲಿಯೇ ಅತಿ ಶ್ರೇಷ್ಠ ಯೋಗಿ ಎನಿಸಿಕೊಂಡ ಮಹಾಮಹಿಮ ಅಲ್ಲಮ ಪ್ರಭುಗಳು ಈ ಐದು ತತ್ವಗಳನ್ನು ಪಂಚ ಬ್ರಹ್ಮಗಳೆಂದು ಘೋಷಿಸಿದ್ದುಂಟು.

ದಾಸೋಹ ಶ್ರೀಮಠದ ಭವ್ಯ ಪರಂಪರೆ ೧೯ನೇ ಶತಮಾನದ ಆದಿಭಾಗದಲ್ಲಿ ಶ್ರೀ ಮಠದ ಪೀಠವನ್ನಲಂಕರಿಸಿದ ಅಟವಿ ಸ್ವಾಮಿಗಳು ಅನ್ನ ದಾಸೋಹ ಪ್ರಾರಂಭಿಸಿ ಕಂತೆಭಿಕ್ಷೆಯ ಸಂಪತ್ತಿನ ಮೂಲದಿಂದ ಬಡತನದ ಬೇಗೆಯಲ್ಲಿ ಬೆಂದು, ನೊಂದು ಬಳಲುತ್ತಿದ್ದ ಮಕ್ಕಳಿಗೆ ಪ್ರಸಾದ ನೀಡುವ, ಅವರನ್ನು ಸಂರಕ್ಷಿಸಿ ಪೋಷಿಸುವ ಶ್ಲಾಘನೀಯವಾದ ಪರಂಪರೆ ಪ್ರಾರಂಭಿಸಿದರು. ಅವರ ನಂತರ ಅಧ್ಯಕ್ಷ ಗದ್ದುಗೆಯನ್ನೇರಿದ ಪೂಜ್ಯ ಉದ್ದಾನ ಸ್ವಾಮಿಗಳು ಆದರ್ಶಪ್ರಾಯವಾದ ಪರಂಪರೆಗೆ ಕೂದಲೆಳೆಯಷ್ಟು ವ್ಯತ್ಯಯವಾಗದಂತೆ ಜಾಗರೂಕತೆಯನ್ನು ವಹಿಸಿ ಅದನ್ನು ವೈಭವೀಕರಿಸಿ ಮೆರೆಸಿದರು.

ಉಕ್ಕುತ್ತಿರುವ ತಾರುಣ್ಯದ ತೇಜಸ್ಸಿಗೆ ಗುರುತರವಾದ ವಿರಕ್ತಿಯ ಸಂಬಂಧ ಇಂದಿನ ಪೂಜ್ಯಶ್ರೀಗಳು ೧೯೩೦ ರಲ್ಲಿ

ಕಲಿತುಕೊಂಡರು. ವಿರಕ್ತಾಶ್ರಮದ ಕಠಿಣವಾದ ಕ್ರಮ, ಶಿಸ್ತುಬದ್ಧ ಜೀವನವನ್ನು ಶ್ರದ್ಧೆ, ನಿಷ್ಠೆ ಹಾಗೂ ಏಕಚಿತ್ತದಿಂದ ಸಾಧಿಸಿ ೧೯೪೧ ರಲ್ಲಿ ಪೂಜ್ಯಶ್ರೀಗಳು ಶ್ರೀ ಮಠದ ಪೂರ್ಣ ಜವಾಬ್ದಾರಿಯನ್ನು ಹೊತ್ತರು. ಪೂಜ್ಯಶ್ರೀಗಳು ಹಿಂದಿನ ಗುರುಗಳು ಬಿಟ್ಟು ಹೋದ ಉಜ್ವಲವಾದ ದಾಸೋಹ ಬಳುವಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ತಮ್ಮ ಘನವಾದ, ವಿರಕ್ತಿಯ ಪ್ರಭಾವದಿಂದ ಪರಿಪಕ್ವವಾದ ಆಚಾರ, ವಿಚಾರಗಳ ಸಂಪತ್ತಿನಲ್ಲಿ ತಮ್ಮ ದೂರದೃಷ್ಟಿ, ಸಂಘಟನಾ ಸಾಮರ್ಥ್ಯ ಪವಾಡಸದೃಶವಾದ ಕಾಯಕನಿಷ್ಠೆಯನ್ನು ಎರೆದು ದಾಸೋಹತತ್ತ್ವ ಶ್ರೀಮಠದ ಪವಿತ್ರವಾದ ನೆಲದ ಮೇಲೆ ಶಾಶ್ವತವಾಗಿ ವಿಜೃಂಭಿಸುವ ಮಹತ್ಕಾರ್ಯವನ್ನು ಈ ಆರು ದಶಕಗಳ ಕಾಲ ತಮ್ಮ ಅಗಮ್ಯವಾದ ಆಧ್ಯಾತ್ಮತೇಜಸ್ಸಿನಿಂದ ಅಪ್ರತಿಮವಾದ ಶಕ್ತಿಯಿಂದ ಮಾಡಿದ ವಿಷಯ ಚಿಂತಿಸಿದಾಗ ಮೈ ನವಿರೇಳುವುದು. ಇದೆಲ್ಲಾ ಶ್ರೀಗಳವರ ತಪಸ್ಸಿನ ಫಲ. ಅವರ ಅಚಲವಾದ ಯಶಸ್ವಿ ಕಾರ್ಯಾಚರಣೆಯಲ್ಲಿಯ ದೃಢವಾದ ನಂಬುಗೆ.

ಶಿಕ್ಷಣ ಮಾನವನಿಗೆ ಸಂಸ್ಕಾರ ಕೊಡುವ ಸಾಧನ. ವಿದ್ಯೆ ಮಾನವನನ್ನು ಮನುಷ್ಯನನ್ನಾಗಿ ಮಾಡುವ ಸೋಪಾನ. ಶಿಕ್ಷಣದ ಮೂಲ ಉದ್ದೇಶ ಜಗತ್ತಿನ ಆಗು ಹೋಗುಗಳನ್ನು, ಪರಿಣಿತಗಳನ್ನು ನಿರ್ವಿಕಾರ ಚಿತ್ತದಿಂದ, ನಿಷ್ಕಲ್ಮಷ ಮನಸ್ಸಿನಿಂದ ವಿವೇಕಯುತವಾದ ವಿವೇಚನಾಪೂರ್ಣವಾದ ದೃಷ್ಟಿಕೋನದಿಂದ ನೋಡುವುದು. ನಿಜವಾಗಿ ಶಿಕ್ಷಣದ ಜೊತೆಗೆ ಮನುಷ್ಯನಿಗೆ ಸ್ವಾಭಾವಿಕವಾಗಿ ತತ್ತ್ವಜ್ಞಾನದ ಅರಿವು ಬರುವುದು. ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಸಮಾಜದಲ್ಲಿ ಸ್ವಾಸ್ಥ್ಯ ಹಾಗೂ ನೆಮ್ಮದಿ ನೆಲೆಸಲು ಉಪಾಯಗಳನ್ನು ಹಾಗೂ ವಿಧಾನಗಳನ್ನು ರೂಪಿಸುವುದೇ ತತ್ತ್ವಜ್ಞಾನದ ತಿರುಳು. ಉನ್ನತವಾದ ಉದ್ದೇಶ ಹಾಗೂ ಧ್ಯೇಯ. ಜನತೆಯ ಬೇಕು ಬೇಡಗಳಿಗೆ ಸ್ಪಂದಿಸಿ, ಅವುಗಳಿಗೆ ಇಂಬು ಕೊಟ್ಟಾಗ, ತತ್ತ್ವಜ್ಞಾನ ಉದ್ದೇಶ ಇಚ್ಛಿತ ರೀತಿಯಲ್ಲಿ ಈಡೇರಿದಂತಾಗುವುದು.

ಸ್ವತಃ ಪಂಡಿತೋತ್ತಮರಾದ ಪೂಜ್ಯ ಶ್ರೀಗಳು ಶಿಕ್ಷಣದ ಮಹೋನ್ನತ ಉದ್ದೇಶದ, ಸಾಫಲ್ಯತೆ ದೇಶದ ಸರ್ವಾಂಗೀಣ ಪ್ರಗತಿಯ ಜೊತೆಗೆ ಹಾಸುಹೊಕ್ಕಾಗಿರುವ ಸಂಸ್ಕೃತಿ ಸತ್ಯತೆಯನ್ನು ಅರಿತು ಶಿಕ್ಷಣ, ದಾಸೋಹ ಬೃಹತ್ ಪ್ರಮಾಣದಲ್ಲಿ ಶ್ರೀ ಮಠದ ಪವಿತ್ರನೆಲದ ಮೇಲೆ ಪ್ರಾರಂಭಿಸುವ ಕೈಂಕರ್ಯ ಕೈಗೊಂಡರು. ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ, ಅವನು ಸಮಾಜ ಜೀವಿಯಾಗಿ ಅರ್ಥಪೂರ್ಣವಾದ ತನಗೆ ಹಾಗೂ ತನ್ನ ಸುತ್ತುವರಿದ ಜಗತ್ತಿಗೆ ಸಾರ್ಥಕವಾಗುವಂತೆ ಬದುಕಲು ಜ್ಞಾನದಾಸೋಹದ ಅಗತ್ಯ ಹಾಗೂ ಅವಶ್ಯಕತೆಯ ಅರಿವನ್ನು ಜನರಲ್ಲಿ ಮೂಡಿಸಲು, ಪೂಜ್ಯ ಶ್ರೀಗಳಿಗೆ ಬಹಳ ಸಮಯ ಬೇಕಾಗಲಿಲ್ಲ. ಪೂಜ್ಯ ಶ್ರೀಗಳು ಶ್ರೀಮಠದ ಅನ್ನ ದಾಸೋಹ ಪರಂಪರೆಗೆ ಜ್ಞಾನ ದಾಸೋಹದ ಸುಂದರವಾದ, ಭದ್ರವಾದ ಜೋಡಣೆ ಮಾಡಿದರು. ಅವರ ಯೋಚನೆ, ಯೋಜನೆಗಳು ತೀವ್ರಗತಿಯಲ್ಲಿ ಮೂರ್ತಸ್ವರೂಪ ಹೊಂದಿದವು. ಪ್ರಾಚೀನ ವೇದ, ಆಗಮ ಉಪನಿಷತ್ತುಗಳಿಂದ ಹಿಡಿದು ಆಧುನಿಕ ತಂತ್ರಜ್ಞಾನದವರೆಗೆ ಇಲ್ಲಿ ಅಧ್ಯಯನಕ್ಕೆ, ಅಭ್ಯಾಸಕ್ಕೆ, ಬೋಧನೆಗೆ ಸಂಶೋಧನಕ್ಕೆ, ಪ್ರಯೋಗಕ್ಕೆ ಅವಕಾಶ ಮಾಡಿಕೊಟ್ಟ ಶ್ರೇಯಸ್ಸು ಪೂಜ್ಯ ಶ್ರೀಗಳದು.

೧೯೧೭ ರಲ್ಲಿ ಪೂಜ್ಯ ಶ್ರೀಗಳ ಹಿಂದಿನ ಧರ್ಮಗುರುಗಳು ಪ್ರಾರಂಭಿಸಿದ ಸಂಸ್ಕೃತ ಪಾಠಶಾಲೆಯನ್ನು ಅಭಿವೃದ್ಧಿ ಪಡಿಸಿ ತರ್ಕ, ವ್ಯಾಕರಣ, ಅಲಂಕಾರ, ಶಕ್ತಿವಿಶಿಷ್ಟಾದ್ವೈತ ವೇದಾಂತಗಳಲ್ಲಿ ಅಭ್ಯಾಸ ತಿಳುವಳಿಕೆ ಬಯಸಿ ಬಂದ ವಿದ್ಯಾರ್ಥಿಗಳಿಗೆ ಸಂಸ್ಕೃತದಲ್ಲಿಯೇ ಅಧ್ಯಯನ ಮಾಡುವ ಅವಕಾಶ ಕಲ್ಪಿಸಿಕೊಟ್ಟುದು ಶ್ರೀಗಳವರ ಅದ್ಭುತ ಸಾಧನೆ. ಸಂಸ್ಕೃತ ಸತ್ತ ಭಾಷೆಯಲ್ಲ, ಜೀವಂತವಾದ ಶ್ರೀಮಂತ ಭಾಷೆ, ಎಲ್ಲ ಭಾಷೆಗಳಿಗೆ ಮಾತೃಸ್ಥಾನದಲ್ಲಿ ಇರುವ ಭಾಷೆ ಎಂಬುದನ್ನು ಶ್ರೀಗಳು ಪ್ರತ್ಯಕ್ಷ ಪ್ರಯೋಗದಿಂದ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿದ್ದಾರೆ.

ಪೂಜ್ಯ ಶ್ರೀಗಳು ನಾಡಿನ ಈ ಭಾಗದಲ್ಲಿ ಅಧ್ಯಕ್ಷ ಗದ್ದುಗೆಯಿಂದ ಶಿಕ್ಷಣ ಕ್ರಾಂತಿಯ ಕಹಳೆ ಊದಿದರು. ಅವರ ಅಮರ ವಾಣಿ, ಅಮೃತ ಸಮ ಸಂದೇಶ, ಸೂಕ್ತವಾದ ಜನತೆಯಲ್ಲಿ ಸಂಬಂಧಿಸಿದಂತೆ ಜಾಗೃತಿ ಮಾಡಿ ತುಮಕೂರು ಜಿಲ್ಲೆಯಲ್ಲಿ ಶಿಕ್ಷಣದ ಹೊಸ ವ್ಯವಸ್ಥೆಯ ಪ್ರಯತ್ನಗಳಿಗೆ ನಾಂದಿ ಹಾಡಿತು.

ಶ್ರೀ ಮಠದ ಆವರಣದಲ್ಲಿ ಜ್ಞಾನ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ಸಂಬಂಧಿಸಿದ ನಾದ, ವಿನಾದ, ಸಂವಾದ, ವಾಗ್ವಾದಗಳಿಗೆ ತುಂಬ ಇಂಬು. ಕಲಾವಿದನ ಕನಸು, ತಂತ್ರಜ್ಞಾನಿಯ ಕುಶಲತೆ, ವಿದ್ವಾಂಸನ ಜ್ಞಾನದ ಪ್ರತಿಭಾಸಂಪನ್ನವಾದ

ಪ್ರಭುತ್ವ, ಕವಿಯ ಸೃಜನಶೀಲತೆ, ಜ್ಞಾನಿಯ ಒಳನೋಟ, ಆವಿಷ್ಕಾರಶೀಲದ ಗುಣ, ಭಿನ್ನಮತವನ್ನು ಆಸ್ಥೆಯಿಂದ ಕೇಳಿ ಗೌರವಿಸುವ ಚಿಂತನೆ ಇವೇ ಮೊದಲಾದ ಅಕೃತ್ರಿಮ ಗುಣಗಳು ಪೂಜ್ಯ ಶ್ರೀಗಳವರ ದಿವ್ಯವ್ಯಕ್ತಿತ್ವದಲ್ಲಿ ಹೆಣೆದುಕೊಂಡು ಬಂದಿದ್ದು ಅವರಿಗೆ ಶೈಕ್ಷಣಿಕ ತಜ್ಞ, ಶಿಕ್ಷಣ ರಂಗದ ನಾಯಕ ಎಂಬ ಅನ್ವರ್ಥಕ ನಾಮ ನೀಡಿವೆ. ಶಿಕ್ಷಣ ರಂಗದಲ್ಲಿ ತರಬೇಕಾದ ಸುಧಾರಣೆಗಳ ಬಗ್ಗೆ ಹಾಗೂ ಹೊಸ ಆಯಾಮಗಳ ಬಗ್ಗೆ, ಸ್ವತಂತ್ರ ವಿಚಾರವೇದಿಕೆ ಶ್ರೀ ಮಠದ ಪವಿತ್ರ ಆವರಣ.

ದಾರಿದ್ರ್ಯ ಪರಿಸ್ಥಿತಿಯಲ್ಲಿ ವಿದ್ಯಾರ್ಜನೆ ಬಯಸಿ ಬಂದ ವಿದ್ಯಾರ್ಥಿಗಳಿಗೆ ಎಲ್ಲ ಆಧುನಿಕ ಸೌಲಭ್ಯಗಳೊಂದಿಗೆ ವಸತಿ ಸೌಕರ್ಯ ಕಲ್ಪಿಸಿ ಕೊಡುವುದು ಶ್ರೀಗಳವರ ಇಚ್ಛೆ. ದಾರಿದ್ರ್ಯ ಜೊತೆಗೆ ಕ್ರಮೇಣವಾಗಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿ ದಾಸೋಹ ಪ್ರಸಾದ ವಿತರಣೆಗೆ ಸೂಕ್ತವಾದ ವ್ಯವಸ್ಥೆ ಮಾಡುವುದು ಶ್ರೀಗಳವರ ಹಂಬಲ.

ವಿದ್ಯಾರ್ಥಿ ನಿಲಯಗಳಲ್ಲಿದ್ದು ದಾಸೋಹದಲ್ಲಿ ಪ್ರಸಾದ ಸ್ವೀಕರಿಸಿ, ಜ್ಞಾನಾರ್ಜನೆ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಇಂದು ಐದು ಸಾವಿರ ಮೀರಿದೆ. ಜೊತೆಗೆ ಕ್ಷೇತ್ರಕ್ಕೆ ಬಂದು ದೇವರ ದರ್ಶನ ಭಾಗ್ಯ ಪಡೆದ, ಶ್ರೀಗಳ ದರ್ಶನ ಆಶೀರ್ವಾದ ಬೇಡಿ ಮಾರ್ಗದರ್ಶನ ಪಡೆದು ಮರಳುವ ಭಕ್ತ ಸಮೂಹ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅವರಿಗೆಲ್ಲ ಕಡ್ಡಾಯವಾಗಿ ಪ್ರಸಾದದ ವ್ಯವಸ್ಥೆ ಆಗುವ ಕಟ್ಟುನಿಟ್ಟಾದ ಅಪ್ಪಣೆ ಶ್ರೀಗಳದು.

ಪೂಜ್ಯ ಶ್ರೀಗಳು ತಮ್ಮ ವಿರಕ್ತಾಶ್ರಮದ ವಜ್ರ ಮಹೋತ್ಸವದ ಆಚರಣೆಯ ಪೂರ್ವದಲ್ಲಿ ವ್ಯವಸ್ಥಿತ ವಿದ್ಯಾರ್ಥಿ ನಿಲಯಗಳ ಎಲ್ಲ ವ್ಯವಸ್ಥೆಯನ್ನೊಳಗೊಂಡ ದಾಸೋಹ ಮಂದಿರದ ನಿರ್ಮಾಣ ನಡೆದರೆ ಒಳಿತು ಎಂದು ತಮ್ಮ ಇಂಗಿತವನ್ನು ಭಕ್ತಸಮೂಹದ ಮುಂದೆ ವ್ಯಕ್ತಪಡಿಸಿದಾಗ ಭಕ್ತರು ಶ್ರೀಗಳವರ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ಕಂಕಣ ಬದ್ಧರಾದರು. ನಾಲ್ಕು ವರುಷಗಳ ಅಲ್ಪಾವಧಿಯಲ್ಲಿ ೨೦೦ ಸುಸಜ್ಜಿತ ಕೊಠಡಿಗಳ, ವಿಸ್ತಾರವಾದ ದಾಸೋಹ ಸದನದ ನಿರ್ಮಾಣ ಭರದಿಂದ ನಡೆದಿದೆ. ನಿರ್ಮಾಣ ಮುಗಿಯುವ ಹಂತದಲ್ಲಿರುವುದನ್ನು ನೋಡಿ ಎಲ್ಲರೂ ಹರುಷಪಡಬೇಕು. ಅಭಿಮಾನ ಹಾಗೂ ಹೆಮ್ಮೆ ಪಡುವಂತಹ ಈ ಕಾರ್ಯದ ಯಶಸ್ಸಿನ ಹಿಂದೆ ಶ್ರೀಗಳ ದೃಢಸಂಕಲ್ಪದ ಚೇತನ ಅಡಗಿದೆ. ಸಮಾಜದ ಒಳಿತಿಗಾಗಿ, ತಮ್ಮ ತನು, ಮನ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಓತಪ್ರೋತವಾಗಿ ೭೫ ವರ್ಷಗಳ ಕಾಲ ಧಾರೆಯೆರೆದು ಬಂದು ಶಕ್ತಿಯಾದ ಶ್ರೀಗಳವರಿಗೆ ವಜ್ರ ಮಹೋತ್ಸವದ ಶುಭ ಸಮಯಕ್ಕೆ ಸಂತೋಷ ಹಾಗೂ ಸಮಾಧಾನ ತರುವ ವಿಷಯವೆಂದರೆ ಸುಸಜ್ಜಿತವಾದ ವಿದ್ಯಾರ್ಥಿ ನಿಲಯ ಹಾಗೂ ದಾಸೋಹ ಮಂದಿರಗಳು.

ವಸತಿ ನಿಲಯಗಳ ಮತ್ತು ದಾಸೋಹ ಮಂದಿರ ನಿರ್ಮಾಣಗಳು ಶ್ರೀಮಠದ ಭವ್ಯವಾದ ಯೋಜನೆಗಳಲ್ಲಿ ಮಹತ್ವದ ಮೈಲಿಗಲ್ಲುಗಳು. ಪೂಜ್ಯ ಶ್ರೀಗಳವರ ಅಪೇಕ್ಷೆಯಂತೆ ಈ ನಿರ್ಮಾಣ ಕಾರ್ಯಗಳು .ಪೂರ್ಣವಾಗಲು ಜನತೆಯ ಭಕ್ತರ ಔದಾರ್ಯ, ದಾನಗುಣಗಳು ಧಾರಾಳವಾಗಿ ಹರಿದು ಬರಬೇಕಾಗಿದೆ. ಶ್ರೀಗಳವರ ಕನಸು ನನಸಾಗಲು ಜನ ಸಾಮಾನ್ಯರ ಶ್ರೀಮಂತರ ಸಹೃದಯದ ಕಾಣಿಕೆ, ದೇಣಿಗೆಗಳು, ಹನಿ ಹನಿಯಿಂದ ಹೊಳೆಯಾಗಿ ಹರಿದು ಬರಬೇಕು. ಪುಣ್ಯಕ್ಷೇತ್ರದ ಪ್ರಭಾವ, ಶ್ರೀಗಳವರ ಆತ್ಮಶಕ್ತಿ, ಅಮೋಘ ಸ್ಥೈರ್ಯ, ಎಲ್ಲರ ಮನ ಮುಟ್ಟಿ ಫಲ ನೀಡುವ ಭರವಸೆ ಹಾಗೂ ವಿಶ್ವಾಸ ಎಲ್ಲರಿಗಿದೆ.

ಪ್ರಕೃತಿಯ ಪರಿಶುದ್ಧವಾದ ಪರಿಸರದಲ್ಲಿ ನೆಲಸಿದ ಶ್ರೀಕ್ಷೇತ್ರ ದೇಶದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆ. ಶ್ರೀ ಮಠದ ಸಂಸ್ಥಾಪಕ ಪೀಠಾಧಿಪತಿಗಳು, ಪರಮಪೂಜ್ಯ ಶ್ರೀ ಗೋಸಲ ಸಿದ್ಧೇಶ್ವರ ಮಹಾಶಿವಯೋಗಿಗಳ ಶ್ರೇಷ್ಠತಮವಾದ ಆಧ್ಯಾತ್ಮಿಕ ಕೇಂದ್ರವೆಂದೇ ಪ್ರಸಿದ್ಧಿ ಪಡೆದ ಶ್ರೀಮಠದಲ್ಲಿ ಕಾಯಕ ತ್ರಿವಿಧ ದಾಸೋಹ, ಗ್ರಾಮಾಂತರ ಬಡ ಜನತೆಯ, ದೀನ ದಲಿತರ ಉದ್ಧಾರದ ಕಾರ್ಯಕ್ರಮಗಳು ವರುಷವಿಡೀ ನಡೆಯುವವು. ಪ್ರತಿದಿನ ಶ್ರೀ ಕ್ಷೇತ್ರಕ್ಕೆ ದಯಮಾಡಿಸಿ ಶ್ರೀಗಳವರ ಪಾದ ದರ್ಶನ ಮಾಡಿಕೊಂಡು, ಅರಸಿ ಬಂದು ಮನಸ್ಸಿನ ಶಾಂತಿಯನ್ನು ಪಡೆದು, ಶ್ರೀಗಳ ಮಾರ್ಗದರ್ಶನ ಹೊಂದಿ, ಧನ್ಯತೆಯ ಭಾವದಿಂದ ಮರಳಿ ಹೋಗುವ ಭಕ್ತರ ನಲಿವು, ಗೆಲುವುಗಳನ್ನು ಅವರನ್ನು ನೋಡಿ ಮಾತನಾಡಿಸಿದಾಗ ವ್ಯಕ್ತವಾಗದೆ ಇರದು.

ಶ್ರೀಗಳು ಒಂದು ಶಕ್ತಿ, ಒಂದು ಅಸದೃಶ ಪವಾಡಮಯವಾದ ಕೇಂದ್ರ. ದೇಶದ ಸ್ವತಂತ್ರ ವೈಚಾರಿಕತೆಯ ಹರಿಕಾರರಲ್ಲಿ ಅವರು ಶ್ರೇಷ್ಠರು. ಸುಮಾರು ಹಿಂದಿನ ವರುಷಗಳ ಮಾತು "His holiness is a living legend. He personities nobility, excellence and goodness. He speaks fluently and profundly our cultural heritage and

breaths our spiritual spirit. His holiness is the eminent, exponent of our culture and thought. He symblises our traditions and epitomoss our values. He is an embodiment of kindness, compassion and consideration for others. In short he is God, walking on an earth amongst us in flesh and blood.'' ಈ ನುಡಿಗಳನ್ನಾಡಿದವರು ದೇಶದ ಖ್ಯಾತ ಶಿಕ್ಷಣತಜ್ಞ, ಶಿಕ್ಷಣ ರಂಗದ ಅನಭಿಷಿಕ್ತ ದೊರೆ, ಕರ್ನಾಟಕ ವಿಶ್ವವಿದ್ಯಾನಿಲಯದ ಆಗಿನ ಉಪಕುಲಪತಿ, ಲಿಂಗೈಕ್ಯ ರ್‍ಯಾಂಗ್ಲರ್ ದಾ.ಚಿಂ. ಪಾವಟೆಯವರು. ಸಂದರ್ಭ ಪೂಜ್ಯ ಶ್ರೀಗಳಿಗೆ ಗೌರವ ಡಾಕ್ಟರೇಟ್ ಕೊಡುವ ಬಗ್ಗೆ ಸೆನೆಟ್ ಸಭೆಯಲ್ಲಿ ಬಂದ ನಿರ್ಣಯದ ಸಮಾರೋಪ. ಆಗ ನಾನು ಸೆನೆಟ್ ಸಭೆಯ ಸದಸ್ಯನಾಗಿದ್ದೆ.

ರ್‍ಯಾಂಗ್ಲರ್ ಸಾಹೇಬರ ಮಾತಿನ ಅರ್ಥ ಶ್ರೀ ಸ್ವಾಮಿಗಳು ಜೀವಿಸುತ್ತಿರುವ ಐತಿಹ್ಯ, ಔನ್ನತ್ಯ, ಪರಿಪಕ್ವತೆ ಹಾಗೂ ಒಳ್ಳೆಯದನ್ನೆಲ್ಲಾ ತೋರಿಸುವ ಪ್ರತ್ಯಕ್ಷ ಪ್ರತೀಕ. ನಮ್ಮ ಸಂಸ್ಕೃತಿ ಪರಂಪರೆಯನ್ನು ಅಧಿಕಾರ ವಾಣಿಯಿಂದ ಅವರು ಹೇಳುತ್ತಾರೆ. ನಮ್ಮ ಆಧ್ಯಾತ್ಮದ ಅರಿವನ್ನು ಅವರು ಉಸಿರಾಡಿಸುತ್ತಾರೆ. ನಮ್ಮ ಸಂಸ್ಕೃತಿ ಹಾಗೂ ವಿಚಾರಗಳನ್ನು ಮಂಡಿಸುವ ಅನನ್ಯ ಶಕ್ತಿ ಅವರು ನಮ್ಮ ಸಂಪ್ರದಾಯ ಹಾಗೂ ಮೌಲ್ಯಗಳನ್ನು ಪ್ರತಿನಿಧಿಸುವ ಸಾಕಾರ ಮೂರ್ತಿಗಳು. ದಯೆ, ಅಂತಃಕರಣ ಮತ್ತೊಬ್ಬರ ಬಗ್ಗೆ ಅನುಕಂಪ ತೋರಿಸುವ ಒಂದು ಕೇಂದ್ರ. ಒಟ್ಟಿನಲ್ಲಿ ಹೇಳಬೇಕಾದರೆ ನಮ್ಮ ಮಧ್ಯೇ ಮನುಷ್ಯ ರೂಪದಲ್ಲಿ ನಡೆದಾಡುವ ಸಾಕ್ಷಾತ್ ದೇವರು.

ದಿವಂಗತ ಪಾವಟೆ ಸಾಹೇಬರ ಈ ಮಾತುಗಳ ಮಾರ್ಮಿಕತೆ ಹಾಗೂ ಸತ್ಯತೆ ಅರಿಯಲು ಶ್ರೀಗಳ ಕ್ಷಣಕಾಲದ ಸಾಮೀಪ್ಯವಾದರೂ ಸಾಕು.

ಪೂಜ್ಯ ಶ್ರೀಗಳು ಶತಾಯುಷಿಗಳಾಗಿ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಾ, ಸನ್ಮಾರ್ಗದಲ್ಲಿ ನಡೆಸುತ್ತಾ, ಸದಾಕಾಲ ನಮ್ಮನ್ನು ಹರಸುತ್ತಿರಲಿ ಎಂದು ನಾವೆಲ್ಲಾ ಭಯ ಭಕ್ತಿಯಿಂದ ಪ್ರಾರ್ಥಿಸೋಣ.

ತಪೋಧನ ಮಹಾಜಂಗಮ

ಡಾ. ಸೂರ್ಯನಾಥ ಕಾಮತ್

ಪೂಜ್ಯರಾದ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಬಗ್ಗೆ ನಾಲ್ಕು ಮಾತು ಬರೆಯಲು ನನಗೆ ಅಭಿಮಾನ. ಅವರನ್ನು ಕಂಡಾಗ ಪ್ರಾಚೀನ ಋಷಿಯೊಬ್ಬರನ್ನು ಕಂಡಂತೆ ಅನಿಸುತ್ತದೆ. ಅವರನ್ನು ನಾನು ಹಲವು ಬಾರಿ ಕಂಡಿದ್ದೇನೆ. ಅವರ ಉಪದೇಶಾತ್ಮಕ ಭಾಷಣವನ್ನು ಕೇಳಿದ್ದೇನೆ. ಆದರೆ ವೈಯಕ್ತಿಕವಾಗಿ ಅವರ ವಿಚಾರ ತಿಳಿದದ್ದು ಅತ್ಯಲ್ಪ.

ಹರದನಹಳ್ಳಿಯ ಮೈಸೂರು ಜಿಲ್ಲೆ ಮಠವು ಅಲ್ಲಮ ಪ್ರಭುಗಳ ಶೂನ್ಯಸಿಂಹಾಸನದ ಪರಂಪರೆಯದೆಂದು ಕೇಳಿದ್ದೇನೆ. ಈ ಮಠದ ಗಣ್ಯ ಸ್ವಾಮಿಗಳಲ್ಲಿ ಒಬ್ಬೊಬ್ಬರೂ ಮಾದೇಶ್ವರ ಬೆಟ್ಟ, ಕುಂತೂರು, ಸಾಲೂರು, ಸಿದ್ಧಗಂಗಾ, ಗುಬ್ಬಿ, ಎಡೆಯೂರು, ಮುಂತಾದ ಕಡೆ ಮಠಗಳನ್ನು ಸ್ಥಾಪಿಸಿದರೆಂದು ಕೇಳಿ ಬಲ್ಲೆ. ಇವೆಲ್ಲ ಗಣ್ಯ, ಜೀವಂತ ವೀರಶೈವ ಕೇಂದ್ರಗಳಾಗಿವೆ. ಸಿದ್ಧಗಂಗಾಮಠ ಹರದನಹಳ್ಳಿ ಮಠದ ಒಬ್ಬ ಸ್ವಾಮಿಗಳಿಂದ ಸ್ಥಾಪಿತವಾಯಿತು. ಇಲ್ಲಿನ ವಿಶೇಷವೆಂದರೆ ಇಲ್ಲಿ ನಡೆಯುವ ಅಖಂಡ ಅನ್ನ ಜ್ಞಾನದಾಸೋಹ. ಬಡ ವಿದ್ಯಾರ್ಥಿಗಳಿಗೆ ಆಸರೆ ನೀಡಿ ಜಾತಿ ಮತ ಭೇದವಿಲ್ಲದೆ ಅವರಿಗೆ ಊಟೋಪಚಾರದ ವ್ಯವಸ್ಥೆ ನಡೆಸಿದ ಕಾರ್ಯ ಇಷ್ಟು ಪ್ರಮಾಣದಲ್ಲಿ ಬೇರೆಲ್ಲೂ ನಡೆದಿಲ್ಲ.

ರಾಜ್ಯ ಗ್ಯಾಸೆಟಿಯರ್‌ನ ದಶವಾರ್ಷಿಕ ಪುರವಣಿಯಲ್ಲಿ ಸಿದ್ಧಗಂಗಾ ಮಠದ ಬಗ್ಗೆ ಹೇಳುವಾಗ ನಾಲ್ಕು ಐದು ಸಾವಿರ ವಿದ್ಯಾರ್ಥಿಗಳಿಗೆ ಇಲ್ಲಿ ನಿತ್ಯ ಪ್ರಸಾದ ವಿತರಣೆ ಆಗುತ್ತದೆಂದು ಬರೆದಿದ್ದೆವು. ಸಲಹಾ ಸಮಿತಿಯ ಒಬ್ಬ ಸದಸ್ಯರು ಇವನ್ನೆಲ್ಲ ಹೇಳಬೇಕೆ ಎಂದು ಕೇಳಿದರು. ಇಂಥ ಕೆಲಸ ಕರ್ನಾಟಕದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಎಲ್ಲೂ ನಡೆದಿಲ್ಲ. ಇದು ಉಲ್ಲೇಖನೀಯವಲ್ಲವೇ ಎಂದು ಸಮರ್ಥಿಸಿದೆ. ಉಳಿದ ಸದಸ್ಯರು ಇದನ್ನು ಬೆಂಬಲಿಸಿದರು. ಇಂಥ ಈ ಕಾರ್ಯ ಇತರರಿಗೆ ಮೇಲ್ಪಂಕ್ತಿಯಾಗುವಂತೆ ಇರುವುದು ನಮ್ಮ ನಾಡಿನ ವೈಶಿಷ್ಟ್ಯ.

ನಮ್ಮ ಗ್ಯಾಸೇಟಿಯರ್ ಕಚೇರಿಯಲ್ಲಿ ಒಬ್ಬ ನೌಕರರು ಈ ಸಂಸ್ಥೆಯಲ್ಲಿ ಇದ್ದು ಓದಿದವರು. ಅವರು ಒಕ್ಕಲಿಗರು. ಸೋಮವಾರ ಮಾತ್ರ ಭಸ್ಮ ಧರಿಸಿ, ಕಚೇರಿಗೆ ಬರುತ್ತಿದ್ದರು. ಉಳಿದ ದಿನ ಊರ್ಧ್ವಪುಂಡ್ರ. ಮಠದ ಉತ್ತರಾಧಿಕಾರಿ ಬಗ್ಗೆ ಯಾವುದೋ ವಾದವಿವಾದ ನಡೆದಿತ್ತು. ಯಾರೋ ಆ ಬಗ್ಗೆ ಹಗುರವಾಗಿ ಮಾತನಾಡಿದರು. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ನಮಗೆ ಓದಲು ದಾರಿ ಮಾಡಿಕೊಟ್ಟವರು, ಆಶ್ರಯ ನೀಡಿದವರು. ಅವರಿಲ್ಲದಿದ್ದರೆ ನಾವು ನಮ್ಮ ಹಳ್ಳಿಯಲ್ಲಿ ದನ ಕಾಯುತ್ತ ಇರಬೇಕಾಗಿತ್ತು, ಎಂದು ಕೈಮುಗಿದು ಅವರು ಹೇಳಿಕೊಂಡರು. ಮಠದ ಪ್ರಸಾದ ಉಂಡು ಕೃತಾರ್ಥರಾದ ಇಂಥ ಸಾವಿರ ಸಾವಿರ ಜನ ಮಠದ ಪರಿವಾರ, ಮಠದ ಸಂಪತ್ತು. ಮಠದ ಶ್ರೀಮಂತಿಕೆಗೆ ಇನ್ನೇನು ಬೇಕು?

ನಾನು ಎಂ.ಎ. ಮುಗಿಸಿದ ಮೇಲೆ ೧೯೬೧ ರಲ್ಲಿ ಸಿದ್ಧಗಂಗಾ ಕ್ಷೇತ್ರಕ್ಕೆ ಧಾರವಾಡದಿಂದ ಬಂದಿದ್ದೆ. ರಾ.ಸ್ವ. ಸಂಘದ ಮಾಸಿಕ ತರಬೇತಿ ಶಿಬಿರದಲ್ಲಿ ಶಿಕ್ಷಕನಾಗಿದ್ದೆ. ಬೇಸಿಗೆಯ ರಜೆಯ ದಿನಗಳಾಗಿದ್ದು ಮಠದ ವಾತಾವರಣ ಪ್ರಶಾಂತವಾಗಿತ್ತು. ಒಮ್ಮೆ ಸ್ವಾಮೀಜಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಉಪನ್ಯಾಸ ಮಾಡಲು ಬಂದಿದ್ದರು. ಸಾಮಾನ್ಯ ಜನರಿಗೆ ಸಾಮಾನ್ಯರ ಭಾಷೆಯಲ್ಲಿ ಕತೆಗಳ ಮೂಲಕ ಆಧ್ಯಾತ್ಮಿಕ, ಧಾರ್ಮಿಕ ವಿಚಾರ ತಿಳಿಸಿ ಹೇಳುವ ಅವರ ವಿಧಾನ ಬುದ್ಧ ಅಥವಾ ರಾಮಕೃಷ್ಣ ಪರಮಹಂಸರನ್ನು ಜ್ಞಾಪಿಸಿತು. ಅಗಾಧ ಪಾಂಡಿತ್ಯ, ಆದರೆ ಜನರಿಗೆ ಗ್ರಾಮೀಣರಿಗೂ ತಿಳಿಯುವಂಥ ಸರಳ ಭಾಷೆ, ಕತೆಗಳಿಂದ ಕೊಡುವ ಉದಾಹರಣೆಯ ವಿಧಾನ, ನೇರ, ಸ್ಪಷ್ಟ ಹಾಗೂ ಪರಿಣಾಮಕಾರಿ. ಅವರ ನುಡಿ ಮತ್ತು ನಡೆಯಲ್ಲಿ ಭೇದವಿಲ್ಲ. ಹೀಗೆ ಅವರೇ ಮಠದ ದಾಸೋಹಕ್ಕೆ ಧಾನ್ಯ ಸಂಗ್ರಹಿಸಲು ಗೋಣಿಚೀಲ ಹಿಡಿದು ಸಂಚರಿಸುತ್ತಿದ್ದರಂತೆ. ಯಾವ ಕೆಲಸವೂ ಆರಂಭವಾಗುವುದು ಹೀಗೇ. ಈಗ ಅವರ ವ್ಯಕ್ತಿತ್ವ, ಸಂಗತಿ, ಕೀರ್ತಿ ಬೆಳೆದಂತೆ ಹೇರುಗಟ್ಟಲೆ ಧಾನ್ಯ, ಲವಾಜಮೆ ತಾವೇ ಬಂದು ಬೀಳುತ್ತಿವೆ. ಈ ದಾಸೋಹದ ಪುಣ್ಯಕಾರ್ಯದಲ್ಲಿ ತಾವೂ ಭಾಗಿಗಳಾಗುವವೆಂಬ ಧನ್ಯತಾ ಭಾವ, ಹೊಲದಲ್ಲಿ ಬೆಳೆಯುವ ಫಸಲನ್ನು ನೀಡುವ ಪದ್ಧತಿ ಜನಸಾಮಾನ್ಯರಲ್ಲಿದೆ. ಇದರಿಂದ ಅವರ ಬಾಳಿಗೊಂದು ಸಾರ್ಥಕತೆ ಬಂದಿದೆ. ನಾನು ನೀರೆರೆದ ಮರ ಅಪೂರ್ವ ಫಲಗಳನ್ನು ನೀಡಿ ಜಗತ್ತಿನಲ್ಲಿ ಅದರಿಂದ ಲಾಭವಾಗುವುದೆಂಬ ವಿಚಾರ ತಿಳಿದಾಗ ನೀರೆರೆದವನ

ಹೃದಯದಲ್ಲಿ ಮೂಡುವ ಆನಂದಕ್ಕೆ ಸಮನಾದುದು ಯಾವುದಿದೆ ? ಆನಂದವೆನ್ನುವುದು ಇಂದ್ರಿಯ ಸುಖಗಳಿಂದಲೇ ಬರತಕ್ಕದ್ದಲ್ಲ. ತ್ಯಾಗದಲ್ಲಿಯೂ ಸುಖವಿದೆ. ಈ ತ್ಯಾಗಕ್ಕೆ ಪ್ರೇರಣೆ ನೀಡಿದವರು ಈ ಮಹಾಜಂಗಮ.

ಅಲ್ಲಿ ನಡೆವ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರಾಗಿ ನಿವೃತ್ತರಾದ ಒಬ್ಬ ಬ್ರಾಹ್ಮಣ ಅಧ್ಯಾಪಕರೆನ್ನುತ್ತಿದ್ದರು : 'ನಮ್ಮ ಗೌರವ, ನಮಗೆ ಸಲ್ಲುವ ವೇತನ, ನಾವು ಮಾಡುವ ವೃತ್ತಿಯ ಬಗ್ಗೆ ಆತ್ಮತೃಪ್ತಿ ಇದಾವುದಕ್ಕೂ ಸಿದ್ಧಗಂಗಾ ಕ್ಷೇತ್ರದಲ್ಲಿ ಕೊರತೆ ಇರಲಿಲ್ಲ. ಕಾಲಕ್ಕೆ ಪಡಿತರ ವಸ್ತುಗಳು ತಪ್ಪದೆ ಮನೆಗೆ ಬರುತ್ತಿದ್ದವು'.

ಕೆಲವು ವರ್ಷಗಳ ಹಿಂದೆ ಇತಿಹಾಸ ಸಮ್ಮೇಳನಕ್ಕಾಗಿ ತುಮಕೂರಿಗೆ ಹೋಗಿದ್ದೆ. ಶ್ರೀಗಳ ಜೊತೆ ವೈಯಕ್ತಿಕವಾಗಿ ಮಾತಾಡಿದ್ದು ಆಗಲೇ. ಮೂವತ್ತು ವರ್ಷಗಳ ಹಿಂದೆ ನಾನು ಶ್ರೀ ಕ್ಷೇತ್ರದಲ್ಲಿ ಒಂದು ತಿಂಗಳು ವಾಸವಾಗಿದ್ದ ಸವಿನೆನಪನ್ನು ನಿವೇದಿಸಿದೆ. ಶ್ರೀಗಳು ನಸು ನಕ್ಕರು. ಆ ನಗೆಯಲ್ಲಿ ಅಪರೂಪದ ಹೆಮ್ಮೆ ಹಾಗೂ ಕೃತಾರ್ಥತೆಯ ಸೆಳವಿತ್ತು ; ಕಣ್ಣಲ್ಲಿ ಅನುಗ್ರಹದ ಮಿಂಚಿತ್ತು.

ಈ ಮಠದಿಂದ ಇಂಜಿನಿಯರಿಂಗ್ ಕಾಲೇಜೂ ನಡೆಯುತ್ತದೆ. ಇಲ್ಲಿ ಕ್ಯಾಪಿಟೇಶನ್ ಶುಲ್ಕ ಎಲ್ಲೆಡೆ ಇರುವಂತೆ ಇದೆ. ಬಡ ಮಣ್ಣಿನ ಮಗ ಅವನ ಕೈಗೆಟುಕುವ ಅಲ್ಪ ದೇಣಿಗೆ ನೀಡಿ ಕಾಲೇಜು ಸೇರುವಂತಾದ ಹತ್ತಾರು ಉದಾಹರಣೆಗಳನ್ನು ನಾನು ಬಲ್ಲೆ. ವಿದ್ಯಾರ್ಥಿಯ ಬಡತನವೊಂದೇ ಇಲ್ಲಿ ಶ್ರೀಗಳ ಅನುಗ್ರಹಕ್ಕೆ ಕಾರಣ. ಇಲ್ಲಿ ಜಾತಿ ಪಾತಿಯ ಮಾತಿಲ್ಲ. ಇದು ನನಗೆ ಮನವರಿಕೆಯಾದ ಮಾತು. ಸ್ವಾಮೀಜಿಯವರ ಸಂಸ್ಥೆಗಳು ಹಣದ ರಾಶಿಗಾಗಿ ಬಾಯಿಬಿಡುವ ಬಕಾಸುರರ ಸಂಸ್ಥೆಯಲ್ಲ. ಹಣ ಎಲ್ಲಿಂದಾದರೂ ಬರುವುದೆಂಬ ಸ್ವಾಮಿಗಳ ಆತ್ಮವಿಶ್ವಾಸ ಇದಕ್ಕೆ ಕಾರಣವಿರಬಹುದು. ಅವರ ಸಮಾಜಪ್ರೇಮ, ಭಕ್ತರಲ್ಲಿ ಕಲ್ಪಿಸಿದ ವಿಶ್ವಾಸಗಳೇ ಇಂಥ ಅವರ ಧೀರಕ್ರಮಗಳಿಗೆ ಕಾರಣವಿರಬೇಕು. ಇತ್ತೀಚೆಗೆ ಕಾಶ್ಮೀರದಿಂದ ನಿರಾಶ್ರಿತರಾಗಿ ಬಂದಿರುವ ವಿದ್ಯಾರ್ಥಿಗಳು ಇಲ್ಲಿ ಪ್ರವೇಶಪಡೆದಿದ್ದಾರೆ. ಅವರು ಏನು ದೇಣಿಗೆ ಕೊಟ್ಟಾರು, ಎಷ್ಟು ಫೀಜು ಕೊಟ್ಟಾರು ಎಂದು ಯಾರಾದರೂ ಊಹಿಸಬಹುದು. ಅವರು ನಮ್ಮ ಬಾಂಧವರೆಂಬ ವಿಶಾಲದೃಷ್ಟಿಯ ಪ್ರಜ್ಞೆಯೇ ಇಂಥ ಹೃದಯ ವೈಶಾಲ್ಯಕ್ಕೆ ಕಾರಣ. ತನ್ನ ಮನೆಯ ವಿದ್ಯಾರ್ಥಿಯ ಪ್ರವೇಶಕ್ಕೆ ಯಾರದ್ದೋ ಪತ್ರ ಪಡೆದು ದೆಹಲಿಯಿಂದ ಬಂದ ಒಬ್ಬ ಕಾಶ್ಮೀರದ ಮಹಿಳೆ, ಗಾಬರಿಗೊಂಡು, ಕಂಗಾಲಾಗಿ ನಿಂತಿರಲು ಸ್ವಾಮೀಜಿ ಆ ಪತ್ರ ನೋಡಿ ವಿಶ್ರಮಿಸೆಂದು ಸನ್ನೆ ಮಾಡಿದಾಗ ತನಗೆ ಅಭಯದಾನವಾಯಿತೆಂದು ಅವಳ ನೊಂದ ಮುಖದಲ್ಲಿ ಮೂಡಿದ ಕಳೆ ಸೂರ್ಯಪ್ರಭೆಯಂಥದು. ಸ್ವಾಮಿಗಳ ಒಂದು ನಗು, ಒಂದು ನೋಟ, ಒಂದು ಕೈಸನ್ನೆ, ಕಂಗೆಟ್ಟ ಜನರ ಮುಖ ಅರಳಿಸುವ ಸಾಮರ್ಥ್ಯವುಳ್ಳದ್ದು.

ಈ ಶಾಂತ ಗಂಭೀರ ಚೇತನ ನಡೆದಾಡಿದಾಗ ಸಿದ್ಧಗಂಗೆಯ ಬೆಟ್ಟದಲ್ಲಿ ಶಿಸ್ತಿನ ಭಕ್ತಿಯ ತಾಳ ಅವರ ಹಾವುಗೆಯ ದನಿಯಿಂದ ಪ್ರತಿಧ್ವನಿತವಾಗುತ್ತದೆ. ಇಲ್ಲಿ ಪ್ರಸಾದ ಪಡೆದವರು ಪುನೀತರಾಗಿದ್ದೇವೆಂದು ಭಾವಿಸುವ ವಾತಾವರಣ, ಸಮಾಜ ಶಿವನ ದಾಸರಾಗುವ ಪಣತೊಡುವ ಸನ್ನಿವೇಶ. ಇದು ಮುಂದುವರಿದರೆ ತಪೋಧನರಾದ ಶ್ರೀಗಳ ಕೈಸನ್ನೆ ಸಿದ್ಧಿಸಿತೆಂದು ಅರ್ಥ. ತಪೋಧನರ ತಪಸ್ಸು ಸಿದ್ಧಿಸಿತೆಂದು ಅರ್ಥ. ಈ ತಪೋಧನರ ಆಯುಷ್ಯ ವರ್ಧಿಸಲಿ. ಅವರ ತಪಶ್ಶಕ್ತಿ ಇನ್ನಷ್ಟು ವರ್ಧಿಸಲಿ. ತಪಸ್ಸಿನ ಲಾಭಪಡೆದ ಜನ ಸದಾ ಕಾಯಕ ನಿರತರಾಗಿರಲಿ. ಇದರಿಂದ ಈ ನಾಡು ಸಮೃದ್ಧವಾಗಲಿ ಎಂದು ನಮ್ರತೆಯಿಂದ ಹಾರೈಸುವೆ.

ಆರಾಧ್ಯ ದೈವ

ಪದ್ಮಶ್ರೀ ಆರ್.ಎಂ.ಜಿ. ಆರಾಧ್ಯ

ನಮ್ಮೂರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಗೊಟ್ಟಿಗೆರೆ. ನಮ್ಮ ತಂದೆಗೆ ಮೂರು ಹೆಣ್ಣುಮಕ್ಕಳಾದ ಮೇಲೆ ಹುಟ್ಟಿದ ನನ್ನನ್ನು ಮುದ್ದು ಬಸವನೆಂದು ಕರೆದರು. ಆದರೆ ಅಸಾಧ್ಯ ತುಂಟನಾಗಿದ್ದ ನಾನು ಓದಿನಲ್ಲಿ ಹಿಂದೆ ಬಿದ್ದೆ. ಎಲ್ಲಿ ಪೊದ್ದು ಬಸವನಾಗುತ್ತಾನೋ ಎಂಬ ದಿಗಿಲು ನಮ್ಮ ಮನೆಯವರನ್ನು ಕಾಡಿರಬೇಕು. ಹುಡುಗರನ್ನು ಕಟ್ಟಿಕೊಂಡು ಮೆರೆಯುವ ನನ್ನನ್ನು ಸ್ವಯಂ ಶಿಸ್ತಿಗೆ ಒಳಪಡಿಸುವ ಬಗ್ಗೆ ಅವರು ಸಾಕಷ್ಟು ತಲೆಕೆಡಿಸಿಕೊಂಡಿರಬೇಕು. ಕೊನೆಗೆ ನಮ್ಮ ಹತ್ತಿರದ ಸಂಬಂಧಿಗಳಾದ ಆರ್.ಜಿ. ಲಿಂಗಾರಾಧ್ಯರು ನನ್ನನ್ನು ಸಿದ್ಧಗಂಗಾಮಠಕ್ಕೆ ಸೇರಿಸಲು ಸಲಹೆ ಮಾಡಿದರು. ತುಂಟಾಟ ಕಡಿಮೆ ಮಾಡಿ ಶಿಸ್ತು ಕಲಿತು ಓದಿನ ಕಡೆ ಹೆಚ್ಚಿನ ಲಕ್ಷ್ಯ ಕೊಡಲು ಇದೇ ಒಳ್ಳೆಯ ಉಪಾಯವೆಂದು ತೀರ್ಮಾನಿಸಿ ನನ್ನನ್ನು ೧೯೩೯ ರಲ್ಲಿ ಸಿದ್ಧಗಂಗೆಗೆ ಕರೆತಂದಿದ್ದರು. ಆಗ ನನ್ನ ವಯಸ್ಸು ೧೦ ವರ್ಷ.

ಪ್ರೈಮರಿ ಸ್ಕೂಲಿನ ಓದು ಮುಗಿದಿತ್ತು. ಮಿಡ್ಲ್ ಸ್ಕೂಲು ಸೇರಬೇಕಾಗಿತ್ತು. ಸಿದ್ಧಗಂಗೆಯ ವಿದ್ಯಾರ್ಥಿನಿಲಯಕ್ಕೆ ನನ್ನನ್ನು ದಾಖಲು ಮಾಡಿದರು. ಕ್ಯಾತ್ಸಂದ್ರದಲ್ಲಿದ್ದ ಮಿಡ್ಲ್ ಸ್ಕೂಲಿಗೆ ಹೋಗಬೇಕಾಗಿತ್ತು. ಆಗ ಹಿರಿಯ ಸ್ವಾಮಿಗಳಾದ ಉದ್ಧಾನಪ್ಪನವರು ಇದ್ದರು. ಅವರ ಆರೋಗ್ಯ ಅಷ್ಟು ಸರಿಯಾಗಿರಲಿಲ್ಲ. ಕಿರಿಯ ಸ್ವಾಮಿಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಎಂಥ ಶಿಸ್ತು ಪಾಲಿಸುತ್ತಿದ್ದರೆಂದರೆ ನೋಡಿದರೇ ದಿಗಿಲಾಗುತ್ತಿತ್ತು.

ಬೆಳಗಿನ ಜಾವ ೫ ಗಂಟೆಗೇ ಎದ್ದು ತಣ್ಣೀರು ಸ್ನಾನ ಮಾಡಿ ಪೂಜೆ ಮಾಡಿ ಸಂಸ್ಕೃತ ಅಭ್ಯಾಸ ಮಾಡಬೇಕಿತ್ತು. ಶ್ಲೋಕಗಳನ್ನು ಕಂಠಪಾಠ ಮಾಡಿಸುತ್ತಿದ್ದರು. ಅನಂತರ ಪ್ರಾರ್ಥನೆ ಮತ್ತೆ ಓದು. ಬೆಳಿಗ್ಗೆ ೮ ರಿಂದ ೧೦ ಗಂಟೆವರೆಗೆ ಸಂಸ್ಕೃತ ತರಗತಿಗಳನ್ನೆಲ್ಲ ಮುಗಿಸಿಕೊಂಡು ೧೦ ಗಂಟೆಗೆ ಊಟ ಮಾಡಿ ಸ್ಕೂಲಿಗೆ ಹೋಗಬೇಕಿತ್ತು.

ಹುಡುಗರ ಗುಂಪಿನಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದ ನನಗೆ, ತುಂಟಾಟ, ಆಟಗುಳಿತನವೇ ಸರ್ವಸ್ವವಾಗಿದ್ದ ನನಗೆ, ಸಿದ್ಧಗಂಗೆಯ ಜೀವನಕ್ರಮಕ್ಕೆ ಒಗ್ಗುವುದು ಕಷ್ಟವಾಯಿತು. ಕಾಡಿನಲ್ಲಿ ಸ್ವತಂತ್ರವಾಗಿ ಓಡಾಡಿಕೊಂಡು ಇದ್ದ ಹುಲಿಯನ್ನು ಬೋನಿನಲ್ಲಿ ಕೂಡಿಹಾಕಿದಂತಾಯಿತು.

ಇಷ್ಟಾದರೂ ನಾನು ತುಂಟತನ ಮಾಡಿ ಸ್ವಾಮಿಗಳಿಂದ ಹೊಡೆತ ತಿನ್ನುತ್ತಿದ್ದೆ. ಅವರು ಎಷ್ಟು ಬಲವಾಗಿ ಹೊಡೆಯುತ್ತಿದ್ದರೆಂದರೆ ನನ್ನಲ್ಲಿರುವ ಒರಟುತನ, ಅಹಂಕಾರಗಳು ಸೋರಿಹೋಗತೊಡಗಿದವು. ಓದಿನ ಕಡೆ ಹೆಚ್ಚು ಗಮನ ಕೊಡಬೇಕಾಗಿದ್ದರಿಂದ ತುಂಟಾಟವೂ ಕೊಂಚ ಕಡಿಮೆಯಾಯಿತೆನ್ನಬೇಕು. ಆಗ ಮಠದಲ್ಲಿ ಸುಮಾರು ೩೦೦ ಹುಡುಗರು ಇದ್ದರು. ಎಲ್ಲರೂ ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತು. ಅದೃಷ್ಟದ ಮಾತೆಂದರೆ ಸ್ವಾಮಿಗಳೇ ನಮಗೆ ಪಾಠ ಮಾಡುತ್ತಿದ್ದರು. ಅವರಿಂದ 'ರಘುವಂಶ' ಪಾಠ ಕೇಳುವ ಭಾಗ್ಯ ನಮ್ಮದಾಗಿತ್ತು.

ಸಿದ್ಧಗಂಗೆಯ ಪರಿಸರ ನಮ್ಮನ್ನು ಒಳ್ಳೆಯ ವಿದ್ಯಾರ್ಥಿಗಳನ್ನಾಗಿ ರೂಪಿಸಿತು. ಜೀವನದಲ್ಲಿ ಶಿಸ್ತನ್ನು ಕಲಿಸಿತು. ೧೯೪೪ರಲ್ಲಿ ಎಲ್.ಎಸ್. ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದೆ. ಊರಿನವರೂ ಸಹ ಹುಡುಗ ದಾರಿಗೆ ಬಂದ ಎಂದು ಸಮಾಧಾನಪಟ್ಟುಕೊಳ್ಳುವಂತಾಯಿತು.

೧೯೪೪ - ೪೫ನೇ ಸಾಲಿನಲ್ಲಿ ತುಮಕೂರಿನಲ್ಲಿ ಹೊಸದಾಗಿ ಸಿದ್ಧಗಂಗಾ ಹೈಸ್ಕೂಲು ಆರಂಭವಾಯಿತು. ಅದರಲ್ಲಿ ಮೊದಲ ತರಗತಿಗೆ ನಾನು ಸೇರಿದೆ. ಹೀಗೇ ಓದು ಸಾಗಿತ್ತು. ಆಗ ನಡೆದ ಘಟನೆ ಸಿದ್ಧಗಂಗೆಯ ನನ್ನ ವಾಸ್ತವ್ಯವನ್ನು ತಪ್ಪಿಸಿ ಬೆಂಗಳೂರಿಗೆ ಎಳೆತಂದಿತು. ಅಲ್ಲೇ ಮುಂದುವರಿದಿದ್ದರೆ ಏನಾಗುತ್ತಿದ್ದೆನೋ !

ತುಮಕೂರಿನಲ್ಲಿ ಆರಂಭಗೊಂಡ ಹೈಸ್ಕೂಲಿಗೆ ಸೇರಿದ್ದೆನೆಂದು ಹೇಳಿದ್ದೆನಷ್ಟೆ. ಒಂದು ದಿನ ಸಂಜೆ ಸ್ಕೂಲು ಮುಗಿಸಿಕೊಂಡು ಐದಾರು ಹುಡುಗರು ಮಠಕ್ಕೆ ಹಿಂತಿರುಗುತ್ತಿದ್ದೆವು. ಒಂದು ಗಾಡಿ ಮಠದ ಕಡೆ ಹೊರಟಿತ್ತು. ಒಬ್ಬ ಮುದುಕರು ಆ ಗಾಡಿಯವನನ್ನು ಗಾಡಿಯಲ್ಲಿ ಕೂರಿಸಿಕೋ ಎಂದು ಅಂಗಲಾಚುತ್ತಿದ್ದರು. ಗಾಡಿಯವನು ಒಪ್ಪಲಿಲ್ಲ. ಆಗ ನಾವು ಗಾಡಿಯವನನ್ನು

'ಅಯ್ಯೋ ಪಾಪ, ನಡೆಯಲಾರದ ಮುದುಕರು, ಕೂರಿಸಿಕೊಳ್ಳಪ್ಪಾ' ಎಂದೆವು. ಅದಕ್ಕೆ ಅವನು ತುಂಬಾ ಒರಟಾಗಿ ನಡೆದುಕೊಂಡ. ಕೈಯಲ್ಲಿದ್ದ ಬಾರುಗೋಲಿನಿಂದ ನಮ್ಮ ಕಡೆ ಬೀಸಿದ. ಇಬ್ಬರಿಗೆ ಚುರುಕು ಮುಟ್ಟುವಂಥ ಪೆಟ್ಟು ಬಿತ್ತು. ನಾವೆಲ್ಲಾ ಸೇರಿ ಕೈಗೆ ಸಿಕ್ಕಿದ್ದನ್ನು ತಗೊಂಡು ಗಾಡಿಯವನನ್ನು ಹೊಡೆದೆವು. ಹ್ಯಾಗೆ ಹೊಡೆದೆವೋ ನಮಗೇ ಗೊತ್ತಿಲ್ಲ. ಅವನು ಕೆಳಗೆ ಬಿದ್ದುಬಿಟ್ಟ. ಅದನ್ನು ಕಂಡ ನಾವು ದಿಕ್ಕಾಪಾಲಾಗಿ ಓಡಿಹೋಗಿ ಮಠ ಸೇರಿಕೊಂಡೆವು.

ಸುತ್ತಮುತ್ತಲ ಜನ ಸೇರಿ ಗಾಡಿಯವನಿಗೆ ಉಪಚಾರ ಮಾಡಿದರು. ಅಲ್ಲಿ ಇಲ್ಲಿ ಚದುರಿ ಬಿದ್ದಿದ್ದ ನಮ್ಮ ಪುಸ್ತಕಗಳ ಮೇಲಿರುವ ಹೆಸರುಗಳಿಂದ ಮಠದ ಇಂಥಿಂಥ ವಿದ್ಯಾರ್ಥಿಗಳೇ ಈ ಕೆಲಸ ಮಾಡಿದ್ದಾರೆಂದು ತೀರ್ಮಾನಿಸಿ ಸ್ವಾಮಿಗಳ ಬಳಿ ದೂರು ತಂದರು.

ಈ ಸಮಾಚಾರ ತಿಳಿದಾಗ ನನಗೆ ವಿಪರೀತ ಭಯವಾಯಿತು. ಆ ಊರಿನ ಜನ ನನ್ನನ್ನು ಬಿಡುವುದಿಲ್ಲ. ಜೊತೆಗೆ ಸ್ವಾಮಿಗಳ ಕೋಪವನ್ನು ಎದುರಿಸುವುದು ಹೇಗೆ ಎಂಬ ಚಿಂತೆ ಹತ್ತಿ ಬೆಳಗಿನ ಜಾವವೇ ಎದ್ದು, ಇದ್ದ ಸಾಮಾನನ್ನೆಲ್ಲಾ ಒಂದು ಚೀಲಕ್ಕೆ ತುಂಬಿಕೊಂಡು ಹಿರೇಹಳ್ಳಿ ಕಡೆ ದೌಡಾಯಿಸಿದೆ. ಅಲ್ಲಿಂದ ಪಟ್ಟ್ಲೆ ರೈಲು ಹಿಡಿದು ಬೆಂಗಳೂರಿಗೆ ಬಂದೆ. ಅಲ್ಲಿ ಇಲ್ಲಿ ಅಲೆದಾಡಿ, ಕೊನೆಗೆ ಉಚಿತ ವಿದ್ಯಾರ್ಥಿನಿಲಯದಲ್ಲಿ ಸೀಟು ದೊರಕಿಸಿಕೊಂಡು ಸೆಂಟ್ರಲ್ ಹೈಸ್ಕೂಲಿನಲ್ಲಿ ಓದು ಮುಂದುವರಿಸಿದೆ. ಆದರೆ ಓದಿನ ಕಡೆ ಮನಸ್ಸು ಕೇಂದ್ರೀಕೃತವಾಗಲಿಲ್ಲ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫೇಲಾದೆ. ನಾನು ಸಿದ್ಧಗಂಗೆಯಲ್ಲೇ ಉಳಿದಿದ್ದರೆ! ಎಷ್ಟು ಉಜ್ವಲವಾಗಬಹುದಿತ್ತು ನನ್ನ ಭವಿಷ್ಯ?

ಏನೇ ಆಗಲಿ, ನಾನು ಸಿದ್ಧಗಂಗೆಯ ಕರ್ಮಶಾಲೆಯಲ್ಲಿ ರೂಪಿಸಿಕೊಂಡ ವ್ಯಕ್ತಿತ್ವದಿಂದ ನನ್ನ ಬದುಕು 'ನಡೆಯುವ ನಾಣ್ಯ' ವಾಯಿತು. ಪೂಜ್ಯರು ನನ್ನನ್ನು ತಿದ್ದಿದರು, ರೂಪಿಸಿದರು, ಒಬ್ಬ ಮನುಷ್ಯನನ್ನಾಗಿ ಮಾಡಿದರು. ನಾನು ಬದುಕಿನಲ್ಲಿ ಏನನ್ನಾದರೂ ಸಾಧಿಸಿದ್ದರೆ ಅದು ಗುರುವಿನ ಅನುಗ್ರಹದಿಂದ ಎಂಬುದನ್ನು ತಿಳಿದಿದ್ದೇನೆ. ಜೀವನದಲ್ಲಿ ಶಿಸ್ತು, ಕಾಯಕದಲ್ಲಿ ಶ್ರದ್ಧೆ, ಪರೋಪಕಾರದ ಬುದ್ಧಿ, ಸಾಮಾಜಿಕ ಕಳಕಳಿ, ಧರ್ಮಾಭಿಮಾನಗಳೇನಾದರೂ ನನಲ್ಲಿ ಇದ್ದಲ್ಲಿ ಅದಕ್ಕೆ ಶ್ರೀ ಕ್ಷೇತ್ರವೇ ನನ್ನ ಹೃದಯದಲ್ಲಿ ಬಿತ್ತಿದ ಸಂಸ್ಕೃತಿಯ ಬೀಜದ ಫಲ ಕಾರಣ. ಪೂಜ್ಯರು ನನ್ನ ವ್ಯಕ್ತಿತ್ವದ ರೂವಾರಿ ಎಂಬುದನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ. ಶ್ರೀ ಸಿದ್ಧಗಂಗೆಯ ಹಳೆಯ ವಿದ್ಯಾರ್ಥಿಯಾದ ನನಗೆ ಪದ್ಮಶ್ರೀ ಪ್ರಶಸ್ತಿ ಬಂದಾಗ ಕರೆದು ಸನ್ಮಾನಿಸಿದ್ದನ್ನು, ಆಶೀರ್ವದಿಸಿದ್ದನ್ನು ಹೇಗೆ ತಾನೇ ಮರೆಯಲಿ ? "ತಮ್ಮ ಕಣ್ಣ ಮುಂದಿನ ಆ ಫಟಿಂಗ ಹೇಗೆ ಬೆಳೆದುಬಿಟ್ಟ!" ಎಂದು ಪೂಜ್ಯರು ಆಶ್ಚರ್ಯವ್ಯಕ್ತಪಡಿಸಿದರಂತೆ. ಪೂಜ್ಯರ ವಜ್ರಮಹೋತ್ಸವದ ಸಂದರ್ಭದಲ್ಲಿ ಅವರ ದಿವ್ಯಪಾದಗಳಲ್ಲಿ ನನ್ನ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

○

"ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ"

ಹೆಚ್. ಗಂಗಾಧರನ್

ಪುಣ್ಯಪುರುಷರಿಗೆ ಜನ್ಮವಿತ್ತ ಪುಣ್ಯಭೂಮಿ ಈ ನಾಡು. ಮಾನವಸಮಾಜ ಮರವೆಯ ಮಾಯೆಯಲ್ಲಿ ಸಿಲುಕಿ ಅನೇಕ ಸಂಕಟಗಳ ಸುಳಿಯಲ್ಲಿ ತೊಳಲಾಡುವ ಪ್ರಸಂಗಗಳು ಆಗಾಗ ಬರುತ್ತವೆ. ಗಂಭೀರವಾಗಿ ಚಿಂತನೆ ಮಾಡಿದರೆ ಕಷ್ಟ ಸುಖಗಳನ್ನು ಮಾನವ ತಾನಾಗೆ ಸೃಷ್ಟಿಸಿಕೊಳ್ಳುತ್ತಾನೆ. ಪುಣ್ಯಪುರುಷರ ಸಂದೇಶದಲ್ಲಿ ಶ್ರದ್ಧೆಯಿಟ್ಟು ನಿಷ್ಠೆಯಿಂದ ನಡೆದರೆ ಕಷ್ಟಗಳ ಕೋಟಲೆಯಿಂದ ಪಾರಾಗಬಹುದು; ಸುಖದ ದಾರಿಯಲ್ಲಿ ಸುಗಮವಾಗಿ ಸಾಗಬಹುದು. ಆದರೂ ಹಿರಿಯರ ಮಾರ್ಗದರ್ಶನವನ್ನು ಮರೆತು ತನ್ನ ಸುತ್ತಮುತ್ತ ಕಷ್ಟಕಾರ್ಪಣ್ಯಗಳ ಹುತ್ತವನ್ನೇ ಸೃಷ್ಟಿಸಿಕೊಳ್ಳುವ ಮಾನವ ಅದಕ್ಕಾಗಿ ತನ್ನ ಅದೃಷ್ಟವನ್ನು, ಅನ್ಯರನ್ನು ಹಳಿಯುತ್ತಾನೆ. ತನ್ನ ಸುಖಕ್ಕಾಗಿ ಹಲವಾರು ಜನರಿಗೆ ಕಷ್ಟಗಳನ್ನು ಕೊಡಲು ಯತ್ನಿಸುತ್ತಾ ಅನ್ಯರು ಸಂಕಟಪಡುವುದನ್ನು ನೋಡಿ ತಾನು ಸಂತೋಷಪಡುತ್ತೇನೆಂದು ಭಾವಿಸುತ್ತಾನೆ. ಇಂತಹ ಪರಿಸ್ಥಿತಿ ನಿರ್ಮಾಣದಿಂದ ಬಹು ಜನರು ಸಂಕಟಕ್ಕೆ ಗುರಿಯಾಗುತ್ತಾರೆ. ಜಗತ್ತನ್ನು ಸೃಷ್ಟಿಸಿದ ಪರಮಾತ್ಮನಿಗೆ ಜನ ಸಂಕಟ ಪಡಬೇಕೆಂಬ ಅಪೇಕ್ಷೆ ಇರುವುದಿಲ್ಲ. ಸರ್ವ ಜನರು ಸುಖಿಗಳಾಗಿ ಬದುಕಬೇಕೆಂಬುದೇ ಈಶ ಸಂಕಲ್ಪ. ಅದಕ್ಕಾಗಿಯೇ ಮಾರ್ಗದರ್ಶನ ಮಾಡುವ ಮಾನವ ಸ್ವರೂಪಿ ಮಹಾನುಭಾವರ ಅವತಾರಕ್ಕೆ ಪರಮಾತ್ಮ ಅವಕಾಶ ಕಲ್ಪಿಸಿ ಕೊಡುತ್ತಾನೆ. ಅಂತಹ ಮಹಾನುಭಾವರು ಅವತರಿಸಿ, ಜಗದ ಜನರನ್ನು ಉದ್ಧರಿಸುವ ಈಶ ಕೈಂಕರ್ಯವನ್ನು ಕೈಗೊಳ್ಳುತ್ತಾರೆ. ವಿಶಾಲವಾದ ಜಗತ್ತು ಅಪಾರವಾದ ಜನ ಸಂಪತ್ತು ಇರುವ ಈ ಭೂಮಿಯಲ್ಲಿ ಒಬ್ಬಾನೊಬ್ಬ ಪ್ರವಾದಿಯು ಜಗತ್ತೆಲ್ಲವನ್ನು ಉದ್ಧರಿಸುವುದು ಸಾಧ್ಯವಿಲ್ಲ. ಆದುದರಿಂದ ಕಾಲಕಾಲಕ್ಕೆ ದೇಶಾಂತರಗಳಲ್ಲಿ ಪರಿಸರ ಮತ್ತು ಪರಿಸ್ಥಿತಿಗನುಗುಣವಾಗಿ ಒಂದು ನಿರ್ದಿಷ್ಟ ಪ್ರದೇಶಗಳಲ್ಲಿ ಅಂದಂದಿನ ಸಮಾಜವನ್ನು ಉದ್ಧರಿಸುವ ಮಹಾನುಭಾವರು ಅವತರಿಸುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಅದರಂತೆ ಆರು ಶತಮಾನಗಳ ಹಿಂದೆ ಅವತರಿಸಿ ಹರದನಹಳ್ಳಿಯ ಶ್ರೀಮನ್ ನಿರಂಜನ ಜಗದ್ಗುರು ಗೋಸಲ ಸಿದ್ಧೇಶ್ವರರು ಬಂದು ಅನುಷ್ಠಾನ ಮಾಡಿ ಜಗದ್ಗುರು ಪೀಠದ ಸಂಸ್ಥಾಪನೆ ಮಾಡಿದ ಪುಣ್ಯಕ್ಷೇತ್ರ ಇಂದಿನ ತುಮಕೂರು ಜಿಲ್ಲಾ ಸಿದ್ಧಗಂಗಾ ಮಹಾಕ್ಷೇತ್ರ. ಅವರ ಪರಂಪರೆಯಲ್ಲಿ ಬಂದ ಶಂಕರಾಚಾರ್ಯರು ಅವರ ಶಿಷ್ಯರಾದ ದಿವ್ಯಲಿಂಗೇಶ್ವರರ ಕರಕಮಲಸಂಜಾತರಾದ ಗೋಸಲ ಚೆನ್ನಬಸವೇಶ್ವರರು ಅವರ ಶಿಷ್ಯಾಗ್ರಣಿಗಳಾದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಈ ಪೀಠದ ಬೆಳವಣಿಗೆಗೆ ಕಾರಣಕರ್ತರಾಗಿ ಈ ಕ್ಷೇತ್ರವನ್ನು ಉದ್ಧರಿಸಿರುವುದು ಇತಿಹಾಸ ಪ್ರಸಿದ್ಧವಾಗಿದೆ. ಹರದನಹಳ್ಳಿ ಪೀಠದ ಪರಂಪರೆಯವರೇ ಈ ಪೀಠವನ್ನು ಮುಂದುವರಿಸುತ್ತಾ ಬಂದಿದ್ದು ಇತಿಹಾಸದ ಕೆಲವು ಸಂಗತಿಗಳು ಇಲ್ಲಿ ಲುಪ್ತವಾಗಿವೆ. ಆದರೆ 19ನೇ ಶತಮಾನದ ಆದಿಯಲ್ಲಿ ಈ ಪೀಠದ ಪುನರುಜ್ಜೀವನಕ್ಕೆ ಕಾರಣರಾದ ಅಟವೀಶ್ವರಮಹಾನುಭಾವರನ್ನು ಸ್ಮರಿಸಬೇಕಾಗುತ್ತದೆ. ನಂತರ ಅವರಿಂದ ಅನುಗ್ರಹೀತರಾದ ಉದ್ದಾನ ಶಿವಯೋಗಿಗಳು ಈ ಶತಮಾನದ ಮಹಾತಪಸ್ವಿಗಳಲ್ಲಿ ಒಬ್ಬರು. ಅಕ್ಷರ ವಿದ್ಯೆಯ ಪ್ರಭಾವಕ್ಕೆ ಸಿಗದಿದ್ದರೂ ಆತ್ಮಶಕ್ತಿ ಸಂಪನ್ನರಾಗಿ ಆಧ್ಯಾತ್ಮಿಕ ವಿದ್ಯಾ ವೈಭವದಿಂದ ಬೆಳಗಿದ ಯೋಗಿಗಳವರು ಅವರು ತ್ರಿಕಾಲಜ್ಞಾನಿಗಳೂ ಆಗಿದ್ದರು. ಆದಕಾರಣ ಅವರ ನಂತರ ಈ ಪೀಠದ ಅಭ್ಯುದಯಕ್ಕೆ ಸಮರ್ಥರಾದ ಉತ್ತರಾಧಿಕಾರಿಯನ್ನು ಆರಿಸುವುದರಲ್ಲಿ ಯಶಸ್ವಿಯಾದರು. ಆ ಮಹಾನುಭಾವರು ಇಂದು ಈ ಪೀಠದ ಕೀರ್ತಿಯನ್ನು ಲೋಕವ್ಯಾಪ್ತಿಯಾಗಿ ಮಾಡಿದ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರಮಹಾಸ್ವಾಮಿಗಳು. ಅವರ ಜೀವನ ಚಿತ್ರವನ್ನು ಅನೇಕ ವಿದ್ವಾಂಸರು ಈಗಾಗಲೇ ಹೃದಯ ಸ್ಪರ್ಶಿಯಾಗಿ ಚಿತ್ರಿಸಿರುವ ಕಾರಣ ಈ ಲೇಖನದಲ್ಲಿ ಅಂತಹ ಸಾಹಸ ಮಾಡುವ ಪ್ರಯತ್ನವಿಲ್ಲ. ಆದರೆ ಕೆಲವು ಸ್ಮರಣೀಯ ಘಟನೆಗಳನ್ನು ಸ್ಮರಿಸಿಕೊಳ್ಳುವುದು ಈ ಲೇಖನದ ಉದ್ದೇಶ.

ಉದ್ದಾನ ಶಿವಯೋಗಿಗಳು ಮರುಳಾರಾಧ್ಯರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿಕೊಂಡಿದ್ದರು. ಆದರೆ ಅವರು ಅಕಾಲಿಕವಾಗಿ ಲಿಂಗೈಕ್ಯರಾದ ಕಾರಣ ಈ ಪೀಠಕ್ಕೆ ಸೂಕ್ತವಾದ ಉತ್ತರಾಧಿಕಾರಿಯನ್ನು ಅನ್ವೇಷಣೆ ಮಾಡುವ ಪರಿಸ್ಥಿತಿ ಒದಗಿ ಬಂದಿತು. ಶಿವಯೋಗ ಸಂಪನ್ನರಿಗೆ ಅದು ಕಠಿಣ ಕಾರ್ಯವೆನಿಸಲಿಲ್ಲ. ಆದರೆ ಉತ್ತರಾಧಿಕಾರಿಯನ್ನು ನೇಮಿಸುವುದಷ್ಟೇ ಅಲ್ಲ. ಅವರನ್ನು ಸಮರ್ಥ ಸಾಧಕರನ್ನಾಗಿ ಮಾಡಿದ ರೀತಿ ವಿಶಿಷ್ಟವಾದುದು.

ಭರತಖಂಡದಲ್ಲಿ ತ್ಯಾಗಶೀಲರಾದ ಮಹಾನುಭಾವರು ಅಪರಿಮಿತವಾಗಿ ದೊರೆಯುತ್ತಿದ್ದ ಕಾಲ ಒಂದಿತ್ತು. ಇಂದು ತ್ಯಾಗಕ್ಕೆ

ಪ್ರತಿಯಾಗಿ ತ್ಯಾಗದ ಸೋಗಿನಲ್ಲಿ ಭೋಗವನ್ನು ಅಪೇಕ್ಷಿಸುವುದರ ಸಂಖ್ಯೆಯೇ ಅಧಿಕವಾಗಿದೆ. ಲೋಕೋದ್ಧಾರಕ್ಕಾಗಿ ಸರ್ವವನ್ನು ತ್ಯಾಗ ಮಾಡಿದ ಮಹಾನುಭಾವರ ಸಂಖ್ಯೆ ವಿರಳವಾಗುತ್ತಾ ಬಂದಿದೆ. ಅದಕಾರಣ ಧರ್ಮ ಸಂಸ್ಥೆಗಳಲ್ಲಿ ನೆಲೆಸಿ ಪರಹಿತಕ್ಕಾಗಿ ದುಡಿಯುವ ತ್ಯಾಗಿಗಳು ದೊರೆಯುವುದು ದುರ್ಲಭವಾಗಿದೆ. ಅನೇಕ ಜನ್ಮಗಳ ಪುಣ್ಯವಿಶೇಷದಿಂದ ಮಹಾಪುರುಷರಾಗಿ ಅವತರಿಸುತ್ತಾರೆ. ಧರ್ಮ ಕ್ಷೇತ್ರಗಳನ್ನು ಉದ್ಧರಿಸುತ್ತಿದ್ದ ಮಹಾನುಭಾವರು ಇತಿಹಾಸದಲ್ಲೂ ಸ್ಮರಣೀಯರಾಗುತ್ತಿದ್ದರು. ಆದರೆ ಇಂದು ಮಹಾನುಭಾವರು ಸ್ಥಾಪಿಸಿದ ಪುಣ್ಯಕ್ಷೇತ್ರಕ್ಕೆ ಔಪಚಾರಿಕವಾಗಿ ಬಲವಂತವಾಗಿ ವ್ಯಕ್ತಿಯನ್ನು ಕರೆತಂದು ಸೂಕ್ತಸ್ಥಾನ ಮಾಡಿಸಿ ತ್ಯಾಗಿಯಾಗಿ, ಯೋಗಿಯಾಗಿ ಬಾಳು ಎಂದು ದೊಡ್ಡವರು ಹರಸಿ ಭಕ್ತರು ಪ್ರಾರ್ಥಿಸುವ ಕಾಲ ಬಂದಿದೆ. ಆದರೂ ಅವನ್ನು ಮೀರಿ ಭೋಗಜೀವನದತ್ತ ಸಾಗುವವರ ಸಂಖ್ಯೆಯೇ ಅಪರಿಮಿತ ಎಂಬುದು ಎಲ್ಲರ ಅನುಭವದ ಮಾತು. ಅರ್ಧ ಶತಮಾನದ ಹಿಂದೆ ಆಂಗ್ಲ ಶಿಕ್ಷಣದಲ್ಲಿ ಪದವೀಧರರಾದವರು ತ್ಯಾಗಜೀವನಕ್ಕೆ ಸಾಗಿ ಬರುತ್ತಿದ್ದುದು ವಿರಳ. ಆಂಗ್ಲರ ಆಡಳಿತದಲ್ಲಿ ಇದ್ದ ಈ ರಾಷ್ಟ್ರದಲ್ಲಿ ಆಂಗ್ಲಭಾಷಾ ವಿದ್ಯೆಯಲ್ಲಿ ಪದವಿ ಪಡೆದರೆ ರಾಜವೈಭೋಗದಿಂದ ಮೆರೆಯುವಂತಹ ಅಧಿಕಾರವು ದೊರೆಯುತ್ತಿದ್ದ ಕಾಲ. ಇಂತಹ ಸಮಯದಲ್ಲಿ ವೀರಾಪುರವೆಂಬ ಹಳ್ಳಿ ರೈತನ ಪುತ್ರರಾಗಿ ಜನಿಸಿ ಹಲವು ಜನ ಸೋದರರಿಗೆ ದೊರೆಯದ ಆಂಗ್ಲವಿದ್ಯಾ ಶಿಕ್ಷಣದ ಸೌಭಾಗ್ಯವನ್ನು ಪಡೆದು ಬಿ.ಎ. ಪದವಿಯ ಅಧ್ಯಯನದ ಅಂತಿಮ ಘಟ್ಟವನ್ನು ಮುಟ್ಟಿದ ವ್ಯಕ್ತಿ ಶಿವಣ್ಣನವರು. ರೈತ ಕುಟುಂಬದಲ್ಲಿ ಹುಟ್ಟಿ ಅದೇ ಪರಿಸರದಲ್ಲಿ ಬೆಳೆಯುತ್ತಾ ಬಂದವರಿಗೆ ಧಾರ್ಮಿಕ ಭಾವನೆಯ ಪ್ರಭಾವ ಬೀರಿರುವುದು ಸುಲಭ ಕಾರ್ಯವಲ್ಲ. ಮೇಲಾಗಿ ಅವರು ಸ್ವಾಭಾವಿಕವಾಗಿ ವಿಚಾರಶೀಲರು. ಸರ್ವ ವಿಷಯವನ್ನೂ ವೈಜ್ಞಾನಿಕವಾಗಿ ವಿಮರ್ಶಿಸುವ ಚಿಂತಕರು. ತಮ್ಮ ವಂಶದಲ್ಲೇ ಇಂತಹ ಪ್ರತಿಭಾವಂತ ವಿದ್ಯಾಸಂಪನ್ನನನ್ನು ಕಾಣದಿದ್ದ ಕುಟುಂಬ ಅವರನ್ನು ಕೌಟುಂಬಿಕ ಜೀವನದಿಂದ ದೂರವಿಡಲು ಬಯಸಿರುವುದು ಬರಸಿಡಿಲಲ್ಲಿ ಆಘಾತವಾದಷ್ಟು ಕಠಿಣ. ಹೆತ್ತವರ ಮತ್ತು ಸೋದರ ಬಂಧುಗಳ ಬಗೆಗೆ ನಿರ್ಮಲ ಮನದ ವಾತ್ಸಲ್ಯಮಯಿಯಾದ ವ್ಯಕ್ತಿ ಆ ಕೌಟುಂಬಿಕ ಬಂಧು ಬಾಂಧವರ ಬಂಧನದಿಂದ ಹೊರಬರುವುದು ಊಹಾತೀತವಲ್ಲವೇ ! ಆದರೆ ..ವಿತಂಡವಾದದಿಂದ ಎಲ್ಲರ ಬಗೆಗೆ ಸಂಶಯದ ಬಿರುಗಾಳಿಯನ್ನೆ ಹಬ್ಬಿಸುತ್ತಿದ್ದ ಸ್ವಾಮಿ ವಿವೇಕಾನಂದರು ಪರಮಹಂಸರ ಗಾರುಡಿಗತನದಲ್ಲಿ ಮರುಳಾಗಿದ್ದುದು ಸೋಜಿಗದ ಸಂಗತಿ. ಅಂತೆಯೇ ಉದ್ದಾನ ಶಿವಯೋಗಿಗಳು ಹೆತ್ತು ಹೊತ್ತವರನ್ನಾಗಲಿ ತುತ್ತು ಅನ್ನವಿಟ್ಟವರನ್ನಾಗಲಿ, ಹತ್ತಾರು ಕಾಲ ಜೊತೆಗಿದ್ದವರನ್ನಾಗಲಿ ಕೇಳಿ ಸಮ್ಮತಿಯನ್ನು ಪಡೆಯದೆ ನಿನ್ನನ್ನು ಈ ಮಠದ ಉತ್ತರಾಧಿಕಾರಿಯಾಗಿ ಮಾಡುತ್ತೇನೆಂದು ದೃಢವಾದ ತೀರ್ಪನ್ನು ನೀಡಿದ ಶಿವಯೋಗಿಗಳ ಮಾತು ಶಿವಣ್ಣನವರ ಹೃದಯದಲ್ಲಿ ಸಮುದ್ರಮಥನವನ್ನು ಮಾಡಿದ ಪರಿಣಾಮವಾಗಿರುವುದನ್ನು ಗಮನಿಸಬಹುದು. ಯಾರೊಬ್ಬರ ಅಪ್ಪಣೆಗೆ ಕಾಯದೆ ಗುರು ಚರಣಾಂಬುಜದ ಭ್ರಮರರಾದುದು ಒಂದು ಐತಿಹಾಸಿಕ ವೈಶಿಷ್ಟ್ಯ ಇದು. ಅನಂತ ಜನ್ಮಗಳ ಸಂಸ್ಕಾರದ ಪುಣ್ಯವಿಶೇಷ. ಹಲವಾರು ಜನ್ಮದ ತಪಸ್ಸಿನ ಪ್ರಭಾವ. ಗುರುವಾಣಿಗೆ ಪ್ರತಿಯಾಡದೆ ಶರಣಾದುದು ಯಾವ ಕಾಲದಲ್ಲಿ, ಯಾವ ಸ್ಥಾನದಲ್ಲಿ ಯಾವ ಕಾರಣಕ್ಕಾಗಿ ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು ಕಠಿಣ. ತಮ್ಮ ಉತ್ತರಾಧಿಕಾರಿಯಾಗಿ ಬರುವ ಪೀಠ, ಸಂಪತ್ತಿನ ಆಗರವಲ್ಲ. ಅಪರಿಮಿತ ಭಕ್ತರ ಕೇಂದ್ರವೂ ಆಗಿರಲಿಲ್ಲ. ಶ್ರೀಮಂತರು, ಸಾಮಂತರು ಪೋಷಿಸುವ ಸಂಸ್ಥೆಗಳೂ ಇರಲಿಲ್ಲ. ಎತ್ತ ನೋಡಿದೊಡತ್ತ ತುತ್ತು ಅನ್ನಕ್ಕಾಗಿ ಅಲೆವವರ ಸಮೂಹ. ಅಕ್ಷರ ಜ್ಞಾನ ಇಲ್ಲದೆ ಅಜ್ಞಾನದ ಅಂಬುಧಿಯಲ್ಲಿ ಮುಳುಗುವವರ ಪರಿಸರ ಶ್ರೀಮಠದಲ್ಲಿ. ಅಲ್ಲಿ ಯಾವುದೇ ಬೌದ್ಧಿಕ ಸಂಪತ್ತು ಇರಲಿಲ್ಲ. ಅಲ್ಲಿದ್ದ ಸಂಪತ್ತು ಎಂದರೆ ಹತ್ತಾರು ಜನ ದೀನಾವಸ್ಥೆಯಲ್ಲಿರುವ ಗ್ರಾಮೀಣ ಯುವಕರು. ಕಷ್ಟಕಾಲದಲ್ಲಿ ತುತ್ತಿಗಾಗಿ ಕೈ ಒಡ್ಡುವ ಜನ ಸಮೂಹವು. ಅತ್ಯಲ್ಪ ಬರಡು ಭೂಮಿ. ಇಂತಹ ಪರಿಸರದಲ್ಲಿ ಪಡೆಯುವ ಅಧಿಕಾರ ಎಂದರೆ ತನುಮನವನ್ನೆಲ್ಲಾ ಮಣ್ಣಿನೊಡನೆ ಬೆರೆಸಿ ಬೆವರು ಸುರಿಸುತ್ತಾ ಗೆದ್ದು ನಿಲ್ಲಬೇಕಾದ ತಾಣ. ಆದರೆ ಅವರಿಗೆ ಇದ್ದ ಅಮೂಲ್ಯ ಸಂಪತ್ತು ಎಂದರೆ ಉದ್ದಾನ ಶಿವಯೋಗಿಗಳ ದಿವ್ಯಸಾನ್ನಿಧ್ಯ, ಸ್ವಾಮಿ ವಿವೇಕಾನಂದರಿಗೆ ಪರಮಹಂಸರ ಸಾನಿಧ್ಯ ದೊರೆತಂತೆ. ಅದನ್ನೇ ತಮ್ಮ ಸಂಪತ್ತು ಎಂದು ಭಾವಿಸಿಕೊಂಡು ಭೌತಿಕವಾಗಿ ಕೃತಕವಾದ ಪ್ರಾಪಂಚಿಕ ಆಶೋತ್ತರಗಳನ್ನು ಅಳಿಸಿ ಲೋಕೋದ್ಧಾರದ ಪಾರಮಾರ್ಥಿಕ ಅಭ್ಯುದಯದ ಹಾದಿಯಲ್ಲಿ ಸಾಗುವ ಮಣಿಹವನ್ನು ಹೊತ್ತು ಗುರುಕರುಣೆಯ ಕಾವಿ, ಕಮಂಡಲಗಳನ್ನು ಪಡೆದ ಶಿವಣ್ಣನವರು ಶ್ರೀ ಶಿವಕುಮಾರ ಮಹಾಸ್ವಾಮಿಗಳಾದುದು ಮಾನವ ಸಮಾಜದ ಸೌಭಾಗ್ಯ.

ಶಿವಯೋಗಿಗಳು ಉತ್ತರಾಧಿಕಾರಿಯನ್ನು ನೇಮಿಸುವುದು ಮಾತ್ರ ತಮ್ಮ ಜವಾಬ್ದಾರಿ ಎಂದು ಭಾವಿಸಿರಲಿಲ್ಲ. ಸಾಂಕೇತಿಕವಾಗಿ ಒಬ್ಬ ಮಠಾಧಿಕಾರಿಯನ್ನು ನೇಮಿಸಿದರೆ ತಮ್ಮ ಜವಾಬ್ದಾರಿ ಮುಗಿಯುತ್ತದೆಂದು ಭಾವಿಸಲಿಲ್ಲ. ಈ ಕ್ಷೇತ್ರದ

ಉತ್ತರಾಧಿಕಾರಿಯಾಗಿ ಒಬ್ಬ ಸಿದ್ಧಪುರುಷನನ್ನು ರೂಪಿಸಬೇಕು ಎಂಬುದು ಅವರ ಸತ್ಯಸಂಕಲ್ಪವಾಗಿತ್ತು. ಅದಕ್ಕೆ ಅವರದೇ ಅನುಭವವೂ ಇತ್ತು. ಅಂದಿನ ಸಮಯದಲ್ಲಿ ಧನಬಲ, ಜನಬಲದಿಂದ ಒಂದು ಪೀಠದ ಅಧಿಕಾರಿಯಾದವರು ಯಾವುದೇ ಅಂತಃಸತ್ವ ಇಲ್ಲದಿದ್ದರೂ ತಾವೇ ಹಿರಿಯರೆಂದು ಮೆರೆಯುವ ಕಾಲವಿತ್ತು. ಹುಟ್ಟಿನಿಂದ ಯೋಗಿಯಾಗುವ ಅಧಿಕಾರ ತಮ್ಮ ಒಬ್ಬರ ಸ್ವತ್ತೆಂದು ಭಾವಿಸಿದ್ದವರೂ ಉಂಟು. ಲೌಕಿಕ ಜೀವನದಲ್ಲಿ ಹಿರಿಮೆಯನ್ನು ಸಾಧಿಸುವವರು ಆಧ್ಯಾತ್ಮಿಕ ಜೀವಿಗಳ ಬಗೆಗೆ ಉತ್ಸಾಹವನ್ನು ತೋರುತ್ತಿರಲಿಲ್ಲ. ಧನಮದ, ಜಾತಿಮದದ ಜೊತೆಗೆ ವಿದ್ಯಾಮದ ಬೇರೆ ತಲೆ ಎತ್ತಿ ನಿಲ್ಲುತ್ತಿತ್ತು. ಈ ಎಲ್ಲಾ ಅನುಭವಗಳ ಆಧಾರದ ಮೇಲೆ ಈ ಕ್ಷೇತ್ರದ ಉತ್ತರಾಧಿಕಾರಿ ಪ್ರಥಮತಃ ಆಧ್ಯಾತ್ಮಿಕ ಬಲದ ಸಂಪತ್ತನ್ನು ಗಳಿಸಿಕೊಳ್ಳಬೇಕು, ತನ್ಮೂಲಕ ಲೋಕಕಲ್ಯಾಣದ ಕಾರ್ಯವನ್ನು ಎಸಗಿ ನಾಡಿನ ಹತ್ತಾರು ಸಂಸ್ಥೆಗಳ ಅಂತರಕ್ಕೆ ಏರಬೇಕೆಂದು ನಿರ್ಧರಿಸಿದರು. ಆದಕಾರಣ ಅಂತಹ ಚೇತನವನ್ನು ನಿರ್ಮಾಣ ಮಾಡಲು ತಮ್ಮ ಉಳಿದ ಜೀವನದ ತಪೋಧಾರೆಯನ್ನು ಅಪ್ರತ್ಯಕ್ಷವಾಗಿ ಧಾರೆಯೆರೆದರು. ಈ ಸಂಕಲ್ಪ ಸಿದ್ಧಿಗೆ ಮೊದಮೊದಲು ಹೆಚ್ಚೆಯಾಗಿ ತಮ್ಮ ಉತ್ತರಾಧಿಕಾರಿಯನ್ನು ಆತ್ಮಬಲ ಸಂಪನ್ನನಾಗಿ ಮಾಡಲು ಪಣತೊಟ್ಟರು. ಹಾಗೆ ಮಾಡಬೇಕಾದರೆ ಆಧುನಿಕ ನಾಗರಿಕ ಪರಿಸರದಲ್ಲಿ ಬೆಳೆದು, ಆಂಗ್ಲವಿದ್ಯೆ ಕ್ಷೇತ್ರದಲ್ಲಿ ನಿರತರಾದ, ದೃಢ ಕಾಯರು, ತೇಜೋಮಯರು ಯೌವನಸ್ಥರು ಅಂತಹ ವ್ಯಕ್ತಿಯನ್ನು ಪರಿವರ್ತಿಸುವುದು ಪ್ರವಾಹಕ್ಕೆ ಎದುರಾಗಿ ಈಜುವ ಸಾಹಸವನ್ನು ಮಾಡುತ್ತಿರುವ ಅಂಶ ಅವರ ಗಮನದಲ್ಲಿ ಇತ್ತು. ಅವರು ವಿದ್ಯೆಯಿಂದ ಯೋಗಶಾಸ್ತ್ರವನ್ನು ಅಭ್ಯಾಸ ಮಾಡದಿದ್ದರೂ ಶಿವಯೋಗ ಸಿದ್ಧರಾದ ಕಾರಣ ವ್ಯಕ್ತಿ ನಿರ್ಮಾಣ ಮಾಡುವ ಸಾಧನ ಅವರಿಗೆ ಮನವರಿಕೆಯಾಗಿತ್ತು. ಆದುದರಿಂದ ಮೊದಲ ಹೆಜ್ಜೆಗೆ ಯೋಗಿಯಾಗುವ ಲಕ್ಷಣವನ್ನು ಗೀತೆಯಲ್ಲಿ ಹೇಳಿದ ತತ್ವದಂತೆ ಅಳವಡಿಸಕೊಳ್ಳಬೇಕು ಎಂಬುದನ್ನು ಅರುಹಿದರು. ಗೀತೆಯ ಈ ಸಂದೇಶ ಸಾಧನೆಯ ನೆಲೆಗಟ್ಟಾಯಿತು. ಮಾರ್ಗದರ್ಶಿ ಸೂಚನೆಯನ್ನು ಗೀತೆಯಲ್ಲಿ ಹೀಗೆ ಹೇಳಿದೆ :

ನಾತ್ಯಶ್ನತಸ್ತು ಯೋಗೋಽಸ್ತಿನಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವಚಾರ್ಜುನ ॥ (೬-೧೬)

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋಭವತಿ ದುಃಖಹಾ ॥ (೬-೧೭)

ಎಲೈ ಅರ್ಜುನ, ಮಿತಿಮೀರಿ ತಿನ್ನುವವನಿಗೂ ಏನೂ ತಿನ್ನದೆ ಇರುವವನಿಗೂ ಯೋಗವಿಲ್ಲ. ಅತಿಯಾಗಿ ನಿದ್ರೆ ಮಾಡುವವನಿಗೂ ಮತ್ತು ಎಚ್ಚರವಾಗಿಯೇ ಇರುವವನಿಗೂ ಇಲ್ಲವೇ ಇಲ್ಲ.

ಆಹಾರಗಳಲ್ಲಿ, ಕರ್ಮಗಳಲ್ಲಿ ಮತ್ತು ನಿದ್ರೆ ಎಚ್ಚರಗಳಲ್ಲಿ ಮಿತವಾಗಿರುವವನಿಗೆ ಯೋಗವು ದುಃಖವನ್ನು ನಾಶಮಾಡುತ್ತದೆ.

ಈ ಪೀಠದ ದೀಕ್ಷೆಯನ್ನು ಪಡೆದ ಮರುದಿನದಿಂದಲೆ ಶ್ರೀಗಳವರು ಗೀತೆಯ ಈ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಅದನ್ನು ಇಂದಿಗೂ ಪಾಲಿಸುತ್ತಾ ಬರುತ್ತಿದ್ದಾರೆ. ಆರು ದಶಕಗಳಿಗಿಂತಲೂ ಮೀರಿದ ಅವರ ತಪೋಜೀವನದಲ್ಲಿ ಈ ತತ್ವವನ್ನು ತಪ್ಪದೆ ಪಾಲಿಸುತ್ತಾ ಬಂದಿರುವುದನ್ನುಮನಗಾಣಬಹುದು. ಅವರ ದಿನಚರಿಯು ಬೆಳಗಿನ ಜಾವ ಬ್ರಾಹ್ಮಿ ಮುಹೂರ್ತದ ಮೂರು ಗಂಟೆಗೆ ಪ್ರಾರಂಭವಾದರೆ ಮಧ್ಯರಾತ್ರಿ 12 ಗಂಟೆಯನ್ನೂ ಮೀರುತ್ತದೆ. ಬ್ರಾಹ್ಮಿ ಮುಹೂರ್ತದಲ್ಲಿ ಪೂಜಾದಿ ಅನುಷ್ಠಾನಗಳಲ್ಲಿ ನಿರತರಾಗಿ ಸೂರ್ಯೋದಯಕ್ಕೆ ಮೊದಲೇ ಪ್ರಥಮ ಪೂಜೆಯನ್ನು ಮುಗಿಸಿ ಶ್ರೀಮಠದ ಕಾರ್ಯ ಕ್ಷೇತ್ರಕ್ಕೆ ಕಾಲಿಟ್ಟರೆ ಮತ್ತೆ ರಾತ್ರಿ 10 ಗಂಟೆವರೆಗೂ ಅವಿರಳವಾಗಿ ದುಡಿಯುತ್ತಾರೆ. ಮತ್ತೆ ರಾತ್ರಿ ಪೂಜಾದಿಗಳನ್ನು ಮುಗಿಸಿ ಬಂದ ನಂತರ ರಾತ್ರಿ ಹನ್ನೆರಡು ಗಂಟೆ ಅಷ್ಟೇ ಅಲ್ಲ ಕೆಲವೊಮ್ಮೆ ಮಹತ್ವದ ಕೃತಿ ದೊರೆತಾಗ ಒಂದು ಗಂಟೆಯವರೆವಿಗೂ ಅಧ್ಯಯನ ಮಾಡುತ್ತಾರೆ. ಪ್ರಾಯಶಃ ದಿನಕ್ಕೆ ಎರಡು ಗಂಟೆಗಳಿಗಿಂತ ಹೆಚ್ಚು ಕಾಲ ನಿದ್ರೆ ಮಾಡುವ ಅಭ್ಯಾಸ ಅವರಿಗೆ ಇಲ್ಲದಂತೆ ಆಗಿದೆ. ಇಂತಹ ಶಕ್ತಿಯನ್ನು ಸ್ವಾಮಿ ವಿವೇಕಾನಂದರು, ದಯಾನಂದ ಸರಸ್ವತಿಯವರು ಪಡೆದಿದ್ದರು ಎಂದು ಅವರ ಜೀವನ ಚರಿತ್ರೆಯಲ್ಲಿ ಕಾಣುತ್ತೇವೆ. ಭಾರತದ ಪ್ರಥಮ ಪ್ರಧಾನಿಯವರು ಅಧಿಕಾರಕ್ಕೆ ಬಂದ ಮೇಲೆ ದಿನಕ್ಕೆ ಎರಡೂವರೆ ಗಂಟೆಗಳಿಗಿಂತ ಹೆಚ್ಚು ಕಾಲ ನಿದ್ರೆ ಮಾಡಲಿಲ್ಲವೆಂದು ಅವರು ಹೇಳಿಕೊಂಡಿದ್ದಾರೆ. ಹೀಗೆ ಅವರು ನಿದ್ರೆಯ ಮಾಯೆಯನ್ನು ಗೆದ್ದ ಸಿದ್ಧಪುರುಷರು. ಇನ್ನು ಆಹಾರದ ವಿಷಯವು ಅಷ್ಟೆ ಮಹತ್ವದು. ಅಜಾನುಬಾಹುವಾದ ಶ್ರೀಗಳವರು ಕಾವಿಯನ್ನು ಧರಿಸಿದ ಮೇಲೆ ನಾಲಗೆಯ ರಸಜಾಲಕ್ಕೆ ಎಂದೂ ಶರಣಾಗಲಿಲ್ಲ. ಅಪ್ರಾಸಂಗಿಕವೆನಿಸಿದರೂ ಮಹಾಪುರುಷರ ಜೀವನದ ಸಂಗತಿಗಳು

ಸಾಧಕರಿಗೆ ಕೈದೀವಿಗೆ ಆಗುತ್ತದೆ ಎಂಬ ಕಾರಣಕ್ಕಾಗಿ ಇಲ್ಲಿ ಅನಿವಾರ್ಯವಾಗಿ ಉಲ್ಲೇಖಿಸಬೇಕಾಗಿದೆ. ಆಹಾರದ ವಿಷಯದಲ್ಲಿ ಗೀತೋಕ್ತಿಯಂತೆ ಮಿತ ಆಹಾರದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಮಹಾಚೇತನ ಅವರು. ಮನುಷ್ಯನ ಮತಿಭ್ರಮಣೆಗೆ ಪೂರಕವಾಗುವಂತಹ ರಾಜಸ - ತಾಮಸ ಆಹಾರಗಳನ್ನು ವರ್ಜಿಸಿ ಸತ್ವಾಹಾರದಿಂದ ಜೀವನವನ್ನು ಸತ್ವಮಯವಾಗಿ ಮಾಡಿಕೊಂಡಿದ್ದಾರೆ. ಅವರ ದಿನನಿತ್ಯದ ಪಾನೀಯ ಬೇವಿನ ಚಕ್ಕೆಯ ರಸ. ನಾಲಗೆಯನ್ನು ಮರುಳುಗೊಳಿಸುವ ಉಪ್ಪು, ಹುಳಿ, ಖಾರ ಮತ್ತು ಸಿಹಿ ಇವುಗಳ ತೀವ್ರತೆಯಿಂದ ಬಹುದೂರ ಸಾಗಿ ಬಂದವರು ಶ್ರೀಗಳು. 'ಆಹಾರ ಶುದ್ಧವೇ ಸತ್ವ ಶುದ್ಧಿ' ಎಂಬ ಉಪನಿಷತ್ತಿನ ಮಾತು 'ಕುಕ್ಷೌ ತಿಷ್ಠತಿ ಯಸ್ಯಾನ್ನಂ ತಸ್ಯಬುದ್ಧಿಃ ಪ್ರಜಾಯತೇ' ಎಂಬ ಮಹಾಭಾರತದ ಸಂದೇಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸತ್ವಶಾಲಿಗಳಾಗಿ ಬೆಳೆದಂತಹ ಮಹಾನುಭಾವರು. ತನ್ನದೇ ಆದ ಯಾವುದೇ ಬೃಹತ್ತಾದ ಭೂ ಸಂಪತ್ತು ಇಲ್ಲದಿದ್ದರೂ ದಿನನಿತ್ಯವೂ ಆರು ಸಹಸ್ರ ಜನತೆಗೂ ಮೀರಿ ಅನ್ನನೀಡುತ್ತಾ ಅದರಲ್ಲಿ ಸಂತೋಷ ಪಡುವ ದಿವ್ಯಚೇತನ ಅವರದು. ಇದು ಸಾಮಾನ್ಯರು ಸುಲಭವಾಗಿ ಸಾಧಿಸುವ ಸಾಧನವಲ್ಲ. ಈ ಸಿದ್ಧಿಗೆ ಗುರುಕೃಪೆಯೂ ಕಾರಣ. ಹೆಜ್ಜೆ ಹೆಜ್ಜೆಗೂ ಎಚ್ಚರ ವಹಿಸಿ ಶಿಷ್ಯರ ಬೆಳವಣಿಗೆಯನ್ನು, ಅವಲಂಬಿಸುತ್ತಿದ್ದ ಶಿವಯೋಗಿಗಳ ಮನೋಗತಕ್ಕೆ ವಿರೋಧವಾಗದೆ, ತನುಮನವನ್ನು ಪರಿಪಕ್ವಗೊಳಿಸುವ ಸಾಧನೆಯಲ್ಲಿ ಶ್ರೀಗಳು ಯಶಸ್ವಿಯಾಗಿದ್ದಾರೆ. ಆಹಾರ, ನಿದ್ರೆ ಇವು ದೇಹದ ಮೇಲೆ ಪರಿಣಾಮ ಮಾಡಬಹುದು. ಆದರೆ ಮನಸ್ಸನ್ನು ಪರಿವರ್ತಿಸುವ ಸಾಧನೆ ಅತ್ಯಂತ ಕಠಿಣ.

"ಯೋಗಃ ಚಿತ್ತವೃತ್ತಿ ನಿರೋಧಃ" ಎಂದು ಪತಂಜಲಿ ಮಹರ್ಷಿಗಳು ಹೇಳಿದ್ದಾರೆ. ಆದರೆ ಇದು ಎಷ್ಟು ಕಷ್ಟಸಾಧ್ಯ ಎಂಬುದನ್ನು ಯೋಗಸೂತ್ರದಲ್ಲಿ ವಿವರಿಸಿದ್ದಾರೆ. ಗುರುಗಳಿಗೆ ಈ ಯೋಗಸಿದ್ಧಿಯನ್ನು ಶಿಷ್ಯನ ಮನೋರಂಗಕ್ಕೆ ಹೇಗೆ ತುಂಬಬೇಕು ಎಂಬುದು ತಿಳಿದಿತ್ತು. ಅಂದರೆ ಅದಕ್ಕಾಗಿ ಶಾಸ್ತ್ರಾರ್ಥದ ಬೋಧನೆ ಮಾಡಲಿಲ್ಲ. ಎಡೆಬಿಡದೆ ದುಡಿಮೆಯಲ್ಲಿ ತೊಡಗಿಸಿ ಚಿತ್ತವು ಅನ್ಯವೃತ್ತಿಗೆ ತುತ್ತಾಗದಂತೆ ನೋಡಿಕೊಂಡರು. ಶಿವಯೋಗಿಗಳಿಗೆ ಸಂಪತ್ತನ್ನು ಸಂಗ್ರಹಿಸಿ ಅನುದಾನ ಮಾಡಬಲ್ಲ ಆತ್ಮಬಲವಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಶ್ರೀಗಳವರು ಅಧಿಕಾರ ವಹಿಸಿಕೊಂಡಾಗ ದಿನನಿತ್ಯವೂ ನೂರಾರು ಜನರಿಗೆ ಅನ್ನದಾನ, ವಿದ್ಯಾದಾನ ನಡೆಯುತ್ತಿತ್ತು. ಸಾವಿರಾರು ಜನರಿಗೆ ಅನ್ನದಾನ ನೀಡುವ ಜಾತ್ರೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದರೆ ಅದಕ್ಕೆ ಸಂಪನ್ಮೂಲಗಳನ್ನು ಶಿಷ್ಯರೇ ಸೃಷ್ಟಿಸಿಕೊಳ್ಳುವ ಮಾರ್ಗ ಸೂಚನೆ ಮಾಡಿದರು. ಸಂಪ್ರದಾಯದಂತೆ ಪೀಠಾಧೀಶ್ವರರು ಭಕ್ತರ ಮನೆಗೆ ಹೋಗಿ ಪೂಜಾದಿ ಅನುಷ್ಠಾನಗಳನ್ನು ನೆರವೇರಿಸಿ ಅನುಗ್ರಹಿಸಿ ಅವರಿಂದ ಬರುವ ಕಾಣಿಕೆಯಿಂದ ಶ್ರೀ ಮಠದ ದೈನಂದಿನ ವ್ಯವಹಾರ ನಡೆಯಬೇಕಾಗಿತ್ತು. ಮಠದಲ್ಲಿ ಯಾವುದೇ ವಾಹನದ ಸೌಲಭ್ಯವಿಲ್ಲದಿದ್ದರೂ ಶ್ರೀಮಂತ ಶಿಷ್ಯರು ಮತ್ತು ಭಕ್ತರ ಸಂಪತ್ತು ವಿರಳವಾಗಿದ್ದಾಗ ಗುರುಗಳ ಅಪ್ಪಣೆ ಹಾಗೂ ಭಕ್ತರ ಕೋರಿಕೆಯಂತೆ ಶ್ರೀಗಳವರು ಹಲವಾರು ಮೈಲಿಗಳು ನಡೆದು ಹೋಗಿ ಪೂಜಾದಿಗಳನ್ನು ನೆರವೇರಿಸಿ ಭಕ್ತರನ್ನು ಅನುಗ್ರಹಿಸಿ ಬರಬೇಕಾಗುತ್ತಿತ್ತು. ಹೀಗೆ ರಾಜದಂಡವನ್ನು ಹಿಡಿಯಬೇಕಾದ ದೀರ್ಘಬಾಹುಗಳು ಗುರುಕರುಣೆಯ ಜೋಳಿಗೆಯನ್ನು ಹೊತ್ತು ಬಡಭಕ್ತರ ಮನೆಗೆ ಸಾಗಬೇಕಾಗಿತ್ತು. ಬಹು ಕಾಲ ಈ ಕಾಯಕವನ್ನು ಶ್ರೀಗಳವರು ನಡೆಸಿದ ಪರಿಣಾಮ, ಅವರಲ್ಲಿ ಮಹತ್ವದ ಪ್ರಭಾವವನ್ನು ಉಂಟುಮಾಡಿತು. ಇವರಲ್ಲಿ ಮೊದಲನೆಯದಾಗಿ ತಾನು ಪರಹಿತಕ್ಕಾಗಿ ತನ್ನ ಸ್ವಾಭಿಮಾನವನ್ನು ತೊರೆಯಬೇಕೆಂಬ ಜ್ಞಾನಸಿರಿ ಅವರನ್ನು ಆವರಿಸಿತು. ಇದಕ್ಕಿಂತಲೂ ಮಿಗಿಲಾಗಿ ಕಡುಬಡವರಾದ ಭಕ್ತರ ಮನೆಗೆ ನಡೆದು ಹೋದ ಕಾರಣ ಸಮಾಜದಲ್ಲಿ ಎಷ್ಟೊಂದು ಯುವ ಚೇತನಗಳು ವಿದ್ಯೆಯಿಂದ ವಂಚಿತರಾಗಿದ್ದಾರೆ. ಆಧುನಿಕ ಸೌಲಭ್ಯಗಳಿಂದ ದೂರವಿದ್ದಾರೆ ಎಂಬುವರ ಪರಿಚಯವಾಗಿ ಆ ದಾರುಣ ಪರಿಸ್ಥಿತಿಯು ಅವರ ಹೃದಯವನ್ನೇ ಕರಗಿಸಿ ಕರುಣೆಯ ವಾಹಿನಿಯಾಗಿ ಹರಿಸಿತ್ತು. ಇದರ ಪರಿಣಾಮವಾಗಿ ಇಂದು ಶ್ರೀಗಳವರ ಕೃಪೆಯಲ್ಲಿ ಹತ್ತಾರು ಸಹಸ್ರ ಬಡ ಕುಟುಂಬದ ಮಕ್ಕಳು ವಿದ್ಯಾ ಸೌಭಾಗ್ಯವನ್ನು ಪಡೆದು ತಮ್ಮ ತಮ್ಮ ಮನೆಗಳಲ್ಲೂ ಸುಸಂಸ್ಕೃತಿಯ ಬೆಳಕನ್ನು ಬೆಳಗುತ್ತಿದ್ದಾರೆ. ಶಿವಯೋಗಿಗಳು ಶ್ರೀಗಳವರನ್ನು ಪ್ರಥಮದಲ್ಲಿ ಕೆಲವು ವೇಳೆ ಶ್ರೀಮಂತರಾದರೂ ಕೃಪಣರ ಮನೆಗೆ ಕಳುಹಿಸುತ್ತಿದ್ದರು. ಅಂತಹವರಿಂದ ತಮ್ಮ ಅಪೇಕ್ಷೆ ಈಡೇರದೆ ಇದ್ದ ಸಂದರ್ಭದಲ್ಲಿ ಸ್ವಾಭಿಮಾನಶೀಲರಾದ ಯುವಶಕ್ತಿಯ ಶ್ರೀಗಳು ಅನೇಕ ವೇಳೆ ಉದ್ವಿಗ್ನರಾಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಮಯದಲ್ಲಿ ಗುರುಕರುಣೆ ಅವರನ್ನು ಸಮಚಿತ್ತರನ್ನಾಗಿ ಮಾಡಿ ಸಹನಶೀಲ ಸಂಪನ್ನರಾಗಿ ರೂಪಿಸಿತ್ತು.

ಮಠದ ಅಧಿಕಾರವನ್ನು ಪೋಜಿನ ಪ್ರತಿಷ್ಠೆಯ ಕಣವಾಗಿ ಮಾಡಿಕೊಳ್ಳದೆ ದೇಹ ದಂಡಿಸಿ ದುಡಿಯುವ ಪ್ರವೃತ್ತಿ ಶ್ರೀಗಳವರದು. ವಿದ್ಯಾರ್ಥಿಗಳ ವಸತಿ ಗೃಹಗಳು ಶಾಲೆ ಸಂಸ್ಥೆಗಳು, ಗೋರಕ್ಷಣಾಲಯ, ದಾಸೋಹ ನಿಲಯ ಇತ್ಯಾದಿ

ಚಟುವಟಿಕೆಗಳ ನಿರ್ಮಾಣದ ಕಾರ್ಯದಲ್ಲಿ ರೂಪಿಸಿಕೊಂಡ ಕಟ್ಟಡಗಳ ಪ್ರತಿಯೊಂದು ಶಿಲೆಯು ಶ್ರೀಗಳವರ ಪುಣ್ಯ ಹಸ್ತಸ್ಪರ್ಶದಿಂದ ಪುನೀತವಾಗಿದೆ. ಬಹುಕಾಲದವರೆಗೆ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣಕ್ಕೆ ಮೂರು ಮೈಲಿಗಳ ದೂರದ ತುಮಕೂರಿಗೆ ನಡೆದು ಹೋಗಬೇಕಾಗಿತ್ತು. ಅದಕ್ಕಾಗಿ ಪ್ರೌಢ ಶಿಕ್ಷಣಾರ್ಥಿಗಳಿಗೆ ಪ್ರಾತಃಕಾಲದಲ್ಲಿಯೇ ಊಟ ನೀಡಬೇಕಾಗಿತ್ತು. ಎಷ್ಟೋ ದಿನಗಳು ಅಡಿಗೆ ತಡವಾಗುತ್ತಿದ್ದಾಗ ತಾವೇ ನಿಂತು ಅಡಿಗೆಯ ಕಾರ್ಯವನ್ನು ಮುಗಿಸಿ ವಿದ್ಯಾರ್ಥಿಗಳಿಗೆ ಉಣಬಡಿಸಿ ಶಿಕ್ಷಣಕ್ಕೆ ಕಳುಹಿಸುತ್ತಿದ್ದ ಎಷ್ಟೋ ದಿನಗಳು ಅವರ ದಿನಚರಿಯಲ್ಲಿ ಸೇರಿವೆ. ಶ್ರೀ ಕ್ಷೇತ್ರಕ್ಕೆ ಬರುತ್ತಿದ್ದ ಯಾತ್ರಾರ್ಥಿಗಳಿಗೆ ನಡೆದ ದಾಸೋಹದ ಕಾರ್ಯವು ಇದೇ ರೀತಿ ನಡೆದ ಪ್ರಸಂಗಗಳು ಉಂಟು. ತಮ್ಮ ತಪಸ್‌ಶಕ್ತಿಯಿಂದ ರಾಷ್ಟ್ರಾದ್ಯಂತ ಗೌರವದ ಔನ್ನತ್ಯವನ್ನು ಪಡೆದಾಗಲೂ ಸಹ ಈ ದುಡಿಮೆಯನ್ನು ಕೀಳಾಗಿ ಭಾವಿಸದೆ ದೇವರ ಸೇವೆಯೆಂದು ಭಾವಿಸಿದ ಮಹಾನುಭಾವರು ಅವರು. ಇಂದು ಶ್ರೀ ಮಠದ ಆಶ್ರಯದಲ್ಲಿ ಹಲವು ವಿದ್ಯಾಸಂಸ್ಥೆಗಳು ರೂಪುಗೊಂಡಿವೆ. ಹಲವಾರು ಪ್ರೌಢ ಶಾಲೆಗಳು, ಕಾಲೇಜುಗಳು, ಇಂಜಿನೀಯರಿಂಗ್ ಕಾಲೇಜು ಇತ್ಯಾದಿ ಬೃಹತ್ ಸಂಸ್ಥೆಗಳನ್ನು ರೂಪಿಸಿದ ಮಹಾನುಭಾವರು. ಶ್ರೀ ಮಠದಲ್ಲಿ ಪ್ರತಿದಿನವೂ ಆರೇಳು ಸಾವಿರ ಜನರಿಗೆ ಅನ್ನ ದಾಸೋಹ ನಡೆಯುತ್ತಿದ್ದು ಇಂತಹ ಬೃಹತ್ ವ್ಯವಸ್ಥೆಯ ಅವಳಿತ ನಿರ್ವಹಣೆಯಲ್ಲಿ ನೇರವಾಗಿ ಭಾಗವಹಿಸಿ ಸಮರ್ಥನೀಯವಾಗಿ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕರ್ನಾಟಕದಲ್ಲಿರುವ ಮಠಾಧೀಶ್ವರರಲ್ಲಿ ಹಿರಿಯರು ಶ್ರೇಷ್ಠ ಲಿಂಗಪೂಜಾ ಗರಿಷ್ಠರು ಎಂದು ಖ್ಯಾತರಾದ ಕಾರಣ ಈ ರಾಜ್ಯದ ಎಲ್ಲೆಡೆ ನಡೆವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಕ್ತರ ಆಪೇಕ್ಷೆಯಂತೆ ಅನಿವಾರ್ಯವಾಗಿ ಭಾಗವಹಿಸುತ್ತಾ ಈ ವಯಸ್ಸಿನಲ್ಲೂ ಶ್ರಮವನ್ನು ಲೆಕ್ಕಿಸದೆ ಆಗಮಿಸಿ ಭಕ್ತರ ಮನಸ್ಸಂತೋಷಪಡಿಸುತ್ತಾರೆ. ಶರಣರ ತತ್ವದೀವಿಗೆಯನ್ನು ಹೊತ್ತು ಹಳ್ಳಿಹಳ್ಳಿಗಳಿಗೆ ಬೆಳಕು ಬೀರುವ ಮಹಾಮಣಿಹದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಶರಣ ಸಂಸ್ಕೃತಿಯನ್ನು ಚಿತ್ರಿಸುವುದಕ್ಕಾಗಿ ರಂಗಭೂಮಿ ಯಶಸ್ವಿ ಮಾಧ್ಯಮವೆಂದು ಭಾವಿಸಿ ಶ್ರೀ ಮಠದಲ್ಲಿ ಕಲಾವಿದರನ್ನು ಕೂಡಿಸಿ ಬಸವೇಶ್ವರ ನಾಟಕವನ್ನು ಅಭ್ಯಾಸ ಮಾಡಿಸಿ ಗ್ರಾಮಾಂತರದಲ್ಲಿ ಪ್ರದರ್ಶನ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಈಗಾಗಲೇ 395 ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪ್ರದರ್ಶನವಾಗಿ ಲಕ್ಷಾಂತರ ಜನರ ಮೇಲೆ ಪರಿಣಾಮ ಉಂಟು ಮಾಡಲಾಗಿದೆ. ಇಂದಿಗೂ ಸಹ ಗ್ರಾಮಾಂತರಗಳಲ್ಲಿ ನಡೆಯುವ ಪ್ರತಿಯೊಂದು ಪ್ರದರ್ಶನದಲ್ಲೂ ಭಾಗವಹಿಸಿ ನಾಟಕದ ಆರಂಭದಿಂದ ಅದರ ಮುಕ್ತಾಯದವರೆವಿಗೂ ಉಪಸ್ಥಿತರಿದ್ದು ಭಕ್ತರು ಮತ್ತು ಕಲಾವಿದರನ್ನು ಆಶೀರ್ವದಿಸುತ್ತಾರೆ.

ಈ ಅಪರ ವಯಸ್ಸಿನಲ್ಲಿ ಪೂಜ್ಯ ಶ್ರೀಗಳು ಇಷ್ಟೊಂದು ನಾಟಕಗಳಲ್ಲೂ ಉಪಸ್ಥಿತರಿರಲು ಧರ್ಮಸೂಕ್ಷ್ಮ ಒಂದಿದೆ. ಅದರಲ್ಲಿ ಒಂದು ನಾಟಕವನ್ನು ನೋಡಬೇಕೆಂಬ ಹವ್ಯಾಸ ಅಥವಾ ಮತ್ತಾವುದೇ ಕಾರಣವಿರುವುದಿಲ್ಲ. ನಾಟಕದ ಅಭಿನಯ ನಡೆಯುವಾಗ ಅವರು ರಂಗಭೂಮಿಯ ಮೇಲೆ ಕಲಾವಿದರ ಕೌಶಲ್ಯವನ್ನು ಕಾಣುವ ಕುತೂಹಲದಿಂದ ಕುಳಿತಿರುವುದಿಲ್ಲ. ಅವರ ದೃಷ್ಟಿಯಲ್ಲಿ ಕಲ್ಯಾಣದ ಸಹಜಕ್ರಿಯೆಯನ್ನು ಕಾಣುವಂತಹ ತನ್ಮಯತೆಯಲ್ಲಿ ಮಗ್ನರಾಗಿರುತ್ತಾರೆ. ಶರಣ ತತ್ವ ಸಂಪತ್ತಿನಲ್ಲಿ ತಮ್ಮನ್ನು ತಾವು ಮರೆಯುತ್ತಾರೆ. ಬಸವಣ್ಣನವರ ಜೀವನದೊಡನೆ ಬೆರೆತುಹೋಗುತ್ತಾರೆ. ಅಂತಹ ಭವ್ಯ ಭಾವನೆ ಕನ್ನಡ ನಾಡಿನ ಜನಮನದಲ್ಲಿ ಮೂಡಿ ಬರಲೆಂಬ ಅಭಿಲಾಷೆಯಿಂದ ಈ ಪ್ರದರ್ಶನದ ವ್ಯವಸ್ಥೆಗೊಳಿಸಿದ್ದಾರೆ. ಈ ಕಾರ್ಯವೂ ಸಹ ದೈವ ಸಾಕ್ಷಾತ್ಕಾರದ ದುಡಿಮೆಯೆಂದು ಭಾವಿಸಿದ ಪವಿತ್ರಜೀವಿ ಅವರು.

ದೈವ ಕಾರ್ಯದಲ್ಲಿ ನಿರತರಾದಾಗ ತಮ್ಮ ದೈಹಿಕ ಶ್ರಮವನ್ನು ಲೆಕ್ಕಿಸದೆ ಅತ್ಯಂತ ಶ್ರದ್ಧೆಯಿಂದ ದೈವಕಾರ್ಯವನ್ನು ನೆರವೇರಿಸಿ ಭಕ್ತರನ್ನು ಅನುಗ್ರಹಿಸುವ ಮಹಾನುಭಾವರು ಅವರು. ತಾ. ೧೮.೧.೯೭ ರಂದು ಮೈಸೂರು ಜಿಲ್ಲಾ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಗದ್ದುಗೆಯ ವಿಮಾನ ಗೋಪುರ ಮತ್ತು ರಾಜಗೋಪುರಗಳ ಕಳಸಾರೋಹಣ ಸಮಾರಂಭ ಏರ್ಪಾಡಾಗಿತ್ತು. ಈ ಸಮಾರಂಭಕ್ಕೆ ಶ್ರೀಗಳನ್ನು ಆಹ್ವಾನಿಸಲಾಗಿತ್ತು. ಇವರಲ್ಲದೆ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳು, ತರಳಬಾಳು ಜಗದ್ಗುರುಗಳು, ಆನಂದಪುರದ ಮಠದ ಜಗದ್ಗುರುಗಳು, ಶಿವಮೊಗ್ಗೆ ಮಠದ ಜಗದ್ಗುರುಗಳು, ಹೊಸಪೇಟೆ ಜಗದ್ಗುರುಗಳವರು ಆಹ್ವಾನಿತರಾಗಿದ್ದರು. ನೂರು ಅಡಿಗಿಂತಲೂ ಮೀರಿ ಎತ್ತರದ ಏಣಿಯನ್ನು ಏರಿ ಸುವರ್ಣ ಕಳಸ ಸ್ಥಾಪನೆ ಮಾಡಬೇಕಾಗಿತ್ತು. ಇತರೆ ಜಗದ್ಗುರುಗಳವರು ಯುವಕರಾಗಿದ್ದರೂ ಮೇಲೆ ಏರಿ ಕಳಸ ಸ್ಥಾಪನೆ ಮಾಡಲು ಅಂಜುತ್ತಿದ್ದರು. ಎಂಬತ್ತೆಂಟು ಸಂವತ್ಸರಗಳು ತುಂಬಿದ ಶ್ರೀಗಳವರು ಸಂತೋಷದಿಂದ ಯಾರ ಸಹಾಯವೂ ಇಲ್ಲದೆ ಏಣಿಯನ್ನು ಏರಿ ವಿಮಾನ ಗೋಪುರಕ್ಕೆ ಕಳಸಸ್ಥಾಪನೆ ಮಾಡಿದರು. ಅದನ್ನು ನೋಡಿದ ಸಹಸ್ರಾರು ಜನ ಹರ್ಷೋದ್ಗಾರ ಮಾಡಿದರು.

ಇದನ್ನು ನೋಡಿದ ಇತರೆ ಜಗದ್ಗುರುಗಳವರು ಸ್ಫೂರ್ತಿಗೊಂಡು ರಾಜಗೋಪುರದ ಏಣಿಯನ್ನು ಏರಿ ಸುವರ್ಣ ಕಳಸ ಸ್ಥಾಪನೆ ಮಾಡಿದರು. ನಂತರ ನಡೆದ ಸಾಂಸ್ಕೃತಿಕ ಸಮಾರಂಭದಲ್ಲಿ ಮಾತನಾಡಿದ ಎಲ್ಲಾ ಜಗದ್ಗುರುಗಳು ಶ್ರೀಗಳವರ ಮನಶ್ಶಕ್ತಿ ಸ್ಮರಣೀಯವಾದುದು; ಅವರ ಅನುಷ್ಠಾನ ಮತ್ತು ತಪಸ್ಸಿನ ಬಲ ಈ ವಯಸ್ಸಿನಲ್ಲೂ ಸಹಾ ಇಂತಹ ಅಸಾಧಾರಣ ಕಾರ್ಯದಲ್ಲಿ ತೊಡಗುವ ಆತ್ಮಬಲವನ್ನು ತಂದು ಕೊಟ್ಟಿದೆ. ಇವರ ಕ್ರಿಯಾಶಕ್ತಿ, ಶೀಲಸಂಪನ್ನತೆ ಅನುಕರಣೀಯ ಮತ್ತು ಸ್ಮರಣೀಯವೆಂದು ಮುಕ್ತಕಂಠದಿಂದ ಪ್ರಶಂಸಿಸಿದರು. ಅಂದಿನ ಕಾರ್ಯ ನೋಡಿದ ಸಹಸ್ರಾರು ಜನರನ್ನು ಚಕಿತಗೊಳಿಸುವಂತಿತ್ತು. ಇದನ್ನು ಶಬ್ದದಿಂದ ವರ್ಣಿಸಲು ಅಸಾಧ್ಯ. ಆದರೆ ಇತಿಹಾಸಪ್ರಸಿದ್ಧವಾದ ಜಗದ್ಗುರು ಪೀಠದ ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿಯುವಂತಹ ಪವಿತ್ರ ಪ್ರಸಂಗ ಎಂಬುದನ್ನು ಮರೆಯುವಂತಿಲ್ಲ.

ಶಿವಯೋಗಿಗಳು ಶ್ರೀಗಳವರ ಮನಸ್ಸನ್ನು ತಮ್ಮ ಕರದಲ್ಲಿ ತೆಗೆದುಕೊಂಡು ಸರಿಗೊಳಿಸುತ್ತಿದ್ದರೋ ಎನ್ನುವಂತಹ ಘಟನೆಗಳು ಗುರು ಸಾನಿಧ್ಯದಲ್ಲಿ ನಡೆಯುತ್ತಿತ್ತು. ಶಿವಯೋಗಿಗಳಿಗೆ ಹೊಗಳುವವರು ಯೋಗಿಗಳನ್ನು ಹೊನ್ನಶೂಲದಲ್ಲಿ ಇಕ್ಕುವರು ಎಂಬ ಮಾತಿನ ಅರಿವು ಇತ್ತು. ಶ್ರೀಗಳವರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿದಾಗ ಅವರ ತಪೋನುಷ್ಠಾನದ ಬಲದಿಂದ ಹೃದಯ ಉಕ್ಕಿಬಂದ ಅಮೃತವಾಣಿಯನ್ನು ಬಿತ್ತರಿಸುತ್ತಿದ್ದರು. ಹೀಗೆ ಅವರ ಸಂದೇಶದ ಪ್ರಭಾವಕ್ಕೆ ಒಳಗಾದ ಶ್ರೀಮಠದ ಅಭಿಮಾನಿಗಳು ಬಂದು ಅವರ ಬಗ್ಗೆ ಪ್ರಶಂಸನೀಯವಾಗಿ ಮಾತನಾಡಿದರೆ ಅಂತಹವರ ಮುಂದೆ ಶಿವಯೋಗಿಗಳು ಮೆಚ್ಚುವುದಕ್ಕಿಂತ ಮೂದಲಿಸಿದ ಪ್ರಸಂಗಗಳೇ ಹೆಚ್ಚು. ಆದರೆ ಅದನ್ನು ಕೇಳಿದಾಗ ಅವರಿಗೆ ಆಗುತ್ತಿದ್ದ ಆನಂದ ಅಳತೆ ಮೀರುತ್ತಿತ್ತು. ತಮ್ಮ ಆನಂದವನ್ನು ಯಾರು ಶ್ರೀಗಳವರ ಬಳಿ ಹೋಗಿ ತಿಳಿಸುವುದಿಲ್ಲವೋ ಅಂತಹ ಪರಿಚಾರಕರ ಮುಂದೆ ನಾಲ್ಕಾರು ಬಾರಿ ವ್ಯಕ್ತಪಡಿಸುತ್ತಿದ್ದರು.ತಮ್ಮ ಉಲ್ಲಾಸವನ್ನು ಪ್ರದರ್ಶಿಸುತ್ತಿದ್ದರು. ಎಷ್ಟೋ ಬಾರಿ ಶ್ರೀಗಳವರು ಯಾವ ಸಂಗತಿಯಲ್ಲಿ ಕಠಿಣವಾಗಿ ವರ್ತಿಸಬೇಕು ಮತ್ತು ಯಾವ ಸಮಯದಲ್ಲಿ ಮೃದುವಾಗಿ ನಡೆದುಕೊಳ್ಳಬೇಕು ಎಂಬುದನ್ನು ಅಪ್ರತ್ಯಕ್ಷವಾಗಿ ವ್ಯಕ್ತಪಡಿಸುತ್ತಿದ್ದರು.

ಶ್ರೀಗಳವರು ಶ್ರೀಮಠದ ಅಧಿಕಾರವನ್ನು ವಹಿಸಿಕೊಂಡಾಗ ಕೇವಲ ನೂರು ಜನರ ಸಂಸ್ಥೆಯಾಗಿದ್ದುದು ಇಂದು ಹತ್ತಾರು ಸಹಸ್ರ ಜನರಿಗೆ ಅನ್ನದಾನ, ಜ್ಞಾನದಾನ ನೀಡುವ ಬೃಹತ್ ಸಂಸ್ಥೆಯಾಗಿ ವಿಶ್ವಖ್ಯಾತಿ ಗಳಿಸಿದೆ. ಶಿವಯೋಗಿಗಳು ಶ್ರೀಗಳವರಿಗೆ ಹಣ ಅಥವಾ ಆಸ್ತಿಯನ್ನು ಗಳಿಸಿ ಅವರಿಗೆ ಧಾರೆ ಎರೆಯಲಿಲ್ಲ. ಅಂದರೆ ಶಿವಯೋಗಿಗಳಿಗೆ ಹಣ ಸಂಗ್ರಹಿಸುವ ಸಾಮರ್ಥ್ಯವಿರಲಿಲ್ಲವೆಂದಲ್ಲ. ಸುವರ್ಣವನ್ನು ಸೃಷ್ಟಿಸುವ ರಾಸಾಯನಿಕ ರಸಸಿದ್ಧಿಯು ಅವರಿಗೆ ಗೊತ್ತಿತ್ತು. ಅವರು ಯಾರನ್ನೂ ಕೇಳದೆ ಮನಸ್ಸಿನಲ್ಲಿ ಯಾರನ್ನಾದರೂ ಸ್ಮರಿಸಿದರೆ ಅವರು ಅಪೇಕ್ಷೆ ಪಡುವಷ್ಟು ಹಣ ದೊರೆಯುತ್ತಿತ್ತು. ಆದರೆ ತಾವು ಕೂಡಿಟ್ಟ ಹಣಕ್ಕೆ ಶಿಷ್ಯನನ್ನು ಒಡೆಯನನ್ನಾಗಿ ಮಾಡುವ ಕಲ್ಪನೆ ಅವರಲ್ಲಿ ಇರಲಿಲ್ಲ. ಎಷ್ಟೋ ವೇಳೆ ಶ್ರೀಮಠದ ದಾಸೋಹದ ವ್ಯವಸ್ಥೆಯಲ್ಲಿ ತಲ್ಲಣಗೊಳಿಸುವ ಪ್ರಸಂಗಗಳು ಉದಿಸುತ್ತಿದ್ದವು. ಶಿವಯೋಗಿಗಳ ಬಳಿ ಅಲ್ಪ ಸ್ವಲ್ಪ ಹಣವಿರುತ್ತಿತ್ತು. ಆದರೆ ಆ ಹಣವನ್ನು ದೂರದಿಂದ ಬರುವ ಫಕೀರರಿಗೆ, ಸಂತರಿಗೆ, ಕೆಲವು ವೇಳೆ ದಾರುಣ ಪರಿಸ್ಥಿತಿಯಲ್ಲಿ ಬರುವ ಹಳ್ಳಿಗರಿಗೆ ಉದಾರವಾಗಿ ನೀಡುತ್ತಿದ್ದರು. ಶ್ರೀಗಳವರು ಶ್ರೀಮಠದ ವ್ಯವಸ್ಥೆಯಲ್ಲಿ ಪರಿತಪಿಸುತ್ತಿದ್ದಾರೆಂದು ಗೊತ್ತಾದಾಗಲೂ ಅವರಿಗೆ ಸಂಪತ್ತನ್ನು ಪಡೆಯುವ ದಿಕ್ಕನ್ನು ತೋರಿಸುತ್ತಿದ್ದರೇ ಹೊರತು ತಾವೇ ಗಳಿಸಿ ಕೊಡುವ ಪ್ರಯತ್ನ ಮಾಡುತ್ತಿರಲಿಲ್ಲ. ಶ್ರಿಗಳವರನ್ನು ಮಡಿಮೆಯಲ್ಲಿ ದೇವರನ್ನು ಕಾಣುವ ಯೋಗಿಯನ್ನಾಗಿ ಮಾಡುವುದು ಅವರ ಉದ್ದೇಶವಾಗಿತ್ತು. ಅವರು ಹಾಗೆ ಆಗಬಲ್ಲರು ಎಂಬ ಆತ್ಮವಿಶ್ವಾಸವೂ ಇತ್ತು. ಶ್ರೀ ರಾಮಕೃಷ್ಣ ಪರಮಹಂಸರು ಸ್ವಾಮಿ ವಿವೇಕಾನಂದರಲ್ಲಿ ಸಪ್ತಋಷಿಗಳ ಅಂಶವನ್ನು ಕಂಡಂತೆ ಶ್ರೀಗಳವರಲ್ಲಿ ಅವ್ಯಕ್ತವಾಗಿದ್ದ ದಿವ್ಯಚೇತನವನ್ನು ಕಂಡು ಆಕರ್ಷಿತರಾಗಿದ್ದರು. ಶ್ರೀ ರಾಮಕೃಷ್ಣರ ಪ್ರಭಾವವನ್ನು ಜಗತ್ತಿಗೆ ಬಿತ್ತರಿಸುವಂತಹ ಕಾರ್ಯಕ್ಕೆ ಸ್ವಾಮಿ ವಿವೇಕಾನಂದರಿಗೆ ಪರಮಹಂಸರು ಏನನ್ನು ಕೊಟ್ಟರೋ ಅದೇ ತಪೋಧಾರೆ ಶಿವಯೋಗಿಗಳಿಂದ ಶ್ರೀಗಳವರಿಗೆ ದೊರೆತಿತ್ತು. ಅವರ ಮನಸ್ಸು ವಿಚಲಿತವಾಗದೆ ದಿವ್ಯತೆಯತ್ತ ಸಾಗಲು ನಿರಂತರ ಮಡಿಮೆಯಲ್ಲಿ ತೊಡಗುವುದು ಉತ್ತಮ ಸಾಧನೆಯೆಂದು ಭಾವಿಸಿದ್ದರು. ಶ್ರೀಗಳವರು ನಡೆಯುವುದನ್ನು, ನುಡಿಯುವುದನ್ನು ನೋಡಿ ಸಂತೋಷಭರಿತರಾಗುತ್ತಿದ್ದರು. ಆದರೆ ಅವರಿಗೆ ಆಗುವ ಆನಂದದ ಹೊಳಹು ಶ್ರೀಗಳವರ ಕಿವಿಗೆ ಮುಟ್ಟದಂತೆ ಎಚ್ಚರವಹಿಸುತ್ತಿದ್ದರು. ಶಿವಯೋಗಿಗಳು ಇಪ್ಪತ್ತನೇ ಶತಮಾನದ ಬಹು ಮಹಾಸ್ವರಯೋಗಿಗಳು, ಸ್ವರಯೋಗ ತಂತ್ರಶಾಸ್ತ್ರದಲ್ಲಿ ಬರುವಂತಹ ಮಹಾಯೋಗ. ಅದರಲ್ಲಿ ಬಲ್ಲಿದರಾದವರು ಅವರ ಸಮಕಾಲೀನರಾರೂ ಕರ್ನಾಟಕದಲ್ಲೇ ಇಲ್ಲ ಎನ್ನಬಹುದು.

ಇಂತಹ ಮಹಾಯೋಗಿಗಳಿಗೆ ಶ್ರೀಗಳವರ ಅಂತರಂಗ ಬಹಿರಂಗಗಳನ್ನು ಅರಿಯುವ ದಿವ್ಯಶಕ್ತಿಯು ಇತ್ತು, ತಿದ್ದುವ ಸಾಮರ್ಥ್ಯವೂ ಇತ್ತು. ಆದುದರಿಂದಲೇ ಅಂತಹ ಮಹಾವ್ಯಕ್ತಿಯನ್ನು ಈ ನಾಡಿಗೆ ಕರುಣಿಸಿದರು.

ಶಿವಯೋಗಿಗಳು ತಮ್ಮ ಉತ್ತರಾಧಿಕಾರಿ ಎಂತಹ ಚೈತನ್ಯ ಚೇತನವಾಗಬೇಕೆಂಬುದನ್ನು ಅಪೇಕ್ಷಿಸುತ್ತಿದ್ದರು ಎಂಬುದನ್ನು ಕೆಲವು ಪ್ರಸಂಗಗಳಿಂದ ಅರಿಯಬಹುದು. ಆ ಸಮಯದಲ್ಲಿ ಜನಬಲ ಮತ್ತು ಧನಬಲದ ಮೇಲೆ ಒಂದು ರೀತಿಯಿಂದ ಭಕ್ತರ ಮೇಲೆ ಆಕ್ರಮಣ ನಡೆಸುತ್ತಿದ್ದಂತಹ ಮಠಾಧೀಶರು ಇದ್ದರು. ಯಾವ ಸಮಾಜದಲ್ಲಿ ಮೇಲು ಕೀಳುಗಳಿರಬಾರದೆಂದು ಬಸವಣ್ಣನವರು ಬೋಧಿಸಿದ್ದರೋ ಅದೇ ಸಮಾಜದ ಗಣ್ಯರು ಬಸವಣ್ಣನವರ ಧ್ವಜವನ್ನೇ ಹಿಡಿದು ಜಾತಿಯ ಅಂತರವನ್ನು ಪ್ರಕಟಿಸಿ ತಮ್ಮ ಮೇಲ್ಮೆಯನ್ನು ದೊರಕಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಕಾಲ. ಸಂಪತ್ತಿನಿಂದ ಕೂಡಿದ್ದ ಮಠಗಳ ಅಧಿಪತಿಗಳ ಹಿರಿತನವನ್ನು ಸಮಾಜ ಪರಿಗಣಿಸುವ ಕಾಲ. ಈ ಭಾವನೆಯನ್ನು ಕೆಲವು ಜನ ಭಕ್ತರು ಕೆಲವು ಪೀಠಾಧೀಶ್ವರರ ಮನದಲ್ಲಿ ತುಂಬಿ ಶರಣತತ್ವವನ್ನು ಗಾಳಿಗೆ ತೂರಿದ್ದರು. ಹಾಗೆ ಪೀಠಾಧೀಶ್ವರರು ತಾವು ಕುಳಿತುಕೊಂಡ ಎತ್ತರದಲ್ಲಿ ಬೇರೆ ಯಾರೂ ಕುಳಿತುಕೊಳ್ಳಬಾರದು ಎಂಬ ಮನೋಧರ್ಮವನ್ನು ಹೊಂದಿದ್ದರು. ಈ ನೀತಿಯು ಶಿವಯೋಗಿಗಳಿಗೆ ಒಪ್ಪುತ್ತಿರಲಿಲ್ಲ. ಅಂತರ ಜಾತಿಯ ಗಣನೆಯಿಂದ ಸಂನ್ಯಾಸದ ಶ್ರೇಷ್ಠತೆಯನ್ನು ಪರಿಗಣಿಸುವ ಪರಿವರ್ತನೆಯನ್ನು ಅವರು ಆಂತರಿಕವಾಗಿ ಪ್ರತಿಭಟಿಸುತ್ತಿದ್ದರು. ಅದಕ್ಕಾಗಿ ಶಿವಯೋಗಿಗಳು ಅನೇಕಬಾರಿ ಬೃಹತ್ ಸಮಸ್ಯೆಯನ್ನೇ ಎದುರಿಸಬೇಕಾದ ಪರಿಸ್ಥಿತಿ ಒದಗಿತ್ತು. ಅವರು ತಮ್ಮ ತಪೋಬಲದಿಂದ ಅಂತಹ ಪ್ರಸಂಗಗಳನ್ನು ಜಯಿಸುತ್ತಲೇ ಬಂದರು. ಒಮ್ಮೆ ಶಿವಯೋಗಿಗಳಿಗೆ ಆರೋಗ್ಯದಲ್ಲಿ ಕೊರತೆ ಉಂಟಾದಾಗ ಹಿರಿತನದ ಭಾವನೆಯ ಗುರುಗಳೊಬ್ಬರು ಶ್ರೀಮಠಕ್ಕೆ ಬರುವ ವ್ಯವಸ್ಥೆ ಆಗಿತ್ತು. ಆಗ ತಾವು ಮಂಚದ ಮೇಲೆ ಮಲಗಿ ಉಳಿದ ಎಲ್ಲಾ ಆಸನಗಳನ್ನು ಅಲ್ಲಿಂದ ಒಳಕ್ಕೆ ಸಾಗಿಸುವುದಕ್ಕೆ ಆಜ್ಞೆ ಮಾಡಿದರು. ಹೀಗೆ ಆ ಗುರುಗಳು ಅವರ ಬಳಿಗೆ ಬಂದಾಗ ಯಾವ ತಪ್ಪನ್ನು ಮಾಡದ ಶ್ರೀಗಳವರು ಅವರ ಜೊತೆಗೂಡಿ ಆ ಮಠಕ್ಕೆ ಆಗಮಿಸಿದಾಗ ಆಸನದ ಅಹಂಭಾವ ತುಂಬಿದ ಗುರುಗಳಿಗೆ ಅಲ್ಲಿ ಎತ್ತರದ ಆಸನವಿರಲಿಲ್ಲ. ಆದರೆ ಆಗ ಅವರ ಜೊತೆಯಲ್ಲಿ ಇದ್ದ ಶ್ರೀಗಳವರನ್ನು ಆ ಗುರುಗಳ ಸಮ್ಮುಖದಲ್ಲಿ ಅವರ ಮನ ನೋಯುವಂತೆ ಮೂದಲಿಸಿ ಮಾತನಾಡಿದರು. ಇಂತಹ ಹತ್ತಾರು ಸನ್ನಿವೇಶವನ್ನು ಈಗಾಗಲೇ ಕಂಡು ಉಂಡು ಅರಗಿಸಿಕೊಂಡಿದ್ದ ಶ್ರೀಗಳವರಿಗೆ ಇದು ಸಹಿಸಲಾರದ ಪರಿಣಾಮವನ್ನು ಉಂಟುಮಾಡಿತು. ಅವರನ್ನು ಉದ್ವಿಗ್ನಗೊಳಿಸಿತ್ತು. ಈ ಸನ್ನಿವೇಶ ಶ್ರೀಮಠದ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದು. ಶಿವಯೋಗಿಗಳು ಆಸ್ತಿ ಮತ್ತು ಆಸನದ ಅಹಂಕಾರವನ್ನು ಅಳಿಸುವ ಕಾರ್ಯವನ್ನು ಮಾಡಿದರು. ತಮ್ಮ ಕರಕಮಲ ಸಂಜಾತರು ತಪಸ್ಸಿನ ತಪೋಬಲದಿಂದಲೂ, ಜನ ಬಲದಿಂದಲೂ ನಾಡಿನ ಪೀಠಕ್ಕೆ ಯಾವ ದೃಷ್ಟಿಯಿಂದಲೂ ಕೀಳಾಗದಂತೆ ಮೇಲೇರಬೇಕೆಂಬುವ ಅಭಿಲಾಷೆ ಅವರ ಅಂತರ್ಯದ ಕಡಲಿನಿಂದ ಉಕ್ಕಿ ಬಂದಿತ್ತು. ಇಲ್ಲಿ ಅತ್ಯಂತ ಗಣನೀಯವಾದ ಸಂಗತಿ ಎಂದರೆ ಇಂತಹ ಪ್ರಸಂಗ ನಡೆದಾಗ ಮಗನೂ ಸಹ ತಂದೆಯ ನಡತೆಯನ್ನು ಸಹಿಸುತ್ತಿರಲಿಲ್ಲ. ಅವಿದ್ಯಾವಂತ ಶಿಷ್ಯರಾಗಿದ್ದರೂ ಸಹ ಯಾವ ಗುರುಗಳ ಬಗೆಗೆ ಮನ್ನಣೆ ಕೊಡುತ್ತಿರಲಿಲ್ಲ. ಆದರೆ ಇಂತಹ ಎಷ್ಟೋ ಘಟನೆಯ ಪ್ರಸಂಗಗಳು ಬಂದರೂ, ಕೋಪ ಉಕ್ಕಿ ಬಂದರೂ ಅಭಿಮಾನದ ಕಡಲು ಭುಗಿಲೆದ್ದರೂ, ತಮ್ಮ ಗುರುಗಳ ಬಗೆಗೆ ಒಮ್ಮೆಯಾದರೂ ತೂಕ ತಪ್ಪಿದ ಒಂದು ನುಡಿಯನ್ನು ಆಡಿದ್ದನ್ನು ಯಾರೂ ಕೇಳಿಲ್ಲ. ಅಂತಹ ಮನೋಭಾವ ಬಂದಿದ್ದು ಶ್ರೀಗಳವರ ನೆನಪಿನಲ್ಲೂ ಇಲ್ಲ. ಇದನ್ನು ನೆನೆದಾಗ ಅಂತಹ ಪ್ರಭಾವಕ್ಕೆ ಶ್ರೀಗಳು ಒಳಗಾಗಿದ್ದರು ಎಂಬುದು ಊಹಾತೀತವಾಗುತ್ತದೆ. ಕ್ಷಣ ಕಾಲ ಈ ಘಟನೆಯಿಂದ ಉದ್ವಿಗ್ನರಾಗಿ ಶ್ರೀಮಠದ ಅಧಿಕಾರವನ್ನೇ ತ್ಯಾಗ ಮಾಡಿ ದೂರ ಸಾಗಬೇಕು ಎನ್ನುವಷ್ಟರಮಟ್ಟಿಗೆ ಆಲೋಚನಾ ಮಗ್ನರಾದರು. ಆದರೆ ಸನ್ನಿಧಿಗೆ ಬರುವಂತೆ ಗುರುಗಳ ಅಪ್ಪಣೆಯಾಗಿದೆ ಎಂದಾಗ ಮರು ಮಾತನಾಡದೆ ಬಂದು ಪ್ರಣಾಮಗಳನ್ನು ಸಲ್ಲಿಸಿದ ಸನ್ನಿವೇಶ ಗಂಭೀರ ಚಿಂತನೆಗೆ ಅರ್ಹವಾದದ್ದು. ಈ ಉರ್ವರ ಬಾಂಧವ್ಯವನ್ನು ಶಬ್ದಗಳಿಂದ ವರ್ಣಿಸಲು ಅಸಾಧ್ಯ. ಮತ್ತೊಂದು ಪ್ರಸಂಗದಿಂದ ನಮ್ಮ ನಮ್ಮ ಚಿಂತನ ಶಕ್ತಿಯ ಅಂತಸ್ತಿಗೆ ಅನುಗುಣವಾಗಿ ಈ ಬಾಂಧವ್ಯದ ಭವ್ಯತೆಯನ್ನು ಅರ್ಥಮಾಡಿಕೊಳ್ಳಬೇಕು. ಶಿವಯೋಗಿಗಳು ದಿನಾಂಕ ೧೧.೧.೧೯೪೧ರ ಶನಿವಾರ ರಾತ್ರಿ ೧೧.೪೦ರ ಸುಮಾರಿಗೆ ಶಿವಯೋಗಿಗಳ ದಿವ್ಯಜ್ಯೋತಿ ಪರಂಜ್ಯೋತಿಯಲ್ಲಿ ಬೆರೆಯಿತು. ಆ ಸಮಯದಲ್ಲಿ ಶ್ರೀಗಳವರು ಆ ಸ್ಥಳದಲ್ಲಿ ಇರಲಿಲ್ಲ. ಸುದ್ದಿ ತಿಳಿದ ತಕ್ಷಣ ಅವರು ತಮ್ಮ ಬಿಡಾರದಿಂದ ಕೆಲವಾರು ನಿಮಿಷದಲ್ಲಿ ಶಿವಯೋಗಿಗಳ ಸನ್ನಿಧಿಗೆ ದಯಮಾಡಿದರು. ಶಿವಯೋಗಿಗಳ ಇಹದ ಯಾತ್ರೆ ಮುಗಿದು ಹಲವಾರು ನಿಮಿಷಗಳು ಕಳೆದುಹೋಗಿದ್ದವು. ಶ್ರೀಮಠದ ವಿದ್ವಾಂಸರು ಶಿವಯೋಗಿಗಳ ಬಳಿಯಲ್ಲೆ ಇದ್ದು ಅವರ ಐಹಿಕ ಯಾತ್ರೆ ಮುಗಿದ

ಸುದ್ದಿಯನ್ನು ಶ್ರೀಗಳವರಿಗೆ ಮುಟ್ಟಿಸಿದ್ದರು. ಶ್ರೀಗಳವರು ಶಿವಯೋಗಿಗಳ ಸನ್ನಿಧಿಗೆ ಬಂದು ಕಂಬನಿ ತುಂಬಿ ಅವರ ಕಾಲ ಬಳಿ ನಿಂತು ಗುರುಗಳನ್ನು ಅವಲೋಕಿಸಿದಾಗ ಶಿವಯೋಗಿಗಳು ಒಂದು ಕ್ಷಣ ಕಣ್ತೆರೆದು ನೋಡಿ ಮುಗುಳ್ನಕ್ಕು ಕಣ್ಮುಚ್ಚಿದರು. ಆದರೆ ಮತ್ತೆ ತೆರೆಯಲಿಲ್ಲ. ಈ ಪ್ರಸಂಗ ಕೆಲವರಿಗೆ ಸೋಜಿಗವಾಗಬಹುದು. ಕೆಲವರಿಗೆ ವಿಶ್ವಾಸಾರ್ಹ ಆಗದೇ ಇರಬಹುದು. ಮಹಾಪುರುಷರ ಜೀವನದಲ್ಲಿ ಇದು ಸಾಧ್ಯ ಎಂಬುದಕ್ಕೆ ಅನೇಕ ನಿದರ್ಶನಗಳೂ ಇವೆ. ಇದರ ಬಗೆಗೆ ಪಾಶ್ಚಾತ್ಯ ದೇಶಗಳಲ್ಲಿ ನಡೆದ ವೈಜ್ಞಾನಿಕ ಸಂಶೋಧನೆಗಳ ಬಗೆಗೆ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಇದು ಸತ್ಯವೇ ಎಂಬುದನ್ನು ಭಾರತದ ಅನೇಕ ಧರ್ಮ ಗ್ರಂಥಗಳು ಉಲ್ಲೇಖಿಸಿವೆ. ಇಂತಹ ಅನೇಕ ಪ್ರಸಂಗಗಳ ಅಧ್ಯಯನದ ಜೊತೆಗೆ ಈ ಲೇಖಕನಿಗೆ ಇಂತಹ ಸ್ವಂತ ಅನುಭವವಿರುವ ಕಾರಣ ಶ್ರೀಗಳವರ ಜೀವನದ ಈ ಪ್ರಸಂಗದ ಬಗೆಗೆ ಖಚಿತ ನಿಶ್ಚಯವಿದ್ದುದರಿಂದ ಮತ್ತು ಈ ಸಂಗತಿ ಇದುವರೆಗೆ ಎಲ್ಲೂ ಪ್ರಕಟವಾಗದೆ ಇದ್ದುದರಿಂದ ಇಲ್ಲಿ ಉಲ್ಲೇಖಿಸಲಾಗಿದೆ. ಈ ಅನುಭವವನ್ನು ಸ್ಮರಿಸಿಕೊಂಡಾಗ ಶ್ರೀಗಳವರ ಹೃದಯ ಉಕ್ಕಿಬರುತ್ತದೆ. ಕಂಬನಿ ತುಂಬಿ ಬರುತ್ತದೆ. ಇದು ಈರ್ವರು ಮಹಾಪುರುಷರಲ್ಲಿ ಸಮರಸಗೊಂಡ ಸತ್ವ ಸಂಪತ್ತು.

ಕಿರಿತನ ಹಿರಿತನ ಇದ್ದರೂ ಸಾಕಾರಮೂರ್ತಿ ಶಿವಯೋಗಿಗಳ ಅಪೇಕ್ಷೆಯಂತೆ ತಪೋನುಷ್ಠಾನದಲ್ಲಿ ಸಂಸ್ಥೆಯ ಸಂಪತ್ತನ್ನು ಬೆಳೆಸುವುದರಲ್ಲಿ ಉತ್ತುಂಗ ಶಿಖರವನ್ನೇರಿದರು. ಆದರೆ ಯಾವುದೇ ಅಧಿಕಾರ ಐಶ್ವರ್ಯದ ಅಹಂಕಾರ ಅವರ ಬಳಿಗೆ ಸುಳಿಯಲಿಲ್ಲ. ಇವರ ಜೀವನದಲ್ಲಿ ಸ್ಮರಿಸುವಂತಹ ಕೆಲವು ಅಂಶಗಳು ಇವೆ. ವಯೋಗುಣದಿಂದ ದೇಹ ಶಕ್ತಿ ಕುಗ್ಗಿದೆ. ಆದರೆ ದುಡಿಮೆಯ ಮನಶ್ಶಕ್ತಿ ಕರಗಿಲ್ಲ ಮತ್ತು ಸೊರಗಿಲ್ಲ. ಅತ್ಯಂತ ಸೂಕ್ಷ್ಮವಾಗಿ ಗಮನಿಸುವ ಸಂಗತಿ ಎಂದರೆ ಶ್ರೀಗಳವರು ಇಂದಿಗೂ ಪ್ರತಿವಾರದಲ್ಲಿ ಒಂದೆರಡು ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಇಂದಿಗೂ ನೂರಾರು ಮೈಲಿಗಳ ಪ್ರವಾಸ ಮಾಡಿ ಭಕ್ತರಿಗೆ ದರ್ಶನ ನೀಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಭಾಗವಹಿಸಿದಾಗ ವೃದ್ಧಕಾಯರಾದ ಅನೇಕ ಮಠಾಧೀಶರು ಕುಳಿತು ಮಾನಾಡುವುದು ಸಂಸ್ಕೃತಿಯೆಂದು ಆದರಿಂದ ಹಿರಿಮೆ ಹೆಚ್ಚುವುದೆಂದು ಭಾವಿಸಿರುವಾಗ ಇವರು ಇಂದಿಗೂ ನಿಂತೇ ಆಶೀರ್ವಚನವನ್ನು ದಯಪಾಲಿಸುತ್ತಾರೆ. ಆರೋಗ್ಯದ ಅವ್ಯವಸ್ಥೆ ಇದ್ದಂತಹ ಅನೇಕ ಪ್ರಸಂಗಗಳಲ್ಲಿ ನೂರಾರು ಮೈಲಿ ಪ್ರವಾಸ ಮಾಡಿ ಬಂದು ದೈಹಿಕ ವೇದನೆಯನ್ನು ಅನುಭವಿಸುತ್ತಿದ್ದರೂ ಸಭೆಯಲ್ಲಿ ಕುಳಿತು ಆಶೀರ್ವಚನವನ್ನು ನೀಡುವ ಮನೋಧರ್ಮಕ್ಕೆ ಒಪ್ಪಲಿಲ್ಲ. ಬಹು ಜನರು ಅಪೇಕ್ಷಿಸಿ ಪ್ರಾರ್ಥಿಸಿದಾಗಲೂ ಅವರು ಸಭೆಯಲ್ಲಿ ಎದ್ದು ನಿಂತು ಭಕ್ತರಿಗೆ ದರ್ಶನ, ಆಶೀರ್ವಾದ ನೀಡುತ್ತಾ ಬಂದಿದ್ದಾರೆ. ಇದು ಸಾಮಾನ್ಯ ಸಂಗತಿಯಾಗಿ ಕಾಣಬಹುದು. ಆದರೆ ಕೆಲವೊಂದು ಸಮಾರಂಭಗಳಲ್ಲಿ ಅವರಿಗೆ ಆಗುತ್ತಿದ್ದ ವೇದನೆಯಲ್ಲೂ ತಮ್ಮ ನಿಲುವನ್ನು ಬದಲಾಯಿಸದಿರುವುದನ್ನು ನೋಡಿದಾಗ ಇದರ ಹಿಂದೆ ಯಾವುದೋ ಅಂತರಾರ್ಥವಿರಬೇಕೆಂದು ಭಾಸವಾಗದಿರದು. ಶ್ರೀಗಳವರು ಯಾವುದೇ ಸಮಾರಂಭಗಳಲ್ಲಿ ಭಾಗವಹಿಸಿದರೂ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಶರಣರು ನೀಡಿದ ಪರಿಹಾರವನ್ನು ಮನೋಜ್ಞವಾಗಿ ಅರುಹುತ್ತಾರೆ. ಶರಣರನ್ನು ಭಕ್ತಿಯಿಂದ ಸ್ಮರಿಸದ ಯಾವ ಸಮಾರಂಭವೂ ಅವರ ಜೀವನದಲ್ಲಿ ನಡೆದಿಲ್ಲ. ಅವರು ಎದ್ದು ನಿಲ್ಲುವುದಕ್ಕೆ ಅದು ಮೂಲ ಕಾರಣವಿರಬೇಕೆನಿಸುತ್ತದೆ. ಅವರು ಅಂತರಂಗ ಬಹಿರಂಗ ವಿದ್ಯಾಸಂಪನ್ನರು. ಜಗತ್ತಿನ ಎಲ್ಲ ಧರ್ಮ ಹಾಗೂ ಪ್ರವರ್ತಕರ ಬಗೆಗೆ ಶ್ರೀಗಳಲ್ಲಿ ಇರುವ ಪೂಜ್ಯ ಭಾವನೆ, ಅವರ ಕಾರ್ಯದಲ್ಲಿ ಅವರಿಗಿರುವ ಅಭಿಮಾನ ಸ್ಮರಣೀಯ ಮತ್ತು ಅನುಕರಣೀಯ.

ಪೂಜ್ಯ ಶ್ರೀಗಳವರ ಜೀವನ ವೈಶಿಷ್ಟ್ಯಗಳಲ್ಲಿ ಅನೇಕ ಸಂಗತಿಗಳಿವೆ. ಅವರು ಸಂತರ ಬಗ್ಗೆ ಎಲ್ಲಾ ಮಠಾಧೀಶರ ಬಗೆಗೆ ಸಮಭಾವನೆಯನ್ನು ತಾಳಿರುವುದೂ ಒಂದು ಗಮನಾರ್ಹ ಸಂಗತಿ. ಅವರು ಶ್ರೀಮಠದಲ್ಲೇ ಇರಲಿ, ಪರಸ್ಥಳದಲ್ಲಿರಲಿ ಹಿರಿತನದ ಕಿರಿತನದ ಭಾವನೆಯನ್ನಾಗಲಿ ಗುರುವಿರಕ್ತ ಭಿನ್ನತೆಯನ್ನಾಗಲಿ ಎಂದೂ ಅನುಸರಿಸಿಲ್ಲ. ಅವರು ಪೂಜಾನುಷ್ಠಾನಗಳಿಗೆ ತೊಡಗಿದಾಗ ಎಲ್ಲಾ ಮಠಾಧೀಶ್ವರರು ಸಮಾನವಾಗಿ ಅವರ ಸಾನಿಧ್ಯದಲ್ಲಿ ಪ್ರಸಾದ ಸ್ವೀಕರಿಸ ತೊಡಗುತ್ತಾರೆ. ಬಸವಣ್ಣನವರ ನುಡಿಯನ್ನು ಇಲ್ಲಿ ಸ್ಮರಿಸಬಹುದು

"ಉಟ್ಟುತೊಟ್ಟು ಪೂಜ್ಯರಾಗಿ ಬಂದ ಜಂಗಮ ವಿಶೇಷವೆಂದು
ಕಂತೆಬೊಂತೆಯ ಜಂಗಮ ಬಂದಡೆ ಹೀನನೆಂದು
ಕಂಡೆನಾದಡೆ ಪಂಚಮಹಾಪಾತಕ.

ಇದು ಕಾರಣ, ಅನ್ನ - ವಸ್ತ್ರ - ಧನ - ಮಾಟದಲ್ಲಿ
ಎರಡಾಗಿ ಕಂಡೆನಾದಡೆ ನರಕದಲ್ಲಿಕ್ಕುವ
ಕೂಡಲಸಂಗಮದೇವಾ.''

ಶ್ರೀಗಳವರ ಜೀವನದ ಮತ್ತೊಂದು ವೈಶಿಷ್ಟ್ಯವೆಂದರೆ ಅವರು ಶರಣರ ಬಗೆಗೆ ಸಭೆಯಲ್ಲಿ ಅತ್ಯಂತ ಗೌರವಯುತವಾಗಿ ಪ್ರಸ್ತಾಪಿಸುವ ಮನೋಧರ್ಮ ; ಭಕ್ತಿತುಂಬಿ ಮುಕ್ತಕಂಠದಿಂದ ಅವರನ್ನು ಸ್ಮರಿಸುತ್ತಾರೆ. ಶರಣರ ತತ್ತ್ವವನ್ನು ಬಿತ್ತರಿಸುತ್ತಾರೆ. ಜಗತ್ತಿನ ಯಾವುದೇ ಧರ್ಮದ ಬಗೆಗೆ ಅನ್ಯರ ಮನ ನೋಯಿಸುವಂತಹ ವಾಕ್ಯ ಅವರ ಕಂಠದಿಂದ ಹೊರಹೊಮ್ಮಿದ ಪ್ರಸಂಗಗಳೇ ಇಲ್ಲ. ಇಂದು ವಿದ್ವತ್ತು ಮತ್ತು ಅಧಿಕಾರದ ಅಮಲಿನಲ್ಲಿ ಶರಣರ ನುಡಿಗಳನ್ನು ಅನ್ಯರ ಅವಹೇಳನಕ್ಕಾಗಿ ಪರರ ಮನನೋಯಿಸಿ ತಮ್ಮ ಅಹಮಿಕೆಯನ್ನು ವ್ಯಕ್ತಪಡಿಸುವುದಕ್ಕಾಗಿ ಬಳಸಿಕೊಳ್ಳುತ್ತಿರುವ ಪ್ರಸಂಗಗಳೇ ಹೆಚ್ಚು. ಶ್ರೀಗಳವರು ಶರಣತತ್ತ್ವವನ್ನು ಬಿತ್ತರಿಸುವಾಗ ಅದನ್ನು ಮಾತಿನ ಮೋಡಿಗಾಗಿ ಬಳಸಿಕೊಳ್ಳುವುದಿಲ್ಲ. ಶರಣ ಜೀವ ಅವರ ಅಂತರ್ಗತವಾಗಿ ಅನುಭಾವದ ಅಮೃತವಾಣಿ ಹೊರಬರುತ್ತದೆ. ಶರಣರ ಜೀವನ ಅವರ ಸ್ಮೃತಿಪಟಲದ ದರ್ಶನವಾದಾಗ ಶ್ರೀಗಳವರ ಭಾವನೆ ಪವಿತ್ರವಾಗಿರುತ್ತದೆ. ಆದುದರಿಂದ ಎಲ್ಲಾ ಸಮಾರಂಭಗಳಲ್ಲೂ ನಿಂತೇ ಆಶೀರ್ವಾದ ಮಾಡುತ್ತಾರೆ. ಅದಕ್ಕೆ ಬಸವಣ್ಣನವರ ಸಂದೇಶ ಸಾಕ್ಷಿಯಾಗಿದೆ.

''ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ
ಆಳ್ದನು ಬರಲು ಆಳುಮಂಚದ ಮೇಲೆ ಇಪ್ಪುದು ಗುಣವೇ, ಹೇಳಾ
ಕೂಡಲ ಸಂಗಮದೇವಾ ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ.''

ಬಸವಣ್ಣನವರ ಈ ನಿಷ್ಠೆ ಶ್ರೀಗಳವರ ಜೀವನದ ತತ್ತ್ವನಿಷ್ಠೆಯಾಗಿದೆ. ಶ್ರೀ ಸಿದ್ಧಲಿಂಗೇಶ್ವರರು ಸಿದ್ಧಗಂಗೆಯಿಂದ ಗುಬ್ಬಿಗೆ ಹೋದಾಗ ಭಕ್ತರು ಅವರನ್ನು ಪಲ್ಲಕ್ಕಿಯಲ್ಲಿ ಹೊತ್ತು ನಡೆಯುತ್ತಿದ್ದರು. ಅವರು ತಮ್ಮ ಗುರುಗಳಾದ ಶ್ರೀ ಚನ್ನಬಸವೇಶ್ವರರ ದೇವಸ್ಥಾನದ ಬಳಿಗೆ ಬಂದಾಗ ಕೆಳಗೆ ಇಳಿದು ಗುರುಗಳ ಗದ್ದುಗೆಗೆ ಪ್ರಣಾಮ ಸಲ್ಲಿಸಿ ಅಲ್ಲಿಂದ ಕಾಲು ನಡಿಗೆಯಲ್ಲಿ ಸಾಗಿ ಮತ್ತೆ ಉತ್ಸವದಲ್ಲಿ ತೆರಳುತ್ತಿದ್ದುದನ್ನು ಕಾವ್ಯಗಳಲ್ಲಿ ವರ್ಣಿಸಿದೆ. ಭಾರತೀಯ ಸಂಸ್ಕೃತಿಯ ಪ್ರವರ್ತಕರಾದ ವೇದವ್ಯಾಸರು ತಮ್ಮ ಪುತ್ರ ಶುಕಮಹರ್ಷಿಯನ್ನು ಆತ್ಮಜ್ಞಾನ ಸಿದ್ಧಿಗಾಗಿ ಜನಕ ಮಹಾರಾಜನ ಬಳಿಗೆ ಕಳುಹಿಸುತ್ತಾರೆ. ಶುಕ ಮಹರ್ಷಿಗೆ ಆಕಾಶದಲ್ಲಿ ಗಮನಿಸುವ ಆತ್ಮಶಕ್ತಿಯ ಸಿದ್ಧಿ ಆಗಿತ್ತು. ಆದರೆ ವೇದವ್ಯಾಸರು ಅರಣ್ಯದಲ್ಲಿ ಪಾದಚಾರಿಯಾಗಿ ಹೋಗಬೇಕೆಂದು ಅಪ್ಪಣೆ ಮಾಡುತ್ತಾರೆ. ಶುಕ ಮಹರ್ಷಿ ಅದನ್ನು ಪಾಲಿಸುತ್ತಾರೆ. ಈ ಸಂಸ್ಕೃತಿಯ ಭವ್ಯತೆಯನ್ನು ಶ್ರೀಗಳವರಲ್ಲಿ ಕಾಣುತ್ತೇವೆ. ಶ್ರೀಗಳವರನ್ನು ಸಮಾರಂಭಕ್ಕೆ ಆಹ್ವಾನಿಸಿದ ಅನೇಕ ಗ್ರಾಮಗಳಲ್ಲಿ ಮೈಲಿಗಟ್ಟಲೆ ನಡೆಯುತ್ತಲೇ ಸಾಗುವ ನೂರಾರು ಸಂದರ್ಭಗಳು ಈ ನಾಡಿನ ಜನತೆಗೆ ನೆನಪಿನಲ್ಲಿವೆ.

ನನಗಿಂತ ಉನ್ನತ ವಿದ್ವಾಂಸರು, ಆಧ್ಯಾತ್ಮಜೀವಿಗಳು ಶ್ರೀಗಳವರ ಜೀವನದಲ್ಲಿ ನಿರಂತರವಾಗಿ ಸ್ಮರಿಸಬೇಕಾದ ಪ್ರಸಂಗಗಳನ್ನು ಕಂಡಿದ್ದಾರೆ, ಅನುಭವಿಸಿ ಆನಂದಿಸಿದ್ದಾರೆ. ನನ್ನ ಅನುಭವದಲ್ಲೇ ಇನ್ನೂ ಎಷ್ಟೋ ಪ್ರಸಂಗಗಳು ನೆನಪಿನ ಸುಳಿಯಲ್ಲಿ ಬರುತ್ತವೆ. ಮಹಾನುಭಾವರೊಬ್ಬರ ಜೀವನದ ಪ್ರತಿಯೊಂದು ಪ್ರಸಂಗವೂ ಸ್ಮರಣೀಯ ಮತ್ತು ಅನುಕರಣೀಯ. ಅದು ಇತಿಹಾಸದಲ್ಲಿ ಉಳಿಯ ಬೇಕು, ಬೆಳಗ ಬೇಕು. ಬಲ್ಲವರು ಅಂತಹ ಪ್ರಸಂಗಗಳನ್ನು ಸ್ಮರಿಸಿ ಪ್ರಕಟಣೆಗೆ ನೆರವಾದರೆ ಅದು ನಾವು ಮುಂದಿನ ಪೀಳಿಗೆಗೆ ಕೊಡುವ ಕಾಣಿಕೆಯಾಗುತ್ತದೆ. ಅಂತಹ ಕೈಂಕರ್ಯ ಎಲ್ಲರಿಂದಲೂ ಸಲ್ಲದು. ನಿಷ್ಠೆಯಲ್ಲಿ ವಜ್ರದಂತೆ ಕಠೋರ ಸ್ವರೂಪಿ, ದೀನ ದಲಿತರ ಅಭ್ಯುದಯದ ಪ್ರಸಂಗಗಳಲ್ಲಿ ಕುಸುಮದಷ್ಟೇ ಮೃದುವಾದ ಹೃದಯ ಸಂಪನ್ನರಾದ ಶ್ರೀಮನ್ ನಿರಂಜನ ಜಗದ್ಗುರು ಶ್ರೀ ಗೋಸಲ ಸಿದ್ಧೇಶ್ವರರ ಪೀಠಾಧೀಶ್ವರರಾದ ಪರಮ ಪೂಜ್ಯ ಶ್ರೀಗಳವರು ಶತ ಸಂವತ್ಸರಗಳನ್ನು ದಾಟಲಿ. ಅವರ ಆತ್ಮಶಕ್ತಿಯ ಆಶೀರ್ವಾದ ಈ ಜಗತ್ತಿಗೆ ಬಹುಕಾಲ ದೊರೆಯಲೆಂದು ಪ್ರಾರ್ಥನೆ.

ಅಪೂರ್ವ ದರ್ಶನ

ಸಗರ ಕೃಷ್ಣಾಚಾರ್ಯ

ನಾನು ೧೯೭೧ ರಲ್ಲಿ ಬೆಂಗಳೂರು ವಿಭಾಗದ ಶಿಕ್ಷಣ ಇಲಾಖೆಯಲ್ಲಿ ಕನ್ನಡ ವಿಷಯ ವೀಕ್ಷಣಾಧಿಕಾರಿಯಾಗಿ ಹೋಗಿದ್ದೆ. ಸುಮಾರು ೫ ವರ್ಷಗಳ ಕಾಲ ನಾನಲ್ಲಿ ಸೇವೆ ಸಲ್ಲಿಸಿದೆ. ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಪ್ರೌಢಶಾಲೆ, ಪದವೀಪೂರ್ವ ಮಹಾವಿದ್ಯಾಲಯಗಳು, ತರಬೇತಿ ಸಂಸ್ಥೆಗಳು, ಇವುಗಳ ವೀಕ್ಷಣಾಕಾರ್ಯ ನಮ್ಮದಾಗಿತ್ತು. ಆ ಸಮಯದಲ್ಲಿ ಪಂಡಿತ ಕೆ.ಪಿ. ಶಿವಲಿಂಗಯ್ಯನವರು ತಮ್ಮ ಪೂಜ್ಯ ಗುರುಗಳಾದ ಡಾ. ಶಿವಕುಮಾರ ಸ್ವಾಮಿಗಳ ಬಗ್ಗೆ ಅಭಿಮಾನದಿಂದ ಹೇಳುತ್ತಿದ್ದರು. ನನಗೆ ಅವರನ್ನು ಕಾಣುವ ತವಕ ಹೆಚ್ಚಿತು. ಆ ಸುಯೋಗಕ್ಕಾಗಿ ಕಾಯುತ್ತಿದ್ದೆ.

ನಮ್ಮ ಪರಿವೀಕ್ಷಣಾ ತಂಡ ತುಮಕೂರು ಜಿಲ್ಲೆಯ ಕೆಲ ಶಾಲೆಗಳ ವೀಕ್ಷಣೆಗಾಗಿ ಹೊರಟಿತು. ಸಿದ್ಧಗಂಗಾ ಕ್ಷೇತ್ರದ ಪ್ರೌಢಶಾಲೆಯ ವೀಕ್ಷಣೆಯೇ ಮೊದಲಿನದಾಗಿತ್ತು. ನನ್ನ ಬಯಕೆ ಈಡೇರಿತೆಂದೂ, ಪೂಜ್ಯ ಶ್ರೀಗಳವರ ಸಂದರ್ಶನದ ಭಾಗ್ಯ ಲಭಿಸಿತೆಂದೂ, ತಪಸ್ವಿಗಳ ಸಮಾಗಮವೇ ಪುಣ್ಯಫಲವೆಂದೂ ಗ್ರಹಿಸಿ ಪ್ರವಾಸ ಹೊರಟೆವು. ಕ್ಯಾತಸಂದ್ರ (ಅದು ಕೇತ ಶರಧಿ ಇದ್ದಿರಬಹುದು) ಚಿಕ್ಕ ಹಳ್ಳಿ. ಚಿಕ್ಕ ರೈಲ್ವೇ ನಿಲ್ದಾಣ. ಇಂಥಲ್ಲಿ ಏತಕ್ಕೆ ತಮ್ಮ ಆಶ್ರಮ ಕಟ್ಟಿಕೊಂಡಿದ್ದಾರೆ ಎಂದು ಅನಿಸಿತು. ರೇಲ್ವೆ ಹಳಿ ದಾಟುತ್ತಲೇ ಬೆಟ್ಟದ ಕೆಳಗಡೆ ವಿಶಾಲವಾದ ಮೈದಾನಿನಲ್ಲಿ ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿ, ಒಂದು ಚಿಕ್ಕ ಊರೇ ನಿರ್ಮಾಣವಾದಂತೆ ಕಂಡಿತು. ತಪಸ್ವಿಗಳಿಗೆ ಯೋಗ್ಯವಾದ ತಾಣ ಎನಿಸಿತು. ಸ್ವಲ್ಪ ಮುಂದಕ್ಕೆ ಸಾಗಿದೆವು. ಸಂಸ್ಕೃತ ಪಾಠಶಾಲೆ, ಪಂಡಿತರಿಗಾಗಿ ವಸತಿ ಗೃಹಗಳು ಎರಡೂ ಬದಿಗೆ ಕಂಗೊಳಿಸಿದುವು. ಆ ತರುವಾಯ ಒಂದು ಬದಿಗೆ ಸಂದರ್ಶನದ ಭವ್ಯವೂ, ವಿಶಾಲವೂ ಆದ ಕೊಠಡಿ. ಇನ್ನೊಂದು ಬದಿಗೆ ಅಡುಗೆಮನೆ, ವಿದ್ಯಾರ್ಥಿ ನಿಲಯ. ಎದುರಿಗೇನೇ ಪ್ರೌಢಶಾಲೆಯ ವಿಶಾಲ ಕಟ್ಟಡ. ಸುತ್ತ ಮುತ್ತ ಇನ್ನೂ ಕೆಲ ಕಟ್ಟಡಗಳು ಇದ್ದುವು.

ನಾವಂದು ವೀಕ್ಷಣೆ ಮುಗಿಸಿಕೊಂಡು ಸ್ವಾಮಿಗಳನ್ನು ಸಂದರ್ಶಿಸುವ ಅಭಿಪ್ರಾಯ ತಿಳಿಸಿದೆವು. ಅವರು ಸಂದರ್ಶನದ ಕೊಠಡಿಯಲ್ಲಿ ಆಗಲೇ ವಿರಾಜಮಾನರಾಗಿದ್ದರು. ನಾವು ಹೋಗುತ್ತಲೇ ನಗುಮೊಗದಿಂದ ಸ್ವಾಗತಿಸಿದರು. ಎತ್ತರದ ನಿಲುವು, ಮುಖದ ಮೇಲೆ ತೇಜಸ್ಸು, ಕಾವೀ ಬಟ್ಟೆಯಲ್ಲಿ ಆಷಾಢಭೂತಿಗಳಂತೆ ಅಲ್ಲ, ಓರ್ವ ವಿಭೂತಿ ಪುರುಷ ಕುಳಿತುಕೊಂಡಂತೆ ನನಗೆ ಭಾಸವಾಯಿತು. ಎಲ್ಲರ ಪರಿಚಯ ಮಾಡಿಕೊಂಡರು. ನನ್ನೆಡೆಗೆ ನೋಡಿ ನನ್ನ ಪರಿಚಯವು ಮಾಡಿಕೊಂಡರು. 'ಓಹೋ, ನೀವು ಅಷ್ಟು ದೂರದಿಂದ ಬಂದಿದ್ದೀರಾ' ಎಂದು ವಿಚಾರಿಸಿದರು. "ಶಿಕ್ಷಣ ಮಂತ್ರಿಗಳಾದ ಮಾನ್ಯ ಶ್ರೀ ಅಣ್ಣಾರಾಯ ಗಣಮುಖಿಯವರೂ, ಅವರ ಆಪ್ತ ಕಾರ್ಯದರ್ಶಿಗಳೂ, ನನ್ನ ಪರಮ ಸ್ನೇಹಿತರೂ ಆದ ಶ್ರೀ ಸಿದ್ದಯ್ಯ ಪುರಾಣಿಕರೂ ಅಭಿಮಾನದಿಂದ ಕರೆಸಿಕೊಂಡಿದ್ದಾರೆ. ನಿರ್ದೇಶಕರಾದ ಮಾನ್ಯ ಶ್ರೀ ದೇವೇಗೌಡರೂ ನನ್ನ ಸೇವೆಯನ್ನು ಇಚ್ಛಿಸಿ ಬರಮಾಡಿಕೊಂಡಿದ್ದಾರೆ" ಎಂದೆ. 'ಬಹಳ ಸಂತೋಷ, ನಿಮ್ಮ ಸೇವೆಯ ಲಾಭ ಈ ಭಾಗದ ಶಿಕ್ಷಕರಿಗೂ ದೊರೆಯಲಿ' ಎಂದು ನುಡಿದರು.

ಅವರ ಮಾತಿನಲ್ಲಿ ಮೃದುತ್ವ, ಲೋಕಾನುಭವ, ಪಾಂಡಿತ್ಯ, ನೈತಿಕ ಸಂಪತ್ತಿನ ಹೃದಯ ವೈಶಾಲ್ಯ, ಒಂದೊಂದು ಮಾತಿನಲ್ಲಿಯೂ ಎದ್ದು ಕಾಣುತ್ತಿತ್ತು. ದೊಡ್ಡವರ ಗುಣವೇ ಹೀಗಿರುತ್ತದೆ ಎಂದುಕೊಂಡೆ. ತಾವು, ಎತ್ತರಮಟ್ಟದ ಸ್ಥಾನದಲ್ಲಿದ್ದೂ ಆತ್ಮೀಯತೆಯ ಅನುರಾಗ ವ್ಯಕ್ತಪಡಿಸಿದ್ದು ನನಗಂತೂ ಅವರ ಬಗ್ಗೆ ಅಪಾರ ಗೌರವಾದರ ಉಂಟಾಯಿತು. 'ಶಾಲೆ ಹೇಗಿದೆ ? ಎಂದರು'. 'ಕೇಳಬೇಕೆ' ಎಂದೆವು. ತಪಸ್ವಿನ ತಾಣದಲ್ಲಿ, ಆಧ್ಯಾತ್ಮದ ಪಾವಿತ್ರ್ಯದಲ್ಲಿ ನೆಲೆನಿಂತ ಆ ಸಂಸ್ಥೆ ಹೇಗಿದ್ದೀತು. ಅವರನ್ನು ಬೀಳ್ಕೊಂಡು ಹೊರಟಾಗ ನನಗಂತೂ ಸ್ನೇಹಿತ ಶಿವಲಿಂಗಯ್ಯನವರ ಒಂದೊಂದು ಮಾತೂ ಅಕ್ಷರಶಃ ನಿಜವೆನಿಸಿತು.

ತಪಃಶಕ್ತಿ, ಲೋಕ ಸಂಗ್ರಹ ಕಾರ್ಯವನ್ನೂ, ಭೂತ ದಯೆಯನ್ನೂ, ದೈವೀ ಸಂಪತ್ತನ್ನೂ, ಅದಮ್ಯ ಸಾಹಸವನ್ನೂ ಮೆರೆಯುತ್ತವೆ ಎಂಬುವನ್ನು, ಜಾತಿ ಮತ ಪಂಥ ಇವುಗಳ ಎಲ್ಲೆಯನ್ನು ದಾಟಿ ಮುನ್ನಡೆಯುತ್ತದೆ ಎಂಬುದು ಅವರ ಉಚಿತ

ವಿದ್ಯಾರ್ಥಿ ನಿಲಯವೇ ಸಾಕ್ಷಿಯಾಗಿತ್ತು. ಸಾವಿರಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳಿಗೆ ಊಟ ವಸತಿ ಒದಗಿಸುವುದು ಸಾಮಾನ್ಯ ಮಾತಲ್ಲ. ಅವರು ಹಳ್ಳಿಗಳಲ್ಲಿಯೂ ಶಾಲೆಗಳನ್ನು ತೆರೆದು, ವಿದ್ಯಾದಾನ, ಅನ್ನದಾನ ಮಾಡುತ್ತಿರುವ ಅದಮ್ಯ ಸಾಹಸಕ್ಕೆ ನಮೋ ಎಂದೆ.

ತಪಸ್ವಿಗಳಿಗೆ ಗುಹೆಯಲ್ಲಿ ಕುಳಿತು ತಪಸ್ಸು ಮಾಡುವುದೊಂದೇ ಮುಖ್ಯವಲ್ಲ, ಜೊತೆಯಲ್ಲಿ ವಿದ್ಯಾದಾನ ಮಾಡುವುದೂ ಮುಖ್ಯ. ವಿದ್ಯೆ, ಬುದ್ಧಿ, ನೀತಿ ಇವುಗಳ ತ್ರಿವೇಣೀ ಸಂಗಮವಾದಾಗಲೇ ತ್ರಿಕರಣಶುದ್ಧಿಯುಂಟಾಗಿ, ವಾಙ್ಮಯ ತಪಸ್ಸು, ಮಾನಸಿಕ ತಪಸ್ಸು, ಶಾರೀರಿಕ ತಪಸ್ಸು ಲಭಿಸಿ ಮನುಷ್ಯ ಮನುಷ್ಯನಷ್ಟೇ ಆಗುವುದಿಲ್ಲ ದೇವತಾ ಸ್ವರೂಪಿಯಾಗುತ್ತಾನೆ. ಲಂಚ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಅತ್ಯಾಚಾರ, ಮುಂತಾದ ಕ್ರೂರ ಕೃತ್ಯಗಳು, ಅವ್ಯವಹಾರಗಳೂ ತಂತಾನೆ ಮಾಯವಾಗುತ್ತವೆ. ಬಾಲಾರ್ಕನ ಸುವರ್ಣಕಿರಣಗಳು ಬಿದ್ದಾಗಲೇ ರಾತ್ರಿಯ ಅಂಧಕಾರ ತೊಲಗಿದಂತೆ.

ನಾನೂ ನಮ್ಮ ಉಪನಿರ್ದೇಶಕರಾಗಿದ್ದ ಮಾನ್ಯ ಶ್ರೀ ಎಸ್.ಆರ್. ರೋಹಿಡೇಕರರೂ, ಎಸ್.ಎಸ್. ಎಲ್.ಸಿ. ಪರೀಕ್ಷಾ ಕೇಂದ್ರಗಳಿಗೆ ಭೆಟ್ಟಿ ಕೊಡಲು ತುಮಕೂರು ಜಿಲ್ಲೆಯ ಕೆಲ ಶಾಲೆಗಳಿಗೆ ಹೊರಟಿದ್ದೆವು. ಮಾರ್ಗದಲ್ಲಿ ಸಾಹೇಬರು 'ಕೃಷ್ಣಾಚಾರ್, ಕೇಂದ್ರಗಳಲ್ಲಿ ಒಂದಾದರೂ ಕಾಪಿ ಮಾಡುವ ವಿದ್ಯಾರ್ಥಿಯನ್ನು ಹಿಡಿಯಬೇಕು' ಎಂದರು. ಮೊದಲಿಗೇನೇ ಸಿದ್ಧಗಂಗಾ ಪ್ರೌಢಶಾಲೆಗೆ ಹೋದೆವು. ಅಲ್ಲಿ ಎಷ್ಟು ಪ್ರಯತ್ನಿಸಿದರೂ ಕಾಪಿ ಮಾಡುತ್ತಿರುವ ವಿದ್ಯಾರ್ಥಿ ದೊರೆಯಲಿಲ್ಲ. ಶಿಕ್ಷಣವೇ ಆ ರೀತಿ ಕೊಡಲಾಗಿತ್ತೋ, ಇಲ್ಲವೆ, ಸ್ವಾಮಿಗಳ ಸಾತ್ವಿಕ ತಪಸ್ಸಿನಪ್ರಭಾವವೇ ಆ ರೀತಿ ಇತ್ತೋ, ನಾವು ತೃಪ್ತಿ ಹೊಂದಿದೆವು. ಎಲ್ಲ ಪರೀಕ್ಷಾ ಕೇಂದ್ರಗಳೂ ಇದೇ ರೀತಿ ಇರಬಾರದೇ ಎಂದುಕೊಂಡೆವು.

ಒಮ್ಮೆ ಶಿವರಾತ್ರಿಯ ಸಂದರ್ಭದಲ್ಲಿ ನನ್ನನ್ನೂ, ಶ್ರೀ ಎಸ್.ಆರ್. ಮಳಗಿಯವರನ್ನೂ ಭಾಷಣಕ್ಕಾಗಿ ಆಮಂತ್ರಿಸಿದ್ದರು. ಇಬ್ಬರ ಭಾಷಣವನ್ನೂ ಕೇಳಿ ಆನಂದಿಸಿದರು. ಅವರು ವಿದ್ಯಾಪಕ್ಷಪಾತಿಗಳಲ್ಲವೆ?

ಶುದ್ಧ ಹೃದಯದ, ನಿರ್ಮಲಾಂತಃಕರಣದ, ಸರ್ವಭೂತಹಿತೇರತ,ಮಹಾತಪಸ್ವಿಗಳು ನೂರಕ್ಕೊಬ್ಬರು ಸಿಗಬಹುದು. ಪಾಶವೀಕೃತ್ಯಕ್ಕಿಳಿದ ನರಭಕ್ಷಕ ರಾಕ್ಷಸರ ಉಪಟಳ ಹೆಚ್ಚುತ್ತಿರುವ ಈ ಕಾಲದಲ್ಲಿ ಇಂಥ ಮಹನೀಯರ ತಪಸ್ಸೇ ಫಲಕಾರಿಯಾಗಿ ವಿಶ್ವದಲ್ಲಿ ಶಾಂತಿ, ಪುಷ್ಟಿ, ತುಷ್ಟಿ ನೆಲಸೀತು. ಅದಕ್ಕಾಗಿ ನಾವೆಲ್ಲರೂ ಪ್ರಾರ್ಥಿಸೋಣ.

ಓಂ ಶಾಂತಿಃ ಶಾಂತಿಃ ಶಾಂತಿಃ

ಸಮಗ್ರ ಕ್ರಾಂತಿಯ ಪ್ರಯೋಗ ಶಾಲೆ

ಚಂದ್ರಶೇಖರ್ ಧೂಳೇಕರ್

ಬಸವಾದಿ ಪ್ರಮಥರು ಕಟ್ಟಿದ ೧೨ನೆಯ ಶತಮಾನದ ಕಲ್ಯಾಣನಗರಿಯ ಅನುಭವ ಮಂಟಪವು ಸಮಗ್ರ ಕ್ರಾಂತಿಯ ಪ್ರಯೋಗ ಶಾಲೆಯಾಗಿತ್ತು. ಅಲ್ಲಿ ಜ್ಞಾನ, ಗುಣ, ಪ್ರತಿಭೆ, ಅನುಭಾವ, ಅನುಭೂತಿಗಳ ರಸ ಸಂಯೋಗದಿಂದ ಹುಟ್ಟಿದ ಸಾಮಾಜಿಕ ಆಂದೋಲನದ ಫಲಶ್ರುತಿಯಾಗಿ ಸಮಾನತೆಯ ಸೂರ್ಯ ಮೂಡಿದ. "ಮನುಷ್ಯಜಾತಿ ಒಂದೆ ವಲಂ" ಎಂಬಂತಾಯಿತು. ಅಪಾಥಭೂತಿಗಳ ಅಂತರಂಗ ಶುದ್ಧಿಗೊಂಡಿತು. ಧನದಾಹ ರಕ್ಕಸರು, ಚಾಡಿ, ಹೀದೆಕೋರರೆಲ್ಲರೂ ಬಸವನ ಮೂಸೆಯಲ್ಲಿ ಸಂಸ್ಕಾರಗೊಂಡು ಶರಣ ಸಂತಾನವಾದರು. ಭಕ್ತಿ ಎಂಬ ಬಳ್ಳಿಯಲ್ಲಿ ಧರ್ಮದ ಹೂ ಅರಳಿ ಅದರ ಗರ್ಭದೊಳಗೆ ಗುಡಿ ಮಾಡಿ, ಆ ಗುಡಿಯೊಳಗೆ ವಚನಗಳ ನುಡಿಮೂಡಿ ಅದೇ ನುಡಿ ನೈವೇದ್ಯವಾಗಿತ್ತು. ಇದು ರಾಜರ ಪರಾಕ್ರಮದಿಂದಾಗಲೀ, ರಾಜಶಾಸನದಿಂದ ಪ್ರಜಾಕೋಟಿಯನ್ನು ಬದಲಾವಣೆಗೊಳಿಸಿದ ಕ್ರಾಂತಿಯಾಗಿರಲಿಲ್ಲ. ಇದು ಬಸವ ಯುಗದ ಮಾಂತ್ರಿಕ ಶಕ್ತಿಯ ಮಾನಸಿಕ ಬದಲಾವಣೆಯ ಸಮಗ್ರಕ್ರಾಂತಿಯಾಗಿತ್ತು.

ಈ ೮೦೦ ವರ್ಷಗಳ ಕಾಲಘಟ್ಟದಲ್ಲಿ ನಾವು ಇಂಥ ಕಲ್ಯಾಣ ನಗರಿಯ ಕ್ರಾಂತಿ ಪ್ರಭೆಯನ್ನು ಇಂದಿನ ಪಂಚಕೋಟಿಯ ಕನ್ನಡ ನಾಡಿನಲ್ಲಿ ಕೆಲವೇ ಶ್ರೇಷ್ಠ ಮಠಗಳಲ್ಲಿ ಕಾಣುತ್ತೇವೆ. ಅಂಥವುಗಳಲ್ಲಿ ಪ್ರಮುಖವಾದುದೆಂದರೆ ಸಿದ್ಧಗಂಗೆ, ಎಂದು ತಿಳಿದಾಗ ಆ ಬಸವ ಯುಗದ ಸಾನಿಧ್ಯದಲ್ಲಿ ನಾವಿದ್ದೇವೆ, ಎಂಬ ಸಂತೋಷವಾಗುತ್ತದೆ. ಏಕೆಂದರೆ ಇಲ್ಲಿ ಧರ್ಮದ ಮೂಲವಾದ ದಯೆಯನ್ನೂ, ಸದಾಚಾರದ ಸ್ವರ್ಗವನ್ನೂ, ಸಕಲರಿಗೂ ಲೇಸನೇ ಬಯಸುವ ಗುರುವನ್ನೂ ಕಾಣುತ್ತೇವೆ. ಮಾತ್ರವಲ್ಲ, ಕಳಲೊಲ್ಲದ, ಕೊಲಲೊಲ್ಲದ, ಹುಸಿಯ ನುಡಿಯಲೊಲ್ಲದ ಅನ್ಯರಿಗೆ ಅಸಹ್ಯವಾಗಲೊಲ್ಲದ, ತನ್ನ ಬಣ್ಣಿಸಿಕೊಳ್ಳಲೊಲ್ಲದ, ಇದಿರು ಹಳಿಯಲೊಲ್ಲದ ಅಂತರಂಗ ಶುದ್ಧಿ ಇಲ್ಲಿ ಮೇಳೈಸಿದೆ. ವಿಶಾಲ ಕರ್ನಾಟಕದ ಆಧ್ಯಾತ್ಮಿಕ ಚಿಂತನೆ ಮತ್ತು ಧರ್ಮಜಾಗೃತಿಯ ಹರಿಕಾರರಾದ ಈ ಮಠದ ಜೀವಚೈತನ್ಯವಾದ, ಡಾ. ಶಿವಕುಮಾರ ಸ್ವಾಮೀಜಿಯವರಲ್ಲಿ ಪುರಾತನ ಸಂಸ್ಕೃತಿಯ ಬೇರನ್ನೂ, ಆಧುನಿಕ ತಂತ್ರಜ್ಞಾನದ ಚಿಗುರನ್ನೂ ಕಾಣುತ್ತೇವೆ. ಕಗ್ಗಲ್ಲ ಕಣಿವೆಯಲ್ಲಿ ದಣಿದಣಿದು ಮೂರ್ತ ಸ್ವರೂಪಗೊಳಿಸಿದ ನುಡಿಕನ್ನಡ ಕಟ್ಟಡಗಳು, ಅಧ್ಯಾತ್ಮ ಚಿಂತನೆಯ ಸೌಧಗಳು, ಜ್ಞಾನ ದಾಸೋಹದ ಛತ್ರಗಳು, ಅರಿವಿನ ಜ್ಞಾನಜ್ಯೋತಿಯನ್ನು ಮೂಡಿಸುವ ಗುರುಕುಲಗಳು . ಒಂದೆ, ಎರಡೆ ಸ್ವರ್ಗದ ನೂರಾರು ಬಾಗಿಲುಗಳು ಇಲ್ಲಿ. ಅಲ್ಲಮ ಪ್ರಭುಗಳು ಪ್ರತಿಪಾದಿಸಿದಂತೆ,

"ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ.
ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ "

ಇಲ್ಲಿಯ ಚರಾಚರ ಮನಸ್ಸುಗಳು ಮಾನಸಗೊಂಡದ್ದನ್ನು ಕಾಣುತ್ತೇವೆ. ಇಲ್ಲಿ ಮೆಚ್ಚಿಗೆಯಾಗುವುದೆಂದರೆ ನಿತ್ಯವೂ ಕೂಡ ಭೌತಿಕ ಮತ್ತು ಮಾನಸಿಕ ಹಸಿವನ್ನು ತಣಿಸುವ ಜ್ಞಾನಾನ್ನ ದಾಸೋಹ ನಡೆಸುತ್ತಿರುವುದು. ಅನ್ನಪೂರ್ಣೇಶ್ವರಿಯು ಇಲ್ಲಿ ನಿತ್ಯ ನಲಿದರೆ, ಶಾರದೆಯು ನಿರಂತರವಾಗಿ ತನ್ನ ವೀಣೆಯನ್ನು ನುಡಿಸುತ್ತಲೇ ಇರುತ್ತಾಳೆ. ಭವವಳಿದು ಶಿವನರಿಯುವ ರಾಜಮಾರ್ಗಗಳನ್ನು ನಾವಿಲ್ಲಿ ಹುಡುಕಬಹುದು. ಇಲ್ಲಿಯ ಶ್ರೀಗಳವರು ಬದುಕಿನ ಪ್ರತಿಯೊಂದು ಘಟ್ಟದಲ್ಲಿಯೂ "ವಿಷಯವೆಂಬ ಹಸಿರಿನಿಂದ ದೂರವಿದ್ದು, ವೈವಿಧ್ಯಮಯ ಜೀವನಾನುಭವಗಳ ರಸಘಟ್ಟಿಯಾಗಿ ಮೇಲೆದ್ದವರು. ಮನದ ಮರ್ಕಟವೆಂಬ ಮಾಯೆಗಳ ಗೆದ್ದವರು. ದೀನರ ವೇದನೆಗೆ ಸಂವೇದಿಸುವ, ಜಾತಿ ಮತ ಪಂಥಗಳ ಕೋಟೆ ಕೊಟೆಗಳನ್ನು ಸ್ಫೋಟಿಸಿದ " ಸರ್ವೇಜನಾಃ ಸುಖಿನೋಭವಂತು" ಎಂದು ಹರಸುವವರು ಇವರು. ಈ ಕಾರಣಕ್ಕಾಗಿ ಈ ಮಠದ ಮಂದಿರದೊಳಗೆ ಬಸವಣ್ಣನ ಕ್ರಾಂತಿಯ ಮೂಲಮಂತ್ರವಾದ ಸಮಾನತೆ ಎದ್ದು ಕಾಣುತ್ತಿದೆ. ಬಡವ ಬಲ್ಲಿದರಾದಿಯಾಗಿ ಸಂಸ್ಕಾರಗೊಂಡ ಮನುಜ ಮತವಲ್ಲ 'ವಿಶ್ವಮತ'ವಾಗಿ ಇಲ್ಲಿಯ ಶರಣ ಸಂಕುಲ ಸಂಪನ್ನಗೊಂಡಿದ್ದಾರೆ. ಈ ಎಲ್ಲ ಪರಿವರ್ತನೆಯ ಅಧ್ವರ್ಯುಗಳಾದ ಶ್ರೀಗಳವರು ವೇದಪ್ರಿಯರಾಗಿ ನಾದಪ್ರಿಯರಾಗಿ ಬಿಂದುವಿನೊಳಗಿನ ಸಿಂಧುವಾಗಿ ಆ ಬಸವನ ಸೂತ್ರಬದ್ಧ ಸಾಕ್ಷಿಯಾಗಿದ್ದಾರೆ.

ನಾವು ಸಾಕಷ್ಟು ಸಂಖ್ಯೆಯಲ್ಲಿ ಮಠಗಳನ್ನು, ಗುರುಗಳನ್ನೂ ಕಂಡಿದ್ದೇವೆ. ಕಾಯಕದ ಮಹತ್ವನ್ನು ಸಾರುವ, 'ಹೊಯ್ವರೆನ್ನ ಹೊರೆದವರೆಂಬೆನು, ಬೈಯ್ವವರೆನ್ನ ಬಂಧುಗಳೆಂಬೆನು' ಎನ್ನುವ ಆತ್ಮಶಕ್ತಿಯನ್ನು ಹೊಂದಿದ ಗುರು ಮತ್ತು ಮಠವನ್ನು ಪ್ರಾಯಶಃ ಇಲ್ಲಿ ಕಾಣುತ್ತೇವೆ. ಏಕೆಂದರೆ ಉಳಿದಂತೆ ಹಲವೆಡೆ ಒಂದಲ್ಲ ಒಂದು ರೀತಿಯ ಆತ್ಮರತಿಯನ್ನು ಹೊಂದಿದ ಸ್ವಾರ್ಥಸಾಧನೆಗಳ ಮಠ ಮಂದಿರಗಳನ್ನು ಕಂಡಿದ್ದೇವೆ. ಧರ್ಮದ ಹೆಸರಿನಲ್ಲಿ ಧನದಾಹ, ಲಾಭಲೋಭಗಳು ಇಂಥಲ್ಲಿ ಎದ್ದು ಕಂಡು ಭಕ್ತರೆಲ್ಲ ಸಮೂಹ ಸನ್ನಿಗೆ ಒಳಗಾಗುವಂತಹ ದುರಂತಗಳು ನಡೆಯುತ್ತಲೇ ಇವೆ. ಆದರೆ ಸಿದ್ಧಗಂಗಾಮಠದಂತಹ ಸ್ಥಳಗಳಲ್ಲಿ ನಡೆಯುವ ವ್ಯವಸ್ಥೆಗಳೇ ಬೇರೆ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಹಿರಿಗುಣ ಹೊಂದಿದ ಡಾ. ಶಿವಕುಮಾರ ಸ್ವಾಮಿಗಳವರಲ್ಲಿ ಧನದಾಹ ಲೋಭಗಳು ಕನಸಿನಲ್ಲಿಯೂ ಸುಳಿಯವು. 'ಸರ್ವವೂ ಶಿವಾರ್ಪಣಮಸ್ತು' ಇವರಲ್ಲಿರುವ ಮೇಲ್ನೋಟದ ಅಖಂಡ ಆಸ್ತಿ. 'ಕೆರೆಯ ನೀರನು ಕೆರೆಗೆ ಚೆಲ್ಲುವ' ತತ್ವವನ್ನು ಹೊಂದಿರುವುದು. ಶರಣ ಸಂತತಿ ಸಿದ್ಧಗಂಗೆ ಧರ್ಮಪೀಠದ ಮೂಲಕ ಜನಕೋಟಿಯ ಕಲ್ಯಾಣಕ್ಕಾಗಿ ಸದ್ವಿನಿಯೋಗಗೊಳಿಸುವ ಮಾಧ್ಯಮವಾಗಿದೆ. ಈ ಮಾಧ್ಯಮವೇ ಶ್ರೀಮಂತಿಕೆ. ಶ್ರೀಮಂತಿಕೆಯಾಗದೇ ಇದೊಂದು ಶಿಷ್ಯಕೋಟಿಯ ಗುರುಪೀಠದ ಮೂಲಕ ಸಕಲರಿಗೂ ಹಂಚುವ ಧಾರ್ಮಿಕ ಪ್ರಕ್ರಿಯೆ. ಈಗಾಗಲೇ ಈ ಮಠದ ಮೂಲಕ ಅಖಂಡ ಕರ್ನಾಟಕಕ್ಕೆ, ಭಾರತಾಂಬೆಯ ಮಡಿಲಿಗೆ, ಅಸಂಖ್ಯ ಕವಿ, ಕೋವಿದರು, ವಿಚಾರವಂತರು, ವಿಜ್ಞಾನಿಗಳು ಅರ್ಪಿತಗೊಂಡಿದ್ದನ್ನು ಕಂಡಾಗ ಕಾಯಕ ತತ್ವಕ್ಕೆ ಪ್ರತಿಭಾ ಫಲವಂತಿಕೆಗೆ ಕೂಡುಗೆಯ ಕನ್ನಡಿಯಾಗುತ್ತದೆ. ಇಂಥಹ ಹಿನ್ನೆಲೆಯಿಂದ ಮೂಡಿ ಬಂದ ಮಹಾನ್ ಕವಿ ಕೋಗಿಲೆಯೊಂದು ಡಾ. ಜಿ.ಎಸ್. ಶಿವರುದ್ರಪ್ಪ ಈ ಮಠ ಮತ್ತು ಗುರುಸಾನ್ನಿಧ್ಯದ ಬಗೆಗೆ ಬರೆದ ಕಾವ್ಯಶ್ರೀ ನೆನಪಿಗೆ ಬರುತ್ತಿದೆ :

"ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆ ಏರಿದೆ.
ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ.
ಕಾವಿಯುಡಿಗೆಯನುಟ್ಟು ನಭವೇಕಿರಣ ಹಸ್ತವ ಚಾಚಿದೆ.
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ."

ಈ ಕಾವ್ಯದ ಅಂತರಾರ್ಥದಲ್ಲಿ ಎಷ್ಟೊಂದು ಸತ್ಯ ಅಡಗಿದೆ ಎನ್ನುವುದನ್ನು ಮನಗಂಡಾಗ ನಿಜಕ್ಕೂ ಸಿದ್ಧಗಂಗೆಯೊಂದು ಕಲ್ಯಾಣನಗರಿಯ ಅನುಭವ ಮಂಟಪವೆಂಬುದು ಭಾಸವಾಗದಿರದು.

ಕ್ರಿ.ಶ. ೧೯೧೭ ರಲ್ಲಿಯೇ ಈ ಮಠದಲ್ಲಿ ಪ್ರಾರಂಭವಾದ ವೇದ ಮತ್ತು ಸಂಸ್ಕೃತ ಪಾಠ ಶಾಲೆಯಿಂದ ಹಿಡಿದು ಪೂರ್ವ ಪ್ರಾಥಮಿಕ ಪಾಠಶಾಲೆ, ಇಂಜಿನಿಯರಿಂಗ್ ಕಾಲೇಜು, ಔಷಧವಿಜ್ಞಾನ,ಶಿಕ್ಷಣ ಮಹಾವಿದ್ಯಾಲಯ, ಪ್ರಥಮ ದರ್ಜೆ ಕಾಲೇಜುಗಳು, ಪದವಿಪೂರ್ವ ಕಾಲೇಜುಗಳು, ಪ್ರೌಢಶಾಲೆಗಳು, ಶಿಕ್ಷಕರ ತರಬೇತಿ ಸಂಸ್ಥೆಗಳು, ಅಂಧ ಮಕ್ಕಳ ಶಾಲೆ, ಸಂಸ್ಕೃತ ಕಾಲೇಜು, ವಾಣಿಜ್ಯ ಶಿಕ್ಷಣ ಸಂಸ್ಥೆ, ಕನ್ನಡ ಪಂಡಿತರ ಕಾಲೇಜು, ಮುಂತಾಗಿ ೧೨೦ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಳೀಯವಾಗಿ, ವಿವಿಧೆಡೆಗಳಲ್ಲಿ ಶ್ರೀಗಳವರು ನಡೆಯಿಸಿಕೊಂಡು ಬರುತ್ತಿರುವುದನ್ನು ಅರಿತಾಗ ಎಲ್ಲ ವಿಶ್ವವಿದ್ಯಾಲಯಗಳ ಜ್ಞಾನಜ್ಯೋತಿಯನ್ನು ಇಲ್ಲಿ ಒಟ್ಟಾಗಿ ಕಂಡಂತಾಗುತ್ತದೆ. ಐದು ಸಾವಿರಕ್ಕೂ ಹೆಚ್ಚು ದೀನದಲಿತರ ಅನಾಥ ಮಕ್ಕಳಿಗೆ ಜಾತಿಯ ಸಂಕೋಲೆಯನ್ನು ಕಿತ್ತೊಗೆದು ಅಶನ, ವಸತಿಗಳನ್ನು ನೀಡಿ ಇವರೆಲ್ಲರ ಭವಿಷ್ಯದ ಬೆಳಕಿಗೆ ಆಧಾರವಾದ ಶ್ರೀಗಳವರ ನೇತೃತ್ವದಲ್ಲಿ ಇಂದು ಸುಮಾರು ೨೦೦೦ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿರುವ ಒಂದು ಹೊಸ ವಿದ್ಯಾರ್ಥಿನಿಲಯದ ನಿರ್ಮಾಣ, ಒಂದೇ ಪಂಕ್ತಿಯಲ್ಲಿ ೩೦೦೦ ಜನ ಊಟ ಮಾಡಲು ಅವಕಾಶವಿರುವ ಒಂದು ದೊಡ್ಡ ಪ್ರಸಾದ ನಿಲಯ, ಶ್ರೀ ಕ್ಷೇತ್ರಕ್ಕೆ ಸುಸಜ್ಜಿತವಾದ ನೀರು ಸರಬರಾಜು ವ್ಯವಸ್ಥೆ, ಆಧುನಿಕ ನೈರ್ಮಲ್ಯದ ವ್ಯವಸ್ಥೆ, ಇನ್ನೂ ಮುಂತಾದ ಆಧುನಿಕ ಆವಿಷ್ಕಾರದ, ನಿರ್ಮಾಣದ ಹೆಜ್ಜೆಗಳನ್ನು ಇಡಲಾಗಿದೆ.

ಒಟ್ಟಾರೆಯಾಗಿ ಸಿದ್ಧಗಂಗೆಯ ಪರಿಸರ ಮತ್ತು ಶ್ರೀಗಳವರ ಚೈತನ್ಯಶೀಲ ಸಾಧನೆಗಳನ್ನು ಗಮನಿಸಿದರ ಇಲ್ಲಿ ವಿಜ್ಞಾನ ಮತ್ತು ಧರ್ಮ ಒಂದಕ್ಕೊಂದು ಐಕ್ಯಗೊಂಡು ಸಾಮರಸ್ಯವನ್ನು ಸಾರುತ್ತವೆ. ವಿಜ್ಞಾನವು ಇಲ್ಲಿ ಬಾಹ್ಯಲೋಕದ ಹೊಸ

ಸಂಶೋಧನೆಗಳತ್ತ ತೆರೆದುಕೊಂಡರೆ ಧರ್ಮವು ಅಂತರ್‌ಲೋಕದ ಅಂತರಂಗದ ಸಂಸ್ಕೃತಿಯ ಬಂಧುವಿನಲ್ಲಿ ವಿರಾಟ್ ಸ್ವರೂಪವನ್ನು ತೆರೆದಿಡುತ್ತದೆ. ಇಲ್ಲಿ ಮುಖ್ಯವಾಗಿ ಎರಡು ತತ್ವಗಳು ನಮ್ಮನ್ನು ಗಂಭೀರತೆಗೆ ಎಳೆದೊಯ್ಯುತ್ತಿವೆ. ಈ ಹಿಂದೆ ತಿಳಿಸಿದಂತೆ :

೧. ಕಾಯಕ ತತ್ವ   ೨. ದಾಸೋಹ ತತ್ವ

ಕಾಯಕತತ್ವವು ಆಧುನಿಕ ಸಮಾಜಕ್ಕೆ ಬಸವಾದಿ ಪ್ರಮಥರಿಂದ ನೀಡಿದ ಅಮೂಲ್ಯ ಕೊಡುಗೆಯಾಗಿದೆ. ಇಂಥ ಅಮೂಲ್ಯ ತತ್ವವನ್ನು ಅಕ್ಷರಶಃ ಪಾಲಿಸುತ್ತಿರುವ ಈ ಮಠದಲ್ಲಿ ಅನುಷ್ಠಾನಗೊಂಡ ಕಾಯಕಗಳೆಂದರೆ :

ನಿರಂತರವಾದ, ಧರ್ಮಬದ್ಧವಾದ ನ್ಯಾಯಬದ್ಧವಾದ, ಸಮಯ ಜ್ಞಾನ ಶ್ರದ್ಧಾ ಭಕ್ತಿಗಳಿಂದ ಕೂಡಿದ ಶ್ರಮದ ಗೌರವವನ್ನು ಎತ್ತಿ ಹಿಡಿಯುವ ಚಟುವಟಿಕೆಗಳೆಲ್ಲ ಇಲ್ಲಿ ಕಾಯಕ ಸ್ವರೂಪವನ್ನು ತಾಳುತ್ತವೆ.

ದಾಸೋಹ ತತ್ವವು ಭೌತಿಕವಾದ ಮತ್ತು ಬೌದ್ಧಿಕವಾದ ವಿಕಾಸಕ್ಕೆ ಅಗತ್ಯವಿರುವ ಪರಿಕರಗಳನ್ನು ಇಲ್ಲಿ ಸದಾಕಾಲ ಅನುಷ್ಠಾನಕ್ಕೆ ತರಲಾಗಿದೆ. ಇದು ಕೂಡ ಕಾಯಕ ತತ್ವಕ್ಕೆ ಪೂರಕವಾಗಿದೆ. ಅನ್ನದಾನ ಜ್ಞಾನದಾನಗಳು ಇಲ್ಲಿ ಮೇಳೈಸಿವೆ.

೧. ಕಾಯಕದ ಗಳಿಕೆಯಿಂದ ದಾಸೋಹ ನಡೆಯುತ್ತಿದೆ. ಅನೀತಿ, ಅಧರ್ಮದಿಂದಲ್ಲ.

೨. ಸೋಮಾರಿಗಳಿಗೆ, ಹೊಣೆಗೇಡಿಗಳಿಗೆ ಇಲ್ಲಿ ಈ ದ್ವಿವಿಧ ದಾಸೋಹ ನಡೆಯಬಾರದು.

೩. ಸಮಾಜದ ರಕ್ಷಣೆಗಾಗಿ ಉನ್ನತಿಗಾಗಿ ಶ್ರಮಿಸುವವರಿಗೆ ಇಲ್ಲಿ ನಿತ್ಯ ದಾಸೋಹವಿದೆ.

೪. ದಾಸೋಹವನ್ನು ಕರ್ತವ್ಯವೆಂದು ಭಾವಿಸುವ ಇದು ಶ್ರದ್ಧೆ, ಭಕ್ತಿ ಅರ್ಪಣಾ ಮನೋಭಾವನೆಗಳಿಂದ ಕೂಡಿರುತ್ತದೆ.

ಈ ಮಹತ್ತರ ತತ್ವಗಳ ಆಚರಣೆಯು ನಿರಂತರವಾಗಿಯೂ ಆಚರಣೆಗೊಳ್ಳುತ್ತಿರುವುದು ಅಂದಿನ ಶರಣರು ಸಾರಿದ ಆರ್ಥಿಕ ಮೌಲ್ಯಗಳನ್ನು ಇಲ್ಲಿ ಎತ್ತಿ ಹಿಡಿದಂತಾಗಿದೆ. ಮನುಷ್ಯನಿಗೆ ಮುಖ್ಯವಾಗಿ ಶ್ರಮ, ಬದುಕು, ಬುದ್ಧಿ ಈ ತ್ರಿವಿಧ ಕಾಣಿಕೆಗಳನ್ನು ಹೊಂದಿದ ಸಿದ್ಧಗಂಗೆ ಮಠವು ಈ ಕಾರಣಕ್ಕಾಗಿ ಎಲ್ಲರ ಮೆಚ್ಚಿಗೆಯನ್ನು ಪಡೆದುಕೊಂಡಿದೆ.

ಒಟ್ಟಿನಲ್ಲಿ ಗುರುವಿನಂತೆ, ಗುರುಮಂದಿರ, ಮಂದಿರದಂತೆ ಮಕ್ಕಳು. ಎಲ್ಲವೂ ಸತ್ಯಂ, ಶಿವಂ, ಸುಂದರಂ.

ಬಸವ ಚಿಂತನೆಗಳ ಕನಸು ನನಸಾಗಿಹುದಿಲ್ಲಿ.
ಬೋಧಿಸಿದ ತತ್ವಗಳು ಸಾಕಾರಗೊಂಡಿಹವು ಸಾಧನೆಗಳ ಬೆಳಕಲ್ಲಿ.
ಕಾಯಕವೆ ಕೈಲಾಸ, ತ್ರಿವಿಧ ದಾಸೋಹ,
ಜಾತಿ ಮತ ಭ್ರಮಣೆಗಳ ಕೋಟೆಗಳು ಸ್ಫೋಟಗೊಂಡಿಹವಿಲ್ಲಿ.
ಕರ್ಮ ಕನ್ನಡಿಯೊಳಗೆ, ಧರ್ಮ ಮುನ್ನಡೆಯ ಸಾಧಿಸಿ.
ಭವ ಭಯವ ನೀಗಿಸಿ ಬೆಳಕಿನರಮನೆಯೆಡೆಗೆ
ನಡೆವಿಹವು ಜೀವ ಕೋಟಿಗಳು ಗುರುಸಾನಿಧ್ಯದಲ್ಲಿ.
ಈ ಸಿದ್ಧಗಂಗೆಯಲ್ಲಿ. ಡಾ. ಶಿವಕುಮಾರ ಸ್ವಾಮಿಗಳವರ ಮಾರ್ಗದರ್ಶನದಲ್ಲಿ.

○

ಶ್ರೀ ಸಿದ್ಧಗಂಗೆಯ ಕೀರ್ತಿ

ಸಿ. ಸೋಮಶೇಖರ್

ಕನ್ನಡ ನಾಡಿನ ಹೆಮ್ಮೆಯ ವೀರಶೈವ ಮಠಗಳಲ್ಲಿ ಶ್ರೀ ಸಿದ್ಧಗಂಗಾ ಮಠ ಅತ್ಯಂತ ಅಪರೂಪವಾದದ್ದು. ಶ್ರೀ ಸಿದ್ಧಗಂಗಾ ಮಠದಲ್ಲಿ ದಿನನಿತ್ಯ ನಡೆಯುತ್ತಿರುವ ದಾಸೋಹ ಕೈಂಕರ್ಯ ಆದರ್ಶವಾದದ್ದು. ಇಲ್ಲಿ ನಡೆಯುತ್ತಿರುವ ತ್ರಿವಿಧ ದಾಸೋಹ ಇಡೀ ಭಾರತದಲ್ಲಿಯೇ ಯಾವ ಮಠದಲ್ಲಿಯೂ ನಡೆಯುತ್ತಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಗಳ ಶಿಲ್ಪಿಗಳು ಪರಮ ಪೂಜ್ಯರಾದ ಡಾ. ಶಿವಕುಮಾರ ಮಹಾ ಸ್ವಾಮಿಗಳು. ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ವ್ಯಕ್ತಿತ್ವ ಹಿಮಾಲಯ ಸದೃಶವಾದುದು. ಅವರೊಂದು ವ್ಯಕ್ತಿಯಲ್ಲ, ಒಂದು ಮಹಾಶಕ್ತಿ. ಅವರ ವ್ಯಕ್ತಿತ್ವ ಶಿವಸದೃಶವಾದುದು. ಅವರ ದರ್ಶನಭಾಗ್ಯದಿಂಲೇ ಪಾಪ ಪರಿಹಾರವಾಗುವುದು, ಪಾದಸ್ಪರ್ಶದಿಂದಲೇ ಜನ್ಮ ಪಾವನವಾಗುವುದು - ಇದು ಅವರ ಲಕ್ಷೋಪಲಕ್ಷ ಭಕ್ತರ ಅಭಿಪ್ರಾಯ, ಅನುಭವ.

ಪರಮಪೂಜ್ಯ ಶ್ರೀಗಳವರನ್ನು ಅತ್ಯಂತ ಸಮೀಪದಿಂದ ಸುಮಾರು ಮೂರು ದಶಕಗಳಿಂದ ನೋಡಿದ ಅನುಭವ ನನ್ನದು. ಇದು ನನ್ನ ಪೂರ್ವಜನ್ಮದ ಪುಣ್ಯವೂ ಹೌದು. ಅವರ ಇಡೀ ದೇಹವೇ ಒಂದು ದೇಗುಲವಿದ್ದಂತೆ. ಅವರ ದರ್ಶನ ಮಾಡಿದರೆ ಪುಣ್ಯಕ್ಷೇತ್ರವಾದ ಕಾಶಿಯ ದರ್ಶನ ಮಾಡಿದಂತೆ.

ಶ್ರೀ ಶ್ರೀಗಳವರ ಕಾಯಕ ನಿಷ್ಠೆ ಅನುಪಮವಾದದ್ದು, ಜಡತೆಯಿಂದ ಜಿಡ್ಡು ಹಿಡಿದ ಸಮಾಜಕ್ಕೆ ಅವರ ಕರ್ತೃತ್ವ ಶಕ್ತಿ, ಕಾಯಕ ನಿಷ್ಠೆ ಅತ್ಯಂತ ಅನುಕರಣೀಯವಾದದ್ದು.

ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಸಾಧನೆ ಹನ್ನೆರಡನೆಯ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಮಾಡಿದಂತಹ ಸಮಗ್ರಕ್ರಾಂತಿಯನ್ನು ಹೋಲುವಂತಹುದು. ಮಾನವ ಸಮಾಜದ ಮಹಾನ್ ಚೇತನವಾದ ಬಸವಣ್ಣನವರು ಸಾರಿದ ದಿವ್ಯಸಂದೇಶದ ಸಂಹಿತೆಗೆ ತಮ್ಮನ್ನು ತಾವೇ ಮುಡಿಪಾಗಿಟ್ಟುಕೊಂಡ ಪೂಜ್ಯ ಶ್ರೀಗಳವರು ಅಭಿನವ ಬಸವಣ್ಣ ಎಂಬ ಖ್ಯಾತಿಗೆ ಪಾತ್ರರಾದರು. ಬಸವಣ್ಣನವರ ನಾಮಸ್ಮರಣೆಯಾದರೆ ಸಾಕು ಈ ಇಳಿ ವಯಸ್ಸಿನಲ್ಲಿಯೂ ಅವರಿಗೆ ವಿದ್ಯುತ್ ಸಂಚಾರವಾದಂತೆ ಒಂದು ವಿಶೇಷವಾದ ಅನುಭವ.

ಶ್ರೀ ಶ್ರೀಗಳವರ ಅನೇಕ ವೈಶಿಷ್ಟ್ಯಪೂರ್ಣವಾದ ಸಾಧನೆಗಳಲ್ಲಿ ನನಗೆ ತುಂಬಾ ಮೆಚ್ಚುಗೆಯಾದದ್ದು ಅವರ ಧರ್ಮ ಪ್ರಸಾರದ ಕೈಂಕರ್ಯ, ಪೂಜಾನಿಷ್ಠೆ ಮತ್ತು ರಾಷ್ಟ್ರಪ್ರೇಮ.

ವೀರಶೈವ ಧರ್ಮದ ತತ್ವಾದರ್ಶಗಳ ಸಂದೇಶವನ್ನು ಅತ್ಯಂತ ಸಮಗ್ರವಾದ ರೀತಿಯಲ್ಲಿ ನಾಡಿನ ಮೂಲೆ ಮೂಲೆಗಳಲ್ಲಿ ಮುಟ್ಟಿಸಿದ ಕೀರ್ತಿ ಶ್ರೀ ಶ್ರೀಗಳವರಿಗೇ ಸಲ್ಲಬೇಕು. ಇತ್ತೀಚಿನ ದಿನಗಳಲ್ಲಿ ಅನೇಕ ಮಠಾಧೀಶರಿಗೆ ಅವರ ಮೂಲ ಕರ್ತವ್ಯವಾದ ಧರ್ಮ ಪ್ರಸಾರ ಅವರ ಎರಡನೆಯ ಆದ್ಯತೆಯೇನೋ ಎಂಬ ಅನುಮಾನ ಆವರಿಸುತ್ತಿರುವ ಸನ್ನಿವೇಶದಲ್ಲಿ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಧರ್ಮಾನುಷ್ಠಾನ ಮತ್ತು ಧರ್ಮ ಪ್ರಸಾರವೇ ತಮ್ಮ ಉಸಿರೆಂದು ಭಾವಿಸಿರುವುದು, ಬೇರೆ ಮಠಾಧೀಶರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಂತಾಗಿದೆ.

ಪೂಜ್ಯ ಶ್ರೀಗಳವರ ಭಾಷಣಗಳು ಎಂದರೆ ಅದೊಂದು ಅದ್ಭುತವಾದ ಗಂಗಾಪ್ರವಾಹದಂತೆ. ಅವರ ವಿಚಾರಧಾರೆ ಮೂಢನಂಬಿಕೆಗಳ ಅಂಧಶ್ರದ್ಧೆಗಳ ವಾಹಿನಿಯಲ್ಲಿ, ವೈಚಾರಿಕತೆಯ ವಸ್ತುನಿಷ್ಠತೆಯ ತಾರ್ಕಿಕವಾದ ವಿಚಾರ ಲಹರಿ. ಅವರ ಸ್ಮರಣೆಯ ಶಕ್ತಿ ಅಪೂರ್ವವಾದದ್ದು. ಅವರು ತಮ್ಮ ವಿಚಾರಧಾರೆಯನ್ನು ಪ್ರವಚಿಸುವ ಸಂದರ್ಭಗಳಲ್ಲಿ ಉದಾಹರಿಸುವ ಘಟನೆಗಳು, ಸಂದರ್ಭೋಚಿತವಾಗಿ ಹೇಳುವ ಕತೆಗಳು ಅತ್ಯಂತ ಸರಳವಾದ ರೀತಿಯಲ್ಲಿ ಗ್ರಾಮೀಣ ಜನರನ್ನು ಸುಲಭವಾಗಿ ಮುಟ್ಟುವಂಥ ಮಾತಿನ ಶೈಲಿ ಶ್ರೀ ಶ್ರೀಗಳವರನ್ನು ಈ ಶತಮಾನದ ಬಹುದೊಡ್ಡ ಧರ್ಮಪ್ರಸಾರದ ಪ್ರವಾದಿಯನ್ನಾಗಿ ಮಾಡಿದೆ ಎಂದರೆ ಅತಿಶಯೋಕ್ತಿಯಲ್ಲ.

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ, ಅಹುದಹುದೆನ್ನಬೇಕು"

ಎಂಬ ಬಸವಣ್ಣನವರ ವಚನದ ದಿವ್ಯಸಾಕ್ಷಾತ್ಕಾರವೇ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು.

ಪರಮ ಪೂಜ್ಯ ಶ್ರೀ ಶ್ರೀಗಳವರು ಮಾಡುತ್ತಿರುವ ಅನ್ನದಾನ, ವಿದ್ಯಾದಾನ, ಜ್ಞಾನದಾನ ಭರತಖಂಡದಲ್ಲಿಯೇ ಒಂದು ಸಮಾನಾಂತರ ಸರ್ಕಾರದಂತೆ ಸೇವೆ ಸಲ್ಲಿಸುತ್ತಿದೆ ಎಂಬುದು ಸಾಮಾನ್ಯ ಅಭಿಪ್ರಾಯ.

ಪರಮ ಪೂಜ್ಯ ಶ್ರೀಗಳವರ ಇಡೀ ವ್ಯಕ್ತಿತ್ವದ ಭದ್ರವಾದ ನೆಲೆ ಇರುವುದು ಅವರ ತಪಸ್ಸಿನ ಶಕ್ತಿಯಲ್ಲಿ. ಶ್ರೀ ಶ್ರೀಗಳವರು ಸ್ವತಃ ಮಹಾನ್ ಸಾಧಕರು. ತಮ್ಮ ದೇಹವನ್ನು ನಿಗ್ರಹಿಸಿ ದೇಹದೊಳಗಿನ ಆತ್ಮವನ್ನು ಪ್ರಕಾಶಮಾನವಾಗಿ ಬೆಳಗುವಂತೆ ಮಾಡಿದ ಚೈತನ್ಯ ಮೂರ್ತಿಗಳು. ಶ್ರೀ ಶ್ರೀಗಳವರ ಕಾಲನಿಷ್ಠೆಯು ಸಹ ಆದರ್ಶವಾದುದು. ಯಾವುದೇ ಸಭೆ ಸಮಾರಂಭಗಳಿಗೆ ತಾವು ಒಪ್ಪಿಕೊಂಡ ಸಮಯಕ್ಕೆ ಸರಿಯಾಗಿ ಶ್ರೀ ಶ್ರೀಗಳವರು ಹಾಜರ್. ವ್ಯವಸ್ಥಾಪಕರುಗಳಿಗೆ ಶ್ರೀ ಶ್ರೀಗಳವರನ್ನು ಆಹ್ವಾನಿಸಿದರೆ ಸಕಾಲದಲ್ಲಿ ಕಾರ್ಯಕ್ರಮ ಪ್ರಾರಂಭಮಾಡಲೇ ಬೇಕಾದಂತಹ ಅನಿವಾರ್ಯ ಪರಿಸ್ಥಿತಿ. ಕಾಲ ನಮಗಾಗಿ ಕಾಯುವುದಿಲ್ಲ, ಅದನ್ನು ವ್ಯರ್ಥಮಾಡಬಾರದು, ಕಾಲ ಅನುತ್ಪಾದಕ ಆಗಬಾರದು ಎಂಬುದು ಅವರ ವಾದ. ವಿಶೇಷವಾಗಿ ಕಾರ್ಮಿಕರು ಮತ್ತು ಯುವಜನಾಂಗ ಕಾಲವ್ಯಯ ಮಾಡುತ್ತಿರುವುದರ ಬಗ್ಗೆ ಅವರಿಗೆ ಅಪಾರವಾದ ನೋವು. ಸದಾ ತಮ್ಮ ಮಾತುಗಳಲ್ಲಿ ಜಪಾನಿನ ಜನರ ಕಾಯಕ ಹಾಗೂ ಕಾಲದ ನಿಷ್ಠೆಯ ಬಗ್ಗೆ ಶ್ರೀ ಶ್ರೀಗಳವರಿಂದ ಮೆಚ್ಚುಗೆ ಹಾಗೂ ಅಭಿನಂದನೆ. ಜಪಾನಿನ ರೀತಿಯಲ್ಲಿಯೇ ಭಾರತ ಸಮಗ್ರವಾದ ಅಭಿವೃದ್ಧಿ ಸಾಧಿಸಬೇಕೆಂಬುದು ಅವರ ಕನಸು.

ಶ್ರೀ ಶ್ರೀಗಳವರಲ್ಲಿ ನಾನು ಮೆಚ್ಚಿಕೊಂಡಂತಹ ಬಹುದೊಡ್ಡ ಮತ್ತೊಂದು ಅಪರೂಪವಾದ ಗುಣವೆಂದರೆ ತಮ್ಮ ಭಕ್ತರ ಬಗ್ಗೆ ತೋರುವ ಪ್ರೀತಿ ಮತ್ತು ಸಮಾನತೆ. ಬಡವನಿರಲಿ ಶ್ರೀಮಂತನಿರಲಿ ಅವರಲ್ಲಿ ಒಂದೇ ರೀತಿಯ ವರ್ತನೆ. ಶಿವಪೂಜೆಗೆ ಆಹ್ವಾನಿಸಿದರೆ ಅವರಿಗೆ ಆಯ್ಕೆಯೇ ಇಲ್ಲ. ಆಹ್ವಾನಿಸುವವರು ಶಿವಭಕ್ತರಾದರೆ ಸಾಕು. ಅವರು ಶ್ರೀಮಂತರಾಗಿರಬೇಕಿಲ್ಲ ಅಥವಾ ಶಿವಪೂಜೆಗೆ ಬಂದಾಗ ಕಾಣಿಕೆ ನೀಡಲೇಬೇಕೆಂದು ನಿಯಮವಿಲ್ಲ. ವೀರಶೈವ ಮಠಾಧಿಪತಿಗಳಲ್ಲಿಯೇ ಶ್ರೀ ಶ್ರೀಗಳವರಲ್ಲಿನ ಶಿವಪೂಜಾ ನಿಷ್ಠೆ ಅನನ್ಯ ಹಾಗೂ ಆದರ್ಶಪ್ರಾಯ. ಶ್ರೀಗಳವರ ಶಿವಪೂಜೆ ಭಕ್ತರಿಗೆ ಕೈಲಾಸದಲ್ಲಿ ನಡೆಯುವ ಸಾಕ್ಷಾತ್ ಶಿವನ ಪೂಜೆಯೇ ಎಂಬಂತಹ ಅನುಭವ. ಶಿವಪೂಜೆಯಲ್ಲಿ ಅವರು ತೋರುವ ಏಕಾಗ್ರಚಿತ್ತತೆ ಹಾಗೂ ತನ್ಮಯತೆ ಭಕ್ತರಿಗೆ ಶಿವಯೋಗದ ವಿಶಿಷ್ಟವಾದ ಅನುಭವವನ್ನೇ ನೀಡುತ್ತದೆ.

ನಡೆ, ನುಡಿ, ನಂಬಿಕೆ ಈ ಮೂರರ ತ್ರಿವೇಣೀಸಂಗಮ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಈ ದಿವ್ಯಚೇತನದ ವರ್ಣನೆ ಸಾಮಾನ್ಯರಿಗೆ ಸಾಧ್ಯವಿಲ್ಲ. ಭಕ್ತರ ವಾತ್ಸಲ್ಯಮೂರ್ತಿಗಳಾಗಿ, ಶ್ರೇಷ್ಠ ಕಾಯಕಯೋಗಿಗಳಾಗಿ, ಬಸವ ಸಂದೇಶದ ಪ್ರಚಾರದ ಕೈಂಕರ್ಯ ಹೊತ್ತ ಬಹುದೊಡ್ಡ ಪ್ರವಾದಿಯಾಗಿ, ತ್ರಿವಿಧ ದಾಸೋಹದ ಮೂಲಕ ಮಹಾನ್ ಪವಾಡ ಪುರುಷರಾಗಿ, ಅಪ್ರತಿಮವಾದ ರಾಷ್ಟ್ರ ಅಭಿಮಾನಿಗಳಾಗಿ ಗ್ರಾಮೀಣ ಜನರ ಜಡತೆ ಮೂಢನಂಬಿಕೆಗಳ ವಿರುದ್ಧ ಸಮರ ಸಾರುವ ಮೂಲಕ ಬಹುದೊಡ್ಡ ವಿಚಾರವಾದಿಯಾಗಿ ಸ್ವತಃ ತಾವೊಬ್ಬ ಶಿವಯೋಗಿಯಾಗಿ ಲಕ್ಷೋಪಲಕ್ಷ ಭಕ್ತರ ಆರಾಧ್ಯ ದೈವವಾದ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಭಾರತದೇಶ ಕಂಡ ಈ ಶತಮಾನದ ಮಹಾನ್ ಸಂತ ತಪಸ್ವಿ ಹಾಗೂ ಪ್ರವಾದಿ.

ಬನ್ನಿ ನೋಡಬನ್ನಿ ಇದು ಸಿದ್ಧಗಂಗೆ
ಹರಿಯುತಿಹುದು ನೋಡ ಇಲ್ಲಿ ಸುಜ್ಞಾನ ಗಂಗೆ
ಸಿದ್ಧಗಂಗೆಯ ಆರಾಧ್ಯ ದೈವವೇ ಶಿವಕುಮಾರ ಮಹಾಸ್ವಾಮಿ
ಅವರ ದಿವ್ಯ ದರ್ಶನ, ಪಾದ ಸ್ಪರ್ಶವೇ ನಮಗೆ ಮಹಾನವಮಿ
ಮೊಳಗಲಿ ಬೆಳಗಲಿ ಶ್ರೀ ಸಿದ್ಧಗಂಗೆಯ ಕೀರ್ತಿ
ಶಿವಕುಮಾರ ಮಹಾಸ್ವಾಮಿಗಳೇ ನಮಗೆ ದಿವ್ಯ ಚೈತನ್ಯಮೂರ್ತಿ
ಶ್ರೀ ಶ್ರೀಗಳವರ ಪಾದಕ್ಕೆ ಶರಣು ಶರಣಾರ್ಥಿ
ಬೆಳಗುವೆ ನನ್ನ ಸುಜನಮನದೊಂದಿಗೆ ಶ್ರೀ ಪಾದಕ್ಕೆ ಮಂಗಳದ ಆರತಿ.

ದಾಸೋಹ ಕ್ಷೇತ್ರ

ಪಂಡಿತ ಕೆ.ಪಿ. ಶಿವಲಿಂಗಯ್ಯ

ಒಸ್ನೆಲೆ : "ಮಠಃ ಛಾತ್ರಾದಿ ನಿಲಯಃ" ಎನ್ನುವ ಅಮರಸಿಂಹನ ವಾಣಿಯಂತೆ ವಿದ್ಯೆಯನ್ನು ಬೇಡುವವರ ಅಥವಾ ಅಪೇಕ್ಷಿಸುವವರ ಅರ್ಥಾತ್ ವಿದ್ಯಾರ್ಥಿಗಳು ಆಶನ - ವಸತಿಗಳನ್ನು ಪಡೆಯುವ ಸ್ಥಾನ ಎಂದು ಸ್ಥೂಲವಾಗಿ ನಿರೂಪಿಸ ಬಹುದಾಗಿದೆ. ಇನ್ನು ವಿದ್ಯೆಯೆಂದರೆ ಯಾವುದು? ಲೌಕಿಕವಿದ್ಯೆಯೆ ಅಥವಾ ಪಾರಮಾರ್ಥ ಸಾಧನೆಯೆ. 'ಸಾ ವಿದ್ಯಾಯಾ ವಿಮುಕ್ತಯೇ - ಈ ಉಕ್ತಿಯನ್ನು ಮನಗಂಡಾಗ ಬಿಡುಗಡೆಯನ್ನು ಮಾಡಬಲ್ಲುದೇ ವಿದ್ಯೆ. ಎಂತಹ ವಿದ್ಯೆ? ಜನನ ಮರಣವೆಂಬ ಭವಬಂಧನದಿಂದ ಬಿಡುಗಡೆ ಅಂದರೆ ಮುಕ್ತಿ. ಮಠ ಅಥವಾ ಗುರುಕುಲದಿಂದ ನಾವು ನಿರೀಕ್ಷಿಸುವ ಆತ್ಯಂತಿಕ ಪ್ರಯೋಜನವೆಂದರೆ ಇದೇ.

ಋಷ್ಯಾಶ್ರಮಗಳು : ಪ್ರಾಚೀನ ಕಾಲದಲ್ಲಿ ಹಿಂದೂ ಸಮಾಜದಲ್ಲಿ ಋಷಿ - ಮುನಿಗಳ ಆಶ್ರಮಗಳಿದ್ದುವು. ಅವುಗಳೇ ಆಗಿನ ಕಾಲದ ಗುರುಕುಲಗಳಾಗಿದ್ದವು. ಆಮೇಲೆ ಕ್ರಿಸ್ತಪೂರ್ವದಲ್ಲಿಯೆ ಬೌದ್ಧಧರ್ಮದ ಮಠಗಳನ್ನು (ವಿಹಾರಗಳೆಂದೂ ಕರೆಯುತ್ತಿದ್ದರು.) ಕಾಣಬಹುದು. ಕ್ರಿ.ಪೂ. ೨೯೨ ರಿಂದ ಕರ್ನಾಟಕದಲ್ಲಿ ಆರಂಭವಾದ ಜೈನರ ಇತಿಹಾಸದಲ್ಲಿಯು ಬಸದಿ, ಚೈತ್ಯಾಲಯ ಮುಂತಾದ ಮಠ ಸ್ವರೂಪವನ್ನು ಕಾಣುತ್ತೇವೆ. ಆದುದರಿಂದಲೇ ಹೊಂಬುಜ, ಶ್ರವಣಬೆಳಗೊಳ ಮಠಗಳು ಪ್ರಾಚೀನವಾದುದೆಂದು ಹೇಳಲವಕಾಶವಿದೆ. ಎಂಟನೆಯ ಶತಮಾನದ ಕೊನೆಯವರೆಗೂ ಜೈನ - ಬೌದ್ಧ ಸಂನ್ಯಾಸಿಗಳು (ಮಠಾಧಿಪತಿಗಳು) ಮಾತ್ರವಲ್ಲದೆ ಕಾಳಾಮುಖಿರು, ಕಾಪಾಲಿಕರು, ಪಾಶುಪತರು ಮೊದಲಾದ ವಿವಿಧ ಪಂಥಗಳಿಗೆ ಸೇರಿದ ಸಂನ್ಯಾಸಿಗಳಿದ್ದರು. ಕಾಲಾಮುಖಿರು ಮಠಪತಿಗಳಾಗಿ ಗುರುಕುಲಗಳನ್ನು ನಡೆಸುತ್ತಿದ್ದುದು ಸರ್ವವಿದಿತ. ಮಠಗಳ ಆಗತ್ಯವನ್ನು ಗಮನಿಸಿ, ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಕೀರ್ತಿ ಶ್ರೀ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಆ ಮೇಲಿನ ಕಾಲಾಂತರದಲ್ಲಿ ದ್ವೈತ ವಿಶಿಷ್ಟಾದ್ವೈತ ಪಂಥಗಳ ಮಠಗಳೂ ಸ್ಥಾಪನೆಯಾಗಿರುವುದನ್ನು ನಾವು ಅರಿಯುತ್ತೇವೆ. ಶಂಕರಾಚಾರ್ಯರಿಗಿಂತ ಪೂರ್ವದಲ್ಲಿಯೇ ವೀರಶೈವ ಮಠಗಳಿದ್ದುವೆಂದು ತಿಳಿದುಬರುತ್ತದೆ.

ವೀರಶೈವ ಮಠಗಳು : ಚಾರಿತ್ರಿಕ ದೃಷ್ಟಿಯಿಂದ ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಮಠಗಳು ಸಂಖ್ಯೆಯಲ್ಲಿ ಎಂತೋ, ಅಂತೆಯೆ ಗುಣದೃಷ್ಟಿಯಿಂದಲೂ ಪ್ರಾಧಾನ್ಯತೆಯನ್ನು ಗಳಿಸಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಮಠಗಳಿಗೆ ಕಲಶಪ್ರಾಯವಾಗಿ ಬಸವಣ್ಣನವರಿಂದ ಸ್ಥಾಪಿತವಾದ ಅನುಭವಮಂಟಪವಂತೂ ಮಠಗಳ ಮಹತ್ಕಾರ್ಯವಾದ ತತ್ತ್ವ ಚಿಂತನೆಗೆ ಮಹಾಕೇಂದ್ರವಾಗಿ ಪರಿಣಮಿಸಿತು. **'ಕಾಯಕವೇ ಕೈಲಾಸ'** ವೆಂದು ಸಾರಿದ ಕಲ್ಯಾಣದ ಶರಣ - ಶರಣೆಯರು ದುಡಿಮೆಯ ಗೌರವ (Dignity of Labour) ಸಿದ್ಧಾಂತಕ್ಕೆ ಧಾರ್ಮಿಕ ಒಸ್ನೆಲೆಯನ್ನು ಕೊಟ್ಟು, ಆ ಕಾಯಕತತ್ತ್ವವನ್ನು ಅಮೃತತ್ವಕ್ಕೆ ಅಣ್ಣನವರು ಏರಿಸಿದ್ದು ಯಾರೂ ಎಂದಿಗೂ ಮರೆಯುವಂತಿಲ್ಲ.

ಮಠಗಳು 'ಘಟಿಕಾಸ್ಥಾನ'ಗಳಾಗಿದ್ದುವು ಎನ್ನುವುದಕ್ಕೆ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ 'ಕೋಡಿಯ ಮಠ'ದ ಶಾಸನ ಪ್ರಸ್ತಾಪವೇ ಸಾಕ್ಷಿ. (Epigraphia Karnataka, P 290)

ಮಠಗಳಲ್ಲಿ ಶಿಕ್ಷಣ ಪ್ರಸಾರದ ದೃಷ್ಟಿಯಿಂದ i) ಸಾಲಿಮಠ ii) ಓದಿಸುವ ಮಠ, ವಿದ್ಯಾಮಠ iii) ವಿರಕ್ತ ಮಠ ಎಂದು ಮೂರು ಪ್ರಕಾರದ ಮಠಗಳನ್ನಾಗಿ ಸಂಘಟಿಸಲಾಯಿತು.

ಇವುಗಳನ್ನು ವಿಸ್ತರಿಸಿ ಹೇಳುವುದು ಪ್ರಸ್ತುತ ಲೇಖನದ ಉದ್ದೇಶವಲ್ಲವಾದರೂ, ಶ್ರೀ ಸಿದ್ಧಗಂಗಾ ಮಠವು ಈ ಮೂರು ಬಗೆಯ ಮಠದ ಪದ್ಧತಿಗಳನ್ನೂ ಬಹಳ ಕಾಲದಿಂದ ಒಳಗೊಂಡು ಅವುಗಳ ಸಾಹಸವನ್ನು ಸಾಧಿಸುತ್ತಾ ಬಂದಿದೆ ಎನ್ನುವುದು ಮಾತ್ರ ಪ್ರಸ್ತಾಪಿಸಲೇಬೇಕಾದ ಅಂಶ.

ಬಸವ ಕಲ್ಯಾಣದ ಮಠಗಳಲ್ಲಿ : ಕಲ್ಯಾಣದಲ್ಲಿ ಬಗೆಬಗೆಯ ಅಸಂಖ್ಯ ಮಠಗಳಿದ್ದುವೆಂದು ಚಿಕ್ಕ ದಣ್ಣಾಯಕರಾದ ಚೆನ್ನಬಸವಣ್ಣ ತಮ್ಮ ಸುದೀರ್ಘ ವಚನದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಆ ವಚನದ ಸಂಬಂಧಪಟ್ಟ ಭಾಗವನ್ನು ಇಲ್ಲಿ ಕೊಡುವುದು ಅಪ್ರಸ್ತುತವಾಗಲಾರದು.(ಆಗ ಮನೆ ಮನೆಗಳೆಲ್ಲ ಮಠಗಳಾಗಿದ್ದುವು)

..............................ಲಿಂಗಾರ್ಚನೆಯ ಮಾಡುವ ಮಠದ ಕಬ್ಬಿಳಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ.

ಇನ್ನು ಬಸವರಾಜ ದೇವರು ಮುಖ್ಯವಾದ ಅಸಂಖ್ಯಾತರ ಮಠಗಳು ಆ ಕಲ್ಯಾಣದೊಳಗೆ ಎಷ್ಟು ಎಂದಡೆ.

ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು,
ಇಪ್ಪತ್ತೆಂಟು ಸಾವಿರ ಮಹಾಮನೆಗಳು .
ಹತ್ತು ಸಾವಿರ ನಿತ್ಯನೇಮಿಗಳ ಮಠಂಗಳು ;
ಹದಿನೈದು ಸಾವಿರ ಚಿಲುಮೆಯಗ್ಗವಣಿಯ ವ್ರತಸ್ಥರ ಮಠಂಗಳು,
ಐದು ಸಾವಿರ ವೀರವ್ರತನೇಮಿಗಳ ಕಟ್ಟಳೆಯ ಮಠಂಗಳು ;
ಹನ್ನೆರಡು ಸಾವಿರ ಅಚ್ಚಪ್ರಸಾದಿಗಳ ಮಠಂಗಳು,
ಒಂದುಸಾವಿರದ ಅರವತ್ತುನಾಲ್ಕು ಶೀಲಸಂಪನ್ನರ ಮಠಂಗಳು ;
ನಿತ್ಯ ಸಾವಿರ ಜಂಗಮಕೆ ಆರೋಗಣೆಯ ಮಾಡಿಸುವ ದಾಸೋಹಿಗಳ ಮಠಂಗಳು ಮೂವತ್ತೆರಡು ಸಾವಿರ ;
ನಿತ್ಯ ಐನೂರು ಜಂಗಮಕೆ ಒಲಿದು ದಾಸೋಹವ ಮಾಡುವ ಸತ್ಯಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ ;
ನಿತ್ಯ ಸಾವಿರದೈನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋಹಿಗಳ ಮಠಂಗಳು ಹನ್ನೊಂದು ಸಾವಿರ ;
ನಿತ್ಯ ಅಹಾರಿಯಿಂದ ಮಾಡುವ ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ ;
ಜಂಗಮ ಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ
ಜಂಗಮ ಭಕ್ತರ ಮಠಂಗಳು ಎರಡು ಸಾವಿರದೇಳ್ನೂರೆಪ್ಪತ್ತು ;
ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂರೆಪ್ಪತ್ತು ;
ಇಂತಪ್ಪ ಅಸಂಖ್ಯಾತರಿಗೆ ಮುಖ್ಯವಾಗಿ ರುದ್ರಲೋಕದಿಂದಿಳಿತಂದ
ಪ್ರಮಥಗಣಂಗಳ ಮಠಂಗಳು ಏಳುನೂರೆಪ್ಪತ್ತು...

(ಷಟ್‌ಸ್ಥಲ ಚಕ್ರವರ್ತಿಯ ಈ ವಚನ ಇನ್ನೂ ಮುಂದುವರಿದು ಅಣ್ಣನವರ ಗುಣಗಾನವನ್ನೊಳಗೊಂಡಿರುತ್ತದೆ.)

ಕಾಲಾಯ ತಸ್ಮೈನಮಃ : ವಿದ್ಯಾಕೇಂದ್ರಗಳಾದ ಅನೇಕ ಮಠಗಳು ಕನ್ನಡನಾಡಿನಲ್ಲಿದ್ದುವು. ಈಗ ಅಂತಹವುಗಳಲ್ಲಿ ನೂರಾರು ಮಠಗಳು ಕಾಣದಂತಾಗಿವೆ ! ಉದಾಹರಣೆಗೆ ಬೆಂಗಳೂರಿನಲ್ಲಿದ್ದುವೆಂದು ಹೇಳಲಾದ ಅರವತ್ತುನಾಲ್ಕು ವೀರಶೈವ ಮಠಗಳಲ್ಲಿ ಇಂದು ನಾಮಮಾತ್ರಕ್ಕೆ ಮೂವತ್ತೊಂಬತ್ತು, ಜೀವಂತವಾಗಿ ಹದಿಮೂರು ಮಠಗಳಿರುವುದು "ಕಾಲಾಯ ತಸ್ಮೈ ನಮಃ" ಎನ್ನುವ ಉಕ್ತಿಗೆ ಸಾಕ್ಷಿಯೆನ್ನಬಹುದು.

ಶ್ರೀ ಸಿದ್ಧಗಂಗಾಮಠದ ಪ್ರಾಚೀನತೆ :- ಶ್ರೀ ಸಿದ್ಧಗಂಗಾ ಮಠವು ಅತ್ಯಂತ ಪ್ರಾಚೀನವಾದುದು ಎನ್ನುವುದಕ್ಕೆ ಇಲ್ಲಿನ ಅವಳಿ ಬೆಟ್ಟಗಳಲ್ಲಿ ಇರುವ ನೂರೊಂದು ಪುರಾತನ ಗುಹೆಗಳೇ ಆಧಾರವೆನ್ನಬಹುದಾಗಿದೆ. ಇಲ್ಲಿಗೆ ಅನತಿ ದೂರದಲ್ಲಿರುವ ಕೌತುಮಾರನ ಹಳ್ಳಿಯಲ್ಲಿ ಗೌತಮ ಋಷಿಗಳು ಆಶ್ರಮ ಮಾಡಿಕೊಂಡು ತಪೋನುಷ್ಠಾನಗೈಯ್ಯುತ್ತಿದ್ದರೆಂದು ಸ್ಥಳಪುರಾಣದಿಂದ ಗೊತ್ತಾಗುತ್ತದೆ. ಅವರಿಂದ ಆಕಸ್ಮಾತ್ ಘಟಿಸಲ್ಪಟ್ಟ ಗೋವಧೆಯ ಪಾಪವನ್ನು ಇಲ್ಲಿನ ಬೆಟ್ಟದಲ್ಲಿ ಅನುಷ್ಠಾನ ಮಾಡಿ ಕಳೆದುಕೊಂಡರೆಂದೂ ತಿಳಿದುಬರುತ್ತದೆ. ಆಗಿನಿಂದಲೂ ಅನೇಕ ತಪಸ್ವಿಗಳು ಇಲ್ಲಿ ತಪಸ್ಸು ಮಾಡಿದರೆಂದು ಪ್ರತೀತಿ. ಆದರೆ ಇಲ್ಲಿ 'ಮಠ' ಸ್ಥಾಪನೆಯಾದುದು ಶ್ರೀ ಗೋಸಲ ಸಿದ್ಧೇಶ್ವರರ ಕಾಲದಲ್ಲಿ, ಅಂದರೆ ಕ್ರಿ. ಶ. ೧೩೦೦ ರಲ್ಲಿ. ಸುಮಾರು ಏಳುನೂರು ವರ್ಷಗಳ ಹಿಂದೆ. ಈ ಪುಣ್ಯಪುರುಷರು ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿಯಿಂದ ಇಲ್ಲಿಗೆ ದಯಮಾಡಿಸಿದವರು. ಇವರಾದರೂ ಅಲ್ಲಮ ಪ್ರಭು ಬಳಿವಿಡಿದು ಬಂದ ಶೂನ್ಯ ಸಿಂಹಾಸನಾಧ್ಯಕ್ಷರು. ಈ ಗುರು ಪರಂಪರೆ; ೧) ಅಲ್ಲಮಪ್ರಭು ದೇವರು ೨) ಚೆನ್ನಬಸವಣ್ಣ ೩) ಸಿದ್ಧರಾಮೇಶ್ವರರು (ಕಲ್ಯಾಣ ಕ್ರಾಂತಿ ಬಳಿಕ ಸೊನ್ನಲಾಪುರಕ್ಕೆ ದಯಮಾಡಿಸಿ, ಅದನ್ನೇ ಕೇಂದ್ರವಾಗಿರಿಸಿಕೊಂಡು ಇಡೀ ಕರ್ನಾಟಕದಾದ್ಯಂತ ವೀರಶೈವವನ್ನು ಪ್ರಚಾರ ಮಾಡಿದರು). ೪) ಅನಾದಿಗಣೇಶ್ವರ (ಇವರು ಆದಿಯಾಗಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಬೋಳಬಸವೇಶ್ವರರವರೆಗೂ ಹರದನಹಳ್ಳಿಯೇ ಶೂನ್ಯಪೀಠದ ಕೇಂದ್ರವಾಗಿದ್ದಿತು). ೫) ಆದಿಗಣೇಶ್ವರ ೬. ನಿರ್ಮಾಯಗಣೇಶ್ವರ (ಮಲೆಮಾದೇಶ್ವರರೇ ಇವರು ಎಂದು ಕೆಲವರ ಅಭಿಪ್ರಾಯ (೭) ನಿರಂಜನ ಗಣೇಶ್ವರ ೮) ಜ್ಞಾನಾನಂದ ಗಣೇಶ್ವರ ೯) ಆತ್ಮ ಗಣೇಶ್ವರ ೧೦) ಅಧ್ಯಾತ್ಮ ಗಣೇಶ್ವರ ೧೧) ರುದ್ರ ಗಣೇಶ್ವರ ೧೨) ಬಸವ ಪ್ರಭು ದೇವರು (ಇವರೇ ಶ್ರೀ ಸಿದ್ಧಗಂಗಾ ಪೀಠದ ಮೊದಲಿಗರು) ೧೬) ಶಂಕರ ದೇವರು ೧೭) ದಿವ್ಯಲಿಂಗ ದೇವರು ೧೮) ಗೋಸಲ ಚೆನ್ನಬಸವೇಶ್ವರರು ೧೯) ತೋಂಟದ ಸಿದ್ಧಲಿಂಗೇಶ್ವರರು ೨೦) ಬೋಳ ಬಸವೇಶ್ವರರು.

ಸಿದ್ಧಗಂಗಾ ಪ್ರಾಪ್ತಿ : ಗೋಸಲ ಸಿದ್ಧೇಶ್ವರರು ತಮ್ಮೊಂದಿಗೆ ಹೋದೆಡೆಯಲ್ಲೆಲ್ಲ ಸದಾ ಇರುತ್ತಿದ್ದ ನೂರೊಂದು ವಿರಕ್ತರ ಜೊತೆ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿಯೂ ಲಿಂಗಪೂಜಾ ವೈಭವದಿಂದಿದ್ದುದು ಸರಿಯಷ್ಟೇ. ಆ ನಿರತ ಶಿಷ್ಯರಲ್ಲಿ

ಮೂರ್ತಿಗಳೊಬ್ಬರು ಮಧ್ಯರಾತ್ರಿಯಲ್ಲಿ ಬಾಯಾರಿಕೆಯುಂಟಾಗಿ ತಮ್ಮ ಗುರುಗಳನ್ನು ಧ್ಯಾನಿಸಿದರು. ಗೋಸಲ ಸಿದ್ಧೇಶ್ವರರ ಶ್ರೀ ಚರಣಕ್ಕೆ ಶಿಷ್ಯಪ್ರಾರ್ಥನೆ ಮುಟ್ಟಿ ಆ ಕೂಡಲೇ ಅವರಿದ್ದ ಗುಹೆಗೆ ಬಂದು ತಮ್ಮ ಮೊಣಕಾಲಿನಿಂದ ಅಲ್ಲಿದ್ದ ಬಂಡೆಗೆ ಹೊಡೆದರು. ಆಗಲೇ ಆ ಕಲ್ಲಿನ ಭಾಗ ಗುಂಡಿ ಬಿದ್ದು ಅಲ್ಲಿ ತಾಯಿ ಗಂಗಾಮಾತೆ ಕಾಣಿಸಿಕೊಂಡಳು. ನೀರಡಿಕೆಯಿಂದ ಬಳಲಿದ್ದ ಆ ವಿರಕ್ತಮೂರ್ತಿಗಳಿಗೆ ಆ ಜಲದಿಂದಲೇ ಸ್ನಾನ ಮಾಡಿಸಿ, ಭಸ್ಮ ಧರಿಸಿ ಶಿವ ಮಂತ್ರೋಚ್ಚಾರಣೆಯೊಂದಿಗೆ ಜಲಪಾನ ಮಾಡಿಸಿ, ಅವರ ಕಳವಳವನ್ನು ಹೋಗಲಾಡಿಸಿದರು. ಗೋಸಲ ಸಿದ್ಧೇಶ್ವರರ ಪಾದಸ್ಪರ್ಶದಿಂದ ಪ್ರತ್ಯಕ್ಷಳಾದ ಗಂಗೆ "ಸಿದ್ಧಗಂಗಾ" ಎಂದು ಪ್ರಸಿದ್ಧಿ ಪಡೆದಳು. ಕ್ಷೇತ್ರಕ್ಕೂ ಅದೇ ಹೆಸರಾಯ್ತು. (ಹಳೆಯ ವಿದ್ಯಾರ್ಥಿ ಸಂಘದಿಂದ ಪ್ರಕಟವಾಗುತ್ತಿರುವ ಪತ್ರಿಕೆಗೂ 'ಸಿದ್ಧಗಂಗಾ' ಅಂತಲೇ ಹೆಸರು.)

ಅಂದಿನಿಂದ ಇಂದಿನವರೆಗೆ ಜಾತಿ - ಮತ ಭೇದವಿಲ್ಲದೆ ತಾಯಿ 'ಸಿದ್ಧಗಂಗಾಮಾತೆ'ಯ ಪೂಜೆಯ ಮೂಲಕ ಜನತೆ ಕೃತಾರ್ಥವಾಗುತ್ತಿದೆ. ಹೀಗೆ ಶ್ರೀ ಸಿದ್ಧಗಂಗಾ ಮಠ ಸ್ಥಾಪಕರಾದ ಶ್ರೀ ಗೋಸಲ ಸಿದ್ಧೇಶ್ವರರ ಗುರು ಪರಂಪರೆಯ ಶ್ರೀ ಶಂಕರಾಚಾರ್ಯರು, ಶ್ರೀ ದಿವ್ಯಲಿಂಗೇಶ್ವರರು, ಶ್ರೀ ಗೋಸಲ ಚನ್ನಬಸವೇಶ್ವರರು, ಕಡೆಗೆ ಶ್ರೀ ನಿರಂಜನಗಣಾಧೀಶ್ವರರ ಅಪರಾವತಾರಿಗಳಾದ ಶ್ರೀ ಸಿದ್ಧಲಿಂಗೇಶ್ವರರು ಸಹಿತ ಕ್ರಮವಾಗಿ ಈ ಕ್ಷೇತ್ರಕ್ಕೆ ಬಂದು ಇಲ್ಲಿ ತಪಗೈದು, ಈ ಪ್ರಾಂತ್ಯದ ಜನತೆಗೆ ಲೌಕಿಕಾಮುಷ್ಮಿಕಗಳ ಸುನೀತಿಯನ್ನು ಬೋಧಮಾಡಿ ಅವರನ್ನು ಉದ್ಧಾರ ಮಾಡಿದ ರೀತಿ ಅನ್ಯಾದೃಶವಾದುದು.

ಶ್ರೀ ಅಡವಿ ಸ್ವಾಮಿಗಳು : ಅಲ್ಲಿಂದ ಮುಂದೆ ಯಾರು ಯಾರು ಈ ಪೀಠದಲ್ಲಿ ಸ್ವಾಮಿಗಳಾಗಿದ್ದರು ಎನ್ನುವುದು ೧೫೦೦ ರಿಂದ ೧೮೦೦ ರವರೆಗೆ ಸುಮಾರು ಮುನ್ನೂರು ವರ್ಷ ಕಾಲ ಯಾರಿಗೂ ಅರಿವಾಗದಂತೆ ಗತಕಾಲದಲ್ಲಿ ಸೇರಿಹೋಗಿದೆ. ಕಳೆದ ಶತಮಾನದಲ್ಲಿ ಶ್ರೀ ಮುಪ್ಪಿನ ಸ್ವಾಮಿಗಳು, ಶ್ರೀ ರುದ್ರಸ್ವಾಮಿಗಳು, ಶ್ರೀ ಸಿದ್ಧಲಿಂಗ ಸ್ವಾಮಿಗಳು - ಈ ಮೂವರು ಮೂರ್ತಿಗಳು ಶ್ರೀ ಸಿದ್ಧಗಂಗಾಮಠದ ಅಧಿಕಾರಿಗಳಾಗಿದ್ದರೆಂದು ತಿಳಿದು ಬರುತ್ತದೆ. ಕೊನೆಯವರಾದ ಸಿದ್ಧಲಿಂಗ ಸ್ವಾಮಿಗಳು ೧೮೫೦ರ ಸುಮಾರಿಗೆ ಈ ಮಠಾಧಿಪತಿಗಳಾಗಿದ್ದಾಗ ಉತ್ತರದ ಕಡೆಯಿಂದ ಗುಬ್ಬಿಗೆ ದಯಮಾಡಿಸಿದ್ದ ಶ್ರೀ ಅಟವೀ ಸ್ವಾಮಿಗಳವರು ಶ್ರೀ ಕ್ಷೇತ್ರಕ್ಕೆ ಬಂದು ಇಲ್ಲಿನ ಸ್ವಾಮಿಗಳ ಅನುಮತಿ ಪಡೆದು ಬೆಟ್ಟದ ಮೇಲೆ ಶ್ರೀ ಸಿದ್ಧಲಿಂಗೇಶ್ವರರ ಹಾಗೂ ಅಮ್ಮನವರ ಸನ್ನಿಧಿಯಲ್ಲಿ ಅನುಷ್ಠಾನ ಮಾಡಿಕೊಂಡಿದ್ದರು. ಪ್ರಗತಿಪರ ಧೋರಣೆಯನ್ನು ಹೊಂದಿದ್ದ ಶ್ರೀ ಅಟವೀಶ್ವರರು ಸಣ್ಣ ಪ್ರಮಾಣದಲ್ಲಿ ದಾಸೋಹವನ್ನು ಪ್ರಾರಂಭಿಸಿ "ಸಿದ್ಧಲಿಂಗ, ಇಂದು ಹಚ್ಚಿದ ಈ ಒಲೆ ಎಂದೆಂದೂ ಆರದಿರಲಿ" ಎಂದು ಶ್ರೀ ಕ್ಷೇತ್ರಾಧಿಪರೆನಿಸಿಕೊಂಡಿರುವ ಶ್ರೀ ಸಿದ್ಧಲಿಂಗೇಶ್ವರರನ್ನು ಪ್ರಾರ್ಥಿಸಿಕೊಂಡರಂತೆ. ಅದೇ ಪ್ರಕಾರ ಇಂದಿಗೂ ಅಂದು ಹೊತ್ತಿಸಿದ ಒಲೆ ಉತ್ತರೋತ್ತರವಾಗಿ ಸಹಸ್ರಾದಿಕವಾಗಿ ಬೆಳೆದು "ಸಿದ್ಧಗಂಗೆಯ ಊಟ, ಶಿವಗಂಗೆಯ ನೋಟ" ಎನ್ನುವ ಅನ್ವರ್ಥ ಗಾದೆಯಾಗಿ ಪರಿಣಮಿಸಿರುವುದು ಸರ್ವವಿದಿತ.

ಈ ಮಧ್ಯೇ ಸಿದ್ಧಗಂಗಾ ಪಾಳ್ಯ, ಬೊಮ್ಮಹಳ್ಳಿ ಈ ಎರಡು ಗ್ರಾಮಗಳನ್ನು ಶ್ರೀ ಮಠಕ್ಕೆ ಮಾನ್ಯ (ಉಂಬಳಿ) ಬಿಟ್ಟಿದ್ದು ಅದನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಸರ್ಕಾರದವರು ವಶಪಡಿಸಿಕೊಂಡುದಾಗಿ ತಿಳಿದುಬರುತ್ತದೆ. ಆ ಕೊಡುಗೆ ಯಾವಾಗ ಬಂತು, ಯಾವಾಗ ವಾಪಸಾಯ್ತು ಎನ್ನುವ ಬಗೆಗೆ ಸರಿಯಾದ ದಾಖಲೆಗಳು ಸಿಕ್ಕಿದಂತೆ ಕಾಣುವುದಿಲ್ಲ. ಆದರೆ ೧೯೧೩ರ ಸುಮಾರಿನಲ್ಲಿ ನಮ್ಮ ಪರಮಗುರುಗಳಾದ ಶ್ರೀಮದುದ್ಧಾನ ಶಿವಯೋಗಿಗಳು ಸರ್ಕಾರಕ್ಕೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲವೆಂದು ಮಾತ್ರ ಗೊತ್ತಾಗುತ್ತದೆ. ಮೊದಲೇ ವೈರಾಗ್ಯಮೂರ್ತಿಗಳಾದ ಶಿವಯೋಗಿಗಳು ಮತ್ತದರ ಗೊಡವೆಗೆ ಹೋದಂತೆ ಕಂಡುಬರಲಿಲ್ಲ. ಇದರಿಂದ ಈ ಮೊದಲಿನ ಮಧ್ಯಕಾಲದಲ್ಲಿಯೂ ದಾಸೋಹ ನಡೆಯುತ್ತಿತ್ತೆಂದು ತಿಳಿಯುವುದು.

ಶ್ರೀ ಉದ್ಧಾನ ಸ್ವಾಮಿಗಳು : ಈಗಾಗಲೇ 'ಸಿದ್ಧಗಂಗಾಶ್ರೀ' ಬೃಹತ್ ಕೃತಿಯಲ್ಲಿ ಅಭಿವರ್ಣಿತವಾಗಿರುವಂತೆ ಕಾಟ್ಸ್‌ಪೇಟೆಯ (ದಾಬಸ್‌ಪೇಟೆ) ಪಕ್ಕದ ಗ್ರಾಮವಾದ ಲಕ್ಕೂರಿನ ಗಟ್ಟೆಪ್ಪ - ಮರುಳಸಿದ್ಧಮ್ಮ ದಂಪತಿಗಳ ಸುಪುತ್ರರಾಗಿ ಅವತರಿಸಿದ ರುದ್ರಪ್ಪ. ಸ್ವಂತ ಶ್ರದ್ಧಾಸಕ್ತಿಪೂರಿತವಾದ ಪರಿಶ್ರಮ ಹಾಗೂ ಆತ್ಮಬಲದಿಂದ ಶ್ರೀ ಮದಟವೀಶ್ವರರ ನೆಚ್ಚಿನ ಶಿಷ್ಯರಾಗಿ ಅವರ ಪಾದ ಸೇವೆ ಮಾಡಿ ಗುರುಕೃಪೆಗೆ ಪಕ್ಕಾಗಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾಗಿ ಯಶೋವಂತರಾದ ದಿವ್ಯಚರಿತ್ರೆ ಜನಜನಿತವಾಗಿದೆ. ಅವರ ಪುಣ್ಯತಮ ಜೀವನದುದ್ದಕ್ಕೂ ಜರುಗಿದ ಪವಾಡಗಳಿಗಂತೂ ಲೆಕ್ಕವೇ ಇಲ್ಲ. ಕಳೆದ ಆರೂವರೆ ದಶಕಗಳಿಂದ ಶ್ರೀಮಠದ ಅಧಿಕಾರಿಗಳಾಗಿ, ವಿಶ್ವವಂದ್ಯರಾಗಿ, ನಡೆದಾಡುವ ದೇವರೇ ಅನ್ನಿಸಿಕೊಂಡಿರುವ ಪೂಜ್ಯ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಶ್ರೀ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿದ್ದು ಸಹಿತ ಶ್ರೀ ಉದ್ಧಾನಪ್ಪನವರ ಪವಾಡಗಳಲ್ಲಿ ಒಂದು ಎಂದರೆ ಅತಿಶಯೋಕ್ತಿಯೇನಲ್ಲ.

ಶ್ರೀ ಶಿವಕುಮಾರ ಸ್ವಾಮಿಗಳು : ೧೯೩೦ ನೆಯ ಇಸವಿ ಮಾರ್ಚ್ / ಏಪ್ರಿಲ್‌ನಲ್ಲಿ ಅಂತಿಮ ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಮೇಲೆ ಆಗ ನೌಕರಿ ಸಿಕ್ಕಲು ಕಷ್ಟವಾಗುತ್ತಿರಲಿಲ್ಲ. ಆದರೆ ಅದೇ ವರ್ಷದ ಪ್ರಾರಂಭದಲ್ಲಿ ಅಂದರೆ ೧೬.೧.೧೯೩೦ ರಂದು ಮೊದಲ ಉತ್ತರಾಧಿಕಾರಿಗಳಾಗಿದ್ದ ಮರುಳಾರಾಧ್ಯ ಸ್ವಾಮಿಗಳು ಲಿಂಗೈಕ್ಯರಾಗಲು ಉದ್ಧಾನ ಶಿವಯೋಗಿಗಳು ತಮ್ಮ ಸತ್ಸಂಕಲ್ಪವನ್ನು ಲಕ್ಷಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶಿವಣ್ಣನವರನ್ನು ಶ್ರೀಮಠದ ಸ್ವಾಮಿಗಳಾಗಲು ಕೋರಿ "ಶಿವಣ್ಣ, ನಮಸ್ಕಾರ ಹಾಕು" ಎಂದು ಅಪ್ಪಣೆ ಮಾಡಿದರು. ಗುರುಗಳ ಅಪ್ಪಣೆ ಎಷ್ಟು ಅನಿರೀಕ್ಷಿತವಾಗಿದ್ದಿತ್ತೋ, ಶಿಷ್ಯರು ಪ್ರತಿ ಮಾತನಾಡದೆ ಒಪ್ಪಿ ನಡೆದುಕೊಂಡುದೂ ಅಷ್ಟೇ ಅನಿರೀಕ್ಷಿತವಾಗಿದ್ದಿತು.

ಗುರುಗಳ ಮೆಚ್ಚುಗೆ : ಬುದ್ಧಿಯವರು ತುಮಕೂರು ಸರಕಾರಿ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಅವರಿಗೂ, ಅವರ ಜೊತೆಯಲ್ಲಿ ಓದುತ್ತಿದ್ದ ಪೂರ್ವಾಶ್ರಮದ ಚಿಕ್ಕ ಅಣ್ಣ ಲಿಂಗಪ್ಪನವರಿಗೂ ಶ್ರೀಮಠದಲ್ಲಿ ಇಂಗ್ಲೀಷ್ ಓದುವವರಿಗೆ ಸೀಟು ಕೊಡುವುದಿಲ್ಲವೆಂದು ನಿರಾಕರಿಸಿದ್ದರು ಗುರು ಶ್ರೀ ಉದ್ಧಾನೇಶ್ವರರು. ಆದರೆ ಲಿಂಗಪ್ಪ ಹೈಸ್ಕೂಲ್‌ನಲ್ಲಿದ್ದಾಗಲೇ ವಿದ್ಯಾಭ್ಯಾಸ ನಿಲ್ಲಿಸಿ ಊರಿಗೆ ಹೋದ ಮೇಲೆ, ಶಿವಣ್ಣನವರು "ಎಂಟ್ರೆನ್ಸ್" ಪರೀಕ್ಷೆಗೆ ಕುಳಿತಿದ್ದಾಗ ಅರ್ಧ ವರ್ಷವಾದ ಮೇಲೆ ಸೀಟು ಕೊಟ್ಟರು. ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತ ಮಠಕ್ಕೆ ಬಂದಾಗಲೆಲ್ಲ ಅಕ್ಕರೆಯಿಂದ ಕಾಣುತ್ತಿದ್ದರು. ಒಮ್ಮೆಯಂತೂ "ಶಿವಣ್ಣ ಶಿವಣ್ಣ, ನಿಮ್ಮ ಸ್ವಾಮಿಗಳು ಲೌಕಿಕದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ನೀನಾದರೋ ಅವರಿಗೆ ಸ್ವಲ್ಪ ಹೇಳಿ ಆಧ್ಯಾತ್ಮಿಕದತ್ತ ತಿರುಗಿಸುವ ಪ್ರಯತ್ನ ಮಾಡು" ಅಂತ ಆಶೀರ್ವದಿಸಿದ್ದು ಉಂಟು. ಅಂದರೆ ಪೂರ್ವಾಶ್ರಮದಲ್ಲಿದ್ದಾಗಲೇ ಶಿವಣ್ಣನವರ ಸಾತ್ವಿಕಗುಣವನ್ನು, ಪೂಜಾಪ್ರೇಮವನ್ನು, ಅಖಂಡ ಬ್ರಹ್ಮಚರ್ಯದಿಂದ ಕೂಡಿದ ಶಿಸ್ತುಬದ್ಧ ಜೀವನವನ್ನೂ ಗುರುತಿಸಿ, ಅಂತರಂಗದಲ್ಲಿ ಅವರನ್ನು ಮನಸಾರೆ ಮೆಚ್ಚಿಕೊಂಡಿದ್ದರು ಎನ್ನುವುದಕ್ಕೆ ಈ ಘಟನೆಯೊಂದು ಸಣ್ಣ ನಿದರ್ಶನವಷ್ಟೆ.

ವಿದ್ವಾನ್ ಗಂಗಪ್ಪನವರು ಆಗ ಅಲ್ಲಿಯೇ ಸಂಸ್ಕೃತ ಓದುತ್ತಿದ್ದು, ಒಂದು ದಿನ ಶಿವಣ್ಣನವರು ಅವರ ಕೈಲಿ ಅಂಗಡಿಯಿಂದ ಯಾವುದೋ ಪದಾರ್ಥ ತರಿಸಿದಾಗ ಅವರೊಂದಿಗೆ "ನಮಗೂ ಇಂಥದೊಂದು ಸಂಸ್ಥೆ ಸಿಕ್ಕರೆ ಸೇವೆ ಸಲ್ಲಿಸಬಹುದಲ್ಲವೇ?" ಅಂತ ಕೇಳಿದ್ದನ್ನು ಒಮ್ಮೆ ನನಗೆ ತಿಳಿಸಿದರು. ಇನ್ನು, ಶ್ರೀ ಮರುಳಾರಾಧ್ಯ ಸ್ವಾಮಿಗಳ ಕಪಿನಿ ತೊಟ್ಟು ಬೆತ್ತ ಹಿಡಿದು ವಿದ್ಯಾರ್ಥಿಗಳನ್ನು ಗದರಿಸುವ ಪಾತ್ರ ವಹಿಸಿದ್ದು ಈಗಾಗಲೇ ಹಿಂದಣ ಬೃಹತ್ ಕೃತಿಯಲ್ಲಿ ವಿದಿತವಾಗಿಯೇ ಇದೆ.

ಚಿಕ್ಕಂದಿನಲ್ಲೇ ಆಧ್ಯಾತ್ಮಿಕ ಒಲವು : ಹೀಗೆ, ಸ್ವಾಮಿಗಳಾಗಲು ಒಪ್ಪಿಗೆ ಕೊಡುವುದಕ್ಕಿಂತ ಪೂರ್ವದಲ್ಲಿಯೇ ನಮ್ಮ ಗುರುಗಳು ತಮಗರಿವಿಲ್ಲದಂತೆಯೇ ಅಂತರಂಗದಲ್ಲಿ ಆಧ್ಯಾತ್ಮಿಕ ವಿದ್ಯೆಯತ್ತ ವಾಲಿದ್ದರು. ಅದನ್ನೇ "ಸಾ ವಿದ್ಯಾಯಾ ವಿಮುಕ್ತಯೇ" (ಯಾವುದು ಬಿಡುಗಡೆ ಮಾಡಬಲ್ಲದೋ, ಅದು (ಚಿತ್) ವಿದ್ಯೆ) ಎಂಬ ಉಕ್ತಿಯೂ, ಸ್ವಾಮಿ ವಿವೇಕಾನಂದರ "Education is the manifestation of perfection as already in man" (ಮಾನವನಲ್ಲಿ ಆಗಲೇ ಇರುವ ಪಕ್ವತೆಯ ಅಭಿವ್ಯಕ್ತಿಯೇ ವಿದ್ಯೆ) ಎನ್ನುವ ವಾಣಿಯೂ ಸಾರಿ ಹೇಳುತ್ತಿವೆ.

ಕೊಟ್ಟ ಮಾತಿಗೆ ತಪ್ಪುವುದಿಲ್ಲ : ಒಂದು ಸಲ ಸಿದ್ಧಗಂಗಾ ಜಾತ್ರೆಯ ಪಂಚಬ್ರಹ್ಮೋತ್ಸವ ತೀರಿಸಿಕೊಂಡು ಬೇಲಿಮಠದ ಹಿಂದಿನ ಶ್ರೀಗಳು ಶ್ರೀ ಸಿದ್ಧಲಿಂಗ ಸ್ವಾಮಿಗಳೊಂದಿಗೆ ಅವರ ಕಾರಿನಲ್ಲಿ ಬೆಂಗಳೂರಿಗೆ ಬರುತ್ತಿದ್ದೆ. ಆಗ ಸ್ವಾಮಿಗಳು ಹೇಳಿದರು "ಪಂಡಿತರೇ, ಉದ್ಧಾನ ಸ್ವಾಮಿಗಳವರು ಶಿವಣ್ಣನವರಿಂದ ಒಪ್ಪಿಗೆಯ ನಮಸ್ಕಾರ ಹಾಕಿಸಿಕೊಂಡ ಕೆಲವು ದಿನಗಳ ಮೇಲೆ ಒಂದು ಸಂಜೆ ಹೈಸ್ಕೂಲಿನ ಲಿಂ. ಚನ್ನಪ್ಪ ಮಾಸ್ತರ ಜೊತೆಯಲ್ಲಿ ಶಿವಣ್ಣನವರು ನಮ್ಮ ಮಠಕ್ಕೆ ಬಂದಿದ್ದರು. ಉಭಯ ಕುಶಲೋಪರಿ ಮಾತುಗಳಾದ ಮೇಲೆ ನಾನು "ಏನಪ್ಪಾ ಶಿವಣ್ಣನವರೇ, ನೀವೇನೋ ಸ್ವಾಮಿಗಳಾಗಲು ಒಪ್ಪಿಗೆ ಕೊಟ್ಟಿರುತ್ತೀರಿ. ಆದರೆ ಬೆಂಗಳೂರಿನ ಪ್ರಭಾವೀ ವ್ಯಕ್ತಿಯೊಬ್ಬರು ನಿಮ್ಮನ್ನು ಅಳಿಯಂದಿರನ್ನಾಗಿ ಮಾಡಿಕೊಳ್ಳಲು ಸನ್ನಾಹ ಮಾಡುತ್ತಾ, ನಿಮ್ಮ ಒಪ್ಪಿಗೆಯನ್ನು ತಪ್ಪಿಸುವ ಪ್ರಯತ್ನದಲ್ಲಿದ್ದಾರೆಂದು ಕೇಳಿದೆ. ಹೇಗೆ ಸಮಾಚಾರ?" ಅಂತ ಪ್ರಶ್ನಿಸಿದೆ. ಅದಕ್ಕೆ ಶಿವಣ್ಣನವರು "ಬುದ್ಧೀ, ಉದ್ಧಾನ ಶಿವಯೋಗಿಗಳವರಿಗೆ ಮನಃಪೂರ್ವಕವಾಗಿ ಒಪ್ಪಿಗೆಯಿತ್ತಿದ್ದೇನೆ. ಮೂಡಲಲ್ಲಿ ಹುಟ್ಟುವ ಸೂರ್ಯ ಪಡುವಲಲ್ಲಿ ಹುಟ್ಟಿದರೂ ನಾನು ಕೊಟ್ಟ ಮಾತಿಗೆ ತಪ್ಪಲಾರೆ" ಎಂದು ಹೇಳಿದರು. ಅದರಂತೆ ನಡೆದುಕೊಂಡರು, ಮಾತ್ರವಲ್ಲ. ಇಡೀ ವಿರಕ್ತಮೂರ್ತಿಗಳಿಗೇ ಮಾರ್ಗದರ್ಶಕರಾಗಿರುವುದು ನನಗಂತೂ ತುಂಬ ಸಂತೋಷವನ್ನುಂಟು ಮಾಡಿದೆ ಎಂದರು. ಇದಕ್ಕಿಂತ ಪ್ರಶಸ್ತಿ ಪತ್ರ ಬೇರೆ ಬೇಕೆ?

ಆರೂವರೆ ದಶಕಗಳ ಕಾರ್ಯವೈಖರಿ : ಇಪ್ಪರ ಮೇಲೆ ಕಳೆದ ಅರವತ್ತೈದು ವರ್ಷಗಳ ಕಾಲದಲ್ಲಿ ನಡೆದಿರುವ "ಬುದ್ಧಿ"ಯವರ

ಕಾರ್ಯವೈಖರಿ ತೆರೆದ ಪುಸ್ತಕದಂತೆ ಎಲ್ಲ ಜನರಿಗೂ ಮನವರಿಕೆಯಾಗಿರುವಂಥದು. ಅದನ್ನು ಮತ್ತೆ ಮತ್ತೆ ಪ್ರಸ್ತಾಪಿಸುವುದು ಪುನರುಕ್ತಿಯಾದೀತು. ಆದರೆ ೧೯೫೩ನೆಯ ಇಸವಿ ಜೂನ್ ತಿಂಗಳಲ್ಲಿ ನನ್ನ ಮೇಲೆ ಪರಮಪೂಜ್ಯ ಶ್ರೀಗುರುದೇವರ ಅನುಗ್ರಹವಾದೊಡನೆ, ಪಂಡಿತ ತರಗತಿಯಲ್ಲಿ ವಿದ್ಯಾ ಇಲಾಖೆ ವತಿಯಿಂದ ಆಯ್ಕೆಯಾದುದು ನನ್ನ ಜೀವನದಲ್ಲಿ ಆದ ಒಂದು ಪವಾಡವೆಂದೇ ಹೇಳಬೇಕು. ಬುದ್ಧಿಯವರೇ ಡಿ.ಪಿ.ಐ. ಆಫೀಸಿನಲ್ಲಿ ನೋಡಿಸಿದಾಗ ನನ್ನ ಹೆಸರೇ ಇರಲಿಲ್ಲವೆಂದು ಅಪ್ಪಣೆ ಮಾಡಿದ್ದರೆ, ಆದರೆ ಅತ್ತ ಮೂರೇ ದಿನಗಳಲ್ಲಿ ಆಯ್ಕೆಯಾದ ಆರ್ಡರ್ ಕೈ ಸೇರಲು, ಅದನ್ನು ಶ್ರೀ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡೆ. ಆಗ ಬುದ್ಧಿಯವರ ದಿವ್ಯ ಮುಖಾರವಿಂದವರಳಿ ಅಲ್ಲಿಯೇ ಆಶೀರ್ವದಿಸುವ ಕೃಪೆ ಮಾಡಿದರು. ಕೇವಲ ೧೬ ಮನೆಗಳಿದ್ದ ಕುಗ್ರಾಮವಾದ ನನ್ನ ಹುಟ್ಟೂರಿಗೆ ಎರಡು ಬಾರಿ ದಯಮಾಡಿಸಿ, ಗ್ರಾಮೀಣ ಬಂಧುಗಳಿಗೆ ನಿಲುಕುವಂತಹ ಅದ್ಭುತ ಉಪನ್ಯಾಸ ನೀಡಿದ್ದನ್ನು ನಾನೆಂದೂ ಮರೆಯಲಾರೆ. ೧೯೫೪, ೧೯೫೫, ೧೯೫೬ ನೆಯ ಇಸವಿಗಳಲ್ಲಿ ತುಮಕೂರು ಮಾಗಡಿ ತಾಲ್ಲೂಕುಗಳ ನಾಲ್ಕೈದು ಗ್ರಾಮಗಳಲ್ಲಿ ಗ್ರಾಮಾಂತರ ಸಮ್ಮೇಳನಗಳನ್ನು ನಡೆಸಲು ಆಶೀರ್ವದಿಸಿ, ಅವುಗಳ ದಿವ್ಯಸಾನ್ನಿಧ್ಯ ವಹಿಸಿದ್ದನ್ನು ತುಂಬು ಕೃತಜ್ಞತೆಯಿಂದ ಸ್ಮರಿಸುವೆನು. ಇತ್ತೀಚೆಗಂತೂ ಗ್ರಾಮಾಂತರ ಪ್ರದೇಶಗಳಲ್ಲಿ ನೂರಾರು ಬಸವ ಜಯಂತಿಗಳನ್ನು ನಡೆಸಿ, ಜಗಜ್ಯೋತಿ ಬಸವೇಶ್ವರರ ನಾಟಕವನ್ನು ಅಷ್ಟೇ ಸಂಖ್ಯೆಯಲ್ಲಿ ಪ್ರದರ್ಶಿಸಲು ವ್ಯವಸ್ಥೆ ಮಾಡಿಸಿದ್ದು ಜಗಜ್ಜಾಹೀರೇ ಆಗಿರುತ್ತದೆ.

ಮಹಾಜನರ ಅನುಭವಪೂರಿತ ಅಭಿಪ್ರಾಯ : ಪಂಡಿತ ಪರೀಕ್ಷೆಗೆ ಆಯ್ಕೆಯಾದ ಆರ್ಡರ್ ಬಂದಾಗ ಹರಳೂರಿನ ಹಿರಿಯ ಸೋದರಿ ಎಚ್.ಎಸ್. ಗಿರಿಜಾಂಬಾ ಅವರು "ಶಿವಲಿಂಗಯ್ಯ, ನಿನಗೆ ಗುರುಕೃಪೆ, ಐಹಿಕ ಲಾಭ (Material benefit) ಎರಡೂ ಒಟ್ಟಿಗೆ ಒದಗಿ ಬಂದುವಲ್ಲ!" ಎಂದರು. ಅದಕ್ಕೆ ನಾನು "ಅದಕ್ಕಿಂತ ಮುಖ್ಯ ಬುದ್ಧಿಯವರ ಮಾರ್ಗದರ್ಶನದಿಂದ ಆಧ್ಯಾತ್ಮಿಕ ಲಾಭ ಹಾಗೂ ಭಾಷಣ ಕಲೆ ಸುಧಾರಣೆ" ಎಂದು ಉತ್ತರಕೊಟ್ಟ ನೆನಪು ಇನ್ನೂ ಹಚ್ಚ ಹಸುರಾಗಿದೆ. ಅವರ ತಂದೆ ಲಿಂ. ಎಸ್. ಶಿವರುದ್ರಯ್ಯ ಮೇಷ್ಟ್ರು ಬುದ್ಧಿಯವರ ಪೂರ್ವಾಶ್ರಮದಲ್ಲಿ ಅವರಿಗೆ ತುಂಬ ಬೇಕಾದವರಾಗಿದ್ದು "ನಾನೂ ಅವರೂ ಆಶ್ರಮ ಸ್ವೀಕಾರದ ಶುಭಾವಸರದಲ್ಲಿ ಒಟ್ಟಿಗೆ ನಡೆದು ಹೋಗುವಾಗ ಅವರು ಶಿವಣ್ಣನವರಾಗಿದ್ದು, ಒಳ ಹೋಗಿ ಅಧಿಕಾರ ಸ್ವೀಕರಿಸಿದ ಮರುಕ್ಷಣದಲ್ಲಿಯೇ ಪೂರ್ಣ ಪರಿವರ್ತನೆ ಹೊಂದಿ ಮಹಾತೇಜಃಪುಂಜರಾಗಿ ಹೊರಗೆ ದಯಮಾಡಿಸಿದ್ದು ನನಗಿನ್ನೂ ಜ್ಞಾಪಕದಲ್ಲಿದೆ" ಎಂದು ಹೇಳಿದ್ದು ಜ್ಞಾಪಕಕ್ಕೆ ಬರುತ್ತದೆ. ಶಿವಣ್ಣನವರೊಂದಿಗೆ ನಾಗವಲ್ಲಿ ಎಂ.ವಿ. ಶಾಲೆ (Anglo - Vernacular School) ಯಲ್ಲಿ ವಿದ್ಯಾಭ್ಯಾಸ ಮಾಡಿದ ಬಳ್ಳಗೆರೆ ಶ್ರೀ ಬೋರೇಗೌಡರು 'ಪಂಡಿತರೆ, ನಿಮಗೊಂದು ಆಶ್ಚರ್ಯದ ಸಂಗತಿ ತಿಳಿಸಲು ಹರ್ಷವಾಗುತ್ತದೆ. ಉದ್ದಾನ ಸ್ವಾಮಿಗಳಿಗೆ ಒಪ್ಪಿಗೆ ಕೊಟ್ಟ ಒಂದೆರಡು ದಿನಗಳಲ್ಲಿ ಶಿವಣ್ಣನವರು ನಾಗವಲ್ಲಿಗೆ ಹೋಗಲು ತುಮಕೂರು ಕಡೆಯಿಂದ ಬರುತ್ತಿದ್ದರು. ನಾನು ನಾಗವಲ್ಲಿ ಕಡೆಯಿಂದ ತುಮಕೂರಿಗೆ ಹೋಗಲು ಬರುತ್ತಿದ್ದೆ. ಇಬ್ಬರೂ ಮರಳೂರು ಕೆರೆ ಏರಿಯ ಮೇಲೆ ಸಂಧಿಸಿದೆವು. ಆಗ ಪರಸ್ಪರ ಸಂಭಾಷಿಸುತ್ತಿದ್ದಾಗ ಅವರು ಕುಳ್ಳ, ನಾನು ಎತ್ತರ ! ಅದೇ ಎರಡು ಮೂರು ತಿಂಗಳು ಕಳೆದು ಅವರಿಗೆ ಅಧಿಕಾರ ಪ್ರಾಪ್ತಿಯಾದ ಒಂದೆರಡು ತಿಂಗಳಾದಾಗ ಶ್ರೀಮಠದಲ್ಲಿ ನಾವಿಬ್ಬರೂ ನಿಂತಾಗ ಅವರು ಎತ್ತರ, ನಾನು ಕುಳ್ಳ ! ಇದು ನನ್ನ ಜೀವಮಾನದಲ್ಲಿ ಕಂಡ ಅತ್ಯಾಶ್ಚರ್ಯ ಘಟನೆ ಎಂದು ಹೇಳಿದ್ದರಲ್ಲಿ ಮಹಾಸ್ವಾಮಿಗಳು ಅಂತರಂಗ ವಿಕಾಸದಲ್ಲಿ ಮಾತ್ರವಲ್ಲದೆ ಭೌತಿಕವಾಗಿಯೂ ಬೇಗ ಬೇಗ ಬೆಳೆದರು ಎನ್ನುವುದೇ ಮಥಿತಾರ್ಥ.

ಸಿದ್ಧಗಂಗೋದ್ಭವ ಲೀಲೆ

ಸುಲಲಿತ ಪುಂಗವಾಚಲಕೆ ವಾಯುವ್ಯದೊ ।
ಳೊಲುಮೆಯೊಲ್ ಯೋಜನಾಂತರದಿ ।
ಚೆಲುವೆತ್ತ ಕೇತ್ರಮುದ್ರದ ಗ್ರಾಮದೆಡೆಯೊಂದು ।
ಬೆಳೆದು ಕಲ್ಲರೆ ಬಂಡೆಯಿಹುದು ॥

ಆಗ ಕಲ್ಲರೆಬಂಡೆಗೀಶನು ನಡೆತರ ।
ಲಾಗ ಶರಣರೆಲ್ಲ ನೋಡಿ ।
ಈಗಲಗ್ಗಣಿ ಬಂದುದೀಶನೆ ಮಜ್ಜನ ।
ವಾಗ ಗೈಬಹುದೆಂದರವರು ॥


ಭಜಕರ ನುಡಿ ಕೇಳಿ ಹರ ತನ್ನ ಪಾದಪಂ ।
ಕಜವ ಕಲ್ಲೊಳಗೂರಲಾಗಿ ।
ತ್ರಿಜಗತ್ಪಾವನ ತೀರ್ಥವುದ್ಭವಿಸಿತು ।
ನಿಜ ಸಿದ್ಧಗಂಗೆಯೆಂದೆನಿಸಿ ॥

ಗುರುಸಿದ್ಧಲಿಂಗನು ಕಲ್ಲುಬಂಡೆಯ ಮೇಲೆ ।
ಚರಣಾಂಕಿತ ಗೆಯ್ಯಲಲ್ಲಿ ।
ದುರಿತನಾಶನ ಸಿದ್ಧಗಂಗೆಯೆನ್ನುವ ತೀರ್ಥ ।
ಸುರತದಿಂದುದಿಸಿತಾ ಕ್ಷಣದಿ ॥

ವರ ಪುಣ್ಯಕರ ಸಿದ್ಧಗಂಗಾತೀರ್ಥವ ಕಂಡು ।
ಪಿರಿಯರು ಸಹ ಲಿಂಗಾರ್ಚನೆಯ ।
ನೆರೆಗೆಯ್ಯುತಿರಲಭ್ರದೊಳು ದುಂದುಭಿಯ ನಾದ ।
ಕರಗೈದರಮರರುತ್ಸವದಿ ॥

- ಹೇರಂಬ ಕವಿ

(ಸಿದ್ಧಲಿಂಗೇಶ್ವರ ಸಾಂಗತ್ಯ. ಅ.೧೮ : ೮೩ ರಿಂದ ೮೭)



ಶ್ರೀಸಾಹಿತ್ಯ

- ಶ್ರೀಶ್ರೀಗಳವರಿಗೆ ಅರ್ಪಿಸಿದ ಕೆಲವು ಬಿನ್ನವತ್ತಳೆಗಳು
- ಶ್ರೀವಾಣಿಗಳು
- ಶ್ರೀಗಳವರ ದೃಷ್ಟಾಂತ ಕಥೆಗಳು
- ಶ್ರೀಗಳವರ ನುಡಿಕೋಶ
- ಶ್ರೀಗಳವರ ಕೆಲವು ಲೇಖನಗಳು
    - ವಿಶ್ವಶಾಂತಿ
    - ಶಿವಶರಣರ ಕಾಯಕನಿಷ್ಠೆ
    - ಬ್ರಹ್ಮಚರ್ಯೆಯ ಮಹತ್ವ
- ಶ್ರೀಗಳವರ ಜೀವನದ ಪ್ರಮುಖ ಘಟನೆಗಳು
- ಶ್ರೀ ಕ್ಷೇತ್ರದ ಉತ್ತರಾಧಿಕಾರಿಗಳಾದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀಗಳವರಿಗೆ ಅರ್ಪಿಸಿದ ಕೆಲವು ಪ್ರಾತಿನಿಧಿಕ ಅಭಿನಂದನಾ ಪತ್ರ, ಬಿನ್ನಹದೋಲೆಗಳು

[ಕನ್ನಡ ನಾಡಿನಾದ್ಯಂತ ಮತ್ತು ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿರುವ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯಿತಿ, ನಗರ ಸಭೆಗಳು, ಭಕ್ತ ಮಂಡಳಿಯವರು ಪೂಜ್ಯ ಶ್ರೀಶ್ರೀಗಳವರನ್ನು ಆಹ್ವಾನಿಸಿ ಸನ್ಮಾನಿಸಿವೆ. ಬಿನ್ನವತ್ತಳೆ ನೀಡಿವೆ. ನೆನಪಿನ ಕಾಣಿಕೆಯನ್ನು ಅರ್ಪಿಸಿ ಪುರಸ್ಕರಿಸಿ ಕೃತಾರ್ಥವಾಗಿವೆ. ಪೂಜ್ಯರ ದಿವ್ಯವ್ಯಕ್ತಿತ್ವವನ್ನು, ಅವರು ಎಸಗಿರುವ ಸೇವಾಕಾರ್ಯಗಳನ್ನು ಸಾರ್ವಜನಿಕರು, ಸಂಘಟನೆಗಳು ಹೇಳಿ ಗುರುತಿಸಿವೆ, ಅರ್ಥಮಾಡಿಕೊಂಡಿವೆ, ಅದಕ್ಕೆ ಸ್ಪಂದಿಸಿವೆ ಎಂಬುದನ್ನು ತಿಳಿಯಲು ೧೯೮೦ರಿಂದೀಚೆಗಿನ ಕೆಲವು ಸನ್ಮಾನ ಪತ್ರಗಳ ಸಾರವನ್ನು ಇಲ್ಲಿ ಕೊಡಲಾಗಿದೆ.]

* * *

೧. ಮಂಡ್ಯ ತಾಲ್ಲೂಕು ದುದ್ದ ಹೋಬಳಿ, ಮುದಗಂದೂರು ಗ್ರಾಮ ಸದ್ಭಕ್ತರು ೨.೧೨.೧೯೮೫ ರಲ್ಲಿ ಶ್ರೀ ಪಂಚಲಿಂಗೇಶ್ವರ ಟ್ರಸ್ಟ್, (ರಿ), ಶ್ರೀ ಪಂಚಲಿಂಗೇಶ್ವರ ಸ್ವಾಮಿಗೆ ನಾಗಾಭರಣ ಧಾರಣ ಮಹೋತ್ಸವ ಮತ್ತು ಕಲ್ಯಾಣ ಮಂದಿರ ಹಾಗೂ ನವಗ್ರಹ ದೇವಸ್ಥಾನದ ಶಂಕುಸ್ಥಾಪನೆ ಸಂದರ್ಭದಲ್ಲಿ ಸಿದ್ಧಗಂಗಾ ಮಠಾಧ್ಯಕ್ಷರ ದಿವ್ಯ ಸನ್ನಿಧಾನಗಳಲ್ಲಿ ಸಮರ್ಪಿಸಿದ ಬಿನ್ನವತ್ತಳೆ.

ಪರಮಪೂಜ್ಯರೆ,

ಆಧ್ಯಾತ್ಮಿಕ ಜೀವನದಲ್ಲಿ ತಾವು ಸಲ್ಲಿಸಿರುವ ಸೇವೆ ಅಪಾರವಾದುದು. ಮನುಷ್ಯನಿಗೆ ಅತ್ಯವಶ್ಯಕವಾಗಿ ಮಾಡಬೇಕಾದುದು ಜ್ಞಾನ. ಅಂತಹ ಜ್ಞಾನವನ್ನು ದೇಶಾದ್ಯಂತ ಪ್ರವಾಸ ಮಾಡಿ ಸದ್ಭಕ್ತರಿಗೆ ನೀಡುತ್ತಾ, ಅವರ ಜನ್ಮ ಪಾವನ ಮಾಡುತ್ತಾ ಬಂದಿದ್ದೀರಿ. ಹಾಗೂ ಶ್ರೀ ಸಿದ್ಧಗಂಗಾ ಕ್ಷೇತ್ರವನ್ನು ಅತ್ಯುನ್ನತ ಮಟ್ಟದಲ್ಲಿ ಬೆಳಗಿದ್ದೀರಿ.

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿನ ನಾನಾ ಯೋಜನೆಗಳಲ್ಲಿ ವೇದ, ಸಂಸ್ಕೃತ ಪಾಠಶಾಲೆ, ವಿದ್ಯಾಸಂಸ್ಥೆ, ಕಾಲೇಜು, ಆಸ್ಪತ್ರೆ ನಿರ್ಮಾಣ ಮಾಡಿದ್ದೀರಿ. ಎಲ್ಲಕ್ಕಿಂತಲೂ ಬೃಹತ್ ಕಾರ್ಯವೆಂದರೆ, ವಿದ್ಯಾರ್ಥಿಗಳಿಗೂ, ಬಂದ ಭಕ್ತಾದಿಗಳಿಗೂ ದಾಸೋಹ ನೀಡುತ್ತಿದ್ದು ತ್ರಿವಿಧ ದಾಸೋಹಿಗಳೆಂದು ಇಡೀ ಭಾರತ ದೇಶದಲ್ಲಿಯೇ ಹೆಸರು ಗಳಿಸಿದ್ದೀರಿ. ಇದು ಅದ್ಭುತವಾದ ಕಾರ್ಯ, ಶ್ಲಾಘನೀಯ ವಿಚಾರವಾಗಿದೆ. ತಮ್ಮ ತಪಸ್ಸನ್ನು ದೇಶದ ಕಲ್ಯಾಣಕ್ಕೂ ಹಾಗೂ ಮಾನವ ಕಲ್ಯಾಣಕ್ಕಾಗಿ ಧಾರೆ ಎರೆದು ಅದಕ್ಕೆ ನಿಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದೀರಿ. ಇದಕ್ಕೆ ನಾವು ಚಿರಋಣಿಯಾಗಿದ್ದೇವೆ.

ಶ್ರೀ ಕ್ಷೇತ್ರದಲ್ಲಿ ತಾವು ನೆಲಸಿ, ಧರ್ಮ ಪ್ರಸಾರ ಮಾಡುತ್ತಾ, ಪರಮ ತಪೋನಿಷ್ಠರೂ, ಶಿವಪೂಜಾಧುರಂಧರರೆನಿಸಿದ್ದೀರಿ. ಇಹದಲ್ಲಿ ಸೌಖ್ಯ, ಪರದಲ್ಲಿ ಮೋಕ್ಷ, ಚಿತ್ತಶುದ್ಧಿ ದಿವ್ಯಜ್ಞಾನ ದೀರ್ಘಾಯುಷ್ಯನ್ನು ಕರುಣಿಸಿ ನಮ್ಮೆಲ್ಲರನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇವೆ.

ನಮ್ಮ ಗ್ರಾಮಕ್ಕೆ ನೀವು ದಯಮಾಡಿಸಿ ಶ್ರೀ ಪಂಚಲಿಂಗೇಶ್ವರ ಸ್ವಾಮಿ ಕಲ್ಯಾಣ ಮಂದಿರ ಮತ್ತು ನವಗ್ರಹ ದೇವಸ್ಥಾನದ ಶಂಕುಸ್ಥಾಪನೆಯನ್ನು ನೆರವೇರಿಸಿಕೊಟ್ಟು, ನಮ್ಮ ಸಕಲ ಪುರೋಭಿವೃದ್ಧಿಗೂ, ಶ್ರೇಯಸ್ಸಿಗೂ ಕಾರಣರಾದ ಹಾಗೂ ನಮ್ಮ ಮುದಗಂದೂರು ಗ್ರಾಮದ ಮೇಲೆ ಇಟ್ಟಿರತಕ್ಕ ಪ್ರೀತಿಗೆ ನಾವು ಹೇಗೆ ತಮಗೆ ಕೃತಜ್ಞತೆಗಳನ್ನು ಅರ್ಪಿಸಬೇಕೋ ತಿಳಿಯದಾಗಿದೆ. ಸರ್ವ ಭಕ್ತ ಮಂಡಳಿಯವರು ಹಾಗೂ ಗ್ರಾಮಸ್ಥರು ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಮರ್ಪಿಸುತ್ತೇವೆ.

* * *

ಗುಬ್ಬಿ ತಾಲ್ಲೂಕು ಕಲ್ಲೂರಿನಲ್ಲಿರುವ ಮೈಸೂರು ಬ್ಯಾಂಕಿನ ೧೫ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅರ್ಪಿಸಿದ ಬಿನ್ನವತ್ತಳೆ.

ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳೂ, ಶಿವಭಕ್ತಿ ಪಾರಾಯಣರೂ, ಕಾಯಕದಲ್ಲಿ ಕೈಲಾಸವನ್ನು ಕಂಡ ಮಹಾಶರಣರೂ ಷಟ್‌ಸ್ಥಲಸಿದ್ಧಾಂತ ಪ್ರತಿಪಾದಕರೂ ಆಗಿರುವ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಘನಸನ್ನಿಧಿಯಲ್ಲಿ,

ದಾಸೋಹ ೩೦

ಭಾರತ ರತ್ನ ಡಾ. ಮೋಕ್ಷಗುಂಡಂ ಶ್ರೀ ವಿಶ್ವೇಶ್ವರಯ್ಯನವರಿಂದ ಪ್ರಾರಂಭಿಸಲ್ಪಟ್ಟು ಕರ್ನಾಟಕದಲ್ಲಿ ಮನೆಮಾತಾಗಿರುವ ಮೈಸೂರು ಬ್ಯಾಂಕಿನ ಶಾಖೆಗಳಲ್ಲೊಂದಾದ ಈ ಕಲ್ಲೂರು ಶಾಖೆಯ ೧೫ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತೇ ಜ್ಯೋತಿರ್ಲಿಂಗವೆನ್ನುತ್ತಾ, ತಮ್ಮ ಪಾದಕಮಲಗಳಲ್ಲಿ ಎರಗಿ, ನಮ್ಮ ಹೃತ್ಪೂರ್ವಕ ಬಿನ್ನವತ್ತಳೆಯನ್ನು ಅರ್ಪಿಸುತ್ತೇವೆ. ದಯವಿಟ್ಟು ಸ್ವೀಕರಿಸಿ.

ಅರಿವೇ ಗುರು ಎಂಬ ನುಡಿ ಸತ್ಯವಾಗಿ ಜನರ ಅನುಭವಕ್ಕೆ ಬರುವಂತೆ ಶ್ರೀ ಸಿದ್ಧಗಂಗಾ ಕ್ಷೇತ್ರವು ತಮ್ಮ ನೇತೃತ್ವದಲ್ಲಿ ಸಾಧಿಸಿರುವ ಪ್ರಗತಿ ಅಪಾರ. ಪ್ರಾಥಮಿಕ ವಿದ್ಯಾಭ್ಯಾಸದಿಂದ ಸ್ನಾತಕೋತ್ತರದವರೆಗೆ ಎಲ್ಲಾ ಹಂತದ ವಿದ್ಯಾಸಂಸ್ಥೆಗಳ ಅಪೂರ್ವ ಸಂಗಮ ಇದೇ ಆಗಿದೆ ಅಲ್ಲದೆ ಸಂಸ್ಕೃತ ಕಾಲೇಜು, ಇಂಜಿನಿಯರಿಂಗ್, ವಿಜ್ಞಾನ ಮತ್ತು ಉಪಾಧ್ಯಾಯ ಶಿಕ್ಷಣ ಕಾಲೇಜುಗಳು, ಶಾರೀರಿಕ ಶಿಕ್ಷಣ ಸಂಸ್ಥೆಗಳು ಇವುಗಳನ್ನು ನಡೆಸುತ್ತಿರುವ ಪರಮಪೂಜ್ಯ ಗುರುಗಳೇ,

ಮಾನವ ಕುಲವೆಲ್ಲ ಒಂದು ಎಂಬ ತಮ್ಮ ಆದರ್ಶ ಎಲ್ಲಾ ನೆಲದ, ಎಲ್ಲಾ ಕುಲದ ಜನ ಬಂದು ಸಿದ್ಧಗಂಗೆಯಲ್ಲಿ ವಿದ್ಯಾ ಸಾಗರವೇ ಆಗಿದೆ.

ಬಡವರ ಸಂಕಷ್ಟಗಳಿಗೆ, ದೀನರಿಗೆ ದಯಾಕರರಾಗಿರುವ ತಮ್ಮ ಸೇವೆ ಅಮೋಘ ಎಂದು ಭಕ್ತಿಪೂರ್ವಕವಾಗಿ ವಂದಿಸುತ್ತೇವೆ. ನಿಮ್ಮಂತಹ ಮಹೋನ್ನತ ಚೇತನ ಸರ್ವಜನರ ಬಾಳಿನ ಬೆಳಕಾಗಲಿ.

* * *

ಬೆಂಗಳೂರು ಜಿಲ್ಲಾ ಕನಕಪುರದ ಶ್ರೀ ದೇಗುಲಮಠದ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಮತ್ತು ಭಕ್ತ ವರ್ಗದವರು ೪.೯.೧೯೮೮ ರಲ್ಲಿ ಶ್ರೀ ಮಹಾಲಿಂಗಸ್ವಾಮಿಗಳ ಪುಣ್ಯತಿಥಿ ಸಂದರ್ಭದಲ್ಲಿ ಅರ್ಪಿಸಿದ ....ಸಂಪುಟ

ಪೂಜ್ಯಪಾದರೆ,

ಗುರುಪರಂಪರೆಯಲ್ಲಿ ತಾವು ಮಾದರಿಯ ಮಂಗಳದೀಪ. ತಮ್ಮ ಪೂಜ್ಯ ಗುರುಗಳು ಆರಂಭಿಸಿದ ಜ್ಞಾನ ಹಾಗೂ ಅನ್ನ ದಾಸೋಹವನ್ನು ತಾವು ನಿರಂತರವಾಗಿ ಬೆಳೆಸಿದಿರಿ. ಶ್ರೀ ಕ್ಷೇತ್ರವನ್ನು ಅಭೂತಪೂರ್ವವಾದ ಎತ್ತರಕ್ಕೆ ಬೆಳೆಸಿ ಅದರ ಕೀರ್ತಿಯನ್ನು ರಾಷ್ಟ್ರವ್ಯಾಪಿಯಾಗಿಸಿದ್ದೀರಿ. ಕಾಲವೂ ನಾಚುವಂತಹ ಕ್ರಿಯಾಶೀಲರು ತಾವು. ವಿದ್ಯಾರ್ಥಿಗಳ ಕ್ಷೇಮಚಿಂತನೆ, ಯಾತ್ರಾರ್ಥಿಗಳ ಯೋಗ ಕ್ಷೇಮ, ಸಮಾಜದ ಅಭಿವೃದ್ಧಿ, ರಾಷ್ಟ್ರದ ಭವಿಷ್ಯ ಇದನ್ನೇ ಚಿಂತಿಸುವ ವಿಶ್ವಕುಟುಂಬಿ ನೀವು. ವಿರಕ್ತರಾದರೂ ಸಮಷ್ಟಿ ಕಲ್ಯಾಣವನ್ನು, ಅದರಲ್ಲೂ ದೀನ ದಲಿತರ, ಬಡವರ, ಗ್ರಾಮೀಣರ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತ್ತಾ ಬಂದ ನವಭಾರತ ನಿರ್ಮಾಣದ ಶಿಲ್ಪಿಗಳಲ್ಲಿ ಒಬ್ಬರು. ತಾವು ಭಾರತೀಯ ಸಂಸ್ಕೃತಿಯ ಸಾಕಾರ ಸ್ವರೂಪರಾಗಿ ಬೆಳಗುತ್ತಿದ್ದೀರಿ.

ತ್ರಿವಿಧ ದಾಸೋಹ ....ತಮ್ಮ ಹಾಗೆ ಗೌರವದಿಂದ ನಡೆಸಿರುವ ಮತ್ತೊಬ್ಬ ಸ್ವಾಮಿಗಳನ್ನು ಹುಡುಕುವುದು ಕಷ್ಟ. ತಮ್ಮ ಸೇವೆಯಿಂದ ಇಡೀ ಜನಾಂಗ ಸಾರ್ಥಕವಾಗುತ್ತಿದೆ. ಯುಗ ಅರ್ಥಪೂರ್ಣವಾಗುತ್ತಿದೆ. ತಮ್ಮಿಂದ ಸೇವೆಯ ಹಲವು ಆಯಾಮಗಳು ಸೃಷ್ಟಿಗೊಂಡವು ಎಂಬುದನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಹೊಗಳುತ್ತಿದ್ದಾರೆ. ತಮ್ಮ ಶ್ರೀಮಠವನ್ನು ಮಾದರಿಯಾಗಿಟ್ಟುಕೊಂಡು ಕರ್ನಾಟಕದ ಅನೇಕ ಮಠಗಳು ಮುನ್ನಡೆದಿವೆ. ತಾವು ಶ್ರೀಮಠದಲ್ಲಿ ಮಾಡಿದ ಅದ್ಭುತ ಸಾಧನೆಯನ್ನು ಗುರುತಿಸಿದ ನಾಡಿನ ಗಣ್ಯರು ತಮ್ಮನ್ನು ಪವಿತ್ರ ಜೀವನದ ತಪಸ್ವಿ, ಪ್ರಭಾವಿ ಸನ್ಯಾಸಿ, ನಿರಾಡಂಬರಮೂರ್ತಿ, ಕಾಯಕಯೋಗಿ, ಸಿದ್ಧಗುರು, ಸಮನ್ವಯ ಯೋಗಿ, ಆಧುನಿಕ ಕುಲಪತಿ, ಸನಾತನ ಧರ್ಮಪ್ರದೀಪ, ಅನ್ನದಾನ ವಿದ್ಯಾದಾನಗಳ ಸಂಗಮ, ಕರ್ತೃತ್ವಶಕ್ತಿಯ ಶ್ರೀಮಂತ ಸಾಕಾರ, ಕಾಯಕಕ್ಕೆ ಹೊಸ ಭಾಷ್ಯ ಬರೆದ ದೇವಪುರುಷ, ವಾತ್ಸಲ್ಯ ಶ್ರೀ, ಪ್ರತ್ಯಕ್ಷ ದೈವ, ಬಾಳಭಾಗ್ಯ, ಸಿದ್ಧಗಂಗೆಯ ಬೆಳಕು, ಮೌನಚೇತನ ಶಕ್ತಿ, ಆನಂದರೂಪಿ ಜಂಗಮಪುರುಷ, ಆದರ್ಶಶಿಲ್ಪಿ ಎಂದು ಮುಂತಾಗಿ ಕರೆದು ಭಕ್ತಿ ಕುಸುಮಾಂಜಲಿಯನ್ನು ಅರ್ಪಿಸಿದ್ದಾರೆ.

ಬಸವಾದಿ ಶರಣರ ಪವಿತ್ರಕಮ್ಮಟದಲ್ಲಿ ಅರಳಿದ ಶಿವಸಾನ್ನಿಧ್ಯವಾದ ತಾವು ಅಥಣಿ ಶಿವಯೋಗಿಗಳ ಲಿಂಗನಿಷ್ಠೆಯನ್ನು, ಬಸವಣ್ಣನ ಭಕ್ತಿಯನ್ನು, ಚಿತ್ರದುರ್ಗದ ಮುರುಘಾಮಠದ ಜಯದೇವ ಜಗದ್ಗುರುಗಳ ಸೇವಾ ನಿಪುಣತೆಯನ್ನೂ, ಮೈಸೂರು ಅರಮನೆ ಪಂಚಗವಿಮಠದ ಶ್ರೀಗೌರಿಶಂಕರ ಸ್ವಾಮಿಗಳ ಪ್ರಕಾಂಡ ಪಾಂಡಿತ್ಯವನ್ನೂ, ಶ್ರೀ ದೇಗುಲ ಮಠದ ಪೂಜ್ಯ ಶ್ರೀ ನಿರ್ವಾಣ ಸ್ವಾಮಿಗಳ ಮುಗ್ಧ ಹೃದಯವಂತಿಕೆಯನ್ನೂ, ಶ್ರೀ ಮಹಾಲಿಂಗ ಸ್ವಾಮಿಗಳ ವ್ಯವಹಾರ ಕೌಶಲ್ಯಗಳನ್ನು ಮತ್ತು ಶಿವ ಗಂಭೀರ

ಹಾಸ್ಯ ಪ್ರವೃತ್ತಿಯನ್ನೂ, ಮಿಗಿಲಾಗಿ ಉದ್ದಾನ ಶಿವಯೋಗಿಗಳವರ ಅನುಪಮ ಸಿದ್ಧಿಯನ್ನು ಸಾಕ್ಷಾತ್ಕರಿಸಿಕೊಂಡು ನಿಜವನರಿದ ನಿಶ್ಚಿಂತರಾಗಿ, ಶ್ರೀ ಕ್ಷೇತ್ರಾಧಿಪತಿ ಶ್ರೀ ಸಿದ್ಧಲಿಂಗೇಶ್ವರರ ತೇಜಸ್ ಸ್ವರೂಪಿಗಳಾಗಿ, ಮಾನವಾತೀತ ದೈವೀಶಕ್ತಿಯುಳ್ಳವರಾಗಿ ಮರಣವಗೆಲಿದ ಮಹಾಂತರಾಗಿ, ಪರವನೊಳಗೊಂಡ ಪರಿಣಾಮಿಯಾಗಿ, ಬಯಲಲ್ಲಿ ಒದಗಿದ ಭರಿತರಾಗಿ ನಿರಾಳವನ್ನೊಳಗೊಂಡ ಸಹಜರಾಗಿ ರಾರಾಜಿಸುತ್ತಿದ್ದೀರಿ. ತಮಗೆ ಶ್ರದ್ಧಾಭಕ್ತಿ ಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತಾ, ಸಮಾಜದ ಪುಣ್ಯವಾಗಿ, ನಾಡಿನ ಭಾಗ್ಯವಾಗಿ, ರಾಷ್ಟ್ರದ ಅಮೂಲ್ಯ ರತ್ನವಾಗಿ ನೂರುಕಾಲ ಬೆಳಗುವಂತೆ ಬಸವಾದಿ ಪ್ರಮಥರು ಅನುಗ್ರಹಿಸಲಿ.

* * *

ಚಾಮರಾಜ ನಗರದ ಸಿದ್ಧಮಲ್ಲೇಶ್ವರ ವಿರಕ್ತಮಠದ ಸದ್ಭಕ್ತ ಮಂಡಳಿ ೨೨.೫.೮೮ ರಂದು ಬಸವ ಜಯಂತಿಯನ್ನು ವಿರಕ್ತಮಠದ ಉತ್ತರಾಧಿಕಾರದ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಘನ ಅಧ್ಯಕ್ಷತೆಯಲ್ಲಿ ಅರ್ಪಿಸಿದ ಬಿನ್ನವತ್ತಳೆ.

ಪೂಜ್ಯಪಾದರೆ,

'ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ ಚರತ್ಯತಿಥಿ ರೂಪೇಣ ನಮಸ್ತೇ ಜಂಗಮಾತ್ಮನೇ' ಎಂಬಂತೆ ಜಂಗಮರೂಪಿಯಾದ ಪರಶಿವನೇ ತಮ್ಮ ರೂಪದಲ್ಲಿ ಅವತರಿಸಿದ್ದಾನೆಂಬ ಭಾವನೆಯಿಂದ ಸಕಲ ಜೀವಾಳಿಗಳಿಗೆ ಲೇಸನೇ ಬಯಸುತ್ತ ಅಹರ್ನಿಶಿ ದುಡಿಯುತ್ತ ಜಾತಿ - ಮತ, ಬಡವ - ಬಲ್ಲಿದ, ಮೇಲು - ಕೀಳು ಎನ್ನದೆ ಸಮದರ್ಶಿಗಳಾಗಿ ಸರ್ವರಿಗೂ ಒಳಿತನ್ನೇ ಬಯಸಿದ ತಾವು ಪರರಿಗಾಗಿ ಗಂಧದ ಕೊರಡಿನಂತೆ ತೇದಿರಿ; ಸುವರ್ಣದಂತೆ ಶಿವನ ಒರೆಗಲ್ಲಿನಲ್ಲಿ ಬೆಳಗಿದಿರಿ. ಬೈದವರನ್ನು ಬಂಧುಗಳೆಂದಿರಿ, ಹೊಗಳಿದವರೆನ್ನ ಹೊನ್ನ ಶೂಲಕಿಕ್ಕಿದಿರಿ ಎಂದಿರಿ, ಹೊಗಳಿಕೆ - ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸಿದಿರಿ. ತಾವು ಸೇವಾ ಕಾರ್ಯದಲ್ಲಿ ಕೈಗೊಂಡ ನಿಲುವು, ವಹಿಸಿದ ತಾಳ್ಮೆ, ಸಂಯಮಗಳು ಸಾಮಾನ್ಯರಿಗೆ ಅರಿಯಲಾಗದ ಅದ್ಭುತಗಳಾಗಿವೆ. ತಮ್ಮ ಧೀಮಂತಿಕೆಗೆ, ಸಮಯೋಚಿತ ಪ್ರಜ್ಞೆ ಅಚ್ಚರಿಗೊಳಿಸಿದೆ. ತಮ್ಮ ಮಾನವೀಯ ಮಹಾಮಣಿಹದಲ್ಲಿ ಅನುವಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತದ್ದು ನಮ್ಮ ಪುಣ್ಯ.

* * *

ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ನಾರ್ವೆ ಎಸ್ಟೇಟಿನ ಶ್ರೀಮತಿ ಮತ್ತು ಶ್ರೀ ಎಸ್.ಸಿ. ವೀರಪ್ಪಗೌಡರು ಮತ್ತು ಸಹೋದರರು ೮.೪.೮೯ ರಂದು ಅರ್ಪಿಸಿದ ಬಿನ್ನಹದೋಲೆ.

ಪರಮಪೂಜ್ಯರೆ,

ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡು, ನಿಜವನರಿದ ನಿಶ್ಚಿಂತರೆನಿಸಿ, ಮರಣವ ಗೆಲಿದ ಮಹಂತರೆನಿಸಿ, ಪರಮನೊಳಗೊಂಡ ಪರಿಣಾಮಿಗಳಾಗಿ, ಬಯಲಲೊದಗಿದ ಭರಿತನಾಗಿ ನಿರಾಳವನ್ನೊಳಗೊಂಡ ಸಹಜರಾಗಿ ಒಪ್ಪುತ್ತ ಅರ್ಧ ಶತಮಾನಕ್ಕೂ ಮಿಕ್ಕು ತ್ರಿವಿಧ ತಪದ, ತ್ರಿವಿಧ ದಾಸೋಹದ, ತ್ರಿವಿಧ ಲಿಂಗಾರ್ಚನೆಯ ಸಿದ್ಧಶ್ರೀಗಳಾಗಿ ವಿರಕ್ತಕುಲದ ಮಂಗಲರತ್ನ ಕಲಶರಾಗಿ ವಿರಾಜಿಸುವ ತಮಗೆ ಭಕ್ತಿಪೂರ್ವಕವಾಗಿ ಈ ಬಿನ್ನಹದೋಲೆಯನ್ನು ಸಮರ್ಪಿಸಿ ಕೃತಾರ್ಥರಾಗಿದ್ದೇವೆ.

* * *

ಬೇಲೂರು ತಾಲ್ಲೂಕು ನಾರ್ವೆ ಗ್ರಾಮದ ನಾಡುಪಟೇಲ್ ಎನ್.ಬಿ. ಮಹಂತಗೌಡರ ೭೬ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಮಲೆನಾಡಿನ ಭಕ್ತ ಮಂಡಳಿಯವರು ೮.೪.೧೯೮೯ರಂದು ಅರ್ಪಿಸಿದ ಬಿನ್ನವತ್ತಳೆ.

ಪರಮ ಪಾವನರೆ,

ಬಸವಾದಿ ಪ್ರಮಥರ ನಂತರ ವೀರಶೈವ ಧರ್ಮದಲ್ಲಿ ಕ್ರಾಂತಿಯನ್ನು, ವಿರಕ್ತ ಸಂಪ್ರದಾಯವನ್ನು ಆರಂಭಿಸಿ ಧರ್ಮ

ಪ್ರಸಾರವನ್ನು ವ್ಯವಸ್ಥೆಗೊಳಿಸಿ, ಶಿವಾನುಭವ ವಿಶಾರದರಾಗಿ ರಾರಾಜಿಸಿದ ಶ್ರೀ ಸಿದ್ಧಲಿಂಗೇಶ್ವರರು ತಪಸ್ಸು ಮಾಡಿ ಪವಿತ್ರಗೊಳಿಸಿದ ತಾಣದಲ್ಲಿ ತಪಸ್ಸು ಮಾಡುತ್ತಾ ತಾವು ಅದನ್ನು ಪವಿತ್ರಗೊಳಿಸಿದ ಮಹಾತ್ಮರಾದಿರಿ.

ಶ್ರೇಷ್ಠ ದಾರ್ಶನಿಕರಾದ ತಮ್ಮ ಅಂತಃಕರಣ ಬಹಳ ವಿಶಾಲವಾದುದು. ಕ್ರಾಂತಿಕಾರಿ ಬಸವಣ್ಣನವರ ತತ್ವಗಳನ್ನು ಕಾರ್ಯಾಚರಣೆಗೆ ತಂದಿರುವುದರಲ್ಲಿ ತಾವೇ ಅಗ್ರಗಣ್ಯರು. ತಮ್ಮ ಪಾದಧೂಳಿಯಿಂದ ಭಾರತದ ಅನೇಕ ಗ್ರಾಮ, ಪಟ್ಟಣಗಳು ಪವಿತ್ರವಾಗಿವೆ.

* * *

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು, ಕೇರಳಾಪುರದ ಗ್ರಾಮಸ್ಥರು ಹಾಗೂ ವೀರಭದ್ರಸ್ವಾಮಿ ಭಕ್ತಮಂಡಳಿ ೨೬.೩.೧೯೮೯ ರಂದು ಅರ್ಪಿಸಿದ ಸನ್ಮಾನ ಪತ್ರ.

ಕಾಯಕ ನಿಷ್ಠ, ಭಕ್ತಿಯ ಸಾಕಾರಮೂರ್ತಿ ಮಹಿಮಾನ್ವಿತ ತಪಸ್ವಿಗಳಾದ ಪೂಜ್ಯರೆ,

ವೀರಶೈವ ಧರ್ಮದ ಮಂಗಳರತ್ನ ಕಳಶವೆನಿಸಿದ ತಾವು ಸಮಾಜ ಕ್ಷೇಮಾಭ್ಯುದಯ ದೀಕ್ಷೆ ತೊಟ್ಟಿರಿ. ಸಿದ್ಧಗಂಗಾ ಕ್ಷೇತ್ರವನ್ನು ನ ಭೂತೋ ನ ಭವಿಷ್ಯತಿ ಎಂಬಂತೆ ರೂಪಿಸಿದಿರಿ. ಶ್ರೀ ಕ್ಷೇತ್ರ ಒಂದು ಜಾತಿಯ ಮಠವಲ್ಲ ಎಂಬುದನ್ನು ತೋರಿಸಿಕೊಟ್ಟು, ಜನಕ್ಕೆ ಹೊಸದೃಷ್ಟಿಯನ್ನು ಅನುಗ್ರಹಿಸಿದಿರಿ.

ಧರ್ಮ ಪ್ರಸಾರ ಕಾರ್ಯದಲ್ಲಿ ಅಪಾರ ಕಳಕಳಿ, ನೈತಿಕ ಮೌಲ್ಯಗಳ ರಕ್ಷಣೆಯಲ್ಲಿ ಅದ್ವಿತೀಯ ಸಮನ್ವಯ, ಅನಂತ ತಾಳ್ಮೆ, ಅನಿರ್ವಚನೀಯ ಸಂಕಲ್ಪ, ವೈಚಾರಿಕ ದೃಷ್ಟಿಯಲ್ಲಿ ಅಗಾಧ ಪ್ರಜ್ಞೆ, ಆಡಳಿತದಲ್ಲಿ ಅಸಾಧಾರಣ ದಕ್ಷತೆ, ಆಧ್ಯಾತ್ಮದಲ್ಲಿ ಅಸದೃಶ ಅನುಭವ ಇವನ್ನೆಲ್ಲಾ ಕಂಡು ಮೂಕ ವಿಸ್ಮಿತರಾಗಿದ್ದೇವೆ. ತಮ್ಮಂಥವರು ನಮ್ಮ ಊರಿಗೆ ದಯಮಾಡಿಸಿದ್ದು ನಮ್ಮೆಲ್ಲರ ಪರಮ ಸೌಭಾಗ್ಯ.

* * *

ಮಾಗಡಿ ತಾಲ್ಲೂಕು ಕಂಚುಗಲ್ ಬಂಡೇಮಠದ ಸದ್ಭಕ್ತರು ರಾಜ್ಯದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ಪೂಜ್ಯರಿಗೆ ಅರ್ಪಿಸಿದ ಬಿನ್ನವತ್ತಳೆ

ಪರಮ ಶಿವಯೋಗಿ ಪುಂಗವರೆ,

ತಮ್ಮ ದಾಸೋಹ ಸದ್ಭಾವದಿಂದ ತಾವು ಕಲ್ಯಾಣದ ಬಸವಣ್ಣನವರ ಮಹಾಮನೆಯನ್ನು ಪುನರ್ ಸ್ಥಾಪಿಸಿ ತೋರಿಸಿದ್ದೀರಿ. ದಾಸೋಹವು ನಿರಹಂಕಾರದ ಶಿವ ಸೋಪಾನವೆಂಬುದನ್ನು ಕಾರ್ಯ ಸಾಧ್ಯಮಾಡಿ ಆದರ್ಶ, ವಿನಯಗಳ ಮಹಾಶ್ರುತಿಗೈಯುತ್ತಾ ಬಸವ ಸಂಗೀತಕ್ಕೆ ಸ್ವತಃ ವೀಣೆಯಾಗಿ ನುಡಿದಿದ್ದೀರಿ. ತಾವು ಮೆಟ್ಟಿದ ಧರೆ ಪಾವನವಾಗಿದೆ. ಮುಟ್ಟಿದ ಘಟ ಶಿವಚೇತನದಿಂದ ಕಂಗೊಳಿಸಿದೆ. ನುಡಿದ ಮಾತು ಮಂತ್ರವಾಗಿದೆ. ತಮ್ಮ ಮಹಾಮಣಿಹದಿಂದಾಗಿ ಸುಸಂಸ್ಕೃತ ಜನಾಂಗ ನಿರ್ಮಾಣವಾಗುತ್ತಾ ಬಂದಿದೆ.

ಕೇವಲ ಬಿನ್ನಹ ಬಿಡುಗಡೆಯ ರೂಢ ಆಚರಣೆಯೊಂದೇ ಸ್ವಾಮಿಗಳ ಕೆಲಸವಲ್ಲ. ಲೋಕ ಕಲ್ಯಾಣಕ್ಕೆ ದೇಹ ಶ್ರಮ ಮಾಡುವುದು ಅಗತ್ಯವೆನ್ನುತ್ತ ದಿನಕ್ಕೆ ೨೦ ಘಂಟೆಗಳಷ್ಟು ಕಾಯಕ ಮಾಡುತ್ತ ಕಾಲ ಧರ್ಮವನ್ನು ಸತ್ಯಶುದ್ಧ ಆಚಾರ ವಿಚಾರಗಳಿಂದ ದೂರ ಸರಿಯದಂತೆ ನಿರ್ವಹಿಸುತ್ತ, ಬಂದ ಭಕ್ತರಿಗೆಲ್ಲಾ ದರ್ಶನಾಶೀರ್ವಾದ ನೀಡುತ್ತ ಸಮಾಜ ಸೂರ್ಯರಾಗಿ ಪ್ರಕಾಶಿಸುತ್ತಿದ್ದೀರಿ.

ಜಡದಿಂದ ಜಂಗಮಕ್ಕೆ ನಮ್ಮನ್ನು ಕೈಹಿಡಿದು ನಡೆಸುತ್ತಾ ಸಾಗಿದ್ದೀರಿ. ತಮ್ಮ ಒಂದೊಂದು ಕಾಯಕ ಕ್ಷೇತ್ರವೂ ಅರಿವಿನಿಂದ ಅನುಭಾವದ ಕಡೆಗೆ ನಮ್ಮನ್ನು ಕೊಂಡೊಯ್ಯುತ್ತಿದೆ ಎಂಬುದನ್ನು ನಾವು ಮನಗಂಡಿದ್ದೇವೆ. ಜಾತ್ರೆ, ವಸ್ತು ಪ್ರದರ್ಶನ, ಶಾಲಾ ಕಾಲೇಜು, ಪತ್ರಿಕೋದ್ಯಮ, ಕೈಗಾರಿಕೋದ್ಯಮ, ಕಲಾ ಜಗತ್ತು, ಪ್ರಚಾರ ಯೋಜನೆ, ಬಸವ ತತ್ವ ಪ್ರಸಾರ, ಗ್ರಾಮಾಂತರ ಬಸವ

ಜಯಂತಿ ಮೊದಲಾದವು ಕ್ರಾಂತದರ್ಶಿಗಳಾದ ತಮ್ಮ ಅಂಗ ಉಪಾಂಗಗಳಾಗಿವೆ. ಎಲ್ಲರನ್ನೂ ಅನ್ಯರೆನ್ನದೆ, ಇವ ನಮ್ಮವನೆಂದು ಆದರಿಸಿ ಕೃತಾರ್ಥರನ್ನಾಗಿ ಮಾಡಿದ್ದೀರಿ.

ಭಾರತೀಯ ಸಂಸ್ಕೃತಿಗೆ ಭಾಷ್ಯರಾದವರು ನೀವು, ಕನ್ನಡ ಸಂಸ್ಕೃತಿಯ ರತ್ನದರ್ಪಣ, ಗ್ರಾಮೀಣ ಬಡವರ ಭಾಗ್ಯಜ್ಯೋತಿ, ವೇದ ಋಷಿಗಳು, ಶರಣ ಶ್ರೇಷ್ಠರು, ಬುದ್ಧ, ಬಸವ, ಗಾಂಧಿ, ಅರವಿಂದರ ಅನುಯಾಯಿಗಳಾದ ನಿಮ್ಮ ದರ್ಶನಾಶೀರ್ವಾದದಿಂದ ನಾವೆಲ್ಲ ಪಾವನರಾಗಿದ್ದೇವೆ. ತಮ್ಮ ಲಿಂಗಪೂಜಾ ನಿಷ್ಠೆಯ ಶಿವಬೆಳಗು ನಮ್ಮೆಲ್ಲರನ್ನೂ ಕತ್ತಲಿನಿಂದ ಬೆಳಕಿಗೆ, ಅಸತ್ಯದಿಂದ ಸತ್ಯದ ಕಡೆಗೆ, ಮೃತ್ಯುವಿನಿಂದ ಅಮೃತತ್ವದ ಕಡೆಗೆ ಕರೆದೊಯ್ಯಲಿ.

* * *

ತುಮಕೂರು ನಗರದ ಬಾಳನಕಟ್ಟೆಯಲ್ಲಿ ೨೧.೩.೯೨ ರಂದು ಮಹಾತ್ಮಗಾಂಧಿ ವಾಣಿಜ್ಯ ಸಂಕೀರ್ಣದ ಗುದ್ದಲಿ ಪೂಜಾ ಸಮಾರಂಭದ ಸಂದರ್ಭದಲ್ಲಿ ಪುರಸಭೆಯವರು ಅರ್ಪಿಸಿದ ಬಿನ್ನವತ್ತಳೆ

ಪರಮ ಶಿವಯೋಗಿಗಳೆ,

ದಕ್ಷಿಣ ಭಾರತದ ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರಬಿಂದುವಾದ ಪುಣ್ಯಕ್ಷೇತ್ರ ಶ್ರೀ ಸಿದ್ಧಗಂಗಾ ಮಠದ ಧ್ರುವತಾರೆ, ಲಕ್ಷಾಂತರ ಬಡ ಮಕ್ಕಳ ಅನ್ನ, ವಸತಿ, ವಿದ್ಯಾದಾತರಾಗಿ ಬೆಳಗುತ್ತಿರುವ ತಮ್ಮ ಸೇವೆ, ಮಾತು ಮನಗಳಿಗೆ ಮೀರಿದ್ದು. ತಾವು ಭಕ್ತಕೋಟಿಯ ಕಾಮಧೇನು. ತಮ್ಮ ಕ್ಷೇತ್ರದ ಹೆಸರೇ ತುಮಕೂರಿಗೇ ವಜ್ರಕವಚ. ಇದರ ಗುರುತ್ವಾಕರ್ಷಣೆಯಾದ ತಾವು ತ್ರಿವಿಧ ದಾಸೋಹಮೂರ್ತಿಯಾಗಿ ಇದ್ದೀರಿ. ತಮ್ಮ ತಪೋಬಲದಿಂದ ನಾಡು ನೆಮ್ಮದಿ ಕಾಣಲಿ.

* * *

ಬೆಂಗಳೂರು ರಾಜಾಜಿ ನಗರದ ಬಸವ ಸಮಿತಿಯವರು ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳು, ಆದಿ ಚುಂಚನಗಿರಿ ಮಠಾಧೀಶರಾದ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಸಾನ್ನಿಧ್ಯ ಹಾಗೂ ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳ ಸಮಕ್ಷಮದಲ್ಲಿ ತ್ರಿವಿಧ ತಪದ, ತ್ರಿವಿಧ ದಾಸೋಹದ, ತ್ರಿವಿಧ ಲಿಂಗಾರ್ಚನೆಯ ಸಿದ್ಧಿಶ್ರೀ, ಸಿದ್ಧಗಂಗಾಶ್ರೀ ಪೂಜ್ಯ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿಗಳಿಗೆ ಅರ್ಪಿಸಿದ ಬಿನ್ನಹಪೋಲೆ.

ಪರಮ ಪೂಜನೀಯರೆ,

ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ತಮ್ಮ ನಿಲುವನ್ನು ಆ ಸಿದ್ಧಲಿಂಗೇಶ್ವರನೇ ಬಲ್ಲನಲ್ಲದೆ ನಮ್ಮಂಥವರು ಬಲ್ಲೆವೆಂದು ಹೇಳಲಾರೆವು. ಮಾತು ಸೋತು ಶರಣಾಗುತ್ತದೆ. ಮಾತಿಗೆ ಮೀರಿದ ವ್ಯಕ್ತಿತ್ವ ನಿಮ್ಮದು.

ಸರ್ವಾಂಗ ಲಿಂಗಿಗಳಾದ ತಮ್ಮ ನಿಶ್ಚಿತ ಜ್ಞಾನ, ನಿರ್ಮಲ ಕ್ರಿಯೆ, ಉಜ್ವಲ ವೈರಾಗ್ಯ, ...ದೈವೀಸಂಪತ್ತು, ಬಹುಭಾಷಾ ಪಾರಂಗತೆ, ಪವಿತ್ರ ಜೀವನ, ಸಕಲ ಜೀವರಾಶಿಗಳನ್ನು ತನ್ನ ತೆಕ್ಕೆಯಲ್ಲಿ ಒಳಗೊಳ್ಳುವ ಅಪಾರ ಅನುಕಂಪ, ಚೆಕ್ಕಸ ಬೆರಗುಗೊಳಿಸುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಪಂಡಿತ ಪಾಮರರಿಬ್ಬರನ್ನೂ ಏಕಪ್ರಕಾರವಾಗಿ ಮೆಚ್ಚಿಸುವ ಮಾತುಗಾರಿಕೆ, ವೈಜ್ಞಾನಿಕ ದೃಷ್ಟಿ, ಆಧ್ಯಾತ್ಮಿಕ ಔನ್ನತ್ಯ, ಕಲಾವಿದ - ವಿದ್ವಾಂಸರಿಗೆ ನಿರಂತರ ನೀಡುತ್ತಿರುವ ಆಶ್ರಯ, ಸಾಹಿತ್ಯ ಸಂಸ್ಕೃತಿಗಳ ಪೋಷಣೆ, ಸಂಘಟನಾ ಶಕ್ತಿ, ಶಿವಮಂತ್ರ ಸಿದ್ಧಿ, ಎಷ್ಟು ಜನರು ಬಂದು ಬೇಡಿ ಕಾಡಿದರೂ ಎಂಥ ವಿಘ್ನಗಳು ಎದುರಾದರೂ ಎಳ್ಳಷ್ಟೂ ಬೇಸರ, ಮುನಿಸು, ದಣಿವುಗಳನ್ನು ತೋರದ ಸದಾ ಸುಪ್ರಸನ್ನವದನ, ಎದುರಾದ ಅನೇಕ ಸಮಸ್ಯೆಗಳನ್ನು ಲೀಲಾಜಾಲವಾಗಿ ಪರಿಹರಿಸುವ ಪರಮಾದ್ಭುತ, ಸರ್ವೋದ್ಧಾರದ ಸಮಗ್ರಯೋಜನೆಗಳವರೆಗೆ ಸರ್ವಕಾರ್ಯಗಳಲ್ಲಿಯೂ ಒಡಮೂಡುವ ಕಾರ್ಯನಿಷ್ಠೆ, ಗಡಿಯಾರವೂ ನಾಚಿಕೊಳ್ಳುವಂತಹ ಸಮಯ ಪರಿಪಾಲನೆ, ಶರಣ ವಿಜಯ, ಜಿತೇಂದ್ರಿಯತ್ವ, ಆಲೋಚಿಸಿದಷ್ಟೂ ಅಪಾರವಾಗಿ ತೋರುವ ಅಧ್ಯಾತ್ಮ ಸೂರ್ಯರಾದ ತಮ್ಮ ಅಗಾಧವಾದ, ಅವರ್ಣನೀಯವಾದ ಎಲ್ಲ ಅಂಶಗಳನ್ನು ಗುರುತಿಸಿ ಅವುಗಳ ಒಟ್ಟು ಬೆಲೆಯನ್ನು ಕಟ್ಟಬಲ್ಲವರಾರು?

ಹನ್ನೆರಡನೆಯ ಶತಮಾನದ ಶರಣರ ಜೀವನದ ನೆನಪನ್ನು ತರುವ ತಮ್ಮ ಬದುಕು, ಹೋರಾಟ, ಸಾಧನೆಗಳನ್ನು ಕಂಡಾಗ ತಮ್ಮ ದಿವ್ಯ, ಭವ್ಯವ್ಯಕ್ತಿತ್ವದ ಎದುರಿಗೆ ಎಲ್ಲರೂ, ಎಲ್ಲವೂ ಕುಬ್ಜವಾಗುತ್ತಾ ಹೋಗುತ್ತದೆ. ಜನಪರ ಧೋರಣೆಯನ್ನುಳ್ಳ ವರ್ತಮಾನಕ್ಕೆ ಸ್ಪಂದಿಸಬಲ್ಲ ತಮ್ಮ ಕಾರ್ಯವೈಖರಿ ನಮ್ಮನ್ನು ದಿಗ್ಭ್ರಾಂತಿಗೊಳಿಸುತ್ತದೆ. ಕಾಲಕಾಲಕ್ಕೆ ಸರಕಾರದವರು ಕೊಡಮಾಡಬಯಸಿದ ಬಿರುದು ಬಾವಲಿಗಳೇ ಮೊದಲಾದ ಗೌರವಯುತ ರಹದಾರಿಗಳನ್ನು ಆಗ್ರಹಪೂರ್ವಕವಾಗಿ ತಾವು ನಿರಾಕರಿಸಿದ್ದು ತಮ್ಮ ವೀರತರ ವೈರಾಗ್ಯದ ದ್ಯೋತಕವೇ ಸರಿ. ಜನ ಸಮುದಾಯದ ಮಧ್ಯದಲ್ಲಿದ್ದುಕೊಂಡು ಸರ್ವರ ಒಳಿತಿಗಾಗಿ ತಾವು ಎಸಗಿದ ಅಕ್ಷರಕ್ರಾಂತಿ ಅಭೂತಪೂರ್ವವಾದುದು. ತಾವು ತಮ್ಮ ಸೇವೆಯಿಂದ ಸಂನ್ಯಾಸಿಗಳ ಸಮುದಾಯಕ್ಕೇ ಒಂದು ಆದರ್ಶವಾಗಿದ್ದೀರಿ. "ಜ್ಞಾನಿನಾ ಆಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ" ಎಂಬ ವಿದ್ಯಾರಣ್ಯ ಋಷಿಗಳ ಯುಕ್ತಿ ತಮ್ಮ ವಿಷಯದಲ್ಲಿ ಸತ್ಯವಾಗಿ ಪರಿಣಮಿಸಿದೆ.

ತಾವು ಗವಿಯ ಹೊಗಲಿಲ್ಲ, ಬೋಧಿಯರಸಿ ಮರಗಿಡದ ಬುಡಕ್ಕೂ ಹೋಗಲಿಲ್ಲ. ಆತ ನಿಮ್ಮೊಳಗಿಳಿದು ಕಂಡುದನೆಲ್ಲರಿಗೂ ಹಂಚುವಾಸೆಯ ಹೊತ್ತು ಸಿದ್ಧಗಂಗೆ ಬೆಳಕಿನ ತಿಲಕವಿಟ್ಟಿರಿ. ತಮ್ಮ ಮಹಮನೆಗೆ ಹೊಕ್ಕೊಡನೆಯೇ ಸ್ವಾಗತಿಸುವುದು ಪ್ರೀತಿ, ಅನುಭವದ ಅಮೃತ ಮೈ ಮರೆಸುವುದು. ಭಕ್ತಿಯಲಿ ನಿಂದವರು, ಹರಕೆಯನೊಪ್ಪಿಸಲೆಂದು ಬಂದವರು, ನುಡಿಯೇ ನಡೆಯಾಗುವುದನ್ನು ಕಾಣುವ ಕೌತುಕದವರು, ಜೇನಿನಂತಹ ಅಕ್ಕರೆಗೆ ಬಾಯಾರಿ ಜಾತ್ರೆಗೆ ನೆರೆದವರು, ಎಲ್ಲರೆದುರೂ ತಾನು ಬಿಟ್ಟಿಕ್ಕೆ ಕೈಕಾಲುಗಳು ಮೂಡಿ ನಡೆದಂತೆ ಸಾಕಾರವಾಗುವಿರಿ. ಶರಣ ಲೋಕದಲ್ಲಿ ನಮ್ಮನ್ನು ಉಸಿರಾಡಿಸುವಿರಿ. ಜ್ಞಾನದಲಿ, ಪ್ರೀತಿಯಲಿ ತಾವು ಬೆಳೆಯುತ್ತಾ ಹೋಗುವಿರಿ. ತಾವು ಬೆಳೆದ ಎತ್ತರ ಬಿತ್ತರ ಸೋಜಿಗ ತರುತ್ತದೆ ಎಂತಲೇ ತಮ್ಮ ಪೀಠಾರೋಹಣದ ಸುವರ್ಣ ಮಹೋತ್ಸವದ ನೆನಪಿನ ಈ ಸಂದರ್ಭದಲ್ಲಿ ಕಾಯಕಕ್ಕೆ ಕಳೆಯಿತ್ತು, ಬದುಕಿಗೇ ಬೆಲೆಯಿತ್ತು, ನಾಡಿನಾಚೆಗೂ ಶಿವನ ಬೆಳಕು ಚೆಲ್ಲುತ್ತಿರುವ ತಮಗೆ ಈ ಬಿನ್ನಹದೋಲೆ ಅರ್ಪಿಸಿ ತಮ್ಮ ದಿವ್ಯಆಶೀರ್ವಾದವನ್ನು ಬೇಡುತ್ತೇವೆ.

* * *

ಬೆಳಗಾವಿ ಮಹಾನಗರದ ಸಮಗ್ರ ನಾಗರಿಕರ ಪರವಾಗಿ ಶಹಾಪೂರದ ಶ್ರೀ ಜಗಜ್ಯೋತಿ ಬಸವೇಶ್ವರ ಕಲ್ಯಾಣಮಂಟಪದಲ್ಲಿ ಏರ್ಪಟ್ಟ ಸನ್ಮಾನ ಸಮಾರಂಭದಲ್ಲಿ ಸಮರ್ಪಿಸಿದ ಮಾನಪತ್ರ

ಕಾಯಕ ನಿರತ ತ್ರಿವಿಧ ದಾಸೋಹಿ, ಶಿವಯೋಗ ಸಂಪನ್ನ, ಸಮಾಜದ ಹಿತಚಿಂತಕರಾದ ಪರಮ ಪೂಜ್ಯರಲ್ಲಿ ಬಿನ್ನಹ.

ಮರ್ತ್ಯದ ಮಣಿಹವನ್ನು ಪೂರೈಸಲೆಂದೇ ಪರಮಾತ್ಮನ ಅನುಜ್ಞೆಯಂತೆ ಉದಿಸಿ ಬಂದವರು ತಾವು. ಆರೇಳು ದಶಕಗಳಿಂದ ಅನ್ನವನಿತ್ತು, ಆಶ್ರಯ ನೀಡಿ, ನಾಡಿನ ಒಳ ಹೊರಗಿನ ಲಕ್ಷೋಪಲಕ್ಷ ಜನಕ್ಕೆ ಜ್ಞಾನಾಮೃತ ಧಾರೆಯೆರೆಯುತ್ತ ಬಂದಿರುವ ತಮ್ಮ ಔದಾರ್ಯವನ್ನು ಜನತೆ ಮರೆಯುವಂತಿಲ್ಲ. ನಾಡಿನ ಜನತೆಯನ್ನು ಅಜ್ಞಾನಾಂಧಕಾರದಿಂದ ಪಾರು ಮಾಡಲು ೯೦ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ನೂತನ ದಾಖಲೆ ತಮ್ಮದು.

ತಾವು ಸಿದ್ಧಗಂಗಾ ಮಠದ ಅಧಿಕಾರ ವಹಿಸಿಕೊಂಡಾಗ ತಮಗಿದ್ದ ಆಸ್ತಿ ಒಂದು ರುದ್ರಾಕ್ಷಿ ಹಾರ, ಒಂದು ಜೋಳಿಗೆ. ಶ್ರೀಮಠದ ಅಭಿವೃದ್ಧಿಗೆ ತಾವು ಹುಲ್ಲು ಕಿತ್ತಿರಿ, ಕಲ್ಲು ಮಣ್ಣು ಹೊತ್ತಿರಿ, ಹೊಲಗದ್ದೆ ತೋಟಗಳ ಕೈ ಮುಟ್ಟಿ ಕೃಷಿ ಮಾಡಿದಿರಿ, ಕಾಯಕಯೋಗಿ ಎನಿಸಿದಿರಿ.

ಬಸವಾದಿ ಪ್ರಮಥರ ತತ್ತ್ವ ಸಿದ್ಧಾಂತಗಳನ್ನು ಪೋಷಿಸುತ್ತ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದವರಲ್ಲಿ ಅಗ್ರಮಾನ್ಯರು ಎಂಬ ಮಾತಿನಲ್ಲಿ ಎರಡಿಲ್ಲ. ಜಾತಿ ಮತ ಪಂಥಗಳಲ್ಲಿ ಮೇಲು ಕೀಳೆನ್ನದೆ ಸಮಾನದೃಷ್ಟಿಯಿಂದ ಕಾಣುತ್ತ ಬಂದಿದ್ದೀರಿ.

ಜ್ಯೋತಿಸ್ವರೂಪರಾಗಿರುವ ತಮ್ಮ ಘನ ವ್ಯಕ್ತಿತ್ವವು ಲೋಕದ ಬದುಕಿಗೆ ನಿತ್ಯ ಚೈತನ್ಯದಾಯಕ. ದೈವಭಕ್ತಿ, ಜೀವದಯೆ ಹಾಗೂ ಆಧ್ಯಾತ್ಮ ಸಾಧನೆಯ ಸಾಕಾರ ಸ್ವರೂಪರಾಗಿ ಭಕ್ತಜನಸಮೂಹದ ಆರಾಧ್ಯದೈವವಾಗಿ, ಅರ್ಥಪೂರ್ಣ ಬದುಕನ್ನು ನಡೆಸಿ ಮಂಗಳಾತ್ಮಕ ಜಂಗಮ ಪುಂಗವರಾಗಿ ಭಕ್ತರ ಬಾಳಿಗೆ ಬೆಳಕು ತೋರಿದ್ದೀರಿ. ಸಮಾಜದ ಹಿತಸಾಧನೆಗಾಗಿ ತಮ್ಮನ್ನೇ ತಾವು ಸಮರ್ಪಿಸಿಕೊಂಡು ಮುನ್ನಡೆದಿದ್ದೀರಿ. ತಮ್ಮ ದರ್ಶನಾಶೀರ್ವಾದಗಳಿಂದ ನಾಡು ಪುನೀತವಾಗಿದೆ. ತಮ್ಮ ದಿವ್ಯವ್ಯಕ್ತಿತ್ವದ ಚೈತನ್ಯದಾಯಕ ಪ್ರಭೆಯ ಕಿರಣಗಳು ನಾಡಿನುದ್ದಗಲಕ್ಕೂ ಇನ್ನೂ ಅನಂತಕಾಲ ಪಸರಿಸಲಿ.

(ಸಂ) ಬಿ. ವೀರಭದ್ರಯ್ಯ

ಶ್ರೀವಾಣಿ

ಇದು ಪೂಜ್ಯ ಶಿವಕುಮಾರ ಸ್ವಾಮಿಗಳು ಅಲ್ಲಿ ಇಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು. 'ಶ್ರೀ ವಾಣಿ'ಯೆಂದು 'ಸಿದ್ಧಗಂಗಾ' ಪತ್ರಿಕೆಯಲ್ಲಿ ಪ್ರಕಟವಾಗುತ್ತಾ ಬಂದಿವೆ. ಅವುಗಳಲ್ಲಿ ಕೆಲವನ್ನು ಮಾದರಿಗಾಗಿ ಕೊಟ್ಟಿದೆ. ಈ ಶ್ರೀವಾಣಿಯು ಗುಣಪಂಚಕದಿಂದ ಕೂಡಿದೆ. ಮನೋಹಾರಿತ್ವ, ಹಿತಪರಿಣಾಮಕಾರಿತ್ವ, ಋಜುತ್ವ, ಅರ್ಥಗೌರವ ಮತ್ತು ಅರ್ಥದೀಪ್ತಿಗಳೇ ಆ ಗುಣಪಂಚಕ. ಇಂಥ ಶ್ರೀವಾಣಿಯು ಅನೇಕರಿಗೆ ಬಹುವಿಧದಲ್ಲಿ ಶ್ರೇಯಸ್ಸನ್ನೂ ಪ್ರೇಯಸ್ಸನ್ನೂ ತಂದು ಕೊಟ್ಟಿದೆ. ಅದೆಷ್ಟೋ ಮಂದಿ ಎಳೆಯರ ಎದೆಯಲ್ಲಿ ಪ್ರತಿಭೆಯನ್ನು ಅರಳಿಸಿದೆ. ಯುವಕರ ಬದುಕಿಗೆ ತಿರುವು ಕೊಟ್ಟಿದೆ. ವಯಸ್ಕರಿಗೆ ವ್ಯಕ್ತಿತ್ವ ಹಾಗೂ ಘನತೆಯನ್ನು ತಂದುಕೊಟ್ಟು, ಸಮಾಜದಲ್ಲಿ ಗೌರವಾನ್ವಿತರಾಗಿ ಬಾಳುವಂತೆ ಮಾಡಿದೆ. ವೃದ್ಧರ ಹೃದಯದಲ್ಲಿ ನೆಲೆನಿಂತು ನೆಮ್ಮದಿ ನೀಡಿದೆ.

ಧರ್ಮ ಎಂದರೇನು ?

ಇಂದು ಯಾವ ದುರದೃಷ್ಟವೋ ಏನೋ, ಕೆಲವರು ಧರ್ಮದ ಬಗ್ಗೆ ಸಲ್ಲದ ಅಸಡ್ಡೆಯನ್ನು ತೋರಿಸುತ್ತಿದ್ದಾರೆ. ಆ ಶಬ್ದ ಅವರ ಕಿವಿಗೆ ಬಿದ್ದಾಕ್ಷಣ ಅದೊಂದು ಗೊಡ್ಡು, ಕೆಲಸಕ್ಕೆ ಬಾರದ ವಸ್ತು.... ಮುಂತಾಗಿ ಅಪಾರ್ಥವನ್ನು ಮನದಲ್ಲಿ ತುಂಬಿಕೊಳ್ಳುತ್ತಾರೆ. ಆದರೆ ಆ ಭಾವನೆಯನ್ನು ದೂರಮಾಡಿ, ಅದರ ಯಥಾರ್ಥವನ್ನು ಪರಿಭಾವಿಸಿ ಬದುಕಿನಲ್ಲಿ ಇಂದು ಅಳವಡಿಸಿಕೊಳ್ಳಬೇಕಾಗಿದೆ. ಮತ್ತು ಅದರ ಬೆಳಕಿನಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾಗಿದೆ. ನಮ್ಮ ಆರ್ಯರು ಆ ಧರ್ಮ ಶಬ್ದಕ್ಕೆ ನಾನಾ ಅಮೂಲ್ಯಾರ್ಥಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ "ಯತೋಽಭ್ಯುದಯನಿಶ್ರೇಯಸಃ ಸ್ಸಿದ್ಧಿಃ ಸ ಧರ್ಮಃ" ಅಭ್ಯುದಯ ಮತ್ತು ನಿಶ್ರೇಯಸ್ಸು ಎಂಬ ಎರಡು ಅರ್ಥಗಳು ಮುಖ್ಯವಾದವು. ಅದರಲ್ಲಿ ಅಭ್ಯುದಯವೆಂದರೆ ಮಾನವನು ಅನ್ನ, ಬಟ್ಟೆ, ವಸತಿ ಮುಂತಾದ ಅವಶ್ಯಕ ಅಗತ್ಯತೆಗಳನ್ನು ನ್ಯಾಯಮಾರ್ಗದಲ್ಲಿ ಪೂರೈಸಿಕೊಂಡು, ವ್ಯಕ್ತಿತ್ವದ ಪೂರ್ಣ ವಿಕಾಸವನ್ನು ಹೊಂದಿ, ಅಪರಿಪೂರ್ಣತೆಯಿಂದ ಪರಿಪೂರ್ಣತೆಯತ್ತ ಬಾಳನ್ನು ಸಾಗಿಸಿ ಮಂಗಳವನ್ನು ಕಾಣುವುದು; ಇದು ಧರ್ಮದ ಕೇವಲ ಬಾಹ್ಯ ಸ್ವರೂಪವಷ್ಟೆ. ಆದರೆ ಇದೇ ಬದುಕಿನ ಚರಮಗುರಿಯಲ್ಲ. ಈ ಲೌಕಿಕವನ್ನೂ ತಿರಸ್ಕರಿಸದೆ ಮುನ್ನಡೆದು ಆ ಪರಾತ್ಪರವಸ್ತುವಿನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದನ್ನೇ ನಮ್ಮವರು ನಿಶ್ರೇಯಸ್ಸು ಎಂದು ಕರೆದರು. ಅಂತೆಯೆ ಮತ್ತೊಬ್ಬರಿಗೆ ನೋವನ್ನುಂಟುಮಾಡದೆ, ಧರ್ಮದ ಅರ್ಥವನ್ನು ತಿಳಿದುಕೊಂಡು ಅದರಂತೆ ಆಚರಿಸಿದರೆ ಕಲ್ಯಾಣವಾಗುವುದು. ಸರ್ವಧರ್ಮ ಸ್ವಾರಸ್ಯವೂ ಅದೇ ಆಗಿದೆ. ಇದನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಆರ್ಯವಾಣಿ ಮೊಳಗಿತು.

"ಶ್ರೂಯತಾಂ ಧರ್ಮ ಸರ್ವಸ್ವಂ ಶ್ರುತ್ವಾಚೈವಾಽವಧಾರ್ಯತಾಂ
ಆತ್ಮನಃ ಪ್ರತಿಕೂಲಾನಿ ಪರೇಷಾಂ ನಸಮಾಚರೇತ್"

ಎಂದು. ಆದ್ದರಿಂದ ನಮ್ಮ ಜನಾಂಗ ಮತ್ತೊಮ್ಮೆ ಧರ್ಮವನ್ನು ಅರ್ಥಮಾಡಿಕೊಂಡು ಅದರ ಬೆಳಕಿನಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಯತ್ನ ಮಾಡಿದಾಗ ಮಾತ್ರ ಸಮಾಜದಲ್ಲಿ ಶಾಂತಿ ಮೂಡೀತು.

ಧರ್ಮದ ಸಾರ

ಭರತ ಖಂಡ ಜಗತ್ತಿಗೆ ಕೊಟ್ಟಿರುವಂತಹ ಕಾಣಿಕೆ ಯಾವ ಕಾಲಕ್ಕೂ ಸ್ಮರಿಸತಕ್ಕದ್ದಾಗಿದೆ. ಅದರ ಕೊಡುಗೆ ವಿಶ್ವಭ್ರಾತೃತ್ವ, ವಿಶ್ವಕಲ್ಯಾಣಕರವಾದುದು. ಭಾರತೀಯ ಧರ್ಮ ಎಂದೂ ಸಂಕುಚಿತ ಭಾವನೆಯುಳ್ಳದ್ದಾಗಲಿ, ವಿನಾಶಾತ್ಮಕವಾದುದಾಗಲಿ ಅಲ್ಲ ಅಥವಾ ಎಲ್ಲವನ್ನೂ ತುಳಿದು ತಾನು ಮಾತ್ರ ಮೇಲೆ ಬರಬೇಕೆಂಬ ಭಾವನೆಯುಳ್ಳದ್ದೂ ಅಲ್ಲ. ಪರಂತು ಅದು ಹೆಚ್ಚು ವಿಧಾನಾತ್ಮಕವಾದದ್ದೂ, ಭಾವನಾತ್ಮಕವಾದದ್ದೂ ಆಗಿದೆ. ಅದರ ಉದಾರಭಾವನೆ ವಿದೇಶದ ವಿಧರ್ಮೀಯರಿಗೂ ಎಡೆಕೊಟ್ಟಿತು. ಎಲ್ಲ ಮತಸಿದ್ಧಾಂತಗಳ ಸಮನ್ವಯವನ್ನೂ ಮೈಗೂಡಿಸಿಕೊಂಡಿತು. ಯಾವ ಬೈಬಲ್ ಧರ್ಮಗ್ರಂಥವಾಗಲಿ, ಕುರಾನಾಗಲಿ ಉದಯವಾಗುವುದಕ್ಕಿಂತ ಸಾವಿರಾರು ವರ್ಷಗಳ ಹಿಂದೆಯೇ ಸರ್ವಧರ್ಮ ಸಾರಸರ್ವಸ್ವವನ್ನು ನಮ್ಮ ಆರ್ಯವಾಣಿ ಸರ್ವಗ್ರಾಹ್ಯವಾಗಿ ಮೊಳಗಿತು.

''ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ

ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ''

ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ. ಇದೇ ಸರ್ವಧರ್ಮ ಸಾರಸಂಗ್ರಹ. ಒಂದು ವಿಷಯವನ್ನು ನಾವಿಂದು ಗಂಭೀರವಾಗಿ ಆಲೋಚಿಸಬೇಕಾಗಿದೆ. ಅದು ದೇಶಪ್ರೇಮಿಗಳ ಮೇಲೆ ಅತ್ಯಂತ ಪರಿಣಾಮ ಬೀರಿದೆ. ಯಾವ ದುರದೃಷ್ಟವೋ ಏನೊ ನಮ್ಮ ಜನ ನಮ್ಮ ಸಂಸ್ಕೃತಿಯ ಬಗ್ಗೆ ಅನಾದರತೆ, ಉದಾಸೀನತೆಯನ್ನು ತೋರಿಸುತ್ತಿದ್ದಾರೆ. ಅದು ನಿಜಕ್ಕೂ ಹಾನಿಪ್ರದ. ಭರತಖಂಡದಲ್ಲಿ ಇಂದು ಉಂಟಾಗಿರುವ ಅನಿಷ್ಟವಾತಾವರಣಕ್ಕೆ ಇಂದಿನ ರಾಷ್ಟ್ರನಾಯಕರು ನಮ್ಮ ಸಂಸ್ಕೃತಿ ಭೂಮಿಕೆಯ ವ್ಯವಹಾರವನ್ನು ಮರೆತಿರುವುದೇ ಮುಖ್ಯ ಕಾರಣವಾಗಿದೆ. ಅವರು ಅಧಿಕಾರದಾಹ, ಸ್ವಾರ್ಥಸಾಧನೆ, ಭೋಗಲಾಲಸೆಗಳಿಗೆ ಬಲಿಯಾಗಿ ದೇಶದ ಹಿತವನ್ನು ಕಡೆಗಣಿಸಿದ್ದಾರೆ. ಇದರಿಂದ ಇಂದು ಮಹಾನ್ ಅನರ್ಥ ಸಂಜನಿಸಿದೆ. ಆದ್ದರಿಂದ ಅದ್ಯಾಪಿ ನಮ್ಮ ಜನಾಂಗ ಮತ್ತು ನಾಯಕರು ಎಚ್ಚೆತ್ತು ವ್ಯವಹಾರದಲ್ಲಿ ನಮ್ಮ ಸಂಸ್ಕೃತಿಯನ್ನು ಅಳವಡಿಸಿಕೊಂಡಾಗ ಮಾತ್ರ ಜಗತ್ತು ನಮ್ಮಿಂದ ಯಾವುದನ್ನು ನಿರೀಕ್ಷಿಸುತ್ತಿದೆಯೋ ಅದನ್ನು ಕೊಡುವ ಸಾಮರ್ಥ್ಯವನ್ನು ಮರಳಿ ಪಡೆಯುತ್ತೇವೆ.

ಧರ್ಮ ಸಮನ್ವಯ

ಭರತ ಖಂಡ ಸರ್ವ ಸದ್ಧರ್ಮಗಳ ಸಮನ್ವಯದ ನೆಲೆವೀಡು. ಅದರಲ್ಲಿ ಕರ್ನಾಟಕವಂತೂ ಬೌದ್ಧ, ಜೈನ, ಶೈವ, ವೈಷ್ಣವ - ಹೀಗೆ ಎಲ್ಲ ಧರ್ಮಗಳ ಸಂಗಮಬೀಡು. ಈ ಕರ್ನಾಟಕದಲ್ಲಿ ಆಳಿದ ಮಹಾಪ್ರಭುಗಳು ಯಾವೊಂದು ಧರ್ಮವನ್ನೂ ಉಪೇಕ್ಷಿಸಿದವರಲ್ಲ. ಪರಂತು, ಅವರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಅದರ ರಕ್ಷಕರೂ ಆಗಿದ್ದರು. ಈ ಒಂದಂಶವನ್ನು ಇಂದಿಗೂ ಶಾಸನಗಳು ಶ್ರುತಪಡಿಸುತ್ತವೆ. ಹೊಯ್ಸಳ ಶಾಸನವೊಂದರಲ್ಲಿ,

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ।

ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ ॥

ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ ।

ಸೋಯಂ ನೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ॥

ಶಿವನೆಂದು ಶೈವರು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ನೈಯಾಯಿಕರು ಕರ್ತನೆಂದು, ಜೈನರು ಅರ್ಹನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ, ಅವನೇ ಈಶನು.....ಎಂದಿದೆ.

ಅಷ್ಟೇಕೆ, ಒಂದೇ ಸಂಸಾರದಲ್ಲಿ ಎಲ್ಲ ಧರ್ಮದವರೂ ಕೂಡಿ ಬಾಳ್ವೆ ನಡೆಸುತ್ತಿದ್ದರು. ಹೊಯ್ಸಳ ವಂಶದ ಬಿಟ್ಟಿದೇವ ಅಥವಾ ವಿಷ್ಣುವರ್ಧನನು ವಿಷ್ಣು ಭಕ್ತನಾಗಿದ್ದರೆ, ಅವನ ಪಟ್ಟದರಸಿಯಾದ ನಾಟ್ಯ ಸರಸ್ವತಿ ಶಾಂತಲಾದೇವಿ ಜಿನಭಕ್ತೆ, ಹರಭಕ್ತೆಯಾಗಿದ್ದಳು. ಆಕೆಯ ತಂದೆ ಮಾರಸಿಂಗಮಯ್ಯ ಶಿವಭಕ್ತ, ತಾಯಿ ಮಾಚಿಕಬ್ಬೆ ಜಿನಭಕ್ತೆ ಹೀಗೆ ಅವರ ಮನೆತನ ಜೈನ ಶೈವ ವೈಷ್ಣವ ಮತಗಳ ತ್ರಿವೇಣೀ ಸಂಗಮವಾಗಿತ್ತು.

ಒಟ್ಟಿನಲ್ಲಿ ಕನ್ನಡ ಭೂಮಿ ಸರ್ವಧರ್ಮ ಸಮನ್ವಯ ರೂಪವಾದ ಒಂದು ದಿವ್ಯ ಧರ್ಮಸಂದೇಶವನ್ನು ಜಗತ್ತಿಗೇ ನೀಡಿದೆ. ಆದರೆ ಇಂಥ ನೆಲದಲ್ಲಿ ಇಂದು ಮತ ಧರ್ಮಗಳ ಸಂಘರ್ಷ ಅವಿರತವಾಗಿ ಸಾಗುತ್ತಿರುವುದು ವಿಷಾದಕರ.

ವಿಶ್ವ ಧರ್ಮ

ಭಗವಾನ್ ಬಸವೇಶ್ವರರ ಪುಣ್ಯ ಅವತಾರದಿಂದ ಶರಣಧರ್ಮ ವಿಶ್ವಾದರಣೀಯವಾಯಿತು, ವಿಶ್ವಧರ್ಮವೆನಿಸಿತು. ಯಾವ ಧರ್ಮ ಮಾನವನ ಬದುಕಿನ ಕಲೆಯನ್ನು ಅರಿವು ಮಾಡಿಕೊಟ್ಟು ಕೃತಾರ್ಥರನ್ನಾಗಿ ಮಾಡುತ್ತದೆಯೋ, ತನ್ನ ಚರಮ ಧ್ಯೇಯವನ್ನು ಸಾಧಿಸಬಲ್ಲುದೋ ಅದೇ ವಿಶ್ವಧರ್ಮ. ಈ ಪ್ರಕಾರವಾಗಿ ಶರಣಧರ್ಮ ಸರ್ವರಿಗೂ ಮುಕ್ತದ್ವಾರವೆನಿಸಿದೆ. ಎಲ್ಲರಿಗೂ ಆತ್ಮೋದ್ಧಾರದ ಹಾದಿಯನ್ನು ತೋರಿಸಿದೆ. ಇಂದಿನ ಅನಂತ ಭೀಕರ ಸಮಸ್ಯೆಗಳಿಗೆ ಪರಿಹಾರ ಮಾರ್ಗ ನೀಡಿದೆ. ಆತ್ಮವಿಶ್ವಾಸ,

ರಾಷ್ಟ್ರಪ್ರೇಮ, ಕರ್ತವ್ಯನಿಷ್ಠೆ, ಮುಂತಾದ ಮಾನವೀಯ ಮೌಲ್ಯಗಳನ್ನು ಸಾರಿದೆ. "ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯಾ" ಎಂಬಂತಹ ವಿಶ್ವಭ್ರಾತೃತ್ವವನ್ನು ಉದ್ಘೋಷಿಸಿದೆ. ಕಾಯಕವೇ ಕೈಲಾಸ ಎನ್ನುವಂಥ ಮಹಾನ್ ಉದ್ಧಾರಕ ಮಂತ್ರವನ್ನು ಜಗತ್ತಿಗೆ ಕೊಟ್ಟಿದೆ. ಕಾಯಕ ಎಂಬುದು ಉದರ ಪೋಷಣೆಯಲ್ಲ, ಅದು ಆತ್ಮವಿಕಾಸದ ಮಾಧ್ಯಮ ಎಂದು ಸಾರಿದೆ. ಈ ಕಾರಣ ನಮ್ಮ ದೇಶದ ಉದ್ಧಾರಕ್ಕೆ ಎಂದಿಗಿಂತ ಇಂದು ಶರಣಧರ್ಮ ಅತ್ಯವಶ್ಯಕವಾಗಿದೆ.

ಮನವೆಂಬ ಮರ್ಕಟ

ಮಾನವನ ಮನಸ್ಸು ಸರ್ವ ಅಶಾಂತಿಗೆ ಮೂಲ. ಬಾಹ್ಯ ವ್ಯಾಪಾರಗಳೆಲ್ಲದಕ್ಕೂ ಅವನ ಭಾವನೆಗಳಿಗೂ ಮನಸ್ಸೇ ಕಾರಣ. ಭಾವದಲ್ಲಿ ಸೆಲೆಯೊಡೆದು ಮನಸ್ಸಿನಲ್ಲಿ ಉದ್ಭವವಾಗತಕ್ಕ ವಿಚಾರಗಳು ಮಾತಿನ ಸ್ವರೂಪದಲ್ಲಿಯೂ, ಕೃತಿಯ ಸ್ವರೂಪದಲ್ಲಿಯೂ ವ್ಯಕ್ತವಾಗುತ್ತವೆ. ಮನಸ್ಸು ಪರಿಶುದ್ಧವಾದಾಗ, ಅರಳಿದಾಗ ಭಾಷೆಗೆ ಗಾಂಭೀರ್ಯ ಹಾಗೂ ಕೃತಿಗೆ ಸೊಬಗು ಉಂಟಾಗುತ್ತದೆ. ಆದ್ದರಿಂದ ಮನಸ್ಸನ್ನು ಮೊದಲು ಪವಿತ್ರಗೊಳಿಸಬೇಕು. ಮನಸ್ಸು ಚಂಚಲಸ್ವಭಾವವುಳ್ಳದ್ದು. ವಿಷಯದಿಂದ ವಿಷಯಕ್ಕೆ, ವಸ್ತುವಿನಿಂದ ವಸ್ತುವಿಗೆ, ವಿಚಾರದಿಂದ ವಿಚಾರಕ್ಕೆ ಹಾರಾಡುವುದೇ ಅದರ ಸ್ವಭಾವವಾಗಿದೆ. ಅರ್ಜುನನು ಶ್ರೀ ಕೃಷ್ಣನನ್ನು `ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವಸುದುಷ್ಕರಂ` ಎಂದು ಪ್ರಶ್ನೆ ಮಾಡುತ್ತಾನೆ. `ಧರೆಯನಜಿನದಂತೆ ಸುರುಳಲಹುದು, ಮೇರುಗಿರಿಯನಂಗುಲಿಯ ಕೊನೆಯಲಾಳಲಹುದು, ಶರಧಿಯನೊಮ್ಮೆ ಪಾನ ಮಾಡಬಹುದು; ಸೈತಿರಿಸಬಾರದು ನಿಮಿಷಾರ್ಧಮೀಮನವನು` ಎಂದು ನಿಜಗುಣ ಶಿವಯೋಗಿಗಳು ಹಾಡಿದ್ದಾರೆ. 'ಮನವೆಂಬ ಮರ್ಕಟನ ತಡೆಯಲಾರೆನು ದೇವ ! ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ' ಎಂದು ಸರ್ಪಭೂಷಣ ಶಿವಯೋಗಿಗಳೂ, `ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು, ಹೊಂದಿದಲ್ಲಿ ಹೊಂದಲೀಯದೆನ್ನ ಮನವು, ನಿಂದಲ್ಲಿ ನಿಲ್ಲಲೀಯದೆನ್ನ ಮನವು` ಎಂದು ಬಸವಣ್ಣನವರೂ ಮನಸ್ಸಿನ ಚಂಚಲ ಸ್ವಭಾವವನ್ನು ಕುರಿತು ಹೇಳಿದ್ದಾರೆ. ಈ ಪ್ರಕಾರವಾಗಿ ಮನೋನಿಗ್ರಹವು ಅಸಾಧ್ಯವಾದರೂ ನಿರಂತರ ಅಭ್ಯಾಸದಿಂದ ಅದನ್ನು ಹದಗೊಳಿಸಬಹುದು. ಅದರ ಸ್ವಚ್ಛಂದ ಪ್ರವೃತ್ತಿಯನ್ನು ನಿರೋಧಿಸಬಹುದು. ಮನಸ್ಸಿನ ಪ್ರವೃತ್ತಿಯನ್ನು ತಡೆಯುವುದೆಂದರೆ ಅದನ್ನು ನಿರ್ವಿಷಯಕವಾಗಿ ಮಾಡುವುದೆಂದಲ್ಲ. ಮನಸ್ಸು ನಿರ್ವಿಷಯಕವಾಗಲಾರದು. ಅದರ ಪ್ರವೃತ್ತಿಯು ಸದ್ವಿಷಯಗಳ ಚಿಂತನೆಯಲ್ಲಿ ಪ್ರವಹಿಸುವುದೇ ಮನೋನಿಗ್ರಹ. ಈ ಮೂಲಕ ವ್ಯಕ್ತಿ ತನ್ನಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಂಡು, ಅಭಿವೃದ್ಧಿ ಹೊಂದಬಹುದು. ಅನೇಕ ಮಹಾನುಭಾವರು ಶ್ರೇಷ್ಠಮಟ್ಟದ ವ್ಯಕ್ತಿಗಳಾಗಲು ಇದನ್ನು ಸಾಧನವನ್ನಾಗಿ ಮಾಡಿಕೊಂಡು, ಉದಾತ್ತವಾದ ಸಂದೇಶಗಳನ್ನು ಜಗತ್ತಿಗೆ ನೀಡಿದ್ದಾರೆ. ಈ ಸಂದೇಶಗಳು ನಮಗೆ ಎಲ್ಲಾ ಕಾಲಕ್ಕೂ ದಾರಿದೀಪಗಳಾಗಿವೆ.

ಬ್ರಹ್ಮಚರ್ಯೆಯೇ ಸುಖದ ಮೂಲಹೇತು

ಸಂಯಮಿತ ಜೀವನ ಅರ್ಥಾತ್ ಬ್ರಹ್ಮಚರ್ಯೆಯು ಸುಖದ ಮೂಲಹೇತು. ಅದೇ ಮಾನವನ ಜೀವಿತದ ಸಾರಸರ್ವಸ್ವ. ಈ ಬ್ರಹ್ಮಚರ್ಯೆಯು ವ್ಯಾಪಕವಾದ ಅರ್ಥವುಳ್ಳದ್ದಾಗಿದ್ದರೂ ಅತ್ಯವಶ್ಯಕವಾದ ನಿಯಮ ಪರಿಪಾಲನೆ ವಿಷಯದಲ್ಲಿ ಜೀವನ ಸತ್ವವಾದ ವೀರ್ಯ ಸಂರಕ್ಷಣೆಯ ವಿಚಾರದಲ್ಲಿ ಬಳಸುವುದು ಒಂದು ಪದ್ಧತಿಯಾಗಿದೆ. ನಮ್ಮ ಭರತಖಂಡದಲ್ಲಿ ಪ್ರಾಚೀನ ಕಾಲದಿಂದಲೂ ಬ್ರಹ್ಮಚರ್ಯೆಯ ರಕ್ಷಣೆಗೆ ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಬ್ರಹ್ಮಚರ್ಯೆಯಿಂದಲೇ ಮನುಷ್ಯನ ಸರ್ವಶಕ್ತಿಗಳೂ ಶುದ್ಧವಾಗಿ ವಿಕಾಸವನ್ನು ಹೊಂದಿ ವಿಪುಲತೆಯನ್ನು ಪಡೆಯುತ್ತವೆಯೆಂದು ವೇದಗಳು ಸಾರಿವೆ.

ಬ್ರಹ್ಮಚರ್ಯೇಣ ತಪಸಾ ರಾಜಾ ರಾಷ್ಟ್ರಂ ವಿ ರಕ್ಷತಿ ।
ಆಚಾರ್ಯೋ ಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ ॥
ಬ್ರಹ್ಮಚರ್ಯೇಣ ತಪಸಾ ದೇವಾ ಮೃತ್ಯುಂ ಅಪಾಘ್ನತ ।
ಇಂದ್ರೋಹಿ ಬ್ರಹ್ಮಚರ್ಯೇಣ ದೇವೇಭ್ಯಃ ಸ್ವರಾಭರತ್ ॥

ಬ್ರಹ್ಮಚರ್ಯ ರೂಪ ತಪಸ್ಸಿನಿಂದಲೇ ರಾಜನು ಪ್ರಜೆಗಳನ್ನು ಸಂರಕ್ಷಣೆ ಮಾಡುತ್ತಾನೆ. ಆಚಾರ್ಯನು ಬ್ರಹ್ಮಚಾರಿಯಾಗಿರತಕ್ಕ ಶಿಷ್ಯನನ್ನು ಇಚ್ಛಿಸುತ್ತಾನೆ. ಬ್ರಹ್ಮಚರ್ಯೆಯಿಂದಲೇ ದೇವತೆಗಳು ಮೃತ್ಯುವನ್ನು ಜಯಿಸಿದರು. ಬ್ರಹ್ಮಚರ್ಯೆಯಿಂದಲೇ ಇಂದ್ರನು ದೇವತೆಗಳಿಗೆ ಸ್ವರ್ಗಸಂಪತ್ತನ್ನು ತಂದು ಕೊಟ್ಟ, ಮುಂತಾದ ಅನೇಕ ಪವಿತ್ರವಾಣಿಗಳು ಬ್ರಹ್ಮಚರ್ಯೆಯ ಹಿರಿಮೆಯನ್ನು ಹೊಗಳಿವೆ. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ಸುಖದ ಮೂಲಹೇತುವನ್ನು ಕಂಡುಕೊಳ್ಳಬೇಕಾದರೆ ಅತ್ಯವಶ್ಯಕವಾಗಿ ಬ್ರಹ್ಮಚರ್ಯೆಯನ್ನು ಪಾಲಿಸಬೇಕು.

ಸುಳ್ಳಿನ ಸಮರ್ಥನೆ

ಇಂದು ಸುಳ್ಳು ಹೇಳುವ ಪ್ರವೃತ್ತಿ ನಮ್ಮ ಜನಾಂಗದಲ್ಲಿ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಬೆಳೆದು ಬಂದಿದೆ.

ಒಂದೂರಿನಲ್ಲಿ ತಂದೆ - ಮಗ ಇಬ್ಬರಿದ್ದರು. ಸುಳ್ಳು ಹೇಳುವುದರಲ್ಲಿ ತಂದೆಗಿಂತ ಮಗ, ಮಗನಿಗಿಂತ ತಂದೆ ನಿಸ್ಸೀಮರು. ಒಮ್ಮೆ ಒಬ್ಬ ಸಾಲ ವಸೂಲಿಗೆ ಬಂದ. "ನಿನ್ನ ತಂದೆ ಎಲ್ಲಿ?" ಮಗನನ್ನು ಕೇಳಿದ. "ಆಕಾಶ ತೂತು ಬಿದ್ದಿತ್ತು. ನಮ್ಮ ಅಪ್ಪ ಹೊಲಿಗೆ ಹಾಕೋಕೆ ಹೋಗವ್ನೆ" ಮಗ ಹೇಳಿದ. ಸರಿ ಸಾಲಗಾರ ಹೊರಟುಹೋದ. ತಂದೆ ಒಳಗಡೆಯಿಂದ ಬಂದ "ಏ ಮಗನೆ, ಏನು ಹೇಳಿ ಕಳುಹಿಸಿದೆ?" "ತೂತು ಬಿದ್ದ ಆಕಾಶಕ್ಕೆ ಹೊಲಿಗೆ ಹಾಕೋಕೆ ಹೋಗವ್ನೆ ಎಂದು ಉತ್ತರ ಕೊಟ್ಟು ಕಳುಹಿಸಿದೆ." ತಂದೆ ರೇಗಿ ಹೋದ, "ನೀನು ನನಗೆ ತಕ್ಕ ಮಗನಲ್ಲ" ಎಂದು ನೀರಿಲ್ಲದ ಬಾವಿಗೆ ತಳ್ಳೇ ಬಿಟ್ಟ. ಮಗ ಹೇಗೋ ಬಾವಿಯಿಂದ ಮೇಲಕ್ಕೆದ್ದು ಬಂದ. "ಬಾವಿಯಿಂದ ಮೇಲಕ್ಕೆ ಹೇಗೆ ಎದ್ದು ಬಂದೆ?" "ಮಳೆ ಬೀಳ್ತಾ ಇತ್ತು. ಆ ಮಳೆ ಹನಿ ಹಿಡಿದುಕೊಂಡು ಎದ್ದು ಬಂದೆ". ಮಗನ ಉತ್ತರ ಕೇಳಿ ತಂದೆಗೆ ಪರಮ ಸಂತೋಷವಾಯಿತು. "ಈಗ ನನಗೆ ತಕ್ಕ ಮಗ ಎನಿಸಿದೆ" ಎಂದು ಶಭಾಷ್‌ಗಿರಿಕೊಟ್ಟ.

ಹೀಗೆ ಹೇಳಿದ ಒಂದು ಸುಳ್ಳಿನ ಸಮರ್ಥನೆಗಾಗಿ ಸುಳ್ಳಿನ ಮಾಲೆಯನ್ನೇ ಕಟ್ಟುತ್ತಾರೆ. ಇದರಿಂದ ಯಾರಿಗೂ ಲಾಭವಿಲ್ಲ. ಪರಂತು ಹಾನಿಯೇ ಹೆಚ್ಚು.

ಹೆಣ್ಣಿನ ಪ್ರಭಾವ

ಜಗತ್ತಿನ ಎಲ್ಲ ಮಹಾಪುರುಷರ ಜೀವನದಲ್ಲಿ ಹೆಣ್ಣಿನ ಪ್ರಭಾವಮುದ್ರೆಯನ್ನು ಕಾಣಬಹುದು. ಹೆಣ್ಣು ತಾನು ತಾಯಿಯಾಗಿ, ಪತ್ನಿಯಾಗಿ ಅವರ ಮೇಲೆ ಸತ್ಪ್ರಭಾವವನ್ನು ಬೀರಿದ್ದಾಳೆ. ಅವರ ಬಾಳು ಬೆಳಗಲು ತನ್ನ ತ್ಯಾಗ ಮತ್ತು ಸಹನಾಗುಣಗಳಿಂದ ಶ್ರಮಿಸಿದ್ದಾಳೆ. ರವೀಂದ್ರರು ಒಂದು ಕಡೆ ಹೆಣ್ಣಿನ ತ್ಯಾಗ ಮತ್ತು ಜವಾಬ್ದಾರಿಗಳ ಬಗ್ಗೆ 'The Woman is the embodiment of service and sacrifice' ಎಂಬುದಾಗಿ ನುಡಿದಿದ್ದಾರೆ. ಮತ್ತು ಅದನ್ನು ಮಹಿಳೆ ಹೇಗೆ ನಿರ್ವಹಿಸಬಲ್ಲಳೆಂಬುದಕ್ಕೆ ತಮ್ಮ ಅನೇಕ ಕೃತಿಗಳಲ್ಲಿ ಸಮರ್ಥನೆ ನೀಡಿದ್ದಾರೆ. ಮಹಾತ್ಮಾಗಾಂಧಿಯವರು ಕೂಡ ಹೆಣ್ಣಿನಿಂದ ಪ್ರಭಾವಿತರಾದರು. ಗಾಂಧೀಜಿ ಚಿಕ್ಕವರಾಗಿದ್ದಾಗ ಅವರನ್ನು ಸಾಕುತ್ತಿದ್ದ ರಂಭಾ ಎಂಬ ದಾದಿಯಿಂದ ಪ್ರಭಾವಿತರಾದರು. ಎಳೆಯವರಿದ್ದಾಗ ಗಾಂಧಿ ತುಂಬಾ ಹೆದರುತ್ತಿದ್ದರು. ಕತ್ತಲು ಕಂಡರೆ ನಡುಗುತ್ತಿದ್ದರು. ದಾದಿ ಅವರಿಗೆ ಧೈರ್ಯ ತುಂಬಿದಳು. "ಭಯವಾದಾಗ ರಾಮ ನಾಮವನ್ನು ಸ್ಮರಿಸು, ಧೈರ್ಯ ತಾನಾಗಿಯೇ ಬರುತ್ತದೆ" ಎಂದು ಮಗುವಿನ ಮುಗ್ಧಮನದಲ್ಲಿ ದೇವರನಾಮದ ಬೀಜ ಬಿತ್ತಿದಳು. ಗಾಂಧೀಜಿಯವರ ಮೇಲೆ ಪ್ರಭಾವಬೀರಿದ ಎರಡನೆಯ ಹೆಣ್ಣು ಅವರ ತಾಯಿ. ಗಾಂಧೀಜಿ ಪರದೇಶಕ್ಕೆ ಹೊರಟಾಗ ಆಕೆ ಮೂರು ಕಟ್ಟಳೆಗಳನ್ನು ಹಾಕಿ ಆಣೆ ಮಾಡಿಸಿದಳು. ಒಂದನೆಯದು ಮದ್ಯಪಾನ ಮಾಡಬಾರದು, ಎರಡನೆಯದು ಮಾಂಸ ತಿನ್ನಬಾರದು. ಮೂರನೆಯದು ಪರಸ್ತ್ರೀ ಸಂಗಮಾಡಬಾರದು. ಗಾಂಧೀಜಿಯವರ ವಿದೇಶ ಜೀವನದಲ್ಲಿ ಅವರ ದೃಢಚಿತ್ತವನ್ನು ಅಲುಗಾಡಿಸುವ ಪ್ರಸಂಗಗಳು ಘಟಿಸಿದಾಗ ತಾಯಿಯ ವಚನವನ್ನು ನೆನೆಸಿಕೊಂಡು ಪಾರಾಗುತ್ತಿದ್ದರು. ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ಮೂರನೆಯ ಮಹಿಳೆಯೆಂದರೆ ಅವರ ಸತಿ ಕಸ್ತೂರಿಬಾ. ಅವರೇ ಹೇಳಿದ್ದಾರೆ "ನನಗೆ ಸತ್ಯಾಗ್ರಹದ ಕಲ್ಪನೆ ಬಂದದ್ದು, ನನ್ನ ಸತಿಯಿಂದ" ಎಂದು. ಹೀಗೆ ಮಹಾತ್ಮರ ಜೀವನದಲ್ಲಿ ಮಹಿಳೆಯ ಪಾತ್ರ ಬಹು ದೊಡ್ಡದು.

ಹೆಣ್ಣು ಕುಟುಂಬದ ಕಣ್ಣು. ಅವಳು ಬುದ್ಧಿವಂತಳಾಗಿ ತನ್ನ ಮಕ್ಕಳನ್ನು ಸತ್ಪ್ರಜೆಯನ್ನಾಗಿ ಬೆಳೆಸಿದರೆ ಆ ಕುಟುಂಬ ಹಸನಾಗುತ್ತದೆ. ಹೀಗೆ ಒಂದೊಂದು ಕುಟುಂಬವೂ ಹಸನಾದರೆ ಸಮಾಜ ಹಸನಾಗುವುದು, ತನ್ಮೂಲಕ ರಾಷ್ಟ್ರವೂ ಹಸನಾದೀತು.

ಸಂಕೀರ್ಣ ಚಿತ್ರಸಂಪುಟ



ಶ್ರೀಗಳು, ಸುತ್ತೂರು ಜಗದ್ಗುರುಗಳು



ಶ್ರೀಗಳವರಿಗೆ ಆದಿಚುಂಚನಗಿರಿ ಜಗದ್ಗುರುಗಳಿಂದ ಸನ್ಮಾನ



ಶ್ರೀಗಳು, ಮುಂಡರಗಿ ಜಗದ್ಗುರುಗಳು



ಶ್ರೀಗಳು ಮತ್ತು ಶ್ರೀ ಮುಮ್ಮಡಿ ಶಿವಾನಂದ ಸ್ವಾಮಿಗಳು



ಶ್ರೀಗಳು ಗದುಗಿನ ಜಗದ್ಗುರುಗಳು



ಶ್ರೀಗಳು - ಸುತ್ತೂರು ಜಗದ್ಗುರುಗಳು,
ಹುಬ್ಬಳ್ಳಿ ಶ್ರೀಗಳು ಮತ್ತು
ಶ್ರೀ ದೇವರಾಜ ಅರಸು



ಶ್ರೀಗಳು - ಇಲಕಲ್ ಶ್ರೀಗಳು, ಕನಕಪುರದ
ದೇಗುಲ ಶ್ರೀಗಳು



ಗುರುವಂದನ ಸಮಾರಂಭದಲ್ಲಿ ವಿವಿಧ
ಮಠಾಧೀಶರುಗಳು



ಶ್ರೀಗಳು,
ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು,
ಶ್ರೀ ಸುಜನಾ ಅವರು



ಶ್ರೀಗಳು - ಶ್ರೀ ಶಿವಲಿಂಗಪ್ಪನವರು



ಶ್ರೀಗಳು - ಶ್ರೀ ವೀರೇಂದ್ರ ಪಾಟೀಲರು



ಶ್ರೀಗಳು - ಶ್ರೀ ಸಿದ್ಧರಾಮಯ್ಯನವರು
(ಉಪ ಮುಖ್ಯಮಂತ್ರಿ)



ಶ್ರೀಗಳು,
ಶ್ರೀ ಕೆ.ಎಚ್. ರಂಗನಾಥ್ ಅವರು



ಶ್ರೀಗಳು ಶ್ರೀ ಶಿವರಾಜ್ ಪಾಟೀಲ್
(ಮಾಜಿ ಲೋಕಸಭಾ ಸದಸ್ಯರು)
ಶ್ರೀ ಎಸ್. ಮಲ್ಲಿಕಾರ್ಜುನಯ್ಯ
(ಮಾಜಿ ಉಪಸಭಾಪತಿ -ಲೋಕಸಭೆ)
ಶ್ರೀ ಜಿ.ಎಸ್. ಮುದ್ದಪ್ಪನವರು
(ಕಾರ್ಯಾಧ್ಯಕ್ಷರು , ವಜ್ರಮಹೋತ್ಸವ ಸಮಿತಿ)



ಶ್ರೀಮಠದ ಸಮಾರಂಭದಲ್ಲಿ
ಶ್ರೀ ಜಿ.ಪಿ. ಶಿವಪ್ಪನವರು (ಶಾಸಕರು)



ಶ್ರೀಗಳವರಿಂದ ಶ್ರೀ ಎಂ.ಪಿ. ಪ್ರಕಾಶ್
(ಸಚಿವರು) ಅವರಿಗೆ ಸನ್ಮಾನ



ಶ್ರೀಗಳು - ಸುತ್ತೂರು ಜಗದ್ಗುರುಗಳು
ಶ್ರೀ ಎಂ.ಪಿ. ಪ್ರಕಾಶ್,
ಶ್ರೀ ಹೆಚ್.ಡಿ. ದೇವೇಗೌಡರು



ಶ್ರೀಗಳವರಿಂದ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೆ ಸನ್ಮಾನ



ಶ್ರೀಗಳು ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಸಚಿವರು)
ಶ್ರೀ ಎಂ.ಎಸ್. ರಾಮಯ್ಯ ಅವರು



ಶ್ರೀಗಳು ಶ್ರೀ ಎಸ್.ಎಸ್. ಪಾಟೀಲ್ (ಸಚಿವರು) ಸಿದ್ಧಗಂಗಾ
ಸಹಕಾರಿಬ್ಯಾಂಕಿನ ಉದ್ಘಾಟನಾ ಸಮಾರಂಭದಲ್ಲಿ



ಶ್ರೀಗಳು -ಶ್ರೀಮತಿ ಬಸವರಾಜೇಶ್ವರಿ (ಮಾಜಿ ಕೇಂದ್ರ ಸಚಿವೆಯರು)
ಶ್ರೀ ರೇವಣ್ಣ (ಶಾಸಕರು)



ಶ್ರೀಗಳವರಿಂದ ಶ್ರೀ ಎಸ್.ಆರ್. ಬೊಮ್ಮಾಯಿಯವರಿಗೆ ಸನ್ಮಾನ



ಶ್ರೀಗಳು - ಶ್ರೀ ಪುಟ್ಟಸ್ವಾಮಿ ಗೌಡರು
(ಸಚಿವರು)



ಶ್ರೀಗಳವರಿಗೆ ಶ್ರೀ ಅಜೀಜ್ ಸೇಟ್
(ಸಚಿವರು) ಅವರಿಂದ ಶಾಲಿನ ಅರ್ಪಣೆ



ಶ್ರೀಗಳು -ಶ್ರೀ ಚಂದ್ರಶೇಖರಮೂರ್ತಿ
(ಸಚಿವರು)



ಶ್ರೀಮಠದ ಉತ್ತರಾಧಿಕಾರಿಗಳಾದ ಶ್ರೀ
ಸಿದ್ಧಲಿಂಗ ಸ್ವಾಮಿಗಳೊಂದಿಗೆ ಶ್ರೀ
ವೀರೇಂದ್ರ ಪಾಟೀಲರು (ಮಾಜಿ
ಮುಖ್ಯಮಂತ್ರಿಗಳು)



ಶ್ರೀಗಳು - ಶ್ರೀ ರಾಜಶೇಖರಮೂರ್ತಿಗಳು (ಕೇಂದ್ರದ ಮಾಜಿ ಸಚಿವರು)



ಶ್ರೀಗಳು, ಶ್ರೀ ಭೀಮಣ್ಣ ಖಂಡ್ರೆ (ಸಚಿವರು), ಶ್ರೀ ಜಾಫರ್ ಷರೀಫ್ (ಕೇಂದ್ರದ ಮಾಜಿ ಸಚಿವರು) ಶ್ರೀ ಮಂಜುನಾಥ್ (ಮಾಜಿ ಸಚಿವರು) ಹಾಗೂ ಮುಂದರಗಿ ಶ್ರೀಗಳು



ಶ್ರೀಗಳು -ಶ್ರೀ ಚಂದ್ರಶೇಖರ್ (ಮಾಜಿ ಸಚಿವರು)



ಶ್ರೀಗಳು, ಸುತ್ತೂರು ಜಗದ್ಗುರುಗಳು, ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು), ಶ್ರೀ ಎಸ್. ಮಲ್ಲಿಕಾರ್ಜುನಯ್ಯ, ಶ್ರೀಮತಿ ಬಸವರಾಜೇಶ್ವರಿ, ಶ್ರೀಮತಿ ರಾಣಿ ಸತೀಶ್ (ಉಪ ಸಭಾಪತಿ - ವಿಧಾನಪರಿಷತ್)



ಶ್ರೀಗಳು, ಇಲಕಲ್ ಶ್ರೀಗಳು ಮತ್ತು
ಶ್ರೀ ಎಸ್. ನಿಜಲಿಂಗಪ್ಪನವರು

ಶ್ರೀಗಳು, ಶ್ರೀ ರೇವಣ್ಣ ಸಿದ್ದಯ್ಯ, ಐ.ಪಿ.ಎಸ್.,
ಶ್ರೀಮಠದ ಹಳೆಯ ವಿದ್ಯಾರ್ಥಿ





ಶ್ರೀ ಶಂಕರ ಬಿದರಿ, ಐ.ಪಿ.ಎಸ್.



ಶ್ರೀಗಳು ಶ್ರೀ [illegible]

ಜೀವನ ಕಲೆ

ಜೀವನವೆನ್ನುವುದು ಒಂದು ಕಲೆ; ಸಂಗೀತ, ಸಾಹಿತ್ಯಾದಿ ಕಲೆಗಳಿದ್ದಂತೆ. ಕಲೆಯ ಸಿದ್ಧಿಗೆ ಸಾಧನೆ ಮುಖ್ಯ. ಸಂಗೀತವನ್ನು ಸಶಾಸ್ತ್ರೀಯವಾಗಿ ಹಲವಾರು ವರ್ಷಗಳ ಕಾಲ ಆ ಕಲೆಯನ್ನು ರೂಢಿಸಿಕೊಂಡ ಸಂಗೀತಗಾರ ಮಧುರವಾಗಿ ಹಾಡಿದರೆ ಶ್ರೋತೃಗಳಿಗೆ ಕರ್ಣಾನಂದವಾಗುತ್ತದೆ. ಆದರೆ ಅಭ್ಯಾಸವಿಲ್ಲದೆ ಕಲೆಯ ಗಂಧವಿಲ್ಲದವನು ಹಾಡಿದರೆ ಅದು ಗಾರ್ದಭ ಸಂಗೀತವಾಗುತ್ತದೆ. ಅದರಂತೆ ಸಾಹಿತ್ಯಾಭ್ಯಾಸವಿಲ್ಲದವನು ಸಾಹಿತ್ಯ ರಚನೆ ಮಾಡಿದರೆ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ಅದರಂತೆ ಜೀವನ ಕಲೆಯನ್ನು ಅರಿಯದವನು ಸಮಾಜದಲ್ಲಿ ಹಗುರನಾಗಬೇಕಾಗುವುದು. ಆದರೆ ಈ ಜೀವನ ಕಲೆ ಒಂದು ದಿವಸದಲ್ಲಿ, ಒಂದು ತಿಂಗಳಲ್ಲಿ, ಒಂದು ವರ್ಷದಲ್ಲಿ ಬರುವಂಥದಲ್ಲ. ಆ ಕಲೆಯನ್ನು ರೂಢಿಸಿಕೊಳ್ಳಬೇಕಾದರೆ ಬದುಕಿನುದ್ದಕ್ಕೂ ನಿರಂತರ ಸಾಧನೆ ನಡೆಯಬೇಕು. ಯಾವ ಮನುಷ್ಯನಲ್ಲಿಯೂ ನೂರಕ್ಕೆ ನೂರರಷ್ಟು ಒಳ್ಳೆಯ ಗುಣಗಳಿರುವುದಿಲ್ಲ ಅಥವಾ ನೂರಕ್ಕೆ ನೂರರಷ್ಟು ದುಷ್ಟಗುಣಗಳೂ ಇರುವುದಿಲ್ಲ. ಇದು ತತ್ತ್ವಜ್ಞಾನಿಗಳ ಮಾತು. ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಕೆಟ್ಟಗುಣಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಂಡು ಒಳ್ಳೆಯ ಗುಣಗಳ ಸಂಖ್ಯೆಯನ್ನು ಬೆಳೆಸಿಕೊಂಡಾಗ ಆದರ್ಶ ಪುರುಷನಾಗುತ್ತಾನೆ. ಈ ಸಂಖ್ಯೆ ಹೆಚ್ಚಾದಾಗ ಲೋಕಪೂಜ್ಯನಾಗುತ್ತಾನೆ. ಈ ಒಂದು ಸಾಧನೆ ನಿರಂತರವಾಗಿ ನಡೆಯಬೇಕು. ನಡೆಯುವಾಗ, ನುಡಿಯುವಾಗ, ವ್ಯವಹರಿಸುವಾಗ ತಿದ್ದಿಕೊಳ್ಳಬೇಕು. ಇದು ಚಿಕ್ಕಂದಿನಿಂದಲೂ ನಡೆಯಬೇಕು. ಹೀಗೆ ಕ್ರಮವರಿತ ಸಾಧನೆ ಒಂದು ಶಕ್ತಿಯಾಗಿ ಬೆಳೆಯುತ್ತದೆ. ಇದನ್ನು ಇಚ್ಛಾ ಶಕ್ತಿ ಎಂದು ಕರೆಯುತ್ತಾರೆ. ಇಂಥ ಇಚ್ಛಾಶಕ್ತಿಯನ್ನು ಬೆಳೆಸಿಕೊಂಡಾಗ ಮಾತ್ರ ವ್ಯಕ್ತಿ ಲೋಕವಂದ್ಯನಾಗುತ್ತಾನೆ.

ಶಿಕ್ಷಕ

ಭರತ ಖಂಡದ ಸಂಸ್ಕೃತಿಯಲ್ಲಿ ಶಿಕ್ಷಕನಿಗೆ ಮಹತ್ತರವಾದ ಸ್ಥಾನವಿದೆ. ನಮ್ಮ ಪ್ರಾಚೀನ ಪರಂಪರೆಯಂತೂ ಅವನನ್ನು ಆಚಾರ್ಯ ಎಂಬ ಶಬ್ದದಿಂದ ಕರೆದು ಗೌರವಿಸಿ ಉಚ್ಚಸ್ಥಾನವನ್ನು ಕೊಟ್ಟಿದೆ. ವಿಶೇಷವಾಗಿ ಆಚಾರ್ಯ ಎಂದೊಡನೆ ಘನೀಭೂತವಾದ ಪಾಂಡಿತ್ಯವುಳ್ಳವನು, ಸರಳಜೀವಿ, ತ್ಯಾಗಜೀವಿ ಮುಂತಾದ ಅರ್ಥಗಳನ್ನು ಕಲ್ಪಿಸಬಹುದಾಗಿದೆ.

ನಮ್ಮ ಪ್ರಾಚೀನ ಕಾಲದ ಶಿಕ್ಷಕನದು ಕೇವಲ ಅಧ್ಯಾಪನ ಕಾರ್ಯ ಮಾತ್ರವಲ್ಲ, ಪರಂತು ಸಮಾಜ ಸುಧಾರಣೆಯ ಕಾರ್ಯವನ್ನೂ ಆತ ಕೈಗೊಳ್ಳುತ್ತಿದ್ದ. ಒಂದು ಗ್ರಾಮದ ಜನತೆ ತಮ್ಮ ಅನೇಕ ಸಮಸ್ಯೆಗಳನ್ನು ಅವನ ಮುಂದೆ ಬಗೆಹರಿಸಿಕೊಳ್ಳುತ್ತಿತ್ತು. ಅವನು ಆ ಊರಿನ ನ್ಯಾಯಾಧಿಪತಿಯೂ ಆಗಿರುತ್ತಿದ್ದ. ಅಷ್ಟೇ ಅಲ್ಲ, ಶ್ರಾವಣ, ಕಾರ್ತೀಕಾದಿ ಶುಭ ಮಾಸಗಳಲ್ಲಿ ಗ್ರಾಮದ ಜನತೆಯನ್ನು ಸಮಾವೇಶಗೊಳಿಸಿ ಶರಣಲೀಲಾಮೃತದಂಥ ಸದ್ಗ್ರಂಥಗಳನ್ನು ವಾಚನ ಮಾಡಿ, ಅರ್ಥ ಹೇಳಿ, ಜ್ಞಾನವನ್ನು ಬೋಧೆ ಮಾಡುತ್ತಿದ್ದ. ಹೀಗೆ ಶಿಕ್ಷಕ ಆ ಗ್ರಾಮದ ಕಣ್ಣಾಗಿ, ಗುರುತರ ಜವಾಬ್ದಾರಿಯನ್ನು ಹೊತ್ತು ತನ್ನ ಪವಿತ್ರ ವೃತ್ತಿಯನ್ನು ನಿರ್ವಹಿಸುತ್ತಿದ್ದ. ಸಮಾಜವೂ ಹಾಗೆ ಆತನನ್ನು ಗೌರವಿಸುತ್ತಿತ್ತು. ಆದರೆ ಇಂದು ಅದೆಲ್ಲವೂ ತದ್ವಿರುದ್ಧವಾಗಿದೆ. ಇನ್ನಾದರೂ ನಮ್ಮ ಶಿಕ್ಷಕ ವರ್ಗ ಆಚಾರ್ಯತ್ವದ ಬೆಲೆಯರಿತು ಆದರ್ಶಶಿಕ್ಷಕರಾಗಿ, ಹೊಣೆ ಹೊತ್ತು ಕಾರ್ಯ ಪ್ರವೃತ್ತರಾದಾಗ, ಅದರಂತೆ ಸಮಾಜ ಅವರನ್ನು ಗೌರವಿಸಿದಾಗ ಮಾತ್ರ ನಮ್ಮ ದೇಶದಲ್ಲಿ ಮಂಗಳ ವಾತಾವರಣ ಮೂಡೀತು. ಭರತಖಂಡ ಜಗತ್ತಿನಲ್ಲಿ ತನ್ನ ಗುರು ಸ್ಥಾನವನ್ನು ಉಳಿಸಿಕೊಂಡೀತು.

(ಸಂ) ಕೆ. ಬಸವರಾಜು

ಶ್ರೀಗಳವರ ದೃಷ್ಟಾಂತ ಕಥೆಗಳು

ಕಲ್ಮಶ ಮನಸ್ಸು

ಒಮ್ಮೆ ಓರ್ವ ಮಹಾರಾಜ ಕುದುರೆಯೇರಿ ರಾಜ್ಯ ಪರಿವೀಕ್ಷಣೆಗಾಗಿ ಹೊರಟ. ಮಧ್ಯಾಹ್ನ ಸಮಯವಾಯಿತು, ಬಿಸಿಲು ವಿಪರೀತ. ಹೀಗೆ ಪ್ರಯಾಣ ಮಾಡುತ್ತಿರುವಾಗ ಮಾರ್ಗಮಧ್ಯೆ ಒಂದು ತಂಪಾದ ತೋಟ ಸಿಕ್ಕಿತು. ರಾಜ ಅಲ್ಲಿ ವಿಶ್ರಮಿಸಿಕೊಳ್ಳಲು ಕುದುರೆಯಿಂದಿಳಿದ. ಆ ತೋಟದ ಮಾಲೀಕನೂ ಅಲ್ಲಿಯೇ ಇದ್ದ. ಪ್ರಭುಗಳನ್ನು ನೋಡಿದ. ಕೂಡಲೆ ಭಯಭಕ್ತಿಯಿಂದ ಪ್ರಭುಗಳನ್ನು ತನ್ನ ತೋಟದೊಳಗೆ ಕರೆದೊಯ್ದ. ನಂತರ ಪಕ್ವವಾಗಿ ಬಿರಿದಿರುವ ದಾಳಿಂಬೆ ಹಣ್ಣನ್ನು ಕಿತ್ತು ತಂದು ಲೋಟದಲ್ಲಿ ರಸ ಹಿಂಡಿದ. ಲೋಟ ರಸದಿಂದ ತುಂಬಿತು. ಮಹಾರಾಜನಿಗೆ ಪಾನಮಾಡಲು ಕೊಟ್ಟ. ಮಹಾರಾಜ ಪಾನ ಮಾಡಿದ. ಬಹಳ ಸ್ವಾದುವಾಗಿತ್ತು. ಅವನ ಹಸಿವು ಬಾಯಾರಿಕೆಗಳೆಲ್ಲಾ ಪರಿಹಾರವಾದುವು. ಆದರೆ ಮನಸ್ಸಿನಲ್ಲಿ ಕೆಟ್ಟ ಆಲೋಚನೆ ಮೂಡಿತು, ಈ ತೋಟ ಬಹಳ ಫಲವತ್ತಾಗಿದೆ. ಆದಾಯ ಜಾಸ್ತಿ ಬರುತ್ತದೆ. ಆದ್ದರಿಂದ ಈ ತೋಟಕ್ಕೆ ಕಂದಾಯ ಇನ್ನು ಹೆಚ್ಚು ಮಾಡಬೇಕು ಎಂದುಕೊಂಡ. ಆಮೇಲೆ ಆ ಮಧುರವಾದ ರಸವನ್ನು ಇನ್ನೂ ಒಂದು ಲೋಟ ಕುಡಿಯುವ ಆಸೆ ಅವನಿಗುಂಟಾಯಿತು. ಕೇಳಿದ ಮಾಲೀಕ ಸಂತೋಷದಿಂದ ತಂದು ಕೊಟ್ಟ. ರಾಜನೂ ಪಾನಮಾಡಿದ. ಆದರೆ ಮೊದಲು ಕುಡಿದ ರಸದಷ್ಟು ಮಧುರವಾಗಿರಲಿಲ್ಲ. ಕಹಿಯಾಗಿತ್ತು. ಮಹಾರಾಜ ಮಾಲೀಕನನ್ನು ಪ್ರಶ್ನೆಮಾಡಿದ, "ಏನಯ್ಯಾ, ಎರಡನೆಯ ಭಾರಿ ತಂದ ಹಣ್ಣು ಅದೇ ಮರದ್ದೊ ಅಥವಾ ಬೇರೇ ಮರದ್ದೋ?" , "ಸ್ವಾಮಿ ಅದೇ ಮರದ್ದು, ಅದೇ ಕೊಂಬೆಯದು" ಮಾಲೀಕ ಉತ್ತರ ಕೊಟ್ಟ. ರಾಜನಿಗೆ ಆಶ್ಚರ್ಯವಾಯಿತು. ಅದು ಸಮಸ್ಯೆಯೂ ಆಯಿತು. ಕೂಡಲೆ ಊರಿಗೆ ತೆರಳಿದ.

ಮರುದಿನವೆ ಎಲ್ಲ ವಿದ್ವಾಂಸರನ್ನು ಕರೆಸಿದ. ತನ್ನ ಸಮಸ್ಯೆಯನ್ನು ಅವರ ಮುಂದಿಟ್ಟ : "ಒಂದೇ ಮರದ ಒಂದೇ ಕೊಂಬೆಯ ಹಣ್ಣಿನ ರಸವು ಮೊದಲು ಕುಡಿದಾಗ ಸಿಹಿಯಾಗಿರಲು, ಎರಡನೆಯ ಬಾರಿ ಕುಡಿದಾಗ ಕಹಿಯಾಗಿರಲು ಕಾರಣವೇನು?". ಎಲ್ಲಾ ವಿದ್ವಾಂಸರು ಆಲೋಚನಾ ಮಗ್ನರಾದರು. ಯಾರಿಗೂ ಪರಿಹಾರ ಹೊಳೆಯಲಿಲ್ಲ. ಆ ಸಮಸ್ಯೆ ದಿನೇ ದಿನೇ ರಾಜನ ತಲೆಯನ್ನು ತಿನ್ನತೊಡಗಿತು. ಕೊನೆಗೆ ಒಬ್ಬ ಸಾಧುವನ್ನು ಸಂಧಿಸಿ ತನ್ನ ಅಳಲನ್ನು ತೋಡಿಕೊಂಡ. ಆ ಸಾಧು ಎಲ್ಲವನ್ನು ಸಾಂಗವಾಗಿ ಕೇಳಿ ತಿಳಿದುಕೊಂಡು ರಾಜನನ್ನು ಕೇಳಿದ. "ಮಹಾರಾಜ, ಎರಡನೆಯ ಬಾರಿ ಹಣ್ಣಿನ ರಸವನ್ನು ಕುಡಿಯುವಾಗ ಏನಾದರೂ ಕೆಟ್ಟದ್ದನ್ನು ಯೋಚನೆ ಮಾಡಿದೆಯಾ?", "ಹೌದು ಸ್ವಾಮಿ, ತೋಟ ಬಹಳ ಫಲವತ್ತಾಗಿದೆ; ಮಾಲೀಕನಿಗೆ ಅದರಿಂದ ವರಮಾನ ಜಾಸ್ತಿ ಬರುತ್ತದೆ; ಆದ್ದರಿಂದ ಕಂದಾಯವನ್ನು ಹೆಚ್ಚುವರಿ ಮಾಡಬೇಕು ಎಂದುಕೊಂಡೆ". "ಹಾಗಾದರೆ ನಿನ್ನ ಸಮಸ್ಯೆಗೆ ಇಲ್ಲಿಯೇ ಇದೆ ಪರಿಹಾರ. ನೀನು ಎರಡನೆ ಬಾರಿ ಹಣ್ಣಿನ ರಸವನ್ನು ಕುಡಿಯುವಾಗ ನಿನ್ನ ಮನಸ್ಸು ಕೊಳಕಾಯಿತು. ಆ ಕಾರಣ ಹಣ್ಣಿನ ರಸವು ಕಹಿಯಾಯಿತು" ಎಂದ ಸಾಧು.

ಆದ್ದರಿಂದ ಮನಸ್ಸೇ ಮಾತು ಮತ್ತು ಕೃತಿಗಳಿಗೆ ಮೂಲಪ್ರೇರಣೆ. ಮನಸ್ಸು ಪರಿಶುದ್ಧವಾಗಿದ್ದರೆ ಮಾತೂ ಶುದ್ಧವಾಗಿರುತ್ತದೆ. ಕೃತಿಯೂ ಶುದ್ಧವಾಗಿರುತ್ತದೆ. ಮನಸ್ಸು ಕಲ್ಮಶವಾದರೆ ಮಾತೂ ಕೊಳಕಾಗುತ್ತದೆ ; ಕೃತಿಯೂ ಕೊಳಕಾಗುತ್ತದೆ.

ಆಸೆಯೆಂಬ ಭೂತ

ಒಮ್ಮೆ ಒಬ್ಬ ಪ್ರಯಾಣಿಕ ದಾರಿಯಲ್ಲಿ ಹೋಗುತ್ತಿದ್ದ. ಮಧ್ಯಾಹ್ನ ಸಮಯವಾಯಿತು. ಬಿಸಿಲಿನ ತಾಪ ತಡೆಯದಾಯಿತು. ಮಾರ್ಗಮಧ್ಯೆ ಒಂದು ಮರ ಸಿಕ್ಕಿತು. ಅದರ ನೆರಳಿನಲ್ಲಿ ಕುಳಿತುಕೊಂಡ. ಅದರ ಸಾಂದ್ರ ನೆರಳು ಬಹಳ ತಂಪಾಗಿತ್ತು. ಮನಸ್ಸಿಗೆ ಅಪ್ಯಾಯಮಾನವಾಯಿತು. ಕಣ್ಣೆತ್ತಿ ಮೇಲೆ ನೋಡಿದ. ಮರದ ಮೇಲೆ ಒಂದೇ ಒಂದು ಹಣ್ಣು ಕಾಣಿಸಿತು. ಅವನಿಗೆ ಅದನ್ನು ತಿನ್ನಬೇಕೆಂಬ ಮನಸ್ಸಾಯಿತು. ಅವನ ಮನೋಇಚ್ಛೆಯಂತೆ ಕೂಡಲೆ ಆ ಹಣ್ಣೂ ಬಿತ್ತು. ಅದನ್ನು ತಿಂದ. ಬಹಳ ಸ್ವಾದುವಾಗಿತ್ತು. ಮತ್ತೊಂದು ಬೇಕೆನಿಸಿತು. ಮೇಲೆ ನೋಡಿದ. ಮನಸ್ಸಿನಲ್ಲಿ ಅಂದುಕೊಂಡಂತೆ ಮತ್ತೊಂದು ಹಣ್ಣು ಕಾಣಿಸಿತು. ಅದೂ ತಾನಾಗಿಯೇ ಬಿತ್ತು. ಅದನ್ನೂ ತಿಂದ. ಹಸಿವನ್ನು ಹಿಂಗಿಸಿಕೊಂಡ. ನಂತರ ಬಾಯಾರಿತು. ನೀರು ಬೇಕೆನಿಸಿತು. ತಕ್ಷಣ ಎದುರಿನಲ್ಲಿ

ಶುಭ್ರವಾದ ಸ್ವಚ್ಛವಾದ ಕೊಳವೂ ಕಾಣಿಸಿತು. ನೀರು ಕುಡಿದು ಬಾಯಾರಿಕೆಯನ್ನು ಹೋಗಲಾಡಿಸಿಕೊಂಡ.

ಇಷ್ಟೆಲ್ಲಾ ಬಯಸಿದ್ದು ಸಿಕ್ಕಿದ ಮೇಲೆ ಆ ಮರ ಕಲ್ಪವೃಕ್ಷವೆಂಬುದು ಅವನಿಗೆ ಮನದಟ್ಟಾಯಿತು. ಮನಸ್ಸಿನ ಆಸೆಯೂ ಹೆಚ್ಚಾಯಿತು. ನಾನು ವಾಸಮಾಡುವುದಕ್ಕೆ ಭವ್ಯವಾದ ಒಂದು ಅರಮನೆ ಬೇಕು ಎಂದುಕೊಂಡ. ಅವನ ಇಷ್ಟದಂತೆ ಭವ್ಯವಾದ ಅರಮನೆಯೂ ಸಿದ್ಧವಾಯಿತು. ಅಷ್ಟಕ್ಕೇ ಅವನ ಆಸೆ ಕೊನೆಯಾಗಲಿಲ್ಲ. ತನ್ನ ಸೇವೆಗಾಗಿ ಹತ್ತಾರು ಆಳುಕಾಳುಗಳು, ಪರಿವಾರದವರು ಬೇಕೆನಿಸಿತು. ಅದೂ ಆಯಿತು. ಹೀಗೆ ಎಲ್ಲ ಅನುಕೂಲಗಳೂ ಒದಗಿದ ಮೇಲೆ ಏಕೋ ಅವನ ಮನಸ್ಸಿನಲ್ಲಿ ವಿಕಾರ ಉಂಟಾಯಿತು. ಮನಸ್ಸಿನಲ್ಲಿ ಭೂತ ಬಂದ್ರೆ !........ ಅಂದುಕೊಂಡ. ಅದರಂತೆ ಭೂತವೂ ಬಂದು ಎಲ್ಲವನ್ನೂ ನುಂಗಿತು.

ಆದ್ದರಿಂದ ನಾವು ಆಶಾಭೂತಗ್ರಸ್ತರಾಗದೆ ಮನಸ್ಸನ್ನು ಅಧೀನದಲ್ಲಿಟ್ಟುಕೊಂಡು ಮನಸ್ಸಿನ ಪರಿಶುದ್ಧತೆಯನ್ನು ಬೆಳಸಿಕೊಂಡು ಬರಬೇಕು.

ನಮ್ಮದು ನಮಗೇ ಇರಲಿ, ನಿಮ್ಮದು ನಿಮಗೆ ಇರಲಿ

ಒಂದು ಊರಿನಲ್ಲಿ ಒಬ್ಬರು ಸ್ವಾಮಿಗಳು ಇದ್ದರು. ಆ ಊರಿನ ಒಬ್ಬ ಭಕ್ತನು ಬಂದು ಸ್ವಾಮಿಗಳನ್ನು ಪೂಜೆಗೆ ದಯಮಾಡಿಸಬೇಕೆಂದು ಉತ್ಸಾಯದಿಂದ ಬಿನ್ನಹ ಮಾಡಿದ. ಆ ಭಕ್ತನ ಉತ್ಸಾಯಕ್ಕೆ ಮಣಿದ ಸ್ವಾಮಿಗಳು ತಮ್ಮ ಸ್ವಂತ ಎತ್ತಿನ ಗಾಡಿಯಲ್ಲಿ ಕುಳಿತು ದಯಮಾಡಿಸಿದರು. ಸ್ವಾಮಿಗಳನ್ನು ಭಕ್ತನು ಭಕ್ತಿಗೌರವಗಳಿಂದ ಬರಮಾಡಿಕೊಂಡು, ಹಜಾರದಲ್ಲಿ ಕಸೂತಿ ಕೆತ್ತನೆಯುಳ್ಳ ರತ್ನಗಂಬಳಿಯನ್ನು ಹಾಸಿ ಅದರ ಮೇಲೆ ಚಿತ್ರಾಸನ ಹಾಕಿ ಕುಳ್ಳಿರಿಸಿದ. ಅದರ ಮೇಲೆ ಸ್ವಾಮಿಗಳು ಮಂಡಿಸಿದರು. ಏಕೋ ಏನೋ ಆ ಸ್ವಾಮಿಗಳಿಗೆ ರತ್ನಗಂಬಳಿ, ಚಿತ್ರಾಸನದ ಮೇಲೆ ಮನಸ್ಸಾಯಿತು. ನಂತರ ಸ್ನಾನ ಮಾಡಿ ಪೂಜೆಗೆ ಕುಳಿತುಕೊಂಡರು. ಜಪ ಪ್ರಾರಂಭಿಸಿದರು. ಜಪಮಾಡುತ್ತಾ ಮಾಡುತ್ತಾ ಮಂತ್ರಬಿಟ್ಟು ಬೇರೆ ಜಪ ಸುರುವು ಮಾಡಿದರು. 'ರತ್ನಗಂಬಳಿ ಹಾಸೋಕಾಯ್ತು, ಚಿತ್ರಾಸನ ಹೊದೆಯೋಕಾಯ್ತು' ಎಂಬುದಾಗಿ. ಎದುರಿಗೆ ಕುಳಿತಿದ್ದ ಭಕ್ತ ಬಹಳ ಬುದ್ಧಿವಂತ, ಕುಶಾಗ್ರಮತಿಯುಳ್ಳವ. ಓಹೊ, ಈ ಸ್ವಾಮಿಗಳ ಮನಸ್ಸು ಪ್ರತಿಯೋಗಿನಿಯಾಗಿ ತಾನೂ ಜಪ ಪ್ರಾರಂಭಿಸಿದ ''ಗಾಡಿ ಹೊಡೆಯೋಕಾಯ್ತು, ಎತ್ತು ಊಡೋಕಾಯ್ತು'' ಎಂದು. ಆ ಎತ್ತುಗಾಡಿ ಸ್ವಾಮಿಗಳವು . ಸ್ವಾಮಿಗಳು ಈ ಭಕ್ತನ ಜಪ ಕೇಳಿಸಿಕೊಂಡರು. ಎಚ್ಚರಪಹಿಸಿದರು. '' ಓಹೋ ಎಡವಟ್ಟಾಯ್ತು'' ಎಂದು ಮತ್ತೆ ಬೇರೆ ಜಪವನ್ನು ಪ್ರಾರಂಭಿಸಿದರಂತೆ, "ನಮ್ಮದು ನಮಗೆ ಇರಲಿ, ನಿಮ್ಮದು ನಿಮಗೇ ಇರಲಿ" ಎಂಬುದಾಗಿ.

ಆದ್ದರಿಂದ, ನಾವು ಮಾಡುವ ಪೂಜೆಯಲ್ಲಿ ನೈಜಭಕ್ತಿ, ಅಚಲ ಶ್ರದ್ಧೆ ಅಳವಟ್ಟಿರಬೇಕು. ಮನಸ್ಸು ಆಶಾವಿಚಲಿತವಾಗದಿರಬೇಕು. ಅಂತಲ್ಲದ ಪೂಜೆ ಜಲಲಿಪಿಯಂತೆ ವ್ಯರ್ಥವಾಗುವುದು.

ಬೆಳ್ಳಿಯ ಬೆತ್ತ

ಒಂದು ಊರಿನ ಪಕ್ಕದ ತೋಪಿನಲ್ಲಿ ಒಬ್ಬರು ಸ್ವಾಮಿಗಳು ವಾಸವಾಗಿದ್ದರು. ಅವರು ಘನವೈರಾಗಿಗಳೂ ಪೂಜಾನಿಷ್ಠರೂ ಆಗಿದ್ದರು. ಅದೇ ಊರಿನಲ್ಲಿ ಒಬ್ಬ ಭಕ್ತನಿದ್ದ. ಅವನಿಗೆ, ಆ ಸ್ವಾಮಿಗಳನ್ನು ಪ್ರತಿದಿನ ಕರೆದೊಯ್ದು ಪೂಜೆ ಮಾಡಿಸಿ ಪ್ರಸಾದ ನೀಡಿ ಕಳುಹಿಸಬೇಕೆಂಬ ಬಯಕೆಯುಂಟಾಯಿತು. ಸ್ವಾಮಿಗಳ ಸನ್ನಿಧಿಗೆ ಬಂದು ಬಿನ್ನೈಸಿಕೊಂಡ. ಆದರೆ ಪರರ ಹಂಗಿಗೆ ಒಳಗಾಗದ ಸ್ವಾಮಿಗಳು ಒಪ್ಪಲಿಲ್ಲ. ಭಕ್ತನೂ ಬಿಡಲಿಲ್ಲ, ಬಲವಂತ ಪಡಿಸಿದ. ಆಗ ಭಕ್ತನ ಉತ್ಸಾಯಕ್ಕೆ ಕಟ್ಟುಬಿದ್ದು ಸ್ವಾಮಿಗಳು ಒಪ್ಪಿಕೊಳ್ಳಬೇಕಾಯಿತು. ಅದರಂತೆ ಅವನ ಮನೆಗೆ ದಯಮಾಡಿಸಿ ಪೂಜೆ ಪ್ರಸಾದಗಳನ್ನು ಮುಗಿಸಿಕೊಂಡು ಹೋಗುತ್ತಿದ್ದರು. ವೈರಾಗ್ಯಮೂರ್ತಿಗಳಾದ ಅವರು ಭಕ್ತ ನೀಡುತ್ತಿದ್ದ ಯಾವ ವಿಧವಾದ ಕಾಣಿಕೆಯನ್ನೂ ಸ್ವೀಕರಿಸುತ್ತಿರಲಿಲ್ಲ.

ಹೀಗೆ ಯಥಾಪ್ರಕಾರವಾಗಿ ಒಂದು ದಿನ ಮಧ್ಯಾಹ್ನ ಸ್ವಾಮಿಗಳು ಪೂಜೆಯನ್ನು ಮುಗಿಸಿಕೊಂಡು ಪ್ರಸಾದ ಸ್ವೀಕರಿಸಿ ಬಟ್ಟೆ ಧರಿಸಿಕೊಳ್ಳುತ್ತಿದ್ದರು. ಆಗ ಅವರ ಮನೆಯ ಮೂಲೆಯಲ್ಲಿದ್ದ ಸುಂದರವಾದ ಕೆತ್ತನೆಯುಳ್ಳ, ಬೆಳ್ಳಿಯ ಅಣಸು ತೊಡಿಸಿದ್ದ ಬೆತ್ತವೊಂದು ಕಣ್ಣಿಗೆ ಬಿತ್ತು. ಯಾವತ್ತು ಯಾವ ವಸ್ತುವಿಗೂ ಆಸೆಪಡದ ಆ ಸ್ವಾಮಿಗಳಿಗೆ ಏಕೊ ಮನಸ್ಸು ವಿಕಾರವಾಯಿತು.

ಅದನ್ನು ಕದಿಯಬೇಕೆಂದು ಮನಸ್ಸಾಯಿತು. ಕೇಳಿದ್ದರೆ ಭಕ್ತನು ಅದನ್ನು ಧಾರಾಳವಾಗಿ ಕೊಡುತ್ತಿದ್ದ. ಆಗ ಆ ಚಿತ್ರವನ್ನು ತೆಗೆದುಕೊಂಡು ನಿಲುವಂಗಿಯ ಒಳಗಡೆ ಇಟ್ಟುಕೊಂಡು ಹೊರಟುಹೋದರು.

ಆದರೆ ಅಂದು ರಾತ್ರಿಯೆಲ್ಲಾ ಆ ಸ್ವಾಮಿಗಳಿಗೆ ನಿದ್ರೆಬರಲಿಲ್ಲ. ಮನಸ್ಸೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ಬಹಳ ವ್ಯಥೆಪಟ್ಟರು. ತಮ್ಮ ಅಪರಾಧ ಅರಿವಾಗಿ ಪಶ್ಚಾತ್ತಾಪದಿಂದ ಕುದಿದು ಹೋದರು. ಬೆಳಗಾಯಿತು. ವಿಚಾರವಾದಿಗಳಾದ ಆ ಸ್ವಾಮಿಗಳು ತಮ್ಮ ಮನೋವಿಕಾರಕ್ಕೆ ಕಾರಣವನ್ನು ಹುಡುಕಬೇಕೆಂದು ನಿರ್ಧರಿಸಿದರು.

ಆ ಕೂಡಲೆ ಚಿತ್ರ ಸಮೇತರಾಗಿ ಆ ಭಕ್ತನ ಮನೆಗೆ ಬಂದರು. ಮನೆಯೊಡತಿಯನ್ನು ವಿಚಾರಿಸಿದರು, ''ತಾಯಿ, ಸುಳ್ಳು ಹೇಳಬೇಡ, ನೀನು ನಿನ್ನೆ ಪ್ರಸಾದ ನೀಡಿದೆಯೆಲ್ಲಾ, ಅದಕ್ಕೆ ಅಕ್ಕಿಯನ್ನು ಎಲ್ಲಿಂದ ತಂದೆ ಹೇಳು?''. ಆಗ ಆಕೆ ''ಸ್ವಾಮಿ, ನಾನೆಂದೂ ಸುಳ್ಳು ಹೇಳಿ ಅರಿಯೆ. ಪ್ರಸಾದಕ್ಕೆ ಬೇಕಾದ ಅಕ್ಕಿಯನ್ನು ಪಕ್ಕದ ಮನೆಯ ಅಜ್ಜಿಯಿಂದ ಸಾಲ ತೆಗೆದುಕೊಂಡು ಬಂದಿದ್ದೆ'' ಎಂದು ಹೇಳಿದಳು. ಆಗ ಸ್ವಾಮಿಗಳು ಮುದುಕಿಯನ್ನು ಕರೆಸಿ ಕೇಳಿದರು. ಆ ಅಜ್ಜಿ "ಸತ್ಯವಾಗಿ ಹೇಳುತ್ತೇನೆ ಸ್ವಾಮಿ, ನಾನು ಪ್ರತಿ ದಿವಸ ಬೇರೆಯವರ ಮನೆಯಲ್ಲಿ ಕೊಟ್ಟಣ ಕುಟ್ಟಿ ಜೀವನ ಮಾಡತಕ್ಕವಳು. ಅವರು ಕೊಟ್ಟಷ್ಟರಲ್ಲಿಯೇ ತೃಪ್ತಿ ಹೊಂದುತ್ತೇನೆ. ಆದರೆ ನಿನ್ನೆದಿವಸ ಒಬ್ಬರ ಮನೆಯಲ್ಲಿ ಕೊಟ್ಟಣ ಕುಟ್ಟಿದೆ. ಅಕ್ಕಿ ಬಹಳ ಚೆನ್ನಾಗಿತ್ತು. ಆಸೆಪಟ್ಟು ಹೇಳದೆ ಕೇಳದೆ ಒಂದು ಸೇರಿನಷ್ಟು ಮಾತ್ರ ಮನೆಗೆ ತೆಗೆದುಕೊಂಡು ಬಂದೆ" ಎಂದು.

ಆಗ ಸ್ವಾಮಿಗಳಿಗೆ ಅರ್ಥವಾಗಿ ತಮ್ಮ ಮನಸ್ಸು ಕೊಳಕಾದುದಕ್ಕೆ ಕಾರಣ ಸಿಕ್ಕಿತು. ಅಶುದ್ಧವಾದ ಮನಸ್ಸಿನಿಂದ ಕದ್ದುತಂದ ಅಕ್ಕಿಯಿಂದ ಅಟ್ಟ ಪ್ರಸಾದವನ್ನು ಸ್ವೀಕರಿಸಿದುದರ ಪರಿಣಾಮವಾಗಿ ನನ್ನ ಮನಸ್ಸು ಅಪವಿತ್ರವಾಯಿತು. ಆದ್ದರಿಂದ ಚಿತ್ರದ ಮೇಲೆ ಮೋಹವುಂಟಾಯಿತು ಎಂದುಕೊಂಡು ಚಿತ್ರವನ್ನು ಕೊಟ್ಟು ಕೂಡಲೆ ಹೊರಟುಹೋದರು.

ದೃಷ್ಟಿ - ಸೃಷ್ಟಿ

ಒಮ್ಮೆ ಕೃಷ್ಣಪರಮಾತ್ಮ ಧರ್ಮರಾಯ, ದುರ್ಯೋಧನರಿಬ್ಬರನ್ನು ಒಟ್ಟಿಗೆ ಕರೆದು ಆದೇಶಿಸಿದ. "ಅಯ್ಯಾ ಧರ್ಮರಾಯ, ಈ ಜಗತ್ತಿನಲ್ಲಿ ಕೆಟ್ಟವರು ಯಾರು? ಹುಡುಕಿ ಬಂದು ಹೇಳು". "ಅಯ್ಯಾ ದುರ್ಯೋಧನ, ಈ ಜಗತ್ತಿನಲ್ಲಿ ಒಳ್ಳೆಯವರು ಎಷ್ಟು ಮಂದಿ ಇದ್ದಾರೆ? ನೋಡಿ ಬಂದು ತಿಳಿಸು" ಎಂದು. ಇಬ್ಬರೂ ಭಗವಂತನ ಆದೇಶಹೊತ್ತು ಪ್ರಪಂಚದ ಮೂಲೆ ಮೂಲೆ ತಿರುಗಿ ಬಂದರು. ಧರ್ಮರಾಯ ತನ್ನ ವರದಿಯನ್ನು ಒಪ್ಪಿಸಿದ. "ಪರಮಾತ್ಮ ಈ ಜಗತ್ತೆಲ್ಲವನ್ನೂ ಶೋಧಿಸಿ ಬಂದೆ, ಒಬ್ಬರಾದರೂ ಕೆಟ್ಟವರು ನನ್ನ ಕಣ್ಣಿಗೆ ಬೀಳಲಿಲ್ಲ". "ಕೃಷ್ಣಾ ಜಗತ್ತನ್ನೆಲ್ಲಾ ಕಾಲ್ನಡಿಗೆ ಬಂದೆ. ಒಳ್ಳೆಯವನು ಎನ್ನುವ ಒಂದು ನರಪಿಳ್ಳೆಯನ್ನೂ ನಾನು ನೋಡಲಿಲ್ಲ" ಎಂದು ದುರ್ಯೋಧನ ಹೇಳಿದ. ಭಗವಂತ ಇಬ್ಬರ ಮಾತನ್ನು ಕೇಳಿ ಸ್ಮಿತವದನನಾಗಿ ಅಪ್ಪಣೆಕೊಡಿಸಿದನಂತೆ, "ಅಯ್ಯಾ ಧರ್ಮರಾಯ, ನಿನ್ನ ದೃಷ್ಟಿ ಒಳ್ಳೆಯದಾದುದರಿಂದ ನಿನ್ನ ಕಣ್ಣಿಗೆ ಕೆಟ್ಟದ್ದು ಎಂಬುದು ಕಾಣಲಿಲ್ಲ. ಎಲೈ ದುರ್ಯೋಧನ, ನಿನ್ನ ದೃಷ್ಟಿಯೆಲ್ಲವೂ ಕೆಟ್ಟದಾದುದರಿಂದ ಜಗತ್ತೆಲ್ಲವೂ ನಿನಗೆ ಕೆಟ್ಟದ್ದಾಗಿ ಕಂಡಿದೆ".

ನಮ್ಮ ದೃಷ್ಟಿ ಒಳ್ಳೆಯದಾದರೆ ಜಗತ್ತೆಲ್ಲವೂ ಒಳ್ಳೆಯದಾಗಿಯೇ ಕಾಣುತ್ತದೆ. ದೃಷ್ಟಿ ಕೆಟ್ಟದ್ದಾದರೆ ಜಗತ್ತೆಲ್ಲವೂ ಕೆಟ್ಟದ್ದಾಗಿಯೇ ಕಾಣುತ್ತದೆ. ಆದ್ದರಿಂದ ದೃಷ್ಟಿಯಂತೆ ಸೃಷ್ಟಿ. ಭಾವನೆಯಂತೆ ಭವಿಷ್ಯತ್ತು. ಮನಸ್ಸಿನಂತೆ ಮಹಾದೇವ.

ಆಶಾ ಗ್ರಹ

ಹಿಂದೆ ಧಾರಾನಗರದಲ್ಲಿ ಭೋಜನೆಂಬ ರಾಜನಿದ್ದ. ಆತ ಮಹಾವಿದ್ವಾಂಸನೂ, ಕವಿಜನಾಶ್ರಯದಾತನೂ ಆಗಿದ್ದ. ಅವನು ಇನ್ನೂ ಐದು ವರ್ಷದವನಿದ್ದಾಗಲೆ ತಂದೆಯನ್ನು ಕಳೆದುಕೊಂಡ. ತಂದೆ ತಾನು ಸಾಯುವಾಗ ಮಗುವನ್ನೂ, ರಾಜ್ಯವನ್ನೂ ತಮ್ಮನಾದ ಮುಂಜನೆಂಬುವನ ವಶಕ್ಕೆ ಒಪ್ಪಿಸಿ ಹೋದ. ಹೀಗೆ ಕೆಲವು ವರ್ಷಗಳ ಕಾಲ ಮುಂಜ ರಾಜ್ಯಭಾರ ಮಾಡಿದ. ರಾಜ್ಯಸುಖವನ್ನು ಅನುಭವಿಸಿದಂತೆಲ್ಲಾ ಅವನಿಗೆ ರಾಜ್ಯದಾಹ ಹೆಚ್ಚಾಯಿತು. ಹೀಗಿರುವಾಗ ಒಬ್ಬ ಜೋತಿಷ್ಯಕಾರನು ಬಂದು ಕೆಲವೇ ವರ್ಷಗಳಲ್ಲಿ ಈ ರಾಜ್ಯಕ್ಕೆ ಭೋಜನು ರಾಜನಾಗುವನೆಂದು ಭವಿಷ್ಯ ನುಡಿದ. ಆಶಾಗ್ರಹ ಪೀಡಿತನಾದ ಮುಂಜ ಇದನ್ನು ಸಹಿಸಲಾರದೆ ಭೋಜನನ್ನು ಕೊಲ್ಲಲು ಕಟುಕರಿಗೆ ಆಜ್ಞೆ ಇತ್ತ. ಈ ಕಟುಕರು ಕೊಲ್ಲಲು ಕಗ್ಗಾಡಿಗೆ ಭೋಜನನ್ನು ಕರೆದೊಯ್ದರು.

ಇನ್ನೇನು ಕೊಲ್ಲಬೇಕು ಎನ್ನುವಾಗ ಭೋಜನು ಪದ್ಯವೊಂದನ್ನು ಬರೆದು ಮುಂಜನ ಕೈಗೆ ಕೊಡುವಂತೆ ಹೇಳಿ ಕಟುಕರ ಕೈಗಿತ್ತ.

"ಮಾಂಧಾತಾ ಚ ಮಹೀಪತಿಃ ಕೃತಯುಗಾಲಂಕಾರ ಭೂತೋಃ ಗತಃ
ಸೇತುರ್ಯೇನ ಮಹೋದಧಾ ವಿರಚಿತಃ ಕ್ವಾಸೌ ದಶಾಸ್ಯಾಂತಕಃ
ಅನ್ಯೇಚಾಪಿ ಯುಧಿಷ್ಠಿರ ಪ್ರಭೃತಯೋಃ ಯಾತಾ ದಿವಂ ಭೂಪತೇಃ
ನೈಕೇನಾಪಿ ಸಮಂಗತಾ ವಸುಮತೀಃ ಮುಂಜ ತ್ವಯಾ ಯಾಸ್ಯತಿಃ."

"ಎಲೈ ಮುಂಜನೆ, ಕೃತಯುಗದಲ್ಲಿ ಸತ್ಯಸಂಧನಾದ ಮಾಂಧಾತನೆಂಬುವನೂ, ತ್ರೇತಾಯುಗದಲ್ಲಿ ಸಮುದ್ರಕ್ಕೆ ಸೇತುವೆ ಕಟ್ಟಿ ಲೋಕಕಂಟಕನಾದ ರಾವಣನನ್ನು ಕೊಂದ ಶ್ರೀರಾಮನೂ ದ್ವಾಪರಯುಗದಲ್ಲಿ ಧರ್ಮಿಷ್ಠನಾದ ಧರ್ಮರಾಯರೇ ಮುಂತಾದವರು ಈ ಭೂಮಿಯನ್ನು ಆಳಿ ಅಳಿದು ಬಿಟ್ಟುಹೋದರು. ಅವರಾರೂ ಹೋಗುವಾಗ ಈ ಭೂಮಿಯನ್ನು ಹೊತ್ತುಕೊಂಡು ಹೋಗಲಿಲ್ಲ. ಹೀಗಿರುವಾಗ ನೀನು ಹೋಗುವಾಗ ಜೊತೆಯಲ್ಲಿ ಹೊತ್ತುಕೊಂಡು ಹೋಗುತ್ತೀಯಾ". ಇದು ಈ ಶ್ಲೋಕದ ಸಾರ.

ಇದನ್ನು ಓದಿಕೊಂಡಾಕ್ಷಣ ಆ ಕಟುಗರ ಮನಸ್ಸು ಪರಿವರ್ತನೆಯಾಯಿತು. ಆಗ ಕೊಲ್ಲಲೊಲ್ಲದೆ ಭೋಜನ ಕೃತಕ ಶಿರವೊಂದನ್ನೂ ಕಾಗದವನ್ನೂ ತೆಗೆದುಕೊಂಡು ಹೋಗಿ ಮುಂಜನಿಗೆ ಕೊಟ್ಟರು. ಮುಂಜ ಕಾಗದವನ್ನು ಓದತೊಡಗಿದ. ಓದುತ್ತಿದ್ದಂತೆಯೇ ಅವನ ಮನಸ್ಸು ಪರಿವರ್ತನೆಯಾಯಿತು. ತನ್ನ ಹೇಯ ಕೃತ್ಯಕ್ಕೆ ತಾನೆ ಪಶ್ಚಾತ್ತಾಪಪಟ್ಟ. ನಂತರ ಉಪಾಯಾಂತರದಿಂದ ಭೋಜನು ಬದುಕಿದ ವಿಷಯವನ್ನು ತಿಳಿದು ಸಂತೋಷಪಟ್ಟು ಅವನ ರಾಜ್ಯವನ್ನು ಮರಳಿ ಅವನಿಗೊಪ್ಪಿಸಿದ.

ಆದ್ದರಿಂದ ಲೋಕದಲ್ಲಿ ಆಶಾಗ್ರಹಪೀಡಿತರಾದ ಜನ ಏನು ಮಾಡುವುದಕ್ಕೂ ಅಂಜುವುದಿಲ್ಲ, ಹೇಸುವುದಿಲ್ಲ.

ಏಕೆ ಯಾತ್ರೆಯ ಮಾಡುವೆ ?

ಒಂದು ಊರಿನಲ್ಲಿ ಇಬ್ಬರು ಸ್ನೇಹಿತರಾದ ಭಕ್ತರಿದ್ದರು. ಅವರು ತಕ್ಕಮಟ್ಟಿಗೆ ಸ್ಥಿತಿವಂತರಾಗಿದ್ದರು. ಯಾತ್ರೆಗೆಂದೇ ಕೂಡಿಟ್ಟ ಹಣವನ್ನು ತೆಗೆದುಕೊಂಡು ಒಂದು ಸಾರಿ ಒಟ್ಟಿಗೆ ತಿರುಪತಿ ಯಾತ್ರೆ ಕೈಗೊಂಡರು. ಇಬ್ಬರೂ ಕಾಲ್ನಡೆಗೆಯಲ್ಲಿ ಹತ್ತಾರು ದಿನಗಳ ಕಾಲ ಪ್ರಯಾಣ ಮಾಡಿ ಒಂದು ದಿವಸ ಮಾರ್ಗಮಧ್ಯದಲ್ಲಿರುವ ಹಳ್ಳಿಯೊಂದರಲ್ಲಿ ತಂಗಿದ್ದರು.

ಆಗ ಅವರಲ್ಲಿ ಒಬ್ಬ ಭಕ್ತ ಪಕ್ಕದ ಗ್ರಾಮಕ್ಕೆ ಹೋಗಿ ಬರುವುದಾಗಿ ಹೇಳಿಹೋದ. ಅಲ್ಲಿ ನೋಡುತ್ತಾನೆ. ಜನ ದಟ್ಟದರಿದ್ರರಾಗಿದ್ದಾರೆ. ಮಕ್ಕಳು ಮರಿಗೆ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ. ಜೊತೆಗೆ ನಾನಾ ರೋಗಗ್ರಸ್ತರಾಗಿದ್ದಾರೆ. ರೋಗಬಡತನಗಳು ಮುತ್ತಿ ಕಿತ್ತು ತಿನ್ನುತ್ತಿವೆ. ಇದನ್ನೆಲ್ಲಾ ನೋಡಿ ಈ ಭಕ್ತನಿಗೆ ಮರುಕ ಹುಟ್ಟಿತು. ತಾನು ತಿರುಪತಿಯಾತ್ರೆಗಾಗಿ ಹಾಗೂ ಕಾಣಿಕೆಗಾಗಿ ತಂದಿದ್ದ ಹಣವೆಲ್ಲವನ್ನೂ ಆ ಬಡಜನತೆಗಾಗಿ ವ್ಯಯಮಾಡಿಬಿಟ್ಟ. ಕೊನೆಗೆ ಬರಿಕೈಯಾದ. ತಿರುಪತಿ ಯಾತ್ರೆ ಸ್ಥಗಿತಗೊಳಿಸಿ ತನ್ನೂರಿಗೆ ಮರಳಿ ಬಂದ.

ಇತ್ತ, ಈ ಇನ್ನೊಬ್ಬ ಭಕ್ತ, ಪಕ್ಕದ ಊರಿಗೆ ಹೋಗಿರುವ ಆ ನನ್ನ ಸ್ನೇಹಿತ ಬರುವನೆಂದು ಕೆಲವಾರು ದಿನ ಕಾಯ್ದ. ಬರಲಿಲ್ಲ. ಅಲ್ಲಿಂದಲೇ ಹಾಗೆಯೇ ಅವನು ತಿರುಪತಿಗೆ ತೆರಳಿರಬಹುದೆಂಬುದಾಗಿ ಭಾವಿಸಿ ತಾನೂ ತಿರುಪತಿಗೆ ಹೋದ. ಅಲ್ಲೆಲ್ಲಾ ತನ್ನ ಮಿತ್ರನಿಗಾಗಿ ಅರಸಿದ. ಎಲ್ಲೂ ಕಾಣಲಿಲ್ಲ. ದೇವರ ದರ್ಶನಮಾಡಿ ಪೂಜೆಮಾಡಿಸಿದ. ಅರ್ಚಕರು ಮಂಗಳಾರತಿ ಎತ್ತಿದರು. ಆಗ ಆ ದೇವರ ಪಕ್ಕದಲ್ಲಿ ತನ್ನ ಸ್ನೇಹಿತ ನಿಂತಿರುವುದನ್ನು ಕಂಡ. ಅವನಿಗೆ ಪರಮಾಶ್ಚರ್ಯವಾಯಿತು. ನಂಬದವನಾದ. ಸರಿ ಅಲ್ಲೆ ೨ - ೩ ದಿನಗಳು ತಂಗಿದ. ಪ್ರತಿದಿನ ತಪ್ಪದೇ ಪೂಜಾ ಸಮಯಕ್ಕೆ ಸರಿಯಾಗಿ ಬರುತ್ತಿದ್ದ. ದಿನವೂ ಅರ್ಚಕರು ದೇವರಿಗೆ ಆರತಿ ಬೆಳಗುವಾಗ ದೇವರ ಪಕ್ಕದಲ್ಲಿ ತನ್ನ ಸ್ನೇಹಿತ ನಿಂತಿರುವುದನ್ನು ಕಾಣುತ್ತಿದ್ದ. ಈ ಸಂಗತಿ ಅವನಿಗೆ ಬಹಳ ಸೋಜಿಗವಾಯಿತು. ಪರೀಕ್ಷೆ ಮಾಡುವುದಕ್ಕಾಗಿ ಊರಿಗೇ ಬಂದ. ನೋಡುತ್ತಾನೆ, ತನ್ನ ಸ್ನೇಹಿತ ಊರಿನಲ್ಲಿಯೇ ಇದ್ದಾನೆ. ವಿಚಾರಿಸಿದ. ಪಕ್ಕದ ಊರಿಗೆ ಹೋಗಿಬರುವುದಾಗಿ ಹೇಳಿ ನೀನು ಎಲ್ಲಿ ಹೋದೆ. ಪ್ರಶ್ನಿಸಿದ. ಆಗವನು ನಡೆದ ಸಂಗತಿಯನ್ನೆಲ್ಲಾ ವಿವರವಾಗಿ ತಿಳಿಸಿದ.

ಆಗ ಆ ಭಕ್ತ ಅರ್ಥಮಾಡಿಕೊಂಡ. ದೇವರು ತಿರುಪತಿಯಲ್ಲಿಲ್ಲ. ಎಲ್ಲೆಲ್ಲೂ ಇದ್ದಾನೆ. ಅವನನ್ನು ಕಾಣಲು ಅಲ್ಲಿಗೆ ಹೋಗಬೇಕಾಗಿಲ್ಲ. ಬಡವರ, ದೀನದಲಿತರ ಹೃದಯದಲ್ಲೇ ಕಾಣಬಹುದು. ದೇವರ ದರ್ಶನಕ್ಕೆ ಬೇಕಾಗಿರುವ ಸಾಧನವೆಂದರೆ

ಭೂತಾನುಕಂಪೆ. ಆರ್ದ್ರವಾದ ಅಂತಃಕರಣ ಮಾತ್ರ ಎಂಬುದಾಗಿ.

ಆಸೆಯೆಂಬ ಕಜ್ಜಿ

ಒಬ್ಬ ರಾಜನಿದ್ದ. ಅವನಿಗೆ ಅನೇಕ ಜನ ಸೇವಕರಿದ್ದರು. ಬಟ್ಟೆ ತೊಡಿಸಲು ಒಬ್ಬ ಸೇವಕ, ಸ್ನಾನ ಮಾಡಿಸಲು ಒಬ್ಬ, ಊಟಕ್ಕೆ ಬಡಿಸಲು ಇನ್ನೊಬ್ಬ, ಹಾಸಿ ಹೊದಿಸಲು, ಅಡಿಕೆ ಎಲೆ ಉಗುಳು ಹಿಡಿಯಲು ಒಬ್ಬೊಬ್ಬ ..... ಇತ್ಯಾದಿ ಒಂದೊಂದು ಕೆಲಸಕ್ಕೊ ಒಬ್ಬೊಬ್ಬ ಸೇವಕನಂತೆ ಅನೇಕ ಸೇವಕರುಗಳಿಂದ ಸೇವೆ ಮಾಡಿಸಿಕೊಳ್ಳುವುದೇ ಸುಖವೆಂದು ಭಾವಿಸಿಕೊಂಡಿದ್ದ. ಈ ರಾಜ ಒಮ್ಮೆ ಬಡ ರೈತನನ್ನು ಕಂಡು ಅಯ್ಯಾ ನಿನ್ನನ್ನು ನೋಡಿದರೆ ನನಗೆ ಬಹಳ ಮರುಕ ಬರುತ್ತದೆ. ನಿನ್ನ ಸೇವೆಗೆಂದು ಯಾರೂ ಇಲ್ಲ. ನನ್ನನ್ನು ನೋಡಿಕೊಂಡು ನಿನ್ನನ್ನು ನೋಡಿದರೆ ಬಹಳ ದುಃಖವಾಗುತ್ತದೆ ಎಂದನು. ಆಗ ಆ ಬಡ ರೈತನು ಸ್ವಾಮಿ ನಾನು ನಿಮ್ಮ ಈ ಮಾತನ್ನು ಒಪ್ಪುವುದಿಲ್ಲ. ಮೈಗೆ ಕಜ್ಜಿಯನ್ನು ಹತ್ತಿಸಿಕೊಂಡು ಆ ಕಜ್ಜಿಯನ್ನು ತುರಿಸಿಕೊಳ್ಳಲು ಎರಡಾಳಿಟ್ಟು ತುರುಸಿಕೊಳ್ಳುತ್ತಾ ಸುಖವಾಗಿದ್ದೇನೆಂದರೆ ಹೇಗೆ ಒಪ್ಪಲಿಕ್ಕಾದೀತು. ಕಜ್ಜಿಯನ್ನೇ ಹತ್ತಿಸಿಕೊಳ್ಳದೆ ತುರಿಸಿಕೊಳ್ಳದೆ ಇರುವವನು ಸುಖಿಯೋ ಅಥವಾ ಕಜ್ಜಿಯನ್ನು ಹತ್ತಿಸಿಕೊಂಡು ತುರಿಸಿಕೊಳ್ಳುವವನು ಸುಖಿಯೋ. ನೀವೇ ವಿಚಾರಿಸಿ. ನಿಮಗೆ ಆಸೆಯೆಂಬ ಕಜ್ಜಿಗಳು ವಿಶೇಷ, ನಿಮ್ಮ ಅವಶ್ಯಕತೆಗಳನ್ನು ನೀವೇ ಪೂರೈಸಿಕೊಳ್ಳಲು ಶಕ್ಯವಿಲ್ಲದ ನಿಮ್ಮ ಸುಖ ಸುಖವೆಂದು ನಾನು ಭಾವಿಸುವುದಿಲ್ಲ. ಅಷ್ಟೇ ಅಲ್ಲ, ಯಾವ ವಿಚಾರವಂತನೂ ಹಾಗೆ ಭಾವಿಸಲು ಸಾಧ್ಯವಿಲ್ಲ ಎಂದನು.

ಆಗ ಆ ರಾಜನು ತನ್ನ ಹುಚ್ಚುತನಕ್ಕಾಗಿ ನಾಚಿಕೆಪಟ್ಟು ಸುಮ್ಮನಾದನು.

ಆದ್ದರಿಂದ ಆಸೆಯೆಂಬುದು ಕಜ್ಜಿ ಇದ್ದಂತೆ, ಅದು ಹತ್ತಿದರೆ ತಡೆಯದ ತುರಿಕೆ ಉಂಟಾಗುತ್ತದೆ. ಆ ಕಾರಣ **ಅದು ಹತ್ತದ** ಹಾಗೆ ನಾವು ಎಚ್ಚರಿಕೆಯಿಂದ ಇರಬೇಕು.

ಬಡವ ಯಾರು?

ಒಮ್ಮೆ ಟಾಲ್‌ಸ್ಟಾಯ್ ಮಹರ್ಷಿಗಳ ಹತ್ತಿರ ಓರ್ವ ವ್ಯಕ್ತಿಯು ಬಂದು "ಸ್ವಾಮಿ ನಾನು ಬಹಳ ಬಡವ. ಸಹಾಯಮಾಡಿ" ಎಂದು ಕೇಳಿದ. ಆಗ ಟಾಲಸ್ಟಾಯ್ ಅಡಿಯಿಂದ ಮುಡಿಯತನಕ ಆ ವ್ಯಕ್ತಿಯನ್ನು ಗಮನಿಸಿ ನೋಡಿದರು. ಅವನದು ಸದೃಢಕಾಯ ದೇಹ. ಎಲ್ಲ ಅಂಗಾಂಗಗಳು ಚೆನ್ನಾಗಿವೆ. ಯಾವುದೂ ಊನವಾಗಿಲ್ಲ. ಮೈ ಮುರಿದು ದುಡಿದು ಸಂಪಾದಿಸಿ ಬದುಕುವ ಸಾಮರ್ಥ್ಯವಿದ್ದರೂ ಬೇಡಲು ಬಂದಿರುವ ಇವನಿಗೆ ಬುದ್ಧಿ ಕಲಿಸಬೇಕೆಂದು ಮನಸ್ಸಿನಲ್ಲಿ ಅಂದುಕೊಂಡರು.

"ಏನಯ್ಯಾ ದೂರದ ದೇಶದಲ್ಲಿ ನನಗೊಬ್ಬ ಸ್ನೇಹಿತನಿದ್ದಾನೆ. ಅವನು ಕೈಗಳ ವ್ಯಾಪಾರ ಮಾಡುತ್ತಾನೆ. ನಿನ್ನ ಎರಡೂ ಕೈಗಳನ್ನು ಕೊಡು. ಐದು ಸಾವಿರ ರೂಪಾಯಿಕೊಡಿಸುತ್ತೇನೆ.''

"ಇಲ್ಲ ಸ್ವಾಮಿ, ಆಗೊಲ್ಲ, ಕೈ ಕಳೆದುಕೊಂಡು ನಾನೇನು ಮಾಡಲಿ?"

"ಹಾಗಾದರೆ ಒಂದು ಕೆಲಸ ಮಾಡು, ನನ್ನ ಇನ್ನೊಬ್ಬ ಸ್ನೇಹಿತ ಕಾಲಿನ ವ್ಯಾಪಾರ ಮಾಡುತ್ತಾನೆ. ನಿನ್ನ ಎರಡು ಕಾಲುಗಳನ್ನು ಕೊಡು, ಹತ್ತು ಸಾವಿರ ರೂಪಾಯಿಗಳನ್ನು ಕೊಡಿಸುತ್ತೇನೆ."'

"ಎಲ್ಲಾದರೂ ಉಂಟೆ, ಇಲ್ಲಾ ಸ್ವಾಮಿ ಇಲ್ಲಾ."

"ಹೋಗಲಿ, ಕಾಲೂ ಬೇಡ, ಇನ್ನೊಬ್ಬ ಸ್ನೇಹಿತನಾದ ವಿಜ್ಞಾನಿ ಇದ್ದಾನೆ. ಕಣ್ಣಿನ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾನೆ. ನಿನ್ನ ಎರಡು ಕಣ್ಣುಗಳನ್ನೂ ಕೊಡು, ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡಿಸುತ್ತೇನೆ."

"ಸಾಧ್ಯವಿಲ್ಲ ಸ್ವಾಮಿ, ನನ್ನ ಕಣ್ಣು ನನಗೆ ಇರಲಿ, ನಿಮ್ಮ ದುಡ್ಡು ನಿಮಗೆ ಇರಲಿ" ಎಂದ ಕೊನೆಗೆ ಆ ವ್ಯಕ್ತಿ.

ಆಗ ಟಾಲ್‌ಸ್ಟಾಯ್ ಮಹರ್ಷಿಗಳು ಹೀಗೆಂದರಂತೆ, "ಅಲ್ಲಯ್ಯಾ, ಭಗವಂತ ನಿನಗೆ ಲಕ್ಷಾಂತರ ರೂಪಾಯಿ ಬೆಲೆಬಾಳುವ ಶರೀರವನ್ನು ಕರುಣಿಸಿದ್ದಾನೆ. ಯಾವುದೂ ಊನವಿಲ್ಲ. ಅಂತಹುದರಲ್ಲಿ ನಾನು ಬಡವ ಬಡವ ಎಂಬ ಭಾವನೆಯಿಂದ

ಬೇಡುತ್ತಿದ್ದೀಯೆ. ನಿನಗೆ ಬಡತನವೆಲ್ಲಿದೆ? ದೇವರು ಕರುಣಿಸಿರುವ ಶರೀರವನ್ನು ದಂಡಿಸಿ ದುಡಿದು ತಿನ್ನು, ಇನ್ನೊಬ್ಬರಿಗೂ ಕೊಡು. ಆಗ ನಿನ್ನಿಂದ ಬಿಟ್ಟು ಸಿರಿವಂತರಿಲ್ಲಾಣ್ಣಾ ಎಲೆ ಮೂರ್ಖ" ಎಂದು ಉಪದೇಶಿಸಿದರು. ಆಗ ಆ ವ್ಯಕ್ತಿಗೆ ತನ್ನ ನೈಜ ಸಿರಿವಂತಿಕೆ ಅರ್ಥವಾಯಿತು.

ನನಗೆ ನಾಲ್ಕೇ ವರ್ಷ ವಯಸ್ಸು

ಒಮ್ಮೆ ಓರ್ವ ಮಹಾರಾಜ ಕುದುರೆಯೇರಿ ಭಟರೊಂದಿಗೆ ಬರುತ್ತಿದ್ದ. ಮಾರ್ಗಮಧ್ಯೇ ಕರ್ತವ್ಯನಿರತನಾಗಿದ್ದ ವಯೋ ಮುದುಕನೊಬ್ಬನನ್ನು ಕಂಡ. ಕೂಡಲೇ ಕುದುರೆಯಿಂದಿಳಿದು ಬಂದು ಮುದುಕನನ್ನು ಪ್ರಶ್ನಿಸಿದ ''ಎಲೈ ಮುದುಕ ನಿನಗೀಗ ವಯಸ್ಸು ಎಷ್ಟು. ವೃದ್ಧ ಮುದುಕ ಗಂಭೀರವಾಗಿ ಉತ್ತರವನ್ನು ಕೊಟ್ಟ ''ಪ್ರಭು ನನಗೀಗ ನಾಲ್ಕೇ ವರ್ಷ ವಯಸ್ಸು''. ಮುದುಕನ ಈ ಉತ್ತರದಿಂದ ರಾಜನಿಗೆ ಆಶ್ಚರ್ಯವಾಯಿತು. ಭಟರಿಗೆ ಕೋಪ ಬಂತು. ಆಗ ಭಟರು ''ಮುದುಕ, ಯಾರ ಮುಂದೆ ನಿಂತು ನೀನು ಮಾತನಾಡುತ್ತಿರುವುದು? ಇವರು ಮಹಾರಾಜರು, ಶಿಕ್ಷೆಯಾದೀತು ಎಚ್ಚರಿಕೆ. ನಿನ್ನ ಅಂಗಾಂಗವೆಲ್ಲ ಶಿಥಿಲವಾಗಿದೆ. ಕಣ್ಣು ಮಂದದೃಷ್ಟಿಯುಳ್ಳವಾಗಿವೆ, ತಲೆಯೆಲ್ಲ ನೆರೆತು ನಡುಗುತ್ತಿದೆ, ಬೆನ್ನು ಬಾಗಿ ಹೋಗಿದೆ. ಇದನ್ನೆಲ್ಲಾ ನೋಡಿದರೆ ಏನಿಲ್ಲವೆಂದರೂ ನಿನಗೆ ಎಪ್ಪತ್ತು-ಎಂಭತ್ತು ವರ್ಷವಾದರೂ ಆಗಿರಬೇಕು. ಅಂತಹುದರಲ್ಲಿ ನಾಲ್ಕೇ ವರ್ಷ ವಯಸ್ಸು ಎಂದು ಹೇಳುತ್ತಿದ್ದೀಯಾ?'' ಎಂದು ಗದರಿಸಿದರು. ಆಗ ಆ ಮುದುಕ ಅವರ ಗದರುವಿಕೆಗೆ ಹೆದರಲಿಲ್ಲ; ನಿಧಾನವಾಗಿ ಉತ್ತರ ಕೊಟ್ಟ: ''ಸ್ವಾಮಿ, ನಾನು ಹೇಳುತ್ತಿರುವುದು ಸತ್ಯ. ನನಗೀಗ ನಾಲ್ಕೇ ವರ್ಷ ವಯಸ್ಸು. ಹೇಗೆಂದರೆ ನನ್ನ ಆಯುಷ್ಯದಲ್ಲಿ ಹತ್ತಾರು ವರುಷಗಳು ನಿದ್ರೆಯಲ್ಲಿ ಕಳೆದರೆ, ಮತ್ತೆ ಹಲವಾರು ವರುಷಗಳು ಕಲಹದಲ್ಲಿ ಕಳೆದುಹೋದವು. ಇನ್ನೂ ಕೆಲವು ವರ್ಷಗಳು ದುರ್ವ್ಯಸನಗಳಲ್ಲಿ ವ್ಯರ್ಥವಾಗಿ ಕಳೆದು ಹೋದವು. ಹೀಗಾಗಿ ನನ್ನ ಬದುಕಿನಲ್ಲಿ ಸಾರ್ಥಕವಾದುದು ನಾಲ್ಕೇ ವರ್ಷ ವಯಸ್ಸು ಮಾತ್ರ. ಈ ಕಾರಣ ನನಗೆ ನಾಲ್ಕೇ ವರ್ಷ ವಯಸ್ಸು" ಎಂದ.

ಆದ್ದರಿಂದ ಸಾಮಾನ್ಯರ ದೃಷ್ಟಿಯಲ್ಲಿ ಮಾನವನ ವಯೋಮಾನವನ್ನು ಹುಟ್ಟಿದಾರಭ್ಯ ಸಾಯುವ ತನಕ ಲೆಕ್ಕ ಹಾಕುವುದು ರೂಢಿಯಲ್ಲಿದೆ. ಆದರೆ ಜ್ಞಾನಿಗಳ ಗಣಿತದ ರೀತಿಯೇ ಬೇರೆ. ಅವರ ದೃಷ್ಟಿಯಲ್ಲಿ ನಿದ್ರೆ, ಕಲಹ, ವ್ಯಸನಗಳಲ್ಲಿ ವ್ಯರ್ಥವಾಗಿ ಕಳೆದ ವಯಸ್ಸು ಪರಿಗಣಿತವಲ್ಲ. ಬದುಕಿನಲ್ಲಿ ಸಾರ್ಥಕವಾಗಿ ಸಂದುದೇ ನಿಜವಾದ ವಯಸ್ಸು ಮತ್ತು ಆಯುಸ್ಸು.

(ಸಂ) ಕೆ. ಬಸವರಾಜು

ಶ್ರೀ ನುಡಿ ಕೋಶ

ಪರಮಪೂಜ್ಯ ಶ್ರೀ ಶ್ರೀಗಳವರ ಭಾಷಣದ ಶೈಲಿ ಅನ್ಯಾದೃಶವಾದುದು. ಶ್ರೀ ಶ್ರೀಗಳವರು ತಮ್ಮ ಭಾಷಣದಲ್ಲಿ ಬಳಸುವ ಶಬ್ದಗಳು ವಿಚಾರಪರಿಪ್ಲುತವೂ, ಸ್ವಾನುಭವಪೂರಿತವೂ, ವಿಶೇಷಾರ್ಥಪ್ರಕಾಶಿತವೂ, ಅರ್ಥಬಾಹುಳ್ಯವುಳ್ಳವುಗಳೂ ಆಗಿವೆ. ಇಂಥ ವಿಶೇಷಾರ್ಥವನ್ನೂ, ವಿಶೇಷವಾದ ವ್ಯಾಖ್ಯಾನವನ್ನೂ ಒಳಗೊಂಡು ಶಬ್ದಗಳನ್ನು ಸಾಂಕೇತಿಕವಾಗಿ ಶ್ರೀ ಶ್ರೀಗಳವರ ಭಾಷಣ ಮತ್ತು ಲೇಖನಗಳಿಂದ ಆಯ್ದುಕೊಂಡು ಶ್ರೀ ನುಡಿಕೋಶ ಎಂಬ ಶೀರ್ಷಿಕೆಯಡಿ ಸಂಯೋಜಿಸಿ, ಸಂಕಲಿಸಿ ಇಲ್ಲಿ ಕೊಡಲಾಗಿದೆ.

ಉಪಾಧ್ಯಾಯ

ಕೇವಲ ಅರ್ಥೋಪಜೀವಿಯಾಗಿರದೆ ಸಮಾಜದ
ಗೌರವವನ್ನು ಸಂಪಾದಿಸಿಕೊಂಡು ತನ್ನ ಕರ್ತವ್ಯವನ್ನು
ನಿರ್ವಂಚನೆಯಿಂದ ನಿರ್ವಹಿಸುವ ಪುಣ್ಯಮೂರ್ತಿ.
ಸರಳ ಜೀವನ, ಉನ್ನತ ಆಲೋಚನೆಗಳೆಂಬ ಸೂತ್ರವನ್ನು
ತನ್ನ ಜೀವನದ ತತ್ತ್ವವನ್ನಾಗಿಸಿಕೊಂಡ ಸಾರ್ಥಕ ಜೀವಿ.

ದೃಷ್ಟಿದೋಷ

ಹಿರಿದಾದುದನ್ನು ಕಿರಿದುಮಾಡಿ
ಕಿರಿದಾದ್ದನ್ನು ಹಿರಿದುಮಾಡಿ
ನೋಡುವ ದೃಷ್ಟಿಮಾಲಿನ್ಯ.

ಅಶಾಂತಿ

ಸಮಾಜ ಹಾಗೂ ರಾಷ್ಟ್ರ ಜೀವನದಲ್ಲಿ
ಅರ್ಥ ಕಾಮಾದಿಗಳ ಗಳಿಕೆ ಮತ್ತು ಬಳಕೆಗಳ
ಜ್ಞಾನಾಭಾವದಿಂದುಂಟಾಗುವ
ಪರಿಸ್ಥಿತಿಯ ಅಸ್ತವ್ಯಸ್ತ.

ಮಾತು

ಮಾನವನ ಅಂತರಂಗ ಶಕ್ತಿ
ಸಂಸ್ಕೃತಿಯ ಅಳತೆಗೋಲು.
ಅರಿವಿನ ಅಡಿಗಲ್ಲು.
ಸರ್ವ ಸಂಪದಕ್ಕೆ ಕಾರಣವಾದುದು.
ಅರ್ಥ ಹಿತ ದೀಪ್ತಿ ಎಂಬ
ಮೂರು ಗುಣವುಳ್ಳದ್ದು.

ವಿದ್ಯಾರ್ಜನೆ

ಒಂದೊಂದು ಕ್ಷಣವಲ್ಲಿಯೂ
ಜ್ಞಾನದ ಒಂದೊಂದು ಕಣವನ್ನೂ
ಹುಡುಕಿ, ಹೆಕ್ಕಿ, ತೊಳೆದು ಕೂಡಿಡುವುದು.

ಸಂಸ್ಕೃತಿ

ಅಂತರ್ ಜೀವನದ ಸೊಬಗು.
ಹೃದಯ ಮನಸ್ಸುಗಳ ವಿಕಾಸ.
ವಿಶ್ವಪ್ರೇಮವನ್ನು ಹೊರಸೂಸುವ ಮಾತು.
ಜಗತ್ಕಲ್ಯಾಣಕರವಾದ ಕೃತಿ.

ವಿಚಾರಮತಿಗಳು

ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು ಎಂಬುದನ್ನರಿತವರು. ಸತ್ಸಂಕಲ್ಪ, ಸದ್ಭಾವನೆಗಳಿಂದ ಪ್ರಚೋದಿತರಾಗಿ ಜೀವನವನ್ನು ಉದಾತ್ತಗೊಳಿಸಿಕೊಳ್ಳುವುದರಲ್ಲಿ ಪ್ರಯತ್ನಶೀಲರಾದ ತರುಣ - ತರುಣಿಯರು.

ಸ್ವಾತಂತ್ರ್ಯ

ಸ್ವೇಚ್ಛಾಚಾರವಲ್ಲ, ಸ್ವಚ್ಛಂದ ಜೀವನವಲ್ಲ,
ಅದು ಆತ್ಮವಿಕಾಸದ ರಕ್ಷೆ. ನಮ್ಮ ಹಿತರಕ್ಷಕರ
ಅಂಕೆಯಲ್ಲಿದ್ದು ಆತ್ಮರಕ್ಷಣೆ ಮಾಡಿಕೊಳ್ಳುವುದು.

ಸ್ಥಿತಪ್ರಜ್ಞ

ಕಷ್ಟ - ಸುಖಗಳೆರಡೂ ಭಗವಂತನ ಪ್ರಸಾದ ಎಂದು
ಭಾವಿಸಿ ಅವುಗಳನ್ನು ಸಮಾನವಾಗಿ ಸ್ವಾಗತಿಸುವವನು.

ಸುಖ

ಬಾಹ್ಯ ಉಪಾಧಿಯಿಂದ ಸಿಗುವ ವಸ್ತುವಲ್ಲ.
ಆಂತರಿಕವಾಗಿ ಹೊರಹೊಮ್ಮುವ ಮಾನಸಿಕ ತೃಪ್ತಿ.

ಸಾಕ್ಷಾತ್ಕಾರ

ಜಗತ್ತನ್ನು ಜಿಪದೆ, ಸಂಸಾರವನ್ನು ತೊರೆಯದೆ,
ಕಾಡನ್ನು ಸೇರದೆ, ತಾನು ಇದ್ದಲ್ಲಿಯೇ ಸಾಧನೆ ಮಾಡಿ
ಸಿದ್ಧಿಯನ್ನೈದುವುದು.

ಬ್ರಹ್ಮಜ್ಞಾನಿ

ನಾನು ಯಾರು? ಎಲ್ಲಿಂದ ಬಂದೆ? ಹೋಗುವು
ದಾದರೂ ಎಲ್ಲಿಗೆ? ಎಂಬ ಪ್ರಶ್ನೆಗಳಿಗೆ
ಉತ್ತರವನ್ನು ಕಂಡುಕೊಳ್ಳುವವನು.

ಮಾನವ ಜನ್ಮ

ಸೃಷ್ಟಿಯಲ್ಲಿ ಭಗವಂತನು ಕರುಣಿಸಿದ
ಅಮೂಲ್ಯವಾದ ಕಾಣಿಕೆ.

ಧರ್ಮ

ಸಮಸ್ತ ಮಾನವ ಜನಾಂಗದ ಅಭ್ಯುದಯ ಮತ್ತು
ಶ್ರೇಯಸ್ಸಿಗೆ ಕಾರಣೀಭೂತವಾದುದು.
ಸತ್ಯದರ್ಶನಕ್ಕೆ ಆತಂಕವಾಗಿರುವ ಅಸುರೀಶಕ್ತಿಗಳ
ಮೇಲೆ ದೈವಶಕ್ತಿಗಳು ನಡೆಸುವ ದಾಳಿ.

ಹೇಡಿ

ಈ ಜಗತ್ತಿನಲ್ಲಿ ನಾನು
ಏನನ್ನೂ ಸಾಧಿಸಲಾರೆನು,
ಯಾವುದನ್ನೂ ಪಡೆಯಲಾರೆನು,
ಬದುಕಿನೊಡನೆ ನನಗೆ ಹೋರಾಟ ಸಾಧ್ಯವಿಲ್ಲ
ಮುಂತಾಗಿ ಆತ್ಮವಿಶ್ವಾಸವಿಲ್ಲದೆ
ಮನೋದೌರ್ಬಲ್ಯದಿಂದ
ಕಿಂಕರ್ತವ್ಯಮೂಢನಾಗಿ ಕೈಕಟ್ಟಿ
ಕುಳಿತುಕೊಳ್ಳುವವನು.

ಆತ್ಮಸಂಪತ್ತು

ಪರಮಾತ್ಮನು ಕರುಣಿಸಿರುವ
ಎಲ್ಲ ವಿಧವಾದ ಶಕ್ತಿಗಳನ್ನು
ಅವನ ಸಮೀಪವರ್ತಿ
ಯಾಗುವುದರಲ್ಲಿ
ವ್ಯಯಗೊಳಿಸುವ
ಅರಿವಿನ ಸಂಕಲನ.

ಮಾನವ ಧರ್ಮ

ಮತ್ತೊಬ್ಬರು ಕಷ್ಟಪಡುವುದನ್ನು ಕಂಡು
ತಾನು ಮರುಗಿ ಸಹಾಯವನ್ನು ಕೊಟ್ಟು
ಮೇಲಕ್ಕೆತ್ತುವುದು. ಅದರಂತೆ ಮತ್ತೊಬ್ಬರು
ಸುಖವಾಗಿ ಬಾಳ್ವೆಮಾಡುವುದನ್ನು ನೋಡಿ
ಅವನ ಸಂತೋಷದಲ್ಲಿ ಭಾಗಿಯಾಗುವ
ಔದಾರ್ಯವನ್ನು ತಾಳುವುದು.

ಸಮದರ್ಶಿ

ತನ್ನಂತೆ ಪರರ ಬಗೆವವನು
ಎಲ್ಲ ಜೀವಾತ್ಮರಲ್ಲಿಯೂ ವಿಶ್ವಾತ್ಮನನ್ನು
ಕಾಣುವವನು. ಸ್ವಾರ್ಥವನ್ನು
ಪರಾರ್ಥದಲ್ಲಿ ಪರಿಣಾಮಿಸುವವನು.

ಸಚ್ಚರಿತರು

ಪರರಿಗಾಗಿ ಜೀವಿಸುವ,
ಪರರ ಮೇಲ್ಮೆಗಾಗಿ ಸವೆಸುವ
ಪುಣ್ಯಶಾಲಿಗಳು.

ಸಾಹಿತ್ಯ

ಹಲವಾರು ಜಟಿಲ ಸಮಸ್ಯೆಗಳಿಗೆ ಪರಿಹಾರ
ಒದಗಿಸುವಂಥದ್ದು. ಜನರನ್ನು ಮೇಲೆತ್ತುವ
ಉತ್ತಮಸಾಧನ. ಸುಸಂಸ್ಕೃತ ಜನಾಂಗವನ್ನು
ಸೃಷ್ಟಿಗೈವ ಶಕ್ತಿ. ಉತ್ತಮ ಬಾಳ್ಕೆ
ಮಾಡುವ ರೀತಿ ನೀತಿಗಳನ್ನು ಜನತೆಯಲ್ಲಿ
ಬಿತ್ತುವ ಮಾಧ್ಯಮ.

(ಸಂ) ಕೆ. ಬಸವರಾಜು

ಶ್ರೀಗಳವರ ಲೇಖನಗಳು

೧. ವಿಶ್ವಶಾಂತಿ

ಇಂದು ವಿಜ್ಞಾನ ಯುಗ. ಮಾನವನು ತನ್ನ ಅಮೃತಮಯ ಧೀಶಕ್ತಿಯಿಂದ ಸೃಷ್ಟಿಯ ಗರ್ಭದಲ್ಲಿ ಹುದುಗಿರುವ ಅಗಾಧ ಶಕ್ತಿಗಳನ್ನು ಕಂಡುಹಿಡಿದು, ವಿಸ್ಮಯಕಾರಿಯಾದ ವೈಚಿತ್ರ್ಯಗಳನ್ನು ಪ್ರದರ್ಶನ ಮಾಡುತ್ತಿದ್ದಾನೆ. ಮಾನವಶಕ್ತಿಗಿಂತ ಮಿಗಿಲಾದ ಶಕ್ತಿಯಿಲ್ಲವೆನ್ನುವುದನ್ನು ಸ್ಥಾಪಿಸಲು ಹವಣಿಸುತ್ತಿದ್ದಾನೆ. ವಿಜ್ಞಾನದ ಸಂಶೋಧನೆಗಳಿಂದ ಲಭ್ಯವಾಗಿರುವ ಯಾಂತ್ರಿಕ ರಚನೆಯು ದೇಶ....ಕಾಲಕೃತ ಅಂತರಾಯಗಳೆಲ್ಲವನ್ನು ಪರಿಹರಿಸಿ ಪ್ರಪಂಚದ ಎಲ್ಲ ರಾಷ್ಟ್ರಗಳೂ ಅಕ್ಕಪಕ್ಕದ ಗ್ರಾಮಗಳೋಪಾದಿಯಲ್ಲಿ ನೆರೆಹೊರೆಯ ಮನೆಯವರ ಹಾಗೆ ವಾಸ ಮಾಡುವ ಸೌಲಭ್ಯ ಉಂಟಾಗಿದೆ. ಮಾನವನು ತನ್ನ ಶಕ್ತಿಯ ಹಿರಿಮೆಯನ್ನು ತಾನೇ ಪ್ರಶಂಸಿಸುತ್ತಾ ಇಹಲೋಕವಲ್ಲದೆ ಬೇರೆ ಲೋಕಗಳನ್ನೂ ಸಹ ಮುಟ್ಟುವುದರಲ್ಲಿ ಜಯಶಾಲಿಯಾಗಬಲ್ಲೆನೆಂಬ ಆತ್ಮಾಭಿಮಾನ ಉಳ್ಳವನಾಗಿ ಸರ್ವಶಕ್ತನೆಂಬ ನಾಮವು ತನಗೇ ಅನ್ವಯಿಸುವುದೆಂದು ಘೋಷಿಸುತ್ತಿದ್ದಾನೆ.

ಈ ಸರ್ವಶಕ್ತನಾದ ಮಾನವನ ಮಹಾಸಾಹಸದಿಂದ ವಿಶ್ವ ರಚನೆಯ ಅರ್ಥದ ಅರಿವು ಆಗಬಲ್ಲುದೇ? ಮಾನವನ ಮಹಾ ಗುರಿಯು ಸಾರ್ಥಕವಾಗಬಲ್ಲುದೇ, ಜಗತ್ತು ಕಲ್ಯಾಣಮಯವಾಗಬಲ್ಲುದೇ ಎನ್ನುವ ಪ್ರಶ್ನೆಗಳುದ್ಭವಿಸುತ್ತವೆ. ಅರ್ಧ ಶತಮಾನದಿಂದೀಚೆಗೆ ಸಂಭವಿಸಿದ ಎರಡು ಮಹಾಯುದ್ಧಗಳ ಮೂಲಹೇತುಗಳು, ಅವುಗಳ ಕರಾಳ ಸ್ವರೂಪ ದುಷ್ಪರಿಣಾಮಗಳು ಎಲ್ಲವನ್ನು ಪರಿಶೀಲನೆ ಮಾಡಿದರೆ, ಈವರೆಗೆ ಮಾನವನು ಗಳಿಸಿರುವ ಶಕ್ತಿಯಿಂದಲಾಗಲೀ, ಸ್ಥಾಪಿಸಿರುವ ಕಾರ್ಯಗಳಿಂದಾಗಲೀ ನೋಡುತ್ತಿರುವ ನೋಟದಿಂದಾಗಲೀ ಜಗತ್ತು ಉದ್ಧಾರವಾಗಲು ಸಾಧ್ಯವಿಲ್ಲವೆನ್ನುವುದು ಚೆನ್ನಾಗಿ ವ್ಯಕ್ತವಾಗುತ್ತದೆ. ಮೊದಲನೆಯ ಮಹಾಯುದ್ಧದಲ್ಲಿ ಉಂಟಾದ ಭೌತಿಕ ಸಿರಿಸಂಪತ್ತಿನ ನಾಶ, ಪ್ರಾಣಿಕೋಟಿಯ ಹಾಗೂ ಮಾನವ ಜನಾಂಗದ ವಿನಾಶ, ಜರ್ಝರಿತವಾದ ಜೀವನ ಪರಿಸ್ಥಿತಿಗಳನ್ನರಿತ ಸಹೃದಯ ಜನಾಂಗದ ಪ್ರಯತ್ನದಿಂದ ಮತ್ತೊಮ್ಮೆ ದಾರುಣ ಪ್ರಸಂಗವು ಸಂಭವಿಸದ ರೀತಿಯಲ್ಲಿ ಸೂಕ್ತ ಏರ್ಪಾಟು ಮಾಡುವ ಉದ್ದಿಶ್ಯ ಜಗತ್ತಿನ ಪ್ರಬಲ ರಾಷ್ಟ್ರಗಳ ಪ್ರಾತಿನಿಧ್ಯವನ್ನೊಳಗೊಂಡ 'ಲೀಗ್ ಆಫ್ ನೇಷನ್' (ಈಗಿನ ವಿಶ್ವಸಂಸ್ಥೆ) ಸ್ಥಾಪಿತವಾಯಿತು. ಈ ಸಂಸ್ಥೆಯಾದರೂ ತನ್ನ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ಕೃತಕೃತ್ಯವಾಗಲಿಲ್ಲವಾಗಿ ಮೊದಲನೆಯ ಯುದ್ಧವು ಮುಕ್ತಾಯವಾದ ಇಪ್ಪತ್ತು ವರ್ಷಗಳ ಅವಧಿಯಲ್ಲಿಯೇ ಅದಕ್ಕಿಂತಲೂ....ಭಯಂಕರವಾದ ಎರಡನೆಯ ಮಹಾಯುದ್ಧವು ಆರಂಭವಾಗಿ ಭಯಂಕರವಾದ ದುಷ್ಪರಿಣಾಮಗಳನ್ನುಂಟು ಮಾಡಿದ ವಿಷಯವು ಎಲ್ಲರಿಗೂ ಮನವರಿಕೆಯಾಗಿದೆ. ಅದರ ತಾಪದಿಂದ ಬೆಂದು, ಬೇಸತ್ತ ಜನತೆಯು ಶಾಂತಿಗಾಗಿ ಹಾತೊರೆಯುತ್ತಿದೆ. ಆದರೆ ಎರಡನೆಯ ಮಹಾಯುದ್ಧವಾದ ನಂತರ ಯುದ್ಧದ ಪ್ರಸಂಗವಿಲ್ಲದೆ ಚಿರಂತನ ಶಾಂತಿಸ್ಥಾಪನೆ ಮಾಡುವ ಉದ್ದಿಶ್ಯಕ್ಕಾಗಿ ಸ್ಥಾಪಿತವಾಗಿರುವ ವಿಶ್ವಸಂಸ್ಥೆಯು ತನ್ನ ಮಹಾಧ್ಯೇಯವನ್ನು ಸಾಧಿಸಿ ಮಂಗಳವನ್ನುಂಟುಮಾಡಬಲ್ಲ ಭರವಸೆಯು ಬಯಲಾಗುತ್ತಿದೆ. ಎರಡು ಮಹಾರಾಷ್ಟ್ರಗಳ ನಡುವೆ ಬೆಳೆಯುತ್ತಿರುವ ವಿಷಮ ಜ್ವಾಲೆಯು ಮೂರನೆಯ ಮಹಾಯುದ್ಧಕ್ಕೆಡೆಗೊಂಡು, ಅಣುಶಕ್ತಿಯ ಪ್ರಯೋಗದಿಂದ ವಿಶ್ವವನ್ನು ಸಂಪೂರ್ಣವಾಗಿ ನಾಶಮಾಡಬಹುದೆಂಬ ಭೀತಿ, ಶಂಕೆಗಳು ಒಡಮೂಡುತ್ತಿವೆ. ಮುಂದೇನು? ಎನ್ನುವ ಪ್ರಶ್ನೆಯು ಶಾಂತ ಮೂರ್ತಿಗಳ, ಪ್ರೇಮಜೀವಿಗಳ ತಲೆಯನ್ನೂ ಕೆಡಿಸಹತ್ತಿದೆ. ''America is destifined to rule the world for at least a century more'' ಎಂದು ಅಮೇರಿಕ ಘೋಷಣೆ ಕೊಡುತ್ತಿದ್ದರೆ, ''The main Economic Policy of Russia is to over through and out stript the Capital countries and Capitalism.'' ಎಂದು ರಷ್ಯ ಹೇಳುತ್ತಿದೆ. ಈ ಪರಿಸ್ಥಿತಿಯಲ್ಲಿ ಶಾಂತಿಯು ನೆಲೆಸುವುದು ಸಾಧ್ಯವೇ ಎಂಬ ಸಂಶಯವು ಪ್ರಬಲವಾಗುತ್ತಿದೆ. ''We have learnt to fly in air like birds, we have learnt to swim in water like fish, but unfortunately we have not learnt to live on earth as men.''

ವಿಶ್ವಕ್ಕೆ ಒದಗಿರುವ ಈ ವಿಷಮ ಪರಿಸ್ಥಿತಿಯನ್ನು ಬಗೆಹರಿಸಿ, ಜಗತ್ತು ಶಾಂತಿ ಸಾಮ್ರಾಜ್ಯವಾಗಿ ಮಾನವ ಕುಲಕ್ಕೆ ಮಂಗಳವನ್ನುಂಟುಮಾಡುವ ಅವಕಾಶವನ್ನೊದಗಿಸುವುದು ಎಂದಿಗೂ ಸಾಧ್ಯವಿಲ್ಲವೆಂಬ ನಿರಾಶಾವಾದದ ಕಾರ್ಮುಗಿಲು ಕವಿದು ಜನತೆಯು ಪರಿತಪಿಸುತ್ತಿದೆ. ಈ ಸಮಯದಲ್ಲಿ ಜನತೆಗೆ ಕಲ್ಯಾಣದ ಆಶ್ವಾಸನೆಯನ್ನು ನೀಡಿ ಭವ್ಯ ಭವಿಷ್ಯದ ಭರವಸೆಯನ್ನು ನೀಡುವ ಆಶಾವಾದದ ದಿವ್ಯಸಂದೇಶವನ್ನು, ಕಾರ್ಯಾಚರಣೆಯ ಆದರ್ಶವನ್ನು ವಿಶ್ವವು ಕುತೂಹಲದಿಂದ ನೋಡುತ್ತಿದೆ.

ಇಂಥ ವಿಪತ್ಕಾಲದಲ್ಲಿ ಪವಿತ್ರ ಸಂಸ್ಕರಣೆಯ ಆಧಾರದ ಮೇಲೆ ತನ್ನ ಬಾಳನ್ನು ರೂಪಿಸಿ ಬೆಳಗಿಸಿರುವ, ತನ್ನದೇ ಆದ ಉಜ್ವಲ ತೇಜಸ್ಸು ಮತ್ತು ನಿಗೂಢ ಸತ್ವದಿಂದ ಆಘಾತ ಪರಂಪರೆಗಳನ್ನು ತಾಳ್ಮೆಯಿಂದ ಸಹಿಸಿ, ದಿಟ್ಟತನದಿಂದ ...ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿರುವ ಭರತ ಖಂಡವು ತನ್ನ ನೈಜವಾದ, ಸಹಜವಾದ ಶಕ್ತಿಯನ್ನು ಅಳವಡಿಸಿಕೊಂಡು ಜಗತ್ತಿಗೆ ಮಾರ್ಗದರ್ಶನಮಾಡಿ, ವಿಶ್ವದ ಉದ್ಧಾರದ ಕಾರ್ಯದಲ್ಲಿ ...ಜವಾಬ್ದಾರಿಯನ್ನು ಹೊರಬೇಕಾಗಿದೆ. ಕೇವಲ ಮಾನವ ಸಮಾಜದಲ್ಲಿ ಮಾತ್ರವಲ್ಲ, ವಿಶಿಷ್ಟ ಜೀವಕೋಟಿಯಲ್ಲಿ ಮಾತ್ರವಲ್ಲ, ಜಡಚೇತನಾತ್ಮಕವಾದ ವಿಶ್ವದ ಎಲ್ಲೆಡೆಯಲ್ಲಿಯೂ ಶಾಂತಿಯನ್ನು ಬಯಸಿ ಶಾಂತಿ ಸ್ಥಾಪನೆ ಮಾಡಿ, ಶಾಂತಿ ಸಾಮ್ರಾಜ್ಯದ ಕರ್ತೃಗಳಾದ ಶಾಂತಿಮೂರ್ತಿಗಳಿಗೆ ಜನ್ಮವಿತ್ತಿರುವ ಭರತ ಖಂಡವೇ ಈ ಕಾರ್ಯವನ್ನು ತೃಪ್ತಿಕರವಾಗಿ ನೆರವೇರಿಸಬಲ್ಲುದೇ ಹೊರತು, ಶಾಂತಿಮಂತ್ರದ ದಿವ್ಯ ಅರ್ಥವನ್ನರಿಯದ ಮಹಾನಾಯಕರು, ರಾಜಕೀಯ ಧುರೀಣರು ಸಮಿತಿಗಳನ್ನು ರಚಿಸಿ ಚರ್ಚೆಗಳನ್ನು ಮಾಡಿ ನಿರ್ಣಯಗಳನ್ನು ಮಂಡಿಸುವುದರಿಂದ ಜಗತ್ಕಲ್ಯಾಣವಾಗುವುದಿಲ್ಲ. ಅಂತೆಯೇ ಭಾರತೀಯರಾಗಿರತಕ್ಕ ನಮ್ಮ ಜವಾಬ್ದಾರಿ ಕೇವಲ ನಮ್ಮ ಸಲುವಾಗಿ ಮಾತ್ರವಲ್ಲದೆ ಇಡೀ ವಿಶ್ವದ ಸಲುವಾಗಿ ಇದೆ ಎಂಬುದನ್ನು ನಾವು ಚೆನ್ನಾಗಿ ಲಕ್ಷಿಸಬೇಕು.

ಧರ್ಮಭೂಮಿಯೆಂದೆನಿಸಿದ ಭರತಖಂಡವು ವಿಶ್ವಕ್ಕೆ ಕೊಟ್ಟಿರುವ ಸಂದೇಶವಾವುದು? ಜನ ಜಂಗುಳಿಗೆ ತೋರಿರುವ ಮಾರ್ಗವಾವುದು ಎನ್ನುವುದನ್ನು ಸ್ಥೂಲವಾಗಿ ವಿಮರ್ಶಿಸುವ , ಧರ್ಮದ ಹೆಸರನ್ನೆತ್ತಿದ ಕೂಡಲೇ ಇಂದಿನ ಜನತೆ ಬೇಸರಪಡುವುದುಂಟು. ಧರ್ಮ, ದೇವರು ಎಂಬ ಮೂಢ ನಂಬಿಕೆಗಳಿಂದ ಭಾರತೀಯರು ಕರ್ತವ್ಯನಿಷ್ಠೆಯಿಂದ ದೂರವಾಗಿ, ಪ್ರಗತಿಶೀಲರಾಗದೆ ಆಲಸ್ಯವನ್ನು ಪೋಷಣೆ ಮಾಡಿದ ನಿಷ್ಕರ್ಮಿಗಳಾಗಿ ದೇಶವನ್ನು ಈ ದುರವಸ್ಥೆಗೆ ಇಳಿಸಿದರೆಂದೂ, ಇಂದಿನ ನಮ್ಮ ಕಷ್ಟ ಕಾರ್ಪಣ್ಯಗಳಿಗೆಲ್ಲಕ್ಕೂ ಈ ಮನೋಭಾವನೆಯೇ ಮೂಲಹೇತುವೆಂದೂ ಆಕ್ಷೇಪಣೆ ಮಾಡುವುದುಂಟು. ಧರ್ಮದ ಯಥಾರ್ಥಸ್ವರೂಪವನ್ನರಿತ ಯಾರೇ ಆಗಲಿ ಈ ಆಕ್ಷೇಪವನ್ನೆತ್ತಲಾರರು. ಧರ್ಮಸ್ವರೂಪವನ್ನರಿಯದ, ಪ್ರಯತ್ನ ಮಾಡದ ಜನರ ಅಜ್ಞಾನದ ಪರಮಾವಧಿಯ ಭ್ರಾಂತಿಯ ಕೂಗದು. ಧರ್ಮದ ವ್ಯಾಖ್ಯೆಯನ್ನು ಮಾಡಿದ ಪುಣ್ಯ ಪುರುಷರು ''ಯತೋಭ್ಯುದಯ ನಿಶ್ರ್ಯೇಯಸಸ್ಸಿದ್ಧಿಃ ಸಧರ್ಮಃ'' ಎನ್ನುವ ದಿವ್ಯಸಂದೇಶದಿಂದ, ಮಾನವನ ಜೀವನದಲ್ಲಿ ಅಭ್ಯುದಯ ನಿಶ್ರೇಯಸ್ಸುಗಳೆರಡನ್ನೂ ಏಕಕಾಲದಲ್ಲಿ ಸಂಪಾದಿಸುವುದೇ ಪರಮಪುರುಷಾರ್ಥವೆಂದು ಸಾರಿರುವರು. ನಿಜಗುಣ ಶಿವಯೋಗಿಗಳು ಜಾಣರು ಲೌಕಿಕ, ಪಾರಮಾರ್ಥಿಕಗಳೆರಡನು ಏಕಕಾಲದಲಿ ಸಾಧಿಸುವರೆಂದೂ ಸಾರಿರುವರು.

ಶಾಂತಿತತ್ತ್ವವನ್ನು ಪರಿಪೂರ್ಣಗೊಳಿಸಲು ತಲೆತಲಾಂತರಗಳಿಂದ ಭರತಖಂಡವು ಶ್ರಮಿಸಿದೆ. ಭಾರತೀಯ ಮಹರ್ಷಿಗಳು, ಸಾಧುಗಳು, ಸಂತರು, ಶರಣರು ಪರಾಶಾಂತಿಯೆಂದು, ಅಪರಾಶಾಂತಿಯೆಂದೂ ಶಾಂತಿಯನ್ನು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದುವುದು, ಅರ್ಥಾತ್ ಬ್ರಹ್ಮನಲ್ಲಿ ಲೀನವಾಗುವುದು, ಜೀವಾತ್ಮನು ವಿಶ್ವಾತ್ಮನಲ್ಲಿ ಐಕ್ಯವಾಗುವುದು, ಜೀವನು ಶಿವನಾಗುವದು, ಅಂಗವು ಲಿಂಗವಾಗುವುದು ಇದೇ ಮಾನವ ಜೀವಿತದ ಮಹಲ್ಲಕ್ಷ್ಯ. ಇದೇ ಪರಾಶಾಂತಿ. ಈ ಪರಾಶಾಂತಿಯನ್ನು ಹೊಂದುವುದೇ, ಎಂದರೆ ಮುಕ್ತಿಯನ್ನು ಗಳಿಸುವುದೇ ಮಾನವನ ಧ್ಯೇಯವೆಂದು ದರ್ಶನಗಳು ಸಾರಿರುವುವಲ್ಲದೆ, ಎಲ್ಲಾ ದರ್ಶನಗಳೂ ಮುಕ್ತಿಯ ಸಾಧನೋಪಾಯಗಳನ್ನು ಬೋಧಿಸಿ ಸಾಧಕನನ್ನು ಸಿದ್ಧನನ್ನಾಗಿ ಮಾಡುವ ಸಲುವಾಗಿಯೇ ಚರಿತಾರ್ಥವಾಗಿದೆ.

ಅಪರಾಶಾಂತಿಯ ಸ್ವರೂಪವನ್ನು ನಿಷ್ಕೃಷ್ಟವಾಗಿ ಬಣ್ಣಿಸುವುದು ದುಸ್ಸಾಧ್ಯ. ಅದೊಂದು ಸುಸಂಬಂಧಿತ ಮಾತು. ಮಾನವ ಜೀವನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅದನ್ನು ನಿರ್ದೇಶಿಸುವುದಾದರೆ ಸ್ವಾತಂತ್ರ್ಯ, ಸೌಹಾರ್ದ ಎನ್ನುವ ತತ್ತ್ವಗಳನ್ನು ಎತ್ತಿಹಿಡಿದು, ಅಭಾವ, ಅಜ್ಞಾನ, ಅನ್ಯಾಯ, ಅಂಜಿಕೆ, ಹಿಂಸೆ, ತುಳಿತ, ಉಚ್ಚನೀಚ ಕಲ್ಪನೆಗಳು, ಸಂಕುಚಿತ ಭಾವಗಳು ಇವುಗಳ ಉಪಟಳವಿಲ್ಲದೆ ಮನುಷ್ಯನ ವಿಕಾಸಕ್ಕೆ ಅವಶ್ಯಕವಾದ ಎಲ್ಲಾ ಸೌಲಭ್ಯಗಳ ಸಮಾನಾವಕಾಶಗಳುಳ್ಳ ಸ್ಥಿತಿಯೆಂದು ಹೇಳಬಹುದು. ರವೀಂದ್ರನಾಥ ಠಾಕೂರರ ಮಾತಿನಿಂದ ಈ ಸ್ಥಿತಿಯ ಸುಂದರವಾದ ಚಿತ್ರವೊಂದನ್ನು ನಾವು ನೋಡಬಹುದು :

Where the mind is without fear and head is held high,
Where the world has not been broken up into fragments by narrow domestic walls,
Where words come out from the depth of truth,
Where the tireless striving stretches its arms towards perfection,

Where the clear stream of reason has not lost its way in the dreary desert sand of dead habit,
Where the mind is led forward by Thee into ever widening thought and action,
Into that heaven of freedom, my Father let my country awake."

ಇಂದಿನ ಪರಿಸ್ಥಿತಿಯನ್ನವಲೋಕಿಸಿದರೆ ನಿರಾಶಾಮಯ ವಾತಾವರಣವೇ ಸರ್ವತ್ರ ವ್ಯಾಪಕವಾಗಿದೆ. ಯಂತ್ರ ನಾಗರಿಕತೆಯು ಧನಿಕರನ್ನು ಮತ್ತಷ್ಟು ಧನಿಕರನ್ನಾಗಿಯೂ ದರಿದ್ರರನ್ನು ದಟ್ಟ ದರಿದ್ರರನ್ನಾಗಿಯೂ ಮಾಡುತ್ತಿರುವುದರಿಂದ ಅನ್ನ ಬಟ್ಟೆಗಳ ಹಾಹಾಕಾರವು ಹೆಚ್ಚಿ, ಬಡತನ ಸಮಸ್ಯೆಯೊಂದು ಪೆಡಂಭೂತವಾಗಿ ನಿಂತಿದೆ. ಸಾಮಾಜಿಕ ಸ್ಥಾನಮಾನಗಳಿಗಾಗಿ ಭೀಕರ ಕಲಹಗಳುಂಟಾಗಿ ಜೀವನ ಜರ್ಜರಿತವಾಗಿದೆ. ಆಸುರೀ ಶಕ್ತಿಯು ಪ್ರಭಾವವು ಕರಾಳಸ್ವರೂಪವನ್ನು ಹೊಂದಿ, ಎಲ್ಲೆಲ್ಲಿಯೂ ಅನ್ಯಾಯ, ಅಸತ್ಯ, ಹಿಂಸೆ, ಕೊಲೆ, ತುಳಿತ, ಗೊಂದಲ ಅಸಮಾಧಾನಗಳು ತಾಂಡವವಾಡುತ್ತಿವೆ. ಅಸ್ತವ್ಯಸ್ತ ಪರಿಸ್ಥಿತಿಯಿಂದ ಜೀವನವು ಕಸಿವಿಸಿಯಾಗಿ ತೃಪ್ತಿಗಾಗಿ, ಶಾಂತಿಗಾಗಿ ಹಾತೊರೆಯುತ್ತಿದೆ. ಶಾಂತಿಸ್ಥಾಪನೆಯು ಅತ್ಯವಶ್ಯವಾಗಿ ಆಗಬೇಕಾಗಿದೆ.

ಜಗತ್ತಿನ ರಾಜಕೀಯ ಧುರೀಣರುಗಳ, ರಾಷ್ಟ್ರ ನಾಯಕರುಗಳ ಸಮಿತಿಗಳನ್ನು ರಚಿಸಿ, ಅಲ್ಲಿ ತರ್ಕ ವಿತರ್ಕಗಳು ಖಂಡನ ಮಂಡನಗಳು ಜರುಗಿ ಶಾಂತಿ ನಿರ್ಣಯಗಳನ್ನು ಮಂಡಿಸುವುದರಿಂದ ಸ್ಥಾಪಿತವಾಗುವ ಭರವಸೆಯಿಲ್ಲ. ದಿವ್ಯಮಂತ್ರದ ರಹಸ್ಯವನ್ನರಿತವರಾಗಿ ಯಾರು ಶಾಂತಸ್ವರೂಪರಾಗಿರುವರೋ ಅಂಥವರೇ ಶಾಂತಿಯ ಸಂದೇಶವನ್ನು ಜಗತ್ತಿಗೆ ಅಶಾಂತಿಯಿಂದ ಪರಿತಪಿಸುತ್ತಿರುವ ಜನತೆಗೆ ಶಾಂತಿಯನ್ನು, ಶಾಂತಿ ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲರು. ಭಾರತದ ಮಹರ್ಷಿಗಳು, ಸಾಧುಸಂತರು, ಶರಣರು, ದಾಸರು ಈ ಕಾರ್ಯದಲ್ಲಿ ಅತ್ಯುನ್ನತವಾದ ಸ್ಥಾನವನ್ನು ಗಳಿಸಿದ್ದಾರೆ.

ಓಂ ದ್ಯೌಶ್ಶಾಂತಿರಂತರಿಕ್ಷಂ ಶಾಂತಿಃ
ಪೃಥಿವೀ ಶಾಂತಿರಾಪಶ್ಶಾಂತಿಃ ಓಷಧಯಶ್ಶಾಂತಿಃ
ವನಸ್ಪತಯಃ ಶಾಂತಿರ್ವಿಶ್ವೇ ದೇವಾ ಶಾಂತಿಃ ಬ್ರಹ್ಮ ಶಾಂತಿಃ
ಸರ್ವಶ್ಶಾಂತಿಃ ಶಾಂತಿರೇವಶಾಂತಿಃ

ಈ ದಿವ್ಯಮಂತ್ರವನ್ನು ಜಪಿಸುತ್ತಾ ಬ್ರಹ್ಮಾಂಡವೆಲ್ಲವು ಶಾಂತಸ್ವರೂಪವಾಗಿರಬೇಕೆಂದು ಆಶಿಸಿದವರವರು.

ಸುಸಂಸ್ಕೃತರೇ, ಪವಿತ್ರಾತ್ಮರೇ ವಿಶ್ವಶಾಂತಿಯನ್ನು ಸಾಧಿಸಬಲ್ಲರು. The greatest conceivable worker for peace is he who has himself attained perfection, realised God and eternal absolute Peace. ''ಪರಾ ಶಾಂತಿಃ'' ಪರಿಪೂರ್ಣತೆಯನ್ನು ಹೊಂದಿ, ದೇವಸಾಕ್ಷಾತ್ಕಾರವನ್ನು ಪಡೆದು ಪರಾಶಾಂತಿಯ ಪ್ರತೀಕವಾಗಿ ಬ್ರಹ್ಮಾನಂದದಲ್ಲಿ ವಿಹರಿಸುತ್ತಿರುವ ಜೀವನ್ಮುಕ್ತರೇ ಶಾಂತಿಸ್ಥಾಪನೆಗೆ ದಿವ್ಯ ಅಧಿಕಾರಿಗಳು ಅವರೇ ''. ತಮಾತ್ಮಸ್ಥಂ ಯೇನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ'' ಎಂದು ಸಾರುತ್ತದೆ ಉಪನಿಷತ್ತು. ಮಹಾನುಭಾವರ ದೃಷ್ಟಿಯಲ್ಲಿ ಜಗತ್ತಿನ ಮಾನವರೆಲ್ಲರೂ ಸರಿಸಮಾನರು. ಉಚ್ಚ ನೀಚ ಕಲ್ಪನೆಗಳಿಲ್ಲ. ಅನಿಮಿತ್ತ ಬಂಧುಗಳವರು. ನಿರ್ವ್ಯಾಜ ಪ್ರೇಮುವವರದು, ಸ್ವಯಂ ಶಾಂತ ಸ್ವರೂಪರಾದ್ದರಿಂದ ಅವರಿರುವ ಕ್ಷೇತ್ರವೇ ಶಾಂತಿಮಂದಿರವಾಗಿ ಸರ್ವತ್ರ ಶಾಂತಿಯನ್ನು ಬೀರುತ್ತಿರುವುದು. ಶಾಂತಿಸ್ಥಾಪನೆಯ ಸಲುವಾಗಿ ಅವರು ಯಾವ ಕಾರ್ಯಗಳನ್ನು ಮಾಡದೆ ಇದ್ದರೂ ವಿಕಸಿತವಾದ ಸುಗಂಧಪುಷ್ಪದ ಸೌರಭವು ಸುತ್ತಮುತ್ತ ಹರಡುವಂತೆ ಆ ಮಹಾನುಭಾವರ ಜೀವನದ ಸಾನ್ನಿಧ್ಯದಿಂದಲೇ ಶಾಂತಿಯು ಪಸರಿಸುವುದು. ಮಹರ್ಷಿಗಳ, ಸಾಧುಗಳ, ಸಂತರ, ಶರಣರ ಆಶ್ರಮಗಳಲ್ಲಿ ಕ್ರೂರಮೃಗಗಳು ತಮ್ಮ ಜಾತಿಸಹಜವಾದ ವೈರವನ್ನು ತೊರೆದು ಪರಸ್ಪರ ಮೈತ್ರೀಭಾವದಿಂದ ಇದ್ದ ಅನೇಕ ನಿದರ್ಶನಗಳಿವೆ. ಅವರು ವಿಶ್ವಕುಟುಂಬಿಗಳು. ಶ್ರೀ ಶಂಕರಾಚಾರ್ಯರ ದಿವ್ಯವಾಣಿಯು,

ಶಾಂತಾ ಮಹಾಂತೋ ನಿವಸಂತಿ ಸಂತಃ
ವಸಂತವಲ್ಲೋಕಹಿತಂ ಚರಂತಃ
ತೀರ್ಣಾ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾನ್ಯಾನಪಿ ತಾರಯಂತಃ.

ಶಾಂತಮೂರ್ತಿಗಳ ಅಮೃತ ಆತ್ಮವನ್ನೂ ಜಗತ್ಕಲ್ಯಾಣ ಕರ್ತೃತ್ವವನ್ನೂ ವರ್ಣಿಸುವುದು.

Peace dwells in the heart of those who love God. Realise that your life without him is barren, Yearn for Him and peace will follow.

Blessed are the pure in the heart for they shall see God.

ಇವರೆಲ್ಲರೂ ದೈವೀಮಾನವರು, ಮಹಾನುಭಾವರು. ಆಗಾಗ್ಗೆ ಅವತಾರ ಮಾಡಿ ಮಾನವಕುಲವನ್ನು ಉದ್ಧಾರಮಾಡಿದ್ದಾರೆ. ಧರ್ಮ ಗ್ಲಾನಿಯಾದಾಗ, ದುಷ್ಟಶಕ್ತಿಯ ವ್ಯಾಪ್ತಿಯು ಹೆಚ್ಚಾದಾಗ ಪರಮಾತ್ಮನೇ ಹಲವಾರು ರೂಪಗಳಲ್ಲಿ ಅವತಾರ ಮಾಡಿ ಅಸುರೀ ಸಂಪತ್ತನ್ನು ಹತ್ತಿಕ್ಕಿ, ದೈವೀಸಂಪತ್ತನ್ನು ನೆಲೆಗೊಳಿಸಿ, ಧರ್ಮ ಸಂಸ್ಥಾಪನೆ ಮಾಡಿ ಜಗತ್ತನ್ನು ರಕ್ಷಣೆ ಮಾಡಿರತಕ್ಕ ವಿಷಯ ಪರಮಾತ್ಮನ ವಾಕ್ಯದಿಂದಲೇ ವ್ಯಕ್ತವಾಗುತ್ತದೆ. ''ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ''. ಮಹಾತ್ಮಾಗಾಂಧಿಯವರು ಅವತಾರ ಮಾಡಿದರು. ತಮ್ಮ ಶ್ರೇಷ್ಠತಮ ಆಚರಣೆಗಳಿಂದ, ಅಮರಸಂದೇಶದಿಂದ ಭರತ ವರ್ಷದ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿ ಭಾರತಮಾತೆಯ ಬಂಧ ವಿಮೋಚನೆ ಮಾಡಿ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಸತ್ಯ, ಅಹಿಂಸೆಗಳಿಂಲೇ ವಿಶ್ವದ ಕಲ್ಯಾಣವೆಂದು ಸಾರಿದರು. ಈ ತತ್ತ್ವಗಳ ಉಪಾಸನೆಯಲ್ಲಿಯೇ ಶಾಂತಿಯನ್ನು ಕಂಡರು. ಆದರೆ ಎಲ್ಲರೂ ದೈವೀಮಾನವರ ಅಂತಸ್ತನ್ನು ಮುಟ್ಟಲಾಗುವುದಿಲ್ಲ.

ಸುಸಂಸ್ಕೃತ ಜನಾಂಗವೇ ವಿಶ್ವಶಾಂತಿಯನ್ನು ನೆಲೆಗೊಳಿಸಬಲ್ಲುದು. ಹಿಂದೆಯೇ ಹೇಳಿರುವಂತೆ ಬರಿಯ ಬಾಹ್ಯಜೀವನದ ಸೊಬಗು ಸೌಂದರ್ಯಗಳಿಂದಲೇ, ಗಳಿಕೆ ಬಳಿಕೆಗಳಿಂದಲೇ ಮನುಷ್ಯನು ಸುಸಂಸ್ಕೃತನಾಗಲಾರನು. ಅಂತರ್ಜೀವನದ ಸೊಬಗು ಸೌಂದರ್ಯಗಳೂ ಬೆಳೆಯಬೇಕು. ಇದುವೆ ನೈಜ ಸಂಸ್ಕೃತಿಯ ಲಕ್ಷಣ. ಸುಸಂಸ್ಕೃತನು ಸ್ವಾರ್ಥರಹಿತನು. ಸ್ವಾರ್ಥವೇ ಸಕಲ ಅನರ್ಥಗಳ ಮೂಲ. ತನ್ನಂತೆ ಪರರ ಬಗೆವುದೇ ಸುಸಂಸ್ಕೃತನ ಸ್ವಭಾವ. ಮಾನವಬಾಂಧವರೆಲ್ಲರೂ ಪರಮಾತ್ಮನ ಮಕ್ಕಳು, ಅವರ ಕಲ್ಯಾಣಕ್ಕಾಗಿ ದುಡಿಯುವುದರಿಂದ ಪರಮಾತ್ಮನ ಕೃಪೆಯು ದೊರಕುವುದೆಂದು ಅವನ ನಂಬಿಕೆ. ಎಲ್ಲರಲ್ಲಿಯೂ ಆತ್ಮೀಯ ಭಾವನೆಯಿಂದ ಅವನ ಜೀವನವು ಸಾಗುವುದು, ಎಲ್ಲ ಜೀವಾತ್ಮರಲ್ಲಿಯೂ ವಿಶ್ವಾತ್ಮನನ್ನು ಕಾಣುವ ಆತನಿಗೆ ಸರ್ವರೂ ಸುಖ ಶಾಂತಿಗಳಿಂದ ಬಾಳಿ ಬದುಕಬೇಕೆಂಬುದೇ ಹೆಬ್ಬಯಕೆ. ಮತ್ತೊಬ್ಬರ ಕಷ್ಟವನ್ನು ನೋಡಿ ಮರುಗಿ, ಅವರ ಕಷ್ಟವನ್ನು ಪರಿಹರಿಸಲು ಪ್ರಯತ್ನ ಮಾಡುವುದೇ ಅವನ ಸ್ವಭಾವ. ಇದುವೇ ಸನಾತನ ಧರ್ಮದ ಸಂದೇಶ : ''ಏತಾವಾನವ್ಯಯೋ ಧರ್ಮಃ ಸದ್ಭಿರ್ನಿತ್ಯ ಮನುಷ್ಠಿತಃ ಯಲ್ಲೋಕ ಶೋಕಹರ್ಷಾಭ್ಯಾಂ ಆತ್ಮಾಶೋಚತಿ ಹೃಷ್ಯತಿ'' ಧರ್ಮದ ಸಾರಸರ್ವಸ್ವವೂ ಈ ಶ್ಲೋಕದಿಂದ ಸಾರಲ್ಪಟ್ಟಿದೆ. ಇನ್ನು ಕೆಲವು ಸಂತರ ನುಡಿಗಳು ವಿಶ್ವಪ್ರೇಮವನ್ನು ಪ್ರತಿಪಾದಿಸುತ್ತವೆ.

What right have I for these joys when all around me is nothing but misery and struggle for a mouldy bit of bread ? I do not want happiness even as a gift, if I do not have peace of mind about each of my blood brothers, bone of my bone and flesh of my flesh.

ಹಿಂದೂ ಧರ್ಮವು ವಿಶಾಲಭಾವನೆಯುಳ್ಳದು. ಈ ನಮ್ಮ ಸಂಸ್ಕೃತಿಯು ಸಕಲರಿಗೂ ಸ್ವಾಗತವನ್ನು ನೀಡುವ ಸಂಸ್ಕೃತಿಯು. ಯಾರನ್ನೂ ದ್ವೇಷಿಸುವುದಿಲ್ಲ. ಅಂತೆಯೇ ಪ್ರಾಚೀನ ಕಾಲದಿಂದಲೂ ವಿವಿಧ ಧರ್ಮೀಯರಿಗೆ ಆಶ್ರಯ ನೀಡಿ, ತನ್ನವರಂತೆ ಅವರನ್ನು ರಕ್ಷಣೆ ಮಾಡಿ ಪೋಷಿಸಿತು. Religious tolerance is the watchword of Hinduism. ಧರ್ಮ ಸಂದೇಶವನ್ನು ಅರಿತು ಜೀವನವನ್ನು ರೂಪಿಸುವುದೇ ಸಂಸ್ಕೃತಿಯು. ಸಂಸ್ಕೃತನಾದವನು ಮಾನವ ಸಾಮಾನ್ಯದ ಸುಖವನ್ನೇ ಬಯಸುತ್ತಿರುವನಾದ್ದರಿಂದ ಅಶಾಂತಿಮೂಲವಾದ ಅನ್ಯಾಯ, ಅಹಿಂಸೆ, ತುಳಿತ, ತಾರತಮ್ಯಗಳೆಲ್ಲವೂ ಮಾಯವಾಗಿ, ಸ್ವಾತಂತ್ರ್ಯ, ಸಮತೆ, ಸೌಹಾರ್ದ, ತತ್ತ್ವಗಳ ಮೇಲೆ ಸುಂದರ ಸಮಾಜವನ್ನು ನಿರ್ಮಿಸುವುದೇ ಅವನ ಮುಖ್ಯ ಗುರಿಯಾಗುವುದು.

ಅಂತೆಯೇ ಪರರಿಗಾಗಿ ಜೀವಿಸುವ, ಅವರ ಮೇಲ್ಮೆಗಾಗಿ ಬಾಳನ್ನು ಸವೆಸುವ ಸುಸಂಸ್ಕೃತರೇ, ಪುಣ್ಯಶಾಲಿಗಳೇ, ಸಚ್ಚರಿತರೇ ವಿಶ್ವಶಾಂತಿಯನ್ನು ಸ್ಥಾಪಿಸಬಲ್ಲರು.

ವಿದ್ಯಾರ್ಥಿಜೀವನವನ್ನು ಮುಗಿಸಿ, ಮನೆಗೆ ಹಿಂತಿರುಗುತ್ತಿರುವ ಸಾಧಕನೊಬ್ಬನಿಗೆ ತೈತ್ತಿರೀಯೋಪನಿಷತ್ತಿನಲ್ಲಿ ಕೊಟ್ಟಿರುವ ಅಮರ ಸಂದೇಶವು ನಮ್ಮ ಸಂಸ್ಕೃತಿಯ ಸಮಗ್ರ ಚಿತ್ರವೊಂದನ್ನು ಕೊಡುತ್ತದೆ :

''ವೇದಮನೂಚ್ಯಾಚಾರ್ಯೋಽನ್ತೇವಾಸಿನಮನುಶಾಸ್ತಿಃ ಸತ್ಯಂ ವದ, ಧರ್ಮಂ ಚರ, ಸ್ವಾಧ್ಯಾಯಾನ್ಮಾಪ್ರಮದಃ, ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ ಸತ್ಯಾನ್ನಪ್ರಮದಿತವ್ಯಂ, ಧರ್ಮಾನ್ನಪ್ರಮದಿತವ್ಯಂ, ಕುಶಲಾನ್ನಪ್ರಮದಿತವ್ಯಂ. ಭೂತ್ಯೈನ ಪ್ರಮದಿತವ್ಯಂ, ಸ್ವಾಧ್ಯಾಯಪ್ರವಚನಾಭ್ಯಾಂ ನಪ್ರಮದಿತವ್ಯಂ.''

''ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ, ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ, ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ, ನೋ ಇತರಾಣಿ, ಯಾನ್ಯಸ್ಮಾಕಗ್ಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ.''

ಭಾರತೀಯರಾದ ನಾವುಗಳೆಲ್ಲರೂ, ಹಿರಿಯರ ಅಮರವಾಣಿಗಳನ್ನು ಅಮರ ಸಂದೇಶಗಳನ್ನು ಅರಿತು ಸತ್ತ್ವಸಾಧಕರಾಗಿ ಸುಸಂಸ್ಕೃತರಾಗಬೇಕಾಗಿದೆ. ಪವಿತ್ರ ಜನಾಂಗವನ್ನು ನಿರ್ಮಾಣಮಾಡಿ ನಮ್ಮ ಸಂಸ್ಕೃತಿಯ ಅಚ್ಚಳಿಯದ ಕೀರ್ತಿ ಪತಾಕೆಯನ್ನು ಬೆಳಗಿ ಜಗತ್ತೆಲ್ಲವೂ ಆಶಾಭರಿತವಾಗಿ ನೋಡತಕ್ಕ ವಿಶ್ವಶಾಂತಿ ಸ್ಥಾಪನೆಯ ಮಹತ್ಕಾರ್ಯವನ್ನು ಸಾಧಿಸಬೇಕಾಗಿದೆ. ಗುರು ಅರವಿಂದರು ಹೇಳತಕ್ಕ ರೀತಿಯ ವಿಶ್ವೈಕ್ಯತೆಯನ್ನು ಸಾಧಿಸಬೇಕಾಗಿದೆ :

''Unity for the human race by an inner oneness and not merely by an external association of interests, the resurgence of man out of the merely animal and economic life or the merely intellectual and aesthetic into the glories of the spiritual existence, the pouring of the power of the spirit into the physical mould and mental instrument so that man may develop his manhood into that supermanhood which shall exceed our present state as much as this exceeds animal state from which science tells us we have issued. Man's unity and man's self transcendence can come only by living in Spirit.''

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ.

೨. ಶಿವಶರಣರ ಕಾಯಕನಿಷ್ಠೆ

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ |

ಏವತ್ವಯಿ ನಾನ್ಯಥೇತೋsಸ್ತಿನ ಕರ್ಮ ಲಿಪ್ಯತೇ ನರೇ ||

- ಈಶಾವಾಸ್ಯೋಪನಿಷತ್

ಪರಮಾತ್ಮ ನಿರ್ಮಿತ ಸೃಷ್ಟಿಯು ಚೇತನಾಚೇತನವೆಂದು ಎರಡು ವಿಧವಾಗಿದೆ. ಅಚೇತನ ವಸ್ತುಗಳಿಗೆ ಇಂದ್ರಿಯಗಳೂ ತದ್ವಾರ ಆಗುವ ಸುಖದಲ್ಲಿ ಸಂವೇದನವೂ ಇಲ್ಲದಿದ್ದರಿಂದ ಅವುಗಳಿಗೆ ಸ್ಪಷ್ಟ ವ್ಯಕ್ತಿತ್ವವಿಲ್ಲ. ಚೇತನ ಸೃಷ್ಟಿಯಲ್ಲಿ ಮನುಷ್ಯ ಪ್ರಾಣಿಯೇ ಎಲ್ಲಕ್ಕೂ ಹೆಚ್ಚಿನವನು. ಇವನಲ್ಲಿ ಚೈತನ್ಯವೆಂಬುದು ಪರಮಾವಧಿಗೆ ಮುಟ್ಟಿದೆ. ಇವನಲ್ಲಿ ಅಪರಿಮಿತ ಸಂವೇದನ ಶಕ್ತಿಯಿದೆ. ಇವನ ಜ್ಞಾನ ಸಾಧನಗಳು ಎಲ್ಲಕ್ಕಿಂತಲೂ ಹೆಚ್ಚು ತೀಕ್ಷ್ಣವಿರುವುವು. ಅವುಗಳ ಸಹಾಯದಿಂದ ಅವನು ಪೂರ್ವಾಪರಾಲೋಚನೆಯಿಂದ ವಿಮರ್ಶೆ ಮಾಡಿ ತನ್ನ ಪರಮ ಕಲ್ಯಾಣವನ್ನು ಮಾಡಿಕೊಳ್ಳುವ ಲವಲವಿಕೆಯಲ್ಲಿರುವನು. ಆದುದರಿಂದ ಶ್ರೇಷ್ಠಜೀವಿಯಾದ ಮಾನವನು ತನಗೆ ದೊರೆತಿರುವ ಅಲ್ಪ ಕಾಲದಲ್ಲಿಯೇ ತನ್ನ ಪವಿತ್ರ ಜೀವನವನ್ನು ಸಾರ್ಥಕಗೊಳಿಸಲು ಯತ್ನಿಸಬೇಕು. ಮಾನವನ ಉನ್ನತಿಯು ಅವನು ಮಾಡುವ ಕಾರ್ಯಗಳನ್ನವಲಂಬಿಸಿದೆ. ಆ ಕಾರ್ಯಗಳು ಸತ್ಕಾರ್ಯಗಳಾದರೆ, ವ್ಯಕ್ತಿಗೂ, ದೇಶಕ್ಕೂ ಕೂಡಿಯೇ ಹಿತವಾಗುತ್ತದೆ. ಒಳ್ಳೆ ಕಾರ್ಯಗಳಿಂದ ಜೀವನವು ಪವಿತ್ರವೆನಿಸುತ್ತದೆ. ಈ ಸಂಗತಿಯನ್ನು ಬಸವೇಶ್ವರರು ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನು, ನಾಲ್ಕು ದಿನ ಬದುಕಿದರೇನು, ಐದು ದಿನ ಬದುಕಿದರೇನು ಎಂದು ಹೇಳಿದ್ದಾರೆ. ಶ್ರೀ ಅರವಿಂದರೂ ಸಹ,

The earth is a world of life and matter. But man is not vegetable nor an animal. He is a spiritual and thinking Being who is set here to shape and use....world for higher purposes with and for more divine instruments ಎಂದು ಉದ್ಗರಿಸಿರುವರು. ಅಂದರೆ ಈ ಪೃಥ್ವಿಯು ಚೇತನಾಚೇತನಾತ್ಮಕವಾದ ಪ್ರಪಂಚವು. ಆದರೆ ಮನುಷ್ಯನು ಸಸ್ಯವರ್ಗ ಯಾ ಪ್ರಾಣಿವರ್ಗಕ್ಕೆ ಸೇರಿದವನಲ್ಲ. ಅವನು ವಿಚಾರಶಕ್ತಿಯುಳ್ಳ ಆಧ್ಯಾತ್ಮಿಕ ಜೀವಿಯು. ಉನ್ನತ ಗುರಿಯುಳ್ಳವನಾಗಿ, ಈ ಪ್ರಪಂಚವನ್ನು ಉದಾತ್ತ ಧ್ಯೇಯ ಸಾಧನೆಗಾಗಿ, ದೈವತ್ವದ ಆವಿಷ್ಕಾರಕ್ಕಾಗಿ ಬಳಕೆ ಮಾಡಿಕೊಳ್ಳಲು ನಿಯಮಿಸಲ್ಪಟ್ಟಿದ್ದಾನೆ.

ಮನುಷ್ಯನು ಇಷ್ಟು ಶ್ರೇಷ್ಠಜೀವಿಯಾಗಿ ಸಾಧಿಸತಕ್ಕ ಉದ್ದೇಶಗಳೂ ಮತ್ತು ಹೊಂದಲಿರುವ ಧ್ಯೇಯಗಳೂ ಅಸಂಖ್ಯಾತವಾಗಿರುವಾಗ, ಅವನು ಜೀವನದ ಒಂದು ಕ್ಷಣವನ್ನಾದರೂ ನಿರರ್ಥಕ ಮಾಡಿಕೊಳ್ಳತಕ್ಕದ್ದಲ್ಲ. ಕಾಲದ ಬೆಲೆಯು ಅಮೋಘವಾದುದು. ಹೋದ ಕಾಲವು ಮರಳಿ ಬರಲಾರದು. ಜೀವಿತವಾದರೂ ಅಲ್ಪಾಯುವಾಗಿದೆ. ಅಂದಮೇಲೆ ಕಾಲದ ಸದ್ವಿನಿಯೋಗವು ಅವನ ಪ್ರತಿಕ್ಷಣದ ಎಚ್ಚರಿಕೆಯಾಗಿರಲೇಬೇಕು. ಮಹಾಪುರುಷರ ಜೀವಮಾನ ಕಾಲದ ಪ್ರತಿಯೊಂದು ಕ್ಷಣವೂ ಅವರಿಗೆ ಒಂದಿಲ್ಲೊಂದು ತೆರಿಗೆಯನ್ನು ತೆತ್ತೇ ಹಾಯ್ದು ಹೋಗಿದೆ. ಅವನು ಕರ್ತವ್ಯನಿಷ್ಠನಾಗಿರಬೇಕು. ನಾವು ನಿರುದ್ಯೋಗಿಗಳಾಗಿರಬೇಕೆಂದೂ, ಕರ್ಮ ಸಂನ್ಯಾಸ ಮಾಡಬೇಕೆಂದೂ ದೇವರು ನಮಗೆ ಈ ದೇಹೇಂದ್ರಿಯವನ್ನೂ, ಈ ಕರ್ಮಶಕ್ತಿಯನ್ನು ಕೊಟ್ಟಿಲ್ಲ. ಕರ್ಮಶಕ್ತಿಯು ದೇವರು ನಮಗೆ ಕೊಟ್ಟಿರುವ ಪರಮ ಭಾಗ್ಯವು. ಅದರ ಯೋಗ್ಯ ಉಪಯೋಗವಾಗಬೇಕೆಂದೇ ಅವನು ಅದನ್ನು ನಮಗೆ ದಯಪಾಲಿಸಿರುವನು. ಕರ್ಮ ಮಾಡದೆ ನಮ್ಮ ಜೀವನ ಯಾತ್ರೆಯೂ ಕೂಡ ಮುಂದೆ ಸಾಗದು. ನಾವು ಈ ಕರ್ಮಭೂಮಿಯಲ್ಲಿ ಕರ್ಮದೇಹವನ್ನು ತೊಟ್ಟಿರುವರೆಗೂ ಕರ್ಮವನ್ನು ಮಾಡಿಯೇ ತೀರಬೇಕು. ಕರ್ಮಸಂನ್ಯಾಸಕ್ಕಿಂತಲೂ ಕರ್ತವ್ಯನಿಷ್ಠೆಯೇ ಉತ್ತಮವು. ಇದನ್ನೇ

ನಿಯತಂ ಕುರು ಕರ್ಮ ತ್ವಂ ಕರ್ಮಜ್ಯಾಯೋಹ್ಯಕರ್ಮಣಃ

ಶರೀರ ಯಾತ್ರಾಪಿಚತೇ ನಪ್ರಸಿದ್ಧ್ಯೇದಕರ್ಮಣಃ ||

ಎನ್ನುವ ಗೀತಾವಾಕ್ಯವು ಸ್ಪಷ್ಟಪಡಿಸುತ್ತದೆ. ಕರ್ಮ ಮಾಡದೆ ನಾವು ಒಂದು ಕ್ಷಣವೂ ಇರಲಾರೆವು.

''ನ ಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಠತ್ಯಕರ್ಮಕೃತ್

ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ||

ಎಂದು ಗೀತೋಕ್ತಿಯೂ ಸಹ ವಾಸ್ತವವಾಗಿ ಯಾರೂ ಒಂದು ಕ್ಷಣವೂ ಕರ್ಮ ಮಾಡದೆ ಇರಲಾರರು. ಪ್ರಕೃತಿಯಿಂದ ಉತ್ಪನ್ನವಾದ ಗುಣಗಳು ಪರವಶನಾಗಿರುವ ಪ್ರತಿಯೊಬ್ಬನಿಂದಲೂ ಕರ್ಮವನ್ನು ಮಾಡಿಸುತ್ತವೆಯೆಂದು ಹೇಳುತ್ತದೆ. ''Intense activity is necessary We always work, we cannot live a minute without work'' ಅಂದರೆ ಉತ್ತಮ ಕೃತಿಯು ಅವಶ್ಯಕ. ನಾವು ಯಾವಾಗಲೂ ಕರ್ಮ ಮಾಡುತ್ತಿರುತ್ತೇವೆ. ಕರ್ಮ ಮಾಡದೆ ಒಂದು ಕ್ಷಣ ಕಾಲವಾದರೂ ಜೀವಿಸಲಾರೆವು ಮತ್ತು ''To be idle physically, while building castles in the air is not withourt work'' ಮನಸ್ಸಿನಲ್ಲಿ ಕಲ್ಪನಾ ತರಂಗಗಳು ತುಂಬಿಕೊಂಡಿರುವಾಗ, ದೈಹಿಕ ವಿಶ್ರಾಂತಿಯನ್ನು ಹೊಂದಿದ್ದರೂ, ಅದು ಕರ್ಮ ಸಂನ್ಯಾಸವಲ್ಲ ಎನ್ನುವ ಸ್ವಾಮಿ ವಿವೇಕಾನಂದರ ಉಕ್ತಿಗಳೂ, ಮನುಷ್ಯನು ಕರ್ಮ ಮಾಡದೆ ಇರುವುದು ಅಸಾಧ್ಯವೆಂದು ಸ್ಪಷ್ಟೀಕರಿಸುತ್ತವೆ. ಅಭ್ಯುದಯ ಪ್ರಾಪ್ತಿಗೆ ಕರ್ಮವು ಅವಶ್ಯಕ. ಹಾಗೆಯೇ ಶ್ರೇಯಸ್ಸಿನ ಪ್ರಾಪ್ತಿಗಾದರೂ, ನಿಷ್ಠಾಪೂರ್ವಕವಾದ ಮನುಷ್ಯನ ದೃಢಪ್ರಯತ್ನವು ಅತಿ ಪ್ರಾಮುಖ್ಯವಾಗಿದೆ. ಸಾಧಕನಾಗಿ ಮಾಡಬೇಕಾದ ಸಾಧನೆಗಳನ್ನು ಮಾಡಿ ಮುಗಿಸಿದ ಮೇಲೆ ಸಿದ್ಧಾವಸ್ಥೆಯನ್ನು ಹೊಂದಬಲ್ಲನು. ಈ ವಿಚಾರಗಳೆಲ್ಲವನ್ನೂ ಚೆನ್ನಾಗಿ ಬಲ್ಲವರಾದ್ದರಿಂದಲೇ ನಮ್ಮ ಶರಣರು ಕಾಯಕಕ್ಕೆ ವಿಶೇಷ ಮಹತ್ವವನ್ನು ಕೊಟ್ಟು ''ಕಾಯಕವೇ ಕೈಲಾಸ'' ಎಂದು ಒತ್ತಿ ಒತ್ತಿ ಸಾರಿರುವರು.

ಸೋಮಾರಿತನವೆನ್ನುವುದು ಶರಣರಿಗೆ ಸೇರದು. ಪರಾವಲಂಬನೆಯೆಂಬುದು ಅವರಿಗೆ ದೂರದ ಮಾತು. ದುಡಿಮೆಯು ಜೀವನದ ಕರ್ತವ್ಯವೆಂದು ಅವರ ಅನ್ನುವಿಕೆ. ಸಮಾಜ ಘಟಕನಾಗಿರತಕ್ಕ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ಕಾರ್ಯವನ್ನು ಅವಲಂಬಿಸಿಯೇ ತೀರಬೇಕೆಂಬ ನಿರ್ಬಂಧವನ್ನು ಹೂಡಿದರು. ಸಾಮಾನ್ಯವಾಗಿ ದೇಹ ಪೋಷಣೆಯು ಸಹ ಆಹಾರೋತ್ಪಾದನೆ, ಧಾನ್ಯಸಂವರ್ಧನ, ಪಾಕಕ್ರಿಯೆ ಮುಂತಾದ ಕಾರ್ಯಗಳನ್ನು ನೆರವೇರಿಸದೆ ಆಗದು. ಅಂದಮೇಲೆ ಜೀವನಕ್ಕೆ ತಕ್ಕ ಕರ್ಮವು ಅವಶ್ಯಕ. ಹಾಗೆಯೇ ಆಧ್ಯಾತ್ಮಿಕ ಸಾಧನೆಗೂ ಕ್ರಿಯೆಯು ಅವಶ್ಯಕವೆಂದು ಶರಣರು ಸಾರಿರುವರು :

''ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೊ
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೊ
ಬೇಯದೆ ಅಶನವನುಂಬ ಠಾವಾವುದು ? ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ
ಕಾಯಕವಳಿದ ಠಾವಿನಲ್ಲಿ ಜೀವನದ ಎಡೆಯಾಟವುಂಟೇ ?
ಕಾಯಕವಿಲ್ಲದೆ ಭಕ್ತಿ ಹೋಯಿತ್ತು ಮಾರಯ್ಯಪ್ರಿಯ
ಅಮಳೇಶ್ವರಲಿಂಗವ ಮುಟ್ಟದೆ.''

ಕ್ರಿಯೆ ಮಾಡದೆ ಸಿದ್ಧಿ ಪ್ರಾಪ್ತಿಯಾಗದು. ಗತಿ ಮತಿ ಕರಣಾದಿಗಳು ಇರುವವರೆವಿಗೆ ಕರ್ಮಗಳನ್ನು ಮಾಡುತ್ತಲೇ ಇರಬೇಕು. ಕೇವಲ ಜ್ಞಾನ ಮಾತ್ರವೇ ಹೆಚ್ಚಿನದೆಂದು ಕುಳಿತರೆ ಅದು ತನ್ನಷ್ಟಕ್ಕೆ ತಾನೇ ತಲೆಯಲ್ಲಿ ಬಂದು ಸೇರದು. ಸತ್ಕ್ರಿಯಾ ಮಾರ್ಗದಿಂದ ಸಾಗಿ ಜ್ಞಾನವನ್ನು ಅಳವಡಿಸಲಿಕ್ಕೇ ಬೇಕು. ಆಗ ಸಿದ್ಧಿಯು ಕೈ ಸೇರುವುದು. ಈ ರೀತಿ ಕಾಯಕವೆನ್ನುವುದು ಜೀವನದಲ್ಲಿ ಒಂದು ಸ್ಥಿರವಾದ ಅನಿವಾರ್ಯ ಪ್ರಸಂಗವೆಂಬುದು ಶರಣರ ಮತವು.

ಆಧುನಿಕ ಕಾಲದಲ್ಲಿ ನಿರುದ್ಯೋಗ ಸಮಸ್ಯೆಯು ಬಹಳ ಕಠಿಣವಾಗಿದೆ. ಪ್ರಪಂಚದಲ್ಲಿ ಮಹಾ ಮಹಾ ಮೇಧಾವಿಗಳ ಲಕ್ಷ್ಯವೆಲ್ಲವೂ ನಿರುದ್ಯೋಗ ಸಮಸ್ಯೆಯ ನಿವಾರಣೋಪಾಯಗಳ ಶೋಧನದಲ್ಲಿ ಮಗ್ನವಾಗಿದೆ. ಅರ್ಥಶಾಸ್ತ್ರಜ್ಞರಂತೂ ಈ ನಿರುದ್ಯೋಗದಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯನ್ನು ದೂರೀಕರಿಸಲು ಅವಶ್ಯಕವಾದ ಯೋಜನೆಗಳನ್ನು ಹುಡುಕುವುದರಲ್ಲಿ ತೊಡಗಿದ್ದಾರೆ. ನಿರುದ್ಯೋಗ ಸಮಸ್ಯೆಯ ಪರಿಣಾಮವಾಗಿ ಆರ್ಥಿಕ ಅವನತಿ ಹಾಗೂ ದಾರುಣ ದಾರಿದ್ರ್ಯದ ಭೀಕರತೆಯು ಎಲ್ಲೆಲ್ಲಿಯೂ ತಾಂಡವವಾಡುತ್ತಿದೆ. ನಮ್ಮ ಶರಣರ ಕಾಯಕ ತತ್ತ್ವವು ಕಠಿಣವಾದ ನಿರುದ್ಯೋಗ ಸಮಸ್ಯೆಯನ್ನು ಬಹಳ ಸುಲಭವಾಗಿ ಬಗೆಹರಿಸಲು ಹೇಗೆ ಶಕ್ಯವಾಯಿತೆಂಬುದನ್ನು ವಿಮರ್ಶಿಸುವ, ಉದ್ಯೋಗಗಳಲ್ಲಿ ಮೇಲು ಕೀಳುಗಳನ್ನೆಣಿಸಿ, ಮೇಲಾದ ಉದ್ಯೋಗವೇ ಕರ್ತವ್ಯವು, ಉಳಿದೆಲ್ಲವೂ ತ್ಯಾಜ್ಯವೆಂಬ ತಪ್ಪು ಭಾವನೆಯು ಪ್ರಚಾರವಾಗಿರುವುದರಿಂದಲೇ ನಿರುದ್ಯೋಗವು ಇಷ್ಟು ಹೆಚ್ಚಾಗಿದೆ. ಉದ್ಯೋಗಗಳ ತಾರತಮ್ಯದಿಂದ ಸಾಮಾಜಿಕ ತಾರತಮ್ಯ ಉಂಟಾಗಿದೆ. ಒಂದು ಉದ್ಯೋಗವನ್ನು ಮಾಡುವವನು ಕೀಳೆಂಬ ಘಾತುಕ ಕಲ್ಪನೆಯುಂಟಾಗಿ ಅನೇಕ ಉದ್ಯೋಗಗಳು ಸಮಾಜದ ಕೈಬಿಟ್ಟು ಹೋಗಿವೆ. ಉತ್ತಮವಾದ ಕಲೆಗಳು ಹಾಳಾಗಿವೆ. ದಾರಿದ್ರ್ಯವು ಹೆಚ್ಚಾಗಿದೆ. ಪರಾವಲಂಬನ ಜೀವಿಗಳ ಹಾಗೂ ಭಿಕ್ಷುಕರ ಸಂಖ್ಯೆಯು ಏರುತ್ತಿದೆ. ಹೀಗಾಗಿ ಸಮಾಜ ಪುರುಷನು ಬಹಳ ಭೀಕರ ಪರಿಸ್ಥಿತಿಯಲ್ಲಿರುತ್ತಾನೆ. ಶ್ರೀ ಬಸವೇಶ್ವರರು ವೃತ್ತಿಗಳ ಮೇಲು ಕೀಳುಗಳನ್ನು ಕಿತ್ತೊಗೆದುದರಿಂದ,

ಮನುಷ್ಯನು ಯಾವ ವ್ಯವಸಾಯವನ್ನು ಕೈಗೊಂಡರೂ ಕೀಳಲ್ಲವೆಂಬ ಅಭಿಪ್ರಾಯವು ತಲೆದೋರಿತು. ಯಾವ ಉದ್ಯೋಗವೇ ಆಗಲಿ ಅದು ನೀತಿ ವಿಶಿಷ್ಟವೂ ಮತ್ತು ಸಮಾಜದ ಮೇಲ್ಮೆಗೆ ಅವಶ್ಯಕವೂ ಆದಲ್ಲಿ, ಪರಮಾತ್ಮನ ಪೂಜೆಯಷ್ಟು ಪವಿತ್ರವೂ, ಕರ್ತವ್ಯವೂ ಎಂಬುದನ್ನು ಸಾರಿದರು.

''ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ
ನಿಮ್ಮಾಣೆ ತಲೆದಂಡ ಕೂಡಲಸಂಗಮದೇವ.''

ಎಂದು ಹೇಳಿ ಪ್ರತಿಯೊಂದು ಕಾಯಕದ ಘನತೆಯನ್ನು ಕೊಂಡಾಡಿರುವರು. All kinds of work from the mending of shoes to the reading of scriptures help man to proceed towards knowledge, if he does it disinterestedly. ಅಂದರೆ ಜೋಡುಗಳನ್ನು ಮಾಡುವ ಉದ್ಯೋಗದಿಂದ ಹಿಡಿದು ವೇದ ಪಾರಾಯಣದ ಪರ್ಯಂತವೂ ಯಾವ ಕಾರ್ಯವನ್ನೇ ಆಗಲಿ ನಿಷ್ಕಾಮಬುದ್ಧಿಯಿಂದ ಮಾಡಿದರೆ, ಅದು ಮನುಷ್ಯನ ಜ್ಞಾನ ಸಂಪಾದನೆಗೆ ಸಹಾಯಕವಾಗುವುದೆಂಬ ಉಕ್ತಿಯು ಉದ್ಯೋಗಗಳಲ್ಲಿರುವ ಉಚ್ಚ ನೀಚ ಭಾವನೆಯನ್ನು ಕಿತ್ತೊಗೆಯುವುದಾಗಿದೆ. ಶ್ರೀ ಬಸವೇಶ್ವರರ ಪ್ರಚಾರದಿಂದ ಸಮಾಜದಲ್ಲಿ ಕೈಬಿಟ್ಟು ಹೋಗಿದ್ದ ಉದ್ಯೋಗಗಳು ಪುನಃ ಪ್ರಾರಂಭವಾದುವು. ಎಲ್ಲರಿಗೂ ಉದ್ಯೋಗವು ದೊರಕುವಂತಾಯಿತು. ಸರ್ವ ವಿಧವಾದ ಕಲಾ ಕೈಗಾರಿಕೆಗಳೂ ಅಭಿವೃದ್ಧಿಗೊಂಡವು. ''ಕೃಷಿ ಕೃತ್ಯ ಕಾಯಕದಿಂದಾದೊಡೇನು, ತನು ಮನವ ಬಳಲಿಸಿ ತಂದು ದಾಸೋಹವ ಗೈವ ಸದ್ಭಕ್ತನ ಪಾದವ ತೋರಯ್ಯಾ ಎನಗೆ'' ಎನ್ನುವ ನುಡಿಗಳು ಎಲ್ಲರನ್ನೂ ಹುರಿದುಂಬಿಸಿ ಕರ್ತವ್ಯನಿಷ್ಠರನ್ನಾಗಿ ಮಾಡಿದುವು. ಕಾಯಕವು ಸ್ವಾವಲಂಬನ ಮಾರ್ಗವು ; ಅದು ಉದರ ನಿರ್ವಾಹ ಸಾಧನೆಯಾಗಿಯೂ,ಮುಕ್ತಿಮಾರ್ಗವಾಗಿಯೂ ಪರಿಣಮಿಸಿತು. ಸಮಾಜದ ಭದ್ರತೆಗೆ ಬೇಕಾದ ಎಲ್ಲಾ ಉದ್ಯೋಗಗಳೂ ಸಮಾಜದಿಂದಲೇ ಮಾಡಲ್ಪಡಬೇಕೆನ್ನುವುದು ಅವರ ಪರಮ ತತ್ತ್ವವು. ತಮ್ಮ ಸಮಾಜಕ್ಕೆ ಬೇಕಾಗುವ ಅನುಕೂಲಗಳನ್ನೆಲ್ಲಾ ತಾವೇ ಏರ್ಪಡಿಸಿಕೊಳ್ಳಬೇಕೆಂದೂ, ಅನ್ಯರನ್ನು ಆಶ್ರಯಿಸಕೂಡದೆಂದೂ ಶಿವಶರಣರ ಮತವು. ಕಾಯಕತತ್ತ್ವವು ವೀರಶೈವ ಸಮಾಜದಲ್ಲಿ ಸುಪರಿಣಾಮವನ್ನುಂಟುಮಾಡಿತು. ಸಮಾಜದ ಸಂಪತ್ತು ಸಮಾಜದಲ್ಲಿಯೇ ಉಳಿದು ಸಮಾಜದ ಆರ್ಥಿಕ ಅಭ್ಯುದಯಕ್ಕೆ ಕಾರಣವಾಯಿತು. ನಮ್ಮ ದೇಶದ ಸಂಪತ್ತು ನಮ್ಮಲ್ಲಿಯೇ ಉಳಿಯುವಂತೆ ನಮಗೆ ಬೇಕಾದ ಸಲಕರಣೆಗಳನ್ನೆಲ್ಲಾ ತಯಾರಿಸುವ ಸಿದ್ಧತೆಗಳನ್ನು ಮಾಡಿ ಆರ್ಥಿಕ ಮುಗ್ಗಟ್ಟನ್ನು ಹೋಗಲಾಡಿಸಬೇಕೆಂಬ ಗ್ರಾಮ ಸುಧಾರಣಾಭಿಪ್ರಾಯಗಳೆಲ್ಲವನ್ನೂ ಈಗ ೮೦೦ ವರ್ಷಗಳ ಹಿಂದೆ ಆಚರಣೆಗೆ ತಂದ ಕೀರ್ತಿಯು ಶ್ರೀ ಬಸವೇಶ್ವರರಿಗೆ ಸೇರಿರುತ್ತದೆ. ಗೃಹಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ ರಾಷ್ಟ್ರದ ದಾರಿದ್ರ್ಯವನ್ನು ಹೋಗಲಾಡಿಸಬೇಕೆಂಬ ಗ್ರಾಮ ಸುಧಾರಕ ಅಭಿಪ್ರಾಯವು ಆಗ ಆಚರಣೆಯಲ್ಲಿದ್ದಿತು. ಕಾಯಕವು ವೀರಶೈವ ಸಮಾಜದ ಸ್ವಸಾಮರ್ಥ್ಯಕ್ಕೆ ಕಾರಣವಾಯಿತು. ಅಲ್ಲದೆ ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ವ್ಯವಸಾಯಗಳನ್ನು ಕೈಕೊಳ್ಳುವುದರಿಂದ ಸಮಾಜದ ಸ್ವಾವಲಂಬನೆಯೂ, ಸ್ವಾಭ್ಯುದಯವೂ ಮತ್ತು ಆರ್ಥಿಕ ಉನ್ನತಿಯೂ ತಲೆದೋರುವುವು. ಈ ಕಾಯಕ ತತ್ತ್ವವು ಅರ್ಥಶಾಸ್ತ್ರದ ಜೀವಾಳವಾದ ಶ್ರಮ ವಿಭಾಗ [Division of Labour] ತತ್ತ್ವವನ್ನು ಹೇಗೆ ಒಳಗೊಂಡಿದೆಯೆಂಬುದು ಮೇಲಿನ ಅಭಿಪ್ರಾಯಗಳಿಂದ ವ್ಯಕ್ತವಾಗುತ್ತದೆ. ವೀರಶೈವರೆಲ್ಲರೂ ಯಾವ ವಸ್ತುವನ್ನೇ ಆಗಲಿ ಸ್ವದೇಶೀಯರಿಂದಲೇ ಮಾಡಲ್ಪಟ್ಟದ್ದನ್ನೇ ವಿನಿಯೋಗಿಸಬೇಕೆಂಬ ನಿರ್ಬಂಧವಿದ್ದುದರಿಂದ, ಉತ್ಪನ್ನವಾದ ವಸ್ತುಗಳಿಗೆ ತಕ್ಕ ಗಿರಾಕಿಗಳು ದೊರೆತು ಜೀವನ ಯಾತ್ರೆಯು ಸುಸೂತ್ರವಾಗಿ ನಡೆಯುತ್ತಿತ್ತು. ಸ್ವದೇಶೀ ವಸ್ತುಗಳನ್ನೇ ಕೊಳ್ಳಿರಿ ಎಂದು ಈಗ ಎಲ್ಲೆಲ್ಲಿಯೂ ಕೇಳಿ ಬರುತ್ತಿರುವ ಕೂಗು ಆಗ ಹೇಗೆ ಸಾಮಾಜಿಕ ಧರ್ಮದಲ್ಲಿ ಸಮಾವೇಶವಾಗಿತ್ತೆನ್ನುವುದನ್ನು ನೋಡಬಹುದು. ಈ ರೀತಿಯಲ್ಲಿ ಶರಣರ ಕಾಯಕ ತತ್ತ್ವ ಸಮಾಜ ಭದ್ರತೆ, ಬಂಧುರತೆ ಹಾಗೂ ಮೇಲ್ಮೆಗೆ ಅತ್ಯುಪಯುಕ್ತವಾದ ಆರ್ಥಿಕ ಸಮಾನತೆಯನ್ನು ಸ್ಥಾಪಿಸುವುದರಲ್ಲಿ ಸಮರ್ಥವಾಯಿತು.

ವಿಶೇಷವಾದ ದ್ರವ್ಯಸಂಗ್ರಹ ಮಾಡಿ ನಾಳಿಗೆಂದು ಕೂಡಿಡುವುದು ಕಾಯಕ ತತ್ತ್ವಕ್ಕೆ ವಿರೋಧ. ಶರಣರು ಇದನ್ನು ಬಹಳ ಹೀಗಳೆದಿದ್ದಾರೆ. ನಾಳಿಗೆಂದು ನಮಗಾಗಿ ಕೂಡಿಡುವ ವಸ್ತು ಸಂಚಯದಿಂದ, ಇಂದಿನ ದಿನ ನಾಲ್ಕಾರು ಮಂದಿಯ ಪೋಷಣೆಗೆ ಉಪಯೋಗವಾಗುವ ವಸ್ತುಗಳ ಕೊರತೆಯನ್ನುಂಟುಮಾಡಿ, ತಾನೊಬ್ಬನೇ ಸುಖವಾಗಿರಲು ಬಯಸುವುದು ಸ್ವಾರ್ಥದ ಹಾಗೂ ಅನ್ಯಾಯದ ಪರಮಾವಧಿಯೆಂದು ಶರಣರು ಹೇಳಿರುವರು. ಈ ತತ್ತ್ವವು ಈಗಿನ ಪ್ರಜಾಹಿತೈಷಿಗಳು ತರಲೆಳಸುವ ಸಮತಾವಾದ ತತ್ತ್ವವನ್ನೊಳಗೊಂಡಿದೆಯಲ್ಲದೆ, ದೇಶದ ಸಾರ್ವಜನಿಕ ಹಿತಕ್ಕೆ ವಿರೋಧವಾದ ಬಂಡವಾಳಶಾಹಿ ತತ್ತ್ವವನ್ನು ಪ್ರತಿಭಟಿಸುವುದಾಗಿದೆ.

ನಾಳೆಗೆಂದು ಸಂಗ್ರಹ ಮಾಡುವುದು ನಿರಂತರವೂ ನಾಳಿನ ಕಾಯಕದ ಫಲವನ್ನು ಅನುಗ್ರಹಿಸುವ ಜಗನ್ನಿಯಾಮಕನ ವಿಚಾರದಲ್ಲಿ ಅವಿಶ್ವಾಸವನ್ನು ತೋರಿಸಿದ ಹಾಗಾಗುತ್ತದೆನ್ನುವುದು ಶರಣರ ಅಭಿಪ್ರಾಯ. ಕಾಯಕವು ಕೇವಲ ಶಾರೀರಿಕ ಶ್ರಮವಲ್ಲ, ಪರಮಾತ್ಮನಲ್ಲಿ ಅಚಲ ಭಕ್ತಿಯುಳ್ಳವನಾಗಿ, ಆ ದೇವದೇವನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು, ಅವನ ಸೇವೆಯೆಂದು ನಿಷ್ಕಾಪೂರ್ವಕವಾಗಿ ಮಾಡುವ ಕಾರ್ಯವದು. ಕಾಯಕದಿಂದ ಲಭಿಸಬಹುದಾದ ಫಲ ಪ್ರಾಪ್ತಿಯು ಪರಮಾತ್ಮನ ಇಚ್ಛೆಗೆ ಒಳಪಟ್ಟಿರುವುದೆನ್ನುವ ಪವಿತ್ರ ಭಾವನೆಯುಳ್ಳವನೇ ಕಾಯಕ ನಿರತನು.

''ಸತ್ಯಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಶುದ್ಧವಾಗಿರಬೇಕು.
ನೇಮದ ಕೂಲಿ ಅಂದಿನ ನಿತ್ಯ ನೇಮದಲ್ಲಿ ಸಂದಿರಬೇಕು.
ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ
ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ.''

ಇವೇ ಮುಂತಾದ ವಚನಗಳಿಂದ ಮೇಲ್ಕಂಡ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವರು. ಗುರುವಾಗಲಿ, ಸರ್ವಸಂಗಪರಿತ್ಯಾಗ ಮಾಡಿದ ಜಂಗಮವಾಗಲಿ ಕಾಯಕವನ್ನು ಮಾಡಿಯೇ ತೀರಬೇಕೆಂಬ ನಿರ್ಬಂಧವನ್ನು ಶ್ರೀ ಬಸವಣ್ಣನವರು ಹೂಡಿದರು. ಇದರಿಂದ ಸೋಮಾರಿಗಳ ಸುಳಿದಾಟ ಅಡಗಿದ್ದಲ್ಲದೆ, ಜಂಗಮದ ಸೋಗು ಹಾಕಿಕೊಂಡು ಪರಾವಲಂಬಿಗಳಾಗಿದ್ದವರ ಸಂಖ್ಯೆ ಬಹಳ ಕಡಿಮೆಯಾಯಿತು. ಸಮಾಜಕ್ಕೆ ಕಂಟಕಪ್ರಾಯರಾಗಿ ಈಗ ತೋರಿ ಬರುತ್ತಿರುವ ಕಪಟ ಜಂಗಮದ ಆಟಾಟೋಪವು ಇಲ್ಲವಾಯಿತು.

೧. ''ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು.
ಜಂಗಮವಾದಡೂ ಕಾಯಕದಿಂದಲೇ ಪಾಶ ಹರಿವುದು.
ಇದು ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದರಿವು.''

೨. ''ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು
ಕಾಯಕವ ಬಿಟ್ಟು ಹೊನ್ನ ಬೇಡಿಹೆನೆಂಬುದು ಕಷ್ಟವಲ್ಲವೆ ?
ಆ ಗುಣ ಅಮಳೇಶ್ವರಲಿಂಗಕ್ಕೆ ದೂರ. ''

ಈ ಪ್ರಪಂಚವೇ ಬೇಡವೆನ್ನುವ ಜಂಗಮನೂ ಸಹ ಕಾಯಕವನ್ನು ಮಾಡಿಯೇ ತೀರಬೇಕೆಂಬ ನಿಯಮವು ಆತ್ಮೋನ್ನತಿ ಕಾರ್ಯಕ್ಕೆ ಮುಖ್ಯ ಸಾಧನವಾಗಿದೆ. ಅಲ್ಲದೆ,

ಯದ್ಯದಾಚರತಿ ಶ್ರೇಷ್ಠ: ತತ್ತದೇವೇತರೋ ಜನಾಃ ।
ಸಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಎಂಬ ಗೀತೋಕ್ತಿಯಂತೆ ಶ್ರೇಷ್ಠರು ಆಚರಿಸುವುದನ್ನು ಜನತೆಯೂ ಆಚರಿಸುವುದು ಲೋಕರೂಢಿಯಾಗಿರುವುದರಿಂದ ತಮ್ಮ ನಿದರ್ಶನದಿಂದ ಸಮಾಜದವರನ್ನು ಕಾಯಕದಲ್ಲಿ ಪ್ರವೃತ್ತರಾಗುವಂತೆ ಮಾಡಬೇಕೆನ್ನುವ ಪರಮ ಉದ್ದೇಶದಿಂದಲಾದರೂ ಜಂಗಮರು ಕಾಯಕ ಮಾಡುವುದು ಅಗತ್ಯವೆಂದು ಗೊತ್ತಾಗುತ್ತದೆ.

ಅನ್ಯಾಯಾರ್ಜಿತ ದ್ರವ್ಯದಿಂದ ತಾನು ಮಾಡತಕ್ಕ ಗುರುಲಿಂಗ ಜಂಗಮ ಸೇವೆಯೂ ದಾನ ಧರ್ಮ ಪರೋಪಕಾರಾದಿಗಳೂ ಎಲ್ಲವು ನಿಷ್ಪ್ರಯೋಜನವು. ಅದರಿಂದ ಆ ಮನುಷ್ಯನಿಗೆ ಯಾವ ಪುಣ್ಯವೂ ಲಭಿಸಲಾರದು. ದೇಹವನ್ನು ದಂಡಿಸಿ ಕಾಯಕದಿಂದ ಗಳಿಸಿರುವುದು ಅಲ್ಪವಾದರೂ ಸರಿಯೆ. ಅದರಿಂದ ತಾನು ಮಾಡುವ ಪರಮಾತ್ಮನ ಪೂಜೆ, ಅರ್ಪಿಸುವ ನೈವೇದ್ಯ ಎಲ್ಲವೂ ಅವನಿಗೆ ಪ್ರಿಯವಾಗಬೇಕಾದರೆ ಸತ್ಯಶುದ್ಧ ಕಾಯಕದಿಂದ ಮಾತ್ರ ಎನ್ನುವುದನ್ನು ಶರಣರು ಸಾರಿ ಸಾರಿ ಹೇಳಿದ್ದಾರೆ.

''ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡ ಕಂಡವರ ಬೇಡಿ ತಂದು ಲಿಂಗಕ್ಕೆ ಮಾಡಿಹೆನೆಂಬುವ ದಂದುಗದ ಓಗರ ಅದು ಲಿಂಗ ನೈವೇದ್ಯಕ್ಕೆ ಸಲ್ಲದು. ತನುವ ದಂಡಿಸಿ, ಮನವ ಬಳಲಿಸಿ, ಬಂದ ತೆರದ ಅನುವರಿದು, ಸಂದಿಲ್ಲದೆ ಸಂಶಯವಿಲ್ಲದೆ ಮಾಡುವುದೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತ. ಅನ್ಯಾಯದ ಗಳಿಕೆ ಅನರ್ಪಿತ.''

ಕಾಯಕ ನಿರ್ವಹಣೆಗೆ ಸುದೃಢ ಆರೋಗ್ಯಕರವಾದ ದೇಹವು ಅವಶ್ಯಕವಾದುದರಿಂದ ದೇಹ ರಕ್ಷಣೆಗೂ ಶರಣರು ಪ್ರಾಮುಖ್ಯತೆಯನ್ನು ಸೂಚಿಸಿರುತ್ತಾರೆ. ದೇಹವನ್ನು ಹೇಯವೆಂದು ಶರಣರು ಅಲ್ಲಗಳೆಯುವವರಲ್ಲ. ದೇಹ ಪ್ರಾಣ ಮನ ಸುವ್ಯವಸ್ಥೆಯಾಗಿದ್ದರೇನೇ ಆಧ್ಯಾತ್ಮ ಸಿದ್ಧಿಯಾಗಬಲ್ಲುದು. 'ಶರೀರಮಾದ್ಯಂ ಖಲು ಧರ್ಮ ಸಾಧನಂ' ಎನ್ನುವ ಹಾಗೆ ಶರೀರವು ಧರ್ಮ ಸಾಧನೆಗೆ ಬೇಕೇ ಬೇಕು. ಶರೀರವು ದೃಢವಾಗಿಯೂ, ನಿರೋಗಿಯಾದದ್ದಾಗಿಯೂ, ಆರೋಗ್ಯಭಾಗ್ಯ ಉಳ್ಳದ್ದಾಗಿಯೂ ಇರಬೇಕು. ರೋಗಪೀಡಿತವಾದ ದುರ್ಬಲ ದೇಹದಿಂದ ಆತ್ಮಸಿದ್ಧಿಯಾಗಲಾರದು.'ನಾಯಮಾತ್ಮಾ ಬಲಹೀನೇನ ಲಭ್ಯ' ಎನ್ನುವ ಶಾಸ್ತ್ರೋಕ್ತಿಯು ಮೇಲಿನ ಅಭಿಪ್ರಾಯವನ್ನೇ ಸಮರ್ಥಿಸುತ್ತದೆ. ಮಾನವನೊಳಗಿನ ದೇಹತ್ವ ಸಂಪಾದನೆ ಹಾಗೂ ದೇವತ್ವ ಪ್ರಕಾಶಕ್ಕೆ ಅಡಿಗಲ್ಲಾಗಿ ಸಮ್ಯಗ್ಸಿದ್ಧ ದೇಹವು ಬೇಕು. ಭಗವದುನ್ಮುಖರಾದ ಜೀವಧರ್ಮ ಪರಿಸಮಾಪ್ತಿಗೆ ದೇಹವು ಒಂದು ಸಾಧನವು. ಇದನ್ನರಿತ ಪ್ರಾಜ್ಞರು "A body is the boat by which we can cross the River of Life" - ಸಂಸಾರ ನದಿಯನ್ನು ದಾಟಲಿಕ್ಕೆ ನಮ್ಮ ದೇಹವೇ ಒಂದು ದೋಣಿಯೆಂದು ಹೇಳಿ ಶರೀರವು ಎಷ್ಟು ಶ್ರೇಷ್ಠವೆಂಬುವನ್ನು ಸ್ಪಷ್ಟಪಡಿಸಿದ್ದಾರೆ. ಕಾಯಕ ತತ್ತ್ವವು ಮನುಷ್ಯನನ್ನು ಶ್ರಮಜೀವಿಯನ್ನಾಗಿ ಮಾಡುತ್ತದೆ. ಕಷ್ಟ ಸಹಿಷ್ಣುತೆಯನ್ನುಂಟುಮಾಡುತ್ತದೆ. ದೇಹದ ದುಡಿಮೆಯಿಂದ ನಾವು ತೆಗೆದುಕೊಳ್ಳುವ ಆಹಾರಪಾನೀಯಗಳು ಚೆನ್ನಾಗಿ ಪಚನವಾಗಿ ದೇಹದ ಬೆಳವಣಿಗೆಗೆ ಕಾರಣವಾಗುತ್ತದೆ. ಉದ್ಯೋಗವಿಲ್ಲದಿರುವ ಕಾಯವೇ ಸಮಸ್ತ ರೋಗಗಳ ನಿಧಾನವಾಗಿರುತ್ತದೆ.

ಕಾಯಕ ತತ್ತ್ವವು ಮಾನಸಿಕ ನೈರ್ಮಲ್ಯ ಹಾಗೂ ಸಿದ್ಧತೆ ಇವುಗಳನ್ನು ಒದಗಿಸಿಕೊಡುತ್ತದೆ. ನಿರುದ್ಯೋಗಿಯ ಮನಸ್ಸು ವಂಚನೆಯ ವ್ಯವಹಾರದಲ್ಲಿ, ಕುತ್ಸಿತ ಆಲೋಚನೆಗಳಲ್ಲಿ ತೊಡಗುವುದು. ಮನಸ್ಸು ಸ್ವಾಭಾವಿಕವಾಗಿ ಚಂಚಲವಾಗಿದೆ. ಅದನ್ನು ಬಂಧಿಸುವುದು ಅತಿ ದುಸ್ತರವಾದ ಕಾರ್ಯ; ಆದರೆ ಒಂದು ಮಾರ್ಗದಲ್ಲಿ ಪ್ರವಹಿಸುತ್ತಿರುವ ಅದರ ಗಮನವನ್ನು ಪ್ರಯತ್ನದಿಂದ ತಡೆದು ಮತ್ತೊಂದು ಮಾರ್ಗದಲ್ಲಿ ಹೋಗುವಂತೆ ಮಾಡುವುದು ಅಷ್ಟು ಕಷ್ಟವಲ್ಲ. ಸಾಮಾನ್ಯವಾಗಿ ಹೀನ ವಿಚಾರಗಳಲ್ಲಿ ಕುತ್ಸಿತ ಆಲೋಚನೆಗಳಲ್ಲಿಯೇ ಮನವು ಪ್ರವೃತ್ತವಾಗುವುದು; ಈ ವಿಧವಾದ ಅದರ ದುಷ್ಟ ಪ್ರವೃತ್ತಿಯನ್ನು ತಡೆದು, ಸದ್ವಿಚಾರಗಳಲ್ಲಿ ಹಾಗೂ ಸದಾಲೋಚನೆಗಳಲ್ಲಿ ಪ್ರವೃತ್ತಿಯುಂಟಾಗುವಂತೆ ಮಾಡಬೇಕಾದುದು ಮನುಷ್ಯನ ಕರ್ತವ್ಯ. ಕಾಯಕವು ಮನಸ್ಸನ್ನು ಉದ್ಯೋಗಶೀಲವನ್ನಾಗಿ ಮಾಡುತ್ತದೆ. ಕಾಯಕ ಮಾಡುವಾಗ ಪ್ರಾಮಾಣಿಕತೆ ಮತ್ತು ಮನಸ್ಥೈರ್ಯ ಇವು ಬಹಳ ಅವಶ್ಯಕ. ಪ್ರಾಮಾಣಿಕತೆಯಿಂದ ಮನಸ್ಸು ಪವಿತ್ರವಾಗುತ್ತದೆ. ಅಲ್ಲದೆ ಒಂದು ವಿಧವಾದ ಅಸಾಧಾರಣ ಶಕ್ತಿಯುಂಟಾಗುತ್ತದೆ. ಬೇಸಾಯಗಾರರು ಉದ್ಯೋಗವನ್ನು ಮಾಡುತ್ತಿರುವಾಗ ಮನಸ್ಸನ್ನು ಚಲಿಸಗೊಡದೆ ಏಕಾಗ್ರತೆಯಿಂದ ಅದನ್ನು ಸಾಗಿಸುತ್ತಿರಬೇಕು. ತಾವು ಮಾಡತಕ್ಕ ಉದ್ಯೋಗದಲ್ಲಿ ಮನಸ್ಸು ಲೀನವಾಗಿರಬೇಕು. ಧ್ಯಾನ ನಿರತನಾದ ಯೋಗಿಯು ಹೇಗೆ ಪರಮಾತ್ಮನಲ್ಲಿ ನಿಶ್ಚಲ ಭಾವವನ್ನಿಟ್ಟು ಅನ್ಯವಸ್ತುಗಳ ಪರಿವೆಯಿಲ್ಲದಿರುವನೋ, ಹಾಗೆಯೇ ಕಾಯಕದಲ್ಲಿ ಶರಣನು ತದೇಕಚಿತ್ತನಿರತನಾಗಿ ಅನ್ಯರ ಗೊಡವೆಯಿಲ್ಲದಿರುವನು. ಕಾಯಕದಲ್ಲಿ ಚಿತ್ತೈಕಾಗ್ರತೆಯು ಹೇಗಿರಬೇಕೆಂಬುದನ್ನು ಶರಣರು,

> ''ಕಾಯಕದಲ್ಲಿ ನಿರತನಾದಡೆ ಗುರುದರ್ಶನವನ್ನಾದರೂ ಮರೆಯಬೇಕು.
> ಕಾಯಕದಲ್ಲಿ ನಿರತನಾದಡೆ ಲಿಂಗಪೂಜೆಯನ್ನಾದರೂ ಮರೆಯಬೇಕು.
> ಜಂಗಮ ಮುಂದಿದ್ದರೂ ಹಂಗು ಹರಿಯಬೇಕು.
> ಕಾಯಕವೇ ಕೈಲಾಸವಾದ ಕಾರಣ,
> ಅಮರೇಶ್ವರ ಲಿಂಗವಾಯಿತ್ತಾದರೂ ಕಾಯದೊಳಗ''

ಎನ್ನುವ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗೆ ಉದ್ಯೋಗ ಮಾಡುತ್ತಿರುವವರಿಗೆ ನನಗೆ ತಿಳಿದ ಮಟ್ಟಿಗೆ ಮನಃಪೂರ್ವಕವಾಗಿ ಈ ಕೆಲಸ ಮಾಡಿದ್ದೇನೆ ಎಂಬ ಸಮಾಧಾನವುಂಟಾಗುತ್ತದೆ. ಮನಸ್ಸಿನಲ್ಲಿ ಸಮಾಧಾನವು ಸಂಪೂರ್ಣವಾಗಿ ನೆಲೆಗೊಂಡಾಗ ಉಂಟಾದ ಆನಂದವು ಅವರ್ಣನೀಯವಾಗಿದೆ. ಆಸಕ್ತಿಯಿಂದ ಕಾಯಕ ಮಾಡುವಾಗ ತಾನು ಮಾಡುವ ಕಾರ್ಯದಲ್ಲಿಯೇ ಒಂದು ಬಗೆಯ ಆನಂದ ಉಂಟಾಗುತ್ತದೆ. ಆ ಆನಂದದಿಂದ ಅವನು ಉದ್ಯೋಗದಲ್ಲಿ ಮತ್ತಷ್ಟು ನಿಷ್ಠಾವಂತನಾಗುತ್ತಾನೆ. ಭಾವನೆಯು ಬಲಿತ ಹಾಗೆಲ್ಲಾ, ಅವನ ಮನಶ್ಶಕ್ತಿಯು ಅಲ್ಲಿಯೇ ಸಮರಸ ಹೊಂದುತ್ತದೆ. ಯಾವುದೇ ವಿಧವಾದ ದುರಾಲೋಚನೆ ದುರ್ವ್ಯಾಪಾರಗಳಲ್ಲಿ ಅದಕ್ಕೆ ಪ್ರವೇಶವೇ ಇಲ್ಲದಂತಾಗುತ್ತದೆ. ಎಲ್ಲೆಲ್ಲಿಯೋ ಹೋಗುತ್ತಿದ್ದ ಮನಸ್ಸನ್ನು ಹಿಂದಿರುಗಿಸಿ ಕಾಯಕದಲ್ಲಿ ನಿಲ್ಲುವಂತೆ ಮಾಡುವುದರಿಂದ, ಮನಸ್ಸಿನ ಸ್ಥೈರ್ಯ ಮತ್ತು ಪಾವಿತ್ರ್ಯಗಳು ಹೆಚ್ಚಾಗುತ್ತವೆ. ನಿರ್ಮಲ ಮನೋಭೂಮಿಕೆಯಲ್ಲಿ

ಬಿತ್ತಲ್ಪಟ್ಟ ಆಧ್ಯಾತ್ಮಿಕ ಬೀಜವು ಚೆನ್ನಾಗಿ ಅಂಕುರಿಸಿ, ವೃಕ್ಷವಾಗಿ ಫಲಗಳನ್ನೀಯುವುದು; ಸೋಮಾರಿತನವು ಮಾನಸಿಕ ವಿಷವು. ನಿರುದ್ಯೋಗವು ಮೈಗೂ ವಿಷ, ಬುದ್ಧಿಗೂ ವಿಷ. ಅಸದ್ವರ್ತನದ ದಾದಿ, ದುಷ್ಟವರ್ತನದ ಮಹಾ ಮಾತೃಶ್ರೀ, ಸಪ್ತಮಹಾ ಪಾತಕಗಳಲ್ಲೊಂದು ಪಾತಕ, ಕಲಿಪುರುಷನಿಗೊರಗುದಿಂಬು, ತಲೆದಿಂಬು, ಲೋಲ್ಲಾಟದ ಮೆತ್ತೆ, ನಿರುದ್ಯೋಗದಿಂದ ಸಂಭವಿಸಲಿರುವ ಮಾನಸಿಕ ವಿಷವನ್ನು ಕಾಯಕವು ಹೋಗಲಾಡಿಸಿ ಮನಸ್ಸಿನಲ್ಲಿ ಶಾಂತಿ, ಸಮಾಧಾನ, ಸ್ಥೈರ್ಯಗಳನ್ನುಂಟುಮಾಡಿ, ಮನೋವಿಕಾಸಗೊಳಿಸುತ್ತದೆ.

ಕಾಯಕದಿಂದ ಮನುಷ್ಯನಿಗೆ ತೃಪ್ತಿಯೂ, ಆ ಮೂಲಕ ಜೀವನದಲ್ಲಿ ಸುಖವೂ ಉಂಟಾಗುತ್ತದೆ. ಯಾವನೇ ಆಗಲಿ ದೇಹ ದಂಡಿಸಿ, ದುಡಿದು ಕಷ್ಟಪಟ್ಟು ಸಂಪಾದಿಸಿದ್ದರಲ್ಲಿ ಹೆಚ್ಚು ವಿಶ್ವಾಸ, ಆದರ ಉಳ್ಳವನಾಗಿರುತ್ತಾನೆ. ತಾನು ಗಳಿಸಿದ ವಸ್ತುಗಳನ್ನು ಭೋಗಿಸುವುದರಲ್ಲಿ ತೃಪ್ತಿ, ಸಮಾಧಾನಗಳುಂಟಾಗುತ್ತವೆ. ಆ ಮೂಲಕ ಒಂದು ವೆಗ್ಗಳವಾದ ಆನಂದ ಉಂಟಾಗುತ್ತದೆ.

ಅನಾದರದಿಂದ ಆ ವಸ್ತುವನ್ನು ವ್ಯರ್ಥಮಾಡಲೆಳಸುವುದಿಲ್ಲ. ತಾನು ಕಷ್ಟಪಡದೆ ಪರರನ್ನು ಶೋಷಣೆ ಮಾಡಿ ಬಡವರ ರಕ್ತವನ್ನು ಹೀರಿ ಧನಿಕರಾಗಿ ಇಂದ್ರವೈಭವದಲ್ಲಿ ಮೆರೆಯುತ್ತಿರುವವರಿಗೆ ಬಡವರ ಭೋಗಿಸುವ ತೃಪ್ತಿ ಎಲ್ಲಿ! ಆನಂದವೆಲ್ಲಿ! ಎಲ್ಲವೂ ಗಗನಕುಸುಮಪ್ರಾಯವು. ಆ ತೃಪ್ತಿ, ಆ ಸಮಾಧಾನ, ಆ ಆನಂದ ಇವುಗಳ ಲೇಶಾಂಶವಾದರೂ ಅವರಿಗೆ ದೊರೆಯಲಾರವು. ತಾವು ದೇಹ ದಂಡಿಸಿ ಸಂಪಾದನೆ ಮಾಡದಿರುವುದರಿಂದ ಆಹಾರದ ಮೌಲ್ಯವು ಗೊತ್ತಿಲ್ಲದೆ, ಪ್ರಸಾದದ ಮಹತ್ವವು ಅರಿವಾಗದೆ ಈಗ ಶ್ರೀಮಂತರ ಮನೆಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಬಹು ವೆಚ್ಚದಿಂದ ಬಹು ಶ್ರಮದಿಂದ ಪಾಕಮಾಡಿದ ಸವಿ ಸವಿಯಾದ ಭಕ್ಷ್ಯ ಭೋಜ್ಯಾದಿಗಳನ್ನು ಲಕ್ಷ್ಯವಿಲ್ಲದೆ ಚರಂಡಿಗೆ ಬಿಸಾಡುತ್ತಿರುವರು. ಮೂರು ಹೊತ್ತು ನಾಲ್ಕು ಹೊತ್ತು ಕೂಳಿಲ್ಲದೆ ಅನ್ನ ಅನ್ನ ಎಂದು ಹಂಬಲಿಸುತ್ತಿರುವ ತಿರುಕರು ಮನೆಯ ಬಾಗಿಲಿಗೆ ಬಂದರೆ ಅವರಿಗೆ ಒಂದು ತುತ್ತು ಅನ್ನವನ್ನು ಕೊಡುವುದೆಂದರೆ ಸೇರದು. ಯಾರಿಗೆ ತೃಪ್ತಿ, ಸಮಾಧಾನ, ಆನಂದಗಳು ಲಭಿಸುವುದಿಲ್ಲವೋ ಅವರ ಬಾಳ್ವೆಯು ದುಃಖದಾಯಕವು.

ಕಾಯಕದಿಂದ ಮನುಷ್ಯನಿಗೆ ತಾಳ್ಮೆಯಿಂದ ಕಷ್ಟಗಳನ್ನು ಸಹಿಸಿಕೊಳ್ಳುವ ಧೈರ್ಯ, ಸುಖದುಃಖಗಳಲ್ಲಿ ಸಮಚಿತ್ತತೆ ಈ ಗುಣಗಳುಂಟಾಗುತ್ತವೆ. ಮನುಷ್ಯನ ಜೀವನದಲ್ಲಿ ಸುಖದುಃಖಗಳು ದ್ವಂದ್ವಾತ್ಮಕ; ತನ್ನ ಜೀವನಪಥದಲ್ಲಿ ಅನಂತ ಕಷ್ಟಗಳನ್ನನುಭವಿಸಬೇಕಾಗುತ್ತದೆ; ಹಲವು ಸ್ತುತಿ ನಿಂದೆಗಳಿಗೆ ಗುರಿಯಾಗಬೇಕಾಗುತ್ತದೆ. ಎಂಥ ಬಿಕ್ಕಟ್ಟಿನ ಪರಿಸ್ಥಿತಿಗಳು ಬಂದಾಗ್ಯೂ ಭೀತಿಗೊಂಡು ಕಾಯಕವನ್ನು ಬಿಡುವುದು ಭಕ್ತನಿಗೆ ಸಲ್ಲದು. ಅಂಜಿ ಕೆಲಸಾರುವುದು ಕಾಯಕತತ್ತ್ವಕ್ಕೆ ವಿರೋಧ. ಕರ್ತವ್ಯಪಥದಲ್ಲಿ ಬರುವ ಅನೇಕ ಅಡಚಣೆಗಳೆಂದರೆ, ದೇವರು ಒಡ್ಡಿದ ಪರೀಕ್ಷಾ ಪ್ರಸಂಗಗಳೆಂದು ನಂಬಿ ಭಕ್ತನು ತನ್ನ ಹಾದಿಯಿಂದ ಚ್ಯುತನಾಗದೆ ಮುಂದೆ ಸಾಗಲಿಕ್ಕೇ ಬೇಕು. ಅಂದರೆ ಜೀವನಬಲುಮೆಯುಂಟಾಗುವುದು.

ಹರ ತನ್ನ ಭಕ್ತರ ತಿರಿವಂತೆ ಮಾಡುವ.
ಒರೆದು ನೋಡುವ ಸುವರ್ಣ ಚಿನ್ನದಂತೆ
ಅರೆದು ನೋಡುವ ಕಬ್ಬಿನಂತೆ
ಬೆದರದೆ ಬೆಚ್ಚದೆ ಇದ್ದರೆ,
ಕರವಿಡಿದು ಎತ್ತಿಕೊಂಬ ನಮ್ಮ ರಾಮನಾಥ.

ಜೀವನಸಂಗ್ರಾಮದಲ್ಲಿ ಬರುವ ಆಘಾತಗಳಿಗೆ ಭೀತನಾಗದೆ, ದೃಢನಿಷ್ಠೆಯಿಂದ ಅವನ್ನು ಹಾಯ್ದು ಹೋಗಿ ಕಷ್ಟ ಸುಖಗಳಲ್ಲಿ ತಗ್ಗಿ ಹಿಗ್ಗದೆ ಸಮಾಧಾನವಾಗಿರುವವನಿಗೆ ಜೀವಮಾನವೆನ್ನುವುದು ಸುಖಕರವಲ್ಲವೆ ?

ನಿಷ್ಕಾಮ ಬುದ್ಧಿಯಿಂದ ಕರ್ತವ್ಯ ಮಾಡಬೇಕೆಂಬುದೇ ಕಾಯಕದ ಮುಖ್ಯ ತತ್ತ್ವವು. ಪ್ರಪಂಚದಲ್ಲಿರುವ ಭೋಗ್ಯ ವಸ್ತುಗಳೆಲ್ಲವೂ ನಾವು ಅವುಗಳನ್ನು ಬಳಸುವ ಭಾವದಿಂದ, ಉಪಯೋಗಿಸತಕ್ಕ ರೀತಿಯಿಂದ ಸಾಧಕ ಅಥವಾ ಬಾಧಕವಾಗುತ್ತವೆ. ಅವುಗಳನ್ನು ಆಸೆಯಿಂದ, ಆಸಕ್ತಿಯಿಂದ ಸ್ವೀಕರಿಸಿದರೆ ಬಾಧಕವಾಗುತ್ತವೆ. ಆಸೆಯು ದಾಸ್ಯತ್ವದ ಕುರುಹು. ಆಶಾಬಂಧವು ಕೋಮಲವಾದರೂ ಎಂಥ ಕಠಿಣ ಹೃದಯಗಳನ್ನಾದರೂ ಬಂಧಿಸಬಲ್ಲುದು. ಮಹಾಪುರುಷರೆಲ್ಲರೂ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ್ದರಿಂದಲೇ ಗಮ್ಯವನ್ನು ಮುಟ್ಟಿದರು. ತ್ಯಾಗವೇ ಅವರ ವಿಜಯಕ್ಕೆ ಮೂಲ, ತ್ಯಾಗದಲ್ಲಿಯೇ ಮಹಾ ಜೀವನದ ಉಗಮ. ಕಾಯಕವು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಲ್ಪಡಬೇಕೆಂಬುದೇ ಶರಣರ ತತ್ವವು. ಗೀತಾಚಾರ್ಯರೂ ಹೀಗೆಯೇ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದಿದ್ದಾರೆ.

ಫಲವಾಶೆ ಮಾಡುವುದು ಕ್ರಿಯೆಯಲ್ಲ
ಅದೇನು ಕಾರಣವೆಂದಡೆ
ಬಯಕೆಯ ಭಕ್ತಿಯ ಪೂರ್ವಪುರಾತನರು ಮೆಚ್ಚರು.
ನಮ್ಮ ಅಮಿಂಡೇಶ್ವರದೇವರು ಹಂಗಿನ ಭಕ್ತಿಯನೊಲ್ಲ ನೋಡಾ''.

ಫಲಾಶಾರಹಿತ ಕರ್ಮವೇ ಶ್ರೇಷ್ಠವು. ಕಾಮ್ಯ ಬುದ್ಧಿಯಿಂದ ಮಾಡಿದ ಕರ್ಮವು, ಉದ್ದಿಷ್ಟ ಫಲವು ದೊರಕದಿರುವಾಗ, ನಮ್ಮನ್ನು ದುಃಖಕ್ಕೊಳಗುಮಾಡುತ್ತದೆ. ಕಾಮ್ಯ ಬುದ್ಧಿಯಿಂದ ಮಾಡಿದ ಯಾವುದೇ ಕರ್ಮವು ದೇವರಿಗೆ ಮುಟ್ಟದು. ಅದರಿಂದ ಕರ್ಮಬಂಧವು ನಿವೃತ್ತಿಯಾಗುವುದಿಲ್ಲ. ಆದುದರಿಂದಲೇ ಬಯಕೆಯ ಭಕ್ತಿಯೂ, ಕಾಮ್ಯಕಾಯಕವೂ, ಫಲಾಶೆಯುಳ್ಳ ಕರ್ಮವೂ ತ್ಯಾಜ್ಯವು. ನಿಜವಾದ ಕರ್ಮಯೋಗಿಯು ಸರ್ವಸ್ವವನ್ನೂ ಪರಮಾತ್ಮನಿಗೆ ಅರ್ಪಿಸಿ ನಿಷ್ಕಾಮನಾ ಮತಿಯುಳ್ಳವನಾಗಿ ಕರ್ತವ್ಯದೃಷ್ಟಿಯಿಂದ ತನ್ನ ಕರ್ಮವನ್ನು ಮಾಡುವನು. ಮುಕ್ತಿಯ ಬಯಕೆಯೂ ಸಹ ಅವನಿಗಿರುವುದಿಲ್ಲ.

ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ,
ಪರಮ ಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ,
ಪರಮ ಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ,
ನಿಮ್ಮ ತೊತ್ತು ಸೇವೆಯೇ ಸಾಕು ಎನಗೆ
ಮಹಾಲಿಂಗ ಕಲ್ಲೇಶ್ವರ ದೇವಾ.

ಶ್ರೀ ಅರವಿಂದರ ಉಕ್ತಿಯು ನಿಷ್ಕಾಮ ಕರ್ಮದ ಮಹತ್ವನ್ನು ಸ್ಪಷ್ಟವಾಗಿ ಹೇಳುತ್ತಿದೆ:

"The only work that spiritually purifies is that which is done without personal motives without desire for fame or public recognition or world greatness, without insistence on one's own mental motives or vital lusts and demands or physical preferences, without vanity, for the sake of the divine alone and at the command of the divine.''

ಅಂದರೆ, ವೈಯಕ್ತಿಕ ಉದ್ದೇಶಗಳಿಲ್ಲದೆಯೂ ಖ್ಯಾತಿ, ಸಾರ್ವಜನಿಕ ಮಾನ್ಯತೆ, ಐಹಿಕ ಘನತೆ ಇವುಗಳ ಆಕಾಂಕ್ಷೆಯಿಲ್ಲದೆಯೂ, ಮತ್ತು ಸ್ವತಃ ಮನಸ್ಸಿನ ಹೇತುಗಳು, ಪ್ರಾಣದ ಲಾಲಸೆ ಮತ್ತು ಬೇಡಿಕೆಗಳು ಅಥವಾ ಶಾರೀರಿಕ ಇಷ್ಟಗಳು - ಇಂಥವುಗಳಾವುದಕ್ಕೂ ದೃಢವಾಗಿ ಅಂಟಿಕೊಳ್ಳದೆಯೂ, ಡಾಂಭಿಕತೆ, ಅಪಕ್ವ ಆತ್ಮವಿಶ್ವಾಸ ಅಥವಾ ಅಧಿಕಾರ ಮತ್ತು ಮೇಲ್ಮೆಗಳ ಬಾಧ್ಯತೆ ಇವುಗಳ ಸಂಪರ್ಕವಿಲ್ಲದೆಯೂ, ಕೇವಲ ದೇವನ ಸಲುವಾಗಿ ದೇವನ ಅಪ್ಪಣೆಯಿಂದ ಮಾಡಲ್ಪಡುವ ಕರ್ತವ್ಯ ಮಾತ್ರವೇ ಆಧ್ಯಾತ್ಮಿಕ ಶುದ್ಧತೆಯನ್ನುಂಟುಮಾಡುವುದು.

ಸಾಮಾನ್ಯವಾಗಿ ಜಗತ್ತಿನಲ್ಲಿ ಅನುಭವಿಸುತ್ತಿರುವ ಕಷ್ಟ ಸಮುದಾಯಕ್ಕೆ ಅಹಂಕಾರವು ಮೂಲ ಹೇತುವಾಗಿರುವುದು. ಕಾಮನೆಗಳೆಲ್ಲವೂ ಅಹಂಕಾರ ಪುರುಷನಿಗೆ ಸಾರ್ವಭೌಮ ಪಟ್ಟವನ್ನು ಕಟ್ಟಿ, ಅವನ ಸಾನ್ನಿಧ್ಯದಲ್ಲಿ ತಾವು ಕುಣಿದಾಡಿ ನಲಿಯುತ್ತಿರುವುವು. ನಾನು ಮಾಡುವೆನು, ನಾನು ದೊಡ್ಡವನು, ನಾನು ಕರ್ತೃ, ನಾನು ಭೋಕ್ತೃ ಮುಂತಾದ ಭಾವನೆಗಳುದಯವಾಗುವುದೇ ಸರ್ವ ಅನರ್ಥಗಳಿಗೂ ಮೂಲ. ಇಂದು ಪ್ರಪಂಚದಲ್ಲಿ ನಡೆಯುತ್ತಿರುವ ಅಸಂಖ್ಯಾತ ವ್ಯವಹಾರಗಳು, ಅನೇಕ ಗಲಭೆಗಳು, ರಾಜಕೀಯ ಆಂದೋಲನಗಳು, ವಿನಾಶಕಾರಕ ಯುದ್ಧಗಳು, ಇವೆಲ್ಲಕ್ಕೂ ಅಹಂಕಾರ ಮಮಕಾರಗಳೇ, ಅರ್ಥಾತ್ ನಾನು, ನನ್ನದೆಂಬುದೇ ಮೂಲ. ಈ ಮದವೊಂದು ಬಿಟ್ಟರೆ ಆತನೇ ಸುಖಜೀವಿಯು, ಶಾಂತಿ ಪ್ರಸ್ಥಾಪಕನು. ಅಹಂಕಾರ ಮಮಕಾರಗಳಿರುವುವರಿಗೂ ಶಾಂತಿ ಸಮಾಧಾನಗಳು ನೆಲೆಗೊಳ್ಳಲಾರವು. ಕಾಯಕ ಮಾಡುವಾಗ ಅಹಂಕಾರದ ಸುದ್ದಿಯೇ ಇರಕೂಡದು. ನಾನು ಮಾಡುವೆನೆಂಬ ಹೆಮ್ಮೆಯಿಂದ ಮಾಡಿದ್ದು ಕಾಯಕವೇ ಅಲ್ಲ. ಕರ್ತವ್ಯಕ್ಕೋಸ್ಕರ ಕರ್ತವ್ಯವೆಂಬ ಶ್ರೇಷ್ಠ ತತ್ವವನ್ನರಿತು ನಿಷ್ಕಾಮ ಬುದ್ಧಿಯಿಂದ ಕರ್ಮ ಮಾಡುವುದೇ ಕಾಯಕವೆನ್ನಿಸಿಕೊಳ್ಳುವುದು.

''ನಾನು ಆರಂಬ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ವ್ಯವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮಸೇವೆಗೆಂದು'',
''ಮಾಡಿದೆನೆಂದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ.''

ಈ ಮೊದಲಾದ ಶರಣರ ವಚನಗಳಿಂದ ಅವರು ಅಹಂಕಾರಿಕ ವೃತ್ತಿಯನ್ನು ಎಷ್ಟರ ಮಟ್ಟಿಗೆ ನೀಗಿದ್ದರೆಂದು ವ್ಯಕ್ತವಾಗುತ್ತದೆ. ಅಹಂಕಾರಿಕ ವ್ಯಕ್ತಿಯಿಂದ ಮಾಡತಕ್ಕ ಕರ್ಮವು ಆತ್ಮೋದ್ಧಾರವನ್ನುಂಟುಮಾಡಲಾರದು. ಅರವಿಂದ ಘೋಷರ ಈ ಕೆಳಗೆ ಉದ್ಧರಿಸಿರುವ ಉಕ್ತಿಯು ಮೇಲ್ಕಂಡ ಇದೇ ಅಭಿಪ್ರಾಯವನ್ನು ಸಮರ್ಥಿಸುವುದಾಗಿದೆ :

"I do not mean by work action done in the ego and the ignorance for the satisfaction of the ego and in the drive of rajasic desire, there can be no Karmayoga without the will to get rid of the ego rajas and desire which are the scals of ignorance.

ಅಂದರೆ, ಕರ್ಮವು ರಾಜಸಿಕ ಆಸೆಯ ಸೆಳೆತದಿಂದ ಅಹಂಕಾರ ತೃಪ್ತಿಗಾಗಿ ಹೆಮ್ಮೆ (ಗರ್ವ) ಮತ್ತು ಅಜ್ಞಾನದಿಂದ ಮಾಡಿದ ಕೃತಿಯಲ್ಲ. ಅಜ್ಞಾನದ ಕುರುಹಾಗಿರುವ ಅಹಂಕಾರ, ರಜಸ್ಸು ಮತ್ತು ವಾಸನೆ ಇವುಗಳನ್ನು ತಳ್ಳಿಬಿಡುವ ಸಂಕಲ್ಪವಿಲ್ಲದಿದ್ದರೆ ಅದು ಯೌಗಿಕ ಕರ್ಮವೆನಿಸಲಾರದು. ಹೀಗೆ ಕಾಮನಾ ರಹಿತ ಮನೋವೃತ್ತಿಯಿಂದ ಅಹಂಕಾರ ರಹಿತನಾಗಿ ಕೆಲಸ ಮಾಡುವುದು ಕಾಯಕವೆನಿಸುವುದು. ಅದಾದರೂ ಪರಮಾತ್ಮಾರ್ಪಿತವಾಗಿರಬೇಕು. ಸಾಧಕನು ತನ್ನ ಸರ್ವಸ್ವವನ್ನೂ ಶಕ್ತಿ, ಯುಕ್ತಿ, ಭಕ್ತಿಗಳನ್ನೂ, ತನುಮನಭಾವಗಳನ್ನೂ, ಪ್ರಾಣ ಕರಣ ಕರ್ಮಗಳನ್ನೂ ಪರಮಾತ್ಮನ ಚರಣದಲ್ಲಿ ಅನನ್ಯವಾಗಿ ಅರ್ಪಿಸುವುದು ಕಾಯಕ ತತ್ವವು. ಈ ಪರಿ ಸರ್ವಾರ್ಪಣ ಮಾಡಿ ಕಾಯಕದಲ್ಲಿ ತೊಡಗಿರುವುದರಿಂದ ಸಾಧಕನ ಸರ್ವಶಕ್ತಿ ಮತ್ತು ಕರ್ಮಗಳು ಕ್ಷಣಶಃ ಅವನನ್ನು ಪರಮಾತ್ಮನೆಡೆಗೆ ಒಯ್ಯುತ್ತಿರುವುವು. ಮೆಲ್ಲಮೆಲ್ಲನೆ ಅವನ ಅಹಂಕಾರ ಸ್ವಾರ್ಥ ಬುದ್ಧಿಗಳೆಲ್ಲವೂ ಅಳಿದು, ದೋಷಗಳೆಲ್ಲ ಸುಟ್ಟುಹೋಗಿ ಅವನಿಗೆ ಪರಮಾತ್ಮನ ಸಾಕ್ಷಾತ್ಕಾರವಾಗುವುದು. ಹೀಗೆ ಸರ್ವಾರ್ಪಣ ಮಾಡಿ ತನ್ನ ಸಕಲ ಹೊಣೆಯನ್ನೂ (ಯೋಗಕ್ಷೇಮ) ಪರಮಾತ್ಮನ ಮೇಲೆ ಹೊರಿಸುವನು.

''ನನ್ನ ಯೋಗಕ್ಷೇಮ ನಿಮ್ಮದಯ್ಯ
ಎನ್ನ ಹಾನಿ ವೃದ್ಧಿ ನಿಮ್ಮದಯ್ಯ''
''ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ,
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ.
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ.''

ತನು, ಮನ, ಧನಗಳ ವಿಕಾರದಿಂದ ಬಿಡುಗಡೆ ಹೊಂದಿದ ಸಾಧಕನು ತಾನು ವಿಶ್ರಾಂತನಾಗಿ ಪರಮಾತ್ಮನಿಗೆ ಮರೆಹೋಗುವನು. ದೇವರೇ ತನ್ನ ಹಿತಾಹಿತಗಳ ಕರ್ತನೆಂದು ತಿಳಿದು, ತನ್ನ ಅಂತಃಕರಣದಲ್ಲಿ ಪರಮಾತ್ಮನನ್ನು ಸ್ಥಾಪಿಸಿ, ಅವನಿಗೆ ಸರ್ವವನ್ನೂ ಅರ್ಪಿಸಿ, ಪರಮಾತ್ಮನ ಸಲುವಾಗಿಯೇ ತಾನು ಕೆಲಸ ಮಾಡುತ್ತಿರುವೆನೆಂದು ಕರ್ಮ ಮಾಡುತ್ತಿರುವನು. ತಾನು ಪರಮಾತ್ಮನ ಅನುಜ್ಞೆಯಂತೆ ಕಾರ್ಯ ಮಾಡುತ್ತಿರುವ ಯಂತ್ರರೂಪನು ಎಂಬ ನಂಬಿಕೆಯಿಂದ ಶಾಂತಿ ಸಮಾಧಾನಗಳನ್ನು ಹೊಂದಿ ಆನಂದದಲ್ಲಿರುವನು. ಶ್ರೀ ಅರವಿಂದರ ಈ ಕೆಳಗಿನ ವಾಕ್ಯಗಳು ಇಂಥ ಅವಸ್ಥೆಯನ್ನು ಚೆನ್ನಾಗಿ ವರ್ಣಿಸಿರುತ್ತವೆ :

"I mean by work action done for the devine and more and more in person with the divine for the divine alone and nothing else.''

ಕೇವಲ ದೇವನ ಸಲುವಾಗಿ ಮತ್ತು ಆತನೊಡನೆ ಯುಕ್ತವಾಗಿ ಆತನ ವಿನಾ ಇನ್ನಾವುದಕ್ಕೊಂದೂ ಅಲ್ಲದೆ ಮಾಡುವ ಕೃತಿಯೇ ಕರ್ಮವೆಂದು ಅರ್ಥ ಮತ್ತು

''When you can begin to feel that it is the mother's force that is doing the work and then you are only a channel or an instrument, then in the place of memory, there will have begun the automatic constant realization of the yoga, devine union works.''

ಮಹಾಮಾತೆಯ ಶಕ್ತಿಯೇ ಕರ್ಮವನ್ನು ಮಾಡುತ್ತಿದ್ದು, ನೀನು ಕೇವಲ ಒಂದು ಯಂತ್ರವಾಗಿರುವುದಾಗಿ ಯಾವಾಗ ಅನುಭವಕ್ಕೆ ಬರತೊಡಗಿರುವುದೋ ಆಗ ಕರ್ಮದಲ್ಲಿ ಮೊದಲಿನ ಸ್ಮರಣಕ್ಕೆ ಬದಲಾಗಿ ಸ್ವಾಭಾವಿಕವೂ, ನಿರಂತರವೂ ಆದ ಯೋಗಾನುಭವ ಮತ್ತು ದೈವೀ ಐಕ್ಯತೆ ಇವು ಆರಂಭವಾಗುವುವು. ಹೀಗೆ ಪರಮಾತ್ಮ ನಿರ್ಮಿತ ಯಂತ್ರಸ್ವರೂಪವಾಗಿ ಕಾಯಕ ಮಾಡುತ್ತ, ಸರ್ವಸ್ವವನ್ನು ಪರಮಾತ್ಮನಿಗೆ ಅರ್ಪಣ ಮಾಡತಕ್ಕ ಭಕ್ತನು ತನ್ನದೆಂಬುವುದು ಯಾವುದನ್ನೂ ಇಟ್ಟುಕೊಳ್ಳದೆ ಎಲ್ಲ ಹೊರೆಯನ್ನೂ ಪರಮಾತ್ಮನ ಮೇಲೆಯೇ ಹೊರಿಸುವನು.

''ಮಾಡುವ ಭಕ್ತನೂ ನೀನೆ, ಮಾಡಿಸಿಕೊಂಬ
ದೇವನೂ ನೀನೆ ಎಂದರಿದೆ. ಇದು ಕಾರಣ ಅಖಂಡೇಶ್ವರಾ
ನಿಮ್ಮ ಫಲ ಪದವ ನೋಡಲಿಲ್ಲ, ನೀವು ಎನಗೆ ಕೊಡಲಿಲ್ಲ.''

ತಾನು ಮಾಡುವ ಕಾಯಕದಲ್ಲಿಯೇ ದೇವನನ್ನು ಕಾಣುವನು. ದುಃಖರಹಿತ ಆನಂದ ಸಾಮ್ರಾಜ್ಯದಲ್ಲೋಲಾಡುವನು, ಜಪತಪಾನುಷ್ಠಾನಗಳನ್ನು ಮಾಡಿ ಬೇರೊಂದೆಡೆಯಲ್ಲಿ ಪರಮಾತ್ಮನನ್ನು ಅರಸಬೇಕಾಗಿಲ್ಲ.

''ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು.
ಅರಿವಿಗೆ ನೆಮ್ಮದಿ ಒಡಗೂಡಬೇಕು.
ಬಯಲ ಭ್ರಮೆಯ ಕಳೆದು ನಮ್ಮ ಗುಹೇಶ್ವರಲಿಂಗದಲ್ಲಿ
ನಿಜಪದವನ್ನೆಯ್ದುವುದು ಮಾರಯ್ಯ.''

''ಮಾಡುವ ಮಾಟ ಉಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ;
ದಾಸೋಹವೆಂಬ ಸೇವೆಯ ಬಿಟ್ಟು, ಸಲಿಸಲಾರದೆ ಕೈಲಾಸವೆಂಬ ಆಸೆ ಬೇಡ.
ಮಾರಯ್ಯಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೇ ಕೈಲಾಸವಯ್ಯ''.

ಶ್ರೀ ಅರವಿಂದಘೋಷರಾದರೂ ಈ ವಿಚಾರವನ್ನು ತಮ್ಮ 'Yoga and its objects' ಎಂಬ ಗ್ರಂಥದಲ್ಲಿ

"Those who do work for the other in all sincerity are prepared by the work itself for the right consciousness even if they do not sit down for meditation or follow any particular practice of yoga".

ಎಂದು ಹೇಳಿರುವರು. ಯಥೋಚಿತವಾಗಿ ಯಾರು ಮಹಾಮಾತೆಗೆಂದೇ ಕರ್ಮ ಮಾಡುವರೋ ಅವರು ಧ್ಯಾನಕ್ಕೆ ಕೂಡದೆಯೂ, ಯಾವ ಯೋಗ ಸಾಧನೆಯನ್ನೂ ಅನುಸರಿಸದೆಯೂ ಅವರಿಗೆ ಯೋಗಸ್ಥಿತಿಯು ಉಂಟಾಗುತ್ತದೆ. ಈ ವಿಧವಾದ ಕರ್ಮಯೋಗಿಯೂ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ, ಮಾಡಿ ನಿರ್ಲೇಪಿ, ತನ್ನ ಶಕ್ತಿ ಸರ್ವಸ್ವದಿಂದ ಲೋಕಸಂಗ್ರಹ ಕಾರ್ಯಗಳನ್ನು ಎಡೆವಿಡದೆ ಮಾಡುತ್ತಿದ್ದರೂ ''ಪುಂಖಾನುಪುಂಖವಿಷಯೇಕ್ಷಣ ತತ್ಪರೋಪಿ ಬ್ರಹ್ಮಾವಲೋಕನ ನಿರೂಢಮನುದ್ದಿಶ್ಯಯೋಗಿ'' ಎನ್ನುವ ರೀತಿ, ಅವುಗಳಿಂದ ಬದ್ಧನಾಗದೆ ಮುಕ್ತನಾಗುವನು.

ಪ್ರಪಂಚದಲ್ಲಿ ನಮಗೆ ದೊರಕುವ ಸುಖಗಳೆಲ್ಲವೂ ದುಃಖ ಮಿಶ್ರಿತವಾದುವು. ದುಃಖರಹಿತವಾದ ಸುಖವೆನ್ನುವುದು ದುರ್ಲಭವಾದ ಮಾತು. ಅದು ಆತ್ಮಸಾಕ್ಷಾತ್ಕಾರದಿಂದ ದೊರಕುವುದೇ ಹೊರತು, ಅಪಾರವಾದ ಧನಸಂಗ್ರಹದಿಂದಾಗಲಿ, ಅದ್ವಿತೀಯ ಪಾಂಡಿತ್ಯ ಸಂಪಾದನೆಯಿಂದಾಗಲಿ, ಉನ್ನತ ಅಧಿಕಾರ ಪ್ರಾಪ್ತಿಯಿಂದಾಗಲಿ, ಮತ್ತೆ ಯಾವುದರಿಂದಾಗಲಿ ಅಲ್ಲ. ಈ ವಿಧವಾದ ನಿತ್ಯವೂ, ಸತ್ಯವೂ, ನಿರ್ದೋಷವೂ, ಅನಾದಿಯೂ ಆದ ಸುಖವೇ ಮೋಕ್ಷವೆನ್ನುವುದು. ಅದರ ಲಾಭಕ್ಕಾಗಿ ಕೈಲಾಸಕ್ಕೆ ಹೋಗಬೇಕೆಂಬ ನಿರ್ಬಂಧವಿಲ್ಲ. ಕೈಲಾಸವೆಂಬುದು ಒಂದು ನಿರ್ದಿಷ್ಟ ಸ್ಥಾನವಲ್ಲ. ಮೇಲೆ ಹೇಳಿದಂತಹ ಆನಂದವು ಮನುಷ್ಯನಿಗೆ ಉಂಟಾದಾಗ ಅದೇ ಕೈಲಾಸವು. ಅದಕ್ಕಾಗಿ ಬೇರೊಂದೆಡೆಗೆ ಹೋಗಿ ಹುಡುಕಬೇಕೆನ್ನುವುದು ತಪ್ಪು ಭಾವನೆಯು. ನಿರಹಂಕಾರಿಯಾಗಿ, ಫಲಾಶಾರಹಿತ ನಿಷ್ಕಾಮ ಬುದ್ಧಿಯಿಂದ ಕಾಯಕವನ್ನು ಮಾಡುವ ಭಕ್ತನು ಸಂಕಲ್ಪವೆಂಬುದೇನೂ ಇಲ್ಲದೆ ಪರಮಾತ್ಮನ ಸಂಕಲ್ಪಗಳನ್ನೇ ಅವನು ಕೇವಲ ನಿಮಿತ್ತಮಾತ್ರನಾಗಿ ಮಾಡುತ್ತಿರುವನು. ಹೀಗೆ ಮಾಡುವ ಕಾಯಕವು ಅವನಿಗೆ ಬಾಧಕವಾಗದೆ ಸಾಧಕವೇ ಆಗುವುದು. ಕ್ರಿಯೆಯೆಂಬುದು ಯಾರಿಗೂ ಎಂದೂ ಬಿಟ್ಟಿದ್ದಲ್ಲ. ಇಷ್ಟವು ಸಾಧ್ಯವಾಗಲಿಕ್ಕೆ ಅದು ಅವಶ್ಯವು. ಅರಿದೆನೆಂಬುವವನಿಗೆ ಸಹ, ಪೂರ್ಣತ್ವವನ್ನು ಹೊಂದಲಿಕ್ಕೆ ಸತ್ಕ್ರಿಯಾಚರಣೆಯಲ್ಲಿ ತೊಡಗಿರಬೇಕೆಂಬುದೇ ಕಾಯಕ ತತ್ತ್ವವು. ಅವನಿಗೆ ಮುಕ್ತಿಯ ಆಶೆ ಸಹ ಉಳಿಯುವುದಿಲ್ಲ. ಮಾಡುವವನೂ ಮಾಡಿಸಿಕೊಳ್ಳುವವನೂ, ಕೊಡುವವನೂ ಕೊಂಬುವವನೂ ದೇವನೆಂಬ ನಿಲುವು ನೆಲೆಯಾಗಿ, ಅವನ ಅಹಂಕಾರಿಕ ವೃತ್ತಿಯೂ, ಕಾಮನೆಗಳೂ ಎಲ್ಲವೂ ಅಳಿದುಹೋಗಿ, ಮಾಡುವ ಕಾಯಕದಿಂದಲೇ ಅವನ ವ್ಯಕ್ತಿತ್ವವು ಪರಮಾತ್ಮನಲ್ಲಿ ಪೂರ್ಣ ಲೀನವಾಗಿ ಹೋಗುವುದರಿಂದ ನಿಸ್ಸೀಮ ಪರಮಾನಂದವನ್ನು ಅರ್ಥಾತ್ ಕೈಲಾಸ ಪದವಿಯನ್ನು ಹೊಂದುವನು.

೩. ಬ್ರಹ್ಮಚರ್ಯೆಯ ಮಹತ್ವ

ಪ್ರಪಂಚದಲ್ಲಿ ಸರ್ವಜೀವಿಗಳಿಗೂ ಸುಖದ ಬಯಕೆಯು ಸ್ವಾಭಾವಿಕವಾದುದು. ಜೀವಕೋಟಿಯಲ್ಲಿ ಅಗ್ರಸ್ಥಾನವನ್ನು ಗಳಿಸಿರುವ ಮಾನವನಾದರೋ ವಿಶಿಷ್ಟ ವ್ಯಾಪಾರಗಳಲ್ಲಿ ಪ್ರವೃತ್ತನಾಗಿರುವುದು ಸುಖದ ಬಯಕೆಯಿಂದಲೇ. ಪರಮಾತ್ಮನಿಂದ ಅನುಗ್ರಹಿಸಲ್ಪಟ್ಟಿರುವ ಕ್ರಿಯಾ ಶಕ್ತಿ, ವಾಕ್ ಶಕ್ತಿ, ಧೀಶಕ್ತಿಗಳೆಲ್ಲವನ್ನು ಬೆಳೆಸಿಕೊಂಡು ಅವುಗಳನ್ನು ಅಧಿಕ ಸುಖಪ್ರಾಪ್ತಿಗಾಗಿ ವಿನಿಯೋಗಿಸುತ್ತಾನೆ. ಬಂದದ್ದನ್ನು ಕಿರಿದುಮಾಡಿ, ಬಾರದ್ದನ್ನು ಹಿರಿದುಮಾಡಿ, ತೃಪ್ತಿಯಿಲ್ಲದೆ ಅಲಭ್ಯವಾದದ್ದನ್ನು ಇಚ್ಛಿಸಿ ಧಾವಿಸುತ್ತಾನೆ. ವೈಜ್ಞಾನಿಕರು, ಸೃಷ್ಟಿಯ ಗರ್ಭದಲ್ಲಿ ಅಡಗಿರುವ ಅದ್ಭುತ ಶಕ್ತಿಗಳನ್ನು ಕಂಡುಹಿಡಿದು, ಅವನ್ನು ಹೊರಗೆಡವಿ, ಅನಂತ ಸಂಶೋಧನೆಗಳನ್ನು ಮಾಡಿ, ಯಂತ್ರಗಳನ್ನು ನಿರ್ಮಾಣಮಾಡುತ್ತಿರುವುದರ ಉದ್ದೇಶವೂ ಸುಖದ ಬಯಕೆಯೆನ್ನುವುದು ಸರ್ವವೇದ್ಯವಾಗಿದೆ. ಅಲ್ಪಶ್ರಮದಿಂದ ಅಧಿಕ ಸುಖವನ್ನು ಹೊಂದಬೇಕೆಂಬ ಆಕಾಂಕ್ಷೆಯಿಂದ, ಹಿಂದೆ ಅವನಿಗೆ ಪ್ರಾಪ್ತವಾಗದಿರುವ ಸುಖಗಳನ್ನು ದೊರಕಿಸಿಕೊಡುವ ಇಚ್ಛೆಯಿಂದ, ಮನುಷ್ಯನಿಗೆ ಯಂತ್ರೋಪಕರಣಗಳ ನೆರವನ್ನು ಒದಗಿಸಿಕೊಟ್ಟು, ಅವನ ಸ್ವಾಭಾವಿಕ ಬಯಕೆಯನ್ನು ಪೂರೈಸುವ ಕೀರ್ತಿಯನ್ನು ಹೊಂದಿರುವುದಾಗಿ ಸಂತುಷ್ಟರಾಗಿದ್ದಾರೆ. ಎಲ್ಲ ರಾಷ್ಟ್ರಗಳು, ಎಲ್ಲ ಜನಾಂಗಗಳು ಅನುಭವಿಸುತ್ತಿರುವ ಸುಖವನ್ನು ಸೂರೆಗೊಂಡು ಕೆಲವೇ ಜನಾಂಗಗಳ ಸ್ವತ್ತಾಗಿ ಮಾಡಬೇಕೆನ್ನುವ ಹಾಗೂ ಎಲ್ಲವನ್ನೂ ಪಾದಾಕ್ರಾಂತವನ್ನಾಗಿ ಮಾಡಿ ತಾವು ಮತ್ತು ತಮ್ಮ ಜನಾಂಗ ಅತ್ಯುನ್ನತ ಸುಖವನ್ನು ಹೊಂದಬೇಕೆಂಬ ರಾಕ್ಷಸೀ ಮಹತ್ವಾಕಾಂಕ್ಷೆಯೇ ಭಯಂಕರವಾದ ಮಾರಕಾಸ್ತ್ರಗಳ ಸಂಶೋಧನೆಗೂ, ನಿರ್ಮಾಣಕ್ಕೂ ಮೂಲ ಹೇತುವಾಗಿದೆ.

ಮಾನವನು ಚರ್ಮಚಕ್ಷುವಿಗೆ ಗೋಚರವಾಗುತ್ತಿರುವ ಐಂದ್ರಿಯಿಕಾನುಭವದ ವ್ಯಾಪ್ತಿಗೆ ಒಳಪಟ್ಟಿರುವ ಭೌತಿಕ ವಸ್ತುಗಳಿಂದಲೇ, ಭೋಗ ಜೀವನದಿಂದಲೇ ನಿಜವಾದ ಸುಖವು ಪ್ರಾಪ್ತಿಯಾಗುವುದೆನ್ನುವ ಹಂಬಲವುಳ್ಳವನಾಗಿರುತ್ತಾನೆ. ಅಂತೆಯೇ ಅವನ ಧ್ಯೇಯ ಧೋರಣೆಗಳು, ಕಾರ್ಯಚಟುವಟಿಕೆಗಳು ಇಂದು ಗೋಚರವಾಗುತ್ತಿರುವ ರೂಪವನ್ನು ತಾಳಿವೆ. ವಾಸ್ತವಿಕವಾಗಿ ಮನುಷ್ಯ ಸಾಮಾನ್ಯನು ಇಂದು ಹೊಂದಿರುವ ತಿಳುವಳಿಕೆಯು ಸಾಧುವಾಗಿರುವುದೆ? ಅವನು ಗಮಿಸುತ್ತಿರುವ ಮಾರ್ಗದಲ್ಲಿ ಮುಂದುವರಿದರೆ ಅವನ ಇಚ್ಛೆಯ ವಸ್ತುವಾದ ಸುಖದ ಆತ್ಯಂತಿಕ ಕಲ್ಪನೆಯು ಅವನಿಗೆ ಪೂರೈಸಬಹುದೆ ಎನ್ನುವುದು ವಿಚಾರಾರ್ಹವಾದ ಅಂಶವು.

ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ಸುಖವೆಂದು ಭಾವಿಸಿರುವ ವಸ್ತುವಿನ ಪ್ರಾಪ್ತಿಗಾಗಿ ಅವನ ಇಂದ್ರಿಯಗಳು ಸಾಧನೆಗಳಾಗಿರುತ್ತವೆ. ಬಾಹ್ಯವಸ್ತುಗಳನ್ನು ಭೋಗಿಸುವುದರಿಂದ ಉಂಟಾಗುವ ತಾತ್ಕಾಲಿಕ ಸುಖವನ್ನು ಪರಮಸುಖವೆಂದು ನಂಬಿ, ಭೋಗಲಾಲಸೆಯಲ್ಲಿ ಮಗ್ನನಾಗಿ ತನ್ನ ಬಾಳನ್ನು ಹಾಳುಮಾಡಿಕೊಳ್ಳುತ್ತಿದ್ದಾನೆ. ಐಂದ್ರಯಿಕ ಸುಖದ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಿರುವ ಮನುಷ್ಯನು ಕ್ಷಣಭಂಗುರಗಳೂ ಆಪಾತರಮಣೀಯಗಳೂ ಪರಿಣಾಮ ವಿರಸಗಳೂ ಆದ ಸುಖಗಳನ್ನು ನಂಬಿ, ಭ್ರಾಂತನಾಗಿ ಕಡೆಗೆ ಅನಂತ ದುಃಖಗಳನ್ನು ಅನುಭವಿಸುತ್ತಾನೆ. ಈ ತಪ್ಪು ಕಲ್ಪನೆಯು ವಿಷಮದೃಷ್ಟಿಯು ಮಾಯವಾಗಿ ಜಗದುದ್ಧಾರ ಕರ್ತೃಗಳಾದ ಮಹಾನುಭಾವರು ಉಸುರಿರುವ ಅಮರಸಂದೇಶಗಳನ್ನು ಅರಿತು ಆಚರಿಸುವ ದೃಢ ಪ್ರಯತ್ನ ಮಾಡದ ಹೊರತು ಮಾನವನಿಗೆ ನಿಜಸುಖವು ಲಭಿಸಲಾರದು. ಸಕಲೇಂದ್ರಿಯಗಳಲ್ಲಿ ವಿಹರಿಸುವ ಮನವ ಸೆಳೆದು ನಿಂದಾತನೇ ಸುಖಿ, ಪಂಚೇಂದ್ರಿಯಗಳಿಚ್ಛೆಯಲ್ಲಿ ಕೀಳುಮನಗೊಂಡು ಸುಳಿವಾತನೇ ದುಃಖಿ, ಮನವು ಬಹಿರ್ಮುಖವಾದರೆ ಮಾಯಾ ಪ್ರಪಂಚ. ಮನವಂತರ್ಮುಖವಾದರೆ ಅವಿರಳ ಜ್ಞಾನಿಯೆಂದು ನುಡಿದು ನಿಜಸುಖದ ಪ್ರಾಪ್ತಿಗಾಗಿ ಸಂಯಮಿತ ಜೀವನದಿಂದ ಕೂಡಿದ ಅಂತರಂಗ ಸಾಧನೆಯು ಅವಶ್ಯಕವೆಂದು ಸಾರಿರುವರು.

ಸಂಯಮಿತ ಜೀವನವು ಅರ್ಥಾತ್ ಬ್ರಹ್ಮಚರ್ಯೆಯು ಸುಖದ ಮೂಲಹೇತುವು. ಮಾನವ ಜೀವಿತದ ಸಾರಸರ್ವಸ್ವವು. ಮಹಾ ಕಲ್ಯಾಣದಾಯಕವು. ಬ್ರಹ್ಮಚರ್ಯೆಯು ವ್ಯಾಪಕವಾದ ಅರ್ಥವುಳ್ಳದಾಗಿದ್ದರೂ, ಸ್ತ್ರೀಪುರುಷ ಸಂಬಂಧವಾದ ಪ್ರೇಮ ವ್ಯವಹಾರದಲ್ಲಿ ಅತ್ಯವಶ್ಯಕವಾದ ನಿಯಮಪಾಲನೆಯ ವಿಚಾರದಲ್ಲಿ, ಜೀವನ ಸತ್ವವಾದ ವೀರ್ಯ ಸಂರಕ್ಷಣೆಯ ವಿಚಾರದಲ್ಲಿ ಅದನ್ನು ಬಳಸುವುದು ಒಂದು ಪದ್ಧತಿಯಾಗಿದೆ.

ಧರ್ಮ, ಸಂಸ್ಕೃತಿ, ಅಧ್ಯಾತ್ಮಿಕತೆಯ ಪವಿತ್ರತತ್ವಗಳ ಮೇಲೆ ಉಳಿದು ಬೆಳೆದು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಾಳನ್ನು ಬೆಳಗಿಕೊಂಡು ಬಂದಿರುವ ನಮ್ಮೀ ಭರತಖಂಡದಲ್ಲಿ ಪ್ರಾಚೀನ ಕಾಲದಿಂದಲೂ ಬ್ರಹ್ಮಚರ್ಯ ರಕ್ಷಣೆಗೆ ವಿಶೇಷ ಮಹತ್ವವನ್ನು ಕೊಟ್ಟಿದ್ದರು. ಜಗತ್ತಿನ ಪ್ರಾಚೀನತಮ ಗ್ರಂಥಗಳಾದ ವೇದಗಳು ಸಹ ಇದರ ಶ್ರೇಷ್ಠತೆಯನ್ನು ಹೊಗಳಿ ಬ್ರಹ್ಮಚರ್ಯದಿಂದಲೇ ಮನುಷ್ಯನ ಸರ್ವಶಕ್ತಿಗಳು ಶುದ್ಧವಾಗಿ ವಿಫುಲತೆಯನ್ನು ಪಡೆಯುವುದೆಂದು ಸಾರಿವೆ. ಬ್ರಹ್ಮಚರ್ಯೇಣ ತಪಸಾ ರಾಜಾ ರಾಷ್ಟ್ರಂ ವಿ ರಕ್ಷತಿ ಆಚಾರ್ಯೋ ಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ । ಬ್ರಹ್ಮಚರ್ಯೇಣ ದೇವೇಭ್ಯಃ ಸ್ವರಾ ಭರತ್॥ ಬ್ರಹ್ಮಚರ್ಯರೂಪೀ ತಪಸ್ಸಿನಿಂದಲೇ ರಾಜನು ಪ್ರಜೆಗಳನ್ನು ಸಂರಕ್ಷಣೆ ಮಾಡುತ್ತಾನೆ. ಬ್ರಹ್ಮಚರ್ಯೆಯಿಂದಲೇ ದೇವತೆಗಳು ಮೃತ್ಯುವನ್ನು ಜಯಿಸಿದರು. ಬ್ರಹ್ಮಚರ್ಯೆಯಿಂದಲೇ ಇಂದ್ರನು ದೇವತೆಗಳಿಗೆ ಸ್ವರ್ಗಸಂಪತ್ತನ್ನು ತಂದುಕೊಟ್ಟನು.

''ಬ್ರಹ್ಮಚಾರೀ ಸಿಂಚತಿ ಸಾನೋಕೇತಃ ಪೃಥಿವ್ಯಾಂ ।
ತೇನಜೀವಂತಿ ಪ್ರಾದಿಶತ್ ಚತುಸ್ರಃ ॥''

ಬ್ರಹ್ಮಚಾರಿಯು ತನ್ನ ತೇಜಶ್ಶಕ್ತಿಯನ್ನು ಪೃಥ್ವಿಯ ಮೇಲೆ ಎರಚುತ್ತಾನೆ. ಈ ಶಕ್ತಿಯಿಂದಲೇ ಸರ್ವವೂ ಜೀವಿಸುತ್ತಿವೆ.

ಅರ್ವಾಗ್ಂ ಅನ್ಯಃಪರೋ ಅನ್ಯೋ ದಿವಸ್ ಪೃಷ್ಠಾತ್
ಗುಹಾ ನಿಧೀ ನಿಹಿತೋ ಬ್ರಾಹ್ಮಣಸ್ಯ
ತೌ ರಕ್ಷತಿ ತಪಸಾ ಬ್ರಹ್ಮಚಾರೀ
ತತ್ ಕೇವಲಂ ಕೃಣುತೇ ಬ್ರಹ್ಮವಿದ್ವಾನ್॥

ಪರಾ ಅಪರಾ ಎಂಬ ಎರಡು ಪವಿತ್ರವಾದ ನಿಧಿಗಳು ಬ್ರಹ್ಮಚಾರಿಯಿಂದ ರಕ್ಷಣೆ ಮಾಡಲ್ಪಡುತ್ತವೆ. ಬ್ರಹ್ಮಚರ್ಯೆಯಿಂದ ಬ್ರಹ್ಮಜ್ಞಾನ ಪಡೆದ ತಪಸ್ವಿಯು ಇವುಗಳನ್ನು ಸ್ವಾಧೀನಮಾಡಿಕೊಳ್ಳುತ್ತಾನೆ.

ಈ ಮುಂತಾದ ಇನ್ನು ಅನೇಕ ಪವಿತ್ರವಾಣಿಗಳು ಬ್ರಹ್ಮಚರ್ಯೆಯ ಹಿರಿಮೆಯನ್ನು ಹೊಗಳಿವೆ.

ನತಪಸ್ತಪ ಇತ್ಯಾಹುರ್ಬ್ರಹ್ಮಚರ್ಯ ತಪೋತ್ತಮಮ್ ।
ಊರ್ಧ್ವರೇತಾಭವೇದ್ಯಸ್ತು ಸದೇವೋ ನತು ಮಾನುಷಂ ॥

ಬ್ರಹ್ಮಚರ್ಯೆಯೇ ಶ್ರೇಷ್ಠವಾದ ತಪಸ್ಸು. ಬ್ರಹ್ಮಚರ್ಯರಕ್ಷಣೆ ಮಾಡಿಕೊಂಡಿರುವವನು ಮನುಷ್ಯರಲ್ಲಿ ದೇವನು.

ಆಯುಸ್ತೇಜೋಬಲಂ ವೀರ್ಯಂ ಪ್ರಜ್ಞಾಶ್ರೀಶ್ಚಮಹದ್ಯಶಃ ।
ಪುಣ್ಯಂಚ ಮತ್ಪ್ರಿಯತ್ವಂಚಹನ್ಯಯತೇ ಬ್ರಹ್ಮಚರ್ಯಯಾ ॥

ಬ್ರಹ್ಮಚರ್ಯರಕ್ಷಣೆ ಮಾಡದಿರುವುದರಿಂದ ಆಯುಸ್ಸು, ತೇಜಸ್ಸು, ಶಕ್ತಿ, ಪರಾಕ್ರಮ ಬುದ್ಧಿ, ಸಂಪತ್ತು, ಯಶಸ್ಸು, ಪುಣ್ಯ, ದೇವಾನುಗ್ರಹ ಎಲ್ಲವೂ ನಾಶವಾಗುತ್ತವೆ.

ಬ್ರಹ್ಮಚರ್ಯಂಚರೇದ್ಯಸ್ತು ವರ್ಷಾಣಾಂ ಪಂಚವಿಂಶತಿಃ ।
ಗುಣವಾನ್ ಶಕ್ತಿಸಂಪನ್ನಃ ಸಶತಾಯುರ್ಭವಿಷ್ಯತಿ ॥

ಇಪ್ಪತ್ತೈದು ವರ್ಷಗಳು ಬ್ರಹ್ಮಚರ್ಯೆಯನ್ನು ಪರಿಪಾಲನೆ ಮಾಡುವವನು ಶೀಲಸಂಪನ್ನನೂ, ಶಕ್ತಿಯುತನೂ, ದೀರ್ಘಾಯುವೂ ಆಗುತ್ತಾನೆ. ''ಬ್ರಹ್ಮಚರ್ಯವೇ ಜೀವನ-ವೀರ್ಯನಾಶವೇ ಮೃತ್ಯು'' ಎಂದು ಸಾರಿರುವ ಆರ್ಯೋಕ್ತಿಗಳಿಂದ ಬ್ರಹ್ಮಚರ್ಯದ ಮಹತ್ವವನ್ನು ಅರಿತು ಸಾಧನೆಮಾಡುವ ಸಾಧಕರ ಸಂಖ್ಯೆಯು ಬೆಳೆದಂತೆಲ್ಲಾ ಜನಾಂಗವೂ ಸುಸಂಸ್ಕೃತವಾಗಿ ಉನ್ನತಿಯನ್ನು ಹೊಂದುತ್ತದೆ.

ದೌರ್ಭಾಗ್ಯವಶಾತ್ ನಮ್ಮೀ ಪುಣ್ಯಭೂಮಿಯನ್ನು ವಿದೇಶೀಯರು ಆಕ್ರಮಣಮಾಡಿ ಆಳರಸರಾದ ನಂತರ ನಮ್ಮ ದೇಶೀಯರು ತೇಜೋಹೀನರಾಗಿ ನಿರ್ವೀಯರಾಗಿ ತಮ್ಮತನವನ್ನು ತಾವು ಮರೆತು ವಿಶ್ವಕಲ್ಯಾಣಕ್ಕೆ ಸಾಧಕವಾದ ತಮ್ಮ ಅಪೂರ್ವವಾದ ಸಂಪತ್ತುಗಳನ್ನೆಲ್ಲಾ ತ್ಯಾಜ್ಯಮಾಡುತ್ತಾ ಬಂದರು. ವಿದೇಶೀಯರ ಅಂಧಾನುಕರಣೆಯಿಂದ ಪರಂಪರಾಗತವಾಗಿ

ಬಂದಿದ್ದ ತಮ್ಮ ಶ್ರೇಷ್ಠ ಗುಣಗಳನ್ನೆಲ್ಲಾ ಮರೆತರು. ಬ್ರಹ್ಮಚರ್ಯೆಯ ಮಹತ್ವವನ್ನರಿಯದೆ ಕೇವಲ ಭೋಗಲಾಲಸೆಯಿಂದ ಐಂದ್ರಿಯಿಕ ತೃಪ್ತಿಗಾಗಿ ಸಾಂಸಾರಿಕ ಜೀವನವನ್ನು ಬಳಸಲು ಅಭ್ಯಸಿಸಿದ ನಮ್ಮ ಜನರು ಊರ್ಧ್ವಮುಖವಾಗಿ ಪ್ರವಹಿಸುವ ವೀರ್ಯವೇ ಓಜೋರೂಪವಾಗಿ ಪರಿಣತವಾಗಿ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಾಗುವುದೆಂಬ ಕಲ್ಪನೆಯನ್ನೂ ಕೂಡ ಅರಿಯದ ಅಸಮರ್ಥರಾದರು. ಧರ್ಮಜೀವನದಿಂದ ಉತ್ತೇಜಿತರಾಗಿ ಮಾನವ ಜೀವನವು ದೇವಜೀವನದಲ್ಲಿ ಪರಿಸಮಾಪ್ತವಾಗಬೇಕೆನ್ನುವ ಉಚ್ಚ ಧ್ಯೇಯವನ್ನು ಮರೆತು ಕಾಲ್ಪನಿಕ ಸುಖಲಾಲಸೆಯ ಕೃತಕ ಜೀವನದಲ್ಲಿ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಮಾಡುತ್ತಾ ಮೃಗಜೀವನದ ಮಟ್ಟಕ್ಕೆ ಇಳಿದರು.

ಶಾಂತಿಯ ಸ್ವರೂಪವನ್ನರಿತು ಶಾಂತಿ ಸಾಧನೆಯನ್ನು ಮಾಡಿ ಶಾಂತಮೂರ್ತಿಗಳಾದ, ಜಗತ್ತಿಗೆ ಶಾಂತಿಸಂದೇಶವನ್ನು ಬೀರಿ, ಶಾಂತಿಸಾಮ್ರಾಜ್ಯವನ್ನು ಸ್ಥಾಪನೆಮಾಡಿದ ಆರ್ಯ ಋಷಿಗಳು, ಸಾಧುಗಳು, ಸಂತರು, ಶರಣರು, ಅನುಭಾವಿಗಳ ಪೀಳಿಗೆಯವರಾಗಿರತಕ್ಕ ನಾವೇ ಇಂದು ಜಗತ್ತಿನಲ್ಲಿ ತಾಂಡವವಾಡುತ್ತಿರುವ ಅಶಾಂತಿ, ಅಸಮಾಧಾನ, ದ್ವೇಷಾಸೂಯೆಗಳು, ಸ್ವಾರ್ಥಪರತೆಯಿಂದುಂಟಾಗಿರತಕ್ಕ ಸಂಕುಚಿತ ಮನೋಭಾವನೆಗಳೆಲ್ಲವನ್ನೂ ಪರಿಹರಿಸಿ, ವಿಶ್ವದಲ್ಲಿ ಶಾಂತಿ ಸಮತೆಗಳನ್ನುಂಟುಮಾಡುವ ಹೊಣೆಗಾರಿಕೆಯನ್ನು ಹೊರಬೇಕಾಗಿದೆ. ಈ ಉದಾರ ಧ್ಯೇಯಸಾಧನೆಗೆ ತಕ್ಕ ಅರ್ಹತೆಯು ಉಂಟಾಗಬೇಕಾದರೆ, ನಮ್ಮ ತರುಣ ತರುಣಿಯರು ವಿಚಾರಮತಿಗಳಾಗಿ, ಸತ್ಸಂಕಲ್ಪ ಸದ್ಭಾವನೆಗಳಿಂದ ಪ್ರಚೋದಿತರಾಗಿ ಬ್ರಹ್ಮಚರ್ಯ ಸಾಧನೆಯಲ್ಲಿ ನಿರತರಾಗಿ ತಮ್ಮ ಜೀವನವನ್ನು ಉದಾತ್ತಗೊಳಿಸುವುದು ಅವಶ್ಯಕವಾಗಿದೆ.

ಕೇವಲ ಬಹಿರ್ಮುಖವಾಗಿರುವ ಇಂದ್ರಿಯಪ್ರವೃತ್ತಿಗಳನ್ನು ನಿಗ್ರಹಮಾಡಿ ಸ್ವಾಭಾವಿಕವಾಗಿ ಪರಸ್ಪರ ಆಕರ್ಷಿತವಾಗಿರುವ ಪ್ರೇಮಜೀವನದ ಉಚ್ಛೃಂಖಲ ವೃತ್ತಿಯನ್ನು ತಡೆದು, ತತ್ರಾಪಿ ಸರ್ವತ್ರ ಪ್ರಚಲಿತವಿರುವ ವಿಕಾರಹೇತುವಾದ ಸನ್ನಿವೇಶಗಳು, ಚಲನಚಿತ್ರದ ವಿಲಕ್ಷಣ ದೃಶ್ಯಗಳು, ಇವುಗಳ ಮಧ್ಯೇ ವ್ಯವಹರಿಸುತ್ತಿರುವ ಸ್ತ್ರೀ ಪುರುಷರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವುದೇನು ಸಾಮಾನ್ಯವಾದ ಮಾತಲ್ಲ. ವಿಶ್ವಾಮಿತ್ರ ಪರಾಶರಾದಿಗಳು ದೀರ್ಘ ತಪಸ್ಸನ್ನು ಮಾಡಿ ತೇಜೋವಂತರಾಗಿದ್ದ ತಪಸ್ವಿಗಳೂ ಸಹ ವಂಚಿತರಾಗಿ ಇಂದ್ರಿಯಗಳಿಗೆ ಅಧೀನರಾಗಿ ಅನಂತರ ಮತ್ತೊಮ್ಮೆ ಕಠಿಣ ತಪಸ್ಸಿನಿಂದ ತಮ್ಮನ್ನು ಉದ್ಧಾರ ಮಾಡಿಕೊಂಡಿರತಕ್ಕ ನಿದರ್ಶನಗಳು ಇರುವಾಗ ಸಾಮಾನ್ಯ ಮನುಷ್ಯರಿಗೆ ಈ ಮಾತು ಸುಲಭವಾದುದಲ್ಲ. ಆದರೂ ಯಾರೂ ಹತಾಶರಾಗಬೇಕಿಲ್ಲ. ಪರಿಶುದ್ಧವಾದ ಮನಸ್ಸು, ಉತ್ತಮ ಸನ್ನಿವೇಶ ಕಲ್ಪನೆ, ಪ್ರಖರವಾದ ಸಾಧನೆ ಇವುಗಳಿಂದ ಮನುಷ್ಯನು ಉದ್ಧಾರವಾಗುವುದು ಶಕ್ಯವೆಂಬ ಭರವಸೆಯನ್ನು ಹೊಂದಿ ಸಾಧನೆಯನ್ನು ಮಾಡುವುದವಶ್ಯಕವು.

ಯುವಕ ಯುವತಿಯರಿಗೆ ಬ್ರಹ್ಮಚರ್ಯೆಯ ಮಹತ್ವವನ್ನು ತಿಳುಹಿಸಿ ಕೊಟ್ಟು ಅವರಿಗೆ ಮಾರ್ಗದರ್ಶನ ಮಾಡಿ ಉದ್ಧಾರದ ಮಾರ್ಗವನ್ನು ತೋರಿಸಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ಶ್ರೀಮಾನ್ ಸತ್ಯವ್ರತರ, ಹಿಂದಿಯಲ್ಲಿ ಬರೆದಿದ್ದ ಗ್ರಂಥವನ್ನು ಗೋರೀಬಿದನೂರು ತಾಲ್ಲೋಕಿನ ಶ್ರೀ ಸು. ವೆಂಕಟಾಚಲಯ್ಯನವರು ಕನ್ನಡ ಅನುವಾದ ಮಾಡಿ ಮಹದುಪಕಾರ ಮಾಡಿದ್ದಾರೆ. ಗ್ರಂಥವು ಬಹಳ ಉಪಯುಕ್ತವೂ, ಗ್ರಾಹ್ಯವೂ, ಆದರಣೀಯವೂ ಆಗಿದೆ. ಬ್ರಹ್ಮಚರ್ಯ ರಕ್ಷಣೆ ಮಾಡಿಕೊಳ್ಳಲಿಚ್ಛಿಸುವ ಯುವಕ ಯುವತಿಯರಿಗೆ ಈ ಗ್ರಂಥವು ಅವಶ್ಯಕವಾದ ವಿಷಯಗಳನ್ನೂ, ಸಾಧನಾಕ್ರಮಗಳನ್ನೂ ಒದಗಿಸಿಕೊಟ್ಟು, ಮಾರ್ಗದರ್ಶಕವಾಗಿದೆ. ಶಾಸ್ತ್ರೀಯವಾಗಿ ವೈಜ್ಞಾನಿಕವಾಗಿ ಬ್ರಹ್ಮಚರ್ಯ ನಾಶದಿಂದ ಉಂಟಾಗತಕ್ಕ ಅನರ್ಥಗಳೂ ರಕ್ಷಣೆಯಿಂದ ಉಂಟಾಗತಕ್ಕ ಪ್ರಯೋಜನಗಳೂ ಚೆನ್ನಾಗಿ ವರ್ಣಿತವಾಗಿವೆ. ಒಂದೊಂದು ಅಧ್ಯಾಯದಲ್ಲಿ ಒಂದೊಂದು ಉಪಯುಕ್ತ ವಿಷಯವು ಆರಿಸಲ್ಪಟ್ಟು ಗ್ರಾಹಕರಿಗೆ, ಸಾಧಕರಿಗೆ ಮನದಟ್ಟಾಗುವಂತೆ ಉಲ್ಲೇಖಿತವಾಗಿದೆ. ಅತ್ಯಂತ ಜಟಿಲವಾದ ವಿಷಯಗಳನ್ನು ಸಾಧ್ಯವಾದ ಮಟ್ಟಿಗೂ ಸುಲಭರೀತಿಯಲ್ಲಿ ಸಾಮಾನ್ಯ ಜನತೆಗೂ ಅರ್ಥವಾಗುವಂತೆ ವಿವರಿಸಲು ಸರ್ವಪ್ರಯತ್ನ ನಡೆದಿದೆ. ಈ ಗ್ರಂಥವು ಕನ್ನಡ ವಾಚಕರಿಗೆ ವಿಶೇಷವಾಗಿ ಯುವಕ ಯುವತಿಯರಿಗೆ ಮಹತ್ವಪೂರ್ಣದ ಗ್ರಂಥವಾಗಿ ಅವರ ಬಾಳನ್ನು ಬೆಳಗುವ ಕೈದೀವಿಗೆಯಾಗಿದೆ. ನಮ್ಮ ನಾಡಿನ ಯುವಕ ಯುವತಿಯರೆಲ್ಲರೂ ಈ ಗ್ರಂಥವನ್ನು ಹತ್ತಾರು ಸಾರಿ ಆಳವಾಗಿ ಅಭ್ಯಾಸಮಾಡಿ ವಿಷಯಗಳನ್ನು ಮನನಮಾಡಿ, ದೃಢಮನಸ್ಕರಾಗಿ ಬ್ರಹ್ಮಚರ್ಯ ರಕ್ಷಣೆ ಮಾಡಿಕೊಂಡು ತೇಜೋವಂತರಾಗಿ ಬಾಳಿ ತಮ್ಮ ಉಜ್ವಲ ಜೀವನದಿಂದ ನಮ್ಮೀ ಪುಣ್ಯಭೂಮಿಯು ಪ್ರಕಾಶಿಸುವಂತೆ ಪ್ರಯತ್ನಮಾಡಿದರೆ ಲೇಖಕರ ಶ್ರಮವು ಸಾರ್ಥಕವಾಗುವುದೆಂದು ನಂಬಲಾಗಿದೆ. ಸರ್ವಾದರಣೀಯವಾದ ಈ ಗ್ರಂಥಕ್ಕೆ ಹೆಚ್ಚಿನ ಪ್ರೋತ್ಸಾಹವು ದೊರೆತು ಲೇಖಕರಿಂದ ಹೆಚ್ಚಾದ ಸೇವೆಯು ಲಭಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಹಾರೈಸುತ್ತೇವೆ.

○

ಶ್ರೀ ಶ್ರೀಗಳವರ ಜೀವನದ ಪ್ರಮುಖ ಘಟನೆಗಳು

೧.	೧.೪.೧೯೦೮	ಜನನ : ವೀರಾಪುರ, ಮಾಗಡಿ ತಾಲ್ಲೂಕು.ಬೆಂಗಳೂರು ಜಿಲ್ಲೆ. ಜನ್ಮನಾಮ : ಶಿವಣ್ಣ, ತಂದೆ : ಶ್ರೀ ಹೊನ್ನಪ್ಪ, ತಾಯಿ : ಶ್ರೀಮತಿ ಗಂಗಮ್ಮ.
೨.	೧೯೧೩	ಪ್ರಾಥಮಿಕ ವಿದ್ಯಾಭ್ಯಾಸ : ವೀರಾಪುರ ಮತ್ತು ಪಾಲನಹಳ್ಳಿ.
೩.	೧೯೨೧	ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ : ನಾಗವಲ್ಲಿ (ತರೂರು).
೪.	೧೯೨೨	ಪ್ರೌಢಶಾಲಾ ವಿದ್ಯಾಭ್ಯಾಸ : ತುಮಕೂರು ಸರ್ಕಾರಿ ಪ್ರೌಢಶಾಲೆ.
೫.	೧೯೨೬	ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣತೆ.
೬.	೧೯೨೭	ಶ್ರೀ ಸಿದ್ಧಗಂಗಾ ಕ್ಷೇತ್ರಾಧಿಪತಿ ಶ್ರೀ ಉದ್ದಾನ ಶಿವಯೋಗಿಗಳ ಆಶ್ರಯದಲ್ಲಿ ನಾಲ್ಕುತಿಂಗಳು ವಾಸ್ತವ್ಯ.
೭.	೧೯೨೭	ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣತೆ.
೮.	೧೯೨೭ - ೧೯೩೦	ಬೆಂಗಳೂರು ತೋಟದಪ್ಪ ವಿದ್ಯಾರ್ಥಿನಿಲಯದ ಆಶ್ರಯ.
೯.	೧೯೨೭ - ೩೦	ಬಿ.ಎ.ತರಗತಿ, ಸೆಂಟ್ರಲ್ ಕಾಲೇಜು, ಬೆಂಗಳೂರು.
೧೦.	೧೬.೧.೧೯೩೦	ಶ್ರೀ ಸಿದ್ಧಗಂಗಾಕ್ಷೇತ್ರದ ಉತ್ತರಾಧಿಕಾರಿಗಳಾಗಿದ್ದ ಶ್ರೀ ಮರಳಾರಾಧ್ಯರ ಸಮಾಧಿಕ್ರಿಯೆಯಲ್ಲಿ ಹಾಜರಿ ; ಶ್ರೀ ಉದ್ದಾನ ಸ್ವಾಮಿಗಳ ಕೃಪಾಕಟಾಕ್ಷ.
೧೧.	೩.೩.೧೯೩೦	ಶ್ರೀ ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರಿಗಳಾಗಿ ಆಯ್ಕೆ.
೧೨.	೧೦.೯.೧೯೩೩	ಶ್ರೀ ಶಿವಯೋಗ ಮಂದಿರಕ್ಕೆ ಭೇಟಿ.
೧೩.	೧೯೩೭	ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆಯು ಕಾಲೇಜಾಗಿ ಪರಿವರ್ತನೆಯಾದುದು.
೧೪.	೧೧.೧.೧೯೪೧	ಶಿವಯೋಗಿ ಶ್ರೀ ಉದ್ದಾನ ಸ್ವಾಮಿಗಳವರು ಲಿಂಗೈಕ್ಯರಾದುದು.
೧೫.	೧೧.೧.೧೯೪೧	ಶ್ರೀ ಸಿದ್ಧಗಂಗಾಮಠದ ಪೂರ್ಣಾಧಿಕಾರ ಸ್ವೀಕಾರ : ಅಧ್ಯಕ್ಷರಾಗಿ ಸೇವಾ ಜೀವನದ ಮುಂದುವರಿಕೆ.
೧೬.	೧.೯.೧೯೪೪	ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಪ್ರೌಢಶಾಲೆಯ ಸ್ಥಾಪನೆ.
೧೭.	೨೮.೧.೧೯೪೫	ಶ್ರೀ ಕ್ಷೇತ್ರದಲ್ಲಿ ಪತ್ರಕರ್ತರ ಸಮ್ಮೇಳನ.
೧೮.	೧೮.೬.೧೯೪೬	ಶ್ರೀ ಕ್ಷೇತ್ರದಲ್ಲಿ ಶಿವಾನುಭವ ಸಮ್ಮೇಳನ.
೧೯.	೨೭.೪.೧೯೪೮	ತುಮಕೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಧಿವೇಶನದ ಸ್ವಾಗತಾಧ್ಯಕ್ಷತೆ.
೨೦.	೧೮.೬.೧೯೪೯	ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದಪಾಠಶಾಲೆಯ ರಜತೋತ್ಸವ.
೨೧.	೧೯.೬.೧೯೪೯	ಶ್ರೀ ಕ್ಷೇತ್ರದಲ್ಲಿ ಸರ್ವಧರ್ಮಸಮ್ಮೇಳನ : ಮೈಸೂರು ಅರಮನೆ ಪಂಚಗವಿ ಮಠಾಧ್ಯಕ್ಷರಾದ ಶ್ರೀಗೌರೀಶಂಕರಸ್ವಾಮಿಗಳವರ ಅಧ್ಯಕ್ಷತೆ.
೨೨.	೧೯೫೦	ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆಯವರಿಂದ 'ಮಹಾನಡವಳಿ' ಉತ್ಸವದಲ್ಲಿ, ಗೌರವ ಸ್ವೀಕಾರ.
೨೩.	೧೯೫೧	ಶ್ರೀಗಳವರಿಂದ 'ಪ್ರಭುಲಿಂಗ ಲೀಲೆಯ' ಪ್ರವಚನ.
೨೪.	೧೯೫೫	ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿಸಂಘದ ಸ್ಥಾಪನೆ.
೨೫.	೧೯೫೫	ಶ್ರೀ ಕ್ಷೇತ್ರದಲ್ಲಿ ಸನಿವಾಸ ಪ್ರೌಢಶಾಲಾ ಸ್ಥಾಪನೆ.

೨೬. ೧೯೫೫ ಸಕಲೇಶಪುರದಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆ.

೨೭. ೧೯೫೬ ಶ್ರೀ ಕ್ಷೇತ್ರದಲ್ಲಿ ಸಂಸ್ಕೃತ ಕಾಲೇಜು ಕಟ್ಟಡದ ನಿರ್ಮಾಣ.

೨೮. ೧೯೫೬ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಉಪಾಧ್ಯಾಯ ಶಿಕ್ಷಣ ತರಬೇತಿ ಸಂಸ್ಥೆ ಸ್ಥಾಪನೆ.

೨೯. ೧೯೬೦ ಶ್ರೀ ಮಠದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ನಿರ್ಮಾಣದ ಆರಂಭ.

೩೦. ೧೯೬೦ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲಾ ಸ್ಥಾಪನೆಗಳ ಮೂಲಕ ಶಿಕ್ಷಣ ಪ್ರಸಾರ.

೩೧. ೨೬.೧.೧೯೬೧ ಶ್ರೀ ಮಠದಲ್ಲಿ ಉಪಾಧ್ಯಾಯ ತರಬೇತಿ ಸಂಸ್ಥೆ ಆರಂಭ.

೩೨. ೧೯೬೨ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸ್ಥಾಪನೆ.

೩೩. ೧೯೬೨ ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ.

೩೪. ೧೯೬೩ ಶ್ರೀ ಮಠದ ಜಾತ್ರೆಯಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನ ಆರಂಭ.

೩೫. ೧೯.೬.೧೯೬೩ ಶ್ರೀ ಸಿದ್ಧಗಂಗಾ ಇಂಜನಿಯರಿಂಗ್ ಕಾಲೇಜು ಸ್ಥಾಪನೆ.

೩೬. ೨೮.೧೨.೧೯೬೩ ಶ್ರೀ ಮಠದಲ್ಲಿ ನಡೆದ ೪೪ನೇ ಅಖಿಲ ಭಾರತ ಕನ್ನಡ ಸಾಹಿತ್ಯಸಮ್ಮೇಳನದ ಸ್ವಾಗತಾಧ್ಯಕ್ಷತೆ.

೩೭. ೧೧.೧.೧೯೬೪ ಶ್ರೀ ಕ್ಷೇತ್ರದಲ್ಲಿ ನಡೆದ ಅಖಿಲ ಕರ್ನಾಟಕ ಉಪಾಧ್ಯಾಯರ ಸಮ್ಮೇಳನದ ನೇತೃತ್ವ.

೩೮. ೧೯೬೫ ಶ್ರೀ ಕ್ಷೇತ್ರದಲ್ಲಿ ಕನ್ನಡ ಪಂಡಿತ ತರಗತಿಯ ಆರಂಭ.

೩೯. ೧೪.೧.೧೯೬೫ 'ಸಿದ್ಧಗಂಗಾ' ತ್ರೈಮಾಸಿಕದ ಆರಂಭ.

೪೦. ೬.೧೧.೧೯೬೫ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. ಸ್ವೀಕಾರ.

೪೧. ೧೬.೬.೧೯೬೬ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಸ್ಥಾಪನೆ.

೪೨. ೧೯೬೭ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಸಂಜೆ ಕಾಲೇಜು ಸ್ಥಾಪನೆ.

೪೩. ೧೯೬೮ ಬಸವ ಕಲ್ಯಾಣದಲ್ಲಿ ನಡೆದ ಬಸವೇಶ್ವರ ಅಷ್ಟ ಶತಮಾನೋತ್ಸವದ ಅಧ್ಯಕ್ಷತೆ.

೪೪. ೨.೬.೧೯೬೯ ಬೊಂಬಾಯಿಯಲ್ಲಿ ನಡೆದ ಅಖಿಲಭಾರತ ವೀರಶೈವ ಮಹಾಸಭೆಯ ಮಹಾಧಿವೇಶನದ ಅಧ್ಯಕ್ಷತೆ.

೪೫. ೧೩.೧೨.೧೯೬೯ ಉಡುಪಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್ತಿನ ನೇತೃತ್ವ.

೪೬. ೨೭.೧೨.೧೯೭೦ ಬೆಂಗಳೂರಿನಲ್ಲಿ ನಡೆದ ೪೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ.

೪೭. ೨೬.೫.೧೯೭೨ ಶ್ರೀ ಮಠದ ಪೀಠಾಧಿಕಾರದ ಸ್ವೀಕಾರದ ರಜತಮಹೋತ್ಸವ.

೪೮. ೨೮.೫.೧೯೭೨ ಶ್ರೀ ಸಿದ್ಧಲಿಂಗೇಶ್ವರ ಉಚಿತ ವಿದ್ಯಾರ್ಥಿನಿಲಯ ಮತ್ತು ಸಂಸ್ಕೃತ ಕಾಲೇಜಿನ ಸುವರ್ಣ ಮಹೋತ್ಸವ.

೪೯. ೨೮.೫.೧೯೭೨ ರಜತಮಹೋತ್ಸವದ ಜ್ಞಾಪಕಾರ್ಥ ನಿರ್ಮಾಣಗೊಂಡ ಪ್ರಫುಲ್ಲ ಭವನದ ಉದ್ಘಾಟನೆ.

೫೦. ೨೮.೫.೧೯೭೨ ಶ್ರೀ ಸಿದ್ಧಲಿಂಗೇಶ್ವರ ಮುದ್ರಣಾಲಯ ಮತ್ತು ಬತ್ತದ ಗಿರಣಿಯ ಪ್ರಾರಂಭೋತ್ಸವ.

೫೧. ೧೯೭೪ ಅಖಿಲ ಭಾರತ ವೀರಶೈವ ಮಠಾಧಿಪತಿಗಳ ಸಂಘದ ಅಧ್ಯಕ್ಷತೆ.

೫೨. ೧೯೭೪ ನೆಲಮಂಗಲ ತಾಲ್ಲೂಕು ಕಂಬಾಳು ಮಠದಲ್ಲಿ ಸುಮಾರು ಐದುಸಾವಿರ ಮಂದಿಗೆ ವೀರಶೈವ ದೀಕ್ಷೆ ಸಂಸ್ಕಾರ.

೫೩. ೧೪.೧.೧೯೭೫ 'ಸಿದ್ಧಗಂಗಾ' ತ್ರೈಮಾಸಿಕವಾಗಿದ್ದದ್ದು ಮಾಸಿಕವಾಗಿ ಮಾರ್ಪಾಟಾದದ್ದು.

೫೪. ೧೯೭೯ ಬೆಂಗಳೂರು ಜಿಲ್ಲೆ, ಮಾಗಡಿ ತಾಲ್ಲೂಕು ಬ್ಯಾಲಕೆರೆ ಗ್ರಾಮದಲ್ಲಿ ಗ್ರಾಮಾಂತರ ಬಸವ ಜಯಂತಿಯ ಪ್ರಥಮ ಸಮಾರಂಭ.

೫೫. ೧೦.೫.೧೯೭೮ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗೆ ನಿತ್ಯರುದ್ರಾಭಿಷೇಕ ಪ್ರಾರಂಭ.

೫೬. ೩.೧೦.೧೯೭೮ ಶ್ರೀ ಕ್ಷೇತ್ರದಲ್ಲಿ ನಡೆದ ಅಖಿಲ ಕರ್ನಾಟಕ ದ್ವಿತೀಯ ಸಂಸ್ಕೃತ ಸಮ್ಮೇಳನದ ಸ್ವಾಗತಾಧ್ಯಕ್ಷತೆ.

೫೭. ೨೪.೪.೧೯೮೨ ಶ್ರೀ ಮಠದ ಪೀಠಾಧಿಕಾರದ ಸುವರ್ಣಮಹೋತ್ಸವ

೫೮. ೨೪.೪.೧೯೮೨ ರಾಷ್ಟ್ರಪತಿ ಮಾನ್ಯಶ್ರೀ ನೀಲಂ ಸಂಜೀವರೆಡ್ಡಿಯವರ ಸಮ್ಮುಖದಲ್ಲಿ ಮುಖ್ಯಮಂತ್ರಿ ಶ್ರೀ ಎಸ್. ಗುಂಡೂರಾವ್ ಅವರಿಂದ ಸುವರ್ಣಮಹೋತ್ಸವ ನೆನಪಿಗಾಗಿ ಸಿದ್ಧಪಡಿಸಿದ ಗೌರವ ಗ್ರಂಥ 'ಸಿದ್ಧಗಂಗಾ ಶ್ರೀ' ಬಿಡುಗಡೆ.

೫೯. ೨೪.೪.೧೯೮೨ ಶ್ರೀ ಸಿದ್ಧಲಿಂಗೇಶ್ವರ ಉಚಿತ ವಿದ್ಯಾರ್ಥಿ ನಿಲಯ ಮತ್ತು ಸಂಸ್ಕೃತ ಕಾಲೇಜಿನ ವಜ್ರಮಹೋತ್ಸವ.

೬೦. ೧೯೮೨ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜಿನ ಸ್ಥಾಪನೆ.

೬೧. ೫.೧೦.೧೯೮೨ ಶ್ರೀಮದ್ರಂಭಾಪುರಿ ಜಗದ್ಗುರುಗಳಾದ ಶ್ರೀ ವೀರಗಂಗಾಧರರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ.

೬೨. ೧೯೮೪ ನೆಲಮಂಗಲದಲ್ಲಿ ಶ್ರೀ ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

೬೩. ೧೯೮೪ ಶ್ರೀ ಮಠದಲ್ಲಿ ಗ್ರಾಮಾಂತರ ಬಸವ ಜಯಂತಿ ವಾರ್ಷಿಕ ಸಮಾರೋಪ ಸಮಾರಂಭದ ಪ್ರಾರಂಭ.

೬೪. ೧೯೮೫ ಶ್ರೀಮಠದಲ್ಲಿ ಇಳಕಲ್ಲಿನ ಶ್ರೀ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನದ ಶರಣ ಸಿದ್ಧಾಂತ ವಿದ್ಯಾಪೀಠದ ಎಂಟನೆಯ ಶಿವಾನುಭವ ತರಬೇತಿ ಶಿಬಿರ ನಡೆಸಿದ್ದು.

೬೫. ೧೯೮೫ ಶ್ರೀ ಸಿದ್ಧಗಂಗಾ ಫಾರ್ಮಸಿ ಕಾಲೇಜಿನ ಸಂಸ್ಥಾಪನೆ : ಡಿ ಫಾರ್ಮ ಪ್ರಾರಂಭ.

೬೬. ೧೯೮೬ ಪರಮ ಪೂಜ್ಯ ಶಿವಯೋಗಿ ಉದ್ಧಾನ ಮಹಾಸ್ವಾಮಿಗಳವರ ಪುಣ್ಯಾರಾಧನೆ ನಿಮಿತ್ತ ಸಾಂಸ್ಕೃತಿಕ ಸಮಾರಂಭ ಪ್ರಾರಂಭಿಸಿದ್ದು.

೬೭. ೨೦.೪.೧೯೮೭ ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಗಂಗಾಧರರಾಜಯೋಗೀಂದ್ರ ಸ್ವಾಮಿಗಳ ರಜತಮಹೋತ್ಸವದ ಅಧ್ಯಕ್ಷತೆ.

೬೮. ೧೯೮೭ ಶ್ರೀ ಸಿದ್ಧಗಂಗಾ ಫಾರ್ಮಸಿ ಕಾಲೇಜಿನಲ್ಲಿ ಬಿ. ಫಾರ್ಮ ಪ್ರಾರಂಭ

೬೯. ೩೦.೩.೧೯೮೮ ಶ್ರೀ ಸಿದ್ಧಲಿಂಗಸ್ವಾಮಿಗಳವರನ್ನು ಶ್ರೀ ಮಠದ ಉತ್ತರಾಧಿಕಾರಿಗಳನ್ನಾಗಿ ಮಾಡಿದ್ದು.

೭೦. ೩೦.೫.೧೯೮೮ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿದ್ದು.

೭೧. ೧೯೮೯ ಡಾ.ಎಚ್. ತಿಪ್ಪೇರುದ್ರಸ್ವಾಮಿ ವಿರಚಿತ 'ಕರ್ತಾರನ ಕಮ್ಮಟ' ಗ್ರಂಥದ ಸುಲಭ ಬೆಲೆಯ ಆವೃತ್ತಿಯ ಪ್ರಕಟಣೆ.

೭೨. ೨೯.೧೨.೧೯೯೦ ಬೆಂಗಳೂರಿನಲ್ಲಿ ನಡೆದ ಶ್ರೀ ನಿಡುಮಾಮಿಡಿ ಮಠದ ಶ್ರೀ ಚನ್ನಮಲ್ಲ ವೀರಭದ್ರ ದೇಶಿಕೇಂದ್ರ ಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವದ ಉದ್ಘಾಟನೆ.

೭೩. ೭ .೧೧.೧೯೯೧ ಗದುಗಿನ ತೋಂಟದಾರ್ಯ ಮಠದಲ್ಲಿ ೧೦೦೧ನೇ ಶಿವಾನುಭವ ಕಾರ್ಯಕ್ರಮದ ಅಧ್ಯಕ್ಷತೆ.

೭೪. ೧೬.೨.೯೨ ಶ್ರೀಗಳವರ ವಜ್ರಮಹೋತ್ಸವ ಸ್ಮಾರಕ ಕಟ್ಟಡಗಳ ಶಿಲಾನ್ಯಾಸ ಉಪರಾಷ್ಟ್ರಪತಿ ಡಾ. ಶಂಕರದಯಾಳು ಶರ್ಮ ಅವರಿಂದ.

೭೫. ೨೮.೪.೧೯೯೨ ಆಂಧ್ರ ಪ್ರದೇಶ ಅನಂತಪುರದಲ್ಲಿ ನಡೆದ ಬಸವ ಜಯಂತಿಯ ಅಧ್ಯಕ್ಷತೆ.

೭೬. ೩೦.೫.೧೯೯೨ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ನೂತನ ರಥ ನಿರ್ಮಾಣ.

೭೮. ೧೯೯೨ ತುಮಕೂರಿನಲ್ಲಿ ಸಿದ್ಧಗಂಗಾ ನರ್ಸಿಂಗ್ ಕಾಲೇಜಿನ ಸ್ಥಾಪನೆ.

೭೯. ೨.೮.೧೯೯೩ ಶ್ರೀ ಮಠದಲ್ಲಿ ಹುಣ್ಣಿಮೆ ಉಪನ್ಯಾಸ ಮಾಲೆಯ ಪ್ರಾರಂಭ.

೮೦. ೨೬. ೧೨.೧೯೯೩ ಮೈಸೂರಿನಲ್ಲಿ ಅಖಿಲ ಭಾರತ ವಚನ ಸಾಹಿತ್ಯ ಪರಿಷತ್ತಿನ ಉದ್ಘಾಟನೆ.

೮೧. ೨.೨.೧೯೯೫ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸ್ಥಾಪನೆ.

೮೨. ೧೮.೩.೧೯೯೫ ತಮಿಳುನಾಡು ಧರ್ಮಪುರಿ ಜಿಲ್ಲೆ ಡೆಂಕಣಕೋಟೆ ತಾಲ್ಲೂಕು ಮಳ್ಳಳ್ಳಿ ಗ್ರಾಮದಲ್ಲಿ ಬಸವ ಜಯಂತಿಯ ನೇತೃತ್ವ.

೮೩. ೨೧.೫.೧೯೯೫ ತುಮಕೂರು ತಾಲ್ಲೂಕು ಮಾಕನಹಳ್ಳಿಯಲ್ಲಿ ಜಂಗಮ ಮಠದ ಸ್ಥಾಪನೆ.

೮೪. ೧೭.೧೦.೧೯೯೫ ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಬಸವಣ್ಣ ದೇವರ ಗುಡಿಯ ಜೀರ್ಣೋದ್ಧಾರ.

೮೫. ೧೫.೬.೧೯೯೫ ಸೊಲ್ಲಾಪುರ ತಪೋವನದ ಶ್ರೀ ಕುಮಾರಸ್ವಾಮಿಗಳ, ಯೋಗ ವಿಹಾರ ಮಂದಿರಕ್ಕೆ ಶಂಕುಸ್ಥಾಪನೆ. ಸಿದ್ಧರಾಮೇಶ್ವರ ಗದ್ದುಗೆ ಸಂದರ್ಶನ.

೮೬. ೧೯೯೫ 'ಕರ್ತಾರನ ಕಮ್ಮಟ'ದ ೪ನೆಯ ಮುದ್ರಣ

೮೭. ೬.೩.೧೯೯೬ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾಮಂಡಳಿಯ ೧೯೫ನೇ ವರ್ಷದ ಘಟಿಕೋತ್ಸವದಲ್ಲಿ ಅನುಗ್ರಹ ಭಾಷಣ.

೮೮. ೩೧.೩.೧೯೯೬ ತುಮಕೂರಿನಲ್ಲಿ ನಡೆದ ಆದಿಜಾಂಬವ ಜಗದ್ಗುರು ಶ್ರೀ ರುದ್ರಾಕ್ಷಿದೇಶೀಕೇಂದ್ರಸ್ವಾಮಿಗಳ ವಜ್ರಮಹೋತ್ಸವದಲ್ಲಿ ಆಶೀರ್ವಚನ.

೮೯. ೧೪.೧೨.೧೯೯೬ ಚಿಕ್ಕಮಗಳೂರಿನಲ್ಲಿ ನಡೆದ ೪ನೇ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಳನದ ಉದ್ಘಾಟನೆ.

೯೦. ೩೦.೮.೯೬ ತಿಪಟೂರಿನಲ್ಲಿ ಪ್ರಾರಂಭವಾದ ತುಮಕೂರು ಧಾನ್ಯವರ್ತಕ ಸಂಘದ ಸಹಕಾರ ಬ್ಯಾಂಕಿನ ಶಾಖೆಯ ಉದ್ಘಾಟನೆ.

೯೧. ೧೯೯೬ ಶ್ರೀ ಕ್ಷೇತ್ರದಲ್ಲಿ ಪ್ರಾಚೀನ ಕಲ್ಯಾಣಿಯ (ಪುಷ್ಕರಣಿ) ನವೀಕರಣ.

೯೨. ೧೯೯೬ ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ ಈ ಶತಮಾನದ ಹಿರಿಯರು ಸಂವಾದ ಕಾರ್ಯಕ್ರಮದಲ್ಲಿ ಪ್ರಧಾನ ಉಪಸ್ಥಿತಿ.

೯೩. ೧೯೯೭ ಶ್ರೀಕ್ಷೇತ್ರದ ಪೀಠಾಧಿಕಾರದ ವಜ್ರಮಹೋತ್ಸವ : ಬೃಹತ್ ವಿದ್ಯಾರ್ಥಿನಿಲಯ ಮತ್ತು ಪ್ರಸಾದ ನಿಲಯ ಹಾಗೂ "ದಾಸೋಹ ಸಿರಿ" ಗ್ರಂಥ ಸಮರ್ಪಣೆ.

ಶ್ರೀ ಸಿದ್ಧಗಂಗಾಕ್ಷೇತ್ರದ ಉತ್ತರಾಧಿಕಾರಿಗಳಾದ

ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ವಿದ್ವಾನ್ ಪಿ.ಎಸ್. ಚಂದ್ರಶೇಖರಯ್ಯ

ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರೂ ಶ್ರೀಮನ್ನಿರಂಜನ ನಿರಾಭಾರಿ ಪ್ರಣವಸ್ವರೂಪಿಗಳೂ ಆದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಕರಕಮಲ ಸಂಜಾತರೆನಿಸಿ ಆರಿಸಲ್ಪಟ್ಟಿರುವ ಶ್ರೀಸಿದ್ಧಲಿಂಗ ಮಹಾಸ್ವಾಮಿಗಳ ಪೂರ್ವಾಶ್ರಮದ ಹೆಸರು 'ವಿಶ್ವನಾಥ' ಎಂದು;. ತಾಯಿ ಶ್ರೀಮತಿ ಶಿವರುದ್ರಮ್ಮ ತಂದೆ ಶ್ರೀ ಸದಾಶಿವಯ್ಯ. ಈ ಶರಣದಂಪತಿಗಳ ಕೊನೆಯ ಮಗುವಾಗಿ ಜನ್ಮತಾಳಿದ್ದು ದಿನಾಂಕ ೨೨.೭.೧೯೬೩ರ ಬ್ರಾಹ್ಮೀ ಮುಹೂರ್ತದಲ್ಲಿ. ಶಿವಶರಣರ ಆಡುಂಬೊಲದಂತಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೋಕು ಕಂಚುಗಲ್ ಬಂಡೇಮಠ ಶ್ರೀಗಳ ಜನ್ಮಸ್ಥಳ. ಬಂಡೇಮಠ ಸಹಜವಾಗಿಯೇ ಸುತ್ತಲೂ ಧಾರ್ಮಿಕ ಪರಿಸರವುಳ್ಳ ಪುಟ್ಟಗ್ರಾಮ. ಇದರ ಸುತ್ತಮುತ್ತ ಸುಮಾರು ೮-೧೦ ಕಿ.ಮೀ. ಫಾಸಲೆಯಲ್ಲಿ ಅನೇಕ ಶರಣರ ಗದ್ದುಗೆಗಳು, ಪುಣ್ಯಕ್ಷೇತ್ರಗಳು, ಮಠಮಾನ್ಯಗಳಿವೆ. ಆ ಗ್ರಾಮದಲ್ಲಿಯೇ ಬಂಡೇಮಠದ ಗುರುಪರಂಪರೆಯ ಅನೇಕ ಗದ್ದುಗೆಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಕಂಚುಗಲ್ಲಪ್ಪನವರ ಗದ್ದುಗೆ ಇದೆ. ಈ ಶರಣರಿಂದಲೇ ಕಂಚುಗಲ್ ಬಂಡೇಮಠವೆಂದು ಹೆಸರು ಬರಲು ಕಾರಣವಾಯಿತೆಂದು ಹೇಳುತ್ತಾರೆ. ಸನಿಹದಲ್ಲಿಯೇ ಏಕ ಶಿಲಾ ರೂಪ ಬೃಹತ್ ಬಂಡೆಯ ಮೇಲೆ ಶ್ರೀ ಮಹಾಲಿಂಗೇಶ್ವರ ದೇವಾಲಯವಿದೆ. ಚೋಳರ ವಾಸ್ತುಶಿಲ್ಪ ರಚನೆಯ ಕಲ್ಲಿನ ದೇವಾಲಯ ತನ್ನ ಇತಿಹಾಸವನ್ನು ಸಾರುತ್ತಿದೆ.

ಈ ಧಾರ್ಮಿಕ ಪ್ರಭಾವಲಯದ ಪುಣ್ಯಪರಿಸರದ ಬಂಡೆಯ ಮೇಲೆ ನಿರ್ಮಿಸಿದ ಬಂಡೇಮಠದ ಸದ್ಯದ ಮಠಾಧಿಪತಿಗಳು ಶ್ರೀ ಶಿವರುದ್ರಸ್ವಾಮಿಗಳವರು. ಮಠಾಧೀಶರಿಗೆ ಹೇಳಿ ಮಾಡಿಸಿದ ಮುಗ್ಧಮನೋಭಾವದ ಪುಣ್ಯ ಮೂರ್ತಿಗಳು. ಶ್ರೀ ಸಿದ್ಧಗಂಗಾ ಮಠದ ಗುರುಪರಂಪರೆಯ ನಿಕಟ ಸಂಪರ್ಕ ಹೊಂದಿ ಅಪ್ಪಟ ಸಂನ್ಯಾಸಿಯಾಗಿ ರೂಪುಗೊಂಡ ಶಿವಯೋಗಿಗಳು. ಶ್ರೀ ಉದ್ದಾನ ಶಿವಯೋಗಿಗಳ ಸೇವಾಭಾಗ್ಯದಿಂದ ಪುನೀತರಾಗಿ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಅಂತರಂಗದ ಒಡನಾಡಿಯಾಗಿ ಬೆಳೆದು ಬಂದ ಸಂನ್ಯಾಸಿಗಳು. ಅವರ ಸರಳ ಸಜ್ಜನಿಕೆ, ಸಾಧುತ್ವಗಳು ಎಂಥವರನ್ನು ಮುಗ್ಧರನ್ನಾಗಿಸುತ್ತವೆ. ಕಪಟ, ಕುಟಿಲ, ಕುಯಕ್ತಿಗಳನ್ನರಿಯದ ಶುದ್ಧಸಾತ್ವಿಕ ಮೂರ್ತಿಯಾದ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರ ಪೂರ್ವಾಶ್ರಮದ ಸೋದರಿಯೇ ಶ್ರೀಮತಿ ಶಿವರುದ್ರಮ್ಮನವರು. ಶ್ರೀಮತಿ ಶಿವರುದ್ರಮ್ಮನವರು ಸಹಜ ಸಾತ್ವಿಕ ಪರಿಸರದಲ್ಲಿ ಬೆಳೆದು ಬಂದವರು. ಗುರುಲಿಂಗಜಂಗಮ ಸೇವಾಕೈಂಕರ್ಯದಲ್ಲಿ ನಿರತವಾಗಿ ಸಾತ್ವಿಕ ಸಾಧ್ವೀ ಶಿರೋರತ್ನವೆಂದು ಕೀರ್ತಿಪಾತ್ರರಾಗಿರುವ ಶ್ರೀಮತಿಯವರು ಪತಿಗೆ ಹಿತರಾಗಿ ಗುರು ಲಿಂಗ ಜಂಗಮ ಪ್ರೇಮಿಗಳಾಗಿ ತುಂಬು ಬಾಳನ್ನು ಬಾಳಿದವರು. ಸದ್‌ಗೃಹಿಣಿಯಾಗಿ, ತಾಯ್ತನದ ಆದರ್ಶಯೆನಿಸಿ ಗೃಹಕೃತ್ಯದ ಜೊತೆಗೆ ಮಠದ ಧಾರ್ಮಿಕ ಕ್ರಿಯೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಸೌಜನ್ಯ ಸ್ವಭಾವಶೀಲರು. ಪತಿ ಸದಾಶಿವಯ್ಯನವರೊಡನೆ ನಿಷ್ಕಾಪಟ್ಯ ದಾಂಪತ್ಯ ಜೀವನದಲ್ಲಿ ಸುಖಕಂಡವರು.

ಶ್ರೀ ಸದಾಶಿವಯ್ಯನವರು ಋಜುಸ್ವಭಾವದ ಸತ್ಯವಾದಿಗಳು, ಆದರ್ಶ ಉಪಾಧ್ಯಾಯರು, ನ್ಯಾಯನಿಷ್ಠುರಿಗಳು, ಗುರುದೈವ ಸೇವಾಕಾಂಕ್ಷಿಗಳು, ದಾಸೋಹಂಭಾವಿಗಳು. ೬ ಜನ ಗಂಡುಮಕ್ಕಳು ಮತ್ತು ೨ ಹೆಣ್ಣು ಮಕ್ಕಳನ್ನು ಸಾಕಿ ಸಲಹಿದ ಕ್ಷಮಯಾಧರಿತ್ರಿ ಎನಿಸಿದ್ದ ಶ್ರೀಮತಿ ಶಿವರುದ್ರಮ್ಮನವರು ಪತಿಯು ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದು ಮಲಗಿದಾಗ ಮಾಡಿದ ಸೇವೆಯಲ್ಲಿನ ಸಹನಾ ಸ್ವಭಾವ ಪರಮ ಪತಿವ್ರತಾಧರ್ಮ ದ್ಯೋತಕವೆನಿಸಿದುದಾಗಿದೆ. ಈ ಕಾರಣ ವಾಗೇ ಲಿಂಗೈಕ್ಯರಾದ ಪತಿಯ ವಿಯೋಗ ಶ್ರೀಮತಿ ಶಿವರುದ್ರಮ್ಮನವರಿಗೆ ಸಹಿಸಲಾಗದ ದುಃಖಸಂಕಟ ತಂದಿತು.

ತಾಯಿ ತಂದೆಗಳ ಗುಣಸ್ವಭಾವಗಳನ್ನು ಮೈಗೂಡಿಸಿಕೊಂಡು ಬೆಳೆದ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಪ್ರಾಥಮಿಕ ವಿದ್ಯಾಭ್ಯಾಸ ಬಂಡೇಮಠದಲ್ಲಿಯೇ ನಡೆಯಿತು. ತಂದೆಯೊಡನೆ ಕೂಡಿ ನಲಿಯುವ ಸುಯೋಗ ದೊರೆಯದಿದ್ದರೂ ಅಣ್ಣ

ಅಕ್ಕಂದಿರ ಪ್ರೇಮಪೂರ್ಣ ಒಲವು ನಲಿವುಗಳಿಗೇನೂ ಕೊರತೆಯಿರಲಿಲ್ಲ. ಶ್ರೀಮತಿ ಶಿವರುದ್ರಮ್ಮನವರು ತಾಯಿ ತಂದೆ ಒಬ್ಬರೇ ಆಗಿ ಕಿರಿಯ ಮಗನ ಪಾಲನೆ ಯಾವ ಕುಂದೂ ಬರದಂತೆ ನೋಡಿಕೊಂಡರು. ಚುರುಕು ಸ್ವಭಾವ, ಸದಾ ಚಟುವಟಿಕೆಯಂದಿರುವುದು. ಆಲಸ್ಯವು ಇವರ ಬಳಿಯೇ ಸುಳಿಯುತ್ತಿರಲಿಲ್ಲ. ಕ್ರಿಯಾಶೀಲತೆ ಇವರ ಹುಟ್ಟುಗುಣವಾಗಿತ್ತು. ಬಾಲ್ಯ ಸಹಜವಾದ ಅಟೋಟಗಳಲ್ಲಿ ತುಂಬಾ ಆಸಕ್ತಿ. ಚಟುವಟಿಕೆಯಿಂದಿರುವ ಮಕ್ಕಳು ಆಟಪಾಟಗಳಲ್ಲಿ ಓದು ಬರಹದಲ್ಲಿ ಕಲಿಕೆ ಅಭ್ಯಾಸಗಳಲ್ಲಿ ಮುಂದಿರುವುದು ಅನುಭವ ವೇದ್ಯವಾದುದು. ಅಂತೆಯೇ ಈ ಬಾಲಕ ಸದಾ ಲವಲವಿಕೆಯಿಂದ, ಹಸನ್ಮುಖಿಯಾಗಿ ಮತ್ತು ಗುರುಹಿರಿಯರನ್ನು ಕಂಡರೆ ಭಕ್ತಿ ಗೌರವ ತೋರುತ್ತಾ ಮಠದ ಮುಂದೆ ಓಡಾಡುವುದನ್ನು ಕಂಡ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರು ಚಕಿತರಾಗುತ್ತಿದ್ದರು. ಈ ಬಾಲಕನ ಅಸಾಧಾರಣ ವರ್ಚಸ್ಸನ್ನು ಸೂಕ್ಷ್ಮವಾಗಿ ಗ್ರಹಿಸಿದರು. ಮುಂದೆ ಓದುವ ವ್ಯವಸ್ಥೆಗೆ ಅಣಿಮಾಡಿದರು. ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆ ಕನಕಪುರದ ದೇಗುಲಮಠಕ್ಕೆ ಕಳುಹಿಸಿದರು. ಶ್ರೀಸಿದ್ಧಗಂಗಾಮಠದ ಶ್ರೀ ಉದ್ದಾನಶಿವಯೋಗಿಗಳ ಪೂರ್ಣಾನುಗ್ರಹ ಕೃಪೆಗೆ ಪಾತ್ರರಾದ ಮತ್ತು ಶ್ರೀ ಶಿವಕುಮಾರಸ್ವಾಮಿಗಳವರ ಒಡನಾಡಿಗಳೂ, ಆತ್ಮೀಯ ಸ್ನೇಹಭಾವವುಳ್ಳವರೂ ಸದಾ ಪ್ರಸನ್ನಮುಖಿಮುದ್ರೆಯ ಸಾತ್ವಿಕಮೂರ್ತಿಗಳೂ ಆಗಿದ್ದ ಕನಕಪುರದ ಶ್ರೀ ಮಹಾಲಿಂಗ ಸ್ವಾಮಿಗಳವರ ಸನ್ನಿಧಿಯಲ್ಲಿ ಆಶ್ರಯ ಪಡೆದು ತಮ್ಮ ಭಕ್ತಿ, ವಿನಯ ಸೌಹಾರ್ದತೆ ಗಳಿಂದ ಅಲ್ಲಿ ಎಲ್ಲರ ಪ್ರೀತಿವಿಶ್ವಾಸಗಳಿಗೆ ಪಾತ್ರರಾದರು. ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿದರು. ಶ್ರೀ ಮಹಾಲಿಂಗ ಸ್ವಾಮಿಗಳವರ ಸಾನ್ನಿಧ್ಯದಿಂದ ಗುರು ಲಿಂಗ ಜಂಗಮರಲ್ಲಿ ಭಕ್ತಿಭಾವಗಳು ಬೆಳೆಯಲು ಕಾರಣವಾಯಿತು. ಅವರ ನಿರಂತರ ಬಿಡುವಿಲ್ಲದ ಭಕ್ತರ ಮನೆಗಳ ಪೂಜೆಗಳ ಮಧ್ಯೆಯೂ ಮಾಡುವ ಕೆಲಸಕಾರ್ಯಗಳನ್ನು ಕಂಡು ಸ್ಫೂರ್ತಿಗೊಂಡರು. ಶರಣರ, ಸಂತರ ಜೀವನ ಚರಿತ್ರೆಗಳ ಅಭ್ಯಾಸ ಅನೇಕ ಮಠಾಧಿಪತಿಗಳು ಬಂದು ಹೋಗುವ ಸನ್ನಿವೇಶಗಳು ಕನಕಪುರದಲ್ಲಿ ಒಂದು ರೀತಿಯ ಹೊಸ ಅನುಭವವನ್ನೆ, ಅನುಗ್ರಹರೂಪವಾಗಿ ಪಡೆಯುವ ಸದವಕಾಶ ದೊರಕಿತ್ತು.

ಶ್ರೀ ಶ್ರೀ ಶಿವರುದ್ರಸ್ವಾಮಿಗಳು ಶ್ರೀ ಮಹಾಲಿಂಗ ಸ್ವಾಮಿಗಳವರ ಸೂಚನೆಯಂತೆ ಈ ಸಂಸ್ಕಾರಿ ವಟುವನ್ನು ಶ್ರೀ ಸಿದ್ಧಗಂಗಾ ಗುರುಕುಲಕ್ಕೆ ತಂದು ಮಹಾ ಮಹಿಮರ ಪದತಲಕ್ಕೊಪ್ಪಿಸಿ ಆಶ್ರಯ ಕೋರಿದರು. ಪೂಜ್ಯ ಶ್ರೀ ಶ್ರೀ ಶಿವಕುಮಾರ ಗುರುಗಳ ಕರುಣೆಯಿಂದ ಶ್ರೀ ಹಳೇಮಠದಲ್ಲಿ ವಾಸ್ತವ್ಯ ದೊರಕಿ, ಅಭ್ಯಾಸ ಆರಂಭಮಾಡಿದರು. ಶ್ರೀಗಳ ಪೂಜಾ ಸೇವಾ ಕಾರ್ಯದಲ್ಲಿ ನಿಯುಕ್ತರಾದರು. ಶ್ರದ್ಧಾಭಕ್ತಿಗಳಿಂದ ಆಲಸ್ಯ ನಿರುತ್ಸಾಹಗಳು ತಲೆದೋರದೆ ಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ನಡೆನುಡಿ, ಸಚ್ಚಾರಿತ್ರ್ಯಗಳಿಂದ ತಮ್ಮನ್ನು ಇತರರಿಗಿಂತಲೂ ಭಿನ್ನವಾಗಿ ಗುರುತಿಸಿಕೊಂಡರು. ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾ ಶಿವಯೋಗಿಗಳ ಪೂರ್ಣಕೃಪಾ ಕಟಾಕ್ಷಕ್ಕೆ ಒಳಗಾದರು.

ಸಂಕಷ್ಟ ಸಮಯದಲ್ಲಿ ದೊರೆತ ಅಮೃತ ಫಲದಂತೆ, ಶ್ರೀ ಸಿದ್ಧಗಂಗಾ ಮಠಕ್ಕೆ ವಟುವಾಗಲೊಪ್ಪಿದ್ದು, ಶ್ರೀ ಮಠದ ಸೌಭಾಗ್ಯವೆಂದೇ ಭಾವಿಸಬೇಕು. ಜೊತೆಗೆ ಶ್ರೀ ಸಿದ್ಧಗಂಗಾ ಮಠದ ಗುರುಪರಂಪರೆಯ ಸುತ್ತ ಸುಪ್ತ ಚೈತನ್ಯದ ಪ್ರಭಾ ಪುಂಜ ಪ್ರೇರಿತವೆಂದು ಭಾವಿಸಿದರೂ ಸರಿಯೇ ೧೯೮೮ ಜನವರಿ ೨೯ರ ಬ್ರಾಹ್ಮೀ ಮುಹೂರ್ತದಲ್ಲಿ ಷಟ್‌ಸ್ಥಲಬ್ರಹ್ಮೋಪದೇಶ ಪೂರ್ವಕ ವಿರಕ್ತಾಶ್ರಮ(ಚರಜಂಗಮ ದೀಕ್ಷೆ) ಸ್ವೀಕಾರ ಸಮಾರಂಭ ನಡೆದು ಹೋಯಿತು. "ಪ್ರಕೃತಿಸ್ತ್ವಾಂನಿಯೋಕ್ಷ್ಯತಿ" (ಗೀತೆ.೧೮-೫೯) ಪ್ರಕೃತಿಯೇ ಮನುಷ್ಯನನ್ನು ಒತ್ತಾಯದಿಂದ ತನ್ನಿಷ್ಟದಂತೆ ಕೆಲಸ ಮಾಡಿಸುತ್ತದೆ. ಎಂದು ನೀತಿ ಹೇಳಿದಂತೆ ದೈವವೂ ತನ್ನಿಷ್ಟದಂತೆ ಮನುಷ್ಯನನ್ನು ನಾನಾ ಕೆಲಸದಲ್ಲಿ ಪ್ರೇರೇಪಿಸುತ್ತದೆ. ಬಲಾತ್ಕಾರವಾಗಿ ಮತ್ತೊಂದೆಡೆ ಸೆಳೆಯುತ್ತದೆ. ಸಿದ್ಧಗಂಗಾ ಮಠದ ಉತ್ತರಾಧಿಕಾರಿಯಾಗುತ್ತಾರೆಂದು ಯಾರು ಕಂಡಿದ್ದರು. ಅಂದುಕೊಂಡಿದ್ದು ಒಂದು ಆದದ್ದು ಮತ್ತೊಂದು. ೧೯೮೮ ಮಾರ್ಚಿ ೩೧ ರಂದು ಬ್ರಾಹ್ಮೀ ಮುಹೂರ್ತದಲ್ಲಿ ಸಂಸ್ಕಾರ ಪೂರ್ಣ ನಿರಂಜನ ನಿರಾಭಾರಿ ಪಟ್ಟಾಧಿಕಾರಮಹೋತ್ಸವ ವಿಧಿವತ್ತಾಗಿ ಜರುಗಿತು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಸಿದ್ಧಗಂಗಾ ಮಠದ ಸಿದ್ಧಪುರುಷರ ಪರಂಪರೆಯಲ್ಲಿ ಸಮ್ಮಿಳಿತರಾದರು. ಅದೊಂದು ಅವಿಸ್ಮರಣೀಯ ಅಪೂರ್ವ ಸಮಾರಂಭ, ಬೆಕ್ಕಸಬೆರಗಾಗುವಂತೆ ನಡೆದು ತನ್ನನ್ನು ದಾಖಲಿಸಿಕೊಂಡಿತು. ಶ್ರೀಮಠದ ಭಕ್ತವರ್ಗ ಹರ್ಷಸಮುದ್ರದಲ್ಲಿ ಮುಳುಗಿತು.

"ಎಲ್ಲರ ಕಷ್ಟ ತನಗಿರಲಿ" "ಸುಖದ ಬಾಳು ನಿಮಗಿರಲಿ" ಎಂದು ಹಾರೈಸಿ ಜಗತ್ತಿನ ಅಳಲು ದುಃಖದುಮ್ಮಾನದ ಭಾರವನ್ನು ಹೊತ್ತು ಮಹಾಚೇತನದ ದಿವ್ಯ ದೀಧಿತಿಯ ಮುಂದೆ ನಾನೆಷ್ಟರವನು? ಮೇರು ಸದೃಶ ವ್ಯಕ್ತಿತ್ವದ ಜ್ಯೋತಿಯ ಪ್ರಭಾವಲಯದಲ್ಲಿ ಬಾಳು ಬೆಳಗಿಸಲು ಬಂದ ನನಗೆ ದೊರೆತ ಅನಿರೀಕ್ಷಿತ ಆಸ್ಫೋಟ ಎಂದು ಭಾವಿಸಿದಂತೆ ತೋರಿತು.

ಶ್ರೀ ಶ್ರೀಗಳವರ ಚಟುವಟಿಕೆಗಳ ದೃಶ್ಯಾವಳಿ



ರಾಗಿಯ ಒಕ್ಕಣೆಯ ಪರಿಶೀಲನೆಯಲ್ಲಿ



ಒಕ್ಕಿದ ರಾಗಿ ಬತ್ತ ರಾಶಿಗಳ ಪರೀಕ್ಷೆ



ಕೆಸರ ಗದ್ದೆಯಲ್ಲಿ
ಕಾಯಕಯೋಗಿ



ದಾಸೋಹಕ್ಕೆ ಹಾಲು
ಕರೆವ ಎಮ್ಮೆಗಳ ಹಿಂದು



ಗೋ ಸಂಪತ್ತಿನೊಂದಿಗೆ



ಪ್ರಾರ್ಥನಾ ಸಭೆ




ವಿದ್ಯಾರ್ಥಿಗಳ ಸಾಮೂಹಿಕ ಪ್ರಾರ್ಥನೆ


ಸುವರ್ಣ ಮಹೋತ್ಸವ



ಅತಿಥಿಗಳಿಗೆ ಪೂರ್ಣಕುಂಭ ಸ್ವಾಗತ



ಪೂಜ್ಯ ಶ್ರೀಗಳ ಆಶೀರ್ವಚನ. ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳು, ಶ್ರೀ ವೀರೇಂದ್ರ ಪಾಟೀಲ್, ರಾಜ್ಯಪಾಲ ಶ್ರೀ ಗೋವಿಂದ ನಾರಾಯಣ್, ರಾಷ್ಟ್ರಾಧ್ಯಕ್ಷ ನೀಲಂ ಸಂಜೀವರೆಡ್ಡಿ, ಮುಖ್ಯಮಂತ್ರಿ ಆರ್. ಗುಂಡೂರಾವ್, ಅಬ್ದುಲ್ ಸಮದ್ ಹಾಗೂ ಚಿತ್ರದುರ್ಗದ ಜಗದ್ಗುರುಗಳವರು ಇದ್ದಾರೆ.



ಧರ್ಮ ಸಮ್ಮೇಳನ : ಕೊಟ್ಟೂರೇಶ್ವರ ಮಠದ ಜಗದ್ಗುರುಗಳು, ಸಿರಿಗೆರೆ ಜಗದ್ಗುರುಗಳು, ಹುಬ್ಬಳ್ಳಿ ಜಗದ್ಗುರುಗಳು, ಚಿತ್ರದುರ್ಗದ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಪೇಜಾವರ ಶ್ರೀಗಳು, ಸುತ್ತೂರು ಜಗದ್ಗುರುಗಳು, ಆದಿಚುಂಚನಗಿರಿ ಜಗದ್ಗುರುಗಳು ಇದ್ದಾರೆ.



ಬಸವ ಜಯಂತಿ ಉತ್ಸವ : ಶ್ರೀ ಮಲ್ಲಿಕಾರ್ಜುನ ಖರ್ಗೆ, ಹುಬ್ಬಳ್ಳಿ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಶ್ರೀ ಜೆ.ಬಿ. ಮಲ್ಲಾರಾಧ್ಯ, ಶ್ರೀ ವೀರಪ್ಪ ಮೊಯ್ಲಿ.



ಮಹಿಳಾ ಗೋಷ್ಠಿಯಲ್ಲಿ ಶ್ರೀ ಶ್ರೀಗಳವರ ಆಶೀರ್ವಚನ. ಶ್ರೀಮತಿ ಬಸವರಾಜೇಶ್ವರಿ, ಶ್ರೀಮತಿ ನಾಗಮ್ಮ ಕೇಶವಮೂರ್ತಿ ಮುಂತಾದವರಿದ್ದಾರೆ



ಕಿಕ್ಕಿರಿದ ಸಭಿಕರು



ಶ್ರೀ ಶ್ರೀಗಳೊಡನೆ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಸಮಾಲೋಚನೆಯಲ್ಲಿ



ಶ್ರೀ ಕೆ. ತಿಪ್ಪೇರುದ್ರಯ್ಯನವರಿಂದ ಭಕ್ತಿ ಸಮರ್ಪಣೆ. ಕೆ ಮಲ್ಲಣ್ಣ, ಬಿ.ಟಿ. ಸೋಮಣ್ಣ ಮುಂತಾದವರಿದ್ದಾರೆ.

ದಾಸೋಹ



ಶ್ರೀ ಶ್ರೀಗಳವರೇ ಸ್ವತಃ ಪ್ರಸಾದ ಬಡಿಸುತ್ತಿದ್ದಾರೆ.



ದಾಸೋಹದ ಇನ್ನೊಂದು ದೃಶ್ಯ

ಶ್ರೀ ಮಠದ ಉತ್ತರಾಧಿಕಾರಿಗಳಾದ ಪರಮ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪಟ್ಟಾಧಿಕಾರದ ದೃಶ್ಯಾವಳಿ



ಶ್ರೀಮಠದ ಉತ್ತರಾಧಿಕಾರಕ್ಕೆ ಮುನ್ನ ಶ್ರೀ [illegible]



ವಿರಕ್ತಾಶ್ರಮ ಪೂರ್ವ ಶ್ರೀ ಸಿದ್ಧನಾಥರಿಂದ ಗುರುವಂದನ



ಶ್ರೀ ನಿರಂಜನ ಜಂಗಮರಾದ ಶ್ರೀ ವಿಶ್ವನಾಥ ಅವರು - ಶ್ರೀ ಸಿದ್ಧಲಿಂಗಸ್ವಾಮಿಗಳಾದ ಸಂದರ್ಭ



ವಿರಕ್ತಾಶ್ರಮ ದೀಕ್ಷಾಧಾರಿ



ಕಿರಿಯ ಶ್ರೀಗಳಿಗೆ ದಂಡ ಕಮಂಡಲ ಪ್ರದಾನ



ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀಗಳವರ ಸಾನಿಧ್ಯದಲ್ಲಿ



ಶ್ರೀ ಸಿದ್ಧಲಿಂಗ ಸ್ವಾಮಿಗಳಿಂದ ದೀಕ್ಷಾಬದ್ಧ ಪ್ರತಿಜ್ಞಾವಿಧಿ



ಶ್ರೀ ಸಿದ್ಧಲಿಂಗ ಸ್ವಾಮಿಗಳು ವಿರಕ್ತಾಶ್ರಮ ಸ್ವೀಕಾರ ಮಾಡಿದ ಸಭಾ ದರ



ದಂಡ ಕಮಂಡಲ ಹಾಗೂ ಸಂಪುಟಧಾರಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಾಕನಹಳ್ಳಿ ಜಂಗಮಮಠದ ಶ್ರೀಗಳು ಮತ್ತು
ವಿಜಯಪುರ ಮಠದ ಶ್ರೀಗಳವರೊಡನೆ



ಶ್ರೀ ಸಿದ್ಧಲಿಂಗಸ್ವಾಮಿಗಳ ವಿರಕ್ತಾಶ್ರಮ ಸ್ವೀಕಾರ ಸಂದರ್ಭದ ಸಭೆ



ಶ್ರೀ ಮಠದ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳು



ಶ್ರೀ ಸಿದ್ಧಲಿಂಗಸ್ವಾಮಿಗಳು ಹಳೆಯ ಮಠದಿಂದ ಇಳಿದು ಬರುತ್ತಿರುವ ದೃಶ್ಯ



ಕಾರ್ಯಾಲಯದಲ್ಲಿ



ಉಪನ್ಯಾಸನೀಡುತ್ತಿರುವುದು



ದೂರದೃಷ್ಟಿ





ಪರಗುರು ಚರಮೂರ್ತಿಗಳ ನಡುವೆ



ಪ್ರಸನ್ನ ಮುಖಮುದ್ರೆಯಲ್ಲಿ





ಯೋಚನಾ ಮುದ್ರೆ



ಶ್ರೀ ಮಠದ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳು

ಅಯ್ಯಾ ಎನ್ನ ವಾಮ ಕ್ಷೇಮ ನಿಮ್ಮದಯ್ಯ
ಅಯ್ಯಾ ಎನ್ನ ಹಾನಿ ವೃದ್ಧಿ ನಿಮ್ಮದಯ್ಯ
ಅಯ್ಯಾ ಎನ್ನ ಮಾನಾಪಮಾನ ನಿಮ್ಮದಯ್ಯ
ಬಳ್ಳಿಗೆ ಕಾಯಿ ಧಿಮ್ಮಿತ್ತೇ ಕೂಡಲ ಸಂಗಮದೇವಾ

ಎಂಬ ಭಾವನೆ ಬಲಿದು ಧೈರ್ಯ ಮೂಡಿದಂತೆ ಭಾಸವಾಯಿತು. 'ನಿಮ್ಮ ಮಂಡೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು' ಎಂಬ ಅಕ್ಕನ ವಾಣಿ ತಂತಾನೆ ಹೊರಹೊಮ್ಮಿತು. ಶ್ರೀ ಸಿದ್ಧಲಿಂಗಸ್ವಾಮಿಗಳವರು ಗುರು ಮುಟ್ಟಿದ ಗುಡ್ಡನಾಗಿ, ಗುರು ತೋರಿದ ಅರಿವಿನ ಹಾದಿಯಲ್ಲಿ ಮುನ್ನಡೆದಿದ್ದಾರೆ.

"ಅಯ್ಯಾ ಸಜ್ಜನ ಸದ್‌ಭಾವದ ಸಂಗದಿಂದ
ಮಹಾನುಭಾವರ ಕಾಣಬಹುದಯ್ಯಾ
ಮಹಾನುಭಾವರ ಸಂಗದಿಂದ
ಗುರುಲಿಂಗ ಜಂಗಮ ಪ್ರಸಾದವನರಿಯಬಹುದು
ಅದು ಕಾರಣ ಸದ್‌ಭಕ್ತರ ಸಂಗವನ್ನೇ ಕರುಣಿಸು"

ಎಂಬ ಅಣ್ಣ ಬಸವಣ್ಣನವರ ವಚನದಂತೆ ಮಹಾನುಭಾವ ದರ್ಶನ, ಸ್ಪರ್ಶ ಸೇವಾ ಭಾಗ್ಯದಿಂದ ಪುನೀತರಾಗಿ ತಪೋನುಷ್ಠಾನ ಸಾಧನೆಯಲ್ಲಿ ನಿರತರಾಗಿದ್ದಾರೆ.

ಬ್ರಹ್ಮಚರ್ಯನಿಷ್ಠೆ, ಲಿಂಗ ಪೂಜಾ ದುರಂಧರತೆ, ವಚನ ಶಾಸ್ತ್ರಾಧ್ಯಯನ ನಿರಂತರ ಆಸಕ್ತಿ, ಸೇವಾ ಜೀವನವನ್ನು ಮೈಗೂಡಿಸಿಕೊಂಡಿರುವ ಶ್ರೀ ಸಿದ್ಧಲಿಂಗಸ್ವಾಮಿಗಳವರು ತಮ್ಮ ಗುರುಗಳ ವರ್ತನೆಯೇ ಉಪದೇಶವೆಂದು ಭಾವಿಸಿ ಅನುಸರಣ ಶೀಲರಾಗಿದ್ದಾರೆ.

ಲಘುತ್ವಮಾರೋಗ್ಯಮಲೋಲುಪತ್ವಂ,
ವರ್ಣಪ್ರಸಾದಂ ಸ್ವರಸೌಷ್ಠವಂಚ,
ಗಂಧಃ ಶುಭೋಮೂತ್ರ, ಪುರೀಷಮಲ್ಪಂ
ಯೋಗ ಪ್ರವೃತ್ತಿಂ ಪ್ರಥಮಾಂ ವದಂತಿ ॥

ಸ್ಥೂಲ ಶರೀರವಿಲ್ಲದಿರುವುದು, ಶಾರೀರಿಕ ಮತ್ತು ಮಾನಸಿಕ ಆರೋಗ್ಯ, ವಿಷಯಾಸಕ್ತಿಯಿಲ್ಲದಿರುವಿಕೆ, ಉಜ್ವಲ ಶರೀರ ಕಾಂತಿ, ಧ್ವನಿಯ ಮಾಧುರ್ಯ, ಶರೀರವು ಮಾಧುರ್ಯ ಗಂಧ ವಿಶಿಷ್ಟವಾಗಿರುವುದು, ಮೂತ್ರ ಪುರೀಷಗಳ ಅಲ್ಪತೆ ಇವುಗಳು ಯೋಗಸಿದ್ಧಿಯ ಪೂರ್ವಭಾವಿಯಾದ ಚಿಹ್ನೆಗಳು ಎಂದು ಶ್ವೇತಾಶ್ವತರೋಪನಿಷಿತ್ ಮಂತ್ರವು ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರನ್ನು ನೋಡಿ ರಚಿಸಿರಬೇಕೆನ್ನುವಂತಿದೆ. ಮಂತ್ರದ್ರಷ್ಟಾರರು ಸಹಸ್ರಾರು ವರ್ಷಗಳ ಹಿಂದೆ ಯೋಗಪುರುಷರಲ್ಲಿ ಕಂಡ ಸತ್ಯವನ್ನು ನಾವಿಂದು ಪ್ರತ್ಯಕ್ಷವಾಗಿ ಪೂಜ್ಯರಲ್ಲಿ ಕಾಣುತ್ತಿದ್ದೇವೆ. ಪೂಜ್ಯರಿಗೆ ಈ ಮಂತ್ರದ ಅರಿವಿಲ್ಲದೆ ಸಹಜವಾಗಿ ಸ್ವಾಭಾವಿಕವಾಗಿ ಅದು ಕೂಡಿಬಂದಿದೆ. ಇದೊಂದು ಯೋಗಾಯೋಗ; ಯೋಗಿಯಾಗುವವರಿಗೆ ಇರಬೇಕಾದ ಪ್ರಾಥಮಿಕ ಗುಣಲಕ್ಷಣಗಳಿವು. ಶ್ರೀ ಸಿದ್ಧಲಿಂಗ ಸ್ವಾಮಿಗಳಲ್ಲಿ ಇವನ್ನು ನಾವಿಂದು ಗುರುತಿಸಬಹುದಾಗಿದೆ. ಶಿವಯೋಗ ಸಿದ್ಧಿಪಡೆದ ಶ್ರೀ ಶಿವಕುಮಾರ ಶಿವಯೋಗಿಗಳ ಕಾರುಣ್ಯಕಕ್ಕೆಗೊಳಗಾಗಿ ಶಿವಯೋಗಾಭ್ಯಾಸದಲ್ಲಿ ನಿರತರಾಗಿರುವ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ನಮ್ಮ ನಾಡಿನ ಆಶಾಜ್ಯೋತಿ, ಅವರ ನಿಷ್ಕಪಟ ನಿರಾಡಂಬರ ಸಾತ್ವಿಕ ಸ್ವಭಾವ ಅನುಕರಣೀಯವಾದುವುಗಳು, ಆದರ್ಶಪ್ರಾಯವಾದುವುಗಳು. ಶ್ರೀ ಸಿದ್ಧಗಂಗಾ ಮಠವು ಹಮ್ಮಿಕೊಂಡಿರುವ ಹತ್ತು ಹಲವು ಜನಕಲ್ಯಾಣ ಕಾರ್ಯಗಳಲ್ಲಿ, ದಾಸೋಹ, ವಿದ್ಯಾಪ್ರಸಾರ, ಮೊದಲಾದ ಅಪಾರ ಜವಾಬ್ದಾರಿಯ, ಸಾಂಸ್ಕೃತಿಕ ಚಟುವಟಿಕೆ ಗಳಲ್ಲಿ ಅತ್ಯುತ್ಸಾಹ, ಕೃಷಿ, ಪಶುಪಾಲನೆ, ತೋಟಗಾರಿಕೆ ಮೊದಲಾದ ಕಾರ್ಯಕಲಾಪಗಳಲ್ಲಿ ತೀವ್ರಾಸಕ್ತಿಗೊಳ್ಳುವ, ದೀನರು, ದಲಿತರು, ಅಶಕ್ತರು, ರೋಗರುಜನಗಳಿಂದ ಬಳಲಿದ ಶ್ರೀಮಠದ ವಿದ್ಯಾರ್ಥಿಗಳ ಬಗ್ಗೆ ಅನುಕಂಪತೋರುವ ಕಾಯಕ ಶೀಲರಾದ ಶ್ರೀಗಳವರು ತಮ್ಮ ಗುರುಗಳ ಅವಿರತ ಶ್ರಮದ ಮುಂದೆ ನಾವು ಮಾಡುವುದಾದರೂ ಏನು ಎನ್ನುತ್ತಾರೆ. ತಾವೇ ಸೌದೆ ಒಡೆಯುವುದು, ಕಳೆಕೀಳುವುದು, ಹುಲ್ಲು ಕೊಯ್ಯುವುದು ಶ್ರೀ ಮಠದ ಅವರಣವನ್ನು ಸ್ವಚ್ಛವಾಗಿಡಲು, ಅಲ್ಲ್ಪ ಉತ್ಸಾಹಿ ಯುವಕರ ತಂಡದೊಂದಿಗೆ ವಾರಕ್ಕೊಮ್ಮೆ ಸ್ವಚ್ಛತಾ ಕಾರ್ಯದಲ್ಲಿ ತೊಡಗುವುದು, ಮುಂತಾದ ಶ್ರೀಮಠದ ಕೆಲಸಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಸಂಸ್ಕೃತದಲ್ಲಿ ವಿದ್ವತ್ ಪದವಿ ಗಳಿಸಿ ಬಿ.ಎ. ಪದವಿ ಪಡೆದವರಾದರೂ

ತಾವು ಕಲಿತಿರುವುದು ಅಲ್ಪ ತಿಳಿಯಬೇಕಾದದ್ದು ಅಪಾರ ಎಂದು ನಿರಂತರ ಮಾಡುತ್ತಿರುವ ಅಭ್ಯಾಸ ಅವರ ಜ್ಞಾನ ಪಿಪಾಸೆಗೆ ಜೀವಂತ ಸಾಕ್ಷಿಯಾಗಿದೆ. ವಿದ್ಯಾ ಪಕ್ಷಪಾತಿಗಳಾದ ಶ್ರೀಗಳು ಬಲ್ಲವರಿಂದ ತಿಳಯುವ ವಿನೀತಭಾವನೆ ಮೆಚ್ಚುವಂತಹದು. ತಮ್ಮ ತಿಳುವಳಿಕೆಗಳಲ್ಲಿ ಕಂಡು ಬರುವ ಲೋಪದೋಷಗಳನ್ನು ತಿದ್ದಿಕೊಳ್ಳುವುದರಲ್ಲಿ ಹಮ್ಮುಬಿಮ್ಮುಗಳಾಗಲಿ, ಒಗರು ಪೊಗರುಗಳಾಗಲಿ ಕಾಣದೆ ಜಿಜ್ಞಾಸುವಿನ ಗುಣಲಕ್ಷಣಗಳುಳ್ಳವರಾಗಿದ್ದಾರೆ. ಜಿಹ್ವಾ ಚಾಪಲ್ಯಗಳಿಗೆ ಒಳಗಾಗದೆ 'ಸಂತುಷ್ಟೋ ಏನಕೇನಚಿತ್' ಎಂಬಂತೆ ವೀರವಿರಕ್ತಿಯ ಚಿಹ್ನೆಗಳು ಅಂಕುರಿತವಾದಂತೆ ಭಾಸವಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ತಮ್ಮ ಗುರುಗಳ ಇಂಗಿತಜ್ಞರಾಗಿ, ಅವರಿಗೆ ಯಾವುದು ಬೇಕು, ಯಾವುದು ಬೇಡ, ಯಾವುದು ಸಹ್ಯ, ಯಾವುದು ಅಸಹ್ಯವೆಂದು ತಿಳಿಯುವ ಸೂಕ್ಷ್ಮಮತಿಗಳಾಗಿ'ಗುರುದೈವಾತ್ ಪರಂನಾಸ್ತಿ'' ಎಂದು ಭಾವಿಸಿ ದಿನವಿಡೀ ಗುರು ನಾಮಸ್ಮರಣೆಯನ್ನು ಹೃನ್ಮನದಲ್ಲಿ ತುಂಬಿಕೊಂಡು ಸಹಜ ಶಿವಯೋಗಿಗಳಾಗಿ ರೂಪುಗೊಳ್ಳುತ್ತಿದ್ದಾರೆ.

''ಎನ್ನ ತನುಮನವೆಂದು ಗುರುಕುರುಣದಿಂದ
ಲಿಂಗದಲ್ಲಿ ಏಕವ ಮಾಡಿದೆನಾಗಿ
ಎನ್ನಂತರಂಗ ಬಹಿರಂಗ ನಿಮ್ಮವೇ ನೋಡಾ.
ನಿಮ್ಮತರಂಗದಲ್ಲಿ ನಿಮ್ಮನೇ ಇಂಬಿಟ್ಟುಕೊಂಬೆ
ನಿಮ್ಮ ಬಹಿರಂಗದಲ್ಲಿನಿಮ್ಮನೇ ಪೂಜಿಸುವೆ,
ನಿಮ್ಮರಿವಿನಿಂದ ನಿಮ್ಮನೇ ಅರಿತೆ ಕಾಣಾ ಕೂಡಲ ಸಂಗಮ ದೇವಾ''

''ಎನ್ನ ಶಿರ ನಿಮ್ಮ ಚರಣವನೊರಸೊರಸೆ ಭೇದವಿಲ್ಲವಯ್ಯಾ.
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ, ನಿಮ್ಮ ಅಂಗುಷ್ಠದ
ಕೊನೆಯ ಸೋಂಕಲೊಡನೆ ಹರಿದು ಹೋಹುದು ನೋಡಯ್ಯ,
ಕೂಡಲ ಸಂಗಮ ದೇವಯ್ಯ, ನಿಮ್ಮ ಶ್ರೀ ಪಾದದ ಬೆಳಗ ಕಂಡು
ಎನ್ನಂಗದ ಕತ್ತಲೆ ತೊಡೆಯಿತು''

ಎಂಬ ಅಣ್ಣ ಬಸವಣ್ಣನವರ ವಚನೋಪದೇಶವನ್ನನುಸರಿಸಿ ನಿತ್ಯ ಗುರು ಪದತಲದಲ್ಲಿ ತನ್ನಂಗವನ್ನಿಂಬುಗೊಂಡು ನಿತ್ಯಾನಂದ ತುಂದಿಲರಾಗಿ ಆನಂದಾಮೃತ ಜಲಧಾರೆಯಲ್ಲಿ ಮಿಂದು ಪುಲಕಿತರಾಗುವ ಭಾಗ್ಯ ದೊರತುದಕ್ಕಾಗಿ ಕೃತಜ್ಞರಾಗಿದ್ದಾರೆ.

ಶ್ರೀ ಗುರುಗಳಾದ ಪರಮ ತಪಸ್ವಿ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪೂರ್ಣಕೃಪೆಗೆ ಪಾತ್ರರಾಗಿ ಈ ಮಹಾಪುಣ್ಯಕ್ಷೇತ್ರದ ಸಮಸ್ತ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡು ಯಥಾರ್ಥದಲ್ಲಿ ಮುನ್ನಡೆಸುವ ಸಾಮರ್ಥ್ಯವನ್ನು ಪಡೆಯಲೆಂದು ಸಮಸ್ತ ಭಕ್ತವರ್ಗ ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಿದೆ.

○



ಕವನ - ನಮನ

ಮೌನವೇ ಸಾರುವುದು ಲಕ್ಷ ನಾಲಗೆಯಿಂದ	-	ಶಾಂತರಸ
ಸಿದ್ಧಗಂಗೆಯ ಮಡಿಲು	-	ಈರಪ್ಪ. ಎಂ. ಕಂಬಳಿ
ದಿವದ ಕರಣ	-	ಸಿ.ಪಿ.ಕೆ.
ಸಿದ್ಧಗಂಗೆಯ ಸಿದ್ಧ	-	ಡಾ. ದೇವೇಂದ್ರಕುಮಾರ ಹಕಾರಿ
ಸಿದ್ಧಗಂಗೆಯ ಸಿದ್ಧಪುರುಷ	-	ಡಾ. ಕೆ.ಆರ್. ಸಂಧ್ಯಾರೆಡ್ಡಿ
ಶತಮಾನಂ ಭವ	-	ಹೆಚ್. ಗಂಗಾಧರನ್
ಶಿವಶರಣ ನಿನಗೆ ನಮನ	-	ಲಿಂಗಣ್ಣ ಸತ್ಯಂಪೇಟೆ
ಮೂರುವಚನ ಕಾಣಿಕೆ	-	ಅನ್ನದಾನಯ್ಯ ಪುರಾಣಿಕ
ಶ್ರೀಗುರುವಿಗೆ ನಮೋ ನಮೋ	-	ಡಾ. ಕಮಲಾ ಹಂಪನಾ
ಬ್ರಹ್ಮವನ ವಿಹಾರಿ	-	ಪುಲಿಕೇಶಿ
ಸಿದ್ಧಗಂಗಾ	-	ದೊಡ್ಡಬಾಣಗೆರೆ ಪ್ರಕಾಶಮೂರ್ತಿ
ಕಾರುಣ್ಯಮೂರ್ತಿ	-	ಜೆ. ಶಾರದಾ ರಾಜಶೇಖರ್
ಗುರುಕುಲ ಗಾಥಾ	-	ಕಯ್ಯಾರ ಕಿಞ್ಞಣ್ಣ ರೈ
ಬಹುರೂಪಿ	-	ಡಾ. ಕೆ. ಮುದ್ದಣ್ಣ
ಶ್ರೀ ಸಿದ್ಧಗಂಗೆಯ ಶ್ರೀಚರಣದಲ್ಲಿ	-	ಡಾ. ಜಿ.ಎಸ್. ಶಿವರುದ್ರಪ್ಪ

ಮೌನವೆ ಸಾರುವುದು ಲಕ್ಷ ನಾಲಗೆಯಿಂದ

ಕಲ್ಪತರು ಕಾಮಧೇನುಗಳ ಮಾತನಾಡುವರು ಬರಿದೆ
ನಿನ್ನ ನೋಡದೆ ಮೂಢಜನರು ಬದುಕು ಸವೆಸಿದರು ಬರಿದೆ

ಏನು ಕೊಟ್ಟೀತು ಗಿಡವು ಹೇಳು ಹಸುವೇನು ನೀಡೀತು
ಶಿಕ್ಷಣವೆ ಸಂಸ್ಕೃತಿಯೆ ಸುಜ್ಞಾನವೇ ಗಳಹದಿರು ಬರಿದೆ

ಚಿಣ್ಣರೆದೆ ಮಿಡಿತ ಅವರಾಯು ಅವರೇಳ್ಗೆ ನೀನೆ ಕಾಣ
ಗಾಳಿಗೂ ನಿನ್ನುಸಿರೆ ಉಸಿರು ನೀನಿರದ ಎಲ್ಲ ಬರಿದೆ

ಮೋಕ್ಷ ಕಂಡವು ಜೈಗು ಜೆಳಗುಗಳು ನಿನ್ನ ಉಡುಗೆಯಾಗಿ
ಧರೆ ವಸುಂಧರೆಯಾಯ್ತು ತಂದೆ ನಿನ್ನಡಿಯ ಸೋಂಕಿನಿಂದೆ

ಚಿಮ್ಮುತಿದೆಯಾನಂದ ಸುಜ್ಞಾನ ತನಿಜೆಳಕು ನಲ್ಮೆಗಳ
ನಿನ್ನ ಆಯುಷ್ಯದೊಂದೊಂದು ನಿಮಿಷವೂ ಎದೆಯ ಜಿಡದೆ

ಸಂಗ ಹೌದೆಂದು ಮೆಚ್ಚುವ ಮಾತು ನೋಟವೊ ಶಿವಲಿಂಗ
ಹರಿಯುತಿದೆ ಕತ್ತಲೆಯ ಪಾಶ ಮೆಲ್ಲಡಿಯ ಕಣ್ಣಿನಿಂದೆ

ಶಿವನು ನೀನೇ ಗುರುವೆ ನೀನೆ ನೀನೆ ಕುಮಾರಸ್ವಾಮಿ
ಬಲವಾಯ್ತು ಚೆಲುವಾಯ್ತು ವಿಶ್ವವು ನಂದಿ ನವಿಲುಗಳಿಂದೆ

ನಿನ್ನ ನೆನೆದರೆ ಕತ್ತಲೆಗೆ ನಕ್ಷತ್ರಗಳ ರೋಮಾಂಚನ
ತೊನೆಯುವಳು ವಸುಮತಿಯು ಮೈಮುರಿವ ಹಚ್ಚ ಹಸುರಿನಿಂದೆ

ಎಲ್ಲಕೂ ಮಿಗಿಲು ಮಾನವತೆ ಮಮತೆ ಪ್ರೀತಿ ಸ್ನೇಹಗಳು
ಜಾತಿ ಕುಲವಳಿಯಿತು ನೀನೀವ ಇಂಥ ಶಿಕ್ಷಣದಿಂದ

ನಿನ್ನ ನುಡಿ ಸಾಲವೆಂದೆಂದೂ ಅರಸ ಗುರುಮಣಿಹ ಸಾರಲು
ಮೌನವೇ ಸಾರುವುದು ಸಾಕು ಬಿಡು ಲಕ್ಷ ನಾಲಗೆಯಿಂದೆ.

ಶಾಂತರಸ

ಸಿದ್ಧಗಂಗೆಯ ಮಡಿಲು

ಸಿದ್ಧಗಂಗೆಯ ಮಡಿಲು ಶುದ್ಧ ಮೌನದ ಕಡಲು
ಸಿದ್ಧ ಪ್ರಸಿದ್ಧರ ಸಾಕಿ ಸಲಹಿದೊಡಲು
ಕ್ಷುದ್ರತನಕವಕಾಶವಿಲ್ಲದಲೆ ತುಳುಕಿಹುದು
ಗುಪ್ತಗಾಮಿನಿಯಾಗಿ ಕರುಣ ರಸವು !

ಬೆಟ್ಟದಾ ತಲೆಯಿಂದ ಉಕ್ಕಿ ಹರಿದಿಹಳಿಲ್ಲಿ
ರಸತತ್ವ ಸಾರುವಾ 'ಸಿದ್ಧಗಂಗೆ'
ಹಸಿರ ಹಾಸಿನಲಿ ಹೆಪ್ಪುಗಟ್ಟಿದೆ ಪ್ರೀತಿ
ಬಯಲ ಗೋಲಕ ಚುಳುಕ ಒಳಗಣ್ಣಿಗೆ !

ಹೊಟ್ಟೆ - ನೆತ್ತಿಯ ತುಂಬಿ ಹಾರಯಿಸುತಿಹನಿಲ್ಲಿ
ಕಾಯಕದಯ್ಯ ಶಿವಕುಮಾರ ಸ್ವಾಮಿ !
ಜೋಳಿಗೆಯೊಂದನೆ ನೆಚ್ಚಿದ ವಿಶ್ವಸಂಸಾರಿಯಿವ
ಮನುಜಕುಲ ರೂಪಿಸುವ ಕುಶಲಕರ್ಮಿ !

ಹಿಮಗಿರಿಯ ಗವಿಯಲ್ಲಿ ಧ್ಯಾನಮುದ್ರೆಯನೊಡೆದು
ಧರೆಗಿಳಿದು ಬಂದವೊಲು ಹರನ ಕರುಣೆ !
ಮನುಜಪಥದಲಿ ಕವಿದ ವಿಸ್ಮೃತಿಯ ಪೊರೆ ಹರಿದು
ಸೇವೆಯಲ್ಲಿಯೇ ಸ್ವರ್ಗ ಕಾಂಬ ಗುರುವೆ !!

ಸಕಲ ಜೀವಾತ್ಮರಿಗೆ ಲೇಸ ಬಯಸುವುದೊಂದೇ
ತನ್ನ ಬದುಕಿನ ಮೂಲಮಂತ್ರ ಸಿದ್ಧನಿಗೆ
ದೀನ ದಲಿತರ ಸೇವೆಗಾಗಿ ಜೀವವು ಮುಡಿಪು
'ತ್ರಿವಿಧ ದಾಸೋಹ ವ್ರತ' ಹಿಡಿದು ಪ್ರಸಿದ್ಧ !

ಸಿದ್ಧಗಂಗೆಯ ಮಡಿಲು ಅಲ್ಲ ಬರೀ ತೆವರು
ಸುರಿದಿದೆ ಇಲ್ಲಿ ಶಿವಕುಮಾರರ ಬೆವರು !
ಹಾತೊರೆದು ಬಂದವರಿಗೆ ಜ್ಞಾನಸುಧೆಯನು ಹನಿಸಿ
ದೊಡ್ಡವರನ್ನಾಗಿಸುವ ಮಹಾಮನೆ - ತವರು !

ಈರಪ್ಪ ಎಂ. ಕಂಬಳಿ

ದಿವದ ಕರಣ

ಸಿದ್ಧಗಂಗೆಯ ಸಿದ್ಧಪುರುಷ, ಶರಣರ ಪರುಷ,
ನೀವಿಹಿರಿ ಕಾವಳದಿ ಜ್ಯೋತಿಯಾಗಿ ;
ಸತ್ತ್ವವೇ ಸಾಕಾರವಾದವೊಲು, ಶಿವತತ್ತ್ವ
ರೂಹುವಡೆದೊಲು, ಶಿವಕುಮಾರಯೋಗಿ !

ಗುಡ್ಡಗಳು, ಬೆಟ್ಟಗಳು ತಲೆಬಾಗಿ ಕೈಮುಗಿದು
ನಮಿಸುತಿವೆ ನಿಮ್ಮ ಹಿರಿಮೆಗೆ, ವಿಭೂತಿ !
ದಾಸೋಹ ಸಾಹಸಿಯೆ, ನಿತ್ಯಕಾಯಕ ಕಲಿಯೆ
ಖ್ಯಾತಿ ಗಳಿಸಿದೆ ನಿಮ್ಮ ಜೀವ ಪ್ರೀತಿ !

ಒಳಗ್ಗೆ ನೋಡುವ ತೆರದಿ ಅರೆಮುಚ್ಚಿದಕ್ಷಿಗಳು
ನಸುಬಾಗಿದೆತ್ತರದ ನಿಲುವು ಭವ್ಯ !
ಕ್ಷುದ್ರತೆಯನೊದ್ದವರು, ಅಲ್ಪತೆಯ ಗೆದ್ದವರು
ಭೂಮವಾಯಿತು ನಿಮಗೆ ಪರಮಸೇವ್ಯ !

ಸಕಲ ಜೀವಾವಳಿಗಳಿಗೆ ಲೇಸನೇ ಬಯಸಿದಿರಿ ;
ತೆರೆದು ಅಕ್ಕರದ ಅರವಟ್ಟಿಗೆಯನು,
ಜಾತಿಭೂತವ ತೂರೆದು, ಅರಿವ ಕೊಟ್ಟಿರಿ ಜನಕೆ
ಅನ್ನವಿಟ್ಟಿರೆ, ಬಿತ್ತಿ ಮೌಲ್ಯಗಳನು !

ಅವಸರ್ಪಿಣಿಯ ಕಾಲವಿದು ಎನ್ನುವುದು ತರವೇ
ನಿಮ್ಮನ್ನರಿರಲು ಭರವಸೆಯ ಕಿರಣ ?
ತೆರೆಯುತಿಹುದು ಅನಂತ ಹೊಸ ದಿಗಂತದಿ ಹೊಳಹ !
ಬಾಳಿರೈ ಶತವರುಷ, ದಿವದ ಕರಣ !

ಸಿ.ಪಿ.ಕೆ.

ಸಿದ್ಧಗಂಗೆಯ ಸಿದ್ಧ

ಕಾಣದಾ ನೆಲೆಯಿಂದ ಬಂದ ಈ ನೆಲಕೆ
ಗಂಗೆ ಇಳಿಯುವ ಮೋಡಿ ಮಾಡಿದವನಲ್ಲ ನೀನು
ಜನಮನದ ಆಳದಲಿ ಗುಪ್ತಗಾಮಿನಿ ಗಂಗೆ
ಉಚ್ಚರಿಸಿ ಪುಟಿವಂತೆ ಹೋರಾಡಿದವ ನೀನು ;

ಒಂದು ಕಲ್ಲಿನ ಶವಕೆ ಕಾಲು ತಾಗಿಸಿ, ಮತ್ತೆ
ಮರುಜನ್ಮ ನೀಡಿದವನಲ್ಲ ನೀನು ;
ಕಗ್ಗತ್ತಲೆಯ ಕೊಳ್ಳದ ಖಿಂಡ ಬಂಡೆಗೆ, ದೃಷ್ಟಿ
ಪರುಷದಾ ಹೊಸಹುಟ್ಟು ಕೊಟ್ಟೆ ನೀನು.

ವಿದ್ಯೆ ಕಲಿಸಿದ ಬಳಿಕ ಹೆಚ್ಚೆರಳ ಕಾಣಿಕೆಯ
ನೀಡೆಂದು ಕೇಳಿದವನಲ್ಲ ನೀನು ;
ಒಳಬೆಳಗಿನಲಿ ನಿಂದು ಅವರ ತಪ್ಪಿಗೆ ನೊಂದು
ಪ್ರಾರ್ಥಿಸುತ, ಕರುಣೆ ದಯೆ ಸುರಿಸಿದವ ನೀನು.

ಅರಸು ಪರಿವಾರಕ್ಕೆ ರಾಜಾತಿಥ್ಯವನು ನೀಡಿ
ಕಾಮಧೇನುವಿನ ಸಿರಿಯುಷಿಯಲ್ಲ ನೀನು ;
ನೆಲದ ಮಕ್ಕಳ ಮುಕ್ತದಾನಶಕ್ತಿಯ ಧಾರೆ
ವಿರಕ್ತಿ ಭಕ್ತಿಯ ನಿತ್ಯದಾಸೋಹಿ ನೀನು.

ಸಾಧನೆಯ ಪಥದಲ್ಲಿ ಕಾಯಕದ ಹೆಜ್ಜೆಗಳ
ನಿಟ್ಟ ಬೆಟ್ಟಕೆ ಸಿದ್ಧಗಂಗೆ ಹೆಸರಾಯ್ತು
ನಾಡುನುಡಿಗಳ ಕಾಯ ಚೇತನದ ನಿಧಿ ನಿನ್ನ
ನಡೆ ನುಡಿಯ ಮಹಿಮೆಯೇ ಜನಕೆ ಉಸಿರಾಯ್ತು !

ಡಾ. ದೇವೇಂದ್ರಕುಮಾರ ಹಕಾರಿ

ಸಿದ್ಧಗಂಗೆಯ ಸಿದ್ಧಿಪುರುಷ

ಚಿನ್ನದಲಿ ಪೋಣಿಸಿದ ರುದ್ರಾಕ್ಷಿ ಮಾಲೆಗಳ
ಜರತಾರಿಯಂಚಿನ ಕಾಷಾಯ ವಸನದ
ಚಿನ್ನದ ಕಿರೀಟ ಬೆಳ್ಳಿ ಮಣೆಯ ಮೇಲೆ
ಕಾಲಿಟ್ಟು ವಿಜೃಂಭಿಸುವ ರತ್ನಪಲ್ಲಕ್ಕಿಗಳಲ್ಲಿ
ಅಡ್ಡಾಡುವ
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಗಳಾದ
ವಿರಕ್ತ ಮಠಾಧೀಶ ನೀವಲ್ಲ.

ನಿಮ್ಮ ಹೆಸರಿನಲ್ಲಿಲ್ಲ ಬಿರುದು ಬಾವಲಿಗಳ ಭಾರ
ಕಣ್ಣು ಮುಚ್ಚಿದ ಭಕ್ತಗಣಕೆ
ಮಂಕುಬೂದಿಯನೆರಚಿ
ಬೆಳಸಿಕೊಂಡವರಲ್ಲ ನಿಮ್ಮ ಹೆಸರ
ಸಹಸ್ರ ಸಹಸ್ರ ಹಸಿದ ಹೊಟ್ಟೆಗಳಿಗೆ ಅನ್ನವಿಕ್ಕಿದ ಬರಿಗೈಯ
ಸರದಾರ
ಅಕ್ಷರ ಸಾಮ್ರಾಜ್ಯ ಕಟ್ಟಿ ಬೆಳಸಿದ
ಶೂನ್ಯಸಿಂಹಾಸನ ಧೀರ.

ಜಾತಿಜಾತಿಯ ಭೇದ ಗಂಡುಹೆಣ್ಣಿನ ಭೇದ
ಬಡವ ಬಲ್ಲಿದ ಭೇದ
ಯಾವ ಭೇದವನೆಣಿಸದೆ
ಸಕಲ ಜೀವಾತ್ಮರನು ಒಂದಾಗಿ ಕಾಣುವ
ಆ ಸೂರ್ಯ ಈ ಚಂದ್ರ
ಆ ಗಾಳಿ ಈ ನೀರು ಇವುಗಳಂತೆಯೇ
ಎಲ್ಲರಿಗೂ ಲಭ್ಯವಾಗುವ ಸಿದ್ಧಗಂಗೆಯ ಸಿದ್ಧಿಪುರುಷ
ನಿಮ್ಮ ಪದತಲಕೆ
ನಮ್ಮ ಕೋಟಿ ಶರಣು.

ಡಾ. ಕೆ.ಆರ್. ಸಂಧ್ಯಾರೆಡ್ಡಿ

ಶತಮಾನಸಂಭವ

ಗಿರಿಯ ಮೇಲಣ ಶಿಲೆಯಿಂ ಜಲವ ಬರಿಸಿ
ಗುರುಪೂಜೆಗಂ ಜಲವನೇ ತೈಲವಾಗಿರಿಸಿ
ಪರತತ್ವದಮೃತಧಾರೆಯನು ಹರಿಸಿ
ಗುರುಸಿದ್ದೇಶರು ತಪಗೈದರಲ್ಲಿ ತಾ ನೆಲೆಸಿ

ಪರಹಿತಕೃತಿಯೊಳು ನಿತ್ಯವಾಗುಳಿದವರು
ಚರಿತೆಯಲಿ ಚಿರ ಪರಿಚಿತರಾಗಿಹರಿವರು
ವರ ಗುರುಸಿದ್ಧೇಶ್ವರರು ಅಟವೀಶ್ವರರು
ಆರಾರಿಗೂ ತೋರದಂತೆ ತಪಗೈದರಿನಿತರು

ಸಾಧಕರಿಗೆ ಸಿದ್ಧಿ ದೊರೆತಿಹ ಪುಣ್ಯದ ಗಿರಿ
ಶೋಧಕರಿಗೆ ಆತ್ಮದರ್ಶನವಿತ್ತ ವನಸಿರಿ
ಬೋಧಕರಿಗೆ ಭಾಗ್ಯವನಿತ್ತ ಜ್ಞಾನಸಿರಿ
ಸಿದ್ಧಪುರುಷರು ಮೆರೆದ ತಾಣ ಸಿದ್ಧಗಿರಿ

ಗುರು ಅಟವೀಶರ ಕಾರುಣ್ಯಶಿಶು
ಉದ್ಧಾನಶಿವಯೋಗಿ
ಪರಮನಿರಂಜನ ಪ್ರಣವಸ್ವರೂಪಿ ಸ್ವರಯೋಗಿ
ಗುರು ನಿನ್ನ ಕರಕಮಲದಲಿ ಕೇಳಿ ಅರಳಿದ ತ್ಯಾಗಿ
ಶರಣತತ್ವವೆ ರೂಪವೆತ್ತಿದ
ಶಿವಕುಮಾರ ಮಹಾಯೋಗಿ
ಜ್ಞಾನದಾನದ ಬೆಳಕ ಜಗಕೆ ಬಿತ್ತರಿಸಿದ ಗುರುವೆ
ಅನ್ನದಾನದಿಂ ದೀನರುದ್ಧರಿಸ ಬಂದಿರುವೆ
ಅನವರತ ಅವನಿಯುದ್ಧಾರದ ತಪಗೈಯುತ್ತಿರುವೆ
ಎನಿತೋ ಲಕ್ಷಮನೆಯ ಅಕ್ಷಯದ ಬೆಳಕಾಗುವೆ

ಸಿದ್ಧಗಂಗಾ ಜ್ಞಾನಗಂಗೆ ಹರಿದಿಹಳು ದಶದಿಶೆಗಳಲಿ
ಉದ್ಧಾನಶಿವಯೋಗಿಗಳ ಕೃಪಾಶೀರ್ವಾದ ಬಲದಲಿ
ಸಿದ್ಧಿಪಡೆದ ಸದ್ಗುರು ನೀವಹುದು ಇಹದಲಿ
ಚಿದ್ಘನ ಗುರುವೇ ತಾಂ ಶತಮಾನ ಬಾಳಿ ಬೆಳಗಲಿ.

ಹೆಚ್. ಗಂಗಾಧರನ್

ಶಿವಶರಣ ನಿನಗೆ ನಮನ

ದೂರದಿಂದ ಹೇಗೋ
ಹತ್ತಿರದಿಂದ
ಕಣ್ಮುಚ್ಚಿ ಕಂಡಿದ್ದರೂ
ಮುಖಾಮುಖಿಯಾಗಿಲ್ಲ, ಮಾತಾಡಿಲ್ಲ
ಆದರೇನಂತೆ ?
ಮನದೊಳೆಂದೋ ಮೂರ್ತಿಗೊಂಡಿದೆ ಚಿತ್ರ
ಸಿದ್ಧಗಂಗಾ - ಶಿವಗಂಗಾ
ಪುಸ್ತಕ - ಪತ್ರಿಕೆ - ಲೇಖನ
ಉಲ್ಲೇಖನಗಳ ಮೇಲೆ
ಕಣ್ಣಾಡಿಸಿದ್ದರೂ ಪುಟ ಬಿಡಿಸಿಲ್ಲ ಪುಸ್ತಕ ಓದಿಲ್ಲ
ಆದರೇನಂತೆ ?
ಅಕ್ಷರಕ್ಷರಗಳೂ ಮೂಡಿಬಿಟ್ಟಿವೆ ಸ್ಪಷ್ಟ
ಅವರೊಬ್ಬ
ಪತಿತ ಜನೋದ್ಧರಣ
ಕಂಟಕಿತ ಪಥಗಮಿತ ಚರಣ
ನೂರುಹರದಾರಿ ನಡೆದು ದಣಿದ ಬೆವರಿಳಿದ
ಹಣೆಯಲ್ಲಿ ಮಾಸದ ಶಿವಭಸಿತ
ಎದೆಯುದ್ದ ಶಿರಮುದ್ದ ಬಂದರೂ
ತುಟಿಯಲ್ಲಿ ಮಿನುಗುವ ಮಂದಹಾಸ
ಸದಾ ತಲೆಗೆ ಸುತ್ತಿದ ಕಾವಿ ಪೇಟ
ಒಳಗಡೆ ವಚನಸಾಹಿತ್ಯ ಗುಮ್ಮಟ
ಆರೋಪ ಪ್ರತ್ಯಾರೋಪಗಳ
ಆರೋಹಣ ಅವರೋಹಣಗಳ ನಡುವೆ
ಕಿಂಚಿತ್ತೂ ಬಾಗದೆ ನಿಂತ ದಿಟ್ಟ
ಗೊಮ್ಮಟ !

ಮೇಲೆ ಒಪ್ಪುವ ತೊಟ್ಟು ನಿಲುವಂಗಿ
ಬಾಗಿದ ಕೈ ಮುಗಿದ ಕೈಗಳ ಭಂಗಿ
ಮಾತು ಬಲುಸ್ಪಷ್ಟ ಧ್ವನಿಯಂತೂ ದಿಟಸ್ಫುಟ
ಯಾರು ಮುನಿದು ನಮಗೇನ ಮಾಡುವರು !
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ಯಾವ ಕೈಮರ ತಡೆಗಳಿಗೂ ನಿಲ್ಲದೆ
ತಂಟೆ ತಕರಾರುಗಳಿಗೆ ಕಿವಿಗೊಡದೆ
ನಿತ್ಯ ನಿರಂತರ ದಣಿವಿಲ್ಲದೆ
ಸದಾ ಓಡಾಡುತ್ತಿರುವ ಎಕ್ಸ್‌ಪ್ರೆಸ್ ರೈಲು
ಯಾರಾದರೇನಂತೆ ?
ವಿದ್ಯಾರ್ಥಿ - ಶಿಕ್ಷಕ, ರೈತ - ಕೂಲಿಕಾರ
ಮುತ್ತೈದೆ, ವಿಧವೆ, ಮದುಮಗಳು
ಮುಖಂಡ, ದನಗಾಹಿ, ದನಗಾಹಿ, ಭಿಕ್ಷುಕ
ಬೇಕಾದವರು ಬನ್ನಿ : ಹತ್ತಿ ಕುಳಿತುಕೊಳ್ಳಿ.
ಬೇಡಾದವರು ಸರಿದು ನಿಲ್ಲಿ. ದಾರಿಬಿಡಿ
ಊರು ಬಂತೋ ಇಕೋ ಇಳಿದು ಹೋಗಿ,
ತಡಮಾಡಬೇಡಿ.
ಸಮಯ ಇಲ್ಲಿ ಯಾವಾಗಲೂ ದುಬಾರಿ !
ಹೊತ್ತು ಹೋಗುವ ಮುನ್ನ ಸೇರಬೇಕು ಊರ ದಾರಿ
ಬೆಟ್ಟ ಬಯಲು ಕಾನನ ನಿರ್ಜನ
ಎಲ್ಲಿಂದಲೋ ಹೊರಟು, ಇನ್ನೆಲ್ಲಿಗೋ ತಲುಪಿ
ಮತ್ತೆಲ್ಲಿಗೋ ಎಂಬತ್ತು ಸಂವತ್ಸರಗಳ ಪಯಣ
ಹೊರಟ ಶಿವಶರಣ
ನಿನಗೆ ನಮನ.

ಲಿಂಗಣ್ಣ ಸತ್ಯಂಪೇಟೆ

ಮೂರು ವಚನ ಕಾಣಿಕೆ

ಶ್ರೀ ಶಿವಕುಮಾರ ಶ್ರೀಗಳು

ಅಲ್ಲಮನ ನಿರ್ಮಾಯ ನಿಲವು
ಬಸವನ ಮಾನವತೆಯ ಒಲವು
ಚೆನ್ನಬಸವನ ಆಧ್ಯಾತ್ಮಿಕ ಗೆಲವು
ಮಾರಯ್ಯನ ಕಾಯಕ ಪ್ರೀತಿ
ಚೆಂದಯ್ಯನ ದಾಸೋಹ ನೀತಿ
ಶರಣರ ಸೇವಾಧರ್ಮ
ಎಲ್ಲವೂ ಸಂಧಿಸಿ-
ಶ್ರೀ ಶಿವಕುಮಾರ ಶ್ರೀರೂಪ ತಾಳಿಹವಯ್ಯ
ನಿನ್ನ ಭವ್ಯಪರಂಪರೆಯ
ದಿವ್ಯದೀಪ್ತಿಯು ಬಹುಕಾಲ ಬೆಳಗಲಯ್ಯ !
ಶ್ರೀ ಗುರು ಸಿದ್ಧಲಿಂಗೇಶ್ವರಾ !

ಶ್ರೀ ಸಿದ್ಧಗಂಗಾ ಶ್ರೀಗಳ ಮಠ

ಬಹು ಹಿಂದೆ ಹೊತ್ತಿಸಿದ
ದಾಸೋಹದ ಒಲೆ, ಇಂದಿಗೂ ಆರಿಲ್ಲವಯ್ಯ
ಬಹು ಹಿಂದೆ ಘೋಷಿಸಿದ
ಬಸವಮಂತ್ರ, ಇಂದಿಗೂ ಅಡಗಿಲ್ಲವಯ್ಯ !
ಹತ್ತು ನೂರಾಗಿ ನೂರು ಸಾವಿರವಾಗಿ
ಬೆಳೆಯುತಿದೆ ವಿದ್ಯಾರ್ಥಿದಂಡು, ಅಯ್ಯಾ
ನಿತ್ಯವೂ ತುಂಬುತಿದೆ ದಾಸೋಹದ ಘಂಟು ಅಯ್ಯ !
ಸಹಸ್ರಾರು ಭಕ್ತರಿಗೆ ಸತ್‌ಪಥವ ತೋರಿ
ಅಸಂಖ್ಯಾತ ಛಾತ್ರರಿಗೆ ಆಶ್ರಯ ನೀಡಿ
ನಿರ್ಮಿಸುತಿದೆ ನಾಗರಿಕರನು ಈ
ಧರ್ಮಕಮ್ಮಟವಯ್ಯ !
ಶ್ರೀ ಸಿದ್ಧಗಂಗಾಶ್ರೀಗಳ ಮಠವಯ್ಯ
ಶ್ರೀ ಗುರುಸಿದ್ಧಲಿಂಗೇಶ್ವರಾ !

ಮಹಾಪದವಿ

ಬ್ರಹ್ಮ ಪದವಿಯ ಪಡೆದವರು
ಬ್ರಹ್ಮಲೋಕವನಾಳುವರಯ್ಯ !
ವಿಷ್ಣು ಪದವಿಯ ಪಡೆದವರು
ವಿಷ್ಣುಲೋಕವನಾಳುವರಯ್ಯ !
ರುದ್ರ ಪದವಿಯನು ಪಡೆದವರು
ರುದ್ರಲೋಕವನಾಳುವರಯ್ಯ !
ನಿನ್ನ ಸದ್‌ಭಕ್ತರ ಸೇವೆಯ ಮಹಾಪದವಿಯನು
ಪಡೆದವರು ಸರ್ವಲೋಕವನಾಳುವರಯ್ಯ !
ಶ್ರೀಗುರು ಸಿದ್ಧಲಿಂಗೇಶ್ವರಾ !

ಅನ್ನದಾನಯ್ಯ ಪುರಾಣಿಕ

ಶ್ರೀ ಗುರುವಿಗೆ ನಮೋ ನಮೋ

ಹೈಮಾಚಲದ ಉದ್ವಗಲ
ಆಸ್ವಾದ ಬಯಸಿದೆ
ಹಿಮಾಲಯದ ಶಿಖರ ಶೃಂಗಗಳ
ಪರಲೆತ್ನಿಸಿದೆ
ಆ ಭವ್ಯತೆ ದಿವ್ಯತೆಗಳ
ಬೃಹತ್ತು - ಮಹತ್ತುಗಳ ನೆಲೆಯನರಿಯದಾದೆ
ಅಹೋ ಎತ್ತರ ಆ ಬಿತ್ತರ ಆ ನಿಲವು ಕಂಡು
ಮೂಕ ವಿಸ್ಮಿತಳಾದೆ
ಇತ್ತ ಸರಿದು ನಿಂತೆ ಮೂಡಣಕೆ ಮುಖಮಾಡಿ
ಕಂಡೆ ಬಂಗಾಳ ಕೊಲ್ಲಿ
ಅತ್ತ ತೆಂಕಣಕೆ ತಿರುಗೆ ಹಿಂದೂಮಹಾಸಾಗರ
ಇತ್ತ ಬಾಗಿದೆ ಪಡುವಣಕೆ ಅರಬ್ಬಿಯ ಆರ್ಭಟ
ವಿಮಾನ ಏರಿ ಪೆಸಿಫಿಕ್ ಸಾಗರ
ಕೆಂಪು ಸಾಗರಗಳ ಮೇಲೆ
ಉಡ್ಡಾನಯಾನ ಮಾಡಿದೆ
ಸಮುದ್ರದ ಆಳ ಅಳೆಯಲಾಗಲಿಲ್ಲ
ಹರವು ಅರಿಯಲಾಗಲಿಲ್ಲ
ಗಾಂಭೀರ್ಯ, ಘನತೆ, ಶಾಂತತೆ ನನ್ನ
ಮನಕ್ಕೆ ಮುಟ್ಟಿದ್ದು, ಮಾತಿಗೆ ನಿಲುಕಲ್ಲಿಲ್ಲ
ಮತ್ತೂ ಮತ್ತೂ ಮಾತು ಬಾರದೆ
ಮೂಕಳಾದೆ
ಭಕ್ತಿಭಾವದೆ ನಿಂತೆ ತಲೆಬಾಗಿ
ವಿನಮ್ರಳಾಗಿ
ಮಾತು ಗೆದ್ದ ಭಾವ ಹೃದಯದೊರತೆಯಲಿ
ಹರಿದಿತ್ತು
ಕಣ್ಣು ತೆರೆದು ನೋಡಿದೆ
ಮುಂದೆ ಆವಿರ್ಭವಿಸಿ ನಿಂತ
ಸೂರ್ಯ ಕೋಟಿ ಸಮ ಭವ್ಯಮೂರ್ತಿಯ !
ಒಮ್ಮೆ ವಿಭೂತಿಮಯ ಹೈಮಾಚಲ
ಆಧ್ಯಾತ್ಮಪರ್ವತ
ಮತ್ತೊಮ್ಮೆ ಕಾವಿ ಧರಿಸಿ ಹರಿದ
ಭೂಮಿಯ ದಯಾಸಾಗರ
ಇನ್ನೊಮ್ಮೆ ಸ್ಥಿರವಾಗಿ ನಿಂತ ಗೊಮ್ಮಟ ಸದೃಶ
ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ
ಅಂತರಂಗ ಬಹಿರಂಗಗಳಲಿ
ನೆಲೆಯೂರಿದ
ಪೃಥ್ವಿ - ಆಗಸಗಳ ಬೆಸೆದು ನಿಂತ ತ್ರಿವಿಕ್ರಮ
ಸಾಗರ ಸದೃಶ ಹೈಮಾಚಲೋನ್ನತ
ಆಗಸದೆತ್ತರದ ಆ ಮಹಾಗುರು
ಶ್ರೀ ಶ್ರೀ ಶಿವಕುಮಾರಸ್ವಾಮಿಗಳಿಗೆ
ಮನದಲ್ಲೇ ನಮೋನಮೋ
ಎನುತಿರ್ದೆನಯ್ಯಾ ಕಮಲಾಪ್ರಿಯ !

ಡಾ. ಕಮಲಾ ಹಂಪನಾ

ಬ್ರಹ್ಮವನ ವಿಹಾರಿ
(ರಾಗ ಅಭೇರಿ, ತಾಳ ಆದಿ)

ಬ್ರಹ್ಮವನ ವಿಹಾರಿ । ಮದ್ಗುರು ।
ಬ್ರಹ್ಮತೇಜ ಸುವಿಚಾರಿ ॥ ಪಲ್ಲವಿ ॥

ಬ್ರಹ್ಮತತ್ತ್ವವನು ಬಾಲಜೀವರಿಗು
ಮರ್ಮವರಿವವೊಲು ತಿಳಿಯಹೇಳುವ
॥ ಅನುಪಲ್ಲವಿ ॥

ವೀರಾಪುರದಲಿ ಜನಿಸಿದಿರಿ
ವೀರಶೈವವನೆ ಬದುಕಿದಿರಿ
ಧೀರಶಾಂತರೆಂದೆನಿಸಿದಿರಿ
ವಿರುತ ಸರಳತೆ ತೋರಿದಿರಿ ॥ ೧ ॥

ಉದ್ಧಾನೇಶ್ವರ ಕರಸಂಜಾತ
ಚಿದ್ಧಾನ ವೀರ ಜಿಜ್ಞಾಸುಗಳಿಗೆ
ಪೆದ್ದಮನುಜರಿಗು ವರಪ್ರದಾತ
ಬದ್ಧಜೀವಿಗಳ ಪಾಶವಿಮೋಚಕ ॥ ೨ ॥

ಅಡಿಯಿರಿಸಿದೆಡೆ ಪಾವನಕ್ಷೇತ್ರ
ಪೊಡಮಡುವುದು ತಾ ಜಗವೆಲ್ಲ
ಅಡವೀಶ್ವರರೆ ಪರಮಗುರುಗಳು
ಕಡವರಮಪ್ಪುದು ಮುಟ್ಟಿದ್ದೆಲ್ಲ ॥ ೩ ॥

ಪೂರ್ವಾಶ್ರಮವನು ವರ್ಜಿಸಿದ
ಗೀರ್ವಾಣವಾಣಿಯನಾರ್ಜಿಸಿದ
ಚಾರ್ವಾಕಪಂಥವನತಿಗಳೆದ
ಸರ್ವಾಭೀಷ್ಟಪ್ರದ ಗುರುದೇವ ॥ ೪ ॥

ಶಿವಕುಮಾರ ಯೋಗಿ ಭಕ್ತರ
ಭವವನೆ ನೀ ನೀಗಿ
ಕವಿಹೃತ್ಕಮಲಕೆ ನೀ ರವಿಯಾಗಿ
ಭುವನಸಕಲಭೋಗಂಗಳ ತ್ಯಾಗಿ ॥ ೫ ॥

ವೀರಾರಾಧ್ಯರು ನೀವೆಂದು
ವಿರಾಡ್ರೂಪರು ನೀವೆಂದು
ಮಾರಾರಿಸುತನೆ ನೀವೆಂದು
ಆರೈದು ನಂಬುವೆ ನಾನೆಂದು ॥ ೬ ॥

ಕಾರುಣ್ಯವಿಗ್ರಹ ಗುರುದೇವ
ಗಾರುಡಿಯೆಸಗಿದ ಮಾದೇವ
ಪಾರಮಾರ್ಥದಾ ಪರದೈವ
ಶಾರದೆಯೊಲಿದಾ ಮಹದೇವ ॥ ೭ ॥

ಪುಲಿಕೇಶಿ

ಸಿದ್ಧಗಂಗಾ

ಧಾರ್ಮಿಕ ಚೇತನದೈಸಿರಿಯ ನೆಲೆ
ಸಂಸ್ಕೃತ ವಿದ್ಯೆಯ ಸಮೃದ್ಧಿಯ ಕಲೆ
ಪುರಾತನ ಚರಿತೆಯ ಪುಣ್ಯಕತೆಯ ಬಲೆ
ಪರಮ ಪವಿತ್ರದ ಘನನಾಡು
ವರ ಕರುನಾಡಿನ ಸಿರಿನಾಡು
ಸಿದ್ಧಗಂಗಾಂಬಿಕೆಯ ದಿವ್ಯಗೂಡು
ಸಿದ್ಧಲಿಂಗೇಶನಿಹ ಭವ್ಯಬೀಡು.

ಅನ್ನವಿದ್ಯೆ ಅಪಾರ ದಾನವ
ಸಿದ್ಧಿಸಿ ನೀಡುವ ಅಪೂರ್ವ ಕ್ಷೇತ್ರ
"ಸಿದ್ಧಗಂಗಾ" ನಾಮವಿ ಬೆಳಗುವ
ಶಕ್ತಿ ಮಹತ್ತಿನ ಸುಂದರ ಕ್ಷೇತ್ರ
ವಿದ್ಯಾದಾನಕೆ ಮೈತಾಳಿಹ ಗುರು
ಶಿವಕುಮಾರರು ಕಟ್ಟಿಹ ಕ್ಷೇತ್ರ.

ಹುಣ್ಣಿಮೆ ಹಿಮಕರನಂತೆಯೆ ಬೆಳಗುತ
ಭಕುತರ ಮನಕಾನಂದವ ಬೀರುವ
ಶರಣಗಣಪ್ರಿಯ ಮಹಕ್ಷೇತ್ರ
ಸೆಳೆವುದು ಸರ್ವರ ಮನ ನೇತ್ರ.
ತುಮಕೂರು ಜಿಲ್ಲೆಯ ಹೆಮ್ಮೆಯ ಕ್ಷೇತ್ರ
ಪರಮ ತಪೋವನ ಪುಣ್ಯಕ್ಷೇತ್ರ.

ದೊಡ್ಡಬಾಣಗೆರೆ ಪ್ರಕಾಶಮೂರ್ತಿ

ಕಾರುಣ್ಯಮೂರ್ತಿ

ಸಿದ್ಧಗಂಗೆಯ ಸಿದ್ಧಪುರುಷ ನೀನು
ಸಿದ್ಧಿಯನ್ನು ಪಡೆದ ಮಠದ ಅಧಿಪತಿಯಾಗಿ ನೀನು

ಬುದ್ಧನಂತೆ ಕಾಡಿಗೆ ಪಯಣಿಸಲಿಲ್ಲ
ಇದ್ದಲ್ಲಿಯೇ ದಾಸೋಹ ಮೂರ್ತಿ ಎನಿಸಿದೆಯಲ್ಲ

ಕಾವಿಯನು ಉಟ್ಟೆ
ಕಾಮಕ್ರೋಧಾದಿಗಳ ಬಿಟ್ಟೆ

ಎತ್ತರದ ನಿಲುವಿಗೆ ಹೆಸರಾದೆ
ಬೃಹತ್ತಾಗಿ ಮಹತ್ತಾಗಿ ಬೆಳೆದೆ

ನೀನು ಬೆಳೆದುದರ ಜೊತೆ ಜೊತೆಗೆ
ಬಡ ವಿದ್ಯಾರ್ಥಿಗಳ ಬೆಳೆಸಿ, ಇರಲು ಕೊಟ್ಟೆ ಜಾಗ

ಒರಟು ಕಲ್ಲುಗಳ ತಂದು
ಸುಂದರ ವಿಗ್ರಹಗಳಾಗಿ ಕಡೆದೆ ಇಂದು

ಜ್ಞಾನ ದಾಸೋಹಕ್ಕಿಂತ ಮಿಗಿಲಾದ ದಾಸೋಹವಿಲ್ಲ
ಅಜ್ಞಾನಿಗಳ ಸುಜ್ಞಾನಿಗಳ ಮಾಡಿದೆಯಲ್ಲ

ಕರುಣೆ ಕಾರಂಜಿಯಲಿ ಸಕಲ ಜೀವರ ತೊಳೆದೆ
ಧರೆಯ ಮೇಲಣ ಶೂನ್ಯ ಸಿಂಹಾಸನವನೇರಿದೆ
ಮುಗಿಲ ಗುರುಗಂಭವಾದೆ

ಬೆಳಗಿನೊಳಗಣ ಮಹಾಬೆಳಗು ನೀನು
ಅಶ್ವತ್ಥ ಮರದಂತೆ ವಿದ್ಯಾರ್ಥಿಗಳಿಗೆ ನೀನು
ತಂಪಾಗಿ ಕೊಡೆ ಹಿಡಿದು ನಿಂತೆ ಅಡ್ಡಲಾಗಿ ಭಾನು

ನಿನ್ನ ಮಾತು ಮುತ್ತಿನ ಹಾರ
ಕೊಂಕಿರದೆ ಗುರಿ ನೇರ

ನಿನ್ನ ಅಂಗಳದಲ್ಲಿ ಹರಿಯುತಿದೆ ದಾಸೋಹ
ತಣಿಸುತಿದೆ ಬಂದವರ ದಾಹ

ದಾಸೋಹಕ್ಕೆ ಜೋಳಿಗೆ ಹಿಡಿದು ನಡೆಯುತಿಹೆಯಲ್ಲ
ಬಿಸಿಲು, ಮಳೆ, ಗಾಳಿ ಎನ್ನದೆ ಕರೆದೆಡೆಯಲ್ಲೆಲ್ಲಾ

ನೀನು ಕಾರುಣ್ಯಮೂರ್ತಿ
ಎಲ್ಲ ಕಡೆ ಹಬ್ಬಿದೆ ನಿನ್ನ ಕೀರ್ತಿ

ನೀನು ಶುದ್ಧ ಅಪರಂಜಿ ಶಿವಕುಮಾರ
ನಿನ್ನ ಅಂತರಂಗ ದೀನ ದಲಿತರ ಸಾಕಾರ
ಸೇವೆಯಲಿ ಮಿದ್ದಿಕೊಂಡೆ
ಮನಸು ಮಲ್ಲಿಗೆಯ ಗೆದ್ದುಕೊಂಡೆ

ಮೇಲು ಕೀಳುಗಳೆಂಬ ಭೇದಗಳ ಬದಿಗೊತ್ತಿ
ದೀನ ದಲಿತರ ತಂಪಾಗಿಸಿದೆ ಅವರ ನೆತ್ತಿ

ಎಲ್ಲರನು ಅಪ್ಪಿಕೊಂಡೆ
ಸರ್ವಸಮಾನ ಸೌಧವನು ಕಟ್ಟಿಕೊಂಡೆ

ತ್ರಿವಿಧ ದಾಸೋಹಕ್ಕೆ ತೆರೆದ ಬಾಗಿಲು ನಿನ್ನ ಮಠ
ಮಹಾಮನೆಯ ನೆನಪ ಮರುಕಳಿಸುವುದೆ ನಿನ್ನ ಹಠ

ಹೃದಯ ಸಂಪುಟದಲ್ಲಿ ಭಕ್ತಿಭಾವ
ಕರುಣೆ ರಸಕ್ಕಿಲ್ಲ ನಿನ್ನಲ್ಲಿ ಅಭಾವ

ಹಸಿದು ಬಂದವನಿಗೆ ಈ ನೆಳಲ ತಂಪಿನಲಿ ಸದಾ ಸಿದ್ಧ
ಅಕ್ಷಯ ಪ್ರಸಾದ, ಬಡಿಸಲು ಎಲ್ಲರೂ ಸಿದ್ಧ

ಎಲ್ಲರಿಗೂ ಒಂದೆ ಮುದ, ಒಂದೆ ಹದ
ತೆರೆದಿರುವರು ಸದಾ ಮಠದ ಕದ

ನಿನಗೆ ಹೃದಯ ತುಂಬಿದ ನಮನಗಳು
ನಿನ್ನ ಆಶೀರ್ವಾದವೇ ನಮಗೆ ಬೆಳಕುಗಳು.

ಜೆ. ಶಾರದಾ ರಾಜಶೇಖರ್

ಗುರುಕುಲ ಗಾಥಾ

ಸುತ್ತು ಪರ್ವತ ಪಂಕ್ತಿ, ಪ್ರಕೃತಿನಿರ್ಮಿತ ದುರ್ಗ
ದುಶ್ಶಕ್ತಿ ಬರದವೊಲು ರಕ್ಷಿಸುತಿರೆ ;
ತಗ್ಗಿನ ತಪೋವನದಿ ವಾಸಿಸುವ ಋಷಿವರರು
ಬ್ರಹ್ಮರ್ಷಿಗೋತ್ರ ಸಂಜಾತರವರೆ.

ಬೆಟ್ಟಗಳ ಬುಡದಿಂದ ಹರಿವ ನದಿನದ ನಾದ
ಶುಕಪಿಕದ ಸಂಗೀತ ಹರಿಣದ ನೃತ್ಯ ;
ತೆಂಗುಕಂಗುಗಳು ತಲೆದೂಗುತಿರೆ ಬಯಲಲ್ಲಿ
ಸಸ್ಯಶ್ಯಾಮಲ ಶಾಲಿವನವು ನಿತ್ಯ.

ದೇವಮಂತ್ರವ ಜಪಿಸಿ, ಯಜ್ಞಯಾಗವ ನಡೆಸಿ
ಖ್ಯಾತ ಯತಿವರರ ಗುರುಕುಲ ಮೆರೆದಿದೆ ;
ಆಶ್ರಮದ ಶಿಕ್ಷಣಕೆ ಶಾಂತಜೀವನ ಧನ್ಯ
ವಟುವೃಂದವಲ್ಲಿಗೆ ಸದಾ ಹರಿದಿದೆ.

ಕೃಷ್ಣನು ಸುಧಾಮನೂ, ದ್ರುಪದನೂ, ದ್ರೋಣನೂ,
ಅಲ್ಲಿ ಎಲ್ಲರುವೊಂದೆ - ನಡತೆ ಸಾಕು
ಸಿರಿತನವೊ ಬಡತನವೊ ಜಾತಿಯೊ ವಿಜಾತಿಯೊ
ಜೀವನದಿ ನೈರ್ಮಲ್ಯವಿರಲೆ ಬೇಕು.

ಅಷ್ಟಾದಶ ಪುರಾಣ, ಶ್ರುತಿಸ್ಮೃತಿ ಸುವಿಜ್ಞಾನ
ಕಾವ್ಯನಾಟಕ ರಸಾಲಂಕಾರ ಪೂರ್ಣ
ಕುಲಪತಿಯ ಶ್ರೀಕಂಠ ಶಂಕನಾದದಿ ಮೊಳಗಿ
ಶ್ರದ್ಧಾನ್ವಿತ ಕುಮಾರ ಹೃದಯದೊಳಗೆ.

* * *

ಸಾಹಸ್ರ ಸಾಹಸ್ರ ವರ್ಷಗಳ ಹಿಂದೆಯೇ
ಭರತವರ್ಷದ ಪುಣ್ಯನೆಲದಿ ನೆಲಸಿ
ಪಾವನ ತಪೋವನದ ಗುರುಕುಲಗಳಲ್ಲಿಯೇ
ದಶಸಹಸ್ರದ ಶಿಷ್ಯವರ್ಗ ಪಠಿಸಿತ್ತು.

ಆಶ್ರಮದ ಶಿಷ್ಯರಿಗೆ ಅಶನವಸನಗಳಿತ್ತು
ವಿದ್ಯಾಸುಧೆಯ ಧಾರೆಯೆರೆಯುವ ಮಹರ್ಷಿ
ಅವನೆ ಕುಲಪತಿ ಶಕುಂತಲೆಯ ಸಾಕಿದ ತಂದೆ
ಭರತವಂಶದ ಕೀರ್ತಿಕಲಶ ಕಣ್ವರ್ಷಿ

ಆಶ್ರಮ ಕುಟೀರದಿ ಸದಾ ಪ್ರಣವದೋಂಕಾರ
ವೇದೋಪನಿಷತ್ತುಗಳ ಶಂಕನಾದ ;
ಬುದ್ಧಿ ಬೆಳಗುತ್ತಿರಲು ದೇಹವು ದೃಢಾಕಾರ
ಶ್ರದ್ಧೆಗೂ ಗೈಮೆಗೂ ಸಾಮ್ಯವಾದ.

ಗುರುಕುಲದಿ ಬೆಳೆಸುತಿಹ ತರುಗುಲ್ಮಲತೆಗಳಿಗೆ
ಕಟ್ಟೆಯನ್ನು ಕಟ್ಟಿ ನೀರೆರೆವ ನೀರೆಯರು ;
ಶಾಂತಿಹೋಮಕೆ ಸಮಿತ್ತು ಹಸಿವಿಗೆ ಫಲಾಹಾರ
ಬಾಣಸಕೆ ಕಟ್ಟಿಗೆಯ ತರುವ ವಟುವರರು.

ವಿದ್ಯೆ ಚಾಕರಿಗಲ್ಲ, ಬಾಳುವೆಯ ಬೆಳಕಿಂಗೆ,
ದೇಶದೇವರ ಸೇವೆಗೆಂದೆ ಸ್ನಾತಕರು ;
ಎಲ್ಲವರ ಆತ್ಮವೂ ಪರಮಾತ್ಮನಂಶವೆನೆ
ನಂಬಿ ನಡೆಯುವವರವರೆ ನಿಜಕು ಸಾಧಕರು.

* * *

ಮಾತೃಪಿತೃಗಳು ಮತ್ತೆ ಆಚಾರ್ಯ ಅತಿಥಿಯರು
ನಿನಗೆ ದೇವರು, ಮುಂದೆ ಕಲಿಕೆ ನಿಲದಿರಲಿ
ಸತ್ಯವನೆ ಹೇಳು, ಧರ್ಮದಿ ನಿನ್ನ ನಡೆಯಿರಲಿ
ಉತ್ತರೋತ್ತರವಾಗಿ ಬದುಕ ಬೆಳಗುತಿರು.

ಇಂತು ಹರಕೆಯ ತಡೆದು, ಆಚಾರ್ಯನಡಿಗೆರಗಿ
ಬಾಳಿದರು ಭರತವರ್ಷದ ಸಂತತಿ ;
ಮನೆ ತುಂಬಿ, ಮನ ತುಂಬಿ, ಪುತ್ರಪೌತ್ರರು ತುಂಬಿ
ಗುರುವರನ ವರ ಪಡೆದ ಆ ದಂಪತಿ.

* * *

ಇದು ಗುರುಕುಲದ ಗಾಥೆ ಭರತವರ್ಷದ ಪರಮ
ಪಾವನದ ಜೀವನದ ಶಿಕ್ಷಣದ ಸುಕಥೆ ;
ಸತ್ಯಕ್ಕೆ ಗೆಲವೆಂಬ, ಮಿಥ್ಯೆ ಸಲ್ಲದುಯೆಂಬ
ನಂಬುಗೆಯ ಶ್ರೀಮುಖದ ಗುರುಮಂತ್ರ ಗಾಥೆ.

ಕಯ್ಯಾರ ಕಿಞ್ಞಣ್ಣ ರೈ

ಬಹುರೂಪಿ

ನಾನು ಮಾನವ ಪ್ರಜ್ಞೆ, ಈಶ್ವರನ ಇಚ್ಛೆ ।
ಮಿಂಚುಗಳ ಕಂಪನವು, ಮೋಡಗಳ ಹನಿಯು ।
ವಿರಹಿಗಳ ಶೃಂಗಾರ, ಪ್ರೇಮಿಗಳ ಮೋದ ।
ಧೀಮಂತ, ಶ್ರೀಮಂತ, ಕಲೆಗಳ ನಾದ ।
ವಿಶ್ವಚೇತನ ನಾನು, ಬಹುರೂಪಿ ನೋಡಿ ॥
ಈ ವಿಶ್ವಸುಂದರಿಯ ವೈಯ್ಯಾರ ನೋಡಿ ॥ ೧ ॥

ಸಿಂಧುವಿನಲಿ ಬಿಂದು, ಬಿಂದುವಿನಲಿ ಸಿಂಧು ।
ವಿಶ್ವದಲಿ ಕಣವು, ಕಣದಲ್ಲಿ ವಿಶ್ವ ।
ನಾನು ಮಾನವನೋ, ದೇವನೋ ಕಾಣೆ ।
ಎನ್ನಾತ್ಮದರ್ಶನವು, ಎಲ್ಲಕಡೆಯಲ್ಲಿ ।
ನನ್ನ ನಾ ಪ್ರೀತಿಸುವೆ, ಆತ್ಮಗೌರವ ನೋಡಿ ॥
ಈ ವಿಶ್ವನರ್ತಕಿಯ ವೈಯ್ಯಾರ ನೋಡಿ ॥ ೨ ॥

ಹೃದಯಗನ್ನಡಿಯಲ್ಲಿ ವಿಶ್ವದರ್ಶನವು ।
ಕರಿಯು ಕನ್ನಡಿಯೊಳಗೆ ಅಡಗಿದಂತೆ ।
ಇಲ್ಲಿ ಎಲ್ಲರ ಸಂಗ, ಅಲ್ಲಿ ದೇವರ ಸಂಗ ।
ಈ ಎರಡು ಸತ್ಯಗಳ ನಾನು ಸಂಗಮವು ।
ನಾನೆಲ್ಲಿ ಹೊಸಬನೆ, ಹಳೆಬೇರು ಹೊಸಚಿಗುರು ॥
ಈ ವಿಶ್ವಸುಂದರಿಯ, ವೈಯ್ಯಾರ ನೋಡಿ ॥ ೩ ॥

ಸಂಶಯವು ನಾನಲ್ಲ, ನಿಶ್ಚಯವೂ ನಾನಲ್ಲ ।
ಇರುವವನು ನಾನಲ್ಲ, ಇಲ್ಲದೆಯೂ ಇಲ್ಲ ।
ಪರದೆಗಳ ಹಿಂದೆ, ಅಡಗಿ ಕೂತವನಲ್ಲ ।
ಎಲ್ಲರಲಿ ಬೆರೆತರೂ, ಎಲ್ಲೂ ಕಾಣುವುದಿಲ್ಲ ।
ಜೀವನ ಮೃತ್ಯುಗಳ ನಾಟಕವ ನೋಡಿ ॥
ಈ ವಿಶ್ವಸುಂದರಿಯ ವೈಯ್ಯಾರ ನೋಡಿ ॥ ೪ ॥

ಯಾರ ಪ್ರತಿನಿಧಿಯಾಗಿ, ನಾನು ಬಂದಿಹೆನಿಲ್ಲಿ ।
ಬುದ್ಧಿಯು ಭ್ರಮೆಗೆ ಶರಣುಹೋಗಿಹುದಿಲ್ಲಿ ।
ನನ್ನ ಜೀವನವೇ ಚಿತ್ರ ವಿಚಿತ್ರ ।
ಮನಕೆ ಶಾಂತಿ,ಸ್ಥಿರತೆ, ನೆಮ್ಮದಿಗಳಿಲ್ಲ ।
ಯಾರ ಪ್ರತಿಮೆಯೋ, ಪ್ರತೀಕವೋ ನೋಡಿ ॥
ಈ ವಿಶ್ವಸುಂದರಿಯ ವೈಯ್ಯಾರ ನೋಡಿ ॥ ೫ ॥

ನಾನು ಹಿಂದು, ಸೀಖ, ಮುಸ್ಲಿಂ, ಈಸಾಯಿ ।
"ಅಹಂ ಬ್ರಹ್ಮಾಸ್ಮಿ" ಎಂದು ನೇಣೆಗೇರಿದೆನು ।
"ಸತ್ಯಂ ಶರಣಂ ಗಚ್ಛಾಮಿ" ಎನ್ನುವೆನು ।
ದೇಹದಾತ್ಮನು ನಾನು, ನಿರ್ಜೀವಿ ದೇಹ ।
ಸತ್ಯಸತ್ಯಗಳ ಸಂಗಮವು ನೋಡಿ ॥
ಈ ನೃತ್ಯಸುಂದರಿಯ, ವೈಯ್ಯಾರ ನೋಡಿ ॥ ೬ ॥

ಡಾ. ಕೆ.ಮುದ್ದಣ್ಣ

ಶ್ರೀ ಸಿದ್ಧಗಂಗೆಯ ಶ್ರೀಚರಣದಲ್ಲಿ

ಹರನ ಕರುಣೋದಯದ ತೆರದಲಿ ಬೆಳಗು ತೆರೆಯುವ ಹೊತ್ತಿಗೆ ।
ವೇದ ಘೋಷದ ದಿವ್ಯಲಹರಿಯು ಮನವ ತೊಳೆಯಲು ಮೆಲ್ಲಗೆ
ಬರುವ ಶ್ರೀಗುರು ಪಾದುಕೆಯ ದನಿ ಅನುರಣಿತವಾಗಲು ಮೌನಕೆ ।
ಸಿದ್ಧಗಂಗೆಯ ನೆಲವು ಜಲವೂ ನಮಿಸಿ ನಿಲುವುದು ಸುಮ್ಮಗೆ

ಬೆಟ್ಟ ಬಂಡೆಯ ನಡುವೆ ಗಿಡ ಮರ ಹೂವನೆತ್ತಿರೆ ಪೂಜೆಗೆ ।
ದೇಗುಲದ ಪೂಜಾರತಿಯ ಗಂಟೆಯ ಮೊಳಗು ಮುಟ್ಟಲು ಬಾನಿಗೆ
ಧೂಪಗಂಧವು ಮಂದ ಮಂದಾನಿಲನ ಜೊತೆಯೊಳು ಮನಸಿಗೆ ।
ಸಂಭ್ರಮವನುಕ್ಕಿಸೆ ಬೆಳಗು ಇಳಿವುದು ಸಿದ್ಧಗಂಗೆಯ ಕ್ಷೇತ್ರಕೆ

ಇಲ್ಲಿ ಇಲ್ಲ ಪವಾಡದದ್ಭುತ ಅಥವಾ ಉತ್ಸವದಬ್ಬರ ।
ಮುಡಿಯನೆತ್ತಿದೆ ಸರಳ ಸಾಧಾರಣದ ಬದುಕಿನ ಗೋಪುರ
ಅದರ ಮೇಲಿದೆ ತ್ಯಾಗ ಧ್ವಜ ಕೈಬೀಸಿ ಕರೆವುದು ಪಥಿಕರ ।
ಪರಮ ನಿರಪೇಕ್ಷೆಯಲಿ ದಿನವೂ ಸೇವೆಗಾಗಿದೆ ಸರ್ವರ

ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ ಲಕ್ಷ ಜನಗಳ ಪೊರೆದಿದೆ ।
ತೀರ್ಥವಾಗಿದೆ ಭಕ್ತರಿಗೆ ಜೊತೆಗೇ ಸ್ಫೂರ್ತಿಯಾಗಿದೆ ಬುದ್ಧಿಗೆ
ಬಂದ ಹಣತೆಗೆ ಎಣ್ಣೆ ಬತ್ತಿಯ ದೀಪ್ತಿ ದಾನವ ಮಾಡಿದೆ ।
ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೊ ರೆಕ್ಕೆಯ ಹಾದಿಗೆ

ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ ।
ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ
ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ ।
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ.

ಡಾ. ಜಿ.ಎಸ್. ಶಿವರುದ್ರಪ್ಪ

('ಸಿದ್ಧಗಂಗಾ ಶ್ರೀ' ಯಿಂದ)

ಗೋಸಲ ಪರಂಪರೆ

ಗೋಸಲ ಸಿದ್ಧೇಶ್ವರರು - ಒಂದು ಅಧ್ಯಯನ

ಗೋಸಲ ಪರಂಪರೆಯ ಮಹಾಬೆಳಗು

ಗೋಸಲ ಪೀಠ ಪರಂಪರೆಯ ಸಾಹಿತ್ಯ

ಬೋಳ ಬಸವೇಶ್ವರರು - ಒಂದು ಅಧ್ಯಯನ

ಗೋಸಲ, ಗೋಸಲ ಸಿದ್ಧೇಶ್ವರರು - ಒಂದು ಅಧ್ಯಯನ

ಪ್ರೊ. ಸಿ.ಮಹಾದೇವಪ್ಪ

ಶ್ರೀ ಸಿದ್ಧಲಿಂಗೇಶ್ವರರ ಗುರುಪರಂಪರೆಯ ಗೋಸಲದೇವರು, ಗೋಸಲಾರ್ಯ, ಗೋಸಲೇಶ, ಗೋಸಲಾರ್ಯಗುರು ಯತಿ, ಗೋಸಲಿಯ ಸಿದ್ಧೇಶ್ವರ ಸ್ವಾಮಿ ಹಾಗೂ ಗೋಸಲ ಚೆನ್ನಬಸವೇಶ್ವರರ ಅಂಕಿತನಾಮಗಳಲ್ಲಿ ಕಂಡುಬರುವ 'ಗೋಸಲ' ಇಲ್ಲವೆ 'ಗೋಸಲಿ' ಶಬ್ದದ ಅರ್ಥವೇನು ಎಂಬುದರ ಜಿಜ್ಞಾಸೆ ಈವರೆಗೆ ನಡೆದಿದ್ದರೂ ಯಾವ ನಿರ್ಣಯಕ್ಕೂ ಬಂದಂತೆ ಕಂಡುಬರದು. ಹಾಗೆ ನಿರ್ಣಯಿಸಲಾಗದಿದ್ದರೂ ಗೋಸಲ ಶಬ್ದದ ಅರ್ಥಪ್ರತಿಪಾದನೆಯಾದರೂ ಸಾಂಗವಾಗಿ ಸಾಗಿದಂತಿಲ್ಲ. 'ಗೋಶಾಲೆ'>ಗೋಸಾಲೆ>ಗೋಸಲ' ಆಗಿರಬಹುದೆಂಬ ಅನಿಸಿಕೆ ಮಾತ್ರ ವ್ಯಕ್ತಪಟ್ಟಂತಾಗಿದೆ. ಅದೂ ಭಾಷಾಶಾಸ್ತ್ರೀಯ ವಿಶ್ಲೇಷಣೆಯಂತಲ್ಲ. ಗೋಸಲ ಚೆನ್ನಬಸವೇಶ್ವರರು ತಮ್ಮ ಗುರುಪರಂಪರೆಯಲ್ಲಿನ ಗೋಸಲ ಸಿದ್ಧೇಶ್ವರರ ಹೆಸರಿನಲ್ಲಿ ಪ್ರಸಿದ್ಧವಾದ 'ಗೋಸಲ' ಶಬ್ದವನ್ನು ತಾವೂ ಗೋವಿಗೆ ಕೊಟ್ಟ ಮಹತ್ವದ ದೃಷ್ಟಿಯಿಂದ, ತಳೆದಿರಬಹುದೆಂದು ಊಹಿಸಿ ಇದು ಇನ್ನೂ ಸಂಶೋಧನೆಗೆ ಒಳಪಡಬೇಕಾದ ವಿಚಾರವೆಂಬ ಅಭಿಪ್ರಾಯ ಮಾತ್ರ ಖಚಿತಗೊಂಡಂತಿದೆ.

ಶ್ರೀ ಸಿದ್ಧಲಿಂಗೇಶ್ವರರು ಕಗ್ಗೆರೆಯ ತೋಟದಲ್ಲಿ ತಪಸ್ಸಿಗೆ ಬಹು ದೀರ್ಘಕಾಲ ಕುಳಿತಿದ್ದರಿಂದ ಅವರ ಮೈಮೇಲೆ ಬೆಳೆದ ಹುತ್ತದ ಬಾಯಿಗೆ ಗೋವೊಂದು ಬಂದು ಪ್ರತಿದಿನವೂ ಕೆಚ್ಚಲ ಸೊರೆಬಿಟ್ಟು ಹಾಲುಕೊಟ್ಟು ಹೋಗುತ್ತಿತ್ತೆಂಬ ಪ್ರತೀತಿ ಪ್ರಸಿದ್ಧವಷ್ಟೆ! ಗೋಸಂಬಂಧವಾದ ಈ ಘಟನೆಗೂ 'ಗೋಸಲ' ಶಬ್ದವನ್ನು ಆ ಹಿಂದಿನ ಯತೀಶ್ವರರು ಸ್ವೀಕರಿಸಿ ಜನಜನಿತವಾದುದಕ್ಕೂ ಹೇಗೆ ಸಂಬಂಧವನ್ನು ಕಲ್ಪಿಸುವುದು ಎಂದ ಬಳಿಕ 'ಗೋಸಲ' ಶಬ್ದಕ್ಕೆ ವ್ಯಾಪಕವೂ ಗೂಢವೂ ಆದ ಅರ್ಥವಿರಬೇಕೆಂದು ತಿಳಿಯಬಹುದು.

ಶ್ರೀ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಒಂದು ವಚನದಲ್ಲಿ ತಮ್ಮ ಗುರುಪರಂಪರೆಯನ್ನು ಪ್ರಕಟಿಸುತ್ತ 'ಹರದನಹಳ್ಳಿಯ ಗೋಸಲದೇವರ'ನ್ನು ಹೆಸರಿಸಿರುವರು. ಆ ಗುರುಪರಂಪರೆಯಲ್ಲಿ ಗೋಸಲೇಶ್ವರರು ಹನ್ನೆರಡನೆಯ ಪಟ್ಟಮೂರ್ತಿಗಳು, ತೋಂಟದ ಸಿದ್ಧಲಿಂಗೇಶ್ವರರ ಗುರುಪರಂಪರೆಗೆ ಹಿಂದಿನ ಶೂನ್ಯಪೀಠಾಧಿಪತಿಗಳಾದ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರರನ್ನು ಒಳಗೊಂಡಂತೆ ನಿರಂಜನ ವಂಶರತ್ನಾಕರದಲ್ಲಿ ಕಾಣಿಸಿರುವ ಗುರುಪರಂಪರೆ:

1 ಅಲ್ಲಮಪ್ರಭು	ಶ್ರೀ ಶೈಲದ ಕದಲೀಮಠದಲ್ಲಿ ಐಕ್ಯ. (ಕದಲೀ/ಳೀ: ಅರ್ಥ 'ವೈಜಯಂತಿ/ ನಿಶಾನಿ 1. ಗುಹೆ 2. ಕದಲೀವನ-ಗುಹಾರಣ್ಯ: ನಿಶಾನಿಮಠ) ನೋ : ಅಡಿಟಿ-೧.
2 ಚೆನ್ನಬಸವೇಶ್ವರರು	ಉಳಿವೆಯ ಮಹಾಮನೆಯಲ್ಲಿ ಇವರ ಗದ್ದುಗೆ.
3 ಸಿದ್ಧರಾಮೇಶ್ವರರು	ಸೊನ್ನಲಾಪುರ ಇವರ ಐಕ್ಯಸ್ಥಳ.
4 ಅನಾದಿ ಗಣನಾಥ	ಇವರು ಬಯಲಾದುದು ಕೊಂಕಣ ಕಡಲತಡಿಯ ಕಲ್ಮಠದಲ್ಲಿ.
5 ಆದಿಗಣೇಶ್ವರ (ಪ್ರಭುಸ್ವಾಮಿ)	ಕೊಳ್ಳೇಗಾಲ ತಾಲ್ಲೂಕು ಕುಂತೂರು ಪ್ರಭುಸ್ವಾಮಿ ಬೆಟ್ಟದ ಬಳಿಯ ಮಠದಲ್ಲಿ ಐಕ್ಯ.
6 ನಿರ್ಮಾಯ ಗಣೇಶ್ವರರು (ಮಹದೇಶ್ವರ ಸ್ವಾಮಿ)	ಕೊಳ್ಳೇಗಾಲ ತಾ. ಮಹದೇಶ್ವರ ಬೆಟ್ಟದಲ್ಲಿ ನಿರ್ವಯಲಾದರು.
7 ನಿರಂಜನಸ್ವಾಮಿಗಳು (ಮಹದೇಶ್ವರನ ಮಲೆ-)	ಕಲ್ಯಾಣದ ತ್ರಿಪುರಾಂತಕ ಕೆರೆಯ ತಟದ ರುದ್ರಮುನಿಸ್ವಾಮಿಗಳ ಮಠದಲ್ಲಿ ಐಕ್ಯವಾದರು.
8 ಜ್ಞಾನಾನಂದ ಸ್ವಾಮಿಗಳು	ಕಲ್ಯಾಣದಿಂದ ಬಂದು ಶ್ರೀಶೈಲದ ಪ್ರಭುದೇವರ ಮಠದಲ್ಲಿ ಬಯಲಾದರು.
9 ಆತ್ಮಗಣವರರು	ಶ್ರೀಶೈಲದ ಕದಳಿ (ಗುಹೆ)ಯ ಬನದಲ್ಲಿ ನಿರ್ವಯಲಾದರು.
10 ಅಧ್ಯಾತ್ಮ ಗಣನಾಥರು	ತಿರುವಣ್ಣಾಮಲೆಯ 'ಕೆಂಗನಮಃಶಿವಾಯಗವಿ'ಯಲ್ಲಿ ಐಕ್ಯವಾದರು.
11 ರುದ್ರಮುನಿಸ್ವಾಮಿಗಳು	ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿಯಲ್ಲಿ ಸಮಾಧಿಸ್ಥರಾದರು.
12 ಬಸವಪ್ರಭುಸ್ವಾಮಿಗಳು	ಬಿಜಾಪುರ ಜಿ. ಜಮಖಿಂಡಿ ತಾ. ತೇರದಾಳದಲ್ಲಿ ತೋರಗದ್ದುಗೆಯಿದೆ.

13 ಆದಿಲಿಂಗದೇವರು	ಬೆಳಗಾಂವ ಜಿ. ಸವದತ್ತಿ ತಾ. ಸುಗೋಲಾಶ್ರಮವಾದ ಸೊಗಲಕ್ಷೇತ್ರದ ಕಲ್ಲೂರು [ಈಗಿನ ಕಲ್ಲಾಪುರ ?] ಗುಡ್ಡದಲ್ಲಿ ಇವರ ಗದ್ದುಗೆಯಿದೆ.
14 ಚೆನ್ನವೀರಸ್ವಾಮಿಗಳು	ಅದೇ ಸವದತ್ತಿ ತಾ. ನ ಅಗಸ್ತ್ಯಾಶ್ರಮವಾದ ಮುನಿಪಲ್ಲಿ, ಈಗಿನ ಮುನವಳ್ಳಿ/ ಮನೋಳಿಯ ಪಂಚಲಿಂಗೇಶ್ವರ ದೇವಾಲಯದ ಮಠದಲ್ಲಿ ಇವರ ಗದ್ದುಗೆಯಿದೆ.
15 ಹರದನಹಳ್ಳಿಯ ಗೋಸಲ ದೇವರು (ಗೋಸಲ ಸಿದ್ಧೇಶ್ವರರು ೭)	ತುಮಕೂರು(ಜಿ) ಸಮೀಪದ ಸಿದ್ಧಗಂಗೆಬೆಟ್ಟದ ಗವಿಯಲ್ಲಿ ಇವರ ಶಿವಯೋಗ ಸಮಾಧಿಯಿದೆ.
16 ಶಂಕರದೇವರು	ತುಮಕೂರು ಜಿ. ಕೊರಟಗೆರೆ ಸಮೀಪದ ಬೆಟ್ಟದಲ್ಲಿ ಇವರ ಐಕ್ಯ.
17 ದಿವ್ಯಲಿಂಗದೇವರು	ಮೈಸೂರು ಜಿ. ಚಾಮರಾಜನಗರ ತಾ. ಹರದನಹಳ್ಳಿ ಅಣೆಲೇಶ್ವರ ಶಿವಾಲಯದಲ್ಲಿ ಇವರ ಶಿವಯೋಗಸಮಾಧಿಯಿದೆ.
18 ಗೋಸಲ ಚೆನ್ನಬಸವೇಶ್ವರರು	ತುಮಕೂರು ಜಿ.ಗುಬ್ಬಿ (ತಾ) ಮಠದಲ್ಲಿ ಇವರ ತೋರಗದ್ದುಗೆಯಿದೆ.
19 ತೋಂಟದ ಸಿದ್ಧಲಿಂಗೇಶ್ವರರು	ಅದೇ ಜಿ. ಕುಣಿಗಲು ತಾ. ಎಡೆಯೂರಿನ ಸ್ವಾಮಿಮಠದಲ್ಲಿ ಶಿವಯೋಗದಲ್ಲಿ ಮೂರ್ತಗೊಂಡ ತೋರಗದ್ದುಗೆಯಿದೆ.

ಈ ಗುರುಶಿಷ್ಯಸಂಬಂಧದ ಮೂಲ ಅನಾದಿವಿಡಿದು ಬಂದದ್ದೆಂಬುದಕ್ಕೆ ಅವರ ಮುಂದಿನ ವಚನವೇ ಸಾಕ್ಷಿ:

ಅನಾದಿ ಗಣೇಶ್ವರನ ಶಿಷ್ಯ ಆದಿಗಣೇಶ್ವರ;
ಆದಿಗಣೇಶ್ವರನ ಶಿಷ್ಯರು ನಿರ್ಮಾಯನೆಂಬ ಗಣೇಶ್ವರ;
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರರು;
ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರರು;
ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರರು;
ಆತ್ಮಗಣೇಶ್ವರನ ಶಿಷ್ಯರು ಅಧ್ಯಾತ್ಮ ಗಣೇಶ್ವರರು;
ಅಧ್ಯಾತ್ಮನೆಂಬ ಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರರು;
ರುದ್ರನೆಂಬ ಗಣೇಶ್ವರರ ಶಿಷ್ಯರು ಬಸವಪ್ರಭುದೇವರು;
ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು;
ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು;
ಚೆನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿಯ ಗೋಸಲದೇವರು;
ಹರದನಹಳ್ಳಿಯ ಗೋಸಲದೇವರ ಶಿಷ್ಯರು ಶಂಕರದೇವರು;
ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು;
ದಿವ್ಯ ಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು;
ಚೆನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾನಯ್ಯ.

ಸಿದ್ಧಲಿಂಗೇಶ್ವರರ ಗುರುಗಳಾದ ಚೆನ್ನಬಸವೇಶ್ವರರು ಗೋಸಲ ಚೆನ್ನಬಸವೇಶ್ವರರೆಂದೇ ಪ್ರಸಿದ್ಧರಾದವರು. ಲೋಕರೂಢಿಯಲ್ಲಿ ಗುಬ್ಬಿಯಪ್ಪ ಎಂದು ಕರೆಯುವರು. ಗುಬ್ಬಿಯ ಗುರುವಾಗಿ ಅಲ್ಲಿ ನೆಲಸಿರುವುದೇ ಅದಕ್ಕೆ ಕಾರಣ. ಅವರನ್ನು ಕವಿ ಶಾಂತೇಶನು ತನ್ನ ಸಿದ್ಧೇಶ್ವರಪುರಾಣ (ಕ್ರಿ.ಶ.1561)ದಲ್ಲಿ 'ಗೋಸಲೇಶ'ನೆಂದೇ ಕರೆದಿದ್ದಾನೆ. ಆತನೆ ತೋಂಟದ ಸಿದ್ಧಲಿಂಗೇಶ್ವರರನ್ನು 'ತೋಂಟದ ಚೆನ್ನಿಧಾನ,' 'ತೋಂಟದ ಸಿದ್ಧೇಶ'ನೆಂದು ಕರೆದಿರುವುದಕ್ಕೂ 'ಗೋಸಲ' ಶಬ್ದಕ್ಕೂ ಏನು ಸಂಬಂಧ ಎಂಬುದನ್ನು ನೋಡೋಣ:

'ಗೋಸಲ' - ಇದೊಂದು ಸಮಸ್ತಪದ. 'ಗೋ' ಮತ್ತು 'ಸಲ' ಎಂಬ ಎರಡು ಪದಗಳು ಕೂಡಿ ಆದದ್ದು. 'ಗೋ' ಎಂಬ ಪದಕ್ಕೆ ಇರುವ ಅರ್ಥ ಒಂದಲ್ಲ ಹಲವಾರು: 'ಗೋ' (೧) ಹಸು, ಹಸುವಿನ ಉತ್ಪನ್ನಗಳು (೨) ವೃಷಭ-ಎತ್ತು (೩) ನಕ್ಷತ್ರ (೪) ಆಕಾಶ (೫) ಸಿಡಿಲು (೬) ಕಿರಣ (೭) ರತ್ನ ಇಲ್ಲವೆ ವಜ್ರ (೮) ಸ್ವರ್ಗ (೯) ಬಾಣ (೧೦) ಭೂಮಿ (೧೧) ವಾಕ್-ಮಾತು (೧೨) ಸರಸ್ವತಿ (೧೩) ತಾಯಿ (೧೪) ದಿಕ್ಕು (೧೫) ಶಿರೋಜ - ಮುಡಿ, ಜಡೆ, ಕೇಶ (೧೬) ಶಿರಸ್ಸು (೧೭)

ಮೈಗೂದಲು (೧೮) ಉದಕ (೧೯) ಇಂದ್ರಿಯ (೨೦) ಕುದುರೆ (೨೧) ತ್ರಿವಿಷ್ಟಪ–ತ್ರಿದಿವ (ಇದೇ ೮) (೨೨) ದ್ವಿಪದ-ನರ (೨೩) ನೇತ್ರ (೨೪) ಲಜ್ಜಾ-ನಾಚಿಕೆ (೨೫) ಗುರು (೨೬) ಕರಿ-ಆನೆ (೨೭) ಪ್ರಭಾ, ಜ್ಯೋತಿ-ಬೆಳಕು (೨೮) ರಮಾ (೨೯) ಶ್ರೀ (೩೦) ಉಮಾ (೩೧) ಶರಣ (೩೨) ವರ (೩೩) ಕುಕ್ಷಿ (೩೪) ಬಸ್ತೂ (೩೫) ಕಿವಿ (೩೬) ಅಲೆ (೩೭) ಪಕ್ಷಿ (೩೮) ಶೃಂಗ-ಕೊಂಬು (೩೯) ಸೂರ್ಯ (೪೦) ಚಂದ್ರ (೪೧) ವಾಯು (೪೨) ಪರ್ವತ (೪೩) ನಾಗ (೪೪) ವೃಕ್ಷ (೪೫) ವಾಸಸ್ಥಾನ - ಮನೆ (೪೬) ದೃಷ್ಟಿ (ಇದೇ ೨೩) (೪೭) ವಸ್ತ್ರ (೪೮) ಪಾಖಂಡವಾಕ್ (೪೯) ಒಬ್ಬಾನೊಬ್ಬ ಋಷಿಯ ಹೆಸರು (೫೦) ವೇದ (೫೧) ನಾಲಗೆ ಇತ್ಯಾದಿ.

ಇನ್ನು 'ಸಲ' ಎಂಬ ಮಾತಿಗಿರುವ ಅರ್ಥವನ್ನು ಗಮನಿಸಬಹುದು. ಸಲ್-ಚಲ್-ಚರ್ ಎಂಬ ಧಾತುಗಳಿಗೆ 'ಚರಿಸು', ಚಲಿಸು, ನಡೆ ಎಂಬುದೆ ಅರ್ಥ. 'ಚರ್ + ಅ': 'ಚರ' ಆದಂತೆ 'ಸಲ್+ಅ': 'ಸಲ' ಆಗಿ ಚರಿಸುವವ ಎಂಬ ಅರ್ಥ ಹೊಂದಿದೆ. ಎಡೆಯೂರ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆಯ ಅಂಗಳದ ಸುತ್ತಾಲದ ಜಗಲಿಯಲ್ಲಿ ನಟ್ಟಿ ಶಿಲಾಶಾಸನದ ಪೀಠಿಕಾರಂಭದ 'ಜಗಹಿತಾರ್ಥವಾಗಿ ಚರಿಸಿದ ಕ್ರಮವೆಂತೆಂದರೆ' ಎಂಬ ವಿವರವಿದೆ. 'ಗೋ' (-ಭೂ) ಸ್ಥಲ-(ತಳ/ಸ್ಥಳ/ಸಳ)- 'ಸಲ'ವೇ 'ಗೋಸಲ'ವಾಗಿ 'ಜಗತೀತಳ' ವೆಂಬರ್ಥವನ್ನು ತಾಳಿದೆ. ಲೋಕಹಿತಾರ್ಥವಾಗಿ ಭೂಸಂಚಾರಮಾಡುತ್ತ ಜನಸಾಮಾನ್ಯರಿಗೆ ಉಪದೇಶಮಾಡುವ ಗುರು, ಜಂಗಮ ಇಲ್ಲವೆ ಚರಂತ, ಚರಾಚಾರ್ಯ ಎಂಬ ಅರ್ಥದ ವೈಶಿಷ್ಟ್ಯವನ್ನು ಪಡೆದ ಶಬ್ದ 'ಗೋಸಲ'. 'ಗೋಸಲದೇವರು', 'ಗೋಸಲೇಶ,' 'ಮೇದಿನೀಸ್ವಾಮಿ', 'ಜಗದ್ಗುರು' - ಇವು ಏಕಾರ್ಥವಾಚಕಗಳು. ಕೇವಲ ದೇಶಿಕ, ಪರಿವ್ರಾಜಕರಾಗದೆ ದೇಶಿಕೋತ್ತಮರೂ, ಪರಿವ್ರಾಜಕಾಚಾರ್ಯರೂ ಎಂದೆನಿಸಿದವರು. "ಆ ದೇಶಮಧ್ಯದಲ್ಲಿರುವ ಗೋಸಲಿಯ ಯತೀಶ್ವರರಾದ ಸಿದ್ಧೇಶ್ವರಸ್ವಾಮಿ" ಎಂಬಲ್ಲಿ ಪ್ರಯೋಗವಾಗಿರುವ 'ಗೋಸಲಿ' ಪದ ಒಂದು ಊರ ಹೆಸರಾಗಿರಬಹುದು ಎಂಬ ಸಂದೇಹ ಸಹಜವಾದದ್ದೆ. ಆ ಶಬ್ದರೂಪವನ್ನು ಹೋಲುವ ಊರುಗಳ ಹೆಸರುಗಳಿಲ್ಲದೆ ಇಲ್ಲ. ಉದಾ: ಸ್ವಾಸಲಿ/ಸೋಸಲಿ>ಸೋಸಲೆ ಎಂಬುದೂ ಒಂದು. ಇದು ಮೈಸೂರು ಜಿಲ್ಲೆ ಕಾವೇರಿ-ಕಪಿಲಾ ಸಂಗಮಕ್ಕೆ ಮೊದಲೆ ಅನತಿದೂರದಲ್ಲಿ ಕಾವೇರಿನದೀತೀರದ ಮೇಲಿದೆ. ಯೋಗೀಶ್ವರರೂ, ಶರಣರೂ, ಕವಿಗಳೂ ಇದ್ದ ಊರು. ಒರಿಸ್ಸಾ ದೇಶದ ಈಗಿನ ಧೌಳಿ, ಹಿಂದೆ 'ತೋಸಲಿ' ಎಂದು ಹೆಸರುಗೊಂಡಿದ್ದಿತು. ಆದರೆ 'ಗೋಸಲಿ' ಎಂಬ ಊರು ಇದ್ದಿತು ಎಂಬುದಕ್ಕೆ ಯಾವ ದಾಖಲೆಯೂ ಇದ್ದ ಬಗ್ಗೆ ಮಾಹಿತಿಯಿಲ್ಲ.

'ಗೋ' ಶಬ್ದಕ್ಕೆ ಹಿಂದೆ ಕೊಟ್ಟಿರುವ ಅರ್ಥಗಳಲ್ಲಿ 'ಗುರು' ಎಂಬ ಅರ್ಥವಿದ್ದಂತೆ 'ವೃಕ್ಷ', 'ಭೂಜ' ಎಂಬ ಮತ್ತೊಂದು ಅರ್ಥವೂ ಉಂಟಷ್ಟೆ 'ಸ್ಥಲಿ' ಸಂಸ್ಕೃತ ಶಬ್ದವೆ 'ಸಲಿ' ಎಂಬ ತದ್ಭವರೂಪ ಹೊಂದಿ 'ಗೋ' ಶಬ್ದದೊಡನೆ ಕೂಡಿ 'ಗೋಸಲಿ' ಯಾಗಿದೆ. ಮರಗಳಿರುವ ಸ್ಥಳ, ತೋಪು, ಉಪವನ, ಕಡೆಗೆ ಅರಣ್ಯ ಎಂಬರ್ಥವನ್ನೇ ಹೊಂದಿದ್ದಾಗಿದೆ. 'ಸಾಲ್' ಎಂಬ ಶಬ್ದಕ್ಕೂ 'ರಾಜಿ' ರಾಶಿ, ಗುಂಪು ಎಂದು ಅರ್ಥವಿರುವುದರಿಂದ ಗೋಸಲ್, ಗೋಸಲ, ಗೋಸಲಿ ಎಂಬ ಈ ಎಲ್ಲ ಪದಗಳಿಗೂ ತೋಪು, ವನ, ತೋಟ ಎಂದೇ ಅರ್ಥವಿದ್ದು ಹರದನ ಹಳ್ಳಿಯ ಗುರುಪರಂಪರೆಯ ವಾಸಸ್ಥಳದ ನಿರ್ದೇಶಕ ಪದವಾಗಿ ಕಂಡುಬರುತ್ತದೆ. ಆ ಕಾರಣದಿಂದಲೇ ತಾನೆ, ಶ್ರೀ ಸಿದ್ಧಲಿಂಗೇಶ್ವರರಿಗೆ ಶಿವನೆ 'ತೋಂಟದ ಸಿದ್ಧೇಶ್ವರ'ನೆಂದು ಹೆಸರಿಟ್ಟನೆಂದು ಶಾಂತೇಶನು ತನ್ನ ಕೃತಿಯಲ್ಲಿ ವರ್ಣಿಸಿದ್ದಾನೆ. ಈ ಹರದನಹಳ್ಳಿಯ ಸಿದ್ಧೇಶ್ವರನ ಶಿಷ್ಯಪರಂಪರೆ ತೋಂಟದ ಗುರುಪರಂಪರೆಯೆಂದೇ ಪ್ರಸಿದ್ಧವಾಗಿದ್ದುದಕ್ಕೆ ಸೋಸಲಿಯ ತೋಪಿನ ಮಠವೂ ಒಂದು ನಿದರ್ಶನವಾಗಿದೆ. ನಿರಂಜನಪೀಠಕ್ಕೂ ತೋಂಟಕ್ಕೂ ಅವಿನಾಸಂಬಂಧವಿದ್ದಂತೆ ಕಾಣುತ್ತದೆ. 'ಸಲ' (ತೆ), ಸಾಲಮು (ತೆ) - ಈ ಎರಡು ಶಬ್ದಗಳಿಗೂ ತೆಲುಗಿನಲ್ಲಿ ಪ್ರತಿಬಂಧ (barricade), ಪ್ರಾಕಾರ (enclosure), ಗುಪ್ತಿ (protection) ಎಂಬ ಅರ್ಥ ಬಳಕೆಯಲ್ಲಿದ್ದುದರಿಂದಲೋ ಏನೋ ಸೋಸಲಿಯ ತೋಪಿನ ಮಠ ಮರಗಳ ಗುಂಪಿನ, ಕೇವಲ ಹೂಗಿಡಗಳ ಬೇಲಿಯೇ ಮಠದ ಒಂದು ಬದಿಗೂ, ಕಳ್ಳಿಯ ಬೇಲಿಯೇ ಮಠದ ಹೊರಪ್ರಾಕಾರವಾಗಿಯೂ ಇದ್ದು ಹೊರಗಿನ ಸಂಪರ್ಕದಿಂದ ಅನುಷ್ಠಾನಕ್ಕೆ ಅಡ್ಡಿಯಾಗದೆ ಇದ್ದುದು ಆ ಶ್ರೀ ಮಠದ ವೈಶಿಷ್ಟ್ಯವಾಗಿತ್ತು. ಹರದನ ಹಳ್ಳಿಯ ಶ್ರೀ ಗೋಸಲಸ್ವಾಮಿಯವರ ಮಠದ ಹಿಂಬದಿಯಲ್ಲಿ ಈಗಲೂ ಅಡಿಕೆ, ತೆಂಗು, ಬಾಳೆಯ ತೋಟವಿರುವುದನ್ನು ನೋಡಿದಾಗ 'ಗೋಸಲ' ಶಬ್ದಕ್ಕೆ ಇರುವ 'ತೋಟ'. ತೋಟದ ಗುರುಪರಂಪರೆಯ ದ್ಯೋತಕವಾದ ಪದವೆನ್ನಬಹುದು. ಹರದನಹಳ್ಳಿಯ ಶ್ರೀ ಪೀಠದ ಇತಿಹಾಸವೇ ಅರಣ್ಯಮಧ್ಯದಿಂದ ಪ್ರಾರಂಭವಾಗಿದ್ದಿತೆಂಬುದಕ್ಕೆ ಇಂದಿಗೂ ಹರದನಹಳ್ಳಿ ಅರಣ್ಯ೧ ಮತ್ತು ಅರಣ್ಯ೨ ಎಂಬುದಾಗಿ ಗ್ರಾಮ ಸೂಚಿಯಲ್ಲಿನ ದಾಖಲಾತಿಯೇ ಸಮರ್ಥನೆ ನೀಡುತ್ತದೆ. 'ಗೋ' ಶಬ್ದಕ್ಕಿರುವ 'ವೃಕ್ಷ' ಎಂಬರ್ಥದ ಅನ್ವಯದಿಂದ ವೃಕ್ಷಸ್ಥಲಿಯೇ (ಹೋ: ವೃಕಸ್ಥಲಿ) 'ಗೋಸಲಿ' - ಉಪವನ, ಅರಣ್ಯಸ್ಥಲ, ಅಲ್ಲಿ ವಾಸಿಸುವ ಗುರುವೇ, ಈಶನೇ ಗೋಸಲಿಯ ಗುರು, ಗೋಸಲೇಶ ಎಂದೆಂಬುದು ಸುವಿದಿತವಾಗಿಯೇ ಇದೆ.

ಈ ತನಕ ಕೇವಲ 'ಗೋಸಲ' 'ಗೋಸಲಿ' ಪದಗಳ ವ್ಯುತ್ಪತ್ತಿಯನ್ನೂ ಅವುಗಳ ಅರ್ಥ ಹೇಗೆ ಹರದನಹಳ್ಳಿಯ ಮಠಕ್ಕೂ, ಈ ಪೀಠದ ಅಧಿಪತಿಗಳಿಗೂ ಅನ್ವಯಿಸುತ್ತದೆ ಎಂಬುದನ್ನು ನಿರೂಪಿಸಿದಂತಾಯಿತು. ಆದರೆ ಮೂಲತಃ ಈ ಗುರುಪರಂಪರೆಯ ಮೂಲ ಎಲ್ಲಿಂದ, ಹೇಗೆ ಆಗಿರಬಹುದೆಂಬುದನ್ನು ಕುರಿತು ನಮ್ಮ ಪೂರ್ವಜರಾದ ಶರಣಕವಿಗಳು ಭಾವಿಸಿ ನಿರೂಪಿಸಿದ ಬಗೆಯನ್ನು ಗಮನಿಸಿ ವಿವೇಚಿಸದೆ ಗತ್ಯಂತರವಿಲ್ಲ. ಈ ಸಂದರ್ಭದಲ್ಲಿ ಎಚ್ಚರದಿಂದ ಪರಿಶೀಲಿಸಬೇಕಾದ ಅಂಶವೊಂದುಂಟು. ಏನೆಂದರೆ ಒಬ್ಬ ಕವಿಯ ಕಾಲದ ಬಗೆಗೆ ನಿಸ್ಸಂದೇಹವಾಗಿಯೂ ನಿರ್ದಿಷ್ಟವಾಗಿ ಖಚಿತವಾಗದೆ ಇರುವಾಗಲೂ ಅಂತಹ ಕವಿಯೊಬ್ಬನು ರಚಿಸಿದ ಕೃತಿಯಲ್ಲಿ ಉದಾಹರಣೆಗೆ 'ಸಿದ್ಧಲಿಂಗೇಶ್ವರ ಸಾಂಗತ್ಯ'ದಲ್ಲಿ ಶ್ರೀಗಳವರ ತಂದೆತಾಯಿಯರ ಹೆಸರುಗಳನ್ನು ಮಲ್ಲಿಕಾರ್ಜುನ ಜ್ಞಾನಾಂಬೆಯರೆಂದು ಹೇಳಿದಾಗ ಆ ವ್ಯಕ್ತಿಗಳ ಹೆಸರು ಚಾರಿತ್ರಿಕವಾಗಿ ಇದ್ದ ವ್ಯಕ್ತಿಗಳನ್ನು ಕಂಡು ಕೇಳಿದ ಹೆಸರುಗಳೆಂದೇ ಗ್ರಹಿಸುವುದಕ್ಕಿಂತ ಸಾಂಕೇತಿಕವೂ ಧ್ವನ್ಯರ್ಥ ಸೂಚಕವೂ ಆದ ಕೇವಲ ಕಲ್ಪನೆಯ ಹೆಸರುಗಳೆಂದು ತಿಳಿಯುವುದೊಳ್ಳಿತು. ಶಿವಪಾರ್ವತಿಯರ ನೆನಪು ಮಾಡಿಕೊಡುವ ಹೆಸರುಗಳೇ ಆಗಿ ಪಾರಮಾರ್ಥಿಕವಾದ ಮೂಲಾರ್ಥದ ಕಡೆಗೆ ಆ ಅಂಕಿತಗಳು ನಮ್ಮ ಶ್ರದ್ಧೆಯನ್ನು ಇಂಗಿತವಾಗಿ ಸೆಳೆಯುವ ಕವಿತಾಸೃಷ್ಟಿಯ ಒಂದು ರಚನಾತಂತ್ರವೆಂದು ಮಾತ್ರ ಪರಿಗಣಿಸಿದರೆ ಸಾಕೆಂದು ತೋರುತ್ತದೆ.

ಇದೇ ಬಗೆಯ ಕವಿಕಲ್ಪನೆಯ ಮತ್ತೊಂದು ಮುಖವನ್ನು ತೋಂಟದ ಸಿದ್ಧೇಶ್ವರ ಪುರಾಣದಲ್ಲಿ ಕಾಣಬಹುದು. 'ಹರುಷದಿಂ ಶಿವನಾಜ್ಞೆಯಿಂ ತಳೆ। ದುರು ರಜತಗಿರಿಯಿಂದ ಮರ್ತ್ಯಕೆ। ಪರಮ ತೋಂಟದ ಸಿದ್ಧಲಿಂಗಂ ಬಂದನತಿಶಯದಿಂ' ಎಂಬಲ್ಲಿ 'ಗೋ' ಶಬ್ದಕ್ಕಿರುವ 'ಸ್ವರ್ಗ', 'ಪರ್ವತ' ಎಂಬ ಅರ್ಥಗಳನ್ನು ಅಂಗೀಕರಿಸಿ ಅನ್ವಯಿಸಿರುವುದನ್ನು ಕಾಣಬಹುದು. ಮರ್ತ್ಯವನ್ನು ಬಿಟ್ಟು ಸ್ವರ್ಗ ಅಥವಾ ಕೈಲಾಸವು ಇಲ್ಲವೆಂದು ಬೋಧಿಸುವ ಸಲುವಾಗಿಯೋ ಎಂಬಂತೆ ಕೈಲಾಸಗಿರಿಯು ಭೂಮಂಡಲದ ಅತ್ಯುಚ್ಚಶಿಖರವಾಗಿ, ಶಿವನ ನಿವಾಸವಾಗಿರುವುದಾಗಿ ವರ್ಣಿತವಾಗಿದೆ. ಶಿವನ ಹಾಗೂ ಶಿವಗಣ ಚಾರಿತ್ರದ ಕಥಾರಂಭದ ಹಿನ್ನೆಲೆಗೆ ಕೈಲಾಸವಲ್ಲದೆ ಮತ್ತಾವ ಸನ್ನಿವೇಶದ ವರ್ಣನೆ ಔಚಿತ್ಯಪೂರ್ಣವಾಗಿ ಮೆರಗುಗೊಡಬಲ್ಲದು? ಶೈವಪುರಾಣಗಳ ಕಥೆಯ ಮೂಲ ಹಾಗೂ ಚೂಲಗಳು ಕೈಲಾಸವೇ ತಾನೆ ! ಅದೇ ಗೋ-ಸಾಲ ! ಧವಳಗಿರಿ ಶಿಖರ !

ಸತ್ಯವೀಶ್ವರನಾದ ಹಂಪೆಯ ಹರೀಶ್ವರದೇವನ ಉದಿತ ಕಾವ್ಯಮಾರ್ಗವನ್ನು ಹಿಡಿದು ನಡೆದ ಶರಣಕವಿಗಳ ಪಂಕ್ತಿಯಲ್ಲಿ ಗುಬ್ಬಿಯ ಕವಿಮಲ್ಲಣಾರ್ಯನೂ ಒಬ್ಬನಷ್ಟೆ. ಹರಿಹರನಿಂದ ನಿರೂಪಿತವಾದ ಕೈಲಾಸದ ಕಥಾರಂಭದಲ್ಲಿ ಕಂಡುಬರುತ್ತಿದ್ದ ಶಾಪಪ್ರಸಂಗಗಳ ದೃಷ್ಟಿಯನ್ನು ಅನುಸರಿಸಲು ಹೋಗಿ, ಒಡನೆಯೇ ಮರುಪರಿಶೀಲನೆಯಿಂದ ಆ ಕಾವ್ಯನಿರೂಪಣೆಯ ಕಥನದೃಷ್ಟಿಯನ್ನೇ ಬದಲಿಸಿ ಒಂದು ಹೊಸ ತಿರುವು ಕೊಟ್ಟುದನ್ನು "ಶಾಪವೆನ್ನವರಿಗುಂಟೇ ಗಣಂಗಳ್ ನೀವು ಭೂಪವಿತ್ರಾರ್ಥದಿಂ ಜನಿಸಿ ಭಕ್ತವ್ರಜಾಲಾಪಮಂ ತಿರ್ದಿ" ಬರುವಂತೆ ಹೇಳಿ ಷಡ್ವದನನ ಜೊತೆಯಲ್ಲಿ ಆ ತನ್ನ ಗಣಂಗಳನ್ನು ಭೂಲೋಕಕ್ಕೆ ಕಳುಹಿಸಿದಂತೆ ವರ್ಣಿಸಿದ ಕಥಾಭಾಗದಲ್ಲಿ ಕಾಣಬಹುದು. ತಂದೆ ಮಲ್ಲಣಾರ್ಯನ ಆ ಕಥನಕ್ರಮವನ್ನೇ ಅನುಸರಿಸಿ ಆತನ ಮಗ ಶಾಂತೇಶನೂ ಜಗದ ಸಮಸ್ತರನ್ನೂ ಬೋಧಿಸಿ ಎಚ್ಚರಿಸುವ ಸಲುವಾಗಿ ಬಸವರಾಜನ ಭಕ್ತಿ, ಚೆನ್ನಬಸವೇಶ್ವರನ ಸುಜ್ಞಾನ, ಅಲ್ಲಮಪ್ರಭುವಿನ ವಿರಕ್ತಿ, ಭೃಂಗೀಶ್ವರನ ಲಿಂಗನಿಷ್ಠೆಯ ಜೊತೆಗೆ ಶಿವನು ತನ್ನ ಸದ್ಗುಣವನ್ನು ಒಡಗೂಡಿಸಿ "ತೋಂಟದ ಚಿನ್ನಿಧಾನಂ ವಿಮಲ ಸಿದ್ಧೇಶ್ವರನೆನಿಪ ಪೆಸರಂ ಕೊಟ್ಟು" ಗುರುರೂಪಿಂದ ಸಕಲರನ್ನೂ ಬೋಧಿಸೆಂದು ಕೈಲಾಸದಿಂದ ಭೂಲೋಕಕ್ಕೆ ಕಳುಹಿಸಿದನೆಂದು ನಿರೂಪಿಸಿದ್ದಾನೆ. ಹರಿಹರನ ರಗಳೆಗಳಲ್ಲಿನ ಶಾಪಪ್ರಸಂಗಗಳ ತಂತ್ರಕ್ಕೆ ಬದಲಾಗಿ ಲೋಕಕಾರುಣ್ಯದಿಂದ ಜಗದ ಜೀವರನ್ನು ಎಚ್ಚರಿಸಿ ಸನ್ಮಾರ್ಗಿಗಳನ್ನಾಗಿ ಮಾಡಲು ಮಾತ್ರ ಶಿವಶರಣರ ಉದ್ಭವವೆಂದು ಪ್ರತಿಪಾದಿಸುವ ಈ ಕಾವ್ಯದೃಷ್ಟಿಯಲ್ಲಿ ವಿನೂತನತೆಯಿದೆ, ಲೋಕವ್ಯಾಪ್ತಿಯ ಆಜೀವಕ ಧರ್ಮದ ವೈಶಾಲ್ಯವಿದೆ.

ಮಲ್ಲಣಾರ್ಯನ ಭಾವಚಿಂತಾರತ್ನಕೃತಿ-ಪ್ರೇರಕನಾದ ಬೋಳಬಸವೇಶ್ವರನ ಶಿಷ್ಯನಾದ ಗೂಳೂರು ಸಿದ್ಧವೀರಣಾರ್ಯನ ಶಿಷ್ಯ ಎಳಂದೂರ ಕವಿ ಹರೀಶ್ವರನು ತನ್ನ 'ಪ್ರಭುದೇವರಪುರಾಣ' (೧-೧೯)ದಲ್ಲಿ ತೋಂಟದ ಸಿದ್ಧೇಶ್ವರರನ್ನು ಕುರಿತು ನುತಿಸಿರುವ ಬಗೆ ಇದು.

"ಶುದ್ಧನ ಸೂನ್ಯತಬದ್ಧನ ಮಾಯೆಯ
ನೊದ್ದನ ಶಿವಸನ್ನದ್ಧನ ಶಮನನ
ತದ್ದನ ಹರಗಣ ಋದ್ಧನ ಕುಮುದವಿರುದ್ಧನ ಗದಭಯಮಂ ।

ಉದ್ಧರಣನ ಹಿಮಕೃದ್ಧರ ವಿತತ ಚಿ
ರದ್ದೇಹನ ಗತವೃದ್ಧನ ಸುಕೃತಪಿ
ನದ್ಧನ ಭಕ್ತಿಸಮೃದ್ಧನ ತೋಂಟದ ಸಿದ್ಧನ ಸನ್ನುತಿಪೆಂ'' ||

ಈ ಷಟ್ಪದಿಯ 'ಶಿವಸನ್ನದ್ಧನ' ಎಂಬೀಮಾತಿನ ಮರ್ಮವೇ ''ಸರ್ವೇಶಂ ತನ್ನ ಸದ್ಗುಣವಾದಿಯಾದವನುನ್ನತದೆ ಕೂಡುತ್ತ'' ಸಿದ್ಧೇಶ್ವರನೆನಿಪ ಪೆಸರಂ ಕೊಟ್ಟನೆಂದು ಶಾಂತೇಶನ ಈ ವರ್ಣನೆಯಲ್ಲಿದೆ. ಉದ್ಧೃತ ಪದ್ಯದ ತೋಂಟದ ಸಿದ್ಧನೆ ಶಾಂತೇಶನ ಪುರಾಣದಲ್ಲಿ 'ತೋಂಟದ ಚಿನ್ನಿಧಾನ'ನಾಗಿರುವುದನ್ನು ಕಾಣಬಹುದು. ಶಿವನ ಸದ್ಗುಣದಿಂದ ಸನ್ನಹಿತನಾದ ಸಿದ್ಧೇಶ್ವರನನ್ನೇ ಆ ಮೊದಲ ಎಳಂದೂರ ಹರಿಹರ ಕವಿಯ ''ಅಮೃತ ಕಲಾಧರ ಶಿವಸಿದ್ಧ'' ''ಚಿರದ್ದೇಹ'' - ಚಿರಂಜೀವಿ, ಆಜೀವಕ, - ದೀರ್ಘಾಯು, ಪ್ರಾಣದನೆಂಬರ್ಥದಿಂದ ಕೊಂಡಾಡಿದ್ದಾನೆ. ಶಾಂತೇಶನೂ ಜಂಗಮನ, ಚಿನ್ಮಯವಾಗಿ ಪರಮ ಸತ್ಕಲೆಯೇ ಚಿದ್ರೂಪಭಕ್ತನ ಭಾವಕ್ಕೆ ತೃಪ್ತಿಲಿಂಗ, ಮನಕ್ಕೆ ಪ್ರಾಣಲಿಂಗ, ಕರಕ್ಕೆ ಇಷ್ಟಲಿಂಗವಾದ ಘನಶೂನ್ಯಲಿಂಗವು ಸರ್ವಕಾರಣ ರೂಪವೆಂದು ನಿರೂಪಿಸುತ್ತ ಆ ಶೂನ್ಯಲಿಂಗವು 'ಆಜೀವಕಂ ಸಲೆ ಬೀಜವೆನಿಸಿತ್ತು.' 'ತನುವೆ ಶೂನ್ಯ'ವೆನಿಸಿತ್ತು ಎಂಬಲ್ಲಿ ಶಾಂತೇಶನು ಆಜೀವಕರ 'ಶೂನ್ಯಧ್ಯಾನ'ದತ್ತ ನಮ್ಮಗಮನವನ್ನು ಸೆಳೆದಿದ್ದಾನೆಂಬುದು ವಿದಿತವಾದ ವಿಷಯವೆ. ಪ್ರಚ್ಛನ್ನವೂ ಪ್ರಕಟವೂ ಆಗಿ ನಿರೂಪಿತವಾಗಿರುವ ಈ 'ಆಜೀವಕ' ಪದಪ್ರಯೋಗ ನಮಗೆ ಆಜೀವಕರೆಂಬ ಸಾಧುವರ್ಗವೊಂದಿದ್ದುದರ ಅರಿವನ್ನು ತಂದುಕೊಡುತ್ತದೆ. ದೇವಾನಾಂ ಪ್ರಿಯದರ್ಶಿ (ದೇವರಿಗೆ ಪ್ರಿಯವಾಗಿ ಕಂಡುಬಂದಾತ) - ಅಶೋಕ ಚಕ್ರವರ್ತಿ (ಕ್ರಿ.ಪೂ. ೨೭೨-೨೩೨)ಯ ಶಾಸನಗಳಲ್ಲಿ ಆಜೀವಕರ ಪ್ರಸ್ತಾಪವಿದೆ. ಬಿಹಾರದ ಗಯೆಗೆ ೧೫ ಮೈಲಿ ಉತ್ತರಕ್ಕೆ ಬಹುಸುಂದರವಾಗಿ ಕಂಡುಬರುವ ಸ್ಥಲತಿಕ ಇಲ್ಲವೆ ಬರಬರ ಪರ್ವತ ಶಿಖರದ ಮೇಲೆ ಬಂಡೆಗೊರೆದ ಕೃತಕಗುಹೆಗಳಲ್ಲಿ ಅಶೋಕ ಚಕ್ರವರ್ತಿಯು ಪಟ್ಟಕ್ಕೆ ಬಂದಮೇಲೆ ಬೇರೆಬೇರೆ ವರ್ಷಗಳಲ್ಲಿ ಶಿಲಾಶಾಸನಗಳನ್ನು ಹಾಕಿಸಿ ಆ ಗುಹೆಗಳನ್ನು ''ಆಜೀವಕರಿಗೆ ದಾನವಾಗಿ ಅರ್ಪಿಸಿದ್ದಾನೆ.'' ನ್ಯಗ್ರೋಧಗುಹಾ ಶಾಸನದಂತೆಯೆ ಇನ್ನೊಂದು ಶಾಸನದ ಮತ್ತೊಂದು ಗುಹೆ-ಈಗ 'ವಿಶ್ವ ಝೋಪ್ರಿ' ಎಂಬ ಹೆಸಂದ. ದೊರೆ ಪ್ರಿಯದರ್ಶಿಯ ಪಟ್ಟಾಭಿಷೇಕವಾದ ಹನ್ನೆರಡನೆಯ ವರ್ಷದಲ್ಲಿ ಈ ಗುಹೆಯನ್ನು ಆಜೀವಕರಿಗೆ ದಾನವಾಗಿ ಅರ್ಪಿಸಿದ್ದಾನೆ ಎಂದಿದೆ. ಅಶೋಕನ ಕಾಲದ ಆಜೀವಕರಿಗೆ ಕೊಟ್ಟ ಗುಹೆಯೊಂದಕ್ಕೆ ಇಟ್ಟ 'ನ್ಯಗ್ರೋಧ ಗುಹೆ' ಎಂಬ ಹೆಸರಿನಿಂದ ಆಜೀವಕರ ಆತ್ಮೀಯವಾದ ವೃಕ್ಷ ನ್ಯಗ್ರೋಧ ಅಥವಾ ವಟವೃಕ್ಷವೆಂದು ತಿಳಿಯಬಹುದಾಗಿದೆ. ಇನ್ನೊಂದು ಗುಹೆಯ ವಿಶ್ವಝೋಪ್ರಿ ಎಂಬ ಈಚಿನ ಹೆಸರೂ ಆಜೀವಕರ ವಿಶ್ವಪ್ರೇಮದ ಪ್ರತೀಕವೆನ್ನಬಹುದು. ಅದೇ ಪರ್ವತದ ಮತ್ತೊಂದು ಗುಹೆಯನ್ನು (ಈಗ ಕರ್ಣಚೌಪಾರ್) ಪಟ್ಟಾಭಿಷೇಕವಾದ ಹತ್ತೊಂಬತ್ತನೆಯ ವರ್ಷದಲ್ಲಿ ಮಳೆಗಾಲದ ಪ್ರವಾಹಕ್ಕೆ ಸಿಕ್ಕದಂತೆ ದೂರದಲ್ಲಿ ಸನ್ಯಾಸಿಗಳ ವಾಸಕ್ಕಾಗಿ ಅಶೋಕನು ಅರ್ಪಿಸಿರುವುದು ಕಂಡುಬರುತ್ತದೆ.

''ದೇವರಿಗೆ ಪ್ರಿಯನಾದ ದೇವಾನಾಂ ಪ್ರಿಯದರ್ಶಿಯ ತರುವಾಯ ಪಟ್ಟಕ್ಕೆಬಂದ ದಶರಥನು ಈ 'ವಾಹಿವಕ' (ವಾಹಿಕ-ಹೇರು, ಎತ್ತಿನಗಾಡಿ) ಗುಹೆಯನ್ನು ಪೂಜ್ಯ ಆಜೀವಕಸನ್ಯಾಸಿಗಳಿಗೆ ಚಂದ್ರಾರ್ಕ-ಪರ್ಯಂತ ಮಳೆಗಾಲದಲ್ಲಿ ಆಶ್ರಯಸ್ಥಾನವಾಗಿರಲೆಂದು ದಾನವಾಗಿ ಅರ್ಪಿಸಿದನು'' - ಎಂಬ ಈ ಶಾಸನದಿಂದ ಆಜೀವಕಸನ್ಯಾಸಿಗಳು ಪೂಜ್ಯರೂ, ದಾನಾರ್ಹರೂ ಆಗಿದ್ದವರೆಂಬ ಅಂಶ ದೃಢಪಡುತ್ತದೆ. ಇದೇ ಶಿಲಾಶಾಸನ 'ವಡತಿಕ' (ವೃಕ್ಷವಾಟಿಕಾ ಗಿರಿಶಿಖರ) ವೆಂಬ ಹೆಸರಿನ ಮತ್ತೊಂದು ಗುಹೆಯಲ್ಲಿಯೂ ಇದ್ದು ಅಶೋಕನ ಕಾಲದ ನ್ಯಗ್ರೋಧ ಎಂದರೆ ವಟವೃಕ್ಷದ ಗುಹೆಯನ್ನು೧ 'ವಡತಿಕ'ಗುಹೆ ಪ್ರತಿಧ್ವನಿಸುವಂತಿದೆ. ಈ ಶಾಸನಗಳಲ್ಲಿ ಉಕ್ತರಾದ ಆಜೀವಿಕ ಮತಾವಲಂಬಿಗಳು ಅಶೋಕನ ಕಾಲಕ್ಕಿಂತ ಬಹುಹಿಂದೆಯೇ ಬಹು ಪ್ರಬಲರೂ ಪ್ರಮುಖರೂ ಪೂಜ್ಯರೂ ಆಗಿದ್ದವರು.

ಅಶೋಕನ ಶಾಸನಗಳ[೭] ಆಧಾರದಿಂದ ಬ್ರಾಹ್ಮಣಾದಿ. ಚಾತುರ್ವರ್ಣ್ಯದವರಿಂದಲೂ, ಜೈನ, ಬೌದ್ಧಮತೀಯರಿಂದಲೂ ಭಿನ್ನವಾದ, ತಮ್ಮದೇ ಆದ ಆಚರಣೆಯನ್ನುಳ್ಳ, ಧರ್ಮೀಯರೆಂಬುದು ತಿಳಿದ ಸಂಗತಿಯೇ ಆಗಿದೆ. ಹೀಗೆ ಆಜೀವಕ ಮತ ಸ್ವತಂತ್ರವಾಗಿತ್ತೆಂಬುದು ಚಾರಿತ್ರಿಕ ಸತ್ಯವಾಗಿದೆ. ಅವರು ಹೊರನೋಟಕ್ಕೆ ನಗ್ನರಾಗಿ ಜೈನದಿಗಂಬರರಂತೆ ಕಂಡುಬರುತ್ತಿದ್ದರೂ ಆಚರಣೆಯಲ್ಲಿ ಜೈನ, ಬೌದ್ಧರಿಂದ ಬೇರೆ ಧರ್ಮೀಯರೆಂಬುದರ ಬಗೆಗೆ ಆಗಿನ ಸಮಕಾಲೀನ ಮತೀಯರಿಗೆ ಯಾವ ಸಂಶಯವೂ ಇರಲಿಲ್ಲ. ಆದರೆ ಅರ್ವಾಚೀನರು ಅವರನ್ನು ಜೈನದಿಗಂಬರರೆಂದು ತಪ್ಪಾಗಿ ಗ್ರಹಿಸಿದುದನ್ನು ಕಂಡು ಜೈನ, ಬೌದ್ಧಮತಗಳಿಗಿಂತ ಆಜೀವಕರು ಭಿನ್ನಮತೀಯರೆಂಬುದನ್ನು ಯಾರೂ ಮರೆಯಬಾರದೆಂದು ಎಚ್ಚರಿಸುವ ಒಂದು 'ನೀಲಕೇಶಿ' ಎಂಬ ಕಾವ್ಯದಲ್ಲಿ ಆಜೀವಕ ಮತತತ್ತ್ವವನ್ನು ಕುರಿತ ಒಂದು ಪ್ರತ್ಯೇಕ ಅಧ್ಯಾಯವೇ ಇದೆಯೆಂದು ತಿಳಿದುಬಂದಿದೆ.[೮] ಪ್ರಸ್ತುತ ಲೇಖಕನಿಗೆ ನೋಡಲು ಸದ್ಯದಲ್ಲಿ ಲಭ್ಯವಾಗಿಲ್ಲ. ವೀರಾಗಮದ ಶೂನ್ಯತತ್ತ್ವದ

ಪ್ರತಿರೂಪವೇ ತಾವಾದರೋ ಎಂಬಂತಿದ್ದ ಆಜೀವಕರು 'ತನುಶೂನ್ಯರಾಗಿದ್ದವರು' ಎಂಬುದಕ್ಕೆ ದೇವರು ಇದ್ದಾನೋ ಇಲ್ಲವೋ ! ಆ ಕಾರಣ ಶೂನ್ಯದ ಧ್ಯಾನವನ್ನು 'ಇಷ್ಟ' ಪೂರ್ವಕ ಮಾಡಲಿಕ್ಕೇ ಬೇಕು ಎಂಬ ಉಪದೇಶದಂತೆ ಅವರು ನಡೆಮುಕೊಂಡುದೇ ನಿದರ್ಶನ. ಆ ಕಾರಣ ನಿರ್ವಾಣ ಸ್ವರೂಪದಿಂದ ಶೂನ್ಯತತ್ತ್ವ ಪ್ರತಿಪಾಲಕರಾದ ಆಜೀವಕರನ್ನು ಗುಬ್ಬಿಯ ಶಾಂತೇಶನ ಬಳಿಕ ನೆನೆದಿರುವ ಕವಿಯೆಂದರೆ ಷಡಕ್ಷರದೇವ. ತೋಂಟದ ಸಿದ್ಧಲಿಂಗೇಶ್ವರರನ್ನು ಕುರಿತ ಸ್ತೋತ್ರದಲ್ಲಿ ಅವರ ಗುರುಪರಂಪರೆಯ ಪ್ರಾರಂಭಿಕ ಇಲ್ಲವೆ ನಡುಗಾಲದ ವೀರ ವಾಣಿಜಸ್ವಾಮಿಗಳ ಹಾಗೂ ಆಜೀವನಾಮಕ ನಿರ್ವಾಣ ಸ್ವಾಮಿಗಳ ಪ್ರಸ್ತಾಪವಿರುವುದನ್ನು ಮನಗಾಣಬಹುದು.

"ಶ್ರೀಕರವೀರ ಸಾಧು ಸಹಕಾರನುದಂಚಿತ ಮುಕ್ತಕಂ ಸುಪ
ದ್ಮಾಕರನ್ ಉದ್ಗಮ ಪ್ರರುಚಿ ಮಂಜುಲತಾನ್ವಿತನೂರ್ಜಿತಾಗಮಾ
ನೀಕನುತಂ ಮಹಾವಿರತಿಸಂಯುತನಾದುದಱಿಂದೆ ಸಾರ್ಥನಾ
ಮಾಕರನಾದ ತೋಂಟದ ಗುರೂತ್ತಮನೊರ್ವನೆ ಸತ್ಫಲಪ್ರದಂ ||

ವೃಷಭೇಂದ್ರ ವಿಜಯ ಆ.೧ ವ್ಯ.೧೭

ಶ್ರೀ ಪುಷ್ಪ-ಪತ್ರ, ಬಾಲಪುಷ್ಪಿ; ಕರವೀರ- ಕಣಿಗಿಲೆ; ಸಾಧು-ದವನ, ಜವನ; ಮತ್ತೆಯೂ- ಸಾಧು - ಸಾಧುವೃಕ್ಷ, - ವರುಣ - ನ್ಯಗ್ರೋಧ - ವಟವೃಕ್ಷ; ಸಹಕಾರ - ಮಾವು; ಮುಕ್ತಕಂ - ತಾರಂ - ಮುಕ್ತಾಗುಣಕಂ, ಪದ್ಮವೃಕ್ಷ; ಮತ್ತೆಯೂ ಪದ್ಮಾಕರನ್ - ಪದ್ಮಕಾಷ್ಠಗಳಿಗೆ ಆಗರವಾದವನು, ಉದ್ಗಮ - ಮೇಲಕ್ಕೆ ಹಬ್ಬಿದ, ಪ್ರರುಚಿ - ರೋಚಿನೀ, ಕಂಪಿಲ್ಲವೆಂಬ, ಮಂಜುಲತಾ-ಹಿಮದಿಂದ ವೃದ್ಧಿಸುವ ಬಳ್ಳಿಯಿಂದ, ಹೂಗಳ ಕಾಂತಿಯಿಂದ ಸುಂದರವಾದ ಬಳ್ಳಿಯಿಂದ, ಅನ್ವಿತ - ಕೂಡಿದ, ಊರ್ಜಿತ-ಅಗಮ - ಬೇರುಬಿಟ್ಟ ಮರಗಳ, ಅನೀಕ - ಸಮೂಹದಿಂದ, ನುತಂ - ಸ್ತುತ್ಯನು. ಮಹಾ - ದೊಡ್ಡ, ಅವಿ - ವೃಕ್ಷಗಳ, ರತಿ-ತಣ್ಣೆಳಲ ಹಾಗೂ ನಿರ್ಮಲವಾಯುವಿನ ಪ್ರೀತಿಯಿಂದ, ಸಂಯುತನ್ - ಒಡಗೂಡಿ ನಿತ್ಯನಾದವನು. ಆದುದರಿಂದ, ಸಾರ್ಥ -(ಸ + ಅರ್ಥ) ಸ -ಆ, ಅರ್ಥ ᵐ'ಜೀವ' ನಾಮಕ್ಕೆ, ಆಕರನ್ - ಜೀವಕ, - ಚಿರಜೀವಿ, ಆಯುಷ್ಮಾನ್, ಪ್ರಾಣದ ಎಂಬ ಜೀವಕವೃಕ್ಷದಿಂದೊಡಗೂಡಿದ ತೋಂಟದ ಗುರೂತ್ತಮನೊರ್ವನೆ, ಸತ್ಫಲಪ್ರದಂ - ಸುಫಲವನ್ನೇ ನೀಡುವವನು. ಇದೇ ವೃತ್ತದ ಮುಮ್ಮುರಿದಂದ್ರ ಕನ್ನಡದ ಗುಪ್ತರಚನೆಯಲ್ಲಡಗಿರುವ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ವ್ಯಕ್ತಿ-ಚಾರಿತ್ರವನ್ನೂ, ಅವರ ಪೂರ್ವಪರಂಪರೆಯ ದಿಗ್ದರ್ಶನವನ್ನೂ ಕವಿ ಮಾರ್ಮಿಕವಾಗಿ ಚಿತ್ರಿಸಿರುವ ಬಗೆಯನ್ನು ನೋಡಿ:

ವೃತ್ತ|| ಶ್ರೀಕರ ವೀರಸಾಧುಸಹಕಾರನ್ ಉದಂಚಿತ ಮುಕ್ತ-ಕಂ ಸುಪ
ದ್ಮಾಕರನ್ ಉದ್ಗಮ ಪ್ರರುಚಿ ಮಂಜುಲ-ತಾನ್ವಿತನ್ ಊರ್ಜಿತ ಆಗಮಾ
ನೀಕ ನುತಂ ಮಹಾ ವಿರತಿಸಂಯುತನ್ ಆದುದಱಿಂದೆ ಸಾರ್ಥನಾ
ಮಾಕರನಾದ ತೋಂಟದ ಗುರೂತ್ತಮನೊರ್ವನೆ ಸತ್ಫಲಪ್ರದಂ ||

ಶ್ರೀಕರ - ಶುಭಪ್ರದ, ವೀರಸಾಧು - ವೀರವ್ರತಾಚರಣರಾದ ಸಾಧುಗಳಿಗೆ, ಸಹಕಾರನ್ - ವಿವೇಕವೆಂಬ ಸಹಕಾರಹಸ್ತವನ್ನುಳ್ಳವನೂ, ಉದಂಚಿತ ಮುಕ್ತ-ಕಂ - ಎತ್ತಿ ಕಟ್ಟಿದ ಬಿಟ್ಟಿಮಂಡೆಯುಳ್ಳವನೂ, ಮತ್ತೆಯೂ ಉದಂಚಿತ ಮುಕ್ತಕಂ - ಎತ್ತಿಹಿಡಿದ ಶಕ್ತ್ಯಾಯುಧ ಇಲ್ಲವೆ ದಂಡವನ್ನುಳ್ಳವನೂ ಸು-ಪದ್ಮಾಕರನ್ -ಸುಸಾತ್ವಿಕರಾದ ಯತೀಶ್ವರರಿಗೆ ಆಶ್ರಯನಾದವನೂ, ಉದ್ಗಮಪ್ರರುಚಿ - ಮಂಜುಲ-ತಾ-ಅನ್ವಿತನ್ - ಮೂಲಾಧಾರಸ್ಥಾನದಿಂದ ಊರ್ಧ್ವಗಾಮಿಯಾದ ವಿದ್ಯುಲ್ಲತಾಕಾರದ ಕುಂಡಲಿನೀಶಕ್ತಿಯ ತೇಜಃಸ್ಫುರಿತ ಪ್ರಾಣಹಂಸದ ಪರಿಶುದ್ಧ ಜ್ಞಾನಚೈತನ್ಯಾತ್ಮಕನೂ, (ತಾ-skt.m.-ನಾರೀ, -ಅನ್ವಿತನ್) ಊರ್ಜಿತ ಅಗಮಾನೀಕನುತನ್ - ಆಪ್ತಪರಂಪರಾಗತ ಸ್ವಾನುಭವಸಿದ್ಧ ವಚನಾಗಮಗಳ ಸಮೂಹದಿಂದ ಸ್ತುತ್ಯನಾದವನೂ, ಮಹಾವಿರತಿಸಂಯುತನ್[4] - ಆದುದಱಿಂದೆ - ಮಹಾವೈರಾಗ್ಯ ಸಂಪನ್ನತೆಯಿಂದ ಕೂಡಿದವನೂ ಆದುದರಿಂದೆ, 'ಸ+ಅರ್ಥ' 'ಆಜೀವ' ನಾಮಕ್ಕೆ ಆಕರನಾಗಿ ನಿತ್ಯಸ್ವರೂಪನೂ, ಮತ್ತೆಯೂ 'ಸ-ಅರ್ಥ' ಶರಣಭಾವದ ನಯವಿನಯ ವಿಜ್ಞಾನಿಯೂ, ಮತ್ತೆಯೂ 'ಸಾರ್ಥ' ನಾಮಾಕರನ್ ಆದ 'ವಾಣಿಜಸಂಘ'ವೆಂಬ ಹೆಸರಿನ ಹರದರ ಸಮೂಹವನ್ನುಳ್ಳವನೂ ಆದ ತೋಂಟದ ಗುರೂತ್ತಮನ್, ಒರ್ವನೆ :- ಒಬ್ಬನೆ, ಸತ್ - ಸತ್ತ್ವಗುಣವೆಂಬ, ಫಲ - ಫಲವನ್ನು, ಪ್ರದಂ- ಅನುಗ್ರಹಿಸುವವನು.

ಈ ವೃತ್ತದಲ್ಲಿನ ನಿರೂಪಣೆಯಲ್ಲಿ ಶ್ರೀ ತೋಂಟದ ಗುರೂತ್ತಮನು ವೀರಸಾಧುಗಳಿಗೆ ಸಹಕಾರಿಯಾಗಿಯೂ, ಜಟಾಮುಕುಟದಿಂದ ಶೋಭಿಸುವವನೂ, ಜೀವನ್ಮುಕ್ತಾತ್ಮಸಾಕಾರ ಸುಖಿಯೂ, ನಯವಿನಯ ವಿಜ್ಞಾನಿಗಳಾದ ಶರಣ ಯತಿಗಳಿಗೆ ಆಶ್ರಯನಾದವನೂ, ಹುಟ್ಟಿನ ಪ್ರಸ್ತುತಾರ್ಥದ ಪ್ರಶಂಸೆಯ ಜೀವಾತ್ಮನ ಮಹಿಮೆಯಿಂದ ಕೂಡಿದವನೂ,

ಆಪ್ತರ ಪರಂಪರಾಗತ ಸ್ವಾನುಭವಸಿದ್ಧ ವಚನಾಗಮಗಳ ಸಮೂಹಗಳಿಂದ ಸ್ತುತ್ಯನಾದವನೂ, ಮಹಾವೈರಾಗ್ಯ ಮೂರ್ತಿಯಾದುದರಿಂದ 'ಅಜೀವ' ನಾಮಾಕರನೂ, ಸ್ವಾಮಿವೆಸರ ವಾಣಿಜಸ್ವಾಮಿಗಳ ಸಮೂಹವುಳ್ಳವನೂ ಆದವನು. ಆ ಗುರೂತ್ತಮನೊಬ್ಬನೇ ಜಗದ ಜೀವರಿಗೆ ಸತ್ತ್ವಗುಣವೆಂಬ ಸುಫಲನ್ನು ಅನುಗ್ರಹಿಸಬಲ್ಲನು ಎಂಬುದು ವೇದ್ಯವಾಗುತ್ತದೆ.

'ವೀರಸಾಧುಸಹಕಾರನ್ ಹಾಗೂ ಸಾರ್ಥನಾಮಾಕರನ್' ಎಂಬೀ ಪದಪ್ರಯೋಗಗಳ ಅಂತರಾರ್ಥ ಔಚಿತ್ಯಪೂರ್ಣ ವಾದದ್ದು. ಸಕಲ ಜೀವರಿಗೆ ಲೇಸನೇ ಬಯಸುವ ಬಸವಾದಿಪ್ರಮಥರ ಕಾಲದ (೧೨ನೆಯ ಶತಮಾನ) ಧಾರ್ಮಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಹಾಗೂ ಸಾಹಿತ್ಯಜಾಗ್ರತಿಯ ಕೇಂದ್ರಗಳಲ್ಲಿ ಒಂದಾದ[೪] ಐಹೊಳೆಯ ಐನೂರ್ವರು ಸ್ವಾಮಿವೆಸರ ವಾಣಿಜಸ್ವಾಮಿಗಳ ವೀರಶಾಸನ ಸಮುದ್ಧರಣರಾದ ಮುಮ್ಮುರಿದಂಡಂಗಳ ಸಂಬಂಧವನ್ನೂ ಮಹಿಮೆಯನ್ನೂ ವಾಚ್ಯವಾಗಿ ಅಲ್ಲದಿದ್ದರೂ, ಸೂಚ್ಯವಾಗಿ ಪ್ರಚ್ಛನ್ನಪ್ರಕಟಾರ್ಥದಿಂದ ಷಡಕ್ಷರದೇವನು ತನ್ನ ಪದರಚನಾಸಂಯೋಗದ ಚಾತುರ್ಯದಿಂದ ಪ್ರಜ್ಞಾಮತಿಗೆ ಸುಗೋಚರವಾಗುವಂತೆ ಮಾಡಿದ್ದಾನೆ.

ಕಲ್ಯಾಣಪುರದಿಂದ ಆಳುತ್ತಿದ್ದ ಮಹಾಮಂಡಲೇಶ್ವರ ರಾಚಮಲ್ಲ ನೃಪನ ಅನುಮತದಿಂದ ಕುಜುಗೋಡ ಮೂಲಸ್ತಂಭವೋ ತಾವೆನಿಸಿ ಇದ್ದಂತಹ ಮುಮ್ಮುರಿದಂಡಂಗಳಾದರೋ ಅಯ್ಯಾವೊಳೆಯ ಇಲ್ಲವೆ 'ಆರ್ಯಾನಾಮಪುರದ ಪ್ರಮುಖರಾದ ಐನೂರ್ವರುಸ್ವಾಮಿವೆಸರ ಗಣವಂಶೋದ್ಭವರಾದ ವೀರಬಣಂಜುಗಳು. ಪ್ರಳಯಕಾಲದ ರುದ್ರಮೂರ್ತಿಗೂ ಮಿಗಿಲಾದ ಉಗ್ರತೇಜರು, ಭಗವತೀ ವರ-ದಾನ ಪ್ರಸಾದರಾದವರೂ ಹರಪದಪದ್ಮಾರಾಧಕರೂ ಆದವರು; ವಿಸ್ತೀರ್ಣವಸ್ತು (ಆತ್ಮ) ಗುಣವಿನಿಹಿತಾ (ಗುಣನಿಷ್ಠಾ-) ಚರಣರೂ, ಸಂಚಿತ ಸಮಸ್ತಧರ್ಮೈಕ ನಿಸ್ತರಣರೂ (ಸಕಲಜೀವರ ಭವಭವಗಳಿಂದ ಸಂಚಿತವಾದ ಎಲ್ಲ ಧರ್ಮವನ್ನೂ ಉದ್ಧರಿಸಿದವರು, ಸರ್ವಾಚಾರಪ್ರತಿಪಾದಕರು) ವ್ಯವಹಾರ ನಯವಿನಯ ವಿಜ್ಞಾನವಿದ್ಯರೂ ಆಗಿದ್ದ ಕುಜುಗೋಡ ವಾಣಿಜರ ಇಲ್ಲವೆ ಹರದರ ಸಂಬಂಧವು ಹರದನಹಳ್ಳಿಯ ಹರದರಿಗೂ ಇದ್ದಿತೆಂಬುದನ್ನು ಷಡಕ್ಷರದೇವನ ವೃತ್ತದಲ್ಲಿನ ಪದಪ್ರಯೋಗವು ನಿರ್ದೇಶಿಸುತ್ತದೆ.

ಕುಜುಗೋಡಿನ ಧರ್ಮಪ್ರತಿಪಾಲಕರಾದ ಮುಮ್ಮುರಿದಂಡಂಗಳು ಗವಜೇಶ್ವರದೇವರನ್ನು ಪ್ರತಿಷ್ಠೆಮಾಡಿದಂತೆ ಹರದನ ಹಳ್ಳಿಯ ಅರಣ್ಯಭಾಗದ ಮೂಲಕ ವ್ಯಾಪಾರಕ್ಕೆ ಹೊರಟಿದ್ದ ವಾಣಿಜರು ತಮ್ಮ ಹೆಸರು ಅಳಿಯದಂತೆ 'ವಾಣಿಜ್ಯಪುರಿ'ಯೆಂಬ ಹರದನಹಳ್ಳಿಯೊಂದನ್ನು ಕಟ್ಟಿ 'ಅಣಿಲೇಶ್ವರಲಿಂಗ' - ಪ್ರತಿಷ್ಠೆಮಾಡಿ ಅದಕ್ಕೆ ದೇವಾಲಯವನ್ನು ನಿರ್ಮಾಣ ಮಾಡಿದ ಸಂಗತಿಯ ಸ್ಮರಣೆಯನ್ನು ಶ್ರೀ ಸಿದ್ಧಲಿಂಗೇಶ್ವರರನ್ನು ಕುರಿತ ಈ ಸ್ತುತಿಪದ್ಯವು ಮನಮುಟ್ಟುವಂತೆ ಮಾಡಿದೆ.

ಪ್ರಸ್ತುತ ಲೇಖಕನು ಮನಗಂಡ ಮತ್ತೊಂದು ಲಿಖಿತಾಧಾರದ[೫] ಕಡೆಗೆ ಓದುಗರ ಗಮನವನ್ನು ಸೆಳೆಯಲು ಬಯಸುವನು. ಶೂನ್ಯಸಿಂಹಾಸನದ ಮೂರನೆಯ ಅಧಿಕಾರಿಗಳಾದ "ಶ್ರೀ ಸೊನ್ನಲಾಪುರದ ಸಿದ್ಧರಾಮೇಶ್ವರಸ್ವಾಮಿಗಳವರ ತರುವಾಯದಲ್ಲಿ ದಕ್ಷಿಣ ದಿಗ್ಭಾಗ, ಕರ್ಣಾಟದೇಶ ಮೈಸೂರು ರಾಜಧಾನಿಗೆ ಸೇರಲ್ಪಟ್ಟ ಕಾವೇರಿ ತೀರದ ಪ್ರಾಂತದಲ್ಲಿ ಇರುವ ಐವಳ್ಳಿ ಮಠಾಧೀಶ್ವರನಾದ ಪಂಚಮಗಣನಾಥನ ವಂಶಜರಾದ ವಾಣಿಜರೆಂಬ ಹರದರಿಂದ ನಿರ್ಮಿತವಾದ ವಾಣಿಜ್ಯಪುರವೆಂಬ ಹರದನಹಳ್ಳಿ ದೇವಭಕ್ತರ ಭಕ್ತಿಯಲ್ಲಿ ಇರ್ದ ವಾಣಿಜ್ಯಪುರ ಶೂನ್ಯಸಿಂಹಾಸನಕ್ಕೆ ಕಾರಣಕರ್ತೃಗಳಾದ ಶಿವಾನುಭವಚರಂತಿಗೆ ಪಟ್ಟದ ಅನಾದಿಗಣನಾಥ, ಇವರಿಂದ ಆದಿಗಣವರ. "ಕುಜುಗೋಡ" 'ಶಾಸನೋಕ್ತ ಐಹೊಳೆ ಐನೂರ್ವರು ಸ್ವಾಮಿವೆಸರ ಗಣವಂಶೋದ್ಭವರಾದ ಕುಜುಗೋಡ ವಾಣಿಜರಂತೆ ಹರದನಹಳ್ಳಿಯ ಹರದರೂ ಐವಳ್ಳಿಯ ಪಂಚಮಗಣನಾಥ ವಂಶಜರು ಎಂಬುದು ಈ ಗ್ರಂಥಾಧಾರದಿಂದ ವ್ಯಕ್ತವಾಗಿದೆ. ಅಲ್ಲದೆ ವಾಣಿಜ್ಯಪುರಿ ಶೂನ್ಯಸಿಂಹಾಸನಕ್ಕೆ ಕಾರಣಕರ್ತೃಗಳಾದವರು ಶಿವಾನುಭವ ಚರಂತಿಗೆ ಪಟ್ಟದ ಅನಾದಿಗಣನಾಥರೆಂಬುದೂ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ನಿರೂಪಿಸಿದ ಅವರ ಗುರುಪರಂಪರೆಯನ್ನೇ ತಿಳಿಸುತ್ತದೆ.

ವಾಣಿಜ್ಯಪುರಶೂನ್ಯಸಿಂಹಾಸನದ ಪೀಠಾಧೀಶ್ವರರೂ, ಅವರ ಮೂಲ ಗುರುಪರಂಪರೆಯೂ 'ಋಷಿ'ಗಳೇ ಆಗಿರುವುದರ ಸಂಕೇತವೋ ಎಂಬಂತೆ ಐವಳ್ಳಿ ಗಣನಾಥವಂಶಜರಾದ ಹರದನಹಳ್ಳಿಯ ಹರದರು ನಿರ್ಮಿಸಿದ ಬೃಹತ್ ದೇವಾಲಯವನ್ನು ಹೊತ್ತ ಭಾರಿ ಶಿಲಾಸ್ತಂಭಗಳಲ್ಲಿ ಕೆತ್ತಿರುವ ಜಟಾಮಕುಟವನ್ನುಳ್ಳ ಯತಿಗಳು, ಅವರ ಕೈಯಲ್ಲಿರುವ ಲಿಂಗ, ಅವರ ಪೂಜಾ ವಿಜೃಂಭಣೆಯ ವೈಭವದ ಶಿಲಾ ಶಿಲ್ಪಮೂರ್ತಿಗಳು ಮೆರೆಯುತ್ತಿವೆ. ವಾಣಿಜ್ಯಪುರಿ ಮಠದ ಗುರು ಪರಂಪರೆಯು ಅತಿ ಪ್ರಾಚೀನ ಜಂಗಮಾಚರಣೆಯ ಪ್ರತೀಕವೋ ಎಂಬಂತೆ ಆ ಗುರು ಯತಿಗಳ ಪ್ರತಿಮಾಮೂರ್ತಿಗಳಿವೆ. ಹರದನಹಳ್ಳಿಯ ಗೋಸಲದೇವರನ್ನು "ಶ್ರೀಗೋಸಲಾರ್ಯಯತಿ" ಎಂದೇ ನಿರೂಪಿಸಿರುವುದನ್ನು ಕಾಣಬಹುದು.

'ಗೋ' ಶಬ್ದವು ಒಬ್ಬ ಋಷಿಯ ಹೆಸರೆಂದೇ ತಿಳಿದಿದ್ದೇವೆ. ಈ ಮೊದಲೇ ಆಜೀವಕ ನಗ್ನ ಸನ್ಯಾಸಿಗಳ ಬಗೆಗೆ ಶಾಸನಗಳಲ್ಲಿ ವ್ಯಕ್ತವಾದ ವಿಷಯಗಳ ನಿರೂಪಣೆಯನ್ನು ಮಾಡಲಾಗಿದೆ. ಆಜೀವಕಮತವು ಪ್ರಾಚೀನ ಭಾರತದ ಒಂದು ಧಾರ್ಮಿಕ ಪಂಥ. ಬುದ್ಧನ ಹಿರಿಯ ಸಮಕಾಲೀನನಾದ 'ಗೋಶಾಲ'ನಿಂದ ಪ್ರವರ್ತಿತವಾದುದೆಂದು ಗ್ರಂಥಾಧಾರಗಳಿಂದ ತಿಳಿದುಬಂದ ವಿಷಯ. ಗೌತಮ-ಬುದ್ಧನು ಬೌದ್ಧಮತದ ಸ್ಥಾಪಕನಾದರೆ ಗೋಸಾಲನು ಆಜೀವಕಮತ-ಪ್ರವರ್ತಕನೆಂದು ಹೆಸರಾಂತವನು. ಜೈನದಿಗಂಬರರಂತೆ ನಗ್ನನಾಗಿಯೇ ಇದ್ದವನು. ಜೈನ 'ಪೂರ್ವಗತ' ಗ್ರಂಥಗಳಲ್ಲಿ ಪರಿಣತನಾಗಿದ್ದು ತನ್ನದೇ ಆದ ಮತಸಿದ್ಧಾಂತವನ್ನು ಸ್ಥಾಪಿಸಿದನು. ಚಿ/ಓ-1-2-3 ಅಹಿಂಸಾ ತತ್ತ್ವಕ್ಕೆ ಜೈನ ಧರ್ಮವಿತ್ತ ಪ್ರಾಧಾನ್ಯಮಾತ್ರವಲ್ಲದೆ ಹಿಂಸಾ ಪ್ರಧಾನವಾದ ಯಾಗಾಚರಣೆಯ ವೈದಿಕ ಮತದ ಕರ್ಮಕಾಂಡವನ್ನು ಖಂಡಿಸಿದ್ದರಿಂದ ಗೋಸಾಲನ ಬೋಧೆಯಿಂದ ಪವಿತ್ರೀಕೃತವಾದ ಆಜೀವಕ ಮತಾನುಯಾಯಿಗಳು ಪಾಖಂಡವಾಕ್ ಎಂಬುವರಾಗಿ ಪಾಪಕಾರ್ಯವನ್ನು ಖಂಡಿಸಿದವರೆಂಬ ಮೆಚ್ಚುಗೆಗೆ ಪಾತ್ರರಾದರು.

ಜೈನರ ಇಪ್ಪತ್ತನಾಲ್ಕನೆಯ ತೀರ್ಥಂಕರನಾದ ಭಗವಾನ್ ಮಹಾವೀರನ ಸಮಕಾಲೀನನೂ ಮಿತ್ರನೂ ಆಗಿದ್ದು, ಕಡೆಗೆ ಪ್ರಬಲವಾದ ಮತಸ್ಥಾಪನೆ ಮಾಡಿ, ಪ್ರತಿಸ್ಪರ್ಧಿಯೂ ಆಗಿದ್ದವನು ಗೋಸಾಲ.[2] ಆತನಿಗೆ 'ಮಸ್ಕರಿ ಗೋಶಾಲ ಪುತ್ರ': ಇವನನ್ನೇ 'ಮಜ್ಕಲಿ ಗೋಶಾಲ'ನೆಂದೂ ಕರೆಯುತ್ತಿದ್ದುದಾಗಿ ತಿಳಿದುಬರುತ್ತದೆ. 'ಮಸ್ಕರ' ಎಂದರೆ 'ಜ್ಞಾನ'ವೆಂದರ್ಥ. 'ಜ್ಞಾನಿ ಗೋಶಾಲಿ ಪುತ್ರ'ನೆಂದು ಮಜ್ಕಲಿ ಗೋಶಾಲನನ್ನು ಕರೆದಿರುವಂತಿದೆ. ಜ್ಞಾನಿಯಾದ 'ಗೋ' ಎಂಬ ಒಬ್ಬ ಋಷಿಯ 'ಶಾಲಿಪುತ್ರ' ಎಂದರೆ ವಂಶದಲ್ಲಿ ಹುಟ್ಟಿದವನೆಂದೂ, 'ಗೋ'-ಋಷಿ[6] ವಂಶೋದ್ಭವನೆಂದೂ ಹೇಳಲ್ಪಟ್ಟಿದ್ದಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಕಾಲಗತಿಯಲ್ಲಿ 'ಗೋ' -ಶಾಲಿಪುತ್ರನು 'ಗೋಶಾಲಿ ಪುತ್ರ'ನಾಗಿ ಅರ್ಥವ್ಯತ್ಯಾಸಕ್ಕೆ ಗುರಿಯಾಗಿರುವುದು ಸಹಜವೆ. ಆದಕ್ಕೆ ಪದಚ್ಛೇದದ ಕ್ರಮ ತಪ್ಪಿದ್ದೇ ಕಾರಣ. ಪದದ ಮೂಲಾರ್ಥದ ಅರಿವಿಲ್ಲದಾಗ ಆಗುವ ಪ್ರಮಾದ ಅದೆಂದು ಹೇಳಬೇಕಾದುದಿಲ್ಲ. ಏನೇ ಇರಲಿ ಗೋಶಾಲ ಇಲ್ಲವೆ ಗೋಸಾಲನು ಜ್ಞಾನಿ ಇಲ್ಲವೆ ಜ್ಞಾನಿಯಾದ 'ಗೋ' ಋಷಿಕುಲೋದ್ಭವನಾದ ನಗ್ನ ಸನ್ಯಾಸಿ ಇಲ್ಲವೆ ಯತಿಯೆಂದು ತಿಳಿಯಬಹುದು. ಮಸ್ಕ್ ಅಥವಾ ಮಂಕ್/ಗ್ ಎಂಬ ಧಾತುಗಳಿಗೆ 'ಚರಿಸು' ಎಂದರ್ಥವಿರುವುದರಿಂದ ಮಸ್ಕರಿ ಇಲ್ಲವೆ ಮಜ್ಕಲಿ ಎಂದರೆ ಚರಮೂರ್ತಿ ಪರಿವ್ರಾಜಕನೆಂದೇ ಅರ್ಥವಾಗುತ್ತದೆ. ಆದ ಕಾರಣ ಗೋಸಾಲ ಗುರೂತ್ತಮನು ಮಹಾಜ್ಞಾನಿ, ಚರಚಕ್ರವರ್ತಿಯಾದವನು. ಜೈನಧರ್ಮ ಗ್ರಂಥಗಳಲ್ಲೊಂದರಲ್ಲಿ ನಿರೂಪಿತವಾಗಿರುವಂತೆ :

''ಗೋಶಾಲ ಪ್ರವರ್ತಿತಾ ಆಜೀವಿಕಾಃ
ಪಾಖಂಡಿನಸ್ತ್ರೈರಾಶಿಕಾ ಉಚ್ಯಂತೇ
ಕಸ್ಮಾದಿತಿ ಚೇದುಚ್ಯತೇ ಇಹ ತೇ
ಸರ್ವಂ ವಸ್ತು ತ್ರ್ಯಾತ್ಮಕಮಿಚ್ಛಂತಿ ತದ್ಯಥಾ
ಜೀವೋಽಜೀವೋ ಜೀವಾಜೀವಶ್ಚ
ನಯಚಿಂತಾಯಾಮಪಿ ತ್ರಿವಿಧಂ ನಯಮಿಚ್ಛಂತಿ,
ತತಸ್ತ್ರಿಭಿಃ ರಾಶಿಭಿಶ್ಚರಂತೀತಿ ತ್ರೈರಾಶಿಕಾಃ''[7]

ಆಜೀವಕರ ತತ್ತ್ವದೃಷ್ಟಿಯಂತೆ ಸರ್ವವಸ್ತುವೂ ತ್ರ್ಯಾತ್ಮಕ. ಸತ್, ಅಸತ್, ಸದಸತ್ ಈ ಮೂರೂ ಒಂದುಗೂಡಿ ಒಂದೇ ಆದುದರಿಂದ ತ್ರೈರಾಶಿಕರೆಂದು ಹೆಸರುಗೊಂಡಂತೆ ತೋರುತ್ತದೆ. ಲೌಕಿಕ, ಪಾರಮಾರ್ಥಿಕ ಫಲಪ್ರಾಪ್ತಿಯ ಉಪಾಯವಾಗಿ ಅವರ ತ್ರ್ಯಾತ್ಮಕ ತತ್ತ್ವಚಿಂತನೆ ಇದ್ದಿತೋ ಏನೋ, ಇನ್ನೂ ಆಳವಾದ ಅಭ್ಯಾಸದಿಂದ ತಿಳಿದು ಹೇಳಬೇಕಾದ ವಿಚಾರ. ಈ ಲೇಖನದ ವ್ಯಾಪ್ತಿಗೆ ಮೀರಿದ್ದು. ಮೂರರ ರಾಶಿಯಾಗಿ ಇಷ್ಟ-ಪ್ರಾಣ-ಭಾವ ಲಿಂಗರೂಪದಿಂದ ಶಿವಸಂಗಮವಾಗಿ ಸ್ವಯ-ಚರ-ಪರಜಂಗಮ ತ್ರೈವಿಧರೋ ಆಜೀವಕರು ಎಂಬ ನಿರ್ಣಯ ಮುಂದೆ ಸಾಗಬೇಕಾದ[10] ಸಂಶೋಧನೆಗೆ ವಸ್ತುವಾಗುತ್ತದೆ. 'ಮೂಗಳಬುದ್ಧಿ' 'ಮುಮ್ಮುರಿದಂಡಂಗಳ'ಗೂ ತ್ರೈರಾಶಿಕ, ತ್ರ್ಯಾತ್ಮಕತತ್ತ್ವಾಚರಣೆಗೂ ಇರುವ ಸಾಮ್ಯ-ವೈಷಮ್ಯಗಳೇನೆಂಬುದು ವಿಚಾರಾರ್ಹಚಿಂತನೆಗಳು. ಶೂನ್ಯಧ್ಯಾನವನ್ನು ಮಾಡಲಿಕ್ಕೇಬೇಕೆಂದು ಬೋಧಿಸಿದ ಗೋಸಾಲನ 'ಶೂನ್ಯ' ತತ್ತ್ವಕ್ಕೂ ಶೂನ್ಯಸಿಂಹಾಸನಾಧೀಶ್ವರರ, ಶೂನ್ಯಸಂಪಾದನಕಾರರ ವಚನಾಗಮಸಿದ್ಧ 'ಶೂನ್ಯಲಿಂಗ' ತತ್ತ್ವಕ್ಕೂ ಇರಬಹುದಾದ ಇನ್ನೂ ಹೆಚ್ಚಿನ ಸಂಬಂಧದ ಸ್ವರೂಪವು ವಿಮರ್ಶೆಗೆ ಯೋಗ್ಯವಾದ ವಸ್ತು. ಶಿವ-ಪಾರ್ವತಿಯರಿಗಿಂತ ಶಿವಶರಣರೇ ಅಧಿಕವೆಂದು ಸಾರಲು ಹೊರಟ ಆಗಮಜ್ಞಾನವನ್ನು ತಿಳಿದು ಶರಣರ ಅಡಿಯನ್ನು ಹೊಗಳುವ ನಿಜಗುಣ ಶಿವಯೋಗಿಗಳ ಅರುವತ್ತುಮೂವರ ತ್ರಿವಿಧಿ, ವಾಗದ್ವೈತನಿರಸನ ತ್ರಿವಿಧಿ, ಶೀಲವಂತಯ್ಯನ ತ್ರಿವಿಧಿ,

ಅಕ್ಕನ ಯೋಗಾಂಗತ್ರಿವಿಧಿ, ಸಿದ್ಧೇಶ್ವರತ್ರಿವಿಧಿ, ಗಣನಾಮಸ್ತೋತ್ರದ ತ್ರಿವಿಧಿ ಇತ್ಯಾದಿ ತ್ರಿವಿಧಿಗಳ ರಾಶಿಗೂ ತ್ರೈರಾಶಿಕತತ್ತ್ವಕ್ಕೂ ಏನಾದರೂ ಸಂಬಂಧವಿದ್ದರೆ ಎಷ್ಟರ ಮಟ್ಟಿಗೆ ಎಂಬುದರ ವಿವೇಚನೆ ಸಾರ್ಥಕವೋ, ನಿರರ್ಥಕವೋ ಯತ್ನಿಸಿಯೇ ತಿಳಿಯಬೇಕಾದ ವಿಷಯ. ನಿರ್ವಾಣನಾಯಕನಾದ ಗೋಸಾಲನ ಅನುಯಾಯಿಗಳಾದ ಆಜೀವಕರೂ ನಿರ್ವಾಣ ಚರಮೂರ್ತಿಗಳಾಗಿ ಪೂಜ್ಯರಾಗಿ ಚಕ್ರವರ್ತಿಗಳಿಂದ ಮಾನ್ಯರಾದುದರ ಕುರುಹಿಗೋ ಏನೋ ೧೦೧ ವಿರಕ್ತರಲ್ಲಿ ನಿರ್ವಾಣಿ ಬೋಳೇಶ, ಬತ್ತಲೇಶ, ಲಿಂಗಪೂಜಾವಿಧಾನದ ಟೀಕಾಕರ್ತೃವಾದ ನಿರ್ವಾಣಮಂತ್ರಿ, ನಿರ್ವಾಣಸ್ವಾಮಿ - ಹೀಗೆ ಅನೇಕರು 'ನಿರ್ವಾಣ' ನಾಮಾಂಕಿತರಾದುದರ ಅಂತರಾರ್ಥವೇನು? ಎಂಬುದೂ ಬುದ್ಧಿಮಂಥನಕ್ಕೆ ಒಳ್ಳೆಯ ಸಾಮಗ್ರಿ. ಅಂತೆಯೇ ಮರುಳಶಂಕರ ದೇವ, ಮರುಳಾರ್ಯ, ಮರುಳಸಿದ್ಧೇಶ್ವರ, ಮರುಳಸ್ವಾಮಿ ಎಂಬ 'ಮರುಳ' ನಾಮಾಂಕಿತ ಪದ್ಧತಿಗೂ ಲೋಕದ ದೃಷ್ಟಿಗೆ 'ವಿಚಿತ್ರ'ವೆನಿಸಿದ್ದ ಗೋಸಾಲ ಗುರುವಿಗೂ ಸಂಬಂಧವಿರಬಾರದೇಕೆ ? - ಇದೂ ದೃಢಪಡಬೇಕಾದದ್ದೆ; ಗಣ್ಯಜಿಜ್ಞಾಸೆಯ ಸಮಸ್ಯೆಯೇ ಸರಿ.

ವೀರ ಸಾಧುವರ್ಗದ ಆಜೀವಕರು ಇಲ್ಲವೆ ಸ್ವಾರ್ಥೇ-'ಕ' ಪ್ರತ್ಯಯವಾದ ಕಾರಣ ಆಜೀವರು ಸಹಜ ಸದ್ಭಕ್ತರಾದವರು. ಇಹ-ಪರ, ಬಂಧ-ಮೋಕ್ಷಗಳ ಇಚ್ಛೆ-ಅನಿಚ್ಛೆಗಳೆರಡನ್ನೂ ತ್ಯಜಿಸಿದವರಾದ ಕಾರಣ ಅವರಿಗೆ ಪುಣ್ಯ-ಪಾಪಗಳೆಂಬುದಿಲ್ಲವೆಂಬುದನ್ನು "ವೀರಶೈವ ಷಟ್‌ಸ್ಥಲಸಿದ್ಧಾಂತ"ದ[೧೧] ಮುಂದಿನ ಪದ್ಯ ಪ್ರತಿಪಾದಿಸಿರುವುದನ್ನು ಗಮನಿಸಬಹುದು:

> ಬಹುಪುಣ್ಯವಶದಿಂದ ಸ್ವರ್ಗದೈವತ ಜನ್ಮ
> ಬಹುಪಾಪವಶದಿಂದ ನರಕ ಸೂಕರಜನ್ಮ
> ಬಹುಪುಣ್ಯಪಾಪವೆರಡರ ಸಮತ್ವದಿಂ ವಿದಿತ ಮಾನುಷಜನ್ಮವು
> ಅಹುದು ಈ ಪರಿಯೊಳನವರತಮಾಜೀವರಿಗೆ
> ಸಹಜಸದ್ಭಕ್ತರಿಗೆ ಪುಣ್ಯಪಾಪಗಳಿಲ್ಲ
> ಇಹಪರದ ಬಂಧಮೋಕ್ಷಂಗಳಿಚ್ಛೆಯನಿಚ್ಛೆಯೆರಡನುಳಿದಿಪ್ಪರಾಗಿ ||

ಪೂಜೆ ಪುಣ್ಯಕ್ಕೆ ಒಡಲಾದಂತೆ ಶೂನ್ಯಕ್ಕೆ ಜ್ಞಾನ ಒಡಲಾದ ಕಾರಣ[೧೨] ಆ ಚಿತ್ಕಲಾರೂಪ ಪರವಸ್ತುವಾದ ಶೂನ್ಯದ ಧ್ಯಾನದಲ್ಲಿ ನಿರತರಾದ ಅಜೀವಕರು ಜ್ಞಾನಾನಂದ ಲಾಂಛನವಾದ ಶೂನ್ಯಲಿಂಗ-ಧ್ಯಾನಿಗಳಾದವರೆಂದು ತಿಳಿಯಲು ಬರುತ್ತದೆ. ಭಕ್ತಿ-ಜ್ಞಾನ-ವೈರಾಗ್ಯಾವೇಶವುಳ್ಳವರಾದುದರಿಂದ ಮರುಳರೆಂದು ಕರೆಯಲ್ಪಟ್ಟವರು. ನಗ್ನರಾದ ಆಜೀವಕರ ಗಣಾಚಾರ್ಯನಾದ ಮಕ್ಖಲಿ ಗೋಸಾಲನು ವಿಚಿತ್ರ ಚರಿತ್ರನಾದ ಸಾಧುವೆಂದು ಸಮಾಕಾಲೀನರು ಭಾವಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ಬುದ್ಧನ ಹಿರಿಯ ಸಮಕಾಲೀನನಾದ ಮಹಾವೀರನಿಗಿಂತ (ಕ್ರಿ.ಪೂ.528) ಹದಿನಾರು ವರ್ಷದ ಮೊದಲೆ (ಕ್ರಿ.ಪೂ.544) ಮಸ್ಕರಿ ಗೋಸಾಲನು ತೀರಿಕೊಂಡರೂ ಆ ವರ್ಧಮಾನ ಮಹಾವೀರನ ಜೈನ ಮತದ ತತ್ತ್ವೋಪದೇಶದ ಪ್ರಭಾವವು ಹೆಚ್ಚು ವ್ಯಾಪಿಸದಂತೆ ತನ್ನದೇ ಆದ ಧರ್ಮಾಚರಣೆಯ ಮಾರ್ಗವನ್ನು ಪ್ರಚುರಗೊಳಿಸಿದ್ದನೆಂಬುದು ಗಮನಾರ್ಹ.

'ಇಷ್ಟ' ನಿಷ್ಠೆಯಿಂದ ಶೂನ್ಯಧ್ಯಾನವನ್ನು ಮಾಡಲಿಕ್ಕೇಬೇಕೆಂಬ ಆಜೀವಕರ ಗುರು ಗೋಸಾಲನ ಶೂನ್ಯಧ್ಯಾನ ಪ್ರತೀಕವೋ ಎಂಬಂತೆ ಅನಾದಿಜಂಗಮದ ಮಕುಟದಲ್ಲಿ ಶೂನ್ಯಲಿಂಗ ಧಾರಣೆಯ ನಿರೂಪಣೆಗೆ ಎಡೆಯೂರ ತೋಂಟದ ಸಿದ್ಧಲಿಂಗೇಶ್ವರರ ಮೂರ್ತಿಚಿತ್ರಣದಲ್ಲಿನ "ಮೇಘಂಗಳೇ ಜಟಾಬಂಧ, ಆ ಜಟಾಬಂಧದಲ್ಲಿ ಶೂನ್ಯಲಿಂಗ; ವೇದ ಪುರಾಣಗಳೇ ಕ್ರೀ" ಎಂಬ [೧೩]ಶಿಲಾಶಾಸನೋಕ್ತಿಯೇ ಸಾಕ್ಷಿಪಾಠವಾಗಿದೆ ಎಂಬುದಕ್ಕೆ ಶಿವಯೋಗ ಸಮಾಧಿಸ್ಥರಾಗಿರುವ ಶ್ರೀ ಮಠದಲ್ಲಿ ಇಂದಿಗೂ ಕೆತ್ತಿಟ್ಟಿರುವ ನಟ್ಟಿಕಲ್ಲಿನ ೧೭ನೇ ಸಾಲನ್ನು ಗಮನಿಸಿ. ಗಣಸಹಸ್ರನಾಮಾವಳಿಯ ಯೋಗಾಚಾರ್ಯ ಗಣವರ್ಗದಲ್ಲಿ ಒಬ್ಬರ ಗಣನಾಮವು 'ಜಟಾಮಾಲಿ' (೬೩೬) ಎಂದಿರುವ ಅಂಕಿತವು ಯೋಗಾಚಾರ್ಯರ ಅನ್ವರ್ಥ[೧೪] ನಾಮವೋ ಎಂಬಂತೆ ಇದ್ದಲ್ಲಿ ಯೋಗಾಚಾರ್ಯರಿಗೂ ಜಟಾಧಾರಣೆಗೂ ಸಂಬಂಧವಿರುವುದರ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ವಟಪುರದ ಸಿದ್ಧೇಶ್ವರನಾದ ಅನಾದಿಗಣ ಮರುಳಾರ್ಯನ ವಂಶಪರಂಪರಾನುಗತ ಪಡಿವಿಡಿದ ರಾಜಗುರು ಅಪ್ಪಣಾರ್ಯರ ನಿಜಗರ್ಭಸಂಜನಿತರಾದ ಗೋಸಲದೇವರನ್ನು 'ಗುರು-ಯತಿ' ಎಂದು ತಾಮ್ರ ಶಾಸನಗಳಲ್ಲಿ[೧೫] ವರ್ಣಿಸಿರುವುದರಿಂದ ಯತೀಶ್ವರರು ಜಟಾಬಂಧವುಳ್ಳವರಾಗಿದ್ದುದು ಹರದನ ಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದಲ್ಲಿ ಕೆತ್ತಿರುವ ಮೂರ್ತಿ ಶಿಲ್ಪಗಳಲ್ಲಿ ಮಾತ್ರವಲ್ಲದೆ ತೋಂಟದ ಸಿದ್ಧಲಿಂಗೇಶ್ವರರ ಚಿಟ್ಟಿಗದೇವರೇ ಮೊದಲಾದ ಶಿಷ್ಯರ ಎಂಟು ಜಡೆಯ ಬಗೆಯ ಹಿರಿಯರ ಪ್ರಸ್ತಾಪದಲ್ಲಿಯೂ ಸುವಿದಿತವಾಗಿದೆ. 'ಜಡೆಯ ಮಠ'ಗಳ ಅಸ್ತಿತ್ವವೂ ಜಟಾಬಂಧದ ಬಗೆಗೇ ಸಂಬಂಧಪಟ್ಟಿದ್ದೆಂಬುದರಲ್ಲಿ ಸಂಶಯವಿಲ್ಲ.

ವಟ-(ಅ: ನ್ಯಗ್ರೋಧವೃಕ್ಷಾ) ಧಾಮನಾದ ಅನಾದಿ ಪರಶಿವನೇ ಈ ಆಜೀವಕರ ಧ್ಯಾನವಸ್ತುವಾದ ಪರಮಪರಂಜ್ಯೋತಿ ಎಂಬುದರ ಸ್ಪಷ್ಟ ಸೂಚನೆಯೋ ಎಂಬಂತೆ ಅವರಿಗೆ ಅಶೋಕ ಚಕ್ರವರ್ತಿಯಿಂದ-(ಕ್ರಿ.ಪೂ. ೨೩೨) ಮಳೆಗಾಲದ ವಾಸಸ್ಥಾನವಾಗಿ ದಾನಮಾಡಿದ ಗುಹೆಯ ''ನ್ಯಗ್ರೋಧವೃಕ್ಷ ಗುಹೆ'' ಎಂಬ ಹೆಸರೇ ತಿಳಿಸುತ್ತದೆ. ಅಶೋಕನ ಧರ್ಮಮಹಾ ಮಾತ್ಯರು 'ಸಂಘಗಳ, ಬ್ರಾಹ್ಮಣರ, ಆಜೀವಕರ, ನಿರ್ಗ್ರಂಥರ,' ಇನ್ನೂ ಇತರ ಎಲ್ಲ ಮತದವರ ಕಾರ್ಯಗಳನ್ನು ನೋಡಿಕೊಳ್ಳುವುದರಲ್ಲೂ ತೊಡಗಿದ್ದಾರೆ ಎಂಬ ಬಂಡೆಗಲ್ಲ ಲೇಖದಿಂದ ಬೌದ್ಧ, ಜೈನ ಹಾಗೂ ಬ್ರಾಹ್ಮಣ ಧರ್ಮದಿಂದ ಭಿನ್ನವಾದ ಮತ ಆಜೀವಕಮತವೆಂಬುದು ಸುಸ್ಪಷ್ಟವಿದೆ. ಬುದ್ಧ (ಕ್ರಿ.ಪೂ. ೫೬೩-೪೮೩)ನ ಹಿರಿಯ ಸಮಕಾಲೀನರಾದ ಆರು ಮಂದಿ ಹಿರಿಯರಲ್ಲಿ ನಿರ್ಗ್ರಂಥ ಜ್ಞಾತಪುತ್ರನ ಎಂದರೆ ಮಹಾವೀರನ ಹಾಗೆ ಮಸ್ಕರಿ-(ಅರ್ಥ:ಜ್ಞಾನಿ) ಗೋಸಾಲನೂ ಒಬ್ಬನಷ್ಟೆ. ಆ ಆರು ಜ್ಞಾನಿಗಳಾದ ಹಿರಿಯರನ್ನು ಕುರಿತು : ''ಸಂಘಿನೊ ಗಣಿನೊ ಗಣಾಚಾರಿಯಾ ಞಾತಾ ಯಸಸ್ಸಿನೊ ತಿತ್ಥಕರಾ ಸಾಧುಸಮ್ಮತಾ ಬಹುಜನಸ್ಯ ಸೈಯ್ಯಥೀದಂ'' ಎಂದು ವರ್ಣಿಸಲಾಗಿದೆ. ಸಂಘದಿಂದ ಒಡಗೂಡಿದವರೂ, ಗಣಂಗಳುಳ್ಳವರೂ ಗಣಾಚಾರ್ಯರೂ ಎಂದರೆ ಗಣಂಗಳಿಗೆ ಆಚಾರ್ಯರಾದವರೂ ಲೋಕವಿಜ್ಞಾತರೂ, ಕೀರ್ತಿಶಾಲಿಗಳೂ, ತೀರ್ಥಂಕರರೂ, ಸಾಧುಗಳೆಂದು ಬಹುಜನರಿಂದ ಸಮ್ಮತಿಸಲ್ಪಟ್ಟವರೂ ಆಗಿದ್ದ 'ಪೂರಣಕಸ್ಸಪ'ನಿಂದ ನಾತಪುತ್ರ ಪರ್ಯಂತ ಆರು ಹಿರಿಯರಲ್ಲಿ ಆಜೀವಕಮತಪ್ರವರ್ತಕನಾದ ಮಸ್ಕರಿ ಗೋಸಾಲನೂ ಒಬ್ಬನಾಗಿದ್ದುದರಿಂದ ಆತನು ವಟ-(=ಶಿವ) ಮತದ ಗಣಾಚಾರ್ಯನೆಂಬುದರ ಸ್ಪಷ್ಟ ಸೂಚನೆಯಿರುವುದನ್ನು ಗುರುತಿಸಬಹುದಾಗಿದೆ. ನಿರ್ವಾಣನಾಯಕ ಮಕ್ಖಲಿ ಗೋಸಾಲನ ಅನುಯಾಯಿಗಳಾದ ಅಜೀವಕರನ್ನು ಬುದ್ಧಘೋಷನು ''ಮನೋರಥ ಪೂರಣಿ''ಯಲ್ಲಿ 'ಬೆತ್ತಲೆ ಪರಿವ್ರಾಜಕ ರೆಂದು' ಹೇಳಿದ್ದಾನೆ.

ಸಹಸ್ರದಳಕಮಲದಲ್ಲಿ ಚಂದ್ರಸೂರ್ಯಾಗ್ನಿ ಮಂಡಲತ್ರಯದಿಂದ ಅಲಂಕೃತವಾದ ಪರಬಿಂದುರೂಪ ನಿರ್ವಾಣ ಶಕ್ತಿಯ ಮಧ್ಯಶೂನ್ಯದಲ್ಲಿ ಮಾಯಾಮಲರಹಿತವಾದ ಶಿವಪದ ಇಲ್ಲವೆ ಬ್ರಹ್ಮಸ್ಥಾನವು ಯೋಗಿಗಮ್ಯವು. ಸಿದ್ಧಿಕಾರಣವಾದ ಈ ನಿರ್ಗುಣ ಬಿಂದುವನ್ನು ಕೆಲವರು ಬ್ರಹ್ಮವೆಂದೂ, ಕೆಲವರು ವಿಷ್ಣುವೆಂದೂ, ಕೆಲವರು ರುದ್ರನೆಂದೂ ಕರೆದಿರುವರು. ಮಹಾಪೂರ್ಣ, ಏಕೋದೇವ, ನಿರಂಜನ, ಚಣಕಾಕಾರರೂಪನಾದ ಆತ್ಮಶಕ್ತಿಯುತ ದೇವನೆಂದು ಹೇಳುವರು. ಈ ನಿರ್ಗುಣ ಬಿಂದುವಿನ ಕೇಶಾಗ್ರಕೋಟಿಭಾಗದಲ್ಲಿ ಒಂದು ಭಾಗವಾದ ಸೂಕ್ಷ್ಮತೇಜೋಽಂಶವು ನಿರ್ವಾಣಶಕ್ತಿಮಧ್ಯದಲ್ಲಿ ಗೂಢಾತ್-ಗೂಢತಮವಾಗಿ ಅತಿ ಗುಪ್ತವಾಗಿರುವುದರಿಂದಲೇ 'ಶೂನ್ಯ' ವೆಂದೆನಿಸಿದುದು. ಪರಮಕುಂಡಲಿಯಾದ ಈ ಪರಬಿಂದು ಸೃಷ್ಟಿ-ಸ್ಥಿತಿ-ಲಯಾತ್ಮಕವು. ಸರ್ವಕಾರಣವಾಗಿ ಸತ್ಪ್ರಾಣರೂಪವೂ ಸಕಲ ತತ್ತ್ವಗಳ ಉತ್ಪತ್ತಿಗೆ ಆಕರವೂ ಆದುದಾಗಿ ಉಕ್ತವಾಗಿದೆ. ಆಜೀವಕರ ಬತ್ತಲೆಯ ಸಂಪ್ರದಾಯವೂ ಶೂನ್ಯ-(= ಶಿವಶಕ್ತ್ಯಾತ್ಮಕ ಬಿಂದು) -ಧ್ಯಾನಯೋಗ ಪದ್ಧತಿಯೂ ನಿರ್ವಾಣ ಸ್ವಾಮಿವೇಸರ ಬತ್ತಲೆ ಗುರುಗಳು ಕೋರುವ ಆರಣ್ಯಭಿಕ್ಷೆ ಇಲ್ಲವೆ ವನಸ್ಪತಿ ಭೋಜನಾಚರಣೆಗೆ ಮೂಲಪ್ರೇರಣೆಯಿನ್ನಿತ್ತ ಅಧ್ಯಾತ್ಮ ಸಾಧನೆಯ ಬೀಜಾಂಕುರವೆಂದು ತಿಳಿಯಬಹುದು.

ಪ್ರಾಚೀನ ಭಾರತದ ಐತಿಹಾಸಿಕ ಮಹತ್ವವನ್ನು ಹೊಂದಿ ಪೂಜ್ಯವಾದ ಮತವೊಂದನ್ನು ಸ್ಥಾಪಿಸಿದ ಮಹಾಜ್ಞಾನಿಯೂ ಆ ಜೀವೋಪದೇಶಿಕನೂ ನಿರ್ವಾಣನಾಯಕನೂ, ಶೂನ್ಯತತ್ತ್ವ ಪ್ರತಿಪಾದಕನೂ ಲೋಕಕ್ಕೆ ಮರುಳಾಗಿ ತೋರಿದವನೂ ಆದ ಗುರು ಗೋಸಾಲನ ಅಂಕಿತವೆ ಜನಬಳಕೆಯ ಮಾತಿನಲ್ಲಿ 'ಗೋಸಲ' ಎಂದಾಗಿ ಜೀವನ್ಮುಕ್ತವೃಕ್ಷಸ್ಥಲ ಮಾಹಾತ್ಮ್ಯ ಸೂಚಕವೂ ಗೋಸಲ ಅರ್ಥಾತ್ ಸ್ಥಿರಗ ಅಥವಾ ಹರದ ಚರಚಕ್ರವರ್ತಿಗಳ ಎಂದರೆ ವಾಣಿಜಸ್ವಾಮಿಗಳ ಗುರುವಿನ ನಾಮನಿರ್ದೇಶಕವೂ ಆದ ಪದಪ್ರಯೋಗವೆಂದು ಭಾವಿಸಬಹುದಾಗಿದೆ.

'ಗೋಸಲ ಸಿದ್ಧೇಶ' (ತ್ರಿವಿಧಿ ೧೨ ನೋಡಿ)ನನ್ನೇ ತೋಂಟದ ಸಿದ್ಧೇಶ (ಇದೇ ತ್ರಿವಿಧಿ ೨೪)ನೆಂದು ಸಿದ್ಧೇಶ್ವರ ತ್ರಿವಿಧಿಯಲ್ಲಿ ಸ್ತುತಿಸಿದ ಅದರ ಕರ್ತೃ ನಂದಿಕವಿಯು 'ಗೋಸಲ'ಶಬ್ದಕ್ಕೆ ತೋಂಟವೆಂದೇ ಅರ್ಥೈಸಿರುವುದು ಸುಸ್ಪಷ್ಟವಾಗಿದೆ.

ಗೋಗೇಶ್ವರ -'ಗೋ' ಪ್ರಿಯನಾದ, ವಟಧಾಮನಾದ ಈಶ್ವರನೇ ತನ್ನ ಇಷ್ಟಲಿಂಗವಾದ ಪ್ರಭುದೇವರು ತನುವ ತೋಂಟವ ಮಾಡಿ ಬ್ರಹ್ಮಬೀಜವ ಬಿತ್ತಿ ಸಲಹಿದ ಬಗೆಯಿದು:

''ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ ಅಗೆದು ಕಳೆದನಯ್ಯ ಭ್ರಾಂತಿನ ಬೇರ, ಒಡೆದು ಸಂಸಾರದ ಹೆಂಟೆಯಬಗಿದು, ಬಿತ್ತಿದನಯ್ಯ ಬ್ರಹ್ಮಬೀಜವ, ಅಖಂಡಮಂಡಲವೆಂಬ ಬಾವಿ, ಪವನವೇ ಜಾಟಳ, ಸುಷುಮ್ನನಾಳದಿಂದವೆ ಉದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹರೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ ಆವಾಗಳೂ ಈ ತೋಂಟದೊಳಗೆ ಜಾಗರವಿದ್ದು ಈ ಸಸಿಯ ಸಲಹಿದೆ ಕಾಣಾ ಗೋಗೇಶ್ವರಾ.'' ಹೀಗೆ 'ಗೋಸಂಸ್ಥಿತನಾಗಿ ಗೋಸಲೇಶನಾದ ಆ ಗುರೋತ್ತಮನು 'ಚಕ್ಷುರಗ್ರೇ-ಸ್ಥಿತಃ' ಆದ ಪ್ರಣವಪ್ರಕಾಶನು ಪರಶಿವಜ್ಯೋತಿಃ ಸ್ವರೂಪನು, ಶೂನ್ಯಲಿಂಗಧ್ಯಾನಯೋಗಿಯು.

'ಅಂಗ' ಪದವಾಚ್ಯನಾದ ಆತ್ಮ, ಆ ಆತ್ಮನ ಶಕ್ತಿಯೇ ಬೀಜರೂಪವಾದ ಭಕ್ತಿಯನ್ನೊಳಗೊಂಡಕ್ಷೇತ್ರ. ಆ ಭಕ್ತಿಬೀಜವೆ ಅಂಕುರಿಸಿ ಅಂಗವಿಸಿ, ಅಂಗ-ಲಿಂಗಸಮರಸಾನಂದ ರೂಪ ಫಲವನ್ನು ನೀಡುವ ವೃಕ್ಷ. ಬೀಜಕ್ಕೂ, ಬೀಜಿಯಾದ ವೃಕ್ಷಕ್ಕೂ, ಬೀಜದ ಉತ್ಪತ್ತಿಗೆ ಸ್ಥಾನವಾದ ಕ್ಷೇತ್ರಕ್ಕೂ ವಿಯೋಗವಾಗದ ಸಂಯೋಗದಿಂದ ಕೂಡಿದ ಗೋಸ್ಥಲ ಇಲ್ಲವೆ ಗೋಸಲಗುರುವಿನ ಜೀವನ್ಮುಕ್ತಸ್ಥಿತಿಯಲ್ಲಿ ಕ್ಷೇತ್ರ-ಬೀಜ-ಬೀಜಿತ್ರಯಾತ್ಮಕವು ಏಕಾತ್ಮವಾದುದೇ ಸಚ್ಚಿದಾನಂದ ನಿರಂಜನ ಪರವಸ್ತು. ಶಿವಾನುಭವಸೂತ್ರದಲ್ಲಿ ಮೊಗ್ಗೆಯ ಮಾಯಿದೇವರು ತ್ರ್ಯಾತ್ಮಕವಾದ ಏಕದ ಅವಿರಳವೂ ಅಚಲವೂ ಅದ ಅಖಂಡಿತ ಸ್ವರೂಪವನ್ನು ನಿರೂಪಿಸಿರುವ ಬಗೆಯಿದು :

''ಏವಂ ಲಿಂಗಾಂಗಸಂಯೋಗವಿಧಿನಾ ಸ್ವಾತ್ಮನಿ ಸ್ಥಿತಾ ।
ಬೀಜರೂಪಾ ಪರಾಭಕ್ತಿಃ ಪ್ರರೋಹತಿ ಸಮಂತತಃ ॥
ಆತ್ಮಾ ಕ್ಷೇತ್ರಂ ಭವೇದ್ಭಕ್ತಿರ್ಬೀಜಂ ಬೀಜೀ ಮಹೇಶ್ವರಃ
ತಸ್ಮಾತ್ ಕ್ಷೇತ್ರಸ್ಯ ಬೀಜಸ್ಯ ಬೀಜಿನಶ್ಚ ಕದಾಚನ
ವಿಯೋಗೋ ನೇಕ್ಷ್ಯತೇ ಕ್ವಾಪಿ ಸದಾ ಸಂಯೋಗ ಏವ ಹಿ'' ॥

ಮಹಾನುಭಾವ ಜಂಗಮನ ಈ ತ್ರಿವಿಧಾತ್ಮಸ್ವರೂಪವನ್ನು ಭಗವಾನ್ ತೋಂಟದ ಸಿದ್ಧಲಿಂಗೇಶ್ವರರು ನಾ-ನೀನೆನಲಿಲ್ಲದ ಆ ಪರಾತ್ಪರ ಸ್ಥಿತಿಯನ್ನು ಹೀಗೆ ಮನಗಾಣಿಸಿದ್ದಾರೆ: ''ಮನ ಘನವಸ್ತುವಾದ ಬಳಿಕ, ಮನ-ವಚನ-ಕಾಯವೆಂಬ ತ್ರಿಕರಣ ಶುದ್ಧಾತ್ಮನೆಂಬೆ, ನಿತ್ಯ ಮುಕ್ತನೆಂಬೆ, ನಿರಾಲಂಬಿಯೆಂಬೆ. ಆತನ ತನು ಶುದ್ಧವಾಗಿ ತನುವೇ ಗುರು, ಆತನ ಮನ ಶುದ್ಧವಾಗಿ ಮನವೇ ಲಿಂಗ. ಆತನ ಭಾವ ಶುದ್ಧವಾಗಿ ಭಾವವೇ ಮಹಾನುಭಾವ ಚರಲಿಂಗ ನೋಡಾ ! ಇಂತೀ ಜ್ಞಾನ ಗುರು, ಅರುಹೆಂಬ ಶಿವಲಿಂಗ, ಮಹಾನುಭಾವವೆಂಬ ಜಂಗಮ. ಇಂತೀ ತ್ರಿವಿಧವು ತನ್ನ ತ್ರಿವಿಧಾತ್ಮ ನೋಡಾ ! ಜ್ಞಾನ ಗುರುವೆಂದಡೆ ತನ್ನ ಜೀವಾತ್ಮ, ಅರುಹೆಂಬ ಶಿವಲಿಂಗವೆಂದಡೆ ತನ್ನ ಅಂತರಾತ್ಮ, ಮಹಾನುಭಾವ ಜಂಗಮವೆಂದಡೆ ತನ್ನ ಪರಮಾತ್ಮ. ಇಂತೀ ತ್ರಯಾತ್ಮ ಏಕಾತ್ಮವಾದಡೆ ಸಚ್ಚಿದಾನಂದ ನಿರಂಜನ ಪರಾತ್ಪರವಸ್ತು ನೀನೆ. ಅಲ್ಲಿ ನಾ-ನೀನೆನಲಿಲ್ಲ. ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.''

ಶೂನ್ಯಲಿಂಗ ಹಾಗೂ ತ್ರೈವಿಧ (ಸ್ವಯ-ಚರ-ಪರ) ಜಂಗಮ ಸ್ವರೂಪ, ಬ್ರಹ್ಮಬೀಜಾಂಕುರದ ಸಸಿಯನ್ನು ಕುರಿತ ಕೆಲವು ವಚನ ಹಾಗೂ ವಚನಭಾಗಗಳನ್ನು ಉದ್ಧರಿಸುವ ಮೂಲಕ ಈ ಲೇಖನವನ್ನು ಪೂರ್ಣಗೊಳಿಸಬಹುದಾಗಿದೆ.

ತಾನೇ ಘನಶೂನ್ಯ

''ಅನಾದಿ ತ್ರಿತತ್ತ್ವಂಗಳು ತಾನಲ್ಲ'', 'ಆದಿ ತ್ರಿತತ್ತ್ವಂಗಳು ತಾನಲ್ಲ'. 'ಗಣಾಧೀಶ್ವರರೆಂಬ ಮಹಾಗಣಂಗಳು ತಾನಲ್ಲ', 'ವಿರಾಟ್ ಪುರುಷ' ತಾನಲ್ಲ. 'ಪತಿ ಪಶು ಪಾಶವೆಂಬ ಸಿದ್ಧಾಂತಗಳು ತಾನಲ್ಲ', 'ತ್ವಂ ಪದ, ತತ್ ಪದ, ಅಸಿ ಪದವೆಂಬ ವೇದಾಂತ ಪಾದತ್ರಯಂಗಳು ತಾನಲ್ಲ. ಪಂಚಭೌತಿಕದ ಪಂಚವಿಂಶತಿ ಗುಣಂಗಳಿಂದಾದ ದೇಹವು ತಾನಲ್ಲ', ಶಿವಜ್ಞಾನವೇ ಶೃಂಗಾರವಾದ ತನ್ನ ತಾನರಿದು, ಅಂತಃಶೂನ್ಯ, ಸರ್ವಶೂನ್ಯ, ನಿರಾಕಾರವಾಗಿಹ, ತನ್ನ ಅಂಗ-ಪ್ರತ್ಯಂಗ ಸ್ವರೂಪ ಭಾವಾಂಗವ ತಿಳಿದ ಮಹಾಶರಣನು ತಾನೇ ಗುರು, ತಾನೇ ಲಿಂಗ, ತಾನೇ ಜಂಗಮ, ತಾನೇ ಪರಮ ಪಾದೋದಕ ಪ್ರಸಾದ ನೋಡಾ; ತಾನೇ ನಾದ ಬಿಂದು ಕಳಾತೀತನು. ತಾನೇ ಶೂನ್ಯ, ತಾನೇ ಘನಶೂನ್ಯ, ಮಹಾಘನಶೂನ್ಯ ನೋಡಾ, ತಾನೇ ಬಯಲು, ನಿರ್ಬಯಲು; ತಾನೇ ನಿರುಪಮ ನಿರಾಕಾರ; ತಾನೇ ನಿರಾಳ ನಿರಾಲಂಬ ನೋಡಾ !''

– ಸರ್ಪಭೂಷಣ ಶಿವಯೋಗಿ

''ಶಿವಶಿವ ಎಲ್ಲರೂ ಉಂಟಾದುದ ಹೇಳಿ, ಇಲ್ಲದ ಬಯಲಿಂಗೆ ಮನವನಿಕ್ಕಿದರು. ಎನಗೆ ಇನ್ನಾವುದು ಬಟ್ಟೆ? ಬಸವಣ್ಣನ ಆಕರಣೆಯಿಂದ ಕಟ್ಟಿದ ಲಿಂಗಕ್ಕೆ ಹುಟ್ಟು ಮೆಟ್ಟನರಿಯೆ. ಕೊಟ್ಟಾತ ಹೇಳಿದುದಿಲ್ಲ. ಕಟ್ಟಿಕೋ ಎಂದಾತ ಈ ಬಟ್ಟೆಯಲಿರು ಎಂದುದಿಲ್ಲ. ಕಡ್ನಾಯಕ್ಕೆ ಕಟ್ಟಿದ ಈ ಒಡ್ಡುಗಲ್ಲಿನ ಮುಱಿಯೆ, ಎನಗೊಂದು ಬುದ್ಧಿಯ ಹೇಳು ಅಲೇಖನಾದ ಶೂನ್ಯ ಕಲ್ಲಿನೊಳಗೆ ಏಕೆ ಅದೆಯಯ್ಯ ?''

– ವಚನಭಂಡಾರಿ ಶಾಂತರಸ

[ಬಟ್ಟೆ: ದಾರಿ; ಆಚರಣೆಯ ಮಾರ್ಗ; ಲಿಂಗವನ್ನು ಹಿಂದಿನ ಕಾಲದಲ್ಲಿ ಲಿಂಗವನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದ ವಸ್ತ್ರ. ಆಕರಣೆ: ಕರೆ, ಆಹ್ವಾನ. ಹುಟ್ಟು ಮೆಟ್ಟು: ಆದಿ ಅಂತ್ಯ. ಕೊಟ್ಟಾತ: ಗುರು. ಕಟ್ಟಿಕೋ ಎಂದಾತ: ಜಂಗಮಲಿಂಗ. ಒಡ್ಡುಗಲ್ಲು:

ಶ್ರೀಶೈಲಗಿರಿ. ಮುಱಿ: ಶಿಲೆಯ ಖಂಡ. ಅಲೇಖ: ಲಿಖಿಸದ. ಬರಿದಾದ: ನುಣ್ಣನಪ್ಪ ಅಳಕಪತ್ರ, ಅಲಿಖಿತ ಪತ್ರ, ಓಲೆ- ಶೂನ್ಯ: ಸರ್ವಕಾರಣರೂಪ, ಶಿವಶಕ್ತ್ಯಾತ್ಮಕ ಬಿಂದು, ಅನಾದಿ, ಕರಸ್ಥಲಲಿಂಗ, ಕಲ್: ಕಲ್ಲು: ಶಿಲೆ: ಶಿಲಾಮೂರ್ತಿ, ಅಱಿವು, ಜ್ಞಾನ. "ಪೂಜೆ ಪುಣ್ಯಕ್ಕೆ ಒಡಲಾದಂತೆ ಶೂನ್ಯಕ್ಕೆ ಜ್ಞಾನ ಒಡಲು."]

ಮಹಾಘನಶೂನ್ಯ ಬ್ರಹ್ಮ

ಸಕಲನಾಗಬಲ್ಲ, ನಿಷ್ಕಲನಾಗಬಲ್ಲ, ಸಕಲ-ನಿಷ್ಕಲಾತೀತನಾಗಿ, ಏನೂ ಏನೂ ಇಲ್ಲದ ಮಹಾಘನಶೂನ್ಯ ಬ್ರಹ್ಮವಾಗಿ ಇರಬಲ್ಲನಯ್ಯಾ, ನಮ್ಮ ಗುಹೇಶ್ವರಲಿಂಗವು - ಪ್ರಭುದೇವರು - (ಸೃಷ್ಟಿಯ ವಚನಭಾಗ)

ಮೂರೊಂದಾದಡೆ

"ಧ್ಯಾತೃ-ಧ್ಯಾನ-ಧ್ಯೇಯ ಮೂರೊಂದಾದಡೆ ಜೀವ ಪರಮರೈಕ್ಯವಯ್ಯಾ. ಆ ಜೀವಪರಮರೈಕ್ಯವಾದುದೇ ಮನಲೀಯ. ಮನಲೀಯವಾದ ಬಳಿಕ ಇನ್ನು ಧ್ಯಾನಿಸಲುಂಟೆ? ಅರಿಯಲುಂಟೆ ? ಹೇಳು. ಬಾಹ್ಯಾಭ್ಯಂತರ ಮನ ಇಂದ್ರಿಯವಿಕಾರವಳಿದು, ಅವಿದ್ಯಾವಾಸನೆಯಡಗಿ ಅಹಂಕಾರವುಡುಗಿದ ಜೀವನ್ಮುಕ್ತಂಗೆ, ಸರ್ವಶೂನ್ಯವಾಗಿ ಸಮುದ್ರಮಧ್ಯದ ತುಂಬಿದ ಕೊಡದಂತೆ ಇದ್ದನಯ್ಯಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮ ಶರಣ." ಸ್ವ.ಸಿ.ವ. ೩೭೮

ಪರಮ ನಿರ್ವಾಣ

ಸರ್ವಜ್ಞತ್ವ, ನಿತ್ಯತೃಪ್ತಿ, ಅನಾದಿ, ಪ್ರಬೋಧ, ಸ್ವತಂತ್ರ, ಸಿದ್ಧಶಕ್ತಿಯೆಂಬ ಷಡ್ಗುಣೈಶ್ವರ್ಯ ತನಗೂ ಶಿವಂಗೂ ಸಮವಾಗಿ ಶಿವ, ಶಿವನೊಳಗೆ ತಾನು, ತನ್ನೊಳಗೆ ಶಿವನು ಅಡಗಿ ಸಮರಸವಾದುದೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಪರಮ ನಿರ್ವಾಣವೆನಿಸುವುದು. ಸ್ವ.ಸಿ.ವ.೪೮೯

ಮೂರ್ತಿಗೌಪ್ಯ

"ತನುತ್ರಯಗಳೆಂಬವ ಮಱೆಗೊಂಡು ಎನ್ನ ಗುಣಮೂಱಱೊಳಾಡಿಪ ನಿನ್ನ ಮೂರ್ತಿಗೌಪ್ಯವ ತಿಳಿಯಲ್ ವಚೋಮನಕಭೇದ್ಯ ಕಣಾ ಗುರುಶಂಕರೇಶ್ವರಾ !" ಗು.ಶಂ.ಶತಕ.೨೭

ಏಕಮೂರ್ತಿಸ್ತ್ರಯೋ ಭಾಗಾಃ

"ಒಂದಱೊಳಂ ತ್ರಯ, ತ್ರಯ ತಾನೊಂದೇ
ಸಂದೇಹಿಸಿ ಬೇಱೆನ್ನದಿರೊಂದೇ -" – ದೀಕ್ಷಾ ಬೋಧೆ ೩-೧೨೧ ಪು.೯೭

ಅಂಗದೊಳಗಣ ಲಿಂಗ, ಲಿಂಗದೊಳಗಣ ಅಂಗ, ಅಂಗ-ಲಿಂಗ-ಸಂಗ ಹಿಂಗದಂತೆ ಮಾಡಿಕೊಳ್ಳಯ್ಯಾ; ದೇಹವಿದ್ದಲ್ಲಿಯೆ ದೇವರ ಧರಿಸಿಕೊಳ್ಳಿರಯ್ಯಾ, ಬಲ್ಲವರು; ಲಿಂಗದೇವರ ಹಿಡಿದು, ಪೂಜಿಸಿ ಪ್ರಸಾದವ ಕೊಳ್ಳಿರೋ, ಬಲ್ಲವರು. ತಾ ಸತ್ತ ಬಳಿಕ ದೇವರ ಕೂಡಿದೆನೆಂದರೆ ಗೋಗೇಶ್ವರ ಲಿಂಗಕ್ಕೆ ಬೇಱೊಂದು ಠಾವುಂಟೆ ? ಹೇಳಿರೈ ಮರುಳುಗಳಿರಾ! ಓಲೆ–೪೮ ಹಲಗೆಯ ದೇವರ ಶೂನ್ಯಸಂಪಾದನೆ

ಶೂನ್ಯಲಿಂಗಾಂಗ ಸಮರಸ ಸಂಪಾದನೆಯಲ್ಲಿ ಬರುವ ಜಗದಾರಾಧ್ಯರೂ ಶೂನ್ಯಸಿಂಹಾಸನಾಧೀಶ್ವರರೂ ಆದ ಪ್ರಭುದೇವರ ಈ ವಚನಾನುಭವಕ್ಕೂ 'ಜ್ಞಾನದಿಂದ ಮೋಕ್ಷವಾಗುವುದಿಲ್ಲ. ದೇವ ಅಥವಾ ಈಶ್ವರನು ಇದ್ದಾನೋ ಇಲ್ಲವೋ! ಅದಕ್ಕಾಗಿ ಸ್ವೇಚ್ಛಾಪೂರ್ವಕ ಶೂನ್ಯಧ್ಯಾನವನ್ನು ಮಾಡಲಿಕ್ಕೇ ಬೇಕು' ಎಂಬ ಕ್ರಿಸ್ತಪೂರ್ವಕ್ಕೆ ಮುನ್ನ ಆರು ಶತಮಾನಗಳ ಹಿಂದೆ ಜನಮನವನ್ನು ಸೂರೆಗೊಂಡ ಗೋಸಾಲನ ಜೀವೋಪದೇಶಕ ಶೂನ್ಯತತ್ತ್ವದ ವಿಚಾರಸರಣಿಗೂ ಒಂದು ಬಲವಾದ ಕುಣಿಕೆ ಬಿದ್ದಿರುವಂತೆ ಕಂಡುಬಂದರೂ ಈ ಎರಡೂ ತತ್ತ್ವದೃಷ್ಟಿಗಳು ಒಂದೇ ಸ್ವರೂಪವುಳ್ಳದ್ದೆಂದೂ ಸರ್ವಸಮವೆಂದೂ ಹೇಗೆತಾನೆ ತುಲನಾತ್ಮಕವಾಗಿ ಪರಿಶೀಲಿಸದೆ ಹೇಳಲಾದೀತು ? ಆ ಶೂನ್ಯಧ್ಯಾನ ಖಂಡನೆಯನ್ನು ಶೈವಾಚಾರ್ಯರು ಮಾಡಿದ್ದಲ್ಲಿ ಗೋಸಾಲಪ್ರತಿಪಾದಿತ ಶೂನ್ಯತತ್ತ್ವದ ಮೂಲಸ್ವರೂಪ, ಅದರ ಸಮಗ್ರ ವಿಕಾಸದ ಹಾಗೂ ವ್ಯಾಪ್ತಿಯ ಲುಪ್ತವಾದ ಮಜಲುಗಳ ವಿವಿಧ ಸ್ತರಗಳನ್ನು ಕಂಡುಹಿಡಿಯುವ ಪ್ರಯತ್ನ ಸಂಶೋಧಕರ ಪಾಲಿಗೆ ಒಂದು ಸವಾಲಾಗಿದೆ ಎಂದು ಹೇಳಿ 'ಗೋಸಲ' ಶಬ್ದಕಲ್ಪದ್ರುಮದ ಬೇರನ್ನು ಬೆದಕುವ ಸಾಹಸವನ್ನು ಸದ್ಯಕ್ಕೆ ಇಲ್ಲಿಗೆ ಸಮಾಪ್ತಿಗೊಳಿಸ ಬಹುದಾಗಿದೆ.

ಎಂದು ಈ ಹಿಂದೆ 'ಅಮರವಾಣಿ' (ಪುಟ.೩೬)ಯಲ್ಲಿ[೯] "ಗೋಸಲ ಶಬ್ದಕಲ್ಪದ್ರುಮ"ದ ಬಗೆಗೆ ಮಾಡಿದ ವಿವೇಚನೆಯನ್ನು ಸಮಾಪ್ತಿಗೊಳಿಸಿದ್ದುದು ಸರಿಯಷ್ಟೆ. ಮುಂದುವರಿದು ಗಮನಿಸಬೇಕಾದ ಸಂಶೋಧನೆಯ ಅಂಶವೆಂದರೆ ವೀರಾಗಮದಲ್ಲಿ ಕಂಡುಬರುವ 'ಶೂನ್ಯಲಿಂಗ'ನಾಮಕ ಕರಸ್ಥಲಲಿಂಗ. ಸಾಕ್ಷ್ಯಾಧಾರ ಗ್ರಂಥಗಳಾದ ಇಪ್ಪತ್ತೆಂಟು ಶಿವಾಗಮಗಳಲ್ಲಿ[೨೦] ಒಂದಾದ ವೀರಾಗಮದಲ್ಲಿ ಜಂಗಮಸ್ವರೂಪದ ಮಹತ್ತ್ವವನ್ನು ಕಾಣಬಹುದು. ಜಂಗಮದ ಮಕುಟದಲ್ಲಿ ಶೂನ್ಯಲಿಂಗ ಹುಟ್ಟಿತೆಂದೂ ಅದೇ ಆತನು ಧರಿಸಿದ ಕರಸ್ಥಲಲಿಂಗವೆಂದು ನಿರೂಪಿಸಿರುವುದನ್ನು ಆಗಮೋಕ್ತಿಯಲ್ಲಿ ಸುಸ್ಪಷ್ಟವಾಗಿ ತಿಳಿಯಬಹುದು. ಜಂಗಮವು ಕರಸ್ಥಲದಲ್ಲಿ ಧರಿಸಿದ ಲಿಂಗವು 'ಶೂನ್ಯಲಿಂಗ'ವೆಂದೇ ಹೆಸರುಗೊಂಡಿದ್ದಿತೆಂಬುದನ್ನು ಹೀಗೆ ಗಮನಿಸಿದಾಗ ಗೋಸಾಲ ಗುರೂತ್ತಮನು ಬೋಧಿಸಿದ ಅಂತಃಶೂನ್ಯಧ್ಯಾನವು ಶೂನ್ಯಲಿಂಗಧ್ಯಾನವೇ ಆಗಿದೆಯೆಂಬುದು ವೀರಾಗಮದ ಮುಂದಿನ ಶ್ಲೋಕಗಳ ಆಧಾರದಿಂದ ಮನಗಾಣಬಹುದಾಗಿದೆ. ಜೈನ ದಿಗಂಬರರಂತೆ ಚರಿಸುತ್ತಿದ್ದ ಗೋಸಾಲನ ನಗ್ನತೆ ಆತನ ಬಹಿಶ್ಶೂನ್ಯತೆಯನ್ನು ಎಂದರೆ ಬಯಲ ಇಲ್ಲವೆ ಬತ್ತಲ ಸಂಪ್ರದಾಯವನ್ನು ಸಾರುತ್ತದೆ. ಶಿವನನ್ನು "ಆಶಾಂಬರಶಂಭು"ವೆಂದು ಸ್ಮರಿಸುತ್ತ ಬಂದಿರುವುದೇ ಜಂಗಮದ ಬಹಿಶ್ಶೂನ್ಯ ಲಕ್ಷಣದ ಈ ಬತ್ತಲಸಂಪ್ರಾದಯಕ್ಕೆ ಮೂಲಪ್ರೇರಣೆಯಾಗಿದ್ದತೆಂದು ಭಾವಿಸಬಹುದಾಗಿದೆ. ವೀರಾಗಮವು ಶೂನ್ಯ ಅರ್ಥಾತ್ ಶೂನ್ಯಲಿಂಗ ನಿರ್ದೇಶವನ್ನು ಮಾಡಿರುವ ಬಗೆಯಿದು:

"ದೇಹಂ ನಾಸ್ತಿ ಕುಲಂ ನಾಸ್ತಿ । ಕರಣಂ ಕಾಲವರ್ಜಿತಂ
ಇಂದ್ರಿಯಾದಿ ಸುಖಂ ನಾಸ್ತಿ । ಶೂನ್ಯಲಿಂಗಮಿತಿ ಸ್ಮೃತಂ ॥
ಅಂತರ್ಬಹಿಶ್ಚ ಶೂನ್ಯಂ ಚ । ದಶಾದಿಶ ವಿವರ್ಜಿತಂ
ಪಾದಾದ್ಯವಯವಂ ನಾಸ್ತಿ । ಶೂನ್ಯಲಿಂಗಮಿತೀರಿತಂ ॥
ತನುಃಶೂನ್ಯಂ ಮನಃಶೂನ್ಯಂ । ಭುವನಂ ಭೋಗವರ್ಜಿತಂ
ಕಾಮಕ್ರೋಧಾದಿ ಶೂನ್ಯಂ ಚ । ಶೂನ್ಯಂ ನಾಮ ಇತಿ ಸ್ಮೃತಂ ॥
ಆದ್ಯಂ ಚಾನಾದಿ ರೂಪಂ ಚ । ನಾದ ಬಿಂದು ನ ಲಿಪ್ಯತೇ
ದೇಹಃ ಪ್ರಾಣೋಪ್ಯತಃಶೂನ್ಯಂ । ಶೂನ್ಯಲಿಂಗಮುದಾಹೃತಂ ॥
ಮಾತಾ ನಾಸ್ತಿ ಪಿತಾ ನಾಸ್ತಿ । ನಾಸ್ತಿ ಬಂಧು ಸಹೋದರಃ
ಕುಲಂ ನಾಸ್ತಿ ಛಲಂ ನಾಸ್ತಿ । ತದ್ವೈ ಶೂನ್ಯಸ್ವರೂಪಕಂ ॥
ಜ್ವಲತ್ಕಾಲಾನಲಾಭಾಸಾ । ತಟಿತ್ಕೋಟಿ ಸಮಪ್ರಭಾ
ತಸ್ಯೋರ್ಧ್ವಂ ಚ ಶಿಖಾ ಸೂಕ್ಷ್ಮಂ । ಚಿದ್ರೂಪಂ ಪರಮಾ ಕಲಾ ॥
ಯಥಾ ಕಲಾ ತಥಾ ಭಾವೋ । ಯಥಾ ಭಾವಸ್ತಥಾ ಮನಃ
ಯಥಾ ಮನಸ್ತಥಾ ದೃಷ್ಟಿ । ರ್ಯಥಾ ದೃಷ್ಟಿಸ್ತಥಾ ಸ್ಥಲಂ ॥
ತಸ್ಮಾಚ್ಛಿವ ಸಮುತ್ಪನ್ನಂ । ಆದಿ ಜಂಗಮ ಮೂರ್ತಿಷು
ಶೂನ್ಯಲಿಂಗಮಿತಿ ಖ್ಯಾತಂ । ಸರ್ವಕಾರಣರೂಪತಃ ॥
ಲಿಂಗೇವ ಕಾರಣಂ ರೂಪಂ ಅನಾದಿ ಜಂಗಮಂ ಶಿವೇ
ತಸ್ಮಾಜ್ಜಂಗಮರೂಪೇಣ । ಲಿಂಗರೂಪ ಸಮುದ್ಭವಂ
ತಲ್ಲಿಂಗೇನ ಸಮುದ್ಭೂತಂ ಸರ್ವ ತತ್ತ್ವಮಥ ಶ್ರುಣು ।"

ಮೂಲಜ್ಞಾನದಿಂದ ತಮ್ಮ ಪೂರ್ವಾಪರ ಸಂಬಂಧವನ್ನು ವಿವೇಕಿಸಿ ಅರಿದ ಪ್ರಭುದೇವರು, ತಾವು "ತ್ರೇತಾಯುಗದಲ್ಲಿ ಶೂನ್ಯಕಾಯನೆಂಬ ಗಣೇಶ್ವರನಾಗಿದ್ದ" ನೆಂದಿರುವುದನ್ನು ನಾವಿಲ್ಲಿ ಸ್ಮರಿಸಬಹುದು. ಅಹಂ ಎಂಬುದೇ ದೇಹ; ನಿರಹಂಕಾರದ ವಿನಮ್ರಭಾವವೇ ನಿರ್ದೇಹ; ಶೂನ್ಯಕಾಯ ಸ್ಫಟಿಕ ಘಟ. ಗುಮ್ಮಳಾಪುರದ ಸಿದ್ಧಲಿಂಗದೇವರ "ಷಟ್ಸ್ಥಲಲಿಂಗಾಂಗ ಸಂಬಂಧದ ನಿರ್ವಚನ"ದೊಂದು ವಚನಭಾಗದಲ್ಲಿ ಶೂನ್ಯವನ್ನು ಕುರಿತ ಮೇಲಣ ಶ್ಲೋಕಗಳ ಅರ್ಥ ಒಡಮೂಡಿರುವ ಬಗೆಯಿದು :

"....ಬೋಳಬಸವೇಶ್ವರನು ಸಿದ್ಧೇಶ್ವರನ ನಿಜಪದವನೊರೆದೊರೆದು ತೋಱಿದ ಕಾರಣ ಎನ್ನ ತನು ಬಯಲಾಯಿತ್ತು ಎನ್ನ ಮನ ಬಯಲಾಯಿತ್ತು. ಎನ್ನ ಪ್ರಾಣ ಬಯಲಾಯಿತ್ತು. ಎನ್ನ ವಿಷಯ ಬಯಲಾಯಿತ್ತು. ಇಂತಿವಱೊಳಗೆ ಬಯಲಾದೆನು." "ವೀರಶೈವಾಚಾರಪ್ರತಿಷ್ಠಾಪನಾಚಾರ್ಯ"ವೆಂದೇ ಪ್ರಸಿದ್ಧವಾಗಿರುವ ಶೂನ್ಯಸಂಪಾದನೆಗಳಾದರೋ

''ಸರ್ವಕರಣಶೂನ್ಯಸಂಪಾದನೆ'' ಯೆಂದೂ ''ಸರ್ವಕರಣಶೂನ್ಯಸಂವಾದ''ವೆಂದೂ ''ಶೂನ್ಯಸಂಬೋಧೆ'' ಯೆಂದೂ ಸಂಕಲನಕಾರರಿಂದಲೇ ಪ್ರಕಟಗೊಂಡಿರುವುದನ್ನು ನಾವು ಮರೆಯುವಂತೆಯೇ ಇಲ್ಲ.

ಬಯಲ ಸ್ವರೂಪವೇ ಜಂಗಮ ಲಕ್ಷಣ. ಸರ್ವಶೂನ್ಯ ನಿರಾಲಂಬ ಚೈತನ್ಯಜಂಗಮವೇ ಮಹದಾದಿ ತತ್ತ್ವಾಶ್ರಯವೆಂದು ನಿರೂಪಿಸಿರುವ ವೀರಾಗಮವು ಶೂನ್ಯವೇ ಲಿಂಗವೆಂಬುದನ್ನು ದೃಢಪಡಿಸಿದೆ. ಲಿಂಗವೆ ಶೂನ್ಯಸ್ವರೂಪಕ. ಆ ಕಾರಣ ಶೂನ್ಯಧ್ಯಾನವು ಸರ್ವಕಾರಣರೂಪ ಶೂನ್ಯಲಿಂಗದ ಧ್ಯಾನವಲ್ಲದೆ ಬೇರೆಯಲ್ಲವೆಂಬುದು ಸ್ವಯಂವೇದ್ಯ. ಪರಶಿವನ ಅಲಕ್ಷ್ಯ, ಅದ್ವಯ, ಶೂನ್ಯ, ಅಮೂರ್ತ, ಅವ್ಯಯ, ಪರಂ, ಅನಾಮಂ, ಅಕುಲಂ, ಶುದ್ಧಂ, ಅನಾದಿ ಎಂಬೀ ಪರ್ಯಾಯ ನಾಮಂಗಳಲ್ಲಿ 'ಶೂನ್ಯ' ಎಂಬುದೂ ಒಂದು. ಎಂದ ಬಳಿಕ ಶೂನ್ಯಧ್ಯಾನವು ಶಿವಧ್ಯಾನವಲ್ಲದೆ ಅನ್ಯಧ್ಯಾನವಲ್ಲ. ''ಶೂನ್ಯಂ ಜಂಗಮಲಕ್ಷಣಂ'' ''ಜಟಾ ಕರಸ್ಥಲೇ ಲಿಂಗಂ''[೨೦] ಎಂಬ ಆಗಮೋಕ್ತಿ ವೀರಶೈವಾಚಾರವಲ್ಲದೆ ಬೇರೆಯಲ್ಲ. ''ಮಂಡೆ ಬೋಳಾದರೇನು ಮನ ಬೋಳಾಗದನ್ನಕ್ಕ'' ಎಂಬ ವಚನಕಾರರ ನುಡಿ ''ಶೂನ್ಯಂ ಜಂಗಮ ಲಕ್ಷಣಂ'' ಎಂಬ ವೀರಾಗಮದ ಜಂಗಮ ಲಕ್ಷಣವನ್ನೇ ಎತ್ತಿ ಹಿಡಿದಿದೆ.

ಜಂಗಮವು ಸರ್ವಮಂತ್ರತತ್ತ್ವಾಲಯವಾದ ಚಿನ್ಮಯ ಜಟಾಸ್ಥಲದಲ್ಲಿ ಉದ್ಭವವಾದ ಶೂನ್ಯಲಿಂಗವನ್ನು ತನ್ನ ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಧರಿಸಿದನೆಂಬ ವೀರಾಗಮದ ಈ ಶೂನ್ಯಲಿಂಗ ನಿರ್ದೇಶವು ಗಣಾಚಾರ್ಯನಾದ ಗೋಸಾಲನಿಂದ ಪ್ರತಿಪಾದಿತವಾದ ಶೂನ್ಯಧ್ಯಾನದ ಇಷ್ಟಮೂರ್ತಿಯನ್ನು ಕುರಿತದ್ದೆ ಆಗಿದೆ ಎಂಬುದಕ್ಕೆ ''ಜ್ಞಾನದಿಂದ ಮೋಕ್ಷವಾಗುವುದಿಲ್ಲ.'' ''ದೇವ ಅಥವಾ ಈಶ್ವರ ಇದ್ದಾನೋ ಇಲ್ಲವೋ, ಅದಕ್ಕಾಗಿ ಸ್ವೇಚ್ಛಾ (=ಇಷ್ಟ) ಪೂರ್ವಕ ಶೂನ್ಯಧ್ಯಾನವನ್ನು ಮಾಡಲಿಕ್ಕೇ ಬೇಕು'' ಎಂಬ ಆತನ ಬೋಧೆಯೇ ಸಾಕ್ಷಿ.

ಶೂನ್ಯಲಿಂಗವೆ ಕರಸ್ಥಲದ ಲಿಂಗವಾಗುಳ್ಳ ಜಂಗಮದ ಲಕ್ಷಣವನ್ನು ವೀರಾಗಮವು ನಿರೂಪಿಸಿರುವುದನ್ನಿಲ್ಲಿ ಗಮನಿಸಿ:

''ತಸ್ಯ ದೇಹೇ ಸಮಸ್ತಾನಿ ಭುವನಾನಿ ಚತುರ್ದಶ
ಬ್ರಹ್ಮಾಂಡಂ ಮಕುಟಂ ಚೈವ ವದನಂ ಗಗನಂ ಶಿವೇ ॥
ದಿಶಾಸ್ಸರ್ವಾಶ್ಚ ಬಾಹೂಶ್ಚ ನೇತ್ರೇ ಚಂದ್ರಾರ್ಕ ಸಂಜ್ಞಕೇ
ಶರೀರಂ ವ್ಯೋಮರೂಪಂ ಚ ಪಾತಾಲಂ ಪಾದಪಂಕಜಂ ॥
ಕರಸ್ಥಲೇ ಶೂನ್ಯಲಿಂಗಂ । ಮೇಘಃ ಸರ್ವೋ ಜಟಾಮಯಾಃ
ಚಂದ್ರಾಂಶೋऽಚ್ಛ ವಿಭೂತಿಶ್ಚ ವೇದಾಃ ಸರ್ವೇ ಕ್ರಿಯಾಮಯಾಃ ॥
ನಕ್ಷತ್ರಂ ಪುಷ್ಪನಿಚಯಂ ರುದ್ರಾಕ್ಷಾಃ ಕುಲಪರ್ವತಾಃ
ಸಾಗರಂ ಜಲಪಾತ್ರಂ ಚ ಕಂಥಾ ಸೃಷ್ಟಿಮಯಂ ಜಗತ್ ॥
ಆಸನಂ ಚ ಪೃಥ್ವೀ ತಸ್ಯ ಅಹೋರಾತ್ರಂ ಗುಹಾ ಮತಂ
ತ್ರಿಕಾಲಜ್ಞಾನಂ ಸೌಭಾಗ್ಯಂ ಋತವಃ ಷಟ್‌ಸ್ಥಲಂ ಪ್ರಿಯೇ ॥
ಶೇಷೋऽಪಿ ಕಟಿಸೂತ್ರಂ ಚ ಜ್ಞಾನಂ ಮುದ್ರಾ ತು ವಾಙ್ಮಯಂ
ಮೇರು ದಂಡಂ ಗುಣಂ ಪಾತ್ರಂ ಕುಲಂ ಶಿವಕುಲಂ ಭವೇತ್
ವನಸ್ಪತಿಶ್ಚ ರೋಮಾಳಿಃ ಏವಮೇನಾತಿ ಪಾರ್ವತಿ''

ಜಂಗಮದ ಈ ಜಗಭರಿತ ಲಿಂಗರೂಪವನ್ನು[೨೧] ವಾರ್ಧಕ ಷಟ್ಪದಿಯಲ್ಲಿ ಗುಬ್ಬಿ ಮಲ್ಲಣಾರ್ಯನು ತನ್ನ ವೀರಶೈವಾಮೃತ ಮಹಾಪುರಾಣದಲ್ಲಿ ವರ್ಣಿಸಿರುವುದನ್ನು ಕಾಣಬಹುದು.

ಪರಮ ಜಂಗಮದ ದೇಹದೊಳಖಿಳ ಲೋಕಂಗ
ಳಿರುತಿರ್ಪವುರುತರ ಬ್ರಹ್ಮಾಂಡವೇ ಮಕುಟ
ವರರೆ ಗಗನಂ ಮೊಗಂ ದಿಕ್ಕುಗಳು ತೋಳುಗಳು ಚಂದ್ರಸೂರ್ಯರೇ ಕಂಗಳು
ಶರಿರವಾ ವ್ಯೋಮರೂಪೆಸೆವ ಪಾತಾಳವೇ
ಚರಣವಾ ಕರದಲ್ಲಿ ಶೂನ್ಯಲಿಂಗವನೊಲ್ದು
ಧರಿಸಿರ್ಪನಾ ಮೇಘತತಿ ಜಟೆಗಳಾ ಚಂದ್ರನೇ ಭಸಿತವಾ ಮಹಿಮಗೆ ॥

ಕಾಂ.೧ ಸಂ.೪ ಪ.೧೯

ಅಕ್ಷಯದ ವೇದಂಗಳೇ ಕ್ರಿಯಾರೂಪವಾ
ನಕ್ಷತ್ರವೇ ಪುಷ್ಪನಿಚಯಂಗಳೆಂತೊಪ್ಪು
ವಕ್ಷಯಂಗೆಸೆವ ಕುಲಪರ್ವತಂ ರುದ್ರಾಕ್ಷಿ ಸಾಗರಂ ಜಲಪಾತ್ರೆಯು
ಈ ಕ್ಷಿತಿಯ ಸೃಷ್ಟಿಮಯವೇ ಕಂಥೆ ಕೇಳು ಕುಮು
ದಾಕ್ಷಿ ಧರೆಯೇ ಪೀಠವಂತಹೋರಾತ್ರೆಯ
ಧ್ಯಕ್ಷ ಗುಹೆಯಾ ತ್ರಿಕಾಲಜ್ಞಾನವೆಸೆವ ಸೌಭಾಗ್ಯವಾ ಮತ್ತೆ ಕೇಳು || ೨೦
ಋತುಗಳಾಱುಂ ಷಟ್‌ಸ್ಥಲಂ ಶೇಷನುಡಿದಾರ
ವತಿಶಯ ಜ್ಞಾನಮುದ್ರೆಯೆ ವಾಙ್ಮಯಂ ಮಹೋ
ನ್ನತ ಮೇರುವೇ ದಂಡವೆಸೆವ ಗುಣವೇ ಪಾತ್ರ ಕುಲವೆ ಶಿವಕುಲವಾತಗೆ
ಸತತವಂಗದೊಳೆಸೆವ ರೋಮಂಗಳಾ ವನ
ಸ್ಪತಿಗಳೇ ಪರಿಯೊಳೊಪ್ಪುವುದೆ ಸ್ವರೂಪು ಪಾ
ರ್ವತಿ ಜಂಗಮಕ್ಕೆಂದು ಪೇಳ್ದನಾ ಶಂಕರಂ ಪರಮ ಸಂತೋಷದಿಂದಂ || ೨೧

ಭಾವಚಿಂತಾರತ್ನ ಹಾಗೂ ವೀರಶೈವಾಮೃತ ಮಹಾಪುರಾಣ ಕರ್ತೃವಾದ ಗುಬ್ಬಿಮಲ್ಲಣಾರ್ಯನ ಪುತ್ರನಾದ ಶಾಂತೇಶನು ತನ್ನ ತೋಂಟದ ಸಿದ್ಧೇಶ್ವರ ಪುರಾಣದಲ್ಲಿ ಸಾಕ್ಷಿಯಾಗಿ ಉಲ್ಲೇಖಿಸಿರುವ ವೀರಾಗಮದ ಶ್ಲೋಕಗಳನ್ನು ಆಧರಿಸಿ ಅವುಗಳ ಅರ್ಥವನ್ನು ಭಾಮಿನೀ ಷಟ್ಪದಿಯಲ್ಲಿ ಮೂಡಿಸಿರುವುದನ್ನು ನೋಡಿ :

ಜಂಗಮದ ದೇಹದೊಳಖಿಳ ಲೋ
ಕಂಗಳಿಪ್ಪವಜಾಂಡವೇ ಸಲೆ
ತುಂಗ ಮಕುಟಂ ಗಗನವೇ ಮೊಗ, ತೋಳ್ಗಳೇ ದಿಕ್ಕು
ಕಂಗಳೇ ರವಿ ಶಶಿಗಳೆರಡಾ
ಯಂಗವೇ ವ್ಯೋಮಸ್ವರೂಪೈ
ಪಿಂಗದೇ ಪಾತಾಳವೇ ಪದವಾ **ಕರಸ್ಥಲದೆ**
ಶೂನ್ಯಲಿಂಗಂ ಮೇಘತತಿ ಸಲೆ
ಯನ್ಯವಿಲ್ಲದೆ ಜಡೆಗಳ್ ಇಂದು ವ
ದಾನ್ಯನೇ ಯಾತಂಗೆ ಭಸ್ಮಂ ವೇದವೇ ಕ್ರಿಯೆಯು
ಮಾನ್ಯ ನಕ್ಷತ್ರಂಗಳೇ ಸೌ
ಜನ್ಯ ಪುಷ್ಪಸಮೂಹಮುಱಿ ಸಾ
ಮಾನ್ಯನೇ ಆ ಜಂಗಮಕೆ ರುದ್ರಾಕ್ಷಿ ಕುಲಗಿರಿಯು || ಸಂಧಿ ೧೨ ಪದ್ಯ ೨೫-೨೬
ಶರಧಿಯುದಕದ ಪಾತ್ರೆ ಸೃಷ್ಟಿಯ
ವರಮಯವೆಯುರು ಕಂಥೆ, ಪೀಠಂ
ಧರೆ ಯಹೋರಾತ್ರೆಯೆ ಗುಹೇ ಸೌಭಾಗ್ಯವಾತಂಗೆ
ಧರಣಿಯೊಳು ಮತ್ತಾ ತ್ರಿಕಾಲಂ
ಪರಮ ಷಟ್‌ಸ್ಥಲ ರುತುಗಳಾಱಂ
ತಿರದೆ ಶೇಷಂ ಕಟಿಯ ಸೂತ್ರಂ ಜ್ಞಾನ ಸನ್ಮುದ್ರೆ
ಚಾರು ವಾಙ್ಮಯವಾಗಿ ತೋರ್ಪುದು
ಮೇರುವೇ ವರ ದಂಡವಾತಂ
ಗಾರಯಲು ಗುಣವೆ ಸತ್ಪಾತ್ರಂ ಕುಲವೆ ಶಿವಕುಲವು
ಸಾರ ಗಾತ್ರದ ರೋಮವೇ ಗಂ
ಭೀರವೆನಿಪ ವನಸ್ಪತಿಗಳೌ
ಗೌರಿ ಕೇಳೆಂದೀಶನೊರೆದಂ ಜಂಗಮದ ರೂಪಂ || ಸಂಧಿ ೧೨ ಪದ್ಯ ೨೭-೨೮

ಶಿವಯೋಗೀಶ್ವರರಾದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ವೀರಾಗಮೋಕ್ತ ಜಂಗಮದ ರೂಪನ್ನು ತಮ್ಮ ಶಿಷ್ಯರಾದ ಚಂದ್ರಶೇಖರ ದೇವರಿಗೆ ವರ್ಣಿಸುತ್ತ ಜಂಗಮನು ತನ್ನ ಮಸ್ತಕಸ್ಥಲದ ಶೂನ್ಯಲಿಂಗವನ್ನು ಕರಸ್ಥಲದಲ್ಲಿ ಧರಿಸಿರುವನೆಂದು ನಿರೂಪಿಸಿರುವುದರಿಂದ ಶೂನ್ಯಲಿಂಗವು ಜಂಗಮನ ಧ್ಯಾನವಸ್ತುವೆಂಬುದನ್ನು ಶಿವಯೋಗಿ ಶಿವಾಚಾರ್ಯರು ಅನುಷ್ಠಾನ ಸಂಬಂಧವಾದ ಆಚರಣೆಯ ಮೂಲಕ ಮನಗಾಣಿಸಿರುವರೆಂಬುದರಲ್ಲಿ ಎಷ್ಟು ಮಾತ್ರವೂ ಸಂಶಯವಿಲ್ಲ. ಆ ಕಾರಣ ಗೋಸಾಲ ಪ್ರತಿಪಾದಿತ ಶೂನ್ಯ ಧ್ಯಾನಾಚರಣೆಯು ಲಿಂಗ-ಜಂಗಮದ ಏಕತೆಯ ಘನರೂಪಾದ ಅನಾದಿಭಕ್ತ ಹಾಗೂ ಜಂಗಮದ ಪರಂಪರಾಗತ ಆಚರಣೆಯಾಗಿದೆಯಲ್ಲದೆ ಬೇರೆಯಲ್ಲ.

ಶಾಂತೇಶನು ವೀರಾಗಮಾನುಸಾರವಾಗಿ ಶೂನ್ಯಲಿಂಗವನ್ನು ಕುರಿತು ವರ್ಣಿಸಿರುವನು. ಜಂಗಮದ ಸದ್ಬ್ರಹ್ಮಾಂಡವೆನಿಸುವ ಮಕುಟದಗ್ರದ ಮಧ್ಯದಲ್ಲಿ ಕನ್ನಡಿಯ ಕಾಂತಿಯಂತೆ ಹೊಳೆಯುವ ಶೂನ್ಯಲಿಂಗದ ಜನನ. ಆನಂದವೆನಿಸುವ ಆ ಶೂನ್ಯಲಿಂಗಕ್ಕೆ ಕಾಯವಿಲ್ಲ. ಕರಣವಿಲ್ಲ. ಕುಲಛಲಗಳಿಲ್ಲ. ಹೀಗೆ ಸರ್ವಕರಣಶೂನ್ಯವಾದ ತನುವೆ ಶೂನ್ಯಲಿಂಗವೆನಿಸಿತ್ತು. ಆದಿ, ಅನಾದಿ, ನಾದ-ಬಿಂದುಗಳೊಂದೂ ಇಲ್ಲದ ಲಿಂಗವೇ ಶೂನ್ಯವೆನಿಸಿತ್ತು. ಚಿದ್ರೂಪವಾದ ಆ ಶೂನ್ಯಲಿಂಗ ಸತ್ಕಲೆಯಾಗಿ ಭಕ್ತನ ಭಾವಕ್ಕೆ ತೃಪ್ತಿಲಿಂಗವಾಯಿತು. ಮನಕ್ಕೆ ಪ್ರಾಣಲಿಂಗವಾಯಿತು. ಆ ನಿರಾಳವನೊಳಕೊಂಡ ಸಹಜ ಸದ್ಭಕ್ತನ ಕರಕ್ಕೆ ಇಷ್ಟಲಿಂಗವಾಯಿತು. ಆ ಘನಶೂನ್ಯಲಿಂಗವೇ ಕಾರಣ-ಸೂಕ್ಷ್ಮ-ಸ್ಥೂಲವೆಂಬೀ ತನುತ್ರಯದ ಭಾವ-ಪ್ರಾಣ-ಇಷ್ಟ-ಲಿಂಗವೆನಿಸಿ ತ್ರಿವಿಧವಾಯಿತು.

ಶೂನ್ಯಾಂತರಾಳದಲ್ಲಿ ಹುಟ್ಟಿದ ಆದಿಮೂರ್ತಿ[೨೩] ಆತನಿಂದ ಘನತರವಾದ ಪರಶಕ್ತಿ; ಆದರಿಂದ ನಾದ-ಬಿಂದುಗಳು; ಅವುಗಳಿಂದ ಜ್ಞಾನದ ಜನನ. ಆ ಜ್ಞಾನದಿಂದ ಶಿವೇಚ್ಛೆಗಳು. ಆ ಶಿವೇಚ್ಛಾ ಶಕ್ತಿಯಿಂದ ಈಶ್ವರ-ಆತ್ಮರ ಉದಯ. ಅವುಗಳಿಂದ ರುದ್ರ ಸತ್ಕ್ರಿಯೆಯ ಉದ್ಭವ. ಆದರಿಂದ ಹರಿ-ಮಹಾಲಕ್ಷ್ಮಿಯರ ಜನನ. ಅವರಿಂದ ಜನ್ಮವೆತ್ತವರೇ ಬ್ರಹ್ಮ-ವಾಣಿಯರು. ಅವರ ದೆಸೆಯಿಂದ ಸಮಸ್ತ ಸೃಷ್ಟಿ ಎಂಬುದು ವೀರತಂತ್ರದ ಸೃಷ್ಟಿಕ್ರಮದ ವಿವರ.

ಹೀಗೆ ತೋಂಟದ ಸಿದ್ಧಲಿಂಗೇಶ್ವರರು ಕರಸ್ಥಲದ ಇಷ್ಟಲಿಂಗದಿಂದ ಶೂನ್ಯಲಿಂಗಧ್ಯಾನವನ್ನು ಪ್ರತಿಪಾದಿಸಿದ್ದಾರಲ್ಲದೆ ಅದನ್ನು ಅವರು ಖಂಡಿಸಿಲ್ಲವೆಂಬುದಕ್ಕೆ ಅವರು ಉದ್ಧರಿಸಿ ಬೋಧಿಸಿದ ವೀರಾಗಮದ ಕರಸ್ಥಲೇ ಶೂನ್ಯಲಿಂಗವೆಂಬಿವೇ ಆದಿಯಾದ ಪ್ರಮಾಣೋಕ್ತಿಗಳೇ ಸಾಕ್ಷಿ. ಅಲ್ಲದೆ ವೀರಾಗಮೋಕ್ತ ಜಂಗಮದ ರೂಪಿಗೆ ಬಹುಮಟ್ಟಿಗೆ ಸಂವಾದಿಯಾದ ಶ್ರೀ ಸಿದ್ಧಲಿಂಗೇಶ್ವರರ ಮೂರ್ತಿಕ್ರಮವನ್ನೂ ಗಂಭೀರವಾಗಿ ಗಮನಿಸಬಹುದಾಗಿದೆ:

''.... ಶ್ರೀಮತು ಸಚ್ಚಿದಾನಂದ ನಿತ್ಯ ಪರಿಪೂರ್ಣವನುಳ್ಳ ಅನಾದಿಭಕ್ತ. ಆ ಭಕ್ತನ ಹೃದಯದಲ್ಲಿ ಜಂಗಮ. ಜಂಗಮದ ಮಕುಟದಲ್ಲಿ ಶೂನ್ಯಲಿಂಗ. ಆ ಲಿಂಗದಲ್ಲಿ ಚಿದಂಬರ, ಶಿವಶಕ್ತಿ, ಪಂಚಶಕ್ತಿ, ಪಂಚನಾದ, ಪಂಚಬ್ರಹ್ಮ, ಈಶ್ವರಾಷ್ಟಕ, ಮಹೇಶ್ವರ ಪಂಚವಿಂಶತಿ ರುದ್ರರೇಕಾದಶ ತ್ರಯಾವಯ (ಹಿ)ರಣ್ಯಗರ್ಭ-ವಿರಾಟಮೂರ್ತಿ ಯಿಂತೀ ಯೆಂಬತ್ತೊಂದು ಮೂರ್ತಿಯೇ ಅಂಗವಾಗಿರ್ಪಾತನೆ ಅನಾದಿ ಭಕ್ತನು. ಆ ಭಕ್ತನ ಪ್ರಾಣ-ಕಳಾಚೈತನ್ಯ ಸ್ವರೂಪೇ ತೋಂಟದ ಸಿದ್ಧಲಿಂಗೇಶ್ವರನು. ಆ ಸಿದ್ಧಲಿಂಗೇಶ್ವರನ ಮೂರ್ತಿಕ್ರಮವೆಂತೆಂದಡೆ:

ಪ್ರಣಮವೆ ಸಿರಸು, ನ-ಮ ಕಾರವೇ ಭುಜ, ಶಿ ಕಾರವೇ ದೇಹ, ವ-ಯ ಕಾರವೇ ಪಾದ, ಅನಂತ ಕೋಟಿ ಬ್ರಹ್ಮಾಂಡಂಗಳೇ ಮಕುಟ. ಸಮಸ್ತ ಲೋಕಾದಿಲೋಕಂಗಳೇ ದೇಹದ ಜಳವಳಿಯ, ಆಕಾಶವೇ ಮುಖ, ದಶದಿಕ್ಕುಗಳೇ ತೋಳು, ಚಂದ್ರಸೂರ್ಯಾದಿಗಳೇ ನಯನ. ಪಾತಾಳವೇ ಹೆದೆ (ಎದೆ/?) ಮೇಘಂಗಳೇ ಜಟಾಬಂಧ, ಆ ಜಟಾಬಂಧದಲ್ಲಿ 'ಶೂನ್ಯ ಲಿಂಗ' ವೇದಪುರಾಣಂಗಳೇ ಕ್ರೀ, ನಕ್ಷತ್ರಂಗಳೇ ಪುಷ್ಪ, ಚಂದ್ರಪ್ರಕಾಶವೇ ವಿಭೂತಿ, ಅಷ್ಟಕುಲಪರ್ವತಂಗಳೇ ರುದ್ರಾಕ್ಷಿ, ಸಪ್ತ ಸಮುದ್ರಂಗಳೇ ಕಮಂಡಲ, ಭುವನಸೃಷ್ಟಿಯೇ ಕಂತೆ, ದಿವಾರಾತ್ರೆಗಳೇ ಮಠ, ಷಡುಋತುಗಳೇ ಷಡುಸ್ಥಲ, ಮಹಾಶೇಷನೇ ಕಟಿಸೂತ್ರ, ಪರಿಪೂರ್ಣಜ್ಞಾನವೇ ಪಂಚಮುದ್ರೆ, ತ್ರಿಕಾಲಜ್ಞಾನವೇ ಮಹದೈಶ್ವರ್ಯ, ಮಹಾಮೇರುವೆ ದಂಡ, ಸದ್ಗುಣವೆ ಕರ್ಪರ, ಕುಲವೆ ಶಿವಕುಲ. ಇಂತಪ್ಪ ಅನಾದಿ ಜಂಗಮ.''[೨೪] ಭಕ್ತನ ಅವಿರಳದ ಅರಿವೇ ಆದ ಜಂಗಮದ ಮೂಲಜ್ಞಾನವಾದ ಘನಶೂನ್ಯಲಿಂಗವು ಸರ್ವಕಾರಣವಾಗಿ ಸತ್ಪ್ರಾಣವು ಆತ್ಮನೆನಿಸಿದುದು. ಆಜೀವರಿಗೂ ಬೀಜವೆನಿಸಿದುದು. ಆ ಶೂನ್ಯಲಿಂಗದಿಂದಲೆ ಎಲ್ಲ ತತ್ತ್ವಗಳೂ ಸರ್ವಜೀವರೂ ಉತ್ಪನ್ನ ಎಂಬ ಆಗಮೋಕ್ತಮಾರ್ಗದಿಂದ ಬೇರೆಯಾಗದ ತತ್ತ್ವಪ್ರತಿಪಾದನೆಯು ಈಶ್ವರನಿದ್ದಾನೋ ಇಲ್ಲವೋ ಆ ಕಾರಣ ಶೂನ್ಯಧ್ಯಾನವನ್ನು ಮಾಡಲಿಕ್ಕೇ ಬೇಕೆಂದು ಉಪದೇಶಿಸಿದ ಗೋಸಾಲನ ''ತನ್ನ ಬಿಟ್ಟು ದೇವನಿಲ್ಲ, ಮಣ್ಣ ಬಿಟ್ಟು ಮಡಕೆಯಿಲ್ಲ'' ಎಂಬ ಗಾದೆಯ ಇಂಗಿತವು 'ಶರಣನ ತನುವೆ ಶಿವ'ನೆಂಬ[೨೫] ''ಸರ್ವಶೂನ್ಯಂ ನಿರಾಲಂಬಂ ನಿರ್ದ್ವಂದ್ವಂ ಪರಮಂ ಪದಂ'' 'ಲಿಂಗಮುಖ ಜಂಗಮ'ವೆಂಬ

ಚೈತನ್ಯಜಂಗಮವೇ ಭಕ್ತಪರತತ್ತ್ವವಾಗಿದೆಯೆಂಬುದು ಸುಸ್ಪಷ್ಟ. "ಸರ್ವಂ ಶೂನ್ಯಂ ನಿರಾಕಾರಂ ಪರಮಾನಂದಮುಚ್ಯತೇ" ಎಂಬ ಲಿಂಗಪುರಾಣೋಕ್ತಿಯ ತತ್ತ್ವನಿಷ್ಠೆಗೂ ನಿಜಪೂಜಾಭಕ್ತಿಭಾವಾಚರಣೆಗೂ ಸಂಬಂಧವಿಲ್ಲದೆಯಿಲ್ಲ. ಸರ್ವಪೂರ್ಣ(ಶೂನ್ಯ)ವೂ ಸೂಕ್ಷ್ಮಾತ್ ಸೂಕ್ಷ್ಮತಮವೂ ಆದ, ನಾದಾನುಸಂಧಾನದಿಂದ ಕೇವಲ ನಿರಾಕಾರವೂ ಆದ, ಪರಶಿವನ ಚಿತ್ ಪ್ರಕಾಶಮಯ ಪರವಸ್ತುವನ್ನು ಮಾನವನು ತನ್ನೊಳಗೆ ತಾನೆ ತನ್ನಿಂದಲೇ ಅರಿತು ತಲ್ಲೀಯವಾಗಬೇಕಲ್ಲದೆ ಬಾಹ್ಯಪ್ರಪಂಚದಲ್ಲಿ ಆ ನಿಷ್ಕಲ ಪರವಸ್ತುವನ್ನು ಮತ್ತೆಲ್ಲಿಯೂ ಕಾಣಲಾಗದು ಎಂಬುದೇ ಗೋಸಾಲನ ಶೂನ್ಯಧ್ಯಾನೋಪದೇಶದ ಗಮ್ಯಾರ್ಥವಲ್ಲದೆ ಬೇರೆಯಲ್ಲ. ಆ ಜಂಗಮದ ಕುಲವಾದರೋ ಶಿವ(ವಟ) ಕುಲವೆಂದೇ ನಿರ್ದೇಶಿಸಿದೆ.

ಸಮಸ್ತಸೃಷ್ಟಿಯ ಹಾಗೂ ಸರ್ವಜೀವರ ಉತ್ಪತ್ತಿಗೆ ಕಾರಣವಾದ ಶೂನ್ಯದ ಧ್ಯಾನಪ್ರತಿಪಾದಕರಾದ ಗೋಸಾಲ ಗುರುವಿನ ಅನುಯಾಯಿಗಳಾದ ಆಜೀವಕರನ್ನು ಅರ್ಥಾತ್ ಸ್ವಯಂಭು ಲಿಂಗಜೀವರನ್ನು ಸಹಜ ಸದ್ಭಕ್ತರೆಂದು ಕೊಂಡಾಡಿ ಅವರಿಗೆ ಪುಣ್ಯ-ಪಾಪಗಳಿಲ್ಲವೆಂದು[೩೭] ಬಂಧ ಮೋಕ್ಷಗಳ ಇಚ್ಛೆ-ಅನಿಚ್ಛೆಗಳೆರಡನ್ನೂ ಅವರು ಅಳಿದವರೆಂದು ಷಟ್‌ಸ್ಥಲ ಸಿದ್ಧಾಂತ ಪ್ರತಿಪಾದಕರು ಈ ಹಿಂದೆಯೇ ಮೆಚ್ಚಿಕೆ ವ್ಯಕ್ತಪಡಿಸಿರುವುದನ್ನು ನೋಡಿದರೆ ಅಶೋಕಚಕ್ರವರ್ತಿಯ ಕಾಲದಲ್ಲಿ ಮನ್ನಣೆ ಪಡೆದಂತೆ ಆಜೀವಕಮತವು ಸಕಲ ಜೀವರಿಗೆ ಲೇಸನೇ ಬಯಸುವ ನಿಲವಿನಿಂದ ಕೂಡಿದ ಲಿಂಗವಂತ ಮತಧರ್ಮವಾಗಿ ಸೈದ್ಧಾಂತಿಕವಾಗಿಯೂ ಪೂಜ್ಯವಾಗಿದ್ದಿತೆಂಬುದು ಗಮನಾರ್ಹ. "ಸಕಲ ಪುಣ್ಯಪಾಪಂಗಳಿಗೆ ಒಳಗಲ್ಲವೆಂಬುದಂ ಜಗಕ್ಕೆ ತೋರ್ಪಂತೆ ಅಲ್ಲಮನೆಂಬ ನಾಮಮಂ ತಾಳ್ದ" ನೆಂಬ ಶಿವಗಣಪ್ರಸಾದಿಯ ವರ್ಣನೆ ಶೂನ್ಯಸಿಂಹಾಸನಾಧೀಶ್ವರನಾದ ಪ್ರಭುದೇವರನ್ನು ಕುರಿತದ್ದು ಎಂಬುದನ್ನು ನಾವು ಮರೆಯುವಂತಿಲ್ಲ.

ಶಿವಶರಣರ ಶಿರೋಮಣಿಯೆನಿಸಿದ ಆದಯ್ಯನು (ಕ್ರಿ.ಶ.1170) ಸ್ತುತಿಸಿರುವ ಜಂಗಮದ ಮೂರ್ತಿಸ್ವರೂಪವು ಶಿವಾಗಮವನ್ನು ಆಧರಿಸಿಯೇ ವ್ಯಕ್ತವಾಗಿದೆಯೆಂಬುದನ್ನು ಆತನ ಮುಂದಿನ ವಚನವನ್ನು ಹೋಲಿಸಿ ನೋಡುವುದರಿಂದಲೇ ಅರಿಯಬಹುದಾಗಿದೆ :

ಪಾತಾಳಲೋಕದಿಂ ಕೆಳಗೆ ಪಾದ.[೩೮]
ಸತ್ಯಲೋಕದಿಂ ಮೇಲೆ ಉತ್ತಮಾಂಗ.
ಬ್ರಹ್ಮಾಂಡವೆ ಮಕುಟ. ಗಗನವೆ ಮುಖ.
ಚಂದ್ರಾರ್ಕಾಗ್ನಿಗಳೆ ನೇತ್ರ. ದಶದಿಕ್ಕುಗಳೇ ಬಾಹುಗಳು
ಮಹದಾಕಾಶವೆ ಶರೀರ. ತರುಗಳೇ ತನೂರುಹ.
ಶೂನ್ಯವೆ ಕರಸ್ಥಲದ ಲಿಂಗ, ನಕ್ಷತ್ರವೆ ಪುಷ್ಪ.
ನಿತ್ಯವೆ ಪೂಜೆ. ಮೇಘವೆ ಜಟೆ.
ಬೆಳುದಿಂಗಳೆ ವಿಭೂತಿ. ಪರ್ವತಂಗಳೆ ರುದ್ರಾಕ್ಷಿಗಳು
ಪಂಚಬ್ರಹ್ಮವೆ ಪಂಚಾಕ್ಷರ. ತತ್ತ್ವಂಗಳೆ ಜಪಮಾಲೆ.
ಮೇರುವೆ ದಂಡಕೋಲು*. ಸಮುದ್ರವೆ ಕಮಂಡಲು.
ಋತುಗಳಾಜೆ ಷಟ್‌ಸ್ಥಲ. ಶೇಷನೆ ಕಟಿಸೂತ್ರ.
ಜಗವೆ ಕಂಥೆ. ಅನಂತವೆ ಕೌಪೀನ.
ತ್ರಿಗುಣವೊಂದಾದುದೆ ಖರ್ಪರ.
ಚತುರ್ಯುಗವೆ ಗಮನ. ಮಿಂಚೆ ಅಂಗರುಚಿ.
ಸಿಡಿಲೆ ಧ್ವನಿ. ವೇದಾಗಮವೆ ವಾಕ್ಯ.
ಜ್ಞಾನಮುದ್ರೆಯೇ ಉಪದೇಶ.
ಪೃಥ್ವಿಯೇ ಸಿಂಹಾಸನ. ದಿವಾರಾತ್ರಿಯೆ ಅರಮನೆ.
ಶಿವಜ್ಞಾನವೆ ಐಶ್ವರ್ಯ. ನಿರಾಳವೆ ತೃಪ್ತಿ.
ಇಂತಪ್ಪ ಚೈತನ್ಯಜಂಗಮಕ್ಕೆ ಆನು ನಮೋ ನಮೋ ಎನುತಿರ್ದೆನಯ್ಯಾ.
ಸೌರಾಷ್ಟ್ರ ಸೋಮೇಶ್ವರಾ ।[೩೯]

[*ಪರಿಭಾವಿಸಿ: 'ಸಿಕ್ಕಾಶೀಲ'/ಶಿಖಾಶೀಲ (ಜೈನ) ಶಿಖಾಶೈಲ/ಶಿಕ್ಯಾಶೈಲ/ಶಿಕ್ಷಾಶೈಲ(ವೀರಶೈವ)]

ವಚನಕಾರರಿಗೆ ವೇದಾಗಮವೆ ಪ್ರಮಾಣವಾಕ್ಯವಾಗಿದ್ದಿತೆಂಬುದಕ್ಕೆ ಈ ವಚನವೇ ಸಾಕ್ಷಿ. ಅಲ್ಲದೆ ಯಾವ ಶೂನ್ಯವನ್ನು ಧ್ಯಾನ ಮಾಡಲೇಬೇಕೆಂದು ಗುರು ಗೋಸಾಲನು ಬೋಧಿಸಿದನೋ ಆ ಸರ್ವಪೂರ್ಣ (ಶೂನ್ಯ) ಸ್ವರೂಪವೇ ತಮ್ಮ ಕರಸ್ಥಲದ ಲಿಂಗ ಎಂಬುದನ್ನು ವಚನಕಾರರಾದ ಶಿವಶರಣರೂ ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆಂಬುದಕ್ಕೆ ಆದಯ್ಯನ ಈ ವಚನವೇ ನಿದರ್ಶನ.

ಜಗದಾರಾಧ್ಯ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯರಲ್ಲಿ ಒಬ್ಬರಾದ ಜಿಗುನಿಯ ಮರುಳದೇವರು ಸೇರಿಸಿದ "ಚಿತ್ಕ್ರಿಯಾ ಸಂಗ್ರಹ" ಎಂಬ ಆಗಮ ಹಾಗೂ ಶಿವಶರಣರ ವಚನಗಳ ಸಂಕಲನ ಗ್ರಂಥದಲ್ಲಿ ಗುರುಕೃಪೆಯಿಂದ ಕರಸ್ಥಲದಲ್ಲಿ ಕಂಗೊಳಿಸುವ ಇಷ್ಟಲಿಂಗವೇ ತನ್ನ ಮಕುಟೋದ್ಭವ ಶೂನ್ಯಲಿಂಗವೆಂದರಿತು ತದ್ಧ್ಯಾನಿಯಾದ ಪ್ರಸಾದಿಶರಣನೇ ಮಂತ್ರಮೂರ್ತಿಯಾದ ಗುರುತತ್ತ್ವವೆಂಬುದನ್ನು ಪ್ರತಿಪಾದಿಸಲಾಗಿದೆ. ಶರಣನ ಬಾಹ್ಯಾಭ್ಯಂತರವನೊಳಕೊಂಡು ಹೃದಯ, -ಭ್ರೂಮಧ್ಯ, - ಬ್ರಹ್ಮರಂಧ್ರದಲ್ಲಿ ಬೆಳಗುತ್ತಿರುವ ಪರಬ್ರಹ್ಮವೇ ಗುರುವಿನ ಅನುಗ್ರಹದಿಂದ ಕರಸ್ಥಲಕ್ಕೆ ಬಂದ ಇಷ್ಟಲಿಂಗವೆಂದು ಹೇಳಿದೆ.

ಅದೇ ಚಿತ್‌ಕ್ರಿಯಾ ಸಂಗ್ರಹದಲ್ಲಿ ಶೂನ್ಯವನ್ನು ಕುರಿತು "ಶೂನ್ಯಲಿಂಗೋದ್ಧರಣೆ"ಯಿದೆ. ವೀರಾಗಮಾದಿ ಶಿವಾಗಮಗಳ ಶೂನ್ಯಲಿಂಗ ನಿರ್ದೇಶವನ್ನಿಲ್ಲಿ ಮಾಡಲಾಗಿದೆ. ಅನಾದಿ (= ಶಿವ)ಭಕ್ತನ ಹಾಗೂ ಅನಾದಿಜಂಗಮ ಉದ್ಧರಣೆ, ಜಂಗಮದ ಮಕುಟೋದ್ಧರಣೆ, ಚಿದಂಬರೋದ್ಧರಣೆ, ಷಡ್ಬ್ರಹ್ಮದ ಉದ್ಧರಣೆ, ಶಾಂಭವ ಚಕ್ರೋದ್ಧರಣೆ, ಮಹಾಲಿಂಗದ ಉದ್ಧರಣೆ, ನವಚಕ್ರೋದ್ಧರಣೆ, ತತ್ತ್ವ-ಮಂತ್ರ-ಲಿಂಗ, ಪಂಚೀಕರಣ ಇತ್ಯಾದಿ ಉದ್ಧರಣೆಗಳೂ ಆ ಸಂಗ್ರಹದಲ್ಲಿವೆ. ಅವು ಲಿಂಗವಂತ ಧಾರ್ಮಿಕಾಚರಣೆಯ ಪ್ರಸಾರಾಂಗಗಳೇ ಆಗಿವೆ. "ಸುಜ್ಞಾನ ಪರಿಪೂರ್ಣತ್ವಂ ಜಂಗಮಂ" ಎಂದೆಂಬ ಜಂಗಮಲಕ್ಷಣವು ಜ್ಞಾನಿ(ಮಸ್ಕರಿ) ಗೋಸಾಲನೆಂದೇ ಪ್ರಖ್ಯಾತನಾದಾತನಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆಯೆಂಬುದನ್ನು ಕಂಡುಕೊಳ್ಳಬಹುದು. ಶೂನ್ಯ ಇಲ್ಲವೆ ಶೂನ್ಯಲಿಂಗವೆಂಬುದು ಲಿಂಗವಂತ ಧರ್ಮದ ಪಾರಿಭಾಷಿಕ ಶಬ್ದಗಳಲ್ಲೊಂದೆಂಬುದು ತಿಳಿದುಬಂದದ್ದೇ ಆಗಿದೆ. "ಗಗನದಿಂದ ಮೇಲೆ ಅನುಭಾವ ತಾನಿಲ್ಲ"ಎಂಬ ಶರಣರ ಸ್ವಾನುಭವೋಕ್ತಿ ದೇಹಸ್ಥ ಶೂನ್ಯಜ್ಞಾನ ಹಾಗೂ ಧ್ಯಾನವನ್ನು ಕುರಿತದ್ದೆ. ವಸ್ತುಸ್ಥಿತಿ ಹೀಗಿರುವಾಗ ಸುಜ್ಞಾನಜಂಗಮನೂ, ಪರಿವ್ರಾಜಕಾಚಾರ್ಯನೂ, ಗಣಾಚಾರ್ಯನೂ ಆದ ಗೋಸಾಲ-ಪ್ರತಿಪಾದಿತ ಶೂನ್ಯ (ಲಿಂಗರೂಪ)ದ ಧ್ಯಾನವು ಶೂನ್ಯಲಿಂಗ ಧ್ಯಾನವೇ ಹೊರತು ಮತ್ತನ್ಯವಲ್ಲವೆಂಬುದು ಖಚಿತ.

ಷಡಕ್ಷರದೇವನು ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗೀಶ್ವರರನ್ನು ಸಾರ್ಥ-'ಆ-ಜೀವ'ನಾಮಾಕರನೆಂದು ಸ್ತುತಿಸಿರುವುದರಿಂದ ಆಜೀವಕರ ಆತ್ಮಸ್ಥ ಶೂನ್ಯಧ್ಯಾನಾಚರಣೆಯ ಲಿಂಗವಂತ ಪೂರ್ವಪರಂಪರೆಗೆ ಗೋಸಲಪೀಠವು ಸೇರಿದುದೆಂಬುದು ಸುವಿದಿತವಾದ ಸಂಗತಿಯೆಂದು ಹೇಳಿ ಗೋಸಲಶಬ್ದಕಲ್ಪದ್ರುಮದ ಈ ಬೇರು ಬುದ್ಧ, ಮಹಾವೀರರ ಸಮಕಾಲೀನನಾದ ಮಸ್ಕರಿ (ಜ್ಞಾನಿ) ಗೋಸಾಲನ ಕ್ರಿ.ಪೂ. ಆರನೇ ಶತಮಾನದಷ್ಟು ಅತಿ ಪ್ರಾಚೀನ ಐತಿಹಾಸಿಕ ಕಾಲಕ್ಕೆ ಸೇರಿದ ತಾಯಿಬೇರೇ ಆಗಿದೆ. ಉತ್ತರ ಭಾರತದಿಂದ ದಕ್ಷಿಣ ಭಾರತದವರೆಗೆ ಈ ಜೀವನ್ಮುಕ್ತವೃಕ್ಷಸ್ಥಲಾಚರಣೆಯ ಲಿಂಗಧಾರಣದ ಆಗಮಸಂಸ್ಕೃತಿಯ ಸತ್ಫಲವು ಎಂದೆಂದಿಗೂ ಅರಿತು ಆಸ್ವಾದಿಸಿ ಆನಂದಿಸಬಹುದಾದ ಶರಣ ಮಾನಸಚರಿತೆಯಾಗಿ ಆನುಭಾವಿಕ ನಿತ್ಯಸತ್ಯವಾಗಿದೆಯೆಂಬುದು ಸ್ತುತ್ಯವೂ ಆತ್ಮೀಯವೂ ಆದ ಸಂಗತಿ.

II

ಯಾವ 'ಶೂನ್ಯ'ವನ್ನು ಗೋಸಾಲನು ಧ್ಯಾನಮಾಡಬೇಕೆಂದು ಬೋಧಿಸಿದನೋ ಆ ಪಿಂಡಸ್ಥ ಚಿತ್ಕಳೆಯು ಅನಾದಿಸಂಸಿದ್ಧವಾದ ವೀರಶೈವಾಚಾರಸಂಬಂಧವೂ, ಆಗಮೋಕ್ತವೂ ಆದದ್ದು. ಆ ಶೂನ್ಯವೆ ಕರಸ್ಥಲದ ಲಿಂಗವೆನಿಸಿತು ಎಂಬುದನ್ನು ಈವರೆಗೂ ಗಮನಿಸಿದುದಾಯಿತು. 'ಆದಿಗಣನಾಥನು ಅಲ್ಲಮಪ್ರಭುವೆಂಬ ನಾಮವಂ ಧರಿಸಿ'ದವನೆಂಬುದು ಶೂನ್ಯಸಂಪಾದನೆಯಿಂದ ತಿಳಿದುಬರುತ್ತದೆ. ಈ ಪ್ರಭುದೇವರೇ ತಮ್ಮ ಮುಂದಿನ ವಚನದಲ್ಲಿ 'ಶೂನ್ಯ'ಪದವನ್ನು 'ಇಷ್ಟಲಿಂಗ' 'ನಿಜಲಿಂಗ'ವೆಂಬ ಅರ್ಥದಲ್ಲಿ ಬಳಸಿರುವುದನ್ನು ಗುರುತಿಸಬಹುದು :

ತನು ತರತರಂಬೋಗಿ ಮನವು ನಿಮ್ಮಲ್ಲಿ ಸಿಲುಕಿತಯ್ಯ
ನೋಟವೇ ಪ್ರಾಣವಾಗಿ, ಆಪ್ಯಾಯನ ನಿಮ್ಮಲ್ಲಿ ಅಜಿತುದಯ್ಯ
ಸಿಲುಕಿತ್ತು ಶೂನ್ಯದೊಳಗೆ, ಗೋಹೇಶ್ವರ ನಿರಾಳವಯ್ಯ !

ಮೊಗ್ಗೆಯ ಮಾಯಿದೇವರ ಸಂಸ್ಕೃತಾನುವಾದದಲ್ಲಿ ಈ ವಚನ ಮೈದಾಳ್ದ ಬಗೆಯಿದು.

ಭಕ್ತಿಕಂಪಭರಿತಂ ವಪುರ್ಮನ
ಸ್ತತ್ಪದೇ ಪರಿಣತಂ ವಿಲೋಕನಂ
ನಿಶ್ಚಲೀಕೃತಮಹಂ ತ್ವಯಿ ಪ್ರಭೋ
ತೃಪ್ತ ಇತ್ಯವಸಿತಾ ಮತಿರ್ಮಮ ॥ **ಪ್ರಭುಗೀತೆ** : ೧೦೩

ಆ ನಿರಾಕಾರಚೈತನ್ಯ ಅಲೇಖನಾದಶೂನ್ಯಪೀಠವಾದರೋ, ಯಾವುದೆಂಬುದನ್ನು ಚಾಮರಸನು ಬಣ್ಣಿಸಿರುವ ಬಗೆಯಿದು :

ಕುಂಡಲಿಯನಂಡಲೆದು ರವಿ ಶಶಿ
ಮಂಡಲಂಗಳ ಮೀಱಿ ಕಾಮದ
ಕಂಡಿಗಳ ಕೀಲಿಸಿ ಸುಷುಮ್ನಾನಾಳದೊಳಗಡಱಿ
ಮಂಡಿಸಿದನಾ ಶೂನ್ಯಪೀಠದ
ಮಂಡೆಯೊಳು ತೊಳತೊಳಗಿ ಬೆಳಗುವ-
ಖಂಡ ತೇಜೋಮೂರ್ತಿಯಲ್ಲಮ ಲಿಂಗಲೀಲೆಯಲಿ ॥ **ಪ್ರಭುಲಿಂಗಲೀಲೆ** : ಗತಿ ೨೨ ಪ ೫೦

ಇಲ್ಲಿ ಚಿದ್ಗಗನ(ಶೂನ್ಯ)ವೇ ತೇಜೋಮೂರ್ತಿಲಿಂಗ. ಆ ಲಿಂಗವೇ ಅಲೇಖನಾದಶೂನ್ಯವೆಂಬುದು ಸ್ಪಷ್ಟ. ಗೋಸಾಲ ಗುರೂತ್ತಮನು ಪ್ರತಿಪಾದಿಸಿದ ಧ್ಯಾನಸ್ಥಾನವೇ ಶೂನ್ಯಪೀಠವೆಂಬುದು ಇದರಿಂದ ಖಚಿತಪಡುತ್ತದೆ. ಶೂನ್ಯಲಿಂಗ ಧ್ಯಾನಸ್ಥನಾಗಲು ಮನಸ್ಸಿಗೆ ಸಾಧನವಾದ ಮಂತ್ರವನ್ನು ಕುರಿತ ಗ್ರಂಥವೊಂದನ್ನು ಮುರಿಗೆಯ ಸಮಯದ ಗುರುಪರಂಪರೆಯಲ್ಲಿ ಕನ್ನಡ-ಸಂಸ್ಕೃತೋಭಯ ಭಾಷೆಗಳಲ್ಲಿ ಕವಿತಾಸಾಮರ್ಥ್ಯದಿಂದ ಉದ್ಗ್ರಂಥಗಳ ಕರ್ತನಾದ ಇಮ್ಮಡಿ ಗುರುಸಿದ್ಧಸ್ವಾಮಿ ರಚಿಸಿದ್ದಾನೆಂಬುದನ್ನು ಗಮನಿಸಬಹುದು. ಅದೇ 'ಶೂನ್ಯಮಂತ್ರ ಗೋಪ್ಯ' ಎಂದಬಳಿಕ ಗೋಸಾಲಗುರು ಬೋಧಿಸಿದ ಶೂನ್ಯಧ್ಯಾನವು ಮಂತ್ರಮಯವೂ ರಹಸ್ಯಮಯಿಯೂ ಆಗಿ ಪರಂಪರಾಗತವಾಗಿ ಗುರುಮುಖೇನ ಕಾಯ್ದುಕೊಂಡು ಬಂದದ್ದೆಂದು ತಿಳಿಯಬಹುದಾಗಿದೆ. 'ಮುರಿಗ'/'ಮುರುಗ' (ದ್ರ). ಮೃಗ (ಸಂ) ಶಬ್ದದ ಮೂಲಾರ್ಥವೇ ಆಜೀವಸಂಬಂಧಿಯಾದುದು. (ನೋ: ಇದೇ ಅಡಿಟಿ೧-೧೮) ಆ ಕಾರಣ ಶೂನ್ಯಮಂತ್ರಗೋಪ್ಯವೂ ಆಜೀವಕಮತ ಸಿದ್ಧಾಂತವೆಂಬುದನ್ನು ನಿರ್ದೇಶಿಸುತ್ತದೆ. 'ಜ್ಞಾನವಿದು ಭ್ರಾಂತೆನಲು ಜ್ಞಾನಶೂನ್ಯವಿದೆನಿಸಿತು' ಎಂಬ ಜ್ಞಾನಶೂನ್ಯಾಂತಸ್ಥಲಿದಿಂದ ಮುಕ್ತಾಯವಾಗುವ ಶೂನ್ಯಸಂಪಾದನೆಯು 'ಜ್ಞಾನದಿಂದ ಮೋಕ್ಷವಾಗುವುದಿಲ್ಲ'೬*ವೆಂಬ ಗುರು ಗೋಸಾಲ ಪ್ರತಿಪಾದಿತ ತತ್ತ್ವಸಂಬೋಧೆಯೇ ಆಗಿದೆಯೆಂಬುದು ಸುವಿದಿತ. ಲಿಂಗವಂತ ಧರ್ಮವು ಹೇಗೆ ಉಗಮಗೊಂಡಿತು ? ಅದರ ಪ್ರವರ್ತಕರು ಯಾರು ಎಂಬುದು ಇದರಿಂದ ಪ್ರಕಟಗೊಂಡಿದೆ.

III

ಗೋಸಲ ಸಿದ್ಧೇಶ್ವರರನ್ನು ತೋಂಟದ ಶ್ರೀ ಸಿದ್ಧಲಿಂಗೇಶ್ವರರು ಹೆಸರಿಸಿರುವಂತೆ 'ಹರದನಹಳ್ಳಿಯ ದೇವ'ರಾದರೂ, ಅದು ಅವರ ಹುಟ್ಟೂರೆಂದು ಹೇಳಲು ಖಚಿತವಾದ ಯಾವ ಉಲ್ಲೇಖವೂ ಇದ್ದಂತೆ ತೋರದು. ಹರದನಹಳ್ಳಿಯು ಅವರ ನೆಲೆಯಾಗಿ ಮಠಾಧೀಶ್ವರರೆನಿಸುವ ಮುನ್ನ ಅವರು'ಗೋಸಲ ಯತೀಶ್ವರನೆಂಬ ಗೋಸಲಿಯ ಸಿದ್ಧೇಶ್ವರಸ್ವಾಮಿ' ಎಂದೇ ಹೆಸರಾಂತಂತೆ ಕಂಡುಬರುತ್ತದೆ. ಈ ಹಿಂದೆ ಗೋಸಲಿ ಎಂಬ ಊರು ಇದ್ದ ಬಗೆಗೆ ಯಾವ ಮಾಹಿತಿಯೂ ಕಂಡುಬಂದಿಲ್ಲವೆಂದು ತಿಳಿದಿದ್ದೇವೆ. ಹಾಗಾದರೆ ಈ ಗೋಸಲಿ ಎಂಬ ಪೂರ್ವನಾಮಕ್ಕೆ ಇರಬಹುದಾದ ಸಂಭಾವ್ಯ ಸಾಂದರ್ಭಿಕ ಸಂಗತಿಯ ಬಗೆಗೆ ಮುಂದೆ ವಿವೇಚಿಸಬಹುದಾಗಿದೆ. ಗೋಸಲ ಸಿದ್ಧೇಶ್ವರರು ತಮ್ಮ ಶೂನ್ಯಸಿಂಹಾಸನಾಧೀಶ್ವರ ಪಟ್ಟವನ್ನು ಧರಿಸಿದುದು ಸೊಗಲಕ್ಷೇತ್ರದಲ್ಲಿ. ಅದಿರುವುದು ಬೆಳಗಾಂವ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ. ಸೊಗಲ, ಮುರುಗೋಡು, ಕಲ್ಲೂರು ಹಾಗೂ ಮುನವಳ್ಳಿಗಳು ಸವದತ್ತಿಯ ಸುತ್ತಮುತ್ತಲ ಪ್ರಸಿದ್ಧ ಧಾರ್ಮಿಕ ಸ್ಥಳಗಳಾಗಿದ್ದವೆಂದು ತಿಳಿದುಬರುತ್ತದೆ. ಶೂನ್ಯಸಿಂಹಾಸನದ ಹದಿನಾಲ್ಕನೆ ಪಟ್ಟದ ಚೆನ್ನವೀರಸ್ವಾಮಿಗಳವರಿಂದ ಶಿವಾನುಭವ ಚರಂತಿಗೆ ಪಟ್ಟವನ್ನು ಮುನಿಪಲ್ಲಿಯ ಪಂಚಲಿಂಗೇಶ್ವರ ದೇವಾಲಯದಲ್ಲಿ ಪಡೆದು ದೇಶಸಂಚಾರ ಮಾಡುತ್ತ ಬಂದವರು ಗೋಸಲ ಸಿದ್ಧೇಶ್ವರ ಸ್ವಾಮಿಗಳು. ಐಹೊಳೆ ಪಂಚವಾಣಿಜರ ವಂಶಸ್ಥರಾದ ಬಣಜಿಗರು ವ್ಯಾಪಾರಕ್ಕೆ ದೇಶಸಂಚಾರ ಹೊರಟವರು ಮಾರ್ಗಮಧ್ಯದಲ್ಲಿ ಅಚ್ಚರಿಯ ಅಮೃತಲಿಂಗಕ್ಕೆ ಶಿವಾಲಯವನ್ನು ಕಟ್ಟಿದಂತೆ, ತಮ್ಮ ಹೆಸರ ಪುರವಾದ ಹರದನಹಳ್ಳಿಯಲ್ಲಿ ಗೋಸಲಿಯ ಸಿದ್ಧೇಶ್ವರರಿಗೂ ಜಗದ್ಗುರು ಮಠವನ್ನು ಕಟ್ಟಿಸಿ (ಕ್ರಿ.ಶ. 1317) ಒಪ್ಪಿಸಿದರೆಂಬುದಕ್ಕೆ ಗ್ರಂಥಾಧಾರಗಳಿವೆ.

ಅಣಿಲೇಶ್ವರ ದೇವಾಲಯವು ನಿರ್ಮಾಣವಾದ ಬಗೆಗೆ ಶಾಸನೋಲ್ಲೇಖ(E.C.ch.116)ವಿದೆ. ಆ ಆಧಾರದಮೇಲೆ ಗೋಸಲ ಸಿದ್ಧೇಶ್ವರರು ಕ್ರಿ.ಶ. 1317ರ ವೇಳೆಗೆ ಹರದನಹಳ್ಳಿಯಲ್ಲಿ ಮಠಾಧಿಪತಿಗಳಾಗಿದ್ದರೆಂದು ಹೇಳಬಹುದು.

ಮೂರನೆಯ ಹೊಯ್ಸಳ ಬಲ್ಲಾಳನ ಅನಂತರ 11.8.1343ರಂದು ಪಟ್ಟಕ್ಕೆ ಬಂದ ಆತನ ಮಗನಾದ ವೀರವಿರೂಪಾಕ್ಷ ಹಂಪೆಯ ಒಡೆಯ ನಾಲ್ಕನೆಯ ವೀರಬಲ್ಲಾಳನು ಕೈಕೊಂಡ ದಕ್ಷಿಣದೇಶದ ವಿಜಯಯಾತ್ರೆಯ ತಾರಣ ಸಂವತ್ಸರ (ಕ್ರಿ.ಶ. 1344)ದಲ್ಲಿ ವಾಣಿಜ್ಯಪುರಿ ಮಠಾಧಿಷ್ಠಿತರಾದ ಗೋಸಲಾರ್ಯ ಯತೀಶ್ವರರಿಗೆ ಬರೆಸಿಕೊಟ್ಟ ತಾಮ್ರಶಾಸನವಿದೆ. ಅದರಲ್ಲಿ ಅವರನ್ನು ಕುರಿತು 'ಶ್ರೀಮತ್ ಸಚ್ಚಿದಾನಂದ ನಿತ್ಯ ಸಂಪೂರ್ಣ ಅವಿರಳ ಜ್ಞಾನಾನಂದ ಪರಂಜ್ಯೋತಿಃಸ್ವರೂಪ ಜಗದ್ವಿಸ್ತಾರ ಮೂಲಸ್ತಂಭಾಯಮಾನ ಚರಾಚರ ಜಗಜ್ಜಾಲ ಜನ್ಮಕಾರಣೀಭೂತ ಶ್ರುತಿ ಸ್ಮೃತಿ ಪುರಾಣಾಗಮೇತಿಹಾಸ ಷಡಸ್ಥಲಪರಬ್ರಹ್ಮೇಷ್ಟಲಿಂಗಾರಾಧಕ ತತ್ತ್ವಮಸ್ಯಾದಿ ಮಹಾಕಾವ್ಯ ವಿಚಾರಧುರೀಣ ಶ್ರೀಮದ್ವಾಣಿಜ್ಯಪುರೀ ಮಠಾಧಿಷ್ಠಿತ ಅನಾದಿ ಮರುಳಾರ್ಯವಂಶ ಪರಂಪರಾಗತ ಪರಿವಿಡಿದ್ರಾಜಗುರು ಅಪ್ಪಣಾರ್ಯನಿಜಗರ್ಭ ಸಂಜನಿತ ವೇದವೇದಾಂತೋಪನಿಷತ್ಪಾರೋದಿತ ನಿಜಪಟ್ಟಮೂರ್ತಿ' ಎಂಬ ವಿವರಣೆಯಿದೆ. ಈ ಯತೀಶ್ವರರ ಭವಾಶ್ರಯದ ವಂಶ ಹಾಗೂ ತಂದೆಯ ಹೆಸರನ್ನು ಕಾಣಿಸಿರುವ ಕಾರಣ ಇದೊಂದು ಪೂರ್ವಪರಂಪರೆಯ ಸೂಚಕವಾಗಿ ಮಹತ್ವಪೂರ್ಣವಾದ ಐತಿಹಾಸಿಕ ಸಂಗತಿಗಳ ಕಡೆಗೆ ದಿಕ್ಸೂಚಿಯಾದ ದಾರಿದೀಪವಾಗಿದೆ ಎಂಬುದನ್ನು ಗಮನಿಸುವುದಗತ್ಯ. ನಿಜಪಟ್ಟಮೂರ್ತಿಯಾಗಿ ಅವರು ಮೆರೆದ ಪವಾಡಗಳನ್ನು ಶಾಸನದಲ್ಲಿ ಉಲ್ಲೇಖಿಸಿದುವುಗಳಲ್ಲಿ ಒಂದು ಕಲ್ಲಗೂಳಿಯನ್ನು ನುಡಿಸಿದುದು. ಎರಡು ಪಂದೆವೊಡೆಯನೆಂಬುವನಿಗೆ ದಾಸೋಹದಲ್ಲಿ ತುಪ್ಪ ಕಡಮೆಯಾಗಲು ಕುಂಭೋದಕವ ತರಿಸಿ ತುಪ್ಪವ ಮಾಡಿ ಉಣಬಡಿಸಿದುದು. ಮೂರು, ಸರ್ಪದಷ್ಟನಾದ ಮಗನನನ್ನು ಬದುಕಿಸಿದುದು. ನಾಲ್ಕು, ತುಳವದೇಶಕ್ಕೆ ಬಂದು ತುಲಕಾಣ್ಯರಿಗೆ ಮಹಿಮೆ ತೋರಿ 'ಶತಪವಾಡ ಮಹನೀಯರು'/'ಶತಪವಾಡ ಮಹಾತ್ಮರು' ಎಂದು ಬಿರುದು ಧರಿಸಿದುದು. ಐದು ವೈಷ್ಣವಾದಿಗಳನ್ನು ಗೆದ್ದು ಶಿವಮತವನ್ನು ಉದ್ಧರಿಸಿದುದು ಇವೇ ಮೊದಲಾದವು.

ಆ ಶಾಸನಕ್ರಮವೆಂತೆಂದಡೆ :

1 ಹಿರಿಯ ಮಡಿವಾಳದ ಶಿವನಂಕೇಶ್ವರರಿಗೆ ಚಂದ್ರಣಿ ಮಠ;

2 ಮಾದೇಶ್ವರರಿಗೆ ಕಂಚೀ ತೆಲುಗಾಣ್ಯ ಮಠ;

3 ಪಂದೇಶ್ವರರಿಗೆ ಶ್ರೀ ವಾಣಿಜ್ಯಪುರೀ ಮಠ;

4 ಸಿದ್ಧೇಶ್ವರರಿಗೆ ಕೆಂಬಲ್ಲೂ ಮಠ;

5 ಬ್ರಹ್ಮೇಶ್ವರರಿಗೆ ಮಹಲಿಂಗಿ ಮಠವೆಂತಲೂ ಈ ಪಂಚೈದು ಲಿಂಗಗಳಿಗೆ ಈ ಮಠಗಳೆಂದು ವಿಧಿಸಿ, ಆಯಾ ದೇವಸ್ಥಾನಕ್ಕೆ ಸೇರಿದ ತಮ್ಮಡಿಗಳು, ಶಿಷ್ಯರು ಬೇಡಗಂಪಣಗಳಿಗೆ ಆಯಾ ಮಠಾಧಿಪತಿಗಳೇ ಲಿಂಗಧಾರಣ, ತೀರ್ಥಪ್ರಸಾದಗಳನ್ನು ಕೊಟ್ಟು ಅವರಿಂದ ಕಟ್ಟು ಕಾಣಿಕೆಗಳನ್ನು ತೆಗೆದು ಆ ದೇವಾಲಯಗಳಲ್ಲಿ ನಡೆಯುವ ಎಲ್ಲಾ ಕಾರ್ಯಗಳನ್ನು ನಡಸತಕ್ಕದ್ದೆಂದು ನೇಮಿಸಿರುತ್ತೇವೆ ಎಂದಿದೆ. ಮುಂದೆ ಶ್ರೀ ಮಹದೇಶ್ವರ ಸ್ವಾಮಿಯವರು ಪ್ರಭುಲಿಂಗಾರಾಧ್ಯರಿಂ(ಕುಂತೂರು ಬೆಟ್ಟದ ಪ್ರಭುಸ್ವಾಮಿಗಳಿಂ)ದ ಲಿಂಗಧಾರಣೆಯನ್ನು ಮಾಡಿಸಿಕೊಂಡು ವಜ್ರಮಲೆಯಲ್ಲಿ ನೆಲೆಗೊಂಡ ಸಂಗತಿ, ಬೇಡರ ಕಂಸಯನ ದೃಢಭಕ್ತಿಗೆ ಮೆಚ್ಚಿ ಮೋಕ್ಷವನ್ನು ಕೊಟ್ಟ ವಿಷಯವಿದೆ. ಪಟಗಾರ ರಾಯಂಣ ನಾಯ್ಕನಿಗೆ ಬಿಳಿಚತ್ರಿ, ಪಂಟಿ ತೋಡಬಳೆ ಶಾಲುನಾಮೆ ಸಹ ಕೊಟ್ಟು ಕಂಪಣಕ್ಕೆ ಕರ್ತನೆಂದು, ನಿನ್ನ ತದ್ವಂಶಪರಂಪರೆಯಾಗಿ ನಡಸಿಕೊಂಡು ಬರತಕ್ಕದ್ದೆಂದು ರಾಜರ ಆದೇಶವಿದೆ. ಅಲ್ಲದೆ ಪಟಗಾರ ರಾಯಂಣ ನಾಯ್ಕರ ವಂಶದವರು, ಪಂದೇಶ್ವರ ತಂಮಡಿಗಳು ಮತ್ತೆ ಶಿಷ್ಯರುಗಳು, ಹಿಂಡಿರಾಮನ ಗುಂಪು, ಬೇಳೆಕೂಟ, ಮೆಂಡಗುದ್ದಿ ಪಾಲಿನವರು, ಕೆರಣೆಪಾಲಿನವರು, ಹಿರಿಯ ಮಡಿವಾಳ ಶಿವನಂಕೇಶ್ವರನ ಪಕ್ಕಲಿನವರು ಈ ಪಂಚೈದು ದೇವಸ್ಥಾನದ ಮೇಲುವಿಚಾರ ಅಧಿಕಾರವನ್ನು ಶ್ರೀ ವಾಣಿಜ್ಯಪುರಿ ಮಠಾಧಿಪತಿಗಳಿಗೆ ಬಿಟ್ಟು, ಮಾದೇಶ್ವರಬೆಟ್ಟದ ಉರಿಗದ್ದುಗೆಯ ವಿರಕ್ತಕಟ್ಟೆಯಲ್ಲಿ ಐದನೆವೊಂದು ಭಾಗ ಕಾಣಿಕೆ ಕೊಡುವುದಲ್ಲದೆ ರಾಯನಹಳ್ಳಿ, ಬಸವನಪುರವೆಂಬ ಗ್ರಾಮಗಳನ್ನು ಬಿಟ್ಟು, ಆ ಗ್ರಾಮದ ಕಾಡಾರಂಭ, ನೀರಾರಂಭ, ಗೊಪ್ಪಟ, ಪೊಮ್ಮೆ, ಸುಂಕ, ದೇವಾದಾಯ, ಬ್ರಹ್ಮಾದಾಯ, ನಟ್ಟಕಲ್ಲು, ಬಿಟ್ಟಬಸವ ಮೊದಲಾದವುಗಳನ್ನು ಈ ಮಠಕ್ಕೆ ಅಮೃತಪಡಿ ದೇವಾರಾಧನೆಯ ಕಾರ್ಯಗಳಿಗಾಗಿ ಕೊಡುವುದಲ್ಲದೆ ನಿಮ್ಮ ತದ್ವಂಶ ಪರಂಪರೆಯಾಗಿ ಆಚಂದ್ರಾರ್ಕಸ್ಥಾಯಿಯಾಗಿ ನಡಸಿಕೊಂಡು ಬರತಕ್ಕದ್ದೆಂದು ರಾಜಶಾಸನವಿದೆ.

IV

ಗೋಸಲ ಸಿದ್ಧೇಶ್ವರರು ವಾಣಿಜ್ಯಪುರಿ ಮಠಾಧೀಶ್ವರರಾಗಿದ್ದ ಆ ಹದಿನಾಲ್ಕನೆ ಶತಮಾನದ ಪೂರ್ವದಲ್ಲಿನ ಸಮಕಾಲೀನ ಸಮಾಜವು ಆ ವೇಳೆಗಾಗಲೆ ಕುಲಾಂತರಗೊಳ್ಳುತ್ತ ಪಂಗಡ ಉಪಪಂಗಡಗಳು ಹೆಚ್ಚುತ್ತ ಹೋಗಿ ಅವುಗಳ ಸಂಖ್ಯೆ ಬೆಳೆಯತೊಡಗಿದ್ದಿತು ಎಂಬ ಅಂಶ ಈ ಶಾಸನೋಕ್ತ ನಿರೂಪಣೆಯಿಂದ ಸ್ಪಷ್ಟಪಡುತ್ತದೆ. ಅದನ್ನು ಕಂಡು ಗುರುಪರಂಪರಾಗತ ಆಜೀವಕಧರ್ಮಾಚರಣೆಯ ದೃಷ್ಟಿಯಿಂದ ಶೂನ್ಯಪೀಠಾಧಿಪರಾಗಿ ಗೋಸಲೇಶ್ವರರು ಆ ಎಲ್ಲ ಕುಲಗಳ ಕೂಟಪಾಲುಗಳನ್ನು ವಿಂಗಡಿಸಿ "ಮುನ್ನೂರು ಮೂವತ್ತೈದು ಪಂಗಡ"ಗಳಾಗಿ ಸುವ್ಯವಸ್ಥಿತ ಕ್ರಮದಿಂದ ಒಡಗೂಡಿಸಿದರು. ಆ ಎಲ್ಲ ವರ್ಗದವರಿಂದಲೂ ಆರಾಧಿಸಲ್ಪಟ್ಟವರಾದರು. ಶೂನ್ಯಪೀಠಾಧಿಪರಾಗಿ ಸಮಾಜಸಂಘಟನೆಯನ್ನು ಮಾಡಿದ ಶ್ರೀಗಳವರ ಅಘಟಿತಘಟನಾ ಸಾಮರ್ಥ್ಯವನ್ನು ಕಂಡ ಹೊಯ್ಸಳ ರಾಜರು ಮನಮೆಚ್ಚಿ ಮಾಡಿದ ಶಾಸನವನ್ನು ಶಾಶ್ವತವಾಗಿ ನಡಸಿಕೊಂಡು ಬರಬೇಕೆಂದು ಆಜ್ಞಾಪಿಸಿದುದು ಔಚಿತ್ಯಪೂರ್ಣವೂ ಶ್ಲಾಘ್ಯವೂ ಆದುದು. ಇಲ್ಲಿ "ಕೇವಲ ಮುನ್ನೂರು ಮೂವತ್ತೈದು" (335)ಪಂಗಡಗಳಾಗಿ ಮಾಡಿದುದರ ಆಶಯವಾದರೂ ಏನು ಎಂಬುದು ವಿಚಾರಣೀಯ ಅಂಶ. ಹಾಗೆ ಮಾಡುವುದಕ್ಕೆ ಏನಾದರು ಹಿನ್ನೆಲೆಯುಂಟೆ ಎಂಬುದೂ ಪರಿಶೀಲಿಸಬೇಕಾದ ವಿಚಾರ.

ಗೋಸಾಲ, ಮಹಾವೀರರ ಕಾಲದ ಸಮಾಜದ ಕಡೆಗೆ ದೃಷ್ಟಿ ಹರಿಸಿದಾಗ ವಿವಿಧ ಮತದವರಿಗೆ ಆಗ್ಗೆ ಪ್ರಚುರವಿದ್ದ ಕ್ರಿಯಾವಾದ, ಅಕ್ರಿಯವಾದ, ಅಜ್ಞಾನವಾದ ಹಾಗೂ ವಿನಯವಾದ - ಈ ದರ್ಶನ ಚತುಷ್ಟಯಗಳಲ್ಲಿ ಒಂದೊಂದು ಅನ್ವಯಿಸುತ್ತಿದ್ದಿತೆಂದು ವರ್ಗೀಕರಿಸುವಾಗ ಇಡೀ ಸಮಾಜದಲ್ಲಿ ಮುನ್ನೂರ ಅರುವತ್ತು ಕುಲದವರೆಂದು ತಿಳಿದುಬರುತ್ತದೆ. ಕ್ರಿ.ಪೂ. ಆ ಆರನೆಯ ಶತಮಾನದ ಅವರ ಕಾಲದ ಸಮಾಜದಲ್ಲಿಯೇ 363 ಪಂಗಡಗಳಿದ್ದದ್ದು ಕಾಲಕಾಲಕ್ಕೆ ಕುಲಾಂತರದಿಂದ ಅಧಿಕವಾಗುತ್ತಿದ್ದ ಒಳಪಂಗಡಗಳನ್ನು ಗೋಸಲ ಸಿದ್ಧೇಶ್ವರರು ಕೇವಲ ಮುನ್ನೂರು ಮೂವತ್ತೈದು (335) ಪಂಗಡಗಳಿಗೆ ಇಳಿಸಿ ಶಿವಭಕ್ತಿಯ ಸೂತ್ರದಿಂದ ಸುಸಂಘಟಿತರಾಗುವಂತೆ ಮಾಡಿ ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವ ಹಾಗೆ ಮಾಡಿದುದು ಅವರ ಮಹಿಮಾಮಯ ವ್ಯಕ್ತಿತ್ವದ್ಯೋತಕವಾಗಿದೆ. ಸಾಸಲರಾಯನಿಗೆ ಲಿಂಗಧಾರಣೆಯನ್ನು ಮಾಡಿಸಿದುದು, ಅನ್ಯಮತೀಯರನ್ನು ಭಸ್ಮಧಾರಣಮಾಡಿಸಿ ತನ್ನವರನ್ನಾಗಿಸಿ ಶಿವಧರ್ಮಪ್ರಸಾರ ಕಾರ್ಯವನ್ನು ಮಾಡಿದುದು ಆಜೀವಕಮತದ ಸರ್ವಾಚಾರಸಂಪತ್ತಿನ ಜೀವಂತಿಕೆಯ ಲಕ್ಷಣವೆನ್ನಬಹುದು.

V

ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಗುರುಪರಂಪರೆಯಲ್ಲಿ ಆದಿಲಿಂಗದೇವರು, ಚೆನ್ನವೀರಸ್ವಾಮಿಗಳು ಹಾಗೂ ಶ್ರೀ ಗೋಸಲಸಿದ್ಧೇಶ್ವರರು ಈ ಮೂವರಲ್ಲಿ ಆದಿಲಿಂಗದೇವರು ಬೆಳಗಾಂವ ಜಿಲ್ಲ ಸವದತ್ತಿ ತಾಲ್ಲೂಕಿನ "ಸುಗೋಲಾಶ್ರಮವಾದ ಸೊಗಲ" ಕ್ಷೇತ್ರದ ಮುರುಗೋಡು ಸಮೀಪದ ಕಲ್ಲೂರು ಗುಡ್ಡದಲ್ಲಿ ನಿರ್ವಯಲಾದರು. ಅದೇ ಸವದತ್ತಿ ತಾಲ್ಲೂಕಿನ "ಆಗಸ್ತ್ಯಾಶ್ರಮವಾದ ಮುನಿಪಲ್ಲಿ" (ಈಗ ಮುನವಳ್ಳಿ/ಮನೋಳಿ)ಯ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ಮಠದಲ್ಲಿ ಚೆನ್ನವೀರಸ್ವಾಮಿಗಳು ಐಕ್ಯವಾದ ತೋರಗದ್ದುಗೆಯಿದೆ. ಈ ಚೆನ್ನವೀರಸ್ವಾಮಿಗಳಿಂದ ಶೂನ್ಯಸಿಂಹಾಸನದ ಹದಿನೈದನೆಯ ಚರಂತಿಗೆ ಪಟ್ಟವನ್ನು ಅದೇ ದೇವಾಲಯದಲ್ಲಿ ಪಡೆದವರೇ "ಗೋಸಲ ಯತೀಶ್ವರನೆಂಬ ಗೋಸಲಿಯ ಸಿದ್ಧೇಶ್ವರ ಸ್ವಾಮಿಗಳು."

ದಕ್ಷಿಣ ದೇಶದ ಕಡೆಗೆ ಅಡಕೆ, ಏಲಕ್ಕಿ, ಮೆಣಸು ಮೊದಲಾದ ಸರಕಿನ ವ್ಯಾಪಾರಕ್ಕಾಗಿ ಉತ್ತರದಿಂದ ಪ್ರಯಾಣಬೆಳಸಿ ಬಂದ ಹರದರಿಂದ ನಿರ್ಮಿತವಾದ ಅವರ ಹೆಸರ ಹರದನಹಳ್ಳಿಯು, ಅಲ್ಲಿ ಅವರೇ ಕಟ್ಟಿಸಿ ಒಪ್ಪಿಸಿದ ಜಗದ್ಗುರುಮಠ, ಅದಕ್ಕೆ ಅಧಿಪತಿಗಳಾದ ಗೋಸಲಿಯ ಸಿದ್ಧೇಶ್ವರ ಸ್ವಾಮಿಗಳ ಕಾರ್ಯಕ್ಷೇತ್ರದ ಕೇಂದ್ರವಾಗತೊಡಗಿತು. ಈ ಮೇಲೆ ಕಾಣಿಸಿದ ಮೂವರು ಶೂನ್ಯಸಿಂಹಾಸನಾಧೀಶ್ವರರಿಗೂ ಸುಗೋಲಾಶ್ರಮವಾದ ಸೊಗಲ ಹಾಗೂ ಅಗಸ್ತ್ಯಾಶ್ರಮವಾದ ಮುನಿಪಲ್ಲಿಗಳನ್ನೊಳಗೊಂಡ ಸವದತ್ತಿಗೂ ಇದ್ದ ನಿಕಟಸಂಬಂಧ ಇಲ್ಲಿ ಸುಸ್ಪಷ್ಟವಾಗಿದೆ.

ದಕ್ಷಿಣ ದೇಶದ ಈ ಎರಡೂ ಕ್ಷೇತ್ರಗಳನ್ನೊಳಗೊಂಡ ಸವದತ್ತಿಗೂ ಅಯೋಧ್ಯೆಯ ಉತ್ತರ ಕೋಸಲ ದೇಶದ ರಾಜಧಾನಿ ಶ್ರಾವಸ್ತಿ - (ಶ್ರಾವಕರ ವಸತಿ ? ಈಗಿನ ಸೆಹರು : ಷಟ್‌ಮಹತ್) - ಧರ್ಮಪುರಿಗೂ ಯಾವ ಸಂಬಂಧವುಂಟು ಎಂಬುದರ ಕಡೆಗೆ ದೃಷ್ಟಿ ಹೊರಳಿಸೋಣ. ಶೂನ್ಯಧ್ಯಾನಪ್ರತಿಪಾದಕನಾದ ಆಜೀವಮತಪ್ರವರ್ತಕ ಗೋಸಾಲನ ಮತ ಧರ್ಮಾಚರಣೆಯ ಕಾರ್ಯಕ್ಷೇತ್ರದ ಕೇಂದ್ರವಾದರೋ ಸಾವತ್ಥಿ (ಶ್ರಾವಸ್ತಿ) ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದಗತ್ಯ. ಆ ಸಾವತ್ಥಿಯ ಸಂಬಂಧದ ಸಂಕೇತವೋ ಎಂಬಂತೆ'ಸವದತ್ತಿ' ಇರುವುದು ಗಮನಾರ್ಹ. ಸವದತ್ತಿಯ ತಾಲ್ಲೂಕಿಗೆ ಸೇರಿದ

ಸೊಗಲವೂ 'ಸುಗೋಲಾಶ್ರಮ'ವೆಂದೇ ಹೆಸರಾಂತಿದೆ. ಅದೇ ತಾಲ್ಲೂಕಿನ ಮುನಿಪಲ್ಲಿಯು ಅಗಸ್ತ್ಯಮುನಿಸಂಬಂಧ ವಾಗಿರುವಂತೆ ಅದರ ಸಮೀಪದ 'ಸೊಗಲ'ವೂ'ಸುಗೋಲಾಶ್ರಮ'ವಾಗಿದೆ ಎಂಬಲ್ಲಿ ಅದೂ ಒಬ್ಬ ಯತೀಶ್ವರಸಂಬಂಧವಾದ ಆಶ್ರಮವೆಂಬುದರ ಸೂಚನೆಯೆಂದೇ ಹೇಳಬೇಕಾಗುತ್ತದೆ. ಆಗ್ಗೆ 'ಗೋಸಲ'ಶಬ್ದವೇ ಸಂಸ್ಕರಣಗೊಂಡು ವರ್ಣಪಲ್ಲಟ ಗೊಂಡು 'ಸುಗೋಲ'ವೆಂಬ ವ್ಯಕ್ತಿಸೂಚಕ ಶಬ್ದವಾಗಿದೆಯೆಂದು ತೋರಿಬರುತ್ತದೆ. 'ಗೋಸಾಲ (>ಗೋಸಲ) ಶಬ್ದಸಂಸ್ಕರಣ ದಿಂದಲೇ ನಿಷ್ಪನ್ನವಾದ ಶಬ್ದ 'ಸುಗೋಲ'ಎನ್ನಬಹುದಾದರೂ ಅರ್ಥಸಾಮ್ಯದೃಷ್ಟಿಯಿಂದ ಅಶೋಕ ಚಕ್ರವರ್ತಿಯ ಕಾಲದಲ್ಲಿ ಆಜೀವಕರಿಗೆ ಮಳೆಗಾಲದ ಆಶ್ರಯಕ್ಕಾಗಿ ದಾನಮಾಡಿದ "ವಿಶ್ವಝೋಪ್ರಿ" ಶಬ್ದದ ಪರ್ಯಾಯ ಶಬ್ದವಾಗಿ 'ಸುಗೋಲಾಶ್ರಮ' ಪದಪ್ರಯೋಗವಿರುವುದೇ ಹೆಚ್ಚು ಸಂಭವನೀಯ. 'ಸುಗೋಲ' ಶಬ್ದ ವರ್ಣಪಲ್ಲಟಗೊಂಡು 'ಗೋಸಲ' ಶಬ್ದವಾಗಿರಬಹುದೋ ಎಂದೆಂಬ - ಸಂಭಾಷಣೆಯ ಕಾಲದಲ್ಲಿ ವ್ಯಕ್ತಪಡಿಸಿದ - ಪಂಡಿತ ಎರೆಸೀಮೆಯವರ ಊಹೆಯ ಅನಿಸಿಕೆಗೆ ಸಮರ್ಥನೀಯ ಆಧಾರ ದೊರಕದೆಂದು ಹೇಳದೆ ವಿಧಿಯಿಲ್ಲ.

'ಗೋಸಲ ಯತೀಶ್ವರನೆಂಬ ಗೋಸಲಿಯ ಸಿದ್ಧೇಶ್ವರ' (ನಿ.ಎಂ.ರ.ಶಿವಾ.ಗ್ರಂ.೨೫-೨೬) ಎಂಬ ವ್ಯಕ್ತಿನಾಮನವನ್ನಿಲ್ಲಿ ವಿವೇಚಿಸಿ ನೋಡಿದಾಗ ಸಿದ್ಧೇಶ್ವರರ ಹೆಸರು ಗೋಸಲ ಗುರುಪರಂಪರಾಗತವೆಂದೂ ಅವರು ಯತಿಗಳಾಗಿರುವರೆಂದೂ ಸಹಜವಾಗಿಯೇ ತಿಳಿದುಬರುತ್ತದೆ. ಅಲ್ಲಿನ ಶೂನ್ಯಧ್ಯಾನಪ್ರತಿಪಾದನೆಯ ಮೂಲಸ್ಥಾನವಾದ 'ಸಾವತ್ಥಿ'ಯೇ ಇಲ್ಲಿನ 'ಸವದತ್ತಿ'ಯಾಗಿ ಶೂನ್ಯಪೀಠಾಧಿಪತಿತ್ವವನ್ನು ಹೊಂದಿದ ಆ ಸಿದ್ಧೇಶ್ವರರಿಗೆ ಇರುವ 'ಗೋಸಲಿಯ' ಎಂಬ ಪೂರ್ವಉಪನಾಮವನ್ನು ಆ ಸಾವತ್ಥಿ ರಾಜಧಾನಿ ಇರುವ 'ಕೋಸಲ'ವೆ 'ಗೋಸಲ'ವಾಗಿದ್ದು, ಬಹುಶಃ ಪೂರ್ವದಲ್ಲಿ ಆ ದೇಶೀಯರಾದರೆಂಬುದರ ನಿರ್ದೇಶನವಾಗಿ ಬಳಕೆಯಲ್ಲಿ ಬಂದ ಪದ 'ಗೋಸಲಿ/ಯ' ಎಂದು ಗ್ರಹಿಸುವುದೇ ಸೂಕ್ತವೆಂದು ತೀರ್ಮಾನಿಸಬಹುದು. ಸಿದ್ಧೇಶ್ವರರ ಗೋಸಲ ಎಂಬ ಅಂಕಿತವು ಶೂನ್ಯಧ್ಯಾನಪ್ರತಿಪಾದಕ ಗೋಸಾಲಯತೀಶ್ವರನ ಸಂಬಂಧವಾಗಿಯೂ, ಗೋಸಲಿಯ ಎಂಬುದು 'ಕೋಸಲ'ದೇಶದ ಸಂಬಂಧವುಳ್ಳವನೆಂಬುದನ್ನು ತೋರಿಸುವ ಪದವಾಗಿಯೂ ಇವೆ ಎಂದು ನಿರ್ಣಯವಾಗುತ್ತದೆ.

ಕ್ರಿಸ್ತಪೂರ್ವ ಆರನೆಯ ಶತಮಾನದ ಒಂದು ಪ್ರಬಲವಾದ ಮತಧರ್ಮವು ಕ್ರಿಸ್ತಶಕದಿಂದ ಈಚೆಗೂ ಹೀಗೆ ಸಾಂಸ್ಕೃತಿಕ ಸಂಬಂಧಸೂಚಕ ಸ್ಥಳನಾಮಗಳಿಂದಲೂ ಸಾಗಿಬಂದಿರುವುದಲ್ಲದೆ ಹದಿಮೂರನೆಯ ಶತಮಾನದ ಒಂದು ಶಾಸನವು ಆಜೀವಕಮತದ ಪ್ರಸ್ತಾಪ ಮಾಡಿರುವುದು ಆ ಮತಧರ್ಮದ ಅಸ್ತಿತ್ವವನ್ನು ದೃಢಪಡಿಸುತ್ತದೆ (ನೋ : ಲಾರ್ಡ್ ಮಹಾವೀರ; ಪು.111).ಸದವತ್ತಿಯೆಂಬ ಮತ್ತೊಂದು ಊರು ಅದೇ ಬೆಳಗಾಂವ ಜಿಲ್ಲೆಯ ರಾಯಭಾಗದಲ್ಲಿಯೂ ಇರುವುದೂ ಆಜೀವಕರ ಮೂಲಸ್ಥಾನದ ಸಂಬಂಧದ ಸ್ಮರಣೆಯ ಪ್ರಭಾವವೆಂಬುದರಲ್ಲಿ ಸಂಶಯವೇ ತೋರದು. ಬೆಳಗಾವಿ ಜಿಲ್ಲೆಯ ಸವದತ್ತಿಯು ಶ್ರಾವಸ್ತಿಯನ್ನು ಹೇಗೋ ಹಾಗೆ, ಮೈಸೂರು ಜಿಲ್ಲೆಯ 'ಹರದನಹಳ್ಳಿ'ಯು ಕೋಸಲದ 'ವಾಣಿಜ್ಯ ಗ್ರಾಮ'ವನ್ನು ನೆನಪಿಗೆ ತರುವ ಮೂಲಕ ಆಜೀವಕರ ಮೂಲಸ್ಥಾನದ ಸಂಬಂಧವನ್ನು ದೃಢಪಡಿಸುತ್ತದೆ.

VI

ವರ್ಧಮಾನ ಮಹಾವೀರ, ಬುದ್ಧ ಹಾಗೂ ಇವರ ಸಮಕಾಲೀನ ಸಮಾಜದಲ್ಲಿ ಬೌದ್ಧಮತೀಯರು 'ಆಜೀವಕ'ಪದವನ್ನು ತೆಗಳುವ ಇಲ್ಲವೆ ನಿಂದೆಯ ನುಡಿಯಾಗಿ ಬಳಸುತ್ತಿದ್ದುದಕ್ಕೆ ಆಜೀವಕ ಮತಾವಲಂಬಿಗಳು ವೃತ್ತಿನಿರತ ಜೀವರಾಗಿದ್ದವ (Professionals) ರೆಂಬುದೇ ಕಾರಣವೆಂದು ಅಭಿಪ್ರಾಯ ಪಡಲಾಗಿದೆ. ಏಕೆಂದರೆ ತನ್ನ ತಂದೆಯ ವೃತ್ತಿಯಲ್ಲಿ ಕೆಲವುಕಾಲ ತೊಡಗಿದ್ದು ಆ ಅನಂತರ ಯತಿಯಾಗಿ ದೀನರೂ, ದಲಿತರೂ, ಬದುಕಿಗಾಗಿ ಉದ್ಯೋಗತತ್ಪರರಾಗಿದ್ದವರೊಡನೆ ಗೋಸಾಲನು ಸಂಪರ್ಕ ಹೊಂದಿದ್ದ ಕಾರಣ ಆತನನ್ನೂ ಆತನ ಮತಾನುಯಾಯಿಗಳನ್ನೂ ಕಡೆಗಣಿಸುವ ರೀತಿಯಲ್ಲಿ ವರ್ತಿಸುವಂತಾಯಿತೆಂದು ತಿಳಿದುಬರುತ್ತದೆ. ಸಮಾಜದ ಸರ್ವತೋಮುಖವಾದ ಏಳಿಗೆಗೆ, ಸಕಲ ಜೀವರಿಗೆ ಲೇಸನೇ ಬಯಸುವ, ಜನಮನದಲ್ಲಿ ಜ್ಞಾನಜ್ಯೋತಿಯನ್ನು ಬೆಳಗುವ ಜಂಗಮರ ಪಾಲಿನ ಕಾಯಕವನ್ನು ವೃತ್ತಿಯೆಂದು ಪರಿಗಣಿಸುವುದಂತೂ ಸಲ್ಲದ ಮಾತು. ವೃತ್ತಿನಿರತರಾದ ಆಜೀವಕರ ಗುರಿಯ ದುಡಿಮೆಯೂ ತಮ್ಮ ಜೀವಿಕೆಗೆ ಮಾತ್ರವಾಗದೆ ಸಕಲರ ಏಳಿಗೆಗಾಗಿಯೂ ಇದ್ದದ್ದು. ಶಿವಶರಣರ ಕಾಯಕದ ಗುರಿ ದಾಸೋಹ ತತ್ತ್ವವೇ ಆಗಿದ್ದುದು ಸುಸ್ಪಷ್ಟವಿದೆ.

ಆಜೀವಕಮತ ಪ್ರಸಾರದ ಕೇಂದ್ರಸ್ಥಾನ ಕುಂಬಾರಗೇರಿಯಾಗಿದ್ದುದನ್ನು ಸ್ಮರಿಸಿದಾಗ ಕಾಯಕದೊಡನೆ ಧಾರ್ಮಿಕಾಚರಣೆ ಗೋಸಾಲನ ಕಾಲದಿಂದಲೇ ಪ್ರಾರಂಭವಾಗಿತ್ತೆಂಬುದರ ಸ್ಪಷ್ಟ ಸೂಚನೆ ನಮಗೆ ಕಂಡುಬರುತ್ತದೆ.

ಗುಪ್ತಗಾಮಿಯಾದ ಆ ಯುಗಪ್ರೇರಣೆಯ ಉಜ್ಜ್ವಲ ಪ್ರತಿಸ್ಪಂದನವೋ ಎಂಬಂತೆ ೧೨ನೆಯ ಶತಮಾನದ ವಚನಕಾರರ ವಚನಗಳು ಅವರ ಅಧ್ಯಾತ್ಮಿಕ ಸಾಧನೆಯ ಉಸಿರಾಗಿ, ಸ್ವಾನುಭವಸಂಪತ್ತಿನ ಸವಿಯಾಗಿ, ಲೋಕದಲ್ಲಿ ಎಲ್ಲೂ ಕಂಡುಬಾರದ ಅದ್ವಿತೀಯವಾದ ಸಾಹಿತ್ಯದ ಹೊನಲನ್ನೇ ಹರಿಸಿವೆ. ತುರುಗಾಹಿಯಾಗಲಿ, ಮಾದಾರನಾಗಲಿ, ಮೇದರನಾಗಲಿ, ಅಂಬಿಗನಾಗಲಿ, ಬಾಚಿಕಾಯಕದವನಾಗಲಿ, ಸೂಜಿಕಾಯಕದವನಾಗಲಿ ಯಾರೇ ಆಗಲಿ ಅವರ ವೃತ್ತಿಯೇ ಅವರ ತನುಜ್ಯೋತಿಯನ್ನು ಬೆಳಗುವ ತೈಲವರ್ತಿಯಾಯಿತು ಎಂದಬಳಿಕ ಆಜೀವಕಮತಧರ್ಮವು ಜಗದ್ಗುರುಗಳಾದ ಶೂನ್ಯಸಿಂಹಾಸನಾಧೀಶ್ವರರ ಪರಂಪರೆಯನ್ನೇ ಹೊಂದಿ ಇಂದೂ ತಲೆಯೆತ್ತಿಕೊಂಡಿರುವುದನ್ನು ಕಾಣಬಹುದು.

VII

ಗೋಸಾಲನ ತಂದೆಯ ಹೆಸರು ಮಂಖಲಿ. ಆತನು ಚಿತ್ರಪಟಗಳನ್ನು ಊರೂರುಗಳಲ್ಲಿ ಪ್ರದರ್ಶಿಸುತ್ತ ಸಂಚರಿಸುತ್ತಿದ್ದವನು. ಒಮ್ಮೆ ಪತ್ನೀಸಮೇತ 'ಸರ್ವನ' ಎಂಬಲ್ಲಿಗೆ ಬಂದು ಆತನು ಗೋಬಹುಲನೆಂಬ ಶ್ರೀಮಂತ ಬ್ರಾಹ್ಮಣನ ಗೋಶಾಲೆಯಲ್ಲಿ ಮನೆಮಾಡಿಕೊಂಡಿದ್ದಾಗ ಅಲ್ಲಿ ಹುಟ್ಟಿದವನೆಂಬ ಕಾರಣ ಗೋಶಾಲನೆಂಬ ಹೆಸರುಗೊಂಡಂತೆ ಜನಪ್ರತೀತಿ. ಗೋಸಾಲ ಗುರೂತ್ತಮನ ಈ ಜನ್ಮವೃತ್ತಾಂತದ ಗೋಸಂಬಂಧದ ರಹಸ್ಯಸೂಚಿಯೋ ಎಂಬಂತೆ ತೋಂಟದ ಸಿದ್ಧಲಿಂಗೇಶ್ವರರು ತಪಸ್ಸಿಗೆ ಕುಳಿತಾಗ ಅವರ ಮೈಮೇಲೆ ಬೆಳೆದ ಹುತ್ತದ ಬಾಯಿಗೆ ಗೋವೊಂದು ಬಂದು ಪ್ರತಿದಿನವೂ ಸೊರೆಬಿಡುತ್ತಿದ್ದಿತೆಂಬ ಕಥೆಯಿರುವುದು ಅವರ ತಪಃಪ್ರಭಾವವಾದರೂ ಕಾಕತಾಳೀಯ ಸಂಬಂಧವೋ ಎಂಬಂತಿದೆ.

ಗೋಸಾಲನು ತಾನು ಹಿಂದೆ ಎತ್ತಿದ ಏಳುಜನ್ಮಗಳ ಸ್ಮರಣೆಯ ಇಂಗಿತವೇನೆಂಬುದು ಅರ್ಥವಾಗದೆಂದು ಅಭಿಪ್ರಾಯಪಡುತ್ತ ತಮ್ಮ ಮನದ ಕೊರತೆಯನ್ನು ತೋಡಿಕೊಂಡರೂ ಆ ಸಮಸ್ಯೆಯ ಆಳವಾದ ಅಭ್ಯಾಸದಿಂದ ಒಳ್ಳೆಯ ಫಲಿತಾಂಶವು ದೊರಕಬಹುದೆಂಬ ಆಶೋತ್ತರವನ್ನೂ ವಿದ್ವಾಂಸರು ವ್ಯಕ್ತಪಡಿಸಿರುವುದುಂಟು. ಮಹಾವೀರನೊಡನೆ ವಾಗ್ವಾದದಲ್ಲಿ ತೊಡಗಿದಾಗ ತಾನು ಹಿಂದೆ 'ಉದಾಯಿ'ಯಾಗಿ ಜನಿಸಿ, 'ಅಜ್ಜುನ'ದೇಹ ತಾಳಿ ಕಡೆಯ ಏಳನೆಯ ಜನ್ಮದಲ್ಲಿ ಈಗಿನ ಗೋಸಾಲದೇಹಧಾರಿಯಾಗಿರುವುದಾಗಿ ಹೇಳಿಕೊಂಡನೆಂದೂ ಅಲ್ಲದೆ ಈ ಕಡೆಯ ಜನ್ಮದಲ್ಲಿ ಸರ್ವಜ್ಞತ್ವವನ್ನು ಹೊಂದಿರುವುದಾಗಿ ಪ್ರಕಟಿಸಿದನೆಂದೂ ತಿಳಿದುಬರುತ್ತದೆ.

ಕನ್ನಡ ನಾಡಿನ ಪ್ರಸಿದ್ಧ ಕಾವ್ಯಗಳಲ್ಲಿ ಚಿತ್ರಿತರಾಗಿರುವ ಬಸವಣ್ಣ, ಅಲ್ಲಮಪ್ರಭು ಮೊದಲಾದ ಶಿವಶರಣರ ಕಥನಗಳಲ್ಲಿ ಅವರ ಪೂರ್ವಸಂಗತಿಗಳನ್ನು ಕೈಲಾಸದಿಂದ ಪ್ರಾರಂಭಿಸುವಾಗ ಅಲ್ಲಿನ ಹೆಸರುಗಳನ್ನು ಹೇಳಿ ಭೂಲೋಕಕ್ಕೆ ಅವತರಿಸುವಂತಾದ ಸಂದರ್ಭದ ವಿವರಣೆಯನ್ನು ಕೊಡುವುದುಂಟಷ್ಟೆ. ಅಲ್ಲದೆ ಬಸವಣ್ಣ, ಅಲ್ಲಮಪ್ರಭು ಮೊದಲಾದ ವಚನಕಾರರ ವಚನಗಳಲ್ಲಿ ತಮ್ಮ ಜನ್ಮ ವೃತ್ತಾಂತಗಳನ್ನು ಹೇಳಿಕೊಂಡಿರುವುದನ್ನು ಕಾಣುತ್ತೇವೆ. ಕ್ರಿಸ್ತಪೂರ್ವದ ಬಹು ಪ್ರಾಚೀನಕಾಲದ ಮತಪ್ರವರ್ತಕ ಗುರೂತ್ತಮನ ಪೂರ್ವಭವಗಳ ಆತ್ಮವೃತ್ತಾಂತದ ಸಂವಾದಿನಿರೂಪಣೆಯೋ ಎಂಬಂತೆ ೧೨ನೆಯ ಶತಮಾನದ ಶೂನ್ಯಪೀಠಾಧಿಪತಿಗಳಾದ ಪ್ರಭುದೇವರು ಮೂಲಜ್ಞಾನದಿಂದ ತಮ್ಮ ಪೂರ್ವಾಪರ ಸಂಬಂಧವನ್ನು ವಿವೇಕಿಸಿ ಅರಿತು ನಾಲ್ಕು ಯುಗಗಳಲ್ಲೂ ಭೂಲೋಕದಲ್ಲಿ ಚರಿಸಿ ಬಂದ ವೃತ್ತಾಂತವನ್ನು ನಿರೂಪಿಸಿರುವುದನ್ನು ಅವರ ಈ ವಚನದಲ್ಲಿ ಕಾಣಬಹುದು :

> ಕೃತಯುಗದಲ್ಲಿ ನಾನು ಭಕ್ತಿಕಾರಣ ಸ್ಥೂಲಕಾಯನೆಂಬ ಗಣೇಶ್ವರನಾಗಿದ್ದೆನಯ್ಯಾ
> ತ್ರೇತಾಯುಗದಲ್ಲಿ ನಾನು ಭಕ್ತಿಕಾರಣ ಶೂನ್ಯಕಾಯನೆಂಬ ಗಣೇಶ್ವರನಾಗಿದ್ದೆನಯ್ಯಾ
> ದ್ವಾಪರಯುಗದಲ್ಲಿ ನಾನು ಭಕ್ತಿಕಾರಣ ಅನಿಮಿಷನೆಂಬ ಗಣೇಶ್ವರನಾಗಿದ್ದೇನಯ್ಯಾ
> ಕಲಿಯುಗದಲ್ಲಿ ಭಕ್ತಿಕಾರಣ ಅಲ್ಲಮಪ್ರಭುವೆಂಬ ಗಣೇಶ್ವರನಾಗಿ ಗೋಗೇಶ್ವರನಟ್ಟಿದ * ಮಣಿಹದಲ್ಲಿ
> ತದುಗತನಾಗಿರ್ದೆನಯ್ಯಾ. — **ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ ೬** (*ವೃತ್ತಿ, ಉದ್ಯೋಗ)

ಶೂನ್ಯಪೀಠಾಧೀಶ್ವರರ ಈ ಯುಗಾಂತರಪ್ರಜ್ಞೆಯು ಆತ್ಮಸಿದ್ಧಿಯ ಅಂತಃಸೂತ್ರವಾಗಿ ಪರಂಪರಾಗತವಾಗಿ ಬಂದ ಅಂತಃಪ್ರಮಾಣವೆಂಬುದನ್ನು ಒಳಹೊಕ್ಕು ನೋಡಿದಾಗ ಮನಗಾಣಬಹುದಾಗಿದೆ. ಕ್ರಿ.ಪೂ. ೬ನೇ ಶತಮಾನದ ಜೈನ ಸಾಹಿತ್ಯದಲ್ಲಿ ನಿರೂಪಿಸಿರುವ ನಾಲ್ಕು ದಾರ್ಶನಿಕ ಪಂಥಗಳಲ್ಲಿನ ವಿನಯವಾದವು ಹನ್ನೆರಡನೆಯ ಶತಮಾನದ ಶಿವಶರಣರಿಗೂ ಹಾಗೂ ಧರ್ಮಪ್ರತಿಪಾಲಕರೂ ನಯವಿನಯವಿದ್ಯರೂ ಆದ ಮುಮ್ಮುರಿದಂಡಂಗಳಿಗೂ ಬಳುವಳಿಯಾಗಿ ಬಂದಿತೋ ಎಂಬಂತೆ ಅವರ ಶರಣು ಶರಣಾರ್ಥಿ ಭಾವದ ನಡೆನುಡಿಯ ನೆನಪಾಗುತ್ತದೆ.

VIII

'ಶಿವನಿಗಿಂತ ಶಿವಶರಣರೇ ಅಧಿಕ' ಎಂಬ ದೃಢಮತವು ವಚನಕಾರರ ವಚನಗಳಲ್ಲಿಯೂ ಷಟ್‌ಸ್ಥಲಸಿದ್ಧಾಂತ ಪ್ರತಿಪಾದಕ ಧರ್ಮಾಚರಣೆಯ ಗ್ರಂಥಗಳಲ್ಲಿಯೂ ಪ್ರಕಟಗೊಂಡಿರುವುದುಂಟು. ಶಿವಸನ್ನದ್ಧರ ಶಿವಯೋಗ ಸಮಾಧಿಯ ಗದ್ದುಗೆಗಳ ನಿತ್ಯಾರಾಧನೆಯ ಪದ್ಧತಿಯು ಈ ವರೆಗೂ ನಡೆದುಕೊಂಡು ಬಂದಿರುವುದಕ್ಕೆ ನಿದರ್ಶನಗಳ ಅಗತ್ಯವಿಲ್ಲ. ಎಡೆಯೂರ ಸ್ವಾಮಿಮಠದಲ್ಲಿನ ಆರಾಧಕವರ್ಗವನ್ನು 'ಆರಿಗವರ್ಗ'ವೆಂದು ಶಿಲಾಶಾಸನದಲ್ಲಿ ಕರೆದಿರುವುದನ್ನು ನೋಡಬಹುದು. ಜೈನರಲ್ಲಿಯೂ ಮೋಕ್ಷವನ್ನು ಪಡೆದ ಚೈತನ್ಯಾತ್ಮರ, ಮುಕ್ತಜೀವರ ಸರ್ವಜ್ಞರೆಂದು ಆರಾಧಿಸಲ್ಪಡುವರೆಂಬುದನ್ನು ಬಲ್ಲೆವು.

'ಅರ'ಸಂಬಂಧವಾದದ್ದು 'ಆರ'(ಜೈನ) + ಗ (ಪ್ರೀತ/ಉತ್ತಮ). ಆರಗನೆಂದಲ್ಲಿ ಜೈನೋತ್ತಮ, ಉಜ್ಜೈನನೆಂಬ ಅರ್ಥದಲ್ಲಿ ಆ ಪದಪ್ರಯೋಗವಿದೆ. ಅರನಾಥ - ಹದಿನೆಂಟನೆಯ ತೀರ್ಥಂಕರನ - ಸಂಬಂಧವಾದ ಜಿನಧರ್ಮದಲ್ಲಿ ಪ್ರೀತನಾದವನೇ 'ಆರಗ.' ಆ 'ಅರ'ಧರ್ಮದಲ್ಲಿ 'ಇಗ'ವರ್ತಿಸುವವನೇ 'ಆರಿಗ'ವರ್ಗಕ್ಕೆ ಸೇರಿದವನು ಎಂಬುದಕ್ಕೆ ಆ ಶಾಸನದ ಈ ಪದಪ್ರಯೋಗವೇ ಪ್ರಮಾಣ. ಜೈನ-ವೀರಶೈವ ಸಮಯ ಸಮಾಗಮದ ಪೂಜಾಚರಣೆಯ ಸಂಬಂಧ ಸೂಚಕವಾದ ವೀರಶೈವ ಪಾರಿಭಾಷಿಕಪದ 'ಆರಿಗ'ವೆಂಬುದು ಇಲ್ಲಿ ಶ್ರುತಪಟ್ಟಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಿಂದೆ ಜೈನರ ನೆಲೆಗಳಲ್ಲಿ ಒಂದಾಗಿದ್ದ ಊರಿನ ಹೆಸರು ಕೂಡ'ಆರಗ' ಆಗಿರುವುದನ್ನು ಈ ಸಮಯದಲ್ಲಿ (ಕ.ಗ್ರಾ.ಸೂ. 'ಅರಗ'[೫೦] ಎಂಬುದು ತಿದ್ದುಪಡಿಗೊಳ್ಳಬೇಕು ಎಂದೂ) ಗಮನಿಸುವುದಗತ್ಯ.

ಮಹಮೂರ್ತಿವಿರಚಿತ[೫೧] 'ಅಷ್ಟಾವರಣತಿಲಕ'(ಆಡಿಟಿ: ೬-೩) ವೆಂಬ ಗ್ರಂಥದ ಬಗೆಗೆ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪ್ರಸಾದ, "ಪ್ರದೋದಕ"ಗಳ ಮಹತ್ತ್ವವನ್ನು ಪೂರ್ವದಲ್ಲಿ ಜೈನರಲ್ಲಿ ಕೆಲವರು, ವೀರಶೈವರಲ್ಲಿ ಕೆಲವರು ಅವುಗಳ ಆಚರಣೆಯ ಸಾಧನೆಯಿಂದ ಪ್ರಕಟಿಸಿರುವರು. ರಾಜರು, ರಾಜಬಂಧುಗಳು ಆಚರಿಸಿಕೊಂಡು ಬಂದ ಈ ಆಚರಣೆ ವಿಚಿತ್ರಮೂಲವನ್ನುಳ್ಳದ್ದೆಂದು ಹೇಳಿರುವುದಂತೂ ಅಷ್ಟಾವರಣದ ಬೇರು ವಿಚಿತ್ರಚರಿತ್ರನೆಂದು ಪ್ರಸಿದ್ಧನಾದ ಗುರುಗೋಸಾಲನ ಕಾಲದಷ್ಟೇ ಪ್ರಾಚೀನವಾದುದೆಂಬುದನ್ನು ಗೋಚರಿಸುವಂತೆ ಮಾಡಿದೆ. ಜೈನ ವೀರಶೈವರು ಕೆಲವರ ಆಚರಣೆಯಲ್ಲಿ ಕಂಡುಬಂದ ಈ ಏಕರೂಪತೆ ಉಭಯಧರ್ಮಗಳ ಸಮಾಗಮವನ್ನು ದೃಢವಾಗಿ ಎತ್ತಿಹಿಡಿದಂತಾಗಿದೆ.

IX

ಹರದನಹಳ್ಳಿಯಲ್ಲಿ ಗೋಸಲದೇವರು ಶೂನ್ಯಪೀಠಾಧೀಶ್ವರರಾಗಿ ಶತಪವಾಡ ಮಹಾತ್ಮರೆಂದು ಪ್ರಖ್ಯಾತರಾಗಿದ್ದ ರೆಂಬುದನ್ನು ತಿಳಿದಿದ್ದೇವೆ. ಅಣೆಲೇಶ್ವರ ದೇವಾಲಯದ ನಿರ್ಮಾಣದ (ಕ್ರಿ.ಶ.1317)ರ ವೇಳೆಗೆ ಜಗದ್ಗುರುಮಠವೂ ಗುರುಗಳಿಗೆ ಒಪ್ಪಿಸಿದ ಸಂಗತಿಯೂ ತಿಳಿದುಬಂದಿದ್ದೆ. ಹೊಯ್ಸಳ ರಾಜನು ಶಾಸನಧರ್ಮವನ್ನು ಮಾಡಿದ ಆ ತಾರಣ ಸಂವತ್ಸರ (ಕ್ರಿ.ಶ. 1344)ದ ಆ ಅನಂತರ ಬಹುಶಃ ಸ್ವಲ್ಪಕಾಲ ಹರದನಹಳ್ಳಿಯಲ್ಲಿಯೇ ಇದ್ದು ಬಳಿಕ ಆ ಅಮೃತೇಶ್ವರ ಲಿಂಗಕ್ಕೆ ನೇಮಿಸಿದ ಕ್ರಿಯಾಮೂರ್ತಿಗಳಾದ ಶಂಕರಾಚಾರ್ಯ ಸ್ವಾಮಿಗಳಿಗೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಮಾಡಿ 101 ಷಟ್‌ಸ್ಥಲಬ್ರಹ್ಮಿಗಳಾದ ವಿರಕ್ತಮೂರ್ತಿಗಳೊಡನೆ ಅಲ್ಲಿಂದ ದೇಶಾಟನ ಹೊರಟು ಶಿವಗಂಗಾ ಕ್ಷೇತ್ರಕ್ಕೆ ಆಗಮಿಸಿದರು. ಅರುವತ್ತು ಮೂವರು ಪುರಾತನ, ಏಕಾದಶರುದ್ರರ ಪೂಜಾರಾಧನೆ ಮಾಡಿಸಿ ತುಮಕೂರು ಬಳಿಯ ಬೆಟ್ಟದಲ್ಲಿ ಒಂದು ಮಠವನ್ನು ಕಟ್ಟಿಸಿಕೊಂಡು ತಮ್ಮ ಗಣಂಗಳಿಗೆ ಗುಹೆಗಳನ್ನು ತೆಗೆಯಿಸಿ ಲಿಂಗಪೂಜಾನಿಷ್ಠೆಯ ಶಿವಯೋಗದಲ್ಲಿ ನಿರತರಾಗುವುದಕ್ಕೆ ಅಣಿಗೊಳಿಸಿಕೊಟ್ಟ ಸಂಗತಿ ಪ್ರಸಿದ್ಧವೇ ಆಗಿದೆ. ಶಿವಯೋಗಸಿದ್ಧರಾದ ಅವರ ಮೊಣಕಾಲ ಹೊಡೆತಕ್ಕೆ ಬಂಡೆಯ ಪಡೆ ಬಿರಿದು ಉದ್ಭವಿಸಿದ ಗಂಗೆಯ ಕಾರಣ 'ಸಿದ್ಧಗಂಗೆ' ಎನಿಸಿದ ಈ ಬೆಟ್ಟ ಆ ಶೂನ್ಯಪೀಠಾಧಿಪತಿಗಳ ತಪೋಭೂಮಿಯಾಗಿ ಮೆರೆದಿದೆ.

ಆ ಪರಂಪರೆಯಲ್ಲಿ ಇಪ್ಪತ್ತನೆಯ ಶತಮಾನದ ಶಿವಸ್ವರೂಪಿಗಳಾಗಿ ತೊಳಗಿಬೆಳಗಿ ಕನ್ನಡ ನಾಡಿನ ಉದ್ದಗಲಕ್ಕೂ ಸಂಚರಿಸಿ ಧರ್ಮಜಾಗ್ರತಿಯನ್ನು ಮೂಡಿಸಿದ ಹಿಂದಿನ ಹಾಗೂ ಇಂದಿನ ವೀರವಿರಕ್ತಾಗ್ರಗಣ್ಯರ .ಪಂಕ್ತಿಯಲ್ಲಿಯೂ ಜೀವದಯೆ, ಲೋಕೋದ್ಧಾರಕ ಕಾಯಕ ಹಾಗೂ ದಾಸೋಹ ತತ್ತ್ವದ ಸಾಕಾರಮೂರ್ತಿಗಳ ವಿರಳ ಪಂಕ್ತಿಯಲ್ಲಿಯೂ ಅಗ್ರಮಾನ್ಯರೆನಿಸಿರುವ ಪರಮಪೂಜ್ಯ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶಿವಕುಮಾರಸ್ವಾಮಿಗಳವರ ನಿರಂತರವಾದ ತಪಃಸಿದ್ಧಿಯ ಫಲವಾಗಿ ಪರಮ ಪವಿತ್ರವಾದ ಈ ಕ್ಷೇತ್ರವು ಜ್ಞಾನ, ದಾನ, ಜೀವದಯಾ ಧರ್ಮಗಳ ನಿಜನಿವಾಸವಾಗಿರುವುದು

ನಾಡಿಗೆ, ಇಡೀ ರಾಷ್ಟ್ರಕ್ಕೆ ಹೆಮ್ಮೆಯನ್ನು ತರುವ ಸಂಗತಿ. ಶ್ರೀಶ್ರೀಶ್ರೀಗಳವರ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಸಿದ್ಧಿ ಅಸಾಧಾರಣ, ಅನುಪಮ, ಅಷ್ಟೇ ಅಲ್ಲ ಅದೊಂದು ಪವಾಡವೇ ಎಂಬುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ವಿಶ್ವವ್ಯಾಪಿಯಾದ ಅನಾದಿ ಸಂಸಿದ್ಧಚೈತನ್ಯಪ್ರವಾಹವೇ ತಾವಾಗಿ ಮೆರೆದ ಗೋಸಲಸಿದ್ಧೇಶ್ವರರು ಶಿವಯೋಗಸಮಾಧಿಯಲ್ಲಿ ಇಂದಿಗೂ ನೆಲಸಿದ ಈ ತಪೋಭೂಮಿ ಒಂದು ಜಾಗ್ರತಸ್ಥಾನ. ಅವರ ಪ್ರಶಿಷ್ಯರ ಶಿಷ್ಯರಾದ ಗೋಸಲ ಚೆನ್ನಬಸವೇಶ್ವರರೂ ಅವರ ಕಾರುಣ್ಯದ ಶಿಶುವಾಗಿ ನಿರಂಜನ ಜಗದ್ಗುರುಗಳಾದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಸಹ ಇಲ್ಲಿ ಶಿವಯೋಗಾನಂದದ ಸುಖದಿಂದ ಇದ್ದು, ಬಂದ ಭಕ್ತರನ್ನು ಭಕ್ತಿಕಂಪಭರಿತರನ್ನಾಗಿ ಮಾಡಿ ಅವರ ಬಾಳನ್ನು ಶಿವಭಾವದೀಪ್ತಿಯಿಂದ ಬೆಳಗುವಂತೆ ಮಾಡಿದುದೇ ಈ ಕ್ಷೇತ್ರದ ಹಿರಿಮೆಗೆ ಕಾರಣ. ಅದರ ಅರಿವೇ ಆನಂದದ ಒಂದು ಚಿಲುಮೆ.

ಅನುಬಂಧ 1

Exhibit 'A' is a deed of gift on copper plate[1] by the Emperor Prataapa Chakravarthy, Hoysala Veera Ballaala Devaru to Srimad Gosalaryavarya Swami. The Document recites among other things "We have established the following Mutts and allotted the five Lingas as follows....Vanijyapuri Mutt for Bandesavara." These five Lingas are allotted respectively. We have assigned to these Mutts the function of giving Linga. Theertha, Prasaada to the tammadis, disciples and beda kampanas (Hill tribes) attached to the respective temples receiving from them kattu kaanikais (fixed money presents) and of getting conducted all the affairs of those temples. We have delegated the Head of this Vanijyapuri Mutt the duty of exercising supervision over the Lineage of pattakaara Rayappa Nayakar. Thambadis and Shishyas of Bandesvara and the groups known as Hindi Ramana gumpu, BElekoota, Donne koota, Gubrina koota and Menda gudli paalu, kerane paalu, vokkalus (devotees) of ShivanankEsvara exercising supervision over these temples. This document shows that there were five important Lingas, whose devotees were Thambadis and hill tribes belonging to the five main kootaas (groups). These groups of people are not mythical personages but are admitted to be in existence by the first defendant himself in the injuction petition and enquiry. They belong to Devanmalai and its sourrounding and are the devotees of BandEsvara. There is no other BandEsvara according to the admission of D.W.I.

This Vaanijya Puri Mutt have been given the supervision over the temple of BandEsvara and its festivals and functions. That this Vaanijya Puri Mutt is the Haradana Halli Mutt, is proved by the ref. at 23 ch ii of the book SiddalingEsvara Vijayam written by Shivappa Sastri., published in 1912 and the suit temple is one of the temples referred to in the copper plate grant is shown not only by the admi.....just now referred to, [but also] by various other facts....[2]

This Pattagaara Nayakar is even now doing Hogli [VOkali] SEvaas and deciding caste disputes. ....

We have to bear in mind that dissimilarity in 'Saka year and Cyclic Year' is common and it is undisputed fact that Veera Ballala the IV was the king in taarana Year and he is said to have stemmed the tide of M.... Conqest. This will be found in Rice's Mysore--Coorg.

ಖಿಂ ವಿದ್ವಾಂಸರ ಗಮನಕ್ಕೆ : "1-1 ಗೋಸಾಲಾರ್ಯರೆಂಬ ಶಿವಶರಣರಿಗೆ "ಶ್ರೀ ಪ್ರತಾಪ ಚಕ್ರವರ್ತಿ ಹೊಯ್ಸಳ ಬಲ್ಲಾಳ ದೇವರು ಶಾಲಿವಾಹನ ಶಕೆ 1246 (ಕ್ರಿ.ಶ. 1324) ತಾರಣ ಸಂವತ್ಸರದಲ್ಲಿ" ಬರೆಸಿಕೊಟ್ಟ ಶಾಸನವಿದೆ. ಆದರೆ ಅದು ಕೃತಕವಾಗಿರಬೇಕೆಂದು ಶಾಸನದ ಇಲಾಖೆಯವರು ಊಹಿಸಿದ್ದಾರೆ (M.A.R. 1930).1"--ಸಂಶೋಧನ ಸಂಪುಟ - 1984 ಪು.೬೨ರ ಅಡಿಟಿಪ್ಪಣಿ.

ಈ ಟಿಪ್ಪಣಿಯನ್ನು ನೋಡಿದರೆ ಮೈಸೂರು ಸಂಸ್ಥಾನದ ನ್ಯಾಯಾಲಯದಯಲ್ಲಿ ಹೂಡಿದ್ದ ಕಟ್ಟಳೆಯಲ್ಲಿ ಈ ಶಾಸನೋಲ್ಲೇಖದ ಪ್ರಾಮಾಣಿಕತೆಯ ಬಗೆಗೆ ಆದ ತೀರ್ಪು ಲೇಖಕರ ಗಮನಕ್ಕೆ ಬಂದಿರಲಾರದು ಎಂದು ಭಾವಿಸಿ, ಶಾಸನದ ಬಗೆಗೆ ವ್ಯಕ್ತಪಡಿಸಿದ ಟಿಪ್ಪಣಿಯ'ಊಹೆ'ಯ ಒಡಕು ಮಾತು ನಿಂತುಬಿಟ್ಟರೆ ಐತಿಹಾಸಿಕ ಸಂಗತಿಗೆ ಅಪಚಾರವಾದೀತೆಂದು ಶಂಕಿಸಿ ಈ ಅನುಬಂಧವನ್ನು ಇಲ್ಲಿ ಕೊಡಲಾಗಿದೆ. ಚಾಮರಾಜನಗರದ ಕಡೆ ಪ್ರಯಾಣದಲ್ಲಿದ್ದಾಗ ನನ್ನ ದೃಷ್ಟಿಗೆ ಬಿದ್ದ ಶಾಸನ ಹಾಗೂ ಅದನ್ನು ಪರೀಶೀಲಿಸಿ ನೀಡಿದ್ದ ನ್ಯಾಯಾಲಯದ ತೀರ್ಪನ್ನು ಎಷ್ಟು ಸಾಧ್ಯವೋ ಅಷ್ಟನ್ನು, ಬಹಳ ವರ್ಷಗಳ ಹಿಂದೆ

ಆ ವೇಳೆಗೆ ಗುರುತುಹಾಕಿದ್ದನ್ನು, ಮತ್ತೊಮ್ಮೆ ತಾಳೆ ನೋಡಲವಕಾಶವಿಲ್ಲದ್ದರಿಂದ, ಅದಿರುವಂತೆ ಇಲ್ಲಿ ಗಮನಕ್ಕೆ ತರಲಾಗಿದೆ.

2 ಪಟ್ಟಗಾರ ರಾಯಪ್ಪನ ವಂಶಸ್ಥರು ಬರಗೂರಿನಲ್ಲಿದ್ದಾರೆ ಎಂಬುದರ ಪರಿಶೀಲನೆ ಇಲ್ಲಿ ಆಗಿದೆ.

* * * * *

ಅಡಿಟಿಪ್ಪಣಿ-೧

-೧ ಬಂದಿತ್ತು ದಿನ ಬಸವಣ್ಣ ಕಲ್ಲಿಗೆ ಚೆನ್ನಬಸವಣ್ಣ ಉಳುವೆಯಲ್ಲಿಗೆ ಪ್ರಭು ಅಕ್ಕ ಕದಳಿ ದ್ವಾರಕ್ಕೆ ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ....। ವಚನ ೪೫ : ತುರುಗಾಹಿ ರಾಮಣ್ಣ.

"ತ್ರಿಕೂಟಗಿರಿಯೊಳಗೊಂದು ಕದಳಿಯುಂಟು ನೋಡಾ.
ಆ ಕದಳಿಯ ತಿಳಿದು ಅಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ" – ಅಲ್ಲಮಪ್ರಭು

೧ ವಡ (-ದೃ)- ವಾಟ- (ಸಂ) ಎ ಗಾರ್ಡನ್-ತೋಂಟ.

೨ ಅಶೋಕನ ಶಾಸನಗಳು ವಯಸ್ಕರ ಶಿಕ್ಷಣಸಮಿತಿ ಪ್ರಕಟನೆ : ಪು. 45

೩ ಜೈನ ಲಿಟರೇಚರ್ ಇನ್ ತಮಿಳ್ ಪು. ೬೧ ಪ್ರೊ. ಎ. ಚಕ್ರವರ್ತಿ. ತಮಿಳ್ ವಿದ್ವಾಂಸರು.

೪ ಬಳ್ಳಿಗಾವೆ-ಪ್ರಭುದೇವರ ಜನ್ಮಸ್ಥಳ ಹಾಗೂ ಶಿರಾಳಕೊಪ್ಪಗಳನ್ನು ಇಲ್ಲಿ ಸ್ಮರಿಸಬಹುದು.

೫ ನಿರಂಜನವಂಶ ರತ್ನಾಕರ-೨ನೆಯ ಭಾಗ ಪು ೧-೨ ಸದ್ಧರ್ಮದೀಪಿಕೆ ಸಂ.೨೭-೨೮

೬ "ಇವನು ಸ್ಥಾಪಿಸಿದ ಆಜೀವಕಸಂಪ್ರದಾಯದ ಉಲ್ಲೇಖವು ಜೈನ, ಬೌದ್ಧ ಸಾಹಿತ್ಯದಲ್ಲಿ ಬಹಳಕಡೆ ಬರುವುದು. ಈ ಸಂಪ್ರದಾಯದ ಶಾಸ್ತ್ರ ಹಾಗೂ ಸಿದ್ಧಾಂತಗಳು ಜೈನ ಆಗಮಗಳಿಗೆ ಬಹಳ ನಿಕಟವರ್ತಿಯಾಗಿವೆ. ದೃಷ್ಟಿಕೋಣದಲ್ಲಿ ಸ್ವಲ್ಪ ಅಂತರವಿದೆ. ಭೂಮಿಕೆಯು ಜೈನ ಅಜೀವಕ ಸಂಪ್ರದಾಯಗಳಿಗೆ ಒಂದೇ ಆಗಿರುವುದರಿಂದ ಮುಂದಿನ ಕಾಲದಲ್ಲಿ ಅಜೀವಿಕ ಸಂಪ್ರದಾಯದ ಗ್ರಂಥಗಳನ್ನು ಜೈನಾಗಮಗಳು ಸಂಗ್ರಹಿಸಿಕೊಂಡುಬಿಟ್ಟುವು. ಇಷ್ಟೇ ಅಲ್ಲ, ಅಜೀವಿಕ ಸಮಾಜವು ಜೈನ ಸಮಾಜದಲ್ಲಿ ಸೇರಿಹೋಗಿಬಿಟ್ಟಿತು."
- ಜೈನಧರ್ಮ ಪು. 156. ೬*ತೀರ್ಥಂಕರ ಮಹಾವೀರ - ಪು. 24. ಮಿರ್ಜಿ ಅಣ್ಣಾರಾಯ.

-೨ "ಶೈವ-ಶ್ರವಣ ಸಂಸ್ಕೃತಿಗಳ ಸಮ್ಮೇಳನ" ಶ್ರೀ ಮಿರ್ಜಿ ಅಣ್ಣಾರಾಯರ ಈ ಲೇಖನಕ್ಕೆ ಶರಣ ಸಾಹಿತ್ಯದ ಸಂಪಾದಕರು ತಮ್ಮ ಆ ಲೇಖನದ ಪೀಠಿಕೆಯಲ್ಲಿ "ಉಡುಪಿಯಲ್ಲಿರುವ ಲಿಂಗಾಯತರ ಮಠಕ್ಕೆ 'ಜೈನ ಜಂಗಮ ಮಠ' ಎಂದು ಹೆಸರು ಎಂದಿದ್ದಾರೆ ಎಂಬುದನ್ನು ಗಮನಿಸಬಹುದು. ನೋ : ಶ.ಸಾ. ಸಂ. ೧೭ ಸಂ. ೧೦ ಪು ೪೫. ನೋ : ಜೈನ-ವೀರಶೈವ ಸಮಯ ಸಮಾಗಮ-ಪ್ರೊ. ಸಿ. ಮಹಾದೇವಪ್ಪ : 'ವಿಚಾರಾಮೃತ' - ಕಲ್ಪಶ್ರೀ ತುಮಕೂರು ಜಿಲ್ಲಾ ಉತ್ಸವ 1993. ಪು. 39-41.

-೩ 'ಅಷ್ಟಾವರಣ ತಿಲಕ' ವಿಷಯ : ನವಿಲಪುರದರಸು ದೇವರಾಜನನ್ನು ಆತನ ಪತ್ನಿ ಮಧುಮಾಣೆಯು ಅಷ್ಟಾವರಣವನ್ನು ಬೋಧಿಸಿ ಲಿಂಗಧಾರಣೆ ಮಾಡಿಸಿದ ಕಥೆ. ಕರ್ತೃ : ಪೊಡವಿಡಿಯ ಮಹಮೂರ್ತಿ, ಆದಿ : ಯೀ ಗ್ರಂಥ ವೀರಶೈವ ಮತಸ್ಥುಲೈನ । ಜಂಗಾಲ ಅಷ್ಟಾವರ್ಣಾಲು ಅಂಟೆ । ೧ ಗುರು ೨ನೆ ಲಿಂಗಂ ೩ ನೆ ಜಂಗಂ ೪ ನೆ ವಿಭೂತಿ । ೫ ನೆ ರುದ್ರಾಕ್ಷಿ । ೬ ನೆ ಪಂಚಾಕ್ಷರಿ ಮಂತ್ರ । ೭ ನೆ ಪ್ರದೋದಕಂ ೮ ನೆ ಪ್ರಸಾದಂ ಯಿವಿ ಅಷ್ಟವರ್ಣಾತಿಲಕಂ ಯಿೂ ವರ್ಣಾಲ ಮಹಾತ್ಮ್ಯಂ ಮುಂನೂ ಜೈನುಲು ಕೊಂನು । ವೀರಶೈವ ಮತಸ್ಥುಲು ಕೊಂನು । ನಡಿಚಿನ ಖಿರ್ವಣಾಮು ಯಿಂನು ಕೊಂತಮಂದಿ ರಾಜುಲು ರಾಜಲೀಕಂಲೋ ನಡಚಿನ ವಿಚಿತ್ರಮೂಲಂ ನೂವುಂನವಿ. ಯಿೂ ಗ್ರಂಥಂ ಹಳೆಕನ್ನಡಂ ವಾರ್ಧಿಕ ಪದಮುತೋ ವುಂದಿ । ಶುಭಮಸ್ತು ॥ ನೋ: ಕ.ಹ.ವ.ಸೂಚೀ. ಸಂಪುಟ ೧ ಪು. ೧೧೫

– ೪ Selfishness is the only real atheism, aspiration, unselfishness, the only real religion - Zangwill.

೭ ಜೈನಧರ್ಮ ಪು. ೧೫೬

೮ ದೇವ ಧರ್ಮಾರ್ಥದಾ ವಿಶೇಷಜ್ಞ
ಸತ್ಕವಿ ಕಣಾ, ಋಷಿಕುಲೋದ್ಭವಂ - ಕವಿ ಮಲ್ಲಣಾರ್ಯ.

೯ ಷಟ್‌ಖಂಡಾಗಮ ಪು. ೧೪೭

೧೦ ಗಮನಿಸಿ : ಬೀದಿಯಲ್ಲಿ ಬಿದ್ದ ಮಾಣಿಕ್ಯವ, ಭೂಮಿಯಲ್ಲಿ ಹೂಣಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ ! ಮರಣವುಳ್ಳವರಿಗೆ ಮರುಜವಳಿಣಿಗೆ ಸಿಕ್ಕುವುದೆ? ಪಾಪಿಯ ಕಣ್ಣಿಗೆ ಪರುಷ ಕಲ್ಲಾಗಿ ಇಪ್ಪಂತೆ ಇಪ್ಪರಯ್ಯಾ ಶಿವಶರಣರು. ಗೋಗೇಶ್ವರಲಿಂಗವು ತಾನೆ ತ್ರೈವಿಧಜಂಗಮನೊಳಕೊಂಡು ನಿಂದ ಮಹಾಮಹಿಮ ಶರಣ ಮರುಳ ಶಂಕರದೇವರ ನಿಲವ ನೋಡಾ ! ಸಂಗನ ಬಸವಣ್ಣಾ.

೧೧ ಮೈಸೂರು ಹೊಸಮಠದ ಮುದ್ರಣ 1923; ಪ್ರಕರಣ 3 ಪದ್ಯ 31.

೧೨ (1) ನಿಜಲಿಂಗ-ಜಂಗಮದೇಕತೆಯ ಘನರೂಪು ಸದ್ಭಕ್ತಂ. ಶಾಂ.ಸಿ.ಪು. ೧೧-೧೮
(2) ಲಿಂಗ-ಜಂಗಮಮೇಕತ್ರಮನಾದಿ ಭಕ್ತ ಉಚ್ಯತೇ - ಅನಾದಿ ಭಕ್ತನ ಉದ್ಧರಣೆ ವಾಚ್ಯ. ಓಲೆ ೨೮

೧೩ 'ಆಕಾಶ ಆಕಾಶವ ಬೆರಸಲು ಜ್ಞಾನ ಪುಟ್ಟಿತ್ತು' : ತತ್ತ್ವ ಪಂಚೀಕರಣ ಉದ್ಧರಣೆ ವಾಚ್ಯ ಅದೇ ಓಲೆ ೭೫

೧೪ ನೋ : ಎ.ಕ. ವಾಲ್ಯೂಂ 12 ನಂ ೪೯

೧೫ ಶ್ರೀಮದ್ಗೋಸಲಾರ್ಯಯತಿ-ಪ್ರೊ. ಸಿ. ಮಹಾದೇವಪ್ಪ, ಕರ್ನಾಟಕ ಲೋಚನ ಸಂ. ೬ ಸಂ. ೨ ಡಿ. ೧೯೯೩. ಶ್ರೀಮದ್ಗೋಸಲಾರ್ಯ ಯತಿ "ಶತಪವಾಡ ಮಹಾತ್ಮರು" - ಸಿದ್ಧಲಿಂಗಪ್ರಕಾಶ 19.4.1994.

೧೬ "ಆರು ಹಿರಿಯರು" ಎಂಬ ಪದಪ್ರಯೋಗಕ್ಕೆ "ಧರೆಗಿರಿಯ ಮೇಲುಳ್ಳ ಆರು ಹಿರಿಯರೆಲ್ಲರನು" ಎಂಬ ಪ್ರಭುದೇವರ ವಚನಕ್ಕೆ ಶ್ಲೋಕ 338 ಪ್ರಭುಗೀತೆ ನೋಡಿ.
ಯೇ ಭೂಮೌ ಗಿರಿಗಹ್ವರೇ ಚ ನಿವಸಂತ್ಯಾರ್ಯಾ ಮಹಾಪೂರುಷಾ
ಸ್ತೇಷಾಂ ಮಧ್ಯತ ಉತ್ತರೋತ್ತರ ಗುಣೋತ್ಕೃಷ್ಟಂ ಪರೀಕ್ಷ್ಯ ಕ್ರಮಾತ್

ಪಶ್ಚಾತ್ತಸ್ಯ ಹೃದಂಬುಜೇ ಮಧುಕರೋ ಭೂತ್ವಾ ಸ್ವಯಂ ಸಂತತಂ
ತಿಷ್ಠತ್ಯಾತ್ಮತಯಾ ಕಿಮತ್ರ ಬಹುನಾ ನಿಶ್ಶಬ್ದಮಾತ್ರಃ ಶಿವಃ ॥

೧೭ "ಆಶಾಂಬರ ಶಂಭು" ಶಾ.ಸಿ. ಪು. ೧೪-೧೧
"ದಿಗಾಂಬರ ಸಿದ್ಧಲಿಂಗಸ್ವಾಮಿಗಳ ಪಾದವೇ ಗತಿ" - ವೀ.ಹ. ಪುಷ್ಪಿಕೆ : ಪು. 113

೧೮ "ಮುರತೀತಿ ಮುರಃ । ಮುರಶ್ಚರ್ಮವೇಷ್ಟನಂ ತದೇಷಾಂ ಅಸ್ತೀ ।
ಮುರಿಣಶ್ಚರ್ಮಶರೀರಿಣಃ । ಚರಾಚರ ಜೀವಿನಸ್ತಾನ್ ಗಚ್ಛತೀತಿ ಮುರಿಗಾ ।"
"ಮುರಿಗಾಖ್ಯ ಶೀಲವಾನ್" "ಮುರಿಗಾಖ್ಯ ಶೀಲಿನಂ ಗುರುಃ"– ವೀರಶೈವೋತ್ಕರ್ಷಪ್ರದೀಪಿಕಾ

೧೯ ನೋ : ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯಸ್ಮಾರಕ ಸಮಿತಿ ಪ್ರಕಟನೆ : 1994 ಪುಪು 18-36

೨೦ "ಕೈಲಾಸನಾಥ temple at ಕಾಂಚೀಪುರಂ we have the earliest record of 28 shaivagamas in which ಪಲ್ಲವ king ರಾಜಸಿಂಹವರ್ಮ of the 5th century states his faith" - Indian philosophy part II p 73. Sir. S. Radhakrishnan

೨೧ ಕಲ್ಯಾಣದ ವಚನಕಾರರ ಕಾಲಕ್ಕೆ ಹಿಂದೆಯೇ ಕ್ರಿ.ಶ. ೨ನೆಯ ಶತಮಾನದಿಂದಲೂ ಶಿವಧರ್ಮೋದ್ಧಾರಕರೂ ನಾಗವಂಶೀಯರೂ ಆದ ಭಾರಶಿವರಾಜರೂ ಅಲ್ಲದೆ ವಾಕಾಟಕ ರಾಜರೂ ಲಿಂಗಧಾರಿಗಳಾಗಿದ್ದರು ಎಂಬ ಸಂಗತಿ ಅವರ ಶಾಸನೋಲ್ಲೇಖಗಳಿಂದಲೇ ತಿಳಿದುಬಂದ ಸಂಗತಿಯಾಗಿದೆ. "ಶಿವಂ ಧಾರಯತಾತ್ಮಸಂಸ್ಥಂ" ಎಂಬ ರಾಜಸಿಂಹಚಕ್ರವರ್ತಿಯ ಶಾಸನೋಕ್ತಿಯೇ ಇದಕ್ಕೆ ಸಾಕ್ಷಿ. ಆತನು ಶಿರಸ್ಸಿನಲ್ಲಿ ಧರಿಸಿದ ಪ್ರಾಣಲಿಂಗರೂಪ ಶಿವಲಿಂಗವು ಜಟಾಬಂಧದ ಶೂನ್ಯಲಿಂಗವನ್ನೇ ನಿರ್ದೇಶಿಸುವುದೆಂದು ಬೇರೆ ಹೇಳಬೇಕಾಗಿಲ್ಲ. ನೋ : sii vol 1 no 33, 34.
ಹರಿಭದ್ರಸೂರಿ (ಕ್ರಿ.ಶ. 700-770)ಯ ಷಡ್ದರ್ಶನ ಸಮುಚ್ಚಯದಲ್ಲಿನ "ಕರೇ ಜಟಾದೌ ಚ ಪ್ರಾಣಲಿಂಗಧರಾಶ್ಚಾಪಿ ಭವಂತಿ" ಎಂಬೀ ಉಲ್ಲೇಖವು ಆಗಮೋಕ್ತ ಜಂಗಮಲಕ್ಷಣವನ್ನೇ ಎತ್ತಿಹಿಡಿದಿದೆ.

೨೨ "ಜಾನಂತ್ಯತಿಶಯಾದ್ ಯೇ ತು ಶಿವಂ ವಿಶ್ವಪ್ರಕಾಶಕಂ
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ – ಸಿದ್ಧಾಂತಶಿಖಾಮಣಿ.

೨೩ "ಬಯಲು ಮೂರ್ತಿಯಾಗಿ ನಿಂದನೊಬ್ಬ, ಶರಣ. ಆತನ ವಿದ್ಯಾ-ಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿ ಸೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕ್ರೋಧದಿಂದ ಹುಟ್ಟಿದಾತ ರುದ್ರ. ಈ ಮೂರು ಪೀಠವಂತಿರಲಿ. ಈ ತತ್ತ್ವತ್ರಯಂಗಳಿಗೆ ಕಾರಣವಾಗಿಪ್ಪ ಶರಣನ ನಿಲವನರಿತು ಶರಣೆನುತ್ತಿದ್ದೆನು ಕೂಡಲ ಚೆನ್ನಸಂಗಮದೇವ. ಹ.ಶೂ.ಸಂ. 574

೨೪ ನೋ : ಅಡಿಟಿ ಇದೇ ೧೪

೨೫ ನೋ : ಜಂಗಮವೊಂದಾಗಿರ್ದ ಲಿಂಗ, ಲಿಂಗವೊಂದಾಗಿರ್ದ ಜಂಗಮವನುಪಮೆಗೆ ತಂದು ಎರಡೆನ್ನಬಹುದೆ ? ಮಹಾಘನ ಜಂಗಮ ಶುದ್ಧ ಶಿವೈಕ್ಯನು ಕೂಡಲಚೆನ್ನಸಂಗಮದೇವ. ವೀ.ಚಿಂ. ಪು. ೭೭
"ಲಿಂಗವಿರ್ಪ ಸೆಜ್ಜೆಯಲ್ಲಾ ಜಂಗಮ? ಆ ಲಿಂಗದ ಪ್ರಾಣವಲ್ಲವೆ ಜಂಗಮವು? ರೇಕಣ್ಣಪ್ರಿಯ ನಾಗಿನಾಥ ಜಂಗಮಕಾಯವ ತೊಟ್ಟು ಸುಳಿವನಾಗಿ" ಅದೇ ಪು. ೭೭–೭೮.

೨೬ ಹೋ : 'ಸಕಲ ಪುಣ್ಯಪಾಪಂಗಳಿಗೆ ಒಳಗಲ್ಲವೆಂಬುದಂ ಜಗಕ್ಕೆ ತೋರ್ಪಂತೆ ಅಲ್ಲಮನೆಂಬ ನಾಮಮಂ ತಳೆದು" - ಹ.ಶೂ.ಸಂ. ಓಲೆ.

೨೭ ಗ್ರಂಥಾಂತರದ ಪಾಠಾಂತರ : "ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ"

೨೮ ವೀರಶೈವಚಿಂತಾಮಣಿ - ಜಂಗಮ ಮಾಹಾತ್ಮ್ಯ : ವಚನ ೨೭; ಓಲೆ ಪ್ರತಿ ಮಾಡಿದ ಕಾಲ ಕ್ರಿ.ಶ. 1759

೨೯ ಶರಣ ಸಾಹಿತ್ಯ. ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿ ಶಾಸ್ತ್ರೀ.

೩೦ ಸಂಶೋಧನ ಸಂಪುಟ 1984 ಎಚ್. ದೇವೀರಪ್ಪ ಎಂ.ಎ.

೩೧ ಕರ್ನಾಟಕ ಗ್ರಾಮಸೂಚಿ : ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು 1985.

೩೨ ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚೀ - ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು.

೩೩ Nanarthamanjari of Raghava 1954 Poona SOIAL. No 9

೩೪ Namamalika of Bhoja 1955 Poon SOIAL. No 18

೩೫ Mysore Gazetteer Vol II Historical 1930 Pedigree of the Hoysala Dynasty.

೩೬ Sanskrit-English Dictionary : V.S. Apte.

೩೭ Mysore Gezetteer vol ii Historical 1930 pedigree of the Hoysala Dynasty.

೩೮ Inscriptions of As'oka : Govt. of India Publication Division.

೩೯ South Indian Inscriptions Vol 1

೪೦ "Lord Mahavira" - [A study in Historical perspective] by Bool Chand, M.A.Ph.d.(Lond), Jain Cultural Research Society, Benares Hindu University. 1948

೪೧ The SERPENT POWER Arthur Avalon. (Sir John woodroffe) 1964.

ಅನುಬಂಧ ೨

ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಜೀವಿತ ಕಾಲವಿಚಾರ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಎಡೆಯೂರಲ್ಲಿ ಯೋಗಸಮಾಧಿಸ್ಥರಾಗಿರುವ ಕಗ್ಗೆರೆಯ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಜೀವಿತಕಾಲದ ಶತಮಾನದ ಹದಿನೈದನೆಯ ಶತಮಾನವೇ ಹೊರತು ಹದಿನಾರನೆಯದಲ್ಲ ಎಂಬುದಕ್ಕೆ ಇರುವ ಕೆಲವು ಗ್ರಂಥಸ್ಥ ಆಧಾರಗಳಲ್ಲಿ ಮುಖ್ಯವಾದ ಅಂಶಗಳನ್ನಿಲ್ಲಿ ನಿರೂಪಿಸಬಹುದಾಗಿದೆ.

ಪ್ರಥಮತಃ ಶಾಂತೇಶನು ತನ್ನ ತೋಂಟದ ಸಿದ್ಧೇಶ್ವರ ಪುರಾಣದ ಮೊದಲನೆ ಸಂಧಿಯಲ್ಲಿ ತನ್ನ ವಂಶಪರಂಪರೆಯನ್ನು ಹೇಳುತ್ತ ಅಮರಗುಂಡದ ಮಲ್ಲಿಕಾರ್ಜುನನ ನಿಷ್ಠಾಭಕ್ತನಾದ ಗುರುಭಕ್ತನನ್ನು ಪೂಜ್ಯಭಾವದಿಂದ ಸ್ಮರಿಸಿದ್ದಾನೆ. ಆ ಗುರುಭಕ್ತನ ವಂಶಸ್ಥನೂ ವಾತುಲಾಗಮ ಟೀಕಾಕಾರನೂ ಯೋಗಷಟ್ಸ್ಥಲ, ವೀರಮಾಹೇಶ್ವರಾಚಾರ ಸ್ಥಾಪನ ನಿರೂಪಣ, ಗಣಭಾಷ್ಯರತ್ನಮಾಲಾ ಪರಿಮಿತದ ವೀರಶೈವಮಹಿಮಾತಿಶಯನೂ ಆದ ಗುಬ್ಬಿ ಮಲ್ಲಣಾರ್ಯನ ಪ್ರಪೌತ್ರ ತಾನೆಂದು ತಿಳಿಸಿದ್ದಾನೆ. ಆ ಗುಬ್ಬಿಯ ಗುರು ಮಲ್ಲಣಾರ್ಯನ ಪೌತ್ರನಾದ ಕವಿ ಮಲ್ಲಣಾರ್ಯನು ಬಸವಪುರಾಣದ ಮಲ್ಲಣಾರ್ಯನೆಂದು ಪ್ರಖ್ಯಾತನಾಗಿದ್ದನೆಂದು ತಿಳಿಸಿ ಆತನ "ಪರಮ ಪುತ್ರಾಂ ಶಾಂತದೇಶಿಕ"[1] ಎಂಬುದಾಗಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

ಕವಿ ಮಲ್ಲಣಾರ್ಯನು ತನ್ನ ಭಾವಚಿಂತಾರತ್ನದಲ್ಲಿ ಅದರ ರಚನಾಕಾಲ ಕ್ರಿ.ಶ. 1513-ಬಾಣ-ಗುಣ-ವಾರ್ಧಿ-ವಿಧು (೧೪೩೫) ಸಂದ ಶಕವರ್ಷ - ಶ್ರೀಮುಖ ಸಂವತ್ಸರ ಎಂದು ನಿರ್ದೇಶಿಸಿದ್ದಾನೆ. ಆ ಕೃತಿರಚನೆಯ ವೇಳೆಗೆ ಮಲ್ಲಣಾರ್ಯನಿಗೆ ಸುಮಾರು ಇಪ್ಪತ್ತು-ಇಪ್ಪತ್ತೈದು ವರ್ಷ ವಯಸ್ಸಾದರೂ ಆಗಿರಬೇಕೆಂದು ಗ್ರಹಿಸಬಹುದಾಗಿದೆ. ಅಸಾಧಾರಣ ಸನ್ನಿವೇಶವಲ್ಲದಲ್ಲಿ ಸಾಮಾನ್ಯವಾಗಿ ಕಾವ್ಯವನ್ನು ರಚಿಸಬಲ್ಲ ಆ ಪ್ರಾಪ್ತ ವಯಸ್ಸಿಗೆ ಬರುವ ಸಮಯಕ್ಕೆ ಆತನ ತಂದೆಯಾದ ಗುರುಭಕ್ತನಿಗೆ ಕನಿಷ್ಠ ನಲವತ್ತು ನಲವತ್ತಮೂರು ವರ್ಷಗಳಾದರೂ ಆಗಿರಲು ಸಾಧ್ಯ ಎಂದ ಬಳಿಕ ಗುರುಭಕ್ತನ ಕಾಲ ಕ್ರಿ.ಶ. 1457ರ ಹಿಂದಕ್ಕೆ ಸರಿಯುವುದಷ್ಟೆ. ಆ ಗುರುಭಕ್ತನ ತಂದೆಯಾದ ಗುಬ್ಬಿಮಲ್ಲಣ್ಣ ಅಥವಾ ಹಿರಿಯ ಮಲ್ಲಣಾರ್ಯನ ಜೀವಿತಕಾಲ 15ನೆಯ ಶತಮಾನವೆಂಬುದು ಸ್ವತಃ ಸಿದ್ಧ.

ಗೋಸಲ ಚೆನ್ನಬಸವೇಶ್ವರರು ಗುಬ್ಬಿಯಲ್ಲಿ "ಗುರುಮಲ್ಲಿನಾಥ"ನಿಂದ ಸೇವೆಯನೊಂದುತಿಲ್ಲಿ ನೆಲೆಗೊಂಡನಿದೇಂ ಘನಪುಣ್ಯ ಕೋಶನೋ ![2] ಎಂಬೀ ವರ್ಣನೆಯಲ್ಲಿ ಗುಬ್ಬಿ ಮಲ್ಲಣ್ಣನನ್ನು'ಗುರು ಮಲ್ಲಿನಾಥ'ನೆಂದು ಕರೆದಿರುವುದನ್ನು ಗಮನಿಸಬಹುದು. ಆತನ ಅಸಾಧಾರಣ ಪಾಂಡಿತ್ಯವನ್ನು ಸ್ತುತಿಸಿರುವವರಲ್ಲಿ ತೋಂಟದ ಸಿದ್ಧಲಿಂಗೇಶ್ವರರಿಂದ ಷಟ್‌ಸ್ಥಲಾಚಾರ್ಯ ಪಟ್ಟವನ್ನು ಪಡೆದ ಶ್ರೀ ಬೋಳಬಸವೇಶ ಹಾಗೂ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ-ಶೀಲವಂತಯ್ಯ-ನ ಶಿಷ್ಯ ಹಲಗೆಯಾಚಾರ್ಯರನ್ನು ಕವಿ ಮಲ್ಲಣಾರ್ಯನು ತನ್ನ ಭಾವಚಿಂತಾರತ್ನ (ಕ್ರಿ.ಶ. 1513) ಹಾಗೂ ವೀರಶೈವಾಮೃತ ಮಹಾಪುರಾಣ (ಕ್ರಿ.ಶ. 1530) ಗಳಲ್ಲಿ ಸ್ಮರಿಸಿ ಹೆಸರಿಸಿರುವುದನ್ನು ಮರೆಯುವಂತಿಲ್ಲ.

ಶಾಂತೇಶನು ತನ್ನ ತೋಂಟದ ಸಿದ್ಧೇಶ್ವರ ಪುರಾಣದ ಪ್ರತಿ ಸಂಧಿಯ ಸಮಾಪ್ತಿಪದ್ಯದಲ್ಲಿ ತನ್ನ ಹಾಗೂ ತನ್ನ ಕೃತಿಯ ಬಗೆಗೆ ಆಡಿರುವ ಮಾತುಗಳಲ್ಲಿ ತನ್ನ ಮುತ್ತಾತನಾದ ಮಲ್ಲಣಾರ್ಯನ ವಂಶಾಬ್ಧಿಚಂದ್ರ ತಾನೆಂದು ವರ್ಣಿಸಿಕೊಂಡಿರುವುದನ್ನು ಕಾಣಬಹುದು.

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರಾ ।
ವದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶ್ವರ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು ॥

ಈ ಪದ್ಯದಲ್ಲಿ ಶಾಂತೇಶನು ತನ್ನನ್ನು 'ಸದಮಲದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರ'ನೆಂದು ಕರೆದುಕೊಂಡಿದ್ದಾನಲ್ಲದೆ '..ಸನ್ಮಲ್ಲಣಾರ್ಯನ ಗರ್ಭಾಬ್ಧಿಚಂದ್ರ'ನೆಂದು ಕರೆದುಕೊಂಡಿಲ್ಲವೆಂಬುದನ್ನು ಗಮನಿಸುವುದಗತ್ಯ. ಶಾಂತೇಶಕವಿ ಇಲ್ಲಿ ತನ್ನ ಮುತ್ತಾತನನ್ನು ಸನ್ಮಲ್ಲಣಾರ್ಯನೆಂದಿದ್ದಾನೆ. ಆದರೆ ತನ್ನ ಕೃತಿರಚನೆಯ ಕಾಲಕ್ಕೆ ಸರಸ ಶಾಸ್ತ್ರಗಳು ಮುಖೋದ್ಗತವಾಗಿ

ರಾಜಿಸುತ್ತಿದ್ದ ತನ್ನ ತಂದೆ ಕವಿ ಮಲ್ಲಣಾರ್ಯನನ್ನು ಶಾಂತೇಶನು "ಘನ ಮಲ್ಲಣಾರ್ಯ"ನೆಂದು ಕರೆದಿದ್ದಾನೆ. ಈ ಉಭಯ ಪದಪ್ರಯೋಗಗಳಲ್ಲಿಯೇ ಕವಿ ಅರ್ಥವ್ಯತ್ಯಾಸವನ್ನು ಮನಗಾಣಿಸದೆಯಿಲ್ಲ. ಪೂರ್ವ ಕವಿಪ್ರಯೋಗಗಳ ಶಬ್ದಾರ್ಥಜ್ಞಾನ ಭಾವಾನುಭವಗಳ ಕಲ್ಪನೆ, ನಡೆ-ನುಡಿ, ಅರಿವು-ಆಚರಣೆ, ಧರ್ಮಾಧರ್ಮ ವಿವೇಕ, ಸಂಸ್ಕೃತಿಗಳ ಸಂಬಂಧಜ್ಞಾನದ ಪ್ರಜ್ಞೆಯನ್ನು ಜಾಗ್ರತಗೊಳಿಸಿಕೊಂಡು ಶ್ರದ್ಧೆಯಿಂದ ಕೃತಿಗಳನ್ನು ಓದದ ಹೊರತು ಕಾವ್ಯಾರ್ಥವಿರಲಿ, ಶಬ್ದಾರ್ಥದ ತಾರತಮ್ಯವನ್ನಾಗಲಿ, ವ್ಯತ್ಯಾಸವನ್ನಾಗಲಿ ಗ್ರಹಿಸಲಾಗದು.

ಸನ್ಮಲ್ಲಣಾರ್ಯ (ಸದ್-ಸತ್ । ಮಲ್ಲಣಾರ್ಯ) ಎಂಬ ವಿಶೇಷಣಯುಕ್ತ ಅಂಕಿತನಾಮದ'ಸತ್' (ಸಂ)-ಸತ್ತು(ಕ) ಎಂಬ ಪದ ಸತ್ತಾಸ್ವರೂಪವನ್ನು ಹೊಂದಿದ್ದಾತನು ಮಲ್ಲಣಾರ್ಯ ಎಂಬುದನ್ನು ಸೂಚಿಸುತ್ತದೆ. ಬಸವಪುರಾಣದಲ್ಲಿ ಒಂದೆಡೆ[3] "ಸತ್ತು ಸರಿಯಹ" ಎಂಬ ಪ್ರಯೋಗವುಂಟು. 'ಸತ್ತು ಕಲ್ಲಿನೊಳಗಹ' ಎಂಬ ಅರ್ಥವನ್ನು ಅಲ್ಲಿನ ಪದ ನಿರ್ದೇಶಿಸುತ್ತದೆ. ಜ್ಞಾನಲೀಲಾವಿಲಾಸದಾನಂದದ ಮಹಾಲಿಂಗ ತತ್ತ್ವಸ್ವರೂಪನಹ ಎಂಬ ಅರ್ಥದ್ಯೋತಕ ಪ್ರಯೋಗವದೆಂಬುದು ಸುಸ್ಪಷ್ಟ. ತನ್ನ ಮುತ್ತಾತನು ತೋಂಟದಾರ್ಯರ ಪದಕಮಲಷಟ್ಚರಣನೆಂದು ತನ್ನ ಪುರಾಣದಲ್ಲಿ ಶಾಂತೇಶನು ಸುವಿದಿತವಾಗುವಂತೆ ನಿರೂಪಿಸಿರುವುದನ್ನು ಹಿಂದೆಯೇ ನೋಡಿದ್ದೇವೆ. ಆ ತೋಂಟದಾರ್ಯರೋ ಹರದನಹಳ್ಳಿಯ ಗೋಸಲ ಚೆನ್ನಬಸವೇಶ್ವರರ ಹಸ್ತದೊಳುದಿಸಿ ಗಂಗಾಧರನ ಘನಶೈಲವಾದ ಶಿವಗಂಗೆಗೆ ಬಂದುದನ್ನೂ ಶಾಂತೇಶನು ತನ್ನ ಗ್ರಂಥದ ಎರಡನೇ ಸಂಧಿಯ ಪಲ್ಲವದಲ್ಲಿ ತಿಳಿಸಿದ್ದಾನೆ. ಶಾಂತೇಶನ 'ಸನ್ಮಲ್ಲಣಾರ್ಯ' ಮತ್ತು 'ಘನಮಲ್ಲಣಾರ್ಯ'–ಈ ಪದ ಪ್ರಯೋಗಗಳ ಅರ್ಥಭೇದವನ್ನು ಸರಿಯಾಗಿಯೇ ಅರಿತವರಾಗಿದ್ದ ಆರ್. ನರಸಿಂಹಾಚಾರ್ ಅವರು "ಶಾಂತೇಶನ (ಕ್ರಿ.ಶ. 1561) ಸಿದ್ಧೇಶ್ವರಪುರಾಣದಿಂದ ಈತನು (ಗುಬ್ಬಿ ಮಲ್ಲಣ್ಣ) ತೋಂಟದ ಸಿದ್ಧಲಿಂಗ ಯತಿಯ (ಸು. 1470) ಶಿಷ್ಯನಾಗಿದ್ದಂತೆ ತಿಳಿಯುತ್ತದೆ." ಎಂದು ಸತ್ಯಸಂಗತಿಯನ್ನು ಸಂಕ್ಷಿಪ್ತವಾಗಿ ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ಶಾಂತೇಶನ ಸಿದ್ಧೇಶ್ವರ ಪುರಾಣದ ಮುಂದಿನ ಪದ್ಯಭಾಗ ಹಾಗೂ ಪದ್ಯಗಳನ್ನು ಗಮನಿಸಬಹುದಾಗಿದೆ :

ತರುಣ ಶಶಿಧರ ಸರ್ವ ಶಂಕರ
ಸ್ಥಿರ ಯಶೋವಿಸ್ತಾರ ತೋಂಟದ ಸಿದ್ಧಲಿಂಗ ಜಯ ಜಯತು ॥

೧-೯

ಧರಣಿ ಜಲವನಲಂ ಪವನವಂ
ಬರ ನಿಶಾಪತಿ ಸೂರ್ಯನಾತ್ಮಂ
ಪರಮ ಗಾತ್ರವೆಯಾದ ಶಂಕರನಂಗವೆನಿಸಿರ್ಪಾ ।
ಶರಣ ತೋಂಟದ ಸಿದ್ಧಲಿಂಗನ
ಚರಣವಾರಿಜವೆನ್ನ ಹೃದಯಾಂ
ಬುರುಹದೊಳಗಿರೆ ಕಾವ್ಯಮಂ ನಾಂ ಪೇಳ್ವೆ ಮುದದಿಂದಾ ॥ 4 ॥

೧-೧೦

ಅಷ್ಟಪ್ರಕೃತಿರೂಪದಲ್ಲಿ 'ಶಂಕರನಂಗ'ವೇ ಪೃಥಿವ್ಯಾದಿ ಆತ್ಮಾಂತ ಅಷ್ಟತನುಗಳೇ ಆಗಿ ನೆಲಸಿದ ತೋಂಟದ ಗುರು ಸಿದ್ಧಲಿಂಗೇಶ್ವರರು ತೋಂಟದ ಲಿಂಗವೇ ಆಗಿಹೋಗಿದ್ದರೆಂಬುದನ್ನು ಮೇಲಣ ಉದ್ಧೃತ ಗ್ರಂಥಭಾಗಗಳಲ್ಲಿ ಶಾಂತೇಶನು ಸೂಚಿಸಿದ್ದಾನೆ. ಈ ಕಾರಣ ಅವರ ನೆನಪನ್ನು ಮಾಡಿಕೊಂಡೇ ಕಾವ್ಯರಚನೆಗೆ ತೊಡಗಿದುದಾಗಿ ಹೇಳಿದ್ದಾನೆ.

ಸುರುಚಿರದ ಪರಮೇಶನಂಗಂ
ಸರಸ ಕೀರ್ತಿವಧೂಭುಜಂಗಂ
ಧರೆಯೊಳಿರ್ಪಂ ಚಾರು ತೋಂಟದ ಸಿದ್ಧ ಗುರುಲಿಂಗಂ ।

೧-೧೧

ತೋಂಟದ ಸಿದ್ಧ 'ಗುರುಲಿಂಗಮೂರ್ತಿ'ಯಾಗಿ ಧರೆಯಲ್ಲಿದ್ದಾರೆ. 'ಸರಸ ಕೀರ್ತಿವಧೂ ಭುಜಂಗ'ರಾಗಿದ್ದಾರೆ ಎಂಬಲ್ಲಿ 'ಭುಜಂಗ' ಪದಪ್ರಯೋಗವು ತೋಂಟದ ಸಿದ್ಧರು ಈ ಲೋಕದಿಂದ ಅಗಲಿಹೋಗಿದ್ದಾರೆ ಎನ್ನದೆ, 'ಕೀರ್ತಿವಧೂಭುಜಂಗ'ರಾಗಿ ಧರೆಯಲ್ಲಿ ಜನರ ನಾಲಗೆಯ ಮೇಲೆ ಹ್ಸನ್ಮನದುಂಬಿ ನೆಲಸಿದ್ದಾರೆಂಬ ಆಲಂಕಾರಿಕ ಭಾಷಾ ಪ್ರಯೋಗದಿಂದ ವಿಶಿಷ್ಟಾರ್ಥವನ್ನುಳ್ಳದ್ದು. ಕೇವಲ 'ಕೀರ್ತಿಶೇಷ'ರಾಗಿದ್ದಾರೆ ಎನ್ನುವುದಕ್ಕೂ 'ಕೀರ್ತಿವಧೂಭುಜಂಗ'ರಾಗಿದ್ದಾರೆಂಬು

ದಕ್ಕೂ ಇರುವ ಸೂಕ್ಷ್ಮವಾದ ಅರ್ಥಭೇದವು ಗಮ್ಯವಷ್ಟೆ ಅಲ್ಲ, ಗಹನವೂ ಆದುದು. ಗುರುವಿನಿಂದ ಅವಿಭಾಜ್ಯವಾದ ಭಕ್ತಿಭಾವವು ಜನಮನದಲ್ಲಿ ಬೇರೂರುವಂತೆ ಮಾಡುವ ರತಿರಂಜನೆಯ ಆಲಂಕಾರಿಕ ಪದಪ್ರಯೋಗವಿದು. ತೋಂಟದ ಸಿದ್ಧ ಗುರು ಇಲ್ಲವೆ ಗುರುಯತಿ 'ಲಿಂಗ' ರೂಪದಿಂದ ಧರೆಯಲ್ಲಿ ನೆಲಸಿದ್ದಾರೆ ಎಂಬುದೇ ಈ ವರ್ಣನೆಯ ಆಶಯ. ಬಸವ ಪುರಾಣದ 'ಸತ್ತು ಸರಿ (ಸಜೀ m ಶಿಲೆ)ಯಹ' ಎಂಬ ಪೂರ್ವ ಕವಿಪ್ರಯೋಗವು 'ಲಿಂಗ'ದೊಳಗಾಗುವುದೇ ಎಂದರೆ ಜ್ಯೋತಿಃಸ್ವರೂಪವಾಗವುದೇ ಜೀವನದ ಪರಮೋದ್ದೇಶವೆಂಬುದನ್ನು ಸೂಚಿಸುವುದಾಗಿದೆ.

"....ಪೌರಾಣ ಸಮ್ಮತ/ಸನ್ನುತ(ಪಾಠಾಂ)

ಗುರುವೇ ತೋಂಟದ ಸಿದ್ಧಲಿಂಗನೆ ಪಂಡಿತನೆ ಪರನೇ ।" ೧-೩

ಎಂಬ ಶಾಂತೇಶನ ಗುಣಿತದ ಪದ್ಯಭಾಗವಾದ ಈ ಸಂಬೋಧನೆಯನ್ನು ಗಮನಿಸಿದಾಗ ಆತನ ಕಾಲಕ್ಕಾಗಲೇ ಬಹು ಹಿಂದೆಯೇ ತೋಂಟದ ಸಿದ್ಧೇಶ್ವರರು ಪುರಾಣೋಕ್ತಪುರುಷರಾಗಿ ಸ್ತುತ್ಯರಾಗಿದ್ದರೆಂಬುದು ಸ್ವಯಂವೇದ್ಯವಾದದ್ದೆ. ಬಹುಮಟ್ಟಿಗೆ ವಿರಕ್ತ ತೋಂಟದಾರ್ಯ ರಚಿತ ಸಿದ್ಧೇಶ್ವರ ಪುರಾಣವನ್ನು ಮನಸ್ಸಿನಲ್ಲಿಟ್ಟುಕೊಂಡೇ ಶಾಂತೇಶನು ತನ್ನ ಕೃತಿಯಲ್ಲಿ ಹೀಗೆ ಪೌರಾಣ ಸಮ್ಮತ ಇಲ್ಲವೆ ಸನ್ನುತ ಗುರುವೆ ಎಂದು ಸ್ತುತಿಸಿದ್ದಾನೆಂದು ವಿದಿತವಾಗುತ್ತದೆ. ನೂರು ವರ್ಷಕ್ಕೂ ಮೀರಿದ ಮಹಿಮಾಮಯ ಚಾರಿತ್ರದಿಂದ ಪವಾಡವನ್ನು ಮೆರೆದವರೆಂದು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಬಗೆಗೆ ದೃಢ ನಂಬುಗೆಯನ್ನು ಈಗ್ಗೆ ನೂರುವರ್ಷಗಳ ಹಿಂದಿನವರು ವ್ಯಕ್ತಪಡಿಸಿರುವುದನ್ನು 5 ದಾಖಲಾತಿಗಳಿಂದ ತಿಳಿಯಬಹುದು.

ಕ್ರಿ.ಶ. ಸು 1395 ರಿಂದ 1500ರ ವರೆಗಿನ ಸುದೀರ್ಘವಾದ ಆಯುಃಪ್ರಮಾಣ ಹೊಂದಿದ ತೋಂಟದ ಸಿದ್ಧರ ಆ ಅವಧಿಯಲ್ಲಿ ಆಗಿ ಹೋದ ಘಟನಾವಳಿಗಳ ಹಲವಾರು ಪವಾಡಗಳ ಮಹತ್ತ್ವವನ್ನು ವರ್ಣಿಸಿ ಜನಮನದಲ್ಲಿ ಭಕ್ತಿಭಾವವನ್ನು ಬೇರೂರಿಸುವಂತೆ ಮಾಡುವುದೇ ಗುರಿಯಾಗುಳ್ಳ ಪುರಾಣ, ವಿರಕ್ತ ತೋಂಟದಾರ್ಯರಚಿತ ಸಿದ್ಧೇಶ್ವರಪುರಾಣ. ಷಟ್ಸ್ಥಲದ ಅಂಗ ಲಿಂಗಸ್ಥಲ ಸ್ವರೂಪ ಹಾಗೂ ಏಕೋತ್ತರಶತಸ್ಥಲದ ಶಿವನ ನಿಲವನ್ನು ಸ್ವಾನುಭಾವಸಂಪನ್ನ ವಾಣಿಯಿಂದ ತಮ್ಮ ಶಿಷ್ಯಾಗ್ರಣಿಯಾದ ಬೋಳಬಸವರಾಜರಿಗೆ ಬೋಧಿಸಿ ಷಟ್ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿದುದನ್ನು ವಿರಕ್ತ ತೋಂಟದಾರ್ಯರು ತಮ್ಮ ಪುರಾಣಕೃತಿಯಲ್ಲಿ ಚಿತ್ರಿಸಿದರೆ, ಶಾಂತೇಶನು ತನ್ನ ತೋಂಟದ ಸಿದ್ಧೇಶ್ವರ ಪುರಾಣದಲ್ಲಿ ಆ ಶ್ರೀ ಗುರು 'ಚಂದ್ರಶೇಖರ' ಮೂರ್ತಿಯೆಂಬ ಮತ್ತೊಬ್ಬ ಶಿಷ್ಯನಿಗೆ ವಿಸ್ತರಿಸಿ ಬೋಧಿಸಿದ ಭುವನಕೋಶ, ಚಿದಂಬರ ರಹಸ್ಯ, ಪರಶಿವನ ಇಪ್ಪತ್ತೈದು ಲೀಲೆ, ಅಷ್ಟಾವರಣ, ಷಟ್ಸ್ಥಲ ಹಾಗೂ ಪುರಾತನ ವಚನಾಗಮಪ್ರತಿಪಾದಿತ ತತ್ತ್ವಬೋಧೆಯನ್ನು ಸಾಧಾರವಾಗಿ ನಿರೂಪಿಸಿರುವನು. ಒಬ್ಬನ ಕೃತಿ ವಾರ್ಧಕ ಷಟ್ಪದಿಯಲ್ಲಿದ್ದರೆ, ಮತ್ತೊಬ್ಬನದು ಭಾಮಿನೀ ಷಟ್ಪದಿಯಲ್ಲಿದೆ. ವಿರಕ್ತ ತೋಂಟದಾರ್ಯರು ರಚಿಸಿದ ಸಿದ್ಧೇಶ್ವರ ಪುರಾಣದ ಕಥಾ ವಸ್ತುವಿನ ವರ್ಣನೆಗೆ ಪೂರಕವಾದ, ಆದರೆ ಅವರ ಯಾವ ಪವಾಡದ ಪ್ರಸಂಗಗಳನ್ನೂ ತರದೆ[6] ಕೇವಲ ತೋಂಟದ ಸಿದ್ಧಲಿಂಗೇಶ್ವರರು ಚಂದ್ರಶೇಖರ ದೇವರಿಗೆ ಬೋಧಿಸಿದ ಭುವನಸೃಷ್ಟಿಯ ಪೌರಾಣಿಕ ದೃಷ್ಟಿ, ಧಾರ್ಮಿಕ, ಸಾಮಾಜಿಕ ಹಾಗೂ ದಾರ್ಶನಿಕ ತತ್ತ್ವಪ್ರತಿಪಾದನೆಯನ್ನು ಮಾತ್ರ ತನ್ನ ಕೃತಿಯಲ್ಲಿ ತಂದಿದ್ದಾನೆಂಬುದನ್ನು ಗಮನಿಸಬಹುದು.

ಕವಿ ಮಲ್ಲಣಾರ್ಯರ ಭಾವಚಿಂತಾರತ್ನರಚನೆಯ (ಕ್ರಿ.ಶ. 1513) ಕಾಲದಿಂದೀಚೆಗೆ ಶಾಂತೇಶವಿರಚಿತ ತೋಂಟದ ಸಿದ್ಧೇಶ್ವರ ಪುರಾಣ ರಚನೆಗೆ (ಕ್ರಿ.ಶ. 1561) ಮುನ್ನ ಈ ಎರಡು ಕೃತಿರಚನೆಗಳ ನಡುಗಾಲದಲ್ಲಿ ಕ್ರಿ.ಶ. ಸು. 1530ರ ಹಿಂದು ಮುಂದಿನ ವರ್ಷಗಳಲ್ಲಿ ತೋಂಟದಾರ್ಯರಿಂದ ಸಿದ್ಧೇಶ್ವರ ಪುರಾಣ ರಚಿತವಾಗಿರಬಹುದೆಂದು ಊಹಿಸಲು ಎಡೆಯುಂಟು. ಭಾವಚಿಂತಾರತ್ನಗ್ರಂಥದ[7] ಮೊದಲನೆಯ ಷಟ್ಪದಿಯ ಕಡೆಕಡೆಯ ಪಂಕ್ತಿಗಳೊಡನೆ ವಿರಕ್ತ ತೋಂಟದಾರ್ಯರಚಿತ ಪುರಾಣ ಗ್ರಂಥದ ಏಳನೆಯ ಸಂಧಿಯ ಸೂಚನಾಪದ್ಯದ ಮೊದಲೆರಡು ಪಾದಗಳನ್ನು ಹೋಲಿಸಿದಾಗ ಕಂಡಬರುವ ಪದಪ್ರಯೋಗದ ಸಾಮ್ಯ ಈ ಅಂಶವನ್ನು ದೃಢಪಡಿಸುತ್ತದೆ.

ಭೋಗಮಲ್ಲೇಶ ಬಿಡದೀಗಲೆನ್ನಯ ಕೃತಿಯ
ಭೂಗಗನದಿಗ್ಭರಿತಮಾಗಿ ಪಸರಿಸುವಿನಂ ಸಾಗಿಸುವುದಳ್ಕಱಿಂದೆ ॥

ಎಂಬ ಈ ಪ್ರಾರ್ಥನಾಭಾಗದಲ್ಲಿ ಕವಿ ಮಲ್ಲಣಾರ್ಯನು ಬಳಸಿರುವ'ಭೂಗಗನದಿಗ್ಭರಿತ'ವೆಂಬೀ ಪದಪುಂಜವು ವಿರಕ್ತ ತೋಂಟದಾರ್ಯರ ಕೃತಿಯಲ್ಲಿ

"ಭೂವಿಯತ್ತಳದಿಗ್ಭರಿತ ಯಶೋನ್ವಿತನಖಿಲ
ದೇವತಾವಲ್ಲಭನೆನಿಪ ಸಿದ್ಧದೇಶಿಕಂ"

ಎಂಬ ವರ್ಣನಾಸ್ತುತಿಯಲ್ಲಿ 'ಭೂವಿಯತ್ತಳದಿಗ್ಭರಿತ'ವೆಂದಾಗಿರುವುದು. ಉಭಯ ಪದಪುಂಜಗಳ ಸಾಮ್ಯ ಇಲ್ಲಿ ಕಾಣಬಂದ ಅಂಶವೇ ಆಗಿದೆ.

ಎಡೆಯೂರ ತೋಂಟದ ಸಿದ್ಧೇಶ್ವರರ ಪ್ರಪ್ರಶಿಷ್ಯರಾದ ವಿರಕ್ತ ತೋಂಟದಾರ್ಯರೂ ತಮ್ಮನ್ನು "ತೋಂಟದ ಸಿದ್ಧಲಿಂಗ ಶಿವಯೋಗೀಂದ್ರ" ನೆಂದೂ 'ತೋಂಟದ ಸಿದ್ಧಲಿಂಗದೇಶಿಕ'ನೆಂದೂ ಕರೆದುಕೊಂಡಿರುವುದು ತಿಳಿದುಬಂದ ಸಂಗತಿಯೇ ಆಗಿದೆ. 'ತೋಂಟದ ಸಿದ್ಧಲಿಂಗ', 'ತೋಂಟದ ಸಿದ್ಧಲಿಂಗ ದೇಶಿಕ'ನೆಂಬ ಅಪರನಾಮಧೇಯವುಳ್ಳ ವಿರಕ್ತ ತೋಂಟದಾರ್ಯರನ್ನೇ ಪೂರ್ವಜರಾದ ಎಡೆಯೂರ ತೋಂಟದ ಸಿದ್ಧಲಿಂಗೇಶ್ವರರೆಂದು ಕೆಲವರು ತಪ್ಪಾಗಿ ತಿಳಿಯಲು ಅವಕಾಶವಾಯಿತು. ಮೂಲ ತೋಂಟದ ಸಿದ್ಧಲಿಂಗೇಶ್ವರರಿಗೂ ವಿರಕ್ತ ತೋಂಟದಾರ್ಯರಿಗೂ ಮೂರು ತಲೆಮಾರುಗಳ ಅಂತರವಿದ್ದುದನ್ನು ಮರೆಯಲಾಗದು. ಎಡೆಯೂರ ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯ ಬೋಳಬಸವೇಶ. ಆತನಿಗೆ ಶಿವಪೂಜೆಯಾರ್ಯನೆಂಬ ಮತ್ತೊಂದು ಹೆಸರೂ ಇದ್ದಿತು. ಆತನ ಶಿಷ್ಯನೇ ಶೂನ್ಯಸಂಪಾದನಕಾರನಾದ ಗೂಳೂರು ಸಿದ್ಧವೀರಣಾರ್ಯ. ಆತನ ಶಿಷ್ಯನೆ ಬಿಜ್ಜವರ ಪುರಾಧಿಪ ತೋಂಟದ ಸಿದ್ಧಲಿಂಗಭೂಪಾಲಕನಿಂದ ಪರಿಪೂಜಿತನಾದ 'ತೋಂಟದ ಸಿದ್ಧಲಿಂಗದೇಶಿಕ'ಅಪರನಾಮಧೇಯನಾದ ವಿರಕ್ತ ತೋಂಟದಾರ್ಯ ಎಂದ ಬಳಿಕ ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿದ್ದ 'ತೋಂಟದ ಸಿದ್ಧಲಿಂಗದೇಶಿಕರು' ಎಡೆಯೂರ ತೋಂಟದ ಸಿದ್ಧಲಿಂಗ ಯತೀಶ್ವರರಲ್ಲ ಎಂಬುದನ್ನು ಅವರ ಶಿಷ್ಯಪರಂಪರೆಯ ಅನುಕ್ರಮದ ಕಾಲದ ಅಂತರವೇ ನಿರ್ದೇಶಿಸುತ್ತದೆ ಎಂಬುದು ಸುಸ್ಪಷ್ಟ.

ಎಡೆಯೂರ ತೋಂಟದ ಸಿದ್ಧಲಿಂಗೇಶ್ವರರ ಕಾಲವಿಚಾರದ ಬಗೆಗೆ ಇರುವ ಗ್ರಂಥಾಂತರದ ಲೇಖಾಧಾರಗಳನ್ನು ಇನ್ನು ನೋಡೋಣ. ಗುಬ್ಬಿಯ ಗುರು ಮಲ್ಲಿಕಾರ್ಜುನ ಇಲ್ಲವೆ ಮಲ್ಲಣಾರ್ಯವಿರಚಿತ ವಾತುಲಾಗಮ ಟೀಕಾಗ್ರಂಥಪ್ರತಿಯ ಓಲೆಯೊಂದರಲ್ಲಿ ಸಂಪ್ರತಿಕಾರನ ಪ್ರಶಸ್ತಿವಾಕ್ಯವಿಂತಿದೆ :

"ಸ್ವಸ್ತಿಶ್ರೀ ಜಯಾಭ್ಯುದಯ ಶಕ ವರುಷನೆಯ ಪರಾಭವ ಸಂವತ್ಸರದ ಫಾಲ್ಗುಣ ಬಹುಳ ೧೩ಯ ಗುರುವಾರದಲ್ಲೂ ವ್ಯಾಖ್ಯಾನ ಪಟಲ ಮಂಗಳಮಹಾಶ್ರೀಶ್ರೀಶ್ರೀಶ್ರೀ" ವ್ಯಾಖ್ಯಾನ ಬರೆದಾತ ಶ್ರೀ ಗುರು ತೋಂಟದಾರ್ಯರ ವರದ ಹಸ್ತದ ಪುತ್ರ ಮಹಂತೈಯ್ಯ ತಪ್ಪಂ ಬರದನೆಂದು ಬಯ್ಯಲಾಗದು. ಬಲ್ಲ ಕವಿಗಳು ತಿದ್ದಿಕೊಂಡು ಹೋಹುದುಂ. ಉಜ್ಜಿಣೆ ಮಠದ ಚರಮೂರ್ತಿ ಬಸವಲಿಂಗಸ್ವಾಮಿಯವರಿಗೆ ಬರದುಕೊಟ್ಟ"ದ್ದೆಂದು ಒಕ್ಕಣಿಸಿದ್ದಾನೆ. ವಾತುಲಾಗಮದ ಟೀಕಾಗ್ರಂಥದ ಪ್ರತಿಕಾರನ ಹೆಸರು ಮಹಂತಯ್ಯನೆಂದೂ, ಆತನು ಲಿಪೀಕರಿಸಿದ ಪ್ರತಿ ತುಮಕೂರು ಜಿಲ್ಲೆ ಕುಣಿಗಲು ತಾಲ್ಲೋಕ್ ಉಜ್ಜಿಣಿ ಮಠದ ಸ್ವಾಮಿಗಳಾಗಿದ್ದ ಚರಮೂರ್ತಿ ಬಸವಲಿಂಗಸ್ವಾಮಿಗಳಿಗಾಗಿ ಎಂಬುದು ಈ ಗ್ರಂಥಾಂತ್ಯದ ಉಲ್ಲೇಖದಿಂದ ತಿಳಿದುಬರುತ್ತದೆ. ವ್ಯಾಖ್ಯಾನ ಪಟಲದ ಪ್ರತಿಲೇಖನದ ಕಾಲ 8.3.1487ನೆಯ ಗುರುವಾರವೆಂದಿರುವುದರಿಂದ ಆ ವೇಳೆಗೆ, ಅದಕ್ಕೂ ಹಿಂದಕ್ಕೆ ತೋಂಟದ ಸಿದ್ಧಲಿಂಗೇಶ್ವರರ ಜೀವಿತಕಾಲ ಸೇರಿದುದೆಂಬುದು ಸ್ವತಃಪ್ರಮಾಣವಾಗಿದೆ.

ಈ ನಿರ್ಣಯವನ್ನು ಪುಷ್ಟೀಕರಿಸುವ ಮತ್ತೊಂದು ಲೇಖನಾಧಾರವೆಂದರೆ ಕ್ರಿ.ಶ. 1444ನೆಯ ನವೆಂಬರ್ 20 ಶುಕ್ರವಾರದಂದು ಪೂರ್ವಪ್ರತಿ ನೋಡಿ ಕಾಗದದ ಮೇಲೆ ಬರೆದ ಆಂಧ್ರದೇಶದ ಸಂಗಾರೆಡ್ಡಿ ಜಿಲ್ಲೆಯ ಕೇತಕೀಸಂಗಮೇಶ್ವರ ದೇವರನ್ನು ಕುರಿತ ಕೇತಕೀಸಂಗಮೇಶ್ವರ ಪುರಾಣ ಕಾಂಡ 5, ಸಂಧಿ 25, ಪದ್ಯ 6 ಹಾಗೂ ಸಂಧಿ 12, ಪದ್ಯ 33-34 ರಲ್ಲಿ ಕ್ರಮವಾಗಿ 'ಸಿದ್ಧಲಿಂಗ' ಮತ್ತು 'ಹಿರಿಯ(ಪ್ರಾಸ)'। ಮಲ್ಲಣಾರ್ಯರನ್ನು ಆ ಪುರಾಣಕರ್ತೃವಾದ ಗಂಗಾಧರನ । ತರುಳನಾದ ಮಡಿವಾಳಯ್ಯನು ಸ್ಮರಿಸಿರುವುದನ್ನು ಕಾಣಬಹುದು.

ಅದಲ್ಲದೆ ಇಮ್ಮಡಿ ದೇವರಾಯನ (ಕ್ರಿ.ಶ. 1419-1446) ಮಹಾಪ್ರಧಾನಿಯೂ ದಂಡಾಧಿಪತಿಯೂ ಆದ ಲಕ್ಕಣ್ಣ ದಂಡೇಶನು ತನ್ನ ಶಿವತತ್ತ್ವಚಿಂತಾಮಣಿಯಲ್ಲಿ ನೂತನ ಪುರಾತನರನ್ನು ಸ್ಮರಿಸುವಾಗ (ಸಂಧಿ ೩೮ ಪದ್ಯ ೬೧) "ಗುಬ್ಬಿಯಾ ಮಲ್ಲಣ್ಣ"ನನ್ನು ಹೆಸರಿಸಿರುವುದರಿಂದ ಆತನ ಕೃತಿ ರಚನೆಯ (ಕ್ರಿ.ಶ. 1450) ಕಾಲಕ್ಕೂ ಮಲ್ಲಣ್ಣನು "ಪೂರಾಯುಷ್ಯ ಪೂರಾತನಃ"ಎಂಬುದಾಗಿ ನಡೆ-ನುಡಿ ಪೂರಾಯನೂ ನೂತನ ಗಣಂಗಳಲ್ಲಿ ಒಬ್ಬನೂ ಆಗಿಹೋಗಿದ್ದಾನೆಂಬುದು ವಿದಿತವೆ ಆಗಿದೆ. ಶಾಂತೇಶನೂ ತನ್ನ ಮುತ್ತಾತನನ್ನು ತೋಂಟದ ಸಿದ್ಧೇಶ್ವರರ ಶಿಷ್ಯನೆಂದಿರುವುದರಿಂದ ಆ ಇಬ್ಬರೂ ಸಮಕಾಲೀನರಾಗಿದ್ದರೆಂಬುದರಲ್ಲಿ ಕಿಂಚಿತ್ತೂ ಸಂಶಯಕ್ಕೆಡೆಯಿಲ್ಲ.

ಹೀಗೆ ಉಪಲಬ್ಧವಿರುವ ಗ್ರಂಥಸ್ಥ ಪ್ರಮಾಣಗಳು ತೋಂಟದ ಸಿದ್ಧಲಿಂಗೇಶ್ವರರೂ ಗುಬ್ಬಿಯ ಮಲ್ಲಣ್ಣಗಳೂ ೧೫ನೆಯ ಶತಮಾನದವರು ಎಂಬುದನ್ನು ಸಾದೃಶ್ಯಗೊಳಿಸಿದ್ದ ಈ ಎಲ್ಲ ಗ್ರಂಥಾಧಾರಗಳನ್ನು ಮನವಿಟ್ಟು ಗಮನಿಸಿದ್ದರೆ ಕೆಲವರು ಇತ್ತೀಚೆಗೆ ಶ್ರೀ ಸಿದ್ಧಲಿಂಗೇಶ್ವರರ ಕಾಲ ಹದಿನೈದನೆಯ ಶತಮಾನವಲ್ಲ, ಹದಿನಾರನೆಯ ಶತಮಾನವೆಂದು[9] ವಾದಿಸತೊಡಗುತ್ತಿರಲಿಲ್ಲ. ಆದರೆ ಪೂರ್ವಗ್ರಹಪೀಡಿತರಾದ ಕೆಲವರಲ್ಲಿ ಒಬ್ಬರಾದ ಎಲ್. ಬಸವರಾಜು "ಈತನು (ತೋಂಟದ ಸಿದ್ಧಲಿಂಗಯತಿ) ತುಮಕೂರು ಪ್ರಾಂತದ ಕಗ್ಗೆರೆ ತೋಂಟದಲ್ಲಿ ಸಿದ್ಧನಾಗಿ ಜನರ ಮನ್ನಣೆಯನ್ನು ಸೂರೆಗೊಂಡು ಪ್ರಖ್ಯಾತನಾದುದು ಕ್ರಿ.ಶ. ೧೫೬೦ರ ಸುತ್ತಿನಲ್ಲಿ. ಇನ್ನೂ ವಿದ್ವಾಂಸರು ಅವನು (ಕ್ರಿ.ಶ. ೧೪೭೦) ಹದಿನೈದನೆಯ ಶತಮಾನದಲ್ಲಿದ್ದವನೆಂಬವಾದ ಊರ್ಜಿತವಾಗುವುದಿಲ್ಲ. 'ಅವನಿದ್ದ ಆ ಹದಿನಾರನೇ ಶತಮಾನ" - ಇತ್ಯಾದಿ ಹೇಳಿಕೆಗಳು ಸತ್ಯಕ್ಕೆ ದೂರವಾದುವುಗಳು. ನಿಜಾಂಶಗಳನ್ನು ಅರಿತು ಆಡಿದ ವಿಮರ್ಶಾತ್ಮಕವಾದ ಮಾತುಗಳಲ್ಲ ಎಂಬುದನ್ನು ವಿದ್ವಜ್ಜನರು ಸಾಧಾರವಾಗಿ ಬಲ್ಲರು. ಇಲ್ಲದ ವಿವಾದವನ್ನು ತಂದೊಡ್ಡಿದ ಅವರೇ ಚಾರಿತ್ರಕ ಸಂಗತಿಗಳನ್ನು ತಿರುವು ಮುರುವು ಮಾಡಿ ವಿರೂಪಗೊಳಿಸಿದ್ದಾರೆ. ಇದು ಅನುಚಿತ, ಹಾಗೂ ಅಪಚಾರವೆನಿಸಿದೆ. ವಿರಕ್ತ ತೋಂಟದಾರ್ಯರನ್ನು ಮೂಲ ಕಗ್ಗೆರೆಯ ಶಿವಯೋಗಿ ತೋಂಟದ ಸಿದ್ಧಲಿಂಗರೆಂದು ತಪ್ಪಾಗಿ ಗ್ರಹಿಸಿದ ಕಾರಣದಿಂದಲೋ ಏನೋ ಅವರಿಂದ ಆದ ಈ ಪ್ರಮಾದವನ್ನು ಪರಪ್ರತ್ಯಯ ನೇಯ ಬುದ್ಧಿಯಿಂದ ಅಂಧಕೂಪನ್ಯಾಯದಂತೆ ಅನುಸರಿಸಿ ಮತ್ತೆ ಕೆಲವರು ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತಾಗಿದೆ. ಆ ಕಾರಣ ಅವರ ಇಂತಹ ಹೇಳಿಕೆಗಳು ಗ್ರಂಥಸ್ಥ ಪ್ರಮಾಣಕ್ಕೆ ವಿರುದ್ಧವಾಗಿವೆ ಎಂಬುದನ್ನು ಪ್ರಾಜ್ಞರಾದ ಓದುಗರೂ, ವಿದ್ವಾಂಸರೂ ಎಚ್ಚರದಿಂದ ಕೂಲಂಕಷವಾಗಿ ವಿಮರ್ಶಿಸಿ ನಿರ್ಣಯಕ್ಕೆ ಬಂದಿದ್ದಾರೆ ಎಂಬುದನ್ನು ಈ ಕೆಲವು ಮಹನೀಯರು ಮರೆಯದಿರಲಿ ಎಂಬುದೇ ಆಶಯ.

ಪ್ರಸ್ತುತ ಶಾಂತೇಶನ ತೋಂಟದ ಸಿದ್ಧೇಶ್ವರ ಪುರಾಣದ ರಚನೆಗೆ ನೆರವಾದ ಗುರೂತ್ತಮನೆಂದರೆ ಪಚ್ಚೆಯ ಕಂಥೆಯಾರ್ಯನ ಶಿಷ್ಯನಾದ ಚಂದ್ರಶೇಖರ ಮೂರ್ತಿ. ಆತನು ತೋಂಟದ ಸಿದ್ಧಲಿಂಗೇಶ್ವರರಿಂದ 'ತರುಣ'ನಾಗಿ ಕೇಳಿದ ಭುವನಕೋಶ, ವೀರಶೈವಸಿದ್ಧಾಂತಾದಿ ವಿಷಯಕ ಬೋಧೆಯನ್ನು ತನ್ನ ಪರಿಪಕ್ವವಾದ ಮುಕ್ತಾವಸ್ಥೆಯಲ್ಲಿ ಶಾಂತೇಶನಿಗೆ ಉಪದೇಶಿಸಿ ಪುರಾಣ ರಚನೆಯನ್ನು ಸಾಂಗೋಪಾಂಗವಾಗಿ ಸಂಪೂರ್ಣಗೊಳಿಸಲು ಕಾರಣನಾದನು. ಈ ಬಗೆಗೆ ಕವಿ ಬಳಸಿರುವ ಗ್ರಂಥಸ್ಥ ಮಾತುಗಳೇ ಸಾಕ್ಷಿ.

ಶಾಂತೇಶನ ಕೃತಿಯಲ್ಲಿ ಚಂದ್ರಶೇಖರ ಗುರುವಿನ ಬಗೆಗೆ ಹೆಚ್ಚಿನ ಸಂಗತಿಗಳೇನೂ ದೊರಕವು. ಆದರೆ ಒಬ್ಬ ಚಂದ್ರಶೇಖರ ದೇವರ ಗದ್ದುಗೆ ಚನ್ನರಾಯನಪಟ್ಟಣದಲ್ಲಿದ್ದು ಅಲ್ಲಿ ಕ್ರಿ.ಶ. ಸು.1604ರ ವೇಳೆಗೆ "ಚಂದ್ರಶೇಖರ ಸ್ವಾಮಿ ದೇವಸ್ಥಾನ"ವನ್ನು ಕಟ್ಟಿದರೋ ಏನೋ ಎಂಬುದನ್ನು ಸಂಶೋಧಿಸಿ ಖಚಿತಪಡಿಸಿಕೊಳ್ಳಬೇಕಾದ ಅಂಶ. ಚಂದ್ರಶೇಖರ ಗುರುವಿನ ಪ್ರಭಾವ ಗುಬ್ಬಿಯ ಸುತ್ತಮುತ್ತಲೂ ವ್ಯಾಪಿಸಿದ್ದಿತೆನ್ನಬಹುದು. ಅದೇ ತಾಲ್ಲೂಕಿನಲ್ಲಿ ಚಂದ್ರಶೇಖರಪುರವೆಂಬ ನಾಲ್ಕು ಪುರಗಳು ಬಹುಶಃ ಆ ಹೆಸರಿನ ಸ್ವಾಮಿಯ ಮೇಲಣ ಭಕ್ತಿಯಿಂದ ಹೆಸರುಗೊಂಡಿವೆಯೆಂದು ತೋರುತ್ತದೆ. ತೋಂಟದ ಸಿದ್ಧಲಿಂಗೇಶ್ವರರ ಷಟ್ಸ್ಥಲಮಾರ್ಗವನ್ನು ಉಪದೇಶಿಸಿ ಶಾಂತೇಶನಿಂದ ವಿರಕ್ತ ತೋಂಟದಾರ್ಯರ ಪುರಾಣ ಕೃತಿರಚನೆಗಿಂತ ಬೇರೆಯೇ ಆದರೂ ಅದಕ್ಕೆ ಪೂರಕವಾಗುವಂತೆ ಸಿದ್ಧಾಂತಪ್ರಧಾನವಾದ ಪುರಾಣವೊಂದನ್ನು ರಚಿತವಾಗುವಂತೆ ಮಾಡಿದ ಕೀರ್ತಿ ಚಂದ್ರಶೇಖರ ಗುರುಮೂರ್ತಿಗೆ ಸಲ್ಲುತ್ತದೆ.

ಅಡಿಟಿಪ್ಪಣಿ-2

1 ಶಾಂ.ಸಿ. ಪು. ೧-೧೭

2 ನೋ : ತುಮಕೂರು ಜಿಲ್ಲೆ ಎಪಿಗ್ರ್ಯಾಫಿಕ ಕರ್ನಾಟಕ XII ಅನುಬಂಧ.

3 ನೋ : ಬಸವಪುರಾಣ-ಕರ್ನಾಟಾಂಧ್ರಕವಿ ಎಂದು ವಿಖ್ಯಾತನಾದ ಭೀಮಕವಿ ವಿರಚಿತ (ಕ್ರಿ.ಶ.1369) ಸಂಧಿ ೧೪ ಕೋಳೂರ ಕೊಡಗೂಸಿನ ಕಥೆ: ಪದ್ಯ ೨೦.

"ಶೂಲಿ ಚಿತ್ತೈಸಯ್ಯ ಹಿಂದಕೆ ।
ಕಾಲನಿಕ್ಕುವಳಲ್ಲ ಇಲ್ಲಿಯೆ ಸತ್ತು ಸರಿಯಹೆನು ।

4 ಹೋ : ಸಂದಿಲ್ಲದವಿರಳಬ್ರಹ್ಮ ತೋಂಟದ ಯತೀ
ಶಂ ದಿವಿಜರುಫೆ ಎನಲನಾದಿ ಭಕ್ತನ ಹೃದಯ
ಮಂದಿರದೊಳಗೆ ಮೂರ್ತಿಗೊಂಡು ಸಂತಸದೊಳೆಸೆದಂ ಜಗವ ರಕ್ಷಿಸುತ್ತ ॥

ವಿ.ತೋಂ.ಸಿ.ಪು.ಸಂ. ೨೫-ಪ ೨೦

"ಆ ... ತೋಂಟದ ಸಿದ್ಧಲಿಂಗನ — ಏಕಚಿತ್ತದೊಳಾಂ
ಪೊಗಳ್ದು ಕೃತಕೃತ್ಯನಹೆನು ಇದೇ ೧ ೨೬.

5 ನೋ : ವಿರಕ್ತ ತೋಂಟದಾರ್ಯ ರಚಿತ ಶ್ರೀ ಸಿದ್ಧೇಶ್ವರ ಪುರಾಣಂ (ಸಂ) ಪಿ.ಆರ್. ಕರಿಬಸವಶಾಸ್ತ್ರಿ. ಮೈಸೂರು. ಪ್ರಕಟನೆ ೧.೨.೧೯೬೫. ಪೀಠಿಕೆ ಪು ೧.

6 ಶ್ರೀಮನ್ ನಿ.ಜ. ತೋಂಟದಾರ್ಯ ಗ್ರಂಥಮಾಲೆಯ (1951) ವಿ.ತೋಂ. ವಿರಚಿತ ಶ್ರೀ ಸಿದ್ಧೇಶ್ವರ ಮಹಾಪುರಾಣದ ಪ್ರಸ್ತಾವನೆ ಪುಟ ೮ರಲ್ಲಿರುವ "ವಿರಕ್ತ ತೋಂಟದಾರ್ಯನಂತೆ ಶಾಂತೇಶ ಕವಿಯು ಪವಾಡಗಳನ್ನು ಅನೇಕ ರೀತಿಯಾಗಿ ವಿವರಿಸಿರುವನು" ಎಂಬ ಅಭಿಪ್ರಾಯವನ್ನು ಅದರ ಪ್ರಕಾಶಕರು ಮುಂದಿನ ಮುದ್ರಣದಲ್ಲಿ ಕೈ ಬಿಡಬೇಕಾಗಿದೆ.

7 ನೋ : ಭಾವಚಿಂತಾರತ್ನ 1954, 1971ರ ಮುದ್ರಣ. ಸಂ; ಸಿ. ಮಹಾದೇವಪ್ಪ ಎಂ.ಎ.

8 ವಿ.ತೋಂ.ವಿರಚಿತ ಶ್ರೀ ಸಿದ್ಧೇಶ್ವರಪುರಾಣದ ಪ್ರತಿ ಸಂಧ್ಯಂತದ ಪದ್ಯ ಹಾಗೂ ಮನೋವಿಜಯದ ಟೀಕೆಯ ಪ್ರತಿಪ್ರಕರಣಾಂತ್ಯದ ಗದ್ಯ ನೋಡಿ.

ನೋ : 1 "ಸಿದ್ಧಲಿಂಗ ಶಿವಯೋಗಿ" (೧೯೭೪-ಪು ೧೨೬ ಎಲ್. ಬಸವರಾಜು) ಐದನೆಯ ಶತಮಾನೋತ್ಸವದ ಅಂಗವಾಗಿ ೨೫.೧.೧೯೭೧ ರಂದು ಏರ್ಪಡಿಸಿದ್ದ ವಿಚಾರಗೋಷ್ಠಿಯ ಪ್ರಬಂಧಗಳ ಪ್ರಕಟನೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ.

2 ಪ್ರಸ್ತುತ ಲೇಖಕನ ಸಿದ್ಧಲಿಂಗ ಶಿವಯೋಗಿಯನ್ನು ಕುರಿತ ಲೇಖ : ಪುಪು ೮೭-೧೨೫.

ಶಿಲಾಶಾಸನ ಹಾಗೂ ಗ್ರಂಥಗಳಲ್ಲಿ ಉಕ್ತವಾಗಿರುವ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯರುಗಳು

1 ಸಪ್ಪೆಯದೇವರು 1 (ಸಪ್ಪೆಯ ಯತೀಶ 2, ಸಪ್ಪೆಯಾರ್ಯ 3, ಸರ್ಪೇಶ 4, ಸಪ್ಪೆಯ ಗುರು 13).

2 ಉಪ್ಪಿನಹಳ್ಳಿ ಸ್ವಾಮಿ 1 (ಉಪ್ಪಿನ ಹಳ್ಳಿಯಯ್ಯ 2, ಉಪ್ಪಿನ ಹಳ್ಳಿಯಾರ್ಯ 2, 3)

3 ಸಿದ್ಧದೇವರು 1 (ಸಿದ್ಧಯ್ಯ 2).

4 ನಂಜೇದೇವರು 1 (ಕಟ್ಟೆಯಪುರದ ನಂಜದೇವ 2).

5 ಬೋಳಬಸವದೇವರು 1 (ಬೋಳಬಸವಾರ್ಯ 2, ಶಿವಪೂಜೆಯಾರ್ಯನೆಂದೆನಿಪ ಬೋಳಬಸವೇಶ 3, ನಿರಕ್ಷರಬೋಳಬಸವೇಶ್ವರ 8, ನಿಜಬೋಳಬಸವ 11).

6 ಗುಮ್ಮಳಾಪುರದ ಸಿದ್ಧಲಿಂಗದೇವರು 1, ಸಿದ್ಧಲಿಂಗಯತೀಶ 2, ಸಿದ್ಧಲಿಂಗೇಶ್ವರ 3, ಸಿದ್ಧವೀರೇಶಸ್ವಾಮಿ 8).

7 ಪಟಣ ದೇವರು 1 (ಪಟ್ಟಣದ ದೇವರು 2, 3)

8 ರೇವಣಸಿದ್ಧದೇವರು 1

9 ಶೀಲವಂತ ದೇವರು 1 (ಶೀಲವಂತೇಶ್ವರ 2, ಶೀಲವಂತಾರ್ಯ 3) ಯತಿವರ ಮರುಳಾರ್ಯರನ್ನು ನೆನೆದಿದ್ದಾರೆ.

10 ಚಿಟ್ಟಿಗದೇವರು 1 (ಚಿಟ್ಟಿಗ ಯತೀಶ್ವರ 2).

11 ಸಿದ್ಧಮಲ್ಲೇಶ 2, 9 (ಸಿದ್ಧಮಲ್ಲೇಶ್ವರ 3, ಸಿದ್ಧಮಲ್ಲಿಕಾರ್ಜುನ 9).

12 ರಾಚೋಟಿಯ ದೇವ 2 (ಸಂಪಗೆ ರಾಚವಟ್ಟಿ ದೇವರು 3).

13 ಚಂದ್ರಶೇಖರ 1 (ಚಂದ್ರಶೇಖರದೇವ 2, 10).

14 ಘನಲಿಂಗಿದೇವ 2, (ಘನಲಿಂಗಿದೇವರು 3)

15 ಹುಚ್ಚು ಪರ್ವತದೇವ 2.

16 ಕಂಕಣ ದೇವ 2, 3.

17 ದೊಡ್ಡ ಸಿದ್ಧಯ್ಯ 2 (ದೊಡ್ಡ ಸಿದ್ಧಲಿಂಗೇಶ್ವರ 2).

18 ಸಿದ್ಧಲಿಂಗೇಶ್ವರ 3 /ಸ್ವತಂತ್ರ ಸಿದ್ಧಲಿಂಗೇಶ್ವರ.

19 ಕಂಬಳ ದೇವರು 3.

20 ಸಿದ್ಧನಂಜೇಶ್ವರ 3.

21 ಚೆನ್ನದೇವರು 3/ ಹರತಾಳ ಚೆನ್ನಂಜೇದೇವರು (ಹರತಲೆ ನಂಜನಗೂಡು ತಾಲ್ಲೋಕು).

22 ಲಂಬಕರ್ಣದ ದೇವರು 3.

23 ಯೆಡತೊರೆಯ ಪುರದ ಗುರುಸಿದ್ಧವೀರಣ್ಣೊಡೆಯರು 3.

24 ಚಿಕ್ಕಮಲ್ಲೇಶ 3.

25 ಮರುಳಸಿದ್ಧೇಶ್ವರ 3.

26 ಸುರಗಿಯಾರ್ಯ 3.

27 ಶಾಂತಮಲ್ಲಿಕಾರ್ಜುನ ದೇವರು 3.

28 ಬೆಡಗಿನ ಪರ್ವತೇಶ್ವರ 3.

29 ಜಿಗುನಿಯ ಮರುಳ ದೇವರು 3 (ಜಿಗುಣಿಯ ಮರುಳೇಶ 5, ಮರುಳಸ್ವಾಮಿ 4, ಯತಿವರ ಮರುಳಾರ್ಯ 12).

30 ಮಳೆಯ ದೇವರು 3.

31 ಬತ್ತಲೆಯ ದೇವರು 3.

32 ಕೊಡಗಿಹಳ್ಳಿಯಾರ್ಯ 3.

33 ಜೋಲಿಯ ಬಸವೇಶ್ವರ 3.

34 ರಾಚವಟ್ಟಿ ಕೋರಿಯ ಸಿದ್ಧಬಸವೇಶ್ವರ 3.

35 ಹಿರಣ್ಯಾರ್ಯ 3.

36 ಕಿತ್ತಾವರದ ಚೆನ್ನಮಲ್ಲೇಶ್ವರ 3.


37 ಚೆನ್ನವೀರಾಚಾರ್ಯ 1, 6
38 ಅರುಣಾಚಲ ಸಿದ್ಧಲಿಂಗಾಖ್ಯ ಸ್ವಾಮಿಗಳು 7.
39 ಗುಬ್ಬಿಯ ಮಲ್ಲಣ್ಣ 10, 14 (ಮಲ್ಲಿಕಾರ್ಜುನ 15, ಮಲ್ಲಣಾಚಾರ್ಯ 9, ಹಿರಿಯ ಮಲ್ಲಣಾರ್ಯ14). ಗುರು ಮಲ್ಲಿನಾಥ (ಗುಬ್ಬಿಯಪ್ಪನ ಗುಡಿಯ ಪಕ್ಕದಲ್ಲಿರುವ ಪಾಪನಾಶಿನೀ ಕಲ್ಯಾಣಿಯ ದ್ವಾರದ ಮೇಲಿರುವ ಶಿಲಾಲೇಖದಲ್ಲಿ).

ಶಾಸನಗಳು

1 E.C. XII. Kunigal 49.
2 E.C.X. Chamarajanagara 116

ಗ್ರಂಥಗಳು :

2 ವಿರಕ್ತ ತೋಂಟದಾರ್ಯನ ಸಿದ್ದೇಶ್ವರಪುರಾಣ.
3 ಚೆನ್ನಬಸವ ಪುರಾಣ ಕ್ರಿ.ಶ. 1580.
4 ಅಮೃತೇಶ್ವರ ಭಾಷ್ಯ.
5 ಮಳೆಯರಾಜ ಚರಿತ್ರ.
6 ವಿಶೇಷಾನುಭವ ಷಟ್‌ಸ್ಥಲ.
7 ಪರ್ವತ ಶಿವಯೋಗಿಯ ತ್ರಿವಿಧ ಮೂರರ ಸಾರದ ಟೀಕೆ.
8 ನಿರಂಜನ ವಂಶರತ್ನಾಕರ.
9 ಭಾವಚಿಂತಾರತ್ನ.
10 ಶಾಂತೇಶನ ಸಿದ್ದೇಶ್ವರಪುರಾಣ.
11 ಮುರಿಗೆ ಶಾಂತವೀರೇಶ್ವರನ ಪಂಚವಿಂಶತಿ ಸ್ತೋತ್ರ.
12 ಆತ್ಮಾಂಗ ಪ್ರಣವಸಂಯೋಗಸ್ಥಲದ ತ್ರಿವಿಧಿ.
13 ಅಭವ ಕಂದ.
14 ಕೇತಕೀ ಸಂಗಮೇಶ್ವರಪುರಾಣ.
15 ವಾತುಲಾಗಮ ಶುದ್ಧಾಖ್ಯತಂತ್ರ.
16 ಮರುಳದೇವರು ನಿರೂಪಿಸಿದ ಕಂದ.
17 ಮುರಿಗೆ ಸ್ವಾಮಿಗಳು ನಿರೂಪಿಸಿದ ಕಂದ.
18 ಲಿಂಗಸ್ತೋತ್ರದಂಡಕ-ಬೋಳಬಸವಯೋಗಿನಾಂ ಕೃತಂ.



1. ನಿಜಗುರು ಸಿದ್ಧಶಾಂತ ಅಂಕಿತದ ವಚನಕಾರ, ಕವಿ ಹಾಗೂ ವಚನಾಗಮ ಸಂಕಲನಕಾರ.
2. ವಿಶೇಷಾನುಭವ ಷಟ್‌ಸ್ಥಲದ ಕರ್ತೃ
3. ಎರಡನೆಯ ಶೂನ್ಯ ಸಂಪಾದನಕಾರ
4. ಗಣಭಾಷ್ಯರತ್ನಮಾಲೆ ಹಾಗೂ ವಾತೂಲತಂತ್ರಟೀಕೆ ಇವುಗಳ ಕರ್ತೃ.
5. ಕೈವಲ್ಯ ಸಾಂಗತ್ಯದ ಕರ್ತೃ.
6. ಭಾವಚಿಂತಾರತ್ನ, ವೀರಶೈವಾಮೃತಮಹಾಪುರಾಣಗ್ರಂಥಕರ್ತೃ
7. ಚೇರಮಕಾವ್ಯ - ಈತನ ಕೃತಿ
8. ತೋಂಟದ ಸಿದ್ಧೇಶ್ವರಪುರಾಣ ಕರ್ತೃ
9. ವಚನ, ಕಂದ ಹಾಗೂ ಷಟ್ಪದಿ ಸಂಕಲನಕಾರ
10. ವಚನಸಂಪಾದನಕಾರ (ಎಳ್ನೆಮಲೆ / ಎಳೆಮಲೆ ಕೊಳ್ಳೇಗಾಲ ತಾ.)
11. ವಚನಸಂಪಾದನಕಾರ
12. ಷಟ್ಸ್ಥಲ ಬ್ರಹ್ಮಾನಂದ ವಿರಕ್ತಚರಿತ್ರ ಎಂಬ ವಚನಸಂಕಲನದ ಸಂಪಾದನಕಾರ.
13. ಶೀಲವಂತಯ್ಯನ ತ್ರಿವಿಧಿಯ ಟೀಕಾಕಾರ
14. ಅನುಭವಸೂತ್ರ ಟೀಕೆಯ ಕರ್ತೃ
15. ಚತುರಾಚಾರ್ಯ ಪುರಾಣಕರ್ತೃ
16. ಅಮೃತೇಶ್ವರ ಭಾಷ್ಯದ ಕರ್ತೃ
17. 'ಅಭವ ಕಂದ' ಕೃತಿಕಾರ.
18. ವಚನಾಚಾರ್ಯ. ವಚನಕಾರ. ಅಷ್ಟವಿಧಾರ್ಚನಾಕ್ರಮ ಶ್ಲೋಕ (೨೧) ಸಂಕಲನಕಾರ. ಲಿಂಗಸ್ತೋತ್ರದಂಡಕದ ಕರ್ತೃ
19. ಮೂರನೆಯ ಶೂನ್ಯಸಂಪಾದನಕಾರ
20. ನಾಲ್ಕನೆಯ ಶೂನ್ಯಸಂಪಾದನಕಾರ
21. ತೋಂಟದ ಸಿದ್ಧೇಶ್ವರ ಪುರಾಣಾದಿಗಳ ಕೃತಿಕರ್ತೃ ಹಾಗೂ ... ಬರೆಯಲು ಗೌರವಾಚಾರ್ಯ ... ನೀಡಿದವರು
22. ... ಪುರಾಣದ ಕರ್ತೃ
23. ... ಸಾರ - ಇತ್ಯಾದಿಗಳ ಟೀಕಾಕಾರ
24. 'ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು' - ಇವರ ಕೃತಿ
25. ... ಶಿವಲಿಂಗವಿಶತಿ. ಸ್ವಪ್ನದರ್ಶನ ಅರ್ಚನ ... ಹಾಗೂ ... ಶತಕಸಂಕಲನಕಾರ.
26. ವಚನಕಾರ, ಶ್ರೀ ಸುತ್ತೂರು ಮಠದ ಪೀಠಾಧಿಪತಿ
27. 'ಏಕೋತ್ತರಸಾರ'ದ ವಚನಸಂಕಲನಕಾರ.
28. ವೈರಾಗ್ಯಷಟ್ಪದಿ ಇತ್ಯಾದಿ ಕೃತಿಗಳ ಕರ್ತೃ
29. ಕನ್ನಡ ಸಂಸ್ಕೃತ ಉಭಯಭಾಷೆಗಳಲ್ಲಿಯೂ ಕವಿತಾ ಸಾಮರ್ಥ್ಯವನ್ನು ಹೊಂದಿ ಕೃತಿ ರಚಿಸಿದಾತ. ಹಾಲಾಸ್ಯಪುರಾಣ, ನಂದೀಶ್ವರ ಜಯದಂಡಕ, ಪ್ರಭುಲೀಲಾ (ಸಂಸ್ಕೃತ ಗ್ರಂಥಕರ್ತೃ). ಕೈವಲ್ಯನಾಮ್ನೋತ್ತರಶತಸ್ಥಳ, ವಿರೂಪಾಕ್ಷ ಪಂಚಾಶಿಕಾನವ, ಶೂನ್ಯಮಂತ್ರಗೋಪ್ಯ, ಶಿವಲಿಂಗಮಹಿಮಾಷಟ್ಪದಿ, ಶಿವಲಿಂಗಸಾಂಗತ್ಯ, ಯೋಗಕಲಾಪಸಾರ, ಸ್ಕಂದಕಲ್ಯಾಣ ಇತ್ಯಾದಿ ಗ್ರಂಥಕಾರ.
30. ಮುರಿಗಾ ಸ್ವಾಮಿಗಳ ಸ್ತೋತ್ರಸಾಂಗ್ಯದ ನಿರೂಪಕ. ಚೈತನ್ಯೇಶ್ವರ ವಿಜಯದ ಕರ್ತೃ.
31. "ವೀರಶೈವೋತ್ಕರ್ಷ ಪ್ರದೀಪಿಕಾ" "ವೀರಶೈವಾಚಾರ ನಿರ್ಣಯ" ಗ್ರಂಥಗಳ ಕರ್ತೃ.
32. ಶಾಂತವೀರೇಶ ಅಂಕಿತದ ಸಾಂಗ್ಯದ ಕರ್ತೃ.

ಗೋಸಲ ಪರಂಪರೆಯ ಮಹಾಬೆಳಗು

ಪಂಡಿತ ಚನ್ನಪ್ಪ ಎರೇಸೀಮೆ

೧೩ನೆಯ ಶತಮಾನದ ಕೊನೆಯಲ್ಲಿ ಮ್ಲೇಚ್ಛರ ಹಾವಳಿ ಮತ್ತು ಹರದನಹಳ್ಳಿ ಪೀಠಾಚಾರ್ಯರ ಕ್ರಾಂತಿ

ಕಲ್ಯಾಣದ ಕ್ರಾಂತಿಯ ನಂತರ ಅಸ್ತವ್ಯಸ್ತಗೊಂಡ ವೀರಶೈವ ಧರ್ಮದ ಪರಿಸ್ಥಿತಿಯನ್ನು ೧೨ನೆಯ ಶತಮಾನದ ಕೊನೆಯಲ್ಲಿ ಸಿದ್ಧಗಂಗಾ ಪರಿಸರದಲ್ಲಿ ಮಾಡಿದ ಸಿದ್ಧತ್ರಯರ ಕ್ರಾಂತಿಯು ಕ್ರಿ. ಶ. ಸುಮಾರು ೧೨೫೦ರವರೆಗೆ ಜನತೆಯನ್ನು ಸುವ್ಯವಸ್ಥೆಗೆ ತರಲು ಪ್ರಯತ್ನಿಸಿತ್ತು. ಆದರೆ ಒಮ್ಮೆಲೆ ಬಿರುಗಾಳಿಯಂತೆ ೧೩ನೆಯ ಶತಮಾನದ ಕೊನೆ ಹಾಗೂ ೧೪ನೆಯ ಶತಮಾನದ ಆದಿಯಲ್ಲಿ ಅನೇಕ ಅನಿಷ್ಟ ಪರಂಪರೆಗಳು ಕಲ್ಯಾಣದಲ್ಲಿ ಬಂದೊದಗಿದವು. ಇಲ್ಲಿ ಧರ್ಮ, ಸಾಹಿತ್ಯ, ಸಂಸ್ಕೃತಿ, ಸಂಪತ್ತೂರೆಗೊಂಡು ಘೋರ ವಿಪತ್‌ಪರಂಪರೆಗಳನ್ನು ಜನತೆ ಅನುಭವಿಸುವ ಹಠಾತ್ತಾದ ಪರಿಸ್ಥಿತಿ ಬಂದೊದಗಿತು. ಒಂದು ಕಾಲದಲ್ಲಿ ಕನ್ನಡನಾಡು ದಕ್ಷಿಣ ಭಾರತವನ್ನು ಸುಸ್ಥಿತಿಯಲ್ಲಿಡುವ ಕರ್ತವ್ಯ ಭಾರವನ್ನು ಹೊತ್ತು ನಿಂತ ನಾಡಾಗಿತ್ತು. ಇಲ್ಲಿ ಹುಟ್ಟಿ ಬೆಳೆದ ಚಕ್ರಾಧಿಪತ್ಯಗಳೇ ಇದಕ್ಕೆ ಸಾಕ್ಷಿ. ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದಷ್ಟು ಚಕ್ರಾಧಿಪತ್ಯಗಳು ಭಾರತದ ಇನ್ನಾವ ಭಾಗದಲ್ಲೂ ಹುಟ್ಟಿ ಬೆಳೆಯಲ್ಲಿಲ್ಲವೆಂದರೆ ತಪ್ಪಲ್ಲ. ಮೌರ್ಯರ ಸಾಮಂತರಾಗಿದ್ದ ಶಾತವಾಹನರು ಮತ್ತು ಗಂಗರು ಮೊದಲ್ಗೊಂಡು ಹೊಯ್ಸಳರವರೆಗೆ ಸುಮಾರು ೧೨೦೦ ವರ್ಷಗಳ ದಕ್ಷಿಣ ಭಾರತವು ಜ್ಞಾನ ವಿಜ್ಞಾನಗಳ, ಸಾಹಿತ್ಯ, ಲಲಿತಕಲೆ, ಶಿಲ್ಪವಿಜ್ಞಾನಗಳ ತವರುಮನೆಯೆನಿಸಿತ್ತು. ಚಾಲುಕ್ಯ ಚಕ್ರವರ್ತಿಗಳ ಆಳೊತ್ತಿನಲ್ಲಿ ವೈಭವ ಶಿಖರಕೇರಿದ್ದ ಕನ್ನಡಚಕ್ರಾಧಿಪತ್ಯದ ಆಧಾರಸ್ತಂಭಗಳು ಆ ಚಕ್ರಾಧಿಪತ್ಯದ ಅವಸಾನದ ನಂತರ ಲಿಕಿಲಿಕಿಯಾಗಿ ಹೋದವು. ಆಗ ಸಮಗ್ರಕರ್ನಾಟಕದ ಕ್ಷೇಮಚಿಂತನೆಯ ಇನ್ನೊಂದು ಚಕ್ರಾಧಿಪತ್ಯ ಗರಿಗಟ್ಟಿಕೊಳ್ಳಲಿಲ್ಲ. ಅನೇಕ ಚಿಕ್ಕ ದೊಡ್ಡ ಸ್ವಯೂಥ ಕಲಹಪೀಡಿತ ರಾಜ್ಯಗಳು ಮಾತ್ರ ಉಳಿದವು. ಅದುವರೆಗೆ ಉತ್ತರದ ಮಹಮ್ಮದೀಯರ ದಾಳಿಯಿಂದ ದೂರವಿದ್ದ ಕನ್ನಡನಾಡಿಗೆ ಮಹಮ್ಮದೀಯರ ದಾಳಿಯ ಪಿಡುಗು ಪ್ರಾರಂಭವಾಯಿತು. ಸಮರ್ಥವಾಗಿ ಆ ದಾಳಿಯನ್ನು ತಡೆಗಟ್ಟುವ ಕೆಚ್ಚು ನೆಚ್ಚುಗಳು ಕನ್ನಡಿಗರಲ್ಲಿ ಉಳಿಯಲಿಲ್ಲ. ಇದಕ್ಕೆ ಕಾರಣಗಳು ಅನೇಕ. ಎಲ್ಲೆಲ್ಲೂ ಅನೈಕಮತ್ಯ ತುಂಬಿತ್ತು. ಅಂತೆಯೇ ಪ್ರಥಮತಃ ದೊಡ್ಡ ಪ್ರಮಾಣದ ಸೈನ್ಯದೊಂದಿಗೆ ದಿಲ್ಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯು ೧೨೯೪ರ ಹೊತ್ತಿನಲ್ಲಿ ದಕ್ಷಿಣ ಭಾರತಕ್ಕೆ ಪದಾರ್ಪಣೆ ಮಾಡಿ ದೇವಗಿರಿಗೆ ಮುತ್ತಿಗೆ ಹಾಕಿ ಅಲ್ಲಿಯ ಅರಸನಾದ ರಾಮದೇವನನ್ನು ಸೋಲಿಸಿ, ಕಪ್ಪವನ್ನು ಸೆಳೆದು ಹೊರಟುಹೋದ ನಂತರ ಕನ್ನಡನಾಡಿನ ಜನಾಂಗಕ್ಕೆ ಉಸುರು ಕಟ್ಟಿದಂತಾಗಿ ಅನೇಕ ಕಷ್ಟನಷ್ಟಗಳು ಪ್ರಾರಂಭವಾದವು. ಇಲ್ಲಿನ ಅಪಾರ ಐಶ್ವರ್ಯ ಅವರ ಕಣ್ಣನ್ನು ಕುಕ್ಕಿಸಿತು. ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ಭಾರತದ ದಾಳಿಯ ರುಚಿಯುಂಡ ಅವನ ಸರದಾರನಾದ ಮಲಿಕಾಫರನು ಕ್ರಿ. ಶ. ೧೩೦೯ ರಿಂದ ೧೩೧೧ರವರೆಗೆ ದೊಡ್ಡ ಪ್ರಮಾಣದಲ್ಲಿ ದಾಳಿಮಾಡಿ ಕನ್ನಡ ನಾಡಿನ ಪ್ರಸಿದ್ಧ ದೊರೆಗಳಾದ ಯಾದವರನ್ನು, ಹೊಯ್ಸಳರನ್ನು ಸೋಲಿಸಿ ಅವರ ಐಶ್ವರ್ಯವನ್ನೆಲ್ಲ ಕೊಳ್ಳೆಹೊಡೆದನು. ಹೆಚ್ಚು ಕಡಿಮೆ ದಕ್ಷಿಣ ಭಾರತವನ್ನೆಲ್ಲ ಅಲ್ಲೋಲಕಲ್ಲೋಲಗೊಳಿಸಿದನು. ಓರಂಗಲ್ಲಿನ ಪ್ರತಾಪರುದ್ರನನ್ನು ಸ್ವಾಧೀನಪಡಿಸಿಕೊಂಡು ಪಾಂಡ್ಯರ ರಾಜಧಾನಿಯಾದ ಮಧುರೆಯಲ್ಲಿ ತನ್ನ ಸೈನ್ಯವನ್ನು ಇಟ್ಟನು. ಮುಂದೆ ದೆಹಲಿಯ ಹುಚ್ಚುದೊರೆ ಮಹಮ್ಮದ್‌ಬಿನ್ ತೊಗಲಕನಂತೂ ಓರಂಗಲ್ಲು, ದೇವಗಿರಿಗಳನ್ನು ದೆಹಲಿಯ ಒಂದು ಭಾಗಗಳಂತೆಯೇ ಮಾಡಿದನು. ಕನ್ನಡಿಗರ ಆಶಾಕಿರಣದಂತಿದ್ದು ಪ್ರಬಲ ರಾಜರಿಂದ ಕೂಡಿದ್ದ ಹೊಯ್ಸಳರ ದೋರಸಮುದ್ರವೀಗ ಹಾಳು. ಯಾದವರೂ ಮೂಲೆಗುಂಪು. ಇನ್ನುಳಿದ ಚಿಕ್ಕ ಪುಟ್ಟ ಪಾಳೆಯಪಟ್ಟುಗಳ ಪಾಡೇನು? ಈ ಸ್ಥಿತಿ ಕ್ರಿ.ಶ.೧೩೩೭ರವರೆಗೆ ಅವ್ಯಾಹತವಾಗಿ ನಡೆಯಿತು. ಈಗ ಕನ್ನಡನಾಡಿನ ಜನತೆ ಕಣ್ಣುಬಿಟ್ಟಿತು. ಕನ್ನಡನಾಡಿನಲ್ಲಿದ್ದ ಸಮಸ್ತ ಧರ್ಮಗಳು ಅಳಿಯತೊಡಗಿದ್ದವು. ಜನತೆ ಗಾಬರಿಗೊಂಡಿತು. ಕಂಪಲಿಯ ರಾಜನು ಹತನಾಗಿ ಅವನ ಇಬ್ಬರು ಮಕ್ಕಳು ಸೆರೆಹಿಡಿಯಲ್ಪಟ್ಟು ಪರಕೀಯ ಧರ್ಮಕ್ಕೆ ಮತಾಂತರಗೊಂಡದ್ದಂತೂ ಕನ್ನಡಿಗರಿಗೆ ತೀರಾ ಗಾಬರಿಯನ್ನುಂಟುಮಾಡಿತು. ಧರ್ಮ, ದೇವಾಲಯ, ಧರ್ಮಗ್ರಂಥಗಳ ಮೇಲೂ ದಾಳಿ ಪ್ರಾರಂಭವಾಯಿತು.[1] ಆಗ ಸಮಗ್ರ ಕರ್ನಾಟಕವನ್ನು ಜಾಗೃತಿಗೊಳಿಸಿದ ಕೀರ್ತಿ ಮಠಾಧಿಪತಿಗಳಿಗೆ ಸಲ್ಲಬೇಕು. ಆ ಮಠಾಧಿಪತಿಗಳು ಯಾರೇ ಆಗಿರಬಹುದು. ಶೈವ, ವೀರಶೈವ, ಅದ್ವೈತ, ವಿಶಿಷ್ಟಾದ್ವೈತ, ಜೈನ ಈ ಎಲ್ಲ

ಸಿದ್ಧಾಂತಾನುಯಾಯಿಗಳೂ ಒಂದುಗೂಡಿದರು. ಧರ್ಮ ರಕ್ಷಣೆಗಾಗಿ, ಸಂಸ್ಕೃತಿ, ಸಾಹಿತ್ಯ, ಶಿಲ್ಪಾದಿಗಳ ರಕ್ಷಣೆಗಾಗಿಯೇ ಒಂದು ಮಹಾಸಾಮ್ರಾಜ್ಯ ಕಟ್ಟುವ ತಮ್ಮ ಸಂನ್ಯಾಸ ಧರ್ಮವನ್ನು ಕ್ರಿಯಾಮುಖಿಗೊಳಿಸಿದರು. ಪಂಪಾಕ್ಷೇತ್ರದ ಪ್ರಸಿದ್ಧ ಕಾಳಾಮುಖಾಚಾರ್ಯ ಕಾಶಿಕ್ರಿಯಾವಿಲಾಸಶಕ್ತಿ, ಶೃಂಗೇರಿ ಶ್ರೀಮಚ್ಛಂಕರ ಭಗವತ್ಪಾದರ ಪರಂಪರೆಯ ಶಾರದಾಪೀಠಾಧಿಪರು ತಮ್ಮ ಮಠಮಾನ್ಯಗಳನ್ನು ಬಿಟ್ಟೆದ್ದರು. ನಾಡಿನುದ್ದಗಲಕ್ಕೂ ಸಂಚರಿಸಿದರು. ಇದೇ ಸಮಯದಲ್ಲಿಯೇ ವೀರಶೈವ ಶೂನ್ಯಪೀಠಾಧಿಪತಿ ಸ್ಥಾನಾಪನ್ನರಾಗಿದ್ದ ಹರದನಹಳ್ಳಿ (ಈಗಿನ ಚಾಮರಾಜನಗರ ತಾಲ್ಲೂಕು) ಜಗದ್ಗುರು ಗೋಸಲಸಿದ್ಧೇಶ್ವರರೂ ಧಾರ್ಮಿಕ ಕೆಚ್ಚು ನೆಚ್ಚುಗಳನ್ನು ಜನತೆಯಲ್ಲಿ ತುಂಬಲು ಸಂಚಾರ ಕೈಗೊಂಡರು. ದಕ್ಷಿಣ ಭಾರತವೆಲ್ಲ ಒಗ್ಗೂಡಿ ದಿಗ್ಗೆಂದು ಎದ್ದುನಿಂತಿತು. ಹೊನ್ನಿನ ಹೊಳೆ ಹರಿಯಿತು. ಸಂಗಮವಂಶದ ಹಕ್ಕ, ಬುಕ್ಕರೇ ಮೊದಲಾದ ನಾಲ್ವರು ಕ್ಷತ್ರಿಯ ವೀರರನ್ನು ಮುಂದೆಮಾಡಿ 'ವಿಜಯನಗರ' ಅಥವಾ 'ವಿಜಯಕಲ್ಯಾಣ'ವೆಂಬ ಹೆಸರಿನ ಧರ್ಮರಾಜ್ಯ ಸ್ಥಾಪನೆಯ ಪೂರ್ವರಂಗಕ್ಕೆ ಅಂದಿನ ದಕ್ಷಿಣ ಭಾರತದ ಸುಪ್ರಸಿದ್ಧ ಶೈವಕ್ಷೇತ್ರವಾದ ಪಂಪಾವಿರೂಪಾಕ್ಷನ ಸ್ಥಾನವೇ ಆರಿಸಲ್ಪಟ್ಟಿತು. ಅವನನ್ನೆ ತಮ್ಮ ರಾಜಮುದ್ರೆಯನ್ನಾಗಿ ಸ್ವೀಕರಿಸಿ ಸಾಮ್ರಾಜ್ಯದ ಅಸ್ತಿಭಾರಹಾಕಿದರು. ಇದಕ್ಕೆ ಹೊಯ್ಸಳರ ಕೊನೆಯ ರಾಜನೂ, ಮಹಮ್ಮದೀಯರಿಂದ ಜರ್ಝರಿತಗೊಂಡವನೂ ಆದ ಮುಮ್ಮಡಿ ಬಲ್ಲಾಳನ ಪೂರ್ಣ ಆಶೀರ್ವಾದ ದೊರಕಿತು. ಕಳೆದುಳಿದ ದ್ರವ್ಯವನ್ನೆಲ್ಲ ರಾಜರೂ, ಪಾಳೆಗಾರರೂ, ಜನತೆಯೂ, ವಿಜಯನಗರಕ್ಕೆ, ಸುರಿಯಿತು. ಅದೇ ಹೊನ್ನಿನ ಮಳೆಗರೆದರೆಂಬ ಪವಾಡದ ಕಥೆ. ಧರ್ಮರಕ್ಷಣೆಗಾಗಿಯೇ ಸಾಮ್ರಾಜ್ಯದ ಸ್ಥಾಪನೆಯಾಯಿತು. 'ದಕ್ಷಿಣ ಭಾರತದ ಇತಿಹಾಸದಲ್ಲಿ ಧರ್ಮರಕ್ಷಣೆಯನ್ನೇ ಉದ್ದೇಶವಾಗಿಟ್ಟುಕೊಂಡ ಸಾಮ್ರಾಜ್ಯ ಬೇರೊಂದು ಇನ್ನೂ ಕಂಡುಬಂದಿಲ್ಲ. ಇದೇ ವಿಜಯನಗರ ಸಾಮ್ರಾಜ್ಯಸ್ಥಾಪನೆಯ ವೈಶಿಷ್ಟ್ಯ. ಜನತೆ ಮತ್ತು ರಾಜರುಗಳು ವೈಯಕ್ತಿಕ ಭಿನ್ನತೆಗಳನ್ನು ದೂರೀಕರಿಸಿದರು. ಬಡವಬಲ್ಲಿದರೆನ್ನದೆ, ಉಚ್ಚನೀಚರೆನ್ನದೆ ಪಂಡಿತ ಪಾಮರರೆನ್ನದೆ ಸಮಸ್ತ ಹಿಂದೂಗಳೆಲ್ಲ ಒಟ್ಟುಗೂಡಿದರು. ಸಮನ್ವಯ ಮನೋಭಾವನೆಗಳನ್ನು ಬೆಳೆಸಿಕೊಂಡು ಏಕೀಭವಿಸಿ ಹೆಣಗಿದರು. ಈ ಕಾರಣದಿಂದ ಅತ್ಯಲ್ಪಕಾಲದಲ್ಲಿ ಪೂರ್ವ ಪಶ್ಚಿಮ ಘಟ್ಟಗಳ ಮಧ್ಯದ ನಾಡಾದ ದಕ್ಷಿಣಭಾರತವನ್ನು ಏಕಚಕ್ರಾಧಿಪತ್ಯದ ನೆರಳಿನಲ್ಲಿ ಸಮಾವೇಶಗೊಳಿಸಲು ಸಾಧ್ಯವಾಯಿತು. ಹಿಂದೂಗಳಿಗೆ, ಹಿಂದೂ ಧರ್ಮಗಳಿಗೆ ಬಂದೊದಗಿದ ಪೀಡೆ ಪರಿಹಾರವಾಯಿತು. ಧರ್ಮಕ್ಕೆ ಸಂಸ್ಕೃತಿಗಳಿಗೆ ಆಧಾರಭೂತರಾಗಿದ್ದ ಮಠಾಧಿಪತಿಗಳಿಗೂ, ವಿದ್ವಾಂಸರಿಗೂ, ದೇವಾಲಯಾದಿಗಳಿಗೂ ರಕ್ಷಣೆಯೊದಗಿತು. 'ವಿಜಯನಗರ' ಅಥವಾ 'ವಿಜಯಕಲ್ಯಾಣ' ಈ ಹೆಸರಿನಲ್ಲಿ ಈ ಎಲ್ಲ ಅಂಶಗಳೂ ಧ್ವನಿತವಾಗುತ್ತಿವೆ. ಆದರೆ ವಿಜಯನಗರದ ಅರಸರು ನಾಮ ಮಾತ್ರ, ಪ್ರಭುವು ನಿಜವಾಗಿ 'ಶ್ರೀ ವಿರೂಪಾಕ್ಷ'ನೇ ಆಗಿದ್ದನೆಂಬುದನಿಲ್ಲಿ ಗಮನಿಸಬಹುದು. ಶ್ರೀ ವಿರೂಪಾಕ್ಷನ ಹೆಸರೇ ರಾಜಮುದ್ರೆ. ವಿರೂಪಾಕ್ಷ ಮುಂದೆ ಮುಂದೆ, ಅರಸರು ಅವನ ಹಿಂದೆ ಹಿಂದೆ. ಈ ಉದ್ದೇಶಕ್ಕೆ ಭಂಗ ಬಂದಾಗಲೇ ಸಾಮ್ರಾಜ್ಯವೂ ಒಡೆಯಿತೆಂಬುದನ್ನು ಇಲ್ಲಿಯೇ ಸ್ಮರಿಸಿಕೊಳ್ಳಬಹುದು. ಇಂಥ ಪರಿಸ್ಥಿತಿಯಲ್ಲಿಯೇ ಮಹಿಮಾಶಾಲಿಗಳೂ, ಅಘಟಿತಘಟನಾಸಮರ್ಥರೂ ಆದ ಗೋಸಲಸಿದ್ಧೇಶ್ವರರು ತಮ್ಮ ಹರದನಹಳ್ಳಿ(ವಾಣಿಜ್ಯಪುರಿ)ಯ ಪೀಠದಲ್ಲಿ ಉತ್ತರಾಧಿಕಾರಿಯಾಗಿ ಶಂಕರಾಚಾರ್ಯ ಎಂಬುವರನ್ನು ಕುಳ್ಳಿರಿಸಿ, ತಾವು ಸಂಚಾರ ಕೈಕೊಂಡರು. ಪರಕೀಯರ ದಾಳಿಗೆ ತುತ್ತಾಗಲಿದ್ದ, ತುತ್ತಾಗಿದ್ದ, ನಾಡಿನ ಜನತೆಯಲ್ಲಿ ಧಾರ್ಮಿಕ ಪ್ರಜ್ಞೆ, ತನ್ಮೂಲಕ ಕೆಚ್ಚುನೆಚ್ಚುಗಳನ್ನು ಬೇರೂರಿಸಲು ತಮ್ಮ ಪಾಲಿನ ಕಾರ್ಯಕ್ಕೆ ತೊಡಗಿದರು.

ಗೋಸಲಸಿದ್ಧೇಶ್ವರರು ಸಿದ್ಧಗಂಗೆಯಲ್ಲಿ ಮಠವನ್ನು ಸ್ಥಾಪಿಸಿದುದು : (ಸು. ೧೩೦೦-೧೩೫೦)

ಗೋಸಲಸಿದ್ಧೇಶ್ವರರು ಹರದನಹಳ್ಳಿ ನಿರಂಜನ ಜಗದ್ಗುರು ಪೀಠಾಚಾರ್ಯರಲ್ಲಿ ೧೫ನೆಯವರು. ಅವರು ಶಂಕರಾಚಾರ್ಯ ರೆಂಬುವರನ್ನು ೧೬ನೆಯ ಜಗದ್ಗುರುಗಳೆಂದು ಗೊತ್ತುಮಾಡಿ ಉತ್ತಾರಾಧಿಕಾರಕೊಟ್ಟು, ತಾವು ಮಠವನ್ನು ಬಿಟ್ಟು ತಮ್ಮ ಅನುಯಾಯಿಗಳಾದ ೧೦೧ ಜನ ವಿರಕ್ತಮೂರ್ತಿಗಳೊಡನೆ ಕೂಡಿಕೊಂಡು ಧರ್ಮಜಾಗೃತಿಗೊಳಿಸುತ್ತ ಪ್ರಥಮತಃ ದಕ್ಷಿಣ ಭಾರತದ ಸುಪ್ರಸಿದ್ಧ ಶೈವ, ವೀರಶೈವ, ಜೈನ, ಅದ್ವೈತ ಸಿದ್ಧಾಂತಗಳ ಕೇಂದ್ರವಾಗಿದ್ದ ಶಿವಗಂಗೆಗೆ ಬಂದರು. ಅಲ್ಲಿ ಭಕ್ತರ ನೆರವಿನಿಂದ ೬೩ ಜನ ಪುರಾತನರ ಮತ್ತು ಏಕಾದಶ ರುದ್ರಗಣಗಳ ಪೂಜೋತ್ಸವಗಳನ್ನು ನೆರವೇರಿಸಿದರು. ಅಲ್ಲಿ ಕೆಲವು ದಿನಗಳು ವಾಸ್ತವ್ಯಮಾಡಿ ಧರ್ಮಪ್ರಸಾರ ಕಾರ್ಯ ಕೈಗೊಂಡ ಮೇಲೆ ತಮ್ಮದೇ ಆದ ಒಂದು ಸ್ವತಂತ್ರಸ್ಥಾನವನ್ನು ಕಲ್ಪಿಸಿಕೊಳ್ಳಲು, ಅದನ್ನು ಸ್ವತಂತ್ರ ವೀರಶೈವ ಕ್ಷೇತ್ರವನ್ನಾಗಿ ಮಾಡಿಕೊಳ್ಳಲು ಮನಸ್ಸುಮಾಡಿ, ಶಿವಗಂಗೆಯಿಂದ ವಾಯವ್ಯಕ್ಕೆ ಸುಮಾರು ಮುಕ್ಕಾಲು ಗಾವುದ(೯ ಮೈಲಿ) ದೂರದಲ್ಲಿದ್ದ ಕೇತಸಮುದ್ರದ ಪಕ್ಕದಲ್ಲಿರುವ ಬೆಟ್ಟಕ್ಕೆ ಬಂದರು. ತುಮಕೂರು ಗೂಳೂರು ಸೀಮೆಯ ಭಕ್ತವೃಂದ ಶ್ರೀಗೋಸಲಸಿದ್ಧೇಶ್ವರರನ್ನು ಎದುರ್ಗೊಂಡಿತು. ಈ ಬೆಟ್ಟದ ಸನ್ನಿವೇಶಕ್ಕೆ ಮಾರುಹೋದ ಗೋಸಲಸಿದ್ಧೇಶ್ವರರು ಈ ಬೆಟ್ಟದ ಪರಿಸರದಲ್ಲಿ ತಮ್ಮೊಡನಿದ್ದ ನೂರೊಂದು ವಿರಕ್ತರಿಗೆ ನೂರೊಂದು

ತಪೋನುಷ್ಠಾನಯೋಗ್ಯವಾದ ಗುಹೆಗಳನ್ನು ಕಲ್ಪಿಸಿದರು. ತಾವು ಅಲ್ಲಿ ಭಕ್ತಾದಿಗಳ ನೆರವಿನಿಂದ ಒಂದು ಮಠವನ್ನು ಸ್ಥಾಪಿಸಿದರು. ಪ್ರಥಮತಃ ಶ್ರೀ ಸಿದ್ಧಗಂಗಾಕ್ಷೇತ್ರದಲ್ಲಿ ಹರದನಹಳ್ಳಿ ಶೂನ್ಯಪೀಠಾಚಾರ್ಯರು ಸ್ಥಾಪಿಸಿದ ಮಠದ ಪರಂಪರೆಯೇ ಇಂದಿಗೂ ಸಾರೋದ್ಧಾರವಾಗಿ ನಡೆದುಕೊಂಡು ಬರುತ್ತಿದೆ. ಹರದನಹಳ್ಳಿಯ ಶೂನ್ಯಪೀಠಾಧೀಶರು ಯಾರೂ ತಾವಾಯಿತು, ತಮ್ಮ ಮಠವಾಯಿತು! ಎಂದು ತಮ್ಮ ಮಠದಲ್ಲಿ ಕುಳಿತವರಲ್ಲ. ಇಂದು ನಾಡಿನ ಉದ್ದಗಲಕ್ಕೂ ಇರುವ ಅನೇಕ ಗದ್ದುಗೆಗಳು, ಮಠಗಳು, ದೇವಾಲಯಗಳು ಈ ಪರಂಪರೆಯವರ ಬೃಹತ್ತು ಮಹತ್ತುಗಳನ್ನು ಸೂಚಿಸುವ ಮುಖ್ಯ ಅವಶೇಷಗಳಾಗಿವೆ. ಸಿದ್ಧಗಂಗಾ ಕ್ಷೇತ್ರದಲ್ಲಿ ಇಂದು ಹಳೆಯ ಮಠವೆಂದು ಹೇಳುವ ಮಠವೇ ಗೋಸಲಸಿದ್ಧೇಶ್ವರರು ಸ್ಥಾಪಿಸಿದ ಮಠ. ಅದರ ಕೆಲವು ಭಾಗಗಳು ಇತ್ತೀಚೆಗೆ ಅಭಿವೃದ್ಧಿಗೊಂಡಿರಬಹುದು. ೯ ಕಂಬಗಳ ಪಡಸಾಲೆಯ ವಿಚಿತ್ರ ರೀತಿಯ ಕಟ್ಟಡದ ಮಾದರಿಯನ್ನಿಲ್ಲಿ ನೋಡಬಹುದು. ಕಂಬಗಳ ಮೇಲೆ ಕೊರೆದ ಚಿತ್ರಗಳು ಅಂದಿನ ಶ್ರೀ ಮಠದ ಚರಿತ್ರೆಯನ್ನು ಪ್ರತಿಬಿಂಬಿಸುತ್ತವೆ.

ಗಂಗೋದ್ಭವ

ಗೋಸಲಸಿದ್ಧೇಶ್ವರರು ತಮ್ಮ ನೂರೊಂದು ವಿರತರೊಡನೆ ಹೀಗೆ ಶ್ರೀ ಸಿದ್ಧಗಂಗಾಕ್ಷೇತ್ರದಲ್ಲಿ ಲಿಂಗಪೂಜೆ ಜಂಗಮ ದಾಸೋಹಾದಿ ಕ್ರಿಯೆಗಳಲ್ಲಿ ಇದ್ದು, ಧರ್ಮಜಾಗೃತಿಯ ಕಾರ್ಯವನ್ನು ಮುಂದುವರಿಸಿಕೊಂಡು ಬರತೊಡಗಿದರು. ಮಹಾಮಹಿರಾದ ಸಿದ್ಧೇಶ್ವರರ ಪಾದ ಕೃಪೆಯಿಂದ ಬಂಡೆಯಿಂದ ಜಲ ಚಿಮ್ಮಿತು. ಆ ಜಲಕ್ಕೆ 'ಸಿದ್ಧಗಂಗಾ' ಜಲವೆಂದು ಹೆಸರಾಯಿತು. ಕ್ಷೇತ್ರಕ್ಕೂ ಅದೇ ಹೆಸರು ಉಂಟಾಯಿತೆಂದು ನಂಬಲಾಗುತ್ತಿದೆ.[2] ಅಂದಿನಿಂದ ಇಂದಿನವವರಿಗೆ ಈ ಗಂಗಾಜಲದ ಸ್ನಾನಾದಿಗಳನ್ನು ಅವಿಚ್ಛಿನ್ನವಾಗಿ ಸಮಸ್ತಕೋಮಿನ ಜನರು ಆಚರಿಸುತ್ತ ಬಂದಿದ್ದಾರೆ; ಜನಮನದ ಮೈಲಿಗೆಯನ್ನು ಈ ಶಿವಯೋಗಿಯ ಪಾದಸ್ಪರ್ಶಜಲ ಕಳೆಯುತ್ತ ಬಂದಿದೆ. ಈ ವಿಷಯದಲ್ಲಿ ಅಂದಿನಿಂದ ಇಂದಿನವರೆಗೆ ಜಾತಿಗೊಂದಲ ಅಡ್ಡ ಬಂದಿಲ್ಲ; ಬಡವ ಬಲ್ಲಿದ ಭಾವ ಪ್ರತಿಬಂಧಕಗೊಳಿಸಿಲ್ಲ. ಇದೊಂದು ಸಮಸ್ತಕೋಮಿನ ಜನರ, ಅನೇಕ ದರ್ಜೆಯ ಜನರ ಭಾವೈಕ್ಯದ ಮಹಾಸೇತುವೆಯೆನಿಸಿ ಪವಿತ್ರತೀರ್ಥವೆನಿಸಿ, ಕ್ಷೇತ್ರ ಪಾವಿತ್ರ್ಯದ ರಕ್ಷಾಕವಚವೆನಿಸಿ, ಸಿದ್ಧಿಶುದ್ಧಿಗಳ ಆಗರವೆನಿಸಿ, ರುಚಿಶುಚಿಗಳ ಸ್ನೈಪಿನ ಸೀಮೆಯೆನಿಸಿ ಮೆರೆಯುತ್ತಿರುವ ಅಂಶವೇನೂ ಯಾರು ಅರಿಯದ ವಿಷಯವಲ್ಲ. ಅಂತೆಯೇ ಶ್ರೀ ಕ್ಷೇತ್ರವು ಅದೇ ಸಂಪ್ರದಾಯವನ್ನು ಉಳಿಸಿಕೊಂಡು ಬೆಳೆಸಿಕೊಂಡು, ಸಮಸ್ತ ಕೋಮಿನ ಜನರ ಹಿತವನ್ನು ಸಾಧಿಸಿಕೊಂಡು ಬರುವ ಮಹಾಹೊಣೆ ಹೊತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಸಿದ್ಧಗಂಗಾ ತೀರ್ಥದ ಬಗೆಗೆ ನಿರಂಜನವಂಶ ರತ್ನಾಕರದಲ್ಲಿ ವಿಶೇಷವರ್ಣನೆ (ಪುಟ ೩೨) ಯಿದ್ದು, ಈ ತೀರ್ಥದ ಸ್ನಾನಪಾನಾದಿಗಳಿಂದ ಬ್ರಹ್ಮಹತ್ಯಾದಿ ದೋಷಗಳೂ, ಕುಷ್ಠರೋಗಗಳೂ ಪರಿಹಾರವಾಗುತ್ತವೆಂದು ವರ್ಣಿಸಲಾಗಿದೆ. ಗೋಸಲಸಿದ್ಧೇಶ್ವರರ ಕಾಲದಲ್ಲಿಯೇ ಆ ಬೆಟ್ಟದಲ್ಲಿ ಸಿದ್ಧಗಂಗಾ ತೀರ್ಥದ ಬಳಿ ಭಕ್ತಾದಿಗಳು ಗಣಪರ್ವಾದಿಗಳನ್ನು ಮಾಡುತ್ತಿದ್ದರೆಂದೂ, ಸೇವಾಕೈಂಕರ್ಯಾದಿಗಳನ್ನು ವಿಶೇಷವಾಗಿ ಆಚರಿಸುತ್ತಿದ್ದರೆಂದೂ ವಿವರಿಸಲಾಗಿದೆ. ಒಂದು ವೇಳೆ ಜಲವು ಬತ್ತಿದರೆ ಭಕ್ತಾದಿಗಳೆಲ್ಲ ಸ್ನಾನಾದಿಗಳನ್ನು ಮಾಡಿ ಭಕ್ತಿಯಿಂದ ಸಿದ್ಧೇಶ್ವರನನ್ನು ಭಜಿಸಿದರೆ ಮೊದಲಿನಂತೆ ಗಂಗಾಜಲವು ಬರುತ್ತದೆಂದೂ ಆ ಜಲದಿಂದ ೧೦ ಸಾವಿರದವರೆಗೂ ಗಣತೃಪ್ತಿಯನ್ನು ಮಾಡಬಹುದೆಂದೂ ಆ ಗ್ರಂಥ ತಿಳಿಸುತ್ತದೆ.[3]

ಹೀಗೆ ಗೋಸಲಸಿದ್ಧೇಶ್ವರರು ತಮ್ಮ ನೆಲೆಯನ್ನು ಶ್ರೀ ಸಿದ್ಧಗಂಗೆಯಲ್ಲಿ ಮಾಡಿ, ಧರ್ಮಪ್ರಸಾರಗೊಳಿಸಿ ಲಿಂಗೈಕ್ಯರಾದರೆಂದು ತಿಳಿದುಬರುವುದು. ಆದರೆ ಈಗ ಬಂದಿರುವ ದೊಡ್ಡ ತೊಡಕೆಂದರೆ ಅವರ ಗದ್ದುಗೆಯ ವಿಚಾರ. ವಿಸ್ತಾರವಾದ ಕಾಲಪ್ರಾಂತದ ಮರೆಯಲ್ಲಿ ಗದ್ದುಗೆಯ ಸ್ಥಾನವು ಅಡಗಿದೆ. ಗೋಸಲಸಿದ್ಧೇಶ್ವರರು ಕೊನೆಯವರೆಗೆ ಶ್ರೀ ಸಿದ್ಧಗಂಗಾಕ್ಷೇತ್ರದ ಸಿದ್ಧಗಂಗಾ ಮಾತೆಯಿರುವ ಗವಿಯಲ್ಲಿಯೇ ಶಿವಯೋಗಾನುಷ್ಠಾನಮಾಡಿದವರು. ತಮ್ಮ ಹಿಂದಿದ್ದ ೧೧೧ ವಿರತರುಗಳಿಗೆ ಅನುಗ್ರಹಮಾಡಿ ಮುಂದೆ ಅವರು ಸಮಾಜದ ವಿವಿಧ ಭಾಗಗಳಲ್ಲಿ ಸಂಚರಿಸಿ ಧರ್ಮ ಜಾಗೃತಿಗೊಳಿಸಲು ಸಮರ್ಥರನ್ನಾಗಿ ಮಾಡಿದರು. ೧೧೧ ಜನ ವಿರತರ ಸಂಪ್ರದಾಯವನ್ನು ಉಂಟುಮಾಡಿದವರು ಪ್ರಾಯಶಃ ಗೋಸಲಸಿದ್ಧೇಶ್ವರಸ್ವಾಮಿಗಳವರೇ ಆಗಿದ್ದಾರೆ. ಈ ಎಲ್ಲ ವಿಷಯಗಳನ್ನು ಲಕ್ಷಿಸಿ ಡಾ॥ ಫ. ಗು. ಹಳಕಟ್ಟಿಯವರು, ಕಲ್ಯಾಣದ ವಿನಾಶದ ನಂತರ ಪಟ್ಟದಕಲ್ಲು, ಪುಲಿಗೆರೆ, ಬನವಾಸಿ, ಬಳ್ಳಿಗಾವಿ, ಮಂಗಳವಾಡ, ಮುದನೂರು, ಕಪ್ಪಡಿಸಂಗಮಗಳ ಪಟ್ಟಿಯಲ್ಲಿ ಸಿದ್ಧಗಂಗೆಯನ್ನು ಸೇರಿಸಿ, ಇದು ಹರದನಹಳ್ಳಿ ಪೀಠಾಚಾರ್ಯರ ವಸಾಹತಾಗಿತ್ತೆಂದೂ, ಧರ್ಮಪ್ರಸಾರ ಕೇಂದ್ರವಾಗಿತ್ತೆಂದೂ ಅಭಿಪ್ರಾಯಪಡುತ್ತಾರೆ.[4] ಬಸವಾದಿ ಪ್ರಮಥರ ನಂತರ ವೀರಶೈವೋದ್ಧರಣ ಕಾರ್ಯವನ್ನು ಬಹು ಬಿರುಸಾಗಿ ಪ್ರಭಾವಯುತವಾಗಿ ಮಾಡಿದವರೇ ಗೋಸಲಸಿದ್ಧೇಶ್ವರರು. ಇವರ ಹರದನಹಳ್ಳಿಯ ಪೀಠವು ಬಹುಶಃ ಇವರ ಕಾಲದಲ್ಲಿಯೇ ಶೂನ್ಯಸಿಂಹಾಸನವೆಂದು, ಅಂದಿನ ಸಮಾಜದಿಂದ ಅಂಗೀಕೃತವಾಗಿರಬಹುದು. ಕಲ್ಯಾಣದ ಕ್ರಾಂತಿಯ ನಂತರ

ಶೂನ್ಯಸಿಂಹಾಸನ, ಅದರ ಆಧಿಪತ್ಯಗಳೂ ವಿಚ್ಛಿತ್ತಿಗೊಂಡುವಷ್ಟೆ. ಪುನಃ ಶೂನ್ಯಸಿಂಹಾಸನದ ಸ್ಥಾನ ನಿರ್ದೇಶನಗೊಳಿಸಲು ಪ್ರಯತ್ನ ನಡೆದಿವೆ. ಮೊದಲ ಪ್ರಯತ್ನ ಶಿವಗಂಗೆಯೆಂದು ತಿಳಿದುಬರುತ್ತದೆ. ಆದರೆ ಆ ಪ್ರಯತ್ನ ಯಶಸ್ಸು ಗಳಿಸಲಿಲ್ಲ. ರೇವಣಸಿದ್ಧೇಶ್ವರರು ತಾವೇ ಒಂದು ಮಠವನ್ನು ಸ್ಥಾಪಿಸಿ, ಮಗನಾದ ರುದ್ರಮುನಿಯನ್ನೊಡಗೊಂಡು ಶಿವಗಂಗೆಯಲ್ಲಿ ಅದ್ಭುತವಾದ ಕಾರ್ಯ ಮಾಡಿದರು. ರೇಣುಕಾಚಾರ್ಯರು ಮತ್ತು ರುದ್ರಮುನಿ ಶಿವಾಚಾರ್ಯರ ಲಿಂಗೈಕ್ಯಾನಂತರ ಆ ಕಾರ್ಯಗಳು ಸ್ಥಗಿತಗೊಂಡವು. ಮುಂದೆ ಹರದನಹಳ್ಳಿಯಲ್ಲಿ ವೀರಬಣಂಜುಗಳವರಿಂದ ಶೂನ್ಯಪೀಠದ ಪರಂಪರೆ ಪುನಃ ನಡೆದುಬರುವಂತೆ ಮಾಡಿದ ಪ್ರಯತ್ನ ಕುತೂಹಲಕಾರಿಯಾದುದು. ಹರದನಹಳ್ಳಿಯ ಮಠದ ಪರಂಪರೆಯಲ್ಲಿ ಗೋಸಲಸಿದ್ಧೇಶ್ವರರು ೧೫ನೆಯರಾದರೂ ಹಿಂದಿನವರಗೆ ಜಗದ್ಗುರು ಎಂಬ ಸಂಕೇತವಿತ್ತೋ ಇಲ್ಲವೋ ಗೊತ್ತಿಲ್ಲ.[5]

ಹರದನಹಳ್ಳಿ ಮತ್ತು ಅಲ್ಲಿನ ಮಠ

ಪ್ರಾಚೀನ ಕರ್ನಾಟಕದ ವ್ಯಾಪಾರವು ವೀರ ಬಣಂಜುಗಳೆಂದು ಕರೆಯಿಸಿಕೊಳ್ಳುವ ಒಂದು ಮಹಾಸಂಘಕ್ಕೆ ಒಳಪಟ್ಟುದಾಗಿತ್ತು. ಈ ಮಹಾಸಂಘದ ಮೂಲಕೇಂದ್ರ ಐಹೊಳೆ(ಅಯ್ಯಾವಳೆ), ಪಟ್ಟದಕಲ್ಲು-ಎಂಬ ಊರುಗಳಲ್ಲಿತ್ತು. ಈ ಬಣಂಜುಗಳಲ್ಲಿ ಮಹಾನಾಡ ಸೆಟ್ಟಿ, ವಾಲಿಸೆಟ್ಟಿ, ಪಟ್ಟಣಸೆಟ್ಟಿ, ಗುಡಾರದಸೆಟ್ಟಿ, ಬಣಕಾರಸೆಟ್ಟಿ, ಗುಣಹಾರಿಸೆಟ್ಟಿ ಇತ್ಯಾದಿ ನಾಮಾಂತರಗಳುಂಟು. ಇವರು ಸಾಮಾನ್ಯವಾಗಿ ಧರ್ಮನಿಷ್ಠರು. ಧರ್ಮ ಸಂರಕ್ಷಕರು. ಎತ್ತುಗಳ ಮೇಲೆ ಕಂಟಲಿ ಹೇರಿಕೊಂಡು ಊರಿಂದೂರಿಗೆ ಸಾಗಿ ವ್ಯಾಪಾರ ಮಾಡುತ್ತಿದ್ದರು. ಹೆಸರುಗಳೇ ಹೇಳುವಂತೆ ವಿವಿಧ ವ್ಯಾಪಾರಗಳಲ್ಲಿ ಇವರೆಲ್ಲ ವ್ಯವಹರಿಸುತ್ತ ಕುಟುಂಬರಕ್ಷಣೆ ಗುರುಲಿಂಗಜಂಗಮಸೇವಾ ಕಾರ್ಯಗಳನ್ನು ಮಾಡುತ್ತಿದ್ದರು. ಒಳನಾಡಿನ ವ್ಯವಹಾರವೆಲ್ಲ ಆ ಕಾಲದಲ್ಲಿ ಎತ್ತಿನ ಮೇಲೆ ಹೇರಿದ ಹೇರುಗಳ ಮೂಲಕವೇ ಸಾಗುತ್ತಿತ್ತು.

ಇಂಥ ಕಂಟಲಿ ವ್ಯಾಪಾರದ ವೀರಬಣಂಜುಗಳು ಮಧುರೆಗೆ ಹೋಗಿಬರುವ ಮಾರ್ಗದಲ್ಲಿ ಈಗಿನ ಚಾಮರಾಜ ನಗರ ತಾಲ್ಲೂಕು ಹರದನಹಳ್ಳಿ ಎಂದು ಹೇಳಿಸಿಕೊಳ್ಳುವಲ್ಲಿ ಒಂದು ನಗರವನ್ನು ಕಟ್ಟಿಸಿದರು. ಇಲ್ಲಿ ತೃಣಜಲಸಮೃದ್ಧವಾಗಿತ್ತು. ಇದಕ್ಕೆ ಹರದನಹಳ್ಳಿ ಎಂದೂ, ಸಂಸ್ಕೃತದಲ್ಲಿ ವಾಣಿಜ್ಯಪುರವೆಂದೂ ಕರೆದರು. ಅಲ್ಲಿ ಅವರು ಒಂದು ಶಿವಾಲಯವನ್ನು ಕಟ್ಟಿಸಿ ಅದರಲ್ಲಿ ಅಮೃತೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರು. ಅದೇ ಮುಂದೆ ದಿವ್ಯ ಲಿಂಗೇಶ್ವರ ಅಖಿಲೇಶ್ವರ ಇತ್ಯಾದಿ ಹೆಸರಿನಿಂದ ಕರೆಯಿಸಿಕೊಂಡಿತು.[6] ಆ ವೀರಬಣಂಜುಗಳು ದೇವಾಲಯದ ಪಕ್ಕದಲ್ಲಿಯೇ ಒಂದು ಮಠವನ್ನು ಕಟ್ಟಿಸಿ ಸಮಯಾಚಾರಕ್ಕಾಗಿ ಅಲ್ಲಿ ಪ್ರಭುದೇವರ ಪರಂಪರೆವಿಡಿದು ಬಂದ ಜಂಗಮ ಪ್ರಭುವೊಬ್ಬರನ್ನು ನೆಲೆಗೊಳಿಸಿದರು. ಈ ಜಂಗಮ ಮೂರ್ತಿಗಳೇ ಹರದನಹಳ್ಳಿಯ ಗೋಸಲದೇವರು, ಅಂದರೆ ಗೋಸಲಸಿದ್ಧೇಶ್ವರಸ್ವಾಮಿಗಳು. ಈ ವಿಷಯವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಅಳಿದು ಹೋದ ಶೂನ್ಯಸಿಂಹಾಸನಕ್ಕೆ ಪುನಃ ಮೂರ್ತಸ್ವರೂಪ ಕೊಟ್ಟು ಹರದನಹಳ್ಳಿಯ ಮಠದಲ್ಲಿ ಅದನ್ನು ಪ್ರತಿಷ್ಠಾಪಿಸಿದರೆಂಬುದು ಗೊತ್ತಾಗುವುದು. ಆದುದರಿಂದ ಈ ಪೂರ್ವದ ಗೋಸಲಸಿದ್ಧೇಶ್ವರರ ಹಿಂದಿನ ೧೧ ಜನ ಗುರುಗಳು ನಿರಂಜನ ಜಂಗಮ ಪದವನ್ನು ಹೊಂದಿರಲಿಲ್ಲವೆಂದು ತೋರುವುದು. ನಿರಂಜನ ಜಂಗಮಾಧಿಕಾರ ಗೋಸಲ ಸಿದ್ಧೇಶ್ವರರಿಂದಲೇ ಮುಂದುವರಿಯಿತೆಂದೂ ಆದುದರಿಂದಲೇ ಅವರು ತಮ್ಮ ನಿರಂಜನಜಗದ್ಗುರು ಸ್ಥಾನಾಪನ್ನರಾಗಿ ಸಂಚಾರ ಕೈಕೊಂಡು ಖಿಲವಾಗುತ್ತ ಬಂದಿದ್ದ ವೀರಶೈವಧರ್ಮದ ಪುನರುದ್ಧಾರದ ಮಹಾಕಾರ್ಯದಲ್ಲಿ ತತ್ಪರರಾಗಿ ಪ್ರಚಾರ ಮಾಡುತ್ತ ಶಿವಗಂಗೆಗೆ, ಅನಂತರ ಸಿದ್ಧಗಂಗೆಗೆ ಬಂದು ಅನೇಕ ವರ್ಷಗಳು ಅನುಷ್ಠಾನಾದಿಗಳನ್ನು ಮಾಡಿ, ಮೂಲಪೀಠದ ಉತ್ತರಾಧಿಕಾರವನ್ನು ಶಂಕರದೇವರು ಅಥವಾ ಶಂಕರಾಚಾರ್ಯರಿಗೆ ವಹಿಸಿ ಇಲ್ಲಿಯೇ ಅಂದರೆ ಸಿದ್ಧಗಂಗೆಯಲ್ಲಿಯೇ ಲಿಂಗೈಕ್ಯರಾದರೆಂದು ಹೇಳಬಹುದು. ಗೋಸಲ ಸಿದ್ಧೇಶ್ವರರು ಲಿಂಗೈಕ್ಯರಾದ ಮೇಲೆ ಅವರ ಶಿಷ್ಯರಾದ ಶಂಕರಾಚಾರ್ಯರ ಕ್ರಾಂತಿಯು ಇನ್ನೂ ಉಜ್ವಲಗೊಳ್ಳುತ್ತದೆ.

ಹರದನಹಳ್ಳಿ ಶಂಕರಾಚಾರ್ಯ ಸ್ವಾಮಿಗಳು: (ಸುಮಾರು ೧೪೯೩)

೧೬ನೆಯ ಪಟ್ಟದ ಈ ಶಂಕರಾಚಾರ್ಯ ಸ್ವಾಮಿಗಳವರು ತಮ್ಮ ಗುರುಗಳಾದ ಗೋಸಲ ಸಿದ್ಧೇಶ್ವರರ ಪ್ರವಾಸ ಕಾಲದಲ್ಲಿ ತಮ್ಮ ಹರದನಹಳ್ಳಿಯ ಮಠದಲ್ಲಿಯೇ ಲಿಂಗಜಂಗಮ ದಾಸೋಹಾದಿಗಳನ್ನು ಮಾಡಿಕೊಂಡು ಇದ್ದು ಗುರುಗಳು ಲಿಂಗೈಕ್ಯರಾದ ಮೇಲೆ ತಮ್ಮ ಶಿವಾನುಭವ ಚರಂತಿಕೆಯ ಪಟ್ಟವನ್ನು ದಿವ್ಯಲಿಂಗೇಶ್ವರರೆಂಬುವರಿಗೆ ಇತ್ತು ತಾವು ಪ್ರವಾಸ ಕೈಕೊಳ್ಳುವರು. ಇವರು ತಮ್ಮ ಪ್ರವಾಸದಲ್ಲಿ ಪ್ರಥಮತಃ ಪಂಪಾಕ್ಷೇತ್ರಕ್ಕೆ ಬಂದು ಅಲ್ಲಿ ತಮ್ಮ ಗುರುಗಳವರು ಅನುಸರಿಸಿದ್ದ ಏಕೋತ್ತರಶತಸ್ಥಲ ಸಂಕೇತದಲ್ಲಿ ೧೦೧ ಜನ ವಿರಕ್ತರ ಸಂಪ್ರದಾಯವನ್ನು ಉಂಟುಮಾಡಿದರು. ಅವರೆಲ್ಲರಿಗೆ ಷಟಸ್ಥಲ ಜ್ಞಾನೋಪದೇಶವನ್ನಿತ್ತರು. ಅವರಲ್ಲಿ ಮುಖ್ಯರಾದವರೆಂದರೆ, ಕರಸ್ಥಲದ ವೀರಣ್ಣೊಡೆಯರು, ಕರಸ್ಥಲದ ನಾಗಿದೇವರು, ಸಪ್ತಕಾವ್ಯದ ಗುರುಬಸವದೇವರು, ಬತ್ತಲೆಯ ದೇವರು, ನಿರ್ವಾಣಿಬೋಳೇಶ್ವರರು, ಕಲ್ಲುಮಠದ ಪ್ರಭುದೇವರು ಇವರೇ

ಮೊದಲಾದವರು. ಪ್ರೌಢದೇವರಾಯನೂ ಇವರಿಂದ ಉಪದೇಶ ಪಡೆದನೆಂದೇ ನಿರಂಜನವಂಶ ರತ್ನಾಕರ ಹೇಳುತ್ತಿದೆ.[7] ಪ್ರೌಢದೇವರಾಯನು ವಿಜಯನಗರದಲ್ಲಿ ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಉತ್ಸವವನ್ನು ಅವರಿಗಿರುವ ೨೨ ಬಿರುದುಗಳ ಸಮೇತ ಮಾಡಿಸಿ, ಅರಮನೆಯಲ್ಲಿ ಪೂಜಾದಿಗಳನ್ನು ನಡೆಸಿ, ಅಪಾರ ಕಾಣಿಕೆಯನ್ನರ್ಪಿಸಿದನು. ಸ್ವಾಮಿಗಳು ಆ ದ್ರವ್ಯದಿಂದ ಹೇಮಕೂಟದಲ್ಲಿ ಗಣಾರಾಧನೆಯನ್ನು ಮಾಡಿಸಿದರು.[8] ಈ ಅಂಶದಿಂದ ವಿಜಯನಗರದಲ್ಲಿ ವೀರಶೈವೋದ್ಧರಣದ ಕಾರ್ಯಕಲಾಪಗಳು ಮತ್ತೊಮ್ಮೆ ಬಿರುಸಾಗಿ ನಡೆಯಲು ಹರದನಹಳ್ಳಿಯ ಪೀಠಾಚಾರ್ಯರು ಬಹುಮಟ್ಟಿಗೆ ಕಾರಣಕರ್ತರಾದರೆಂಬುದು ಧ್ವನಿತವಾಗುವುದು. ನೂರೊಂದು ವಿರಕ್ತರ ಸಂಪ್ರದಾಯ ವಿಜಯನಗರದಲ್ಲಿ ಬೆಳೆದು ಬಂದ ಬಗೆಗೆ ಅನೇಕ ಊಹಾಪೋಹಗಳಿವೆ. ಆದರೆ ಆಗ ವೀರಶೈವ ಪ್ರಪಂಚಕ್ಕೆ ಹರದನಹಳ್ಳಿಯ ಪೀಠದ ಆಸರೆಯೇ ಮುಖ್ಯವಾಗಿತ್ತೆಂದೂ ಉಳಿದ ಇನ್ನಿತರ ಕೇಂದ್ರಗಳು ರಾಜಕೀಯ ವಿಪ್ಲವದ ಕಾಲ್ತುಳಿತಕ್ಕೆ ಸಿಕ್ಕು ಜರ್ಜರಿತಗೊಂಡಿದ್ದವೆಂದೂ ಊಹಿಸಬೇಕಾಗಿದೆ. ಬಸವಾದಿ ಪ್ರಮಥರ ಕ್ರಾಂತಿಯ ಕಿಡಿ ಆರಗೊಡದಂತೆ ಪ್ರಯತ್ನಿಸಿದವರು ಈ ಪೀಠದವರು.

ಹಂಪೆಯಿಂದ ನೇರವಾಗಿ ಶಂಕರಸ್ವಾಮಿಗಳು ಸಂಚಾರ ಕೈಕೊಂಡು ತಮ ಪೂಜ್ಯಗುರುಗಳಾದ ಗೋಸಲಸಿದ್ಧೇಶ್ವರರು ತಪಸ್ಸು ಮಾಡಿ ಮಠವನ್ನು ಕಟ್ಟಿಸಿದ ಸಿದ್ಧಗಂಗಾ ಗಿರಿಗೆ ಬಂದು ಅಲ್ಲಿ ಅನೇಕ ವರ್ಷಗಳು ಶಿವಯೋಗಾನುಷ್ಠಾನದಲ್ಲಿ ನಿರತರಾಗಿ, ಆಗಿನ ಪೆನುಗುಂಡೆ ನಾಡಿಗೊಳಪಟ್ಟಿದ್ದ ಕೊರಟಗೆರೆಯ ಸಮೀಪದ ಸಿದ್ಧನಬೆಟ್ಟದಲ್ಲಿ ಶಿವಾಧೀನರಾದರು. ಇವರ ಉತ್ತರಾಧಿಕಾರಿಗಳಾಗಿ ಹರದನಹಳ್ಳಿಯ ಶಿವಾನುಭವ ಚರಂತಿಕೆಯ ಸ್ವಾಮಿಗಳವರಾಗಿದ್ದ ದಿವ್ಯಲಿಂಗೇಶ್ವರರು ತಮ್ಮ ಗುರುವರ್ಗದವರಂತೆ ಪ್ರವಾಸ ಕೈಕೊಂಡಿದ್ದರೂ ಹೆಚ್ಚಿನ ಪ್ರಭಾವಯುತವಾದ ಕಾರ್ಯಗಳೇನೂ ಅವರ ಕಾಲದಲ್ಲಿ ಆದಂತೆ ಕಂಡುಬರುವುದಿಲ್ಲ. ಕೆಲವುಕಾಲ ಈ ಸ್ವಾಮಿಗಳು ತಲಕಾಡಿನ ಸುತ್ತಮುತ್ತ ಮಾತ್ರ ಸಂಚರಿಸಿದರು. ಆದರೆ ಇವರು ಮಹಾಪುರುಷರಾಗಿದ್ದ ಹಾಗೆ ಕಂಡುಬರುವುದು. ಅಂಗವಿಕಲರನೇಕರಿಗೆ ಅಂಗಾಂಗಗಳುಂಟಾಗುವ ಪವಾಡವನ್ನು ಎಳಂದೂರಿನಲ್ಲಿ ಮಾಡಿದ ಹಾಗೂ ಎಳಂದೂರು ತಲಕಾಡುಗಳಲ್ಲಿ ಪರಮತಸ್ಥರೊಡನೆ ವಾದಮಾಡಿ ಅವರನ್ನು ಗೆದ್ದು ಸ್ವಮತೋತ್ಕರ್ಷವನ್ನುಂಟುಮಾಡಿದರೆಂದೂ, ಏನೂ ಅರಿಯದ ನಿರಕ್ಷರ ಕುಕ್ಷಿಗಳಿಂದ ವೇದಾಗಮೋಪನಿಷತ್ತುಗಳನ್ನು ಹೇಳಿಸಿದರೆಂದೂ ತಿಳಿದುಬರುವುದು. ಇವರು ತಮ್ಮ ಶಿವಾನುಭವ ಚರಂತಿಕೆಯ ಪಟ್ಟವನ್ನು ಗೋಸಲ ಚೆನ್ನಬಸವ ರಾಜೇಂದ್ರರಿಗೆ ಉಂಟುಮಾಡಿ ತಾವು ಹರದನಹಳ್ಳಿಯಲ್ಲಿಯೇ ಲಿಂಗೈಕ್ಯರಾದರು.[9]

ಗೋಸಲ ಚೆನ್ನಬಸವರಾಜೇಂದ್ರ ಸ್ವಾಮಿಗಳು

ಗೋಸಲ ಚೆನ್ನಬಸವರಾಜೇಂದ್ರ ಸ್ವಾಮಿಗಳು ಹರದನಹಳ್ಳಿಯ ನಿರಂಜನ ಜಂಗಮಾಧಿಕಾರ ವಹಿಸಿಕೊಂಡ ತರುಣದಲ್ಲಿಯೇ ವಿಜಯನಗರದ ಪ್ರೌಢದೇವರಾಯನು ಲಿಂಗೈಕ್ಯನಾದನು. ಅನಂತರ ವೀರಶೈವೋದ್ಧರಣಕಾರ್ಯದಲ್ಲಿ ಆಸಕ್ತಿವಹಿಸುವ ಇನ್ನೊಬ್ಬ ರಾಜನು ವಿಜಯನಗರದಲ್ಲಿ ಹುಟ್ಟಲಿಲ್ಲ. ಅಂತೆಯೇ ವೀರಶೈವೋದ್ಧರಣಕಾರ್ಯದಲ್ಲಿ ಅತ್ಯಂತ ಮಹಿಮಾಶಾಲಿಗಳಾದ ವ್ಯಕ್ತಿಗಳು ಬೇಕಾಗಿತ್ತು. ಸಮಾಜದ ಪುಣ್ಯವೋ ಎಂಬಂತೆ ತೋಂಟದ ಸಿದ್ಧಲಿಂಗಶಿವಯೋಗಿಗಳು ಹರದನಹಳ್ಳಿಯಲ್ಲಿಯೇ ಜನ್ಮವೆತ್ತಿ ೮ನೆಯ ವಯಸ್ಸಿನಲ್ಲಿಯೇ ಗೋಸಲ ಚನ್ನಬಸವೇಶ್ವರರ ಕೃಪೆಗೆ ಪಾತ್ರರಾದರು. ಇವರಿಗೆ ಬಾಲ್ಯದಲ್ಲಿಯೇ ಗೋಸಲ ಚೆನ್ನಬಸವೇಶ್ವರರು ಶಿವಾನುಭವ ಚರಂತಿಕೆಯ ಪಟ್ಟಕಟ್ಟಿದರು. 'ಸಿದ್ಧಲಿಂಗೇಶ್ವರ' ಎಂದು ನಾಮಕರಣ ಮಾಡಿದರು. ಇವರು ತಮ್ಮ ಎಂಟನೆಯ ವರ್ಷದ ಬಾಲ್ಯದಲ್ಲಿಯೇ ಅಪಾರ ಶಿವಾನುಭವ ಸಂಪತ್ತಿನಿಂದಲೂ, ಅಪೂರ್ವ ಪ್ರತಿಭೆಯಿಂದಲೂ ಶೋಭಿಸುವ ಮಹಾಪುರುಷರಾಗಿದ್ದರು. ಅಂತೆಯೇ ನಿರಂಜನಪೀಠದ ಆಗುಹೋಗುಗಳನ್ನು ಆ ಚಿಕ್ಕವಯಸ್ಸಿನಲ್ಲಿಯೇ ನಿರ್ವಹಿಸುತ್ತ ದಾಸೋಹಾದಿ ಕ್ರಿಯೆಗಳನ್ನು ಮಾಡಿಕೊಂಡಿರುತ್ತಿರಲು ಚನ್ನಬಸವೇಶ್ವರರು ತಮ್ಮೆಲ್ಲ ಗುರುಗಳ ಹಾಗೆಯೇ ಪ್ರವಾಸ ಕೈಕೊಂಡು ಹರದನಹಳ್ಳಿಯನ್ನು ಬಿಟ್ಟು ನೇರವಾಗಿ ಸಿದ್ಧಗಂಗಾಕ್ಷೇತ್ರಕ್ಕೆ ಬಂದು ಅಲ್ಲಿ ಗಣಪರ್ವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಸಿದ್ಧಗಂಗೆಯ ಬೆಟ್ಟದ ಮೇಲಣಗವಿಯಲ್ಲಿ ಅನುಷ್ಠಾನಾದಿಗಳನ್ನು ಮಾಡಿಕೊಂಡು ಲಿಂಗಜಂಗಮದಾಸೋಹಾದಿ ಕ್ರಿಯೆಗಳನ್ನು ಯಥಾಸಾಂಗವಾಗಿ ನಡೆಯಿಸಿಕೊಂಡು ಬರತೊಡಗಿದರು. ಆ ಸಮಯದಲ್ಲಿ ಗುಬ್ಬಿಯಲ್ಲಿ ಅನೇಕ ಅನುಭಾವಿಗಳೂ ವಿದ್ವಾಂಸರೂ ಇದ್ದರು. ಇಷ್ಟೇ ಅಲ್ಲ, ೧೨ನೆಯ ಶತಮಾನದಿಂದಲೂ ಗುಬ್ಬಿಯು ಶಿವಶರಣರ ಬೀಡಾಗಿದ್ದ ಬಗೆಗೆ ನಮಗೆ ವಿವರಗಳು ದೊರಕುತ್ತವೆ. ಆಗಿನ ಈ ಊರಿನ ಹೆಸರು 'ಅಮರಗುಂಡ' ಎಂಬುದು.'ಅಮರಗುಂಡದ ಮಲ್ಲಿಕಾರ್ಜುನ' ಎಂಬ ಪ್ರಸಿದ್ಧ ವಚನಕಾರನು ೧೨ನೆಯ ಶತಮಾನದಲ್ಲಿ ಅಲ್ಲಿ ಆಗಿಹೋದನು. ಅಮರಗುಂಡದ ಮಲ್ಲಿಕಾರ್ಜುನ ದೇವಾಲಯ ಇಂದಿಗೂ ಇಲ್ಲಿದೆ. ಇದೇ ಊರಿನಲ್ಲಿಯೇ ಪ್ರಸಿದ್ಧದಾರ್ಶನಿಕನೂ ಶಿವಾನುಭವಿಯೂ ಆದ 'ಮಲ್ಲಣ್ಣ'ನೆಂಬುವನು ಇದ್ದನು. ಅವನು ವಾತುಲಾಗಮಕ್ಕೆ ವ್ಯಾಖ್ಯಾನ ಬರೆದುದಲ್ಲದೆ, 'ಗಣಭಾಷಿತರತ್ನಮಾಲೆ' ಎಂಬ ಹೆಸರಿನ ವೀರಶೈವ ದರ್ಶನವನ್ನು ತಿಳಿಸುವ ವಚನ ಸಂಕಲನ ಮಾಡಿದ್ದಾನೆ.

ಇವನ ಮೊಮ್ಮಗ ಮಲ್ಲಣಾರ್ಯನೆಂಬುವನು ಸಿದ್ಧಗಂಗೆಗೆ ಬಂದು ಇಲ್ಲಿಂದ ಮಹಾ ಶಿವಯೋಗೀಶ್ವರರಾದ ಚನ್ನಬಸವರಾಜೇಂದ್ರ ಸ್ವಾಮಿಗಳವರನ್ನು ಗುಬ್ಬಿಗೆ ಕರೆದೊಯ್ದು ಅಲ್ಲಿ ೭೨ ಬಿರುದುಗಳು ಸಮೇತವಾಗಿ ಸ್ವಾಮಿಗಳವರ ಉತ್ಸವಾದಿಗಳನ್ನು ಮಾಡಿಸಿ ಗಣಪರ್ವಗೈಸಿ ಅವರಿಂದ ಅನುಗ್ರಹದೀಕ್ಷೆಯನ್ನು (ಷಟಸ್ಥಲ ಜ್ಞಾನೋಪದೇಶವನ್ನು) ಪಡೆದನು.[10] ಅನಂತರ ಮಲ್ಲಣಾರ್ಯನು ಮಹಾಪ್ರಭುವಾದ ಚೆನ್ನಬಸವೇಶ್ವರರನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಬೇಕೆಂದು ಒಂದು ಮಠವನ್ನು ನಿರ್ಮಾಣ ಮಾಡಿ ಅಲ್ಲಿ ಅವರನ್ನು ಇರಿಸಿದನು. ಆ ಮಠವು ಇಂದಿಗೂ ಗುಬ್ಬಿಯಿಂದ ಒಂದು ಮೈಲು ದೂರದಲ್ಲಿ 'ಚೆನ್ನಶೆಟ್ಟಿಹಳ್ಳಿ' ಎಂಬ ಗ್ರಾಮದಲ್ಲಿದೆ. ಚೆನ್ನಬಸವೇಶ್ವರರ ಸಂಬಂಧದಿಂದಲೇ ಈ ಊರು 'ಚೆನ್ನಶೆಟ್ಟಿಹಳ್ಳಿ' ಎಂದು ಇಂದಿಗೂ ಉಳಿದಿರುವುದನ್ನು ಈ ಸಮಯದಲ್ಲಿ ಜ್ಞಾಪಿಸಿಕೊಳ್ಳಬಹುದು.[11] ಶ್ರೀಗಳವರು ತಮಗೆ ಕಟ್ಟಿಸಿದ ಮಠದಲ್ಲಿರುತ್ತ ಶಿವಯೋಗಾನಂದತುಂದಿಲರಾಗಿರುತ್ತಿದ್ದು, ಇಲ್ಲಿಯೇ ಲಿಂಗೈಕ್ಯರಾದರು. ಅವರ ಗದ್ದುಗೆಯು ಊರಿನ ಪೂರ್ವದಿಗ್ಭಾಗದಲ್ಲಿ ಇಂದೂ ವಿರಾಜಿಸುತ್ತಿದೆ. ಇಂದಿಗೂ ಗುಬ್ಬಿಯ ಅಧಿದೇವತೆ ಚೆನ್ನಬಸವೇಶ್ವರರೇ ಆಗಿದ್ದಾರೆ. ಪ್ರತಿವರ್ಷ ರಥೋತ್ಸವಾದಿಗಳು ಜರುಗುತ್ತವೆ.

ತೋಂಟದ ಸಿದ್ಧಲಿಂಗೇಶ್ವರರು:

ಶೂನ್ಯ ಸಿಂಹಾಸನಾಧೀಶ್ವರರ ಪರಂಪರೆಯಲ್ಲಿ ಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮೇಶ್ವರರ ನಂತರ ಶ್ರೀ ಸಿದ್ಧಲಿಂಗೇಶ್ವರರು ಅತ್ಯಂತ ಪ್ರಭಾವಶಾಲಿಗಳೂ, ಮಹಿಮಾಪುರುಷರೂ, ಶಿವಾನುಭವ ವಿದ್ಯಾವಿಶಾರದರೂ, ವಚನಶಾಸ್ತ್ರಕಾರರೂ ಎನಿಸಿದ ಶಿವಯೋಗಿಗಳಾಗಿದ್ದಾರೆ.ಇವರು ಬಹುಶಃ ಕ್ರಿ. ಶ. ೧೪೦೦ ಸುಮಾರಿನಲ್ಲಿ ಜನಿಸಿ, ೧೪೮೦ರವರೆಗೆ ಬಾಳಿದರು.[12] ವೀರಶೈವ ಧರ್ಮೇತಿಹಾಸದಲ್ಲಿ ಅತ್ಯದ್ಭುತ ಕ್ರಾಂತಿಯನ್ನು ಮಾಡಿದ ಕಾರಣಪುರುಷರೆನಿಸಿದ್ದಾರೆ; ಇವರನ್ನು ದ್ವಿತೀಯ ಪ್ರಭುದೇವರೆಂದೂ ಕರೆಯಲಾಗುತ್ತಿದೆ. ಇವರು ಮಾಡಿದ ಕ್ರಾಂತಿ ದೊಡ್ಡದು; ತತ್ಫಲವಾಗಿ ಧರ್ಮವು ನವನವೋನ್ಮೇಷಶಾಲಿನಿಯೆನಿಸಿದೆ. ಇಂದು ವೀರಶೈವ ಸಮಾಜದಲ್ಲಿ ತಲೆಯೆತ್ತಿನಿಂತಿರುವ ಅಧಿಕ ಸಂಖ್ಯಾತವಾದ ವಿರಕ್ತ ಮಠ, ಪಟ್ಟದಮಠ, ಶರಣಸಂತತಿಯ ಮಠಗಳ ಅಸ್ತಿತ್ವಕ್ಕೆ ತೋಂಟದ ಸಿದ್ಧಲಿಂಗಶಿವಯೋಗಿಗಳೇ ಬಹುಮಟ್ಟಿಗೆ ಕಾರಣಪುರುಷರೆನಿಸಿದ್ದಾರೆ. ಸಿದ್ಧಗಂಗಾ ಮಠವು ಗೋಸಲ ಸಿದ್ಧೇಶ್ವರರಿಂದ ಸ್ಥಾಪನೆಗೊಂಡು ತನ್ನ ಮಹಿಮಾವಿಶೇಷಗಳನ್ನು ಬೆಳಸಿಕೊಂಡುಬಂದರೂ ಈ ಕ್ಷೇತ್ರಾಧಿಪತಿಗಳು ಸಿದ್ಧಲಿಂಗೇಶ್ವರರೇ ಎನಿಸಿದ್ದಾರೆ. ಇಂದು ಕ್ಷೇತ್ರದಲ್ಲಿ ನಡೆಯುವ ನಿತ್ಯೋತ್ಸವ, ಮಾಸೋತ್ಸವ, ವಾರ್ಷಿಕೋತ್ಸವ, ರಥೋತ್ಸವ, ಯಾತ್ರಾದಿ ಕಾರ್ಯಕ್ರಮಗಳೆಲ್ಲ ಇವರ ಹೆಸರಿನಿಂದಲೇ ನಡೆಯುತ್ತಿವೆ. ಮಹಾಮಹಿಮರಾದ ಇವರ ಮತ್ತು ಇವರ ಗುರುವರ್ಗದವರ ತಪೋತೇಜದಿಂದ ಈ ಕ್ಷೇತ್ರವು ಜಾಗ್ರತಸ್ಥಾನವೆನಿಸಿ ಅಪಾರ ಮಹಿಮೆಗಳ ಆಗರವೆನಿಸಿದೆ. ಲಕ್ಷೋಪಲಕ್ಷ ಜನರ ಜೀವನದ ಮೇಲೆ ಪರಿಣಾಮ ಬೀರಿ ನಾನಾ ವಿಧವಾದ ಜೀವನಮಾರ್ಗವನ್ನು ಕಲ್ಪಿಸಿದೆ; ಕಲ್ಪಿಸುತ್ತಿದೆ. ಮಾನಸಿಕ ದೈಹಿಕ ನೆಮ್ಮದಿ ಭಂಗಗೊಂಡವರಿಗೆ ಅಭಯ ಪ್ರದಾನಮಾಡಿ ಸುಖಶಾಂತಿಗಳನ್ನು ಕಲ್ಪಿಸುತ್ತಿದೆ. ದೀನದಲಿತವರ್ಗಕ್ಕೆ ಪ್ರಸಾದವಿತ್ತು, ಪ್ರಸನ್ನತೆಯನ್ನೊದಗಿಸುತ್ತಿದೆ. ಜನತೆಯನ್ನು ಯಾವ ಭೇದಭಾವವಿಲ್ಲದೆ ಲೌಕಿಕ, ಪಾರಲೌಕಿಕ ವಿದ್ಯಾವೈದುಷ್ಯ ಸಂಪದ್ಭರಿತವನ್ನಾಗಿ ಮಾಡುತ್ತಿದೆ. ಕಿಂಬಹುನಾ- ಈ ಕ್ಷೇತ್ರವು ಸಕಲಜೀವಾತ್ಮರಿಗೆ ಲೇಸನೇ ಬಯಸುತ್ತಿದೆ ಎಂಬ ಒಂದು ಮಾತಿನಿಂದ ಕ್ರೋಡೀಕರಿಸಿ ಹೇಳಿ ಮುಗಿಸಬಹುದು.

ಪ್ರಕೃತ ಈ ಕ್ಷೇತ್ರಾಧಿಪತಿಗಳಾದ ಶ್ರೀ ಸಿದ್ಧಲಿಂಗಶಿವಯೋಗಿಗಳ ವಿಷಯವಾಗಿ ಈ ಲೇಖನದಲ್ಲಿ ಸ್ವಲ್ಪ ದೀರ್ಘವಾಗಿಯೇ ವಿವರಣೆ ಕೊಡಲಾಗಿದೆ.

ತೋಂಟದ ಸಿದ್ಧಲಿಂಗ ಶಿವಯೋಗೀಶ್ವರರನ್ನು ಪ್ರಭುದೇವರ ಶೂನ್ಯಸಿಂಹಾಸನಾಧಿಪತಿಗಳೆಂದೂ, ದ್ವಿತೀಯ ಪ್ರಭುದೇವರೆಂದೂ ಇವರ ಬಗೆಗೆ ಹುಟ್ಟಿದ ಅನೇಕ ಪುರಾಣಗಳಲ್ಲಿ ಮತ್ತು ಸ್ತೋತ್ರಮಾಡಿದ ಕವಿಗಳ ಕಾವ್ಯಗಳಲ್ಲಿ ಕೀರ್ತಿತರಾಗಿದ್ದಾರೆ. ಇವರ ಬಗೆಗೆ ಇದುವರೆಗೆ ಎರಡು ಶಿಲಾಶಾಸನಗಳು ಉಪಲಬ್ಧವಿದ್ದು ಆ ಶಾಸನಗಳು ಈ ಮಹಾಶಿವಯೋಗಿಯ ನಾಮಸ್ಮರಣೆಮಾಡಿ ಪುನೀತಗೊಂಡಿವೆಯೆನ್ನಬಹುದು. ಮೊದಲನೆಯ ಶಾಸನವೇ ಎಡೆಯೂರಿನ ದೇವಾಲಯದಲ್ಲಿರುವ ಶಾಸನ. ಇದರಲ್ಲಿ ಶಿವಯೋಗಿಗಳನ್ನು ವಿಶೇಷವಾಗಿ ವರ್ಣನೆಮಾಡಲಾಗಿದೆ. ಎರಡನೆಯ ಶಾಸನ ಚಿತ್ರದುರ್ಗದ ಶ್ರೀನಿವಾಸ ಅವಧಾನಿಗಳ ತೋಟದಲ್ಲಿ ಇದೆ. ಅದರಲ್ಲಿ ಶಿವಯೋಗಿಗಳು ಬರೆದ ಷಟ್‌ಸ್ಥಲ ಜ್ಞಾನಾಮೃತ ಸಾರದ ೩೭೨ನೆಯ ವಚನದ ಪೂರ್ಣಪಾಠವೇ ಇದೆ. ಈ ಎರಡೂ ಶಿಲಾಶಾಸನಗಳನ್ನೂ ಅವಲೋಕಿಸಿದಾಗ[13] ಆ ಕಾಲದಲ್ಲಿ ಶಿವಯೋಗಿಗಳ ಪ್ರಭಾವಮುದ್ರೆ ಎಂತಹುದೆಂಬುದರ ಅರಿವಾಗದಿರದು. ಚಿತ್ರದುರ್ಗದ ಶಾಸನವನ್ನು ಯಂತ್ರದ ಕಲ್ಲೆಂದು

ಕರೆಯಲಾಗುತ್ತಿದೆ. ಜನರು ದನಕರುಗಳಿಗೆ ಬೇನೆ ಬಂದಾಗ ಇದನ್ನು ತೊಳೆದ ನೀರನ್ನು ಅವುಗಳಿಗೆ ಕುಡಿಸುತ್ತಾರೆ. ರೋಗ ಗುಣವಾಗುತ್ತದೆ ಎಂಬ ಭಾವನೆ ಆ ಜನರಲ್ಲಿದೆ. ಇದೊಂದು ಯಂತ್ರದ ಕಲ್ಲಾಗಿರುವುದು ನಿಜವೆಂದು ತೋರುತ್ತದೆ. ಏಕೆಂದರೆ ಈ ವಚನದ ಮೇಲ್ಭಾಗದಲ್ಲಿ ಷಡಕ್ಷರ ಮಂತ್ರದ ಕುಂಡಲಿಯು ಉದ್ಧೃತವಾಗಿದೆ. ದತ್ತಿ ಮೊದಲಾದ ಬೇರೆ ಯಾವ ವಿಷಯವೂ ಈ ಶಾಸನದಲ್ಲಿಲ್ಲದ ಮೂಲಕ ಇದನ್ನು ಕೇವಲ ಈ ಮಂತ್ರ ಮಹಿಮೆಯನ್ನು ಬಿತ್ತರಿಸುವದಕ್ಕಾಗಿಯೇ ಕೆತ್ತಿದಂತೆ ತೋರುತ್ತದೆ.[14]

ತೋಂಟದ ಸಿದ್ಧಲಿಂಗೇಶ್ವರರು ಪ್ರಭುದೇವರಿಂದ ಶೂನ್ಯಸಿಂಹಾಸನಾಧೀಶ್ವರರ ಪರಂಪರೆಯಲ್ಲಿ ೧೯ನೆಯವರು ಅಥವಾ ತಾವೇ ತಮ್ಮ ಒನೆಯ ವಚನದಲ್ಲಿ ಹೇಳಿಕೊಂಡ ಹಾಗೆ ತಮ್ಮ ಗುರುಪರಂಪರೆಯಲ್ಲಿ ೧೬ನೆಯವರು. ಇವರ ಜೀವನಚರಿತ್ರೆಯನ್ನರಿಯಲು ವಿಪುಲವಾದ ಸಾಹಿತ್ಯರಾಶಿ ಕನ್ನಡದಲ್ಲಿದೆ. ಇವರ ಜೀವನವನ್ನು ಅಧಿಕರಿಸಿ, ಸ್ವತಃ ಇವರ ಶಿಷ್ಯ ಪರಂಪರೆಯಲ್ಲೊಬ್ಬರಾದ ವಿರಕ್ತ ತೋಂಟದಾರ್ಯರು (ಕ್ರಿ.ಶ. ೧೫೬೦) 'ಸಿದ್ಧೇಶ್ವರ ಪುರಾಣ'ವೆಂಬ ಹೆಸರಿನ ಪುರಾಣ ಬರೆದಿದ್ದಾರೆ. ಹೇರಂಬನೆಂಬ ಬ್ರಾಹ್ಮಣ ಕವಿಯು (ಕ್ರಿ.ಶ. ೧೫೬೦)[15] 'ಸಿದ್ಧಲಿಂಗೇಶ್ವರ ಸಾಂಗತ್ಯ'ವನ್ನು ಬರೆದಿದ್ದಾನೆ. ಶಾಂತೇಶನೆಂಬ ಕವಿಯು (ಕ್ರಿ.ಶ. ೧೫೬೧)[16] 'ಸಿದ್ಧೇಶ್ವರ ಪುರಾಣ'ವನ್ನು ಬರೆದಿದ್ದಾನೆ. ಇದೂ ಅಲ್ಲದೆ ಘನಲಿಂಗಿದೇವ (ಕ್ರಿ.ಶ. ೧೪೭೦) ಮೊದಲ್ಗೊಂಡು ೧೮ನೆಯ ಶತಮಾನದವರೆಗಿನ ಸುಮಾರು ನಲ್ವತ್ತು ಜನಗಳು ತಮ್ಮ ಕಾವ್ಯಗಳಲ್ಲಿ ಸಿದ್ಧಲಿಂಗೇಶ್ವರರ ಮಹಿಮಾತಿಶಯವನ್ನು ಭಯ ಭಕ್ತಿಯಿಂದ ಕೊಂಡಾಡಿದ್ದಾರೆ.[17] ಷಡಕ್ಷರದೇವನಂಥ ಅದ್ಭುತ ಪ್ರತಿಭಾ ಪಾಂಡಿತ್ಯವುಳ್ಳ ಕವಿಯು ತನ್ನ ಗ್ರಂಥಗಳಲ್ಲಿ ಸಿದ್ಧಲಿಂಗೇಶ್ವರರ ವ್ಯಕ್ತಿತ್ವವನ್ನು ಭಯ ಭಕ್ತಿಯಿಂದ ಕೊಂಡಾಡಿದ್ದಲ್ಲದೆ, ಪ್ರತ್ಯೇಕವಾಗಿ 'ಸಿದ್ಧಲಿಂಗ ಸ್ತವ' ಎಂಬ ಸ್ತೋತ್ರಗೀತೆಗಳನ್ನು ಸಂಸ್ಕೃತದಲ್ಲಿ ಹಾಡಿದ್ದಾನೆ. ಇವಲ್ಲದೆ ನಿರಂಜನ ವಂಶರತ್ನಾಕರ, ನಿರಂಜನವಂಶದರ್ಪಣ ಮೊದಲಾದ ಗ್ರಂಥಗಳಲ್ಲಿ ಸಿದ್ಧಲಿಂಗೇಶ್ವರರ ಅನೇಕ ಮಹಿಮೆಗಳ ವರ್ಣನೆಯಿದೆ.

ಸಿದ್ಧಲಿಂಗೇಶ್ವರರ ಸಂಚಾರ; ಸಿದ್ಧಗಂಗಾಕ್ಷೇತ್ರಕ್ಕೆ ಆಗಮನ

ತಮ್ಮೆಲ್ಲ ಗುರುವರ್ಗದವರ ಹಾಗೆಯೇ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಹರದನಹಳ್ಳಿಯ ನಿರಂಜನ ಜಂಗಮಾಧಿಕಾರವನ್ನು ತಮ್ಮ ವಾತ್ಸಲ್ಯಕ್ಕೆ ಪಾತ್ರರಾಗಿದ್ದ ಬೋಳುಬಸವಿದೇವರೆಂಬುವರಿಗೆ ವಹಿಸಿ,[18] ತಾವು ಸಂಚಾರ ಕೈಗೊಳ್ಳುತ್ತಾರೆ. ಸಿದ್ಧಲಿಂಗೇಶ್ವರರ ಸಂಚಾರ ಕಾಲದಲ್ಲಿ ೭೦೧ಜನ ವಿರತರೂ ಮೂರು ಸಾವಿರ ಜನ ಚರಮೂರ್ತಿಗಳೂ ಪಾಲ್ಗೊಂಡಿದ್ದರು. ಈ ಎಲ್ಲರೊಡನೆ ಹರದನ ಹಳ್ಳಿಯನ್ನು ಬಿಟ್ಟು ಪ್ರವಾಸ ಕೈಗೊಂಡ ಸಿದ್ಧಲಿಂಗೇಶ್ವರರು ಸಮಗ್ರ ಭಾರತವನ್ನು ಪ್ರವಾಸ ಮಾಡಿದರು. ಅವರು ಸಂದರ್ಶಿಸಿ, ತಂಗಿ, ಧರ್ಮಪ್ರಸಾರ ಮಾಡಿದ ಸ್ಥಾನಗಳಲ್ಲಿ ಸೌರಾಷ್ಟ್ರ, ಶ್ರೀಶೈಲ, ಕೊಲ್ಲಿಪಾಕಿ, ಕೇದಾರ, ದ್ರಾಕ್ಷಾರಾಮ, ಗೋಕರ್ಣ, ಹಂಪೆ, ತ್ರ್ಯಂಬಕೇಶ್ವರ, ಶಿವಗಂಗೆ, ರಾಮೇಶ್ವರ, ಪೊನ್ನಾಂಬಲ, ಕಂಚಿ, ಕಾಳಹಸ್ತಿ, ಚಿದಂಬರ, ಅರುಣಾಚಲ ಮೊದಲಾದವು ಮುಖ್ಯಸ್ಥಳಗಳು, ಇವಲ್ಲದೆ ಹೊಳಲುಗುಂದ, ಕಾರ್ಕಳ, ಗಾಳಿಪೂಜೆಬೆಟ್ಟ, ಹೊನ್ನುಡಿಕೆ, ಚೆನ್ನಪಟ್ಟಣ, ಮಂಗಳವಾಡ, ಕಲ್ಯಾಣಗಳನ್ನು ಹೇಳಬಹುದು. ಇಲ್ಲೆಲ್ಲ ಸಂಚರಿಸಿ ಅಗತ್ಯವಿದ್ದಲ್ಲಿ ಮಠಮಾನ್ಯಗಳನ್ನು ಪ್ರತಿಷ್ಠಾಪನೆ ಮಾಡಿ ಅವಕ್ಕೆಲ್ಲ ಚರಮೂರ್ತಿಗಳನ್ನು ನಿಯಮಿಸಿ ವೃದ್ಧಾಪ್ಯದ ಹೊತ್ತಿಗೆ ಅಂದರೆ ಕ್ರಿ. ಶ. ೧೪೭೦-೮೦ರೊಳಗಿನ ದಶಕದ ಸುಮಾರಿಗೆ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಬರುತ್ತಾರೆ. ಇಲ್ಲಿ ಅನೇಕ ವರ್ಷಗಳು ಪೂಜಾನುಷ್ಠಾನಾದಿಗಳನ್ನು ಮೇಲಣ ಗವಿಯಲ್ಲಿ ಮಾಡಿ ಕೇತಶರಧಿ, ತುಮಕೂರು, ಸಿದ್ಧಗಂಗೆ ದೇವರಾಯಪಟ್ಟಣಗಳಲ್ಲಿ ಅನೇಕ ಪವಾಡಗಳನ್ನು ಮೆರೆದು ಸಿದ್ಧಗಂಗೆಯಿಂದ ನೇರವಾಗಿ ತುಮಕೂರು, ಗೂಳೂರು, ಹೆಬ್ಬೂರು, ಕುಣಿಗಲ್ಲು, ಹುಲಿಯೂರುದುರ್ಗಗಳ ಮಾರ್ಗವಾಗಿ ಹೊರಟು ಕಗ್ಗೆರೆಗೆ ಬಂದು, ಕಗ್ಗೆರೆಯಲ್ಲಿ ಕೆಲವು ದಿನಗಳಿದ್ದು ಎಡೆಯೂರಿನಲ್ಲಿ ಕ್ರಿ.ಶ. ೧೪೮೦ರ ಹೊತ್ತಿಗೆ ಶಿವಸಮಾಧಿ ಹೊಂದುವರು. ಈ ಹೊತ್ತಿಗಾಗಲೇ ಸಿದ್ಧಗಂಗೆ ಪವಿತ್ರತೀರ್ಥಕ್ಷೇತ್ರವೆಂದು ಪ್ರಸಿದ್ಧಿ ಹೊಂದಿ ಅನೇಕ ಕಡೆಯಿಂದ ಭಕ್ತಾದಿಗಳನ್ನು ಆಕರ್ಷಿಸುತ್ತ ಅವಿಮುಕ್ತಕ್ಷೇತ್ರವೇ ಎನಿಸಿತ್ತು. ಜೊತೆಗೆ ಇಲ್ಲಿ ಮಠವೂ ಸ್ಥಾಪಿತವಾಗಿ ಒಂದು ಪರಂಪರೆ ನಡೆದು ಬರುತ್ತಿತ್ತು.

ಸಿದ್ಧಗಂಗೆ ಮತ್ತು ಪರಿಸರದಲ್ಲಿ ಸಿದ್ಧಲಿಂಗೇಶ್ವರರು ಮೆರೆದ ಪವಾಡಗಳು

ಹೇರಂಬ ಕವಿಯ ಸಿದ್ಧಲಿಂಗೇಶ್ವರ ಸಾಂಗತ್ಯದಲ್ಲಿ 'ಸಿದ್ಧಗಂಗಾ ಜಲ'ದ ಮಹಿಮೆಯು ವಿಶೇಷವಾಗಿ ವರ್ಣಿಸಲ್ಪಟ್ಟಿದೆ.[19] ಈ ಸಿದ್ಧಗಂಗಾ ಜಲದ ಮಹಿಮಾತಿಶಯವು ಕರ್ನಾಟಕ ತಮಿಳುನಾಡುಗಳಲ್ಲೂ ಪ್ರಸರಿಸಿತ್ತು. ತಿಗುಳಾಣ್ಯದಿಂದ 'ವೀರಣಾರ್ಯ' ಎಂಬುವವನು ವಿಷರೋಗದಿಂದ ಪೀಡಿತನಾಗಿ ಬರುವನು. ಅವನು ಇಲ್ಲಿದ್ದ ಸಿದ್ಧಲಿಂಗ ಶಿವಯೋಗಿಗಳ ಮೊರೆಹೊಕ್ಕು ತನ್ನ ತಮಿಳುಭಾಷೆಯಿಂದಲೇ 'ಮಹಾವಿಷರೋಗಸುಪರ್ಣನೇ, ನನ್ನ ರೋಗವನ್ನು

ಪರಿಹರಿಸು' ಎಂದು ಕೇಳುವನು. ಸಿದ್ಧಲಿಂಗೇಶ್ವರರು 'ಸಿದ್ಧಗಂಗಾ ಜಲದಲ್ಲಿ ಸ್ನಾನ ಮಾಡು' ಎಂದು ಅವನಿಗೆ ತಿಳಿಸುವರು.[20] ಅದರಂತೆ ವೀರಣಾರ್ಯನು ಸ್ನಾನ ಮಾಡಲು ವಿಷರೋಗ ಪರಿಹಾರವಾಯಿತು. ತನಗೆ ಕನ್ನಡ ಭಾಷೆ ಗೊತ್ತಿರದಿದ್ದರಿಂದ ಸ್ವಾಮಿಯನ್ನು ಸಿದ್ಧಗಂಗಾ ಜಲವನ್ನು ತಮಿಳುಭಾಷೆಯಲ್ಲಿಯೇ ಸ್ತೋತ್ರಮಾಡಲು ಪ್ರಾರಂಭಿಸಿದನು. ಅಕ್ಕಪಕ್ಕದಲ್ಲಿದ್ದ ಸ್ವಾಮಿಗಳವರ ಶಿಷ್ಯರೆಲ್ಲ ತಮಗೆ ಈತನ ಭಾಷೆ ತಿಳಿಯುವುದಿಲ್ಲವೆಂದೂ, ಈತನಿಗೆ ಕನ್ನಡ ಭಾಷೆ ಬರುವಂತೆ ಮಾಡಿ ಕನ್ನಡದಲ್ಲಿಯೇ ಅವನು ಸ್ತೋತ್ರ ಮಾಡುವಂತೆ ಕರುಣಿಸಬೇಕೆಂದೂ ಬೇಡಿಕೊಂಡರು. ರುದ್ರಗಣದ ವಾಕ್ಯವನ್ನು ಕೇಳಿ ಸಿದ್ಧಲಿಂಗೇಶನು ಅವನಿಗೆ ಕನ್ನಡ ಭಾಷೆ ಬರುವಂತೆ ಅನುಗ್ರಹದೃಷ್ಟಿಯನ್ನು ಬೀರಲು ಅವನಿಗೆ ಕನ್ನಡಭಾಷೆ ಬಂದು ಕನ್ನಡದಲ್ಲಿಯೇ ಅವನು ಸ್ವಾಮಿಗಳವರ ಸ್ತೋತ್ರಮಾಡಲು ಪ್ರಾರಂಭಿಸಿದನು.[21] ಈತನ ಪ್ರಾರ್ಥನೆಯನ್ನು ಕೇಳಿ ಸರ್ವರೂ ಆನಂದಗೊಂಡರು. ಮುಂದೆ ಸಿದ್ಧಲಿಂಗೇಶ್ವರರು ಮಠದೊತ್ತಿನಲ್ಲಿಯೇ ಇರುವ ದೇವರಾಯಪಟ್ಟಣದಲ್ಲಿ ಒಂದು ಮಡಿಕೆ ಅನ್ನವನ್ನು ೩೦೦ ಜನ ಜಂಗಮರಿಗೆ ಪ್ರಸಾದವಾಗುವ ಹಾಗೆ ಪವಾಡವೆಸಗಿದರು.[22] ಅತಿವೃಷ್ಟಿಯನ್ನು ನಿಲ್ಲಿಸಿದ ಪವಾಡ ಇಲ್ಲೇ ನಡೆಯಿತು. ಸಿದ್ಧಗಂಗೆಯ ಪಕ್ಕದ ಕೇತಶರಧಿ (ಈಗಿನ ಕ್ಯಾತಸಂದ್ರ)ಯಲ್ಲಿಮುರಿದ ರಥ ಮೊದಲಿನಂತಾದುದು ಮತ್ತು ಸಿದ್ಧಲಿಂಗೇಶ್ವರರ ಆಣೆಯಿಂದ ಎತ್ತು ಏಳುದಿನ ಉಪವಾಸವಿದ್ದ ಪವಾಡಗಳೂ ನಡೆದವು. ಹೀಗೆ ಶ್ರೀಕ್ಷೇತ್ರದಲ್ಲಿದ್ದು ಸಿದ್ಧಲಿಂಗೇಶ್ವರರು ಅನೇಕ ಪವಾಡಗಳನ್ನು ಮೆರೆದು ಸಂಚಾರ ಕೈಗೊಳ್ಳುತ್ತಾರೆ.

ಸಿದ್ಧಗಂಗೆಯಿಂದ ಸಿದ್ಧಲಿಂಗೇಶ್ವರರ ಪ್ರಯಾಣ

ಸಿದ್ಧಗಂಗೆಯಿಂದ ತಮ್ಮ ೭೦೧ ಜನ ವಿರತರು ಹಾಗೂ ಮೂರು ಸಾವಿರ ಚರಮೂರ್ತಿಗಳೊಡನೆ ತುಮಕೂರಿಗೆ ಬಂದು ಅಲ್ಲಿಯೂ ಅನೇಕ ಪವಾಡಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಒಂದೇ ರಾತ್ರಿ ತುಮಕೂರು ಮತ್ತು ಕಣಿಯಕಲ್ಲು(ಕುಣಿಗಲ್ಲು?)ಗಳಲ್ಲಿ ಕಾಣಿಸಿಕೊಂಡ ಮತ್ತು ತುಮಕೂರಿನ ಹಲಗೆಶೆಟ್ಟರ ಮನೆಯಲ್ಲಿ ತುಂಬೆ ಹೂವಿನ ಮಳೆಗರೆಸಿದ ಪವಾಡಗಳು ಮುಖ್ಯವಾದುವು. ಈ ತುಂಬೆ ಹೂವಿನ ಮಳೆಗರೆಸಿದ ಪವಾಡ ನಡೆದ ಸ್ಥಳದಲ್ಲಿಯೇ ಈಗ ಸಿದ್ಧಲಿಂಗೇಶ್ವರ ದೇವಾಲಯ ನಿರ್ಮಾಣವಾಗಿದೆ ಎಂದು ತಿಳಿದು ಬರುತ್ತದೆ. ತುಮಕೂರಿನಿಂದ ನೇರವಾಗಿ ಪ್ರವಾಸ ಕೈಕೊಂಡು ಗೂಳೂರು (ವೃಷಭಪುರ), ಹೊನ್ನುಡಿಕೆ, ಹೆಬ್ಬೂರು, ನಾಗಸಂದ್ರ ? (ನಾಗಶರಧಿ) ಕುಣಿಯಕಲ್ಲು (ಕುಣಿಗಲ್ಲು?) ಹುಲಿಯೂರು (ಚಿತ್ರಕಾಯಪುರ, ವ್ಯಾಘ್ರಪುರ)[23] ಮುಂತಾದ ಊರುಗಳಲ್ಲಿ ಸಂಚರಿಸಿ ಅನೇಕ ಪವಾಡಗಳನ್ನು ಮೆರೆದು ಕಗ್ಗರೆಗೆ ದಯಮಾಡಿಸಿ ನಾಗಿಣೀನದಿಯ ತೀರದ ಹೂವುಗಳಿಂದ ರಮ್ಯವಾಗಿ, ಬಿಲ್ವವನದಿಂದ ಮನೋಹರವಾಗಿ ಶೋಭಿಸುವ ತೋಟದಲ್ಲಿ ಬೀಡುಬಿಡುವರು. ಆ ಊರ ಮುಖ್ಯವ್ಯಕ್ತಿಯಾದ ನಂಬ್ಯಣ್ಣ ಮತ್ತು ಗಿರಿಗೌಡರೂ ಸಮಸ್ತ ಭಕ್ತರೂ ಶ್ರೀಗಳವರಲ್ಲಿ ತಮ್ಮ ಅನಂತ ಭಕ್ತಿಯನ್ನು ಅರ್ಪಿಸುವರು. ಇಷ್ಟರಲ್ಲಿ ಕಗ್ಗೆರೆಗೆ ಒಂದು ಘೋರ ವಿಪತ್ತು ಪ್ರಾಪ್ತವಾಗುವುದು. ರತ್ನಗಿರಿಯ ವಾಲ್ಮೀಕಿಕುಲದ ಪಾಳೆಗಾರನು[24] ಸೈನ್ಯ ಸಮೇತರಾಗಿ ಬಂದು ದಾಳಿಯನ್ನಿಕ್ಕುವನು. ಊರ ಜನರೆಲ್ಲ ದಿಕ್ಕುಗೆಟ್ಟು ಊರು ಬಿಟ್ಟೋಡಿ ಹೋಗಿ ನೀರಗಲ್ಲ ಅರಸರ ಮೊರೆಹೊಗುವರು. ಈ ದಾಳಿಯ ಅವಾಂತರದಲ್ಲಿ ಜನರು ಶಿವಯೋಗಿಗಳನ್ನೇ ಮರೆತು ಬಿಡುವರು. ನಂಬ್ಯಣ್ಣ ಮೊದಲಾದ ಕಗ್ಗೆರೆಯ ಭಕ್ತರ ಬಿನ್ನಹವನ್ನು ಸ್ವೀಕಾರಮಾಡಿದ್ದ ಶ್ರೀಗಳವರು ಮುಂದಕ್ಕೆ ಪ್ರಯಾಣ ಮಾಡುವಂತೆಯೂ ಇರಲಿಲ್ಲ. ಊರಲ್ಲಿ ಭಕ್ತರಾರೂ ಇಲ್ಲ. ಶಿವಯೋಗಿಗಳು ತಾವು ಕುಳಿತ ಮರದಡಿಯಲ್ಲಿಯೇ ಶಿವಯೋಗಾನಂದದಲ್ಲಿ ಮುಳುಗಿ ಸಮಾಧಿಸ್ಥರಾಗುವರು. ಶ್ರೀಗಳವರ ದೇಹದ ಸುತ್ತಲೂ ಹುತ್ತಬೆಳೆದು ನಿಲ್ಲುವುದು. ಸ್ವಲ್ಪದಿನಗಳಲ್ಲಿ ಊರುಬಿಟ್ಟು ಓಡಿಹೋದ ಜನ ಮರಳಿ ಊರಿಗೆ ಬಂದು ಸ್ವಾಮಿಗಳವರಲ್ಲಿ ಅನಂತಭಕ್ತಿ ಪ್ರಾರ್ಥನೆ ಸಲ್ಲಿಸುವರು. ಬಹಿರ್ಮುಖಿರಾದ ಶಿವಯೋಗಿಗಳು ಅವರ ಪ್ರಾರ್ಥನೆಯ ಮೇರೆಗೆ ಕಗ್ಗರೆಯನ್ನು ಪ್ರವೇಶಿಸುವರು.[25] ಭಕ್ತಾದಿಗಳು ಅತಿ ವೈಭವದಿಂದ ಶ್ರೀಗಳವರ ಮೆರವಣಿಗೆ ಮಾಡುವರು. ಈ ಹೊತ್ತಿಗಾಗಲೆ ಶಿವಯೋಗಿಗಳವರಿಗೆ ತುಂಬಾ ವಯಸ್ಸಾದ ಹಾಗೆ ಕಾಣುತ್ತದೆ. ಶಿವಯೋಗಿಗಳವರ ಪಾದಪದ್ಮಾರಾಧಕರಲ್ಲೊಬ್ಬನಾದ ಚೆನ್ನವೀರಪ್ಪ ಒಡೆಯರೆಂಬುವರು ಸ್ವಾಮಿಗಳವರಿಗೆ ಒಂದು ಮಠವನ್ನು ಕಟ್ಟಿಸಿಕೊಡುವ ಸತ್ಸಂಕಲ್ಪವುಳ್ಳವರಾಗಿ ತಮ್ಮ ಗುರುಗಳೂ ಸಿದ್ಧಲಿಂಗೇಶ್ವರರ ಪರಮಭಕ್ತರೂ ಆದ ಪಟ್ಟದ ಚಿಟ್ಟಿಗದೇವರೆಂಬುವರಲ್ಲಿ ಈ ವಿಷಯವನ್ನು ಬಿನ್ನೈಸಿ ಕೆಲವೊಂದು ಧನವನ್ನು ಅವರಿಗೆ ಒಪ್ಪಿಸುವರು. ಚಿಟ್ಟಿಗದೇವರು ತಮ್ಮ ಭಕ್ತನ ಭಕ್ತಿಯ ಮೇರೆಗೆ ಎಡೆಯೂರಿನಲ್ಲಿ ಒಂದು ಮಠವನ್ನು ಕಟ್ಟಿಸಿ ಶಾಸನ ಹಾಕಿಸುವರು.[26] ಶ್ರೀ ಶಿವಯೋಗಿಗಳವರು ತಮ್ಮ ಸಂಗಡವೇ ಇದ್ದ ಸಪ್ಪೇದೇವರು, ಉಪ್ಪಿನಹಳ್ಳಿಯ ಸ್ವಾಮಿ, ಗುಮ್ಮಳಾಪುರದ ಸಿದ್ಧಲಿಂಗದೇವರು, ಶೀಲವಂತ ದೇವರು, ಬೋಳಬಸವಾರ್ಯರೇ ಮೊದಲಾದವರಿಗೆ[27] ಶಿವಯೋಗರಹಸ್ಯದ ಅನೇಕ ಮರ್ಮಗಳನ್ನು ತಿಳಿಸಿ, ಲಿಂಗಾಂಗ ಸಾಮರಸ್ಯದ ರೀತಿಯನ್ನು ಅರುಹಿ ಎಡೆಯೂರಿನಲ್ಲಿ ಚಿಟ್ಟಿಗದೇವದಿಂದ ಕಟ್ಟಿಸಲ್ಪಟ್ಟ ಮಠದಲ್ಲಿ ಲಿಂಗೈಕ್ಯರಾಗುವರು.

ತೋಂಟದ ಸಿದ್ಧಲಿಂಗೇಶ್ವರರ ಕ್ರಾಂತಿಯ ಫಲ

ಸಾಮಾನ್ಯವಾಗಿ ಈಗ ಸಮಾಜದಲ್ಲಿರುವ ಜಂಗಮವರೇಣ್ಯರ ಮಠಗಳಿಗೂ, ಅನೇಕ ಪಟ್ಟಾಧ್ಯಕ್ಷರ ಮಠಮಾನ್ಯಗಳಿಗೂ ಶ್ರೀ ತೋಂಟದಾರ್ಯರಿಗೂ ಒಂದಿಲ್ಲೊಂದು ಬಗೆಯಲ್ಲಿ ಸಂಬಂಧವಿದ್ದೇ ಇದೆ. ಕಲ್ಯಾಣದ ಪ್ರಭುದೇವರ ಪರಂಪರೆಯನ್ನು ಮುಂದುವರಿಸಿಕೊಂಡು ಧರ್ಮೋದ್ಧಾರದ, ಸಮಾಜಸಂಸ್ಕರಣದ, ಕಾರ್ಯನಿಷ್ಠೆಯ ವಿವಿಧೋದ್ದೇಶ ಸಾಧನೆಗಾಗಿ ಆವಿರ್ಭಾವಗೊಂಡ ಶೂನ್ಯಪೀಠದ ಕಾರ್ಯಗಳು, ಕಲ್ಯಾಣದಲ್ಲಿ ಸ್ಥಗಿತಗೊಂಡ ಮೇಲೆ ಅದರ ಮೂಲ ಕೇಂದ್ರವು ಹರದನಹಳ್ಳಿಯ ಪರಂಪರೆಯಿಂದ ಮುಂದುವರಿದು ಕಾರ್ಯರಂಗ ಪ್ರವೇಶಮಾಡಿ ದೇಶದ ಮೂಲೆ ಮೂಲೆಗಳಲ್ಲಿ ನವಜಾಗ್ರತಿಯನ್ನುಂಟುಮಾಡಿ ಸರ್ವಸಮಾಜಗಳ ಸಂಸ್ಕೃತಿ ಸಂವರ್ಧನೆಗೆ ಪ್ರಯತ್ನಿಸಿದುದು ಗೋಚರವಾಗುತ್ತದೆ. ಈ ಪರಂಪರೆಯಲ್ಲಿ ತೋಂಟದ ಸಿದ್ಧೇಶ್ವರರ ಪಾತ್ರ ಅತ್ಯಂತ ಪ್ರಭಾವಯುತವಾದುದು. ಇವರು ಪ್ರವಾಸಕಾಲದಲ್ಲಿ ಅನೇಕರಿಗೆ ಅನುಗ್ರಹದೀಕ್ಷೆಯಿತ್ತು, ಮಠ ಮಾನ್ಯಗಳನ್ನು ನಿರ್ಮಿಸಿ, ಅಲ್ಲಲ್ಲಿ ಚರವರೇಣ್ಯರನ್ನು ನೇಮಿಸಿ ಧರ್ಮ, ಸಂಸ್ಕೃತಿ, ಸಾಮಾಜಿಕ ಪ್ರಗತಿ, ಶೀಲಸಂವರ್ಧನೆಯ ಆಗಾಧಕಾರ್ಯವನ್ನು ಮಾಡಿದ್ದಾರೆ; ವೀರಶೈವೋದ್ಧರಣದ ಆಗಾಧ ಪ್ರಗತಿಯನ್ನು ಸಾಧಿಸಿದ್ದಾರೆ. ತೋಂಟದಾರ್ಯರ ಹಿಂದಿದ್ದ ಏಳ್ನೂರು ವಿರತರ ಸಂತತಿಯವರೇ ಇಂದು ದೇಶಾದ್ಯಂತ ಅನೇಕ ಮಠಮಾನ್ಯಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. 'ವಿರತ' ಶಬ್ದವು ಕೇವಲ ಜಂಗಮ ಸಂಪ್ರದಾಯದವರಿಗೇ ಮೀಸಲಾಗಿರದೆ ಪಟ್ಟಾಧ್ಯಕ್ಷರಿಗೂ ಮೀಸಲಾದ ಶಬ್ದವೇ ಆಗಿದೆ. ವಿಗತವಾದ ರತಿಯೇ 'ವಿರತಿ', ಅದನ್ನುಳ್ಳವನೇ 'ವಿರಕ್ತ'. ವಿರಕ್ತ ಎಂದರೆ ಈಗ ಜಂಗಮ ಸಂಪ್ರದಾಯದವರಿಗೆ ಕರೆಯುವುದೇ ರೂಢಿ ಅಷ್ಟೆ. ವಿರೂಪಾಕ್ಷ ಕವಿಯ ಚೆನ್ನಬಸವ ಪುರಾಣ, ಲಕ್ಕಣ ದಂಡೇಶನ ಶಿವತತ್ತ್ವ ಚಿಂತಾಮಣಿ ಮುಂತಾದ ಗ್ರಂಥಗಳು ದೇಶಾದ್ಯಂತ ಇರುವ ಅನೇಕ ವೀರಶೈವ ಚರ್ಯಾಕಾಂಡಪಂಡಿತರ, ಶಿವಯೋಗಿಗಳ ಹೆಸರು, ಅವರು ಮಾಡಿದ ಕಾರ್ಯಗಳ ಪಟ್ಟಿಯನ್ನು ಕೊಡುತ್ತವೆ. ನಾಡಿನಾದ್ಯಂತ ಇರುವ ಶರಣರ ಮತ್ತು ವಿರಕ್ತರ, ಪಟ್ಟಾಧ್ಯಕ್ಷರ ಪಟ್ಟಿ ವಿಜಯನಗರಕ್ಕೆ ಮುಟ್ಟಲು ವಿಜಯನಗರವು ವೀರಶೈವದ ಒಂದು ಪ್ರಮುಖ ಕೇಂದ್ರವಾಗಿರುವುದಷ್ಟೇ ಅಲ್ಲ, ಹರದನಹಳ್ಳಿ ಪೀಠಾಚಾರ್ಯರಿಗೂ ವಿಜಯನಗರಕ್ಕೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಅದರ ಸ್ಥಾಪನೆಯ ಉದ್ದೇಶದ ಘನತೆಯನ್ನು ಈ ಹಿಂದೆ ವಿವರಿಸಲಾಗಿದೆ. ಚೆನ್ನಬಸವಪುರಾಣದಲ್ಲಿ ಯಾವ ಯಾವ ಊರುಗಳಲ್ಲಿ ಯಾವ ಯಾವ ಭಕ್ತರು, ಶರಣರು, ಇದ್ದು ವೀರಶೈವಾಚಾರ ಸಂಪತ್ತಿನಿಂದ ಕೂಡಿದ್ದರು, ಅವರ ಕಾರ್ಯಗಳೇನು? ಇತ್ಯಾದಿಗಳನ್ನು ಸಂಕ್ಷೇಪವಾಗಿ ಹೇಳಲಾಗಿದೆ.[28] ಇವರೆಲ್ಲ ತೋಂಟದ ಸಿದ್ಧಲಿಂಗೇಶ್ವರರ ಅಥವಾ ಹರದನಹಳ್ಳಿ ಪರಂಪರೆಯ ಸಿದ್ಧಲಿಂಗೇಶ್ವರರ ಪೂರ್ವಜರ ಕ್ರಾಂತಿಯ ಫಲವಾಗಿ ಜಾಗೃತರಾಗಿ ವೀರಶೈವೋದ್ಧರಣದ ಕಾರ್ಯರಂಗದಲ್ಲಿದ್ದವರೆಂದು ತಿಳಿಯಲನುಮಾನವಿಲ್ಲ. ಇವರಲ್ಲಿ ಮುಖ್ಯರಾದವರ ಹೆಸರುಗಳನ್ನು ಹೀಗೆ ಹೇಳಬಹುದು:-

ಶ್ರೀ ಗಿರಿಯ ಪ್ರಾಂತದಲ್ಲಿದ್ದ ಹುಚ್ಚುನಂಜೇಶ್ವರ, ಹುಚ್ಚುವಿರೂಪಾಕ್ಷರು. ಮಾದಾಪುರದ ಮರುಳದೇವರು, ಹೊನ್ನಹಳ್ಳಿಯ ಅನಾದಿಸಿದ್ಧರದೇವ, ಸಿದ್ಧವೀರೇಶ, ನಿಡುಮಾಮಿಡಿಯ ಕರಿಯ ಬಸವೇಶ, ಕರಡಿಯ ಹಾಲುದೇವ, ಸರವೆಯ ಸಿದ್ಧರಾಮೇಶ, ಕೋನ್ನದಾರ್ಯ, ಬುಕ್ಕಸಾಗರದ ಕರಿಯ ಸಿದ್ಧೇಶ್ವರ, ನಾರಕಂಥೆಯ ದೇವರು, ಚೆಂಡಗಹಳ್ಳಿಯ ವೀರಪ್ಪ, ಮಾವಿನ ಹಳ್ಳಿಯ ಮಲ್ಲಪ್ಪ, ಅದೇ ಗ್ರಾಮದ ಸಂಗಮೇಶ್ವರ, ಗುಮ್ಮಳಾಪುರದ ಜಂಗುಳಿ ವೀರಪ್ಪ, ಸುಪ್ರಸಾದಿ ದೇವರು, ನಂಜರಾಯ, ಕೆಂಚಸೋಮಣ್ಣನಾಯಕ, ಎಳಂದೂರು ಚೆನ್ನೊಡೆಯ, ಬರಗಿರಿಯ ದೇವಿನಾಯಕ, ಸಿದ್ಧಮಲ್ಲಿನಾಯಕ, ಜಂಬೂರು ದೊರೆಗಳು, ಕೇತಸಾಗರದ ಸೆಟ್ಟಿ, ಬಿಜ್ಜಾವರದ ಚಿಕ್ಕಣ್ಣಗೌಡ, ಸುಕಟೂರು ತಮ್ಮಣ್ಣಗೌಡ, ತಗಡೂರು ಪ್ರಭು, ತಲಕಾಡು ಚಂದ್ರಶೇಖರ, ಭೋಗವಾಡಿಯ ಲಿಂಗರಾಯ, ಉಡುವಂಕ ನಾಡಪ್ರಭು, ಸೋಲೂರು ಬಸಪ್ಪ ಮತ್ತು ಸಂಗಯ್ಯ ಮಹಾಂತಯ್ಯ, ಸಂಡಿಗೆ ಸಿದ್ಧಪ್ಪ, ಮುದ್ದುಸಂಗಪ್ಪ, ಅಂದೂರುಕೆರೆಯ ದಾಸೋಹದ ಲಿಂಗಪ್ಪ, ಮಲ್ಲಪ್ಪ, ಕಾಬಣದ ಬಿಂಗಿ ಗಂಗಾಧರ, ಕಳಲೆ ವೀರಪ್ಪ, ಹೊಸಹಳ್ಳಿಯ ನಾಗಪ್ಪ, ಬಸಪ್ಪ, ಮೋಳಿಗಯ್ಯ, ಬಾಣಾವರದ ಸಿದ್ಧಪ್ಪ, ಶೀಲವಂತ ಸಿರಿಯಾಳಯ್ಯ, ಹೋಳಿನ ಸಿದ್ಧಪ್ಪ, ದುರ್ಗದ ಕಲ್ಲಪ್ಪ, ವಿರತ ಬಸಪ್ಪ, ತೈಲದಲ್ಲಿ ಮರುಳಪ್ಪ, ಮಾನಂಗಿ ಶಿಖರಪ್ಪ, ಚಿಟ್ಟಮಂಡೆಯ ಪ್ರಭು, ಬಯಲ ಪ್ರಭು, ಕಳಲೆಯ ಕೆಂಚೇದೇವರು, ಕಾನಾಪುರದ ಮರುಳುಸಿದ್ಧೇಶ, ಉಪ್ಪಲ ಗುಡಿಯ ಮರುಳುಸಿದ್ಧೇಶ, ಕೊಟ್ಟೂರು ಬಸವಲಿಂಗೇಶ, ಆನೇಗುಂದಿ ಬೆಟ್ಟದಲ್ಲಿದ್ದ ಹುಚ್ಚುದೇವರು, ಬಳ್ಳಿಗಾವೆಯ ಹುಚ್ಚು ಸಿದ್ಧರಾಮೇಶ, ಇತ್ಯಾದಿ. ನಾಡಿನ ಶಿವಭಕ್ತರ ಈ ರೀತಿಯ ಪಟ್ಟಿಯನ್ನು ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ನೋಡಬಹುದು. ಅದು ಇನ್ನೂ ವ್ಯಾಪಕವಾದದ್ದು.

ಸಿದ್ಧಲಿಂಗೇಶ್ವರರ ಮತ್ತು ಅವರ ಪೂರ್ವಜರಾದ ನಿರಂಜನ ಜಗದ್ಗುರುಗಳವರ ಕ್ರಾಂತಿಯ ಬೆಳಸು ನಾಡಿನ ಮೂಲೆ ಮೂಲೆಗಳಲ್ಲಿ ಹೇಗೆ ಜಾಗೃತವಾಗಿತ್ತು ಎಂಬುದು ಈ ಮೇಲಿನ ಪಟ್ಟಿಯಿಂದ ಸಿದ್ಧವಾಗುತ್ತದೆ. ಸಿದ್ಧಲಿಂಗೇಶ್ವರರಂತೂ ಒಬ್ಬ ಸೂರ್ಯನಿದ್ದ ಹಾಗೆ. ಅವರ ಸಹಸ್ರ ಸಹಸ್ರ ಸಂಖ್ಯೆಯ ಪ್ರಭಾಮಯ ಕಿರಣಗಳು ನಾಡಿನ ಮೂಲೆ ಮೂಲೆಗಳಲ್ಲೂ ಪ್ರಸಾರಗೊಂಡು ನಾಡೆಲ್ಲ ಬೆಳ್ಳಂಬೆಳಕಾಗಿ ಜನತೆ ಅಜ್ಞಾನಾಂಧಕಾರದಿಂದ ಜ್ಞಾನದ ಹೊಂಬೆಳಕಿನಲ್ಲಿ ವಿರಾಜಿಸುತ್ತಿತ್ತೆಂದು ಹೇಳಿದರೆ ಸಾಕು.

ಸಿದ್ಧಲಿಂಗೇಶ್ವರರ ನಂತರದ ಸಿದ್ಧಗಂಗಾಕ್ಷೇತ್ರ

ಸಿದ್ಧಲಿಂಗೇಶ್ವರರ ನಂತರ ಅನೇಕ ವರ್ಷಗಳವರೆಗೆ ಶ್ರೀ ಸಿದ್ಧಗಂಗಾ ಕ್ಷೇತ್ರದ ಪರಂಪರೆಯಲ್ಲಿ ಐತಿಹಾಸಿಕವಾಗಿ ನಮಗೆ ಆಧಾರಗಳು ಸಿಗುತ್ತಿಲ್ಲ. ಆದರೆ ಆ ವಿರಕ್ತಪರಂಪರೆ ಬೆಳೆದುಕೊಂಡು ಬಂದಿದೆ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮುಪ್ಪಿನಾರ್ಯರು, ರುದ್ರಸ್ವಾಮಿಗಳು, ಸಿದ್ಧಲಿಂಗಸ್ವಾಮಿಗಳು ಈ ಕ್ಷೇತ್ರಾಧಿಪತಿಗಳಾಗಿದ್ದ ಹಾಗೆ ತಿಳಿದುಬರುವುದು. ಆದರೆ ಈ ಕಾಲದಲ್ಲಿ ಮಠದ ಸ್ಥಿತಿಗತಿಗಳು ಚೆನ್ನಾಗಿಲ್ಲದೆ ಹಳೆಯ ದಾಖಲೆಗಳೆಲ್ಲ ನಾಶವಾಗಿ ಕಾಲಗರ್ಭದಲ್ಲಿ ಅವಿತು ಚರಿತ್ರೆಯ ಮೇಲೆ ಮಸಕು ಕವಿದಿದೆ. ೧೯ನೇ ಶತಮಾನದ ಆದಿಯಲ್ಲಿ ಸಿದ್ಧಲಿಂಗಸ್ವಾಮಿಗಳವರು ಶ್ರೀ ಮಠಾಧ್ಯಕ್ಷರಾಗಿದ್ದ ಕಾಲದಲ್ಲಿ ಆ ಶತಮಾನದ ಕೊನೆಯಲ್ಲಿ ಸುಮಾರು ಕ್ರಿ.ಶ. ೧೮೫೦-೫೫ರ ಸುಮಾರಿಗೆ ಹಾನಗಲ್ಲು ತಾಲ್ಲೂಕು ಕೂಡಲ ವಿರಕ್ತ ಮಠಾಧೀನದಲ್ಲಿರುವ ಗುರುನಂಜೇಶ್ವರನ ಗದ್ದುಗೆಯಲ್ಲಿ ಪೂಜಾನುಷ್ಠಾನಗಳನ್ನು ಮಾಡಿಕೊಂಡಿದ್ದ ಸಿದ್ಧಪುರುಷರಾದ ಅಡವೀಸ್ವಾಮಿಗಳು (ಅಟವೀಶ್ವರ ಸ್ವಾಮಿಗಳು) ಗುಬ್ಬಿಗೆ ಬಂದ ಮೇಲೆ ಅವರು ಸಿದ್ಧಗಂಗಾ ಕ್ಷೇತ್ರದ ಮಹಾತ್ಮೆಯನ್ನರಿತವರಾಗಿ ಆ ಕಡೆಯಿಂದ ಗಂಗಾಪೂಜೆಗೆ ಸಿದ್ಧಗಂಗೆಗೆ ಬರುವ ಜನರೊಡನೆ ಆಕರ್ಷಿತರಾಗಿ ಬಂದರು. ಇಲ್ಲಿನ ಸ್ಥಿತಿಗತಿಗಳನ್ನರಿತು ಈ ಕ್ಷೇತ್ರದಲ್ಲಿ ಅನೇಕ ರಚನಾತ್ಮಕ ಕಾರ್ಯಗಳನ್ನು ಕೈಕೊಂಡು ಶ್ರೀ ಕ್ಷೇತ್ರದ ಕೀರ್ತಿಯನ್ನು ಬೆಳಗಿಸಿದರು. ದಾಸೋಹ, ಸಂಸ್ಕೃತ ವಿದ್ಯಾಭ್ಯಾಸಗಳಿಗೆ ಅಂಕುರಾರ್ಪಣೆಮಾಡಿದರು.

ಮಹಿಮಾಪುರುಷ ಅಡವೀಸ್ವಾಮಿಗಳು

ಹಾನಗಲ್ಲು ತಾಲ್ಲೂಕು 'ಕೂಡಲ' ಒಂದು ಸಂಗಮಕ್ಷೇತ್ರ. ಈ ಗ್ರಾಮದ ಹತ್ತಿರ ಪಶ್ಚಿಮ ಘಟ್ಟದ ಮಡಿಲಲ್ಲಿರುವ ೞಸಳೂರು ಗ್ರಾಮದಲ್ಲಿ[29] ಹುಟ್ಟಿ ಬರುವ 'ಧರ್ಮಾ' ಎಂಬ ಹೊಳೆ, ಸಾಗರದ ಹತ್ತಿರ ಅದೇ ಪಶ್ಚಿಮ ಘಟ್ಟಗಳ ಸಾನುಪ್ರದೇಶದ ವರದಾಮೂಲವೆಂಬ ಹೆಸರಿನ ಸ್ಥಳದಿಂದ ಹುಟ್ಟಿಬರುವ 'ವರದಾ' ಎಂಬ ಹೊಳೆಗಳ ಸಂಗಮವಾಗಿವೆ.[30] ಆದ್ದರಿಂದಲೇ ಈ ಊರಿಗೆ ಕೂಡಲ ಎಂಬ ಹೆಸರು. ಇದೊಂದು ಪುರಾತನ ಪುಣ್ಯಕ್ಷೇತ್ರ. ಇಲ್ಲಿ ಭೂಗತವಾದ ಅವಶೇಷಗಳು ಹೇರಳ. ಅದರ ಪ್ರಾಚೀನ ಚರಿತ್ರೆಯ ಮೇಲೆ ದೊಡ್ಡ ಬಂಡೆಗಲ್ಲು ಎಳೆದಿದೆ. ಈ ಕೂಡಲದಲ್ಲಿ ಸಂಗಮೇಶ್ವರ ಶಿವಲಿಂಗವಿದೆ. ಬಸವಣ್ಣನವರ ಕುಮಾರನಾದ 'ಮುದ್ದು ಸಂಗಪ್ಪ'[31] ನವರ ಗುಡಿಯಿದೆ. ಇವೆರಡೂ ದೇವಾಲಯಗಳಿಗೆ ಮೊದಲು ಭದ್ರವಾದ ಪ್ರಾಕಾರವಿದ್ದು ಈಗ ಅದೆಲ್ಲ ಬಿದ್ದು ಹೋಗಿದೆ. ಪಕ್ಕದಲ್ಲಿಯೇ ದೊಡ್ಡ ವಿರಕ್ತ ಮಠವಿದೆ. ಆ ಮಠದಲ್ಲಿ ನೀಲಮ್ಮನವರ ಗುಡಿ ಎಂಬ ಪ್ರತ್ಯೇಕ ಭಾಗವಿರುವುದೊಂದು ವೈಶಿಷ್ಟ್ಯ. ಈ ವಿರಕ್ತ ಮಠದ ಆವರಣದಲ್ಲಿಯೇ ಮಹಾಮಹಿಮಾಶಾಲಿಗಳಾದ ಗುರುನಂಜೇಶ್ವರ (ಗುರುನಂಜಪ್ಪ) ಗದ್ದುಗೆಯಿದೆ. ಇವರು ಮಹಾಮಹಿಮಾಶಾಲಿಗಳಾದ ವಿರಕ್ತವರೇಣ್ಯರೆನಿಸಿ ಆ ಮಠದಲ್ಲಿ ಆಗಿ ಹೋದರು. ಇವರ ಮಹಿಮೆಗಳು ಅನೇಕ: ಅದರಲ್ಲಿ ಮುಖ್ಯವಾದುದೆಂದರೆ: ಒಮ್ಮೆ ಪ್ರವಾಸ ಹೋಗಿದ್ದ ಗುರುನಂಜೇಶ್ವರರಿಗೆ ಬಹಳ ಬಿಸಿಲಾಗಿ ತುಂಬಾ ಆಯಾಸವಾಗಿತ್ತಂತೆ. ಆಗ ಚೆನ್ನಾಗಿ ಚಿಗಿತ ಮಾವಿನ ಮರದ ಕೊಂಬೆಯೊಂದನ್ನು ಮುರಿದುಕೊಂಡು ಹೆಗಲ ಮೇಲೆ ಇಟ್ಟುಹೊತ್ತುಕೊಂಡು ಬಿಸಿಲಿನ ತಾಪವನ್ನು ಹೋಗಲಾಡಿಸಿಕೊಂಡರಂತೆ. ಬಿಸಿಲನ ತಾಪ ಕಡಿಮೆಯಾದ ಮೇಲೆ ಆ ಮುರಿದ ಮಾವಿನ ಕೊಂಬೆಯನ್ನು ಅಲ್ಲಿಯೇ ಹಳ್ಳದ ದಂಡೆಯಲ್ಲಿ ಭೂಮಿಯ ಬಿರುಕಿನಲ್ಲಿಟ್ಟು, ಹಳ್ಳದಿಂದ ನೀರನ್ನು ತಂದು ಅದಕ್ಕೆರದು 'ದೊಡ್ಡ ಮರವಾಗು' ಎಂದು ಆಶೀರ್ವದಿಸಿದರಂತೆ. ದೊಡ್ಡದಾಗಿ ಬೆಳೆದ ಆ ಮಾಮರ 'ಮಾರನ ಬೀಡು'[32] ಎಂಬ ಹಳ್ಳಿಯ ಹತ್ತಿರ ಇಂದಿಗೂ ಇದೆ. ಅದಕ್ಕೆ 'ಗುರು ನಂಜಪ್ಪನ ಮಾವಿನಮರ' ಎಂದೂ ಹೇಳುತ್ತಾರೆ. ಪೂಜಾದಿಗಳನ್ನು ಮಾಡುತ್ತಾರೆ. ಇಂಥ ಮಹಿಮಾ ಶಾಲಿಗಳಾದ ಗುರುನಂಜೇಶ್ವರರ ಗದ್ದುಗೆ ಭವ್ಯವಾಗಿ ಕಟ್ಟಲ್ಪಟ್ಟಿದೆ (ಈಗ ಶಿಥಿಲಗೊಂಡಿದೆ). ಈ ಗುರುನಂಜೇಶ್ವರನ ಗದ್ದುಗೆಯಲ್ಲಿ ಪೂಜಾನುಷ್ಠಾನಗಳನ್ನು ಮಾಡಿಕೊಂಡಿದ್ದ ಅಟವೀಶ್ವರ ಸ್ವಾಮಿಗಳಿಗೆ ಕೂಡಲ ವಿರಕ್ತಮಠದ ಸಂಬಂಧವಿತ್ತೋ ಇಲ್ಲವೊ ತಿಳಿದು ಬರುವುದಿಲ್ಲ. ಅಂತೂ ಮಹಾಮಹಿಶಾಲಿಗಳೆಂದು ಕೀರ್ತಿವೆತ್ತವರು.[33]

ಈ ಅಡವೀಶ್ವರ ಸ್ವಾಮಿಗಳವರಿಗೆ ಕೂಡಲದಲ್ಲಿ ಮನನೋಯುವ ಪ್ರಸಂಗವೊಂದು ಒದಗಿತು. ಆ ಪ್ರಸಂಗದಿಂದ ನೊಂದುಕೊಂಡ ಅಡವೀಶ್ವರರು ಕೂಡಲವನ್ನು ಬಿಟ್ಟು ರಾತ್ರಿಯೇ ಹೊರಟು ನಾಗನೂರಿಗೆ[34] ಬರುವಷ್ಟರಲ್ಲಿ ನಾಗನೂರಿನ

ಜನರು ಇವರನ್ನು ಸಂತೈಸಿ ಪೂಜೆಗೆ ಕರೆದೊಯ್ದರು. ಪೂಜೆ ಮಾಡಿ ಮಲಗಿದರು. ರಾತ್ರಿ ಯಾರಿಗೂ ಹೇಳದೆ ತಮ್ಮ ಪೂಜಾಸಾಮಾಗ್ರಿಗಳನ್ನು ಅವರ ಮನೆಯಲ್ಲಿಯೇ ಬಿಟ್ಟು ಹೊರಟುಬಿಟ್ಟರು. (ಅಡವಿಸ್ವಾಮಿಗಳವರಿಗೆ ಸಂಬಂಧಿಸಿದ ಕೆಲವು ಸಾಮಾಗ್ರಿಗಳು ಸವಣೂರು ತಾಲೂಕು ಮನ್ನಂಗಿ ಎಂಬ ಊರಿನಲ್ಲಿ ಇವೆಯೆಂದು ತಿಳಿದುಬಂದಿದೆ. ಆ ಸಾಮಗ್ರಿಗಳನ್ನು ಆ ಮನೆಯವರು ಯಾರಿಗೂ ಕೊಡಲು ಒಪ್ಪುತ್ತಿಲ್ಲವೆಂದೂ ತಿಳಿದುಬಂದಿದೆ). ಮುಂದೆ ಅವರು ಎಲ್ಲಿಗೆ ಹೋದರೆಂಬುದು ಯಾರಿಗೂ ಗೊತ್ತಾಗಲೇ ಇಲ್ಲ. ಸ್ವಾಮಿಗಳು ಹೊರಟು ಊರು ದಾಟಿ ಗುಬ್ಬಿಗೆ ಬಂದು ತಂಗಿದರು.[35] ಇತ್ತ ಕೂಡಲದ ಅನೇಕ ಜನಗಳು ಸ್ವಾಮಿಗಳವರನ್ನು ಹುಡುಕುವ ಕಾರ್ಯತತ್ಪರರಾದರು. ಆದರೆ ಅವರು ಸಿಕ್ಕದೆ ನಿರಾಸೆಗೊಂಡರು. ಇಂದಿಗೂ ಈ ಭಾಗದಲ್ಲಿ-''ಏನಾಗಿದ್ದಾರವ್ವ ಕಂಡೀರೇನಡವಿಸ್ವಾಮಿನ.....' ಎಂಬ ಹೆಣ್ಣು ಮಕ್ಕಳ ಹಾಡು ಪ್ರಚಲಿತವಿದೆ. ಅಡಿವೆಪ್ಪ, ಅಡಿವೆವ್ವ ಇತ್ಯಾದಿ ಹೆಸರಿಡುವ ಪದ್ಧತಿಯೂ ವಿಶೇಷವಾಗಿದೆ. ಒಂದೇ ಮನೆಯಲ್ಲಿ ಇಬ್ಬರು ಮೂವರಿಗೆ ಈ ಹೆಸರಿಡುವ ಪದ್ಧತಿಯೂ ಕೂಡಲದಲ್ಲಿತ್ತು. ಈಗಲೂ ಅಡಿವೆಪ್ಪ ಅಡಿವೆವ್ವ ಹೆಸರುಗಳ ಆಧಿಕ್ಯವಿದೆ. ಇವೆಲ್ಲ ಅಡವಿಸ್ವಾಮಿಗಳ ಪ್ರಭಾವದಿಂದಾದ ಹೆಸರುಗಳು. ಈ ಅಡವಿಸ್ವಾಮಿಗಳೇ ಗುಬ್ಬಿಯಲ್ಲಿ ನಿಂತು ಅಲ್ಲಿ ಅನೇಕ ಮಹಾಕಾರ್ಯ ಮಾಡಿ ಕಾರಣ ಪುರುಷರೆನಿಸಿದ್ದರು.

ವಿಷರೋಗ ಪರಿಹಾರಕಗಳೂ, ಇಷ್ಟಸಿದ್ಧಿದಾಯಿಕೆಯೂ ಎನಿಸಿ ಗೋಸಲಸಿದ್ಧೇಶ್ವರರ ಕಾಲದಿಂದಲೂ ಜನತೆಯಲ್ಲಿ ಶ್ರದ್ಧಾ ಭಕ್ತಿ ವಿಶ್ವಾಸಗಳನ್ನು ಮೂಡಿಸಿದ್ದ 'ಸಿದ್ಧಗಂಗಾ' ಮಾತೆಯ ಪೂಜೆ(ಗಂಗಾಪೂಜೆ)ಗೆ ನಿಟ್ಟೂರು ಗುಬ್ಬಿಯ ಕಡೆಯಿಂದ ಜನ ಗಾಡಿಗಳನ್ನು ಹೂಡಿಕೊಂಡು ಪರ್ವದಿನಗಳಲ್ಲಿ ಶುಕ್ರವಾರ, ಮಂಗಳವಾರಗಳಂದು ಬರುವ ಹೋಗುವ ಪರಿಪಾಠ ಇಂದಿನಂತೆ ಅಂದೂ ಇತ್ತು. ಗುಬ್ಬಿಯಲ್ಲಿ ವಾಸವಾಗಿದ್ದ ಅಡವೀಶ್ವರರಿಗೆ ಇದರ ಪರಿಚಯವಾಗಿ ಒಮ್ಮೆ ಇಲ್ಲಿಗೆ ಬರುವ ಗಾಡಿಯಲ್ಲಿ ಕುಳಿತು ಬಂದರು. ಇಲ್ಲಿನ ಪ್ರಾಕೃತಿಕ ಸನ್ನಿವೇಶ ತಪೋನುಷ್ಠಾನಯೋಗ್ಯ ಸನ್ನಿವೇಶ, ಕ್ಷೇತ್ರ ಮಾಹಾತ್ಮೆಗಳು ಅವರ ಮನವನ್ನು ಸೂರೆಗೊಂಡವು. ಕ್ಷೇತ್ರಾಧಿಪತಿಗಳಾಗಿದ್ದ ನಿ। ಪ್ರ। ಶ್ರೀ ಸಿದ್ಧಲಿಂಗ ಶಿವಯೋಗಿಗಳು ತಮ್ಮ ಪಾಡಿಗೆ ತಾವು ತಮ್ಮ ಪೂಜಾನುಷ್ಠಾನದಲ್ಲಿದ್ದು, ವಿಶೇಷ ಕಾರ್ಯಕ್ರಮಗಳನ್ನೇನೂ ಇಟ್ಟುಕೊಂಡಿದ್ದಿಲ್ಲ. ಅಡವೀಶ್ವರರು ದಾಸೋಹ ಸದ್ಭಾವಿಗಳು, ಪ್ರತ್ಯುತ್ಪನ್ನಮತಿಗಳು. ತಮ್ಮ ಲೋಕೋಪಕಾರಕ ಸನ್ಮತಿಗೆ ಇಂತಹ ಸ್ಥಾನದ ಒಂದು ಅವಶ್ಯಕತೆಯೂ ಇತ್ತು. ಇಲ್ಲಿಯೇ ಸಿದ್ಧಗಂಗಾ ಗುಹೆಯಲ್ಲಿ ಉಳಿದು ಪೂಜಾನುಷ್ಠಾನಗಳಿಂದ ಕಾಲಯಾಪನೆ ಮಾಡುತ್ತ ತಪೋನಿರತರಾದರು. ಅವರ ತಪಸ್ಸಿಗೆ ಸಿದ್ಧಗಂಗಾ ಮಾತೆಯ ಕಾರುಣ್ಯ ಲಭ್ಯವಾಯಿತು; ಸಿದ್ಧಪುರುಷರೇ ಅದರು. ಚಿಕ್ಕ ಒಂದು ಸಂಸ್ಕೃತ ಪಾಠಶಾಲೆ, ದಾಸೋಹಕ್ರಿಯೆ ಮೇಲ್ಭಾಗದ ಗುಹೆಯ ಪರಿಸರದಲ್ಲಿಯೇ ಪ್ರಾರಂಭವಾದುವು. ಮೊದಲೇ ಇದ್ದ ಅಲ್ಪಪ್ರಮಾಣದ ಅನ್ನ ಸಂತರ್ಪಣೆಯ ಕಾರ್ಯ ವ್ಯವಸ್ಥಾಬದ್ಧವಾಗಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭವಾದುವು. 'ಮತಕಪುರವರಾಧೀಶ ಸೋಮೇಶ್ವರ ವರಪ್ರಸಾದ ಲಬ್ಧ ಕವಿತಾವಿಶಾರದ ಶಿವಕವಿ ನಂಜುಂಡ ಶಿವಯೋಗಿಗಳೆಂಬುವರು[36] ಶ್ರೀ ಕ್ಷೇತ್ರಕ್ಕೆ ಬಂದು ಅಡವೀಶ್ವರರ ದಿವ್ಯಪ್ರಭಾವಕ್ಕೊಳಗಾಗಿ ಮಠದಲ್ಲಿಯೇ ನಿಂತರು. ಅಡವೀಶ್ವರರ ಪೂರ್ಣಾನುಗ್ರಹಕ್ಕೆ ಪಾತ್ರರಾದರು. ಅವರ ಸಹಾಯದಿಂದ ಅಡವೀಶ್ವರಸ್ವಾಮಿಗಳು ಸಿದ್ಧಗಂಗೆಯಲ್ಲಿ ಪಾಠಶಾಲೆಯನ್ನು ಮೊದಲು ಮಾಡಿದರು. ಈ ಮತುಕೂರು ನಂಜುಂಡ ಶಿವಯೋಗಿಗಳು ಶರಣಲೀಲಾಮೃತ, ರಾಜಶೇಖರ ವಿಲಾಸ, ಚೆನ್ನಬಸವಪುರಾಣ, ಸರ್ವಜ್ಞವಚನ-ಮೊದಲಾದ ಕಾವ್ಯ ಪಠಣದಲ್ಲಿ, ವ್ಯಾಖ್ಯಾನದಲ್ಲಿ ಬಲ್ಲಿದರಾಗಿದ್ದರು. ಇವರ ವಿದ್ವತ್ತು, ಕವಿತ್ವಶಕ್ತಿ, ಬೋಧನಾಚಾತುರ್ಯ, ಕಾವ್ಯವಾಚನ ವ್ಯಾಖ್ಯಾನಗಳು ಕ್ಷೇತ್ರಕ್ಕೆ ಬರುವ ಜನಮನವನ್ನು ಸೂರೆಗೊಂಡವು. ಆಗಿನ ವೀರಶೈವ ಪಂಡಿತ ಪ್ರಕಾಂಡರಾದ ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭಾಷಾರತ್ನ ಪಿ. ಆರ್. ಕರಿಬಸವ ಶಾಸ್ತ್ರಿಗಳೇ ಮೊದಲಾದವರು ನಂಜುಂಡ ಶಿವಯೋಗಿಗಳವರ ಪಾಂಡಿತ್ಯ, ಶುದ್ಧಿ, ಸಿದ್ಧಿಗಳಿಗೆ ಮಾರುಹೋದರು. ಇವರ ಕವಿತಾಶಕ್ತಿಯ ಬಗೆಗೆ ಪಿ. ಆರ್. ಕರಿಬಸವ ಶಾಸ್ತ್ರಿಗಳು – 'ಶ್ರೀನಂಜುಂಡ ಶಿವಯೋಗಿಗಳನ್ನು ನಾನು ಇಚ್ಛಾಪೂರ್ವಕವಾಗಿ ಸಂದರ್ಶಿಸಿ, ಅವರ ಗ್ರಂಥವನ್ನು ಓದಿದೆನು. ಅವರು ಸುಸಂಸ್ಕೃತವಾದ ಅಂತಃಕರಣವುಳ್ಳವರು; ಶುದ್ಧಚರಿತ್ರರು; ಅಸದೃಶ ಕವಿತಾಶಕ್ತಿಯುಳ್ಳವರು; ಅಭಿನವ ಕಾಳಿದಾಸ ಕೈ. ಬಸವಪ್ಪ ಶಾಸ್ತ್ರಿಗಳಿಗೆ ಸಮಾನರಿವರೊಬ್ಬರೇ. ಇಂತಹವರು ನಮ್ಮ ಸಮಾಜದಲ್ಲಿ ಅಪರೂಪ. ರಾಜಾಶ್ರಯವಿದ್ದಿದ್ದರೆ ಲೋಕವಿಖ್ಯಾತ ಕವಿಗಳೆಂದು ಹೆಸರಾಗುತ್ತಿದ್ದರು. ಗೌರವದಿಂದ ಪ್ರೀತಿಯಿಂದ ನನ್ನನ್ನು ಕಂಡ ಅವರನ್ನು ಪ್ರೀತಿಯಿಂದ ಗೌರವಿಸುತ್ತೇನೆ'[37] ಎಂದಿದ್ದಾರೆ. ಈ ನಂಜುಂಡ ಶಿವಯೋಗಿಗಳು ಅಡವೀಶ್ವರ ಭಕ್ತಿಸಾರವೆಂಬ ಉತ್ತಮಮಟ್ಟದ ಭಕ್ತಿಜ್ಞಾನವೈರಾಗ್ಯ ಬೋಧಕಗ್ರಂಥವನ್ನು ಶ್ರೀ ಕ್ಷೇತ್ರದಲ್ಲಿ ರಚಿಸಿ ಅಡವೀಶ್ವರರಿಗೆ ಅರ್ಪಿಸಿದ್ದಾರೆ. ಆ ಗ್ರಂಥವು ಭಾಮಿನಿ ಷಟ್ಪದಿಯಲ್ಲಿದ್ದು ಪ್ರಸನ್ನ ಕವಿತಾವಾಣಿಯಿಂದ ಕೂಡಿದೆ. ೨೧೬ ಷಟ್ಪದಿಗಳಿಂದ ಕೂಡಿದ ಈ ಪದ್ಯಗ್ರಂಥದಲ್ಲಿ ಪ್ರತ್ಯೇಕವಾದ ೫೫ ಪದ್ಯಗಳು ಶಿವಪಾರ್ವತೀವರ್ಣನ ಪರವಾಗಿದೆ. ೨೧೬ ಪದ್ಯಗಳನ್ನು ಪ್ರತ್ಯೇಕಗೊಳಿಸಿದುದರ ಉದ್ದೇಶ ತಿಳಿದೇ ಇದೆ; ವೀರಶೈವದಲ್ಲಿ ೨೧೬ ಸಂಖ್ಯೆ ಲಿಂಗಸಕೀಲಕ ಬೋಧಕವಾದುದು. ಆದುದರಿಂದ ಅಡವೀಶ್ವರ ಭಕ್ತಿಸಾರವು ೨೧೬ ಪದ್ಯಗಳಿಂದ

ಕೂಡಿದೆ. ಈ ಗ್ರಂಥದ ಮೇಲೆ ರಾಜಶೇಖರ ವಿಲಾಸ, ಚೆನ್ನಬಸವಪುರಾಣ, ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ಮೊದಲಾದ ಪ್ರಸಿದ್ಧ ಗ್ರಂಥಗಳ ಪ್ರಭಾವವುಂಟಾಗಿದೆ. ಗ್ರಂಥದಲ್ಲಿ ಸಿದ್ಧಗಂಗಾಮಾತೆಯನ್ನು ಹೀಗೆ ಸ್ತುತಿಸಿದ್ದಾನೆ :-

ಅದ್ರಿಗುಹೆಯೊಳು ನೆಲಸಿ ತೋಂಟದ ।
ಸಿದ್ಧಲಿಂಗೇಶ್ವರನ ಮೃದಪದ ।
ಪದ್ಮಸೇವೆಯೊಳಾವಗಂ ತವೆಸಿದ್ಧವಾಗಿರ್ಪ ॥
ಸಿದ್ಧಗಂಗೆಯೆ ಕೊಡುವುದೆನ್ನಯ ।
ಬುದ್ಧಿಗತಿ ನಿರ್ಮಲವನೆಂಬನು ।
ಶುದ್ಧಪುಣ್ಯಪ್ರದನೆ ಪಾಲಿಪುದೆಮ್ಮನಟವೀಶಾ ॥ (ಪ. ೪)

ಹಿಮಗಿರಿಕನ್ನೆಯೆನಿಸಿದ ಗಂಗೆಯನ್ನು ಸಿದ್ಧಗಂಗಾ ಮಾತೆಯೊಡನೆ ಅಭೇದವಾಗಿ:

ಚೆನ್ನೆ ಸದ್ಗುಣರನ್ನೆ ಹಿಮಗಿರಿ ।
ಕನ್ನೆ ನುತಿಸುವೆನಿನ್ನೆ ದೀನಶ ।
ರಣ್ಯೆ ಘನಸಂಪನ್ನೆ ಮಾನ್ಯೆವದಾನ್ಯೆ ಪಾವನೇ ॥
ಬನ್ನಬಡಿಸದೆ ದುರಿತಸಂಕುಲ ।
ವನ್ನು ತೊಲಗಿಸಿ ಕರಣಶುದ್ಧಿಯ ।
ಸನ್ನುತಳೆ ಕೃಪೆಮಾಳ್ಪುದೆಂಬೆನು ಪೊರೆವುದಟವೀಶಾ ॥ (ಪ. ೫)

ಈ ಗ್ರಂಥವು ಪಾಠ್ಯಯೋಗ್ಯವಾಗಿದ್ದು ಉತ್ತಮ ಕವಿತಾಶಕ್ತಿಯಿಂದ ಕೂಡಿ ಭಕ್ತಿಜ್ಞಾನ ವೈರಾಗ್ಯ ಬೋಧಕವಾಗಿದೆ. ಪ್ರತಿ ಪದ್ಯವೂ 'ಪೊರೆವುದೆಮ್ಮನಟವೀಶಾ' 'ಪಾಲಿಪುದೆಮ್ಮನಟವೀಶಾ' ಇತ್ಯಾದಿಯಾಗಿ ಮುಕ್ತಾಯಗೊಳ್ಳುತ್ತದೆ.

ಇದಲ್ಲದೆ ಶಿವಯೋಗಿಗಳು ಆಟವೀಶ್ವರ ಗೀತಾಮಂಜರಿ,[38] ಮಾರ್ಕಾಂಡೇಯ ವಿಳಾಸ, ಸುರಾಭಾಂಡೇಶ್ವರೋಪಾಖ್ಯಾನ, ಹಾಲಾಹಲಭಕ್ಷಣೆಯ ಕಥೆ, ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ.[39] ಕವಿತಾಶಕ್ತಿಯ ಜೊತೆಗೆ ಇವರಿಗೆ ಚಿತ್ರಕಲಾ ನೈಪುಣ್ಯವೂ ಇತ್ತು.[40]

ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಮತಕೂರು ಶಿವಯೋಗಿಗಳ ವಿದ್ವತ್ತಿನ ಸೇವೆಯೊದಗಿದುದರ ಜೊತೆಗೆ ಇನ್ನೊಬ್ಬರು ಮಹಾವಿದ್ವಾಂಸರೂ ಉಭಯ ಕವಿತಾವಿಶಾರದರೂ ಎನಿಸಿದ ಮಾಗಡಿ ವೀರಪ್ಪಶಾಸ್ತ್ರಿಗಳ ಸೇವೆಯೂ ಕೊಂಚಕಾಲ ಒದಗಿತು. ಇಲ್ಲಿನ ವೇದಪಾಠಶಾಲೆಗೆ ಇವರು ವಿದ್ಯಾಭ್ಯಾಸಕ್ಕೆಂದು ಬಂದು ವಿದ್ಯಾಭ್ಯಾಸ ಮಾಡಿದರು. ಇವರು ಆಟವೀಶ್ವರರ ಕೃಪೆಗೆ ಪಾತ್ರರಾಗಿ ಹೋಗಿ ಗ್ರಂಥಗಳನ್ನು ರಚಿಸಿದರು.[41]

ಒಂದು ಕಡೆಯಲ್ಲಿ ವಿದ್ವಾಂಸರ ವಿದ್ವತ್ತಿನ ಪ್ರಭೆಯೂ, ಮತ್ತೊಂದು ಕಡೆ ಅಡವೀಶ್ವರರ ಶಿವಯೋಗ ನಿಷ್ಠೆಯ ಉಜ್ವಲ ಪ್ರಕಾಶವೂ, ಮಗುದೊಂದೆಡೆ ಗೋಸಲ ಸಿದ್ಧೇಶ್ವರರು ಮೊದಲುಗೊಂಡು ಹರದನಹಳ್ಳಿಯ ನಿರಂಜನ ಜಂಗಮ ವಂಶದವರ ತಪೋತೇಜದ ಸೂರ್ಯನ ಸಹಸ್ರ ಕಿರಣಗಳ ಹೊಂಬೆಳಗೂ ಮುಪ್ಪುರಿಗೊಂಡು ಶ್ರೀ ಸಿದ್ಧಗಂಗೆಯ ಕೀರ್ತಿಲತೆ ಚಲ್ಲವರಿದು ದಾಂಗುಡಿಯಿಟ್ಟು ಬೆಳೆಯತೊಡಗಿತು. ಭಕ್ತರ, ಭಾವುಕರ, ಶ್ರೀಮಂತರ ಕೊಡುಗೆಗಳು ಅಧಿಕವಾದವು. ಆಟವೀಶ್ವರರು ಸಿದ್ಧಗಂಗೆಯ ದಾಸೋಹಾದಿ ಕ್ರಿಯೆಗಳನ್ನು, ಚಿಕ್ಕದಾಗಿ ಪ್ರಾರಂಭಿಸಿದ ವಿದ್ಯಾಸಂಸ್ಥೆಯನ್ನು ಯಥಾಸಾಂಗವಾಗಿ ನೆರವೇರಿಸುವ ಹೊಣೆಯ ಜೊತೆಗೆ ತಾವು ಪೂರ್ವದಲ್ಲಿ ಗುಬ್ಬಿ ಸುಕ್ಷೇತ್ರದಲ್ಲಿ ಎಲ್ಲಿ ಬಂದಿಳಿದಿದ್ದರೋ ಅಲ್ಲಿ ಒಂದು ಮಠವನ್ನು ನಿರ್ಮಾಣ ಮಾಡಬೇಕೆಂಬ ಸತ್ಸಂಕಲ್ಪ ಮಾಡಿದರು. ಭಕ್ತರ ನೆರವಿನಿಂದ ಗುಬ್ಬಿಯಲ್ಲಿ ಕೋಡಿ ಹಳ್ಳದ ದಂಡೆಯಲ್ಲಿ ಒಂದು ಮಠವನ್ನು ನಿರ್ಮಾಣ ಮಾಡ ಮುಗಿಸಿದರು. ತೊರೆಯ ದಂಡೆಯಲ್ಲಿ ಕಟ್ಟಿದ ಮಠವಾದ್ದರಿಂದ ಅದಕ್ಕೆ 'ತೊರೆಯ ಮಠ' ವೆಂದು ಕರೆಯಲಾಗುತ್ತಿದೆ. ಹರದನಹಳ್ಳಿಯ ಶೂನ್ಯಸಿಂಹಾಸನಾಧೀಶರೂ, ತೋಂಟದ ಸಿದ್ಧಲಿಂಗೇಶ್ವರರ ಗುರುಗಳೂ, ಶ್ರೀ ಸಿದ್ಧಗಂಗೆಯಲ್ಲಿ ಅನೇಕ ಕಾಲ ತಪೋನುಷ್ಠಾನ ಮಾಡಿ ಗುಬ್ಬಿಯಲ್ಲಿ ಲಿಂಗೈಕ್ಯರಾದವರೂ ಆದ ಗೋಸಲ ಚೆನ್ನಬಸವೇಶ್ವರರ ದೇವಲಾಯದ ಪಕ್ಕದಲ್ಲಿ ೬೩ ಪುರಾತನರ ಮಂಟಪ, ಮಂಟಪದ ಮಧ್ಯದಲ್ಲಿ 'ಅಘನಾಶಿನಿ' ಎಂಬ ಕಲ್ಯಾಣಿಯನ್ನು ಕಟ್ಟಿಸಿದರು. ಈ ಕಾರ್ಯಗಳೆಲ್ಲ ಕ್ರಿ.ಶ. ೧೮೫೭ರ ಹೊತ್ತಿಗೆ ಮುಗಿದುವೆಂದು ಊಹಿಸಬಹುದು. ಏಕೆಂದರೆ ಈ ಕಾಲದಲ್ಲಿ ಹುಟ್ಟಿದ ಒಂದು ಶಾಸನ ದೇವಾಲಯದ ಪಕ್ಕದಲ್ಲಿದ್ದು ಅದರಲ್ಲಿ ಆಟವೀಶ್ವರರ ವಿಷಯದ ಪ್ರಸ್ತಾಪವಿದೆಯೆಂದು ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳುತ್ತಾರೆ. ಅವರು ಚೆನ್ನಬಸವೇಶ್ವರರಿಗೆ ಬೆಳ್ಳಿಯ ಪಲ್ಲಕ್ಕಿಯನ್ನು ಮಾಡಿಸಿದರು. 'ತೊಟ್ಟಿಲ ಕೆರೆ' ಎಂಬ ಗ್ರಾಮದಲ್ಲಿ ವಿರಕ್ತಮಠವನ್ನು ಅಭಿವೃದ್ಧಿಗೆ ತಂದರು.[42] ಹೀಗೆ ಈ

ಭಾಗದಲ್ಲಿ ಅನೇಕ ಮಹಾತ್ಕಾರ್ಯಗಳನ್ನು ಸಾಧಿಸಿದ ಅಟವೀಶ್ವರರ ಮಮತೆ ಶ್ರೀ ಸಿದ್ಧಗಂಗಾ ಕ್ಷೇತ್ರದ ವಿಷಯದಲ್ಲಿ ಅಧಿಕವಾಯಿತು.[43] ಅಷ್ಟರಲ್ಲಿ ಕ್ಷೇತ್ರಾಧಿಪತಿಗಳಾಗಿದ್ದ ಶ್ರೀ ನಿ. ಪ್ರ. ಸಿದ್ಧಲಿಂಗ ಶಿವಯೋಗಿಗಳು ಲಿಂಗೈಕ್ಯರಾಗಿ ಹೋಗಿದ್ದರು. ಸಿದ್ಧಗಂಗಾ ಕ್ಷೇತ್ರದಲ್ಲಿ ತಾವು ಮಾಡಿದ್ದ ಅನೇಕ ಲೋಕೋಪಕಾರಕ ಕಾರ್ಯ ಮತ್ತು ವೀರಶೈವ ಧರ್ಮ ಸಂವರ್ಧನ ಎಂಬ ಕಲ್ಪವೃಕ್ಷದ ಸಸಿಯನ್ನು ಶಿವಯೋಗಶಕ್ತಿಯ ಕಾರುಣ್ಯಜಲವನ್ನೆರೆದು ಬೆಳೆಸಿ ಮಹಾವೃಕ್ಷವನ್ನಾಗಿಸುವ ಸಾಮರ್ಥ್ಯವುಳ್ಳ ಭೀಮಶಕ್ತಿಯ ಮಹಾವ್ಯಕ್ತಿಯನ್ನು ಅರಸುವ ಕಾರ್ಯಕ್ಕೆ ಮೊದಲು ಮಾಡಿದರು. ಅವರ ಸಂಕಲ್ಪಶಕ್ತಿಯ ಪ್ರಬಲ ಪಾಶ 'ಲಕ್ಕೂರಿನ ರುದ್ರಪ್ಪ' ಎಂಬ ಅಘಟಿತಘಟನಾ ಸಾಮರ್ಥ್ಯದ ವ್ಯಕ್ತಿಯನ್ನು ಬಂಧಿಸಿ ಮಠಕ್ಕೆಳೆತಂದಿತು. ಈ ರುದ್ರಪ್ಪ ಮತ್ತಾರೂ ಅಲ್ಲ. ಅಸಾಧಾರಣ ಚೇತನಶಕ್ತಿ ಸಂಪನ್ನರೂ, ಅಘಟಿತಘಟನಾ ವಿಶೇಷವುಳ್ಳವರೂ ಆದ ಉದ್ದಾನಶಿವಯೋಗಿಗಳು.

ಲಕ್ಕೂರಿನ ರುದ್ರಪ್ಪನವರ ಆಗಮನ:

ಲಕ್ಕೂರಿನ ರುದ್ರಪ್ಪನು ಅಟವಿಸ್ವಾಮಿಗಳವರ ಪ್ರಬಲಾಕರ್ಷಣೆಗೊಳಗಾಗಿ ಮಠಕ್ಕೆ ಬಂದುದೇ ತಡ ಅಡವೀಶ್ವರರಿಗೆ ಸಹಸ್ರ ಬಾಹುಬಲ ಬಂದಂತಾಯಿತು. ಸಹಸ್ರ ಕಿರಣಗಳನ್ನು ದಿಗ್ದಗಂತಗಳಿಗೆ ಚಾಚಿ ಉದಯಗೊಳ್ಳುವ ಹೊಂಗದಿರನ ಕಾಂತಿಯ ಶ್ರೀ ಕ್ಷೇತ್ರಭಾಗ್ಯೋದಯದ ಮರೀಚಿ ಮಾಲೆಯಂತಾಯಿತು. ರುದ್ರಪ್ಪ ಶ್ರೀ ಕ್ಷೇತ್ರಕ್ಕೆ ಸಿದ್ಧಿಗಾಗಿ ಬಂದಿದ್ದರೇ? ಸಿದ್ಧಪುರುಷರಾಗಿ ಬಂದಿದ್ದರೇ? ಸಿದ್ಧಿಗಾಗಿ ಬಂದರೋ, ಸಿದ್ಧಪುರುಷರಾಗಿ ಬಂದರೋ ಎರಡೂ ಬಿಡಿಸಲಾರದ ಕಗ್ಗಂಟು. ಸಿದ್ಧಗಂಗೆಗೆ ಲಕ್ಕೂರಿನ ರುದ್ರಪ್ಪ ಅದೆಷ್ಟೋ ಸಲ ಬಂದಿದ್ದ. ತನ್ನೂರಿನಿಂದಲೇ ಪಶ್ಚಿಮ ದಿಗಂತದಲ್ಲಿ ಬೂದು ಬೂದು ಬಣ್ಣದಿಂದ ಕಾಣುವ ಸಿದ್ಧಗಂಗಾ ಬೆಟ್ಟವನ್ನು ಬಾಲ್ಯದಿಂದ ನೋಡಿ ಕೈಯೆತ್ತಿ ಮುಗಿಯುತ್ತಿದ್ದವನು. ಸಿದ್ಧಗಂಗಾ ಕ್ಷೇತ್ರವೆಂಬ ಸಮುದ್ರದ ಉಪ್ಪು, ಲಕ್ಕೂರಿನ ಬೆಟ್ಟದ ನೆಲ್ಲಿಕಾಯಿ ಅಡವಿಸ್ವಾಮಿಗಳವರ ದಿವ್ಯ ಶಿವಯೋಗಶಕ್ತಿಯ ಫಲವಾಗಿ ಎರಡೂ ಒಂದಾದವು. ಸಿದ್ಧಗಂಗೆಯ ಭಾಗ್ಯದ ಬಾಗಿಲು ತೆರೆಯಿತು. ಭಕ್ತರ ಭಕ್ತಿಜೀವನಕ್ಕೆ ಕಳೆಯೇರಿತು. ಮುಂದೆ ಕೆಲದಿನಗಳಲ್ಲಿ ರುದ್ರಪ್ಪ 'ಉದ್ದಾನ ಸ್ವಾಮಿ' ಎಂಬ ನೂತನಾಭಿಧಾನದಿಂದ ಹರದನಹಳ್ಳಿ ಪೀಠಾಚಾರ್ಯರ ಪ್ರಾಚೀನ ತಪೋಭೂಮಿಯಾದ ಶ್ರೀ ಸಿದ್ಧಗಂಗಾಧಿಪತ್ಯವನ್ನು ವಹಿಸಿದನು. ಅಟವಿಸ್ವಾಮಿಗಳು ಕ್ರಿ.ಶ. ೧೯೦೧ರ ಕಾರ್ತಿಕ ಮಾಸದಲ್ಲಿ ಲಿಂಗೈಕ್ಯರಾದರು. ತೊಟ್ಟಿಲಕೆರೆಯಲ್ಲಿ ಅವರ ಸಮಾಧಿಯಾಯಿತು.

ಉದ್ದಾನ ಶಿವಯೋಗಿಗಳು ತಮ್ಮನಂತರ ತಮ್ಮ ಪೀಠಕ್ಕಾಗಿ 'ಶ್ರೀ ಮರುಳಾರಾಧ್ಯ'ರೆಂಬವರನ್ನು ಆರಿಸಿಕೊಂಡರು. ಆದರೆ ಅವರು ಅಕಾಲದಲ್ಲಿಯೇ ಲಿಂಗೈಕ್ಯರಾದರು. ಆಗ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅಂತಿಮ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ 'ಶಿವಣ್ಣ' ಎಂಬ ಮಾಗಡಿ ತಾಲ್ಲೂಕು ವೀರಾಪುರಗ್ರಾಮದ ವಿದ್ಯಾರ್ಥಿಯನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡರು. ೧೯೩೦ನೆಯ ಮಾರ್ಚ್ ೩ನೆಯ ದಿನಾಂಕದಂದು ಅವರಿಗೆ "ಶ್ರೀ ಶಿವಕುಮಾರಸ್ವಾಮಿಗಳು" ಎಂದು ಹೆಸರಿತ್ತು ವಿಧ್ಯುಕ್ತವಾಗಿ ವಿರಕ್ತಾಶ್ರಮ ನೀಡಿದರು. ಅವರಿಗೆ ಅನೇಕ ಬಗೆಯ ಅನುಭವವುಂಟಾಗುವಂತೆ ೧೧ ವರ್ಷಗಳ ಕಾಲ ತರಬೇತುಗೊಳಿಸಿ ತಾವು ಕ್ರಿ.ಶ. ೧೯೪೧ರಲ್ಲಿ ಲಿಂಗದೊಳಗಾದರು. ಈ ಪರಂಪರೆಗೆ ಮಹಾಬೆಳಕುಂಟಾದಂತಾಯಿತು.

೧೯೩೦ ರಿಂದ ಶ್ರೀ ಕ್ಷೇತ್ರದ ಅಭಿವೃದ್ಧಿಗೆ, ಸಾರ್ವಜನಿಕ ಸೇವೆಗೆ, ಬಸವಾದಿ ಪ್ರಮಥರುಗಳ ನಡೆನುಡಿಗಳ ಪಥದಲ್ಲಿ ಇಲ್ಲಿಯವರೆಗೆ ಅಂದರೆ ೭೫ ವರ್ಷಗಳ ವರೆಗೆ ಅಖಂಡ ಸೇವೆಸಲ್ಲಿಸಿ, ವಿಶ್ವದ ಗಮನವನ್ನು ಸೆಳೆದವರಾಗಿ ಕಂಗೊಳಿಸುತ್ತಿದ್ದಾರೆ. ಸಂನ್ಯಾಸಧರ್ಮ ಕ್ರಿಯಾಮುಖವಾದರೆ ಎಂಥಹ ಪವಾಡ ಸದೃಶ ಅದ್ಭುತಗಳು ಜರುಗುತ್ತವೆ ಎಂಬುದಕ್ಕೆ ಜ್ವಲಂತ ನಿದರ್ಶನರೆನಿಸಿದ್ದಾರೆ. ಇಂತಹ ಶಿವಯೋಗಪುಂಗವರಿಗೆ ತಮ್ಮ ಕೃತಜ್ಞತಾಪೂರ್ವಕ ಭಕ್ತಿಯನ್ನು ಸಲ್ಲಿಸುವ ಸತ್ಸಂಕಲ್ಪದಿಂದ, ಭಕ್ತಾದಿಗಳು ವಜ್ರಮಹೋತ್ಸವನ್ನು ಆಚರಿಸುವುದರ ಮೂಲಕ ಕೃತಾರ್ಥರೆನಿಸುತ್ತಿದ್ದಾರೆ.

ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಅನೇಕ ವರ್ಷಗಳು ತಮ್ಮ ಸೇವೆಯಲ್ಲಿಯೇ ಇದ್ದಂತಹ ಟಿ. ವಿಶ್ವನಾಥ ಎಂಬ ವಟುವಿಗೆ ಶ್ರೀ ಸಿದ್ಧಲಿಂಗಸ್ವಾಮಿಗಳು ಎಂದು ಹೆಸರಿಸಿ, ತಮ್ಮ ಉತ್ತರಾಧಿಕಾರಿಯನ್ನಾಗಿ ದಿನಾಂಕ ೩೦-೩-೧೯೮೮ ರಂದು ಮಾಡಿಕೊಂಡು, ಶ್ರೀಮಠದಲ್ಲಿ ಲಿಂಗಪೂಜೆ ಜಂಗಮ ದಾಸೋಹ ಕ್ರಿಯಾಮುಖದಿಂದ ಲೋಕ ಕ್ಷೇಮಕಾರಕ ತ್ರಿವಿಧ ಸೇವಾ ನಿರತರಾಗಿ ಕಾಲ ಕಳೆಯುತ್ತಿದ್ದಾರೆ.

ಟಿಪ್ಪಣಿಗಳು

1 (i) ವೈಷ್ಣವ ಆಚಾರ್ಯನಾದ ವೆಂಕಟನಾಥನು ತನ್ನ 'ಅಭೀತಿಸ್ತವ'ದಲ್ಲಿ

ಕಲಿಪ್ರಣಿಧಿ ಲಕ್ಷಣೈಃ ಕಲಿತಶಾಕ್ಯಲೋಕಾಯತೈಃ । ತುರುಷ್ಕಯವನಾದಿಭಿಃ ಜಗತಿ ಜೃಂಭಮಾಣಂಭಯಂ।
ಪ್ರಕೃಷ್ಟ ನಿಜಶಕ್ತಿಭಿಃ ಪ್ರಸಭಮಾಯುಧೈಃ ಪಂಚಭಿಃ ಕ್ಷಿತಿತ್ರಿದಶರಕ್ಷಕೈಃ ಕ್ಷಪಯರಂಗನಾಥ ಕ್ಷಣಾತ್।

— ಹೀಗೆಂದು ರಂಗನಾಥನನ್ನು ಸ್ಮರಿಸಿದ್ದಾನೆ.

(ii) ಬುಕ್ಕರಾಯನ ಸೊಸೆಯೂ ಕಂಪಣರಾಯನ ಹೆಂಡತಿಯೂ ಆದ ಗಂಗಾದೇವಿಯು, ತನ್ನ ವೀರ ಕಂಪಣರಾಯ ಚರಿತ್ರೆಯೆಂಬ ಸಂಸ್ಕೃತಗ್ರಂಥದಲ್ಲಿ-

"ಶ್ರುತಿರಸ್ತಮಿತಾನಯಃ ಪ್ರಲೀನೋ । ವಿರತಾಧರ್ಮಕಥಾ ಚ್ಯುತಂ ಚರಿತಂ ।
ಸುಕೃತಂಗತಿಂ ಅಭಿಜಾತ್ಯಮಸ್ತಂ । ಕಿಮಿವಾನ್ಯತ್ ಕಲರೇಕವಧನ್ಯಃ ॥"
"ನತಥಾ ಕಟುಘೂತ್ಕೃತಾತ್ ವ್ಯಥಾಮೇ । ಹೃದಿ ಜೀರ್ಣೋಪವನೇಷು ಘೂಕಲೋಕಾತ್ ।
ಪರಿಶೀಲಿತ ಪಾರಸೀಕವಾಗ್ ಭ್ಯೋ । ಯವನಾನಾಂ ಭವನೇ ಯಥಾ ಶುಕೇಭ್ಯಃ ॥"
"ಪ್ರಶಾಂತ ದಾವೇವನಾಂತಲಕ್ಷ್ಮೀಃ । ಗತೋಪರಾಗಾ ಗಗನಸ್ಥಲೀವ ।
ಕಲಿಂದಜಾಮರ್ಧಿತಕಾಲಿಯೇವ । ದಿಗ್ ದಕ್ಷಿಣಾಸೀತ್ ಕೃತಪಾರಸೀಕಾಃ ॥"

– ಈ ಎಲ್ಲ ಮಾತುಗಳೂ ಆ ಕಾಲದ ಯವನರ ದಾಳಿಯ ಪರಿಣಾಮಾದಿಗಳನ್ನು ಸೂಚಿಸುತ್ತವೆ.

2. "ನಿರಂಜನವಂಶ ರತ್ನಾಕರ"ವೆಂಬ ಗ್ರಂಥದಿಂದ ಗಂಗಾಜಲವು ಗೋಸಲಸಿದ್ಧೇಶ್ವರರಿಂದ ಉದ್ಭವಗೊಂಡಿತೆಂದು ತಿಳಿದು ಬರುತ್ತದೆ. ಆದರೆ ಗ್ರಂಥಾಂತರಗಳಿಂದ ಈ ವಿಷಯದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಕ್ರಿ.ಶ. ಸು. ೧೬೦೦ರಲ್ಲಿದ್ದ ಹೇರಂಬನೆಂಬ ಎಲಹಂಕದ ಕವಿಯು ಬರೆದ "ಸಿದ್ಧಲಿಂಗೇಶ್ವರ ಸಾಂಗತ್ಯ" ವೆಂಬ ಗ್ರಂಥದ ಪ್ರಕಾರ ಈ 'ಸಿದ್ಧಗಂಗಾ' ಜಲವು ತೋಂಟದ ಸಿದ್ಧಲಿಂಗೇಶ್ವರಿಂದ ಉಂಟಾಯಿತೆಂದು ಗೊತ್ತಾಗುತ್ತದೆ. ಗೋಸಲಸಿದ್ಧೇಶ್ವರರಿಗೂ ಹೇರಂಬ ಕವಿಗೂ ಸುಮಾರು ೩೦೦ ವರ್ಷಗಳ ಅಂತರವಿದ್ದು ಈ ದೀರ್ಘಾವಧಿಯಲ್ಲಿ ಕಥೆ ಹೇಗೆ ಹೇಗೊ ಬೆಳೆದು ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲೆಲ್ಲ ಮಹಾಪ್ರಭಾವಶಾಲಿಗಳೆನಿಸಿದ್ದ ತೋಂಟದ ಸಿದ್ಧಲಿಂಗಶಿವಯೋಗಿಗಳವರ ಸಂಬಂಧವನ್ನು ಪಡೆದಿರಬಹುದು. ಈ ಹೊತ್ತಿಗಾಗಲೇ 'ಸಿದ್ಧಗಂಗಾ' ತೀರ್ಥದ ಮಹತ್ತು ಬೃಹತ್ತುಗಳು ಜನಜನಿತವಾಗಿ ಹೋಗಿದ್ದುವು. ಅಂತೆಯೇ ಹೇರಂಬ ಕವಿ ತನ್ನ ಗ್ರಂಥದ ೧೯ನೆಯ ಸಂಧಿಯಲ್ಲಿ ಈ ಸಿದ್ಧಗಂಗಾ ತೀರ್ಥದ ಬಗೆಗೆ ವಿಶೇಷವಾಗಿ ಹೊಗಳಿದ್ದಾನೆ. ಈ ತೀರ್ಥವು ಅನೇಕ ಜನರ ಮಾನಸಿಕ ಮತ್ತು ದೈಹಿಕ ರೋಗ ಪರಿಹಾರವಾಗುತ್ತದೆಂದು ಹೇಳುವುದನ್ನು ಗಮನಿಸಬಹುದು. ಈ ಲೇಖನದಲ್ಲಿ ಮುಂದೆ ಆ ವಿಷಯವನ್ನು ಪ್ರಸ್ತಾಪಿಸಲಾಗಿದೆ. ೧೪ನೆಯ ಶತಮಾನದಿಂದ ಇಂದಿನ ವರೆಗೆ ಅವಿಚ್ಛಿನ್ನವಾಗಿ ಗಂಗಾಪೂಜೆ, ಗಂಗಾಮಾತೆಯ ಉಪಾಸನೆ ಸರ್ವಧರ್ಮೀಯರ ಶ್ರದ್ಧೆಯಲ್ಲಿ ಬೇರೂರಿ ನಡೆಯುತ್ತಲೇ ಇದೆ.

3 ಸಿದ್ಧಗಂಗಾ ಕ್ಷೇತ್ರದ ಬೆಟ್ಟದಲ್ಲಿ ಈಗ ಸಿದ್ಧಲಿಂಗೇಶ್ವರ ಮೂರ್ತಿಯ ದೇವಾಲಯದ ಎದುರಿನ ಮಹಾಗುಹೆಯೇ 'ಸಿದ್ಧಗಂಗಾ' ಮಾತೆಯ ಸ್ಥಾನ. ೧೦-೧೨ ಆಳೆತ್ತರದ ಮಹಾ ಕೊಡುಗಲ್ಲು ನಿಂತಿದ್ದು ಆ ಕೊಡುಗಲ್ಲಿನ ಕೆಳಭಾಗದಲ್ಲಿ ಮಹಾಗುಹೆಯೊಂದು ಪ್ರಕೃತಿಯಿಂದಲೇ ನಿರ್ಮಾಣವಾಗಿದೆ. ಆ ಗುಹೆ ಸುಮಾರು ೭೦-೮೦ ಜನರು ಕೂಡಲು ಯೋಗ್ಯವಾಗಿದೆ. ಅಲ್ಲಿಯೇ ಬಂಡೆಯ ಮಧ್ಯದಲ್ಲಿ ಸಿದ್ಧಗಂಗೋದ್ಭವವಾಗಿದೆ. ಅದರಲ್ಲಿನ ಜಲವನ್ನು ತೆಗೆತೆಗೆದಷ್ಟು ಬರುತ್ತದೆ; ಆದರೆ ಉಕ್ಕಿ ಹರಿಯುವುದಿಲ್ಲ. ವಿಶೇಷ ಮಳೆಗಾಲದಲ್ಲಿ ಮಾತ್ರ ಒಮ್ಮೊಮ್ಮೆ ಉಕ್ಕುವುದುಂಟು. ಹಾಗೆ ಉಕ್ಕಿದ ವರ್ಷ ಸಮೃದ್ಧವಾದ ಮಳೆ ಬೆಳೆಗಳಿಂದ ಕೂಡಿದ ವರ್ಷವೆಂದೂ ನಂಬಿಕೆ. ಗಂಗೋದ್ಭವವಾಗಿರುವ ಸ್ಥಾನದ ಮುಂಭಾಗದಲ್ಲಿ ಎರಡು ಮೆಟ್ಟಲುಗಳ ಆಳದ ತಗ್ಗು ಇದೆ. ಇದು ಶಿಲಾಮಯವೇ ಆಗಿದೆ. ಅದರ ತುಂಬ ನೀರು ನಿಲ್ಲುತ್ತದೆ. ಈ ಭಾಗವನ್ನು ದಾಟಿಯೇ ಮುಂದಿನ ತಪೋನುಷ್ಠಾನ ಯೋಗ್ಯವಾದ ಗುಹೆಯನ್ನು ಪ್ರವೇಶಿಸಬೇಕು. ಅಲ್ಲಿ ಒಳಭಾಗ ವಿಶಾಲವಾಗಿದೆ. ಒಳಗೆ ಪ್ರವೇಶಿದೊಡನೆಯೇ ಎಂಥ ಚಂಚಲಚಿತ್ತನಿಗೂ ಮಾನಸಿಕ ಸಂಗ್ರಹವುಂಟಾಗಿ ಶಿವಜ್ಞಾನವು ಎಚ್ಚರಗೊಳ್ಳುತ್ತದೆ. ಚಿತ್ತವೃತ್ತಿಯಲ್ಲಿ ಸಂಯಮವುಂಟಾಗುವುದನ್ನು ಅಲ್ಲಿ ಹೋಗಿ ನೋಡಿ ಅನುಭವಿಸಬೇಕು.

4 ಶಿವಶರಣರ ಚರಿತ್ರೆ ಭಾಗ ೨, ಪುಟ ೨೮೮ (೧೯೫೧)

5 ಶ್ರೀ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ವಚನದಲ್ಲಿ ಗುರುಪರಂಪರೆಯನ್ನು ಹೇಳಿಕೊಂಡಿದ್ದಾರೆ. ಅದರಲ್ಲಿ ೧) ಅನಾದಿಗಣೇಶ್ವರ ೨) ಆದಿಗಣೇಶ್ವರ ೩) ನಿರ್ಮಾಯಗಣೇಶ್ವರ ೪) ನಿರಂಜನ ಗಣೇಶ್ವರ ೫) ಜ್ಞಾನಾನಂದ ಗಣೇಶ್ವರ ೬) ಆತ್ಮಗಣೇಶ್ವರ ೭) ಆಧ್ಯಾತ್ಮ ಗಣೇಶ್ವರ ೮) ರುದ್ರಗಣೇಶ್ವರ ೯) ಬಸವಪ್ರಭುದೇವರು ೧೦) ಆದಿಲಿಂಗದೇವರು ೧೧) ಚನ್ನವೀರೇಶ್ವರದೇವರು ೧೨) ಹರದನಹಳ್ಳಿಯ ಗೋಸಲದೇವರು (ಗೋಸಲಸಿದ್ಧೇಶ್ವರರು) ೧೩) ಶಂಕರದೇವರು ೧೪) ದಿವ್ಯಲಿಂಗದೇವರು ೧೫) ಚೆನ್ನಬಸವೇಶ್ವರರು ೧೬) ತೋಂಟದ ಸಿದ್ಧಲಿಂಗಶ್ವರರು-ಹೀಗೆ ಗುರುಪರಂಪರೆಯ ಹೆಸರುಗಳ ಪಟ್ಟಿ ಬಂದಿದೆ. ಶೂನ್ಯ ಸಿಂಹಾಸನವನ್ನೇರಿದ ಪ್ರಭುದೇವರು, ಚೆನ್ನಬಸವಣ್ಣನವರು ಮತ್ತು ಸಿದ್ಧರಾಮೇಶ್ವರರು-ಇವರನ್ನು ಸೇರಿಸಿ ಗೋಸಲಸಿದ್ಧೇಶ್ವರರು ೧೫ನೆಯ ಶೂನ್ಯಸಿಂಹಾಸನಾಧೀಶ್ವರೆಂದು ಹೇಳುವ ಪರಿಪಾಠವಿದೆ. ಇಲ್ಲಿ ಹರದನಹಳ್ಳಿಯ ಹೆಸರು ಬಂದಿರುವುದು ಕೇವಲ ಗೋಸಲದೇವರಿಂದಲೇ. ತೋಂಟದ ಸಿದ್ಧಲಿಂಗ ಯತಿಗಳು ಹೇಳಿದ ಇದೇ ಪರಂಪರೆಯನ್ನೇ ವಿರಕ್ತ ತೋಂಟದಾರ್ಯರು ತಮ್ಮ ಸಿದ್ಧೇಶ್ವರ ಪುರಾಣದಲ್ಲಿಯೂ ಹೇಳಿದ್ದಾರೆ. (ಸಂ. ೨, ಪ ೩೧, ೩೨, ೩೩) ನಿರಂಜನವಂಶ ರತ್ನಾಕರದಲ್ಲಿ ಇದೇ ಪರಿವಿಡಿಯನ್ನೇ ಅನುಸರಿಸಿ ಈ ಎಲ್ಲ ಸ್ವಾಮಿಗಳವರು ಸಂಚರಿಸಿದ ದೇಶ, ಮಾಡಿದ ಕಾರ್ಯ ಪವಾಡ ಮತ್ತು ಲಿಂಗೈಕ್ಯ ಸ್ಥಳಗಳನ್ನು ಹೇಳಿದೆ. ಆದರೆ ಸಿದ್ಧೇಶ್ವರ ಪುರಾಣದಲ್ಲಿ ಪ್ರಭುದೇವರ, ಚೆನ್ನಬಸವಣ್ಣನವರ, ಸಿದ್ಧರಾಮೇಶ್ವರ ಹೆಸರನ್ನು ಹೇಳಿಲ್ಲ.

6 ಇಲ್ಲಿ ಶಿವಾಲಯವನ್ನು ಕಟ್ಟಿಸಿ ಲಿಂಗಪ್ರತಿಷ್ಠೆ ಮಾಡಿಸಲು ಕಾರಣವಾದ ಕಥೆ ಸಿದ್ಧೇಶ್ವರಪುರಾಣ. ನಿರಂಜನವಂಶ ರತ್ನಾಕರಗಳಲ್ಲಿ ಬಂದಿದೆ ಅದು ಹೀಗೆ: "ಅಡಿಕೆ, ಮೆಣಸು, ಯಾಲಕ್ಕಿ ಮುಂತಾದ ಸರಕುಗಳನ್ನು ಸಾವಿರಾರು ಎತ್ತುಗಳ ಮೇಲೆ ಹೇರಿಕೊಂಡು ಹೋಗುತ್ತಿದ್ದ ಈ ವ್ಯಾಪಾರಿಸಂಘವು ತೃಣಜಲಕಾಷ್ಠಗಳಿಂದ ಸಮೃದ್ಧವಾದ ಈ ಸ್ಥಳದಲ್ಲಿ ಕಂಟಲಿಗಳನ್ನು ಇಳುಹಿ, ಗೂಡಾರಗಳನ್ನು ಹೊಡೆದು ತಂಗಿದ್ದರು. ಎತ್ತುಗಳನ್ನು ಮೇಯಲು ಬಿಟ್ಟು ಅನಂತರ ಸ್ನಾನಾದಿಗಳನ್ನು ಮಾಡಿ ಅಡಿಗೆಮಾಡಲು ಪ್ರಾರಂಭವಾಯಿತು. ಹೂಡಿದ ಒಲೆಯ ಗುಂಡುಗಳಲ್ಲಿ ಒಂದು ಗುಂಡಿನಿಂದ ಹಾಲು ಹರಿಯುವುದಕ್ಕೆ ಮೊದಲಾಗಿ ಬೆಂಕಿಯೆಲ್ಲಾ ನಂದಿಹೋಗತೊಡಗಿತು. ಈ ಸುದ್ದಿಯನ್ನು ಹಿರಿಯ ಸೆಟ್ಟಿಗೆ ತಿಳಿಸಿದರು. ಹಿರಿಯಸೆಟ್ಟಿಯು ತನ್ನ ಬೀಡಿಕೆಯಲ್ಲಿರುವ ಎಲ್ಲ ಸೆಟ್ಟರನ್ನು ಕರೆಯಿಸಿ ತೋರಿಸಿ ಮುಂದೇನೆಂದು ಯೋಚಿಸಿದನು. ಅವರೆಲ್ಲ ಹಾಲು ಹರಿಯುತ್ತಿದ್ದ ಗುಂಡನ್ನು ಹೊರತೆಗೆದು

ಪರೀಕ್ಷಿಸಿ ಇದು ಗುಂಡಕಲ್ಲವೆಂದೂ, ಲಿಂಗಶಿಲೆಯೆಂದೂ ಅರಿತು ಆ ಗುಂಡಿಗೆ ಅಮೃತೇಶ್ವರ ಲಿಂಗವೆಂದು ಹೆಸರಿಟ್ಟು ಒಂದು ಶಿವಾಲಯವನ್ನು ನಿರ್ಮಿಸಿದರು. ಅದೇ ಶಿವಲಿಂಗಕ್ಕೆ ಮುಂದೆ ವಿಶ್ವಲಿಂಗವೆಂದು ಹೆಸರಿಟ್ಟು ಅಲ್ಲಿಯೇ ತಮ್ಮ ಸಮಯಾಚಾರಕ್ಕಾಗಿ ಒಂದು ಮಠವನ್ನು ಕಟ್ಟಿಸಿ ತಮ್ಮ ಸಮಯಾಚಾರದ ಪ್ರಭುದೇವರ ಪರಂಪರೆಯಲ್ಲಿ ಗೋಸಲ ಸಿದ್ಧೇಶ್ವರರೆಂಬುವರನ್ನು ನೇಮಿಸಿ ದೇವಾಲಯ ಮತ್ತು ಮಠಕ್ಕೆ ಭೂಮಿಕಾಣಿಗಳನ್ನು ಮಾಡಿದ್ದರು.'' ಹೀಗೆ ನಿರಂಜನವಂಶರತ್ನಾಕರ ಹೇಳಿದರೆ, ಸಿದ್ಧೇಶ್ವರ ಪುರಾಣದಲ್ಲಿ ಕಥೆಯೇನೋ ಇದೇ ಕ್ರಮದಲ್ಲಿ ಬಂದದ್ದರೂ ಮಠದಲ್ಲಿ ಸಮಯಾಚಾರಕ್ಕಾಗಿ ನೇಮಿಸಿದ ಸ್ವಾಮಿಗಳ ಹೆಸರು ಹೇಳುವಾಗ ಟಿಪ್ಪಣಿ ೫ ರಲ್ಲಿ ಹೇಳಿರುವ ಮೊದಲನೆಯ ಸ್ವಾಮಿಗಳಿಂದಲೇ ಸ್ವಾಮಿಗಳ ಪರಂಪರೆ ಪ್ರಾರಂಭವಾಯಿತೆಂದು ಹೇಳಲಾಗಿದೆ. (ಸಂ. ೨. ಪ ೩೧ ೩೨ ೩೩). ಇಲ್ಲಿ ಇನ್ನೊಂದು ಅಂಶವೇನೆಂದರೆ ವೀರಬಣಂಜುಗಳು ಹರದನ ಹಳ್ಳಿಯಲ್ಲಿ ಮಠವನ್ನು ಸ್ಥಾಪಿಸಲಿಕ್ಕೆ ಮತ್ತು ಅಲ್ಲಿ ಅನಾದಿಗಣವರ ಹೆಸರು ಪ್ರಭುಸ್ವಾಮಿ ಎಂದು ಇತ್ತೆಂದೂ ಈ ಅನಾದಿಗಣವರನಿಗೆ ರೇವಣಸಿದ್ಧೇಶ್ವರರೇ ಮುಖ್ಯವಾದ ಕಾರಣವೆಂದೂ. ಈ ಅನಾದಿಗಣವದರ ಹೆಸರು ಪ್ರಭುಸ್ವಾಮಿ ಎಂದು ಇತ್ತೆಂದೂ ಈ ಅನಾದಿಗಣವರನಿಗೆ ರೇವಣಸಿದ್ಧೇಶ್ವರರು ರುದ್ರಮುನಿ ಶಿವಾಚಾರ್ಯರಿಂದ ಷಟ್‌ಸ್ಥಲೋಪದೇಶ ಕೊಡಿಸಿದರೆಂದೂ ಶ್ರೀ ಚೆನ್ನಮಲ್ಲಿಕಾರ್ಜುನರು ಅಭಿಪ್ರಾಯ ಪಡುತ್ತಾರೆ.(ರೇ.ಸಿ. ಪೀಠಿಕೆ ಪು. XV). ಈ ವಿಷಯ ಯೋಚಿಸತಕ್ಕತವ್ವಾಗಿದೆ. ಹೀಗಾದಾಗ ಕಾಲದ ಅಸಾಂಗತ್ಯ ಅಧಿಕವಾಗುತ್ತದೆ.

7 ನಿ. ವಂ. ರತ್ನಾಕರ. ಹಳಕಟ್ಟಿಯವರ ಪ್ರಕಟನೆ. ಪು. ೩೨ ೩೩

8 ಈಗಲೂ ಹೇಮಕೂಟದಲ್ಲಿ ವಿರೂಪಾಕ್ಷ ದೇವಾಲಯದಿಂದ ದಕ್ಷಿಣಕ್ಕೆ ತುಂಗಭದ್ರಾ ತೀರದಲ್ಲಿ ಹಾಳುಬಿದ್ದ ಒಂದು ದೊಡ್ಡ ವೀರಶೈವ ಮಠವಿದೆ. ಈಗ ಅದರ ಜೀರ್ಣೋದ್ಧಾರವನ್ನು ಕೊಟ್ಟೂರು ಮಠದ ಶ್ರೀಗಳವರು ಮಾಡುತ್ತಿದ್ದಾರೆ. ಆ ಮಠ ಕೊಟ್ಟೂರು ಸ್ವಾಮಿ ಮಠದ ಪರಂಪರೆಗೆ ಸೇರಿದುದೆಂದು ತಿಳಿದುಬರುತ್ತದೆ. ಸಾಕಷ್ಟು ಭಗ್ನವಾಗಿರುವ ಈ ಮಠ ಪಂಪಾಕ್ಷೇತ್ರದಲ್ಲಿದ್ದ ವೀರಶೈವ ಮಠಗಳಲ್ಲೆಲ್ಲ ದೊಡ್ಡದೆಂದು ಹೇಳಲಾಗುತ್ತಿದೆ. ಈ ಮಠದ ಮೂಲಪುರುಷರಾದ ಕಪ್ಪಿನ ಚನ್ನಬಸವಸ್ವಾಮಿಗಳು (೧೫೧೮). ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯರಾಗಿದ್ದರೆಂದು ಆ ಮಠದ ದಾಖಲೆಗಳಿಂದ ಗೊತ್ತಾಗುತ್ತದೆ. (ರಸಿಕಚಕ್ರಿ ಹರಿಹರದೇವ ಪುಟ XVI ನೋಡಿ) ಸಂ. ಬಿ. ಸಿ. ಜವಳಿ ಮತ್ತು ಶಾಂತರಸ.

9 ನಿ. ವಂ. ರತ್ನಾಕರ (ಸಂ. ಹಳಕಟ್ಟಿ) ಪು. ೩೫

10 ಈ ಮಲ್ಲಣಾರ್ಯನ ಮನೆತನ ಶ್ರೇಷ್ಠಸಂತತಿಯ ಮನೆತನ. ಈತನು ವೀರಶೈವಾಮೃತ ಮಹಾಪುರಾಣವೆಂಬ ಶ್ರೇಷ್ಠತಮವಾದುದೂ, ವೀರಶೈವ ವಿಶ್ವಕೋಶದಂತಿರುವುದೂ ಆದ ಗ್ರಂಥವನ್ನೂ, ಭಾವಚಿಂತಾರತ್ನವೆಂಬ ಸತ್ಯೇಂದ್ರಚೋಳನ ಕಥೆಯನ್ನು ತಿಳಿಸುವ ಮಂತ್ರ ಮಹಾತ್ಮೆಯ ಪ್ರಾಧ್ಯಾನ್ಯವಿಷಯವುಳ್ಳ ಗ್ರಂಥವನ್ನೂ ಬರೆದಿದ್ದಾನೆ ಎಂಬ ವಿಷಯ ಈ ಹಿಂದೆ ವಿವರಿಸಲ್ಪಟ್ಟಿದೆ.

11 ಇಂದಿಗೂ ಈ ಮಠದಲ್ಲಿ ಚೆನ್ನಬಸವೇಶ್ವರಸ್ವಾಮಿಗಳವರ ಉತ್ಸವ ಮೂರ್ತಿಯು ಇದ್ದು, ಪ್ರತಿವರ್ಷ ಉತ್ಸವಾದಿಗಳು ಜರುಗುತ್ತವೆ.

12 ಇತ್ತೀಚೆಗೆ ತೋಂಟದ ಸಿದ್ಧಲಿಂಗೇಶ್ವರರ ಕಾಲದ ಬಗೆಗೆ ಅನೇಕ ಚರ್ಚೆಗಳು ನಡೆಯುತ್ತವೆ. ಕ್ರಿ.ಶ. ೧೪೦೦ ರಿಂದ ೧೫೬೦ ವರೆಗೆ ಇವರ ಕಾಲ ತೂಗುಯ್ಯಾಲೆಯಲ್ಲಿ ಇದೆ. ಪ್ರಕೃತ ಕವಿಚರಿತ್ರಕಾರರ ಅಭಿಪ್ರಾಯವನ್ನೂ ಇದುವರೆಗೆ ನಂಬಿಕೊಂಡು ಬಂದಿರುವ ನಂಬಿಗೆಯನ್ನೂ ಮುಖ್ಯವಾಗಿಟ್ಟುಕೊಂಡು ಸದ್ಯಕ್ಕೆ ಅದೇ ಕಾಲವನ್ನು ಸ್ವೀಕರಿಸಲಾಗಿದೆ. ಇತ್ತೀಚಿನ ವಿದ್ವಾಂಸರು ಕ್ರಿ.ಶ. ೧೫೬೦ವರೆಗೆ ಅವರ ಕಾಲವನ್ನು ಎಳೆದೊಯ್ಯುವ ವಾದವನ್ನು ಅಲ್ಲಗಳೆಯುವವರಿದ್ದಾರೆ. ಡಾ. ಮಲ್ಲೇದೇವರು ಸಂಪಾದಿಸಿರುವ ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು ಗ್ರಂಥದ ಪೀಠಿಕೆ (ಪುಟ ೧೯ ರಿಂದ ೨೫)ಯಲ್ಲಿ ಈ ವಾದವನ್ನು ಅಲ್ಲಗಳೆದು ಕವಿಚರಿತ್ರಕಾರರ ಕಾಲವನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದ್ದಾರೆ. ಕವಿಚರಿತ್ರಕಾರರ ಕಾಲವನ್ನು ಒಪ್ಪದೆ ಒಂದು ಶತಮಾನದಷ್ಟು ಕಾಲವನ್ನು ಮುಂದಕ್ಕೆ ಹೇಳುವವರ ವಾದದಲ್ಲಿಯೂ ಅನೇಕ ಸಂಶಯಗಳು, ತೊಡರುಗಳು ಇಲ್ಲದಿಲ್ಲ. ಮಹಾತಪಸ್ವಿಗಳಾದ ಅವರು ದೀರ್ಘಕಾಲ ಬದುಕಿ ೧೫೦೦ರ ಮುಂದೆಯೂ ಇದ್ದಿರಬಹುದು. ಆಗ ಅವರ ಜನನದ ಅಂದಾಜು ಕಾಲವು ಮುಂದಕ್ಕೆ ಬರಬೇಕಾಗುತ್ತದೆ. ನಿಷ್ಕೃಷ್ಟ ಆಧಾರಗಳ ಅಭಾವದಿಂದ ಇದಮಿತ್ಥಂ ಎಂದು ಹೇಳುವುದಕ್ಕೆ ಅನೇಕ ತೊಡಕುಗಳು ಬರುತ್ತವೆ. ಅಂತೂ ೧೫೦೦ರಲ್ಲಿ ಅವರು ಇರಲು ಸಾಧ್ಯವೆನ್ನಬಹುದು. ಗುಬ್ಬಿಗೆ ಚನ್ನಬಸವೇಶ್ವರರನ್ನು ಕರೆತಂದ ಮಲ್ಲಣಾರ್ಯರ ಬಗೆಗೂ ಭಿನ್ನಭಿಪ್ರಾಯಗಳಿವೆ. ಪ್ರಾಯಃ ಇವನ ತಾತನಾದ ಮಲ್ಲಣ್ಣನೇ ಈ ಕಾರ್ಯಮಾಡಿರಬಹುದೆನ್ನುವವರೂ ಇದ್ದಾರೆ.

13 ೧ನೆಯ ಶಾಸನ ಎಡೆಯೂರ ದೇವಾಲಯದಲ್ಲಿರುವುದು (ಇಲ್ಲಿಯ ಅಂಕಿಗಳು ಸಾಲುಗಳನ್ನು ಸೂಚಿಸುವುವು. ೧) ಕೊಡಗಿಹಳ್ಳಿಯ ದೇವರು ತಾಲುಪಡದ ಭೂಮಿಯಲ್ಲಿ ತೋಂಟದಸ್ವಾಮಿ ೨) ಗೆ ತಮ್ಮ ಭಕ್ತಿಯಿಂದಾ ಕಟ್ಟಿಸಿಕೊಟ್ಟ ಮಠ ಯಿಮಹ ಸಿದ್ಧೇಶ್ವರನ ಅತಿಸಯವೆಂತೆಂದ ೩) ಡೇ ಶ್ರೀ ಮತು ಸಚ್ಚಿದಾನಂದ ನಿತ್ಯಪರಿಪೂರ್ಣವನುಳ್ಳ ಅನಾದಿಭಕ್ತ ಆ ಭಕ್ತನ ಹೃದಯದಲ್ಲಿ ಜಂ ೪) ಗಮ ಜಂಗಮರ ಮಕುಟದಲ್ಲಿ ಶೂನ್ಯಲಿಂಗ ಆ ಲಿಂಗದಲ್ಲಿ ಚಿದಂಬರ ಶಿವಶಕ್ತಿ, ಪಾಚಶಕ್ತಿ ಪಂಚನಾದ ಪಂಚಬ್ರಂಹ್ಮಯೀಶ್ವರಾಷ್ಟಕ ಮಹೇಶ್ವರ ಪಂಚವಿಂಶತಿ ರುದ್ರರೇಕಾ ೬) ದಶತ್ರಯವಯ.....ರಂಣ್ಯ ಗರ್ಭ ವಿರಾಟ ಮೂರ್ತಿಯಂತೀಯೆಂಭತ್ತೊಂದು ಮೂರ್ತಿ ೭) ಯೆ ಅಂಗವಾಗಿರ್ಪಾತನೆ ಅನಾದಿಭಕ್ತನು ಆ ಭಕ್ತನ ಪ್ರಾಣಕಲಾಚೈತನ್ಯಸ್ವ ೮) ರೂಪೇ ತೋಂಟದ ಸಿದ್ಧಲಿಂಗೇಶ್ವರನು. ಆ ಸಿದ್ಧಲಿಂಗೇಶ್ವರನ ಮೂರ್ತಿ ಕ್ರಮವೆಂತೆಂದ ೯) ಡೆ ಪ್ರಣಮವೆ ಸಿರುಸು ನಮಸಾರಾವೆಭುಜ ಶಿಕುರವೇ ದೇಹ ಪಯಪ್ಕಾರವೇಪಾದ ಅನಂ ೧೦) ತ ಕೋಟಿಬ್ರಹ್ಮಾಂಡಂಗಳೇ ಮುಕುಟ ಸಮಸ್ತ ಲೋಕಾದಿಲೋಕಂಗಳೇ ದೇಹದ ಜಳಪ ೧೧) ಳಿಯ ಆಕಾಶವೇ ಮುಖ ದಿಕ್ಕುಗಳೇ ತೋಳು ಚಾಂದ್ರಸೂರ್ಯಾದಿಗಳೇ ನಯನ ಪಾತಾಳ ೧೨) ವೇ ಹೆದೆ ಮೇಘಂಗಳೇ ಜಟಾಬಂಧ ಆ ಜಟಾಬಂಧದಲ್ಲಿ ಶೂನ್ಯಲಿಂಗ ವೇದಪುರಾಣಂಗಳೇ ತ್ರಿನ ೧೩) ಕ್ಷತ್ರಂಗಳೇ ಪುಷ್ಪ ಚಂದ್ರಪ್ರಕಾಶವೇ ವಿಭೂತಿ ಅಷ್ಟಕುಲ ಪರ್ವತಂಗಳೇ ರುದ್ರಾಕ್ಷ ಸಮಸ್ತ ಸಮುದ್ರಂಗ ೧೪) ಳೇ ಕಮಂಡಲ ಭುವನ ಸ್ರಷ್ಟಿಯೆಕಂತೆ ದಿವಾರಾತ್ರಿಗಳೇ ಮಠ ಷಡುರುತುಗಳೇ ಷಡುಸ್ಥಲ ಮಹಾಸೇ ೧೫) ಷನೆ ಕಟಿಸೂತ್ರ ಪರಿಪೂರ್ಣಜ್ಞಾನವೇ ಪಂಚಮುದ್ರೆ ತ್ರಿಕಾಲಜ್ಞಾನವೇ ಮಹದೈಶ್ವರ್ಯ ಮಹಾ ೧೬) ಮೇರುವೇ ದಂಡ ಸದ್ಗುಣವೇ ಕರ್ಪೂರ ಕುಲವೇ ಶಿವಕುಲಯಿಂತಪ್ಪ ಅನಾದಿ ಜಂಗಮವೆ ೧೭) ಜಗಹಿತಾರ್ಥವಾಗಿ ಚರಿಸಿದ ಕ್ರಮವೆಂತೆಂದರೆ ಜ್ಞಾನಕ್ರಿಯಾ ಸ್ವರೂಪನ ಸರ್ವಾಂಗಲಿಂ ೧೮) ಗಿ ಷಟಸ್ಥಲಜ್ಞಾನಿ ಸರ್ವಾಚರಾಸಂಪಂನ್ನ ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯರು ೧೯) ಅಷ್ಟಾವರಣಾಲಂಕರಣ ದ್ವೈತಾದ್ವೈ ತತತಿಮಿರಮಾರ್ತ್ರಂಡನುಂ ಯಿಂತಪ್ಪ ದಿವ್ಯಶಿವಯೋಗಿ ಸಿದ್ಧಲಿ ೨೦) ಂಗೇಶ್ವರಂಗೆ ಸಂಮ್ಯಜ್ಞಾನೋದಯವಾಗಿ ಸಂಹಾರಹೇಯಮಂ ಮಾಡಿ ಶರಣು ಹೊಕ್ಕ ಸಿಷ್ಯಜನ.....''

— ಸಂ. ಡಾ. ಆರ್. ಸಿ. ಹಿರೇಮಠ; ಷಟ್ಸ್ಥಲ ಜ್ಞಾನಸಾರಾಮೃತ. ಪೀಠಿಕೆ, ಪು. ೨೯-೩೧

೨ನೆಯಶಾಸನ ನಾದ ಬಿಂದು ಕಳೆಭೇದವ ತಿಳಿದಲ್ಲಿ। ಅರಕ್ಷರವಾದ ತೆರೆವನರಿಯ ಬಾರದು ಅರಕ್ಷರಕೆ ಮೂಲ ಪ್ರಣಮನ ತಿಳಿದಲ್ಲದೆ ನಾದ ಕಳೆದೋರದು ಅನಾದದೊಳಗಿನ ಕಳೆಯನೋಡಿ ಕಂಡಲ್ಲದೆ ರಾಜಶಿವಯೋಗಿಯಾಗಬಾರದು ರಾಜಶಿವಯೋಗವೆಂಬುದು ಆದಿಯಲ್ಲಿ ಶಿವಬೀಜವಾದ ಮಹಾಮಹಿಮರಿಗೆ ಸಾಧ್ಯವಪ್ಪುದಲ್ಲದೆ ತ್ರೈಜಗದಲ್ಲಾರಿಗೂ ಅಸಾಧ್ಯ ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

14 ಅದೇ. ಪು. ೨೩೨.

15 ಹೇರಂಬ ಕವಿಯೂ ಕ್ರಿ.ಶ. ೧೫೭೦ ರಲ್ಲಿದ್ದನೆಂದು ಷ. ಜ್ಞಾನ. ಸಾ.ದ ಪೀಠಿಕೆ ಪು. ೫೧ರಲ್ಲಿ ಹೇಳಿದ್ದಾರೆ. ಇದು ನಿಜವಾದರೆ ಇವರೂ ವಿರಕ್ತ ತೋಂಟದಾರ್ಯರ ಸಮಕಾಲೀನರೇ ಆಗುತ್ತಾರೆ. ಇವನು ಯಲಹಂಕದ ನಾಳ್ಪ್ರಭು ಮುದ್ದುಕೃಷ್ಣರಾಜನೆಂಬುವನಿಗಾಗಿ ಶ್ರೀ ಸಿದ್ಧಲಿಂಗೇಶ್ವರ ಸಾಂಗತ್ಯವನ್ನು ಬರೆದಂತೆ ಹೇಳಿಕೊಂಡಿದ್ದಾನೆ. ಆದರೆ ಸಾಕಷ್ಟು ಆಧಾರಗಳಿಲ್ಲದ್ದರಿಂದ ಈ ಮಾತನ್ನು ಒಪ್ಪಲಾಗುವುದಲ್ಲ. ಇತ್ತೀಚೆಗೆ ಹೇರಂಬನ ಕಾಲವನ್ನು ೧೭೦೦ ರಿಂದ ಮುಂದೆ ಎಂದು ವಿದ್ವಾಂಸರು ಕಾರಣ ಕೊಟ್ಟು ವಿವರಿಸುತ್ತಿದ್ದಾರೆ.

16 ಈ ಶಾಂತೇಶ ಕವಿಯು ವೀರಶೈವಾಮೃತ ಮಹಾಪುರಾಣವನ್ನು ಬರೆದ ಗುಬ್ಬಿಯ(ಅಮರಗುಂಡದ) ಮಲ್ಲಣಾರ್ಯನ ಮಗ. ಇವರದು ವಿದ್ವತ್ಪರಂಪರೆಯ ಶರಣ ಸಂಪ್ರದಾಯದ ಮನೆತನ. ಇವನ ತೋಂಟದ ಸಿದ್ಧಲಿಂಗೇಶ್ವರ ಪುರಾಣ ಇತ್ತೀಚೆಗೆ ಶ್ರೀ ಬಿ. ನಂ. ಚಂದ್ರಯ್ಯನವರಿಂದ ಸಂಪಾದಿತವಾಗಿ ಪ್ರಕಟವಾಗಿದೆ.

17 ಘನಲಿಂಗಿದೇವ (೧೪೭೦), ಗುಬ್ಬಿಯ ಮಲ್ಲಣ್ಣ (೧೪೭೫), * ಸ್ವತಂತ್ರ ಸಿದ್ಧಲಿಂಗೇಶ್ವರ(೧೪೮೦), ಗುಮ್ಮಳಾಪುರದ ಸಿದ್ಧಲಿಂಗೇಶ್ವರ (೧೪೮೦) ಗುಳೂರು ಸಿದ್ಧವೀರಣಾರ್ಯ (೧೪೮೦), ಸಾನಂದ ಶಿವಯೋಗಿ (೧೪೮೦), ಮಲ್ಲಿಕಾರ್ಜುನ ಕವಿ (೧೪೮೫), ಬಸವಲಿಂಗಶಿವಯೋಗಿ (೧೫೦೦) ಗುರುನಂಜ ಕವಿ (೧೫೦೦), ಗುಬ್ಬಿಯ ಮಲ್ಲಣಾರ್ಯ (೧೫೧೩), ಪ್ರಭುಲಿಂಗ ಕವಿ (೧೫೨೦), ಓದುವ ಗಿರಿಯ (೧೫೨೫), ಚೇರಮಾಂಕ (೧೫೨೬), ಮುರಿಗೆಯ ಶಾಂತವೀರ (೧೫೩೦), ಸಂಪಾದನೆಯ ಚೆನ್ನಂಜದೇವ (೧೫೨೦), ಇಮ್ಮಡಿ ತೋಂಟದಾರ್ಯ (೧೫೩೦), ಎಮ್ಮೆಯ ಬಸವ (೧೫೪೩), ಚೆನ್ನಬಸವಾಂಕ (೧೫೧೫), ಕುಮಾರ ಚೆನ್ನಬಸವ (೧೫೫೦), ಸಿರಿನಾಮಧೇಯ (೧೫೫೦), ಮುರಗೆದೇಶಿಕೇಂದ್ರ (೧೫೬೦), ಮಹಾಂತಸ್ವಾಮಿ (೧೫೬೦), ಎಳಮಲೆಯಗುರುಶಾಂತದೇವ (೧೫೬೫), ವಿರೂಪಾಕ್ಷ ಪಂಡಿತ (೧೫೮೫), ಇಮ್ಮಡಿ ಮುರಿಗೆಸ್ವಾಮಿ (೧೫೯೦), ಬಸವಲಿಂಗಕವಿ (೧೬೦೦), ಸಿದ್ಧಲಿಂಗಶಿವಯೋಗಿ (೧೬೦೦), ಸಂಪಾದನೆಯ ವೀರಣಾರ್ಯ (೧೬೦೦), ಎಳಂದೂರು ಹರೀಶ್ವರ (೧೬೦೦), ಬಸವಲಿಂಗ (೧೬೧೧), ಶಾಂತವೀರದೇಶಿಕ (೧೬೫೦), ಸಿದ್ಧನಂಜೇಶ (೧೬೫೦), ಶಾಂತಮಲ್ಲ (೧೬೫೦), ಪರ್ವತ ಶಿವಯೋಗಿ(೧೬೫೦), ಷಡಕ್ಷರಕವಿ (೧೬೫೪), ಬಸವಲಿಂಗ (೧೬೭೯), ಸಂಪಾದನೆಯ ಪರ್ವತೇಶ (೧೬೯೮), ಸೋಮಶೇಖರ ಶಿವಯೋಗಿ (೧೭೦೦), ಸೋಮಕವಿ (೧೭೦೦), ನೂರೊಂದ (೧೭೪೦), ನಂದಿನಾಥ(೧೭೪೫). ಇತ್ಯಾದಿ. (*ಇವರು ಸ್ತೋತ್ರಮಾಡಿದಂತೆ ಕಂಡುಬರುತ್ತಿಲ್ಲ. ಸಂ.) -ಸಂ. ಆರ್. ಸಿ. ಹಿರೇಮಠ: ಷ. ಜ್ಞಾ. ಸಾ. ಪೀಠಿಕೆ ಪು. ೨೩೨-೩೩

18 ಈ ಬೋಳಬಸವೀದೇವರಿಗೆ 'ನಿರಕ್ಷರಕುಕ್ಷಿ ಬೋಳಬಸವಿದೇವ' ರೆಂದೂ ಹೆಸರು. ಇವರು ವಿದ್ಯಾಭ್ಯಾಸವನ್ನು ಮಾಡಿರಲಿಲ್ಲ. ಶಿವಾನುಭವ ಸಂಪತ್ತಿನಲ್ಲಿ ಅದ್ವಿತೀಯರೆನಿಸಿದ್ದರು. ಕೆಲವು ಜನ ಕುಚೋದ್ಯಗಾರರು ಇವರ ಬಗ್ಗೆ 'ಕುಕ್ಷಿಯನ್ನು ಬಗೆದರೂ ಮೂರಕ್ಷರವಿಲ್ಲದವರು, ಎಂದು ಚೇಷ್ಟೆ ಮಾಡಿದರಂತೆ. ಆಗ ನೊಂದುಕೊಂಡ ಬೋಳಬಸವೇಶರು ೨೧ ದಿನಗಳವರೆಗೆ ಪ್ರಸಾದವಿಲ್ಲದೆ ಒಂದು ಗುಹ್ಯದಲ್ಲಿ ಕುಳಿತು ತಮ್ಮ ಗುರುಗಳಾದ ತೋಂಟದ ಸಿದ್ಧಲಿಂಗೇಶ್ವರರನ್ನು ಧ್ಯಾನ ಮಾಡಲು ತರ್ಕವ್ಯಾಕರಣಾದಿ ಶಾಸ್ತ್ರಜ್ಞಾನವೂ, ಪುರಾಣಪ್ರವಚನಾದಿ ವಿದ್ಯಾವೈದುಷ್ಯವೂ ಕೈಗೂಡಿತೆಂದು ನಿರಂಜನ ವಂಶರತ್ನಾಕರ ಹೇಳುತ್ತದೆ. ತಥ್ಯಾಂಶವಿಷ್ಟೆ. ಇವರು ನಿರಂಜನಜಂಗಮಾಧಿಕಾರ ಸ್ವೀಕಾರ ಕಾಲದಲ್ಲಿ ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿದವರಲ್ಲ. ಸಿದ್ಧಲಿಂಗೇಶ್ವರರ ಕೃಪೆಗೆ ಪಾತ್ರರಾಗಿ ಅಧಿಕಾರ ಸ್ವೀಕಾರ ಮಾಡಿದ ಮೇಲೆ ಕ್ರಮೇಣ ಸಕಲಶಾಸ್ತ್ರಪಾರಂಗತರಾದರು ಎಂದು ಭಾವಿಸಬೇಕು.

19 'ಸಿದ್ಧಗಂಗಾ' ಜಲೋದ್ಭವವು ಸಿದ್ಧಲಿಂಗೇಶ್ವರರಿಂದಲೇ ಆಯಿತೆಂದು ಹೇರಂಬ ಕವಿಯು ಹೇಳುತ್ತಾನೆ. ಆದರೆ ನಿ. ವಂ. ರತ್ನಾಕರ ಗ್ರಂಥದ ಪ್ರಕಾರ ಸಿದ್ಧಗಂಗಾ ಜಲೋದ್ಭವ ಪವಾಡ ಗೋಸಲ ಸಿದ್ಧೇಶ್ವರದಿಂದ ಆಯಿತೆಂದು ಹೇಳಲಾಗುತ್ತಿದೆ. ಬಹುಶಃ ಗೋಸಲ ಸಿದ್ಧೇಶ್ವರರಿಂದಲೇ ಈ ಜಲೋದ್ಭವದ ಪವಾಡ ಕ್ರಿ.ಶ. ಸು. ೧೩೨೫ರ ಸುಮಾರಿಗೆ ಆಯಿತೆಂದು ಊಹಿಸಬಹುದು. ಅದೇನೇ ಇದ್ದರೂ ೧೪೭೦ರ ಸುಮಾರಿಗೆ ಈ ಸಿದ್ಧಗಂಗಾ ಜಲವು ಪವಿತ್ರ ಜಂಗಮಪಾದತೀರ್ಥವೆಂಬ ಕೀರ್ತಿಗೆ ಪಾತ್ರರಾಗಿ, ಜನತೆಯಲ್ಲಿ ಇದರ ಮಹಿಮಾತಿಶಯಗಳು ಭಕ್ತಿಯನ್ನುಂಟು ಮಾಡಿದ್ದುವೆಂದು ಒಟ್ಟಾರೆ ತಿಳಿಯಬಹುದು.

20 (i) ಹೊಸಮಹಿಮೆಯ ಸಿದ್ಧಗಂಗಾ ತೀರ್ಥದಬಳಿಯೆಸೆದಿಪ್ಪ ಸಿದ್ಧೇಶನೆಡೆಗೆ ।
ವಿಷರೋಗಾನ್ವಿತನಾಗಿ ತಿಗುಳಾಣ್ಯದಿಂದಲು। ಬ್ಬಸಗೊಳು ತೋರ್ವನೈತಂದ । ೧೭ ೯

(ii) ರೋಗತಿಮಿರ ಮಾರ್ತಾಂಡ ಮಹಾವಿಷ' ರೋಗ ಸುಪರ್ಣನೆಯೆನ್ನ
ರೋಗ ಪರಿಹರಿಸೆಂದು ದ್ರಾವಿಡ ಭಾಷೆಯಾಗಮದಿಂದ ಸ್ತುತಿಸಿದ ೧೯ ೬

(iii) ವಿಷರೋಗಾನ್ವಿತನ ನುಡಿಯ ಕೇಳಿ ವನವಾಸಿ। ಬೆಸಸಿದ ಸಿದ್ಧಗಂಗೆಯೊಳು
ಸುಸರದಿ ನೀನು ಸ್ನಾನವ ಮಾಡೆ ಭವರೋಗ। ವಿಷಹರವಹುದೆನುತವಗೆ ॥ ೧೯ ೭

(iv) ಅನಿಮಿಷವಂದ್ಯನ ನುಡಿಗೇಳಿ ವೀರಣ್ಣಾ । ರ‍್ಯನು ಘನ ಹರುಷವ ತಾಳಿ ।
ಮನನಲವಿಂದ ಸ್ನಾನವ ಮಾಡೆ ವಿಷರೋಗ । ಕ್ಷಣದೊಳು ಪರಿಹಾರವಾಯ್ತು । ೧೯-೮

21 ಈ ಘಟನೆಯನ್ನು ಸಿದ್ಧನಂಜೇಶನು (ಕ್ರಿ. ಶ. ಸು. ೧೬೫೦) ತನ್ನ ಗುರುರಾಜ ಚಾರಿತ್ರೆಯ ಸಂ. ೧೩ರಲ್ಲಿ ಪ. ೮೭ರಿಂದ ೯೫ರವರೆಗೆ ಸಿದ್ಧಲಿಂಗೇಶ್ವರರ ಮಹಿಮಾತಿಶಯವನ್ನು ಹೇಳುವ ಸಂದರ್ಭದಲ್ಲಿ 'ವೀರಯ್ಯನಿಗಿತ್ತ ಕನ್ನಡ ಭಾಷೆಯ' ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದುದರಿಂದ ತಿಗುಳದೇಶ ಕರ್ನಾಟಕ ದೇಶಗಳಲ್ಲಿ ಕ್ರಿ. ಶ. ೧೬೫೦ಕ್ಕೂ ಹಿಂದೆಯೇ ಸಿದ್ಧಗಂಗಾ ತೀರ್ಥದ ಮಹಿಮೆ ಪ್ರಚಾರಗೊಂಡಿತ್ತೆಂದಾದರೂ ಊಹಿಸಲು ಅನುಮಾನವೇನಿದೆ?

22 ಈ ಘಟನೆ ಸಿದ್ಧೇಶ್ವರ ಪುರಾಣ, ಸಿದ್ಧಲಿಂಗೇಶ್ವರ ಸಾಂಗತ್ಯ, ತೋಂಟದಾರ್ಯರಗಳೆ - ಈ ಮೂರು ಗ್ರಂಥಗಳಲ್ಲೂ ಬರುತ್ತದೆ.

- ಸಂ. ಆರ್. ಸಿ. ಹಿರೇಮಠ: ಷ. ಜ್ಞಾ. ಸಾ. ಪೀಠಿಕೆ ಪು. ೫೫ ಮತ್ತು ೬೦

23. ಹುಲಿಯೂರ (ಹುಲಿಯೂರುದುರ್ಗ) ಹತ್ತಿರದಲ್ಲಿ ದ್ವಿತೀಯ ಸಿದ್ಧಗಂಗೆಯೆಂಬ ಸ್ಥಳವೊಂದಿದೆ. ತೋಂಟದ ಸಿದ್ಧಲಿಂಗಶಿವಯೋಗಿಗಳು ಇಲ್ಲಿಗೆ ದಯಮಾಡಿಸಿದಾಗ ಸಿದ್ಧಗಂಗೆಯ ಹಾಗೆಯೇ ಇಲ್ಲಿಯೂ ಕಲ್ಲುಬಂಡೆಯಲ್ಲಿ ಪಾದಸ್ಪರ್ಶದಿಂದ ತೀರ್ಥಜಲವನ್ನು ಬರಿಸಿದ ಪವಾಡವನ್ನು ಮೆರೆದಿದ್ದಾರೆ. ಅಲ್ಲಿ ಒಂದು ಮಠವನ್ನು ಶಿವಯೋಗಿಗಳು ನಿರ್ಮಿಸಿ ಚರಮೂರ್ತಿಗಳನ್ನು ನೇಮಿಸಿದ ವಿಷಯವನ್ನು ಹೇರಂಬ ಮತ್ತು ವಿರಕ್ತತೊಂಟದಾರ್ಯರು ತಮ್ಮ ಗ್ರಂಥದಲ್ಲಿ ನಿರೂಪಿಸಿದ್ದಾರೆ.

24 ನಿ. ವ. ರ. ದಲ್ಲಿ ವಾಲ್ಮೀಕ ಕುಲದವನಾದ ರತ್ನಗಿರಿಯ ದೊರೆ ಎಂದು ಇದೆ.

25 ತೋಂಟದ ಸಿದ್ಧಲಿಂಗ ಶಿವಯೋಗಿಗಳವರನ್ನು 'ಸಿದ್ಧೇಶ' ಎಂದೇ ಕರೆಯಲಾಗುತ್ತಿದ್ದು. ಅವರು ಕಗ್ಗರೆಯ ತೋಟದಲ್ಲಿ ಶಿವಯೋಗ ಸಮಾಧಿಯಲ್ಲಿ ಕುಳಿತ ನಂತರ ತೋಂಟದ ಸಿದ್ಧೇಶ, ತೋಂಟದ ಸಿದ್ಧಲಿಂಗೇಶ್ವರ, ತೋಂಟದಾರ್ಯ-ಇತ್ಯಾದಿ ನಾಮಾಂತರಗಳಿಂದ ಕರೆಯಲಾಗುತ್ತಿದೆ. ತೋಟಪ್ಪ ಮುಂತಾಗಿ ಇಡುವ ಹೆಸರುಗಳ ಹಿನ್ನಲೆಯೂ ಇದೇ ಆಗಿದೆ.

26 ಟಿಪ್ಪಣಿ ೧೨ ರಲ್ಲಿ ಈ ಶಾಸನದ ವಿಷಯವನ್ನು ಕೊಡಲಾಗಿದೆ.

27 ತೋಂಟದ ಸಿದ್ಧಲಿಂಗ ಶಿವಯೋಗಿಗಳ ಹಿಂದೆ ೭೦೧ ವಿರತರು ೩೦೦೦ ಚರಮೂರ್ತಿಗಳು ಇದ್ದರೆಂದು ಹೇಳಲಾಗುತ್ತಿದೆ. ಅದರಲ್ಲಿ ಬಹುಜನರ ಹೆಸರನ್ನು ಚನ್ನಬಸವಪುರಾಣ ಹೇಳಿದೆ. ಅಲ್ಲಿ ".... ಇಂತಿವರ್ ಮೊದಲಾದ ವಿರತರೇಳ್ನೂರ್ವರುಂ ಸಂತತಂಗೂಡಿ ಷಟ್‌ಸ್ಥಲ ಮಾರ್ಗಮಂ ಧರೆಯೊಳಂತರಿಸದಂತೆ ನೆಲೆಗೊಳಿಸುತೆ" (ಕಾಂ. ೫, ಸಂ. ೧೦, ಪ ೫೦) ಎಂದಿದ್ದಾರೆ. ೭೦೧ ಸಂಖ್ಯೆಯಿಲ್ಲ. ಅವರಲ್ಲಿ ಮುಖ್ಯರಾದವರು :-

(i) ಸಿದ್ಧಲಿಂಗೇಶ್ವರಂ ಕಂಬಳಾದೇವರಾ । ಸಿದ್ಧನಂಜೇಶ್ವರಂ ಚೆನ್ನದೇವರ್ ದೊಡ್ಡ ।
ಸಿದ್ಧಲಿಂಗೇಶ್ವರಂ ಕಂಕಣದದೇವರ್ ಆ ಲಂಬಕರ್ಣದ ದೇವರು ।
ಸಿದ್ಧಮಲ್ಲೇಶ್ವರಂ ಗುಮ್ಮಾಳಪುರದವರ । ಸಿದ್ಧಲಿಂಗೇಶ್ವರಂ ಎಡತೊರೆಯ ಪುರದಗುರು
ಸಿದ್ಧವಿರಕ್ತೊಡೆಯರೆಸೆವ ಘನಲಿಂಗದೇವರ್ ಚಿಕ್ಕ ಮಲ್ಲೇಶನು॥ ಕಾ. ೫. ಸಂ. ೧೦-೪೭

(ii) ಮರುಳಸಿದ್ಧೇಶ್ವರಂ ಚಂದ್ರಶೇಖರನೆಸೆವ । ಸುರಗಿಯಾರ್ಯಂ ಶಾಂತಮಲ್ಲಿಕಾರ್ಜುನದೇವ ।
ರಿಂದೆ ಬೆಡಗನ ಪರ್ವತೇಶ್ವರಂ ಪಟ್ಟಣದೇವರೆಂದಾ ಜಗುನಿಯ
ಮರಳದೇವರ್ ಮಳೆಯ ದೇವರಾ ಬತ್ತಯ।ಲಿರುವ ದೇವರ್ ಸಂಪಿಗೆಯ ರಾಚವಟ್ಟದೇ
ವರು ಸಪ್ಪಿಯಾರ್ಯನುಪ್ಪಿನ ಹಳ್ಳಿ । ಯಾರ್ಯನೊಪ್ಪುವ ಶೀಲವಂತಾರ್ಯನ ॥ ೪೮ ॥

(iii) ಎಸೆವ ಕೊಡಗೆಯ ಹಳ್ಳಿಯಾರ್ಯನುಂ ಜೋಲಿಯಾ ಬಸವೇಶ್ವರಂ ರಾಚವಟ್ಟಿಕೋರಯಸಿದ್ಧ
ಬಸವೇಶ್ವರಂ ಹಿರಣ್ಯಾರ್ಯನಾಶಿವಪೂಜೆಯಾರ್ಯನೆಂದನಿಪ ಬೋಳು
ಬಸವೇಶನಂದುಕಿತ್ತಾವರದೆನಿಂದಾರಾ । ಜಿಸುವ ಚನ್ನಮಲ್ಲೇಶ್ವರಾದಿ ಪರಿಪರಿಯಲ್ಲಿ
ಪೆಸರ್ವಡೆದ ವಿರತರೇಳ್ನೂರ್ವರಾ ತೋಂಟದಯತೀಶನಂ ಕೂಡಿರ್ದರು ॥೪೯॥

– ಈ ಪಟ್ಟಿಯಲ್ಲಿ ಅನೇಕ ಪಟ್ಟಾಧ್ಯಕ್ಷ ಸ್ವಾಮಿಗಳವರ ಪರಂಪರೆಯೂ ಇದೆ. ಅನೇಕ ಪಟ್ಟಾಧ್ಯಕ್ಷ ಪರಂಪರೆಯವರು, ವಿರಕ್ತರು, ಶರಣ ಸಂತತಿಯವರು ಸಿದ್ಧಲಿಂಗೇಶ್ವರರ ಅನುಗ್ರಹ ಪಡೆದವರೇ ಆಗಿದ್ದಾರೆ. ಇದರಿಂದ ಜಂಗಮದ ಸ್ಥಾನಮಾನದ ಕಲ್ಪನೆಯೂ ಆಗುತ್ತದೆ. ಸುತ್ತೂರು ಮಹಾಮಠದ ಘನಲಿಂಗಿ ದೇವರು ತೋಂಟದ ಸಿದ್ಧಲಿಂಗೇಶ್ವರರಿಂದ ಅನುಗ್ರಹ ಪಡೆದವರೇ ಆಗಿದ್ದಾರೆ. ಇವರದು ಪಟ್ಟಾಧ್ಯಕ್ಷರ ಪೀಠ. ಇಲ್ಲಿ ಬಂದಿರುವ ದೊಡ್ಡ ಸಿದ್ಧೇಶ್ವರರೇ ವಚನಕಾರರಾದ ಸ್ವತಂತ್ರ ಸಿದ್ಧಲಿಂಗೇಶ್ವರರೆಂದು ಡಾ. ಮಲ್ಲೆದೇವರು ತಾವು ಸಂಪಾದಿಸಿದ 'ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು' ಗ್ರಂಥದ ಪ್ರಸ್ತಾವನೆಯಲ್ಲಿ ನಿರ್ಧರಿಸಿದ್ದಾರೆ. (ಪೀಠಿಕೆ ಪು. ೮ ನೋಡಿ)

28 ಚೆ. ಬ. ಪು. ಕಾ. ೫, ಸಂ. ೧೦, ಪದ್ಯ ೫೧ ರಿಂದ ಮುಂದೆ.

29 ಇಸಳೂರು ಈಗ ಕಾರವಾರ ಜಿಲ್ಲಾ ಸಿರ್ಸಿ ತಾಲ್ಲೂಕಿನಲ್ಲಿದೆ. ಇಲ್ಲಿ ತೋಂಟದ ಸಿದ್ಧಲಿಂಗೇಶ್ವರರ ಪರಂಪರೆಯ ನೋಡ ಸಿದ್ಧಲಿಂಗ ಸ್ವಾಮಿಗಳವರ ಗದ್ದುಗೆ ಇದೆ. ಇವರು ತಿಳವಳ್ಳಿಯಲ್ಲಿ ಲಿಂಗೈಕ್ಯರಾದ ತೋಂಟದ ಸಿದ್ಧಲಿಂಗಸ್ವಾಮಿಗಳ ಪರಂಪರೆಯ ಸಿದ್ಧವೀರಸ್ವಾಮಿಗಳವರ ಶಿಷ್ಯರು. ಇವರಿಂದಲೇ ಮುಂದೆ ಮುರಿಗೆ ಸಮಯ, ಕುಮಾರ ಸಮಯ, ಕೆಂಪಿನಸಮಯ ಭೇದಗಳು ಉಂಟಾದವೆಂದು ನಿ.ವಂ. ರತ್ನಾಕರ ಗ್ರಂಥದಿಂದ ತಿಳಿದುಬರುವುದು.

30 ಈ ವರದಾ ನದಿಯ ದಂಡೆಯಲ್ಲಿ ಕದಂಬರ ಸುಪ್ರಸಿದ್ಧ ರಾಜಧಾನಿಯಾದ ಬನವಾಸಿ ಇದೆ. ಧರ್ಮಾನದಿಯ ದಂಡೆಯ ಮೇಲೆ ಕದಂಬರ ಇನ್ನೊಂದು ಶಾಖೆಯ ರಾಜಧಾನಿಯಾದ ಪುರಾಣ ಪ್ರಸಿದ್ಧ ರಾಜಧಾನಿಯಾದ ಪುರಾಣ ಪ್ರಸಿದ್ಧ ಹಾನಗಲ್ಲು ಇದೆ.

31 ಮುದಿ ಸಂಗಪ್ಪ, ಮುಸೆಂಗಪ್ಪ- ಈ ಹೆಸರಿನಿಂದ ಜನ ಈ ಗುಡಿಯಲ್ಲಿರುವ ವಿಗ್ರಹವನ್ನು ಕರೆಯುತ್ತಿದ್ದಾರೆ.

32 ಈ ಮಾರನ ಬೀಡು ಕೂಡಲದಿಂದ ಸುಮಾರು ೪ ಮೈಲು ದೂರದಲ್ಲಿದೆ. (ಹಾನಗಲ್ಲು ತಾಲ್ಲೂಕು)

33 ಈ ಅಡವಿಸ್ವಾಮಿಗಳನ್ನು ಕೆಲವರು ಅಂಕಲಗಿಯಿಂದ ಬಂದವರು ಎಂದು ತಪ್ಪುಗ್ರಹಿಕೆಯಿಂದ ಹೇಳುತ್ತಿದ್ದಾರೆ. ಅಂಕಲಗಿ ಅಡವಿಸ್ವಾಮಿಗಳೇ ಬೇರೆ; ಇವರೇ ಬೇರೆ. ಅಂಕಲಗಿ ಅಡವಿಸ್ವಾಮಿಗಳು ಕ್ರಿ.ಶ ೧೮೫೭ರ ಹೊತ್ತಿಗೆ ಲಿಂಗೈಕ್ಯರಾಗಿ ಹೋದ ಬಗೆಗೆ ಐತಿಹ್ಯವುಂಟು. ಇವರಾದರೋ ೧೯೦೧ರಲ್ಲಿ ಲಿಂಗೈಕ್ಯರಾದವರು. ಈಗ ಇವರ ಮೂಲವಾದ ಧಾರವಾಡ ಜಿಲ್ಲಾ ಹಾನಗಲ್ ತಾಲ್ಲೂಕು ಕೂಡಲ ಗ್ರಾಮದಲ್ಲಿರುವ ವಿರಕ್ತ ಮಠದಸ್ವಾಮಿಗಳು, ಇವರ ಚರಿತ್ರೆಯ ಸಂಗ್ರಹ ಮತ್ತು ಇವರು ಅಲ್ಲಲ್ಲಿ ಬಿಟ್ಟುಹೋಗಿರುವ ಸಾಮಗ್ರಿಗಳ ಸಂಗ್ರಹದ ಪ್ರಯತ್ನದಲ್ಲಿ ತೊಡಗಿದ್ದಾರೆ. ಕೂಡಲದ ವೃದ್ಧ ಜನರನೇಕರು ಇವರ ಬಗೆಗೆ ಅನೇಕ ಕಥೆಗಳನ್ನು ಹೇಳುವವರು ಈಗಲೂ ಇದ್ದಾರೆ.

34 ಈ ನಾಗನೂರು ಕೂಡಲದಿಂದ ಒಂದೂವರೆ ಮೈಲು ದೂರದಲ್ಲಿ ಅದೇ ವರದಾಹೊಳೆಯ ದಂಡೆಯಲ್ಲಿದೆ.

35 ಈಗ ಅಡವೀ ಸ್ವಾಮಿಗಳ ಮಠವಿರುವ ಕಡೆ ಒಂದು ಚಿಕ್ಕ ಮಂಟಪವಿತ್ತೆಂದೂ ಅದೇ ಮಂಟಪದಲ್ಲಿ ಪ್ರಥಮತಃ ಬಂದು ಅಡವೀ ಸ್ವಾಮಿಗಳು ತಂಗಿದ್ದರೆಂದೂ ನೋಡಿದ ಅನೇಕ ವೃದ್ಧರು ಹೇಳುತ್ತಿದ್ದರು.

36 ಈಗಿನ ಮ್ಯ... ಗಾ ಮಕ್ಕಿ ಮತಕಪುರ, ಮತುಕೂರು-ಇತ್ಯಾದಿ ಹೆಸರುಗಳುಂಟು. ಇದು ಸಿದ್ಧಗಂಗೆಗೆ ೪-೫ ಮೈಲು ದೂರದಲ್ಲಿದೆ. ಆ ಊರಿನಲ್ಲಿ ಪುರಾತನವಾದ ಸೋಮೇಶ್ವರ ದೇವಾಲಯವಿದೆ. ಅಲ್ಲಿ ಮಹಾಪಂಡಿತರೂ, ಉಪಾಧ್ಯಾಯ ವೃತ್ತಿಯಲ್ಲಿ ಪ್ರಥಮತಃ ಇದ್ದು ಶಿವಯೋಗ ಮಾರ್ಗದಲ್ಲಿ

ಅಭಿಲಾಷೆಯುಳ್ಳವರೂ ಆಗಿದ್ದ ನಂಜುಂಡ ಶಿವಯೋಗಿ ಎಂಬ ಹೆಸರಿನ ಗೃಹಸ್ಥರಿದ್ದರು. ಅವರನ್ನು 'ಮತುಕೂರು ನಂಜುಂಡ ಶಿವಯೋಗಿ' ಎಂದು ಕರೆಯಲಾಗುತ್ತಿದೆ. ಅವರು ತಮ್ಮ 'ಅಟವೀಶ್ವರ ಗುರುಭಕ್ತಿಸಾರ'ವೆಂಬ ಗ್ರಂಥದಲ್ಲಿ 'ಶ್ರೀಮತ್ಕರ್ಣಾಟಮಂಡಲ ಮಂಡನಾಯಮಾನ ಮತಕಪುರಾಧೀಶ ಶ್ರೀ ಸೋಮೇಶ ವರಪ್ರಸಾದಲಬ್ಧ ಕವಿತಾವಿಶಾರದರಾದ ಶಿವಕವಿ ನಂಜುಂಡ ಶಿವಯೋಗಿ' ಎಂದು ಹೇಳಿಕೊಂಡಿದ್ದಾರೆ. ಇವರು ಕ್ರಿ.ಶ. ೧೮೪೨ರಲ್ಲಿ ಜನಿಸರಬಹುದೆಂದು ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ತರ್ಕಿಸಿದ್ದಾರೆ. (ಸಮರ್ಪಣೆ ಗ್ರಂಥದ ಲೇಖನ ಪು. ೧೧೪) ಸುಮಾರು ೯೬ ವರ್ಷಗಳ ಕಾಲ ಜೀವಿಸಿದ್ದು ಬೆಂಗಳೂರಿನ ಸಮೀಪದ ಹುಸ್ಕೂರು ಗ್ರಾಮದಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆ ಹುಸ್ಕೂರಿನಲ್ಲಿ ಈಗಲೂ ಇದೆ.

37 ಸಮರ್ಪಣೆ ಪದ್ಮಶ್ರೀ. ಬಿ. ಶಿವಮೂರ್ತಿಶಾಸ್ತ್ರೀ. ಪು. ೧೧೬

38 ಈ ಗ್ರಂಥ ೧೮೯೪ರಲ್ಲಿ ಬೆಂಗಳೂರಿನಲ್ಲಿ ಮುದ್ರಣವಾಗಿದೆ.

39 ಶಿವಾನುಭವ: ಸಂ. ಫ. ಗು. ಹಳಕಟ್ಟಿ; ಸಂ. ೩ ಸಂ. ೧೧. ಪುಟ. ೧ (೧೯೨೮) .(ಅಟವೀಶ್ವರರ ಗೀತಾಮಂಜರಿ ಶಿವಯೋಗಿಗಳು ಸಿದ್ಧಗಂಗೆಯಲ್ಲಿದ್ದಾಗಲೇ ರಚಿತವಾಗಿರಬಹುದು. ಆದರೆ ಉಳಿದ ಗ್ರಂಥಗಳು ತುಮಕೂರಿನಲ್ಲಿದ್ದಾಗ ರಚಿತವಾದವೋ ಅಥವಾ ಸಿದ್ಧಗಂಗೆಯಲ್ಲಿದ್ದಾಗ ರಚಿತವಾದುವೋ ಗೊತ್ತಿಲ್ಲ. ಅಂತೂ ಅವೆಲ್ಲ ಪ್ರಕಾಶಕ್ಕೆ ಬಂದುದು ಶ್ರೀ ಸಿದ್ಧಗಂಗೆಯಲ್ಲಿ ಅವರು ಇದ್ದಾಗಲೇ ಎಂಬುದು ತರ್ಕಿಸಬೇಕಾದ ವಿಷಯ).

40 'ಇವರು ಬರೆದ ಚಿತ್ರಗಳು ತುಮಕೂರಿನ ಹಾಲಪ್ಪನವರ ಕರಿಬಸಪ್ಪನವರ ಮನೆ, ಇನ್ನೂ ಹಲವು ಶ್ರೀಮಂತರ ಮನೆಗಳನ್ನು ಅಲಂಕರಿಸಿವೆ. ಅವರ ಮನೆಗಳಲ್ಲಿ (೧) ಸರ್ವಸಿದ್ಧಿ ಗಣಪತಿ, (೨) ಚಂದ್ರಶೇಖರಮೂರ್ತಿ (೩) ಗಿರಿಜಾಕಲ್ಯಾಣ ವೈಭವ (೪) ಉಮಾಮಹೇಶ್ವರ ಮೂರ್ತಿ (೫) ನಂದಿವಾಹನ ಮೂರ್ತಿ (೬) ಅಂಧಕಾಸುರ ಸಂಹಾರ-ಎಂಬ ಚಿತ್ರಗಳು ಕಂಗೊಳಿಸುತ್ತಿವೆ.' – ಪದ್ಮಶ್ರೀ. ಬಿ. ಶಿವಮೂರ್ತಿಶಾಸ್ತ್ರೀ, ಸಮರ್ಪಣೆ ಗ್ರಂಥ. ಪು. ೧೧೬

41 ಕ್ರಿ. ಶ. ೧೮೬೮ರಲ್ಲಿ ಸಾವಂದಪ್ಪ-ಗಂಗಮ್ಮ ಎಂಬ ದಂಪತಿಗಳ ಗರ್ಭದಿಂದುಸಿದ ವೀರಪ್ಪ ಶಾಸ್ತ್ರಿಗಳು ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿಕೊಂಡು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಸಿದ್ಧಗಂಗೆಗೆ ಬಂದು ಸೇರಿದರು. ಅಟವೀಶ್ವರರ ಕೃಪೆಗೆ ಪಾತ್ರರಾದರು. ಇವರು ರಾಘವಾಂಕ ಕಾವ್ಯವನ್ನು ಸಂಪಾದಿಸಿ ೧೯೦೪ ರಲ್ಲಿ ಪ್ರಕಟಿಸಿದರು. ಅಷ್ಟಾವರಣವಿವೇಕ, ಸಿದ್ಧಲಿಂಗೇಶ್ವರಶತಕ (೧೦೧ ಪದ್ಯಗಳು) ಸಿದ್ಧಲಿಂಗೇಶ್ವರ ಸ್ತೋತ್ರ (ಸಂಸ್ಕೃತ ೧೦೮ ಶ್ಲೋಕಗಳು), ಕೋಳೂರು ಕೊಡಗೂಸಿನ ಕಥೆ, ವೇಮನಾರಾಧ್ಯನ ಕಥೆ, ಜಯದೇವ ಭಜಕಾನಂದಿನಿ, ಗುರು ಭಜನ, ಶಿವಗೀತೆ, ಶಿವಾಕ್ಷ, ಬಿಜ್ಜವ್ವೆಯ ಕಥೆ,-ಈ ಗ್ರಂಥಗಳನನು ಬರೆದುದಲ್ಲದೆ, ೧೯೨೩ರಲ್ಲಿ 'ವೀರಶೈವ ಧರ್ಮಸಂಗ್ರಹ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. (೧೯೦೬-೧೯೦೭ರಲ್ಲಿ ವೀರಶೈವಾಮೃತ ಪುರಾಣವನ್ನು ಪ್ರಕಟಿಸಿದ್ದಾರೆ. ಸಂ.) – ಶಿವಾನುಭವ; ಫ.ಗು. ಹಳಕಟ್ಟಿ, ಸಂ ೧೦, ಸಂ ೬; ೧೯೩೬

42 ಪದ್ಮಶ್ರೀ ಬಿ. ಶಿ. ಶಾಸ್ತ್ರೀ: ಗುಬ್ಬಿ ಚೆನ್ನಬಸವೇಶ್ವರ ಸುಪ್ರಭಾತ; ಪು. ೧೮-೧೯.

43 ವಾಸ್ತವಾಂಶವೆಂದರೆ ಆಗಿನ ಮಠದ ಪರಿಸ್ಥಿತಿ ತೀರಾ ದುರ್ಬಲಗೊಂಡಿತ್ತು. ಇದನ್ನು ಕಂಡು ಮಠಕ್ಕೆ ಇದ್ದ ಸಿದ್ಧಗಂಗಾಪಾಳ್ಯ, ಬೊಮ್ಮನಹಳ್ಳಿ-ಎಂಬೆರಡು ಗ್ರಾಮಗಳ ಇನಾಮತಿಯನ್ನೂ ಸರಕಾರದವರು ಕಿತ್ತುಕೊಂಡಿದ್ದರು.

ಗೋಸಲಪೀಠ ಪರಂಪರೆಯ ಸಾಹಿತ್ಯ

ಡಾ|| ಬಿ.ಆರ್.ಹಿರೇಮಠ

ಕಲ್ಯಾಣಕ್ರಾಂತಿಯ ತರುವಾಯ ನಾಡಿನ ಒಳ-ಹೊರಗೆಲ್ಲ ಚದುರಿಹೋದ ವಚನಗಳನ್ನು ಶೋಧಿಸುವ, ಸಂಗ್ರಹಿಸುವ, ಓದುವ, ಅರ್ಥೈಸುವ, ಬೋಧಿಸುವ, ಸಂಕಲಿಸುವ ಹಾಗೂ ವ್ಯಾಖ್ಯಾನಿಸುವ ಕಾರ್ಯಗಳು ಪವನವೇಗದಲ್ಲಿ ನಡೆದುದು ಹದಿನೈದು-ಹದಿನಾರನೆಯ ಶತಮಾನದ ನೂರೊಂದು ಮತ್ತು ಏಳುನೂರೊಂದು ವಿರಕ್ತರ ಕಾಲದಲ್ಲಿ. ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಕಲ್ಲುಮಠದ ಪ್ರಭುದೇವನ ಲಿಂಗಲೀಲಾವಿಲಾಸಚಾರಿತ್ರ, ಮಹಾಲಿಂಗದೇವನ ಏಕೋತ್ತರ ಶತಸ್ಥಲಗಳು ಇಂಥ ಕ್ರಿಯಾಶೀಲ ಪ್ರಯತ್ನದ ಫಲಗಳಾಗಿರುತ್ತವೆ. ಈ ಯುಗದ ವೀರಶೈವರು ವಚನಗಳ ಮಥನದಿಂದ ತಾತ್ವಿಕ ಸೌಂದರ್ಯವನ್ನು ಸಾಕ್ಷಾತ್ಕಾರ ಮಾಡಿಸಿಕೊಟ್ಟರು. ಹೀಗೆ ಹದಿನೈದನೆಯ ಶತಮಾನದಲ್ಲಿಯೂ ವೀರಶೈವ ವಚನ ಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನ, ವ್ಯಾಖ್ಯಾನ ಚಟುವಟಿಕೆಗಳು ಭರದಿಂದ ನಡೆದುದು ವಿದಿತವಾಗುತ್ತದೆ.

ಏಳುನೂರೊಂದು ವಿರಕ್ತ ಸಮೂಹದ ನಾಯಕ ವ್ಯಕ್ತಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು, ಹದಿನಾರನೆಯ ಶತಮಾನದಲ್ಲಿ ಅವತಾರವೆತ್ತಿದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ವೀರಶೈವ ಧರ್ಮ, ಸಮಾಜ, ಸಾಹಿತ್ಯ, ಸಂಸ್ಕೃತಿಗಳ ಸಂವರ್ಧಕರಾಗಿ ಶಿಖರಸದೃಶ ಕಾರ್ಯ ಮಾಡಿದರು. ಈ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಗೋಸಲಪೀಠ ಪರಂಪರೆಯವರು. ಗೋಸಲ ನಿರಂಜನಪೀಠದ ಷಟ್‌ಸ್ಥಲ ಚಕ್ರವರ್ತಿ ಚನ್ನಬಸವ ಶಿವಯೋಗಿಗಳ ಶಿಷ್ಯರಾದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಪ್ರಭುವಿನಂತೆ ನಿರಂಜನಮೂರ್ತಿಯಾಗಿ, ಬಸವಣ್ಣನಂತೆ ವೀರಶೈವ ಧರ್ಮ ಸಂಘಟಕರಾಗಿ, ಚೆನ್ನಬಸವಣ್ಣನವರಂತೆ ತತ್ವವೇತ್ತರಾಗಿ ಬಾಳಿದರು. ಗೋಸಲಪೀಠ ಪರಂಪರೆಯ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ-ಪ್ರಶಿಷ್ಯ ಪರಂಪರೆ ನಾಡಿನಲ್ಲಿ ಹಂದರದ ಬಳ್ಳಿಯಂತೆ ಹಬ್ಬಿಕೊಂಡಿದೆ. ಈ ಶಿಷ್ಯ-ಪ್ರಶಿಷ್ಯ ಸಂತಾನದವರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಭಾವಲಯದಲ್ಲಿ ಬೆಳಗುವ ಅನಂತ ಸಾಹಿತ್ಯಜ್ಯೋತಿಗಳಾಗಿದ್ದಾರೆ. ಗೋಸಲಪೀಠ ಪರಂಪರೆಯ ಈ ಶಿವಯೋಗಿಸೂರ್ಯ ಹಾಗೂ ಶಿಷ್ಯ-ಪ್ರಶಿಷ್ಯರು ಸಾಹಿತ್ಯದ ಮೂಲಕ ಕನ್ನಡಿಗರ, ಅದರಲ್ಲಿಯೂ ವೀರಶೈವರ ಬದುಕನ್ನು ತಿದ್ದಿದ್ದಾರೆ; ಭಾವನೆಗಳನ್ನು ಅರಳಿಸಿದ್ದಾರೆ. ಹೀಗೆ ಗೋಸಲಪೀಠ ವರ್ಂಪರೆಯವರ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಗೌರವಾನ್ವಿತ ಸ್ಥಾನವಿದೆ. ಸಾಹಿತ್ಯ ಮಹಾಂತರೆನಿಸಿದ ಇವರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ನೀಡಿದ ಕೊಡುಗೆ ವಿಪುಲವೂ ವೈವಿಧ್ಯಪೂರ್ಣವೂ ಆದುದಾಗಿದೆ. ಈ ಗೋಸಲ ಪೀಠ ಪರಂಪರೆಯ ಸಾಹಿತ್ಯವನ್ನು ಸೃಜನಸಾಹಿತ್ಯ, ಸಂಕಲನಸಾಹಿತ್ಯ, ಸಂಪಾದನಸಾಹಿತ್ಯ, ಸಂಗ್ರಹಸಾಹಿತ್ಯ, ವ್ಯಾಖ್ಯಾನಸಾಹಿತ್ಯವೆಂದು ಗುರುತಿಸಿ, ಹೀಗೆ ವಿವರಿಸಬಹುದು :

ಸೃಜನಸಾಹಿತ್ಯ : ಗೋಸಲಪೀಠ ಪರಂಪರೆಯವರ ಈ ವೀರಶೈವ ಸೃಜನಸಾಹಿತ್ಯ ಮೂರು ರೀತಿಯದ್ದಾಗಿರುತ್ತದೆ: ೧. ವಚನಸಾಹಿತ್ಯ, ೨. ಸ್ವರವಚನ ಸಾಹಿತ್ಯ ಹಾಗೂ ೩. ಕಾವ್ಯಸಾಹಿತ್ಯ.

೧. ವಚನಸಾಹಿತ್ಯ: ಹನ್ನೆರಡನೆಯ ಶತಮಾನದ ತರುವಾಯ ವಚನಸೃಷ್ಟಿ ಕಾರ್ಯ ಜರುಗಿದುದು ಹದಿನಾರನೆಯ ಶತಮಾ. ನಲ್ಲಿ. ಈ ಯುಗದಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿ, ಗುಮ್ಮಳಾಪುರದ ಸಿದ್ಧಲಿಂಗದೇವ, ಸ್ವತಂತ್ರ ಸಿದ್ಧಲಿಂಗೇಶ್ವರ, ಘನಲಿಂಗದೇವ, ಮುರಿಗಾ ಶಾಂತವೀರಸ್ವಾಮಿ, ಇಮ್ಮಡಿ ಮುರಿಗಾ ಗುರುಸಿದ್ಧದೇವ, ಹಾಗಲವಾಡಿ ಮುದ್ವೀರಸ್ವಾಮಿಗಳು ಸ್ವತಂತ್ರ ವಚನಗಳನ್ನು ರಚಿಸಿದ್ದಾರೆ.

ಏಳುನೂರೊಂದು ವಿರಕ್ತರ ದ್ಯೋತಕವೆಂಬಂತೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ 'ಷಟ್‌ಸ್ಥಲ ಜ್ಞಾನ ಸಾರಾಮೃತ' ದಲ್ಲಿ 'ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ' ಅಂಕಿತದ ೭೦೧ ವಚನಗಳಿದ್ದು, ೧೫+೬ ಸ್ಥಲಗಳಿರುತ್ತವೆ. ವೀರಶೈವ ತತ್ವಪ್ರತಿಪಾದನೆಯೇ ಇಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಆದ್ದರಿಂದ ಇಲ್ಲಿ ತಾತ್ವಿಕ ವಚನಗಳ ಸಂಖ್ಯೆ ಅಧಿಕವಾಗಿರುತ್ತದೆ. ಸ್ವತಂತ್ರ ಸಿದ್ಧಲಿಂಗೇಶ್ವರರು 'ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ' ಅಂಕಿತದಲ್ಲಿ ೪೩೦ವಚನ ರಚಿಸಿದ್ದಾರೆ. "ಮುಕ್ತ್ಯಂಗನೆಯ ಕಂಠಮಾಲೆ" ಇವರ ಇನ್ನೊಂದು ವಚನಕೃತಿ. ಈ ಎರಡೂ ವಚನಕೃತಿಗಳು ವೀರಶೈವ

ಸಿದ್ಧಾಂತವನ್ನು ಬೋಧಿಸುತ್ತವೆ. ಗುಮ್ಮಳಾಪುರದ ಸಿದ್ಧಲಿಂಗದೇವರು 'ಬೋಳಬಸವೇಶ್ವರಾ ನಿಮ್ಮ ಧರ್ಮ, ನಿಮ್ಮ ಧರ್ಮ' ಅಂಕಿತದಲ್ಲಿ ೧೮ ವಚನಗಳನ್ನು ಬರೆದಿದ್ದು ಇವು 'ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ' ಹೆಸರಿನಲ್ಲಿ ಲಭಿಸುತ್ತವೆ. ಇಮ್ಮಡಿ ಮುರಿಗಾ ಗುರುಸಿದ್ಧರ ೨೦೮ ವಚನಗಳು 'ಶಿವಲಿಂಗೇಶ್ವರ' ಅಂಕಿತದಲ್ಲಿರುತ್ತವೆ. ಘನಲಿಂಗಿದೇವನ ಅರವತ್ತುಮೂರು ವಚನಗಳು'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಅಂಕಿತದಲ್ಲಿರುತ್ತವೆ. ಇದರಂತೆ ಮುರಿಗಾ ಶಾಂತವೀರ, ಹಾಗಲವಾಡಿ ಮುದ್ವೀರಸ್ವಾಮಿಗಳ ವಚನಗಳೂ ಇರುವುದಾಗಿ ತಿಳಿದುಬರುತ್ತದೆ. ಈ ಎಲ್ಲ ವಚನಕಾರರ ವಚನಗಳು ಹೆಚ್ಚಾಗಿ ತಾತ್ವಿಕರೂಪದವುಗಳಾಗಿರುತ್ತವೆ. ಈ ವಚನಗಳಲ್ಲಿ ವೀರಶೈವ ತತ್ವದ ಪುನರ್ ರಚನೆಯ ಪ್ರಯತ್ನವನ್ನು ನಾವು ಕಾಣುತ್ತೇವೆ. ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ, ಅಕ್ಕ ಮಹಾದೇವಿ ಮೊದಲಾದ ವಚನಕಾರರ ವಚನಗಳ ತಲಸ್ಪರ್ಶಿಯಾದ ಅಧ್ಯಯನ ನಡೆಸಿದಂತೆ, ಗೋಸಲಪೀಠಪರಂಪರೆಯ ವಚನಕಾರರ ವಚನಗಳ ಅಧ್ಯಯನ ತಲಸ್ಪರ್ಶಿಯಾಗಿ, ಸರ್ವಸಮಗ್ರವಾಗಿ, ವೈವಿಧ್ಯಪೂರ್ಣವಾಗಿ (ಒಂದೆರಡು ಪ್ರಯತ್ನ ಬಿಟ್ಟರೆ) ಇನ್ನೂ ನಡೆದಿಲ್ಲವೆಂದೇ ಹೇಳಬೇಕು.

೨. ಸ್ವರವಚನ ಸಾಹಿತ್ಯ : ರಾಗ, ತಾಳಗಳ ನಿರ್ದೇಶನವಿರುವ ಸ್ವರವಚನಗಳನ್ನು ಹಾಡುತ್ತಿದ್ದರು. ಹನ್ನೆರಡನೆಯ ಶತಮಾನದ ವಚನಕಾರರೂ ಈ ಸ್ವರವಚನಗಳನ್ನು ಬರೆದಿದ್ದಾರೆ. ಗೋಸಲಪೀಠ ಪರಂಪರೆಯಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧದೇವ (೨೧೮ ಸ್ವರವಚನ), ಜಿಗುನಿ ಮರುಳದೇವ (೧೫೬ ಸ್ವರವಚನ) ಹಾಗೂ ಹಾಗಲವಾಡಿ ಮುದ್ವೀರಸ್ವಾಮಿ (೧೦೭ ಸ್ವರವಚನ)ಯವರು ಸ್ವರವಚನಸಾಹಿತ್ಯ ಸೃಷ್ಟಿಸಿ, ಈ ಮೂಲಕ ವೀರಶೈವತತ್ವಗಳನ್ನು ತಿಳಿಯಪಡಿಸಿದ್ದಾರೆ.

೩. ಕಾವ್ಯಸಾಹಿತ್ಯ : ಕಾವ್ಯಸಾಹಿತ್ಯದಲ್ಲಿ ಶ್ರವ್ಯಕಾವ್ಯ, ದೃಶ್ಯಕಾವ್ಯವೆಂದು ಮತ್ತೆ ಎರಡು ಪ್ರಕಾರಗಳನ್ನು ಮಾಡಿಕೊಳ್ಳಬಹುದು. ಶ್ರವ್ಯಕಾವ್ಯ ಪರಂಪರೆಯಲ್ಲಿ ವೀರಶೈವಸಾಹಿತ್ಯದ ಹಿರಿಯ ಪ್ರಕಾರಗಳನ್ನೂ ಕಿರಿಯ ಪ್ರಕಾರಗಳನ್ನೂ ಕಾಣುತ್ತೇವೆ. ಕ್ಷೇತ್ರಜ್ಞ ಸುಮನೋವಾದಂ (ಗೋಸಲ ಚೆನ್ನಬಸವ), ಹಾಲಾಸ್ಯಪುರಾಣ-ಸ್ಕಂದಕಲ್ಯಾಣ-ಶಿವರಹಸ್ಯ-ಪಂಚಾಶಿಕೆ (ಇಮ್ಮಡಿ ಮುರಿಗಾ ಗುರುಸಿದ್ಧದೇವ), ಹಮ್ಮೀರಕಾವ್ಯ (ಮುರಿಗಾ ಶಾಂತವೀರ), ಪ್ರಭುದೇವರ ಪುರಾಣ (ಎಳಂದೂರ ಹರೀಶ್ವರ), ಚತುರಾಚಾರ್ಯ ಪುರಾಣ (ಸಂಪಾದನೆಯ ಪರ್ವತೇಶ) ಸಿದ್ಧೇಶ್ವರ ಪುರಾಣ-ಪಾಲ್ಕುರಿಕೆಸೋಮೇಶ್ವರ ಪುರಾಣ-ಚಿದಾನಂದ ಸಿಂಧು (ವಿರತ ತೋಂಟದಾರ್ಯ) ಮೊದಲಾದ ಹಿರಿಯ ಪ್ರಕಾರದ ಪುರಾಣ-ಕಾವ್ಯಗಳನ್ನೂ ಕೀರ್ತಿಶತಕ- ಶಿವಕಾರುಣ್ಯಾಹ್ವಾನ ಶತಕ-ಶಿವಲಿಂಗ ವಿಕಳತೆ ಸನ್ನಿದರ್ಶನ ಅರ್ಚನ ಪೂಜನಶತಕ (ಗುರುನಂಜ), ಹೋಳಿಹಾಡು- ಶಿವಲಿಂಗನಾಂದ್ಯ-ಶಿವಲಿಂಗ ಮಹಿಮಾಷಟ್ಪದಿ-ಮಿಶ್ರಾರ್ಪಣ-ಯೋಗಕಲಾಪ ಸಾರ-ಶಿವಮತ ಪ್ರತಷ್ಠಾಪನ-ಪರಮತ ಖಂಡನ ವಾರ್ಧಿಕ-ಕೊರವಂಜಿ ಕಟ್ಟಳೆ (ಇಮ್ಮಡಿ ಮುರಿಗಾ ಗುರುಸಿದ್ಧ ದೇವ), ಪ್ರಭುಲಿಂಗದ ಕಂದ-ಮುರಿಗೆಸ್ವಾಮಿಗಳು ನಿರೂಪಿಸಿದ ನಾಂದ್ಯ-ಶಬ್ದರತ್ನಾಕರ-ಷಡ್ವಕ್ತ್ರ ಸ್ತೋತ್ರ-ಏಕೋನ ವಿಂಶತಿಪದ-ನೀಲಾಂಬಿಕಾ ಲಲಿತ ಪಂಚವಿಂಶತಿ-ಪಾರಿಜಾತ-ಲಿಂಗದ ಮಹಿಮೆ-ಮುರಿಗೆಸ್ವಾಮಿಗಳ ಮುಕ್ತಿಪ್ರದೀಪಿಕೆ-ಮುರಿಗೆಸ್ವಾಮಿಗಳ ಸಮಾಧಿಕ್ರಿಯೆ-ಲಿಂಗಸಾವಧಾನ ಪ್ರಣವ ಸಂಬಂಧಿ ಸಮಾಧಿಕ್ರಿಯಾದ ಉದ್ಧರಣೆ (ಮುರಿಗಾ ಶಾಂತವೀರ ಸ್ವಾಮಿಗಳು), ಮರುಳದೇವರಕಂದ (ಜಿಗುನಿ ಮರುಳದೇವ), ಕರ್ನಾಟಕ ಶಬ್ದಮಂಜರಿ-ಶೈವಸಂಜೀವಿನಿ-ಸರ್ವಮಂಗಳೆ ಶತಕ (ವಿರತ ತೋಂಟದಾರ್ಯ), ಜಂಗಮ ರಗಳೆ (ಸ್ವತಂತ್ರ ಸಿದ್ಧಲಿಂಗೇಶ್ವರ), ಕಟ್ಟಿಗೆಯ ತಾರಾವಳಿ (ಮುರಿಗಾ ಶಾಂತವೀರರು) ಶಿವಗಣ ಸಹಸ್ರ ತಾರಾವಳಿ (ಜ್ವಲಕಂಠ ಮಹಾಂತಸ್ವಾಮಿ) ಮುಂತಾದ ಕಿರಿಯ ಪ್ರಕಾರದ ಸಾಹಿತ್ಯಕೃತಿಗಳನ್ನೂ ಗೋಸಲಪೀಠ ಪರಂಪರೆಯವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ.

ದೃಶ್ಯಕಾವ್ಯಸಾಹಿತ್ಯದಲ್ಲಿ ಬಿಜ್ಜಮಹಾದೇವಿಚರಿತೆ (ಇಮ್ಮಡಿ ಮುರಿಗಾ ಗುರುಸಿದ್ಧರು), ಮಡಿವಾಳಯ್ಯನ ಚರಿತೆ (ಕಟ್ಟಿಗೆಹಳ್ಳಿ ಸಿದ್ಧಲಿಂಗ)ಯಂಥ ಯಕ್ಷಗಾನ ಕೃತಿಗಳು ಆಕಾರ ಪಡೆದಿರುತ್ತವೆ. ಹೀಗೆ ಗೋಸಲಪೀಠ ಪರಂಪರೆಯವರ ಸೃಜನಸಾಹಿತ್ಯ ಗಾತ್ರ, ಸತ್ವ ಮತ್ತು ಸಂಖ್ಯೆಗಳ ದೃಷ್ಟಿಯಿಂದ ಅತ್ಯಂತ ಮೌಲಿಕವಾದುದಾಗಿದೆ. ವೀರಶೈವ ಧರ್ಮ-ತತ್ವಗಳ ಪ್ರಸಾರಕ್ಕಾಗಿ ಇವರು ವೀರಶೈವ ಲಘುಸಾಹಿತ್ಯ ಪ್ರಕಾರಗಳನ್ನೇ ವಿಶೇಷವಾಗಿ ಬಳಸಿರುವುದು ಒಂದು ವೈಶಿಷ್ಟ್ಯವಾಗಿದೆ.

ಸಂಕಲನ ಸಾಹಿತ್ಯ : ಕಲ್ಯಾಣ ಕ್ರಾಂತಿಯ ಕಾರಣದಿಂದ ಹತ್ತಾರು ದಿಕ್ಕಿನಲ್ಲಿ ಹರಿದು ಹಂಚಿಹೋದ ವಚನ ಸಾಹಿತ್ಯವನ್ನು ಸಂಗ್ರಹಿಸುವ, ಸಂಗ್ರಹಿಸಿದ ವಚನಗಳನ್ನು ಒಂದು ತತ್ವ ಅಥವಾ ಒಂದು ದೃಷ್ಟಿಕೋನ (ವಿಷಯ)ದ ಹಿನ್ನೆಲೆಯಲ್ಲಿ ಸಂಕಲಿಸುವ ಕಾರ್ಯಗಳು ತೀವ್ರವಾಗಿ, ಗಂಭೀರವಾಗಿ ಸಾಗಿಬಂದವು. ಸರಿಯಾದ, ಭದ್ರವಾದ ನೆಲೆಗಟ್ಟಿನ ಮೇಲೆ ಈ ಕಾರ್ಯ ಆರಂಭವಾದುದು, ಗೋಸಲಪೀಠ ಪರಂಪರೆಯವರಿಂದ. ಇದರೊಂದಿಗೆ ಸಮಗ್ರ ವಚನಸಾಹಿತ್ಯದ ಅಕ್ಷಯ ನಿಧಿಯನ್ನು ಸಂರಕ್ಷಿಸುವ ಜವಾಬ್ದಾರಿಯ ಕೆಲಸವೂ ಪ್ರಾಮಾಣಿಕವಾಗಿ, ಪರಿಶ್ರಮಪೂರ್ವಕವಾಗಿ ನಡೆಯಿತು.

ವೀರಶೈವ ಸಂಕಲನಸಾಹಿತ್ಯವು ಸಂಯೋಜನಸಾಹಿತ್ಯದ ಒಂದು ಅಂಗ. ನಾಡಿನ ನಾನಾ ಮೂಲೆಗಳಿಂದ, ಹಲವಾರು ವರ್ಷಗಳಿಂದ, ನೂರಾರು ಜನರಿಂದ ಸಂಗ್ರಹವಾದ ವಚನರಾಶಿಯನ್ನು ಒಂದು ತತ್ವ ಅಥವಾ ವಿಷಯದ ಹಿನ್ನೆಲೆಯಲ್ಲಿ ಸಂಯೋಜಿಸುವ ವಿಚಾರ ಸಂಕಲನಕಾರರಿಗೆ ಹೊಳೆದುದು ಒಂದು ಶುಭಗಳಿಗೆ, ಅವರ ಅನುಭಾವದ ಪ್ರತೀಕ. ಸಂಕಲನಕಾರರ ಇಂಥ ಪ್ರಯತ್ನದ ಫಲವಾಗಿ ರೂಪ ತಳೆದ ವಚನಕೃತಿಗಳು 'ಸಂಕಲನ'ಗಳೆನಿಸುತ್ತವೆ. ಸಂಕಲನಕಾರರು ಈ ಕಾರ್ಯಕ್ಕಾಗಿ ಪರಿಶ್ರಮ, ಪಾಂಡಿತ್ಯಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ. ವಚನ ಸಂಕಲನಗಳಲ್ಲಿ ಸ್ಥಲಸಹಿತ ಸಂಕಲನ, ಸ್ಥಲರಹಿತ ಸಂಕಲನಗಳಿರುತ್ತವೆ. ಆಚರಣೆಯ ವಚನ (೨೮ ಸ್ಥಲ), ಸಂಬಂಧದ ವಚನ (೨೪ ಸ್ಥಲ) (ಸಂಪಾದನೆಯ ಚೆನ್ನಂಜೇದೇವ), ಶಿವಮಹಿಮಾಸ್ತೋತ್ರದ ವಚನ (೨೦ ಸ್ಥಲ, ವೀರಸಂಗಯ್ಯ), ಚಿದೈಶ್ವರ್ಯ ಚಿದಾಭರಣ (೧೦+೧ ಸ್ಥಲ, ಗುರುಸಿದ್ಧದೇವ)ಗಳು ಸ್ಥಲವಿಭಜನೆಯುಳ್ಳ ವಚನ ಸಂಕಲನಗಳಾಗಿರುತ್ತವೆ. ಈ ಸ್ಥಲ ವಿಭಜನೆಯ ನಿರ್ಮಾಣದ ಹಿಂದಿರುವ ಷಟ್‌ಸ್ಥಲಜ್ಞಾನಿಗಳಾದ ಸಂಕಲನಕಾರರ ಉದ್ದೇಶ, ತಂತ್ರಗಳ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

ಆಚರಣೆಯ ಸಂಬಂಧದ ವಚನ-ಲಿಂಗಸ್ತೋತ್ರದ ವಚನ (ಸಂಪಾದನೆಯ ಸಿದ್ಧವೀರಣ್ಣ), ಮಿಶ್ರಸ್ತೋತ್ರದ ವಚನ, ಬಸವಸ್ತೋತ್ರದ ವಚನ (ಸಂಪಾದನೆಯ ಚೆನ್ನಂಜೇದೇವ), ಚಿತ್ಕ್ರಿಯಾ ಸಂಗ್ರಹ (ಜಿಗುನಿ ಮರುಳದೇವ), ಅಷ್ಟಾವರಣ ಸ್ತೋತ್ರದ ವಚನ-ಷಡುಸ್ಥಲಸ್ತೋತ್ರದ ವಚನ-ಶರಣಸ್ತೋತ್ರದ ವಚನ-ಮಿಶ್ರಸ್ತೋತ್ರದ ವಚನ-ಲಿಂಗ ವಿಕಳಾವಸ್ಥೆಯ ವಚನ (ಎಳಮಲೆಯ ಗುರುಶಾಂತದೇವ), ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನ-ಬಸವಸ್ತೋತ್ರದ ವಚನ-ಬಸವಸ್ತೋತ್ರದ ವಚನ (ಸಂಪಾದನೆಯ ಬೋಳಬಸವ), ಅನುಭವ ಜ್ಞಾನ ಸಾರಾಮೃತ ಸಂಪಾದನಾಸ್ತೋತ್ರ (ಸಂಪಾದನೆಯ ಪರ್ವತೇಶ), ಕ್ರಿಯಾಸಮರಸದ ವಚನ (ಸಿದ್ಧವೀರದೇವ)ಗಳು ಸ್ಥಲವಿಭಜನೆಯಿಲ್ಲದ ವಚನ ಸಂಕಲನಗಳೆನಿಸಿವೆ. ಹಿಂದೆಂದೂ ಸೃಷ್ಟಿಯಾಗದಷ್ಟು ಅಧಿಕ ಸಂಖ್ಯೆಯ ವಚನ ಸಂಕಲನ ಕೃತಿಗಳು ಈಗ ಕಣ್ತೆರೆದವು. ಸಂಕಲನಕಾರರು ವಚನಗಳ ಮಧ್ಯೆ ಕೆಲವು ಸಲ ವಿವರಣರೂಪದ ಗದ್ಯವನ್ನೂ ಪ್ರಮಾಣ ರೂಪದ ಸಂಸ್ಕೃತ ಶ್ಲೋಕಗಳನ್ನೂ ಸೇರಿಸಿದ್ದಾರೆ. ಒಟ್ಟಿನಲ್ಲಿ ವೀರಶೈವ ವಚನಸಂಕಲನಸಾಹಿತ್ಯ ಗೋಸಲಪೀಠ ಪರಂಪರೆಯವರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಕೊಟ್ಟ ಅಮೂಲ್ಯ ಹಾಗೂ ವಿಶಿಷ್ಟ ಕೊಡುಗೆಯಾಗಿದೆ.

ವಚನ ಸಂಕಲನಗಳಂತೆ ವೀರಶೈವಕಾವ್ಯಗಳನ್ನೂ ಇವರು ಸಂಕಲಿಸಿ ಕೊಟ್ಟಿದ್ದಾರೆ. ಮಿಶ್ರಸ್ತೋತ್ರ(ಭೈರವೇಶ್ವರ ಕಾವ್ಯ)-ಮಿಶ್ರಸ್ತೋತ್ರದ ಷಟ್ಪದಿ-ಶಂಕರದೇವರ ಕಂದ-ಸರ್ವಜ್ಞನ ತ್ರಿಪದಿ-ಲಿಂಗಸ್ತೋತ್ರದ ಷಟ್ಪದಿ-ಲಿಂಗಸ್ತೋತ್ರ (ಕೊಂಡಗುಳಿ ಕೇಶಿರಾಜ)ದ ಕಂದ (ಸಂಪಾದನೆಯ ಸಿದ್ಧವೀರಣ್ಣ), ಅಷ್ಟಾವರಣಸ್ತೋತ್ರದ ಷಟ್ಪದಿ-ಆಚರಣೆಯ ಸಂಬಂಧದ ಷಟ್ಪದಿ-ವೈರಾಗ್ಯ ಷಟ್ಪದಿ (ಸಂಪಾದನೆ ಗುರುನಂಜೇಸ್ವಾಮಿ), ಶಂಕರದೇವರಕಂದ - ಬಸವ ಸ್ತೋತ್ರದ ಷಟ್ಪದಿ (ಸಂಪಾದನೆಯ ಚೆನ್ನಂಜೇದೇವ), ಸಿದ್ಧೇಶ್ವರ ಪುರಾಣದ (ಶಾಂತೇಶ) ನಾಂದ್ಯ-ಮಂತ್ರಮಹತ್ವದ ಕಂದ (ಕೊಂಡಗುಳಿ ಕೇಶಿರಾಜ) (ಎಳಮಲೆಯ ಗುರುಶಾಂತದೇವ) ಕೃತಿಗಳು ಗೋಸಲಪೀಠ ಪರಂಪರೆಯವರ ಕಾವ್ಯಸಂಕಲನಗಳಾಗಿರುತ್ತವೆ. ಶರಣರ ಸಂಕೀರ್ತನೆ ಹಾಗೂ ವೀರಶೈವ ತತ್ವ ಆಚರಣೆಗಳನ್ನು ಜನರಿಗೆ ತಲುಪಿಸಲು ವೀರಶೈವಕಾವ್ಯಗಳಿಂದ ಪದ್ಯಗಳನ್ನು ಆಯ್ದುಕೊಂಡು ಈ ಕಾವ್ಯಸಂಕಲನಗಳನ್ನು ಸಂಯೋಜಿಸಿದ್ದಾರೆ. ಹೀಗೆ ವೀರಶೈವ ಸಂಕಲನಸಾಹಿತ್ಯ ವಚನಸಂಕಲನ, ಕಾವ್ಯಸಂಕಲನವೆಂದು ಎರಡು ಪ್ರಕಾರಗಳಲ್ಲಿ ದೊರೆಯುತ್ತದೆ. ಈ ಸಂಕಲನಸಾಹಿತ್ಯದಲ್ಲಿ ವಚನ ಸಂಕಲನಗಳು ಮಾತ್ರ ಪ್ರಕಟವಾಗಿದ್ದು, ಕಾವ್ಯಸಂಕಲನಗಳು ಹೆಚ್ಚಾಗಿ ಅಪ್ರಕಟಿತ ರೂಪದಲ್ಲಿ ದೊರೆಯುತ್ತವೆ.

ಸಂಪಾದನ ಸಾಹಿತ್ಯ : ಕನ್ನಡಸಾಹಿತ್ಯದಲ್ಲಿ 'ವೀರಶೈವ ಸಂಪಾದನಸಾಹಿತ್ಯ' ವಿಶಿಷ್ಟವಾದ, ವಿನೂತನವಾದ ಪ್ರಕಾರದ್ದಾಗಿರುತ್ತದೆ. ಗೋಸಲಪೀಠದವರು ಈ ಸಾಹಿತ್ಯಪ್ರಕಾರಕ್ಕೆ ವಿಶೇಷ ಬೆಲೆ ತಂದುಕೊಟ್ಟಿದ್ದಾರೆ. 'ಶೂನ್ಯ ಸಂಪಾದನೆ'ಗಳು ಈ ಸಂಪಾದನಾ ಸಾಹಿತ್ಯದ ಪ್ರಯೋಗನಿಷ್ಠ ಕೃತಿಗಳಾಗಿವೆ. ಶಿವಗಣ ಪ್ರಸಾದಿ ಮಹಾದೇವಯ್ಯ 'ಶೂನ್ಯಸಂಪಾದನೆ'ಯ ಪ್ರಥಮ ಶಿಲ್ಪಿ. ತರುವಾಯ ಈ ಶಿಲ್ಪದ ಪರಿಷ್ಕರಣ ಕಾರ್ಯ ಕೈಕೊಂಡವರು, ಗೋಸಲ ಪೀಠದ ಗುಮ್ಮಳಾಪುರ ಸಿದ್ಧಲಿಂಗದೇವ, ಗೂಳೂರು ಸಿದ್ಧವೀರಣ್ಣದೇವರು.

ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯಸಂಪಾದನೆಯಲ್ಲಿ ಪ್ರಕರಣಗಳ ವಿಭಜನೆಯಿಲ್ಲ. ಆದರೆ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಇಲ್ಲದ ಆಯ್ದಕ್ಕಿ ಮಾರಯ್ಯನ ಸಂಪಾದನೆ, ಗೋರಕ್ಷನ ಸಂಪಾದನೆಗಳು, ಗುಮ್ಮಾಳಾಪುರ ಸಿದ್ಧಲಿಂಗದೇವನ ಶೂನ್ಯಸಂಪಾದನೆಯಲ್ಲಿ ಹೊಸದಾಗಿ ಸೇರಿಕೊಂಡವು. ಗೂಳೂರು ಸಿದ್ಧವೀರಣ್ಣನ ಶೂನ್ಯಸಂಪಾದನೆಯಲ್ಲಿ ಗೊಗ್ಗಯ್ಯನ ಬೋಧೆ, ಮೋಳಿಗಯ್ಯನ ಸಂಪಾದನೆ, ಘಟ್ಟಿವಾಳಯ್ಯನ ಸಂಪಾದನೆಗಳು ಮತ್ತೆ ಹೊಸದಾಗಿ ಸೇರ್ಪಡೆಯಾದವು. ಇದರಲ್ಲಿ ಪ್ರಕರಣ ವಿಭಜನೆಯಿದೆ. ಹೀಗೆ ಶೂನ್ಯಸಂಪಾದನೆಯ ಪರಿಷ್ಕರಣ ಕಾರ್ಯ

ಪರಿಪೂರ್ಣವಾದುದು, ಪರಮಸಿದ್ಧಿ ಪಡೆದುದು ಗೂಳೂರು ಶೂನ್ಯಸಂಪಾದನೆಯಲ್ಲಿ. ಸಂಪಾದನಕಾರರ ಸಂಯೋಜಕ ಪ್ರತಿಭೆ, ಪಾಂಡಿತ್ಯ, ಪರಿಶ್ರಮಗಳ ಸಾಕಾರರೂಪ ಈ ಶೂನ್ಯಸಂಪಾದನೆಗಳು. ಆರಂಭದಲ್ಲಿಯ ಗುರು ಲಿಂಗ ಜಂಗಮ ಮೊದಲಾದ ಧಾರ್ಮಿಕ ಸಿದ್ಧಾಂತಗಳ ಜೊತೆಯಲ್ಲಿ ಈಗ ಕಾಯಕ, ದಾಸೋಹ ಮುಂತಾದ ಸಾಮಾಜಿಕ ಸಿದ್ಧಾಂತಗಳೂ ಪ್ರವೇಶ ಪಡೆದವು. ಹೀಗೆ 'ಧಾರ್ಮಿಕಗ್ರಂಥ'ವೆನಿಸಿದ ಶೂನ್ಯಸಂಪಾದನೆ, ಕ್ರಮೇಣ 'ಮಾನವ ಧರ್ಮಗ್ರಂಥ'ವಾಗಿ ರೂಪ ಪಡೆಯಿತು. ಶೂನ್ಯಸಂಪಾದನೆ ಜಾಗತಿಕಸಾಹಿತ್ಯದ ವಿನೂತನ ಪ್ರಯೋಗಕೃತಿ. ಇದರಿಂದ ಗುಮ್ಮಳಾಪುರ ಸಿದ್ಧಲಿಂಗದೇವ, ಗೂಳೂರು ಸಿದ್ಧವೀರಣ್ಣರು ಜಾಗತಿಕ ಸಾಹಿತ್ಯದ ಮಹಾಂತರೆನಿಸುತ್ತಾರೆ. ಗೋಸಲಪೀಠದವರು ಕನ್ನಡಸಾಹಿತ್ಯಕ್ಕೆ ಹಾಗೂ ಜಾಗತಿಕ ಸಾಹಿತ್ಯಕ್ಷೇತ್ರಕ್ಕೆ ಸಮರ್ಪಿಸಿದ ಅಮೋಘ ಕೊಡುಗೆಗಳಾಗಿವೆ, ಈ ಶೂನ್ಯ ಸಂಪಾದನೆಗಳು.

'ಸಂಪಾದನಾಸಾಹಿತ್ಯ'ದ ಕಾರ್ಯವನ್ನು 'ಕಾಯಕ'ದ ಮಟ್ಟಕ್ಕೆ ಮುಟ್ಟಿಸಿ, ಈ ಸಾಹಿತ್ಯವನ್ನು ಹುಲುಸಾಗಿ ಬೆಳೆಸಿದವರು, ಗೋಸಲಪೀಠದ ಶಿಷ್ಯ-ಪ್ರಶಿಷ್ಯರೆಂಬುದು ಅಭಿಮಾನದ ಸಂಗತಿಯಾಗಿದೆ.

ವಚನಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನೆಗಳಿಗಾಗಿ ವೀರಶೈವ 'ಸಂಪಾದನ ಸಮಯ'ವನ್ನು ಅನಾವರಣಗೊಳಿಸಿದವರು ಈ ಪೀಠದವರು. ಮುಂದೆ ಈ 'ಸಂಪಾದನ ಸಮಯವನ್ನು' ಉದ್ದೀಪನಗೊಳಿಸಿದ ಶ್ರೇಯಸ್ಸು ಸಂಪಾದನೆಯ ಚೆನ್ನಂಜೇದೇವ, ಸಂಪಾದನೆಯ ಸಿದ್ಧವೀರಾಚಾರ್ಯ, ಸಂಪಾದನೆಯ ಬೋಳಬಸವ, ಸಂಪಾದನೆಯ ಗುರುನಂಜ, ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ಪರ್ವತೇಶರದಾಗಿದೆ. ಇವರ ದುಡಿಮೆಯ ಫಲವಾಗಿ ಹಾಡಿನಲ್ಲಿ ಸಂಪಾದನೆಯ ಮಠ, ಶೂನ್ಯಸಂಪಾದನೆಯ ಮಠಗಳು ನಿರ್ಮಾಣಗೊಂಡು, 'ಸಂಪಾದನ ಸಾಹಿತ್ಯ'ವನ್ನು ಮುಂದುವರಿಸಿಕೊಂಡು ಬರುವಂತಾಯಿತು. ವೀರಶೈವಧರ್ಮ, (ವಚನ) ಸಾಹಿತ್ಯ, ಸಮಾಜ, ಸಂಸ್ಕೃತಿಗಳನ್ನು ಬದುಕಿಸಿದ, ಪ್ರಸಾರಗೊಳಿಸಿದ ಕೀರ್ತಿ, ಈ 'ಸಂಪಾದನ ಸಮಯ'ದ ಸಂಪಾದನಕಾರರಿಗೆ, ಸಂಪಾದನೆ-ಶೂನ್ಯಸಂಪಾದನೆಯ ಮಠಗಳಿಗೆ ಸಲ್ಲುತ್ತದೆ.

ತಮಿಳಿನ ಸಂಘಂ ಸಾಹಿತ್ಯ, ನಮ್ಮ 'ವಚನಸಂಕಲನ'ವನ್ನು ಹೋಲುತ್ತಿದ್ದರೂ 'ಸಂಪಾದನೆ'ಯ ಸೃಜನಶೀಲತೆ ಅಲ್ಲಿರುವುದಿಲ್ಲ. ಹೀಗೆ 'ವಚನಸಂಪಾದನ ಸಾಹಿತ್ಯ' ತಮಿಳಿನ ಸಂಘಂ ಸಾಹಿತ್ಯಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ.

ಸಂಗ್ರಹ (=ಸಂಕ್ಷೇಪ) ಸಾಹಿತ್ಯ : ವೀರಶೈವ ಧರ್ಮ-ತತ್ವಗಳನ್ನು ಸುಲಭವಾಗಿಯೂ ಅಲ್ಪಾವಧಿಯಲ್ಲಿಯೂ ತಿಳಿದುಕೊಳ್ಳಲು ಅನುಕೂಲವಾಗುವಂತೆ 'ವಚನ ಸಂಗ್ರಹರೂಪ'ಗಳು ಹುಟ್ಟಿಬಂದವು. ಈ 'ಸಂಗ್ರಹರೂಪ'ಗಳನ್ನು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ನೀಡಿದ ಪ್ರಥಮಾಚಾರ್ಯರು, ಈ ಪೀಠದ ಕಟ್ಟಿಗೆಹಳ್ಳಿ ಸಿದ್ಧಲಿಂಗ ಮತ್ತು ಸಂಪಾದನೆಯ ಸಿದ್ಧವೀರಣ್ಣರಾಗಿದ್ದಾರೆ. ಸಾರ, ಸಾರಾಮೃತ ಪದಗಳು ಇಂಥ ವಚನಸಂಗ್ರಹಗಳನ್ನು ಸೂಚಿಸುತ್ತವೆ. ಇಲ್ಲಿಯ ಪ್ರತಿಯೊಂದು ವಚನಕ್ಕೂ ಟೀಕೆ ಇರುವುದು ಈ ಸಂಗ್ರಹಗಳ ವೈಶಿಷ್ಟ್ಯವಾಗಿದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನ 'ಸಂಪಾದನೆಯ ಸಾರಾಮೃತ', ಗೂಳೂರ ಸಿದ್ಧವೀರಣ್ಣನ ಶೂನ್ಯಸಂಪಾದನೆಯ ಸಂಗ್ರಹ (=ಸಂಕ್ಷೇಪ) ಕೃತಿಯಾಗಿದೆ. ಗೂಳೂರ ಶೂನ್ಯಸಂಪಾದನೆಯಲ್ಲಿ ಕೇವಲ ವಚನಗಳಿದ್ದರೆ, ಸಂಪಾದನೆಯ ಸಾರಾಮೃತದಲ್ಲಿರುವ ಎಲ್ಲ ವಚನಗಳಿಗೂ ವ್ಯಾಖ್ಯಾನಗಳಿರುತ್ತವೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನು ಈ ವ್ಯಾಖ್ಯಾನಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿದ್ದಾನೆ.

ಕಟ್ಟಿಗೆಹಳ್ಳಿ ಸಿದ್ಧಲಿಂಗ ಹಾಗೂ ಸಂಪಾದನೆಯ ಸಿದ್ಧವೀರಣ್ಣರ ಏಕೋತ್ತರ ಸಾರಗಳು ಮಹಾಲಿಂಗದೇವನ ಏಕೋತ್ತರಶತಸ್ಥಲದ ಸಂಗ್ರಹ ಕೃತಿಗಳಾಗಿವೆ. ಇಲ್ಲಿಯೂ ಪ್ರತಿಯೊಂದು ವಚನಗಳಿಗೆ ಟೀಕೆಯಿದೆ. ಹೀಗೆ ವಚನ ಸಂಕಲನ ಮತ್ತು ವಚನ ಸಂಪಾದನೆಗಳ 'ಸಂಗ್ರಹರೂಪ'ಗಳನ್ನು ಕನ್ನಡ ಸಾರಸ್ವತಲೋಕಕ್ಕೆ ನೀಡಿದ ಗೋಸಲಪೀಠದವರ ಸಾಹಿತ್ಯಿಕ ಕೊಡುಗೆ ನೆನೆಯುವಂಥವಾಗಿವೆ. ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಹೊಸ ಹೊಸ ಪ್ರಯೋಗ ಕೃತಿಗಳನ್ನು ಕೊಟ್ಟ ಕಟ್ಟಿಗೆಹಳ್ಳಿ ಸಿದ್ಧಲಿಂಗ ಹಾಗೂ ಸಂಪಾದನೆಯ ಸಿದ್ಧವೀರಣ್ಣರು ಅಭಿನಂದನಾರ್ಹರು.

ವಚನಗಳ ಸಂಗ್ರಹ, ಸಂಕಲನ, ಸಂಪಾದನ ಕೃತಿಗಳ ಪರಿಷ್ಕರಣಕ್ಕಾಗಿ ಇವರು ಅನುಸರಿಸಿದ ಪರಿಷ್ಕರಣ ವಿಧಾನಗಳು ಲಿಖಿತರೂಪದಲ್ಲಿ ಉಳಿದುಬಂದಿಲ್ಲ. ಹೀಗಿದ್ದರೂ ಇದು, ಕನ್ನಡ ಗ್ರಂಥಸಂಪಾದನೆಯ ವಿಧಾನಗಳನ್ನು ಕಾರ್ಯರೂಪಕ್ಕಿಳಿಸಿದ ಪ್ರಥಮ ಪ್ರಯತ್ನವೆನಿಸಿದೆ. ಕನ್ನಡ ಗ್ರಂಥಸಂಪಾದನೆಯ ಇತಿಹಾಸ ಇಲ್ಲಿಂದಲೇ ಆರಂಭವಾಗುತ್ತದೆ. ಇದನ್ನು ಕನ್ನಡ ಗ್ರಂಥಸಂಪಾದನೆಯ ಪ್ರಥಮ ಘಟ್ಟವೆಂದು ಕರೆಯಬಹುದು. ಕನ್ನಡ ಗ್ರಂಥಸಂಪಾದನಾ ಕ್ಷೇತ್ರಕ್ಕೆ ಇವರದು 'ಹೆಸರಿಲ್ಲದ ಹೆಸರಿನ' ಕೊಡುಗೆಯಾಗಿದೆ.

ವ್ಯಾಖ್ಯಾನ ಸಾಹಿತ್ಯ : ಕನ್ನಡ ವ್ಯಾಖ್ಯಾನಸಾಹಿತ್ಯದಲ್ಲಿ ವೀರಶೈವ ವ್ಯಾಖ್ಯಾನಸಾಹಿತ್ಯಕ್ಕೆ ವಿಶೇಷ ಮರ್ಯಾದೆಯಿದೆ. ಹಲವು ಹದ, ಹಲವು ವಿಧಗಳಲ್ಲಿ ರಚಿತವಾದ ವೀರಶೈವ ವ್ಯಾಖ್ಯಾನಸಾಹಿತ್ಯ ಸೃಜನ, ಸಂಕಲನ, ಸಂಪಾದನ ಸಾಹಿತ್ಯದೊಂದಿಗೆ

ಸಮೃದ್ಧವಾಗಿಯೇ ಬೆಳೆದುಬಂದಿತು. ಸಾಹಿತ್ಯ, ಧರ್ಮ ಹಾಗೂ ತತ್ವಗಳ ಪ್ರಸಾರ ಮಾಧ್ಯಮವಾಗಿ ವ್ಯಾಖ್ಯಾನಸಾಹಿತ್ಯ ಬಳಕೆಯಾಗಿದೆ. ಗೋಸಲಪೀಠದ ಪರಂಪರೆಯವರೂ ಈ ವ್ಯಾಖ್ಯಾನಸಾಹಿತ್ಯದ ಸೃಷ್ಟಿಗಾಗಿ ಹಿರಿದಾದ ಸೇವೆ ಸಲ್ಲಿಸಿದ್ದಾರೆ. ಈ ವ್ಯಾಖ್ಯಾನಗಳು ಕೃತಿಯ ಅಂತರಂಗ-ಬಹಿರಂಗ ಸೌಂದರ್ಯಗಳನ್ನು ಸಾಕ್ಷಾತ್ಕಾರಗೊಳಿಸಿಕೊಡುತ್ತವೆ.

ಗೋಸಲಪೀಠದ ಪರಂಪರೆಯವರು ರಚಿಸಿದ ವೀರಶೈವ ವ್ಯಾಖ್ಯಾನಸಾಹಿತ್ಯ ೧. ವಚನಗಳಿಗೆ ಬರೆದ ವ್ಯಾಖ್ಯಾನ, ೨. ಕನ್ನಡ ಕೃತಿಗಳಿಗೆ ಬರೆದ ವ್ಯಾಖ್ಯಾನ, ೩. ಸಂಸ್ಕೃತ ಕೃತಿಗಳಿಗೆ ಬರೆದ ಕನ್ನಡವ್ಯಾಖ್ಯಾನ-ಹೀಗೆ ಮೂರು ಪ್ರಕಾರದ್ದಾಗಿರುತ್ತದೆ. ಸೋಮಶೇಖರ ಶಿವಯೋಗಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್‌ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನಗಳಿಗೂ, ಬಸವಣ್ಣನವರ ಷಟ್‌ಸ್ಥಲದ ಬೆಡಗಿನ ವಚನಗಳಿಗೂ ಟೀಕೆ ಬರೆದಿದ್ದಾನೆ. ಚೆನ್ನಬಸವಣ್ಣನವರ ಕರಣಹಸುಗೆ ಟೀಕೆ, ಮಿಶ್ರಾರ್ಪಣ ಟೀಕೆ, ಜಕ್ಕಣಾರ್ಯನ ಏಕೋತ್ತರಶತಸ್ಥಲದ ಟೀಕೆ, ಬಸವೇಶ್ವರ ವಚನ ಸಾರಾರ್ಥಗಳು ಪರ್ವತ ಶಿವಯೋಗಿಯ ವಚನ ವ್ಯಾಖ್ಯಾನ ಕೃತಿಗಳಾಗಿವೆ. ಸಂಪಾದನೆಯ ಚೆನ್ನಂಜೇದೇವನು ಸ್ವತಂತ್ರ ಸಿದ್ಧಲಿಂಗೇಶ್ವರರ ವಚನ ಸಂಕಲನ ಮುಕ್ತ್ಯಾಂಗನಾ ಕಂಠಮಾಲೆಗೆ ಟೀಕೆ ರಚಿಸಿದ್ದಾನೆ.

ಪರ್ವತ ಶಿವಯೋಗಿಯ ಮರುಳದೇವರ ಕಂದ ಟೀಕೆ, ಗುರುಸ್ತೋತ್ರದ (ಚೆನ್ನಮಲ್ಲ) ತ್ರಿಪದಿ ಟೀಕೆ, ಷಡ್ವಕ್ತ್ರ ಸ್ತೋತ್ರದ ಟೀಕೆ, ಕರಸ್ಥಲದ ನಾಗಿದೇವನ ತ್ರಿಪದಿ ಟೀಕೆ, ಮುರಿಗಾಶಾಂತವೀರನ ಪ್ರಭುಲಿಂಗದ ಕಂದದ ಟೀಕೆ, ಸಂಗಮೇಶ್ವರಾಂಕಿತ ಗುರುಸ್ತೋತ್ರದ ತ್ರಿಪದಿ ಟೀಕೆಗಳೂ ಸಂಪಾದನೆಯ ಗುರುಲಿಂಗದೇವನ ಶೀಲವಂತಯ್ಯನ ತ್ರಿಪದಿ ಟೀಕೆ, ವಿರತ ತೋಂಟದಾರ್ಯನ ಸಿದ್ಧಲಿಂಗಶತಕ ಟೀಕೆ, ಮಗ್ಗೆಯ ಮಾಯಿದೇವರ ಶತಕತ್ರಯದ ಟೀಕೆ, ಮನೋವಿಜಯ (ಗುರುಬಸವ)ದ ತಾತ್ಪರ್ಯಗಳೂ ಕನ್ನಡ ಕೃತಿಗಳಿಗೆ ಬರೆದ ವ್ಯಾಖ್ಯಾನಗಳು.

ಸಂಪಾದನೆಯ ಗುರುನಂಜೇಸ್ವಾಮಿಯ ಯಜುರ್ವೇದಭಾಷ್ಯ (ಭಟ್ಟಭಾಸ್ಕರ) ಟೀಕೆ, ಸಾನಂದ ಶಿವಯೋಗಿಯ ಮಾಹೇಶ್ವರಾಚಾರ ಸಾರೋದ್ಧಾರ ಟೀಕೆ, ಪರ್ವತಶಿವಯೋಗಿಯ ಭೋಜದೇವಕೃತ ತತ್ವಪ್ರಕಾಶಿಕಾ ಟೀಕೆ, ಇಮ್ಮಡಿ ಮುರಿಗಾ ಗುರುಸಿದ್ಧರ ಲಿಂಗಾಚಾರ ರಚನಾಗಮ ಟೀಕೆ ಹಾಗೂ ವಿರತ ತೋಂಟದಾರ್ಯನ ಪಾಲ್ಕುರಿಕೆ ಸೋಮನಾಥನ ಪಂಚಗದ್ಯಗಳ ಟೀಕೆಗಳು ಸಂಸ್ಕೃತ ಗ್ರಂಥಗಳಿಗೆ ಮಾಡಿದ ಕನ್ನಡ ವ್ಯಾಖ್ಯಾನಗಳಾಗಿರುತ್ತವೆ.

ಪ್ರತಿಪದಾರ್ಥ, ವಾಕ್ಯ ಹಿಮ್ಮೆಟ್ಟಿಸಿ ಬರೆದ ವಾಕ್ಯರೂಪದ ಅರ್ಥ, ಇವೆರಡರ ಸಮ್ಮಿಶ್ರಪದ್ಧತಿ, ಕೇವಲ ಒಂದೆರಡು ಪದ ಅಥವಾ ವಾಕ್ಯಗಳಿಗೆ ಹೇಳಿದ ಅರ್ಥ, ತಾತ್ಪರ್ಯಾರ್ಥ - ಹೀಗೆ ಈ ವ್ಯಾಖ್ಯಾನಕಾರರು ವಚನಗಳಿಗೆ ಹಲವು ರೂಪದ ವ್ಯಾಖ್ಯಾನ ಮಾಡಿದ್ದಾರೆ. ಕಾವ್ಯಗಳಿಗೆ ಹೆಚ್ಚಾಗಿ ಪ್ರತಿಪದಾರ್ಥ ಟೀಕೆಯಿದೆ.

ಈ ವ್ಯಾಖ್ಯಾನಗಳಲ್ಲಿ ವಾಚ್ಯಾರ್ಥಕ್ಕಿಂತ ತಾತ್ವಿಕಾರ್ಥವೇ ಪ್ರಧಾನವಾಗಿ ಕಂಡುಬರುತ್ತದೆ. ವ್ಯಾಖ್ಯಾನಕಾರರ ಆಳವಾದ ಅಧ್ಯಯನ, ಅಪಾರವಾದ ಲೋಕಾನುಭವ, ಪಾಂಡಿತ್ಯ, ಉಭಯಭಾಷಾಜ್ಞಾನ ಹಾಗೂ ಉಜ್ವಲಪ್ರತಿಭೆಗಳು ಇಲ್ಲಿಯ ವ್ಯಾಖ್ಯಾನಗಳಲ್ಲಿ ಮಡುಗಟ್ಟಿ ನಿಂತಿವೆ. ಈ ವ್ಯಾಖ್ಯಾನಕಾರರು ವೀರಶೈವ ತತ್ವಗಳ ಪ್ರತಿಪಾದನೆಗಾಗಿ ಕನ್ನಡ ಭಾಷೆಯನ್ನು ಪ್ರಮಾಣಭಾಷೆಯನ್ನಾಗಿ ಸ್ವೀಕರಿಸಿರುವುದೂ ಭಾಷೆಯ ಸರ್ವಸಾಧ್ಯತೆಗಳನ್ನು ಬಳಸಿಕೊಂಡಿರುವುದೂ ಶಬ್ದ-ಅರ್ಥ ಸಂಪತ್ತನ್ನು ಹೆಚ್ಚಿಸಿರುವುದೂ ಅತ್ಯಂತ ಗಮನಾರ್ಹ. ತಾತ್ವಿಕಾರ್ಥ ಮುಂದುವರಿಯಬೇಕೆಂಬ ಈ ವ್ಯಾಖ್ಯಾನಕಾರರ ಹಂಬಲ ಮೆಚ್ಚುವಂತಹದಾಗಿದೆ. ವ್ಯಾಖ್ಯಾನಸಾಹಿತ್ಯದ ಮೂಲಕ ವೀರಶೈವ ತತ್ವಗಳನ್ನು ಸಂರಕ್ಷಿಸಿದ, ಪ್ರಸಾರಗೊಳಿಸಿದ ಈ ವ್ಯಾಖ್ಯಾನಕಾರರು ವೀರಶೈವ ವ್ಯಾಖ್ಯಾನಸಾಹಿತ್ಯಕ್ಕೆ ಕನ್ನಡಸಾಹಿತ್ಯದಲ್ಲಿ ಅಗ್ರಸ್ಥಾನ ಸಲ್ಲುವಂತೆ ಮಾಡಿದ್ದಾರೆ. ಈ ಸಮಯದಲ್ಲಿ ನಾಡಿನ ತುಂಬ ಹುಟ್ಟಿದ 'ಟೀಕಿನ ಮಠ'ಗಳು ವೀರಶೈವ ವ್ಯಾಖ್ಯಾನಸಾಹಿತ್ಯ ನಿರ್ಮಾಣದ ಕೇಂದ್ರಗಳಾಗಿದ್ದವು.

ಗೋಸಲಪೀಠ ಪರಂಪರೆಯವರ ಈ ಸಂಕಲನ, ಸಂಪಾದನ, ವ್ಯಾಖ್ಯಾನ ಕಾರ್ಯಗಳು ಗ್ರಂಥಲೇಖನ ಕಾರ್ಯದಲ್ಲಿ ನಿರತರಾಗಿದ್ದ ಬಿಜಾಂಟಿಯಂ ಪ್ರದೇಶದ ಕ್ರೈಸ್ತಮಠಗಳನ್ನೂ, ಇಜಿಪ್ತದ ಪ್ರಸಿದ್ಧ ಗ್ರಂಥ ಸಂಪಾದಕ ಜಿನೋಡೋಟಸ್, ಶಿಷ್ಯ ಅರಿಸ್ಟೋಫೆನಿಸ್, ಶಿಷ್ಯ ಅರಿಸ್ಟಾರ್ಕಸ್‌ರ ಗುರು-ಶಿಷ್ಯ ಪರಂಪರೆಯನ್ನೂ ನಮಗೆ ನೆನೆಪಿಸಿ ಕೊಡುತ್ತವೆ.

ಹದಿನೈದು-ಹದಿನಾರನೆಯ ಶತಮಾನದ ಗೋಸಲಪೀಠದ ಶಿಷ್ಯ-ಪ್ರಶಿಷ್ಯರ ಸಾಹಿತ್ಯವೆಂದರೆ ಕನ್ನಡ ಸಾಹಿತ್ಯವೆಂದೇ ಅರ್ಥ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಗೋಸಲಪೀಠ ಪರಂಪರೆಯವರು ನೀಡಿದ ಕೊಡುಗೆಯನ್ನು ಪರಿಭಾವಿಸಬೇಕು.

ಹೀಗೆ ಮೇಲಿನ ವಿವೇಚನೆಯಿಂದ ಗೋಸಲಪೀಠದ ಶಿಷ್ಯ-ಪ್ರಶಿಷ್ಯರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ನೀಡಿದ ವೀರಶೈವ ಸೃಜನ, ಸಂಕಲನ, ಸಂಪಾದನ, ಸಂಗ್ರಹ ಹಾಗೂ ವ್ಯಾಖ್ಯಾನ ಸಾಹಿತ್ಯಗಳ ಕೊಡುಗೆಯ ಸ್ಥೂಲ ಪರಿಚಯ ನಮಗಾಗುತ್ತದೆ.

ಬೋಳಬಸವೇಶ್ವರರು — ಒಂದು ಸ್ಥೂಲ ಅಧ್ಯಯನ

ಡಾ. ವೀರಣ್ಣ ರಾಜೂರ

ಬಸವಾದಿ ಪ್ರಮಥ ಪ್ರಣೀತ ವೀರಶೈವವನ್ನು ಉಜ್ವಲವಾಗಿ ಬೆಳಗಿದವರಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಹೆಸರು ಶಿರೋರತ್ನಪ್ರಾಯವಾದುದು. ಹದಿನಾರನೆಯ ಶತಮಾನದಲ್ಲಿ ಎಡೆಯೂರನ್ನು ಕೇಂದ್ರವಾಗಿಟ್ಟುಕೊಂಡು ನಾಡಿನ ಉದ್ದಗಲಕ್ಕೂ ಸಂಚರಿಸಿ, ಷಟ್‌ಸ್ಥಲ ತತ್ವಬೋಧೆಯ ಮೂಲಕ ಅಜ್ಞಾನತಮವನ್ನು ದೂಡುತ್ತ, ಜ್ಞಾನಸೂರ್ಯನಂತೆ ಜನಮನವನ್ನು ಬೆಳಗಿ, ಲೋಕಕಲ್ಯಾಣ ಮಣಿಹವನ್ನು ಅರ್ಥಪೂರ್ಣವಾಗಿ ಪೂರೈಸಿದ ಮಹಾತ್ಮನೀತ. ಆತನ ಆತ್ಮೀಯ ಪರಿಸರದಲ್ಲಿ ಬೆಳೆದು, ಆತ ಹರಿಸಿದ ಜ್ಞಾನಗಂಗೆಯಲ್ಲಿ ಮಿಂದು, ಆತನುಣಿಸಿದ ಜ್ಞಾನಾಮೃತವನ್ನು ಸವಿದು ಪುನೀತರಾಗಿ, ಅದನ್ನು ಲೋಕಕ್ಕೆ ಹಂಚಿ ಬದುಕಿನ ಸಾರ್ಥಕ್ಯವನ್ನು ಮೆರೆದ ವ್ಯಕ್ತಿಗಳು ಹಲವು. ಅವರಲ್ಲಿ ಬೋಳಬಸವೇಶ್ವರನ ಹೆಸರು ಅಗ್ರಗಣ್ಯವಾದುದು.

ಬೋಳಬಸವೇಶ್ವರ ತೋಂಟದ ಸಿದ್ಧಲಿಂಗರ ತರುವಾಯ ನಿರಂಜನಪೀಠದ ಪಟ್ಟಾಧ್ಯಕ್ಷನಾಗಿ, ಗುರುವಿನ ಹಾದಿಯಲ್ಲಿಯೇ ನಡೆದು ಆ ಪೀಠದ ಘನತೆ-ಗೌರವಗಳನ್ನು ಹೆಚ್ಚಿಸಿದ ದಿವ್ಯಾತ್ಮ. ನಿರಂಜನಪೀಠದ ಪರಂಪರೆ ಶ್ರೀಮಂತವಾದುದು. ಅದರ ಆರಂಭ, ಮೂಲಪುರುಷ, ಮುಂದೆ ಆಗಿಹೋದ ನಿರಂಜನಮೂರ್ತಿಗಳ ಹೆಸರುಗಳ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ[1]. ತೋಂಟದ ಸಿದ್ಧಲಿಂಗೇಶ್ವರರ ವಚನ(ಲ), ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣ, ಗುರುಸಿದ್ಧದೇವನ ಚಿದೈಶ್ವರ್ಯ ಚಿದಾಭರಣಗಳ ಪ್ರಕಾರ ಬೋಳಬಸವೇಶ್ವರನು ಹದಿನೇಳನೆಯ ಪಟ್ಟಾಧ್ಯಕ್ಷನೆನಸಿದರೆ[2] ನಿರಂಜನ ವಂಶರತ್ನಾಕರದ ಪ್ರಕಾರ ೨೦ ನೆಯವನಾಗಿ, ನಿರಂಜನಜಂಗಮವಂಶದರ್ಪಣದ ಪ್ರಕಾರ ೧೮ನೆಯವನಾಗಿ ಮತ್ತು ಮಹಾದೇವನ ಮಹಾಲಿಂಗೇಂದ್ರವಿಜಯದ ಪ್ರಕಾರ ೩ನೆಯವನಾಗಿ ತೋರುತ್ತಾನೆ. ಈ ಪರಂಪರೆ ಉಳಿದ ಕೃತಿಗಳಲ್ಲಿ ಅನಾದಿ ಗಣೇಶ್ವರನಿಂದ ಆರಂಭವಾದರೆ, ನಿರಂಜನವಂಶರತ್ನಾಕರದಲ್ಲಿ ಪ್ರಭುದೇವರಿಂದ, ಮಹಾಲಿಂಗೇಂದ್ರ ವಿಜಯದಲ್ಲಿ ಚೆನ್ನಬಸವಣ್ಣನಿಂದ ಆರಂಭವಾಗುತ್ತದೆ. ಎಲ್ಲ ಕೃತಿಗಳಲ್ಲಿಯೂ ಬೋಳಬಸವೇಶ್ವರನ ಹೆಸರು ತೋಂಟದ ಸಿದ್ಧಲಿಂಗರ ನಂತರ ಕಡ್ಡಾಯವಾಗಿ ಬರುವುದರಿಂದ ಈತ ಅವರ ಪ್ರಥಮ ಪಟ್ಟಶಿಷ್ಯ ಎಂಬುದು ನಿರ್ವಿವಾದ.

ಬೋಳಬಸವೇಶ ೭೦೧ ವಿರಕ್ತರಲ್ಲಿ ಒಬ್ಬ. ಭೂಲೋಕದಲ್ಲಿ ಅನಾಚಾರ ಹೆಚ್ಚಿ, ವೀರಶೈವಾಚಾರ ಕುಂದಲು, ಈಶ್ವರನ ಅಪ್ಪಣೆಯ ಮೇರೆಗೆ ಕೈಲಾಸದ ನಿರಂಜನ ಗಣೇಶ್ವರನು ಶ್ರೇಷ್ಠವಾದ ಏಳುನೂರು ಗಣೇಶ್ವರರನ್ನು ಕೂಡಿಕೊಂಡು, ಭೂಮಿಯಲ್ಲಿ ಸಿದ್ಧಲಿಂಗ ಎಂಬ ಹೆಸರಿನಿಂದ ಜನಿಸಿ, ಜಂಗಮಸ್ಥಲವನ್ನು ಸ್ವೀಕರಿಸಿ ಷಟ್‌ಸ್ಥಲವನ್ನು ಉದ್ಧರಿಸಿದನು ಎಂದು ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದಲ್ಲಿ ಹೇಳಲಾಗಿದೆ. ಅಲ್ಲದೆ ೩೩ ಜನ ವಿರಕ್ತರ ಹೆಸರುಗಳನ್ನೂ ಅದರಲ್ಲಿ ಉಲ್ಲೇಖಿಸಲಾಗಿದೆ. ಇವರಲ್ಲಿ ಕೆಲವರ ಹೆಸರುಗಳನ್ನು ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣ, ಸಿದ್ಧನಂಜೇಶನ ಗುರುರಾಜಚಾರಿತ್ರ ಮತ್ತು ಎಡೆಯೂರ ಶಾಸನಗಳಲ್ಲಿಯೂ ಕಾಣಬಹುದು.[3] ಬೋಳಬಸವೇಶ್ವರನ ಹೆಸರು ಮಾತ್ರ ನಾಲ್ಕೂ ಕೃತಿಗಳಲ್ಲಿ ನಿಯತವಾಗಿ ಬರುವುದರಿಂದ ಈತ ಏಳೂನೂರಾಒಂದು ವಿರಕ್ತರಲ್ಲಿ ತುಂಬ ಪ್ರಸಿದ್ಧನಾಗಿದ್ದ ಎಂದು ಹೇಳಬಹುದು.

ಹೆಸರು : ಬೋಳಬಸವೇಶ್ವರನಿಗೆ ಬೋಳಬಸವ,[4] ಬೋಳಬಸವೇಶ,[5] ಬೋಳಬಸವೇಶ್ವರ,[6] ಬೋಳಬಸವರಾಜ,[7] ಬೋಳಬಸವದೇವ,[8] ಬೋಳಬಸವಾರ್ಯ,[9] ಬೋಳಬಸವೇಶಾರ್ಯ,[10] ಬೋಳಬಸವೇಶಾಚಾರ್ಯ,[11] ಬೋಳಬಸವರಾಜದೇವರು,[12] ಬೋಳಬಸವೇಶಸ್ವಾಮಿ,[13] ಬೋಳಬಸವದೇಶಿಕ,[14] ಬೋಳೇಶ,ಬೋಳೇಶ್ವರ,[15] ನಿರಕ್ಷರ ಬೋಳಬಸವೇಶ್ವರ,[16] ನಿಜಬೋಳಬಸವ,[17] ಶಿವಪೂಜೆಯಾರ್ಯ,[18] ಶಿವಪೂಜೆಯಾರ್ಯನೆಂದೆನಿಪ ಬೋಳಬಸವೇಶ[19] ಎಂಬ ನಾಮಾಂತರಗಳಿವೆ. ಈತನ ಹೆಸರು ಉಲ್ಲೇಖಿಸುವ ಮೊದಲ ಕೃತಿಯೆಂದರೆ ಗುಬ್ಬಿಯ ಮಲ್ಲಣಾರ್ಯನ (೧೫೩೦) ಭಾವಚಿಂತಾರತ್ನ. ಅದರಲ್ಲಿ ಈತನಿಗೆ ಶಿವಪೂಜೆಯಾರ್ಯನೆಂದು ಕರೆಯಲಾಗಿದೆ.[20] ಈ ಶಿವಪೂಜೆಯಾರ್ಯನೇ ಬೋಳಬಸವೇಶನೆಂಬುವಕ್ಕೆ

ಚೆನ್ನಬಸವಪುರಾಣದ'ಶಿವಪೂಜೆಯಾರ್ಯನೆಂದೆನಿಪ ಬೋಳಬಸವೇಶ[21] ಎಂಬ ಹೇಳಿಕೆ ಸ್ಪಷ್ಟೀಕರಣ ನೀಡುತ್ತದೆ. ನಿರಂಜನವಂಶರತ್ನಾಕರ ಮತ್ತು ಮಹಾಲಿಂಗೇಂದ್ರ ವಿಜಯಗಳಲ್ಲಿ ಈತನನ್ನು 'ನಿರಕ್ಷರ ಬೋಳಬಸವೇಶ್ವರ' ಎಂದು ಕರೆದಿದೆ. ಈತನಿಗೆ ಈ ಹೆಸರು ಬರಲು ಕಾರಣವನ್ನು ಮಹಾಲಿಂಗೇಂದ್ರ ವಿಜಯದಲ್ಲಿ ಕೊಡಲಾಗಿದೆ.[22]

ಚಿಕ್ಕಂದಿನಲ್ಲಿ ಈತನಿಗೆ ಮಾತು ಬರುತ್ತಿರಲಿಲ್ಲವಾದುದರಿಂದ 'ನಿರಕ್ಷರ'ನೆಂದೂ ಬಹಳ ಬೋಳೇ(ಸಾಧು) ಸ್ವಭಾವದವನಾದುದರಿಂದ 'ಬೋಳ'[23] ನೆಂದೂ ಭಕ್ತಿಭಾಂಡಾರಿಯಾದುದರಿಂದ 'ಬಸವ' ನೆಂದೂ - ಹೀಗೆ ಎಲ್ಲ ಸೇರಿ 'ನಿರಕ್ಷರ ಬೋಳಬಸವೇಶ' ನೆಂಬ ಅನ್ವರ್ಥಕನಾಮ ಪ್ರಾಪ್ತವಾಯಿತಂತೆ. ತೋಂಟದ ಸಿದ್ಧಲಿಂಗರ ಕೃಪೆಯಿಂದ ಈ ನಿರಕ್ಷರಿಗೆ ಅಕ್ಷರಜ್ಞಾನ ಬರುತ್ತದೆ. ಅಂದಿನಿಂದ ಈತ ಅವರ ಶಿಷ್ಯತ್ವ ವಹಿಸಿ, ಅವರ ಸನ್ನಿಧಿಯಲ್ಲಿಯೇ ಇದ್ದು, ನಿತ್ಯ ಅವರ ಶಿವಪೂಜೆಗೆ ವಸ್ತುಗಳನ್ನು ಅಣಿಮಾಡುವ ಪವಿತ್ರಕಾರ್ಯವನ್ನು ವಹಿಸಿಕೊಂಡಿರಬೇಕು.[24] ಈ ಕಾರಣದಿಂದ ಈತನಿಗೆ 'ಶಿವಪೂಜೆಯಾರ್ಯ' ಎಂಬ ಹೆಸರು ರೂಢಿಗೊಂಡಿರಬೇಕು. ಕಾಲಾಂತರದಲ್ಲಿ ಈತನು ಮಹಾಜ್ಞಾನಿಯಾಗಿ ಧರ್ಮತತ್ತ್ವ ಬೋಧೆಗೆ ತೊಡಗಿದಾಗ ಈ ಹೆಸರು ಅಪ್ರಚಲಿತವಾಗಿ, ನಿರಕ್ಷರ ಬೋಳಬಸವೇಶ ಎಂಬ ಹೆಸರಿನಲ್ಲಿಯ 'ನಿರಕ್ಷರ' ಎಂಬ ವಿಶೇಷಣವೂ ಮಾಯವಾಗಿ ಕೇವಲ'ಬೋಳಬಸವೇಶ' ಎಂಬುದು ಮಾತ್ರ ಉಳಿದುಕೊಂಡಿರಬೇಕು. ಅದನ್ನೇ ಮುಂದೆ ಬಂದ ಕವಿಗಳೆಲ್ಲ ಬಳಸುತ್ತ ಬಂದಿರಬೇಕು. ಮಹಾಂತಸ್ವಾಮಿಯ ಸಾಂಧ್ಯದಲ್ಲಿ ಈತನನ್ನು 'ನಿಜಬೋಳಬಸವ' ಎಂದು ಕರೆಯಲಾಗಿದೆ.[25] ಇದು ಈತನ ಸತ್ಯನಿಷ್ಠೆಗೆ ಅನುಗುಣವಾಗಿ ಬಂದ ಹೆಸರಾಗಿರಬೇಕು. ಇನ್ನು ಈತನ ಹೆಸರಿಗೆ ಹತ್ತಿದ ಆರ್ಯ, ಆಚಾರ್ಯ, ದೇವ, ರಾಜ, ಈಶ, ಈಶ್ವರ, ಸ್ವಾಮಿ, ದೇಶಿಕ ಎಂಬುವು ಈತನ ಮಹಾನ್ ವ್ಯಕ್ತಿತ್ವಕ್ಕೆ ಸಲ್ಲಿಸಿದ ಗೌರವಸೂಚಿ ಪದಗಳಾಗಿವೆ.[26]

ಸ್ಥಳ : ಗುಬ್ಬಿಯ ಮಲ್ಲಣಾರ್ಯ ತನ್ನ ಭಾವಚಿಂತಾರತ್ನದಲ್ಲಿ ಶಿವಪೂಜೆಯಾರ್ಯನ್ನು ಕುರಿತು- "ಶಿವಕಲ್ಯಾಣದುತ್ಸವದ ನಾಗವಲ್ಲಿಯ ಮೆರೆವ ಶಿವಪೂಜೆಯಾರ್ಯ"[27], " ಕಥೆಯರಿವ ಯತಿ ನಾಗವಲ್ಲಿಯುರು ಶಿವಪೂಜೆಯಾರ್ಯ" [28] ಎಂದು ಹೇಳಿದ್ದಾನೆ. ಇಲ್ಲಿ ಬರುವ 'ನಾಗವಲ್ಲಿ' ಎಂಬುದು ಶಿವಪೂಜೆಯಾರ್ಯನ ಸ್ಥಳವಾಗಿರಬೇಕು. ಇದು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಒಂದು ಊರು. ಇಲ್ಲಿ ದೊರೆತ ಒಂದು ಶಾಸನದಲ್ಲಿ[29] 'ಶಿವಭಕ್ತಿಗೆ ಕಲ್ಯಾಣವೆನಿಸಿದ ನಾಗವಲ್ಲಿ' ಎಂದು ಈ ಊರನ್ನು ವರ್ಣಿಸಲಾಗಿದೆ. ಭಾವಚಿಂತಾರತ್ನದಲ್ಲಿ ವರ್ಣಿತವಾದ 'ಶಿವನ ಕಲ್ಯಾಣದುತ್ಸವದ ನಾಗವಲ್ಲಿ' ಮತ್ತು ಶಾಸನದಲ್ಲಿ ಬಣ್ಣಿಸಿದ 'ಶಿವಭಕ್ತಿಗೆ ಕಲ್ಯಾಣವೆನಿಸಿದ ನಾಗವಲ್ಲಿ' ಎರಡೂ ಒಂದೇ ಎಂಬುದರಲ್ಲಿ ಸಂಶಯವಿಲ್ಲ.[30] ಶಿವಭಕ್ತಿಗೆ ಆಗರವೆನಿಸಿದ ಈ ಊರಲ್ಲಿ 'ಬಸವೇಶ್ವರರ ಮಹತ್ವವನ್ನು ಶರಣರಿಗೆ ತಿಳಿಸುವುದರಲ್ಲಿ ನಿಪುಣನೆನಿಸಿ ತನ್ನ ವಚನದಿಂದಲೂ ಭಕ್ತಿಯಿಂದಲೂ ಕೀರ್ತಿಯನ್ನು ಗಳಿಸಿದ್ದ ಯತಿಯಾಗಿದ್ದ- ಶಿವಪೂಜೆಯಾರ್ಯ- ಎಂಬುದು ಮಲ್ಲಣಾರ್ಯನ ಹೇಳಿಕೆ. ಆದರೆ ಭಾವಚಿಂತಾರತ್ನಕ್ಕೆ ಟೀಕೆಯನ್ನು ಬರೆದ ಮರಿಸಿದ್ಧಲಿಂಗದೇಶಿಕ ಅಥವಾ ಪಟ್ಟುಗಂಬಳಿಯ ಸಿದ್ಧಲಿಂಗ (೧೭೪೧) -ಈತನು 'ಗಿರಿಜಾಕಲ್ಯಾಣ ಕೃತಿಯನ್ನು ನಾಗವಲ್ಲಿಯಲ್ಲಿ ಪ್ರತಿವರ್ಷವೂ ಮೆರವಣಿಗೆ ಮಾಡಿಸುತ್ತಿದ್ದ ಒಬ್ಬ 'ಗುರು' ಎಂದು ಹೇಳುತ್ತಾನೆ.[31] ಅಂತೂ ಶಿವಪೂಜೆಯಾರ್ಯನ ಮೂಲಸ್ಥಳ ನಾಗವಲ್ಲಿ ಎಂಬುದು ಸ್ಪಷ್ಟ.[32]

ಗುರುರಾಜಚಾರಿತ್ರ್ಯದಲ್ಲಿ ಬೋಳಬಸವೇಶ್ವರನು ಬಿಜ್ಜಾವರದಲ್ಲಿ ಮಹಿಮೆಯನ್ನು ಮೆರೆಯುತ್ತ ಇದ್ದು ಅಲ್ಲಿಯೇ ಐಕ್ಯವಾದ ಎಂದು ಹೇಳಿದರೆ, ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣದಲ್ಲಿ ಈತ ಕಗ್ಗೆರೆಯಲ್ಲಿ ಸಿದ್ಧಲಿಂಗರಿಂದ ಷಟ್ ಸ್ಥಲಬೋಧೆ ಮಾಡಿಸಿಕೊಂಡ ಎಂದು, ನಿರಂಜನವಂಶರತ್ನಾಕರದಲ್ಲಿ ಈತ ಎಡೆಯೂರಿನಲ್ಲಿ ಭಕ್ತಿಯಿಂದ ಪೂಜೆಗೊಳ್ಳುತ್ತಿದ್ದು ಮದುಗಿರಿಯಲ್ಲಿ ಐಕ್ಯವಾದ ಎಂದು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಈತ ಬಿಜ್ಜಾವರದಲ್ಲಿ ಮುಮ್ಮಡಿ ಚಿಕ್ಕಭೂಪಾಲನಿಗೆ ಪಟ್ಟಗಟ್ಟಿದ ಎಂದು, ಮಹಾಲಿಂಗೇಂದ್ರವಿಜಯದಲ್ಲಿ ಈತ ಮದ್ಗಿರಿಯಲ್ಲಿ ಐಕ್ಯವಾದ ಎಂದು ತಿಳಿಸಲಾಗಿದೆ.

ಈ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೀಗೆ ಹೇಳಬಹುದು : ಬೋಳಬಸವೇಶ್ವರ ಮೂಲತಃ ನಾಗವಳ್ಳಿಯವನಾಗಿದ್ದು, ನಂತರ ಸಿದ್ಧಲಿಂಗರ ಶಿಷ್ಯತ್ವ ವಹಿಸಿ ಎಡೆಯೂರಿಗೆ ಬಂದಿರಬೇಕು. ಅಲ್ಲಿ ಅವರಿಂದ ಷಟ್‌ಸ್ಥಲಬೋಧೆ ಪಡೆದು ದೇಶಸಂಚಾರ ಕೈಕೊಂಡು ಮುಂದೆ ಅವರ ಶಿಷ್ಯರಾದ ಮಹಾನಾಡಪ್ರಭುಗಳ ರಾಜಧಾನಿ ಬಿಜ್ಜಾವರಕ್ಕೆ ಬಂದು ರಾಜಗುರುವಾಗಿ, ಮದ್ದಗಿರಿಯಲ್ಲಿ ನಿಂತು ವೀರಶೈವ ತತ್ವಪ್ರಚಾರ, ರಾಜಕಾರ್ಯ ಎರಡನ್ನೂ ನೆರವೇರಿಸಿ ಅಲ್ಲಿಯೇ ಐಕ್ಯವಾಗಿರಬೇಕು.

ಬೋಳಬಸವೇಶ್ವರನ ಐಕ್ಯಸ್ಥಳವನ್ನು ತಿಳಿಸುವ ಕೃತಿಗಳಲ್ಲಿ ಏಕಾಭಿಪ್ರಾಯವಿಲ್ಲ. ಗುರುರಾಜಚಾರಿತ್ರ ಬಿಜ್ಜಾವರ ಎಂದು ಹೇಳಿದರೆ, ನಿರಂಜನವಂಶಾರತ್ನಾಕರ ಮತ್ತು ಮಹಾಲಿಂಗೇಂದ್ರ ವಿಜಯ ಮದ್ಗಿರಿ ಎಂದು ಹೇಳುತ್ತವೆ. ಆದರೆ ಇಂದು ಈತನ ಗದ್ದುಗೆ ಇರುವುದು ಸಿದ್ಧಾಪುರದಲ್ಲಿ. ಇದು ಈ ರಾಜರ ಪರಮಗುರುವಾದ ಸಿದ್ಧಲಿಂಗೇಶ್ವರರ ಹೆಸರಿನಲ್ಲಿ 'ಸಿದ್ಧಲಿಂಗಪುರ'[33] ಎಂಬ ಹೆಸರಿನಿಂದ ಕಟ್ಟಿಸಿದ ಊರೆಂದು ತಿಳಿದುಬರುತ್ತದೆ.[34] ಬಿಜ್ಜಾವರ-ಮದ್ದಗಿರಿ-ಸಿದ್ಧಾಪುರ-ಈ ಮೂರು ಊರುಗಳು ಒಂದೇ ಸೀಮೆಯಲ್ಲಿ ಇದ್ದು, ಹಿಂದೆ ಒಂದೇ ವಿಸ್ತರಣಕ್ಕೆ ಒಳಪಟ್ಟವುಗಳಾಗಿರಬೇಕು.[35]

ಕಾಲ : ಇತ್ತೀಚಿನ ಹೊಸ ಆಧಾರಾಂಶಗಳ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗರ ಜೀವಿತಕಾಲವನ್ನು ೧೬ನೆಯ ಶತಮಾನದ ಉತ್ತರಾರ್ಧವೆಂದು ನಿರ್ಧರಿಸಲಾಗಿದೆ.[36] ಇದರಿಂದ ಅವರ ಪ್ರಥಮ ಶಿಷ್ಯನೆನಿಸಿದ ಬೋಳಬಸವೇಶ್ವರನ ಕಾಲವೂ ಸಹಜವಾಗಿ ಈಚೆಗೆ ಸರಿದುಬರುತ್ತದೆ. ಬೋಳಬಸವೇಶ್ವರನನ್ನು ಉಲ್ಲೇಖಿಸುವ, ಈಗ ಉಪಲಬ್ಧವಾದ ಪ್ರಥಮ ಆಕರವೆಂದರೆ ೧೫೧೩ರಲ್ಲಿ ರಚಿತವಾದ ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ. ಇದರಿಂದ ಬೋಳಬಸವೇಶ್ವರ (ಶಿವಪೂಜೆಯಾರ್ಯ) ಇದಕ್ಕಿಂತ ಪೂರ್ವದಲ್ಲಿ ಇದ್ದನೆಂಬುದು ಖಚಿತ.

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಬೋಳಬಸವೇಶ್ವರನ ಕಾಲನಿರ್ಧಾರಕ್ಕೆ ಆಧಾರವಾದ ಮತ್ತೊಂದು ಮಹತ್ವದ ಕೃತಿ. ಬಿಜ್ಜಾವರದ ಮಹಾನಾಡಪ್ರಭುಗಳ ಇತಿಹಾಸದ ಮೇಲೆ ಬೆಳಕುಚೆಲ್ಲುವ ಇದರಲ್ಲಿ ಬೋಳ ಬಸವೇಶ್ವರ ಈ ಅರಸರಿಗೆ ರಾಜಗುರುವಾಗಿದ್ದನೆಂಬ ಸಂಗತಿ ವ್ಯಕ್ತವಾಗಿದೆ. ಈ ಕೃತಿಯ ನಾಯಕ ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಮಗ ತೋಟೇಂದ್ರ ಸು. ೧೫೯೪ರಲ್ಲಿ ನಡೆದಿರಬಹುದಾದ ಹರವೆ ಕಾಳಗದಲ್ಲಿ ಮಡಿಯುತ್ತಾರೆ. ಆಗ ಇಮ್ಮಡಿ ಚಿಕ್ಕಭೂಪಾಲನ ಎರಡನೆಯ ಮಗ ಸಪ್ಪೇಂದ್ರ ಅಥವಾ ಮುಮ್ಮಡಿ ಚಿಕ್ಕಭೂಪಾಲನಿಗೆ ಬೋಳಬಸವೇಶ್ವರನು ಪಟ್ಟಗಟ್ಟಿ ಹರಸುತ್ತಾನೆ.[37] ಇದು ೧೫೯೪ರಲ್ಲಿ ಬೋಳಬಸವೇಶ್ವರ ಇನ್ನೂ ಜೀವಿಸಿದ್ದನೆಂಬುದಕ್ಕೆ ಸಾಕ್ಷಿ.

ಸಿದ್ಧನಂಜೇಶ ತನ್ನ ಗುರುರಾಜ ಚಾರಿತ್ರದಲ್ಲಿ "………ಶ್ರೀ ಕೈಲಾಸಪುರದ ಬಾಗಿಲೊಳು ತಮ್ಮಯ ಪಾದ ಸೇವನಾತುರನು ಬಿಜ್ಜಾವರದ ಗೌಡ ತೋಂಟನ ತಡೆದುಮಿರ್ದಪರು. ನಾವು ಪೋಗಿ ಬಿಡಿಸಿ ಕರೆದೊಯ್ಯವೇಳ್ಕೆಂದು ಸರ್ವರೊಳುಸುರ್ದು ಪೊಡವಿ ಬೆರಗಾಗಲಾ ಶಿವಸಮಾಧಿಯೊಳೆಯ್ದಿ ಮೃಡನ ಸನ್ನಿಧಿಗೆ ಕರೆದೊಯ್ದು ಮೋಕ್ಷವನಿತ್ತ ಪ್ರತ್ಯಕ್ಷ ಶಿವಮೂರ್ತಿಯು"[38] ಎಂದು ಬೋಳಬಸವನನ್ನು ಕುರಿತು ಹೇಳಿದ್ದಾನೆ. ಇಲ್ಲಿ ಉಲ್ಲೇಖಗೊಂಡ ಬಿಜ್ಜಾವರದ ಗೌಡ ತೋಂಟನೆಂದರೆ ಇಮ್ಮಡಿ ಚಿಕ್ಕಭೂಪಾಲನ ಮಗ ತೋಟೇಂದ್ರ ಎಂಬುದು ಸ್ಪಷ್ಟ. ಇವನು ತನ್ನ ತಂದೆಯ ಜೊತೆಯಲ್ಲಿ ವೈರಿಗಳೊಡನೆ ಹೋರಾಡಿ ಹರವೆ ಕಾಳಗದಲ್ಲಿ ಮಡಿದ ಎಂಬ ವಿಷಯ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಉಕ್ತವಾಗಿದೆ ಎಂಬುದನ್ನು ಮೇಲೆ ಉಲ್ಲೇಖಿಸಲಾಗಿದೆ. ಈತನನ್ನು ಕೈಲಾಸಪುರದ ಬಾಗಿಲಲ್ಲಿ ತಡೆಯಲು ಬೋಳಬಸವೇಶ್ವರನು ಶಿವಸಮಾಧಿಯನ್ನು ಹೊಂದಿ ಹೋಗಿ ಬಿಡಿಸಿ ಅವನನ್ನು ಮೃಡನ ಸನ್ನಿಧಿಗೆ ಕರೆದೊಯ್ದು ಮೋಕ್ಷವೀಯುತ್ತಾನೆ. ಅಂದರೆ ತೋಟೇಂದ್ರ ತೀರಿದ ಕೆಲವೇ ದಿನಗಳಲ್ಲಿ ಬೋಳಬಸವೇಶ್ವರನೂ ಐಕ್ಯನಾದನು ಎಂಬ ಧ್ವನಿ ಇಲ್ಲಿ ಅಡಗಿರುವಂತೆ ಕಾಣುತ್ತದೆ. ಇದರಿಂದ ಬೋಳಬಸವೇಶ್ವರನು ಸಪ್ಪೇಂದ್ರನಿಗೆ ಪಟ್ಟಗಟ್ಟಿ ಸ್ವಲ್ಪೇ ದಿನಗಳಲ್ಲಿ ಅಂದರೆ ೧೫೯೪ರಲ್ಲಿಯೇ ಶಿವಸಮಾಧಿಯನ್ನು ಹೊಂದಿದನು ಎಂದು ಹೇಳಬೇಕಾಗುತ್ತದೆ. ಈ ಆಧಾರಗಳ ಮೇಲಿಂದ ಬೋಳಬಸವೇಶ ೧೫೧೩ಕ್ಕಿಂತ ಮೊದಲು ಹುಟ್ಟಿ, ೧೫೯೪ರಲ್ಲಿ ಐಕ್ಯವಾದನು ಎಂದು ನಿರ್ಧರಿಸಬಹುದು. ಈತ ೯೬ ವರ್ಷ ಬಾಳಿ ಬದುಕಿದನೆಂದು ನಿರಂಜನವಂಶರತ್ನಾಕರ ಮತ್ತು ಮಹಾಲಿಂಗೇಂದ್ರವಿಜಯಗಳಲ್ಲಿ ಹೇಳಲಾಗಿದೆ. ಮೇಲಿನ ಕಾಲಾವಧಿ ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ.

ಜೀವನ ಚರಿತ್ರೆ : ಬೋಳಬಸವೇಶ್ವರನ ಜೀವನೇತಿಹಾಸ ಕುರಿತ ಸಾಮಗ್ರಿ ತೀರ ಅಲ್ಪ. ತೋಂಟದ ಸಿದ್ಧಲಿಂಗರನ್ನು ಕುರಿತು ವಿಪುಲ ಸಾಹಿತ್ಯ ದೊರಕುವಾಗ, ಅವರ ತರುವಾಯ ನಿರಂಜನಪೀಠದ ಅಧ್ಯಕ್ಷನಾಗಿ ವೀರಶೈವಧರ್ಮ ತತ್ವಗಳನ್ನು ಪ್ರಚುರಪಡಿಸುವಲ್ಲಿ ಮಹತ್ವದ ಪಾತ್ರವಾಡಿ, 'ಎರಡನೆಯ ಸಿದ್ಧದೇಶಿಕ' ನೆಂದು ಶಿಷ್ಯರಿಂದ ಗೌರವಿಸಿಕೊಂಡ ಈತನ ಬಗೆಗೆ ಈತ ಮಾಡಿದ ಸಾಧನೆ, ಸಿದ್ಧಿಗಳನ್ನು ವಿವರಿಸುವ ಒಂದೂ ಕೃತಿ ರಚನೆಗೊಳ್ಳದೆ ಇರುವುದು ಸೋಜಿಗದ ಸಂಗತಿ.[39]

ತೋಂಟದ ಸಿದ್ಧಲಿಂಗರ ಚರಿತ್ರೆಯನ್ನು ಹೇಳುವ ಕೆಲವು ಕಾವ್ಯಗಳಲ್ಲಿ ಕೊನೆಗೆ ಸಿದ್ಧಲಿಂಗರು ತಮ್ಮ ಶಿಷ್ಯನಾದ ಬೋಳಬಸವೇಶ್ವರನಿಗೆ ಷಟ್‌ಸ್ಥಲೋಪದೇಶ ಮಾಡಿ, ನಿರಂಜನಪೀಠದ ಪಟ್ಟಾಧಿಕಾರವನ್ನು ವಹಿಸಿ ನಿರ್ವಿಕಲ್ಪಸಮಾಧಿಯನ್ನು ಹೊಂದಿದರು ಎಂದು ಮಾತ್ರ ಹೇಳಲಾಗಿದೆ. ಅದೇ ಮಹಾತ್ಮನ ಚರಿತ್ರೆಯನ್ನು ಹೇಳುವ ಶಾಂತೇಶನ ಸಿದ್ಧೇಶ್ವರ ಪುರಾಣ, ಚೆನ್ನವೀರಜಂಗಮದೇವನ ಷಟ್‌ಸ್ಥಲವಲ್ಲಭ ಕೃತಿಗಳಲ್ಲಿ ಈ ವಿಷಯವೂ ಸಹಿತ ಬರದೇ ಇರುವುದು ಇನ್ನೂ ವಿಸ್ಮಯದ ಸಂಗತಿಯಾಗಿದೆ. ವಿರಕ್ತ ತೋಂಟದಾರ್ಯರ ಸಿದ್ಧೇಶ್ವರ ಪುರಾಣ, ತೀರ ಈಚಿನದಾದ ಮಹಾದೇವನ (೧೮೨೦) ಮಹಾಲಿಂಗೇಂದ್ರವಿಜಯ, ಗದ್ಯಕೃತಿಗಳಾದ ನಿರಂಜನಜಂಗಮವಂಶದರ್ಪಣ ಮತ್ತು ನಿರಂಜನವಂಶರತ್ನಾಕರಗಳಲ್ಲಿ

ಈತನನ್ನು ಕುರಿತ ಕೆಲವು ಹೆಚ್ಚಿನ ವಿವರಗಳು ದೊರೆಯುತ್ತವೆ. ಸಿದ್ಧನಂಜೇಶನ ಗುರುರಾಜಚಾರಿತ್ರ, ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ, ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರಪುರಾಣ, ಗುಬ್ಬಿಮಲ್ಲಣಾರ್ಯನ ಭಾವ ಚಿಂತಾರತ್ನಗಳಲ್ಲಿ ಈತನ ವ್ಯಕ್ತಿ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡ ಸ್ತುತಿಪದ್ಯಗಳು ಬಂದರೆ, ಸಂಪಾದನೆಯ ಪರ್ವತೇಶನ ಚತುರಾಚಾರ್ಯಪುರಾಣ, ಸಂಪಾದನೆಯ ಗುರುಲಿಂಗದೇವನ ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನ, ಸೋಮಶೇಖರ ಶಿವಯೋಗಿಯ ಷಟ್‌ಸ್ಥಲಜ್ಞಾನಸಾರಾಮೃತ ಬೆಡಗಿನ ವಚನಗಳ ಟೀಕೆ, ಮಹಾಂತಸ್ವಾಮಿಯ ನಾಂದ್ಯ, ಬಸವಲಿಂಗ ಶಿವಯೋಗಿಯ ಮಾಚಿದೇವ ಮನೋವಿಲಾಸ ಮತ್ತು ಎಡೆಯೂರ ಶಾಸನಗಳಲ್ಲಿ ಗುರುಪರಂಪರೆಯ ಮಾಲಿಕೆಯಲ್ಲಿ ಈತನ ಹೆಸರು ಮಾತ್ರ ಉಲ್ಲೇಖವಾಗಿದೆ.

ಅಲ್ಲಲ್ಲಿ ಬರುವ ಬಿಡಿಬಿಡಿಯಾದ ಈ ಎಳೆಗಳನ್ನು ಜೋಡಿಸಿ ಬೋಳಬಸವೇಶ್ವರನ ಜೀವನಚರಿತ್ರೆಯನ್ನು ಕೆಳಗಿನಂತೆ ಹೆಣೆಯಬಹುದು:

ನಾಗವಲ್ಲಿ ಎಂಬ ಊರಲ್ಲಿ ಶಿವಪೂಜೆಯಾರ್ಯನೆಂಬ ಶರಣನಿದ್ದ. ನಿತ್ಯನಿಷ್ಠೆಯಿಂದ ಶಿವಪೂಜೆ ಮಾಡುವುದು ಅವನ ಕಾಯಕವಾಗಿತ್ತು. ಅವನಿಗೆ ನಿರಕ್ಷರ ಬೋಳಬಸವನೆಂದು ಮತ್ತೊಂದು ಹೆಸರು. ಚಿಕ್ಕಂದಿನಲ್ಲಿ ಆತ ನಿರಕ್ಷರಿಯೂ ಬೋಳೇಸ್ವಭಾವದವನೂ ಸದ್ಭಕ್ತಿಸಂಪನ್ನನೂ ಆದುದರಿಂದ ಆತನಿಗೆ ಈ ಹೆಸರು ಅನ್ವರ್ಥಕವಾಗಿ ಬಂದಿತ್ತು.

ಕಾಲಾಂತರದಲ್ಲಿ ಈತನಿಗೆ ತೋಂಟದ ಸಿದ್ಧಲಿಂಗರ ಕೃಪೆಯಿಂದ ಮಾತು ಬಂತು; ಮಾತಿಗೆ ಮೀರಿದ ಮತಿ ಪ್ರಾಪ್ತವಾಯಿತು. ವೇದ ಆಗಮ ಉಪನಿಷತ್ತು ಪುರಾಣ ನ್ಯಾಯ ತರ್ಕ ಮೀಮಾಂಸೆ ವ್ಯಾಕರಣ ಛಂದಸ್ಸು, ಸಕಲ ಶಾಸ್ತ್ರಗಳಲ್ಲಿ ಆತ ಪಾರಂಗತನಾದ. ಕೇವಲ ಇಪ್ಪತ್ತೊಂದು ದಿನಗಳಲ್ಲಿ ಆತ ಸುಜ್ಞಾನಿ, ವಾಗ್ಮಿದವರ, ವಾದಪಟುವಾಗಿ ತನ್ನೊಡನೆ ಸ್ಪರ್ಧೆಗಿಳಿದವರನ್ನು ಸುಲಭವಾಗಿ ಜಯಿಸಿದ. ತಾನು ಸಂಪಾದಿಸಿದ ಈ ಅಪೂರ್ವ ಜ್ಞಾನವನ್ನು ಲೋಕ ಕಲ್ಯಾಣಕ್ಕಾಗಿ ಹಂಚತೊಡಗಿದ.

ಹೀಗಿರುವಾಗ ತೋಂಟದ ಸಿದ್ಧಲಿಂಗರು ಲೋಕ ಸಂಗ್ರಹಕ್ಕಾಗಿ ಷಟ್‌ಸ್ಥಲೋಪದೇಶ ಮಾಡುತ್ತ ಸಂಚಾರ ಕೈಕೊಂಡರು. ಅವರ ಹಿಂದೆ ೭೦೦ ಜನ ವಿರಕ್ತ ಚರಮೂರ್ತಿಗಳು ಸಾಗಿದರು. ಅವರಲ್ಲಿ ಬೋಳಬಸವನೂ ಒಬ್ಬನಾಗಿ ನಡೆದ. ಗುರುವಿನ ಸೇವೆಯನ್ನು ಭಯ-ಭಕ್ತಿ-ನಿಷ್ಠೆಗಳಿಂದ ಮಾಡತೊಡಗಿದ. ಆದ್ದರಿಂದ ಸಹಜವಾಗಿ ಈತನ ಮೇಲೆ ಗುರುವಿನ ಕೃಪಾಕಟಾಕ್ಷ ಬಿದ್ದಿತು. ದಿನದಿಂದ ದಿನಕ್ಕೆ ಗುರುಶಿಷ್ಯರಲ್ಲಿ ಆತ್ಮೀಯತೆ ಬೆಳೆಯಿತು. ಬೋಳಬಸವ ಗುರುವಿನ ಅಂತರಂಗದ ಶಿಷ್ಯನಾದ. ಗುರುಗಳು ತಾವು ಕಂಡುಂಡು, ಸಾಧಿಸಿದ ಅನುಭವಾಮೃತವನ್ನು ಈತನಿಗೆ ಎರೆಯುತ್ತ ನಡೆದರು. ಹಾಗೇ ಊರಿಂದೂರಿಗೆ, ನಾಡಿನಿಂದ ನಾಡಿಗೆ, ದೇಶದಿಂದ ದೇಶಕ್ಕೆ ಸಂಚಾರ ಸಾಗಿತು. ಅಲ್ಲಲ್ಲಿ ಬಯಸಿ ಬಂದ ಭಕ್ತರನ್ನು ಉದ್ಧರಿಸುತ್ತ, ಅವರಿಗೆ ಬಂದ ರೋಗರುಜಿನ ಆಪತ್ತು-ವಿಪತ್ತುಗಳನ್ನು ಪರಿಹರಿಸುತ್ತ ಅನೇಕ ಪವಾಡಗಳನ್ನು ಮೆರೆಯುತ್ತ ಮುನ್ನಡೆದರು.

ಹಾಗೆ ನಡೆದು ಕಗ್ಗೆರೆಗೆ ಬಂದರು. ಅಲ್ಲಿ ಗುರುಸಿದ್ಧಲಿಂಗರು ಲಿಂಗಾರ್ಚನೆಯಲ್ಲಿ ಮಗ್ನರಾದರು. ಬಾಹ್ಯ ಪ್ರಪಂಚದ ಅರಿವನ್ನು ಮೀರಿ ಶಿವಯೋಗ ಸಮಾಧಿಯಲ್ಲಿ ಮುಳುಗಿದರು. ಗುರುವಿನ ಲಿಂಗಲೀಲಾವಿಲಾಸವನ್ನು, ಲಿಂಗಾರ್ಚನಾ ನಿಷ್ಠೆಯನ್ನು ಕಂಡು ಬೋಳಬಸವ ನಿಬ್ಬೆರಗಾದ. ಮನದುಂಬಿ ಸ್ತುತಿಸಿದ: ಹರ್ಷದಿಂದ ಕುಣಿದು ಕುಪ್ಪಳಿಸಿದ; ಕುಕಿಲಿರಿದು ಕೂಗಿದ.

ಮತ್ತೊಂದು ದಿನ ನಾಗಿಣೆನದಿಯ ತೀರದ ಶಿಲಾಮಂಟಪದಲ್ಲಿ ಸರ್ವವಿರಕ್ತರ ಮಧ್ಯೆ ಸಿದ್ಧಲಿಂಗಗುರು ಮಂಡಿಸಿದ್ದರು. ಬೋಳಬಸವ ಕಂಡು ಅತ್ಯಂತ ಹರ್ಷಚಿತ್ತನಾಗಿ ಬಂದು ಸಾಷ್ಟಾಂಗವೆರಗಿದ. ಚರಣಕಮಲವನ್ನು ಅಪ್ಪಿ "ಉಜ್ವಲ ಮಹಾತೇಜೋಮೂರ್ತಿ, ಕಾರುಣ್ಯನಿಲಯ ಮದ್ಗುರುವೆ, ಸದ್ಗುರುವೆ, ಚಿದ್ಗುರುವೆ ಷಟ್‌ಸ್ಥಲವನರುಪಿ ಸಲಹೆನ್ನನು" ಎಂದು ಬಿನ್ನವಿಸಿದ. ಗುರು ಸಿದ್ಧಲಿಂಗರಿಗೆ ಅತ್ಯಾನಂದವಾಯಿತು. ನಸುನಗುತ್ತ ಶಿಷ್ಯನ ಕರವಿಡಿದು ಕರುಣೆಯಿಂದ ಮೇಲೆತ್ತಿ ಕಾರುಣ್ಯಾಮೃತ ಕಟಾಕ್ಷಗಳಿಂದ ನೋಡಿ, ಮೃದಡವಿ "ನೀನು ಕೇಳಿದ ಮಹಾಪ್ರಶ್ನೆ ಲೇಸಾದುದು. ಹೇಳುವೆ ಚಿತ್ತಶುದ್ಧಿಯಿಂದ ಕೇಳು" ಎಂದು ವಿವರಿಸತೊಡಗಿದರು. 'ವೀರಶೈವರಲ್ಲಿ ಜನ್ಮವೊಂದರಲ್ಲಿಯೇ ನಿಜಮೋಕ್ಷ' ಎಂದು ವೀರಶೈವದ ಮಹತಿಯನ್ನು ಹೇಳುತ್ತ, ಮುಂದೆ ಭಕ್ತಾದಿ ಐಕ್ಯಾಂತ ಷಟ್‌ಸ್ಥಲಗಳ ಸ್ವರೂಪ-ಸಂಬಂಧ-ಲಕ್ಷಣಗಳನ್ನು, ಅಂಗಸ್ಥಲ ಲಿಂಗಸ್ಥಲ ಸಮನ್ವಿತ ಏಕೋತ್ತರ ಶತಸ್ಥಲಗಳ ರಚನೆ-ರಹಸ್ಯವನ್ನು 'ವಿರತಕುಲತಿಲಕ' ನೆನಿಸಿದ ಬೋಳಬಸವನಿಗೆ ಬೋಧಿಸಿದರು. ಕೊನೆಯಲ್ಲಿ "ಕೇಳಲ್ಕೆ ಕಂದ ನಿನಗೀ ಮಾರ್ಗವಳವಟ್ಟಿತು ಅವನಿಯೊಳು ಕುಂದದಾನಂದದಿಂದಾ ಚರಿಸುತಿರ್ಪುದು", "ಈ ಸಹಜ ಷಟ್‌ಸ್ಥಲಬ್ರಹ್ಮಮಂ ಮುಮುಕ್ಷುಗಳಿಗೊಲವಿಂದರುಪಿ ರಕ್ಷಿಸುವುದು" ಎಂದು ಹೇಳಿದರು. ಅದಕ್ಕೆ ಬೋಳಬಸವೇಶನು ಸಂದೇಹ-ಸಂತೋಷಗಳಿಂದ "ಸದ್ಗುರುವೆ, ನೀನಿಂತೇ ಪರಿಯೊಳು ನಿರವಿಸಲು ಎನಗೆ ಸತ್ವವುಂಟೆ

ದೇಶ ಮತ್ತು ರಾಷ್ಟ್ರ ನಾಯಕರೊಡನೆ ಶ್ರೀಶ್ರೀಗಳು



ಶ್ರೀಗಳವರೊಂದಿಗೆ ಶ್ರೀಮಾನ್ ದೇವೇಗೌಡರು (ಮುಖ್ಯಮಂತ್ರಿಗಳು)



ನಜೀರ್ ಸಾಬ್ (ಸಚಿವರು)



ಶ್ರೀಗಳವರಿಗೆ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಂದ ಮಾಲಾರ್ಪಣೆ



ಶ್ರೀಗಳವರಿಂದ ಶ್ರೀ ಶಿವರಾಜ್ ಪಾಟೀಲರಿಗೆ ಸನ್ಮಾನ



ಶ್ರೀಗಳು ಮತ್ತು ಶ್ರೀ ದೇಶಪಾಂಡೆಯವರು



ಶ್ರೀಗಳು ಮತ್ತು ಮಾಜಿ ಪ್ರಧಾನಿ ಶ್ರೀ ಚಂದ್ರಶೇಖರ್



ಶ್ರೀಗಳು ಮತ್ತು ಕರ್ನಾಟಕದ ರಾಜ್ಯಪಾಲ ಶ್ರೀ ವೆಂಕಟಸುಬ್ಬಯ್ಯನವರು



ಶ್ರೀಗಳು ಮತ್ತು ಸಚಿವ ಶ್ರೀ ಎಸ್. ಎಸ್. ಪಾಟೀಲ್ ಹಾಗೂ ಸಚಿವ ಶ್ರೀ ಟಿ. ನಾಗರಾಜಯ್ಯ



ಮಾಜಿ ಮುಖ್ಯ ಮಂತ್ರಿ ಶ್ರೀ ಎಸ್.ಆರ್. ಬೊಮ್ಮಾಯಿ



ಶ್ರೀಗಳು ಮತ್ತು ಸಿರಿಗೆರೆ ಶ್ರೀಗಳು ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ಬಂಗಾರಪ್ಪ



ಶ್ರೀಗಳು ಮತ್ತು ಮಾಜಿ ಆಗಿನ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಹಾಗೂ ಎಸ್.ಐ.ಟಿ. ಪ್ರಿನ್ಸಿಪಾಲ್ ಡಾ. ಎಂ.ಎನ್. ಚನ್ನಬಸಪ್ಪನವರು



ಶ್ರೀಗಳು ಮತ್ತು ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್



ಮುಂಡರಗಿ ಶ್ರೀಗಳು ಹಾಗೂ ಕೇಂದ್ರದ ಮಾಜಿ ಸಚಿವ ಶ್ರೀ ಚಂದ್ರಶೇಖರ ಮೂರ್ತಿ



ಮಾಜಿ ಸಚಿವ ಶ್ರೀ ಹಾರ್ನಳ್ಳಿ ರಾಮಸ್ವಾಮಿ



ಶ್ರೀಗಳು ಮತ್ತು ಮಾಜಿ ಸಚಿವೆ ನಾಗರತ್ನಮ್ಮನವರು



ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಸನ್ಮಾನ

ಶ್ರೀ ಉದ್ದಾನೇಶ್ವರ ಜಯಂತಿ ಮತ್ತು ಬಸವ ಜಯಂತಿ ಸಮಾರೋಪ ದೃಶ್ಯಗಳು





ಶ್ರೀ ಉದ್ದಾನಶಿವಯೋಗಿಗಳ ಉತ್ಸವ ದೃಶ್ಯಗಳು



ಕಿರಿಯ ಶ್ರೀಗಳು - ಹಿರಿಯ ಶ್ರೀಗಳು




ಪ್ರೊ. ಎಲ್.ಎಸ್. ಶೇಷಗಿರಿರಾವ್, ಶ್ರೀಗಳು, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು



ಶ್ರೀ ಗೊ.ರು. ಚನ್ನಬಸಪ್ಪ, ಪ್ರೊ. ಜಿ.ಎಸ್. ಎಸ್., ಟಿ.ಎಂ. ಚಂದ್ರಶೇಖರ್, ಶ್ರೀಗಳು, ಬೇಲಿಮಠದ ಶ್ರೀಗಳು ಮತ್ತು ಕನಕಪುರದ ಶ್ರೀಗಳು



ವಿವಿಧ ಮಠಾಧೀಶರು



ಶ್ರೀಗಳವರಿಗೆ ಮಾಲಾರ್ಪಣೆ : ಶ್ರೀ ಜಿ.ಎಸ್. ಮುದ್ದಪ್ಪನವರಿದ್ದಾರೆ




ಡಾ. ಎಸ್.ಜಿ. ನಾಗಲೋಟಿ ಮಠ ಮಾತನಾಡುತ್ತಿರುವುದು. ಶ್ರೀ ಎಚ್. ಗಂಗಾಧರನ್, ದೇಗುಲಮಠದ ಶ್ರೀಗಳು, ಬೆಟ್ಟದಪುರ ಶ್ರೀಗಳು



ಉದ್ದಾನೇಶ್ವರ ಜಯಂತಿ ಮತ್ತು ಬಸವ ಜಯಂತಿ ಸಮಾರೋಪ ಸಮಾರಂಭದ ದೃಶ್ಯಗಳು





ಶ್ರೀಗಳವರಿಗೆ ಪುಷ್ಪವೃಷ್ಟಿ



ಶ್ರೀಗಳವರಿಂದ ಶ್ರೀ ಗೊ.ರು. ಚನ್ನಬಸಪ್ಪನವರಿಗೆ ಸನ್ಮಾನ



ಬಸವ ಜಯಂತಿ : ವಾರ್ಷಿಕ ಸಮಾರೋಪ ಸಮಾರಂಭದಲ್ಲಿ ಶ್ರೀಗಳವರು ಮಾತನಾಡುತ್ತಿರುವುದು.



ಸಮಾರಂಭದ ಒಂದು ದೃಶ್ಯ



ಸಮಾರಂಭದ ಒಂದು ದೃಶ್ಯ



ಉತ್ಸವದ ದೃಶ್ಯ

ಬೋಧಿಸುವೊಡೆಲ್ಲಕೆ?'' ಎಂದು ಪ್ರಶ್ನಿಸುತ್ತಾನೆ. ಆಗ ಸಿದ್ಧಲಿಂಗ ''ನಿನಗೇಕೆ ಸಂದೆಯಂ ಅಖಿಳಲೋಕದೊಳಗೆ । ಅನುವಿನಿಂ ಪರಮ ಷಟ್‌ಸ್ಥಲದೆ ಸನ್ಮಾರ್ಗಮಂ । ಘನಹರ್ಷದಿಂದುಂಟುಮಾಡಲೆಂದವನಿಯೊಳು ಬಂದ ಕಾರಣದಿ ನಾನು ॥ ನಿನಗೆ ಪೇಳ್ದೆನು ನೀನವರ ಚಿತ್ತಗಳನರಿದು । ವಿನಯದಿಂದವರ ಬೋಧಿಸಿ ನಿಲಿಸಿ ನಿಜ ಮುಕ್ತಿವನಿತೆಯೊಳಗೇಕತ್ವಮಂ ಮಾಳ್ಪುದು'' (೨೫-೪) ಎಂದು ತಿಳಿಸಿದ. ಬೋಳಬಸವನಿಗೆ ಇದು ನುಂಗಲೂ ಬಾರದ, ಉಗುಳಲೂ ಬಾರದ ಬಿಸಿತುಪ್ಪದಂತೆನಿಸಿತು. ಆದರೆ ತನಗೀ ಕಾರ್ಯ ಅನಿವಾರ್ಯವೆಂದು ಅನಿಸಿ, ಮತ್ತೆ ಗುರುವಿನಲ್ಲಿ ಸಂದೇಹ ಪರಿಹಾರಕ್ಕಾಗಿ 'ದೇವ' ನೀವು ನನ್ನ ಮೇಲಿನ ಪ್ರೀತಿಯಿಂದ ಹೀಗೆ ಹೇಳುತ್ತಿದ್ದೀರಿ. ಆದರೆ ನನಗೊಂದೂ ತಿಳಿಯದು. ಈ ಲೋಕದಲ್ಲಿ ಷಟ್‌ಸ್ಥಲಬ್ರಹ್ಮವನ್ನು ಯಾರಿಗೆ ಹೇಳಬೇಕು? ಇದನ್ನು ಕೇಳಲು ಯೋಗ್ಯ ಅಧಿಕಾರಿಗಳು ಯಾರು? ದಯವಿಟ್ಟು ತಿಳಿಸಿ ರಕ್ಷಿಸಬೇಕು'' ಎಂದು ವಿನಂತಿಸಿಕೊಳ್ಳುತ್ತಾನೆ. ಆಗ ತೋಂಟದಾರ್ಯರು ಅದನ್ನು ವಿವರಿಸತೊಡಗುತ್ತಾರೆ; ಅನಂತರ ಉನ್ನತವಾದ ಆಸನದ ಮೇಲೆ ಬೋಳಬಸವೇಶನನ್ನು ಕುಳ್ಳಿರಿಸಿ, ಸತ್ಕರುಣದಿಂದ ಪ್ರಸಾದದ ವೀಳೆಯವನ್ನು ಕೊಟ್ಟು, ಜಯಘೋಷಗಳನ್ನು ಮಾಡುವ ಸುಜ್ಞಾನಿಗಳ ಮಧ್ಯೆ, ಲೋಕಹಿತಕ್ಕೋಸ್ಕರ ಷಟ್‌ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿ ಆನಂದಿಸಿದರು. ಅದನ್ನು ಕಂಡು ಸಪ್ಪೆಯ ದೇಶಿಕ, ಪಟ್ಟಣದ ದೇವ, ಚಂದ್ರಶೇಖರ ದೇವ, ದೊಡ್ಡ ಸಿದ್ದೇಶ, ಬಿಟ್ಟಿಗ ದೇವ, ಶೀಲವಂತೇಶ, ಉಪ್ಪಿನಹಳ್ಳಿಯಯ್ಯ ಮೊದಲಾದ ಶಿಷ್ಯಸಮೂಹವೆಲ್ಲ ಸಂತಸಗೊಂಡು, ಇವನು 'ಎರಡನೆಯ ಸಿದ್ಧದೇಶಿಕ'ನಲ್ಲದೆ ಬೇರಲ್ಲ ಎಂದು ಭಾವಿಸಿ, ಈತನಿಂದ ಲೋಕದಲ್ಲಿ ಕುಂದದೆ ಷಟ್‌ಸ್ಥಲಮಾರ್ಗ ಪಸರಿಸುವುದು ಎಂದು ನಲಿದಾಡುತ್ತ, ಸಕಲಸನ್ಮಾರ್ಗವನ್ನು ಅವನಿಂದ ತಿಳಿದು, ಶಿವಜ್ಞಾನಯುಕ್ತರಾಗಿ ಅವಿರಳನಿಜಾನಂದದಲ್ಲಿ ಮುಳುಗಿದರು.

ಭೂಮಿಯ ಮೇಲಿನ ವಿರಕ್ತರೆಲ್ಲ ಪ್ರೀತಿಯಿಂದ ಬಂದು ಬೋಳಬಸವನ ಚರಣಕಮಲಕ್ಕೆರಗಿ, ಷಟ್‌ಸ್ಥಲಮಾರ್ಗವನ್ನು ತಿಳಿದು, ಭಕ್ತಿಜ್ಞಾನವೈರಾಗ್ಯ ಸಂಪನ್ನರಾಗಿ ಸತ್ಕೀರ್ತಿಯನ್ನು ಹೊಂದಿ ಲೋಕದಲ್ಲೆಲ್ಲ ಸಂಚರಿಸತೊಡಗಿದರು. ಲೋಕದಲ್ಲೆಲ್ಲ ಷಟ್‌ಸ್ಥಲಬ್ರಹ್ಮಿಗಳು ತುಂಬಿ, ಭೂತಳವೆಲ್ಲ ಷಟ್‌ಸ್ಥಲಮಯವಾಗಲು ಚಿಜ್ಯೋತಿ ಸ್ವರೂಪನಾದ ತೋಂಟದಾರ್ಯ ಇದನ್ನು ಕಂಡು ಸಂತಸಪಟ್ಟು, ಪ್ರೀತಿಯಿಂದ ಬೋಳಬಸವ ಮೊದಲಾದ ತನ್ನ ಶಿಷ್ಯರನ್ನೆಲ್ಲ ಹತ್ತಿರ ಕರೆದು, ಸಂತೈಸಿ, ''ಭೂತಳದೊಳಾನೆನ್ನ ಸ್ವಾತಂತ್ರ್ಯದಿಂ ಬಂದ ಲೀಲೆ ಸೌಖ್ಯವನಿತ್ತುದು'' ಎಂದು ಹೇಳಿ ಶಿವಯೋಗ ಸಮಾಧಿಯಲ್ಲಿ ಮೂರ್ತಗೊಂಡರು.

ಮುಂದೆ ಬೋಳಬಸವ ಗುರುವಿನ ಆಣತಿಯನ್ನು ಶಿರದಲ್ಲಿ ಧರಿಸಿ ಲೋಕಸಂಚಾರ ಕೈಕೊಂಡು ಗುರುವಿನಂತೆ ಅನೇಕ ಮಹಿಮೆಗಳನ್ನು ಮೆರೆದನು. ತನ್ನಿಂದ ಈ ಲೋಕದ ಜನ ಉದ್ಧಾರವಾಗಲಿ ಎಂದು ಬೋಧನ ಸಂಸ್ಥೆಯನ್ನು ಸ್ಥಾಪಿಸಿ, ಏಳುನೂರು ಜನ ಚರಮೂರ್ತಿಗಳಿಗೆ ಮತ್ತು ಮೂರುಸಾವಿರ ಜನ ವಿರಕ್ತರಿಗೆ ಶಾಸ್ತ್ರಾದಿಗಳನ್ನು ಬೋಧಿಸಿ, ಸಮಾಜ ಸುಧಾರಣೆಯ ಕಾರ್ಯದಲ್ಲಿ ಅವರು ಪಾಲ್ಗೊಳ್ಳಲು ಯೋಗ್ಯವಾದ ತರಬೇತಿಯನ್ನು ಕೊಟ್ಟನು. ''ಸಮಾಜದಲ್ಲಿ ಮುಂದಾಳೆನಿಸಿಕೊಳ್ಳುವ ಜನ ಚೆನ್ನಾದ ಹೊರತು ಸಾಮಾನ್ಯ ಜನದ ಜೀವನ ಹಸನಾಗಲು ಉತ್ತೇಜನ ದೊರೆಯದೆಂಬುದು''[40] ಆತನ ನಿಲುಮೆಯಾಗಿತ್ತು. ಅದಕ್ಕಾಗಿ ಸ್ವತಃ ಜ್ಞಾನಿಯಾದ ಅವನು ಮುಂದಿನ ತನ್ನ ಉತ್ತರಾಧಿಕಾರಿಗಳು ಸಮಾಜದಲ್ಲಿ ಋಜುತ್ವವನ್ನು ಪ್ರಸಾರಮಾಡಲು ಸಮರ್ಥರಾಗಬೇಕೆಂದು ಅಂಥ ಸನ್ಯಾಸಿಗಳ ಮತ್ತು ಸಂತರ ಒಂದು ದೊಡ್ಡ ತಂಡವನ್ನೇ ಸಿದ್ಧಗೊಳಿಸಿ ಈ ಮೂಲಕ ತನ್ನ ಗುರುವಿನ ಕನಸನ್ನು ನನಸ್ಸಾಗಿಸುವತ್ತ ದಿಟ್ಟಹೆಜ್ಜೆಗಳನ್ನಿಟ್ಟನು. ದೇಶಸಂಚಾರ ಕೈಕೊಂಡಾಗ ವೀರಶೈವ ಸಿದ್ಧಾಂತವನ್ನು ಪ್ರತಿಭಟಿಸಿದವರನ್ನು ವಾದದಿಂದ ಸೋಲಿಸಿ, ಇಚ್ಛಿಸಿದಲ್ಲಿ ಅವರಿಗೆ ದೀಕ್ಷೆಯನ್ನು ಕೊಟ್ಟನು. ಗುರುವಿನಿಂದ ದೊರೆತ ಗಣಸಮೂಹ ಮುಂತಾದ ೭೨ ಬಿರುದುಗಳುಳ್ಳ ಸಕಲಸಂಭ್ರಮವನ್ನು ಒಪ್ಪಿಸಿಕೊಂಡನು. ಎಡೆಯೂರಿನಲ್ಲಿ ಪೂಜೋತ್ಸವಗಳನ್ನು ನೆರವೇರಿಸುತ್ತ, ನಿತ್ಯ ಗುರುವಿನ ಪೂಜೆ, ಜಂಗಮದಾಸೋಹ ಸಾಂಗವಾಗಿ ನಡೆಯುವ ವ್ಯವಸ್ಥೆ ಮಾಡಿದನು.

ಹಾಗೇ ದೇಶಸಂಚಾರ ಮಾಡುತ್ತ ತೋಂಟದ ಸಿದ್ಧಲಿಂಗರ ಕೃಪಾಪಾತ್ರರಾದ ಬಿಜ್ಜಾವರದ ಮಹಾನಾಡಪ್ರಭುಗಳ ರಾಜಧಾನಿಗೆ ಬಂದನು. ಅವರಿಂದ ಸೇವೆಯನ್ನು ಸ್ವೀಕರಿಸಿ, ರಾಜಗುರುವಾಗಿ ಯೋಗ್ಯ ಮಾರ್ಗದರ್ಶನ ನೀಡಿದನು. ಎಡೆಯೂರಿನ ನಂತರ ಬಿಜ್ಜಾವರವನ್ನು ತನ್ನ ಧರ್ಮಪ್ರಚಾರದ ಕೇಂದ್ರವನ್ನಾಗಿ ಮಾಡಿಕೊಂಡು ವಿಧಾಯಕ ಕಾರ್ಯಗಳನ್ನು ಎಸಗಿದನು. ಹರವೆಯ ಕಾಳಗದಲ್ಲಿ ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಮಗ ತೋಟೇಂದ್ರ ವೀರಮರಣವನ್ನಪ್ಪಲು, ಇಮ್ಮಡಿ ಚಿಕ್ಕಭೂಪಾಲನ ಎರಡನೆಯ ಮಗ ಸಪ್ಪೇಂದ್ರನಿಗೆ ಪಟ್ಟಗಟ್ಟಿ ಹರಸಿದನು. ಬಿಜ್ಜಾವರದಿಂದ ಸಪ್ಪೇಂದ್ರ ತನ್ನ ರಾಜಧಾನಿಯನ್ನು ಮದ್ದಗಿರಿಗೆ ಸ್ಥಳಾಂತರಿಸಲು, ಬೋಳಬಸವನೂ ತನ್ನ ಧರ್ಮಪ್ರಚಾರಕೇಂದ್ರವನ್ನು ಮದ್ದಗಿರಿಗೆ ವರ್ಗಾಯಿಸಿದನು. ಅಲ್ಲಿ ಅನೇಕ ಮಹಿಮೆಗಳನ್ನು ಮೆರೆದು, ಲಿಂಗಾಭಿಷೇಕ ಉದಕವನ್ನು ಮಸ್ತಕದಲ್ಲಿ ಧರಿಸಿ ಶರಣಾಗತರ ಬಯಕೆಗಳನ್ನು ಈಡೇರಿಸುತ್ತ 'ಭೂತಳದಲ್ಲಿ ಚರಿಸುವ ಮಹಾ ಮಹಿಮ' ಎಂದು ಹೊಗಳಿಸಿಕೊಳ್ಳುತ್ತ ಇರುವಾಗ, ಒಂದು

ದಿನ ಒಣಗಿದ ಅತ್ತಿಯ ಮರವನ್ನು ಕರುಣಕಟಾಕ್ಷದಿಂದ ನೋಡಿ, ಆ ಕ್ಷಣವೇ ಅದು ಚಿಗುರುವಂತೆ, ಫಲಗಳಿಂದ ತುಂಬುವಂತೆ ಮಾಡಿದ. ಅದನ್ನು ಕಂಡು ಜನರೆಲ್ಲ ಹೊಗಳಿ ಗೌರವ ಸಲ್ಲಿಸಿದರು. ಹೀಗೆ ಇರುವಾಗ ಮತ್ತೊಂದು ದಿವಸ ಕೈಲಾಸಪುರದ ಬಾಗಿಲಲ್ಲಿ ತಮ್ಮ ಪಾದಸೇವಾತುರನಾದ ಬಿಜ್ಜಾವರದ ಗೌಡ ತೋಂಟನನ್ನು ತಡೆದಿದ್ದಾರೆಂದು, ತಾನು ಹೋಗಿ ಬಿಡಿಸುತ್ತೇನೆಂದು ಎಲ್ಲರಿಗೂ ಹೇಳಿ ಭೂಮಿಯ ಜನರೆಲ್ಲ ಬೆರಗಾಗುವಂತೆ ಶಿವಸಮಾಧಿಯಲ್ಲಿ ನಿಂತು, ಆತನನ್ನು ಶಿವನ ಸನ್ನಿಧಿಗೆ ಕರೆದೊಯ್ದು ಮೋಕ್ಷವನ್ನು ಕರುಣಿಸಿದನು. ಹೀಗೆ ಬೋಳಬಸವೇಶ್ವರನು ೯೬ ವರ್ಷ ಕಾಲ ಬದುಕಿದ್ದು, ನಿತ್ಯವೂ ಮಾನವಕಲ್ಯಾಣ ಕುರಿತು ಚಿಂತಿಸುತ್ತ ಮದ್ದಗಿರಿಯಲ್ಲಿ-ಇಂದಿನ ಸಿದ್ಧಾಪುರದಲ್ಲಿ-ಸಿದ್ಧಸಮಾಧಿಯನ್ನು ಹೊಂದಿದನು.

ವ್ಯಕ್ತಿತ್ವ: ಬೋಳಬಸವೇಶ್ವರನು ಘನವ್ಯಕ್ತಿತ್ವವನ್ನು ಪಡೆದ ಸಾತ್ವಿಕ ಶಿವಯೋಗಿಯಾಗಿದ್ದ. ಆತನ ಈ ವ್ಯಕ್ತಿತ್ವದ ಅನನ್ಯತೆಯನ್ನು ಕವಿಗಳು ಮುಕ್ತಕಂಠದಿಂದ ಹೊಗಳಿದ್ದಾರೆ. ಆತನ ಶಿಷ್ಯರು ನುಡಿಗೌರವ ಸಲ್ಲಿಸಿದ್ದಾರೆ. ವಿರಕ್ತತೋಂಟದಾರ್ಯ ಆತನನ್ನು ಚಿಂತಾರಹಿತ, ಮಹಾಚಾರ್ಯ, ಅಘತಿಮಿರಸೂರ್ಯ, ವಿರತಕುಲತಿಲಕ, ಷಟ್‌ಸ್ಥಲಾಚಾರ್ಯ, ಪರಮಸಚ್ಚರಿತ, ಗುರುಕುಲಾಗ್ರಣಿ, ಚಿದಾನಂದಸ್ವರೂಪ, ಸಂಯಮೀಶ್ವರ, ಪರಮಶಿವಮೂರ್ತಿ ಎಂದು ಕರೆದರೆ, ಸಿದ್ಧನಂಜೇಶ ಪರಮಶಾಂತಮೂರ್ತಿ, ಮಹಾಮಹಿಮ, ಅನಘಪಾವನ ಸಂಯಮಿ, ಘನವಿರಕ್ತ ಪ್ರತ್ಯಕ್ಷಶಿವಮೂರ್ತಿ ಎಂದು ಬಣ್ಣಿಸಿದ್ದಾನೆ. ಗುಬ್ಬಿಯ ಮಲ್ಲಣಾರ್ಯನು ನಿರ್ಮಲಕೀರ್ತಿ, ಶ್ರೇಷ್ಠಭಕ್ತಿ, ಮುದ್ದುವಚನದಿಂದ ಕಲ್ಯಾಣದ ಬಸವನ ಮಹತ್ವವನ್ನು ಶರಣರಿಗೆ ಕಲ್ಯಾಣದುತ್ಸವ ಮಾಡಲು ಬಂದವನು ಎಂದು ಹೇಳುತ್ತಾನೆ.

ಮಲ್ಲಿಕಾರ್ಜುನನು "ವರಗುಣಭೂಷಣ ಸೂನೃತಭಾಷಣ ದುರಿತ ಕರ್ದಮ ಶೋಷಣ, ಕರುಣಾಕರ" ಎಂದೂ ಮಹಾದೇವನು "ಕಡುವಿರಕ್ತ, ವಿಷಯ ಪ್ರಪಂಚ ನಿರ್ಲಿಪ್ತ, ಬಂಧುಬಾಂಧವ ಸಂಬಂಧರಹಿತ, ಘನಜಗದ್ಗುರು, ಮೋಹವೆಂಬ ಮೇಘಮಾಲೆಗೆ ಚಂಡಮಾರುತ, ಭಕ್ತರೆಂಬ ತಾವರೆತಂಡಕ್ಕೆ ಉದಯೋನ್ಮುಖ ಸೂರ್ಯ" ಎಂದೂ ವರ್ಣಿಸಿದ್ದಾರೆ. ಗುಮ್ಮಾಳಾಪುರದ ಸಿದ್ಧಲಿಂಗ 'ಅಘದೂರ ಬೋಳಬಸವಾಚಾರ್ಯನ ಕಾರುಣ್ಯದಿಂದ ಶೂನ್ಯಬೋಧೆಯನ್ನು ಹೇಳಿದೆ'ನೆಂದೂ ಬೋಳಬಸವೇಶ್ವರನ ಕೃಪೆಯಿಂದ ಸಿದ್ಧೇಶ್ವರನೆಂಬ ಪರುಷ ಎನಗೆ ಸಾಧ್ಯವಾಯಿತೆಂದೂ ತಿಳಿಸುತ್ತಾನೆ. ಗೂಳೂರ ಸಿದ್ಧವೀರಣ್ಣೊಡೆಯ 'ಆಮಿಷಕುಂತಳ ಛೇದ್ಯನಾದ ಬೋಳಬಸವದೇಶಿಕನ ಕೃಪೆಯಿಂದ ಅಲ್ಲಮಪ್ರಭುರಾಯನ ಪರಮಾನುಭಾವಬೋಧೆಯನ್ನು ಬರೆದೆ'ನೆಂದು ಹೇಳುತ್ತಾನೆ. ಅಲ್ಲದೆ "ಜಗದಾರಾಧ್ಯರಪ್ಪ ತೋಂಟದ ಸಿದ್ಧಲಿಂಗ ಕೃಪಾಪ್ರಸನ್ನ ಪಾತ್ರರಾದ ಬೋಳಬಸವೇಶ್ವರ", "ತೋಂಟದ ಸಿದ್ಧಲಿಂಗ ಸದ್ಗುರುವರನಾಥನಾದರದೊಳಿರ್ಪ ಬೋಳಬಸವೇಶ್ವರ" ಎಂದು ಆತನನ್ನು ವಿಶೇಷಿಸಿದ್ದಾನೆ. ಸಂಪಾದನೆಯ ಪರ್ವತೇಶ ತನ್ನ ಚತುರಾಚಾರ್ಯ ಪುರಾಣದಲ್ಲಿ "ಗುರುವಿನನುಪಮವೀಟಿಕಾಪ್ರಸಾದದ ಮಹಿಮಸರಸಾನುಭಾವನಾದ ಬೋಳಬಸವ" ಎಂದು, ಸಂಪಾದನೆಯ ಗುರುಲಿಂಗದೇವ ತನ್ನ ಶೀಲವಂತಯ್ಯನ ತ್ರಿವಿಧಿವ್ಯಾಖ್ಯಾನದಲ್ಲಿ "ತೋಂಟದ ಸಿದ್ಧಲಿಂಗಪ್ರಭುವೆಂಬಾಚಾರ್ಯರ ನಿಜದರಿವಿನಾಚರಣೆಯನುಭವಿಯೇ ಬೋಳ ಬಸವೇಶ್ವರನು" ಎಂದು ಹೇಳಿದ್ದಾರೆ.

ಈ ಎಲ್ಲ ಗುಣ ವಿಶೇಷಣಗಳು ಬೋಳಬಸವನೊಬ್ಬ ಶ್ರೇಷ್ಠ ವಿರಕ್ತನಾಗಿದ್ದ, ಮಹಾನುಭಾವಿಯಾಗಿದ್ದ. ಸಚ್ಚಾರಿತ್ರ, ಸದ್ಭಕ್ತಿ, ಕಡುಸಂಯಮ, ಸಾತ್ವಿಕತೆ, ಸದ್ಗುಣಗಳ ಸಂಗಮವೆನಿಸಿ ಶಿವಸಾಕಾರವೆನಿಸಿದ್ದ, 'ಸದ್ಗುರುವಿನಿಂದಾದ ಶಿಷ್ಯ ಸದ್ಗುರುವಪ್ಪುದು ತಪ್ಪದು' ಎಂಬಂತೆ ಘನಗುರು-ಗುರುಕುಲಾಗ್ರಣಿ ಎನಿಸಿದ್ದ. ಪಾಪದೂರನಾಗಿ, ಪಾಪಿಗಳನ್ನು ತನ್ನ ಪರುಷದೃಷ್ಟಿ-ಪರುಷನುಡಿ-ಪರುಷಹಸ್ತದಿಂದ ಪವಿತ್ರಗೊಳಿಸುವ ಪರಶಿವಮೂರ್ತಿ ಎನಿಸಿದ್ದ, ಪರಮಶಾಂತಿಯೇ ಮೈವೆತ್ತಂತಿರುವ ಪರಂಜ್ಯೋತಿ ಸ್ವರೂಪನಾಗಿದ್ದ ಎಂಬುದನ್ನು ಎತ್ತಿ ಹೇಳುತ್ತವೆ; ಆತನ ವ್ಯಕ್ತಿತ್ವದ ಉತ್ತುಂಗತೆಯನ್ನು ಹೊತ್ತು ಸಾರುತ್ತವೆ.

ಶಿಷ್ಯಪರಂಪರೆ : ತೋಂಟದ ಸಿದ್ಧಲಿಂಗರ ಶಿಷ್ಯ-ಪ್ರಶಿಷ್ಯ ಪರಂಪರೆ ಅನಂತ ಶಾಖೋಪಶಾಖೆಗಳಲ್ಲಿ ಹಬ್ಬಿ ಮಹಾವೃಕ್ಷವಾಗಿ ಬೆಳೆದುನಿಂತಿದೆ. ಇವರ ಶಿಷ್ಯರಲ್ಲಿ ಬೋಳಬಸವೇಶ್ವರನಿಗೆ ಅಗ್ರಪ್ರಾಶಸ್ತ್ಯ. ಸಿದ್ಧಲಿಂಗರ ಪ್ರಥಮ ಶಿಷ್ಯನಾಗಿ ಅವರ ನಂತರದಲ್ಲಿ ನಿರಂಜನಪೀಠವನ್ನು ಮುಂದುವರಿಸಿಕೊಂಡು ಸಾಗಿದ ಈತನಿಂದ ಅನುಗ್ರಹಿತರಾಗಿ, ಶಿಷ್ಯತ್ವ ವಹಿಸಿ ಸಾಹಿತ್ಯ-ಸಿದ್ಧಾಂತ-ಆಧ್ಯಾತ್ಮ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರ ಸಂಖ್ಯೆ ಅಪಾರ. ಅವರಲ್ಲಿ ಕೆಲವರು ಕೇವಲ ಆಧ್ಯಾತ್ಮವಾದಿಗಳಾಗಿ ಷಟ್‌ಸ್ಥಲೋಪದೇಶ ಮಾಡುತ್ತ ಲೋಕಕಲ್ಯಾಣಕಾರ್ಯದಲ್ಲಿ ತೊಡಗಿದವರಾದರೆ, ಮತ್ತೆ ಕೆಲವರು ಸಾಹಿತ್ಯಸೃಷ್ಟಿ ಮಾಡಿ ಆಧ್ಯಾತ್ಮತತ್ವಗಳನ್ನು ಸಾಹಿತ್ಯ ಕೃತಿಗಳ ಮೂಲಕ ಜನತೆಗೆ ಬೋಧಿಸಿದವರು. ಇನ್ನೂ ಕೆಲವರು ಬಸವಾದಿ ಪ್ರಮಥರು ಉಸುರಿದ ವಚನಸಾಹಿತ್ಯವನ್ನು ಶೋಧಿಸುವ, ಸ್ಥಲಾನುಗುಣವಾಗಿ ಜೋಡಿಸುವ, ವ್ಯಾಖ್ಯಾನ, ಟೀಕೆ-ಟಿಪ್ಪಣೆ ಬರೆಯುವ ಕಾರ್ಯದಲ್ಲಿ ತೊಡಗಿದವರು. ವಿವಿಧ ಮೂಲಗಳಲ್ಲಿ ದೊರೆಯುವ ಆತನ ಶಿಷ್ಯ-ಪ್ರಶಿಷ್ಯ ಪರಂಪರೆಯನ್ನು ಆದರಲ್ಲಿ ಉಂಟಾದ ಕವಲುಗಳನ್ನು ಕೆಳಗಿನಂತೆ ಗುರುತಿಸಬಹುದು :

ತೋಂಟದ ಸಿದ್ಧಲಿಂಗ*

- ಬೋಳಬಸವೇಶ್ವರ
  - ಗೂಳೂರ ಸಿದ್ಧಲಿಂಗಯ್ಯ
    - ಗುಮ್ಮಳಾಪುರದ ಸಿದ್ಧಲಿಂಗ
      - ಗಗನದಾರ್ಯ(ಉದ್ಧಾನಾರ್ಯ)
        - ಕಟ್ಟಿಗೆಹಳ್ಳಿ ಸಿದ್ಧಲಿಂಗ
          - ಮುರಿಗೆ ಶಾಂತವೀರೇಶ್ವರ
            - ಮುರುಗೆ ಗುರುಸಿದ್ಧೇಶ್ವರ
              - ಸೋಮಶೇಖರ ಶಿವಯೋಗಿ
  - ಗೂಳೂರ ಸಿದ್ಧವೀರ
    - ಎಳಂದೂರ ಹರೀಶ್ವರ
  - ಹರತಾಳ ಚೆನ್ನಂಜೇದೇವ
    - ಎಳಮಲೆಯ ಗುರುಶಾಂತದೇವ
      - ಪರ್ವತೇಂದ್ರ
        - ವಿರಕ್ತ ತೋಂಟದಾರ್ಯ
      - ಸಂಪಾದನೆಯ ಸಿದ್ಧವೀರಣಾರ್ಯ
        - ಚೆನ್ನಮಲ್ಲಿಕಾರ್ಜುನದೇವ
          - ಸಂಪಾದನೆಯ ಪರ್ವತೇಶ
        - ಸಂಪಾದನೆಯ ಬೋಳಬಸವ
          - ಸಂಪಾದನೆಯ ಗುರುಲಿಂಗದೇವ
  - ಆನಂದ ಬಸವಲಿಂಗ ಶಿವಯೋಗಿ

ನಿರಂಜನ ಪೀಠ ಪರಂಪರೆ*

- ತೋಂಟದ ಸಿದ್ಧಲಿಂಗ
  - ಬೋಳಬಸವೇಶ್ವರ
    - ಗೂಳೂರ ಸಿದ್ಧಲಿಂಗಯ್ಯ
      - ಗುಮ್ಮಳಾಪುರದ ಸಿದ್ಧವೀರಯ್ಯ
        - ಗಗನದಾರ್ಯ
          - (ಚೀಲಾಳ ಸಮಯ) ಹರಿಹರಸ್ವಾಮಿ
            - ಭಿಕ್ಷುಕದ ಬಸವಲಿಂಗಾರ್ಯ
              - ಕಟ್ಟಿಗೆಹಳ್ಳಿ ರಾಚೋಟಿಸ್ವಾಮಿ
                - ಅಣ್ಣಿಗೆರೆ ಕೌದಿ ಮಹಾಂತಸ್ವಾಮಿ
                  - ಅರ್ಧನಾರೀಶ್ವರಸ್ವಾಮಿ
                    - ಈಸೂರ ನಂದೀಶ್ವರಸ್ವಾಮಿ
                      - ಸದಾಶಿವಸ್ವಾಮಿ
          - ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
            - (ಮುರಿಗಾ ಸಮಯ) ಮುರಿಗೆ ಶಾಂತವೀರ
              - ಸಿದ್ಧಬಸವಸ್ವಾಮಿ
                - ಹುಬ್ಬಳ್ಳಿ ಸಂಗನ ಬಸವದೇಶಿಕ
                  - ಶಾಂತವೀರದೇಶಿಕ
            - (ಕುಮಾರ ಸಮಯ) ನೋಡ ಸಿದ್ಧಲಿಂಗ
              - ಕುಮಾರದೇಶಿಕೇಂದ್ರ

- ಇಮ್ಮಡಿ ಗುರುಸಿದ್ಧಸ್ವಾಮಿ
  - ಕಪ್ಪಿನಂಜೇ ಸ್ವಾಮಿ
  - ಸ್ವಾದಿ ವೀರಚೆನ್ನ ಬಸವಾರ್ಯ
    - ಶಿರಹಟ್ಟಿ ಸಿದ್ಧಲಿಂಗಸ್ವಾಮಿ
  - ಮಹಾಂತ ಸ್ವಾಮಿ

- ಮಹಾಂತಸ್ವಾಮಿ
- ವೃದ್ಧತೋಂಟದಾರ್ಯ
- ಮೃತ್ಯುಂಜಯಸ್ವಾಮಿ
- ಸಿದ್ಧೇಶ್ವರಸ್ವಾಮಿ
- ಗುರುಬಸವಸ್ವಾಮಿ
- ಶಿವಕುಮಾರಸ್ವಾಮಿ
- ತೋಂಟದ ಸಿದ್ಧಲಿಂಗಸ್ವಾಮಿ (ಈಗ ಗದುಗಿನಲ್ಲಿರುವವರು)

- ಗುರುಪಾದಸ್ವಾಮಿ
- ಮೂರುಸಾವಿರದ ಗುರುಪಾದಸ್ವಾಮಿ
- ಮೂರುಸಾವಿರದ ಸಿದ್ಧಲಿಂಗಸ್ವಾಮಿ
- ಒಪ್ಪೊತ್ತಿನ ಚೆನ್ನವೀರಸ್ವಾಮಿ ಗುರುಮಲ್ಲಸ್ವಾಮಿ
- ವ್ಯಾಕರಣದ ಸಿದ್ಧಲಿಂಗಸ್ವಾಮಿ
- ನಿಘಂಟಿನ ಸಿದ್ಧಬಸವಸ್ವಾಮಿ
- ಸಣ್ಣಬರಹದ ರಾಚೋಟಿಸ್ವಾಮಿ
- ಮಹಾಲಿಂಗಸ್ವಾಮಿ
- ಹೆಬ್ಬಾಳದ ರುದ್ರಸ್ವಾಮಿ
- ಮುಪ್ಪಿನಸ್ವಾಮಿ
- ಜಯದೇವಸ್ವಾಮಿ
- ಜಯವಿಭವಸ್ವಾಮಿ
- ಮಲ್ಲಿಕಾರ್ಜುನಸ್ವಾಮಿ
- ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿ (ಈಗಿನ ಚಿತ್ರದುರ್ಗದ ಬೃಹನ್ಮಠದ ಅಧ್ಯಕ್ಷರು)

- ಕುಮಾರದೇಶಿಕ
- ಶಿವಪೂಜಾ ಬಸವಲಿಂಗದೇಶಿಕ
- ಇಮ್ಮಡಿ ಬಸವಲಿಂಗದೇಶಿಕ
- ಸಿದ್ಧಬಸವಲಿಂಗದೇಶಿಕ
- ಬಸವಲಿಂಗದೇಶಿಕ

ಕನ್ನಡ ಸಾಹಿತ್ಯ ಮತ್ತು ಸೈದ್ಧಾಂತಿಕ ಕ್ಷೇತ್ರಗಳಿಗೆ ಬೋಳಬಸವೇಶನ ಶಿಷ್ಯರು ಕೊಟ್ಟ ಕೊಡುಗೆ ಅನನ್ಯವಾದುದು. ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯರು ಶಿವಶರಣರ ಮಹಾನುಭಾವ ಪ್ರಸಂಗವೆನಿಸಿದ ಶೂನ್ಯಸಂಪಾದನೆಗಳನ್ನು ಸಂಯೋಜಿಸಿದರೆ ಹರತಾಳ ಚೆನ್ನಂಜೇದೇವ, ಎಳಮಲೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯ, ಸಂಪಾದನೆಯ ಬೋಳಬಸವ ಮೊದಲಾದವರು ಬಸವಾದಿ ಶರಣರ ವಚನಗಳನ್ನು ಸಂಗ್ರಹಿಸುವ, ಸ್ಥಲಾನುಗುಣವಾಗಿ ಸಂಕಲಿಸುವ ಕಾರ್ಯ ಮಾಡಿ, ಪರ್ವತಶಿವಯೋಗಿ, ವಿರಕ್ತತೋಂಟದಾರ್ಯ, ಎಳಂದೂರ ಹರೀಶ್ವರ, ಆನಂದ ಬಸವಲಿಂಗಶಿವಯೋಗಿ, ಕಟ್ಟಿಗೆಹಳ್ಳಿ ಸಿದ್ಧಲಿಂಗ, ಮುರಿಗೆ ಗುರುಸಿದ್ಧದೇವ ಮೊದಲಾದವರು ವಿಶಿಷ್ಟ ಕಾವ್ಯರಚನೆ ಮಾಡಿ, ಸಂಪಾದನೆಯ ಗುರುಲಿಂಗದೇವ, ಸೋಮಶೇಖರಶಿವಯೋಗಿ ಕಾವ್ಯ, ವಚನ, ಶಾಸ್ತ್ರಗಳಿಗೆ ವ್ಯಾಖ್ಯಾನ, ಟೀಕೆ ಟಿಪ್ಪಣೆ ಬರೆದು ವೀರಶೈವ ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. 'ಸಂಪಾದನ ಸಮಯ' ಎಂಬುದೊಂದು ಈ ಪರಂಪರೆಯಲ್ಲಿ ಹುಟ್ಟಿಕೊಂಡು ನೂರೊಂದು ವಿರಕ್ತರ ನಂತರ ಬಸವಾದಿ ಪ್ರಮಥರ ವಚನಸಾಹಿತ್ಯವನ್ನು ರಕ್ಷಿಸುವ-ಉಳಿಸುವ-ಅದರ ಉದಾತ್ತತೆಯನ್ನು ಎತ್ತಿತೋರುವ ಕಾರ್ಯವನ್ನು ಸಾಂಘಿಕವಾಗಿ ತುಂಬ ಯಶಸ್ವಿಯಾಗಿ ನೆರವೇರಿಸಿ, ವಚನಸಾಹಿತ್ಯದ ಪುನರುಜ್ಜೀವನಕ್ಕೆ ಕಾರಣವಾಯಿತು.

ಇನ್ನು ಆಧ್ಯಾತ್ಮಕ್ಷೇತ್ರದತ್ತ ದೃಷ್ಟಿ ಹರಿಸಿದರೆ, ಅಲ್ಲಿಯೂ ಬೋಳಬಸವನ ಶಿಷ್ಯಪರಂಪರೆ ಅದ್ವಿತೀಯವಾದ ಕೆಲಸ ಮಾಡಿದುದು ಗಮನಕ್ಕೆ ಬರುತ್ತದೆ. ಗಗನಾರ್ಯನಿಂದ ಮುಂದುವರಿದ ಈ ಪರಂಪರೆಯಲ್ಲಿ ಮುಂದೆ ಚೀಲಾಳ ಸಮಯ-ಮುರಿಗಾ ಸಮಯ-ಕುಮಾರ ಸಮಯ ಎಂಬ ಮೂರು ಶಾಖೆಗಳು ಹುಟ್ಟಿಕೊಂಡು, ಒಂದೊಂದು ಶಾಖೆಗಳೂ

ಸ್ವತಂತ್ರಪೀಠಗಳಾಗಿ ಬೆಳೆದು ಧಾರ್ಮಿಕಜಾಗೃತಿ, ವೀರಶೈವ ಧರ್ಮತತ್ವ-ಸಾಹಿತ್ಯ-ಸಿದ್ಧಾಂತಗಳ ಪ್ರಚಾರ, ತನ್ಮೂಲಕ ಮಾನವಕಲ್ಯಾಣವನ್ನು ನಿರಂತರವಾಗಿ ಮಾಡುತ್ತ ಸಾಗಿದವು.

ಈ ಎಲ್ಲ ಚಟುವಟಿಕೆಗಳು ತುಂಬ ವ್ಯವಸ್ಥಿತವಾಗಿ, ವ್ಯಾಪಕವಾಗಿ ನಡೆಯಲು ಬೋಳಬಸವೇಶ್ವರನು ಸತ್ ಸಂಪ್ರದಾಯ ಹಾಕಿಕೊಟ್ಟು ಚೈತನ್ಯದ ಚಿಲುಮೆಯಾಗಿ, ಪ್ರೇರಕಶಕ್ತಿಯಾಗಿ, ಮಾರ್ಗದರ್ಶಿಯಾಗಿ ನಿಂತುದೇ ಕಾರಣವಾಗಿದೆ.

ಭಾವಚಿಂತಾರತ್ನದ "ಲೌಲ್ಯವೆಲೆ ದೇವ ನಿಮ್ಮಯ ವಚನ" ಎಂಬ ಉಕ್ತಿಯನ್ನು ಗಮನಿಸಿ ಬೋಳಬಸವೇಶ್ವರನು (ಶಿವಪೂಜೆಯಾರ್ಯ) ವಚನಕಾರನಾಗಿದ್ದನೆಂದು ವಿದ್ವಾಂಸರು ಊಹಿಸಿದ್ದಾರೆ. ಆದರೆ ಆತ ರಚಿಸಿರಬಹುದಾದ ಒಂದು ವಚನವೂ ಇದುವರೆಗೂ ದೊರೆತಿಲ್ಲ. ಇದರಿಂದ ಮೇಲಿನ ಉಕ್ತಿ ಆತ ರಚಿಸಿದ ವಚನಗಳನ್ನು ಸೂಚಿಸದೆ ಆತನ ಮಾತಿನ ಮಾಧುರ್ಯ, ವಾಕ್‌ಚಾತುರ್ಯವನ್ನು ಧ್ವನಿಸುವಂತಿದೆ ಎಂದು ಹೇಳಬಹುದು. ಮಹಾಲಿಂಗೇಂದ್ರ ವಿಜಯ ಮತ್ತು ನಿರಂಜನವಂಶರತ್ನಾಕರಗಳು ಬೋಳಬಸವನು ಮಹಾಪಂಡಿತನಾಗಿದ್ದ, ವೇದಾಗಮ ಪುರಾಣಶಾಸ್ತ್ರಗಳು ಆತನಿಗೆ ಕರತಲಾಮಲಕವಾಗಿದ್ದವು. ವಾದದಲ್ಲಿ ಆತ ಅನೇಕ ಪಂಡಿತರನ್ನು ಸೋಲಿಸಿದ ಎಂದು ಹೇಳುತ್ತವೆ. ಇದಕ್ಕೆ ಪೋಷಕವೆನ್ನುವಂತೆ 'ವಾದಕಾಂಡವಿಚಾರ ಸಂಗ್ರಹ' ಮತ್ತು 'ಜಂಗಮ ಮಹತ್ವ' ಎಂಬ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆಂದು ತಿಳಿದುಬರುತ್ತದೆ.[41]

ಡಾ॥ ಎಲ್. ಬಸವರಾಜು ಅವರು "ಬೋಳಬಸವನು ಸಂಪಾದಿಸಿದ ಬಸವಾದಿ ಪ್ರಮಥರ ಒಂದು ವಚನಸಂಕಲನವಿದೆ. ವಿರಕ್ತರ ಆಚರಣೆಗೆ ಸಂಬಂಧಿಸಿದ್ದು" ಎಂದು ಹೇಳಿದ್ದಾರೆ.[42] ಆದರೆ ಇದು[43] ಈತನ ಪ್ರಶಿಷ್ಯನಾದ ಸಂಪಾದನೆಯ ಬೋಳಬಸವನದಾಗಿದೆ. ಪ್ರೊ॥ ಸಿ. ಮಹಾದೇವಪ್ಪನವರು "ತೋಂಟದ ಸಿದ್ಧೇಶ್ವರನ ಶಿಷ್ಯನಾದ ಬೋಳೇಶನ ವಚನವನ್ನು ಉದಾಹರಿಸುವುದಾಗಿ ಕಂಬಾಳ ಶಾಂತಮಲ್ಲೇಶ ಅಥವಾ ಕಂಬಾಳದೇವ ಹೇಳಿರುವುದರಿಂದ ಮಲ್ಲಣಾರ್ಯನು ಸೂಚಿಸಿರುವಂತೆ ಬೋಳಬಸವೇಶನು ವಚನಕಾರನಾಗಿದ್ದನೆಂಬುದು ಯಥಾರ್ಥವಾದ ಸಂಗತಿಯೆಂದು ತಿಳಿಯಬಹುದು" ಎಂದಿದ್ದಾರೆ.[44] ಆದರೆ ಗಣವಚನರತ್ನಾವಳಿಯಲ್ಲಿ ಸೇರಿದ ಸ್ವರವಚನಗಳು ಸಿದ್ಧಲಿಂಗೇಶ್ವರರ ಶಿಷ್ಯ ಬೋಳಬಸವೇಶನವಾಗಿರದೆ ನೂರೊಂದು ವಿರಕ್ತರಲ್ಲಿ ಒಬ್ಬನಾಗಿರಬಹುದಾದ ನಿರ್ವಾಣಿ ಬೋಳೇಶನವಾಗಿವೆ.[45]

ಇದಿರಿಂದ ಬೋಳಬಸವೇಶ್ವರ ರಚಿಸಿದ ಒಂದೂ ಕೃತಿ ಇನ್ನೂ ಲಭ್ಯವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಹೀಗೆಂದಾಕ್ಷಣ ಆತನ ವ್ಯಕ್ತಿತ್ವಕ್ಕೇನೂ ಕುಂದಿಲ್ಲ. ಸಾಹಿತ್ಯಕೃತಿ ರಚನೆಗಿಂತ ಆತ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯ ನೂರುಪಟ್ಟು ಹಿರಿದಾಗಿದೆ. ಆಧ್ಯಾತ್ಮಕೇಂದ್ರವನ್ನು ಸ್ಥಾಪಿಸಿ ಏಳುನೂರು ಜನ ಚರಮೂರ್ತಿಗಳಿಗೆ, ಮೂರುಸಾವಿರ ಜನ ವಿರಕ್ತರಿಗೆ ಯೋಗ್ಯ ತರಬೇತಿ ಕೊಟ್ಟು ಲೋಕಕಲ್ಯಾಣ ಕಾರ್ಯದಲ್ಲಿ ತೊಡಗುವಂತೆ ಮಾಡಿದ್ದು, ದೇಶಸಂಚಾರ ಕೈಕೊಂಡು ದೀನರ-ದುಃಖಿತರ ನೋವು, ದಾರಿದ್ರ್ಯಗಳನ್ನು ದೂರ ಮಾಡಿದ್ದು, ಗುಬ್ಬಿ ಮಲ್ಲಣಾರ್ಯ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯ ಮೊದಲಾದವರಿಗೆ ಕೃತಿರಚನೆಗೆ ಪ್ರೇರಣೆ ನೀಡಿದ್ದು, ಮಹಾನಾಡಪ್ರಭುಗಳ ರಾಜಗುರುಗಳಾಗಿ ಉನ್ನತ ಮಾರ್ಗದರ್ಶನ ನೀಡಿದ್ದು, ತಮ್ಮ ಸಾತ್ವಿಕ ನಡೆ ನುಡಿ, ನಿರ್ಮಲ ಬೋಧೆಯ ಮೂಲಕ ಮಾನವಸಮಾಜವನ್ನು ಋಜುತ್ವಮಾರ್ಗದತ್ತ ನಡೆಸಿದ್ದು- ಯಾವ ಮಹಾಕಾವ್ಯ ರಚನೆಗೂ ಕಡಿಮೆಯದಲ್ಲ.

ಈ ಗುರುಶ್ರೇಷ್ಠರನ್ನು ಅವರ ಶಿಷ್ಯ-ಪ್ರಶಿಷ್ಯರು ತಮ್ಮ ಕೃತಿಗಳಲ್ಲಿ ಸ್ತುತಿಸಿ ಕೃತಜ್ಞತೆ ಸಲ್ಲಿಸಿದ್ದಾರೆ. ಆತನ ಶಿಷ್ಯರಲ್ಲೊಬ್ಬನಾದ ಗುಮ್ಮಳಾಪುರದ ಸಿದ್ಧಲಿಂಗನು ತಾನು ರಚಿಸಿದ ವಚನಗಳಿಗೆ "ಬೋಳಬಸವೇಶ್ವರಾ ನಿಮ್ಮ ಧರ್ಮ"[46] ಎಂಬ ಅಂಕಿತವನ್ನು ಇಟ್ಟುಕೊಂಡು ಗುರುವಿನ ಹೆಸರನ್ನು ಚಿರಗೊಳಿಸಿದ್ದಾನೆ.[47] ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನಪೀಠದಲ್ಲಿ ಅಸ್ತಿತ್ವಕ್ಕೆ ಬಂದ ಬಸವೇಶ್ವರಪೀಠದ ವೀರಶೈವ ಗ್ರಂಥಾಲಯದಲ್ಲಿ ಸಿದ್ಧಲಿಂಗರು ಬೋಳಬಸವೇಶ್ವರಿನಿಗೆ ಷಟ್‌ಸ್ಥಲೋಪದೇಶ ಮಾಡುವ ಒಂದು ಅಪೂರ್ವ ತೈಲಚಿತ್ರವಿದೆ. ಅದು 'ಊಟಿ'ಎಂಬ ಗ್ರಾಮದಿಂದ ತಂದುದಾಗಿದೆ. ಆ ಊರಿನ ಸದ್ಭಕ್ತರು ಅದನ್ನು ಬರೆಯಿಸುವುದರ ಮೂಲಕ ಆ ಗುರುಶಿಷ್ಯರಿಗೆ ಗೌರವ ಸಲ್ಲಿಸಿದ್ದಾರೆ. ವೀರಶೈವ ಸಾಹಿತ್ಯ ಸಂಸ್ಕೃತಿಗಳ ಪಿತಾಮಹರೆನಿಸಿದ ಡಾ॥ ಬಿ. ಶಿವಮೂರ್ತಿಶಾಸ್ತ್ರಿಗಳು ಈತನ ಸ್ಥಳದ ಬಗೆಗೆ ಹೆಚ್ಚಿನ ಸಂಶೋಧನೆ ಕೈಕೊಂಡು,[48] ಕಾವ್ಯಗಳಲ್ಲಿ ಉಕ್ತವಾಗಿದ್ದಂತೆ ಬೋಳಬಸವೇಶನ ಗದ್ದುಗೆ ಮದ್ದಗಿರಿ ಗಿರಿಯಲ್ಲಿ ಇಲ್ಲ; ನೆರೆಯ ಊರಾದ ಸಿದ್ಧಾಪುರದಲ್ಲಿದೆ ಎಂದು ಗುರುತಿಸಿದ್ದಾರೆ. "ಈಗ ಅದು ಬೋಳಾರಾಧ್ಯರ ಮಠ, ಬಾಳಯ್ಯಸ್ವಾಮಿ ಮಠ

ಎಂದು ಕರೆಯಿಸಿಕೊಳ್ಳುತ್ತದೆ. ಈ ವಿಷಯ ಈ ಪರಂಪರೆಯ ಗುರುಗಳಿಗೇ ಗೊತ್ತಿಲ್ಲ. ಅಲ್ಲಿಗೆ ಹೋಗಿ ಭಕ್ತಿಪೂಜೆ ಸಲ್ಲಿಸುತ್ತಿಲ್ಲ. ಈ ಸ್ಥಿತಿಯು ವೀರಶೈವ ಸಮಾಜದ ಭಾವದಾರಿದ್ರ್ಯಕ್ಕೆ ಒಂದು ಒಳ್ಳೆಯ ನಿದರ್ಶನವಾಗಿದೆ'' ಎಂದು ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಅದರೆ ಆಲಸ್ಯ ಅಜ್ಞಾನಗಳನ್ನು ಅರಿಯದೆ ನಿತ್ಯ ಲೋಕಕಲ್ಯಾಣವನ್ನೇ ಚಿಂತಿಸಿದ ಈ ಯೋಗಿ ನಮ್ಮ ಈ ದಾರಿದ್ರ್ಯವನ್ನು ಲೆಕ್ಕಿಸದೆ, ಅನ್ಯರಿಂದ ಯಾವುದೇ ರೀತಿಯ ಗೌರವಾದರಗಳನ್ನು ಬಯಸದೆ, ಸ್ವಯಂ ಗೌರವಾನ್ವಿತನಾಗಿ ಸಿದ್ಧಾಪುರದ ಸಿದ್ಧಸಮಾಧಿಯಲ್ಲಿ ಪ್ರಶಾಂತಚಿತ್ತದಿಂದ ಮಲಗಿದ್ದಾನೆ. ಆತನ ದಿವ್ಯಚೇತನ ಮಾತ್ರ ಸದಾ ಜಾಗೃತವಾಗಿದ್ದು ಪರಂಜ್ಯೋತಿಯಂತೆ ಲೋಕವನ್ನೇ ಬೆಳಗುತ್ತಿದೆ. ಆ ಬೆಳಕಿನಿಂದ ಬಾಳು ಬೆಳಗಿಸಿಕೊಳ್ಳುವುದು ಬಿಡುವುದು ನಮಗೆ ಸೇರಿದ್ದು.

ಟಿಪ್ಪಣಿಗಳು

1 ವಿವರಗಳಿಗೆ ನೋಡಿ : ಪಿ.ಎಂ. ಗಿರಿರಾಜು: 'ತೋಂಟದ ಸಿದ್ಧಲಿಂಗಯತಿಗಳ ಗುರುಪರಂಪರೆ, ಬಸವ ಪಥ, ೩-೧, ಪು. ೨೫; ಆರ್. ಸಿ. ಹಿರೇಮಠ(ಸಂ): ಷಟ್‌ಸ್ಥಲಜ್ಞಾನಸಾರಾಮೃತ, ಪ್ರಸ್ತಾವನೆ.

2 ಇಲ್ಲೆಲ್ಲ ಬೋಳಬಸವೇಶ್ವರನ ಹೆಸರನ್ನು ಗುರುಪರಂಪರೆಯಲ್ಲಿ ಸೇರಿಸಿಲ್ಲ. ತೋಂಟದ ಸಿದ್ಧಲಿಂಗರಿಗೆ ಅದು ನಿಲ್ಲುತ್ತದೆ. ಅವರ ನಂತರದ ಅಧ್ಯಕ್ಷ ಇವನೆಂದು ಗಣಿಸಿ ಈ ಸಂಖ್ಯೆಯನ್ನು ಹೇಳಲಾಗಿದೆ.

3 ವಿವರಗಳಿಗೆ ನೋಡಿ : i. ಚೆನ್ನ ಬಸವಪುರಾಣ (ವಿರೂಪಾಕ್ಷ ಪಂಡಿತ): ತೋಂಟದ ಸಿದ್ಧಲಿಂಗ, ಸಪ್ಪೆಯಾರ್ಯ, ಬೋಳಬಸವೇಶ (ಶಿವಪೂಜೆಯಾರ್ಯ), ಉಪ್ಪಿನಹಳ್ಳಿಯಾರ್ಯ, ಗುಮ್ಮಳಾಪುರದ ವರಸಿದ್ಧಲಿಂಗೇಶ್ವರ, ಪಟ್ಟಣದ ದೇವರು, ಶೀಲವಂತಾರ್ಯ, ಘನಲಿಂಗಿದೇವ, ಸಿದ್ಧಮಲ್ಲೇಶ, ಬತ್ತಲೆಯದೇವ, ಬೆಡಗಿನ ಪರ್ವತೇಶ, ಕಂಕಣದದೇವ, ಸಂಪಗೆಯ ರಾಚವಟ್ಟದೇವರು, ಚಂದ್ರಶೇಖರ, ದೊಡ್ಡ ಸಿದ್ಧಲಿಂಗೇಶ್ವರ, ಸಿದ್ಧಲಿಂಗೇಶ್ವರ,ಮಳೆಯದೇವ, ಕೊಡಗಿಯ ಹಳ್ಳಿಯಾರ್ಯ, ಕಂಬಾಳದೇವ, ಸಿದ್ಧನಂಜೇಶ್ವರ, ಲಂಬಕರ್ಣದದೇವರು, ಎಡತೊರೆಯ ಪುರಗುರುಸಿದ್ಧವೀರಣ್ಣೊಡೆಯರು, ಚಿಕ್ಕಮಲ್ಲೇಶ, ಮದ್ದೇಶ್ವರ, ಸುರಗಿಯಾರ್ಯ, ಶಾಂತಮಲ್ಲಿಕಾರ್ಜುನ, ಜಗುನಿಯ ಮರುಳದೇವರು, ಜೋಲಿಯ ಬಸವೇಶ್ವರ, ರಾಚವಟ್ಟ, ಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಚೆನ್ನಮಲ್ಲೇಶ್ವರ.

ii. ಸಿದ್ಧೇಶ್ವರಪುರಾಣ (ವಿರಕ್ತತೋಂಟದಾರ್ಯ) : ತೋಂಟದ ಸಿದ್ಧಲಿಂಗ, ಸಪ್ಪೆಯ ಯತೀಶ, ಬೋಳಬಸವೇಶ, ಉಪ್ಪಿನಹಳ್ಳಿಯಯ್ಯ, ಗುಮ್ಮಳಾಪುರ ಸಿದ್ಧಲಿಂಗೇಶ, ಪಟ್ಟಣದ ದೇವರು, ಶೀಲವಂತೇಶ್ವರ, ಘನಲಿಂಗಿದೇವ, ಸುತ್ತೂರ ಸಿದ್ಧಮಲ್ಲೇಶ, ಬತ್ತಲೆಯದೇಸಿಕ, ಹುಚ್ಚಪರ್ವತೇಶ, ಕಂಕಣದದೇವರು, ರಾಚವೀಟಿಯದೇವರು, ಗುರುಚಂದ್ರಶೇಖರ, ದೊಡ್ಡಸಿದ್ಧೇಶ, ನಂಜದೇಶಿಕೇಂದ್ರ, ಗಟ್ಟಿಸಿದ್ಧಯ್ಯ.

iii. ಎಡೆಯೂರ ಶಾಸನ : ತೋಂಟದ ಸಿದ್ಧಲಿಂಗ, ಸಪ್ಪೆದೇವರು, ಬೋಳಬಸವರಾಜದೇವರು, ಉಪ್ಪಿನಹಳ್ಳಿಯಸ್ವಾಮಿ, ಗುಮ್ಮಳಾಪುರದ ಸಿದ್ಧಲಿಂಗದೇವರು, ಶೀಲವಂತದೇವರು, ಸಿದ್ಧದೇವ, ಕೊಡಗಿಯಹಳ್ಳಿಯದೇವರು, ನಂಜೇದೇವರು, ರೇವಣಸಿದ್ಧದೇವರು.

iv. ಗುರುರಾಜಚಾರಿತ್ರ (ಸಿದ್ಧನಂಜೇಶ) : ತೋಂಟದ ಸಿದ್ಧಲಿಂಗ, ಸಪ್ಪೆಯಯ್ಯ, ಬೋಳಬಸವೇಶ, ಸಿದ್ಧಲಿಂಗೇಶ, ಮಳೆಯ ಮಲ್ಲೇಶ

4 ಮಹಾಲಿಂಗೇಂದ್ರವಿಜಯ; 5 ಸಿದ್ಧೇಶ್ವರಪುರಾಣ (ವಿತೋಂ), ಚೆನ್ನಬಸವಪುರಾಣ, ಗುರುರಾಜಚಾರಿತ್ರ, ಸಿದ್ಧಲಿಂಗ ಸಾಂಗತ್ಯ, ಮಹಾಲಿಂಗೇಂದ್ರ ವಿಜಯ, ಚತುರಾಚಾರ್ಯಪುರಾಣ; 6 ಚೆಪುಶೂಸಂ (ಗುಂಗೂ), ಷಸಾಚಿವ ಟೀಕೆ, ಶೀಲವಂತಯ್ಯನ ತ್ರಿವಿಧಿವ್ಯಾಖ್ಯಾನ, ಮಹಾಲಿಂಗೇಂದ್ರವಿಜಯ, ಸಿಪು (ವಿತೋಂ); 7 ಸಿಪು (ವಿತೋಂ); 8 ಸಿಪು (ವಿತೋಂ); 9 ಶೂಸಂ (ಗೂ); 10 ಶೂಸಂ (ಗೂ);11 ಶೂಸಂ (ಗುಂ); 12 ಎಡೆಯೂರ ಶಾಸನ; 13 ಮಹಾ ಲಿಂಗೇಂದ್ರ ವಿಜಯ; 14 ಶೂಸಂ (ಗೂ); 15 ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ (೧-೫೪) ; 16 ನಿರಂಜನ ವಂಶರತ್ನಾಕರ, ಮಹಾಲಿಂಗೇಂದ್ರವಿಜಯ; 17 ಮಹಾಂತಸ್ವಾಮಿಯನಾಂಧ್ಯ ; 18 ಭಾವಚಿಂತಾರತ್ನ ;19 ಚೆನ್ನಬಸವ ಪುರಾಣ ; 20 ಭಾವಚಿಂತಾರತ್ನ ಸಂಗ್ರಹ (1-5, 1-೯); 21 ಚೆನ್ನಬಸವಪುರಾಣ (೬೩-೪೯);22 ಎಲ್. ಬಸವರಾಜು (ಸಂ.): ಮಹಾಲಿಂಗೇಂದ್ರ ವಿಜಯ (೧೫-೪)

23 ಶಿವನಿಗೆ 'ಬೋಳೇಶಂಕರ' ಎಂದು ಕರೆಯಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು.

24 ಇಲ್ಲವೆ ಆತ ಮೊದಲಿನಿಂದಲೂ ಶಿವಪೂಜೆಯನ್ನು ನಿತ್ಯನಿಷ್ಠೆಯಿಂದ ಮಾಡುತ್ತ ಬಂದುದರಿಂದ ಆತನಿಗೆ ಈ ಹೆಸರು ಬಂದಿರಲೂ ಬಹುದು.

25 ಎಸ್. ಶಿವಣ್ಣ (ಸಂ.) : ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರಕರಂಡ, ಪು. ೩: ಮಹಾಂತಸ್ವಾಮಿಗಳು ನಿರೂಪಿಸಿದ ನಾಂಧ್ಯ (ನುಡಿ ೧೧)

26 ವೀರಶೈವಸಾಹಿತ್ಯ ಚರಿತ್ರೆಯಲ್ಲಿ 'ನಿರ್ವಾಣಿ ಬೋಳೇಶ', ' ಸಂಪಾದನೆಯ ಬೋಳಬಸವೇಶ' - ಎಂಬ ಇಬ್ಬರು ವ್ಯಕ್ತಿಗಳು ಪ್ರಸಿದ್ಧರಾಗಿದ್ದಾರೆ. ಇವರು ಬೋಳಬಸವೇಶ್ವರನಿಂದ ಭಿನ್ನರು. ನಿರ್ವಾಣಿ ಬೋಳೇಶ ನೂರೊಂದು ವಿರಕ್ತರಲ್ಲಿ ಒಬ್ಬನಾಗಿ ಸ್ವರವಚನಗಳನ್ನು ರಚಿಸಿದ್ದಾನೆ- ನೋಡಿ: ವೀರಣ್ಣ ರಾಜೂರ (ಸಂ.): ಶಿವಯೋಗ ಪ್ರದೀಪಿಕೆ, ಪ್ರಸ್ತಾವನೆ, ಪು. ii; ಸಂಪಾದನೆಯ ಬೋಳಬಸವೇಶನು ಬೋಳಬಸವನ ಶಿಷ್ಯಪರಂಪರೆಗೆ ಸೇರಿದ ಸಂ. ಸಿದ್ಧವೀರಣ್ಣನ ಶಿಷ್ಯನಾಗಿದ್ದಾನೆ. ಈತ ಬಸವಸ್ತೋತ್ರದವಚನ, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು ಎಂಬ ಕೃತಿಗಳನ್ನು ಸಂಯೋಜಿಸಿದ್ದಾನೆ- ನೋಡಿ : ಎಂ. ಎಂ. ಕಲಬುರ್ಗಿ (ಸಂ.): ಬಸವಸ್ತೋತ್ರದ ವಚನಗಳು, ಪು. xiii.

27 ಸಿ. ಮಹಾದೇವಪ್ಪ (ಸಂ.): ಭಾವಚಿಂತಾರತ್ನಸಂಗ್ರಹ (೧-೫)

28 ಅದೇ (೧-೯)

29 ಎ.ಕ., ಸಂ. ೪ (ಹೊಸ ಆವೃತ್ತಿ, ೧೯೭೫), ಸಂ. ೭೪, ಪು. ೧೨೮

30 ಇದನ್ನು ಪ್ರೊ॥ ಸಿ. ಮಹಾದೇವಪ್ಪನವರು ಗುರುತಿಸಿದ್ದಾರೆ (ಸಿದ್ಧಲಿಂಗಶಿವಯೋಗಿ, ಪು. ೧೦೪)

31 ಭಾವಚಿಂತಾರತ್ನಸಂಗ್ರಹ, ಅನುಬಂಧ, ಪು. ೯೮

32 ತೋಂಟದ ಸಿದ್ಧಲಿಂಗರು ಗುರುಗೋಸಲ ಬಸವೇಶ್ವರರಿಂದ ದೀಕ್ಷೆ ಪಡೆದುದು ಇದೇ ಚಾಮರಾಜನಗರ ತಾಲೂಕಿಗೆ ಸೇರಿದ ಹರದನಹಳ್ಳಿಯಲ್ಲಿ ಎಂಬುದನ್ನು ಗಮನಿಸಬೇಕು.

33 ಈ ಊರು ಕಟ್ಟಿದ ಸ್ಥಳ ಮದ್ದಗಿರಿ ಸರಹದ್ದಿನಲ್ಲಿ ಇದ್ದಿರಬೇಕು. ಬೋಳಬಸವರು ಐಕ್ಯರಾದ ನಂತರ ಊರು ನಿರ್ಮಾಣವಾಗಿರಬೇಕು. ಹೀಗಾಗಿ ಮೊದಲು ಮದ್ದಗಿರಿಯಲ್ಲಿದ್ದ ಅವರ ಸಮಾಧಿ, ನಂತರ ಸಿದ್ಧಾಪುರದ ವಲಯಕ್ಕೆ ಒಳಪಟ್ಟಿರಬೇಕು.

34 ಬಿ. ಶಿವಮೂರ್ತಿಶಾಸ್ತ್ರಿ : 'ಬಿಜ್ಜಾವರ ಮತ್ತು ಸಿದ್ಧಾಪುರ' (ಕಭಾ ೮-2, ಪು. ೫೯-೬೪)

35 ಬಿಜ್ಜಾವರದಿಂದ ಮದ್ದಗಿರಿ ೩ ಮೈಲು ದೂರದಲ್ಲಿದ್ದರೆ, ಸಿದ್ಧಾಪುರ ಮದ್ದಗಿರಿಯಿಂದ ೨ ಮೈಲು ದೂರದಲ್ಲಿದೆ.

36 ಎಂ. ಎಂ. ಕಲಬುರ್ಗಿ. : 'ತೋಂಟದ ಸಿದ್ಧಲಿಂಗಯತಿಗಳ ಕಾಲ', ಮಾರ್ಗ, ಸಂ. ೧, ಪು. ೩೮೨-೩೮೫

37 ಎಂ. ಎಂ. ಕಲಬುರ್ಗಿ, ಬಿ. ಆರ್. ಹಿರೇಮಠ (ಸಂ.) : ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ (೧೭-೬೮)

38 ಗುರುರಾಜಚಾರಿತ್ರ : ೧೭-೩೪

39 ಹಾಗೇ ಈ ಪೀಠದ ಮುಂಚೆ ಬಂದ ಅನೇಕ ಗುರುಗಳ ಬಗೆಗೂ ಕಾವ್ಯಗಳೂ ಹುಟ್ಟಿಲ್ಲ. ಸಿದ್ಧಲಿಂಗನ ಪ್ರಭಾವವೇ ಹೆಚ್ಚಾಗಿ ಹೀಗಾಗಿರಬೇಕೇ?

40 ಮಹಾಲಿಂಗೇಂದ್ರವಿಜಯ, ಪೀಠಿಕೆ, ಪು. ೫೪

* i. ಷಟ್‌ಸ್ಥಲಜ್ಞಾನಸಾರಾಮೃತ -ಬೆಡಗಿನ ವಚನ ಟೀಕೆ
   ii. ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನ
   iii. ಚತುರಾಚಾರ್ಯಪುರಾಣ
   iv. ಪಾಲ್ಕುರಿಕೆ ಸೋಮನಾಥಪುರಾಣ
   v. ಮಾಚಿದೇವ ಮನೋವಿಲಾಸ

* ಸಿದ್ಧಲಿಂಗ ಶಿವಯೋಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ, ಪು. ೧೧೨ ರ ನಂತರದ ನಕ್ಷೆ

41 ಆರ್. ಸಿ. ಹಿರೇಮಠ (ಸಂ.): ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ, ಪ್ರಸ್ತಾವನೆ, ಪು. ೧೭ (ನಿರಂಜನಜಂಗಮವಂಶದರ್ಪಣ)

42 ಮಹಾಲಿಂಗೇಂದ್ರವಿಜಯ, ಪೀಠಿಕೆ, ಪು. ೪೨

43 ಇದರ ಹೆಸರು 'ಷಟ್‌ಸ್ಥಲಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು'

44 ಸಿದ್ಧಲಿಂಗ ಶಿವಯೋಗಿ, ಮೈವಿವಿ, ಪು. ೧೦೪

45 ನೋಡಿ: ಎಸ್. ಉಮಾಪತಿ (ಸಂ.) : ಗುಣವಚನ ರತ್ನಾವಳಿ, ಗದಗ

46 ಈ ವಚನ ಸಂಕಲನಕ್ಕೆ 'ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ' ಎಂದು ಹೆಸರು. ಇದರಲ್ಲಿ ೧೮ ವಚನಗಳಿವೆ.

47 ಆಧುನಿಕ ವಚನಕಾರರಾದ ಪಿ. ಬಸವಣ್ಣ ಅವರು 'ಬೋಳಬಸವೇಶ್ವರ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಅವರ ವಚನಸಂಕಲನದ ಹೆಸರು: 'ಬೋಳಬಸವನ ಬೊಂತೆ'.

48 ಬಿಜ್ಜಾವರ ಮತ್ತು ಸಿದ್ಧಾಪುರ (ಬ. ಪ. ೮-೨, ಪು. ೬೪)

ಶ್ರೀ

ಜಗಜ್ಜಾಲಪಾಲಂ ಜನಸ್ತುತ್ಯಶೀಲಂ ।
ಭವಾರಣ್ಯದಾವಂ ಭೃತಸ್ವಾನುಭಾವಂ ।
ಶಿವಾನಂದಕೋಶಂ ದಿನೇಶಪ್ರಕಾಶಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

ಪವಿತ್ರಸ್ವಗಾತ್ರಂ ಬುಧಸ್ತೋತ್ರಪಾತ್ರಂ ।
ನಿವೃತ್ತಾವರೋಧಂ ನಿಸರ್ಗಾವಬೋಧಂ ।
ಚಿದಾಮೋದ ಭಾಜಂ ಚರಾಚರ್ಯರಾಜಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

ಶಿವಾಚಾರಪಕ್ಷಂ ಕೃಪಾಭೃತ್ಯಕಟಾಕ್ಷಂ ।
ಷಡಧ್ವಾದಿಬೀಜಂ ನತಾಮರ್ತ್ಯಭೂಜಂ ।
ಪರಿತ್ಯಕ್ತರಾಗಂ ಪರಬ್ರಹ್ಮಯೋಗಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

ಜಿತಾರಾತಿವರ್ಗಂ ಗೃಹೀತಾದ್ಯಮಾರ್ಗಂ ।
ಶತಾಮ್ನಾಯಸಾರಂ ತಮಸ್ತೋಮದೂರಂ ।
ಪರಂ ಷಟ್ಸ್ಥಲಾಂಕಂ ನಿರಾತಂಕಶಂಕಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

ಸ್ವತಂತ್ರಸ್ವಲೀಲಂ ಗಜೇಂದ್ರಾನುಕೂಲಂ ।
ಮಿಳನ್ಮೂಲಮಂತ್ರಂ ಪ್ರಣೇತೇಶತಂತ್ರಂ ।
ಶಿವಧ್ಯಾನಸಕ್ತಂ ಪರಾನಾದಿಮುಕ್ತಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

ಕಲಾಸತ್ಕಲಾಪಂ ಕಪರ್ದಿಸ್ವರೂಪಂ ।
ಮನೋವೃತ್ತಿ ಶೂನ್ಯಂ ಮುನಿವ್ರಾತಮಾನ್ಯಂ ।
ಸಮುಂಚದ್ಗುಣಾಂಕಂ ಸದಾ ನಿಷ್ಕಳಂಕಂ ।
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ ॥

– **ಮಹಾಕವಿ ಷಡಕ್ಷರದೇವ (ಸಿದ್ಧಲಿಂಗಾಷ್ಟಕ)**

ENGLISH SECTION

- A brief history of Sri Siddhaganga Mutt
- Portrait of a Swamy
- Sri Basaveshwara - a biography
- Veerashaivism and Buddhism
- The path of Shatshtala

A BRIEF HISTORY OF SREE SIDDAGANGA MATH

Dr. M.N. Channabasappa

Sree Siddaganga Math is an ancient ashram fostering a continuous line of "Sivayogi Siddhapurushas" dating back to 15th century A.D.

Tha Math is located on the Bangalore-Poona National Highway and is about 63 km. from Bangalore, the State Capital, and hardly five kilometers from Tumkur, the headquarters of the district. The following write-up is an introduction to the Holy Math and its manifold activities.

1. Siddaganga - The Abode of Saints :

History has recorded that some six hundred years ago a renowned "Yati" Sri Gosala Siddeswara performed penance and founded Sri Siddaganga Math with the sole purpose of serving universal good. After some time, the famous "Virakta" - Sri Tontada Siddalingeshwara, having toured throughout the length and breadth of Karnataka and having brought about spiritual reawakening among the people of Karnataka arrived at Sri Siddaganga Math. Hallowed is that same place today with the temples of Sri Siddalingeshwaraswamy and Sri Gangamatha, where Sri Tontada Siddalingeshwara performed penance.

It is said that one hundred and eight saints, the contemporaries of Sri Gosala Siddeshwara were performing penance in the caves of Sri Siddaganga Hills. Among those saints, legend has it, that an aged one felt thirsty during a particular night, culminating in utter weakness. That fragile and weakened saint remembered Sri Gosala Siddeswara and Lord Sri Gosala Siddeshwara appeared before him and opened a hole in the rocks with his own hands and water, the sustainer of life, gurgled up from the rocks effortlessly. The aged Saint's life was saved. That holy water, the result of Sri Gosala Siddeshwara's holy penance, is today known as "Siddaganga" and worshipped by thousands of devotees every day.

Subsequent to the Saint Sri Gosala Siddeshwara, in the galaxy of the saints who reigned the holy Math, mention may be made of the Saints - Sri Nanjundaswamiji (1784 - 1820), Sri Rudraswamiji (1820 - 1853), Sri Siddalinga Swamiji (1853 - 1901), Sri Uddana Swamiji (1901 - 1941) and his Uttaradhikari Sri Marularadhya Swamiji (1924 - 1930). The present head of the Math Dr. Sree Sree Sivakumara Swamiji was initiated into the Holy order on 3.3.1930 and has assumed full responsibility of the Math from 11.1.1941.

During the time of Sri Siddalingaswamiji, Sri Muppinaswamiji and Sri Ataviswamiji, the two saints who came all the way from North Karnataka stayed in the holy Math for some time continuing their usual religious duties and made a sincere beginning of the stupendous task of feeding freely the ever arriving devotees and carried out this humanitarian work, of course, on a small scale consistent with the resources available in the holy Math at that time. Sri Uddana Swamiji continuing the tradition of Sri Ataviswamiji regarding free feeding of the devotees, was also instrumental in starting a Sanskrit pathashala as early as 1917 and a hostel with free board and lodging facilities and thus laid firm foundation for the propagation of education among rural masses. It is to be noted that those were the days when the government never objected and rather encouraged separate hostels for students belonging to different castes. At such a time, Sri Uddana Swamiji threw open the Sanskrit pathasala and the Free

boarding home to students of all castes and communities. This speaks volumes about the large heartedness and foresight of Sri Uddana Swamiji.

The two-week long annual cattle fair and the car festival of Sri Siddlaingeshwara Swamy during the holy Shivaratri were started by Sri Uddana Swamiji in 1909. A saint to the core who made the holy Math shine resplendently with the power of his penance attained his immortality on 11.1.1941.

2. Siddaganga - Piligrims' Centre :

Thousands of people of all faiths visit this holy Math every day. They worship Sri Siddalingeshwaraswamy and Gangadevi and receive the blessings of Sri Swamiji. It may be mentioned here, that irrespective of the number of, the holy Math provides all the piligrims with free board and lodging facility.

During the annual Shivaratri festival thousands of devotees from the nook and corner of the country assemble for the annual Sri Siddalingeshwaraswamy Fair and participate in it wholeheartedly. It is indeed incredible to see that in these hard days, all these devotees are fed freely twice a day by the holy Math. This annual fair provides a splendid opportunity to the farmers who are the backbone of the country's economy to sell or to purchase their cattle. There will be a concourse of nearly fifty thousand cattle. The various activities of the holy Math with the sole purpose of general welfare of all inspire the devotees to redouble their devotion and faith in the Math.

3. Siddaganga - The Centre of Learning :

There are at present, five thousand students of various castes and communities in the Sri Siddaganga Gurukula maintained and run by the holy Math. Sri Siddaganga Math providing equal opportunity under its fold to the poor as well as to the orphaned of the country, has rightly and legitimately stood as a symbol of national and religious unity and a model to be emulated by all in the country. Educational facilities are provided to the inmates of Gurukula right from the primary upto 12th standard level in the Math premises, Higher educational facilities are available at Tumkur (4 km. away from the Gurukula) where Sree Siddaganga Education Society has established colleges offering degree courses in Science, Arts, Commere, Pharmacy, Nursing, Education and Engineering. The late Uddana Swamiji in addition to free mass-feeding, by starting a Sanskrit Pathashala way back in 1917, gave fillip to the dissemination and propagation of education in general and revival of Sanskrit learning in particular. In 1932, the Sanskrit pathashala was upgraded into a Sanskrit College. This college has grown into one of the biggest Sanskrit Colleges in the country offering courses in Alankara, Vyakarana, Tarka and Shaktivishistadwaita leading to the Vidwat degree. The college which has on its rolls more than 3500 students is rejoicing in celebrating its Amritha Mahotsava during Jan. 1997.

Dr. Sree Sree Sivakumara Swamiji, the present head of the Math and a paragon among the Viraktas, is also aware of the modern day requirements. Realising the importance of modern educational set-up, besides developing the Sanskrit College His Holiness has established schools, colleges, sanskrit pathashalas and hostels in far-flung rural areas of Karnataka and neighbouring state of Andhra Pradesh.

The table given below shows the chronological development of these institutions :

Sl.No.	Name of the Institutions	Year of Starting
1.	Sree Siddalingeswara Veda-Sanskrit College, Sree Sidaganga Math, Tumkur - 572 104.	1917.

2.	Sree Siddalingeswara Residential Middle School, Sree Siddaganga Math, Tumkur District - 572 104.	1942.
3.	Sree Siddaganga High School, Tumkur - 572 103.	1944.
4.	Sree Siddalingeswara Residential Higher Primary School, Sree Siddaganga Math, Tumkur District - 572 104.	1955.
5.	Sree Siddalingeswara Residential High School, Sree Siddaganga Math, Tumkur - 572 104.	1955.
6.	Sree Siddaganga Teachers' Training Institute, B.H. Road, Tumkur - 572 102.	1956.
7.	Sree Maruthi Rural High School, Hosahalli, Pavagada Tq, Tumkur Dist.	1960.
8.	Sree Sharada High School, M.N. Kote, Gubbi Taluk, Tumkur District.	1961.
9.	Sree Jayamangali Rural High School, Nitrahalli, Madhugiri Tq, Tumkur District.	1961.
10.	Sree Basaveswara Teachers' Training Institute, Sree Siddaganga Math, Tumkur - 572 104.	1961.
11.	Sree Siddaganga Practicing Elementary school, B.H. Road, Tumkur - 572 102.	1962.
12.	Sree Siddaganga Rural High School, Tharur, Sira Tq, Tumkur District.	1962.
13.	Sree Siddaganga Kinder garten School, B.H. Road, Tumkur - 572 102.	1963.
14.	Sree Siddaganga Rural High school, Kanchagal Bande Math, Magadi Taluk, Bangalore District.	1963.
15.	Sree Siddaganga Rural High School, Budigere, Devanahalli Tq, Via - Sulibele, Bangalore District.	1963.
16.	Sree Basaveswara High school, Solur, Magadi Taluk, Bangalore District.	1963.
17.	Sree Basaveswara High School, Hulikal, Magadi Taluk, Bangalore District.	1963.
18.	Sree Siddaganga Institute of Technology, Tumkur - 572 103.	1963.
19.	Sree Beladhara Rural High School, Beladhara, Tumkur Taluk & District.	1964.
20.	Sree Nehru Rural High School, Adival, Hiriyur Tq, Chitradurga Dist.	1964.
21.	Sree Siddaganga Rural High School, Purusanahalli, Doddaballapura Taluk, Bangalore District.	1965.

22.	Sree Siddaganga Rural High school, Gudemaranahalli, Magadi Taluk, Bangalore District.	1965.
23.	Kannada Pandith Section, S.S. Sanskrit College, Sree Siddaganga Math, Tumkur - 572 104.	1965.
24.	Sree Mallikarjuna Rural High School, Doddaguni, Gubbi Taluk, Tumkur District.	1966.
25.	Sree Manjunatha Girls' High school, Nelamangala, Bangalore District.	1966.
26.	Sree Niveditha High school, Kyatasandra - 572 104, Tumkur Taluk and District.	1966.
27.	Sree Siddaganga College of Arts, Science & Commerce for Boys, B.H. Road, Tumkur - 572 102.	1966.
28.	Sree Siddalingeswara Residential Higher Secondary School, Sree Siddaganga Math, Tumkur District - 572 104.	1968.
29.	Sree Siddaganga Rural High school, Kallur, Gubbi Taluk, Tumkur Dist.	1968.
30.	Sree Siddalingeshwara Institute of Commerce, Sree Siddaganga Math, Tumkur - 572 104.	1968.
31.	Sree Siddaganga High School, Kandikere, C.N. Halli Taluk, Tumkur District.	1969.
32.	Sree Ranganatha Rural High School, Neralekere, Madhugiri Taluk, Tumkur District.	1969
33.	Sree Gangadhareswara Rural High School, Anekere, Turuvekere Taluk, Tumkur District.	1970.
34.	Sree Shalivahana Rural High school, Thandaga, Turuvekere Taluk, Tumkur District.	1970.
35.	Sree Siddaganga Rural High School, Hirehalli, Tumkur Taluk & District.	1970.
36.	Sree Siddaganga Rural High School, Areyur, Tumkur Taluk & District.	1970.
37.	Sree Siddaganga Rural High School, Adalagere, Gubbi Taluk, Tumkur District.	1970.
38.	Sree Siddaganga Rural High School, Adivala, Magadi Taluk, Bangalore District.	1971.
39.	Sree Siddaganga Samskrita Patashala, Halanur, Tumkur Taluk, Tumkur District.	1971.
40.	Sree Siddaganga College of Education, B.H. road, Tumkur - 572 102.	1972.
41.	Sree Bapuji Rural High school, Machenahalli, Turuvekere Taluk, Tumkur District.	1977.

42.	Sree Shalivahana Samskrita Patashala, Thandaga, Turuvekere Taluk, Tumkur District.	1977.
43.	Sree Siddaganga Samskrita Patashala, Melehalli, Tumkur Taluk & District.	1977.
44.	Sree Siddaganga School for the Blind, Sree Siddaganga Math, Tumkur District - 572 102.	1978.
45.	Sree Siddalingeswara Samskrita Patashala, Byalakere, Magadi Taluk, Bangalore District.	1978.
46.	Sree Siddaganga Pre-University College, B.H. Road, Tumkur - 572 102.	1978.
47.	Sree Mahalingeswara Rural High School, Kora, P.B. Road, Tumkur Taluk and District.	1979.
48.	Sree Basaveswara English Convent School, B.H. Road, Tumkur District - 572 102.	1980.
49.	Sree Veerabhadraswamy Rural High school, Haralur, Tumkur Taluk and District.	1980.
50.	Sree Siddaganga Rural High school, Ganjalagunte, Madhugiri Taluk, Tumkur District.	1980.
51.	Sree Siddaganga Rural High school, Shukravarasanthe, Sakaleshpur Taluk, Hassan District.	1980.
52.	Sree Siddaganga Rural High school, Hedakanahalli, Via Nandagudi, Hosakote Taluk, Bangalore District.	1980.
53.	Sree Siddaganga Samskrita Patashala, Siddegiri Bruhanmutt, Chakrabavi, Magadi Taluk, Bangalore District.	1980.
54.	Sree Siddaganga Samskrita Patashala, Chikkamaskal, Magadi Taluk, Bangalore District.	1980.
55.	Sree Siddalingeswara Samskrita Patashala, Narasandra, Magadi Taluk, Bangalore District.	1980.
56.	Sree Mahalingeswara Samskrita Patashala, Kora, P.B.Road, Tumkur Taluk and District.	1980.
57.	Sree Siddaganga Samskrita Patashala, Sira Town, Tumkur District.	1980.
58.	Sree Siddaganga Samskrita Patashala, Ramagondanahalli, Tumkur Taluk & District.	1980.
59.	Sree Ambika Kannada Higher Primary School, Jai Maruthi Nagar, Bangalore - 560 022.	1981.
60.	Sree Veerabhadraswamy Kannada Higher Primary School, Jarakbandekawal, Bangalore - 560 079.	1981.
61.	Sree Basaveswara Rural High School, Doddasaggere, Koratagere Taluk, Tumkur District.	1981.

62.	Sree Shivakumarswamy Samskrita Patashala, B.H. Road, Tumkur - 572 102.	1981.
63.	Sree Uddana Shivayogiswara Rural High school, Gattipura, Magadi Taluk, Bangalore District.	1982.
64.	Sree Siddaganga Rural High School, Raghuvanahalli, Kanakapura Road, Bangalore South Taluk - 560 062.	1982.
65.	Sree Jagadguru Revanasiddeswara Rural High School, Yennegere, Magadi Taluk, Bangalore District.	1982.
66.	Sree Siddaganga College of Arts, Science & Commerce for Women, B.H. Road, Tumkur - 572 102.	1982.
67.	Sree Shalivahana Samskrita Patashala, Ganjalagunte, Madhugiri Taluk, Tumkur District.	1982.
68.	Sree Siddaganga Higher Primary School, Jangamamath, Shivanahalli, Rajajinagar, Bangalore - 560 010.	1983.
69.	Sree Siddaganga Pre-University College, Gudemaranahalli, Magadi Taluk, Bangalore District.	1983.
70.	Sree Siddaganga High School, Jangama math, Shivanahalli, Rajajinagar, Bangalore - 560 010.	1984.
71.	Sree Shivakumarswamy Rural High School, Byalakere, Magadi Taluk, Bangalore District.	1984.
72.	Sree Ganesha Rural Pre-University College, Gulur, Tumkur Taluk & District.	1984.
73.	Sree Siddaganga Rural Pre-University College, Halanur, Tumkur Taluk and District.	1984
74.	Sree Vinayaka Rural Pre-University College, Nittur, Gubbi Taluk, Tumkur District.	1984.
75.	Sree Siddaganga College of Pharmacy, B.H. Road, Tumkur - 572 103.	1984.
76.	Sree Mahantheswara Girls' High School, Kudur, Magadi Taluk and Bangalore District.	1985.
77.	Sree Suvarnamukhi High School, Mallekavu, Koratagere Taluk & District.	1986.
78.	Sree Basaveswara Rural High School, Thotagere, Dasanapura Hobli, Bangalore North Taluk.	1986.
79.	Sree Basaveswara Girls' English High School, B.H. Road, Tumkur - 572 102.	1988.
80.	Sree Shivakumaraswamy Pre-University College, Belakavadi, Malavalli Taluk, Mandya District.	1988.
81.	Sree Siddaganga College of Arts, Science & Commerce Nelamangala, Bangalore District.	1988.

82.	Sree Siddaganga Polytechnic, B.H. Road, Tumkur - 572 103.	1988.
83.	Sree Ambuja Samskrita Patashala, Jangamamath, Shivanahalli, Rajajinagar, Bangalore - 560 010.	1988.
84.	Sree Siddaganga Rural High School, Doddagangavadi, Ramanagaram Taluk, Bangalore District.	1990.
85.	Sree Shivakumara Swamy High School, Holesalu Paranamipura, T. Narasipura Taluk, Mysore District.	1990.
86.	Sree Siddaganga Samskrita Patashala, Ambalagere, Purushanahalli.	1991.
87.	Sree Ambika Kannada High School, Jai Maruti Nagar, Bangalore - 560 022.	1992.
88.	Sree Siddaganga School of Nursing, Tumkur - 572 103.	1993.
89.	Sree Siddaganga Samskrita Patashala, Kannur, Magadi Taluk, Bangalore District.	1993.
90.	Sree Veerabhadra Swamy Kannada High School, Agrahara-Dasarahalli, Bangalore.	1995.
91.	Sree Thontadarya Samskrita Patashala, K.B. Math, Magadi Taluk, Bangalore District.	1995.
92.	Sree Siddalingeshwara Samskrita Patashala, Gudemaranahalli, Bangalore District.	1995.

4. Siddaganga - Synonym for Dasoha :

Free feeding (particularly of the poor and the needy) known as Dasoha in religious parlance has become Math's way of life.

The sacred fire lit 100 years ago in its kitchen is still glowing brighter feeding thousands of men and women, day in and day out. In addition to feeding 5000 students in the free boarding home about a thousand pilgrims visiting the Math for worshipping the dieties and for Darshan of Swamiji, are also provided with free boarding. Annually, for about a fortnight, tens of thousands of people, who congregate at the time of the Car Festival and Cattle Fair, are also provided with free meals. This is indeed a colossal "Dasoha" requiring enormous quantities of foodstuff, fuel, water facilities, a huge establishment, an efficient organisation and management. Sree Swamiji's unreserved and unwearisome service to the society induces a spirit of philanthropy in the people even in these hard days, and attracts liberal contributions towards the "Dasoha" in the Math. Out of all the activities of the Math Sree Swamiji attaches utmost importance to "Dasoha" and he is very particular that nobody should leave without taking food. This is indeed a case of unrivalled hospitality.

5. Siddaganga and the generous Public :

It would be relevant to give a brief account of the economic conditions of the Math which has taken upon itself the responsibility of providing free food, shelter and education to about 5000 children, running more than 90 educational institutions, and providing free food to an

unending stream of devotees who visit the holy Math every day. Sri Siddaganga Math, a Virakta Math of Veerashaiva tradition, does not possess permanent assets whose proceeds can balance the huge expenditure to be incurred in discharging its heavy responsibilities. The proceeds from its permanent assets may suffice to meet the expenditure of about two months. Hence the real asset of the Math is the generous and spontaneous help from the general public. Also help is received from the governments mainly in the form of aid for running educational institutions, subsidy for running the orphanage and scholarships to children studying sanskrit. It may be mentioned here that the Math is practicing utmost austerity in its spending. Every paisa spent by revered Swamiji is meant to serve the cause of the downtrodden. Hence the public is coming forward with great happiness and supreme confidence to contribute generously to support the activities of the Math. It is Sree Siddaganga Math's legitimate pride that the activities of the Math attract donors from all sections of the society irrespective of their caste, creed or religion.

6. Sree Siddaganga Gurukula - a unique culture :

Visitors to the holy Math are in for a surprise to find even the corridors of the Math buildings packed with students engaged in studies. The reason is apparent in that the hostels are accommodating students over and above their normal capacity. The reason for admitting more than the admissible number of students is equally clear. Ours is a land of villages. Most of the villagers are steeped in illiteracy and poverty. Hence, children with a predominantly rural bias come to the holy Math yearning for help. If they are denied an opportunity of being educated, with the bounteous help offered by the holy Math, in due course, little wonder if their economic condition goes from bad to worse. The revered Swamiji, who identified himself with the poor goes out of the way to meet their needs and gives them an opportunity, realising fully the manifold responsibility involved in it. It is, indeed, the humanitarian outlook inherent in the revered Swamiji which manifests itself in rendering utmost help to maximum number of students within the available resources, that has made the number of students proliferate.

Socialism as was dreamt of by Mahatma Gandhi years ago, is translated into reality in Sri Siddaganga Math.

The present Swamiji resides like any other student in one of the rooms in the hostel along with other students.

Children who get an opportunity to study in Sri Siddaganga Gurukula are really fortunate. They get an opportunity to study sanskrit which is the receptacle of our ancient wisdom and culture. Qualities such as discipline, moderation, sense of equality and spiritual outlook and self confidence - so necessary for developing a national outlook are imbided by the students under the direct guidance of the Revered Dr. Sivakumara Swamiji who is an embodiment of Indian culture and wisdom.

7. Extra - Curricular Activities :

(i) Sri Tontadarya Vidyavardhini Sabha :

Started way back in 1938, this association managed by students has been responsible for carrying out activities like arranging competitions in essay writing, debates, quizzes, music, and organising lectures by identifying the interests of students. The Sabha continued under its starting nomenclature till about 1964. The student activities are now being carried out under the auspices of United Students' Union.

(ii) Sri Siddalingeswara Dramatics Association :

This association has been established, with the sole purpose of encouraging the hidden dramatic talent among the students. The association does not aim at enriching its coffers by enacting plays. Its purpose is to stage devotional plays and thereby arouse, the much needed patriotism and spiritual awareness in the spectators. Till now, the association has staged plays such as the Bhakta Markandeya, Ecchammanayaka, Rajashekharavilasa, Dakshayaga, Jagajyothi Basaveswara and these plays have received encomium at the hands of the lovers of Fine Arts. The association has well developed stage equipment with the necessary costume and setting. A project which is very close to the heart of Revered Swamiji is "Basavajayanthi in rural areas". During the last Seventeen years there have been 395 shows of the drama Jagajyothi Basaveshwara. Every show has been preceded by a day long discourses and discussions on Basava Philosophy. The Basava Philosophy is so dear to Revered Swamiji that he has witnessed every one of these shows, each run for more than six hours in nights, daring seasonal weather conditions in open air, despite his old age. These programmes have brought about meaningful changes among rural masses.

(iii) Sri Siddalingeshwara Publications :

Wedded to the purpose of publishing books highlighting religious, spiritual, educational and social values, the publishers have brought out till now an English Volume entitled "Sri Basaveswara and his Contemporaries" along with its Kannada version, a book of collections entitled "Subhashita Kusumanjali", a play by name "Karmayogi Siddarama", and a collection of poems called "Pourusha Panchajanya". Kartarana Kammata,' a Kannada novel by Dr. Thipperudraswamy is made available at a highly subsidised rate.

(iv) Old Boys' Association :

Thousands of students who have had the singular fortune of getting educated in Sree Siddaganga Gurukula are serving with distinction in various capacities both in the country and abroad. With a view to cultivate and continue the fellowship among themselves and also to render collectively whatever help they can do to the Alma Mater, the Old Boys of the Math came together on 4.10.1954 and formed Old Boys' Association of Sri Siddaganga Math. Since then, the Association has meaningfully associated with the activities of the Math. The general body of the association meets generally once in a year to chalk out ways and means of contributing their humble mite to their mother institution.

ಕ್ರಿ.ಶ. ಹನ್ನೊಂದನೆಯ ಶತಮಾನಕ್ಕಿಂತ ಮುಂಚೆ ವೀರಶೈವ ಮಠಗಳಲ್ಲಿ ವೇದ, ಶಿವಾಗಮ, ಉಪನಿಷತ್ತು, ಮೀಮಾಂಸೆ, ದರ್ಶನಗಳು, ಯೋಗ, ಕಾವ್ಯ, ನಾಟಿಕಾ (ದೃಶ್ಯಕಾವ್ಯ) ಮುಂತಾದವುಗಳನ್ನು ಕಲಿಸಲಾಗುತ್ತಿತ್ತು. ಶೈವ ಮಠಗಳಲ್ಲಿ, ದೇವಸ್ಥಾನಗಳಲ್ಲಿರುತ್ತಿದ್ದ ವಿದ್ಯಾಕೇಂದ್ರಗಳಲ್ಲಿಯೂ ಈ ಬಗೆಯ ವಿದ್ಯಾಭ್ಯಾಸವನ್ನು ಮಾಡಿಸಲಾಗುತ್ತಿತ್ತು. ಬಸವಣ್ಣನವರೂ ಕಪ್ಪಡಿ ಸಂಗಮದ ಇಂಥದೇ ಒಂದು ವಿದ್ಯಾ ಕೇಂದ್ರದಲ್ಲಿ ಅಧ್ಯಯನ ಮಾಡಿದರು. ಸಂಸ್ಕೃತದ ಮೂಲಕ ಶಿಕ್ಷಣವನ್ನು ಪಡೆಯಬೇಕಾಗುತ್ತಿತ್ತು. ಋಷಿ, ಮುನಿ, ಆಚಾರ್ಯರು ತಾವು ಆಯ್ದ ವಿದ್ಯಾರ್ಥಿಗಳಿಗೆ ಕಟ್ಟುನಿಟ್ಟಾಗಿ ವಿದ್ಯಾದಾನಗೈಯ್ಯುತ್ತಿದ್ದರು. ಉಚ್ಚವರ್ಗದ ವಿದ್ಯಾರ್ಥಿಗಳಿಗೆ ಪ್ರಾಶಸ್ತ್ಯ ಇತ್ತು. ಆದರೆ ಇತರ ಜಾತಿಯ ವಿದ್ಯಾರ್ಥಿಗಳಿಗೂ ಶಿಕ್ಷಣ ದೊರೆಯುತ್ತಿತ್ತು. ಚಾಲುಕ್ಯ ವಿಕ್ರಮಾದಿತ್ಯನ ದಂಡಾಧೀಶನಾಗಿದ್ದ ಮಹಾದೇವನು ಇಟ್ಟಿಗೆಯಲ್ಲಿ ವಿದ್ಯಾದಾನಕ್ಕಾಗಿಯೇ ಮಠವೊಂದನ್ನು ಕಟ್ಟಿಸಿ ಸರಸ್ವತಿ ಮಠವೆಂದು ಹೆಸರಿಸಿದ್ದನಂತೆ. ಬೆಳಗಾವಿ ಜಿಲ್ಲೆಯಲ್ಲಿ ಹೂಲಿಮಠ, ಶಿವಮೊಗ್ಗ ಜಿಲ್ಲೆಯ ಕೋಡಿಮಠ, ವಿಜಾಪೂರ ಜಿಲ್ಲೆಯ ಸಾಲೋಟಗಿ ಮಠ ಇವು ಅತ್ಯಂತ ಪ್ರಾಚೀನ ಶೈಕ್ಷಣಿಕ ಮಠಗಳೆನಿಸಿದ್ದವು. ವ್ಯಾಕರಣ, ಭಾಷೆ, ಧರ್ಮ, ಕಾವ್ಯ, ನಾಟಕ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಶಿಕ್ಷಣ ಈ ಮಠಗಳಲ್ಲಿ ನಡೆಯುತ್ತಿತ್ತು. ಹದಿಮೂರು, ಹದಿನಾಲ್ಕನೆಯ ಶತಮಾನಗಳ ಅನಂತರ ವಿದ್ಯಾಭ್ಯಾಸಕ್ಕಾಗಿಯೇ ಕೆಲ ಮಠಗಳನ್ನು ಸ್ಥಾಪಿಸಿದಂತೆ ತೋರುತ್ತದೆ. 'ಓದಿಸೋ ಮಠ', 'ಟೀಕಿನ ಮಠ', 'ಟಿಪ್ಪಣಿ ಮಠ', 'ಓಲೆಮಠ', 'ಸಾಲಿಮಠ' ಇಂತಹ ಹಲವಾರು ಮಠಗಳು ವಿದ್ಯಾದಾನಕ್ಕಾಗಿಯೇ ಮೀಸಲಾದ ಮಠಗಳಿದ್ದಂತೆ ತಿಳಿದು ಬರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಕಾಯಕಕ್ಕೆ ಒಂದು ವಿಶೇಷ ಸ್ಥಾನ ಲಭಿಸಿದ ಮೇಲೆ ಶಿಕ್ಷಣ ನೀಡುವುದನ್ನೇ ಒಂದು ಪ್ರಮುಖ ಕಾಯಕವೆಂದು ಈ ಮಠಾಧೀಶರು ಭಾವಿಸಿದರು. ವಿದ್ಯಾದಾನದೊಂದಿಗೇ ಧಾರ್ಮಿಕ ಶಿಕ್ಷಣವನ್ನೂ ನೀಡಲಾಗುತ್ತಿತ್ತು. ಸಮಾಜದ ಆರೋಗ್ಯಕರ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ - ಧರ್ಮ ಇವೆರಡೂ ತೀರಾ ಅವಶ್ಯಕ ಎಂದು ವೀರಶೈವ ಮಠಾಧೀಶರು ನಂಬಿದ್ದರು. ಅಜ್ಞಾನ, ಮೂಢ ನಂಬಿಕೆಗಳನ್ನು ಕಳೆದು ಧರ್ಮತತ್ತ್ವಾಚರಣೆಯ ಮೂಲಕ ಮಾನಸಿಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಸರ್ವ ಸಮಾನತೆಯ ಸಹ ಬಾಳ್ವೆ ನಡೆಸಿ ಆತ್ಮೋನ್ನತಿಯನ್ನು ಸಾಧಿಸಲು ವಿದ್ಯೆಯ ಅವಶ್ಯಕತೆ

ತೀವ್ರವಾಗಿರುವುದನ್ನು ಮಠಗಳು ಕಂಡುಕೊಂಡವು. ಕೆಲವು ವೀರಶೈವ ಮಠಗಳಲ್ಲಿ ಕೇವಲ ಜ್ಞಾನಾರ್ಜನೆಗೆ ಅಷ್ಟೇ ಅಲ್ಲ ಜೀವನೋಪಾಯಕ್ಕೆ ಅನುಕೂಲವಾಗುವ ೧೧೧ ಕಸಬುಗಳನ್ನೂ ಕಲಿಸುವ ಏರ್ಪಾಡು ಇತ್ತೆಂದು ತಿಳಿದು ಬರುತ್ತದೆ.

ವಿಜಯನಗರ ಅರಸರಲ್ಲಿ ಪ್ರೌಢದೇವರಾಯನ ದಂಡೇಶನಾಗಿದ್ದ ಲಕ್ಕಣ್ಣ, ಅನಂತರದ ಕೆಳದಿ, ಮೈಸೂರು, ಸ್ವಾದಿ, ಬೀಳಗಿ ರಾಜ ಮನೆತನಗಳು, ವೀರಶೈವ ಸಂಸ್ಥಾನಿಕರು, ಮಠಗಳಲ್ಲಿ ಶಿಕ್ಷಣ ಮುಂದುವರಿಯುವಂತೆ ಪ್ರೋತ್ಸಾಹಿಸಿದರು. ವಿಪುಲ ವಚನ ಸಾಹಿತ್ಯ ಲಭ್ಯವಾಗುತ್ತಿದ್ದಂತೆ ಅದನ್ನು ಅಭ್ಯಸಿಸುವ ಪ್ರವೃತ್ತಿಯನ್ನು ಬೆಳೆಸಲಾಯಿತು. ಸಂಸ್ಕೃತದ ಮೇಲಿನ ವ್ಯಾಮೋಹ ಕಡಿಮೆಯಾಗಿ ಆಗಮ ಉಪನಿಷತ್ತು ಇತ್ಯಾದಿ ಅಧ್ಯಯನ ಕಠಿಣವಾಗತೊಡಗಿತು. ಮರಾಠಿ, ಇಂಗ್ಲೀಷ್, ಉರ್ದು ಪ್ರಭಾವದಿಂದ ಕನ್ನಡವೂ ಸೊರಗತೊಡಗಿತು. ಇದನ್ನರಿತ ಮಠಾಧೀಶರು ತಮ್ಮ ಪ್ರಾಚೀನ ಪರಂಪರೆಯನ್ನು ಉಳಿಸಿಕೊಂಡು ಬರಬೇಕೆಂದು ತಮ್ಮ ಮಠಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ತೆರೆಯಲಾರಂಭಿಸಿದರು.

ಬ್ರಿಟಿಶ್ ಆಳ್ವಿಕೆ ಆರಂಭವಾದ ಮೇಲೆ ಶಿಕ್ಷಣ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳು ಆದವು. ಮಠದಯ್ಯನವರ ಶಾಲೆಗಳ ಬದಲಾಗಿ ಸರಕಾರಿ ಶಾಲೆಗಳು ಬಂದವು. ನೌಕರಿ ಆಕರ್ಷಣೆ, ಜನಸಂಖ್ಯಾ ಹೆಚ್ಚಳ, ರಾಜಕೀಯ ಸಾಮಾಜಿಕ ಬದಲಾವಣೆಗಳು ಇವುಗಳಿಂದಾಗಿ ಮಠದ ಶಾಲೆಗಳು ಮಹತ್ವವನ್ನು ಕಳೆದುಕೊಂಡವು. ಈ ಹಂತದಲ್ಲಿ ಮಠಗಳು ಬೇರೊಂದು ರೀತಿಯಲ್ಲಿ ಶೈಕ್ಷಣಿಕ ಸೇವೆಯನ್ನು ಮುಂದುವರಿಸಲು ಅಣಿಯಾದವು.

೧. ಭಕ್ತರ ಸಹಾಯ - ಸಹಕಾರದಿಂದ, ಮಠದಿಂದಲೆ ಅಂತಹ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು.

೨. ಸರಕಾರ ಅಥವಾ ಇನ್ನಾವುದೇ ಸಂಸ್ಥೆಯಿಂದ ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಬಯಸುವ ವೀರಶೈವ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ - ವಸತಿ ನಿಲಯಗಳನ್ನು ನಡೆಸಿದ್ದು.

ಇದರಿಂದ ಬಡ, ಜಾಣ ವಿದ್ಯಾರ್ಥಿಗಳು ಉನ್ನತ ವಿದ್ಯೆಯನ್ನು ಪಡೆಯಲು ಸಾಧ್ಯವಾಗಿ ಇಡೀ ವೀರಶೈವ ಸಮಾಜ ಶೈಕ್ಷಣಿಕವಾಗಿ ಮುಂದುವರಿಯಲು ಸಹಾಯಕಾರಿಯಾಯಿತು. ವೀರಶೈವ ಮಠಗಳು ವೀರಶೈವ ವಿದ್ಯಾರ್ಥಿಗಳಿಗೆ ಪ್ರಾಶಸ್ತ್ಯವನ್ನು ನೀಡಿದರೂ ಬಸವಾದಿ ಪ್ರಮಥರ ಪ್ರಗತಿಪರ ವಚನ ಚಳುವಳಿಯ ಪ್ರಭಾವದಿಂದಾಗಿ ದಲಿತ ವರ್ಗದ ವಿದ್ಯಾರ್ಥಿಗಳಿಗೂ ವೀರಶೈವ ಮಠಗಳ ಪ್ರಸಾದ ನಿಲಯಗಳಲ್ಲಿ ಪ್ರವೇಶ ನೀಡಿದವು. ಅವರೂ ಮೇಲೆ ಬರಲು ಸಹಾಯಕಾರಿಯಾಯಿತು. ಒಂದು ಕಾಲದಲ್ಲಿ ಬ್ರಾಹ್ಮಣರು ಮಾತ್ರ ವಿದ್ಯೆ ಪಡೆಯಲು ಅರ್ಹರು ಎಂಬ ಭಾವನೆಯನ್ನು ಬಿತ್ತಲಾಗಿತ್ತು. ಉತ್ತರ ಕರ್ನಾಟಕದಲ್ಲಂತೂ "ಉಳ್ಳಾಗಡ್ಡಿ ತಿಂಬೋ ಈ ಲಿಂಗಾಯತ ಮಕ್ಕಳಿಗೆ ವಿದ್ಯಾ ಹತ್ತುತ್ತದೆಯೆ? ಹೆಗಲ ಮೇಲೆ ಬಾರಕೋಲು ಹಾಕಿಕೊಂಡು ದುಡ್ಯೋದೇ ಇವ್ರಿಗೆ ಒಳ್ಳೇಯದು" ಎಂದು ಸಾಲೆ ಕಲಿಯಲು ಬಯಸಿದ ವೀರಶೈವ ಮಕ್ಕಳನ್ನು ಹೀಯಾಳಿಸಿದ್ದೂ ಉಂಟು. ಈ ಬಗೆಯ ಅಣಕ ವೀರಶೈವ ಮಕ್ಕಳಿಗೆ ಇನ್ನೆಂದೂ ಬಾರದಿರಲೆಂದು ವೀರಶೈವ ಮಠಗಳು ಅವರ ಆಧುನಿಕ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಲು ಕಂಕಣ ಬದ್ಧವಾದವು. ಶೈಕ್ಷಣಿಕ ಕ್ಷೇತ್ರದಲ್ಲಿ ವೀರಶೈವ ಮಠಗಳು ಈಗಲೂ ಮಾಡುತ್ತಿರುವ ಸೇವೆ ಅನುಪಮವಾದುದು. ಕೆಲವು ಉದಾಹರಣೆಗಳ ಮೂಲಕ ವೀರಶೈವ ಮಠಗಳು ಈ ಕ್ಷೇತ್ರದಲ್ಲಿ ಹೇಗೆ ಕೆಲಸ ಮಾಡುತ್ತಿವೆಯೆಂಬುದನ್ನು ಇಲ್ಲಿ ಸಂಕ್ಷೇಪದಲ್ಲಿ ನಿರೂಪಿಸಲಾಗಿದೆ.

೧೯೦೯ ರಲ್ಲಿ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ವಿಜಾಪೂರ ಜಿಲ್ಲೆಯ ಬಾದಾಮಿ ಹತ್ತಿರ 'ಶಿವಯೋಗ ಮಂದಿರ' ಎಂಬ ಧಾರ್ಮಿಕ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದರು. ವೀರಶೈವ ಮಠಾಧೀಶರು ಕಾಶಿಗೆ ಹೋಗಿ ವೇದಾಂತವನ್ನು ಅಧ್ಯಯನ ಮಾಡುವುದಕ್ಕಿಂತ ಇಲ್ಲಿಯೇ ವೀರಶೈವ ತತ್ತ್ವ - ವಚನ ಶಾಸ್ತ್ರ ಅಧ್ಯಯನ ಮಾಡುವಂತಾದರೆ ಒಳಿತು ಎಂದು ಭಾವಿಸಿ ಸಮಗ್ರ ಯೋಜನೆಯೊಂದನ್ನು ಹಾಕಿಕೊಂಡು ಹಿರಿಯ ಮಠಾಧೀಶರ, ಭಕ್ತರ ಸಹಕಾರದಿಂದ ಅದನ್ನು ಕಾರ್ಯರೂಪಕ್ಕೆ ತಂದರು. ಶಿವಯೋಗ ಮಂದಿರದಲ್ಲಿ ಕಲಿಯುವ ವಟುಗಳಿಗೆ, ಭಾವೀ ಮಠಾಧೀಶರಿಗೆ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿ ತಮ್ಮ ತಮ್ಮ ಮಠಗಳ ಮೂಲಕ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅದು ಸಾಧ್ಯವಿಲ್ಲದಿದ್ದಲ್ಲಿ ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸಲು ಸಲಹೆ ನೀಡಿದರು. ಇದರಿಂದ ಶಿವಯೋಗ ಮಂದಿರದಲ್ಲಿ ಶಿಕ್ಷಣ ಪಡೆದು ಹೊರ ಬಂದ ವೀರಶೈವ ಮಠಾಧೀಶರಲ್ಲಿ ಅನೇಕರು ಆ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬಂದರು. ವೀರಶೈವ ಸಾಹಿತ್ಯ, ಧರ್ಮ, ಸಂಸ್ಕೃತಿಯ ಸರಿಯಾದ ಅಧ್ಯಯನಕ್ಕೆ ಅವಶ್ಯಕವಾದ ಒಳ್ಳೆಯ ಗ್ರಂಥಾಲಯವನ್ನೂ ಅಲ್ಲಿ ಸ್ಥಾಪಿಸಿದರು. ಉತ್ತಮ ಹಸ್ತಪ್ರತಿ ಭಂಡಾರ, ಗ್ರಂಥ ಪ್ರಕಟನೆಗೆ ಬೇಕಾಗುವ ಮುದ್ರಣಾಲಯ, ಉತ್ತಮ ನೈಸರ್ಗಿಕ ಪರಿಸರ ಇತ್ಯಾದಿ ಅಂಶಗಳು ಶಿವಯೋಗ ಮಂದಿರದ ವೈಶಿಷ್ಟ್ಯವನ್ನೂ, ಮಹತ್ವವನ್ನೂ ಎತ್ತಿ ತೋರುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ಸಿದ್ಧಗಂಗಾ ಮಠದ ಕಾಣಿಕೆ ಅತ್ಯಮೂಲ್ಯವಾದುದು. ೧೯೧೭ರಲ್ಲಿ ಸಂಸ್ಕೃತ ಪಾಠಶಾಲೆ, ಉಚಿತ ಪ್ರಸಾದ ನಿಲಯ ಸ್ಥಾಪಿಸುವುದರ ಮೂಲಕ ಪ್ರಾರಂಭವಾದ ಶೈಕ್ಷಣಿಕ ಚಟುವಟಿಕೆ ಇಂದಿಗೂ ಅನೂಚಾನವಾಗಿ ಬೆಳೆಯುತ್ತ ಸಾಗಿವೆ. ೧೯೩೭ ರಲ್ಲಿ ಸಂಸ್ಕೃತ ಪಾಠಶಾಲೆ ಕಾಲೇಜಾಗಿ ಪರಿವರ್ತನೆಗೊಂಡಾಗ ಇಡೀ ದೇಶದ ಗಮನ ಸೆಳೆಯುವಂತಾಯಿತು. ೧೯೩೦ರಲ್ಲಿ ಶ್ರೀ ಮ.ನಿ.ಪ್ರ. ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀ ಸಿದ್ಧಗಂಗಾ ಮಠಕ್ಕೆ ಅಧಿಪತಿಗಳಾಗಿ ಬಂದ ಅನಂತರದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ. ವೀರಶೈವರಿಗಷ್ಟೇ ಅಲ್ಲದೆ ಹರಿಜನ - ಗಿರಿಜನ ವಿದ್ಯಾರ್ಥಿಗಳಿಗೂ ಯಾವ ಭೇದ - ಭಾವವಿಲ್ಲದೆ ಪ್ರವೇಶ ನೀಡಲಾಗಿದೆ. ಶಿಶುಶಾಲೆ, ಪ್ರಾಥಮಿಕ, ಮಾಧ್ಯಮಿಕ, ಪದವಿಪೂರ್ವ, ಪದವಿಕಾಲೇಜು, ಸಂಜೆ ಕಾಲೇಜು, ಕುರುಡರ ಶಾಲೆ, ವೃತ್ತಿ ಶಾಲೆ ಇತ್ಯಾದಿ ಒಟ್ಟು ೯೫ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಶ್ರೀಮಠ ಈಗ ನಡೆಸುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಸಹಸ್ರಾರು ವಿದ್ಯಾರ್ಥಿಗಳು ಉಚಿತ ಪ್ರಸಾದ - ವಸತಿ ನಿಲಯಗಳಲ್ಲಿದ್ದು ವಿವಿಧ ಬಗೆಯ ಶಿಕ್ಷಣ ಪಡೆಯುತ್ತಿದ್ದಾರೆ.

ಶ್ರೀಮಠದ ಇನ್ನೊಂದು ವಿಶೇಷ ಕೊಡುಗೆ : ಪ್ರತಿಶತ ೯೦ ರಷ್ಟು ಶಿಕ್ಷಣ ಸಂಸ್ಥೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸುತ್ತಿರುವುದೂ, ಇಂಥ ಸಂಸ್ಥೆಗಳಲ್ಲಿ ಸುಮಾರು ೪೫೦೦ ವಿದ್ಯಾರ್ಥಿಗಳಿಗೆ ಅಶನ, ವಸತಿ ಸೌಕರ್ಯಗಳೊಂದಿಗೆ ಅನಾಥ ಮಕ್ಕಳಿಗೆ ವಿದ್ಯಾಭ್ಯಾಸದ ಖರ್ಚು ಮತ್ತು ಉಚಿತ ಬಟ್ಟೆಯನ್ನು ಮೊದಲಾದುವನ್ನೂ ಒದಗಿಸಲಾಗುತ್ತಿದೆ. ಕುರುಡ ಮಕ್ಕಳಿಗೆ, ಅಂಗವಿಕಲ ಮಕ್ಕಳಿಗೆ ಪಾಠಶಾಲೆ, ಸ್ವ ಉದ್ಯೋಗ ತರಬೇತಿ ಸಂಸ್ಥೆಗಳನ್ನು ಶ್ರೀಮಠ ನಡೆಸುತ್ತಿದೆ. ಸಂಗೀತ, ನೃತ್ಯ, ಗಮಕ, ನಾಟಕ, ವೀರಭದ್ರನೃತ್ಯ ಮುಂತಾದ ಕಲೆಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಗ್ರಂಥಭಂಡಾರ, ವಾಚನಾಲಯಗಳಿವೆ. ಶೈಕ್ಷಣಿಕ ಕ್ಷೇತ್ರಕ್ಕೆ ಮಠಗಳು ಹೇಗೆ ಸೇವೆ ಸಲ್ಲಿಸಬಹುದೆಂಬುದಕ್ಕೆ ಮಾದರಿಯಾಗಿ ಸಿದ್ಧಗಂಗಾಮಠ ನಿಂತಿದೆ.

ಇಪ್ಪತ್ತನೆಯ ಶತಮಾನದ ಮಧ್ಯಕಾಲದವರೆಗೆ ಪ್ರಸಾದನಿಲಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದರ ಮೂಲಕ ವೀರಶೈವ ಶೈಕ್ಷಣಿಕ ಕ್ರಾಂತಿಯ ರೂವಾರಿಗಳೆನಿಸಿದ ಶ್ರೇಷ್ಠರಲ್ಲಿ ಧಾರವಾಡ ಮುರುಘಾಮಠದ ಶ್ರೀ ಮೃತ್ಯುಂಜಯಪ್ಪಗಳು ಹಾಗೂ ಶ್ರೀ ನಿ.ಪ್ರ. ಮಹಾಂತ ಶಿವಯೋಗಿಗಳು, ಹಾಲಕೆರೆ ಶ್ರೀ ಅನ್ನದಾನ ಮಹಾಸ್ವಾಮಿಗಳು, ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು, ಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರ ಸ್ವಾಮಿಗಳು ಮುಂತಾದ ಶ್ರೀಗಳನ್ನು ಹೆಸರಿಸಬಹುದು. ೧೯೫೦ರ ಸುಮಾರಿಗೆ ಹಾಗೂ ಅನಂತರ ಕರ್ನಾಟಕದಾದ್ಯಂತ ಹಲವು ಮಠಗಳು ಈ ಬಗೆಯ ಶೈಕ್ಷಣಿಕ ಸೇವೆಗೈಯತೊಡಗಿವೆ. ಇತ್ತೀಚಿನ ಎರಡು ಮೂರು ದಶಕಗಳಲ್ಲಿ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಗದುಗಿನ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಇವರೀರ್ವರೂ ಈ ನಿಟ್ಟಿನಲ್ಲಿ ಸಮಾಜಕ್ಕೆ ಕೊಟ್ಟ ಕೊಡುಗೆ ಗಮನಾರ್ಹವಾದುದು. ಹುಬ್ಬಳ್ಳಿ ಮೂರುಸಾವಿರಮಠ ಸ್ತ್ರೀ ಶಿಕ್ಷಣಕ್ಕೆ ನೀಡಿದ ಆದ್ಯತೆ, ಕೀರ್ತನ ಮಹಾವಿದ್ಯಾಲಯ, ಓಂದಿ ಮಹಾವಿದ್ಯಾಲಯ ಮುಂತಾದವು ವಿಶೇಷವೆನಿಸಿದರೆ, ಗದುಗಿನ ತೋಂಟದಾರ್ಯಮಠ ಕೈಗಾರಿಕಾ ತರಬೇತಿ ಮುಂತಾದ ತಾಂತ್ರಿಕ ಶಿಕ್ಷಣಕ್ಕೆ ನೀಡಿದ ಆದ್ಯತೆ, ಒಕ್ಕಲುತನ, ಯೋಗ ತರಬೇತಿ ಶಾಲೆಗಳು ವಿಶೇಷವೆನಿಸಿವೆ. ಸಾಮಾನ್ಯ ಶಿಕ್ಷಣವಲ್ಲದೆ ಈ ಬಗೆಯ ವಿಶಿಷ್ಟ ಶಿಕ್ಷಣ ನೀಡುವ ಸಂಸ್ಥೆಗಳನ್ನು ಈ ಮಠಗಳು ನಡೆಸುತ್ತಿವೆ. ಮೂರುಸಾವಿರಮಠ ಒಟ್ಟು ೩೫೦ ಕ್ಕೂ ಹೆಚ್ಚು ಶಿಕ್ಷಣ
೨೪ ಸಂಸ್ಥೆಗಳನ್ನು, ತೋಂಟದಾರ್ಯಮಠ ಒಟ್ಟು ೨೦ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ೧೧ ಪ್ರಸಾದ ನಿಲಯಗಳನ್ನು ನಡೆಸುತ್ತಿದೆ. ಒಂದು ಸ್ಥೂಲ ಸಮೀಕ್ಷೆಯಿಂದ ವೀರಶೈವ ಮಠಗಳಲ್ಲಿ ಪ್ರತಿಶತ ೮೦ ಕ್ಕೂ ಹೆಚ್ಚು ಸಂಖ್ಯೆಯ ಮಠಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿವೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಪೂರಕವಾಗುವಂತೆ ಉಚಿತ ಪ್ರಸಾದ ನಿಲಯಗಳನ್ನು ನಡೆಸುತ್ತಿವೆ. ಕರ್ನಾಟಕದಲ್ಲಿ ಬೇರೆ ಯಾವ ಧರ್ಮದವರ ಮಠಗಳೂ ಇಷ್ಟು ವ್ಯಾಪಕ, ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿಲ್ಲ, ನೀಡುತ್ತಿಲ್ಲವೆಂಬುದು ಗಟ್ಟಿ ಅಂಶ.

ಧಾರ್ಮಿಕ ಕ್ಷೇತ್ರದಲ್ಲಿ ವೀರಶೈವ ಮಠಗಳು ಸಾಮಾನ್ಯವಾಗಿ ಒಂದೇ ಬಗೆಯ ಚಟುವಟಿಕೆಗಳನ್ನು ನಡೆಸುತ್ತ ಬಂದಿವೆ. ವೀರಶೈವ ಧರ್ಮ ತತ್ತ್ವಗಳ ಅಧ್ಯಯನ - ಅಧ್ಯಾಪನ - ಸಂಶೋಧನೆಗೆ ಸಂಬಂಧಪಟ್ಟಂತೆ ಅಧ್ಯಯನ ಸಂಸ್ಥೆಗಳನ್ನು ಸ್ಥಾಪಿಸಿದ್ದು, ವೀರಶೈವಕ್ಕೆ ಸಂಬಂಧಿಸಿದ ಶ್ರೇಷ್ಠ ಹಾಗೂ ಸಾಧಾರಣ ಕೃತಿಗಳನ್ನು ಪ್ರಕಟಿಸಿದ್ದು , ಪುರಾಣ ಪ್ರವಚನ, ಕೀರ್ತನೆ, ಜಾತ್ರೆ, ಉತ್ಸವ, ಸಮ್ಮೇಳನ, ಗೋಷ್ಠಿ ವಿಚಾರ ಸಂಕಿರಣ ಇತ್ಯಾದಿಗಳ ಮೂಲಕ ಧರ್ಮ ತತ್ತ್ವಗಳನ್ನು ಜನರ ಮೇಲೆ ಬಿಂಬಿಸಲು ಯತ್ನಿಸಿದ್ದು, ದೀಕ್ಷೆ, ಲಿಂಗಧಾರಣ, ಧಾರ್ಮಿಕ ಸ್ಥಳಗಳ ಜೀರ್ಣೋದ್ಧಾರ ಮಾಡಿಸಿದ್ದು , ಧರ್ಮಜಾಗ್ರತಿಗಾಗಿ ಅನುಷ್ಠಾನ, ಪಾದಯಾತ್ರೆ, ಜ್ಯೋತಿ ಸಂಚಾರ ಮಾಡಿಸಿದ್ದು , ಧಾರ್ಮಿಕ ಪತ್ರಿಕೆ, ನಿಯತಕಾಲಿಕೆಗಳನ್ನು ನಡೆಸಿದ್ದು, ವೀರಶೈವ ಬೋಧಕ ತರಬೇತಿ ಶಿಬಿರ,

ವೀರಶೈವ ಧರ್ಮ ಪರಿಚಯ ಪರೀಕ್ಷೆಗಳನ್ನೇರ್ಪಡಿಸಿದ್ದು, ಮಾಸಿಕ ಶಿವಾನುಭವ ಗೋಷ್ಠಿ, ವೀರಶೈವ ಧರ್ಮದ ಬಗೆಗೆ ವಿದ್ವಜ್ಜನರ ಉಪನ್ಯಾಸ ಇತ್ಯಾದಿ ಏರ್ಪಡಿಸಿದ್ದು ಇವೇ ಮುಂತಾದ ಕಾರ್ಯಕ್ರಮಗಳನ್ನು ವೀರಶೈವ ಮಠಗಳು ಜರುಗಿಸುತ್ತ ಬಂದಿವೆ. ಸಣ್ಣಮಠ ಇರಲಿ, ದೊಡ್ಡಮಠ ಇರಲಿ ತಮ್ಮ ತಮ್ಮ ಅನುಕೂಲತೆಗಳಿಗೆ ತಕ್ಕಂತೆ ನಿರಂತರವಾಗಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತ ಬಂದಿವೆ. ಈ ನಿಟ್ಟಿನಲ್ಲಿ ಶಿವಯೋಗ ಮಂದಿರ, ಧಾರವಾಡ ಮುರುಘಾಮಠ, ಹುಬ್ಬಳ್ಳಿ ಮೂರುಸಾವಿರಮಠ, ಗದಗ ತೋಂಟದಾರ್ಯಮಠ, ಮುಂಡರಗಿ ಅನ್ನದಾನೇಶ್ವರಮಠ, ಹೊಸಪೇಟೆ ಕೊಟ್ಟೂರು ಸ್ವಾಮಿ ಮಠ, ನಿಡಸೋಸಿ ದುರದುಂಡೀಶ್ವರ ಮಠ, ಮುರಗೋಡ ಮಹಾಂತೇಶ್ವರಮಠ, ಭಾಲ್ಕಿ ಹಿರೇಮಠ, ಮೈಸೂರು ಸುತ್ತೂರು ಮಠ, ಇಳಕಲ್ಲ ವಿಜಯ ಮಹಾಂತೇಶಮಠ, ಬೆಂಗಳೂರು ಸರ್ಪಭೂಷಣ ಮಠ, ಹಾನಗಲ್ಲ ವಿರಕ್ತಮಠ, ಸಿರಿಗೆರೆಮಠ, ಶ್ರೀಶೈಲ, ಉಜ್ಜಯಿನಿ ಜಗದ್ಗುರು ಮಠಗಳು, ನಿಡುಮಾಮಿಡಿಮಠ, ನವಲಗುಂದ, ಕೊಪ್ಪಳ ಗವಿಮಠಗಳು * ಮುಂತಾದ ನೂರಾರು ಸಂಖ್ಯೆಯ ಮಠಗಳು ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತ ಬಂದಿವೆ. ಒಂದು ಸಮೀಕ್ಷೆಯಂತೆ ನೂರಕ್ಕೆ ನೂರರಷ್ಟು ವೀರಶೈವ ಮಠಗಳು ಧಾರ್ಮಿಕ ಚಟುವಟಿಕೆಗಳನ್ನು ಶ್ರಾವಣಮಾಸದಲ್ಲಿ ಮೇಲೆ ಸೂಚಿಸಿದ ಕಾರ್ಯಕ್ರಮಗಳಲ್ಲಿ ಅರ್ಧದಷ್ಟನ್ನು ನಡೆಸುತ್ತವೆ. ವೀರಶೈವ ಮಠಗಳು ಹೊರಡಿಸುವ ನಿಯತಕಾಲಿಕೆಗಳ ಸಂಖ್ಯೆ ಕರ್ನಾಟಕದಲ್ಲಿ ಬೇರೆ ಧರ್ಮೀಯ ಮಠಗಳು ಹೊರಡಿಸುವ ಸಂಖ್ಯೆಗಿಂತ ಹೆಚ್ಚಾಗಿವೆ. ಅವುಗಳ ಪ್ರಸಾರ ಸಂಖ್ಯೆಯೂ ಹೆಚ್ಚಾಗಿದೆ. ವೀರಶೈವ ಮಠಗಳು ವೀರಶೈವ ಧರ್ಮ ತತ್ತ್ವ, ಸಾಹಿತ್ತಿಕ, ಪುಣ್ಯಪುರುಷರು ಮುಂತಾದವುಗಳಿಗೆ ಸಂಬಂಧಿಸಿದಂತೆ ಹೊರಡಿಸುತ್ತಿರುವ ಪುಸ್ತಕಗಳ ಸಂಖ್ಯೆಯೂ ಗಮನಾರ್ಹವಾಗಿ ಅಧಿಕ ಪ್ರಮಾಣದಲ್ಲಿದೆ. ವೀರಶೈವಕ್ಕೆ ಇರುವ ಭವ್ಯ ಪರಂಪರೆ, ವಿಪುಲ ಸಾಹಿತ್ಯವೇ ಇದಕ್ಕೆ ಕಾರಣ. ವೀರಶೈವ ಮಠಗಳು ತಮ್ಮ ಧರ್ಮ - ತತ್ತ್ವ, ಸಾಹಿತ್ಯ ಪರಂಪರೆಯನ್ನು ಎಚ್ಚರಿಕೆಯಿಂದಲೇ ಕಾಯ್ದುಕೊಂಡು ಬಂದಿರುವುದು ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಧಾರ್ಮಿಕ ಕ್ಷೇತ್ರದಲ್ಲಿಯೂ ವೀರಶೈವ ಮಠಗಳ ಕಾಣಿಕೆ ಸಣ್ಣದೇನಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಮಠಾಧೀಶರ ನೇತೃತ್ವದಲ್ಲಿ ನಡೆಯುತ್ತಿರುವ ಧಾರ್ಮಿಕ ಚಟುವಟಿಕೆಗಳಲ್ಲಿ, ಮೂಲತತ್ತ್ವ ಪ್ರತಿಪಾದನಾತ್ಮಕ ಪ್ರಚಾರಕ್ಕಿಂತ ಸ್ವಪ್ರಚಾರ ಪ್ರಿಯತೆ, ಒಂದೇ ನಿರ್ದಿಷ್ಟ ದೃಷ್ಟಿಕೋನದಿಂದ ವೀರಶೈವ ಧರ್ಮ ಪ್ರಸಾರ, ತಮ್ಮದೆ ಸರಿ ಎನ್ನುವ ಹಠಮಾರಿಗಳ ಗುಂಪುಗಾರಿಕೆ ಮುಂತಾದ ಅನಾವಶ್ಯಕ ಅಹಿತಕರ ಬೆಳವಣಿಗೆ ಕಾಣುತ್ತಿವೆ. ವಸ್ತುನಿಷ್ಠವಾದ, ಸಾಧಾರಣವಾದ ಸಂಶೋಧನಾತ್ಮಕ ದೃಷ್ಟಿಯಿಂದ ವಿವೇಚಿಸುವ ಹಾಗೂ ಸಾಮಾನ್ಯರನ್ನು ಗೊಂದಲಕ್ಕೆ ಈಡುಮಾಡದ ಧಾರ್ಮಿಕ ವಿಚಾರ ಧಾರೆಯ ಪ್ರಸಾರದ ಅಗತ್ಯತೆ ಇದೆ. ಹಿರಿಯ ಮಠಾಧೀಶರು ಈ ನಿಟ್ಟಿನಲ್ಲಿ ಇಡೀ ವೀರಶೈವ ಮಠಾಧೀಶರು ಒಮ್ಮತವಾಗಿ ಧರ್ಮ ತತ್ತ್ವ ಪ್ರಚಾರ ಪ್ರಣಾಲಿಯ ಮೂಲಭೂತ ಸೂತ್ರಗಳನ್ನು ನಿರ್ಮಿಸಿ ಎಲ್ಲರೂ ಅದೇ ವಿಚಾರಗಳನ್ನು ಪ್ರತಿಪಾದಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಹೀಗಾಗದಿದ್ದಲ್ಲಿ ಒಬ್ಬೊಬ್ಬರೂ ಒಂದೊಂದು ಗುಂಪಾಗಿ ತಮತಮಗೆ ತಿಳಿದಷ್ಟನ್ನೇ ಹೇರುತ್ತ ಮೂಲ ಸತ್ಯವನ್ನು ತತ್ತ್ವವನ್ನು ಮರೆಮಾಚಿಬಿಡುವ ಅಪಾಯವಿದೆ. ಮಠ - ಮಠಗಳ ಅಥವಾ ಮಠಾಧೀಶರ ನಡುವೆ ಏನೇ ವೈಯಕ್ತಿಕ ಭಿನ್ನಾಭಿಪ್ರಾಯಗಳಿದ್ದರೂ ಧಾರ್ಮಿಕ ವಿಚಾರ - ಆಚಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಅಭಿಪ್ರಾಯಗಳೆಲ್ಲ ಒಂದೇ ಆಗಿರಬೇಕಾದುದು ಸಾಮಾನ್ಯ ಭಕ್ತನ ದೃಷ್ಟಿಯಿಂದ ಹೆಚ್ಚು ಸಮಂಜಸವಾಗಿದೆ.

ಇನ್ನು ವೀರಶೈವ ಮಠಗಳ ಸಾಮಾಜಿಕ ಕೊಡುಗೆಯ ವಿಷಯಕ್ಕೆ ಬಂದರೆ ಭಕ್ತರಿಗೆ ಮಠಗಳ ಬಗೆಗೆ ತುಂಬ ಗೌರವ ಭಾವ ಉಂಟಾಗುವಂತೆ ಅವು ಸಾಮಾಜಿಕ ಕಾರ್ಯ ಕೈಕೊಳ್ಳುತ್ತಿರುವುದು ಹೆಮ್ಮೆಯ ಅಂಶವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರರು ಗೈದ ಸಾಮಾಜಿಕ ಕ್ರಾಂತಿಯ ಬೇರುಗಳು ಇನ್ನೂ ವೀರಶೈವರಲ್ಲಿ ಉಳಿದುಕೊಂಡು ಬಂದಿರುವುದಕ್ಕೆ ಕಾಲಕಾಲಕ್ಕೆ ಮಠಗಳು ಬಸವ ತತ್ತ್ವ ಪ್ರಚಾರ, ಅನುಷ್ಠಾನ ನಡೆಸಿಕೊಂಡು ಬಂದಿರುವುದೇ ಕಾರಣವಾಗಿದೆ. ಬಸವ ಪುರಾಣವನ್ನು ಮಠದಲ್ಲಿ ಹಚ್ಚಿಸುವುದೆಂದರೆ ಮಠಾಧೀಶರಿಗೆ ಒಂದು ಬಹು ದೊಡ್ಡ ಹೆಮ್ಮೆ. ಅಂತೆಯೇ ಆದ್ದರಿಯಿಂದ ಬಸವ ಪುರಾಣವನ್ನು ಹಚ್ಚಿಸಿ ತನ್ಮೂಲಕ ಜನರಲ್ಲಿ ಬಸವಭಕ್ತಿ, ಬಸವ ತತ್ತ್ವಾಚರಣೆ ನೆಲೆಯೂರುವಂತೆ ಮಾಡಲಾಗಿದೆ.

ವೀರಶೈವ ಹಾಗೂ ಇತರ ಸಮಾಜದವರೆಲ್ಲರಿಗೆ ಉಪಯುಕ್ತವಾದ ಅನೇಕ ಬಗೆಯ ಸಾಮಾಜಿಕ ಕಾರ್ಯಗಳನ್ನು ಕಾಲಕಾಲಕ್ಕೆ ನೆರವೇರಿಸಿ ವೀರಶೈವ ಮಠಗಳು ಗಮನಾರ್ಹವಾಗಿ ಸಾಮಾಜಿಕ ಕೊಡುಗೆಯನ್ನು ನೀಡಿವೆ. ಅಂಥ ಕೆಲವು ಕಾರ್ಯಗಳೆಂದರೆ,

೧. ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ಎಲ್ಲ ಸಮಾಜದವರಿಗೂ ಲಗ್ನ ಸಮಾರಂಭಗಳನ್ನು ಹೆಚ್ಚು ಆಯಾಸವಿಲ್ಲದೆ

* ಈ ದಿಶೆಯಲ್ಲಿ ಚಿತ್ರದುರ್ಗದ ಬೃಹನ್ಮಠದ ಸೇವೆಯೂ ಸ್ಮರಣೀಯವಾದುದು (ಸಂ)

ಏರ್ಪಡಿಸಿಕೊಳ್ಳಲು ಅನುಕೂಲಮಾಡಿಕೊಟ್ಟಿದ್ದು. ಉತ್ತರ ಕರ್ನಾಟಕದಲ್ಲಿಯೇ ಅತ್ಯಾಧುನಿಕ ಭವ್ಯ ವಾಸ್ತುಶಿಲ್ಪದಿಂದ ಕೂಡಿದ ಸುಮಾರು 30 ಲಕ್ಷ ರೂ.ಗಳ ವೆಚ್ಚದಲ್ಲಿ ಗದಗ ಶಹರದಲ್ಲಿ ಜ. ತೋಂಟದಾರ್ಯ ಮಠದ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪ ಇದಕ್ಕೆ ತಕ್ಕ ಉದಾಹರಣೆಯಾಗಿದೆ. ಕಲ್ಯಾಣ ಮಂಟಪಗಳು ಇಲ್ಲದಲ್ಲಿಯೂ ವೀರಶೈವ ಮಠಗಳಲ್ಲಿಯೇ ಲಗ್ನ ಸಮಾರಂಭಗಳು ಜರಗುತ್ತವೆ. ಕೆಲವು ಮಠಗಳಲ್ಲಿ ವೀರಶೈವರಲ್ಲದೆ ಬೇರೆ ಯಾವುದೇ ಧರ್ಮ, ಜಾತಿಯ ಜನರೂ ಮದುವೆ ಮಾಡಿಕೊಳ್ಳುತ್ತಾರೆ. ದೀನ - ದಲಿತ, ಬಡವರ್ಗದ ಜನರಿಗಾಗಿ ಮಠಗಳು ಸಾಮೂಹಿಕ ವಿವಾಹ ಸಮಾರಂಭಗಳನ್ನು ಏರ್ಪಡಿಸಿ ಎಲ್ಲ ವೆಚ್ಚವನ್ನೂ ಮಠಗಳೇ ನೋಡಿಕೊಂಡಿವೆ. ಹೊಸಪೇಟೆಯ ಜಗದ್ಗುರು ಶ್ರೀ ಕೊಟ್ಟೂರು ಮಠದ ಜಗದ್ಗುರುಗಳು ಒಮ್ಮೆಲೆ ಇಂಥ ಸಾವಿರಗಟ್ಟಲೆ ಲಗ್ನಗಳನ್ನು ಏರ್ಪಡಿಸಿದ ದಾಖಲೆ ಇದೆ. ವೀರಶೈವ ಮಠಗಳಲ್ಲಿ ಬಹುತೇಕ ಎಲ್ಲ ಮಠಗಳೂ ಈ ಬಗೆಯ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿವೆ.

೨. ಸಾಮೂಹಿಕ ವಿವಾಹಗಳಂತೆಯೇ ಸಾಮೂಹಿಕ ಲಿಂಗಧಾರಣೆ, ಲಿಂಗದೀಕ್ಷೆ, ದಾಸೋಹ, ಮುಂತಾದವುಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿವೆ.

೩. ಸೃಷ್ಟಿಯ ಅಸ್ತವ್ಯಸ್ತತೆಯಿಂದ, ಅಂದರೆ ಬರಗಾಲ, ಅತಿವೃಷ್ಟಿ, ಮಹಾಪೂರ, ಭೂಕಂಪ ಇತ್ಯಾದಿಗಳಿಂದಾಗಿ ಬಳಲಿದ ಜನರಿಗೆ ವೀರಶೈವ ಮಠಗಳು ಸಹಾಯಕ್ಕೆ ಬಂದ ಅನೇಕ ಉದಾಹರಣೆಗಳಿವೆ. ಗದುಗಿನ ಜ. ತೋಂಟದಾರ್ಯ ಮಠದ ಶ್ರೀಗಳು ೧೯೭೮ ರಲ್ಲಿ ಆಂಧ್ರಪ್ರದೇಶದಲ್ಲಿ ಭೀಕರ ಬರಗಾಲ ಸಂಭವಿಸಿದಾಗ ಲಾರಿಗಟ್ಟಲೆ ಬಟ್ಟೆಬರೆ, ದವಸ ಧಾನ್ಯಗಳನ್ನು ಪಾದಯಾತ್ರೆಯ ಮೂಲಕ ಸಂಗ್ರಹಿಸಿ ಹಂಚಿ ಬಂದಿದ್ದಾರೆ.

೪. ವೀರಶೈವ ಮಠಗಳು ಪ್ರಗತಿಶೀಲ ಯುವಕ ಸಂಘ, ಅಕ್ಕಮಹಾದೇವಿ ಮಹಿಳಾ ಸಂಘಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಯುವಕ ಯುವತಿಯರು ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿವೆ. ಇದರಿಂದ ಯುವಕರಲ್ಲಿ ಸಹಕಾರ, ಪರಸ್ಪರ ಗೌರವ ಭಾವ, ಸಾಂಘಿಕ ಶಕ್ತಿಯಲ್ಲಿ ವಿಶ್ವಾಸ ಬೆಳೆದು ಸಮಾಜದ ಯುವ ಜನಾಂಗದಲ್ಲಿ ಒಂದು ಬಗೆಯ ಸೌಶೀಲ್ಯ ಬೆಳೆಯುವಲ್ಲಿ ಸಹಾಯಕಾರಿಯಾಗಿದೆ.

೫. ಧಾರ್ಮಿಕ - ಆಧ್ಯಾತ್ಮಿಕ ಚಟುವಟಿಕೆಗಳ ಮೂಲಕ ಮನಸ್ಸು ಬುದ್ಧಿಗಳನ್ನು ಶುದ್ಧಗೊಳಿಸುವ ಕಾರ್ಯದೊಂದಿಗೆ ಜನರ ದೇಹಾರೋಗ್ಯದ ಕಡೆಗೂ ವೀರಶೈವ ಮಠಗಳು ಗಮನ ಹರಿಸಿದ್ದು ಮೆಚ್ಚುವಂತಹದು. ತಜ್ಞ ವೈದ್ಯರುಗಳನ್ನು ಕರೆಸಿ ಆರೋಗ್ಯ ತಪಾಸಣೆಯ ಶಿಬಿರಗಳನ್ನು ಏರ್ಪಡಿಸುವುದು ಕ್ಯಾನ್ಸರ್ ಮುಂತಾದ ವಿಶಿಷ್ಟ ಆಸ್ಪತ್ರೆಗಳಿಗೆ ಧನಸಹಾಯ ಒದಗಿಸುವುದು,ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸುವುದು ಇವೇ ಮೊಲಾದ ಕಾರ್ಯಗಳನ್ನು ಹಲವಾರು ವೀರಶೈವ ಮಠಗಳು ಹಮ್ಮಿಕೊಳ್ಳುತ್ತಿವೆ. ಹುಬ್ಬಳ್ಳಿ ಜ. ಮೂರುಸಾವಿರಮಠದ ಕೊಡುಗೆ ಈ ನಿಟ್ಟಿನಲ್ಲಿ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಬೆಳಗಾವಿ ಜಿಲ್ಲೆಯ ಘಟಪ್ರಭೆಯಲ್ಲಿ ಕ್ಷಯರೋಗ ನಿವಾರಣಾ ಅತ್ಯುತ್ತಮ ಆಸ್ಪತ್ರೆಯೊಂದನ್ನು ಪ್ರಾರಂಭಮಾಡಿದ್ದು ಸಣ್ಣ ಸಾಧನೆಯಲ್ಲ. ಸುಮಾರು ಅರ್ಧಕೋಟಿ ರೂಪಾಯಿಗಳ ವೆಚ್ಚದಲ್ಲಿ ೬೫ ಎಕರೆ ವಿಶಾಲ ಸಹಜ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಅತ್ಯಾಧುನಿಕ ಸಲಕರಣೆಗಳನ್ನು ಉತ್ತಮ ವೈದ್ಯರನ್ನು, ರೋಗಿಗಳಿಗೆ ಬೇಕಾಗುವ ಉಚಿತ ಸೌಲಭ್ಯಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಕಳೆದ.೨೫ ವರ್ಷಗಳಿಂದ ಈ ದವಾಖಾನೆ ನಡೆಯುತ್ತಿದ್ದು ಸುಮಾರು ೬ (ಆರು) ಲಕ್ಷಕ್ಕೂ ಹೆಚ್ಚು ರೋಗಿಗಳು ಇಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಹಾಗೂ ಅವರನ್ನು ನೋಡಿಕೊಳ್ಳಲು ಬಂದ ಸಹಚರರಿಗೆ ಉಚಿತ ಊಟದ ವ್ಯವಸ್ಥೆ ಇದೆ. ೨೫ ಲಕ್ಷ ರೂ.ಗಳನ್ನು ಠೇವಣಿಯಾಗಿಟ್ಟು ಅದರ ಬಡ್ಡಿಯಲ್ಲಿ ನಿರಂತರವಾಗಿ ಈ ಉಚಿತ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಧರ್ಮಶಾಲೆ, ವೃದ್ಧಾಶ್ರಮ, ಸಹಕಾರಭವನ, ವಸತಿಗೃಹ, ವೈದ್ಯಕೀಯ ಮ್ಯೂಜಿಯಂ, ಗ್ರಂಥಾಲಯ, ಚಲನಚಿತ್ರ ಮಂದಿರ ಮುಂತಾದ ವ್ಯವಸ್ಥೆಗೆ ಯೋಜನೆ ಹಾಕಿಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ಹುಬ್ಬಳ್ಳಿಯ ಮೂರುಸಾವಿರ ಮಠದ ಲಿಂ. ಜಗದ್ಗುರು ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳಿಂದ ಕಟ್ಟಿಸಲ್ಪಟ್ಟು, ಈಗಿನ ಜಗದ್ಗುರುಗಳಿಂದ ಪ್ರಾರಂಭಿಸಲ್ಪಟ್ಟ ಶ್ರೀ ಜ. ಗುರು ಸಿದ್ಧೇಶ್ವರ ಸಹಕಾರಿ ಆಸ್ಪತ್ರೆಯ ಆವರಣದಲ್ಲಿ ಈ ಕ್ಷಯರೋಗ ಆಸ್ಪತ್ರೆ ಕಟ್ಟಡ ಇದೆ. ಇದೇ ರೀತಿ ಗದುಗಿನ ಜ. ತೋಂಟದಾರ್ಯ ಮಠವು ಹುಬ್ಬಳ್ಳಿಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆವ ಬಡ ರೋಗಿಗಳಿಗೆ ಉಚಿತ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದಾರೆ.

೬. ದಲಿತ ವರ್ಗದ ಸುಧಾರಣೆಯಲ್ಲಿ ವೀರಶೈವ ಮಠಗಳು ಯಾವಾಗಲೂ ಮುಂಚೂಣಿಯಲ್ಲಿವೆ. ಮಠಗಳ ಉತ್ಸವಗಳಲ್ಲಿ ಹರಿಜನ - ಗಿರಿಜನರಾದಿಯಾಗಿ ಎಲ್ಲರೂ ಪಾಲ್ಗೊಳ್ಳುತ್ತಾರೆ. ಸಾಮೂಹಿಕ ವಿವಾಹಾದಿಗಳಲ್ಲಿ ಹರಿಜನ - ಗಿರಿಜನರೂ ಸೌಲಭ್ಯ ಪಡೆಯುತ್ತಾರೆ. ಕೆಲವು ಮಠಾಧೀಶರು ಹರಿಜನ ಕೇರಿಗಳಿಗೂ ಹೋಗಿ ಅವರನ್ನು ಉದ್ಧರಿಸಿದ್ದಾರೆ. ಈ ನಿಟ್ಟಿನಲ್ಲಿ ಗದುಗಿನ ಜಗದ್ಗುರುಗಳು ಪ್ರತಿವರ್ಷ ಸಿದ್ಧರಾಮ ಜಯಂತಿಯಂದು ಹರಿಜನ - ಗಿರಿಜನರನ್ನು ಮಠಕ್ಕೆ ಆಹ್ವಾನಿಸಿ ಅವರಿಗೆ ಸಾಮೂಹಿಕ ಅನ್ನ ಸಂತರ್ಪಣೆ ಮಾಡುವರು. ಆ ವೇಳೆಯಲ್ಲಿ ಅವರ ಊಟದ ತಟ್ಟೆಗಳನ್ನು ಮೇಲ್ಜಾತಿಯವರೆನಿಸಿಕೊಳ್ಳುವ ಭಕ್ತರು ತೆಗೆಯುವರು. ಸಮಾಜದ ಎಲ್ಲ ವರ್ಗಗಳ ಜನತೆಯ ಸಮೀಪಕ್ಕೆ ತಾವೇ ಸ್ವತಃ ಹೋಗಿ ಸಮಾಜಕ್ಕೆ ಕಳಂಕವಾಗುವ ಅವರ ಕೆಟ್ಟ ಚಟಗಳನ್ನು ತಮ್ಮ ಜೋಳಿಗೆಗೆ ಹಾಕಿಕೊಂಡು ಇನ್ನೆಂದೂ ಅವರು ಆ ಚಟಕ್ಕೆ ಬಲಿಯಾಗದಂತೆ ಒಂದು ನವೀನತಮ "ಮಹಾಂತ ಜೋಳಿಗೆ" ಕಾರ್ಯಕ್ರಮವನ್ನು ವಿಜಾಪೂರ ಜಿಲ್ಲೆಯ ಇಲಕಲ್‌ನ ಶ್ರೀ ನಿ. ಪ್ರ. ಮಹಾಂತಸ್ವಾಮಿಗಳವರು ೧೯೭೫ ರಿಂದ ಪ್ರಾರಂಭಿಸಿದ್ದಾರೆ. ಚಹಾ ಚಟದಿಂದ ಹಿಡಿದು ಶಬ್ದದಿಂದ ಹೇಳಲಾಗದ ಮಹಾ ಚಟಗಳನ್ನೆಲ್ಲ ನೂರಾರು ಜನರು ಮಹಾಂತ ಜೋಳಿಗೆಗೆ ಅರ್ಪಿಸಿದ್ದಾರೆ. ಇದೊಂದು ಸಾಮಾಜಿಕ ಸುಧಾರಣೆಯ ಪವಿತ್ರ ಕೈಂಕರ್ಯವೇ ಸರಿ.

ಹೀಗೆ ವೀರಶೈವ ಮಠಗಳು ಕೇವಲ ವೀರಶೈವರಿಗಷ್ಟೇ ಅಲ್ಲದೆ ವೀರಶೈವೇತರ ಜನರಿಗೂ ಅದರಲ್ಲೂ ದೀನ - ದಲಿತ, ಹರಿಜನ - ಗಿರಿಜನರನ್ನೊಳಗೊಂಡು ಮಾನವ ಸಮಾಜದ ಎಲ್ಲ ವರ್ಗಗಳ ಜನರಿಗೂ ಲೇಸಾಗುವ ಸಾಮಾಜಿಕ ಸುಧಾರಣಾ ಕಾರ್ಯಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸುತ್ತ ಬಂದಿವೆ. ಕರ್ನಾಟಕದ ಒಳಗೂ ಹೊರಗೂ ನೂರಾರು ಮಠಗಳು ಈ ಬಗೆಯ ಸಾಮಾಜಿಕ ಕಾರ್ಯಗಳನ್ನು ಮಾಡುತ್ತ ಬಂದಿರುವುದರಿಂದಲೇ ಇಂಥ ಕಾರ್ಯಗಳನ್ನು ಹಮ್ಮಿಕೊಂಡಾಗ ಉಳ್ಳವರು ಉದಾರವಾಗಿ ಧನ - ಧಾನ್ಯಾದಿ ಕಾಣಿಕೆಗಳನ್ನು ಸಲ್ಲಿಸುತ್ತಲೇ ಬಂದಿದ್ದಾರೆ.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ವೀರಶೈವ ಮಠಗಳ ಕೊಡುಗೆ ಗಣನೀಯವಾಗಿದೆ. ಶಿವಶರಣರು ರಾಜಾಶ್ರಯವನ್ನು ಧಿಕ್ಕರಿಸಿ ನಿಂತವರು. ಅನಂತರದ ಕಾಲದಲ್ಲಿ ಕೆಲವು ರಾಜಮನೆತನಗಳನ್ನು ಬಿಟ್ಟರೆ ಸಾಮಾನ್ಯವಾಗಿ ವೀರಶೈವ ಸಾಹಿತ್ಯಕ್ಕೆ ಬೆಂಬಲವಾಗಿ ನಿಂತ ಸಂಸ್ಥೆಗಳೆಂದರೆ ಮಠಗಳೇ ಎನ್ನಬಹುದು. ಮಠಗಳು ಶಿಕ್ಷಣಕ್ಕೆ ಎಷ್ಟೊಂದು ಮಹತ್ವವನ್ನು ನೀಡಿದವೋ ಅಷ್ಟೇ ಮಹತ್ವವನ್ನು ವೀರಶೈವ ಸಾಹಿತ್ಯ ರಚನೆ - ಅಧ್ಯಯನ - ಅಧ್ಯಾಪನಗಳಿಗೆ ನೀಡಿದವು. ವೀರಶೈವ ಮಠಗಳಲ್ಲಿ ಸಾಹಿತ್ಯ ಚಟುವಟಿಕೆ : ೧. ಸೃಜನ ೨. ವಿಮರ್ಶೆ - ಟೀಕೆ ೩. ಅಧ್ಯಯನ, ಸಂಕಲನ, ಸಂಪಾದನೆ ಈ ಮೂರು ಮುಖ್ಯ ವಿಭಾಗಗಳಲ್ಲಿ ನಡೆದಿದೆ.

ವೀರಶೈವ ಮಠಗಳು ಮಾಡಿದ ಅತಿ ದೊಡ್ಡ ಮಹತ್ವದ ಕಾರ್ಯವೆಂದರೆ ಕರ್ನಾಟದ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ತಾಡೋಲೆಯ ಗ್ರಂಥಗಳನ್ನು ಶರಣರ ವಚನಗಳ ಕಟ್ಟುಗಳನ್ನು, ಕೋರಿ ಕಾಗದಲ್ಲಿದ್ದ ಗ್ರಂಥ - ವಚನ ಇತ್ಯಾದಿಗಳನ್ನು ಸುರಕ್ಷಿತವಾಗಿ ಕಾಯ್ದಿಟ್ಟಿದ್ದು. ಮಠಗಳು ಈ ಕಾರ್ಯವನ್ನು ಮಾಡಿರದಿದ್ದರೆ ಕನ್ನಡದ ಒಂದು ಅಮೂಲ್ಯ ಭಾಗವೇ ಇಲ್ಲವಾಗುತ್ತಿತ್ತು. ಮಠಗಳಲ್ಲಿ ಈಗಲೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹಸ್ತಪ್ರತಿಗಳು ಲಭ್ಯವಿವೆ. ತಮ್ಮ ಮಠಗಳಲ್ಲಿ ಈ ರೀತಿ ಸಂಗ್ರಹಗೊಂಡ ಗ್ರಂಥಗಳನ್ನು ಅಧ್ಯಯನ, ಅಧ್ಯಾಪನ, ಸಂಪಾದನೆ, ವಿಮರ್ಶೆ - ಟೀಕೆ ಮುಂತಾದವುಗಳಿಗೆ ಬಳಸಿಕೊಳ್ಳಲಾಯಿತು. ತಮ್ಮ ಮಠದಲ್ಲಿ ಈ ಕೆಲಸ ಸಾಧ್ಯವಾಗದಾದಾಗ ಬೇರೆ ಮಠಗಳಿಗೆ, ಸಂಸ್ಥೆಗಳಿಗೆ, ವಿಶ್ವವಿದ್ಯಾಲಯಗಳಿಗೆ, ಹಿರಿಯ ವಿದ್ವಾಂಸರಿಗೆ ಅವುಗಳನ್ನು ನೀಡಲಾಯಿತು.

ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ನೂರೊಂದು ವಿರಕ್ತರು ವೀರಶೈವ ಸಾಹಿತ್ಯ - ಧರ್ಮಕ್ಕೆ ಸಂಬಂಧಿಸಿದಂತೆ ಬಹು ವ್ಯವಸ್ಥಿತ ರೀತಿಯಲ್ಲಿ ಸಂರಕ್ಷಣೆ - ಬೆಳವಣಿಗೆಯ ಯೋಜನೆಗಳನ್ನು ಹಾಕಿಕೊಂಡು ಅದರಿಂದ ಸ್ಥಾಪಿತವಾದ ಮಠಗಳಲ್ಲೆಲ್ಲ ಇಂತಹ ವೀರಶೈವ ಸೃಜನ ಟೀಕೆ, ಸಂಪಾದನೆ ಕ್ಷೇತ್ರಗಳಿಗೆ ಮೌಲಿಕ ಕಾಣಿಕೆಗಳನ್ನು ನೀಡಿದ್ದಾರೆ. ತೋಂಟದ ಸಿದ್ಧಲಿಂಗ ಯತಿಗಳು ಸ್ವತಃ ವಚನಗಳನ್ನು ರಚಿಸಿದ್ದಾರೆ. ಷಣ್ಮುಖ ಸ್ವಾಮಿಗಳು ಶ್ರೇಷ್ಠ ವಚನಕಾರರಾಗಿದ್ದರು. ಶೂನ್ಯ ಸಂಪಾದನೆ ಎಂಬ ವೈಶಿಷ್ಟ್ಯಪೂರ್ಣ ಕೃತಿಯನ್ನು ಕನ್ನಡಕ್ಕೆ ನೀಡಿದವರು ಮಠಾಧೀಶರು. ಕಲ್ಲುಮಠದ ಪ್ರಭುದೇವ, ಸ್ವತಂತ್ರ ಸಿದ್ಧಲಿಂಗೇಶ್ವರ, ಘನಮಠದ ನಾಗಭೂಷಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮುಂತಾದ ಹಲವಾರು ಸ್ವಾಮಿಗಳಲ್ಲದೆ ಆಧುನಿಕ ಕಾಲದ ಡಾ. ಜ.ಚ.ನಿ. ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀಗಳು, ಮುಂಡರಗಿ ಜ. ಅನ್ನದಾನೀಶ್ವರ ಸ್ವಾಮಿಗಳು ಹೀಗೆ ಇಂದಿಗೂ ಹಲವಾರು ಸ್ವಾಮಿಗಳು ವೀರಶೈವ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠರಾಗಿದ್ದಾರೆ.

ವಚನಸಾಹಿತ್ಯದಲ್ಲಿ ವಚನ, ಸ್ವರವಚನ, ಅನುಭಾವಗೀತೆ ಮುಂತಾದವುಗಳು, ವೀರಶೈವಧರ್ಮ - ತತ್ತ್ವ ವಿವೇಚನೆ, ವಿಮರ್ಶೆ, ಸಂಶೋಧನೆಗಳು ಇದರಿಂದ ರಚಿತವಾದ ಸಾಹಿತ್ಯ, ವೀರಶೈವ ತತ್ತ್ವಾರ್ಥ ವಿವೇಚನೆ, ಕೃತಿ ವಿಮರ್ಶೆ, ಟೀಕೆ ಇಂತಹ ಸಾಹಿತ್ಯಿಕ ಚಟುವಟಿಕೆಗಳಿಗೆ ಮೀಸಲಾದ ವೀರಶೈವ ಮಠಗಳು ಒಂದು ಕಾಲಕ್ಕೆ ಇದ್ದವು. ಉದಾಹರಣೆಗೆ ಬಾಗಿಲುಕೋಟೆಯ ಹಾಗೂ ನರಗುಂದ ಟೀಕಿನ ವಿರಕ್ತಮಠಗಳು ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರತಿಮಾಡುವ ಕಾರ್ಯವನ್ನು ಪ್ರಮುಖವಾಗಿ ಕೈಕೊಳ್ಳುತ್ತಿದ್ದ ಓಲೆಯ ಮಠಗಳೂ ಇದ್ದವು. ವೀರಶೈವ ಧರ್ಮ - ಸಾಹಿತ್ಯ - ಸಂಸ್ಕೃತಿಗಳನ್ನು ರಕ್ಷಿಸಿ ಬೆಳೆಸುವ ಈ ಬಗೆಯ ಕಾರ್ಯವನ್ನು ಮಠಗಳು ಕೈಕೊಂಡಿರದಿದ್ದಲ್ಲಿ ಅಪಾರವಾದ ವೀರಶೈವ ಸಾಹಿತ್ಯ ಲಭ್ಯವಾಗುತ್ತಿರಲಿಲ್ಲ.

ಆಧುನಿಕ ಕಾಲದಲ್ಲಿಯೂ ವೀರಶೈವ ಮಠಗಳು ಸಾಹಿತ್ಯಾಭಿವೃದ್ಧಿಗೆ ಎದ್ದು ಕಾಣುವ ರೀತಿಯಲ್ಲಿ ಶ್ರಮಿಸುತ್ತಿರುವುದನ್ನು ಕಾಣಬಹುದು. ವೀರಶೈವ ಮಠಗಳು ಸಾಹಿತ್ಯ ಕೃತಿಗಳನ್ನು ಪ್ರಕಟಿಸುವುದು, ಸಾಹಿತಿಗಳಿಗೆ ಸನ್ಮಾನ, ಸಾಹಿತ್ಯ ಕೃತಿಗಳಿಗೆ ಬಹುಮಾನ, ಸಂಸ್ಮರಣ, ಸಂಭಾವನಾ ಗ್ರಂಥಗಳ ಪ್ರಕಟಣೆ ಮುಂತಾದ ಹಲವಾರು ಬಗೆಯ ಚಟುವಟಿಕೆಗಳನ್ನು ಈಗಿನ ವೀರಶೈವ ಮಠಗಳು ಒಂದಿಲ್ಲೊಂದು ರೀತಿಯಲ್ಲಿ ನಡೆಸುತ್ತಿವೆ. ಸಾಹಿತ್ಯ ಕ್ಷೇತ್ರದಲ್ಲಿ ಮಠಗಳು ಹೇಗೆ ಕಾರ್ಯ ಮಾಡಿ ತೋರಿಸಬಲ್ಲವು ಎಂಬುದಕ್ಕೆ ಧಾರವಾಡ ಮುರುಘಾಮಠ, ಹುಬ್ಬಳ್ಳಿ ಮೂರುಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಮುಂಡರಗಿ ಅನ್ನದಾನೀಶ್ವರ ಮಠ ಮುಂತಾದುವು ಸಾಕ್ಷಿಯಾಗಿವೆ. ಗದುಗಿನ ತೋಂಟದಾರ್ಯ ಮಠ ೧೯೭೭ ರಿಂದ ಈ ವರೆಗೆ ಅಂದರೆ ಕೇವಲ ೧೬ ವರ್ಷಗಳ ಅವಧಿಯಲ್ಲಿ ವೀರಶೈವ ಪುಣ್ಯಪುರುಷರ ಮಾಲಿಕೆಯಲ್ಲಿ ೧೧೩, ವೀರಶೈವ ಅಪ್ರಕಟಿತ ಗ್ರಂಥಮಾಲೆಯಲ್ಲಿ ೫೭ ಹೀಗೆ ಒಟ್ಟು ೧೭೦ ಕ್ಕೂ ಹೆಚ್ಚು ಸಂಖ್ಯೆಯ ೨೫ ಸಾವಿರ ಪುಟಗಳ ೭ ಲಕ್ಷ ರೂ.ಗಳ ವೆಚ್ಚದ ಪುಸ್ತಕಗಳನ್ನು ಮಠದಿಂದ ಪ್ರಕಟಿಸಲಾಗಿದೆ. ಈ ಮಠದ ಇನ್ನೊಂದು ದಾಖಲೆ ಎಂದರೆ ೧೨ ಲಕ್ಷ ವೆಚ್ಚ ತಗಲಬಹುದಾದ ೭ ಸಾವಿರ ಪುಟಗಳ ವೀರಶೈವ ವಿಶ್ವಕೋಶವನ್ನು ೧೨ ಸಂಪುಟಗಳಲ್ಲಿ ಪ್ರಕಟಿಸಲು ಉದ್ಯುಕ್ತವಾದುದು. ಹುಬ್ಬಳ್ಳಿ ಮೂರುಸಾವಿರ ಮಠದಿಂದ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಮುನ್ನೂರಕ್ಕೂ ಹೆಚ್ಚು ಸಂಖ್ಯೆಯ ಗ್ರಂಥಗಳು ಹೊರಬಂದಿವೆ. ಅಲ್ಲಿಯ ಹಸ್ತಪ್ರತಿ ಭಂಡಾರ ಸಂಶೋಧಕರಿಗೆ ಒಂದು ಉತ್ತಮ ಕೊಡುಗೆ. ಕೆಲವು ಮಠಾಧೀಶರು ತಮ್ಮ ಪ್ರಚಾರಕ್ಕಾಗಿ ಗ್ರಂಥಗಳನ್ನು ಪ್ರಕಟಿಸಿ ಸುಪ್ರಭಾತದ ಕ್ಯಾಸೆಟ್ಟು, ಚರ್ವಿತಚರ್ವಣದ ಧರ್ಮ ತತ್ತ್ವದ ಶುಷ್ಕ ಪ್ರಮಾಣಬದ್ಧವೆನಿಸದ ಪುಸ್ತಕ ಪ್ರಕಟಣೆ, ಜಾತ್ರೆ, ಅಡ್ಡಪಲ್ಲಕ್ಕಿ ಉತ್ಸವ ಹೀಗೆ ಅನಾವಶ್ಯಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ತಮ್ಮ ಪ್ರಚಾರಕ್ಕಾಗಿ ಅಥವಾ ತಮ್ಮ ವಿಚಾರಗಳನ್ನು ಹೇರುವುದಕ್ಕಾಗಿ ಅಥವಾ ತಮಗೆ ಆಗದವರನ್ನು ತೆಗಳುವುದಕ್ಕಾಗಿ ತಮ್ಮ ತಮ್ಮ ಮಠದಿಂದ ಪತ್ರಿಕೆ ನಿಯತಕಾಲಿಕೆಗಳನ್ನು ಹೊರಡಿಸುತ್ತಿದ್ದಾರೆ. ಆದರೆ ಸಾಹಿತ್ಯಕ್ಷೇತ್ರದಲ್ಲಿ ಮೌಲಿಕವೆನಿಸುವಂತಹ ಯೋಜನೆಗಳನ್ನು ಕೆಲವೇ ಮಠಗಳು ಮಾತ್ರ ಕಾರ್ಯಗತಗೊಳಿಸಿವೆ. ಜೊಳ್ಳು ಬಹುಬೇಗ ಹಾರಿಹೋಗಿ ಕೊನೆಗೆ ಉಳಿಯುವಂತಹವು ಗಟ್ಟಿಕಾಳು ಮಾತ್ರ ಎಂಬಂತೆ ಮಠಗಳು ಈ ನಿಟ್ಟಿನಲ್ಲಿ ಹೆಚ್ಚು ದೂರದರ್ಶಿಯಾದ, ವ್ಯವಸ್ಥಿತ ಯೋಜನೆಗಳನ್ನು ಕಾರ್ಯಗತಗೊಳಿಸುವ ಅವಶ್ಯಕತೆ ಇದೆ. ಅದಕ್ಕೆ ಗದಗ - ಹುಬ್ಬಳ್ಳಿ ಮಠಗಳು ಮಾದರಿಯಾಗಿವೆ. ವೀರಶೈವ ಮಠಾಧೀಶರು ತಾವೇ ಇಂಥ ಮೌಲಿಕ ಯೋಜನೆಗಳನ್ನು ಹಾಕಿಕೊಳ್ಳಲು ಸಾಧ್ಯವಿಲ್ಲದಿದ್ದರೆ, ಅಂತಹ ಪ್ರತ್ಯೇಕ ಸಂಸ್ಥೆಗಳನ್ನು ಸ್ಥಾಪಿಸಿ ಅಥವಾ ವಿಶ್ವವಿದ್ಯಾಲಯ, ಸಂಶೋಧನ ಕೇಂದ್ರಗಳಿಗೆ ಅಗತ್ಯ ಸೌಕರ್ಯ ಒದಗಿಸುವುದರ ಮೂಲಕವೂ ಕಾರ್ಯ ಮಾಡಬಹುದು. ಬೆಳಗಾವಿ ಜಿಲ್ಲೆಯ ಮುರಗೋಡ ದುರದುಂಡೀಶ್ವರ ಮಠದ ಲಿಂ. ಮಹಾಂತ ಶಿವಯೋಗಿಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವೀರಶೈವ ಅಧ್ಯಯನ ಸಂಶೋಧನೆ ಪ್ರಕಟಣೆ ಇತ್ಯಾದಿಗಳಿಗಾಗಿ 'ಬಸವೇಶ್ವರ ಪೀಠ'ವನ್ನು ಸ್ಥಾಪಿಸಿದ್ದಾರೆ. ಚಿತ್ರದುರ್ಗದ ಶ್ರೀ ನಿ. ಪ್ರ. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಬೃಹನ್ಮಠ ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ವಚನಗಳನ್ನು ಹಿಂದಿ ಭಾಷೆಗೆ ಅನುವಾದಿಸಲು ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಹೊರಬರುತ್ತಿರುವ ಪ್ರಕಟಣೆಗಳಲ್ಲಿ ವೀರಶೈವಕ್ಕೆ ಸಂಬಂಧಪಟ್ಟ ಪ್ರಕಟಣೆಗಳ ಸಂಖ್ಯೆಯು ಗಮನಾರ್ಹವಾಗಿ ಹೆಚ್ಚಾಗಿದ್ದು, ಅವುಗಳಲ್ಲಿ ಪ್ರತಿಶತ ೭೫ ರಷ್ಟು ವೀರಶೈವ ಮಠಗಳಿಂದಲೆ ಪ್ರಕಟಿತವಾಗಿರುತ್ತವೆ. ರಾಜಾಶ್ರಯದಿಂದ ವಂಚಿತರಾಗಿರುವ ವೀರಶೈವರಿಗೆ ಸಾಹಿತ್ಯದ ದೃಷ್ಟಿಯಿಂದ ಮಠಗಳೇ ಆಶ್ರಯ ಸ್ಥಾನಗಳಾಗಿವೆ. ಒಟ್ಟಿನಲ್ಲಿ ವೀರಶೈವ ಮಠಗಳು ಸಾವಿರಾರು ವರ್ಷಗಳಿಂದಲೂ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ಗಮನಾರ್ಹವಾದ ಸೇವೆ ಸಲ್ಲಿಸಿ ಮಾನವ ಸಮಾಜಕ್ಕೆ ಅಮೂಲ್ಯ ಕಾಣಿಕೆಯನ್ನು ಸಲ್ಲಿಸಿವೆ.

ಮತಮಾನ್ಯಗಳ ಸಾಮಾಜಿಕ ಹೊಣೆ

ಜ. ಹೊ. ನಾರಾಯಣಸ್ವಾಮಿ

ಮನುಷ್ಯನ ಚಿಂತನೆಯ ಉದ್ದೇಶ ಸೃಷ್ಟಿಯನ್ನು ಅರಿಯುವುದು. ಅತಿ ಪ್ರಾಚೀನ ಸಂಸ್ಕೃತಿಗಳ ಉಗಮದಲ್ಲಿಯೂ ಈ ಉದ್ದೇಶವೇ ಇರುವುದು ಕಂಡುಬರುತ್ತದೆ. ಅಲ್ಲಿ ಅರಿವಿನಿಂದ ಅರಿವಿಗೆ ಅಡಿ ಇಡುತ್ತಾ ಸೃಷ್ಟಿಯ ನಿಗೂಢವನ್ನು ಭೇದಿಸಿ ವಿಶ್ವ ವೈಶಾಲ್ಯತೆಗೆ ಎದೆ ತೆರೆದು ಒಂದಾಗುವ ಯತ್ನ ವ್ಯಕ್ತವಾಗಿದೆ. ವೇದಗಳ ಕಾಲದ ಪಂಚಭೂತಗಳ ಅಧ್ಯಯನವಾಗಲೀ, ವೇದ ಪೂರ್ವಕಾಲದ ಹರಪ್ಪ ಮೊಹಂಜೊದಾರೋ ಸಂಸ್ಕೃತಿಯ ಅರ್ಧನಾರೀಶ್ವರ ಕಲ್ಪನೆಯ ಹಿಂದಿರುವ ಪ್ರಕೃತಿ ಪುರುಷರ ಸಮನ್ವಯ ತತ್ವವಾಗಲೀ, ಉಪನಿಷತ್ ಕಾಲದ ಚೈತನ್ಯದ ಸರ್ವವ್ಯಾಪಕ ಅಭಿವ್ಯಕ್ತಿಯಾಗಲೀ, ಅನಂತರ ಬಂದ ಜೈನ ಬೌದ್ಧ ಧರ್ಮಗಳ ಗುರಿಯಾಗಲೀ, ಬಹುಪ್ರಾಚೀನವಾದ ಶೈವಸಿದ್ಧಾಂತವಾಗಲೀ ಈ ಯಾವುವೂ ಕೊಲ್ಲುವ ಕ್ರಿಯೆಗೆ ಒತ್ತುಕೊಡದೆ ಅರಿತು ಅಡಿಯಿಡುವುದಕ್ಕೆ ಮಹತ್ವಕೊಟ್ಟವು. ಹಾಗೆ ನೋಡಿದರೆ ವೇದಕಾಲದ ಯಜ್ಞ-ಬಲಿ ಆ ಕಾಲದ ವಿಕೃತ ಮನಸ್ಸಿನ ಕ್ರಿಯೆಯೆ ಆಗಿದೆ. ವೇದದ ಗುರಿ ಅದಾಗಿರಲಿಲ್ಲ. ವಿದ್ ಎಂಬ ಧಾತುವಿನಿಂದ ಬಂದಿರುವ ವೇದಪದ. 'ವಿದ್' ಎಂದರೆ 'ತಿಳಿ' ಎನ್ನುವ ಅರ್ಥವನ್ನು ಹೊಂದಿದ್ದು ತಿಳಿಯುತ್ತ ಮುಂದುವರೆವ ಪ್ರಕ್ರಿಯೆಯಲ್ಲಿ ಸಮಾಜ ಸಾಗುತ್ತಾ ಬಂದಿರುವುದನ್ನು ನಾವು ಗುರುತಿಸಬಹುದಾಗಿದೆ.

ಈ ಅರಿವಿನ ಹಾದಿಯಿಂದ ಹೊರಳಿ ಕೊಲ್ಲುವ ಕ್ರಿಯೆ ಪ್ರಾರಂಭವಾದದ್ದು ಬಹುಶಃ ತ್ರೇತಾಯುಗದಲ್ಲಿ ಎಂದು ಕಾಣುತ್ತದೆ. ಅದು ವರ್ಗ ಸಂಘರ್ಷಕ್ಕೆ ಮೊದಲ ಹೆಜ್ಜೆಗುರುತಾಗಿದೆ. ಅದನ್ನು ಆರ್ಯದ್ರಾವಿಡ ಎಂದೂ, ಉತ್ತರ ದಕ್ಷಿಣ ಭಾರತದ ಸಂಘರ್ಷ ಎಂದೂ ಗುರುತಿಸಲಾಗಿದೆ. ಮನುಷ್ಯ ಅರಿವಿನ ಹಾದಿಯಿಂದ ಹೊರಳಿ ಅವತಾರದ ಕಲ್ಪನೆಗಳನ್ನು ಹುಟ್ಟುಹಾಕಿ ದುಷ್ಟ-ಶಿಷ್ಟ ಪರಿಕಲ್ಪನೆಯನ್ನು ತಂದುಕೊಂಡು ಶಿಷ್ಟರು ಅವತಾರಪುರುಷರು. ಅವರ ಅವತಾರ, ದುಷ್ಟಸಂಹಾರಕ್ಕಾಗಿ ಎಂದು ವ್ಯಾಖ್ಯಾನಿಸಿ ರಾಮನನ್ನು ವಿಷ್ಣುವಿನ ಅವತಾರವಾಗಿಸಿ ರಾವಣನನ್ನು ರಾಕ್ಷಸನನ್ನಾಗಿಸಿ ಕೊಲೆಗೈವ ಸಂಸ್ಕೃತಿ ಹುಟ್ಟಿಕೊಂಡದ್ದು ಇಲ್ಲೆ. ಹಾಗೆ ಉತ್ತರ ಕಾಂಡದಲ್ಲಿ ಬರುವ ಶಂಬೂಕನ ಶಿರಶ್ಛೇದನದ ಘಟನೆಯಲ್ಲಿ ವರ್ಣ ವ್ಯವಸ್ಥೆಯ ಕರಾಳಮುಖ ಹೆಪ್ಪುಗಟ್ಟಿರುವುದು ಇಲ್ಲೆ.


ಮುಂದುವರೆದು ದ್ವಾಪರಯುಗದಲ್ಲಿ ವರ್ಗಸಂಘರ್ಷ ಇನ್ನೂ ಸಂಕೀರ್ಣಗೊಂಡು ದಾಯಾದಿಗಳ ಒಳಗೆ ಬೃಹದ್‌ರೂಪ ಪಡೆದು ಪರಸ್ಪರ ಸರ್ವನಾಶವಾಗುವ ದಿಕ್ಕಿನಲ್ಲಿ ಕ್ರಮಿಸಿರುವುದು ಕಂಡುಬರುತ್ತದೆ. ಸೋದರ ಸೋದರರನ್ನು ವಧಿಸುವ ಮೂಲಕ ಧರ್ಮದ ಉಳಿವಿಗೆ ಯತ್ನಿಸಲಾಗಿದೆ ಎನ್ನುವ ಸೂಕ್ಷ್ಮ ವ್ಯಾಖ್ಯಾನ ಅದಾಗಿದೆ. ಮೇಲ್ನೋಟಕ್ಕೆ ಅದು ಹಾಗೆ ಕಂಡರೂ ಅದರ ಅಂತರಂಗ ಸ್ವಾರ್ಥ ಮತ್ತು ಕುಟಿಲತೆಯೆ ಆಗಿದೆ. ಹಾಗೆ ಮುಂದುವರೆದ ಅದು ಕಲಿಯುಗದಲ್ಲಿ ಸೋದರ ಸೋದರರನ್ನು ಸುಲಿವುದಿರಲಿ ಪ್ರತಿಯೊಬ್ಬರೂ ಪ್ರತಿಕ್ಷಣವೂ ಅಂತಃಸ್ಸಾಕ್ಷಿಯನ್ನು ಕೊಲ್ಲುತ್ತಾ ಆತ್ಮಹತ್ಯೆ ಮಾಡಿಕೊಂಡಿರುವ, ಮಾಡಿಕೊಳ್ಳುತ್ತಿರುವ ದಾರುಣ ಪರಿಸ್ಥಿತಿ ಪ್ರಾಪ್ತವಾಗಿದೆ. ಇದು ಮನುಕುಲದ ವ್ಯಥೆಯ ಕಥೆ. ಇದು ಅಂತಃಸಾಕ್ಷಿಯನ್ನು ಕೊಲ್ಲುವ ಯುಗ. ಧರ್ಮದ ಹೆಸರಿನಲ್ಲಿ ಈ ಕೃತ್ಯಗಳು ನಡೆಯುತ್ತಿರುವುದು ದುರಂತವೇ ಸರಿ. ಧರ್ಮ ಎಂದರೆ ಕೊಲ್ಲುವುದಲ್ಲ, ಕೊಲ್ಲುವ ಮನಸ್ಸುಗಳನ್ನು ಗೆಲ್ಲುವುದು.

೨

ನಮ್ಮ ಸಮಾಜದಲ್ಲೀಗ ಕಂಡುಬರುತ್ತಿರುವ ಜಾತಿ ಹಾಗೂ ಧರ್ಮಗಳ ಸಂಘರ್ಷ ಮೇಲ್ನೋಟಕ್ಕಷ್ಟೆ. ಆದರೆ ವಾಸ್ತವವಾಗಿ ಅದರ ಅಂತರಂಗದಲ್ಲಿ ತಡೆಯುತ್ತಿರುವುದು ಇನ್ನೂ ಸ್ಪಷ್ಟರೂಪ ಪಡೆಯದ ವರ್ಗಸಂಘರ್ಷ.

ಭಾರತದಲ್ಲೀಗ ಪ್ರಧಾನವಾಗಿ ಮೂರು ವರ್ಗಗಳನ್ನು ಗುರುತಿಸಿಕೊಳ್ಳಬಹುದು. (1) ಮೇಲ್ವರ್ಗ (2) ಮಧ್ಯಮ ವರ್ಗ (3) ಕೆಳವರ್ಗ. ಮೇಲ್ವರ್ಗದಲ್ಲಿ ಕೇವಲ ಕೈಹಿಡಿಯಷ್ಟು ಜನರಿದ್ದಾರೆ. ಮಧ್ಯಮ ವರ್ಗದಲ್ಲಿ ಅದಕ್ಕಿಂತ ಸ್ವಲ್ಪ ಹೆಚ್ಚು ಜನರಿದ್ದಾರೆ. ಕೆಳವರ್ಗದಲ್ಲಿ ಬಹುಸಂಖ್ಯಾತರಿದ್ದಾರೆ. ಅವರು ಇವರು ಎನ್ನದೆ ಎಲ್ಲ ಜಾತಿಯ, ಎಲ್ಲ ಧರ್ಮಗಳ ಜನರೂ

ಈ ಮೂರೂ ವರ್ಗಗಳಲ್ಲಿದ್ದಾರೆ. ಈ ವರ್ಗಗಳು ಸಾಮಾಜಿಕ ಪರಿಸ್ಥಿತಿಯಿಂದಾಗಿ ತನ್ನಿಂದ ತಾನೆ ರೂಪಪಡೆದು ಅನೇಕ ಅನಾಹುತಗಳು ಆಗುತ್ತಿದ್ದರೂ, ಅದು ಹೇಗೆ ಆಗುತ್ತಿದೆ ಎಂಬ ಸ್ಪಷ್ಟ ಚಿತ್ರಣ ಸಮಾಜದ ಅರಿವಿಗೆ ಬಂದಿಲ್ಲ. ವರ್ಗವಿಂಗಡಣೆಗೆ ಹಾಗೂ ಅದರ ಪ್ರಮಾಣಗಳನ್ನು ಈ ಕೆಳಗಿನ ಚಿತ್ರದಿಂದ ಅರಿಯಬಹುದು :



1. ಮೇಲ್ವರ್ಗ 2. ಮಧ್ಯಮ ವರ್ಗ 3. ಕೆಳವರ್ಗ

ಮೇಲ್ವರ್ಗ : ಇವರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಆದರೆ ಅತ್ಯಂತ ಬಲಿಷ್ಠರು ಇವರೇ. ಇಡೀ ಸಮಾಜದ, ದೇಶದ ಹೃದಯವನ್ನು ತಮ್ಮ ಮುಷ್ಠಿಯಲ್ಲಿ ಹಿಡಿದು ಆಡಿಸುತ್ತಿದ್ದಾರೆ. ಈ ಮೇಲ್ವರ್ಗದಲ್ಲಿ ಪ್ರಧಾನವಾಗಿ ನಾಲ್ವರು ಒಂದಾಗಿ ಪರಸ್ಪರ ಕೈಹಿಡಿದು ತಮ್ಮ ಹಿತಸಾಧನೆಯಲ್ಲಿ ತೊಡಗಿದ್ದಾರೆ. ಅವರೆ (1) ಪುರೋಹಿತಶಾಹಿ, (2) ಬಂಡವಾಳಶಾಹಿ, (3) ಅಧಿಕಾರಶಾಹಿ, (4) ರಾಜಕಾರಣಿಗಳು. ದೇಶದ ಜನಸಂಖ್ಯೆಗೆ ಹೋಲಿಸಿದರೆ ಇವರು ಅತ್ಯಂತ ಅಲ್ಪ ಸಂಖ್ಯಾತರು. ಆದರೆ ದೇಶದ ಸೂತ್ರವನ್ನು ಆಡಿಸುತ್ತಿರುವವರು ಇವರೆ. ಇವರು ಬೆಣ್ಣೆದೋಸೆಯ ಮೇಲೆ ಬೆಣ್ಣೆ ತಿನ್ನುವ ಜನ. ಇವರು ವ್ಯವಸ್ಥೆಯ, ಪರಂಪರಾನುಗತವಾಗಿ ಬಂದಿರುವ ಸಾಮಾಜಿಕ, ಧಾರ್ಮಿಕ ಸೂತ್ರಗಳನ್ನು ಹಿಡಿದಿರುವವರು.

ಪುರೋಹಿತಶಾಹಿ : ಮೊದಲ ಸ್ಥಾನದಲ್ಲಿರುವ ಇವರು ಈ ದೇಶದ ಎಲ್ಲ ವರ್ಗಗಳ ಮೇಲೆ ತಮ್ಮ ಬಿಗಿ ಮುಷ್ಟಿಯನ್ನು ಸ್ಥಾಪಿಸಿಕೊಂಡಿದ್ದಾರೆ. ಇವರಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಗುಡಿ, ಚರ್ಚು, ಮಸೀದಿಗಳು, ಮಠ ಮಾನ್ಯಗಳು ಪ್ರಮುಖಸ್ಥಾನದಲ್ಲಿದ್ದು ಈ ದೇಶದ ಬಂಡವಾಳಶಾಹಿಗಳನ್ನು, ಅಧಿಕಾರಶಾಹಿಗಳನ್ನು ಹಾಗೂ ರಾಜಕಾರಣಿಗಳನ್ನು ತನ್ನ ಹಿಡಿತದಲ್ಲಿ ಪರೋಕ್ಷವಾಗಿ ಹಿಡಿದುಕೊಂಡಿದೆ. ಇವರ ಅಣತಿ ಇಲ್ಲದೆ ಯಾವುದೂ ಜರುಗುವುದಿಲ್ಲ. ಅದು ಚುನಾವಣೆ ಇರಲಿ, ಸಾಮಾಜಿಕ ಕ್ರಿಯೆಗೆ ಸಂಬಂಧಿಸಿದ್ದಿರಲಿ ಇವರ ಹಸ್ತಕ್ಷೇಪ ಇದ್ದೇ ಇದೆ.

ಈ ಮಠಮಾನ್ಯಗಳಿಗೆ, ದೇವಸ್ಥಾನ, ಚರ್ಚು, ಮಸೀದಿಗಳಿಗೆ ಹರಿದು ಬರುತ್ತಿರುವ ಹಣದ ಹುಚ್ಚು ಹೊಳೆ ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ. ಅದು ಹೊರದೇಶದಿಂದ ವಿವಿಧ ಹೆಸರಿನಲ್ಲಿ ಹರಿದುಬರುತ್ತಿರುವ ಹಣವಾಗಿರಬಹುದು, ಅಂತರಿಕವಾಗಿ ಉಕ್ಕುತ್ತಿರುವ ಕಪ್ಪುಹಣವಾಗಿರಬಹುದು. ಅದಕ್ಕೆ ಮಿತಿಯೇ ಇಲ್ಲವಾಗಿದೆ.

ಇತ್ತೀಚೆಗೆ ಜಾತಿಗೊಂದು ಧರ್ಮಸಂಸ್ಥೆ ಹುಟ್ಟುತ್ತಿರುವುದಕ್ಕೆ ಇರುವ ಮುಖ್ಯ ಕಾರಣ ಈ ಕಪ್ಪುಹಣದ ದಂಧೆ. ಮಠಗಳ ಮೇಲೆ ತೆರಿಗೆ ಅಧಿಕಾರಿಗಳಾಗಲಿ ಅಥವಾ ಮತ್ತಾವುದೇ ರೀತಿಯ ಧಾಳಿಗಳಿಗೆ ಕಾನೂನಿನಲ್ಲಿ ಅವಕಾಶವಿರದ ಕಾರಣ ಎಲ್ಲ ಜಾತಿಯ ಜನರ ಭ್ರಷ್ಟ ಹಣ ಅವರವರ ಧರ್ಮಸಂಸ್ಥೆಗಳಲ್ಲಿ ಸುರಕ್ಷಿತವಾಗಿದೆ.

ಬಂಡವಾಳಶಾಹಿ : ನೆಹರೂರವರನ್ನು ಒಳಗೊಂಡಂತೆ ಈ ದೇಶದ ಅನೇಕರು ಗಾಂಧಿಯ ಚರಕವನ್ನು ಮೇಲ್ನೋಟಕ್ಕಷ್ಟೆ ಹಿಡಿದಿದ್ದರು. ಅದರ ಉದ್ದೇಶ ವಿಕೇಂದ್ರೀಕರಣ ಹಾಗೂ ಗ್ರಾಮಸ್ವರಾಜ್ಯವಾಗಿರಲಿಲ್ಲ. ಬದಲಿಗೆ ಗಾಂಧಿಯನ್ನು ಮುಂದು ಮಾಡಿಕೊಂಡು ಸ್ವಾತಂತ್ರ್ಯ ಪಡೆವುದಾಗಿತ್ತು. ಹೊರಗೆ ಚರಕ, ಒಳಗೆ ಗಿರಣಿ. ಗಾಂಧಿಯ ಮೂಲಕ ಸ್ವಾತಂತ್ರ್ಯ ಪಡೆದನಂತರ ಗಾಂಧಿಯನ್ನು ಗುಂಡಿಕ್ಕಿ ಕೊಲ್ಲುವುದರ ಮೂಲಕ ಅವರ ತತ್ವಗಳನ್ನು ಬಲಿಗೊಂಡು ಬೃಹತ್ ಉದ್ಯಮಗಳನ್ನು ಹುಟ್ಟು ಹಾಕಲಾಯ್ತು.

ದೇಶ ಇಂದು ಬಂಡವಾಳಶಾಹಿಗಳ ಹಿಡಿತದಲ್ಲಿದೆ. ಅವರ ಮರ್ಜಿಯಲ್ಲಿ ಸರ್ಕಾರ ತನ್ನ ಕಾರ್ಯ ನಿರ್ವಹಿಸಬೇಕಾದ ಇಕ್ಕಟ್ಟು ಇದೆ. ಈ ಬಂಡವಾಳಶಾಹಿ ಮತ್ತು ಪುರೋಹಿತಶಾಹಿಗಳು ಪರಸ್ಪರ ಕೈಹಿಡಿದು ನಡೆದಿವೆ. ಇವರನ್ನು ಎದುರು ಹಾಕಿಕೊಂಡರೆ ನಾವು ಅಧಿಕಾರದಲ್ಲಿ ಉಳಿಯುವಂತಿಲ್ಲ ಎಂದು ಒಂದು ರಾಜ್ಯದ ಮುಖ್ಯಮಂತ್ರಿಯ ಹೇಳಿಕೆ ವಾಸ್ತವ, ಕಟುಸತ್ಯದ ಅಭಿವ್ಯಕ್ತಿಯಾಗಿದೆ.

ಈ ಪ್ರಭಾವೀ ಬಂಡವಾಳಶಾಹಿಗಳ ಪ್ರಲೋಭನೆಯಿಂದ ನಗರೀಕರಣ ಸಂಸ್ಕೃತಿ ಹರಡುತ್ತಿದೆ. ಪರಿಸರ ನಾಶವಾಗುತ್ತಿದೆ. ವೈಜ್ಞಾನಿಕ ಅನ್ವೇಷಣೆಯ ದುರ್ಬಳಕೆಯಾಗುತ್ತಿದೆ. ದೂರದರ್ಶನದ ಆದಿಯಾಗಿ ಎಲ್ಲ ಪ್ರಚಾರ ಮಾಧ್ಯಮಗಳಲ್ಲೂ ಈ ಬಂಡವಾಳಶಾಹಿಗಳ ಆರ್ಭಟ ಹಾದಿತಪ್ಪಿಸುತ್ತಿದೆ. ಜಾಹಿರಾತಿನ ಹೆಸರಿನಲ್ಲಿ ಮಹಿಳೆಯರ ಮಾನ ಹರಾಜು ಆಗುತ್ತಿದೆ. ವಿದ್ಯಾಸಂಸ್ಥೆಗಳು ವ್ಯಾಪಾರದ ತಾಣಗಳಾಗಿವೆ. ಈಗ ಈ ಬಂಡವಾಳಶಾಹಿಗಳು ಮಿನಿ ಮಹಾರಾಜರುಗಳಾಗುತ್ತಿದ್ದಾರೆ. ಅವರ ಅನುಕೂಲಕ್ಕೆ ತಕ್ಕಂತೆ ಕಾನೂನನ್ನು ತಿರುಚಲಾಗುತ್ತಿದೆ, ನ್ಯಾಯ ವಾಲುತ್ತಿದೆ. ಇವರು ಮತ್ತು ಪುರೋಹಿತಶಾಹಿ ತನ್ನ ಹಿಡಿತವನ್ನು ಪ್ರಬಲವಾಗಿ ಹೊಂದಿದ್ದು ಅವರ ಉದ್ದಿಮೆಗಳಲ್ಲಿ ದುಡಿವ ಕಾರ್ಮಿಕರಿಗೆ

ಪ್ರಾಥಮಿಕ ಸೌಲಭ್ಯಗಳಿಂದಲೂ ವಂಚಿಸಿ ದೇವಸ್ಥಾನಗಳನ್ನು, ಮಠಗಳನ್ನು ಕಟ್ಟುವ ನಯವಂಚನೆ ನಿರಂತರವಾಗಿ ನಡೆದಿದೆ. ಇವರೀರ್ವರೂ ಸೇರಿ ಉದ್ಯಮದ ಹೆಸರಿನಲ್ಲಿ ದೇಶವನ್ನು ಅಂತರರಾಷ್ಟ್ರೀಯವಾಗಿ ಹರಾಜು ಹಾಕುತ್ತಿದ್ದಾರೆ. ರಾಷ್ಟ್ರೀಯ ಭಾವನೆ ಬೇರೂರಲು ಇವರು ಅವಕಾಶವೀಯದೆ ಒಂದು ಅತಂತ್ರ ಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆ. ಇವರಿಂದಾಗಿ ದೇಶದ ಬಹುಸಂಖ್ಯಾತ ಜನ ಗೌರವಾನ್ವಿತ ಗುಲಾಮರಾಗಿ ಉಳಿವ ಪರಿಸ್ಥಿತಿ ಉಂಟಾಗಿದೆ.

ಅಧಿಕಾರಶಾಹಿ : ಈ ದೇಶದ ಅಧಿಕಾರಶಾಹಿ ಅತ್ಯಂತ ಕ್ರೂರವಾಗಿದೆ. ಕಾನೂನಿನ ಪೂರ್ಣಜ್ಞಾನ ಇರದ ರಾಜಕಾರಣಿಗಳನ್ನು ತನ್ನ ಕೈಗೊಂಬೆಯಾಗಿಸಿಕೊಂಡು ಅತ್ಯಂತ ನಾಜೂಕಿನಿಂದ ಸ್ವಾರ್ಥ ಸಾಧಿಸಿಕೊಳ್ಳುತ್ತಿದೆ. ದೇಶದ ಯಾವುದೇ ಯೋಜನೆ ಪೂರ್ಣ ಜಾರಿಯಾಗದಂತೆ ಎಚ್ಚರ ವಹಿಸುತ್ತಾ, ಯಥಾಸ್ಥಿತಿವಾದವನ್ನು ಉಳಿಸಿ ಬೆಳಸುತ್ತಾ ಮತ್ತು ಭ್ರಷ್ಟಗೊಳಿಸುತ್ತಾ ಲಪಟಾಯಿಸುವ ಚಾಣಾಕ್ಷಬುದ್ಧಿ ಇದರದಾಗಿದೆ. ಸಾಮಾಜಿಕ ಪರಿವರ್ತನೆಯ ಯಾವೊಂದು ಶಾಸನವೂ ಕಾರ್ಯರೂಪಕ್ಕೆ ಬರದ ಹಾಗೆ ನ್ಯಾಯಾಂಗವೂ ಸೇರಿದಂತೆ ಈ ಕಾರ್ಯಾಂಗ ಅತಿ ಆಸ್ಥೆಯಿಂದ ನೋಡಿಕೊಳ್ಳುತ್ತಿವೆ.

ಭ್ರಷ್ಟಾಚಾರ ಇದರ ಅಂತರಂಗ. ಈ ದೇಶದ ಹೃದಯ ರಿಸರ್ವಬ್ಯಾಕ್. ಅಲ್ಲೂ ಹಗರಣಗಳ ಸರಮಾಲೆಗಳೇ ಜರುಗುತ್ತಿವೆ. ತಮ್ಮ ಸ್ವಹಿತ ಕಾಪಾಡಿಕೊಳ್ಳುವಲ್ಲಿ ರಾಜಕಾರಣಿಗಳೊಂದಿಗೆ ಕೈಜೋಡಿಸುವ ಇವರು ರಾಜಕಾರಣಿ ಬೆಕ್ಕುಗಳಿಗೆ ಸಿಹಿ ಹಂಚುವ ಮಂಗಗಳಂತಾಗಿದ್ದಾರೆ.

ಈ ದೇಶದ ಅಂತರಂಗದಲ್ಲಿ ಕಡೆಯುತ್ತಿರುವ ಅವ್ಯವಹಾರಗಳು ಯಾವ ಕ್ಷಣದಲ್ಲಿ ಯಾವುದನ್ನು ಕಕ್ಕುತ್ತವೆಯೋ ಹೇಳುವಂತಿಲ್ಲ. ಆಂತರಿಕ ಗೌಪ್ಯ ವಿಚಾರಗಳೂ ಕೂಡ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹಿರಂಗವಾಗಿ ಹರಾಜು ಆಗುವಷ್ಟು ವ್ಯಾಪಕವಾಗಿ ಅಧಿಕಾರದ ಜಾಲ ನಡೆಯುತ್ತಿದೆ.

ಆಯಾಯ ಜಾತಿಯ ಅಧಿಕಾರಿಗಳು ತಮ್ಮ ತಮ್ಮ ಅಧಿಕಾರದ ಅವಧಿಯಲ್ಲಿ ಲೂಟಿ ಹೊಡೆದ ಕಪ್ಪುಹಣ ಅವರವರ ಜಾತಿಯ ಮಠಗಳಲ್ಲಿ ಕೋಟಿ ಕೋಟಿ ಕೊಳೆಯುತ್ತಿವೆ. ಕೇವಲ ಆಸ್ತಿಯ ತನಿಖೆ ಮಾಡಿದರೂ ಸಾಕು ಈ ಅಧಿಕಾರಿಗಳು ಮತ್ತು ರಾಜಕಾರಣಿಗಳು ಅವರ ಮತ್ತು ಅವರ ಸಂಬಂಧಿಕರ ಹೆಸರಿನಲ್ಲಿ ಮಾಡಿರುವ, ಮಾಡುತ್ತಿರುವ ಆಸ್ತಿಗಳು ಅಷ್ಟಿಷ್ಟಲ್ಲ. ಸರ್ಕಾರದ ಹೆಸರಿನಲ್ಲಿ ಇವರುಗಳು ಕಟ್ಟಿಸಿಕೊಂಡು ಮೆರೆಯುತ್ತಿರುವ ಮೋಜಿನ ಮಂದಿರಗಳು ಲೆಕ್ಕವಿಲ್ಲದಷ್ಟು. ಅಧಿಕಾರದ ಸುಪ್ಪತ್ತಿಗೆಯಲ್ಲಿ ನಡೆಸುತ್ತಿರುವ ದಾಂಧಲೆ ಪಾಶ್ಚಾತ್ಯ ರಾಷ್ಟ್ರಗಳೂ ನಾಚಿ ತಲೆತಗ್ಗಿಸುವಷ್ಟು. ಇನ್ನೂ ಗೌಪ್ಯ ವಿಷಯಗಳನ್ನು ಕುರಿತು ಹೇಳಲೇ ಬೇಕಾಗಿಲ್ಲ. ಅವು ಬಹಿರಂಗವಾಗಿಯೇ ಹರಾಜಾಗುತ್ತಿವೆ.

ಪ್ರಗತಿಗಾಗಿ ಇವರ ಕೊಡುಗೆ ಶೂನ್ಯ. ಉತ್ಸಾಹಿ ಯುವ ಉದ್ಯಮಿಗಳಿಗೆ ಇವರ ಕೊಡುಗೆಗಿಂತ ಕಿರುಕುಳವೇ ಜಾಸ್ತಿ. ಇವರನ್ನು ನಂಬಿ ಯಾವ ಯೋಜನೆಗಳನ್ನು ಹಮ್ಮಿಕೊಳ್ಳುವಂತಿಲ್ಲ. ಇವರು ರಾಜಕಾರಣಿಗಳನ್ನು ಬುಗುರಿ ಆಡಿಸಬಲ್ಲರು. ಅನೇಕ ವೇಳೆ ಮಂತ್ರಿ ಮಹೋದಯರೆ ಇವರಿಗೆ ಕೈಮುಗಿದು ಕೇಳಿಕೊಳ್ಳುವ ಪ್ರಸಂಗಗಳುಂಟು. ಇವರು ಪುರೋಹಿತಶಾಹಿಯ, ಬಂಡವಾಳಶಾಹಿಗಳ ಬಾಲಬಡುಕರು. ರಾಜಕಾರಣಿಗಳ ತಲೆಹಿಡುಕರು. ಜನಸಾಮಾನ್ಯರು ಇವರ ಪಾಲಿಗೆ ಊಳಿಗದವರು. ಇವರಿಗೆ ಅಧಿಕಾರದ ಪ್ರತಿಷ್ಠೆಗಿಂತ ಸ್ವಪ್ರತಿಷ್ಠೆಯೇ ಜಾಸ್ತಿ. ಇವರು ಇರುವುದನ್ನು ಇಲ್ಲವಾಗಿಸಬಲ್ಲರು. ಇರದುದನ್ನು ಪ್ರತ್ಯಕ್ಷಗೊಳಿಸಬಲ್ಲರು.

ಅಧಿಕಾರ ಇವರಿಗೆ ರಬ್ಬರ್ ಇದ್ದಹಾಗೆ. ಅದನ್ನು ಅವರಿಗೆ ಬೇಕಾದ ಹಾಗೆ ಹಿಗ್ಗಿಸಿಕೊಳ್ಳಬಲ್ಲ, ಇಲ್ಲಾ ಕುಗ್ಗಿಸಿಕೊಳ್ಳಬಲ್ಲ ವಿದ್ಯೆ ಕರಗತ. ಕೊಡುವ ಅಥವಾ ಹೊರಡಿಸುವ ಆದೇಶಗಳು ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ. ಇದರ ಅಂತರಂಗ ಕತ್ತಲೆಯ ಕೂಪ. ಸ್ವಾತಂತ್ರ್ಯಾನಂತರ ಈ ದೇಶದ ಶ್ರೀಸಾಮಾನ್ಯನ ಶರೀರ ಒಣಗಿ ಬೆಂಡಾಗುತ್ತಿದ್ದರೆ ಅಧಿಕಾರಶಾಹಿ ಜಿಗಣೆಯ ರೀತಿ ಊದುತ್ತಲೇ ಇದೆ. ದೇಶದ ಆದಾಯದ ಶೇಕಡ ಅರವತ್ತು ಭಾಗವನ್ನು ಕೇವಲ ಏಳುಭಾಗಕ್ಕಿಂತ ಕಡಿಮೆ ಇರುವ ಈ ಅಧಿಕಾರಶಾಹಿ ನುಂಗುತ್ತಿದೆ.

ರಾಜಕಾರಣಿಗಳು : ಪುರೋಹಿತಶಾಹಿಯ, ಬಂಡವಾಳಶಾಹಿಯ, ಅಧಿಕಾರಶಾಹಿಯ ಬಾಲಬಡುಕರು ಇವರು. ಇವರು ಶಾಸಕಾಂಗದ ಒಡೆಯರು ಎನ್ನುವುದು ಮೇಲ್ನೋಟಕ್ಕಷ್ಟೆ. ಈ ದೇಶದ ಬೇಕು ಬೇಡಗಳಿಗೆ ಶಾಸನ ಮಾಡುವ ಇವರ ಅಂತರಂಗದ ತಿರುಳು ಬರಡಾದ ಮರಳು. ಮುಂದಿನ ಪೀಳಿಗೆ ಇರಲಿ, ಸ್ವಾತಂತ್ರ್ಯಕ್ಕಾಗಿ, ಮೌಲ್ಯಗಳಿಗಾಗಿ ಹೋರಾಡಿದ ಹಿರಿಯ ರಾಜಕಾರಣಿಗಳೇ ಅತ್ಯಂತ ಭ್ರಷ್ಟರಾದ ದುರಂತ ಈ ದೇಶದ್ದು. ಬೋಫರ್ಸ್ ಹಗರಣಗಳಿಂದ ಹಿಡಿದು ಷೇರು ಹಗರಣದವರೆಗೆ, ಮಹಾತ್ಮಗಾಂಧಿಯ ಕೊಲೆಯಿಂದ ಹಿಡಿದು ರಾಜೀವಗಾಂಧಿಯ ಕೊಲೆಯವರೆಗೆ ಈ ಎಲ್ಲವೂ ಇವರ ರಾಜಕೀಯ ಚದುರಂಗದ ದಾಳಗಳು. ಒತ್ತೆಯಾಳುಗಳ ಕೊಲೆಯಾಗಲೀ, ಬಾಬರಿಮಸೀದಿ ಉರುಳುವುದಾಗಲೀ,

ಭಯೋತ್ಪಾದಕ ಕೃತ್ಯಗಳಾಗಲೀ, ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳಿಗೆ ಸಿಂಹಸ್ವಪ್ನವಾಗಿರುವ ವೀರಪ್ಪನ್ ಗೈಯುವ ಅಸಂಖ್ಯಾತ ಕೊಲೆಗಳಾಗಲೀ ಇವರಿಗೆ ಏನೂ ಅಲ್ಲ. ರಾಷ್ಟ್ರೀಯ ಜಲನೀತಿಯನ್ನು ತರಲಾಗದ ಇವರಿಗೆ ನೀರಿನ ಸಮಸ್ಯೆ ಮನರಂಜನೆ ಅಥವಾ ಇವರ ರಾಜಕೀಯ ದೊಂಬರಾಟದ ತಾಳ. ಇವರಿಗೆ ಧರ್ಮ, ಜಾತಿ, ಮೀಸಲಾತಿ ಎಲ್ಲವೂ ಬಂಡವಾಳ. ಇವರು ಭಾಷೆಯನ್ನೂ ಬಿಡದೆ ಬಂಡವಾಳವಾಗಿಸಿಕೊಳ್ಳುವವರು. ಗಡಿಸಮಸ್ಯೆಗಳು ಇವರಿಗೆ ರಾಜಕೀಯ ದುಡಿಮೆಗಳು.

ಇವರಿಗೆ ಆಗದವರ ಹಗರಣ ಬೆಳಕಿಗೆ ಬಂದಷ್ಟೇ ಬೇಗ ಕತ್ತಲೆಯಲ್ಲಿ ಕೈಕೈ ಕುಲುಕಿದ ಕ್ಷಣಾರ್ಧದಲ್ಲಿ ಒಳಕೋಣೆಗೆ ಸರಿದು ಬಿಡುತ್ತವೆ. ಅನಕ್ಷರತೆ, ಮೂಢನಂಬಿಕೆಗಳು ಇವರ ವರದಾನಗಳು. ಅವನ್ನು ಪೋಷಿಸಿಕೊಂಡು ಬರುವಲ್ಲಿ ಇವರ ಜಾಣ್ಮೆ ಹೇಳತೀರದು. ಅವನ್ನೂ ಬಂಡವಾಳವಾಗಿಸಿಕೊಳ್ಳಬಲ್ಲ ಭಂಡರು. ಪರಸ್ತ್ರೀ ಸೆರಗಲ್ಲಿ ಮಲಗಿ ಸುಖಿಸುವ ಇವರು ತಮ್ಮ ಹೆಂಡಿರ ಸೆರಗಲ್ಲಿ ಮಲಗಿದವರನ್ನು ಕಂಡು ಕಾಣದಂತೆ ಇರಬಲ್ಲ ಚತುರ ನಟರು. ದೇಶದ ಬಡತನ ಇವರ ಮೂಲ ಬಂಡವಾಳ. ಜಗತ್ತು ಇರುವವರೆಗೂ ಇವರದು ಒಂದೇ ಕಾರ್ಯಕ್ರಮ : ಗರೀಬಿ ಹಠಾವೋ. ವೇದಿಕೆಯ ಮೇಲೆ ವಿರೋಧ ವ್ಯಕ್ತಪಡಿಸುವ ಇವರುಗಳೆಲ್ಲಾ ಒಳಗೆ ಒಂದೆ. ಒಬ್ಬ ಸತ್ತಂತೆ ನಟಿಸಿದರೆ ಮತ್ತೊಬ್ಬ ಅತ್ತಂತೆ ನಟಿಸುವವ. ನಟನೆ ಇವರ ಮೂಲ ಬಂಡವಾಳ. ನಟರನ್ನು ಮೀರಿಸುವ ಮಹಾನ್‌ನಟರಿವರು. ದೇಶ ದಿವಾಳಿಯಾದರೂ ದೀಪಾವಳಿಯ ಸಡಗರದವರು.


ಮಧ್ಯಮ ವರ್ಗ : ಮೇಲ್ವರ್ಗದವರಿಗಿಂತ ಸ್ವಲ್ಪ ಜಾಸ್ತಿ ಇರುವ ವಿದ್ಯಾವಂತರು. ಇವರು ಆರ್ಥಿಕವಾಗಿ ಅಷ್ಟು ಬಲವುಳ್ಳವರಲ್ಲ. ಇವರ ಬಂಡವಾಳವೆಂದರೆ ವಿದ್ಯೆಯೊಂದೆ.

ಕೆಳವರ್ಗ : ಇವರು ಹೆಚ್ಚು ಸಂಖ್ಯೆಯಲ್ಲಿರುವ ಅನಕ್ಷರಸ್ಥರು. ಇವರಲ್ಲಿ ಅಜ್ಞಾನ, ಮೂಢನಂಬಿಕೆಗಳು ಜಾಸ್ತಿ. ಇವರಿಗೆ ಧರ್ಮ ಅಫೀಮು ಇದ್ದಹಾಗೆ. ಶ್ರಮವೇ ಇವರ ಮೂಲ ಬಂಡವಾಳ. ದುಡಿಯುವುದನ್ನು ಎಂದರೆ ಬೆವರು ಬಸಿಯುವುದನ್ನು ಬಿಟ್ಟರೆ ಮತ್ತೇನನ್ನೂ ಅರಿಯದ ಮುಗ್ಧರು. ಹಗಲಿರುಳು ದುಡಿದರೂ ಯಾರು ತಮ್ಮ ಶ್ರಮದ ಫಲವನ್ನು ಕಸಿದುಕೊಳ್ಳುತ್ತಿದ್ದಾರೆ ಎಂಬ ಪರಿಜ್ಞಾನವೂ ಇಲ್ಲದ ಸಮೂಹ. ಒಂದು ಚದರ ಅಡಿ ಗುಂಡಿ ತೆಗೆಯಲು ಒಂದು ರೂ. ಆದರೆ ಎರಡು ಚದರ ಅಡಿಗೆ ಎರಡು ರೂ. ಅಂದರೆ ಹೌದು ಎಂದು ಒಪ್ಪಿಕೊಳ್ಳುವಷ್ಟು ಮುಗ್ಧರು, ಅಜ್ಞರು.

೩


ಮೇಲ್ವರ್ಗದ ಕೈಹಿಡಿಯಲ್ಪಟ್ಟಿರುವ ಈ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ರಾಜಕಾರಣಿಗಳು ಹೂಡುವ ಉದ್ದಿಮೆಗಳು, ಕೊಡುವ ನೌಕರಿಗಳಿಗೆ ಮಧ್ಯಮ ವರ್ಗದ ವಿದ್ಯಾವಂತರು ಕೆಲಸಕ್ಕೆ ಸೇರಿ ಈ ಕೆಳವರ್ಗದ ಶ್ರಮ ಜೀವಿಗಳಿಂದ ದುಡಿಸಿಕೊಳ್ಳುವ ವ್ಯವಸ್ಥೆ ಇಂದು ಅವ್ಯಾಹತವಾಗಿ ನಡೆದು ಬರುತ್ತಿದೆ.

ಆದಾಯ : ದುಡಿಯುವುದರ ಉದ್ದೇಶ ಪ್ರತಿಫಲಾಪೇಕ್ಷೆಯಿಂದ. ಹೀಗೆ ದುಡಿಯುವುದರಿಂದ ಬರುವ ಪ್ರತಿಫಲ ಅಥವಾ ಆದಾಯ ಈಗಿನ ವ್ಯವಸ್ಥೆಯಲ್ಲಿ ಯಾವ ಪ್ರಮಾಣದಲ್ಲಿ ಹಂಚಿಕೆಯಾಗುತ್ತಿದೆ ಎಂಬುದನ್ನು ಈ ಕೆಳಗಿನ ಚಿತ್ರದಲ್ಲಿ ಕಾಣಿಸಿದೆ.



ಕಡಿಮೆ ದುಡಿವ ಮೇಲ್ವರ್ಗ ಅತ್ಯಂತ ಹೆಚ್ಚು ಆದಾಯವನ್ನು ಪಡೆದುಕೊಂಡರೆ ಹೆಚ್ಚು ದುಡಿವ ಕೆಳವರ್ಗ ಅತ್ಯಂತ ಕಡಿಮೆ ಆದಾಯವನ್ನು ಅಥವಾ ಪ್ರತಿಫಲವನ್ನು ಪಡೆಯುತ್ತಿದೆ.


ತೆರಿಗೆ : ಈ ದೇಶದಲ್ಲಿ ತೆರಿಗೆಯ ಪ್ರಮಾಣ ಯಾವ ರೀತಿಯಲ್ಲಿ ಸಂದಾಯವಾಗುತ್ತಿದೆ ಎಂದರೆ ಅತ್ಯಂತ ಕುತೂಹಲಕರವೂ, ಆಶ್ಚರ್ಯಕರವೂ ಆಗಿದೆ. ಈ ಕೆಳಗಿನ ಚಿತ್ರದಲ್ಲಿ ಅದನ್ನು ಕಾಣಬಹುದು.



ಕಡಿಮೆ ದುಡಿದು ಹೆಚ್ಚು ಆದಾಯ ಪಡೆದ ಮೇಲ್ವರ್ಗ ಅತ್ಯಂತ ಕಡಿಮೆ ತೆರಿಗೆಯನ್ನು ತೆರುತ್ತಿದೆ. ವಂಚನೆಯ ಜಾಲವನ್ನು ಅದು ಮೈಗೂಡಿಸಿಕೊಂಡಿದೆ. ಈ ದೇಶವಲ್ಲಿ ಹೆಚ್ಚು ತೆರಿಗೆಯನ್ನು ಕದಿಯುತ್ತಿರುವವರು ಮೇಲ್ವರ್ಗದವರೇ.

ಮಧ್ಯಮ ಹಾಗೂ ಕೆಳವರ್ಗದವರು ಕದಿಯಲು ಅವಕಾಶವೇ ಇಲ್ಲ. ಅವರು ಕೊಳ್ಳುವ ಪ್ರತಿಯೊಂದು ವಸ್ತುವಿನಿಂದಲೂ ಅಧಿಕ ತೆರಿಗೆ ವಸೂಲಾಗುತ್ತಿದೆ. ಮಧ್ಯಮ ವರ್ಗದವರು ಆರಕ್ಕೆ ಏರದೆ, ಮೂರಕ್ಕೆ ಇಳಿಯದೆ ಇರುವ ಸ್ಥಿತಿಯಲ್ಲಿದ್ದಾರೆ. ಅವರಿಂದ ತೆರಿಗೆಯನ್ನು ಅವರ ಸಂಬಳದಲ್ಲಿ, ಆದಾಯದಲ್ಲಿಯೇ ಹಿಡಿದು ಬಿಡಲಾಗುತ್ತಿದೆ.

ಸೌಲಭ್ಯ : ಇನ್ನು ಯಾವುದೇ ದೇಶದ ಒಟ್ಟು ದುಡಿಮೆಯ ಉದ್ದೇಶ ಪ್ರಾಥಮಿಕ ಸೌಲಭ್ಯಗಳನ್ನು ಹೊಂದುವುದಾಗಿರುತ್ತದೆ. ಈ ವ್ಯವಸ್ಥೆಯಲ್ಲಿ ಆ ಸೌಲಭ್ಯಗಳು ಯಾವ ಪ್ರಮಾಣದಲ್ಲಿ ವಿತರಣೆಯಾಗುತ್ತಿವೆ ಎಂಬುದನ್ನು ಈ ಕೆಳಗಿನ ಚಿತ್ರದಿಂದ ಮನಗಾಣಬಹುದು.



ಹೆಚ್ಚು ಸೌಲಭ್ಯ ಲಭ್ಯವಾಗುತ್ತಿರುವುದು ಮೇಲ್ವರ್ಗಕ್ಕೆ. ಯಾವುದೇ ಹೊಸಹೊಸ ಅನ್ವೇಷಣೆಯ ಫಲ, ಉಪಯೋಗ ಈ ವರ್ಗದವರ ಸೊತ್ತು. ಯಾವುದೇ ಸೌಲಭ್ಯದ ಸಿಂಹಪಾಲು ಇವರದೆ. ಹೊಸ ಹೊಸ ಆವಿಷ್ಕಾರಗಳು ಇವರಿಗೇ ಮೀಸಲು. ದುರಂತ ಎಂದರೆ ಹೆಚ್ಚು ದುಡಿದು, ಕಡಿಮೆ ಆದಾಯ ಪಡೆದು, ಹೆಚ್ಚು ತೆರಿಗೆ ತೆತ್ತು ಕನಿಷ್ಠ ಸೌಲಭ್ಯವೂ ಇಲ್ಲದೆ : ಎಂದರೆ ಕುಡಿವ ನೀರು, ವಾಸಿಸುವ ಮನೆ, ಓಡಾಡುವ ರಸ್ತೆ, ದೀಪ, ಓದಲು ಶಾಲೆ, ಮೈ ಮುಚ್ಚುವಷ್ಟು ಬಟ್ಟೆಯೂ ಇಲ್ಲದೆ ನರಳುತ್ತಿರುವವರೆಂದರೆ ಕೆಳವರ್ಗದ ಜನ.

೪

ಇದು ಈ ದೇಶದ ಪರಿಸ್ಥಿತಿ. ಮೇಲ್ವರ್ಗ ಎಂಬುದು ಯಾವುದೇ ಜಾತಿಗೆ, ಧರ್ಮಕ್ಕೆ ಸೀಮಿತವಾಗಿಲ್ಲ. ಇಲ್ಲಿ ಎಲ್ಲ ಜಾತಿಯ, ಎಲ್ಲ ಧರ್ಮದ ಜನರೂ ಶಾಮೀಲಾಗಿದ್ದಾರೆ. ಆದ ಕಾರಣವೆ ಒಮ್ಮೆ ಮೀಸಲಾತಿ ಪಡೆದ ಕುಟುಂಬ-ಅದು ಮಾಜಿ ಮಂತ್ರಿಯೇ ಆಗಿರಬಹುದು-ಸ್ವಾಭಿಮಾನದಿಂದ ಮತ್ತೆ ಬೇಡ ಎನ್ನುವುದಿಲ್ಲ. ಮೇಲ್ಜಾತಿಯ ಜನರೂ ಸುಳ್ಳು ಜಾತಿಪತ್ರಗಳನ್ನು ನೀಡಿ ಮೀಸಲಾತಿಯನ್ನು ಕಬಳಿಸಲು ಯತ್ನಿಸುತ್ತವೆ. ಗ್ರಾಮೀಣ ಪ್ರದೇಶದಿಂದ ಹೋದ ಶೂದ್ರವರ್ಗ ಪುರೋಹಿತಶಾಹಿಯ, ಬಂಡವಾಳಶಾಹಿಯ, ಅಧಿಕಾರಶಾಹಿಯ ಎಲ್ಲ ಅನಿಷ್ಟಗಳನ್ನು ಮೈಗೂಡಿಸಿಗೊಳ್ಳುತ್ತಿದೆ; ಅಲ್ಲದೆ ರಾಜಕೀಯ ಹೊಲಸನ್ನು ಅಂಟಿಸಿಕೊಳ್ಳುತ್ತಿದೆ. ಈ ಯಾರಿಗೂ ಗ್ರಾಮೋದ್ಧಾರ ಬೇಕಾಗಿಲ್ಲ. ನಗರೀಕೃತ ವಿಕೃತ ಮನಸ್ಸುಗಳು ರೂಪಗೊಂಡು ಅಧಿಕಾರ, ಹಣದ ಆಮಿಷಗಳಿಗೆ ಒಳಗಾಗಿ ಸಾವಿನ ಅಂಚಿಗೆ ಸಾಗುತ್ತಿವೆ.

೫

ಈ ದೇಶದಲ್ಲಿ ಸಮಾನತೆಯನ್ನು ತರುವುದು ಎಂದರೆ ಮಧ್ಯಮ ಹಾಗು ಕೆಳವರ್ಗದವರು ಒಂದಾಗಿ ಈ ಮೇಲ್ವರ್ಗದ ಹುನ್ನಾರಗಳನ್ನು ಅರಿತು ಸಮಾನ ಅವಕಾಶಗಳಿಗಾಗಿ ಹೋರಾಡುವುದು ಅನಿವಾರ್ಯ. ಆದರೆ ಕೆಳವರ್ಗದಲ್ಲಿ ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳು ತಾಂಡವವಾಡುತ್ತಿರುವುದರಿಂದ ಈ ವ್ಯವಸ್ಥೆಯ ಅರಿವು ಅವರಿಗೆ ಆಗುತ್ತಿಲ್ಲ. ಅಲ್ಲದೆ ಅವರು ದಿನನಿತ್ಯದ ಕೂಳಿಗೆ ಹೋರಾಡಬೇಕಾದ ಪರಿಸ್ಥಿತಿ ಇದೆ. ಬಹಳಷ್ಟು ಮಧ್ಯಮ ವರ್ಗದ ಸ್ಥಿತಿಯೂ ಅದೇ ಆಗಿದೆ.

ಈ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಂಡು ಹೋಗುವಲ್ಲಿ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ರಾಜಕಾರಣಿಗಳು ಒಂದಾಗಿ ಹುನ್ನಾರುಗಳನ್ನು ಹೂಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ನಾಶಗೊಳಿಸಬೇಕೆಂಬ ಮಧ್ಯಮ ಹಾಗೂ ಕೆಳವರ್ಗದ ಜನರಲ್ಲಿ ಒಡಕು ಹೆಚ್ಚಾಗಿದೆ. ಮೇಲ್ವರ್ಗದವರ ಕುಮ್ಮಕ್ಕಿಗೆ ಬಲಿಯಾಗುತ್ತಿದ್ದಾರೆ. ಅದಕ್ಕೆ ಕಾರಣ ಇವರಲ್ಲಿರುವ ಎಂದರೆ ಮಧ್ಯಮ ವಿದ್ಯಾವಂತವರ್ಗದಲ್ಲಿರುವ ಅರಿವಿನ ಕೊರತೆ ಹಾಗೂ ಕೆಳವರ್ಗದಲ್ಲಿರುವ ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳು. ಸಮೂಹ ಮಾಧ್ಯಮಗಳು ಕೂಡ ತಮ್ಮ ಜವಾಬ್ದಾರಿಯಿಂದ ಹೊರಳಿ ಈ ವಿಕಲ್ಪಗೊಂಡ ಮೇಲ್ವರ್ಗದ ಸೇವೆಯಲ್ಲಿ ನಿರತವಾಗಿ ಮೇಲ್ವರ್ಗ ಎಸೆವ ಎಂಜಲಿನಿಂದಲೇ ತೃಪ್ತಿಯ ತೇಗು ತೇಗುತ್ತಿವೆ. ಈಗ ಬೇಕಾಗಿರುವುದು ಸ್ವಾಭಿಮಾನದ ಎಚ್ಚರ.

೬

ಭಾರತ ಶತಮಾನಗಳ ಗುಲಾಮೀಯತೆಯಲ್ಲಿ ನರಳಿದೆ. ಹೊರದೇಶದವರ ಧಾಳಿಗೆ ತುತ್ತಾಗಿ ಪರಕೀಯವಾಗಿದ್ದು ಐತಿಹಾಸಿಕ ಒತ್ತಡಗಳಿಂದ ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದಿದೆ. ನಾಲ್ಕು ಸಾವಿರ ವರ್ಷಕಾಲ ಗುಲಾಮಗಿರಿಯಲ್ಲಿ ನರಳಿದ್ದ

ಬಹುಸಂಖ್ಯಾತ ಭಾರತೀಯ ಮನಸ್ಸು ಈಗ ಭೌತಿಕ ಆಸೆ ಆಮಿಷಗಳಿಗೆ ಬಲಿಯಾಗಿ ತನ್ನೆಲ್ಲಾ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ. ನೈತಿಕ ಮಟ್ಟ ಕುಸಿದು ಕಬಳಿಸುವಿಕೆ ಪ್ರಧಾನ ಪಾತ್ರ ವಹಿಸಿದೆ. ಭೌತಿಕ ವಸ್ತುಗಳನ್ನು ಒಳಗೊಳ್ಳುವುದೆ ಜೀವನದ ಪರಮ ಮೌಲ್ಯ ಹಾಗೂ ಗುರಿಯಾಗಿದೆ. ಅದಕ್ಕಾಗಿ ಜನ್ಮಕೊಟ್ಟ ತಾಯಿನಾಡನ್ನೇ ಸುಲಿದು ತಿನ್ನುವ ದುಷ್ಟ ಪ್ರವೃತ್ತಿ ಕ್ರಿಯಾತ್ಮಕವಾಗಿದೆ.

ಆದರೂ ನಿರಾಶರಾಗಬೇಕಾಗಿಲ್ಲ. ಸ್ವಾತಂತ್ರ್ಯಾನಂತರವೂ ಭಾರತ ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ. ಸಾವಿರಾರು ವರ್ಷಗಳು ಗುಲಾಮಗಿರಿಯಲ್ಲಿ ನರಳಿದ ಒಂದು ರಾಷ್ಟ್ರದ ಐತಿಹಾಸಿಕ ಸಂದರ್ಭಗಳಲ್ಲಿ ಇಂಥ ಪರಿಸ್ಥಿತಿಗಳು ಅನಿವಾರ್ಯ. ಉದಾಹರಣೆಗೆ ಹತ್ತಾರು ದಿನಗಳು ಅನ್ನವನ್ನೇ ಕಾಣದವರಿಗೆ ಒಂದು ಮಾನಸಿಕ ಜಾಡ್ಯ ಉಂಟಾಗುತ್ತದೆ. ಅವನಿಗೆ ಏನೆಲ್ಲವೂ ಅನ್ನವಾಗಿ ಕಾಣಲು ಶುರುವಾಗಿಬಿಡುತ್ತದೆ. ಅವನನ್ನು ಹಿಡಿದು ಹತ್ತು ಕೆ. ಜಿ. ಅನ್ನವನ್ನು ಅವನ ಮುಂದೆ ಸುರಿದು ಇದೆಲ್ಲವೂ ನಿನ್ನದೆ. ಸಾವಧಾನವಾಗಿ ತಿನ್ನು ಎಂದರೂ ಮೊದಲ ಹತ್ತು ಗುಕ್ಕನ್ನು ಗಬಗಬನೆ ತಿಂದು, ನೀರು ಕುಡಿದು ಸಮಾಧಾನವಾದ ಮೇಲೆ ಸಹಜ ಗತಿಯಲ್ಲಿ ಬೇಕು ಬೇಡಗಳನ್ನು ಅರಿಯುವಂತೆ ಭಾರತದ ಜನಮನ ಈ ಹತ್ತು ಗುಕ್ಕು ತಿನ್ನುವ ಪ್ರಕ್ರಿಯೆಯಲ್ಲಿ ಉದ್ಯುಕ್ತವಾಗಿದೆ. ಕಾಲಕಳೆದಂತೆ ಅದು ವಾಸ್ತವ ಅಥವಾ ಸಹಜ ಸ್ಥಿತಿಗೆ ತಲುಪುವುದು ಐತಿಹಾಸಿಕ ಅನಿವಾರ್ಯ ಕೂಡ ಆಗುತ್ತದೆ. ಆದರೆ ಆ ಹತ್ತು ಗುಕ್ಕು ತಿನ್ನುವುದು ನಿರಂತರ ರೋಗವಾಗದಂತೆ ಎಚ್ಚರವಹಿಸಬೇಕಾಗುತ್ತದೆ. ಈ ಸಾಮಾಜಿಕ ಅರಿವೇ ಆ ಎಚ್ಚರ.

ಆದ್ದರಿಂದ ತಮ್ಮ ಮುಂದೆ ಈಗ ಇರುವ ಸವಾಲು ಎಂದರೆ ಭಾರತದ ಸಮೂಹ ಮನಸ್ಸುಗಳನ್ನು ಎಚ್ಚರಗೊಳಿಸಿ ಸಹಜಸ್ಥಿತಿಗೆ ತರುವುದು. ಅದು ಸಾಧ್ಯವಾಗುವುದು ಪ್ರಶಸ್ತಿಗಳ ಬೆನ್ನತ್ತಿ ಕೇವಲ ಅವನ್ನು ಪಡೆವುದರಲ್ಲಿ ಅಲ್ಲ. ಬದಲಿಗೆ ತ್ಯಾಗ ಮತ್ತು ಬಲಿದಾನಗಳಲ್ಲಿ. ಆಗ ಮಾತ್ರ ರಾಷ್ಟ್ರ ಪುನರ್ ನಿರ್ಮಾಣಗೊಳ್ಳಲು ಸಾಧ್ಯ.

ಇಂತಹ ಮಹಾನ್ ಕಾರ್ಯಗಳಲ್ಲಿ ಮಠಮಾನ್ಯಗಳು ಕಾರ್ಯಪ್ರವೃತ್ತವಾಗಿ ವಿಚಾರದ ಬೀಜಗಳನ್ನು ವಿದ್ಯಾರ್ಥಿಗಳ ಹಾಗೂ ಕೆಳವರ್ಗದ ಜನಮನದಲ್ಲಿ ಬಿತ್ತಬೇಕಾಗಿದೆ. ಏಕೆಂದರೆ ವಿದ್ಯಾರ್ಥಿಗಳಾಗಲೀ, ಭಕ್ತ ಸಮೂಹವಾಗಲೀ, ಮಠಮಾನ್ಯಗಳಿಂದ ಬಿಡುಗಡೆಯ ಮಾರ್ಗದರ್ಶನವನ್ನು ನಿರೀಕ್ಷಿಸುತ್ತದೆ. ಅದನ್ನು ಆಗು ಮಾಡುವ ಸಾಮಾಜಿಕ ಹೊಣೆ ಮಠಗಳದ್ದು.

ಶ್ರೀ ಸಿದ್ಧಗಂಗಾಮಠ ಅಂತಹ ಪುಣ್ಯಕಾರ್ಯದಲ್ಲಿ ಆದಿಯಿಂದಲೂ ತೊಡಗಿಸಿಕೊಂಡಿರುವುದು ರಾಷ್ಟ್ರದ ಆಶಾದಾಯಕ ಸೂಚನೆಯಾಗಿದೆ. ನಲವತ್ತರ ದಶಕದಲ್ಲಿ ಕೇವಲ ೫೦-೬೦ ವಿದ್ಯಾರ್ಥಿಗಳನ್ನು ಹೊಂದಿದ್ದ ಈ ಮಠ ಈಗ ಹತ್ತಿರ ಹತ್ತಿರ ಐದು ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ನೀಡುತ್ತಿದೆ ಎಂದರೆ ಪವಾಡ ಸದೃಶವೇ ಸರಿ. ಅಲ್ಲದೆ ಅಲ್ಲಿ ಲಿಂಗಾಯತ ವಿದ್ಯಾರ್ಥಿಗಳಲ್ಲದೆ ಮುಸ್ಲಿಂ ವಿದ್ಯಾರ್ಥಿಗಳೂ ಸೇರಿದಂತೆ ಅನ್ಯಜಾತಿಯ ವಿದ್ಯಾರ್ಥಿಗಳು ಸೇರಿ ಜಾತಿ ಭೇದವನ್ನು ಮರೆತು ಕಲಿಯುತ್ತಿರುವುದು ಭಾವೈಕ್ಯತೆಯ ಹಾಗೂ ಜಾತಿ ಬಿಡುಗಡೆಯ ಸಂಕೇತವಾಗಿದೆ. ಜಾತಿಭೇದವನ್ನು ತೊಡೆದು ವಿದ್ಯಾರ್ಥಿಗಳ ಮನಸ್ಸಿನಲ್ಲಿ ರಾಷ್ಟ್ರೀಯ ಭಾವನೆ ಮೂಡಿಸುವ ಸ್ವಾಮೀಜಿಯವರ ಕೊಡುಗೆ ಅದ್ವಿತೀಯವಾದುದು.

ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿ ಅವರು ಈ ಉದಾತ್ತ ದೃಷ್ಟಿಯನ್ನು ಹಾಗೂ ವೈಚಾರಿಕ ಮತ್ತು ವೈಜ್ಞಾನಿಕ ಮನೋಧರ್ಮವನ್ನು ವಿದ್ಯಾರ್ಥಿಗಳ ಹೃನ್ಮನಗಳಲ್ಲಿ ಉದ್ದೀಪನಗೊಳಿಸುವಲ್ಲಿ ಪೂರ್ಣ ಯಶಸ್ಸು ಅವರದಾಗಲಿ ಎಂದು ಹೃದಯ ತುಂಬಿ ಹಾರೈಸೋಣ.

○

ವೀರಶೈವ ಮಠಗಳ ಸುಧಾರಣೆಯ ಕೆಲವು ಕಾರ್ಯಗಳು

ಡಾ.ಎಚ್.ಎಂ. ಮರುಳಸಿದ್ದಯ್ಯ

ಧರ್ಮದ ಸಾಮಾನ್ಯ ವ್ಯಾಖ್ಯಾನ

ಧರ್ಮದ ಬಗ್ಗೆ ಅನೇಕ ವ್ಯಾಖ್ಯಾನಗಳಿದ್ದರೂ ಲೌಕಿಕ ಬದುಕಿಗಿಂತಲೂ, ಇಹದ ಜೀವನಕ್ಕಿಂತಲೂ ಅಲೌಕಿಕ ಚಿಂತನೆಯ ಮೇಲೆ, 'ಪರ'ದ ಗಳಿಕೆಯ ಮೇಲೆ ಒತ್ತು ಕೊಡುವ ವ್ಯಾಖ್ಯಾನಕ್ಕೇ ಹೆಚ್ಚಿನ ಮನ್ನಣೆಯನ್ನು ಕೊಡಲಾಗುತ್ತದೆ. ಪುರುಷಾರ್ಥಗಳ ಪ್ರಸ್ತಾವನೆಯಲ್ಲಿಯೂ ಮೋಕ್ಷಕ್ಕೆ ನೀಡುವ ಮಹತ್ವದ ಸ್ಥಾನವನ್ನು ಇತರ ಮೂರು ಪುರುಷಾರ್ಥಗಳಿಗೆ (ಧರ್ಮ, ಅರ್ಥ, ಕಾಮ) ಅದರಲ್ಲೂ ಅರ್ಥ - ಕಾಮಗಳಿಗೆ ನೀಡುತ್ತಲಿಲ್ಲವೆಂಬುದು ಗಮನಾರ್ಹ ಸಂಗತಿ.

ಹುಟ್ಟಿ ಬಂದುದಕ್ಕೆ ಉಸಿರನ್ನು ಹಿಡಿದುಕೊಂಡು ಪರದ ಕರೆಯು ಬರುವವರೆಗೂ ಜೀವನವನ್ನು ಸಾಗಿಸಬೇಕಾದದ್ದು ಅನಿವಾರ್ಯ; ಮಾಯೆಯ ಸೆರಗಿನಲ್ಲಿ ಸೆರೆಸಿಕ್ಕು ಇಹಕ್ಕೇ ಬದ್ಧವಾದ ಜೀವನವನ್ನು ನಡೆಸಿ, ಕರ್ಮಜಾಲದಲ್ಲಿ ಸಿಕ್ಕು, ಜನನ - ಮರಣಗಳ ಕೊನೆಗಾಣದ ಸರಪಳಿಗೆ ಜೋತುಬೀಳುವ ಹೇಯ ಸಂಸಾರವನ್ನು ಬಿಡದೆ ಮನುಷ್ಯನು ಪಾಪಕೂಪದಲ್ಲಿ ಇರುತ್ತಾನೆ. ಇದರಿಂದ ಬಿಡುಗಡೆ ಪಡೆಯುವುದೇ ಇಹವನ್ನು ಗೌಣವಾಗಿ, ಹೇಯವೆಂದು ಕಾಣುವುದು, ಪರದ ಕಡೆಗೇ ಆಸಕ್ತಿಯನ್ನು ತಳೆಯುವುದು ಮನುಷ್ಯನಿಗೆ ಅನಿವಾರ್ಯವಾಗುತ್ತದೆ ; ಹಾಗೆ ಬದುಕಿದರೇನೇ ಅದು ಸಾರ್ಥಕ ಬದುಕಾಗುತ್ತದೆ.

ಆತ್ಮ - ಪರಮಾತ್ಮ ಪ್ರಸಂಗದಲ್ಲಿ ಆತ್ಮನಿಗೆ ಅಸ್ತಿತ್ವವೇ ಇಲ್ಲ ; ಕೊಟ್ಟ ಕೊನೆಗೆ ಪರಮಾತ್ಮನಲ್ಲಿ ವಿಲೀನವಾಗುವುದೇ ಆತ್ಮನಿಗಿರುವ ಏಕೈಕ ಗುರಿ. ಆ ಗುರಿಯನ್ನು ತಲುಪಬೇಕಾದರೆ ನಾನಾ ರೀತಿಯ ಕ್ರಿಯಾವಿಧಿಗಳನ್ನು (Rituals) ಅಳವಡಿಸಿಕೊಳ್ಳಲೇ ಬೇಕಾಗುತ್ತದೆ. ಇಂಥ ಚಿಂತನೆಯೇ ಎಲ್ಲ ಧರ್ಮಗಳಿಗೂ ಸಾಮಾನ್ಯವಾಗಿ ಇರುವುದರಿಂದ ಜನರ ಜೀವನವು ಆಧ್ಯಾತ್ಮಮಯವೇ ಆಗಿರಬೇಕು ಎಂದು ನಿರೀಕ್ಷಿಸಿ ಮತ್ತು ಅಪೇಕ್ಷಿಸಿ, ಅದರ ಪ್ರಕಾರ ಮತ್ತು ಅದಕ್ಕಾಗಿಯೇ ಸಂಕೀರ್ಣವಾದ ಕ್ರಿಯಾವಿಧಿಗಳನ್ನು ರೂಪಿಸಿ, ಅನುಷ್ಠಾನಕ್ಕೆ ತಂದಿವೆ.

ಆದರೆ, ವೀರಶೈವವು, ಅದರಲ್ಲೂ ಶಿವಶರಣರ ಪಥವು, ವಿಭಿನ್ನವಾದ ಮಾರ್ಗವನ್ನು ಕಂಡು ಹಿಡಿದು ಜನರ ಮುಂದೆ, ಅದರಲ್ಲೂ ಜನ ಸಾಮಾನ್ಯರ ಮುಂದೆ ಮಂಡಿಸಿದೆ. ಆದುದರಿಂದಲೇ ಇದು ಸಾರಿದ ತತ್ತ್ವಚಿಂತನೆ, ಸಿದ್ಧಾಂತ, ತೋರುವ ಮಾರ್ಗ, ಇತ್ಯಾದಿಗಳು ಭಿನ್ನವಾಗಿವೆ.

ಉಪಕರಣವಾದ ಮಠ

ಪ್ರತಿಪಾದಿಸುತ್ತಿರುವ ಧರ್ಮದ ತಾತ್ತ್ವಿಕ ಚಿಂತನೆ ಮತ್ತು ಧಾರ್ಮಿಕ ಆಚರಣೆಯನ್ನು ಕಟ್ಟುನಿಟ್ಟಾಗಿ ಧರ್ಮದ ಅನುಯಾಯಿಗಳು ಪಾಲಿಸಬೇಕೆಂದು ನಿರ್ದೇಶಿಸುವ, ಆಚರಣೆಯು ಹೇಗೆ ನಡೆಯುತ್ತಿದೆ ಎಂದು ಮೇಲ್ವಿಚಾರಿಸುವ, ದಾರಿ ತಪ್ಪಿದವರಿಗೆ ಮಾರ್ಗದರ್ಶನ ನೀಡುವ, ಆಜ್ಞೆಗಳನ್ನು ಮೀರಿ ನಡೆಯುವವರನ್ನು ಶಿಕ್ಷಿಸುವ, ಧರ್ಮ ನಿಷ್ಠರನ್ನೂ, ಶಿಷ್ಟರನ್ನೂ ರಕ್ಷಿಸುವ ಹೊಣೆ - ಹಕ್ಕುಗಳನ್ನು ಹೊಂದಿರುವ ಸಂಘಟಿತ ವ್ಯವಸ್ಥೆಯೇ ಮಠ. ಮೂರ್ತಸ್ವರೂಪದ ಭೂ ನಿವೇಶನವಾಗಲಿ, ಕಟ್ಟಡವಾಗಲಿ, ಪೀಠೋಪಕರಣಗಳಾಗಲಿ, ನೀರು ಸರಬರಾಜು ಮುಂತಾದ ಭೌತ ಸವಲತ್ತುಗಳಾಗಲಿ ಮಠವಲ್ಲ. ಇದು ಅಮೂರ್ತವಾಗಿದ್ದರೂ ಚೇತನದ ಕೇಂದ್ರ.

ಸದಾ ಎಚ್ಚರಿಕೆಯಿಂದ ಜನರ ಧಾರ್ಮಿಕ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುವ, ಜನರ ಚಟುವಟಿಕೆಗಳಲ್ಲಿ ಯಾವುವು ಮತ್ತು ಅವು ಹೇಗೆ ಹೇಗೆ ಧಾರ್ಮಿಕ ಅಥವಾ ಧಾರ್ಮಿಕವಲ್ಲ ಎಂಬುದನ್ನು ನಿರ್ಧರಿಸುವ, ಅಧಾರ್ಮಿಕ ಕ್ರಿಯೆಗಳು ಧಾರ್ಮಿಕ ತತ್ತ್ವ ಚಿಂತನೆಯ ಮತ್ತು ಅದರ ಅನುಷ್ಠಾನದ ಮೇಲೆ ಬೀರುವ ದುಷ್ಪರಿಣಾಮಗಳ ಪ್ರಮಾಣವನ್ನು ಅಳೆಯುವ, ಶಿಷ್ಟ ಮತ್ತು ದುಷ್ಟಕಾರ್ಯಗಳ ಬಗೆಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸುವ ಅಧಿಕಾರವು ಮಠಗಳಿಗಿದೆ. ಸಾಮಾನ್ಯವಾಗಿ ಪರಂಪರೆಯನ್ನು ಅನೂಚಾನವಾಗಿ ಮತ್ತು ಚಾಚೂ ತಪ್ಪದೆ ಅನುಯಾಯಿಗಳು ಪರಿಪಾಲಿಸಿಕೊಂಡು ಹೋಗುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಮಠಗಳದ್ದು.

ಧಾರ್ಮಿಕ ಚಿಂತನೆಯು ಅಮೂರ್ತವಾದರೆ, ಅದರ ಅನುಷ್ಠಾನದ ಮೂರ್ತ ಸ್ವರೂಪವು ಅನುಯಾಯಿಗಳ ವರ್ತನೆಯಾಗಿರುತ್ತದೆ. ಆದುದರಿಂದ ಆ ವರ್ತನೆಗೆ ಚಾಲನೆ ಕೊಡುವ, ಅದನ್ನು ಸೂಕ್ತವಾಗಿ ನಿಯಂತ್ರಿಸುವ ಉಪಕರಣವಾದ ಮಠಗಳು ಮಾನವರ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆ ಎಂಬುದರಲ್ಲಿ ಸಂಶಯವಿಲ್ಲ.

ವೀರಶೈವ ಮಠಗಳ ವೈಶಿಷ್ಟ್ಯ

ಆದರೆ, ಮಠಗಳು ಕೇವಲ ಧಾರ್ಮಿಕ ವಿಶೇಷಗಳ ಗಡಿಯೊಳಗೇ ಕಾರ್ಯಾಸಕ್ತವಾಗಿರುತ್ತವೆ ಎಂಬುದು ಅವೈಜ್ಞಾನಿಕ, ಅವಾಸ್ತವ. ಒಂದು ಪಕ್ಷ ಮಠಗಳು ಕೇವಲ ಧಾರ್ಮಿಕ ತತ್ತ್ವಾಚರಣೆಗೇ ಸೀಮಿತಗೊಂಡಿವೆ ಎಂದು ನಿರೀಕ್ಷಿಸಿ, ನಂಬುವುದಾದರೆ ವೀರಶೈವ ಮಠಗಳು ಇದಕ್ಕೆ ಅಪವಾದಗಳಾಗಿವೆ. ಅಂದರೆ ಧಾರ್ಮಿಕ ತತ್ತ್ವ ಚಿಂತನೆಯನ್ನು ಹಿನ್ನೆಲೆಯಾಗಿರಿಸಿಕೊಂಡಿದ್ದರೂ ವೀರಶೈವ ಮಠಗಳು ಧರ್ಮದ ಗಡಿಯಾಚೆಗೆ ಅರ್ಥ, ರಾಜಕಾರಣ, ಆಡಳಿತ, ಶಿಕ್ಷಣ, ನ್ಯಾಯ, ಅಭಿವೃದ್ಧಿ ಇತ್ಯಾದಿಗಳನ್ನು ಒಳಗೊಂಡಂತೆ ಇಡೀ ಸಮಾಜದ ಪ್ರಮುಖ ಬದುಕಿನ ನೆಲೆಗಳಿಗೆ ತನ್ನ ಕಾರ್ಯಾಸಕ್ತಿಯನ್ನು ವಿಸ್ತರಿಸಿರುವುದನ್ನು ಅರಿಯಬಹುದು. ಇದಕ್ಕೆ ಕನಿಷ್ಠ ಎರಡು ಮುಖ್ಯ ಕಾರಣಗಳಿವೆ :

೧. ಮಾನವ ಸಮಾಜವು ಒಂದು ಇಡಿಯಾದ ಸಂಘಟನೆಯಾಗಿರುವುದರಿಂದ, ಎಲ್ಲ ವಿಭಾಗಗಳೂ ಅಖಂಡತ್ವದ ಸೂತ್ರದಲ್ಲಿ ಬಂಧಿತವಾಗಿರುವುದರಿಂದ 'ಧರ್ಮವು' ಅನನ್ಯವಾದ ಸಂಗತಿಯಲ್ಲ ಎಂಬುದರ ಅರಿವು.

೨. ಮನುಷ್ಯನ ಇಹದ ಜೀವನಕ್ಕೂ (ಪರದಷ್ಟೇ) ಸಮಾನವಾದ ನೆಲೆ - ಬೆಲೆಯನ್ನು ಧರ್ಮವು ಕೊಡಲೇಬೇಕು ಎಂಬ ಕ್ರಾಂತಿಕಾರಕ ಚಿಂತನೆ.

ಈ ಕಾರಣಗಳಿಂದ ವೀರಶೈವ ಮಠಗಳು ಧರ್ಮಚಿಂತನೆಯ ಸುತ್ತಲೂ ಅಂದರೆ, ಅಲೌಕಿಕ ಚಿಂತನೆಯ ಸುತ್ತಲೂ, ಲೌಕಿಕವೆಂದು ಗುರುತಿಸಲಾಗಿರುವ ಎಲ್ಲ ಪ್ರಕಾರದ ಬದುಕಿನ ವಲಯಗಳನ್ನು ಕ್ರಿಯಾತ್ಮಕವಾಗಿ ನೇಯ್ದು ಎಲ್ಲವನ್ನೂ ಸೂಕ್ತ ರೀತಿಯಲ್ಲಿ ಸಂಬಾಳಿಸಿಕೊಂಡು ಹೋಗುವ ಗುರುತರವಾದ ಹೊಣೆಯನ್ನು ಹೊತ್ತುಕೊಂಡಿರುವುದನ್ನು ನಾವು ಗುರುತಿಸಬಹುದು.

ಈ ಬರೆಹದ ಹರವು :

ಧಾರ್ಮಿಕ ತತ್ತ್ವ ಚಿಂತನೆ ಮತ್ತು ಅದರ ಆಚರಣೆಯ ಮಧ್ಯಸ್ಥಿಕೆಯನ್ನು ವಹಿಸಿಕೊಂಡಿರುವ ವೀರಶೈವ ಮಠಗಳು ಸಮಾಜ ಸುಧಾರಣೆಯನ್ನು ಹೇಗೆ ಕೈಗೊಂಡಿದ್ದವು ಎಂಬುದರ ಹಿನ್ನೆಲೆಯಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವ ತೆರನ ಪಾತ್ರವನ್ನು ಅವು ಆಡಬೇಕು ಮತ್ತು ಆಡಲಿಕ್ಕೆ ಸಾಧ್ಯ ಎಂಬುದನ್ನು ಸ್ಥೂಲವಾಗಿ ರೇಖಿಸುವ ಪ್ರಯತ್ನವನ್ನು ಇಲ್ಲಿ ಮಾಡಲೆತ್ನಿಸಿದೆ.

ವೀರಶೈವವು ಬಸವ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿತ್ತು ಎಂಬುದನ್ನು ಸಂಶೋಧಕರು ತೋರಿಸಿದ್ದಾರೆ. ಬಸವಣ್ಣನ ಮುಖಂಡತ್ವದಲ್ಲಿ ನಡೆದ ಶರಣ ಕ್ರಾಂತಿಯು ವೀರಶೈವಕ್ಕೆ ನವೀನ ಮತ್ತು ಹರಿತವಾದ ಆಯಾಮವನ್ನು ನೀಡಿತು ಎಂಬುದನ್ನು ದೃಢಪಡಿಸಲಾಗಿದೆ. ಕ್ರಿ.ಶ. ಹನ್ನೊಂದು - ಹನ್ನೆರಡನೆಯ ಶತಮಾನದ ಚಿಂತನೆಗಳು ಮತ್ತು ಆಚರಣೆಗಳು ಸಮಾಜದ ನಾನಾ ರಂಗಗಳನ್ನು ಒಳಗುಮಾಡಿಕೊಂಡಿದ್ದುದು ಒಂದು ನಿಟ್ಟಾದರೆ, ಅವು ಸಾರ್ವಕಾಲಿಕವಾಗಿ ಪ್ರಸ್ತುತತೆಯನ್ನು ಪಡೆದಿರುವುದು ಇನ್ನೊಂದು ನಿಟ್ಟಾಗಿದೆ. ಅಂದರೆ, ಅಂದಿನ ಶರಣ ಚಿಂತನೆ ಹಾಗೂ ಆಚರಣೆಗಳು ಅಂದು ಹೊಂದಿದ್ದ ವ್ಯಾಪಕತೆಯನ್ನು ಹಿನ್ನೆಲೆಯಾಗಿರಿಸಿಕೊಂಡು ಇಂದಿನೀ ಆಧುನಿಕ ಸಂಕೀರ್ಣ ಮಾನವ ಸಮಾಜದ ಆವಾವ ಅಂಗಗಳಿಗೆ ಹೇಗೆ ಹೇಗೆ ಮತ್ತು ಎಷ್ಟರ ಮಟ್ಟಿಗೆ ಸೂಕ್ತವಾದ ರೀತಿಯಲ್ಲಿ ಅನ್ವಯವಾಗುವ ಸಾಧ್ಯತೆಯನ್ನು ಪರ್ಯಾಲೋಚಿಸುವುದು ಸಂಗತವೆಂದು ಭಾವಿಸುತ್ತೇನೆ. ಅನ್ವಯವು ವೀರಶೈವ ಮಠಗಳ ಉಪಕ್ರಮದಿಂದ ಆಗಬಹುದು. ಅವುಗಳ ಮೂಲಕ ನಡೆಯಬಹುದು, ಅಥವಾ ಅವುಗಳ ಸಹಯೋಗ - ಸಹಕಾರಗಳಿಂದ ನೆರವೇರಬಹುದು. ಯಾವುದೇ ರೀತಿಯದಾದರೂ ಅನ್ವಯವಾಗುವುದನ್ನು ಪರಿಶೀಲಿಸುವುದು ಮಠಗಳ ಮುಖ್ಯ ಹೊಣೆಯಾಗಿರುತ್ತದೆ.

ಮಠಗಳ ವೈವಿಧ್ಯತೆ

ವೀರಶೈವ ಮಠಗಳಲ್ಲಿ ಗುರುವರ್ಗಕ್ಕೆ (ಪಂಚಾಚಾರ್ಯ ಪರಂಪರೆಗೆ) ಮತ್ತು ವಿರಕ್ತ ವರ್ಗಕ್ಕೆ ಸೇರಿದವುಗಳೆಂದು ಮುಖ್ಯವಾದ ಎರಡು ಗುಂಪುಗಳಿವೆ. ಇವುಗಳ ಜೊತೆಗೆ ಇವುಗಳ ಶಾಖಾ ಮಠಗಳೂ, ಶಿವ - ಪಾರ್ವತಿ - ಗಣಪತಿ - ಷಣ್ಮುಖ -

ಬಸವೇಶ್ವರ ದೇವಾಲಯಗಳಿಗೆ ಹೊಂದಿಕೊಂಡಂಥ ಧಾರ್ಮಿಕ ವ್ಯವಸ್ಥೆಗಳೂ, ಪರಂಪರೆಯಿಂದ ಧಾರ್ಮಿಕ / ಪೌರೋಹಿತ್ಯ ಕ್ರಿಯಾ ವಿಧಿಗಳನ್ನು ನೆರವೇರಿಸುತ್ತಾ ಬರುತ್ತಿರುವ, ಮಠಸ್ಥರೆಂದೆನ್ನಿಸಿಕೊಳ್ಳುತ್ತಿರುವ, ಕುಟುಂಬಗಳೂ ಮಠಗಳಂತೆ ವ್ಯವಹರಿಸುವುದೂ ಉಂಟು. ಬ್ರಹ್ಮಚಾರಿಗಳಾದ ಸ್ವಾಮಿಗಳು ಅಧಿಪತಿಗಳಾಗಿರುವ ಮಠಗಳಾಗಲಿ, ಗೃಹಸ್ಥ ಪೂಜಾರಿಗಳ ನಿಯಂತ್ರಣಕ್ಕೆ ಒಳಗಾಗಿರುವ ದೇವಾಲಯಗಳಾಗಲಿ, ವೈಯಕ್ತಿಕ ನೆಲೆಯನ್ನು ಹೊಂದಿದ ಪುರೋಹಿತ ವರ್ಗದ ಕುಟುಂಬಗಳಾಗಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಇವೆಲ್ಲವೂ ಸಮಾಜದಲ್ಲಿರುವ ಅನುಯಾಯಿಗಳ, ಶಿಷ್ಯರ, ಭಕ್ತರ ವರ್ತನೆಗಳನ್ನು ನಿಯಂತ್ರಿಸುವ, ತಿದ್ದುವ, ಹತ್ತಿಕ್ಕುವ, ಪರಿವರ್ತಿಸುವ ನಾನಾ ಕ್ರಮಗಳನ್ನು ತಮ್ಮ ಅಳವಿಗೆ ತಕ್ಕ ಹಾಗೆ ಕೈಗೊಳ್ಳುತ್ತವೆ.

ವೈಜ್ಞಾನಿಕ ಮನೋಭಾವವು ಎಷ್ಟೇ ಬೆಳೆದಿರಲಿ, ಲೌಕಿಕ ವ್ಯವಹಾರವು ಎಷ್ಟೇ ವ್ಯಾಪಿಸಿರಲಿ, ಜೀವನ ಶೈಲಿಯಲ್ಲಿ ಆಧುನಿಕ ಮೌಲ್ಯಗಳ ಕಾರಣದಿಂದ ಮಹತ್ತರವಾದ ಪರಿವರ್ತನೆಯಾಗಿರಲಿ, ದೇವರು - ದಿಂಡರುಗಳ ಬಗೆಗಿನ ನಂಬುಗೆಗಳಲ್ಲಿ ಎಷ್ಟೇ ಶಿಥಿಲತೆಯು ಕಂಡುಬಂದಿರಲಿ, ಮಠ - ದೇವಸ್ಥಾನಗಳ ಬಗೆಗೆ, ಸ್ವಾಮಿ - ಸಂನ್ಯಾಸಿಗಳ ಬಗೆಗೆ, ಪುರೋಹಿತ - ಪೂಜಾರಿಗಳ ಬಗೆಗೆ ಇನ್ನೂ ಗೌರವಾದರಗಳಿವೆ, ಭಯ - ಭಕ್ತಿಗಳಿವೆ, ಆಸ್ಥೆ - ಆಸಕ್ತಿಗಳಿವೆ. ತೀವ್ರತರವಾಗಿ ಪರಿವರ್ತನೆಗೊಳ್ಳುತ್ತಲೇ ಪರಂಪರೆಯ ಮೂಲಭೂತ ಅಂಶಗಳಲ್ಲಿ ಕೆಲವನ್ನು ಉಳಿಸಿಕೊಂಡು ಹೋಗುತ್ತಲಿರುವ ಮಠದ ವ್ಯವಸ್ಥೆಯನ್ನು ಆಧುನಿಕ ಕಾಲದಲ್ಲಿ ಹೇಗೆ ಪರಿಣಾಮಕರವಾಗಿ, ಉಪಯುಕ್ತವಾಗಿ, 'ಸಕಲಜೀವಾತ್ಮರಿಗೆ ಲೇಸಾಗಬೇಕು' ಎಂಬ ಇರಾದೆಯಿಂದ ಬಳಸಿಕೊಳ್ಳಬಹುದು ಎಂಬುದನ್ನು ಚಿಂತಿಸುವುದು ಅತ್ಯಗತ್ಯ.

ವೀರಶೈವ ಮಠಗಳು ಮುಖ್ಯವಾಗಿ ಸಮಾಜದ ಜಾಗೃತ ಸ್ಥಾನಗಳು ; ಜಡದಲ್ಲೂ ಜಂಗಮವಾಗಿರುವ ಸದಾ ಸಂಚಲನಾತ್ಮಕ ವ್ಯವಸ್ಥೆಗಳು; ಕ್ರಾಂತಿಯ ಬೀಜಗಳನ್ನು ಸದಾ ಉಡಿಯಲ್ಲಿ ಇರಿಸಿಕೊಂಡಿರುವ ಶೆಪ್ಪೆಗಳು; ವಯಸ್ಸು, ಲಿಂಗ, ವರ್ಗ, ಜಾತಿ, ಕಸಬು (ಕಾಯಕ), ಇತ್ಯಾದಿಗಳಲ್ಲಿ ಭೇದವನ್ನು ಗಣಿಸದ ಸಮಚಿತ್ತಗಳು; ಮಾನವರ ಇಹಜೀವನವನ್ನು ಸಹ್ಯವಾಗಿ, ಸುಖಮಯವಾಗಿ, ಆಹ್ಲಾದಕರವಾಗಿ 'ಸಲ್ಲುವ' ಹಾಗೆ ಇರುವಂತೆ ನೋಡಿಕೊಳ್ಳುವ ಹೊಣೆಗಾರ ಸಂಘಟನೆಗಳು. ಇಂಥ ಮಠಗಳು ಹೇಗಿರಬೇಕು, ಏನು ಮಾಡಬೇಕು ಎಂದು ಸಹಜವಾಗಿಯೇ ಆಲೋಚಿಸಬೇಕಾಗುತ್ತದೆ.

ವೀರಶೈವ ಮಠಗಳಲ್ಲಿ ಹಲವು ವಿಧಗಳಿವೆ : ಬಹು ದೊಡ್ಡವು - ಬಹು ಸಣ್ಣವು ; ಬಹು ಶ್ರೀಮಂತಿಕೆಯುಳ್ಳವು - ಬಹು ಬಡತನದವುಗಳು ; ನಗರದಲ್ಲಿರುವವುಗಳು - ಹಳ್ಳಿಯಲ್ಲಿರುವವುಗಳು ; ಆಧ್ಯಾತ್ಮ ಚಟುವಟಿಕೆಗಳ ಜೊತೆಗೆ ಅನೇಕ ಲೌಕಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂಥವುಗಳು - ಕೇವಲ ಆಧ್ಯಾತ್ಮಿಕ ಚಿಂತನೆ, ಪೂಜೆ - ಪುನಸ್ಕಾರಗಳಲ್ಲಿ ನಿರತವಾಗಿರುವಂಥವು ; ಕರ್ನಾಟಕದ ಒಳಗೆ ಮಾತ್ರವೇ ಅಲ್ಲ ಅದರ ಗಡಿಗಳಾಚೆಯೂ ಪ್ರಭಾವ ಉಳ್ಳವುಗಳು - ಕೇವಲ ಚಿಕ್ಕ ಸ್ಥಳೀಯ ವಲಯದೊಳಗೇ ಅಡಗಿ ಕುಳಿತಿರುವಂಥವುಗಳು; ದೊಡ್ಡ ವಿದ್ವಾಂಸರಾದ ಸ್ವಾಮಿಗಳು ಅಧ್ಯಕ್ಷರುಗಳಾಗಿರುವಂಥವುಗಳು - ಅಷ್ಟಾಗಿ ಓದಿರದ ಸ್ವಾಮಿಗಳು ಅಧ್ಯಕ್ಷರುಗಳಾಗಿರುವಂಥವುಗಳು; ಶರಣರ ತತ್ತ್ವಗಳಿಗೆ ಹೆಚ್ಚಿನ ಕಾಳಜಿ ನೀಡುವಂಥವುಗಳು - ಆ ತತ್ತ್ವಗಳಿಗೆ ಔಪಚಾರಿಕ ಸ್ಥಾನವನ್ನು ಮಾತ್ರ ನೀಡಿರುವಂಥವುಗಳು. ಶರಣರ ಸಿದ್ಧಾಂತಗಳಿಗೇ ಅಂಟಿಕೊಂಡಿರುವಂಥವುಗಳು - ಆ ಸಿದ್ಧಾಂತವನ್ನು ವಿರೋಧಿಸುವಂಥವುಗಳು; ವೈದಿಕ ಸಂಪ್ರದಾಯಗಳನ್ನು ಅಳವಡಿಸಿಕೊಂಡಿರುವಂಥವುಗಳು - ವೈದಿಕ ವಿರೋಧಿ ನಿಲುವನ್ನು ತಳೆದಿರುವಂಥವುಗಳು; ತಮ್ಮ ಪರಂಪರೆಯ ಇತಿಹಾಸವನ್ನು ದಾಖಲುಗೊಳಿಸಿಕೊಂಡಿರುವಂಥವುಗಳು - ತಮ್ಮ ಚರಿತ್ರೆಯ ಬಗ್ಗೆ ಜ್ಞಾನವಿಲ್ಲದಂಥವುಗಳು; ಇತರ ವೀರಶೈವ ಮಠಗಳೊಡನೆ ನಿಕಟ ಸಂಪರ್ಕ ಸಂಬಂಧಗಳನ್ನು ಇರಿಸಿಕೊಂಡಂಥವುಗಳು - ಏಕಾಕಿಯಾಗಿಯೇ ಇರುವಂಥವುಗಳು; ಅನ್ಯ ಧರ್ಮೀಯರ ಮಠಗಳೊಡನೆ ಸಂಬಂಧ ಬೆಳೆಸಿಕೊಂಡಿರುವಂಥವುಗಳು - ಅನ್ಯ ಧರ್ಮೀಯರ ಮಠಗಳಿಂದ ದೂರವಿರುವಂಥವುಗಳು; ಇತ್ಯಾದಿ. ಈ ಇಂಥ ಮಠಗಳನ್ನು ಗಮನಿಸುವಾಗ ವೀರಶೈವ ಧರ್ಮಾನುಯಾಯಿಗಳು ಮಠಗಳಿಗೆ ಹೊಂದಿಕೊಂಡೋ, ದೂರವಿದ್ದೋ, ನಾನಾ ಚಟುವಟಿಕೆಗಳಲ್ಲಿ ನಿರತವಾಗಿರುವ ಸಂಘ ಸಂಸ್ಥೆಗಳನ್ನೂ ದೃಷ್ಟಿಯಲ್ಲಿರಿಸಿಕೊಳ್ಳುವುದು ಅಗತ್ಯ. ಉದಾ : ಅಖಿಲ ಭಾರತ ವೀರಶೈವ ಮಹಾಸಭೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಾಷ್ಟ್ರೀಯ ಬಸವದಳ, ಬಸವ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಅಕ್ಕನ ಬಳಗ, ಇತ್ಯಾದಿ. ಪೂರ್ಣ ಧಾರ್ಮಿಕ ಸಂಸ್ಥೆಗಳಾದ ಮಠಗಳೂ, ಅರೆ ಧಾರ್ಮಿಕವಾದ ಸಂಘಟನೆಗಳೂ ವೀರಶೈವರ ಮತ್ತು ಇತರರ ಜೀವನ ವ್ಯವಹಾರಗಳಲ್ಲಿ ವಿವಿಧ ರೀತಿಗಳಲ್ಲಿ ಭಾಗವಹಿಸುತ್ತವೆ.

ಸಾಮಾಜಿಕ ಹೊಣೆ

'ಸಾಮಾಜಿಕ ಹೊಣೆ' ಎಂಬುದು ಇಡೀ ಸಮಾಜದ ಬಗೆಗಿನ ಹೊಣೆ. ಸಮಾಜ ಸುಧಾರಣೆಯು ಸಮಾಜದ ಸಮಗ್ರ ಸುಧಾರಣೆಯನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ ಭಾವನೆ ಮತ್ತು ಧಾರ್ಮಿಕ ನಡವಳಿಕೆಯ ಹೊಣೆಯು ಮಠಗಳ ಮೊದಲ ಕರ್ತವ್ಯವಾದರೂ ಸಮಾಜ ಸುಧಾರಣೆಯೂ ಅವುಗಳ ಪ್ರಮುಖ ಹೊಣೆಯಾಗಿದೆ. 'ಸುಧಾರಣೆ' ಎಂಬುದು ಕಾಲ-ದೇಶಗಳನ್ನು ಅವಲಂಬಿಸಿದ, ಒಂದು ಸಾಪೇಕ್ಷ ಪರಿಕಲ್ಪನೆ. ವಿಭಾಗೀಯವಾಗಿಯೂ ಕೈಗೊಂಡ ಸುಧಾರಣೆಯ ಕ್ರಮವು ಇಡೀ ಸಂಗತಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಸುಧಾರಣೆಯ ಅಂತರ್ಯದಲ್ಲಿ ಪರಿವರ್ತನೆಯ ಸೆಳಕು ಇದ್ದೇ ಇರುತ್ತದೆ. ತೀರಾ ಪ್ರತಿಗಾಮಿ ಶಕ್ತಿಗಳು ಕೂಡಾ, ತೀರಾ ಪ್ರಗತಿಗಾಮಿ ಶಕ್ತಿಗಳಂತೆ, ಇರುವ ಸ್ಥಿತಿಯನ್ನು ಹಾಗೆಯೇ ಇರಿಸಿಕೊಳ್ಳಲೆಂದೇ ಸುಧಾರಣೆಯ ಕ್ರಮಕ್ಕೆ ಕೈ ಹಾಕುತ್ತವೆ, ಅದಕ್ಕಾಗಿ ಹೋರಾಡುತ್ತವೆ. ಮೂಲಭೂತವಾದಿಗಳು ಕೈಗೊಂಡು ನಡೆಸುತ್ತಿರುವ ನಾನಾ ಕ್ರಿಯೆಗಳು ಒಂದು ರೀತಿಯಲ್ಲಿ ಸಮಾಜ ಸುಧಾಗಣೆಯ ಉದ್ದೇಶವನ್ನು ಹೊಂದಿರುವವರೇ. ತಮ್ಮ ಆಲೋಚನೆಯ ಚೌಕಟ್ಟಿನ ಪ್ರಕಾರವೇ ಸಮಾಜವನ್ನು ರೂಪಿಸಿ, ಅದರಂತೆಯೇ ಅದನ್ನು ಸಂಪೋಷಿಸಿಕೊಂಡು ಹೋಗಬೇಕೆನ್ನುವವರೇ ಅವರು. ಪ್ರಗತಿಗಾಮಿಗಳಂತೂ ಯಥಾಸ್ಥಿತಿಯನ್ನು ಸ್ಥಿತ್ಯಂತರಗೊಳಿಸಿ, ನವೀನ ಸಮಾಜವನ್ನು ನಿರ್ಮಿಸುವುದಕ್ಕಾಗಿ ವೈವಿಧ್ಯಮಯ ತಂತ್ರೋಪಾಯಗಳನ್ನೂ, ಮಾರ್ಗೋಪಾಯಗಳನ್ನೂ ಕಂಡರಿಸಿ, ಅವುಗಳನ್ನು ಉಪಯೋಗಿಸುತ್ತಾರೆ. ಬುದ್ಧನಿಂದ ಹಿಡಿದು ಗಾಂಧಿಯವರೆಗೂ ಸಮಾಜ ಸುಧಾರಕರು ಹಿಡಿದದ್ದು ಇದೇ ಮಾರ್ಗವನ್ನು. ಹನ್ನೆರಡನೆಯ ಶತಮಾನದ ಶರಣರು ಆಲೋಚಿಸಿ, ಆಚರಣೆಗೆ ತಂದ ಮಾರ್ಗವೂ ಇದೇ ಆಗಿದೆ. ಯಥಾಸ್ಥಿತಿಯನ್ನು ಸ್ಥಿತ್ಯಂತರಗೊಳಿಸುವುದು, ಹೊಸಸ್ಥಿತಿಯನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿದ್ದು, ಇರುವ ಉಪಕರಣಗಳನ್ನು ನವೀಕರಿಸಿ, ನವೀನ ರೀತಿಯಲ್ಲಿ ಅವುಗಳನ್ನು ಅವರು ಉಪಯೋಗಿಸಿಕೊಂಡರು. ಆ ಉಪಕರಣಗಳಲ್ಲಿ ಮಠಗಳೂ ಸೇರುತ್ತವೆ.

ತಮ್ಮ ವಿಚಾರಗಳನ್ನು, ತಾತ್ವಿಕ ಚಿಂತನೆಗಳನ್ನು, ಕಾರ್ಯಾಲೋಚನೆಗಳನ್ನು, ಅನುಷ್ಠಾನ ಮಾರ್ಗಗಳನ್ನು ಶರಣರು ವಚನ ವಾಙ್ಮಯದ ಮೂಲಕ ಜನಸಾಮಾನ್ಯರ ಜೀವನವನ್ನು ಸುಧಾರಿಸತೊಡಗಿದರು. ಆಲೋಚನೆಗಳು ವಚನಗಳಲ್ಲಿ ಅಭಿವ್ಯಕ್ತಗೊಂಡು, ಭಕ್ತಿ ಮಾರ್ಗಾನುಯಾಯಿಗಳ ಆಚರಣೆಗಳಲ್ಲಿ ಪ್ರಕಟವಾದವು. ಇವುಗಳ ಸಾಧ್ಯತೆಗೆ ವೀರಶೈವ ಮಠಗಳು ಪರಿಣಾಮಕರವಾದ ಉಪಕರಣಗಳಾಗಿ ಕಾರ್ಯ ನಿರತವಾದವು. ಹೊಸ ಸಮಾಜದ ನಿರ್ಮಾಣದಲ್ಲಿ ಈ ಮಠಗಳ ಪಾತ್ರ ಗಣನೀಯವಾದದ್ದೇ. ನೂರಾರು ವರ್ಷಗಳು ಉರುಳಿ ಹೋಗಿದ್ದರೂ, ಶರಣರ ಚಿಂತನೆಗಳೂ, ಮಾರ್ಗದೃಷ್ಟಿಗಳೂ, ಈಗಲೂ ಪ್ರಸ್ತುತವಾಗಿವೆ. ಆಧುನಿಕ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಲಭ್ಯವಿರುವ ಅನುಕೂಲಗಳನ್ನು ಉಪಯೋಗಿಸಿಕೊಂಡು ವೀರಶೈವ ಮಠಗಳು ಅವಾವ ಸುಧಾರಣೆಯ ಕಾರ್ಯಗಳನ್ನು ಶರಣರ ಆದರ್ಶಗಳ ಬೆಳಕಿನಲ್ಲಿ ಕೈಗೊಳ್ಳಬಹುದೆಂಬುದನ್ನೂ ನೋಡೋಣ.

ಬದಲಾವಣೆಯ ಅನುಮಿತ್ಯರ್ಥ

ಸಂಸ್ಕೃತಿಗಳ ಸಂಪರ್ಕದಿಂದ, ಔದ್ಯೋಗಿಕ ಕ್ರಾಂತಿಯಿಂದ, ನಗರೀಕರಣದಿಂದ, ರಾಜಕೀಯ ವಿಪ್ಲವದಿಂದ, ವಾಣಿಜ್ಯೀಕರಣದಿಂದ, ಶಿಕ್ಷಣ ಪ್ರಸಾರದಿಂದ, ಆರೋಗ್ಯ - ನೈರ್ಮಲ್ಯ ಕಾರ್ಯಕ್ರಮಗಳ ಅನುಷ್ಠಾನದಿಂದ, ಸಮೂಹ ಮಾಧ್ಯಮಗಳ ಪ್ರಗತಿಯಿಂದ, ವೈಜ್ಞಾನಿಕ ಆವಿಷ್ಕಾರಗಳಿಂದ ಇಂತಹ ಇತರ ಅಂಶಗಳ ಪ್ರಕ್ರಿಯೆಗಳಿಂದ ಸಮಾಜದಲ್ಲಿ ಮಹತ್ತರವಾದ ಪರಿವರ್ತನೆಗಳು ಸಂಭವಿಸಿದವು. ಪರಿವರ್ತನೆಗಳ ಪರಿಣಾಮವಾಗಿ ಹಳೆಯ ಸಮಸ್ಯೆಗಳನ್ನು ನವೀನ ಮಾರ್ಗದೃಷ್ಟಿಗಳಿಂದ ಅರ್ಥೈಸಲು, ಅವುಗಳಿಗೆ ಆಂಶಿಕವಾಗಿ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಆದರೆ, ಅನೇಕ ಹಳೆಯ ಸಮಸ್ಯೆಗಳು ಉಲ್ಬಣಗೊಳ್ಳತೊಡಗಿದವು; ಸಮಸ್ಯೆಗಳೇ ಅಲ್ಲವೆಂಬ ಸ್ಥಿತಿಗಳು ಸಮಸ್ಯೆಗಳೆಂದು ತೋರತೊಡಗಿದವು; ಹೊಸ ಹೊಸ ಸಮಸ್ಯೆಗಳು ಮೈದೋರಿ ಜನಜೀವನವನ್ನು ಕ್ಲಿಷ್ಟವೂ, ಸಂಕೀರ್ಣವೂ ಆಗಿ ಮಾರ್ಪಡಿಸಿದವು.

ಧರ್ಮದ ಉಪಕರಣವಾದ ಮಠಗಳು ಹೊಸ ಪರಿಸ್ಥಿತಿಗೆ ಅನುಗುಣವಾಗಿ ನವೀನ ಹಕ್ಕು-ಹೊಣೆಗಳನ್ನು ಪಡೆದವು. ವೈರುಧ್ಯವೆಂಬಂತೆ, ಅತ್ಯಂತ ಸೋಜಿಗವೆಂಬಂತೆ, ಲೌಕಿಕ ಮತ್ತು ವೈಜ್ಞಾನಿಕ ಶಕ್ತ್ಯಂಶಗಳ ಪ್ರಭಾವದ ಹೆಚ್ಚಳವನ್ನು ಕಂಡುಂಡ ಆಧುನಿಕ ವಾತಾವರಣದಲ್ಲಿ ಮಠಗಳ ಮತ್ತು ಮಠಾಧೀಶರ, ಪೀಠಗಳ ಮತ್ತು ಪೀಠಾಧಿಪತಿಗಳ, ದೇವಸ್ಥಾನಗಳ ಮತ್ತು ಪೂಜಾರಿಗಳ, ಧಾರ್ಮಿಕ ಕ್ರಿಯಾ ವಿಧಿಗಳ ಆಚರಣೆ ಮತ್ತು ಭಕ್ತ ವೃಂದಗಳ ಸಂಖ್ಯೆಯು ಏರುತ್ತಾ ನಡೆಯುತ್ತಿದೆ. ಅಧಾರ್ಮಿಕ

ಎಂದು ಹೇಳುವುದು ಕಠಿಣವಾದರೂ, ಧಾರ್ಮಿಕ ಚಿಂತನಾಚರಣೆಗಳಿಗೆ, ಸಾಪೇಕ್ಷವಾಗಿಯಾದರೂ, ಆಶ್ರಿತವಾದ ಚಟುವಟಿಕೆಗಳನ್ನು ಮಠಗಳು ಕೈಗೊಳ್ಳುತ್ತಿರುವುದನ್ನು ನಾವು ಕಾಣುತ್ತೇವೆ.

ಈ ಹಿನ್ನೆಲೆಯಲ್ಲಿ ಸಮಾಜ ಸುಧಾರಣೆಯ ಕಾರ್ಯಕ್ರಮಗಳನ್ನು ವೀರಶೈವ ಮಠಗಳು ಹಮ್ಮಿಕೊಳ್ಳುವ ಮತ್ತು ಇವುಗಳನ್ನು ಶರಣ ಧರ್ಮದ ಬೆಳಕಿನಲ್ಲಿ ಅನುಷ್ಠಾನಗೊಳಿಸುವ ಕ್ರಮಗಳನ್ನು ಪ್ರಸ್ತಾಪಿಸುವ ಅಗತ್ಯವಿದೆ. ಆಧ್ಯಾತ್ಮವು ಮಾನವನ ಜೀವನದ ಒಂದು ಭಾಗ ಮಾತ್ರ; ಲೌಕಿಕ ವ್ಯವಹಾರವನ್ನು ಕಡೆಗಣಿಸಿ ಆಧ್ಯಾತ್ಮವನ್ನು ಸಾಧಿಸಲು ಆಗದು. ಈ ದೃಷ್ಟಿಯಿಂದ ಕೆಲವು ಸುಧಾರಣೆಯ ಕ್ರಮಗಳನ್ನು ಚರ್ಚಿಸೋಣ.

ಮಠಗಳ ಸಾಮರ್ಥ್ಯ

ಯಾವುದೇ ಉದ್ದೇಶವು ಪರಿಣಾಮಕರವಾಗಿ ಕೈಗೂಡಲು ಅಳವಡಿಸಿಕೊಂಡ ತಂತ್ರೋಪಾಯಗಳೂ, ಮಾರ್ಗೋಪಾಯಗಳೂ ಶಕ್ತಿಯುತವಾಗಿರಬೇಕು ಎಂಬುದು ಎಷ್ಟು ನಿಜವೋ ಅವುಗಳನ್ನು ಉಪಯೋಗಿಸುವ ವ್ಯವಸ್ಥೆಯೂ ಸಮರ್ಥವಾಗಿರಬೇಕು ಎಂಬುದೂ ಅಷ್ಟೇ ನಿಜ. ಅಂದರೆ, ಈ ಸಂದರ್ಭದಲ್ಲಿ ವೀರಶೈವ ಮಠಗಳು ತಾವು ಅಂಗೀಕರಿಸಿದ ಉದ್ದೇಶಗಳನ್ನು ನೆರವೇರಿಸಲು ಬಹು ಸಮರ್ಥವಾಗಿರಬೇಕು ಎಂದೇ ಅರ್ಥ. ಶರಣರು ಕಂಡರಿಸಲು ಬಯಸಿದ್ದು ಅಕಳಂಕ ವ್ಯಕ್ತಿತ್ವವನ್ನು, ಸಮಾನತೆಯ ಮತ್ತು ಸೌಹಾರ್ದತೆಯ ಬದುಕನ್ನು, ಕಾಯಕ-ದಾಸೋಹಗಳಲ್ಲಿ ನಿರತರಾಗಿರುವ ಭಕ್ತ ಸಮೂಹವನ್ನು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ವ್ಯಕ್ತಿ ಸಮೂಹ ಮತ್ತು ಸಮುದಾಯಗಳೆಲ್ಲವೂ ಅಪ್ಪಟ ಮಾನವ್ಯ ಮೌಲ್ಯಗಳ ವ್ಯಕ್ತರೂಪಗಳಾಗಿರಬೇಕು. ಇಂಥ ಘನೋದ್ದೇಶಗಳನ್ನು ಹೊಂದಿದ ವೀರಶೈವ ಮಠಗಳು ಹೇಗಿರಬೇಕು?

ಧಾರ್ಮಿಕ ವ್ಯವಸ್ಥೆಗಳಾಗಿದ್ದರೂ ಮಠಗಳು ಕೆಲವು ಆವಶ್ಯಕ ಭೌತ ಅನುಕೂಲಗಳನ್ನು ಪಡೆದಿರಬೇಕು. ಸಾಕಷ್ಟು ದೊಡ್ಡ ನಿವೇಶನ, ಬೇಕಾದಷ್ಟು ಕಟ್ಟಡಗಳು, ಯಥೇಚ್ಛವಾದ ನೀರು, ಸಾಕಷ್ಟು ಪ್ರಮಾಣದ ವಿದ್ಯುತ್ತು, ಉದ್ದೇಶ ಸಾಧನೆಗೆ ಬೇಕಾದಷ್ಟು ಆದಾಯ, ಭಕ್ತ ಸಮೂಹವನ್ನು ಸಂತೃಪ್ತಗೊಳಿಸಬಲ್ಲ ಸೇವಾ ಸಿಬ್ಬಂದಿ, ಸಾಂತ್ವನಗೊಳಿಸುವ ತೇಜೋಮಯ ಗುರು ವೃಂದ, ಇತ್ಯಾದಿ ಇರಬೇಕಾದದ್ದು ಅತ್ಯಗತ್ಯ. ಇವೆಲ್ಲವುಗಳ ಜೊತೆಗೆ ಅಮೂರ್ತವಾದ ಗುಣವಿಶೇಷಗಳನ್ನು ಗಮನಿಸಬೇಕು. ಮಠಗಳು ಸಮಾಜದಲ್ಲಿನ (ಲೋಕದ) ಡೊಂಕುಗಳನ್ನು ತಿದ್ದಬೇಕಾದುದರಿಂದ ತಮ್ಮ ತಮ್ಮ ಡೊಂಕುಗಳನ್ನು ಮೊದಲು ತಿದ್ದಿಕೊಳ್ಳಬೇಕು; ಅಂತರಂಗ ಬಹಿರಂಗಗಳೆರಡರಲ್ಲೂ ಶುದ್ಧವಾಗಿರುವ ಯೋಗ್ಯರು ಮಠಗಳಲ್ಲಿರಬೇಕು. ಆಂತರಿಕವಾಗಿರುವ ವೈಯಕ್ತಿಕ ಮತ್ತು ಕಿರು ಬಣಗಳ ದ್ವೇಷಾಸೂಯೆಗಳನ್ನು ಮೂಲೋತ್ಪಾಟನೆ ಮಾಡಿಕೊಂಡಿರಬೇಕು; ಮಠಗಳಲ್ಲಿನ ಜಗಳಗಳು ಉಲ್ಬಣಗೊಳ್ಳದಂತೆ, ನ್ಯಾಯಾಲಯಗಳ ಕಟ್ಟೆ ಹತ್ತದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು; ಪಾರಸ್ಪರಿಕವಾಗಿರುವ ಅಸಹನೆ, ಆಪಾದನೆಗಳು, ಈರ್ಷ್ಯಾ ಮನೋಭಾವನೆಗಳು ಉತ್ಪನ್ನವಾಗದಂತೆ, ಉತ್ಪನ್ನವಾದರೂ ಅವುಗಳನ್ನು ಬೆಳೆಯಗೊಡದಂತೆ ಮಠಗಳು ಎಚ್ಚರಿಕೆ ವಹಿಸಬೇಕು; ಲೌಕಿಕ ವ್ಯವಹಾರದಲ್ಲಿ ಆಗುವ ಮುಂದು ವೆಚ್ಚ, ಹಣವು ಪೋಲಾಗುವುದು, ಮಠದ ಆಸ್ತಿಯನ್ನು ವ್ಯಕ್ತಿಗಳು ಕಬಳಿಸುವುದು ಇತ್ಯಾದಿಗಳನ್ನು ಗೌಣವೆಂದು ಕಡೆಗಣಿಸಕೂಡದು; ಅನ್ಯ ಮಠಗಳಲ್ಲಿ ಆಗುತ್ತಿರುವ ಒಳ್ಳೆಯ ಕಾರ್ಯಗಳನ್ನು ಮೆಚ್ಚುವ, ಅವುಗಳಿಗೆ ಬೆಂಬಲವನ್ನೀಯುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು; ಇದು ಅಂತರ ಮಠೀಯ ಮಧುರ ಬಾಂಧವ್ಯದಿಂದಲೇ ಸಾಧ್ಯವೆಂಬುದನ್ನು ಅರಿತುಕೊಂಡು ಅಂಥ ಬಾಂಧವ್ಯದ ವೃದ್ಧಿಗೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಈ ಎಲ್ಲಾ ಕ್ರಮಗಳಿಂದ ಆರೋಗ್ಯಕರವಾದ ವಾತಾವರಣವು ಮಠಗಳ ಒಳಗೂ, ಹೊರಗೂ, ಅವುಗಳ ನಡುವೆಯೂ ಉಂಟಾಗುತ್ತದೆ. ಇಂಥ ವಾತಾವರಣವು ಸ್ಥಾಪಿತವಾಗಿ ಸಂಪೋಷಿತಗೊಳ್ಳುತ್ತಾ ಹೋದರೆ ಸುಧಾರಣೆಯ ಕಾರ್ಯವನ್ನು ಕೈಗೊಳ್ಳುವುದಕ್ಕೆ ಮಠಗಳಿಗೆ ನೈತಿಕ ಹಕ್ಕು ಇರುತ್ತದೆ, ಪರಿಣಾಮಕರವಾಗಿ ಕಾರ್ಯನಿರತವಾಗಿರಲು ಅವುಗಳಿಗೆ ಸಾಮರ್ಥ್ಯವಿರುತ್ತದೆ.

ಪ್ರಮುಖ ಉದ್ದೇಶ ವಲಯಗಳು

ಈ ಮೇಲೆ ಸೂಚಿಸಿದಂತೆ ಸಮರ್ಥವಾದ ವೀರಶೈವ ಮಠಗಳು ಮುಖ್ಯವಾಗಿ ಕೈಗೊಳ್ಳಬೇಕಾದ ಕಾರ್ಯಗಳು ಈ ಅಂಶಗಳ ಸುತ್ತಲೂ ಹೆಣೆದುಕೊಂಡ ಕ್ರಿಯಾವಲಯಗಳಾಗಬೇಕು: ಅಕಳಂಕ ವ್ಯಕ್ತಿತ್ವ, ಮಧುರದಾಂಪತ್ಯ, ಸಮರಸವಾದ ಕುಟುಂಬ, ನಿರ್ಮಲವಾದ ಪರಿಸರ, ಒಳ ಪಂಗಡಗಳ ಐಕ್ಯತೆ, ಜಾತಿ - ಜಾತಿಗಳ ನಡುವಣ ಸಹನೆ - ಸೌಹಾರ್ದ ಸಂಬಂಧ, ಕಾಯಕದ ಬಗ್ಗೆ ಗೌರವ, ಸಮುದಾಯಾಭಿವೃದ್ಧಿ. ಈ ಪಟ್ಟಿಯು ಸಂಪೂರ್ಣವಾದುದೇನೂ ಅಲ್ಲ; ಇದು ಕೇವಲ ದೃಷ್ಟಾಂತವಾದದ್ದು. ಜೊತೆಗೆ,

ಇವೆಲ್ಲವೂ ಪಾರಮಾರ್ಥಿಕ ವಲಯಗಳಿಗೆ ನೇರವಾಗಿ ಸೇರಿಲ್ಲವಾದರೂ ಶರಣರು ಬಹು ಆಸ್ಥೆಯಿಂದ ಲೌಕಿಕ ವಿಷಯಗಳಿಗೆ ನೀಡಿದ ಮಹತ್ವವನ್ನು ಗಮನದಲ್ಲಿರಿಸಿಕೊಂಡು ಇವುಗಳನ್ನು ನಮೂದಿಸಲಾಗಿದೆ. ಈ ಮುಂದೆ ಇವುಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

೧. ಅಕಳಂಕ ವ್ಯಕ್ತಿತ್ವ

ಮಾನವನು ಪರಿಶುದ್ಧವಾದ ವ್ಯಕ್ತಿತ್ವವನ್ನು ಪಡೆದಿರಬೇಕು ಎಂದು ಶರಣರು ಬಯಸಿದರು. ಭಕ್ತನಾದ ವ್ಯಕ್ತಿಯ ಅಂತರಂಗ ಮತ್ತು ಬಹಿರಂಗಗಳೆರಡೂ ಶುದ್ಧವಾಗಿರಬೇಕು. ಅವನ ಚಿಂತನೆ, ನುಡಿ ಮತ್ತು ನಡೆ ಎಲ್ಲವೂ ಅವಿನಾಭಾವದಿಂದ ಇರಬೇಕು. ಅವನು ಪರಸತಿ, ಪರಧನ ಬೇಡವೆಂಬ ಛಲದವನಾಗಿರಬೇಕು. ಅವನು "ಶಾಂತನಾಗಿರಬೇಕು, ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು, ಭೂತ ಹಿತವಹ ವಚನವ ನುಡಿಯಬೇಕು, ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು, ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು, ತನು ಮನ ಧನವ ಗುರು ಲಿಂಗ ಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರ ದಾನವ ಗೆಯ್ಯದಿರಬೇಕು, ಸಕಲ ಇಂದ್ರಿಯಗಳೂ ತನ್ನ ವಶಗತವಾಗಿರಬೇಕು, (ಚೆನ್ನ ಬಸವಣ್ಣ)" ಒಟ್ಟಿನಲ್ಲಿ ವ್ಯಕ್ತಿಯು 'ರತ್ನಮೌಕ್ತಿಕದಚ್ಚು' ಆಗಿರಬೇಕು.

ಇಂಥ ವ್ಯಕ್ತಿತ್ವವು ಇದ್ದಕ್ಕಿದ್ದ ಹಾಗೆ ಬರುವುದಿಲ್ಲ. ಮಠದ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರ ಅಂತರಂಗವನ್ನು ಹೊಗುವ, ಅಲ್ಲಿನ ಕಲ್ಮಷಗಳನ್ನು ತೊಳೆಯುವ ಕಾರ್ಯವು ಮಠದ ಸ್ವಾಮಿಗಳದ್ದು. ಭಕ್ತನು ಸದುವಿನಯ ಸಂಪನ್ನನೂ, ಭ್ರಷ್ಟ ಮನಸ್ಸಿನಿಂದ ವಿದೂರನೂ ಆಗಿರುವಂತೆ ನೋಡಿಕೊಳ್ಳುವುದು ಅವರ ಆದ್ಯ ಕರ್ತವ್ಯ. ದುರ್ವ್ಯಸನಗಳಿಗೆ ತುತ್ತಾದ ವ್ಯಕ್ತಿಯನ್ನು ಪರಿವರ್ತಿಸಲು ನಾನಾ ಮಾರ್ಗೋಪಾಯಗಳನ್ನು ಉಪಯೋಗಿಸಬೇಕಾಗುತ್ತದೆ. ಕೆಲವು ಸಲ ಕಠಿಣವಾಗಿ ಸ್ವಾಮಿಗಳು ವರ್ತಿಸಬೇಕಾಗಲೂಬಹುದು. ಉದಾ : ಕುಡುಕನೂ, ವ್ಯಭಿಚಾರಿಯೂ, ಭ್ರಷ್ಟನೂ ಆದ ಶ್ರೀಮಂತನ ಕೂಡ ವ್ಯವಹಾರವನ್ನು ತ್ಯಜಿಸುವಂಥ ಕಠಿಣ ನಿರ್ಧಾರಕ್ಕೂ ಸ್ವಾಮಿಗಳು ಬರುವ ಅಗತ್ಯವಿದೆ. (ಆದರೆ, ಸ್ವಾಮಿಗಳು ಸಚ್ಚಾರಿತ್ರ್ಯ ಹೊಂದಿದವರೂ, ಸಕಲೇಂದ್ರಿಯಗಳನ್ನೂ ತಮ್ಮ ವಶಗತಮಾಡಿಕೊಂಡಂಥವರೂ, ಹಣದ ಆಮಿಷಕ್ಕಾಗಿಯಾಗಲಿ, ಕೀರ್ತಿಶನಿಯ ಬೆನ್ನು ಬೀಳುವುದಾಗಲಿ, ಪ್ರಚಾರ ಪ್ರಿಯತೆಗಾಗಲಿ ಬಲಿಯಾಗಬಾರದು)

ಆರೋಗ್ಯಕರವಾದ ವ್ಯಕ್ತಿತ್ವವು ಬಾಲ್ಯದಿಂದಲೇ ಬೆಳೆದುಬರಬೇಕಾಗುತ್ತದೆ. ಮಗುವಿನ ಕುಟುಂಬವೂ, ಅವನ ಗೆಳೆಯರ ಗುಂಪೂ, ನೆರೆಹೊರೆಯೂ, ಶಾಲೆಯೂ ಹಿತಕರವಾದ ವಾತಾವರಣವನ್ನು ಹೊಂದಿರಬೇಕಾದದ್ದು ಅಗತ್ಯ. ಕುಟುಂಬದಲ್ಲಿ ವಾತ್ಸಲ್ಯಮಯ ಆವರಣ ಸೃಷ್ಟಿಯಾದರೆ ಮಗುವಿನ ವ್ಯಕ್ತಿತ್ವವು ಪರಿಪೂರ್ಣವಾಗಿ ಅರಳಲು ಸಾಧ್ಯವಾಗುತ್ತದೆ. (ಕುಟುಂಬವನ್ನು ಕುರಿತು ಆನಂತರ ಪ್ರಸ್ತಾಪಿಸಲಾಗುವುದು.) ಸಮುದಾಯದಲ್ಲಿನ ಎಲ್ಲ ಕುಟುಂಬಗಳೂ ಮಠದ ನಿಕಟ ಸಂಪರ್ಕಕ್ಕೆ ಬರಲಿಕ್ಕಿಲ್ಲ. ಆದರೆ, ಸಾಮಾನ್ಯವಾಗಿ ಸಮುದಾಯದ ಎಲ್ಲ ಮಕ್ಕಳೂ ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. (ಅವರೆಲ್ಲರೂ ಶಾಲೆಗೆ ಹೋಗುವಂತೆ ಮಾಡುವ ಕೆಲಸವೂ ಆಗಬೇಕಾಗಿದೆ . ಇದರಲ್ಲಿ ಮಠದ ಪಾತ್ರವೂ ಇದೆ). ಆದುದರಿಂದ ಮಠವು ಆ ಸಮುದಾಯದಲ್ಲಿನ ಪ್ರಾಥಮಿಕ ಶಾಲೆಯ, ಇದ್ದರೆ ಮತ್ತು ಸಾಧ್ಯವಾದರೆ, ಪ್ರೌಢಶಾಲೆಯ ನಿಕಟ ಸಂಪರ್ಕವನ್ನು ಪಡೆದುಕೊಳ್ಳಬೇಕು. ಶಾಲಾ ಶಿಕ್ಷಕ, ಶಿಕ್ಷಕಿಯರನ್ನು ಪ್ರೋತ್ಸಾಹಿಸಿ, ಪ್ರೇರೇಪಿಸಿ, ಸಮುದಾಯದಲ್ಲಿನ ಧನಿಕರನ್ನು ಪುಸಲಾಯಿಸಿ, ಶಾಲಾ ಮಕ್ಕಳಿಗೆ, ಸಕಲ ಅನುಕೂಲಗಳನ್ನು ಕಲ್ಪಿಸಿ, ಹಿಂದುಳಿದ ವರ್ಗದ ಮಕ್ಕಳಿಗೆ, ಬೌದ್ಧಿಕವಾಗಿ ಮತ್ತು ದೈಹಿಕವಾಗಿ ಊನಶಕ್ತರಾದ ಮಕ್ಕಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸಿ, ನೈತಿಕ ತಿಳುವಳಿಕೆಯನ್ನು ಬೋಧಿಸುವ ಏರ್ಪಾಟು ಮಾಡಿ ಅವರಲ್ಲಿ ಆತ್ಮವಿಶ್ವಾಸವನ್ನೂ, ಬಾಳಿನಲ್ಲಿ ನಂಬುಗೆಯನ್ನು ತಳೆಯುವಂತೆಯೂ ಸೂಕ್ತ ಬೋಧನೆಯನ್ನು ಏರ್ಪಡಿಸಬೇಕು. ಮಠದ ಸ್ವಾಮಿಗಳ ಸತ್ಪ್ರಭಾವಕ್ಕೆ ಶಾಲೆಗಳು ಒಳಗಾಗುವಂತಾದರೆ ಮಕ್ಕಳ ಮನೋವೃಷ್ಟಿಯು ಪವಿತ್ರವಾಗುವ ಸಾಧ್ಯತೆ ಇರುತ್ತದೆ; ಅವರ ವ್ಯಕ್ತಿತ್ವವು ಅಕಳಂಕವಾಗಿ ರೂಪುವಳೆಯಲೂ ಸಾಧ್ಯವಿರುತ್ತದೆ.

ಮೇಲೆ ವಿವರಿಸಿದ್ದುದು ಒಂದು ಪ್ರಾತ್ಯಕ್ಷಿಕೆಯಷ್ಟೇ. ಸಂದರ್ಭಕ್ಕೆ ತಕ್ಕಂತೆ ಮಾರ್ಗೋಪಾಯಗಳನ್ನು ಕಂಡು ಹಿಡಿದು ಪ್ರಯೋಗಿಸಬೇಕು. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂದು ಹೇಳಲಾಗುವುದಲ್ಲವೇ ? ಇಂದಿನ ಮಕ್ಕಳೇ ಇಂದಿನ 'ಹಿರಿಯರಿಗೆ' ಮಾರ್ಗದರ್ಶಿಗಳು ಆಗುವಂತೆ ಅವರನ್ನು ರೂಪಿಸುವುದು ಮಠಗಳ ಆದ್ಯ ಕರ್ತವ್ಯ. ಮಕ್ಕಳು ಮನೆಗಳಲ್ಲಿ

ಮಾರ್ಗದರ್ಶಿಗಳಾಗುವುದು ಇದರಿಂದ ಸಾಧ್ಯವಾಗುತ್ತದೆ. ಒಳ್ಳೆಯ ವಾತಾವರಣದಲ್ಲಿ ಬೆಳೆದ ಮಗುವು ಒಳ್ಳೆಯ ಯುವಕ, ಪ್ರೌಢ ಮತ್ತು ರಾಷ್ಟ್ರಕ ಆಗುತ್ತಾನೆ. ಒಳ್ಳೆಯ ವ್ಯಕ್ತಿತ್ವವು ಮಧುರ ದಾಂಪತ್ಯಕ್ಕೆ, ಸಮರಸವಾದ ಕುಟುಂಬಕ್ಕೆ, ನಿರ್ಮಲವಾದ ಪರಿಸರಕ್ಕೆ ತಳಹದಿಯನ್ನು ಹಾಕುತ್ತದೆ.

೨. ಮಧುರ ದಾಂಪತ್ಯ

ಆಧುನಿಕ ಕಾಲದಲ್ಲಿ ತೀವ್ರತರವಾಗಿ ಆಗುತ್ತಿರುವ ಬದಲಾವಣೆಯ ಸೆಳವುಗಳಿಗೆ ಸಿಕ್ಕ ಗಂಡು - ಹೆಣ್ಣುಗಳು ವೈವಾಹಿಕ ಜೀವನದಲ್ಲಿ ವಿರಸವನ್ನೇ ಬಿತ್ತಿ ಬೆಳೆದು ಒಕ್ಕುವುದುಂಟು. "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ಉಕ್ತಿಯನ್ನು ಅವರಿಗೆ ಸದಾ ನೆನಪಿನಲ್ಲಿ ಉಳಿಯುವಂತೆ ಮಾರ್ಗದರ್ಶನವನ್ನು ನೀಡುವುದು ಮಠಗಳ ಪ್ರಮುಖ ಕೆಲಸ. ತಮ್ಮ ಧಾರ್ಮಿಕ ಕರ್ಮಗಳ ಕಕ್ಷೆಗೆ ಬರದಿದ್ದರೂ ಸ್ವಾಮಿಗಳು ಗಂಡು - ಹೆಣ್ಣುಗಳನ್ನು ಹೊಂದಿಸಿಕೊಡುವ ಲೌಕಿಕ ವ್ಯವಹಾರದಲ್ಲಿ ನೆರವಾಗುವುದುಂಟು. ಮದುವೆಗೆ ಮುನ್ನ ಹೀಗೆ ಆರಂಭವಾದ ಸಂಬಂಧವು ಮದುವೆಯು ಸ್ವಾಮಿಗಳ ಸಾನ್ನಿಧ್ಯದಲ್ಲಿಯೇ ಸಾಮಾನ್ಯವಾಗಿ ನಡೆಯುತ್ತಿರುವುದರಿಂದ ಅವರಿಗೆ ದಂಪತಿಯ ಮೇಲೆ ಪ್ರಭಾವವನ್ನು ಬೀರುವುದು ಕಷ್ಟವಾಗುವುದಿಲ್ಲ. ಮಠಗಳಿಗೆ ಆಗಮಿಸುವ ದಂಪತಿಗಳನ್ನು ಆತ್ಮೀಯವಾಗಿ ಕಂಡು ಅವರ ಸುಖ-ದುಃಖಗಳನ್ನು ತಿಳಿಗಂಪನದಿಂದ ಆಲಿಸಿ, ಅವರಿಗೆ ಸಾಂತ್ವನವನ್ನು ನೀಡುವುದು ಅಗತ್ಯ. ಕ್ಷುಲ್ಲಕ ಕಾರಣಗಳಿಗಾಗಿ ಮನಸ್ತಾಪ ಮಾಡಿಕೊಂಡು ಜೋಡಿಗಳು ಇಜ್ಜೋಡಿಗಳಾಗುವ ಪ್ರಸಂಗವನ್ನು ತಮ್ಮ ಸಲಹಾಲೋಚನೆಯ (Consulting) ಮೂಲಕ ಸ್ವಾಮಿಗಳು ತಪ್ಪಿಸಬಹುದು.

ಗಂಡು - ಹೆಣ್ಣುಗಳಲ್ಲಿ ಭೇದವನ್ನು ಶರಣರು ಕಲ್ಪಿಸುವುದಿಲ್ಲ. ಗಂಡ - ಹೆಂಡಿರಲ್ಲೂ ಭೇದವನ್ನು ಗಣಿಸುವುದಿಲ್ಲ. ಪ್ರಾಕೃತಿಕವಾದ ಶಾರೀರಿಕ ಪ್ರಕ್ರಿಯೆ ಮುಟ್ಟನ್ನು ದೋಷವೆಂದು ಭಾವಿಸುವುದಿಲ್ಲ. "ಮೊಲೆ ಮುಡಿ ಬಂದರೆ ಹೆಣ್ಣೆಂಬರು; ಗಡ್ಡ ಮೀಸೆ ಬಂದರೆ ಗಂಡೆಂಬರು ಒಳಗಾಡುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ" ಎಂದು ಜೇಡರ ದಾಸಿಮಯ್ಯನ ಮಾತಿಗೆ ಶರಣರು ಧ್ವನಿಗೂಡಿಸುತ್ತಾರೆ. ಗೊಗ್ಗವ್ವೆಯು "ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆಕಾಸೆ ಬಂದಡೆ ಗಂಡೆಂಬರು, ಈ ಉಭಯದ ಜ್ಞಾನ ಹೆಣ್ಣೋ ಗಂಡೋ ?" ಎಂದು ಕೇಳುವಲ್ಲಿ ಇದೇ ಧ್ವನಿ ಇದೆಯಲ್ಲವೆ?. ಪರಂಪರೆಯ ಪ್ರಕಾರ ಗಂಡು ಹೆಣ್ಣನ್ನು ಮೋಹಿಸಬಹುದು, ಆರಿಸಿಕೊಳ್ಳಬಹುದು, ಹೆಂಡತಿಯಾಗಿ ಮಾಡಿಕೊಳ್ಳಬಹುದು. ಆದರೆ, ಹೆಣ್ಣು ಈ ರೀತಿ ಮಾಡಿದರೆ ? ಗೊಗ್ಗವ್ವೆಯ ಈ ದಿಟ್ಟ ನುಡಿಯನ್ನು ಕೇಳಿ, "ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡು ಹಿಡಿದಡೆ ಉತ್ತರವಾವುದೆಂದರಿಯಬೇಕು? ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ." ಗಂಡನು ಹೆಂಡತಿಗೆ, ಹೆಂಡತಿಯು ಗಂಡನಿಗೆ ಒಡವೆ; ಛೇ ! ಛೇ ! ಯಾರಿಗೆ ಯಾರೂ ಒಡವೆಯಲ್ಲ ಒಡೆಯರೂ ಅಲ್ಲ. ಇಬ್ಬರೂ ಸಮಾನರೇ. ಗಂಡ - ಹೆಂಡಿರ ಆಚಾರ - ವಿಚಾರಗಳಲ್ಲಿ ಐಕ್ಯತೆ, ಹೊಂದಾಣಿಕೆ ಇರಬೇಕು. ಇದರಿಂದ ಅವರಿಬ್ಬರಿಗೂ ಸುಖವಿದೆ, ಅವರ ಮಕ್ಕಳಿಗೂ ಸುಖವಿದೆ, ಇಡೀ ಸಂಸಾರವೇ ಸುಖಮಯವಾಗಿರುತ್ತದೆ. ಆದರೆ ಗಂಡ - ಹೆಂಡಿರು ಪ್ರತಿಷ್ಠೆಯ ಭ್ರಮೆಗೆ ಒಳಗಾಗಿ ಸಂಘರ್ಷಕ್ಕೆ ಬಲಿಯಾಗುತ್ತಾರೆ. ಇದು ಬಹು ಸೂಕ್ಷ್ಮ ಸ್ಥಿತಿ. ಇದು ಉಲ್ಬಣಕ್ಕೆ ಹೋಗುವ ಮೊದಲೇ ಇದನ್ನು ನವುರಾಗಿ ಮತ್ತು ಬಹು ಜಾಣ್ಮೆಯಿಂದ ಪರಿಹರಿಸಲು ಸ್ವಾಮಿಗಳಿಗೆ ಸಾಧ್ಯವಾಗುತ್ತದೆ. ದಂಪತಿಯ ವಿರಸವು ಅವರ ಅಂತರಿಕ ಸತ್ವವನ್ನು ನಾಶಪಡಿಸುವುದಲ್ಲದೆ ಅವರ ಮಕ್ಕಳನ್ನೂ ಹಾದಿ ತಪ್ಪಿಸುತ್ತದೆ. ಇದನ್ನು ಅವರಿಗೆ ಮನದುಂಬುವಂತೆ ತಿಳಿಸುವುದು ಮಠಗಳಿಗೆ ಸಾಧ್ಯವಾಗುತ್ತದೆ. ಸ್ವಾಮಿಗಳಲ್ಲಿರುವ ಅಪಾರವಾದ ಭಕ್ತಿ ಗೌರವಗಳಿಂದ ವೈಯಕ್ತಿಕ ಪ್ರತಿಷ್ಠೆಯನ್ನು ದಂಪತಿಗಳು ತಗ್ಗಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ.

ವಿರಸ ದಾಂಪತ್ಯವು ಕೌಟುಂಬಿಕ ಅಸ್ವಾಸ್ಥ್ಯಕ್ಕೆ ಎಡೆಮಾಡಿಕೊಡುವುದೆಂಬುದನ್ನೂ ಗಮನದಲ್ಲಿರಿಸಿಕೊಂಡರೆ ಸರಸ-ಮಧುರ ದಾಂಪತ್ಯವು ಎಷ್ಟು ಮಹತ್ವದ್ದು ಎಂಬುದನ್ನು ಗಂಡ-ಹೆಂಡರಿಗೆ ಅರಿವಾಗುವ ಹಾಗೆ ಮಠಗಳು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಸಾಧ್ಯ. ಇದು ನೇರವಾಗಿ ಕೈಗೊಳ್ಳುವಂಥದ್ದಲ್ಲವೆಂಬುದು ನಿಜವಾದರೂ ಮಠಗಳ ವಿವಿಧ ಕಾರ್ಯಕ್ರಮಗಳಲ್ಲಿ ದಂಪತಿಗಳು ಭಾಗವಹಿಸುವಂತೆ ಮಾಡಿದಾಗ ಸಂಗ್ರಾಹಿಕ ಪರಿಣಾಮವಾಗಿ (cumulative result) ಮಧುರ ದಾಂಪತ್ಯವು ಒಡಮೂಡುತ್ತದೆ ; ಬಲಿಷ್ಠಗೊಳ್ಳುತ್ತದೆ.

೩. ಸಮರಸವಾದ ಕುಟುಂಬ

ಸಮಾಜದ ಇತರ ಅಂಗಗಳಂತೆ ಕುಟುಂಬವೂ ಮನುಷ್ಯನ ಅನುಕೂಲಕ್ಕಾಗಿ ಸೃಷ್ಟಿಸಿಕೊಂಡ ಒಂದು ಸಂಸ್ಥೆ. ಶತಶತಮಾನಗಳಿಂದ ಉಳಿದುಕೊಂಡು ಬಂದಿರುವ, ತೀವ್ರವಾದ ಬದಲಾವಣೆಗಳೂ ಆಗಿದ್ದರೂ ಆವಶ್ಯಕವಾದ ವ್ಯವಸ್ಥೆ ಎಂದು ಸಾಧಿತವಾಗಿರುವ ಕುಟುಂಬವು ಪ್ರಾಕೃತಿಕವಾದದ್ದೇನೋ ಎಂಬಷ್ಟು ಸಹಜವಾಗಿದೆ. ಕುಟುಂಬವಿಲ್ಲದೆ ಮನುಷ್ಯನು ಜೀವಿಸಲಿಕ್ಕೇ ಸಾಧ್ಯವಿಲ್ಲವೇನೊ ಎಂಬಷ್ಟು ಅನಿವಾರ್ಯ ಆವಶ್ಯಕತೆಯಾಗಿದೆ. ಲೈಂಗಿಕ ತೃಪ್ತಿಗಾಗಿಯಾಗಲಿ, ಮಧುರವಾದ ದಾಂಪತ್ಯಕ್ಕಾಗಲಿ, ಮಕ್ಕಳ ಲಾಲನೆ-ಪಾಲನೆಗಾಗಿಯಾಗಲಿ, ಧಾರ್ಮಿಕ ಪದ್ಧತಿಯ ಉಳಿವಿಗಾಗಲಿ, ಸಂಸ್ಕೃತಿಯ ಸಂವರ್ಧನೆಗಾಗಲಿ ಕುಟುಂಬವು ಅತ್ಯಗತ್ಯವಾಗಿದೆ. ಆದುದರಿಂದಲೇ ಕುಟುಂಬವನ್ನು 'ಕಿರುಸಮಾಜ' ಎಂದೇ ಗಣಿಸುತ್ತಾರೆ ಶಾಸ್ತ್ರಜ್ಞರು. ಈ ಹಿನ್ನೆಲೆಯಲ್ಲಿ ವೀರಶೈವ ಮಠಗಳು ತಮ್ಮ ಭಕ್ತರ ಕುಟುಂಬಗಳು ಹೇಗೆ ಸಮರಸವಾದ ವ್ಯವಸ್ಥೆಗಳಾಗಿ ಸಂಘಟಿತಗೊಳ್ಳಬೇಕು, ಸಂಪೋಷಿತಗೊಳ್ಳಬೇಕು ಎಂಬುದನ್ನು ಆಲೋಚಿಸಬೇಕಾಗಿದೆ.

ವೀರಶೈವರ ಕುಟುಂಬಗಳು ಸಾಮಾನ್ಯವಾಗಿ ಆರೋಗ್ಯಕರವಾಗಿಯೇ ಇರುತ್ತವೆ. ಆದರೂ ವಿರಸ ದಾಂಪತ್ಯದಿಂದ, ಹೊಲಬುಗೇಡಿ ಮಕ್ಕಳಿಂದ, ಬಡತನ - ನಿರುದ್ಯೋಗದಿಂದ, ಆಧುನಿಕ ಮೌಲ್ಯಗಳ ಹಸಿಹಸಿ ಅಳವಡಿಕೆಯಿಂದ, ಅನಾರೋಗ್ಯ-ಅನಿರೀಕ್ಷಿತ ಆಘಾತಗಳಿಂದ, ಕೆಲವು ಸದಸ್ಯರ ದುರ್ವ್ಯಸನಗಳಿಂದ, ಇಂತಹವೇ ಇತರ ಸಮಸ್ಯೆಗಳ ಒತ್ತಡದಿಂದ ಕುಟುಂಬಗಳು ಒಡೆದು ಹೋಗುವ, ಸಂಘರ್ಷಣೆಯ ಹಾದಿಯನ್ನು ತುಳಿಯುವ, ವಿವಾಹ ವಿಚ್ಛೇದನೆಗಾಗಿ ಆಸ್ತಿಯ ವಿಭಜನೆಗಾಗಿ ನ್ಯಾಯಾಲಯಗಳಿಗೆ ಹೋಗುವ, ತೀವ್ರ ವ್ಯಾಧಿ-ವೇದನೆಗಳಿಗೆ ಒಳಗಾಗುವ ಸ್ಥಿತಿಯು ಕುಟುಂಬಗಳಲ್ಲಿ ಉಂಟಾಗುವುದನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳಿಗೆ ಏನಾದರೂ ಪರಿಹಾರವಿದೆಯೆ ಎಂದು ಚಿಂತಿಸುವುದು ಮಠಗಳಿಂದ ಸಾಧ್ಯವಾಗುತ್ತದೆ.

ಸ್ವಾಮಿಗಳಲ್ಲಿ ತಮ್ಮ ನೋವುಗಳನ್ನು ಭಕ್ತರು ಹೇಳಿಕೊಳ್ಳುತ್ತಾರೆ. ಅವರ ದುಗುಡಗಳನ್ನು ಆಸ್ಥೆಯಿಂದ ಆಲಿಸಿ, ಚರ್ಚಿಸುವುದರಿಂದ ಅವರಿಗೆ ಸಮಾಧಾನವಾಗುತ್ತದೆ. ಕುಟುಂಬದ ಸಂಕಷ್ಟಗಳನ್ನು ಪರಿಹರಿಸುವ ಮಾರ್ಗಕ್ಕೆ ಇದು ನೆರವಾಗುತ್ತದೆ. ತಂದೆ - ಮಗನಲ್ಲಿ, ತಂದೆ -ಮಗಳಲ್ಲಿ, ತಾಯಿ - ಮಗಳಲ್ಲಿ, ತಾಯಿ - ಮಗನಲ್ಲಿ, ಗಂಡ - ಹೆಂಡಿರಲ್ಲಿ, ಅಕ್ಕ - ತಂಗಿಯರಲ್ಲಿ, ಅಣ್ಣ-ತಮ್ಮಂದಿರಲ್ಲಿ, ಅಕ್ಕ - ತಮ್ಮಂದಿರಲ್ಲಿ, ಅತ್ತೆ - ಸೊಸೆಯರಲ್ಲಿ, ಯಜಮಾನ - ಆಳುಗಳಲ್ಲಿ, ಬೀಗರು - ಬಿಜ್ಜರಲ್ಲಿ ಹೀಗೆಯೇ ಕುಟುಂಬದ ಸದಸ್ಯರೊಳಗೆ ಅಪನಂಬುಗೆಗಳು, ಕಲಹಗಳು ಹುಟ್ಟಿ ಹರಡುತ್ತವೆ. ಇವುಗಳಿಂದ ಸಂಬಂಧಗಳು ಶಿಥಿಲಗೊಳ್ಳುತ್ತವೆ, ಮುರಿದು ಹೋಗುತ್ತವೆ. ಶಿಥಿಲಗೊಂಡಿರುವ ಶಿಥಿಲಗೊಳ್ಳುತ್ತಿರುವ, ಮುರಿದು ಹೋಗುತ್ತಿರುವ ಸಂಬಂಧಗಳನ್ನು ಸರಿಪಡಿಸುವ ಸಾಮರ್ಥ್ಯವನ್ನು ಮಠಗಳು ಈಗಲೂ ಪಡೆದಿವೆ ಎಂಬುದು ನಾನು ಗಮನಿಸಿದ ಅಂಶ. ಕೌಟುಂಬಿಕ ಸೌಖ್ಯವು ಆತ್ಮ ಸಂತೋಷಕ್ಕೆ, ಅಧ್ಯಾತ್ಮ ಬೆಳವಣಿಗೆಗೆ, ಧಾರ್ಮಿಕ ಸಂವರ್ಧನೆಗೆ, ಬಳಗ-ನೆರೆಹೊರೆಯ ಸೌಹಾರ್ದಕ್ಕೆ ಅಗತ್ಯವೆಂಬುದನ್ನು ಕುಟುಂಬದ ಸದಸ್ಯರಲ್ಲಿ ಬಿಂಬಿಸುವುದು ಸಾಧ್ಯವೂ ಹೌದು, ವೀರಶೈವ ಸಿದ್ಧಾಂತಕ್ಕೆ ಸಾಧುವೂ ಹೌದು.

೪. ನಿರ್ಮಲವಾದ ಪರಿಸರ

ಈ ವಿಶ್ವವು ಮುಖ್ಯವಾಗಿ ನಾಲ್ಕು ವಿಭಾಗಗಳ ಒಕ್ಕೂಟ : ಜಡವಸ್ತುಗಳು, ಸಸ್ಯಸಂಪತ್ತು, ಪ್ರಾಣಿ ಪಕ್ಷಿಗಳು ಮತ್ತು ಮನುಕುಲ. ಇವೇ ಆ ನಾಲ್ಕು ವಿಭಾಗಗಳು. ಮನುಷ್ಯನು ತನ್ನನ್ನೂ ಒಳಗೊಂಡಂತೆ ಎಲ್ಲ ವಿಭಾಗಗಳ ಮೇಲೆ, ಪ್ರಾಣಿ-ಪಕ್ಷಿಗಳು ತಮ್ಮನ್ನೂ ಒಳಗೊಂಡಂತೆ ಆದರೆ ಮನುಷ್ಯನನ್ನು ಹೊರತುಪಡಿಸಿ ಎಲ್ಲ ವಿಭಾಗಗಳ ಮೇಲೆ, ಸಸ್ಯಗಳು ತಮ್ಮನ್ನೂ ಸೇರಿದಂತೆ ಆದರೆ ಮನುಷ್ಯನನ್ನು ಹೊರತುಪಡಿಸಿ ಎಲ್ಲ ವಿಭಾಗಗಳ ಮೇಲೆ ಅವಲಂಬಿಸಿವೆ. ಆದರೆ ಜಡವಸ್ತುಗಳು ಮಾತ್ರ ಯಾವ ವಿಭಾಗದ ಮೇಲೂ ಅವಲಂಬಿಸಿಕೊಂಡಿಲ್ಲ. ಆದುದರಿಂದಲೇ ಮನುಷ್ಯನ ಅಳಿವು-ಉಳಿವಿಗೆ, ಉನ್ನತಿ- ಅಧೋಗತಿಗೆ ಎಲ್ಲ ವಿಭಾಗಗಳೂ ಅತ್ಯಗತ್ಯ. ಅವನು ಎಲ್ಲ ವಿಭಾಗಗಳ ಜೊತೆಗೂ ಮಧುರವಾದ, ಸಹಕಾರಮನೋಭಾವದ ಬಾಂಧವ್ಯವನ್ನು ಹೊಂದಿ ಜೀವಿಸುವುದು ತೀರಾ ಅನಿವಾರ್ಯ. ಈ ಅಂಶವನ್ನು ಶರಣರು ಆಳವಾಗಿ ಅರಿತುಕೊಂಡಿದ್ದರು; ತಮ್ಮ ಅಭಿಪ್ರಾಯವನ್ನು ಬಹು ಸ್ಪಷ್ಟವಾಗಿ ವಚನಗಳ, ಹಾಡುಗಳ ಮೂಲಕ ಅಭಿವ್ಯಕ್ತಗೊಳಿಸುತ್ತಿದ್ದರು. ಸಕಲ ಜೀವಾತ್ಮರನ್ನು ಒಳಗೊಂಡ ಪ್ರಕೃತಿಯನ್ನು ಅವರು ತುಂಬಾ ಗೌರವದಿಂದ ಕಾಣುತ್ತಿದ್ದರು, ಪ್ರೀತಿಸುತ್ತಿದ್ದರು.

ಆದರೆ, ಆಧುನಿಕತೆಯು ಹರಡುತ್ತಿದ್ದಂತೆ ಪ್ರಕೃತಿಯು ವಿಕೃತಿಯಾಗುವಂತೆ ಮನುಷ್ಯನು ನಡೆದುಕೊಳ್ಳತೊಡಗಿದ. ಪರಿಸರದ ಪ್ರಜ್ಞೆ ಇಲ್ಲದ ಮನುಷ್ಯನು ತನಗೆ ಇರುವ ಭಸ್ಮಾಸುರ ಶಕ್ತಿಯನ್ನು ದುರುಪಯೋಗಪಡಿಸಿಕೊಂಡು ಮಾಲಿನ್ಯದ

ಬಲೆಯನ್ನೇ ವಿಶ್ವಕ್ಕೆಲ್ಲಾ ಹರಡತೊಡಗಿದ. ನೆಲ-ಜಲ-ವಾಯು-ಶಬ್ದ ಎಲ್ಲ ತೆರನ ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಾ ಸಾಗಿತು. ಓಜೋನ್‌ನಂಥ ರಕ್ಷಾಕವಚವನ್ನು ತುಂಡರಿಸತೊಡಗಿದ. ತಾನು ಉಳಿಯುವ ಸ್ವಾರ್ಥಕ್ಕಾಗಿಯಾದರೂ ಪ್ರಕೃತಿಯ ಬಗೆಗೆ ಗೌರವ ಭಾವನೆಯನ್ನು ಇರಿಸಿಕೊಂಡು ಮಾಲಿನ್ಯವನ್ನು ಪರಿಹರಿಸಿ, ಅದು ಹುಟ್ಟಿ ಹರಡದ ಹಾಗೆ ಪ್ರತಿಬಂಧಕ ಕ್ರಮವನ್ನು ಕೈಗೊಂಡು ಮನುಷ್ಯನು ಬಾಳಬೇಕಾಗಿದೆ. ಈ ಮಾನವ ಪ್ರಯತ್ನದಲ್ಲಿ ಧಾರ್ಮಿಕ ಶಕ್ತಿಯ ಮಠಗಳ ನೆರವು ಅಗತ್ಯವಾಗಿದೆ.

ಅಂದರೆ, ಮಠಗಳು ತಾವು ಇರುವ ಸುತ್ತಣ ಪರಿಸರವನ್ನೂ ಒಳಗಿನ ಪರಿಸರದಂತೆ ನಿರ್ಮಲವೂ ಸುಂದರವೂ ಆಗಿರುವಂತೆ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕಾಗಿಯೇ ತಮ್ಮ ಭಕ್ತರ ಜೊತೆಗೆ ಮಾತ್ರವೇ ಅಲ್ಲದೆ ತಾವಿರುವ ಸಮುದಾಯದ ಆಡಳಿತದಲ್ಲಿ ನಿರತರಾಗಿರುವ ಅಧಿಕಾರಿಗಳನ್ನೂ ಸಂಪರ್ಕದಲ್ಲಿರಿಸಿಕೊಳ್ಳುವುದು ಅಗತ್ಯ. ಸಮುದಾಯದ ಆರ್ಥಿಕ, ರಾಜಕೀಯ, ಶೈಕ್ಷಣಿಕ ಆಡಳಿತದಲ್ಲಿ ನಿರತವಾಗಿರುವವರ ಸಹಕಾರ ಮತ್ತು ನೆರವು ಇಲ್ಲದಿದ್ದರೆ ಮಠಗಳು ಕ್ರಿಯಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಮನೆಯ ಒಳ-ಹೊರಗಿನ ನಿರ್ಮಲ ಪರಿಸರವು ಮನೆಯ ಯಜಮಾನನ ಹೊಣೆಗಾರಿಕೆ ಎಂಬುದು ಬಸವಣ್ಣನಂಥ ಶರಣರ ಅಭಿಪ್ರಾಯ. ತನುವಿನೊಳಗೆ ಹುಸಿ ತುಂಬಿರದ ಹಾಗೆ, ಮನದಲ್ಲಿ ವಿಷಯ ತುಂಬಿರದ ಹಾಗೆ ಆತ್ಮನು ಹೇಗೆ ನೋಡಿಕೊಳ್ಳುತ್ತಾನೋ ಹಾಗೆಯೇ ಮನೆಯ ಯಜಮಾನನು ಒಳ-ಹೊರಗಿನ ಕೊಳೆಯನ್ನೂ ತೆಗೆಯುವಲ್ಲಿ ನಿರತನಾಗಿರಬೇಕು. ಇದು ಕೇವಲ ಆರೋಗ್ಯ ಸೂತ್ರವನ್ನು ಪಾಲಿಸಲು ಮಾತ್ರವೇ ಅಲ್ಲ, ಪ್ರಕೃತಿಯನ್ನು ಮಲಿನಗೊಳಿಸದೆ ಇರಿಸಿಕೊಳ್ಳುವುದು ದೈವದ ನಿರೀಕ್ಷೆಯೂ ಹೌದು. "ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ" ಎಂದು ಕಾಣಬೇಕಾದರೆ ನಿರ್ಮಲವಾದ ವಾತಾವರಣವು ಇರಬೇಕಲ್ಲವೆ? ಪರಿಸರದ ಸಮತೋಲನದಲ್ಲಿಯೇ ದೇವರ ಇರವು ಸಾಧ್ಯವೆಂಬುದು ಶರಣರ ನಂಬುಗೆ. ಅಂಥ ಪರಿಸ್ಥಿತಿಯೇ ಜೀವದ ಇರವಿಗೂ, ಪ್ರಗತಿಗೂ ಅತ್ಯಗತ್ಯ ಎಂಬುದು ಎಲ್ಲ ಪ್ರಾಜ್ಞರ ಅಭಿಮತ.

ತಮ್ಮ ಭಕ್ತರು ಎಲ್ಲೆಲ್ಲಿ ವಾಸವಾಗಿದ್ದಾರೋ ಅಲ್ಲಲ್ಲೆ ಅಲ್ಲಿನ ನೆರೆಹೊರೆಯವರ ನೆರವನ್ನು ಪಡೆದೋ, ನೆರವನ್ನು ನೀಡಿಯೊ ನೆರೆಹೊರೆಯನ್ನು ಮಾಲಿನ್ಯರಹಿತ ನಿರ್ಮಲ ಸಮುದಾಯವನ್ನು ನಿರ್ಮಿಸಿ, ಕಾಪಾಡಿಕೊಂಡು ಹೋಗಬೇಕೆಂದು ಮಠಗಳು ಭಕ್ತರನ್ನು ಪ್ರೇರೇಪಿಸಬೇಕು. ಮನೆ ಮತ್ತು ಅದರ ಸುತ್ತಣವು ಕೊಳೆಯಿಲ್ಲದ, ಮರಗಿಡಬಳ್ಳಿಗಳು ಆವರಿಸಿರುವ ಪರಿಸರವು ಅಲ್ಲಿನ ಎಲ್ಲರಿಗೂ ಆಹ್ಲಾದವನ್ನುಂಟುಮಾಡುವುದಲ್ಲವೆ? ಈಗಲೂ ಹಳ್ಳಿ-ನಗರಗಳಲ್ಲಿ ದೇವರನ್ನು ಮೆರವಣಿಗೆಗೆ ಕೊಂಡೊಯ್ಯುವಾಗ ರಸ್ತೆ-ಬೀದಿಗಳನ್ನು ಗುಡಿಸಿ, ನೀರ 'ಸೆಳ್ಳೇವು' ಕೊಟ್ಟು ನಿರ್ಮಲವಾಗಿ ಇರಿಸುತ್ತಿರುವುದು ಮಠಗಳಿಗೆ ಮಾರ್ಗದರ್ಶಿಯಾಗುತ್ತದೆ. ಮಠದ ಸ್ವಾಮಿಗಳು ಬಿನ್ನಾಯಕ್ಕೆ ಹೋದಾಗ, ಸಂದರ್ಶನಾರ್ಥ ಓಣಿ - ವಠಾರಗಳಿಗೆ ಹೋದಾಗ ಸಹಜವಾಗಿಯೇ ಸ್ವಚ್ಛತೆಯನ್ನು ಅಲ್ಲಿನವರು ಇರಿಸಿಕೊಂಡಿರುತ್ತಾರೆ. ಈ ನೈರ್ಮಲ್ಯ ಕಾರ್ಯವು ಆಗೀಗ ಮಾತ್ರ ನಡೆಯದೆ ಸದಾ ನಡೆಯುವಂತಾಗಬೇಕು, ಅಲ್ಲಿನವರೆಲ್ಲರ ಜೀವನದ ಭಾಗವಾಗುವಂತಾಗಬೇಕು. ಇದು ಸಾಧ್ಯವಾಗುವುದು ಸ್ವಾಮಿಗಳು ಅಲ್ಲಿನವರೊಡನೆ ಚರ್ಚಿಸಿ, ತಮ್ಮ ಅಪೇಕ್ಷೆಯನ್ನು ಸೂಚಿಸುವುದರಿಂದ. ಹೀಗಾದರೆ, ಇದು ಒಂದು ಮಹತ್ವದ ಹೆಜ್ಜೆಯಾಗುತ್ತದೆ.

೫. ಒಳ ಪಂಗಡಗಳ ಐಕ್ಯತೆ

ಹನ್ನೆರಡನೆಯ ಶತಮಾನದಲ್ಲಿ ಆದ ಕ್ರಾಂತಿಯು ಹಳೆಯ ಜಾತಿ ಪದ್ಧತಿಗೆ ಕೊಡಲಿ ಪೆಟ್ಟನ್ನುಕೊಟ್ಟಿತು. ಹುಟ್ಟಿನಿಂದಲೇ ವೀರಶೈವರು ಆಗಿರಬೇಕೆಂದೇನೂ ಇಲ್ಲ. ವೀರಶೈವರು ಇಂಥದೇ ವೃತ್ತಿಯಲ್ಲಿ ನಿರತರಾಗಿರಬೇಕೆಂದೇನೂ ಇಲ್ಲ. ಆ ಕ್ರಾಂತಿಯ ಪರಿಣಾಮವಾಗಿ ವೃತ್ತಿ - ಕಸುಬುಗಳ ಆಧಾರದ ಮೇಲೆ ರೂಪುಗೊಂಡಿದ್ದ ಜಾತಿಗಳು ಪಣಿಶ್ರೇಣಿಗತವಾಗಿ ವ್ಯವಸ್ಥೆಗೊಂಡಿದ್ದು ಧಾರ್ಮಿಕವಾಗಿಯೂ ಅಸಮಾನತೆಯ ಕಹಿಯನ್ನು ಉಣ್ಣುತ್ತಿದ್ದವು. ಶರಣಕ್ರಾಂತಿಯು ಅವರನ್ನು ಧಾರ್ಮಿಕ ದಾಸ್ಯದಿಂದ ಅಸಮಾನತೆಯ ಸಂಕೋಲೆಯಿಂದ ಬಿಡುಗಡೆ ಮಾಡಿತು. ಜೊತೆಗೆ ಎಲ್ಲ ವೃತ್ತಿಗಳನ್ನೂ ವಿವಿಧ ತೆರನ ಗೌರವಾನ್ವಿತ ಕಾಯಕಗಳು ಎಂದು ಕರೆದು ಜಾತಿಗಳ ಗಡಿಗಳನ್ನು ಗೌಣವಾಗಿ ಕಂಡಿತು. ಇದರಿಂದ ವೀರಶೈವಕ್ಕೆ ಮತಾಂತರಗೊಂಡ ಎಲ್ಲ ಜಾತಿಯವರು ಏಕಾಭಿಪ್ರಾಯದವರಾಗಿ ಬಾಳತೊಡಗಿದರು. ಆದರೂ ವಿಕೇಂದ್ರೀಕರಣ ಪ್ರಕ್ರಿಯೆಯು ಚಾಲನೆಯಲ್ಲಿದ್ದುದರಿಂದ ಹಳೆಯ ಗುಂಪುಗಳು ತಮ್ಮ ತಮ್ಮ ಗಡಿಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕದೆ ಹಾಗೆಯೇ ಉಳಿದುಕೊಂಡು ಬಂದವು. ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಯ ಬೆಚ್ಚಗಿನ ಆಪ್ಯಾಯಮಾನವಾದ 'ಸ್ವತಂತ್ರ - ಸಮಾನ' ವಾತಾವರಣದಲ್ಲಿ ಜಾತಿಗಳ ಗಡಿರೇಖೆಗಳು ನುಸುಳಿ ಹೋದವು.

ಆದರೆ, ಶತಮಾನಗಳು ಉರುಳಿದಂತೆಲ್ಲಾ ಕ್ರಾಂತ ವೀರಶೈವವು ಅಂದಿನ ಚೈತನ್ಯದ ಬಿಸಿಯನ್ನು ಉಳಿಸಿಕೊಂಡು ಹೋಗದೆ ಇದ್ದುದರಿಂದ ಜಾತಿಯ ಗಡಿರೇಖೆಗಳು ಕ್ರಮೇಣ ಒಡೆದು ಕಾಣತೊಡಗಿದವು. ದೇಹದ ಮೇಲೆ ಇಷ್ಟಲಿಂಗವಿದ್ದುದರಿಂದ ಜಾತಿಗಳು ಒಳಪಂಗಡಗಳಾದುವಷ್ಟೇ ಹೊರತು ವೀರಶೈವರೆಲ್ಲಾ ಒಂದೇ ಎಂಬ ದೃಢ ನಂಬುಗೆಯು ಮನ-ಹೃದಯಗಳಲ್ಲಿ ಬೇರು ಬಿಡಲಿಲ್ಲ. ಏಕ ರೀತಿಯ ಆಚರಣೆಗಳು ಸಮಾನವಾಗಿ ಹಬ್ಬಿ ಹರಡಲಿಲ್ಲ. ಕ್ರಾಂತಿಯನ್ನು ಸೋಲಿಸಬೇಕೆಂಬುವ ವೈದಿಕ ಮತ್ತಿತರ ಧಾರ್ಮಿಕ ಶಕ್ತಿಗಳು ಬಲಿಷ್ಠಗೊಂಡುದರಿಂದ ವೀರಶೈವದ ಒಳಗಿದ್ದವರೂ ಹೊರಗಣ ನಂಬುಗೆಗಳಿಗೆ, ಕ್ರಿಯಾ ವಿಧಿಗಳ ಆಚರಣೆಗೆ ತಮ್ಮನ್ನು ತಾವು ತೆರೆದುಕೊಂಡರು. ಕಾಯಕಗಳ ಸುತ್ತಲೂ ಗೂಡುಕಟ್ಟಿಕೊಂಡಿದ್ದ ಗುಂಪುಗಳು ಅನ್ಯ ಕಾಯಕಗಳನ್ನು ಕೈಕೊಂಡಾಗಲೂ ತಮ್ಮ ತಮ್ಮ ಹಳೆಯ ಗೂಡುಗಳನ್ನು ಗುಡಿಸಲುಗಳಾಗಿ, ಗಾರೆ -ಇಟ್ಟಿಗೆಗಳ ಮನೆಗಳಾಗಿ, ಕೊನೆ ಕೊನೆಗೆ ಕಲ್ಲು - ಕಾಂಕ್ರೀಟುಗಳ ಬಂಗಲೆಗಳಾಗಿ ಅಭೇದ್ಯ ವಾಸಸ್ಥಾನಗಳನ್ನಾಗಿ ಮಾರ್ಪಡಿಸಿಕೊಂಡವು. ಆಧುನಿಕ ಕಾಲದ ರಾಜಕೀಯ, ಆರ್ಥಿಕ ಇತ್ಯಾದಿ ಆಮಿಷಗಳಿಗೆ ಬಲಿಯಾಗಿ ಒಡೆದು ಹೊರ ಹೋಗುವ ಆತುರವನ್ನು ತೋರತೊಡಗಿದವು. 'ಇವನಾರವ, ಇವನಾರವ' ಎನ್ನದೆ, 'ಇವ ನಮ್ಮವ ಇವ ನಮ್ಮವ' ಎಂಬ ಬಸವಣ್ಣನ ಮಾತು ವಿಕೃತವಾಗಿ 'ಇವ ನಮ್ಮವ, ಅಂದರೆ, ಜಂಗಮ' 'ಇವ ನಮ್ಮವ ಅಂದರೆ ಪಂಚಮಸಾಲಿ'; ''ಇವ ನಮ್ಮವ ಅಂದರೆ ಬಣಜಿಗ'; 'ಇವ ನಮ್ಮವ ಅಂದರೆ ಸಾದ'; 'ಇವ ನಮ್ಮವ ಅಂದರೆ ನೊಣಬ'; 'ಇವ ನಮ್ಮವ ಅಂದರೆ ಸಜ್ಜನ'; 'ಇವ ನಮ್ಮವ ಅಂದರೆ ಮಡಿವಾಳ'; 'ಇವ ನಮ್ಮವ ಅಂದರೆ ಕುಡು ಒಕ್ಕಲಿಗ'; 'ಇವ ನಮ್ಮವ ಅಂದರೆ ರೆಡ್ಡಿ'; 'ಇವ ನಮ್ಮವ ಅಂದರೆ...ಅಂದರೆ...ಅಂದರೆ..' ಹೀಗೆಯೇ ನೂರಾರು ಪಂಗಡಗಳು ಗಟ್ಟಿಗೊಳ್ಳುತ್ತಾ ಸಾಗಿವೆ. ಆಧುನಿಕ ಕಾಲಕ್ಕೆ ತಕ್ಕ ಹಾಗೆ ತಮ್ಮ ತಮ್ಮ ಒಳ ಪಂಗಡಗಳ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಬಲಿಷ್ಠಗೊಳ್ಳುತ್ತಿದ್ದಾರೆ. ''ತಮ್ಮವರಿಗಾಗಿಯೇ'' ವಿದ್ಯಾರ್ಥಿನಿಲಯಗಳನ್ನು ತೆರೆಯುತ್ತಿದ್ದಾರೆ. ವಿವಾಹ ಸಲಹಾ ಕೇಂದ್ರಗಳನ್ನು ಆರಂಭಿಸುತ್ತಿದ್ದಾರೆ. ಸ್ವ-ಸಹಾಯದ ಸೂತ್ರವನ್ನು ಹಿಡಿದು ಸೇವಾ ಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದಾರೆ. ಬೌದ್ಧ, ಜೈನ ಧರ್ಮದ ಹಾಗೆ ವೀರಶೈವವೂ ವೈದಿಕ ಧರ್ಮ ಪೀಠಗಳಂತೆ ಶತಮಾನಗಳ ಹಿಂದೆಯೇ ಪೀಠಗಳನ್ನೂ ಮಠಗಳನ್ನೂ ಸ್ಥಾಪಿಸಿತು. ಈ ಇಪ್ಪತ್ತನೆಯ ಶತಮಾನದಲ್ಲಿ, ಅದರಲ್ಲೂ ಇದರ ಉತ್ತರಾರ್ಧದಲ್ಲಿ ಹಿಂದೂ ಧರ್ಮದ ಭಾಗಗಳಾದ ವರ್ಣ, ಜಾತಿಗಳು, ಸ್ವತಂತ್ರ ಪೀಠ-ಮಠಗಳನ್ನು ಸ್ಥಾಪಿಸತೊಡಗಿವೆ. ಒಕ್ಕಲಿಗರ ಪೀಠವಾಯಿತು, ಕುರುಬರ ಪೀಠವಾಯಿತು, ವೈಶ್ಯರ ಪೀಠವಾಯಿತು, ವಾಲ್ಮೀಕಿಗಳ ಪೀಠವಾಯಿತು, ಮರಾಠಿಗರ ಪೀಠವಾಯಿತು, ನಾಪಿತರ ಪೀಠವಾಯಿತು....ಇನ್ನೂ ಸರಣಿ ಮುಗಿದಿಲ್ಲ. ಸಮಾಜ, ಶಾಸ್ತ್ರೀಯವಾಗಿ ಜಾತಿಯನ್ನು ಧರ್ಮದಿಂದ ಭಿನ್ನವಾಗಿ ಪರಿಗಣಿಸಲಾಗುತ್ತಿತ್ತು. ಈಗ ಜಾತಿಗಳು ಪೀಠ-ಮಠ ಸ್ಥಾಪನೆ ಮಾಡಿಕೊಂಡು ತಾವು ಪ್ರತ್ಯೇಕ ಪ್ರತ್ಯೇಕವಾದ ಧರ್ಮಗಳೆಂದು ಘೋಷಿಸಿಕೊಳ್ಳುವ ಸಾಧ್ಯತೆಯೂ ಇದೆ. ಹಿಂದೂ ಧರ್ಮವನ್ನು ಯಾವ ಪೀಠವು ಸಂರಕ್ಷಿಸಬೇಕು ? ವೈದಿಕ ಪರಂಪರೆಯ ''ಬ್ರಾಹ್ಮಣ'' ಪೀಠ-ಮಠಗಳೇ?.ವೀರಶೈವವು ಹಿಂದೂ ಧರ್ಮದಿಂದ ಭಿನ್ನವಾದುದು ಎಂಬ ವಾದ ಇರುವುದರಿಂದ ವೀರಶೈವ ಪೀಠ-ಮಠಗಳು ಹಿಂದೂ ಧರ್ಮವನ್ನು ರಕ್ಷಿಸುವ ಗೋಜಿಗೆ ಹೋಗುವುದಿಲ್ಲ. ಈಗ ವೀರಶೈವದ ಒಳ ಪಂಗಡಗಳು ಕ್ರಮೇಣ ಗಟ್ಟಿಗೊಳ್ಳುತ್ತಾ ಹಿಂದೂ ಜಾತಿಗಳ ಮಾರ್ಗವನ್ನು ಹಿಡಿದು ತಮತಮಗೇ ಪ್ರತ್ಯೇಕ ಪೀಠ-ಮಠಗಳನ್ನು ಸ್ಥಾಪಿಸತೊಡಗಿದರೆ ವೀರಶೈವದ ಗತಿ ಏನು ? ಪಂಚಾಚಾರ್ಯರು ವಿರಕ್ತರಿಂದ ಭಿನ್ನ ಎಂದು ತಿಳಿದುಕೊಂಡಿರುವಾಗ, ವೀರಶೈವ ಒಳ ಪಂಗಡಗಳೂ ತಾವೆಲ್ಲ ಭಿನ್ನ ಭಿನ್ನವೆಂದು ತಿಳಿದುಕೊಂಡು ಸಾಗುವ ಸಾಧ್ಯತೆ ಇದೆ. ಇದು ವಾಸ್ತವವಾದರೆ ವೀರಶೈವವು ಕೇವಲ ಕಲ್ಪನೆಯ ಧರ್ಮವಾಗಿ ಉಳಿಯಬಹುದು, ಅಂದರೆ, ಅಳಿದು ಹೋಗಬಹುದು. ಮಾನವನು ನಿಜವಾಗಿಯೂಮಾನವನಾಗಿ ಜೀವಿಸಲು ಬೇಕಾದ, ಇಹ-ಪರಗಳನ್ನು ಸಮತೂಕದಲ್ಲಿ ಕಂಡರಿಸಿಕೊಂಡ ಧರ್ಮವನ್ನು ನೀಡಿದ ವೀರಶೈವವು ಅಳಿದು ಹೋಗುವ ಸಾಧ್ಯತೆಯನ್ನು ಕಲ್ಪಿಸಿದರೆ ವ್ಯಥೆಯಾಗದಿದ್ದೀತೆ?

ಆದುದರಿಂದ ಮಠಗಳು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ, ಹೇಗೆ ಹೇಗೆ ಸಾಧ್ಯವೋ ಹಾಗೆ ಹಾಗೆ, ಯಾರು ಯಾರಿಂದ ಸಾಧ್ಯವೋ ಅಂಥಂಥವರಿಂದ ಒಳ ಪಂಗಡಗಳ ಗಡಿಗಳನ್ನು ಅಳಿಸಿ ಹಾಕುವಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರೋತ್ಸಾಹಿಸುವ ಕೆಲಸವನ್ನು ಮುತುವರ್ಜಿಯಿಂದ ತೊಡಗಬೇಕು. ಇದು ಅತ್ಯಂತ ಅವಸರದಿಂದ ಆಗಬೇಕಾದ ಕಾರ್ಯ. ಈ ಪರ್ವಕಾಲದಲ್ಲಿ ಒಳ ಪಂಗಡಗಳ ಪ್ರಾಬಲ್ಯಕ್ಕೆ ಅವಕಾಶವಾಗದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯದ, ತುರ್ತಿನ ಕಾರ್ಯವಾಗಿದೆ.

೬. ಜಾತಿ - ಜಾತಿಗಳೊಳಗಿನ ಸಹನೆ - ಸೌಹಾರ್ದ ಸಂಬಂಧ

ಸಮಾಜದಲ್ಲಿನ ದೋಷ ನಿವಾರಣೆಗೆ, ಸಮಾಜ ಸುಧಾರಣೆಗೆ ನಾನಾ ನಿಟ್ಟಿನಲ್ಲಿ, ನಾನಾ ರಂಗಗಳಲ್ಲಿ ಕ್ರಮಗಳನ್ನು ವಿವಿಧ ಸಂಘಟನೆಗಳು ಕೈಗೊಳ್ಳಬೇಕಾದದ್ದು ಅಗತ್ಯವೆಂಬುದು ವಿವಾದಾತೀತ. ಮಠಗಳೂ ಇದರಲ್ಲಿ ಮಹತ್ವದ ಕಾರ್ಯವನ್ನು ಮಾಡಬೇಕಾಗಿದೆ. ವೀರಶೈವ ಮಠಗಳು ತಮ್ಮ ತಮ್ಮೊಳಗಿರುವ ಭಿನ್ನಾಭಿಪ್ರಾಯವನ್ನು ಅಳಿಸಿಹಾಕುವುದು, ಒಳಪಂಗಡಗಳ ಐಕ್ಯತೆಯನ್ನು ಸಾಧಿಸುವುದು ಆದ್ಯತೆಯಲ್ಲಿ ಕೈಗೊಳ್ಳಬೇಕಾದದ್ದು ಈ ಮೇಲೆ ಎಷ್ಟು ಅಗತ್ಯವೆಂಬುದನ್ನು ವಿವರಿಸಲಾಗಿದೆ. ಇದೇ ರೀತಿಯಲ್ಲಿ ಭಾರತದಲ್ಲಿನ ವಿವಿಧ ಧರ್ಮಗಳನ್ನು ಮತ್ತು ವಿವಿಧ ಜಾತಿಗಳನ್ನು ಹತ್ತಿರ ಹತ್ತಿರ ತರುವ ಕಾರ್ಯವನ್ನೂ ಕೈಗೊಳ್ಳಬೇಕಾಗಿದೆ. ವೀರಶೈವರನ್ನು ಹಿಂದೊಮ್ಮೆ ಶೂದ್ರರೆಂದು ಬ್ರಾಹ್ಮಣ್ಯವು ಬಗೆಯುತ್ತಿತ್ತು. ವೀರಶೈವವು ಶಕ್ತಿವಿಶಿಷ್ಟಾದ್ವೈತ ಎಂಬ ಒಂದು ದರ್ಶನವೆಂದೂ, ವೀರಶೈವರು ಶೂದ್ರರಲ್ಲ ಎಂದು ನ್ಯಾಯಾಲಯದಲ್ಲೂ ಚರ್ಚಿತವಾಗಿತ್ತು. ವೀರಶೈವವು ಜಾತಿಯಲ್ಲ, ಧರ್ಮ; ಇದು ಹಿಂದೂ ಧರ್ಮವಲ್ಲ, ಪ್ರತ್ಯೇಕ ಧರ್ಮ; ವೀರಶೈವರು ಅತಿವರ್ಣಿಗಳು ಎಂದುಕೊಂಡರೂ ವೀರಶೈವರ ದಿನದಿನದ ನಂಬುಗೆಗಳೂ ಆಚರಣೆಗಳೂ ಹಿಂದೂಗಳಿಂದ ತೀರಾ ಭಿನ್ನವಾಗಿ ಕಾಣುತ್ತಲಿಲ್ಲ. ಸಿದ್ಧಾಂತವು ವಿಭಿನ್ನವಾಗಿರಬಹುದು. ಆದರೆ, ಅದರ ಅನುಷ್ಠಾನವು ವಿಫಲವಾದರೆ ಏನು ಪ್ರಯೋಜನ ?

ಭಾರತದಲ್ಲಿನ ಧರ್ಮಗಳು ಕೆಲವು ಸಾಮಾನ್ಯ ಚರ್ಯೆಗಳನ್ನೂ, ಅವುಗಳ ಅನುಯಾಯಿಗಳು ಜಾತಿ ಪದ್ಧತಿಯ ಚೌಕಟ್ಟಿನೊಳಗೇ ಅನೇಕ ಸಾಮಾನ್ಯ ಚರ್ಯೆಗಳನ್ನು ಹೊಂದಿ ಜೀವನವನ್ನು ನಡೆಸುತ್ತಿರುವುದನ್ನು ನಾವು ಗಮನಿಸಬಹುದು. ಈಗಾಗಲೇ ಸೂಚಿಸಿದಂತೆ ಆಧುನಿಕ ಒತ್ತಡಗಳಿಗೆ ಒಳಗಾಗಿರುವ ಭಾರತವು ಲೌಕಿಕ ಮತ್ತು ರಾಜಕೀಯ ಶಕ್ತಿಗಳ ಆಕರ್ಷಣೆಗಳಿಂದ ಜಾತೀಯ, ಇತ್ತೀಚೆಗೆ ಧಾರ್ಮಿಕ ವೇಷಗಳ ಪೋಷಾಕುಗಳನ್ನು ಹಾಕಿಕೊಂಡು ಶಕ್ತಿಯನ್ನು ಬೆಳೆಸಿಕೊಂಡು ಪ್ರಬಲವಾಗಿ ಗಟ್ಟಿಗೊಳ್ಳುತ್ತಿರುವ ಗುಂಪುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಈ ಗುಂಪುಗಳು ಪಾರಸ್ಪರಿಕವಾಗಿ ವೈಷಮ್ಯಗಳನ್ನು ಒಳಗಿಂದ ಒಳಗೇ ಬೆಳೆಸಿಕೊಳ್ಳುತ್ತಿವೆ. ಕಹಿಯು ದಟ್ಟೈಸಿ, ತುಡಿತಗಳಿಂದ ಕುದಿಯತೊಡಗಿ ಯಾವುದಾದರೂ ದುರ್ಬಲ ಪ್ರಸಂಗ ಬಂದೊಡನೆಯೇ ಸಮೂಹ ಸನ್ನಿಯಾಗಿ ಸ್ಫೋಟಗೊಳ್ಳುತ್ತದೆ. ಅಂದರೆ, ವೈಯಕ್ತಿಯ ಸ್ವಾರ್ಥಾಸೂಯೆಗಳು ಜಾತಿಗಳ ಪೋಷಾಕಿನಲ್ಲಿ ಸಂಘರ್ಷಗಳು ಉಂಟಾಗಿ ಅವು ಉಲ್ಬಣಗೊಳ್ಳುತ್ತಲಿವೆ. ಇಂಥ ಸ್ಥಿತಿಯಿಂದ ಯಾರಿಗೂ ಸಮಾಧಾನವಿಲ್ಲ, ಶಾಂತಿಯಿಲ್ಲ, ಲಾಭವಾಗುವುದಿಲ್ಲ. ಬದಲಿಗೆ ಜೀವನಷ್ಟ ಆತಂಕದ ದುರ್ಭರ ಪ್ರಸಂಗಗಳ ಆಗರವೇ ಆಗುತ್ತಲಿದೆ.

ವೀರಶೈವವು ಸಮನ್ವಯದ ಧರ್ಮ; ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಧರ್ಮ; ದಯವೇ ಧರ್ಮವೆಂದು ಸಾರಿದ, ಸಮ ವಿನಯವನ್ನೇ ಎತ್ತಿ ಹಿಡಿದಿರುವ ಧರ್ಮ; ಸಕಲರನ್ನೂ, ಸಕಲ ಗುಂಪುಗಳನ್ನೂ-ವಯಸ್ಸು, ಲಿಂಗ, ವೃತ್ತಿ, ಇವಾವನ್ನೂ ಲೆಕ್ಕಿಸದೆ-ಸಮಾನವಾಗಿ ಕಾಣುವ ಧರ್ಮ; ಭವಿಗಳನ್ನು (ನೂರಾರು ವರ್ಷಗಳ ಹಿಂದೆ) ದೂರವಿರಿಸಿದ್ದರೂ ಅವರು ಭಕ್ತರಾದ ಮೇಲೆ ಅವರೊಳಗೆ ಭೇದವೆಣಿಸದ ಧರ್ಮ. ಇಂಥ ಧರ್ಮವು, ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಬ್ರಾಹ್ಮಣ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲ ಜಾತಿಗಳನ್ನು ಅಪ್ಪಿಕೊಂಡ ಧರ್ಮವು ಆಧುನಿಕ ಜಗತ್ತಿನಲ್ಲಿ, ಅದರಲ್ಲೂ ಪರಂಪರೆಯ ಅನೇಕ ಅಮಾನವೀಯ ಗೋಡೆಗಳು ಕುಸಿದು ಹೋಗಿರುವ ಸಂದರ್ಭದಲ್ಲಿ, ಎಲ್ಲ ಗುಂಪುಗಳನ್ನೂ ಯಾಕೆ ಸಮಾನ ದೃಷ್ಟಿಯಿಂದ ಕಾಣಬಾರದು ? ಅಂದರೆ, ವೀರಶೈವ ಮಠಗಳು ಎಲ್ಲ ಜಾತಿ - ಪಂಗಡಗಳ ವಿಚಾರ ವಿನಿಮಯಕ್ಕೆ ಸಾಮಾನ್ಯ ವೇದಿಕೆಯಾಗಬೇಕು.; ಎಲ್ಲ ಜಾತಿಗಳನ್ನು ಒಂದೆಡೆಗೆ ತಂದು ಸ್ನೇಹ ತಂತುವಿನಿಂದ ಒಗ್ಗೂಡಿಸುವ ಕೇಂದ್ರಗಳಾಗಬೇಕು. ಇದು ಕಠಿಣವಾದರೂ ತೋರಿಕೆಯ ಕ್ರಮವಾಗಬಾರದು; ಪರಿಶುದ್ಧ, ಅಕೃತ್ರಿಮ ಕೃತಿಯಾಗಬೇಕು. ಹಾಗಾದರೆ ಜಾತೀಯತೆಯ ವಿಷಮ ಸ್ಥಿತಿಯು ಜಾತಿ - ಜಾತಿಗಳೊಳಗಣ ಮಧುರ ಬಾಂಧವ್ಯದ ನೆಲೆಯಾಗಿ ಪರಿವರ್ತನೆಗೊಳ್ಳುತ್ತದೆ.

೭. ಕಾಯಕದ ಬಗ್ಗೆ ಗೌರವ

ವೈದಿಕ ಸಂಪ್ರದಾಯದಲ್ಲಿ ವರ್ಣಶ್ರೇಣಿಗತ ವಿಭಾಗೀಕರಣವು ಸಾಮಾನ್ಯಾಂಶವಾಗಿತ್ತು: ವಯಸ್ಸು, ಲಿಂಗ, ವೃತ್ತಿ, ಆಹಾರ, ನೆಲ, ಜಲ, ಭಾಷೆ, ಗುಣ ಇತ್ಯಾದಿ ಎಲ್ಲವನ್ನೂ ವಿಂಗಡಿಸಿ, ಗುಂಪಾಗಿಸಿ, ಮೇಲು - ಕೀಳುಗಳ ಪಟ್ಟಿಗಟ್ಟಿ ಶೋಷಣೆಯನ್ನು ವ್ಯವಸ್ಥೆಯ ಭಾಗವಾಗಿಸಲಾಯಿತು. ಜೀವನೋಪಾಯಕ್ಕೆ ಅತ್ಯಂತ ಆವಶ್ಯಕವೂ ಅನಿವಾರ್ಯವೂ ಆದ ದುಡಿಮೆಯನ್ನೂ ಮೇಲು - ಕೀಳುಗಳ ಸ್ತರಗಳನ್ನಾಗಿ ವಿಂಗಡಿಸಿದ್ದುದು ಒಂದು ಖೇದದ ಸಂಗತಿ. ದುಡಿಮೆಯಲ್ಲಿ ನಿರತರಾಗಿರುವವರನ್ನೂ

ದುಡಿಮೆಯ ಸ್ತರಕ್ಕೆ ಅನುಗುಣವಾಗಿ ಸ್ತರಗತಗೊಳಿಸಿ ಅಸಮಾನತೆಯ ಗುಂಪುಗಳನ್ನು ಆ ಮೂಲಕ ಅಸಮಾನತೆಯ ಸಮಾಜವನ್ನು ಸೃಜಿಸಲಾಯಿತು. ಆದರೆ ಕೆಲಸವು ಕೆಲವು, ಮುಖ್ಯವಾಗಿ ಮೂರು, ಅಂಶಗಳಿಗೆ ನೇರವಾಗಿ ಸಂಬಂಧಿಸಿದೆ. ಅದು ಸಮಾಜವನ್ನು ವಿಕೃತವಾಗಿ ಒಡೆಯಲಿಕ್ಕಲ್ಲ ಎಂಬುದು ಯಾರೂ ಅರಿತುಕೊಳ್ಳಬಹುದಾದ ಸಂಗತಿ. ನೇರವಾಗಿ ಸಂಬಂಧಿಸಿದ ಮೂರು ಅಂಶಗಳೆಂದರೆ ದೈಹಿಕ ಸಾಮರ್ಥ್ಯ, ಮನಸ್ಸಿನ ಅಪೇಕ್ಷೆ ಮತ್ತು ಜೀವನಾವಶ್ಯಕತೆಗಳ ಪೂರೈಕೆ. ಸಾಮಾನ್ಯವಾಗಿ ಯಾವ ಕೆಲಸವೇ ಆಗಲಿ ವ್ಯಕ್ತಿಯ ಮನೋದೈಹಿಕ ಶಕ್ತಿ-ಸಾಮರ್ಥ್ಯಗಳಿಂದ ಸಾಧ್ಯವಾಗುತ್ತದೆ; ಆ ಕೆಲಸದ ಪೂರೈಕೆಯಿಂದ ಹೊಮ್ಮಿದ ಫಲವು ಕೆಲಸದಲ್ಲಿ ನಿರತನಾಗಿರುವವನ ಮತ್ತು / ಇಲ್ಲವೆ ಇತರರ ಜೀವನಾವಶ್ಯಕತೆಗಳನ್ನು ಪೂರೈಸುತ್ತದೆ. ಕೆಲಸವು ಕೇವಲ ಆರ್ಥಿಕ ಮಾನದಂಡದಿಂದಲೇ ಅಳೆಯಲ್ಪಡಬಾರದು ಎಂಬುದರಿಂದ ಶರಣರು ಅದನ್ನು ಕಾಯಕ ಎಂದು ಕರೆದರು. ಅದು ಕಾಯಕವಾದುದರಿಂದ, ಕಾಯಕವಾಗಿರಬೇಕಾದುದರಿಂದ ಅದು ಶುದ್ಧವಾಗಿರಬೇಕು ಮತ್ತು ಸತ್ಯವಾಗಿರಬೇಕು. ಅದರಿಂದ ಸಮಾಜಕ್ಕೆ ಹಾನಿಯುಂಟಾಗದೆ ಪ್ರಯೋಜನವಾಗುವಂತಿರಬೇಕು. ಸಮಾಜದ ಸುವ್ಯವಸ್ಥಿತ ಅಸ್ತಿತ್ವಕ್ಕೆ ಅಗತ್ಯವಾದ, ಅನಿವಾರ್ಯವಾದ ಕಾಯಕವನ್ನು ಶರಣರು ಗೌರವಿಸಿದರು. ಯಾವ ಕೆಲಸವು ಸಮಾಜದ ವಿಸಂಘಟನೆಗೆ, ಅಸ್ವಾಸ್ಥ್ಯಗೆ ಹಾದಿ ಮಾಡಿಕೊಡುತ್ತದೋ ಅದನ್ನು ಕೈಗೊಳ್ಳಬಾರದು ಎಂಬುದು ಶರಣರ ನಿಲುವು. ಜೊತೆಗೆ, ಸತ್ಯ-ಶುದ್ಧವಾದ ಕಾಯಕವು ಮಾಡುವವನ ತಾದಾತ್ಮ್ಯವನ್ನು ನಿರೀಕ್ಷಿಸುತ್ತದೆ; ಕಾಯಕದಿಂದ ಎಷ್ಟು ಸಂಭಾವನೆಯು ದೊರಕಬೇಕೊ ಅಷ್ಟು ಮಾತ್ರವೇ ಕೆಲಸಗಾರನು ನಿರೀಕ್ಷಿಸಿ ಸ್ವೀಕರಿಸಬೇಕು; ದುರಾಸೆಯಿಂದ ಹೆಚ್ಚು ಸಂಭಾವನೆಯನ್ನು ಪಡೆಯುವುದು ಪಾಪವೆಂದೇ ಪರಿಗಣಿಸಲ್ಪಡುತ್ತದೆ.; ಅನ್ಯರ ಬೆವರಿನಿಂದ ಹೊಮ್ಮಿದ ಫಲವನ್ನು ಉಣ್ಣುವುದೂ ಪಾಪವೆನ್ನಿಸುತ್ತದೆ; ಕಾಯಕದಿಂದ ಗಳಿಸಿದ ಫಲವನ್ನು ಅನ್ಯರೊಡನೆ - ಅದರಲ್ಲೂ ಪಾತ್ರರಾದವರೊಡನೆ-ಹಂಚಿಕೊಂಡು ಅನುಭೋಗಿಸಬೇಕು. ಮಾಡುವುದು ಕಾಯಕ, ನೀಡುವುದು ದಾಸೋಹ, ದುಡಿಮೆಯಿಂದ ಉಂಟಾದ ಸ್ವತ್ತು ಯಾರ ಸ್ವತ್ತೂ ಅಲ್ಲ, ಅದು ಇಡೀ ಸಮಾಜದ ಸ್ವತ್ತು. ಅದನ್ನು ಸಮಾಜದ ಎಲ್ಲರೂ ಅನುಭವಿಸಲು ಹಕ್ಕುಳ್ಳವರು.

ಇಂತಹ ಉದಾತ್ತ ಸೂತ್ರಗಳಿಂದ ಕಾಯಕ - ದಾಸೋಹ ಜೋಡಿ ಪರಿಕಲ್ಪನೆಯನ್ನು ಶರಣರು ಬಹು ಹಿಂದೆಯೇ ನೀಡಿದ್ದರು. ಅದು ಇಂದಿಗೂ ಪ್ರಸ್ತುತವಾಗಿದೆ. ಈ ಆಧುನಿಕ ಜಗತ್ತಿನಲ್ಲಿ ಅಪರಿಮಿತ ಸಂಖ್ಯೆಯ ಕಸುಬುಗಳು ಮೈದೋರಿವೆ. ನಮ್ಮ ಕಲ್ಪನೆಗೂ ಮೀರಿದ ಕೆಲವು ಕೆಲಸಗಳು ಅಸ್ತಿತ್ವಕ್ಕೆ ಬಂದಿವೆ. ವಿಜ್ಞಾನದ ಅದ್ಭುತ ಬೆಳವಣಿಗೆಯಿಂದ ಕೆಲಸಗಳು ಸಂಕೀರ್ಣಗೊಂಡಿವೆ. ಕೈ-ಕಸುಬುಗಳು ಯಂತ್ರ ಕಸುಬುಗಳಾಗುತ್ತಿವೆ. ಏಕ ವ್ಯಕ್ತಿ ಅಥವಾ ಕಿರುಗುಂಪು ಕೇಂದ್ರಿತವಾದ ಕೆಲಸಗಳು ಅನೇಕ ವ್ಯಕ್ತಿಗಳ ಅಥವಾ ಬೃಹತ್ ಗುಂಪಿನ ಆಧಾರ ಹೊಂದಿದ ಕಸುಬುಗಳಿಗೆ ಎಡೆ ಮಾಡಿಕೊಟ್ಟಿವೆ; ಮುಖಾಮುಖಿ ಸಂಬಂಧ ಹೊಂದಿದವರಿಂದ ಉತ್ಪತ್ತಿಯಾಗುತ್ತಿದ್ದುದು ಈಗ ತೀರಾ ಅಪರಿಚಿತರ, ಎಂದೂ ಕಾಣದೇ ಇದ್ದವರ, ಕಾಣದೇ ಹೋಗುವವರ ನಿರ್ಮಾಣವೆಂದು ಹೊರ ಹೊಮ್ಮುತ್ತಿದೆ; ಸ್ಥಳೀಯ ಭೋಗಕ್ಕೆ ಉತ್ಪತ್ತಿಯಾಗುತ್ತಿದ್ದುದು ಈಗ ದೂರದೂರದ ಮಾರುಕಟ್ಟೆಗಳಿಗೆಂದು ಉತ್ಪನ್ನಗೊಳ್ಳುತ್ತಿದೆ; ಎಣಿಸಬಹುದಾದ ಸಂಖ್ಯೆಯ ಉತ್ಪನ್ನಗಳ ಸ್ಥಳದಲ್ಲಿ ಇಂದು ರಾಶ್ಯುತ್ಪನ್ನವು ಮೈದೋರಿದೆ. ವಸ್ತು - ವಸ್ತುಗಳ, ವಸ್ತು - ಸೇವೆಗಳ, ಸೇವೆ - ಸೇವೆಗಳ ನೇರ ವಿನಿಮಯದ ಬದಲು ಹಣದ ವ್ಯವಹಾರದ ಮಧ್ಯಸ್ಥಿಕೆಯ ವಿನಿಮಯವು ವಿರಾಜಿಸುತ್ತಿದೆ. ದುಡಿಯುವವರೂ, ದುಡಿಸಿಕೊಳ್ಳುವವರೂ, ಬಳಕೆದಾರರೂ ಎಲ್ಲರೂ ಪಾರಸ್ಪರಿಕವಾಗಿ ಬಲ್ಲವರಾಗಿದ್ದರು ಹಿಂದೆ. ಆದರೆ ಈಗ ಯಾರಿಗೆ ಯಾರೂ ಪರಿಚಯವಿಲ್ಲದವರಾಗಿದ್ದಾರೆ. ಇಂತಹ ತೀವ್ರತರ ಬದಲಾವಣೆಯ ವಾತಾವರಣದಲ್ಲಿ, ಸ್ವಾರ್ಥ - ಮೋಸ - ವಂಚನೆ - ಭ್ರಷ್ಟಾಚಾರಗಳ ಅಂಕೆ ಮೀರಿದ ಹಾವಳಿಯಲ್ಲಿ ಕಸುಬು ಕೇವಲ ವ್ಯಾವಹಾರಿಕ; ಐಹಿಕ ಭೋಗ್ಯಕ್ಕೆಂದು ಕೈಗೊಂಡ, ನೀತಿ ನಿಯಮಗಳಿಗೆ, ಸತ್ಯನಿಷ್ಠೆಗೆ ಬದ್ಧವಾಗದ ಮೌಲ್ಯವಿದೂರ ಕೆಲಸವೇ ಇಂದಿನ ಆದರ್ಶವಾಗಿದೆ.

ಇಂಥ ಪ್ರಸಂಗದಲ್ಲಿ ಮಠಗಳು ಮಾರ್ಗದರ್ಶನ ಮಾಡಬೇಕಾಗಿದೆ. ಕೊನೆಗೆ ತಮ್ಮ ಭಕ್ತರು, ಅನುಯಾಯಿಗಳು ಅವರವರ ದುಡಿಮೆಯನ್ನು ಸತ್ಯ - ಶುದ್ಧ ಕಾಯಕವೆಂದು ಬಗೆಯುವಂತೆ, ಎಲ್ಲ ಕಾಯಕವೂ ಒಂದೆ ಕಾಯಕವಾಗಿರುವುದರಿಂದ ಯಾವ ಕಾಯಕವೂ ಮೇಲಲ್ಲ ಅಥವಾ ಕೀಳಲ್ಲ ಎಂದು ಭಾವಿಸುವಂತೆ ಅವರನ್ನು ಪ್ರೇರೇಪಿಸುವುದು ಮಠಗಳ ಕರ್ತವ್ಯ. ಕಾಯಕದಿಂದ ಎಷ್ಟು ಆದಾಯ ಬರಬೇಕೋ ಅಷ್ಟನ್ನು ಮಾತ್ರವೇ ನಿರೀಕ್ಷಿಸಿ ಸ್ವೀಕರಿಸಬೇಕೆಂದೂ ಆ ಕಾಯಕದ ಮೂಲಕ ದೊರೆಯುವ

ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಕೂಡದೆಂದೂ ಅವರ ಮನವೊಲಿಸುವ ಪ್ರಯತ್ನ ಮಾಡಬೇಕು. ಇದರಿಂದ ಅಲ್ಪ ಸ್ವಲ್ಪವಾದರೂ ಸತ್ಪರಿಣಾಮವು ಉಂಟಾದೀತು.

೮. ಸಮುದಾಯಾಭಿವೃದ್ಧಿ

ವೀರಶೈವ ಮಠಗಳು ಹಳ್ಳಿಗಳಲ್ಲಿರಬಹುದು, ಪಟ್ಟಣ ನಗರಗಳಲ್ಲಿರಬಹುದು. ಅವುಗಳ ಪ್ರಭಾವ ವಲಯವು ವಿಶಾಲವಾಗಿದ್ದರೂ ಅವು ಇರುವ ಭೌಗೋಲಿಕ ಪರಿಸರವು ಕಿರಿದಾಗಿರುತ್ತದೆ. ಭೌಗೋಲಿಕ ಹಿನ್ನೆಲೆಯ ಸಮುದಾಯವು ಮಠದ ಜನನಕ್ಕೆ ಕಾರಣವಾಗಿರಬಹುದು ಅಥವಾ ಮಠದ ಸ್ಥಾಪನೆಯೇ ಆ ಸಮುದಾಯದ ರೂಪುರೇಷೆಗಳ ನಿರ್ಧಾರಕ್ಕೆ ಕಾರಣವಾಗಬಹುದು. ಮಠದ ಉಳಿವು - ಉನ್ನತಿಗೆ ಆ ಸಮುದಾಯವು ಹಿನ್ನೆಲೆಯನ್ನು ಒದಗಿಸುತ್ತದೆ. ಮಠದ ಮತ್ತು ಸಮುದಾಯದ ಇತಿಹಾಸಗಳು ಕ್ರಿಯಾತ್ಮಕವಾಗಿ ಹೆಣೆದುಕೊಂಡಿರುತ್ತವೆ. ಮಠದ ಚಟುವಟಿಕೆಗಳು, ಒಟ್ಟಿನಲ್ಲಿ, ಸಮುದಾಯದ ಆಗು ಹೋಗುಗಳನ್ನು ಬಿಂಬಿಸುವಂತಿರಬೇಕು. ಮಠಗಳು ಸಮಾಜ ಸುಧಾರಣೆಯ ಕಾರ್ಯಗಳನ್ನು ಪರಿಣಾಮಕರವಾಗಿ ಮಾಡಲು ಸಮರ್ಥವಾಗಬೇಕಾದರೆ ತಾವು ನೆಲೆಸಿರುವ ಸಮುದಾಯದ ಸುಧಾರಣಾಭಿವೃದ್ಧಿಗೆ ಮೊದಲ ಗಮನ ಕೊಡಬೇಕಾಗುತ್ತದೆ. ದೀಪದ ಕೆಳಗೆ ಕತ್ತಲು, ಹಿತ್ತಲಗಿಡ ಮದ್ದಲ್ಲ, ದೂರದ ಗುಡ್ಡ ನುಣ್ಣಗೆ, ಇತ್ಯಾದಿ ನಾಣ್ನುಡಿಗಳು ತಾವಿರುವ ಸಮುದಾಯದ ಬಗೆಗೆ ಇರಬೇಕಾದ ಅಭಿಮಾನವು ಇಲ್ಲದಿರುವುದನ್ನು, ತಾವು ಕೈಗೊಳ್ಳಬೇಕಾದ ಕಲ್ಯಾಣಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ ಇರುವುದು, ತಮ್ಮ ಸಮುದಾಯವನ್ನು ಗೌಣವಾಗಿ ಕಾಣುತ್ತಿರುವುದು, ಇತ್ಯಾದಿಗಳನ್ನು ಪ್ರತಿಬಿಂಬಿಸುತ್ತವೆ. ಸೋಜಿಗವೆಂದರೆ, ಹತ್ತಿರದ ಸಮಾಜ / ಸಮುದಾಯವೇ ತಮ್ಮ ಕಾರ್ಯ ಚಟುವಟಿಕೆಗಳನ್ನು ಸಂಶಯದಿಂದ ನೋಡುತ್ತಿರುವುದು, ತಾವು ನಡೆಸುತ್ತಿರುವ ಒಳ್ಳೆಯ ಕೆಲಸವನ್ನು ಮೆಚ್ಚದೇ ಇರುವುದು ಮಠಗಳೂ ಅನುಭವಿಸುವುದುಂಟು. ಮನೆಯನ್ನು ಗೆದ್ದು ಮಾರು ಗೆಲ್ಲಬೇಕು ಎಂಬ ಮಾರ್ಗದರ್ಶಕ ನುಡಿಯಲ್ಲಿ ತುಂಬಾ ಅರ್ಥವಿದೆ. ತಮ್ಮ ಸಮುದಾಯವೇ ಪ್ರಯೋಗಾಲಯವಾಗಬೇಕು, ಕಮ್ಮಟವಾಗಬೇಕು. ಅಲ್ಲಿ ತಾವು ಸಲ್ಲಬೇಕು. ಅಂತಾದರೇ ಬೇರೆ ಕಡೆ ಯಶಸ್ವಿಯಾಗಲು ಸಾಧ್ಯ ಮತ್ತು ಯಶಸ್ವೀ ಕೆಲಸ ಮಾಡಲು ನೈತಿಕ ಧೈರ್ಯ ಬರುತ್ತದೆ.

ಮಠಗಳಿಗೆ ಆಗಮಿಸುವ ಭಕ್ತ ವೃಂದವು ಕೇವಲ ಮಠದ ಸುಂದರ ಮತ್ತು ನಿರ್ಮಲ ಆವರಣವನ್ನು ಮಾತ್ರವೇ ಕಂಡು ಮೆಚ್ಚಿ, ಸಂತೋಷಪಟ್ಟು ಹಿಂದಿರುಗುವುದಿಲ್ಲ. ಆ ಮಠಗಳ ಸುತ್ತಣ ಸಮುದಾಯಗಳು ಎಷ್ಟರಮಟ್ಟಿಗೆ ನಿರ್ಮಲವಾಗಿವೆ, ಸುಂದರವಾಗಿವೆ, ಸೌಕರ್ಯಗಳನ್ನು ಹೊಂದಿವೆ ಎಂಬುದನ್ನೂ ಅವರು ಗಮನಿಸುತ್ತಾರೆ. ಅವರು ಅನುಭವಿಸುತ್ತಿರುವ ತೊಂದರೆಗಳೂ, ಪಡೆಯುತ್ತಿರುವ ಅನುಕೂಲಗಳೂ ಅವರ ಅಭಿಪ್ರಾಯಗಳನ್ನು ರೂಪಿಸುತ್ತವೆ. ಸದಭಿಪ್ರಾಯಗಳು ಮಠಗಳ ಶ್ರೇಯೋಭಿವೃದ್ಧಿಗೆ ನೆರವಾಗುತ್ತವೆ. ದುರಭಿಪ್ರಾಯಗಳು ಮಠಗಳ ಅವನತಿಗೆ ಚಾಲನೆ ಕೊಡುತ್ತವೆ.

ಮಠಗಳು ಇರುವ ಸಮುದಾಯಗಳು ಪುಣ್ಯಕ್ಷೇತ್ರಗಳು ಎಂಬುದು ಸಾರ್ಥಕವಾಗಬೇಕಾದರೆ ಅವು ಮನಸ್ಸಿಗೆ ಸಮಾಧಾನವನ್ನೂ, ಆಹ್ಲಾದವನ್ನೂ ಭಕ್ತರಿಗೆ, ಯಾತ್ರಿಕರುಗಳಿಗೆ ತರುವಂತಿರಬೇಕು. ಅದಕ್ಕಾಗಿಯೇ ರಸ್ತೆ - ಬೀದಿಗಳು ಸರ್ವ ಋತು ಗುಣಮಟ್ಟವನ್ನು ಕಾಪಾಡಿಕೊಂಡಿರಬೇಕು; ಕೊಳೆ ನಿಂತಿರದ ಚರಂಡಿಗಳು, ಬೀದಿ - ರಸ್ತೆಗಳ ಬದಿಗಳಲ್ಲಿ ಹೂ ಗಿಡ ಮರ ಬಳ್ಳಿಗಳು, "ಹುಲ್ಲು ಹುಟ್ಟಿರದ" ಮನೆಯ ಹೊಸತಿಲುಗಳು, ಕಸ ತುಂಬಲು ಇರಿಸಿದ ತೊಟ್ಟಿಗಳು, ತೊಟ್ಟಿಗಳನ್ನು ಸ್ವಚ್ಛವಾಗಿರಿಸುವ ವ್ಯವಸ್ಥೆ, ಮಲಿನಗೊಳ್ಳದ ಸಾಕಷ್ಟು ಪ್ರಮಾಣದ ನೀರಿನ ಸರಬರಾಜು, ಮಲಿನವಲ್ಲದ ಗಾಳಿ, ಆಟದ ಮೈದಾನಗಳು, ಉದ್ಯಾನಗಳು, ಸಮುದಾಯ ಭವನಗಳು, ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡ ಶಾಲೆ-ಕಾಲೇಜುಗಳು, ಶುಚಿಯಾದ ಆಹಾರ - ಪಾನೀಯ ಗೃಹಗಳು, ರೋಗಿಗಳಿಗೆ ಸದಾ ಬಾಗಿಲು ತೆರೆದಿರುವ ಆಸ್ಪತ್ರೆಗಳು, ಸೂಕ್ತ ಸ್ಥಳಗಳಲ್ಲಿ ಶೌಚಾಲಯಗಳು ಇತ್ಯಾದಿ ಸವಲತ್ತುಗಳು ಇರಬೇಕು. ಈ ವರ್ಣನೆಯು ಬರಿಯ ಕನಸಿನ ಲೋಕದ ಸಮುದಾಯದ ಚಿತ್ರಣವೆಂದೆನ್ನಿಸಬಹುದಾದರೂ ಪಶ್ಚಿಮ ರಾಷ್ಟ್ರಗಳಲ್ಲಿನ ಸಮುದಾಯಗಳನ್ನು ನೋಡಿದರೆ ಇದು ನನಸಾಗದ ಕನಸೇನೂ ಅಲ್ಲವೆನ್ನಿಸುತ್ತದೆ.

ಇಂಥ ಸುಂದರ - ನಿರ್ಮಲ - ಸಕಲ ಸವಲತ್ತುಗಳ ಸಮುದಾಯವನ್ನು ರೂಪಿಸುವ, ಪೋಷಿಸಿಕೊಂಡು ಹೋಗುವ ಕೆಲಸವು ಮಠಗಳ ನೇರ ಹೊಣೆಯಲ್ಲವಾದರೂ ಇದರ ಬಗ್ಗೆ ಆಸಕ್ತಿ ವಹಿಸುವುದು ಅಗತ್ಯ. ಸ್ವಾಮಿಗಳು ಪಾದಯಾತ್ರೆಯಿಂದ ಇಡೀ

ಸಮುದಾಯವನ್ನು ಆಗಾಗ ಸುತ್ತಿ ಬರುವುದರಿಂದ, ಸಮುದಾಯದ ಹಿರಿಯರನ್ನೂ, ಮಹಿಳೆಯರನ್ನೂ, ಯುವಕರನ್ನೂ, ಶಾಲಾ ಶಿಕ್ಷಕ - ಶಿಕ್ಷಕಿಯರನ್ನೂ, ಸ್ಥಳೀಯ ಸರಕಾರಿ ನೌಕರರನ್ನೂ, ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರನ್ನೂ ಕರೆಸಿ, ಸಮುದಾಯದ ಬಗ್ಗೆ ಚರ್ಚಿಸಿ ತಮ್ಮ ಅಪೇಕ್ಷೆಯನ್ನು ಮಂಡಿಸಿದರೆ ಅವರೆಲ್ಲರಲ್ಲಿ ವಿದ್ಯುತ್ ಸಂಚಾರವಾಗಿ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಮುಂದಾಗುವುದರಲ್ಲಿ ಸಂಶಯವಿಲ್ಲ.

"ತಿಳಿದು ಬಾಳುವ, ದುಡಿದು ಬದುಕುವ,
ರೋಗವಿಲ್ಲದ ಮನ - ಮನ,
ಸ್ನೇಹ ತಂತುವ ನೇಯುತಿರುವ
ಸ್ವಸ್ತಿ ನಾಡಿನ ಚೇತನ !"

ಈ ಸಾಲುಗಳಲ್ಲಿ ಅಡಗಿರುವ ಆಶಯವನ್ನು ಮಠಗಳು ಅರ್ಥಮಾಡಿಕೊಂಡರೆ, ಮಠಗಳ ಸುತ್ತಣ ಸಮುದಾಯಗಳಲ್ಲಿರುವ ಜನರು ತಿಳಿದು ಬಾಳುವಂತೆ (ಅದುದರಿಂದಲೇ ಅವರೆಲ್ಲರೂ ಅಕ್ಷರಸ್ಥರೂ, ಸುಶಿಕ್ಷಿತರೂ ಆಗುವಂತೆ), ದುಡಿದು ಬದುಕುವ (ಅಂದರೆ, ಅನ್ಯರ ಬೆವರ ಮೇಲೆ ಬದುಕದೆ ತಾವೇ ಸ್ವತಃ ದುಡಿದು ಬದುಕುವ), ಅವರೆಲ್ಲರ ಮನಸ್ಸುಗಳೂ, ದೇಹಗಳೂ, ಕುಟುಂಬಗಳೂ ನಿರೋಗಿಯಾಗಿರುವ, ಇಡೀ ಸಮುದಾಯದ ಎಲ್ಲರನ್ನೂ ಸ್ನೇಹದ ನೂಲಿನಲ್ಲಿ ಬಂಧಿಸಿ ಸದಾ ಉತ್ಥಾನಮುಖಿಯಾದ ಸಮುದಾಯವು ಸ್ವಸ್ಥವಾಗಿರುವಂತೆ ನೋಡಿಕೊಂಡರೆ ಅಲ್ಲಿನ ಮಠವು ಆ ಸಮುದಾಯಕ್ಕೆ ಮತ್ತು ಆ ಸಮುದಾಯವು ಆ ನಾಡಿಗೆ ಚೇತನ ಕೇಂದ್ರವಾಗುತ್ತದೆ.

ಮಂಗಳ

ಇದುವರೆಗೆ ವಿವರಿಸಿದ ಕಾರ್ಯೋದ್ದೇಶಗಳು ಇಷ್ಟೇ ಎಂದು ಹೇಳುವುದು ಸರಿಯಲ್ಲ. ಮನುಷ್ಯನ ಸಾರ್ಥಕ ಜೀವನಕ್ಕೆ ಇನ್ನೂ ಅನೇಕ ಅಂಶಗಳನ್ನು ಪ್ರಸ್ತಾಪಿಸಬಹುದು. ಇಲ್ಲಿನ ಎಂಟು ಕಾರ್ಯೋದ್ದೇಶಗಳು ಸರ್ವತಂತ್ರ ಸ್ವತಂತ್ರವಾದವುಗಳಲ್ಲ. ಇವೆಲ್ಲವೂ ಒಂದಕ್ಕೊಂದು ಕ್ರಿಯಾತ್ಮಕವಾಗಿ ಹೊಂದಿಕೊಂಡಿವೆ. ಈ ಎಲ್ಲಾ ಉದ್ದೇಶಗಳೂ ಮಠಗಳ ಹೊಣೆಯ ವ್ಯಾಪ್ತಿಗೆ ಬರಲಾರವು ಎಂದು ಕೆಲವರಿಗೆ ಅನ್ನಿಸಲೂಬಹುದು. ಆದರೆ, ವೀರಶೈವ ಮಠಗಳನ್ನು ಅವುಗಳ ಇತಿಹಾಸ, ಹಕ್ಕು - ಹೊಣೆಗಾರಿಕೆ ಮತ್ತು ಅಧಿಕಾರ - ಪ್ರಭಾವ ವಲಯ - ಇವುಗಳನ್ನು ಸಮಾಜಶಾಸ್ತ್ರೀಯ ಮತ್ತು ಸಮಾಜಕಾರ್ಯ ಶಾಸ್ತ್ರೀಯವಾಗಿ ಪರಿಶೀಲಿಸಿದರೆ, ಕನಿಷ್ಠ ನನ್ನ ದೃಷ್ಟಿಯಲ್ಲಾದರೂ, ಇವು ವೀರಶೈವ ಮಠಗಳ ಕರ್ತವ್ಯಗಳೆಂದು ಕಾಣಿಸುತ್ತವೆ. ಇವು ಮತ್ತು ಇವುಗಳಂಥ ಇತರ ಕಾರ್ಯಗಳನ್ನು ವೀರಶೈವ ಮಠಗಳು ಹಮ್ಮಿಕೊಂಡರೆ ಅವು ಸ್ಥಾಪಿತವಾದುದಕ್ಕೆ ಸಾರ್ಥಕವಾಗುತ್ತದೆ; ಅವುಗಳ ಧಾರ್ಮಿಕ ಹೊಣೆಗಾರಿಕೆಯ ಅನುಷ್ಠಾನಕ್ಕೆ ಪರಿಣಾಮಕರವಾದ ವಾತಾವರಣವು ಸೃಷ್ಟಿಯಾಗುತ್ತದೆ.

ಎಚ್ಚತ್ತ ವೀರಶೈವ ಎತ್ತಸಾಗಿದೆ ?

ಡಾ. ಎ.ಎಲ್. ಶಿವರುದ್ರಪ್ಪ

ಪ್ರಸ್ತಾವನೆ

ಎಚ್ಚರ ಎಂಬುದು ಜಾಗೃತಿಯ ಸಂಕೇತವಾದರೆ ನಿದ್ದೆಯು ಜಡತೆಯ ಸಂಕೇತ. ನಿದ್ದೆ ಮತ್ತು ಎಚ್ಚರ ಇವು ಜೀವಿಯ ಎರಡು ಪರ್ಯಾಯ ಸ್ಥಿತಿಗಳು. ಇವು ಒಂದನ್ನೊಂದು ಅನುಸರಿಸಿ ಬರುವಂಥವು. ಪ್ರಗತಿ ಮತ್ತು ಮಂದಗತಿ, ಮುನ್ನಡೆ ಹಾಗೂ ಹಿನ್ನಡೆ ಇವು ವ್ಯಕ್ತಿಯ ಬದುಕಿನಂತೆ ಒಂದು ಸಮಾಜದ ಬದುಕಿನಲ್ಲಿಯೂ ಬಂದು ಹೋಗುತ್ತವೆ.

ವೀರಶೈವ ಸಮಾಜವೂ ಸಹ ತನ್ನ ದೀರ್ಘ ಇತಿಹಾಸದಲ್ಲಿ ಜಡತೆ ಮತ್ತು ಜಾಗೃತಿ, ಮಂದಗತಿ ಮತ್ತು ಪ್ರಗತಿ ಈ ಪರ್ಯಾಯ ಸ್ಥಿತಿಗಳಿಗೆ ಮೈಗೊಟ್ಟು ಬೆಳೆದಿರುವುದನ್ನು ನಾವು ಕಾಣುತ್ತೇವೆ. ವೀರಶೈವ ಧರ್ಮವು ತುಂಬಾ ಪ್ರಗತಿಶೀಲ ಧರ್ಮ ಎಂಬ ಮಾತು ನಿಜವೇ ಆದರೂ ಈ ಸಮಾಜವು ಎಲ್ಲ ಕಾಲದಲ್ಲಿಯೂ ಪ್ರಗತಿ ಪಥದಲ್ಲಿಯೇ ಸಾಗಿ ಬಂದಿದೆ ಎಂಬ ಮಾತು ಸತ್ಯಕ್ಕೆ ದೂರವಾದದ್ದು. ಇದರ ಇತಿಹಾಸವನ್ನು ಸ್ವಲ್ಪ ಹತ್ತಿರದಿಂದ ಅವಲೋಕಿಸಿ ನೋಡಿದಾಗ ಇದು ಪ್ರಗತಿ ಪಥದಲ್ಲಿ ಸಾಗಿ ಬಂದದ್ದು ಯಾವಾಗ ಮತ್ತು ಮಂದಗಾಮಿಯಾಗಿ ಸಾಗಿಬಂದಿರುವುದು ಯಾವಾಗ ಎಂಬ ಅರಿವು ನಮಗಾಗುತ್ತದೆ.

ಒಂದು ಧರ್ಮದ ಇತಿಹಾಸದಲ್ಲಿ ಪ್ರಗತಿ ಮತ್ತು ಮಂದಗತಿ, ಜಾಗೃತಿ ಮತ್ತು ಜಡತೆ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದಾದರೂ ಹೇಗೆ ? ಒಂದು ಧರ್ಮವು ಜಾಗೃತಗೊಂಡಾಗ ಅದರಲ್ಲಿ ವೈಚಾರಿಕತೆ, ನೈತಿಕತೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ದೊರೆಯುತ್ತದೆ. ಅದಿಲ್ಲದೆ, ಒಂದು ಧರ್ಮದಲ್ಲಿ ಅಂಧಶ್ರದ್ಧೆ (Blind Faith) ಮತ್ತು ಕಂದಾಚಾರಗಳು ದಟ್ಟೈಸಿ ನಿಂತು ಸಾಂಪ್ರದಾಯಿಕ ಆಚರಣೆಗಳ ಮಹತ್ವ ಹೆಚ್ಚಿದರೆ ಆಗ ಆ ಧರ್ಮವು ಮಂದಗತಿಯಲ್ಲಿ ಕ್ರಮಿಸುತ್ತದೆ. ಆ ರೀತಿಯ ಜಡತೆಗೆ ಮೈಗೊಟ್ಟ ಸಮಾಜದಲ್ಲಿ ಧಾರ್ಮಿಕ ಗ್ರಂಥಗಳಿಗೆ ಅಕ್ಷರಕ್ಕಂಟಿದಂತೆ ಭಾಷ್ಯಗಳು ಹುಟ್ಟಿಕೊಳ್ಳುತ್ತವೆ. ಪುರೋಹಿತ ವರ್ಗದ ಬಿಗಿ ಮುಷ್ಟಿಗೆ ಸಿಕ್ಕಿ ಧಾರ್ಮಿಕ ಆಚಾರ ವಿಚಾರಗಳು ವಿಧಿ ನಿಷೇಧಗಳ ರೂಪದಲ್ಲಿ ಅಭೇದ್ಯವೆನಿಸುತ್ತವೆ. ಸಂಪ್ರದಾಯದ ಬಿಗಿಕಟ್ಟು ಹೆಚ್ಚಿದಂತೆಲ್ಲಾ ವೈಚಾರಿಕತೆ ಮತ್ತು ವೈಜ್ಞಾನಿಕತೆ ನಶಿಸುತ್ತದೆ; ವಿಚಾರಶೀಲತೆ ಕುಂದುತ್ತದೆ. ಇಂತಹ ಪ್ರತಿಗಾಮಿ ಧೋರಣೆಯನ್ನು ಮೀರಿ ನಿಂತಾಗ ಮಾತ್ರ ಧರ್ಮವು ಪ್ರಗತಿಗಾಮಿ ಯೆಂದೆನಿಸುತ್ತದೆ.

ವೀರಶೈವ ಧರ್ಮವು ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಧರ್ಮಗಳಂತೆ ಕೇವಲ ವೈದಿಕ ಧರ್ಮವೂ ಅಲ್ಲ, ಅಥವಾ ಬೌದ್ಧ, ಜೈನ ಧರ್ಮಗಳಂತೆ ಪೂರ್ಣವಾಗಿ ಅವೈದಿಕ ಧರ್ಮವೂ ಅಲ್ಲ. ಶಕ್ತಿವಿಶಿಷ್ಟಾದ್ವೈತವೆಂಬ ತಾತ್ವಿಕ ನೆಲೆಗಟ್ಟಿನ ಮೇಲೆ ಬೆಳೆದು ಬಂದಿರುವ ಈ ಧರ್ಮವು ತನ್ನದೇ ಆದ ಪ್ರತ್ಯೇಕವಾದ ಸಿದ್ಧಾಂತಗಳನ್ನು ರೂಪಿಸಿಕೊಂಡಿದೆ. ಈ ಧರ್ಮವು ವೈದಿಕ ಧರ್ಮಗಳಂತೆ ಭಗವಂತನ ಅಸ್ತಿತ್ವವನ್ನು ಪೂರ್ಣವಾಗಿ ಒಪ್ಪುತ್ತದೆ. ಆದರೆ ವೈದಿಕ ಧರ್ಮದಲ್ಲಿ ಕಾಣುವ ಯಜ್ಞಯಾಗಾದಿ ಕರ್ಮಗಳ ಹಿರಿಮೆಯನ್ನಾಗಲಿ ವರ್ಣಾಶ್ರಮಧರ್ಮದಲ್ಲಿ ಬರುವ ಸಾಮಾಜಿಕ ತಾರತಮ್ಯವನ್ನಾಗಲಿ ಒಪ್ಪುವುದಿಲ್ಲ. ನೀತಿ ಪ್ರಧಾನವಾದ ಆಚಾರ ಸಂಹಿತೆ ಮತ್ತು ಸರ್ವ ಸಮಾನತೆಯಂತಹ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಈ ಧರ್ಮವು ಬೌದ್ಧ, ಜೈನ ಧರ್ಮಗಳಂತೆ ವಿಚಾರ ಪ್ರಧಾನವಾದ ಧರ್ಮ ಎಂದೆನಿಸಿದೆ. ಈ ರೀತಿ ಆಸ್ತಿಕ ಮತ್ತು ನಾಸ್ತಿಕ ಧರ್ಮಗಳೆಂಬ ಎರಡು ಅತಿರೇಕಗಳಿಂದಲೂ ಭಿನ್ನವೆನಿಸಿದ ಇಂತಹ ಒಂದು ವಿಶಿಷ್ಟ ಧಾರ್ಮಿಕ ಸ್ವರೂಪ ಈ ಧರ್ಮಕ್ಕೆ ಹೇಗೆ ಲಭಿಸಿತೆಂಬುದನ್ನು ತಿಳಿಯಲು ಇದನ್ನು ಕುರಿತು ಬಹು ವ್ಯಾಪಕವಾದ ಸಂಶೋಧನೆಯೇ ಬೇಕಾಗುತ್ತದೆ. ಪ್ರಸ್ತುತ ಈ ಲೇಖನದಲ್ಲಿ ಅಷ್ಟೊಂದು ಸುದೀರ್ಘ ಚಿಂತನೆಗೆ ಅವಕಾಶವಿಲ್ಲವಾದ ಕಾರಣ ಅದನ್ನು ಕುರಿತ ಸ್ಥೂಲ ಪರಿಚಯ ಸಾಕೆನಿಸುತ್ತದೆ.

ವೀರಶೈವ ಧರ್ಮದ ಜಾಗೃತಿಯ ನಾಲ್ಕು ಹಂತಗಳು

ವೀರಶೈವ ಧರ್ಮದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಅತ್ಯಂತ ಮಹತ್ವಪೂರ್ಣವಾದ ಕಾಲ ಎಂದೆನಿಸಿದ್ದರೂ ಹನ್ನೆರಡನೆಯ ಶತಮಾನಕ್ಕೆ ಮುನ್ನ ಮತ್ತು ಹನ್ನೆರಡನೆಯ ಶತಮಾನದ ನಂತರ ಈ ಧರ್ಮವು ಸಾಗಿಬಂದ ದಾರಿ ಅಷ್ಟೇ ಮಹತ್ವಪೂರ್ಣವಾದದ್ದು ಎಂಬುದನ್ನು ನಾವು ಗಮನಿಸಬೇಕು. ಈ ಧರ್ಮವನ್ನು ಕುರಿತು ವಿಚಾರ ಮಾಡುವ ಬಹುಪಾಲು ಪಂಡಿತರು ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಧರ್ಮದಲ್ಲಿ ಕಂಡ ಧಾರ್ಮಿಕ ಕ್ರಾಂತಿಯನ್ನು ನೋಡಿ ತಮ್ಮನ್ನು ತಾವು ಮೈಮರೆತುಬಿಡುತ್ತಾರೆ. ಇದು ಒಂದು ರೀತಿಯಲ್ಲಿ ಸಹಜವೂ ಅಹುದು. ಏಕೆಂದರೆ ವಿಶ್ವದ ಯಾವುದೇ ಧರ್ಮದಲ್ಲಿ ಕಂಡರಿಯದಂತಹ ಒಂದು ತಾತ್ವಿಕ, ನೈತಿಕ, ಸಾಮಾಜಿಕ ಕ್ರಾಂತಿ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶಿವಶರಣರಿಂದ ಆಗಿಹೋದದ್ದು ಕರ್ನಾಟಕದ ಇತಿಹಾಸದ ಒಂದು ಅವಿಸ್ಮರಣೀಯ ಘಟನೆ. ಆದರೂ ಸಹ ವೀರಶೈವ ಧರ್ಮಜಾಗೃತಿಯ ಪೂರ್ಣ ಪರಿಚಯವನ್ನು ಗಳಿಸಬೇಕಾದರೆ ಹನ್ನೆರಡನೆಯ ಶತಮಾನಕ್ಕೆ ಮುನ್ನ ಈ ಧರ್ಮವು ನಡೆದುಬಂದ ದಾರಿ ಮತ್ತು ಹನ್ನೆರಡನೇ ಶತಮಾನದ ಶರಣರ ಕಾಲದಲ್ಲಿ ಇದು ಗಳಿಸಿದ ಧಾರ್ಮಿಕ ಔನ್ನತ್ಯ ಮತ್ತು ಇವುಗಳ ಜೊತೆಗೆ ಹದಿನೈದನೆಯ ಶತಮಾನದಲ್ಲಿ ಬಂದ ತೋಂಟದ ಸಿದ್ಧಲಿಂಗೇಶ್ವರರೇ ಮೊದಲಾದ ವಿರಕ್ತ ಪರಂಪರೆ ಹಾಗೂ ಇಂದಿನ ಆಧುನಿಕ ಯುಗದಲ್ಲಿ ಈ ಧರ್ಮದ ಆಚರಣೆಯಲ್ಲಿ ಕಾಣಬರುವ ಜಾತಿ, ಪಂಥ ಮತ್ತು ಪಂಗಡ ಭೇದಗಳು, ಭಕ್ತ ಜಂಗಮರೆಂಬ ಧಾರ್ಮಿಕ ಪ್ರಭೇದಗಳು, ಇವುಗಳ ಪೂರ್ಣ ಪರಿಚಯ ನಮಗೆ ಬೇಕಾಗುತ್ತದೆ. ಆದ್ದರಿಂದ ಈಗ ನಾವು ಶರಣರ ಪೂರ್ವ ಯುಗದ ವೀರಶೈವ, ಶರಣ ಯುಗದ ವೀರಶೈವ, ವಿರಕ್ತ ಸಂಪ್ರದಾಯದ ಕಾಲದ ವೀರಶೈವ ಮತ್ತು ಆಧುನಿಕ ಯುಗದಲ್ಲಿ ವೀರಶೈವ ಎಂದು ನಾಲ್ಕು ಸ್ತರಗಳಲ್ಲಿ ಈ ಧರ್ಮವನ್ನು ಕುರಿತು ಅವಲೋಕಿಸುವುದು ಹೆಚ್ಚು ವೈಜ್ಞಾನಿಕ ಎಂದೆನಿಸುತ್ತದೆ.

ಶರಣಪೂರ್ವ ಯುಗದ ವೀರಶೈವ

ವೀರಶೈವ ಧರ್ಮದ ಜಾಗೃತಿಯ ಮೊದಲ ಹಂತವಾದ ಅದರ ಉಗಮ ಮತ್ತು ಶೈಶವಾವಸ್ಥೆಯನ್ನು ಕುರಿತು ನಮಗೆ ಇಂದು ದೊರೆತಿರುವ ಮಾಹಿತಿ ಅತ್ಯಂತ ಮಸುಕು ಮಸುಕಾಗಿದ್ದು ವೈಚಾರಿಕ ದೃಷ್ಟಿಯಿಂದ ಅಸ್ಪಷ್ಟವೆನಿಸುತ್ತದೆ. ಇದನ್ನು ಕುರಿತಾಗಿ ನಮಗೆ ಈಗ ದೊರೆಕಿರುವ ಆಧಾರಗ್ರಂಥಗಳಾದ ಶೈವಾಗಮಗಳು, ಸಿದ್ಧಾಂತ ಶಿಖಾಮಣಿ ಮತ್ತು ಶ್ರೀಕರಭಾಷ್ಯ ಮೊದಲಾದ ಗ್ರಂಥಗಳ ಕಾಲ ಮತ್ತು ಕರ್ತೃಗಳ ವಿಚಾರದಲ್ಲಿ ಪಂಡಿತರಲ್ಲಿಯೇ ವಿಚಾರಭೇದವಿದ್ದು, ಆ ಗ್ರಂಥಗಳು ಪ್ರತಿಪಾದಿಸುವ ಸಿದ್ಧಾಂತಗಳ ವಿಚಾರದಲ್ಲಿ ಸಂಶಯಪಡುವವರು ಸಾಕಷ್ಟು ಜನರಿದ್ದಾರೆ. ಲಿಂಗೋದ್ಭವರಾದ ರೇಣುಕಾದಿ ಪಂಚಾಚಾರ್ಯರಿಂದ ಉದ್ಬೋಧನಗೊಂಡ ವೀರಶೈವ ಧರ್ಮದ ಮೂಲಸಿದ್ಧಾಂತವು ಅಗಸ್ತ್ಯಮುನಿಗಳಿಂದ ಪ್ರಚಾರ ಗೊಂಡಿತು ಎಂಬ ವಿವರಣೆಯು ಪೌರಾಣಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿರುವಂತೆ ಕಾಣುವುದರಿಂದ ಅದನ್ನು ಒಪ್ಪಲು ಹಲವರು ಸಿದ್ಧರಿಲ್ಲ. ಈ ವಿವರಣೆಯನ್ನು ಒಪ್ಪದ ಕೆಲವು ಪಂಡಿತರು ವೀರಶೈವ ಧರ್ಮವು ತನ್ನದೇ ಆದ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳಂತಹ ವಿನೂತನ ಸಿದ್ಧಾಂತಗಳೊಂದಿಗೆ ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರಿಂದಲೇ ಉಗಮಗೊಂಡಿತು ಎಂದು ನಂಬುತ್ತಾರೆ.

ಈ ಎರಡು ವಿವರಣೆಗಳನ್ನು ಒಪ್ಪದೆ, ಐತಿಹಾಸಿಕ ಚಿಂತನೆ ಮತ್ತು ಧಾರ್ಮಿಕ ಪರಿವರ್ತನೆಯನ್ನು ನಂಬುವ ಕೆಲವು ಜನ, ಭಾರತದ ಧಾರ್ಮಿಕ ಇತಿಹಾಸದಲ್ಲಿ ಬೌದ್ಧ, ಜೈನ ಧರ್ಮಗಳ ನಂತರ ಮೂಡಿಬಂದ ಕಾಪಾಲಿಕ, ಕಾಳಾಮುಖ, ಪಾಶುಪತ, ಗಾಣಪತ್ಯ, ಸೌರ, ಶಾಕ್ತ ಮುಂತಾದ ಶೈವಧರ್ಮಗಳ ದೀರ್ಘಕಾಲದ ಸಹ ಬಾಳ್ವೆ ಮತ್ತು ಸಂಘರ್ಷದ ಫಲವಾಗಿ ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳಂತಹ ವೀರಶೈವದ ಸ್ಪಷ್ಟಸಿದ್ಧಾಂತಗಳು ಮೊದಲು ಅಸ್ಪಷ್ಟವಾಗಿ ಮೂಡಿ ಬಂದು ಕಾಲಾನಂತರದಲ್ಲಿ ವಿಕಾಸಗೊಂಡು, ಹನ್ನೆರಡನೆಯ ಶತಮಾನದ ವೇಳೆಗೆ ನಿಶ್ಚಿತರೂಪವನ್ನು ಪಡೆದಿವೆ ಎಂದು ನಂಬುತ್ತಾರೆ. ಅದರಲ್ಲಿಯೂ ಬಹುಮಟ್ಟಿಗೆ, ಕಾಳಾಮುಖ ಶೈವದ ಪರಿವರ್ತನ ರೂಪವೇ ವೀರಶೈವ ಧರ್ಮ ಎಂದು ಪ್ರತಿಪಾದಿಸುವವರ ಸಂಖ್ಯೆ ಗಣನೀಯವಾಗಿದೆ. ಇದರ ಸತ್ಯಾಸತ್ಯತೆ ಅದೇನೇ ಇರಲಿ, ಶೈವಧರ್ಮದ ಸುಧಾರಿತ ರೂಪ ಅಥವಾ ಎಚ್ಚತ್ತ ರೂಪವೇ ವೀರಶೈವ ಎಂಬುದು ಈ ವಿವರಣೆಯ ಸಾರ.

ಶರಣಯುಗದ ವೀರಶೈವ

ವೀರಶೈವ ಧರ್ಮದ ಪರಿಪೂರ್ಣ ಜಾಗೃತಿಯನ್ನು ಕಾಣಬೇಕಾದರೆ ಹನ್ನೆರಡನೆ ಶತಮಾನದ ಶಿವಶರಣರ ಸಾಧನೆ ಮತ್ತು ಬೋಧನೆಯನ್ನು ಹೆಚ್ಚಾಗಿ ಗಮನಿಸಬೇಕಾಗುತ್ತದೆ. ತಾತ್ವಿಕ ದೃಷ್ಟಿಯಿಂದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಸ್ಪಷ್ಟ

ನಿರೂಪಣೆ ಅಲ್ಲಮಪ್ರಭು ಮತ್ತು ಚನ್ನಬಸವಣ್ಣನವರ ವಚನಗಳಲ್ಲಿ ವ್ಯಾಪಕವಾಗಿ ಮೂಡಿ ಬಂದಿರುವುದು ನಮಗೆ ಕಾಣುತ್ತದೆ. 'ದೇವನೊಬ್ಬ ನಾಮ ಹಲವು' ಎಂಬ ಮಾತಿನ ಸತ್ಯತೆಯನ್ನು ಚೆನ್ನಾಗಿ ಮನಗಂಡ ಈ ಶರಣರು ಒಬ್ಬನೇ ಆದ ಭಗವಂತನನ್ನು ಹಲವು ಹನ್ನೊಂದು ಹೆಸರುಗಳಿಂದ ಸಂಬೋಧಿಸುತ್ತಾರೆ. ಬಸವಣ್ಣನಿಗೆ ಕೂಡಲಸಂಗಮನಾಗಿ ಕಾಣುವ ಪರತತ್ತ್ವವು, ಅಲ್ಲಮನಿಗೆ ಗುಹೇಶ್ವರನಾಗಿ ಮೈದೋರುತ್ತಾನೆ. ಅಕ್ಕಮಹಾದೇವಿಯ ಆರಾಧ್ಯದೈವವಾದ ಚನ್ನಮಲ್ಲಿಕಾರ್ಜುನ, ಸಿದ್ಧರಾಮಣ್ಣನ ಕಪಿಲಸಿದ್ಧ ಮಲ್ಲಿಕಾರ್ಜುನನಿಗಿಂತಲೂ ಭಿನ್ನನಲ್ಲ. ತಾವು ನಂಬಿದ ಪರಶಿವನನ್ನು ಸಾಕಾರವೂ ಅಲ್ಲದ ನಿರಾಕಾರವೂ ಎನಿಸದ ಇಷ್ಟಲಿಂಗದ ರೂಪದಲ್ಲಿ ಅಂಗದ ಮೇಲೆ ಧರಿಸಿದ ಈ ಸಾಧಕರು, ಭಗವಂತನ ನಿರಂತರ ಒಡನಾಟವನ್ನು ಜೀವಂತವಾಗಿ ಸದಾ ಅನುಭವಿಸಲು ಕಲಿತರು. ತಮ್ಮ ಸಾಧನೆಯಲ್ಲಿ ಭಕ್ತಿಜ್ಞಾನಕರ್ಮಗಳ ಸಮನ್ವಯತೆಯನ್ನು ರೂಢಿಸಿದ ಈ ಶಿವಶರಣರು, ಜಾತಿ ಮತ ಬೇಧಗಳ ಸಾಮಾಜಿಕ ಪಿಡುಗನ್ನು ಮೀರಿ ಬೆಳೆದರು. ಯಜ್ಞ ಯಾಗಾದಿ ಕರ್ಮಗಳನ್ನು ನಿರಾಕರಿಸಿದ ಇವರಿಗೆ, ಪುರೋಹಿತಶಾಹಿ ಧರ್ಮದ ವಿಧಿ ನಿಷೇಧಗಳು ಅಪ್ರಕೃತವೆನಿಸಿದವು.

'ಮರ್ತ್ಯಲೋಕ'ವನ್ನು 'ಕರ್ತಾರನ ಕಮ್ಮಟ'ವೆಂದರಿತ ಈ ಶರಣರು, ತಮ್ಮ ದೈನಂದಿನ ಬದುಕನ್ನು ಅತ್ಯಂತ ಸಾರ್ಥಕವಾಗಿ ಬದುಕಲು ಕಲಿತರು. ಸತ್ಯಶುದ್ಧ ಕಾಯಕದಿಂದ ದುಡಿದು ದಾಸೋಹ ಭಾವದಿಂದ ಲೋಕಸಂಗ್ರಹಕ್ಕಾಗಿ ಬದುಕುವ ಜೀವನ ಕಲೆ ಶರಣರಿಗೆ ಕರಗತವಾಗಿದ್ದಿತು. ಸಮಾಜದ ಎಲ್ಲ ಸ್ತರಗಳಿಂದಲೂ ಹುಟ್ಟಿಬಂದ ಈ ಶರಣರು, ಶಿಕ್ಷಣದ ಸೌಲಭ್ಯದಿಂದ ವಂಚಿತರಾಗಿದ್ದರೂ ಸಹ, ಶರಣರ ಸಮೂಹದಲ್ಲಿ ತಮಗೆ ದೊರೆತ ಆತ್ಮಸಂಸ್ಕಾರದ ಫಲವಾಗಿ, ಉಪನಿಷತ್ತಿಗೆ ಸರಿಸಾಟಿಯಾಗ ಬಲ್ಲ ಧಾರ್ಮಿಕ ಹಾಗೂ ತಾತ್ವಿಕ ಮೌಲ್ಯಗಳನ್ನೊಳಗೊಂಡ ವಚನ ವಾಙ್ಮಯವನ್ನು ಕನ್ನಡ ನಾಡಿಗೆ ನೀಡಿಹೋದರು.

ವರ್ಣಧರ್ಮವನ್ನು ನಿರಾಕರಿಸಿದ ಈ ಶರಣಧರ್ಮ ಜಾತಿ ಮತಗಳ ಮೇರೆಯನ್ನು ಮೀರಿದ್ದು ಮಾತ್ರವೇ ಅಲ್ಲದೆ, ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಸ್ತ್ರೀ ಪುರುಷರು, ಸ್ಪೃಶ್ಯ ಅಸ್ಪೃಶ್ಯ ಎಂಬ ಭೇದವನ್ನು ಅತಿಗಳೆದು ಸರ್ವ ಸಮಾನತೆಯ ಒಂದು ಹೊಸ ಧಾರ್ಮಿಕ ದಿಗಂತವನ್ನೇ ಮಾನವತೆಗೆ ಮೊಟ್ಟಮೊದಲಿಗೆ ತೆರೆದಿಟ್ಟರು. ಧರ್ಮದ ಹೆಸರಿನಲ್ಲಿ ಬಹು ದೀರ್ಘಕಾಲದಿಂದ ಬೆಳೆದುಬಂದ ಅಂಧಶ್ರದ್ಧೆ ಅನಾಚಾರಗಳನ್ನು ಕುರಿತು ಸತ್ಯಶೋಧನೆಯ ದೃಷ್ಟಿಯಿಂದ ವಿಚಾರ ಮಾಡಬೇಕೆಂಬ ಒಂದು ನೂತನ ಪ್ರಜ್ಞೆ ಜನಸಾಮಾನ್ಯರಲ್ಲಿಯೂ ಮೂಡುವಂತಾಗಲು, ಶರಣರು ಕಾರಣರಾದರು. ಬೌದ್ಧಿಕ ದಾಸ್ಯದಿಂದ ಮುಕ್ತರಾದ ಈ ಜನ, ಧಾರ್ಮಿಕವಾಗಿ ಸ್ವಾವಲಂಬಿಗಳಾಗಲು ಕಲಿತರು. ಶರೀರ ಶ್ರಮವೂ ಸಹ ಒಂದು ಧಾರ್ಮಿಕ ಕ್ರಿಯೆ ಎಂದೆನಿಸಿದ್ದು, ಅದು ಪೂಜೆಯಷ್ಟೇ ಪವಿತ್ರವಾಗಬಲ್ಲದು ಎಂಬ ವಿನೂತನ ಸಿದ್ಧಾಂತವನ್ನು "ಕಾಯಕವೇ ಕೈಲಾಸ" ಎಂಬ ಮಹಾವಾಕ್ಯದಲ್ಲಿ ಪ್ರಕಾಶಪಡಿಸಿದರು. ಶರೀರ ಶ್ರಮಕ್ಕಿರುವ ಆರ್ಥಿಕ ಮೌಲ್ಯವನ್ನು ಗುರುತಿಸಿದವರು ಈ ಜಗತ್ತಿನಲ್ಲಿ ಅನೇಕರು ಆಗಿಹೋಗಿದ್ದಾರೆ. ಅದರಿಂದಾಗುವ ಸಾಮಾಜಿಕ ಸಮಾನತೆ ಮತ್ತು ಘನತೆಯನ್ನು ಮೆಚ್ಚುವವರೂ ಹಲವರುಂಟು. ಆದರೆ ಶಾರೀರಿಕ ದುಡಿಮೆಗೆ ಧಾರ್ಮಿಕ ಪಾವಿತ್ರ್ಯತೆಯೂ ಇರಬಲ್ಲದು ಎಂಬುದನ್ನು ಜಗತ್ತಿಗೆ ತೋರಿಸಿದವರು ಶಿವಶರಣರು ಮಾತ್ರವೇ ಎಂಬುದೊಂದು ಸಾರ್ವಕಾಲಿಕ ಸತ್ಯ.

ವಿರಕ್ತಸಂಪ್ರದಾಯದ ಕಾಲದ ವೀರಶೈವ

ವಚನಕಾರರ ನಂತರ ವೀರಶೈವ ಧರ್ಮದ ಇತಿಹಾಸದಲ್ಲಿ ಬಹಳ ಗಮನೀಯವಾದ ಘಟನೆ ಎಂದರೆ ಗೋಸಲ ಚನ್ನಬಸವೇಶ್ವರರು ಮತ್ತು ಅವರ ಶಿಷ್ಯರಾದ ಎಡೆಯೂರು ಸಿದ್ಧಲಿಂಗೇಶ್ವರರು ಮತ್ತು ನೂರೊಂದು ಜನ ವಿರಕ್ತರು ನಡೆಸಿದ ಧಾರ್ಮಿಕ ಪರಿಕ್ರಮ. ವಚನಕಾರರ ಕಾಲದಲ್ಲಿ ವೀರಶೈವ ಸಿದ್ಧಾಂತದ ಆಚಾರ ವಿಚಾರಗಳಲ್ಲಿ ಕಂಡ ಮುಕ್ತ ವಾತಾವರಣದ ಫಲವಾಗಿ, ಧಾರ್ಮಿಕ ನಂಬಿಕೆಗಳು ಹಾಗೂ ಅದರ ಆಚಾರ ವಿಚಾರಗಳು ಸಡಿಲಗೊಂಡು ಸ್ವಚ್ಛಂದತೆಗೆ ದಾರಿಯಾಗುವ ಸಾಧ್ಯತೆಗಳು ವಚನಕಾರರ ತರುವಾಯದ ಯುಗದಲ್ಲಿ ಕಂಡುಬಂದದ್ದು ಸಹಜ. ಈ ಹಿನ್ನೆಲೆಯಲ್ಲಿ ನೋಡಿದಾಗ ಹದಿನೈದನೇ ಶತಮಾನದಲ್ಲಿ ಬಂದ ವಿರಕ್ತಸಂಪ್ರದಾಯದ ನೂರಾರು ಜನ ವೀರಶೈವ ಯತಿಗಳು ವೀರಶೈವ ಧರ್ಮದ ಅನುಯಾಯಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಧಾರ್ಮಿಕವಾಗಿ ಸಂಘಟಿಸಲು ನಡೆಸಿದ ಪ್ರಯತ್ನ ತುಂಬಾ ಗಮನೀಯವಾದದ್ದು. ಶರಣಧರ್ಮವನ್ನು ಸಂಪ್ರದಾಯದ ಚೌಕಟ್ಟಿಗೆ ಒಳಪಡಿಸಿ, ಅಷ್ಟಾವರಣ ಮತ್ತು ಪಂಚಾಚಾರಗಳ ಅನುಸಂಧಾನಕ್ಕೆ ಸಹಕಾರಿಯಾಗಿ ಗುರು ಮತ್ತು ಜಂಗಮರ ಕರ್ತವ್ಯದ ನಿರೂಪಣೆ ಹಾಗೂ ಮಠಮಾನ್ಯಗಳ ಪರಿಕಲ್ಪನೆಗೆ ಕಾರಣರಾದ, ವಿರಕ್ತ ಸಂಪ್ರದಾಯದ ಸಿದ್ಧಲಿಂಗೇಶ್ವರರೇ ಮೊದಲಾದ ಯತಿಗಳು ವೀರಶೈವ ಧರ್ಮದ ರಕ್ಷಕರಾಗಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದಾರೆ. ಇವರ ಈ ಪ್ರಯತ್ನ ವಚನಕಾರರಂತೆ ಕ್ರಾಂತಿಕಾರಕವೆನಿಸದಿದ್ದರೂ, ವೀರಶೈವ ಧರ್ಮದ ಅನುಷ್ಠಾನ ಮತ್ತು ಅದರ ಅಸ್ತಿತ್ವಕ್ಕೆ ಭದ್ರಬುನಾದಿಯನ್ನು ದೊರಕಿಸಿಕೊಟ್ಟಿತೆಂಬುದನ್ನು ಮರೆಯುವಂತಿಲ್ಲ.

ಅಷ್ಟಾವರಣ ಯುಕ್ತವಾದ ವೀರಶೈವ ಧರ್ಮದ ಆಚರಣೆಯಲ್ಲಿ ಬಹುಮುಖ್ಯವಾದ ಅಂಶಗಳೆನಿಸಿದ ಲಿಂಗ ದೀಕ್ಷೆ, ಮಂತ್ರ ಬೋಧೆ, ವಿಭೂತಿ, ರುದ್ರಾಕ್ಷಿ ಇವುಗಳ ವಿಧಿವತ್ತಾದ ಧಾರಣೆ ಹಾಗೂ ಪಾದೋದಕ ಪ್ರಸಾದಗಳ ಮನ್ನಣೆ, ಇವುಗಳಿಗೆ ಕಾರಣರಾದ ಗುರು ಮತ್ತು ಜಂಗಮರಿಗೆ ವಿರಕ್ತ ಸಂಪ್ರದಾಯದಲ್ಲಿ ಪ್ರಾಶಸ್ತ್ಯ ಹೆಚ್ಚಿತೆಂಬುದು ನಿಜ. ಅಷ್ಟಾವರಣಗಳ ಆಚರಣೆಯು ಸಂಪ್ರದಾಯ ಸ್ವರೂಪವನ್ನು ಪಡೆದು ಹೆಪ್ಪುಗಟ್ಟಿದಂತೆಲ್ಲಾ, ವಚನಕಾರರ ಕಾಲದಲ್ಲಿದ್ದ ಸಾಮಾಜಿಕ ಸಮಾನತೆ ಮತ್ತು ಲಾಲಿತ್ಯ ನಷ್ಟಗೊಂಡು, ಗುರು ಜಂಗಮರದೇ ಒಂದು ವರ್ಗ, ಭಕ್ತ ಸಮೂಹವೇ ಮತ್ತೊಂದು ವರ್ಗ ಎಂಬ ಸಾಮಾಜಿಕ ತಾರತಮ್ಯಕ್ಕೆ ಕಾರಣವಾಯಿತು. ಬಸವಾದಿ ಶರಣರ ಕಾಲದಲ್ಲಿ ಕಂಡ ಧಾರ್ಮಿಕ ಸಮಾನತೆಯಿಂದ ಆಕರ್ಷಿತರಾಗಿ ಬಂದ ವಿವಿಧ ಜಾತಿ ಮತ್ತು ವೃತ್ತಿಯ ಜನರು ಗುರು ಮತ್ತು ಜಂಗಮರ ಮಾರ್ಗದರ್ಶನವನ್ನು ನಮ್ರತೆಯಿಂದ ಸ್ವೀಕರಿಸಲು ಕಲಿತರು. ಅದರ ಫಲವಾಗಿ ಜಂಗಮ ಪರಂಪರೆ ಮತ್ತು ಭಕ್ತ ಪರಂಪರೆ ಎಂಬ ಎರಡು ಪ್ರಭೇದಗಳು ಬೆಳೆಯಲು ನಾಂದಿಯಾಯಿತು. ಬೋಧಕ ಪರಂಪರೆ ಒಂದಾದರೆ, ಸಾಧಕ ಪರಂಪರೆ ಮತ್ತೊಂದಾಯಿತು. ಬೋಧಕ ಪರಂಪರೆಯ ಮಹತ್ವ ಹೆಚ್ಚಿದ ಕಾರಣ ವೈದಿಕ ಪರಂಪರೆಯಲ್ಲಿ ವರ್ಣಧರ್ಮದಂತಹ ಸಾಮಾಜಿಕ ಸಿದ್ಧಾಂತ ಮೂಡಿ ಬಂದು, ಅದು ಮುಂದೆ ಹಿಂದೂ ಧರ್ಮದ ಅನೈಕ್ಯತೆಗೆ ಕಾರಣವಾದಂತೆ, ವೀರಶೈವ ಸಮಾಜದಲ್ಲಿಯೂ ಸಹ, ಬೋಧಕ ವರ್ಗದ ಮಹತ್ವ ಹೆಚ್ಚಿದಂತೆಲ್ಲಾ, ಜಂಗಮ ಮತ್ತು ಭಕ್ತರೆಂಬ ಪ್ರಭೇದ ಮತ್ತಷ್ಟು ಪ್ರಬಲಗೊಂಡು ಈ ಧರ್ಮದ ಸಂಘಟನೆಗೆ ಆತಂಕಕಾರಿಯಾಯಿತು ಎಂಬ ಮಾತು ಒಂದು ರೀತಿಯ ವಾಸ್ತವಿಕ ಸತ್ಯ.

ಯಾವುದೇ ಒಂದು ಧರ್ಮದಲ್ಲಿ ಅನುಭಾವಯುಕ್ತವಾದ ಬೋಧನೆ ಮತ್ತು ಸಾಧನೆಯ ಕಾವು ನಂದಿದಂತೆಲ್ಲಾ, ಆ ಧರ್ಮದ ಸಿದ್ಧಾಂತಗಳು ಶೀತಲಗೊಂಡು, ಆಚಾರ ಸಂಹಿತೆಯ ರೂಪವನ್ನು ಪಡೆದು, ವಿಧಿ ನಿಷೇಧಗಳ ಸ್ವರೂಪದಲ್ಲಿ ಅಭೇದ್ಯವೆಂದೆನಿಸುತ್ತವೆ. ಅನುಭಾವಿಯುಗದಿಂದ ಸಾಂಪ್ರದಾಯಿಕ ಯುಗಕ್ಕೆ ಸಂಕ್ರಮಣಗೊಂಡ ವೀರಶೈವ ಧರ್ಮಕ್ಕೂ ಸಹ ಈ ಸ್ಥಿತಿ ಅನಿವಾರ್ಯವಾಯಿತು. ಅತ್ಯಂತ ವಿಚಾರಶೀಲರೆನಿಸಿದ ವೀರಶೈವರಲ್ಲಿಯೂ ಸಹ ಯಾವ ಹಿನ್ನೆಲೆಯಲ್ಲಿ ತಮಗರಿವಿಲ್ಲದೆ ತಮ್ಮ ಅಂತರಂಗದಲ್ಲಿ ನುಸುಳಿಬಂದಿರುವ ಜಂಗಮ ಭಕ್ತರೆಂಬ ಈ ಪ್ರಭೇದದ ಬೇರು ಬಹು ಸುಪ್ತವಾಗಿ ಬೆಳೆದು ಬಂದು ಇಂದು ಪ್ರಬಲಗೊಂಡಿವೆ ಎಂಬುದನ್ನು ಇದು ಸೂಚಿಸುತ್ತದೆ.

ಆಧುನಿಕ ಯುಗದಲ್ಲಿ ವೀರಶೈವ

ಆಧುನಿಕ ಯುಗವನ್ನು ವೈಜ್ಞಾನಿಕ ಯುಗ ಹಾಗೂ ವೈಚಾರಿಕ ಯುಗ ಎಂದು ಕರೆಯುತ್ತಾರಷ್ಟೆ. ವಿಚಾರ ಪ್ರಧಾನವಾದ ವಿಜ್ಞಾನಕ್ಕೂ, ಶ್ರದ್ಧೆಯನ್ನವಲಂಬಿಸಿದ ಧರ್ಮಕ್ಕೂ ನಡುವೆ, ಹೆಚ್ಚಿನ ಸಾಮರಸ್ಯ ಇರಲಾರದು ಎಂಬುದು ಸಾಧಾರಣ ಜನರ ನಂಬಿಕೆ. ಶ್ರದ್ಧೆ ಮತ್ತು ವೈಚಾರಿಕತೆ ಇವು ಜೊತೆ ಜೊತೆಯಾಗಿ ಬಾಳಲಾರವು ಎಂಬುದು ಜನಸಾಮಾನ್ಯರ ನಂಬಿಕೆಯಾದರೆ, ಅಂಧಶ್ರದ್ಧೆ ಮತ್ತು ಕಂದಾಚಾರಗಳು ಮಾತ್ರ ವೈಚಾರಿಕತೆಯ ಪರಮ ವೈರಿಗಳು ಎಂಬುದು ಪ್ರಜ್ಞಾವಂತರ ಮತ.

ವೀರಶೈವ ಧರ್ಮವು ಅದೆಷ್ಟೇ ವಿಚಾರ ಸಮ್ಮತ ಧರ್ಮ ಎಂದೆನಿಸಿದ್ದರೂ ಸಹ, ಅದರಲ್ಲಿ ಬರುವ ಕೆಲವು ಆಚರಣೆಗಳು ಅವುಗಳ ಸ್ಥೂಲರೂಪದಲ್ಲಿ ಅವೈಜ್ಞಾನಿಕ ಹಾಗೂ ಅವೈಚಾರಿಕವೆನಿಸುವಂತಿದೆ. ಅಂತಹ ಆಚರಣೆಗಳಲ್ಲಿ ಅಂತರ್ಗತವಾದ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿವರಣೆಗಳ ಹಿನ್ನೆಲೆಯಲ್ಲಿ ಆ ಆಚಾರಗಳನ್ನು ಒಪ್ಪಬೇಕಾಗುತ್ತದೆಯೇ ಹೊರತು ಅನ್ಯಥಾ ಅಲ್ಲ. ಅಷ್ಟಾವರಣಗಳಲ್ಲಿ ಬರುವ ಗುರು ಮತ್ತು ಜಂಗಮ ತತ್ವಗಳು ಒಂದೇ ಉದ್ದೇಶಕ್ಕಾಗಿ ಇರುವ ಸಮಾನಾಂತರ ಸಂಸ್ಥೆಗಳಂತಿದ್ದು ಅನ್ಯಧರ್ಮಗಳಲ್ಲಿರುವಂತೆ ಗುರುವಾದವನು ಜಂಗಮನು ನಿರ್ವಹಿಸುವ ಧಾರ್ಮಿಕ ವಿಧಿಗಳನ್ನು ತಾನೇ ನಿರ್ವಹಿಸಬಹುದೆನಿಸುತ್ತದೆ. ದೀಕ್ಷಾ ಗುರುವು ಶಿಕ್ಷಾ ಗುರುವೂ ರಕ್ಷಾ ಗುರುವೂ ಆಗಬಹುದು. ಗುರುವಿನ ಧರ್ಮ ಸ್ಥಾವರವೆನಿಸಿದರೆ ಜಂಗಮನ ಧರ್ಮ ಚಲನಾತ್ಮಕವಾದದ್ದು. ವೀರಶೈವ ಧರ್ಮದಲ್ಲಿ ಗುರುವಿನ ವೈಶಿಷ್ಟ್ಯ ಲಿಂಗದೀಕ್ಷೆಯನ್ನು ನೀಡುವುದಕ್ಕೆ ಸೀಮಿತವಾಗಿರುವಂತೆ ಕಾಣುತ್ತದೆ. ಶ್ರೇಷ್ಠತೆಯ ದೃಷ್ಟಿಯಿಂದ ನೋಡಿದರೆ ಗುರು ಮತ್ತು ಜಂಗಮ ಇವರಿಬ್ಬರೂ ಸಮಾನ ಶ್ರೇಷ್ಠರು ಮತ್ತು ಧಾರ್ಮಿಕವಾಗಿ ಉತ್ಕೃಷ್ಟ ಸ್ಥಿತಿಯನ್ನು ಮುಟ್ಟಿ ನಿಂತವರು. ಆ ಕಾರಣದಿಂದಲೆ ಇಂದಿನ ವೀರಶೈವದ ದೈನಂದಿನ ಆಚರಣೆಯಲ್ಲಿ ಗುರು ಮತ್ತು ಜಂಗಮರ ನಡುವಿನ ಪ್ರಭೇದ ಕ್ಷೀಣಿಸಿ ಒಂದು ರೀತಿಯಲ್ಲಿ ಸೀಮೋಲ್ಲಂಘನ ನಡೆದಿದೆ. ಅಲ್ಲದೆ, ಜಂಗಮರು ಪುರೋಹಿತರ ಪಾತ್ರವನ್ನು ನಿರ್ವಹಿಸುತ್ತಿರುವಂತಿದೆ. ಇದು ಜಂಗಮ ಧರ್ಮಕ್ಕೆ ಸಲ್ಲದ ಸ್ಥಿತಿ.

ಅಷ್ಟಾವರಣಗಳಲ್ಲಿ ಒಂದಾದ ಪಾದೋದಕದ ಕಲ್ಪನೆ ವೀರಶೈವ ಧರ್ಮದಲ್ಲಿ ಮಾತ್ರ ಕಾಣುವಂತಹ ಒಂದು ವಿಶಿಷ್ಟ ಆಚರಣೆ. ಗುರು ಮತ್ತು ಜಂಗಮರಿಂದ ದೊರೆಯುವ ಪಾದೋದಕವನ್ನು ಪವಿತ್ರವೆಂದು ನಂಬಲು ಆರೋಗ್ಯ ಮತ್ತು

ಕ್ಷೇತ್ರಾಧಿಪತಿ ಶ್ರೀ ಸಿದ್ಧಲಿಂಗೇಶ್ವರರು ಮತ್ತು ಜಾತ್ರಾ ಮಹೋತ್ಸವ



ಶ್ರೀ ಸಿದ್ಧಲಿಂಗೇಶ್ವರರು



ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರನ್ನು ಪಲ್ಲಕ್ಕಿಯಲ್ಲಿ ಕರೆತರುತ್ತಿರುವುದು




ಶ್ರೀ ಸಿದ್ಧಲಿಂಗೇಶ್ವರ ರಥೋತ್ಸವ



ಬೆಳ್ಳಿ ಪಲ್ಲಕ್ಕಿ ಉತ್ಸವಕ್ಕೆ ಶ್ರೀಗಳವರನ್ನು ಸೇವಾಕರ್ತರಾದ ಶ್ರೀ ಟಿ.ಕೆ. ನಂಜುಂಡಪ್ಪನವರು ಸ್ವಾಗತಿಸುತ್ತಿರುವುದು



ಬೆಳ್ಳಿ ಪಲ್ಲಕ್ಕಿ



ಮುತ್ತಿನ ಪಲ್ಲಕ್ಕಿ



ತೆಪ್ಪೋತ್ಸವ



ಶ್ರೀಗಳು ದಾಸೋಹ ಸಿದ್ಧತೆ ಪರಿಶೀಲನೆಯಲ್ಲಿ



ಮುಟ್ಟಿನ ಮರ



ಶ್ರೀಗಳು ದಾಸೋಹದ ಪರಿಶೀಲನೆಯಲ್ಲಿ



ಅಂಗಡಿ ಮಳಿಗೆಗಳ ದೃಶ್ಯ



ಶ್ರೀಗಳು - ಪಶು ವಾತ್ಸಲ್ಯ



ದೀಪಾಲಂಕಾರ



ಜಾನುವಾರು ಜಾತ್ರೆ



ವಸ್ತು ಪ್ರದರ್ಶನದಲ್ಲಿ ಶ್ರೀಗಳು



ಪದ್ಮಭೂಷಣ ಡಾ. ಎಂ.ಸಿ. ಮೋದಿ, ಶ್ರೀ ಲಕ್ಷ್ಮೀನರಸಿಂಹಯ್ಯ, ಶ್ರೀ ದೇಶಪಾಂಡೆ (ಸಚಿವರು), ಶ್ರೀಗಳು

ನೈರ್ಮಲ್ಯದ ಅರಿವಿರುವ ಇಂದಿನ ಯುವಜನರು ಸಿದ್ಧರಿರುವಂತೆ ಕಾಣುವುದಿಲ್ಲ. ಅಂತೆಯೇ ಗುರು ಮತ್ತು ಜಂಗಮರ ಪ್ರಸಾದದಲ್ಲಿ ಎಂಜಲನ್ನರಸಬಾರದು ಎಂಬ ಸಿದ್ಧಾಂತದ ಮಾತನ್ನು ಆಧುನಿಕ ವೀರಶೈವರು ಸುಲಭವಾಗಿ ಒಪ್ಪಲು ಸಿದ್ಧರಿಲ್ಲ. ಅದೇ ರೀತಿಯಲ್ಲಿ ವಿಭೂತಿ ಮತ್ತು ರುದ್ರಾಕ್ಷಿಯ ಧಾರಣೆಯಿಂದ ಲಭಿಸುವ ಧಾರ್ಮಿಕ ಲಾಭದ ವಿಚಾರದಲ್ಲಿ ಸಂಶಯ ಪಡುವವರ ಆಧುನಿಕ ವೀರಶೈವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇವುಗಳ ಮಹತ್ವವನ್ನು ಕುರಿತು ವಿಚಾರ ಸಮ್ಮತವಾಗುವ ರೀತಿಯಲ್ಲಿ ವಿವರಿಸಲು ಧರ್ಮಗುರುಗಳು ಪ್ರಯತ್ನವನ್ನೇ ಮಾಡುವಂತೆ ಕಾಣುತ್ತಿಲ್ಲ.

ಹನ್ನೆರಡನೆ ಶತಮಾನದಲ್ಲಿ ಬಂದ ಬಸವಾದಿ ಶರಣರು ಬಯಸಿ ವೀರಶೈವರಾದವರು ಎಂಬ ಸತ್ಯವನ್ನು ನಾವು ಮರೆಯಬಾರದು. ಹುಟ್ಟಿನಿಂದ ವೈದಿಕ ಬ್ರಾಹ್ಮಣನಾಗಿದ್ದ ಬಸವಣ್ಣನು ತಾನು ಹುಟ್ಟಿ ಬೆಳೆದ ಧರ್ಮದಲ್ಲಿ ಕಾಣದಿದ್ದ ಧಾರ್ಮಿಕ ಸಮಾನತೆಯನ್ನು ವೀರಶೈವ ಧರ್ಮದಲ್ಲಿ ಕಂಡದ್ದರಿಂದ ಅವನು ಬೇಕೆಂದು ಬಯಸಿ ವೀರಶೈವ ಧರ್ಮವನ್ನು ಅಪ್ಪಿಕೊಂಡನು. ತಾನು ಅತ್ಯಂತ ನಿಷ್ಠೆಯಿಂದ ಈ ಧರ್ಮದಲ್ಲಿ ಬದುಕಿ ಅನ್ಯರಿಗೆ ಮಾರ್ಗದರ್ಶಕನಾದನು. ಇವನಂತೆ ನೂರಾರು ಜನ ಸಾಧಕರು ಕೇವಲ ಧಾರ್ಮಿಕ ತೃಪ್ತಿಯಿಂದಾಗಿ, ಈ ಧರ್ಮದಲ್ಲಿ ಸಮಾಗಮಗೊಂಡರು. ಆದ್ದರಿಂದ ಇವರಿಗೆ ಲಿಂಗಧಾರಣೆ, ಲಿಂಗಪೂಜೆ, ಜಂಗಮ ದಾಸೋಹ ಎಂಬುದು ಕೇವಲ ಒಂದು ಶುಷ್ಕ ಸಂಪ್ರದಾಯವೆನಿಸಲಿಲ್ಲ. ವಿಭೂತಿ, ರುದ್ರಾಕ್ಷಿಯನ್ನು ಧರಿಸದ ಭವಿಯ ಮುಖದರ್ಶನವು ಅಪವಿತ್ರಕರವಾದದ್ದು ಎಂದು ಅವರು ತಿಳಿದಿದ್ದರು.

ಸ್ಥಾವರಲಿಂಗದ ಪೂಜೆಯನ್ನು ನಿರಾಕರಿಸಿ ಇಷ್ಟಲಿಂಗದ ಪೂಜೆಯ ಈ ನೂತನ ಸಂಸ್ಕೃತಿಯನ್ನು ಅಂದಿನ ಶರಣರು ಮನಮೆಚ್ಚಿ ಪುರಸ್ಕರಿಸಿದರು. ಆದರೆ ಇಂದಿನ ವೀರಶೈವರು ಅನ್ಯಧರ್ಮೀಯರ ಅದರಲ್ಲಿಯೂ ಹೆಚ್ಚಾಗಿ ವೈದಿಕ ಧರ್ಮೀಯರ ಅನುಕರಣೆಯಿಂದಾಗಿ ಸ್ಥಾವರಲಿಂಗದ ಪೂಜೆಗೆ ಮಹತ್ವಕೊಟ್ಟು ಗುಡಿಗೋಪುರಗಳ ಸ್ಥಾಪನೆಯಲ್ಲಿ ತೊಡಗುತ್ತಿದ್ದಾರೆ. ಇವರು ಕಟ್ಟುವ ಇಂತಹ ಸ್ಥಾವರಲಿಂಗದ ದೇಗುಲಗಳಲ್ಲಿ ವಿಗ್ರಹಾರಾಧನೆಗೆ ನೆರವಾಗುವ ಗುರು ಮತ್ತು ಜಂಗಮರ ಸಮೂಹಕ್ಕೇನು ಕಡಿಮೆಯಿಲ್ಲ. ಇದನ್ನೆಲ್ಲಾ ನೋಡಿದಾಗ ಇಂದಿನ ಕಾಲದ ವೀರಶೈವರ ಬಹುಪಾಲು ಆಚರಣೆಗಳು ನಿಜವಾದ ವೀರಶೈವ ದರ್ಶನಕ್ಕೆ ವಿರುದ್ಧವಾಗಿರುವುದು ಯಾರಿಗಾದರೂ ತಿಳಿಯುವಂತಹುದೇ.

ಕೇವಲ ಹುಟ್ಟಿನಿಂದಲೇ ವೀರಶೈವರಾದ ಇಂದಿನ ಜನರಿಗೆ ಈ ಧರ್ಮದಲ್ಲಿರುವ ಕೆಲವು ಉನ್ನತ ಆದರ್ಶಗಳು ಮತ್ತು ಅವುಗಳ ಆಚರಣೆಯ ಹಿರಿಮೆ ತಿಳಿಯದಾಗಿದೆ. ಅಸ್ಪೃಶ್ಯರೆಂಬ ಕಾರಣದಿಂದ ಹಾಗೂ ಸ್ತ್ರೀಯರೆಂಬ ಲಿಂಗಭೇದದ ಕಾರಣದಿಂದ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಂದಿನ ಜನರಿಗೆ ಈ ಧರ್ಮದಲ್ಲಿ ಕಂಡ ಧಾರ್ಮಿಕ ಸಮಾನತೆ ಅತ್ಯಂತ ಆಶ್ಚರ್ಯವೆನಿಸಿದ್ದಿತು. ಆದರೆ ಇಂದಿನ ವೀರಶೈವರಿಗೆ ಲಿಂಗಧಾರಣೆ ಎಂಬುದು ಒಂದು ಒಲ್ಲದ ಸಂಸ್ಕಾರವೆನಿಸಿದೆ. ವೀರಶೈವರಲ್ಲಿರುವ ಸ್ತ್ರೀವರ್ಗಕ್ಕೂ ಇದರ ಮಹತ್ವ ಅರಿಯದಾಗಿದೆ. ಲಿಂಗಪೂಜೆಯ ಕಾರಣದಿಂದ ದಿನಕ್ಕೆ ಎರಡು ಬಾರಿಯಾದರೂ ಶಾರೀರಿಕ ನೈರ್ಮಲ್ಯದ ಜೊತೆಗೆ ಅಂತರ್ಮುಖಿಗಳಾಗಿ ಮಾನಸಿಕ ನೈರ್ಮಲ್ಯವನ್ನು ಸಾಧಿಸಲು ನೆರವಾಗಬಲ್ಲ ಈ ಶಿವಪೂಜಾ ವಿಧಿಯನ್ನು ಗೌರವಿಸುವ ವೀರಶೈವರ ಸಂಖ್ಯೆ ಇಂದು ಕ್ಷೀಣಿಸುತ್ತಿದೆ. ವಿದ್ಯಾವಂತರೂ ವಿಚಾರಶೀಲರೂ ಆದ ವೀರಶೈವರು ಕೇವಲ ಪ್ರಯೋಗಾತ್ಮಕವಾಗಿಯಾದರೂ ಇವುಗಳ ವಿಚಾರದಲ್ಲಿ ಆಸಕ್ತಿ ತಳೆಯದಿರುವದು ತುಂಬಾ ವಿಷಾದದ ಮಾತು. ಅವಿದ್ಯಾವಂತರಾದ ಗ್ರಾಮಾಂತರದ ಜನರ ಸ್ಥಿತಿ ಇದಕ್ಕಿಂತ ಸ್ವಲ್ಪ ಮೇಲೆಂದು ಕಾಣುತ್ತದೆ. ಕೇವಲ ಮುಗ್ಧರಾದ ಈ ಜನ, ಧಾರ್ಮಿಕ ಮತ್ತು ಸಾಮಾಜಿಕ ಕಟ್ಟು ಪಾಡುಗಳನ್ನು ನಿರಾಕರಿಸುವುದರಲ್ಲಿ ನಾಗರಿಕರಷ್ಟು ಅವಸರಪಡುತ್ತಿಲ್ಲ. ಭಯಭಕ್ತಿಯ ಕಾರಣದಿಂದಲಾದರೂ ಅವರು ಈ ಕೆಲವು ಧಾರ್ಮಿಕ ನಂಬಿಕೆಗಳನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಹನ್ನೆರಡನೆ ಶತಮಾನದಲ್ಲಿ ನಾನಾ ಜಾತಿ ಮತ್ತು ವೃತ್ತಿಯಿಂದ ಬಂದು ವೀರಶೈವ ಧರ್ಮವನ್ನು ಅಪ್ಪಿದ ಈ ಧರ್ಮಾನುಯಾಯಿಗಳಲ್ಲಿ ಧಾರ್ಮಿಕ ಸಾಮರಸ್ಯ ಮತ್ತು ಸಮಾನತೆ ಬಹುಬೇಗ ಸಾಧ್ಯವಾಯಿತು. ಅಲ್ಲದೆ ಕಾಯಕದ ಮಹತ್ವವನ್ನು ಅರಿತಿದ್ದ ಈ ಜನ ತಮ್ಮ ಪೂರ್ವಾಶ್ರಮದಲ್ಲಿ ತಾವು ಪರಿಣತಿ ಪಡೆದಿದ್ದ ವಿವಿಧ ಕಾಯಕಗಳನ್ನು ವೀರಶೈವ ಧರ್ಮೀಯರಾದ ನಂತರವೂ ಮುಂದುವರಿಸಿದರು. ಕಾಯಕದಲ್ಲಿ ಮೇಲಿಲ್ಲ ಕೀಳಿಲ್ಲ ಎಂಬ ಉದಾರತತ್ತ್ವ ಅಂದಿನ ವೀರಶೈವರಿಗೆ ಚೆನ್ನಾಗಿ ತಿಳಿದಿದ್ದಿತು. ಆದರೆ ಕಾಯಕದ ಈ ಮರ್ಯಾದೆ ಮತ್ತು ಗೌರವ ಕಾಲಾನಂತರ ಕ್ಷೀಣಿಸಿತು. ಶರೀರ ಶ್ರಮವನ್ನು ಬಯಸುವ ವ್ಯವಸಾಯ, ನೇಯಿಗೆ ಕೆಲಸ, ಕ್ಷೌರಿಕನ ಕೆಲಸ, ಮಡಿವಾಳಿಯ ಕಾಯಕ ಈ ಮುಂತಾದ ವೃತ್ತಿಗಳು ಘನತೆಯ ದೃಷ್ಟಿಯಿಂದ ಕೀಳೆನಿಸಿ, ಬುದ್ಧಿ ಪ್ರಧಾನವಾದ ವೃತ್ತಿಗಳು ಮೇಲೆಂಬ ಭಾವನೆ ವೀರಶೈವರಲ್ಲಿಯೂ ಬೆಳೆದು ಬಂದಿತು. ಆ ಕಾರಣದಿಂದಲೇ ವಿವಿಧ ವೃತ್ತಿಯ ವೀರಶೈವರು ಬೇರೆ ಬೇರೆ ಪಂಗಡದವರೆಂಬಂತೆ ಪ್ರತ್ಯೇಕಗೊಂಡರು. ಸಾಮಾಜಿಕವಾಗಿ ಕೊಟ್ಟು ತರುವ ಸಂಪ್ರದಾಯ ಆಯಾ ಪಂಗಡಗಳಿಗೆ ಸೀಮಿತವಾಯಿತು. ಸಹಭೋಜನವೂ ಸಹ ಆಯಾ ಪಂಗಡಗಳಿಗೆ ಸೀಮಿತಗೊಂಡಿತು. ಇದರಿಂದಾಗಿ ಪಂಗಡ ಮತ್ತು ಒಳ ಪಂಗಡಗಳ ಪ್ರಜ್ಞೆ ಹೆಚ್ಚು ವ್ಯಾಪಕವಾಗಿ ಬೆಳೆದು

ವಿವಿಧ ವೃತ್ತಿಯ ವೀರಶೈವರು ಸಾಮಾಜಿಕವಾಗಿ ಸುರುಳಿ ಸುರುಳಿಯಂತೆ ಪ್ರತ್ಯೇಕಗೊಂಡರು. ವೃತ್ತಿಗನುಗುಣವಾದ ಕೆಲವು ಪ್ರವೃತ್ತಿಗಳು ಬೆಳೆಯುವುದು ಸಹಜವಾದ್ದರಿಂದ ಬೇರೆ ಬೇರೆ ವೃತ್ತಿಯ ಜನರಲ್ಲಿ ಸಾಮಾಜಿಕವಾಗಿ ಪ್ರತ್ಯೇಕತೆ ಬೆಳೆಯಲು ಅವೂ ಕಾರಣವಾದವು. ಸಾಮಾಜಿಕವಾದ ಈ ಶೈಥಿಲ್ಯ ಅದೆಷ್ಟು ಮುಂದುವರಿಯಿತೆಂದರೆ ಒಂದೊಂದು ಪಂಗಡಕ್ಕೂ ಬೇರೆ ಬೇರೆ ಗುರು ಮತ್ತು ಜಂಗಮರು ಹಾಗೂ ಮಠಮಾನ್ಯಗಳು ಹುಟ್ಟಿಕೊಂಡು ವೀರಶೈವರ ಧಾರ್ಮಿಕ ಸಾಮರಸ್ಯ ಕುಂದುವಂತಾಯಿತು.

ವೀರಶೈವ ಸಮಾಜದ ವಿಚ್ಛಿದ್ರತೆಗೆ ಸಹಕಾರಿಯಾಗಿ ಆಚಾರ ವರ್ಗವೂ ಶಿಥಿಲಗೊಂಡಿದ್ದರ ಫಲವಾಗಿ ಆದಿ ವೀರಶೈವ, ಅನಾದಿ ವೀರಶೈವ ಎಂಬ ಅರ್ಥವಿಲ್ಲದ ಅವಿಚಾರ ಪ್ರಜ್ಞೆ ಆಚಾರವರ್ಗದಲ್ಲಿಯೂ ತಲೆದೋರಿತು. ಇಂತಹ ಅವೈಚಾರಿಕ ಪ್ರಜ್ಞೆಯನ್ನು ಪ್ರತಿಪಾದಿಸುವ ಗ್ರಂಥಗಳೂ ಹುಟ್ಟಿಕೊಂಡವು. ಪುರಾತನವಾದದ್ದು ಶ್ರೇಷ್ಠ, ಇತ್ತೀಚಿನದು ಕನಿಷ್ಠ ಎಂಬ ಮಾತು ಧಾರ್ಮಿಕ ರಂಗಕ್ಕೆ ಹೊಸದೇನಲ್ಲ. ವೇದಗಳು ಅನಾದಿ ಹಾಗು ಸನಾತನವಾದ್ದರಿಂದ ಅವು ನಿರ್ದೋಷ ಎಂಬ ನಂಬಿಕೆ ವೈದಿಕ ಸಂಪ್ರದಾಯದಲ್ಲಿಯೂ ಬೆಳೆದು ಬಂದಿದ್ದಿತು. ಪಾಶ್ಚಾತ್ಯ ಚಿಂತಕರಾದ ಮ್ಯಾಕ್ಸ್‌ಮುಲ್ಲರ್, ದಾಯಿಸನ್, ವಿಂಟರ್‌ನಿಟ್ಸ್‌ನಂತಹ ಮಹನೀಯರ ವೈಚಾರಿಕತೆಯ ಫಲವಾಗಿ ಇಂತಹ ನಂಬಿಕೆ ಅರ್ಥಹೀನವೆಂಬ ಅರಿವು ವೈದಿಕರಲ್ಲಿ ಮೂಡಿತು. ಇಂತಹ ಅನುಭವಗಳ ಹಿನ್ನೆಲೆಯಲ್ಲಿ ವೀರಶೈವರೂ ಎಚ್ಚರಗೊಳ್ಳಬೇಕಾಗಿದೆ. ಆದಿ ವೀರಶೈವ, ಅನಾದಿ ವೀರಶೈವ, ಬಣಜಿಗ ವೀರಶೈವ, ಗಾಣಿಗ ವೀರಶೈವ, ಮಗ್ಗದ ವೀರಶೈವ ಈ ಮುಂತಾದ ಪ್ರಭೇದಗಳನ್ನು ಮರೆತು ವೀರಶೈವರೆಲ್ಲರೂ ಒಂದೇ ಎಂಬ ದೃಷ್ಟಿಯನ್ನು ಬೆಳೆಸುವುದು ಎಚ್ಚತ್ತ ವೀರಶೈವರಿಗೆ ಈಗ ಅನಿವಾರ್ಯವಾಗಿದೆ.

ಕೊನೆಯದಾಗಿ ದಾರ್ಶನಿಕ ದೃಷ್ಟಿಯಿಂದ ಹೇಳಬೇಕಾದ ಒಂದು ಮಾತಿದೆ. ಅದೇನೆಂದರೆ ಶಕ್ತಿವಿಶಿಷ್ಟಾದ್ವೈತ ಎಂದೆನಿಸಿದ ಈ ಧರ್ಮದ ತಾತ್ವಿಕ ನಿಲುವನ್ನು ಗುರು ಮತ್ತು ಜಂಗಮರು ಪೂರ್ಣವಾಗಿ ಅರಿತು ಅದರ ಅಂತರಂಗವನ್ನು ತಾವು ಮೊದಲು ಮನಗಂಡು ನಂತರ ತಮ್ಮ ಸಹಧರ್ಮೀಯರಲ್ಲಿ ಸರಿಯಾಗಿ ಪ್ರಚಾರ ಮಾಡಬೇಕಾಗಿದೆ. ಏಕೆಂದರೆ ಶಕ್ತಿ ವಿಶಿಷ್ಟಾದ್ವೈತದ ಪ್ರಕಾರ ಪರಶಿವನ ಶಕ್ತಿಯಿಂದ ವಿಕಾಸಗೊಂಡ ನಮ್ಮ ಈ ಜಗತ್ತು ಮಾಯೆಯಲ್ಲ ಅಥವಾ ಸುಳ್ಳಲ್ಲ. ಶರಣರು ಹೇಳಿದಂತೆ ಪರಶಿವನು ಜಗತ್ತಿನಲ್ಲೆಲ್ಲಾ ವ್ಯಾಪಿಸಿದ್ದು, ಶಿವನಲ್ಲದೆ ಅನ್ಯ ತತ್ವ ಇಲ್ಲಿ ಎಲ್ಲಿಯೂ ಇರಲಾರದು. ಪರಶಿವನಿಂದ ಆವೃತವಾದ ಈ ಜಗತ್ತನ್ನು ಪ್ರೀತಿ ಗೌರವದಿಂದ ಅರಿತು ಅರ್ಥೈಸುವ ಪ್ರಯತ್ನ ಬಹು ಪವಿತ್ರವಾದ ಪ್ರಯತ್ನ. ಈ ದೃಷ್ಟಿಯಿಂದ ನೋಡಿದಾಗ ಮಾನವನ ಸಂಸ್ಕೃತಿ, ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಇವುಗಳ ಜೊತೆಗೆ ನಾವು ನಡೆಸುವ ದೈನಂದಿನ ಕರ್ತವ್ಯಗಳು ಮತ್ತು ಕಾಯಕಗಳು ಬಹು ಮಹತ್ವಪೂರ್ಣವೆನಿಸುತ್ತವೆ. ಬದುಕುವುದು ಎಷ್ಟು ಮಹತ್ವ ಪೂರ್ಣವಾದದ್ದೋ ಸಾವು ಅಷ್ಟೇ ಮಹತ್ವವುಳ್ಳದ್ದು. ಆ ಕಾರಣದಿಂದಲೇ ಶರಣರು ಮರಣವನ್ನು ಮಹಾನವಮಿ ಎಂದು ಗೌರವಿಸಿದರು.

ಜಗತ್ತು ಮಾಯೆಯಲ್ಲ, ಇದು ಒಂದು ಸತ್ಯ ಸಂಗತಿ ಹಾಗೂ ಇದರಲ್ಲಿ ನಾವು ನಡೆಸುವ ಪಾತ್ರವೂ ಅತ್ಯಂತ ಸತ್ಯವಾದದ್ದು ಎಂಬ ಒಂದು ನೂತನ ಪ್ರಜ್ಞೆ ನಮ್ಮಲ್ಲಿ ಮೂಡಿ ಬಂದಾಗ, ನಮ್ಮ ಜೀವನ ದೃಷ್ಟಿಯೇ ಬೇರೆಯಾಗುತ್ತದೆ. ನಮ್ಮ ಒಂದೊಂದು ವ್ಯವಹಾರವೂ ಅರ್ಥಪೂರ್ಣವಾಗುತ್ತದೆ. ಈ ಬದುಕು ನಶ್ವರ, ಇದು ಒಂದು ಮಾಯೆ ಎಂಬ ಅಸಹಾಯಕತೆ ಮತ್ತು ಸೋಲಿನ ಮನೋಭಾವ ಮಾಯವಾಗಿ ಬದುಕಿನಲ್ಲಿ ಗೌರವ ಮತ್ತು ಆತ್ಮವಿಶ್ವಾಸ ಬೆಳೆದು ಮಾನವನು ಹೆಚ್ಚು ಕ್ರಿಯಾಶೀಲನಾಗುತ್ತಾನೆ. ಜಗತ್ತು ಅನಿತ್ಯ, ಕೇವಲ ಮಾಯೆ, ಅಶಾಶ್ವತ, ನಿರರ್ಥಕ ಎಂಬ ಜೀವನದೃಷ್ಟಿಯಿಂದಾಗಿ ಪಲಾಯನ ಸಿದ್ಧಾಂತ ಮನುಷ್ಯನಲ್ಲಿ ಮೂಡಲು ಕಾರಣವಾಗಿದೆ. ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿಯಂತಹ ಶರಣರು ಮಾಯೆ ಎಂಬ ಮಾತನ್ನು ತಮ್ಮ ವಚನಗಳಲ್ಲಿ ಬಳಸಿರುವರಾದರೂ ಅವರ ಪ್ರಕಾರ ಶಂಕರಾಚಾರ್ಯರು ಹೇಳಿದಂತೆ ಈ ಜಗತ್ತು ಸುಳ್ಳಲ್ಲ ಅಥವಾ ಒಂದು ಭ್ರಮೆ ಎಂದೆನಿಸುವುದಿಲ್ಲ. ಈ ಜಗತ್ತು ಪರಶಿವನ ಒಂದು ಲೀಲಾಪ್ರಸಂಗ. ಅವನ ಈ ಲೀಲಾವಿನೋದದಲ್ಲಿ ಪಾಲ್ಗೊಳ್ಳುವುದೇ ಭಗವಂತನ ಸಾಕ್ಷಾತ್ಕಾರಕ್ಕೆ ಒಂದು ಸಾಧನ. ''ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ''ವಾದ ಕಾರಣ ಇಹಲೋಕದಲ್ಲಿ ಸಂದು ಶಿವಲೋಕಕ್ಕೆ ಏರಬೇಕಾಗಿದೆ. ಆದ್ದರಿಂದ ಸಮಾಜದ ಹೊಣೆಗಾರಿಕೆಗಳನ್ನು ಮರೆತು, ಸನ್ಯಾಸಿಯಾಗಿ ಏಕಾಂತವನ್ನರಸದೆ, ಸಂಘಜೀವಿಯಾಗಿ ಕಾಯಕನಿರತನಾಗಿ, ದಾಸೋಹಂ ಭಾವದಿಂದ, ವಿಶ್ವದ ಈ ಲೀಲಾ ಪ್ರಸಂಗದಲ್ಲಿ ಭಾಗಿಯಾಗಬೇಕೆಂಬುದೇ ವೀರಶೈವ ಧರ್ಮದ ದಿವ್ಯ ಸಂದೇಶ. ಎಚ್ಚತ್ತ ವೀರಶೈವವು ಈ ದಿಕ್ಕಿನಲ್ಲಿ ಮುಂದೆ ಸಾಗಬೇಕಾಗಿದೆ.

O

ವಚನ ಚಳುವಳಿ–ಒಂದು ಸಾಮಾಜಿಕ ಆಂದೋಲನವಾಗಿ

ಡಾ.ಓ.ಎಲ್.ನಾಗಭೂಷಣಸ್ವಾಮಿ

ವಚನಗಳು ಮೂರು ವಿವಿಧ ಸನ್ನಿವೇಶದಲ್ಲಿ ಸೃಷ್ಟಿತವಾಗಿವೆ : ಹನ್ನೆರಡನೆಯ ಶತಮಾನದ ಬಸವಾದಿಗಳಿಂದ; ಹದಿನೈದನೆಯ ಶತಮಾನದ ನಂತರ ವೀರಶೈವ ಪುನರುತ್ಥಾನದ ಕಾಲದಲ್ಲಿ ಹಾಗೂ ಆಧುನಿಕ ಕಾಲದಲ್ಲಿ. ಆದರೆ ಇವುಗಳಲ್ಲಿ ಮೊದಲು ಹೇಳಿದ ಕಾಲದಲ್ಲಿ ರಚಿತವಾದ ವಚನಗಳು ಎರಡು ದೃಷ್ಟಿಯಿಂದ 'ವಚನ ಚಳುವಳಿ' ಎನ್ನಿಸಿಕೊಳ್ಳಲು ಯೋಗ್ಯವಾಗಿವೆ : (೧) ಮೊಟ್ಟಮೊದಲ ಬಾರಿಗೆ ಮೂವತ್ತಕ್ಕೂ ಹೆಚ್ಚಿನ ಮಹಿಳೆಯರನ್ನೊಳಗೊಂಡಂತೆ ಇನ್ನೂರಕ್ಕೂ ಮೇಲ್ಪಟ್ಟ ಸಂಖ್ಯೆಯ ಜನರು ವಚನ ರಚನೆಯಲ್ಲಿ ತೊಡಗಿ, ವಚನ ರಚನೆಯನ್ನೇ ಚಳುವಳಿಯ ರೀತಿಯಲ್ಲಿ ಸಾಗಿಸಿದುದು ಹಾಗೂ (೨) ತಮ್ಮ ವೈಯಕ್ತಿಕ ರಚನೆಗಳಾದರೂ ವಚನಗಳನ್ನು ತಮ್ಮ ಕಾಲದಲ್ಲಿ ನಡೆದ ಸಮಾಜೋ-ಧಾರ್ಮಿಕ ಆಂದೋಲನದ ಒಂದು ಭಾಗವಾಗಿ ಅವರು ವಚನಗಳನ್ನು ರಚಿಸಿದುದು. ಆಗ ವೈಯಕ್ತಿಕ ಆಶೋತ್ತರಗಳು ಆ ಚಳುವಳಿಗೆ ಬೆಂಬಲವಿತ್ತವರ ಸಾಮಾಜಿಕ ಕಾಳಜಿಗಳ ಜೊತೆಯಲ್ಲಿ ಮೇಳೈಸಿದವು. ಹೀಗಾಗಿ ವಚನಗಳಿಂದ ಚಳುವಳಿಗೆ ಪ್ರಚಾರ ಸಿಕ್ಕಿತು; ಚಳುವಳಿಯ ಆಶಯಗಳು ಪ್ರಕಟವಾದುವು ಮತ್ತು ಚಳುವಳಿಯ ದೆಸೆಯಿಂದ ವಚನರಚನೆ ವ್ಯಾಪಕವಾಯಿತು, ಸಾಮಾಜಿಕ ಪ್ರಸ್ತುತತೆಯನ್ನು ಪಡೆಯಿತು.

ವಚನ ಚಳುವಳಿಯನ್ನು ಶುದ್ಧರೂಪದ ಸಾಮಾಜಿಕ ಆಂದೋಲನ ಎಂದು ಕರೆಯುವುದು ಕಷ್ಟ. ಏಕೆಂದರೆ ಆಧುನಿಕ ಪರಿಕಲ್ಪನೆಯ ಸಾಮಾಜಿಕ ಆಂದೋಲನ ಆಗ್ಗೆ ಸಾಧ್ಯವಿರಲಿಲ್ಲ; ಎಂದರೆ ಹಾಗೆ ಮಾಡುವುದು ಸಾಧ್ಯವೆಂಬ ಕಲ್ಪನೆಯೇ ಆಗ ಇರಲಿಲ್ಲ. ಅದ್ವಿಜ ಸಮೂಹದ ಆಶೋತ್ತರಗಳಿಗೆ ಬಾಧಕವಾಗಿದ್ದ ಆಗಿನ ಸ್ಥಿರಸಮಾಜ ಆ ವರ್ಗದ ಜನರಲ್ಲಿ ಅತೃಪ್ತಿಯ ಬೆಂಕಿಯನ್ನು ಹೊತ್ತಿಸಿತ್ತು. ಹೀಗಾಗಿ ಪ್ರತಿಭಟನೆಯ ಸ್ಫೋಟನೆಗೆ ಅವಕಾಶವಾಯಿತು. ವಿಶೇಷವಾಗಿ ಅದ್ವಿಜ ಸಮುದಾಯಕ್ಕೆ ಸಾಮಾಜಿಕ-ಧಾರ್ಮಿಕ ನೆಲೆಯಲ್ಲಿ ಪುನಶ್ಚೇತನವನ್ನುಂಟು ಮಾಡಬಲ್ಲ, ವೈದಿಕ ಮತ ವ್ಯವಸ್ಥೆಗೆ ಪರ್ಯಾಯವಾದ ಒಂದು ಸಂಘಟನೆಯು ಹನ್ನೆರಡನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಹೊಗೆಯಾಡುತ್ತಿತ್ತು. ಕೊಂಡಗುಳಿ ಕೇಶಿರಾಜ, ಶಂಕರ ದಾಸಮಯ್ಯ, ಜೇಡರ ದಾಸಿಮಯ್ಯ ಮುಂತಾದವರ ಕಾಲದಲ್ಲಿ ಪ್ರಾರಂಭವಾದ ಈ ಸಂಘಟನೆಯ ಲಕ್ಷಣಾಂಶಗಳನ್ನು ಡಾ. ಎಂ. ಚಿದಾನಂದಮೂರ್ತಿ ನೀಡುತ್ತಾರೆ : (೧) ಬ್ರಾಹ್ಮಣ್ಯದ ತಿರಸ್ಕಾರ; (೨) ಶಿವನ ಬಗೆಗಿನ ನೈಷ್ಠಿಕ ಭಕ್ತಿ; (೩) ರಾಜನಿಗೆ ವಿಶೇಷ ಗೌರವ ನೀಡದೆ ಅವನ ಅಧಿಕಾರವನ್ನು ಪ್ರತಿಭಟಿಸಿದುದು; (೪) ತಮ್ಮ ಗುಂಪಿನ ಜನರಲ್ಲಿ ಜಾತಿ ಭೇದವನ್ನು ಮಾಡದುದು; (೫) ಮಾಂಸಾಹಾರದ ಬಗ್ಗೆ ವಿರೋಧವಿಲ್ಲದಿದ್ದುದು; (೬) ದೇವಾಲಯದ ಪ್ರತಿಮೆ ಹಾಗೂ ಒಯ್ಯಬಹುದಾದ ಲಿಂಗಗಳೆರಡಕ್ಕೂ ಸಲ್ಲಿಸಬಹುದಾದ ಪೂಜೆ; (೭)ತಾವು ಶಿವನಿಗೆ ವೇಳೆವಾಳಿಗಳೇ ಹೊರತು, ತಮ್ಮ ನೌಕರಿಯ ಯಜಮಾನನಿಗೆ ಅಲ್ಲ ಎಂಬ ನಿಲುವು ಹಾಗೂ (೮) ಶಿವಭಕ್ತನಿಗೆ ವಿಶೇಷ ಗೌರವ (ವಚನ ಸಾಹಿತ್ಯ : ೩೦-೩೨).

ಬಸವಣ್ಣ ಬರುವ ಹೊತ್ತಿಗೆ ಈ ಸಂಘಟನೆ ಸ್ಫೋಟಕ ಸ್ಥಿತಿಯನ್ನು ತಲುಪಿತ್ತು. ತನಗೆ ಹಿಂದೆ ರೂಪುಗೊಂಡಿದ್ದ ವೈದಿಕ ವಿರೋಧಿ ನೆಲೆಯನ್ನು ಸ್ವೀಕರಿಸಿ, ಅದಕ್ಕೆ ಕೆಲವು ಪರಿಷ್ಕಾರಗಳನ್ನು ಮಾಡಿ, ಹೊಸ ಕೆಲವು ಪರಿಕಲ್ಪನೆಗಳನ್ನು ಸೇರಿಸಿ ಬಸವಾದಿಗಳು ಅದನ್ನೊಂದು ವ್ಯಾಪಕ ಆಂದೋಲನವನ್ನಾಗಿ ರೂಪಿಸಿದರು. ತಮ್ಮದನ್ನು ವೈದಿಕ ಮತಕ್ಕೆ ಪರ್ಯಾಯವನ್ನಾಗಿ ರೂಪಿಸಬೇಕೆಂಬುದೇ ಅವರ ಆಶಯವಾಗಿತ್ತು. ಈ ಹೊಸ ಆಲೋಚನಾ ಮಾರ್ಗವನ್ನು ಒಪ್ಪಿಕೊಂಡವರು ಭಕ್ತರೆನ್ನಿಸಿಕೊಂಡರು; ಉಳಿದವರು ಭವಿಗಳು. ಕಡು ಶಿವನಿಷ್ಠೆಯ ಕಾರಣ ಅವರು ವೀರಶೈವರೆನ್ನಿಸಿದರು.

ಬಸವಾದಿಗಳು ಸಾಮಾಜಿಕವಾಗಿಯೂ ಕೆಲವು ಪರಿಷ್ಕಾರಗಳನ್ನು ತರ ಬಯಸಿದುದು ಭಕ್ತ ಸಮುದಾಯದಲ್ಲಿಯೇ. ಚೆನ್ನಬಸವಣ್ಣನ ಒಂದು ವಚನವು ಸ್ಪಷ್ಟವಾಗಿ ಮನುಷ್ಯ ಸಮುದಾಯವನ್ನು ಈ ದ್ವೈಧೀಕರಣದಿಂದಲೇ ಪರಿಭಾವಿಸುತ್ತದೆ : ''ವಾರವೇಳು ಕುಲ ಹದಿನೆಂಟು ಎಂಬರಯ್ಯ. ಅದ ನಾವು ಅಲ್ಲವೆಂಬೆವು. ಇರುಳೊಂದು ವಾರ ಹಗಲೊಂದು ವಾರ; ಭವಿಯೊಂದು ಕುಲ, ಭಕ್ತನೊಂದು ಕುಲ. ನಾವು ಬಲ್ಲುದು ಕಾಣಾ ಕೂಡಲ ಚೆನ್ನಸಂಗಮದೇವಾ''. ಹಗಲು-ಇರುಳುಗಳಂತೆ ಭಕ್ತರು-ಭವಿಗಳು; ಪರಸ್ಪರ ವಿರೋಧಿಗಳು, ಕೂಡಿ ಇರಲಾಗದವು. ಹಾಗಾಗಿ ಶರಣರು ತರ ಬಯಸಿದ ಸುಧಾರಣೆಗಳೆಲ್ಲ

ಭವಿಕುಲವನ್ನು ಹೊರತುಪಡಿಸಿ, ಭಕ್ತರ ಸಂಘಟನೆಯ ಉದ್ದೇಶ ಹೊತ್ತವು. "ದೇವ ದೇವಾ, ಬಿನ್ನಪ ಅವಧಾರು : ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೆ ಎಂಬೆ; ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರನೊಂದೆ ಎಂಬೆ" ಎಂದು ಮೊದಲಾಗುವ ಬಸವಣ್ಣನ ವಚನವೂ ಇದನ್ನು ಹೇಳುತ್ತದೆ. ಅಲ್ಲದೆ ಹುಟ್ಟು-ಜಾತಿಗಳನ್ನು ಲೆಕ್ಕಿಸದೆ ಭಕ್ತರನ್ನೆಲ್ಲ ಒಂದೇ ಗೌರವದಿಂದ ಕಾಣುತ್ತೇನೆ; ಅಂತೆಯೇ ಹುಟ್ಟು-ಜಾತಿಗಳ ಲೆಕ್ಕವಿಲ್ಲದೆ ಭವಿಗಳನ್ನೆಲ್ಲ ಒಂದೇ ಅವಜ್ಞತೆಯಿಂದ ಕಾಣುತ್ತೇನೆ ಎಂಬ ಧ್ವನಿಯೂ ಬಸವಣ್ಣನ ಈ ವಚನದಲ್ಲಿದೆ. ಹೀಗಾಗಿ ಶರಣರ ಸಾಮಾಜಿಕ ಆಂದೋಲನವು ಭಕ್ತ ಪರಿಧಿಯಲ್ಲಿಯೇ ನಡೆಯಿತು; ಅದರ ಉದ್ದೇಶವೂ ಅದೇ.

ಇಂತಹ ಭಕ್ತರ ಸುಸಂಘಟನೆಗೆ ಒಂದು ಆಚಾರ-ಸಂಹಿತೆಯನ್ನು ಒದಗಿಸುವ ಪರಿಕಲ್ಪನೆಯೇ'ಪಂಚಾಚಾರ'ಗಳು : ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಚಾರ ಮತ್ತು ಭೃತ್ಯಾಚಾರ. ಸಾಮಾಜಿಕ ನೆಲೆಯಲ್ಲಿ ಇವುಗಳಲ್ಲಿ ಮುಖ್ಯವಾದವೆಂದರೆ ಸದಾಚಾರ ಮತ್ತು ಶಿವಾಚಾರ ಅಥವಾ ಸಮಯಾಚಾರಗಳು. ಸದಾಚಾರವು ಕಾಯಕ-ದಾಸೋಹಗಳನ್ನು ಭಕ್ತ ಅಳವಡಿಸಿಕೊಂಡು ಬಾಳುವುದನ್ನು ಹೇಳುತ್ತದೆ. ಕಾಯಕವೆಂದರೆ ಬುದ್ಧಿ ಅಥವಾ ದೇಹವನ್ನು ಶ್ರಮಕ್ಕೆ ಒಳಗು ಮಾಡಿ ಗೈಯುವ ಒಂದು ವೃತ್ತಿ. ಅದು ಯಾವುದಾದರೂ ಉಪಯುಕ್ತ ಕೆಲಸವಾಗಬಹುದು. ಅವುಗಳಲ್ಲಿ ಭೇದವಿಲ್ಲ, ಅವೆಲ್ಲ ಸಮಾನವಾಗಿ ಪ್ರಮುಖವಾದವು. ಪ್ರಾಮಾಣಿಕವೂ ನಿಷ್ಠವೂ ಆದ ಕಾಯಕನಿರತತೆ ಮಿಕ್ಕ ಯಾವುದೇ ವಸ್ತು-ಭಾವನೆಗಿಂತಲೂ ಶ್ರೇಷ್ಠ. ಹಾಗಾಗಿ ಕಾಯಕದಲ್ಲಿ ತೊಡಗಿರುವ ಕಾಲವೆಂದರೆ ಶಿವಾನುಸಂಧಾನದಂತೆ ಪವಿತ್ರ. ಇಂತಹ ಕಾಯಕದಿಂದ ಬಂದ ದ್ರವ್ಯವು ತನ್ನ ಶ್ರಮಕ್ಕೆ ತಕ್ಕುದಾಗಿರಬೇಕು. ಹೆಚ್ಚಿನ ಆಸೆಯಿಂದ ಪ್ರತಿಫಲ ಪಡೆಯುವುದು ನಿಷಿದ್ಧ. ಇದೇ 'ಸತ್ಯ ಶುದ್ಧ ಕಾಯಕ'. ಹಾಗೆ ಬಂದ ದ್ರವ್ಯದಲ್ಲಿ ಬೇಕಾದಷ್ಟನ್ನು ಭಕ್ತ ತನ್ನ ಜೀವನಕ್ಕೆ ಬಳಸಿಕೊಂಡು ಉಳಿದುದನ್ನು ದಾಸೋಹಕ್ಕೆ ವಿನಿಯೋಗಿಸಬೇಕು. ಗುರುಲಿಂಗ ಜಂಗಮಗಳೆಂಬ ತ್ರಿವಿಧಕ್ಕೆ ಸಲ್ಲಿಸಬೇಕಾದ ಕರ್ತವ್ಯವೇ ದಾಸೋಹ. ಹೆಚ್ಚು ನೀಡುವುದೇ ಕಾಯಕವಲ್ಲ. 'ಸತ್ಯಶುದ್ಧ ಕಾಯಕದಿಂದ ತಂದ ಕಾರೆಯ ಸೊಪ್ಪಾದರೂ' ದಾಸೋಹಕ್ಕೆ ಯೋಗ್ಯ. ಹಾಗಾಗಿ ದಾಸೋಹದಲ್ಲಿ ಮುಖ್ಯವಾಗಿದ್ದು ನೀಡಬೇಕೆಂಬ ಪ್ರಾಮಾಣಿಕ ಬಯಕೆಯೇ ವಿನಾ ಎಷ್ಟು ನೀಡುವೆನೆಂಬ ಗಾತ್ರವಲ್ಲ.

ಕಾಯಕದ ಪರಿಕಲ್ಪನೆ ಮುಖ್ಯವಾಗುವುದು ವ್ಯಕ್ತಿ-ಸಮಾಜಗಳ ಸಂಬಂಧದ ಸ್ವರೂಪವನ್ನು ನಿಷ್ಕೃಷ್ಟಗೊಳಿಸುವ ರೀತಿಯಲ್ಲಿ ತನ್ನ ವೈಯಕ್ತಿಕ ಆಶೋತ್ತರಗಳ ಪೂರೈಕೆಗೆ ಅನುವು ನೀಡುವ ಸಮಾಜಕ್ಕೆ ವ್ಯಕ್ತಿ ಸಲ್ಲಿಸಬೇಕಾದ ಕರ್ತವ್ಯ ಹಾಗೂ ವ್ಯಕ್ತಿಯ ಮುಕ್ತ ಬೆಳವಣಿಗೆಗೆ ಅವಕಾಶ ನೀಡಬೇಕಾದ ಸಮಾಜದ ಸ್ವರೂಪ - ಈ ಎರಡೂ ಪರಸ್ಪರ ವಿರೋಧವಾಗದೆ ಪೂರಕವಾಗಬೇಕೆಂಬುದೇ ಕಾಯಕ-ದಾಸೋಹಗಳಲ್ಲಿ ಅಡಕವಾಗಿರುವ ಆಶಯ. ವ್ಯಕ್ತಿಯು ಐಹಿಕ ನೆಲೆಯಲ್ಲಿ ಸಂತೋಷ-ತೃಪ್ತಿಗಳಿಂದ ಬಾಳುವುದನ್ನು ಶರಣರು ಅಲ್ಲಗಳೆಯಲಿಲ್ಲ. ಬಲವಂತದ ಇಂದ್ರಿಯ ನಿಗ್ರಹವನ್ನು ಅವರು ಖಂಡಿಸಿದರು. "ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕೂಡುವುದು. ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು. ಭಕ್ತನ ಮನ ಹೊನ್ನಿನೊಳಗಾದಡೆ ಬಳಲಿ ದೊರಕಿಸುವುದು ನೋಡಾ, ಕಪಿಲ ಸಿದ್ಧಮಲ್ಲಿಕಾರ್ಜುನಾ" ಎಂದು ಸಿದ್ಧರಾಮ ಹೇಳುತ್ತಾನೆ. 'ಹೆಣ್ಣು ಹೊನ್ನು ಮಣ್ಣು' ಐಹಿಕತೆಯನ್ನು ಸಂಕೇತಿಸುವ ನುಡಿಗಟ್ಟು. ಇದರಲ್ಲಿ ಆಸಕ್ತನಾಗುವುದು (ಕನಿಷ್ಟ ಪಕ್ಷ ಒಂದು ನೆಲೆಯಲ್ಲಿ) ನಿಷಿದ್ಧವಲ್ಲ. ಆದರೆ ಅದರಿಂದ ಪಡೆವ ಸಂತೋಷ ನ್ಯಾಯಯುತವಾಗಿರಬೇಕು, ಶುಚಿಯಾಗಿರಬೇಕು. ವಿವಾಹವಾಗಿ, ಕೊಂಡು, ಬಳಲಿ - ಈ ಮೂರನ್ನೂ ಪಡೆಯಬೇಕೆಂಬ ಮಾತು ಈ ಐಹಿಕ ಸಂತೋಷದ ಶುಚಿಮಾರ್ಗವನ್ನು ಸೂಚಿಸುತ್ತದೆ. ಈ ಮಾರ್ಗ ಸಾಧ್ಯವಾಗುವುದು ಕಾಯಕದಿಂದ; ಸಾರ್ಥಕವಾಗುವುದು ದಾಸೋಹದಿಂದ.

ದಾಸೋಹವೆಂದರೆ ಸೇವೆ ಎಂಬರ್ಥವಿದ್ದರೂ ತ್ರಿವಿಧ ದಾಸೋಹ ಜಂಗಮ ದಾಸೋಹ ಎಂಬ ಮಾತುಗಳು ಅವುಗಳಿಗೆ ಸಲ್ಲಿಸಬೇಕಾದ ಕರ್ತವ್ಯವನ್ನು ಸೂಚಿಸುತ್ತವೆ. ಈ ಕರ್ತವ್ಯದ ಸ್ವರೂಪವೇನು ? 'ಜಂಗಮ' ತುಂಬ ಸಾಧಾರಣ ನೆಲೆಯಲ್ಲಿ ವೀರಶೈವ ವಿರಕ್ತನನ್ನು ಸೂಚಿಸುತ್ತದೆ. ಆತ ವೈಯಕ್ತಿಕತೆಯನ್ನು ತೊರೆದು ಸಮುದಾಯದ ಅಭಿವೃದ್ಧಿಗೆ ಶ್ರಮಿಸುವವನು. ಹೀಗಾಗಿ ಆತನ ಜೀವನದ ಹೊಣೆ ಭಕ್ತರದ್ದು. ಆದ್ದರಿಂದ ಜಂಗಮನ ಜೀವನ ನಿರ್ವಹಣೆಗೆ ನೆರವಾಗುವುದೇ ಮೊದಲ ಹಂತದಲ್ಲಿ ದಾಸೋಹ; ಅದೂ ಜಂಗಮನಿಗೆ ಊಟಕ್ಕಿಡುವುದು. ಮುಂದಿನ ಹಂತದಲ್ಲಿ ಜಂಗಮ ಎಂದರೆ ಭಕ್ತಸಮಾಜ. "ಬಸವ ಬಾರಯ್ಯಾ, ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ. ನಾನೊಬ್ಬನೇ ಭಕ್ತನು - ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ ಲಿಂಗ ನೀನೇ ಅಯ್ಯಾ, ಕೂಡಲಸಂಗಮದೇವಾ" ಎಂಬ ಬಸವಣ್ಣನ ವಚನವು, ಭಕ್ತನು ತನ್ನನ್ನುಳಿದ ಮಿಕ್ಕ ಭಕ್ತ ಸಮುದಾಯವನ್ನೆಲ್ಲ ಜಂಗಮವಾಗಿ ಪರಿಭಾವಿಸಬೇಕೆಂಬುದನ್ನು ಸೂಚಿಸುತ್ತದೆ. ಕೊನೆಯ ಹಂತದಲ್ಲಿ "ಸ್ಥಾವರಕ್ಕಳಿವುಂಟು,

ಜಂಗಮಕ್ಕಳಿವಿಲ್ಲ'' ಎಂಬ ಬಸವಣ್ಣನದೇ ಮಾತು ಕೊನೆಯಿರುವ ವ್ಯಕ್ತಿ-ಕೊನೆಯಿರದ ಶಕ್ತಿಗಳ ಸ್ವರೂಪವನ್ನು ಸೂಚಿಸುತ್ತದೆ. ಎಂದರೆ ಆತ್ಯಂತಿಕ ಸ್ಥಿತಿಯಲ್ಲಿ 'ದಾಸೋಹ'ವು ತಾನು ಯಾವುದರ ಭಾಗವಾಗಿದ್ದಾನೋ ಆ ಸೃಷ್ಟಿಯ ಬಗ್ಗೆ ವ್ಯಕ್ತಿಜೀವ ಅನುಸಂಧಾನದ ಮೂಲಕ ವ್ಯಕ್ತಪಡಿಸುವ ಭಾವನೆಯೇ ಆಗಿದೆ. ಹಾಗಾಗಿ ಜಂಗಮ ದಾಸೋಹವೆಂಬುದಕ್ಕೆ ವ್ಯಾಪಕ ಅರ್ಥವಿದೆ; ಆ ಕಾರಣಕ್ಕಾಗಿಯೇ ಅದಕ್ಕೆ ಮಹತ್ವವೂ ಪ್ರಾಪ್ತವಾಗಿದೆ.

ಶಿವಾಚಾರವು ಭಕ್ತ ಸಮುದಾಯದಲ್ಲಿ ವರ್ಣ-ಜಾತಿ ಭೇದಗಳನ್ನು ಮಾಡದಿರುವ ನೆಲೆಯನ್ನು ಸೂಚಿಸುತ್ತದೆ. ''ಚತುರ್ವರ್ಣಾತೀತನೇ ವೀರಶೈವ ನೋಡಾ'' ಎಂಬ ಸಿದ್ಧರಾಮನ ಮಾತು ಭಕ್ತನು ಚತುರ್ವರ್ಣಗಳನ್ನು ಮೀರಿದವನು ಎಂಬುದನ್ನು ಸೂಚಿಸುವಂತೆಯೇ, ಚಾತುರ್ವರ್ಣ್ಯ ಪದ್ಧತಿಯನ್ನು ಪುರಸ್ಕರಿಸುವ ವೈದಿಕ ವ್ಯವಸ್ಥೆಗೆ ಹೊರತಾದವನು ಎಂಬ ಧ್ವನಿಯನ್ನು ಪಡೆದಿದೆ. ಆದ್ದರಿಂದ ವೀರಶೈವನು ವರ್ಣ-ಜಾತಿಗಳ ಗುಂಗಿನಿಂದ ಹೊರಬಂದರೆ ಮಾತ್ರ ನಿಜವಾದ ಅರ್ಥದಲ್ಲಿ ಭಕ್ತನಾಗುತ್ತಾನೆ. ವಚನ ಚಳುವಳಿಯ ಕಾಲಕ್ಕೆ ಆಗಲೇ ವರ್ಣಗಳು ಜಾತಿಗಳಾಗಿ ಮಾರ್ಪಟ್ಟಿದ್ದವು. ವೈದಿಕ ವ್ಯವಸ್ಥೆಯಲ್ಲಿ ಮೊದಲ ಮೂರು ದ್ವಿಜವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯಗಳು ಅದೇ ಕ್ರಮದ ಪ್ರಾಮುಖ್ಯದಲ್ಲಿ ಜಾತಿಗಳಾಗಿ ಬದಲಾಗಿದ್ದವು. ಶೂದ್ರ 'ವರ್ಣ'ದವರು ದೇಹಶ್ರಮದ ವೃತ್ತಿಯಲ್ಲಿ ತೊಡಗಿದವರಾದ್ದರಿಂದ ಎಷ್ಟು ಅಂತಹ ವೃತ್ತಿಗಳಿದ್ದವೋ ಅಷ್ಟು ಸಂಖ್ಯೆಯ ಜಾತಿಗಳಾಗಿ ಒಡೆದಿದ್ದವು. ಆ ಕಾಲದ 'ಹೊಲೆ ಹದಿನೆಂಟು ಜಾತಿ' ಎಂಬ ನುಡಿಗಟ್ಟು ಜಾತಿ ಸಂಖ್ಯೆಯನ್ನು ಸ್ಥೂಲವಾಗಿ ತಿಳಿಸುತ್ತದೆ. ಬ್ರಾಹ್ಮಣನಿಂದ ಮೊದಲುಗೊಂಡು ಮಾದಿಗನಲ್ಲಿ ಕೊನೆಯಾಗುವ ಈ ಜಾತಿಪಟ್ಟಿ ಅನುಶ್ರೇಣಿ ಸೂಚಕತೆಯೊಂದಿಗೆ ಅನೇಕ ವಚನಗಳಲ್ಲಿ ದೊರಕುತ್ತದೆ. ಹೀಗಾಗಿ 'ಕಾಯಕ'ಕ್ಕೆ ಅನುಗುಣವಾದ ಜಾತಿಗಳು, ಅವುಗಳನ್ನು ಅನುಸರಿಸುತ್ತಿದ್ದವರು ಭಕ್ತರಾದ್ದರಿಂದಾಗಿ, ವೀರಶೈವ ವಲಯಕ್ಕೂ ಪ್ರವೇಶ ಮಾಡಿದ್ದವು. ಆದ್ದರಿಂದಲೇ ಸಿದ್ಧರಾಮ ಆ ಗುಂಗಿನಿಂದ ಹೊರಬರಬೇಕೆಂದು ಕರೆಕೊಟ್ಟದ್ದು. ಇದು ವೃತ್ತಿಯಲ್ಲಿ ತನ್ನ ಮೂಲವನ್ನು ಹೊಂದಿದೆ ಎಂದು ಗುರುತಿಸುವ ಬಸವಣ್ಣನು, ಎಲ್ಲ ಪಂಗಡದ ಜನರ ಬದುಕಿನ ಸ್ವರೂಪವೂ ಒಂದೇ ಆದ್ದರಿಂದ, ವೃತ್ತಿ ವ್ಯತ್ಯಾಸವು ಅವಕಾಶ ವ್ಯತ್ಯಾಸಕ್ಕೆ-ತಾರತಮ್ಯಕ್ಕೆ ಕಾರಣವಾಗಬಾರದೆಂದು ವಾದಿಸುತ್ತಾನೆ.

ವಚನಕಾರರು ಸಾಮಾನ್ಯ ಜನಗಳನ್ನು ಉದ್ದೇಶಿಸಿ ತಮ್ಮ ಸುಧಾರಣಾ ಕಾರ್ಯಕ್ಕೆ ಕೈಹಾಕಿದ್ದರಿಂದ ಅವರ ಬರಹ-ಮಾತು ಸಹಜವಾಗಿ ಕನ್ನಡದ ಮೂಲಕ ನಡೆಯಿತು. ಕನ್ನಡ ಭಾಷೆಯ ಬಗ್ಗೆ ಪ್ರಜ್ಞಾಪೂರ್ಣ ಹೇಳಿಕೆಗಳನ್ನೆಲ್ಲಾ ವಚನಗಳಲ್ಲಿ ನಾವು ಕಾಣುವುದಿಲ್ಲವಾದರೂ, ಅವರು ಕನ್ನಡದಲ್ಲಿಯೇ ನಮ್ಮೆಲ್ಲ ರಚನೆಗಳನ್ನು ಮಾಡಿದುದು ಅವರ ಜನಪದ ನಿಲವಿನ ಕಾರಣದಿಂದಾಗಿಯೇ. 'ಕನ್ನಡ' ಎಂಬ ಪದ ಕಣ್ಣಡ, ಕಣ್ಣಡ್ಡ ಎಂಬ ರೂಪಗಳಿಗೆ ಪರ್ಯಾಯವಾಗಿ ವಚನಗಳಲ್ಲಿ ಬಳಕೆಯಾಗಿದೆ ; ಭಾಷಾವಾಚಿಯಾಗಲ್ಲ. ಒಟ್ಟು ವೈದಿಕ ಸಂಬಂಧೀ ಪರಿಕಲ್ಪನೆಗಳನ್ನು ವಚನಕಾರರು ತಿರಸ್ಕರಿಸಿದ್ದರಿಂದ ಸಂಸ್ಕೃತದ ಪ್ರಾಮುಖ್ಯವನ್ನೂ ಅವರು ಅಲ್ಲಗಳೆಯುವಂತಾಯಿತು. ವಚನಗಳು ಮೂಲತಃ ಸಂಸ್ಕೃತ ಮಂತ್ರಗಳಿಗೆ ಪರ್ಯಾಯವಾಗಬೇಕೆಂಬ ಆಶಯವು ಶರಣರಲ್ಲಿ ಇದ್ದಂತೆ ಕಾಣುತ್ತದೆ.

ಹನ್ನೆರಡನೆಯ ಶತಮಾನದ ಶರಣರ ಆಂದೋಲನವು ಒಟ್ಟಾರೆಯಾಗಿ ಸಮಾಜಮುಖಿಯಾಗಿತ್ತು. ವಚನಕಾರರಲ್ಲಿ ಅತಿ ಸಾಮಾನ್ಯರ ಉದಾಹರಣೆಯನ್ನು ತೆಗೆದುಕೊಂಡರೂ ಅಲ್ಲಿ ಎರಡು ಮುಖ್ಯ ಧಾರೆಗಳ ಮನೋಭಾವವು ಅಭಿವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ: ತಮ್ಮಿಂದ ಇದುವರೆಗೆ ಬಹುದೂರವಿದ್ದ ಅಧ್ಯಾತ್ಮಚಿಂತನೆ; ಇದುವರೆಗೆ ಯಾರು ಆಧ್ಯಾತ್ಮಿಕ ಸಿದ್ಧಿಯಿಂದ ವಂಚಿತರಾಗಿದ್ದಾರೋ ಅವರೂ ಆ 'ಅಚಿಂತ್ಯ'ದ ಬಗ್ಗೆ ಆಲೋಚಿಸಲು ತೊಡಗಿದರು. ಎರಡನೆಯದಾಗಿ, ಒಟ್ಟು ಸಮಾಜದ ಸ್ವರೂಪದ ಬಗ್ಗೆ ಚಿಂತಿಸಿದುದು; ಎಂದರೆ ಜಾತಿ ಮುಂತಾದ ಕಟ್ಟುನಿಟ್ಟಿನ ಸಾಮಾಜಿಕ ಪದ್ಧತಿಗಳನ್ನು ಸ್ವರ್ಗ-ನರಕ ಕಲ್ಪನೆಗಳನ್ನು ವೈಚಾರಿಕ ನೆಲೆಯಲ್ಲಿ ಪರೀಕ್ಷಿಸಲು ಸಿದ್ಧರಾದುದು. ಹೀಗಾಗಿಯೇ ಕಾಳವ್ವೆಯಂತಹ ದಲಿತ ಹೆಣ್ಣುಮಗಳು ಜಾತಿ ಪದ್ಧತಿಯ ಬಗ್ಗೆ ಬರೀ ಆಕ್ರೋಶದಿಂದ ಮಾತಾಡವೆ, ವಿಶ್ಲೇಷಣಾ ವಿಧಾನವನ್ನು ಅನುಸರಿಸಿದ್ದು, ಲಿಂಗಮ್ಮನಂತಹ ಮಹಿಳೆಯು ಕೈಲಾಸ-ಮರ್ತ್ಯಲೋಕಗಳ ವ್ಯತ್ಯಾಸವನ್ನು ಖಂಡಿಸಿ ''ಶಿವಶರಣರು ಸುರಲೋಕವನು ನರಲೋಕವನು ತೃಣವೆಂದು ಭಾವಿಸು''ತ್ತಾರೆಂದು ಹೇಳುವಂತಹ ದಿಟ್ಟತನ ತೋರಿಸುತ್ತಾಳೆ. ಬಹುತೇಕ ವೈಯಕ್ತಿಕತೆಯ ನೆಲೆಯನ್ನು ತೊರೆದು ಸಮಾಜಮುಖೀ ಆಲೋಚನೆಯಲ್ಲಿ ತೊಡಗುವುದನ್ನು ವಚನಕಾರರಲ್ಲಿ ಕಾಣುತ್ತೇವೆ.

ಕಾಲಕಾಲಕ್ಕೆ ಈ ಸಾಮಾಜಿಕ ನೆಲೆಯ ಆಲೋಚನೆ-ಆದರ್ಶಗಳು ವೀರಶೈವದಿಂದ ದೂರವಾದದ್ದು ನಿಜವಾದರೂ, ಕೆಲವು ಅಪೇಕ್ಷಣೀಯ ಪ್ರವೃತ್ತಿಯು ಉಳಿದು ಬಂದಿರುವುದೂ ಅಷ್ಟೇ ಸತ್ಯ. ಹನ್ನೆರಡನೆಯ ಶತಮಾನದ ನಂತರ ಕಾಳಾಮುಖರಿಗೆ ಸೇರಿದ್ದ ಅನೇಕ ಮಠಗಳು ವೀರಶೈವರ ಕೈಗೆ ಬಂದವು (G.S. Dikshit : 'Social and Religious conditions of Karnataka before Basava': Sri Basavesvara - A commemoration Volume, p.123). ಭಾರತದಲ್ಲಿ

ಮಠಗಳ ಇತಿಹಾಸ ಶಂಕರಾಚಾರ್ಯರಿಂದ ಪ್ರಾರಂಭವಾದಂತೆ ತೋರುತ್ತದೆ. ಕಾಳಾಮುಖರ ವಶದಲ್ಲಿದ್ದ ಮಠಗಳು ಸಾಮಾಜಿಕವಾಗಿ ಉಪಯುಕ್ತವಾದ ಕಾರ್ಯದಲ್ಲಿಯೂ ತೊಡಗಿದ್ದವು. ಉದಾಹರಣೆಗೆ ಹನ್ನೆರಡನೆಯ ಶತಮಾನದಲ್ಲಿ ಬಳ್ಳಿಗಾವೆಯಲ್ಲಿದ್ದ ಕೋಡೀಮಠವು ಬಹು ದೊಡ್ಡ ವಿದ್ಯಾಕೇಂದ್ರವಾಗಿದ್ದುದಲ್ಲದೆ, ಅಲ್ಲಿ ರೋಗ ಶುಶ್ರೂಷೆಯಂತಹುದಕ್ಕೂ ಅವಕಾಶವಿತ್ತು. ಪ್ರಾಯಶಃ ಈ ಪರಂಪರೆಯನ್ನು ಮುಂದೆ ವೀರಶೈವ ಮಠಗಳು ಮುಂದುವರೆಸಿದವು. ಸಾಲಿಮಠಗಳು, ಓದಿಸುವ ಮಠಗಳು, ವಿರಕ್ತ ಮಠಗಳು - ಎಂಬ ಮೂರು ಬಗೆಯ ಮಠಗಳು ಮುಂದೆ ಅಸ್ತಿತ್ವಕ್ಕೆ ಬಂದವೆಂದು ಕೆಲವರು ಹೇಳುತ್ತಾರೆ. (ಡಾ. ಜಿ. ಶಿವರುದ್ರಪ್ಪ : 'ಕರ್ನಾಟಕದಲ್ಲಿ ವಿದ್ಯಾಭಿವೃದ್ಧಿಗೆ ವೀರಶೈವ ಮಠಗಳ ಕೊಡುಗೆ': ಕಾಯಕ ಪರಿಣಾಮಿ. : ಪು. ೪೭೦-೭೧). ಕೆಲವದರಲ್ಲಿ ವಿವಿಧ ಬಗೆಯ ಕಾಯಕಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತೆಂಬ ಭಾವನೆಯೂ ಇದೆ.

ವಿಜಯನಗರದ ಕಾಲದಲ್ಲಿ ಹಾಗೂ ಅನಂತರ ನಡೆದ ವೀರಶೈವ ಪುನರುಜ್ಜೀವನ ಕಾರ್ಯವು ಬಸವಾದಿಗಳು ಬಿತ್ತಿದ್ದ ಸಾಮಾಜಿಕ ಆದರ್ಶಗಳ ಹಾದಿಯನ್ನು ಸ್ವಲ್ಪಮಟ್ಟಿಗೆ ಅನುಸರಿಸಿದವು. ಕನ್ನಡ ಭಾಷೆಯ ಬೆಳವಣಿಗೆಗೆ ವೀರಶೈವ ಮಠಗಳು ನೀಡಿರುವ ಕಾಣಿಕೆ ವಿಶೇಷವಾದದ್ದು. ಪ್ರೌಢದೇವರಾಯನ ಕಾಲದಲ್ಲಿ ಮತ್ತು ಮುಂದೆ ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ಕನ್ನಡ ಕಾವ್ಯಗಳ ರಚನೆಗೆ ಎಂತಹ ಭರತಿ ಬಂದಿಂತೆಂಬುದು ಕನ್ನಡ ಸಾಹಿತ್ಯ ಚರಿತ್ರೆಯನ್ನು ಬಲ್ಲವರು ಅರಿತಿದ್ದಾರೆ. ಅಲ್ಲದೆ, ಸಹಜವಾಗಿಯೇ ಈ ಬದಲಾವಣೆ ಸಂಭವಿಸಿರಬಹುದಾದರೂ, ಕಾವ್ಯದ ಭಾಷೆ ಸರಳವಾಗಲು ಬಸವಾದಿಗಳ ವಚನಗಳ ಮೇಲ್ಪಂಕ್ತಿ ಕಾರಣವಾಗಿರಲೂ ಸಾಕು. ಇಂದಿಗೂ ವೀರಶೈವ ಮಠಗಳಲ್ಲಿ ಕನ್ನಡಕ್ಕೆ ಮಹತ್ವವಿರಲು ಕಾರಣ ಬಸವಾದಿಗಳು ಕನ್ನಡದಲ್ಲಿ ವಚನಗಳನ್ನು ಬರೆದು 'ಜನವಾಣಿ ದೇವವಾಣಿಯಾಗು'ವಂತೆ ಮಾಡಿದುದು. ಹಾಗಾಗಿ ಕನ್ನಡಕ್ಕೆ ಪೂಜ್ಯತೆ ದೊರೆಯುವಲ್ಲಿ ವಚನಕಾರರ ಪಾತ್ರ ಹಿರಿದು.

ಅನುಭವ ಮಂಟಪವು ಒಂದು ವ್ಯವಸ್ಥಿತ ಸಂಸ್ಥೆಯಾಗಿ ವಚನಕಾರರ ಕಾಲದಲ್ಲಿ ಕಾರ್ಯ ನಿರ್ವಹಿಸುತ್ತಿತ್ತೇ ಎಂಬುದು ತೀವ್ರ ವಿವಾದಾಸ್ಪದ ವಿಷಯ. ಆದರೆ ಸಾಂಕೇತಿಕವಾಗಿದ್ದ ಈ ಕಲ್ಪನೆ, ವೀರಶೈವ ಪುರಾಣಗಳಲ್ಲಿ ವೈಭವಯುಕ್ತವೂ ಸುಸಂಘಟಿತವೂ ಆದ ಸಂಸ್ಥೆಯಾಗಿ ಚಿತ್ರಿತವಾದವು. ಇದರಿಂದ ಆದ ಒಂದು ಮುಖ್ಯ ಪ್ರಯೋಜನವೆಂದರೆ ಮಠಗಳು'ಶಿವಾನುಭವಗೋಷ್ಠಿ'ಗಳಂತಹ ಚಿಂತನ ಕಾರ್ಯಕ್ರಮಗಳನ್ನು ನಡೆಸುವುದು, ಬೇರಾವ ಮಠಗಳಿಗಿಂತಲೂ ವೀರಶೈವ ಮಠಗಳು ಇಂತಹ ವೈಚಾರಿಕ ನೆಲೆಯ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವಮಂಟಪದಂತಹ ಕಲ್ಪನೆಯು ಮುಖ್ಯ ಪ್ರೇರಕ ಅಂಶವಾಗಿದೆ.

ವಚನಕಾರರ ಸಂಖ್ಯೆ ಹನ್ನೆರಡನೆಯ ಶತಮಾನದಲ್ಲಿ ಇನ್ನೂರನ್ನು ದಾಟಿತ್ತು; ಅವರಲ್ಲಿ ಮೂವತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು. ಇದರಿಂದಾಗಿ ಆ ಕಾಲವೆಂದರೆ ವಿದ್ಯೆ, ಅಭಿವ್ಯಕ್ತಿ ಪ್ರಯತ್ನಗಳು ಸಾರ್ವತ್ರಿಕವಾದದ್ದು. "ಲಿಂಗವಂತರು ತಾವಾದ ಬಳಿಕ ಅನುಭವದ ವಚನಗಳ ಹಾಡಿ ಸುಖಿದುಃಖಿಗಳಿಗಭೇದ್ಯವಾಗಿರಬೇಕು" ಎಂಬ ಸಿದ್ಧರಾಮನ ಮಾತಿನಂತಹ ನುಡಿಗಳು (ಅವುಗಳ ನಿಜವಾದ ಅರ್ಥ ಏನೇ ಇರಲಿ) ಮುಂದೆಯೂ ಅಸಂಖ್ಯಾತ ವಚನಕಾರರು ಬರಲು ಕಾರಣವಾಯಿತು. ಎಂದರೆ ಕಲಿಯುವುದು, ಬರೆಯುವುದು ವ್ಯಾಪಕವಾಗಲು ಶರಣರ ಆಂದೋಲನದ್ದೇ ಪ್ರೇರಣೆ. ಇದೇ ವೀರಶೈವ ಮಠಗಳು ಎಲ್ಲ ಕಾಲದಲ್ಲಿಯೂ ವಿದ್ಯಾಭ್ಯಾಸ ಕೇಂದ್ರಗಳಾಗಲು ಕಾರಣವಾಯಿತು. ಆಧುನಿಕ ಕಾಲದಲ್ಲಿಯೂ ಬಹುತೇಕ ಮಠಗಳು ವಿಪುಲ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತ ಬಂದಿರುವುದು ಈ ಪರಂಪರೆಯ ಮುಂದುವರಿಕೆಯಾಗಿದೆ.

ಮಠಗಳಲ್ಲಿ ನಡೆಯುವ, ನಡೆಯುತ್ತಿರುವ ಬಹು ಅಮೂಲ್ಯ ಕಾರ್ಯವೆಂದರೆ ದಾಸೋಹ. ದಾಸೋಹದ ವಿವಿಧ ನೆಲೆಗಳು ಯಾವುದೇ ಇರಲಿ, ಮೂಲತಃ ಹಸಿದವರಿಗೆ ಅನ್ನ ನೀಡುವುದು ಎಂಬ ಸಾಮಾನ್ಯಾರ್ಥ ಇಂದು ಬಳಕೆಯಲ್ಲಿದ್ದು ಆ ಕಾರ್ಯ ಮಠಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಇದಕ್ಕೆ ಕಾರಣ ಜಂಗಮ ದಾಸೋಹದ ಪರಿಕಲ್ಪನೆಯ ಜೊತೆಗೆ ವಚನಕಾರರು ಹಸಿವಿನ ತೀವ್ರತೆಯನ್ನು, ಅದರ ನಿವಾರಣೆಯ ಮಹತ್ವವನ್ನು ವಿವರಿಸಿದ್ದು. ಜೇಡರ ದಾಸಿಮಯ್ಯನು "ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದರೆ ವಿಷವೇರಿತ್ತಯ್ಯಾ ಆಪಾದ ಮಸ್ತಕಕ್ಕೆ, ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ" ಎಂದು ಹೇಳಿ, ಹಸಿವಿನ ತೀವ್ರವೂ ವ್ಯಾಪಕವೂ ಆದ ಅಸ್ತಿತ್ವವನ್ನು ಮನವರಿಕೆ ಮಾಡಿಕೊಟ್ಟಿದ್ದಾನೆ. ಅಂಬಿಗರ ಚೌಡಯ್ಯನಂತೂ "ದೇಹಾರವ ಮಾಡುವಣ್ಣಗಳಿರಾ, ಒಂದು ತುತ್ತು ಆಹಾರವಸಿಕ್ಕಿರೆ, ದೇಹಾರಕ್ಕೆ ಆಹಾರವೆ ನಿಚ್ಚಣಿಗೆ, ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ ಆ ಹರನಿಲ್ಲೆಂದನಂಬಿಗ ಚೌಡಯ್ಯ" ಎಂದು ಹೇಳಿ ಆಹಾರವನ್ನು ನೀಡುವ ಮಹತ್ವವನ್ನು ವಿವರಿಸಿದ್ದಾನೆ. ಹೀಗಾಗಿ ವೀರಶೈವ ಮಠಗಳೂ (ಉಳಿದ ಮಠಗಳೂ, ಈಗೀಗ) ಅಗಾಧ ಪ್ರಮಾಣದಲ್ಲಿ ಅನ್ನವನ್ನು ನೀಡುತ್ತ ಒಂದೆಡೆಗೆ ಈ ಆದರ್ಶಪಾಲನೆಯಲ್ಲಿ

ತೊಡಗಿರುವುದರೊಂದಿಗೆ, ಅನ್ನವಿಲ್ಲದ ಕಾರಣಕ್ಕಾಗಿಯೇ ವಿದ್ಯೆ ಕಲಿಯಲಾರದವರಿಗೆ ಒಂದು ದಾರಿ ತೋರಿಸಿ, ವಿದ್ಯೆ ಕಲಿಯಲು ಅನುವು ಮಾಡುಕೊಡುತ್ತಲಿವೆ. ಈ ದಾಸೋಹವು ಪರ್ಯಾಯವಾಗಿ ಆಧುನಿಕ ಪರಿಸ್ಥಿತಿಗನುಗುಣವಾಗಿ ಭೇದವಿಲ್ಲದೆ ತಕ್ಕಮಟ್ಟಿಗೆ ಸಾಗುತ್ತಿದೆ.

ದಾಸೋಹದ ಪದ್ಧತಿಯಿಂದಾಗಿ ಮಠಗಳಲ್ಲಿ ವ್ಯಕ್ತಿ-ವ್ಯಕ್ತಿ ಸಂಬಂಧಕ್ಕಿಂತ ವ್ಯಕ್ತಿ-ಸಂಸ್ಥೆಗಳ ಸಂಬಂಧ ಮುಖ್ಯವಾಗಿ, ಅನೇಕ ಮುಜುಗರಗಳನ್ನು ನಿವಾರಿಸಲು ಸಹಾಯಕವಾಗಿದೆ. ಭಕ್ತರು ಮಠಕ್ಕೆ ನೀಡುತ್ತಾರೆ; ಮಠಗಳು ವ್ಯಕ್ತಿಗಳಿಗೆ ನೀಡುತ್ತವೆ. ಹೀಗಾಗಿ ಅನ್ನದ ವಿತರಣೆ ಸಾಂಸ್ಥಿಕವಾಗಿ ನಡೆಯುವುದರಿಂದ ವ್ಯಕ್ತಿ-ವ್ಯಕ್ತಿಗಳ ನಡುವೆ ಕೊಡು-ಕೊಳುಗಳು ನಡೆಯದೆ ವ್ಯಕ್ತಿಯು ದೀನನಾಗುವುದು ತಪ್ಪುತ್ತದೆ. ಹೀಗಾಗಿ ಭಕ್ತ-ಜಂಗಮ ಸಂಬಂಧವು ಭಕ್ತ-ಮಠ-ವ್ಯಕ್ತಿಗಳ ಸಂಬಂಧವಾಗಿ ಮಾರ್ಪಟ್ಟಿದೆ.

ಒಟ್ಟಾರೆ ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ನಡೆಸಿದ ಆಂದೋಲನದ ಸಾಮಾಜಿಕ ಮುಖವು ಇಪ್ಪತ್ತನೆಯ ಶತಮಾನದವರೆಗೂ ವ್ಯತ್ಯಸ್ತಗೊಂಡ ರೂಪದಲ್ಲಿ ಉಳಿದು ಬಂದಿದೆ. ವಚನಕಾರರ ಸಾಮಾಜಿಕ ಆಶಯಗಳ ಸ್ವರೂಪವು ಈಗ ಉಳಿದಿಲ್ಲದಿರಬಹುದು. ಆದರೆ ಅವುಗಳ ಗುಣಾತ್ಮಕ ಅಂಶಗಳು ಆಧುನಿಕ ಸಂವೇದನೆಯೊಂದಿಗೆ ಹೊಂದಿಕೊಂಡು ತಕ್ಕಮಟ್ಟಿಗೆ ಈಗಲೂ ಉಳಿದುಕೊಂಡಿದೆ. ಹನ್ನೆರಡನೆಯ ಶತಮಾನದ ಆಂದೋಲನಕ್ಕೂ ಇಪ್ಪತ್ತನೆಯ ಶತಮಾನದ ವೀರಶೈವ ಮಠಗಳಿಗೂ ಇರುವಂಥದು "ಎತ್ತಣಿಂದೆತ್ತ ಸಂಬಂಧವಯ್ಯಾ" ಎಂದು ವಿಸ್ಮಯ ಪಡುವಂತಹುದೇನೂ ಆಗಿಲ್ಲ; ಅಲ್ಲಿರುವುದು ಸಹಜ ಪಾರಂಪರಿಕ ಸಂಬಂಧ.

We, the Chancellor, Vice-Chancellor and Members of the Senate of the **Karnatak University** certify that the Honorary Degree of

Doctor of Letters

has been conferred on

His Holiness Shivakumar Swamiji, B.A.,

at Dharwar, on Sixth November, in the year one thousand nine hundred and sixty-five.

In Testimony whereof are set the Seal of the said University and the Signature of the said Chancellor.

V.V. Giri

Chancellor

ವಿವಿಧ ವೀರಶೈವ ಮಠಗಳ ಕೊಡುಗೆ

ಶ್ರೀ ರಂಭಾಪುರಿ ರೇಣುಕಾಚಾರ್ಯ ಪೀಠ

ಶ್ರೀ ಕಾಶಿ ಜಂಗಮವಾಡಿಮಠ

ಶ್ರೀಶೈಲ ಸಿಡುಮಾಮಿಡಿ ಪೀಠ

ಶ್ರೀ ಶಿವಯೋಗ ಮಂದಿರ

ಶ್ರೀ ಚಿತ್ರದುರ್ಗದ ಬೃಹನ್ಮಠ

ಶ್ರೀ ಹುಬ್ಬಳ್ಳಿ ಮೂರುಸಾವಿರ ಮಠ

ಗದಗಿನ ಶ್ರೀ ತೋಂಟದಾರ್ಯಮಠ

ಸಿರಿಗೆರೆ ಶ್ರೀ ತರಳಬಾಳು ಮಠ

ಶ್ರೀ ಸುತ್ತೂರು ಮಠ

ಮುಂಡರಗಿ ಶ್ರೀ ಅನ್ನದಾನೇಶ್ವರ ಮಠ

ಧಾರವಾಡ ಶ್ರೀ ಮುರುಘಾ ಮಠ

ಕೊಪ್ಪಳ ಶ್ರೀ ಗವಿಮಠ

ಬೆಳಗಾವಿ ಶ್ರೀ ನಾಗನೂರ ಮಠ

ಅಥಣಿ ಶ್ರೀ ಶಿವಯೋಗೀಶ್ವರ ಮಠ

ಶ್ರೀ ಶರಣ ಬಸವೇಶ್ವರ ಮಹಾಸಂಸ್ಥಾನ ಮಠ

ಭಾಲ್ಕಿ ಶ್ರೀ ಹಿರೇಮಠ

ಶ್ರೀ ಬಂಥನಾಳ ಮಠ

ಮುಳಗುಂದ ಶ್ರೀ ಗವಿಮಠ

ಹೊಸಪೇಟೆ ಶ್ರೀ ಕೊಟ್ಟೂರುಸ್ವಾಮಿ ಮಠ

ಬೆಂಗಳೂರು ಶ್ರೀ ಸರ್ಪಭೂಷಣ ಮಠ

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರ

ಕಾಣಾಮಡಗು ಶ್ರೀ ಶರಣಾರ್ಯ ದಾಸೋಹ ಮಠ

ಶ್ರೀ ಫಕೀರೇಶ್ವರ ಮಠ

ಕನಕಪುರ ಶ್ರೀ ದೇಗುಲಮಠ

ಕೊಡಗಿನ ವೀರಶೈವ ಮಠಗಳು

ರಂಭಾಪುರಿ ಜಗದ್ಗುರು ರೇಣುಕಾಚಾರ್ಯ ಪೀಠದ ಕೊಡುಗೆ

ವಿದ್ವಾನ್ ಜಿ.ವಿ. ಶಿವಸ್ವಾಮಿ

ವಿವಿಧ ಧರ್ಮ ಸಂಸ್ಕೃತಿಗಳ ತವರು ಭಾರತ. ಈ ರಾಷ್ಟ್ರದಲ್ಲಿ ಇರುವ ಧರ್ಮಗಳಲ್ಲಿ ವೀರಶೈವಧರ್ಮವೂ ಒಂದು. ಪವಿತ್ರವಾದ ವೀರಶೈವ ಧರ್ಮವು ಅತ್ಯಂತ ಪ್ರಾಚೀನವಾದುದು. ಆದರೆ ಇದರ ಕಾಲಮಾನಾದಿಗಳನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟಕರವೆಂದು ವಿದ್ವಾಂಸರ ಮತ. ಈ ಧರ್ಮವನ್ನು ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದರೆಂದು ವೇದ, ಆಗಮ, ಪುರಾಣ ಮತ್ತು ಶಾಸ್ತ್ರಗ್ರಂಥಗಳು ವಿವರಿಸುತ್ತವೆ.

ತಸ್ಮಾತ್ತಸ್ಮಾಚ ಗಿರಿಜೇ ಪಂಚಾನನ ಸಮುದ್ಭವಾಃ ।
ಮದಾದಿ ಸರ್ವಲೋಕಾನಾಂ ಜಗದ್ಗುರು ವರೋತ್ತಮಾಃ ॥

ಸುಪ್ರಭೇದಾಗಮದಲ್ಲಿ ಪರಶಿವನು ಪಾರ್ವತಿಗೆ ಹೀಗೆ ನಿರೂಪಿಸಿದ್ದಾನೆ. ಎಲೈ ಪಾರ್ವತಿಯೇ, ಪಂಚಾಚಾರ್ಯರು ನನ್ನ ಲೋಕವೆ ಮೊದಲ್ಗೊಂಡು ಎಲ್ಲಾ ಲೋಕಗಳಿಗೂ ಸಹ ಜಗದ್ಗುರುಗಳಾಗಿರುತ್ತಾರೆ. ನನ್ನ ಅಂಶಸಂಭೂತರಾದ ಇವರು ಭೂಲೋಕದಲ್ಲಿ ಸಂಚರಿಸಿ ಶಿವಭಕ್ತಿಯನ್ನು ನೆಲೆಗೊಳಿಸಿ "ಶಿವಾದ್ವೈತ ಸಿದ್ಧಾಂತ" ವನ್ನು ಪ್ರಚಾರ ಮಾಡುವರು ಎಂದು ನಿರೂಪಿಸಿದನು.

ಆಚಾರ್ಯರ ಪರಂಪರೆ

ಕೊಲನುಪಾಕಿ ಶ್ರೀ ಸೋಮೇಶ್ವರ ಲಿಂಗದಿಂದ ಆವಿರ್ಭವಿಸಿ ಜಗದ್ಗುರು ರೇಣುಕಾಚಾರ್ಯರು ಪ್ರತಿಯೊಂದು ಯುಗದಲ್ಲಿಯೂ ವೀರಶೈವ ಧರ್ಮವನ್ನು ಪ್ರಚುರಪಡಿಸಿರುತ್ತಾರೆ. ಈ ಆಚಾರ್ಯರು ಒಂದೊಂದು ಯುಗದಲ್ಲಿ ಒಂದೊಂದು ಹೆಸರಿನಿಂದ ಅವತರಿಸಿರುವುದು ಆಗಮ ಮತ್ತು ಪುರಾಣಗಳಿಂದ ತಿಳಿದು ಬರುತ್ತದೆ. ಕೃತಯುಗದಲ್ಲಿ, ಏಕಾಕ್ಷರ ಶಿವಾಚಾರ್ಯರು, ತ್ರೇತಾಯುಗದಲ್ಲಿ ಏಕವಕ್ತ್ರ ಶಿವಾಚಾರ್ಯರು, ದ್ವಾಪರಯುಗದಲ್ಲಿ ರೇಣುಕಾಚಾರ್ಯರು, ಕಲಿಯುಗದಲ್ಲಿ ರೇವಣಸಿದ್ಧರು[1] ಎಂಬ ಹೆಸರುಗಳಿಂದ ಪ್ರಸಿದ್ಧರಾಗಿರುತ್ತಾರೆ. ಈ ವಿಷಯವನ್ನು ಸುಪ್ರಭೇದಾಗಮ ಮತ್ತು ಸದಾಚಾರ ಸಂಗ್ರಹ ಮುಂತಾದ ಗ್ರಂಥಗಳು ಉಲ್ಲೇಖಿಸಿರುತ್ತವೆ.

ಲೋಕಕಲ್ಯಾಣಕ್ಕಾಗಿ ಸಂಚರಿಸುತ್ತಿದ್ದ ರೇಣುಕಾಚಾರ್ಯರು ಅಗಸ್ತ್ಯಮುನಿಯ ಪ್ರಾರ್ಥನೆಯಂತೆ ಮಲಯಾಚಲಕ್ಕೆ ದಯಮಾಡಿಸಿ ಅಗಸ್ತ್ಯಮುನಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿದರು.

ಅಗಸ್ತ್ಯಮುನಿಶಾರ್ದೂಲ ಸಮಸ್ತಾಗಮ ಪಾರಗ ।
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣುಸಾದರಂ ॥ (ಸಿದ್ಧಾಂತ ಶಿಖಾಮಣಿ)

ಜ್ಞಾನಿಯಾದ ಅಗಸ್ತ್ಯಮಹರ್ಷಿಯೇ, ಶಿವಸಿದ್ಧಾಂತವನ್ನು ಲೋಕಕಲ್ಯಾಣಕ್ಕಾಗಿ ನಿನಗೆ ಉಪದೇಶಿಸುವೆ. ಪ್ರೀತಿಯಿಂದ ಕೇಳಿ ಪ್ರಚಾರಪಡಿಸು ಎಂದು ಅಪ್ಪಣೆ ಕೊಡಿಸಿದರು. ರೇಣುಕಾಗಸ್ತ್ಯರ ಸಂವಾದವನ್ನು ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿ ರಚಿಸಿರುವುದೇ "ಸಿದ್ಧಾಂತ ಶಿಖಾಮಣಿ". ಈ ಗ್ರಂಥವು ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥಗಳಲ್ಲಿ ಒಂದಾಗಿರುತ್ತದೆ.

ರಂಭಾಪುರಿ ಪೀಠ

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿಗೆ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿ ಮಲಯಾಚಲ

1. ರೇವಣಸಿದ್ಧರು, ರೇವಣಾರಾಧ್ಯ ಮುಂತಾದ ಒಂದೇ ಹೆಸರಿನ ಅನೇಕ ಜನ ಆಚಾರ್ಯರು ರಂಭಾಪುರೀ ಪೀಠದಲ್ಲಿ ಆಗಿ ಹೋಗಿರುತ್ತಾರೆ.

ಪುಣ್ಯಭೂಮಿಯಲ್ಲಿ ತೆಂಗು, ಕಿತ್ತಳೆ, ಏಲಕ್ಕಿ, ಮೆಣಸು, ಶ್ರೀಗಂಧ, ಕಾಫಿ, ಮಾವು, ಬಾಳೆ, ಹೊನ್ನೆ ಮತ್ತು ಬಿಲ್ವ ಮುಂತಾದ ವೃಕ್ಷಗಳ ಪ್ರಕೃತಿಕ ಸೌಂದರ್ಯದಿಂದ ಕೂಡಿ ಹರಿಯುತ್ತಿರುವ ಪವಿತ್ರವಾದ ಭದ್ರಾನದಿಯ ದಂಡೆಯ ಮೇಲೆ ರಂಭಾಪುರಿ ಮಹಾಪೀಠವು ಪ್ರಾಚೀನಕಾಲದಿಂದಲೂ ಶೋಭಾಯಮಾನವಾಗಿದೆ. ಈ ಪುಣ್ಯಭೂಮಿ ಆಚಾರ್ಯರ ಪವಿತ್ರ ಪಾದಸ್ಪರ್ಶದಿಂದ ಪುಣ್ಯಕ್ಷೇತ್ರವಾಗಿ ಅವರ ತಪಸ್ಸಿನ ತೇಜಸ್ಸು ಇಂದಿಗೂ ಪ್ರಜ್ವಲಿಸುತ್ತಿದೆ. ಅನೇಕ ಋಷಿ ಮುನಿಗಳಿಗೆ, ದಾರ್ಶನಿಕರಿಗೆ ಸ್ಫೂರ್ತಿ ನೀಡಿದ ಮಹಿಮಾ ಪೀಠ.

ಜಗದ್ಗುರು ರೇಣುಕಾಚಾರ್ಯರು ಪೀಠಾಧೀಶ್ವರರು, ಮಹಾಶಿವಯೋಗಿ ಸಿದ್ಧಪುರುಷರು, ದಾರ್ಶನಿಕಸಾಹಿತ್ಯಕಾರರು, ಭಾಷ್ಯಕಾರರು. ಅವರು ಉಪದೇಶಿಸಿದ ಸಿದ್ಧಾಂತಶಿಖಾಮಣಿ ವೀರಶೈವ ಸಿದ್ಧಾಂತ ಕ್ಷೇತ್ರಕ್ಕೆ ಮಹತ್ತರ ಕೊಡಿಗೆಯಾಗಿದೆ. ಈ ಪರಂಪರೆಯಲ್ಲಿ ಬಂದ ಶ್ರೀ ರೇವಣಸಿದ್ಧರೇ ಮುಂತಾದ ಅನೇಕ ಪೀಠಾಚಾರ್ಯರು ರಾಷ್ಟ್ರದ ಉದ್ದಗಲಕ್ಕೂ ಸಂಚಾರಮಾಡಿ ಮಾನವ ಕುಲವನ್ನೇ ಉದ್ಧಾರಮಾಡಿರುವುದು ಅನೇಕ ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ.

ಆಚಾರ್ಯರನ್ನು ಕುರಿತ ಸಾಹಿತ್ಯ ಕೃತಿಗಳು

ಜಗದ್ಗುರು ರೇಣುಕಾಚಾರ್ಯರ ಮತ್ತು ಕಲಿಯುಗದ ಆಚಾರ್ಯರಾದ ಶ್ರೀ ರೇವಣಸಿದ್ಧರ ಪ್ರಭಾವಕ್ಕೆ ಒಳಗಾದ ಅನೇಕ ಆಚಾರ್ಯರು, ಕವಿಗಳು ಅವರ ಜೀವನಚರಿತ್ರೆ, ಅವರ ಉಪದೇಶ, ಮಹಿಮೆ ಮತ್ತು ಪವಾಡಗಳನ್ನು ಕುರಿತು ಸಂಸ್ಕೃತ, ಕನ್ನಡ, ತೆಲುಗು ಮುಂತಾದ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿರುವುದು ತಿಳಿದು ಬರುತ್ತದೆ.

೧. ಸಿದ್ಧನಾಥ ಶಿವಾಚಾರ್ಯ ಸಂಸ್ಕೃತದಲ್ಲಿ "ರೇಣುಕ ವಿಜಯ", ೨. ಮಲ್ಲಣಕವಿ "ರೇಣುಕಸಾಂಗತ್ಯ", ೩. ಈಶಾನ್ಯ ಶಿವಗುರು ಸಂಸ್ಕೃತದಲ್ಲಿ "ರೇಣುಕ ಚರಿತ್ರೆ", ೪. ಚತುರ್ಮುಖ ಬೊಮ್ಮರಸ ಕವಿ "ರೇವಣಸಿದ್ಧ ಪುರಾಣ", ೫. ಹರಿಹರ ಕವಿ "ರೇವಣಸಿದ್ಧರಗಳೆ", ೬. ಗುರುಸಿದ್ಧಲಿಂಗರು[1] "ರೇವಣಸಿದ್ಧೇಶ್ವರ ಭಕ್ತಿಸಾರ", ೭. ಸಂಪಾದನೆಯ ಪರ್ವತೇಶನ "ಚತುರಾಚಾರ್ಯರ ಚಾರಿತ್ರ", (ಈ ಕೃತಿಯನ್ನು ಪ್ರೊ. ಎಸ್. ಬಸವಾರಾಧ್ಯರು ಸಂಪಾದಿಸಿ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ.) ೮. ಅಭಿನವಕಾಳಿದಾಸ ಬಸಪ್ಪಶಾಸ್ತ್ರಿಗಳ "ರೇಣುಕ ವಿಜಯ", ೯. ನಂಜನಗೂಡಿನ ಶ್ರೀಕಂಠ ಶಾಸ್ತ್ರಿಗಳ "ರೇಣುಕ ವಿಜಯ ಪುರಾಣ", ೧೦. ಆಸ್ಥಾನ್ ವಿದ್ವಾನ್ ಸಿರಸಿ ಗುರುಶಾಂತಶಾಸ್ತ್ರಿಗಳ " ರೇಣುಕ ವಿಜಯ", ೧೧. ಜ.ಚ.ನಿ. ಅವರ "ಮಣಿಮುಕುರ" ,"ಮಣಿಕಾಂತಿ", "ಆದಿಜಗದ್ಗುರು ರೇಣುಕರು", "ವೀರಾಗಮ " (ಸಂಶೋಧನ) - ಈ ಕೃತಿಗಳನ್ನು ಜ.ಚ.ನಿ. ಅವರೆ ಸಂಗ್ರಹಿಸಿ ಬರೆದಿರುತ್ತಾರೆ. ೧೨. ಡಾ. ಟಿ.ಜಿ. ಸಿದ್ಧಪ್ಪರಾಧ್ಯರ " ಶಕ್ತಿ ವಿಶಿಷ್ಟಾದ್ವೈತದರ್ಶನ ", (ಸಂಸ್ಕೃತ ಡಾಕ್ಟರೇಟ್ ಪ್ರಬಂಧ) ೧೩. ಡಾ. ಎಂ. ಶಿವಕುಮಾರಸ್ವಾಮಿಗಳು ಇಂಗ್ಲೀಷ್‌ನಲ್ಲಿ "ಸಿದ್ಧಾಂತ ಶಿಖಾಮಣಿ" ಭಾಷಾಂತರ ಕೃತಿ, ೧೪. ಡಾ|| ಚಂದ್ರಶೇಖರ ಶಿವಾಚಾರ್ಯರ (ಗುಳೆದಗುಡ್ಡ) "ವೀರಶೈವ ಪಂಚಪೀಠ ಪರಂಪರೆ". ಇವಲ್ಲದೆ ಆಚಾರ್ಯರನ್ನು ಕುರಿತು ಕನ್ನಡ, ತೆಲುಗು, ಮರಾಠಿ, ಹಿಂದಿ ಭಾಷೆಗಳಲ್ಲಿ ಅನೇಕ ಕೃತಿಗಳು ಬಂದಿರುತ್ತವೆ.

ಆಚಾರ್ಯರನ್ನು ಕುರಿತ ಉಲ್ಲೇಖನಗಳು .

ರೇಣುಕಾಚಾರ್ಯರನ್ನು ಕುರಿತ ಅನೇಕ ವಿದ್ವಾಂಸರುಗಳು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವುದನ್ನು ನೋಡಬಹುದು. "ವೀರಶೈವ ಪ್ರಥಮ ದೇಶಿಕಂ", "ವೀರಶೈವ ಸಿದ್ಧಾಂತವನ್ನು ಲೇಸಾಗಿ ಪಸರಿಸಿದ ರೇವಣಸಿದ್ಧೇಶಂ", "ವೀರಶೈವ ಸಿದ್ಧಾಂತ ಚಕ್ರೇಶಂ", "ವೀರಶೈವ ಮತಸ್ಥಾಪನಾಚಾರ್ಯ", " ಶಿವಾದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ", "ಸಮಸ್ತವೇದಶಾಸ್ತ್ರಾದಿ ವ್ಯವಹಾರ ದುರಂಧರ", "ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಸ್ವರೂಪದ ರೂಪರೇಖೆಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿದ್ದರಿಂದ ಪರಂಜ್ಯೋತಿ ಎನಿಸಿ, ಎಲ್ಲರ ಹೃದಯದಲ್ಲಿ ಶೋಭಿಸುತ್ತಲಿದ್ದಾರೆ". ಮರಿತೊಂಟದಾರ್ಯರು ತಮ್ಮ ವೀರಶೈವಾನಂದ ಚಂದ್ರಿಕೆಯಲ್ಲಿ "ವೀರಶೈವ ಸಮಯ ಪ್ರವರ್ತಕಾನಾಂ ರೇಣುಕಾನಾಂ" ಎಂದು ಹೇಳಿ ಶ್ರೀ ರೇಣುಕರನ್ನು

*1. ಕ್ರಿ.ಶ. ೯೫೦ ರಿಂದ ಕ್ರಿ.ಶ. ೧೯೪೧ ರವರೆಗೆ ವಿರಚಿಸಲ್ಪಟ್ಟ ಗ್ರಂಥಗಳು ಸಂಸ್ಕೃತ ೧೯, ಕನ್ನಡ ೩೨, ತೆಲುಗು ೬, ಮರಾಠಿ ೫, ಹಿಂದೀ ೪, ಇಂಗ್ಲೀಷ್ ೪,ಹೀಗೆ ಒಟ್ಟು ೭೯ ಗ್ರಂಥಗಳು ಆಚಾರ್ಯರನ್ನು ಕುರಿತು ಪ್ರಕಟವಾಗಿರುತ್ತವೆ. ವೀರಶೈವ ಪಂಚಪೀಠಪರಂಪರೆ ಪುಟ ೩೧ ಡಾ. ಚಂದ್ರಶೇಖರ ಶಿವಾಚಾರ್ಯರು. ಈಗಿನ ಕಾಶಿ ಜಗದ್ಗುರುಗಳು.

ವೀರಶೈವದರ್ಶನ. ಪುಟ ೬೨, ವಿದ್ವಾನ್ ಜಿ.ವಿ. ಶಿವಸ್ವಾಮಿ.

ಭಾರತೀಯ ಇತಿಹಾಸದರ್ಶನ. ಶ್ರೀ ಬಿ.ಕೆ. ಮಾಧವಮೂರ್ತಿ ಮತ್ತು ಶ್ರೀ ಬಿ.ಎಸ್. ರಾಮಯ್ಯನವರು.

ಮತಪ್ರವರ್ತಕರಲ್ಲಿ ಮೊದಲನೆಯವರೆಂದು ಹೇಳಿರುತ್ತಾರೆ. "ವೀರಶೈವ ಧರ್ಮದ ಉಗಮ ಐದು ಜನ ಆಚಾರ್ಯರಿಗೆ ಸೇರುತ್ತದೆ. ಇವರನ್ನು ಪಂಚಾಚಾರ್ಯರು ಎಂದು ಕರೆಯುತ್ತಾರೆ" ಎಂದು ಭಾರತೀಯ ಇತಿಹಾಸದರ್ಶನ ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ.

ಧರ್ಮಪ್ರಚಾರ

ಶ್ರೀ ರೇಣುಕಾಚಾರ್ಯರು ಮತ್ತು ಕಲಿಯುಗದ ಆಚಾರ್ಯರಾದ ಜಗದ್ಗುರು ರೇವಣಸಿದ್ಧರು ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಪ್ರವಾಸಮಾಡಿ ಧರ್ಮಜಾಗೃತಿಯನ್ನುಂಟು ಮಾಡಿರುತ್ತಾರೆ. ವೀರಶೈವಧರ್ಮವನ್ನು ಉದ್ಧಾರಮಾಡಿದ ಆಚಾರ್ಯರಾಗಿರುತ್ತಾರೆ. ವೀರಶೈವದರ್ಶನ ಮತ್ತು ಶಾಸ್ತ್ರಗ್ರಂಥಗಳ ಅರಿವಿನಿಂದ ಮಾನವರು ನಿತ್ಯಸುಖ, ಶಾಂತಿ ಮತ್ತು ಕೈವಲ್ಯಪದವಿಯನ್ನು ಪಡೆಯಬಹುದೆಂದು ಹೇಳಿ, ಭಾರತೀಯರ ಜೀವನ ಧರ್ಮ ಮತ್ತು ತ್ಯಾಗಗಳಿಂದ ಕೂಡಿರಬೇಕು. ಪ್ರತಿಯೊಬ್ಬರ ನಡೆ, ನುಡಿಗಳನ್ನು ಶಿವ ಮೆಚ್ಚುವಂತಿರಬೇಕು. ಶಿವಕೃಪೆಯಿಂದ ಭಕ್ತ ಭಗವಂತನಾಗುತ್ತಾನೆ. ಶಿವದರ್ಶನವೇ ಮುಕ್ತಿ ಎಂದು ಉಪದೇಶಿಸಿರುತ್ತಾರೆ. ಅವರುಗಳು ಕುಳಿತು ತಪಸ್ಸು ಮಾಡಿದ ಸ್ಥಳಗಳು, ಸ್ಥಾಪಿಸಿದ ವೀರಶೈವ ಮಠಗಳು ಭಾರತಾದ್ಯಂತ ಇವೆ.

ಹಿಂದೂ ಮಠಗಳು

ಭಾರತದ ಇತಿಹಾಸದಲ್ಲಿ ಕೆಲವು ಬದಲಾವಣೆಯನ್ನು ಹೊಂದಿದ ಹಿಂದೂಮಠಗಳು ಕ್ರಿ.ಶ. ಐದನೇ ಶತಮಾನದಿಂದ ಎಂಟನೇ ಶತಮಾನದವರೆಗೆ ಧರ್ಮ ಮತ್ತು ಶಿಕ್ಷಣ ಪ್ರಚಾರಕ್ಕೆ ಗಮನಕೊಟ್ಟವು. ಅಗ್ರಹಾರ, ಶಿವಾಲಯ, ವೈಷ್ಣವ ದೇವಾಲಯ ಮತ್ತು ಗುರುಕುಲಗಳು ನಿರ್ಮಾಣಗೊಂಡವು. ಇವುಗಳಲ್ಲಿ ಪಾಶುಪತರು, ಕಾಳಾಮುಖಿರು, ಕಾಪಾಲಿಕರು ಮತ್ತು ಜೈನ ಬೌದ್ಧಸನ್ಯಾಸಿಗಳು, ವಿರಕ್ತಸನ್ಯಾಸಿಗಳು ಸಹ ವಾಸಮಾಡುತ್ತಿದ್ದರು. ಈ ಕಾಲಕ್ಕಾಗಲೇ ಭಾರತದಲ್ಲಿ ಶ್ರೀ ರೇಣುಕಾದಿ ಪಂಚಾಚಾರ್ಯರು, ಶಂಕರಾಚಾರ್ಯರು ಮುಂತಾದ ಆಚಾರ್ಯರು ಸಂಚರಿಸಿ ಪಾಶುಪತ ಮತ್ತು ಕಾಳಾಮುಖಿರ ಮೇಲೆ ಪ್ರಭಾವ ಬೀರಿ ಅವರನ್ನು ಮಾರ್ಪಾಟು ಮಾಡಿದ್ದರು. ಅನೇಕ ತತ್ವಗೋಷ್ಠಿಗಳನ್ನು ನಡೆಸಿ ಅನೇಕ ಕಡೆ ಮಠಗಳನ್ನು ಸ್ಥಾಪಿಸಿದರು. ರಂಭಾಪುರಿ, ಶ್ರೀಶೈಲ, ಉಜ್ಜಯಿನಿ, ಕಾಶಿ ಮತ್ತು ಕೇದಾರಗಳಲ್ಲಿ ವೀರಶೈವ ಪಂಚಮಠಗಳು (ಪೀಠಗಳು) ದ್ವಾರಕ, ಪೂರಿ, ಶೃಂಗೇರಿ, ಹರಿದ್ವಾರ, ವೃಂದಾವನ, ಪ್ರಯಾಗ ಮುಂತಾದ ಕಡೆಗಳಲ್ಲಿ ಮಠಗಳು ಧರ್ಮಪ್ರಚಾರದ ಜೊತೆಗೆ ವೈದಿಕ ಶಿಕ್ಷಣವನ್ನು ಪ್ರಚಾರ ಮಾಡತೊಡಗಿದ್ದವು. ಈ ಮಠಾಧೀಶ್ವರರನ್ನು ಆಚಾರ್ಯರು, ಮಹಂತರು ಅಥವಾ ಸ್ವಾಮಿಗಳು ಎಂದು ಕರೆಯುತ್ತಿದ್ದರು. ಈ ಮಠಗಳು ಅಂದಿನ ಸಮಾಜದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದವು. ಜೋಗೇಂದ್ರ ಚಂದ್ರಘೋಷರು ಹೇಳುವಂತೆ ಆಗಿನ ಕಾಲದಲ್ಲಿ ವಿದ್ಯೆಯು ಧಾರ್ಮಿಕ ಶಿಕ್ಷಣಕ್ಕೆ ಸೀಮಿತವಾಗಿತ್ತು. ಉದ್ಗ್ರಂಥಗಳ ಅಧ್ಯಯನ ಮತ್ತು ತತ್ವಶಾಸ್ತ್ರಗಳ ಅಭ್ಯಾಸದ ಜೊತೆಗೆ ಮಠಕ್ಕೆ ಬರುತ್ತಿದ್ದ ಅತಿಥಿಗಳನ್ನು ಸತ್ಕರಿಸುವ ಸಂಪ್ರದಾಯವಿತ್ತು.

ವೀರಶೈವ ಮಠಗಳು

ಶೈವಧರ್ಮದ ಪ್ರಮುಖ ಶಾಖೆ ವೀರಶೈವಧರ್ಮ. ಶೈವಧರ್ಮ ಕ್ರಮೇಣ ಕೆಲವು ಬದಲಾವಣೆಗಳನ್ನು ಹೊಂದಿ ವೀರಶೈವ ಧರ್ಮದಲ್ಲಿ ಪರಿಪೂರ್ಣತೆಯನ್ನು ಪಡೆಯಿತು. ಉದಾತ್ತ ಧ್ಯೇಯಗಳಿಂದ ಕೂಡಿದ ವೀರಶೈವ ಮಠಗಳು ಸಮಾಜದ ಅವಿಭಾಜ್ಯ ಭಾಗವಾಗಿ ಸಮಾಜದೊಡನೆ ವಿವಿಧ ಧರ್ಮ ಸಂಬಂಧಗಳನ್ನು ಹೊಂದಿದ್ದವು. ಸಮಾಜ ವಿಕಾಸವಾಗುತ್ತ ಹೋದಂತೆ ವೀರಶೈವ ಮಠಗಳ ಕಾರ್ಯಕ್ಷೇತ್ರವು ಬೆಳೆಯುತ್ತ ಹೋಯಿತು. ಕೇವಲ ಹತ್ತಾರು ಜನ ಪಂಡಿತರಿಗೆ, ಪುರೋಹಿತರಿಗೆ ಮೀಸಲಾಗದೆ ಸಮಾಜದ ಅಭ್ಯುದಯದ ಕಡೆಗೆ ವೀರಶೈವ ಮಠಗಳು ಗಮನ ಹರಿಸಿದವು. ಪ್ರಾರಂಭದಲ್ಲಿ, ಧಾರ್ಮಿಕ ಶಿಕ್ಷಣಕ್ಕೆ ಗಮನ ಹರಿಸಿದ್ದ ಮಠಗಳು ಕಾಲಧರ್ಮಕ್ಕನುಗುಣವಾಗಿ ನಿತ್ಯಜೀವನಕ್ಕೆ ಬೇಕಾದ ಶಿಕ್ಷಣಕ್ಕೂ ಆದ್ಯತೆ ನೀಡಿದವು.

ವೀರಶೈವ ಮಠಗಳ ಧ್ಯೇಯ

ನಾಡಿನ ಪ್ರತಿಯೊಬ್ಬ ವ್ಯಕ್ತಿಗೂ ಧರ್ಮ, ಸಂಸ್ಕೃತಿ ಮತ್ತು ಕಾಯಕದ ಮಹತ್ವವನ್ನು ಪರಿಚಯ ಮಾಡಿಕೊಡುವುದು ಮಠಗಳ ಉದ್ದೇಶವಾಯಿತು. ಪ್ರತಿಯೊಬ್ಬನ ಜೀವನ ಶಾಂತಿ, ಸಮೃದ್ಧಿಗಳಿಂದ ಕೂಡಿರಬೇಕಾದರೆ ಅವನು ಮೊದಲು

ವಿದ್ಯಾವಂತನಾಗಬೇಕು. ಒಳಗಿನ ಅಜ್ಞಾನ ಓಡಿಸಲು ವಿದ್ಯಾಭ್ಯಾಸ ಅವಶ್ಯಕ. ಆದರೆ ಎಲ್ಲರೂ ಓದಲು ಆಗುವುದಿಲ್ಲ. ಬಡತನ ನಡುವೆ ನಿಂತಿದೆ. ಹಸಿದ ಹೊಟ್ಟೆಗೆ ಅನ್ನ ಕೊಟ್ಟು, ಜ್ಞಾನ ನೀಡಬೇಕೆಂದು ಮಠಾಧೀಶ್ವರರು ಭಾವಿಸಿದರು. "ಮಠ ಛಾತ್ರಾದಿ ನಿಲಯಂ" ಎಂದು ಅಮರ ಸಿಂಹನ ವಾಣಿಯಂತೆ ಮಠಗಳು ವಿದ್ಯಾರ್ಥಿಗಳಿಗೆ ಆಶ್ರಯವಿತ್ತು ಜ್ಞಾನ ನೀಡುವ ಶಿಕ್ಷಣ ಕ್ಷೇತ್ರಗಳಾದವು. ವರ್ಣಾಶ್ರಮ ಧರ್ಮವನ್ನು ಕಿತ್ತೊಗೆದು ಎಲ್ಲ ವರ್ಗದ ಮಕ್ಕಳಿಗೂ ಶಿಕ್ಷಣ ನೀಡಲು ಸತ್‌ಸಂಕಲ್ಪ ಮಾಡಿದವು.

ಕರ್ನಾಟಕದಲ್ಲಿ ಕ್ರಿ.ಶ. ಒಂಭತ್ತನೇ ಶತಮಾನದಲ್ಲಿಯೇ ಶಿಕ್ಷಣ ಕ್ಷೇತ್ರದಲ್ಲಿ ಕಾಣಿಸಿಕೊಂಡ ಮಠಗಳು ಹತ್ತನೇ ಶತಮಾನದಿಂದ ಹದಿಮೂರನೆ ಶತಮಾನದವರೆಗೆ ಕಾಳಾಮುಖ, ಶೈವ ಮತ್ತು ವೀರಶೈವ ಮಠಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ರಾಷ್ಟ್ರಕೂಟರ ಕಾಲದಲ್ಲಿಯೇ ಅತ್ಯಂತ ಪ್ರಮುಖವಾದ ಅಗ್ರಹಾರಗಳು ಶಿಕ್ಷಣ ನೀಡುತ್ತಿದ್ದವು. ಬಿಜಾಪುರದ ಜಿಲ್ಲೆಯಲ್ಲಿರುವ ಸಾಲೋಟಗಿ ಎಂಬ ಅಗ್ರಹಾರದಲ್ಲಿ ಪ್ರಾಚೀನ ವಿದ್ಯಾಪೀಠವಿತ್ತು. ಈ ವಿದ್ಯಾಪೀಠದಲ್ಲಿ ಸಂಸ್ಕೃತ, ವೇದ - ವೇದಾಂತ, ಆಗಮ ಮತ್ತು ಆಯುರ್ವೇದವನ್ನು ಬೋಧಿಸಲಾಗುತ್ತಿತ್ತು. ಈ ವಿದ್ಯಾಪೀಠದ ಪ್ರಾಚಾರ್ಯರು ಶಿವಯೋಗಿ ಶಿವಾಚಾರ್ಯರಾಗಿದ್ದರು ಎಂದು ಜ.ಚ.ನಿ. ಅವರು 'ಸಿದ್ಧಾಂತ ಶಿಖಾಮಣಿಯ ಸೌಂದರ್ಯ ದರ್ಶನ'ದಲ್ಲಿ ಉಲ್ಲೇಖಿಸಿರುತ್ತಾರೆ.

ಶ್ರೀಶೈಲ ಮತ್ತು ಕೊನಲಪಾಕಿ ಗುರುಕುಲಗಳು

ಆಂಧ್ರಪ್ರದೇಶದ ಶ್ರೀ ಶೈಲ ಮತ್ತು ಕೊನಲಪಾಕಿ (ಕೊಲ್ಲಿಪಾಕಿ) ಗಳಲ್ಲಿ ಗುರುಕುಲಗಳಿದ್ದವು. ಈ ಗುರುಕುಲಗಳಲ್ಲಿ ವೇದ, ಆಗಮ, ಉಪನಿಷತ್ತು, ಶಾಸ್ತ್ರಗ್ರಂಥಗಳ ಅಧ್ಯಯನ, ಆಯುರ್ವೇದ ಮತ್ತು ಯೋಗಸಾಧನೆಯನ್ನು ಬೋಧಿಸಲಾಗುತ್ತಿತ್ತು. ಕೋಡಿಮಠದ ಮೂಲಸ್ಥಾಪಕರಾದ ಶ್ರೀ ಕೇದಾರೇಶ್ವರರು ಮತ್ತು ಇವರ ಶಿಷ್ಯ ಶ್ರೀಕಂಠ ಪಂಡಿತರು ಶ್ರೀಶೈಲದಿಂದ ಬಂದವರು.

ಕೋಡಿಮಠ

ಹತ್ತನೇ ಶತಮಾನದವರೆಗೆ ದೇವಸ್ಥಾನದಲ್ಲಿದ್ದ ಬೋಧನೆಯು ಮಠ ಮತ್ತು ಆಶ್ರಮಗಳಿಗೆ ಸೇರಿಸುವ ರೂಢಿಯಾಯಿತು. ಬೆಳ್ಳಿಗಾವಿಯ ಕೇದಾರೇಶ್ವರ ದೇವಾಲಯಕ್ಕೆ ಸೇರಿದ ಕೋಡಿಮಠ ಕ್ರಿ.ಶ. ೧೧೬೨ ರ ಶಾಸನವು ಅದನ್ನು ವಿವರಿಸುತ್ತದೆ. ಶ್ರೀಶೈಲದಿಂದ ಬಂದ ಕೇದಾರೇಶ್ವರರು ಮತ್ತು ಇವರ ಶಿಷ್ಯ ಶ್ರೀಕಂಠ ಪಂಡಿತರು ಸರ್ವಜ್ಞರಾಗಿದ್ದರು. ಇವರು ಮತ್ತು ಇವರ ಶಿಷ್ಯರು ಈ ಮಠದ ಗುರುಕುಲದಲ್ಲಿ ಆಚಾರ್ಯರಾಗಿದ್ದರು. ಇವರ ಶಿಷ್ಯರು "ವಿದ್ಯಾವಾಚಸ್ಪತಿ" ಎಂಬ ಬಿರುದು ಪಡೆದಿದ್ದರು. ಕೋಡಿಮಠದ ಗುರುಕುಲದ ಯಶಸ್ಸಿಗೆ ಇವರುಗಳು ಕಾರಣರಾಗಿದ್ದರು. ಈ ಗುರುಕುಲದಲ್ಲಿ ವೇದ, ಶಾಸ್ತ್ರ, ಪುರಾಣ, ಕಲೆ, ಸಂಗೀತ, ದರ್ಶನ, ಪುರಾಣ, ಮುಂತಾದ ಶಿಕ್ಷಣ ನಡೆಯುತ್ತಿತ್ತು.

ಕೂಡಲ ಸಂಗಮ ಗುರುಕುಲ

ಬಿಜಾಪುರ ಜಿಲ್ಲಾ ಬಾಗೇವಾಡಿ ಕೂಡಲಸಂಗಮ ಗುರುಕುಲ ಕ್ರಿ.ಶ. ಹನ್ನೆರಡನೆ ಶತಮಾನದಲ್ಲಿ ಪ್ರಸಿದ್ಧಿ ಪಡೆದ ಗುರುಕುಲವಾಗಿತ್ತು. ಜಾತವೇದ ಮುನಿಗಳು ಈ ಗುರುಕುಲದ ಆಚಾರ್ಯರಾಗಿದ್ದರು. ಇದು ವಿದ್ವನ್ಮಣಿಗಳ ಕೇಂದ್ರವಾಗಿತ್ತು. ಸಂಗಮದ ಮಹಾರಾಜರು ಸಂಗಮೇಶ್ವರನ ಭಕ್ತರಾಗಿದ್ದರು. ಸ್ತ್ರೀ - ಪುರುಷರಿಗೂ ಶಿಕ್ಷಣಕ್ಕೆ ಅವಕಾಶವಿತ್ತು. ಬಸವಣ್ಣ ಮುಂತಾದವರು ಈ ಗುರುಕುಲದಲ್ಲಿ ವಿದ್ಯಾಭ್ಯಾಸಮಾಡಿ ಮಹಾಜ್ಞಾನಿಗಳಾದರು. ಅವರ ಮುಂದಿನ ಜೀವನಕ್ಕೆ ಇಲ್ಲಿ ಪಡೆದ ಶಿಕ್ಷಣ ಹೊಸ ಬೆಳಕನ್ನು ನೀಡಿತು. ಇಲ್ಲಿ ವೇದ, ಉಪನಿಷತ್ತು, ಸಂಸ್ಕೃತ, ಗಣಿತ, ಶಾಸನ ಬೋಧನೆ ನಡೆಯುತ್ತಿತ್ತು.

ವಿಜಯನಗರ, ಕೆಳದಿ, ಕಲಚೂರ್ಯ, ಚಾಲುಕ್ಯರು, ಗಂಗ, ರಾಷ್ಟ್ರಕೂಟರು ಮತ್ತು ಮೈಸೂರು ಅರಸರು ಸಹ ವೀರಶೈವ ಮಠಗಳು ನಡೆಸುತ್ತಿದ್ದ ಶಿಕ್ಷಣಕ್ಷೇತ್ರಗಳಿಗೆ ದಾನ ದತ್ತಿ ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹಿಸಿರುತ್ತಾರೆ.

ಇಂದಿನ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿವೆ. ಮಠಗಳ ಜೊತೆ ಕೆಲವು ಶಿಕ್ಷಣ ಸಂಸ್ಥೆಗಳು ಸಹ ಜನಸಾಮಾನ್ಯರ ಮಕ್ಕಳಿಗೆ ಶಿಕ್ಷಣ ನೀಡುತ್ತಿವೆ. ಅವುಗಳ ಹೆಸರುಗಳನ್ನು ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯಾಗುತ್ತದೆ. ಇಲ್ಲಿ ಕೆಲವು ಪ್ರಮುಖ ಮಠಗಳ ಹೆಸರನ್ನು ಮಾತ್ರ ಹೇಳಬಹುದು. ರಂಭಾಪುರಿಪೀಠ, ಸಿದ್ಧಗಂಗಾಮಠ, ಸುತ್ತೂರುಮಠ, ಮೂರು ಸಾವಿರ ಮಠ, ಸಿರಿಗೆರೆ ಮಠ, ಚಿತ್ರದುರ್ಗದ ಬೃಹನ್ಮಠ, ಅನ್ನದಾನೇಶ್ವರ ಮಠ, ಗದುಗಿನ ತೋಂಟದಾರ್ಯಮಠ, ದೇಗುಲಮಠ, ಮರಳೇಗವಿಮಠ, ಅಂಕನಹಳ್ಳಿ ಗವಿಮಠ ಮತ್ತು ಶರಣಬಸವೇಶ್ವರ ಸಂಸ್ಥೆ ಮುಂತಾದವುಗಳು.

ಈ ಮಠಗಳು ಸಂಸ್ಕೃತ ಪಾಠಶಾಲೆ, ಪ್ರಾಥಮಿಕ, ಪ್ರೌಢಶಾಲೆ, ವಿಜ್ಞಾನ, ವಾಣಿಜ್ಯ ಮತ್ತು ಕಲಾ ಕಾಲೇಜುಗಳನ್ನು ಹಾಗೂ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ನಡೆಸಿ ಜನಸಾಮಾನ್ಯರ ಮಕ್ಕಳಿಗೆ, ಅನ್ನ ಮತ್ತು ಜ್ಞಾನ ದಾನವನ್ನು ಮಾಡುತ್ತಿವೆ. ಈ ಮಠಗಳಲ್ಲಿ, ಎಲ್ಲ ವರ್ಗದ ಮಕ್ಕಳಿಗೂ ಶಿಕ್ಷಣಕ್ಕೆ ಮುಕ್ತ ಅವಕಾಶವಿರುತ್ತದೆ. ಶಿಕ್ಷಣಕ್ಷೇತ್ರಕ್ಕೆ ವೀರಶೈವ ಮಠಗಳ ಸೇವೆ ಅಮೂಲ್ಯವಾದುದು.

ಧರ್ಮ ಮತ್ತು ಸಮಾಜಸೇವೆ

ಧರ್ಮ ಪ್ರಚಾರ ಮಾಡುವುದು ವೀರಶೈವ ಮಠಗಳ ಗುರಿಯಾಗಿರುತ್ತದೆ. ಆದ್ದರಿಂದಲೇ ಪಂಚಪೀಠಗಳು ಭರತಖಂಡದ ಐದು ಭಾಗಗಳಲ್ಲಿ ನೆಲೆಗೊಂಡಿವೆ. ತಮ್ಮ ಪೀಠದ ಮೂಲ ಉದ್ದೇಶವನ್ನು ಪ್ರಚಾರ ಮಾಡಲು ಪೀಠಾಚಾರ್ಯರು ಇಪ್ಪತ್ತು ರಾಜ್ಯಗಳಲ್ಲಿ, ಸಾವಿರಾರು ಗುರುವರ್ಗದ ಶಾಖಾಮಠಗಳನ್ನು ಸ್ಥಾಪಿಸಿ ಅವುಗಳ ಮುಖೇಣ, ಧರ್ಮ, ಸಾಹಿತ್ಯ, ಶಿಕ್ಷಣ, ಧಾರ್ಮಿಕ ಸಂಸ್ಕಾರಗಳನ್ನು ಜನರಿಗೆ ನೀಡುತ್ತಿದ್ದಾರೆ. ಐದು ಜನ ಪೀಠಾಚಾರ್ಯರು ಎಲ್ಲಾರಾಜ್ಯದ ಜಿಲ್ಲೆ, ತಾಲ್ಲೂಕುಗಳಲ್ಲಿ ಸಂಚರಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಶಾಖಾಮಠದ ಉಪಾಚಾರ್ಯರು (ಗುರುಗಳು) ಆಯಾ ಭಾಗಗಳಲ್ಲಿ ಸಂಚರಿಸಿ ಮಠದ ಶಿಷ್ಯರಿಗೆ ಧಾರ್ಮಿಕ ಸಂಸ್ಕಾರಗಳಾದ ದೀಕ್ಷೆ, ವಿವಾಹ, ಪಟ್ಟಾಧಿಕಾರ, ಜಾತಕರ್ಮ ಮುಂತಾದವುಗಳನ್ನು ನೀಡಿ, ಅವರಿಗೆ ಆಚಾರ ವಿಚಾರಗಳನ್ನು ಬೋಧಿಸುತ್ತಾ ಬಂದಿರುತ್ತಾರೆ.

ರಂಭಾಪುರಿ ಜಗದ್ಗುರುಗಳಾದ ಲಿಂ. ಜಗದ್ಗುರು ಶಿವಾನಂದ ಶಿವಾಚಾರ್ಯರು ಮತ್ತು ಲಿಂ. ಜಗದ್ಗುರು ಗಂಗಾಧರ ಶಿವಾಚಾರ್ಯರ ಕಾಲದಲ್ಲಿ ಮತ್ತಷ್ಟು ಧಾರ್ಮಿಕ ಕಾರ್ಯಗಳು ಸಮಾಜದ ಅಭ್ಯುದಯಕ್ಕಾಗಿ ನೆರವೇರಿದವು. ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಕಾಶಿ ಮುಂತಾದ ನಗರಗಳಲ್ಲಿ ಸರ್ವಧರ್ಮಸಮ್ಮೇಳನ, ವಿದ್ವತ್‌ಸಭೆ, ಪಂಚಾಚಾರ್ಯರ ಸಮ್ಮೇಳನ ಮತ್ತು ಧಾರ್ಮಿಕ ಸಭೆ ಸಮಾರಂಭಗಳನ್ನು ಜಗದ್ಗುರುಗಳವರು ನೆರವೇರಿಸಿದರು. ಅಂದಿನ ಮೈಸೂರು ರಾಜ್ಯದಲ್ಲಿ ಜಗದ್ಗುರುಗಳು ಅನುಷ್ಠಾನ ಮಾಡಿದ ಕಡೆಗಳಲ್ಲೆಲ್ಲಾ ಶಿವದೀಕ್ಷೆ ಕಾರ್ಯಕ್ರಮವನ್ನು ಏರ್ಪಡಿಸಿ ಜನರಿಗೆ ಬೋಧಿಸಿದ ತತ್ತ್ವೋಪದೇಶಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಂತಿರುತ್ತವೆ.

ಬೆಂಗಳೂರು ನಗರದಲ್ಲಿ ೧೯೩೪ರಲ್ಲಿ ದಿವಾನ್ ಬಹದ್ದೂರ್ ಸರ್ ಕೆ.ಪಿ. ಪುಟ್ಟಣ್ಣಶೆಟ್ಟರು, "ರಾಜಧರ್ಮ ಪ್ರವೀಣ" ಪಿ. ಮಹದೇವಯ್ಯ, ಧರ್ಮಪ್ರಕಾಶ್ ಎನ್. ರುದ್ರಯ್ಯ, ದೇಶದ ರುದ್ರಪ್ಪ ಶೆಟ್ಟರು, ಬಸವಯ್ಯ ಮತ್ತು ಶಂಕರಣ್ಣನವರ ಶಿವಣ್ಣ ಮುಂತಾದ ಭಕ್ತರು ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯರನ್ನು ಬರಮಾಡಿಕೊಂಡು ನಡೆಸಿದ ಉತ್ಸವ, ವಿದ್ವತ್ ಸಭೆ ಮುಂತಾದವುಗಳು ಮಹತ್ವವಾದವು. ಆಗಿನ ಮೈಸೂರು ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಸಭೆಯಲ್ಲಿ ಭಾಗವಹಿಸಿ ಜಗದ್ಗುರುಗಳ ಪಾಂಡಿತ್ಯ ಮತ್ತು ಜನಪ್ರೀತಿಯನ್ನು ಕಂಡು ವಿಸ್ಮಯಗೊಂಡರು. ಅರಮನೆಯಿಂದ ಪೀಠಕ್ಕೆ ಸಲ್ಲಬಹುದಾದ ಎಲ್ಲಾ ಮರ್ಯಾದೆಗಳನ್ನು ಸಲ್ಲಿಸಿದರು. ಸಂಸ್ಕೃತ ವಿದ್ವಾಂಸರಾಗಿದ್ದ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯರು ಕಾಶಿ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ, ಬೆಂಗಳೂರಿನಲ್ಲಿ ಒಂದು ಸಂಸ್ಕೃತ ವಿದ್ಯಾಲಯವನ್ನು ತೆರೆಯಲು ನಿವೇಶನವನ್ನು ಪಡೆದು ಬಸಪ್ಪ ಇಂಟರ್‌ಮೀಡಿಯೇಟ್ ಕಾಲೇಜನ್ನು ಪ್ರಾರಂಭಿಸಲು ಪ್ರೋತ್ಸಾಹಿಸಿದರು. ಅವರ ಸಂಕಲ್ಪ ಶಕ್ತಿಯೇ ಇಂದಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಗೆ ಕಾರಣವಾಯಿತು.

ಮೈಸೂರು ರಾಜಧಾನಿಗೆ ಜಗದ್ಗುರುಗಳ ಪ್ರವೇಶ *

ಮೈಸೂರು ನಗರಕ್ಕೆ ವೇ. ಕಾಶಿನಾಥ ಶಾಸ್ತ್ರಿಗಳು, ದೇಶದ ಶೆಟ್ಟರು ಯಜಮಾನರು ಹಾಗೂ ವೀರಶೈವರ ಪ್ರಯತ್ನದಿಂದಲೂ ದಿವಾನರುಗಳ ಸಹಕಾರದಿಂದಲೂ ದಿನಾಂಕ ೨೩.೯.೧೯೩೪ ರಂದು ಸಕಲ ರಾಜಮರ್ಯಾದೆಯೊಡನೆ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರು ಪ್ರವೇಶ ಮಾಡಿದರು. ಅರಮನೆಯಿಂದ ೨ ಆನೆಗಳು, ೧೧ ಕುದುರೆ ಸರದಾರರು, ೧೩ ಜನ ಬಾರ್ ಸಿಪಾಯಿಗಳು, ಅರಮನೆಯ ಮೇಲಧಿಕಾರಿಗಳು, ೧೮ ಜನ ಬ್ಯಾಂಡ್ ವಾದ್ಯಗಾರರು, ೧೨ ಜನ ಸಾವಾ ಕಟ್ಟಿಗೆಯವರು, ೧೩ ಜನ ಬೆಳ್ಳಿ ದಂಡದವರು, ೧೨ ಜನ ಹಸುರು ಪಟ್ಟಿಯವರು, ಹಗಲು ದೀವಟಿಗೆ, ಛತ್ರಿ, ಚಾಮರ, ಮೇನ

* ಶ್ರೀ ಜಗದ್ಗುರು ಶಿವಾನಂದ ವಿಜಯ ಪುಟ - ೪೭

ಮುಂತಾದ ರಾಜಮರ್ಯಾದೆಗಳನ್ನು ಅರಮನೆಯಿಂದ ಕಳುಹಿಸಿದ್ದರು. ಜಗದ್ಗುರುಗಳ ಅಡ್ಡಪಾಲಿಕಿ ಮಹೋತ್ಸವವು ಅರಮನೆಯ ಸಮೀಪಕ್ಕೆ ಬಂದ ಕೂಡಲೆ ಜಗದ್ಗುರುಗಳ ಗೌರವಾರ್ಥವಾಗಿ ೧೧ ತೋಪುಗಳನ್ನು ಹಾರಿಸಲಾಯಿತು. ಅಂದಿನ ಬ್ರಿಟಿಷ್ ರೆಸಿಡೆಂಟರು ಮತ್ತು ಅವರ ಧರ್ಮಪತ್ನಿಯವರು, ದಿವಾನರು ಪುರಪ್ರವೇಶದಲ್ಲಿ ಜಗದ್ಗುರುಗಳನ್ನು ಸ್ವಾಗತಿಸಿದರು. ಜಗದ್ಗುರುಗಳ ಉತ್ಸವ ರಾಜಬೀದಿಗಳಲ್ಲಿ ಅತ್ಯಂತ ವೈಭವದಿಂದ ನೆರವೇರಿತು.

ವಿದ್ವತ್ ಸಭೆ

ಅಂದು ಸಂಜೆ ನೂರಾರು ಜನ ವಿದ್ವಾಂಸರು, ಅರಮನೆಯ ಮೇಲಧಿಕಾರಿಗಳು, ದಿವಾನರು ಸಾವಿರಜನ ಭಕ್ತರು ಸಭೆಯಲ್ಲಿ ಪಾಲ್ಗೊಂಡರು. ಜಗದ್ಗುರುಗಳು ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವತ್‌ಪೂರ್ಣವಾದ ಸಂದೇಶ ನೀಡಿದರು. ಅರಮನೆಯ ಅಧಿಕಾರಿಗಳಿಗೂ ಸಮಾಜದ ಹಿರಿಯರಿಗೂ ಗೌರವಿಸಿ ಆಶೀರ್ವದಿಸಿದರು. ವಿದ್ವಾಂಸರು ಮತ್ತು ಅಭಿಮಾನಿಗಳು ಸನ್ನಿಧಿಯವರ ಆಶೀರ್ವಾದ ಕೇಳಿ ಹರ್ಷಗೊಂಡರು. ಮಹಾರಾಜರ ಅಪೇಕ್ಷೆಯಂತೆ ದಿನಾಂಕ ೪.೧೧.೧೯೩೪ ರಂದು ರಾಜಮರ್ಯಾದೆಯೊಡನೆ ಅರಮನೆಗೆ ದಯಮಾಡಿಸಿದರು. ಪೂರ್ಣಕುಂಭ ಮತ್ತು ವೇದಘೋಷದೊಡನೆ ಜಗದ್ಗುರುಗಳನ್ನು ಸ್ವಾಗತಿಸಲಾಯಿತು. ಅಂದಿನ ಶಿವಪೂಜಾನುಷ್ಠಾನ ಅರಮನೆಯಲ್ಲಿ ನೆರವೇರಿತು. ರಾಜದಂಪತಿಗಳು ಜಗದ್ಗುರುಗಳಿಗೆ ರೇಶ್ಮೆಮುಗುಟ, ಶಾಲು, ಬೆಳ್ಳಿತಟ್ಟೆ, ಚಿನ್ನದ ರುದ್ರಾಕ್ಷಿ ಕಂಠಾಭರಣ ಕಾಣಿಕೆಗಳನ್ನು ಸಲ್ಲಿಸಿ ಜಗದ್ಗುರುಗಳಿಂದ ಆಶೀರ್ವಾದ ಪಡೆದರು. ರಾಜರು ಅರಮನೆಯ ಪದ್ಧತಿಯಂತೆ ರಾಜಬಿಲ್ಲತ್ತುಗಳನ್ನು, ಪ್ರಥಮ ಶ್ರೇಣಿಯ ಬಿರುದುಬಾವಲಿಗಳನ್ನು ಇತ್ತು ರಂಭಾಪುರಿ ಪೀಠಕ್ಕೆ ಗೌರವ ಸಲ್ಲಿಸಿದರು. ರಾಜಋಷಿಗಳೆಂದು ಹೆಸರು ಗಳಿಸಿದ್ದ ಮೈಸೂರು ಅರಸರಾದ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ರಂಭಾಪುರಿ ಪೀಠದ ಮೇಲೆ ಅನನ್ಯ ಭಕ್ತಿಯುಳ್ಳವರಾಗಿ ಪೀಠಕ್ಕೂ ಕೆಲವು ಬಾರಿ ದಯಮಾಡಿಸಿ ಆಶೀರ್ವಾದ ಪಡೆದಿದ್ದರು. ಜಗದ್ಗುರುಗಳು ಮೈಸೂರು ಕಾರ್ಯಕ್ರಮ ಮುಗಿಸಿ ಅನಂತರ ಮೈಸೂರು ಜಿಲ್ಲೆಯ ಟಿ. ನರಸಿಪುರ, ನಂಜನಗೂಡು, ಚಾಮರಾಜನಗರ, ತಲಕಾಡು, ಕೊಳ್ಳೆಗಾಲ, ಮಳವಳ್ಳಿ ಮುಂತಾದ ಕಡೆ ಧರ್ಮಜಾಗೃತಿಸಭೆಗಳನ್ನು ನಡೆಸಿ ಜನರಿಗೆ ವೀರಶೈವಧರ್ಮದ ವಿಶಾಲ ತತ್ವಗಳನ್ನು ಬೋಧಿಸಿದರು. ಅವರು ಮುಂದೆ ಮಠದ ದೊಡ್ಡಿಮಠ, ಆನೇಕಲ್ ರಾಚಾಪುರಮಠ, ಅತ್ತಿಬೆಲೆ, ತುಮಕೂರು, ಗುಬ್ಬಿ, ತಿಪಟೂರು, ಸಾಸಲು, ಕುಪ್ಪೂರು, ಚಿಕ್ಕನಾಯಕನಹಳ್ಳಿ, ಚಿಕ್ಕಮಗಳೂರು, ಹಾಲೂರು, ಶಿವಮೊಗ್ಗ, ಭದ್ರಾವತಿ, ಹುಬ್ಬಳ್ಳಿ, ಧಾರವಾಡ, ಹರಿಹರ, ರಾಣೆಬೆನ್ನೂರು, ಬಳ್ಳಾರಿ, ಹೊಸಪೇಟೆ, ಕೊಟ್ಟೂರು, ಉಜ್ಜನಿ ಮತ್ತು ಮಹರಾಷ್ಟ್ರ ಸೊಲ್ಲಾಪುರ ಮುಂತಾದ ಕಡೆ ಪ್ರವಾಸ ಮಾಡಿ, ಶ್ರಾವಣ, ಭಾದ್ರಪದ, ಆಶ್ವೀಜ, ಕಾರ್ತಿಕ ಮತ್ತು ಧನುರ್ಮಾಸ ತಿಂಗಳುಗಳಲ್ಲಿ ಅನುಷ್ಠಾನಮಾಡಿ ಆಶೀರ್ವದಿಸಿದರು, 'ದಸರಾ ದರ್ಬಾರ್', ದಸರಾ ಸಂಸ್ಕೃತಿ ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾದದ್ದು. ಹತ್ತು ದಿನಗಳು ಸಭೆ ನಡೆಸಿ ವಿವಿಧ ಸಾಹಿತ್ಯ, ಸಂಗೀತ ಕಲಾವಿದರಿಗೆ, ವಿದ್ವಾಂಸರಿಗೆ, ಗಣ್ಯರಿಗೆ ಗೌರವ ಪ್ರಶಸ್ತಿಗಳನ್ನಿತ್ತು ಗೌರವಿಸಿದ ಕೀರ್ತಿ ಜಗದ್ಗುರು ಶಿವಾನಂದ ಶಿವಾಚಾರ್ಯರದಾಗಿತ್ತು. ತಾ. ೨೩.೯.೧೯೪೪ ರಂದು ಕಾಶಿಪೀಠಕ್ಕೆ ದಯಮಾಡಿಸಿ ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಕಾಶಿಪೀಠದ ಪಟ್ಟಾಧಿಕಾರವನ್ನು ಅನುಗ್ರಹಿಸಿ ಕರ್ನಾಟಕಕ್ಕೆ ವಾಪಸು ದಯಮಾಡಿಸಿದರು. ಕೆಲವಾರು ವರ್ಷಗಳಿಂದ ಪೀಠದಲ್ಲಿ ಧರ್ಮಸಭೆ, ರೇಣುಕ ಜಯಂತಿ, ವೀರೇಶ್ವರ ಜಾತ್ರೆಗಳನ್ನು ನಡೆಸಿ ಪೀಠವನ್ನು ಅಭಿವೃದ್ಧಿಮಾಡಿದರು. ಪೀಠದ ಭೂ ಅಭಿವೃದ್ಧಿಗೆ ಶ್ರೀ ಶಿವಾನಂದ ಜಗದ್ಗುರುಗಳೇ ಕಾರಣೀಭೂತರು. ಅನಾರೋಗ್ಯದ ಕಾರಣ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿಗಳಿಗೆ ವಿಲ್ ಬರೆದು ೧೯೪೬ ರಲ್ಲಿ ಲಿಂಗೈಕ್ಯರಾದರು. ಅವರ ಯೋಗ ಸಮಾಧಿ ರಂಭಾಪುರಿ ಪೀಠದಲ್ಲಿ ಇರುತ್ತದೆ.

ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು

ಶ್ರೀ ಗಂಗಾಧರ ಜಗದ್ಗುರುಗಳು ಆಚಾರವಂತರು, ಪರಮತಪೋನಿಧಿಗಳು, ವಿದ್ವಾಂಸರೂ ಆಗಿದ್ದರು. ಪೂರ್ವಾಶ್ರಮದಲ್ಲಿ ಗುಳೇದ ಗುಡ್ಡ, ಸೊಲ್ಲಾಪುರ ವಾರದವರ ಸಂಸ್ಕೃತ ಪಾಠ ಶಾಲೆಯಲ್ಲಿ ಪಂಡಿತ್ ಜಗದೀಶ ಶಾಸ್ತ್ರಿಗಳವರಲ್ಲಿ ವೇದ, ಸಂಸ್ಕೃತ, ವೇದಾಂತ ಅಭ್ಯಾಸ ಮಾಡಿಬಂದರು. ಪಾಲಿಕೊಪ್ಪದ ಹಿರೆಮಠಾಧೀಶ್ವರರಾಗಿ ಅನೇಕ ಕಡೆ ಅನುಷ್ಠಾನ ಮಾಡಿ ಧರ್ಮ ಜಾಗೃತಿ ಕಾರ್ಯಕ್ರಮವನ್ನು ನಡೆಸಿ ಜನಪ್ರಿಯರಾಗಿದ್ದರು. ಜಗದ್ಗುರು ಶಿವಾನಂದ ಶಿವಾಚಾರ್ಯರ ಕೃಪಾಶೀರ್ವಾದಕ್ಕೆ ಪಾತ್ರರಾದುದ್ದರಿಂದ ಅವರ ಮಾರ್ಗದರ್ಶನದಂತೆ ಬೆಂಗಳೂರು ಶ್ರೀಮಹಾಂತರ ಮಠ ಮತ್ತು ಶ್ರೀ ವಿಭೂತಿಪುರ ಸಂಸ್ಥಾನ ಮಠಗಳಿಗೆ ೧೯೩೧ ರಲ್ಲಿ ಪಟ್ಟಾಧಿಕಾರಿಗಳಾಗಿ ಸಮಾಜಕ್ಕೆ ಬಹುಮುಖ ಸೇವೆ ಸಲ್ಲಿಸಿದರು. ಶ್ರೀಗಂಗಾಧರ ಶಿವಾಚಾರ್ಯರು ಶ್ರೀಮಹಾಂತರ ಮಠದಲ್ಲಿ ಜಗದ್ಗುರು ರೇಣುಕ ಜಯಂತಿಯನ್ನು ಸುಮಾರು ಒಂದು ತಿಂಗಳು ನಡೆಸುತ್ತಿದ್ದರು. ಇದರ ಅಂಗವಾಗಿ ಧರ್ಮಸಭೆ, ಸಂಗೀತ,

ಶಿವಕಥೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರುತ್ತಿದ್ದವು. ಮೈಸೂರು ಸ್ಟಾರ್ ಪತ್ರಿಕೆಯ ವರದಿಯನ್ನು ನೋಡಿದರೆ ಅವರು ನೆರವೇರಿಸುತ್ತಿದ್ದ ಶ್ರೀ ರೇಣುಕರ ಜಯಂತಿ ಕಾರ್ಯಕ್ರಮಗಳ ಮಹತ್ವ ತಿಳಿಯುತ್ತದೆ. ವಿದ್ಯಾರ್ಥಿನಿಲಯ, ವೇದಸಂಸ್ಕೃತ ಪಾಠಶಾಲೆಗಳನ್ನು ಮಹಂತರ ಮಠದಲ್ಲಿ ಪ್ರಾರಂಭಿಸಿದರು.

ಸಾಹಿತ್ಯ ಸೇವೆ

ಶ್ರೀ ಗಂಗಾಧರ ಶಿವಾಚಾರ್ಯರು ಸಾಹಿತಿಗಳು, ಲೇಖಕರು ಮತ್ತು ಧರ್ಮಪ್ರಿಯರು ಆಗಿದ್ದರು. ಅವರು ಮಹಂತರ ಮಠವಲ್ಲಿ ಇದ್ದಾಗ ಕೆಲವಾರು ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಸಂಕ್ಷಿಪ್ತ ಶಿವಪೂಜಾವಿಧಿ, ವಿಭೂತಿ, ನಿಂದಕರು ನಿತ್ಯಸುಖದಾಯಕರು, ಶಿವನಾಮ ಸುಧಾಕರ, ಸ್ತ್ರೀನೀತಿ, ಗುರುವಂಶ, ಜಾಗೃತಿ, ಭಕ್ತಿಯೋಗ, ವೀರಶೈವ ಧರ್ಮಸುಧಾರಣೆ, ತ್ರಿದಳ, ಗೋರಕ್ಷ ಗರ್ವಹರಣ, (ನಾಟಕ), ಜಗದ್ಗುರು ಪಂಚಾಚಾರ್ಯರ ಸ್ತೋತ್ರಾವಳಿ, ಗುರುಕೀರ್ತನೆ ಮುಂತಾದುವುಗಳು. ರಂಭಾಪುರಿ ಪೀಠಾಧೀಶ್ವರರಾದ ಮೇಲೆ ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರ ಧರ್ಮ, ಸಾಹಿತ್ಯ, ಸಂಸ್ಕೃತಿ ಮತ್ತು ಶಿವಾದ್ವೈತ ತತ್ವಪ್ರಚಾರ ಕಾರ್ಯಕ್ರಮಗಳು ತ್ವರಿತಗೊಂಡವು. ಕರ್ನಾಟಕದಿಂದ ಕೇದಾರದವರೆಗೂ, ಧರ್ಮ ಪ್ರಚಾರಕ್ಕಾಗಿ ಪ್ರವಾಸ ಮಾಡಿದರು. ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಕಾಶಿ, ರಾಮೇಶ್ವರ, ಸಿಲೋನ್ (ಲಂಕಾದ್ವೀಪ) ಮುಂತಾದ ಕಡೆ ಅನುಷ್ಠಾನ ಮಾಡಿ ಜನರಿಗೆ ಧರ್ಮಬೋಧಿಸಿದರು. ಶ್ರಾವಣ, ಧನುರ್ಮಾಸ, ಭಾದ್ರಪದ, ಆಶ್ವೀಜ, ಕಾರ್ತೀಕ ಮತ್ತು ವಿಜಯದಶಮಿಗಳಲ್ಲಿ ಅವರು ಮಾಡುತ್ತಿದ್ದ ಪೂಜಾನುಷ್ಠಾನ, ಧರ್ಮ ಸಭೆಗಳು ಅಭೂತಪೂರ್ಣವಾದವುಗಳು.

ಧರ್ಮಸಭೆ

'ಮಾನವಧರ್ಮಕ್ಕೆ ಜಯವಾಗಲಿ' , 'ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂದು ಅವರ ವೀರಘೋಷಣೆಗಳಾಗಿದ್ದವು. ಅವರೇ ರಚಿಸಿದ 'ಧರ್ಮಗೀತೆ' 'ಮಾನವ ಧರ್ಮಗೀತೆ' ಎರಡು ಹಾಡುಗಳನ್ನು ಸಭೆಗಳಲ್ಲಿ ಹಾಡಿ ಜನರಿಗೆ ಹೇಳಿ ಕೊಡುತ್ತಿದ್ದರು. ಅವರ ಧರ್ಮ ಸಮನ್ವಯತೆ ಎಲ್ಲರಿಗೂ ಅನುಕರಣೀಯ. ಹಿಂದು ಮತ್ತು ವೀರಶೈವ ಎಲ್ಲಾ ಮತಾಚಾರ್ಯರ, ಶ್ರೀಮಹಾವೀರ, ಬುದ್ಧ, ಮೊಹಮ್ಮದ್ ಪೈಗಂಬರ್, ಯೇಸುಕ್ರಿಸ್ತ, ಗುರುನಾನಕ್, ಬಸವಣ್ಣ, ಗಾಂಧಿ ಮುಂತಾದವರ ಆರು ಅಡಿ ಎತ್ತರದ ಭಾವಚಿತ್ರಗಳನ್ನು ಬರೆಸಿ ಉತ್ಸವ ಮಾಡಿಸುತ್ತಿದ್ದರು. ತಮ್ಮ ಉತ್ಸವ ನಡೆದ ಕಡೆಗಳಲ್ಲೆಲ್ಲಾ ಅವುಗಳು ಮುಂದೆ ಇರುತ್ತಿದ್ದವು. ಈ ಎಲ್ಲಾ ಆಚಾರ್ಯರ ವಿಗ್ರಹಗಳನ್ನು ಮುಕ್ತಿಮಂದಿರ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿರುವುದು ಅವರ ವಿಶ್ವಮಾನವ ಪ್ರೇಮದ ಹೆಗ್ಗುರುತಾಗಿದೆ. ಎಲ್ಲಾ ಧರ್ಮಗಳ ಗುರಿ ಒಂದೇ ಎಂಬುದು ಅವರ ಮನೋಗತವಾಗಿತ್ತು. ಅವರ ಧರ್ಮಗೀತೆಯ ಒಂದು ಉದಾಹರಣೆ ಇಲ್ಲಿ ನಾವು ನೋಡಬಹುದು. "ರೇಣುಕ, ಶಂಕರ, ಮಧ್ವ, ರಾಮನುಜ, ಬುದ್ಧ, ಮಹಾವೀರ, ನಾನಕ, ಯೇಸು ಕ್ರಿಸ್ತ, ಪೈಗಂಬರ ಪೊರೆದ ಸನಾತನ ಧರ್ಮಕ್ಕೆ ಜಯವಾಗಲಿ ಮಾನವಧರ್ಮಕ್ಕೆ ಜಯವಾಗಲಿ,ವಸುಧೆಯೊಳನುದಿನ ಎಸೆದ ಸಂತರು ಮತ್ತೆ ಬಸವಾದಿ ಶರಣರು ಒಸೆದು ಪಾಲಿಸಿ ತೋರ್ದ ॥ ಮಾನವ ಧರ್ಮಕ್ಕೆ ಜಯವಾಗಲಿ* ಎಂಬುದು ಅವರ ಬೋಧನೆಯ ಮುಖ್ಯ ಗುರಿಯಾಗಿತ್ತು.

ಮುಕ್ತಿಮಂದಿರ

ಕರ್ನಾಟಕದಲ್ಲಿ ಇರುವ ಕ್ಷೇತ್ರಗಳಲ್ಲಿ ಮುಕ್ತಿಮಂದಿರವು ಒಂದಾಗಿದೆ. ಧಾರವಾಡ ಜಿಲ್ಲೆ, ಶಿರಹಟ್ಟಿ ತಾಲ್ಲೂಕು, ಲಕ್ಷ್ಮೇಶ್ವರದ ಸಮೀಪದಲ್ಲಿ ಮುಕ್ತಿಮಂದಿರ ಕ್ಷೇತ್ರವಿರುತ್ತದೆ. ಇದು ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯ ಭಗವತ್ಪಾದರ ಆಧ್ಯಾತ್ಮಿಕ ತಪೋಕ್ಷೇತ್ರ. ಅವರು ಬಹುಕಾಲ ಇಲ್ಲಿಯೇ ತಪೋನುಷ್ಠಾನ ಮಾಡಿ, ಪವಿತ್ರಕ್ಷೇತ್ರವನ್ನಾಗಿ ಮಾರ್ಪಡಿಸಿದರು. ಇದು ಮೊದಲು ಬರಡು ಭೂಮಿಯಾಗಿತ್ತು. ಈಗ ವನಪ್ರದೇಶದ ತಪೋಕ್ಷೇತ್ರವಾಗಿದೆ. ತೆಂಗು, ಬಾಳೆ, ಬಿಲ್ವ, ಮಾವು, ಬೇವು, ಮಲ್ಲಿಗೆ, ಸಂಪಿಗೆ ಮುಂತಾದ ಹೂಗಿಡ ಮರಗಳಿಂದ ಕೂಡಿ, ಸೋಮಸಾಗರ ತಟದಲ್ಲಿ ವಿರಾಜಮಾನವಾಗಿದೆ. ಈ ಕ್ಷೇತ್ರದಲ್ಲಿ ಗೋಶಾಲೆ, ವ್ಯಾಯಾಮ ಶಾಲೆ, ವೇದ ಮತ್ತು ಸಂಸ್ಕೃತ ಪಾಠಶಾಲೆ, ಮಾಧ್ಯಮಿಕ ಶಾಲೆ, ಮಾಂಗಲ್ಯ ಮಂದಿರ

---

* ಶ್ರೀ ವಿಶ್ವಮತಸ್ಥಾಪನಾಚಾರ್ಯರು ಮತ್ತು ವೀರಶೈವ ಗೋತ್ರಪುರುಷರು. ಲೇ. ಬಸವರಾಜ ಅಂಗಡಿ ಪು. ೧ - ೨

(ಕಲ್ಯಾಣ ಮಂಟಪ), ದಾಸೋಹ ಮಂದಿರ, ಪೂಜಾಮಂದಿರ, ಧರ್ಮಮಂದಿರ, ವಿಶ್ವಶಕ್ತಿ ಮಂದಿರ, ಶ್ರೀಗಣಪತಿ, ವೀರಭದ್ರ, ಉಮಾಮಹೇಶ್ವರ ಮಂದಿರಾದಿಗಳು ನಿರ್ಮಾಣಗೊಂಡಿವೆ.

ಜಗದ್ಗುರುಗಳು ಪ್ರವಾಸ ಮತ್ತು ಅನುಷ್ಠಾನ ಮಾಡಿದ ಕಡೆಗಳಲ್ಲಿ ಏಕವಾರ ರುದ್ರಾಭಿಷೇಕ, ಕೋಟಿ ಬಿಲ್ವಾರ್ಚನೆ, ಲಕ್ಷದೀಪೋತ್ಸವ, ಸಾವಿರದೆಂಟು ಕಮಲಪೂಜೆ, ಮುಕ್ತಿಮಂದಿರದಲ್ಲಿ ೧೦೦೮ ಮಂಟಪ ಪೂಜೆ, ೧೦೮ ರಥೋತ್ಸವ, ಸಹಸ್ರ ಕುಂಭಾಭಿಷೇಕ, ಸಾಮೂಹಿಕ ಲಿಂಗಪೂಜೆ, ವಿದ್ವತ್ ಸಭೆಗಳು, ಪ್ರತಿ ಅಮಾವಾಸ್ಯೆ ಪೂಜೆ, ದೀನದಲಿತೋದ್ಧಾರ ಕಾರ್ಯಕ್ರಮಗಳು ವರ್ಣಿಸಲಸದಳವಾಗಿವೆ. ಅವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಮಹತ್‌ಶಕ್ತಿಯಾಗಿ ಅನೇಕ ಬಡವಬಲ್ಲಿದರ ಮನೋಗತವನ್ನು ನೆರವೇರಿಸಿದ ಮಹಾಮಹಿಮರು. ಅವರು ಕಾಯಕಯೋಗಿಗಳಾಗಿ, ಮಹಾಶಿವಯೋಗಿಯಾಗಿ ಸಿದ್ಧ ಪುರುಷರಾಗಿದ್ದರು. ಅವರ ವಿಶೇಷ ಪೂಜೆಗಳು ಕೈಲಾಸದ ಸ್ಮರಣೆ ತರುತ್ತಿತ್ತು. ಅವರು ರಾಜಋಷಿಗಳಾಗಿ, ಮಹಾಋಷಿಗಳಾಗಿ, ಶಿವಯೋಗಿಗಳಾಗಿ ಶಿವಯೋಗದಲ್ಲಿ ಕುಳಿತು ಶಿವನಾದರು.

ರಂಭಾಪುರಿಪೀಠದ ಪಟ್ಟಾಧಿಕಾರ

ಗುರುಮುಟ್ಟಿ ಗುರವಾಗುವ ತೆರದಿ, ರಂಭಾಪುರಿಪೀಠದ ಉತ್ತರಾಧಿಕಾರವನ್ನು ತ್ರಿಭಾಷಾ ಪಂಡಿತರಾಗಿದ್ದ ಶ್ರೀ ಷ.ಬ್ರ. ರುದ್ರಮುನಿಶಿವಾಚಾರ್ಯರಿಗೆ ತಾ. ೧೫-೫-೧೯೭೨ ರಲ್ಲಿ ಪಟ್ಟಾಧಿಕಾರವನ್ನು ಕಟ್ಟಿ ಶ್ರೀ ಜಗದ್ಗುರು ವೀರರುದ್ರಮುನಿಶಿವಾಚಾರ್ಯಮಹಾಸ್ವಾಮಿಗಳೆಂದು ನಾಮಕರಣ ಮಾಡಿ, ಶಿಷ್ಯರ ಸಮ್ಮುಖದಲ್ಲಿ ಪೀಠದ ಅಧಿಕಾರವನ್ನು ವಹಿಸಿ ಆಶೀರ್ವದಿಸಿದರು. ಮುಂದೆ ತಮ್ಮ ಅಪೇಕ್ಷೆಯಂತೆ ಮುಕ್ತಿಮಂದಿರದಲ್ಲಿ ತಾ. ೫-೧೦-೧೯೮೨ ರಲ್ಲಿ ಶಿವೈಕ್ಯರಾದರು. ಅವರ ಯೋಗ ಸಮಾಧಿಯನ್ನು ಅವರ ಭಕ್ತ ಸಮೂಹ ಹತ್ತಾರು ಲಕ್ಷ ಹಣ ಖರ್ಚುಮಾಡಿ ಆಧುನಿಕ ರೀತಿಯಲ್ಲಿ ನಿರ್ಮಿಸಿರುತ್ತಾರೆ. ಪ್ರತಿನಿತ್ಯ ಮತ್ತು ವಿಶೇಷವಾಗಿ ಅಮವಾಸ್ಯೆಯಲ್ಲಿ ಸಾವಿರಾರು ಭಕ್ತರು ಬಂದು ಸೇವೆಸಲ್ಲಿಸಿ ಧನ್ಯರಾಗುತ್ತಿದ್ದಾರೆ.

ಧಾರ್ಮಿಕ ಸಂಸ್ಕಾರ ಮತ್ತು ಶಿವದೀಕ್ಷೆ

ವೀರಶೈವ ಧರ್ಮದಲ್ಲಿ ಪ್ರಾಚೀನ ಕಾಲದಿಂದಲೂ ಮಾನವರಿಗೆ ದೈವೋಪಾಸನೆಯ ಯೋಗ್ಯತೆಗಾಗಿ, ಧಾರ್ಮಿಕ ಸಂಸ್ಕಾರಗಳನ್ನು ಹೇಳಲಾಗಿದೆ. ಈ ಸಂಸ್ಕಾರಗಳ ಬಗ್ಗೆ ದಶಕರ್ಮವಿಧಿ, ಸಿದ್ಧಾಂತ ಶಿಖಾಮಣಿ, ಸಂಸ್ಕಾರವಿಧಿ, ವೀರಶೈವ ಕೈಪಿಡಿ, ಧರ್ಮಸೂತ್ರ, ವೀರಶೈವಪೂರ್ವ ಪ್ರಯೋಗರತ್ನ ಮುಂತಾದ ಗ್ರಂಥಗಳು ವಿವರಿಸುತ್ತವೆ.

ಈ ಪ್ರಪಂಚದಲ್ಲಿ ಕಂಡುಬರುವ ಪ್ರತಿಯೊಂದು ವಸ್ತುವೂ ಅಥವಾ ಪದಾರ್ಥವೂ ತಾನು ಹುಟ್ಟುವಾಗ ಯಾವ ಸಂಸ್ಕಾರವನ್ನು ಪಡೆಯದೆ ಇದ್ದರೂ ಕಾಲಕ್ರಮೇಣ ಹಂತಹಂತವಾಗಿ ಸಂಸ್ಕಾರ ಪಡೆದು ಉಪಯುಕ್ತವಾಗುತ್ತಿರುವುದನ್ನು ಎಲ್ಲರೂ ತಿಳಿದಿರುತ್ತಾರೆ. ಧಾನ್ಯಗಳು, ಚಿನ್ನ ಮುಂತಾದ ಲೋಹಗಳು, ವಸ್ತ್ರ, ಜಲ, ಕ್ಷೀರ ಮತ್ತು ಶಿಲೆಗಳು ಸಂಸ್ಕಾರ ಪಡೆದು ಉಪಯುಕ್ತವಾಗುತ್ತವೆ.

ಮಾನವನ ಜೀವನಕ್ಕೆ ಅಗತ್ಯವಾದ ಧಾರ್ಮಿಕ ಕ್ರಿಯೆಯೇ "ಸಂಸ್ಕಾರ" . "ಆತ್ಮ ಶರೀರಾನ್ಯತರನಿಷ್ಠ ವಿಹಿತಕ್ರಿಯಾಜನ್ಯಃ ಅತಿಶಯ ವಿಶೇಷಃ ಸಂಸ್ಕಾರಃ" - ಆತ್ಮ ಅಥವಾ ಶರೀರಗಳಲ್ಲಿರುವ ವಿಹಿತ ಕ್ರಿಯೆಯಿಂದುಂಟಾದ ಅತಿಶಯ ವಿಶೇಷವೆ ಸಂಸ್ಕಾರ. ಈ ಸಂಸ್ಕಾರವು ಎರಡು ವಿಧವಾಗಿರುತ್ತದೆ. ಮೊದಲನೆಯದು "ಕಾರ್ಯಂತರ ಯೋಗ್ಯತಾ ಜನಕತ್ವ" ಎಂದರೆ ಶಿವದೀಕ್ಷಾ ಸಂಸ್ಕಾರವು, ವೇದಾಧ್ಯಯನ, ಶಿವಲಿಂಗೋಪಾಸನೆ ಮುಂತಾದ ಮೋಕ್ಷಸಾಧನೆಗೆ ಅರ್ಹತೆಯುಂಟಾಗುತ್ತದೆ. ಎರಡನೆಯದು "ಉತ್ಪನ್ನದುರಿತ ಮಾತ್ರ ನಾಶಕಃ" - ಗರ್ಭಾದಾನ ಮುಂತಾದ ಸಂಸ್ಕಾರಗಳು ಬೀಜಗರ್ಭ ಸಂಬಂಧವಾದ ದುರಿತಗಳನ್ನು ಮಾತ್ರ ನಿವಾರಣೆ ಮಾಡುತ್ತವೆ.

ವೀರಶೈವರಿಗೆ ಮುಖ್ಯವಾಗಿ ಹತ್ತು ಸಂಸ್ಕಾರಗಳು ಉಕ್ತವಾಗಿವೆ. ಗರ್ಭಧಾರಣ, ಪುಂಸವನ, ಸೀಮಂತ, ಜಾತಕರ್ಮ, ಅನ್ನಪ್ರಾಶನ, ಚೌಲಕರ್ಮ, ಅಕ್ಷರಾಭ್ಯಾಸ, ಶಿವದೀಕ್ಷಾ, ವಿವಾಹ ಮತ್ತು ಅಂತ್ಯಸಂಸ್ಕಾರ ಎಂಬುದಾಗಿ ಹತ್ತು ಸಂಸ್ಕಾರಗಳನ್ನು ವಿವರಿಸಲಾಗಿದೆ. ಗಂಡು ಹೆಣ್ಣು ಬೇಧವಿಲ್ಲದೆ ವೀರಶೈವರಲ್ಲಿ ಕೆಲವು ಸಂಸ್ಕಾರಗಳನ್ನು ಆಚರಿಸಲಾಗುತ್ತಿದೆ. ಆದರೆ ಸ್ತ್ರೀಯರಿಗೆ

ಗರ್ಭಾದಾನ, ಪುಂಸವನ ಮತ್ತು ಸೀಮಂತ ಈ ಮೂರು ಪ್ರತ್ಯೇಕವಾಗಿ ಆಚರಿಸಲಾಗುತ್ತದೆ. ಈ ಎಲ್ಲಾ ಸಂಸ್ಕಾರಗಳು ಗುರುಗಳ ಸಮಕ್ಷಮದಲ್ಲಿ ನಡೆಯುತ್ತವೆ. (ಕೆಲವು ಗುರುಗಳ ಮುಖಾಂತರವೆ ನಡೆಯುತ್ತವೆ).

ಶಿವದೀಕ್ಷೆ

ವೀರಶೈವರಲ್ಲಿ ದೀಕ್ಷೆಯು ಅತಿಮುಖ್ಯವಾದುದು. ಸ್ತ್ರೀ - ಪುರುಷರಿಗೂ ಸಮಾನವಾಗಿ ಕೊಡಲ್ಪಡುತ್ತದೆ. ದೀಕ್ಷೆಯೆಂದರೆ ಆಗಮವಿಧಿ, ಧಾರ್ಮಿಕ ಸಂಸ್ಕಾರ, ಅನುಗ್ರಹ, ಗುರುಕಾರುಣ್ಯ, ಮಹೇಶ್ವರ ಸಂಸ್ಕಾರ, ಜಂಗಮತ್ವ ಅನುಗ್ರಹ ಮುಂತಾದ ಅರ್ಥಗಳಿವೆ. ಪೀಠಾಚಾರ್ಯರು ಅಥವಾ ಉಪಾಚಾರ್ಯರಾದ ಗುರುಗಳು ವಿಶೇಷ ಸಂದರ್ಭಗಳಲ್ಲಿ ಶುಭಮಾಸಗಳಲ್ಲಿ ಮಠ ಮಂದಿರಗಳಲ್ಲಿ ದೀಕ್ಷೆಯನ್ನು ಭಕ್ತರಿಗೆ ನೀಡುತ್ತಾರೆ. ಇದು ಭವಿತ್ವದಿಂದ ಭಕ್ತತ್ವಕ್ಕೆ ಬರಿಸುವ ಒಂದು ವಿಶೇಷ ಸಂಸ್ಕಾರ. ಮಾಂಸಮಯ ಪಿಂಡವನ್ನು ಸಂಸ್ಕರಿಸಿ ಮಂತ್ರಮಯ ಪಿಂಡವನ್ನಾಗಿ ಮಾಡುವ ವಿಧಾನವೇ "ದೀಕ್ಷೆ". ಜೀವಾತ್ಮನಿಗೆ ಗುರುವು ಶಿವಾತ್ಮಭಾವ ವಿದ್ಯೆಯನ್ನು ಅನುಗ್ರಹಿಸುವ ವಿಧಾನವೇ ಶಿವದೀಕ್ಷಾ ಸಂಸ್ಕಾರವೆನಿಸುವುದು. ರಂಭಾಪುರಿ ಪೀಠಾಧೀಶ್ವರರಾದ ಲಿಂ. ಜಗದ್ಗುರು ಶಿವಾನಂದ ಶಿವಾಚಾರ್ಯರು ಮತ್ತು ಲಿಂ. ಜಗದ್ಗುರು ಗಂಗಾಧರ ಶಿವಾಚಾರ್ಯರು ತಾವು ಲೋಕಕಲ್ಯಾಣಕ್ಕಾಗಿ ಸಂಚರಿಸಿ, ಅನುಷ್ಠಾನ ಮತ್ತು ಧರ್ಮ ಸಭೆಗಳು ನಡೆಸುತ್ತಿದ್ದ ಕಡೆಗಳಲ್ಲೆಲ್ಲಾ ಶಿವದೀಕ್ಷೆ ಕಾರ್ಯಕ್ರಮವನ್ನು ಏರ್ಪಡಿಸಿ ಸಾವಿರಾರು ಭಕ್ತರಿಗೆ ಶಿವದೀಕ್ಷೆ ನೀಡಿ ಅನುಗ್ರಹಿಸುತ್ತಿದ್ದರು. ಇದು ಪೀಠಾಚಾರ್ಯ ಕರ್ತವ್ಯಗಳಲ್ಲಿ ಮುಖ್ಯವಾದುದು. ಸಾಯಂಕಾಲ ಸಭೆಯಲ್ಲಿ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಳಗಳ ಬಗ್ಗೆ ಉಪದೇಶ ಮಾಡಿ ಜನರಲ್ಲಿ ಧಾರ್ಮಿಕ ಭಾವನೆ ಮೂಡಿಸುತ್ತಿದ್ದರು. "ದೀಕ್ಷೆ" ಮಾನವ ಮಹಾದೇವನಾಗಲು ಅವಶ್ಯಕವಾದುದು. ಜಗದ್ಗುರು ರೇಣುಕ ಭಗವದ್‌ಪಾದರು, ದೀಕ್ಷೆ ಮಹತ್ವದ ಬಗ್ಗೆ ಈ ರೀತಿ ಅಪ್ಪಣೆ ಕೊಡಿಸಿರುತ್ತಾರೆ:

ದೀಯತೇಚ ಶಿವಜ್ಞಾನಂ ಕ್ಷೀಯತೇ ಪಾಶ ಬಂಧನಂ ।

ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥

ದೀಯತೇ ಜ್ಞಾನಸಂಬಂಧಃ ಕ್ಷೀಯತೇಚ ಮಲತ್ರಯಂ ।

ದೀಯತೇ ಕ್ಷೀಯತೇ ಯಸ್ಮಾತ್ ಸಾದೀಕ್ಷೇತಿ ನಿಗದ್ಯತೇ ॥ [2]

ವೀರಶೈವರಲ್ಲಿ ಸ್ತ್ರೀ - ಪುರುಷರಿಗೆ ದೀಕ್ಷೆಯು ಅತಿಮುಖ್ಯವಾದುದು. "ದೀ" ಎಂಬುದು ಜ್ಞಾನದಾತೃತ್ವವನ್ನು "ಕ್ಷೀ" ಎಂಬುದು ಅಜ್ಞಾನ ಕ್ರಿಯೆಗಳೆಂಬ ಪಾಶ ಬಂಧನ ವಿಮುಕ್ತಿಯನ್ನು ಬೋಧಿಸುತ್ತದೆ. ಭವಪಾಶ ಬಂಧನದಿಂದ ಬಿಡುಗಡೆ, ಶಿವಜ್ಞಾನ ಪಡೆಯುವುದು. ಆಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳನ್ನು ಜೀವಾತ್ಮನಲ್ಲಿ ಆವರಿಸಿವೆ. ಅವುಗಳನ್ನು ಗುರುವು ನಿಷ್ಕ್ರಿಯಗೊಳಿಸಿ ಸಮ್ಯಕ್ ಜ್ಞಾನ, ಮಹಾಭಾವನೆಗಳನ್ನಿತ್ತು, ವೇಧಾ, ಮನು, ಕ್ರಿಯಾದೀಕ್ಷೆಗಳಿಂದ ಬಿಡುಗಡೆಮಾಡಿ ಶಿವಭಾವವನ್ನುಂಟು ಮಾಡುವ ವಿಧಾನವು. ಈ ದೀಕ್ಷೆಯು ಮೂರು ವಿಧವಾಗಿದೆಯೆಂದು ಶ್ರೀ ರೇಣುಕರು ಸಿದ್ಧಾಂತ ಶಿಖಾಮಣಿಯಲ್ಲಿ ಉಪದೇಶ ಮಾಡಿದ್ದಾರೆ.

ಸಾದೀಕ್ಷಾ ತ್ರಿವಿಧಾ ಪ್ರೋಕ್ತಾ ಶಿವಾಗಮ ವಿಶಾರದೈಃ ।

ವೇಧಾರೂಪಾ ಮಂತ್ರರೂಪಾ ಕ್ರಿಯಾರೂಪಾ ಚ ತಾಪಸ ॥ [3]

ವೇದಾ, ಮಂತ್ರ, ಕ್ರಿಯಾರೂಪ ಎಂದು ದೀಕ್ಷೆಯು ತ್ರಿವಿಧವಾಗಿದೆ. ವೇದಾದೀಕ್ಷೆಯಿಂದ ಕಾರಣತನವನ್ನು, ಮಂತ್ರದೀಕ್ಷೆಯಿಂದ ಸೂಕ್ಷ್ಮತನವನ್ನು ಕ್ರಿಯಾದೀಕ್ಷೆಯಿಂದ ಸ್ಥೂಲತನುವನ್ನು ಶುದ್ಧಗೊಳಿಸುತ್ತದೆ. ಆಣವ, ಮಾಯಾ, ಕಾರ್ಮಿಕ ಮಲಗಳನ್ನು ಶ್ರೀಗುರುವು ಸಂಸ್ಕಾರಗಳಿಂದ ಕಳೆದು ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗಗಳನ್ನು ಅನುಗ್ರಹಿಸುತ್ತಾನೆ.

ಗುರುವು ದೃಷ್ಟಿಯೋಗ ಮತ್ತು ಹಸ್ತ ಮಸ್ತಕ ಸಂಯೋಗಗಳಿಂದ ಶಿಷ್ಯನಲ್ಲಿ ಶಿವತ್ವ ಸಮಾವೇಶಗೊಳಿಸುವುದೇ ವೇಧಾದೀಕ್ಷೆ. ಶಿಷ್ಯನ ಯೋಗಾಂಗದಲ್ಲಿ ಚಿತ್ಕಳೆಯು ಭಾವಲಿಂಗಾಭಿವ್ಯಕ್ತವೇ ವೇಧಾದೀಕ್ಷೆಯೆನಿಸುವುದು ಇಲ್ಲಿ ಆತನ ಆಣವ ಮಲ ನಿವೃತ್ತಿಯಾಗುತ್ತದೆ.

ಮಂತ್ರದೀಕ್ಷೆ ಶ್ರೀಗುರುವು ಶಿಷ್ಯನಿಗೆ ಮಂತ್ರೋಪದೇಶ ಮಾಡುವುದೇ ಮಂತ್ರದೀಕ್ಷೆ. ಇದು ಭೋಗಾಂಗಕ್ಕೆ ಸಂಬಂಧಿಸಿದುದು. ಮಂತ್ರ ಬೋಧನೆಯಿಂದ ಶಿಷ್ಯನಿಗೆ ಜ್ಞಾನೋದಯವಾಗುತ್ತದೆ. ಪ್ರಾಣ, ಪ್ರಣವರೂಪವಾಗಿ, ಪ್ರಾಣಲಿಂಗವಾಗುತ್ತದೆ. ಭಾವಲಿಂಗ ಅನುಭವಾತ್ಮಕವಾದರೆ ಪ್ರಾಣಲಿಂಗ ಜ್ಞಾನಾತ್ಮಕವಾಗುತ್ತದೆ. ಮಾಯಾಮಲ ನಿವೃತ್ತಿಯಾಗುತ್ತದೆ,. ಮನಕ್ಕೆ ಯೋಗ್ಯವಾದುದು ಮಂತ್ರ. ಆ ಮಂತ್ರ ಚೇತನವೆ ಪ್ರಾಣಲಿಂಗ. ಮಂತ್ರ ಮನನದಿಂದ ಮನದಲ್ಲಿ ಸಂಯಮವುಂಟಾಗಿ, ಸಾಧಕನಾಗುತ್ತಾನೆ. ಮಂತ್ರಪಠನದಿಂದ ಮಾಂಸಮಯ ಪಿಂಡ ಮಂತ್ರಮಯ ಪಿಂಡವಾಗುತ್ತದೆ.

ಕ್ರಿಯಾದೀಕ್ಷೆ, ತ್ಯಾಗಾಂಗಕ್ಕೆ ಸಂಬಂಧಿಸಿದುದು.

ಕುಂಡಲ ಮಂಡಲಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಂ ।
ಶುಭಮಾಸೇ ಶುಭತಿಥೌ ಶುಭಕಾಲೇ ಶುಭೇS ಹನಿ ॥
ವಿಭೂತಿಂ ಶಿವಭಕ್ತೇಭ್ಯೋದತ್ವಾತಾಂಬೂಲ ಪೂರ್ವಕಂ ।
ಯಥಾ ವಿಧಿ ಯಥಾಯೋಗಂ ಶಿಷ್ಯಮಾಸೀಯ ದೇಶಿಕಃ ॥

ಶ್ರೀಗುರುವು ಶುಭಮಾಸದಲ್ಲಿ ಮಂಟಪವನ್ನು ನಿರ್ಮಿಸಿ, ಪುಣ್ಯಾಹ ನಾಂದಿ · ಸಮಾರಾಧನ, ಪಂಚಕಳಸಗಳನ್ನು (ಪಂಚಾಚಾರ್ಯರ ಪ್ರತಿನಿಧಿಯಾಗಿ) ವಿಧಿವತ್ತಾಗಿ ಸ್ಥಾಪಿಸಿ, ಶಿಷ್ಯನಿಗೆ ಕಂಕಣಧಾರಣೆ ಮಾಡಿ, ಶಿವಧ್ಯಾನ ಮಾಡಿಸಿ, ಬಳಿಕ ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ರುದ್ರಾಕ್ಷಿ, ಆಯತ್ತ, ಸ್ವಾಯತ್ತ ಎಂಬ ಏಳು ವಿಧವಾದ ದೀಕ್ಷಾ ಕ್ರಮದಿಂದ ಇಷ್ಟಲಿಂಗವನ್ನು ಅನುಗ್ರಹಿಸುವುದೇ ಕ್ರಿಯಾದೀಕ್ಷೆ. ಕಾರ್ಮಿಕ ಮಲ ನಿವೃತ್ತಿಯಾಗಿ ಶಿವಸ್ವರೂಪನಾಗುತ್ತಾನೆ. ಈ ದೀಕ್ಷೆಯಿಂದ ಭವದ ಕತ್ತಲೆ ಹರಿದು ಶಿವನ ಬೆಳಕು ಬಿತ್ತರಗೊಳ್ಳುವುದು. "ಯಾವಜ್ಜೀವಂ ಸಮರ್ಚಯ" ಗುರುವಿನ ಅಣತಿಯಂತೆ ಯಾವಜ್ಜೀವನ ಪರಿಯಂತರ ಲಿಂಗಪೂಜೆ ಮಾಡುವುದು ಶಿಷ್ಯನ ಕರ್ತವ್ಯವಾಗಿದೆ. ಈ ದೀಕ್ಷೆಯನ್ನು ಎಂಟನೆ ವರ್ಷದಲ್ಲಿ ಮಾಡುವುದು 'ಮುಖ್ಯ', ತರುವಾಯ ಹದಿನಾರನೆ ವರ್ಷದಲ್ಲಿ ಮಾಡಿದರೆ 'ಮಧ್ಯಮ'. ಅಲ್ಲಿಂದ ಮುಂದೆ ಮಾಡುವ ದೀಕ್ಷೆ 'ಅಧಮ' ವೆಂದು ಆಚಾರ್ಯರು ವಿವರಿಸಿರುತ್ತಾರೆ.

ಶಿಕ್ಷಣ ಕ್ಷೇತ್ರಕ್ಕೆ ರಂಭಾಪುರಿ ಪೀಠದ ಕೊಡುಗೆ

ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಕೃತಿ ಸೌಂದರ್ಯದಿಂದ ಕೂಡಿ ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕ ಸಿದ್ಧಿಯ ತಾಣವಾಗಿ ಅನೇಕ ಋಷಿ ಮುನಿಗಳ ಜ್ಞಾನಮಂದಿರವಾಗಿ ಬೆಳಗುತ್ತಿದೆ ರಂಭಾಪುರಿ ಪೀಠ. ಈ ಪೀಠಾಚಾರ್ಯರು ಮಹಾವಿದ್ವಾಂಸರಾಗಿ, ತಪಸ್ವಿಗಳಾಗಿ, ಸಿದ್ಧಿಪುರುಷರಾಗಿ, ದಾರ್ಶನಿಕರಾಗಿ ಭಾರತಾದ್ಯಂತ ಸಂಚರಿಸಿ ಲೋಕ ಕಲ್ಯಾಣ ಮಾಡಿದ ಮಹಾಪುರುಷರು. ಲಿಂಗೈಕ್ಯರಾದ ಜಗದ್ಗುರು ಶಿವಾನಂದ ಶಿವಾಚಾರ್ಯರು ಮತ್ತು ಜಗದ್ಗುರು ಗಂಗಾಧರ ಶಿವಾಚಾರ್ಯರ ಕಾಲದಲ್ಲಿ ಅನೇಕ ಮಹತ್ತರ ಕಾರ್ಯಗಳನ್ನು ಸಾಧಿಸಿದರು. ಸರ್ವಧರ್ಮ ಸಮ್ಮೇಳನ, ವಿದ್ವತ್‌ಗೋಷ್ಠಿ, ಪಂಚಾಚಾರ್ಯ ಸಮ್ಮೇಳನ, ಕಲಾವಿದರಿಗೆ ಮತ್ತು ವಿದ್ವಾಂಸರಿಗೆ ಸನ್ಮಾನ, ಧರ್ಮಗ್ರಂಥಗಳ ಪ್ರಕಟಣೆ ಮತ್ತು ಪ್ರಕಟಣೆಗೆ ಪ್ರೋತ್ಸಾಹ. ವೀರಶೈವ ಮಠಾಧೀಶ್ವರ ಸಂಘಟನೆ, ಮುಂತಾದ ಮಹಾಕಾರ್ಯಗಳನ್ನು ಮಾಡಿರುತ್ತಾರೆ. ಪೀಠದ ಸ್ಥಿರ ಆಸ್ತಿಗಳನ್ನು ಅಭಿವೃದ್ಧಿ, ವೀರೇಶ್ವರನ ದೇವಸ್ಥಾನ, ರೇಣುಕ ಮಂದಿರಗಳ ಜೀರ್ಣೋದ್ಧಾರ, ಬೆಂಗಳೂರಿನಲ್ಲಿ ಶ್ರೀ ರೇಣುಕಾಚಾರ್ಯ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ ಕೀರ್ತಿ ಇವರದು. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಆರ್ಥಿಕ ನೆರವು ಮತ್ತು ಪ್ರೋತ್ಸಾಹ ನೀಡಿದರು. ಇವರ ನಂತರ ಅಧಿಕಾರ ವಹಿಸಿಕೊಂಡ ಜಗದ್ಗುರು ವೀರರುದ್ರಮುನಿ ಶಿವಾಚಾರ್ಯರು ಪೀಠದಲ್ಲಿ ಪ್ರವಾಸಿ ಮಂದಿರ, ಮಹಾದ್ವಾರ, ವೀರೇಶ್ವರ ಮಂದಿರದ ಗೋಪುರ ನಿರ್ಮಾಣ ಮಾಡಿಸಿದರು. ಮಠದ ಭೂ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗೊಳಿಸಿದರು. ಕೆಲವು ಕಡೆ ವೇದ - ಸಂಸ್ಕೃತ ಪಾಠಶಾಲೆ ಮತ್ತು ಕಾಲೇಜು ತೆರೆಯಲು ಪ್ರೋತ್ಸಾಹಿಸಿರುತ್ತಾರೆ. ಮಠದಲ್ಲಿ ನಡೆಯುತ್ತಿದ್ದ ಜಾತ್ರೆ ಮತ್ತು ರೇಣುಕ ಜಯಂತಿ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸಿದರು. ಬಾಳೆಹೊನ್ನೂರಿನಲ್ಲಿ ಜಗದ್ಗುರು ರೇಣುಕಾಚಾರ್ಯ ಪದವಿಪೂರ್ವ ಕಾಲೇಜು ಪ್ರಾರಂಭಿಸಲು ಆರ್ಥಿಕ ನೆರವು ನೀಡಿದರು. ಜಗದ್ಗುರುಗಳು ಕನ್ನಡ, ಮರಾಠಿ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ವಿದ್ವಾಂಸರಾಗಿದ್ದರು.

ಪೀಠದಲ್ಲಿ ನಡೆಯುವ ಶಿಕ್ಷಣ ಸಂಸ್ಥೆಗಳು

ಕೆಲವಾರು ವರ್ಷಗಳ ಹಿಂದೆ ಪೀಠಾಧಿಕಾರವನ್ನು ವಹಿಸಿಕೊಂಡ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಬಹುಮುಖ ಪ್ರತಿಭೆಯುಳ್ಳವರು. ಆಧ್ಯಾತ್ಮಿಕ ಮತ್ತು ಆಧುನಿಕ ಶಿಕ್ಷಣ ತಜ್ಞರು. ಸಾಹಿತ್ಯ ಪ್ರೇಮಿಗಳು. ಪೀಠದ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಹಗಲು ರಾತ್ರಿ ಶ್ರಮಿಸುತ್ತಿರುವ ಪೀಠಾಚಾರ್ಯರು. ನೂರಾರು ವರ್ಷಗಳಲ್ಲಿ ಸಾಧಿಸಬಹುದಾದುದ್ದನ್ನು ಹತ್ತು ವರ್ಷಗಳಲ್ಲಿ ಸಾಧಿಸಲು ಸತ್‌ಸಂಕಲ್ಪ ಮಾಡಿ ಕಾರ್ಯಪ್ರವೃತ್ತರಾಗಿದ್ದಾರೆ. ಪೀಠದಲ್ಲಿ ಪ್ರಸಾದನಿಲಯ, ನಿತ್ಯದಾಸೋಹ - ಶಿಕ್ಷಣ - ಶಾಲಾ ಕಾಲೇಜುಗಳ ಕಟ್ಟಡ, ನಿತ್ಯಬರುತ್ತಿರುವ ಯಾತ್ರಾರ್ಥಿಗಳಿಗೆ ಆಧುನಿಕ ರೀತಿಯಲ್ಲಿ ವಸತಿಗೃಹ, ಪೂರ್ವಾಚಾರ್ಯ ಯೋಗ ಗದ್ದುಗೆಗಳ ನವೀಕರಣ, ವೀರಭದ್ರಸ್ವಾಮಿ ದೇವಾಲಯದ ಜೀರ್ಣೋದ್ಧಾರ, 'ಸಾಹಿತ್ಯ ಪ್ರಕಟಣೆಗಳು'.' ರಂಭಾಪುರಿ ಬೆಳಗು' ಮಾಸಪತ್ರಿಕೆ ಪ್ರಕಟಣೆ ಮುಂತಾದ ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ.

೧. ರಂಭಾಪುರಿ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ : ಇದರ ಆಶ್ರಯದಲ್ಲಿ ಈ ಕೆಳಕಂಡ ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ೧. ಜಗದ್ಗುರು ರುದ್ರಮುನೀಶ್ವರ ಪ್ರೌಢಶಾಲೆ, ೨. ಜಗದ್ಗುರು ಶಿವಾನಂದ ರಾಜೇಂದ್ರ ವಿದ್ಯಾರ್ಥಿನಿಲಯ, ೩. ಜಗದ್ಗುರು ರೇಣುಕಾಚಾರ್ಯ ಗುರುಕುಲ (ಮಠಾಧೀಶ್ವರರಿಗೆ ತರಬೇತಿ). ೪. ಐ.ಟಿ.ಐ. ತರಬೇತಿ ಕೇಂದ್ರ, ೫. ವೇದ ಸಂಸ್ಕೃತ ಪಾಠಶಾಲೆ, ೬. ಶ್ರೀ ಜಗದ್ಗುರು ರೇಣುಕಾಚಾರ್ಯ ಪದವೀಪೂರ್ವ ಕಾಲೇಜುಗಳು ನಡೆಯುತ್ತಿವೆ.

೨. ಧಾರವಾಡ ಜಿಲ್ಲಾ ಶಿಗ್ಗಾವಿ ತಾಲ್ಲೂಕು ತಿರುವಲಕೊಪ್ಪದಲ್ಲಿ ಶ್ರೀ ಜಗದ್ಗುರು ಗಂಗಾಧರೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯಗಳು ನಡೆಯುತ್ತಿವೆ.

೩. ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು. ಝಳಕಿಯಲ್ಲಿ ಜಗದ್ಗುರು ರಂಭಾಪುರೀಶ್ವರ ಪ್ರೌಢಶಾಲೆ ನಡೆಯುತ್ತಿದೆ.

೪. ಬೆಂಗಳೂರು ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಸಂಸ್ಥೆ (ರಿ) ಯ ಆಶ್ರಯದಲ್ಲಿ ನಡೆಯುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳು : ೧. ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ, ವಾಣಿಜ್ಯ ಕಾಲೇಜು ೨. ಶ್ರೀ ಜಗದ್ಗುರು ರೇಣುಕಾಚಾರ್ಯ ಕಾನೂನು ಕಾಲೇಜು. ೩. ಶ್ರೀ ಜಗದ್ಗುರು ರೇಣುಕಾಚಾರ್ಯ ಔಷಧಿ ವಿಜ್ಞಾನ ಮಹಾವಿದ್ಯಾಲಯ. ೪. ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಿಳಾ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು. ೫. ಶ್ರೀ ಜಗದ್ಗುರು ರೇಣುಕಾಚಾರ್ಯ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು. ೫. ಶ್ರೀ ಮಹಂತರ ಮಠದ ಆಶ್ರಯದಲ್ಲಿ ಜಗದ್ಗುರು ಪಂಚಾಚಾರ್ಯ ವೇದ - ಸಂಸ್ಕೃತ ಪಾಠಶಾಲೆ. : ಶ್ರೀ ಜಗದ್ಗುರು ಪಂಚಾಚಾರ್ಯ ಫ್ರೀ ಬೋರ್ಡಿಂಗ್.

ಧರ್ಮ ಮತ್ತು ಶಿಕ್ಷಣ ಪ್ರಚಾರವನ್ನು ನಡೆಸುತ್ತಿರುವ ರಂಭಾಪುರಿ ಪೀಠವು ಜನಸಾಮಾನ್ಯರ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುತ್ತದೆ. ಈ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು ಹತ್ತು ಸಹಸ್ರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ಈ ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳು ಪ್ರಾಮಾಣಿಕತೆಯಿಂದ ಕೆಲಸಮಾಡಿ ನಾಡಿನ ಜನತೆಗೆ ಉತ್ತಮ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ ವೀರಶೈವ ಮಠಗಳು ಗ್ರಾಮಾಂತರ ಮತ್ತು ನಗರದ ನಾಗರೀಕರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಒದಗಿಸುವಲ್ಲಿ ಮಹತ್ತರ ಪಾತ್ರ ವಹಿಸಿರುತ್ತವೆ. ವೀರಶೈವ ಮಠಗಳು ನಾಡಿನ ಜ್ಞಾನ ದೇಗುಲಗಳು ಎಂದು ಹೇಳಬಹುದು.

ಕಾಶಿ ಜಗದ್ಗುರು ಜಂಗಮವಾಡಿ ಮಠದ ಸಾಂಸ್ಕೃತಿಕ ಕೊಡುಗೆ

ಡಾ. ವಿ. ಶಿವಾನಂದ

ಉತ್ತರ ಭಾರತದ ಕಾಶಿಯಲ್ಲಿ ವೀರಶೈವ ಧರ್ಮದ ಪಂಚಪೀಠಗಳಲ್ಲೊಂದಾದ ಜಗದ್ಗುರು ಜಂಗಮವಾಡಿ ಮಠ ನೆಲಸಿರುವುದು ಧರ್ಮ ಪ್ರಸಾರ, ಸಾಂಸ್ಕೃತಿಕ ಭಾವೈಕ್ಯದ ದೃಷ್ಟಿಯಿಂದ ಮಹತ್ವದ ಸಂಗತಿಯಾಗಿದೆ. ಒಟ್ಟು ಐದು ಪೀಠಗಳಲ್ಲಿ ರಂಭಾಪುರಿ ಮತ್ತು ಉಜ್ಜೈನಿ ಪೀಠಗಳು ಕರ್ನಾಟಕದಲ್ಲಿದ್ದರೆ ಮಿಕ್ಕ ಮೂರು ಪೀಠಗಳು ಹೊರನಾಡಿನಲ್ಲಿವೆ. ಆಂಧ್ರದ ಶ್ರೀಶೈಲದಲ್ಲಿ ಒಂದು, ಮಿಕ್ಕೆರಡರಲ್ಲಿ ಕೇದಾರ ಮತ್ತು ಕಾಶಿ ಪೀಠಗಳು ಉತ್ತರ ಪ್ರದೇಶದಲ್ಲಿ ಸ್ಥಾಪಿತಗೊಂಡಿವೆ. ಈ ಪೀಠಗಳು ಪ್ರಾಚೀನವೆಂಬುದಕ್ಕೆ ಐತಿಹಾಸಿಕ ಸಾಮಗ್ರಿಗಳು ಆಧಾರವಾಗಿರುವಂತೆ ಅದಕ್ಕಿಂತ ಹೆಚ್ಚಿಗೆ ಪೌರಾಣಿಕ, ಧಾರ್ಮಿಕ ದೃಷ್ಟಿಯಿಂದ ಇವುಗಳ ಪರಂಪರೆ ಸನಾತನವಾದುದೆಂದು ಭಾವಿಸಲಾಗಿದೆ. ವೀರಶೈವ ಪಂಚಪೀಠಗಳ ಉತ್ಪತ್ತಿ, ವಿಕಾಸವನ್ನು ಪೌರಾಣಿಕ ಮತ್ತು ಧಾರ್ಮಿಕ ನೆಲಗಟ್ಟಿನಲ್ಲಿ ಉಲ್ಲೇಖಿಸುವ ಕ್ರಮ ಇಂತಿದೆ:--

೧. **ಪೌರಾಣಿಕ ಹಿನ್ನೆಲೆ:**

ಪರಶಿವ
|
ಅಪ್ರಾಕೃತ ಸೃಷ್ಟಿ
|
ಶಿವತತ್ತ್ವ (ಲಿಂಗ) ಉದಯ
|
ಪಂಚ ತತ್ತ್ವಗಳು (ಪೃಥ್ವಿ - ಅಪ್ - ತೇಜ - ವಾಯು - ಆಕಾಶ)
|
ಪಂಚ ಪ್ರಮಥಾಚಾರ್ಯರು

ರೇಣುಕ | ದಾರುಕ | ಘಂಟಾಕರ್ಣ | ಧೇನುಕರ್ಣ | ವಿಶ್ವಕರ್ಣ

೨. ಧಾರ್ಮಿಕ ಹಿನ್ನೆಲೆ

ಪಂಚಲಿಂಗೋದ್ಭವರು

ಲಿಂಗ :	ಸೋಮೇಶ್ವರ ಲಿಂಗ	ಸಿದ್ಧೇಶ್ವರ ಲಿಂಗ	ಮಲ್ಲಿಕಾರ್ಜುನಲಿಂಗ	ಭೀಮನಾಥಲಿಂಗ	ವಿಶ್ವೇಶ್ವರಲಿಂಗ
ಸ್ಥಲ :	(ಕೊಲ್ಲಿಪಾಕಿ)	(ವಟಕ್ಷೇತ್ರ)	(ಶ್ರೀಶೈಲ)	(ದ್ರಾಕ್ಷಾರಾಮ)	(ಕಾಶಿ)
ಆಚಾರ್ಯ :	ರೇಣುಕಾಚಾರ್ಯ	ದಾರುಕಾಚಾರ್ಯ	ಪಂಡಿತಾರಾಧ್ಯ	ಏಕೋರಾಮಾರಾಧ್ಯ	ವಿಶ್ವಾರಾಧ್ಯ
ಗೋತ್ರ :	ವೀರ	ನಂದಿ	ವೃಷಭ	ಭೃಂಗಿ	ಸ್ಕಂದ
ಸೂತ್ರ :	ಪಡ್ವಿಡಿ	ವೃಷ್ಟಿ	ಮುಕ್ತಾ	ಲಂಬನ	ಪಂಚವರ್ಣ
ಪೀಠ :	ವೀರ	ಧರ್ಮ	ಸೂರ್ಯ	ವೈರಾಗ್ಯ	ಜ್ಞಾನ
ಧ್ವಜ :	ಹಸಿರು	ಕುಂಕುಮ	ಬಿಳಿ	ನೀಲ	ಹಳದಿ
ಶಿಷ್ಯ ವರ್ಗ :	ಮಖಾರಿ	ಕಾಲಾರಿ	ಸ್ಮರಾರಿ	ಪುರಾರಿ	ವೇದಾರಿ
ಪುರಾಣೋಕ್ತ ಶಿಷ್ಯವರ್ಗ:	ಅಗಸ್ತ್ಯ	ದಧೀಚಿ	ಸಾನಂದ	ವೇದವ್ಯಾಸ	ದೂರ್ವಾಸ

ವೀರಶಿವಾಗಮೋಕ್ತ ಗ್ರಂಥಗಳಾದ ಸುಪ್ರಬೋಧಾಗಮ, ಸ್ವಯಂಭು ಆಗಮ, ವೀರಲಿಂಗೋಪನಿಷತ್‌ಗಳಲ್ಲಿಯೂ ಕನ್ನಡದ ವಚನಕಾರರಾದ ತೋಂಟದ ಸಿದ್ಧೇಶ್ವರರ ವಚನಗಳಲ್ಲೂ ಶಿವತತ್ತ್ವದ ಮೂಲ; ಶಿವಲಿಂಗ ತತ್ತ್ವ, ಲಿಂಗೋದ್ಭವದ ಅರ್ಥ ಪರಿಕಲ್ಪನೆ, ಪಂಚಪೀಠಾಚಾರ್ಯರ ಬೆಳವಣಿಗೆ ಕ್ರಮ ಕುರಿತು ವಿವರಣೆಗಳು ನಮಗೆ ದೊರೆಯುತ್ತವೆ. ಕನ್ನಡದಲ್ಲಿ ಬರೆಯಲಾದ ವೀರಶೈವ ಪುರಾಣ ಗ್ರಂಥಗಳಲ್ಲಿ ನಾಲ್ಕು ಪೀಠಗಳ ಉಲ್ಲೇಖವಿದ್ದು, ವಿಶ್ವಾರಾಧ್ಯ ಪೀಠದ ಪ್ರಸ್ತಾಪವಿಲ್ಲ. ಆದರೆ ಸಂಸ್ಕೃತ ಆಕರಗಳಲ್ಲಿಯೂ, ಇತಿಹಾಸ, ಶಿಲಾಶಾಸನ, ದಾನಪತ್ರ ಹಾಗೂ ಮತ್ತಿತರ ದಾಖಲಾತಿಗಳ ಮೇಲಿಂದ ಈ ಪೀಠವೇ ಉಳಿದವುಗಳಿಗಿಂತ ಪ್ರಪ್ರಾಚೀನವೆಂದು ಸಂಭಾವಿಸಲಾಗಿದೆ. ಭಾರತದ ಎಲ್ಲ ಮತ - ಧರ್ಮಗಳಲ್ಲಿ ಶೈವ ಧರ್ಮವೇ ಅತ್ಯಂತ ಪ್ರಾಚೀನ. ಕಾಶಿಯಂತೂ ಸನಾತನ ಕಾಲದಿಂದಲೂ ಶೈವ ಧರ್ಮ, ಶಿವೋಪಾಸನೆಯ ಮುಖ್ಯ ಕೇಂದ್ರ. ಕಾಶಿಯಲ್ಲಿ ನೆಲಸಿರುವ ವಿಭಿನ್ನ ಸಂಪ್ರದಾಯ ಮತ, ಧರ್ಮ ಸಂಘಗಳಿಗೆ ಸೇರಿದ ಎಲ್ಲ ಮಠಗಳಿಗಿಂತ ಜಂಗಮವಾಡಿ ಮಠದ ಪ್ರಾಚೀನತೆ ,ಶೈವ ಧರ್ಮದ ಐತಿಹಾಸಿಕತೆಯಿಂದಾಗಿ ತುಂಬ ಹಳಮೆಯಾಗುತ್ತದೆ. ಕಾಶಿಯಲ್ಲಿನ ಮಠಮಾನ್ಯ ಸಂಪ್ರದಾಯಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದ ಔತ್ತರೇಯ ವಿದ್ವಾಂಸರೇ ಇದನ್ನು ಒಪ್ಪಿಕೊಳ್ಳುತ್ತಾರೆ. ಶಂಕರಾಚಾರ್ಯರು ಕಾಶಿಯಲ್ಲಿ ಐನೆಯ ಪೀಠವನ್ನು ಸ್ಥಾಪಿಸಿದ ಆದ್ಯರೆಂದು ಕೆಲವರು ಭಾವಿಸಿದ್ದರೆ ಅದು ತಪ್ಪು ಗ್ರಹಿಕೆಯದು. ವಿಶ್ವೇಶ್ವರನ ಸಂಬಂಧಿಯಾದ ಶೈವ ವಿಚಾರಗಳು, ವೀರಶೈವ ಮತದ ಕುರುಹುಗಳು ಮೊದಲಿಂದಲೂ ಇದ್ದು ಅದು ಇಲ್ಲಿ ಅನಂತರ ವಿಕಾಸಗೊಂಡಿದೆಯೆಂಬುದು ತಜ್ಞರ ಅಭಿಪ್ರಾಯ.

....There is a controversy about the Adya Shankara's establishing a fifth peetha in Kashi. But the bare fact that the fifth peetha of the Veerashaiva has been existing in Kashi from a very ancient time is not subject to any such dispute. It must be borne in mind that Veerashaivism in an ancient sect.[1]

ವಿಶ್ವೇಶ್ವರ ಲಿಂಗ - ವಿಶ್ವಾರಾಧ್ಯ ಪೀಠಸಂಬಂಧಗಳು:

ವಿಶ್ವೇಶ್ವರಾಭಿದಾನಯುಕ್ತ ಅವಿಮುಕ್ತ ಕ್ಷೇತ್ರವೆನ್ನಿಸಿದ ಕಾಶಿಯ ವಿಶ್ವೇಶ್ವರ ಲಿಂಗದಲ್ಲಿ ಪ್ರಕಟರಾದ ವಿಶ್ವಾರಾಧ್ಯ ವ್ಯಕ್ತಿ ಮತ್ತು ತತ್ತ್ವಗಳು ವೀರಶೈವ ಧರ್ಮದ ಲಿಂಗಾಂಗ ಸಾಮರಸ್ಯದಂತೆ ಅವಿನಾಭಾವ ಸಂಬಂಧವುಳ್ಳವುಗಳು. ಕಾಶಿಯ ವಿಶ್ವೇಶ್ವರ ಲಿಂಗದ ಉಲ್ಲೇಖ ಕಾಶೀಖಂಡ, ಬ್ರಹ್ಮವೈವರ್ತಪುರಾಣಾಂತರ್ಗತ ಕಾಶೀ ರಹಸ್ಯ, ಶಿವರಹಸ್ಯಾದಿ ಗ್ರಂಥಗಳಲ್ಲೂ, ಶಿವ ಪುರಾಣಗಳಲ್ಲೂ ದೊರೆಯುತ್ತದೆ.

ವಿಶ್ವೇಶ್ವರೋ ಯತ್ರನ ತತ್ರ ಚಿತ್ತಂ ಧಮಾರ್ಥಕಾಮಾಮೃತರೂಪಃ
ಸ್ವರೂಪಃ ವಿಶ್ವರೂಪಸ್ತಮಾನ್ನ ಕಾಶೀ ಸದೃಶೀ ತ್ರಿಲೋಕೇ

(ಕಾ.ಖಂ. ೩ - ೯೮)

ತ್ರಿಲೋಕಗಳಲ್ಲೇ ಇಲ್ಲದ ವಿಶ್ವ ಸಮಸ್ತರೂಪನಾದ ವಿಶ್ವೇಶ್ವರ, ಧರ್ಮಾರ್ಥಕಾಮ ಮೋಕ್ಷ ಪ್ರದಾಯಕನು ನೆಲಸಿರುವ ಸಿದ್ಧಸ್ಥಾನ ಕಾಶಿಯೆಂದಾಗಿ ಕಾಶೀ ಖಂಡದಲ್ಲಿ ವರ್ಣಿಸಲಾಗಿದೆ. ಮಹಾಭಾರತದ ಅನುಶಾಸನ ಪರ್ವದಲ್ಲಿ ಒಂದೆಡೆ 'ಶಿವ, ಮಹಾದೇವ'ನ ಅನುಗ್ರಹವುಳ್ಳ ಸಕಲ ಪ್ರಾಣಿಗಳೂ ಜನನ ಮರಣಗಳ ಬಂಧನದಿಂದ ಮುಕ್ತರಾಗುವುದಾಗಿ ಸಾರಿದೆ. (ಮ.ಭಾ.ಅನು. ೧೮.) "ಕಾಶ್ಯಾಂ ಮರಣಾನ್ಮುಕ್ತಿಃ" ಎಂಬುದು ಇದರಿಂದಾಗಿ ಪರಮೋಕ್ತಿಯಾಗಿ ನಿಂತಿದೆ. ಈ ಮಹಿಮಾನ್ವಿತ ವಿಶ್ವೇಶ್ವರ ಲಿಂಗದಿಂದುದಿಸಿದ ಖ್ಯಾತಿ ವಿಶ್ವಾರಾಧ್ಯರದಾಗಿದೆ. ಈ ಶಿವಾಚಾರ್ಯ ಪೀಠದ ಸ್ಪಷ್ಟ ಉಲ್ಲೇಖವನ್ನು ಕೆಳಗಿನ ಶ್ಲೋಕಗಳಲ್ಲಿ ಕಾಣಬಹುದು.

ಕಾಶ್ಯಾಂ ವಿಶ್ವೇಶ ಲಿಂಗಾಚ್ಚವಿಶ್ವಾರಾಧ್ಯಸ್ಯ ಸಂಭವಃ ।
ಸ್ಥಾನಂಶ್ರೀ ಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಮ್ ॥

(ಸ್ವಯಂಭು ಆಗಮ)

ಈ ಪೀಠದ ಗೋತ್ರ ಸೂತ್ರಾದಿಗಳು ಇನ್ನೊಂದೆಡೆಯಲ್ಲಿ ಉಕ್ತಗೊಂಡಿರುವುದು ಇಂತಿದೆ :

1. Ascetics of Kashi - Surjit Sinha and B Saraswati (1978).

ಸ್ಕಂದ ಗೋತ್ರಾಧಿನಾಥಸ್ಯ ಮಹಾಸಿಂಹಾಸನಾಗ್ರಣೀಃ ।
ವಿಶ್ವಾರಾಧ್ಯ ಇತಿಖ್ಯಾತೋ ಜಗದ್ಗುರೂತ್ತಮಶ್ಚಸಃ ॥

(ಸುಪ್ರಭೋದಾಗಮ)

ವಿಶ್ವನಾಥ ಲಿಂಗದ ಅರ್ಚನ, ಅಭಿಷೇಕಾದಿ ಕ್ರಿಯಾಚರಣೆಗಳು ಹಿಂದೆ ಈ ಮಠದ ಅಧಿಕಾರದಲ್ಲೇ ಇದ್ದು ಪ್ರಭಾವ ವಿಶೇಷದಿಂದ ವೈದಿಕ ಬ್ರಾಹ್ಮಣರ ಕೈವಶಗೊಂಡಿವೆ. ವಿಶ್ವನಾಥ ಗರ್ಭಗೃಹದಲ್ಲಿ ಮೂಲದಲ್ಲಿದ್ದ ಪಂಚಮುಖವುಳ್ಳ ವಿಶ್ವೇಶ್ವರ ರಜತ ವಿಗ್ರಹ ಈಗಲೂ ಮಠದ ಸ್ವಾಧೀನದಲ್ಲೇ ಇದ್ದು, ಇದನ್ನು ಶಿವರಾತ್ರಿ ಮಹೋತ್ಸವದ ಕಾಲದಲ್ಲಿ ಹೊರತೆಗೆದು, ಮೆರವಣಿಗೆ ಮಾಡುವ ಸಂಪ್ರದಾಯವಿದೆ. ವಿಶ್ವೇಶ್ವರ ಮೂಲ ವಿಗ್ರಹಕ್ಕೂ ವಿಶ್ವಾರಾಧ್ಯ ಪೀಠಕ್ಕೂ ಇರುವ ಪೂರ್ವಾಪರ ಸಂಬಂಧಗಳನ್ನು ಈ ಸಂಕೇತದಿಂದ ತಿಳಿಯಬಹುದಾಗಿದೆ. [2]

ಉತ್ತರ ಭಾರತದಲ್ಲಿ ಶಿವೋಪಾಸಕ ಜಂಗಮರ ಸಂಚಾರ

ಕರ್ನಾಟಕದಿಂದ ಬಹುದೂರವಿರುವ ಕಾಶಿಯಲ್ಲಿ ಹಾಗೂ ಉತ್ತರ ಭಾರತದ ಹಲವಾರು ಕಡೆಗಳಲ್ಲಿ ಶೈವ ಜಂಗಮರ ಸಂಚಾರ ಸಂಪರ್ಕಗಳು ಬೆಳೆದಿದ್ದವೇ? ಎಷ್ಟು ಹಿಂದಿನಿಂದ? ಎಂಬ ಪ್ರಶ್ನೆಗಳಿಗೆ ಪ್ರಾಚೀನ ಶಿಲಾಶಾಸನಗಳಲ್ಲಿ ಉತ್ತರ ದೊರೆಯುತ್ತದೆ. ಹಿಂದೆ ಶಿವ ದೇವಾಲಯಗಳಿದ್ದಲ್ಲಿ ಸ್ಥಾನಿಕಾಚಾರ್ಯರು ಪಾಶುಪತ ಮತಾವಲಂಬಿಗಳಾದ "ಗುರು","ಮಹೇಶ್ವರ" "ಜಂಗಮರೇ" ಆಗಿರುತ್ತಿದ್ದು ದೇವಸ್ಥಾನಕ್ಕೆ ಹೊಂದಿ ಮಠಗಳು ನೆಲಸಿದ್ದವು. ಬಳ್ಳಿಗಾವೆಯ ಕೋಡೀಮಠ ಸಂಬಂಧಿಯಾದ ಶಾಸನಗಳು ಈ ಸಂಗತಿಯನ್ನು ಸ್ಪಷ್ಟೀಕರಿಸುತ್ತವೆ.[3] ಕ್ರಿ.ಶ. ೯೫೦ರ ಚಾಲುಕ್ಯರ ಕಾಲದ ಒಂದು ಶಿಲಾಶಾಸನದಲ್ಲಿ ಇಂತಹ ಜಂಗಮರ ಸ್ಪಷ್ಟ ಚಿತ್ರವಿದೆ. "ಭಸ್ಮೋದ್ಧೂಳಿತ ಗಾತ್ರರು, ಕೌಪೀನಾಜಿನರುಂ, ರುದ್ರಾಕ್ಷ ಮಾಲಾಧಾರರುಂ, ವಾತುಲಾಗಮ ಸಮಯ ಸಮುದ್ಧಾರರುಂ ಜಂಗಮಲಿಂಗಾವತಾರರುಂ..." ಇಂದು ನಾಮಖ್ಯಾತವಾಗಿರುವ ಪಂಚ ಪೀಠಗಳ ಮೂಲವನ್ನು ಪ್ರಾಚೀನ ಶೈವ ಶಾಖೆಗಳಾದ ಪಾಶುಪತ, ಲಾಕುಲೀಶ, ಕಾಳಾಮುಖ ಶಾಖೆಗಳಲ್ಲಿ ಅನ್ವೇಷಿಸಬಹುದು. ಇವು ಮುಂದೆ ವೀರಶೈವದಲ್ಲಿ ಸಮನ್ವಿತಗೊಂಡಿವೆ. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಾಳಾಮುಖ ಪ್ರಸಾರಗೊಂಡರೆ, ಉತ್ತರ ಭಾರತದಲ್ಲಿ ಪ್ರಾಚೀನ ಕಾಲದಿಂದ ಎಂದರೆ ಕ್ರಿ.ಶ. ೫ - ೬ ನೆಯ ಶತಮಾನಗಳಿಂದೀಚೆಗೆ ಲಾಕುಲೀಶ - ಪಾಶುಪತಗಳು ಬೆಳವಣಿಗೆಗೊಂಡವು. ಪರಮ ಮಾಹೇಶ್ವರ ವ್ರತನಿಷ್ಠರಾದ ಈ ಮಠದ ಆಚಾರ್ಯರು ದೇಶದಾದ್ಯಂತ ಪಸರಿಸಲು ಇದು ಕಾರಣವಾಯಿತು. ಜೊತೆಗೆ ಕಾಶ್ಮೀರ ಶೈವಧರ್ಮದ ಪ್ರಭಾವವೂ ಇವುಗಳ ಮೇಲಾಯಿತು. ಕ್ರಿ.ಶ. ೭೫೪ ರ ಒಂದು ಶಾಸನದಲ್ಲಿ 'ಗಂಗೆಯ ಉತ್ತರ ತಡಿಯ' ಮೃಗಥಣಿಕಾಹಾರ ವಿಷಯ'ದಲ್ಲಿ ' ಶಿವಶಾಸನ' ನೆಂಬ ಬಿರುದಾಂಕಿತ ಶಿವಾಗಮ ನಿರತನಿದ್ದ ಉಲ್ಲೇಖ ದೊರೆಯುತ್ತದೆ. ಇದು ಇಂದಿನ ಕಾಶಿಯ ಹತ್ತಿರದ 'ಸಾರನಾಥ'. ಇದನ್ನು ಹಿಂದೆ 'ಮಿಗದಾಹವಿಹಾರ' ವೆಂದು ಹೆಸರಿಸಿದೆ.[4] ಕಾಶಿಯ ಜಂಗಮವಾಡಿ ಮಠದ ಮೂಲಕರ್ತರ ಹೆಸರು 'ಮಲ್ಲಿಕಾರ್ಜುನ ಜಂಗಮಗೋಸಾಯಿ'. ಇವರು ಜಯನಂದನ ದೊರೆಯಿಂದ ಗೋಚರ ಭೂಮಿಯನ್ನು ದತ್ತಿಯಾಗಿ ಪಡೆದ ಕಾಲ ಕ್ರಿ.ಶ. ೬೩೧. ಶ್ರೀ ಪರ್ವತಾವಳಿಯ, ಎಂದರೆ ಇಂದಿನ ಶ್ರೀಶೈಲದ ಕಾಳಾಮುಖ ಆಚಾರ್ಯರಲ್ಲಿ 'ಮಲ್ಲಿಕಾರ್ಜುನ' ಹೆಸರುಗಳು ದೊರೆಯುತ್ತವೆ. ಆ ಪ್ರಭಾವ ಕಾಶಿಯಲ್ಲಿನ ಪಾಶುಪತ ಆಚಾರ್ಯರ ಮೇಲೂ ಉಂಟಾಗಿರಲು ಸಾಧ್ಯ. ಒಟ್ಟಾರೆ ಶೈವ ಧರ್ಮದ ಪ್ರಸಾರಾರ್ಥವಾಗಿ ಶಿವ ಜಂಗಮರು ಒಂದು ಕಾಲಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಪ್ರಮುಖ ಧಾರ್ಮಿಕ ಕೇಂದ್ರಗಳನ್ನು ಹೊಂದಿದ್ದು ಪರಸ್ಪರ ಸಂಪರ್ಕವುಳ್ಳವರಾಗಿದ್ದರಿಂದ ದಕ್ಷಿಣದಿಂದ ಉತ್ತರದ ಕಡೆಗೂ ಉತ್ತರದಿಂದ ದಕ್ಷಿಣದ ಕಡೆಗೂ ಈ ಜಂಗಮರ ಸಂಚಾರವಿತ್ತೆಂಬುದು ಸ್ಪಷ್ಟವಾಗುತ್ತದೆ. ಕಾಶ್ಮೀರ, ನೇಪಾಲ, ಉಜ್ಜೈನಿ, ಶ್ರೀಶೈಲ, ಕಾಶಿ ಈ ನೆಲೆಗಳಲ್ಲಿ ಜಂಗಮ ಸಮುದಾಯ ವಿಶೇಷವಾಗಿತ್ತೆಂದು ಗೊತ್ತಾಗುತ್ತದೆ.[5] ಔತ್ತರೇಯ ಸಂತ ಶ್ರೇಷ್ಠರಾದ ಕಬೀರ, ಸುಂದರದಾಸ, ಧಾದೂ ದಯಾಲ್ ಹಾಗೂ ಶಿಖ್‌ಗುರು ತೇಜ ಬಹದ್ದೂರರ ವಾಣಿಗಳಲ್ಲಿ 'ಜಂಗಮ' ಪದಪ್ರಯೋಗವಿದ್ದು ಜಂಗಮರು ಉತ್ತರ ಭಾರತದಲ್ಲಿ ಆ ಕಾಲಕ್ಕಾಗಲೇ ವಾಸಿಸಿದ್ದರೆಂಬುದಕ್ಕೆ ಸಮರ್ಥನೆ ಸಿಕ್ಕುತ್ತದೆ.

---

2 'Vishwanath temple was once under the management of thjs math - ಈ ಹೇಳಿಕೆ ಮೇಲಿನದನ್ನು ಸಮರ್ಥಿಸುತ್ತದೆ. (*Ibid*) (1978)

3 E C VII, SK 94 - ವಿಶೇಷ ವಿವರಕ್ಕೆ, ಡಾ. ಎಂ. ಚಿದಾನಂದಮೂರ್ತಿ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೨೦

4 ಡಾ. ಎಂ.ಸಿ. ಮೂರ್ತಿಗಳು ಇದಾವ ದೇಶವೋ ತಿಳಿಯದು ಎಂದಿದ್ದಾರೆ. ಕ.ಶಾ.ಸಾ.ಅ.ಪು ೧೩೯. ಇದು ಬೌದ್ಧಕೇಂದ್ರವಾದ ಸಾರನಾಥವೇ ಆಗಿದ್ದು, ಹಿಂದೆ ಇಲ್ಲಿ ಶೈವ ಧರ್ಮ ನೆಲಸಿತ್ತೆಂಬುದಕ್ಕೆ ಆಧಾರಗಳಿವೆ.

5 Kashinath Shastri speeches (1969) Mysore

೧. 'ಜಂಗಮ'ತೋ ಸಿದ್ಧಿ ಪಿಕೋ ಧಾವ್ಮೆಂಯ್ । ನಿಸಿಬಾಸರ ಶಿವಧ್ಯಾನಲಗಾವ್ಮೆಂಯ್ ಶಿವ ಶಿವ ಕರತಗಯೇ ಶಿವದ್ವಾರ ॥

೨. ಜಂಗಮ ಜೀವ ಕಬಾಂನಿಪೀಂ ಮೋರ್ಕೆಯ್
ಪಢ್ಯೆಂ ಗುಣ್ಯೆಂ ನಮನಾಮೇ ಉಚಾರೇ ॥ (ಕಬೀರ ವಚನಾವಲೀ)

೩. ಮಠಾಕಾಶ ಮಾಹೀ ಸಬ್ ಘಟಮಠ್ ದೇಖಿಯತ್ (ಸುಂದರದಾಸ ಕ್ರಿ.ಶ. ೧೫೯೬)

೪. ನಿಕಟ ನಿರಂಜನಲಾಗೀರಹೇ - (ದಾದೂ ದಯಾಲ್ ಕ್ರಿ.ಶ. ೧೫೪೪)

೫. ಜೋಗೀಜಂಗಮ ಅರು[6] ಸನ್ನ್ಯಾಸಿ । ಸಬಹೀ ಪರಿಡಾರೀ ಬಾದಘಾಂಸೀ ॥ (ತೇನಬಹದ್ದೂರ. ಕ್ರಿ.ಶ. ೧೬೨೨)

ಇದರಿಂದ ೧೫ನೆಯ ಶತಮಾನದಷ್ಟು ಹೊತ್ತಿಗೆ 'ಜಂಗಮ'ರ ತತ್ತ್ವ ವಿಚಾರಗಳು ಉತ್ತರ ಭಾರತದ ಸಂತ, ಸಿದ್ಧ ಹಾಗೂ ನಾಥ ಪಂಥವರಿಗೆ ತಿಳಿದಿದ್ದವೆನ್ನಬಹುದು. ಪ್ರತಿ ೬ ಮತ್ತು ೧೨ ವರ್ಷಗಳಲ್ಲಿ ಜರುಗುವ ಪ್ರಯಾಗದ ಅರ್ಧ ಮತ್ತು ಪೂರ್ಣ ಕುಂಭಮೇಳಾಗಳಿಗೆ ಜಂಗಮರೂ ಸಹ ಬರುತ್ತಿದ್ದರೆಂದೂ ಕೆಲವರು ತಮ್ಮ ಜಡೆಗಳಲ್ಲಿ ಲಿಂಗ ಧರಿಸುತ್ತಿದ್ದರೆಂದೂ ಹಿಂದಿನ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು ಇದೇ ಲೇಖಕನಿಗೆ ಒಮ್ಮೆ ಸಂದರ್ಶನದಲ್ಲಿ ತಿಳಿಸಿದ್ದು ಇಲ್ಲಿ ಉಲ್ಲೇಖನೀಯ. ಈಗಿನ ವೀರಶೈವ ಪರಿಭಾಷೆಯಲ್ಲಿನ "ಜಂಗಮ"ರು ಇವರಾಗಿರದಿದ್ದರೂ "ಜಂಗಮ ಸಾಧು"ಗಳಿದ್ದರೆಂಬುದಕ್ಕೆ ಇದು ಆಧಾರವಾಗುತ್ತದೆ. ಏಕೆಂದರೆ ಕುಂಭಮೇಳಾಗಳಿಗೆ ಸಾಮಾನ್ಯವಾಗಿ ವೀರಶೈವರು ನಡೆದುಕೊಳ್ಳುವ ಸಂಪ್ರದಾಯ ವಿರುವುದಿಲ್ಲ.[7] ಸಾಯಣ ಭಾಷ್ಯದಲ್ಲಿ ಜೋಗಿ, ಸನ್ಯಾಸಿ, ಜಂಗಮ, ಯತಿಗಳುಉಕ್ತಗೊಂಡಿರುವುದರಿಂದ ಜಂಗಮಸಂಪ್ರದಾಯ, ಜಂಗಮ ಸಮುದಾಯವಿದ್ದಿರಬೇಕೆಂಬುದಂತೂ ನಿರ್ವಿವಾದವಾದ ಸಂಗತಿ. ಕೆಲವು ವೀರಶೈವ ಪುರಾಣಗಳಲ್ಲಿ ಕಾಶ್ಮೀರದಿಂದ ಜಂಗಮರನ್ನು ಕರೆದುಕೊಂಡು ಬಂದ ಸಂಗತಿ ಪವಾಡ ರೂಪದಲ್ಲಿ ವರ್ಣಿತಗೊಂಡಿದೆ. ಇವೆಲ್ಲ ಸಂಗತಿಗಳಿಂದ ೧೨ನೆಯ ಶತಮಾನಕ್ಕೆ ಮುಂಚೆಯೇ ಉತ್ತರ ಭಾರತದಲ್ಲಿ ಜಂಗಮರಿದ್ದುದು ನಿಚ್ಚಳವಾಗುತ್ತದೆ.[8]

ಪ್ರಾಚೀನ ಶಾಸನೋಕ್ತ ದಾಖಲೆಗಳಲ್ಲಿ ಜಂಗಮವಾಡಿ ಮಠ

ಜಂಗಮವಾಡೀ ಮಠದ ಅಸ್ತಿತ್ವಕ್ಕೆ ಅತ್ಯಂತ ಪ್ರಾಚೀನ ಆಕರವಾಗಿರುವುದು ಕಾಶೀ ನರೇಶ ಜಯನಂದನ ದೊರೆಯ ಕಾಲದ ತಾಮ್ರ ಮತ್ತು ಶಿಲಾಶಾಸನಗಳು, ಇವುಗಳ ಕಾಲ ವಿಕ್ರಮ ಸಂವತ್ ೫೬೪ (ಎಂದರೆ ಕ್ರಿ.ಶ. ೬೩೧). "ಮಲ್ಲಿಕಾರ್ಜುನ ಜಂಗಮ ಗೋಸಾಯಿಗಳ ಜಪತಪಮೋನಾನುಷ್ಠಾನಕ್ಕಾಗಿ" ಕರ್ದಮೇಶ್ವರದಿಂದ ಗಂಗಾತಟದವರೆಗಿನ ಭೂಮಿಯನ್ನು ಗೋಚರಾರ್ಥವಾಗಿ ಈ ಜಂಗಮರಿಗೆ ಮಹಾರಾಜನು ದತ್ತಿಯಾಗಿತ್ತನು. ಇದರ ಸಮಾಧಿ, ಪುಷ್ಕರಣಿ ಮತ್ತು ಸ್ಮಾರಕ ದೇವಾಲಯಗಳು ಈಗಲೂ ಇದ್ದು ಇದರ ಪರಿಸರದ ಗ್ರಾಮಕ್ಕೆ 'ಜಂಗಮಪುರ'ವೆಂದೇ ಹೆಸರಿದೆ. ಪಂಡಿತ ಮದನ ಮೋಹನ ಮೂಲವೀಯರು ಬನಾರಸ ಹಿಂದೂ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿದ ಮೇಲೆ ಜಂಗಮವಾಡೀ ಮಠದ ಈ ಜಾಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಸೇರಲ್ಪಟ್ಟಿದೆ. ಇದೇ ಮಠದ ಒಂದು ಶಾಖಾ ಮಠವು ನೇಪಾಲದಲ್ಲಿ ಖಟಮಂಡುವಿಗೆ ಹತ್ತಿರವಿರುವ ಭತಗಾಂವ್‌ದಲ್ಲಿದ್ದು ನೇಪಾಲವನ್ನಾಳಿದ ಮಲ್ಲ ದೊರೆಗಳಲ್ಲಿ ಇಬ್ಬರು ವಿಶ್ವಮಲ್ಲ ಹಾಗೂ ಜಯರುದ್ರ ಮಲ್ಲರಸದೇವರು ಭೂದಾನ ಮಾಡಿದ ಬಗೆಗೆ ಎರಡು ಸಂಸ್ಕೃತ ಶಿಲಾಶಾಸನಗಳು ಆಮಠದಲ್ಲಿ ಉಪಲಬ್ಧವಾಗಿವೆ. ಅವುಗಳಲ್ಲಿ ಒಂದರ ಕಾಲ ವಿಕ್ರಮ ಸಂ. ೬೯೨. ಅದರಲ್ಲಿಯೂ ಸಹ 'ಮಲ್ಲಿಕಾರ್ಜುನ ಜಂಗಮ' ಹೆಸರಿರುವುದರಿಂದ ಪೂರ್ವೋಕ್ತವಾದ ಕಾಶೀ ಶಾಸನ ಹಾಗೂ ಭತಗಾಂವ್ ಶಾಸನಗಳಲ್ಲಿನ ಮಲ್ಲಿಕಾರ್ಜುನ ಜಂಗಮ ಏಕೈಕ ವ್ಯಕ್ತಿಗಳೋ ಅಥವಾ ಭಿನ್ನ ವ್ಯಕ್ತಿಗಳೋ ಎಂಬುದು ವಿಚಾರಾರ್ಹ ಸಂಗತಿಯಾಗಿದೆ. ಆದರೆ ಮೂಲ ಗುರುವಿನ ಹೆಸರೇ ಅನಂತರದವರಿಗೂ ಮುಂದುವರೆಯುವ ಸಂಪ್ರದಾಯ ವೀರಶೈವ ಮಠಮಾನ್ಯಗಳಲ್ಲಿರುವುದರಿಂದ ಇವೆರಡೂ ಮಠಗಳ ಗುರು ಪರಂಪರೆ ಸಾಮಾನ್ಯವಾಗಿ ಒಂದೇ ಆಗಿದೆ. ಕಾಶಿಯ ಜಂಗಮವಾಡಿ

---

6. ಕಾಲಕ್ರಮದಲ್ಲಿ ಆಚಾರ ವಿಚಾರಗಳ ಸಂಪರ್ಕ ಕಳೆದುಕೊಂಡು ಜಂಗಮರು ಭೋಗಿಗಳಾಗಿ ಭಿಕ್ಷಾಟನೆಗಿಳಿದರು. ಇವರು ಆದಿಮ ಕಾಲದಿಂದಲೂ ಇದ್ದು ನಾಗರಿಕ ಸಂಪರ್ಕವಿಲ್ಲದಂತೆ ಈಗಲೂ ಹಲವೆಡೆ ಗುಡ್ಡಗಾಡುಗಳಲ್ಲಿ ಗಿರಿಜನರಾಗಿ ಬದುಕಿದ್ದನ್ನೂ ಕಾಣುತ್ತೇವೆ. ಬುಡ್ಗ ಜಂಗಮ, ಬೇಡ ಜಂಗಮ, ಮಲ್ಲೆ ಜಂಗಮ ಹೆಸರಿನಲ್ಲಿ ಆಂಧ್ರ, ಹಳೆ ಮೈಸೂರು, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಇವರ ಉಲ್ಲೇಖ ದೊರೆಯುತ್ತದೆ. ನೋಡಿ. E Thurston Castes & Tribes of South India Enthovan Tribes of Bombay Provinces

7. ಚಿತ್ತರೇಯ ಹಾಗೂ ವಾರಣಾಸಿಯ ಸ್ಥಳೀಯ ಪಂಡಿತರಲ್ಲಿ "ಜಂಗಮ"ಎಂದರೆ ವೀರಶೈವರಲ್ಲಿನ "ಬ್ರಾಹ್ಮಣ"ಎಂಬ ತಪ್ಪು ಗ್ರಹಿಕೆಯಿದೆ. (ಶ್ರೀ ಕಿಶೋರಿ ರಮಣ ರಾಣಾ ಬರೆದಿರುವ ಸಂಕ್ಷಿಪ್ತ ಮಠದ ಚರಿತ್ರ (ಹಿಂದಿ ೧೯೫೦) "ಲಿಂಗೀ ಬ್ರಾಹ್ಮಣ"ವಾದದ ಇತ್ತೀಚಿನ ಕಲ್ಪನೆಗಳು ಇಲ್ಲಿ ಹರಡಿರುವುದೇ ಇದಕ್ಕೆ ಕಾರಣ. ಆದರೆ "ಜಂಗಮ"ಕ್ಕೆ ವೀರಶೈವರಲ್ಲಿ ವಿಶಿಷ್ಟಾರ್ಥವಿರುವುದನ್ನು ಗಮನಿಸಬೇಕು.

8. ಚೋರಬಸವ ಚರಿತೆ - ಶ್ರೀ ಮುರುಘಾಮಠ ಪ್ರಕಾಶನ, ಧಾರವಾಡ.

ಪೂರ್ವದ್ದಾಗಿದ್ದು ಸು. ೧೪೦೦ ಎಕರೆಗಳಷ್ಟು ವಿಸ್ತಾರ ಭೂಮಿಯನ್ನು ಒಂದು ಕಾಲಕ್ಕೆ ಹೊಂದಿತ್ತು. ಕಾಶಿಯಲ್ಲಿ ಇಂದು ಸು. ೧೫೦೦ ಮಂದಿರಗಳು, ೩೦೦ ಮಠಗಳು ಒಟ್ಟಿಗೆ ಇದ್ದರೂ ಜಂಗಮವಾಡಿಯಷ್ಟು ವಿಸ್ತೃತ ನಿವೇಶನ ಹೊಂದಿದ್ದರ ಬಗೆಗೆ ಪ್ರಾಚೀನ ಆಧಾರಗಳಿಲ್ಲ. ಕಾಶಿಯಲ್ಲಿನ ಸೂರ್ಯನಾರಾಯಣ ಮಂದಿರ, ರೋಹಿತಾಸ ಮಂದಿರ,* ರಾಮ ಮಂದಿರ (ಮಾನಸ ಸರೋವರ) ಮನಕಾಮೇಶ್ವರ, ವಿಶ್ವನಾಥಗಲ್ಲಿ, ಗುಡಿಗಳ ಪೂಜಾಖರ್ಚು ಹಾಗೂ ಮೇಲ್ವಿಚಾರಣೆ ಮಠದ ಕೆಳಗೇ ಇರುವುದರಿಂದ ಆ ಭಾಗವೆಲ್ಲ ಜಂಗಮವಾಡಿ ಮಠಕ್ಕೆ ಸೇರಿದ್ದಾಗಿತ್ತು. ಅಲ್ಲದೆ 'ಹರಿಕೇಶಾನಂದನವನ'ದಲ್ಲಿರುವ ಮಹಾದೇವ ಮಂದಿರದ ಜೀರ್ಣೋದ್ಧಾರ ಕಾರ್ಯವನ್ನು ಜಂಗಮ ಸಂಸ್ಥಾಮಠದ ಮಹಾಂತ ಶಿವಲಿಂಗ ಸ್ವಾಮಿಗಳು ನಿರ್ವಹಿಸಿ, ಅವರ ನಿರೂಪವಂತೆ ಕಂಬದ ಮೇಲೆ ಒಂದು ಶಿಲಾಶಾಸನವನ್ನು ಕೆತ್ತಲಾಗಿದೆ. ಇದು ಗೊದೌಲಿಯಾಕ್ಕೆ ಹೋಗುವ ಮಾರ್ಗದಲ್ಲಿದೆ.[9] ಜಂಗಮವಾಡಿ ಮಠದ ಪ್ರಾಚೀನ ಶಿಲಾಶಾಸನದ ಪೀಠ, ಮಠದ ದಾಖಲಾತಿಗಳಲ್ಲಿ ಭೂರ್ಜ್ವ ಪತ್ರದ ಮೇಲೆ ಬರೆಯಲಾಗಿದ್ದು ಅದು ಜೀರ್ಣಗೊಳ್ಳುತ್ತಿದ್ದುದನ್ನು ಕಂಡು ಕಾಶಿಯ ದೊರೆ ಪ್ರಭುನಾರಾಯಣರ ಆದೇಶದಂತೆ ಅಲ್ಲಿನ ಪಾಠವನ್ನು ಹೊಸದೊಂದು ತಾಮ್ರ ಪಟದ ಮೇಲೆ ಲಿಖಿಸಲಾಗಿದೆ.

ಮೊಗಲ್ ಬಾದಶಹರ 'ಫರಮಾನ್'ಗಳಲ್ಲಿ ಜಂಗಮವಾಡಿ ಮಠ

'ಫರಮಾನ್' ಎಂಬುದು ಮೊಗಲರ ಆಡಳಿತ ಭಾಷೆಯಾದ ಪರ್ಷಿಯನ್ ಮೂಲಕ ಬಂದ ಶಬ್ದ. ರಾಜರು ಗೈದ ಭೂಮಿಯ ದಾನ ಇಲ್ಲವೆ ಅಧ್ಯಾದೇಶ, ರಾಜನಿರೂಪ ಸಂಗತಿಗಳನ್ನು ಒಳಗೊಂಡ ದಾಖಲೆಗಳನ್ನು 'ಸರಮಾನ್' ಎಂದು ಕರೆದರು. ವಾರಣಾಸಿ, ಕಾಶಿಗೆ ಬದಲಾಗಿ ಮೊಗಲರು ಈ ಸ್ಥಳವನ್ನು 'ಬನಾರಸ್' ಎಂದೇ ಕರೆದರು. ಸಮಗ್ರ ಉತ್ತರ ಭಾರತವನ್ನಾಳಿದ ಮೊಗಲ ಸುಲ್ತಾನರು ತಮ್ಮ ಆಧೀನ ಪ್ರದೇಶವಾದ ಬನಾರಸ್‌ನಲ್ಲಿ ವಜೀರರನ್ನು, ಸುಭೆದಾರರನ್ನು ನೇಮಿಸಿದ್ದರು. ಆದರೆ ಯಾವುದೇ ರಾಜಾಜ್ಞೆಗೆ ಬಾದಶಹನ ಮುದ್ರೆ ಸ್ವಹಸ್ತಾಕ್ಷರದಲ್ಲಿರುತ್ತಿತ್ತು. ಮೊಗಲ ಬಾದಶಹರು ಜಂಗಮವಾಡಿ ಮಠಕ್ಕೆ ವಿಶೇಷ ಭೂದಾನಗೈದರು. ಮಹಾಂತರ ಧರ್ಮಾಚರಣೆಗಳನ್ನು ಅನೂಚಾನವಾಗಿ ಕಾಪಾಡಿಕೊಂಡಿರುವುದಕ್ಕೆ ಯಾವುದೇ ವಿಧದ ಅಡ್ಡಿಯನ್ನುಂಟು ಮಾಡಲಿಲ್ಲ. ಇದಕ್ಕೆ ಮಠದ ಸಂಬಂಧವಾಗಿ ಅವರು ಹೊರಡಿಸಿರುವ ೧೭ಕ್ಕಿಂತ ಹೆಚ್ಚಿನ ಸಂಖ್ಯೆಯ ಫರಮಾನ್‌ಗಳು ಸಾಕ್ಷಿಯಾಗಿವೆ. ಅಕ್ಬರ್‌ನಿಂದ ಮೊದಲಾಗಿ ಔರಂಗಜೇಬನ ಕಾಲಾವಧಿಯ ತನಕ ಎಲ್ಲಾ ಸುಲ್ತಾನರು ಭೂದಾನ ನಿವೇಶನಾದಿಗಳನ್ನು ಮಠಕ್ಕೆ ಒದಗಿಸಿದ್ದಾರೆ. ಅವುಗಳ ಸಂಕ್ಷಿಪ್ತ ವಿವರಣೆ ಇಲ್ಲಿದೆ :-

ಬಾದಶಹನ ಹೆಸರು	ಕಾಲ	ದತ್ತಿ ಪ್ರಮಾಣ	ಫರಮಾನ್ ವಿವರ
ಅಕಬರ್	ಕ್ರಿ.ಶ. ೧೫೭೫	೩೦೦ ಬಿಂಘೆಜಮೀನು	ಜಂಗಮ ಸಾಧುಗಳ ನಿವೇಶನದ ಮೆಲೆ ಯಾರೂ ಅತ್ಯಾಕ್ರಮಣ ನಡೆಸಕೂಡದು.
ಜಹಂಗೀರ	೧೬೧೬	೧೭೮	ಜಂಗಮ ಸಾಧುಗಳಲ್ಲಿ ಹಿರಿಯರಾದವರು 'ಮುತುವಲಿ'ಗಳಾಗಬೇಕು. ಅನ್ನಸತ್ರ ಧರ್ಮಕಾರ್ಯಗಳಿಗಾಗಿ ದತ್ತಿಯ ವಿನಿಯೋಗ
ಜಹಂಗೀರ	೧೬೧೮	೨೭೮	ಜಂಗಮ ಸಾಧುಗಳ ಸಂಖ್ಯೆ ಹೆಚ್ಚಿದ್ದರಿಂದ ಹೆಚ್ಚಿನ ಭೂಮಿಯನ್ನು ದಾನಗೈದಿರುವುದು
ಶಹಜಹಾನ್	೧೬೩೦	೨೭೮	ದಾನಗೈದ ಭೂಮಿಯನ್ನು ವರ್ಷಪ್ರತಿ ನವೀಕರಣ ಮಾಡುವಂತೆ ಅಧ್ಯಾದೇಶ.
"	"	……	ಬನಾರಸ ಬಳಿಯ 'ಚುನಾರ್' ಎಂಬ ಸ್ಥಳದಲ್ಲಿನ ಸರಕಾರೀ ಆಧೀನದ ಭೂಮಿಯನ್ನು ಅಲ್ಲಿನ ಶಾಖಾ ಮಠಕ್ಕೆ ಮಾನ್ಯ ಮಾಡಲು ದಿವಾನ್ ಸರದಾರನಿಗೆ ಹೊರಡಿಸಿಲಾದ ಹುಕುಮು.

9 ಜಂಗಮವಾಡಿ ಮಠಸಂಬಂಧಿ ಶಿಲಾ - ಶಾಸನಗಳ ವಿವರಗಳಿಗೆ ನೋಡಿ. ಉತ್ತರ ಭಾರತದ ಕನ್ನಡ ಹಸ್ತಪ್ರತಿ-ಇತರ ದಾಖಲಾತಿ ಸೂಚಿ. (ಸಂ) ಡಾ. ಪಿ. ಶಿವಾನಂದ (೧೯೯೨).

* ಹರಿಶ್ಚಂದ್ರನ ಮಗ ರೋಹಿತನಿಗೆ ಸರ್ಪ ಕಚ್ಚಿದ ಸ್ಥಳವೆಂದು ಪ್ರತೀತಿ.

ಷಹಜಹಾನ್	೧೬೩೦	......	ಜಂಗಮ ಜಮಾಯತ್ ಭೂಮಿಯ ಮೇಲಿನ ಎಲ್ಲಾ ಕರಗಳನ್ನು ವಿಮುಕ್ತಗೊಳಿಸಬೇಕೆಂದು ನಿರೂಪ.
"	೧೬೩೨	....	ಮುತವಲಿಯ ಅಧೀನದಲ್ಲಿ ಜಂಗಮವಾಡಿಗೆ ಸೇರಿದ ಅನ್ಯತ್ರ ಜಾಗೆಯ ವಿಚಾರಣೆ.
"	೧೬೩೩	....	ಮಲ್ಲಿಕಾರ್ಜುನ ಜಂಗಮ ಗೋಸಾಯಿ ಮತ್ತು ಅವರ ಶಿಷ್ಯಂದಿರಿಗೆ ವಿನಾಕಾರಣ ಕಿರುಕುಳವೀಯಲು ತೊಡಗಿದವರ ಮೆಲೆ ಕ್ರಮ.
"	"	....	ದತ್ತಿಯಾಗಿತ್ತ ಭೂಮಿಯನ್ನು 'ಮಾಫಿ ಇನಾಮ್' ಎಂಬುದಾಗಿ ಘೋಷಿಸಿರುವುದು.
ಔರಂಗಜೇಬ	೧೬೭೫	....	ಅರ್ಜುನಮಲ್ ಜಂಗಮರ (ಮಲ್ಲಿಕಾರ್ಜುನ ಹೆಸರಿನ ಅಪಭ್ರಂಶ ಉಚ್ಚಾರ) ಅಧೀನದ ಜಂಗಮ ಸಾಧುಗಳಿಗಾಗಿ ಮಹಮ್ಮದಾಬಾದ (ಬನಾರಸ್)ನಲ್ಲಿ ೫ ಹವೇಲಿಗಳಿರುವುದಾಗಿ ತಿಳಿಸಿರುವುದು ಹಾಗೂ ಆ ಹವೇಲಿಗಳ ಮೆಲೆ ಅನ್ಯಾಯವಾಗಿ ತೆರಿಗೆ ವಸೂಲಿ ನಡೆಸಿದ್ದಕ್ಕಾಗಿ ಅಧಿಕಾರಿಗಳ ಮೇಲೆ ಕ್ರಮ. ಆಲಂಗೀರ್‌ನ ಕ್ಷೇಮಾಭ್ಯುದಯಕ್ಕೆ ಜಂಗಮರು ಪ್ರಾರ್ಥನೆ, ಧರ್ಮ ಸಚ್ಚಿಂತನೆ ನಡೆಸಿಕೊಂಡಿರಲು ರಾಜಮನವಿ.
"	"	....	ಜಂಗಮಪುರದ ಜಮೀನು ಹಾಗೂ ಹಾಗೂ ಆ ದತ್ತಿ ಗ್ರಾಮವನ್ನು ಕರ ವಿಮುಕ್ತಗೊಳಿಸುವಂತೆ ನಿರೂಪ.

ಬನಾರಸ್‌ನಲ್ಲಿ ಮಾತ್ರವಲ್ಲದೆ, ಜಂಗಮವಾಡಿ ಶಾಖಾಮಠಗಳು ಅಲಹಾಬಾದ್, ಚುನಾರ್ ಹಾಗೂ ಬೋಧಗಯಾಗಳಲ್ಲೂ ಸ್ಥಾಪಿತಗೊಂಡಿದ್ದು, ಅವಕ್ಕೂ ಸಹ ಭೂದತ್ತಿ ನೀಡಿರುವುದಾಗಿ ಫರಮಾನ್‌ಗಳಲ್ಲಿ ಹೇಳಲಾಗಿದೆ. ಅಲಹಾಬಾದಿನ ದಾರಾಗಂಜ ಮೊಹಲ್ಲಾದಲ್ಲಿರುವ ಜಂಗಮವಾಡಿಮಠಕ್ಕೆ ಎರಡು ಗುಮ್ಮಟಗಳು, ವಿಶಾಲ ಪ್ರಾಂಗಣ ಮತ್ತು ಒಂದು ತೋಟವಿದ್ದು, ಇದರ ಚಕಬಂದಿಗನುಸರಿಸಿ ಅಲ್ಲಿನ ಶಾಖಾ ಮಹಾಂತ ಅರ್ಜುನ ಮಹರ್‌ರು ಅಧಿಕಾರ ನಿರ್ವಹಿಸಿಕೊಂಡಿರಬೇಕೆಂದು ಒಂದು ಫರ್ಮಾನ್ ಉಲ್ಲೇಖಿಸುತ್ತದೆ. ಗಯಾ ಕ್ಷೇತ್ರದ ಶಿರ್ಸೋರಿಯಾ ಮೊಹಲ್ಲಾದಲ್ಲಿ ಜಂಗಮವಾಡಿ ಮಠವು ರಾಮಸಾಗರ್ ಪುಷ್ಕರಣಿಗೆ ನಿಕಟವಾಗಿದೆ. ಆ ಮಠದ ದತ್ತಿಯನ್ನು ಅಪಹರಣಗೈದವರಲ್ಲಿ ಪರಮತೀಯರು ಎಂದರೆ ಮುಸ್ಲೀಮರಾಗಿದ್ದರೆ, ಅವರು ಸೂಕರ ಮಾಂಸ ಭಕ್ಷಿಸಿದಂತೆ, ಹಿಂದೂಗಳಾಗಿದ್ದರೆ ಗೋಮಾಂಸ ಭಕ್ಷಣೆಗೈದ ಪಾಪ ಸೋಂಕುವುದಾಗಿ ಫರ್ಮಾನ್‌ದ ಶಾಪಾಶಯ ಉಕ್ತವಾಗಿದೆ.*

ಮೊಗಲರಲ್ಲಿ ಔರಂಗಜೇಬನು ಕಟ್ಟರ್‌ಪಂಥಿಯಾಗಿದ್ದು ಅವನು ಹಿಂದೂಮಂದಿರಗಳನ್ನು ಒಡೆದುದು ಹಾಗೂ ಹಿಂದೂ ಧರ್ಮದವರ ಹತ್ಯೆ ಹಿಂಸಾಚಾರಗಳಿಗೆ ಕಾರಣನಾದನೆಂದು ಇತಿಹಾಸದಲ್ಲಿ ಪ್ರತೀತಿಯಿದ್ದರೂ ಸಹ ಅಂತಹ ಜಾತ್ಯಂಧ,ಮತಾಂಧ ದೊರೆ ಸಹ ಪರಮತ ಸಹಿಷ್ಣುವಾಗಿ ಸೌಹಾರ್ದದಿಂದ ವೀರಶೈವ ಜಂಗಮ ಮಹಾಂತರ ಧರ್ಮಾಚರಣೆಗಳಿಗೆ ವಿಘ್ನ ಬಾರದಂತೆ ವರ್ತಿಸಿರುವುದು ಇಲ್ಲಿನ ಫರ್ಮಾನ್‌ಗಳಲ್ಲಿ ವ್ಯಕ್ತಗೊಳ್ಳುವ ಸಂಗತಿ. ಒಮ್ಮೆ ಕಾಶೀ ವಿಶ್ವನಾಥ ಮಂದಿರದ ಮೇಲೆ ದಾಳಿಮಾಡಲೆತ್ನಿಸಿದಾಗ ಅವನ ಕಾಕದೃಷ್ಟಿ ಜಂಗಮವಾಡಿ ಮಠದ ಮೇಲೂ ಬಿದ್ದಿತು. ಆದರೆ ಮಹಾದ್ವಾರದಲ್ಲಿ ಪ್ರವೇಶಗೈದು ದೂರದಿಂದ ಗದ್ದುಗೆಯನ್ನವಲೋಕಿಸುತ್ತಲೆ ಲೋಕವನ್ನೇ ದಹಿಸುವಂತೆ ಅದ್ಭುತ ನಿಟಿಲಾಕ್ಷದ ವಿಸ್ಫುಲಿಂಗಗಳು ಪ್ರಖರವಾಗಿ

* ಸದ್ಯದಲ್ಲಿ ಅಲಹಾಬಾದ ಮಠವು ಸ್ವಾಧೀನದಲ್ಲಿದ್ದು, ಯೋಗ್ಯಮಹಾಂತರು ವಾಸಗೈಯದೆ ಹೋಗಿರುವುದರಿಂದ ಬೋಧಗಯ ಮತ್ತು ಚುನಾರ್ ಮಠಗಳು ಸರಕಾರದ ವಶವಾಗಿದ್ದು ಅಲ್ಲಿ ಪ್ರವಾಸೀ ಬಂಗ್ಲೆಗಳು ಹುಟ್ಟಿಕೊಂಡಿರುವುದು ಶೋಚನೀಯ ಸಂಗತಿ.

ಹೊರಹೊಮ್ಮಿಬಂದು ಅವನ ಕಣ್ಣಿಗೆ ಒಮ್ಮೆಲೆ ಕತ್ತಲೆ ಆವರಿಸಿದಂತಾಯಿತು. ಭೂವ್ಯೋಮ ಪರಿಯಂತವಾಗಿ ಒಂದು ಉಜ್ವಲಮೂರ್ತಿ ಗದ್ದುಗೆ ಸಮ್ಮುಖದಲ್ಲಿ ಕಾಣಿಸಿಕೊಂಡಂತಾದಾಗ ತನ್ನ ವ್ಯಗ್ರತೆ ಮಾಯವಾಗಿ, ಉದಾರಮತಿಯಾಗಿ ಆ ದಿವ್ಯ ಶಕ್ತಿಗೆ ಮಣಿದು ದರ್ಪ ಅಹಂಕಾರಗಳಿಂದ ವಿಮುಕ್ತನಾಗಿ ಹಿಂದಿನ ಸುಲ್ತಾನರ ಪರಂಪರೆಯಂತೆ ಅವನೂ ಸಹ ಮಠಕ್ಕೆ ಭೂದಾನ ಮಾಡಿ, ಹಾಗೂ ಮಹಾಂತರ ಕ್ಷೇಮಾಭ್ಯುದಯಕ್ಕೆ ಹಾರೈಸಿದನೆಂದು ಒಂದು ಫರ್ಮಾನ್‌ದಲ್ಲಿ ಬಣ್ಣಿಸಲಾಗಿದೆ.[10] ಇಂತಹ ಜಂಗಮ ಮಹಾಪುರುಷರ ದಯೆ, ಅನುಗ್ರಹಗಳು ಉಳಿದರೆ ಅವರ ರಾಜ್ಯದಲ್ಲಿ ಶಾಂತಿ, ಸುಭಿಕ್ಷತೆಗಳು ನೆಲಸುವುದಾಗಿ ಮೊಗಲ ಸುಲ್ತಾನರು ಭಾವಿಸಿದ್ದರು. ಭಾರತೀಯ ಸನಾತನ ಧರ್ಮ ಸಂರಕ್ಷಣೆ, ಪಾರಸ್ಪರಿಕ ಮತ ಸೌಹಾರ್ದ ಭಾವನೆ ಹಾಗೂ ಸಾಂಸ್ಕೃತಿಕ ಏಳ್ಗೆಯ ದೃಷ್ಟಿಯಿಂದ ಮೊಗಲ ಬಾದಶಹರ ಕಾಲದ ಜಂಗಮವಾಡಿ ಮಠದ ಫರ್ಮಾನ್‌ಗಳ ಕೊಡುಗೆ ಅತ್ಯಮೌಲ್ಯವಾಗಿದೆ.

ಕರ್ನಾಟಕ ಅರಸರ ಸಂಪರ್ಕದಲ್ಲಿ ಜಂಗಮವಾಡಿ ಮಠ

ಕರ್ನಾಟಕದ ಆಳರಸರಲ್ಲಿ ಕೆಳದಿ, ಕೊಡಗು ಹಾಗೂ ಮೈಸೂರು ದೊರೆಗಳು ಜಂಗಮವಾಡಿಮಠಕ್ಕೆ ವಿಶೇಷ ಗೌರವವನ್ನಿತ್ತ ಸಂಗತಿಗಳು ಇತಿಹಾಸದಿಂದ ಲಭ್ಯವಾಗುತ್ತವೆ. ಕೆಳದಿ ಆಸ್ಥಾನದ ಲಿಂಗಣ್ಣ ಕವಿ ರಚಿತ ಕೆಳದಿನೃಪವಿಜಯದಲ್ಲಿ ಈ ಮಠದ ಸ್ಥಾಪನೆ, ಜೀರ್ಣೋದ್ಧಾರ ಕುರಿತು ಕೆಲವು ವಿನೂತನ ಸಂಗತಿಗಳು ಪ್ರಸ್ತಾಪಗೊಂಡಿವೆ. ಪೂರ್ವೋಕ್ತ ಮಠದ ಪ್ರಾಚೀನ ಶಿಲಾಲೇಖದ ಪ್ರಕಾರ ಜಯನಂದನ ದೊರೆಯ ಕಾಲದಲ್ಲಿ ಮಲ್ಲಿಕಾರ್ಜುನ ಜಂಗಮರಿಂದ ಈ ಮಠ ಸ್ಥಾಪನೆಗೊಂಡಿದ್ದರೆ ಈ ಕಾವ್ಯದಲ್ಲಿನ ಹೇಳಿಕೆ ಅದಕ್ಕೆ ಭಿನ್ನವಾಗಿದೆ. "ಶೀಲವಂತ ನಾಯಕನೆಂಬ ಜಂಗಮನು ಶ್ರೀಶೈಲದಿಂದ ಯೋಗ ಸಿದ್ಧಿ ಪಡೆದು ಮೊರಗಳನ್ನು, ರೆಕ್ಕೆ ಮಾಡಿಕೊಂಡು ಆಕಾಶಗಾಮಿತ್ವದಿಂದ ಕಾಶಿಗೆ ಬಂದು, ಅಲ್ಲಿನ ಜಯನಂದನ ದೊರೆಯನ್ನು ಪವಾಡದಿಂದ ಮೆಚ್ಚಿಸಿ ದಶಾಶ್ವಮೇಧ ಘಾಟದ ಪಶ್ಚಿಮ ದಿಶಾವಳಯದ ಹರಿಕೇಶವಾನಂದ ಕಾನನವನ್ನು ದತ್ತಿಯಾಗಿ ಪಡೆದನು. ಆ ಭೂಮಿಯಲ್ಲಿ ಮಠ ಸ್ಥಾಪಿಸಿ, ಮಲ್ಲಿಕಾರ್ಜುನ ಜಂಗಮರಿಗೆ ಪಟ್ಟಗಟ್ಟಿದಂತೆ" ಅದರಲ್ಲಿ ಉಕ್ತಗೊಂಡಿದೆ.[11] ಇದೇ ಕವಿ ಹೇಳುವಂತೆ ಮ್ಲೇಚ್ಛರಾಳಿಕೆಯಲ್ಲಿ ಕ್ಷೀಣಿಸಿದ್ದ ಈ ಮಠವನ್ನು ಕೆಳದಿ ಸಂಕಣ್ಣ ನಾಯಕ (ಚಿಕ್ಕ ಸಂಕಣ್ಣ ದೊರೆ) (ಕ್ರಿ.ಶ. ೧೫೬೦ - ೧೫೭೩) ಪುನರುತ್ಥಾನಗೊಳಿಸಿ, ಮಠದ ಚತುರ್ಗಡಿಗಳಲ್ಲಿ ಶಿಲಾಸ್ತಂಭ ನೆಟ್ಟು, ಆ ಎಲ್ಲ ಆವರಣವನ್ನು 'ಜಂಗಮಘಾಟಿ' ಎಂದು ಕರೆದು ಕಾಶಿಯ ನೈಋತ್ಯದೆಸೆಯ ಒಂದು ಗ್ರಾಮವನ್ನು "ಜಂಗಮಪುರ"ವೆಂದು ಅಭಿದಾನವಿತ್ತು, ಅದನ್ನು ದತ್ತಿಗ್ರಾಮವಾಗಿ ಮಠಕ್ಕೆ ಸಲ್ಲಿಸಿದನು. ಪಂಚಕ್ರೋಶಿ ಮಾರ್ಗದಲ್ಲಿನ ಕಪಿಲಧಾರ ತೀರ್ಥದಲ್ಲಿ ಪುಷ್ಕರಣಿಗಳ ಜೀರ್ಣೋದ್ಧಾರಗೈದುದಾಗಿ ಕನ್ನಡ, ಸಂಸ್ಕೃತ ಹಾಗೂ ಬಂಗಾಲಿ ಭಾಷೆಗಳಲ್ಲಿ ಶಿಲಾಶಾಸನಗಳನ್ನು ಬರೆಸಿದನು. ಇದಲ್ಲದೆಯೆ ಕಾಶೀ ಕ್ಷೇತ್ರದಲ್ಲಿರುವ ಕರ್ದಮೇಶ್ವರ, ನರ್ಮದೇಶ್ವರ, ಭೀಮಚಂಡಿಕೆ, ವೃಷಭಧ್ವಜೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರಗೈದನು. ಮಾನಸಸರೋವರ, ಗಂಧರ್ವಸಾಗರ ಹೆಸರಿನ ತೀರ್ಥಗಳನ್ನು ಜಂಗಮವಾಡಿ ಆಧೀನದಲ್ಲಿ ತಂದು ತನ್ನೆಲ್ಲ ಸಂಗತಿಗಳನ್ನು ಕಾಶೀಯಾತ್ರಾ ಸ್ಮರಣಾರ್ಥವಾಗಿ ಸ್ವಪುತ್ರ ವೆಂಕಟಪ್ಪನಾಯಕರ ಹೆಸರಿನಲ್ಲಿ ಮೈಯಪ್ಪನೆಂಬ ಸೇನು ಬೋವನಿಂದ ಶಾಸನಗಳನ್ನು ಬರೆಸಿ, ಶಾಶ್ವತ ಧರ್ಮಕೀರ್ತಿಯನ್ನು ಪಡೆದುದಾಗಿ ಲಿಂಗಣ್ಣ ಕವಿ ಬಣ್ಣಿಸಿದ್ದಾನೆ.[12]

ಕಾಶಿ ಜಂಗಮವಾಡಿಮಠದ ಒಳಾವರಣದಲ್ಲಿ ಕೊಡಗಿನ ದೊರೆ ಚಿಕ್ಕವೀರ ರಾಜೇಂದ್ರ ಹಾಗೂ ಆತನ ಪುತ್ರರ ಸಮಾಧಿಗಳಿರುವುದು ಒಂದು ರೋಚಕ ವೃತ್ತಾಂತ. ಸ್ವತಂತ್ರಧೀರರೂ, ಕನ್ನಡ ನೆಲದ ಕಟ್ಟಾಳುಗಳೂ ಆಗಿದ್ದ ಕೊಡಗಿನ ಹಾಲೇರಿ ರಾಜ ಪರಂಪರೆ ಚಿಕ್ಕವೀರ ರಾಜೇಂದ್ರನ ಕಾಲಕ್ಕೆ ಅಸ್ತಂಗತವಾಗಿ ಕೊನೆಗೊಮ್ಮೆ ಬ್ರಿಟಿಷರ ವಶವಾಯಿತು. ಚಿಕ್ಕವೀರನನ್ನು ರಾಜಕೈದಿಯಾಗಿಸಿದ್ದಷ್ಟೇ ಅಲ್ಲ, ಅವನನ್ನು ಗಡೀಪಾರು ಮಾಡಿ ಸೀಮಿತ ರಾಜಮರ್ಯಾದೆಗಳೊಂದಿಗೆ ಮೊದಲಿಗೆ ಕಲಕತ್ತೆಗೂ

---

10 Shahstri Speeches (1968) See also Ascetics of Kashi P. 110 by Sujit Sinha (1978).

11 ಕೆಳದಿ ನೃಪವಿಜಯ ಮೈ. ವಿ.ವಿ (೧೯೭೩). ಶೀಲವಂತ ಜಂಗಮನ ಕಾಲ ೧೩ನೆಯ ಶತಮಾನ. ವಿವರಗಳಿಗೆ 'ಶಿವಶರಣ ಕಥಾ ರತ್ನಕೋಶ' (ತ.ಸು. ಶಾಮರಾಯ). ಕಾಶಿಯ ದೊರೆಗಳ ವಂಶಾವಳಿಯಲ್ಲಿ ಜಯನಂದನದೇವನ ಕಾಲ ನಿರ್ದಿಷ್ಟವಾಗಿ ಗೊತ್ತಾದರೆ ಇಲ್ಲಿನ ಸಮಸ್ಯೆಗಳು ಪರಿಹಾರಗೊಳ್ಳಬಹುದು. ಅಲ್ಲದೆ ಶೀಲವಂತನಾಯಕನ ಕಾಲದಲ್ಲಿದ್ದ ಮಲ್ಲಿಕಾರ್ಜುನ ಜಂಗಮ ಅದೇ ಹೆಸರಿನ ಮತ್ತೋರ್ವನೂ ಆಗಿರಬಹುದು.

12 ಲಿಂಗಣ್ಣ ಕವಿ ಇತ್ತೀಚಿನವನಾಗಿದ್ದು, ಆಕರ್ಣಾಂತವಾಗಿ ಕೇಳಿ ತಿಳಿದ ಸಂಗತಿಗಳನ್ನಷ್ಟೇ ಇಲ್ಲಿ ಕೆಳದಿ ಅರಸರ ವಿಜಯ ಪ್ರಶಸ್ತಿಯಾಗಿ ಅತ್ಯುಕ್ತಿಯಾಗಿ ಸೇರಿಸಿರಲೂ ಬಹುದು. ಆದರೆ ಈ ದೊರೆಗಳು ಕಾಶಿ ಹಾಗೂ ಜಂಗಮವಾಡಿ ಮಠದ ದರ್ಶನ ಹೊಂದಿದ್ದು ನಿಜ. ಕೆಳದಿ ರಾಜವಂಶಾವಳಿಯನ್ನೊಳಗೊಂಡ ಕಪಿಲಧಾರಾತೀರ್ಥದಲ್ಲಿನ ಕನ್ನಡ ಹಾಗೂ ಅನ್ಯ ಭಾಷೆಗಳಲ್ಲಿರುವ ೩ ಶಿಲಾಶಾಸನಗಳು ಈಗಲೂ ಅಲ್ಲಿ ಉಳಿದಿರುವುದು ಇದಕ್ಕೆ ಆಧಾರವಾಗುತ್ತದೆ.

ಅಲ್ಲಿಂದ ಓರಿಸ್ಸಾದ ಗಂಜಾಂಗೂ ಕಟ್ಟಕಡೆಗೆ ಬನಾರಸ್‌ಗೆ ಅವನನ್ನು ಅಟ್ಟಿತು. ೧೭ ವರ್ಷಕಾಲ ಈ ದೊರೆ ಕಾಶಿಯಲ್ಲಿದ್ದು ಒಂದು ವ್ಯಾಜ್ಯ ನಿಮಿತ್ತ ಇಂಗ್ಲೆಂಡಿಗೆ ಹೋಗಿ ಅಲ್ಲಿಯೇ ಮರಣ ಹೊಂದಿದನು. ಅವನ ಪಟ್ಟದರಾಣಿ ನಂಜಮ್ಮಾಜಿ, ವಿಕ್ಟೋರಿಯಾ ಮಹಾರಾಣಿಯ ಅನುಮತಿ ಪಡೆದು ಹಡಗಿನಲ್ಲಿ ರಾಜನ ಪಾರ್ಥಿವ ಶರೀರವನ್ನು ತರಿಸಿ ಜಂಗಮವಾಡಿ ಮಠದ ಲಿಂಗಮುದ್ರೆ ಕಲ್ಲಿನೊಳಗೆ ವೀರಶೈವ ವಿಧ್ಯುಕ್ತ ಪ್ರಕಾರವಾಗಿ ಸಮಾಧಿಕ್ರಿಯೆ ಜರುಗಿಸಿದಳು (ಕ್ರಿ.ಶ.೧೮೬೨). ಚಿಕ್ಕವೀರ ದೊರೆಯ ಪಟ್ಟದ ಪುತ್ರ ಲಿಂಗರಾಜೇಂದ್ರನೂ ಸಹ ಕಾಶಿಯಲ್ಲಿ ತೀರಿಕೊಂಡಾಗ ತಂದೆಯ ಸಮಾಧಿ ಬಳಿಯಲ್ಲೇ ಲಿಂಗಮುದ್ರೆ ಕಲ್ಲಿನಲ್ಲಿ ಸಂಸ್ಕರಿಸಲಾಯಿತು. ಇವುಗಳ ಸ್ಮರಣಾರ್ಥವಾಗಿ "ವೀರೇಶ್ವರ" ಮತ್ತು "ಲಿಂಗೇಶ್ವರ" ಹೆಸರಿನ ಎರಡು ಸುಂದರ ದೇವಾಲಯಗಳನ್ನು ನಿರ್ಮಿಸಿದ್ದಾಗಿ ದೇವಾಲಯಗಳ ನಿರ್ಮಾಣಕಾಲದಲ್ಲಿ ಸುಬೇದಾರ ಅಚ್ಚಯ್ಯಾ ಎಂಬುವವನ್ನು ಕೊಡಗಿನಿಂದ ಕರೆಸಿ, ಅದನ್ನು ನಿರ್ವಹಿಸಿದ್ದಾಗಿ ದೇವಾಲಯದ ಭಿತ್ತಿಯ ಮೆಲೆ ಬರೆಯಲಾದ ಶಿಲಾಶಾಸನಗಳಲ್ಲಿ ಹೇಳಲಾಗಿದೆ. ಕಾಶೀ ವಾಸಿಗಳಾಗಿದ್ದಷ್ಟು ಕಾಲ ಕೊಡಗಿನ ರಾಜ ಮತ್ತು ಅವನ ರಾಣಿಯರು, ಪುತ್ರ ಪೌತ್ರರೆಲ್ಲರೂ ಜಂಗಮವಾಡಿಯ ಮಠದ ಜಗದ್ಗುರುಗಳಲ್ಲಿ ಭಕ್ತಿ ನಿಷ್ಠೆಯುಳ್ಳವರಾಗಿದ್ದು ಮಠದ ಅಭ್ಯುದಯಕ್ಕೆ ಕಾರಣರಾದರು. ಮಠದೊಳಗಿನ ಅನೇಕ ಕಟ್ಟಡಗಳು ಈ ದೊರೆಗಳ ಆಶ್ರಯದಲ್ಲಿ ನಿರ್ಮಿತವಾದವು. ಇವರಿಗೆ ವಾಸವಾಗಿರಲು ಕೊಟ್ಟಿದ್ದ ಬ್ರಿಟಿಷರ ಕಾಲದ ಸ್ಥಳ ಕಾಶಿಯಲ್ಲಿ "ಭೋಜಬೀರ" ಎಂಬಲ್ಲಿದ್ದು ಈಗಲೂ ಅವರ ಕುರುಹುಗಳನ್ನು ಕಾಣಬಹುದು. ಮಧ್ಯಪ್ರದೇಶದ ಮೆಹರ್ ಉತ್ತರ ಪ್ರದೇಶದ ಬರೇಲಿ ಮತ್ತು ನೇಪಾಲ ಕಡೆಗಳಲ್ಲಿ ಕೊಡಗಿನ ದೊರೆಗಳ ರಾಜ ಪರಿವಾರದವರು ಚದುರಿಹೋಗಿರುವುದಾಗಿ ಈಗ ಗೊತ್ತಾಗಿರುವ ಸಂಗತಿ.

ಮೈಸೂರು ದೊರೆಗಳಲ್ಲಿ ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರು ಕ್ರಿ.ಶ. ೧೮೪೬ರಲ್ಲಿ ಹಿಂದಿನ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಗೆ ಅರ್ಪಿಸಿರುವ ಬಿನ್ನವತ್ತಳೆ ರೂಪದ ತಾಮ್ರ ಶಾಸನದಲ್ಲಿ, ಮಠದಲ್ಲಿ ನಿತ್ಯ ೧೭ ಜನ ಜಂಗಮರ ಗಣಾರಾಧನೆಗೋಸುಗ ವರ್ಷಪ್ರತಿ ಹುಂಡಿಯನ್ನು ದತ್ತಿಯಾಗಿ ಕೊಟ್ಟ ಸಂಗತಿ ಉಲ್ಲೇಖಗೊಂಡಿದೆ. ಅಲ್ಲದೆ ಮಹಾರಾಜರು ಜಗದ್ಗುರುಗಳ ದರ್ಶನದ ಸ್ಮರಣಾರ್ಥವಾಗಿ 'ಶ್ರೀಕೃಷ್ಣ' ಎಂಬ ರಾಜನ ಒಪ್ಪವಿರುವ ಎರಡು ಬೆಳ್ಳಿಯ ಚವುರಿಗಳನ್ನು ಕಾಣಿಕೆಯಾಗಿ ಸಲ್ಲಿಸಿರುವರು. ಅವನ್ನು ಜಗದ್ಗುರುಗಳು ಮಂಡಿಸುವ ಸಿಂಹಾಸನದ ಪಾರ್ಶ್ವಗಳಲ್ಲಿ ಈಗಲೂ ಕಾಣಬಹುದಾಗಿದೆ. ಕೆಳದಿ, ಬಿದನೂರು, ಮೈಸೂರು ಹಾಗೂ ಕೊಡಗಿನ ದೊರೆಗಳ ಭವ್ಯ ತೈಲಚಿತ್ರಗಳು ಜಂಗಮವಾಡಿ ಮಠದ ಗರ್ಭಗುಡಿಯ ಗೋಡೆಗಳ ಮೇಲೆ ಇಂದಿಗೂ ಅಲಂಕೃತಗೊಂಡಿವೆ. ಇದು ಆ ದೊರೆಗಳಿಗೂ ಜಂಗಮವಾಡಿ ಮಠಕ್ಕೂ ಇರುವ ನಿಕಟ ಬಾಂಧವ್ಯದ ದ್ಯೋತಕವಾಗಿದೆ.

ಉಜ್ವಲ ಪೀಠ ಪರಂಪರೆ

ಜಂಗಮವಾಡಿ ಮಠದ ಪಟ್ಟವಲ್ಲರಿಯಲ್ಲಿ ಈವರೆಗೆ ಆಗಿಹೋದ ೮೫ ಮಹಾಂತರ ಸಂಖ್ಯೆಯೇ ಇದರ ಪ್ರಾಚೀನ ಭವ್ಯಪರಂಪರೆಗೆ ನಿದರ್ಶನವಾಗಿದೆ. ಸ್ಥಾಪಕರಾದ ಮಲ್ಲಿಕಾರ್ಜುನ ಗೋಸಾಯಿಗಳನ್ನು ಬಿಟ್ಟರೆ ಆ ತರುವಾಯದ ೭ ಮಹಾ ಸ್ವಾಮಿಗಳವರ ಚರಿತ್ರೆ ಕಾಲಗರ್ಭದಲ್ಲೇ ಅಡಗಿದೆ. ೭೧ರ ಸಂಖ್ಯೆಯಿಂದೀಚೆಗೆ ಸು. ೮-೧೦ ಜಗದ್ಗುರುಗಳವರ ಚಾರಿತ್ರಿಕ ಸಂಗತಿಗಳು ನಿಚ್ಚಳವಾಗಿವೆ. ಸ್ಥಾಪನಾಚಾರ್ಯರ ಲಿಂಗಸಮಾಧಿಯನ್ನು "ಜಂಗಮ ಬಾಬಾ", "ಜಂಗಮಬುವಾ" ಹೆಸರಿನಿಂದ ಕರೆಯುತ್ತಿದ್ದು ಜಂಗಮಪುರದ ಹಾಗೂ ಅಲ್ಲಿನ ಪರಿಸರದವರು ಭಯಭಕ್ತಿಯಿಂದ ನಡೆದುಕೊಳ್ಳುವರಲ್ಲದೆ ನಾಮಕರಣ, ವಿವಾಹಾದಿ ಕ್ರಿಯೆಗಳನ್ನು ಆ ಸ್ಥಳದಲ್ಲಿ ಆಚರಿಸುತ್ತಾರೆ. ಆ ಸ್ಥಳದ ಬಗೆಗೆ ಅನೇಕ ಕಥಾನುಕತೆ, ಐತಿಹ್ಯಗಳು ಹಿಂದೀ ಮತ್ತು ಭೋಜಪುರಿ ಭಾಷೆಯಲ್ಲಿ ಪ್ರಚುರವಾಗಿವೆ. ಮೊಗಲ್ ಬಾದಶಹರು ದಾನಪತ್ರವಾಗಿತ್ತ ಫರಮಾನ್‌ಗಳು ಈ ಪೀಠದ ೭೧ರಿಂದ ೭೭ರ ವರೆಗಿನ ಮಹಾಂತರ ಕಾಲದಲ್ಲಿ ದೊರಕಿಸಲಾದುವೆಂದು ಗೊತ್ತಾಗುತ್ತದೆ.[13]

ನಾಮ ಖ್ಯಾತರಾದವರಲ್ಲಿ ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯರು ಕ್ರಿ.ಶ. ೧೮೭೦ರಲ್ಲಿ ಅಧಿಕಾರಿಗಳಾಗಿದ್ದರು. ಕೊಡಗಿನ ದೊರೆಗಳು ಇವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದು ಮಠಕ್ಕೆ ತಮ್ಮ ಗೌರವವನ್ನು ಪ್ರಕಟಿಸಲಾರಂಭಿಸಿದರು. ಇವರಿಗೆ ಮುಂಚೆ ಕ್ರಿ.ಶ. ೧೭೫೦ರಲ್ಲಿದ್ದ ಮಹಾಸ್ವಾಮಿಗಳು ಜಗದ್ಗುರು ಶಿವಲಿಂಗ ಮಹಾಂತರು. ಹರಿಕೇಶವಾನಂದ ಕಾನನದಲ್ಲಿನ ಮಹಾದೇವ ಮಂದಿರದ ಜೀರ್ಣೋದ್ಧಾರಗೈದುದಾಗಿ ಆ ದೇವಾಲಯದ ಕಂಭ ಶಾಸನ ತಿಳಿಸುತ್ತದೆ. ಹರೀಶ್ವರರ ತರುವಾಯ

13 'ವಿದ್ಯಾನಿಧಿ ವೀರಭದ್ರ ಜಗದ್ಗುರುಗಳು' - ಡಾ. ಚಂದ್ರಶೇಖರ ಶಿವಾಚಾರ್ಯಸ್ವಾಮಿ, ಸತ್ಸಂಗ ಪ್ರಕಾಶನ, ಕುಡುತಿನಿ (೧೯೮೮)

ಮೊದಲನೆಯ ಮಲ್ಲಿಕಾರ್ಜುನ ಉರುಫ್ ವೀರಭದ್ರ ಶಿವಾಚಾರ್ಯರು ತುಂಬ ಪ್ರಭಾವಶಾಲಿಗಳಾಗಿದ್ದರು. ಕೊಡಗು ದೊರೆಗಳ ಮಹದಾಶ್ರಯದಿಂದ ಇವರ ಕಾಲಕ್ಕೆ ಮಠದ ದರ್ಬಾರ್ ಹಾಲ್, ರಾಣೀಛತ್ರ, ಗಣೇಶ ಮಹಲ್ ಹಾಗೂ ಚಿತ್ರಶಾಲಾ ಕಟ್ಟಡಗಳು ನಿರ್ಮಾಣಗೊಂಡವು. ಚಿತ್ರ ಶಾಲಾದಲ್ಲಿ ಶಿವಪುರಾಣ, ರಾಮಾಯಣ, ಮಹಾಭಾರತಾದಿಗಳ ಆಖ್ಯಾಯಿಕೆಯ ವಿವಿಧ ವರ್ಣವಿನ್ಯಾಸದ ಚಿತ್ರಗಳು ಗೋಡೆಯ ಚತುರ್ಭಾಗ ಮಂಟಪ ಮೇಲ್ಛಾವಣಿಗಳ ಮೇಲೆ ಕೆತ್ತಲಾಗಿದ್ದು, ಕಲಾವಿದರ ಕುಂಚ ವರ್ಣವಿನ್ಯಾಸದ ಹಿರಿಮೆಯನ್ನು ಸೂಚಿಸುತ್ತವೆ. ಇದರಲ್ಲಿ ಕೆಲವು ಚಿತ್ರಗಳು ವಿವಿಧ ಪಕ್ಷಿ, ಪ್ರಾಣಿ ಹಾಗೂ ಯೋಗದ ತಾಂತ್ರಿಕ ತತ್ತ್ವರಹಸ್ಯದ ಸಂಕೇತದಲ್ಲಿವೆ. ಹೆಚ್ಚಿನ ವ್ಯವಸ್ಥೆಯಿಲ್ಲದ್ದರಿಂದ ಇವು ದಿನೇದಿನೇ ಬಣ್ಣವಳಿಯುತ್ತ ನಡೆದಿವೆ. ೧ನೆಯ ವೀರಭದ್ರ ಶಿವಾಚಾರ್ಯರು ಪೀಠ ಪರಂಪರೆಯ ೮೦ನೆಯ ಜಗದ್ಗುರುಗಳು. ಕ್ರಿ.ಶ. ೧೮೭೯ರಿಂದ ೧೯೦೧ರವರೆಗೆ ದ್ವಾದಶ ವರ್ಷಕಾಲ ಮಠಾಧಿಕಾರಿಗಳಾಗಿ ಪೀಠದ ಕಟ್ಟಡಗಳ ಉನ್ನತಿಗೆ ಬಹುವಾಗಿ ಶ್ರಮಿಸಿದರು. ೮೧ನೆಯವರು ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯರು. ಕ್ರಿ.ಶ. ೧೮೯೧ ರಿಂದ ೧೯೦೭ರವರೆಗೆ ೧೬ ವರ್ಷಕಾಲ ಮಠಾಧಿಪತ್ಯದಲ್ಲಿದ್ದರು. ಕಾಶಿಯ ವಿದ್ವತ್ ಪರಂಪರೆಯ ಘನಸಂಪರ್ಕವುಳ್ಳವರಾಗಿದ್ದರು. ಶ್ರೀಮಠದ ಅವಿರಳ ಉಪಲಬ್ಧಿಯಾದ ವೀರಶೈವ ಧರ್ಮಗ್ರಂಥಗಳ ಪ್ರಚಾರ, ಪರಿಷ್ಕರಣದ ಕಾರ್ಯಾರಂಭಗೊಳಿಸಿದವರಲ್ಲಿ ಇವರೇ ಮೊದಲಿಗರು. ಕಾಶಿಯ ವಿದ್ವಜ್ಜನ ಇವರನ್ನು 'ಜಂಗಮ ಮಹಾರಾಜ'ರೆಂದು ಗೌರವಪೂರ್ವಕ ಸಂಬೋಧಿಸುತ್ತಿದ್ದರು. ಕಾಶಿಯ ಮೂರ್ಧನ್ಯ ಪಂಡಿತ ಮಹಾಮಹೋಪಾಧ್ಯಾಯ ಪಂ. ಶಿವಕುಮಾರ ಶಾಸ್ತ್ರಿಗಳವರಿಂದ 'ಶರತ್' ವ್ಯಾಖ್ಯಾನ ಸಮೇತವಾಗಿ 'ಲಿಂಗಧಾರಣ ಚಂದ್ರಿಕೆ' ಎಂಬ ಸಂಸ್ಕೃತ ಗ್ರಂಥವನ್ನು ಇವರು ಮಠದಿಂದ ಪ್ರಕಾಶನಗೊಳಿಸಿದ್ದು ಇಲ್ಲಿ ಸ್ಮರಣೀಯ. ಇವರ ತರುವಾಯದಲ್ಲಿ ಕ್ರಿ.ಶ. ೧೯೦೭ರಿಂದ ೧೯೩೨ ರವರೆಗೆ ೨೫ ವರ್ಷಕಾಲ ಅಧಿಕಾರ ಹೊಂದಿದ್ದವರು ೨ನೆಯ ಶಿವಲಿಂಗ ಶಿವಾಚಾರ್ಯ ಜಗದ್ಗುರುಗಳು. 'ಜಗದ್ಗುರು ವಿಶ್ವಾರಾಧ್ಯ ಗುರುಕುಲ' ಆರಂಭಗೊಳಿಸಿದ್ದಲ್ಲದೆ, ಕರ್ನಾಟಕ ಮಹಾರಾಷ್ಟ್ರದ ಹಲವು ಕಡೆಗಳಲ್ಲಿ ಈ ಗುರುಕುಲದ ಶಾಖೆಗಳನ್ನು ಸ್ಥಾಪಿಸಿದರು. ಕ್ರಿ.ಶ. ೧೯೧೮ರಲ್ಲಿ ಕಾಶಿಯಲ್ಲಿ ಪಂಚಾಚಾರ್ಯರ ಮಹಾಸಮ್ಮೇಳನ ಜರುಗಿಸಿದ್ದು ಇವರ ಇನ್ನೊಂದು ಶ್ರೇಯಸ್ಸು. ೧೯೩೨ರಲ್ಲಿ ಲಿಂಗೈಕ್ಯರಾದ ಬಳಿಕ ಇವರ ಇಚ್ಛಾನುಸಾರ ಮಠಾಧಿಕಾರವನ್ನು ಪಡೆದವರು ತಾಸಗಾಂವ್ ಹಿರೇಮಠದ ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು. ಕ್ರಿ.ಶ. ೧೯೩೨ರಿಂದ ಕ್ರಿ.ಶ. ೧೯೪೪ರ ತನಕ ಇವರು ೮೩ನೆಯ ಪೀಠಾಚಾರ್ಯರಾಗಿ ಕಾರ್ಯನಿರ್ವಹಿಸಿದರು. ಮೇಧಾವಿಗಳಷ್ಟೇ ಅಲ್ಲದೆ ಮುತ್ಸದ್ದಿಗಳೂ ಆಗಿದ್ದ ಪಂಚಾಕ್ಷರ ಶಿವಾಚಾರ್ಯರು ಆ ಕಾಲದಲ್ಲಿ ಮಠಕ್ಕೆ ಒದಗಿದ್ದ ಆರ್ಥಿಕ ಸಂಕಟ ನಿವಾರಣೆಗೆ ಅವಿಶ್ರಾಂತವಾಗಿ ಶ್ರಮಿಸಿದರು. ಒಂದು ಘಟನೆ ಇಲ್ಲಿ ಉಲ್ಲೇಖನೀಯ: ಹಿಂದಿನ ಜಗದ್ಗುರು ೧ನೇ ವೀರಭದ್ರರು ಸಹಕಾರ ಸಂಘಟನೆಯ ಸಮುದ್ದೇಶದಿಂದ ವಿಶ್ವಾರಾಧ್ಯ ಹೆಸರಿನ ಬ್ಯಾಂಕ್ ಸ್ಥಾಪಿಸಿದರು. ಆದರೆ ಯೋಗ್ಯ ನಿರ್ವಹಣಾಭಾವದಿಂದ ಅದು ಇವರ ಕಾಲಕ್ಕೆ ದಿವಾಳಿ ತೆಗೆದು ಠೇವಣೀದಾರರು ತಮ್ಮ ಠೇವುಗಳ ಮರುಪಾವತಿಗೆ ಮಠದ ಆಸ್ತಿ ಮಾರಾಟವಾಗಬೇಕೆಂದು ಅಲಹಾಬಾದಿನ ನ್ಯಾಯಾಲಯದಲ್ಲಿ ದಾವೆ ತಂದರು. ಅಂತಹ ಸಮಯದಲ್ಲಿ ಸಮರ್ಥ ನ್ಯಾಯಾಧೀಶರಿಂದ ಮರು ಪರಿಶೀಲನೆ ನಡೆದು ರಾಜ ಮಹಾರಾಜರಿಂದಲೂ ಮೊಗಲ ಸುಲ್ತಾನರಂತಹವರಿಂದಲೂ ದಾನವಾಗಿತ್ತ ಭೂಮಿಯ ಮಾರಾಟ ತ್ರಿಕಾಲಕ್ಕೂ ಸಾಧ್ಯವಿಲ್ಲವೆಂದು ನಿರ್ಣೀತವಾಗಿ ಕಾಲಕ್ರಮದಲ್ಲಿ ಮತ್ತಿತರ ಆದಾಯದಿಂದ ಠೇವುಗಳ ಮರುಪಾವತಿ ಮಾಡಲಾಯಿತು. ಬ್ಯಾಂಕು ದಿವಾಳಿಯೆದ್ದುದು ನಷ್ಟದ ಸಂಗತಿಯಾದರೂ ಇದರಿಂದ ಮಠದ ಇತಿಹಾಸ ಬೆಳಕಿಗೆ ಬಂದುದು ಬಹುದೊಡ್ಡ ಲಾಭ. ನ್ಯಾಯಾಲಯಕ್ಕೆ ಸ್ವಾಮಿಗಳು ಹಾಜರು ಪಡಿಸಿದ ಪ್ರಾಚೀನ ದಾಖಲೆಗಳು, ಮಹಾಂತರ ಉಜ್ವಲ ಪರಂಪರೆ ರಾಜ ಮಹಾರಾಜರ ದಾನದತ್ತಿಯ ಫರ್ಮಾನ್‌ಗಳು ಜಂಗಮವಾಡಿ ಮಠದ ಉಜ್ವಲ ಪರಂಪರೆಯನ್ನು ಲೋಕವಿಖ್ಯಾತಗೊಳಿಸಿದವು. ದೊಡ್ಡದೊಡ್ಡ ಸಂಶೋಧನ, ಅನ್ವೇಷಣ ಕಾರ್ಯಗಳು ಒಮ್ಮೊಮ್ಮೆ ಅತ್ಯಂತ ಆಗಂತುಕವಾಗಿ ನಡೆದು ಜ್ಞಾನದ ಕ್ಷಿತಿಜವನ್ನು ವಿಸ್ತರಿಸುತ್ತವೆಂಬುದು ಎಷ್ಟು ಅದ್ಭುತವೋ ಅಷ್ಟೇ ಸತ್ಯದ ಮಾತಾಗಿರುತ್ತದೆ ಎಂಬುದಕ್ಕೆ ಈ ಘಟನೆ ನಿದರ್ಶನ. ಪಂಚಾಕ್ಷರ ಶಿವಾಚಾರ್ಯರ ಕಾರ್ಯ ಈ ದೃಷ್ಟಿಯಿಂದ ಪ್ರಾತಃಸ್ಮರಣೀಯವೆನಿಸಿದೆ.

'ನಹಿ ಜ್ಞಾನೇನ ಸದೃಶಂ' 'ವಿದ್ಯಾಯಾಂ ಅಮೃತಮ್' 'ವಿನ್ನೊಡವೆಯೆಂಬುದು ಜ್ಞಾನರತ್ನ ನೋಡಾ' - ಈ ಸೂಕ್ತಿಗಳ ಸಾಕಾರ ಸ್ವರೂಪರಾಗಿ ಜ್ಞಾನ ಸಿಂಹಾಸನವನ್ನೇರಿದ ೨ನೆಯ ಶ್ರೀ ವೀರಭದ್ರ ಶಿವಾಚಾರ್ಯ ಜಗದ್ಗುರುಗಳು ನಿಜಕ್ಕೂ ಜ್ಞಾನನಿಧಿಗಳು. ೧೯೪೪ರಿಂದ ೧೯೪೮ರ ವರೆಗೆ ಕೇವಲ ನಾಲ್ಕು ವರ್ಷಕಾಲ ಜಗದ್ಗುರುಗಳಾಗಿದ್ದರಾದರೂ ಅವರ ವಾಙ್ಮಯ ತಪಸ್ಸು, ವಿದ್ವತ್ಪೂರ್ಣ ಗ್ರಂಥ ಲೇಖನ, ಭಾಷಣಗಳ ಮೂಲಕ ಚಿರಕಾಲ ವಿದ್ಯಮಾನವಾಗಿದೆ. ಚಿದರೆಮಠದ ಪಂ. ವೀರಭದ್ರ

ಶರ್ಮರೆಂದೇ ಖ್ಯಾತರಾಗಿದ್ದ ಅವರು ಹೆಚ್ಚಿನ ಜ್ಞಾನ ಪಿಪಾಸೆಗೆ ಕಾಶಿಯ ವಿಶ್ವಾರಾಧ್ಯ ಗುರುಕುಲವನ್ನು ೧೯೨೫ ರಲ್ಲಿ ಸೇರಿ ಸಂಸ್ಕೃತದಲ್ಲಿ ಪ್ರಖರ ಪಾಂಡಿತ್ಯವನ್ನು ಹೊಂದಿದರು. ಕಲ್ಕತ್ತದ ಸಂಸ್ಕೃತ ಸಂಘ ನಡೆಸುತ್ತಿದ್ದ ಪರೀಕ್ಷೆಗಳಲ್ಲಿ ಅತ್ಯಂತ ಮಿಗಿಲಾದ ವೇದ ತೀರ್ಥ ಉಪಾಧಿಯನ್ನು ಪಡೆದವರಲ್ಲಿ ಇವರೇ ಮೊದಲಿಗರು. ಜೊತೆಗೆ 'ಕಾವ್ಯತೀರ್ಥ'ವನ್ನು ಸಂಪಾದಿಸಿದರು. ಜ್ಯೋತಿಷ್ಯ, ಛಂದ, ಅಲಂಕಾರ, ಕಾವ್ಯ, ನಾಟಕಗಳಲ್ಲದೆ ಆಧುನಿಕ ಕ್ಷೇತ್ರಗಳಾದ ಇತಿಹಾಸ, ಲಿಪಿಶಾಸ್ತ್ರ, ಶಾಸನ ಮುಂತಾದ ಪ್ರಾಕ್ತನ ವಿದ್ಯಾಪಾರಂಗತರೂ ಆಗಿದ್ದರು. ಸುಮಾರು ೪೪ ಕ್ಕಿಂತ ಹೆಚ್ಚಿನ ಲಿಪಿಗಳನ್ನು ಓದಬಲ್ಲವರಾಗಿದ್ದರು. ತೆಲುಗು, ಕನ್ನಡ, ಮರಾಠಿ, ಹಿಂದಿ, ಉರ್ದು ಭಾಷೆಗಳ ಮೇಲೆ ಸಮಾನ ಪ್ರಭುತ್ವವಿದ್ದಿತಲ್ಲದೆ ಇಂಗ್ಲೀಷ್, ಬೆಂಗಾಲಿಗಳನ್ನು ರೂಢಿಸಿಕೊಂಡಿದ್ದರು. ಇವರ ಬಹುಭಾಷಿತ್ವ, ಬಹುಮುಖ ಜ್ಞಾನವನ್ನರಿತ ಕಾಶಿಯ ವಿದ್ವತ್ ಪರಿಷತ್ತು ೧೯೩೫ ರಲ್ಲಿ ಇವರಿಗೆ 'ವಿದ್ಯಾರತ್ನ' ಎಂಬ ಗೌರವ ಪ್ರಶಸ್ತಿಯನ್ನು ನೀಡಿತು. ಜಗದ್ಗುರುಗಳಾಗುವದಕ್ಕಿಂತ ಮುಂಚೆ ಸಂಸ್ಕೃತ ಶಿಕ್ಷಕ ವೃತ್ತಿಯಲ್ಲಿದ್ದವರು. ಕಾಶಿಯಿಂದ ವಿದ್ಯಾ ಸಂಪನ್ನರಾಗಿ ಮರಳಿ ಯಾದಗಿರಿ ಸಂಸ್ಕೃತ ಕಾಲೇಜಿನಲ್ಲಿ ಕ್ರಿ.ಶ. ೧೯೨೫ ರಿಂದ ೧೯೩೫ ರ ದಶಕ ಕಾಲ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಆ ಅವಧಿಯಲ್ಲಿ ಆಂಧ್ರ, ಕರ್ನಾಟಕ ಸಾಹಿತ್ಯ ಪರಿಷತ್ತು, ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ, ಬಿಹಾರ, ಪ್ರಯಾಗಗಳಲ್ಲಿನ ಸಂಶೋಧನ ಸಂಸ್ಥೆಗಳೊಂದಿಗೆ ನಿಕಟರಾಗಿದ್ದು ಆ ಸಂಸ್ಥೆಯ ಪತ್ರಿಕೆಗಳಲ್ಲಿ ಅತ್ಯಮೂಲ್ಯ ಪ್ರಾಚ್ಯಲೇಖನಗಳನ್ನು ಬರೆದು ಪ್ರಕಟಿಸಿದರು. ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರದ ಬಹು ಸಂಖ್ಯಾತ ವೀರಶೈವ ಸಭೆ, ಸಮಾರಂಭ ಧಾರ್ಮಿಕ ಅಧಿವೇಶನಗಳಲ್ಲಿ ಪಾಲ್ಗೊಂಡರು. ನೈಜಾಂ ಪ್ರಾಂತೀಯ ಪ್ರಥಮ ವೀರಶೈವ ಅಧಿವೇಶನ (೧೯೨೪) ಪರಳಿಯ ವೀರಶೈವ ವ್ಯಾಜ್ಯ ಪ್ರಕರಣ (೧೯೨೫) ಪರಳಿಯ ದ್ವಿತೀಯ ವೀರಶೈವ ಮಹಾರುದ್ರಾಭಿಷೇಕ ಉತ್ಸವ ಗೋಷ್ಠಿ (೧೯೩೦) ಸೊಲ್ಲಾಪುರ ವೀರಶೈವ ಧರ್ಮೋನ್ನತಿ ಸಮ್ಮೇಳನ (೧೯೩೫) ಗಳಲ್ಲಿ ಇವರು ಮಂಡಿಸಿದ ಪಾಂಡಿತ್ಯಪೂರ್ಣ ವಿಚಾರಗಳು ಧರ್ಮ ಸಂಘಟನೆ, ಧರ್ಮ ಜಾಗೃತಿಗೆ ನಿತ್ಯಪ್ರೇರಕಗಳಾಗಿವೆ. ಬೆಂಗಳೂರು, ಶಿವಮೊಗ್ಗ, ಸಿಕಂದರಾಬಾದ, ಸೊಲ್ಲಾಪುರ,ಪಂಢರಪುರ, ಬಾರ್ಸಿ, ಕುರ್ದವಾಡಿ, ಬೀದರ, ಹಾವೇರಿ, ಹುಬ್ಬಳ್ಳಿ, ಕಾಶಿ ಹೀಗೆ ನಾಡಿನ ಒಳ-ಹೊರಗೆ ಇವರು ಮಾಡಿದ ವಿದ್ವತ್‌ಪೂರ್ಣ ಭಾಷಣಗಳನ್ನು ಸಂಗ್ರಹಿಸಿದರೆ ಸಾವಿರ ಪುಟದ ಗ್ರಂಥವಾಗಬಲ್ಲದು. ನಾಡು ನುಡಿ, ಲಿಪಿ ಸುಧಾರಣೆ, ಭಾಷಾ ಬಾಂಧವ್ಯ, ಇತಿಹಾಸ, ಕಲೆ, ಸಂಸ್ಕೃತಿ, ಧರ್ಮ, ಸಂಘಟನೆ, ಪ್ರಾಚೀನ ಗ್ರಂಥ, ತಾಳೆಗರಿಗಳ ಶೇಖರಣೆ ಮುಂತಾದ ಸಮಷ್ಟಿ ಜ್ಞಾನದ ಪುನರುತ್ಥಾನ, ಪ್ರಸಾರಣೆ ಹಾಗೂ ಪುರೋಭಿವೃದ್ಧಿಗಾಗಿ ಹೋರಾಡಿದ ವೀರಶೈವ ಮಠಾಧೀಶರಲ್ಲಿ ಇವರಂತೆ ಮತ್ತೋರ್ವರಿರುವುದು ವಿರಳ. ಪಾರಂಪರಿಕ ಹಿಂದೂ ಪಂಚಾಂಗಗಳಲ್ಲಿ ಹೇಳಿದ ವಿವಿಧ ಕಾಲಗಳ ಕೋಷ್ಟಕದಿಂದ ರಚಿಸಲಾದ ಕಲಿಕಾಲ ನಿರ್ಣಯ ಎಂಬ ಪ್ರಾಕ್ತನ ಕೈಪಿಡಿ ಹಾಗೂ 'ಸ್ವಲೇಖ ಸಂಗ್ರಹ' ಎಂಬ ಶೀರ್ಷಿಕೆಯ ಅವರ ಕನ್ನಡ ಹೊತ್ತಗೆಗಳು ಅಲ್ಲದೆ 'ಶಿವಪಂಚವಿಂಶ ಲೀಲಾಶತಕಮ್' ಎಂಬ ಸಂಸ್ಕೃತ ಕೃತಿಯೂ ಪ್ರಕಟಗೊಂಡರೆ ಅವರ ವಿದ್ವತ್ತಿನ ಕಾಣಿಕೆ ಮನವರಿಕೆಯಾಗಬಲ್ಲದು.[14] ಇಂತಹ ಮಹಾ ಮೇಧಾವಿಗಳು ಜಂಗಮವಾಡಿ ಮಠದ ಅಧಿಕಾರಿಗಳಾಗಿ 'ಮಠವೆಂದರೆ ಬಾಹ್ಯ ಕಟ್ಟಡವಲ್ಲ. ಅಂತರಂಗದ ವಿಕಾಸಕ್ಕೆ ಕಟ್ಟಬೇಕಾದ ಜ್ಞಾನದ ವಿಶ್ವವಿದ್ಯಾಮಂದಿರ' ಎಂಬ ಮಹದಾದರ್ಶವನ್ನು ತೋರಿ ಹೋಗಿರುವುದು ಸ್ತುತ್ಯಾರ್ಹ.

ಜಂಗಮವಾಡಿಯ ಮಠಕ್ಕೆ ಅವರಿತ್ತ ಯೋಗದಾನವನ್ನು ಅವರ ಈ ಕೆಳಗಿನ ಸಂಘಟನೆಗಳಿಂದ ಸ್ಮರಿಸಿಕೊಳ್ಳಬಹುದು:-

೧. ಶೈವ ಭಾರತಿ ಭವನ ಸ್ಥಾಪನೆ (ಕಾಶಿ, ಸಿಕಂದರಾಬಾದಗಳಲ್ಲಿ) ೧೯೩೪, ೧೯೩೬.

೨. ವೀರಶೈವ ಗುರುಕುಲ ಸ್ಥಾಪನೆ (ಸಿಕಂದರಾಬಾದ ಶಾಖಾ)

೩. ಜ್ಞಾನ ಮಂದಿರ ಪ್ರಾಚ್ಯ ಗ್ರಂಥ ಭಂಡಾಗಾರ ಸ್ಥಾಪನೆ ೧೯೪೫.

೪. ಶಿವಧರ್ಮ ಗ್ರಂಥಮಾಲೆಯ ಪುನರಾರಂಭ ೧೯೪೬.

೫. 'ವಿಭೂತಿ' ಮಾಸಪತ್ರಿಕೆ ಸಂಪಾದನೆ (ಕಾಶಿ, ಸಿಕಂದರಾಬಾದ).

ಜ್ಞಾನಮಂದಿರ ಪ್ರಾಚ್ಯ ಗ್ರಂಥ ಭಂಡಾರ

ವೀರಶೈವ ಧರ್ಮ, ಸಿದ್ಧಾಂತ ಅಲ್ಲದೆ ವೇದ, ಪುರಾಣ, ಉಪನಿಷತ್ತು ಆಗಮ, ತಂತ್ರ, ಕ್ರಿಯಾಚರಣೆ, ಜ್ಯೋತಿಷ್ಯ

14 ಶ್ರೀಶೈಲದ ಶಿವಾನಂದಸ್ವಾಮಿಗಳೆಂಬವರು ಸಂಪೂರ್ಣಾನಂದ ವಿಶ್ವ ವಿದ್ಯಾಲಯದಿಂದ ಇವರನ್ನು ಕುರಿತು ಸದ್ಯದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪ್ರಶಸ್ತಿಯನ್ನು ಸಂಸ್ಕೃತದಲ್ಲಿ ಪಡೆದಿದ್ದಾರೆ. ಆ ಮಹಾಪ್ರಬಂಧ ಕನ್ನಡದಲ್ಲಿ ಹೊರತರುವುದು ಅತ್ಯಗತ್ಯ.

ಮುಂತಾದವುಗಳ ಅಧ್ಯಯನ, ಸಂಶೋಧನೆ, ಸಂಪಾದನೆಗಳಿಗೆ ನೆರವಾಗಲೆಂದು ಅಪಾರ ಸಂಖ್ಯೆಯ ಪ್ರಾಚೀನ ತಾಳೆಗರಿ, ಕಾಗದ ಪ್ರತಿ ಅಲ್ಲದೆ ಅಪೂರ್ವ ಲಭ್ಯವಾದ ಮುದ್ರಣದ ಪ್ರತಿಗಳನ್ನು ಜ್ಞಾನ ಮಂದಿರ ಪ್ರಾಚ್ಯ ಗ್ರಂಥಾಲಯ ಒಳಗೊಂಡಿದೆ. ವೀರಭದ್ರ ಜಗದ್ಗುರುಗಳು ಮಠಾಧಿಕಾರಿಗಳಾದ ಬಳಿಕ ಸಿಕಂದರಾಬಾದ್‌ನಲ್ಲಿನ ಸ್ವಂತ ಗುರುಕುಲದ ಪ್ರತಿಗಳನ್ನೂ ಸಹ ಇಲ್ಲಿ ಒತ್ತಟ್ಟಿಗೆ ತಂದು ಇವನ್ನು ಸ್ಥಾಪಿಸಿದರು. ಇಂದು ಸುಮಾರು ಹತ್ತು ಸಾವಿರ ಮುದ್ರಿತ ಪ್ರತಿಗಳು, ಐದು ಸಾವಿರ ಪ್ರಾಚೀನ ತಾಳೆಗರಿ ಮತ್ತು ಕಾಗದದ ಹಸ್ತಪ್ರತಿಗಳು, ಪ್ರಾಚೀನ ಲೇಖ್ಯ, ಲೇಖನ ಸಾಮಗ್ರಿಗಳು ಸಂಗ್ರಹವಾಗಿವೆ. ಸಂಸ್ಕೃತದಲ್ಲಿ ಶಿವಾಗಮಗಳಿಗೆ ಸಂಬಂಧಿಸಿದ ಎಷ್ಟೋ ಏಕೈಕ ಹಸ್ತಪ್ರತಿಗಳು ಇಲ್ಲಿರುವುದರಿಂದ ಮೈಸೂರು ಪ್ರಾಚ್ಯ ಗ್ರಂಥಾಲಯದವರು ಈ ಪ್ರತಿಗಳನ್ನು ಮೈಕ್ರೊಫಿಲಂ ಮೂಲಕ ಅವನ್ನು ದೊರಕಿಸಿದ್ದಾರೆ. ಸಂಸ್ಕೃತವಲ್ಲದೆ ಕನ್ನಡ, ತೆಲುಗು, ತಮಿಳು, ಮರಾಠಿ, ಗ್ರಂಥಲಿಪಿ, ಬೆಂಗಾಲಿ ಭಾಷೆಯ ತಾಳೆಗರಿಗಳೂ ಇಲ್ಲಿ ಸಹ ಉಪಲಬ್ಧವಾಗಿವೆ. ಇಲ್ಲಿನ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ' (Descriptive Catalogue) ಯನ್ನು ಬನಾರಸ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠವು ಇತ್ತೀಚೆಗೆ ಸಿದ್ಧಪಡಿಸಿದೆ. ಉಳಿದವುಗಳ ಸೂಚಿಯನ್ನು ತಯಾರಿಸುವ ಯೋಜನೆ ಮುಂದುವರೆದಿದೆ. ಆಧುನಿಕ ಸಂಶೋಧಕರಿಗೂ, ಗ್ರಂಥ ಸಂಪಾದಕರಿಗೂ ಇದೊಂದು ಅರಿವಿನ ಅರವಟ್ಟಿಗೆ. ಕಾಲ ಕಾಲಾಂತರ ಸಾಹಿತ್ಯದ ನಿಧಿ ನಿಕ್ಷೇಪ ಇಲ್ಲಿ ಹುದುಗಿರುವುದನ್ನು ನಾವು ಕಾಣುತ್ತೇವೆ

ಗ್ರಂಥ ಪ್ರಕಟಣೆಗಳು

ಲಿಂ. ರಾಜೇಶ್ವರ ಮಹಾಸ್ವಾಮಿಗಳು, ಪಂಡಿತ ದಿಗ್ಗಜ ವೀರಭದ್ರ ಶಿವಾಚಾರ್ಯರು, ಉಜನೆಯ ಕ್ಯಾಸನೂರು ಮಠದ ವಿಶ್ವೇಶ್ವರ ಜಗದ್ಗುರುಗಳು ಈ ಸತ್ಪರಂಪರೆಯಲ್ಲಿ ಸದ್ಯ ವಿರಾಜಮಾನರಾಗಿರುವ ಜಗದ್ಗುರು.ಡಾ. ಚಂದ್ರಶೇಖರ ಶಿವಾಚಾರ್ಯರು ಮುಖ್ಯವಾಗಿ ವಿದ್ಯಾ ಪಕ್ಷಪಾತಿಗಳು, ಸಾರಸ್ವತ ತಪೋನಿಧಿಗಳು. ಇವರೆಲ್ಲರ ಪ್ರೇರಣೆ, ಪ್ರೋತ್ಸಾಹನೆಗಳಿಂದ ಮಠದಲ್ಲಿನ ಶೈವ ವೀರಶೈವ ಧರ್ಮ, ದರ್ಶನ, ಆಗಮ ತಂತ್ರ ಕುರಿತಾದ ಗ್ರಂಥಗಳು ಸಂಸ್ಕೃತದಲ್ಲಿ ಅಲ್ಲದೆ, ಹಿಂದಿ, ಮರಾಠೀ, ಕನ್ನಡ ಭಾಷೆಗಳಲ್ಲಿ ಕಾಲಕಾಲಕ್ಕೆ ಪ್ರಕಟಣೆಗೊಳ್ಳುತ್ತ ಬಂದಿವೆ. ಸೊಲ್ಲಾಪುರದ ವಾರದ ಮಲ್ಲಪ್ಪನವರ ತರುವಾಯ ಸಂಸ್ಕೃತ ವೀರಶೈವ ಧರ್ಮಗ್ರಂಥಗಳ ಪ್ರಕಾಶನದ ಕಾರ್ಯ ಕುಂಠಿತಗೊಂಡಿದ್ದನ್ನು ಜಂಗಮವಾಡಿ ಮಠ ಮುಂದುವರಿಸಿರುವುದು ಶ್ರೇಯೋಭಾಜನ ವಾಗಿದೆ. ವೀರಶೈವ ವಾಙ್ಮಯ ಪ್ರಸಾರಣಾರ್ಥವಾಗಿ "ಶಿವತತ್ತ್ವ ಗ್ರಂಥಮಾಲೆ", " ಶೈವಭಾರತಿ ಗ್ರಂಥಮಾಲೆ", "ಶೈವ ಶೋಧ ಪ್ರತಿಷ್ಠಾನ" ಹಾಗೂ "ವೀರಶೈವ ಅನುಸಂಧಾನ ಸಂಸ್ಥಾನ", ಇವೇ ಮುಂತಾದ ಸಂಘಟನೆಗಳ ಮೂಲಕ ಆಯಾಕಾಲಕ್ಕೆ ಗ್ರಂಥಗಳನ್ನು ಈ ಮಠ ಪ್ರಕಾಶ ಪಡಿಸಿದೆ. ವೀರಶೈವ ಧರ್ಮ ಸಿದ್ಧಾಂತಗಳ ಮೂಲವೆನಿಸಿರುವ ಸಮಗ್ರ ಶಿವಾಗಮಗ್ರಂಥಗಳನ್ನು ಆಧುನಿಕ ವಿದ್ವಾಂಸರಿಂದ ಪರಿಷ್ಕರಿಸಿ, ಸಂಪಾದಿಸಿ, ಟೀಕೆ, ವ್ಯಾಖ್ಯಾನ, ಪರಾಮರ್ಶೆಯೊಂದಿಗೆ ಹೊರತರುವ ಯೋಜನೆಯನ್ನು ಸದ್ಯ ಆರಂಭಿಸಲಾಗಿದೆ. ಹಿಂದಿನ ಜಗದ್ಗುರುಗಳವರಿಂದ ಆರಂಭಿಸಿ, ವರ್ತಮಾನ ಜಗದ್ಗುರುಗಳವರೆಗೆ ಪ್ರಕಾಶನಗೊಂಡಿರುವ ಮಠದ ಮುಖ್ಯ ಪ್ರಕಟಣೆಗಳ ಪಟ್ಟಿ ಇಲ್ಲಿದೆ

ಜಗದ್ಗುರು ರಾಜೇಶ್ವರ ಶಿವಾಚಾರ್ಯರ ಕಾಲದ ಪ್ರಕಟಣೆಗಳು

ಸಂಸ್ಕೃತ — ಲಿಂಗಧಾರಣ ಚಂದ್ರಿಕೆ, ಮಹಾಮಹೋಪಾಧ್ಯಾಯ ಪಂ. ಶಿವಕುಮಾರ ಶಾಸ್ತ್ರಿಗಳ 'ಶರತ್' ವ್ಯಾಖ್ಯಾನ ಸಮೇತ.

ಜಗದ್ಗುರು ಪಂ. ವೀರಭದ್ರ ಶಿವಾಚಾರ್ಯರ ಕಾಲದ ಪ್ರಕಟಣೆಗಳು

ಸಂಸ್ಕೃತ — ಶಿವಧರ್ಮ (ಅಪೂರ್ಣ), ಶ್ರೀಕರ ಭಾಷ್ಯ (ಪೂರ್ಣ), ಪುರುಷಸೂಕ್ತ (ಶೈವ ಭಾಷ್ಯ), ಸಿದ್ಧಾಂತ ಶಿಖಾಮಣಿ (ಮೂಲ ಶ್ಲೋಕಗಳು), ನಂದಿಕೇಶ್ವರ ಕಾರಿಕಾ (ಉಪಮನ್ಯು ಕೃತ).

ಕನ್ನಡ — ಸಿದ್ಧಾಂತ ಶಿಖಾಮಣಿ (ಲಿಪಿ ಕನ್ನಡ) ವೀರಶೈವ ವಿಶ್ವಕೋಶ, ವೀರಶೈವ ವಿಜ್ಞಾನ ಶೀರ್ಷಿಕೆಯಲ್ಲಿ ಗ್ರಂಥ ಸಂಪಾದನ ಯೋಜನೆ ಇವರದಾಗಿದ್ದು, ಅದು ಅರ್ಧಕ್ಕೆ ಸ್ಥಗಿತಗೊಂಡಿತು. "ಸ್ವಲೇಖ ಸಂಗ್ರಹ" "ಕಲಿಕಾಲ ನಿರ್ಣಯ" ಇವರ ಸ್ವಂತ ಗ್ರಂಥಗಳು ಅಪ್ರಕಟಿತವಾಗಿ ಉಳಿದಿವೆ.

ಮರಾಠೀ — ವೀರಶೈವ ರತ್ನ, ಕಾಶೀ ಪೀಠಾಚೆ ಪ್ರಾಚೀನತ್ವ, 'ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ' 'ಸಾಂಗ್ಲಿ ವೀರಶೈವ' ಪರಿಷದೇಚೇ ಅಧ್ಯಕ್ಷೀಯ ಭಾಷಣ, 'ಶಿವ ಸಂಸ್ಕೃತಿ ಪಾಠ'.

ಹಿಂದೀ — ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ.

ತೆಲುಗು 'ರೇಣುಕಾಚಾರ್ಯ ಚರಿತ್ರಮು', 'ರೇಣುಕ ವಿಜಯ ಪುರಾಣಮು', 'ವೀರಶೈವ ರತ್ನ', 'ಶ್ರೀಕರಭಾಷ್ಯ (ಚತು ಸ್ಮೃತಿ)', ವೀರಶೈವ ಮಹಾತ್ಮ್ಯಲು ಪಾಲ್ಕುರಿಕೆ ಸೋಮನಾಥ ಚರಿತ್ರ, ವೀರಶೈವ ವಿವಾಹ ವಿಧಿ ಮುಂತಾದವು.

ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಕಾಲದ ಪ್ರಕಟಣೆಗಳು

ಕನ್ನಡ/ಹಿಂದಿ/ಇಂಗ್ಲಿಷ್ ಜಂಗಮವಾಡಿ ಮಠದ ಜಡ್ಜ್‌ಮೆಂಟ್.

ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರ ಕಾಲದ ಪ್ರಕಟಣೆಗಳು

ಸಂಸ್ಕೃತ ಶ್ರೀಕಂಠ ಭಾಷ್ಯಮ್

ಹಿಂದಿ ಲಿಂಗಧಾರಣ ಚಂದ್ರಿಕಾ (ಹಿಂದೀ ಭಾವಾನುವಾದ) ಜಂಗಮವಾಡಿ ಮಠಕೀ ಪ್ರಾಚೀನತಾ

ವರ್ತಮಾನ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ಕಾಲದ ಪ್ರಕಟಣೆಗಳು

ಸಂಸ್ಕೃತ ಸಿದ್ಧಾಂತ ಶಿಖಾಮಣಿ ಸಮೀಕ್ಷಾ (ಸಂಶೋಧನ ಮಹಾ ಪ್ರಬಂಧ).

ಸೂಕ್ಷ್ಮಾಗಮ, ಚಂದ್ರ ಜ್ಞಾನಾಗಮ, ಮುಕುಟಾಗಮ, ಕಾರಣಾಗಮ, ವಾತುಳಾಗಮ (ಪಂ. ವ್ರಜವಲ್ಲಭ ದ್ವಿವೇದಿಗಳಿಂದ ಪರಿಷ್ಕೃತ ಸಂಪಾದನೆ).

ಹಿಂದಿ ಅಷ್ಟಾವರಣ ವಿಜ್ಞಾನ.

ಮರಾಠಿ ಅಷ್ಟಾವರಣ ವಿಜ್ಞಾನ, ಜನಮ್ ಹಾ ಆಚೇರ್‌ಚ (೮ ಭಾಗಗಳಲ್ಲಿ).

ಕನ್ನಡ ಅಷ್ಟಾವರಣ ವಿಜ್ಞಾನ, ಪ್ರವಚನ ಪ್ರಭೆ (ಸಿದ್ಧಾಂತ ಶಿಖಾಮಣಿ ಪ್ರವಚನಗಳು). ಪಂಚಪೀಠ ಪರಂಪರೆ, ವಿದ್ಯಾನಿಧಿ ವೀರಭದ್ರ ಜಗದ್ಗುರುಗಳು., ಮುಂತಾದುವು.

ಮೇಲ್ಕಾಣಿಸಿದ ಉದ್ಗ್ರಂಥಗಳಲ್ಲದೆ ವೀರಶೈವ ಲಘು ಸಾಹಿತ್ಯ ಪ್ರಕಾರಗಳೆನ್ನಿಸಿದ ಸ್ತೋತ್ರ, ಶತಕ, ಅಷ್ಟೋತ್ತರ ನಾಮ, ಶಿವಪೂಜಾವಿಧಿ, ಶಿವಪಾಠ, ಲಿಂಧಾರಣ ವಿಧಿ, ವಿವಾಹ ವಿಧಿ, ಮುಂತಾದ ೫೦ ಕ್ಕೂ ಹೆಚ್ಚು ಕಿರು ಹೊತ್ತಗೆಗಳು ಬೆಳಕಿಗೆ ಬಂದಿವೆ. ಈ ಗ್ರಂಥಗಳಿಂದ ಶೈವ ಸಿದ್ಧಾಂತ ಶಕ್ತಿ ವಿಶಿಷ್ಟಾದ್ವೈತದ ವೈಶಿಷ್ಟ್ಯ, ವೀರಶೈವ ಧರ್ಮದ ಮೂಲ, ಬೆಳವಣಿಗೆಯನ್ನು ಉತ್ತರ ಭಾರತದ ವಿದ್ವಾಂಸರು ಅರಿಯಲು ಶಕ್ಯವಾಗಿದೆ. ವಿದ್ವತ್ ಲೋಕದಲ್ಲಿ ಅಗ್ರೇಸರರಾದ ಗೋಪಿನಾಥ ಕವಿರಾಜ, ಡಾ. ವಾಸುದೇವ ಶರಣ ಅಗರವಾಲಾ, ಪಂ. ಶಿವಕುಮಾರ ಶಾಸ್ತ್ರಿ, ಪಂ. ವ್ರಜವಲ್ಲಭ ದ್ವಿವೇದಿ, ವಿದ್ಯಾಧರ ಶರ್ಮ, ಗೌರೀನಾಥ ಪಾಠಕ, ಪಂ. ಹರಿನಾಥ ಶಾಸ್ತ್ರೀ, ಡಾ. ವೆಂಕಟಾಚಲಂ ಮುಂತಾದವರು ತಮ್ಮ ಗ್ರಂಥ - ಲೇಖನಗಳಲ್ಲಿ ವೀರಶೈವ ಸಿದ್ಧಾಂತದ ಮರ್ಮವನ್ನು ಸೂಕ್ತ ಸಂದರ್ಭಗಳಲ್ಲಿ ಉಲ್ಲೇಖಿಸಲು ಜಂಗಮವಾಡಿ ಮಠದ ಗ್ರಂಥಗಳು ಸಹಾಯಕವಾಗಿ ನಿಂತಿವೆ. ಆದರೆ ಕೇವಲ ಶೈವದಿಂದ ಉತ್ತೇಜಿತವಾದ ಆಗಮ ನಿಗಮ ಪ್ರೋಕ್ತ ವಿಚಾರಗಳಷ್ಟೇ ಬೆಳಕಿಗೆ ಬಂದರೆ ಸಾಲದು. ವೀರಶೈವರು ಇಂದು ಹೆಚ್ಚು ಸಂಖ್ಯೆಯಲ್ಲಿ ಅದರ ಅನುಯಾಯಿಗಳಾಗಿರುವುದು ಕರ್ನಾಟಕದಲ್ಲಿ. ಇವರೇ ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಪಸರಿಸಿದ್ದಾರೆ. ತಮಿಳುಶೈವ ಸಿದ್ಧಾಂತ, ಆಂಧ್ರದ ಆರಾಧ್ಯ ಶೈವ ಸಂಪ್ರದಾಯಗಳು ತತ್ತ್ವ ಮತ್ತು ಆಚರಣೆಗಳಲ್ಲಿ ನೂತನ ಪರಿಷ್ಕೃತವಾದ ವೀರಶೈವದಿಂದ ಭಿನ್ನವಾಗಿವೆ. ಪಂಚಪೀಠಾಚಾರ್ಯರಾಗಲಿ, ವಿರಕ್ತ ಪರಂಪರೆಯವರಾಗಲಿ ಕೇವಲ ಮಠೀಯ ಕಾರ್ಯಾಚರಣೆಯಲ್ಲಿ ಭಿನ್ನರೇ ಹೊರತು, ವೀರಶೈವ ಧರ್ಮ ತತ್ತ್ವಜ್ಞಾನಗಳಲ್ಲಿ ಏಕಾಭಿನ್ನರು.[15] ರೇಣುಕಾಚಾರ್ಯರ ಜೊತೆಗೆ ಕರ್ನಾಟಕದಲ್ಲಿ ನಡೆದ ೧೨ನೆಯ ಶತಮಾನದ ಶರಣ ಧರ್ಮಕ್ರಾಂತಿಯ ಪ್ರಭಾವವನ್ನೂ ಸಹ ತಿಳಿಯುವುದು ಅತ್ಯಗತ್ಯ. ಉತ್ತರ ಭಾರತದ ವಿದ್ವಾಂಸರಿಗೆ ಈ ಕಡೆಗೆ ಲಕ್ಷ್ಯವಿಲ್ಲದಿರುವುದು ದುರಾದೃಷ್ಟವೇ ಸರಿ.

ಯಶೋಭೂಷಿತ ಮಹಾವ್ಯಕ್ತಿಗಳು

ಕಾಶಿಗೆ ಯಾತ್ರಾರ್ಥಿಗಳಾಗಿ ಬರುವ ಸಾಮಾನ್ಯ ಹಿಂದೂ ಸಂಪ್ರದಾಯದಂತೆ ವೀರಶೈವರು ತೀರ್ಥಾಟನೆ ಇಲ್ಲವೆ

15 ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳು ಕ್ರಮವಾಗಿ ವೀರಶೈವದ ಅಂಗ, ಪ್ರಾಣ, ಆತ್ಮಸ್ವರೂಪವಾಗಿದ್ದು ಇವು ಉಭಯ ಪಕ್ಷದವರಿಗೂ ಸಮಾನವೆಂದು ಇವರ ಅರ್ಥ.

ಪೌರೋಹಿತ್ಯಾದಿ ಕರ್ಮಗಳನ್ನಾಚರಿಸಲು ಬಂದವರಲ್ಲ. ಕಾಶೀನಗರಿ ಮೋಕ್ಷ ಸದನವಾಗಿರುವುದು ಜ್ಞಾನಿಗಳಿಗೆ ಹೊರತು ಅಜ್ಞಾನಿ, ಜಡಮಾನವರಿಗಲ್ಲ. ಎಲ್ಲರನ್ನೂ ಮೋಕ್ಷಗೊಳಿಸುವುದಾಗಿ ಹೇಳಿರುವುದು ಅತ್ಯುಕ್ತ್ಯೇಕ್ತಿ. ಸ್ಥಳಮಹಿಮಾಧಿಕ್ಯವಲ್ಲದೆ ಬೇರೇನೂ ಅಲ್ಲ. ಮೋಕ್ಷ ಮೂಲವಾದ ಸುಜ್ಞಾನದ ಪ್ರಕಾಶವನ್ನು ಬೀರುವ ಸ್ಥಳ ನಿಜವಾದ ಕಾಶಿ. 'ಕಾಶ್ಯತೇ ಪ್ರಕಾಶ್ಯತೇ ಇತಿ ಕಾಶೀ', 'ವಿದ್ಯಾಯಾಂ ಸದನಂ ಕಾಶೀ' ಎಂಬ ಹೇಳಿಕೆಗಳು ಅರ್ಥಪೂರ್ಣವಾದುವು. 'ಕಾಶೀಮೋಕ್ಷ ನಿರ್ಣಯ' ಎಂಬ ಗ್ರಂಥದ ಶ್ಲೋಕಗಳು ಇದನ್ನೇ ಸಮರ್ಥಿಸುತ್ತವೆ.

ಪ್ರಾರಬ್ಧ ಕರ್ಮಭೋಗೇನ ಕ್ಷೀಯತೇ ಜ್ಞಾನಕಾರಣಮ್ ।
ತತೋ ವಿದೇಹ ಕೈವಲ್ಯಂ ಭವತೀತಿ ಸುನಿಶ್ಚಿತಮ್ ॥
ಉಪಾಸ್ತೇಃ ಪರರೂಪತ್ವಾತ್ ತಾರತಮ್ಯ ಪದಾಸ್ಥಿತೇಃ
ಜ್ಞಾನಾಗ್ನಿನಾ ವಿನಷ್ಟತ್ವಾತ್ ವಿಶ್ಲೇಷಃ ಪೂರ್ವಕರ್ಮಣಾಮ್ ॥

ಸಂಚಿತಾದಿ ಕರ್ಮಗಳನ್ನು ಜ್ಞಾನಾಗ್ನಿಯಿಂದ ನಷ್ಟವಾಗಿಸಿ 'ಮಹೇಶ್ವರ ಜ್ಞಾನ ಭರಿತನಾಗಿ' ಮನುಷ್ಯ ಪರಿಪೂರ್ಣ ಸ್ಥಿತಿಯನ್ನು ಹೊಂದುವ ಸ್ಥಳವೇ ಕಾಶಿ. ಶತ ಶತಮಾನಗಳಲ್ಲಿ ಅದಕ್ಕೆಂದೇ ಭಿನ್ನ ಭಿನ್ನ ಮತಾಚಾರ್ಯರು ತಮ್ಮ ತಮ್ಮ ಮತ ಸಿದ್ಧಾಂತ, ವೇದಾಂತಗಳ ಪ್ರತಿಪಾದನೆಗಾಗಿ ಇಲ್ಲಿಗೆ ಬಂದರು. ಬುದ್ಧ, ಶಂಕರರು, ತುಳಸಿ, ಕಬೀರ, ಏಕನಾಥ, ಮೀರಾಬಾಯಿ, ರಮಾನಂದ, ದಯಾನಂದ, ಕಾಷ್ಠ ಜಿಹ್ವಾಸ್ವಾಮಿ, ತೈಲಂಗ ಸ್ವಾಮಿ, ಸ್ವಾಮಿ ಕರಪತ್ರಜಿ, ಕೀನಾರಾಮ ಬಾಬಾ ರಂತಹ ನೂರಾರು ಸಿದ್ಧ ಸಾಧಕರು, ಸಂತರು ತಮ್ಮ ಜ್ಞಾನಮಾರ್ಗದ ಗರಡೀಮನೆಯಾಗಿಸಿ, ವಿದ್ವತ್ತಿನ ಪ್ರಖರ ಕಿರಣಗಳನ್ನು ಹೊರಹೊಮ್ಮಿಸಿದರು. ವೀರಶೈವರಲ್ಲಿ 'ಜಂಗಮ' ಅರ್ಥಾತ್ 'ಷಟ್‌ಸ್ಥಲಬ್ರಹ್ಮ' ಸಾಕ್ಷಾತ್ ಜ್ಞಾನದ ತವನಿಧಿ, 'ಅಂತಹವನೇ' ಅಭಿವಂದ್ಯನೆಂದಾಗಿ ಮಗ್ಗೆಯ ಮಾಯಿದೇವನ ಹೇಳಿಕೆ.

ನಮಸ್ತೇ ಷಟ್‌ಸ್ಥಲ ಬ್ರಹ್ಮ ಮೂರ್ತಯೇ ಶುಭ ಕೀರ್ತಯೇ
ಸ್ವ ಸಂವೇದ್ಯಾಯ ಹೃದ್ಯಾಯ ವಿದ್ಯಾರೂಪಾಯ ಶಂಭವೇ ॥ (ವಿ.ಪ್ರ. ೨.೩೯)

ಸಮಾಜ, ಮತ, ಧರ್ಮ, ತತ್ತ್ವ ಪ್ರಸಾರದ ಏಳ್ಗೆಗೂ, ಸ್ವಯಂ ಜ್ಞಾನಾರ್ಜನೆಗೂ ಕಾಶಿಯಂತಹ ಸ್ಥಳಕ್ಕೆ ವೀರಶೈವರೂ ಸಹ ಬಂದುದು ಈ ದೃಷ್ಟಿಯಿಂದ ಜ್ಞಾನಯಾತ್ರೆಗಾಗಿಯೇ ಹೊರತು ಬಾಹ್ಯ ತೀರ್ಥಾಟನೆಗಲ್ಲ. ಜಂಗಮವಾಡಿ ಮಠ ಇಂತಹ ಜ್ಞಾನಾರ್ಥಿಗಳಿಗೆ ಹೆಬ್ಬಾಗಿಲಾಗಿ, ಜ್ಞಾನದಾಸೋಹದ ಚಿರಂತನ ಪೀಠವಾಗಿ ಒಂದು ಮಹಾ ಜ್ಞಾನಜ್ಯೋತಿಯಿಂದ ಹೊತ್ತಿಸಿದ ಕಿರಣಗಳೂ ಸಹ ಅದೇ ಸ್ವಪ್ರಕಾಶವನ್ನು ಬೀರುವಂತೆ ಇಲ್ಲಿಗೆ ಬಂದ ಅನೇಕ ಸಾಧಕರು ಕಾಶಿಯಲ್ಲಿ ಅಧ್ಯಯನ ನಡೆಸಿ, ತಾವಿರುವ ಕಡೆಗಳಲ್ಲೂ ಸಹ ಬೆಳಕಾಗಿರುವುದು ಶ್ಲಾಘನೀಯ. ಸುಮಾರು ೨೫೦ ವರ್ಷಗಳ ಕಾಲದಿಂದಲೂ ಕಾಶಿಯ ಜಂಗಮವಾಡಿ ಮಠದಲ್ಲಿದ್ದು, ಅಧ್ಯಯನಗೈದವರ ಪರಂಪರೆಯನ್ನು ಶೋಧಿಸಬಹುದಾದರೂ ಇಲ್ಲಿ ಯಶೋಭೂಷಿತರಾದ ಮಹಾ ಸ್ವಾಮಿಗಳ ಹಾಗೂ ಮಹಾನ್ ವಿದ್ಯಾವಿಶಾರದರಲ್ಲಿನ ಕೆಲವು ಪ್ರಮುಖರನ್ನು ಮಾತ್ರ ಉಲ್ಲೇಖಿಲು ಶಕ್ಯ. ಇದರಲ್ಲಿ ಗುರು, ವಿರಕ್ತರು, ವಿದ್ವಾಂಸರು, ಪಂಡಿತರು, ಸಂಸ್ಕೃತ ಬೋಧಕರು, ಪುರಾಣಿಕರು, ಪ್ರವಚನ ಪಟುಗಳು, ವಿಖ್ಯಾತ ಲೇಖಕರು, ಕವಿಗಳು, ಸಂಗೀತಾದಿ ಕಲೋಪಾಸಕರು ಇವರೆಲ್ಲ ಸಮಾವೇಶರಾಗಿದ್ದಾರೆ.

ಮಹಾಸ್ವಾಮಿಗಳು

ಚಿತ್ರದುರ್ಗದ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು, ಜಗದ್ಗುರು ಮೂರುಸಾವಿರ ಮಠದ ಗಂಗಾಧರ ರಾಜಯೋಗೀಂದ್ರರು, ಹುಚ್ಚೇಶ್ವರ ಮಹಾಸ್ವಾಮಿಗಳು ಕಮತಗಿ, ಗವಿಮಠಾಧ್ಯಕ್ಷರಾದ ಕೊಪ್ಪಳ ಶ್ರೀ ಮರಿಶಾಂತಸ್ವಾಮಿಗಳು, ಧಾರವಾಡ ತಪೋವನದ ಕುಮಾರ ಮಹಾಸ್ವಾಮಿಗಳು, ಸಿದ್ಧಾರೂಢ, ಸಾಂಪ್ರತ ಬೀದರ ಶ್ರೀ ಶಿವಕುಮಾರ ಸ್ವಾಮಿಗಳು, ಅನಂತಪುರ ಶ್ರೀ ಲಿಂಗಮರಿಸ್ವಾಮಿಗಳು, ಗೊಬ್ಬೂರು ವೃಷಭಲಿಂಗ ಶಿವಾಚಾರ್ಯರು, ಬೆಳಗಾವಿಯ ಗುರುಲಿಂಗದೇವರು, ಜಮಖಂಡಿ ಅನ್ನದಾನ ಶಿವಾಚಾರ್ಯರು, ಸವದತ್ತಿ ನಂದಿಕೇಶ್ವರ ಶಿವಾಚಾರ್ಯರು, ಮೊಳಕಾಲ್ಮೂರಿನ ಚಿದ್ಘನ ಶಿವಾಚಾರ್ಯರು, ಕೊಂಡಕುಂದಿ ಶಿವಶಂಕರ ಶಿವಾಚಾರ್ಯರು, ಚಿಕ್ಕಮಣ್ಣೂರುಗುರುದೇವ ಶಿವಾಚಾರ್ಯರು.

ಪಂಡಿತರು

ಹುಳ್ಯಾಳ ಶ್ರೀ ಶಂಭುಲಿಂಗ ಶಿವಾಚಾರ್ಯರು, ಮೈಸೂರಿನ ಪಂ. ಗುರುಶಾಂತಜಿ, ನಾಗನೂರು ಮಠಾಧ್ಯಕ್ಷರಾದ ಪಂ. ಕಾಶೀನಾಥ ಶಾಸ್ತ್ರಿ.

ಪ್ರತಿಭಾನ್ವಿತರು

ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು.

ಶಾಸ್ತ್ರಿಗಳು

ಹಂಚಿನಾಳ ಶಿತಿಕಂಠ ಶಾಸ್ತ್ರಿ, ಸಿದ್ಧರಹಳ್ಳಿ ಮಹಾಲಿಂಗ ಶಾಸ್ತ್ರಿ, ಅಬ್ಬಿಗೇರಿ ಜಗದೀಶ ಶಾಸ್ತ್ರಿ ಹಾಗೂ ಸಿದ್ದೇಶ್ವರ ಶಾಸ್ತ್ರಿಗಳು, ರಾಮದುರ್ಗ ಮರುಳಾರಾಧ್ಯ ಶಾಸ್ತ್ರಿ, ಬೆಟಗೇರಿ ವಾಮದೇವ ಶಾಸ್ತ್ರಿ, ಜಾಲಿಹಾಳ ಶಾಂತಬಸವ ಶಾಸ್ತ್ರಿ, ಮುಂತಾದವರು. ಇದು ಲಿಂಗೈಕ್ಯ ವೀರಭದ್ರ ಜಗದ್ಗುರುಗಳ ಸಮಕಾಲೀನರಾಗಿದ್ದವರ ೧೯೩೦ರ ದಶಕದ ಸಂಕ್ಷಿಪ್ತ ಪಟ್ಟಿ. ಮೇಲಿನವರಲ್ಲಿ ಕೆಲವರು ತತ್ಕಾಲದಲ್ಲಿಯೇ ಗ್ರಂಥ ರಚಕರಾಗಿದ್ದಾರೆ. ಪಾಂಡಿತ್ಯಪೂರ್ಣ ಲೇಖನಗಳನ್ನೂ ಸಹ ಬರೆದು ಪ್ರಕಟಿಸಿದ್ದಾರೆ. ಗೋರಖಪುರ ಪ್ರೆಸ್ಸಿನ ಕಲ್ಯಾಣದ ವಿಶೇಷ ಸಂಚಿಕೆಯಾದ 'ಶಿವಾಂಕ' ದಲ್ಲಿ ಅವರ ಲೇಖನಗಳನ್ನು ಕಾಣಬಹುದು. ವೀರಶೈವ ಮಠ ಮಾನ್ಯಗಳು ಅನ್ನದಾನ ವಿದ್ಯಾದಾನಕ್ಕಾಗಿ ಸಲ್ಲಿಸಿರುವ ಸೇವೆ ಅಪಾರ. ಭಾರತೀಯ ಇತರ ಮತ ಧರ್ಮದವರಿಗೂ ಸಹ ಇದೊಂದು ಆದರ್ಶ. ಜಂಗಮವಾಡಿ ಮಠ 'ಜ್ಞಾನ ಸಿಂಹಾಸನ' ವೆಂಬುದಕ್ಕೆ ಇದು ಅನ್ವರ್ಥವಾಗಿದೆ.

ಕರ್ತೃ ಗದ್ದುಗೆ ಪೂಜಾ ಪಾಠವಿಧಾನಗಳು

ಕಾಶಿಯ ಜಗದ್ಗುರುಗಳನ್ನು ೧೦೦೮ರ ಸಂಖ್ಯಾಭಿದಾನದಿಂದ ಸೂಚಿಸಲಾಗುತ್ತದೆ. ಬಹುಶಃ ಇದು ಆ ಸಂಖ್ಯೆಯ ಶಿವನಾಮ ಸ್ತೋತ್ರ, ಸಹಸ್ರ ಬಿಲ್ವಾರ್ಚನೆಗಳ ಪ್ರತೀಕ. ಇದು ಕರ್ತೃ ಗದ್ದುಗೆಯಾದ ವಿಶ್ವಾರಾಧ್ಯರ ಪೂಜಾ ಪಾಠದಲ್ಲಿಯೂ ಅಳವಟ್ಟಿದೆ. ಪ್ರತಿನಿತ್ಯ ತ್ರಿಕಾಲ ಪೂಜೆ, ರುದ್ರಾಭಿಷೇಕ, ಪಂಚಮಂಗಳಾರತಿ, ಪಂಚಾಭಿಷೇಕಾದಿಗಳು ವಿಧಿವತ್ತಾಗಿ ಇಲ್ಲಿ ಜರುಗುತ್ತವೆ. ಸಹಸ್ರ ಬಿಲ್ವಾರ್ಚನೆ ಜೊತೆಗೆ ಭಕ್ತಾದಿಗಳಿಂದ ಕೋಟಿ ಬಿಲ್ವಾರ್ಚನೆ ಸಹ ವಿಶೇಷ ಸಂದರ್ಭಗಳಲ್ಲಿ ನಡೆಯುತ್ತದೆ. ಗರ್ಭಗೃಹದಲ್ಲಿ ಚಂದ್ರಮೌಳೀಶ್ವರರ ವಿಗ್ರಹವೂ ಸಹ ಸ್ಥಾಪಿತಗೊಂಡಿದೆ.

ವಿಶೇಷ ಪರ್ವ - ಉತ್ಸವ ಜಾತ್ರೆ - ಸಮಾರಂಭಗಳು

ಶ್ರಾವಣ ಮಾಸಾಚರಣೆ, ಕಾರ್ತೀಕಪೂಜೆ, ವಿಜಯ ದಶಮಿಯ ಕಾಲದಲ್ಲಿ ಶಮೀಪೂಜೆ, ಸೀಮೋಲ್ಲಂಘನೆ, ಅನ್ನಪೂರ್ಣೇಶ್ವರಿ ಆರಾಧನೆ, ಹೋಮ - ಹವನಾದಿಗಳು ಏರ್ಪಡುತ್ತವೆ. ಮಹಾಶಿವರಾತ್ರಿಯ ಕಾಲಕ್ಕೆ ವಿಶ್ವಾರಾಧ್ಯರ ಉತ್ಸವ ಮೂರ್ತಿಯನ್ನಲಂಕರಿಸಿ, ಪಾಲಕಿ ಸಮೇತವಾಗಿ ಬೆಳ್ಳಿಯ ರಥದಲ್ಲಿ ಮೆರೆಸುವ ಪರಂಪರೆಯಿದ್ದು, ಇದೊಂದು ವಿಶೇಷ ಜಾತ್ರೆಯ ಮಟ್ಟದಲ್ಲಿ ವಿಜೃಂಭಣೆಯಿಂದ ನೆರವೇರುತ್ತದೆ. ಮಠದ ಮಹಾದ್ವಾರದಿಂದ ಹೊರಟು ಗೋದೌಲಿಯಾ ಚೌಕ ಹಾಗೂ ಗಂಗಾತಟಾಕದ ದಶಾಶ್ವಮೇಧ ಘಾಟದವರೆಗೆ ರಥವು ಸಾಗುತ್ತದೆ. ಅಲ್ಲಿ ಕುಂಭಸ್ಥಳ, ಮಂಗಳ, ಕರ್ಪೂರಾರತಿಗಳು ಜರುಗಿದ ಬಳಿಕ ತೇರು ಮತ್ತೆ ಮಠಕ್ಕೆ ಹಿಂದಿರುಗುತ್ತದೆ. ಉತ್ತರ ಭಾರತದಲ್ಲಿನ ಜನಗಳಿಗೆ ವೀರಶೈವರ ಈ ಮಹೋತ್ಸವ ಒಂದು ವಿಶಿಷ್ಟ ತೆರನಾದ ಆಚರಣೆ. ಮಹಾರಾಷ್ಟ್ರ ಭಕ್ತರ ದಿಂಡಿ ಭಜನೆ, ಕರ್ನಾಟಕದವರ ಪುರವಂತಿಕೆ ಕುಣಿತ, ಶಸ್ತ್ರಧಾರಣೆ, ಒಡಬುಗಳ ಉದ್ಘೋಷಣೆ, ಶಿವಭಜನೆ, ವಿವಿಧ ವಾದ್ಯಗಳಿಂದ ಸಮ್ಮಿಳಿತವಾದ ಈ ಉತ್ಸವವನ್ನು ಇಲ್ಲಿನ ಜನ ನಿಬ್ಬೆರಗಾಗಿ ನೋಡುತ್ತಾರೆ. ವಿದೇಶೀ ಪರ್ಯಟಕರಂತೂ ಈ ಸ್ಥಳದಲ್ಲೇ ವೀಡಿಯೋ ಕ್ಯಾಮರಾಗಳಿಂದ ದೃಶ್ಯಗಳನ್ನು ಚಿತ್ರೀಕರಣ ಮಾಡಿಕೊಳ್ಳುತ್ತಾರೆ. ಇಡೀ ಮಠದ ಸಾಕ್ಷ್ಯಚಿತ್ರವನ್ನು ಸದ್ಯದ ಜಗದ್ಗುರುಗಳು ಇತ್ತೀಚೆಗೆ ತಯಾರಿಸಿದ್ದಾರೆ. ಶಿವರಾತ್ರಿಯ ದಿನ ಕಾಶಿಯ ವಿದ್ವತ್ ಸಭೆ ಏರ್ಪಡುತ್ತದೆ. ಪ್ರತಿಷ್ಠಿತರಿಗೆ ಸನ್ಮಾನ, ನೂತನ ಗ್ರಂಥಗಳ ವಿಮೋಚನೆ ಈ ಕಾಲಕ್ಕೆ ನಡೆಯುತ್ತದೆ. ಸ್ಥಳಿಕ ಭಕ್ತರಿಗೆ ಮಠದ ಗದ್ದುಗೆ ಹಾಗೂ ಜಗದ್ಗುರುಗಳ ದರ್ಶನ ಪಡೆಯುವ ಸದವಕಾಶ ಶಿವರಾತ್ರಿಯ ದಿನದಂದು ಸಂಪ್ರಾಪ್ತವಾಗುತ್ತದೆ.

ಪರ್ಯಟಕ ಭಕ್ತರ ತಂಗುದಾಣ

ಕಾಶಿಯಲ್ಲಿ ಆಯಾ ಮತದವರಿಗೆ ಸೇರಿದ ನೂರಾರು ಮಠ, ಮಂದಿರ, ಆಶ್ರಮ, ಅಖಾಡಾಗಳಿವೆ. ಆದರೆ ವೀರಶೈವ

ಯಾತ್ರಿಕರಿಗೂ ಅಲ್ಲದೆ ದಕ್ಷಿಣ ಭಾರತದಿಂದ ಬರುವ ಯಾವುದೇ ಹಿಂದೂ ಮತಬಾಂಧವರಿಗೆ ಜಂಗಮವಾಡಿ ಮಠದಲ್ಲಿ ಆಶ್ರಯದ ವ್ಯವಸ್ಥೆಯಿರುವುದು ವಿಶೇಷ ಸಂಗತಿ. ವೀರಶೈವರು ಕೇವಲ ಕರ್ನಾಟಕ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ, ಆಂಧ್ರ, ಮಧ್ಯಪ್ರದೇಶದ ನೇಫಾ ನಗರ, ಜಮಶೇಟಪುರ, ಜಬ್ಬಲಪುರ, ಶಕ್ತಿನಗರ, ಅಂಬಿಕಾಪುರಗಳಲ್ಲಿ, ಒರಿಸ್ಸಾದ ಗಂಜಾಂ ಜಿಲ್ಲೆ, ಪಶ್ಚಿಮ ಬಂಗಾಳ, ದೆಹಲಿ, ನೇಪಾಳ, ಕೇದಾರದ ಊಖೀಮಠ ಇವೇ ಮುಂತಾದ ಕಡೆಗಳಲ್ಲಿರುವುದು ಇಲ್ಲಿಗೆ ಅವರು ವಿಶ್ವನಾಥ ಜ್ಯೋತಿರ್ಲಿಂಗ ದರ್ಶನ ಹಾಗೂ ಮಠಕ್ಕೆ ಬರುತ್ತಿರುವುದರ ಮೇಲಿಂದ ಗೊತ್ತಾಗುವ ಸಂಗತಿ. ಇವರ ವಿಳಾಸಾದಿಗಳ ಮೇಲಿಂದ ಹೊರನಾಡ ವೀರಶೈವರ ಅಂಕೆ, ಸಂಖ್ಯೆ, ಉದ್ಯೋಗ, ಶಿಕ್ಷಣ ಮುಂತಾದ ವಿವರಗಳನ್ನು ಒಂದೆಡೆಗೆ ಸಂಗ್ರಹಿಸುವ ಯೋಜನೆಯನ್ನು ಮಠದ ಆಡಳಿತ ಸಿಬ್ಬಂದಿ ಇದೀಗ ಕೈಕೊಂಡಿದೆ. ಇವರಲ್ಲಿ ಹಲವಾರು ಭಕ್ತರು ವರ್ಷಂಪ್ರತಿ ಮಠಕ್ಕೆ ಕಾಣಿಕೆ ಸಲ್ಲಿಸುವವರಿದ್ದಾರೆ.. ಮಠದ ಗದ್ದುಗೆಯ ಪೂಜಾಪಾಠ ಸಾಧಕರಿಗೂ ಹಾಗೂ ಉಳಿದ ಭಕ್ತಾದಿಗಳಿಗೆ 'ಭಂಡಾರ' ಸೇವೆ ಸಲ್ಲಿಸುವ ವಾಡಿಕೆಯನ್ನಿರಿಸಿಕೊಂಡಿದ್ದಾರೆ. ವಿಶೇಷವಾಗಿ ತಮ್ಮ ಹಿರಿಯರ ಸ್ಮಾರಕವಾಗಿ ಶಿವಲಿಂಗಗಳನ್ನು ಸ್ಥಾಪಿಸುವ ಸಂಕಲ್ಪ ಹೊಂದಿರುತ್ತಾರೆ. ಹೀಗೆ ಸ್ಥಾಪನೆಗೊಂಡ ಸಹಸ್ರಾರು ಲಿಂಗಗಳನ್ನು ಮಠದಲ್ಲಿ ನೋಡಬಹುದು. ಯಾತ್ರಾರ್ಥಿಗಳಿಗೆ ಪ್ರತ್ಯೇಕ ಕೋಣೆಗಳು, ವಿಶೇಷ ಅತಿಥಿ ಗೃಹ, ಅಭಿಷೇಕಾದಿ ವ್ಯವಸ್ಥೆಯಿರುವುದರಿಂದ ಜಂಗಮವಾಡಿ ಮಠ ಕಾಶಿಯಲ್ಲಿನ ಪ್ರಮುಖ ತಂಗುದಾಣಗಳಲ್ಲಿ ಒಂದಾಗಿದೆ. ಸಾಮಾನ್ಯವಾಗಿ ಶಿವರಾತ್ರಿಯಿಂದ ಆರಂಭಿಸಿ ಜುಲೈ ತಿಂಗಳ ಅಂತ್ಯದವರೆಗೆ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಿರುತ್ತದೆ.

ಶ್ರೀಮಂತ ಭಕ್ತರ ಉದಾರ ದೇಣಿಗೆ - ಪೋಷಣೆ - ಪ್ರೋತ್ಸಾಹನೆ

ಹಿಂದೆ ರಾಜ ಮಹಾರಾಜರಿಂದ ದಾನ ದತ್ತಿಗಳನ್ನು ಹೊಂದಿದ ಪ್ರಸಿದ್ಧವೂ, ಪ್ರಾಚೀನವೂ ಆದ ಈ ಮಠಕ್ಕೆ ಇಂದು ಉದಾರಿಗಳೂ, ಸತ್ಪಾತ್ರದಾನಿಗಳೂ ಆದ ಶ್ರೀಮಂತ ಭಕ್ತರನೇಕರು ತಮ್ಮ ತನು - ಮನ - ಧನಗಳಿಂದ ಸಹಾಯ ಸಲ್ಲಿಸುತ್ತಿದ್ದಾರೆ. ಮಠದ ಭವ್ಯವಾದ ಮಹಾದ್ವಾರದ ನಿರ್ಮಾಣಕ್ಕೆ ವೀರಶೈವ ಪ್ರತಿಷ್ಠಿತ ಉದ್ದಿಮೆದಾರರಲ್ಲಿ ಒಬ್ಬರಾದ ಪುಣೆಯ ಶ್ರೀ ನೀಲಕಂಠರಾವ ಕಲ್ಯಾಣಿಯವರು ಅಪಾರ ಧನವನ್ನು ದೇಣಿಗೆಯಾಗಿ ಸಲ್ಲಿಸಿದ್ದಾರೆ. ಸಾಧಕರ ಅಧ್ಯಯನ ಕೋಣೆಗಳಿಗೆ ಇನ್ನೊಬ್ಬ ಭಕ್ತರು ನೆರವಾಗಿದ್ದಾರೆ. ಓರ್ವ ಭಕ್ತರು ಕೋಟಿ ಬಿಲ್ವಾರ್ಚನಾ ಪೂಜಾವಿಧಿಗೆ ಒಂದು ಲಕ್ಷ ಹಣವನ್ನು ಸಮರ್ಪಿಸಿದ್ದಾರೆ. ಭಕ್ತಾದಿಗಳಿಂದ ಬರುವ ಯಾವುದೇ ದೇಣಿಗೆಯನ್ನು ಆಡಂಬರವಿಲ್ಲದಂತೆ ಅದನ್ನು ಮಠದ ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿಳ್ಳೆಯ ನಿಯೋಜಿತ ಕಾರ್ಯಕ್ರಮಗಳಿಗೆ ಸದ್ವಿನಿಯೋಗಗೊಳಿಸುತ್ತಿರುವುದು ಪ್ರಶಂಸಾರ್ಹವಾಗಿದೆ.

ವರ್ತಮಾನ ಜಗದ್ಗುರುಗಳ ಹೊಂಬೆಳಗಿನಲ್ಲಿ ಜಂಗಮವಾಡಿ ಮಠ

ಇಂದು ಮಠದ ಪೀಠ ಪರಂಪರೆಯಲ್ಲಿ ೮೭ನೆಯ ಜಗದ್ಗುರುಗಳಾಗಿರುವ ಡಾ. ಚಂದ್ರಶೇಖರ ಶಿವಾಚಾರ್ಯರು ಲಿಂ. ವೀರಭದ್ರ ಜಗದ್ಗುರುಗಳ ತರುವಾಯದಲ್ಲಿ ಅದೇ ಶ್ರೇಣಿಯ ಪಾಂಡಿತ್ಯ ಮತ್ತು ಪ್ರತಿಭೆಗಳನ್ನು ಮೇಳವಿಸಿಕೊಂಡು ಮಠದ ಸಮಷ್ಟಿ ಅಭಿವೃದ್ಧಿಯ ಕಡೆಗೆ ಲಕ್ಷ್ಯವಹಿಸಿರುವುದು ಅಭಿಮಾನದ ಸಂಗತಿ. ಗಾಂಭೀರ್ಯ ಮತ್ತು ಸರಳತೆಯ ಸಮತೂಕದ ವ್ಯಕ್ತಿತ್ವ ಅವರದು. ಕರ್ನಾಟಕದ ಬಿಜಾಪುರ ಜಿಲ್ಲೆಯ ಗುಳೇದಗುಡ್ಡದ ಅಮರೇಶ್ವರ ಮಠದ ಸ್ನಾತಕರಾಗಿ, ಸಾಧಕರಾಗಿ ಹಿಂದಿನ ಜ.ವಿಶ್ವೇಶ್ವರ ಶಿವಾಚಾರ್ಯರ ಅಚ್ಚುಮೆಚ್ಚಿನವರಾಗಿ ಕಾಶಿಯಲ್ಲಿ ಸಂಸ್ಕೃತ ವ್ಯಾಸಂಗವನ್ನು ಪೂರ್ಣಗೊಳಿಸಿದರು. ಸಂಪೂರ್ಣಾನಂದ ವಿಶ್ವವಿದ್ಯಾಲಯದಿಂದ ಸಿದ್ಧಾಂತ ಶಿಖಾಮಣಿಯ ಮೇಲೆ ವಿದ್ವತ್ಪೂರ್ಣ ಮಹಾಪ್ರಬಂಧವನ್ನು ಬರೆದು ಡಾಕ್ಟರೇಟ್ ಉಪಾಧಿಪಡೆದರು. ವೇದಾಂತಾಚಾರ್ಯದಲ್ಲಿ ಪ್ರಥಮರಲ್ಲಿ ಪ್ರಥಮರಾಗಿ ಸ್ವರ್ಣ ಪದಕ ವಿಜೇತರಾದರು. ಕಲ್ಕತ್ತದ ಸಂಸ್ಕೃತ ಪರಿಷತ್ತಿನಿಂದ ವಿಶೇಷ ಗೌರವ ಪ್ರಶಸ್ತಿಯನ್ನು ಪಡೆದರು. ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರ ಪ್ರಯತ್ನದಿಂದ ಸಂಪೂರ್ಣಾನಂದ ವಿಶ್ವ ವಿದ್ಯಾಲಯದಲ್ಲಿ ಭಾರತೀಯ ವೇದ ವೇದಾಂತಗಳ ಅಧ್ಯಯನ ಶಾಖೆಯಲ್ಲಿ 'ಶಕ್ತಿವಿಶಿಷ್ಟಾದ್ವೈತ' ಅಧ್ಯಯನವನ್ನು ಜಾರಿಗೊಳಿಸಿದ ಮೇಲೆ, ಆ ವಿಷಯದ ಬೋಧಕರಾಗಿ ಸೇವೆ ಸಲ್ಲಿಸಿದರು. ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ ಭಾಷೆಗಳ ಮೇಲೆ ಸಮಾನ ಪ್ರಭುತ್ವವನ್ನು ಹೊಂದಿ ಅಧಿಕಾರವಾಣಿಯಿಂದ ವೀರಶೈವ ಸಿದ್ಧಾಂತವನ್ನು ಅನ್ಯ ಮತೀಯರೂ ಸಹ ತಲೆದೂಗುವಂತೆ ಪ್ರವಚನಗೈಯಬಲ್ಲ ಸಾಮರ್ಥ್ಯ ಇವರಿಗಿದೆ. ಜಗದ್ಗುರುಗಳಾದ ಬಳಿಕ ಇವರು ನಡೆಸಿರುವ ಗೋಷ್ಠಿಗಳಿಂದ ಕರ್ನಾಟಕ, ಮಹಾರಾಷ್ಟ್ರ, ಮಧ್ಯ ಪ್ರದೇಶಗಳಲ್ಲಿ ಅನೇಕ ವೀರಶೈವ ಸಂಘ ಸಂಸ್ಥೆಗಳು, ಮಠಗಳು ನಿರ್ಮಾಣಗೊಂಡಿರುವುದು ಅವರ ವ್ಯಕ್ತಿತ್ವದ ಪ್ರಭಾವದ ದ್ಯೋತಕವಾಗಿದೆ.'ಜನಮ್‌ಹೇ ಅಖೇರಚ' ಎಂಬ ಮರಾಠಿ ಗ್ರಂಥ ಪ್ರಕಟಗೊಂಡು ಅವರ ವಿವಿಧ

ಪ್ರಭಾವದಿಂದ ಅಸಂಖ್ಯ ಭಕ್ತರಿಗೆ ವೀರಶೈವ ಮಾರ್ಗ ರಹಸ್ಯ ಹಾಗೂ ಅದರ ಸುಲಭಾಚರಣೆಗಳು ಜೀವನಕ್ಕೆ ಎಷ್ಟು ನಿಕಟವೆಂಬುದು ಮನದಟ್ಟಾಗಿದೆ. ಕನ್ನಡದಲ್ಲಿರುವ 'ಪ್ರವಚನ ಪ್ರಭೆ' ಸಂಪುಟಗಳಲ್ಲಿ ವೀರಶೈವರ ಜೊತೆಗೆ ಅನ್ಯ ಮಾರ್ಗಗಳನ್ನು ಹೇಗೆ ಸಮನ್ವಯಗೊಳಿಸಬಹುದೆಂಬುದರ ವಿಚಾರಧಾರೆ ಪ್ರಕಟಗೊಂಡಿದೆ. ಪಂಚಪೀಠಾಚಾರ್ಯರಲ್ಲಿ ಕಾಶೀ ಪೀಠದ ಧಾರ್ಮಿಕ ನಿಲುವೆ ಅತ್ಯಂತ ವಿಶಾಲವೆಂಬುದು ಯಾವುದೇ ಸಮ್ಮೇಳನದಲ್ಲಿ ಪ್ರಖರವಾಗಿ ಗೊತ್ತಾಗುವದಕ್ಕೆ ಜಗದ್ಗುರುಗಳವರ ಸಮಷ್ಟಿ ಪ್ರಜ್ಞೆ ಮತ್ತು ಸಮಭಾವಗಳೇ ಕಾಣ. ಸಮಾಜ ಧರ್ಮದ ಅಭ್ಯುತ್ಥಾನಕ್ಕಾಗಿ ನಾವು ಗುರು ವಿರಕ್ತರೆಂಬ ಭೇದವಿಲ್ಲದೆ ಬೆರೆತುಬಾಳಬೇಕೆಂಬುದೇ ಇವರ ಆದರ್ಶ. ಕಾಶಿಯಂತಹ ಧಾರ್ಮಿಕ ಭಾವೈಕ್ಯವುಳ್ಳ ಸ್ಥಳ (Consumption City) ಭಾರತದಲ್ಲಿ ಇನ್ನೊಂದಿಲ್ಲ. ಇಲ್ಲಿ ನಮ್ಮ ಮತದ ವಿಶಾಲ ತತ್ತ್ವಗಳು, ವಿಶ್ವಧರ್ಮ ವಿಶ್ವ ಮಾನವತಾವಾದವನ್ನು ಪ್ರತಿಪಾದಿಸುವಂತಹ ವಿಶಾಲ ಚೌಕಟ್ಟನ್ನು ರೂಪಿಸಿಕೊಂಡಾಗ ಮಾತ್ರ ವೀರಶೈವದ ಅಗ್ಗಳಿಕೆ ಜಗತ್ತಿಗೆ ಗೊತ್ತಾಗಬಲ್ಲದು. ಇದನ್ನು ಕಾರ್ಯರೂಪಕ್ಕೆ ತರುವ ಹತ್ತೆಂಟು ವಿನೂತನ ಯೋಜನೆಗಳನ್ನು ವರ್ತಮಾನ ಜಗದ್ಗುರುಗಳು ಹಮ್ಮಿಕೊಂಡಿದ್ದಾರೆ.

ವೀರಶೈವ ಅಜ್ಞಾತ, ಅಲ್ಪಜ್ಞಾತವಾಗಿರುವ ಸಂಸ್ಕೃತ ಗ್ರಂಥಗಳ ಅತ್ಯಾಧುನಿಕ ರೀತಿಯ ಸಂಪಾದನೆ, ಪ್ರಕಟಣೆ ಯೋಜನೆ, ವಿದ್ವತ್ ಪತ್ರಿಕೆಯ ಪುನರಾರಂಭ, ವೀರಶೈವ ಅನುಸಂಧಾನ, ಪ್ರತಿಷ್ಠಾನ, ವಿಶ್ವಾರಾಧ್ಯ ನಿತ್ಯಾನ್ನ ದಾಸೋಹ, ಸಾಪ್ತಾಹಿಕ ಗೋಷ್ಠಿ, ಸಾಧಕರಲ್ಲಿ ಪ್ರವಚನ ಸ್ಪರ್ಧಾ ಶಿಬಿರ, ಸ್ವಚ್ಛತಾ ಅಭಿಯಾನ, ಸಮಗ್ರ ಜನಕಲ್ಯಾಣ ಪ್ರತಿಷ್ಠಾನ, ಹಿಂದಣ ಜಗದ್ಗುರುಗಳ ಚರಿತ್ರ ಸಂಗ್ರಹಣ, ಪ್ರಕಟಣೆ, ಕಟ್ಟಡಗಳ ಪುನರ್ ನವೀಕರಣ, ವೀರಶೈವ ವಿಶ್ವಕೋಶ ನಿರ್ಮಾಣ ಯೋಜನೆ, ಕಂಪ್ಯೂಟರೀಕರಣ ಪ್ರಕಾಶನ ಸಂಸ್ಥೆ, ಶಕ್ತಿ ವಿಶಿಷ್ಟಾದ್ವೈತವನ್ನು ವಿಶೇಷ ಅಧ್ಯಯನಗೈಯುವ ಸ್ನಾತಕ ಹಾಗೂ ಸಂಶೋಧಕರಿಗೆ ಸ್ಕಾಲರ್‌ಶಿಪ್, ಫೆಲೋಶಿಪ್ ಹಾಗೂ ಸ್ವರ್ಣಪದಕಗಳ ವಿತರಣೆ ಇವೇ ಮುಂತಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವಿಕಾಸ ಸಂಬಂಧಿಯಾದ ಯೋಜನೆಗಳನ್ನು ಈಗಾಗಲೇ ಅನುಷ್ಠಾನಕ್ಕೆ ತಂದಿರುವುದು ಅವರ ಚೈತನ್ಯಪೂರ್ಣ ವ್ಯಕ್ತಿತ್ವ ಮತ್ತು ಕೃತಿತ್ವಗಳ ದ್ಯೋತಕ.

ವಿಹಂಗಮ ನೋಟ

ವಿಶ್ವೇಶ್ವರ, ವಿಶ್ವದ ಮಹಾಚೇತನ, ವಿಶ್ವದ ಜ್ಯೋತಿ, ಜ್ಯೋತಿರ್ಲಿಂಗ. ಅದರಿಂದ ಸ್ಫುರಿಸಿದ ವಿಶ್ವಾರಾಧ್ಯರು ಆ ಜ್ಯೋತಿರ್ಲಿಂಗದ ಮುಖ. ಅದು ನಿಷ್ಕಲ ಪರಬ್ರಹ್ಮವಾದರೆ ಇದು ಸಕಲ - ಸಕಲನಿಷ್ಕಲ. ಒಂದು ಎರಡಾಗಿ, ಎರಡು ಒಂದರಲ್ಲಡಗುವದೇ ವೀರಶೈವ ದರ್ಶನ ರಹಸ್ಯ. ಇದು ಜ್ಯೋತಿ - ಜ್ಯೋತಿಗಳು ಒಂದಾದಂತೆ, ಉರಿ - ಕರ್ಪೂರ ಸಂಯೋಗದಂತೆ ಈ ತತ್ತ್ವವನ್ನು ಪ್ರತಿಷ್ಠಿತಗೊಳಿಸುವುದಕ್ಕಾಗಿಯೇ ಪೀಠ - ಮಠಗಳ ಪ್ರಾದುರ್ಭವವಾಗಿದೆ. ಜಂಗಮವಾಡಿಯ ಜ್ಞಾನಸಿಂಹಾಸನ ಪೀಠ ಈ ತತ್ತ್ವದ ಪ್ರತೀಕ. ಶತ ಶತಮಾನಗಳ ಇತಿಹಾಸ ಈ ಮಠಕ್ಕಿದೆ. ಹಿಂದೂ, ಮುಸ್ಲಿಮ್ ಆಳರಸರಿಂದ ರಾಜ ಮನ್ನಣೆಯನ್ನು ಹೊಂದಿ ವೀರಶೈವ ಧರ್ಮಪ್ರಸಾರ,ಧಾರ್ಮಿಕ ಭಾವೈಕ್ಯ, ಉನ್ನತ ಜ್ಞಾನಾರ್ಜನೆಯ ಜಾಗ್ರತ ಸ್ಥಾನವಾಗಿ ಕೀರ್ತಿವಡೆದಿದೆ. ಗಂಗೆ ಉತ್ತರದಲ್ಲಿ ಪ್ರವಹಿಸುತ್ತಾಳೆ. ಆದರೆ ಜ್ಞಾನಗಂಗೆಯ ಗಂಗೋತ್ರಿಯಾಗಿರುವ ಈ ಪೀಠ, ದಕ್ಷಿಣದ ಭಕ್ತಿಯನ್ನು ಉತ್ತರದ ಜ್ಞಾನವನ್ನು ಅಲ್ಲದೆ ಮಹಾ ಜಂಗಮತ್ವದಲ್ಲಿನ ಪರಮ ವೈರಾಗ್ಯವನ್ನು ಹೊಂದಿ ಈ ಭಕ್ತಿ - ಜ್ಞಾನ - ವಿರತಿಗಳ ತ್ರಿವೇಣೀ ಸಂಗಮದಂತೆ ಕಾಶಿಯಲ್ಲಿ ನೆಲೆಸಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ಶ್ರೀಶೈಲ ನಿಡುಮಾಮಿಡಿ ಮಹಾಸಂಸ್ಥಾನ ಪೀಠದ ಕೊಡುಗೆ

ಎಂ.ಜಿ. ನಾಗರಾಜ್

ಹಿನ್ನೆಲೆ

ವೀರಶೈವಧರ್ಮಪರಂಪರೆಯಲ್ಲಿ ಪೀಠಗಳ ಸಂಪ್ರದಾಯ ಪ್ರಾಚೀನವೆ. ಮಠಗಳಲ್ಲಿನ ಗುರುಪೀಠಗಳನ್ನು ಸಿಂಹಾಸನಗಳು ಎನ್ನುವುದುಂಟು. ವೀರಶೈವ ಧರ್ಮಸ್ಥಾಪನಾಚಾರ್ಯರ ಗುರುಪೀಠಗಳಿಗೆ ಸಿಂಹಾಸನ ಎಂದೇ ರೂಢಿ. ಸಾಂಪ್ರದಾಯಿಕವಾಗಿ ಐದು ಪೀಠಗಳನ್ನೂ ಹೇಳಿ ಪಂಚಸಿಂಹಾಸನವೆನ್ನುತ್ತಾರೆ. ಇವೆಲ್ಲ ಶಿವಾಚಾರ್ಯರ ಪೀಠದ ಪರಂಪರೆಯೇ ಆಗಿದೆ. ಇನ್ನೊಂದು ವಿಭಾಗವಾಗಿ ಶೂನ್ಯಸಿಂಹಾಸನವು, ವಿರಕ್ತ ವರ್ಗದ ಗುರುಪರಂಪರೆಗೆ ಸೇರಿದಂತೆ ಇದೆ. ಕೆಲವಡೆ ಇವುಗಳನ್ನು ನಿರಂಜನ ಪೀಠ ಎನ್ನುತ್ತಾರೆ. ಗುರುಸ್ಥಲದ ಪೀಠಗಳು ಶಿವಾಚಾರ್ಯ ಪರಂಪರೆಗೆ ಸೇರಿದವಾದರೆ, ವಿರಕ್ತವರ್ಗವು ಶೂನ್ಯಸಿಂಹಾಸನಕ್ಕೆ ಸೇರಿದಂತಹವು. ಇವೆರಡರ ಸಂಯುಕ್ತ ರೂಪವೂ ತಮಿಳುನಾಡಿನಲ್ಲಿ ಕಾಣಬರುತ್ತದೆ. ಕೊಡಗಿನಲ್ಲಿ ಇಂತಹ ಸಂಯುಕ್ತ ರೂಪದ ಒಂದು ಮಠವಿರುವಂತಿದೆ. ಪೀಠವೆನಿಸಿಕೊಳ್ಳುವ ಗುರುಮಠಗಳು ಅನೇಕ ಶಾಖಾ ಮಠಗಳನ್ನು ಹೊಂದಿರುವ ಕಾರಣ ಮಹಾಸಂಸ್ಥಾನ ಎಂದೂ ಕರೆಸಿಕೊಳ್ಳುವುದುಂಟು. ಈ ವರ್ಗದಲ್ಲಿ ವೀರ ಸಿಂಹಾಸನ, ಧರ್ಮ ಸಿಂಹಾಸನ, ವೈರಾಗ್ಯ ಸಿಂಹಾಸನ, ಸೂರ್ಯ ಸಿಂಹಾಸನ ಹಾಗೂ ಜ್ಞಾನ ಸಿಂಹಾಸನ ಎಂಬವುಗಳು ಭಾರತದ ವಿವಿಧ ಕ್ಷೇತ್ರಗಳಲ್ಲಿ ವೀರಶೈವ ಧರ್ಮದ ಗುರುಪೀಠಗಳಾಗಿ ಸ್ಥಾಪಿತವಾಗಿವೆ. ಈ ಪೀಠಗಳಿಗೆ ಗೋತ್ರ, ಸೂತ್ರ, ಪ್ರವರಗಳಿದ್ದು ಗೋತ್ರಾಚಾರ್ಯರ ವಿವರಗಳನ್ನು ಹೇಳಲಾಗಿದೆ.[1] ಈ ಗೋತ್ರಗಳು ಗುರುಸಂಬಂಧದವೇ ವಿನಾ ರಕ್ತಸಂಬಂಧಿಕ ಋಷಿಗೋತ್ರಗಳಂತಲ್ಲ. ಬದಲು ಇತಿಹಾಸದ ಎಳೆಯನ್ನು ಹೊಂದಿದಂತಹವು.

ಶೂನ್ಯ ಸಿಂಹಾಸನದ ಆದಿಯನ್ನು ಅಲ್ಲಮಪ್ರಭುವಿಗೆ ಆರೋಪಿಸಲಾಗಿದೆ. ಇದರ ಜೊತೆಗೆ ಗೋಸಲ ಪೀಠದ ವಿರಕ್ತ ಪರಂಪರೆಯನ್ನು ಅಲ್ಲಮಪ್ರಭುವಿನ ಹಿಂದಕ್ಕೂ ಒಯ್ಯುವುದುಂಟು. ಒಟ್ಟಾರೆ ಇವೆಲ್ಲವೂ ವೀರಶೈವರ ಅವಿಭಾಜ್ಯ ಅಂಗಗಳೇ ಆಗಿವೆ. ಇಲ್ಲಿ ಸ್ಥಿರ, ಚರದ ಕಲ್ಪನೆಯೂ ಉಂಟು. ಸಾಂಪ್ರದಾಯಿಕವಾಗಿ ಸ್ಥಿರಪಟ್ಟಾಧಿಕಾರಿ ಮತ್ತು ಚರಪಟ್ಟಾಧಿಕಾರಿ ಎಂಬಿಬ್ಬರು ಅಧಿಪತಿಗಳುಂಟು. ಸ್ಥಿರಪಟ್ಟಾಧಿಕಾರಿಗಳಿಗೆ ಮಾತ್ರ ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವ ಪರಿಪಾಠ ಉಂಟು. ಈ ಸ್ಥಿರ, ಚರ ಒಂದು ರೀತಿಯಲ್ಲಿ ಗುರುಸ್ಥಲ, ಜಂಗಮಸ್ಥಲಕ್ಕೆ ಸಂಬಂಧಗೊಂಡಂತಹವು. ಪೀಠಗಳ ದೃಷ್ಟಿಯಿಂದ, ಈ ವಿಂಗಡಣೆಯು ವಾಸ್ತವ ವಿಂಗಡನೆ ಹಾಗೂ ವೈಜ್ಞಾನಿಕ. ಒಂದು ಸ್ಥಿತಿ. ಒಂದು ಗತಿ. ಆದರೆ ಇಲ್ಲಿನ ಸ್ಥಿತಿ ಸ್ಥಾವರ ಅಲ್ಲ. ಗತಿಬಿಂಬದ ಗತಿಯನ್ನು ಸಹಜವಾಗಿ ನಿಯಂತ್ರಿಸುವ ಸ್ಥಿತಿಯ ಸ್ಥಿತಿಬಿಂಬ. ಅಂತಾಗಿ ಸ್ಥಿರಚರಗಳ ಅವಶ್ಯಕತೆ ಈ ಸಿಂಹಾಸನಗಳ ಕಲ್ಪನೆಯಲ್ಲಿ ಮೂಡಿಬಂದಿದೆ. ಚರವೇ ಜಂಗಮವೆನಿಸುತ್ತದೆ. ಪೀಠವೊಂದರ ಕೊಡುಗೆಯ ಬಗ್ಗೆ ಪ್ರಸ್ತಾಪಿಸ ಬೇಕಿರುವ ಕಾರಣ ಇವಕ್ಕಿರುವ ಸಾಂಪ್ರಾದಾಯಿಕ ಹಿನ್ನಲೆಯನ್ನು ತಿಳಿಯುವುದಗತ್ಯ.

ವೀರಶೈವದಲ್ಲಿ ಬರುವ 'ಗುರುಲಿಂಗಜಂಗಮ' ಎಂಬಲ್ಲಿ 'ಜಂಗಮ' ಶಬ್ದ ಪಾರಿಭಾಷಿಕ. ಶಿವನೇ ತಾನಾಗಿರುವ ಶಿವಯೋಗಿಗೆ 'ಜಂಗಮ'ನೆನ್ನುವುದು ವೈದಿಕ ನಿಘಂಟಿನ ಮಾತು. ಜನಹಿತಕ್ಕಾಗಿ ಸಂಚರಿಸುವ ಜಂಗಮನಿಗೆ ಶರಣೆನ್ನುವುದು ವೀರಾಗಮದ ಭಾವವಾಗಿದೆ. ತನ್ನನ್ನು ತಾನರಿತು ಅತ್ತಿತ್ತ ಸುಳಿಯದೆ ಒಂದು ನೆಲೆಯಲ್ಲಿರುವಾತ ಸ್ವಯ ಜಂಗಮ. ಜನರನ್ನು ಭಕ್ತಿಮಾರ್ಗದಲ್ಲಿ ಚಲಿಸಲು, ಸಂಚರಿಸುವವ ಚರಜಂಗಮ. ಈ ಎರಡೂ ಮೀರಿದವನೇ ಪರಜಂಗಮ. ವೇದಕಾಲದಲ್ಲಿ ವೀರಶೈವವು ವ್ರಾತ್ಯಪಾಶುಪತ ಎಂದು ಹೆಸರಾಗಿತ್ತು. 'ವೀರಶೈವ ಶಿರೋವ್ರತಿಗಳು, ಕರಪೀಠಾರ್ಚಕರು, ಪಾಣಿ ಪೀಠಾರ್ಚಕರು, ಮುನಿಗಳು' ಎಂಬ ಹೆಸರುಗಳಿಂದ ಆಗಿನ ಜಂಗಮರು ವರ್ಣಿತರಾಗಿದ್ದಾರೆ. ಈ ವ್ರಾತ್ಯ ಪಾಶುಪತರಲ್ಲಿ ಜಾತಿ ಭೇದವಿರಲಿಲ್ಲ. ಹಿಂದುಳಿದ ಆದಿ ಜನಾಂಗಗಳನ್ನು ಸಂಸ್ಕರಿಸಿ ತಮ್ಮಲ್ಲಿ ಸೇರಿಸಿಕೊಂಡು ಒಂದು ಗಣರಾಜ್ಯವನ್ನೆ ಸ್ಥಾಪಿಸಿದ್ದರು. ವ್ರಾತ್ಯ ರಾಜನ್ಯರಿಗೆ ವ್ರಾತ್ಯ ಪಾಶುಪತ ಜಂಗಮರೇ ರಾಜಗುರು ಸ್ಥಾನದಲ್ಲಿದ್ದರು. ಆರ್ಯಬ್ರಾಹ್ಮಣರಿಗೆ ವ್ರಾತ್ಯ ಪಾಶುಪತ ಜಂಗಮರಲ್ಲಿ ಶ್ರದ್ಧಾಭಕ್ತಿ ಗೌರವಗಳಿದ್ದವು. ಎಡಹಸ್ತ ಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುತ್ತಿದ್ದವರಿಗೆ ಕರಪೀಠಾಚಾರ್ಯರಿಗೆ ಇದು ಅನ್ವಯವಾದ ವಿಷಯವಾಗಿತ್ತು. ಅಂದರೆ ಇದು ಪಾಶುಪತ ಜಂಗಮನಿಗೆ

ಅನ್ವಯವಾದ ಸಂಗತಿಯಾಗಿತ್ತು.[೧-೪] ವೇದಪೂರ್ವ ಲಿಂಗೋಪಾಸಕರಲ್ಲಿ ಅನೇಕ ಮುನಿಗಳನ್ನು'ಕೇಶಿ'ಗಳೆನ್ನುತ್ತಿದ್ದರು. ಆ ಪರಂಪರೆಯ ಮುನಿಗಳೇ ವೇದಕಾಲದಲ್ಲಿ ಜಟಾಧಾರಿಗಳೆನಿಸಿದರು. ಆರ್ಯರಿಂದ ಭಕ್ತಿ ಗೌರವಗಳನ್ನು ಪಡೆದ ಈ ಮುನಿಗಳು ಲಿಂಗಯೋಗಿಗಳೆನಿಸಿ, ಪುರೋಹಿತರಿಗಿಂತ ಶ್ರೇಷ್ಠರೆನಿಸಿದ್ದರು. ಪುರಾತನ ಲಿಂಗವಂತರಲ್ಲಿ ಲಿಂಗಾರಾಧಾಕ ಹಾಗೂ ಮುನಿ ಅಥವಾ ಲಿಂಗಯೋಗಿ ಎಂಬ ಎರಡು ವಿಭಾಗಗಳಿದ್ದವು. ಲಿಂಗಭಕ್ತ, ಲಿಂಗಯೋಗಿಗಳಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಭಕ್ತ ಲಿಂಗಯೋಗಿಯಾಗುತ್ತಿದ್ದ. ಲಿಂಗಯೋಗಿ ಭಕ್ತನ ಕರ್ತವ್ಯಗಳನ್ನು ನೆರವೇರಿಸುತ್ತಿದ್ದ. ಭಕ್ತ ಹಾಗೂ ಮುನಿ(ಗುರು) ಎಂಬ ಸ್ವತಂತ್ರ ಜಾತಿಗಳಿರಲಿಲ್ಲ. ಲಿಂಗಭಕ್ತರಲ್ಲಿ ಅನೇಕ ಶಿವಯೋಗಿಗಳಿದ್ದು ಜಟಾಧಾರಿ ಎನಿಸಿ, ಯೋಗಬಲದಿಂದ ಶಿವಸಾಕ್ಷಾತ್ಕಾರ ಪಡೆದವರಿದ್ದರು. ಇವರು ಶಿವಾನುಭವವನ್ನು ವಿತರಿಸುವ ಸದಾ ಸಂಚಾರಿಗಳಾಗಿದ್ದರು. ಇವರನ್ನು ಮಹಾದೇವ, ಈಶಾನ, ರುದ್ರ, ಶಿವ ಎಂದೆಲ್ಲ ಆದರಿಸುತ್ತಿದ್ದರು. ಈ ವೇದಕಾಲೀನ ಚರಮೂರ್ತಿಗಳೇ ಸದ್ಯದ ಜಂಗಮರು[೫] ಎಂಬ ಅಭಿಪ್ರಾಯವು ಇದೆ. ವೀರಾಗಮದ ಮಾತುಗಳಲ್ಲಿ:

'ವೀರ ಮಾಹೇಶ್ವರಾಚಾರ ಏಕೋತ್ತರ ಶತಾನ್ವಿತಾಃ ಪ್ರಾಣಲಿಂಗಾಂಗ ಸಂಭೂತ ಭಸ್ಮಲೇಪನ ತತ್ಪರಾಃ ।
ತ್ರಿಷಷ್ಠಿ ಶೀಲ ಸಂಪನ್ನಾಃ ಧರ್ಮ ಜ್ಞಾನೈಕ ಸಾಧನಾಃ ಜಗತಾಂ ಗುರವಃ ಸರ್ವೇಭವಂತೀತಿ ಸಂಶಯಃ ॥

ಇದು ಜನತೆಯ ಗುರುಗಳಾಗಲು ಇರುವ ಅಂಗರಚನೆ. ವೀರಮಾಹೇಶ್ವರಾಚಾರ್ಯರು ಅಂದರೆ ವೀರಶೈವಾಚಾರವಾದ ಏಕೋತ್ತರ ಶತಸ್ಥಲ ಸಂಪನ್ನರು, ಇಷ್ಟ-ಪ್ರಾಣ-ಭಾವಲಿಂಗಾಂಗ ಸಂಭೂತ ಭಸ್ಮಲೇಪನ ತತ್ಪರರು, ೬೩ ಶೀಲ ಸಂಪನ್ನರು, ಧರ್ಮಜ್ಞಾನ, ಅನುಭವಗಳ ಸಾಧನಗಳನ್ನು ಉಳ್ಳವರು ಜಗತ್ತಿನ ಗುರುಗಳಾಗುವುದರಲ್ಲಿ ಸಂದೇಹವಿಲ್ಲ. ಇಂತಹುದರಿಂದಾಗಿ ಪುರಾತನರು ಆದ್ಯರೆನಿಸಿದರು, ವೇದ್ಯರೆನಿಸಿದರು. ಅಂತಹವರು ಇರುವ ಕಡೆ ಮಠ ನಿರ್ಮಾಣ, ಮಠಶೈವ ಸ್ಥಾಪನೆ (ಅದು ಮಹಾ ಸಂಸ್ಥಾನಗಳ ಕುರುಹು). ಇಂತಹ ಸನ್ನಿವೇಶದಿಂದ ಪ್ರೇರಿತಗೊಂಡು ಶಿಂಶುಮಾರನು ಮಾಡಿದ ಮಠಹ ವೀರಾಗಮದಲ್ಲಿ ಸೂಚಿತವಾಗಿದೆ :

''ಶಿಂಶುಮಾರ ಗಣಾಧೀಶಂ ಚಾರಿತ್ರೇಣ ಮನೋಹರಂ
ವೀರ ಮಾಹೇಶ್ವರಾಚಾರಂ ರೇಣುಕೇನ ಪ್ರಪೇರಿತಂ
ಪಾಂಚಾತಿಥ್ಯಂ ಚ ಗುರುಣಾ ಶ್ರಮ ಚ್ಛೇದಕರಂ ವರಂ
ಪುಣ್ಯ ವೃಕ್ಷೈಶ್ಚ ಸಂವೃದ್ಧಂ ವೀರಮಾಹೇಶ್ವರಾನ್ವಿತಂ
ತಚ್ಛೈವಂ ಮಠಮಿತ್ಯಾಹುಃ ಕೇಚಿತ್ಕಾಂತಾ ವರಾನನೇ''

ವೀರ ಮಾಹೇಶ್ವರಾಚಾರದಲ್ಲಿ ನಿರತನಾದ ಶಿಂಶುಮಾರನು ಶ್ರೀ ರೇಣಕ ಭಗವತ್ಪಾದರಿಂದ ಪ್ರೇರಣೆಗೊಂಡು ಮಠ ಕಟ್ಟಿದ. ಅತಿಥಿಗಳು ಯಾರೇ ಬರಲಿ ಆ ಮಠದಲ್ಲಿ ಆತಿಥ್ಯ, ದಾಸೋಹ ನಿರ್ಭೇದವಾಗಿರುತ್ತಿತ್ತು. ಗುರುವಿನ ಅನುಭಾವವು ನೆತ್ತಿಗೆ ಮನಸ್ಸಿಗೆ ತುತ್ತಿಡುತ್ತಿತ್ತು. ಮಠದ ಮುಂದೆ ಕೈತೋಟ ಹಾಗೂ ಉತ್ತಮ ವೃಕ್ಷಗಳ ಬೆಳಸು ಇರುತ್ತಿತ್ತು. ಅನುಷ್ಠಾನ ನಿರತರಾದ ವೀರಮಾಹೇಶ್ವರರು ಅಲ್ಲಿರುತ್ತಿದ್ದರು. ಈ ಕಾರಣಗಳಿಂದ, ಶಿಂಶುಮಾರನಲ್ಲದೆ ಡಿಂಡಿಮಾರ, ಶತಾನಂದರೂ ಕಟ್ಟಿದ ಮಠಗಳಲ್ಲಿ, ಗುರು ಹಾಗೂ ಚರರು ಇರುತ್ತಿದ್ದರು.[೬] ವೀರಶೈವ ಮಠಗಳ ಉಗಮದ ವಿಚಾರವಾಗಿ ಸಾಂಪ್ರದಾಯಿಕವಾಗಿ ಐದು ಮಠ ಸ್ಥಾಪಿಸಿದವರು ಐವರು ಆಚಾರ್ಯರೆಂಬುದನ್ನು, ವೀರಾಗಮ ಲಭ್ಯವಾಗಿರುವ ಕಾರಣ ಸಾಂಪ್ರದಾಯಿಕ ಎಂದು ತಳ್ಳಿಹಾಕುವಂತಿಲ್ಲ. ವೀರಶೈವ ಮಠಗಳ ಉಗಮದ ಜೊತೆಗೆ ವೀರಶೈವರ ಉಗಮಕ್ಕೂ ಸಂಬಂಧವಿದೆ. ಈ ಆಚಾರ್ಯರ ಕಥೆಗಳು ಪೌರಾಣಿಕ ಕಥೆಗಳಂತೆ ಕಂಡರೂ ಇವರು ಐತಿಹಾಸಿಕ ಪುರುಷರಾಗಿರಬೇಕೆಂಬುದನ್ನು ಊಹಿಸಲು ಅವಕಾಶವಿದೆ.[೭] ಈ ಹಿನ್ನೆಲೆಗಳು ಸಾಂಪ್ರದಾಯಿಕವೆಂದೇ ವಾದಿಸಿದರೂ, ವೀರಶೈವ ಮಠ ಸಿಂಹಾಸನಗಳ ಕಲ್ಪನೆಗೆ, ಅವುಗಳ ಸ್ವರೂಪ, ಕಾರ್ಯ ನಿರ್ವಹಣೆ, ಹಾಗೂ ಉದ್ದೇಶಗಳಿಗೆ ವಿಕಾಸದ ಹಾದಿಯಲ್ಲಿ ಹೇಗೆ ಪೂರಕವಾದವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದನ್ನು ಮರೆಯಬಾರದು. ಇಂತಹ ತಲೆಮಾರುಗಳ ಸಂಗತಿಗಳನ್ನು ಶ್ರೀ ಶೈಲ ನಿಡುಮಾಮಿಡಿ ಪೀಠವು ಹೊಂದಿರುವ ಕಾರಣ ಆ ಬಗೆಗೆ ವಿವೇಚಿಸಬೇಕಾದ ಅಗತ್ಯವಿದೆ. ಆ ಪೀಠದ ಇತಿಹಾಸವು ಕೊಡುಗೆಗಳ ಜೊತೆಗೇ ಹೊಂದಿಕೊಂಡು ಬರುವ ಕಾರಣ ಅದರ ಸಂಕ್ಷಿಪ್ತ ವಿವರವನ್ನು ಗಮನಿಸಬೇಕು.

ಪ್ರಾಚೀನ ಸ್ತರಗಳು

ಯುಗಮಾನಗಳ ನಂಬಿಕೆಯಲ್ಲಿ ಶ್ರೀಶೈಲ ಪೀಠದ ಆದಿಗುರುಗಳಾದ ಜ॥ ಶ್ರೀ ಶೈಲ ಪಂಡಿತಾರಾಧ್ಯ ಶಿವಾಚಾರ್ಯರು, ಚತುರಕ್ಷರ ಶಿವಾಚಾರ್ಯ, ಚತುರ್ವಕ್ತ್ರ ಶಿವಾಚಾರ್ಯ, ಧೇನುಕರ್ಣ (ಗೋಕರ್ಣ) ಶಿವಾಚಾರ್ಯರೆನಿಸಿ ಕೊನೆಗೆ ಶ್ರೀಶೈಲದಲ್ಲಿ ಅವತರಿಸಿ ಶ್ರೀಶೈಲ ಪರ್ವತದಲ್ಲಿ 'ಸೂರ್ಯ ಸಿಂಹಾಸನ' ಎಂಬ ಜಗದ್ಗುರು ಪೀಠವನ್ನು ಸ್ಥಾಪಿಸಿ, ವೀರಶೈವ ಮತಸ್ಥಾಪನಾ

ಚಾರ್ಯರೆನಿಸಿದರು[೫] ಎನ್ನಲಾಗಿದೆ. ಈ ಮೂಲ ಪೀಠಾಚಾರ್ಯರ ಅಸ್ತಿತ್ವವು ಮೊದಲಿಗೆ ಸುಪ್ರಭೇದಾಗಮ ಸ್ವಯಂಭುವಾಗಮ ಮತ್ತು ವೀರಾಗಮಗಳಲ್ಲಿ ಉಪಲಬ್ಧವಾಗಿದೆ.[೬] ಕ್ರಿ. ಶ. ೪೦೫ರ ಚೀನಾಯಾತ್ರಿಕ ಫಾಹಿಯಾನನು ಶ್ರೀ ಶೈಲದ ಮೇಲೆ 'ಪಾರಾವತಮಠ' (ಶೈವಮಠ)ವಿದ್ದ ಬಗ್ಗೆ ಹೇಳಿದ್ದಾನೆ. ಇವನಲ್ಲದೆ ಕ್ರಿ.ಶ.೬೭೫ರ ಇತ್‌ಸಿಂಗ್ ಕೂಡ ಶೈವಮಠವಿದ್ದ ಬಗ್ಗೆ ಹೇಳಿದ್ದಾನೆ. ಶ್ರೀ ಪರ್ವತವು ಬೌದ್ಧರ ವಜ್ರಯಾನದ (ಮಹಾಯಾನದ ತಾಂತ್ರಿಕ ಕವಲು) ಅವತಾರ ಕ್ಷೇತ್ರವಾಗಿತ್ತು.[೭] ಅಂತಾಗಿ ಅವನು ಅಲ್ಲಿಗೆ ಬಂದಿರುವುದು ಸಹಜವೆನಿಸುತ್ತದೆ. ಆದರೆ ಈ ಮಠ ಬೌದ್ಧರದಾಗಿತ್ತು ಎನ್ನುವಂತಿಲ್ಲ. ಪ್ರತ್ಯೇಕ ಧರ್ಮಪೀಠವಾಗಿತ್ತು. ಕ್ರಿ. ಶ. ೧೦೪೯-೫೦ರ ಒಂದನೇ ರಾಜಾಧಿರಾಜ ಚೋಳನ ತಮಿಳುನಾಡಿನಲ್ಲಿ ಮಹಾದೇವರ ದೇಗುಲ ಶಾಸನದಲ್ಲಿ ಅದಕ್ಕೆ ಹೊಂದಿಕೊಂಡಿದ್ದ ಮಠವನ್ನು'ಪರ್ವತ್ತಿರ ಮಾಣಿಕ ಮಡಂ' ಎಂದು ಕರೆದಿದೆ.[೮] ಇದು ಶ್ರೀ ಶೈಲ ಪೀಠದ ತಮಿಳುನಾಡಿನ ೧೧ನೆಯ ಶತಮಾನದ ಶಾಖಾಮಠವನ್ನು ಸೂಚಿಸಿದಂತಾಗುತ್ತದೆ. ಶ್ರೀ ಶೈಲ ಪೀಠಕ್ಕೆ 'ಪರ್ವತ ಪೀಠ' ಎಂದೂ ಹೆಸರಿದೆ. 'ಮಾಣಿಕ' ಎಂಬ ಶಬ್ದವು, ಪೀಠದ ಗೋತ್ರ ಪ್ರವರದಲ್ಲಿ ಕಾಣಬರುವ 'ಮುಕ್ತಗುಚ್ಛಸೂತ್ರ' ಎಂಬುದಕ್ಕೆ ತಾಳೆಯಾಗುತ್ತದೆ. ಈ ಎರಡೂ ಅನ್ವಯ ತಮಿಳುನಾಡಿನ ಆ ಶಾಸನನೋಲ್ಲೇಖದಲ್ಲಿ ಅಡಗಿರುವಂತಿದೆ. ಕ್ರಿ.ಶ.೮ನೆಯ ಶತಮಾನದ ಕರ್ನೂಲು ಜಿಲ್ಲೆ ಪಾಣಂ ೧೬೬ನೆಯ ಶಾಸನದಲ್ಲಿ,

'..... ಶ್ರೀ ಗಿರಿ ಶೃಂಗವಾಸೀ ಶ್ರೀ ಪಂಡಿತಾರ್ಯ' ಎಂದಿದೆ.

ಹಳ್ಳಿಯ ಹಾಡುಗಳ ಉಗ್ಗಡಿಕೆಯಲ್ಲಿ 'ಶ್ರೀಗಿರಿಯ ಮಲ್ಲಯ್ಯ ಉಘೇ ಉಘೇ
ಸೂರ್ಯ ಪೀಠದ ಪಂಡಿತಯ್ಯ ಉಘೇ ಉಘೇ' ಎಂದಿದೆ.

ಸುಪ್ರಭೇದಾಗಮದಲ್ಲಿ ಪಂಡಿತಾರಾಧ್ಯರಿಗೆ ವೃಷಭಗೋತ್ರವು ಉಕ್ತವಾಗಿರುವುದು ಹೀಗೆ :

'ವೃಷಭಗೋತ್ರಾದಿನಾಥಶ್ಚ ಸಿಂಹಾಸನ ಪತಿಶ್ಚಯಃ| ಪಂಡಿತಾರಾಧ್ಯ ಸನ್ನಾಮಾ ಜಗದ್ಗುರು ತಮಶ್ಚಸಃ |'

ಶ್ರೀಶೈಲದ ಮೇಲೆ ಸೂರ್ಯತಾಟಿ, ಸೂರ್ಯಕುಂಡ, ಸೂರ್ಯೇಶ್ವರ ಎಂಬುವುಗಳಿರುವುದು, ತೆಲುಗು ಕೃತಿ 'ಪರ್ವತ ಪುರಾಣಮು'ನಲ್ಲಿ ಉಕ್ತವಾಗಿದೆ. ಸೂರ್ಯ ವಂಶದ ಅರಸರ ಅಸ್ತಿತ್ವವೂ ಇಲ್ಲಿ ಸಂಬಂಧಗೊಂಡಿದೆ. ಮಾಘ ಶುದ್ಧ ಸಪ್ತಮಿ ಉತ್ತರಾಯಣದ ಶುಭಸಮಯದಲ್ಲಿ ಸೂರ್ಯನ ರಥಾರೋಹಣ. ಅದುವೆ ರಥಸಪ್ತಮಿ. ಪಂಡಿತಾರಾಧ್ಯರು ಹಾಗೂ ಮುಂದಿನ ಜಗದ್ಗುರುಗಳು ಈ ಸನ್ನಿಹಿತದಲ್ಲಿಯೇ ಸಿಂಹಾಸನಾರೂಢರಾದರು. ಈ ಕಾರಣಗಳಿಂದ ಪೀಠಕ್ಕೆ 'ಸೂರ್ಯ ಸಿಂಹಾಸನ' ಎಂಬ ಬಿರುದು ನಿಂತಿದೆ. ಪೀಠದ ಸಂಬಂಧದ ವೀರಶೈವರು ಮತ್ತು ಶ್ರೇಷ್ಠಪಣವೆಂಬ ೧೮ ಜಾತಿಗಳಲ್ಲಿ ಈ 'ಸೂರ್ಯಸಿಂಹಾಸನ'ದ ಉಗ್ಗಡಿಕೆ ನಿತ್ಯ ನೈಮಿಕ ಕ್ರಿಯೆಯಲ್ಲಿ ಇದೆ.[೯] 'ಪಂಡಿತ' ಎಂದರೆ 'ಜ್ಞಾನಿ' ಎಂಬ ಅರ್ಥವಿದೆ. 'ಸೂರಿ' ಎಂಬ ಪರ್ಯಾಯ ಸಮಾನಾರ್ಥಕ ಪದವೂ ಅದಕ್ಕಿದೆ. 'ಸೂರಿ' ಶಬ್ದದಿಂದ 'ಸೂರ್ಯ' ಎಂಬ ರೂಪವೂ ತದ್ಧಿತಾನ್ವಯವಾಗಿ ಸಿದ್ಧಿಸುತ್ತದೆ. ಈ ಕಾರಣದಿಂದ ಪಂಡಿತಾರಾಧ್ಯರು ಏರಿದ 'ಸೂರ್ಯಸಿಂಹಾಸನ' ಎಂದು ಹೆಸರು ಬಂದಿದೆ[೧೦], ಎಂಬ ಅಭಿಪ್ರಾಯವೂ ಇದೆ. ಇದಲ್ಲದೆ ಶ್ರೀಶೈಲದ ಮೇಲಿದ್ದ ಸೂರ್ಯಸಂಕೇತಗಳನ್ನು ಆದಿ ಪೀಠಾಚಾರ್ಯರ ಹೆಸರಿನ ಆದಿಭಾಗದ ಅರ್ಥಗಳನ್ನು, ಸೂರ್ಯನ ಪಲನ ಚರ್ಯೆಗೂ ಸಮೀಕರಿಸಿಕೊಂಡು, ಪೀಠದ ಜಗದ್ಗುರುಗಳು ಸಿಂಹಾಸನಾರೋಹಣ ಪದ್ಧತಿಯನ್ನು ಆರಂಭದಿಂದಲೇ ರಥಸಪ್ತಮಿಯ ದಿನಕ್ಕೆ ಹೊಂದಿಸಿಕೊಂಡಿರುವುದು ಈ ಮೇಲಿನ ಅಂಶಗಳಿಂದ ತಿಳಿಯುತ್ತದೆ. ಆದಕ್ಕೆ ಪರಂಪರೆಯನ್ನು ಬೆಳೆಸಲಾಗಿದೆ. ಪೀಠವು ಸ್ಥಗಿತವಾಗದೆ, ಚಲಿಸುವ ತಿರುವುಗಳನ್ನು ಪಡೆಯುವ ಸಂಕೇತವಾಗಲಿ ಎಂಬ'ಸೂರ್ಯ ಸಿಂಹಾಸನ' ಮೌಲ್ಯವನ್ನು ಬೆಳಸಿದಂತಿದೆ.

ಈ ಪಂಡಿತಾಚಾರ್ಯರಿಗೆ ಶ್ವೇತಾಚಾರ್ಯ ಎಂಬ ಹೆಸರು ಅವರು ಮಾಡಿದ ಧರ್ಮೋಸಾಮಾಜಿಕ ಕಾರ್ಯದಿಂದಾಗಿ ಬಂದಿರುವಂತಿದೆ. ಇವರ ಕಾಲಕ್ಕೆ ಮುಖಕ್ಕೆ ಮಸಿ ಬಳಿದು ಕೊಂಡು ದೂಷಿತಾಚಾರದಲ್ಲಿ (ವಾಮಾಚಾರ) ಕಾಳಾಮುಖರಿದ್ದರು. ತಮ್ಮ ಶುಭ್ರಾಚಾರ ಹಾಗೂ ಪಾಂಡಿತ್ಯದ ಪ್ರಭಾವದಿಂದ ಅವರನ್ನು ವೀರಶೈವಾಚಾರಕ್ಕೆ ಎಳೆಸಿ, ಶ್ವೇತಾಚಾರ್ಯರೆನಿಸಿದರಂತೆ ಪಂಡಿತಾಚಾರ್ಯರು.[೧೧] ಅಂದರೆ ಆಂಧ್ರ ವಿಭಾಗದಲ್ಲಿ ವಾಮಾಚಾರದ ಹಾವಳಿಯನ್ನು ನಿಯಂತ್ರಿಸಿದರೆಂಬ ಸೂಚನೆ ಇಲ್ಲಿ ದೊರೆಯುತ್ತದೆ. ಶ್ರೀ ಶೈಲದಲ್ಲಿ ವಿವಿಧ ಧರ್ಮಗಳ ಮಠಗಳು[೧೨] ಬೌದ್ಧ, ಶೈವ, ವೀರಶೈವ, ಕಾಳಾಮುಖ ಇತ್ಯಾದಿ ಇದ್ದು ಕಾಳಾಮುಖರ ಹಾವಳಿ ಹೆಚ್ಚಿದ್ದಿರಬೇಕು. ಇವರು ಪಂಚಾಗ್ನಿ ಸಾಧನೆಯಿಂದ ಸೂರ್ಯನನ್ನು ಕುರಿತು ತಪಸ್ಸು ಮಾಡುತ್ತಿದ್ದವರು. ಸೂರ್ಯಪ್ರತ್ಯಕ್ಷಕ್ಕೆ ಕಾತರಿಸಿದವರು. ಇವರಲ್ಲಿ ಅವಧೂತ ಶಿಷ್ಯ ವೃಂದವಿತ್ತು. (ಹಾಗೆ ನೋಡಿದರೆ ನಾಥ ಸಂಪ್ರದಾಯವನ್ನೇ ಅವಧೂತ ಮತ, ಅವಧೂತ ಸಂಪ್ರದಾಯ ಎನ್ನುವುದುಂಟು. ಕಾಳಾಮುಖರಲ್ಲಿಯೂ 'ಅವಧೂತದೇವ', 'ಈಯ ಧೂತದೇವ' ಎಂಬುವರಿಗೆ ಅವಧೂತ ಶಿಷ್ಯವೃಂದವಿತ್ತು) ಪರ್ವತಾವಳಿಯ ಬೆಳ್ಳಿಯ ಸಂತಾನವೆನಿಸಿಯೂ ಇದ್ದರು. ಇವರಿಗೆ ಗೋತ್ರಪ್ರವರ ಸೂತ್ರವಿಲ್ಲ. ಇವರ ಸೂರ್ಯೋಪಾಸನೆ ಕುರಿತು ಹೊಂಬುಚ ಶಾಸನವೂ ಹೇಳುತ್ತದೆ. ಆದರೆ ಇವರಲ್ಲಿ

'ಕಾಳಾಮುಖ ಮಸಿ' ಎಂಬ ಹೆಸರಿನವರಿದ್ದರು; ಸೋಮದೇವನ ಯಶಸ್ತಿಲಕವು ಹೇಳುವಂತೆ, 'ಅಸಿತವಕ್ತ್ರ(ಕಪ್ಪು ಮುಖದವರು)ರು, ಶ್ರೀಕಂಠ ಶಿವಾಚಾರ್ಯರ ಹೇಳಿಕೆ ರೀತ್ಯಾ 'ಅತಿಮಾರ್ಗಿ'ಗಳು ಆಗಿದ್ದರು. ಇಂತೆಲ್ಲ ಇವರ ಕುರಿತು ಉಕ್ತಿಗಳು ಇರುವಲ್ಲಿ[೧೫] ಘೋರಕರ್ಮಿಗಳೂ ಆಗಿದ್ದರು ಎಂಬ ಅಭಿಪ್ರಾಯವೂ ಇದೆ. ಈ ಸನ್ನಿವೇಶಕ್ಕೆ ಕ್ರಿ.ಶ. ೮-೯ನೇ ಶತಮಾನದ ಬೌದ್ಧಸಿದ್ಧರ ಸಂಗತಿಯನ್ನು ಹೋಲಿಸಿದರೆ ಪಂಡಿತಾರಾಧ್ಯರ ಮಣಿಹಕ್ಕೆ ತಾರ್ಕಣೆ ಒದಗುವಂತಿದೆ.

ಶ್ರೀ ಪರ್ವತ ಬೌದ್ಧರ 'ವಜ್ರಯಾನ'ದ ಅವತಾರ ಕ್ಷೇತ್ರವಾಗಿದ್ದು ಅಲ್ಲಿ ಗುಹ್ಯ ಸಿದ್ಧಿಯನ್ನು ಪಡೆವ ಸಲುವಾಗಿ 'ಗುಹ್ಯಸಮಾಜ' ಎಂಬ ಬೌದ್ಧಕೃತಿಯೂ ನಿರ್ಮಾಣವಾಗಿತ್ತು. ವಜ್ರಯಾನದಲ್ಲಿ ಸ್ತ್ರೀ-ಪುರುಷತತ್ವಗಳ ಮೈಥುನ ಅಥವಾ ಕಾಮಕಲೆಗೆ ಪ್ರಾಶಸ್ತ್ಯ ಬಂದಿತು. ತಾಂತ್ರಿಕ ಗ್ರಂಥವಾದ 'ಗುಹ್ಯಸಮಾಜ' ದಲ್ಲಿ ಧ್ಯಾನಿಬುದ್ಧರ ಕಲ್ಪನೆ ಇದೆ. ಅವರಲ್ಲಿ 'ಮೋಹ' ಕುಲದ ನಾಯಕ ವೈರೋಚನ, ಸೌರಸಂಬಂಧಿಯಾದ ದೇವತೆ. ಮುಂಜಾನೆ ಪೂಜೆಗೊಳ್ಳುವ ದೇವತೆ.[೧೬] ಬೌದ್ಧಮತಕ್ಕೆ ಶೈವಧರ್ಮದೀಕ್ಷೆ ಕೊಟ್ಟು ವಾಮಾಚಾರದ ಕೆಡುಕಿನಿಂದ ಜನರನ್ನು ಉದ್ಧರಿಸಿದವನು ನಾಥಪಂಥದ ಮಹಾಸಿದ್ಧ ಗೋರಕ್ಷನಾಥ ಎನ್ನಲಾಗಿದೆ. ಇವನು ಹಾಗೂ ಕೃಷ್ಣಪಾದ (ಬೌದ್ಧಸಿದ್ಧ!)ನು ಕರ್ನಾಟಕದ ಮೂಲದವರಾಗಿದ್ದರು ಎಂದೂ ಹೇಳಲಾಗಿದೆ.[೧೭] ವಿದ್ವಾಂಸರ ರೀತ್ಯಾ ಕ್ರಿ.ಶ. ೬ ರಿಂದ ೧೧ನೇ ಶತಮಾನದವರೆಗೆ ಮೆರೆದ ಚತುರಶೀತಿ (೮೪) ಬೌದ್ಧಸಿದ್ಧರು ವಜ್ರಯಾನದ ಗುಹ್ಯಸಮಾಜ ತಂತ್ರವನ್ನು ಬಳಕೆ ಮಾಡಿದವರಾಗಿ ಶ್ರೀಪರ್ವತದಲ್ಲಿ ಇದ್ದವರೆ. ಗೋರಕ್ಷನೂ ವಾಮಾಚಾರದ ಸಿದ್ಧನೆಂದೂ ಅಭಿಪ್ರಾಯವಿದೆ. ಈ ಗೋರಕ್ಷನಾಥನ ಹೆಸರು ಮುಖ್ಯವಾಗಿ ಬೌದ್ಧಸಿದ್ಧರ ಪಟ್ಟಿಯಲ್ಲಿದೆ. ಈ ಬೌದ್ಧಸಿದ್ಧರಲ್ಲಿ 'ಕಣಪಾ' ಎಂಬುವನು (ಕೃಷ್ಣಪಾದ!) ಕನ್ನಡ ಮೂಲದವನಂತೆ. ಅಂದರೆ ಬೌದ್ಧಸಿದ್ಧರಲ್ಲಿ ಕನ್ನಡಿಗರೂ ಇದ್ದಿರಬೇಕೆಂದಾಗುತ್ತದೆ. ಈ ಬೌದ್ಧಸಿದ್ಧರು ಶೈವ ಅವಧೂತರಾಗಿ ಮುಂದೆ ವೀರಶೈವದಲ್ಲಿ ಐಕ್ಯವಾದರು ಎಂದೂ ಹೇಳಲಾಗಿದೆ.[೧೮] ಅಂದರೆ ಗೋರಕ್ಷನಾಥನಿಗೆ ಮುನ್ನವೂ ಇದ್ದ ಸೌರ ಸಂಬಂಧದ ಮೋಹಕುಲದ ಮೈಥುನಾಚಾರಗಳನ್ನು ಪಾಲಿಸುತ್ತ ಬಂದು ಬಹುಶಃ ಬೌದ್ಧಸಿದ್ಧರ ತಂಡವಾಗಿದ್ದವರು ಶೈವ ಅವಧೂತರಾಗಿ ಅಸಿತವಕ್ತ್ರರಾಗಿ ಕಾಳಾಮುಖರೆನಿಸಿದ್ದವರಿದ್ದರು. ಅವರನ್ನು ದೂಷಿತಾಚಾರಗಳಿಂದ ಬಿಡಿಸಿ ವೀರಶೈವಕ್ಕೆ ತಮ್ಮ ಕಾಲದಲ್ಲಿ ಆಕರ್ಷಿಸಿ ಶ್ವೇತ ಮುಖಿಗಳನ್ನಾಗಿ ಪಂಡಿತಾಚಾರ್ಯರು ಮಾಡಿದ ಕಾರಣ 'ಶ್ವೇತಾಚಾರ್ಯ'ರೆನಿಸಿರಬೇಕು. ಹಾಗೂ ಸೂರ್ಯೋಪಾಸಕರೂ ಆಗಿದ್ದ ಅವರನ್ನು ಪಾಂಡಿತ್ಯದಿಂದ ಗೆಲಿದ ಕಾರಣ 'ಸೂರ್ಯ ಸಿಂಹಾಸನ' ಎಂಬ ಬಿರುದು ಬರಲೂ ಇನ್ನೊಂದು ಕಾರಣವಾಗಿರಬೇಕೆನಿಸುತ್ತದೆ. ಅಭಿನವಗುಪ್ತನಿಗೆ ಸಾಕಷ್ಟು ಹಿಂದಿನವನಾಗಿ, ಅವನ ಸ್ತುತ್ಯನಾದ 'ಮಚ್ಛಂದವಿಭು' (ಮತ್ಸ್ಯೇಂದ್ರನಾಥ)ವಿನ ನೇರ ಶಿಷ್ಯ ಗೋರಖ (ಗೋರಕ್ಷ)ನಾಥ ಕ್ರಿ.ಶ. ೯ನೆಯ ಶತಮಾನದ ಸುಮಾರಿನಲ್ಲಿದ್ದವನು. ಆದರೆ ಹರಿಹರನ ರೇವಣಸಿದ್ಧ ರಗಳೆ ರೀತ್ಯಾ ಹಾಗೂ ಪ್ರಭುದೇವರ ಜೀವನದಲ್ಲಿ ಕಂಡುಬರುವ ಗೋರಕ್ಷನೊಬ್ಬನಿದ್ದಾನೆ. ಅವನು ಕಠಾರಿ ಕತೆಯ ಸಂದರ್ಭದಿಂದ ರೇವಣಸಿದ್ಧನಿಂದ ಗರ್ವಭಂಗಿತನಾದ, ಪ್ರಭುದೇವರನ್ನು ವಜ್ರಾಯುಧದಿಂದ ಹೊಡೆದಾಗ ಬಯಲನ್ನು ಹೊಡೆದಂತಾಗಿ ತನ್ನ ಮಿತಿಯನ್ನು ಅರಿತವನಾದ 'ಗೋರಕ್ಷ'ನಾಗಿದ್ದಾನೆ. ಅವನು ಪ್ರಭುವಿನಿಂದ ವೀರಶೈವ ದೀಕ್ಷೆ ಪಡೆದನೆನ್ನಲಾಗಿದೆ. ಅವನು ಗೋರಕ್ಷಪಾಲಕ ಮಹಾಪ್ರಸಿದ್ಧ (ಮಹಾಪ್ರಭುಸಿದ್ಧ) 'ಸೋಮನಾಥಲಿಂಗ' ಎಂಬ ಅಂಕಿತದಲ್ಲಿ ಕನ್ನಡ ವಚನಗಳನ್ನು ಬರೆದಿದ್ದಾನೆ. ಈ ಕತೆಗಳು ಹಾಗೂ ವಚನ ರಚನೆಯ ಕಾರಣ ಬಸವ ಸಮಕಾಲೀನ. ಇವನಕಾಲ ಕ್ರಿ.ಶ. ೧೧೬೦ ಎಂದು ಕವಿಚರಿತ್ರೆಕಾರರ ಊಹೆಯಾಗಿದೆ.[೧೯] ಆದರೆ ಅಭಿನವಗುಪ್ತ ಸ್ತುತನಾದ ಮತ್ಸ್ಯೇಂದ್ರನಾಥ ಹಾಗೂ ಅವನ ಶಿಷ್ಯ ಗೋರಕ್ಷನಾಥ ಈರ್ವರೂ ರೇವಣಸಿದ್ಧರ ಸಮಕಾಲೀನರಾಗದೆ, ಅವರಿಗಿಂತ ಪೂರ್ವವರ್ತಿಗಳಾಗುತ್ತಾರೆ. ಅಂತಾಗಿ ಪ್ರಸ್ತುತ ವಚನಕಾರ ಗೋರಕ್ಷನಾಥ ಪಂಥದ ಅನುಯಾಯಿ ಪರವರ್ತೀಸಿದ್ಧನಾಗಿರಬೇಕು. ಇವನು ಶಂಕರಾಚಾರ್ಯರ ಪೀಠದಲ್ಲಿ ಕೂಡುವವರೆಲ್ಲ ಶಂಕರಾಚಾರ್ಯರೆನಿಸಿಕೊಳ್ಳುವಂತೆ ಗೋರಕ್ಷ ಮತಾನುಯಾಯಿ ಗೋರಕ್ಷನೆನ್ನಿಸಿಕೊಂಡರೆ ಅದು ಆಶ್ಚರ್ಯವೇನಿಲ್ಲ. ಬಸವಾದಿ ಪ್ರಮಥರ ಕಾಲದಲ್ಲಿಯೂ ಕನ್ನಡನಾಡಿನಲ್ಲಿ ನಾಥಪಂಥ ಸಾಕಷ್ಟು ಪ್ರಚಲಿತವಿತ್ತು. ಅನಂತರ ವೀರಶೈವದ ಮುಂದೆ ಅದು ನಿಲ್ಲಲಾರದೆ ಮೂಲೆಗುಂಪಾಯಿತು.[೨೦] ಅಂದರೆ ಆದಿ ಪಂಡಿತಾರಾಧ್ಯರ ಮುಂದಿನ ಕಾಲದ ಸುಮಾರಿನ ಗೋರಕ್ಷ ಹಾಗೂ ೧೨ನೇ ಶತಮಾನದ ಗೋರಕ್ಷ ನಾಥಪಂಥದಲ್ಲಿಯ ಬೇರೆಬೇರೆಯೇ ವ್ಯಕ್ತಿಗಳೆಂದಾಗುತ್ತದೆ. ಇದರಿಂದ ಬಹುಶಃ ಬೌದ್ಧಸಿದ್ಧರ ಮೂಲಪಂಥದ ಅವಧೂತ ಸಂಪ್ರದಾಯಾರ್ಗತ (ನಾಥಪಂಥ) ಕಾಳಾಮುಖರ ತಂಡಕ್ಕೆ ಬಿದ್ದ ಮೊದಲ ಏಟು ಪಂಡಿತಾರಾಧ್ಯರಿಂದಾಗಿರಬಹುದು ಎಂದು ತೋರುತ್ತದೆ. ನಂತರ ಪೂರ್ಣಪ್ರಹಾರ ರೇವಣಸಿದ್ಧ, ಹಾಗೂ ಪ್ರಭುದೇವರಿಂದ ಎಂಬುದು ಅವರೆಲ್ಲರ ಕತೆಯೇ ಸಾಂಕೇತಿಕವಾಗಿ ತಿಳಿಸುವಂತೆ ಕಾಣುತ್ತದೆ. ಅಲ್ಲದೆ ಮುಂದೆ ಗೊಯ್ಯದವಾಡಿ= ಗುಯಲೂರು, ಆದ 'ಗುಹ್ಯ' ಎಂಬ ನೆಲೆಯೂ ಗೂಳೂರಿನಲ್ಲಿದ್ದು ಬೌದ್ಧಸಿದ್ಧರ ಚಟುವಟಿಕೆಯ ಕೇಂದ್ರ ವಾಗಿದ್ದ ಕಾರಣ, ಆ ಹೆಸರು ಒದಗುವಂತಾಗಿರಬೇಕು. ಇಲ್ಲವಾಗಿದ್ದರೆ ಬೌದ್ಧ ಮೂಲದ ಶೈವ ಅವಧೂತ ಕಾಳಾಮುಖರನ್ನು ಗೆಲಿದ ಸಂದರ್ಭದ ಸಂಕೇತವಾಗಿ ಬಹುಶಃ 'ಗುಹ್ಯ' ಎಂಬ ನಾಮ ಮೂಲದ ಗೂಳೂರಿನಲ್ಲಿ ಪೀಠದ ಅಸ್ತಿತ್ವಕ್ಕೆ ಪೂರ್ವ

ಪುರಾವೆ ಸಿಗುತ್ತಿರಲಿಲ್ಲ ಎನಿಸುತ್ತದೆ. ಅಲ್ಲದೆ ವಾಮಾಚಾರದ ಹಾವಳಿಯನ್ನು ನಿಲ್ಲಿಸಿದ ಕೇಂದ್ರಗಳಲ್ಲಿ ಒಂದಾಗಿ ಗುಯಲೂರು=ಗೂಳೂರು ಕೂಡ ಆದಂತಿದೆ. ಕಾಳಾಮುಖಿರು, ಜಂಗಮರ ಪೂರ್ವಜರಲ್ಲ ಎನ್ನಲು[೧೯] ಇದು ಒಂದು ತಾರ್ಕಣೆಯೂ ಆಗಬಲ್ಲುದು.

ಪಂಡಿತಾರಾಧ್ಯರು ಬ್ರಹ್ಮಸೂತ್ರಗಳಿಗೆ ಶಿವಾದ್ವೈತಪರ ಭಾಷ್ಯ ಬರೆದಿರುವ ಬಗ್ಗೆ ಶ್ರೀಪತಿಪಂಡಿತರ ಶ್ರೀಕರಭಾಷ್ಯದಿಂದ ತಿಳಿಯುತ್ತದೆ. ವೀರಶೈವ ಭಾಷ್ಯಕಾರರು ಹಾಗೂ ವ್ಯಾಖಾನಕಾರರಿಗೆ ಪ್ರಥಮರೆನಿಸಿದ್ದಾರೆ ಎನ್ನುವುದು ವೃಷಭ ಪಂಡಿತಾರಾಧ್ಯರಲ್ಲಿ ಉಲ್ಲೇಖವಾಗಿದೆ. ಶ್ರೀ ಜ|| ಪಂಡಿತಾರಾಧ್ಯರು ಕಂಚಿಯ ಪಲ್ಲವರಾಜರಲ್ಲಿ ಪ್ರಸಿದ್ಧನಾದ ಮಹೇಂದ್ರವರ್ಮನ ಕುಲಗುರುಗಳಾಗಿ ಕಂಚಿಯಲ್ಲಿ ವೀರಶೈವ ಮಠಸ್ಥಾಪನೆಗೆ ಕಾರಣರಾದರು. ಇವರ ಚರ ಗದ್ದುಗೆ ಶ್ರೀಶೈಲ ನಿಡುಮಾಮಿಡಿ ಪೀಠದಲ್ಲಿ ಇತ್ತು.[೨೦] ಬಹುಶಃ ಇವರ ಕಾಲ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕ್ರಿ.ಶ. ೮-೯ನೇ ಶತಮಾನಗಳ ಸುಮಾರಿಗಿರಬಹುದೆನಿಸುತ್ತದೆ. ಇವರ ಕಾಲವನ್ನು ಇನ್ನೂ ಹಿಂದಕ್ಕೆ ಒಯ್ಯುವ ಪರಿಪಾಠವಿದೆ.

ಶ್ರೀ. ಜ|| ಪಂಡಿತಾರಾಧ್ಯ ಪರಂಪರೆಯ ಪಟ್ಟಿವಲ್ಲರಿಯ ರೀತ್ಯಾ, ಪೀಠದ ಎರಡನೆಯವರು ಶ್ರೀ. ಜ|| ಚೆನ್ನಮಲ್ಲ ಶಿವಾಚಾರ್ಯರೆನ್ನಲಾಗಿದೆ.[೨೧] ಇವರು 'ನರೇಂದ್ರ ಮೃಗರಾಜ'ಎನಿಸಿದ ಚಾಲುಕ್ಯರ ಎರಡನೆಯ ವಿಜಯಾದಿತ್ಯನನ್ನು 'ಪರಮ ಮಾಹೇಶ್ವರ'ನನ್ನಾಗಿ ಮಾಡಿದರಂತೆ. ಅವನು ರಾಷ್ಟ್ರಕೂಟರೊಡನೆ ಕಾದು ಗೆಲಿದ. ಆದರೆ ಹತ್ಯಾದೋಷ ಹೋಗಲಾಡಿಸಿ ಕೊಳ್ಳಲು ಈ ಪೀಠಾಧಿಪತಿಗಳ ಸಲಹೆಯ ಮೇರೆಗೆ ನೂರೆಂಟು ಶಿವಾಲಯಗಳನ್ನೂ 'ನರೇಂದ್ರೇಶ್ವರ' ಎಂಬ ಹೆಸರಿನಲ್ಲಿ ಸ್ಥಾಪಿಸಿದನೆನ್ನಲಾಗಿದೆ. ಇವರ ಮುಂದಿನವರು ಶ್ರೀ ಜ|| ಗುರುಸಿದ್ಧಮಲ್ಲ ಶಿವಾಚಾರ್ಯರು. ಇವರ ಹೆಸರನ್ನು ಮುಂದಿನ ಗುರುಗಳು ತಮ್ಮ ವಚನ ರಚನಾಂಕಿತ ಮಾಡಿಕೊಂಡಿದ್ದಾರೆ. ಇದು ಬಿಟ್ಟರೆ ಈ ಮೂರನೆ ಪೀಠಾಚಾರ್ಯರ ಬಗ್ಗೆ ಹೆಚ್ಚು ತಿಳಿದು ಬಂದಿಲ್ಲ.

ಪೀಠದ ನಾಲ್ಕನೆಯವರಾದ ಶ್ರೀ ಇಮ್ಮಡಿ ಪಂಡಿತಾರಾಧ್ಯರು ೧೦ನೆಯ ಶತಮಾನದ ಆರಂಭದಲ್ಲಿದ್ದರೆನ್ನಲಾಗಿದೆ. ತತ್ಪೂರ್ವ ತಮ್ಮ ಜಗದ್ಗುರುಗಳ ಹೆಸರನ್ನೆ ಸೂಳ್ನುಡಿಯ ಅಂಕಿತವಾಗಿ ಬಳಸಿದರೆನ್ನಲಾಗಿದೆ. ಸೂಳ್ನುಡಿ ಎಂಬುದೇ ಅನುಭವ. ಅನುಭಾವದ ಆರೈಕೆಯಲ್ಲಿ ಸಂವಾದಗೊಳ್ಳುವ ನುಡಿವಚನ. ಇಲ್ಲಿ ಗುರುವಿನ ನೆನಹೇ ಆ ಕೆಲಸ ಮಾಡಿರುವಂತಿದೆ. ಸರ್ವ ಪುರಾತನರ ವಚನ ಕಟ್ಟುಗಳಲ್ಲಿ ಇವರ ಒಂದು ವಚನ ಮಾತ್ರ ಲಭ್ಯವಾಗಿದ್ದು ವಚನವನ್ನು ಪ್ರತಿಮಾಡಿದವರು 'ಪಂಡಿತಾರಾಧ್ಯ ವಚನ' ಎಂದು ಬರೆದಿದ್ದಾರೆ. ಪಂಡಿತತ್ರಯರಲ್ಲಿ ಒಬ್ಬರಾದ ಹಾಗೂ ಶ್ರೀ ಶೈಲ ಪೀಠದ ಮೂಲ ಪಂಡಿತರಾಧ್ಯರಿಗಿಂತ ಭಿನ್ನರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ (ಕ್ರಿ.ಶ. ೧೨ ನೆಯ ಶತಮಾನ) ವಚನಾಂಕಿತ 'ಶ್ರೀ ಮಲ್ಲಿಕಾರ್ಜುನ' ಎಂದಿದೆ. ಈ ಕಾರಣ ಇಮ್ಮಡಿ ಪಂಡಿತಾರಾಧ್ಯರ ಈ ಸೂಳ್ನುಡಿಯೆ ಪ್ರತ್ಯೇಕವಾಗಿದೆ. ಅಂತಾಗಿ ಇವರೆ ಮೊದಲ ವಚನಕಾರರೆನ್ನಬಹುದು.[೨೨] ಆ ಸೂಳ್ನುಡಿ ಹೀಗಿದೆ :

ಇಲ್ಲದ ಕುತ್ತವ ಕೊಂಡು ಬಲ್ಲವರ ಬಾಯ ಹೊಗ ಹೋದಡೆ
ಆ ಬಲ್ಲ ಬಲ್ಲವರೆಲ್ಲ ಆ ಬಲ್ಲೆಯಲ್ಲಿ ಅಲ್ಲ ತಗೊಳುತಿರ್ದರು
ಇದೆಲ್ಲಿಯ ಕುತ್ತವೆಂದು ತಿಳಿದು ವಿಚಾರಿಸಲು
ಅದಲ್ಲೆ ಬಯಲಾಯಿತ್ತು ಗುರುಸಿದ್ಧಮಲ್ಲಾ ।

ತನ್ನ ಅರಿವಿನ ಕೊರತೆಯನ್ನು ಹೋಗಿಸಬೇಕು. ಅದಕ್ಕಾಗಿ ತಿಳಿದವರೊಡನೆ ಸಂವಾದದಲ್ಲಿ ತೊಡಗಲು ಹೋದಾಗ, ಹಾಗೆ ತಿಳಿದವರೂ ಕೂಡ ಆ ಬಗ್ಗೆಯೆ ಸಹಜವಾಗಿ ಚಿಂತನ ಮಂಥನಕ್ಕೆ ತೊಡಗಿದರು. ಅರಿವಿನ ಕೊರತೆಯ ಬಗ್ಗೆ ಮತ್ತಷ್ಟು ಅನುಭವದಲ್ಲಿ ವಿಚಾರಮಾಡಿದಾಗ, ಇದ್ದವರು ಹಾಗೂ ಕೂಡಿದವರಿಗೆಲ್ಲ ಅದು ಹೊಳೆಯಿತು, ತೆರೆದುಕೊಂಡಿತು ಎಂಬ ಭಾವ ಇಲ್ಲಿದೆ. ಮಹಾಜ್ಞಾನವನ್ನು (ಅನುಭಾವ) ಪಡೆಯಲು ಸಂವಾದ ಗೋಷ್ಠಿ ಇರಬೇಕು ಹಾಗೂ ವಿನಯದ ಸಂವಾದವಿರಬೇಕು ಎಂಬ ಧ್ವನಿಯೂ ಇಲ್ಲಿರುವಂತಿದೆ. ಅಂದರೆ ಸಾಮಾನ್ಯರು ಹಾಗು ಅನುಭಾವಿಗಳ ನಡುವಣ ಸಂವಾದ ಎಂಬ ಅರ್ಥವೂ ಇಲ್ಲಿ ಒದಗುವಂತಿದೆ.

ಈ ವಚನವು ಭಾಷಾಶೈಲಿಗಳ ದೃಷ್ಟಿಯಿಂದ ೧೨ನೆಯ ಶತಮಾನಕ್ಕೆ ಸೇರುವಂತೆ ತೋರುತ್ತದೆ. ಪಂಡಿತಾರಾಧ್ಯ, ಪಂಡಿತಾಚಾರ್ಯಾರಾಧ್ಯ ಇತ್ಯಾದಿ ಮೂವರಲ್ಲಿ ಈ ವಚನ ಕರ್ತೃವಿನ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಮಲ್ಲಿಕಾರ್ಜುನ ಪಂಡಿತಾರಾಧ್ಯನ ಮಗ ಪಂಡಿತಾರಾಧ್ಯನೆ ಈ ವಚನ ಕರ್ತೃ ಎಂಬ ಊಹೆಯೆ ಸದ್ಯಕ್ಕೆ ಸಮಂಜಸವೆನಿಸುತ್ತದೆ ಹಾಗೂ ಅವನ ಕಾಲ ಕ್ರಿ.ಶ. ೧೧೬೦ ಎಂದು ಹೇಳಲಾಗಿದೆ.[೨೩] ಆದರೆ ಶ್ರೀಶೈಲ ಪಂಡಿತಾರಾಧ್ಯರ ಪರಂಪರೆಯ ಪೀಠದ ಪಟ್ಟಿವಲ್ಲರಿಯ ರೀತ್ಯಾ ಪ್ರಸ್ತುತ ಸೂಳ್ನುಡಿಯ ಇಮ್ಮಡಿ ಪಂಡಿತಾರಾಧ್ಯರ ಗುರು, ಸಿದ್ಧಮಲ್ಲ ಶಿವಾಚಾರ್ಯರಾಗಿದ್ದಾರೆ. ಅಂದರೆ ಪೀಠಸ್ಥ

ಗುರುಗಳಾಗಿದ್ದಾರೆ. ಮೊದಲ ಸಂಪ್ರದಾಯವಾಗಿ ತಮ್ಮ ಪೀಠದ ಪೂರ್ವಗುರುವಿನ ಹೆಸರನ್ನೇ ಅಂಕಿತ ಮಾಡಿಕೊಂಡಿದ್ದಾರೆ. ಮುಂದೆ ಇದೇ ಪರಂಪರೆ ಪೀಠದಲ್ಲಿ ಮುಂದುವರಿದಿದೆ. ಅದೇ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಮಗ ಪೀಠಾಧಿಕಾರಿಯಂತೆ ತೋರುವುದಿಲ್ಲ. ಆತನ ಗುರುವಿನ ಬಗ್ಗೆಯೂ ಹೇಳಿಲ್ಲ. ಆದಾಗಿ ಈ ಸೂಳ್ನುಡಿಯ ಕರ್ತೃತ್ವ ಗುರುವನ್ನು ಸ್ಮರಿಸಿ ಹೇಳಿರುವ ೧೧ನೆಯ ಶತಮಾನದ ಇಮ್ಮಡಿ ಪಂಡಿತಾರಾಧ್ಯರಿಗೆ ಆರೋಪವಾಗುವಂತಿದೆ. ಆದರಿಂದ ಅಚ್ಚಗನ್ನಡದೊಲವಿನಲ್ಲಿ ದೇಸಿಯಲ್ಲಿ ತತ್ತ್ವದ ಬಲುಮೆಯನ್ನು ಹಿಡಿದಿಟ್ಟ ಆರಂಭಿಕ ಪ್ರಯತ್ನಗಳ ಒಂದು ಪ್ರಾಚೀನ ಸೂಳ್ನುಡಿಯ ಕೊಡುಗೆ ಕನ್ನಡ ಸೂಳ್ನಡಿಸಾಹಿತ್ಯಕ್ಕೆ ಒದಗಿತು ಎನ್ನಬಹುದು. ಈ ಸೂಳ್ನುಡಿಯಲ್ಲಿ 'ಲ'ಕಾರ ದ್ವಿತ್ವ, ಅನುಪ್ರಾಸ, ಅಕ್ಷರಪ್ರಾಸದ ಭಾಷಾಶೈಲಿ ಕಾಣುತ್ತದೆ. ಬೆಡಗಿನ ವಚನಗಳ ತೀರ ಮೊದಲಿನ ರೂಪ ಇದೆನ್ನಿಸುತ್ತದೆ. ದೇವರದಾಸಿಮಯ್ಯ ಹಾಗು ಕೆಲವು ಸೂಳ್ನುಡಿಗಳಲ್ಲಿ ಈ ಶೈಲಿಯ ಪ್ರಭಾವ ಕಾಣುವಂತಿದೆ.[೨೪]

ಮುಂದೆ ಬಂದ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಶಿವಾಚಾರ್ಯರು ಭಾರತದ ಸಂಚಾರದಲ್ಲಿ ಹಂಪೆ, ಗೋಕರ್ಣ, ಪಂಡರೀಪುರ, ಉಜ್ಜಯನಿ, ಕಳಿಂಗ, ಕಾಂಭೋಜ, ಕಾಶ್ಮೀರ, ಕೇದಾರಗಳಿಗೆ ಹೋಗಿ ಶಕ್ತಿವಿಶಿಷ್ಟಾದ್ವೈತದ ಸಿದ್ಧಾಂತವನ್ನು ಸ್ಥಾಪಿಸಿದರು. ವಿಶೇಷವಾಗಿ ಗೋಕರ್ಣದಲ್ಲಿ ಕೇವಲಾದ್ವೈತ ಪರಭಾಷ್ಯವಾದಿ ಪಂಡಿತರನ್ನು ವಾದದಲ್ಲಿ ಸೋಲಿಸಿ ನೀಲಕಂಠ ಶಿವಾಚಾರ್ಯರ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನೇ ಮರುಸ್ಥಾಪಿಸಿದರು. ಕಾಶ್ಮೀರದ ಶಿವದೇವ ಅರಸನನ್ನು ಲಿಂಗಧಾರಿಯಾಗಿಸಿ, ಅರಸನಾದರೂ ಸ್ವಂತ ಕಾಯಕವನ್ನು ಕಮ್ಮಾರನ ಬಳಿ ಮಾಡಿಸಿ ಬಂದ ಕಾಣಿಕೆಯನ್ನು ಪಡೆದು ಕಾಯಕದ ಮಹತ್ವವನ್ನು ಅವನ ಅರಿವಿಗೆ ತಂದರು. ಅಲ್ಲಿ ಸೋಮಾನಂದ ಕವಿಯ 'ಶಿವದೃಷ್ಟಿ' ಗ್ರಂಥ ಹಾಗು ಉತ್ಪಲಾಚಾರ್ಯನ 'ಪ್ರತ್ಯಭಿಜ್ಞಾಕಾರಿಕೆ' ಗ್ರಂಥವನ್ನು ಸಂಗ್ರಹ ಮಾಡಿದರು. ವೀರಶೈವನಾದ ಈ ಶಿವದೇವರಾಜನ ವಂಶಿಕನಾದ ಮಹಾದೇವರಾಜನು ೧೨ನೆಯ ಶತಮಾನದಲ್ಲಿ ಕಲ್ಯಾಣಕ್ಕೆ ಬಂದು ಕಾಯಕ ನಡೆಸಿದ ಮೋಳಗಿ ಮಾರಯ್ಯನೆನ್ನಲಾಗಿದೆ.[೨೫]

ವೈರಾಗ್ಯಪೀಠ, ಜಂಗಮಪೀಠ ಎನಿಸಿರುವ ಪಂಚಪೀಠಗಳಲ್ಲಿ ಒಂದಾದ ಕೇದಾರಪೀಠವನ್ನು ಸಂದರ್ಶಿಸಿ ಶ್ರೀಗಿರಿಪೀಠ ಹಾಗು ಆ ಹಿಮಗಿರಿಪೀಠಗಳ ಸಂಬಂಧದ ಸನ್ನಿಹಿತವನ್ನು ತೋರಿದರು. ಕಾಶಿಯಲ್ಲಿ ಪ್ರಸಿದ್ಧ ಭಾಷ್ಯಾಕಾರ ಶ್ರೀಪತಿ ಪಂಡಿತನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಅವನಿಂದ ಶಿವಾದ್ವೈತ ಪರವಾಗಿ ಶ್ರೀಕರಭಾಷ್ಯ ಬರೆಸಿದರು. ವಿಜಯವಾಡದ ರಾಜನಲ್ಲಿಗೆ ಬಂದಾಗ ಅವನಿಂದ ಕನಕದುರ್ಗಾದೇವಿಯ ದೇಗುಲ ನಿರ್ಮಾಣಕ್ಕೆ ಕಾರಣರಾದರು. ಶ್ರೀಶೈಲದಲ್ಲಿ ಗುರುಕುಲ ವನ್ನೂ ಸ್ಥಾಪಿಸಿದರು. ಇಲ್ಲಿ ಶಿವಯೋಗ, ಅಷ್ಟಾಂಗಯೋಗ, ಹಠಯೋಗ, ಮಂತ್ರಯೋಗ, ಲಯಯೋಗ, ರಾಜಯೋಗದ ಅಭ್ಯಾಸಾವಕಾಶಮಾಡಲಾಗಿತ್ತು. ಶ್ರೀ ವಿರೂಪಾಕ್ಷದೇಶಿಕೇಂದ್ರರೂ ವಾತುಲಾಂತ ಶಿವಾಗಮಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಈ ಗುರುಕುಲದಲ್ಲಿ ಭವಿ-ಭಕ್ತ ಲಿಂಗಿ ಅಲಿಂಗಿಗಳೆಂಬ ಭೇದಭಾವವಿರಲಿಲ್ಲ. ಗುರುವರ್ಗಕ್ಕೆ ಬೇಕಾದ ಆಚಾರವಿಚಾರ, ಆಗಮಾಭ್ಯಾಸ, ಶ್ರೀರುದ್ರ ಸೂಕ್ತಾಧ್ಯಯನ, ವೈದ್ಯವಿದ್ಯೆ ಇತ್ಯಾದಿಗಳ ಬಗ್ಗೆ ಶಿಕ್ಷಣ ನಡೆಯುತ್ತಿತ್ತು. ಸ್ವತಃ ವೈದ್ಯರಾಗಿದ್ದ ವಿರೂಪಾಕ್ಷ ದೇಶಿಕೇಂದ್ರರು 'ವಿರೂಪಾಕ್ಷ ಕಲ್ಪ' ಎಂಬ ಔಷಧಿಯನ್ನು ಕಂಡುಹಿಡಿದು ಪ್ರಚಾರಕ್ಕೆ ತಂದರು. ಮೂಲಿಕಾವನವೊಂದನ್ನು ನಿರ್ಮಿಸಿ, ಕದಲೀವನವೆಂದು ಹೆಸರಿಟ್ಟರು. ಚೊಂಚರೆಂಬ ಗಿರಿಜನರ ದ್ರೋಹವನ್ನು ಮನ್ನಿಸಿ ಅನುಗ್ರಹಿಸಿ, ಜೀವನೋಪಾಯಕ್ಕೆ ವೈದ್ಯವಿದ್ಯೆಯನ್ನು ಕಲಿಸಿದರು.[೨೬] ಹೀಗೆ ದೇಶಾಟನ ಧರ್ಮ ಪ್ರಸಾರ, ಗ್ರಂಥ ಸಂಗ್ರಹ, ಸಂಘಟನೆ, ಪಂಡಿತ ಮನ್ನಣೆ, ಕೃತಿ ರಚನೆ, ಗುರುಕುಲಸ್ಥಾಪನೆ, ಗಿರಿಜನೋದ್ಧಾರ' ವೈದ್ಯಕೀಯ ಕಾಯಕಗಳನ್ನು ಮಾಡಿ ಪೀಠದ ಬಳುವಳಿಯಾಗಿ ಸಮಾಜಕ್ಕೆ ನೀಡಿದರೆನ್ನಬಹುದು. ಶ್ರೀ ವಿರೂಪಾಕ್ಷ ದೇಶಿಕೇಂದ್ರರ ವರ್ಚಸ್ಸು ನಾಥಪಂಥದ ಮೇಲೆ ಬಿದ್ದು ವೀರಶೈವಕ್ಕೆ ಅದು ಬಂದಿತು[೨೭] ಎನ್ನುವಲ್ಲಿ ಅಂತಿಮವಾಗಿ ವೀರಶೈವದಲ್ಲಿ ಅದು ವಿಲೀನವಾಗುವ ಮುನ್ನ ಮಧ್ಯಂತರದಲ್ಲಿ ಅದು ವೀರಶೈವಕ್ಕೆ ವರ್ಗವರ್ಗಯಾಗಿ ಸೇರ್ಪಡೆಗೊಳುತ್ತಿತ್ತು ಎಂದಾಗುತ್ತದೆ. ಇನ್ನು ೧೮ ಕುಲದವರಿಗೆ ಶಿವತತ್ತ್ವೋಪದೇಶಮಾಡಿ, ಮಠ, ಮಹಂತ, ಸೆಟ್ಟಿ, ಯಜಮಾನ, ಗಣಾಚಾರಿ ಎಂಬ ಅಧಿಕಾರಿ ವರ್ಗವನ್ನು ಇವರು ನಿರ್ಮಿಸಿದರಂತೆ.

ಮಧ್ಯಸ್ತರಗಳು : ಪೀಠದ ಆರನೆಯವರಾಗಿ ಬಂದವರು ಶ್ರೀ ಚಂದ್ರಗುಂಡಶಿವಾಚಾರ್ಯರು. ಶ್ರೀ ವಿರೂಪಾಕ್ಷ ದೇಶಿಕೇಂದ್ರರ ಕರಸಂಜಾತರು.[೨೮] ಜನ್ಮನಾಮ ಶ್ರೀಪತಿ ಪಂಡಿತ ಪುತ್ರ ಗೋಪತಿ ಎಂದಿತ್ತು. ಶ್ರೀ ಶೈಲ ಪೀಠಾರೋಹಣದ ಕಾಲದ ರಥಸಪ್ತಮಿಯೆಂದು ಗುರುವಿಟ್ಟ ಅಭಿಧಾನ ಚಂದ್ರಗುಂಡ ಶಿವಾಚಾರ್ಯ, ಐತಿಹಾಸಿಕ ಮೌಲ್ಯ ಪಡೆದ ಹೆಸರೂ ಆಗಿದೆ. ತಮ್ಮ ಗುರುಗಳು ಉತ್ತರ ಭಾರತ ಪ್ರವಾಸದಲ್ಲಿ ಧರ್ಮ ಜಾಗೃತಿ ಕೈಕೊಂಡಂತೆ ದಕ್ಷಿಣ ಭಾರತದಲ್ಲಿ ಇವರು ಕೈಕೊಂಡರು. ೧೮ ಕುಲದವರಿಗೆ ಶಿವತತ್ತ್ವೋಪದೇಶ ಮಾಡಿದ ವಿರೂಪಾಕ್ಷ ದೇಶಿಕರಂತೆ[೨೮-ಅ] ಇವರೂ ಶಿವದೀಕ್ಷಾ ಸಂಸ್ಕಾರ ನೀಡಿದರು. ಅಸ್ಪೃಶ್ಯೋದ್ಧಾರದ ಸಂಕೇತವಾಗಿ 'ಛಲವಾದಿ'ಗಳನ್ನು ರೂಪಿಸಿದರು. ಇವರ ತೆಕ್ಕೆಗೆ ಸಜ್ಜನ, ದೇವಾಂಗ, ಕವಾಡಿಗ, ಹೂಗಾರ,

ಡೋಹರಾದಿಗಳ ಗುಂಪು ಬಂದು ಸಾಮಾಜಿಕ ಪ್ರಗತಿಯನ್ನು ಗಳಿಸಿದವು. ೧೧ನೆಯ ಶತಮಾನದ ತಮ್ಮ ಪೀಠಾರೋಹಣ ಕಾರ್ಯದ ನಂತರ ಶ್ರೀಶೈಲದಲ್ಲಿ ಕಿರಿದಾದ ಅನುಭವ ಕೇಂದ್ರವನ್ನೂ ರೂಪಿಸಿದರು. ಅದಕ್ಕೆ ಚಂದ್ರಗುಂಡ ಮಠವೆನ್ನುವುದುಂಟು. ಅವರಲ್ಲಿ ಶಿವಾನುಭಾವಿಗಳ ಜಿಜ್ಞಾಸೆ ನಡೆಯುತ್ತಿತ್ತು. ಈ ಕೇಂದ್ರದಲ್ಲಿ ರಾಮನಾಥನನ್ನು ಕಂಡುಕೊಂಡು 'ಶರಣರ ಸೂಳ್ನುಡಿ'ಗಳ ಮಹತ್ವವನ್ನು ತೋರಿಸಿಕೊಟ್ಟವ ದೇವರದಾಸಿಮಯ್ಯ. ಅವನು ಶ್ರೀ ಚಂದ್ರಗುಂಡ ಶಿವಾಚಾರ್ಯರಿಗೆ ಕರಕಮಲ ಸಂಜಾತನಾದ ಶಿಷ್ಯನಾಗಿದ್ದ.[೫೯] ಇವನ ವಂಶೀಯರಲ್ಲಿ ಶ್ರೀಶೈಲ ಪೀಠಕ್ಕೆ ರಥಸಪ್ತಮಿಯಂದು ವಾರ್ಷಿಕವಾಗಿ ನೇಯ್ದ ಅಮೂಲ್ಯ ವಸ್ತ್ರ ಅರ್ಪಿಸುವ ಪದ್ಧತಿ ಇದೆ. ದೇವರ ದಾಸಿಮಯ್ಯ(ಜೇಡರ ದಾಸಿಮಯ್ಯ ಎಂಬ ಹೆಸರಿಗೂ ಸಮೀಕರಣವಿದೆ)ನ ಸಾಕಷ್ಟು ಸೂಳ್ನುಡಿಗಳು ಲಭ್ಯವಿದೆ. ಬಹುಶಃ ಶ್ರೀ ಶೈಲದ ಅನುಭವ ಕೇಂದ್ರದ ಸಂವಾದ ಗೋಷ್ಠಿಯಲ್ಲಿ ಅವು ರೂಪುಗೊಂಡಿರುವಂತಿದೆ. ಈ ದೃಷ್ಟಿಯಿಂದ ಸೂಳ್ನುಡಿ ರಚನೆಗೆ ನಿರ್ದೇಶನ ನೀಡಿದವರು ಶ್ರೀ ಚಂದ್ರಗುಂಡ ಶಿವಾಚಾರ್ಯರಿರಬೇಕು. ಹಾಗಿದ್ದರೆ ಅವರ ಸೂಳ್ನುಡಿಗಳೂ ಇರಬೇಕೆನ್ನಿಸುತ್ತದೆ. ಆದರೂ ಅವರ ಹೆಸರಿನಲ್ಲಿ ಪ್ರಕಟವಾಗಿರುವ ಸೂಳ್ನುಡಿಗಳು[೬೦] ಅವರದೇ ಎನ್ನಲು ಪುರಾವೆಗಳು ಹೆಚ್ಚು ಲಭ್ಯವಾಗಬೇಕಿದೆ. ಪಂಡಿತಾರಾಧ್ಯ ಚರಿತ್ರೆ ಎಂಬ ಕೃತಿ ಸೇರಿದಂತೆ ೧೪ ಗ್ರಂಥಗಳನ್ನು ದೇವರ ದಾಸಿಮಯ್ಯನು ಬರೆದು ಈ ತನ್ನ ಶ್ರೀ ಗುರುವಿಗೆ ಅರ್ಪಿಸಿದ ಎನ್ನಲಾಗಿದೆ. ಹಾಸನ ಜಿಲ್ಲೆಯ ೧೦ನೆಯ ಶತಮಾನದ ಅಂಕನಾಥಪುರದ ಶಾಸನದಲ್ಲಿ ಶೀಲಾಚಾರದ 'ದೇವರ ದಾಶ್ರೀಮಯ್ಯ'ನ ಹೆಸರಿರುವುದು ಗಮನಾರ್ಹವಾಗಿದೆ. (ನೋಡಿ : ಎ.ಕ.ಸಂ. ೮ (ಹೊಸತು) ಹಾಸನಜಿಲ್ಲೆ, ಹೊಳೆನರಸೀಪುರ ೬೪)

ಕೊಡಗಿನ ೧೧ನೆಯ ಶತಮಾನದ ಹೊಸ ವೀರಶಾಸನದಲ್ಲಿ ಗುರುಸ್ತುತಿಯಂತೆ ಕಾಣಬರುವ ಸಾಲುಗಳಲ್ಲಿ (ಕೆಲವಾರು ತ್ರುಟಿತ ಅಕ್ಷರಗಳೂ ಇವೆ) ಇಂತಿದೆ[೬೧]:

> 'ತಾರನ[ನ್ದೀ]ಸನನಾ.... ಗೊರುಣ ಭ[ದ್ರ] ಗುರೋಪಿ ಮಾರತಿಂಬಿ ನಿಂಣಗಣ ಗೋಪತಿ ಕೋಕ್ಷ
> ಶ್ರೀ ಬುವಿಯನರತಿ ಯಘ್ನ ಮಾಡಿದ ಭದ್ರಗೋತ್ರಾ ಶಿಕ್ಷರ್....'

ಇಲ್ಲಿ ಭದ್ರಗೋತ್ರದ ಗುರು ಸಂದರ್ಭದಲ್ಲಿ ಬರುವ 'ಗೋಪತಿ' ಶಬ್ದ ಚಂದ್ರಗುಂಡಶಿವಾಚಾರ್ಯರ ಪೂರ್ವಾಶ್ರಮದ ಜನಪ್ರಿಯ ಹೆಸರಾಗಿ ಇಲ್ಲಿ ಅನ್ವಯವಿದ್ದರೆ ಅವರ ೧೧ನೆಯ ಶತಮಾನದ ಅನೇಕ ಮಣಿಹಗಳಿಗೆ ಪೂರಕವಾಗುತ್ತದೆ. ಏಕೆಂದರೆ ಇವರು 'ನಿಗರಿಲಿ' ಚೋಳಮಂಡಲ'ದ ಭಾಗವಾಗಿಸಿದ್ದ ಚೋಳರ ಕಾಲದ ನಂದಿಬೆಟ್ಟದಲ್ಲಿ[೬೨] ಯೋಗ ನಂದೀಶ್ವರ ದೇಗುಲ ನೆಲ್ಲಿಕಾಯಿ ಬಸವನಗುಡಿ ಶಾಸನಗಳಿಗೆ ಸಂಬಂಧಗೊಂಡವರೆಂದಿದೆ. ರಾಜೇಂದ್ರಚೋಳನು (ಕ್ರಿ.ಶ. ೧೦೦೨-೧೦೬೪) ೧೧ನೆಯ ಶತಮಾನದಲ್ಲಿ ಕರ್ನಾಟಕದ ಗಂಗವಾಡಿಯನ್ನು ಗೆದ್ದು (ಕ್ರಿ.ಶ. ೧೦೦೨-೧೦೦೪) ವಿಜಯ ಸ್ತಂಭವನ್ನು ನಾಟಿದ್ದುದು ಚಲಮಂಗಲ ಶಾಸನದಿಂದ ವ್ಯಕ್ತ. ಈ ರಾಜೇಂದ್ರಚೋಳ ಹೈಹಯ ವಂಶದವ ಎಂಬುದು ವೀರಭದ್ರರಾಯರ ಆಂಧ್ರುಲ ಚರಿತ್ರದಿಂದ ತಿಳಿದು ಬರುತ್ತದೆ. ಅವನು ಶ್ರೀಶೈಲದ ಚಂದ್ರಗುಂಡಶಿವಾಚಾರ್ಯರಲ್ಲಿಗೆ ಹೋಗಿ ತನ್ನ ಹತ್ಯಾಪಾತಕವನ್ನು ಹೋಗಲಾಡಿಸಲು ಬೇಡಿದ. ಆ ಪ್ರಾರ್ಥನೆಗನುಗುಣವಾಗಿ, ಚೋಳನ ಈ ಭಾಗದ ರಾಜಧಾನಿ ಆಗಿದ್ದ ಗೊಯ್ಯದವಾಡಿ ಅಥವಾ ಗುಯ್ಯಲೂರಿಗೆ ಬಂದರು. ಶಾಸನಗಳಲ್ಲಿ (೧೧೩೯-೧೫೪೪ ಅವಧಿಯವು) ಈ ಊರಿಗೆ ಗುಯ್ಯಲೂರು ಸೀಮೆ, ಗುಯಲೂರು ನಾಡಸೀಮೆ ಎಂದೇ ಉಕ್ತವಾದ ಹೆಸರುಗಳಿವೆ. ಐತಿಹ್ಯದ ರೀತ್ಯಾ ರಾಜೇಂದ್ರ ಚೋಳನಿಗೆ ಅವನ ಧರ್ಮಪತ್ನಿ ಕನಕವಲ್ಲಿ ಸಹಿತವಾಗಿ ಚಂದ್ರಗುಂಡಶಿವಾಚಾರ್ಯರಿಂದ ದೀಕ್ಷೆ ಪಡೆದ ಮೇಲೆ ಹತ್ಯಾದೋಷವು (ಮಾನಸಿಕ ಚಿಂತೆಯು) ಅವನ ಎಡಗಿವಿಯ ಮೂಲಕ 'ಗುಯ್' ಎಂಬ ಶಬ್ದದೊಡನೆ ನಿರ್ಗಮನವಾಯಿತು. ಆದರಿಂದ 'ಗುಯ್ಯಲೂರು' ಎಂದು ಗೂಳೂರಿಗೆ ೧೧ನೆಯ ಶತಮಾನದಲ್ಲಿ ಹೆಸರು ನಿಂತಿತೆನ್ನಲಾಗಿದೆ. ಈ ಗುಯಲೂರು ಎಂಬ ಹೆಸರು ೧೬-೧೭ನೇ ಶತಮಾನದವರೆಗೂ ಇಲ್ಲಿ ಚಾಲ್ತಿಗಿತ್ತು.[೬೩] ಪಶ್ಚಿಮ ಚಾಲುಕ್ಯರ ಇಮ್ಮಡಿ ಜಗದೇಕಮಲ್ಲನ ಮಹಾಮಂಡಲೇಶ್ವರ ಇರಂಗೋಳ ಚೋಳನಿಗೆ ಕ್ರಿ.ಶ. ೧೧೩೯ರಲ್ಲಿ ಅನಂತರಪುರ ಜಿಲ್ಲೆಯ ಭಾಗವಾಗಿದ್ದ ಈ ಗುಯ್ಯಲೂರು ರಾಜಧಾನಿ ಆಗಿತ್ತು.

ರಾಜೇಂದ್ರ ಚೋಳನ ರಾಜೋದ್ಯಾನ ರಾಜಧಾನಿಯ ಉತ್ತರಭಾಗಕ್ಕಿತ್ತು. ಅಲ್ಲಿ ಶಿವಪೂಜಾನುಷ್ಠಾನಕ್ಕೆ ಈಗಿರುವ ಚಂದ್ರಮೌಳೇಶ್ವರ ದೇಗುಲ ಪ್ರದೇಶದಲ್ಲಿ ಕುಳಿತರು ಶ್ರೀ ಚಂದ್ರಗುಂಡಶಿವಾಚಾರ್ಯರು. ಲಿಂಗಾರ್ಚಿತಕ್ಕೆ ಅಲ್ಲಿದ್ದ ತೆಂಗಿನ ಮರಕ್ಕೆ ಫಲ ಬೇಡಿದಾಗ ಅದು ಬಾಗಿ ನೀಡಿತಂತೆ. ಈ ಪವಾಡವನ್ನು ಕೇಳಿದ ರಾಜನು ಸಕಲ ರಾಜ ಮರ್ಯಾದೆಯೊಡನೆ ಬಂದು ಶ್ರೀಗಳವರಲ್ಲಿ ಆ ಮಹಿಮೆಯನ್ನು ತನಗೂ ತೋರಬೇಕೆಂದು ಪ್ರಾರ್ಥಿಸಿದ. ಆಗ ಮತ್ತೊಮ್ಮೆ 'ಗುರುಧರ್ಮ ಭಿಕ್ಷಾ' ಎಂದರಂತೆ. ತೆಂಗಿನಮರ ಕೂಡಲೆ ಬಾಗಿ ಫಲನೀಡಿತು. ಆ ಸಂದರ್ಭದಲ್ಲಿಯೆ ಅವನ ಹತ್ಯಾದೋಷವು ಹೋಗಲು, ಶಿವದೀಕ್ಷಾ ಸಂಸ್ಕಾರವು ಅನುವಾಯಿಯಂತೆ. ಈ ಅಂಶಗಳೆಲ್ಲ ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರೆಯಲ್ಲಿ (ದ್ವಿತೀಯಾಶ್ವಾಸ. ಪು. ೧೦೭-೧೧೧) ಬಹಳ ಸುಂದರವಾಗಿ ವರ್ಣಿತವಾಗಿವೆ. ಕಾರ್ತವೀರ್ಯನ ವಂಶಜರಾದ ಹೈಹಯ ಅರಸರಿಗೆ ಶೈವದೀಕ್ಷೆ ನೀಡಿ ಪರಂಪರೆಯಿಂದ ಅಂಟಿ ಬಂದಿದ್ದ ಬ್ರಹ್ಮಹತ್ಯಾ ದೋಷವನ್ನು (ಜಮದಗ್ನಿಯ ವಧೆಯ ಕಾರಣ) ಚಂದ್ರಗುಂಡ

ಶಿವಾಚಾರ್ಯರು ಹೋಗಲಾಡಿಸಿದರಂತೆ. ಹತ್ಯೆಯ ದೋಷ ಕಿವಿಯ ಮೂಲಕ ಹೊರಟು ಕಪ್ಪುಹೊಗೆಯಾಗಿ ಮುಗಿಲು ಸೇರಿ ಮಾಯವಾಯಿತು. ಇನ್ನೊಂದು ಕತೆಯ_ರೀತ್ಯಾ ವೈರಿಗಳ ಆಕ್ರಮಣಕ್ಕೆ ತುತ್ತಾದ ಈ ಕಾರ್ತವೀರ್ಯಾರ್ಜುನ ವಂಶಜರು (ಹೈಹಯ) ಶ್ರೀ ಜ॥ ಚಂದ್ರಗುಂಡಶಿವಾಚಾರ್ಯರ ಮರೆಹೊಕ್ಕರಂತೆ. ಶತ್ರುರಾಜ ಬಂದು ಸನ್ನಿಧಿಯವರನ್ನು ದುರ್ಜನರಾದ ಹೈಹಯವಂಶಿಕರನ್ನು ಬಿಟ್ಟುಕೊಡಲು ಕೇಳಿದನಂತೆ. ಆಗ ಸನ್ನಿಧಿಯವರು ಅವರನ್ನೆಲ್ಲ ಸಜ್ಜನರನ್ನಾಗಿ ಮಾಡಿರುವ ಕಾರಣ ಚಿಂತೆ ಬೇಡ ಎಂದು ಹೇಳಿ ಮನನಿಸಿ ಹಿಂದಕ್ಕೆ ಕಳುಹಿಸಿದರಂತೆ. ಸನ್ನಿಧಿಯವರಿಂದ ವೀರಶೈವ ದೀಕ್ಷೆ ಪಡೆದು ಪೀಠಕ್ಕೆ ಶಿಷ್ಯರಾಗಿ ಈ ರಾಜವಂಶಿಕರು ಸಜ್ಜನರೆಂದು ನಾಮಕರಣಗೊಂಡರು. ಶಾಸನಗಳಲ್ಲಿ 'ಸಜ್ಜನ ಶುದ್ಧ ಶಿವಾಚಾರ' ದವರೆಂದು ಉಲ್ಲೇಖಿತರಾದರು. ರಾಜೇಂದ್ರ ಚೋಳನೂ ಈ ಹೈಹಯ ವಂಶದವನೇ ಆಗಿದ್ದ. ಬೆಜವಾಡದ ಮಲ್ಲೇಶ್ವರ ಮತ್ತು ಕನಕದುರ್ಗಾಂಬೆಯರು ಈ ಜನಾಂಗದ ಕುಲದೇವತೆಗಳಾದರು. ಅವರಿಗೆ ಗಾಣದ ವೃತ್ತಿ ಕೂಡಿತು. ಅಂದರೆ ಸಮುದಾಯವೊಂದರ ರಕ್ಷಣೆಗೆ ನಿಂತು ಆಸರೆಕೊಟ್ಟು ನಿಲ್ಲಿಸಿದ ಪೀಠದ ಮಣಿಹವಿದು.

ಇಲ್ಲಿನ ಪವಾಡ, ಕತೆಗಳು ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರಿಗೆ ಸಂಬಂಧಿಸಿದಂತೆ ಬಹಳ ಸಾಂಕೇತಿಕವಾಗಿವೆ. ಮುಖ್ಯವಾಗಿ 'ಗುಯ್ಯಲೂರು', 'ಗೊಯ್ಯ'ದ ವಾಡಿ, 'ಎಡಗಿವಿಯಿಂದ ಗುಯ್' ಶಬ್ದದಿಂದ 'ಕಪ್ಪು ಹೊಗೆಯಾಗಿ ಹೋಯಿತು', 'ತೆಂಗಿನ ಮರ ಬಾಗಿ ಫಲನೀಡಿದ್ದು', ಚಂದ್ರಮೌಳೀಶ್ವರ ದೇಗುಲ ಇತ್ಯಾದಿ ಅಂಶಗಳು ಗಮನಿಸ ಬೇಕಾದಂತಹವು. ಕಾರಣ ಪೀಠದ ಕೊಡುಗೆಯ ಸಂಬಂಧದ ಸಂಗತಿಯಾಗಿವೆ.

'ಗುಯ್ಯ' ಎಂಬುದು 'ಗುಹ್ಯ' ಎಂಬ ಸ್ಥಳನಾಮದ ಅಪಭ್ರಂಶ ಅಥವಾ ತದ್ಭವರೂಪವಾಗಿದೆ.[೬೪] ಈಗಾಗಲೇ ತಿಳಿಸಿರುವಂತೆ, ವಜ್ರಯಾನ ಬೌದ್ಧದ 'ಗುಹ್ಯ ಸಮಾಜ ತಂತ್ರ' ಕೃತಿ ಪ್ರೇರಿತ ಗುಹ್ಯ ಸಿದ್ಧಿಯ ಕೇಂದ್ರ ಗೂಳೂರು=ಗುಯ್ಯಲೂರಿನಲ್ಲಿದ್ದಿರಬೇಕು. ಹಾಗು ವಾಮಾಚಾರಕ್ಕೆ ನೆಲೆಯೂ ಆಗಿದ್ದಿರಬೇಕು. ಈ ಕ್ರಿಯೆಯ ತಂಡವಾಗಿ ಬೌದ್ಧಸಿದ್ಧರ ಮೂಲದ ಅಸಿತವಕ್ತ್ರ ಅವಧೂತ ಕಾಳಾಮುಖರು ಇಲ್ಲಿಯೂ ದೂಷಿತಾಚಾರಗಳಲ್ಲಿ ನಿರತರಾಗಿದ್ದರೆಂದು ತೋರುತ್ತದೆ. ಇವರನ್ನು ಶ್ವೇತಮುಖಿಗಳನ್ನಾಗಿಸಿ (ಶ್ರೀ ಶೈಲದಲ್ಲಿದ್ದವರನ್ನು) ಶ್ವೇತಾಚಾರ್ಯರೆನಿಸಿದ ಶ್ರೀ ಪಂಡಿತಾರಾಧ್ಯ ಪರಂಪರೆಯ ಶ್ರೀ ಚಂದ್ರಗುಂಡ ಶಿವಾಚಾರ್ಯರು ಶ್ರೀಶೈಲದಲ್ಲಿದ್ದುದು ಹಾಗು ಹೈಹಯರಾಜ ವಂಶಿಕರನ್ನು ಸಜ್ಜನರನ್ನಾಗಿಸಿದ ಸಂಗತಿ ರಾಜೇಂದ್ರ ಚೋಳನಿಗೆ ತಿಳಿದಿರಬೇಕು. ಅವನಿಗೆ ಧಾರ್ಮಿಕವಾಗಿ ಈ ದೂಷಿತಾಚಾರದ ಅಸಿತವಕ್ತ್ರರನ್ನು ಎದುರಿಸುವ ಅಗತ್ಯ ಬಂದಿರಬೇಕು. ಬಹುಶಃ ಆ ಕಾರಣ ಶ್ರೀ ಚಂದ್ರಗುಂಡ ಶಿವಾಚಾರ್ಯರನ್ನು ಗುಯ್ಯಲೂರಿಗೆ ಪ್ರಾರ್ಥಿಸಿ ಕರೆತಂದಿರಬೇಕು. ಶ್ರೀಶೈಲದಲ್ಲಿ ತಮ್ಮ ಪೂರ್ವಜಗದ್ಗುರುಗಳು ಹಿಂದೆ ನಡೆಸಿದ ಕಾಯಕದಂತೆ, ಗುಯ್ಯಲೂರಿನಲ್ಲಿದ್ದ ಅಸಿತವಕ್ತ್ರಕ ತಂಡವನ್ನು ಪಾಂಡಿತ್ಯ ಹಾಗು ಇತರ ವಿಧಾನಗಳಿಂದ ಮಣಿಸಿ ವೀರಶೈವಕ್ಕೆ ದೀಕ್ಷೆ ನೀಡಿ ಶಿಷ್ಯರನ್ನಾಗಿಸಿರಬೇಕು. ಈ ಮಣಿಹವು ಸಾಂಕೇತಿಕವಾಗಿ 'ಎಡಗಿವಿಯಿಂದ ಕಪ್ಪುಹೊಗೆ ಗುಯ್ ಆಗಿ ಹೋದದ್ದು' ಎಂದರೆ ವಾಮಾಚಾರವನ್ನು ನಿರ್ಮೂಲಮಾಡಿ ವೀರಶೈವವನ್ನು ಇಲ್ಲಿ ಬೆಳಸಿದರು ಎಂದೇ ಅರ್ಥ ಕೊಡುವಂತಿದೆ. ಫುಲ್ಲಕವಿ ಅಂತೇ ಇವರನ್ನು 'ತಿಮಿರ ಚಂಡ ಮಾರ್ತಾಂಡ' ಎಂದಿದ್ದಾನೆ. ಇದಕ್ಕೆ ಪೂರಕವಾಗಿ ದೇಗುಲದ ಹೊರ ಆವರಣ ಅಥವಾ ಮುಖಿಗೋಪುರದಲ್ಲಿ ಭಂಟರ, ಶಿಷ್ಯರ ವಿಗ್ರಹಗಳು ಸಾಮಾನ್ಯವಾಗಿ ರೂಢಿಯ ಕೆತ್ತನೆ ಆಗಿರುವಂತೆ ಈ ಸಂಸ್ಥಾನದ ಗೂಳೂರು ಮಠದ ಹೊರ ಬೋದಿಗೆಗಳಲ್ಲಿ ಇಂದಿಗೂ ಸಿದ್ಧರ ರೂಪದ ಶಿಲ್ಪಗಳನ್ನು ಸಾಂಕೇತಿಕವಾಗಿ, ಮಿಥುನ ಶಿಲ್ಪ ಭಂಗಿ ಸಹಿತವಾಗಿ ಕಾಣಬಹುದು. ಈ ಕಾರಣಗಳಿಂದ ಗುಯ್ಯಲೂರು ಎಂಬ ಹೆಸರು ಒದಗಿರುವಂತಿದೆ.

ತೆಂಗಿನ ಮರ ಬಾಗಿ ನೀಡಿದ ಅಂಶ, ಇಚ್ಛಾ ಮಾನಸ ಶಕ್ತಿಯಿಂದ ಗ್ರಹಿಸಿದ ಸಂಗತಿಯಾಗಿ ಕಳಿತು ಬಿದ್ದ ನಾರಿಕೇಳದ ಸಂದರ್ಭಕ್ಕೆ ಸಮೀಕರಣವಾಗಿರಬೇಕು. ತೆಂಗು ನೀಡಿದ ನೆಲೆ ಇದಾದ್ದರಿಂದ 'ನೀಡು' ಎಂಬ ವಿಶೇಷಣವು ರೂಪಾಂತರಗೊಂಡು ಈ ಸಂಸ್ಥಾನದ ಹೆಸರಿಗೆ 'ನಿಡು' ರೂಪ ಹೊಂದಿಕೊಂಡಂತೆ ತೋರುತ್ತದೆ. ಮುಂದೆ 'ನಿಡು ಮಾಮಿಡಿ' ಎಂಬ ಹೆಸರು ಒದಗಲು ಇದೂ ಒಂದು ಕಾರಣವಿರಬಹುದೆನ್ನಲು ಅನಂತಪುರ-ಹೈದರಾಬಾದ್ ರಸ್ತೆಯಲ್ಲಿ, ಹೈದರಾಬಾದಿಗೆ ಸುಮಾರು ೩೦ ಕಿ.ಮಿ. ಮುನ್ನವೇ 'ಮಾಮಿಡಿ' ಎಂಬ ಗ್ರಾಮವೇ ಇದ್ದು, ಪೆನುಗೊಂಡೆ ತಾಲೂಕಿನಲ್ಲಿ 'ನಿಡುಮಾಮಿಡಿ' ಎಂಬ ಪ್ರತ್ಯೇಕ ಗ್ರಾಮವಿರುವುದೂ ಇಂದು ಗಮನಿಸಬೇಕಾದ ಸಂಗತಿ ಎನಿಸುತ್ತದೆ. ಇಲ್ಲಿ ನಿಡುಗಲ್ಲು ಚೋಳರ 'ರಾಜಗುರು' ಸಂಬಂಧವೂ ಇರಬಹುದು.

ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರ ಮಣಿಹಗಳಿಂದ ರಾಜೇಂದ್ರ ಚೋಳ ಪ್ರಭಾವಿತನಾದ. ಪೀಠದ ಸಂಪ್ರದಾಯಕ್ಕನುಗುಣವಾಗಿಯೋ, ಏನೋ ಚಂದ್ರಮೌಳೀಶ್ವರ ದೇಗುಲವನ್ನು ನಿರ್ಮಿಸಿದ ಅಥವಾ ತನ್ನ ಚಂದ್ರಗುಂಡ ಗುರುಗಳ ಹೆಸರಿನ ಸಂಕೇತವಾಗಿ ಜೀರ್ಣೋದ್ಧಾರ ಮಾಡಿದ ಎನಿಸುತ್ತದೆ. (ಹೈಹಯ ರಾಜವಂಶಿಕರಾದ ಸಜ್ಜನರಿಗೆ ಅನೇಕ ಕಡೆ ಆರಾಧ್ಯದೈವವಾಗಿ ಈ ದೇವರ ದೇಗುಲಗಳಿವೆ) ಒಂದು ಬೃಹನ್ಮಠವನ್ನು ಅವರ ನಿಡುವಾಸ್ತವ್ಯಕ್ಕೆ ಈ ದೇಗುಲವನ್ನೊಳ

ಗೊಂಡಂತೆ ಕಟ್ಟಿಸಿಕೊಟ್ಟ. ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರು ಅಲ್ಲಿ ಸ್ಥಿರ ನಿವಾಸವನ್ನು ಏರ್ಪಡಿಸಿಕೊಂಡರು. ಸಿಂಹಾಸನ-ಸಂಸ್ಥಾನ ಪೀಠವಾಗಿಸಿ ಪೂರ್ವ ಸಂಪ್ರದಾಯವನ್ನು ಮುಂದುವರಿಸಿದರು; ಮುಂದೆ ಅಲ್ಲಿಯೆ ಲಿಂಗೈಕ್ಯರಾಗುವಲ್ಲಿ[೩೫] 'ಜೀವಂತ ಕ್ರಿಯಾಸಮಾಧಿಗೊಂಡರು ಎಂದು ಕೇಳಿಬರುತ್ತದೆ.

ರಾಜೇಂದ್ರಚೋಳ ಹಾಗು ಅವನ ರಾಣಿ ಕನಕವಲ್ಲಿಯನ್ನು ಇಲ್ಲಿ ಶಿವಾಚಾರಕ್ಕೆ ತೊಡಗಿಸಿದ ಮೇಲೆ ಧರ್ಮ ಜಾಗೃತಿಗಾಗಿ ದೇಶಸಂಚಾರಕ್ಕೆ ಹೊರಟರು. ಕರ್ನಾಟಕ, ಆಂಧ್ರ, ದ್ರಾವಿಡ, ಕೇರಳ, ಮಹಾರಾಷ್ಟ್ರ ಪ್ರಾಂತಗಳಲ್ಲಿ ಸಂಚರಿಸಿದರು. ರಾಚೋಟಿ, ಹುಮನಾಬಾದ್, ಹಂಪೆ, ಗೊಡಚಿ, ಚಿತ್ರಾವತಿ, ನಂದಿ, ಗೂಳೂರು ಮುಂತಾದ ನಾಡಿನ ಅನೇಕ ಪಟ್ಟಣ ಹಾಗು ಗ್ರಾಮಗಳಲ್ಲಿ ಶಿವಾಗಮೋಕ್ತವಾಗಿ ವೀರಭದ್ರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು. (ಗೊಡಚಿಯಲ್ಲಿ ವೀರಭದ್ರನ ಹಿಂಬದಿಯ ಗುಡಿಯಲ್ಲಿ ಇಂದೂ ಕಾಣುವಂತೆ ಆಸೀನ ಮುದಿವೀರಣ್ಣ -ಮುದಿವೀರಭದ್ರನ ('ಶಿವ'ನೆನ್ನುವುದುಂಟು) ಗುಡಿ ಇರುವುದು ವಿಶೇಷ. ಇದು ಬೌದ್ಧ ಸಿದ್ಧ ಅವಧೂತರ ನೆಲೆ ಆಗಿದ್ದ ಬಗ್ಗೆ ಕುರುಹುಗಳು ಕಾಣಬರುತ್ತವೆ. ಕೋಲಾರ, ವಾಪಸಂದ್ರ, ಗೋಳ್ಳಾಪುರ, ಗುಡಿಬಂಡೆ, ಹುಣಸಮಾರನಹಳ್ಳಿ, ಲೇಪಾಕ್ಷಿ, ಪೆನುಗೊಂಡೆ, ಐತಾಂಡಹಳ್ಳಿ, ಬೆಟ್ಟದಪುರ[೩೬] ಇತ್ಯಾದಿ ಕಡೆ ಶಾಖಾಮಠಗಳನ್ನು ಸ್ಥಾಪಿಸಿದರು. ಇವಲ್ಲದೆ ತಮ್ಮ ಸಂಚಾರದ ಉಳಿದ ಮೇಲ್ಸೂಚಿತ ಪ್ರದೇಶಗಳಲ್ಲೆಲ್ಲ ಇದೇ ಮಣಿಹವನ್ನು ಮಾಡಿ ಪ್ರಭಾವ ಬೀರಿರುವ ಸಾಧ್ಯತೆಗಳನ್ನು ಗಮನಿಸಬಹುದು.

ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲೂಕು ತೊಂಡವಾಡಿಯ ಶಾಸನದಲ್ಲಿನ 'ರಾಚವಟ್ಟಿ ವೀರಭದ್ರ'ನು ಕುಲದೇವರಾಗಿರುವ ಉಲ್ಲೇಖವಿದೆ.[೩೭] ಇದು ರಾಚೋಟಿ (ರಾಚಹಟ್ಟಿ) ವೀರಭದ್ರನಿಗೆ ಅನ್ವಯವಾದ ವಿಷಯವಾಗಿದ್ದು ಆ ಪ್ರದೇಶದಲ್ಲಿ ಆ ದೇವರ ಪ್ರಭಾವವು ೧೨-೧೩ನೇ ಶತಮಾನಗಳಲ್ಲಿಯೂ ಇದ್ದ ಬಗ್ಗೆ ಸೂಚನೆ ಆಗುತ್ತದೆ. ಕ್ರಿ.ಶ. ೧೦೪೪ರ ತಮಿಳುನಾಡಿನ ಮಹಾದೇವ ದೇಗುಲ ಮಠದ ಶಾಸನದಲ್ಲಿ ಈ ಹಿಂದೆಯೂ ಹೇಳಿರುವಂತೆ 'ಪರ್ವತಿರ ಮಾಣಿಕ ಮಠ' ಚಂದ್ರಗುಂಡರ ಸಂಚಾರ ಕಾಲದಲ್ಲಿ ರೂಪಿತವಾಗಿರಬಹುದೆನ್ನಲು ಅದು ಶ್ರೀಶೈಲ ಸೂತ್ರ ಸಂಬಂಧಿಯಾಗಿರುವುದೂ ಕಾರಣ ಎನಿಸುತ್ತದೆ. ಚೋಳರು ಕ್ರಿ.ಶ. ೧೦೦೪ರಲ್ಲಿ ಗಂಗರು ಹಾಗು ಅವರ ಮಾಂಡಲಿಕರಾಗಿದ್ದ ಕೊಡಗಿನಲ್ಲಿಯ ಚಂಗಾಳ್ವರನ್ನು ಸೋಲಿಸಿದರು. ಕ್ರಿ.ಶ. ೧೧೦೬ರ ವರೆಗೆ ಚೋಳರ ಮಾಂಡಲಿಕರಾಗಿ ಅವರು ಕೊಡಗನ್ನು ಆಳುತ್ತಿದ್ದರು. ಚೋಳರು ೧೧ನೆಯ ಶತಮಾನದಲ್ಲಿ ಕೊಡಗಿನ ಪೂರ್ವದ ಕಾವೇರಿ ದಂಡೆಯಲ್ಲಿ(ನಂಜರಾಯಪಟ್ಟಣ ಪ್ರದೇಶ)'ಚೋಳಪ್ರತಿಷ್ಠಾ ವೀರಭದ್ರ'ನನ್ನು ಪ್ರತಿಷ್ಠಾಪಿಸಿದರು.[೩೮] ಇದಲ್ಲದೆ ಕೊಡಗಿನ ೧೧ನೇ ಶತಮಾನದ ಬಿಳುಗುಂದದ ಹೊಸ ವೀರಶಾಸನದಲ್ಲಿ ಬರುವ ಗುರುಸ್ತುತಿಯಲ್ಲಿನ 'ಗೋಪತಿ..... ಭದ್ರಗೋತ್ರಾ ಶಿಕ್ಷರ್' ಸಂಬಂಧಗಳೂ ಚಂದ್ರಗುಂಡರಿಗೆ ಬಹುಶಃ ಅನ್ವಯವಾಗುವುದಿದೆ. ಅಂದರೆ ಚೋಳನಾಡಿನಲ್ಲಿ ವೀರಶೈವಮಠಗಳನ್ನು ಸ್ಥಾಪಿಸಿ ಚೋಳರ ಕೆಲವು ಅರಸರನ್ನೂ ಅವರು ವೀರಶೈವಕ್ಕೆ ಆಕರ್ಷಿಸಿರಬೇಕು. ಅದರ ಫಲವಾಗಿ ಗುರುವಿನ ನಿರ್ದೇಶನದಂತೆ ಚೋಳರು ವೀರಭದ್ರ ಪ್ರತಿಷ್ಠೆಗಳನ್ನು ಮಾಡಿರಬೇಕು ಎನಿಸುತ್ತದೆ. ಇದಕ್ಕೆ ರಾಜೇಂದ್ರಚೋಳನಿಗೆ ಚಂದ್ರಗುಂಡರು ಕುಲಗುರುವಾದ ಪ್ರಭಾವವೂ ಕಾರಣವಿರಬೇಕು. ಪೀಠದ ಶಾಖಾಮಠಗಳ ಪಟ್ಟಿಯಿಂದಲೂ ಇದಕ್ಕೆಲ್ಲ ಪೂರಕ ಬೆಂಬಲವಿರುವಂತಹ ಸಾಕ್ಷ್ಯಗಳು ದೊರೆಯುತ್ತವೆ.

ಗಾಣಿಗ, ಗಳಿಗೌ, ಬಣಜಿಗ, ಬಳೆಗಾರ, ಹೂಗಾರ, ಈಡಿಗ, ಬೆಸ್ತ, ಕುಂಬಾರ, ಸಂಪಿಗ ಮೊದಲಾದ ಕೆಳಗಾಗಿಸಿದ್ದ ವಂಚಿತ ವರ್ಗದ ಹದಿನೆಂಟು ಕುಲದವರನ್ನು ವೀರಶೈವಕ್ಕೆ ಆಗುಮಾಡಿದರು. ಇಂದಿಗೂ ಈ ೧೮ ಫಣಕಟ್ಟಿನ ಗುರುತ್ವ ಶ್ರೀ ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರಿಂದಾಗಿ ಈ ಪೀಠಕ್ಕಿದೆ.[೩೯] ಆದರೆ ಆಂಧ್ರ ಹಾಗೂ ಕರ್ನಾಟಕದ ಈ ಫಣಕಟ್ಟಿನಲ್ಲಿ ತುಸು ಬೇರೆ ಬೇರೆ ಜನಾಂಗಗಳು ಸೇರಿರುವಂತೆ ಕಾಣುತ್ತದೆ.[೪೦] ಪುಲ್ಲಕವಿ ಹೇಳುವಂತೆ ಈ ಪೀಠ ಸಕಲ ಛಾತ್ರ ನಿವಾಸವಾಗಿತ್ತು. ಅನುಭಾವಿಗಳ ಕೇಂದ್ರವಾಗಿತ್ತು. ವಿದ್ಯಾರ್ಥಿಗಳಿಗೆ ಅನುವಾಗಿತ್ತು. ಅಂತೇ ಶ್ರೀಗಳವರು 'ನಿಡುಮಾಮಿಡಿ' ಎಂಬ ಬಿರುದು ಪೀಠಕ್ಕೆ ಅರ್ಥಪೂರ್ಣವಾಗಿ ಬರುವಂತೆ ಶ್ರಮಿಸಿದರೆನ್ನಲಾಗಿದೆ.

ಮುಂದಿನ ವೃಷಭರಾಜೇಂದ್ರ ಶಿವಾಚಾರ್ಯರು ಶ್ರೀ ಚಂದ್ರಗುಂಡ ಶಿವಾಚಾರ್ಯರ ಕರಸಂಜಾತರು. ಧಾರವಾಡದ ಬಳಿ ನರೇಂದ್ರದಲ್ಲಿ ನೆಲೆನಿಂತು ಮಠಸ್ಥಾಪಿಸಿದರು. ರಾಜನೊಡ್ಡಿದ ಸ್ಪರ್ಧೆಯಲ್ಲಿ ಗೆದ್ದು ಪಡೆದ ಗ್ರಾಮದಾನವನ್ನು ಆನೆ ಕಾಯುತ್ತಿದ್ದ ಬೊಮ್ಮಪ್ಪನಿಗೆ ನೀಡಿ ಬದುಕು ಹಸನು ಮಾಡಿದರಂತೆ. ಇವರು ರಾಜಗುರುಗಳಾಗಿದ್ದರೆಂದು ಪ್ರತೀತಿ ಇದೆ. ಈ ನರೇಂದ್ರ ಮಠದ ವಶಿಗಿದ್ದ ವಿಸ್ತಾರ ಭೂಮಿಯನ್ನು ಧಾರವಾಡಕ್ಕೆ ಇಂದಿನ ಕೃಷಿ ಕಾಲೇಜಿಗೆ ದಾನ ನೀಡಲಾಗಿದೆ. ೧೯೬೩ ರಲ್ಲಿ ಇಲ್ಲಿನ ಅವರ ಮಠ ಹಾಗು ಗದ್ದುಗೆಗಳು ಜೀರ್ಣೋದ್ಧಾರವಾದುವು.

ಮುಂದಿನ ಮುಖ್ಯರು ಜ॥ ಕರಿಬಸವ ದೇಶಿಕೇಂದ್ರ ಶಿವಾಚಾರ್ಯರು. ಇವರಿಗೆ ಚರಪಟ್ಟಾಧಿಕಾರವಿತ್ತೆನ್ನಲಾಗಿದೆ.[೪೧] ನಂತರ ಶ್ರೀಮರಿಕರಿಬಸವ ದೇಶಿಕೇಂದ್ರರು, ಇಮ್ಮಡಿ ಕರಿಬಸವ ದೇಶಿಕೇಂದ್ರರು ಬಂದವರಾಗಿದ್ದಾರೆ. ಪುಲ್ಲಕವಿ ನೀಡಿರುವ ಪಟ್ಟಾವಳಿಯ ರೀತ್ಯಾ ಇವರ ಕಾಲ ಅನುಕ್ರಮವಾಗಿ ಕ್ರಿ.ಶ. ೧೨೦೦ ರಿಂದ ೧೨೪೪ಕ್ಕೆ ಆಚೆಗೆ ಹೋಗುತ್ತದೆ. ಹಾಗು ಅವರ

ಲಿಂಗೈಕ್ಯ ನೆಲೆಗಳನ್ನು ನಿಡುಮಾಮಿಡಿ, ಕೂಡಲಸಂಗಮ, ಇಂದ್ರಗಿರಿ ಎಂದಿದೆ.[೪೨] ಶ್ರೀ ಜಚನಿ ಅವರು ತಿದ್ದುಪಡಿಯಲ್ಲಿ ಅನುಕ್ರಮವಾಗಿ ತೇರದಾಳ ಕೂಡಲಸಂಗಮ ಹಾಗೂ ನಿಡುಮಾಮಿಡಿ ಎಂದು ಸೂಚಿಸಿದ್ದಾರೆ.[೪೩] ಪೀಠದಲ್ಲಿ ಮುಖ್ಯವಾಗಿ ಗೋತ್ರ ಪುರುಷ 'ವೃಷಭ' ಆಗಿರುವ ಕಾರಣ ಆದರ ಸಂಕೇತವಾಗಿ ಸುಮಾರು ೨೦-೨೫ ಗುರುಗಳು 'ಕರಿಬಸವ' ಹೆಸರಿನೊಡನೆ ವಿಶೇಷಣ ಸಹಿತವಾಗಿ ಆಗಿಹೋಗಿ ನಿಡುಮಾಮಿಡಿ ಪವಾಡದ ಕಾರಣ ಯಾರ ಹೆಸರಲ್ಲಿ ಅದು ನಡೆಯಿತು ಎಂಬುದು ಮುಖ್ಯವಾಗುತ್ತದೆ. ಏಕೆಂದರೆ ಪೀಠಕ್ಕೆ ಅದು ಮುಖ್ಯ ಹೆಸರಾಗಿ ಐಕ್ಯಗೊಂಡಿದೆ. (ಈ ಹೆಸರುಗಳ ಆವರ್ತನೆಯಿಂದ ಇತಿಹಾಸದ ಘಟನೆಗಳ ಹೊಂದಿಕೆಯು ತುಸು ಕಷ್ಟಕರವಾಗಿದೆ.)

೧೨ನೆಯ ಶತಮಾನದಲ್ಲಿ ಅಲ್ಲಮ ಪ್ರಭುವಿನೊಡನೆ ಇದ್ದು[೪೪] (ಗುಪ್ತಯೋಗ ಸಮಾಗಮದಲ್ಲಿದ್ದು) ವೀರಶೈವದ ಪ್ರಸಾರ ಕಾರ್ಯ ಮಾಡಿದವರು ಕರಿಬಸವ ದೇಶಿಕೇಂದ್ರರು. ನಿಡುಮಾಮಿಡಿ ಕರಿಬಸವೇಶ್ವರ ಪುರಾಣದ ರೀತ್ಯಾ ಇವರು ಒಣಗಿದ ಮಾಮರ ಚಿಗುರಿಸಿದವರು. ಇದರಿಂದ ಗುರುಸ್ಥಲ, ಶೂನ್ಯಸ್ಥಲ (ವಿರಕ್ತ) ಸಂಪ್ರದಾಯಗಳಲ್ಲಿ ಯಾವಭೇದವೂ ವೀರಶೈವದ ಪ್ರಸಾರ ಕಾರ್ಯದಲ್ಲಿ ಇರಲಿಲ್ಲ ಎಂಬುದು ಸೂಚಿತವಾಗುತ್ತದೆ. ಸೂರ್ಯಸಿಂಹಾಸನ ಹಾಗೂ ಶೂನ್ಯ ಸಿಂಹಾಸನದ ಸಮನ್ವಯ ಸಹಯೋಗದ ಸಂಕೇತ ಇದೆಂದು ತೋರುತ್ತದೆ. ಬಹುಶಃ ಇಂತಹುದೇ ಸಂವಾದಿ ಉದಾಹರಣೆ ತಮಿಳುನಾಡಿನ ಕುಂಭಕೋಣದ ಪೆರಿಯಮಠವು, ವೀರಸಿಂಹಾಸನ, ಶೂನ್ಯಸಿಂಹಾಸನದ ಸಮನ್ವಯ ಸಂಕೇತವಾಗಿ '**ವೀರಸಿಂಹಾಸನ-ಮುರುಘಾ ಬೃಹ್ಮತರ್ಕ**' ಎಂದು[೪೪-೧] ಚಾಲ್ತಿಗೊಂಡದ್ದೇ ಆಗಿದೆ ಎನಿಸುತ್ತದೆ. ಜ॥ ಕರಿಬಸವೇಂದ್ರರ ನಿಡುಮಾಮಿಡಿಯ ಈ ಘಟನೆ ೧೬ನೆಯ ಶತಮಾನದ 'ಕಲ್ಲು ಮಠದ ಪ್ರಭುದೇವ'ನ ಕಾಲಕ್ಕೆ ಸಂಬಂಧಿಯಾದುದಲ್ಲ ಎಂಬುದು ಮುಂದಿನ ಸಂಗತಿಗಳಿಂದ ವಿದಿತವಾಗುತ್ತದೆ. ಕ್ರಿ.ಶ. ೧೧೨೬ ರಾಕ್ಷಸ ಸಂವತ್ಸರ ಕಾರ್ತಿಕ ಶು॥ ೫ (೩೦-೧೦-೧೨೦೪)ರ ವಂಶಾವಳಿಯ (ಹೆಳವರ) ಕಂಚಿನ ಶಾಸನದ ಪ್ರತಿಯಲ್ಲಿ ಆ ಮನೆತನದ ಮನೆದೇವರು ವೀರಭದ್ರದೇವರು, ಇವರ ಗುರುಗಳು ನಿಡುಮಾಮಿಡಿ ಕರಿಬಸವಸ್ವಾಮಿಗಳು, ಎಂದಿರುವ ಕಾರಣ[೪೫] ೧೨೦೪ರ ಸಾಕಷ್ಟು ಮುನ್ನವೆ 'ನಿಡುಮಾಮಿಡಿ' ಪವಾಡ ನಡೆದು ಅಲ್ಲಿ ಮಠವಿದ್ದ ಬಗ್ಗೆ ಬೆಳಕು ಬೀರುತ್ತದೆ. ಅಲ್ಲಮ ಪ್ರಭುವಿನ ಸಂದರ್ಭಕ್ಕೆ ಒಪ್ಪಿ ಹೇಳಿದರೆ ಕ್ರಿ.ಶ. ೧೧೫೦-೧೧೭೫ರ ಸುಮಾರಿಗೆ ಮಾವಿನ ಮರ ಚಿಗುರಿಸಿದ ಸಂಗತಿ ಒದಗುತ್ತದೆ. ಶ್ರೀ ಜಚನಿ. ಈ ಸಂಗತಿಯನ್ನು ಇಮ್ಮಡಿ ಕರಿಬಸವರಾಜ ದೇಶಿಕೇಂದ್ರರಿಗೆ ಹೊಂದಿಸಿದ್ದಾರೆ. ಅವರ ಕಾಲ ಕ್ರಿ.ಶ. ೧೨೦೦ರ ಸುಮಾರಿಗಿಟ್ಟುಕೊಂಡರೆ ಮಾತ್ರ ಈ ಸಂಗತಿಗೆ ತಾಳೆ ಆಗುತ್ತದೆ. ಅದು ಹೇಗೇ ಆದರೂ ಕ್ರಿ.ಶ. ೧೨೦೦ರ ಮುನ್ನಾ ಈ ಘಟನೆ ನಡೆದಿರುವುದು ಸಹಜ. ಆದರೆ ಅದಕ್ಕೆ ಸುತರ್ಕವನ್ನು 'ಪವಾಡ'ದ ಪರಿಧಿಯಲ್ಲೇ ನಿಲ್ಲಿಸದೆ ಒದಗಿಸಬಹುದು. ಕಾರಣ ಅದೊಂದು ಸಮಾಜೋಪಯೋಗಿ ಕೈಂಕರ್ಯವಾಗಿದೆ.

೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಗುಯ್ಯಲೂರಿನಿಂದ ಧರ್ಮಪ್ರಸಾರಕ್ಕೆ ಜ॥ ಕರಿಬಸವ ದೇಶಿಕೇಂದ್ರರು ಸಂಚಾರ ಹೊರಟು ಪೆನುಗೊಂಡೆಯ ಸನಿಹದ ಸ್ವರ್ಣವತೀ ತೀರದ ಸೋಮಲಾಪುರದ ಬಳಿಗೆ ಬಂದು ಒಣಮಾಮರದ ಬಳಿ ಶಿವಪೂಜಾ ನಿಷ್ಠರಾದರು. ಆ ಮರಕ್ಕೆ ಅಭಿಷೇಕ ಜಲ ಎರೆದು ಚಿಗುರಿಸಿ ಹೂವು ಹಣ್ಣುಗಳನ್ನು 'ನೀಡುಮಾಮಿಡಿ' ಎಂದು ಭಿಕ್ಷೆಬೇಡಿ ಪಡೆದರಂತೆ. ಆ ಕಾಲದ ಪೆನುಗೊಂಡೆಯ ಬಹುಶಃ ಹೊಯ್ಸಳ ವಂಶಿಕರಲ್ಲಿ ಒಬ್ಬನಾಗಿದ್ದ ಅಚ್ಯುತರಾಯನೆಂಬ ರಾಜ, ಈ ಮಹಿಮೆ ಕೇಳಿ ಬಂದು ತನ್ನ ಭಕ್ತಿ ಗೌರವಗಳನ್ನು ಅರ್ಪಿಸಿ ನಿಡುಮಾಮಿಡಿ ಮಠವೆಂದು ಕಟ್ಟಿಸಿಕೊಟ್ಟನಂತೆ. ಇದನ್ನು ತುಸು ವಿವೇಚಿಸಬಹುದು ಹೀಗೆ : ನಿಡು ಎಂಬ ಶಬ್ದಕ್ಕೆ 'ಉದ್ದ' ಎಂಬ ಅರ್ಥವಿದೆ. ನೀರಿಲ್ಲದೆ ಒಣಗುತ್ತಿದ್ದ ಮಾವಿನಮರಗಳಿಗೆ ನೀರಿನ ಆಸರೆಯನ್ನು ಒಣಗಿದ್ದ ನದಿಯನ್ನು ತೋಡಿ ಒದಗಿಸಿ ರಕ್ಷಿಸಿ ಪೋಷಿಸಿದ ಕಾರ್ಯವನ್ನು ಶಿಷ್ಯರೊಡಗೂಡಿ ಗುರುಗಳು ಸಾರ್ಥಕವಾಗಿ ಪೂರೈಸಿರಬೇಕು. ಗುರುಗಳ ಮೇಲಿನ ಭಕ್ತಿ, ಗೌರವಗಳಲ್ಲದೆ ತಮಗಾದ ಅನುಕೂಲದಿಂದಾಗಿಯೂ ಜನರಲ್ಲಿ ಅದು ಪವಾಡದ ಕತೆಯಾಗಿ ರೂಪುಗೊಂಡಿರುವಂತಿದೆ. ಅದು ಬಹುಶಃ ಅಚ್ಯುತರಾಯನ ರಾಣಿಯ ಅಥವಾ ಹೊಯ್ಸಳ ಬಲ್ಲಾಳನ ಮಗಳ ಹೆಸರಿನಲ್ಲಿದ್ದ ಸೋಮಲಾಪುರವು 'ನಿಡುಮಾಮಿಡಿ' ಎಂಬ ಪ್ರತಿ ನಾಮಧೇಯವನ್ನು ಹೊಂದಿ ಪ್ರಸಿದ್ಧವಾಗಿರಬೇಕು.[೪೬] ನಂತರದ ಗುರುಗಳಿಗೆ ಪೆನುಗೊಂಡೆಯ ರಾಜಾಶ್ರಯವು ವಿಜಯನಗರದ ಕಾಲದವರೆಗೂ ಇದ್ದಕಾರಣ ಅಲ್ಲಿಯೇ ನೆಲೆನಿಂತು ಪೀಠಕ್ಕೆ ಆ ಹೆಸರೇ ಮುಖ್ಯವಾಗುವಂತೆ ಪ್ರಸಿದ್ಧಿಗೊಳ್ಳಲೂ ಕಾರಣವಾಯಿತು. ಒಂದು ರೀತಿಯಲ್ಲಿ ಪರಿಸರ ಪೋಷಣೆಯು ಬಂಜರು ನೆಲದಲ್ಲಿ ನಡೆದ ಸಂಕೇತವಾಗಿ ಈ ಹೆಸರು ಉಳಿಯಿತೆನ್ನಬೇಕು. ಅಲ್ಲದೆ 'ಮಾಮಿಡಿ' ಎಂಬ ಹೆಸರಿನ ಬೇರೊಂದು ಗ್ರಾಮವು ಹೈದರಬಾದ್‌ಗೆ ಸು.೩೦ ಕಿ.ಮೀ. ದೂರದಲ್ಲಿ ಇರುವುದು, ಇದರ ಪ್ರಭಾವ ಹಾಗೂ ವೈಶಿಷ್ಟ್ಯತೆಯನ್ನು ಸೂಚಿಸುತ್ತದೆ. 'ನಿಡುಮಾಮಿಡಿ' ಎಂಬ ಹೆಸರು ಬಹಳ ಪ್ರಭಾವಪೂರ್ಣವಾಗಿತ್ತು. ಇದಕ್ಕೆ ಸಾಕ್ಷಿ ಎಂದರೆ ಮುಂದೆ ಕ್ರಿ.ಶ. ೧೨೩೫ರ ಮೋಡಿಲಿಪಿಯ ಬರಹದಲ್ಲಿ, ೧೬ನೇ ಶತಮಾನದ ತೀರಮುನ್ನಿನ ನಂದಿನಾಗರಿಲಿಪಿಯ ಶಿಖಾಮುದ್ರೆಯಲ್ಲಿ, ಕ್ರಿ.ಶ. ೧೪೯೯ರ ಬರಹವೊಂದರಲ್ಲಿ ಕ್ರಿ.ಶ. ೧೮೧೬ರ

ಚಿಂಚೋಳಿಯ ಪತ್ರದಲ್ಲಿ ಕ್ರಿ.ಶ. ೧೪೩೮ರ ನಿಡುಮಾಮಿಡಿಯ ಶಾಸನದಲ್ಲಿ ಹಾಗು ಹೀಗೆಯೇ ೧೮೩೭ರ ವರೆಗಿನ ಪತ್ರಗಳಲ್ಲಿ ಈ ಹೆಸರು ಪೀಠಕ್ಕೆ ಅಂಟಿಕೊಂಡೇ ಪ್ರಸಿದ್ಧವಾಗಿದೆ. ಈ ನಿಡುಮಾಮಿಡಿ ಶ್ರೀಶೈಲ ಸಂಸ್ಥಾನಕ್ಕೆ ಪೀಠದ ಶಿಷ್ಯರು ಸಂರಕ್ಷಣೆ, ನಿರ್ವಹಣೆ, ಆಚಾರಗಳಿಗೆಂದು ನೀಡಿದ ಆಂಧ್ರದ ಅನಂತಪುರ ಜಿಲ್ಲೆಯ ಗ್ರಾಮಗಳ ಜಮೀನುಗಳ ಪಹಣಿಯಲ್ಲಿ ಪರಂಪರೆಯಲ್ಲಿ ಪೀಠದ ಹೆಸರು ನಮೂದುಗೊಂಡ ಬಗೆಗಳನ್ನು ತಿಳಿಸುತ್ತವೆ. ಇಂದಿನ ಕಿರಿಯ ಸನ್ನಿಧಿಯವರಾದ ಶ್ರೀ ವೀರಭದ್ರ ಚೆನ್ನಮಲ್ಲ ಮಹಾಸ್ವಾಮಿಯವರ ಬಳಿ ಇರುವ ಪಹಣಿಗಳನ್ನು ಗಮನಿಸಿದಾಗ, 'ನಿಡಿಮಾಮಿಡಿ ಶ್ರೀಶೈಲ ಸಂಸ್ಥಾನಮು', 'ನಿಡಿಮಾಮಿಡಿ ಶ್ರೀಶೈಲ ಮಠಂ ಸಂಸ್ಥಾನ', 'ಗೂಳೂರು ನಿಡುಮಾಮಿಡಯ್ಯ ಮಠಮು', 'ಗೂಳೂರು ಜಂಗಂ ನಿಡುಮಾಮಿಡಿ ಮಠ', ಇತ್ಯಾದಿ ಹೆಸರುಗಳು ಕಾಣಬರುತ್ತವೆ. ಅದೇ ಇಡಗೂರು ರುದ್ರಕವಿ ತನ್ನ ವಿರೂಪಾಕ್ಷ ಮಹಾತ್ಮೆಯಲ್ಲಿ 'ಶ್ರೀಮನ್ನಿಡುಮಾಮಿಡಿ ಕನಕಸಿಂಹಾಸನಾಧೀಶ್ವರುಲಗು', ಕ್ರಿ.ಶ. ೧೫೮೫ರ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ 'ನಿಡುಮಾಮಿಡಿಯ ಕರಿಬಸವೇಶ', ಕ್ರಿ.ಶ. ೧೩೯೯ರ ಪೀಠದ ಪತ್ರವೊಂದರಲ್ಲಿ 'ಶ್ರೀ ನಿಡುಮಾಮಿಡಿ ಮಣಿಖಚಿತ ಕನಕಸಿಂಹಾಸನ' ಕ್ರಿ.ಶ. ೧೪೧೭ರ ಗರವನಹಳ್ಳಿಯ ಪತ್ರದಲ್ಲಿ 'ನಿಡುಮಾಮಿಡಿ ಕರಿಬಸವೇಶ್ವರ', ನಿಡುಮಾಮಿಡಿಯ ಶಾಸನ (ಕ್ರಿ.ಶ. ೧೪೩೮)ದಲ್ಲಿ 'ನಿಡುಮಾಮಿ(ಡಿ)ವಿನ ಸುದೇವಸ್ಥಾನ', ಪಂಡಿತಾರಾಧ್ಯ ಚರಿತ್ರೆಯ ಪ್ರತಿಯಲ್ಲಿ 'ಕನಕಪುರಾಯಿ ಸಿಂಹಾಸನಂ ನಿಡುಮಾಮಿಡಿ' ಎಂದಿದೆ. ಅಂದರೆ ಪ್ರಾದೇಶಿಕ ಪಾಠಾಂತರಗಳಾಗಿ 'ನಿಡಿಮಾಮಿಡಿ' ಹಾಗು 'ನಿಡುಮಾಮಿಡಿ' ಎಂಬ ಪ್ರಯೋಗಗಳು ಒಂದೇ ಅರ್ಥದಲ್ಲಿ ಕಾಣಬರುತ್ತವೆ ಎಂದಾಗುತ್ತದೆ. ಈ ಕಾರಣಕ್ಕೆ 'ನಾರಿಕೇಳ' ಪವಾಡವನ್ನು ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ (ಕ್ರಿ.ಶ. ೧೫೮೫) ಹಾಗು ಸಂಪಾದನೆಯ ಸಿದ್ಧನಂಜೇಶರ (ಕ್ರಿ.ಶ. ೧೬೭೯), ಗುರುರಾಜ ಚಾರಿತ್ರದಲ್ಲಿ 'ನಿಡುಮಾಮಿಡಿಯ ಕರಿಬಸವೇಶ'ರಿಗೆ ಚಂದ್ರಗುಂಡ ದೇಶಿಕೇಂದ್ರರ ಬದಲು ಅನ್ವಯಿಸಿ ಬಿಡಲಾಗಿದೆ ಎನ್ನಿಸುತ್ತದೆ.

೧೪ನೆಯ ಶತಮಾನದಲ್ಲಿ ಹಕ್ಕಬುಕ್ಕರು ವಿಜಯನಗರ ಸ್ಥಾಪನೆ ಮಾಡುವಲ್ಲಿ ಅವರ ಕುಲಗುರು, ರಾಜಗುರುವಾಗಿ ಕಾಶಿವಿಲಾಸ ಕ್ರಿಯಾಶಕ್ತಿಯ ಹಾಗು ವಿದ್ಯಾರಣ್ಯರ ಪಾತ್ರವೂ, ಆಶೀರ್ವಾದವೂ ಇತ್ತು.[೪೭] ಈ ಕಾಶೀ- ವಿಲಾಸ ಕ್ರಿಯಾಶಕ್ತಿಗಳು ಮೊದಲಿಗೆ ಕಾಳಾಮುಖ ಪಂಗಡದವರೆನಿಸಿದ್ದರು. ಶ್ರೀಶೈಲ ನಿಡುಮಾಮಿಡಿ ಪೀಠದ ಆಚಾರ್ಯರಿಂದ (ಬಹುಶಃ ಇಮ್ಮಡಿ ಕರಿಬಸವ ದೇಶಿಕೇಂದ್ರರು !) 'ನಿಜೇಷ್ಟಲಿಂಗ ಧೃತಾಧಿಷ್ಠಾನ'ರಾಗಿ ವೀರಶೈವ ದೀಕ್ಷೆ ಪಡೆದು ನಿಡುಮಾಮಿಡಿ ಪೀಠದ ಆಚಾರ್ಯರೂ ಆದರೆನ್ನಲಾಗಿದೆ[೪೮]. ೧೪ನೇ ಶತಮಾನದ ಕಾಕತೀಯ ಅರಸ ಪ್ರತಾಪರುದ್ರದೇವನಿಗೂ ಈ ಪೀಠದ ಆಚಾರ್ಯರು ಪೂಜ್ಯರಾಗಿದ್ದರು.

೧೫ನೆಯ ಶತಮಾನದಲ್ಲಿ ನಿಡುಮಾಮಿಡಿಯಲ್ಲಿರುವ ಕ್ರಿ. ಶ. ೧೪೩೮ರ ಬಸವನ ವಿಗ್ರಹದ ತಳಪೀಠದ ಪಾರ್ಶ್ವದಲ್ಲಿರುವ ಶಾಸನದ ರೀತ್ಯಾ 'ಶ್ರೀ ಮುದ್ರಾಯ ರಾಜಗುರು ಮಂಡಲಾಚಾರ್ಯ ಶ್ರೀ ಚಂದ್ರ ಭೂಷಣದೇವವೊಡೆಯರ ನಿಡುಮಾಮಿಡಿನ ದೇವಸ್ಥಾನದಲಿ' ಬಸವನ ವಿಗ್ರಹಸ್ಥಾಪನೆಯ ವಿಷಯವಿದೆ. ಪಟ್ಟವಲ್ಲರಿಯಲ್ಲಿಯೂ ಹೀಗೆಯೇ ಹೆಸರಿದ್ದು ವಿಜಯನಗರದರಸ ಇಮ್ಮಡಿ ದೇವರಾಯನ (ಕ್ರಿ.ಶ. ೧೪೨೪-೪೬) ರಾಜಗುರುವಾಗಿದ್ದ ಕುಲಗುರುವಾಗಿದ್ದ ಸೂಚನೆ ಇಲ್ಲಿ ಸಿಗುತ್ತದೆ. ಹಂಪೆಯ ಅರಸರ ಪ್ರಭಾವದಿಂದಲೋ ಏನೋ ನಿಡುಮಾಮಿಡಿ ಜಗದ್ಗುರುಗಳ ಪತ್ರವ್ಯವಹಾರಗಳಲ್ಲಿ ಮಂಗಳವಾಚಕವಾಗಿ 'ಶ್ರೀವಿರೂಪಾಕ್ಷ' ಎಂಬ ಪದ ನಿಡುಮಾಮಿಡಿ ಸಂಸ್ಥಾನದ ಶಿಖಾಮುದ್ರಿಕೆಗಳಲ್ಲಿದೆ. ಚಂದ್ರಭೂಷಣ ದೇವ ಒಡೆಯರು ಹಂಪೆಯಲ್ಲಿ ಶಾಖಾಮಠವನ್ನು ನಿರ್ಮಿಸಿ ಅಲ್ಲಿಯೇ ಲಿಂಗೈಕ್ಯರಾದರು.

ಕ್ರಿ.ಶ. ೧೫೭೫-೧೬೦೦ರ ಸಮಯದಲ್ಲಿ ಶಿವಕಂಚಿಯಲ್ಲಿ ಈ ಪೀಠದ ಶಾಖಾ ಮಠವನ್ನು ಅಲ್ಲಿಯ ರಾಜನು ಕಟ್ಟಿಸಿಕೊಟ್ಟ ಕಾರಣ, ಗುರುಗಳಿಗೆ ಕಂಚಿ ಕರಿಬಸವಸ್ವಾಮಿ ಎಂಬ ಹೆಸರುಳಿಯಿತು. ಹೀಗೆಯೇ ಮಧುರೆ, ಅರುಣಾಚಲ, ಚಿದಂಬರದಲ್ಲಿ ಶಾಖಾಮಠಗಳ ನಿರ್ಮಾಣಕ್ಕೆ ಅವರು ಕಾರಣರಾದರು. ವಿಜಯನಗರದ ಕೃಷ್ಣದೇವರಾಯನಿಗೆ ಪೆನುಗೊಂಡೆ ಉಪರಾಜಧಾನಿ ಆಗಿತ್ತು.[೪೯] ಕೃಷ್ಣದೇವರಾಯನು ಕಳುಹಿಸಿದ ಕಿವುಡನೊಬ್ಬನಿಗೆ ಕಿವುಡನ್ನು ಗುಣವಾಗಿಸಿದ ಜ॥ ಕರಿಬಸವ ಸ್ವಾಮಿಗಳನ್ನು ರಾಜಗೌರವ ನೀಡಿ ಸನ್ಮಾನಿಸಿ ಹಂಪೆಯಲ್ಲಿ ಮಠ ಕಟ್ಟಿಸಿಕೊಟ್ಟನಂತೆ. [ಕ್ರಿ. ಶ. ೧೫೪೫ರಲ್ಲಿ ಸದಾಶಿವರಾಯನ ಕಾಲದಲ್ಲಿ ಈ ಗುರುಗಳ ಆಶಯದಂತೆ (ದಳವಾಯಿ ಜಂಗಮಯ್ಯ) ಎಂಬ ಶಿಷ್ಯನಿಂದ ಉದ್ಯಾನ ವೀರಭದ್ರನ ಸ್ಥಾಪನೆ ಆಯಿತೆಂದು ಮತ್ತು ಪುಲ್ಲಕವಿ ಹೇಳಿದ್ದಾನೆ ಶಾಸನವೂ ಇದೆ.] ಇದು ನಿಡುಮಾಮಿಡಿಯು ವೈದ್ಯಕೀಯ ನೆಲೆಯಾಗಿ ಮೂಲಿಕಾವನವನ್ನು ಹೊಂದಿದ್ದ ಸಂಕೇತವೆ ಎನಿಸುತ್ತದೆ. ಅಲ್ಲಿರುವ ಪಂಚವೃಕ್ಷ ಸ್ಥಾನವು ಒಂದು ಕಾಲದ ಮಠದ ಮೂಲಿಕಾವನದ ಅಸ್ತಿತ್ವದ ಸಂಕೇತವೆಂದು ತೋರುತ್ತದೆ. ಪೀಠದ ಶಿಷ್ಯ ಕೊಟ್ಟೂರು ಬಸವರಾಜನ ವೈದ್ಯಗ್ರಂಥ 'ಬಸವರಾಜೀಯ'ಕ್ಕೆ ಪರಂಪರೆಯ ಪ್ರೇರಣೆ ಬಹುಶಃ ಇಲ್ಲಿಂದ ಒದಗಿರಬೇಕು.

ವಿಜಯನಗರದರಸ ಅಚ್ಯುತರಾಯನು (ಕ್ರಿ. ಶ. ೧೫೩೦-೪೨) ತನ್ನ ಉಪರಾಜಧಾನಿ ಆಗಿದ್ದ ಪೆನುಗೊಂಡೆಯಲ್ಲಿ ಈ ಪೀಠದ ಇಮ್ಮಡಿ ಕರಿಬಸವೇಂದ್ರ ಸ್ವಾಮಿಗಳನ್ನು ಸನ್ಮಾನಿಸಿ, ಬೃಹನ್ಮಠವನ್ನು ಕಟ್ಟಿಸಿಕೊಟ್ಟ. 'ಘನಗಿರಿ ಸಿಂಹಾಸನ' ಮಠವೆಂದು ಹೆಸರಿಸಿ ಆ ಪ್ರಾಂತದ ಘಣಾಚಾರಾಧಿಪತ್ಯವನ್ನು ನೀಡಿದ ಬಗ್ಗೆ ಪಂಡಿತಾರಾಧ್ಯ ಚರಿತ್ರೆಯು ಹೇಳುತ್ತದೆ.

'ಶ್ರೀ ಮನ್ನಿಡುಮಾಮಿಡಿ ಸ್ವಾಮುಲು ಅಷ್ಟಾವರಣಂ ಸಾಲು ಮೂಲ ದ್ಯಾವರ ದೇಶಮುದ್ರ ಶೆಟ್ಟಿ ಶ್ಯಾನುಭೋಗುಲು ಯೆದ್ದು ವೇಲ್ಪು ಕಾಪುಕಮ್ಮಟಂ ದ್ಯಾವರಕೊಂಡ ಡೆಬ್ಬಯೇಲು ಕುಲಂ. ಇದಿ ಪೆನುಗೊಂಡ ಕನಕಪುರಾಯಿ ಸಿಂಹಾಸನಂ ನಿಡುಮಾಮಿಡಿ ಜಂಗಮಯ್ಯ ಪಂಡಿತಾರಾಧ್ಯ ಸೂರ್ಯಸಿಂಹಾಸನಾನ್ನಿ ನಡಿವ ವಲಮು. ಅಚ್ಯುತರಾಯಲು ಶಿಷ್ಯಲು ಆಗುಟೆ ಸಾಕ್ಷಿ ಶ್ರೀ ಶ್ರೀ ಶ್ರೀ.'

ಅಂದರೆ ಹೊಲೆ ೧೮ ಜಾತಿಯ ಘಣಕಟ್ಟಿನ ಜನರ ಕುರಿತ ಪೀಠದ ಸಾಮಾಜಿಕ ಕಾಳಜಿಯನ್ನು ಕಂಡ ಅರಸ ಹೀಗೆ ರಾಜಮಾನಿತ ಒಪ್ಪಿತವನ್ನು ನೀಡಿರಬೇಕು.

ವಿಜಯನಗರದಲ್ಲಿ ಸದಾಶಿವರಾಯನ ಕಾಲ. ಆಗ ಅಳಿಯ ರಾಮರಾಯನದೇ (ಕ್ರಿ. ಶ. ೧೫೪೨-೬೫) ಪ್ರಾಬಲ್ಯ. ಇದನ್ನು ಸಹಿಸದ ಕೋಶಾಧಿಕಾರಿ ಬೊಕ್ಕಸಂ ತಿಮ್ಮಯ್ಯ ಸೈನ್ಯಬಲವನ್ನು ಸಂಚಿನಿಂದ ತನ್ನತ್ತ ಸೆಳೆದುಕೊಂಡು ರಾಮರಾಯನನ್ನು ಸೆರೆ ಇಡುವ ಹವಣಿಕೆಯಲ್ಲಿದ್ದ. ಈ ವಿಜಯನಗರದರಸರ ರಾಜಗುರು ಪರಂಪರೆಯಲ್ಲಿ ಆದಿಯಿಂದಲೂ ಈ ಪೀಠದವರು ಇದ್ದಂತೆ ರಾಮರಾಯನ ಬಹುಶಃ ರಾಜಗುರುವಾಗಿದ್ದ ಶ್ರೀ ಶೈಲ ನಿಡುಮಾಮಿಡಿ ಪೀಠದ ಇಮ್ಮಡಿ ಕರಿಬಸವಸ್ವಾಮಿಗಳ ಬಳಿಗೆ ಬಂದು ಅವನು ಸಲಹೆ ಹಾಗು ನೆರವಿಗಾಗಿ ಪ್ರಾರ್ಥಿಸಿದ. ಬಿಜಾಪುರದಲ್ಲಿ ಕೃಷ್ಣೆಯ ಉತ್ತರದಲ್ಲಿ ಮೂರ್ತಿಗಿರಿ (ಮುತ್ತಗಿ) ಎಂಬ ಗ್ರಾಮದ ಗೌಡಿಕೆಯಲಿ ಇದ್ದ ಹಂಡೆಕುರುಬ ಜಾತಿಯ ಬಾಲದ ಹನುಮಪ್ಪನಾಯಕ (ಹಂಡೆಬಾಲದ ಹನುಮಪ್ಪನಾಯಕ ಅಥವಾ ಹಂಡೆ ಹನುಮಪ್ಪ ನಾಯಕ) ವಂಶದ ಮೂಲಪುರುಷ.[೫೦] ಇವನು ಪೀಠದ ನೆಚ್ಚಿನ ಶಿಷ್ಯನಾಗಿದ್ದ. ಪೀಠದ ಗುರುಗಳ ಆದೇಶದ ಮೇಲೆ ರಾಮರಾಯನ ನೆರವಿಗೆ ಹೋದ. ಆದರಿಂದ ತಿಮ್ಮಯ್ಯನ ಬಂಡಾಯ ವಿಫಲವಾಯಿತು. ರಾಮರಾಯನಿಗೆ ವಿಜಯನಗರ ಉಳಿಯಿತು. ಈ ಘಟನೆ ಕ್ರಿ. ಶ. ೧೫೫೫-೬೦ರ ಅವಧಿಯಲ್ಲಿ ನಡೆದಂತಿದೆ. ಇದಲ್ಲದೆ ಈ ಹನುಮಪ್ಪನಾಯಕನು ನಿಜಾಂ ಪಾದುಷಾಹನನ್ನು, ಕೈಸೆರೆ ಹಿಡಿದು ರಾಮರಾಯನಿಗೆ ಒಪ್ಪಿಸಿದ. ಈ ಶೌರ್ಯವನ್ನು ಮೆಚ್ಚಿ ರಾಮರಾಯನು ನಾಯಕನಿಗೆ ಬುಕ್ಕರಾಯಸಮುದ್ರ, ನಂದ್ಯಾಲ, ಬಳ್ಳಾರಿ, ಕುರುಗೋಡ ಇತ್ಯಾದಿ ಗ್ರಾಮಗಳನ್ನು ಉಂಬಳಿಯಾಗಿ ನೀಡಿದ. ನಾಯಕ ವಿಜಯನಗರದ ಮಾಂಡಲಿಕನಾದ. ಕ್ರಿ. ಶ. ೧೫೬೫ರ ವಿಜಯನಗರದ ಪತನಾನಂತರ ಕ್ರಿ.ಶ.೧೫೬೭ರಲ್ಲಿ ಬಳ್ಳಾರಿಗೆ ಬಂದು ಸಂಸ್ಥಾನ ಮಾಡಿ ಕ್ರಿ.ಶ.೧೬೩೨ರವರೆಗೆ ಅಲ್ಲಿ ಆಳಿದ.[೫೧] ಈ ಸಮಯದಲ್ಲಿ ಇವನ ಇತರೆ ವಂಶೀಕರು ಮೊದಲು ಬುಕ್ಕರಾಯಸಮುದ್ರದಲ್ಲಿದ್ದು ನಂತರ ಅನಂತಪುರಕ್ಕೆ ಬಂದಿರಬೇಕು. ಇದಲ್ಲದೆ ಇವನು ಬಿಜಾಪುರದ ಮಹಮದ್ ಆದಿಲ್‌ಶಹನ (ಕ್ರಿ. ಶ. ೧೬೨೫-೫೬) ಸೈನ್ಯದಲ್ಲಿ ವಜೀರನಾಗಿದ್ದ.[೫೨] ಬಹುಶಃ ರಾಮರಾಜನ ಕಾಲದ ಇವನ ಶೌರ್ಯ ಆದಿಲ್‌ಶಹನ ಗಮನಕ್ಕೆ ಬಂದು ತನ್ನಲ್ಲಿ ಸೇರಿಸಿಕೊಂಡಿದ್ದಿರಬೇಕು. ಈ ಸಮಯದಲ್ಲಿ ತನ್ನ ಕುಲಗುರುವಾದ ಕರಿಬಸವ ದೇಶಿಕೇಂದ್ರ ಶಿವಾಚಾರ್ಯರನ್ನು ಆದಿಲ್‌ಶಹನ ಮೂಲಕ ಗೌರವಿಸಲು ಬರಮಾಡಿಕೊಂಡ. ಈ ಹಂಡೆ ಹನುಮ ಕ್ಷಿತೀಶ. ಆ ಕಾಲಕ್ಕೆ ಧಾರ್ಮಿಕ ಮತಾಂತರವನ್ನು, ಅನ್ಯಧರ್ಮದ ಸಂತ ಅಥವಾ ಗುರುಗಳನ್ನು ಧಾರ್ಮಿಕ ಶ್ರೇಷ್ಠತೆಯ ವಾದಕ್ಕೆಳೆಸುವ ಮೂಲಕ ಉಪಾಯ ಮಾಡಿ ಸಾಧಿಸಿರುವ ಉದಾಹರಣೆಗಳಿವೆ. (ಅಂತಹ ಹಳೆಯ ಸಂಕೇತಗಳು ಇಂದಿಗೂ ಬಿಜಾಪುರದಲ್ಲಿ ಕಾಣಬರುತ್ತವೆ.) ಆದರೆ ಕರಿಬಸವ ದೇಶಿಕೇಂದ್ರರು ವಾದದಲ್ಲಿ ಗೆದ್ದು 'ಹಿಂದೂ ಫಕೀರ' ಎಂಬ ಬಿರುದು ಪಡೆದು ತಮ್ಮ ಧರ್ಮದ ಸುಸಾಂಗತ್ಯವನ್ನು ಎತ್ತಿತೋರಿದರು. ಧಾರ್ಮಿಕ ಸೌಹಾರ್ದದಿಂದ ಸಮಾಜ ಸ್ವಾಸ್ಥ್ಯಕ್ಕೆ ನೆರವಾದರು. ಪ್ರಭಾವಿತನಾದ ಆದಿಲ್‌ಶಹ ಗುರುಗಳ ಆಶಯಕ್ಕನುಗುಣವಾಗಿ ಹಂಡೆ ಹನುಮಕ್ಷಿತೀಶನನ್ನು ಅನಂತಪುರದ ಒಡೆಯನನ್ನಾಗಿ ನೇಮಿಸಿದ. ಆಗ ಅದು ಹಂಡೆ ಅನಂತಪುರ ಎನಿಸಿತು. ಹಾಗೆ ಆ ಗುರುಗಳು ಅವನ ವಂಶದ ಉದ್ಧಾರಕರಾದರು.[೫೩] ಅಂದರೆ ಹಂಡೆ ವಂಶೀಯರಿಗೆ ಕೆಲವು ಮುಸ್ಲಿಮರಿಂದ ಒದಗುತ್ತಿದ್ದ ಕಿರುಕುಳಗಳನ್ನು ಹೀಗೆ ಪೀಠದ ಗುರುಗಳು ತಪ್ಪಿಸುತ್ತಿದ್ದ ಸಂಕೇತ ಇದಾಗಿದೆ.

ಹಂಡೆ ಹನುಮಪ್ಪ ನಾಯಕನ ಮಗ ಅಂಕುಶರಾಯ ಹಾಗೂ ಮೊಮ್ಮಗ ಪ್ರಸನ್ನಪ್ಪ ನಾಯಕ ಅನಂತಪುರದಲ್ಲಿ ಆಳುತ್ತಿದ್ದರು. ಕ್ರಿ.ಶ. ೧೬೯೦-೧೭೨೦ರಲ್ಲಿ ಆಳುತ್ತಿದ್ದ ಪ್ರಸನ್ನಪ್ಪನಾಯಕನೇ ಒಂದನೇ ಪವಾಡಪ್ಪ ನಾಯಕನೆನಿಸಿದ್ದ. ಈತನಿಗೆ ಬಂದ ಕುಷ್ಠರೋಗವನ್ನು ವೈದ್ಯಕೀಯ ಚಿಕಿತ್ಸೆ ಹಾಗು ಶುಶ್ರೂಷೆ ಮಾಡಿ ಕರಿಬಸವಸ್ವಾಮಿ ದೇಶಿಕೇಂದ್ರರು ಗುಣಪಡಿಸಿದರು.[೫೪] ಇಮ್ಮಡಿ ಕರಿಬಸವೇಂದ್ರರ ನಂತರ ಕಂಚಿಕರಿಬಸವಸ್ವಾಮಿಗಳು ಪೀಠದ ಸ್ವಾಮಿಗಳಾಗಿ ಬಂದರು. ತಮಿಳುನಾಡಿನಾದ್ಯಂತ ಸಂಚಾರ ಮಾಡಿ ಶಾಖಾಮಠಗಳನ್ನು ಸ್ಥಾಪಿಸಿ ರಾಜಮಾನಿತರಾಗಿದ್ದರು.

ಪೆನಗೊಂಡೆಯ ಶಿವಲಿಂಗಾರ್ಯರು ಶ್ರೀ ನಿಡುಮಾಮಿಡಿ ಶ್ರೀಶೈಲಪೀಠದ ಪುತ್ರವರ್ಗದವರು. ಇವರ ಮಗ ವೀರಣಾರ್ಯ. ಈತನ ಪೌತ್ರರಾದ ಶಾಂತವೀರ ದೇಶಿಕೇಂದ್ರರು ಪೀಠಾಧಿಪತಿಗಳಾಗಿ ಬಂದು'ಶಿವಲಿಂಗಚಾರಿತ್ರ' ಎಂಬ ಚಂಪೂಕಾವ್ಯವನ್ನು ಬರೆದರು. ವೀರಣಾರ್ಯರು ಮಾಗಡಿಯ ಇಮ್ಮಡಿ ಕೆಂಪೇಗೌಡನಿಗೆ (ಕ್ರಿ.ಶ.೧೫೮೫-೧೬೫೮) ಕುಲಗುರುವಾಗಿದ್ದರು. ಈ ವೀರಣಾರ್ಯರಿಗೆ ನಿಲಯ, ಹಿತ್ತಿಲ, ಬಿತ್ತಿ ಮಹಾಕೂಪಂಗಳ ನಿರ್ಮಿಸಿ ಬೆಂಗಳೂರಿನಲ್ಲಿ ಅವನು ಮಠವನ್ನು ಕಟ್ಟಿಸಿಕೊಟ್ಟಿದ್ದಾನೆ.[೫೦] ಈ ಮಠವು ಇಂದು ಗವೀಪುರಂ ಗುಟ್ಟಳ್ಳಿ(ಕೆಂಪೇಗೌಡನಗರ)ಯ ಗೌರಿಶಂಕರ-ರಾಜರಾಜೇಶ್ವರ ದೇಗುಲವಾಗಿದೆ.[೫೧] ಪೀಠದ ೨೮ನೆಯವರಾಗಿ ಬಂದ ಜ॥ ಶಾಂತವೀರ ದೇಶಿಕೇಂದ್ರರ ಕಾಲವನ್ನು ಕವಿಚರಿತಕಾರರು ಕ್ರಿ.ಶ.೧೬೫೦ ಎಂದಿದ್ದಾರೆ.

ಬಹುಶಃ ಈ ಪೀಠವು ವೈದ್ಯಕೀಯ ಚಿಕಿತ್ಸೆಗೆ ಬಹಳ ಪ್ರಸಿದ್ಧವಾಗಿದ್ದಂತೆ ಕಾಣುತ್ತದೆ. ಹಿಂದಿನ ಗುರುಗಳಂತೆ ಪೀಠದ ೨೮ನೆಯವರಾದ ಶ್ರೀ ಮಾಚೇಶ್ವರ (ಮಾಹೇಶ್ವರ) ಶಿವಾಚಾರ್ಯರೂ ಅನಂತಪುರದ ಪವಾಡ ಭೂವಲ್ಲಭನಿಗೆ ಚಿಕಿತ್ಸೆ ನೀಡಿ ರೋಗ ನಿವಾರಣೆ ಮಾಡಿದ್ದ ಸಂಗತಿ ಇದೆ. ಇವರು ಮಠವನ್ನು ದೋಚಲು ಬಂದ ಕಳ್ಳರು ಹಾಗು ಮರಾಠಾ ಸೈನಿಕರಿಗೆ ಹಿತನುಡಿದು 'ಧರ್ಮಗುರು' ಎನಿಸಿದರು.

ಹಂಡೆ ಪ್ರಸನಪ್ಪ ನಾಯಕನ ಸೋದರ ೨ನೆಯ ಪವಾಡಪ್ಪನಾಯಕ. ಈತನನ್ನು ಇಮ್ಮಡಿ ಪವಾಡ ಭೂವಲ್ಲಭ ಎಂದು ಪಂಡಿತಾರಾಧ್ಯ ಚರಿತ್ರೆ ತಿಳಿಸುತ್ತದೆ. ಇವನ ಕಾಲದಲ್ಲಿ ಅನಂತಪುರವು ಕಡಪದ ನವಾಬರ ಆಳ್ವಿಕೆಗಿತ್ತು. ಇವನು ನವಾಬರಿಗೆ ವಾರ್ಷಿಕವಾಗಿ ಕಪ್ಪಕೊಡುತ್ತಿದ್ದ. ಇವನ ಆಸ್ಥಾನದಲ್ಲಿದ್ದ 'ರಾಮಾಜಿ' ಎಂಬ ಅಧಿಕಾರಿ ನವಾಬರ ಕುತಂತ್ರಕ್ಕೆ ಬಲಿಯಾಗಿ ರಾಜ್ಯವನ್ನು ಅವರಿಗೊಪ್ಪಿಸುವ ಸಂಚುಮಾಡಿದ. ನವಾಬರ ಸೈನ್ಯವು ಪವಾಡಪ್ಪನನ್ನು ಬಂಧಿಸಿತು. ಪವಾಡಪ್ಪನು ಭಾವಮೈದುನ ಚನ್ನಬಸಪ್ಪನ ಮೂಲಕ ಪೀಠದ ಬಹುಶಃ ರಾಜಗುರುಗಳಾಗಿದ್ದ ಕರಿಬಸವರಾಜ ದೇಶಿಕೇಂದ್ರರಿಗೆ (ಕರಿಬಸವರಾಜಸ್ವಾಮಿ ಕ್ರಿ. ಶ. ೧೭೩೧-೫೦ ಅಥವಾ ಮರಿಕರಿಬಸವರಾಜ ಶಿವಾಚಾರ್ಯರು ಕ್ರಿ. ಶ. ೧೭೫೦-೭೫) ಸುದ್ದಿ ತಿಳಿಸಿ ತನ್ನನ್ನು ಪಾರು ಮಾಡಲು ಬೇಡಿದ. ಆಗ ಕೊತ್ತಚೆರುವು ಶಾಖಾ ಮಠದಲ್ಲಿದ್ದ ಗುರುಗಳು, ಅನಂತಪುರ ಮಠಕ್ಕೆ ಬಂದರು. ಅರಮನೆ ಪಕ್ಕದ ಅವರ ಮಠದ ಹಿಂದೆ ದಿಡ್ಡಿ ಬಾಗಿಲು ಇತ್ತು. ಅದರ ಮೂಲಕ ರಾಜನ ಸಿಪಾಯಿಗಳು ಹುಲ್ಲುಹೊರೆಗಳಲ್ಲಿ ಕತ್ತಿ ಕಠಾರಿ ಅಡಗಿಸಿ, ಮಠಕ್ಕೆ ಬಂದು ಸೇರುವಂತೆ ಉಪಾಯ ಮಾಡಿದರು. ಅನ್ನ ತರುತ್ತಿದ್ದ ಸೇವಕಿಯ ಮೂಲಕ ಗುರುಗಳ ರಹಸ್ಯ ಸಂದೇಶದಂತೆ ದಿಡ್ಡಿ ಬಾಗಿಲ ಮೂಲಕ ಬಂದು ಮಠಕ್ಕೆ ಸಾಗಿ ಪವಾಡಪ್ಪನಾಯಕ ಅವಿತುಕೊಂಡ. ನವಾಬನ ಸೈನಿಕರನ್ನು ಮಠದಲ್ಲಿದ್ದ ನಾಯಕನ ಸೈನಿಕರು ಪ್ರಬಲ ಹೋರಾಟದಲ್ಲಿ ಸೋಲಿಸಿ ಅಟ್ಟಿದರು. ಸೇನಾನಿಗಳು ಮಡಿದ ಕಾರಣ ನವಾಬರ ಸೈನ್ಯ ಪಲಾಯನ ಮಾಡಿತು. ಪವಾಡಪ್ಪನಾಯಕನು ಬದುಕಿರುವವರಿವಿಗೂ ಶ್ರದ್ಧೆಯಿಂದ ಗುರುಗಳನ್ನೆ ಆರಾಧಿಸುತ್ತ ಬಂದ. ಮಡಿದ ಮೇಲೆ ತನ್ನ ಸಮಾಧಿಯನ್ನು ಕೊತ್ತಚೆರುವು ಶಾಖಾಮಠದಲ್ಲಿಯೇ ಇರಬೇಕೆಂಬ ಅವನ ಆಶಯದಂತೆ ಅದು ಇಂದೂ ಅಲ್ಲಿ ಕಾಣಬರುತ್ತದೆ.[೫೨]

ಈ ಅಂಶಗಳಿಂದ ಪೀಠದ ಗುರುಗಳು ರಾಜಗುರುಗಳಂತೆ ರಾಜನ ಹಾಗು ನಾಡಿನ ಕಷ್ಟಕಾಲದಲ್ಲಿ ರಾಜಕೀಯ ಹಾಗು ಸೈನಿಕ ವ್ಯೂಹದ ಮಾರ್ಗದರ್ಶನ ನೀಡಿ ನೆರವಾಗುತ್ತಿದ್ದರೆಂದು ಸೂಚಿಸುವಂತಿದೆ. ಈ ಪೀಠದ ಮಣೆಹ ಎಲ್ಲ ಜನಾಂಗಗಳಿಗೆ ಸಲ್ಲುತ್ತಿದ್ದ ಬಗೆ ಕಂಡು ಮೈಸೂರು ಚಿಕ್ಕದೇವರಾಜ ಒಡೆಯರು, ಗುರು ಶ್ರೀ ಮರಿಕರಿಬಸವಸ್ವಾಮಿ ಶಿವಾಚಾರ್ಯರಿಗೆ (ಕ್ರಿ. ಶ. ೧೬೯೧-೧೭೧೦) ನಂಜನಗೂಡಿನಲ್ಲಿ ಮಠ ಕಟ್ಟಿಸಿಕೊಟ್ಟರು. ಹೈದರ್‌ಅಲಿಖಾನನು ನಿಡುಮಾಮಿಡಿಗೆ ಶ್ರೀ ಕರಿಬಸವ ದೇಶಿಕೇಂದ್ರರ ದರ್ಶನಕ್ಕೆಂದು ಬಂದು ಅಲ್ಲಿ ನಿಧಿ ನಿಕ್ಷೇಪದ ಬಗ್ಗೆ ಆಸೆ ಪಟ್ಟನಂತೆ. ಶ್ರೀಗಳವರು ಅವನ ಜೊತೆಯಲ್ಲಿ ಪೆನುಗೊಂಡೆಗೆ ದಯಮಾಡಿಸುವಲ್ಲಿ ನಿಧಿ ನಿಕ್ಷೇಪಗಳಿದ್ದರೆ ತೆಗೆದುಕೊಳ್ಳಬಹುದು ಎಂದು ಹೇಳಿ ತಾವು ಆದ್ಯಗುರುಗಳಲ್ಲಿ ಅನುಷ್ಠಾನಕ್ಕೆ ತೊಡಗಿದರು. ಅವರಿದ್ದ ನೆಲೆಗೆ ಹೈದರನಿಂದ ಯಾರೂ ಹೋಗದಂತೆ ನಿರ್ಬಂಧವೂ ಇದ್ದು, ಶ್ರೀಗಳವರಿಗೆ ಒಂದು ರೀತಿ ನಿರಶನ ಅನುಷ್ಠಾನವೂ ಆಗಿತ್ತು. ನಿಡುಮಾಮಿಡಿಯಲ್ಲಿ ಹೈದರನಿಗೆ ರಹಸ್ಯ ಸೂಚನೆಯಿಂದಲೂ ನಿಧಿ ನಿಕ್ಷೇಪ ದೊರೆಯದೆ ತನ್ನ ವರ್ತನೆ ಬಗ್ಗೆ ಪಶ್ಚಾತ್ತಾಪಪಟ್ಟ.ಜೊತೆಗೆ ಅವನಿಗೆ ಹಾಗು ಪರಿವಾರಕ್ಕೆ ಸೋಂಕಿನ ದೋಷದಿಂದ ಉಂಟಾದ ಉದರ ಶೂಲೆಗೆ ಕೊನೆಗೆ ಶ್ರೀಗಳವರೇ ಚಿಕಿತ್ಸೆ ನೀಡಿದರು. ಈ ವಿಶಾಲ ವರ್ತನೆ ಕಂಡು ಹೈದರ್ ಅವರನ್ನು ಗೌರವಿಸಿ ಸನ್ಮಾನಿಸಿದ.

ಇನ್ನು ಮೂಲತಃ ಕುರುಬರಾಗಿದ್ದರೂ ಲಿಂಗಧಾರಿಗಳೂ ಆದ ಹಂಡೆ ಪಾಳೆಗಾರರ ವಂಶಿಕನಾದ ಕ್ರಿ. ಶ. ೧೮೭೯ರ ಹಂಡೆ ರಾಮಪ್ಪನಾಯಕನಿಗೆ ಗುರು, ತೋಂಟದ ಸಿದ್ಧಲಿಂಗೇಶ್ವರ ಸಂಪ್ರದಾಯದ ವಿರಕ್ತ ಮಠದ ನೀಲಕಂಠ ಸ್ವಾಮಿಗಳು ಎಂದು ಹಸ್ತಪ್ರತಿ ಪ್ರಶಸ್ತಿಯ ಸಂಗತಿಯೂ ಇದೆ.[೫೩] ಬಹುಶಃ ಶ್ರೀಶೈಲ ನಿಡುಮಾಮಿಡಿ ಪೀಠದ ಜ॥ ಕರಿಬಸವೇಂದ್ರ

ಗದ್ದುಗೆಯೂ ಗದುಗಿನಲ್ಲಿ ಇರುವ ಕಾರಣ[೫೯] ವಂಶಿಕರ ಗುರು ಪರಂಪರೆಯನ್ನೂ ಜೊತೆಗೆ ಮಾನಿಸಿದ ಸಂಕೇತ ಈ ರಾಮಪ್ಪ ನಾಯಕನ ಸಮನ್ವಯ ಆರಾಧನೆಯಲ್ಲಿ ಕಂಡುಬರುವಂತಿದೆ. ಗುರು ವಿರಕ್ತ ಸಮನ್ವಯವನ್ನು ಈ ಪೀಠ ಕಾಪಾಡಿಕೊಂಡು ಬಂದು ನೀಡಿದ ಸಾಮರಸ್ಯದ ಕೊಡುಗೆಯನ್ನು ಹೀಗೆ ಕಾಣಬಹುದೆನಿಸುತ್ತದೆ.

ಆಧುನಿಕ ಸ್ತರಗಳು

೨೦ನೆಯ ಶತಮಾನದ ಆದಿಯಲ್ಲಿಯೂ ಈ ಪೀಠ ಸಾಮಾಜಿಕವಾಗಿ ಬಹು ಚಟುವಟಿಕೆಯಿಂದ ಕೂಡಿದ್ದ ಬಗ್ಗೆ ೧೯೨೩ರಲ್ಲಿ ಶ್ರೀ ಮರಿಕರಿಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳು, ಪೂರ್ವದ ಶ್ರೀವಿರೂಪಾಕ್ಷ ದೇಶಿಕೇಂದ್ರರನ್ನು ನೆನಸಿ ಮಾಡಿರುವ ಪತ್ರ ವ್ಯವಹಾರಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ೧೬-೫-೧೯೨೩ರಲ್ಲಿ ಚಿಂತಾಮಣಿಯ ಮಲ್ಲಾಪುರದ ಹನುಮಂತನ ಮಗ ಪಾಪಣ್ಣ ಎಂಬುವನು ತನ್ನ ಹೆಂಡತಿಯನ್ನು ಶ್ರದ್ಧೆಯಿಂದ ನೋಡಿಕೊಳ್ಳುವ ಬಗ್ಗೆ ಪೀಠಕ್ಕೆ ಮುಚ್ಚಳಿಕೆ ಬರೆದು ಕೊಟ್ಟಿರುವುದು ಈ ಬಗೆಗೆ ಅನೇಕ ಉದಾಹರಣೆಗಳಲ್ಲಿ ಒಂದಾಗಿದೆ. ಹೀಗೆಯೇ ಮಠದ ಶಾಲಾ ನಿರ್ವಹಣೆಯ ಬಗ್ಗೆ ಕಾಳಜಿ ವಹಿಸಿರುವ ಪತ್ರಗಳೂ ಇವೆ.

ಇನ್ನು ಈ ಶತಮಾನದಲ್ಲಿ ಸಾಹಿತ್ಯಕವಾಗಿ, ಎತ್ತರ ಬಿತ್ತರಗಳನ್ನು, ಸಂಘಟನೆಯಲ್ಲಿ ಸ್ತ್ರೀಪುರುಷರ ಶಿವ ಬಳಗಗಳ ಸ್ಥಾಪನೆಗಳನ್ನು, ಸಾಮಾಜಿಕವಾಗಿ ನೆರವುಗಳನ್ನು ಪೀಠದ ವತಿಯಿಂದ ಬಹಳ ಗಂಭೀರವಾಗಿ ವಿಸ್ತರಿಸಿ ವಿಶಿಷ್ಟ ಕೊಡುಗೆಗಳನ್ನೂ ಕೊಟ್ಟವರು, ೧೨.೬.೧೯೪೪ರಲ್ಲಿ ಪೀಠಕ್ಕೆ ಬಂದ ಶ್ರೀ ಜ॥ ಚೆನ್ನಬಸವ ದೇಶಿಕೇಂದ್ರ ಶಿವಾಚಾರ್ಯರು (ಡಾ. ಶ್ರೀ ಜಚನಿ). ಗುಯ್ಯಲೂರು (ಗೂಳೂರು) ನಿಂದ ೧೨ನೆಯ ಶತಮಾನದಲ್ಲಿ ನಿಡುಮಾಮಿಡಿಗೆ ಹೋಗಿ ೧೮ನೆಯ ಶತಮಾನದ ಮಧ್ಯಭಾಗದ ಸುಮಾರಿನವರೆಗೆ ಕಾಕತೀಯ, ವಿಜಯನಗರ, ಪೆನುಗೊಂಡೆ ಅರಸರ ರಾಜಗುರುಗಳಾಗಿ ಮುಖ್ಯಸ್ಥಾನ ಪಡೆದಿದ್ದ ಕಾರಣ ಅಲ್ಲಿಯೇ ಪ್ರಸ್ಥಾನಗೊಂಡಿದ್ದರು ಪೀಠದ ಗುರುಗಳು. ನಂತರ ಮತ್ತೆ ಪೂರ್ವನೆಲೆಯಾದ ಗುಯ್ಯಲೂರಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (ಕ್ರಿ.ಶ.೧೭೭೫-೧೮೧೩) ಪೀಠದ ಜ॥ಗುರುಗಳು ಬಂದು ವಾಸ್ತವ್ಯವಾದರು. ಇಲ್ಲಿಗೆ ಬಂದ ಮೇಲೆ, ಸಾಮಾಜಿಕ, ಸಾಹಿತ್ಯಕ ಮಣಿಹಗಳು ವಿಶೇಷವಾಗಿ ಗರಿಗಟ್ಟಿಕೊಂಡದ್ದು ಶ್ರೀ ಜಚನಿ ಅವರಿಂದಾಗಿ -

ಪ್ರವೇಶವಿಲ್ಲದಿದ್ದ ದಲಿತರಿಗೆ ಪೀಠದ ರಥೋತ್ಸವ ಸಮಯದಲ್ಲಿ (ಕ್ರಿ.ಶ.೧೯೪೮) ಮೊದಲಿಗೆ ಮಠಕ್ಕೆ ಪ್ರವೇಶ ನೀಡಿದರು. ಗೌರಿಬಿದನೂರಿನಲ್ಲಿ ಸಾರ್ವಜನಿಕ ವಿಧ್ಯಾರ್ಥಿನಿಲಯ ತೆರೆದರು. ಬೂದಿಲಿ ಗ್ರಾಮದ ಶಾಲಾಕಟ್ಟಡ ನಿರ್ಮಾಣಕ್ಕೆ ನೆರವಾದರು. ಬೆಂಗಳೂರಿನಲ್ಲಿ ಜ॥ ನಿಡುಮಾಮಿಡಿ ನಿವಾಸವನ್ನು ರೂಪಿಸಿ, ಧಾರ್ಮಿಕ ಸಾಹಿತ್ಯಕ ಸಂಘಟನೆ ಮಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಸರ್ವಧರ್ಮ ಸಮ್ಮೇಳನ, ಸೂಳ್ನುಡಿ ಸಾಹಿತ್ಯ ಸಮ್ಮೇಳನ, ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ ಹೀಗೆ ಹಲವಾರು ಸಮ್ಮೇಳನಗಳು ನಡೆದು ಪೀಠದ ಸಾಹಿತ್ಯಿಕ, ಸಾಂಸ್ಕೃತಿಕ ಕೊಡುಗೆ ಆಗಿದೆ.

ಮಹಿಳೆಯರಿಗಾಗಿ ಅಕ್ಕನ ಬಳಗ, ಭ್ರಮರಾಂಬಾಬಳಗ, ಮಲ್ಲಿಕಾಂಬ ಮಂಡಳಿ, ಶಿವಾಚಾರಿಣಿಯರ ಸಮಾಜವನ್ನು ಸಂಸ್ಥಾಪಿಸಲಾಗಿದೆ. ವೀರಶೈವ ತತ್ವ ಪ್ರಚಾರ ಸಂಘವನ್ನು ಪ್ರತಿಷ್ಠಾಪಿಸಲಾಗಿದೆ. ಭಾಷಾಚಾರ್ಯ ಸದಾಶಿವಾಚಾರ್ಯರ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆಯನ್ನೂ ರೂಪಿಸಲಾಗಿದೆ. ಅಧ್ಯಯನ ಪೀಠದ ಸಾಂಸ್ಕೃತಿಕ ಮುಖವಾಣಿಯಾದ ಪತ್ರಿಕೆ 'ಮಾಮಿಡಿ' ಎಂಬ ಮೂರ್ತಿಂಗಳೋಲೆಯನ್ನು ಕ್ರಿ.ಶ. ೧೯೮೦ರ ಆಷಾಢದಿಂದ ಹೊರತರಲಾಗುತ್ತಿದೆ.[೬೦]

ಸಾಹಿತ್ಯಿಕವಾಗಿ ನಾಲ್ಕು ಮಹಾಕಾವ್ಯಗಳನ್ನು ಪುರಾತನ ಕಥಾವಸ್ತುವಿನ 'ಚಂದ್ರಪ್ರಭಾ'ದಿಂದ ಹಿಡಿದು ಸಮಕಾಲೀನ ಸಜ್ಜಲ ಗುಡ್ಡದ ಶರಣಮ್ಮೆಯರ ಕುರಿತಂತೆ ಬರೆಯಲಾಗಿದೆ. ಲಾಕ್ಷಣಿಕ ಕೃತಿಗಳೇ ಅಲ್ಲದೆ ಪ್ರಾಚೀನರಾದ ರುದ್ರ, ಭದ್ರರಿಂದ ಹಿಡಿದು ಪೀಠದ ಆದ್ಯರು, ಕಾರಣಿಕ ಹಾನುಗಲ್ಲು ಕುಮಾರಯೋಗಿಗಳ ವರೆಗೆ ಕೃತಿಗಳು ಹೊರಬಂದಿವೆ. ಆಗಮ ಸಂಶೋಧನಾ ಕೃತಿಗಳಾಗಿ ಶಿವರುದ್ರಾಗಮ, ವೀರಾಗಮ ಇತ್ಯಾದಿ ಎಂಟು ಕೃತಿಗಳನ್ನು ಹೊರತರಲಾಗಿದೆ. ವೀರಶೈವ ಸಿದ್ಧಾಂತ ಕುರಿತಂತೆ'ಜೀವನಸಿದ್ಧಾಂತ' ಹಾಗು ಶೂನ್ಯಸಂಪಾದನೆಯ ವಿಶಿಷ್ಟ ಮುಖಗಳನ್ನು ತೆರೆದಿಟ್ಟಿರುವ 'ಸಂಪಾದನೆಯ ಸೊಂಪು', ಶಿವಾದ್ವೈತ ದರ್ಶನಗಳು ಪ್ರಕಟವಾಗಿವೆ. 'ಸಿದ್ಧಾಂತ ಶಿಖಾಮಣಿ'ಗೆ ಸಂಬಂಧಿಸಿದ ಹತ್ತಾರು ಕೃತಿಗಳು, ೧೫ಕ್ಕೂ ಮೀರಿದ ಕವನ ಸಂಕಲನಗಳು, ಜಾನಪದ ಕೃತಿಗಳು, ವಿಭೂತಿ, ದಾಸೋಹ, ದೇವರ ದಾಸಿಮಾರ್ಯ ಪ್ರಶಸ್ತಿ, ಶ್ರೀಶೈಲ ಪೀಠದರ್ಶನ ಇತ್ಯಾದಿ ಸಂಪಾದಿತ ಕೃತಿಗಳು ಹೊರಬಂದಿವೆ. ೨೦ನೆಯ ಶತಮಾನದ ಮುಖ್ಯ ವಚನಕಾರರಾಗಿ ಸುಮಾರು ೭೫೦೦ಕ್ಕೂ ಮೀರಿದ ವಚನಗಳು ಶ್ರೀ ಜಚನಿ ಅವರಿಂದ ಪ್ರಕಟವಾಗಿವೆ. ಅವುಗಳು ಧರ್ಮ, ತತ್ತ್ವ, ಸಾಹಿತ್ಯ, ರಾಜಕೀಯ, ವಿಜ್ಞಾನ, ವೈದ್ಯ, ದಲಿತರು, ಆಧುನಿಕ ಪ್ರಕ್ರಿಯೆಗಳು ಇತ್ಯಾದಿಗಳನ್ನು ಬಹುಸಮುಚಿತವಾಗಿ ವಚನ ಮಾಧ್ಯಮದಲ್ಲಿ ಬಳಸಿ ವಿಶಿಷ್ಟ ಚಚನಿ. ವಚನ ಶೈಲಿ ಎಂದೇ ಪರಿಗಣಿತವಾಗಿವೆ. ಕೆಲವಾರು ಕೃತಿಗಳೇ ಅಲ್ಲದೆ ವಚನಗಳು ಆಂಗ್ಲಭಾಷೆಗೆ ಅನುವಾದ

ಗೊಂಡಿವೆ. ಇವುಗಳ ಪ್ರೇರಣೆಯಿಂದ ಶಿವಾಚಾರಿಣೆಯರ ಸೂಳ್ನುಡಿಗಳು ಹಾಗು ಶಿವಾಚಾರಸ್ಥರ ಸೂಳ್ನುಡಿಗಳು ಪ್ರಕಟವಾಗಿ ಪೀಠವು ನೂರಾರು ವಚನಕಾರರಲ್ಲಿ ರಚನಾಸಾಮರ್ಥ್ಯವನ್ನು ಬೆಳಸಿದೆ. 'ಶ್ರೀ ಜಚನಿ ವಚನ ಸಾಹಿತ್ಯ' ಕುರಿತಂತೆ ಡಾ. ಸಂಗಮೇಶ ಹಂಡಿಗಿ ಅವರು ಅಧ್ಯಯನ ಮಾಡಿ ಪಿಎಚ್. ಡಿ ಪಡೆದಿದ್ದಾರೆ. ಹೀಗೆ ಕಾವ್ಯ, ಕಾವ್ಯ ಮೀಮಾಂಸೆ, ಪೀಠದ ಆದ್ಯರ ಚರಿತ್ರೆ ಆಗಮ, ಸಂಶೋಧನೆ, ಕವನ, ನಾಟಕಗಳ ಜೊತೆಗೆ ಮಾದೇವಿ, ಚಂದ್ರಾವತಿ, ಶಾಂಭವಿ, ಭವಾನಿ, ಸುಗ್ಗಳೆ, ದುಗ್ಗಳೆ ಮುಂತಾದ ಸ್ತ್ರೀ ವ್ಯಕ್ತಿತ್ವ ಕುರಿತ ಕೃತಿಗಳು ಹಾಗು ವಿಶಿಷ್ಟವಾದ ೧೨ನೆಯ ಶತಮಾನದ ಪೂರ್ವ ವೀರಶೈವ ಸೂಳ್ನುಡಿಕಾರರು, ಬಸವ ಗೀತೆ, ಇತ್ಯಾದಿಗಳು ಸೇರಿದಂತೆ ಸುಮಾರು ೩೫೦ ಕೃತಿಗಳನ್ನು ಡಾ. ಶ್ರೀ ಜಚನಿ. ಅವರು ಬರೆದು 'ಸಾಹಿತ್ಯ ಲೋಕಕ್ಕೆ' ಮಣಿಹ ಸಲ್ಲಿಸಿದ್ದಾರೆ. ಅಂತೇ 'ಸಾಹಿತ್ಯ ಲೋಕದ ಸೋಜಿಗ' ಎಂದು ಡಾ. ಸಿದ್ದಯ್ಯಪುರಾಣಿಕರು ನುಡಿದಿದ್ದಾರೆ.

ಈ ಪೀಠದ ಕೊಡುಗೆಯ ಇತಿಹಾಸವನ್ನೂ ಸೇರಿದಂತೆ ಬರೆದವರಲ್ಲಿ, ವಿರೂಪಾಕ್ಷಪಂಡಿತ, ಸಂಪಾದನೆಯ ಸಿದ್ಧನಂಜೇಶ, ಶಿವಲಿಂಗ ಕವಿ, ಶಾಂತವೀರದೇಶಿಕ, ಪುಲ್ಲಕವಿ, ಇಡಗೂರು ರುದ್ರಕವಿ, ಅಪ್ಪಪ್ಪಕವಿ, ಕೊಟ್ಟೂರು ಬಸವರಾಜ, ಪಂಡಿತಾರಾಧ್ಯ, ಭದ್ರಗಿರಿ ಶಿವಕವಿ, ಚೌದಾಪುರಿ ಶಾಂತವೀರ ಶಿವಾಚಾರ್ಯರು, ಸಿರೀಪಿ ಆಂಜನೇಯಲು, ಆಂಧ್ರ ಶೇಷಗಿರಿರಾವ್, ನಾಗಸಂದ್ರಂ ವಾಸುದೇವರಾವ್, ಟಿ. ಎಚ್. ಎಂ. ಸದಾಶಿವಯ್ಯ, ಅಕ್ಕುಲಯ್ಯ ದೀಕ್ಷಿತರು, ಬುದ್ದಯ್ಯ ಪುರಾಣಿಕರು, ಡಾ. ಎಸ್. ಶ್ರೀಕಂಠಶಾಸ್ತ್ರಿ, ಮಂ. ಗೋವಿಂದಪೈ, ಫ. ಗು. ಹಳಕಟ್ಟಿ, ಅ.ನ.ಕೃಷ್ಣರಾವ್, ಬಂಡಾರು ತಮ್ಮಯ್ಯ, ಕಾಶೀನಾಥಶಾಸ್ತ್ರಿಗಳು, ಎಸ್. ಹಂಪಯ್ಯ, ಶ್ರೀನಿವಾಸರಾವ್ ಕೊರಟಿ, ಎಂ.ಜಿ. ನಂಜುಂಡಾರಾಧ್ಯ, ಎಸ್.ಕೆ. ರಾಮಚಂದ್ರರಾವ್, ಚ. ಸುಂದರೇಶನ್, ಡಾ. ಬಿ.ನಂ. ಚಂದ್ರಯ್ಯ, ಎಂ. ಜಿ. ನಾಗರಾಜ್, ಮುಂತಾದವರು ಸೇರಿದ್ದಾರೆ. ಇದಲ್ಲದೆ ಶ್ರೀ ಸದಾಶಿವ ಒಡೆಯರ್ ಹಾಗು ಶ್ರೀ ಚನ್ನವೀರಕಣವಿ ಅವರು ಸಂಪಾದಿಸಿರುವ ಶ್ರೀಜಚನಿ ಷಷ್ಟ್ಯಬ್ದಿ ಸಮಾರಂಭ ಸ್ಮಾರಕ ಸಂಪುಟ, -'ಜೀವನಸಿದ್ಧಿ', ಹಾಗು ಶ್ರೀ. ಗೊ. ರು. ಚೆನ್ನಬಸಪ್ಪನವರ ಸಂಚಾಲಕತ್ವದಲ್ಲಿ ಹೊರಬಂದ 'ದಾಸೋಹ', 'ವಿಭೂತಿ' ಸಂಪುಟಗಳು, ಡಾ. ಸಾ. ಶಿ. ಮರುಳಯ್ಯ ಮತ್ತು ಡಾ. ಎಸ್. ವಿದ್ಯಾಶಂಕರ್ ಸಂಪಾದಿತ 'ನೂತನ ಚೇತನ' ಸಂಸ್ಮರಣ ಸಂಪುಟಗಳು ಈ ಪೀಠದ ವಿವಿಧ ಮಣಿಹ ಹಾಗೂ ಕೊಡುಗೆಗಳ ಚಿತ್ರಣವನ್ನು ಸಾಕಷ್ಟು ನೀಡುತ್ತವೆ. ಕಾವ್ಯ, ವಚನ, ಸಾಹಿತ್ಯ ಹಾಗು ಅನುಭಾವಕ್ಷೇತ್ರಕ್ಕೆ ನೀಡಿದ ಮಹತ್ತರ ಕೊಡುಗೆಗಳಾಗಿ ಡಾಕ್ಟೋರೇಟ್ ಪದವಿಯಯನ್ನು ಮೈಸೂರು ವಿಶ್ವವಿದ್ಯಾಲಯ, ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯಸರ್ಕಾರವು ಡಾ. ಶ್ರೀ ಜಚನಿ ಅವರಿಗೆ ನೀಡಿದ್ದು ಪೀಠಕ್ಕೂ ಸಂದ ಗೌರವವಾಗಿದೆ.

ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಜಿಯವರು ಇಂದಿನ ಕಿರಿಯ ಸನ್ನಿಧಿಯವರಾಗಿ ೨೭-೧೨-೧೯೯೦ ರಂದು ಪೀಠಾಧಿಕಾರಕ್ಕೆ ಬಂದು ಪೀಠದ ಮಣಿಹಗಳಿಗೆ ಒಂದು ಹೊಸ ಆಯಾಮವನ್ನು ತಂದಿದ್ದಾರೆ. ಯಾರೇ ಮನುಷ್ಯ ಇನ್ನೊಬ್ಬನನ್ನು ಮಾನವತೆಯ ಪ್ರತೀಕವಾಗಿ ಕಾಣುವುದು ಮಾನವಧರ್ಮ. ಈ ಆಶಯ ಪೀಠದ್ದು ಎಂದು ಗೂಳೂರಿನ ಈ ಪೀಠಕ್ಕೆ 'ಮಾನವಧರ್ಮಪೀಠ' ಎಂಬ ಹೊಸ ಹೆಸರನ್ನು ಅರ್ಥವತ್ತಾಗಿ ಚಾಲ್ತಿಗೊಳಿಸಲಾಗುತ್ತಿದೆ. ಸಾಹಿತ್ಯದ ವೈಚಾರಿಕ, ತಾತ್ತ್ವಿಕ ಮಂಥನವನ್ನು ಸಾಮಾಜಿಕ ಕುರುಡು ಶ್ರದ್ಧೆಗಳು, ಸುಳ್ಳುಸೃಷ್ಟಿಗಳನ್ನು ಬಯಲಿಗೆಳೆಯುವ ಪ್ರಯತ್ನವನ್ನು ತಮ್ಮ ಗ್ರಂಥಗಳ ಮೂಲಕವೂ ಮಾಡುತ್ತಿದ್ದಾರೆ ಕಿರಿಯ ಶ್ರೀಗಳವರು. ಆ ದಿಸೆಯಲ್ಲಿ ಅವರ ಎರಡು ಮುಖ್ಯ ಕೃತಿಗಳಾದ 'ಚಿಂತನ ಚೇತನ' ಹಾಗು 'ಸುಳ್ಳು ಸೃಷ್ಟಿಗಳು' ವೈಚಾರಿಕ ಜಾಗೃತಿಯನ್ನು ಮಾಡುತ್ತ ಮರುಮುದ್ರಣಗೊಂಡಿವೆ.

ನುಡಿಗೆ ತಕ್ಕಂತೆ ನಡೆಯಾಗಿ ಸಂಸ್ಕಾರ ನೀಡಿ ದಲಿತ ಅರ್ಚಕರನ್ನು ಪೀಠದ ವೀರಭದ್ರನ ಗುಡಿಗೆ ನೇಮಿಸಿ, ದಲಿತರಲ್ಲಿ ವಿಶ್ವಾಸ ಮೂಡಿಸಿದ್ದಾರೆ. ಜಾತಿಮುಕ್ತವಾದ ಡಾ. ಶ್ರೀ ಜಚನಿ ಉಚಿತ ವಿದ್ಯಾರ್ಥಿ ವಸತಿ ನಿಲಯವನ್ನು ಆರಂಭಿಸಲಾಗಿದೆ. ಧರ್ಮಗುರು ಗ್ರಂಥಾಲಯ, ಪಂಡಿತಾರಾಧ್ಯ ವಾಚನಾಲಯ, ಶಿಶುವಿಹಾರ, ಧರ್ಮಗುರು ವೃದ್ಧಾಶ್ರಮ, ಪ್ರೌಢಶಾಲೆ ಇತ್ಯಾದಿಗಳನ್ನು 'ಡಾ. ಶ್ರೀ. ಜಚನಿ ರಾಷ್ಟ್ರೀಯ ಸೇವಾ ಪೀಠ' ಎಂಬ ಹೆಸರಿನಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ, ಸಾಹಿತ್ಯ ವಿಚಾರ ಸಂಕಿರಣ, ಉಪನ್ಯಾಸ ಕಾರ್ಯಕ್ರಮಗಳನ್ನು ಶೈಕ್ಷಣಿಕ ಹಾಗು ಸಾಂಸ್ಕೃತಿಕ ಕೊಡುಗೆಯಾಗಿ ಈಚೆಗೂ ಪೀಠ ನೀಡುತ್ತಿದೆ. ಕಳೆದ ೫೦ ವರ್ಷಗಳಿಂದ ಬಂದಂತೆ ಗ್ರಂಥ ಪ್ರಕಟನೆ ಕಾರ್ಯವು ಪರಂಪರೆಯನ್ನು ಮುಂದುವರಿಸಲಾಗಿದೆ. ನಿಡುಮಾಮಿಡಿ ಹಾಗು ಸಂಸ್ಥಾನದಲ್ಲಿನ ಶಿಲಾಸ್ತಂಭಗಳಲ್ಲಿ ಪ್ರಾಚೀನ ಹಾಗೂ ಪೌರಾಣಿಕ ಶಿಲ್ಪಗಳು ಮತ್ತು ವೀರಭದ್ರಮೂರ್ತಿಗಳು, ಚಂದ್ರಮೌಳೀಶ್ವರಲಿಂಗ ಹಾಗು ಪೀಠದ ಪರಂಪರೆಯಲ್ಲಿ ಬಂದ ವಿಶಿಷ್ಟ ಸರ್ವಾಂಗಲಿಂಗ ಶಿಲ್ಪ ವೃಷಭ ವಿಗ್ರಹಗಳ ಬೇರೆಯೆ ಮೂರ್ತಿಶಿಲ್ಪಗಳು ಇದ್ದು ಪೀಠದ ಸಾಂಸ್ಕೃತಿಕ ಕೊಡುಗೆಗಳಿಗೆ ಸಾಕ್ಷಿಯಾಗಿವೆ. ಈಚೆಗೆ ಗೋಶಾಲೆಯ ನಿರ್ವಹಣೆ, ವಿಶ್ವಯೋಜನೆಯ ಕಟ್ಟಡಗಳು ಆಗಿವೆ. ಅಕ್ರಮಿತವಾಗಿದ್ದ ಪೀಠದ ಭೂ ಆಸ್ತಿಗಳನ್ನು ಸೌಹಾರ್ದವಾಗಿ ತೆರವು ಮಾಡಿಸಲಾಗಿದೆ. ಮುಖ್ಯವಾಗಿ ಅಲ್ಲಿ ತೆಂಗು, ತೇಗ ಹಾಗು ಇತರೆ ಮರಗಳನ್ನು ಬೆಳೆಸಿ

ಹಸಿರು ವಲಯವನ್ನು ನಿರ್ಮಿಸಿರುವುದು ಪರಿಸರ ಸಂರಕ್ಷಣೆಗೆ ಕೊಡುಗೆಯಾಗಿದೆ. ಪವಿತ್ರವನಗಳಂತಹ ಸಸ್ಯೋದ್ಯಾನವನ್ನು ನಿರ್ಮಿಸುವ ಪ್ರಯತ್ನವೂ ಆಗಿದೆ. ಪುರಾತತ್ವ ಇಲಾಖೆಯ ನೆರವಿನಿಂದ ಪ್ರಾಚೀನ ದೇಗುಲದ ಜೀರ್ಣೋದ್ಧಾರ ಮಾಡಿಸಿ, ಪ್ರಾಚೀನ ಶಿಲ್ಪ ಸಂರಕ್ಷಣೆಯನ್ನು ಮಾಡಲಾಗಿದೆ. ಈ ಕೆಳಗಿನ ಸೇವಾ ಕಾರ್ಯಗಳೂ ನಡೆದಿವೆ :-

ಡಾ. ಶ್ರೀ ಜಚನಿ ಅನಾಥ ಮಕ್ಕಳ ಉಚಿತ ವಿದ್ಯಾರ್ಥಿನಿಲಯ (೧೯೯೧)
ಡಾ. ಶ್ರೀ ಜಚನಿ ವಸತಿ ಸಹಿತ ಪ್ರೌಢಶಾಲೆ (೧೯೯೨)
ಶ್ರೀ ವಿಘ್ನೇಶ್ವರ ಪ್ರೌಢಶಾಲೆ (ತಿಮ್ಮಂಪಲ್ಲಿ ೧೯೯೨)
ಡಾ. ಶ್ರೀ ಜಚನಿ ಬಾಲವಿಕಾಸ ಕೇಂದ್ರ (೧೯೯೩)
ಡಾ. ಶ್ರೀ ಜಚನಿ ಸಂಸ್ಕೃತ ವಿದ್ಯಾಲಯ (೧೯೯೩)
ಡಾ. ಶ್ರೀ ಜಚನಿ ಮಹಾವಿದ್ಯಾಲಯ
ಶ್ರೀ ಚಂದ್ರ ಮೌಳೇಶ್ವರ ದೇವಾಲಯದ ಪುನರ್ನಿರ್ಮಾಣ
ವಿಶ್ವಗೃಹ (ವಿಶ್ವಯೋಜನೆಯ ಶೆಡ್: ೧೯೯೩)
೮೦ ಸಾವಿರ ಲೀಟರಿನ ನೀರಿನ ತೊಟ್ಟಿ
ಶ್ರೀ ನಿಡುಮಾಮಿಡಿ ನರ್ಸರಿ (ಸಾಗವಾನಿ ಸಸಿಗಳು ೧೯೯೧ ರಿಂದ)

ಪ್ರಾಚೀನ ಭಾವಿಗಳ ದುರಸ್ತಿ ಮಾಡಿಸಿ, ಎರಡು ಬೋರ್‌ವೆಲ್‌ಗಳನ್ನು ಹಾಕಿಸಿದ್ದು, ತೋಟಗಾರಿಕೆ ಮತ್ತು ವ್ಯವಸಾಯಾಭಿವೃದ್ಧಿಮಾಡಿ ಬರಡು ನೆಲದಲ್ಲಿ ಹಸಿರಿನ ಕಳೆಯನ್ನು ತರಲಾಗಿದೆ.

ಅನ್ಯಾಕ್ರಮಿತ ಭೂಮಿಯನ್ನು ಬಿಡಿಸಿಕೊಂಡು ಶೈಕ್ಷಣಿಕ ಕ್ಯಾಂಪಸ್ ಹಾಗು ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಾಗಿರಿಸಿದೆ (ಹೆಚ್ಚಿನ ವಿವರಗಳಿಗೆ ನೋಡಿ : ಮಾಮಿಡಿ(ಮೂರ್ತಿಂಗಳೋಲೆ) ನಂ. ೧೫, ಸಂಚಿಕೆ ೪೮/ ೧೯೯೪ ಪು. ೩-೧೦).

ಪೀಠದ ಪ್ರೇರಣೆಯಿಂದಾಗಿ ಶ್ರೀ ವೀರಭದ್ರಸೇವಾ ಸಮಿತಿಯವರು, ನಿಡುಮಾಮಿಡಿಯಲ್ಲಿ ಶ್ರೀ ಕರಿಬಸವೇಂದ್ರ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಶ್ರೀ ವೀರಶೈವ ತತ್ತ್ವ ಪ್ರಚಾರಸಂಘ ಹಾಗು ಶಿವಾಚಾರಿಣಿಯರ ಸಮಾಜದವರು ಬೆಂಗಳೂರಿನ ಪೀಠದ ಗುರು ನಿವಾಸದ ಜಾಗದ ಭಾಗದಲ್ಲಿ ಕಲ್ಯಾಣ ಮಂಟಪವನ್ನು ಶ್ರೀಗಳವರ ಕೃಪೆಯಿಂದ ಕಟ್ಟಿಸಿ, ಅದರಲ್ಲಿ ವಾರ್ಷಿಕ ಹಾಗು ಮಾಸಿಕವಾಗಿ ಸಾಹಿತ್ಯಕ, ಸಾಂಸ್ಕೃತಿಕ ನಡೆಯಣೆ, ನುಡಿಯಣೆಗಳನ್ನೂ ನಿರ್ವಹಿಸುತ್ತಿದ್ದಾರೆ.

ಇಲ್ಲಿ ಒಂದು ಸಂಸ್ಥಾನವಾಗಿ ಶ್ರೀ ಶೈಲ ನಿಡುಮಾಮಿಡಿ ಪೀಠವು ನೀಡಿರುವ ಕೊಡುಗೆಗಳನ್ನು ಸ್ಥೂಲವಾಗಿ ನೀಡಲಾಗಿದೆ; ಪೀಠದ ಗುರುಗಳ ಮಣಿಹ ಪೀಠದ ವತಿಯಿಂದಾಗಿರುವ ಕಾರಣ, ಇತಿಹಾಸ ಕಾಲಕ್ರಮಕ್ಕನುಗುಣವಾಗಿ ಹೇಳಲಾಗಿದೆ; ಮಠ ಸಮಾಜಕ್ಕೆ ನೀಡಿರುವ ಕೊಡುಗೆಗಳಲ್ಲಿ ಮಠಗಳ ನಿರ್ಮಾಣದ ಉದಾಹರಣೆಯಾಗಿ ಶಾಖಾಮಠಗಳನ್ನು ಸಾಂಕೇತಿಕವಾಗಿ ಹೆಸರಿಸಲಾಗಿದೆ. ಇತಿಹಾಸವನ್ನು ದಾಖಲಿಸುತ್ತ, ವಾಮಾಚಾರಗಳ ನಿರಸನ ಕಾರ್ಯ, ವೈದ್ಯಕೀಯ ಸೇವೆ, ರಾಜರಿಗೆ ಮಾರ್ಗದರ್ಶನ, ಸಾಹಿತ್ಯ ನಿರ್ಮಾಣ, ಶಿಕ್ಷಣ ನೀಡಿಕೆ, ಶಾಲಾ ನಿರ್ಮಾಣ, ಪರಿಸರ ಸಂರಕ್ಷಣೆ, ಶಿಲ್ಪ ನಿರ್ಮಾಣ ಇತ್ಯಾದಿಗಳ ಮೂಲಕ ಚಾಲನಾತ್ಮಕ ಗುಣದ ಪರಿಯನ್ನು ತೋರಿದೆ. ಆದರ ಪರಿಣಾಮಗಳ ಉದಾಹರಣೆಯಾಗಿ ರಾಜರು ಹಾಗು ಜನತೆ ನೀಡಿರುವ ಶಾಸನೋಕ್ತ ದಾನಗಳು, ವೀರಭದ್ರ ಪ್ರತಿಷ್ಠೆ, ಭದ್ರಕಾಳಿ ದುರ್ಗೆಯರ ಕುರಿತಾದ ಜನಪದ ಆಚರಣೆಗಳು, ಪೀಠದ ಬಳಿಯಲ್ಲಿಯೆ ನಡೆಯುವ ಸಂತೆ, ಭಕ್ತವೃಂದವು ತಮ್ಮ ಬದುಕಿನ ಸಮಸ್ಯಾಪರಿಹಾರಗಳಿಗಾಗಿ ಪೀಠಕ್ಕೆ ಬರೆಯುತ್ತ ಬಂದಿರುವ ವಿಪುಲ ಪತ್ರವ್ಯವಹಾರಗಳು ಇವೆ ಹಾಗೂ ಗ್ರಂಥ ಪ್ರಕಟನೆಗೆ ಅವು ನೀಡಿರುವ ಆರ್ಥಿಕ ನೆರವಿನ ಸಂಗತಿಗಳು ಆ ಗ್ರಂಥಗಳಲ್ಲಿಯೇ ದಾಖಲಾಗಿದೆ. ಈ ಪೀಠದ ಗುರುಗಳ ಮೇಲೆ ಜನಪದ ಗೀತೆಗಳೆ ಹುಟ್ಟಿವೆ.[೬೬] ಅನೇಕ ಸೂಳ್ನುಡಿಕಾರ್ತಿಯರು ಪೀಠದ ಗುರುಗಳನ್ನು ಸ್ಮರಿಸಿ ತಮ್ಮ ಸೂಳ್ನುಡಿಯ ಅಂಕಿತವನ್ನಾಗಿ ಮಾಡಿಕೊಂಡಿರುವುದು ಮೇಲಿನ ಅಂಶಗಳಿಗೆ ಒತ್ತು ಕೊಡುವಂತಿದೆ.

ತನ್ನ ಸಂಪನ್ಮೂಲಗಳನ್ನು ಸಂಘಟಿಸಿಕೊಳ್ಳುತ್ತ ಇತಿಮಿತಿಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತ ಸಾಂಸ್ಕೃತಿಕ ಹರಿವು ಸಾಗುತ್ತ ಬರುವಂತೆ ಪೀಠ ತನ್ನ ಮಣಿಹವನ್ನು ಸಮುದಾಯಕ್ಕೆ ಸಲ್ಲಿಸಿದೆ. ಈ ದೃಷ್ಟಿಯಿಂದ ಮುಖ್ಯವಾಗಿ ಈ ಪೀಠವು ಸಾಹಿತ್ಯೋಪಾಸಕ ಮಾನವ ಧರ್ಮದ ಸಾಂಸ್ಕೃತಿಕ ಪೀಠ ಎನಿಸಿದೆ; ಸಾಂಸ್ಕೃತಿಕ ಪಥವನ್ನು ಯಶಸ್ವಿಯಾಗಿ ಗಮಿನಿಸುತ್ತಿದೆ. ಈಶ್ವರಾಜ್ಞೆಯಂತೆ ಇಂತಹ ಮಣಿಹವನ್ನು ಮಾಡಿಮುಗಿಸಿ ಸಮಾಜ ಸೇವೆಯನ್ನು ನಿರ್ವಹಿಸಿದ ಶ್ರೀ ಜ.ಚ.ನಿ. ಸನ್ನಿಧಿಯವರು 5-11-96 ರಂದು ಲಿಂಗೈಕ್ಯರಾದರು. ಅವರ ದಿವ್ಯಚೇತಸ್ಸು ಉತ್ತರೋತ್ತರ ದಿವ್ಯವಾಗಿ ಭವ್ಯವಾಗಿ ಬೆಳಗಲಿ.

ಟಿಪ್ಪಣಿಗಳು

೧. 'ಸಿಂಹಾಸನಾಧಿಪತಯಃ ಶಿವಾಮುದ್ರಾದಿ ಸಂಯುತಾ': ಪಾಶುಪತಾಗಮದ ಈ ಮಾತಿಗೆ ಸಿಂಹಾಸನಾಧಿಪತಿಗಳು ಶಿವಾಮುದ್ರಾದಿಗಳಿಂದ ಕೂಡಿದವರು ಎಂದರ್ಥವಿದೆ. (ಶಿವಾಗಮಸೌರಭ:(ಸಂ) ಎಂ. ಜಿ. ನಂಜುಂಡಾರಾಧ್ಯ, ಬೆಂಗಳೂರು, ೧೯೮೭, ಪು. ೮೩ ಅನುಬಂಧ. ಪು. ೯೦)

೧ಅ. ಎಂ. ಜಿ. ನಂಜುಂಡಾರಾಧ್ಯ: 'ವೇದಕಾಲದ ಜಂಗಮರು', ಚಿನ್ಮೂಲಾದ್ರಿ ಚೇತನ, ಚಿತ್ರದುರ್ಗ, ೧೯೮೯, ಪು. ೧೮೪-೮೭

೨. ಹಿತ್ತಲಮನಿ ಮಲ್ಲಣಾಚಾರ್ಯರು: 'ಶಕ್ತಿ ವಿಶಿಷ್ಟಾದ್ವೈತದ ಪ್ರಾಚೀನತೆ', ವಿಭೂತಿ (ಸಂ) ಶ್ರೀ ಜಚನಿ, ಬೆಂಗಳೂರು, ೧೯೬೧, ಪು. ೨೬೧ ಮತ್ತು ೨೬೪

೩. ಡಾ. ಶ್ರೀ. ಜಚನಿ: ಶ್ರೀ ಜಗದ್ಗುರು ಆದಿರೇಣುಕರು, ಗದಗ, ೧೯೮೩, ಪು. ೨೪-೨೭

೪. ಕನ್ನಡ ನಾಡಿನ ಚರಿತ್ರೆ: ಭಾಗ ೨, ಕರ್ನಾಟಕ ಧರ್ಮಗಳು: (ಪ್ರ. ಸಂ) . ಬಿ. ಎಂ. ಶ್ರೀಕಂಠಯ್ಯ, ಡಾ. ಎಸ್. ಸಿ. ನಂದೀಮಠ, ಬೆಂಗಳೂರು, ಪು. ೪೧

೫. ಅಕ್ಕುಲಯ್ಯ ದೀಕ್ಷಿತರು: 'ಶ್ರೀಶೈಲ ಪಂಡಿತಾರಾಧ್ಯ ಮೂಲಪೀಠ': ಶ್ರೀಶೈಲಪೀಠದರ್ಶನ, ಬೆಂಗಳೂರು, ೧೯೬೭, ಪು. ೪೩

೬. ಶ್ರೀ ಪುಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತಮು: ಬೆಂಗಳೂರು, ೧೯೫೪, ಎಂ. ಜಿ. ನಂಜುಂಡಾರಾಧ್ಯರ ಉಪೋದ್ಘಾತ, ಪು. ೧೬

೭. ಎಸ್. ಕೆ. ರಾಮಚಂದ್ರರಾವ್: 'ಟಿಬೆಟ್ಟಿನಲ್ಲಿ ತಾಂತ್ರಿಕ ಸಂಪ್ರದಾಯ', ಶ್ರೀಕಂಠತೀರ್ಥ, (ಸಂ.) ಎಂ. ಚಿದಾನಂದ ಮೂರ್ತಿ ಮತ್ತಿತರರು, ಬೆಂಗಳೂರು, ೧೯೭೬, ಪು. ೮೦೫

೮. T. V. Mahalingam . 'A Topographical list of inscriptions in the Tamilnadu and Kerala States, NewDelhi, ೧೯೮೫, pp ೭೪-೭೫

೯. ಶ್ರೀ ಜಚನಿ: ಪ್ರತಿಭಾಸಿದ್ಧರು ಪಂಡಿತಾರಾಧ್ಯರು, ಬೆಂಗಳೂರು, ೧೯೬೬, ಪು. ೫,೧೨, ೩೯(ಪೀಠಿಕೆ, ಪ್ರ.ಗ) ಮತ್ತು ಶ್ರೀಶೈಲ ಪೀಠದರ್ಶನ, ಅದೇ ಪು. ೪೫-೪೬

೧೦. ಶ್ರೀಶೈಲ ಪಂಡಿತಾರಾಧ್ಯ ಚರಿತಮು: ಅದೇ ಪು. ೩೧

೧೧. ಶ್ರೀ ಜಚನಿ: ಅದೇ, ಪು. xii

೧೨. ಶ್ರೀಶೈಲಪೀಠದರ್ಶನ, ಅದೇ ಪು. ೪೪- ರೀತ್ಯಾ ಘಂಟಾಮಠ, ಸಾರಂಗಮಠ, ನರಲೋಕ ಸೂರಿಯನ್ ತಿರುಮಠ, ಕಲ್ಲುಮಠ ಮೂಲಮಠ ಚಂದ್ರಗುಂಡ ಮಠ ಇತ್ಯಾದಿ ಮಠಗಳಿವೆ. ಮೊದಲಿಗೆ ಬೌದ್ಧ ಮಠವೂ ಅಲ್ಲಿ ಇದ್ದಿರಬೇಕು.

೧೩. ಕಪಟರಾಳ ಕೃಷ್ಣರಾವ್ : ಕರ್ನಾಟಕದ ಲಾಕುಳಶೈವರ ಇತಿಹಾಸ, ಧಾರವಾಡ, ೧೯೫೫, ಪು. ೬೪, ೬೫, ೧೦೪

೧೪. ಎಸ್. ಕೆ. ರಾಮಚಂದ್ರರಾವ್ ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೫, ಪು. ೩೦೭, ೩೦೯, ೩೧೯

೧೫. ಮ.ಸು. ಕೃಷ್ಣಮೂರ್ತಿ. 'ನಾಥಪಂಥ', ಶ್ರೀಕಂಠತೀರ್ಥ, ಅದೇ, ಪು. ೮೨೧, ೮೩೧: ಅಲ್ಲದೆ ಗೋರಕ್ಷ, ಗೋದಾವರಿ ತೀರದ ಬಡಗನಾಡಿನ ಭದ್ರಗಿರಿಯವನು, ಪಟ್ಟದಕಲ್ಲು ಜನ್ಮಸ್ಥಳ ಎಂದೆಲ್ಲ ಅಭಿಪ್ರಾಯಗಳಿವೆ. ಆದರೆ ಕನ್ನಡ ವಚನಗಳನ್ನು ಬರೆದ ಗೋರಕ್ಷ ಬೇರೆ ಇರಬೇಕು.

೧೬. ಡಾ. ತಾಳ್ತಜೆ ವಸಂತಕುಮಾರ್: ಕರ್ನಾಟಕದಲ್ಲಿ ಬೌದ್ಧಸಂಸ್ಕೃತಿ, ಬೆಂಗಳೂರು, ೧೯೮೮, ಪು. ೧೬೦, ೧೮೪

೧೭. ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ) : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೭, ಪು-೬೨೫

೧೮. ಮ. ಸು. ಕೃಷ್ಣಮೂರ್ತಿ. ಅದೇ, ಪು. ೮೩೫

೧೯. ಟಿ.ಎನ್. ಮಲ್ಲಪ್ಪ: ವೀರಶೈವದ ಉಗಮ ಮತ್ತು ಪ್ರಗತಿ, ಬೆಂಗಳೂರು, ೧೯೬೯, ಪು. ೩೦

೨೦. ಶ್ರೀ ಜಚನಿ: ಅದೇ, ಪು. ೩೫, ೩೭

೨೧. ನೂತನ ಚೇತನ (ನೂತನ ಪಟ್ಟಾಧಿಕಾರ ಮಹೋತ್ಸವ ಸಂಸ್ಮರಣ ಸಂಪುಟ, ಸಂ. ಡಾ. ಸಾ. ಶಿ ಮರುಳಯ್ಯ, ಡಾ. ಎಸ್. ವಿದ್ಯಾಶಂಕರ್, ಶ್ರೀಶೈಲ ಜಗದ್ಗುರು ನಿಡುಮಾಮಿಡಿ ನಿವಾಸ, ಬೆಂಗಳೂರು-೪, ಪು. ೭

೨೨. ಶ್ರೀ ಜಚನಿ: ಪ್ರತಿಭಾಸಿದ್ಧರು ಪಂಡಿತಾರಾಧ್ಯರು, ಅದೇ ಪು. ೬೨

೨೩. ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ): ಅದೇ, ಪು. ೬೫೯: ಇಲ್ಲಿನ ಈ ಊಹೆಯ ಮಾತಿಗೆದುರಾಗಿ ಹೀಗೂ ಹೇಳಬಹುದು - ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ, 'ಮನೆ ನಿನಗೆ ನಂದಗೋಪಾಲನ ಮನೆ', 'ಪಟ್ಟದ ಮೊದಲಿಗ ರಾಜಿಗೆ ಜಟ್ಟಿಗರಪರೆಂದು', 'ಉರಿ ಮುಟ್ಟಿದ ಅರಳೆಯಂತಂ,' ಹಾಗು ವಡ್ಡಾರಾಧನೆಯಲ್ಲಿ ಸವಣ ಮತ್ತು ಬ್ರಾಹ್ಮಣನ ನಡುವೆ ಮಗಳ ವ್ರತ ಸಂಬಂಧದಲ್ಲಿ ಬರುವ ಮಾತುಗಳೂ, ಎಷ್ಟೋ ಮುಂದಿನ ಕಾಲದಲ್ಲಿದ್ದ ಬಳಕೆಯ ಭಾಷಾಶೈಲಿಯಂತೇ ಕಾಣುತ್ತದೆ. ಹಾಗೆಂದು ಅವನ್ನು ಮುಂದಿನ ಯಾವುದೋ ಶತಮಾನಕ್ಕೆ ಸೇರಿಸಲು ಆದೀತೆ? ಇದಲ್ಲದೆ ಕ್ರಿ. ಶ. ೧೩೫೦ರ ಗುರುದೇವನು ತನ್ನ 'ವೀರಶೈವಾಚಾರ ಪ್ರದೀಪಿಕೆ'ಯಲ್ಲಿ ತನ್ನ ವಂಶದಲ್ಲಿ 'ಮಲ್ಲಿಕಾರ್ಜುನ ಪಂಡಿತಾರಾಧ್ಯನ ಮಗ ಪಂಡಿತಾರಾಧ್ಯ' ಎಂದು ಮಾತ್ರ ಹೇಳಿದ್ದಾನೆ ಎನ್ನುವುದು ಸೂಕ್ತವೆನಿಸುವುದಲ್ಲ. ತಂದೆಗೆ 'ಪಂಡಿತಾರಾಧ್ಯ' ಎಂಬುದು ವಂಶಿಕ ವಿಶೇಷಣವಾಗಿ ಬಂದಿರುವಲ್ಲಿ ಮಗನಿಗೆ ಅದಷ್ಟೇ ಹೆಸರಾಯಿತೆನ್ನುವುದು ಇಲ್ಲಿನ ಸಂದರ್ಭದಲ್ಲಿ ಸಮರ್ಥನೀಯವೆನಿಸದು. ಕೃತಿಕಾರನೇ ಆ ಬಗ್ಗೆ ಮಾಹಿತಿ ದೊರಕದೆ ಸರಿಯಾಗಿ ದಾಖಲು ಮಾಡಿಲ್ಲವೆಂದು ತೋರುತ್ತದೆ. ಗುರುವರ್ಗದ ಪಟ್ಟದ ಮಠವಲ್ಲದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಪೀಠವು ವೆಲ್ಲಟೂರು(ಯಪ್ಪಟೂರು?) ನಲ್ಲಿದ್ದಿತೆನ್ನಲಾಗಿದೆ. ಇವನ ವಂಶದ ಗುರುಸೋಮನಾಥನು ಮಹಾಕವಿ ಪೋತನಾಮಾತ್ಯನಿಂದ ಬರೆಸಿದ 'ವೀರಭದ್ರ ವಿಜಯ' ಕಾವ್ಯದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನ ೫ ಜನ ಮಕ್ಕಳ ಹೆಸರುಗಳಲ್ಲಿ, ಈ 'ಪಂಡಿತಾರಾಧ್ಯ'ನ ಹೆಸರಿಲ್ಲ. ಶ್ರೀ ಶೈಲ ಪಂಡಿತಾರಾಧ್ಯ ಪೀಠದ ಪಟ್ಟವಲ್ಲರಿಯಲ್ಲಿ ಇವರಾರೂ ಅಂಕಿತರಾಗಿಲ್ಲ. ಅಂದಮೇಲೆ ಪೀಠದಗುರು, 'ಗುರುಸಿದ್ಧಮಲ್ಲು' ಇವನ ವಚನಾಂಕಿತವೆನ್ನುವುದಕ್ಕೆ ಆಧಾರ ಇಲ್ಲ ಎನಿಸುತ್ತದೆ. (ಪುಲ್ಲಕವಿ ಅದೇ, ಉಪೋದ್ಘಾತ, ಪು. ೯೨ ೯೩) ಇನ್ನು ಶೈಲಿಯ ಪ್ರಮಾಣ ನಿರ್ವಿವಾದವಲ್ಲ. ಅದೂ ಆಂಧ್ರದಲ್ಲಿದ್ದು ಕನ್ನಡ ಪ್ರಭಾವವಿದ್ದಿತೆನ್ನಲಾದ ಪ್ರದೇಶದ ಸೂಳ್ನುಡಿಕಾರರೊಬ್ಬರ ಅದ್ಯರಚನೆ ಇದಾಗಿದೆ. ಅದನ್ನು ಕರ್ನಾಟಕದಲ್ಲಿದ್ದ ಸೂಳ್ನುಡಿ ವಚನಕಾರರ ಸಾಹಿತ್ಯ ಹಾಗು ಭಾಷಾಶೈಲಿಯ ರೀತಿಗೆ ಪೂರ್ಣವಾಗಿ ಹೋಲಿಸಲು ಬಾರದು. ೧೨ನೆಯ ಶತಮಾನದ ವಚನಕಾರರ ನಡುವೆ ಆಂಧ್ರದ ಈ ಸೂಳ್ನುಡಿಕಾರರ ಒಂದು ವಚನ ಮಾತ್ರ ಇದ್ದು ಪ್ರಸಿದ್ಧಿಗೊಂಡು ಪುರಾತನದ ವಚನಕಟ್ಟುಗಳಲ್ಲಿ ಸೇರಿತ್ತು, ಎನ್ನುವುದೂ ಸಮರ್ಪಕವೆನಿಸುವಂತೆ ಕಾಣುವುದಿಲ್ಲ. ಬಹುತೇಕ

೧೨ನೆಯ ಶತಮಾನದ ವಚನಕಾರರು ತಮ್ಮ ಆರಾಧ್ಯ ದೈವವಾದ ಸ್ಥಾವರಲಿಂಗದ ಹೆಸರನ್ನೆ ವಚನಾಂಕಿತಕ್ಕೆ ಮುಖ್ಯವಾಗಿ ಬಳಸಿಕೊಂಡಿದ್ದಾರೆ. ಆದರೆ ಇಲ್ಲಿ ಗುರುವಿನ ಅಂಕಿತವಿದೆ. ಆ ಕಾಲದ ರೂಢಿಯಂತೆ ದೇಸಿಯ ಪ್ರಭಾವ ಮಾತ್ರ ಡಾಳವಾಗಿದೆ.

೨೪. ದೇವರ ದಾಸಿಮಯ್ಯನ 'ಸಿರಿಯ ನಿತ್ತೊಡೆ ಒಲ್ಲೆ ....' ಹಾಗು ಶಂಕರದಾಸಯ್ಯಗಳ, 'ಇದು ಶ್ರುತದುಷ್ಟ ಅನುಮಾನದಿಂದ ವಿಚಾರಿಸಿ ನೋಡಲು .... ಘನಗುರು ಶಿವಲಿಂಗ ರಾಮನಾಥಾ' ಎನ್ನುವ ಸೂಳ್ನುಡಿಗಳಲ್ಲಿ (ಡಾ. ಶ್ರೀ ಜಚನಿ: ವೀರಶೈವ ಸೂಳ್ನುಡಿಕಾರರು. ಪು. ೪೦) ಮೇಲಿನ ಪಂಡಿತಾರಾಧ್ಯರ ಸೂಳ್ನುಡಿಯ ಪ್ರಭಾವ ಕಾಣುತ್ತದೆ. ಶಂಕರದಾಸಯ್ಯಗಳ ೨೦೫ ಸಾಲುಗಳ ಏಕ ಸೂಳ್ನುಡಿಯಲ್ಲಿ ಸಂಸ್ಕೃತ ಶ್ಲೋಕಗಳ ಹಾಸು ೬೫ ಸಾಲುಗಳಷ್ಟಿರುವುದು ಗಮನಾರ್ಹ. ೧೨ನೆಯ ಶತಮಾನದ ವಚನಕಾರರಲ್ಲಿ 'ಲ'ಕಾರ ದಿತ್ವದ ಈ ಬಗೆ, ಭಾಷಾ ಶೈಲಿಯ ಈ ಬಗೆ ಕಾಣಬರದು.

೨೫-೨೬-೨೭. i. ಶ್ರೀ ಪುಲ್ಲಕವಿ ವಿರಚಿತ ಶ್ರೀ ಶೈಲ ಪಂಡಿತಾರಾಧ್ಯ ಚರಿತಮು. ಅದೇ. ಪು. ೪೯-೬೨

ii. ಡಾ. ಶ್ರೀ ಜಚನಿ: ಶ್ರೀ ವಿರೂಪಾಕ್ಷ ದೇಶಿಕೇಂದ್ರರು. ಶ್ರೀ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ. ಬೆಂಗಳೂರು-೪. ೧೯೯೦. ಪು. ೧೦, ೧೪, ೩೫, ೩೭

iii. ಎಂ. ಜಿ. ನಂಜುಂಡಾರಾಧ್ಯ: ವೈರಾಗ್ಯ ಸಿದ್ಧ ವಿರೂಪಾಕ್ಷ ದೇಶಿಕೇಂದ್ರ, ಬೆಂಗಳೂರು. ೧೯೬೮.ಪ್ರಸ್ತಾವನೆ. ಪು. xxx

೨೮. ಶ್ರೀ ಪುಲ್ಲಕವಿ: ಅದೇ. ಪು. (ಪ್ರಥಮಾಶ್ವಾಸ) ೬೩-೬೫ ದ್ವಿತೀಯಾಶ್ವಾಸ ಪದ್ಯ ೨

೨೮.ಅ: ಶ್ರೀ ಜಚನಿ: ಚಿತ್ಕಳಾಮೂರ್ತಿ ಚಂದ್ರಗುಂಡ ಶಿವಾಚಾರ್ಯ, ಬೆಂಗಳೂರು -೧೯೬೪. ಪು. ೨.

೨೯. ಕನ್ನಡ ಕವಿಚರಿತೆ (ಭಾಗ. ೩) ಪು. ೨೨೨ ರೀತ್ಯಾ ಮಹಾಂತದರ್ಶನ 'ಶಿವಶರಣ ವಿಲಾಸ' ಗ್ರಂಥದ ೧೬ನೇ ಸಂಧಿಯಲ್ಲಿಯೂ ಈ ವಿಷಯವಿದೆ. ಪುಲ್ಲಕವಿಯೂ ತನ್ನ ಕೃತಿಯ ದ್ವಿತೀಯಾಶ್ವಾಸದಲ್ಲಿ ೯-೧೧ನೇ ಪದ್ಯಗಳಲ್ಲಿಯೂ ಹೇಳಿದ್ದಾನೆ. ಮತ್ತು
ಶ್ರೀ ಜಚನಿ: ಚಿತ್ಕಳಾಮೂರ್ತಿ ಚಂದ್ರಗುಂಡ ಶಿವಚಾರ್ಯ, ಬೆಂಗಳೂರು-೪, ೧೯೬೪. ಪು. ೧೭-೧೮

೩೦. ೧೨ನೆಯ ಶತಮಾನದ ಪೂರ್ವ ವೀರಶೈವ ಸೂಳ್ನುಡಿಕಾರರು (ಸಂ.) ಡಾ. ಶ್ರೀ ಜಚನಿ, ಬೆಂಗಳೂರು-೪, ೧೯೯೨. ಪು. ೬-೭ ದೇವರ ದಾಸಿಮಯ್ಯನಲ್ಲಿ (೧೧ನೆಯ ಶತಮಾನದ) ಬರುವ'ಹಿರಿದಪ್ಪ ರಾಜ್ಯವನಿತ್ತೊಡೆ ಒಲ್ಲೆ' ಎಂಬ ಸೂಳ್ನುಡಿಯ ಸಾಲಿನ ಧ್ವನಿಯನ್ನು ೧೨ನೆಯ ಶತಮಾನದವನೆಂದು ವಿಭಿನ್ನ ಜೇಡರ ದಾಸಿಮಯ್ಯನ ಹೆಸರಿಗೆ ಆರೋಪಿಸಿದರೆ ಇತಿಹಾಸ ತಾಳೆ ಆಗದು. ಆದಾಗಿ ದೇವರ ದಾಸಿಮಯ್ಯನೂ ಸೂಳ್ನುಡಿಕಾರನೆಂದರೆ ಈ ವೈರುಧ್ಯ ತಪ್ಪುತ್ತದೆ. ಅದು ಚಂದ್ರಗುಂಡ ಶಿವಾಚಾರ್ಯರೂ ಸೂಳ್ನುಡಿ ರಚಿಸಿರಬಹುದೆಂಬ ಊಹೆಗೆ ಇಂಬು ಕೊಡುತ್ತದೆ. ಚಂದ್ರಗುಂಡರ ಸಂದರ್ಭದಲ್ಲಿ ಮಾತ್ರ ಈ ಬಗ್ಗೆ ಮತ್ತಷ್ಟು ಪ್ರಮಾಣಗಳ ಪರಾಮರ್ಶೆಗಳು ಆಗತ್ಯವಿದೆ. ಜೊತೆಗೆ ಎ.ಕ. ಸಂ.೮ (ಹೊಸತು) ಹೊಳೆನರಸೀಪುರ ೬೪ ನೋಡಿ.

೩೧. ಎಂ. ಜಿ. ನಾಗರಾಜ್: 'ಕೊಡಗಿನ ಕೊಲೆಕಲ್ಲುಗಳು', ಹರತಿ ಸಿರಿ.(ಸಂ) ಲಕ್ಷ್ಮಣ ತೆಲಗಾವಿ. ಹರ್ತಿಕೋಟೆ. ೧೯೮೭. ಪು. ೬೨೧

೩೨. ಎಸ್. ಕೆ. ರಾಮಚಂದ್ರರಾವ್: 'ನಂದಿಬೆಟ್ಟ' ಪ್ರಜಾವಾಣಿ. ೨೧.೨.೧೯೬೧

೩೩. ಪುಲ್ಲಕವಿ: ಅದೇ. ಉಪೋದ್ಘಾತ. ಪು. ೩೮-೩೯, ಮತ್ತು ಶಿವಾನುಭವ. ೧೯೩೭. ಸಂ. ೧೨. ಸಂ. ೩. ಪು. ೧೫೬

೩೪ ಅ. ಕುಪ್ಪಚ್ಚಿರ ಪೊಣ್ಣಪ್ಪ: ಪೊಮ್ಮಾಲೆ ಕೊಡಗ್. ಮಡಿಕೇರಿ. ೧೯೮೯.ಪು. ೧೩ ರಲ್ಲಿ ಇಂದಿನ ಸಿದ್ದಾಪುರದ ಬಳಿಯ 'ಗುಹ್ಯ' ಗ್ರಾಮಕ್ಕೆ ಕೊಡವ ಭಾಷೆಯಲ್ಲಿ 'ಗುಯ್ಯ' ಎಂಬ ಪ್ರಯೋಗವಿರುವುದು ಕಾಣುತ್ತದೆ. ಪೂರ್ವಹಳಗನ್ನಡ ಭಾಷಾ ಕುಟುಂಬದಲ್ಲಿ ಒಂದಾಗಿದ್ದು ಶೇಕಡ ಸುಮಾರು ೫೦ರಷ್ಟು ಕನ್ನಡ ಶಬ್ದಗಳಿರುವ ಕೊಡವ ಭಾಷೆಯಲ್ಲಿ ಗುಹ್ಯ = ಗುಯ್ಯ ಎಂದಿರುವುದು ಗಮನಾರ್ಹ.
ಆ: ಪೀಠದ ಅವರಣದಲ್ಲಿ ಆಸೀನ ಬೃಹತ್ ವೃಷಭನ ಶಿಲ್ಪವಿದೆ. ಅಂತಾಗಿ ಗೂಳೂರು ಎಂಬುದು ಗೂಳಿಕುಳಿತ ಊರು > ಗೂಳಿಯ ಊರು > ಗೂಳಿಯೂರು > ಗುಳ್ಳೂರು > ಗೂಳೂರು ಎಂದು ಸ್ಥಳನಾಮರೂಪ ವಿಕಾಸವನ್ನು ಪಡೆದಿರಬಹುದು. ಇದಕ್ಕೆ ಪೂರಕವಾಗಿ 'ವೃಷಭಪುರ' ಅಥವಾ 'ಗೂಳೂರಿನ ಸಿದ್ಧವೀರ' ಎಂಬುದು ಯಳಂದೂರ ಹರೀಶ್ವರನ ಕೃತಿ ರಚನೆಯೊಂದರ ಸಂದರ್ಭದಲ್ಲಿ ಬಂದಿರುವಲ್ಲಿ, ವೃಷಭ ಹಾಗು ಗೂಳಿ ಎಂಬ ಜ್ಞಾತಿ ಶಬ್ದಗಳಾಗಿ ಗೂಳೂರು ಎಂಬ ಸ್ಥಳನಾಮಕ್ಕೆ ಹೊಂದಿಕೆ ಆಗಿರಲೂ ಬಹುದು.(ಈ ಬಗ್ಗೆ ಜಿ.ಜಿ. ಮಂಜುನಾಥನ್: 'ಆಕರಗಳು', ಹದಿನಾಡು ವೀರಶೈವ ಅರಸುಮನೆತನ (ಸಂ) ಡಾ. ಎಸ್. ವಿದ್ಯಾಶಂಕರ್, ಬೆಂಗಳೂರು, ೧೯೯೩, ಪು. ೧೨. ನೋಡಿ)

೩೫. ಪುಲ್ಲಕವಿ: ಅದೇ ದ್ವಿತೀಯಾಶ್ವಾಸ, ಪು. ೧೧೪. ಆದರೆ ಚಂದ್ರಗುಂಡ ಸನ್ನಿಧಿಯವರ'ನಾರೀಕೇಳಪವಾಡ' (ತೆಂಗಿನ ಮರ ಬಾಗಿ ನೀಡಿದ ಫಲ) ಪ್ರಸಿದ್ಧವಾದರೂ ಈ ಸಂಸ್ಥಾನಕ್ಕೆ ನಾರಿಕೇಳ ಅಥವಾ ತೆಂಗಿನಫಲ ಸಂಬಂಧದ ಹೆಸರಿನ ವಿಶೇಷಣ ಅಂಟಲಿಲ್ಲ. ಅಂದರೆ ಪೂರ್ವಪರಂಪರೆಯ ಹೆಸರೇ ಮುಂದೆ ನಡೆದ 'ಮಾಮಿಡಿ' ಪವಾಡದವರೆಗೂ ಮುಂದುವರಿದಿರಬೇಕೆನಿಸುತ್ತದೆ. ಇದಲ್ಲದೆ ಎಸ್.ಕೆ. ರಾಮಚಂದ್ರರಾವ್ 'ಗೂಳೂರಿನಲ್ಲಿ ಶ್ರೀಶೈಲ ಸನ್ನಿಧಿ', ಶ್ರೀಶೈಲಪೀಠ ದರ್ಶನ, ಪು. ೨೩೬-೩೭ ರೀತ್ಯಾ ಶ್ರೀ ಚಂದ್ರಗುಂಡ ದೇಶಿಕೇಂದ್ರರ ಪ್ರಭಾವಶಾಲಿ ವ್ಯಕ್ತಿತ್ವದಿಂದಾಗಿ ಅಲ್ಲಿನ ಪಂಡಿತಾರಾಧ್ಯ ಪ್ರವರ್ತಿತ ಸಿಂಹಾಸನ ಮಠಕ್ಕೆ ಚಂದ್ರಗುಂಡ ಮಠವೆಂದೇ ವ್ಯವಹರಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಅಲ್ಲದೆ ಕುಷ್ಟಗಿ ಹಿರೇಮಠದ ಚೆನ್ನಬಸವ ಪುರಾಣದಲ್ಲಿ ಚಂದ್ರಗುಂಡದ ಶ್ರೀ ಮಠದ ಪಟ್ಟದಸ್ವಾಮಿ ಕಲಿಬಸವೇಶ ಎಂದಿದೆ.

೩೬. ಪುಲ್ಲಕವಿ: ಅದೇ ಉಪೋದ್ಘಾತ, ಪು. ೨೩ ರಲ್ಲಿ ಸಂಗತಿ ಹೀಗಿದೆ : ಮೈಸೂರು ಜಿಲ್ಲೆ ಬೆಟ್ಟದಪುರದ ವಿರಕ್ತಮಠದಲ್ಲಿದ್ದ ಕೈಬರಹದ ಗ್ರಂಥದಲ್ಲಿ 'ಪಾಶುಪತಾಗೋಪೋಕ್ತ ವೀರಶೈವಾನ್ವಯ ಪ್ರಕಾಶಿಕೆ'ಯ ಉದ್ಧೃತ ಚಂದ್ರಗುಂಡ ಶಿವಾಚಾರ್ಯರ ಬಗ್ಗೆ ಹೇಳಿರುವುದನ್ನು ರಕ್ಷಿಸಿಡಲಾಗಿತ್ತು ಎಂದಿದೆ. ಬಹುಶಃ ಶಾಖಾಮಠವಾಗಿ ಅನ್ವಯಿಕ ವಿಷಯದ ಬರಹವನ್ನು ರಕ್ಷಿಸಿಟ್ಟಿರುವುದು ಸಹಜವೆನಿಸುತ್ತದೆ. ಕಾಲಾಂತರದಲ್ಲಿ ಮಠವು ಜೀರ್ಣಾವಸ್ಥೆಯಲ್ಲಿದ್ದಾಗ ಲೀಲಾಪ್ತಿ ಸಮಯದ ವಿರಕ್ತ ಗುರುಗಳು ಅಲ್ಲಿ ನಿಂತು ಜೀರ್ಣೋದ್ಧಾರಗೊಳಿಸಿರುವಂತೆ ತೋರುತ್ತದೆ. ಅಲ್ಲದೆ ಪಿರಿಯಾಪಟ್ಟಣ ತಾಲೂಕು. ಕ್ರಿ. ಶ. ೧೫೨೧ರ ಅಲ್ಲಿನಾಯಕನಹಳ್ಳಿ ಶಾಸನ ಹಾಗೂ ೧೬೦೭ರ ಬೆಟ್ಟದಪುರ ಶಾಸನದಲ್ಲಿ, 'ಶ್ರೀಗಿರಿ ಅನ್ನದಾನಿ ಮಲ್ಲಿಕಾರ್ಜುನ', 'ಶ್ರೀಶೈಲಪರ್ವತದ ಮಲ್ಲಿಕಾರ್ಜುನ ಸ್ವಾಮಿ ಆರುಕೆ' ಎಂದು ಉಕ್ತವಾಗಿರುವುದು ಗಮನಾರ್ಹ.

೩೭. ಎ. ಕ. ಸಂಪುಟ. ೩ ಮೈಸೂರು ಜಿಲ್ಲೆ, ೧೯೬೪, ಗುಂಡ್ಲುಪೇಟೆ ೬೧

೩೮ Coorg District Gazetteer; (Ed) B. N. Satyan, 1965, pp. 44,45

೩೯. ಡಾ. ಶ್ರೀಜಚನಿ : 'ಸನ್ನುತ ಶ್ರೀ ಚಂದ್ರಗುಂಡ ಶಿವಚಾರ್ಯ ಸನ್ನಿಧಿಯವರು', (ಚಂದ್ರಗುಂಡ ಶಿವಾಚಾರ್ಯಾಂಕ) ಮಾಮಿಡಿ ವಿಶೇಷಾಂಕ -೧೯. ಬೆಂಗಳೂರು, ಸಂ. ೯. ಸಂ. ೩೫ ೩೭, ಪು. ೧೨

೪೦. ಆಂಧ್ರದ ಪೋಲೇ ಪಲ್ಲಿಯ ಶ್ರೀ ಪಿ. ಎಂ. ಬಂಡೆಯ್ಯ ಸ್ವಾಮಿಗಳು ಬರೆದು ತಿಳಿಸಿದ ವಿಷಯ: ಅವರ ಮಠದ ದಾಖಲೆ ರೀತ್ಯಾ ಆಂಧ್ರ ಪ್ರದೇಶದಲ್ಲಿ ೧೮ ಫಣಾಚಾರಕ್ಕೆ ಸೇರಿದವರು ಶೆಟ್ಟಿಬಲಿಜ, ಈಡಿಗ, ಪಾತ್ರದವರು,(ದೇವದಾಸಿ), ಕುಂಬಾರ, ಮೇದರ, ಉಪ್ಪಾರು, ಕುರುಬರು, ನೇಕಾರ, ಅಗಸ, ಭಜಂತ್ರಿ, ಕೊರಸರು, ಮುಚ್ಚಿಗರು, ಹಗಲು ವೇಷಧಾರಿಗಳು, ಬಾಲಜಂಗಾಲರು, ಮಣ್ಣವಡ್ಡರು, ಬೆಸ್ತರು, ಕಾಟಿಪಾಪರು, ಚಲವಾದಿಗಳು, ಇದ್ದಾರೆ; ಕರ್ನಾಟಕದಲ್ಲಿ ಹಿರೆ ಕುರುವಿನ ಶೆಟ್ಟಿ, ಚಿಕ್ಕುರುವಿನ ಶೆಟ್ಟಿ, ಶೆಟ್ಟಿಬಣಜಿಗ, ಕುಂಬಾರಶೆಟ್ಟಿ, ಕುರುಬಗೌಡ, ಕ್ಷೌರಿಕ, ಅಗಸ, ಚಲವಾದಿ, ನವನಾತಸಿದ್ಧರು (ಕಾಟಿಪಾಪರು), ದೊಹರರು (ದೊಕ್ಕಲರು), ಮುಚ್ಚಿಗರು, ಮ್ಯಾದಾರು, ಕೊರಸರು, ಮಣ್ಣುವಡ್ಡರು, ಬಾಲಜಂಗಾಲರು, ಯಳವರು, ಭಟ್ಟರು, ಶಿರಿಜಂಗಾಲರು, ಅಥವಾ ಪರ್ವತ ಮಲ್ಲಯ್ಯನವರು - ೧೮ ಫಣದ ಇವರೆಲ್ಲ ಶಿವಾಚಾರಕ್ಕೆ ಸೇರಿದವರು ಆಗಿದ್ದಾರೆ. ಇವರಲ್ಲದೆ ವೀರಶೈವೇತರರೂ ಈ ಪೀಠಕ್ಕೆ ಶಿಷ್ಯರಾಗಿ ನಡೆದುಕೊಂಡಿದ್ದಾರೆ ಎಂದು ಡಾ. ಶ್ರೀ ಜಚನಿ. ಹೇಳಿದ್ದಾರೆ(ಮಾಮಿಡಿ ವಿಶೇಷಾಂಕ, ಅದೇ. ಪು. ೧೩).

೪೧. ಡಾ. ಶ್ರೀ ಜಚನಿ. ಕರಿನಾಡ ಕರಿಬಸವೇಂದ್ರರು, ಬೆಂಗಳೂರು, ೧೯೭೪, ಪು. ೬೫

೪೨. ಪಲ್ಲಕುರಿ ಪಂಡಿತಾರಾಧ್ಯ ಚರಿತ್ರಮು, ಅನುಬಂಧಮು. ೮, ಪು. ೩೬೭

೪೩. ನೂತನ ಚೇತನ : (ಪಟ್ಟಿವಲ್ಲರಿ) ಅದೇ, ಪು. ೭

೪೪. ಶ್ರೀ ಬುದ್ಧಯ್ಯ ಸ್ವಾಮಿ ಪುರಾಣಿಕ ಲೇಖನದಿಂದ ಉದ್ಧೃತ (ಪುಲ್ಲಕವಿ . ಅದೇ ಉಪೋದ್ಘಾತ. ಪು. ೬೫, ೬೮) ಶಿವಾನುಭವ, ಅಕ್ಟೋಬರ್ ೧೯೩೫

೪೪-ಅ. ಈ ಪೆರಿಯ ಮಠದ ಈ ಅಂಶವನ್ನು ಅಲ್ಲಿನ ಡಾ॥ಶಾಂತದೇವ ಸಾರಂಗದೇವ ದೇಶಿಕೇಂದ್ರ ಅವರಿಂದ, ಬೆಂಗಳೂರಿನ ಶಿವನಹಳ್ಳಿಯ ಮಠದಲ್ಲಿ ವಾಸ್ತವ್ಯವಿದ್ದಾಗ ೧೭.೧.೧೯೮೭ ರಲ್ಲಿ ದರ್ಶನ ಮಾಡಿ ತಿಳಿದದ್ದಾಗಿದೆ.

೪೫. ಪುಲ್ಲಕವಿ: ಅದೇ, ಉಪೋದ್ಘಾತ, ಪು. ೭೭.

೪೬. ಎಂ. ಜಿ. ನಾಗರಾಜ್: '೮ ಶತಮಾನಗಳ ರೋಚಕ ಇತಿಹಾಸದ ನಿಡುಮಾಮಿಡಿ ಮಠ' ಮಾಮಿಡಿ, ಸಂ. ೧೨, ಸಂಗಮ ಸಂಚಿಕೆ ೪೬-೪೭, ೧೯೯೧, ಪು.೫೯-೬೦ ಮತ್ತು ಚಂದ್ರಗುಂಡದಲ್ಲಿ ಬರುವ 'ನಿಡು, ನಿಡುಮಾಗಡಿ, ನೀಡು ತೆಂಗು' ಸಂದರ್ಭಗಳೂ, ಈ ಸಂಗತಿಗೆ ಸಮೀಕರಣಗೊಂಡಿರುವಂತಿದೆ.

೪೭-ಅ. T.V. Mahalingam: Administraticn and Social life under Vijayanagar, part-II, Madras, 1975, p. 213 ರೀತ್ಯವೂ ಕ್ರಿಯಾಶಕ್ತಿಯು ಒಂದನೇ ಹರಿಹರ ಹಾಗು ೨ನೇ ಹರಿಹರನಿಗೆ ಕುಲಗುರುವಾಗಿದ್ದ. ಮಧಾವಾಚಾರ್ಯನೇ (ಕ್ರಿಯಾಶಕ್ತಿಯ ಶಿಷ್ಯ) ಬುಕ್ಕನ ಕುಲಗುರುವೆಂದು ಕರೆದುಕೊಂಡಿದ್ದಾನೆ ಎಂದಿದೆ.

ಆ. H.R. Raghunatha Bhat: 'A New lithic record of Kriyashakti Yatishwara', Early Vijayanagara Studies in its Histroy and Culture, (Ed) G. S. Dikshit, Bangalore, 1988, p. 53

ಇ. ಡಾ. ಎಂ. ಚಿದಾನಂದ ಮೂರ್ತಿ. 'ಕರ್ನಾಟಕದ ಸಂಕ್ಷಿಪ್ತ ಚರಿತ್ರೆ' ಕನ್ನಡ-ಕನ್ನಡಿಗ-ಕರ್ನಾಟಕ, (ಸಂ) ಎಲ್.ಎಸ್. ಶೇಷಗಿರಿರಾವ್, ಗೊ.ರು. ಚೆನ್ನಬಸಪ್ಪ, ರಾ.ನಂ. ಚಂದ್ರಶೇಖರ್, ಕನ್ನಡಶಕ್ತಿ ಕೇಂದ್ರ, ಬೆಂಗಳೂರು, ೧೯೯೦, ಪು. ೫೧

೪೮. ಎಂ. ಜಿ. ನಂಜುಂಡಾರಾಧ್ಯ 'ನಿಡುಮಾಮಿಡಿ ಶ್ರೀಶೈಲ ಪೀಠಾಧಿಪತಿಗಳನ್ನು ಆರಾಧಿಸಿದ ರಾಜರು', ಶ್ರೀಶೈಲ ಪೀಠದರ್ಶನ, ಅದೇ, ಪು. ೨೧೧ ಮತ್ತು ಪುಲ್ಲಕವಿ: ಉಪೋದ್ಘಾತ, ಪು. ೭೧ ರಲ್ಲಿರುವ ನಿಡುಮಾಮಿಡಿಯ ಶಾಸನದಲ್ಲಿ 'ಶ್ರೀ ಗುರುಭ್ಯೋನಮಃ ಸ್ವಭಾನು ಸಂ॥ ಮಾಘ ಬ॥೩೦ ಬು. ಶ್ರೀ ಮದ್ರಾಯ ರಾಜಗುರು ಮಹಾಮಂಡಲಾಚಾರ್ಯ ಕ್ರಿಯಾಶಕ್ತಿ ದೇವರಾಯ ಒಡೆಯರು ಎಂದಿದ್ದು ೪. ೨ ೧೪೦೩ ರದು ಆಗಿದೆ.

ಈ ಗುರುವು ಒಂದನೇ ಹರಿರ (ಕ್ರಿ. ಶ. ೧೩೩೬-೫೭) ಮತ್ತು ೨ನೇ ಹರಿಹರ (ಕ್ರಿ. ಶ. ೧೩೭೭-೧೪೦೪) ನಿಗೆ ಕುಲಗುರು ಆಗಿದ್ದನೆಂದಿರುವ ಕಾರಣ, ಪ್ರಸ್ತುತ ಶಾಸನ ಕ್ರಿ. ಶ ೧೪೦೩ರದು ಆಗಿರುವಲ್ಲಿ ತಾರ್ಕಿಕತೆ ಒದಗುತ್ತದೆ. ಇದಲ್ಲದೆ ಹಕ್ಕಬುಕ್ಕರು ಕಂಪಿಲಿಯಲ್ಲಿ ಅಧಿಕಾರಿಗಳಾಗಿದ್ದಾಗ ದೆಹಲಿ ಸುಲ್ತಾನರಿಂದ ಕಂಪಿಲಿ ಪತನವಾದಾಗ, ಇವರನ್ನು ದೆಹಲಿಗೆ ಸೆರೆ ಮಾಡಿ ಒಯ್ಯಲಾಯಿತು. ಆಂಧ್ರದಲ್ಲಿ ಆ ಸಮಯದಲ್ಲಿ ದಂಗೆ ಎದ್ದು ಅದನ್ನು ಅಡಗಿಸಲು ಈ ಸೋದರರನ್ನೇ ಸುಲ್ತಾನರು ಕಳುಹಿಸಿದರು. ಬಲವಂತವಾಗಿ ಇಸ್ಲಾಂಧರ್ಮಕ್ಕೆ ಮತಾಂತರಗೊಂಡಿದ್ದ ಅವರು ಆಂಧ್ರಕ್ಕೆ ಬಂದ ಮೇಲೆ ಸ್ವತಂತ್ರರಾಗಿ ಮತಾಂತರದಿಂದ ಬಿಡುಗಡೆಗೊಂಡರು (K.II. Neelakanta Sastri : A History of South India, London, 1955 p. 227). ಇದು ನಿಜವೆಂದರೆ, ವೈದಿಕ ಧರ್ಮದಲ್ಲಿ ಮರುಮತಾಂತರದಿಂದ ಸ್ವೀಕರಣ ಸಾಧ್ಯವಿಲ್ಲವಾದಕಾರಣ, ವೀರಶೈವ ದೀಕ್ಷೆಯನ್ನು ಆ ವೇಳೆಗೆ ಶ್ರೀ ನಿಡುಮಾಮಿಡಿ ಶ್ರೀ ಶೈಲ ಪೀಠದ ಆಚಾರ್ಯನಾಗಿದ್ದ ಕ್ರಿಯಾಶಕ್ತಿಯಿಂದ ಪಡೆದು ಅವನನ್ನು ಕುಲಗುರು, ರಾಜಗುರುವನ್ನಾಗಿಸಿಕೊಂಡಂತೆ ತೋರುತ್ತದೆ. ಬಹುಶಃ ಹೀಗೆ ಹಿಂದೂ ಧರ್ಮದ ಕಕ್ಷೆಗೆ ಹಿಂದಿರುಗಿದ ಮೇಲೆ ಮಾಧವ ವಿದ್ಯಾರಣ್ಯರ ನೆರವು ಆಶೀರ್ವಾದಗಳು ರಾಜ್ಯಸ್ಥಾಪನೆಗೆ ಹಕ್ಕಬುಕ್ಕರಿಗೆ ಒದಗಿರಬಹುದು. 'ಕ್ರಿಯಾಶಕ್ತಿ'ಗಳು ವೀರಶೈವ ದೀಕ್ಷಿತವಾಗಿ 'ನಿಜೇಷ್ಟಲಿಂಗ ಧೃತಾಧಿಷ್ಠಾನ' ರಾಗಿರುವ ಬಗ್ಗೆ ನೋಡಿ ವೀರಶೈವ iv. 4 ಪು. ೨೮, ೪೫ ಅಲ್ಲದೆ ಶ್ರೀ ರೇಣುಕಪರಂಪರೆಯ ಗುರುಮಠದ ಪಟ್ಟಾಧ್ಯಕ್ಷನಾಗಿದ್ದ ೧೭ನೇ ಶತಮಾನದ ಷಡಕ್ಷರದೇವನು ತನ್ನ ರಾಜಶೇಖರವಿಳಾಸ (೩.೪೪)ದಲ್ಲಿ 'ಕರದೊಳ್ತಾಳ್ದ ನಿಜೇಷ್ಟಲಿಂಗಮನಂ ...... ಶ್ರೀ ಶೈಲಜಾವಲ್ಲಭಾ' ಎಂದಿರುವುದು ವೀರಶೈವದ ಪಾರಿಭಾಷಿಕ ಶಬ್ದವಾಗಿ', 'ಕ್ರಿಯಾ ಶಕ್ತಿಯ ಸಂದರ್ಭದಲ್ಲಿಯೂ ವೀರಶೈವ ಪರಂಪರೆಯನ್ನೆ ಧ್ವನಿಸುವಂತಿದೆ. ಹೊಸಪೇಟೆ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಸಂಬಂಧವೂ ಮುಂದೆ ವಿಜಯನಗರಕ್ಕೆ ಒದಗಿರುವಂತಿದೆ.

೪೯. T. V. Mahalingam op cit p. 315 ರೀತ್ಯಾ ಮುಂದಿನ ವಿಜಯನಗರದರಸುಗಳ ಕಾಲದ ರಾಜಧಾನಿಗಳಲ್ಲಿ ಪೆನುಗೊಂಡೆಯೂ ಒಂದಾಗಿತ್ತು.

೫೦. ಡಾ. ಎಂ. ಎಂ. ಕಲಬುರ್ಗಿ. ಕರ್ನಾಟಕದ ಕೈಫಿಯತ್ತುಗಳು, ಹಂಪಿ ಕನ್ನಡ ವಿಶ್ವವಿದ್ಯಾಲಯ, ೧೯೯೪, ಪು. ೪೬೩, ೫೨೫, ಅಲ್ಲದೆ ಅದೇ ಪು. ೪೬೦ರ ರೀತ್ಯಾ, 'ಅನಂತಪುರದಿಂದಾ ಪೂರ್ವದಲ್ಲು ಹಂದರಹಳ್ಳಿನಲ್ಲು ಹಂಡೆ ವಂಶಸ್ಥರ ಪ್ರಸನ್ನನಾಯಕನ ವಂಶಸ್ಥರು ಅನಂತರಪುರದಲ್ಲಿ ಇರಲಾಗಿ'', ಎಂಬಸಾಲುಗಳನ್ನು ಪರಿಶೀಲಿಸಿದಾಗ ಅದು ಮೇಲಿನ ವಿಚಾರಕ್ಕೆ ಹೊಂದಿಕೆಯಾಗುವ ಸಂದರ್ಭಕ್ಕೆ ಹೇಳಲಾಗಿದೆ.

೫೧. ಈ ಹಂಡೆ ಹನುಮಪ್ಪನಾಯಕನೇ ಹಂಡೆ ಹನುಮಪ್ಪನಾಯಕನಾಗಿದ್ದಾನೆ. ಕಾರಣ ವಂಶವೃಕ್ಷದ ರೀತ್ಯಾ (ಕರ್ನಾಟಕ ಕೈಫಿಯತ್ತು, ಅದೇ, ೪೬೪) ಕ್ರಿ.ಶ.೧೭೭೯-೬೯ರ ಅವಧಿಯಲ್ಲಿ ಮಾತ್ರ ಇಬ್ಬರು ಹನುಮಪ್ಪ ನಾಯಕರು ಕಾಣಸಿಗುತ್ತಾರೆ. ಆದಿಲ್‌ಶಾಹನ ಕಾಲದ ವಜೀರ್‌ನಾಗಿ ಹಂಡೆ ಹನುಮಪ್ಪನಾಯಕ ಮಾತ್ರ ಈ ವಂಶದಲ್ಲಿದ್ದ ಮತ್ತು ಈ ವಾದ. ಸ್ಥಾನದ ಘಟನೆ ಕ್ರಿ.ಶ.೧೭೨೫-೧೭೩೨ರ ಅವಧಿಯಲ್ಲಿ ನಡೆದಿರಬೇಕು. ಆ ನಾಯಕನ ಹೆಸರು ಕ್ರಿ.ಶ.೧೭೩೨ ನಂತರ ಕಾಣಬರದು. ಪಂಡಿತಾರಾಧ್ಯ ಚರಿತ್ರೆಯಲ್ಲಿ ಪುಲ್ಲಕವಿಯು ಇದನ್ನು ಬರೆದಿದ್ದರೂ, ಕಾಲಗಣನೆಯಲ್ಲಿ ತಪ್ಪಿದ್ದಾನೆ. ಪಟ್ಟವಲ್ಲರಿಯ ರೀತ್ಯಾ ಈ ಸಮಯದ ಪೀಠದ ಗುರುಗಳು ಶಾಂತವೀರ ದೇಶಿಕೇಂದ್ರರೆಂದಾಗುತ್ತದೆ. ಇದು ಘಟನೆಯ ತಾರ್ಕಿಕತೆಗೆ

ವೈರುಧ್ಯವಾಗುತ್ತದೆ. ಅಂತಾಗಿ ಪುಲ್ಲಕವಿಯು ಪದ್ಯದಲ್ಲಿ ಹೇಳಿರುವ ಈ ಘಟನೆಯ ಕಾಲದವರು ಕರಿಬಸವ ದೇಶಿಕೇಂದ್ರರೆಂದೇ ಗಮನಿಸುವುದು ಸೂಕ್ತ. ಮುಂದಿನ ಕರಿಬಸವ ಸ್ವಾಮಿ ದೇಶಿಕೇಂದ್ರರಿಗೆ ಸಂಬಂಧಿಸಿದ್ದು ಎಂದರೆ ಕಾಲಮಾನ ತಾಳೆ ಆಗದು.

೫೪. ಪುಲ್ಲಕವಿಯಲ್ಲಿ ೫ನೇ ಅಶ್ವಾಸ ೬೮ನೇ ಪದ್ಯದಲ್ಲಿ ಈ ಸಂಗತಿ ಬಂದಿದೆ. ಆದರೆ ವಂಶವೃಕ್ಷದ ರೀತ್ಯಾ (ಕೈಫಿಯತ್ತು ಪು. ೪೬೪) ಹಂಡೆ ಹನುಮಪ್ಪನಾಯಕನ ಎರಡನೆ ಮಗನ ಮಗ ಪವಾಡದ ರಾಮಪ್ಪನಾಯಕ ಎಂದಿದೆ. ಮೊದಲನೆ ಮಗನ ಮಗ ಅನಂತಪುರದ ಪ್ರಸನ್ನನಾಯಕ ಆಗಿದ್ದಾನೆ. ರಾಮಪ್ಪನಾಯಕ ಬಳ್ಳಾರಿಗೆ ಸಂಬಂಧಗೊಂಡವ. ಅಂತಾಗಿ ಪ್ರಸನ್ನಪ್ಪನಾಯಕನಿಗೇ ರೋಗ ಚಿಕಿತ್ಸೆಯ ಸಂಗತಿ ಅನ್ವಯವೆನ್ನಬೇಕು.

೫೫. ಎಂ. ವಿ. ಕೃಷ್ಣರಾವ್: ಬೆಂಗಳೂರು ಕೆಂಪೇಗೌಡ, ಬೆಂಗಳೂರು, ೧೯೬೪, ಅನುಬಂಧ-೧೧, ಪು. ೧೯೪

೫೬. ಎಂ. ಜಿ. ನಾಗರಾಜ್: ಶ್ರೀ ಗೌರೀಶಂಕರದರ್ಶನ, ಗವೀಪುರಂ ಗುಟ್ಟಹಳ್ಳಿ, ಬೆಂಗಳೂರು, ೧೯೯೦. ಪು. ೧೪-೧೭ ರೀತ್ಯಾ ದೇಗುಲ ನಿರ್ಮಾಣದ ಸಮಯದಲ್ಲಿ ಗದ್ದುಗೆ, ಕಾವಿಬಟ್ಟೆಯ ಅವಶೇಷಗಳ ಜೊತೆಗೆ ಶಿವಲಿಂಗವೂ ದೊರೆತಿರುವಲ್ಲಿ ಮಠವೊಂದು ಅಲ್ಲಿದ್ದುದರ ಕುರುಹು ಎನಿಸುತ್ತದೆ.

೫೭. ಈ ಸಂಗತಿಗಳು ಸಿರಪಿ ಆಂಜನೇಯಲು ಅವರ 'ಕರಿಬಸವಸ್ವಾಮಿ' ಎಂಬ ಕೃತಿಯಲ್ಲಿ, ನಾಗಸಂದ್ರಂ ವಾಸುದೇವರಾವ್ ಅವರ 'ಆಂಧ್ರರಾಜ್ಯದ ಅನಂತಪುರ ಮಂಡಲಚರಿತ್ರ', ದಲ್ಲಿ 'ಶ್ರೀಶೈಲ ಪಂಡಿತರಾಧ್ಯ ಚರಿತ್ರಮು'ವಿನಲ್ಲಿ ಹಾಗು ಸಿ. ಪಿ. ಬ್ರೌನ್ ಅವರ ಅನಂತಪುರ ಗ್ಯಾಸೆಟಿಯರ್‌ನ ಅನಂತಪುರ ಜಿಲ್ಲಾಕಥಲು, ಪು. ೨೬, ೩೫ರಲ್ಲಿ ಕಾಣಬರುತ್ತವೆ. ಆದರೆ ಕರ್ನಾಟಕ ಕೈಫಿಯತ್ತಿನ ಪು. ೪೬೨-೪೬೪ರ ರೀತ್ಯಾ ಪ್ರಸನ್ನ ರಾಮಪ್ಪನಾಯಕನ ಕಾಲ ಕ್ರಿ.ಶ.೧೬೬೦ ಎಂದು ಸೂಚಿತವಾಗುವಲ್ಲಿ ಅವನು ಬಳ್ಳಾರಿಗೆ ಸಂಬಂಧಿಸಿದ ಪವಾಡದ ರಾಮಪ್ಪನಾಯಕನೆ? ಅಥವಾ ಹಂದರಹಳ್ಳಿ ರಾಮಪ್ಪನಾಯಕನೇ? ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

೫೮. ಡಾ. ಚನ್ನಕ್ಕ ಪಾವಟೆ : 'ಕೂಡ್ಲಿ ಶೃಂಗೇರಿ ಸಂಸ್ಥಾನಕ್ಕೆ ಹಂಡೆ ಪಾಳೆಯಗಾರರ ದಾನ', ಇತಿಹಾಸ ದರ್ಶನ, (ಸಂ) ಡಾ. ಸೂರ್ಯನಾಥ್‌ಕಾಮತ್, ಪಿ.ವಿ. ಕೃಷ್ಣಮೂರ್ತಿ, ಸಂ. ೧೦/೧೯೯೫, ಪು. ೧೩೨

೫೯. ಡಾ. ಶ್ರೀ ಜಚನಿ ಅವರು, ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಮಠದ ಆವರಣದಲ್ಲಿ ಜ॥ ಕರಿಬಸವೇಂದ್ರರ ಗದ್ದುಗೆಯೂ ಇದ್ದು ಅವರ ಹೆಸರಿನಲ್ಲಿ ಸಂತೆಯೂ ನಡೆಯುತ್ತಿತ್ತು ಎಂದು ಹೇಳುತ್ತಾರೆ.

೬೦. ಆರಂಭದ ಕೆಲವು ಸಂಚಿಕೆಗಳಿಗೆ ಡಾ. ಶ್ರೀ ಸಂಗಮೇಶ ಹಂಡಿಗಿ ಅವರು ಸಂಪಾದಕರಾಗಿ ಕೆಲಸ ನಿರ್ವಹಿಸಿದರು. ನಂತರ ಶ್ರೀ ಎಂ. ಜಿ. ನಾಗರಾಜ ಅವರು ಪ್ರಧಾನ ಸಂಪಾದಕರಾಗಿ ಹಾಗು ಶ್ರೀ ಜಿ. ಎಸ್. ಕುಮಾರಸ್ವಾಮಿ ಅವರು ನಿರ್ವಾಹಕ ಸಂಪಾದಕರಾಗಿ ಡಾ.ಡಿ.ವಿ.ದೇವರಾಜ್ ಅವರು ಸಂಪಾದಕರಾಗಿ ಈವರೆವಿಗೆ ನಿರ್ವಹಿಸುತ್ತ ಬಂದಿದ್ದಾರೆ.

೬೧-೬೨. ಪೀಠದ ಪ್ರಾಚೀನತೆಗೆ ಸಾಕ್ಷಿಯಾಗಿ ಪೀಠದ ಆದಿ ಗುಂಡಿ ವೀರಭದ್ರನ ಸುಮಾರು ೫ ಅಡಿ ಎತ್ತರದ ಒರಟುಗಲ್ಲಿನ ಏಕಶಿಲಾ ಉಬ್ಬು ಶಿಲ್ಪವಿದೆ. ಮಳೆಬರದಿದ್ದಾಗ ಹರಕೆಯಾಗಿ ೧೦೧ ಕೊಡ ನೀರನ್ನು ಈ ಮೂರ್ತಿಗೆ ಜನಪದರು ನೀರೆರೆಯುತ್ತಾರೆ. ನೆರೆಗಿರುವ ಬೃಹತ್ ಆಸೀನ ವೃಷಭನ ಬಾಯಿಗೆ ಹಸು ಹಾಲು ಕರೆಯದಿದ್ದಾಗ ಬೆಣ್ಣೆಹಚ್ಚುತ್ತಾರೆ.

ಪೀಠದ ಉತ್ತರ ಪಾರ್ಶ್ವದ ಗದ್ದುಗೆ ಗುಡಿಯಲ್ಲಿ ವೀರಶೈವ ಪರಿಕಲ್ಪನೆಯ ೩೬ ತತ್ತ್ವಗಳ ಸುಂದರ ಸಾಂಕೇತಿಕ 'ಸರ್ವಾಂಗಲಿಂಗ' ಶಿಲ್ಪವಿದೆ. ಪೀಠದ ಪರಂಪರೆಗೆ ಬಹುಶಃ ಚಂದ್ರಗುಂಡ ಶಿವಾಚಾರ್ಯರ ಕಾಲದಲ್ಲಿ ಸಂದಾಯವಾಗಿ ಬಂದ, ಈ ಲಿಂಗ ಶಿಲ್ಪ ಭಿನ್ನವಾಗಿ ಹೋಗಿತ್ತು. ೧೩.೩.೧೯೬೪ರಲ್ಲಿ ಕೊಪ್ಪಳದ (ಲಿಂಗ)ಸಂಗಪ್ಪ, ಮಹಂತವ್ವ ದಂಪತಿಗಳ ಸೇವೆಯಾಗಿ ಮತ್ತೆ ಮಾಡಿಸಿ (ಸ್ಥಾಪಿಸಿ) ಇರಿಸಲಾಯಿತು ಎಂದು ಡಾ. ಶ್ರೀ.ಜಚನಿ ಸನ್ನಿಧಿಯವರು ತಿಳಿಸಿದರು. 'ಸರ್ವಾಂಗಲಿಂಗ' ಶಿಲ್ಪದ ಮೇಲೆ ಸೇವಾಕರ್ತರ ಹೆಸರು ಪಾಣಿಪೀಠದಲ್ಲಿದೆ. ಇದಕ್ಕೆ ಐತಿಹಾಸಿಕ ಮಹತ್ವವಿರುವ ಕಾರಣ 'ಶ್ರೀಶೈಲಪೀಠದರ್ಶನ' ಗ್ರಂಥದಲ್ಲಿ ಛಾಯಾಚಿತ್ರವನ್ನು ಭಾಗಗಳಸಹಿತವಾಗಿ ೧೯೬೭ರಲ್ಲಿಯೆ ಪ್ರಕಟಿಸಲಾಗಿದೆ. ಪ್ರಾಣಲಿಂಗದ ೩೬ ಪ್ರಕಾರದ ಕಾಯಾರ್ಪಣ ವಿವರದ ಈ ಶಿಲ್ಪದ ಶಿರ ರುದ್ರಭಾಗದ ನೆತ್ತಿಯಲ್ಲಿ ೩೬ ಕಿರುಲಿಂಗಗಳನ್ನು ಹೊಂದಿ 'ಅವಕಾಶ ತ್ರಿಭುಜಾಂಕಣ'ದಲ್ಲಿ ಸೇರಿದೆ. ನೆತ್ತಿಯ ಕೆಳಗೆ ಮೂರು ಮುಖಿಗಳನ್ನು ಹೊಂದಿ 'ಭಾವಲಿಂಗ', 'ಇಷ್ಟಲಿಂಗ', 'ಪ್ರಾಣಲಿಂಗ', ಮುಖಿಗಳ ಸಂಕೇತವಾಗಿವೆ. ಈ ಮುಖಿಗಳಲ್ಲಿ ಸೂರ್ಯವೃತ್ತ, ಪದ್ಮವೃತ್ತಾವೃತ ಲಿಂಗಗಳಿವೆ. ಒಂದು ರೀತಿ ಶಿವಶ್ರೀಚಕ್ರದ ಪ್ರತೀಕವಾಗಿ ಕುಂಡಲಿನೀ ಶಿವನನ್ನು ಜಾಗೃತ ಗೊಳಿಸುವ 'ನಿಜೇಷ್ಟಲಿಂಗದ' ತಾಂತ್ರಿಕ ಸ್ವರೂಪ ಈ ಶಿಲ್ಪದಲ್ಲಿದೆ ಎನಿಸುತ್ತದೆ. ಹಾವಿನಹಾಳ ಕಲ್ಲಯ್ಯನ ವಚನದಲ್ಲಿ 'ಸರ್ವಾಂಗಲಿಂಗ' ಶಬ್ದವಿದ್ದು, ಆ ತತ್ತ್ವದ ಕಲ್ಪನೆ ಕಾಣುತ್ತದೆ. ಪಾಶುಪತಮತ ಕಾಲದಲ್ಲಿಯೆ 'ಸರ್ವಾಂಗಲಿಂಗ' ಸಾಹಿತ್ಯ ಪದ್ಧತಿ ಇದ್ದ ಬಗ್ಗೆ ಡಾ. ಶ್ರೀ ಜಚನಿ. ಅವರು 'ಶಿವಾಗಮ ಸೌರಭ' (ಪು.೧೨-೧೩)ದಲ್ಲಿ ತಿಳಿಸಿದ್ದಾರೆ.

ಕ್ರಿ.ಶ.೧೫೪೫ರಲ್ಲಿ ಶಾಸನೋಕ್ತವಾಗಿ ದಳವಾಯಿ ಜಂಗಮಯ್ಯನು ಹಂಪೆಯಲ್ಲಿ ಉದ್ದಾನ ವೀರಭದ್ರಸ್ವಾಮಿ ಗುಡಿಯನ್ನು ಕಟ್ಟಿಸಿದ. ಇದಕ್ಕೆ ಪೀಠದ ಗುರುಗಳಾಗಿದ್ದ ಇಮ್ಮಡಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯರು ಪ್ರೇರಕರು ಎಂದು ಪುಲ್ಲಕವಿ ಪಂಡಿತಾರಾಧ್ಯ ಚರಿತ್ರೆಯಲ್ಲಿ (ತೃತೀಯ ಅಶ್ವಾಸ, ಪದ್ಯ.೩೪) ಹೇಳುತ್ತಾನೆ. ಆ ಗುಡಿಯಲ್ಲಿ ಇದೇ ಸ್ವರೂಪದ ಪ್ರಾಚೀನ 'ಸರ್ವಾಂಗಲಿಂಗ'ವಿದೆ. ಬಹುಶಃ ವೀರಭದ್ರನ ಗುಡಿಯಲ್ಲಿ ಈ ಪೀಠವು ಚಾಲ್ತಿಗೊಳಿಸಿದ್ದ ಶಿಲ್ಪವಾಗಿ, ವಿಜಯನಗರದರಸರ ಕುಲಗುರು ಪರಂಪರೆಗೆ ಸೇರಿದ ಶಿಲ್ಪವಿದೆನ್ನಿಸುತ್ತದೆ. ಶ್ರೀ ಸಿ.ಎಂ.ಕೊಟ್ರಯ್ಯ ಅವರು ೧೯೭೦ರ ಹಂಪೆ ಕುರಿತ ವಿಚಾರ ಸಂಕಿರಣದ ಪ್ರಬಂಧ ಮಂಡನೆಯಲ್ಲಿ, ಈ ದೇಗುಲದ ಹಿರೇಮಠದಲ್ಲಿದ್ದ ವಿರೂಪಾಕ್ಷ ಪಂಡಿತನು ಜನರಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸುವಲ್ಲಿ ಈ ಲಿಂಗವನ್ನು ಪ್ರಾತ್ಯಕ್ಷಿಕೆಯಾಗಿ ಬಳಸುತ್ತಿದ್ದ, ಎಂದು ತಿಳಿಸಿದ್ದಾರೆ. ಆದರೆ ಅದಕ್ಕೆ ಬೇರೆ ಆಯಾಮವೂ ಇದೆ. ಇದಲ್ಲದೆ 'ಸಿದ್ಧರಾಮ ಚರಿತ್ರೆ'ಯಲ್ಲಿ ಲಿಂಗದ ಮೇಲೆ ಲಿಂಗವಾದ 'ಯೋಗಲಿಂಗ'ವೆನಿಸಿದ ತನಗೆ ತಾನೆ ಆಧಾರವಾದ ಆ ಲಿಂಗ ಶಿಲ್ಪವೂ ದೇಗುಲದ ಎದುರಿನ ದೀಪಸ್ತಂಭದ ಮೇಲೆಯೆ ಇದೆ ಎಂಬುದು ಈ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ.

೬೩. ಈ ಗೀತೆಗಳನ್ನು ಬಿಜಾಪುರ ಜಿಲ್ಲೆ ಬಾಗಲಕೋಟೆ ತಾಲೂಕು ಶಿರೂರಿನ ಅಕ್ಕಮಹಾದೇವಿ ಮಹಿಳಾ ಮಂಡಲದ ಶಿವಾಚಾರಿಣಿಯರು ಬಹಳ ಚೆನ್ನಾಗಿ ಹಾಡುತ್ತಾರೆ.

ಶಿವಯೋಗ ಮಂದಿರದ ಕೊಡುಗೆ

ಗೌ.ಮ. ಉಮಾಪತಿ ಶಾಸ್ತ್ರಿ

ಶ್ರೀಮದ್ವೀರಶೈವ ಸಮಾಜ ಕನ್ನಡ ನಾಡು - ನುಡಿಗಳ ಅಭಿವೃದ್ಧಿಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದೆ. ವೀರಶೈವರು ಸಾವಿರ ವರ್ಷಗಳ ಐತಿಹಾಸಿಕ ಆಗು ಹೋಗುಗಳಲ್ಲಿ ಉಳಿದ ನಾಡಿಗರೊಂದಿಗೆ ಸಮ್ಮಿಳಿತರಾಗಿ ಮುನ್ನಡೆದಿರುವರು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ರಂಗಗಳಲ್ಲಿ ಅವರು ಸಾಧಿಸಿದ ಪ್ರಗತಿ ಯಾವ ಬಗೆಯಲ್ಲೂ ಕಡಿಮೆಯದೇನಲ್ಲ. ಅವರಲ್ಲಿಯೂ, ಧಾರ್ಮಿಕ ಕೇಂದ್ರಗಳಾದ ವೀರಶೈವ ಮಠಗಳು ವಿಶೇಷವಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ವಿವಿಧ ಮುಖವಾಗಿ ಸಾಧಿಸಿದ ಕಾರ್ಯಗಳು ಮಹನೀಯವಾಗಿವೆ.

ಐತಿಹಾಸಿಕವಾಗಿ ಕಲ್ಯಾಣ, ವಿಜಯನಗರ, ಕೆಳದಿ, ಸೋದೆ, ಬಿಳಗಿ, ಕೊಡಗು, ಮೈಸೂರು ಮೊದಲಾದ ರಾಜರ ಕಾಲದಿಂದ ವೀರಶೈವ ಸಮಾಜ ಗುರು - ವಿರಕ್ತ ಮಠಗಳ ಮೂಲಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಜನ ಸಾಮಾನ್ಯರ ಲೇಸ ಬಯಸಿ ಹೋರಾಡಿದ ಕ್ರಾಂತಿ ಅದ್ಭುತ. ಧಾರ್ಮಿಕ ಜಾಗೃತಿಯ ಜೊತೆಗೆ ಕನ್ನಡ - ಸಂಸ್ಕೃತ - ಮರಾಠಿ - ತೆಲುಗು - ತಮಿಳು ಭಾಷೆಗಳ ಸಾಹಿತ್ಯ ಸೃಷ್ಟಿಯಲ್ಲಿಯೂ ಕೃಷಿ ಮಾಡಿದ ವೀರಶೈವ ಜನಾಂಗ ಕೇವಲ ಕನ್ನಡದ ನೆಲಕ್ಕೆ ಸೀಮಿತವಾದುದಲ್ಲ. ಕಾವೇರಿಯಿಂದ ಗೋದಾವರಿಯವರೆಗೆ, ಅಲ್ಲದೆ ಕಾಶಿ - ಕೇದಾರಗಳ ಎತ್ತರಕ್ಕೂ ಬೆಳೆದ ವೀರಶೈವ ರಾಜರು - ಗುರುಗಳು, ದೃಷ್ಟಿವೈಶಾಲ್ಯದಿಂದ ಭಾರತೀಯ ಸಮನ್ವಯ ಸಂಸ್ಕೃತಿಯ ಪತಾಕೆಯನ್ನು ಎತ್ತಿಹಿಡಿದ ಧೀಮಂತರು. ವೀರಶೈವರು ಈಗಲೂ ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಬಹು ಸಂಖ್ಯೆಯಲ್ಲಿದ್ದು, ಗುಪ್ತವಾಗಿ ಆಯಾ ನಾಡು ನುಡಿಗಳ ಪ್ರಗತಿಯಲ್ಲಿ ಸಕ್ರಿಯವಾಗಿರುವುದನ್ನು ನಾವಿಂದು ಪ್ರಜ್ಞಾಶೀಲರಾಗಿ ಗುರುತಿಸಬೇಕಾಗಿದೆ.

ಹತ್ತೊಂಭತ್ತನೆಯ ಶತಮಾನದ ಪ್ರಾರಂಭದಲ್ಲಿ ಅನೈಕ್ಯತೆ ಹಾಗೂ ಪಾರತಂತ್ರದ ಪರಿಣಾಮವಾಗಿ, ಸಾಮಾನ್ಯವಾಗಿ ಭಾರತೀಯರೆಲ್ಲ ಜಡರಾಗಿ ಸ್ವಸ್ವರೂಪದ ಪರಿಜ್ಞಾನವಿಲ್ಲದೆ ಕತ್ತಲೆಯಲ್ಲಿ ತಡಕಾಡುತ್ತಿದ್ದರು. ಅವರಲ್ಲಿಯೂ ವಿಶೇಷವಾಗಿ ಕರ್ನಾಟಕದಲ್ಲಿ, ಒಂದು ಕಾಲದಲ್ಲಿ ಕೃಷಿ, ವಾಣಿಜ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದ ಲಿಂಗಾಯತರು ಕಳೆಗುಂದಿದ್ದರು. ಸಮಾಜ ಎಲ್ಲ ದೃಷ್ಟಿಯಿಂದಲೂ ದುರ್ಬಲವಾಗಿ ಖಿಲವಾಗಿತ್ತು.

ನಾಡಿನ ಗ್ರಾಮ - ನಗರಗಳಲ್ಲಿ ಬಹು ಸಂಖ್ಯೆಯಲ್ಲಿರುವ ವೀರಶೈವ ಮಠಗಳು ಸಾಂಸ್ಕೃತಿಕ ಕೇಂದ್ರಗಳು. ಅವುಗಳ ಅಧ್ಯಕ್ಷರಾದ ಧರ್ಮಗುರುಗಳು ಸುಶಿಕ್ಷಿತರಾಗದೆ ಇದ್ದುದರಿಂದ, ಅವು ಸಮಾಜದ ಸಮಷ್ಟಿಯ ಜಾಗೃತಿಗೆ ಪದಾರ್ಥವಾಗಿ ಸ್ಪಂದಿಸದೆ, ಸಂಕುಚಿತ ಮನೋವೃತ್ತಿಯ ಅಂಧ ಪರಂಪರೆಯ ಸೆಳವಿಗೆ ಸಿಕ್ಕು ಅಂತಃಸತ್ವ ಕಳೆದುಕೊಂಡು ನಗಣ್ಯವಾಗಿದ್ದವು. ಶತ - ಶತಮಾನಗಳಿಂದ ಅವುಗಳ ಮೂಲಕ ಪ್ರವಹಿಸುತ್ತ ಬಂದಿದ್ದ ಧರ್ಮ - ಸಾಹಿತ್ಯ - ಸಂಸ್ಕೃತಿಗಳ ಸ್ರೋತ ಬತ್ತಿಹೋಗಿತ್ತು.

ಸಮಾಜದ ಈ ದುಸ್ಥಿತಿಯನ್ನು ಕಂಡು ಮರುಗಿ ಕ್ರಿಯಾಶೀಲರಾದ ಸ್ವಾಮಿಗಳವರಲ್ಲಿ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ಅಗ್ರಮಾನ್ಯರು. ಪ್ರಾತಃಸ್ಮರಣೀಯರು. ಹಾನಗಲ್ಲ ಮಠ ಮಾಯಾಕೋಲಾಹಲ ನಿರಂಜನ ಮೂರ್ತಿ ಶ್ರೀಮದ್ ಅಲ್ಲಮ ಪ್ರಭುದೇವರ ಬಳಿವಿಡಿದು ಬಂದ ಹೆಸರಾಂತ ವಿರಕ್ತ ಪೀಠ. ಶ್ರೀಗಳು ಸಾಧಕರಾಗಿ ಎಳಂದೂರ ಶ್ರೀ ಬಸವಲಿಂಗ ಸ್ವಾಮಿಗಳಿಂದ ಪಾತಂಜಲ ಯೋಗಮಾರ್ಗ ತಿಳಿದು, ನಿಜಗುಣದ ಷಟ್‌ಶಾಸ್ತ್ರಗಳ ಅಧ್ಯಯನ - ಮನನ ಮಾಡುತ್ತ ಶಂಭುಲಿಂಗನ ಬೆಟ್ಟದಲ್ಲಿ ಹನ್ನೆರಡು ವರ್ಷ ಶಿವಯೋಗಾನುಷ್ಠಾನ ಮಾಡಿ ಪೀಠರಾಗರಾಗಿ ಪಟ್ಟಕ್ಕೆ ಬಂದವರು.

ಹಿಂದಿನ ಗುರುಗಳು ಕರಿಯ ಕುಂಬಾರ ಹೆಂಚುಗಳಿಂದಾಗಿ ಮಳೆಗಾಲದಲ್ಲಿ ನೀರು ಸೋರಿ ಹಾಳಾಗುವ ಮಣ್ಣಿನ ಮಠದ ರಕ್ಷಣೆಗೆಂದು ತಾಮ್ರದ ತಗಡು ಹೊದಿಸುವ ಸಂಕಲ್ಪ ಮಾಡಿದ್ದರು. ಅದಕ್ಕಾಗಿ ಭಿಕ್ಷೆಯ ಸಾವಿರಾರು ಪಲ್ಲ ಭತ್ತದ ಹಗೇವು ತುಂಬಿಸಿಟ್ಟಿದ್ದರು. ಕರುಣಾಳು ಶ್ರೀಗಳು ಅದನ್ನು ಬರದ ಬೇಗೆಯಿಂದ ಬೆಂದ - ನೊಂದ ಜನತಾ ಶಿವನಿಗೆ ಅನ್ನದಾಸೋಹ ಮಾಡಿ ವಿನಿಯೋಗಿಸಿದರು. ಲೋಕಹಿತದ ಅನುಕಂಪ ಅವರಲ್ಲಿ ಸಹಜ ಸುಪ್ತ ಶಕ್ತಿಯಾಗಿತ್ತು. ಶ್ರೀಗಳು ಉಳಿದವರಂತೆ ಮಠದ ಬರಿಯ ಭೌತಿಕ ಸಮೃದ್ಧಿಗೆ ಮನವೀಯದೆ, ಅಧ್ಯಾತ್ಮದ ಹಿನ್ನೆಲೆಯಲ್ಲಿ ಸಮಾಜ ಮಂದಿರದ ಜೀರ್ಣೋದ್ಧಾರದ ಕನಸು ಕಂಡವರು. ಅವರು

ಮಠದಲ್ಲಿ ತೂಗುಮಂಚದ ಮೇಲೆ ಚಿಂತಾಕ್ರಾಂತರಾಗಿ ಕುಳಿತಾಗ, ವೀರ ವೈರಾಗ್ಯಮೂರ್ತಿ ಬಾಗಲಕೋಟೆಯ ಮಲ್ಲಿಕಾರ್ಜುನರ ಪ್ರೇರಣೆಯಿಂದ ಸಮಾಜ ಪುರುಷನ ಸೇವೆಗಾಗಿ ಕಂಕಣ ಕಟ್ಟಿದರು. ಶಿವಾರ್ಚನೆಯ ಗವಿಯ ಮೂಲೆಯಲ್ಲಿ ಪೂಜೆಗೊಳ್ಳುತ್ತಿದ್ದ ಜೋಳಿಗೆ - ಬೆತ್ತ ಎತ್ತಿಕೊಂಡು ಪಾದಚಾರಿಗಳಾಗಿ ನಾಡಿನ ಉದ್ದಗಲಕ್ಕೂ ಸಂಚರಿಸಿದರು. ಜಂಗಮ ಮೂರ್ತಿಯ ರೂಪದಲ್ಲಿ, ಲೋಕೋಪಕಾರಕ್ಕಾಗಿ ಪರಮೇಶ್ವರನೇ ಅತಿಥಿಯಾಗಿ ಸಂಚರಿಸುವನೆಂಬ ಶಿವಾಗಮದ ಉಕ್ತಿ ಕ್ರಿಯಾಶಕ್ತಿಯಾಗಿ ಮೈದಾಳಿತು.

ಹಾನಗಲ್ಲ ಶ್ರೀಗಳವರು ಮೊದಲು ಖಿಲವಾಗಿದ್ದ ಸಮಾಜದಲ್ಲಿ ಐಕ್ಯತೆಯ ಜಲ ತುಂಬಲು ವೀರಶೈವ ಮಹಾಸಭೆಯನ್ನು ಅಖಿಲ ಭಾರತದ ಮಟ್ಟದಲ್ಲಿ, ೧೯೦೪ ರಲ್ಲಿ ಧಾರವಾಡದಲ್ಲಿ ಸಂಘಟಿಸಿದರು. ಅಂದು ಸಮಾಜ ಪುರುಷನ ಜೀವನದಲ್ಲಿ ಒಂದು ಶುಭೋದಯದ ಘಳಿಗೆ. ಎಚ್ಚೆತ್ತ ಸಮಾಜದ ದೇಸಾಯರು, ನಾಡಗೌಡರು, ಉದ್ಯಮಿಗಳು, ಕೃಷಿ ಮೊದಲಾದ ಕಾಯಕದವರು ತಮ್ಮ ಅಂತಸ್ತುಗಳನ್ನು ಮರೆತು ಒಂದೇ ಮಂಚದಲ್ಲಿ ಕುಳಿತು, ಸಮಾಜ ಬಾಂಧವರ ಆಗು - ಹೋಗುಗಳತ್ತ ಉನ್ಮುಕ್ತವಾಗಿ ಚಿಂತಿಸುವ ಬಗೆಯೊಂದು ಸಕ್ರಿಯವಾಗಿ ಮೂಡಿ ಬಂದಿತು. ಮಹಾಸಭೆಯ ವಾರ್ಷಿಕ ಅಧಿವೇಶನಗಳಲ್ಲಿ ಶ್ರೀಗಳು ತೆರೆಯಮರೆಯಲ್ಲಿದ್ದು ಪ್ರೇರಕ ಶಕ್ತಿಯಾಗಿ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುತ್ತಿದ್ದರು.

ಉತ್ತರ ಕರ್ನಾಟಕದ ಪ್ರಸಿದ್ಧ ವ್ಯಾಪಾರ ಕೇಂದ್ರವಾದ ಬಾಗಲಕೋಟೆಯಲ್ಲಿ ೧೯೦೮ ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ೪ನೆಯ ಅಧಿವೇಶನ ಕೂಡಿತು. ಅದರಲ್ಲಿ ಸರ್ವಾನುಮತದ ಸಂಕಲ್ಪಿತ ಉದ್ದೇಶಗಳಲ್ಲಿ ಮಠಗಳ ವಟುಗಳಿಗೆ ಧಾರ್ಮಿಕ ಶಿಕ್ಷಣ ಕೊಡುವ "ಶಿವಯೋಗ ಮಂದಿರ ಸಂಸ್ಥೆ"ಯ ಸ್ಥಾಪನೆಯ ವಿಷಯ ಬಹು ಮುಖ್ಯವಾಗಿತ್ತು. ಅದರ ಹೊಣೆಗಾರಿಕೆಯನ್ನು ಶ್ರೀಗಳವರು ಸರ್ವಾತ್ಮನಾ ವಹಿಸಿಕೊಂಡು ಕಾರ್ಯಪ್ರವೃತ್ತರಾದರು.

ಉದ್ದೇಶಿತ ಈ ಸಂಸ್ಥೆಯನ್ನು ಸ್ಥಾಪಿಸುವ ಸ್ಥಾನದ ಆಯ್ಕೆಯ ಸಮಸ್ಯೆ ಜಟಿಲವಾಗಿತ್ತು. ಇಲಕಲ್ಲ ತಪಸ್ವಿ ಶ್ರೀ ಮಹಾಂತ ಸ್ವಾಮಿಗಳ ನಿರ್ದೇಶನದಲ್ಲಿ ಪುಣ್ಯತಾಣವೊಂದು ಎಲ್ಲರ ಮನ ಸೆಳೆಯಿತು. ಬದಾಮಿ ಚಾಲುಕ್ಯರ ಕಾಲದ ಶೈವತಪಸ್ವಿಗಳ ಸಾಧನೆಯ ನೆಲೆ, ವೀರಯೋಧರ ಕೆಚ್ಚಿನ ನೆಲ, ಪಾವನ ಕ್ಷೇತ್ರ ಮಹಾಕೂಟ, ಪ್ರಭುದೇವರ ಗುರು ಅನಿಮಿಷದೇವರ ಕಾರ್ಯಭೂಮಿ, ಪಟ್ಟದಕಲ್ಲಿನ ಹಾಗೂ ಮಗ್ಗೆಯ ಮಾಯಿದೇವರ ವಾಙ್ಮಯ ತಪೋಭೂಮಿ, ಐಹೊಳೆಯ ಸಾಮೀಪ್ಯ, ಮಲಾಪಹಾರಿ ನದಿಯ ತೀರ, ಕೊಟ್ನೂರು ಶ್ರೀ ಬಸವೇಶ್ವರರು ಅನುಷ್ಠಾನ ಮಾಡಿದ ಬಿಲ್ವವನ. ಅಲ್ಲಿಯೇ ೧೯೦೯ ರಲ್ಲಿ ಶ್ರೀ ಮದ್ವೀರ ಶಿವಯೋಗ ಮಂದಿರ ಸಂಸ್ಥಾಪಿತವಾಯಿತು.

ಹಾನಗಲ್ಲ ಶ್ರೀಗಳವರು ಸಂಕಲ್ಪಿಸಿದ ಶಿವಯೋಗ ಮಂದಿರ ಭಾರತೀಯ ಆಶ್ರಮ ಪರಂಪರೆಯಲ್ಲಿ ರೂಪುಗೊಳ್ಳಬೇಕಾಗಿತ್ತು. ಅವರ ಯೋಗ ಸಂಸ್ಥೆ ಕಲ್ಲು ಮಣ್ಣಿನ ಕಟ್ಟಡವಾಗದೆ ನಿಸರ್ಗದ ವನರಾಜಿಯ ಪ್ರಶಾಂತ ಪರಿಸರದಲ್ಲಿ, ನಗರದ ಶಬ್ದ, ಧೂಳಿ, ದೂಸರಗಳ ಮಾಲಿನ್ಯದಿಂದ ದೂರವಾಗಿದ್ದು ಬೆಳೆಯಬೇಕೆಂದು ಅಪೇಕ್ಷಿಸಿದ್ದರು; ನದಿಯ ತೀರದಲ್ಲಿ, ಅಡವಿಯಲ್ಲಿ ಸಹಜವಾಗಿ ಬೆಳೆದ ಬಿಲ್ವ, ಬನ್ನಿ, ನೇರಿಲ, ಹೊಂಗೆ, ಬೇವು ವನಸ್ಪತಿಗಳನ್ನು ರಕ್ಷಿಸಿದರು. ಕಾಡು ಬಳ್ಳಿಗಳ - ತರುಗುಲ್ಮಗಳ ಪ್ರಕೃತಿದತ್ತ ಲತಾಮಂಟಪಗಳನ್ನು ಬೆಳೆಸಿ, ಗೊರವಿ - ಮಳಿಗೆ, ಆಕಾಶಮಲ್ಲಿಗೆ, ಬೆಟ್ಟದಾವರೆ ಹೂಗಿಡಗಳಿಂದ ಅವುಗಳ ಶೋಭೆ ಹೆಚ್ಚಿಸಿದರು. ಅವರ ಪರಿಸರ ರಕ್ಷಣೆಯ ಪ್ರಜ್ಞೆ ವೈಜ್ಞಾನಿಕವಾಗಿತ್ತು.

ಹಾನಗಲ್ಲ ಶ್ರೀಗಳು ತಾವೊಬ್ಬರೇ ಬನದವರೆಯ ನೆರಕೆಯ ಗುಡಿಸಲು ಕಟ್ಟಿಕೊಂಡು ಏಳು ಜನ ಸಾಧಕರಿಗೆ ಸಂಕಲ್ಪಿಸಿದ ಸಮಾಜ ಸೇವೆಯ ದೀಕ್ಷೆ ನೀಡಿದರು. ಅವರಿಗಾಗಿ ಪಾತಂಜಲ ಯೋಗ ಸಾಧನೆಯೊಂದಿಗೆ ಶಿವಯೋಗದ ಅಂಗವಾದ ಶಿವಪೂಜೆ, ಶಿವಮಂತ್ರ ಜಪ ಮತ್ತು ಶಿವ ಚಿಂತನೆಯ ಸಾತ್ತ್ವಿಕ ನಿಯಮಗಳನ್ನು ಶೀಲಾಚರಣೆಯ ಈ ವಿಧಿಯಲ್ಲಿ ರೂಪಿಸಿದರು. ಎಂಟುವರ್ಷದ ವಟುಗಳ ಪೂರ್ವಾಶ್ರಮದ ಸಂಸ್ಕಾರ ಕಳೆದು, ಅವರಿಗೆ ತಾವೇ ತಂದೆ - ತಾಯಿಯಾಗಿ ಆಧ್ಯಾತ್ಮ ಬಾಳಿನ ಬೆಳಕು ನೀಡಿದರು.

ಶಿವಯೋಗ ಮಂದಿರದ ಕಾರ್ಯಕ್ಷೇತ್ರ ಕ್ರಮೇಣ ಬೆಳೆಯಿತು. ಅದರ ವ್ಯವಸ್ಥೆಗೆಂದು ಹಾವೇರಿ ಹುಕ್ಕೇರಿಮಠದ ತಪಸ್ವಿ ಶ್ರೀ ಶಿವಬಸವ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವಿಶ್ವಸ್ತ ಮಂಡಳಿ ರಚಿಸಿ, ತಾವು ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚರಿಸಿ, ಭಿಕ್ಷಾಟನೆ ಮಾಡಿ ಜನಮನದಲ್ಲಿ ಜಾಗೃತಿಯ ಕಿಡಿ ಹೊತ್ತಿಸಿದರು.

ಶ್ರೀಗಳು ರೂಪಿಸಿದ ಶಿವಯೋಗ ಮಂದಿರ ಸಂಸ್ಥೆಯ ಉದ್ದೇಶಗಳಲ್ಲಿ ಯೋಗ ಧರ್ಮಗಳ ಪ್ರಸಾರ, ಕನ್ನಡ ಸಾಹಿತ್ಯ - ಸಂಸ್ಕೃತಿಯ ರಕ್ಷಣೆ ಮತ್ತು ಸಮಾಜ ಸೇವೆಯ ಆದರ್ಶಗಳು ಅಡಕವಾಗಿವೆ.

೧. ಶಾಖಾ ಶಿವಯೋಗ ಮಂದಿರಗಳ ಸ್ಥಾಪನೆ.

೨. ಯೋಗ ಸಾಧನೆ ಮತ್ತು ಪ್ರಸಾರ.

೩. ಪವಿತ್ರ ಗೋಮಯದಿಂದ ಪರಿಶುದ್ಧವಾದ ಭಸ್ಮ ಮತ್ತು ಪಂಚಸೂತ್ರದ ಕಲಾತ್ಮಕ ಶಿವಲಿಂಗ ಪೀಠಿಕೆಗಳ ನಿರ್ಮಾಣ ಹಾಗೂ ಸುಲಭ ಬೆಲೆಯಲ್ಲಿ ಅವುಗಳ ವಿತರಣೆ.

೪. ಕನ್ನಡದೊಂದಿಗೆ ಸಂಸ್ಕೃತ, ಮರಾಠಿ ಮತ್ತು ಇಂಗ್ಲೀಷ್ ಭಾಷೆಗಳ ಅಧ್ಯಯನ, ಧರ್ಮ - ದರ್ಶನಗಳ ತುಲನಾತ್ಮಕ ಅಭ್ಯಾಸ, ಸಾಹಿತ್ಯ ಪ್ರಕಾಶನ.

೫. ಕನ್ನಡ ವಾಙ್ಮಯದ ಮೂಲ ಆಕರಗಳಾದ ಪ್ರಾಚೀನ ತಾಡ ಓಲೆ ಮತ್ತು ಕಾಗದದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಂಶೋಧನೆ.

೬. ಸಂಗೀತ ವಿದ್ಯೆಯ ಪ್ರಸಾರ; ಶಿವಕೀರ್ತನೆ ಮತ್ತು ನಾಟಕಗಳ ಮೂಲಕ ಧರ್ಮ ಪ್ರಚಾರ.

೭. ಶಿಕ್ಷಣ ಸಂಸ್ಥೆ ಮತ್ತು ಉಚಿತ ಪ್ರಸಾದ ನಿಲಯಗಳ ಸ್ಥಾಪನೆ.

೮. ಮಹಿಳೆಯರ ಸಂಘಟನೆ ಮತ್ತು ಶಿಕ್ಷಣ.

೯. ಕೃಷಿ ಮೊದಲಾದ ಕಾಯಕ ವೃತ್ತಿಗಳ ಅಭಿವೃದ್ಧಿಯ ಯೋಜನೆ.

೧೦. ವಿದೇಶಗಳಲ್ಲಿ ಧರ್ಮ ಪ್ರಸಾರ.

ಈ ಧ್ಯೇಯಗಳ ಪೂರ್ತಿಗಾಗಿ ಸಂಸ್ಥೆ ೮೭ ವರ್ಷಗಳಲ್ಲಿ ಗಣನೀಯ ಪರಿಣಾಮ ಸಾಧಿಸಿದೆ.

ಧಾರ್ಮಿಕ ಜಾಗೃತಿಯ ಕೇಂದ್ರಗಳಾಗಿ ಶಾಖಾ ಶಿವಯೋಗ ಮಂದಿರಗಳು ಹಾವೇರಿ ಶ್ರೀಗಳವರ ಶಿವಯೋಗಾನುಷ್ಠಾನದ ಕ್ರಮದಲ್ಲಿ ರೂಪುಗೊಂಡವು. ಶಿವಮೊಗ್ಗ ಜಿಲ್ಲೆಯಲ್ಲಿ ಕಪನಳ್ಳಿ ಶಿವಯೋಗಾಶ್ರಮ ಗೋಪಾಲನ ಮತ್ತು ಕೃಷಿಯ ಕಾಯಕದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದೆ.

ಯೋಗ ಶಿಕ್ಷಣದತ್ತ ಸಂಸ್ಥೆ ಪ್ರಾರಂಭದ ದಿನಗಳಲ್ಲಿ ಬಹಳ ಕಾರ್ಯ ಸಾಧಿಸಿತು. ಪಾತಂಜಲ ಹಠಯೋಗದ ಕ್ರಮಪರಿತ ಶಿಕ್ಷಣವನ್ನು ಶ್ರೀಗಳು ಎಳಂದೂರ ಶ್ರೀಗಳವರಿಂದ ಪಡೆದಿದ್ದರು. ಕೆಲವು ಸಾಧಕರಿಗೆ ಆಸನ - ಪ್ರಾಣಾಯಾಮಗಳಲ್ಲಿ ಹೆಚ್ಚಿನ ಪರಿಣತಿ ನೀಡಿದರು. ಕಂಚುಗಲ್ಲ ಬಿದರೆಯ (ತಾ. ಕಡೂರು) ದೊಡ್ಡಮಠದ ಶ್ರೀ ಪ್ರಭುಕುಮಾರ ಪಟ್ಟಾಧ್ಯಕ್ಷರನ್ನು ಹಠಯೋಗದ ಷಟ್ಕರ್ಮ ಸಾಧನೆಯಲ್ಲಿ ಸಿದ್ಧರನ್ನಾಗಿ ಮಾಡಿದರು. ಅವರು ನಾಸಿಕದ ಕುಂಭಮೇಳದಲ್ಲಿ ಯೋಗ ಪ್ರದರ್ಶನ ಮಾಡಿ 'ಯೋಗಿರಾಜ' ಎಂಬ ಪ್ರಶಸ್ತಿ ಪಡೆದು ನಾಡಿಗೇ ಕೀರ್ತಿ ತಂದರು. ಅವರ ಶಿಷ್ಯರಾದ 'ಭಾಷ್ಯಾಚಾರ್ಯ' ಸುಬಿರಾಯಪಟ್ಟಣದ ಶ್ರೀ ಸದಾಶಿವ ಶಿವಾಚಾರ್ಯರು, ಸಿಂದಗಿಯ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಮತ್ತು ಶಿರ್ಶಿಯ ಬಣ್ಣಮಠದ ಶ್ರೀ ಗುರುಸಿದ್ಧ ಸ್ವಾಮಿಗಳು ಪ್ರಮುಖರಾಗಿದ್ದರು.

ಶ್ರೀಗಳು ಸಾಧಕರಿಗೆ ಆಧ್ಯಾತ್ಮ ಸಾಧನೆಯ ಜೊತೆಗೆ ಸಂಸ್ಕೃತ - ಇಂಗ್ಲೀಷ್ ಭಾಷೆಗಳ ಪ್ರೌಢ ಶಿಕ್ಷಣ ಸಿಗುವಂತೆ ಯೋಜಿಸಿದ್ದರು; ಕಾಶಿಯಿಂದ ಕಲಿತು ಬಂದ ಶ್ರೀ ಉಮಚಗಿ ಶಂಕರಶಾಸ್ತ್ರಿ ಮೊದಲಾದ ಪಂಡಿತರಿಂದ ಸಾಧಕರಿಗೆ ಕಾವ್ಯ - ಶಾಸ್ತ್ರಗಳ ಅಭ್ಯಾಸ ಮಾಡಿಸಿದರು. ಕವೀಂದ್ರ ರವೀಂದ್ರರ 'ಶಾಂತಿನಿಕೇತನ'ದ ಮಾದರಿಯಲ್ಲಿ ಶಿವಯೋಗ ಮಂದಿರವನ್ನು ರೂಪಿಸಬಯಸಿದ್ದರು. ಬದಾಮಿಯ ಶ್ರೀ ನಾರಾಯಣ ಸಂಗಮ ಅವರನ್ನು ಸಂಸ್ಥೆಯ ಪತಿಯಿಂದ, ಆ ಬಗ್ಗೆ ಶಿಕ್ಷಣ ಪಡೆದು ಬರಲು 'ಶಾಂತಿನಿಕೇತನ'ಕ್ಕೆ ಕಳಿಸಿಕೊಟ್ಟಿದ್ದರು.

ದ್ಯಾಂಪುರದ ಮಹಾಲಿಂಗಯ್ಯನವರು ಭೀಮಕವಿಯ ಬಸವಪುರಾಣದ 'ಬಸವ ಭಾಷೆ'ಯನ್ನು ನಿಜಗುಣರ 'ವಿವೇಕ ಚಿಂತಾಮಣಿ'ಯ ನೀತಿ ವಚನಗಳನ್ನು ಸಂಗ್ರಹಿಸಿ ಅವುಗಳಿಗೆ ಸರಳ ಕನ್ನಡದಲ್ಲಿ ಅರ್ಥ ಬರೆದು ಪ್ರಕಟಿಸಿದರು. ಶ್ರೀಗಳ ಪ್ರೇರಣೆಯಿಂದ ದ್ಯಾಂಪುರದ ಚನ್ನಕವಿಗಳು ಹೇಮರೆಡ್ಡಿ ಮಲ್ಲಮ್ಮ, ಚಿತ್ತರಗಿಯ ಮಹಾಂತ ಶಿವಯೋಗಿ ಮೊದಲಾದ ವೀರಶೈವ ಪುಣ್ಯ ಪುರುಷರ ಚರಿತ್ರೆಗಳನ್ನು ವಾರ್ಧಿಕ ಷಟ್ಪದಿ ಕಾವ್ಯಗಳಲ್ಲಿ ರಚಿಸಿದರು. ಅವುಗಳ ಮುದ್ರಣವೂ ಅಂದ ಮತ್ತು ಪರಿಶುದ್ಧವಾಗಿರುವಂತೆ ಶ್ರೀಗಳು ನಿರ್ದೇಶಿಸಿದ್ದರು. ಶ್ರೀಗಳು ಸ್ವತಃ ಕವಿಗಳಾಗಿದ್ದರು. 'ಶಿವಯೋಗ ' ಮುದ್ರಿಕೆಯಲ್ಲಿ ಕೈವಲ್ಯದ ಹಾಡುಗಳನ್ನು ನಿಜಗುಣರ ಅನುಕರಣೆಯಲ್ಲಿ ರಚಿಸಿದರು.

ನವಿಲುಗುಂದ ಗವಿಮಠದ ಶ್ರೀ ಬಸವಲಿಂಗ ಸ್ವಾಮಿಗಳು ಶ್ರೀಗಳ ಅಪೇಕ್ಷೆಯಂತೆ ಸಾಧಕರಿಗೆ ಭಾಷಣ - ಪ್ರವಚನಗಳ ಕಲೆ ಕಲಿಸಿದರು. ಅವರ ಪ್ರಯತ್ನದಿಂದಾಗಿ ಬಿ.ಎಂ. ಶ್ರೀ., ಎಂ.ಆರ್. ಶ್ರೀ., ಬೀ.ಸೀ.ಯಂಥ ಸಾಹಿತಿಗಳು ಮಂದಿರಕ್ಕೆ ಸಂದರ್ಶನ ನೀಡಿದರು. ಅವರ ಭಾಷಣಗಳನ್ನು ಕೇಳಿ ಸಾಧಕರಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ವ್ಯಾಸಂಗ ಪ್ರವೃತ್ತಿ ಬೆಳೆಯಿತು. ನವಿಲುಗುಂದ ಶ್ರೀಗಳ ಮಾರ್ಗದರ್ಶನದಲ್ಲಿ 'ಸುಕುಮಾರ' ಮಾಸಪತ್ರಿಕೆಯನ್ನು ಅಡ್ನೂರ ಚಂದ್ರಶೇಖರ ದೇವರು (ಈಗ ಡಾ. ಜ.ಚ.ನಿ.) ಮುತ್ತಿನಂಥ ಅಕ್ಷರಗಳಲ್ಲಿ ಬರೆದರು. ಅದು ನಾಡಿನ ಹಿರಿಯರ ಮೆಚ್ಚುಗೆಗೆ ಪಾತ್ರವಾಯಿತು. ಸಿದ್ಧಗಂಗೆಯ ಪರಮಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ನವಲಗುಂದ ಶ್ರೀಗಳವರ ಕರೆಯ ಮೇರೆಗೆ ಶಿವಯೋಗ ಮಂದಿರಕ್ಕೆ ಸಂದರ್ಶನ ೧೯೩೩ರ ಸೆಪ್ಟೆಂಬರ್ ೧೦ ರಂದು ನೀಡಿ, ಸಾಧಕ - ವಟುಗಳಿಗೆ ಹಿತೋಪದೇಶ ಅನುಗ್ರಹಿಸಿ 'ಸುಕುಮಾರ' ಕೈಬರಹ ಪತ್ರಿಕೆಯ ಬಗ್ಗೆ ಬರೆದ ಅಭಿಪ್ರಾಯ ಮನನೀಯ....

> "ಶಿವಯೋಗ ಮಂದಿರದ ಸಾಧಕರಿಂದ ಹೊರಡಿಸಲ್ಪಡುವ ಈ ಪತ್ರಿಕೆಯ ಅವಗಾಹನೆಯು ಸಂಪೂರ್ಣ ಆಯಿತು. ಇದರಲ್ಲಿ ಇರುವ ಸಾಮಾಜಿಕ, ನೀತಿಬೋಧಕ ಹಾಗೂ ತಾತ್ವಿಕ ಲೇಖನಗಳು ಸಾಧಕರ ಅನುಪಮ ಶ್ರದ್ಧಾ, ಭಾಷಾ ಸೌಷ್ಠವ, ಕನ್ನಡ ಪ್ರೇಮ ಮತ್ತು ವಿದ್ಯಾನಿಪುಣತೆ ಇವುಗಳನ್ನು ಉತ್ಕಟವಾಗಿ ಸ್ಪಷ್ಟೀಕರಿಸುತ್ತವೆ. ಇದರಲ್ಲಿ ಬರೆದಿರುವ ಚಿತ್ರಗಳು ಮುದ್ದಾಗಿಯೂ, ಮನೋರಂಜಕವಾಗಿಯೂ ಇವೆ. ಸಣ್ಣ ಸಣ್ಣ ಕವನಗಳು ಹೃದಯಂಗಮವಾಗಿಯೂ ಮಹಾ ಮಂದಿರದ ಸನ್ನಿವೇಶದ ಮಹತ್ವವನ್ನೂ, ಪ್ರಕೃತಿ ಸೌಂದರ್ಯವನ್ನೂ ವರ್ಣಿಸತಕ್ಕವಾಗಿವೆ. ಈ ಸಂಚಿಕೆಯು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿ ಹೊಂದುತ್ತ ಪ್ರಚಾರ ಹೊಂದಿ ಸಾಮಾಜಿಕ ಏಳ್ಗೆಯನ್ನು ಕೋರತಕ್ಕ ಮುಖ್ಯವಾದ ಪತ್ರಗಳಲ್ಲೊಂದಾಗಿ ಪರಿಣಮಿಸಲೆಂದು ಹಾರೈಸುವೆ."

ಈ ಪತ್ರಿಕೆಯಲ್ಲಿ ಹಿರಿಯ ಸಾಧಕರಾಗಿದ್ದ ರೇಣುಕ ದೇಶಿಕರು (ಲಿಂ. ಸದಾಶಿವ ಮಹಾಸ್ವಾಮಿಗಳು, ಹಾನಗಲ್ಲ) ಕಲಾತ್ಮಕ ಚಿತ್ರಗಳನ್ನು ಬರೆಯುತ್ತಿದ್ದರು. ಪೂಜ್ಯರ ಹಾರೈಕೆಯಂತೆ ೧೯೫೦ ರಲ್ಲಿ ನಾನು "ಸುಕುಮಾರ" ತ್ರೈಮಾಸಿಕವನ್ನು ಮುದ್ರಣ ರೂಪಕ್ಕೆ ತಂದು ಸಂಪಾದಿಸಿ - ಪ್ರಕಟಿಸಿದೆ. ಅದು ಮಧುರ ಚೆನ್ನ, ಹುಲ್ಲೂರು ಶ್ರೀನಿವಾಸ ಜೋಯಿಸ, ಶಿ.ಚೆ. ನಂದಿಮಠ, ಡಿ.ಎಸ್.ಕರ್ಕಿ, ಎಸ್.ಎಸ್. ಬಸುಸೆಟ್ಟಿರ, ಸಿ.ಎಸ್. ಕಣವಿ ಮೊದಲಾದ ವಿದ್ವಾಂಸರ ಮತ್ತು ಕವಿಗಳ ರಚನೆಗಳಿಂದ ಜನಪ್ರಿಯ ನಿಯತಕಾಲಿಕವಾಗಿತ್ತು.

ಶ್ರೀಗಳವರು ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಯತ್ತ ಗಮನವಿತ್ತ ಮೊದಲ ಮಠಾಧೀಶರು. ತಾವು ಸಂಚರಿಸಿದ ನಗರ - ಗ್ರಾಮಗಳ ಮಠ - ಮಾನ್ಯಗಳಲ್ಲಿ ಹುಳು ಹಿಡಿದು ಹಾಳಾಗುತ್ತಿದ್ದ ತಾಡೋಲೆ ಮತ್ತು ಕಾಗದದ ಹಸ್ತಪ್ರತಿಗಳನ್ನು ತಂದು ಸಂಸ್ಥೆಯಲ್ಲಿ ಸಂಗ್ರಹಿಸಿದರು. ಆ ಸಂಗ್ರಹ ವಿಜಯ ಮಹಾಂತೇಶ್ವರ ಗ್ರಂಥಾಲಯವಾಗಿ ರೂಪುಗೊಂಡಿತು. ಶ್ರೀಗಳವರು ಸಂಶೋಧಕರಿಗೆ ಪ್ರೇರಣೆ ಹಾಗೂ ಮಾರ್ಗದರ್ಶನ ನೀಡಿದರು. 'ವಚನ ಪಿತಾಮಹ' ಡಾ. ಫ.ಗು. ಹಳಕಟ್ಟಿ ಅವರಿಗೆ ವಚನ ವಾಙ್ಮಯ ಬೆಳಕಿಗೆ ತರಲು ಪ್ರೇರಕ ಶಕ್ತಿಯಾಗಿದ್ದರು. ಡಾ. ಹಳಕಟ್ಟಿಯವರು ಶ್ರೀಗಳವರ ಈ ಕಾರ್ಯವನ್ನು ಮನದುಂಬಿ ನೆನೆದಿರುವರು:

"ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳವರು ಹೇಗೆ ಧನಸಂಚಯ ಮಾಡುತ್ತ ಬಂದರೋ ಹಾಗೆಯೇ ಅವರು ಗ್ರಂಥ ಸಂಚಯವನ್ನು ಸಹ ಮಾಡುತ್ತ ಬಂದರು. ಅವರ ಈ ಕಾರ್ಯ ಅತ್ಯಂತ ಮಹತ್ತರವಾದುದು. ಶ್ರೀ ಸ್ವಾಮಿಗಳವರ ದರ್ಶನ ಹೊಂದಲು ಎಲ್ಲ ಕಡೆಯಿಂದಲೂ ಪ್ರಮುಖ ವ್ಯಕ್ತಿಗಳು ಈ ಮಂದಿರಕ್ಕೆ ಬರುವುದು ರೂಢಿಯಾಗಿತ್ತು. ಅವರನ್ನು ಶ್ರೀ ಸ್ವಾಮಿಗಳು ಕಂಡು ಅವರ ಗ್ರಾಮಗಳಲ್ಲಿ ತಾಡವೋಲೆಯ ಗ್ರಂಥಗಳು ಇವೆಯೇ ಹೇಗೆ ಎಂಬುದನ್ನು ಪ್ರಶ್ನೆ ಮಾಡವೆ ಬಿಡುತ್ತಿದ್ದಿಲ್ಲ. ಯಾರಾದರೂ ತಮ್ಮಲ್ಲಿ ಇಂಥ ಗ್ರಂಥಗಳು ಇವೆ ಎಂದು ಉತ್ತರ ಕೊಟ್ಟಲ್ಲಿ ಅವುಗಳನ್ನು ಮಂದಿರಕ್ಕೆ ಕಳಿಸಬೇಕೆಂದು ಶ್ರೀ ಸ್ವಾಮಿಗಳು ತಪ್ಪದೆ ಹೇಳುವರು....ಎಲ್ಲರೂ ಭಕ್ತಿಯಿಂದ ತಮ್ಮಲ್ಲಿಯ ಗ್ರಂಥಗಳನ್ನು ಅವರ ಕಡೆಗೆ ಸಮರ್ಪಿಸುತ್ತಿದ್ದರು. ಈ ಪ್ರಕಾರ ಮಂದಿರದಲ್ಲಿ ವೀರಶೈವ ಗ್ರಂಥಗಳ ಒಂದು ದೊಡ್ಡ ಸಂಗ್ರಹವು ಸ್ವಲ್ಪ ದಿವಸಗಳಲ್ಲೆ ಉಂಟಾಯಿತು.

ಶ್ರೀ ಸ್ವಾಮಿಗಳವರು ಮಂದಿರದ ಒಂದು ದೊಡ್ಡ ನಿಧಿಯನ್ನು ಕೂಡಿಸಿದ್ದೂ, ಅಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದೂ ಮಹತ್ವದ ಕಾರ್ಯಗಳೆಂಬುದು ನಿಃಸ್ಸಂದೇಹವಾದದ್ದು. ಆದರೆ ಹಣಕ್ಕಿಂತಲೂ ಮಹತ್ವವೆನಿಸಿಕೊಳ್ಳುವ ಗ್ರಂಥಗಳ ಸಂಗ್ರಹ

ಮಾಡುವುದು ಅಷ್ಟೇ ಶ್ರೇಯಸ್ಕರವಾದದ್ದು ಇರುತ್ತದೆ. ಇಂಥ ಗ್ರಂಥಗಳು ಸಮಾಜದಲ್ಲಿ ಇರದಿದ್ದರೆ ಸಂಸ್ಕೃತಿಯು ಬಾಳುವ ಸಂಭವವೇ ಇಲ್ಲ.

ಇದೇ ಕಾಲದಲ್ಲಿ ನಾನು ವಚನಶಾಸ್ತ್ರದ ಉಕ್ತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದೆನು. ಈ ಸಂಗತಿಯನ್ನು ನಾನು ಸ್ವಾಮಿಗಳವರ ನಿದರ್ಶನಕ್ಕೆ ಆಗಿಂದಾಗ್ಗೆ ತರುತ್ತಿದ್ದೆನು. ಅವರು ಇದನ್ನು ನೋಡಿ ಬಹಳ ಸಂತೋಷಿಸುತ್ತಿದ್ದರು ಮತ್ತು ನನಗೆ ಅದರಲ್ಲಿ ಪ್ರೋತ್ಸಾಹವನ್ನೂ ಕೊಡುತ್ತಿದ್ದರು.

ಮುಂದೆ ನಾನು 'ವಚನಶಾಸ್ತ್ರಸಾರ' ಎಂಬ ಗ್ರಂಥವನ್ನು ನಿರ್ಮಾಣ ಮಾಡಿ, ಅದರಲ್ಲಿ ನಾಲ್ಕು ಭಾಗಗಳನ್ನು ತಯಾರಿಸಿದ್ದೆನು. ಮೊದಲನೆಯ ಭಾಗವು ಪೂರ್ಣವಾದುದನ್ನು ಬಾಗಲಕೋಟೆಯ ಕೆಲವು ಮಹನೀಯರು ಸ್ವಾಮಿಗಳವರಿಗೆ ಹೇಳಲು ಅವರು ಖುದ್ದಾಗಿ ನಾನಿದ್ದ ಮನೆಯ ಸಮೀಪದಲ್ಲಿ ಸೊನ್ನದ ಶ್ರೀಮಂತ ಗಂಗಪ್ಪ ದೇಸಾಯಿಯವರ ಕಟ್ಟಡವು ಪ್ರಾರಂಭವಾಗಿದ್ದು ಅದೇ ಮನೆಯಲ್ಲಿ ಅವರು ಇಳಿದರು. ಆಗ ನಾನು ವಿಷಮಜ್ವರ ಪೀಡಿತನಾಗಿದ್ದೆ. ಚೆನ್ನಾಗಿ ಕುಳ್ಳಿರಲಿಕ್ಕೆ ಬರುತ್ತಿದ್ದಿಲ್ಲ. ಅದರೂ ಶ್ರೀ ಸ್ವಾಮಿಗಳು ನನ್ನ ಅನುಕೂಲತೆಗಾಗಿ ಈ ಗೃಹದಲ್ಲಿ ಇಳಿದು ಕೆಲವು ದಿವಸಗಳವರೆಗೆ ನಾನು ಸಂಗ್ರಹಿಸಿದ ಉಕ್ತಿಗಳನ್ನು ನನ್ನ ಕಡೆಯಿಂದ ಓದಿಸಿಕೊಳ್ಳುತ್ತಿದ್ದರು. ಅವುಗಳಲ್ಲಿರುವ ವಚನಗಳಲ್ಲಿಯ ಉಚ್ಚ ವಿಚಾರ ಮತ್ತು ಸುಂದರ ನುಡಿಗಳನ್ನು ಕೇಳಿ ಅವರು ಹರ್ಷಿಸುತ್ತಿದ್ದರು ಮತ್ತು ನನಗೆ ಆ ಗ್ರಂಥವನ್ನು ಅಚ್ಚು ಹಾಕಲಿಕ್ಕೆ ಪ್ರೋತ್ಸಾಹಿಸಿದರು. ಈ ಅಚ್ಚು ಹಾಕುವ ಕಾರ್ಯದಲ್ಲಿ ನನಗೆ ಶ್ರೀಮಂತ ಗಂಗಪ್ಪ ದೇಸಾಯಿಯವರು ಧನ ಸಹಾಯವನ್ನು ಮಾಡಲು ಒಪ್ಪಿದರು. ಶ್ರೀ ಸ್ವಾಮಿಗಳು ಅದನ್ನು ಕೇಳಿ ಸಂತೋಷ ಪ್ರದರ್ಶನವನ್ನು ಮಾಡಿದರು. ಗ್ರಂಥದ ಮುದ್ರಣವು ಬೆಳಗಾವಿಯಲ್ಲಿ ಮುಗಿದ ಬಳಿಕ ನಾನು ಅದನ್ನು ಅವರಿಗೆ ಅರ್ಪಿಸಿದೆನು.

ಸ್ವಾಮಿಯವರ ಹಸ್ತದಲ್ಲಿ ಈ ಗ್ರಂಥವು ಬಂದ ಬಳಿಕ ಅವರು ತಮ್ಮ ಭೋಜನೋತ್ತರ ಕಾಲದಲ್ಲಿ ಅದರಲ್ಲಿಯ ಶ್ರೇಷ್ಠ ಉಕ್ತಿಗಳನ್ನು ತಮ್ಮನ್ನು ಕಾಣಲಿಕ್ಕೆ ಬಂದ ಜನರಿಗೆ ತಿಳಿಸಿ ಹೇಳುವರು. ಈ ಕಾರ್ಯವನ್ನು ಅವರು ಬಹುದಿನ ಮಾಡುತ್ತ ಬಂದರು. ಹೀಗೆ ತಾವಷ್ಟೇ ಅಲ್ಲ, ಮಂದಿರಕ್ಕೆ ಬಂದ ಮಠಾಧಿಕಾರಿಗಳಿಗೂ, ಶಾಸ್ತ್ರಿಗಳಿಗೂ "ಶಿವ ಶರಣರು ಎಂಥ ಮಹತ್ವದ ಕಾರ್ಯವನ್ನು ಮಾಡಿದ್ದಾರೆ ನೋಡಿರಿ" ಎಂದು ತಿಳಿಸಿ ಹೇಳುವರು.

ಮುಂದೆ ಶ್ರೀಯುತ ರಂಗರಾವ್ ದಿವಾಕರ್, ಶ್ರೀಯುತ ಬಿ.ಎಂ. ಶ್ರೀಕಂಠಯ್ಯ, ಶ್ರೀಯುತ ಎಂ.ಆರ್. ಶ್ರೀನಿವಾಸಮೂರ್ತಿ ಮೊದಲಾದ ಮಹನೀಯರು ಶಿವಶರಣರ ಬಗ್ಗೆ ಬಹಳ ಉಚ್ಚತರದ ಲೇಖ-ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಹೀಗೆ ಶಿವಶರಣರ ವಚನಗಳನ್ನು ಮೊದಲು ಪ್ರಸಾರ ಮಾಡಿದವರು ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳೇ ಆಗಿದ್ದಾರೆ. ಅವರು ಹೋದಲ್ಲೆಲ್ಲ ಶಿವಶರಣರ ವಿಚಾರಗಳನ್ನು ತನ್ನ ಅಧಿಕಾರವಾಣಿಯಿಂದ ಜನರ ಮುಂದೆ ಪ್ರಸ್ತಾಪಿಸಿ ಅವುಗಳನ್ನು ಮುಂದಕ್ಕೆ ತಂದರು.

ಶ್ರೀ ಸ್ವಾಮಿಗಳು ನಿಜಗುಣದ ಶಾಸ್ತ್ರವನ್ನು ಚೆನ್ನಾಗಿ ಪರಿಶೀಲಿಸಿದ್ದರು. ಈ ಗ್ರಂಥಗಳಲ್ಲಿ ಯೋಗಾಭ್ಯಾಸದ ತತ್ವಗಳು ವಿಸ್ತಾರವಾಗಿ ಬಂದಿರುತ್ತವೆ. ಶಿವಶರಣರ ಗ್ರಂಥಗಳಲ್ಲಿ ಬರುವ ಕ್ಲಿಷ್ಟ ಆಂತರಂಗಿಕ ವಿಚಾರಗಳನ್ನು ಶ್ರೀ ಸ್ವಾಮಿಗಳವರು ಬಹಳ ಹಗುರವಾಗಿ ಜನರಿಗೆ ತಿಳಿಸಿ ಹೇಳುವರು. ಇದರಿಂದ ವಚನ ವಾಙ್ಮಯದ ಮಹತ್ವವು ಅವರಿಗೆ ಚೆನ್ನಾಗಿ ಬಿಂಬಿಸುತ್ತಿತ್ತು. ಮುಂದೆ ಇದರ ಪ್ರಭಾವವು ಬೆಳೆಯುತ್ತಲೇ ಬಂದಿತು. ಈ ಪ್ರಭಾವವು ಬೆಳೆಯುತ್ತ ಇನ್ನೂ ವಿಶಾಲ ಸ್ಥಿತಿಯನ್ನು ಹೊಂದುವುದರಲ್ಲಿ ಇದೆ. ಇದು ಪೂರ್ಣತೆಗೆ ಬರಲಿಕ್ಕೆ ಇನ್ನೂ ಕೆಲ ಕಾಲವು ಬೇಕಾಗಬಹುದು. ಈ ಮಹತ್ವದ ಕಾರ್ಯವು ಶ್ರೀ ಶಿವಯೋಗ ಮಂದಿರದ ಸ್ಥಾನದಲ್ಲಿಯೇ ಸ್ವಲ್ಪ ಕಾಲದಲ್ಲಿ ಪೂರ್ಣತೆಗೆ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ."[1]

ಪ್ರಾಚೀನ ಹಸ್ತಪ್ರತಿಗಳಲ್ಲಿರುವ ಶಿವಶರಣರ ವಚನ ವಾಙ್ಮಯವನ್ನೆಲ್ಲ ಸಂಶೋಧಿಸಿ, ಅದನ್ನು ಚಿಕ್ಕ ಪುಸ್ತಕಗಳ ರೂಪದಲ್ಲಿ ಅಂದವಾದ ಮುದ್ರಣದೊಡನೆ ಕಡಿಮೆ ಬೆಲೆಯಲ್ಲಿ ಪ್ರಕಟಿಸಿ ಅದು ಸಾಮಾನ್ಯನ ಕೈಗೂ ಎಟಕುವಂತೆ ಮಾಡುವುದಕ್ಕಾಗಿ ಶಿರಿಯಾಳ ಕೊಪ್ಪದ ನಿವೃತ್ತ ಶಿಕ್ಷಕ ಶ್ರೀ ಚನ್ನಮಲ್ಲಪ್ಪ ಮೇಪ್ಪು, ಕೋರಿ ಶೆಟ್ಟರ (ಶ್ರೀ ಚೆನ್ನಮಲ್ಲಿಕಾರ್ಜುನ) ಅವರಿಗೆ ಶ್ರೀಗಳವರು ಪ್ರೇರಣೆ ನೀಡಿದರು. ಅವರು ಶ್ರೀಗಳವರ ಕಟ್ಟಾ ಶೀಲಾಚರಣೆಯಲ್ಲಿದ್ದು ಭವಿತಾರ್ಪಣ ಪ್ರಸಾದದ ಸಿದ್ಧಿಯನ್ನು ಪಡೆದ ವಿರಾಗಿ ನಿಜ ಶರಣರಾಗಿದ್ದರು. ಅವರಿಗೆ ಹಾವೇರಿ ಹುಕ್ಕೇರಿ ಮಠದಲ್ಲಿಯ ಶಿವಲಿಂಗ ವಿಜಯ ಮುದ್ರಣಾಲಯದಲ್ಲಿ 'ಸದ್ಧರ್ಮ ದೀಪಿಕೆ' ಮಾಸ ಪತ್ರಿಕೆಯನ್ನು ಪ್ರಕಟಿಸಲು ಎಲ್ಲ ಬಗೆಯ ಅನುಕೂಲತೆಗಳನ್ನು ಶ್ರೀಗಳ ಅನುಜ್ಞೆಯಂತೆ ಮಂದಿರದ

1. ಬೆಳಗು (ಕೆಲವು ನೆನಪುಗಳು) ಡಾ. ಫ.ಗು. ಹಳಕಟ್ಟಿ, ಬಿ.ಎ., ಎಲ್‌ಎಲ್‌ಬಿ. ಡಿ.ಲಿಟ್. ಪು. ೬೪-೬೬)

ಆಜೀವ ಅಧ್ಯಕ್ಷರಾಗಿದ್ದ ಶ್ರೀ ನಿ.ಪ್ರ. ಶಿವಬಸವ ಮಹಾಸ್ವಾಮಿಗಳವರು ಕಲ್ಪಿಸಿಕೊಟ್ಟರು. ಮುಂದೆ ಶ್ರೀ ಚನ್ನ ಮಲ್ಲಿಕಾರ್ಜುನ ಅವರು ಮೈಸೂರಲ್ಲಿ ನೆಲೆಯಾಗಿ ತಮ್ಮ ಆರಾಧ್ಯ ಗುರುದೇವ "ಹಾನಗಲ್ಲ ಸದಾಶಿವ ಕುಮಾರ ಮಹಾಸ್ವಾಮಿ"ಗಳ ಸಂಸ್ಮರಣೆಯಲ್ಲಿ "ಸದ್ಧರ್ಮ ದೀಪಿಕೆ"ಯನ್ನು ಮುಂದುವರೆಸಿದರು. ಈ ಪತ್ರಿಕೆಯ ಮೂಲಕ ರಗಳೆ, ಶಾರದ, ತ್ರಿಪದಿ, ತಾರಾವಳಿ, ಸ್ತೋತ್ರ ಮೊದಲಾದ ನೂರಾರು ಅಪ್ರಕಟಿತ ಕೃತಿಗಳು ಸಂಶೋಧನೆಯೊಂದಿಗೆ ಬೆಳಕಿಗೆ ಬಂದವು. ಶ್ರೀ ಚೆನ್ನಮಲ್ಲಿಕಾರ್ಜುನ ಅವರು ಹರಿಹರ ಮಹಾಕವಿಯ "ಮಹಾದೇವಿಯಕ್ಕನ ರಗಳೆ" ಯನ್ನು ಹಸ್ತಪ್ರತಿಗಳ ಪಾಠಾಂತರಗಳೊಂದಿಗೆ ಪರಿಶುದ್ಧವಾಗಿ ಸಂಪಾದಿಸಿ ಪ್ರಕಟಿಸಿದರು. ರೇವಣ ಸಿದ್ಧೇಶ್ವರ ಮತ್ತು ಬಸವೇಶ್ವರರ ಬಗೆಗೆ ಸಂಶೋಧನಾತ್ಮಕ ಗ್ರಂಥಗಳನ್ನು ಬರೆದುದಲ್ಲದೆ ನನ್ನಂಥ ಅನೇಕ ಶಿಕ್ಷಿತರಿಗೆ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಓದುವ ಮತ್ತು ಸಂಪಾದಿಸುವ ವಿಧಾನವನ್ನು ಕಲಿಸಿಕೊಟ್ಟರು. ಅವರ ಮಾರ್ಗದರ್ಶನದಲ್ಲಿ ನಾನು 'ಸುಕುಮಾರ ' ಮಾಸಪತ್ರಿಕೆಯಲ್ಲಿ ಅನೇಕ ಕಿರುಕೃತಿಗಳನ್ನು ಸಂಪಾದಿಸಿದೆ. ನಾಡಿನ ಮಠಗಳಲ್ಲಿಯ ಹಸ್ತಪ್ರತಿ ಸೂಚಿಗಳನ್ನು ಬೆಳಕಿಗೆ ತಂದೆ. ಅಪ್ರಕಟವಾಗಿದ್ದ ಹಮ್ಮೀರ ಕಾವ್ಯ (ರಾಜೇಂದ್ರ ವಿಜಯ) ವನ್ನು 'ಸುಕುಮಾರ ಗ್ರಂಥಮಾಲೆ'ಯಲ್ಲಿ ಡಾ. ಎಂ.ಎಸ್. ಸುಂಕಾಪುರ ಅವರ ಸಂಪಾದಕತ್ವದಲ್ಲಿ ಪ್ರಕಾಶಕ್ಕೆ ಬರುವಂತೆ ಮಾಡಿದೆ.

ದಾವಣಗೆರೆಯ ನಿಶಾನಿಮಠದ ಶಾಂತವೀರಾಧ್ಯರು ಹಸ್ತಪ್ರತಿಗಳನ್ನು ಸಂಗ್ರಹಿಸುವ, ಅವನ್ನು ಅಭ್ಯಾಸ ಮಾಡುವ ಪ್ರವೃತ್ತಿಯನ್ನು ಶ್ರೀಗಳ ಮಾರ್ಗದರ್ಶನದಲ್ಲಿ ಬೆಳೆಸಿಕೊಂಡರು. 'ಶಿವಾನುಭವ' ಮಾಸಪತ್ರಿಕೆಯಲ್ಲಿ ಅವರ ಲೇಖನಗಳು ಡಾ. ಹಳಕಟ್ಟಿ ಅವರ ಮೆಚ್ಚುಗೆ ಗಳಿಸಿದ್ದವು. ಅವರು ತಮ್ಮ ಹಸ್ತಪ್ರತಿ ಸಂಗ್ರಹವನ್ನೆಲ್ಲ ಮಂದಿರದ ಗ್ರಂಥಾಲಯಕ್ಕೆ ಸಮರ್ಪಿಸಿದರು.

ದ್ಯಾಂಪುರದ ಮಹಾಲಿಂಗಯ್ಯನವರು ಮಂದಿರದಲ್ಲಿ ಕನ್ನಡ ಪಂಡಿತರಾಗಿದ್ದರು. ನಿಜಗುಣರ ಕೃತಿಗಳು ಪರಿಶುದ್ಧವಾಗಿ ಪ್ರಕಟವಾಗಬೇಕೆಂದು ಬಯಸಿದ ಶ್ರೀಗಳವರು ಅವರಿಗೆ ಕನ್ನಡದ ಮೊದಲ ವಿಶ್ವಕೋಶ 'ವಿವೇಕ ಚಿಂತಾಮಣಿ'ಯನ್ನು ಹಸ್ತಪ್ರತಿಗಳನ್ನು ಆಧರಿಸಿ ಸಂಪಾದಿಸುವಂತೆ ಆದೇಶ ನೀಡಿದ್ದರು. ಆ ದಿಶೆಯಲ್ಲಿ ಅವರು ಪ್ರಾರಂಭಿಸಿದ ಕಾರ್ಯವನ್ನು ನಾನು ಮಂದಿರದಲ್ಲಿ ಸಂಸ್ಕೃತ ಅಧ್ಯಾಪಕನಾಗಿದ್ದು ಮುಂದುವರೆಸಿದೆ. ನಾನು ಸವಿಸ್ತಾರ ಪ್ರಸ್ತಾವನೆಯೊಂದಿಗೆ ಸಂಪಾದಿಸಿದ 'ವಿವೇಕ ಚಿಂತಾಮಣಿ' ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾಯಿತು.[2] ಅದೇ ಬಗೆಯಲ್ಲಿ ನಿಜಗುಣದ ಯೋಗಶಾಸ್ತ್ರ, 'ಪಾರಮಾರ್ಥ ಪ್ರಕಾಶಿಕೆ'ಯನ್ನೂ ಸಂಪಾದಿಸಿ ಸ್ವಂತದ 'ಶಾರದಾ ಭವನ' ಪ್ರಕಾಶನದಲ್ಲಿ ತಂದೆ.

ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳವರು ಶಿವಯೋಗ ಮಂದಿರ ಸಂಸ್ಥೆಯ ಆಶ್ರಯದಲ್ಲಿ ಸಾಧಿಸಿದ ಮಹತ್ಕಾರ್ಯಗಳಲ್ಲಿ ಸಂಗೀತ ವಿದ್ಯೆಯ ಪ್ರಸಾರ ಬಹಳ ಮುಖ್ಯವಾದುದು. ಸಂಗೀತಕಲೆ ಮಾನವನ ಚಂಚಲ ಚಿತ್ತವೃತ್ತಿಗಳನ್ನು ಉದಾತ್ತಗೊಳಿಸಿ ಸಮತೆ - ಶಾಂತಿ ನೀಡುವ ನಾದಯೋಗ. ಮನರಂಜನೆಯ ಜೊತೆಗೆ ಅದು ಶಿವಯೋಗ ಸಾಧನೆಗೆ ಸಹಕಾರಿಯಾಗಿ ಬೆಳೆಯಬೇಕೆಂದು ಹಾನಗಲ್ಲ ಶ್ರೀಗಳವರು ಬಯಸಿದ್ದರು.

ಈ ಮಹೋದ್ದೇಶದ ಪೂರ್ತಿಗಾಗಿ ಶ್ರೀಗಳವರು ಹುಟ್ಟುಗುರುಡ ಶ್ರೀ ಪಂಚಾಕ್ಷರ ಗವಾಯಿಗಳವರಿಗೆ ಕರ್ನಾಟಕ (ದಕ್ಷಿಣಾದಿ) ಮತ್ತು ಹಿಂದುಸ್ತಾನಿ (ಉತ್ತರಾದಿ) ಸಂಗೀತ ಪದ್ಧತಿಗಳ ಶಿಕ್ಷಣ ಕೊಡಿಸಿದರು. ಶ್ರೀ ಗವಾಯಿಗಳು ಶ್ರೀಗಳ ಇಚ್ಛೆಯಂತೆ ಶಿವಪೂಜಾನಿಷ್ಠರಾಗಿದ್ದು ನೈಷ್ಠಿಕ ಬ್ರಹ್ಮಚರ್ಯದೊಂದಿಗೆ "ಸಂಚಾರಿ ಸಂಗೀತಶಾಲೆ"ಯನ್ನು ನಡೆಸಿ, ಇಡಿಯ ನಾಡನ್ನೇ ಸುತ್ತಿ ಸಾವಿರಾರು ಹುಟ್ಟುಗುರುಡರಿಗೆ ಉಚಿತ ಶಿಕ್ಷಣ ನೀಡಿದರು. ೧೯೩೮ ರಲ್ಲಿ ಹುಬ್ಬಳ್ಳಿಯಲ್ಲಿ ಕೂಡಿದ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಪ್ರೊ.ಶಿ.ಶಿ. ಬಸವನಾಳ ಅವರು ಗವಾಯಿಗಳಿಗೆ 'ಗಾಯನಾಚಾರ್ಯ' ಪದವಿ ಕೊಟ್ಟು ಗೌರವಿಸಿದರು.

ಶ್ರೀ ಗವಾಯಿಗಳವರ ಪಟ್ಟಶಿಷ್ಯ ಡಾ. ಪಂ. ಪುಟ್ಟರಾಜ ಗವಾಯಿಗಳು ಉಭಯಗಾನ ವಿಶಾರದರು. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿರುವ ಮೇಧಾವಿಗಳು. ಗುರುಗಳಂತೆ ಶಿವಪೂಜಾನಿಷ್ಠ ವಿರಕ್ತರು. ಅವರು ಗದಗಿನ ಶ್ರೀ ವೀರಶೈವ ಪುಣ್ಯಾಶ್ರಮದಲ್ಲಿ ನೂರಾರು ಜನ್ಮಾಂಧರಿಗೆ ಜಾತಿ ವಿಜಾತಿಯೆನ್ನದೆ ಉಚಿತವಾಗಿ ಸಂಗೀತ ವಿದ್ಯೆಯ ತರಬೇತಿ ನೀಡುತ್ತಿರುವುದು ಪ್ರಶಂಸನೀಯ ಅನುಪಮ ಸೇವೆ.

ಶ್ರೀ ಗವಾಯಿಗಳ ಇನ್ನೊಬ್ಬ ಪ್ರಿಯ ಶಿಷ್ಯರು ಪಂ. ಬಸವರಾಜ ರಾಜಗುರು ಅವರು ಅಖಿಲ ಭಾರತ ಮಟ್ಟದಲ್ಲಿ ನಾಡಿಗ

---

2. "ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ (೧೮೩೦ - ೧೯೦೦) ಗಳೆಂಬುವರು ಕ್ರಿ.ಶ. ೧೮೭೬ ರಲ್ಲಿ ಅಂದರೆ ಇಂದಿಗೆ ಒಂದೂಕಾಲು ಶತಮಾನದಷ್ಟು ಹಿಂದೆಯೇ 'ವಿವೇಕ ಚಿಂತಾಮಣಿ'ಯನ್ನು ಪರಿಶೋಧಿಸಿ ಪ್ರಕಟಿಸಿದರು. ಆಮೇಲೆ ಇದರಲ್ಲಿದ್ದ ಹಲವು ಪ್ರಕ್ಷಿಪ್ತ ಭಾಗಗಳನ್ನು ತೆಗೆದು ಶುದ್ಧೀಕರಿಸಿ ಅದರ ಅಧಿಕೃತ ಪರಿಷ್ಕರಣವನ್ನು (೧೯೬೮) ರಲ್ಲಿ ಹೊರತಂದ ಕೀರ್ತಿ ಪ್ರೊ. ಜಿ.ಎಂ. ಉಮಾಪತಿ ಶಾಸ್ತ್ರಿ, ಎಂ.ಎ. ಅವರಿಗೆ ಸಲ್ಲುತ್ತದೆ." - ನಿಜಗುಣ ಶಿವಯೋಗಿಯ ತತ್ತ್ವದರ್ಶನ ಡಾ. ಎಲ್. ಬಸವರಾಜು, (ಪೀಠಿಕೆ. ಪು. IX).

ಕೀರ್ತಿ ತಂದ, ಉತ್ತರಾದಿ ಪದ್ಧತಿಯ ವರ ಕಲಾವಿದರು.ಬೆಂಗಳೂರಿನ ಶ್ರೀ ಆರ್.ವಿ. ಶೇಷಾದ್ರಿ ಗವಾಯಿಗಳು.* ಅವರ ಇನ್ನೊಬ್ಬ ಹೆಸರಾಂತ ಕಾರ್ಯ ನಿರತ ಸಂಗೀತಾಚಾರ್ಯರು. ಅವರ ಶ್ರೀ ಪಂಚಾಕ್ಷರಿ ಕೃಪಾಪೋಷಿತ 'ಅರವಿಂದ ಸಂಗೀತ ವಿದ್ಯಾಲಯ' ಗುರುಗಳ ಆದರ್ಶದಲ್ಲಿ ಮುನ್ನಡೆದಿದೆ. ಶ್ರೀ ಅರ್ಜುನ ಸಾ ನಾಕೋಡ್, ಶ್ರೀ ಸಿದ್ದರಾಮ ಜಂಬಲದಿನ್ನಿ, ಪ್ರೊ. ಪಂಚಾಕ್ಷರಿ ಮತ್ತಿಗಟ್ಟಿ ಮುಂತಾದ ಕಲಾವಂತರು ಗವಾಯಿಗಳವರ ಶಿಷ್ಯಕೋಟಿಯಲ್ಲಿ ಪರಿಗಣಿತರು. ಪ್ರಸಿದ್ಧ ಸಿನಿಮಾ ಹಾಸ್ಯಗಾರ ಶ್ರೀ ಹನುಮಂತಾಚಾರ್ ಅವರು ಪ್ರಸಿದ್ಧ ವಾದ್ಯಗಾರರೂ ಆಗಿದ್ದರು. ಶ್ರೀ ಗವಾಯಿಗಳಿಂದ ಶಿಕ್ಷಿತರಾದ ನೂರಾರು ಶಿವಕೀರ್ತನಕಾರರು ವೀರಶೈವ ಧರ್ಮ - ಸಾಹಿತ್ಯ - ಸಂಸ್ಕೃತಿಗಳ ಪ್ರಚಾರ ಮಾಡುತ್ತಿರುವರು.

ಶಿವಯೋಗ ಮಂದಿರ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ಮಠಾಧಿಪತಿಗಳಾದ ಗುರು ವಿರಕ್ತ ಸ್ವಾಮಿಗಳು ವಿವಿಧ ಮುಖವಾಗಿ ಸಾಮಾಜಿಕ ಸೇವೆ ಮಾಡಿ ಹಾನಗಲ್ಲ ಗುರುವರ್ಯರ ಆದರ್ಶಗಳನ್ನು ಕಾರ್ಯರೂಪಕ್ಕೆ ತಂದವರಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಲಿಂ. ಶ್ರೀ ಜಿ. ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಪ್ರಮುಖರು. ಅವರು ವಾಣಿಜ್ಯ ನಗರವಾದ ಹುಬ್ಬಳ್ಳಿಯಲ್ಲಿ ಶ್ರೀ ಕಾಡಸಿದ್ದೇಶ್ವರ ಮಹಾವಿದ್ಯಾಲಯ ರೂಪಿಸಿ ಉಚ್ಚ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು. ಶ್ರೀ ಮಠದಲ್ಲಿ ದಾನವೀರ ಸಿರಸಂಗಿ ದೇಸಾಯಿ ಲಿಂಗರಾಜರ ಸ್ಮಾರಕವಾಗಿ ಉಚಿತ ಪ್ರಸಾದ ನಿಲಯ ಸ್ಥಾಪಿಸಿ ಅಲ್ಲಿ ಎಲ್ಲ ಮತೀಯ ಜಾತೀಯ ಮಕ್ಕಳು ಸಹ ಪಂಕ್ತಿಯಲ್ಲಿ ಕುಳಿತು ಪ್ರಸಾದ ಪಡೆಯುವ ಹೊಸ ಪರಂಪರೆಗೆ ಪ್ರೋತ್ಸಾಹ ನೀಡಿದರು. ಗಾಂಧೀಜಿಯವರ ಆದರ್ಶಗಳಿಂದ ಪ್ರಭಾವಿತರಾಗಿ ಖಾದಿವಸ್ತ್ರ ಧರಿಸಿದರು. ಅಸ್ಪೃಶ್ಯತೆಯ ನಿವಾರಣೆಗೆ ಸಕ್ರಿಯವಾಗಿರುವಂತೆ ಭಕ್ತರಿಗೆ ಪ್ರಚೋದನೆ ನೀಡಿದರು. ಪೂಜ್ಯ ಗುರುಗಳ ಈ ಯೋಜನೆಗಳನ್ನು ಅವರ ಉತ್ತರಾಧಿಕಾರಿಗಳಾದ ಶ್ರೀ ಜಿ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ನಾಲ್ಕಡಿಯಾಗಿ ಕಾರ್ಯಗತಗೊಳಿಸುತ್ತಿರುವರು. ಅವರ ಮಾರ್ಗದರ್ಶನದಲ್ಲಿ ಶ್ರೀ ಮೂರು ಸಾವಿರ ಮಠದ 'ಶಿವಯೋಗಿ ಸಂಘ' ಶಾಖಾ ಶಿವಯೋಗ ಮಂದಿರದ ಮಾದರಿಯಲ್ಲಿ ವಟುಗಳಿಗೆ ಸಾಧಕರಿಗೆ ಕನ್ನಡ - ಸಂಸ್ಕೃತಾಂಗ್ಲ ಭಾಷೆಗಳಲ್ಲಿ ಉಚ್ಚ ಶಿಕ್ಷಣದೊಂದಿಗೆ ಸಮಾಜ ಸೇವೆಯ ದೀಕ್ಷೆ ನೀಡುತ್ತಿರುವುದು ಆದರ್ಶನೀಯ.

ಶ್ರೀಮಠದ ವತಿಯಿಂದ ನಡೆಯುತ್ತಿರುವ ಘಟಪ್ರಭೆಯ ಆರೋಗ್ಯಧಾಮ ಜನ ಮಾನ್ಯ ಸೇವಾ ಕೇಂದ್ರವೆನಿಸಿದೆ. 'ಶ್ರೀ. ಜ. ಗಂಗಾಧರ ಧರ್ಮ ಪ್ರಸಾರಕ ಮಂಡಳಿ'ಯ ವತಿಯಿಂದ ವೀರಶೈವ ವಾಙ್ಮಯದ ಅಧ್ಯಯನದೊಂದಿಗೆ ಗ್ರಂಥ ಪ್ರಕಾಶನದ ಕಾರ್ಯವು ಆದರ್ಶವಾಗಿ ನಡೆಯುತ್ತಿದೆ. ಪೂಜ್ಯರು ಶಿಷ್ಯರೊಂದಿಗೆ ವಿದೇಶಗಳಲ್ಲಿಯ ಧರ್ಮ - ವಿಶ್ವಶಾಂತಿ ಸಮ್ಮೇಳನಗಳಲ್ಲಿ ಭಾಗವಹಿಸಿ ಹಾನಗಲ್ಲ ಶ್ರೀಗಳವರ ಉದ್ದೇಶವನ್ನು ಕಾರ್ಯರೂಪಕ್ಕೆ ತಂದ ಮಠಾಧೀಶರಲ್ಲಿ ಅಗ್ರಮಾನ್ಯರೆನಿಸಿರುವರು.

ಕನ್ನಡ ನಾಡಿನ ಗಡಿ ಪ್ರದೇಶವಾದ ಬೆಳಗಾಂವಿ ಜಿಲ್ಲೆಯಲ್ಲಿ ಕನ್ನಡ ಸಂಸ್ಕೃತಿಯ ಉಳಿವಿಗಾಗಿ ಹೋರಾಡಿದ ರುದ್ರಾಕ್ಷಿ ಮಠದ ಲಿಂ. ಶ್ರೀ. ನಿ.ಪ್ರ. ಶಿವಬಸವ ಸ್ವಾಮಿಗಳು ಹಾನಗಲ್ಲ ಶ್ರೀಗಳವರ ನಿಷ್ಠಾವಂತ ಶಿಷ್ಯರು. ಅವರು ಬೆಳಗಾಂವಿಯಲ್ಲಿ ಉಚಿತ ಪ್ರಸಾದ ನಿಲಯ, ವಸತಿ ಪ್ರೌಢಶಾಲೆ ಹಾಗೂ ವೀರಶೈವ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದರು. ಅವರ ಧ್ಯೇಯ - ಧೋರಣೆಗಳನ್ನು ಮುನ್ನಡೆಸಿಕೊಂಡು ಬಂದಿರುವ ಶ್ರೀ ಸಿದ್ಧರಾಮ ಸ್ವಾಮಿಗಳು ಲೋಕಮಾನ್ಯರಾಗಿರುವರು.

ಹಾನಗಲ್ಲ ಶ್ರೀಗಳವರ ನಿಕಟ ಸಂಪರ್ಕದಲ್ಲಿದ್ದು ಅವರ ಸೇವೆ ಮಾಡಿ ಶಿವಾನುಭವ ಸಂಪತ್ತು ಪಡೆದ ಭಾಗ್ಯಶಾಲಿ ಹಿರಿಯ ಶಿಷ್ಯರು ಭಾಲ್ಕಿಯ ಹಿರಿಯ ಮಠದ ಶ್ರೀ ಚನ್ನಬಸವ ಪಟ್ಟದ ಸ್ವಾಮಿಗಳು. ಅವರು 'ಕನ್ನಡ ಶಾಂತಿವರ್ಧಕ ಶಿಕ್ಷಣ ಸಂಸ್ಥೆ'ಯನ್ನು ಸ್ಥಾಪಿಸಿ ಅದರ ಮೂಲಕ ಬೀದರ ಜಿಲ್ಲೆಯಲ್ಲಿ ಬಸವಣ್ಣನವರ ಕಲ್ಯಾಣ ಕ್ರಾಂತಿ ಮತ್ತೆ ಮೈದಾಳುವಂತೆ ಕ್ರಿಯಾಶೀಲರಾಗಿ ಹೈದರಾಬಾದದ ಗಡಿನಾಡಿನಲ್ಲಿ ಕನ್ನಡ ನುಡಿಯ ಗೌರವ ಹೆಚ್ಚಿಸಿದ ಮಹನೀಯರು. ಡಾ|| ಜ.ಚ.ನಿ. ಅವರು ಶಿವಕವಿಗಳೆನಿಸಿ ನೂರಕ್ಕೂ ಹೆಚ್ಚು ಸಾಹಿತ್ಯಿಕ, ಧಾರ್ಮಿಕ ಕೃತಿಗಳನ್ನು ಬರೆದು ಕೋಲಾರದ ಗಡಿನಾಡಿನಲ್ಲಿ ಕನ್ನಡದ ನೆಲೆ ಉಳಿಸಿದ ಪರಮಾಚಾರ್ಯರು.

ಶಿವಯೋಗ ಮಂದಿರದಲ್ಲಿ ಧಾರ್ಮಿಕ ಸಂಸ್ಕಾರ ಹೊಂದಿ, ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಆಧುನಿಕ ಪ್ರೌಢಶಿಕ್ಷಣ ಪಡೆದು, ವಿಶಾಲಮತಿಗಳಾದ ಮಠಾಧಿಪತಿಗಳ ತರುಣ ಪೀಳಿಗೆಯೊಂದು ಸಮಾಜ ಸೇವೆಗೆ ಕಟಿಬದ್ಧವಾಯಿತು. ಅದರಿಂದಾಗಿ ವಿಧಾಯಕ ಕಾರ್ಯಗಳು ನಡೆದು ಸಮಾಜದಲ್ಲಿ ಹೊಸ ಚೈತನ್ಯ ತುಂಬಿ ಬರುವಂತಾಯಿತು.

ಈ ದಿಶೆಯಲ್ಲಿ ವಿಜಾಪುರ ಜಿಲ್ಲೆಯ ಇಲಕಲ್ಲಿನ ಚಿತ್ತರಗಿ ವಿಜಯ ಮಹಾಂತೇಶ್ವರ ಮಠದ ಶ್ರೀ ಮಹಾಂತ ಸ್ವಾಮಿಗಳು ಶಿಕ್ಷಣ ಪ್ರಚಾರದೊಂದಿಗೆ 'ಮಹಾಂತ ಜೋಳಿಗೆ'ಯ ಮೂಲಕ ಜನರು ದುಶ್ಚಟಗಳನ್ನು ಬಿಟ್ಟು ಸದ್ಗುಣಶೀಲರಾಗುವಂತೆ ಮಾಡುತ್ತಿರುವ ನೈತಿಕ ಕ್ರಾಂತಿ ಆದರ್ಶಮಯ.

* ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷರು.

ಬೆಳಗಾವಿ ಜಿಲ್ಲೆಯ ನಿಡಸೋಸಿಯ ದಾಸೋಹಮಠದ ಶ್ರೀ ಜ. ಪಂಚಮ ಶಿವಲಿಂಗೇಶ್ವರ ಸ್ವಾಮಿಗಳು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ರೂಪಿಸಿ, ವಿವಿಧ ಚಟುವಟಿಕೆಗಳಿಂದ ವೀರಶೈವ ಸಂಸ್ಕೃತಿಯನ್ನು ಉಜ್ವಲಗೊಳಿಸುತ್ತಿರುವ ಪ್ರಗತಿಶೀಲ ವಿಚಾರವಂತ ಮಹಂತರು.

ಗದಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಜ. ತೋಂಟದ ಸಿದ್ಧಲಿಂಗ ಸ್ವಾಮಿಗಳು ಕೃಷಿ ಕಾಯಕದಲ್ಲಿದ್ದು, ವಾಗ್ಮಿಗಳಾಗಿ, ವೀರಶೈವ ಅಧ್ಯಯನ ಸಂಸ್ಥೆಯನ್ನು ಡಾ. ಎಂ.ಎಂ. ಕಲಬುರ್ಗಿ ಅವರ ನಿರ್ದೇಶನದಲ್ಲಿ ಪ್ರಸ್ಥಾಪಿಸಿರುವುದು ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಗೆ ಚಾಲನೆ ನೀಡಿ ಅಪ್ರಕಟಿತ ಗ್ರಂಥಗಳನ್ನು ಬೆಳಕಿಗೆ ತರುತ್ತಿರುವ ಮಹತ್ಕಾರ್ಯ ಅಭೂತಪೂರ್ವ. ಈ ಗ್ರಂಥಮಾಲೆಯಲ್ಲಿ ವೀರಶೈವ ಪುಣ್ಯಪುರುಷರ ಚರಿತ್ರೆಯ ಹೊತ್ತಿಗೆಗಳು ಜನಪ್ರಿಯ ಕೈಪಿಡಿಗಳಾಗಿವೆ.

ಮುಂಡರಗಿಯ ಅನ್ನದಾನೀಶ್ವರ ಮಠದ ಶ್ರೀ ಜ. ಅನ್ನದಾನಿ ಸ್ವಾಮಿಗಳು ಕಾಶಿಯಲ್ಲಿದ್ದು ಸಂಸ್ಕೃತದ ಪ್ರೌಢ ವ್ಯಾಸಂಗ ಮಾಡಿದವರು. ಅವರು ವೀರಶೈವ ಆಗಮಗಳ ಹಾಗೂ ಶಿವಶರಣರ ವಚನಗಳ ತುಲನಾತ್ಮಕ ಅಧ್ಯಯನ ಮಾಡಿ ಸರ್ವಸಮ್ಮತ ತತ್ತ್ವಗಳ ಪ್ರತಿಪಾದನೆಯೊಂದಿಗೆ ಗ್ರಂಥಗಳನ್ನು ಪ್ರಕಟಿಸುತ್ತಿರುವ ಸಮನ್ವಯವಾದಿ ವಿದ್ವಾಂಸರು. ಅವರು ಈಗ ಶಿವಯೋಗ ಮಂದಿರ ಸಂಸ್ಥೆಯ ಅಧ್ಯಕ್ಷರು.

ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಕಾಲದ ಹಂಪೆಯ ಕಲ್ಲುಮಠದ ಪ್ರಭುದೇವರ ಪರಂಪರೆಯಲ್ಲಿ ಅನೇಕ ವಿರಕ್ತ ಮಠಗಳು ಪ್ರವರ್ಧಮಾನವಾಗಿದ್ದವು. ಅವುಗಳಲ್ಲಿ ಹೊಸಪೇಟೆಯ ಕೊಟ್ಟೂರು ಸ್ವಾಮಿ ಮಠ ಐತಿಹಾಸಿಕ ಪೀಠ. ಅದರ ಅಧಿಪತಿಗಳಾದ ಶ್ರೀ ಜ. ಸಂಗನಬಸವ ಸ್ವಾಮಿಗಳು ಹರಿಹರ ಮಹಾಕವಿಯ ಪ್ರಶಸ್ತಿ ಸಂಪುಟವನ್ನು ಪ್ರಕಟಿಸಿದರು. ವೀರಶೈವ ಸಾಹಿತ್ಯ - ಸಂಸ್ಕೃತಿಯ ಪ್ರಸಾರಕ್ಕೆ 'ಹೇಮಕೂಟ' ಮಾಸಪತ್ರಿಕೆಯ ಮೂಲಕ ಹೊಸ ರೀತಿಯಲ್ಲಿ ಮಾಡಿದವರು ' ಬಸವ ಪುರಾಣ'ದ ಪ್ರವಚನಗಳ ಬಗೆಯಲ್ಲಿ ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹ ನಡೆಸಿದ ಕಾರ್ಯದಕ್ಷರು.

ಶಿವಮೊಗ್ಗ ಜಿಲ್ಲೆಯ ಆನಂದಪುರಂ ಮುರುಘಾಮಠ, ಕೆಳದಿ ಸೋದೆರಾಜರ ಗುರುಗಳಾಗಿದ ಪ್ರತಿಭಾನ್ವಿತ ಉಭಯ ಭಾಷಾಕವಿ ಶ್ರೀ ಮುರಿಗಾ ಇಮ್ಮಡಿ ಗುರುಸಿದ್ಧ ದೇಶಿಕೇಂದ್ರರ ತಪೋಭೂಮಿ. ಅದರ ಅಧಿಪತಿಗಳಾಗಿರುವ ಶ್ರೀ ಜ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು 'ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ'ಯ ಮೂಲಕ ಕರ್ತೃ ಗುರುಸಿದ್ಧ ದೇಶಿಕೇಂದ್ರರ ಕೃತಿಗಳನ್ನು ಸಂಶೋಧನೆಯೊಂದಿಗೆ ಪ್ರಕಟಿಸಿ, ಕೆಳದಿ ರಾಜಮನೆತನದ ಇತಿಹಾಸವನ್ನು ಒಳಗೊಂಡ ಅಧ್ಯಯನ ಪೂರ್ಣ ಸಂಪುಟವೊಂದನ್ನು ತಂದಿರುವರು. ಇವರು ಹಿಂದುಳಿದ ಮಲೆನಾಡಿನ ಗ್ರಾಮಗಳಲ್ಲಿ ವಸತಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದ ಶಿಕ್ಷಣ ಪ್ರೇಮಿಗಳು. ವಿದೇಶ ಪ್ರವಾಸ ಮಾಡಿ ವೀರಶೈವ ಸಂಸ್ಕೃತಿಯ ಬಗ್ಗೆ ಉಪನ್ಯಾಸ ನೀಡಿದ ಪ್ರಜ್ಞಾವಂತ ವಾಕ್‌ಪಟುಗಳು.

ಶಿವಯೋಗ ಮಂದಿರ ಮತ್ತು ಕಾಶಿಯಲ್ಲಿ ವ್ಯಾಸಂಗ ಮಾಡಿ ಸಂಸ್ಕೃತ ವಿದ್ವತ್ತು ಸಂಪಾದಿಸಿದ ಜಮಖಂಡಿಯ ಓಲೆಮಠದ ಶ್ರೀ ಚನ್ನಬಸವ ದೇವರು (ಈಗ ಶ್ರೀ ಅಭಿನವ ಕುಮಾರ ಸ್ವಾಮಿಗಳು) ಪಂ. ನಾಗಭೂಷಣ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ "ಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರ"ದ ಅಧ್ಯಯನ ಪೂರ್ಣ ಮಹಾಪ್ರಬಂಧಕ್ಕೆ ಹಂಪೆಯ ಕನ್ನಡ ವಿಶ್ವವಿದ್ಯಾಲಯ ಪಿ.ಎಚ್.ಡಿ. ಪದವಿ ನೀಡಿದೆ.

ಪ್ರತಿವರ್ಷ ಶಿವರಾತ್ರಿಯ ಯಾತ್ರೋತ್ಸವದಲ್ಲಿ ಮಹಿಳಾ ಸಮ್ಮೇಳನ ನಡೆಸಿ ಮಹಿಳೆಯರ ಏಳ್ಗೆಗಾಗಿ ವಿಚಾರ ಗೋಷ್ಠಿಗಳನ್ನು ಶ್ರೀಗಳವರು ಸಂಯೋಜಿಸಿದ್ದರು.

ಹೀಗೆ ಶಿವಯೋಗ ಮಂದಿರ ಸಂಸ್ಥೆಯಿಂದ ಕನ್ನಡ ನಾಡ ಪುರುಷನಿಗೆ ಸಂದಿರುವ ವಿವಿಧ ಮುಖವಾದ ಕೊಡುಗೆ ಅನ್ಯಾದೃಶ. ಆದರೂ ಸಂಸ್ಥಾಪಕ ಶ್ರೀಗಳವರು ನಿರೀಕ್ಷಿಸಿದ ಮಟ್ಟದಲ್ಲಿ ಮಂದಿರ ಪ್ರಗತಿ ಸಾಧಿಸದಿರುವುದು ಶೋಚನೀಯ. ಅದಕ್ಕೆ ಕಾರಣ ಈ ಸಂಸ್ಥೆಯಿಂದ ಉಪಕೃತರಾದವರು ಒಮ್ಮನದಿಂದ ನಿಸ್ಪೃಹರಾಗಿ ಕೂಡಿ ಮಾತ್ರ ಮಂದಿರದ ಏಳ್ಗೆಗೆ ಕಾರ್ಯ ಮಾಡದಿರುವುದು.

"ಆರ್ಯ ಸಂಸ್ಕೃತಿಗೂ ಕರ್ನಾಟಕಕ್ಕೂ ಲಿಂಗಾಯತ ಧರ್ಮಕ್ಕೂ ಈ ಸಂಸ್ಥೆಯು ಅಮೂಲ್ಯ ಸಹಾಯವನ್ನು ಮಾಡೀತು. ಕರ್ನಾಟಕಕ್ಕೆ ಈಗ ಇದರ ಬೆಲೆ ತಿಳಿಯ ಬರದಿದ್ದರೂ ಕೆಲ ಕಾಲದ ಮೇಲೆಯೂ ಭವಿಷ್ಯತ್ಕಾಲದಲ್ಲಿ ಇದರ ಅಪೂರ್ವ ಸೇವೆಯನ್ನು ನೆನಸಿ ನೆನಸಿ ಹಾಡಿ ಹರಸೀತು" ಎಂದು ೭೬ ವರ್ಷಗಳ ಹಿಂದೆ ಉದ್ಗರಿಸಿದ ವರಕವಿ ಬೇಂದ್ರೆಯವರ ಹಾರೈಕೆಯ ಮಾತು ಪೂರ್ಣವಾಗುವ ಕಾಲ ಅದೆಂದು ಬಂದೀತೋ !

ಚಿತ್ರದುರ್ಗದ ಶ್ರೀ ಬೃಹನ್ಮಠದ ಸಾಂಸ್ಕೃತಿಕ ಕೊಡುಗೆ

ಟಿ.ಆರ್. ಮಹಾದೇವಯ್ಯ

ಕನ್ನಡನಾಡಿನ ಚರಿತ್ರೆಯಲ್ಲಿ ಚಿತ್ರದುರ್ಗವು ಪ್ರಮುಖವಾಗಿ ಎರಡು ಸಂಗತಿಗಳಿಂದ ಪ್ರಖ್ಯಾತವಾಗಿದೆ. ಒಂದು ಕ್ಷಾತ್ರತೇಜ, ಇನ್ನೊಂದು ಧಾರ್ಮಿಕ ತೇಜ. ಅಲ್ಲಿರುವ ಏಳುಸುತ್ತಿನ ಕೋಟೆ, ಐತಿಹಾಸಿಕ ಪಳೆಯುಳಿಕೆಗಳು, ಚಾರಿತ್ರಿಕ ಉಲ್ಲೇಖಗಳು, ಮದಕರಿ ನಾಯಕ, ಒನಕೆ ಓಬವ್ವ ಮೊದಲಾದ ವೀರಪುರುಷ, ವೀರಸ್ತ್ರೀಯರ ನೆನಪುಗಳು ಅಲ್ಲಿಯ ಕ್ಷಾತ್ರತೇಜವನ್ನು ಸ್ಫುಟಗೊಳಿಸುತ್ತವೆ. ಇಲ್ಲಿಯ ಬೃಹನ್ಮಠವು ಶೂನ್ಯಪೀಠದ ನೆಲೆಯಾಗಿ, ಶಿವಯೋಗ ಸಂಪನ್ನರಾದ ಅನೇಕ ಜಗದ್ಗುರುಗಳ ಪಾವನ ತಪೋಭೂಮಿಯಾಗಿ ನಾಡಿಗೆ ನೀಡಿದ ಧಾರ್ಮಿಕ ತೇಜಸ್ಸು ಅನನ್ಯವಾದುದು. ಈ ಮಠದ ಗುರುಪರಂಪರೆ ಬಹಳ ದೊಡ್ಡದು. ಅವರೆಲ್ಲರೂ ಪರಮ ವೈರಾಗ್ಯಶೀಲರೂ, ಅನುಪಮಜ್ಞಾನಿಗಳೂ, ಸಾಮಾಜಿಕ ಕಳಕಳಿಯುಳ್ಳ ದಯಾಳುಗಳೂ ಆಗಿದ್ದವರು. ಅವರು ಸಮಾಜಕ್ಕೆ, ನಾಡಿಗೆ ನೀಡಿದ ಕಾಣಿಕೆ ಅಪೂರ್ವವಾದುದು. ಈ ಕಾರಣದಿಂದಲೇ ಕರ್ನಾಟಕದ ಮಠಗಳಲ್ಲಿ ಚಿತ್ರದುರ್ಗದ ಬೃಹನ್ಮಠವು ಹೆಸರಿಗೆ ತಕ್ಕಂತೆ ಬೃಹತ್ ಮತ್ತು ಮಹತ್ ಸಾಧನೆಗಳಿಂದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಇದರಿಂದಲೇ ಇದರ ಪ್ರಭಾವ ನಾಡಿನ ಉದ್ದಗಲಕ್ಕೂ, ನಾಡಿನ ಹೊರಗೂ ಹರಡಿತು. ಮುರುಘ ಎಂಬ ಹೆಸರು ಒಂದು ಮಂತ್ರವಾಗಿ ಜನಮನವನ್ನು ಆಳಿದೆ. ಪರಿಣಾಮವಾಗಿ ನಾಡಿನ ಮೂಲೆಮೂಲೆಗಳಲ್ಲೂ ಮುರುಘಾಮಠದ ಶಾಖೋಪಶಾಖೆಗಳು ಸ್ಥಾಪನೆಗೊಂಡವು. ಅವು ತಮ್ಮ ತಮ್ಮ ಪ್ರದೇಶದಲ್ಲಿಯ ಜನರ ಆರೋಗ್ಯಕರ ಬದುಕಿಗೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೇರಣೆ ಮತ್ತು ಸೂಕ್ತ ಮಾರ್ಗದರ್ಶನ ನೀಡಿದವು. ಇವು ನಾಡವರಿಗೆ ಮಾಡಿದ ಮಹದುಪಕಾರವನ್ನು ಮರೆಯುವಂತಿಲ್ಲ.

ಉಲ್ಲೇಖಿಸಬೇಕಾದ ಮಾತೆಂದರೆ, ಈ ಮಠಗಳು ಜನರ ಬದುಕಿನೊಂದಿಗೆ ಸ್ಪಂದಿಸುತ್ತಾ ಬಂದಿವೆ. ಅವರ ಐಹಿಕ ಜೀವನದ ಬಗೆಗೆ ಆಸಕ್ತಿ ವಹಿಸಿದಂತೆ ಲೌಕಿಕ ಹಿತಾಸಕ್ತಿಗಳ ವಿಚಾರದಲ್ಲೂ ಕಾಳಜಿಹೊಂದಿದವು. ಜನರಿಗೆ ಆರ್ಥಿಕ ಮುಗ್ಗಟ್ಟು ಬಂದಾಗ ಧನಸಹಾಯ ಮಾಡುವುದು, ಬರಗಾಲದಲ್ಲಿ ಮಠದ ಕಣಜ ತೆರೆದು ದವಸ ಹಂಚುವುದು, ಗಂಜಿಕೇಂದ್ರಗಳನ್ನು ನಡೆಸುವುದು ಮೊದಲಾದ ಮಾನವೀಯ ಸೇವೆ ಮಾಡಿವೆ. ಸಾಂಸ್ಕೃತಿಕ ವೇದಿಕೆಗಳನ್ನು ಸ್ಥಾಪಿಸಿ ವಿದ್ವಾಂಸರಿಗೆ, ವಿವಿಧ ಕಲಾವಿದರಿಗೆ ಅವಕಾಶ ನೀಡಿ ಪ್ರೋತ್ಸಾಹಿಸಿವೆ. ಆ ಮೂಲಕ ಗ್ರಾಮೀಣ ಜನರ ಬದುಕಿನಲ್ಲಿ ನವೋದಯಕ್ಕೆ ಕಾರಣವಾಗಿವೆ. ವಿದ್ಯಾರ್ಥಿ ನಿಲಯಗಳನ್ನು ತೆರೆದು ಬಡಮಕ್ಕಳಿಗೆ ಉಚಿತ ಊಟ, ವಸತಿ ಒದಗಿಸಿ ಅವರ ಕತ್ತಲ ಬದುಕಿನಲ್ಲಿ ಆಶಾಜ್ಯೋತಿ ಹಚ್ಚಿಟ್ಟಿವೆ. ಇಂಥ ವಿದ್ಯಾರ್ಥಿನಿಲಯಗಳಲ್ಲಿದ್ದುಕೊಂಡು ಓದಿದವರು ನಾಡಿನ ಉದ್ದಗಲಕ್ಕೂ ಗೌರವಯುತ ಹುದ್ದೆಯಲ್ಲಿದ್ದು ಬಾಳಿಗೆ ಕಣ್ಣುಕೊಟ್ಟ ಶ್ರೀಮಠವನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಆ ಮಠಗಳಲ್ಲಿಯ ಸ್ವಾಮಿಗಳು ನಿಸ್ವಾರ್ಥ ಬುದ್ಧಿ, ಪರೋಪಕಾರ ಗುಣ, ಸಕಲರಿಗೆ ಹಿತ ಬಯಸುವ ಉದಾರ ಚರಿತಗಳಿಂದ ಜನಸಾಮಾನ್ಯರ ಪ್ರತ್ಯಕ್ಷ ದೈವವೆನಿಸಿದ್ದಾರೆ. ಇನ್ನೊಂದು ಮಹತ್ವದ ವಿಷಯವೆಂದರೆ, ಜನರು ಜಾತಿ ಮತ ಭೇದಗಳನ್ನು ಮರೆತು ಮುರುಘಾಮಠ ತಮ್ಮದೆಂಬ ಭಾವನೆಯಿಂದ ಮೊದಲಿಂದಲೂ ನಡೆದುಕೊಂಡು ಬಂದಿದ್ದಾರೆ. ಸಾಮಾನ್ಯನಿಗೆ ಮತ ಧರ್ಮಕ್ಕಿಂತ ಮಿಗಿಲಾಗಿ ಬೇಕಿರುವುದು ಮಾನಸಿಕ ನೆಮ್ಮದಿ, ಮನಶ್ಶಾಂತಿ ನೀಡುವ ಸ್ವಾಮಿಗಳು, ತಮ್ಮ ಭಕ್ತಿಕಾಣಿಕೆ ಒಪ್ಪಿಸಲು ಒಂದು ಮಠ, ಅಷ್ಟೆ. ನಾಡಿನಾದ್ಯಂತ ಪಸರಿಸಿರುವ ಶ್ರೀಮಠದ ಶಾಖೆಗಳು ಸಾಮಾನ್ಯ ಜನರ ಪಾಲಿಗೆ ಬೇಸತ್ತ ಬದುಕಿಗೆ ಶಾಂತಿ ಸುಧೆಯುಣಿಸುವ ಪವಿತ್ರ ತಾಣಗಳಾದುವು. ಕನ್ನಡ ನಾಡಿನ ಒಳಗೆ ಮತ್ತು ಹೊರನಾಡುಗಳಲ್ಲಿ ಇರುವ ಅಂಥ ಶಾಖಾಮಠಗಳ ಪಟ್ಟಿ ದೊಡ್ಡದಿದೆ. ಸಂಗ್ರಹವಾಗಿ ಹೇಳುವುದಾದರೆ ಧಾರವಾಡ ಜಿಲ್ಲೆ - ೩೨, ಬೆಳಗಾವಿ ಜಿಲ್ಲೆ - ೭, ಬಿಜಾಪುರ ಜಿಲ್ಲೆ - ೬, ರಾಯಚೂರು ಜಿಲ್ಲೆ - ೧, ಗುಲ್ಬರ್ಗ ಜಿಲ್ಲೆ - ೧, ಉತ್ತರ ಕನ್ನಡ ಜಿಲ್ಲೆ ೪, ಕೊಡಗು - ೫, ಶಿವಮೊಗ್ಗ ಜಿಲ್ಲೆ - ೩, ಚಿಕ್ಕಮಗಳೂರು - ೧, ಹಾಸನ ಜಿಲ್ಲೆ - ೫, ಮೈಸೂರು ಜಿಲ್ಲೆ - ೫, ತುಮಕೂರು ಜಿಲ್ಲೆ - ೬, ಬೆಂಗಳೂರು ಜಿಲ್ಲೆ-೬, ಹೊರನಾಡಿನ ಮಹಾರಾಷ್ಟ್ರದ ಕೊಲ್ಲಾಪುರ, ಮಿರ್ಜಿ, ಸೊಲ್ಲಾಪುರ, ತಮಿಳುನಾಡಿನ ಕುಂಭಕೋಣಂ, ಪುಂಗನೂರು, ಕಣ್ಣಾನೂರು, ಆಂಧ್ರಪ್ರದೇಶದ ಕಾಲ್ವೆಗಳಲ್ಲಿ ಶಾಖಾ ಮಠಗಳಿವೆ.

ಮೂಲ ಬೃಹನ್ಮಠ

ಬೆಟ್ಟದ ಮೇಲಣ ಕೋಟೆಯೊಳಗೆ ಸಂಪಿಗೆ ಸಿದ್ದೇಶ್ವರನ ಗುಡಿಯ ಮಗ್ಗುಲಿಗೆ ಮೂಲ ಮಠವಿದೆ. ಅದೊಂದು ವಿಶಾಲವಾದ

೩೬೦ ಅಂಕಣಗಳ ಕಟ್ಟಡ. ಕೋಟೆಯೊಳಗೆ ಸದಾ ಯುದ್ಧದ ಚಟುವಟಿಕೆ, ಕಲುಷಿತ ವಾತಾವರಣದಿಂದ ಮಠವು ದೂರವಿರಬೇಕೆಂಬ ಭಾವನೆಯಿಂದ ಊರಿನ ಹೊರವಲಯದ ಪ್ರಶಾಂತ ಸ್ಥಳವನ್ನು ಈಗಿನ ಬೃಹನ್ಮಠಕ್ಕಾಗಿ ಆಯ್ಕೆ ಮಾಡಿರಬೇಕು. ಚಿತ್ರದುರ್ಗ - ದಾವಣಗೆರೆ ರಸ್ತೆಯಲ್ಲಿ ನಗರದಿಂದ ೫ ಕಿಲೋಮೀಟರ್ ದೂರದಲ್ಲಿ ಅದು ಇದೆ. ಮಠದ ಮಹಾದ್ವಾರದ ಗೋಪುರ ಬಹುದೂರಕ್ಕೆ ಕಾಣಿಸುತ್ತದೆ. ಒಳಗೆ ಪ್ರವೇಶಿಸಿದರೆ ವಿಸ್ತಾರವಾಗಿ ಹಚ್ಚ ಹಸುರಿನ ಬಯಲು, ಗಿಡಮರ ಬಳ್ಳಿಗಳು ಸ್ವಾಗತಿಸುತ್ತವೆ. ಮಠಕ್ಕೆ ರಾಜಾಶ್ರಯವಿದ್ದುದರಿಂದ ಸಹಜವಾಗಿಯೆ ವೈಭವದ ಪಳೆಯುಳಿಕೆಗಳು ಕಾಣಿಸುತ್ತವೆ. ಎರಡನೆಯ ಮಹಾದ್ವಾರವನ್ನು ದಾಟಿ ಮುಂದಡಿಯಿಟ್ಟರೆ ವಿಶಾಲವಾದ ಪ್ರಾಂಗಣ. ಇದನ್ನು ಸದರಕಟ್ಟೆ ಎನ್ನುವರು. ಅಲ್ಲಿಂದ ಎಡಕ್ಕೆ ಹೊರಳಿದರೆ ಮಠದ ಹಿರಿಯ ಗುರುಗಳ ಗದ್ದಿಗೆ ಇದೆ. ಎಲ್ಲೆಲ್ಲೂ ನಿರ್ಮಲ ವಾತಾವರಣ, ಪವಿತ್ರ ಗಂಧಗಾಳಿಯ ಸುಳಿವು!

ಆಚರಣೆಗಳು

ಶ್ರೀಮಠದಲ್ಲಿ ವರ್ಷವಿಡೀ ಒಂದಲ್ಲ ಒಂದು ಪೂಜೆ, ಧಾರ್ಮಿಕ ಆಚರಣೆ, ಸಭೆ-ಸಮಾರಂಭಗಳು ನಡೆದೇ ಇರುತ್ತವೆ. ಈ ಧಾಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳು, ಹಬ್ಬಗಳು ಜನರನ್ನು ಮಠದತ್ತ ಸೆಳೆಯುತ್ತವೆ. ಜನರು ತಮ್ಮ ತರತಮಗಳನ್ನು ಮರೆತು ಒಗ್ಗೂಡಿ ಇವುಗಳಲ್ಲಿ ಪಾಲ್ಗೊಳ್ಳುತ್ತಾರೆ. ತನ್ಮಯರಾಗಿ ಕಲೆತು ಮನ ಮಡಿಮಾಡಿಕೊಳ್ಳುತ್ತಾರೆ. ಮಠಗಳ ಉದ್ದೇಶ ಅದೇ ತಾನೆ ! ಶ್ರೀ ಮಠದಲ್ಲಿ ನಡೆಯುವ ಅಂಥ ಆಚರಣೆಗಳ ಒಂದು ಪಕ್ಷಿನೋಟವನ್ನು ಈ ಕೆಳಗಿನಂತೆ ಕಾಣಬಹುದು :-

ಯುಗಾದಿ: ಶ್ರೀ ಮಠದಲ್ಲಿ ಹೊಸವರ್ಷವನ್ನು ಸ್ವಾಗತಿಸುವ ರೀತಿ ಇದು : ಮಠದ ವಿದ್ಯಾರ್ಥಿಗಳಿಗೆ, ಕಾರ್ಯಕರ್ತರಿಗೆ ಎಣ್ಣೆ ಮಜ್ಜನ, ಹೊಸಬಟ್ಟೆಯ ಸಂಭ್ರಮ. ಕರ್ತೃಗದ್ದುಗೆಗೆ ವಿಶೇಷ ಪೂಜೆ. ಮಠಕ್ಕೆ ಆಗಮಿಸಿದ ಭಕ್ತರಿಗೆ ಬೇವು ಬೆಲ್ಲದ ಪ್ರಸಾದ. ಆ ನಂತರ ಮಹಾಪ್ರಸಾದ ವ್ಯವಸ್ಥೆ. ಸಂಜೆ ಚಂದ್ರದರ್ಶನ ಕಾರ್ಯಕ್ರಮ. ಪಂಚಾಂಗ ಶ್ರವಣ : ಹೊಸ ವರ್ಷದ ಆಗು -ಹೋಗುಗಳ ಪರಿಚಯ ಮಾಡಿಕೊಳ್ಳುವುದು. ಪಾನಕ ಫಲಹಾರ ವಿತರಣೆ. ರಾತ್ರಿ ೯ ಗಂಟೆವರೆಗೆ ಹಬ್ಬದ ಸಂಭ್ರಮದ ವಾತಾವರಣವಿರುತ್ತದೆ.

ಬಸವ ಜಯಂತಿ: ಎತ್ತುಗಳ ಮೈತೊಳೆದು ಅಲಂಕರಿಸಿ ಪೂಜಿಸುವುದು. ಸದರಕಟ್ಟೆಯಲ್ಲಿ ಬಸವೇಶ್ವರರ ಭಾವಚಿತ್ರವನ್ನು ಇಟ್ಟು ಅಲಂಕಾರ ಮಾಡಿ ಪೂಜೆ ಮಾಡುವುದು. ನೀಲಕಂಠೇಶ್ವರ ದೇವಸ್ಥಾನದಿಂದ ಬಸವಣ್ಣ ಮತ್ತು ಇತರ ಶರಣರ ಭಾವಚಿತ್ರಗಳ ಉತ್ಸವದ ಏರ್ಪಾಡು. ದಾಸೋಹ. ಸಂಜೆ ಎಸ್.ಜೆ.ಎಂ. ಸಮುದಾಯ ಭವನದಲ್ಲಿ ಸಮಾರಂಭ. ಜಯಂತಿಯ ಅಂಗವಾಗಿ ನಡೆಸಿದ ವಚನ ಸ್ಪರ್ಧೆ ಮತ್ತು ಶರಣರ ವಿವಿಧ ವೇಷ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಉಪನ್ಯಾಸ ಹಾಗೂ ವಚನ ಸಂಗೀತ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ಮಕರ ಸಂಕ್ರಮಣ: ಧನುರ್ಮಾಸ ಪೂರ್ತಿ ಶ್ರೀಮಠದಲ್ಲಿ ಬೆಳಗಿನ ಝಾವದ ವಿಶೇಷ ಪೂಜೆಗಳು ನಡೆಯುತ್ತವೆ. ಸಂಕ್ರಾಂತಿಯ ದಿನವೂ ನಸುಕಿನಲ್ಲೇ ಪೂಜಾದಿ ಆಚರಣೆಗಳು ನಡೆಯುತ್ತವೆ. ಎಳ್ಳು-ಬೆಲ್ಲ ಪ್ರಸಾದ ವಿತರಣೆಯಾಗುತ್ತದೆ. ಮಧ್ಯಾಹ್ನ ಸಜ್ಜೆ ಹಾಗೂ ಜೋಳದ ರೊಟ್ಟಿ ಮತ್ತು ಕಡ್ಲೆಕಾಳು ಉಸಳಿ ವಿಶೇಷ ಪ್ರಸಾದ ವಿನಿಯೋಗ.

ಶಿವರಾತ್ರಿ: ಸಂಜೆ ೬ ಗಂಟೆಯಿಂದ ಕರ್ತೃಗದ್ದುಗೆಗೆ ವಿಶೇಷ ಪೂಜೆ ಆರಂಭ. ರಾತ್ರಿ ೧೦ ಗಂಟೆಯಿಂದ ೧೨ರ ವರೆಗೆ ಜಗದ್ಗುರುಗಳರೊಡನೆ ಸಾಮೂಹಿಕ ಲಿಂಗಪೂಜೆ. ಅದೇ ಹೊತ್ತಿಗೆ ಅಂಕಲಿಮಠ, ಮೈಲಾರಲಿಂಗೇಶ್ವರ ದೇವಸ್ಥಾನ, ಬಸವೇಶ್ವರ ದೇವಸ್ಥಾನ, ಮೈಸೂರು ಮಠ, ಚೌಡಮ್ಮ ದೇವತೆ ಹಾಗೂ ಶ್ರೀ ಮಠದ ಗದ್ದಿಗೆಗಳಿಗೆ ಪೂಜೆ ನಡೆದಿರುತ್ತದೆ. ನಗಾರಿ ವಾದನವಿರುತ್ತದೆ. ಭಕ್ತರಿಗೊಂದು ಅಪೂರ್ವ ಅವಕಾಶ. ರಾತ್ರಿಯೆಲ್ಲಾ ಜಾಗರಣೆ, ಭಜನೆ. ಬೆಳಗಿನ ಝಾವ ೫ ಗಂಟೆಗೆ ಫಲಹಾರ. ಮಾರನೆಯ ದಿನ ಪಾರಣೆ, ಮಹಾ ದಾಸೋಹ.

ಶ್ರಾವಣ ಮಾಸ: ಒಂದು ತಿಂಗಳ ಪರ್ಯಂತ ಕರ್ತೃಗದ್ದುಗೆಗೆ ಅಭಿಷೇಕ, ವಿಶೇಷ ಪೂಜೆ. ಹೊರಗಡೆಯಿಂದ ಭಕ್ತರ ಆಗಮನ. ಪ್ರತಿದಿನವೂ ಪ್ರಸಾದಕ್ಕೆ ಸಿಹಿಯೂಟ. ಬರಲಾಗದವರಿಗೆ ಅಂಚೆಯ ಮೂಲಕ ಪೂಜಾ ಪ್ರಸಾದವನ್ನು ಕಳಿಸುವ ವ್ಯವಸ್ಥೆ. ಪ್ರತಿದಿನ ಸಂಜೆ ಪ್ರವಚನ ಕಾರ್ಯಕ್ರಮ. ಶರಣಚರಿತಾಮೃತ ಸೇವನೆ. ಗಣಪತಿ ಹಬ್ಬದ ದಿನ ಆಯುಧಾಗಾರದಲ್ಲಿ ಗಣೇಶ ಪ್ರತಿಷ್ಠಾಪನೆ. ಇದೊಂದು ಮಕ್ಕಳಿಗಾಗಿ ಮಾಡುವ ವಿಶೇಷ ಕಾರ್ಯಕ್ರಮ. ಕರಿಗಡುಬಿನ ನೈವೇದ್ಯ. ಐದುದಿನಗಳ ಪೂಜಾ ಕೈಂಕರ್ಯದ ನಂತರ ದೊಡ್ಡಬಾವಿಯಲ್ಲಿ ವಿಸರ್ಜನೆ. ಪ್ರಸಾದ ವಿನಿಯೋಗ.

ದಸರಾ: ಶ್ರೀ ಮಠದಲ್ಲಿ ನಡೆಯುತ್ತಾ ಬಂದಿರುವ ಅತ್ಯಂತ ಸಂಭ್ರಮದ ಜನಪ್ರಿಯ ಹಬ್ಬ. ಇದು ಹನ್ನೊಂದು ದಿನಗಳ ಕಾಲ ನಡೆಯುತ್ತದೆ. ಮೊದಲ ದಿನ ಘಟಸ್ಥಾಪನೆ, ಅಂಕುರಾರ್ಪಣ, ಅಂದರೆ ಕರ್ತೃಗದ್ದುಗೆ ಬಳಿ ಹುತ್ತದ ಮಣ್ಣಿನಲ್ಲಿ ನವಧಾನ್ಯಗಳನ್ನು ಮೊಳಕೆ ಕಟ್ಟುವುದು. ಚೌಡಮ್ಮನಿಗೆ ಹೊಸ ಸೀರೆ ಉಡಿಸಿ ಮೊಸರು ಪೂಜೆ ಸಲ್ಲಿಸುವುದು. ಆಯುಧಪೂಜೆಯ ದಿನ ಷಟ್‌ಸ್ಥಲ ಧ್ವಜಾರೋಹಣ ನಡೆಯುತ್ತದೆ. ವಿವಿಧ ಆಯುಧಗಳು ಹಾಗೂ ವಾಹನಗಳನ್ನು ತೊಳೆದು ಅಲಂಕರಿಸಿ ಪೂಜಿಸುವರು. ಶ್ರೀಮಠದ ಲಾಂಛನ ಶಿಖಾಶೈಲದ ಪೂಜೆ, ಮಧ್ಯಾಹ್ನ ಸಿಂಹಾಸನ, ಪಲ್ಲಕ್ಕಿಗಳಿಗೂ ವಿಶೇಷ ಪೂಜೆ ನಡೆಸುವರು. ಅದೇ ದಿನ ಸಾಯಂಕಾಲ ಪಲ್ಲಕ್ಕಿ, ಆನೆ, ಕುದುರೆ, ಧ್ವಜಗಳ ಸಮೇತ ಉತ್ಸವ ಹೊರಟು ಗಾರೆಹಟ್ಟಿ ಮಹಾಬಲೇಶ್ವರ ದೇವಸ್ಥಾನಕ್ಕೆ ಹೋಗಿ ಗಂಗೆಯನ್ನು ತೆಗೆದುಕೊಂಡು ಶ್ರೀಮಠಕ್ಕೆ ಬಂದು ಪೂಜಿಸಲಾಗುವುದು. ಹತ್ತನೆಯ ದಿನ ವಿಜಯದಶಮಿ. ಯಥಾ ರೀತಿ ವಿಶೇಷ ಪೂಜೆಗಳು ನಡೆಯುವುವು. ಬೆಳಿಗ್ಗೆ ೧೦ ಗಂಟೆಗೆ ರಾಜನಹಳ್ಳಿ ಹನುಮಂತಪ್ಪನವರ ಛತ್ರದಿಂದ ಸಕಲ ಬಿರುದಾವಳಿಗೊಡನೆ ಶ್ರೀ ಜಗದ್ಗುರುಗಳವರ ಪಲ್ಲಕ್ಕಿ ಉತ್ಸವ ಹೊರಡುವುದು. ಮೆರವಣಿಗೆ ಚಿತ್ರದುರ್ಗದ ಮುಖ್ಯಮಾರ್ಗದಲ್ಲಿ ಸಾಗಿ ಬೆಟ್ಟದ ತಪ್ಪಲನ್ನು ಮುಟ್ಟುವುದು. ಜಗದ್ಗುರುಗಳವರು ಮೇನಾದಲ್ಲಿ ಕುಳಿತು ಬೆಟ್ಟದ ಮೇಲಣ ಮಠಕ್ಕೆ ಬರುವರು. ಅಲ್ಲಿನ ತೋರುಗದ್ದಿಗೆ, ಸಂಪಿಗೆ ಸಿದ್ದೇಶ್ವರ, ಹಿಡಿಂಬೇಶ್ವರನಿಗೆ ಪೂಜೆ ಆದ ನಂತರ ಭಕ್ತ ಸಮೂಹಕ್ಕೆ ಬನ್ನಿಯನ್ನು ಅನುಗ್ರಹಿಸುವರು. ಅದಾದ ನಂತರ ಮೇನಾದಲ್ಲಿ ಕುಳಿತು ಕೆಳಕ್ಕೆ ಬಂದು ಮತ್ತೆ ಪಲ್ಲಕ್ಕಿಯಲ್ಲಿ ಮಂಡಿಸುವರು. ಮೆರವಣಿಗೆ ಚಿಕ್ಕಪೇಟೆಯ ಮೂಲಕ ಸಂಭ್ರಮದಿಂದ ಸಾಗಿ ನೀಲಕಂಠೇಶ್ವರ ದೇವಸ್ಥಾನದಲ್ಲಿ ಸಮಾರಂಭ ನಡೆಯುವುದು. ಭಕ್ತರಿಗೆ ಬನ್ನಿ ವಿತರಣೆಯಾಗುವುದು. ಮತ್ತೆ ಮೆರವಣಿಗೆ ಮುಂದುವರಿದು ಶ್ರೀ ಮಠಕ್ಕೆ ಬಂದಾಗ ಹೆಬ್ಬಾಗಿಲಿನಲ್ಲಿ ಸ್ವಾಗತ ನೀಡಲಾಗುವುದು. ಕರ್ತೃಗದ್ದುಗೆಗೆ ಮಹಾಮಂಗಳ ನಡೆದು ಭಕ್ತ ಸಮುದಾಯಕ್ಕೆ ಪ್ರಸಾದ ವಿನಿಯೋಗ ಮಾಡಲಾಗುವುದು. ಮಾರನೆಯ ದಿನ, ಅಂದರೆ ದಸರಾದ ಹನ್ನೊಂದನೆಯ ದಿನ ಗದ್ದುಗೆಗಳಿಗೆ, ಚೌಡಮ್ಮನಿಗೆ ವಿಶೇಷ ಪೂಜೆಗಳು ನಡೆಯುವುದು. ಹನ್ನೊಂದು ಗಂಟೆಗೆ ಸದರಕಟ್ಟೆಯಲ್ಲಿ ದರ್ಬಾರಿಗೆ ವ್ಯವಸ್ಥೆ ಮಾಡಲಾಗುವುದು. ಸಿಂಹಾಸನವನ್ನು ಅಲಂಕರಿಸಲಾಗಿರುತ್ತದೆ. ಜಗದ್ಗುರುಗಳು ಗದ್ದುಗೆ ಬಳಿ ಬಂದು ಕಿರೀಟ ಮತ್ತು ಶಿಖಾಶೈಲಗಳನ್ನು ಧರಿಸಿಕೊಂಡು ವಿಧ್ಯುಕ್ತವಾಗಿ ಸಿಂಹಾಸನಾರೋಹಣ ಮಾಡುವರು. ಸಾಂಪ್ರದಾಯಿಕ ದರ್ಬಾರು ನಡೆಯುವುದು. ಆ ನಂತರ ಜಗದ್ಗುರುಗಳು ಕರ್ತೃಗದ್ದಿಗೆಯ ಬಳಿ ತೆರಳಿ ಕಿರೀಟ ಹಾಗೂ ಶಿಖಾ ಶೈಲ ತೆಗೆದಿರಿಸಿ ಶಿರಪೇಚು ಧರಿಸಿ ಮೇನಾದಲ್ಲಿ ಕುಳಿತು ಹೊರಬಂದು ಮಠದ ಪ್ರದಕ್ಷಿಣೆ ಮುಗಿಸಿ ಕೈಲಾಸ ಬಾಗಿಲಿನ ಮೂಲಕ ಸಾಗಿ ಹಿರಿಯ ಗುರುಗಳ ಗದ್ದಿಗೆ ಬಳಿ ಬರುವರು. ೧೦೧ ತೆಂಗಿನಕಾಯಿ ಒಡೆಯುವರು. ಆ ನಂತರ ಮಂಗಳವಾಗುವುದು.

ಕಾರ್ತಿಕ ಮಾಸ: ಒಂದು ಮಾಸ ಪೂರ್ತಿ ಕರ್ತೃಗದ್ದುಗೆಗೆ ವಿಶೇಷ ಪೂಜೆ. ಪ್ರತಿದಿನ ಸಂಜೆ ಹಿತ್ತಾಳೆ ರಥದಲ್ಲಿ ದೀಪಹಚ್ಚಿ ಪ್ರಾಂಗಣದ ಸುತ್ತ ಎಳೆಯುವರು. ಭಕ್ತರಿಗೆ ಮಂಡಕ್ಕಿ ಮತ್ತು ಕಾರದ ಪ್ರಸಾದ ವಿತರಣೆ. ದೀಪಾವಳಿಯಂದು ಅಭಿಷೇಕ, ವಿಶೇಷ ಪೂಜಾದಿಗಳ ಜೊತೆಗೆ ಲಕ್ಷ್ಮೀಪೂಜೆಯನ್ನು ನೆರವೇರಿಸಿ ಪ್ರಸಾದದ ವ್ಯವಸ್ಥೆ ಮಾಡಲಾಗುವುದು.

ಇದು ಶ್ರೀಮಠದಲ್ಲಿ ವರ್ಷಪೂರ್ತಿ ನಡೆಯುವ ಧಾರ್ಮಿಕೋ - ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥೂಲನೋಟ. ಈ ಎಲ್ಲಾ ಕಾರ್ಯಕ್ರಮಗಳ ಹಿಂದೆ ಜನಹಿತಾಸಕ್ತಿಯನ್ನು ನಾವು ನಿಚ್ಚಳವಾಗಿ ಗುರುತಿಸಬಹುದಾಗಿದೆ.

ಸಾಮಾಜಿಕ ಸೇವೆ

ಶ್ರೀ ಬೃಹನ್ಮಠದಲ್ಲಿ ಎಸ್.ಜೆ.ಎಂ. ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘವೊಂದು ಸ್ಥಾಪಿತವಾಗಿದೆ. ಯುವಜನತೆಯನ್ನು ಸಂಘಟಿಸಿ ಅವರಲ್ಲಿರುವ ಸುಪ್ತಪ್ರಜ್ಞೆಯನ್ನು ಗುರುತಿಸಿ ಸೂಕ್ತ ಪ್ರೋತ್ಸಾಹ ನೀಡುವುದು, ಅವರ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಒದಗಿಸುವುದು ಅದರ ಉದ್ದೇಶ. ಈ ದಿಸೆಯಲ್ಲಿ ಈಗಾಗಲೇ ರಾಜ್ಯಮಟ್ಟದ, ಜಿಲ್ಲಾಮಟ್ಟದ ಕ್ರೀಡಾಸ್ಪರ್ಧೆಗಳನ್ನು ಸಂಘಟಿಸಿದೆ. ಯುವಜನ ಮೇಳ, ಇತಿಹಾಸ ಸಮ್ಮೇಳನ, ನಾಟಕ ತರಬೇತಿ ಶಿಬಿರಗಳನ್ನು ನಡೆಸಿದೆ. ಜನಪದ ಕಲೆಗೆ ಪ್ರೋತ್ಸಾಹ ನೀಡುವ ಸಲುವಾಗಿ ವಿವಿಧ ಗ್ರಾಮೀಣ ಕಲಾ ತಂಡಗಳನ್ನು ಬರಮಾಡಿಕೊಂಡು ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ನೀಡಲಾಗಿದೆ. ಇದರಲ್ಲಿ ಭಜನೆಮೇಳ, ಡೊಳ್ಳುಕುಣಿತ, ಕೀಲುಕುದುರೆ, ಕೋಲಾಟ, ಉತ್ತರಿಕುಣಿತ, ವೀರಗಾಸೆ ಮೊದಲಾದ ೫೦ ಕ್ಕೂ ಹೆಚ್ಚಿನ ತಂಡಗಳು ಪ್ರದರ್ಶನ ನೀಡಿವೆ.

ಕುಸ್ತಿ ತರಬೇತಿ ಕೇಂದ್ರವೊಂದು ಇದರ ಆಶ್ರಯದಲ್ಲಿ ನಡೆಯುತ್ತಿದ್ದು, ಅನೇಕ ಯುವಕರು ಅಲ್ಲಿ ತರಬೇತಿ ಪಡೆಯುತ್ತಿದ್ದಾರೆ. ವಿದ್ಯಾರ್ಥಿ ನಿಲಯದ ಆಸಕ್ತ ವಿದ್ಯಾರ್ಥಿಗಳಿಗೆ ವಿವಿಧ ವೃತ್ತಿಪರ ತರಬೇತಿಯನ್ನು ನೀಡುವ ಯೋಜನೆಯೊಂದನ್ನು ಕೈಗೊಳ್ಳಲಾಗುತ್ತಿದ್ದು, ಅದರಡಿ ಹೈನುಗಾರಿಕೆ ತರಬೇತಿಯನ್ನು ನೀಡಲಾಗುತ್ತಿದೆ. ಶ್ರೀಮಠದ ಎಸ್.ಜೆ.ಎಂ. ಮುದ್ರಣಾಲಯದಲ್ಲಿ ಮುದ್ರಣಕ್ಕೆ ಸಂಬಂಧಿಸಿದ ತರಬೇತಿಯನ್ನು ಸಹಾ ನೀಡಲಾಗುತ್ತಿದೆ. ದುಡಿಯಬೇಕೆಂಬ ಹುಮ್ಮಸ್ಸು, ತನ್ನ ಕಾಲ ಮೇಲೆ ತಾನು ನಿಂತು ಸಂಪಾದಿಸಬೇಕೆಂಬ ಮನಸ್ಸು ಯುವಕರಲ್ಲಿ ಮೂಡಲು ಇದು ಸಹಕಾರಿ.

ಗ್ರಾಮೀಣ ಜನತೆಯಲ್ಲಿ ಬೇರೂರಿರುವ ಅಂಧಶ್ರದ್ಧೆ, ಕಂದಾಚಾರಗಳನ್ನು ಬಿಡಿಸುವುದು, ನಿರಕ್ಷರಿಗಳನ್ನು ಸಾಕ್ಷರರನ್ನಾಗಿ ಮಾಡುವ ಸಾಕ್ಷರತಾ ಆಂದೋಳನ ನಡೆಸುವುದು - ಇಂಥ ಕಾರ್ಯಕ್ರಮಗಳ ಬಗೆಗೂ ಸಂಘವು ಗಮನ ಹರಿಸುತ್ತಿದೆ. ಇಂಥ ಸಾಮಾಜಿಕ ಕಾರ್ಯಕ್ರಮಗಳಿಗೆ ಎಸ್.ಜೆ.ಎಂ. ಸಂಸ್ಥೆಯ ಕಾಲೇಜುಗಳ ರಾಷ್ಟ್ರೀಯ ಸ್ವಯಂ ಸೇವಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಉತ್ಸಾಹಭರಿತ ಸಹಕಾರವನ್ನು ಪಡೆಯಲಾಗುತ್ತಿದೆ. ಹಾವೇರಿಯಲ್ಲಿರುವ ಶ್ರೀಮಠದ ವಿದ್ಯಾ ಸಂಸ್ಥೆಯು ಈ ನಿಟ್ಟಿನಲ್ಲಿ ನಡೆಸಿದ ಸಾಧನೆಯಿಂದಾಗಿ ಅತ್ಯುತ್ತಮ ಸೇವಾಘಟಕವೆಂದು ಪ್ರಶಸ್ತಿ ಗಳಿಸಿದೆ.

ಈ ಸಂಘವು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಜಾತ್ರೆ, ದನದ ಪರಿಶೆ, ರಥೋತ್ಸವ ಮುಂತಾದವುಗಳ ವ್ಯವಸ್ಥೆಯನ್ನು ಮಾಡುತ್ತಿದೆ. ಉದಾಹರಣೆಗಾಗಿ, ಶೀಬಾರದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಗುರುಪಾದಸ್ವಾಮಿಗಳ ಸ್ಮಾರಕವಾಗಿ ನಡೆಸುತ್ತಿರುವ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದನಗಳ ಜಾತ್ರೆ. ಅಲ್ಲಿ ಪ್ರತಿದಿನ ಸಂಜೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಕಲಾವಿದರ ವಿವಿಧ ಕಲೆಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತದೆ.

ಶರಣಮಾರ್ಗ ಜೀವನಪ್ರೀತಿಯನ್ನು ಕಲಿಸಿತು. ಕೌಟುಂಬಿಕ ಜೀವನಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು. ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂದಿತು. ಶ್ರೀಮಠದ ಸ್ವಾಮಿಗಳು ಪರಮ ವೈರಾಗ್ಯಶೀಲರಾದರೂ ಭಕ್ತರ ವಿವಾಹಾದಿಗಳಲ್ಲಿ ಆಸಕ್ತಿ ತೋರಿದ್ದಾರೆ. ಇತ್ತೀಚೆಗೆ ಮದುವೆಗಳೆಂದರೆ ದುಂದುವೆಚ್ಚದ, ಅರ್ಥಹೀನ ಆಚರಣೆಗಳ ನಡವಳಿಕೆಯಾಗುತ್ತಿದೆ. ಅದನ್ನು ಬಿಟ್ಟು ಸಾಮೂಹಿಕ ವಿವಾಹಗಳನ್ನು ಸರಳ ಹಾಗೂ ಅರ್ಥಪೂರ್ಣವಾದ ಶರಣ ಸಂಪ್ರದಾಯದ ಮದುವೆ ಮಾಡುವತ್ತ ಪ್ರೇರಿಸಬೇಕಾದ ಅಗತ್ಯವಿದೆ. ಇದರಿಂದಾಗಿಯೇ ಈ ಸಂಘದ ಮೂಲಕ ಸಾಮೂಹಿಕ ಸರಳ ವಿವಾಹಗಳನ್ನು ನಡೆಸಲಾಗುತ್ತಿದೆ. ಇಂಥ ಸಮಾಜಹಿತ ಕಾರ್ಯಕ್ಕೆ ದಾನಿಗಳು ಮುಂದೆ ಬರುವುದು ಸಹಜ. ಈ ಸಂದರ್ಭಕ್ಕೆ ರಚಿಸಿ, ಪ್ರಕಟಿಸಿರುವ 'ವಿವಾಹ : ಶರಣರ ದೃಷ್ಟಿಯಲ್ಲಿ' ಪುಸ್ತಿಕೆಯು ಈ ರೀತಿಯ ವಿವಾಹ ನಡೆಸಬೇಕೆನ್ನುವವರಿಗೆ ಮಾರ್ಗಸೂಚಿಯಾಗಿದೆ.

ಮುರುಘು ವನ

ಶ್ರೀಮಠದ ಸಾಮಾಜಿಕ ಸಾಧನೆಗಳನ್ನು ಕುರಿತು ಹೇಳುವಾಗ ಅದು ರೂಪಿಸಿರುವ ಮುರುಘರಾಜೇಂದ್ರ ಪ್ರಕೃತಿಧಾಮ - ಚಿದ್ವನದ ಬಗ್ಗೆ ಬರೆಯದೆ ಬಿಡುವುದು ಹೇಗೆ ಸಾಧ್ಯ? ಶ್ರೀ ಮಠದ ಬಲಭಾಗದಲ್ಲಿ ವಿಸ್ತಾರವಾದ ಜಾಗವಿದೆ. ಹಿಂದೆ ಅಲ್ಲಿ ಬೇವು, ಹುಣಸೆ, ಬಿಲ್ವ, ಬೆಳ್ಳವತ್ತ ಮೊದಲಾದ ಮರಗಳ ತೋಪೇ ಇತ್ತು. ಅದರಲ್ಲಿ ಕೆಲವು ಭಾಗ ಕಲ್ಲುಬಂಡೆಗಳ ಬೆಂಗಾಡೂ ಇತ್ತು. ಒಂದು ರೀತಿಯಲ್ಲಿ ಹೇಳಿ ಕೇಳುವವರಿಲ್ಲದ ಕಗ್ಗಾಡಾಗಿತ್ತು. ಈಗ ಆ ಇಡೀ ಪ್ರದೇಶವೆಲ್ಲಾ ಹಸಿರು ಚೈತನ್ಯ ಹರಿದಾಡುತ್ತಿರುವ ನಿಸರ್ಗರಮಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಅರಣ್ಯ ಇಲಾಖೆಯ ಸಹಕಾರವನ್ನು ಪಡೆದು ಅಲ್ಲಿ ಔಷಧೀಯ ಮೌಲ್ಯವುಳ್ಳ ಗಿಡಗಂಟೆಗಳ ಬೇಸಾಯ ನಡೆದಿದೆ. ನಾಲ್ಕು ಸಾವಿರಕ್ಕೂ ಹೆಚ್ಚಿನ ವೃಕ್ಷ ಸಂಪತ್ತು ಅಲ್ಲಿದ್ದು, ಅವುಗಳಲ್ಲಿ ೧೩೦ಕ್ಕೂ ಹೆಚ್ಚಿನ ವಿವಿಧ ಸಸ್ಯಜಾತಿಗಳಿವೆ. 'ಡಿ' ಫಾರ್ಮ ಮತ್ತು 'ಬಿ' ಫಾರ್ಮ ಕಾಲೇಜಿನವರು ಎಸ್.ಜೆ.ಎಂ. ಕಾಲೇಜುಗಳ ಇಡೀ ಕ್ಯಾಂಪಸ್ಸನ್ನು ಸಸ್ಯಾಭಿವೃದ್ಧಿ ಕಾರ್ಯಕ್ಕಾಗಿ ಕೈಗೆತ್ತಿಕೊಂಡಿರುವುದನ್ನು ಇಲ್ಲಿ ನೆನೆಯಬಹುದು. ಚಿತ್ರದುರ್ಗ ಪರಿಸರದ ಸಸ್ಯಗಳ ವರ್ಗೀಕರಣ ಮಾಡಿ ಪ್ರಯೋಗಾತ್ಮಕವಾಗಿ ಬೆಳೆಸುತ್ತಿದ್ದಾರೆ - ಧರ್ಮಸಂಬಂಧೀ ವೃಕ್ಷಗಳನ್ನು ಅತ್ತಿ, ಎಕ್ಕ, ಶಮೀ ಇತ್ಯಾದಿ. ಇದು ಮೆಚ್ಚತಕ್ಕ ಅಂಶವಾಗಿದೆ.

ಇಲ್ಲಿ ಒರಟು ಬಂಡೆಯ ಬೆಂಗಾಡು ನೀರು ಚಿಮ್ಮಿ ಹರಿವ ರಮಣೀಯ ಸ್ಥಳವಾಗಿ ಪರಿವರ್ತಿತವಾಗಿದೆ. ಕೆಳಭಾಗದಲ್ಲಿ ಇರುವ ಕೆರೆಯಲ್ಲಿ ದೋಣಿ ವಿಹಾರಕ್ಕೂ ಅವಕಾಶ ಮಾಡಲಾಗಿದೆ. ಪ್ರತಿಸಲಕ್ಕೊಮ್ಮೆ ಅಲ್ಲಿಗೆ ಹೋದಾಗಲೂ ಏನಾದರೂ

ಹೊಸತನ ಕಂಡೇ ಕಾಣುತ್ತದೆ. ಅದೀಗ ಸುಂದರ ವಾಯುವಿಹಾರ ತಾಣವೆನಿಸಿದೆ. ಅಲ್ಲದೆ, ಮಕ್ಕಳ ವಿಹಾರಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನೂ - ಜೋಕಾಲೆ, ಜಾರುಬಂಡಿ, ಏರಿ ಇಳಿಯುವ ಏಣಿಗಳು ಇತ್ಯಾದಿಗಳನ್ನು ಒದಗಿಸಲಾಗಿದೆ. ಅಲ್ಲಿನ ವನಸಿರಿಯ ಜೊತೆಗೆ ಅಲ್ಲಲ್ಲಿ ರೂಪಿಸಿರುವ ಕುಶಲ ಕಲಾಮೂರ್ತಿಗಳು ನಮ್ಮ ಗಮನ ಸೆಳೆಯುತ್ತವೆ. ತನ್ನ ತಲೆಯ ಮೇಲಿಂದ ಗಂಗೆಯನ್ನು ಪುಟಿಸುವ ಗಂಗಾಧರ, ಹಸ್ತಲಾಘವಕ್ಕೆ ಕೈ ಚಾಚಿ ನಿಂತಿರುವ ಮಂಗಣ್ಣ, ಪೂಜ್ಯ ಜಗದ್ಗುರುಗಳ ಆಶೀರ್ವಾದ ಪಡೆಯುತ್ತಿರುವ ನಾಯಕ ಮೊದಲಾದ ಮೂರ್ತಿಗಳು ಚಿತ್ತಾಕರ್ಷಕವಾಗಿವೆ. ಯೋಜನೆಗಳನ್ನು ಯೋಜಿಸುವುದು, ಆರಂಭಿಸುವುದು ಸುಲಭ. ಆದರೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ತೋರಬೇಕಾದ ಎಚ್ಚರ, ಆ ನಂತರ ಇರಬೇಕಾದ ಉಸ್ತುವಾರಿ, ಪರಾಮರ್ಶೆಗಳು ಸಮರ್ಪಕವಾಗಿ ಇಲ್ಲದೆ ನಮ್ಮ ಅನೇಕ ಯೋಜನೆಗಳು ಸೋಲು ಅನುಭವಿಸುತ್ತವೆ. ಆದರೆ ಇಲ್ಲಿ ಯೋಜನೆ, ಕಾರ್ಯಸಾಧ್ಯತೆ ಮತ್ತು ವ್ಯವಸ್ಥೆಗಳ ಪರಾಮರ್ಶೆಗಳು ಇದ್ದು, ಜನೋಪಕಾರಿ ಯೋಜನೆಯೊಂದು ಯಶಸ್ವಿಯಾಗಿ ಫಲ ನೀಡುತ್ತಿದೆ. ಪರಿಸರಪ್ರಜ್ಞೆಯುಳ್ಳವರೆಲ್ಲರೂ ಶ್ರೀಮಠದ ಈ ಸೇವೆಯನ್ನು ಮೆಚ್ಚದಿರರು.

ಬದಲಾದ ಆಧುನಿಕ ಕಾಲದ ಅಗತ್ಯಗಳಿಗೆ ತಕ್ಕಂಥ ಜನೋಪಯೋಗಿ ಕಾರ್ಯಕ್ರಮಗಳನ್ನು ರೂಪಿಸಲು, ಅವನ್ನು ಹತ್ತು ಹಲವು ಮುಖವಾಗಿ ವಿಸ್ತರಿಸಲು ಶ್ರೀಮಠವು ಮತ್ತೆ ಕೆಲವು ಸಂಘಟನೆಗಳನ್ನು ಪ್ರೋತ್ಸಾಹಿಸುತ್ತಾ ಇದೆ. ಅವುಗಳಲ್ಲಿ ಕೆಲವು ಇವು : ಎಸ್.ಜೆ.ಎಂ. ಕ್ರೆಡಿಟ್ ಕೋ - ಆಪರೇಟಿವ್ ಸೊಸೈಟಿ, ಎಸ್.ಜೆ.ಎಂ. ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ, ಎಸ್.ಜೆ.ಎಂ. ಹಣಕಾಸು ಸಂಸ್ಥೆ, ಮೊದಲಾದುವು. ವೃತ್ತಿ ಶಿಕ್ಷಣ, ಉದ್ಯೋಗಾವಕಾಶ, ಹಣಕಾಸಿನ ನೆರವು, ಸ್ವಯಂ ಉದ್ಯೋಗ ಮಾರ್ಗದರ್ಶನ ಮೊದಲಾದ ಸೌಕರ್ಯಗಳನ್ನು ಜನರಿಗೆ ಒದಗಿಸುವತ್ತ ಅವು ಗಮನ ಹರಿಸುತ್ತಿವೆ. ಜನರು ಶ್ರೀಮಠವು ಒದಗಿಸುತ್ತಿರುವ ಈ ಸೌಲಭ್ಯಗಳನ್ನು ಪಡೆದು ತಮ್ಮ ಬಾಳನ್ನು ಬಂಗಾರವಾಗಿಸಿಕೊಳ್ಳಬಹುದಾಗಿದೆ.

ಸಾರಸ್ವತ ಸಾಧನೆ

ಶ್ರೀ ಮಠಗಳೆಂದರೆ ವಿದ್ಯೆಯಾಗರ. ಕೆಲವಂತೂ ಒಳ್ಳೆಯ ವಿಶ್ವವಿದ್ಯಾಲಯಗಳಂತೆ ಇದ್ದು, ಅಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಪ್ರಕಟಣಗಳು ನಿರಂತರವಾಗಿ ನಡೆಯುತ್ತವೆ. ಪ್ರಾಚೀನ ಸಾಹಿತ್ಯ ಸಂಪತ್ತನ್ನು ಕಾಪಾಡುವುದೂ, ಇಂದಿನ ಸಾಹಿತ್ಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದೂ ಅವುಗಳ ಕರ್ತವ್ಯವಾಗಿದೆ. ಅವು ಪ್ರಾಚೀನ ತಾಡೋಲೆ, ತಾಮ್ರಪಟ ಮೊದಲಾದುವನ್ನು ಸಂಗ್ರಹಿಸಿ ರಕ್ಷಿಸಿಕೊಂಡು ಬರುತ್ತಿವೆ. ಇಲ್ಲದಿದ್ದರೆ ನಮ್ಮ ಅಪಾರ ಸಾಹಿತ್ಯಸಂಪದ ಜನರ ಅಜ್ಞಾನ ಅವಜ್ಞೆಗಳಿಂದಾಗಿ ಹುಳು ತಿಂದೋ, ಅಗ್ನಿಗಾಹುತಿಯಾಗಿಯೋ ಹಾಳಾಗಿ ಹೋಗುತ್ತಿತ್ತು. ಮಠದ ಆಚಾರ್ಯರು ಅವುಗಳ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಸಿ ಅವನ್ನು ಸಂಗ್ರಹಿಸಿದರು. ಹೀಗಾಗಿ ಅಪೂರ್ವ ಗ್ರಂಥರಾಶಿ ಶೇಖರಣೆಗೊಂಡಿತು. ಬೃಹನ್ಮಠದಲ್ಲೂ ಇಂಥ ಅಪೂರ್ವವಾದ ಹಸ್ತಪ್ರತಿ ಭಂಡಾರವಿದೆ. ಅದರಲ್ಲಿ ಸುಮಾರು ೪೭೦೦ ಕ್ಕೂ ಹೆಚ್ಚಿನ ಕೃತಿಗಳಿವೆ. ಈಗ ಅವನ್ನೆಲ್ಲಾ ಕ್ರಮವಾಗಿ ಜೋಡಿಸಿ ಅವುಗಳ ಪರಿಚಯಾತ್ಮಕ ಸೂಚಿಯೊಂದನ್ನು ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಅಪೂರ್ವ ಕೃತಿಗಳ ಪ್ರಕಟಣ ಹಾಗೂ ಪ್ರಸರಣ ಉದ್ದೇಶದಿಂದಲೇ 'ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ' ಎಂಬ ಪ್ರಕಟಣ ಶಾಖೆಯನ್ನು ಆರಂಭಿಸಲಾಗಿದೆ.

ಬೃಹನ್ಮಠದ ಸಾಹಿತ್ಯಸೇವೆಯನ್ನು ಕುರಿತು ಬರೆಯುವಾಗ ಮೊದಲು ಉಲ್ಲೇಖಿಸಬೇಕಾದದ್ದು ಶ್ರೀ ಮಠದ ಹಿಂದಿನ ಕೆಲವು ಪೀಠಾಧಿಪತಿಗಳು ಸ್ವತಃ ವಿದ್ವಾಂಸರು, ಕವಿಗಳು ಆಗಿದ್ದು ನಡೆಸಿದ ಸಾಹಿತ್ಯೋಪಾಸನೆಯನ್ನು. ೧೫೭೦ರಲ್ಲಿದ್ದ ಮುರುಗೆಯ ದೇಶಿಕೇಂದ್ರರು 'ರಾಜೇಂದ್ರವಿಜಯ' (ಚಂಪೂ) ವನ್ನು ರಚಿಸಿದ್ದಾರೆ.ಆ ನಂತರ ಮಹಂತಸ್ವಾಮಿಗಳು 'ನಾಂದ್ಯ' (ಷಟ್ಪದಿ) ವೆಂಬ ಪ್ರಾರ್ಥನಾ ಪದ್ಯಗಳ ಸಂಕಲನವನ್ನು ಅಣಿಗೊಳಿಸಿದ್ದಾರೆ. ೧೫೯೦ ರಲ್ಲಿದ್ದ ಇಮ್ಮಡಿ ಮುರುಗೆಸ್ವಾಮಿಗಳು 'ಹಾಲಾಸ್ಯಪುರಾಣ' (ಚಂಪೂ) ವೂ ಸೇರಿದಂತೆ ಕನ್ನಡದಲ್ಲಿ ೧ ಕೃತಿಗಳನ್ನೂ ಸಂಸ್ಕೃತದಲ್ಲಿ ೨ ಕೃತಿಗಳನ್ನೂ ಬರೆದಿದ್ದಾರೆ. ಶ್ರೀಮಠದ ಜಗದ್ಗುರು ಮಹಾಲಿಂಗೇಶರನ್ನು ಕುರಿತು ಕವಿ ಮಹಾದೇವನು 'ಮಹಾಲಿಂಗೇಂದ್ರ ವಿಜಯ' (ಷಟ್ಪದಿ)ವನ್ನು ರಚಿಸಿದ್ದಾನೆ. ಶೂನ್ಯಪೀಠ ಪರಂಪರೆಯ ೧೬ನೆಯ ಜಗದ್ಗುರು ಸಿದ್ಧಲಿಂಗಸ್ವಾಮಿಗಳು 'ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು' ಎಂದೇ ಪ್ರಸಿದ್ಧರಾಗಿದ್ದಾರೆ. ಅವರು ವಿವಿಧ ವ್ಯಾಕರಣಗಳಲ್ಲಿ ಪಾಂಡಿತ್ಯ ಸಂಪಾದಿಸಿದವರು. ತ್ರಿಮತಾಚಾರ್ಯರನ್ನು ವಾದದಲ್ಲಿ ಗೆದ್ದು ತಮ್ಮ ಅಪೂರ್ವ ವಿದ್ವತ್ತನ್ನು ಮೆರೆದವರು. ಆದರೆ ಅವರ ಕೃತಿಗಳು ಮಾತ್ರ ದೊರೆತಿಲ್ಲ. ಅದರಂತೆ ೧೭ನೆಯ ಜಗದ್ಗುರುಗಳು ನೈಘಂಟಿನ ಸಿದ್ಧಬಸವಸ್ವಾಮಿಗಳು. ಮುಂದೆ ಮುರಿಗೆ ಶಾಂತವೀರಸ್ವಾಮಿಗಳು ಘನವಿದ್ವಾಂಸರು. ಅಷ್ಟೇ

ಅಲ್ಲ, ಸರಸ ಕವಿತ್ವಲೋಲರು. ಇವರನ್ನು ಕುರಿತು ಮಹಂತಸ್ವಾಮಿ, ಕಂಪಿನಂಜಯ್ಯ, ಇಮ್ಮಡಿ ಗುರುಸಿದ್ಧ ಮೊದಲಾದವರು ಕೃತಿರಚಿಸಿ ಸ್ತೋತ್ರ ಮಾಡಿದ್ದಾರೆ (ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರ ಕರಂಡ).

ಶ್ರೀಮಠದ ಶಿಷ್ಯನಾದ ಚೆನ್ನಬಸವಣ್ಣನು 'ಕೋಲುಪದ' ವನ್ನು, ನಂಜಕವಿ 'ಕಪೋತವಾಕ್ಯ'ವನ್ನು ರಚಿಸಿದ್ದಾರೆ. ಸೋಮಣ್ಣನು ಲಾಳಸಿಂಗಿ 'ಕಗ್ಗೋಲೆಯಮಾನ್ಯ' ಮೊದಲಾದ ಸಾಹಿತ್ಯ ರಚಿಸಿದ್ದಾನೆ. ಇವರು ಚಿನ್ಮೂಲಾದ್ರಿಯ ವೀರಶೈವ ಕವಿಗಳಲ್ಲಿ ಕೆಲವರು.

ಹಿಂದಿನ ಜಗದ್ಗುರುಗಳಾದ ಪೂಜ್ಯ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಂಸ್ಕೃತ ಮತ್ತು ಕನ್ನಡದಲ್ಲಿ ಘನ ವಿದ್ವಾಂಸರು. ಅದ್ಭುತವಾದ ಪ್ರವಚನಕಾರರು. ಗಡುಚಾದ ತಾತ್ವಿಕ ವಿಚಾರಗಳನ್ನು ಅವರಷ್ಟು ಲಲಿತವಾಗಿ ಮನ ಮುಟ್ಟಿಸುತ್ತಿದ್ದವರು ವಿರಳ. ನಿರಂತರವಾಗಿ ಹರಿಯುತ್ತಿದ್ದ ಅವರ ವಾಗ್ಧಾರೆ ಮನದ ಜಂಜಡವನ್ನು ತೊಳೆದು ತಿಳಿವಿನ ತಿಳಿಬೆಳಗ ಹಚ್ಚಿಡುತ್ತಿತ್ತು. ಅವರ ಮುಂದಾಲೋಚನೆ ಹಾಗೂ ಮುತ್ಸದ್ದಿತನದಿಂದಾಗಿ ಅನೇಕ ಹೊಸ ಹೊಸ ಲೋಕೋಪಕಾರಕ ಯೋಜನೆಗಳು ಕಾರ್ಯರೂಪಕ್ಕಿಳಿದು ಶ್ರೀಮಠವು ಪ್ರಗತಿ ಪಥದಲ್ಲಿ ದಾಪುಗಾಲನ್ನಿಟ್ಟಿದೆ.

ಅದರಂತೆ ಈಗಿನ ಬೃಹನ್ಮಠದ ಅಧ್ಯಕ್ಷರಾದ ಪೂಜ್ಯಶ್ರೀ ಶಿವಮೂರ್ತಿ ಮಹಾಸ್ವಾಮಿಗಳೂ ಸಹ ವಿದ್ವಾಂಸರು. ಒಳ್ಳೆಯ ಚಿಂತಕರು. ಸಿರಸಿಯ ರುದ್ರದೇವರಮಠ ಮತ್ತು ಹಾವೇರಿಯ ಹೊಸಮಠಗಳ ಅಧ್ಯಕ್ಷರಾಗಿ ಚಿಕ್ಕವಯಸ್ಸಿನಲ್ಲೇ ಮಹಾಸಾಧನೆ ಮಾಡಿ ಕೀರ್ತಿ ಗಳಿಸಿದರು. ಸಂಗೀತ ಸಾಹಿತ್ಯಕಲೆಗಳ ಮೂಲಕ ಶರಣಸಂಸ್ಕೃತಿಯ ದರ್ಶನ ಮಾಡಿಸುವ, ಜನರನ್ನು ವಿಶ್ವಮಾನವತೆಯಲ್ಲಿ ಮುನ್ನಡೆಸುವ ಸಂಕಲ್ಪ ಉಳ್ಳವರು. ಪೂಜ್ಯರು ಈಗಾಗಲೇ 'ವಚನತರಂಗ ಭಾಗ-೧ ಮತ್ತು ಭಾಗ-೨', 'ವಚನಸುಮನ', 'ಚಿಂತನರಂಗ', 'ನಮ್ಮ ಸುತ್ತ', 'ವಚನಕ್ರಾಂತಿ', 'ಜಯದೇವ ಜಗದ್ಗುರುಗಳು' 'ಶರಣಸುಧೆ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶೂನ್ಯ ಸಿಂಹಾಸನಕ್ಕೆ ಮತ್ತೆ ಒಬ್ಬ ಸೃಜನಶೀಲ ಕವಿ - ಸಾಹಿತಿ ಅಧ್ಯಕ್ಷರಾದುದು ಹಿಂದಿನ ಸಾರಸ್ವತ ಪರಂಪರೆಯು ಮುಂದುವರಿದಂತಾಗಿದೆ. ಪೂಜ್ಯರು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಬಸವತತ್ತ್ವ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಅಲ್ಲಿ ಪ್ರತಿ ತಿಂಗಳ ೭ನೇ ತಾರೀಖು ಕ್ರಮವಾಗಿ ಶಿವಾನುಭವ ಚಿಂತನ ಕಾರ್ಯಕ್ರಮ ನಡೆಯುತ್ತಿದೆ. ಇದೊಂದು ಅರ್ಥಪೂರ್ಣವಾದ ಕಾರ್ಯಕ್ರಮವೆನಿಸಿದೆ. 'ಸಹಜ ಶಿವಯೋಗ', 'ಮನೆಗೆ ಮಹಾಮನೆ' ಎಂಬ ಅವರ ವಿನೂತನ ಕಾರ್ಯಕ್ರಮ ಶಿವಶರಣರ ತತ್ತ್ವದ ಕಾರ್ಯರೂಪವೆನಿಸಿ ಜನಪ್ರಿಯವಾಗುತ್ತಿವೆ. ಪೂಜ್ಯರು ಈಚೆಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಸಂಚಾರಮಾಡಿ ಶರಣ ಸಂದೇಶವನ್ನು ಬಿತ್ತರಿಸಿ ಬಂದಿದ್ದಾರೆ. ಮಾನವತಾವಾದವನ್ನು ಎತ್ತಿಹಿಡಿಯುವ, ಭಾವೈಕ್ಯವನ್ನು ಬಿಂಬಿಸುವ ಅವರ ಹಾಡುಗಳು, ರೂಪಕಗಳು ಪ್ರಭಾವಪೂರ್ಣವೆನಿಸಿವೆ. ಇದಕ್ಕಾಗಿ ಪೂಜ್ಯರಿಗೆ ಭಾವೈಕ್ಯತಾ ಪ್ರಶಸ್ತಿ ಕೂಡ ಸಂದಾಯವಾಗಿದೆ.

ಶ್ರೀ ಮಠವು ಅನೇಕ ಅಮೂಲ್ಯ ಪ್ರಕಟಣೆಗಳನ್ನು ಹೊರತಂದಿದೆ. ಅಲ್ಲದೆ ಲೇಖಕರಿಗೆ ಧನಸಹಾಯ ಮಾಡಿ ಕೃತಿಗಳು ಹೊರಬರಲು ಕಾರಣವಾಗಿದೆ. ಶ್ವೇತಾಶ್ವತರೋಪನಿಷದ್ವೀರಶೈವ ಭಾಷ್ಯಂ, ಶ್ರೀಶಿವತತ್ತ್ವರತ್ನಾಕರ, ಶರಣಗೀತ, ಬಸವಗೀತ, ನಾಸದೀಯ ಸೂಕ್ತ. ವಚನೋಪನಿಷತ್ತು, ಪುರುಷಸೂಕ್ತ, ಪ್ರಭುದೇವರ ಶೂನ್ಯಸಂಪಾದನೆ, ಮುರುಘೇಂದ್ರ ವಿಜಯ, ಮಹಾಲಿಂಗೇಂದ್ರ ವಿಜಯ, ಮಾಂಡೂಕ್ಯೋಪನಿಷತ್ತು, ಕಠೋಪನಿಷತ್‌ಪ್ರಕಾಶ, ಮುಂಡಕೋಪನಿಷತ್‌ಪ್ರಕಾಶ, ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು, ಬ್ರಹ್ಮಸೂತ್ರದರ್ಶನ,. ವೀರಶೈವ ತತ್ತ್ವ ಮತ್ತು ಆಚರಣೆ, ಶಬ್ದಮಣಿದರ್ಪಣ, ವೃತ್ತಾರತ್ನಾಕರ ಕರ್ಣಾಟ ವೃತ್ತಿ, ಶಿವಶರಣ ವಿಲಾಸ, ಮುರಿಗೆ ಶಾಂತವೀರ ಸ್ವಾಮಿಗಳ ಕೃತಿಗಳು, ಅಷ್ಟಾವರಣ - ಒಂದು ಅಂತರಂಗ, ಚಿಕ್ಕವೀರರಾಜೇಂದ್ರ ವಿವಾದ, ಮೊದಲಾದ ಕೃತಿಗಳನ್ನು; ಭಕ್ತಿಯ ಬೆಳಕು; ವಿವಾಹ - ಶರಣರ ದೃಷ್ಟಿ ಎಂಬ ಕಿರುಕೃತಿಗಳನ್ನು ಹೊರತಂದಿದೆ.

ಶ್ರೀ ಮಠದ ಹಿರಿಯ ಜಗದ್ಗುರುಗಳಾದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ೧೯೯೪ರಲ್ಲಿ ಲಿಂಗೈಕ್ಯರಾದರು. ಅವರ ಶಿವಯೋಗ ಸಮಾಧಿಯು ಹೊಳಲ್ಕೆರೆಯ ಒಂಟಿಕಂಬದ ಮಠದ ಪ್ರಾಂಗಣದಲ್ಲಿ ನೆರವೇರಿ ಅದೀಗ ಒಂದು ಸದ್ಭಕ್ತಿಯ ನೆಲೆವೀಡಾಗಿದೆ. ಲಿಂ. ಜಗದ್ಗುರುಗಳ ಪುಣ್ಯಸ್ಮರಣೆಗಾಗಿ 'ಮುರುಘಶ್ರೀ' ಎಂಬ ಮಹಾಸಂಪುಟವು ಪ್ರೊ. ಲಕ್ಷ್ಮಣ್ ತೆಲಗಾವಿಯವರ ಸಂಪಾದಕತ್ವದಲ್ಲಿ ರೂಪುಗೊಳ್ಳುತ್ತಿದೆ.

ನಿಯತಕಾಲಿಕೆ ಮತ್ತು ದಿನಪತ್ರಿಕೆ

ಸತ್ಯ ಶುದ್ಧ ಕಾಯಕ : ನಾಡಿನ ವಿದ್ವತ್ ಪತ್ರಿಕೆಗಳಲ್ಲಿ ಇದು ಒಂದಾಗಬೇಕೆಂಬ ಮಹದಾಸೆಯಿಂದ ೧೯೯೦ರ

ವಿಜಯದಶಮಿಯಂದು ಇದನ್ನು ಆರಂಭಿಸಲಾಗಿದೆ. ಶ್ರೀ ಬಿ. ರಾಜಶೇಖರಪ್ಪ ಅವರು ಇದರ ಸಂಪಾದಕರು. ಧಾರ್ಮಿಕ ವಿಷಯವಷ್ಟೇ ಅಲ್ಲದೆ ಸಾಹಿತ್ಯಕ, ಐತಿಹಾಸಿಕ, ಸಾಂಸ್ಕೃತಿಕ, ವೈಚಾರಿಕ, ಶೈಕ್ಷಣಿಕ ಮೊದಲಾದ ವಿಷಯಗಳಿಗೂ ಇದರಲ್ಲಿ ಪ್ರಾಶಸ್ತ್ಯ ನೀಡಲಾಗುತ್ತಿದೆ. ನಾಡಿನ ಹೆಸರಾಂತ ವಿದ್ವಾಂಸರು ಇದಕ್ಕೆ ಲೇಖನಗಳನ್ನು ಬರೆಯುತ್ತಿದ್ದಾರೆ. ಪತ್ರಿಕೆಯು ತುಂಬಾ ಆಕರ್ಷಕವಾಗಿ, ಸತ್ತ್ವಪೂರ್ಣವಾಗಿ ಹೊರಬರುತ್ತಿದೆ. ಇದರೊಂದಿಗೆ 'ಜನವಾಹಿನಿ' ಬೆಳಗಿನ ದಿನಪತ್ರಿಕೆಯೂ ಶ್ರೀಮಠದಿಂದ ಪ್ರಕಟಗೊಳ್ಳುತ್ತಿದೆ. ಶ್ರೀ ದೊಣೆಹಳ್ಳಿ ಗುರುಮೂರ್ತಿ ಅವರು ಇದರ ಸಂಪಾದಕರು.

ಶೈಕ್ಷಣಿಕ ಸಾಧನೆ

''ಕರ್ನಾಟಕದಲ್ಲಿ ಅಕ್ಷರಸ್ಥರ, ವಿದ್ಯಾವಂತರ ಸಂಖ್ಯೆ ಹೆಚ್ಚಲು ವೀರಶೈವಮಠಗಳೇ ಕಾರಣ'' ಎಂಬ ಭಾರತ ಸರ್ವೇಕ್ಷಣಾಲಯದವರು ಕೊಟ್ಟಿರುವ ವರದಿ ಯಥಾರ್ಥವನ್ನೆ ಉಲ್ಲೇಖಿಸಿದೆ. ಶ್ರೀ ಮುರುಘಾಮಠವು ಈ ವಿಚಾರದಲ್ಲಿ ಮುಂಚೂಣಿಯಲ್ಲಿದೆ. ಶ್ರೀಮಠದ ಶೈಕ್ಷಣಿಕ ಸಾಧನೆಯನ್ನು ಮಹಾಲಿಂಗ ಜಗದ್ಗುರುಗಳ ಕಾಲದಿಂದಲೂ ಗುರುತಿಸ ಬಹುದು. ಶ್ರೀ ಬೃಹನ್ಮಠದ ಮಹಾಲಿಂಗ ಜಗದ್ಗುರುಗಳವರು ಶಿರಸಂಗಿಯಲ್ಲಿದ್ದಾಗ ಶಿಕ್ಷಣತಜ್ಞ ಡೆಪ್ಯುಟಿ ಚೆನ್ನಬಸಪ್ಪನವರು ಬಂದು ಬೆಳಗಾವಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಒಂದು ಪಾಠಶಾಲೆಯನ್ನು ನಡೆಸಬೇಕೆಂದು ಕೇಳಿಕೊಂಡರು. ಜಗದ್ಗುರುಗಳು ಅದಕ್ಕೆ ಒಪ್ಪಿ ಶಾಲೆ ಆರಂಭಿಸಲು ಉದಾರವಾಗಿ ದಾನ ಮಾಡಿದರು. ಪರಿಣಾಮವಾಗಿ ಬೆಳಗಾವಿಯಲ್ಲಿ ಜಗದ್ಗುರು ಮಹಾಲಿಂಗ ಪಾಠಶಾಲೆ ಎಂಬ ವಿದ್ಯಾಸಂಸ್ಥೆ ಪ್ರಾರಂಭವಾಯಿತು. ಮುಂದೆ ದೇಶದ ನಾನಾ ಭಾಗಗಳಲ್ಲಿ ಹಿಂದುಳಿದ ವೀರಶೈವ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲೆಂದು ವಿದ್ಯಾಸಂಸ್ಥೆಗಳು, ವಿದ್ಯಾರ್ಥಿನಿಲಯಗಳು ಶ್ರೀಮಠದ ವತಿಯಿಂದ ಸ್ಥಾಪನೆಯಾದವು. ಬ್ರಿಟಿಷರ ಆಡಳಿತದ ಕಾಲಕ್ಕೆ ಸಮಾಜದಲ್ಲಿ ಇಂಥ ರಚನಾತ್ಮಕ ಕಾರ್ಯ ಮೊದಲಾದುದು ಚಿತ್ರದುರ್ಗ ಜಗದ್ಗುರುಗಳಿಂದಲೇ ಎಂಬುದು ಮಹತ್ವದ ಸಂಗತಿ. 'ಮಹಾಲಿಂಗೇಂದ್ರವಿಜಯ'ದ ಅಧ್ಯಾಯ ೩೦ರ ೧೬ ಮತ್ತು ೧೭ನೆಯ ಪದ್ಯಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ.

ಸ್ವತಃ ಬೃಹನ್ಮಠದಲ್ಲಿ ಆರಂಭದಿಂದಲೂ ಸಂಸ್ಕೃತ ಅಭ್ಯಾಸಕ್ಕಾಗಿ ವೇದಪಾಠಶಾಲೆಗಳನ್ನು ನಡೆಸುವುದನ್ನು ಬಿಟ್ಟರೆ ಬೇರೆ ಶಿಕ್ಷಣ ಸಂಸ್ಥೆಗಳು ಇರಲಿಲ್ಲವಾದರೂ ನಾಡಿನಾದ್ಯಂತ ವಿದ್ಯಾಭ್ಯಾಸ ಮಾಡುತ್ತಿರುವ ಸಹಸ್ರಾರು ವೀರಶೈವ ಬಡವಿದ್ಯಾರ್ಥಿಗಳಿಗೆ ಉಚಿತವಾದ ಅಶನ ಹಾಗೂ ವಸತಿಗೆ ಏರ್ಪಾಡು ಮಾಡುವತ್ತ ಶ್ರೀಮಠವು ತೀವ್ರ ಗಮನ ಹರಿಸುತ್ತಾ ಬಂದಿರುವುದು ಕಾಣುತ್ತದೆ. ಅದರಲ್ಲೂ ಜಯದೇವ ಜಗದ್ಗುರುಗಳವರು ಕನ್ನಡನಾಡಿನ ತುಂಬೆಲ್ಲಾ, ಅಷ್ಟೇ ಏಕೆ, ಹೊರನಾಡುಗಳಲ್ಲೂ ಧರ್ಮಚಕ್ರದಂತೆ ಸುಳಿದರು. ಆಯಾ ಪ್ರದೇಶದಲ್ಲಿ ಕೊಡುಗೈ ದಾನಿಗಳನ್ನು ಹಿಡಿದು, ಸತ್ಕಾರ್ಯಕ್ಕೆ ಅವರನ್ನು ಪ್ರೇರಿಸಿ ದಾನಮಾಡಿಸಿದರು. ಸಂಸ್ಥಾನದಿಂದಲೂ ಧನಸಹಾಯ ಮಾಡಿ ನಿಲಯಗಳನ್ನು ಕಟ್ಟಿಸಿದರು. ನಮ್ಮ ಸಮಾಜ ಏಳಿಗೆ ಹೊಂದಬೇಕಾದರೆ ಜನ ವಿದ್ಯಾವಂತರಾಗಬೇಕು ಎಂಬುದನ್ನು ಅರಿತ ಅವರು ಇದನ್ನು ವೀರವ್ರತವೆಂದು ಭಾವಿಸಿ ಮುನ್ನಡೆದರು. ಆಗಿನ ಕಾಲಕ್ಕೆ ಅವರು ಇದಕ್ಕಾಗಿ ೬೦ ಲಕ್ಷ ರೂಪಾಯಿಗಳನ್ನು ವಿನಿಯೋಗ ಮಾಡಿದ್ದರೆಂಬುದು ಅವರ ಸಾಮಾಜಿಕ ಕಾಳಜಿ, ಮುಂದಾಲೋಚನೆ ಯಾವ ಮಟ್ಟದ್ದಾಗಿತ್ತು ಎಂಬುದನ್ನು ಮನದಟ್ಟು ಮಾಡುತ್ತದೆ. ಈ ಮಹಾಕಾರ್ಯವನ್ನು ಅವರು ಅಗುಮಾಡಿದ ರೀತಿ ಇತಿಹಾಸದ ಮಾತಾಗಿದೆ. ಹೀಗಾಗಿ ಅನೇಕ ಜಯದೇವ ವಿದ್ಯಾರ್ಥಿ ನಿಲಯಗಳು ಬಡ ವಿದ್ಯಾರ್ಥಿಗಳ ಕೃಪಾಛತ್ರವಾದವು. ಲಕ್ಷಾಂತರ ವಿದ್ಯಾರ್ಥಿಗಳು ಇವುಗಳಲ್ಲಿ ಕಲಿತು ಇಂದು ಸಮಾಜದಲ್ಲಿ ಉನ್ನತ ಸ್ಥಾನಮಾನಗಳಲ್ಲಿದ್ದು ಗಣ್ಯರಾಗಿ ಬಾಳುತ್ತಿದ್ದಾರೆ. ಇಡೀ ಸಮಾಜ ಬೃಹನ್ಮಠದಂತಹ ವೀರಶೈವ ಮಠಗಳಿಗೆ ಋಣಿಯಾಗಿರಬೇಕಿದೆ.

ಶೂನ್ಯಪೀಠ ಪರಂಪರೆಯ ೨೭ನೆಯ ಜಗದ್ಗುರುಗಳಾಗಿ ೧೯೬೪ರಲ್ಲಿ ಪರಮಪೂಜ್ಯ ಶ್ರೀ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಶ್ರೀಮಠದ ಶೈಕ್ಷಣಿಕ ಕ್ಷೇತ್ರದಲ್ಲಿ ನವಮನ್ವಂತರ ಆರಂಭವಾಯಿತು. ಅವರು ಬದಲಾಗುತ್ತಿರುವ ಕಾಲಕ್ಕೆ ತಕ್ಕುದಾದ ಯೋಜನೆಗಳನ್ನು ರೂಪಿಸಿ, ಅವನ್ನು ಕಾರ್ಯಗತಗೊಳಿಸುತ್ತಾ ಬಂದುದು ಕಾಣುತ್ತದೆ. ಅವರು ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠವನ್ನು ಸ್ಥಾಪಿಸುವುದರ ಮೂಲಕ ಮಠದ ಶೈಕ್ಷಣಿಕ ಪ್ರಗತಿಗೆ ಬುನಾದಿ ಹಾಕಿದರು. ೧೯೬೮ರ ಜೂನ್ ತಿಂಗಳಿನಲ್ಲಿ ನಡೆದ ಸುಂದರ ಸಮಾರಂಭವು ಶ್ರೀ ಮಠದ ಇತಿಹಾಸದ ಸುವರ್ಣಾಧ್ಯಾಯವನ್ನು ತೆರೆಯಿತು. ಅಂದು ವಿದ್ಯಾಪೀಠದ ಆರಂಭೋತ್ಸವ. ಅಂದೇ ಬೃಹನ್ಮಠದ ಪ್ರೌಢಶಾಲೆಯ

ಶುಭಾರಂಭವೂ ಆಯಿತು. ಅಂದು ನಟ್ಟ ಸಸಿ ಇಂದು ವಟವೃಕ್ಷದಂತೆ ಬೆಳೆದು ನಿಂತಿದೆ. ಇಂದು ವಿದ್ಯಾಪೀಠವು ನರ್ಸರಿ, ಪ್ರಾಥಮಿಕ ಶಾಲೆಯಿಂದ ಹಿಡಿದು ಪದವಿ ತರಗತಿವರೆಗೆ ಅನೇಕ ಶಾಲಾ ಕಾಲೇಜುಗಳನ್ನು ಹೊಂದಿದೆ. ಇದರಲ್ಲಿ ಪ್ರೈಮರಿ, ಹೈಸ್ಕೂಲು, ಕಿರಿಯ ಹಾಗೂ ಹಿರಿಯ ಕಾಲೇಜುಗಳು, ತಾಂತ್ರಿಕ ತರಬೇತಿ ಕಾಲೇಜುಗಳು, 'ಬಿ' ಫಾರ್ಮಾ ಕಾಲೇಜು, ದೈಹಿಕ ತರಬೇತಿ ಕಾಲೇಜು, ಇಂಜನಿಯರಿಂಗ್ ಕಾಲೇಜು ಹಾಗೂ ಡೆಂಟಲ್ ಕಾಲೇಜುಗಳೂ ಸೇರಿವೆ. ಅವುಗಳಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶ ಹಾಗೂ ಪ್ರೋತ್ಸಾಹ ನೀಡುವ ಸಲುವಾಗಿ ಪ್ರತ್ಯೇಕ ಶಾಲಾ ಕಾಲೇಜುಗಳನ್ನು ತೆರೆಯಲಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಹೊಂದಿಕೊಂಡಂತೆ ವಿದ್ಯಾರ್ಥಿನೀ ನಿಲಯಗಳೂ ಇವೆ.

ಈ ಶಿಕ್ಷಣಸಂಸ್ಥೆಗಳಲ್ಲಿ ಶಿಸ್ತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಆಯಾ ಸಂಸ್ಥೆಗಳಲ್ಲಿ ಸುಸಜ್ಜಿತ ಗ್ರಂಥಾಲಯ, ವಾಚನಾಲಯಗಳು ಇದ್ದು, ಅನೇಕ ಅಮೂಲ್ಯ ಗ್ರಂಥಗಳು ವಿದ್ಯಾರ್ಥಿಗಳ ಪರಾಮರ್ಶನಕ್ಕೆ ಒದಗಿಸುವ ವ್ಯವಸ್ಥೆಯಿದೆ. ವಿದ್ಯಾರ್ಥಿಗಳು ತಮ್ಮ ಸಾಮಾನ್ಯಜ್ಞಾನವನ್ನು ಕಾಲೋಚಿತಗೊಳಿಸಿಕೊಳ್ಳಲು ಹಾಗೂ ತಾವು ಕಲಿಯುವ ವಿಶೇಷ ವಿಷಯಗಳಿಗೆ ಸಂಬಂಧಿಸಿದಂತೆ ಪರಿಣತಿ ಪಡೆಯಲು ಅವು ಸಹಕಾರಿಯಾಗಿವೆ. ವಿದ್ಯಾರ್ಥಿಗಳ ಸುಪ್ತಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ, ಸೂಕ್ತ ಮಾರ್ಗದರ್ಶನ ನೀಡುತ್ತಿರುವುದರಿಂದ ಸಂಸ್ಥೆಗಳು ಗುಣಮಟ್ಟದಲ್ಲೂ ಹೆಚ್ಚಿನ ಪ್ರಗತಿ ಸಾಧಿಸಿವೆ. ಉದಾಹರಣೆಗೆ, ಕಡಿಮೆ ಅವಧಿಯಲ್ಲಿಯೇ ಇಂಜನಿಯರಿಂಗ್ ಮತ್ತು ಡೆಂಟಲ್ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ಅನೇಕ ರ್‍ಯಾಂಕುಗಳನ್ನು, ಪ್ರಶಸ್ತಿ ಪುರಸ್ಕಾರಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಗಳಿಸಿದ್ದಾರೆ. ಇದರಿಂದ ವಿದ್ಯಾಪೀಠಕ್ಕೆ ಹೆಚ್ಚಿನ ಕೀರ್ತಿ ಸಂದಿದೆ.

ಶ್ರೀ ಮುರುಘರಾಜೇಂದ್ರ ವಿದ್ಯಾಪೀಠದ ಮಹೋದ್ದೇಶಗಳನ್ನು ಕೃತಿಗಿಳಿಸುವಲ್ಲಿ ವಿಶೇಷವಾಗಿ ಶ್ರಮಿಸುತ್ತಿರುವ ವಿವಿಧ ವಿದ್ಯಾಲಯಗಳ ಪ್ರಾಂಶುಪಾಲರು, ಪ್ರಾಧ್ಯಾಪಕರು, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಯವರು ಅಭಿನಂದನಾರ್ಹರಾಗಿದ್ದಾರೆ. ಇಂಥ ಶೈಕ್ಷಣಿಕ ಸಾಧನೆಯ ಹಿಂದೆ ಲಿಂ. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ದಿವ್ಯಕೃಪೆ ಹಾಗೂ ಇಂದಿನ ಪೂಜ್ಯರಾದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳ ದಿವ್ಯ ಮಾರ್ಗದರ್ಶನ, ಆಡಳಿತಾಧಿಕಾರಿ ಶ್ರೀ ಎಸ್.ಕೆ. ಬಸವರಾಜನ್ ಅವರ ಕರ್ತೃತ್ವ ಶಕ್ತಿಗಳೂ ಇವೆ ಎಂಬುದನ್ನು ಮರೆಯುವಂತಿಲ್ಲ.

ವಿದ್ಯಾಸಂಸ್ಥೆಗಳಿಗೆ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆ. ಕ್ರೀಡೆಯು ದೈಹಿಕ ವ್ಯಾಯಾಮವನ್ನು ಒದಗಿಸುವುದರ ಜೊತೆಗೆ ಮಾನಸಿಕ ಶಿಸ್ತನ್ನು ತರುತ್ತದೆ. ಆದ್ದರಿಂದಲೇ ವಿದ್ಯಾರ್ಥಿಗಳಿಗೆ ಕ್ರೀಡೆ ಹಾಗೂ ದೈಹಿಕಶಿಕ್ಷಣ ನೀಡಲಾಗುತ್ತಿದೆ. ಅಲ್ಲದೆ ಒನಕೆ ಓಬವ್ವ ಕ್ರೀಡಾಂಗಣ, ಶ್ರೀ ಮುರುಘರಾಜೇಂದ್ರ ಕ್ರೀಡಾಂಗಣಗಳಂತಹ ಸುಸಜ್ಜಿತ ಆಟದ ಮೈದಾನಗಳ ನಿರ್ಮಾಣಕ್ಕೆ ನೆರವಾಗಿ ಪ್ರೋತ್ಸಾಹಿಸಲಾಗಿದೆ.

ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಸಂಸ್ಥೆ (ರಿ) ಯು ನಡೆಸುತ್ತಿರುವ ಶಾಲಾಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳು:-

ತಾಂತ್ರಿಕ ವಿದ್ಯಾಶಾಲೆಗಳು : ೧. ಎಸ್.ಜೆ.ಎಂ. ತಾಂತ್ರಿಕ ಮಹಾವಿದ್ಯಾಲಯ, ಚಿತ್ರದುರ್ಗ, ೨. ಎಸ್.ಜೆ.ಎಂ. ದಂತ ಕಾಲೇಜು, ಚಿತ್ರದುರ್ಗ, ೩. ಎಸ್.ಜೆ.ಎಂ. ಪಾಲಿಟೆಕ್ನಿಕ್, ಚಿತ್ರದುರ್ಗ, ೪. ಎಸ್.ಜೆ.ಎಂ. ಪಾಲಿಟೆಕ್ನಿಕ್, ಬೀರೂರು, ೫. ಎಸ್.ಜೆ.ಎಂ. 'ಡಿ' ಫಾರ್ಮ ಕಾಲೇಜು, ಚಿತ್ರದುರ್ಗ, ೬. ಎಸ್.ಜೆ.ಎಂ. 'ಬಿ' ಫಾರ್ಮ ಕಾಲೇಜು ಚಿತ್ರದುರ್ಗ, ೭. ಎಸ್.ಜೆ.ಎಂ.ಸಿ.ಪಿ.ಇಡಿ. ಕಾಲೇಜು, ಸಿರಸಿ (ಉತ್ತರ ಕನ್ನಡ), ಮತ್ತು ೮. ಎಸ್.ಜೆ.ಎಂ. ಸಿ.ಪಿ.ಇಡಿ. ಕಾಲೇಜು, ಚಿತ್ರದುರ್ಗ, ೯. ಎಸ್.ಜೆ.ಎಂ. ಪಾಲಿಟೆಕ್ನಿಕ್, ಚಳ್ಳಕೆರೆ.

ಪದವಿ ಕಾಲೇಜುಗಳು ಮತ್ತು ಪದವಿಪೂರ್ವ ಕಾಲೇಜುಗಳು: ೧. ಎಸ್.ಜೆ.ಎಂ. ಕಲೆ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು, ಚಿತ್ರದುರ್ಗ, ೨. ಎಸ್.ಜೆ.ಎಂ. ಪ್ರಥಮದರ್ಜೆ ಮಹಿಳಾ ಕಾಲೇಜು, ಚಿತ್ರದುರ್ಗ, ೩. ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಧಾರವಾಡ, ೪. ಎಸ್.ಜೆ.ಎಂ. ಸಂಜೆ ಕಾಲೇಜು, ಚಿತ್ರದುರ್ಗ, ೫. ಎಸ್.ಜೆ.ಎಂ. ವೃತ್ತಿಪರ ಕಾಲೇಜು, ಚಿತ್ರದುರ್ಗ, ೬. ಎಸ್.ಜೆ.ಎಂ. ಪ್ರಥಮದರ್ಜೆ ಕಾಲೇಜು, ತರೀಕೆರೆ, ೭. ಬಿ.ಎ.ಜೆ.ಎಸ್.ಎಸ್. ಮಹಿಳಾ ಕಾಲೇಜು, ರಾಣೆಬೆನ್ನೂರು, ೮. ಎಸ್.ಜೆ.ಎಂ. ಪ್ರಥಮದರ್ಜೆ ಮಹಿಳಾ ಕಾಲೇಜು, ಹೊಳಲಕೆರೆ, ೯. ಎಸ್.ಜೆ.ಎಂ. ಜೂನಿಯರ್ ಕಾಲೇಜು, ಹೊಸಮಠ, ಹಾವೇರಿ, ೧೦. ಎಸ್.ಜೆ.ಎಂ. ಮಹಿಳಾ ಜೂನಿಯರ್ ಕಾಲೇಜು, ರಾಣೆಬೆನ್ನೂರು, ೧೧. ಬಾಪೂಜಿ ಜೂನಿಯರ್ ಕಾಲೇಜು,

ಭರಮಸಾಗರ, ೧೨. ಶ್ರೀ ಪ್ರಸನ್ನ ರಾಮೇಶ್ವರ ಜೂನಿಯರ್ ಕಾಲೇಜು, ಬೆಲಗೂರು (ಹೊಸದುರ್ಗ ತಾಲ್ಲೂಕು) ಮತ್ತು ೧೩. ಎಸ್.ಜೆ.ಎಂ. ಜೂನಿಯರ್ ಕಾಲೇಜು, ಚಿತ್ರದುರ್ಗ.

ಪ್ರೌಢಶಾಲೆಗಳು: ೧. ಶ್ರೀ ಬೃಹನ್ಮಠ ಪ್ರೌಢಶಾಲೆ, ಚಿತ್ರದುರ್ಗ, ೨. ಶ್ರೀ ಬಕ್ಕೇಶ್ವರ ಬಾಲಿಕಾ ಪ್ರೌಢಶಾಲೆ, ದಾವಣಗೆರೆ, ೩. ಶ್ರೀ ರುದ್ರೇಶ್ವರ ಪ್ರೌಢಶಾಲೆ, ಹೆಬ್ಬಾಳು (ದಾವಣಗೆರೆ ತಾಲ್ಲೂಕು) ೪. ಎಸ್.ವಿ.ಎಸ್. ಪ್ರೌಢಶಾಲೆ, ಐಮಂಗಲ (ಹಿರಿಯೂರು ತಾಲ್ಲೂಕು) ೫. ಶ್ರೀ ಬಸವೇಶ್ವರ ಪ್ರೌಢಶಾಲೆ, ಆಲದ ಕಟ್ಟೆ (ಹಾವೇರಿ ತಾಲ್ಲೂಕು), ೬. ಬಾಪೂಜಿ ಗ್ರಾಮಾಂತರ ಪ್ರೌಢಶಾಲೆ, ಭರಮಸಾಗರ (ಚಿತ್ರದುರ್ಗ ತಾಲ್ಲೂಕು), ೭. ಎಸ್.ಜೆ.ಎಂ.ಬಾಲಿಕಾ ಪ್ರೌಢಶಾಲೆ, ಸೋಮವಾರಪೇಟೆ (ಕೊಡಗು ಜಿಲ್ಲೆ), ೮. ಎಸ್.ಜೆ.ಎಂ. ಪ್ರೌಢಶಾಲೆ, ಬೀರೂರು, ೯. ಎಂ.ಆರ್.ಎಸ್.ಯಶೋದಮ್ಮ ನಾಗತಿ ಪ್ರೌಢಶಾಲೆ, ತರೀಕೆರೆ, ೧೦. ಶ್ರೀ ಫಲಾಹಾರೇಶ್ವರ ಪ್ರೌಢಶಾಲೆ, ಆಸುಟಿ (ರೋಣ ತಾಲ್ಲೂಕು), ೧೧. ಪ್ರಿಯದರ್ಶಿನಿ ಬಾಲಿಕಾ ಪ್ರೌಢಶಾಲೆ, ಬುರುಜನಹಟ್ಟಿ ಚಿತ್ರದುರ್ಗ, ೧೨. ದೊರೆ ಶ್ರೀ ವೀರರಾಜೇಂದ್ರ ಪ್ರೌಢಶಾಲೆ, ಸೋಮವಾರಪೇಟೆ, ೧೩. ಎಸ್.ಜೆ.ಎಂ. ಪ್ರೌಢಶಾಲೆ, ಹಾವೇರಿ, ೧೪. ಶ್ರೀ ದಶರಥ ರಾಮೇಶ್ವರ ಪ್ರೌಢಶಾಲೆ, ಗುಡ್ಡದ ನೇರಲಕೆರೆ ಜಿ.ಎನ್. ಕೆರೆ (ಹೊಸದುರ್ಗ ತಾಲ್ಲೂಕು), ೧೫. ಜವಳಿ ಹನುಮಂತಪ್ಪ ಪ್ರೌಢಶಾಲೆ, ಗುಯಿಲಾಳು (ಹಿರಿಯೂರು ತಾಲ್ಲೂಕು), ೧೬. ಮಹದೇವ ಮೈಲಾರ ಪ್ರೌಢಶಾಲೆ, ಮೋಟೆಬೆನ್ನೂರು, ೧೭. ಎಸ್‌ಜೆ.ಎಂ. ಬಾಲಿಕಾ ಪ್ರೌಢಶಾಲೆ, ಚಿಕ್ಕಜಾಜೂರು (ಹೊಳಲಕೆರೆ ತಾಲೂಕು) ೧೮. ಎಸ್.ಜೆ.ಎಂ ಪ್ರೌಢಶಾಲೆ, (ಹೊಳಲಕೆರೆ), ೧೯. ಎಸ್.ಜೆ.ಎಂ. ಪ್ರೌಢಶಾಲೆ, ಮಾದಾಪುರ ಉತ್ತರ ಕೊಡಗು ಮತ್ತು ೨೦. ಎಸ್.ಜೆ.ಎಂ. ಪ್ರೌಢಶಾಲೆ, ಹೊಸದುರ್ಗ.

ಪ್ರಾಥಮಿಕ ಮತ್ತು ನರ್ಸರಿ ಶಾಲೆಗಳು: ೧. ಅರುಣೋದಯ ಉನ್ನತ ಪ್ರಾಥಮಿಕ ಶಾಲೆ, ಹೊಳಲಕೆರೆ, ೨. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಭರಮಸಾಗರ (ಚಿತ್ರದುರ್ಗ ತಾಲ್ಲೂಕು) ೩. ಎಸ್.ಜೆ.ಎಂ.ಪ್ರಾಥಮಿಕ ಶಾಲೆ, ಸೋಮವಾರಪೇಟೆ (ಕೊಡಗು ಜಿಲ್ಲೆ) ೪. ಎಸ್.ಜೆ.ಎಂ.ಉನ್ನತ ಪ್ರಾಥಮಿಕ ಶಾಲೆ, ಚಿತ್ರದುರ್ಗ, ೫. ಶಕ್ತಿ ಉನ್ನತ ಪ್ರಾಥಮಿಕ ಶಾಲೆ, ಚಿತ್ರದುರ್ಗ, ೬. ಶ್ರೀದೇವಿ ಲಕ್ಕಮ್ಮ ಉನ್ನತ ಪ್ರಾಥಮಿಕ ಶಾಲೆ, ಕಸವನಹಳ್ಳಿ, ೭. ಶ್ರೀ ಚೆನ್ನಕೇಶವ ಉನ್ನತ ಪ್ರಾಥಮಿಕ ಶಾಲೆ, ಕನಸವನಹಳ್ಳಿ. ೮. ಶಕ್ತಿ ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಶಾಲೆ, ಚಿತ್ರದುರ್ಗ ಮತ್ತು ೯. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಚಿತ್ರದುರ್ಗ.

ವಿದ್ಯಾರ್ಥಿನಿಲಯಗಳು: ೧. ಎಸ್.ಜೆ.ಎಂ. ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿಲಯ, ಚಿತ್ರದುರ್ಗ, ೨. ಎಸ್.ಜೆ.ಎಂ.ದಂತ ಮಹಾವಿದ್ಯಾಲಯದ ವಿದ್ಯಾರ್ಥಿನಿಲಯ, ಚಿತ್ರದುರ್ಗ, ೩. ಎಸ್.ಜೆ.ಎಂ. ಮಹಿಳಾ ವಿದ್ಯಾರ್ಥಿನಿಲಯ, ಚಿತ್ರದುರ್ಗ, ೪. ಎಸ್.ಜೆ.ಎಂ.ಪಾಲಿಟೆಕ್ನಿಕ್ ವಿದ್ಯಾರ್ಥಿನಿಲಯ, ಚಿತ್ರದುರ್ಗ, ೫. ಎಸ್.ಜೆ.ಎಂ. ಬಿ, ಫಾರ್ಮ ವಿದ್ಯಾರ್ಥಿನಿಲಯ, ಚಿತ್ರದುರ್ಗ, ೬. ಎಸ್.ಜೆ.ಎಂ.ಪರಿಶಿಷ್ಟಜಾತಿ ಮತ್ತುಪರಿಶಿಷ್ಟವರ್ಗದ ವಿದ್ಯಾರ್ಥಿನಿಲಯ, ತುಮಕೂರು, ೭. ಶ್ರೀ ಜಯದೇವ ವಿದ್ಯಾರ್ಥಿನಿಲಯ, ಚಿತ್ರಮರ್ಗ, ೮. ಶ್ರೀ ಜಯದೇವ ವಿದ್ಯಾರ್ಥಿನಿಲಯ, ತುಮಕೂರು, ೯. ಶ್ರೀ ಜಯದೇವ ವಿದ್ಯಾರ್ಥಿನಿಲಯ, ದಾವಣಗೆರೆ, ೧೦. ಶ್ರೀ ಜಯದೇವ ವಿದ್ಯಾರ್ಥಿನಿಲಯ, ತಿಪಟೂರು, ೧೧. ಶ್ರೀ ಜಯದೇವ ವಿದ್ಯಾಥಿನಿಲಯ, ಅರಸೀಕೆರೆ, ೧೨. ಶ್ರೀ ಜಯದೇವ ವಿದ್ಯಾರ್ಥಿನಿಲಯ, ಹೊಸದುರ್ಗ.

ಪುಸ್ತಕ ಭಂಡಾರ: ಎಸ್.ಜೆ.ಎಂ. ವಾಚನಾಲಯ ಮತ್ತು ಗ್ರಂಥಾಲಯ, ಬೃಹನ್ಮಠ, ಚಿತ್ರದುರ್ಗ ಹಾಗೂ ಆಯಾ ಶಾಲಾ ಕಾಲೇಜುಗಳಲ್ಲಿರುವ ಸುಸಜ್ಜಿತ ವಾಚನಾಲಯಗಳು ಹಾಗೂ ಪುಸ್ತಕ ಭಂಡಾರಗಳು ಓದುಗರಿಗೆ ಅಗತ್ಯವಾದ ಪುಸ್ತಕಗಳನ್ನು ನಿಯತಕಾಲಿಕೆಗಳನ್ನು ಒದಗಿಸುತ್ತಿವೆ.

ಹೀಗೆ ಚಿತ್ರದುರ್ಗದ ಬೃಹನ್ಮಠ ಸಮಾಜಕ್ಕೆ, ಆ ಮೂಲಕ ನಾಡಿಗೆ ನೀಡುತ್ತಿರುವ ಕಾಣಿಕೆ ಅನುಪಮವಾದುದು. ನಾಡವರನ್ನು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮೇಲೆತ್ತಲು ಶ್ರೀ ಮಠ ಕೈಗೆತ್ತಿಕೊಂಡ ಜನೋಪಯೋಗಿ ಕಾರ್ಯಕ್ರಮಗಳು ನಾಡಿನ ಇತಿಹಾಸದ ಭಾಗವಾಗಿವೆಯೆಂಬುದು ನಾವು ಅಭಿಮಾನ ಪಡಬೇಕಾದ ಸಂಗತಿಯಾಗಿದೆ.

ಹುಬ್ಬಳ್ಳಿ ಮೂರುಸಾವಿರಮಠದ ಸಾಂಸ್ಕೃತಿಕ ಕೊಡುಗೆ

ಪ್ರೊ. ಕೊಟ್ರೇಶ್ ಆರಾಧ್ಯಮಠ

ಶ್ರೀ ಜಗದ್ಗುರು ಮೂರುಸಾವಿರಮಠವು ಪ್ರಾಚೀನ ಪರಂಪರೆಯ ಜಾಗೃತ ಪೀಠವಾಗಿರುವುದರೊಂದಿಗೆ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವೂ ಆಗಿದೆ. ಭಾರತೀಯ ಸಂಸ್ಕೃತಿಯನ್ನು ಬಸವಾದಿ ಪ್ರಮಥರ ತತ್ವಗಳನ್ನು ಒಳಗೊಂಡ ಈ ಪೀಠ ಹಲವು ಕ್ಷೇತ್ರಗಳಲ್ಲಿ ಅಪಾರ ಸಾಧನೆಗಳನ್ನು ಗೈದಿದೆ.

ಹನ್ನೆರಡನೆಯ ಶತಮಾನದಿಂದಲೂ ಧರ್ಮಧ್ವಜವನ್ನು ಎತ್ತಿ ಆತ್ಮ ಪ್ರತಿಭೆಯನ್ನು ಬೆಳಗಿಸಿ, ಭಕ್ತಜನಕೋಟಿಯನ್ನು ಉದ್ಧಾರ ಮಾಡಿರುವ, ಮಾಡುತ್ತಿರುವ ಹಾಗೂ ಮುಂದುವರಿಯಲು ಸಂಕಲ್ಪಿಸಿರುವ ಈ ಪೀಠದ ವಿಷಯವು 'ಶಿರಸಿ' ಶಾಸನದಿಂದ ಕಂಡು ಬರುತ್ತದೆಯೆಂದು ಶ್ರೀ ಮೂರುಸಾವಿರಮಠದ ಬಗ್ಗೆ ಸುಪ್ರಸಿದ್ಧ ಐತಿಹಾಸಿಕ ವಿಮರ್ಶಕರಾದ ಡಾ. ವರದರಾಜ ಉಮರ್ಜಿ ಅವರ ಸಂಶೋಧನೆಯಿಂದ ತಿಳಿದು ಬರುತ್ತದೆ. ಹುಬ್ಬಳ್ಳಿಯಲ್ಲಿ ಧಾರ್ಮಿಕ ಕೇಂದ್ರವಾಗಿರುವ ಈ ಜಾಗೃತ ಪೀಠದ ಮೂಲ ಕರ್ತೃಗಳು ಒಂದನೇ ಶ್ರೀ ಜಗದ್ಗುರು ಗುರುಸಿದ್ಧೇಶ್ವರರು. ಇವರು ಭಾರತೀಯ ಸಂಸ್ಕೃತಿಯೊಂದಿಗೆ ಸಾಧನೆಯನ್ನು ಸಿದ್ಧಿಸಿಕೊಂಡ ಸಿದ್ಧರು, ಶಿವಯೋಗಿವರೇಣ್ಯರು, ಭಕ್ತರ ಇಷ್ಟಾರ್ಥ ಸಿದ್ಧಿಪ್ರದಾತರು, ಶಾಪಾನುಗ್ರಹ ಸಮರ್ಥರು, ನಿರ್ವಿಕಲ್ಪ ಸಮಾಧಿಯನ್ನು ಪಡೆದ ಈ ಹುಬ್ಬಳ್ಳಿಯಲ್ಲಿಯ ಪೀಠದ ಈ ಮೂಲ ಕರ್ತೃವಿನ 'ಗದ್ದುಗೆ' ದೇವಾಲಯದ ಗರ್ಭಗುಡಿಯು ದಿವ್ಯಶಕ್ತಿಯನ್ನು ಕೊಡುವ ಅದ್ಭುತ ಶಕ್ತಿ ಕೇಂದ್ರವೆಂದರೆ ತಪ್ಪಾಗಲಿಕ್ಕಿಲ್ಲ. ಅಂತೆಯೇ ಇದು ಸರ್ವಧರ್ಮವನ್ನು ಉದ್ಧರಿಸುವ ಪುಣ್ಯಕ್ಷೇತ್ರವೆಂದೂ, ಶಾಂತಿಧಾಮವೆಂದೂ, ಶರಣ ಸಂಸ್ಕೃತಿಯ ಕೇಂದ್ರವೆಂದೂ ಪೂಜೆಗೊಳ್ಳುತ್ತದೆ.

ಜಾತಿ ಕುಲಗಳ ನಾತಿಲ್ಲದೆ, ಮೇಲು-ಕೀಳಿನ ಮಾತಿಲ್ಲದೆ, ಬಡ-ಬಲ್ಲಿದರ ಭೇದವಿಲ್ಲದೆ ಸರ್ವ ಧರ್ಮದ ಲಕ್ಷಾನುಲಕ್ಷ ಜನರು ಶ್ರೀ ಮಠದ ಭಕ್ತರಾಗಿ, ಅಭಿಮಾನಿಗಳಾಗಿ ಗೌರವ ವಿಶ್ವಾಸಗಳಿಂದ ನಡೆದುಕೊಳ್ಳುತ್ತಿದ್ದಾರೆ. ಹೀಗೆ ಹುಬ್ಬಳ್ಳಿಯ ಹೃದಯದಂತಿರುವ ಶ್ರೀಮಠಕ್ಕೆ ಜಾಗೃತ ಚೈತನ್ಯ ಶಕ್ತಿಯಾಗಿದೆ.

ಮಠವೆಂದರೆ ಕೇವಲ ಒಂದು ಭವ್ಯ ಕಟ್ಟಡ ಮಾತ್ರ ಅಲ್ಲ. ಅದೊಂದು ಧಾರ್ಮಿಕ ಸೌಧವಾಗಿ ಸಮಸ್ತ ಸಮಾಜವೇ ಸಾಂಘಿಕವಾಗಿ ವಿಕಾಸಗೊಳ್ಳುವಂತೆ ಮಾಡುವ ಪೂಜಾಗೃಹ ಎನ್ನಬಹುದು. ಮಠಗಳು ಮಾನವ ಕುಲದ ನಂದಾದೀಪಗಳು. ಮಠಗಳಿಂದಲೇ ಭಾರತದ ಸಂಸ್ಕೃತಿ ಉಳಿದಿರುವುದು ಎಂದು ಭಾರತದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದರು ಹುಬ್ಬಳ್ಳಿಯಲ್ಲಿ ಶ್ರೀ ಮೂರುಸಾವಿರಮಠಕ್ಕೆ ಆಗಮಿಸಿದಾಗ ಹೇಳಿದ ಈ ನುಡಿಮುತ್ತುಗಳು ಅರ್ಥವತ್ತಾಗಿವೆ.

೧೯೫೮ರ ಮೇ ೧ನೇ ದಿನದೊಡನೇ ಕರ್ನಾಟಕದ ತುಂಬ ನವಚೈತನ್ಯ ಪುನಃ ಉದಯಿಸಿತು. ಅದೊಂದು ಶುಭ ಮಂಗಲ ಮುಹೂರ್ತ, ವಿಜಾಪುರ ಜಿಲ್ಲೆಯ ಚಿತ್ತರಗಿ ಇಲಕಲ್ ಮಠಗಳ ಪವಿತ್ರ ಪೀಠವನ್ನು ಆರೋಹಿಸಬೇಕಾಗಿದ್ದ ಹಾಸನ ಜಿಲ್ಲೆಯ ಶಶಿವಾಳ ಗ್ರಾಮದ ಕೊಳಕಲ್ ಹಿರೇಮಠದ ಶ್ರೀ ವಿಜಯಮಹಾಂತೇಶ ದೇವರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಎಂಬ ನಾಮಕರಣದೊಂದಿಗೆ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಖ್ಯಾತಿವೆತ್ತ ಹುಬ್ಬಳ್ಳಿ ಮೂರುಸಾವಿಮಠದ ಶೂನ್ಯ ಸಿಂಹಾಸನದ ಶ್ರೀ ಜಗದ್ಗುರು ಪೀಠವನ್ನಲಂಕರಿಸಿದರು.

ಈ ಶೂನ್ಯ ಸಿಂಹಾಸನಕ್ಕೆ ಇವರು ಸರ್ವ ಸಮರ್ಥರಿರುವರೆಂದೇ ಪೂರ್ವ ಪೀಠಾಧಿಪತಿಗಳಾದ ಲಿಂ. ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರು ಇವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡರು. ಇವರು ತಮ್ಮ ಬಾಲ್ಯದ ಐದನೆಯ ವಯಸ್ಸಿನಿಂದಲೂ ಶಿವಯೋಗಮಂದಿರದಲ್ಲಿದ್ದು, ಶಿವಯೋಗದ ಅಧ್ಯಯನ ಮಾಡುತ್ತಾ ಲಿಂ. ಕೆಳದಿ ಪಟ್ಟಾಧ್ಯಕ್ಷರಿಂದ ದೀಕ್ಷೆ, ಜಡೆ ನಿರಂಜನ ಶ್ರೀಗಳಿಂದ ಅನುಗ್ರಹ ಪ್ರಸಾದಿಸ್ಥಲ ಹಾಗೂ ಸಂಸ್ಕಾರ ಪಡೆದ ಪರಮಪೂಜ್ಯರಾಗಿದ್ದಾರೆ. ಇವರು ಶಿವಯೋಗಮಂದಿರ, ಕಾಶಿ ಕ್ಷೇತ್ರಗಳಲ್ಲಿ ಅಧ್ಯಯನ, ಅನುಷ್ಠಾನ ಮಾಡಿ, ಕಲ್ಕತ್ತಾದ ಕಾವ್ಯತೀರ್ಥ, ಢಾಕಾದ ಸಾಹಿತ್ಯರತ್ನ, ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ನಾತಕೋತ್ತರ

ವೇದಾಂತಾಚಾರ್ಯ ಸಂಸ್ಕೃತ ಪದವೀಧರರಾಗಿದ್ದಾರೆ. ಜೊತೆಗೆ ಬಿ.ಎ. ಮಟ್ಟದ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ಪದವೀಧರರಾಗಿದ್ದಾರೆ. ಇವರು ತಮ್ಮ ಗುರುಗಳಾದ ಮೂರುಸಾವಿರಮಠದ ಲಿಂಗೈಕ್ಯ ಶ್ರೀ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರಿಂದ ನಿರೂಪಿತವಾದಂತಹ ಮಾನವತಾವಾದವನ್ನು ಈ ೩೮ ವರ್ಷಗಳಲ್ಲಿ ಪುರಸ್ಕರಿಸಿ ಕಾರ್ಯರೂಪಕ್ಕಿಳಿಸಿದ್ದಾರೆ.

ಗಂಗಾಧರ ದರ್ಶನ

ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಪೀಠಾರೋಹಣದ ೩೮ ವರ್ಷಗಳು ಶ್ರೀ ಮೂರುಸಾವಿರಮಠದ ಸಾವಿರ ವರ್ಷದ ಇತಿಹಾಸದಲ್ಲಿ ಮರೆಯದ ಮೈಲುಗಲ್ಲುಗಳು. ಲೋಕದರ್ಶನ ಹಾಗೂ ಶಿವದರ್ಶನಗಳ ಸಮರಸದ ಶಿವಾನುಭವ ಗಡಿಯಾರದ ಮುಳ್ಳು ಬಿಡುವಿಲ್ಲದೆ ನಡೆದಂತೆ ದಣಿವಿಲ್ಲದೆ ದುಡಿದ ಪೂಜ್ಯ ಜಗದ್ಗುರುಗಳು ಒಂದು ವ್ಯಕ್ತಿಯಲ್ಲ. ಅನೇಕ ಶಕ್ತಿಗಳ ಸಂಗಮ. ಸಿದ್ಧರಾಮನ ಕರ್ಮಯೋಗ, ಬಸವಣ್ಣನ ಭಕ್ತಿಯೋಗ, ಅಲ್ಲಮ ಪ್ರಭುದೇವರ ಜ್ಞಾನಯೋಗ ಇವರಲ್ಲಿ ಸಮರಸದ ಶಿವಯೋಗ ಸಂಪಾದಿಸಿವೆಯೆಂದು ಸಮೀಪದಿಂದ ಕಂಡವರು ಮನದುಂಬಿ ಹೇಳುತ್ತಾರೆ. ಶರಣರ ಸಮಗ್ರ ಸಾಹಿತ್ಯದ ವಿಹಂಗಮ ಪರಿಚಯ ನೀಡುವ ಸುಮಾರು ೧ ಕೋಟಿ ರೂಪಾಯಿ ವೆಚ್ಚದ ೬೦೦ ಗ್ರಂಥಗಳ ಪ್ರಕಾಶನ ಘೋಷಣೆ (ಈಗಾಗಲೇ ೪೨೦ ಗ್ರಂಥಗಳ ಪ್ರಕಟಣೆ ಕರ್ನಾಟಕದ ಮಠಗಳ ಗ್ರಂಥ ಪ್ರಕಟಣೆಯ ಇತಿಹಾಸದಲ್ಲಿಯೇ ಒಂದು ದೊಡ್ಡ ದಾಖಲೆ). ಈ ಶತಮಾನದಲ್ಲಿ ಸರ್ವಜ್ಞನ ತರುವಾಯ, ಪೂರ್ಣಜ್ಞ ಶಿರೋನಾಮದ ೪೦೦೦ ತ್ರಿಪದಿಗಳಲ್ಲಿ ಮೇರುಕೃತಿ ಬರೆದಿದ್ದಾರೆ. ಸಾಹಿತ್ಯ, ಸ್ಮೃತಿ, ಧರ್ಮಗಳ ಸಮನ್ವಯ ಸಾಧಿಸಿದ ಪರಂಜ್ಯೋತಿ ಪತ್ರಿಕೆ ಪ್ರಕಟಣೆ. ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿಯ ಸಂಸ್ಕೃತಿ ಪ್ರಚಾರೋಪನ್ಯಾಸ ಶಿಬಿರಗಳು, ಕನ್ನಡ ಗ್ರಂಥಗಳಿಗೆ ಪುರಸ್ಕಾರ, ವೀರಶೈವ ಗ್ರಂಥಗಳಿಗೆ ವಿಶೇಷ ಪುರಸ್ಕಾರ ಇವು ಶ್ರೀಮಠದ ವಾಙ್ಮಯ ಪ್ರಸಾರದ ಮುಖ್ಯ ಮುಖಗಳು. ಶೈಕ್ಷಣಿಕವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದಂತೆಲ್ಲ ಮಠ, ವಿಶೇಷವಾಗಿ ಮಹಿಳಾ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡಿ, ಮಹಿಳೆಯರಿಗಾಗಿ ಶಿಶುವಿಹಾರದಿಂದ ಕಾಲೇಜಿನವರೆಗೆ ಅತ್ಯಾಧುನಿಕ ಶಿಕ್ಷಣ ಸೌಲಭ್ಯ ನೀಡಿದರು. ಇಂದು ಮಹಿಳಾ ಕಾಲೇಜು ಉತ್ತರ ಕರ್ನಾಟಕದ ಅತಿದೊಡ್ಡ ಮಹಿಳಾ ಶಿಕ್ಷಣ ಸಂಸ್ಥೆ. ಇದಲ್ಲದೆ ನೂರಾರು ಶೈಕ್ಷಣಿಕ ಸಂಸ್ಥೆಗಳಿಗೆ ಪೂಜ್ಯರು ನೀಡಿದ ಕೊಡುಗೆಗೆ ಕೊನೆಯಿಲ್ಲ ಕರ್ನಾಟಕದ ಇತಿಹಾಸದಲ್ಲಿಯೇ ವೀರಶೈವ ಜಗದ್ಗುರುಗಳಲ್ಲಿ ಪ್ರಪ್ರಥಮವಾಗಿ ವಿದೇಶಕ್ಕೆ ಹೋಗಿ, ಜಗತ್ತಿನ ೧೪ ರಾಷ್ಟ್ರಗಳಲ್ಲಿ ಸಂಚರಿಸಿ, ದಿಲ್ಲಿ-ಕ್ಯೋಟೋ-ಬ್ರೂಸೆಲ್ಸ್‌ಗಳಲ್ಲಿ ಜರುಗಿದ ಮೂರು ವಿಶ್ವಧರ್ಮಗಳ ಮಹಾಪರಿಷತ್ತುಗಳಲ್ಲಿ ಪಾಲ್ಗೊಂಡು ಕನ್ನಡದ ಜಯಭೇರಿಯನ್ನು ವಿಶ್ವದ ಬಾಂದಳದಲ್ಲಿ ಮೊಳಗಿಸಿದರು.

ಸಮಾಜ ಸೇವೆ

ಬರಗಾಲದಲ್ಲಿ ಗಂಜಿಕೇಂದ್ರ ನಿರ್ಗತಿಕರಿಗೆ ಆಶ್ರಯ ಇಂಥ ಸಮಾಜಸೇವೆ ನಿರಂತರ ನಡೆದು ಬಂದಿದೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ನೂರಾರು ಮಠಗಳಿಗೆ ಸ್ವಾಮಿಗಳನ್ನು ಸಿದ್ಧಪಡಿಸಿ ಕೊಡಮಾಡ ಶಿವಯೋಗ ಕೇಂದ್ರ ಶ್ರೀಮಠ. ಹಿಂದು ಮುಸ್ಲಿಂ ಬಾಂಧವರಲ್ಲಿ ಸಹೋದರ ಸಂಬಂಧ ಅರಳಿಸಿ ಶಾಂತಿಯ ಸುಗಂಧ ಬೀರಿ ಪ್ರೀತಿಯೇ ದೇವರು ಎಂಬ ಮಹಾಸತ್ಯವನ್ನು ಸಾರಿದರವರು ಶ್ರೀಗಳು. ಕಾಯಕವೇ ಕೈಲಾಸ ಪೂಜ್ಯರ ಪ್ರತ್ಯಕ್ಷ ಜೀವನದರ್ಶನ. ೨೦ನೇ ಶತಮಾನದಲ್ಲಿ ಪ್ರಪ್ರಥಮವಾಗಿ ೧೬೩ ಗುರುವಿರಕ್ತರೊಂದಿಗೆ ಧರ್ಮ ಜಾಗೃತಿಗಾಗಿ ಹುಬ್ಬಳ್ಳಿಯಿಂದ ಶಿವಯೋಗಮಂದಿರಕ್ಕೆ ಪಾದಯಾತ್ರೆ ಮಾಡಿದರು. ಸಹಕಾರಿ ಕ್ಷೇತ್ರದಲ್ಲಿಯೇ ಅಗ್ರಗಣ್ಯ ಪಂಕ್ತಿಯಲ್ಲಿ ನಿಲ್ಲಬಲ್ಲ ಬೃಹತ್ ಪ್ರಮಾಣದಲ್ಲಿ ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಬ್ಯಾಂಕು ಸ್ಥಾಪನೆ ಹಾಗೂ ಶಿರಢಾಣದಲ್ಲಿ ರಾಮಕೃಷ್ಣ ಮಿಶನ್ ಮಾದರಿಯಲ್ಲಿ ವಸತಿಶಾಲೆ ಸ್ಥಾಪನೆ. ಮೊದಲಾದವು ಪೂಜ್ಯರ ೩೮ ವರ್ಷಗಳ ಕಾಲ ರಂಗದ ಸಾಧನೆಗಳು.

ಶ್ರೀಮಠ ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು

ಪೂರ್ವ ಪ್ರಾಥಮಿಕ ಶಾಲೆಗಳು ೧೦, ಪ್ರಾಥಮಿಕ ಶಾಲೆಗಳು ೧, ಕಿರಿಯ ಕಾಲೇಜು ೧, ಪದವಿ ಕಾಲೇಜು

ಮಹಿಳೆಯರಿಗಾಗಿ ೧, ಐ.ಟಿ.ಐ. ಮಹಿಳೆಯರಿಗಾಗಿ ೧, ಲಲಿತಕಲಾ ಮಹಾವಿದ್ಯಾಲಯ ೧, ಸಂಸ್ಕೃತ ಕಾಲೇಜು ೧, ಹಿಂದಿ ಬಿ.ಎಡ್. ಕಾಲೇಜು ೧, ಕೀರ್ತನ ಕಾಲೇಜು ೧, ನರ್ಸರಿ ಟ್ರೈನಿಂಗ್ ಸ್ಕೂಲ್, ೩, ವೈದಿಕ ಪಾಠಶಾಲೆಗಳು ೨, ಪ್ರಸಾದ ನಿಲಯಗಳು ೪, ಟಿ.ಸಿ.ಹೆಚ್. ಕಾಲೇಜು ೧, ವಿದ್ಯಾರ್ಥಿನಿಯರ ಹಾಸ್ಟೆಲ್ ೪, ವಿದ್ಯಾರ್ಥಿಗಳ ಹಾಸ್ಟೆಲ್ ೬, ಬಿ.ಎ.ಎ. ಆಯುರ್ವೇದ ಕಾಲೇಜು.

೨೦ನೇ ಶತಮಾನದಲ್ಲಿ ಪ್ರಪ್ರಥಮವಾಗಿ ೧೬೩ ಗುರುವಿರಕ್ತರು, ಸಾವಿರಾರು ಭಕ್ತರೊಂದಿಗೆ ಧರ್ಮ ಜಾಗೃತಿಗಾಗಿ ಹುಬ್ಬಳ್ಳಿಯಿಂದ ಶಿವಯೋಗಮಂದಿರಕ್ಕೆ ಪಾದಯಾತ್ರೆ, ಸಹಸ್ರಾರು ಜನರ ದುಶ್ಚಟ ನಿವಾರಣೆ, ೩೦೦೦ ಜನರಿಗೆ ಲಿಂಗಧಾರಣ ಮಾಡಿಸಿದ್ದು, ದಾರಿಯುದಕ್ಕೂ ಹಳ್ಳಿಗಳಲ್ಲಿ ಕಲ್ಯಾಣ ಮಂಟಪ, ಅನುಭವ ಮಂಟಪ ಆರಂಭ.

ಕಂದಾಚಾರ, ಮೂಢನಂಬಿಕೆ, ದುಶ್ಚಟಗಳ ನಿವಾರಣೆಗಾಗಿ ಗ್ರಾಮಾಂತರ ಪ್ರದೇಶಗಳಿಗೆ ಹಲವಾರು ಪಾದಯಾತ್ರೆಗಳು, ವಿವಿಧ ಕಾರ್ಯಕ್ರಮಗಳ ಮೂಲಕ ಜನಮನ ತಿದ್ದುವಲ್ಲಿ, ಜಾಗೃತಗೊಳಿಸುವಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಹರಿಜನೋದ್ಧಾರಕ್ಕಾಗಿ ಪಾದಯಾತ್ರೆ, ಅವರ ದಿನನಿತ್ಯದ ಬದುಕನ್ನು ಹಸನುಗೊಳಿಸುವಲ್ಲಿ ಸತತ ಪ್ರಯತ್ನ ನಡೆಸಲಾಗುತ್ತಿದೆ.

ಹಿಂದುಳಿದ ಪರಿಶಿಷ್ಟ ಜನಾಂಗದವರಿಗಾಗಿ ಲಕ್ಷಾಂತರ ಬೆಲೆ ಬಾಳುವ ಜಮೀನು ನೀಡಿದ್ದು.

ಹರಿಜನ ಕೇರಿಯಲ್ಲಿ ಪಾದಯಾತ್ರೆ, ದಲಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಾಯ ಸಹಕಾರ ನೀಡಲಾಗಿದೆ. ನೂರಾರು ಹಿಂದುಳಿದ ಜನರಿಗೆ ಉಚಿತ ವಿವಾಹಗಳ ಏರ್ಪಾಡು, ಅಂತರ್ಜಾತೀಯ ವಿವಾಹಗಳನ್ನು ೫೦೦ ಕ್ಕೂ ಮೇಲ್ಪಟ್ಟು ವ್ಯವಸ್ಥೆ ಮಾಡಲಾಗಿದೆ.

ಮೂರುಸಾವಿರಮಠದ ವಿದ್ಯಾರ್ಥಿನಿಲಯದಲ್ಲಿ ಹಿಂದುಳಿದವರನ್ನು ಮೊದಲು ಮಾಡಿಕೊಂಡು ಸರ್ವಧರ್ಮದವರಿಗೂ ಪ್ರವೇಶ ನೀಡಲಾಗಿದೆ. ಸರ್ವಧರ್ಮದವರೆಲ್ಲರಿಗೂ ಭೇದ ಭಾವಗಳಿಲ್ಲದೇ ಪ್ರಸಾದ ನಿಲಯದಲ್ಲಿ ಸಹ ಭೋಜನ ಏರ್ಪಡಿಸಿದೆ.

ಸಾಮಾಜಿಕ ಸೇವೆಗಳಲ್ಲಿ ೧೯೮೪ ರಿಂದ ಹಿಂದು ಮುಸಲ್ಮಾನರ ಸೌಹಾರ್ದತೆಗಾಗಿ ಅಹೋರಾತ್ರಿ ಶ್ರಮಿಸಲಾಗುತ್ತಿದೆ.

ಶ್ರೀ ಮೂರು ಸಾವಿರಮಠದಲ್ಲಿನ ಪ್ರಾಚೀನ ತಾಡೋಲೆಗಳ ಸಂಸ್ಕರಣ, ಸಂರಕ್ಷಣೆ, ಪ್ರತ್ಯೇಕ ಸಂಗ್ರಹ, ಕೇಂದ್ರ ಸಹಕಾರದ ಸಹಯೋಗದೊಂದಿಗೆ ತಾಡೋಲೆಗಳ ಸ್ಲೈಡ್ ಫಿಲಂ ತಯಾರಿಕೆ, ಹಸ್ತ ಪ್ರತಿಸೂಚಿ (ಕ್ಯಾಟಲಾಗ್) ಪ್ರಕಟಣೆ ಮಾಡಲಾಗಿದೆ. ಪೀಠಾರೋಹಣ ರಜತೋತ್ಸವ ಸಂಸ್ಮರಣೆಯಲ್ಲ 'ಸಾಹಿತ್ಯ ರಥಯಾತ್ರೆ' ನಾಡಿನ ೨೫ ಊರುಗಳಲ್ಲಿ ೨೫ ಶಿವಶರಣ ಶರಣೆಯರ ವಚನ ಗ್ರಂಥ ಬಿಡುಗಡೆ ಮಾಡಲಾಗಿದೆ.

ಮುಂಬರುವ ದಿನಗಳಲ್ಲಿ ಶ್ರೀಮಠವು ನೆರವೇರಿಸಲಿರುವ ಯೋಜನೆಗಳಲ್ಲಿ ಕೆಲವು ಹೀಗಿವೆ :-

ನಾಡಿನ ಪ್ರತಿ ಜಿಲ್ಲೆಗಳಲ್ಲಿ ಹತ್ತು ವರ್ಷದೊಳಗಾಗಿ ೬೩ ಪ್ರಾಥಮಿಕ ಶಾಲೆಗಳ ಪ್ರಾರಂಭ. ಧರ್ಮ ಪ್ರಚಾರಕ್ಕಾಗಿ ವಿದೇಶಗಳಿಗೆ ಸಾಧಕರನ್ನು ಕಳಿಸುವುದು, ಹಗೂ ಸಂಘ ಸಂಸ್ಥೆ ಸ್ಥಾಪಿಸುವುದು, ಧಾರವಾಡದಲ್ಲಿ ವೃದ್ಧಾಶ್ರಮ, ನಿಸರ್ಗ ಚಿಕಿತ್ಸಾ ಕೇಂದ್ರ, ಬಾಲಿಕೆಯರ ಕನ್ನಡ ಕಾನ್ವೆಂಟ್, ಅನಾಥಾಶ್ರಮ, ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್, ಶ್ರೀ ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಅಧ್ಯಾಪಕರಿಗಾಗಿ ವಸತಿಗೃಹ ನಿರ್ಮಾಣ, ಘಟಪ್ರಭಾದಲ್ಲಿ ಉದ್ಯೋಗಸ್ಥ ಮಹಿಳೆಯರಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯ, ಭಾರತದ ಎಲ್ಲಾ ರಾಜ್ಯಗಳಲ್ಲಿ ೧೦೧ ಗುರುವಿರಕ್ತರು ಹಾಗೂ ೩೦೦೦ ಸರ್ವಧರ್ಮದ ಸದ್ಭಕ್ತರೊಂದಿಗೆ ಧರ್ಮ ಜಾಗೃತಿಗಾಗಿ ಪ್ರವಾಸ, ಆಯಾ ರಾಜ್ಯ ಭಾಷೆಯಲ್ಲಿ ಬಸವ ಸಂದೇಶ ಮುದ್ರಣ ಪ್ರಸಾರ, ವಿದೇಶಗಳಲ್ಲಿ ಜೆ.ಜಿ. ಧರ್ಮ ಪ್ರಚಾರಕ ಮಂಡಳದ ಶಾಖೆಗಳ ಪ್ರಾರಂಭ. 'ಪರಂಜ್ಯೋತಿ' ಇಂಗ್ಲಿಷ್ ಆವೃತ್ತಿ ಪ್ರಾರಂಭ-ಪ್ರಸಾರ. ಮಹಿಳೆಯರಿಗಾಗಿ ಪ್ರತ್ಯೇಕ ವಿಜ್ಞಾನ, ಕಾಲೇಜ್, ಮಹಿಳೆಯರಿಗಾಗಿ ಪ್ರತ್ಯೇಕ ಬಿ.ಎಡ್. ಕಾಲೇಜ್.

ಹೀಗೆ ಹುಬ್ಬಳ್ಳಿಯ ಮೂರುಸಾವಿರಮಠವು ನಾಡಿನ ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ.

○

ಗದಗಿನ ತೋಂಟದಾರ್ಯ ಮಠ : ಸಾಮಾಜಿಕ ಕಳಕಳಿಯ ಮಣಿಹ

ಸದಾನಂದ ಕನವಳ್ಳಿ

ಮಠಗಳೆಲ್ಲ ಕರ್ಮಠಗಳಾಗಿದ್ದ ಕಾಲವೊಂದಿತ್ತು. ಇಂದಿಗೂ ಬಹುತೇಕ ಮಠಗಳು ಹಾಗೆಯೇ ಇವೆ. ಸ್ತ್ರೀಯರಿಗೆ ಪೂಜೆಯ ಹಕ್ಕಿಲ್ಲ; ಸ್ತ್ರೀಯೆಂದರೆ ಅಶುದ್ಧಳು, ಮಾನವನನ್ನು ನರಕಕ್ಕೆ ಎಳೆಯುವ ನಾರಿ ಎನ್ನುವ ಜಗದ್ಗುರುಗಳಿದ್ದಾರೆ. ಸತಿ ಪದ್ಧತಿಯನ್ನು ಪುರಸ್ಕರಿಸುವ ಜಗದ್ಗುರುಗಳಿದ್ದಾರೆ. ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವ ಜಗದ್ಗುರುಗಳಿದ್ದಾರೆ. ಇವರು ಅಜ್ಞ, ನೆಟ್ಟ ಕರ್ಮಠ ಮರಕ್ಕೇ ಜೋತುಬೀಳುವವರು. ಇವರಿಗೆ ವೈಜ್ಞಾನಿಕ ದೃಷ್ಟಿಕೋನವಿಲ್ಲ; ಮಾನವೀಯತೆಯ ಸೋಂಕಿಲ್ಲ. ಕಾಲರಾಯ ಇವರನ್ನು ಇತಿಹಾಸದ ಕಸದ ತೊಟ್ಟಿಗೆ ಎಸೆಯುವುದು ಖಂಡಿತ. ಇನ್ನು ಕೆಲವೇ ಕೆಲವಾದರೂ ಮಠಗಳಿವೆ. ಅವುಗಳು ಪ್ರಗತಿಪರ ವಿಚಾರಗಳನ್ನು ಮೈಗೂಡಿಸಿಕೊಂಡು ಸಮಾಜದ ಮೌಢ್ಯಗಳನ್ನು ತೊಡೆಯುವಲ್ಲಿ ನಿರತವಾಗಿವೆ. ಅಷ್ಟೇ ಅಲ್ಲ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುತ್ತಿವೆ. ಅವುಗಳನ್ನು ನಿವಾರಿಸಲು ಯಥಾಶಕ್ತಿ ಹೆಣಗುತ್ತಿವೆ. ಸರ್ವತೋಮುಖ ಸಾಮಾಜಿಕ ಉನ್ನತಿಗೆ ಪ್ರಯತ್ನಿಸುತ್ತಿವೆ. ಸಮಾಜವೇ ದೇವರೆಂದು ನಂಬಿವೆ. ಸಮಾಜಸೇವೆಯೇ ಮೋಕ್ಷಕ್ಕೆ ಮಾರ್ಗವೆಂದು ನೆಚ್ಚಿವೆ. ಇಂಥ ವಿರಳಾತಿವಿರಳ ಮಠಗಳಲ್ಲಿ ಗದುಗಿನ ತೋಂಟದಾರ್ಯಮಠ ಕಳೆದ ಎರಡು ದಶಕಗಳಲ್ಲಿ ಎದ್ದುಕಾಣುವ ಸಮಾಜೋನ್ನತಿ ಸಾಧಿಸಿದೆ.

ಹೊಸ ಗಾಳಿ

ಗದುಗಿನ ತೋಂಟದಾರ್ಯ ಮಠ ಯಾರೂ ಹಾಯದ ಅಧೋಗತಿ ತಲುಪಿತ್ತು. ಸಾಲದಲ್ಲಿ ಮುಳುಗಿತ್ತು. ೧೯೭೪ ರಲ್ಲಿ ಸಿದ್ಧಲಿಂಗ ಸ್ವಾಮಿಗಳು ೧೯ನೆಯ ಪೀಠಾಧಿಪತಿಗಳಾಗಿ ಬಂದಾಗ ಹೊಸ ಗಾಳಿ ಬೀಸಿತು. ಚಿತ್ರ ಬದಲಾಗತೊಡಗಿತು. ಅಬ್ಬರವಿಲ್ಲದ ಮೌನಕ್ರಾಂತಿಗೆ ನಾಂದಿಯಾಯಿತು. ಇಂದದು ಹತ್ತು ಹಲವು ದಿಸೆಯಲ್ಲಿ ದಾಂಗುಡಿಯಿಟ್ಟಿದೆ.

ಅಡ್ಡಪಲ್ಲಕ್ಕಿ ಪ್ರತಿಷ್ಠೆಯ ಕುರುಹು. ಪೀಠಾಧಿಪತಿಗಳು ದೇವಾಂಶಸಂಭೂತರು, ಅವರನ್ನು ಯಾವಾಗಲೂ ಹೆಗಲ ಮೇಲೆ ಹೊತ್ತು ಮೆರೆಸಬೇಕೆಂಬ ಆಢ್ಯತೆಯ ಕುರುಹು, ಜನರಿಂದ ದೂರವಾಗಲು ಇನ್ನೇನು ಬೇಕು ? ಸಿದ್ಧಲಿಂಗ ಸ್ವಾಮಿಗಳು ಮಾಡಿದ ಮೊಟ್ಟಮೊದಲ ಸುಧಾರಣೆಯೆಂದರೆ ತಮ್ಮ ಮತ್ತು ಭಕ್ತರ ನಡುವೆ ಅಡ್ಡಗೋಡೆಯಾಗಿದ್ದ ಅಡ್ಡಪಲ್ಲಕ್ಕಿಯನ್ನು ತೊರೆದುದು. ಅವರು ಭಕ್ತರ ಹೃದಯಪಲ್ಲಕ್ಕಿಯಲ್ಲಿ ಆಸೀನರಾಗಿದ್ದಾರೆ. ತಮ್ಮ ಮಠದ ಘನತೆ, ಗಾಂಭೀರ್ಯ ಪರಂಪರೆಯನ್ನು ಕಾಯ್ದುಕೊಳ್ಳುವುದು ಪವಿತ್ರ ಕರ್ತವ್ಯವೆಂದು ಕೆಲವು ಜಗದ್ಗುರುಗಳು ಸಿಂಹಾಸನಾರೂಢರಾಗಿರುತ್ತಾರೆ. ಕಿರೀಟ, ವಜ್ರ, ವೈಢೂರ್ಯ ಧರಿಸಿ ಅಟ್ಟಹಾಸಗೈಯುತ್ತಾರೆ. ಎಲ್ಲವನ್ನೂ ತೊರೆದ ಸನ್ಯಾಸಿಗಳಿಗೆ ಸಿಂಹಾಸನ, ಕಿರೀಟಗಳೇಕೆ ? ಎಂಬ ಆಭಾಸ ಅವರ ಅರಿವಿಗೆ ಬಾರದು. ಈ ರಾಜಪ್ರತೀಕ, ರಾಜಲಾಂಛನಗಳನ್ನು ತೊರೆದು ಸರಳ ಪ್ರಜಾಪ್ರತೀಕ ಜೀವನವಿಧಾನಗಳನ್ನು ಅನುಸರಿಸಿದ ಪ್ರಥಮರಲ್ಲಿ ಸಿದ್ಧಲಿಂಗ ಸ್ವಾಮಿಗಳೊಬ್ಬರು. ಉತ್ಸವ ಸಂದರ್ಭಗಳಲ್ಲಿ ಪಲ್ಲಕ್ಕಿಯಲ್ಲಿ ಎಡೆಯೂರ ಸಿದ್ಧಲಿಂಗೇಶ್ವರರ ಫೋಟೋ ಇರುತ್ತದೆ. ಎಲ್ಲಕ್ಕೂ ಮುಂಚೂಣಿಯಲ್ಲಿ ಕಾಲ್ನಡಿಗೆಯಲ್ಲಿ ಸಿದ್ಧಲಿಂಗ ಸ್ವಾಮಿಗಳಿರುತ್ತಾರೆ. ಮೊದಲು ಸ್ವಾಮಿಗಳು ಕೂಡ್ರುವ ಹಜಾರದಲ್ಲಿ ಒಂದು ಪಲ್ಲಂಗವಿತ್ತು. ದರ್ಶನಾರ್ಥಿಗಳು ಕೆಳಗೆ ಕುಳಿತುಕೊಳ್ಳುತ್ತಿದ್ದರು. ಪಲ್ಲಂಗವನ್ನು ತೆಗೆಯಿಸಿ ಈ ತರತಮವನ್ನು ಕಿತ್ತೆಸೆದರು. ಇವ ನಮ್ಮವ, ಇವ ನಮ್ಮವ ಎಂಬ ಪ್ರೀತಿಯಿಂದ ಎಲ್ಲರನ್ನೂ ಬರಮಾಡಿಕೊಳ್ಳುತ್ತಾರೆ. ಶ್ರೀ ಮಠದಲ್ಲಿ ಎಲ್ಲೂ ಆಡಂಬರಕ್ಕೆ ಎಡೆಯಿಲ್ಲ. ಎಲ್ಲೆಲ್ಲೂ ಸರಳತೆಯ ಗಾಳಿ ಸೂಸುತ್ತದೆ.

ಜ್ಞಾನ ದಾಸೋಹ

೧೯೭೫ ರಲ್ಲಿ ವೀರಶೈವ ಅಧ್ಯಯನ ಸಂಸ್ಥೆಯ ಸ್ಥಾಪನೆ. ಅದಕ್ಕೆ ಡಾ. ಎಂ.ಎಂ. ಕಲಬುರ್ಗಿಯವರ ಸಮರ್ಥ ನಿರ್ದೇಶನ. ತನ್ಮೂಲಕ ಗ್ರಂಥ ಪ್ರಕಟಣೆ, ಉಪನ್ಯಾಸ, ಭಾಷಾಂತರ ಕಾರ್ಯ ಅವ್ಯಾಹತ. ವೀರಶೈವ ಪುಣ್ಯ ಪುರುಷರ ಚರಿತ್ರೆ ೧೪೬, ವೀರಶೈವ ಅಪ್ರಕಟಿತ ಸಾಹಿತ್ಯ ೨೮, ವೀರಶೈವ ಪುರಾತನ ಸಾಹಿತ್ಯ ೧೨, ವೀರಶೈವ ನೂತನ ಸಾಹಿತ್ಯ ೧೪, ವೀರಶೈವ ಅನುವಾದ ೨ ಪ್ರಕಟಣೆ ಕಂಡಿವೆ. ಇದೂ ಅಲ್ಲದೆ ೬ ಪಿ.ಎಚ್.ಡಿ. ಪ್ರಬಂಧಗಳು ಹಾಗೂ ೩ ಅಭಿನಂದನ ಗ್ರಂಥಗಳು ಪ್ರಕಾಶಿತವಾಗಿವೆ. ಒಟ್ಟು ೨೧೦ ಕೃತಿಗಳು ಹೊರಬಂದಿರುವುದು ಮೇರು ಸಾಧನೆ. ವಿಶ್ವ ವಿದ್ಯಾಲಯಗಳಲ್ಲೂ ಈ ಮಟ್ಟದ ಪ್ರಕಟನ ಕಾರ್ಯ ನೋಡಸಿಗದು.

ಇವೆಲ್ಲ ಸೇರಿ ಒಟ್ಟು ೫೦ ಸಾವಿರ ಪುಟಗಳು. ಓದುಗರ ಕೈಸೇರಿದ ಪ್ರತಿಗಳ ಸಂಖ್ಯೆ ೪ ಲಕ್ಷ. ವ್ಯಯಿಸಿದ ಮೊತ್ತ ೧೫ ಲಕ್ಷ ರೂಪಾಯಿಗಳು.

ಪುಣ್ಯಪುರುಷ ಮಾಲಿಕೆಯಲ್ಲಿ ಇದುವರೆಗೆ ಚರಿತ್ರೆಗಳು ಬಂದಿವೆ. ಇವರೆಲ್ಲ ನಾಡು ನುಡಿಗೆ ಗಣನೀಯ ಸೇವೆ ಸಲ್ಲಿಸಿದ ಮಹಾನುಭಾವರು. ಈ ಚರಿತ್ರೆಗಳು ಅರ್ವಾಚೀನ ಇತಿಹಾಸ. ಕಾಲಗರ್ಭದಲ್ಲಿ ಹೂತುಹೋಗಬಹುದಾಗಿದ್ದ ಮಹತ್ವದ ಘಟನೆಗಳ ದಾಖಲಾತಿ. ಕಾಲಮಾರ್ಗದಲ್ಲಿ ಹಚ್ಚಿಟ್ಟ ಪುಟ್ಟ ಪುಟ್ಟ ಪಣತಿಗಳು. ಒಂದು ನಾಡಿನ ಚರಿತ್ರೆಯೆಂದರೆ ಮಹಾಪುರುಷರ ಯಶೋಗಾಥೆ ತಾನೆ? ಮಾಲಿಕೆಯ ಹಾಸು ದೊಡ್ಡದು. ಚರಿತ್ರನಾಯಕರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು, ಅಥಣಿ ಶಿವಯೋಗಿಗಳು, ಮೃತ್ಯುಂಜಯಪ್ಪಗಳು, ಸಜ್ಜಲಗುಡ್ಡದ ಶರಣಮ್ಮ, ನವಿಲುಗುಂದ ಗವಿಮಠದ ಶ್ರೀಗಳು, ಗೌರೀಶಂಕರ ಸ್ವಾಮಿಗಳು, ಜಯದೇವ ಜಗದ್ಗುರುಗಳು, ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು, ಬಂಥನಾಳ ಶಿವಯೋಗಿಗಳು, ಸುತ್ತೂರು ಜಗದ್ಗುರುಗಳು, ಸಿದ್ಧೇಶ್ವರ ಜಗದ್ಗುರುಗಳು, ಮುರಗೋಡ ಮಹಾಂತಸ್ವಾಮಿಗಳು ಮೊದಲಾದ ಧರ್ಮಗುರುಗಳಿದ್ದಾರೆ.

ಸ್ವಾತಂತ್ರ್ಯ ಸೇನಾನಿಗಳಾದ ಮೈಲಾರ ಮಹದೇವಪ್ಪ, ವಾಲಿ ಚನ್ನಪ್ಪ ಮುಂತಾದವರಿದ್ದಾರೆ. ಎಂ.ಪಿ. ಪಾಟೀಲ, ದೊಡ್ಡಮೇಟಿ ಅಂದಾನಪ್ಪ, ಎಸ್.ಆರ್. ಕಂಠಿ, ಅಂಬಲಿ ಚನ್ನಬಸಪ್ಪ, ಸುಗಂಧಿ ಮುರಿಗೆಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಹೊಸಮನಿ ಸಿದ್ದಪ್ಪ, ಸರ್ ಸಿದ್ದಪ್ಪ ಕಂಬಳಿ, ರಾಂಪುರೆ ಮಹದೇವಪ್ಪ, ಪಿ.ಎಂ. ನಾಡಗೌಡ ಮೊದಲಾದ ರಾಜಕೀಯ ಮುತ್ಸದ್ದಿಗಳಿದ್ದಾರೆ. ದಾನಿಗಳಾದ ಸಿರಸಂಗಿ ಲಿಂಗರಾಜ, ರಾಜಾ ಲಖಮಗೌಡ, ಬಸರಿಗಿಡದ ವೀರಪ್ಪ, ಭೂಮರೆಡ್ಡಿ ಬಸಪ್ಪ, ವೈ. ಮಹಾಬಲೇಶ್ವರಪ್ಪ ಮುಂತಾದವರಿದ್ದಾರೆ. ದ್ರುಷ್ಠ್ಯಾರ ಹರ್ಡೇಕರ ಮಂಜಪ್ಪ ಇದ್ದಾರೆ. ಶಿಕ್ಷಣ ಸೇವೆ ಸಲ್ಲಿಸಿದ ಡೆಪ್ಯುಟಿ ಚೆನ್ನಬಸಪ್ಪ, ಚಿಕ್ಕೋಡಿ ಪಂಡಿತಪ್ಪ, ಬಿ.ಬಿ. ಮಮದಾಪುರ, ಬಿ.ಎಸ್. ಹಂಚಿನಾಳ, ಎಂ.ಆರ್. ಸಾಖರೆ, ಡಾ.ಟಿ. ಪಾವಟೆ ಮೊದಲಾದವರಿದ್ದಾರೆ. ಅರಟಾಳ ರುದ್ರಗೌಡ, ಗಿಲಗಂಚಿ ಗುರುಸಿದ್ದಪ್ಪ, ಕೆ.ಪಿ. ಪುಟ್ಟಣ್ಣಚೆಟ್ಟಿ, ಚಿಗಟೇರಿ ಮುರಿಗೆಪ್ಪ, ಬ್ಯಾರಿಸ್ಟರ ಎಂ.ಎಸ್. ಸರದಾರ, ವಾರದ ಮಲ್ಲಪ್ಪ, ಧನಶೆಟ್ಟಿ ಮಲ್ಲಪ್ಪ, ಜಂಗಿನ ಮುರಿಗೆಯ್ಯ ಮೊದಲಾದ ಸಮಾಜಸೇವಾ ದುರಂಧರರಿದ್ದಾರೆ. ನೀಲಕಂಠ ಬುವಾ, ಪಂಚಾಕ್ಷರಿ ಗವಾಯಿ, ಮಲ್ಲಿಕಾರ್ಜುನ ಮನಸೂರರಂಥ ಸಂಗೀತಗಾರರಿದ್ದಾರೆ. ಜಿ.ಎಸ್. ದಂಡಾಪತಿಮಠ, ಡಿ.ಜಿ. ಬಡಿಗೇರರಂಥ ಚಿತ್ರಕಲಾವಿದರಿದ್ದಾರೆ. ಗುಬ್ಬಿ ವೀರಣ್ಣ, ಶಿವಮೂರ್ತಿ ಸ್ವಾಮಿ, ಕಣಬರ್ಗಿಮಠರಂಥ ನಾಟಕರತ್ನರಿದ್ದಾರೆ. ನಲವಡಿ ಶ್ರೀಕಂಠಶಾಸ್ತ್ರಿ, ಎಚ್.ಟಿ. ಮಹಾಂತೇಶಶಾಸ್ತ್ರಿಗಳಂಥ ನಾಟಕಕಾರರಿದ್ದಾರೆ. ಮಧುರಚೆನ್ನ, ಬಸವಪ್ಪಶಾಸ್ತ್ರಿ, ದ್ಯಾಂಪುರ ಚೆನ್ನಕವಿಗಳು, ಪಿ.ಆರ್. ಕರಿಬಸವಶಾಸ್ತ್ರಿ, ವ್ಯಾಕರಣದ ಮಲ್ಲಪ್ಪ, ಫ.ಗು. ಹಳಕಟ್ಟಿ, ಶಿ.ಶಿ. ಬಸವನಾಳ್, ಸ.ಸ. ಮಾಳವಾಡ, ಈಶ್ವರ ಸಣಕಲ್ಲ ಮುಂತಾದ ಸಾಹಿತಿಗಳಿದ್ದಾರೆ.

ಚರಿತ್ರೆಕಾರರಲ್ಲಿ ಸ.ಸ. ಮಾಳವಾಡ, ಶಾಂತಾದೇವಿ ಮಾಳವಾಡ, ಆರ್.ಸಿ. ಹಿರೇಮಠ, ಸಿದ್ಧಯ್ಯ ಪುರಾಣಿಕ, ಎನ್ಕೆ, ಸೂರ್ಯನಾಥ ಕಾಮತ, ಸದಾಶಿವ ಒಡೆಯರ, ಗುರುಲಿಂಗ ಕಾಪಸೆ, ಶಾಂತರಸ, ಆರ್. ರಾಚಪ್ಪ, ಎಂ.ಜಿ. ನಂಜುಂಡಾರಾಧ್ಯ, ಸಾ.ಶಿ. ಮರುಳಯ್ಯ, ಎಚ್. ದೇವೀರಪ್ಪ, ದೇಜಗೌ, ಜೋಳದರಾಶಿ ದೊಡ್ಡನಗೌಡ, ಪಾಟೀಲ ಪುಟ್ಟಪ್ಪ ಮುಂತಾದ ಹೆಸರಾಂತ ಸಾಹಿತಿಗಳಿದ್ದಾರೆ.

ಇದೂ ಅಲ್ಲದೆ, ವಚನಸಾಹಿತ್ಯ ಮತ್ತು ಸ್ವರವಚನ ಸಾಹಿತ್ಯ ಕ್ಷೇತ್ರದಲ್ಲಿ ೬೦ ಅಪ್ರಕಟಿತ ಕೃತಿಗಳನ್ನು ಹೊರ ತಂದು ಶ್ರೀ ಮಠ ಹೊಸ ಅಧ್ಯಾಯ ತೆರೆದಿದೆ. ನಾಡು ನುಡಿ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡ ಸ.ಸ. ಮಾಳವಾಡ, ಸಂ.ಶಿ. ಭೂಸನೂರಮಠ, ಸಿಂದಗಿ ಪಟ್ಟಾಧ್ಯಕ್ಷರಿಗೆ ಅಭಿನಂದನಾ ಗ್ರಂಥಗಳನ್ನು ಸಮರ್ಪಿಸಿ ಗೌರವಿಸಲಾಗಿದೆ.

ವಿಶ್ವವಿದ್ಯಾಲಯಗಳು ಪಿಎಚ್.ಡಿ. ಪ್ರಬಂಧಗಳ ಪ್ರಕಟಣೆಯನ್ನು ನಿಲ್ಲಿಸಿದಾಗಿನಿಂದ ಅವುಗಳನ್ನು ರಚಿಸಿದವರ ನಿರಾಶೆ ಹೇಳತೀರದು. ಶ್ರೀಮಠ ಪಿ.ವಿ. ನಾರಾಯಣರ "ವಚನಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ", ವಿರೂಪಾಕ್ಷ ಬಡಿಗೇರರ "ಸಿರಸಂಗಿ ಸಂಸ್ಥಾನ : ಒಂದು ಅಧ್ಯಯನ", ವೆಂಕಟೇಶ ಜೋಯಿಸರ "ಕೆಳದಿ ಅರಸರ ಶಾಸನ ಸಂಪುಟ", ಎಂ.ಎಂ. ಪಡಶೆಟ್ಟಿಯವರ "ತಿಂಥಿಣಿ ಮೋನಪ್ಪಯ್ಯ : ಒಂದು ಅಧ್ಯಯನ", ಬಸವರಾಜ ಜಗಜಂಪಿಯವರ "ಗರುಡ ಸದಾಶಿವರಾಯರು" ಈ ಐದು ಸಂಪ್ರಬಂಧಗಳನ್ನು ಹೇರಳ ಧನ ವ್ಯಯಿಸಿ ಪ್ರಕಟಿಸಿ ಸಂಶೋಧನೆಯನ್ನು ಪ್ರೋತ್ಸಾಹಿಸಿದೆ.

ಅನ್ನದಾನ

ಅನ್ನದೇವರಿಗಿಂತ ಇನ್ನು ದೇವರಿಲ್ಲ. ಗದುಗಿನ ಶ್ರೀಮಠದಲ್ಲಿ ನಿತ್ಯ ದಾಸೋಹವಿದೆ. ಶಾಖಾಮಠಗಳಲ್ಲಿ ೧೦ ಉಚಿತ ಪ್ರಸಾದನಿಲಯ ಮತ್ತು ವಸತಿನಿಲಯ ಸ್ಥಾಪಿಸಲಾಗಿದೆ. ಜಗದ್ಗುರುಗಳು ತುಮಕೂರು ಜಿಲ್ಲೆಯ ಎಡೆಯೂರು ಸಿದ್ಧಲಿಂಗೇಶ್ವರ

ಕ್ಷೇತ್ರದ ದಾಸೋಹದ ಅಧಿಪತಿಗಳಾಗಿದ್ದು ಕ್ಷೇತ್ರಕ್ಕೆ ನಿತ್ಯ ದರ್ಶನಕ್ಕೆ ಬರುವ ಸಾವಿರಾರು ಭಕ್ತರಿಗೆ ದಾಸೋಹ ನಡೆಸಲಾಗುತ್ತಿದೆ. ಗದಗ ಮಠದಲ್ಲಿ ೧೮ ಲಕ್ಷ ರೂಪಾಯಿ ವೆಚ್ಚದಲ್ಲಿ ಪ್ರಸಾದನಿಲಯ ಕಟ್ಟಿಸಲಾಗಿದೆ. ತೋಂಟದಾರ್ಯ ಮಠ ಹೇಳಲಿಕ್ಕೆ ಸಂಸ್ಥಾನಮಠ. ಆದರೆ ಹೇಳಿಕೊಳ್ಳುವಂಥ ಆಸ್ತಿಯಿಲ್ಲ. ಭಕ್ತರೇ ಆಸ್ತಿ.

ವಿದ್ಯಾದಾನ

ಶಿಕ್ಷಣವಿಲ್ಲದೆ ಸಮಾಜದ ಉನ್ನತಿಯಾಗದು. ನಗರಗಳಲ್ಲೊ ಶಿಕ್ಷಣ ಸಂಸ್ಥೆಗಳು ಸ್ವಲಾಭಕ್ಕೋಸ್ಕರ ತಾವೇ ತಾವಾಗಿ ಹುಟ್ಟಿಕೊಳ್ಳುತ್ತವೆ. ಆದರೆ, ಹಳ್ಳಿಗಳಲ್ಲಿ ಶಿಕ್ಷಣ ಸೌಲಭ್ಯಗಳ ತೀವ್ರ ಕೊರತೆಯಿದೆ. ಹಳ್ಳಿಗಳು ವಿದ್ಯಾವಂತರಾಗದೆ ದೇಶ ಅಭಿವೃದ್ಧಿ ಹೊಂದದು. ಇದನ್ನು ಮನಗಂಡು ೧೯೭೬ ರಲ್ಲಿ ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠವನ್ನು ಸ್ಥಾಪಿಸಿ, ಹಳ್ಳಿಗಳ ಮಕ್ಕಳಿಗೆ ವಿದ್ಯಾಸೌಕರ್ಯ ಕಲ್ಪಿಸಲಾಗಿದೆ. ೧೯೮೩-೧೯೯೩ ರ ೧೦ ವರ್ಷಗಳಲ್ಲಿ ೪೧ ವಿದ್ಯಾ ಸಂಸ್ಥೆಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ೯ ಕನ್ನಡ ಪ್ರಾಥಮಿಕ ಶಾಲೆಗಳಿವೆ, ೧೦ ಪ್ರೌಢಶಾಲೆಗಳಿವೆ, ೨ ಪದವಿಪೂರ್ವ ಕಾಲೇಜುಗಳಿವೆ, ೩ ಪದವಿ ಕಾಲೇಜುಗಳಿವೆ, ೩ ಲಲಿತಕಲಾ ವಿದ್ಯಾಲಯಗಳಿವೆ, ೨ ಸಂಗೀತ ಪಾಠಶಾಲೆಗಳಿವೆ, ೯ ಸಂಸ್ಕೃತ ಪಾಠಶಾಲೆಗಳಿವೆ, ೩ ನಿರ್ಗತಿಕ ಮಕ್ಕಳ ಶಾಲೆಗಳಿವೆ. ಇವು ರಾಯಚೂರು, ಬಳ್ಳಾರಿ, ಕಲಬುರ್ಗಿ, ಧಾರವಾಡ ಜಿಲ್ಲೆಗಳ ಹಳ್ಳಿಗಳಲ್ಲಿ ಹರಡಿಕೊಂಡಿವೆ. ತರತರದ ವಿದ್ಯಾಸಂಸ್ಥೆಗಳು ಹಳ್ಳಿ ಹುಡುಗರಿಗೆ ತರತರದ ಶಿಕ್ಷಣ ಸೌಲಭ್ಯ ಒದಗಿಸಿ ಅವರ ಅಭಿವೃದ್ಧಿಗೆ ಕಾರಣೀಭೂತವಾಗಿವೆ.

ಜಗದ್ಗುರುಗಳು ಕರ್ನಾಟಕದ ಗಾಂಧಿ ಎನಿಸಿದ ಹರ್ಡೇಕರ ಮಂಜಪ್ಪನವರು ಆಲಮಟ್ಟಿಯಲ್ಲಿ ಸ್ಥಾಪಿಸಿದ ಶ್ರೀಮದ್ ವೀರಶೈವ ವಿದ್ಯಾಲಯದ ಅಧ್ಯಕ್ಷರಾಗಿದ್ದು ತನ್ಮೂಲಕ ಶಾಲೆ ಕಾಲೇಜುಗಳನ್ನು ನಡೆಸಲಾಗುತ್ತಿದೆ.

ಹೊಳೆಆಲೂರು, ರೋಣ, ಗದಗ, ಅಣ್ಣಿಗೇರಿ, ಬೆಳವಣಿಕೆ ಮೊದಲಾದ ಗ್ರಾಮಗಳ ವಿದ್ಯಾಸಂಸ್ಥೆಗಳ ಕಟ್ಟಡಗಳಿಗಾಗಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ದಾನವಾಗಿ ನೀಡಲಾಗಿದೆ.

ಕಲಾ - ಕ್ರೀಡಾ ಪೋಷಣೆ

ಸಂಗೀತಗಾರರಾದ ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಪುಟ್ಟರಾಜ ಗವಾಯಿ, ಜೋಳದರಾಶಿ ದೊಡ್ಡನಗೌಡ, ಅರ್ಜುನಸಾ ನಾಕೋಡ, ಹುಕ್ಕೇರಿ ಬಾಳಪ್ಪ ಮೊದಲಾದವರನ್ನು ಶ್ರೀಮಠದಲ್ಲಿ ಸತ್ಕರಿಸಲಾಗಿದೆ. ಅವರ ಗಾಯನ ಕಚೇರಿ ಏರ್ಪಡಿಸಲಾಗಿದೆ. ಚಿತ್ರಕಲಾವಿದರಾದ ರುಮಾಲೆ ಚನ್ನಬಸವಯ್ಯ, ಎಂ.ವಿ. ಚೆಟ್ಟಿ, ಎಂ.ವಿ. ಮಿಣಜಗಿಯವರನ್ನು ಸತ್ಕರಿಸಲಾಗಿದೆ. ರಂಗ ಕಲಾವಿದೆ ಬಿ. ಜಯಮ್ಮ ಅವರನ್ನು ಸತ್ಕರಿಸಲಾಗಿದೆ.

ಜಾನಪದ ನಮ್ಮ ಸಂಸ್ಕೃತಿಯ ತಾಯಿಬೇರು. ಆಗಾಗ್ಗೆ ಜಾನಪದ ಸಮ್ಮೇಳನಗಳನ್ನು ಸಂಘಟಿಸಲಾಗುತ್ತಿದೆ. ಕರಡಿ ಮಜಲು, ಡೊಳ್ಳು, ನಂದಿಕೋಲು ಕುಣಿತ, ಭಜನಾಮೇಳ, ಝಾಂಝು ಮೇಳ ಮುಂತಾದ ಜಾನಪದ ಕಲೆಗಳ ಸ್ಪರ್ಧೆ, ಪ್ರದರ್ಶನ ಏರ್ಪಡಿಸಲಾಗುತ್ತಿದೆ. ಪ್ರೋತ್ಸಾಹಿಸಲಾಗುತ್ತಿದೆ. ಆರ್ಥಿಕ ನೆರವು ನೀಡಲಾಗುತ್ತಿದೆ. ಗ್ರಾಮೀಣ ಕಲಾವಿದರಿಗೆ ವಾದ್ಯಗಳನ್ನು ಉಚಿತವಾಗಿ ವಿತರಿಸಲಾಗಿದೆ.

ವಿನಾಶದ ಅಂಚಿನಲ್ಲಿರುವ ತೊಗಲು ಬೊಂಬೆಯಾಟವನ್ನು ಪುನರುಜ್ಜೀವನಗೊಳಿಸಿದ ಶ್ರೇಯಸ್ಸು ತೋಂಟದಾರ್ಯ ಮಠದ್ದು. ಸುಪ್ರಸಿದ್ಧ ಕಲಾವಿದರಾದ ಬೆಳಗಲ್ಲ ವೀರಣ್ಣನವರಿಗೆ ಎಲ್ಲ ಪರಿಕರ, ನೆರವು ಒದಗಿಸಿಕೊಟ್ಟು ಬಸವೇಶ್ವರ ತೊಗಲು ಬೊಂಬೆಯಾಟವನ್ನು ಅಣಿಗೊಳಿಸಿದ್ದಲ್ಲದೆ, ರಾಜ್ಯಾದ್ಯಂತ ಸುಮಾರು ಒಂದು ನೂರು ಪ್ರದರ್ಶನಗಳನ್ನು ಏರ್ಪಡಿಸಲು ನೆರವಾದುದು. ಇದರಿಂದ ಎರಡು ಉದ್ದೇಶಗಳು ಸಫಲಗೊಂಡವು. ಒಂದು ತೊಗಲು ಬೊಂಬೆಯಾಟ ಮರುಹುಟ್ಟು ಪಡೆಯಿತು. ಎರಡು, ಬಸವಣ್ಣನವರ ಸಂದೇಶ ನಿರಕ್ಷರಕುಕ್ಷಿಗಳಾದ ಹಳ್ಳಿಗರಿಗೂ ತಲುಪಿತು.

ಇನ್ನು ಕ್ರೀಡೆ. ೧೯೭೬ ರಲ್ಲಿ ಮಹಾಯೋಗಿ ಶ್ರೀ ನಿ.ಪ್ರ. ಯಳಂದೂರು ಬಸವಲಿಂಗ ಮಹಾಸ್ವಾಮಿಗಳ ಸ್ಮರಣಾರ್ಥ ಯೋಗ ಪಾಠಶಾಲೆ ಸ್ಥಾಪಿಸಿ, ಮಹಿಳೆಯರಿಗೆ, ಪುರುಷರಿಗೆ, ಮಕ್ಕಳಿಗೆ ಯೋಗಶಿಕ್ಷಣ ನೀಡಲಾಗುತ್ತಿದೆ. ಪ್ರತಿವರ್ಷ ಗ್ರಾಮೀಣ ಕ್ರೀಡೆಗಳಾದ ಕಬಡ್ಡಿ, ವಾಲಿಬಾಲ್, ಕುಸ್ತಿ ಸ್ಪರ್ಧೆಗಳನ್ನು ಏರ್ಪಡಿಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ಸಾಂಸ್ಕೃತಿಕ ಉತ್ಥಾನ

ಜನರು ಸುಸಂಸ್ಕೃತರಾಗಬೇಕು. ಅವರ ಆಚಾರ ವಿಚಾರಗಳು ಪರಿಶುದ್ಧವಾಗಬೇಕು. ಒಟ್ಟಿನಲ್ಲಿ ಅವರ ಬಾಳು

ಹಸನಾಗಬೇಕು. ಇಂಥ ಉದಾತ್ತ ಧ್ಯೇಯ ಹೊತ್ತು ಪ್ರತಿ ಸೋಮವಾರ ಸಂಜೆ ಶಿವಾನುಭವ ಕಾರ್ಯಕ್ರಮಗಳನ್ನು ಜರುಗಿಸಲಾಗುತ್ತಿದೆ. ೯.೧೧.೧೯೭೨ ರಂದು ಪ್ರಥಮ ಶಿವಾನುಭವ ಕಾರ್ಯಕ್ರಮ ನಡೆಯಿತು. ಡಿಸೆಂಬರ್ ೭, ೧೯೯೧ ರಂದು ೧೦೦೦ ನೆಯ ಶಿವಾನುಭವ ಕಾರ್ಯಕ್ರಮದ ಆಚರಣೆ, ಡಿಸೆಂಬರ್ ೮ ಮತ್ತು ೯ ರಂದೂ ಮುಂದುವರೆಯಿತು. ದೇಜಗೌ, ಸಿದ್ಧಯ್ಯ ಪುರಾಣಿಕ, ಎಸ್. ನಿಜಲಿಂಗಪ್ಪ, ಸಿದ್ಧಗಂಗಾ ಶ್ರೀಗಳು ಅತಿಥಿ ಅಧ್ಯಕ್ಷರಾಗಿ ಪಾಲ್ಗೊಂಡಿದ್ದರು. ಇಂದಿಗೂ ನಿರಂತರ ನಡೆಯುತ್ತಿವೆ. ಶಿವಾನುಭವ ಕಾರ್ಯಕ್ರಮಗಳ ಹರವು ದೊಡ್ಡದು. ವೈವಿಧ್ಯ ಅಪಾರ. ಧಾರ್ಮಿಕ, ಕೌಟುಂಬಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಕ್ರೀಡೆ, ಕೃಷಿ, ಅದು ಮುಟ್ಟದ ವಿಷಯವಿಲ್ಲ, ತಟ್ಟದ ಮನವಿಲ್ಲ. ಜನರ ಬದುಕನ್ನು ಎತ್ತರಿಸುವ ಎಲ್ಲ ಸಾಮಗ್ರಿಯಿದೆ.

ಧರ್ಮ, ಜಾತಿ ಬೇಧವಿಲ್ಲದೆ ಪ್ರತಿ ಶಿವಾನುಭವದಲ್ಲಿ ಸಾವಿರ ಸಾವಿರ ಜನ ಪಾಲ್ಗೊಳ್ಳುತ್ತಾರೆ. ದ.ರಾ. ಬೇಂದ್ರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ. ಚಿದಾನಂದಮೂರ್ತಿ, ಜಿ.ಎಸ್. ಶಿವರುದ್ರಪ್ಪ, ಪು.ತಿ.ನ., ಚನ್ನವೀರ ಕಣವಿ, ಹಿರೇಮಲ್ಲೂರ ಈಶ್ವರನ್, ಹೈದರಾಬಾದಿನ ಜನಾಬ ಮೌಲ್ವಿ ರಫಿ, ರೆವರೆಂಡ್ ಯಾಡಿಗೇರಿ, ಡಾ. ಎಂ.ಸಿ. ಮೋದಿ, ವೀರೇಂದ್ರ ಪಾಟೀಲ, ರತ್ನಪ್ಪ ಕುಂಬಾರ, ರಾಜಕುಮಾರ, ಲೋಕೇಶ, ಅನಂತನಾಗ ಅತಿಥಿಗಳಾಗಿ ಬಂದಿದ್ದಾರೆ.

ಇವೆಲ್ಲ ಕಾರ್ಯಕ್ರಮಗಳಿಗೆ ಒಂದು ಶಾಶ್ವತ ತಾಣವಾಗಿ ಶಿವಾನುಭವ ಮಂಟಪ ನಿರ್ಮಾಣಗೊಳ್ಳುತ್ತಿದೆ. ಜಗದ್ಗುರುಗಳ ಸೌಂದರ್ಯ ಪ್ರಜ್ಞೆ ಅನನ್ಯವಾದುದು. ದೆಹಲಿಯಲ್ಲಿ ತಾವು ಕಂಡ ಕಮಲಾಕಾರದ ಬಹಾಯಿ ಮಂದಿರದ ಮಾದರಿಯಲ್ಲಿ ಶಿವಾನುಭವ ಮಂಟಪ ನಿರ್ಮಿಸಲೋಸುಗ ವಾಸ್ತುಶಿಲ್ಪಿ, ಎಂಜಿನಿಯರರನ್ನು ದೆಹಲಿಗೆ ನೋಡಿಬರಲು ಕಳಿಸಿದರು. ಅದು ೭೦ ಲಕ್ಷ ರೂಪಾಯಿ ಯೋಜನೆ. ಅದೊಂದು ಪ್ರವಾಸಿ ಆಕರ್ಷಣೆಯಾಗಬೇಕು, ಗದುಗಿಗೆ ಬಂದವರು ನೋಡದೆ ಹೋಗದಂತಿರಬೇಕು ಎಂಬುದು ಶ್ರೀಗಳ ಆಕಾಂಕ್ಷೆ.

ಮೇಟಿ ವಿದ್ಯೆ ಮೇಲು

ಕೋಟಿ ವಿದ್ಯೆಗಿಂತ ಮೇಟಿವಿದ್ಯೆ ಮೇಲು. ಆದರೆ, ಭಾರತೀಯ ರೈತನ ಸ್ಥಿತಿ ಶೋಚನೀಯ. ಬೇಸಾಯ ಅನಿಶ್ಚಿತತೆಗಳ ಆಗರ. ಶ್ರೀಮಠಕ್ಕಿರುವುದು ಡಂಬಳದಲ್ಲಿನ ೭೦ ಎಕರೆ ಜಮೀನು. ಅದು ಬಂಜರಾಗಿತ್ತು. ಜಗದ್ಗುರುಗಳ ಜೆವರನ್ನುಂಡ ಆ ಭೂಮಿ ಇಂದು ನಳನಳಿಸುತ್ತಿದೆ. ಉತ್ತಮವಾದುದು ಎಲ್ಲಿ ಕಂಡರೂ ಜಗದ್ಗುರುಗಳು ಮಾಡದೆ ಬಿಡರು. ಎಲ್ಲ ಕಡೆ ಸುತ್ತಾಡಿ ಪ್ರಗತಿಪರ ಕೃಷಿಯ ವಿಧಾನಗಳನ್ನು ಅರಿತುಕೊಂಡು ತಮ್ಮ ಭೂಮಿಯಲ್ಲಿ ಪ್ರಯೋಗಕ್ಕಿಳಿಯುವುದು ಅವರ ಛಲ. ಅವರ ಪ್ರಯೋಗಗಳೆಲ್ಲ ಯಶೋದಾಂಗುಡಿಯಿಟ್ಟಿವೆ. ಅಲ್ಲೀಗ ಅತ್ಯುತ್ತಮ ತಳಿಯ ದ್ರಾಕ್ಷಿ, ಬಾರಿ, ಬಾಳೆ, ತೆಂಗು ಕಂಗೊಳಿಸುತ್ತಿವೆ. ಹನಿ ನೀರಾವರಿ, ಪ್ರಾಕೃತಿಕ ಬೇಸಾಯ ಅಳವಡಿಸಲಾಗಿದೆ.

ಗುಡ್ಡ ಕಡಿದು ಮಣ್ಣುಮಾಡಿ ಹಣ್ಣು ಬೆಳೆದುದನ್ನು ನೋಡಿ ಇದು ನಿಜ ಭಾರತ ಎಂದು 'ಅಮೇರಿಕೆಯ ಕೆಂಟ್ ಅಲ್ಲರ್‌ಶಾಪ್ ಪಿಯರ್ ಗ್ರ್ಯೂಬರ್' ಉದ್ಗರಿಸಿದ್ದಾರೆ. ಕೃಷಿ ವಿಶ್ವವಿದ್ಯಾಲಯ, ಕೃಷಿ ಇಲಾಖೆ ಮನಸಾರೆ ಹೊಗಳಿವೆ.

ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ

ಡಂಬಳದಲ್ಲಿ ನೂರಾರು ದನಗಳ ಡೇರಿ ಸ್ಥಾಪಿಸಲಾಗಿದೆ. ಹೆಚ್ಚುವರಿ ದನಗಳನ್ನು ಮಾರಾಟಮಾಡದೆ ದೀನದಲಿತರಿಗೆ, ಕೃಷಿ ಕಾರ್ಮಿಕರಿಗೆ ಉಚಿತವಾಗಿ ಹಂಚಲಾಗುತ್ತದೆ. ಮಠದಲ್ಲಿ ಪ್ರತಿವರ್ಷ ದನಗಳ ಜಾತ್ರೆ, ದನಗಳ ಪ್ರದರ್ಶನ ಏರ್ಪಡಿಸಲಾಗುತ್ತದೆ. ಅತ್ಯುತ್ತಮ ದನಗಳಿಗೆ ಬಂಗಾರದ ಪದಕ, ಎಲ್ಲಕ್ಕೂ ಹೆಚ್ಚು ಹಾಲು ಕರೆಯುವ ಆಕಳಿಗೆ ಬಹುಮಾನ ಇತ್ಯಾದಿ ಕೃಷಿಯಾಧಾರಿತ ಕಾರ್ಯಕ್ರಮಗಳು ಜರುಗುತ್ತವೆ.

ಜಗದ್ಗುರುಗಳಿಗೆ ತಮ್ಮದೊಂದೇ ಕೃಷಿ ಸುಧಾರಿಸಿದರೆ ತೃಪ್ತಿಯಿಲ್ಲ. ಬೆಂಗಾಡಾಗಿರುವ ಡಂಬಳ ಮತ್ತು ಸುತ್ತಮುತ್ತಲಿನ ಕೃಷಿ ಸುಧಾರಿಸಬೇಕೆಂಬ ಹಂಬಲ, ಯತ್ನ. ಹಲವು ವಿಧದ ನೆರವು. ಬದುಕಿನ ಬವಣೆ ನಿವಾರಿಸಲು ಸದಾ ಸಿದ್ಧರು. ನಮ್ಮ ರಾಜ್ಯದಲ್ಲಿ ೧೯೮೭ ರಲ್ಲಿ ಭೀಕರ ಬರಗಾಲ ಬಿದ್ದಾಗ ಎಲ್ಲಾದರೂ, ಎಂತಾದರೂ ಬದುಕಿಕೊಳ್ಳಲಿ, ನಾವಂತೂ ಸಲಹಲಸಾಧ್ಯ ಎಂದು ರೈತರು ಕಂಗಾಲಾಗಿ ತಮ್ಮ ದನಕರುಗಳನ್ನು ಕಣಿ ಬಿಚ್ಚಿ ಬಿಟ್ಟುಬಿಟ್ಟಿದ್ದರು. ಜಗದ್ಗುರುಗಳು ಗೋಶಾಲೆ ಸ್ಥಾಪಿಸಿ ಬಡವರ ನೂರಾರು ದನಗಳನ್ನು ಬರಗಾಲ ನೀಗುವವರೆಗೆ ಸಲಹಿ ಪರಿಸ್ಥಿತಿ ಸುಧಾರಿಸಿದ ಮೇಲೆ ಅವರವರಿಗೆ ಹಿಂತಿರುಗಿಸಿದರು. ಅವೆಲ್ಲವಕ್ಕೆ ನೀರು ನಿಗದಿ, ಮೇವು ಮೆದೆ ವ್ಯವಸ್ಥೆ ಹೇಗಾಯಿತೊ ದೇವರೇ ಬಲ್ಲ. ದಿನವೂ ಮೂರು ನಾಲ್ಕು ಲಾರಿ ಮೇವು ಬೇಕಾಗುತ್ತಿತ್ತು.

ಎಲ್ಲೆಲ್ಲಿಂದಲೋ ಬರುತ್ತಿತ್ತು. ಸಂಕಲ್ಪ ಶುದ್ಧವಿದ್ದು, ನಿಷ್ಠೆಯಿಟ್ಟು ಪ್ರಯತ್ನಿಸಿದರೆ ಯಾವುದೂ ಸಾಧ್ಯವೆಂಬುದಕ್ಕೆ ಇದೊಂದು ನಿದರ್ಶನ. ಶ್ರೀಮಠದ ಈ ಸಾಹಸ ಏಕಮೇವಾದ್ವಿತೀಯ.

ಮಾನವೀಯತೆ ಮಿಡಿಯುವ ಹೃದಯ

ಹುಬ್ಬಳ್ಳಿಯ ಕ್ಯಾನ್ಸರ್ ಆಸ್ಪತ್ರೆಗೆ ಲಕ್ಷಾಂತರ ರೂಪಾಯಿಗಳು, ನೂರಾರು ಚೀಲ ಧಾನ್ಯ, ದನಕರುಗಳಿಗೆ ಮೇವು ಸಂಗ್ರಹ, ಹಲವಾರು ಗ್ರಾಮಗಳಲ್ಲಿ ಡಾ. ಎಂ.ಸಿ. ಮೋದಿ ಅವರ ಉಚಿತ ನೇತ್ರ ಚಿಕಿತ್ಸಾ ಶಿಬಿರ ಏರ್ಪಾಡು. ಡಾ.ಕೆ.ಎಸ್. ಶೆಟ್ಟಿ ಅಸ್ತಮಾ ಚಿಕಿತ್ಸಾ ಶಿಬಿರ ಏರ್ಪಾಡು. ಕುಷ್ಠರೋಗಿಗಳಿಗೆ ಕಂಬಳಿ, ಬಟ್ಟೆ, ಆರ್ಥಿಕ ನೆರವು.

ಆಂಧ್ರಪ್ರದೇಶದಲ್ಲಿ ಚಂಡಮಾರುತದ ಸಂದರ್ಭದಲ್ಲಿ ಜಗದ್ಗುರುಗಳು ಪಾದಯಾತ್ರೆ ಮಾಡಿ ಬಟ್ಟೆಬರೆ ಕೂಡಿಸಿಕೊಟ್ಟರು. ೧೯೯೩ ರಲ್ಲಿ ಮಹಾರಾಷ್ಟ್ರದ ಕಿಲಾರಿಯಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ಸಂತ್ರಸ್ತರಾದವರಿಗೆ ದೊಡ್ಡ ಪ್ರಮಾಣದಲ್ಲಿ ಧನಧಾನ್ಯ, ಬಟ್ಟೆಬರೆ, ಔಷಧಿ ಸಂಗ್ರಹ.

ರೈತರು ತಾವೇ ಮುಂದಾಗಿ ಸ್ವತಃ ನಿರ್ಮಿಸಿದ ಚಿಕ್ಕಪಡಸಲಗಿ ಬ್ಯಾರೇಜಿಗೆ ೨೫,೦೦೦ ರೂಪಾಯಿ ಕೊಡುಗೆ. ಅದರ ರೂವಾರಿ ಸಿದ್ದೂ ನ್ಯಾಮೇಗೌಡರಿಗೆ ಸನ್ಮಾನ, ಅವರ ಸ್ಫೂರ್ತಿದಾಯಕ ಅನುಭವ ಶ್ರವಣ. ಹುಬ್ಬಳ್ಳಿಯಲ್ಲಿ ಜರುಗಿದ ೬೩ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ೧೦,೦೦೦ ರೂಪಾಯಿ ದೇಣಿಗೆ. ಪರಿಸರ ರಕ್ಷಣಾ ಹೋರಾಟದ "ಕಿತ್ತಿಕೊ ಹಚ್ಚಿಕೊ ಸತ್ಯಾಗ್ರಹ" ಗ್ರಂಥಕ್ಕೆ ೧೦,೦೦೦ ರೂಪಾಯಿ ಧನಸಹಾಯ. ಒಂದೇ ಎರಡೇ ? ಒಳ್ಳೆಯದೆಲ್ಲಿಯೆ ಇರಲಿ, ಧಾವಿಸಿ ನೆರವು ನೀಡುವುದು ಜಗದ್ಗುರುಗಳ ಸಹಜ ಗುಣ, ಶ್ರೀಮಠದ ಪರಿಪಾಠ. ಭಾರತದಲ್ಲಿ ಭಾಷಣಕ್ಕೆ ಬರವಿಲ್ಲ. ಆದರೆ ಗದಗಿನ ಜಗದ್ಗುರುಗಳು ವಾಣಿಯಂತೆ ಕ್ರಿಯೆ, ಕ್ರಿಯೆಯಂತೆ ವಾಣಿ ಮೇಳವಿಸಿಕೊಂಡ ಅಪೂರ್ವ ಸಾಧಕರು.

ದೇವನೊಬ್ಬ ನಾಮ ಹಲವು

ಭಾರತದಲ್ಲಿ ಲೆಕ್ಕವಿಲ್ಲದಷ್ಟು ಮತ ಧರ್ಮಗಳು. ಅವುಗಳು ಬೋಧಿಸುವ ತತ್ವಗಳು ವಿಶ್ವಮಾನ್ಯವಾದವುಗಳು. ಕಾಲಕ್ರಮೇಣ ಉದಾತ್ತ ಧರ್ಮಗಳೆಲ್ಲ ಜಾತಿಗಳಾಗಿ ಸಂಕುಚಿತಗೊಂಡಿರುವುದು ದುರಂತ.ಹಾಗಾಗಿ, ಈ ಧರ್ಮಗಳು ಮಾನವರನ್ನು ಒಂದುಗೂಡಿಸುವ ಬದಲು ಬೇರ್ಪಡಿಸುತ್ತಿವೆ. ಫಲಸ್ವರೂಪವಾಗಿ ಮನುಷ್ಯ ಇಂದು ಧರ್ಮಕ್ಕಾಗಿ ಕಾದಾಡ ಬಲ್ಲ, ಮಡಿಯ ಬಲ್ಲ. ಆದರೆ ಧರ್ಮಕ್ಕಾಗಿ ಬಾಳುವುದನ್ನು ಮಾತ್ರ ಕಲಿತಿಲ್ಲ. ಧರ್ಮಪೀಠಗಳು ತಮ್ಮ ತಮ್ಮ ಧರ್ಮಗಳ ಬಗೆಗೆ ದುರಭಿಮಾನವನ್ನೂ ಇತರ ಧರ್ಮಗಳ ಬಗೆಗೆ ತುಚ್ಛ ಭಾವನೆಯನ್ನೂ ಬೆಳೆಸುತ್ತಿರುವುದು ಸಮಾಜದ ಛಿದ್ರೀಕರಣಕ್ಕೆ ಕಾರಣವಾಗಿದೆ.

ಗದಗಿನ ತೋಂಟದಾರ್ಯ ಮಠ ಇದಕ್ಕೆಲ್ಲ ಅಪವಾದ. ಜಾತಿಗಳ ಅಡ್ಡಗಟ್ಟುಗಳನ್ನು ಒಡೆಯುವಲ್ಲಿ ನಿರತವಾಗಿದೆ. ಅಲ್ಲಿ ಹಿಂದೂ, ಮುಸ್ಲಿಮ, ಸಿಖ್, ಈಸಾಯಿ, ಪರಿಶಿಷ್ಟ ಎಲ್ಲ ವರ್ಗಗಳಿಗೂ ಮುಕ್ತದ್ವಾರ, ಸಮಾನ ಗೌರವ. ಶ್ರೀಮಠದಲ್ಲಿ ಪೈಗಂಬರ ಜಯಂತಿ, ರಮಜಾನ ಆಚರಣೆ, ಮೌಲ್ವಿಗಳಿಂದ ಉಪನ್ಯಾಸ, ಕ್ರಿಸ್‌ಮಸ್ ಸಂದರ್ಭಗಳಲ್ಲಿ ಪಾದ್ರಿಗಳಿಂದ ಪ್ರವಚನ. ಜೈನಮುನಿ ಭಟ್ಟಾರಕರ, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರೊಂದಿಗೆ ನಿಕಟ ಒಡನಾಟ. ಮಹಾವೀರ ಜಯಂತಿಯಂದು ಮಹಾವೀರ ಸಂದೇಶ ಪ್ರಸಾರ. ಬಸದಿಗಳಿಗೆ ಪ್ರವೇಶ, ಪ್ರವಚನ, ಬುದ್ಧ ಜಯಂತಿ, ಅಂಬೇಡ್ಕರ್ ಜಯಂತಿ, ಗಾಂಧಿ ಜಯಂತಿ ಆಚರಣೆ.

ಇಂಥ ಸಂದರ್ಭಗಳಲ್ಲಿ ಹರಿಜನ ಗಣ್ಯರಿಗೆ ಸನ್ಮಾನ. ಪ್ರತಿವರ್ಷ ಸಿದ್ಧರಾಮ ಜಯಂತಿಯಂದು ಸಾವಿರಾರು ಹರಿಜನರಿಗೆ ಪ್ರಸಾದ ವ್ಯವಸ್ಥೆ, ಶಿಷ್ಯರಿಂದ ಪ್ರಸಾದ ವಿತರಣೆ, ಎಂಜಲು ಎಲೆ ತೆಗೆಯುವಿಕೆ. ಹರಿಜನ ಕೇರಿಯಲ್ಲಿ ಪೂಜೆ ವ ಪ್ರಸಾದ ಸ್ವೀಕಾರ. ಗದಗಿನಲ್ಲಿ ೨೫ ಲಕ್ಷ ರೂಪಾಯಿ ಖರ್ಚುಮಾಡಿ ನಿರ್ಮಿಸಿದ ಪ್ರಶಸ್ತ ಕಲ್ಯಾಣ ಮಂಟಪದ ಉದ್ಘಾಟನೆ. ೬೩ ಕೋಮಿನ ೨೨೩ ಉಚಿತ ಸಾಮೂಹಿಕ ವಿವಾಹಗಳೊಂದಿಗೆ ಮಾಡಿದ್ದು ಅರ್ಥಪೂರ್ಣ. ರಾಯಚೂರು ಜಿಲ್ಲೆಯ ಮಾಲಗಿತ್ತಿಯಲ್ಲಿ ಪ್ರತಿವರ್ಷ ಜಾತಿಮತವೆನ್ನದೆ ನೂರಾರು ಸಾಮೂಹಿಕ ವಿವಾಹಗಳ ಏರ್ಪಾಡು. ದೇವದಾಸಿಯರ ಮದುವೆ, ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ.

ಪರಿಶಿಷ್ಟರಿಗೆ ವಿದ್ಯಾರ್ಥಿ ನಿಲಯ ಸ್ಥಾಪನೆ. ಈ ವರ್ಗದ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಭೂಮಿದಾನ. ಹರಿಜನಕೇರಿಯಲ್ಲಿ ರಾತ್ರಿ ಶಾಲೆ ವ್ಯವಸ್ಥೆ. ಉಚಿತ ತೆಂಗಿನ ಸಸಿ ವಿತರಣೆ. ಸರಕಾರದಿಂದ ಭೂಮಿ ಮಂಜೂರು ಮಾಡಿಸುವಿಕೆ. ಸವಣೂರಿನಲ್ಲಿ ಜರುಗಿದ

ಅಖಿಲ ಕರ್ನಾಟಕ ಹರಿಜನ ಗಿರಿಜನ ಸಮಾವೇಶದ ಅಧ್ಯಕ್ಷತೆ. ಡೋಣಿ ಲಂಬಾಣಿ ತಾಂಡಾವನ್ನು ಅಭಿವೃದ್ಧಿಗಾಗಿ ದತ್ತು ತೆಗೆದುಕೊಂಡಿರುವುದು. ವೆಂಕಟಸ್ವಾಮಿ ಆಯೋಗದೆದುರು ಹಿಂದುಳಿದವರ ಪರ ಸಾಕ್ಷ್ಯ ನೀಡಿಕೆ. ಇವೆಲ್ಲ ಶ್ರೀಮಠದ ಪ್ರಗತಿಪರ ಕಾರ್ಯಸಾಧನೆಗೆ ಸಾಕ್ಷಿ. ಸಕಲ ಜೀವಾತ್ಮರಿಗೆ ಲೇಸ ಬಯಸುವುದೇ ಶ್ರೀಮಠದ ಧ್ಯೇಯ. ದಲಿತರ, ದುಃಖಿತರ, ಶೋಷಿತರ ಕಣ್ಣೀರೊರೆಸದ ಧರ್ಮ ಅದೆಂಥ ಧರ್ಮ ! ಎಂಬ ನಿಲುವು.

ವೈಜ್ಞಾನಿಕ ದೃಷ್ಟಿ

ಕಂದಾಚಾರ, ಪವಾಡಗಳನ್ನು ನಂಬದಿರಲು ಕರೆ. ತೋಂಟದ ಸಿದ್ಧಲಿಂಗ ಯತಿಗಳನ್ನು ಪವಾಡಪುರುಷನೆಂದು ನೋಡದೆ ಅವರೊಬ್ಬ ಸಾಧಕರೆಂದು ಪರಿಗಣಿಸಿರಿ ಎಂದು ಒಂದು ಭಾಷಣದಲ್ಲಿ ಶ್ರೀಗಳು ನುಡಿದುದಕ್ಕೆ ಕೆಲವೆಡೆ ತೀವ್ರ ಪ್ರತಿಕ್ರಿಯೆ ವ್ಯಕ್ತಪಟ್ಟಿತು. ತಮ್ಮ ಮೂಲಪುರುಷನನ್ನೆ ಅವಹೇಳನ ಮಾಡುತ್ತಿದ್ದಾರೆಂಬ ಕುಹಕವೂ ತಲೆಯೆತ್ತಿತು. ಆದರೆ, ಜಗದ್ಗುರುಗಳು ತಮ್ಮ ವೈಜ್ಞಾನಿಕ ದೃಷ್ಟಿ ಬಿಟ್ಟುಕೊಡಲಿಲ್ಲ. ಪವಾಡ, ಯಂತ್ರ ಮಂತ್ರಗಳು ಮಾನವನನ್ನು ವಿವೇಚನಾ ಶೂನ್ಯನನ್ನಾಗಿಸುತ್ತವೆ. ಮೂಢಭಕ್ತಿ ದಾಸನನ್ನಾಗಿಸುತ್ತದೆ. ಅಂಥ ಕಪೋಲಕಲ್ಪಿತಗಳಿಗೆ ಜೋತುಬೀಳದಿರಿ ಎಂದು ಭಕ್ತರನ್ನು ಎಚ್ಚರಿಸುತ್ತಲೆ ಬಂದಿದ್ದಾರೆ.

ಜಾತ್ರೆಯಲ್ಲಿ ತೇರು ಎಳೆಯುವಾಗ ಎಡೆಯನ್ನು ಅದರ ಗಾಲಿಗೆ ಚೆಲ್ಲುವುದು ಕಂದಾಚಾರ, ಆಹಾರದ ಅಪವ್ಯಯ. ಅದನ್ನೇ ಬಡಬಗ್ಗರಿಗೆ ನೀಡಿದರೆ ಹಸಿವು ಹಿಂಗೀತು ಎಂದು ತಿಳಿಹೇಳಿ ಆ ಅರ್ಥಹೀನ ಸಂಪ್ರದಾಯವನ್ನು ನಿಲ್ಲಿಸಿದ್ದಾರೆ. ಮೋಜಿನ ಕೇಂದ್ರಗಳಾಗಿದ್ದ ಜಾತ್ರೆಗಳನ್ನು ಜನಜಾಗೃತಿಯ ಕೇಂದ್ರಗಳನ್ನಾಗಿಸಿದೆ. ಕಂದಾಚಾರಗಳಿಗೆ ಬದಲಾಗಿ ಬುಟ್ಟಿ ಹೆಣೆಯುವ, ಕಂಬಳಿ ನೇಯುವ, ಹಗ್ಗ ಹೊಸೆಯುವ, ಹಾಲು ಕರೆಯುವ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಉಪನ್ಯಾಸ, ಸನ್ಮಾನ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಕಲಾಪ್ರದರ್ಶನ, ಮಕ್ಕಳ ಮೇಳ, ಜಾತ್ರೆಗಳ ಅಂಗಗಳಾಗಿವೆ. ಹೀಗೆ, ಅರಿವು ಆಚಾರಗಳ ಸಂಗಮವನ್ನು ಶ್ರೀಮಠದ ಪ್ರತಿಯೊಂದು ಚಟುವಟಿಕೆಯಲ್ಲೂ ಕಾಣಬಹುದು.

ಕನ್ನಡ ಭಕ್ತಿ

ಎಲ್ಲಕ್ಕೂ ಕಳಶಪ್ರಾಯವಾದುದು ಜಗದ್ಗುರುಗಳ ಕನ್ನಡ ಭಕ್ತಿ. 'ಕನ್ನಡವೆನೆ ಕುಣಿದಾಡುವುದೆನ್ನೆದೆ' ಎಂದು ಕುವೆಂಪು ಹೇಳಿದುದು ಜಗದ್ಗುರುಗಳಂಥವರನ್ನು ಕಂಡೇ ಇರಬಹುದು. ಅವರದು ನಾಡು ನುಡಿಗಳ ಬಗೆಗೆ ಅಪ್ರತಿಮ ಕಳಕಳಿ. ಕನ್ನಡ ಭಾಷೆಯ ರಕ್ಷಣೆಗಾಗಿ ಗೋಕಾಕ ಚಳುವಳಿಯ ಪ್ರಥಮ ಕಿಡಿಯನ್ನು ಹಾರಿಸಿದವರು ಜಗದ್ಗುರುಗಳೇ, ಸಿಂದಗಿ ಭಾಷಣದಲ್ಲಿ. ಆ ಕಿಡಿ ಪ್ರಜ್ವಲಿಸಿ ಬೃಹತ್ ಗೋಕಾಕ ಚಳುವಳಿಯಾದುದು ಇತಿಹಾಸ. ಗದಗಿನಲ್ಲಿ ಕನ್ನಡಕ್ಕಾಗಿ ಉಪವಾಸ ಸತ್ಯಾಗ್ರಹ ಕೈಗೊಂಡರು. ಈ ತೆರನ ಜನಪರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಪ್ರಥಮ ಜಗದ್ಗುರುಗಳವರು. ಅವರನ್ನು ಅನುಸರಿಸಿ ಅನೇಕಾನೇಕ ಮಹಿಳೆಯರು ಉಪವಾಸ ಸತ್ಯಾಗ್ರಹ ಗೈದು ಜೈಲುವಾಸ ಅನುಭವಿಸಿದರು. ಸರಕಾರ ಮಣಿದು ಚಳುವಳಿಯ ಬೇಡಿಕೆ ಈಡೇರಿಸುವ ಭರವಸೆ ನೀಡಿದಾಗ ಗದಗಿನ ಮಠದಲ್ಲಿ ಸಂಭ್ರಮದ ವಿಜಯೋತ್ಸವ ಆಚರಿಸಲಾಯಿತು. ಸಿದ್ಧಲಿಂಗ ಸ್ವಾಮಿಗಳು ಕನ್ನಡದ ಜಗದ್ಗುರುಗಳೆಂದೇ ಖ್ಯಾತರಾಗಿದ್ದಾರೆ.

ಇಷ್ಟೆಲ್ಲ ಬಹುಮುಖಿ ಸಾಧನೆಯನ್ನು ಮೆಚ್ಚಿ ಗುಲಬರ್ಗಾ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದೆ. ಜಾತ್ಯತೀತ ನಿಲುವು, ಕಾರ್ಯಗಳಿಗೆ ಕರ್ನಾಟಕ ಸರಕಾರ ೧೯೯೫ ರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅದರೊಂದು ಮಾತು. ಇಂಥ ಕಾರ್ಯಸಾಧನೆಗೆ ಎಂಥ ದೊಡ್ಡ ಪ್ರಶಸ್ತಿಯೂ ಸಮನಾದುದಲ್ಲ.

ಇಂಥ ದೊಡ್ಡ ಸಾಧನೆಗೆ ಗದಗಿನ ತೋಂಟದಾರ್ಯ ಮಠ ಬೀಗುತ್ತಿದೆಯೆ ? ಇಲ್ಲ. ಮಾಡಿದುದು ಅಡಿಕೆ ಬೆಟ್ಟದಷ್ಟು, ಮಾಡಬೇಕಿರುವುದು ಗುಡ್ಡದಷ್ಟಿದೆ ಎಂಬ ನಮ್ರಭಾವ. ಇದು ಅಮೆರಿಕೆಯ ಪ್ರಖ್ಯಾತ ಕವಿ ರಾಬರ್ಟ್ ಫ್ರಾಸ್ಟರ "ಸ್ಟಾಪಿಂಗ್ ಬಾಯ್ ದ ವುಡ್ಸ್" ಕವನದ ಕೊನೆಯ ಸಾಲುಗಳನ್ನು (ಅನುವಾದ ನನ್ನದು) ಪ್ರತಿಧ್ವನಿಸುವಂತಿದೆ :

ಕಾನನ ಸುಂದರ, ಕಪ್ಪು, ನಿಬಿಡವಹುದು
ಆದರೆ ನಾನು ಇನ್ನೂ ವಚನಗಳನ್ನು ಪಾಲಿಸುವುದಿದೆ
ಮಲಗುವ ಮುನ್ನ ಮೈಲು ಮೈಲು ಸಾಗುವುದಿದೆ
ಮೈಲು ಮೈಲು ಸಾಗುವುದಿದೆ.

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಸಾಂಸ್ಕೃತಿಕ ಕೊಡುಗೆ

ರಾ. ವೆಂಕಟೇಶ ಶೆಟ್ಟಿ

೧೨ನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಹಾರುವ ಮೊದಲು ಅಂತ್ಯಜ ಕಡೆಯಾಗಿ ಎಲ್ಲರನ್ನೂ ಪ್ರೀತಿಯ ಬಂಧನದಲ್ಲಿ ಬೆಳೆಯಲು ಧರ್ಮದ ಬೆಳಕೆಯಾದುದು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಸುವರ್ಣ ಪುಟವೆಂದರೆ ಅತಿಶಯೋಕ್ತಿಯಾಗಲಾರದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿಭಿನ್ನ ರಾಜಕೀಯ ವ್ಯವಸ್ಥೆಗಳ, ಭಾಷೆಗಳ ಗಡಿಬಾಂದುಗಳನ್ನು ದಾಟಿ ಕಲ್ಯಾಣದ ಪ್ರೀತಿಯ ಕರೆ ದೇಶದೆಲ್ಲೆಡೆಗೆ ತಲುಪಿದುದು ಸಾಮಾನ್ಯ ಸಂಗತಿಯೇನಲ್ಲ. ಅಂದಿನ ಆ ಬಸವಜ್ಯೋತಿಯನ್ನು ನಂದಲೀಯದೆ ಕಾಪಾಡಿಕೊಂಡು ಬಂದ ಕೀರ್ತಿ ಕರ್ನಾಟಕದ ವೀರಶೈವ ಮಠಗಳಿಗೆ ಸಲ್ಲುತ್ತದೆ. ನಾಡಿನ ಜನತೆಯನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮೇಲೆತ್ತಲು ಅಹೋರಾತ್ರಿ ಈ ಮಠಗಳು ಶ್ರಮಿಸುತ್ತಾ ಬಂದಿವೆ. ಅಂತಹ ಮಠಗಳಲ್ಲಿ ವೈಶಿಷ್ಟ್ಯಪೂರ್ಣವಾದುದು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ.

ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಗಳೂರಿನಿಂದ ಧಾರವಾಡದ ಕಡೆಗೆ ಪ್ರಯಾಣಿಸುವವರಿಗೆ ಚಿತ್ರದುರ್ಗ ದಾವಣಗೆರೆಯ ಮಧ್ಯೆ, ರಸ್ತೆಯ ಎಡಬದಿಯಲ್ಲಿ ಒಂದು ಚಿತ್ತಾಕರ್ಷಕ ಕಮಾನು ಗೋಚರಿಸುತ್ತದೆ. ಅದರ ಮೇಲೆ ಬರೆಯಲಾಗಿದೆ "ಶ್ರೀಮದುಜ್ಜಯಿನಿಸದ್ಧರ್ಮಸಿಂಹಾಸನ, ಶ್ರೀ ತರಳಬಾಳು ಬೃಹನ್ಮಠ." ಆ ಕಮಾನಿನ ಕೆಳಗೆ ಹಾದು ೮ ಕಿಲೋಮೀಟರ್ ದೂರವನ್ನು ಪ್ರಯಾಣಿಕರು ಕ್ರಮಿಸಿದರೆ ನಾಡಿನ ಸಾಂಸ್ಕೃತಿಕ ಉತ್ಥಾನದ ಜೀವನಾಡಿಯಾದ ಸಿರಿಗೆರೆ ಸಿಗುತ್ತದೆ. ಬಸವಣ್ಣನವರು ಕಲ್ಯಾಣದಲ್ಲಿ ಹೊತ್ತಿಸಿದ ಜ್ಯೋತಿ ಸಿರಿಗೆರೆಯ ಪ್ರಣತೆಯಲ್ಲಿ ಇಂದಿಗೂ ಉರಿಯುತ್ತಿರುವುದನ್ನು ಅವರು ಕಾಣುತ್ತಾರೆ.

ಜೋಗದ ಜಲಪಾತದ ನಯನ ಮನೋಹರ ದೃಶ್ಯವನ್ನು ಅನೇಕರು ಅನೇಕ ರೀತಿಯಲ್ಲಿ ವರ್ಣಿಸಿದ್ದಾರೆ. ಎತ್ತರದಿಂದ ಗಿರಿಕಂದರಕ್ಕೆ ಧುಮುಕುವ ಶರಾವತಿ ನದಿ ಅನೇಕ ಕವಿಗಳ ಕಾವ್ಯಕ್ಕೆ ಸ್ಫೂರ್ತಿಯಾಗಿದೆ. ಆದರೆ ಅದೇ ಜಲಪಾತವನ್ನು ಕಂಡ ವಿಶ್ವವಿಖ್ಯಾತ ಇಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯನವರು "ಅಯ್ಯೋ ಎಂತಹ ನಷ್ಟ!" ಎಂದು ಉದ್ಗರಿಸಿದರಂತೆ. ಎತ್ತರದಿಂದ ನದಿ ಗಿರಿಕಂದರಕ್ಕೆ ಧುಮುಕುವಾಗ ಅದರಲ್ಲಿನ ಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸಬಹುದು, ಹಾಗೆ ಮಾಡದಿರುವುದು ತುಂಬಾ ನಷ್ಟದಾಯಕ ಎಂಬುದನ್ನು ವಿಶ್ವೇಶ್ವರಯ್ಯನವರು ಮಾತ್ರ ಕಂಡುಕೊಂಡು ಅಲ್ಲಿ ಜಲವಿದ್ಯುತ್ ಯೋಜನೆ ಆರಂಭಿಸಿದರು. ಹಾಗೆಯೇ ನಮ್ಮ ದೇಶದ ಜನರ ಮದುವೆ, ಗಣಾರಾಧನೆ, ಗೃಹಪ್ರವೇಶ ಮೊದಲಾದ ಕೌಟುಂಬಿಕ ಸಮಾರಂಭಗಳು, ಜಾತ್ರೆ, ಉತ್ಸವ ಮೊದಲಾದ ಸಾಮುದಾಯಿಕ ಕಾರ್ಯಕ್ರಮಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರು ಭಾಗವಹಿಸುತ್ತಿದ್ದುದನ್ನು ಗುರುಗಳು ಗಮನಿಸಿದರು. ಬರೀ ಊಟೋಪಚಾರ, ಆಡಂಬರ, ವೌಲು, ದೌಲತ್ತುಗಳಲ್ಲಿ ಮುಗಿಯುತ್ತಿದ್ದ ಈ ಸಮಾರಂಭಗಳನ್ನು ಗಮನಿಸಿ "ಅಯ್ಯೋ ಎಂಥ ನಷ್ಟ!" ಎಂದುಕೊಂಡರು. ಅನಾಯಾಸವಾಗಿ ಸಾವಿರಾರು ಜನರು ಸೇರಿರುವಾಗ ಸರ್ವಶರಣ ಸಮ್ಮೇಳನವನ್ನು ಏರ್ಪಡಿಸಿದರೆ ಶರಣರ ತತ್ವಗಳನ್ನು ಅಷ್ಟೋ ಇಷ್ಟೋ ಜನರಿಗೆ ತಲುಪಿಸಬಹುದಲ್ಲವೇ ಎಂದು ಯೋಚಿಸಿದರು. ಈ ಉದ್ದೇಶಕ್ಕಾಗಿ ಗುರುಗಳು ಅಂತಹ ಸಮಾರಂಭಗಳಿಗೆ ಒಂದು ಹೊಸ ರೂಪವನ್ನೇ ನೀಡಿದರು. ಕೋಳಿ ಕೂಗುವ ಹಳ್ಳಿ ಹಳ್ಳಿಗಳ ಯಾವುದೇ ಸಮಾರಂಭವಿರಲಿ ಅದಕ್ಕೆ ಸರ್ವಶರಣ ಸಮ್ಮೇಳನವನ್ನು ಜೋಡಿಸಿ, ಕೇವಲ ಉಂಡು ಹೋಗುವ ಜನರಿಗೆ ಶರಣರ ತತ್ವಗಳನ್ನು ಕೊಂಡು ಹೋಗಲು ನೆರವಾದರು. ಹೊಟ್ಟೆ ತುಂಬಿದರೆ ಸಾಲದು, ನೆತ್ತಿಯನ್ನೂ ತುಂಬಿಕೊಳ್ಳಿ ಎಂದು ಕೆಲವೊಮ್ಮೆ ಕಡ್ಡಾಯವಾಗಿಯೂ ಸಹ ಶರಣರ ತತ್ವಗಳನ್ನು ಜನರ ಮನಸ್ಸಿನಲ್ಲಿ ತುಂಬಿದರು.

ಶರಣ ಸಂಸ್ಕೃತಿಯ ಪ್ರಸಾರವನ್ನು ಮಾಹೇಶ್ವರ ನಿಷ್ಠೆಯಿಂದ ಮಾಡಿದವರು ಹಿರಿಯ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಬಹುಪಾಲು ಅನಕ್ಷರಸ್ಥರೇ ಇರುವ ಗ್ರಾಮೀಣ ಜನರಲ್ಲಿ ಶರಣರ ವಿಚಾರಧಾರೆಯನ್ನು, ಶರಣ ಸಂಸ್ಕೃತಿ ಪ್ರಸಾರವನ್ನು ಅವರು ಒಂದು ಸವಾಲಿನಂತೆ ಸ್ವೀಕರಿಸಿದರು. ಈ ಉದ್ದೇಶಕ್ಕಾಗಿ ಪೂಜ್ಯರು ಅಣ್ಣನ ಬಳಗ, ಅಕ್ಕನ ಬಳಗ ಮತ್ತು ಕಲಾಸಂಘಗಳನ್ನು ಪೋಷಿಸಿ ಬೆಳೆಸಿದರು. ಗುರುಗಳು ಬಂದರೆಂದರೆ ಅವರ ಜೊತೆಯಲ್ಲಿಯೇ ಬರುತ್ತಿದ್ದರು ಅಕ್ಕನ ಬಳಗದವರು. ಸಮಾರಂಭಕ್ಕೆ ಮೊದಲು ಅವರಿಂದ ಇಂಪಾದ ವಚನ ಗಾಯನ. ಈ ವಚನಗಳಿಗೆ ಜನರಿಗೆ ತಲುಪುವಂತಹ ರಾಗಗಳ ಆಯ್ಕೆಯಲ್ಲಿಯೂ ಗುರುಗಳ ಕೊಡುಗೆ ಅಪಾರವಾಗಿದೆ. ವಚನ ಗಾಯನದ

ಸವಿಯನ್ನು ಸಭಿಕರು ಉಂಡು ಆ ವಚನಗಳ ಕುರಿತು ಅಸ್ಖಲಿತವಾಗಿ ಮಾತನಾಡುತ್ತಿದ್ದರು. ಮಹಿಳಾ ಭಾಷಣಕಾರರು ಶರಣರ ತತ್ವಗಳ ಜೊತೆ ಜೊತೆಯಲ್ಲಿಯೇ ಮಹಿಳೆಯರ ಸಮಸ್ಯೆಗಳಿಗೆ ಶರಣರು ಸ್ಪಂದಿಸಿದ ರೀತಿ, ಶರಣರು ಹೆಣ್ಣಿಗೆ ನೀಡಿದ ಗೌರವದ ಸ್ಥಾನ ಮೊದಲಾದ ವಿಚಾರಗಳನ್ನು ಕುರಿತು ತಿಳಿಸುತ್ತಿದ್ದರು. ಸಮಾಜದಲ್ಲಿ ಮಡುಗಟ್ಟಿ ನಿಂತಿರುವ ಮೂಢನಂಬಿಕೆಗಳನ್ನು ನಿವಾರಿಸುವಲ್ಲಿ ಈ ಸಮಾರಂಭಗಳ ಕೊಡುಗೆ ಅಪಾರವಾಗಿದೆ. ಜನರ ಅಜ್ಞಾನವನ್ನು ತೊಲಗಿಸಿ ಅಕ್ಷರ ಜ್ಞಾನವನ್ನು ನೀಡಲು ಒಂದು ಬೃಹತ್ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ನಾಡಿನಾದ್ಯಂತ ಬಹುತೇಕ ಹಳ್ಳಿಗಾಡುಗಳಲ್ಲಿ ನೂರಾರು ಶಾಲಾ ಕಾಲೇಜುಗಳು ಮತ್ತು ಪ್ರಸಾದ ನಿಲಯಗಳನ್ನು ಆರಂಭಿಸಿದರು. ಸರಕಾರದ ಕೈಯಲ್ಲೂ ಮಾಡಲಾಗದ ಕೆಲಸವನ್ನು ಅವರು ಮಾಡಿ ತೋರಿಸಿದರು.

ಶರಣ ಸಂಸ್ಕೃತಿಯ ಪ್ರಸಾರಕ್ಕೆ ಹಾಕಿಕೊಂಡ ಮತ್ತೊಂದು ವೈಶಿಷ್ಟ್ಯಪೂರ್ಣ ಕ್ರಮವೆಂದರೆ, ಶರಣರ ಜಯಂತಿಗಳ ಆಚರಣೆ. ನಾವು ಆಚರಿಸುತ್ತಿರುವ ಹಬ್ಬ, ಹರಿದಿನಗಳು ತಮ್ಮ ಮೂಲ ಅರ್ಥಗಳನ್ನು ಕಳೆದು ಮೋಜು - ಮೇಜುವಾನಿಯ ಸಂದರ್ಭಗಳಾಗಿದ್ದುದನ್ನು ಗಮನಿಸಿದ ಹಿರಿಯ ಶ್ರೀ ಜಗದ್ಗುರುಗಳವರು ಒಂದೊಂದು ಹಬ್ಬಕ್ಕೆ ಒಬ್ಬೊಬ್ಬ ಶರಣರ ಜಯಂತಿಯನ್ನು ಜೋಡಿಸಿ ಆಚರಿಸುವ ಮೂಲಕ ಹಬ್ಬಗಳಿಗೆ ಹೊಸ ಅರ್ಥಗಳನ್ನು ನೀಡಿದರು. ಹೀಗೆ ಬೆಳಕಿನ ಹಬ್ಬವಾದ ದೀಪಾವಳಿ ಜ್ಞಾನನಿಧಿ ಚನ್ನಬಸವ ಜಯಂತಿಯಾಯಿತು, ಮಕರ ಸಂಕ್ರಾಂತಿ ಕಾಯಕಯೋಗಿ ಸಿದ್ಧರಾಮ ಜಯಂತಿಯಾಯಿತು, ಶಿವರಾತ್ರಿ ಸರ್ವಶರಣ ದಿನವಾಯಿತು.

ಅಣ್ಣನ ಬಳಗ ಮತ್ತು ಅಕ್ಕನ ಬಳಗಳು ಬೃಹನ್ಮಠದ ಸಾಂಸ್ಕೃತಿ ಸಂಸ್ಥೆಗಳಾಗಿದ್ದು, ಅವುಗಳಲ್ಲಿ ಸದಾ ಗೀಜಗನ ಗೂಡಿನಂತೆ ರಚನಾತ್ಮಕ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ. ಶರಣರ ಜಯಂತಿಗಳನ್ನು ಆಚರಿಸುವುದರ ಜೊತೆಗೆ ಆಧುನಿಕ ನಾಗರಿಕತೆಯ ದಾಳಿಗೆ ಸಿಲುಕಿ ಬಸವಳಿಯುತ್ತಿರುವ ಜಾನಪದ ಕಲೆಗಳ ಪುನರುತ್ಥಾನಕ್ಕೆ ಇವು ಶ್ರಮಿಸುತ್ತಿವೆ. ಪ್ರತಿವರ್ಷವೂ ಶ್ರೀ ಕಾಶಿಮಹಾಲಿಂಗಸ್ವಾಮಿಗಳ ಲಿಂಗೈಕ್ಯ ದಿನಾಚರಣೆಯಂದು ವೀರಗಾಸೆ ಮೇಳ, ಶ್ರೀ ಗುರುಶಾಂತರಾದ ದೇಶಿಕೇಂದ್ರ ಮಹಾಸ್ವಾಮಿಗಳವರ ಲಿಂಗೈಕ್ಯ ದಿನಾಚರಣೆಯಂದು ಭಜನಾಮೇಳ ನಡೆಸಲಾಗುತ್ತಿದೆ. ಆಕರ್ಷಕವಾದ ಬಹುಮಾನಗಳನ್ನು ನೀಡುವುದರ ಜೊತೆಗೆ ಈ ಕಲೆಗಳನ್ನು ಜೀವಂತವಾಗಿಡುವ ಬಗೆಗೆ ಅನೇಕ ಸಲಹೆಗಳನ್ನು ನೀಡಲಾಗುತ್ತಿವೆ. ಪ್ರತಿ ಹದಿನೈದು ದಿನಗಳಿಗೊಮ್ಮೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ 'ದಂದಣ ದತ್ತಣ ಗೋಷ್ಠಿ'ಗಳನ್ನು ಏರ್ಪಡಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಸಹಜವಾಗಿ ಇರುವ ಸಭಾಕಂಪನವನ್ನು ನಿವಾರಿಸಿ ಅವರಲ್ಲಿ ಭಾಷಣ ಕಲೆ ವಿಕಾಸವಾಗುವಂತೆ ಮಾಡುವುದೇ ಇವುಗಳ ಉದ್ದೇಶವಾಗಿದೆ. ವಿದ್ಯಾರ್ಥಿಗಳಲ್ಲಿ ಶರಣರ ವಚನಗಳ ಅಧ್ಯಯನದ ಬಗ್ಗೆ ಆಸಕ್ತಿಯನ್ನು ಮೂಡಿಸಲು ವಚನ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಅಕ್ಕನ ಬಳಗವು ಪ್ರತಿ ವರ್ಷವೂ ಸಾಮೂಹಿಕ ವಿವಾಹಗಳ ಸಂದರ್ಭದಲ್ಲಿ ಸೋಬಾನೆ ಸ್ಪರ್ಧೆಗಳನ್ನು ನಡೆಸುತ್ತದೆ. ಶರಣರ ಜೀವನಾದರ್ಶಗಳನ್ನು ಆಧರಿಸಿದ 'ಶರಣ ಸಂಕುಲ' ನೃತ್ಯರೂಪಕವನ್ನು ಅಕ್ಕನ ಬಳಗದ ಆಶ್ರಯದ ತರಳಬಾಳು ನೃತ್ಯಶಾಲೆ ಸಿದ್ಧಪಡಿಸಿದ್ದು ಇದು ನೂರಾರು ಪ್ರಯೋಗಗಳನ್ನು ಕಂಡಿದೆ. ಚಿಕ್ಕ ಚಿಕ್ಕ ಮಕ್ಕಳೇ ಈ ರೂಪಕದಲ್ಲಿ ಪಾಲುಗೊಂಡು ಉತ್ತಮ ಅಭಿನಯವನ್ನು ನೀಡುತ್ತಾರೆ. ಈ ನೃತ್ಯರೂಪಕದಲ್ಲಿ ಬಳಸಲಾದ ಹಾಡುಗಳ ಧ್ವನಿಸುರುಳಿಯನ್ನು ಹೊರತರಲಾಗಿದ್ದು, ಅದು ಜನಪ್ರಿಯವಾಗಿದೆ.

ಶರಣ ಸಂಸ್ಕೃತಿಯ ಪ್ರಸಾರದಲ್ಲಿ ತರಳಬಾಳು ಕಲಾಸಂಘದ ಕೊಡುಗೆ ಅಪಾರವಾಗಿದೆ. ಶರಣರ ಜೀವನಾದರ್ಶಗಳನ್ನು ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಲು ಧ್ವನಿಮಾಧ್ಯಮದ ಅಗತ್ಯವೆಂಬುದನ್ನು ಮನಗಂಡ ಹಿರಿಯ ಶ್ರೀ ಜಗದ್ಗುರುಗಳವರು ಪೋಷಿಸಿ ಬೆಳೆಸಿದ ಈ ಸಂಘ ಇಂದು ರಂಗ ಚಟುವಟಿಕೆಗಳ ಗೀಜಗನ ಗೂಡಾಗಿದೆ. ಈ ಸಂಘದ ಸದಸ್ಯ ಶ್ರೀ ಕೆ. ಮೌನೇಶ್ವರಾಚಾರ್ ಅವರು ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಹಿರಿಯ ಶ್ರೀ ಜಗದ್ಗುರುಗಳವರೇ ರಚಿಸಿದ 'ಮರಣವೇ ಮಹಾನವಮಿ' ನಾಟಕಗಳ ಸಹಸ್ರಾರು ಪ್ರಯೋಗಗಳು ನಾಡಿನ ಒಳಹೊರಗೆ ನಡೆದಿವೆ. ಕಳೆದ ಹತ್ತಾರು ವರ್ಷಗಳಲ್ಲಿ ಸಂಘವು ಅಶೋಕ ಬಾದರದಿನ್ನಿಯವರೂ ಸೇರಿದಂತೆ ಅನೇಕ ಪ್ರಸಿದ್ಧ ರಂಗ ನಿರ್ದೇಶಕರುಗಳನ್ನು ಬರಮಾಡಿಕೊಂಡು ಈ ರಂಗ ತಂತ್ರಗಳನ್ನು ಅಳವಡಿಸಿಕೊಂಡು ನಾಡಿನ ಅತ್ಯಂತ ಉತ್ತಮ ತಂಡಗಳಲ್ಲಿ ಒಂದೆಂಬ ಖ್ಯಾತಿಯನ್ನು ಗಳಿಸಿದೆ. ನಾಟಕಗಳನ್ನು ಈಗಾಗಲೇ ಸ್ವತಂತ್ರವಾಗಿ ನಿರ್ದೇಶಿಸಿರುವ ಐದಾರು ಜನರು ಈ ಸಂಘದಲ್ಲಿದ್ದಾರೆ. ಹಲವಾರು ತಿರುಗಾಟಗಳ ಕಾರ್ಯಕ್ರಮವನ್ನು

ಈ ಸಂಘ ಯಶಸ್ವಿಯಾಗಿ ಪೂರೈಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರವೂ ಸೇರಿದಂತೆ ನಾನಾ ಕಡೆಗಳಲ್ಲಿ ಅನೇಕ ನಾಟಕೋತ್ಸವಗಳನ್ನು ಈ ಸಂಘ ನಡೆಸಿದೆ. ನಾಡಿನ ಬೇರೆಡೆಗಳಿಂದ ಪ್ರಸಿದ್ಧ ನಾಟಕ ತಂಡಗಳನ್ನು ಬರಮಾಡಿಕೊಂಡು ಅವರ ನಾಟಕಗಳನ್ನು ಸಹಿಯಲೂ ಸಹ ಈ ಸಂಘ ಅನುವು ಮಾಡಿಕೊಡುತ್ತ ಬಂದಿದೆ.

ಬೃಹನ್ಮಠ ತನ್ನದೇ ಆದ ಗ್ರಂಥ ಪ್ರಕಾಶನವನ್ನು ಹೊಂದಿದ್ದು, ನೂರಾರು ಉಪಯುಕ್ತ ಗ್ರಂಥಗಳನ್ನು ಹೊರತರಲಾಗಿದೆ. ತರಳಬಾಳು ಜಗದ್ಗುರು ನಿಧಿಯಿಂದ ಬಸವಣ್ಣನವರ ವಚನಗಳ ಇಂಗ್ಲೀಷ್. ತೆಲುಗು ಅನುವಾದಗಳನ್ನು ಪ್ರಕಟಿಸಲಾಗಿದೆ. ಹಿಂದಿ ಅನುವಾದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದು ಲಕ್ಷ ರೂ.ಗಳನ್ನು ನೀಡಲಾಗಿದೆ. ಮಹದೇವ ಬಣಕಾರರ "ವಿಶ್ವಬಂಧು ಮರುಳಸಿದ್ಧ ಮಹಾಕಾವ್ಯ", ಭಗವಾನ್ ಎಸ್. ಗಿದ್ವಾನಿಯವರ "ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್" ಕನ್ನಡ ಅನುವಾದವೂ (ಅನುವಾದ ಎಸ್.ಬಿ. ರಂಗನಾಥ್) ಸೇರಿದಂತೆ ಅನೇಕ ಉಪಯುಕ್ತ ಸಾಹಿತ್ಯ ಕೃತಿಗಳನ್ನು ಪ್ರಕಟಿಸಲಾಗಿದೆ. ಅನೇಕ ಸಾಹಿತಿಳಿಗೆ ನೆರವನ್ನು ನೀಡಲಾಗಿದೆ. ತರಳಬಾಳು ತ್ರೈಮಾಸಿಕ ಪತ್ರಿಕೆ ಸಾಹಿತ್ಯಕ ಬರೆಹಗಳನ್ನು ಒಳಗೊಂಡು ಸಾಹಿತ್ಯಾಸಕ್ತರ ಗಮನವನ್ನು ಸೆಳೆದಿದೆ. ಬೃಹನ್ಮಠದ ವಿವಿಧ ಕಾರ್ಯ ಚಟುವಟಿಕೆಗಳನ್ನು ಪರಿಚಯಿಸಲು "ತರಳಬಾಳು ವಾರ್ತಾಪತ್ರ" ಮಾಸಿಕ ಸುದ್ದಿ ಪತ್ರಿಕೆಯನ್ನು ಹೊರತರಲಾಗುತ್ತಿದೆ.

ನಾಡಿನ ಅತಿ ದೊಡ್ಡ ಸಾಂಸ್ಕೃತಿಕ ಹಬ್ಬವಾದ ತರಳಬಾಳು ಹುಣ್ಣಿಮೆ ಮಹೋತ್ಸವದ ಬಗ್ಗೆ ಉಲ್ಲೇಖಿಸದೇ ಹೋದರೆ ಲೇಖನ ಪೂರ್ಣವಾಗುವುದಿಲ್ಲ. ಹನ್ನೆರಡನೇ ಶತಮಾನದಲ್ಲಿ ಜಾತಿ ಮತ, ಬಡವ-ಬಲ್ಲಿದ, ಸ್ತ್ರೀ ಪುರುಷ ಇತ್ಯಾದಿ ತಾರತಮ್ಯ ಹಾಗೂ ಮೂಢನಂಬಿಕೆ, ಕಂದಚಾರಗಳ ವಿರುದ್ಧ ವಿಶ್ವಬಂಧು ಮರುಳಸಿದ್ಧರು ಸಮರ ಸಾರಿದರು. ಅವರು ಸ್ಥಾಪಿಸಿದ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ತಮ್ಮ ಕಾರುಣ್ಯದ ಶಿಶು ತೆಲುಗುಬಾಳು ಸಿದ್ದೇಶ್ವರರನ್ನು ಕುಳ್ಳಿರಿಸಿ 'ತರಳ ಬಾಳು' ಎಂದು ಹರಸಿದ ದಿನ ಮಾಘ ಶುದ್ಧ ಹುಣ್ಣಿಮೆ. ಆ ಹುಣ್ಣಿಮೆಯೇ 'ತರಳಬಾಳು ಹುಣ್ಣಿಮೆ' ಎಂದು ಪ್ರಸಿದ್ಧವಾಯಿತು. ಈ ಘಟನೆಯ ಸವಿನೆನಪಿಗಾಗಿ ಪ್ರತಿ ವರ್ಷ ಮಾಘ ಶುದ್ಧ ಸಪ್ತಮಿಯಿಂದ ಹುಣ್ಣಿಮೆಯವರೆಗೆ ಈ ಮಹೋತ್ಸವವನ್ನು ನಾಡಿನ ಒಳ-ಹೊರಗೆ ನಡೆಸಲಾಗುತ್ತಿದೆ. ರಾಷ್ಟ್ರೀಯ ಭಾವೈಕ್ಯಕ್ಕೆ ಆಪತ್ತು ಒದಗಿಸಿರುವ ಈ ಸಂದರ್ಭದಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವ ಒಂದು ಆಶಾಜ್ಯೋತಿಯಾಗಿದೆ. ಸಮಾಜದ ಎಲ್ಲ ವರ್ಗಗಳ ಜನರೂ ಒಟ್ಟಾಗಿ ಸೇರಿ ಈ ಮಹೋತ್ಸವವನ್ನು ಆಚರಿಸುತ್ತಾರೆ. ಆಕರ್ಷಕವಾದ ಮಹಾಮಂಟಪ. ಅದರಲ್ಲಿ ಸುಂದರವಾದ ವೇದಿಕೆ, ಎಲ್ಲಿ ಕಣ್ಣಿಡಲಲ್ಲಿ ಶರಣರ ಸೂಕ್ತಿಗಳು, ಶಿವಧ್ವಜಗಳು, ನಯನ ಮನೋಹರವಾದ ವಿದ್ಯುದಲಂಕಾರ. ಒಂಬತ್ತೂ ದಿನಗಳು ಕಣ್ಮನಗಳಿಗೆ ಹಬ್ಬವನ್ನುಂಟುಮಾಡುವ ಈ ಮಹೋಸವ ನಾಡ ಮಹೋತ್ಸವಕ್ಕೆ ಹೊಸರೂಪವನ್ನು ನೀಡಿದ್ದಾರೆ. ಪ್ರತಿ ದಿನ ಬೆಳಿಗ್ಗೆ ನಡೆಯುವ ಸರ್ವಧರ್ಮ ಪ್ರಾರ್ಥನಾ ಸಭೆಗಳು, ಧರ್ಮಗಳು ಬೇರಾದರೂ ಎಲ್ಲವುಗಳ ತಿರುಳು ಒಂದೇ ಎಂಬುದನ್ನು ಪ್ರಾತ್ಯಕ್ಷಿಕವಾಗಿ ಜನರಿಗೆ ತೋರುತ್ತವೆ. ಪ್ರತಿ ದಿನ ಸಂಜೆಯ ಕಾರ್ಯಕ್ರಮಗಳಂತೂ ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ ಅವರ ಸಾಂಸ್ಕೃತಿಕ, ಧಾರ್ಮಿಕ ಹಸಿವನ್ನು ಹಿಂಗಿಸುತ್ತದೆ. ರಾತ್ರಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಾದರಪಡಿಸಲಾಗುವ ನಾಟಕಗಳು ಕಲೆಯ ರಸದೂಟವನ್ನೇ ನೀಡುತ್ತವೆ. ಒಂಬತ್ತನೆಯ ದಿನವಂತೂ ಜನರ ಉತ್ಸಾಹ ಕೋಡಿವರಿಯುತ್ತದೆ. ಅಂದು ಶ್ರೀ ಜಗದ್ಗುರುಗಳವರ ಮೆರವಣಿಗೆಯ ಸಂದರ್ಭದಲ್ಲಂತೂ ಜಾನಪದ ಕಲೆಗಳ ಹಬ್ಬವೇ ನಡೆಯುತ್ತದೆ, ಕಿನ್ನರಲೋಕವೊಂದು ನೆಲದ ಮೇಲೆ ಬಂದಿಳಿದಂತೆ ಭಾಸವಾಗುತ್ತದೆ. ಸಂಜೆ ಸದಧರ್ಮ ಸಿಂಹಾಸನಾರೋಹಣವಾದ ನಂತರ ಸಭೆ ನಡೆಯುತ್ತದೆ. ಸಭೆಯ ಕೊನೆಯಲ್ಲಿ ಆಶೀರ್ವಚನವನ್ನು ನೀಡುವಾಗ ಶ್ರೀ ಜಗದ್ಗುರುಗಳವರ ಮುಂದಿನ ವರ್ಷದ ತರಳಬಾಳು ಹುಣ್ಣಿಮೆ ನಡೆಯುವ ಸ್ಥಳವನ್ನು ಪ್ರಕಟಿಸುತ್ತಾರೆ. ಮುಂದಿನ ವರ್ಷ ಈ ಮಹೋತ್ಸವ ಎಲ್ಲಿ ನಡೆಯುತ್ತದೆ ಎಂಬುದನ್ನು ತಿಳಿಯಲು ಜನರು ತುದಿಗಾಲ ಮೇಲೆ ನಿಂತಿರುತ್ತಾರೆ. ಇದನ್ನು ಆಚರಿಸುವ ಅವಕಾಶವನ್ನು ಪಡೆಯಲು ವಿವಿಧ ಪಟ್ಟಣಗಳ ಮುಖಂಡರಲ್ಲಿ ಒಂದು ರೀತಿಯ ಸ್ಪರ್ಧೆಯೇ ಪ್ರತಿವರ್ಷ ನಡೆಯುತ್ತದೆ. ತಮ್ಮಲ್ಲಿಯೇ ಈ ಮಹೋತ್ಸವವನ್ನು ಆಚರಿಸಬೇಕೆಂದು ನಾನಾ ರೀತಿಯ ಒತ್ತಡಗಳನ್ನು ಶ್ರೀ ಜಗದ್ಗುರುಗಳವರ ಮೇಲೆ ತರಲಾಗುತ್ತದೆ. ಈ ಮಹೋತ್ಸವ ನಡೆದ ಸ್ಥಳದ ಜನರ ಸ್ಮೃತಿಪಟಲದಿಂದ ಎಂದೆಂದೂ ಮಾಸದ ನೆನಪು ಉಳಿಯುತ್ತದೆ !

ಶಿವಾನುಭವ ಪ್ರವಾಸವನ್ನು ಏರ್ಪಡಿಸಿ ಹಿರಿಯ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ

ಮಹಾಸ್ವಾಮಿಗಳವರು ಹಳ್ಳಿಯ ಜನರನ್ನು ತಮ್ಮೊಟ್ಟಿಗೆ ಕರೆದುಕೊಂಡು ಹೋಗುತ್ತಿದ್ದರು, ದೇಶದ ಭಿನ್ನತೆಯಲ್ಲಿ ಏಕತೆ ಹೇಗೆ ಬೆಸೆದುಕೊಂಡಿದೆ ಎಂಬ ಅಂಶವನ್ನು ತಿಳಿಸುತ್ತಿದ್ದರು. ಶರಣರ ತತ್ವಗಳ ಪ್ರಸಾರವನ್ನೂ ಮಾಡುತ್ತಿದ್ದರು. ಅಂತಹ ಪ್ರವಾಸಗಳಲ್ಲಿ ಅಕ್ಕಮಹಾದೇವಿಯ ಐಕ್ಯಸ್ಥಳವಾದ ಕದಳೀವನ ಸಂಶೋಧನಾ ಪ್ರವಾಸ ಉಲ್ಲೇಖನೀಯವಾಗಿದೆ. ಈ ಪ್ರವಾಸದಲ್ಲಿ ಖ್ಯಾತ ಸಾಹಿತಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಭಾಗವಹಿಸಿದ್ದರು. ಈ ಪ್ರವಾಸದ ಸ್ಫೂರ್ತಿಯಿಂದ ಅವರು ಪ್ರವಾಸದ ನಂತರ ಅಕ್ಕಮಹಾದೇವಿಯ ಜೀವನವನ್ನು ಕುರಿತ "ಕದಳಿ ಕರ್ಪೂರ" ಕಾದಂಬರಿಯನ್ನು ಬರೆದರು. ೨೦೦ ಜನರನ್ನು ಒಮ್ಮೆ ತಮ್ಮ ಜೊತೆಗೆ ರೈಲಿನಲ್ಲಿ ಕರೆದೊಯ್ದು ಉತ್ತರ ಭಾರತ ಮತ್ತು ನೇಪಾಳಗಳ ಪ್ರವಾಸವನ್ನು ಹಿರಿಯ ಗುರುಗಳು ಮಾಡಿಸಿದ್ದರು. ಅದೇ ಮಾದರಿಯಲ್ಲಿ ಹಳ್ಳಿಯ ಜನರನ್ನು ವಿಮಾನದಲ್ಲಿ ಕರೆದೊಯ್ದು ವಿಶ್ವಶಾಂತಿಯಾತ್ರೆ ಮಾಡಿಸಬೇಕೆಂಬ ಹಂಬಲ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಬಹಳ ದಿನಗಳಿಂದ ಇತ್ತು. ೧೯೯೪ ರಲ್ಲಿ ಅಂತಹ ಒಂದು ಪ್ರವಾಸವನ್ನು ಏರ್ಪಡಿಸಿ ೧೦೦ ಜನರನ್ನು ವಿಮಾನದಲ್ಲಿ ಕರೆದೊಯ್ದು ವಿಶ್ವಶಾಂತಿಯಾತ್ರೆಯನ್ನು ಮಾಡಿಸಿದರು. ಈ ಯಾತ್ರೆಯಲ್ಲಿ ಪಾಲುಗೊಂಡ ಒಬ್ಬ ಮಹಿಳೆ ಹೀಗೆ ಬರೆದಿದ್ದಾರೆ, "ಭಾರತೀಯರ ದೃಷ್ಟಿಯಲ್ಲಿ ವಿದೇಶವೆಂದರೆ ಒಂದು ಸ್ವರ್ಗಲೋಕವಿದ್ದಂತೆ, ಏಕೆಂದರೆ ಅನೇಕ ಜನ ವಿದ್ಯಾವಂತರು ವಿದೇಶಕ್ಕೆ ಉನ್ನತ ವ್ಯಾಸಂಗಕ್ಕೆಂದು ಹೋಗಿ ಅಲ್ಲಿನ ಆಧುನಿಕ ಸೌಲಭ್ಯಗಳು ಹಾಗೂ ಶ್ರೀಮಂತಿಕೆಯ ಮೋಹಕ್ಕೊಳಗಾಗಿ ಅಲ್ಲಿಯೇ ನೆಲೆಸಿಬಿಡುವರು. ಅತ್ಯಾಧುನಿಕ ವೈಜ್ಞಾನಿಕ ಅನ್ವೇಷಣೆಗಳು, ವೈಭವಪೂರ್ಣ ಜೀವನ ಎಲ್ಲಕ್ಕಿಂತ ಹೆಚ್ಚಾಗಿ ಯಥೇಚ್ಛವಾದ ಹಣ ಸಂಪಾದನೆ ಇವುಗಳ ಬಗೆಗೆ ಕೇಳಿದ ಹಾಗೂ ಓದಿದ ಭಾರತೀಯರಿಗೆ ಸಹಜವಾಗಿಯೇ ವಿದೇಶಕ್ಕೆ ಹೋಗಿ ನೋಡಬೇಕು ಹಾಗೂ ಕೆಲ ದಿನಗಳಾದರೂ ಅಲ್ಲಿಯೇ ನೆಲೆಸಬೇಕು ಎಂಬ ಭಾವನೆ ಮೂಡುವುದು. ಆದರೆ ಈ ಆಸೆ ಈಡೇರುವುದು ಅಷ್ಟೇನೂ ಸುಲಭ ಸಾಧ್ಯವಲ್ಲ. ಪ್ರವಾಸಕ್ಕೆ ತಗಲುವ ದುಬಾರಿ ವೆಚ್ಚ ಒಂದು ಸಮಸ್ಯೆಯಾದರೆ ಒಂದು ವೇಳೆ ಹಣವಿದ್ದರೂ ಸುರಕ್ಷಿತವಾಗಿ ಕರೆದೊಯ್ದು ವಾಪಸು ಕರೆದುಕೊಂಡು ಬರುವ ದಕ್ಷ ವ್ಯಕ್ತಿಗಳ ಕೊರತೆ ಇನ್ನೊಂದು ಸಮಸ್ಯೆ. ಇಂತಹ ಸನ್ನಿವೇಶದಲ್ಲಿ ಶ್ರೀ ತರಳಬಾಳು ಜಗದ್ಗುರುಗಳವರು ಒಂದು ತಿಂಗಳ ಕಾಲ ಏರ್ಪಡಿಸಿದ ವಿಶ್ವಶಾಂತಿಯಾತ್ರೆಯಲ್ಲಿ ಪ್ರಪಂಚದ ಆರು ರಾಷ್ಟ್ರಗಳಿಗೆ ಕರೆದೊಯ್ದು ತಾಯಿಯೋಪಾದಿಯಲ್ಲಿ ಸಕಲರ ಯೋಗಕ್ಷೇಮವನ್ನು ನೋಡಿಕೊಂಡು ಯಾರೊಬ್ಬರ ಕೂದಲೂ ಕೊಂಕದಂತೆ ಸುರಕ್ಷಿತವಾಗಿ ಕರೆತಂದರು. ನೂರು ಜನರಿಗೆ ಇಂತಹ ಸದವಕಾಶ ಕಲ್ಪಿಸಿದ ಆ ಚೇತನಕ್ಕೆ ಎಷ್ಟು ಪ್ರಣಾಮಗಳನ್ನು ಸಲ್ಲಿಸಿದರೂ ಸಾಲದು."

"ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಹಿಂದೆ ತಮ್ಮ ತಮ್ಮ ಶಿಷ್ಯಬಳಗಕ್ಕೆ ಪ್ರವಾಸವನ್ನೇರ್ಪಡಿಸಿ ಭಾರತದರ್ಶನ ಮಾಡಿಸಿದರು. ಅಂತೆಯೇ ಇಂದು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ನಮ್ಮ ನಾಡಿನ ಮಣ್ಣಿನ ಮಕ್ಕಳಿಗೆ ವಿದೇಶವನ್ನು ಹತ್ತಿರದಿಂದ ತೋರಿಸುವ ದೊಡ್ಡ ಜವಾಬ್ದಾರಿಯನ್ನು ಅತ್ಯಂತ ಶ್ರೇಷ್ಠ ರೀತಿಯಲ್ಲಿ ನಿರ್ವಹಿಸಿದರು. ಶ್ರೀಗಳವರ ಅಪಾರ ಶ್ರಮ, ಶ್ರದ್ಧೆ, ಆಸಕ್ತಿಯ ಫಲವಾಗಿ ಅವರದೇ ಮಾತಿನಲ್ಲಿ ಹೇಳುವುದಾದರೆ ನೂರು ಜನ ಯಾತ್ರಿಕರೂ 'ಫಾರಿನ್ ರಿಟರ್ನ್ಡ್" ಎನ್ನಿಸಿಕೊಂಡರು.

"ಪ್ರವಾಸಿ ತಂಡದಲ್ಲಿ ಬಹುಪಾಲು ವೃದ್ಧ ರೈತಾಪಿ ಜನರು, ಅನಕ್ಷರಸ್ಥರು, ಹೊಸಿಲು ದಾಟದ ಗೃಹಿಣಿಯರು, ವರ್ತಕರು, ವೈದ್ಯರು, ಇಂಜಿನಿಯರು, ಶಿಕ್ಷಕರು ಮುಂತಾದ ಉದ್ಯೋಗಿಗಳು ಹಾಗೂ ವಿವಿಧ ಜಾತಿಗಳಿಗೆ ಸೇರಿದ ಜನರೂ ಇದ್ದರು. ಇಂತಹ ಅಪೂರ್ವ ಪ್ರವಾಸದಲ್ಲಿ ಭಾಗಿಯಾಗುವ ಅವಕಾಶ ನನಗೆ ದೊರಕಿದ್ದು ನನ್ನ ಅದೃಷ್ಟ" (ಎಸ್.ಎಂ. ಮಲ್ಲಮ್ಮ. ವಿಶ್ವಶಾಂತಿ ಯಾತ್ರೆ: ಸ್ಮರಣ ಸಂಚಿಕೆ ೧೯೯೫).

ಅಟ್ಲಾಂಟಾದಲ್ಲಿ ಜರುಗಿದ ವೀರಶೈವ ಸಮಾಜ ಆಫ್ ನಾರ್ತ್ ಅಮೇರಿಕಾ ಸಂಸ್ಥೆಯ ಸಮ್ಮೇಳನದಲ್ಲಿ ಪಾಲುಗೊಂಡ ತಮ್ಮ ಅನುಭವಗಳನ್ನು ದಾವಣಗೆರೆಯ ಅಣಜೇರು ಸರೋಜಮ್ಮ ರಾಜಶೇಖರಪ್ಪನವರು ಹೀಗೆ ನಿರೂಪಿಸಿದ್ದಾರೆ "ಜುಲೈ ೨ ಮತ್ತು ೩ ರಂದು ಅಟ್ಲಾಂಟಾದಲ್ಲಿ ಜರುಗಿದ ವೀರಶೈವ ಸಮ್ಮೇಳನವು ಹೆಚ್ಚು ಕಡಿಮೆ ತರಳಬಾಳು ಹುಣ್ಣಿಮೆಯಂತಿತ್ತು. ನಮ್ಮ ದೇಶದಲ್ಲಿ ಜರುಗುವುದು ಜವಾರಿ ತರಳಬಾಳು ಹುಣ್ಣಿಮೆ. ಅದಕ್ಕೆ ಹಳ್ಳಿಯ ಜನರು ಮತ್ತು ದಿಲ್ಲಿಯ ಮಂತ್ರಿಗಳು ಬರುತ್ತಾರೆ. ಆದರೆ ಅವರದು ಹೈಬ್ರಿಡ್ ತರಳಬಾಳು ಹುಣ್ಣಿಮೆ. ಅಂದರೆ ಬರೀ ವಿದ್ಯಾವಂತರು ಮಾತ್ರ ಇಲ್ಲಿ ಸೇರುತ್ತಾರೆ. ಈ ಸಮ್ಮೇಳನಕ್ಕೆ ಅಮೇರಿಕಾದ ಮೂಲೆ ಮೂಲೆಗಳಲ್ಲಿರುವ ವೀರಶೈವರೆಲ್ಲರೂ ಪ್ರತಿ ವರ್ಷ ಒಂದೊಂದು ಊರಿನಲ್ಲಿ ಬಂದು ಸೇರಿ, ಚರ್ಚಿಸಿ

ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ನಮ್ಮ ದೇಶದ ಸಂಸ್ಕೃತಿಯನ್ನು ಅವರ ಮಕ್ಕಳು ಮರೆಯದಿರಲೆಂದು ಭರತನಾಟ್ಯ, ವಚನಗಾಯನ, ನಾಟಕ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸಿರುತ್ತಾರೆ''. (ವಿಶ್ವಶಾಂತಿ ಯಾತ್ರೆ. ಸ್ಮರಣ ಸಂಚಿಕೆ : ೧೯೯೫)

ಪ್ರವಾಸಿ ತಂಡದಲ್ಲಿ ಕನ್ನಡ ಬಿಟ್ಟು ಬೇರಾವ ಭಾಷೆಯೂ ಬಾರದೆ ಇದ್ದವರು ಬಹಳ ಜನರಿದ್ದರು. ಅಂತಹವರೂ ಭಾಷಾ ತೊಡಕನ್ನೂ ಮೀರಿ ಅಲ್ಲಿನ ಜನರೊಂದಿಗೆ ಸಂವಹನೆಯನ್ನು ಸಾಧಿಸಿ ವಿಶ್ವಶಾಂತಿಯಾತ್ರೆ ಸಂದೇಶವನ್ನು ಆ ದೇಶಗಳಲ್ಲಿ ಪ್ರಸಾರ ಮಾಡಿದರು. ದಾವಣಗೆರೆಯ ಮಹಿಳೆ ಶ್ರೀಮತಿ ಸುನಂದಮ್ಮ ಆಲೂರು ಅವರ ಮಾತುಗಳಿವು : ಪ್ರವಾಸದ ಆರಂಭದಲ್ಲಿಯೇ ಶ್ರೀಗಳು ನಮಗೆಲ್ಲಾ ಶಾಂತಿಯಾತ್ರೆಯ ಸಂದೇಶವುಳ್ಳ ಕರಪತ್ರಗಳನ್ನು ವಿದೇಶದಲ್ಲಿ ವಿತರಿಸಲು ಕೊಟ್ಟಿದ್ದರು. ಕರಪತ್ರವನ್ನು ಮೊಟ್ಟಮೊದಲನೆಯದಾಗಿ ಶಾಂತಿಯ ಮಹತ್ವವನ್ನು ಚೆನ್ನಾಗಿ ಅರಿತಂತಹ ವ್ಯಕ್ತಿ ಶ್ರೀಯುತ ರೆನಾಲ್ಡ್ ಬ್ರೌನ್‌ರವರಿಗೆ ಕೊಡುವ ಭಾಗ್ಯ ನನ್ನದಾಯಿತು. ಶ್ರೀ ಬ್ರೌನ್‌ರವರನ್ನು ನಮ್ಮ ಪ್ರವಾಸದ ಮೊದಲನೆಯ ಸ್ಥಳವಾದ ಲಂಡನ್ ನಗರವನ್ನು ವೀಕ್ಷಿಸಲು ಹೊರಟಾಗ ನಾವು ತಂಗಿದ್ದ ವೈಟ್‌ಹೌಸ್ ಹೋಟೆಲ್‌ನ ಎಲಿವೇಟರಿನಲ್ಲಿ ಭೆಟ್ಟಿಯಾದೆನು. ಶ್ರೀ ಬ್ರೌನ್‌ರವರು ನಾವು ಧರಿಸಿದ ವಿಭೂತಿ ಹಾಗೂ ವೇಷ ಭೂಷಣಗಳನ್ನು ಕುತೂಹಲದಿಂದ ನೋಡುತ್ತಾ ''ಎಲ್ಲಿಂದ ಬಂದಿರುವಿರಿ?'' ಎಂದು ಕೇಳಿದರು. ಆಗ ನಾನು ''ಇಂಡಿಯಾದಿಂದ'' ಎಂದು ಉತ್ತರಿಸಿದೆ. ''ಗುಂಪಿನಲ್ಲಿ ಬಂದಿದ್ದೀರಾ?'' ಎಂದು ಕೇಳಿದರು. ''ಹೌದು ನಾವುಗಳು ಶ್ರೀಗಳೊಂದಿಗೆ ವಿಶ್ವಶಾಂತಿ ಯಾತ್ರೆಗೆ ಬಂದಿದ್ದೇವೆ'' ಎಂದು ಹೇಳಿದೆನು. ''ನಿಮ್ಮ ಈ ಯಾತ್ರೆಯ ಉದ್ದೇಶ ಏನು? ಅದಕ್ಕಾಗಿ ಏನು ಮಾಡುತ್ತೀರಿ?'' ಎಂದು ಕೇಳಿದರು. ನನಗೆ ಇಂಗ್ಲಿಷ್ ಭಾಷಾಜ್ಞಾನ ಕಡಿಮೆ ಇದ್ದುದರಿಂದ ಮಾತು ನಿಂತಿತು, ಆದರೆ ತಕ್ಷಣ ಕೈಗಳು ಚುರುಕಾಗಿ ಶ್ರೀಗಳವರು ಕೊಟ್ಟಿದ್ದ ಶಾಂತಿ ಸಂದೇಶ ಪತ್ರ ಹಾಗೂ ನನ್ನ ಪರಿಚಯ ಪತ್ರ ಇವುಗಳನ್ನು ಅವರಿಗೆ ಕೊಟ್ಟೆನು. ಅವರಲ್ಲಿದ್ದ ಬೆಂಗಳೂರಿನ ಸಾಂಸ್ಕೃತಿಕ ಕೇಂದ್ರದ ಚಿತ್ರವನ್ನು ನೋಡುತ್ತಾ ವಂದನೆಗಳನ್ನರ್ಪಿಸಿ ಎಲಿವೇಟರಿನಿಂದ ಹೋದರು. ನನಗೆ ಪೂರ್ಣ ಇಂಗ್ಲಿಷ್ ಭಾಷಾಜ್ಞಾನವಿದ್ದಿದ್ದರೂ ಸಹ ಆ ಕೊನೆಯ ಒಂದು ನಿಮಿಷದಲ್ಲಿ ನಮ್ಮ ಯಾತ್ರೆಯ ಉದ್ದೇಶವನ್ನು ಅವರಿಗೆ ಮನದಟ್ಟು ಮಾಡಲು ಸಾಧ್ಯವಿರಲಿಲ್ಲ. ನಾನು ಪ್ರವಾಸ ಮುಗಿಸಿ ಭಾರತಕ್ಕೆ ಹಿಂತಿರುಗುವ ಮೊದಲೇ ಶ್ರೀ ಬ್ರೌನ್‌ರವರಿಂದ ಪತ್ರ ಬಂದಿತ್ತು. ಅದರಲ್ಲಿ ಅವರು ಶಾಂತಿ ಸಂದೇಶದಿಂದ ಪ್ರೇರಿತರಾಗಿ ಅದರ ಅನೇಕ ಪ್ರತಿಗಳನ್ನು ಮಾಡಿಸಿ ತಮ್ಮ ಮಿತ್ರರಿಗೆ ವಿತರಿಸಿರುವುದಾಗಿ ಬರೆದಿದ್ದರು. ಹೀಗೆ ನಾನು ಮೊದಲು ಬೀರಿದ ಶಾಂತಿ ಸಂದೇಶದ ಬೀಜ ಯುರೋಪ್‌ನಲ್ಲಿ ಸ್ವಲ್ಪ ಸಮಯದಲ್ಲಿ ಮಹಾವೃಕ್ಷವಾಗಿ ಬೆಳೆದು ಎಲ್ಲೆಡೆ ಶಾಂತಿ ಸಂದೇಶ ಬೀರಿ ಫಲವಾಗಿ ಪರಿಣಮಿಸಿತ್ತು. ಇದರಿಂದ ನಮ್ಮ ಶಾಂತಿ ಸಂದೇಶಯಾತ್ರೆ ಫಲಪ್ರದವಾಗಿದೆ ಎಂದೆನಿಸಿತು. ಶ್ರೀಗಳವರು ಮುಂದಾಲೋಚನೆಯಿಂದ ಬರೆದ ಶಾಂತಿ ಸಂದೇಶ ಐತಿಹಾಸಿಕ ದಾಖಲೆಯಾಗಿ ಪರಿಣಮಿಸುವಲ್ಲಿ ನನ್ನದು ಚಿಕ್ಕ ಪಾತ್ರ'' (ವಿಶ್ವಶಾಂತಿ ಯಾತ್ರೆ : ಸ್ಮರಣ ಸಂಚಿಕೆ . ೧೯೯೫)

ಈ ಪ್ರವಾಸದ ಸಂದರ್ಭದಲ್ಲಿನ ಘಟನೆಯೊಂದನ್ನು ಶ್ರೀ ಜಗದ್ಗುರುಗಳವರೇ ಹೀಗೆ ನಿರೂಪಿಸುತ್ತಾರೆ ''ಭಾಷೆ ಮನುಷ್ಯನ ಭಾವನೆಗಳ ಒಂದು ಸಂವಹನ ಮಾಧ್ಯಮ. ಹೀಗಾಗಿ ಜಗತ್ತಿನ ಯಾವುದೇ ಭಾಷೆ ಇರಲಿ, ಆ ಭಾಷೆಯನ್ನಾಡುವ ಜನರು ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ನಿತ್ಯ ಅವಲಂಬಿಸುವ ತಮ್ಮ ಭಾಷೆಯ ಬಗ್ಗೆ ಅಭಿಮಾನಪಟ್ಟುಕೊಳ್ಳುವುದು ಸಹಜವೇ. 'ಕನ್ನಡಯೆನೆ ಕುಣಿದಾಡುವುದೆನ್ನೆದೆ ಕನ್ನಡಯೆನೆ ಕಿವಿ ನಿಮಿರುವುದು' ಎಂಬ ಕವಿವಾಣಿಯ ಭಾವತೀವ್ರತೆಯು ಅನುಭವಕ್ಕೆ ಬರುವುದು ಕನ್ನಡನಾಡಿಗಿಂತ ಕನ್ನಡ ಗಡಿಬಾಂದುಗಳನ್ನು ದಾಟಿ ಅನ್ಯಭಾಷೆಯ ಪ್ರದೇಶಗಳಲ್ಲಿದ್ದಾಗ, ಪರದೇಶಗಳಲ್ಲಿ ಸಂಚರಿಸುವಾಗ ಆಕಸ್ಮಿಕವಾಗಿ ದೂರದಲ್ಲಿ ಯಾರೋ ಕನ್ನಡದಲ್ಲಿ ಮಾತನಾಡುವುದು ಕೇಳಿಬಂದರೆ ಹೃದಯದಲ್ಲಿ ಆವಿರ್ಭವಿಸುವ ಭಾವನೆಗಳ ತುಡಿತ, ಅವರು ಯಾರಿರಬಹುದು ಹತ್ತಿರ ಹೋಗಿ ಮಾತನಾಡಿಸಬೇಕೆಂಬ ಮನಸ್ಸಿನ ಸೆಳೆತ ಹೇಳಲಸದಳ. ೧೯೯೪ರ ಜೂನ್ ತಿಂಗಳಲ್ಲಿ ಒಂದು ತಿಂಗಳ ''ವಿಶ್ವ ಶಾಂತಿ'' ಯಾತ್ರೆ ಕೈಗೊಂಡು ಮಹಿಳೆಯರೂ ಸೇರಿದಂತೆ ನೂರೊಂದು ಜನ ಗ್ರಾಮೀಣ ಜನರನ್ನು ಪರದೇಶಗಳಿಗೆ ನಾವು ಕರೆದುಕೊಂಡು ಹೋದಾಗ ನಮ್ಮವರಿಗೆ ಆದ ಅನುಭವ ವರ್ಣಿಸಲಸಾಧ್ಯ. ಸ್ವಿಟ್ಜರ್‌ಲೆಂಡಿನ ಪ್ರಮುಖ ನಗರಾದ ಜಿನೀವಾದಲ್ಲಿ ಆಕಾಶದೆತ್ತರ ಚಿಮ್ಮುವ ಕಾರಂಜಿಯನ್ನು ನೋಡುತ್ತಾ ಸಮೀಪದ ಉದ್ಯಾನವನದಲ್ಲಿ ನಾವು ಕುಳಿತಿದ್ದಾಗ ದೂರದಿಂದ ನಮ್ಮನ್ನು ನೋಡಿ, ನಮ್ಮ ಪ್ರವಾಸೀತಂಡದಲ್ಲಿದ್ದ ಮಹಿಳೆಯರು ಕನ್ನಡದಲ್ಲಿ ಮಾತನಾಡುವುದನ್ನು ಕೇಳಿ, ಅವರಿಂದ ನಾವು ಸಿರಿಗೆರೆಯ ಗುರುಗಳು ಎಂದು ತಿಳಿದುಕೊಂಡು ''ಹಾಗಾದರೆ ನಮ್ಮ ತಂದೆಯವರ ಪರಿಚಯ ಅವರಿಗೆ

ಇರಲೇಬೇಕು" ಎಂಬ ಪೂರ್ಣ ಭರವಸೆಯನ್ನು ಹೊತ್ತು ನಮ್ಮ ಹತ್ತಿರ ಬಂದ ಆ ಅಪರಿಚಿತ ಮಹಿಳೆ ಕನ್ನಡದ ಖ್ಯಾತ ಸಾಹಿತಿ ಎಲ್. ಬಸವರಾಜುರವರ ಮಗಳು. "ನಿಮ್ಮ ತಂದೆಯವರು ನಮ್ಮ ಹಿರಿಯ ಗುರುಗಳ ಕಾಲದಿಂದಲೂ ನಮಗೆ ಚೆನ್ನಾಗಿ ಗೊತ್ತಮ್ಮಾ" ಎಂದು ನಾವು ಹೇಳಿದಾಗ ಆ ಮಹಿಳೆ ಕಣ್ಣುಗಳು ಆರ್ದ್ರಗೊಂಡು ತನ್ನ ತವರಿನವರನ್ನು ಕಂಡ ಧನ್ಯತೆಯ ಭಾವ ಮುಖದಲ್ಲಿ ಎದ್ದು ಕಾಣುತ್ತಿತ್ತು! ವಿದೇಶೀ ನೆಲದಲ್ಲಿ ಅಪರೂಪಕ್ಕೆ ಕನ್ನಡದಲ್ಲಿ ಮಾತನಾಡುವ ಮಹಿಳಾತಂಡವೇ ಸಿಕ್ಕಿದ್ದರಿಂ ಆ ಮಹಿಳೆಗೆ ಉಂಟಾದ ಸಂತೋಷ ಹಾಗೂ ಆಕೆಯ ಹೃದಯಾಂತರಾಳದಿಂದ ಚಿಮ್ಮುತ್ತಿದ್ದ ಭಾವನೆಗಳನ್ನು ಗುರುತಿಸಿದ ನಮ್ಮ ಪ್ರವಾಸೀ ತಂಡದವರಿಗೆ ಬಾನಿನೆತ್ತರಕ್ಕೆ ಚಿಮ್ಮುತ್ತಿದ್ದ ನಿರ್ಜೀವಿ ಕಾರಂಜಿಗಿಂತ ಹೆಚ್ಚು ಆಕರ್ಷಕವಾದ ಜೀವಂತ ಕಾರಂಜಿಯಾಗಿ ಆ ಮಹಿಳೆ ಕಂಡರು. ವಿದೇಶೀ ಯುವಕನೊಬ್ಬನನ್ನು ಮದುವೆಯಾಗಿ ಆ ದೇಶದಲ್ಲಿಯೇ ಹತ್ತಾರು ವರ್ಷಗಳಿಂದ ನೆಲೆಸಿ ಬಂಧು ಬಾಂಧವರಿಂದ ದೂರವಿದ್ದು ನೊಂದಿರುವ ಆ ಮಹಿಳೆಯ ಆಗಿನ ಮನಃಸ್ಥಿತಿ ಹೇಗಿತ್ತೆಂದರೆ ಕಾಳಿದಾಸನು ವರ್ಣಿಸುವಂತೆ ಹಿಮಾಲಯದ ತಪ್ಪಲಲ್ಲಿ ಧ್ಯಾನಕ್ಕೆ ಕುಳಿತಿದ್ದ ಜಟಾಧಾರಿ ಶಿವನ ನಿಜಸ್ವರೂಪವನ್ನು ನೋಡಿ ಆಕರ್ಷಿತಳಾದ ಪಾರ್ವತಿಯ ಹಾಗೆ "ನ ಯಯೌ ನ ತಸ್ಥೌ" ಮುಂದೆ ಅಡಿಯಿಡಲೂ ಮನಸ್ಸಿಲ್ಲ, ಅಲ್ಲಿಯೇ ನಿಲ್ಲಲೂ ಆಗುತ್ತಿಲ್ಲ. ಈ ಭಾವನೆ ಕನ್ನಡಿಗಷ್ಟೇ ಅಲ್ಲ 'ಕನ್ನಡಯೆನೆ ಕುಣಿದಾಡುವುದೆನ್ನೆದೆ' ಎಂಬ ಕವಿವಾಣಿಯನ್ನು 'ತಮಿಳುಯೆನೆ', 'ತೆಲುಗುಯೆನೆ' ಎಂದು ಮುಂತಾಗಿ ಬದಲಾಯಿಸಿ ಜಗತ್ತಿನ ಯಾವುದೇ ಭಾಷೆಯವರನ್ನು ಕುರಿತು ಹೇಳಬಹುದು." (೨.೨.೯೫ ರಂದು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ಘಟಿಕೋತ್ಸವದ ಸಂದರ್ಭದಲ್ಲಿನ ಭಾಷಣ).

ವಿದೇಶಗಳಲ್ಲಿ ನೆಲೆಸಿರುವ ಭಾರತೀಯರು ಶ್ರೀ ಜಗದ್ಗುರುಗಳವರನ್ನು ತಮ್ಮ ಸಾಂಸ್ಕೃತಿಕ ಹಸಿವನ್ನು ತಣಿಸಲು ತಮ್ಮಲ್ಲಿಗೆ ಬರಬೇಕೆಂದು ಪದೇ ಪದೇ ಆಹ್ವಾನಿಸುವುದುಂಟು. ಅಂತಹ ಸಂದರ್ಭಗಳಲ್ಲಿ ಅಲ್ಲಿನ ಮಕ್ಕಳು ಗುರುಗಳನ್ನು ನಾನಾ ರೀತಿಯ ಪ್ರಶ್ನೆಗಳನ್ನು ಕೇಳಿ ಅನೇಕ ಧಾರ್ಮಿಕ ವಿಚಾರ ತಿಳಿಯುವುದುಂಟು. ಒಮ್ಮೆ ಹೀಗಾಯಿತು. ಇಷ್ಟಲಿಂಗದ ಮಹತ್ವವನ್ನು ಗುರುಗಳಿಂದ ತಿಳಿದ ಬಾಲಕನೊಬ್ಬ ಅವರಿಂದ ದೀಕ್ಷೆಯನ್ನು ಪಡೆದುಕೊಂಡ. ಲಿಂಗವನ್ನು ಯಾವಾಗಲೂ ಕೊರಳಿನಿಂದ ತೆಗೆಯಬಾರದು ಎಂದು ಗುರುಗಳು ಹೇಳಿದ್ದರು. ಆ ಬಾಲಕ ಲಿಂಗವನ್ನು ಶಾಲಾ ಯೂನಿಫಾರಂ ಮೇಲೆ ಎದ್ದು ಕಾಣುವಂತೆ ಹೊರಗೆ ಹಾಕಿಕೊಂಡು ಶಾಲೆಗೆ ಹೋದನಂತೆ. ಅಲ್ಲಿನ ಬಾಲಕರಿಗೆ ಇದು ತುಂಬಾ ವಿಚಿತ್ರವಾಗಿ ಕಂಡಿತು. ಹುಡುಗನ ಸಹಪಾಠಿ ಒಬ್ಬ ಹೇಳಿದ "It looks like a binacular". ಆಗ ತಕ್ಷಣ ಆ ಹುಡುಗ ಹೇಳಿದನಂತೆ "Yes. this is a binacular blessed by my swamiji to see God". ಈ ಘಟನೆಯನ್ನು ಶ್ರೀ ಜಗದ್ಗುರುಗಳವರು ತಮ್ಮ ಆಶೀರ್ವಚನಗಳಲ್ಲಿ ಇಂದೂ ಪ್ರಸ್ತಾಪಿಸುತ್ತಿರುತ್ತಾರೆ.

ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ವಿದೇಶೀ ವಿದ್ವಾಂಸರು, ವಿದ್ಯಾರ್ಥಿಗಳು, ಪ್ರವಾಸಿಗರನೇಕರ ನಿಕಟ ಸಂಪರ್ಕವನ್ನು ಪಡೆದಿದ್ದಾರೆ. ಅನೇಕ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆಯುವ ವಿವಿಧ ವಿಷಯಗಳನ್ನು ಕುರಿತ ವಿಚಾರ ಸಂಕಿರಣಗಳಲ್ಲಿ ಆಗಾಗ ಭಾಗವಹಿಸುತ್ತಾರೆ. ವಿದೇಶಗಳಲ್ಲಿ ನೆಲೆಸಿರುವ ಭಾರತೀಯರನೇಕರಿಗೆ ಶ್ರೀ ಜಗದ್ಗುರಗಳವರ ನಿಕಟ ಪರಿಚಯವಿದೆ. ಹೀಗಾಗಿ ಅವರು ಭಾರತಕ್ಕೆ ಬಂದಾಗಲೆಲ್ಲಾ ಬೃಹನ್ಮಠಕ್ಕೆ ಭೇಟಿಕೊಡುತ್ತಾರೆ. ಪ್ಯಾರಿಸ್‌ನ ಇಂಡೋ - ಫ್ರೆಂಚ್ ಸಾಂಸ್ಕೃತಿಕ ಸಂಸ್ಥೆಯ ನಿರ್ದೇಶಕರಾದ ಡಾ|| ಮಹೇಶ್ ಘಟ್ರಡ್ಯಾಲ್ ಅವರ ನೇತೃತ್ವದಲ್ಲಿ ಹಲವಾರು ಬಾರಿ ಸಾಂಸ್ಕೃತಿಕ ವಿನಿಮಯ ತಂಡಗಳು ಸಿರಿಗೆರೆಗೆ ಬಂದಿವೆ. ಭಾರತೀಯ ಸಂಸ್ಕೃತಿಯನ್ನು ಕುರಿತು ನಿಕಟ ಪರಿಚಯವನ್ನು ಪಡೆದುಕೊಂಡಿವೆ. ಶ್ರೀ ಜಗದ್ಗುರುಗಳವರು ಹಲವಾರು ಬಾರಿ ಭೇಟಿ ನೀಡಿ ಉಪನ್ಯಾಸವಿತ್ತಿರುವ ಬಾನ್ ವಿಶ್ವವಿದ್ಯಾನಿಲಯದ ಇಂಡಾಲಜಿ ವಿಭಾಗದ ವಿದ್ಯಾರ್ಥಿಗಳ ಒಂದು ತಂಡವು ಇದೇ ವರ್ಷ ಮಾರ್ಚ್‌ನಲ್ಲಿ ಪ್ರೊ. ಎಚ್.ಜಿ. ಫಿಂಡೈಸ್ ಅವರ ನೇತೃತ್ವದಲ್ಲಿ ಸಿರಿಗೆರೆಗೆ ಭೇಟಿ ನೀಡಿತ್ತು. ಬೆಂಗಳೂರಿನ ರವೀಂದ್ರನಾಥ ಟಾಗೂರ್ ನಗರದಲ್ಲಿ ಅತ್ಯಂತ ಕಲಾತ್ಮಕವಾಗಿ ನಿರ್ಮಾಣವಾಗುತ್ತಿರುವ (ನಿರ್ಮಾಣ ಈಗ ಪೂರ್ತಿಯಾಗುತ್ತಿದೆ) ತರಳಬಾಳು ಕೇಂದ್ರವು ಅಂತರರಾಷ್ಟ್ರೀಯ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ. ಭಾರತೀಯ ಸಂಸ್ಕೃತಿ, ಸಾಹಿತ್ಯ (ಅದರಲ್ಲೂ ವಿಶೇಷವಾಗಿ ಶರಣ ಸಾಹಿತ್ಯ) ವರ್ಷದ ಅಂತ್ಯದಲ್ಲಿ ವಿಶ್ವ ಸಂಸ್ಕೃತ ಸಮ್ಮೇಳನ ಜರುಗಲಿದೆ. ದೇಶ ವಿದೇಶಗಳ ಪ್ರಖ್ಯಾತ ಸಂಸ್ಕೃತ ವಿದ್ವಾಂಸರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಪಾಣಿನಿಯ ಸಂಸ್ಕೃತ ವ್ಯಾಕರಣ ಗ್ರಂಥ "ಅಷ್ಟಾಧ್ಯಾಯೀ" ಕೃತಿಯನ್ನು

ಶ್ರೀ ಜಗದ್ಗುರುಗಳವರು ಕಂಪ್ಯೂಟರಿಗೆ ಅಳವಡಿಸಲು ಒಂದು ಸಾಫ್ಟ್‌ವೇರನ್ನು ತಯಾರಿಸಿದ್ದು ಅದು ಈಗಾಗಲೇ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ವಿದ್ವಾಂಸರುಗಳ ಮೆಚ್ಚುಗೆ ಗಳಿಸಿದೆ. ಈ ಸಾಫ್ಟ್‌ವೇರಿಗೆ ಶ್ರೀ ಜಗದ್ಗುರುಗಳವರು ನೀಡಿರುವ ಹೆಸರು ಗಣಕಾಷ್ಟಾಧ್ಯಾಯೀ. ಕಬ್ಬಿಣದ ಕಡಲೆಯಂತಿರುವ ಸಂಸ್ಕೃತ ವ್ಯಾಕರಣ ಈ ಸಾಫ್ಟ್‌ವೇರಿನ ಸಹಾಯದಿಂದ ಅಧ್ಯಯನ ಮಾಡಲು ಹುರಿಗಡಲೆಯಷ್ಟೇ ಸುಲಭವಾಗುತ್ತದೆ.

ನಮ್ಮ ಸಂಸ್ಕೃತಿಯನ್ನೇ ಸರ್ವನಾಶ ಮಾಡುತ್ತಿರುವ ಮದ್ಯಪಾನದ ವಿರುದ್ಧ ಶ್ರೀ ಜಗದ್ಗುರುಗಳವರು ಅತಿ ದೊಡ್ಡ ಪ್ರಮಾಣದಲ್ಲಿ ಚಳುವಳಿಯನ್ನು ನಡೆಸುತ್ತಿರುವುದಂತೂ ಸರ್ವವೇದ್ಯವೇ ಆಗಿದೆ. ಈ ಚಳುವಳಿಗೆ ವ್ಯಾಪಕವಾಗಿ ಅನೇಕ ಮಠ ಪೀಠಗಳು ಬೆಂಬಲವಾಗಿ ನಿಂತಿವೆ. ಮದ್ಯಪಾನ ಒಂದು ಸಾಮಾಜಿಕ ಪಿಡುಗು. ಇದರ ನಿವಾರಣೆ ಅಗತ್ಯವೆಂಬ ಸಾರ್ವಜನಿಕ ಅಭಿಪ್ರಾಯ ರೂಪುಗೊಂಡು ಸರ್ಕಾರದ ಮೇಲೆ ಒತ್ತಡ ಬಿದ್ದುದರ ಪರಿಣಾಮವಾಗಿ ಹಂತ ಹಂತವಾಗಿ ಮದ್ಯಪಾನ ನಿಷೇಧವನ್ನು ಜಾರಿಗೆ ತರುವುದಾಗಿ ಸರಕಾ ಘೋಷಿಸಿದೆ. ಈ ವರ್ಷ ಮದ್ಯಪಾನ ನಿಷೇಧದ ಮೊದಲ ಹಂತವಾಗಿ ಸಾರಾಯಿ ನಿಷೇಧವನ್ನು ಜಾರಿಗೆ ತರುತ್ತಿದೆ.

ಹಲವಾರು ಧರ್ಮಗಳ ಜನರು ಒಟ್ಟಾಗಿ ಬದುಕಬೇಕಾದುದು ಭಾರತದಲ್ಲಿ ಅತ್ಯಂತ ಅಗತ್ಯವಾದುದು. ನಮ್ಮ ದೇಶದ ಸಂಸ್ಕೃತಿಯೇ ಅಂತಹ ಸಂಕೀರ್ಣತೆಯುಳ್ಳದ್ದು. ಭಿನ್ನತೆಯಲ್ಲೂ ಏಕತೆಯುಳ್ಳದ್ದು. ಈ ಸರಳ ವಿಚಾರವನ್ನು ಅರಿಯದ ಕೆಲವು ಮೂಲಭೂತವಾದಿಗಳ ದುಷ್ಟ ಸಂಚಿನಿಂದಾಗಿ ಅನೇಕ ವೇಳೆ ಭುಗಿಲೇಳುವ ಕೋಮುಗಲಭೆಗಳ ಸಂದರ್ಭದಲ್ಲಿ ಶ್ರೀ ಜಗದ್ಗುರುಗಳವರು ಸ್ವತಃ ಪಾದಯಾತ್ರೆ ಮಾಡಿ ನೊಂದವರಿಗೆ ಸಾಂತ್ವನವನ್ನು ಹೇಳಿ ಕೋಮು ಸಾಮರಸ್ಯವನ್ನು ಕಾಪಾಡಿದ್ದಾರೆ. ಹೀಗಾಗಿ ವಿವಿಧ ಧರ್ಮಗಳ ಜನರು ಅವರ ಬಗೆಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದಾರೆ.

ಹೀಗೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಾಂಸ್ಕೃತಿಕವಾಗಿ ಹಾಡನ್ನು ಮೇಲೆತ್ತಲು ತನ್ನೆಲ್ಲ ಶಕ್ತಿ ಸಾಮರ್ಥ್ಯಗಳೊಡನೆ ಕೆಲಸ ಮಾಡುತ್ತಿವೆ. ನಿನ್ನೆಯ ನೆನಪಿನಲ್ಲಿ ಇಂದಿನ ಬದುಕು ಸುಂದರ ನಾಳೆಗಳನ್ನು ಸೃಷ್ಟಿಸಬೇಕು. ಹಾಗಾದರೆ ಮಾತ್ರ ಕರ್ತಾರನ ಕಮ್ಮಟವಾದ ಇಹದ ಬದುಕು ಸುಂದರ. ನಾಡನ್ನು ಕಟ್ಟುವ, ಜನರ ನಡುವಿನ ಅಡ್ಡಗೋಡೆಗಳನ್ನು ಕೆಡಹುವ ಕೆಲಸ ಇಲ್ಲಿ ಸದಾ ನಡೆಯುತ್ತಿರುತ್ತದೆ. "ತರಳಾ ಬಾಳು" ಎಂದು ಲೋಕದ ಜನರೆಲ್ಲಾ ಸುಖವಾಗಿ ಬಾಳಬೇಕು ಎಂದೇ ಅರ್ಥ. "ತರಳಾ ಬಾಳು" ಎಂಬುದು ಲೋಕಗುರು ಮರುಳಸಿದ್ಧರು ತಮ್ಮ ಶಿಷ್ಯ ಸಿದ್ಧೇಶ್ವರರಿಗೆ ಉಪದೇಶಿಸಿದ ಪಂಚಾಕ್ಷರಿ ಮಂತ್ರ. ಅದೇ ಈ ಪೀಠದ ಉಸಿರೂ ಸಹ.

ಸುತ್ತೂರು ಶ್ರೀಮಠದ ಸಾಂಸ್ಕೃತಿಕ ಕೊಡುಗೆ

ಪ್ರೊ. ಕೆ. ವೀರಭದ್ರ

ಸಮಸ್ತ ಚರಾಚರ ಜಗತ್ ಸೃಷ್ಟಿಯಲ್ಲಿ ಬಾಧಾಕರವೂ ಆನಂದದಾಯಕವೂ ಆದ ವೈಚಿತ್ರ್ಯವೊಂದಿದೆ. ಕ್ರೂರ ಪ್ರಾಣಿಗಳಾದ ಹುಲಿ ಸಿಂಹ ಮುಂತಾದವುಗಳು ಸಲಸಲಕ್ಕೆ ಮೂರು - ಮೂರಕ್ಕಿಂತ ಹೆಚ್ಚಿನ ಮರಿಗಳಿಗೆ ಜನ್ಮವೀಯುತ್ತವೆ ! ಸಾಧು ಪ್ರಾಣಿಗಳಾದ ಜಿಂಕೆ ಗೋವು ಮುಂತಾದವುಗಳು ಒಂದೊಂದೇ ಸಂತಾನವನ್ನು ಈಯುತ್ತವೆ. ವಿಷಜಂತುಗಳು ಅಧಿಕ ಸಂಖ್ಯೆಯ ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ರುಧಿರದಾಹೀ ಕ್ರಿಮಿ ಕೀಟಗಳು ಅಸಂಖ್ಯಾತ ಸಂತಾನಕ್ಕೆ ಕಾರಣೀಭೂತಗಳಾಗಿವೆ !

ಇದು ಜಗತ್ತಿನ ವೈಶಿಷ್ಟ್ಯ. ಈ ವೈಶಿಷ್ಟ್ಯ ಮಾನವ ಲೋಕದಲ್ಲೂ ಉಂಟು !

ಅರಿಷಡ್ವರ್ಗಗಳ ಅಡಿಯಾಳುಗಳಾಗಿ ಸ್ವಾರ್ಥಪರರಾದ ಅಸಂಖ್ಯಾತ ಮಾನವರು ಒಂದು ಕಡೆ. ನಿಷ್ಕಾಮ, ತ್ಯಾಗಮಯ, ಲೋಕ ಕಲ್ಯಾಣಕಾರಕ ಸಾಧು - ಸಂತ - ಸತ್ಪುರುಷರು ಒಂದು ಕಡೆ. ಆದರೆ ಇವರ ಸಂಖ್ಯೆ ಬೆರಳೆಣಿಕೆಯಷ್ಟೆ !

ಸೃಷ್ಟಿಯಲ್ಲಿ ಕತ್ತಲಿದೆ, ಬೆಳಕಿದೆ. ಆದರೆ ಇವೆರಡೂ ಒಟ್ಟೊಟ್ಟಿಗೆ ಇಲ್ಲ ! ಮಾನವರಲ್ಲಿ ಮಾತ್ರ ದುಷ್ಟರೂ, ಶಿಷ್ಟರೂ ಒಟ್ಟೊಟ್ಟಿಗೇ ಇದ್ದಾರೆ. ಆದರೆ ಸಂಖ್ಯಾ ದೃಷ್ಟಿಯಿಂದ ಶಿಷ್ಟರು ಗೋ ಸಂತಾನದಂತೆ ಮಿತ ಸಂಖ್ಯೆಯಲ್ಲಷ್ಟೇ !

ಆದಿಮಾನವ ಸುಮಾರು ಆರು ಲಕ್ಷ ವರ್ಷಗಳ ಅವಧಿಯಲ್ಲಿ ಆಧುನಿಕ ಮಾನವನಾಗಿದ್ದಾನೆ. ಏನೆಲ್ಲ ಅಲ್ಲೋಲ ಕಲ್ಲೋಲಗಳು, ವಿಪ್ಲವಗಳು, ಯುದ್ಧಗಳು ನಡೆದುವು. ಎಷ್ಟೆಲ್ಲ ಸಾಮ್ರಾಜ್ಯಗಳು ಎದ್ದುಬಿದ್ದು ಹೋದವು ! ಜೊತೆ ಜೊತೆಯಲ್ಲೇ ಬೌದ್ಧಿಕ ವಿಕಾಸ, ಕಲೆಗಳ ವಿಕಾಸ, ಸಾಹಿತ್ಯದ ಪ್ರಸಾರ, ಧಾರ್ಮಿಕ ಬೋಧನೆ, ಸಹಬಾಳ್ವೆಯ ಶಾಂತಿ ಮಂತ್ರ ಪಠನ. ಮಾನವನಲ್ಲಿ ವಿವೇಕೋದಯವಾಗಲಿ, ಸನ್ನಡತೆ ಅಳವಡಲಿ, ಭೂತದಯೆ ಉದ್ಭೂತಗೊಳ್ಳಲಿ, ತನ್ನಂತೆ ಪರರ ಬಗೆಯುವ ಭಾವ ಬಲಿಯಲಿ, ಮಾನವ ಸಕಲಜೀವಾತ್ಮರಿಗೆ ಲೇಸನೇ ಬಯಸಲಿ, ಇಲ್ಲಿ ಸಲ್ಲುವಂತೆ ಬದುಕಿ ಬಾಳಿ ಅಲ್ಲಿಯೂ ಸಲ್ಲಲಿ, ದಯಾಮೂಲ ಧರ್ಮ ನಿರತನಾಗಲಿ ಎಂದು ಮಹಾತ್ಮರು, ಮಹಾನುಭಾವಿಗಳು, ಏನೆಲ್ಲ ನುಡಿದು, ನಡೆದು ಬೋಧಿಸಿದರು, ಬೋಧಿಸುತ್ತಲೇ ಇರುವರು !

'ನೆರೆಯವರನು ಪ್ರೀತಿಸು' ಎಂದ ಏಸು, 'ಪ್ರತಿಯೊಂದು ವಿಷಯ ವಿಚಾರವನ್ನು ಪ್ರಶ್ನಿಸಿ ವಿವೇಚಿಸಿರಿ' ಎಂದ ಸಾಕ್ರಟೀಸ್, 'ದುಃಖಕ್ಕೆ ಆಸೆಯೇ ಮೂಲ' ಎಂದ ಬುದ್ಧ, 'ಅಹಿಂಸೋ ಪರಮೋಧರ್ಮಃ' ಎಂದ ಮಹಾವೀರ, 'ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದ ಶ್ರೀ ಕೃಷ್ಣ, 'ಕಳಬೇಡ, ಕೊಲಬೇಡ ಹುಸಿಯ ನುಡಿಯಲುಬೇಡ' ಎಂದ ಬಸವಣ್ಣ, 'ಸ್ತುತಿ - ನಿಂದೆಗಳು ಬಂದಡೆ ಸಮಾಧಾನಿಯಾಗಿರು' ಎಂದ ಅಕ್ಕಮಹಾದೇವಿ, 'ನೆಲದಾಹ ಬೇಡ ಸಹಬಾಳ್ವೆ ಮಾಡಿ' ಎಂದ ವ್ಯಾಸ, 'ಸಂಪತ್ಸಂಗ್ರಹ ಬೇಡ, ಸಮಾತಾಭಾವ ಬೇಕು ಎಂದು ಬೋಧಿಸಿದ ಮಾರ್ಕ್ಸ್, 'ಈಶ್ವರ್ ಅಲ್ಲಾ ತೇರೇ ನಾಮ್, ಸಬಕೋ ಸನ್ಮತಿ ದೇ ಭಗವಾನ್' ಎಂದ ಮಹಾತ್ಮ ಗಾಂಧಿ ! ಅಷ್ಟೇ ಅಲ್ಲ, ಮಾನವನಲ್ಲಿನ ದಾನವತ್ವದ ದಮನಕ್ಕಾಗಿ ದಶಾವತಾರಗಳು ಆಗಿಹೋದುವು ! ಮಾನವನನ್ನು ದೇವಮಾನವನನ್ನಾಗಿ ಪರಿವರ್ತಿಸಲು ಎಷ್ಟೊಂದು ಜನ ಮಹಾತ್ಮರು ಅವತರಿಸಿದರು ! ಆದರೂ ಅಸಂಖ್ಯಾತ ಕತ್ತಲ ಪ್ರತಿಮೆಗಳಂಥ ಆಸುರೀ ಸ್ವಭಾವದ ಮಾನವರು ವಿಜೃಂಭಿಸುತ್ತಲೇ ಇದ್ದಾರೆ ! 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬ ಗೀತಾವಾಣಿ ಇಂದಿಗೂ ಸಾಧು ಸಂತರ ಸ್ವರೂಪದಲ್ಲಿ ಸಾಕಾರಗೊಳ್ಳುತ್ತಲೇ ಇದೆ.

ಇಂತಹ ಗೀತಾವಾಣಿಯ ಸಾಕಾರ ಸ್ವರೂಪ ಇಂದಿಗೆ ಸಾವಿರ ವರುಷಗಳ ಹಿಂದೆ ದಕ್ಷಿಣಕಾಶಿ ನಂಜನಗೂಡು ಸನಿಹದಲ್ಲಿ ಕಪಿಲಾ ನದೀ ತೀರದ ಶ್ರೀ ಮತ್ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ರೂಪದಿಂದ ಅವತಾರವಾಯಿತು.

ತಲಕಾಡಿನ ರಾಜಮಲ್ಲನಿಗೂ ಕಂಚಿಯ ರಾಜೇಂದ್ರ ಚೋಳನಿಗೂ ಮಧ್ಯೇ ಹಸಿಗರುಕೆ ಹಾಕಿದರೂ ಭಗ್ಗನೆ ಹೊತ್ತಿ ಉರಿಯುವಂಥ ದ್ವೇಷಾಗ್ನಿ ! ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಆ ಪ್ರಳಯಾಗ್ನಿ ಸದೃಶ ದ್ವೇಷಾಗ್ನಿಯನ್ನು ಲೋಕ ಕಲ್ಯಾಣಕಾರಕ ಹೋಮ ಶಿಖಿಯಂತೆ ಪರಿವರ್ತಿಸಿ ಆ ಇಬ್ಬರಲ್ಲಿ ಸಹಬಾಳ್ವೆಯ ಸಹಕಾರ ತತ್ವವನ್ನು, ಶಾಂತಿಯನ್ನು ಬಿತ್ತಿ

ಬೆಳೆಯಿಸಿ, ತನ್ನಂತೆ ಪರರ ಬಗೆಯುವುದನ್ನು ಕಲಿಸಿದರು. ಅಂಥ ಮಹಾನುಭಾವರಿಂದ ಸಂಸ್ಥಾಪಿತವಾದ ಶ್ರೀ ಮತ್ಸುತ್ತೂರು ವೀರಸಿಂಹಾಸನ ಮಠ ಅಂದಿನಿಂದ ಇಂದಿನ ತನಕ ಇಪ್ಪತ್ತು ನಾಲ್ಕು ಜನ ಪರಮಪೂಜ್ಯ ಜಗದ್ಗುರುಗಳನ್ನು ಲೋಕೋದ್ಧಾರ ಮಣಿಹಕ್ಕೆ ಅರ್ಪಿಸಿದೆ. ಈ ಎಲ್ಲ ಜಗದ್ಗುರುಗಳಲ್ಲಿ ಆದಿ ಜಗದ್ಗುರುಗಳ ಚಿಂತನ ತಪಃಶಕ್ತಿ ನಿರಂತರವಾಗಿ ಪ್ರಶಾಂತವಾಗಿ ಪ್ರಜ್ವಲಿಸುತ್ತದೆ. ಮುಂದೆಯೂ ನಂದಾದೀಪದಂತೆ ಕಂಗೊಳಿಸುತ್ತಲೇ ಇರುತ್ತದೆ.

ಈ ಜಗದ್ಗುರುಗಳೆಲ್ಲರೂ ಹಿಮಾಲಯದ ಉತ್ತುಂಗ ಶಿಖರ ಸದೃಶರು. ಹಿಮಾಲಯದ ಉನ್ನತೋನ್ನತ ಶಿಖರಗಳು ಭಾರತವನ್ನು ಶತ್ರುಗಳ ಆಕ್ರಮಣದಿಂದ ಸಂರಕ್ಷಿಸುತ್ತಿರುವ ಹಾಗೆ ಈ ಜಗದ್ಗುರುಗಳು ಮಾನವರನ್ನು ಆಕ್ರಮಿಸಲು ಹವಣಿಸುತ್ತಿರುವ ಅರಿಷಡ್ವರ್ಗಗಳಿಂದ ಜನರನ್ನು ಪಾರು ಮಾಡುತ್ತಿದ್ದಾರೆ. ಈ ಹಿಮಾಲಯ ಶಿಖರಗಳು ತಮ್ಮನ್ನು ಸೂರ್ಯಾತಪದಲ್ಲಿ ಕರಗಿಸಿಕೊಂಡು ಜೀವನದಿಗಳಾಗಿ ಹರಿದು ಭಾರತವನ್ನು ಸಮೃದ್ಧಿಗೊಳಿಸುತ್ತಿರುವಂತೆ ಈ ಜಗದ್ಗುರುಗಳು ಮಾನವರನ್ನು ಪೊರೆಯುತ್ತಲೇ ಇರುವರು.

ಗೌರೀಶಂಕರ, ಕಾಂಚನ ಗಂಗಾ ಶಿಖರಪ್ರಾಯರಾದ ಹಲವಾರು ಜಗದ್ಗುರುಗಳು ಕನ್ನಡದ ಆದಿಕವಿಯೂ, ಮಹಾಕವಿಯೂ ಆದ ಪಂಪ ಉದ್ಘೋಷಿಸಿದಂತಹ,

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರ್....."

ಇಂಥ ಮಾನವರನ್ನು ರೂಪಿಸುವುದರಲ್ಲಿ ನಿತ್ಯ ನಿರಂತರವಾಗಿ ಶ್ರಮಿಸುತ್ತಲೇ ಬಂದಿದ್ದಾರೆ. ಈ ಇಪ್ಪತ್ತನಾಲ್ಕು ಜಗದ್ಗುರುಗಳಲ್ಲಿ ದ್ವಿತೀಯ ಜಗದ್ಗುರುಗಳು ಶ್ರೀ ಈಶಾನೇಶ್ವರ ಒಡೆಯರು "ಜನ ಬದುಕಲೆಂದು" "ರೇವಣಸಿದ್ಧೇಂದ್ರ ದೇಶಿಕರ ಪರಮ ಲೀಲಾ ಕಥನ" ಎಂಬ ಗ್ರಂಥವನ್ನು ರಚಿಸಿ ಪರಮತತ್ವದ ದಿವ್ಯಬೆಳಗನ್ನು ನೀಡಿರುವರು.

ಕಲ್ಯಾಣದತ್ತಣಿಂದ ಶ್ರೀ ಸುತ್ತೂರು ಕ್ಷೇತ್ರಕ್ಕೆ ಆಗಮಿಸಿದ ಮುಸುಡಿ ಚೌಡಯ್ಯ ಮೊದಲಾದ ಶರಣರಿಗೆ ತೃತೀಯ ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯರು ಆಶ್ರಯವಿತ್ತು ಧರ್ಮ ಪ್ರಚಾರಕ್ಕೆ ಇಂಬು ಮಾಡಿಕೊಟ್ಟರು.

"ಪರಮ ಶಿವಾಧಿಕ್ಯ ಶಿಖಾಮಣಿ" ಎಂಬ ಪ್ರೌಢ ಗ್ರಂಥ ರಚಿಸಿದ ಚತುರ್ಥ ಜಗದ್ಗುರು ಶ್ರೀ ಸಿದ್ಧನಂಜದೇಶಿಕೇಂದ್ರರು ಸುತ್ತೂರನ್ನು ದ್ವಿತೀಯ ಕಲ್ಯಾಣವನ್ನಾಗಿಸಿದ ಮಹಾನುಭಾವರು. ಅಷ್ಟೇ ಅಲ್ಲ, ಶ್ರೀಶೈಲದತ್ತಣಿಂದ ಬಂದ ಶ್ರೀ ಮಲೆಯ ಮಾದೇಶ್ವರರಿಗೆ ಆಶ್ರಯವಿತ್ತು, ರಾಗಿ ಬೀಸುವ ಕಾಯಕ ವಹಿಸಿಕೊಟ್ಟು, ಆ ದೇವಮಾನವ ಮಹಾನುಭಾವ ಮಾದೇಶ್ವರರಿಗೆ "ಕಾಯಕ - ಮಹತ್ವ" ವನ್ನು ಮನದಟ್ಟು ಮಾಡಿಸಿ, ಲೋಕ ಕಲ್ಯಾಣಕ್ಕಾಗಿ ಏಳು ಮಲೈಗಳತ್ತ ಹಾರ್ದಿಕವಾಗಿ ಬೀಳ್ಕೊಟ್ಟರು.

"ಅತಿ ಪ್ರಾಚೀನವಾದ ಸುತ್ತೂರು ವೀರಸಿಂಹಾಸನ ಮಠದಿಂದ ಗುರುವರ್ಗವು ಧಾರ್ಮಿಕ ಸಾಮಾಜಿಕ - ಸಾರಸ್ವತ ಕ್ಷೇತ್ರಗಳಲ್ಲಿ ಆದರ್ಶ ಸೇವೆಯನ್ನು ಕಳೆದ ಹಲವಾರು ಶತಮಾನಗಳಿಂದಲೂ ಸಲ್ಲಿಸುತ್ತಾ ಬಂದಿದೆ. ಅದರಲ್ಲಿ ಶ್ರೀಮಠದ ಹನ್ನೊಂದನೆಯ ಅಧಿಪತಿಗಳಾದ ಶ್ರೀ ಘನಲಿಂಗ ಶಿವಯೋಗಿಗಳು ಬಸವಕಲ್ಯಾಣದ ಕನಸನ್ನು ನನಸಾಗಿಸಲು ಹದಿನೈದನೆಯ ಶತಮಾನದಲ್ಲಿ ನಡೆದ ಪುನರುತ್ಥಾನದ ನೇತಾರರಾದ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಸಾಕ್ಷಾತ್ ಶಿಷ್ಯರಾಗಿದ್ದು ತಮ್ಮ ಗುರುಗಳೊಡನೆ ಸಮಾಜೋದ್ಧಾರದ ಮಹತ್ಕಾರ್ಯಗಳಲ್ಲಿ ಭಾಗವಹಿಸಿದರಲ್ಲದೆ, ಆ ಪ್ರಮಥರಂತೆ ತಾವು ವಚನಗಳ ಮೂಲಕ ತಮ್ಮ ಅಮರ ಸಂದೇಶವನ್ನು ಬಿಟ್ಟು ಹೋಗಿರುವರು. ಅವರ ಒಂದೊಂದು ವಚನದಲ್ಲಿಯೂ ದಿಕ್ಕು ತಪ್ಪಿದ ಜನಕ್ಕೆ ಧ್ರುವ ತಾರೆಯಾಗಬಲ್ಲ ಸುಜ್ಞಾನದ ಸ್ವಯಂ ಪ್ರಕಾಶವಿದೆ. ಈ ರೀತಿಯಲ್ಲಿ ಮಾತೇ ಜ್ಯೋತಿರ್ಲಿಂಗವಾಗುವ ಪವಾಡವನ್ನು ನಾವು ಅವರ ಪ್ರತಿ ವಚನದಲ್ಲಿಯೂ ಕಾಣಬಹುದು" ಎಂದು ದಿವಂಗತ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ಹೃದಯ ತುಂಬಿ ನುಡಿದಿದ್ದಾರೆ.

ಪರಮ ಸುಜ್ಞಾನಿ ಅಲ್ಲಮ ಪ್ರಭುಗಳ ವಚನಗಳಿಗೆ - ಮುಖ್ಯವಾಗಿ ಬೆಡಗಿನ ವಚನಗಳಿಗೆ ಸಮಾನವೆನಿಸುವ ಬೆಡಗಿನ ವಚನಗಳನ್ನು ವೈರಾಗ್ಯ ನಿಧಿ ಅಕ್ಕಮಹಾದೇವಿಯ ಮಧುರ ಸತಿ ಪತಿಭಾವದ ವಚನಗಳಿಗೆ ಹೊಯ್‌ಕೈಯಾದ ವಚನಗಳನ್ನು ರಚಿಸಿದ ಜಗದ್ಗುರು ಶ್ರೀ ಘನಲಿಂಗಿದೇವರ ಅಪೂರ್ವ ವಚನಗಳು ಕನ್ನಡ ವಚನ ಸಾಹಿತ್ಯದ ಅಮೂಲ್ಯ ವಚನಗಳಾಗಿ ಪರಿಣಾಮ ರಮಣೀಯವಾಗಿವೆ :

೧

ಎನ್ನ ತಂದೆಯು ಬಸುರಲ್ಲಿ ಬಂದಳೆಮ್ಮವ್ವೆ.
ಎನ್ನ ತಂಗಿಯರಿಬ್ಬರೂ ಹೆಂಡಿರಾದರೆನಗೆ.
ಎನ್ನ ಸತಿಯರು ಎನ್ನ ಮದವಳಗಿತ್ತಿಯ ಮಾಡಿ
ಎಮ್ಮಪ್ಪಗೆ ಮದುವೆಯ ಮಾಡಿದರು.
ಎನ್ನ ಗಂಡನ ಮನೆಯೊಡವೆಯನೆನ್ನ ಉಗುರು ಕಯಿನಲೆತ್ತಿ

೨

ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಆರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಗೆ ಮಾತನಿಕ್ಕಿದರಮ್ಮಾ
ಒಗೆತನವ ಮಾಡುವೆನು
ಎಮ್ಮಕ್ಕನ ಕೈಯಿಂದ ಎನ್ನ ಗಂಡನ ಹೆಂಡತಿಯೆನಿಸಿಕೊಂಬೆನು.
ನಿನ್ನ ಗಂಡ ಆಳಲಿ ಆಳದೆ ಹೋಗಲಿ
ಪತಿಭಕ್ತಿಯ ಬಿಡೆ ಕಣಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ *

ಇಂಥಾ ಅರ್ಥಘನ - ಭಾವಘನ ವಚನಕಾರರಾದ ಜಗದ್ಗುರು ಶ್ರೀ ಘನಲಿಂಗಿ ದೇವರು ಸಾರಸ್ವತ ಲೋಕದಲ್ಲಿ ಅಮರರಾಗಿದ್ದಾರೆ. ಇಂಥ ಪರಮಪೂಜ್ಯ ಜಗದ್ಗುರು ಪರಂಪರೆಯಲ್ಲಿ ಒಂಭತ್ತನೆಯ ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು (ಕ್ರಿ.ಶ. ೧೪೯೦) ವಿಜಯನಗರ ಸಾಮ್ರಾಟರ ಅನನ್ಯ ಭಕ್ತಿ ಗೌರವಾದರಗಳಿಗೆ ಪಾತ್ರರಾಗಿದ್ದರು.

ವಿಜಯನಗರ ಸಾಮ್ರಾಜ್ಯದ ಅಧಿಕಾರಿ ಭದ್ರಯ್ಯ - ಹತ್ತನೆಯ ಜಗದ್ಗುರು ಶ್ರೀ ಕೂಗಲೂರು ನಂಜುಂಡದೇಶಿಕೇಂದ್ರರ ಪರಮ ಭಕ್ತನಾಗಿದ್ದು ಶ್ರೀ ಮಠಕ್ಕೆ ದತ್ತಿಯನ್ನಿತ್ತಿದ್ದಾನೆ.

ವಿಜಯನಗರದ ವೆಂಕಟಪತಿರಾಯನ ಮಾಂಡಳಿಕ ಇಮ್ಮಡಿ ರಾಮರಾಜನಾಯಕನು ಹದಿಮೂರನೆಯ ಜಗದ್ಗುರು ಶ್ರೀ ಚೆನ್ನಬಸವದೇಶಿಕೇಂದ್ರರಿಗೆ (ಕ್ರಿ.ಶ. ೧೫೯೦) ದತ್ತಿಯನ್ನಿತ್ತು ಭಕ್ತಿಯನ್ನು ಮೆರೆದಿದ್ದಾನೆ.

ಸಂಸ್ಕೃತ ಗ್ರಂಥ 'ಶಿವಾಧಿಕ್ಯ ಶಿಖಾಮಣಿ'ಯ ಟೀಕೆಯನ್ನು ರೇವಣಾರಾಧ್ಯರಿಂದ ಕನ್ನಡದಲ್ಲಿ ಬರೆಯಿಸಿದ ಹದಿನೈದನೆಯ ಜಗದ್ಗುರು ಶ್ರೀ ಗುರು ಚೆನ್ನಬಸವ ಶಿವಾಚಾರ್ಯರು ಮೈಸೂರರಸರಾದ ದೊಡ್ಡ ಕೃಷ್ಣರಾಜ ಒಡೆಯರಿಂದ ಭಕ್ತಿಪೂರ್ಣ ಕೈಂಕರ್ಯವನ್ನು ಸ್ವೀಕರಿಸಿ ಅನುಗ್ರಹಿಸಿದ್ದಾರೆ.

ಹತ್ತೊಂಭತ್ತನೆಯ ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು (ಕ್ರಿ.ಶ. ೧೮೦೧) ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಸಂಪೂಜಿತರು, ಅಲ್ಲದೆ ಮೈಸೂರಿನಲ್ಲಿದ್ದ ಕಂಪನಿ ಸರ್ಕಾರದ ಅಧಿಕಾರಿ ಲ್ಯಾಸಿಂಗ್‌ಟನ್ ಎಂಬುವವನಿಂದ ಶ್ರೀಮಠಕ್ಕೆ ಸನ್ನದನ್ನು ಪಡೆದಂಥ ಮಹಾನುಭಾವರು.

ಇಪ್ಪತ್ತೆರಡನೆಯ ಜಗದ್ಗುರು 'ಮಂತ್ರ ಮಹರ್ಷಿ' ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರೂ, ಇಪ್ಪತ್ತಮೂರನೆಯ ಜಗದ್ಗುರು 'ರಾಜಗುರು ತಿಲಕ' ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೂ ರತ್ನ ಸಿಂಹಾಸನಾಧೀಶ್ವರ ಮಹೀಶೂರು ಶ್ರೀ ಮನ್‌ಮಹಾರಾಜ ಜಯಚಾಮರಾಜ ಒಡೆಯರ್ ಅವರ ಅನನ್ಯ ಭಕ್ತಿ ಗೌರವಗಳನ್ನು ಪಡೆದವರಾಗಿದ್ದರು.

ಈ ಎಲ್ಲ ಜಗದ್ಗುರುಗಳು ರಾಜಪೂಜಿತ ಜಗದ್ಗುರುಗಳಾಗಿ ರಾರಾಜಿಸಿದ ಮಹಾತ್ಮರು.

ಗತೇತಿಹಾಸ ದರ್ಪಣದಲ್ಲಿ ವರ್ತಮಾನತನವನ್ನು ನೋಡಿಕೊಂಡು, ತನ್ನಲ್ಲಿನ ನ್ಯೂನತೆಗಳನ್ನು ನೀಗಿಕೊಂಡು, ಕ್ರಮಿಸಬೇಕಾದ ಸತ್ಪಥವನ್ನು ಮನಗಂಡು, ತನ್ನನ್ನು ಮುಂದಿನ ಭವಿಷ್ಯತ್ತಿಗೆ ಭವ್ಯ ಇತಿಹಾಸವನ್ನಾಗಿ ರೂಪಿಸಿಕೊಳ್ಳಬೇಕು, ಎಂಬ ಈ ಸುವರ್ಣ ಸೂತ್ರವನ್ನು ಇಪ್ಪತ್ತೆರಡನೆಯ ಜಗದ್ಗುರು, 'ಮಂತ್ರ ಮಹರ್ಷಿ' ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಅನುಷ್ಠಾನಕ್ಕೆ ತಂದುದು ನಾಡಿನ ಪುಣ್ಯ.

---

* ''ಘನಲಿಂಗದೇವರ ವಚನಗಳು'' : ಸಂಪಾದಕರು : ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಸಾವಿರ ವರ್ಷಗಳ ಶ್ರೀ ಮತ್ಸುತ್ತೂರು ವೀರಸಿಂಹಾಸನ ಮಠದ ಭವ್ಯೇತಿಹಾಸವನ್ನು ಗರ್ಭೀಕರಿಸಿಕೊಂಡ ಐತಿಹಾಸಿಕ ದಾಖಲೆಗಳನ್ನು, ಶಾಸನಗಳನ್ನು, ಜನ ಪ್ರತೀತಿಗಳನ್ನು ಕಲೆಹಾಕಿ ಸುಸಂಬದ್ಧವಾಗಿ ಸೂತ್ರೀಕರಿಸಿ ಶ್ರೀ ಮಠದ ಇತಿಹಾಸದ ರಚನೆಯನ್ನು ಅಪಾರ ಶ್ರಮದಿಂದ ಪೂರೈಸಿದರು. ಓತಪ್ರೋತವಾಗಿ ಕರ್ತೃತ್ವಶಕ್ತಿಯಿಂದ ಶ್ರೀಮಠದ ಆಡಳಿತವನ್ನು ಅಚ್ಚುಕಟ್ಟುಗೊಳಿಸಿದರು. ಕರುಣ ಮಡುಗಟ್ಟಿದ ಕಾರಿಣ್ಯವನ್ನು ಪ್ರದರ್ಶಿಸಿ ಮಠದ ಸಂಪನ್ಮೂಲಗಳನ್ನು ರೂಢಿಸಿದರು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರನ್ನು ಅನುಕ್ಷಣ ಧ್ಯಾನಿಸಿ, ಶ್ರೀಮಠವನ್ನು ದೇದೀಪ್ಯಮಾನವಾಗಿ ಬೆಳಗಿಸುವ ಭಾವೀ ಜಗದ್ಗುರುಗಳನ್ನು ಪಡೆದರು. ಅವರೆ ಇಪ್ಪತ್ತಮೂರನೇ ಜಗದ್ಗುರು ಪರಮಪೂಜ್ಯ 'ರಾಜಗುರು ತಿಲಕ' ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಅವರನ್ನು ಹನ್ನೆರಡನೆಯ ವಯಸ್ಸಿನಲ್ಲಿಯೇ ಪಟ್ಟಾಧಿಕಾರಕ್ಕೆ ತಂದು ತಾವು ಸಮಸ್ತ ಜೀವರಾಶಿಗಳ ಸುಕ್ಷೇಮಾರ್ಥವಾಗಿ ಆರು ಕೋಟಿ ಶಿವಮಂತ್ರ ಲೇಖನತಪಸ್ಸಿಗೆ ತೊಡಗಿ ಬೆಳಕಿನಲ್ಲಿ ಬೆಳಕಾಗಿ ಬಯಲಲ್ಲಿ ಬಯಲಾದರು.

'ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂಧೆನಿಸಯ್ಯ' ಎಂದು ಬಸವಣ್ಣನವರು ಕೂಡಲ ಸಂಗನಲ್ಲಿ ಮೊರೆಯಿಟ್ಟರು. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಯಾರನ್ನೂ ಇವನಾರವ, ಇವನಾರವ ಎನ್ನಲಿಲ್ಲ. ಎಲ್ಲರನ್ನು ಜಾತಿ - ಮತ - ಪಂಥ ಭೇದಗಳಿಲ್ಲದೆ 'ಇವ ನಮ್ಮವ, ಇವ ನಮ್ಮವ' ಎಂದು ಅಪ್ಪಿಕೊಂಡು, ವಿಶ್ವಮಾನವರಾದರು. ವಿಶ್ವಮಾನವರಾದ ಬಗೆ ಅನುಕರಣೀಯ.

ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಸಹ ವಿದ್ಯಾರ್ಥಿಗಳ ಕಷ್ಟ ನಷ್ಟಗಳನ್ನು ಕಂಡು ಸಹಜ ಮಾತೃ ಹೃದಯದ ಶಿವರಾತ್ರಿ ರಾಜೇಂದ್ರರು ಕರಗಿ ನೀರಾದರು. ಅಮೃತ ಸಲಿಲವಾದರು, ಬಡ ವಿದ್ಯಾರ್ಥಿಗಳ ಪಾಲಿಗೆ.

ನನ್ನ ವಿದ್ಯಾಭ್ಯಾಸ ಸ್ಥಗಿತಗೊಂಡರೂ ಚಿಂತೆಯಿಲ್ಲ, ಅನೇಕರು ವಿದ್ಯಾವಂತರಾಗಲಿ. ಒಂದು ದೀಪಕ್ಕಿಂತ ಅಸಂಖ್ಯಾತ ದೀಪಗಳು ಬೆಳಗಲಿ ಎಂದರು. ಈ ಶತಮಾನದ ನಾಲ್ಕನೆಯ ದಶಕದಲ್ಲಿ ತಾವು ಉಪವಾಸ ಅರೆ ಉಪವಾಸವಿದ್ದು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದರು.

"ಶರಣರ ಸೂಳ್ನುಡಿಯ ಒಂದರಗಳಿಗೆಯಿತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ ! " ಎಂದ ಜೇಡರ ದಾಸಿಮಯ್ಯ ದೇವ ಮಾನವ ಪಥದಲ್ಲಿ ಹೆಜ್ಜೆಯೂರಲು ಅದೇ ತಾನೇ ಧೃತಗತಿಯಿಂದ ಸಾಗಲು ನಿಶ್ಚಯಿಸಿದ್ದ ಶಿವರಾತ್ರಿ ರಾಜೇಂದ್ರರು ತಮ್ಮ ಇಷ್ಟಲಿಂಗದ ಸುವರ್ಣ ಸಂಪುಟವನ್ನೇ ಮಾರಿ ಬಿಟ್ಟರು ! ಅಲ್ಲಿಂದ, ಆ ಅಮೃತಗಳಿಗೆಯಿಂದ ವರ್ಷ ವರ್ಷ ಅಧಿಕಾಧಿಕ ಸಂಖ್ಯೆಯ ಬಡವಿದ್ಯಾರ್ಥಿಗಳಿಗಾಗಿ ಅಶನ ವಸತಿ ನಿಲಯಗಳನ್ನು ನಿರ್ಮಿಸಿದರು.

"ಗ್ರಾಮೋದ್ಧಾರವಾಗದೆ ದೇಶದ ಉದ್ಧಾರ ಸಾಧ್ಯವಿಲ್ಲ" ಎಂದರು ಮಹಾತ್ಮಾ ಗಾಂಧಿಯವರು. ಶಿವರಾತ್ರಿ ರಾಜೇಂದ್ರರು ಗ್ರಾಮೋದ್ಧಾರವಾಗಬೇಕಾದರೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳು ಹೆಚ್ಚಿದಷ್ಟು ಒಳಿತು ಎಂದು ಮನಗಂಡರು. ೧೯೫೪ ರಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. ಅಂದು ನ್ಯಗ್ರೋಧ ಬೀಜರೂಪದ ಮಹಾವಿದ್ಯಾಪೀಠ ಇಂದು ಮಹಾವಟವೃಕ್ಷವಾಗಿರುವುದು ಲೋಕವಿದಿತ.

ಮಾನವ ಸುಸಂಸ್ಕೃತನಾಗಬೇಕಾದರೆ ವಿದ್ಯಾವಂತನಾಗಬೇಕು, ಸೇವಾಮನೋಭಾವ ಬೆಳೆಸಿಕೊಳ್ಳಬೇಕು. ಸಾಹಿತ್ಯ, ಸಂಗೀತ ಲಲಿತಕಲೆಗಳಲ್ಲಿ ಆಸಕ್ತನಾಗಬೇಕು, ಧರ್ಮದ ಚೌಕಟ್ಟಿನಲ್ಲಿ ಅರ್ಥ - ಕಾಮ - ಮೋಕ್ಷ - ಸಾಧಕನಾಗಬೇಕು. ಜ್ಞಾನದ ಜೊತೆಗೆ ವಿಜ್ಞಾನವನ್ನು ಕರಗತಮಾಡಿಕೊಳ್ಳಬೇಕು. ಇದಲ್ಲದೆ ಜೊತೆಗೆ ಮುಖ್ಯವಾಗಿ ಮಾನವೀಯ ಗುಣಗಳನ್ನು ವೃದ್ಧಿಪಡಿಸಿಕೊಳ್ಳಬೇಕು. 'ಪರೋಪಕಾರಾರ್ಥಮಿದಂ ಶರೀರಂ' ಎಂಬುದನ್ನು ತನ್ನ ಬಾಳಿನಲ್ಲಿ ಅನುಷ್ಠಾನಕ್ಕೆ ತರಬೇಕು. ಹೀಗಾದರೆ ಮಾತ್ರ ಮಾನವನ ಅಂತರಂಗ ಬಹಿರಂಗ ಶುದ್ಧವಾಗಲು ಸಾಧ್ಯ ಎಂಬುದನ್ನು ಮನಗಂಡ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಇಂಥ ಸುಸಂಸ್ಕೃತರನ್ನು ರೂಪಿಸಿ ತದ್ವಾರ ಭಾರತೀಯ ಸಂಸ್ಕೃತಿ ಲೋಕೋತ್ತರ ಸಂಸ್ಕೃತಿ ಎಂಬುದನ್ನು ನಿರೂಪಿಸುವ ಸಲುವಾಗಿ ಶಿಕ್ಷಣ, ಸಾಹಿತ್ಯ, ಸಂಗೀತ, ಧರ್ಮ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧಿಸಿದ ಸಿದ್ಧಿ ಅನುಪಮ.

ಸಂಸ್ಕೃತಿಯ ಅಂಗೋಪಾಂಗಗಳಲ್ಲೆಲ್ಲ ಮೌಲಿಕವಾದ ಕಾರ್ಯವನ್ನು ಬಿಡಿಬಿಡಿಯಾಗಿ ಸಾರಸಂಗ್ರಹವಾಗಿ ಗಮನಿಸುವುದು ಸೂಕ್ತ.

ಶೈಕ್ಷಣಿಕ ಕ್ಷೇತ್ರ

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಗುರುಪರಂಪರೆಯ "ಜ್ಞಾನಾನ್ನ ದಾಸೋಹ"ದ ಮಹಾಮಣಿಹಕ್ಕೆ ತಮ್ಮನ್ನು ತಾವು ತ್ರಿಕರಣಪೂರ್ವಕವಾಗಿ ಅರ್ಪಿಸಿಕೊಂಡರು.

ಪ್ರಸಾದ ನಿಲಯಗಳ ಜೊತೆಜೊತೆಗೆ ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿದರು. ಆಧುನಿಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಜೆ.ಎಸ್.ಎಸ್. ಮಹಾವಿದ್ಯಾಪೀಠವನ್ನು ೧೯೫೪ ರಲ್ಲಿ ಸಂಸ್ಥಾಪಿಸಿ ಕೇವಲ ನಾಲ್ಕು ದಶಕಗಳಲ್ಲಿ ನಾಡಿನ ದಶದಿಕ್ಕುಗಳಲ್ಲಿ ಆಧುನಿಕ ಶಿಕ್ಷಣದ ಎಲ್ಲ ಶಾಖೆಗಳನ್ನೊಳಗೊಂಡ ವಿದ್ಯಾಸಂಸ್ಥೆಗಳನ್ನು ಸ್ಥಾಪನೆಗೈದರು.

ಕರ್ನಾಟಕ ದಕ್ಷಿಣಭಾಗವಾದ ಮೈಸೂರು ಬೆಂಗಳೂರು ಜಿಲ್ಲೆಗಳಲ್ಲದೆ ನೆರೆಹೊರೆಯ ಜಿಲ್ಲೆಗಳಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈವರೆಗೆ ೩೬ ವಿದ್ಯಾರ್ಥಿ ನಿಲಯಗಳನ್ನು, ೫೫ ಪ್ರೌಢಶಾಲೆಗಳನ್ನು, ೫ ಪಬ್ಲಿಕ್ ಸ್ಕೂಲ್‌ಗಳನ್ನು, ೧೫ ಬಾಲಜಗತ್‌ಗಳನ್ನು, ೨ ವಿಶೇಷ ಸ್ಕೂಲುಗಳನ್ನು (ಸ್ಪೆಷಲ್ ಸ್ಕೂಲ್), ೬ ಶಿಶುವಿಹಾರಗಳನ್ನು, ೧೪ ಸಂಸ್ಕೃತ ಮತ್ತು ಹಿಂದಿ ವಿದ್ಯಾಲಯಗಳನ್ನು ೮ ಪ್ರಥಮ ದರ್ಜೆ ಕಾಲೇಜುಗಳನ್ನು, ೯ ಜ್ಯೂನಿಯರ್ ಕಾಲೇಜುಗಳನ್ನು, ೪ ಪಾಲಿಟೆಕ್ನಿಕ್ ಕಾಲೇಜುಗಳನ್ನು, ೪ ಇಂಡಸ್ಟ್ರಿಯಲ್ ಟ್ರೈನಿಂಗ್ ಶಾಲೆಗಳನ್ನು, ೬ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ಗಳನ್ನು ಹುಟ್ಟುಹಾಕಿದ್ದಾರೆ. .

'ಆರೋಗ್ಯವೇ ಮಹಾಭಾಗ್ಯ' ಎಂಬುದನ್ನು ನಿರೂಪಿಸಿದ್ದಾರೆ. ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮೂರು ಆರೋಗ್ಯ ಕೇಂದ್ರಗಳನ್ನು ಒಂದು ಮಹಾ ವೈದ್ಯಕೀಯ ಕಾಲೇಜನ್ನು, ದಂತವೈದ್ಯ ಕಾಲೇಜು ಮತ್ತು ಫಾರ್ಮಸಿ ಕಾಲೇಜುಗಳು - ಹೀಗೆ ಹತ್ತಾರು ಕಾಲೇಜುಗಳನ್ನು ನಾಡಿನ ಜನತೆಗೆ ಅರ್ಪಿಸಿದ್ದಾರೆ. ಅಲ್ಲದೆ ಅತ್ಯಂತ ಸುಸಜ್ಜಿತ ಅತ್ಯಾಧುನಿಕ ವೈದ್ಯಕೀಯ ಯಂತ್ರೋಪಕರಣಗಳಿಂದ ಕೂಡಿದ, ಅಸಂಖ್ಯಾತ ರೋಗಿಗಳ ನೆಮ್ಮದಿಯ ತಾಣವೆನಿಸಿದ ಜೆ.ಎಸ್.ಎಸ್. ಆಸ್ಪತ್ರೆಯನ್ನು ಸಂಸ್ಥಾಪಿಸಿದ್ದಾರೆ. ದೇಶದ ಪ್ರಗತಿಗೆ ತಾಂತ್ರಿಕಜ್ಞಾನ ಅತ್ಯಾವಶ್ಯಕ. ಏಷ್ಯಾ ಖಂಡದ ಅತ್ಯುತ್ತಮ ಹತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದೆಂದು ಖ್ಯಾತಿಗಳಿಸಿದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕರಾಗಿ ಅಭೂತಪೂರ್ವ ಸೇವೆ ಸಲ್ಲಿಸಿದ್ದಾರೆ. ಜೆ.ಎಸ್.ಎಸ್. ಶ್ರಮಿಕ ವಿದ್ಯಾಪೀಠ ಅಲ್ಪಾವಧಿಯಲ್ಲಿ ಕರಕುಶಲ ವಿದ್ಯೆಗಳನ್ನು ಕರಗತ ಮಾಡಿಕೊಂಡು ಸ್ವಯಂ ಉದ್ಯೋಗಿಗಳಾಗಿ ಯುವಕ ಯುವತಿಯರು ನೆಮ್ಮದಿಯಿಂದ ಬಾಳಲು ಈ ಪೀಠ ನಿರುದ್ಯೋಗಿಗಳ ಆಶಾಜ್ಯೋತಿಯಾಗಿದೆ.

ಪರಮಪೂಜ್ಯ ಜಗದ್ಗುರುಗಳ ಅಭೂತಪೂರ್ವ ಸಾಧನೆಯನ್ನು ಮನಗಂಡ ಭಾರತ ಸರ್ಕಾರ ಸುತ್ತೂರಿನಲ್ಲಿ "ಕೃಷಿ ವಿಜ್ಞಾನ ಕೇಂದ್ರ" ವನ್ನು ನಡೆಸಲು ಅನುಮತಿಯಿತ್ತಿದೆ. ಅಂಧರಿಗೆ ಪ್ರಸಾದ ನಿಲಯಗಳನ್ನು, ಅಂಗವಿಕಲರಿಗೆ, ಬುದ್ಧಿಮಾಂದ್ಯರಿಗೆ ಆತ್ಮ ವಿಶ್ವಾಸ ಮೂಡಿಸುವ ಸಂಸ್ಥೆಗಳನ್ನು ನಿರ್ಮಿಸಿದ್ದಾರೆ.

ಸಾಹಿತ್ಯ ಕ್ಷೇತ್ರ

ಲೌಕಿಕ ಶಿಕ್ಷಣದಿಂದ ವ್ಯಷ್ಟಿ - ಸಮಷ್ಟಿ, ತುಷ್ಟಿ - ಪುಷ್ಟಿಗೊಳ್ಳುವುದು ದಿಟ. ಈ ಶಿಕ್ಷಣ ಬುದ್ಧಿ ವಿಕಾಸಕ್ಕೆ ಸಾಧನವಾದರೆ ಹೃದಯ ವಿಕಾಸಕ್ಕೆ ಮಾನವೀಯತೆಯ ಪ್ರಕಾಶಕ್ಕೆ ಅತ್ಯಂತ ಸಹಕಾರಿಯಾದುದು ಸಾಹಿತ್ಯ ಎಂಬುದನ್ನು ಗ್ರಹಿಸಿದ ಪೂಜ್ಯ ಮಹಾಸ್ವಾಮಿಗಳವರು ಜೆ.ಎಸ್.ಎಸ್. ಗ್ರಂಥಮಾಲೆಯನ್ನು ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ವೈಚಾರಿಕ ಧಾರ್ಮಿಕ ಸಾಹಿತ್ಯ ಪ್ರಸಾರಕ್ಕೆ ಮೀಸಲಾದ 'ಪ್ರಸಾದ', 'ಕನ್ನಡ' ಮತ್ತು 'ಶರಣಪಥ' ಇಂಗ್ಲೀಷ್ ನಿಯತಕಾಲಿಕೆಗಳನ್ನು ಪ್ರಕಟಿಸುವ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ

ಈ ದತ್ತಿಯ ಆಶ್ರಯದಲ್ಲಿ ಧಾರ್ಮಿಕ ಶಿಬಿರಗಳು, ವಿಚಾರ ಸಂಕಿರಣಗಳು ಇತ್ಯಾದಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಏರ್ಪಡಿಸಿರುವುದು ಜನಪದರ ಮುಕ್ತ ಪ್ರಶಂಸೆಗೆ ಪಾತ್ರವಾಗಿದೆ. ಅಲ್ಲದೆ ಪ್ರಾಚೀನ ಗ್ರಂಥಗಳ ಸಂಶೋಧನೆ, ಸಂಪಾದನೆ,

ಪ್ರಕಟಣೆಗಳನ್ನು ಕೈಗೆತ್ತಿಕೊಂಡಿದೆ. ಈ ಕ್ಷೇತ್ರದಲ್ಲಿ ಪ್ರಕಟಗೊಂಡ ಅತ್ಯುತ್ತಮ ಕೃತಿಗೆ (ಕೃತಿಕರ್ತರಿಗೆ) ಪ್ರಶಸ್ತಿಗಳನ್ನು ವರ್ಷ ವರ್ಷವೂ ನೀಡುತ್ತಲಿದೆ.

ಜೆ.ಎಸ್.ಎಸ್. ಸಂಗೀತ ಸಭಾ

ವಿದ್ಯಾಧಿದೇವತೆ ಶಾರದೆ ವೀಣಾಪಾಣಿಯೂ ಹೌದು ! ಸಂಗೀತ, ಸಾಹಿತ್ಯಗಳು ಸರಸ್ವತಿಯ ಎರಡು ಕಣ್ಣುಗಳು. ಕರ್ನಾಟಕ ಸಂಗೀತಸುಧೆ ಇಂಗಿ ಹೋಗುತ್ತಿದೆಯೇನೋ ಈ ಪಾಶ್ಚಾತ್ಯ ಕಿವಿ ಗಡಚಿಕ್ಕುವ ರಣಸಂಗೀತದಲ್ಲಿ; ವಿಷಮಾವಸ್ಥೆ ಸಂಕ್ರಮಿಸುತ್ತಿರುವುದನ್ನು ಮನಗಂಡ ಪರಮಪೂಜ್ಯರು 'ಜೆ.ಎಸ್.ಎಸ್. ಸಂಗೀತ ಸಭಾ' ಸ್ಥಾಪಿಸಿ ರಾಜ್ಯದ, ನೆರೆರಾಜ್ಯದ ಶ್ರೇಷ್ಠ ಸಂಗೀತಗಾರರನ್ನು ಬರಮಾಡಿಕೊಂಡು ಕರ್ನಾಟಕ ಸಂಗೀತ ಸುಧಾ ಪ್ರವಾಹವನ್ನೇ ಹರಿಸಿದರು. ಯುವ ಸಂಗೀತಗಾರರಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವುದು ಎಲ್ಲ ಸಂಗೀತಗಾರರಿಗೆ ಹಲವರಿಗೆ ನವಜನ್ಮ ಲಭಿಸಿದಂತಾಗಿದೆ, ಕೆಲವರಿಗೆ ಪುನರ್ಜನ್ಮ ನೀಡುತ್ತಲಿದೆ.

ಜೆ.ಎಸ್.ಎಸ್. ಕಲಾ ಮಂಟಪ

ಈ ಕಲಾಮಂಟಪ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತ್ಯುತ್ಸವ ಜಾತ್ರಾ ಮಹೋತ್ಸವ ಮುಂತಾದ ಶುಭ ಸಂದರ್ಭಗಳಲ್ಲಿ ಧರ್ಮಪರ ನಾಟಕಗಳನ್ನು, ಪ್ರದರ್ಶನಗಳನ್ನು ಚಾಚೂ ತಪ್ಪದೆ ನಡೆಸುತ್ತದೆ. ಇದಕ್ಕೆ ಪೋಷಕ ಪೂರಕವಾಗಿ ಭಜನಾಮೇಳಗಳು ಸಹಕಾರಿಗಳಾಗಿವೆ.

ಜೆ.ಎಸ್.ಎಸ್. ಶರಣ ತತ್ತ್ವ ಪ್ರಚಾರ ಸಮಿತಿ

ಅಂದಿನ ಅನುಭವ ಮಂಟಪದ ದಿವ್ಯಾನುಭವವನ್ನು ತಂದುಕೊಡುವಲ್ಲಿ ಈ ಪ್ರಚಾರ ಸಮಿತಿ, ಪ್ರವಚನ, ವಚನಗಾಯನ, ಗಮಕಗಳ ದ್ವಾರಾ ಸರ್ವರೂ ತಮ್ಮ ಜೀವನದಲ್ಲಿ ಸುಲಭವಾಗಿ ಶರಣತತ್ತ್ವಗಳನ್ನು ಅಳವಡಿಸಿಕೊಂಡು ಸದಾಚರಣೆಯಲ್ಲಿ ತೊಡಗಲು ಪ್ರೇರಕ ಶಕ್ತಿಯಾಗಿದೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಈಗಾಗಲೇ ಮೈಸೂರು, ಬೆಂಗಳೂರು, ಬಳ್ಳಾರಿ, ಹೊಸಪೇಟೆಗಳಲ್ಲಿ ಮೂರು ಮಹಾಸಮ್ಮೇಳನಗಳನ್ನು ಪರಿಷತ್ತು ನಡಸಿದೆ. ಈ ಸಾಲಿನಲ್ಲಿ (೧೯೯೬) ಚಿಕ್ಕಮಗಳೂರಿನಲ್ಲಿ ನಾಲ್ಕನೆಯ ಅಖಿಲಭಾರತ ಶರಣ ಸಾಹಿತ್ಯ ಸಮ್ಮೇಳನ ನಡೆದಿದೆ. ಶರಣ ಸಾಹಿತ್ಯ ಪ್ರಸಾರ, ಶರಣ ತತ್ತ್ವ ವಿವರಣೆ, ಶರಣತತ್ತ್ವದ ಪ್ರಸರಣೆ, ಚಿಂತನ ಮಂಥನ, ಗೋಷ್ಠಿಗಳು ಅತ್ಯಂತ ಜನಾದರಣೀಯವಾಗಿ ಪಂಡಿತ ಪಾಮರರಿಗೂ ಪ್ರಿಯವಾಗಿವೆ.

ಸಹಕಾರ ಕ್ಷೇತ್ರ

ಬಾಳು ಹಸನಾಗಲು - ಸಹ್ಯವಾಗಲು - ಸಂತಸದಿಂದಿರಲು - ಸಹಕಾರ ತತ್ತ್ವದ ಆಚರಣೆ ಅತ್ಯಂತ ಅಗತ್ಯ, ಪರಸ್ಪರ ಸಹಕಾರ ಹಸ್ತ ಮಿಲನ, ಹಸ್ತಲಾಘವಗಳಿಂದ ಸಮಾಜದ ಸ್ವಾಸ್ಥ್ಯ ಗಟ್ಟಿಗೊಳ್ಳುತ್ತದೆ ಎಂಬ ನೀತಿಯ ನೆಲೆಗಟ್ಟಿನ ಮೇಲೆ ಹಲವಾರು ಸಹಕಾರ ಸಂಘ ಸಂಸ್ಥೆಗಳು ಶ್ರೀಮಠದ ಆಶ್ರಯದಲ್ಲಿ ಕಾರ್ಯ ಪ್ರವೃತ್ತವಾಗಿವೆ.

ಆರೋಗ್ಯ ಕ್ಷೇತ್ರ

ವೈದ್ಯಕೀಯ ಔಷಧೀಯ, ದಂತವಿಜ್ಞಾನ ಕಾಲೇಜುಗಳ ಮೂಲಕ ಹಾಗೂ ಜೆ.ಎಸ್.ಎಸ್. ಆಸ್ಪತ್ರೆಯ ಮೂಲಕ ಕಾಲಕಾಲಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ, ನಗರದ ಕೊಳಚೆ ಪ್ರದೇಶಗಳಲ್ಲಿ, ಹಿಂದುಳಿದ ಬಡಾವಣೆಗಳಲ್ಲಿ ಉಚಿತ ಆರೋಗ್ಯ ತಪಾಸಣೆಯ ಶಿಬಿರಗಳನ್ನು ಏರ್ಪಡಿಸಿ ಆರೋಗ್ಯವೇ ಮಹಾಭಾಗ್ಯ ಎಂಬುದನ್ನು ಜನಸಾಮಾನ್ಯರಿಗೆ, ಅನಕ್ಷರಸ್ಥರಿಗೆ ಮನದಟ್ಟು ಮಾಡಿಕೊಡುವುದರಲ್ಲಿ ಪ್ರಗತಿ ಸಾಧಿಸಲಾಗಿದೆ.

ಈ ಎಲ್ಲ ಮಹತ್ತರ ಕ್ಷೇತ್ರಗಳಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠವು ಕಳೆದ ಈ ನಾಲ್ಕು ದಶಕಗಳಲ್ಲಿ ನಾಡಿನ ಶೈಕ್ಷಣಿಕ ಸಾಂಸ್ಕೃತಿಕ ಧಾರ್ಮಿಕ ರಂಗಗಳಲ್ಲಿ ಮೌಲಿಕ ಸೇವೆ ಸಲ್ಲಿಸಿರುವುದು ಮುದತರುವ ಸಂಗತಿ.

ಹೀಗೆ ಈ ಎಲ್ಲದರ ಚೇತನಸ್ವರೂಪರಾದ ಪರಮಪೂಜ್ಯ ಜಗದ್ಗುರು 'ರಾಜಗುರು ತಿಲಕ' ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಎಳೆಯ ವಯಸ್ಸಿನಲ್ಲಿಯೇ (೨೮.೨.೧೯೨೮ ರಲ್ಲಿ) ಇಪ್ಪತ್ತಮೂರನೆಯ ಜಗದ್ಗುರುಗಳಾಗಿ ಪಟ್ಟಾಧಿಕಾರಕ್ಕೆ ಬಂದು ತಮ್ಮ ಹಿಂದಿನ ಎಲ್ಲ ಇಪ್ಪತ್ತೆರಡು ಜಗದ್ಗುರುಗಳ ತಪಃಶಕ್ತಿಯ ಪ್ರಭಾವದಿಂದ ಆ ಮಹಾನುಭಾವರ ಆಶಯಗಳನ್ನು ಲೋಕ ಸೇವಾಕಾಂಕ್ಷೆಗಳನ್ನು ಧರ್ಮೋದ್ಧಾರದ ಪವಿತ್ರ ಕಾಯಕವನ್ನು ಇತೋಪ್ಯತಿಶಯವಾಗಿ ನೆರವೇರಿಸಿದರು. ೧೯೫೪ ರಲ್ಲಿ ಸಂಸ್ಥಾಪಿಸಿದ ಜೆ.ಎಸ್.ಎಸ್. ಮಹಾ ವಿದ್ಯಾಪೀಠದ ವತಿಯಿಂದ ಲೋಕನಕ್ಷೆಯಲ್ಲಿ ಶಿಕ್ಷಣ, ಸಾಹಿತ್ಯ, ಧರ್ಮ, ಸಂಸ್ಕೃತಿಗಳ ಹೆಗ್ಗುರುತುಗಳನ್ನು ಅಚ್ಚಳಿಯದೆ ಮೂಡಿಸಿದರು. ಘನತೆವೆತ್ತ ಭಾರತದ ಪ್ರಥಮ ರಾಷ್ಟ್ರಪತಿ ಡಾ. ಬಾಬೂ ರಾಜೇಂದ್ರ ಪ್ರಸಾದರಿಂದ ಮೊದಲ್ಗೊಂಡು ಎಲ್ಲ ರಾಷ್ಟ್ರಪತಿಗಳನ್ನು, ಪ್ರಧಾನಿಗಳನ್ನು, ರಾಜ್ಯದ ಮುಖ್ಯ ಮಂತ್ರಿಗಳನ್ನು ಸರ್ವ ಧರ್ಮಗಳ ಸದ್ಗುರುಗಳನ್ನು, ತಮ್ಮ ಅಂತರಂಗ ಬಹಿರಂಗಗಳ ಪಾರದರ್ಶಕ ಸ್ಫಟಿಕ ಶುದ್ಧ ವ್ಯಕ್ತಿತ್ವದಿಂದ, ಆಯಸ್ಕಾಂತತ್ವದಿಂದ ಆಕರ್ಷಿಸಿ, ಲೋಕವಿಖ್ಯಾತ ಜಗದ್ಗುರುಗಳೆನಿಸಿದರು. ದೇಶದ ಚರಿತ್ರೆಯಲ್ಲಿ, ಜನಮನದಲ್ಲಿ ಶಾಶ್ವತ ಮುದ್ರೆ ಮೂಡಿಸಿ ಅಜರಾಮರರಾದರು, ಚಿರಸ್ಮರಣೀಯರಾದರು.

ಆದಿಜಗದ್ಗುರುಗಳಿಂದ ಮೊದಲ್ಗೊಂಡು ಸುತ್ತೂರಿನ ಶ್ರೀ ಜಗದ್ಗುರುಪರಂಪರೆಯು ನಡೆಸಿಕೊಂಡು ಬಂದ ಜ್ಞಾನಾನ್ನ ದಾಸೋಹವನ್ನು ಬೃಹತ್ ಪ್ರಮಾಣದಲ್ಲಿ ನಡೆಸಿ ತ್ರಿವಿಧ ದಾಸೋಹಿಗಳೆನಿಸಿದರು. ಜನಜೀವನದ ಎಲ್ಲ ಕ್ಷೇತ್ರಗಳಲ್ಲೂ ಪ್ರಾಮಾಣಿಕತೆಯಿಂದ ದುಡಿವ ಲೋಕ ವಿಖ್ಯಾತರನ್ನು ರೂಪಿಸಿದರು. ಕಲೆಗಳನ್ನು ಪೋಷಿಸಿದರು. ಕವಿ ಕಲಾವಿದರ ಆಶ್ರಯದಾತರಾದರು. ಸರ್ವಧರ್ಮ ಸಮನ್ವಯಾಚಾರ್ಯರೆನಿಸಿದರು. ಸಾಹಿತ್ಯ, ಸಂಗೀತ, ಸಂಸ್ಕೃತಿ, ಧರ್ಮ ಪ್ರಕಾಶಕರ ಅಧ್ವರ್ಯುಗಳಾದರೂ, ನೊಂದ ಜೀವಿಗಳಿಗೆ, ದೀನಾನಾಥರಿಗೆ ಕಲ್ಪವೃಕ್ಷರಾದರು. ಒಂದೇ ವಾಕ್ಯದಲ್ಲಿ ಹೇಳಬಹುದಾದರೆ, ತಾಯಿ ಹೃದಯದ ತಂದೆಯಾದರು. ಲೋಕ ವ್ಯಾಪಾರದಲ್ಲಿ, ಜೀವನ ಸಂಗ್ರಾಮದಲ್ಲಿ ಹೋರಾಡಿ ಬಸವಳಿದು ಬೆಂದು ಬಳಲಿ ಬಳಿಗೆ ಬಂದವರನ್ನೆಲ್ಲ ತಾಯಿಯಂತೆ ಸಲಹಿದರು, ತಂದೆಯಂತೆ ತಿದ್ದಿದರು; ಗುರುವಾಗಿ ಬೆಳಕಿನ ಹಾದಿಯಲ್ಲಿ ಮುನ್ನಡೆಸಿದರು.

ಹೀಗೆ ತಮ್ಮಂತೆಯೇ ಈ ಪವಿತ್ರ ಕಾಯಕವನ್ನು ಮುನ್ನಡೆಸಿಕೊಂಡು ಹೋಗುವ ಮಹತ್ತರ ಗುರುಭಾರವನ್ನು ತಮ್ಮ ಕರಕಮಲ ಸಂಜಾತರಾದ ಇಪ್ಪತ್ತನಾಲ್ಕನೆಯ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಮರ್ಥ ಸ್ಕಂಧಗಳಿಗೆ ವಹಿಸಿ, ತಾವು ಇಹಲೋಕ ವ್ಯಾಪಾರ ಮುಗಿಸಿ ಬೆಳಕಿನಲ್ಲಿ ಬೆಳಕಾಗಿ, ಬಯಲಲಿ ಬಯಲಾಗಿ ಹೋದರು; ಪ್ರಾತಃಸ್ಮರಣೀಯರಾದರು.

ಪ್ರಸ್ತುತ ಸುತ್ತೂರು ಶ್ರೀ ಮಹಾಸಂಸ್ಥಾನದ ಇಂದಿನ ಜಗದ್ಗುರುಗಳವರಾದ ಪರಮಪೂಜ್ಯ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರ ಅಸಾಧಾರಣವಾದ ಅದ್ಭುತ ಕರ್ತೃತ್ವಶಕ್ತಿಯ ದಿವ್ಯ ಮಾರ್ಗದರ್ಶನದಲ್ಲಿ ಶ್ರೀಪೀಠದ ಸೇವಾ ಕ್ಷೇತ್ರಗಳು ಜಗದಗಲ, ಮುಗಿಲಗಲ ಹಬ್ಬಿ ಬೃಹದಾಕಾರವಾಗಿ ಬೆಳೆಯುತ್ತಿರುವುದನ್ನು ಕಂಡಾಗ ಒಮ್ಮೆಲೆ ಭಕ್ತಿ ಗೌರವಗಳು ಮೂಡಿ ಅಚ್ಚರಿ ಮೆಚ್ಚುಗೆಗಳು ಚಿಮ್ಮಿ ಬರುತ್ತವೆ. ಬಹು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಪ್ರಗತಿಗೆ ಹೆಚ್ಚಿನ ಪ್ರಾಮುಖ್ಯ ಕೊಡುತ್ತಿರುವುದು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬೇಕಾದ ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ, ಕಲೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸುಸಜ್ಜಿತವಾದ ಹೊಸ ಹೊಸ ಸಂಸ್ಥೆಗಳನ್ನು ತೆರೆಯುವುದರ ಕಡೆಗೆ ಆದ್ಯತೆ ನೀಡುತ್ತಿರುವುದು, ಜನತೆಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಜಾಗೃತಿಗೆ ವಿಶೇಷ ಗಮನವನ್ನಿತ್ತು ಪ್ರಗತಿಪರ ವಿಶಿಷ್ಟ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿರುವುದು ಇವೇ ಮೊದಲಾದವು ಅತ್ಯಮೂಲ್ಯವಾದ ಅಮೋಘ ಕೊಡುಗೆಗಳೆನಿಸಿ, ಪೂಜ್ಯ ಶ್ರೀಗಳವರ ದಿವ್ಯ ತಪಶ್ಶಕ್ತಿಯ ದ್ಯೋತಕಗಳಾಗಿವೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರಿಂದ ಸಹಸ್ರ ವರ್ಷಗಳ ಹಿಂದೆ ಸಂಸ್ಥಾಪನೆಗೊಂಡ ಶ್ರೀ ಸುತ್ತೂರು ಜಗದ್ಗುರು ಪೀಠವು ಇಂಥ ಮಹಾನ್ ಜಗದ್ಗುರುಗಳ ಅನುಪಮ ಕಾಯಕ ಮಹತ್ತಿನಿಂದ ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಲಿಖಿತಗೊಂಡು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಶಾಶ್ವತ ಸ್ಥಾನವನ್ನು ಅಲಂಕರಿಸಿದೆ. ಅಷ್ಟೇ ಅಲ್ಲದೆ ಸಾಗರದಾಚೆಗೆ ಖಂಡ ಖಂಡಾಂತರಗಳಲ್ಲೂ ತನ್ನ ವಿಶ್ವಮಾನವ ಧರ್ಮದ ಕಿರಣ ಪುಂಜವನ್ನು ಪ್ರಸರಿಸಿ, ಸಮಸ್ತ ಲೋಕಕ್ಕೆ ಲೇಸನೇ ಬಯಸಿ, ಲೇಸನೇ ನುಡಿದು, ಲೇಸನೇ ನಡೆದು, ಲೇಸನೇ ಮಾಡುತ್ತ ನಂದಾದೀಪವಾಗಿ ರಾರಾಜಿಸುತ್ತಿದೆ. ○

ಮುಂಡರಗಿ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಕೊಡುಗೆ

ಮಹಾಲಿಂಗ ಯಾಳಗಿ

ಸಮಾಜದ ಸಕಲ ಕ್ಷೇತ್ರಗಳಿಗೆ ಭದ್ರಬುನಾದಿಯಾಗಿ ವ್ಯಕ್ತಿಯನ್ನು ಮುನ್ನಡೆಸಿಕೊಂಡು ಹೋಗುವದು ಧರ್ಮ. ಆ ಧರ್ಮ ಯಾವುದೇ ಆಗಿರಬಹುದು. ಯಾರೇ ಅದನ್ನು ಸ್ಥಾಪಿಸಿರಬಹುದು. ವಿಶ್ವದ ಯಾವುದೋ ಮೂಲೆಯಲ್ಲಿ ಅದು ಬೆಳಕು ಕಂಡಿರಬಹುದು. ಅದರೆ ಅದನ್ನು ಸ್ಥಾಪಿಸಿದ ವ್ಯಕ್ತಿ ಒಂದು ಚಿರಂತನ ಶಕ್ತಿಯಾಗಿ ಅವನ ಆಚಾರ-ವಿಚಾರಗಳು, ತತ್ವ-ಸಿದ್ಧಾಂತಗಳು, ಸಿದ್ಧಿ-ಸಾಧನೆಗಳು ಮನುಕುಲದ ಸರ್ವಾಂಗೀಣ ಅಭ್ಯುದಯವನ್ನು ಸಾಧಿಸಿದ್ದರೆ, ಸಾಧಿಸುತ್ತಿದ್ದರೆ ನಿಜಕ್ಕೂ ಅದು ವಿಶ್ವಮಾನ್ಯ. ಅಂಥ ಧರ್ಮಕ್ಕೆ ಅಳಿವಿಲ್ಲ, ಸ್ಥಾಪಿಸಿದ ವ್ಯಕ್ತಿಗೆ ಸಾವಿಲ್ಲ. ಆ ಪವಿತ್ರ 'ಬೆಳಕು' ಅದು ಎಂದಿಗೂ ನಂದಲಾರದ ನಂದಾದೀಪ. ಅದು ಸುಜ್ಞಾನದ ಜಗಜ್ಯೋತಿ. ಪ್ರತಿಯೊಂದು ಧರ್ಮದಲ್ಲಿ ಜನಿಸಿದ ಮಹಾಪುರುಷರು ಮಹಾತ್ಮರು, ಸಂತರು, ಯೋಗಿಗಳು, ದಾರ್ಶನಿಕರು ತಾವು ಜನಿಸಿದ ದೇಶದ, ಬೆಳೆದು ಬಂದ ಸಮಾಜದ, ತಮ್ಮ ಜನಾಂಗದ ಉನ್ನತಿಗೆ ಕಾರಣಪುರುಷರಾಗುತ್ತಾರೆ. ಕಾಲ-ದೇಶ-ಭಾಷೆಗಳು ಭಿನ್ನವಾದರೂ ಎಲ್ಲರೂ ಸಾರಿದ ಸಂದೇಶ ಒಂದೆ. ಅವರು ಜನತೆಯ ಉದ್ಧಾರಕ್ಕಾಗಿ ಕೈಕೊಂಡ ಸೇವೆ, ಸಮಾಜಕ್ಕೆ ಸಲ್ಲಿಸಿದ ಕೊಡುಗೆ, ವ್ಯಷ್ಟಿ-ಸಮಷ್ಟಿಗಳ ಉತ್ಕರ್ಷಕ್ಕೆ ನಾಂದಿ ಹಾಡುತ್ತದೆ. ಧರ್ಮದ ಕಾರ್ಯ ವೈಶಿಷ್ಟ್ಯಪೂರ್ಣವಾದುದು. ಓರ್ವ ತತ್ವಜ್ಞಾನಿ ಧರ್ಮವನ್ನು ಕುರಿತು ಆಡಿದ ನುಡಿಗಳು ಅದರ ಗುರಿಯನ್ನು ಎತ್ತಿ ತೋರಿಸುತ್ತವೆ : "Religion teaches the art of living in tune with the science of life. It teaches us what is truth, what is right, what is good and what is just. It preaches us the conduct of right living and virtuousness."

ಇಂಥ ಒಂದು ಸಮಾಜೋದ್ಧಾರದ, ಲೋಕೋದ್ಧಾರದ ಕಾರ್ಯದಲ್ಲಿ ವ್ಯಕ್ತಿಗತ ಬದುಕು ಹಸನುಗೊಂಡು, ವೈಚಾರಿಕ, ವೈಜ್ಞಾನಿಕ ತಳಹದಿಯ ಮೇಲೆ ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಧರ್ಮದ ಪಾತ್ರ ಪ್ರಮುಖವಾದುದು. ಅಂಥ ಧರ್ಮ ವಿಶ್ವ ಧರ್ಮ, ಮಾನವಧರ್ಮ, ಹತ್ತು ಹಲವಾರು ಮುಖಗಳಿಂದ ನಾಡಿನ ಜನಾಂಗಕ್ಕೆ ಸಂಸ್ಕೃತಿಗೆ ಅಪೂರ್ವವಾದ ಕೊಡುಗೆಯನ್ನು ನೀಡಿದ್ದು ವೀರಶೈವ ಧರ್ಮ. ಈ ವೀರಶೈವ ಧರ್ಮದ ರೂವಾರಿಗಳಾದ ವೀರಶೈವ ಮಠಾಧೀಶರು.

ಲೌಕಿಕ ಹಿತಾಸಕ್ತಿಗಳನ್ನು ಕಡೆಗಣಿಸದೆ, ಪಾರಲೌಕಿಕ ಚಿಂತನೆಯಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡಿರುವ ನಮ್ಮ ನಾಡಿನ ಪೀಠಾಧಿಪತಿಗಳು ಭಕ್ತರು ಕಟ್ಟಿಸಿಕೊಟ್ಟ ಭವ್ಯವಾದ ಮಠಗಳಲ್ಲಿ ಕೇವಲ ಲಿಂಗಪೂಜೆ ಮಾಡುತ್ತ ತಮ್ಮ ಆತ್ಮೋದ್ಧಾರಕ್ಕೆ ಹಂಬಲಿಸಲಿಲ್ಲ. ರುದ್ರಾಕ್ಷಿ ಮಣಿಗಳನ್ನೆಣಿಸುತ್ತ ಜಪ-ತಪಗಳಲ್ಲಿ ತಲ್ಲೀನರಾಗಲಿಲ್ಲ. ವಿರಾಗಿ ವಿರಕ್ತರೆಂದು ಎಲ್ಲವನ್ನು ತ್ಯಜಿಸಿ ಗುಡ್ಡ-ಬೆಟ್ಟಗಳನ್ನು ಸೇರಿ ತಪಸ್ಸನ್ನು ಗೈಯಲಿಲ್ಲ. "ಭಕ್ತರ ಉದ್ಧಾರವೇ ಭಗವಂತನ ಸಾಕ್ಷಾತ್ಕಾರ", "ಶಿಷ್ಯರ ಸೇವೆಯೇ ಶಿವಪೂಜೆ", "ಪತಿತೋದ್ಧಾರವೇ ಪರಮಾತ್ಮನ ಆರಾಧನೆ" ಎಂಬ ವಿಚಾರ ಕ್ರಾಂತಿಯ ಹರಿಕಾರರಾಗಿ ಜನತೆಯ ಮಧ್ಯದಲ್ಲಿದ್ದುಕೊಂಡು ಅವರ ಸುಖ-ದುಃಖಗಳಿಗೆ ಸ್ಪಂದಿಸುತ್ತ, ಸಮಾಜದ ಒಳಿತಿಗಾಗಿ ತಮ್ಮ 'ಶಿವಬದುಕನ್ನು' ಸಾಗಿಸಿ 'ಶಿವಾನುಭವಿ'ಗಳಾಗಿ ಜನರಿಗೆ, ಸಮಾಜಕ್ಕೆ 'ಶಿವಬೆಳಕ'ನ್ನು ನೀಡಿದ್ದಾರೆ. ಲೋಕದ ಮಧ್ಯದಲ್ಲಿದ್ದರೂ 'ನೀರ ತಾವರೆ'ಯಂತೆ ಸಕಲ ಜೀವಿಗಳಿಗೆ ಲೇಸನ್ನೇ ಬಯಸುತ್ತಿರುವ ಸ್ವಾಮಿಗಳವರ ವೈಯಕ್ತಿಕ ಸಾಧನೆ-ಸಿದ್ಧಿಗಳು ಸಮಾಜದ ಬಹುಮುಖ ಶುದ್ಧಿಗಾಗಿ ಕೈಕೊಂಡ ಕಾರ್ಯಗಳು ನಾಡಿನ ಇತಿಹಾಸದಲ್ಲಿ ಒಂದು ಸುವರ್ಣ ಸಂಪುಟ; ಚರಿತ್ರೆಯಲ್ಲಿ ಧವಳಕೀರ್ತಿ ಪಟ.

ಪ್ರಾಚೀನ ಕಾಲದಲ್ಲಿ 'ಮಠ'ವೆಂದರೆ ವಿದ್ಯಾಭ್ಯಾಸದ ಕೇಂದ್ರವೆಂಬರ್ಥವನ್ನು ಹೊಂದಿತ್ತು. ಇದಕ್ಕೆ "ಮಠಃ ಛಾತ್ರಾದಿ ನಿಲಯಃ" ಎಂಬ ಅಮರಸಿಂಹನ ಉಕ್ತಿ ಸಾಕ್ಷಿಯಾಗಿದೆ. ಆದರೆ ಇಂದು 'ಮಠ'ದ ಅರ್ಥ ವಿಶಾಲವಾಗಿದೆ. ಅವುಗಳ ಅರ್ಥ-ಗುರಿ-ಕಾರ್ಯ ವಿಸ್ತಾರಗೊಂಡು ವ್ಯಕ್ತಿಯ ಉನ್ನತಿ-ಸಮಾಜದ ಪ್ರಗತಿಗಾಗಿ ಮೀಸಲಾಗಿರುವುದನ್ನು ಕಾಣುತ್ತೇವೆ; Centre of light and leading ಆಗಿವೆ. ಇಂದಿನ ವೀರಶೈವ ಮಠಗಳು 'ಜ್ಞಾನವೇ ಕ್ರಿಯೆ ಕ್ರಿಯೆಯೇ ಜ್ಞಾನ' ಎಂಬ ವೈಚಾರಿಕ

ಅಡಿಗಲ್ಲಿನ ಮೇಲೆ ಕಟ್ಟಲ್ಪಟ್ಟ ವೀರಶೈವ ಮಠಗಳು ಪಕ್ಷ-ಪಂಗಡ, ಜಾತಿ, ಮತ, ಮೇಲು-ಕೀಳು, ಹೆಣ್ಣು-ಗಂಡು ಎಂಬ ಭೇದಗಳನ್ನೆಣಿಸದೆ ಶಿಕ್ಷಣವು ಪ್ರತಿಯೊಬ್ಬರಿಗೂ ಸಲ್ಲಬೇಕಾದುದು ಎಂಬ ಪ್ರಜಾಸತ್ತಾತ್ಮಕ ಸಿದ್ಧಾಂತವನ್ನು ಅನುಷ್ಠಾನಗೊಳಿಸಿದ್ದು ಅಪೂರ್ವ ಘಟನೆಯಾಗಿದೆ. ಶ್ರೀ ಸಿದ್ಧಗಂಗಾ ಮಠದ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ಶ್ರೀ ಉದ್ದಾನ ಶಿವಯೋಗಿಗಳು ೧೯೧೭ಕ್ಕಿಂತ ಮೊದಲೆ ತಮ್ಮ ವಿದ್ಯಾರ್ಥಿನಿಲಯ ಹಾಗೂ ಸಂಸ್ಕೃತ ಪಾಠಶಾಲೆಗಳಿಗೆ ಸಕಲರಿಗೆ ಪ್ರವೇಶ ನೀಡಿದ್ದು ಮುಂದಿನ ವೀರಶೈವ ಮಠಾಧೀಶರಿಗೆ ಮಾರ್ಗದರ್ಶಿಯಾಯಿತು.

"ಕರ್ನಾಟಕ ಸಂಸ್ಕೃತಿಯ ಮುಖ್ಯ ಲಕ್ಷಣವೆಂದರೆ ಅಲ್ಲಿ ಕಾಣಬರುವ ಅಸಂಖ್ಯಾತ ವೀರಶೈವ ಮಠಗಳು. ಭಾರತದ ಇತರ ಯಾವ ಭಾಗಗಳಲ್ಲಿಯೂ ಇಷ್ಟು ಮಠಗಳಿಲ್ಲ. ಮಠಗಳು ಧಾರ್ಮಿಕ ಕೇಂದ್ರಗಳೆಂದು ಹೆಸರಾಗಿರದೆ ಅವು ಶಿಕ್ಷಣ ಪ್ರಸಾರದ ಗುರಿಯುಳ್ಳವೆಂದು ಜನಪ್ರಿಯವಾಗಿದ್ದವು. ಪ್ರತಿಯೊಂದು ಮಠದಲ್ಲಿಯೂ ಜನಸಾಮಾನ್ಯರಿಗೆಲ್ಲ ಜ್ಞಾನಜ್ಯೋತಿಯನ್ನು ಬೆಳಗಲು ಕಂಕಣಬದ್ಧರಾಗಿದ್ದ ಗುರುಗಳಿದ್ದರು. ಅವರು ತಮ್ಮ ಕಾರ್ಯಕ್ಷೇತ್ರವನ್ನು ಕೇವಲ ಪಟ್ಟಣಗಳಿಗೆ ಸೀಮಿತಗೊಳಿಸದೆ ಹಳ್ಳಿಗಳನ್ನು ವಿದ್ಯಾಚಟುವಟಿಕೆಗಳ ಕೇಂದ್ರಗಳಾಗಿಸಿ ಸಮಾಜದ ಬಹುಭಾಗದ ಸೇವೆಗೈದರು." ಎಂಬ ಡಾ. ಬಿ. ಎಸ್ ಗದ್ದಗಿಮಠರ ನುಡಿಗಳು ವೀರಶೈವ ಮಠಗಳ ಕಾರ್ಯಕ್ಷೇತ್ರಕ್ಕೆ ಬರೆದ ಭಾಷ್ಯ.

"ವೀರಶೈವ ಮಠಗಳು ನಮ್ಮ ಸಂಸ್ಕೃತಿಯ ನೆಲೆಗಳು. ನಮ್ಮ ವಿಶಿಷ್ಟ ವಿದ್ಯಾಕೇಂದ್ರಗಳು, ಸೇವೆಯ ತರಬೇತಿ ತಾಣಗಳು, ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಅನ್ನದಾನ ಮಾಡಿ, ಎಲ್ಲ ಧರ್ಮೀಯರೂ ವಿದ್ಯಾವಂತರಾಗುವಂತೆ ಶ್ರಮಿಸಿದ, ಶ್ರಮಿಸುತ್ತಿರುವ ಪವಿತ್ರಕ್ಷೇತ್ರಗಳು. ಅನ್ನದಾಸೋಹ, ಜ್ಞಾನದಾಸೋಹ ಇವುಗಳ ಬಗ್ಗೆ ಭಾರತದಲ್ಲಿ ಅಷ್ಟೇ ಏಕೆ ವಿಶ್ವದಲ್ಲೇ ವೀರಶೈವ ಮಠಗಳಿಗೆ ಸರಿಗಟ್ಟುವ ಸಂಸ್ಥೆಗಳು ಇನ್ನೊಂದು ಹುಟ್ಟಿಲ್ಲ" ಎಂಬ ಶ್ರೀ ಸಿ. ಎ. ಜಮಖಂಡಿಮಠರ ಮಾತುಗಳು ವೀರಶೈವ ಮಠಗಳ ಕರ್ತೃತ್ವ ಶಕ್ತಿಗೆ ಹಿಡಿದ ರನ್ನಗನ್ನಡಿ.

ಒಂದು ಕೈಯಲ್ಲಿ ಇಷ್ಟಲಿಂಗ ಪೂಜೆ - ಇನ್ನೊಂದು ಕೈಯಿಂದ ಸಮಾಜಲಿಂಗ ಪೂಜೆಯನ್ನು ಮಾಡುತ್ತ ಧಾರ್ಮಿಕ ಪ್ರಜ್ಞೆ, ಜ್ಞಾನಪ್ರಸಾರ, ಸಾಮಾಜಿಕ ಅರಿವು, ರಾಷ್ಟ್ರೀಯ ಮನೋಭಾವದಂತಹ ಮಹಾಮಣಿಹದಲ್ಲಿ ತೊಡಗಿಸಿಕೊಂಡ ತುಮಕೂರಿನ ಶ್ರೀ ಸಿದ್ಧಗಂಗಾ ಮಠ, ಮೈಸೂರಿನ ಸುತ್ತೂರ ಶಿವರಾತ್ರೀಶ್ವರ ಮಠ, ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ, ಬೆಳಗಾವಿಯ ನಾಗನೂರು ಸ್ವಾಮಿಗಳ ಮಠ, ಗದುಗಿನ ತೋಂಟದಾರ್ಯ ಮಠ, ಕೊಪ್ಪಳದ ಗವಿಮಠ, ಬೆಂಗಳೂರಿನ ಸರ್ಪಭೂಷಣಮಠ, ಸಾವಳಿಗೆಯ ಶಿವಲಿಂಗೇಶ್ವರ ಮಠ, ಹಾವೇರಿಯ ಹುಕ್ಕೇರಿ ಮಠ, ಹೊಸಪೇಟೆಯ ಕೊಟ್ಟೂರು ಸ್ವಾಮಿಗಳ ಮಠ, ನಿಡಸೋಸಿಯ ಶಿವಲಿಂಗೇಶ್ವರ ಮಠ, ಶಿರಹಟ್ಟಿಯ ಫಕೀರೇಶ್ವರ ಮಠ, ಸಿರಿಗೆರೆಯ ಬೃಹನ್ಮಠ, ಹಾನಗಲ್ಲಿನ ವಿರಕ್ತಮಠ, ಇಳಕಲ್ಲಿನ ಮಹಾಂತಸ್ವಾಮಿಗಳ ಮಠ, ಡಾ. ಜ.ಚ.ನಿ ನಿಡುಮಾಮಿಡಿ ಪೀಠ- ಹೀಗೆ ಒಂದಲ್ಲ ಎರಡಲ್ಲ, ನಾಡಿನಾದ್ಯಂತ ಇಂಬಿಲ್ಲದಂತೆ ಹಬ್ಬಿಕೊಂಡಿರುವ ಈ ವೀರಶೈವ ಮಠಗಳ ಕೊಡುಗೆ ಅಪಾರ, ಅನುಪಮ, ಅವರ್ಣನೀಯ. ಇವುಗಳಲ್ಲಿ ಮುಂಡರಗಿ ಜಗದ್ಗುರು ಶ್ರೀ ಅನ್ನದಾನೀಶ್ವರ ಸಂಸ್ಥಾನಮಠವೂ ಕೂಡ ಒಂದಾಗಿದ್ದು ತನ್ನ ಉಜ್ವಲ ಪರಂಪರೆಯ ಸಾಧನೆ ಸಿದ್ಧಿಗಳಿಗೆ ಈ ಭಾಗದ ಜನ-ಮನದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದೆ. ಈ ಭಾಗದ ವಿನೂತನ ಕ್ರಾಂತಿಗೆ ಧಾರ್ಮಿಕ ಚಟುವಟಿಕೆಗಳಿಗೆ, ಸಾಮಾಜಿಕ ಸುಧಾರಣೆಗೆ, ಜ್ಞಾನಪ್ರಸಾರಕ್ಕೆ, ಶೈಕ್ಷಣಿಕ ಸಂವರ್ಧನೆಗೆ, ಸಾಹಿತ್ಯ ಸಂಸ್ಕೃತಿಗಳ ಮೂಲಕ ಜನರಲ್ಲಿ ಜಾಗೃತಿಯನ್ನುಂಟು ಮಾಡಿದ ಶ್ರೇಯಸ್ಸು ಶ್ರೀ ಮಠದ ವೈಶಿಷ್ಟ್ಯಪೂರ್ಣ ಕೊಡುಗೆಯಾಗಿದೆ.

ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠಕ್ಕೆ ದಿವ್ಯ ಪರಂಪರೆಯಿದೆ. ಕಲ್ಯಾಣಕ್ರಾಂತಿಯಾದ ಮೇಲೆ ಶರಣತಿಂಥಿಣಿಯೊಂದಿಗೆ ಉಳುವಿಗೆ ಆಗಮಿಸಿದ ಪಟ್‌ಸ್ಥಲ ಚಕ್ರವರ್ತಿ, ಅವಿರಳಜ್ಞಾನಿ ಚನ್ನಬಸವಣ್ಣನವರಿಂದ ಕ್ರಿಯಾಭಸ್ಮದ ಘಟ್ಟಿಯನ್ನು ಪಡೆದ ಮೂಲಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರೇ, ಈ ಮುಂಡರಗಿ ಮಠಕ್ಕೆ ಕಾರಣಕರ್ತರು. ಶರಣ ಸಂದೇಶವನ್ನು ಜನಮನದಲ್ಲಿ ಬಿತ್ತಿ ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ ಎಂಬ ಜಂಗಮ ನಿಯಮದಂತೆ, ಮುಂಡರಗಿಯ ನೆರೆಯಲ್ಲಿರುವ ಕಪೋತಗಿರಿಗೆ ಆಗಮಸುತ್ತಾರೆ. ಅಲ್ಲಿ ವಾಸಿಸುತ್ತಿದ್ದ ಬೇಡರ ಪಡೆ ಶ್ರೀಗಳವರ ಕೃಪಾದೃಷ್ಟಿಗೆ ಒಳಗಾಗಿ ಕಾಡುಬೇಡರು ನಾಡನಾಗರಿಕರಾಗಿ ಪರಿವರ್ತನೆಗೊಂಡರು. ಇಂಥ ಪೂಜ್ಯರ ಪರಂಪರೆಯಲ್ಲಿ ಒಂಭತ್ತು ಜನ ಮಹಾಸ್ವಾಮಿಗಳು ಶೂನ್ಯಸಿಂಹಾಸನವನ್ನೇರಿದರು. ಇವರಲ್ಲಿ ಈಗ ಈ ಸಂಸ್ಥಾನಮಠದ ಅಧಿಪತಿಗಳಾಗಿರುವ ಜಗದ್ಗುರುಗಳವರೇ ದಶಮ ಪೀಠಾಧಿಕಾರಿಗಳು. ಈ ಮಠಕ್ಕೆ ಅಧಿಕಾರ ಪಡೆದವರೆಲ್ಲರೂ ಜಗದ್ಗುರು ಅನ್ನದಾನ ಮಹಾಸ್ವಾಮಿಗಳೆಂದೇ ಹೆಸರು ಪಡೆದಿದ್ದಾರೆ.

ದ್ವಿತೀಯ ಪೀಠಾಧಿಪತಿಗಳು ಭಕ್ತರನ್ನು ಉದ್ಧರಿಸುತ್ತ ಶಿರೋಳದಲ್ಲಿ ತೃತೀಯ ಶಿವಯೋಗಿಗಳು ಅನೇಕ ಲೀಲೆಗಳನ್ನು ಗೈದು ಮರಿಯಮ್ಮನಹಳ್ಳಿಯಲ್ಲಿ, ಚತುರ್ಥ ಜಗದ್ಗುರುಗಳು ಲಕ್ಕುಂಡಿಯಲ್ಲಿ, ಐದನೆಯ ಪೀಠಾಧಿಪತಿಗಳು (ಕ್ರಿ.ಶ. ೧೭೫೦-೧೮೧೫) ಮುಂಡರಗಿಯ ಹಳೇ ಮಠದಲ್ಲಿ, ಆರನೆಯವರಾದ ಹುಚ್ಚನ್ನದಾನ ಸ್ವಾಮಿಗಳು (೧೮೧೫-೧೮೫೩) ಮಟಕವಾಡದಲ್ಲಿ, ಏಳನೆಯವರಾದ ಬಳ್ಳೊಳ್ಳಿ ಅಜ್ಜನವರು (೧೮೪೯-೧೮೮೦) ಸದ್ಯದ ಶ್ರೀಮಠದಲ್ಲಿ (ಮೊದಲು ಹೊಸಮಠವೆಂಬ ಹೆಸರಿತ್ತು), ಎಂಟನೆಯ ಶಿವಯೋಗಿಗಳಾದ ಸೊರಟೂರ ಶ್ರೀಗಳವರು (ಕ್ರಿ.ಶ. ೧೮೮೮-೧೯೨೬) ಮುಂಡರಗಿಯಲ್ಲಿ, ಒಂಭತ್ತನೆಯ ಜಗದ್ಗುರುಗಳಾದ ವೆಂಕಟಾಪೂರ ಅಜ್ಜನವರು (೧೯೨೬-೧೯೬೩) ತಮ್ಮ ಲಿಂಗಲೀಲೆಗಳನ್ನು ಗೆಯ್ದು ಮುಂಡರಗಿಯ ಶ್ರೀಮಠದಲ್ಲಿ ಲಿಂಗೈಕ್ಯರಾಗಿದ್ದು, ಇಂದು ಈ ಮಠದ ಕೀರ್ತಿಯನ್ನು ನಾಡಿನಾದ್ಯಂತ ಹಬ್ಬಿಸುವಲ್ಲಿ ಸಾಕಷ್ಟು ಶ್ರಮಿಸಿದ ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ೧೯೬೪ರಲ್ಲಿ ಮುಂಡರಗಿಯ ಶೂನ್ಯಸಿಂಹಾಸನಾರೋಹಣ ಗೆಯ್ದು, ಈ ನಾಡನ್ನು ಮೃಡಗಿರಿಯನ್ನಾಗಿಸಿದ್ದಾರೆ.

ಈ ಮಠದ ಪರಂಪರೆಯಲ್ಲಿ ಬಂದವರೆಲ್ಲ ಪವಾಡ ಪುರುಷರೂ, ಸಮಾಜೋದ್ಧಾರಕರೂ, ಕಾರಣಪುರುಷರೂ ಆಗಿರುವುದು ಅವರ ದಿವ್ಯಚರಿತೆಯಿಂದ ತಿಳಿದುಬರುತ್ತದೆ. ಅಲ್ಲಮಪ್ರಭು ಸಲ್ಲಲಿತ ಸನ್ಮಾರ್ಗದಲ್ಲಿ ಬಸವಣ್ಣ ಚನ್ನಬಸವಣ್ಣನವರ ದಿವ್ಯಜ್ಞಾನಪ್ರಭೆಯಲ್ಲಿ ಬೆಳಗುತ್ತಿರುವ ಶ್ರೀ ಮಠದ ಕೊಡುಗೆ ಅಪೂರ್ವವಾದುದು. ಏಳನೆಯ ಪೀಠಾಧಿಪತಿಗಳ ಕಾಲದಲ್ಲಿ ಹೊಸಮಠ ಪ್ರಾರಂಭವಾಯಿತು. ಮಟಕವಾಡದ ಶ್ರೀಗಳ ಕಾಲದಲ್ಲಿಯೇ ಹಳೆಯಮಠದಲ್ಲಿರುವಾಗ ಡಂಬಳದ ತೋಂಟದಾರ್ಯರೊಂದಿಗೆ ಜರುಗಿದ ಕಹಿಘಟನೆಯಿಂದ ಮಠವನ್ನು ತ್ಯಜಿಸಿದ್ದರು. ಆ ಹಳೆಯ ಮಠವನ್ನು ಅಂದಾನಿಸ್ವಾಮಿ ಮಠ ಎಂದು ಕರೆಯುವ ವಾಡಿಕೆ ಬಹುದಿನಗಳವರೆಗೆ ಇತ್ತು. ಬಳ್ಳೊಳ್ಳಿ ಶ್ರೀಗಳವರು ಪರಧರ್ಮಸಹಿಷ್ಣುಗಳಾಗಿದ್ದರು. ಮುಂಡರಗಿ ವಿಠ್ಠಲ ಮಂದಿರದ ನಿರ್ಮಾಣಕ್ಕೆ ಮತ್ತುಂಪುರದ ೧೬ ಎಕರೆ ಜಮೀನನ್ನು ದಾನವಾಗಿತ್ತರು. ಆಂಗ್ಲರ ಆಳಿಕೆಯ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಹಮ್ಮಿಗಿ ಕೆಂಚನ ಗೌಡರಿಗೂ ಬಂಡಾಯದ ಭೀಮರಾಯರಿಗೂ ಆಶೀರ್ವಾದವನ್ನಿತ್ತಿದ್ದರು. ಕಲಿಕೇರಿ ದೇಸಾಯರಲ್ಲಿ ಉಂಟಾದ ಅಂತಃಕಲಹವನ್ನು ದೂರಗೊಳಿಸಲು ಸಂತಾನಭಾಗ್ಯ ಕರುಣಿಸಿದ್ದಾರೆ.

ಎಂಟನೆಯ ಪೀಠಾಧಿಪತಿಗಳಾದ ಸೊರಟೂರ ಶ್ರೀಗಳವರ ಕಾಲದಲ್ಲಿ ಶ್ರೀ ಮಠದ ವ್ಯಾಜ್ಯ ಪರಕಾಷ್ಠೆಯನ್ನು ತಲುಪಿತ್ತು. ಆದರೂ ತಮ್ಮ ತಪಃಶಕ್ತಿಯಿಂದ ಜನಪರ ಕಾರ್ಯಗಳಿಗೆ ಸ್ಪಂದಿಸಿದರು. ತುಂಬಿ ಹರಿಯುತ್ತಿದ್ದ ತುಂಗಭದ್ರೆಯನ್ನು ತಮ್ಮ ಕುದುರೆಯ ಮೇಲೆ ಕುಳಿತುಕೊಂಡು ದಾಟಿದ ಪವಾಡ ಪುರುಷರು. ೧೯೧೯ರಲ್ಲಿ ಸ್ವಾತಿ ಮಳೆ ಒಂದೇ ಸವನೆ ಸುರಿಯುತ್ತಿರುವಾಗ ಬ್ರಾಹ್ಮಣ ಸಮಾಜದ ಗುರುಗಳ ಆರಾಧನೆಗೆ ಒಣಕಟ್ಟಿಗೆಯ ತೊಂದರೆಯಾದುದನ್ನು ಅರಿತು ತಮ್ಮ ಮಠದ ಒಂದು ಭಾಗದ ಇಮಾರತನ್ನೂ ಕೆಡವಿ ಒಣಕಟ್ಟಿಗೆ ಪೂರೈಸಿದವರು. ಪ್ರಾಥಮಿಕ ಶಾಲೆಗೆ, ಸಾರ್ವಜನಿಕ ಆಸ್ಪತ್ರೆಯ ಕಟ್ಟಡಕ್ಕೆ, ಪೀಸ್ ಮೆಮೋರಿಯಲ್ ಹಾಲ್ (ಇಂದಿನ ಸಬ್‌ರಜಿಸ್ಟ್ರಾರ್ ಕಚೇರಿ) ಪೋಲೀಸರ ವಸತಿ ನಿವೇಶನಕ್ಕೆ ಸೊರಟೂರಿನಲ್ಲಿ ಕನ್ನಡ ಶಾಲೆಗೆ ಭೂದಾನ ಮಾಡುವುದರೊಂದಿಗೆ ಸಾಕಷ್ಟು ಧನಸಹಾಯವನ್ನು ಮಾಡಿ ಶ್ರೀ ಮಠದ ಕೀರ್ತಿಗೆ ಬೆಳ್ಳಿಕಿರೀಟ ತೊಡಿಸಿದ್ದಾರೆ. ಡೊಂಬರವನ ಆಟವನ್ನು ಮೆಚ್ಚಿಕೊಂಡು ಮೈಮೇಲಿನ ಬೆಲೆಯುಳ್ಳ ಶಾಲನ್ನು, ಜಂಗಮನೋರ್ವನು ಬೆಳ್ಳಿಯ ಪೂಜಾಸಾಮಾನು ಹಾಗೂ ಡಮಣಿಗಾಡಿಯನ್ನು ಇಚ್ಛಿಸಿದಾಗ ಅವನಿಗಿತ್ತ ನಿಸ್ಪೃಹ ಶಿವಯೋಗಿಗಳವರು.

ಒಂಭತ್ತನೆಯ ಜಗದ್ಗುರುಗಳ ಕಾಲದಲ್ಲಿ ಶ್ರೀಮಠದ ವ್ಯಾಜ್ಯ ತಾರಕಕ್ಕೇರಿ ಪ್ರಿವ್ಹಿಕೌನ್ಸಿಲ್ಲಿನ ಮುಖಾಂತರ ಇವರಂತೆ ಆದುದು ಶ್ರೀಗಳವರ ಲಿಂಗಪೂಜಾ ಬಲದಿಂದಲೇ ಎನ್ನಬಹುದು. ಹೆಚ್ಚಾಗಿ ಲೌಕಿಕ ವಿದ್ಯೆಯನ್ನು ಪಡೆಯದಿದ್ದರೂ ಪಾರಲೌಕಿಕ ಜ್ಞಾನ ಅಪಾರವಾಗಿತ್ತು. ನಿತ್ಯ ಯೋಗಾಸನಗಳನ್ನು ಹಾಕುತ್ತಿದ್ದ ಶ್ರೀಗಳವರು ವಜ್ರದೇಹಿಗಳಾಗಿದ್ದರು. ಮಕ್ಕಳೊಂದಿಗೆ ಮಕ್ಕಳಾಗಿ ಹಿರಿಯರೊಂದಿಗೆ ಹಿರಿಯರಾಗಿ ಪ್ರತಿಯೊಬ್ಬರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ಹೃದಯಸ್ಪರ್ಶಿಯಾಗಿರುತ್ತಿತ್ತು. ಮಠಕ್ಕೆ ಬಂದ ಭಕ್ತರಿಗೆ ತಾವೇ ಕೈಯಾರೆ ಪ್ರಸಾದವನ್ನು ಬಡಿಸುತ್ತ ಭಕ್ತರು ಹೆಚ್ಚೆಚ್ಚು ಉಂಡಷ್ಟು ತೃಪ್ತಿಪಡುತ್ತಿದ್ದರು. ಮಾತೃವಾತ್ಸಲ್ಯಕ್ಕೆ ಸಾಕ್ಷಿಯಾದ ಶ್ರೀಗಳವರು "ತಿರಕೊಂಡು ಬಂದ್ರು ಕರಕೊಂಡು ಉಣಬೇಕ್ರಪಾ" ಎಂದು ಅಪ್ಪಣೆ ಕೊಡಿಸುತ್ತಿದ್ದರು. ಶ್ರೀಮಠ ಬರಿದಾಗಿದ್ದರೂ ಶ್ರೀಗಳವರ ಮನ ಎಂದೂ ಬರಿದಾಗಲಿಲ್ಲ. ವಿದ್ಯಾಪ್ರೇಮಿಗಳಾಗಿದ್ದ ಶ್ರೀಗಳವರು ಜಗದ್ಗುರು ಅನ್ನದಾನೀಶ್ವರ ಪ್ರೌಢಶಾಲೆಗೆ ತಮ್ಮ ಶ್ರೀ ಮಠದ ಹೊಲವೊಂದನ್ನು ಮಾರಿ ೩೩,೦೦೦ ರೂ.ಗಳನ್ನೂ, ಉಚಿತ ಪ್ರಸಾದ ನಿಲಯಕ್ಕೆ ೧೫,೦೦೦ ರೂ.ಗಳನ್ನೂ, ಹುಬ್ಬಳ್ಳಿ ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜ, ಹೊಸರಿತ್ತಿ ಗಾಂಧೀ ಆಶ್ರಮ, ವಿಜಾಪುರ ಕುರುಡರ ಸಂಘಕ್ಕೆ ಧನ ಸಹಾಯ ಮಾಡಿದ್ದಲ್ಲದೆ

ಹೊಳೆಆಲೂರಿನ ಕಲ್ಲೇಶ್ವರ ಪ್ರೌಢಶಾಲೆಗೆ ಹುನಗುಂದ ತಾಲೂಕಿನ ಹೇರೂರ ಗ್ರಾಮದ ೧೧ ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ. ಲಕ್ಕುಂಡಿಯ ದವಾಖಾನೆ, ಪಂಚಾಯತ್ ಕಾರ್ಯಾಲಯಗಳಿಗೆ ಭೂಮಿ ಕೊಟ್ಟಿದ್ದಾರೆ. ಈ ಶ್ರೀಮಠಕ್ಕೆ ಎಲ್ಲ ಜಾತಿಯವರೂ ಭಕ್ತರಾಗಿದ್ದರು. ತಮಗೆ ಸಾಕಷ್ಟು ಆರ್ಥಿಕ ತೊಂದರೆಗಳಿದ್ದರೂ, ಬಳಿಗೆ ಬಂದವರನ್ನು ಎಂದಿಗೂ ಬರಿಗೈಯಿಂದ ಕಳಿಸಿದವರಲ್ಲ. ತಮ್ಮ ಮಠದ ನವೀಕರಣಕ್ಕಾಗಲಿ ತಮಗಾಗಲಿ ಏನೂ ಮಾಡಿಕೊಳ್ಳಲಿಲ್ಲ. ಎಷ್ಟೋ ಸಲ ಹಳೆಯ ಕಪನಿಯನ್ನು ತೊಟ್ಟುಕೊಂಡು ಕುದುರೆ, ಸಾರಿಗೆ ಬಸ್ಸಿನ ಮೂಲಕ ಸಂಚಾರ ಮಾಡುತ್ತಿದ್ದರು. ಸಮಾಜಕ್ಕೆ ದುಡಿಯುತ್ತಿರುವ ಕಳಕಳಿಯನ್ನು ಕಂಡ ಭಕ್ತರು "ಅಲ್ರಿ ಬುದ್ಧಿ, ಮಠಾ ಹಳೇದಾಗೇದ, ಶಾಖಾಮಠಗಳು ಬೀಳು ಬಿದ್ದಾವ್ರ ಅವುಗಳ ಕಡೆಗನೂ ಅಷ್ಟು ಲಕ್ಷ್ಯ ಹರಿಸರಿ" ಎಂದಾಗ ಕಣ್ಣುಮುಚ್ಚಿಕೊಂಡು "ನೋಡ್ರೆಪಾ ಮುಂದ್ರ ಬರುವವರು ಎಲ್ಲಾ ಮಾಡ್ತ್ಯಾರ , ಮಠಾ ಅಷ್ಟ್ರ ಯಾಕ, ಜನಾನೂ ಕಟ್ಟುತಾರ್ರ, ಮನಾನೂ ಹಸನ್ರ ಮಾಡ್ತಾರ್ರ. ಆಗ ಎಲ್ಲಾನೂ ಆಗತೈತಿ ಮಠ್ಯಾನು ಬೆಳಗತೈತಿ, ಈ ಮುಂಡರಗಿ, ಮೃಡನ ಗಿರಿ, ಮೃಡಗಿರಿ ಆಗತದ. ಯಾವದಕ್ಕೂ ಕಾಲಬೇಕು. ಅದನ್ನೆಲ್ಲ ನೀವ್ರ ನೋಡ್ತೀರಿ" ಎಂದು ನುಡಿಯುತ್ತಿದ್ದರು. ಎಷ್ಟೋ ಭಕ್ತರಿಗೆ ಶ್ರೀಗಳವರ ಲಿಂಗನುಡಿಗಳು ಅರ್ಥವಾಗದೆ ಹೋಗುತ್ತಿದ್ದವು. ಅಪೂರ್ವ ವಾಕ್‌ಸಿದ್ಧಿಯನ್ನು ಪಡೆದು ಲಿಂ. ಜಗದ್ಗುರುಗಳವರ ಲಿಂಗನುಡಿಗಳು, ಲಿಂಗನಡೆಗಳಾಗಿ ಶ್ರೀ ಮಠದ ಕೊಡುಗೆ ದಶಮಪೀಠಾಧಿಪತಿಗಳ ಕಾಲದಲ್ಲಿ ದಿಟವಾದುದನ್ನು ಇಂದು ಪ್ರತ್ಯಕ್ಷ ಕಾಣುತ್ತಿದ್ದೇವೆ.

ಇಂದು ಮೃಡಗಿರಿಯ ಶೂನ್ಯಸಿಂಹಾಸನದಲ್ಲಿ ರಾರಾಜಿಸುತ್ತಿರುವ ದಶಮ ಪೀಠಾಧಿಪತಿಗಳು ಶಿವಯೋಗ ಮಂದಿರದಲ್ಲಿರುವಾಗಲೇ ಲಿಂ. ವೆಂಕಟಾಪುರ ಅಜ್ಜನವರ ಅನುಗ್ರಹಕ್ಕೆ ಪಾತ್ರರಾಗಿ ೧೯೬೨ ರಲ್ಲಿಯೇ ಶ್ರೀಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡಿದ್ದರು. ವಿದ್ಯಾಪ್ರೇಮಿಗಳಾದ ಶ್ರೀಗಳವರು ಕಾಶಿಯಲ್ಲಿದ್ದು 'ವೇದಾಂತಶಾಸ್ತ್ರಿ' ಪ್ರಪ್ರಥಮಿಗರಾಗಿ ಉತ್ತೀರ್ಣರಾದುದಲ್ಲದೆ ಹಿಂದಿಯಲ್ಲಿ 'ಸಾಹಿತ್ಯರತ್ನ' ಪರೀಕ್ಷೆಯನ್ನು ಮುಗಿಸಿದರು. ಆಗಲೇ ಉಪನ್ಯಾಸ ಲೇಖನ ಕಲೆಗಳನ್ನು ಕರಗತಮಾಡಿಕೊಂಡು ಹಿಂದಿ ಹಾಗೂ ಸಂಸ್ಕೃತ ಭಾಷೆಯ ಪತ್ರಿಕೆಗಳಲ್ಲಿ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದು ಪ್ರಖ್ಯಾತಿಯನ್ನು ಪಡೆದರು. ತಮ್ಮಲ್ಲಿರುವ ಭಾಷಣಕಲೆಯಿಂದ ಆ ಭಾಗದ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾದರು. ಎನ್.ಸಿ.ಸಿ.ಯನ್ನು ಸೇರಿ ಕಾವಿಯೊಂದಿಗೆ ಖಾಕಿಯನ್ನೂ ಲೇಖನಿಯೊಂದಿಗೆ ಬಂದೂಕನ್ನೂ ಹಿಡಿದು ಹೊತ್ತು ಬಂದರೆ ಸ್ವಾಮಿಯಾದರೂ ಕೂಡ ರಾಷ್ಟ್ರಸೇವೆಗೆ ಸಿದ್ಧನಾಗಿರಬೇಕೆಂಬುದನ್ನು ಸಾಧಿಸಿತೋರಿಸಿದರು. ಕಲಿಯಬೇಕೆಂಬ ಹಂಬಲ ಸಾಕಷ್ಟಿದ್ದರೂ ಗುರುಗಳ ಆಣತಿಗೆ ತಲೆಬಾಗಿ ಕಾಶಿಯಿಂದ ಮರಳಿ ಬಂದು ಶ್ರೀ ಮಠದ ಸಾಮಾಜಿಕ-ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಮ್ಮು-ಬಿಮ್ಮುಗಳನ್ನರಿಯದ ಶ್ರೀಗಳವರು ಶ್ರೀಮಠದ ನವೀಕರಣ ಶಾಖಾಮಠಗಳ ಜೀರ್ಣೋದ್ಧಾರ, ಕೃಷಿಕಾರ್ಯದಲ್ಲಿ ಆಸಕ್ತಿ, ಗ್ರಂಥಗಳ ಸಂಗ್ರಹ ಮೊದಲಾದ ಕಾರ್ಯಗಳನ್ನು ಕೈಕೊಂಡರು. ಶ್ರೀ ಕುಮಾರೇಶ್ವರ ಗ್ರಂಥಾಲಯದೊಂದಿಗೆ, ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯನ್ನು ಪ್ರಾರಂಭಿಸಿ ಶ್ರೀಮಠದ ಮೂಲಕ ಜ್ಞಾನಪ್ರಸಾರ ಹಾಗೂ ಗ್ರಂಥ ಪ್ರಕಟನೆಗೆ ಕೈಹಾಕಿದರು. ಶ್ರೀಗಳವರ 'ಸರಸ್ವತಿ ಭಂಡಾರ'ವನ್ನು ನೋಡುವುದೇ ಒಂದು ಆನಂದ. ವಿಶ್ವವಿದ್ಯಾಲಯಗಳಲ್ಲಿ ಕೂಡ ದೊರಕದ ಅನೇಕ ಪ್ರಾಚೀನ ಗ್ರಂಥಗಳೆಲ್ಲವೂ ಇಲ್ಲಿ ಲಭ್ಯ. ಆ ಸರಸ್ವತಿಯ ಮಂದಿರದಲ್ಲಿಯೇ ಸರಸ್ವತಿಯ ಸತ್ಪುತ್ರರಾದ ಶ್ರೀಗಳ ಚಿಂತನ, ಅಧ್ಯಯನ, ಬರವಣಿಗೆ, ದಿನದ ೧೦-೧೨ ತಾಸುಗಳು ಕಳೆಯುವುದು ಆ ಸರಸ್ವತಿ ಮಂದಿರದಲ್ಲಿಯೆ.

೧೯೬೭ರಲ್ಲಿ ಕರ್ನಾಟಕದಲ್ಲಿಯೇ ಶಿವಯೋಗ ಮಂದಿರದ ಶಿವಬೆಳಕಾಗಿದ್ದ ಕಾರಣಿಕ ಹಾನಗಲ್ಲ ಕುಮಾರ ಮಹಾಶಿವಯೋಗಿಗಳವರ ಶತಮಾನೋತ್ಸವವನ್ನು ಪ್ರಪ್ರಥಮವಾಗಿ ಜರುಗಿಸದ ಶ್ರೇಯಸ್ಸು ಶ್ರೀಗಳವರದು. ಅದೇ ಕಾಲದಲ್ಲಿ ತಮ್ಮ ಪೂಜ್ಯ ಗುರುಗಳೊಂದಿಗೆ ನಾಡಿನಾದ್ಯಂತ ಸಂಚರಿಸಿ ಸದ್ಭಕ್ತರ ಹೃದಯದಲ್ಲಿ ಪ್ರತಿಷ್ಠಾಪನೆಗೊಂಡರು. ವೀರಶೈವ ಧರ್ಮವನ್ನು ಕುರಿತು ಅಂದು ಶ್ರೀಗಳವರ ಉಪನ್ಯಾಸಗಳನ್ನಾಲಿಸಿದವರೆಲ್ಲ ಇವರು ವೀರಶೈವಧರ್ಮದ ಉದ್ಧಾರಕ್ಕಾಗಿ ಮತ್ತೆ ಅವತರಿಸಿ ಬಂದ ಚನ್ನಬಸವಣ್ಣನವರೇ ಎಂದಾಡಿದ ನುಡಿಗಳು ಸತ್ಯವಾಗಿ ಪರಿಣಮಿಸಿವೆ. ವೆಂಕಟಪುರ ಅಜ್ಜನವರು ದಿ ೨೪-೪-೧೯೬೭ರಂದು ಲಿಂಗದೊಳಗಾದರೂ, ಮುಂದೆ ಪೂಜ್ಯ ಲಿಂಗನಾಯಕನಹಳ್ಳಿ ಶ್ರೀ ಚೆನ್ನವೀರ ಮಹಾಸ್ವಾಮಿಗಳವರಿಂದ ಅನುಗ್ರಹ ಹೊಂದಿದರು. ಪಟ್ಟಾಭಿಷೇಕದ ಬಗ್ಗೆ ಭಕ್ತರಲ್ಲುಂಟಾದ ವಾದವಿವಾದಗಳಿಂದ ಎರಡು ವರುಷಗಳವರೆಗೆ ತಡೆಯಲ್ಪಟ್ಟ ಶೂನ್ಯಸಿಂಹಾಸನಾರೋಹಣವು ಸಕಲ ಸದ್ಭಕ್ತರ ಇಚ್ಛೆಯಂತೆ ದಿ. ೩೧-೧-೧೯೬೯ರ ಶಾ.ಶ. ೧೮೯೦ನೆಯ ಕೀಲಕ ನಾಮ ಸಂವತ್ಸರ ಮಾಘ ಶುದ್ಧ ೧೩ ಶುಕ್ರವಾರ ಎಂಟನೆಯ ಜಗದ್ಗುರುಗಳವರ ೪೩ನೆಯ ಪುಣ್ಯತಿಥಿಯ ಶುಭ ಮಹೂರ್ತದಲ್ಲಿ ಶ್ರೀ ಚಂದ್ರಶೇಖರ ದೇಶಿಕರಿಗೆ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳೆಂಮ

ಘೋಷಿಸಿ ನಿರಾಭಾರಿ ಚರಪಟ್ಟಾಭಿಷೇಕ ಸಮಾರಂಭವು ಅಸಂಖ್ಯಾತ ಹರಗುರು ಚರಮೂರ್ತಿಗಳ, ನಾಡಿನ ನಾನಾ ಭಾಗಗಳಿಂದ ಆಗಮಿಸಿದ ಸದ್ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರು ತಮ್ಮ ಸಂಸ್ಥಾನಮಠದ ಮೂಲಕ ಈ ೨೫ ವರ್ಷಗಳ ಅವಧಿಯಲ್ಲಿ ಸಲ್ಲಿಸಿದ ಸೇವೆ ಬಹುಮುಖವಾದುದಾಗಿದೆ. ಶ್ರೀಮಠದ ಕೊಡುಗೆಯನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ತಿಕ ಎಂದು ಚತುರ್ಮುಖವಾಗಿ ವಿಂಗಡಿಸಬಹುದು. ಶ್ರೀ ಜಗದ್ಗುರುಗಳವರ ಈ ಚತುರ್ಮುಖ ಕಾರ್ಯಗಳ ಮೂಲಕ ಅವರನ್ನು ಚತುರ್ವಿಧ ಕ್ರಾಂತಿ ಪುರುಷರಂದರೆ ಏನೂ ತಪ್ಪಾಗಲಾರದು.

ಧರ್ಮ ಇಂದು ಅಪಮೌಲ್ಯಗೊಂಡಿರುವ ಕಾಲದಲ್ಲಿ ವೀರಶೈವ ಧರ್ಮ ವಿಶ್ವಧರ್ಮ ಎಂಬುದನ್ನು ಪ್ರತಿಪಾದಿಸಿ ಜನತೆಯ ಹೃದಯಕ್ಕೆ ಮುಟ್ಟಿಸಿ, ಜನ ಧರ್ಮಪಥದಲ್ಲಿ ಮುನ್ನಡೆಯುವಂತೆ ಕೈಕೊಂಡ ಶ್ರೇಯಸ್ಸು ಮುಂಡರಗಿಯ ಶ್ರೀಮಠಕ್ಕೆ ಸಲ್ಲುತ್ತದೆ. ಯಾತ್ರಾ ಮಹೋತ್ಸವ, ಪುಣ್ಯತಿಥಿ ಆಚರಣೆ, ದೀಕ್ಷೆ, ಅಯ್ಯಾಚಾರ, ಶಿವಾನುಭವ ಗೋಷ್ಠಿ, ಪುರಾಣ ಮೊದಲಾದವುಗಳಿಗೆ ವೈಚಾರಿಕ ದೃಷ್ಟಿ,ವೈಜ್ಞಾನಿಕ ಮೌಲ್ಯ ಬರುವಂತೆ ಶ್ರಮಿಸುತ್ತಿರುವ ಪೂಜ್ಯರು ಪ್ರಗತಿಪರ ಮನೋಭಾವದ ಸಂಕೇತವಾಗಿದ್ದಾರೆ. ಪ್ರತಿಯೊಂದು ಕಾರ್ಯವನ್ನು ವಿಮರ್ಶಿಸಿ ತೂಗಿ ನೋಡಿ ಅದು ಇಂದು ಎಷ್ಟರ ಮಟ್ಟಿಗೆ ಜನತೆಯ ಹೃದಯವನ್ನು ತಟ್ಟಬಲ್ಲದು ಎಂಬ ಆಧುನಿಕತೆಯನ್ನು ಮೈಗೂಡಿಸಿಕೊಂಡ ಶ್ರೀಗಳವರು ಯಾವ ಆಡಂಬರ ಪ್ರತಿಷ್ಠೆಗಳಿಗೆ ಒಳಗಾಗದೆ ಧರ್ಮದಲ್ಲಿ ಕ್ರಾಂತಿಯನ್ನುಂಟು ಮಾಡಿದ್ದಾರೆ. ಶಿವಾನುಭವ ತರಬೇತಿಯನ್ನೇರ್ಪಡಿಸಿ ಜನರಿಗೆ ವೀರಶೈವ ಧರ್ಮದ ಆಚಾರ-ವಿಚಾರ, ಲಿಂಗಪೂಜಾ ಪ್ರಾತ್ಯಕ್ಷಿಕೆಗಳ ಮೂಲಕ ಹೃದಯದಲ್ಲಿ ಅಚ್ಚೊತ್ತುವಂತೆ ಮಾಡಿದ್ದಾರೆ. ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಮೂಲಕ ಉಳವಿ, ಬನವಾಸಿ, ಶಿಕಾರಿಪುರ, ಸೊನ್ನಲಿಗೆಗಳಲ್ಲಿ ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮರನ್ನು ಕುರಿತು, ಆಯಾ ಶರಣರ ದಿವ್ಯಜೀವನ ಸಾಧನೆ ಸಿದ್ಧಿ, ಸಾಹಿತ್ಯ ಸಂದೇಶಗಳ ಸಮಗ್ರ ವಿಚಾರ ಸಂಕಿರಣಗಳನ್ನೇರ್ಪಡಿಸಿದ್ದಾರೆ. ನಾಡಿನ ಮಹಾ ವಿದ್ವಾಂಸರನ್ನು ಗಣ್ಯರಾದ ಮಹಾ ಮಠಾಧೀಶರನ್ನು ಆಮಂತ್ರಿಸಿ ಪ್ರಬಂಧ ಮಂಡನೆ, ಚರ್ಚೆ, ಅಧ್ಯಯನ ಅವುಗಳ ಪ್ರಕಟನೆಯ ಮೂಲಕ ಕೈಗೊಂಡ ಕಾರ್ಯ ಧರ್ಮಜಾಗೃತಿಗೆ ಕಾರಣವಾಗಿದೆ. ಆಗಾಗ್ಗೆ ಧರ್ಮೋತ್ತೇಜಕ ಸಭೆ, ಸರ್ವಧರ್ಮಗಳ ಸಮ್ಮೇಳನಗಳನ್ನೂ ಏರ್ಪಡಿಸಿ ಈ ಭಾಗದಲ್ಲಿ ಧಾರ್ಮಿಕ ಕ್ರಾಂತಿಯನ್ನುಂಟು ಮಾಡಿದ್ದಾರೆ. ಸಂಸ್ಕೃತ ವಿದ್ವತ್ ಪರಿಷತ್ತು ಪೂಜ್ಯರನ್ನು ಗೌರವಿಸಿ 'ಧರ್ಮಭಾಸ್ಕರ' ಎಂಬ ಪ್ರಶಸ್ತಿಯನ್ನಿತ್ತುದು ಸಾರ್ಥಕ ಅನ್ವರ್ಥಕ ಅಷ್ಟೇ ತತ್ವಾರ್ಥಕವೂ ಆಗಿದೆ.

Man is a social animal ಎಂಬ ಅರಿಸ್ಟಾಟಲ್‌ನ ಉಕ್ತಿಯಂತೆ ಮಾನವನು ಜನನದಿಂದ ಮರಣದವರೆಗೂ ಬಾಳಿ ಬದುಕಬೇಕಾದುದು ಸಮಾಜದಲ್ಲಿ. ಮನುಷ್ಯ ಸಂಘಜೀವಿ, ಕಾರಣ ವ್ಯಕ್ತಿಗಳು ಒಳ್ಳೆಯವರಾದರೆ ಸಮಾಜ ಒಳ್ಳೆಯದಾಗುತ್ತದೆ. ವ್ಯಕ್ತಿಯಂತೆ ಸಮಾಜ. ಆದ್ದರಿಂದ ಪ್ರತಿಯೊಂದು ವ್ಯಕ್ತಿಯೂ ತಾನು ಹುಟ್ಟಿ ಬೆಳೆದ ಸಮಾಜದ ಋಣವನ್ನು ತೀರಿಸಲೇ ಬೇಕಾಗುತ್ತದೆ. ಸಂಘ-ಸಂಸ್ಥೆ-ಮಠಗಳೂ ಕೂಡ ಸಮಾಜದ ಅತಿ ಮುಖ್ಯ ಅಂಗಗಳು. ವ್ಯಕ್ತಿಯಂತೆ ಸಮಾಜ, ಸಮಾಜದಂತೆ ಸಂಸ್ಕೃತಿ, ಸಂಸ್ಕೃತಿಯಂತೆ ದೇಶ ಕಾರಣ ವ್ಯಕ್ತಿಗಳನ್ನು ಮೊದಲು ಮಾಡಿಕೊಂಡು ಸಂಘ-ಸಂಸ್ಥೆ-ಮಠಗಳ ಮುಖಾಂತರ ಸಮಾಜದ ಪ್ರಗತಿ ಸಾಧಿಸಬಹುದೆಂಬುದನ್ನು ಅರಿತ ಜಗದ್ಗುರುಗಳವರು ಸಾಮಾಜಿಕ ಕ್ರಾಂತಿಯನ್ನು ಕೈಗೊಂಡಿದ್ದಾರೆ. ವ್ಯಕ್ತಿಗಳ ಶೀಲ, ಚಾರಿತ್ರಿಕ ಶುದ್ಧಿ, ಆಚಾರ-ವಿಚಾರಗಳಿಗೆ ಒತ್ತುಕೊಟ್ಟು ಸಮಾಜದ ಏಳ್ಗೆಗೆ ಬಹುಮುಖವಾಗಿ ಪ್ರಯತ್ನಿಸುತ್ತಿದ್ದಾರೆ. ಸಾಮೂಹಿಕ ವಿವಾಹಗಳು, ಆರೋಗ್ಯ ಶಿಬಿರಗಳು, ದಾಸೋಹ, ಶಿವಾನುಭವ-ಕಲ್ಯಾಣ ಮಂಟಪಗಳ ನಿರ್ಮಾಣ, ಶಾಖಾಮಠಗಳ ಜೀರ್ಣೋದ್ಧಾರ, ಪ್ರಸಾದ ನಿಲಯ, ಕೃಷಿ ಸಮ್ಮೇಳನ,ರೇಷ್ಮೆ-ಕೈಗಾರಿಕೆ ಸಮ್ಮೇಳನ, ಸಮಾಜಕ್ಕಾಗಿ ದುಡಿದ ವ್ಯಕ್ತಿಗಳ ಸನ್ಮಾನ, ಹಿಂದುಳಿದವರಿಗೆ ಸಹಾಯ-ಸಹಕಾರ, ನೊಂದವರ ಎದೆಗೆ ಅಮೃತದ ನು ಡಿಹೀಗೆ ಹತ್ತು ಹಲವಾರು ರೀತಿಯಲ್ಲಿ ಸಾಮಾಜಿಕ ಅಭ್ಯುದಯಕ್ಕೆ ಪಾತ್ರರಾಗಿದ್ದಾರೆ. ನಾಡಿನಾದ್ಯಂತ ಸಂಚರಿಸಿ ಭಕ್ತರ ಕರೆಗೆ ಓಗೊಟ್ಟು ಅವರ ಮನೆಯ ಬಾಗಿಲಿಗೆ ಧಾವಿಸಿ, ಅವರ ನೋವು-ನಲಿವುಗಳಿಗೆ ಸ್ಪಂದಿಸಿ ಆತ್ಮದ ಬೆಳಕಿನಲ್ಲಿ ಮುನ್ನಡೆಯುವಂತೆ ಮಾಡಿದ್ದಾರೆ. ಇದರಿಂದಾಗಿ ಅನೇಕ ಗ್ರಾಮಗಳಲ್ಲಿ ವಂಶಪರಂಪರೆಯಾಗಿ ಬಂದ ವೈರತ್ವವು ಮರೆಯಾಗಿ ಪರಸ್ಪರ ಬಂಧುಗಳಂತೆ ಜತೆಬಾಳುವ ಸಾಗಿಸುತ್ತಿದ್ದುದು ಕಂಡುಬರುತ್ತವೆ. ವ್ಯರ್ಥ ಆಡಂಬರಗಳಲ್ಲಿ ವ್ಯಯಿಸುತ್ತಿದ್ದ ಗ್ರಾಮೀಣರ ಸಂಪತ್ತು ಅವರ ಉಪಜೀವನಕ್ಕೆ ಆಧಾರವಾಗುವಂತೆ ಕಾಯಕದಲ್ಲಿಯೆ ಕೈಲಾಸ, ಇದರಿಂದಲೇ ಸಾಮಾಜಿಕ ವಿಕಾಸ ಎಂಬುದನ್ನು ಶ್ರೀಗಳವರು ಸಾಧಿಸಿ ತೋರಿಸಿದ್ದಾರೆ.

ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ಸಾಮಾಜಿಕ ಅಭಿವೃದ್ಧಿಗೆ, ಸಾಂಸ್ಕೃತಿಕ ಪ್ರಸಾರಕ್ಕೆ ಶಿಕ್ಷಣವು ಬಹುಮುಖ್ಯವಾದದ್ದು. ಮನುಷ್ಯನಿಗೆ ಅಶನ-ವಸನ-ವಸತಿಗಳಷ್ಟೇ ಮುಖ್ಯವಲ್ಲ, ಇವುಗಳ ಜೊತೆಗೆ ಅರಿವು, ಜ್ಞಾನ ಅರ್ಥಾತ್ ಶಿಕ್ಷಣ ಮುಖ್ಯ. ವಿದ್ಯಾಧನವೇ ಅತ್ಯಂತ ಶ್ರೇಷ್ಠವಾದುದು ಎಂಬುದನ್ನು ಅನೇಕ ಪ್ರಾಚೀನ ಉಕ್ತಿಗಳು ಸಮರ್ಥಿಸುತ್ತವೆ.

"ವಿದ್ಯಾನಾಮ ನರಸ್ಯರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ
ವಿದ್ಯಾಭೋಗಕರೀ ಯಶಸ್ಸುಖಕರೀ ವಿದ್ಯಾಗುರೂಣಾಂ ಗುರುಃ
ವಿದ್ಯಾಬಂಧು ಜನೋ ವಿದೇಶ ಗಮನೇ ವಿದ್ಯಾಪರಾದೇವತಾ
ವಿದ್ಯಾ ರಾಜಸು ಪೂಜ್ಯತೇ ನಹಿ ಧನಂ ವಿದ್ಯಾವಿಹೀನಃ ಪಶುಃ'

ಸರ್ವಜ್ಞ ಶಿವಯೋಗಿ 'ವಿದ್ಯೆಯಿಲ್ಲದವನು ಹದ್ದಿಗಿಂತಲೂ ಕಡೆ' ಎಂದು ಸಾರಿದ್ದಾನೆ. ೩-೪ ದಶಕಗಳ ಹಿಂದೆ ಮುಂಡರಗಿ ತಾಲೂಕು ಅತ್ಯಂತ ಹಿಂದುಳಿದಿತ್ತು. ಅನ್ನಕ್ಕೆ ಅಭಾವ, ನೀರಿಗೆ ನಿಧಾನ, ವಿದ್ಯೆಗೆ ವಿದಾಯ ಎಂಬ ಪರಿಸ್ಥಿತಿ ಇತ್ತು. ದೇಶದ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವು ಒಂದು ಮಹತ್ವದ ಸಾಧನ. ಇದರಿಂದ ಸಮಾಜ-ಆರ್ಥಿಕ ಅಭಿವೃದ್ಧಿ ಸಾಧ್ಯವೆಂಬುದನ್ನು ಮನಗಂಡ ವೀರಶೈವ ಮಠಾಧೀಶರು ವಿದ್ಯಾದಾನದಂತಹ ಪವಿತ್ರಕಾರ್ಯಕ್ಕೆ ಕೈಹಾಕಿದರು. ಈ ದಿಸೆಯಲ್ಲಿ ಮುಂಡರಗಿ ಶ್ರೀ ಮಠವು ಅಪಾರವಾದ ಕೊಡುಗೆಯನ್ನು ನೀಡಿದೆ. ಎಂಟನೆಯ ಒಂಭತ್ತನೆಯ ಜಗದ್ಗುರುಗಳು ಬಿತ್ತಿದ ಶಿಕ್ಷಣದ ಬೀಜ ಇಂದು ಬೆಳೆದು ಹೆಮ್ಮರವಾಗಿ ಮುಂಡರಗಿಯ ತಾಲೂಕಿಗಷ್ಟೇ ಅಲ್ಲದೆ ನಾಡಿನ ಬೇರೆ ಬೇರೆ ಭಾಗಗಳಿಗೆ ತನ್ನ ಕೊಂಬೆ ರೆಂಬೆಗಳನ್ನು ಚಾಚಿ ಅಮೃತಫಲವನ್ನೀಯ ತೊಡಗಿದೆ. ಇಂದಿನ ಜಗದ್ಗುರುಗಳವರು ಶ್ರೀಮಠದ ಅಧಿಕಾರ ವಹಿಸಿಕೊಂಡಾಗ ಇಡೀ ತಾಲೂಕಿನಲ್ಲಿ ಹಿಂದಿನ ಜಗದ್ಗುರುಗಳವರ ನಾಮಾಂಕಿತದಿಂದ ಒಂದೇ ಒಂದು ಪ್ರೌಢಶಾಲೆಯಿತ್ತು. ಆದರೆ ಇಂದು ಇಂದಿನ ಜಗದ್ಗುರುಗಳವರ ದೂರದೃಷ್ಟಿಯ ಪರಿಣಾಮವಾಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿಯ ಆಶ್ರಯದಲ್ಲಿ ಒಂದು ಮಹಾವಿದ್ಯಾಲಯ, ಎರಡು ಪದವಿ ಪೂರ್ವ ಮಹಾವಿದ್ಯಾಲಯಗಳು, ಎಂಟು ಪ್ರೌಢಶಾಲೆಗಳು, ಒಂದು ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆ, ಒಂದು ವೃತ್ತಿಶಿಕ್ಷಣ ವಿದ್ಯಾಲಯ, ಒಂದು ಪಾಲಿಟೆಕ್‌ನಿಕ್, ಒಂದು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಸಂಸ್ಕೃತ ಪಾಠಶಾಲೆ, ಅನೇಕ ಕನ್ನಡ ಶಾಲೆಗಳನ್ನು ಅವುಗಳೊಂದಿಗೆ ಉಚಿತ ಪ್ರಸಾದ ನಿಲಯಗಳನ್ನು ಪ್ರಾರಂಭಿಸಿರುವುದು ಎಷ್ಟೋ ಬಡ ಹಿಂದುಳಿದ ಮಕ್ಕಳಿಗೆ ವರದಾನವಾಗಿ ಪರಿಣಮಿಸಿದೆ. ಮೃಡಗಿರಿಯಿಂದ ಪ್ರಾರಂಭವಾದ ಈ ಜ್ಞಾನಜ್ಯೋತಿ ಮುಂಡರಗಿ ತಾಲೂಕನ್ನು ದಾಟಿ, ಶಿರಹಟ್ಟಿ, ನವಿಲುಗುಂದ, ಕೊಪ್ಪಳ, ಗದಗ, ವಿಜಾಪುರ, ಕಾರವಾರ ಜಿಲ್ಲೆಗಳಲ್ಲಿ ಬೆಳಕು ಬೀರಿ ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸುವಲ್ಲಿ ಸಮರ್ಥವಾಗಿದೆ. ಇಂದು ಮುಂಡರಗಿ ಶ್ರೀಮಠವು ಅನ್ನದಾನ-ಜ್ಞಾನದಾಸೋಹಗಳ ಮೂಲಕ ಶೈಕ್ಷಣಿಕ ಕ್ರಾಂತಿಯನ್ನುಂಟು ಮಾಡಿ ನಾಡಿನ ಜನತೆಯ ಪುನರುಜ್ಜೀವನಕ್ಕೆ ಕಾರಣವಾಗಿದೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯ ಮೂಲಕ ಮುಂಡರಗಿಯ ಶ್ರೀ ಮಠವು ಕೈಕೊಂಡ ಸಾಹಿತ್ಯಿಕ ಕ್ರಾಂತಿ ಅಭೂತಪೂರ್ವವಾದುದು. ಕನ್ನಡ, ಹಿಂದಿ, ಸಂಸ್ಕೃತಗಳಲ್ಲಿ ತ್ರಿಭಾಷಾ ಪಂಡಿತರಾದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ವೈಚಾರಿಕ ಲೇಖಕರೂ, ಸಹೃದಯ ಸಾಹಿತಿಗಳೂ, ಶ್ರೇಷ್ಠ ವಚನಕಾರರೂ ಆಗಿರುವದರೊಂದಿಗೆ ಸಾರಸ್ವತ ಪ್ರಪಂಚಕ್ಕೆ ೩೫ಕ್ಕೂ ಹೆಚ್ಚು ಗ್ರಂಥಗಳ ಕೊಡುಗೆಯನ್ನು ನೀಡಿದ್ದಾರೆ. ಕೇವಲ ೨೪ ವರ್ಷಗಳ ಅವಧಿಯಲ್ಲಿ ೧೦೧ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಹೊಸ ಲೇಖಕರಿಗೆ ಪ್ರೋತ್ಸಾಹಿಸಿ ಬರೆಸಿದ್ದಾರೆ. ವಿದ್ವಾಂಸರಿಂದ ಅನೇಕ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸಿ, ಶ್ರೀ ಮಠದ ಹೆಸರು ಸಾಹಿತ್ಯಿಕ ವಲಯದಲ್ಲಿ ಚಿರಂತನವಾಗಿ ಉಳಿಯುವಂತೆ ಮಾಡಿದ್ದಾರೆ. ಸ್ವತಃ ವೀರಶೈವ ಧರ್ಮದ ಬಗೆಗೆ ಆಳವಾಗಿ ಅಧ್ಯಯನಗೈದ ಪೂಜ್ಯರ ಸತ್‌ಚಿಂತನೆಯ ಮೂಲಕ ಹೊರಬಂದ ಕೃತಿ ಮೈಲಾರಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯನ್ನು ಕುರಿತಾದ ಬೃಹದ್ಗ್ರಂಥ "ವೀರಶೈವ ದಾರ್ಶನಿಕ ಸಿದ್ಧಾಂತ". ಇದೊಂದು ವೀರಶೈವ ಧರ್ಮದ ಕೈಪಿಡಿ. ಹಾನಗಲ್ಲ ಲಿಂ. ಶ್ರೀ ಸದಾಶಿವ ಮಹಾಸ್ವಾಮಿಗಳವರು "ಇದು ವೀರಶೈವ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ" ಎಂದಿದ್ದರೆ, ಧಾರವಾಡದ ಪೂಜ್ಯ ಮಹಾಂತಪ್ಪಗಳವರು "ಇದು ಬರಿಯ ಪುಸ್ತಕವಲ್ಲ. ವೀರಶೈವ ಧರ್ಮದ ಶಿರೋರತ್ನ. ಇಂಥ ಕೃತಿಗೆ ಡಾಕ್ಟರೇಟ್ ಪದವಿ ಸಲ್ಲಬೇಕು" ಎಂದು ನುಡಿದು ತಮ್ಮ ಮಸ್ತಕದ ಮೇಲಿರಿಸಿಕೊಂಡು ಕುಣಿದಾಡಿದರಂತೆ. ಡಾ|| ಎಚ್. ತಿಪ್ಪೇರುದ್ರಸ್ವಾಮಿ, ಡಾ|| ಬಿ. ವ್ಹಿ. ಮಲ್ಲಾಪೂರ, ಡಾ|| ಎಸ್. ಎಮ್. ವೃಷಭೇಂದ್ರ ಸ್ವಾಮಿಗಳವರಂಥ ಘನ ವಿದ್ವಾಂಸರು ಈ ಕೃತಿಯನ್ನು ಶ್ಲಾಘಿಸಿದ್ದಾರೆ. ಪೂಜ್ಯರು ರಚಿಸಿದ ಮಾನವಧರ್ಮ

ಈಗಾಗಲೇ ನಾಲ್ಕನೇ ಆವೃತ್ತಿಗೆ ಅಣಿಯಾಗಿದ್ದು ಹಿಂದಿ, ಮರಾಠಿ. ಆಂಗ್ಲಭಾಷೆಗಳಲ್ಲಿ ಅನುವಾದಗೊಂಡಿದೆ. ಆರೈದು (ಭಾಗ ೧, ೨, ೩, ೪, ೫,) ವಚನ ಸಂಪದ, ಜಂಗಮಜ್ಯೋತಿ, ಚಿನ್ಮಯ ಚೇತನ, ಶಿವಯೋಗ ಮೊದಲಾದ ಕೃತಿಗಳು ಶಿವಪಥದತ್ತ ಸಾಗಿಸಬಲ್ಲವುಗಳಾಗಿವೆ. ಹಿರಿಯ ಬರಹಗಾರರಾದ ಡಾ. ಎಸ್.ಎಮ್. ಹಿರೇಮಠ, ಶ್ರೀ ಯೋಗೀಶ ಯಡ್ರಾವಿ, ಡಾ. ವ್ಹಿ. ಜಿ. ಪೂಜಾರ, ಟಿ.ಆರ್. ಮಹಾದೇವಯ್ಯ, ಡಾ. ವೀರಣ್ಣ ರಾಜೂರ, ಪಂ. ಷಣ್ಮುಖಯ್ಯ ಅಕ್ಕೂರಮಠಂಥ ವಿದ್ವಾಂಸರ ಗ್ರಂಥಗಳನ್ನು ಪ್ರಕಟಿಸುವ ಮೂಲಕ, ಸಂಪಾದಿಸುವ ಮೂಲಕ ಸಾಹಿತ್ಯದ ಸುಕೃತಕೃಷಿಯನ್ನು ಬೆಳೆಸುವಲ್ಲಿ ಜಗದ್ಗುರುಗಳ ಕಾರ್ಯ ಮೆಚ್ಚುವಂತಹದು.

೧೯೯೫ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಪೀಠಾರೋಹಣದ ರಜತ ಮಹೋತ್ಸವ ವರ್ಷ. ಸಾರ್ಥಕ ಲಿಂಗಮಯ ಜೀವನದ ರಜತ ಮಹೋತ್ಸವದ ಆಚರಣೆ ನಾಡಿನ ೨೫ ಗ್ರಾಮ ಪಟ್ಟಣಗಳಲ್ಲಿ ನಿರಾಡಂಬರವಾಗಿ ಜ್ಞಾನಪ್ರಸಾರದ ಮೂಲಕ ಆಚರಿಸಿ ಜನಸಾಮಾನ್ಯರ ಹೃದಯಕ್ಕೆ ಮುಟ್ಟುವಂತೆ ಹಾಕಿಕೊಂಡ ಕಾರ್ಯಕ್ರಮಗಳು ಮುಂಡರಗಿ ಶ್ರೀ ಮಠದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಾಖಲೆಗಳಾಗಿವೆ. ಕೃಷಿತಜ್ಞರೂ ವಾಸ್ತುಶಿಲ್ಪ ಪರಿಣತರೂ ಆದ ಶ್ರೀಗಳವರು ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧನೆಯನ್ನು ಮಾಡಿದ್ದಾರೆ. ಕೇವಲ ಐವತ್ತೆರಡು ವಸಂತಗಳನ್ನು ಕಂಡಿರುವ ಶ್ರೀಗಳವರ ಬಹುಮುಖಿ ಸಾಧನೆ, ಸಿದ್ಧಿ ಅನುಪಮ. 'ಮಠದಿಂದ ಘಟವಲ್ಲ, ಘಟದಿಂದ ಮಠ' ಎನ್ನುವ ನುಡಿಗೆ ನಿದರ್ಶನ ಶ್ರೀಗಳವರು. ಪೂಜ್ಯ ಜಗದ್ಗುರುಗಳವರ ಶೂನ್ಯಸಿಂಹಾಸನಾರೋಹಣದ ರಜತೋತ್ಸವದ ಸಂದರ್ಭದಲ್ಲಿ ಭಕ್ತಿಯಿಂದ ಸಮರ್ಪಿಸಿದ ಗ್ರಂಥ "ಅನುಭಾವಿ."

ಬದುಕೆಲ್ಲ ಅನುಭಾವವೇ ಆದ, ರಚನೆಗಳೆಲ್ಲ ಶಿವಾನುಭವವೇ ಆದ, ಚಿಂತನೆಯೆಲ್ಲ ಲೋಕಾನುಭವವೇ ಆದ ದಶಮ ಪೀಠಾಧಿಪತಿಗಳು ಸಾರ್ಥಕವೂ, ಅನ್ವರ್ಥಕವೂ ಆದ ಬದುಕುಳ್ಳವರಾಗಿದ್ದಾರೆ. ಇಂದು ಕನ್ನಡನಾಡಿನ ಉದ್ದಗಲಕ್ಕೂ ಮುಂಡರಗಿ ಸಂಸ್ಥಾನಮಠದ ಹೆಸರು ಕೇಳಿಬರುತ್ತಿದ್ದರೆ ಅದಕ್ಕೆ ಕಾರಣಪುರುಷರಾದವರು ಪೂಜ್ಯ ಜಗದ್ಗುರುಗಳವರು. ನಿಜಕ್ಕೂ ಮುಂಡರಗಿಯ ಶ್ರೀ ಮಠದ ಕೊಡುಗೆ ಅಪಾರ, ಅನಂತ.

ಧಾರವಾಡದ ಶ್ರೀ ಮುರುಘಾಮಠದ ಕೊಡುಗೆ

ಪ್ರೊ. ಪಂಚಾಕ್ಷರಿ ಹಿರೇಮಠ

ಧಾರವಾಡದ ಶ್ರೀ ಮುರುಘಾಮಠ ಎಂಬತ್ತು ವರ್ಷಗಳ ಪೂರ್ವದಲ್ಲಿ ಇಂದಿನಂತಿರಲಿಲ್ಲ. ಆಗ ಇದು ಕೇವಲ ಮೂರಂಕಣದ, ಮಣ್ಣಿನ ಹೆಂಟೆಯಿಂದ ಕಟ್ಟಿ, ಮಣ್ಣಿನ ಗಿಲಾಯಿ ಮಾಡಿ ಸಗಣಿ ಸಾರಿಸಿದ, ಕುಂಬಾರ ಹಂಚು ಹೊದಿಸಿದ, ಮಳೆಗಾಲದಲ್ಲಿ ವಿಪರೀತ ಸೋರುವ, ಸುತ್ತಲೂ ಡಬ್ಬಗಳ್ಳಿ ಮುಳ್ಳಿನಿಂದ ಆವೃತವಾದ ಒಂದು ಅತ್ಯಂತ ಸಾಮಾನ್ಯ ಕಟ್ಟಡವಾಗಿತ್ತು.

ಇಂಥ ಕಟ್ಟಡದಲ್ಲಿ ಒಂದು ಕರ್ತೃ ಗದ್ದುಗೆ. ಊರ ಹೊರಗೆ ಈ ಮಠವಿದ್ದುದರಿಂದ ಜನರ ಸಂಚಾರ ಕೂಡ ಕಡಿಮೆ. ಮುಚ್ಚಂಜೆಯಲ್ಲಿ ಕೂಡ ಜನ ಹೋಗಲು ಹೆದರುತ್ತಿದ್ದರು. ಇಂಥ ಮಠ ತನ್ನ ಹಾಗೂ ಸಮಾಜದ ಉದ್ಧಾರಕ್ಕಾಗಿ ಓರ್ವ ಮಹಾತಪಸ್ವಿಯ ಬರುವಿಗಾಗಿ ತಪದಲ್ಲಿ ನಿರತವಾಗಿತ್ತು. ಮಠಕ್ಕೆ ಯಾವುದೇ ರೀತಿಯ ಆಸ್ತಿಯಿಲ್ಲದ್ದರಿಂದ ಯಾರೂ ಈ ಮಠಕ್ಕೆ ಸ್ವಾಮಿಗಳಾಗಿ ಬರಲು ಆಸಕ್ತಿ ವಹಿಸಿರಲಿಲ್ಲ. ಒಂದು ಒಳ್ಳೆಯ ಕಾಲ, ಎಲ್ಲರಿಂದ ಉಪೇಕ್ಷಿಸಲ್ಪಟ್ಟ ಈ ಮಠಕ್ಕೂ ಬಂತು. ಅದು ಸಾವಿರದೊಂಬೈನೂರ ಹದಿನಾರರ ಕಾಲ. ಅಥಣಿಯ ಗಚ್ಚಿನ ಮಠದ ಪರಮತಪೋನಿಧಿ ಶ್ರೀ ಮುರುಘೇಂದ್ರ ಶಿವಯೋಗಿಗಳ ಸೇವೆಯಲ್ಲಿದ್ದು ತಮ್ಮ ಅಪಾರ ಸೇವಾ ಧರ್ಮದಿಂದ ಪೂಜ್ಯ ಶಿವಯೋಗಿಗಳ ಸಂಪೂರ್ಣ ಕೃಪೆಗೆ ಪಾತ್ರರಾಗಿದ್ದ ಪೂಜ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಚಿತ್ರದುರ್ಗದ ಬೃಹನ್ಮಠದ ಜಗದ್ಗುರುಗಳಾಗಿದ್ದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಧಾರವಾಡ ಶ್ರೀ ಮುರುಘಾಮಠದ ಅಧಿಕಾರ ವಹಿಸಿಕೊಳ್ಳಲು ದಯಮಾಡಿಸಿದರು. ಇಲ್ಲಿಗೆ ಬರುವ ಪೂರ್ವದಲ್ಲಿ ದಾವಣಗೆರೆಯ ವಿರಕ್ತ ಮಠದ ಅಧ್ಯಕ್ಷರಾಗಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಅವರು ತಂದ ಮನ್ವಂತರ ಅಪರೂಪದ್ದಾಗಿತ್ತು. ಅಷ್ಟೇ ಅಲ್ಲ ಮಹಾನುಭಾವಿ ಬಸವಣ್ಣನವರ ಜನನದ ತಿಥಿಯನ್ನು ನಿರ್ಣಯಿಸಿ, ಬಸವ ಜಯಂತಿಯನ್ನು ಆ ಕಾಲದ ಪ್ರಸಿದ್ಧ ಶರಣಜೀವಿ, ಸಮಾಜ ಸೇವಿಯಾಗಿದ್ದ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಪ್ರಥಮವಾಗಿ ಆರಂಭಿಸಿ, ಮುಂದೆ ನಾಡಿನ ತುಂಬ ಬಸವಜಯಂತಿ ಆಚರಿಸುವಂತೆ ಮಾಡಿದ ಸತ್ಕೀರ್ತಿ ಕೂಡ ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳದ್ದಾಗಿದೆ.

ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳು ಧಾರವಾಡಕ್ಕೆ ಬರುವ ಪೂರ್ವದಲ್ಲಿ ಹಾಗೂ ದಾವಣಗೆರೆಗೆ ಬರುವ ಕಾಲದಲ್ಲೂ ತಮ್ಮ ಪರಮ ಆರಾಧಕ ದೈವವಾಗಿದ್ದ ಶ್ರೀ ಶಿವಯೋಗಿಗಳ ಸೇವೆಯಿಂದ ವಂಚಿತರಾಗಲು ಅವರು ಸಿದ್ಧರಿರಲಿಲ್ಲ. ಶ್ರೀ ಶಿವಯೋಗಿಗಳ ಸೇವೆಯ ಮಹಾಭಾಗ್ಯದ ಮುಂದೆ ಅವರಿಗೆ ಲೋಕದ ಎಲ್ಲ ಸಂಪತ್ತೂ ತುಚ್ಛವಾಗಿತ್ತು. ಅಂತೆಯೇ ಅವರು ಮತ್ತೆ ದಾವಣಗೆರೆಯಿಂದ ಅಥಣಿಗೆ ದಯಮಾಡಿಸಿದರು. ಇವರು ಅಲ್ಲಿಗೆ ಹೋಗುವ ಪೂರ್ವದಲ್ಲಿಯೇ ಶ್ರೀ ಶಿವಯೋಗಿಗಳಿಗೆ ಜಗದ್ಗುರುಗಳ ಇಚ್ಛೆ ತಿಳಿದಿತ್ತು. ಹೀಗಾಗಿ ಶ್ರೀ ಶಿವಯೋಗಿಗಳು ಶ್ರೀ ಮೃತ್ಯುಂಜಯ ಸ್ವಾಮಿಗಳಿಗೆ ಜೋಳಿಗೆ ನೀಡಿ ಅದರಲ್ಲೊಂದು ರುದ್ರಾಕ್ಷಿ ಇಟ್ಟು "ಮೃತ್ಯುಂಜಯಪ್ಪ ನೀನು ಧಾರವಾಡಕ್ಕೆ ಹೋಗು. ಬಿದ್ದಿರುವ ಸಮಾಜವನ್ನು ಎತ್ತು. ಅಪ್ಪಾ ಅವರು (ಬಸವಣ್ಣ) ನಿನ್ನ ರಕ್ಷಣೆಗೆ ಇದ್ದಾರೆ" ಎಂದು ಅಪ್ಪಣೆ ಮಾಡಿದರು. ನಿತ್ಯ ಶಿವಯೋಗಿಗಳ ದರ್ಶನ ಹಾಗೂ ಅವರ ಸೇವೆಯಿಂದ ತಾವು ವಂಚಿತರಾಗುತ್ತಿರುವುದನ್ನು ಮನಗಂಡ ಪೂಜ್ಯ ಶ್ರೀಗಳು ತುಂಬ ದುಃಖಿತರಾಗಿದ್ದರು. ಶ್ರೀ ಶ್ರೀ ಶಿವಯೋಗಿಗಳಿಂದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಅಗಲುವ ಪ್ರಸಂಗ ನಮಗೆ ಕೂಡಲಸಂಗಮನಾಥನ ನಿತ್ಯ ದರ್ಶನ, ನಿತ್ಯಸೇವೆಯಿಂದ ವಂಚಿತನಾಗಿ ಆತನ ಅಪ್ಪಣೆಯಿಂದಲೇ ಬಸವಣ್ಣನಿಗೆ ಕಲ್ಯಾಣಕ್ಕೆ ಹೋಗಬೇಕಾಗಿ ಬಂದ ಪ್ರಸಂಗ ಇಲ್ಲಿ ನೆನಪಿಗೆ ಬರುತ್ತದೆ. ನಿನ್ನ ದರುಶನ, ಸೇವಾಭಾಗ್ಯವೊಂದಿದ್ದರೆ ಸಾಕು ಸಂಗಮನಾಥ ಎಂದು ಅಂದು ಬಸವಣ್ಣ ಅತ್ತರಿದಂತೆಯೇ ಈಗ ಮೃತ್ಯುಂಜಯ ಸ್ವಾಮಿಗಳು ಶಿವಯೋಗಿಗಳ ದರ್ಶನ, ಸೇವಾಭಾಗ್ಯದಿಂದ ವಂಚಿತರಾಗುವ ಕಾಲದಲ್ಲಿ ಅತ್ತರಿದರು, ಗೋಳೋ ಎಂದು ಕಣ್ಣೀರ್ಗರೆದರು. ಅಂದು ಸಂಗಮನಾಥ ತನ್ನ ನೆಚ್ಚಿನ ಬಸವಣ್ಣನನ್ನು ''ನೀ ನಿಂದಲ್ಲಿ ನಿಂದಪೆಂ, ನೀ ಕುಳಿತಲ್ಲಿ ಕುಳಿತಪೆಂ, ನೀ ನುಡಿದಲ್ಲಿ ನುಡಿದಪೆಂ.... ಪೋಗು ಬಸವ, ಬಸವರಸ, ಬಸವೇಶ ಪೊಡವಿಗಧಿಪತಿಯಾಗಿ ಬಾಳು ....." ಎಂದು ಸಂತೈಸಿ ಕಲ್ಯಾಣಕ್ಕೆ ಕಳಿಸಿದಂತೆ ಶ್ರೀ ಶಿವಯೋಗಿಗಳೂ "ನೀನಿದ್ದಲ್ಲಿಯೇ ನಾನಿರುತ್ತೇನೆ, ನಿನ್ನೊಳಗೇ ಇರುತ್ತೇನೆ. ನೀನಲ್ಲದೆ ಎನಗೆ ಬೇರೆ ಠಾವಿಲ್ಲ ಮೃತ್ಯುಂಜಯಪ್ಪ. ಸಮಾಜ ಕಲ್ಯಾಣಕ್ಕಾಗಿ ನೀನು ಹೋಗು" ಎಂದು ಮೃತ್ಯುಂಜಯಸ್ವಾಮಿಗಳನ್ನು ಸಂತೈಸಿ, ಮೈದಡವಿ ಧಾರವಾಡಕ್ಕೆ ಕಳಿಸಿಕೊಟ್ಟರು.

ಶ್ರೀ ಶಿವಯೋಗಿಗಳ ಅಪ್ಪಣೆ, ಆಶೀರ್ವಾದ ತಮ್ಮ ಉತ್ತಮಾಂಗದಲ್ಲಿ ಧರಿಸಿಕೊಂಡು ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳು ಇಲ್ಲಿಗೆ ಬಂದನಂತರ ಅವರು ಗೈದ ಮಹಾತಪಸ್ಸಿನ ಫಲವಾಗಿ ಇಂದಿನ ಶ್ರೀ ಮುರುಘಾಮಠ ಪವಾಡವೆನ್ನುವಂತೆ ಬೆಳೆದು ಲೋಕಪ್ರಸಿದ್ಧಿ ಪಡೆಯಿತು. ಇಂದು ಆ ಮಠ ಇಂತಿದೆ. ಬನ್ನಿ ದರ್ಶನ ಮಾಡಿಕೊಳ್ಳೋಣ.

ಧಾರವಾಡದ ಉತ್ತರ ಭಾಗ. ಈಗ ಈ ವಿಸ್ತೀರ್ಣದ ಹೆಸರು ಶ್ರೀ ಮೃತ್ಯುಂಜಯನಗರ. ಈ ನಗರದ ಕೊನೆಯಲ್ಲಿ ನೆಲೆಸಿರುವುದು ಶ್ರೀ ಮುರುಘಾಮಠ. ಮಠದ ಪ್ರಶಾಂತವಾದ ಆವರಣದ ಒಳಹೊಕ್ಕು ಒಂದು ನಿಮಿಷ ಮುಂದೆ ನಡೆದರೆ ನಂದೀಧ್ವಜ ಸ್ತಂಭ. ಅದರ ಎದುರಿಗಿರುವುದೇ ಶಿವಾನುಭವ ಮಂಟಪ, ಬಲಕ್ಕೆ ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗೀಶ್ವರರ ಪುಣ್ಯನಾಮ ಪಡೆದಿರುವ ಮಂದಿರ. ಈ ಮಂದಿರದ ಅರ್ಧಭಾಗದಲ್ಲಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಗ್ರಂಥಮಾಲೆಯ ಕಾರ್ಯಾಲಯವಿದೆ. ಈ ಗ್ರಂಥಮಾಲೆ ಲಕ್ಷಗಟ್ಟಲೆ ರೂಪಾಯಿ ಬೆಲೆ ಬಾಳುವ ಪ್ರಾಚೀನ ಗ್ರಂಥಗಳನ್ನು ಪಂಡಿತೋತ್ತಮರಾದವರಿಂದ ಸಂಶೋಧಿಸಿ, ಸಂಪಾದಿಸಿ ಪ್ರಕಟಿಸಿದೆ. ಇನ್ನರ್ಧ ಭಾಗದಲ್ಲಿ ಅಂಚೆ ಕಚೇರಿಯಿದೆ. ಅಲ್ಲಿಂದ ಮುಂದೆ ಬಂದರೆ ಈ ಲೋಕದ ಪರಮಗುರುವಾದ ಶ್ರೀಮದಘಣಿಯ ಶಿವಯೋಗಿಗಳ ಮಹಾಸನ್ನಿಧಾನಕ್ಕೆ ಮಾರ್ಗತೋರುವ ಮಹಾಮಂಟಪ. ಮಂಟಪದಲ್ಲಿ ಬಂದು ತದೇಕಚಿತ್ತರಾಗಿ ಸುತ್ತಲೂ ಕಣ್ಣಾಡಿಸಿದರೆ ಶ್ರೀ ಶಿವಯೋಗಿಗಳ ಅಮೋಘವಾದ ಪವಾಡಮಯ ಜೀವನವನ್ನು ನಮ್ಮ ಚಿತ್ತಭಿತ್ತಿಯಲಿ ಮೂಡಿಸುವ ಹಲವಾರು ಸುಂದರವಾದ ತೈಲಚಿತ್ರಗಳು. ಈ ಚಿತ್ರಗಳನ್ನು ನಾಡಿನ ಹೆಸರಾಂತ ಚಿತ್ರಕಲಾವಿದರಾದ ಶ್ರೀ ಮುರಿಗೆಪ್ಪ ಚೆಟ್ಟಿ ಅವರು ಶಿವಯೋಗಿಗಳಲ್ಲಿ ತಮಗಿರುವ ಭಕ್ತಿ ಶ್ರದ್ಧೆಗಳಿಗೆ ಸಾಕ್ಷಿಯಾಗಿ ಚಿತ್ರಿಸಿದ್ದಾರೆ. ಅಲ್ಲಿಂದ ಮುಂದೆ ಶಿವನ ಸಾನ್ನಿಧ್ಯ. ಬಹು ಎಚ್ಚರಿಕೆಯಿಂದ ಶಿವಯೋಗಿಗಳನ್ನು ಸ್ಮರಿಸುತ್ತ, ಅಹಂಕಾರದ ಯಾವ ಕಾಳಸರ್ಪವೂ ಎಲ್ಲಿಯೂ ಸುಳಿಯದ ಹಾಗೆ ಎಚ್ಚರ ವಹಿಸುತ್ತ ಮೈಮನ, ಚಿತ್ತ ಎಲ್ಲವೂ ಮಣಿದು ಪರಿಶುದ್ಧವಿರಿಸಿಕೊಂಡು ಮುಂದೆ ಸಾಗಬೇಕು. ಮಹಾ ಮಂಟಪದ ದ್ವಾರ ದಾಟಿದರೆ ಸಾಕು. ಪಾರಮಾರ್ಥಿಕ ಲೋಕದ, ಶಿವಲೋಕದ, ಲಿಂಗಮಯವಾಗಿರುವ ಪರಮತಾಣ ಗೋಚರವಾಗುತ್ತದೆ. ಯಾವುದೋ ಒಂದು ದಿವ್ಯಲೋಕದೊಳಪೊಕ್ಕಂತೆ ಅನುಭವ. ಸರಿ. ಅಲ್ಲಿಂದ ಮುಂದೆ ಹೋದರೆ ಚಂದ್ರಕಾಂತ ಶಿಲೆಯ ಬಣ್ಣ ಬಣ್ಣದ ತುಣುಕುಗಳನ್ನು ಹಾಸಿದ ಸುಂದರ ನೆಲ. ಆಚೆ - ಈಚೆ ಬೆಳಕಿನ ಸಾಲುಗಂಬ. ಪೂರ್ಣಿಮೆಯ ಪೂರ್ಣಚಂದ್ರನ ಹಾಗಿರುವ ಗೋಲಾಕಾರದಿಂದ ಬೆಳಕು ಹರಡುತ್ತದೆ. ಈ ವಿದ್ಯುತ್ ಬೆಳಕಿನ ಸಾಲಿನಲ್ಲಿ ಮುಂದೆ ಹೋದರೆ ಶ್ರೀ ಶಿವಯೋಗಿಗಳು ಮುಹೂರ್ತ ಮಾಡಿರುವ ಮಂಟಪ. ಮಂಟಪ ಬಹು ಕಲಾತ್ಮಕವಾಗಿದೆ. ಮಂಟಪದ ಪ್ರದಕ್ಷಿಣೆ ಹಾಕಿಕೊಂಡು ಎದುರಿಗೆ ಬಂದರೆ ಲಿಂಗವೇ ತಾವಾಗಿರುವ ಪರಮಶಿವ ಶ್ರೀ ಶಿವಯೋಗಿಗಳ ದಿವ್ಯದರುಶನ. ಭಕ್ತಿಯಿಂದ ಸಾಷ್ಟಾಂಗವೆರಗಿ ನಿಂತು ಧ್ಯಾನಾಸಕ್ತರಾಗಿ ದೃಷ್ಟಿಸಿದರೆ ಸುತ್ತಲೂ ಬೆಳಕು ಹರಡಿದ ಹಾಗೆ, ನಮ್ಮ ಒಳಗೂ ಹೊರಗೂ ಬೆಳಕು ಸುರಿದ ಹಾಗೆ ಭಾಸವಾಗುತ್ತದೆ. ಅಲ್ಲ ಅನುಭವವಾಗುತ್ತದೆ. ಶ್ರೀ ಶಿವಯೋಗಿಗಳ ಆ ದಿವ್ಯ ಮೂರುತಿ ಕೆಲಕಾಲದಲ್ಲಿ ಕಾಣದಂತಾಗಿ ಅಲ್ಲಿ ಕೇವಲ ನಿರ್ಮಲಾಂತಃಕರಣದ ಪರಮ ಪ್ರಸನ್ನತೆ, ತೇಜೋಪೂರ್ಣವಾದ ಚಿತ್ಕಳೆ ಕಾಣಿಸುತ್ತದೆ. ಈ ಮಹಾಭಾಗ್ಯ ಇಲ್ಲಿಗೆ ಒಲಿಸಿಬಂದುದು ನಮ್ಮ ಶ್ರೀ ಮೃತ್ಯುಂಜಯ ಅಪ್ಪಗಳವರ ತಪಸ್ಸಿನ ಫಲ. ಈ ಮಹಾಬೆಳಕು, ಚಿತ್ಕಳೆ ಶ್ರೀಗಳವರಿಗೆ ಒಲಿದ ಪರಿ ವರ್ಣಿಸಲಾಗದು. ಅದು ಶಬ್ದದಾಚಿನ ಮಾತು.

ಶ್ರೀ ಶಿವಯೋಗಿಗಳ ಈ ಮಹಾ ಮಂಟಪ ಕಲಾ ಕೌಶಲ್ಯದಿಂದೊಡಗೂಡಿದೆ. ಅಲ್ಲಿ ಎಳೆಯ ಬಳ್ಳಿಯ ಹಾಗೆ, ಬಳ್ಳಿಯ ಎಸಳಿನ ಹಾಗೆ ಇರುವ ಸುಳುಹುಗಳು, ತೋರಣಗಳು, ಜಾಲರಿಗಳು ಬಹು ಚೆಲುವಾಗಿವೆ.

ಶಿವಯೋಗಿಗಳ ಈ ಮಂಟಪದ ಸುತ್ತಲೂ ನಿರ್ಮಿತಗೊಂಡಿರುವ ಸೊಗಸಾದ ಈ ತೋಟ, ತೆಂಗುಗಳ ಗರಿಯ ಚಾಮರವು, ದಿಕ್ಕು ದಿಕ್ಕಿಗೂ ಗಾಳಿಯಲ್ಲಿ ಸುಳಿಯುವ ಸಂಪಿಗೆಯ ಕಂಪು, ಚೆಂಗುಲಾಬಿ, ಜಾಜಿ, ಮಲ್ಲಿಗೆ,. ಸೇವಂತಿಗೆ, ಬಕುಳ ಪುಷ್ಪಗಳ ಹಿತಮಿತವಾದ, ನವಿರಾದ ಸುವಾಸನೆ ನಿತ್ಯವೂ ಶಿವಯೋಗಿಯ ಸಾನ್ನಿಧ್ಯಕ್ಕೆ ಸಲ್ಲಿಸಿ ಕೃತಾರ್ಥತೆ ಪಡೆಯುತ್ತಿದೆ. ನೂರು ಬಣ್ಣದಲಿ ಮಿಂದೆದ್ದಿರುವ ಇಲ್ಲಿಯ ಗಿಡ ಬಳ್ಳಿಗಳಿಗೂ ಸಾರ್ಥಕ್ಯದ ಹಿರಿಮೆ ಇದೆ. ಅದೋ ಇಲ್ಲಿ ನೋಡಿ ಈ ಗಿಡದಲಿಹ ನಾಗಲಿಂಗ ಪುಷ್ಪ. ಈ ಪುಷ್ಪ ನೋಡಿದಾಗ ಎಂತ ನಾಸ್ತಿಕನೂ ಆಸ್ತಿಕನಾದಾನು. ಅಂತಹ ಪವಾಡಮಯ ಸತ್ವವನ್ನು ಹೊಂದಿದೆ. ಸಮಸ್ತ ಸೃಷ್ಟಿಯೇ ಶಿವಪೂಜೆ, ಲಿಂಗ ಪೂಜೆಯಲ್ಲಿದೆಯೆಂಬುದನ್ನು ತೋರುವ ಈ ಪುಷ್ಪ ತ್ರಿಕಾಲವೂ ಶಿವಯೋಗಿಗಳ ಪಾದಸನ್ನಿಧಿಗೆ ಸಲ್ಲುತ್ತಿದೆ. ಶಿವಯೋಗಿಗಳ ಮಂಟಪದ ಬಲಬದಿಯಲ್ಲಿರುವ ಈ ಕೊನೆ ನೋಡಿ, ಅದುವೇ ಪುಟ್ಟಕದಳಿಯ ಬನ. ಶ್ರೀ ಶೈಲದ ಕದಳಿಯ

ಬನದಲ್ಲಿ ಅಂದು ಎಂಟುನೂರು ವರುಷಗಳ ಹಿಂದೆ ಪರಮ ವೈರಾಗ್ಯ ನಿಧಿ ಅಕ್ಕಮಹಾದೇವಿ, ಪ್ರಭುದೇವರು ಬಯಲಾದ ಕದಳಿಯ ಬನ. ಸುಲಭವಾಗಿ ಹೋಗಲು ಸಾಧ್ಯವಾಗದಷ್ಟು ಘೋರಾರಣ್ಯ ಅದು. ಅಂಥ ಸ್ಥಳದಿಂದ ಆ ಪುಣ್ಯಕ್ಷೇತ್ರದಿಂದ ಈ ಪುಣ್ಯಕ್ಷೇತ್ರಕ್ಕೆ ಈ ಕದಳಿ ಬಂದಿದೆ. ಈ ಇದು ಹತ್ತೆಂಟು ಕದಳಿಗಳ ಪುಟ್ಟಕದಳಿ ಬನ.

ಶ್ರೀಮದಥಣಿ ಶಿವಯೋಗಿಗಳ ಈ ಮಂಟಪದ ಸುತ್ತ ಇರುವ ಈ ತೋಟ, ಈ ಬನದಾಯಿ ಸುಗಂಧವ ಬೀರಿ ತನು ಮನ ಚಿತ್ತವನು ತಣಿಸುತಿಹಳು. ಇಲ್ಲಿಯ ಮಣ್ಣಿನ ಕಣಕಣವೂ ಸುವಾಸನೆ ತಾಳಿದೆ. ಇಲ್ಲಿಯ ಮಣ್ಣು ಪನ್ನೀರಿನ ಸಿಂಚನ ಪಡೆದಿದೆಯೇನೋ ಎನ್ನಿಸುತಿದೆ. ಅಂತಹ ಸುಗಂಧತೆ. ಚಿತ್ತವನ್ನು, ಮನವನ್ನು ಪ್ರಸನ್ನಗೊಳಿಸುತಿಹ - ಸುಗಂಧತೆ, ಎಲ್ಲಿ ನೋಡಿದರೂ ಶಿವಕಳೆಯ, ಚಿದ್ವಿಭೂತಿಯ ತಾಳಿ ನಿಂತಿರುವ ಬಿಲ್ವಪತ್ರಿ.

ಶ್ರೀ ಶಿವಯೋಗಿಗಳ ಮಹಾಮಂಟಪ. ಮಂಟಪದ ಸುತ್ತಲೂ ಇರುವ ಚೆಲುವಾದ ತೋಟ. ತೋಟದ ಸುತ್ತಲೂ ಇರುವ ಅರವತ್ತು ಮೂರು ಪುರಾತನರ ಪುಣ್ಯನಾಮ ಹೊತ್ತು ನಿಂತಿರುವ ಅರುವತ್ತು ಮೂರು ಕೋಣೆಗಳು. ಅವುಗಳ ಮೇಲೆ ಮತ್ತೆ ಅರವತ್ತು ಮೂರು ಕೋಣೆಗಳು. ಒಂದನೂರ ಇಪ್ಪತ್ತಾರು ಕೋಣೆಗಳಲ್ಲಿ ಐದು ನೂರು ವಿದ್ಯಾರ್ಥಿಗಳು, ರಾಷ್ಟ್ರದ ಭವಿಷ್ಯತ್ತಿನ ಆಶೋತ್ತರಗಳನ್ನು ಪೂರ್ಣಗೊಳಿಸಲಿರುವ ಆಶಾ ಕುಸುಮಗಳು ಅರಳಲೆಂದು ಇಲ್ಲಿ ವಾಸಿಸುತ್ತಿವೆ - ಪರಮ ಗುರುವಿನ ಕೃಪಾ ರಕ್ಷೆಯಲಿ.

ಈ ವಿದ್ಯಾರ್ಥಿಗಳಲ್ಲಿ ತತ್ತ್ವಜ್ಞಾನದ, ಕನ್ನಡದ, ಸಂಸ್ಕೃತದ, ಹಿಂದಿಯ, ಸಮಾಜಶಾಸ್ತ್ರದ, ಮಾನವ ಶಾಸ್ತ್ರದ, ಮನಶ್ಶಾಸ್ತ್ರದ, ಸಾಹಿತ್ಯದ, ವಿಜ್ಞಾನದ, ಕೃಷಿ ವಿಜ್ಞಾನದ, ಸಂಖ್ಯಾಶಾಸ್ತ್ರದ, ಅರ್ಥಶಾಸ್ತ್ರದ, ರಾಜ್ಯಶಾಸ್ತ್ರದ ಅಭ್ಯಾಸಿಗಳಿದ್ದಾರೆ. ಮಹಾಸ್ವಾಮಿಗಳ ಕರುಣಾಕಟಾಕ್ಷದ ರಕ್ಷಣೆಯಲ್ಲಿ ಬಾಳುತ್ತಿರುವ ಈ ವಿದ್ಯಾರ್ಥಿವೃಂದದ ಪುಣ್ಯ ವಿಶೇಷವೇ ಪುಣ್ಯ ವಿಶೇಷ.

ಇಲ್ಲಿರುವ ನೂರಾರು ವಿದ್ಯಾರ್ಥಿಗಳಿಗೆ ಪ್ರಸಾದ, ವಸತಿಯ ಸೌಕರ್ಯದೊಂದಿಗೆ ಅವರ ಬದುಕನ್ನು ಸಂಸ್ಕಾರಗೊಳಿಸುವ ಕೆಲಸವೂ ನಡೆಯುತ್ತಿದೆ. ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸದಾಚಾರದ ಓಜಸ್ಸನ್ನು, ಸೇವಾಭಾವನೆಯನ್ನು ಇಲ್ಲಿಯ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ಶ್ರೀ ಮುರುಘರಾಜೇಂದ್ರ ಪ್ರಸಾದ ನಿಲಯದಲ್ಲಿ ಈ ಏಳೆಂಟು ದಶಕಗಳಲ್ಲಿ ಪ್ರಸಾದ ಸ್ವೀಕರಿಸಿದ, ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡ ವಿದ್ಯಾರ್ಥಿಗಳು ಹಲವು ಸಾವಿರ. ಸಮಸ್ತಭಾರತ ಹಾಗೂ ಪರದೇಶಗಳಲ್ಲಿ ಇಲ್ಲಿ ವಿದ್ಯಾರ್ಥಿಗಳಾಗಿದ್ದವರು ಹಿರಿದಾದ ಸ್ಥಾನದಲ್ಲಿದ್ದು ಸೇವೆಸಲ್ಲಿಸುತ್ತಿದ್ದಾರೆ.

ಶ್ರೀಮದಥಣಿ ಶಿವಯೋಗಿಯ ಸೇವೆಯಲಿ ಸವೆದ ಭಾವಬುದ್ಧಿಯಲ್ಲಿ ಮಿಂದ ಪುಣ್ಯ- ನಮ್ಮ ಶ್ರೀ ಮೃತ್ಯುಂಜಯ ಅಪ್ಪಗಳದು. ಅರವತ್ತು ಮೂರು ಮಂದಿ ಪುರಾತನರ ನೆರಳಿನಲ್ಲಿ ಸಂಜೆ ಮುಂಜಾವಿನಲಿ ಮಹಾಸ್ವಾಮಿಗಳದು ಪ್ರದಕ್ಷಿಣೆ. ಈ ಪ್ರದಕ್ಷಿಣೆ ಭಕ್ತಿ ಜ್ಞಾನ ವೈರಾಗ್ಯ ಪಥದಲ್ಲಿ ಶ್ರೀಗಳು ನಡೆಯುವ ನಡೆಯಾಯಿತ್ತು. ಶ್ರೀ ಶಿವಯೋಗಿಗಳ, ಬಸವಾದಿ ಪ್ರಮಥರ, ಪುರಾತನರ ಅಸಂಖ್ಯಾತ ಶರಣರಲ್ಲಿ ನಮ್ಮ ಅಪ್ಪಗಳು ತಳೆದಿರುವ ಭಕ್ತಿ, ಇರಿಸಿರುವ ನಂಬಿಕೆ; ಶ್ರದ್ಧೆಗಳ ಹಾಗೂ ಅವರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಭೃತ್ಯಾಚಾರದ ಪ್ರತೀಕವಾಗಿದೆ - ಈ ಪ್ರದಕ್ಷಿಣೆ. ವೈರಾಗ್ಯದ ಪರಮ ಮೂರುತಿಯಾದ ಈ ಕಾಷಾಯಾಂಬರಧಾರಿಯ ಹೆಜ್ಜೆಯ ತುಂಬ ನಕ್ಷತ್ರದ ಬೆಳಕು, ಬರೀ ಬೆಳಕಲ್ಲ ತಿಳಿಬೆಳಕು. ಆ ಬೆಳಕಿನ ಹೆಜ್ಜೆಯನು ಗುರುತಿಸಿ ನಡೆದವರು ಮತ್ತೋರ್ವ ಕಾಷಾಯಾಂಬರಧಾರಿ ಶ್ರೀ ಮಹಾಂತಪ್ಪಗಳು. ಜನ ಸಾಮಾನ್ಯರು ಗುರುತಿಸಲು ಹೆಜ್ಜೆ ಮೂಡಿವರಲ್ಲವೆ ಅಲ್ಲಿ. ಅಲ್ಲಿರುವುದು ಬರೀ ತಿಳಿಬೆಳಕು.

ಶ್ರೀ ಮೃತ್ಯುಂಜಯಪ್ಪಗಳು ಎಂದರೆ ಲೋಕ ಕಲ್ಯಾಣಾರ್ಥವಾಗಿ ಧರೆಗಿಳಿದು ಬಂದ ಪರಮಪುರುಷ. ಶ್ರೀ ಶಿವಯೋಗಿಗಳ ದರ್ಶನ ಪಡೆದು ಪುನೀತರಾಗಿ ಹೊರಗೆ ಬಂದು ಬಲಕ್ಕೆ ತಿರುಗಿದರೆ ಪಕ್ಕದಲ್ಲಿರುವುದೇ 'ಬಸವ ತೀರ್ಥ'. ಅಲ್ಲಿಂದಲೇ ಕಾಣಿಸುವುದು - ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಅಷ್ಟೇ ಅಲ್ಲ ಅಖಿಲ ಭಾರತ ವ್ಯಾಪ್ತಿ ಪಡೆದಿರುವ ಅಖಿಲ ಭಾರತ ಶಿವಾನುಭವ ಸಂಸ್ಥೆಯ ಕೇಂದ್ರ ಕಾರ್ಯಾಲಯ. ಶ್ರೀಗಳ ಪ್ರೇರಣೆಯಿಂದ ನಿರ್ಮಾಣಗೊಂಡು ದೇಶದ ಕಲ್ಯಾಣ ಕಾರ್ಯದಲ್ಲಿ ಮಹೋನ್ನತ ಕಾರ್ಯವೆಸಗುತ್ತಿರುವ ಹಲವಾರು ಸಂಸ್ಥೆಗಳಲ್ಲಿ ಈ ಸಂಸ್ಥೆ ಬಹು ಮುಖ್ಯವಾದುದು. ಈ ಸಂಸ್ಥೆ ಅನುಭಾವ,

ಸಿದ್ಧಾಂತ ಸಾಹಿತ್ಯವನ್ನು ತಿಳಿಗನ್ನಡದಲ್ಲಿ ವಿದ್ವಾಂಸರಿಂದ ಬರೆಯಿಸಿ ಅದೆಷ್ಟೋ ಗ್ರಂಥಗಳನ್ನು ಪ್ರಕಟಿಸಿದೆ. ನಾಡಿನ ಎಲ್ಲ ಸ್ಥಳಗಳಲ್ಲೂ ಶಿವಾನುಭವ ಸಮ್ಮೇಳನಗಳನ್ನು ನಡೆಯಿಸಿ ಶಿವಯೋಗಿಗಳ, ಶರಣರ, ಮಹಾನುಭಾವರ ಸಂದೇಶಗಳನ್ನು ಸಾಮಾನ್ಯ ಜನತೆಯ ಮನದ ಬಾಗಿಲವರೆಗೂ ತಲುಪಿಸಿದೆ. ಶಿವಾನುಭವವನ್ನು ಸದಾ ತಿಳಿಪಡಿಸಲು ಒಂದು ಪ್ರಮುಖ ಸಾಧನವಾಗಿದೆ. ಈ ಸಂಸ್ಥೆಯ ಮುಖಪತ್ರಿಕೆ - "ಸಾವಧಾನ". ಈಗಲೂ ಇದನ್ನು ಶ್ರದ್ಧೆಯಿಂದ ತಮ್ಮ ಇಳಿವಯಸ್ಸಿನಲ್ಲೂ ಸಂಪಾದಿಸುತ್ತಿದ್ದಾರೆ ದರ್ಶನವಿಶಾರದ ಪಂಡಿತ ನಾಗಭೂಷಣ ಶಾಸ್ತ್ರಿಗಳು. ಈ ಕಾರ್ಯಾಲಯದ ಹಿಂದೆ ಇರುವುದು 'ಶ್ರೀ ಜಯದೇವ ಮಂದಿರ' ಅತಿಥಿ ಗೃಹ. ಅಲ್ಲಿಂದ ಈಚೆಗೆ ಹೊಸದಾಗಿ ನಿರ್ಮಾಣಗೊಂಡಿರುವ ಐದು ಕೋಣೆಗಳುಳ್ಳ ಮತ್ತೊಂದು ಅತಿಥಿಗೃಹ. ಮತ್ತೆ ಬಸವತೀರ್ಥದ ಹತ್ತಿರ ಬಂದರೆ ಚಿತ್ರದುರ್ಗದ ಜಗದ್ಗುರು ಮಹಾಸನ್ನಿಧಿ ದಯಮಾಡಿಸಿದಾಗ ವಾಸಿಸುವ ಹಾಗೂ ಹರಗುರು ಚರಮೂರ್ತಿಗಳ ವಾಸಕ್ಕಾಗಿ ನಿರ್ಮಿತಗೊಂಡಿರುವ ಮಂದಿರಗಳು. ಅಲ್ಲಿಂದ ಒಳಗೆ ಬಂದರೆ ಪ್ರಶಾಂತವಾದ ಪ್ರಾಕಾರವುಳ್ಳ ಬಯಲು. ಅದರ ಎದುರಿಗಿರುವುದೇ ಪ್ರಸಾದ ಸ್ವೀಕರಿಸುವ ಸ್ಥಳ. ಅದರೀಚೆಗಿರುವುದೇ ಪ್ರಸಾದ ಸಿದ್ಧಗೊಳಿಸುವ ಸ್ಥಳ. ಒಮ್ಮೆಗೇ ಐದಾರುನೂರು ಜನ ಪ್ರಸಾದ ಸ್ವೀಕರಿಸಬಹುದಾದಂತಹ ವಿಶಾಲವಾದ ಭವನ. ನೂರಾರು ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆ ಸಲ್ಲಿಸುತ್ತ ತುತ್ತಿಗೊಮ್ಮೆ ಶಿವಯೋಗಿಯನ್ನು ಸ್ಮರಿಸುತ್ತ ಪ್ರಸಾದ ಸ್ವೀಕರಿಸುವುದನ್ನು ಇಲ್ಲಿ ನೋಡುವುದೇ ಒಂದು ಪುಣ್ಯ.

ಪ್ರಸಾದ ಭವನದ ಪಕ್ಕದಲ್ಲಿ ಪೂಜ್ಯ ಅಪ್ಪಗಳು ವಿಶ್ರಮಿಸುವ ಸೊಗಸಾದ ಒಂದು ಹಾಲ್. ಸದಾ ಮುಗುಳ್ನಗುತ್ತಲೇ ಇರುವ ಆ ನಗುಮುಖ. ಅಪ್ಪಗಳು ನಕ್ಕಾಗಲೆಲ್ಲ ಬೆಳಕಿನ ಕಿರಣಗಳು ಸುತ್ತಲೂ ಚೆಲ್ಲವರಿದಂತೆ ಆಗುವುದನ್ನು ನೋಡುವುದೂ ಒಂದು ಅಪೂರ್ವ ಭಾಗ್ಯವೆಂದೇ ನಾನು ಭಾವಿಸಿದ್ದೇನೆ. ದರ್ಶನಾರ್ಥಿಗಳಾಗಿ ಬಂದ ಎಲ್ಲರ ಯೋಗಕ್ಷೇಮ ವಿಚಾರಿಸುತ್ತ - "ಹದುಳವೆ, ಶಿವಯೋಗಿ ಉತ್ತರೋತ್ತರ ನಿಮಗೆ ಕಲ್ಯಾಣವನ್ನುಂಟು ಮಾಡಲಿ" ಎಂದು ಹರಸುವುದು ಪೂಜ್ಯ ಅಪ್ಪಗಳ ಮನಸ್ಸು.

ಎದುರಿಗಿರುವ ಪ್ರಾರ್ಥನಾ ಹಾಲ್ ಭವ್ಯವಾದ ಶ್ರೀ ಶಿವಯೋಗಿಗಳ ಬಹುಸುಂದರವಾದ ತೈಲ ಚಿತ್ರದಿಂದ ಸುಶೋಭಿತಗೊಂಡಿದೆ. ಪೂಜ್ಯ ಮಹಾಂತಪ್ಪಗಳು ಶ್ರೀ ಮೃತ್ಯುಂಜಯ ಅಪ್ಪಗಳ ಪಡಿನೆಳಲು. ಅಂದು ಶ್ರೀ ಶಿವಯೋಗಿಗಳಿಗೆ ಶ್ರೀ ಮೃತ್ಯುಂಜಯ ಅಪ್ಪಗಳಿದ್ದಂತೆ ನಮ್ಮ ಕಾಲದಲ್ಲಿ ಶ್ರೀ ಮೃತ್ಯುಂಜಯ ಅಪ್ಪಗಳಿಗೆ ಶ್ರೀ ಮಹಾಂತಪ್ಪಗಳಿದ್ದರು. ಈ ಗುರು ಶಿಷ್ಯರ ಸಂಬಂಧ ಅಪೂರ್ವವಾಗಿತ್ತು.

ಪ್ರಾರ್ಥನಾಮಂಟಪದಲ್ಲಿ ಬೆಳಗಿನ ಐದು ಗಂಟೆಗೆ ಹಾಗೂ ಸಂಜೆ ಏಳುಗಂಟೆಗೆ ಇಲ್ಲಿಯ ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತರಾಗಿರುತ್ತಾರೆ. ಇಲ್ಲಿಯೇ ಎಲ್ಲ ಕಾರ್ಯಕ್ರಮಗಳು ಜರಗುವವು. ವರುಷದ ತುಂಬ ಕಾರ್ಯಕ್ರಮವಿದ್ದೇ ಇರುತ್ತವೆ ಇಲ್ಲಿ. ಅದರಲ್ಲೂ ಶ್ರಾವಣ ಮಾಸ ಇಡೀ ತಿಂಗಳು ಪುರಾಣ ಪ್ರವಚನ, ಕೀರ್ತನೆ, ಉಪನ್ಯಾಸಗಳು, ಸಂಗೀತ ಕಾರ್ಯಕ್ರಮಗಳು. ಶ್ರೀ ಶಿವಯೋಗಿಗಳ ಜಾತ್ರೆಯ ಕಾಲದಲ್ಲೂ ಒಂದು ವಾರಕಾಲ ಸಾಹಿತ್ಯ, ಸಂಗೀತ ಕಾರ್ಯಕ್ರಮಗಳು ನಡೆಯುತ್ತವೆ.

ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳು ತಮ್ಮ ನಡೆನುಡಿಗಳ ಗಡಣದಿಂದ ಅನುಭಾವದ ಆಂತರ್ಯವನ್ನು ಅರುಹಿದವರು. ಧರ್ಮ, ಸಮಾಜ, ಸಾಹಿತ್ಯ, ಸಂಸ್ಕೃತಿ, ಅನುಭಾವ ಕ್ಷೇತ್ರದಲ್ಲಿ ಅಮೋಘವಾದ ರೀತಿಯಲ್ಲಿ ಹೊಸ ಮನ್ವಂತರ ತಂದ ಮಹಾಮಹಿಮರು.

ವೀರಶೈವ ಸಿದ್ಧಾಂತವನ್ನು, ಶರಣರ ವಚನಗಳ ತತ್ತ್ವವನ್ನು ಬದುಕಿಸಿದವರು. ತಮ್ಮ ನಡೆಯಿಂದ ಅವುಗಳಿಗೆ ವ್ಯಾಖ್ಯೆ ಬರೆದ ಮಹಾನುಭಾವರು. ಸಾಮಾಜಿಕರ ಬದುಕಿನಲ್ಲಿ ಚಾರಿತ್ರ್ಯ, ಶೀಲಗಳನ್ನು ಚಿರಸ್ಥಾಯಿಯಾಗಿಸಿದ ಹಿರಿಮೆ ಅವರದು.

ಸರ್ವಾಂಗ ಲಿಂಗಿಗಳಾಗಿದ್ದ ಪೂಜ್ಯ ಅಪ್ಪಗಳು, ಏನೂ ಇಲ್ಲದ ಧಾರವಾಡದ ಶ್ರೀ ಮುರುಘಾಮಠವನ್ನು ಹೊಸದಾಗಿ ಅಭೂತಪೂರ್ವವಾಗಿ ನಿರ್ಮಿಸಿ, ಅದರ ಕೀರ್ತಿ ಕದಲಾಚೆಗೂ ಹಬ್ಬುವಂತೆ ಮಾಡಿದ ಶ್ರೀಗಳು ಧಾರವಾಡ ಜಿಲ್ಲೆಯ ಇಂಗಳಹಳ್ಳಿಯ ಗುರುಲಿಂಗಜಂಗಮ ಪ್ರೇಮಿಗಳಾಗಿದ್ದ ಆಚಾರನಿಷ್ಠರಾಗಿದ್ದ ಸೌ. ಚೆನ್ನವೀರಮ್ಮ ಅವರ ಹಾಗೂ ವೇದ ಮೂರುತಿ ಶ್ರೀಶಾಂತಪ್ಪಯ್ಯ ಅವರ ಮಗುವಾಗಿ ಸಾವಿರದೆಂಟುನೂರ ಎಂಬತ್ತೆಂಟರ ಏಪ್ರಿಲ್‌ದಲ್ಲಿ ಜನಿಸಿದರು. ಕನಸಿನಲ್ಲಿ

ಬಂದು ಆಶೀರ್ವದಿಸಿದ ಶ್ರೀ ತೋಂಟದ ಜಗದ್ಗುರುಗಳಿಗೆ ವಚನಕೊಟ್ಟ ತಾಯಿ ತಂದೆಗಳು ಶ್ರೀಗಳು ಹತ್ತು ವರ್ಷದವರಾದ ತಕ್ಷಣ ಗದುಗಿನ ಶ್ರೀ ತೋಂಟದಾರ್ಯ ಮಠಕ್ಕೆ ಕರೆದೊಯ್ದು ಜಗದ್ಗುರುಗಳಿಗೆ ಒಪ್ಪಿಸಿ ಬಂದರು. ಎಂಥ ನಿರ್ಮೋಹತ್ವ!

ಶ್ರೀ ಮಠದಲ್ಲಿ ಪೂಜ್ಯರು ಸಂಸ್ಕೃತ, ಕನ್ನಡ, ಸಂಗೀತ, ಶಾಸ್ತ್ರ ಅಭ್ಯಾಸ ಮಾಡಿದರು. ಶ್ರೀಮಂತ ಮಠದ ರಾಜ ವೈಭವವು ಮೃತ್ಯುಂಜಯ ಮರಿದೇವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ಅವರನ್ನು ಸದಾ ಕಾಡುತ್ತಿದ್ದುದು ಒಂದೇ ಒಂದು ಯೋಚನೆ. ಅದು ಯೋಗ್ಯ ಗುರುವಿನಲ್ಲಿ ಕೈಂಕರ್ಯ ಕೈಕೊಳ್ಳಬೇಕೆಂಬುದಾಗಿತ್ತು. ಈ ಯೋಚನೆಯಲ್ಲಿ ಇರುವಾಗಲೇ ಗದುಗಿನ ಶ್ರೀಮಂತ ಮಠವನ್ನು ತ್ಯಜಿಸಿ ಗುರುವಿನ ಹುಡುಕಾಟದಲ್ಲಿ ದೇಶ ಸಂಚಾರಿಯಾಗಿ ಹೊರಟರು. ಒಂದು ಶುಭಗಳಿಗೆಯಲ್ಲಿ ಹೀಗೆ ಈ ಯಾತ್ರೆಯಲ್ಲಿ ಒಮ್ಮೆ ಸುಕ್ಷೇತ್ರ ಅಂಕಲಗಿಯ ಅಡವಿ ಮಠಕ್ಕೆ ದಯಮಾಡಿಸಿದರು. ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡುವ ಈ ಎಳೆಯ ಮರಿದೇವರ ಕಂಠ ಮಾಧುರ್ಯಕ್ಕೆ ಅಂಕಲಗಿಯ ತಪೋನಿಧಿ ಶ್ರೀ ಅಡವಿಸ್ವಾಮಿಗಳು ತುಂಬ ಮಾರು ಹೋದರು. ವೀರಶೈವ ತತ್ತ್ವಶಾಸ್ತ್ರಗಳನ್ನು ತಮ್ಮ ಅನುಭಾವದ ಹಿನ್ನೆಲೆಯಲ್ಲಿ ಪೂಜ್ಯರು ಶ್ರೀ ಮೃತ್ಯುಂಜಯ ಮರಿದೇವರಿಗೆ ಬೋಧಿಸಿದರು. ಹೀಗೆ ಬೋಧಿಸುತ್ತ "ದೇವರು, ನಿಮ್ಮ ಮುಂದಿನ ಯೋಜನೆ ಏನು" ಎಂದು ಪೂಜ್ಯರು ಕೇಳಿದಾಗ ಪೂಜ್ಯ ಅಪ್ಪಗಳು, "ಬುದ್ಧಿ ಕಾಶಿಗೆ ಹೋಗಬೇಕೆಂದು ಯೋಚಿಸುತ್ತಿರುವೆ" ಎಂದಾಗ ಶ್ರೀ ಅಡವಿಸ್ವಾಮಿಗಳು "ಹುಚ್ಚಪ್ಪಾ, ಕಾಶಿಯಲ್ಲಿ ಏನಿದೆ? ಅಲ್ಲಿ ಮಾತನಾಡುವ ದೇವರಿಲ್ಲ. ನಿಮ್ಮ ಇಚ್ಛೆ ಏನೆಂಬುದು ನಮಗೆ ತಿಳಿದಿದೆ. ಯೋಗ್ಯ ಗುರುವಿನ ಸೇವೆಗಾಗಿ ಹಂಬಲಿಸುವ ನಿಮ್ಮ ಮನಸ್ಸಿಗೆ ತೃಪ್ತಿ ಸಿಗಬೇಕಾದರೆ ನೀವು ಅಥಣಿಗೆ ಹೋಗಿ. ಅಲ್ಲಿ ನಿಮ್ಮ ಸಕಲ ಇಚ್ಛೆಗಳೂ ಪೂರ್ಣಗೊಳ್ಳುತ್ತವೆ. ಅಲ್ಲಿ ಮಾತನಾಡುವ ದೇವರಿದ್ದಾರೆ. ಅಲ್ಲಿಗೇ ಹೋಗಿ "ಎಂದು ಅಪ್ಪಣೆ ಮಾಡಿದಾಗ ಅಪ್ಪಗಳು ಪೂಜ್ಯರ ಆದೇಶ ಪಡೆದು ಕಾಶಿಗೆ ಹೋಗುವುದನ್ನು ಬಿಟ್ಟು ಶ್ರೀ ಮದಥಣಿಗೆ ದಯಮಾಡಿಸುತ್ತಾರೆ. ಅಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿಗಳ ದರ್ಶನ ಪಡೆದ ಕೂಡಲೇ ಮೃತ್ಯುಂಜಯ ಅಪ್ಪಗಳಿಗೆ- "ಇವರೇ ನಾನು ಹುಡುಕುತ್ತಿದ್ದ ಗುರುಗಳು. ಇಲ್ಲಿಯವರೆಗೂ ನಾನು ಇವರ ಪಾದದರ್ಶನಕ್ಕಾಗಿ ಹಂಬಲಿಸುತ್ತಿದ್ದೆ. ಇವರೇ ನನ್ನ ಸರ್ವಸ್ವ" ಎನ್ನಿಸಿ ಅವರ ಮನಸ್ಸು ಪ್ರಶಾಂತ ಕಡಲಿನಂತೆ ಶಾಂತಿಯನ್ನು ಪಡೆಯುತ್ತದೆ. ಮೃತ್ಯುಂಜಯ ಅಪ್ಪಗಳು ಶಿವಯೋಗಿಗಳಲ್ಲಿ ತಮ್ಮನ್ನು ಸರ್ವಾರ್ಪಣ ಭಾವದಿಂದ ಅರ್ಪಿಸಿಕೊಳ್ಳುತ್ತಾರೆ.

ಶ್ರೀಶಿವಯೋಗಿಗಳ ಸೇವಾಫಲವಾಗಿ ತಾವು ಪಡೆದುದೆಲ್ಲವನ್ನೂ ಶ್ರೀ ಶಿವಯೋಗಿಗಳ ಅಪ್ಪಣೆಯಂತೆ ಏನೂ ಇಲ್ಲದ ಧಾರವಾಡದ ಶ್ರೀ ಮುರುಘಾಮಠಕ್ಕೆ ಬಂದು ಸಮಾಜ ಪುರುಷನಿಗೆ ಧಾರೆಯೆರೆದರು. ಪೂಜ್ಯ ಅಪ್ಪಗಳು ಕಂಡುದೆಲ್ಲ ಪಾವನವಾಯಿತು. ಅವರು ಹೇಳಿದ್ದೆಲ್ಲ ಪರಮಬೋಧನೆಯಾಯಿತು. ಮುಟ್ಟಿದ್ದೆಲ್ಲ ಪರುಷದ ಸೋಂಕಾಯಿತು. ಸುಳಿದ ಸುಳುಹೆಲ್ಲ ಜಗತ್ಪಾವನವಾಯಿತು. ಅವರು ಪಾದವಿಟ್ಟ ನೆಲವೆಲ್ಲ ಅವಿಮುಕ್ತ ಕ್ಷೇತ್ರವಾಯಿತು. ಸೋಂಕಿದ ಜಲವೆಲ್ಲ ಪುಣ್ಯತೀರ್ಥಗಳಾದವು. ಶರಣೆಂದು ಭಕ್ತಿ ಮಾಡಿದವರೆಲ್ಲರೂ ಶಿವಸಾಯುಜ್ಯ ಪಡೆದರು.

ಅರ್ಧಶತಮಾನದವರೆಗೆ ಸಕಲ ಜೀವಾವಳಿಯ ಲೇಸಿಗಾಗಿ ತಮ್ಮ ತಪಸ್ಸನ್ನೆಲ್ಲ ಧಾರೆಯೆರೆದ ಈ ವಿಭೂತಿಪುರುಷ ತಮ್ಮ ಲೋಕದ ಲೀಲೆಗಳನ್ನು ಸಾವಿರದೊಂಬೈನೂರು ಅರವತ್ನಾಲ್ಕರಲ್ಲಿ ಸಮಾಪ್ತಿಗೊಳಿಸಿದರು.

ಕೊಪ್ಪಳ ಗವಿಮಠ : ಪರಂಪರೆ ಮತ್ತು ಕೊಡುಗೆ

ಮಲ್ಲಿಕಾರ್ಜುನ ಹಿರೇಮಠ

ಕೊಪ್ಪಳ ಮೊದಲ ನೋಟಕ್ಕೇ ತನ್ನ ಉತ್ತುಂಗ ಬೆಟ್ಟ, ಕೋಟೆ ಹಾಗೂ ಗವಿಮಠಗಳಿಂದ ನಮ್ಮನ್ನು ಸೆಳೆಯುತ್ತದೆ. ಊರೊಳಗೆ ಪ್ರವೇಶಿಸುತ್ತಿದ್ದಂತೆ ನಿಜಾಮನ ಕಾಲದಲ್ಲಿ ಕಟ್ಟಿದ ಕಮಾನುಗಳು ಎದುರಾಗುತ್ತವೆ. ಇವೆಲ್ಲ ಕೊಪ್ಪಳ ಇತಿಹಾಸದ ಬಗ್ಗೆ ಬಹಳಷ್ಟು ಹೇಳುತ್ತವೆ.

ಕೊಪ್ಪಳಕ್ಕೆ ಬಹು ಪುರಾತನವಾದ ಐತಿಹ್ಯವಿದೆ. ಇಲ್ಲಿಯ ಕಲ್ಲು ಬಂಡೆಗಳು ಇದರ ಪುರಾತನದ ಬಗ್ಗೆ ಹೇಳಿದರೆ, ಇಲ್ಲಿ ಅಶೋಕ ಕೆತ್ತಿಸಿದ 'ಗವಿಮಠ ಶಾಸನ' ಹಾಗೂ 'ಪಾಳಿಗುಂಡ ಶಾಸನ'ಗಳು, ಇದೊಂದು ಪ್ರಾಚೀನ ನಗರವಾಗಿತ್ತು ಎಂಬುದನ್ನು ಸೂಚಿಸುತ್ತವೆ. 'ವಿದಿತ ಮಹಾ ಕೊಪಣನಗರ' 'ತಿರುಳ್ಗನ್ನಡ ನಾಡು' ಎಂದು ಕೊಪ್ಪಳ 'ಕವಿರಾಜ ಮಾರ್ಗ' ದಲ್ಲಿ ವರ್ಣಿಸಲ್ಪಟ್ಟಿದೆ. ಬೌದ್ಧ ಹಾಗೂ ಜೈನ ಕೇಂದ್ರವಾಗಿದ್ದ ಕೊಪ್ಪಳವು ನಂತರ ವೀರಶೈವ ಧರ್ಮದ ಕೇಂದ್ರವಾಯಿತು.

ವೀರಶೈವ ಧರ್ಮ ಮತ್ತು ಸಂಸ್ಕೃತಿಯ ಪುಣ್ಯಕ್ಷೇತ್ರವಾದ ಗವಿಮಠವು ಬೆಟ್ಟದ ಐಸಿರಿಯಲ್ಲಿ ನೆಲೆಗೊಂಡಿದ್ದು ಬಹು ದೂರದಿಂದಲೇ ನೋಡುಗನನ್ನು ಆಕರ್ಷಿಸುತ್ತದೆ. ಈ ಮಠದ ಸೊಗಸಾದ ನೋಟ, ಅದು ಬೀರುವ ದಿವ್ಯ ಪ್ರಭಾವ, ಮಹಿಮೆ ಕುರಿತು ಈ ಭಾಗದ ಹೆಸರಾಂತ ಸಾಹಿತಿ ಡಾ. ಪಂಚಾಕ್ಷರಿ ಹಿರೇಮಠ ಅವರು ೧೯೪೯ ರಲ್ಲಿ ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಬರೆದ ಸುದೀರ್ಘ ಕವಿತೆಯ ಕೆಲ ಸಾಲುಗಳನ್ನು ಇಲ್ಲಿ ಅವಲೋಕಿಸಬಹುದು.

> ಪುಣ್ಯ ಮಠವು ಬೆಟ್ಟದಡಿಯಲಿ ತಾ
> ಗವಿಯುದರದಲಿ ಹಾಯಾಗಿ ಪವಡಿಸಿಪ್ಪುದು
> ಮಠದ ಸುತ್ತಲೂ ನಾಲ್ದೆಸೆಯಲೂ ಗುಡ್ಡದಾ
> ಕೋಟೆ ತಾ ಭದ್ರವಾಗಿ ಕಾಯುತಿರ್ಪುದು
> ಮಠದ ಮುಂಬದಿ ಪವಿತ್ರ ಗವೀಶ-ಕೆರೆ
> ಕಾಲ ಕಾಲಕೆ ನೀರ್ಮುಂಬಿ ಬಾಯಾರ್ದ ಜೀವಿಗಳ ತಣಿಸುತಿಹುದು.
>
> ....
>
> ವಿದ್ಯಾರ್ಥಿಗಳ್ಗೆ ಕಾಮಧೇನು ಕಲ್ಪವೃಕ್ಷವೆನಿಸಿ
> ಮೇಣ್ ಭಕ್ತವೃಂದಕೆ ಮುಕ್ತಿಧಾಮವೆನಿಸಿ
> ಪ್ರತಿದಿನವೂ ಅಸಂಖ್ಯಾತ ಭಕ್ತರ್ಗೆ ತಾ
> ಪ್ರಸಾದಮನಿತ್ತು ಪುಣ್ಯಜೀವಿಗಳನ್ನಾಗಿ ಮಾಡುತಿಹುದು !
> ಪವಿತ್ರ ಮಂಗಲಮಯ ಗವೀಶನಡಿ ತಾ
> ಕೈಲಾಸಮದು ಇರಲ್ಕೆ ಆ ಸಗ್ಗಕ್ಕೇಂ ಕೋಡುಂಟೆ ಪೋ !

ಈ ಪವಿತ್ರ ತಾಣ ಈ ನೆಲದ ಮೇಲೆಯೇ ಕೈಲಾಸವನ್ನು ಸೃಷ್ಟಿಸಿದೆ ಎಂಬ ಕವಿಯ ಭಾವ ಈ ಮಠ ಬೀರಿರುವ ದಿವ್ಯ ಪ್ರಭಾವದ ಬಗ್ಗೆ ಬಹಳಷ್ಟು ಸೂಚಿಸುತ್ತದೆ.

ಕೊಪ್ಪಳಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದ್ದರೆ, ಶ್ರೀ ಗವಿಮಠಕ್ಕೆ ಒಂದು ಸಾವಿರ ವರ್ಷದ ಪರಂಪರೆ ಇದೆ. ಮಠದಲ್ಲಿಯ ಶಿಲಾಶಾಸನವನ್ನು ಆಧರಿಸಿ ಹೇಳುವುದಾದರೆ ಕ್ರಿ.ಶ. ೧೦೮೭ ರಲ್ಲಿಯೇ ಕೊಪ್ಪಳವು ವೀರಶೈವ ಕೇಂದ್ರವಾಗಿದ್ದುದರ ಬಗ್ಗೆ ತಿಳಿದು ಬರುತ್ತದೆ. ಬಸವಾದಿ ಶರಣರಿಗಿಂತ ಪೂರ್ವದಲ್ಲೇ ಉತ್ತರಭಾರತದ ಕಾಶಿಯಿಂದ ಲೋಕ ಸಂಚಾರ ಮಾಡುತ್ತ ಶ್ರೀ ರುದ್ರಮುನಿ ಶಿವಾಚಾರ್ಯರು ಕೊಪ್ಪಳಕ್ಕೆ ಬಂದು, ಗವಿಯಲ್ಲಿ ವಾಸ್ತವ್ಯ ಮಾಡತೊಡಗಿದ ಮೇಲೆ ಈ ಗವಿಯೇ ಗವಿಮಠವಾಯಿತು ಎಂದು ಹೇಳಲಾಗುತ್ತಿದೆ. ಹನ್ನೊಂದನೆಯ ಶತಮಾನದ ಶ್ರೀ ರುದ್ರಮುನಿ ಶಿವಾಚಾರ್ಯರೇ ಈ ಮಠದ ಆದ್ಯ ಪುರುಷರು. ಇಲ್ಲಿಂದಲೇ ಗವಿಮಠದ ಪರಂಪರೆಯ ಆರಂಭ. ಮಠವು ಹೀಗೆ ಗುರುಪರಂಪರೆಯಲ್ಲಿ ಆರಂಭವಾಗಿ ನಂತರ ವಿರಕ್ತ ಮಠವಾಗಿ ಪರಿಣಮಿಸಿದೆ. ಮಸ್ಕಿಯ ಶರಣ ಹೋಳಿಯ ಹಂಪಯ್ಯ ವ್ಯಾಪಾರ ಮಾಡುತ್ತ ಕೊಪ್ಪಳಕ್ಕೆ ಬಂದಾಗ

ಶ್ರೀ ರುದ್ರಮುನಿ ಶಿವಾಚಾರ್ಯರ ದರ್ಶನ ಪಡೆದು ಕ್ರಿ.ಶ. ೧೦೮೬ ರಲ್ಲಿ ಗುಹೆಯ ಮುಂದಿನ ಭಾಗವನ್ನು ಕಟ್ಟಿಸಿದ ಬಗ್ಗೆ ಶಿಲಾಶಾಸನವಿದೆ. ಇದುವರೆಗಿನ ಹದಿನೇಳು ಪೀಠಾಧಿಪತಿಗಳನ್ನು ಇಲ್ಲಿ ಹೆಸರಿಸಬಹುದು :

೧. ಶ್ರೀ ರುದ್ರಮುನಿ ಶಿವಾಚಾರ್ಯರು. ೨. ಶ್ರೀ ಸಂಗನಬಸವ ಚರಮೂರ್ತಿಗಳು. ೩. ಶ್ರೀ ಶಿವಲಿಂಗ ಸ್ವಾಮಿಗಳು. ೪. ಶ್ರೀ ಚೆನ್ನವೀರಸ್ವಾಮಿಗಳು. ೫. ಶ್ರೀ ಕಾಶಿ ಕರಿಬಸವಸ್ವಾಮಿಗಳು. ೬. ಬೂದಿಹಾಳ ಹಿರೇಮಠದ ಸಂಗಯ್ಯನವರ ಮಗ ಶ್ರೀ ಶಿವಲಿಂಗ ಸ್ವಾಮಿಗಳು. ೭. ಶ್ರೀ ಪುಟ್ಟ ಸುಚೆನ್ನವೀರಸ್ವಾಮಿಗಳು. ೮. ಜ. ಚೆನ್ನಮಲ್ಲಿಕಾರ್ಜುನ ಸ್ವಾಮಿಗಳು. ೯. ಜ. ಸಂಗನಬಸವಸ್ವಾಮಿಗಳು. ೧೦. ಚೆನ್ನಬಸವೇಶ್ವರ ಸ್ವಾಮಿಗಳು (ಗವಿಸಿದ್ಧೇಶ್ವರ ಸ್ವಾಮಿಯ ಗುರುಗಳು), ೧೧. ಗುಡದಯ್ಯನವರು (ಇವರೇ ಗವಿಸಿದ್ಧ ಸ್ವಾಮಿಗಳು), ೧೨. ಜ. ಹಿರಿಶಾಂತವೀರಸ್ವಾಮಿಗಳು. ೧೩. ಜ. ಶಿವಶಾಂತವೀರಸ್ವಾಮಿಗಳು. ೧೪. ಶ್ರೀ ಮರಿಶಾಂತವೀರಸ್ವಾಮಿಗಳು. ೧೫. ಜ. ಶಿವಶಾಂತವೀರಸ್ವಾಮಿಗಳು (ಗಡ್ಡದಜ್ಜ ಎಂಬ ಖ್ಯಾತಿ ಉಳ್ಳವರು). ೧೬. ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು. ೧೭. ಈಗಿನ ಸ್ವಾಮಿಗಳು - ಶ್ರೀ ಶಿವಶಾಂತವೀರಮಹಾಸ್ವಾಮಿಗಳು.

ಈ ಎಲ್ಲ ಸ್ವಾಮಿಗಳು ಜನಮನವನ್ನು ತಿದ್ದಲು, ಸಂಸ್ಕರಿಸಲು ಶ್ರಮಿಸಿದ್ದಾರೆ. ತಮ್ಮ ಧ್ಯಾನ, ಜಪ, ತಪಗಳಿಂದ ಹಾಗೂ ಸಮಾಜಕ್ಕಾಗಿ ಅನ್ನದಾನ, ಜ್ಞಾನದಾನ, ಧರ್ಮದಾನ ಕೈಕೊಳ್ಳುವ ಮೂಲಕ ಈ ಮಠವನ್ನು ಪುಣ್ಯಕ್ಷೇತ್ರವನ್ನಾಗಿಸಿದ್ದಾರೆ. ೬೩ ಶಾಖಾ ಮಠಗಳನ್ನೂ ಹೊಂದಿದ ಈ ಮಠಕ್ಕೆ ಒಂದು ಭವ್ಯ ಪರಂಪರೆ ಇದೆ. ಇದೊಂದು ಸಂಸ್ಥಾನ ಪೀಠವಾಗಿದೆ.

ಏಳನೆಯ ಪೀಠಾಧಿಪತಿಗಳಾದ ಶ್ರೀ ಪುಟ್ಟ ಸುಚೆನ್ನವೀರಸ್ವಾಮಿಗಳು ಭಕ್ತರ ಉಪಯೋಗಕ್ಕಾಗಿ ಹಾಗೂ ದನಕರುಗಳಿಗಾಗಿ ಮಠಕ್ಕೆ ಹೊಂದಿ ಕೆರೆಯನ್ನು ಕಟ್ಟಿಸಿದ ಬಗ್ಗೆ ಹಾಗೂ ಬೆಟ್ಟದ ಮೇಲಿನ ಮಠಕ್ಕೆ ಭಕ್ತಾದಿಗಳು ಹೋಗಲು ಪಾವಟಿಗೆಗಳನ್ನು ಮತ್ತು ಮಹಾದ್ವಾರವನ್ನು ನಿರ್ಮಿಸಿದ ಬಗ್ಗೆ ತಿಳಿದು ಬರುತ್ತದೆ.

ಹನ್ನೊಂದನೆಯ ಪೀಠಾಧಿಪತಿಗಳಾದ ಗುಡದಯ್ಯನವರು (ಗವಿಸಿದ್ಧ ಸ್ವಾಮಿಗಳು ಎಂದು ಪ್ರತೀತರಾದವರು) ಬಾಲ್ಯದಲ್ಲೇ ಶಿವಧ್ಯಾನದಲ್ಲಿ ತನ್ಮಯರಾಗಿ ಕೂಡುತ್ತಿದ್ದರು. ದನಗಾಹಿ ಬಾಲಕ ಸತ್ತ ಆಕಳು ಬದುಕಿಸಿದ್ದು, ಕಮ್ಮಾರ ಕಾಯಿಸಿದ ಕಬ್ಬಿಣದ ಇರಸನ್ನು ಕೈಯಲ್ಲಿ ಹಿಡಿದದ್ದು, ಮರಾಠರ ಸತ್ತ ಹುಡುಗನನ್ನು ಬದುಕಿಸಿದ್ದು - ಹೀಗೆ ಅನೇಕ ಪವಾಡಗಳನ್ನು ಮೆರೆದನೆಂದು ಹೇಳಲಾಗುತ್ತದೆ. ಗೌಡರು ಈ ಬಾಲಕನನ್ನು ಚೆನ್ನಬಸವಸ್ವಾಮಿಗಳ ಸನ್ನಿಧಿಗೆ ತಂದೊಪ್ಪಿಸಿದರು. ಗವಿಸಿದ್ಧ ಸ್ವಾಮಿಗಳು ಅನೇಕ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿದ ಮಹಾನುಭಾವರು. ಕುಷ್ಠರೋಗ ಪೀಡಿತನಾಗಿದ್ದ ಕೊಪ್ಪಳದ ಜಹಗೀರದಾರ ಮಿರಾಲಂ ಬಹಾದ್ದೂರನ್ನು ಶ್ರೀಗಳವರ ದರ್ಶನಾಶೀರ್ವಾದ ಪಡೆದು ಆ ಮಠದ ಅಂಬಲಿ ಪ್ರಸಾದ ಸ್ವೀಕರಿಸಿದ ನಂತರ ಗುಣವಾದದ್ದರಿಂದ ಆತ ಮಠದ ದಾಸೋಹಕ್ಕಾಗಿ ಹಿರೇಬಗನಾಳ ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದರ ಬಗ್ಗೆ ಕ್ರಿ.ಶ. ೧೮೦೧ರ ಸನ್ನದು ಇದೆ. ಹೈದ್ರಾಬಾದಿನ ನವಾಬರು ಕೊಪ್ಪಳಕ್ಕೆ ಬಂದ ಕೂಡಲೆ ಗವಿಮಠಕ್ಕೆ ಬಂದು ಮೊದಲು ಶ್ರೀಗಳವರ ದರ್ಶನಾಶೀರ್ವಾದ ಪಡೆದು ಹೋಗುತ್ತಿದ್ದರು.

ಕ್ರಿ.ಶ. ೧೮೯೯ನೇ ಇಸ್ವಿಯಲ್ಲಿ ತಮ್ಮ ಗುರು ಚೆನ್ನಬಸವಸ್ವಾಮಿಗಳು ಲಿಂಗದಲ್ಲಿ ಬೆರೆಯುವ ವಿಷಯ ತಿಳಿದ ಗವಿಸಿದ್ಧ ಸ್ವಾಮಿಗಳು ತಾವೇ ಅವರ ಸಮಾಧಿಯಲ್ಲಿ ಸಮಾಧಿಸ್ಥರಾಗಿ ಕುಳಿತು ಸಜೀವ ಸಮಾಧಿಗೊಂಡರು. ಶ್ರೀ ಗವಿಮಠದ ಪರಂಪರೆಯಲ್ಲಿ ಇವರು ಹನ್ನೊಂದನೆಯವರಾದರೂ ಇವರ ಗದ್ದುಗೆಯನ್ನೇ ಕರ್ತೃ ಗದ್ದುಗೆಯೆಂಬಂತೆ ಭಕ್ತಾದಿಗಳು ಕಾಣುತ್ತ ಬಂದಿದ್ದಾರೆ.

ಹದಿನೈದನೆಯ ಪೀಠಾಧಿಪತಿಗಳಾದ ಗಡ್ಡದಜ್ಜನವರು ಎಂದು ಕರೆಯಲ್ಪಡುತ್ತಿದ್ದ ಜ. ಶಿವಶಾಂತವೀರ ಮಹಾಸ್ವಾಮಿಗಳು ಘನಗಂಭೀರ ವ್ಯಕ್ತಿತ್ವವುಳ್ಳವರು, ವಾಕ್‌ಸಿದ್ಧಿಯುಳ್ಳವರು ಎಂದು ಜನಮನದಲ್ಲಿ ನೆಲೆಗೊಂಡಿದ್ದರು. ಆ ಕಾಲದಲ್ಲಿ ಗುಣಮಟ್ಟದ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿ ಅಲ್ಲಿ ಅನೇಕ ವಿದ್ವಾಂಸರನ್ನು ನೇಮಕ ಮಾಡಿಕೊಂಡಿದ್ದರು. ವೀರಶೈವ ದರ್ಶನವನ್ನು ಸಮರ್ಥವಾಗಿ ಪ್ರತಿಪಾದಿಸಬಲ್ಲ, ಜನಸಾಮಾನ್ಯರಿಗೆ ತಿಳಿಯಗಿ ವಿವರಿಸಬಲ್ಲ ನಮ್ಮ ನಾಡಿನ ಬಹುದೊಡ್ಡ ವಿದ್ವಾಂಸರಾಗಿದ್ದ ಆಸ್ಥಾನ ವಿದ್ವಾನ್ ಪಂ. ವೈ. ನಾಗೇಶಶಾಸ್ತ್ರಿಗಳು ಶ್ರೀ ಗವಿಮಠವು ನೀಡಿದ ಅಪರೂಪದ ಕೊಡುಗೆಗಳಲ್ಲಿ ಒಂದು. ಕೊಪ್ಪಳದ ಬಳಿ ಗೊಂಡಬಾಳಕ್ಕೆ ಜ್ಯೋತಿಷ್ಯ ಕಲಿಯಲು ಹೊರಟಿದ್ದ ನಾಗೇಶ ಶಾಸ್ತ್ರಿಗಳನ್ನು ಸಂಸ್ಕೃತ ಕಲಿತು ಪಂಡಿತನಾಗು ಎಂದು ತಮ್ಮ ಬಳಿಯೇ ಇಟ್ಟುಕೊಂಡು ಸಂಸ್ಕೃತ ವಿದ್ಯಾಭ್ಯಾಸ ಮಾಡಿಸಿದವರು ಜ. ಶಿವಶಾಂತ ವೀರಮಹಾಸ್ವಾಮಿಗಳು. ವೈ. ನಾಗೇಶ ಶಾಸ್ತ್ರಿಗಳು ಶ್ರೀ ಮಠವನ್ನು, ಪೂಜ್ಯ ಶ್ರೀಗಳವರನ್ನು ತಮ್ಮ ಒಂದು ಲೇಖನದಲ್ಲಿ ಮನದುಂಬಿ ನೆನೆದಿದ್ದಾರೆ : "೧೯೧೦ನೇ ಸಂವತ್ಸರದ ಪೂರ್ವದಲ್ಲಿ ಕೊಪ್ಪಳ ಶ್ರೀ ಗವಿಮಠದ ಸಂಸ್ಕೃತ ಪಾಠಶಾಲೆಯಲ್ಲಿ ನಾನು ಅಭ್ಯಾಸ ಮಾಡುತ್ತಿದ್ದೆನು. ಆಗ ಕೊಂಗವಾಡ ಹಿರೇಮಠದ ಪಂ. ವೀರಭದ್ರ ಶಾಸ್ತ್ರಿಗಳು ಅಧ್ಯಾಪಕರಾಗಿದ್ದರು. ಲಿಂ. ಶ್ರೀ ಮ.ನಿ.ಪ್ರ. ಶಿವಶಾಂತವೀರ ಮಹಾಸ್ವಾಮಿಗಳು ಪೀಠಾಧಿಪತಿಗಳಾಗಿದ್ದರು....ಜಾತಿ, ಮತ, ಪಂಥಗಳ ಭೇದವಿಲ್ಲದೆ ಸರ್ವಜನರೂ ಬಂದು ಮಠದ

ಪ್ರಸಾದವನ್ನು ಸ್ವೀಕರಿಸಿ ಗವಿಸಿದ್ಧೇಶ್ವರನ ಅನುಗ್ರಹವನ್ನು ಪಡೆದು ಧನ್ಯರಾಗುತ್ತಿದ್ದರು.....ಶ್ರೀ ಮ.ನಿ.ಪ್ರ. ಶ್ರೀ ಶಿವಶಾಂತವೀರ ಮಹಾಸ್ವಾಮಿಗಳವರು ನನ್ನ ಬಾಳದಾರಿಯ ಬೆಳಕಾಗಿ ಬೆಳಗಿದರು. ನಾನು ಏನಾಗ (ಜ್ಯೋತಿಷಿ) ಬೇಕೆಂದಿದ್ದೆನೋ ಅದನ್ನು ಅಳಿಸಿ, ಹಣೆಯಬರಹವನ್ನೇ ಬದಲಿಸಿ ಈಗಿರುವ ಸ್ಥಿತಿಗೆ ತಂದವರು ಕೊಪ್ಪಳ ಗವಿಮಠದ ಶ್ರೀಗಳವರು. ಶ್ರೀ ಗವಿಮಠದ ಕೃಪೆ ನನ್ನ ಮೇಲೆ ತುಂಬ ಇದೆ."

ನಮ್ಮ ಈ ಕಾಲದಲ್ಲಿ ಗವಿಮಠದ ಕಾರ್ಯಕ್ಷೇತ್ರವನ್ನು ಇನ್ನೂ ವಿಸ್ತರಿಸಿದವರು ಈ ಹಿಂದಿನ (೧೮ನೆಯ ಪೀಠಾಧಿಕಾರಿಗಳಾದ) ಲಿಂ. ಶ್ರೀ ನಿ. ಜ.ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು. ೧೯೨೨ ರಲ್ಲಿ ೧೮ನೆಯ ಪೀಠಾಧಿಕಾರಿಯಾದ ಶ್ರೀಗಳವರು ೧೯೭೭ರವರೆಗೆ ಸುಮಾರು ೫೫ ವರ್ಷಗಳ ಕಾಲ ತಮ್ಮ ವಿದ್ವತ್ತು, ತಪಸ್ಸು ಹಾಗೂ ಕರ್ತೃತ್ವಶಕ್ತಿಯಿಂದ ಮಠದ ಘನತೆಯನ್ನು ಹೆಚ್ಚಿಸಿದರು.

ಶ್ರೀಗಳವರು ತಮ್ಮ ನೈತಿಕ ಆಚರಣೆ, ಬ್ರಹ್ಮಚರ್ಯೆ, ಜಪ ತಪಗಳಿಂದ ಪರಮಯೋಗಿಯಾಗಿದ್ದರು. ಅವರು ಸ್ವತಃ ವಿದ್ವಾಂಸರಾಗಿ ವಿದ್ಯಾ ಪ್ರೇಮಿಯಾಗಿದ್ದರು. ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ ಭಾಷೆಗಳನ್ನು ಬಲ್ಲ ಶ್ರೀಗಳು ಆಯಾ ಭಾಷೆಗಳ ಉತ್ತಮ ಗ್ರಂಥಗಳ ಭಂಡಾರವನ್ನು ಹೊಂದಿದ್ದರು. ಸಂಸ್ಕೃತ ಹಾಗೂ ವಚನ ಸಾಹಿತ್ಯವನ್ನು ಆಳವಾಗಿ ಬಲ್ಲವರಾಗಿದ್ದರು. ಪಂ. ನಾಗಭೂಷಣ ಶಾಸ್ತ್ರಿಗಳು ಶ್ರೀಗಳವರ ಕೃಪಾರಕ್ಷೆ ಪಡೆದು ಕಾಶಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೋದರು. ಅವರು ತಾವು ಒಮ್ಮೆ ಭೇಟಿಯಾಗಲು ಹೋದಾಗ ಶಿವಾದ್ವೈತ ಮಂಜರಿಯನ್ನು ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ತಮ್ಮೊಂದಿಗೆ ಅದನ್ನು ಚರ್ಚಿಸುತ್ತ ನಿಖರವಾಗಿ ವಿಮರ್ಶಿಸುವಾಗ ಅವರ ತರ್ಕ ಹಾಗೂ ಪಾಂಡಿತ್ಯದಿಂದ ತಾವು ಬೆರಗಾದ ಬಗ್ಗೆ ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ತರ್ಕ, ನ್ಯಾಯ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಬಲ್ಲಿದರಾದ ಶ್ರೀಗಳವರು ಕುಶಾಗ್ರಮತಿಗಳಾಗಿದ್ದರು. ಬನವಾಸಿ ಮಧುಕೇಶ್ವರ ಶಿವಲಿಂಗವನ್ನು ಮುಟ್ಟಲು, ಪೂಜಿಸಲು ವೀರಶೈವರು ಅನರ್ಹರು ಎಂಬ ವ್ಯಾಜ್ಯ ಕೋರ್ಟಿನಲ್ಲಿ ನಡೆದಾಗ ಶ್ರೀಗಳವರು ತಮ್ಮ ಪಾಂಡಿತ್ಯ ಹಾಗೂ ವಾಕ್ಪಟುತ್ವದಿಂದ ಅವರು ಹೇಗೆ ಅರ್ಹರು ಎಂಬುದನ್ನು ಸಾಬೀತುಗೊಳಿಸಿದವರು. ಹಾಗೆಯೇ ಪರಳಿಯ ವೈಜನಾಥ ದೇವಸ್ಥಾನದ ವ್ಯಾಜ್ಯದಲ್ಲಿಯೂ ಮಹತ್ವದ ಪಾತ್ರವಹಿಸಿದ್ದರು.

ಶ್ರೀಗಳವರು ಚರಕ ಸಂಹಿತೆ ಮೊದಲಾದ ಆಯುರ್ವೇದ ಶಾಸ್ತ್ರಗಳಲ್ಲಿ ಬಲ್ಲಿದರಾಗಿದ್ದರು. ಆಯುರ್ವೇದದಲ್ಲಿ ವಿವಿಧ ಪ್ರಯೋಗಗಳನ್ನು ಮಾಡುತ್ತ ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಿ ಗುಣಪಡಿಸಿದ್ದರು. ತಾವೇ ಅನೇಕರಿಗೆ ಆಯುರ್ವೇದ ಬೋಧನೆ, ತರಬೇತಿ ನೀಡಿ, ವೈದ್ಯರ ತಂಡವನ್ನೇ ನಿರ್ಮಾಣ ಮಾಡಿ, ಸುತ್ತಲಿನ ಹಳ್ಳಿಗಳಲ್ಲಿ ರೋಗಿಗಳ ಸೇವೆ ಶುಶ್ರೂಷೆಗೆ ಅಣಿಗೊಳಿಸಿದರು. ತಮ್ಮ ದರ್ಶನಕ್ಕೆ ಬಂದ ಭಕ್ತರ ಜೊತೆಗೆ ಆಯುರಾರೋಗ್ಯದ ಬಗ್ಗೆ ಚರ್ಚಿಸುತ್ತ ಸರಳ ಸಾತ್ವಿಕ ಮಾರ್ಗೋಪಾಯಗಳನ್ನು ಸೂಚಿಸುತ್ತಿದ್ದರು. ಶ್ರೀಗಳು ಭಕ್ತರ ಉದ್ಧಾರಕ್ಕಾಗಿ, ಲೋಕ ಕಲ್ಯಾಣಕ್ಕಾಗಿ ತಮ್ಮ ಆಯುರ್ವೇದ ವಿದ್ಯೆಯನ್ನು ಉಪಯೋಗಿಸುತ್ತಿದ್ದ ಬಗ್ಗೆ ಪಂ. ಅಮರನಾಥ ಶಾಸ್ತ್ರಿಗಳು ನೆನೆಯುತ್ತಾರೆ. "ನಮ್ಮೂರಿನ ತಿಮ್ಮಪ್ಪ ಮಾಳೇಕೊಪ್ಪ ಎನ್ನುವವನಿಗೆ ಪುಪ್ಪುಸ ಕ್ಷಯವಾಗಿ ಯಾವ ಡಾಕ್ಟರರಿಂದಲೂ ಗುಣವಾಗದೆ ಮರಣೋನ್ಮುಖವಾಗಿದ್ದನು. ಕೊನೆಗೆ ಆತನನ್ನು ಶ್ರೀಗಳ ಸನ್ನಿಧಿಯಲ್ಲಿ ತಂದು ಹಾಕಲಾಯಿತು. ಶ್ರೀಗಳು ಕೊಟ್ಟ ಔಷಧ ಮತ್ತು ಮಠದ ಅಂಬಲಿ ಪ್ರಸಾದ ಇವುಗಳಿಂದ ಮೂರು ತಿಂಗಳಲ್ಲಿ ಆತನು ನಿರೋಗಿಯಾಗಿ ಸದೃಢಕಾಯನಾದ...ಹೀಗೆ ಶ್ರೀಗಳಿಂದ ಗುಣಮುಖರಾದ ಜನರು ಮಠಕ್ಕೆ ನಡಕೊಳ್ಳುತ್ತಿರುವವರು ಅನೇಕ. ಅವರ ಪವಾಡಗಳು ಅಸದಳ".

ಶ್ರೀಗಳವರು ಗುರು - ವಿರಕ್ತ ಭೇದವನ್ನು ತೊಡೆಯಲು ಶ್ರಮಿಸಿದರು. ಸ್ವತಃ, ತಾವು ವಿರಕ್ತಾಶ್ರಮಕ್ಕೆ ಸೇರಿದ್ದರೂ ಅನೇಕ ಪಟ್ಟಾಧಿಕಾರಿ ಮರಿಗಳಿಗೆ ಆಶ್ರಯ ಕೊಟ್ಟಿದ್ದರು. ಅವರಿಗೆ ತಾವೇ ಪಾಠ ಹೇಳಿಕೊಡುತ್ತಿದ್ದರು. ಶ್ರೀಗಳವರು ತಮ್ಮ ಸರಳ ನೇರ ನಡೆ ನುಡಿಗಳಿಂದ ಸಾತ್ವಿಕ ನಿರಾಡಂಬರ ಬದುಕಿನಿಂದ ಮಾದರಿಯಾಗಿದ್ದರು. ಕಾಶಿಯಲ್ಲಿ ಇವರು ವಿದ್ಯಾರ್ಥಿಯಾಗಿರುವಾಗ ಕೂಡ ಈ ಗುರು ವಿರಕ್ತ ಜಗಳಗಳು ನಡೆದಾಗ ಸಂತೈಸುತ್ತ ಸಮಭಾವ ತೋರುತ್ತಿದ್ದರೆಂದು ಸಹಪಾಠಿ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು ನೆನಪಿಸಿಕೊಂಡು ಹೇಳುತ್ತಾರೆ. ಇಂತಹ ಕಲಹದಿಂದ ಶ್ರೀಗಳವರು ಬಹಳ ನೊಂದುಕೊಳ್ಳುತ್ತಿದ್ದರು. ಲಿಂಗಧಾರಿಗಳ ಪೂರ್ವಾಶ್ರಮದ ಬಗ್ಗೆ ಕೂಡ ಮಾತನಾಡುವುದು ಶರಣಧರ್ಮಕ್ಕೆ ವಿರುದ್ಧವಾದುದು ಎಂಬ ನಿಲುವು ಅವರದಾಗಿತ್ತು.

ಶ್ರೀಗಳವರು ಶೈಕ್ಷಣಿಕವಾಗಿ ಹಿಂದುಳಿದ ಹೈದ್ರಾಬಾದ ಕರ್ನಾಟಕದ ಈ ಪ್ರದೇಶದಲ್ಲಿ ಆಧುನಿಕ ವಿದ್ಯಾಭ್ಯಾಸಕ್ಕೆ ಅವಕಾಶಗಳನ್ನು ತೆರೆದರು. ಸಂಸ್ಕೃತ ಶಾಲೆಯನ್ನು ನಡೆಯಿಸಿಕೊಂಡು ಬರುತ್ತಿರುವುದರೊಂದಿಗೆ ಪ್ರಾಥಮಿಕ ಶಾಲೆ, ಹೈಸ್ಕೂಲುಗಳನ್ನು ಆರಂಭಿಸಿದರು. ೧೯೫೧ ರಲ್ಲಿ ಶಿಕ್ಷಣ ಸಂಸ್ಥೆಗಳು ಆರಂಭಗೊಂಡವು. ತಮ್ಮ ಮಠದ ನಾಲ್ಕುನೂರು ಎಕರೆ ಜಮೀನನ್ನು ನೀಡಿ ಶ್ರೀ ಗವಿಸಿದ್ಧೇಶ್ವರ ಶಿಕ್ಷಣ ವಿಶ್ವಸ್ಥ ನಿಧಿ ಸ್ಥಾಪಿಸಿ, ಆ ಮೂಲಕ ಶ್ರೀ ಗವಿಸಿದ್ಧೇಶ್ವರ ಕಲಾ ವಿಜ್ಞಾನ ಮಹಾವಿದ್ಯಾಲಯ

ಪ್ರಾರಂಭಿಸಿದರು. ತಾವು ಪ್ರವಾಸ ಕಾಲದಲ್ಲಿದ್ದಾಗ ಅನೇಕರ ಮಕ್ಕಳನ್ನು ಪ್ರೋತ್ಸಾಹಿಸಿ ತಮ್ಮಲ್ಲಿಗೆ ಕರೆದುಕೊಂಡು ಬಂದು ಪ್ರಸಾದ ವ್ಯವಸ್ಥೆ ಮಾಡಿ ವಿದ್ಯಾರ್ಜನೆಗೆ ತೊಡಗಿಸಿದರು. ತಮ್ಮ ಪ್ರಸಾದ ನಿಲಯದಲ್ಲಿ ಎಲ್ಲ ಜಾತಿ ವರ್ಗಗಳ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶ ಮಾಡಿಕೊಟ್ಟಿದ್ದರು. ಸುಮಾರು ಇನ್ನೂರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಪ್ರತಿವರ್ಷ ಅವರ ಪ್ರಸಾದ ನಿಲಯದಲ್ಲಿ ಪ್ರಸಾದ ಸ್ವೀಕರಿಸುತ್ತ ಬಂದಿದ್ದಾರೆ. ಉಚಿತ ಪ್ರಸಾದ ನಿಲಯ, ವಸತಿ ವ್ಯವಸ್ಥೆಗಳಿಂದಾಗಿ ಸಾವಿರಾರು ಬಡ ತರುಣರು ಸುಶಿಕ್ಷಿತರಾದರು.

ಗವಿಮಠದ ದಾಸೋಹ ವಿದ್ಯಾರ್ಥಿಗಳಿಗಾಗಿ ಮಾತ್ರ ತೆರೆದಿರುವುದಿಲ್ಲ. ಎಲ್ಲ ಬಡ ಬಗ್ಗರು, ದಾರಿ ಹೋಕರು, ದೀನ ದಲಿತರು ಎಂದರೆ ಹಸಿದು ಬಂದ ಎಲ್ಲರೂ ದಿನಂಪ್ರತಿ ಅಂಬಲಿ, ಸಾರು ಪ್ರಸಾದ ಪಡೆಯುತ್ತಲೇ ಇರುತ್ತಾರೆ. ನಾನು ಧಾರವಾಡದ ಮುರುಘಾ ಮಠದ ಪ್ರಸಾದ ನಿಲಯದಲ್ಲಿದ್ದು ಓದುತ್ತಿದ್ದಾಗ ಒಮ್ಮೆ ಶ್ರೀಗಳವರ ದರ್ಶನಕ್ಕೆ ಹೋದ ಪ್ರಸಂಗ ನೆನಪಾಗುತ್ತದೆ. ಶ್ರೀಗಳವರು ಎಂದಿನಂತೆ ತಮ್ಮ ಸಮಯ ವ್ಯರ್ಥ ಕಳೆಯದೆ ಅಧ್ಯಯನದಲ್ಲಿ ನಿರತರಾಗಿದ್ದರು. ನಾನು ಸಂಸ್ಕೃತವನ್ನು ಒಂದು ವಿಷಯವಾಗಿ ಕಾಲೇಜಿನಲ್ಲಿ ಓದುತ್ತಿರುವುದನ್ನು ತಿಳಿದ ಶ್ರೀಗಳು ತಮ್ಮ ಕೈಯಲ್ಲಿಯ ಸಂಸ್ಕೃತ ಗ್ರಂಥವನ್ನು ಕೊಟ್ಟು, ಒಂದು ಪುಟ ಓದಿಸಿದರು. ಅದರ ಅರ್ಥವನ್ನು ತಾವೇ ವಿವರಿಸಿದರು. ಬಳಿಕ ಶ್ರೀ ಮುರುಘಾಮಠದ ಪ್ರಸಾದ ವ್ಯವಸ್ಥೆಯ ಬಗ್ಗೆ ಕೇಳಿ ತಿಳಿಯುತ್ತಾ "ನಮ್ಮದು ಎಲ್ಲರಿಗೂ ಅಂಬಲಿ ಪ್ರಸಾದ ಅಷ್ಟೇ ನೋಡಪಾ" ಅಂದರು. ನನ್ನಂಥ ಬಿಚ್ಚು ಹುಡುಗನ ಜೊತೆ ಕೂಡ ಸರಳವಾಗಿ, ಸಹಜವಾಗಿ ಮಂಗಲಕರ ಮಾತುಗಳನ್ನಾಡಿ ಆಶೀರ್ವದಿಸಿ ಕಳಿಸಿದ್ದು ನಾನು ಮರೆಯುವಂತಿಲ್ಲ. ದಾಸೋಹದ ಅಡಿಗೆಮನೆಗೆ ಹೋದರೆ ಸದಾ ಕುದಿಯುತ್ತಿರುವ ಅಂಬಲಿ ಸಾರು ಇದ್ದೇ ಇರುತ್ತದೆ. ಯಾವ ಭೇದ ಇಲ್ಲದೆ ಎಲ್ಲರಿಗೂ ಇದೇ ಅಂಬಲಿ ಪ್ರಸಾದ ಯಾವತ್ತೂ ಸಿಗುತ್ತದೆ. ಹೀಗೆ ಇಲ್ಲಿ ದಾಸೋಹ ಎಲ್ಲರಿಗೂ ತೆರೆದ ಬಾಗಿಲು. ಸಮಾನತೆಯ ಹರಿಕಾರರಾಗಿದ್ದ ಶ್ರೀಗಳು ಅನೇಕರ ಬಾಳಿನಲ್ಲಿ ಹೊಸ ಭರವಸೆಗಳನ್ನು ನಂಬಿಕೆಗಳನ್ನು ಉಂಟುಮಾಡಿದರು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣರಾಗಿದ್ದರು. ಗವಿಮಠ ಈ ಭಾಗದಲ್ಲಿ ಬಹುದೊಡ್ಡ ಪಾತ್ರವಹಿಸಿದೆ. ಜನಮನವನ್ನು ತಿದ್ದುವಲ್ಲಿ, ಬದುಕಿನಲ್ಲಿ ಹತಾಶೆಗೊಂಡ ಜನರಿಗೆ ಹೊಸ ಆಸೆಗಳನ್ನು ಉಂಟುಮಾಡುವಲ್ಲಿ, ಪಂಡಿತರಿಂದ ಪಾಮರರವರೆಗೆ ಶ್ರೀಮಠ ಆಶ್ರಯಸ್ಥಾನವಾಗಿದೆ.

ಶ್ರೀ ಗವಿಮಠದ ಕೃಪಾಛತ್ರದಲ್ಲಿ ಬಂದ ಪೂಜ್ಯ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳ ಅನುಗ್ರಹ ಪಡೆದ ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಶ್ರೀಗಳ ಅಸೀಮ ಸಿದ್ಧಿಯನ್ನು ನೆನೆಯುತ್ತ "ದಯೆಯ ನಲ್ಬರಿಗೆ, ತಪದ ಬಾಂದೊರೆಗೆ ಸಮನಿ ಅರುವಿನೀ ದೊರೆಗೆ" ಎಂದು ತಮ್ಮ ಭಕ್ತಿ ಗೌರವಗಳನ್ನು ಸಲ್ಲಿಸಿದ್ದಾರೆ. ಡಾ. ದೇವೇಂದ್ರಕುಮಾರ ಹಕಾರಿ -

"ನಮ್ಮ ಹೃದಯದ ಗವಿಯ ಮುತ್ತಿರುವ ಕತ್ತಲೆಗೆ
ನಿನ್ನ ಕರುಣೆಯ ಬೆಳಗು !
ನಿನ್ನ ಮಂಗಲದ ಮೊಳಗು !"

ಎಂದು ಹಾಡಿದ್ದಾರೆ.

ಶ್ರೀ ಗವಿಮಠದಲ್ಲಿ ಹಾಗೂ ಪೂಜ್ಯ ಮರಿಶಾಂತವೀರ ಮಹಾಸ್ವಾಮಿಗಳವರಲ್ಲಿ ಅನನ್ಯ ಭಕ್ತಿ ಇಟ್ಟುಕೊಂಡು ಅವರ ನಾಮಸ್ಮರಣೆ ಮಾಡುತ್ತಲೇ ಮೈಮರೆಯುತ್ತಿದ್ದ ಚಿಕ್ಕೇನಕೊಪ್ಪದ ಶರಣರು ತಮ್ಮ ಗುರುಗಳ ಮಹಿಮೆಯನ್ನು ತಮ್ಮ ಸಂಚಾರದಲ್ಲಿ ಬೀರುತ್ತಿದ್ದರು. ಈ ಶರಣರು ಕೂಡ ಭಕ್ತರಿಗೆ ಮಹಿಮಾಪುರುಷರಾಗಿದ್ದರೆಂಬುದನ್ನು ಮರೆಯುವಂತಿಲ್ಲ.

೧೯೭೨ ರಲ್ಲಿ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಹದಿನೇಳನೆಯ ಪೀಠಾಧಿಪತಿಗಳಾಗಿ ಶ್ರೀ ಶಿವಶಾಂತವೀರ ಸ್ವಾಮಿಗಳು ತಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆದಿದ್ದಾರೆ. ಈ ಶ್ರೀಗಳವರು ಯಾವ ಸದ್ದುಗದ್ದಲವಿಲ್ಲದೆ ಮೌನಯೋಗಿಗಳಾಗಿ ತಮ್ಮ ಧ್ಯಾನ, ಜಪ ತಪಗಳಿಂದ ಹಾಗೂ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಯೋಜನೆಗಳ ಅನುಷ್ಠಾನದಿಂದ ಜನ ಮನದಲ್ಲಿ ನೆಲೆಸಿದ್ದಾರೆ. ರಥೋತ್ಸವ ಸಂದರ್ಭದಲ್ಲಿ ಅನೇಕ ವಿದ್ವಜ್ಜನರ ಉಪನ್ಯಾಸ, ಸಂಗೀತ ಮೊದಲಾದ ಕಾರ್ಯಕ್ರಮಗಳನ್ನು ನೆರವೇರಿಸುತ್ತಿದ್ದಾರೆ. ೧೯೭೭ ರಲ್ಲಿ ತಮ್ಮ ಗುರುಗಳ ಸ್ಮರಣೆಗಾಗಿ 'ಗವಿ ದೀಪ್ತಿ' ಎಂಬ ಹೆದ್ದೊತ್ತಿಗೆಯನ್ನು ವಿದ್ವಜ್ಜನರಿಂದ ಸಂಪಾದಿಸಿ ಹೊರ ತಂದಿದ್ದಾರೆ. ಇದು ಕೊಪ್ಪಳ ಹಾಗೂ ಗವಿಮಠದ ಐತಿಹಾಸಿಕ ದಾಖಲೆಗಳನ್ನು ಒಂದೆಡೆ ಕೊಡುತ್ತ ಈ ಭಾಗದ ಇತಿಹಾಸ ಮತ್ತು ಸಂಸ್ಕೃತಿಗೆ ಒಂದು ವಿಶಿಷ್ಟ ಕೊಡುಗೆಯಾಗಿದೆ.

ಸಾವಿರ ವರ್ಷಗಳ ಪರಂಪರೆ ಇರುವ ಗವಿಮಠ ಕರ್ನಾಟಕದ ಪುಣ್ಯಕ್ಷೇತ್ರಗಳಲ್ಲೊಂದಾಗಿ ಈ ನಾಡಿನ ಚರಿತ್ರೆಯನ್ನು ರೂಪಿಸುವಲ್ಲಿ ತನ್ನ ಗಣನೀಯ ಪಾಲು ಸಲ್ಲಿಸಿದೆ. ಶ್ರೀ ಗವಿಮಠ ಅನ್ನದಾಸೋಹಕ್ಕೆ ಹೆಸರಾದಂತೆ ಧರ್ಮ, ಶಿಕ್ಷಣ ಹಾಗೂ ಸಂಸ್ಕೃತಿಯ ಕೇಂದ್ರವಾಗಿ ಈ ಭಾಗದ ಜನತೆಗೆ ಚೈತನ್ಯದ ನೆಲೆಯಾಗಿದೆ.

ಬೆಳಗಾವಿಯ ಶ್ರೀನಾಗನೂರು ಮಠದ ಕೊಡುಗೆ

ಡಾ॥ ಚನ್ನಕ್ಕ ಪಾವಟೆ

ಕರ್ನಾಟಕದ ಗಂಡುಮೆಟ್ಟಿನ ಸ್ಥಳ. ಸಾಂಸ್ಕೃತಿಕ ರಾಜಧಾನಿಯೆನಿಸಿದುದು ಬೆಳಗಾವಿ ಜಿಲ್ಲೆ. ಧರ್ಮ, ತ್ಯಾಗ, ಮಾನವೀಯತೆಗೆ ಹೆಸರಾದುದು. ಕರ್ನಾಟಕದ ಹೃದಯದೇಗುಲ. ಕರ್ನಾಟಕದ ಉತ್ತರದಿಕ್ಕಿನ ಬಾಗಿಲು. ಕರ್ನಾಟಕ ಮಹಾರಾಷ್ಟ್ರಗಳೆಂಬ ವಿಶಾಲರಾಜ್ಯಗಳಿಗೆ ಬೆಳಗಾವಿಯ ಶಿವಬಸವ ಪ್ರಸಾದ ನಿಲಯ ಕೂಡಲಸಂಗಮಕ್ಷೇತ್ರವೆನಿಸಿದೆ. ಉತ್ತರ ಕರ್ನಾಟಕದಲ್ಲಿ ಜ್ಞಾನದೀವಿಗೆಯನ್ನು ಬೆಳಗಿದ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆ ನೆಲೆನಿಂತ ಪ್ರದೇಶವಿದು.'ಪ್ರಕೃತಿಯೆ ಗುರು, ಗಗನವೆ ಲಿಂಗ, ಜಗವೇ ಕೂಡಲಸಂಗಮ' ಕವಿವಾಣಿಯನ್ನು ಚಿರವಾಗಿ ಉಳಿಸುವ ಪರಿಸರ, ಶಿವಬಸವ ಸ್ವಾಮಿಗಳಂತಹ ಕಾಮಧೇನು ಕಲ್ಪವೃಕ್ಷಗಳ ನೆನಪು ಮೆರೆಸುವ ದಿವ್ಯಸನ್ನಿಧಾನ. ವ್ಯಕ್ತಿಯಾಗಿ ಹುಟ್ಟಿ, ಪ್ರಸಾದ ತತ್ವವಾಗಿ ಬೆಳೆದು, ದಾಸೋಹಕ್ರಿಯೆಯಾಗಿ, ನಿತ್ಯ ನಿರಂಜನಜ್ಯೋತಿಯಾಗಿ ಬೆಳಗುವಲ್ಲಿ ಮಾನವನ ಹುಟ್ಟಿನ ಸಾರ್ಥಕತೆ. ಶಿವಬಸವ ಸ್ವಾಮಿಗಳು ಇಂತಹ ಸಾತ್ವಿಕ ಪ್ರಸಾದತತ್ವದ ಸೂತ್ರರೂಪರು : 'ತನುವಿನೊಳು ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ, ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಪರಶಿವಮೂರ್ತಿ, ಪರಮ ನಿರಂಜನಮೂರ್ತಿಯಾಗಿದ್ದರು ಶಿವಬಸವ ಮಹಾಸನ್ನಿಧಿಯವರು.

ಪೂಜ್ಯ ಶಿವಬಸವಸ್ವಾಮಿಗಳವರ ಮೂಲಕ್ಷೇತ್ರ ನಾಗನೂರು. ನಾಗನೂರಿನ ರುದ್ರಾಕ್ಷಿಮಠ ಅವರ ಕಾರ್ಯರಂಗ. ವೀರಶೈವವನ್ನುದ್ಧರಿಸಲು ಅವತರಿಸಿದ ಹಾನಗಲ್ಲ ಕುಮಾರ ಶಿವಯೋಗಿಗಳ ಕರಕಮಲ ಸಂಜಾತರು. ಪ್ರಸಾದತತ್ವಕ್ಕೆ ಮನ್ನಣೆ ದೊರಕಿಸಿಕೊಟ್ಟ ದಿವ್ಯಚೇತನ. ಜಾತಿ, ಮತ, ಪಂಥ, ಪ್ರದೇಶಗಳ ಭೇದವನ್ನೆಣಿಸದೆ ಬಡವರ ದೀನದಲಿತರ ಗ್ರಾಮೀಣ ಜನತೆಯ ಏಳ್ಗೆಗಾಗಿ ಮನ ತೆಯ್ದ ಪುಣ್ಯನಿಧಾನ. ಅಮಿತವಾದ ಆಧ್ಯಾತ್ಮಶಕ್ತಿಯನ್ನು ಲೋಕಕಲ್ಯಾಣಕ್ಕಾಗಿ ಬಳಸಿದ ಮಹಾಸನ್ನಿಧಾನ. ಬಸವಾದಿ ಪ್ರಮಥರ ಉತ್ತರಾಧಿಕಾರಿ, ಶರಣತತ್ವಗಳ ಹರಿಕಾರ, ಭಕ್ತಿಶ್ರದ್ಧೆ ನಿಷ್ಠೆ ಮುಪ್ಪುರಿಗೊಂಡ ದಿವ್ಯಸನ್ನಿಧಿ. ಶೈಕ್ಷಣಿಕ ಏಳ್ಗೆ ಸಮಾಜವನ್ನು ಅಜ್ಞಾನದ ಅಂಧಕಾರದಿಂದ ಬಡಿದೆಬ್ಬಿಸಿ ಸುಜ್ಞಾನದ ಸನ್ನಿಧಾನಕ್ಕೆ ಒಯ್ಯುವ ತಾರಕಮಂತ್ರವನ್ನು ನಂಬಿ ಅದಕ್ಕಾಗಿ ಸಮರ್ಪಣೆ ಮಾಡಿಕೊಂಡ ಮಹಾತ್ಯಾಗಿ. ಮಾತು ಬೆಳ್ಳಿ, ಮೌನ ಬಂಗಾರದಂತಹ ತುಂಬಿದ ಕೊಡದ ವ್ಯಕ್ತಿತ್ವ. ನಡೆನುಡಿಯಲ್ಲಿ ಸಮ್ಮಿಳನಗೊಂಡ ಅಂತರಂಗದ ಸಿದ್ಧಿಯನ್ನು ಸಮಾಜದ ಅಭಿವೃದ್ಧಿಗೆ ಲೋಕದ ಯೋಗಕ್ಷೇಮಕ್ಕೆ ನೂರುಕಾಲ ಬಳಸಿದ ಶತಾಯುಷಿ. ಇಂಥವರ ಪ್ರಾತಃಸ್ಮರಣೆ, ಬದುಕಿ ಸ್ಮರಿಸುವವರೆಗೆ ದೈವೀಪ್ರೇರಣೆ.

ಅಂತೆಯೇ ಕನ್ನಡದ ಕವಿಗಳು ಅವರ ವ್ಯಕ್ತಿತ್ವವನ್ನು ಹಾಡಾಗಿಸಿ ನಲಿದಿದ್ದಾರೆ. ಅವರನ್ನು ಕುರಿತು ಕಥೆ, ಕವನ ರಚಿಸಿದ್ದಾರೆ. ಶಿವದೀಪ್ತಿಯನ್ನು ಬೆಳಗಿದ್ದಾರೆ. ತುತ್ತಿಗೊಮ್ಮೊಮ್ಮೆ ನಾಡುನುಡಿಗಾಗಿ ತಮ್ಮ ತನುಮನಧನ ಸವೆಸಿದ, ಗಂಧದ ಕೊರಡಿನಂತೆ ತೆಯ್ದು ಸುಗಂಧ ಬೀರಿದ ಇಂಥ ಮಹಾಪುರುಷರ ನೆನೆಯುವದೇ ಶಿವಪೂಜೆ. ಅದೇ ಲಿಂಗದ ಮಾಟ, ಜಂಗಮದ ಕೂಟ, ಕೂಡಲಸಂಗಮನ ಅರಿಯುವ ಆಟ.

ಪಲ್ಲಕ್ಕಿಯನೇರಲಿಲ್ಲ ನೀವು
ಮೆರವಣಿಗೆಯ ಕೋರಲಿಲ್ಲ
ಗಾದಿಗೊರಗಿ ಕೂಡಲಿಲ್ಲ ನೀವು
ಮೃಷ್ಟಾನ್ನವನುಣ್ಣಲಿಲ್ಲ.
ಬಂಗಾರವ ಬೇಡಲಿಲ್ಲ ನೀವು
ಸಿಂಗಾರವ ಬಯಸಲಿಲ್ಲ.
ಕೀರ್ತಿಶನಿಯ ಬೆನ್ನಹಿಂದೆ
ಎಂದೆಂದೂ ಅಲೆಯಲಿಲ್ಲ.

ಬಸವರಾಜ ಕಟ್ಟಿಮನಿಯವರ ಕಾವ್ಯಲಹರಿ ಅಪ್ಪಗಳವರ ದಿವ್ಯವ್ಯಕ್ತಿತ್ವವನ್ನು ಕವನವಾಗಿಸಿದೆ. ನಾಗನೂರು ಹೆಸರಾಯಿತು ನಿಮ್ಮ ಪಾದಸ್ಪರ್ಶದಿಂದ, ಬೆಳಗಾವಿಯು ಉಸಿರಾಯಿತು ನಿಮ್ಮ ಅಡಿದಾವರೆಗಳಲ್ಲಿ ತಲೆ ಇಟ್ಟ ಕನ್ನಡಿಗರ ಭಕ್ತಿಸ್ಪರ್ಶದಿಂದ.

ನಾಗನೂರು ರುದ್ರಾಕ್ಷಿಮಠ ಪರಂಪರೆ

ವೀರಪರಂಪರೆಯ, ಸುಸಂಸ್ಕೃತಿಯ ನೆಲೆವೀಡು ನಾಗನೂರು. ಧರ್ಮ ಸಂಸ್ಕೃತಿಗೆ ಇಲ್ಲಿ ಮಿಗಿಲಾದ ಮಾನ್ಯತೆ. ಇತಿಹಾಸ ಪ್ರಸಿದ್ಧ ಬೆಳವಡಿ ಕಿತ್ತೂರು ಸಂಸ್ಥಾನಗಳ ಕ್ಷಾತ್ರ ಪರಿಸರದಲ್ಲಿ ಸಾಂಸ್ಕೃತಿಕ ಮಹತಿ ಮೆರೆದ ಸ್ಥಳ. ಬೆಳವಡಿ ಮತ್ತು ಕಿತ್ತೂರು ಶಿವಾಜಿ ಮಹಾರಾಜನಂತಹ ಸಮರ್ಥವನ್ನು ಎದುರಿಸಿದ ಧೀರೆ ಬೆಳವಡಿಯ ಮಲ್ಲಮ್ಮ, ಬ್ರಿಟಿಷ್ ಸೈನ್ಯ ಎದುರಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೇತನವನ್ನರ್ಪಿಸಿದ-ಧ್ರುವತಾರೆ ಕಿತ್ತೂರು ಚೆನ್ನಮ್ಮರು ನೆಲೆನಿಂತ ಪ್ರದೇಶಗಳು. ಬೆಳವಡಿ ಕಿತ್ತೂರುಗಳ ಸ್ವಾಮಿಭಕ್ತಿ, ದೇಶನಿಷ್ಠೆ, ವೀರಶ್ರೀಯನ್ನು ಅಳವಡಿಸಿಕೊಂಡ ಗ್ರಾಮ ನಾಗನೂರು ಬೈಲಹೊಂಗಲ ತಾಲೂಕಿನ ಚಿಕ್ಕಹಳ್ಳಿ, ಬೈಲಹೊಂಗಲದಿಂದ ಪಶ್ಚಿಮಕ್ಕೆ ಐದುಮೈಲು ಅಂತರದ ಪ್ರದೇಶ.

ಕರ್ನಾಟಕದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚರಿತ್ರೆಯಲ್ಲಿ ವೀರಶೈವ ಮಠಗಳ ಸ್ಥಾನಮಾನ ಬಹುದೊಡ್ಡದು. ಧಾರ್ಮಿಕ ಸೇವೆಯೊಂದಿಗೆ ನಾಡಿನ ಅಭಿವೃದ್ಧಿಗೆ ಸಂಬಂಧಿಸಿದ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ನಾಡಿನ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಬಂದವು ವೀರಶೈವ ಮಠಮಾನ್ಯಗಳು. ಇಂಥ ಸಮಾಜೋಧಾರ್ಮಿಕ ಪ್ರಜ್ಞೆಯ ಮಠಗಳಲ್ಲಿ ನಾಗನೂರಿನ ರುದ್ರಾಕ್ಷಿಮಠ ಪುರಾತನ ಸಂಸ್ಕೃತಿಯ ಮಠ, ನಾಗನೂರು ಏಳುಮಠಗಳನ್ನು ಹೊಂದಿದ ಪುಣ್ಯಭೂಮಿ. ಇವುಗಳಲ್ಲಿ ಗುರುಸ್ಥಳದ ಮಠಗಳೈದು, ವಿರಕ್ತ ಸಂಪ್ರದಾಯದ ಮಠಗಳು ಎರಡು. ನಾಗನೂರು ರುದ್ರಾಕ್ಷಿಮಠ ಈ ಎರಡು ವಿರಕ್ತಮಠಗಳಲ್ಲಿ ಗುರುಸ್ಥಳದ ಮಠಗಳೈದು, ವಿರಕ್ತ ಸಂಪ್ರದಾಯದ ಮಠಗಳು ಎರಡು. ನಾಗನೂರು ರುದ್ರಾಕ್ಷಿಮಠ ಈ ಎರಡು ವಿರಕ್ತಮಠಗಳಲ್ಲಿ ಒಂದು, ಸಮೃದ್ಧಿ ಧರ್ಮಗಳ ನೆಲೆವೀಡು. ಶಿವಬಸವಸ್ವಾಮಿಗಳ ಪಾದಸ್ಪರ್ಶದಿಂದ ಪುನೀತಗೊಂಡ ಪ್ರದೇಶ. ಬಸವಾದಿ ಪ್ರಮಥರು ಹಾಕಿಕೊಟ್ಟ ಮೌಲ್ಯರೂಪದ ಕಾಯಕ ಸೇವೆಯಲ್ಲಿ ಶಿವಬಸವಸ್ವಾಮಿಗಳವರ ಅಪಾರಗೌರವ ಅಡಕವಾಗಿದೆ. ರುದ್ರಾಕ್ಷಿ ಮಠದಲ್ಲಿ ಇಂದಿಗೂ ಉಚಗೊಡ್ಡ ಹೊಡೆದು ನುಣುಪಾಗಿ ಮಾಡಿದ ಕಂಬ, ಬೋದುಗೆ, ಮಾಳಿಗೆಗಳು ಶಿವಬಸವಸ್ವಾಮಿಗಳ ಉಳಿಯ ಹೊಡೆತದಿಂದ ಮೆರಗುಗೊಂಡಿವೆ. ಹಳತು ಹೊಸಸಂಸ್ಕೃತಿಗಳ ಸಂಗಮ ಇಲ್ಲಿ ಘನೀಭೂತಗೊಂಡಿದೆ.

ಸನಿಹದ ಪ್ರಕೃತಿ ಪರಿಸರದ ಮಧ್ಯದಲ್ಲಿ ಚೌಕಿಮಠವಿದೆ. ಶ್ರೀಮಠದ ಪ್ರಶಾಂತ ವಾತಾವರಣದಲ್ಲಿ ಬೆಳಗು ಮುಂಜಾನೆಯ ಆಹ್ಲಾದಮಯ ವಾತಾವರಣದಲ್ಲಿ ನಿತ್ಯ ಮೊಳಗುತ್ತಿರುವ ಓಂಕಾರನಾದದ ಘಂಟಾನಿನಾದದ ಗುಂಜಾರವ ಸದಾ ಅಲೆ ಅಲೆಯಾಗಿ ತೇಲಿಬಂದು ಭಾವುಕರನ್ನು ಭಕ್ತಿಪರವಶರನ್ನಾಗಿಸುತ್ತಿದೆ.

ವೀರಶೈವ ಅಷ್ಟಾವರಣದಲ್ಲಿ ರುದ್ರಾಕ್ಷಿಯ ಸ್ಥಾನ ಮಹತ್ವದ್ದು. ಶ್ರೀಮಠದ ಪ್ರತಿಷ್ಠಾಪನೆಗೆ ಕಾರಣರಾದ ಪುಣ್ಯಪುರುಷರು ಶ್ರೀ ಅಲ್ಲಮಪ್ರಭು ಹಾಗೂ ಸಿದ್ಧರಾಮಸ್ವಾಮಿಗಳವರು. ಘನತಪಸ್ವಿಗಳೂ, ಲಿಂಗಭೋಗೋಪ ಭೋಗಿಗಳೂ, ಗುರು ಲಿಂಗ ಜಂಗಮ ಸೇವಾ ಸಂಗರೂ ಆದ ಈ ಮಹಿಮರು ಪೂಜೆಗೆ ಧರಿಸುತ್ತಿದ್ದುದು ರುದ್ರಾಕ್ಷಿಯ ಕಿರೀಟ. ಇದರಿಂದಾಗಿ ಶ್ರೀಮಠಕ್ಕೆ'ರುದ್ರಾಕ್ಷಿಮಠ' ಎಂಬ ಪವಿತ್ರ ಹೆಸರು ಜನಜನಿತವಾಗಿದೆ.

ನಾಗನೂರಿನ ರುದ್ರಾಕ್ಷಿಮಠದ ಪರಂಪರೆ ಕಿತ್ತೂರು ಸಂಸ್ಥಾನದ ಅರಸು ಶಿವಲಿಂಗರುದ್ರಸರ್ಜನ ಕಾಲದವರೆಗೆ ಹಿಂದಕ್ಕೆ ಹೋಗುತ್ತದೆ. ಇಂಥ ಮಹಾತಪಸ್ವಿಗಳು, ಅಚಲಬ್ರಹ್ಮಚರ್ಯದ ಮಹಾಸ್ವಾಮಿಗಳವರು ನೆಲೆನಿಂತ ಈ ಮಠಕ್ಕೆ ಏಳನೆಯ ಅಧಿಕಾರಿಗಳಾಗಿ ಪೀಠವನ್ನು ಅಲಂಕರಿಸಿದವರು ತಪಸ್ವಿ ಶಿವಬಸವಸ್ವಾಮಿಗಳವರು. ಹಿರಿಯಪೂಜ್ಯರು ಹಾಕಿಕೊಟ್ಟ ಘನಪರಂಪರೆ, ಶ್ರೀಮಠವನ್ನು ದಿನದಿಂದ ದಿನಕ್ಕೆ ಪ್ರಗತಿಪಥದತ್ತ ಮುನ್ನಡೆಸಿಕೊಂಡು ಬಂದವರು ಅಪ್ಪಗಳವರು. ಜಗಜ್ಯೋತಿ ಬಸವಾದಿ ಪ್ರಮಥರನ್ನು ಲಾಂಛನವಾಗಿರಿಸಿಕೊಂಡು 'ದಯವೇ ಧರ್ಮದ ಮೂಲ' ಮಂತ್ರವನ್ನು ಸಾರುತ್ತ ಸಾಗಿರುವ ಈ ಪರಂಪರೆ ಸತ್ಕಾರ್ಯಗಳಿಗೆ ಸದಾ ಮುಂದು. ಗುರುಪೂಜೆ ಲಿಂಗಪೂಜೆಯ ಜೊತೆ ಜೊತೆಗೆ ಜಂಗಮದಾಸೋಹಕ್ಕೆ ಮಾನ್ಯತೆ ಇತ್ತುದು ನಾಗನೂರಿನ ರುದ್ರಾಕ್ಷಿಮಠ.

ಗ್ರಾಮಾಂತರ ಪ್ರದೇಶದ ಜನತೆಯ ಏಳ್ಗೆಯನ್ನು ಗಮನಿಸಿ ಅವರಿಗೆ ಸಂಸ್ಕೃತಿ, ಸಂಸ್ಕಾರ, ಭಕ್ತಿಜ್ಞಾನಗಳು ತಲುಪುವಂತೆ ಸಮಾಜೋದ್ಧಾರಕ ಕಾರ್ಯಕ್ರಮಗಳ ಕೇಂದ್ರಬಿಂದುವೆನಿಸಿದವರು ಶ್ರೀಗಳು. ಒಳ್ಳೆ ಸ್ನೇಹಜೀವಿಗಳು, ಅವರ ಮೌನಕ್ಕೆ ಸದಾ ಬಂಗಾರದ ಮೌಲ್ಯ. ಮೌನದ ಹಿಂದಿರುವ ಕ್ರಿಯಾಶಕ್ತಿಗೆ ಆ ಬಸವಾದಿ ಪ್ರಮಥರೇ ಪ್ರಮುಖ ಪ್ರೇರಣೆ.

ಕೊಣ್ಣೂರಿನ ಕೆಂಪಯ್ಯ ಸ್ವಾಮಿಗಳು, ಇಳಕಲ್ಲ ಗುರುಮಹಾಂತ ಸ್ವಾಮಿಗಳು, ನವಲಗುಂದದ ಬಸವಲಿಂಗ ಸ್ವಾಮಿಗಳು ಪೂಜ್ಯರ ಒಡನಾಡಿಗಳು. ಕೆಂಪಯ್ಯ ಸ್ವಾಮಿಗಳು ಕೊಣ್ಣೂರು ಮರಡೀ ಮಠದ ಸ್ವಾಮಿಗಳಾಗಿದ್ದ ಸಂದರ್ಭ, ಮರಡೀಮಠದಲ್ಲಿ ಅನ್ನದಾಸೋಹ, ಪಾಠಶಾಲೆ, ಇಂಗ್ಲೀಷ್ ಶಾಲೆ ಮುಂತಾದ ಸಾರ್ವಜನಿಕ ಹಿತಾಸಕ್ತಿಯ ಕಾರ್ಯಗಳನ್ನು ಬಿಟ್ಟು ಬಿಡದೇ ಕೈಕೊಳ್ಳುತ್ತ ಬಂದಿದ್ದರು. ನಾಗನೂರು ಶಿವಬಸವಸ್ವಾಮಿಗಳು ಈ ಎಲ್ಲ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಹುಬ್ಬಳ್ಳಿ ಮೂರುಸಾವಿರಮಠಕ್ಕೆ ಪೂಜ್ಯ ಕೆಂಪಯ್ಯ ಸ್ವಾಮಿಗಳು ಜಗದ್ಗುರುಗಳಾಗಿ ಹೋದ ಬಳಿಕ ಶಿವಬಸವಸ್ವಾಮಿಗಳು ಸಮಾಜಸೇವೆಗೆ ಪೂರಕವಾದ ಉಚ್ಚಮಟ್ಟದ ಸಮಾಜೋ ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮ ಹಮ್ಮಿಕೊಳ್ಳಲು ಹೆಚ್ಚು ಅನುಕೂಲವಾಗತೊಡಗಿತು. ಜಗದ್ಗುರುಗಳವರ ಉದಾರದೇಣಿಗೆಯಿಂದ ಹುಬ್ಬಳ್ಳಿಯಲ್ಲಿ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಹೊಸ ಹೊಸ ಸಂಸ್ಥೆಗಳು ಉದಯವಾದವು. ಶಿವಬಸವಸ್ವಾಮಿಗಳು ಬೆಳಗಾವಿಯಲ್ಲಿ ತೆರೆದ ಸುವರ್ಣಾವಕಾಶ ಸುತ್ತುಮುತ್ತಲಿನ ಅನೇಕ ಶಿಕ್ಷಣ ಸಂಸ್ಥೆಗಳಿಗೆ, ಗ್ರಾಮೀಣಭಾಗದ ಬಡವಿದ್ಯಾರ್ಥಿಗಳು ವಿದ್ಯಾಭಿಲಾಷಿಗಳಾಗಿ ಬರುವಂತಾಯಿತು. ಅನ್ನ, ಅರಿವೆ, ಆಶ್ರಯದಂತಹ ಮೂಲಭೂತ ಸಮಸ್ಯೆಗಳು ಗುರುಪ್ರಸಾದದ ಕರುಣೆಯಿಂದ ಬಗೆಹರಿದು, ಹೆಚ್ಚಿನ ಗಮನವನ್ನು ವಿದ್ಯಾಭ್ಯಾಸಕ್ಕೆ ಮೀಸಲಾಗಿಡಲು ಅನುವು ದೊರೆತಂತಾಯಿತು. ಹೀಗಾಗಿ ಜಗದ್ಗುರು ಗುರುಸಿದ್ಧ ರಾಜಯೋಗಿಂದ್ರ ಸ್ವಾಮಿಗಳೂ, ನಾಗನೂರು ಶಿವಬಸವ ಸ್ವಾಮಿಗಳೂ ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದ ಅಮೂಲ್ಯವಾದ ಕಾರ್ಯ ಕೈಕೊಳ್ಳಲು ಅನುಕೂಲವಾಯಿತು.

ಬೆಳಗಾವಿಯಲ್ಲಿ ಪ್ರಸಾದ ನಿಲಯ

ವಿದ್ಯಾರ್ಥಿಗಳಲ್ಲಿ ಜೀವವಿರಿಸಿಕೊಂಡಿದ್ದವರು ಧಾರವಾಡದ ಮುರುಘಾಮಠದ ಶ್ರೀ ಮೃತ್ಯುಂಜಯ ಅಪ್ಪಗಳವರು. ಅವರ ಪಡಿನೆಳಲೇ ನಾಗನೂರಿನ ಶಿವಬಸವ ಸ್ವಾಮಿಗಳವರು. ಭಾರತದ ಸ್ವಾತಂತ್ರ್ಯಪೂರ್ವದಲ್ಲಿಯೇ ವಿದ್ಯಾರ್ಥಿ ಯೋಗಕ್ಷೇಮ ಬಯಸಿ ಅವರು ಶೈಕ್ಷಣಿಕ ಚಟುವಟಿಕೆಗಳಲ್ಲಿ ಧುಮುಕಿದ್ದರು. ನಾಗನೂರಿನಲ್ಲಿದ್ದ ಅವರ ಅನ್ನದಾಸೋಹ, ಜ್ಞಾನದಾಸೋಹ ಜನಮನವನ್ನು ಸ್ಪಂದಿಸಿದ್ದವು. ಹೀಗಾಗಿ ಪೂಜ್ಯರು ಕೈಕೊಳ್ಳುವ ಇನ್ನೂ ಮಹತ್ವದ ಕಾರ್ಯಗಳಿಗೆ ಅಲ್ಲಲ್ಲಿ ಕೆಲವು ಮಠಮಾನ್ಯಗಳು, ಖಾಸಗಿ ಸಂಸ್ಥೆಗಳು, ಗಣ್ಯನಾಗರಿಕರು ಕೊಡಗೈಯ ಸೇವೆಗೆ ಸನ್ನದ್ಧರಾಗಿದ್ದರು.

ತುಂಬ ವೆಚ್ಚದ ಉಚ್ಚಶಿಕ್ಷಣ, ಬಡಜನತೆಗೆ ನಿಲುಕಬೇಕಾದರೆ ಮಹತ್ಕಾರ್ಯಗಳನ್ನು ಕೈಕೊಳ್ಳುವುದು ತುಂಬ ಅವಶ್ಯಕವೆನಿಸಿತ್ತು ಶಿವಬಸವಸ್ವಾಮಿಗಳಿಗೆ. ಕರ್ತೃತ್ವಶಕ್ತಿ ಮುಂದಾಲೋಚನೆಯುಳ್ಳ ಶಿವಬಸವಸ್ವಾಮಿಗಳು ಈಗ ನಾಗನೂರಿನಂತಹ ಸಣ್ಣಹಳ್ಳಿಯಿಂದ ತಮ್ಮ ಕಾರ್ಯವ್ಯಾಪ್ತಿಯನ್ನು ವ್ಯಾಪಕಕ್ಷೇತ್ರಕ್ಕೆ ಪರಿಚಯಿಸಿಕೊಳ್ಳಲು ಉದ್ಯುಕ್ತರಾದರು. ಲೋಕಸಂಗ್ರಹವನ್ನು ಮಣಿಹವಾಗಿ ಸ್ವೀಕರಿಸಿದ ಈ ನಿರಂಜನ ಜಂಗಮಮೂರ್ತಿ ಸಾಮಾಜಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಮಾಜವನ್ನು ಮೇಲೆತ್ತುವ ಕಾರ್ಯಕ್ಕೆ ಕಂಕಣಬದ್ಧರಾದರು.

ಈ ಸಂದರ್ಭ ಶಿವಬಸವಸ್ವಾಮಿಗಳವರ ಮನದಲ್ಲಿ ನೆಲೆನಿಂತ ಚಿಂತನೆ "ನಮ್ಮ ನಾಡು ಮುಂದೆ ಬರಬೇಕಾದರೆ ಹಳ್ಳಿಗಳ ಉದ್ಧಾರವಾಗಬೇಕು. ಗ್ರಾಮೀಣ ಭಾಗದ ಜನರು ಕಲಿಯದೇ ಈ ಭಾಗದ ಉದ್ಧಾರವಾಗದು. ಕಾರಣ ಹಳ್ಳಿಗಳಿಂದ ಬರುತ್ತಿರುವ ಬಡವಿದ್ಯಾರ್ಥಿಗಳಿಗೆ ಅಲ್ಲಿಗೆ ಬಂದು ನಿಂತು ವಿದ್ಯಾರ್ಜನೆ ಮಾಡಲು ಆರ್ಥಿಕ ದೃಷ್ಟಿಯಿಂದ ಸಾಧ್ಯವಿಲ್ಲ. ಕಾರಣ ಉಚಿತ ಪ್ರಸಾದ ನಿಲಯವನ್ನು ಆರಂಭಿಸಿ ಬಡವರಿಗೆ, ಗ್ರಾಮೀಣ ಭಾಗದ ಜನತೆಗೆ ಶಿಕ್ಷಣ ಸೌಕರ್ಯ ಒದಗಿಸಬೇಕು. ಜಾತಿ, ಮತ, ಪಂಥ ಪ್ರದೇಶಗಳ ತಾರತಮ್ಯವಿಲ್ಲದೆ ಸರ್ವರಿಗೂ ಮುಕ್ತವಾಗಿದ್ದ ಉಚಿತ ಪ್ರಸಾದ ನಿಲಯ ಸ್ಥಾಪಿಸಬೇಕು ಎಂಬ ದೃಢಸಂಕಲ್ಪ ಮಾಡಿದರು. ಈ ಅನ್ನದಾಸೋಹಕ್ಕೆ ಆಗಲೇ ಮನೆಮನೆ ಭಿಕ್ಷಕ್ಕೆ ಮನ ನಿರ್ಧರಿಸಿತು.

ನಾಗನೂರಿಗೆ ಹತ್ತಿರದ ಪಟ್ಟಣ ಶೈಕ್ಷಣಿಕ ಅನುಕೂಲತೆ ಹೊಂದಿದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಕಲರೀತಿಯಿಂದ ಅನುಕೂಲಕರವಾದ ಬೆಳಗಾವಿಯನ್ನು ತಮ್ಮ ಕೇಂದ್ರವನ್ನಾಗಿಸಿಕೊಂಡರು. ೧೯೩೨ನೇ ಜೂನ್ ೬ ರಂದು ಈಗಿನ ಬಸ್ ನಿಲ್ದಾಣದ ಸಮೀಪ ಕೋಟೆಯಲ್ಲಿ ಪ್ರಸಾದನಿಲಯ ಪ್ರಾರಂಭಿಸಿಯೇ ಬಿಟ್ಟರು. ೨೫ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಈ ಪ್ರಸಾದನಿಲಯ ಅತಿಬೇಗನೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡಿತು. ವಿದ್ಯಾರ್ಥಿಗಳ ಸಂಖ್ಯೆ ೫೦ಕ್ಕಿಂತ ಹೆಚ್ಚಾಗಲು ಕೋಟೆಯಲ್ಲಿಯ ಪ್ರಸಾದನಿಲಯ ಸಾಲದೇ ಹೋಯಿತು. ವಿದ್ಯಾರ್ಥಿಗಳ ಹೆಚ್ಚಳ ಸಕಲ ಸೌಕರ್ಯಗಳ ಅವಶ್ಯಕತೆ, ವ್ಯವಸ್ಥಿತ ಆಡಳಿತ ಹೊಂದಿದ ಪ್ರಸಾದನಿಲಯ ಅದಕ್ಕಿಂತ ಪ್ರಶಸ್ತವಾದ ನಿಕೇತನಕ್ಕೆ ಸ್ಥಳಾಂತರಿಸುವ ವಿಚಾರ ಶ್ರೀಗಳವರಿಗೆ ಬಂದಿತು. ಶಹಾಪುರದಲ್ಲಿರುವ ಶ್ರೀ ಬೋಳಮಲ್ಲನವರ ಮನೆ ಪೂಜ್ಯರ ಗಮನ ಸೆಳೆಯಿತು. ಐವತ್ತು ವಿದ್ಯಾರ್ಥಿಗಳ ವಸತಿ ಸೌಕರ್ಯಕ್ಕೆ ಅನುಕೂಲವಾಗಿದ್ದ ಈ ಬೋಳಮಲ್ಲನವರ ಮನೆ ಪ್ರಸಾದನಿಲಯಕ್ಕೆ ಅನುಕೂಲವಾಯಿತು. ೧೯೪೦ರ ವರೆಗೆ ಇಲ್ಲಿಯೇ ಪೂಜ್ಯರ ಸನ್ಮಾರ್ಗದಲ್ಲಿ ಪ್ರಸಾದನಿಲಯ ದಿನದಿನಕ್ಕೂ ಪ್ರಗತಿಹೊಂದಿ

ಹೆಚ್ಚೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗತೊಡಗಿತು. ಈ ಸಂಖ್ಯಾಬಾಹುಳ್ಯ ಆದಷ್ಟು ಬೇಗನೆ ಮತ್ತೊಂದು ಕಟ್ಟಡದ ಅವಶ್ಯಕತೆಗಾಗಿ ಕಾಯವಂತಾಯಿತು.

ಪ್ರಸಾದ ನಿಲಯದ ಸ್ವತಂತ್ರ ಕಟ್ಟಡ

'ಭಾವ ಶುದ್ಧವಿದ್ದರೆ ಭಾಗ್ಯಕ್ಕೇನು ಕಮ್ಮಿ' ಎಂಬುದು ನಮ್ಮ ಜನರ ನಂಬುಗೆ. ಒಳ್ಳೆಯ ಕೆಲಸಕ್ಕೆ ಶಿವನೊಲವು ಹರಿದು ಬರುವುದು ಎಂಬಂತೆ ನಾಗನೂರು ಅಪ್ಪಗಳವರ ಕರ್ತೃತ್ವಶಕ್ತಿಯನ್ನು ಮನಗಂಡು ಅವರು ಕೈಕೊಂಡ ದಾಸೋಹ ಮಣಿಹಕ್ಕೆ ಉದಾರಹಸ್ತ ನೀಡಿದವರು ಅನೇಕ ಗಣ್ಯನಾಗರಿಕರು. ಅದಕ್ಕಿಂತ ಹೆಚ್ಚಾಗಿ ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಶ್ರೀಗುರುಸಿದ್ಧರಾಜ ಯೋಗೀಂದ್ರ ಮಹಾಸನ್ನಿಧಿಯವರು ಮನದುಂಬಿ ಅನೇಕ ಕೊಡುಗೆ ನೀಡಿ ಆಶೀರ್ವದಿಸಿದರು. ಇದರ ಸತ್ಫಲವಾಗಿ ಶಹಪುರದಲ್ಲಿಯ ಶ್ರೀ ಬೋಳಮಲ್ಲನವರ ಮನೆಯಿಂದ ಹನುಮನ ಬೀದಿಯಲ್ಲಿರುವ ಭವ್ಯವಾದ ಕಟ್ಟಡಕ್ಕೆ ಈ ಪ್ರಸಾದ ನಿಲಯವನ್ನು ೧೯೪೩ರಲ್ಲಿ ಸ್ಥಳಾಂತರಿಸಲಾಯಿತು.

ಜಂಗಮನೊಬ್ಬ ಸಮಾಜಕಾರ್ಯಕ್ಕೆ ಜೋಳಿಗೆ ಹಾಕಿ ಭಿಕ್ಷ ಅಂದರೆ ಅದೇ ಲಕ್ಷ. ಅತ್ಯಂತ ತ್ವರಿತವಾಗಿಯೇ ಎರಡೂವರೆ ಲಕ್ಷ ರೂ. ವೆಚ್ಚ ಮಾಡಿ ವಿದ್ಯಾರ್ಥಿಗಳ ವಾಸಕ್ಕೆ ಎಲ್ಲ ರೀತಿಯ ಅನುಕೂಲತೆಯುಳ್ಳ ಪ್ರಶಸ್ತ ಹೊಸ ಕಟ್ಟಡ ನಿರ್ಮಿಸುವ ಏರ್ಪಾಡು ಕಾರ್ಯರೂಪಕ್ಕೆ ಬಂದಿತು. ಈ ಕಟ್ಟಡದ ಅಡಿಗಲ್ಲು ಸಮಾರಂಭವನ್ನು ಲಿಂಗೈಕ್ಯ ದಾನಶೂರ ಶ್ರೀ ಬಸರೀಗಿಡದ ವೀರಪ್ಪನವರು ೧೯೪೮ರಲ್ಲಿ ನೆರವೇರಿಸಿದ್ದು ಯೋಗಾಯೋಗ. ಇದೇ ಸಂದರ್ಭದಲ್ಲಿ ಶ್ರೀಯುತರು ೫೧೫೫೫ ರೂ.ಗಳನ್ನು ನೂತನ ಕಟ್ಟಡ ನಿರ್ಮಾಣಕ್ಕೆ ದಾನವಾಗಿತ್ತರು. ಸಹಸ್ರಾರು ಸದ್ಭಕ್ತರ, ಬೆಳಗಾವಿಯ ಗಣ್ಯನಾಗರಿಕರ ಸಹಾಯದ ಫಲವಾಗಿ ಪ್ರಸಾದನಿಲಯದ ಸ್ವತಂತ್ರ ನೂತನ ಕಟ್ಟಡ ಬೆಳಗಾವಿ ಊರ ಮಧ್ಯದಲ್ಲಿ ವಿರಾಜಮಾನವಾಯಿತು.

ಅಂದಿನ ಮೈಸೂರು ಸಂಸ್ಥಾನದ ಶ್ರೀಮನ್ಮಹರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ ಬಹದ್ದೂರ ಅವರ ಅಮೃತಹಸ್ತದಿಂದ ಸೋಮವಾರ ೧೦.೯.೧೯೫೧ ರಂದು ಬೆಳಗಾವಿಯಲ್ಲಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ ಜಯರಾಮರಾಜೇಂದ್ರ ಒಡೆಯರ ಬಹದೂರ ಅವರಿಗೂ, ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ ನೆರವೇರಿಸಿದ ಶ್ರೀ ಬಸರೀಗಿಡದ ವೀರಪ್ಪನವರಿಗೂ ಈ ವಿದ್ಯಾರ್ಥಿ ಪ್ರಸಾದನಿಲಯದ ವ್ಯವಸ್ಥಾಪಕ ಸಮಿತಿಯು ತನ್ನ ಶುಭಾಶಯ, ಬೇಡಿಕೆಗಳೊಡನೆ ಬಿನ್ನವತ್ತಳೆ, ಅರ್ಪಿಸಿ ಗೌರವ ಸಲ್ಲಿಸಿತು. ಶೇಗುಣಸಿಯ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಶ್ರೀಗಳೊಡನೆ ವಿಶೇಷ ಪರಿಶ್ರಮ ವಹಿಸಿದುದು ಗಮನಾರ್ಹ.

ಇಂದು ಪ್ರಸಾದನಿಲಯ ಬರಿಯ ಒಂದು ಭವ್ಯಕಟ್ಟಡವಲ್ಲ. ಇನ್ನೂರು ವಿದ್ಯಾರ್ಥಿಗಳ ಅನ್ನ, ಜ್ಞಾನ, ದಾಸೋಹದ ನಿಲಯ. ಪ್ರಸಾದನಿಲಯ 'ಸಹನೌಭುನಕ್ತು ಸಹವೀರ್ಯಂಕರವಾವಹೈ' ಎಂಬ ಶಾಂತಿಮಂತ್ರ, ತುತ್ತಿಗೊಮ್ಮೆ ಶಿವಶರಣರನ್ನು ನೆನೆಯುತ್ತ ಪ್ರಸಾದದ ತೃಪ್ತಿ ಪಡೆವ ವಿದ್ಯಾರ್ಥಿ ದೇವರನ್ನು ಕಂಡಾಗ ಶಿವಬಸವ ಅಪ್ಪಗಳವರಿಗಾಗುತ್ತಿದ್ದ ಸಂತೃಪ್ತಿ ಅಷ್ಟಿಷ್ಟಲ್ಲ. ಪ್ರಸಾದನಿಲಯದ ಶಿಸ್ತು, ಸಂಯಮ, ಅಚ್ಚುಕಟ್ಟು, ಆಟಪಾಠಗಳು, ಸ್ಪರ್ಧಾತ್ಮಕ ಮನೋಭಾವ ಅದನ್ನೊಂದು ಮಾದರಿಯ ಪ್ರಸಾದನಿಲಯವನ್ನಾಗಿ ಪರಿವರ್ತಿಸಿವೆ. ಭಾವೈಕ್ಯತೆ, ಸೌಹಾರ್ದತೆ, ಮಾನವೀಯ ಕೇಂದ್ರವಾಗಿರುವ ಪ್ರಸಾದನಿಲಯ ಇಂದು ಸಾಮಾಜಿಕ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ಕನ್ನಡನಾಡಿನ ಹೃದಯದರಮನೆ ಬೆಳಗಾವಿಗೆ ಅಂತರಾಷ್ಟ್ರೀಯ ಮಹತ್ವದ ಸ್ಥಾನ ಕಲ್ಪಿಸುತ್ತಿದೆ. ಪ್ರಸಾದ ನಿಲಯಕ್ಕೆ ಪೂರಕವಾಗಿ ರಚನೆಯಾಗಿದ್ದುದು ಅಲ್ಲಿಯ ಸರಸ್ವತಿ ಭಂಡಾರ.

ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಗ್ರಂಥಭಂಡಾರ

ಶ್ರೀಮಠದೊಂದಿಗೆ ಆತ್ಮೀಯ ಸಂಬಂಧವನ್ನಿರಿಸಿಕೊಂಡು ಪ್ರಸಾದನಿಲಯದ ಸರ್ವಾಂಗೀಣ ಬೆಳವಣಿಗೆಗೆ ಪ್ರಧಾನ ಶಕ್ತಿಯಾದವರು ಹುಬ್ಬಳ್ಳಿಯ ಮೂರುಸಾವಿರಮಠದ ಲಿಂಗೈಕ್ಯ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರು. ಅವರಿಗೆ ಕೃತಜ್ಞತಾ ಸಮರ್ಪಣೆಯ ಈ ಗ್ರಂಥಭಂಡಾರ 'ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಗ್ರಂಥಭಂಡಾರ'ವೆನಿಸಿದೆ.

ಪ್ರಸಾದನಿಲಯ ವಸತಿಗೃಹದ ಜೊತೆ ಜೊತೆ ಗ್ರಂಥಭಂಡಾರ ಯೋಜನೆ ಆಧುನಿಕಯುಗದ ಮಹತ್ವದ ಕೊಡುಗೆ. ವಿದ್ಯಾರ್ಥಿಗಳ ಬದುಕಿನ ಪರಿಪೂರ್ಣತೆಗೆ ಗ್ರಂಥಭಂಡಾರದ ಅವಶ್ಯಕತೆಯನ್ನು ಮನಗಂಡ ಶಿವಬಸವಸ್ವಾಮಿಗಳು ವಿವಿಧ ಭಾಷೆಗಳ, ವಿವಿಧ ವಿಷಯಗಳ ಗ್ರಂಥಭಂಡಾರವನ್ನು ಸುವ್ಯವಸ್ಥಿತವಾಗಿ ಸಂಗ್ರಹಿಸಿರುವರು. ಸರಸ್ವತಿ ಮಂದಿರವನ್ನು ಉದಾರ ಹಸ್ತರೆಂದು ಪ್ರಸಿದ್ಧಿಪಡೆದಿದ್ದ ಭೂಮರೆಡ್ಡಿಬಸಪ್ಪನವರ ಅಮೃತಹಸ್ತದಿಂದ ೨೬.೯.೧೯೫೫ ರಂದು ಅನಾವರಣಗೊಳಿಸಲಾಗಿದ್ದು ಇಂದು ಸುಮಾರು ೧೦ ಸಾವಿರಕ್ಕೂ ಮಿಕ್ಕಿ ವೈವಿಧ್ಯಮಯ ಕೃತಿಗಳ ಪ್ರಯೋಜನವನ್ನು ಅಲ್ಲಿಯ ವಿದ್ಯಾರ್ಥಿಗಳು ಪಡೆಯುತ್ತಿರುವುದು ಒಂದು ವಿಶೇಷ.

ಪರಮಪೂಜ್ಯ ಹಾನಗಲ್ಲು ಕುಮಾರಶಿವಯೋಗಿಗಳು ಹಸ್ತಪ್ರತಿ ಸಂಗ್ರಹಿಸುತ್ತಿದ್ದ ಹವ್ಯಾಸ ಇಂದು ಬೆಳಗಾವಿಯ ಸರಸ್ವತಿ ಭಂಡಾರದವರೆಗೆ ಬಂದಂತಿದೆ. ಬೆಳಗಾವಿಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಸಂಗ್ರಹಿಸಿದ ತಾಡೋಲೆ ಹಸ್ತಪ್ರತಿಗಳ ಅಪಾರ ಸಂಗ್ರಹ ಇಲ್ಲಿದೆ. ಕಾಲಾಂತರದಲ್ಲಿ ಹಸ್ತಪ್ರತಿಯ ಭವ್ಯ ಅಪರೂಪದ ಗ್ರಂಥಭಂಡಾರದ ಲಕ್ಷಣಗಳು ಇಲ್ಲಿ ಕಾಣುತ್ತಿವೆ.

ಇದೇ ಸಂದರ್ಭದಲ್ಲಿ ಮೃತ್ಯುಂಜಯ ಗವಾಯಿಗಳು ಕೆಲದಿನ ವಿದ್ಯಾರ್ಥಿಗಳಿಗೆ ಸಂಗೀತ ಬೋಧನೆಮಾಡಿದ್ದು, ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆಗೆ ವೈದ್ಯರು ಸದಾಕಾಲ ನೆರವು ನೀಡುತ್ತ ಬಂದುದು ಪೂಜ್ಯರ ವ್ಯವಸ್ಥೆಗೆ ಕನ್ನಡಿ ಹಿಡಿದಿದೆ.

ಹೆಣ್ಣುಮಕ್ಕಳ ಪ್ರಸಾದನಿಲಯ

'ಗಂಡುಮಗುವಿಗೆ ವಿದ್ಯಾಭ್ಯಾಸ ಮಾಡಿಸಿದರೆ ಹುಟ್ಟಿದ ಮನೆ ಬೆಳಗುವವನು, ಅದೇ ಹೆಣ್ಣುಮಗಳಿಗೆ ವಿದ್ಯಾಭ್ಯಾಸ ಮಾಡಿಸಿದರೆ ಒಂದು ನಾಡನ್ನು ಬೆಳಗುವವಳು' ಎಂಬ ಹೇಳಿಕೆ ಶಿವಬಸವಸ್ವಾಮಿಗಳ ಮನದಾಳದಲ್ಲಿ ಪ್ರವೇಶಮಾಡಿತು. ಈ ಭಾವನೆ ಮನಸ್ಸನ್ನು ಕೆದಕಿದ್ದೊಂದೇ ತಡ, ಪೂಜ್ಯರು ಕಾರ್ಯತತ್ಪರರಾದರು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ೧೯೬೪ರಲ್ಲಿ ಹೆಣ್ಣುಮಕ್ಕಳ ಪ್ರಸಾದನಿಲಯ ಸ್ಥಾಪಿಸಿದರು. ಇಂದು ಪ್ರಾಥಮಿಕ ವಿದ್ಯಾರ್ಥಿನಿಯರಿಂದ ಹಿಡಿದು ಉಚ್ಚಶಿಕ್ಷಣ ಪಡೆವ ವಿದ್ಯಾರ್ಥಿನಿಯರವರೆಗೆ ಅಲ್ಲಿ ವಿದ್ಯಾರ್ಥಿನಿಯರಿರುವರು. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶೆಟ್ಟಿಬೀದಿಯ ಈ ಪ್ರಸಾದನಿಲಯದಲ್ಲಿ ಈಗ ಮೂವತ್ತು ವಿದ್ಯಾರ್ಥಿನಿಯರು ಇರುವರು. ಗೃಹೋದ್ಯೋಗ, ಗ್ರಾಮೋದ್ಯೋಗ, ಮೂಲೋದ್ಯೋಗಗಳ ತರಬೇತಿ ಕೇಂದ್ರ ಈ ವಸತಿ ಗೃಹದಲ್ಲಿ ನಡೆಯುತ್ತಿದೆ. ಇಬ್ಬರು ನಿವೃತ್ತ ಶಿಕ್ಷಕಿಯರ ಮೇಲ್ವಿಚಾರಣೆಯಲ್ಲಿ ಕುಮಾರೇಶ್ವರ ಪ್ರಸಾದ ನಿಲಯದ ಒಂದು ಶಾಖೆಯಾದರೂ, ಸ್ವತಂತ್ರ ಘಟಕದಂತೆ ಕೆಲಸಮಾಡುತ್ತಿದೆ. ವಿದ್ಯಾರ್ಥಿನಿಯರಿಗೆ ವೃತ್ತಿಮೂಲ ಶಿಕ್ಷಣ ದೊರೆತರೆ ಅವರ ಗೃಹಜೀವನದ ಸುಖಶಾಂತಿಗೆ ಇದು ನೆರವಾಗಬಲ್ಲದು.

ಶ್ರೀ ಶಿವಬಸವಮಹಾಸ್ವಾಮಿಗಳ ಪ್ರಸಾದನಿಲಯ, ಬೈಲಹೊಂಗಲ

ಚಲಿಸುವ ವಿಶ್ವಕೋಶದಂತಿದ್ದ ಶಿವಬಸವಸ್ವಾಮಿಗಳು ದೂರದೃಷ್ಟಿಯುಳ್ಳವರು. ಬೆಳಗಾವಿ ಪ್ರಸಾದನಿಲಯದ ತೃಪ್ತಿಕರ ಕಾರ್ಯವ್ಯಾಪ್ತಿ ಮನಗಂಡ ಶಿವಬಸವಸ್ವಾಮಿಗಳ ಗಮನ ಬೈಲಹೊಂಗಲದ ಕಡೆಗೆ ಹೊರಳಿತು. ನಾಗನೂರಿನ ಸಮೀಪದಲ್ಲಿರುವ ಬೈಲಹೊಂಗಲದ ಪ್ರದೇಶ ಸುತ್ತಲಿನ ಗ್ರಾಮಗಳ ವಿದ್ಯಾರ್ಥಿ ವಸತಿ ಶಿಕ್ಷಣಕ್ಕೆ ತುಂಬ ಅನುಕೂಲಕರವಾದ ಸ್ಥಳ. ಬೈಲಹೊಂಗಲ ಸುತ್ತಮುತ್ತಲಿನ ಗ್ರಾಮಸ್ಥರ ಮಕ್ಕಳು ಚಳಿ ಮಳೆ ಗಾಳಿಯೆನ್ನದೆ ಬಸ್‌ಮೂಲಕ ವಿದ್ಯೆಗಾಗಿ ಪರದಾಡಿ ವೇಳೆ ಹಾಳುಮಾಡಿಕೊಳ್ಳುತ್ತಿರುವುದನ್ನು ಮನಗಂಡು ಪೂಜ್ಯರು ಬೈಲಹೊಂಗಲದಲ್ಲಿ ಒಂದು ಪ್ರಸಾದನಿಲಯವನ್ನು ಸ್ಥಾಪಿಸಿ ೧೯೮೩ರಲ್ಲಿ ಅದಕ್ಕೆ ತನ್ನದೇ ಅಸ್ತಿತ್ವ ರೂಪಿಸಿಕೊಟ್ಟರು. ಇದು ಪೂಜ್ಯರ ದೂರದೃಷ್ಟಿ, ವಿದ್ಯಾರ್ಥಿಗಳ ಹಿತಚಿಂತನೆ, ಅವರ ಕಳಕಳಿಯ ಸ್ವಭಾವಕ್ಕೆ ಸೂಚನೆಯೆನಿಸಿದೆ.

ಉದ್ಯೋಗಸ್ಥ ಮಹಿಳಾ ವಸತಿಗೃಹ

ಬೆಳಗಾವಿ ವಿಭಾಗೀಯ ಮುಖ್ಯಸ್ಥಳ. ಅಷ್ಟೇ ಜಿಲ್ಲೆಯ ಕೇಂದ್ರಸ್ಥಳ, ಶೈಕ್ಷಣಿಕ ಕೇಂದ್ರ, ಸಾಂಸ್ಕೃತಿಕ ತಾಣ. ದಿನದಿನಕ್ಕೆ ಗರಿಗೆದರಿ ಬೆಳೆಯುತ್ತಿರುವ ಉದ್ಯಮನಗರ. ಇಲ್ಲಿಗೆ ಉದ್ಯೋಗವನ್ನರಸಿ ಬರುವ ಮಹಳೆಯರಿಗೆ ಸುರಕ್ಷಿತವಾದ ವಸತಿ ಸೌಕರ್ಯದ ಮಹತ್ವವನ್ನು ಮನಗಂಡ ಪೂಜ್ಯರು ಈ ಕೊರತೆ ನೀಗಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಧನಸಹಾಯ ಪಡೆದು ಬೆಳಗಾವಿಯ ಜವಾಹರಲಾಲ ನೆಹರೂ ಮೆಡಿಕಲ್ ಕಾಲೇಜಿನ ಎದುರು, ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಮೇಲೆ ಸಕಲ ಸುಸಜ್ಜಿತ ಸೌಕರ್ಯಗಳನ್ನೊಳಗೊಂಡ ಭವ್ಯಕಟ್ಟಡ ನಿರ್ಮಿಸಿರುವರು. ಈ ವಸತಿಗೃಹ ೩೬ ಕೋಣೆ ಹೊಂದಿದ್ದು, ೧೦೦ ಮಹಿಳೆಯರಿಗೆ ವಸತಿಗೆ ಅನುಕೂಲವಾಗಿದೆ. ಶಿವಬಸವನಗರದ ಪ್ರಶಾಂತಸ್ಥಳದಲ್ಲಿ ೨ ಎಕರೆ ೫ ಗುಂಟೆ ವಿಸ್ತೀರ್ಣ ಸ್ಥಳದಲ್ಲಿ ರೂ. ೨೪,೨೪,೧೬೨ ವೆಚ್ಚದಲ್ಲಿ ನಿರ್ಮಾಣಗೊಂಡಿದೆ.

ಅಂಗನವಾಡಿ ತರಬೇತಿ ಸಂಸ್ಥೆ

ಸಮಾಜದ ಬಹುಮುಖ್ಯ ಕಣ್ಣಾದ ಹೆಣ್ಣುಮಕ್ಕಳ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಅವರಿಗಾಗಿ ಒಂದು ಪ್ರಸಾದನಿಲಯವನ್ನು ಸ್ಥಾಪಿಸಿದರು. ಗ್ರಾಮೀಣ ಮಹಿಳೆಯರಲ್ಲಿ ಮನೆ ಮಾಡಿಕೊಂಡಿದ್ದ ಮೂಢನಂಬಿಕೆ, ಅಜ್ಞಾನ, ಪರಿಸರ ನೈರ್ಮಲ್ಯ, ಮಹಿಳೆ, ಮಕ್ಕಳ ಆರೋಗ್ಯ ಮುಂತಾದ ವಿಚಾರಗಳ ಬಗ್ಗೆ ಸಲಹೆ ಸೂಚನೆಗಳನ್ನಿತ್ತು ಗ್ರಾಮೋದ್ಧಾರ

ಯೋಜನೆಯಿಂದ ರಾಮರಾಜ್ಯೋದ್ಭವ ಮಾಡುವ ಯೋಜನೆ ಅತ್ಯಲ್ಪ ಕಾಲದಲ್ಲಿ ಸಫಲವಾಯಿತು. ಇಂದು ಇಲ್ಲಿ ಅನೇಕ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆಯರಾಗಿ ತರಬೇತಿ ಹೊಂದಿ ಬದುಕಿನಲ್ಲಿ ಒಂದು ಸನ್ಮಾರ್ಗವನ್ನು ಪಡೆಯುತ್ತಿರುವುದಕ್ಕೆ ಬೆಳಗಾವಿಯ ಗಣ್ಯನಾಗರಿಕರ ಸಲಹೆ ಸೂಚನೆ, ಶಿವಬಸವಸ್ವಾಮಿಗಳ ಮಹಿಳಾಬದುಕಿನ ಬಗೆಗಿರುವ ಅಂತರಂಗದ ಕಳಕಳಿ ಕಾರಣವಾಗಿರುವುದು ವ್ಯಕ್ತವಾಗುತ್ತದೆ.

ಸಿದ್ಧರಾಮೇಶ್ವರ ಶಿಕ್ಷಣಮಂಡಳಿಯ ಔದ್ಯೋಗಿಕ ತರಬೇತಿ ಕೇಂದ್ರ

ನಿರುದ್ಯೋಗ ಸಮಸ್ಯೆಯ ಕರಾಳತೆಯನ್ನು ಮನಗಂಡು ಪೂಜ್ಯರು ತಾಂತ್ರಿಕ ಶಿಕ್ಷಣಕ್ಕೆ ಮಹತ್ವವಿತ್ತು ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವುದರ ಮೂಲಕ ತರುಣ, ತರುಣಿಯರು ಸ್ವತಂತ್ರ ನೆಲೆಗಟ್ಟಿನ ಮೇಲೆ ನಿಲ್ಲುವ ಹೊಸ ಜವಾಬ್ದಾರಿಯನ್ನು ನಿರ್ವಹಿಸಿದರು. ಈ ತರಬೇತಿ ಕೇಂದ್ರದ ಸ್ಥಾಪನೆಗೆ ಕಲ್ಕತ್ತದ ಅಪಿಜಯ ಟ್ರಸ್ಟಿನವರು ಒಂದು ಲಕ್ಷ ರೂ. ದೇಣಿಗೆ ನೀಡುವ ವಾಗ್ದಾನ ಮಾಡಿದ್ದಲ್ಲದೆ, ಆಗಲೇ ೭೫ ಸಾವಿರ ರೂ. ಕೊಟ್ಟಿದ್ದು ಈ ಕೈಗಾರಿಕಾ ಕೇಂದ್ರಕ್ಕೆ 'ಅಪಿಜಯ ಕೈಗಾರಿಕಾ ತರಬೇತಿ ಸಂಸ್ಥೆ' ಎಂದು ನಾಮಕರಣ ಮಾಡುವ ಉದ್ದೇಶವನ್ನು ಸಂಸ್ಥೆ ಹೊಂದಿದೆ. ನಾಲ್ಕು ಲಕ್ಷ ರೂ.ಗಳ ಕಟ್ಟಡದಲ್ಲಿ ೧೯೮೩ರಲ್ಲಿ ಪ್ರಾರಂಭವಾದ ಈ ಸಂಸ್ಥೆಯಲ್ಲಿ ೧೦೦ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿರುವರು. ಈ ಎಲ್ಲ ಕೆಲಸದ ಹಿಂದೆ ಬೆಳಗಾವಿಯ ಗಣ್ಯನಾಗರಿಕರ ಉದಾರ ಹಸ್ತದ ನೆರವು ಇದೆಯೆಂಬುದನ್ನು ಎಂದಿಗೂ ಮರೆಯಲಿಕ್ಕಾಗದು.

ಆರ್.ಎಸ್.ಶೆಟ್ಟಿ ತಾಂತ್ರಿಕ ವಿದ್ಯಾಲಯ

ಕೈಗಾರಿಕಾ ತರಬೇತಿ ಕೇಂದ್ರದ ಬೆಳವಣಿಗೆಯನ್ನು ಕಂಡು ಸಂತೋಷಗೊಂಡ ಪೂಜ್ಯರು ವಿದ್ಯಾರ್ಥಿಗಳ ಬೇಡಿಕೆಯನ್ನು ಗಮನಿಸಿ ತಾಂತ್ರಿಕ ಶಿಕ್ಷಣ ಕಾಲೇಜು ಪ್ರಾರಂಭಿಸಲು ಮುಂದಾದರು. ಪೂಜ್ಯರ ಪ್ರಯತ್ನ ಬೆಳಗಾವಿ ಗಣ್ಯವರ್ತಕರ ದುಡಿಮೆಯ ಮೇರೆಗೆ ೧೯೮೪ರಲ್ಲಿ ತಾಂತ್ರಿಕ ಮಹಾವಿದ್ಯಾಲಯ ಕಾರ್ಯಾರಂಭ ಮಾಡಿದೆ.

ಪ್ರಮುಖ ಉದ್ದಿಮೆದಾರ ಆರ್.ಎನ್.ಶೆಟ್ಟಿಯವರು ೫ ಲಕ್ಷ ರೂ. ವಾಗ್ದಾನ ಮಾಡಿದ್ದರಿಂದ ಸಂಸ್ಥೆಗೆ ಈ ಹೆಸರುಬಂದಿದೆ. ತಾಂತ್ರಿಕ ವಿದ್ಯಾಲಯದ ವರ್ಗಗಳು ಶ್ರೀ ಕುಮಾರೇಶ್ವರ ಪ್ರಸಾದನಿಲಯದ ೨ನೆಯ ಅಂತಸ್ತಿನಲ್ಲಿ ನಡೆಯುತ್ತಿವೆ. ವಿವಿಧ ಭಾಗಗಳನ್ನು ಹೊಂದಿ, ೧೭೬ ವಿದ್ಯಾರ್ಥಿಗಳ ತರಬೇತಿ ಕಾರ್ಯ ಇಲ್ಲಿ ನಡೆಯುತ್ತಿದೆ.

ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆ

ಪ್ರಾಥಮಿಕ ಶಾಲೆ ಭದ್ರವಾಗಿದ್ದಷ್ಟು ಉಚ್ಚಮಟ್ಟದ ಶಿಕ್ಷಣ ಸತ್ಯಪೂರ್ಣವಾಗುವದೆಂಬುದನ್ನು ಮನಗಂಡಿದ್ದವರು ಪೂಜ್ಯರು. ಯೋಗ್ಯ ಶಿಕ್ಷಣಕ್ಕೆ ಪ್ರಾಥಮಿಕ ಘಟ್ಟ ಪ್ರಥಮ ವೇದಿಕೆ ಎಂದರಿತ ಅವರು ಅದಕ್ಕೆ ಒಳ್ಳೆಯ ತಳಹದಿಯ ಪ್ರಾಥಮಿಕ ಶಾಲೆಗಳ ಸ್ಥಾಪನೆಗೆ ಮುಂದಾದರು. ಹೀಗಾಗಿ ಪೂಜ್ಯರು ಪ್ರಾಥಮಿಕ, ಉನ್ನತ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಇಂದು ಕಾನ್ವೆಂಟ್ ಶಾಲೆಗಳಿಗೆ ಸರಿದೊರೆಯಾಗಿ ಕನ್ನಡ ಮಾಧ್ಯಮದ ಶಾಲೆಗಳನ್ನು ನಡೆಸುತ್ತಿರುವರು. ಪ್ರಾಥಮಿಕ ಶಿಕ್ಷಣಕ್ಕೆ ಪೂಜ್ಯರು ಇಷ್ಟು ಮಹತ್ವವಿತ್ತು ದೇಶದ ಶಿಕ್ಷಣ ವ್ಯವಸ್ಥೆಯ ಹೊಸ ಆಯಾಮಕ್ಕೆ ಕಾರಣೀಕರ್ತೃವಾಗಿರುವರು.

ಶ್ರೀ ಸಿದ್ಧರಾಮೇಶ್ವರ ವಸತಿ ಪ್ರೌಢಶಾಲೆ

ಮಕ್ಕಳು ನಾಡಿನ ಆಸ್ತಿ, ಮಕ್ಕಳಿಲ್ಲದಿದ್ದರೆ ಜಗತ್ತು ನಾಸ್ತಿ. ಮಕ್ಕಳ ಏಳ್ಗೆಯೇ ರಾಷ್ಟ್ರದ ಏಳ್ಗೆ ಎಂದರಿತ ಪೂಜ್ಯರು, ಕೇವಲ ಪ್ರಸಾದನಿಲಯದ ನಿರ್ಮಾಣದಿಂದ ತೃಪ್ತಿಗೊಳ್ಳದೆ, ಆದರ್ಶಯುತವಾದ ಭಾರತೀಯ ಸಂಸ್ಕೃತಿಯ ಮೌಲ್ಯಗಳು ನಮ್ಮ ಮಕ್ಕಳಲ್ಲಿ ಉಳಿಯಬೇಕು, ಮುಂದಿನ ಜನಾಂಗದಲ್ಲಿ ಬೆಳೆದು ಬರಬೇಕು ಎಂಬ ಸದುದ್ದೇಶದಿಂದ ಚಿಕ್ಕವಯಸ್ಸಿನ ಮಕ್ಕಳಿಗೆ ಮಹತ್ವದ ಶಿಕ್ಷಣ ನೀಡುವ ತೀರ್ಮಾನ ಕೈಕೊಂಡರು. ಇಂದಿನ ಅಣುಯುಗದಲ್ಲಿ ಭಾರತ ದೇಶದ ಮಕ್ಕಳು ಶಾಂತಿ ಸುಸಂಸ್ಕೃತಿಯಿಂದ ರಾರಾಜಿಸಲಿ ಎಂದು ಹರಸಿದರು. ಬಸವಾದಿ ಪ್ರಮಥರ ಆಧ್ಯಾತ್ಮಿಕ ವಿಚಾರಗಳನ್ನು ಪಾಲಿಸಿ, ಜಗತ್ತಿನ ಏಳ್ಗೆ ಮತ್ತು ಶಾಂತಿ ಸೌಹಾರ್ದತೆ ಮೂಡಲೆಂದು ಇಚ್ಛಿಸಿ ಶ್ರೀ ಸಿದ್ಧರಾಮೇಶ್ವರ ವಸತಿ ಶಾಲೆಯನ್ನು ೧೯೭೬ರಲ್ಲಿ ಸ್ಥಾಪಿಸಿರುವರು. ಇಂಥ ಮಹತ್ವದ ಶಾಲೆಯ ಸ್ಥಾಪನೆಗೆ ಅಂದಿನ ಸಲಹಾ ಮಂಡಳಿಯ ಸದಸ್ಯರ, ವ್ಯವಸ್ಥಾಪಕ ಮಂಡಳಿಯ ಸದಸ್ಯರ ಆಸಕ್ತಿ ಹೆಚ್ಚಿನ ಮಟ್ಟದಲ್ಲಿ ಕೆಲಸ ನಿರ್ವಹಿಸಿದೆ.

ಈ ಶಾಲಾಕಟ್ಟಡ ರಾಷ್ಟ್ರೀಯ ಹೆದ್ದಾರಿಯ ಮೇಲೆ ಜವಾಹರಲಾಲ ನೆಹರೂ ವೈದ್ಯಕೀಯ ಮಹಾವಿದ್ಯಾಲಯದ ಎದುರು ಇದ್ದು ೩೯೨ ವಿದ್ಯಾರ್ಥಿಗಳು ವಸತಿ, ಊಟ ಪಡೆಯುತ್ತಿದ್ದಾರೆ. ಭವ್ಯವಾದ ಕಟ್ಟಡ, ಪ್ರಶಾಂತ ವಾತಾವರಣ, ಆಶ್ರಮದ ನೆನಪನ್ನು ಮರುಕಳಿಸುವ ಪರಿಸರ ಇಲ್ಲಿದೆ. ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಲು, ವಿಚಾರ ವಿನಿಮಯ ಕೈಕೊಳ್ಳಲು ತಕ್ಕ ಅವಕಾಶ ಇಲ್ಲಿದೆ.

ಸಿದ್ಧರಾಮೇಶ್ವರ ಪ್ರೌಢಶಾಲೆ ಆಗಸ್ಟ್ ೧೬, ೧೯೮೩ರಲ್ಲಿ ಸಂಯುಕ್ತ ಪದವಿಪೂರ್ವ ಕಾಲೇಜು ಆಗಿ ಪರಿವರ್ತನಗೊಂಡಿದೆ.

ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ

ಪ್ರಾಚೀನ ಸಂಸ್ಕೃತ ಭಾಷೆಯ ಮಹತ್ವವನ್ನರಿತ, ಅದರ ಜ್ಞಾನದ ವಿಕಾಸವನ್ನರಿತ ಪೂಜ್ಯರು ಇಂದಿನ ಮಕ್ಕಳಿಗೆ ಅದರ ಸವಿಯನ್ನು ಉಣಬಡಿಸುವ ಯೋಜನೆ ಕೈಕೊಂಡಿರುವರು. ಪ್ರಸಾದನಿಲಯದ ಅಂಗವಾಗಿ ೧೯೬೪ರಲ್ಲಿ 'ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ'ಪ್ರಾರಂಭ ಮಾಡಿರುವರು.

ಶ್ರೀ ಪ್ರಭುದೇವ ಕಲ್ಯಾಣಮಂಟಪ, ಬೆಳಗಾವಿ

ಶಿವಬಸವಸ್ವಾಮಿಗಳದು ಸದಾ ಕ್ರಿಯಾತ್ಮಕ ಸ್ವಭಾವ. ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತರಾಗುವ ಮನೋಭಾವ. ಸಂಸ್ಥೆಯ ಬೆಳವಣಿಗೆ, ಶೈಕ್ಷಣಿಕ ಸಂಘಟನೆ, ಸಾಮಾಜಿಕ, ಸಾಂಘಿಕ ಚಟುವಟಿಕೆ ಸಮಾಜದ ಸ್ವಾಸ್ಥ್ಯವನ್ನು ಗಮನದಲ್ಲಿರಿಸಿಕೊಂಡ ಪೂಜ್ಯರು ತುಂಬ ಉಪಯುಕ್ತವಾದ ಒಂದು ಬೃಹತ್ ಕಟ್ಟಡ ನಿರ್ಮಿಸಲು ಸಂಕಲ್ಪ ಮಾಡಿದರು. ಇದಕ್ಕೆ ಮುಂದಾಳಾಗಿ ಬೆಳಗಾವಿಯ ಹಿಡದುಗ್ಗಿ ಪರಿವಾರದವರು ಮನಮುಟ್ಟಿ ಶ್ರಮಿಸಿದರು.

೨೮.೮.೧೯೭೭ರಲ್ಲಿ ಜಗದ್ಗುರು ಶ್ರೀ ನಿಜಲಿಂಗೇಶ್ವರ ಸ್ವಾಮಿಗಳು ಸಿದ್ಧಸಂಸ್ಥಾನಮಠ, ಇವರ ಅಮೃತಹಸ್ತದಿಂದ ಕಲ್ಯಾಣಮಂಟಪದ ಅಡಿಗಲ್ಲು ಸಮಾರಂಭ ನೆರವೇರಿತು. ೨೪ ಲಕ್ಷ ರೂ. ವೆಚ್ಚದ ಕಲ್ಯಾಣ ಮಂಟಪ ಕಟ್ಟಡಕ್ಕೆ ಬೆಳಗಾವಿ, ಸುತ್ತಲಿನ ಗಣ್ಯ ನಾಗರಿಕರು, ಅನೇಕ ಸಕ್ಕರೆ ಕಾರಖಾನೆಯವರು, ಊರ ಪ್ರಮುಖರು ಉದಾರವಾಗಿ ದಾನ ನೀಡಿರುವರು.

ಇಂಥ ಕಲ್ಯಾಣ ಮಂಟಪ ಇಂದು ಬೆಳಗಾವಿ, ಸುತ್ತಮುತ್ತಲಿನ ಗ್ರಾಮಸ್ಥರಿಗೆ ವಿವಾಹ, ಇತರ ಮಂಗಳಕಾರ್ಯಗಳಿಗೆ ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಿಗೆ ಬಹು ಪ್ರಶಸ್ತವಾದ ತಾಣವಾಗಿದೆ.

ಸಂಶೋಧನ ಸಂಸ್ಥೆ

ಸಂಶೋಧನ ಕಾರ್ಯ ಪೂಜ್ಯರಿಗೆ ತುಂಬ ಪ್ರಿಯವಾದುದು. ವೀರಶೈವ ಸಾಹಿತ್ಯ ಚರಿತ್ರೆಯ ಮಹತ್ವ ಮನಗಂಡ ಶ್ರೀಗಳು ವೀರಶೈವ ಸಾಹಿತ್ಯದ ಸಂಶೋಧನೆ, ಸಂಪಾದನೆ ಕಾರ್ಯಗಳ ಜವಾಬ್ದಾರಿ ಹೊತ್ತರು. ಅದಕ್ಕಾಗಿ ಒಂದು ಸ್ವತಂತ್ರ ಸಂಸ್ಥೆಯನ್ನೇ ಅಸ್ತಿತ್ವಕ್ಕೆ ತಂದರು. ಕೆಲವು ವರ್ಷಗಳ ಹಿಂದೆ ಏಕೋತ್ತರ ಶತಸ್ಥಲವನ್ನು ಪ್ರಕಟಿಸಿದ ಪ್ರಸ್ತುತ ಸಂಸ್ಥೆ ಈಗ ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಮಹಾಪುರಾಣ'ವನ್ನು ಬೆಳಕಿಗೆ ತಂದಿದೆ.

'ವೀರಶೈವಾಮೃತ ಮಹಾಪುರಾಣ' ವೀರಶೈವ ಶಿವಶರಣರ ಇತಿಹಾಸವನ್ನೊಳಗೊಂಡ ಕೃತಿ. ೮ ಸಾವಿರ ಪದ್ಯ, ೨ ಸಾವಿರ ಶ್ಲೋಕಗಳನ್ನೊಳಗೊಂಡ ಈ ಕೃತಿ ಕನ್ನಡದಲ್ಲಿ ತುಂಬ ಮಹತ್ವಪೂರ್ಣ ಇತಿಹಾಸವನ್ನು ಒಳಗೊಂಡುದು. ವೀರಶೈವ ಧರ್ಮ ತತ್ವಗಳನ್ನು ವಿವರಿಸುವಲ್ಲಿ ಇದೊಂದು ಅಧಿಕೃತ ಗ್ರಂಥವೆಂದು ಹೆಸರು ಪಡೆದಿದೆ. ಶ್ರೀಮಠ ಇಂದು ಮಹತ್ವಪೂರ್ಣ ಸಂಶೋಧನ ಪ್ರಬಂಧಗಳ ಪ್ರಕಟನಾ ಕಾರ್ಯವನ್ನು ಎತ್ತಿಕೊಂಡಿದ್ದು ಕರ್ನಾಟಕದಲ್ಲಿ ಸತಿಪದ್ಧತಿ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಡೆಪ್ಯುಟಿ ಚೆನ್ನಬಸಪ್ಪ ಮುಂತಾದವರ ಮಹತ್ವದ ಪ್ರಬಂಧಗಳನ್ನು ಪ್ರಕಟಿಸಿ ಓದುಗರಿಗೆ ಅನುಕೂಲ ಮಾಡಿಕೊಟ್ಟಿದೆ.

ವೀರಶೈವ ಅಧ್ಯಯನ ಅಕಾಡೆಮಿ

ನಾಗನೂರು ಮಠ ಇತ್ತೀಚೆಗೆ ಆರಂಭಿಸಿದ 'ವೀರಶೈವ ಅಧ್ಯಯನ ಅಕಾಡೆಮಿ' ಮೌಲ್ಯಯುಕ್ತ ಆದರ್ಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಾರಂಭವಾದ ಒಂದು ಸಾಂಸ್ಕೃತಿಕ ಸಂಸ್ಥೆ. ವೀರಶೈವಕ್ಕೆ ಸಂಬಂಧಪಟ್ಟ ಸಾಹಿತ್ಯ, ಕಲೆ, ಧರ್ಮ, ಸಮಾಜ, ಸಂಸ್ಕೃತಿಗಳ ಅಧ್ಯಯನ ಮತ್ತು ಪ್ರಸಾರ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿರುವ ಈ ಸಂಸ್ಥೆ ನಾಗನೂರು ರುದ್ರಾಕ್ಷಿಮಠದ ಒಂದು ಅಂಗಸಂಸ್ಥೆ.

ವೀರಶೈವ ಅಧ್ಯಯನ ಅಕಾಡೆಮಿಯ ಗೊತ್ತುಗುರಿಗಳು ಹೀಗಿವೆ :

೧. 'ವೀರಶೈವ ಪ್ರಾಚೀನ ಸಾಹಿತ್ಯ ಮಾಲೆ', 'ವೀರಶೈವ ಆಧುನಿಕ ಸಾಹಿತ್ಯ ಮಾಲೆ', 'ವೀರಶೈವ ಅನುವಾದ ಸಾಹಿತ್ಯ ಮಾಲೆ', 'ವೀರಶೈವ ಜನಪ್ರಿಯ ಸಾಹಿತ್ಯ ಮಾಲೆ', 'ಪಿಎಚ್.ಡಿ. ಪ್ರಬಂಧ ಮಾಲೆ', ಹೀಗೆ ಗ್ರಂಥ ಪ್ರಕಟನೆಗಾಗಿ ಐದು ಮಾಲೆಗಳನ್ನು ಅಸ್ತಿತ್ವಕ್ಕೆ ತಂದಿದೆ.

೨. ವಿಶೇಷೋಪನ್ಯಾಸ, ವಿಚಾರ ಸಂಕಿರಣ, ಕಾರ್ಯ ಶಿಬಿರ, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವ ಮೂಲಕ ವೀರಶೈವ ಸಾಮಾಜಿಕ, ಧಾರ್ಮಿಕ, ಐತಿಹಾಸಿಕ, ಶೈಕ್ಷಣಿಕ ಕ್ಷೇತ್ರಗಳನ್ನು ವಿದ್ವಾಂಸರ ಚಿಂತನೆಗೆ ಒಳಪಡಿಸುವುದು.

೩. ನಾಟಕ, ನರ್ತನ, ಸಂಗೀತ, ಚಿತ್ರ, ಶಿಲ್ಪ ಮಾಧ್ಯಮಗಳನ್ನು ವೀರಶೈವ ಪ್ರಸಾರಕ್ಕಾಗಿ ಬಳಸಿಕೊಳ್ಳುವುದು.

೪. ಆಧುನಿಕ ಪ್ರಸಾರ ಮಾಧ್ಯಮಗಳಾದ ವಿಡಿಯೋ ಚಿತ್ರೀಕರಣ, ಧ್ವನಿಸುರುಳಿ ಇತ್ಯಾದಿಗಳ ಮೂಲಕ ವೀರಶೈವ ಸಂಸ್ಕೃತಿಯನ್ನು ಸಂಗ್ರಹಿಸುವುದು, ಸಂರಕ್ಷಿಸುವುದು ಮತ್ತು ಪ್ರಸಾರಗೊಳಿಸುವುದು.

೫. ಗ್ರಂಥಾಲಯ, ವಸ್ತು ಪ್ರದರ್ಶನಾಲಯ, ಹಸ್ತಪ್ರತಿ ಗ್ರಂಥಾಲಯ ಮೊದಲಾದವುಗಳನ್ನು ಸ್ಥಾಪಿಸುವುದು.

೬. ಸಮಾಜಕ್ಕೆ ಅಪಾರ ಸೇವೆ ಸಲ್ಲಿಸಿರುವ, ತಮ್ಮ ಸಾಧನೆಯಿಂದ ಗಣ್ಯಸ್ಥಾನ ಪಡೆದಿರುವ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವುದು.

ಹೀಗೆ ಅಧ್ಯಯನ ಅಕಾಡೆಮಿ ಹಲವು ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಪ್ರವರ್ತವಾಗಿದೆ.ಅಕಾಡೆಮಿ ಕಾರ್ಯ ಪ್ರಾರಂಭಿಸಿದ ಕೆಲವೇ ವರ್ಷಗಳಲ್ಲಿ ಕರ್ನಾಟಕದ ಸಂಶೋಧನ ಸಂಸ್ಥೆಗಳಲ್ಲೆಲ್ಲ ಗಣ್ಯಸ್ಥಾನ ಪಡೆದಿದೆ. ಸಾಂಸ್ಕೃತಿಕ ಸಾಹಿತ್ಯಿಕ ವಿಚಾರಗೋಷ್ಠಿಗಳನ್ನಲ್ಲದೆ'ವೀರಶೈವ ಜನಪ್ರಿಯ ಸಾಹಿತ್ಯ ಮಾಲೆ' ಆರಂಭಿಸಿ ಆ ದಿಶೆಯಲ್ಲೂ ಕೆಲ ಪುಸ್ತಕಗಳನ್ನು ಪ್ರಕಟಪಡಿಸಿದೆ. ಇಂದು ವೀರಶೈವ ಅಧ್ಯಯನ ಅಕಾಡೆಮಿಯಿಂದ ಪ್ರಕಟವಾಗಿರುವ ೧೬ ಕೃತಿಗಳ ಪಟ್ಟಿಯನ್ನು ಇಲ್ಲಿ ಗಮನಿಸಬಹುದು.

ಶಿವದೀಪ್ತಿ-ಡಾ. ಆರ್.ಸಿ. ಹಿರೇಮಠ, ಚಿಂತನಚೇತನ-ಬಿ.ಎಸ್. ಪಾಟೀಲ, ವೀರಶೈವಾಮೃತ ಪುರಾಣ (I-II) (ಸಂ) ಡಾ. ಆರ್.ಸಿ. ಹಿರೇಮಠ, ಭವ್ಯಮಾನವ ಕಾವ್ಯದರ್ಶನ (ಸಂ) ಡಾ. ಗುರುಲಿಂಗ ಕಾಪಸೆ. ಡಾ. ಎಸ್.ಜಿ. ಘಿವಾರಿ, ಅಣ್ಣಪ್ಪ ಮಟ್ಟೀಕಲ್ಲಿ, ಉರಿಬರಲಿ ಸಿರಿಬರಲಿ -ಡಾ. ಆರ್. ಸಿ. ಹಿರೇಮಠ, ದಾನದಾಸೋಹಿ ದಾನಮ್ಮ - ಶಾಂತಾದೇವಿ ಮಾಳವಾಡ, ಶ್ರೀ ಬಸವೇಶ್ವರ ವಚನಾಮೃತ -(ಸಂ) ಡಾ. ಆರ್.ಸಿ. ಹಿರೇಮಠ, ಕಾಯಕಯೋಗಿ - ಡಾ. ವಿ.ಎಸ್. ಕಂಬಿ, ವೀರಶೈವ ವಿಚಾರ ಸಂಕಿರಣ - (ಸಂ) ಡಾ. ಸಾ. ಶಿ. ಮರುಳಯ್ಯ, ಶಿ.ಶಿ. ಬಸವನಾಳ, ಎಚ್. ಎಫ್. ಕಟ್ಟೀಮನಿ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ, ಡಾ. ಜಿ. ಎಮ್. ಹೆಗಡೆ, ಬೀಳಗಿ ಅರಸು ಮನೆತನ - (ಸಂ) ಡಾ. ಎಚ್.ಆರ್. ರಘುನಾಥ್‌ಭಟ್ - ಡಾ. ಎಂ.ಎಂ. ಕಲಬುರ್ಗಿ, - ಹಲಗಲಿ - ಒಂದು ಅಧ್ಯಯನ - ಶ್ರೀ ರಾಮ ಇಟ್ಟಣ್ಣವರ.

ಈ ಹದಿಮೂರು ಕೃತಿಗಳ ಜೊತೆಗೆ ಮೇಲೆ ಸೂಚಿಸಿದ ಮೂರು ಪಿಎಚ್.ಡಿ. ಪ್ರಬಂಧಗಳ ಪ್ರಕಟನೆ ಸೇರಿಸಿದರೆ ಅಧ್ಯಯನ ಅಕಾಡೆಮಿ ಕೆಲವೇ ಕಾಲದಲ್ಲಿ ಇದು ಮಾಡಿದ ಸಾಧನೆ, ಕೈಕೊಂಡ ಪುಸ್ತಕಗಳ ಪ್ರಕಟನೆ, ಗುಣಮಟ್ಟ ದೃಷ್ಟಿಯಿಂದ ಕೃತಿಗಳ ಮೌಲ್ಯವನ್ನು ಗುರುತಿಸಿದರೆ ಅಕಾಡೆಮಿಯ ಸ್ಥಾನಮಾನ ವಿದಿತವಾಗದೇ ಇರದು.

ಭಾಷಾಂತರ ವಿಭಾಗ

ಬಸವಾದಿ ಶರಣರು ಬರೆದ ವಚನ ಸಾಹಿತ್ಯದ ಮೌಲ್ಯ ಅನ್ಯದೇಶ ಭಾಷೆಗಳ ಮೂಲಕ ವಿದೇಶೀಯರಿಗೆ ತಲುಪಬೇಕು. ಅವರು ಅವುಗಳನ್ನು ಅರಿತು ಜೀವನ ಶುಚಿಗೊಳಿಸಿಕೊಳ್ಳಬೇಕೆಂಬ ಹಿರಿಯಾಸೆ ಶಿವಬಸವಸ್ವಾಮಿಗಳವರದು. ವಚನಸಾಹಿತ್ಯ ವನ್ನು ಇಂಗ್ಲೀಷ್, ಫ್ರೆಂಚ್, ರಶಿಯನ್ ಹಾಗೂ ಭಾರತೀಯ ಬೇರೆ ಬೇರೆ ಭಾಷೆಗಳಿಗೆ ತುರ್ಜುಮೆ ಮಾಡಿಸುವ ಕಾರ್ಯ ಹಿಂದಿನಿಂದಲೇ ಶ್ರೀಮಠದಲ್ಲಿ ನಡೆದುಬಂದಿದೆ. ಈಗಾಗಲೇ ಬಸವಣ್ಣನವರ ವಚನಗಳ ಮರಾಠಿ ಭಾಷಾಂತರ ಕಾರ್ಯ ಮುಕ್ತಾಯದ ಹಂತದಲ್ಲಿದೆ. ವಚನಸಾಹಿತ್ಯದ ಅನುಪಮ ಮೌಲ್ಯವನ್ನು ವಿಶ್ವಸಾಹಿತ್ಯಕ್ಕೆ ಪರಿಚಯಿಸಿ ಕೊಡಬೇಕೆನ್ನುವ ಶ್ರೀಮಠದ ಅದಮ್ಯ ಆಸಕ್ತಿ ಭಾರತೀಯರನ್ನಷ್ಟೇ ಅಲ್ಲ, ವಿದೇಶೀಯರನ್ನು ಬೆರಗುಗೊಳಿಸುವಂಥದು.

ಹಾಲಿನ ಕೇಂದ್ರ

ಹೆತ್ತ ತಂದೆ ಮಮತೆಯಿಂದ ಮಕ್ಕಳನ್ನು ಜೋಪಾನಮಾಡುವಂತೆ ಶಿವಬಸವಸ್ವಾಮಿಗಳವರು ಸಮಸ್ತ ವಿದ್ಯಾರ್ಥಿ ಬಳಗಕ್ಕೆ ಪಿತೃಸಮಾನರು, ಪೂಜ್ಯರು. ಮಕ್ಕಳೆಂದರೆ ಅವರಿಗೆ ತುಂಬ ಮಮತೆ. ಪ್ರಸಾದ ನಿಲಯಕ್ಕೆ ಬಂದ ವಿದ್ಯಾರ್ಥಿಗಳು

ಓದಿಗೆ ಕೊಡುವಷ್ಟೇ ಬೆಲೆ ಆರೋಗ್ಯಕ್ಕೂ ಕೊಡಬೇಕೆಂಬುದು ಪೂಜ್ಯರ ವಿಚಾರವಾಗಿತ್ತು. ಊಟದ ಜೊತೆಗೆ ಹಾಲು ಕೊಟ್ಟು ವಿದ್ಯಾರ್ಥಿಗಳ ಆರೋಗ್ಯವನ್ನು ಕಾಪಾಡಿಕೊಂಡು ಬಂದ ಅಪರೂಪದ ತಾಯಿಹೃದಯದ ಮನಸ್ಸು ಅವರದು. ಶ್ರೀಮಠದ ಆವರಣದಲ್ಲಿ ಡೈರಿಯೊಂದನ್ನು ಪ್ರಾರಂಭಿಸಿ ವಿದ್ಯಾರ್ಥಿಗಳು ಉಂಡು ಬಿಟ್ಟ ಆಹಾರ, ಮೂವತ್ತೇಳು ಎಕರೆಯಲ್ಲಿ ಹುಲ್ಲು ಬೆಳಸಿ ದನಗಳನ್ನು ಮೇಯಿಸಿ ಹಾಲು ಮಕ್ಕಳಿಗೆ, ಗೊಬ್ಬರ ಹೊಲಕ್ಕೆ – ಹೀಗೆ ನಡೆದಿತ್ತು ಅವರ ಕಲ್ಯಾಣಕಾರ್ಯ.

ಪ್ರಭುದೇವ ಪ್ರತಿಷ್ಠಾನ

ಶಿವಬಸವಸ್ವಾಮಿಗಳವರ ಉತ್ತರಾಧಿಕಾರಿಗಳು ಪ್ರಭುದೇವ ಸ್ವಾಮಿಗಳು. ಅಕಾಲದಲ್ಲಿ ಲಿಂಗೈಕ್ಯರಾದ ಪ್ರಭುದೇವ ಸ್ವಾಮಿಗಳವರ ನಿತ್ಯಸ್ಮರಣೆಗೆ ಪ್ರಭುದೇವ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದಿದೆ. ಈ ಪ್ರತಿಷ್ಠಾನದ ಮುಖ್ಯ ಉದ್ದೇಶ ಸಂಶೋಧನೆ, ಬೋಧನೆ, ಪ್ರಕಟನೆ. ಈ ಕಾರ್ಯಗಳಿಗಾಗಿ ಒಂದು ಸಂಶೋಧನ ಕೇಂದ್ರ ಸ್ಥಾಪಿಸಿದ್ದು, ನಾಡಿನ ಬೇರೆ ಬೇರೆ ಭಾಗಗಳಲ್ಲಿ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ಸಾಹಿತ್ಯಕ ವಿಷಯಗಳಿಗೆ ಸಂಬಂಧಪಟ್ಟ ಉಪನ್ಯಾಸಗಳನ್ನೇರ್ಪಡಿಸಿ ಪ್ರಕಟಿಸುವ ಯೋಜನೆ ಕೈಗೊಂಡಿವೆ.

ವಿಚಾರ ಸಂಕಿರಣ

ಇತ್ತೀಚೆಗೆ ಧಾರವಾಡದ ಸಿದ್ಧರಾಮೇಶ್ವರರ ಮಾರ್ಗದರ್ಶನದಲ್ಲಿ ಬೀಳಗಿ ಅರಸು ಮನೆತನದ ಬಗ್ಗೆ ಒಂದು ವಿಚಾರಗೋಷ್ಠಿ ಹಮ್ಮಿಕೊಂಡಿದ್ದು ತುಂಬ ವೈಶಿಷ್ಟ್ಯಪೂರ್ಣವಾಗಿತ್ತು. ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲೇ ವಿಶಿಷ್ಟ ಸ್ಥಾನಮಾನ ಪಡೆದ ಅರಸು ಮನೆತನ ಬೀಳಗಿಯವರದು. ಮೊದಮೊದಲು ಜೈನಧರ್ಮಾವಲಂಬಿಗಳಾಗಿದ್ದ ಬೀಳಗಿಯವರು ಅಪೂರ್ವವಾದ ರತ್ನತ್ರಯ ಬಸದಿ ಕಟ್ಟಿಸಿದ್ದಲ್ಲದೆ ಅಮೋಘ ಪಾಂಡಿತ್ಯಕ್ಕೆ ಪ್ರಸಿದ್ಧನಾದ ಭಟ್ಟಾಕಳಂಕನನ್ನು ಪ್ರೋತ್ಸಾಹಿಸಿದ್ದರು. ಕಾಲಾಂತರದಲ್ಲಿ ಶೈವ-ವೀರಶೈವ ಮತದತ್ತ ಹೆಚ್ಚಿನ ಒಲವು ತೋರಿದ ಬೀಳಗಿಯವರು ವೀರಶೈವರಾಗಿ ಪರಿವರ್ತನೆಗೊಂಡಿರುವರು. ಬೀಳಗಿ ದೊರೆ ಶಿವಭಕ್ತನಾದ ಘಂಟೇಂದ್ರ ಕಾಡುಮಠದ ಶಾಂತಬಸವರಾಜದೇವರ ಶಿಷ್ಯನಾಗಿದ್ದವನು. ನಿಷ್ಠಾವಂತ ಜಂಗಮ ಗುರುಗಳ ವರ್ಚಸ್ಸು ಬೀಳಗಿ ಅರಸರ ಮೇಲೆ ಅಧಿಕ ಪ್ರಭಾವ ಬೀರಿತು. ಇಂಥ ವೀರಶೈವ ಅರಸು ಮನೆತನದ ವಿಚಾರ ಸಂಕಿರಣವನ್ನು ಹಮ್ಮಿಕೊಂಡು ನಾಡಿನ ಮೂಲೆ ಮೂಲೆಗಳಿಂದ ಅನೇಕ ವಿದ್ವಾಂಸರನ್ನು ಕರೆಸಿ, ಅವರಿಂದ ಬೀಳಗಿ ಅರಸರ ಕಲೆ, ಸಾಹಿತ್ಯ, ಸಂಸ್ಕೃತಿ, ಧರ್ಮ, ಸಮಾಜಕ್ಕೆ ಸಂಬಂಧ ಪಟ್ಟಂತೆ ಪ್ರಬಂಧ ಮಂಡಿಸಿ ಅದನ್ನು ಪುಸ್ತಕ ರೂಪದಲ್ಲಿ ೧೯೯೫ರಲ್ಲಿ ಪ್ರಕಟಿಪಡಿಸಿದ್ದು ವೀರಶೈವ ಅಧ್ಯಯನ ಅಕಾಡೆಮಿ. ಡಾ. ರಘುನಾಥಭಟ್, ಡಾ. ಎಂ. ಎಂ. ಕಲಬುರ್ಗಿ – ಈ ಇಬ್ಬರು ವಿದ್ವಾಂಸರ ಸಂಪಾದಕತ್ವದಲ್ಲಿ ಪ್ರಕಟವಾದ 'ಬೀಳಗಿ ಅರಸುಮನೆತನ' ಅಧ್ಯಯನ ಅಕಾಡೆಮಿ ಪ್ರಕಟಿಸಿದ ವೀರಶೈವ ರಾಜಮನೆತನಗಳಲ್ಲಿ ಅಪರೂಪವಾದ ಒಂದು ಮನೆತನದ ಇತಿಹಾಸ.

ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ

ಇತ್ತೀಚೆಗೆ ಬೆಂಗಳೂರಿನ ಕರ್ನಾಟಕ ಇತಿಹಾಸ ಅಕಾಡೆಮಿಯವರು ೯ನೆಯ ವಾರ್ಷಿಕ ಅಧಿವೇಶನವನ್ನು ಬೆಳಗಾವಿಯ ವೀರಶೈವ ಅಧ್ಯಯನ ಅಕಾಡೆಮಿಯ ಮೂಲಕ ಮೂರು ದಿವಸ ಅದ್ದೂರಿಯಾಗಿ ಆಚರಿಸಿದ್ದು ಗಮನಿಸುವಂಥದು. ನಾಡಿನ ಹಿರಿಕಿರಿಯ ಸಂಶೋಧಕ ವಿದ್ವಾಂಸರು ಬರೆದು ತಂದ ಹೊಸ ಹೊಸ ಸಂಶೋಧನೆಯ ಪ್ರಬಂಧಗಳನ್ನು ಮೂರು ದಿವಸ ಮಂಡಿಸಿ ಚಿಂತನಮಂಥನ ಕೈಕೊಂಡ ವಿಚಾರಸಂಕಿರಣ ತುಂಬ ಯಶಸ್ವಿಯಾಗಿ ಮುಕ್ತಾಯಗೊಂಡ ವಾರ್ಷಿಕ ಸಮ್ಮೇಳನ. ಸುಮಾರು ೧೦೦ಕ್ಕೂ ಹೆಚ್ಚು ಸಂಶೋಧಕರು ೧೯೯೫ ಸೆಪ್ಟಂಬರ ೯.೧೦.೧೧ ರಂದು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಪ್ರಬಂಧ ಓದಿದ್ದು ಅಧ್ಯಯನ ಅಕಾಡೆಮಿಯ ಶಿಸ್ತನ್ನು, ವಿಚಾರಸಂಕಿರಣದ ಬಗ್ಗೆ ಅವರಿಗಿದ್ದ ಆಸ್ಥೆಯನ್ನು ವ್ಯಕ್ತಪಡಿಸುವಂತಿದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಹಿರಿಯ ಇತಿಹಾಸಕಾರ ಡಾ. ಎ.ವಿ. ನರಸಿಂಹಮೂರ್ತಿ ಯವರನ್ನೊಳಗೊಂಡು ಸಂಘಟನೆಯ ಹಿರಿಯ ವಿದ್ವಾಂಸರಾದ ಡಾ. ಜಿ. ಎಸ್. ದೀಕ್ಷಿತ್, ಡಾ. ಸೂರ್ಯನಾಥ ಕಾಮತ್ ನಾಡಿನ ಎಲ್ಲೆಡೆಯಿಂದ ಆಗಮಿಸಿದ ಹಿರಿಕಿರಿಯ ಸಂಶೋಧಕರು ಅಕಾಡೆಮಿಯ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಹೊಗಳಿಯೇ ಹೊಗಳಿದ್ದು. ನಾಗನೂರಿನ ರುದ್ರಾಕ್ಷಿಮಠ ಹೀಗೆ ವಿಭಿನ್ನ ಕಾರ್ಯಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅವನ್ನು ನಿರ್ವಹಿಸುತ್ತ ಬಂದುದು ಒಂದು ವಿಶೇಷವೆನ್ನಬೇಕು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ಶಿವಬಸವ ಸ್ವಾಮಿಗಳ ಸಹಾಯಹಸ್ತ ಹೊರಗಿನ ಸಂಸ್ಥೆಗಳಿಗೂ ಸಂದುದು. ವೀರಶೈವರ ಕೇಂದ್ರ ಶಿವಯೋಗ ಮಂದಿರ, ಘಟಪ್ರಭಾದ ಶ್ರೀಗುರುಸಿದ್ಧೇಶ್ವರ ಕೋ-ಅಪರೇಟಿವ್ ಹಾಸ್ಪಿಟಲ್,

ಅಖಿಲಭಾರತ ಶಿವಾನುಭವ ಸಂಸ್ಥೆ ತಮ್ಮದೇ ಆದ ಧಾರವಾಡದ ಸಿದ್ಧರಾಮೇಶ್ವರ ಮಾರ್ಗದರ್ಶಿ ಮುಂತಾದವು ಪ್ರಮುಖ ಸಂಸ್ಥೆಗಳು.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳು ಹಾಗೂ ಪ್ರಸಾದ ನಿಲಯಗಳು

ಶಿವಬಸವ ಸ್ವಾಮಿಗಳವರ ದಿವ್ಯದೃಷ್ಟಿ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಸದಾ ಇರುತ್ತಿತ್ತು. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಯಾವ ಸಂಸ್ಥೆ ಕಾರ್ಯಪ್ರವೃತ್ತವಾದರೂ ಪೂಜ್ಯರು ಅದಕ್ಕೆ ತಮ್ಮ ಸಹಾಯ ಹಸ್ತ ಚಾಚದೇ ಬಿಟ್ಟಿಲ್ಲ. ಹುಕ್ಕೇರಿಯಲ್ಲಿ ಪ್ರಾರಂಭವಾದ ಕಾಲೇಜಿಗೆ ಶ್ರೀಗಳು ಉದಾರ ಧನಸಹಾಯ ಮಾಡಿರುವರು. ನಾಗನೂರಿನಲ್ಲಿ ಹೈಸ್ಕೂಲು ಸ್ಥಾಪಿಸಲು ಒಂದು ಲಕ್ಷಕ್ಕಿಂತಲೂ ಹೆಚ್ಚು ಬೆಲೆಬಾಳುವ ಮೂರು ಎಕರೆ ಭೂಮಿಯನ್ನು ಅಲ್ಲಿಯ ಒಂದು ಶಿಕ್ಷಣ ಸಂಸ್ಥೆಗೆ ಉಚಿತವಾಗಿ ಕೊಟ್ಟಿರುವರು. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಪ್ರಸಾದನಿಲಯವನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ಮನಗಂಡು ಬೈಲಹೊಂಗಲದಲ್ಲಿ ಒಂದು ಪ್ರಸಾದನಿಲಯವನ್ನು ಪ್ರಾರಂಭಿಸಿರುವರು.

ಯಾವುದೇ ಗ್ರಾಮ ಆರ್ಥಿಕವಾಗಿ ಹಿಂದುಳಿದಿದ್ದರೆ ಅಲ್ಲೊಬ್ಬ ಸ್ವಾಮಿಗಳು ಅಥವಾ ಮಠದವರು, ಪ್ರಸಾದನಿಲಯವನ್ನು ಸ್ಥಾಪಿಸಿ ಮಕ್ಕಳಿಗೆ ಉಚಿತವಾಗಿ ಊಟ ಬಟ್ಟೆ ಪಾಟಿ ಪುಸ್ತಕಗಳ ವೆಚ್ಚ ಜೊತೆಗೆ ಆವಶ್ಯಕತೆ ಇದ್ದರೆ ಅನುಕೂಲತೆ ಕಲ್ಪಿಸಿಕೊಟ್ಟು ಅಲ್ಲಿಯ ಮಕ್ಕಳನ್ನು ಜ್ಞಾನಿಗಳನ್ನಾಗಿ ಪರಿವರ್ತಿಸುವ ಕಲೆ ಶಿವಬಸವಸ್ವಾಮಿಗಳವರಿಗೆ ಕರಗತವಾಗಿತ್ತು. ಅದಕ್ಕಾಗಿ ಹಳ್ಳಿಗಳತ್ತ ಪ್ರಸಾದ ನಿಲಯಗಳನ್ನು ಕೊಂಡೊಯ್ದು ಹಳ್ಳಿಯ ಮುಗ್ಧತೆಯನ್ನು ಬಿಡಿಸಿ ಅವರನ್ನು ಜ್ಞಾನವಂತರನ್ನಾಗಿ ಮಾಡುವ ಅಪ್ಪಗಳವರ ಜಾಣ್ಮೆ ತುಂಬ ಗಮನಾರ್ಹ.

ಶಿವಯೋಗ ಮಂದಿರ

ವೀರಶೈವರ ಆತ್ಮ ಶಿವಯೋಗಮಂದಿರ. ಅದಕ್ಕೆ ಪ್ರಾಣ ಸ್ವರೂಪರಾಗಿದ್ದವರು ಹಾನಗಲ್ಲು ಕುಮಾರಸ್ವಾಮಿಗಳವರು. ಶಿವಬಸವ ಸ್ವಾಮಿಗಳವರಿಗೆ ಅವರು ಪೂಜ್ಯ ಸ್ವರೂಪರು. ಶಿವಯೋಗಮಂದಿರ ಶ್ರೀಗಳವರ ವ್ಯಕ್ತಿತ್ವವನ್ನು ಅರಳಿಸಿದ ದಿವ್ಯಕೇಂದ್ರವೆನಿಸಿತ್ತು.

ಶಿವಯೋಗ ಮಂದಿರದ ಅಧ್ಯಕ್ಷರಾಗಿದ್ದ ಹಾವೇರಿ ಹುಕ್ಕೇರಿ ಮಠಾಧ್ಯಕ್ಷರಾದ ಶ್ರೀ ಶಿವಬಸವಸ್ವಾಮಿಗಳು ಲಿಂಗೈಕ್ಯರಾಗಿದ್ದರು. ಆ ಸ್ಥಾನಕ್ಕೆ ಸಮರ್ಥ ಗುರುಗಳೊಬ್ಬರನ್ನು ತರುವ ಪ್ರಯತ್ನ ನಡೆದಿತ್ತು. ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳೂ, ಹಾಲಕೆರೆಯ ಅನ್ನದಾನ ಮಹಾಸ್ವಾಮಿಗಳೂ ಆಲೋಚನೆ ಮಾಡಿ ನಾಗನೂರು ಶಿವಬಸವಸ್ವಾಮಿಗಳನ್ನು ಆಯ್ಕೆ ಮಾಡಿದರು. ಆ ಪೂಜ್ಯರ ಅಣತಿ ಶಿವಯೋಗ ಮಂದಿರದ ಬಗೆಗಿರುವ ಪೂಜ್ಯಭಾವನೆ ಶಿವಬಸವಸ್ವಾಮಿಗಳನ್ನು ಒಪ್ಪುವಂತೆ ಮಾಡಿತು. ೧೯೪೮ರಲ್ಲಿ ಶಿವಬಸವಸ್ವಾಮಿಗಳು ಶಿವಯೋಗ ಮಂದಿರದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು. ೧೯೫೭ರ ವರೆಗೆ ಆ ಸ್ಥಾನದಲ್ಲಿ ಕೆಲಸ ಮಾಡಿದರು. ಆರ್ಥಿಕ ದೃಷ್ಟಿಯಿಂದ ಮುಗ್ಗಟ್ಟನ್ನು ಎದುರಿಸುತ್ತಿದ್ದ ಶಿವಯೋಗ ಮಂದಿರ ಎಂಟುವರ್ಷಗಳ ಅವಧಿಯಲ್ಲಿ ಅಲ್ಲಿಯ ಚಟುವಟಿಕೆಗಳನ್ನು ಚುರುಕುಗೊಳಿಸಿ ಹೊಸ ಯೋಜನೆಗಳನ್ನು ಅಳವಡಿಸಿ ಆರ್ಥಿಕ ಮುಗ್ಗಟ್ಟನ್ನು ಬಿಡಿಸಿ ಸುಮಾರು ೨ ಲಕ್ಷ ರೂ. ಉಳಿಸಿದರು. ಕಾರ್ಯಬಾಹುಳ್ಯದಿಂದ ೧೯೫೭ ರಲ್ಲಿ ಅಧ್ಯಕ್ಷ ಪದವಿಯಿಂದ ಹಿಂದೆ ಸರಿದರು. ಆದರೆ ೧೦ವರ್ಷಗಳ ನಂತರ ಮತ್ತೆ ಕರೆ ಬರಲು ಶಿವಬಸವಸ್ವಾಮಿಗಳು ಗುರುಗಳಾದ ಹಾಲಕೆರೆ ಅನ್ನದಾನಸ್ವಾಮಿಗಳು ಹಾಗೂ ಹಾನಗಲ್ಲು ಸದಾಶಿವಸ್ವಾಮಿಗಳ ಕೋರಿಕೆಯಂತೆ ಅಧ್ಯಕ್ಷ ಪದವಿ ಸ್ವೀಕರಿಸಿ ಅನೇಕ ಸ್ಮರಣೀಯ ಕಾರ್ಯಗಳನ್ನು ಮಾಡಿ ಸ್ವಾಮಿ ಸೇವೆಯನ್ನು ಕೈಕೊಂಡರು.

ಶ್ರೀ ಗುರುಸಿದ್ದೇಶ್ವರ ಕೋ-ಆಪರೇಟಿವ್ ಹಾಸ್ಪಿಟಲ್, ಘಟಪ್ರಭಾ

ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಸ್ಥಾಪಿಸಿದ ಕೋ-ಆಪರೇಟಿವ್ ಹಾಸ್ಪಿಟಲ್ ಒಂದು ದೊಡ್ಡ ಸಂಸ್ಥೆ. ಲಕ್ಷಾಂತರ ಬಡಜನರಿಗೆ ಔಷಧೋಪಚಾರ ಪೂರೈಸುತ್ತಿರುವ ಇದರ ಸೇವೆ ಗಮನಾರ್ಹ. ಶಿವಬಸವಸ್ವಾಮಿಗಳವರು ಕೆಲಕಾಲ ಇದರ ಅಧ್ಯಕ್ಷರಾಗಿ ಸರ್ವತೋಮುಖ ಅಭಿವೃದ್ಧಿಯ ಕಾರ್ಯ ಕೈಕೊಂಡಿರುವರು.

ಅಖಿಲ ಭಾರತ ಶಿವಾನುಭವ ಸಮ್ಮೇಳನ

ಶ್ರೀಗಳವರು ಕೈಕೊಂಡ ಮಹತ್ವದ ಕಾರ್ಯಗಳಲ್ಲಿ ಅಖಿಲಭಾರತ ಶಿವಾನುಭವ ಸಮ್ಮೇಳನವೂ ಒಂದು. ಬೆಳಗಾವಿಯ ಲಿಂಗರಾಜ ಕಾಲೇಜಿನ ಬಯಲಲ್ಲಿ, ಸುಂದರವಾದ ಮಂಟಪದಲ್ಲಿ ಜರುಗಿದ ಅರ್ಥಪೂರ್ಣ ಸಮ್ಮೇಳನವಿದು. ತುಮಕೂರಿನ ಸಿದ್ಧಗಂಗಾಮಠದ ಪರಮಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಧಾರವಾಡದ ಮೃತ್ಯುಂಜಯ ಅಪ್ಪಗಳವರು ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು. ಈ ವ್ಯವಸ್ಥೆಯ ಕೇಂದ್ರಶಕ್ತಿ ಶಿವಬಸವಸ್ವಾಮಿಗಳೆನಿಸಿದ್ದರು. ಅಂದಾಗ ಕೇಳಬೇಕೆ? ಸಮಾರಂಭ ತುಂಬ ಯಶಸ್ವಿಯಾಗಿ ಜರುಗಿತು.

ಇಂಥ ದಯಾಮಯಿ, ಕಾಯಕಯೋಗಿ, ರಾಷ್ಟ್ರೀಯ ಚೇತನ ಎನಿಸಿದ್ದ ನಾಗನೂರಿನ ರುದ್ರಾಕ್ಷಿಮಠದ ಶಿವಬಸವಸ್ವಾಮಿಗಳ ಸೇವೆಯನ್ನು ಮನಗಂಡ ಕರ್ನಾಟಕ ವಿಶ್ವವಿದ್ಯಾಲಯ, ೧೯೮೮ರಲ್ಲಿ ಜರುಗಿದ ತನ್ನ ೪೦ನೆಯ ಘಟಿಕೋತ್ಸವದಲ್ಲಿ ಅವರಿಗೆ 'ಗೌರವ ಡಾಕ್ಟರೇಟ್' ಪ್ರಶಸ್ತಿಯನ್ನಿತ್ತು ಗೌರವಿಸಿ ತನ್ನ ಗೌರವ ಹೆಚ್ಚಿಸಿಕೊಂಡಿದೆ.

ರುದ್ರಾಕ್ಷಿಮಠದ ಉತ್ತರಾಧಿಕಾರ

ರುದ್ರಾಕ್ಷಿಮಠದ ಶಿವಬಸವಸ್ವಾಮಿಗಳು ಹಿರಿಯರ ಆಣತಿಯಂತೆ ಕೋವಾಡದ ಹಿರಿಯಮಠದ ಶ್ರೀ ಪ್ರಭುಸ್ವಾಮಿಗಳನ್ನು ತಮ್ಮ ೮ನೆಯ ಉತ್ತರಾಧಿಕಾರಿಗಳನ್ನಾಗಿ ನಿಯಮಿಸಿದರು. "ಶ್ರೀ ಗುರು ಕುಮಾರೇಶ್ವರನ ಕೃಪೆಯಿಂದ ಅತಿ ಚಿಕ್ಕದಾಗಿ ಪ್ರಾರಂಭವಾದ ಈ ಪ್ರಸಾದನಿಲಯ ಹೆಮ್ಮರವಾಗಿ ಬೆಳೆದಿದೆ. ಗುರುಗಳ ಆಶೀರ್ವಚನದಂತೆ ಪ್ರಸಾದದಲ್ಲಿ ಪರಮಾತ್ಮನಿರುವನು. ಆ ಪ್ರಸಾದ ವಿತರಣೆಯು ಈ ಮಠದ ಧ್ಯೇಯವಾಗಲಿ. ಇಲ್ಲಿ ತಲೆಯೆತ್ತಿದ ಅನೇಕ ಸಂಸ್ಥೆಗಳು ನಿಮ್ಮ ಉದಾರ ಅಂತಃಕರಣದಿಂದ ಉತ್ತರೋತ್ತರವಾಗಿ ಬೆಳೆಯಲಿ" ಎಂದು ಮನದುಂಬಿ ಹರಸಿದರು.

ಗುರುಗಳ ತುಂಬುಮನದ ಕೋರಿಕೆಯಂತೆ ಪ್ರಭುಸ್ವಾಮಿಗಳವರು ಅತ್ಯಂತ ಚಟುವಟಿಕೆಯುಳ್ಳವರಾಗಿ ಅತ್ಯಲ್ಪಕಾಲದಲ್ಲಿ ತಮ್ಮ ನಿಷ್ಕಾಪೂರ್ಣ ಸೇವೆಯಿಂದ ಶಿವಬಸವಸ್ವಾಮಿಗಳ ಮನ ಗೆದ್ದರು. ದೈವಸಂಕಲ್ಪದಂತೆ ಅಷ್ಟೇ ಬೇಗ ಪರಮಾತ್ಮನಿಗೆ ಪ್ರಿಯರಾದರು.

ಶಿವಬಸವಸ್ವಾಮಿಗಳವರ ಪರಿಶುದ್ಧ ಮನಸ್ಸು, ಮಾತೃಹೃದಯದ ಅಂತಃಕರಣ, ಬದುಕಿನ ಪುಣ್ಯ ಕೆನೆಗಟ್ಟಿದಂತೆ ಗುರುಪಾದದೇವರೆಂಬವರು ೯ನೆಯ ಉತ್ತರಾಧಿಕಾರಿಗಳಾಗಿ ಶ್ರೀಮಠದ ಕೀರ್ತಿಯನ್ನು ಬೆಳಗುತ್ತಿದ್ದಾರೆ. ಸಿದ್ಧರಾಮಸ್ವಾಮಿಗಳೆಂದು ನಾಮಕರಣಹೊಂದಿದ ಪೂಜ್ಯರು ತಮ್ಮ ವಿನಮ್ರ ಮನೋಭಾವ, ಸದುವಿನಯ, ಗೌರವಪೂರ್ಣ ಗಾಂಭೀರ್ಯ ನಡೆನುಡಿಗಳಿಂದ ಶಿವಬಸವಸ್ವಾಮಿಗಳವರ ಮನ ಗೆದ್ದರು. ಅಪ್ಪಗಳವರ ಕನಸನ್ನು ನನಸು ಮಾಡುತ್ತಿರುವವರು. ಕಾಶಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಎಂ. ಎ. ಪದವೀಧರರಾಗಿ ಸಂಸ್ಕೃತ, ತತ್ವಶಾಸ್ತ್ರ, ವಚನಶಾಸ್ತ್ರದಲ್ಲಿ ಅಪಾರಪಾಂಡಿತ್ಯ ಸಂಪಾದಿಸಿಕೊಂಡಿರುವವರು. ಗುರು ಮುಟ್ಟಿ ಗುರುವಾದವರು, ಗುರುಸೇವೆಯಿಂದ ಪುನೀತಗೊಂಡವರು. ಹೆತ್ತತಾಯಿ ಸ್ವರೂಪದ ಶತಸಂವತ್ಸರ ಕಂಡ ಗುರುವಿಗೆ ತಕ್ಕ ಉತ್ತರಾಧಿಕಾರಿಯಾದವರು.

ಸಿದ್ಧರಾಮಸ್ವಾಮಿಗಳವರ ಗೌರವಪೂರ್ಣ ಕಿರೀಟಕ್ಕೆ ಸಿಕ್ಕಿಸಿದ ನೂತನ ತುರಾಯಿ ಧಾರವಾಡದ 'ಸಿದ್ಧರಾಮೇಶ್ವರ ಮಾರ್ಗದರ್ಶಿ ಸಂಸ್ಥೆ'.

ಧಾರವಾಡದ ಸಿದ್ಧರಾಮೇಶ್ವರ ಮಾರ್ಗದರ್ಶಿ

ಸಾಂಸ್ಕೃತಿಕ ತೊಟ್ಟಿಲೆನಿಸಿದ ಧಾರವಾಡದ ಪ್ರಕೃತಿ ಪರಿಸರದ ಪ್ರತಿಷ್ಠಿತ ಬಡಾವಣೆ ಕಲ್ಯಾಣನಗರದಲ್ಲಿ ೧೯೯೨ ರಿಂದ ಮುನ್ನಡೆದಿರುವ 'ಸಿದ್ಧರಾಮೇಶ್ವರ ಮಾರ್ಗದರ್ಶಿ' ಮಹತ್ವದ ಸಂಸ್ಥೆಯಾಗಿದೆ.

ಪೂಜ್ಯ ಶಿವಬಸವಸ್ವಾಮಿಗಳವರು ಕರ್ನಾಟಕದ ಯುವಕರು ಆಯ್.ಎ.ಎಸ್., ಆಯ್.ಪಿ.ಎಸ್. ಮುಂತಾದ ಅಖಿಲಭಾರತ ಆಡಳಿತ ಹುದ್ದೆಗಳಲ್ಲಿ ಆಯ್ಕೆಗೊಳ್ಳಬೇಕೆಂಬ ಅಭೀಪ್ಸೆಯಿಂದ ಬೆಂಗಳೂರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಕೇಂದ್ರವನ್ನು ಎರಡು ಮೂರು ವರ್ಷ ನಡೆಸಿದ್ದರು. ಅದು ೧೯೯೨ ರಿಂದ ಧಾರವಾಡಕ್ಕೆ ಬಂದಿದೆ. ನಮ್ಮ ಯುವಕ ಯುವತಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಗಳನ್ನು, ಮತ್ತಿತರ ವೃತ್ತಿಮಾರ್ಗದರ್ಶನವನ್ನು ಸಮರ್ಥವಾಗಿ ನೀಡಲು ಶ್ರೀಮಠ ಅಹರ್ನಿಶಿ ಶ್ರಮಿಸುತ್ತದೆ. ಧಾರವಾಡದ ಅನುಭವಿ ಹಿರಿಯ ಪ್ರಾಧ್ಯಾಪಕರು, ಗಣ್ಯ ನಾಗರಿಕರು ಹತ್ತಾರು ಯೋಜನೆಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಶ್ರೇಯೋಭಿಲಾಷೆಗೆ ಮನಮುಟ್ಟಿ ಶ್ರಮಿಸುತ್ತಿರುವರು. ಆಯಾ

ವಿಷಯದ ತಜ್ಞರಿಂದ ಬೋಧನ ಮಾರ್ಗದರ್ಶನ ಒದಗಿಸಲಾಗುತ್ತಿದೆ. ಇಲ್ಲಿ ಜರುಗಿಸಿದ ತರಬೇತಿಗಳು (೧) ಭಾರತೀಯ ಆಡಳಿತ ಸೇವೆ (ಆಯ್.ಎ.ಎಸ್.) (೨) ಭಾರತೀಯ ಅರಣ್ಯ ಸೇವೆ (ಆಯ್.ಎಫ್.ಎಸ್) (೩) ಕರ್ನಾಟಕ ಆಡಳಿತ ಸೇವೆ (ಕೆ.ಎ.ಎಸ್. ಕ್ಲಾಸ್ ೧ ಮತ್ತು ೨) (೪) ರಾಷ್ಟ್ರೀಯ ಪ್ರತಿಭಾ ವಿದ್ಯಾರ್ಥಿವೇತನ ಪರೀಕ್ಷೆ (೫) ಯು.ಜಿ.ಸಿ.ಎಸ್.ಆಯ್.ಆರ್. ನಡೆಸುವ ಅಖಿಲಭಾರತ ಶಿಕ್ಷಣ ಪರೀಕ್ಷೆಗಳು (೬) ಎಂಜನಿಯರಿಂಗ್ ಕಾಲೇಜು ಸಾಮಾನ್ಯ ಪ್ರವೇಶ ಪರೀಕ್ಷೆ (೭) ವ್ಯಕ್ತಿತ್ವ ವಿಕಾಸ ತರಬೇತಿ, ಮುಂತಾದವು ಮುಖ್ಯ. ಇಲ್ಲಿಯವರೆಗೆ ಈ ತರಬೇತಿಯಿಂದ ಬಂದ ಫಲಿತಾಂಶ ಗಮನಿಸಿದರೆ ಉಜ್ವಲ ಭವಿಷ್ಯ ಪ್ರಯತ್ನಿಸುವ ಮಕ್ಕಳಿಗೆ ಕಾಯ್ದಿದೆ ಎಂದು ಹೇಳಬಹುದು.

ಯುವಕರಲ್ಲಿ ಹುದುಗಿದ ಸುಪ್ತಶಕ್ತಿಯನ್ನು ಜಾಗೃತಗೊಳಿಸಿ ಅವರ ವ್ಯಕ್ತಿತ್ವವನ್ನು ವಿಕಸನಗೊಳಿಸಿ ಅವರು ಉನ್ನತ ಹುದ್ದೆಗಳಿಗೆ ಆಯ್ಕೆಯಾಗಲು ಕ್ಷಮತೆ ಪಡೆಯುವಂತೆ ತರಬೇತಿ ಮಾರ್ಗದರ್ಶನ, ವ್ಯಕ್ತಿಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಬಗೆಗೆ ಅರಿಯಲಿಚ್ಛಿಸುವವರಿಗೆ ಸೂಕ್ತ ವೈಯಕ್ತಿಕ ಸಲಹೆ ಸೂಚನೆಗಳು, ಗುಂಪು ಚರ್ಚೆ, ಸ್ಪರ್ಧಾತ್ಮಕ ಪರೀಕ್ಷೆಗಳು ಇಲ್ಲಿನ ಆಕರ್ಷಕ ತರಬೇತಿ.

'ಸಿದ್ಧರಾಮೇಶ್ವರ ಮಾರ್ಗದರ್ಶಿ'ಯ ಭಾವೀ ಯೋಜನೆಯಲ್ಲಿ ಎರಡನೆಯ ವರ್ಷದ ಪ. ಪೂ. ವಿದ್ಯಾರ್ಥಿಗಳಿಗೆ ತರಬೇತಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಸ್ಪರ್ಧೆಗಳು, ಗ್ರಂಥಾಲಯ, ವೃತ್ತಿಮಾರ್ಗದರ್ಶನ ಮುಂತಾದವು ಮುಖ್ಯವಾಗಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ದೊಡ್ಡ ಕನಸೊಂದಿದೆ. ಶಿಶುವಿಹಾರದಿಂದ ಮೊದಲ್ಗೊಂಡು ಉಚ್ಚಶಿಕ್ಷಣದ ವರೆಗೆ ಒಂದೇ ಆವರಣದಲ್ಲಿ ಸೌಲಭ್ಯ ಕಲ್ಪಿಸಿ ಪಠ್ಯಕ್ರಮ ಬೋಧನೆಯ ಜೊತೆಜೊತೆಗೆ ಎಳತನದಿಂದಲೇ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಗೊಳಿಸುವ ಯೋಜನೆಯಿದು. ಜಾತಿ ಮತ ಕೋಮುಗಳನ್ನು ಮೆಟ್ಟಿನಿಂತು ಪ್ರತಿಭೆಗೆ ಬೆಲೆಕೊಡುವ ಏಕಮೇವ ಸಂಸ್ಥೆಯಿದು.

ಹೀಗೆ ನಾಗನೂರಿನ ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳು ಒಂದು ಸಂಸ್ಥೆಯಾಗಿ ಕನ್ನಡನಾಡಿನ ಅಭಿವೃದ್ಧಿ ಪರ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡುದು, ಅವರ ಜ್ಞಾನತೇರನ್ನು ಅಷ್ಟೇ ಜೋಕೆ ತೂಕದಿಂದ ಮುಂದೆ ಮುಂದೆ ಸಾಗಿಸುತ್ತಿರುವ ಸಿದ್ಧರಾಮಸ್ವಾಮಿಗಳವರು ಸದಾ ಧನ್ಯರು; ಸದಾ ಮಾನ್ಯರು.

○

ಅಥಣಿಯ ಶ್ರೀ ಶಿವಯೋಗಿಶ್ವರ ಮಠದ ಕೊಡುಗೆ

ಲೀಲಾದೇವಿ ಆರ್. ಪ್ರಸಾದ್

"ನಿಂದ ನೆಲದ ಗುಣವೋ ಬಂದ ಕಾಲ ಗುಣವೋ"

ಎಂಬ ಮಾತನ್ನು ಮಹಾಕವಿ ರಾಘವಾಂಕ ತನ್ನ ಕಾವ್ಯದಲ್ಲಿ ಉಸಿರಿದ್ದಾನೆ. ಆ ಮಾತು ಅನೇಕ ತಾಣಗಳಿಗೆ ನಿದರ್ಶನವಾಗುತ್ತದೆ. ಅಂತೆಯೇ ಬೆಳಗಾಂ ಜಿಲ್ಲೆಯ ಅಥಣಿ, ನೆಲದ ಗುಣವನ್ನು ಪ್ರದರ್ಶಿಸಿರುವ ಪುಣ್ಯಕ್ಷೇತ್ರ ಹಾಗೂ ಜಾಗ್ರತ ಸ್ಥಾನ. ಕರ್ನಾಟಕ, ಇಂತಹ ಪುಣ್ಯಕ್ಷೇತ್ರಗಳನ್ನು ಕ್ಷಾತ್ರಧರ್ಮದ ನೆಲದ ಗುಣವನ್ನು ಪ್ರದರ್ಶಿಸಿದೆ. ಇಂತಹ ನೆಲದಿಂದಲೇ ಅನೇಕ ವೀರರು, ಶೂರರು, ತ್ಯಾಗಿಗಳು, ಇತಿಹಾಸ ಪುರುಷರು, ವಿರಾಗಿಗಳು, ತಪಸ್ವಿಗಳು ಮೂಡಿ ಬಂದಿದ್ದಾರೆ. ನಾಡು ನುಡಿಯನ್ನು ಪಾವನಗೊಳಿಸಿದ್ದಾರೆ. ಇಂತಹ ಇತಿಹಾಸದಲ್ಲಿಯೇ ಬೆಳಗಾವಿ ಜಿಲ್ಲೆಯ ಅಥಣಿ ಹಾಗೂ ಅಲ್ಲಿಯ ಶ್ರೀ ಮಠದ ಶ್ರೀ ಮುರುಘೇಂದ್ರ ಶಿವಯೋಗಿಗಳು ಒಬ್ಬರು.

ಶ್ರೀಗಳ ಜೀವಿತಕಾಲದಲ್ಲಿ ನಡೆದ ಒಂದು ಘಟನೆಯನ್ನು ಅಥಣಿಯ ಹಿರಿಯರು ಇಂದೂ ಸ್ಮರಿಸುತ್ತಾರೆ. 'ಶ್ರೀಶಿವಯೋಗಿಗಳು ತಮ್ಮ ಬೆಳಗಿನ ಸಂಚಾರದಿಂದ ಶ್ರೀ ಮಠಕ್ಕೆ ಆಗಮಿಸಿದಾಗ ಮಠದ ಒಳಭಾಗದಲ್ಲಿಯೇ ಒಂದು ವಸ್ತು ಬಿದ್ದಿತ್ತು. ಕೂಡಲೇ ಶ್ರೀಗಳು ಭಕ್ತರನ್ನು ಕರೆದು' ಬರ್ರಪಾ, ಬರ್ರಿ ಇಲ್ಲಿ ಒಂದು ಚೇಳು ಬಂದಿದೆ. ಕೂಡಲೇ ಇದನ್ನು ಹೊರಗೆ ಹಾಕಿ" ಎಂದರು. ಮಠದ ಭಕ್ತರು ಬಂದು ಒಂದೇ ಸಮನೆ ತಡಕಾಡುತ್ತಿದ್ದರು. "ಚೇಳು ಎಲ್ಲೂ ಕಾಣಿಸಲಿಲ್ಲ ಬುದ್ಧಿ, ಚೇಳು ಎಲ್ಲೂ ಕಾಣಿಸುಲೊಲ್ಲದು ಇಲ್ಲಿ ಹಣ ಮಾತ್ರ ಇದೆ" ಎಂದರು. ತಟ್ಟನೇ ಶ್ರೀಗಳು "ಮತ್ತೇ ಅದೇ ಅಲ್ಲವೇನಪ್ಪಾ ಚೇಳು, ಮೊದಲು ಅದನ್ನು ಹೊರಗೆ ಕಳುಹಿಸಿ" ಎಂದು ನುಡಿದರು. ಭಕ್ತರಿಗೆ ದಿಗ್ಭ್ರಮೆಯಾಯಿತು. ಅನಾಯಾಸವಾಗಿ ಬಂದ ಹಣವನ್ನು ಚೇಳನ್ನು ಕಂಡಂತೆ ಹೊರ ಹಾಕಬೇಕೆನ್ನುವ ಶ್ರೀಗಳ ಮನೋವೃತ್ತಿ ಅವರಿಗೆ ಆಶ್ಚರ್ಯವನ್ನು ತಂದಿತು. ಅಂತೆಯೇ ಆ ಭಕ್ತರು ಚೇಳನ್ನು (ಹಣ) ಹೊರಗೆ ತೆಗೆದು ಕಳುಹಿಸಿದರು. ಈ ಒಂದು ಸಣ್ಣ ಘಟನೆ ಶ್ರೀಗಳ ಲೌಕಿಕದ ಬಗ್ಗೆ ತಳೆದಿದ್ದ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ. ಇಂತಹ ಅನೇಕ ಘಟನೆಗಳನ್ನು ಅಥಣಿಯ ಹಿರಿಯರು ಇಂದೂ ಸ್ಮರಿಸುತ್ತಾರೆ. ಶ್ರೀ ಮುರುಘೇಂದ್ರ ಶಿವಯೋಗಿಗಳು ಬಾಳಿದ ನೆಲ ಅಥಣಿ. ಅವರು ಬೆಳಗಿದ ಶ್ರೀ ಗಚ್ಚಿನ ಮಠ, ಇಂದೂ ಕೂಡ ನಂಬಿದವರಿಗೆ ದಾರಿಯನ್ನು ಇಂಬು ಮಾಡಿಕೊಡುತ್ತದೆ.

೧೬ನೇ ಶತಮಾನದಲ್ಲಿ ಅಥಣಿಯಲ್ಲಿ ನೆಲಸಿದ್ದ ಶ್ರೀ ರೇವಣಸಿದ್ಧ ಮಹಾಸ್ವಾಮಿಗಳು, ಗಚ್ಚಿನಿಂದ ಒಂದು ಮಠವನ್ನು ಕಟ್ಟಿಸಿದರು. ಅದು ಕಾರಣವೇ ಏನೋ ಅದು ಗಚ್ಚಿನ ಮಠವೆಂದು ಖ್ಯಾತಿ ಪಡೆಯಿತು. ಆ ತಪಸ್ವಿಗಳ ನಂತರ ಹಲವಾರು ಶರಣರು ಶ್ರೀ ಮಠದ ಪುಣ್ಯನೆಲದಲ್ಲಿ ಆಗಿಹೋದರು. ಅನಂತರದಲ್ಲಿ ಬಂದ ಶ್ರೀ ಮುರುಘೇಂದ್ರ ಶಿವಯೋಗಿಗಳ ಕಾಲದಲ್ಲಿ ಈ ಗಚ್ಚಿನ ಮಠ ಲೋಕವಿಖ್ಯಾತಿಯನ್ನು ಪಡೆಯಿತು. ಗಚ್ಚಿನ ಮಠವನ್ನು ಶ್ರೀ ಮುರುಘೇಂದ್ರ ಶಿವಯೋಗಿಗಳ ಮಠ, ಶಿವಯೋಗೀಶ್ವರ ಮಠ ಎಂದು ಕರೆಯುವ ಪರಿಪಾಠ ಬೆಳೆಯಿತು.

ಶ್ರೀ ಅಥಣಿ ಶಿವಯೋಗಿಗಳು ಶ್ರೀ ಮಠದ ಪೀಠಾಧಿಪತಿಗಳಾಗುವ ಮುನ್ನ ೧೪ ಜನ ತಪೋನಿಧಿಗಳು ಈ ಪೀಠವನ್ನು ಅಲಂಕರಿಸಿದ್ದರು. ಅವರುಗಳು : (೧) ಶ್ರೀ ರೇವಣಸಿದ್ಧ ಮಹಾಸ್ವಾಮಿಗಳು (೨) ಶ್ರೀ ಗುರುಶಾಂತ ಸ್ವಾಮಿಗಳವರು (೩) ಶ್ರೀ ಮರುಳಶಂಕರ ಸ್ವಾಮಿಗಳವರು (೪) ಶ್ರೀ ಮುರುಘೇಂದ್ರ ಸ್ವಾಮಿಗಳವರು (೫) ಶ್ರೀ ಚೆನ್ನಬಸವ ಸ್ವಾಮಿಗಳವರು (೬) ಶ್ರೀ ಮರುಳಶಂಕರಸ್ವಾಮಿಗಳವರು (೭) ಶ್ರೀ ಗುರುಶಾಂತ ಸ್ವಾಮಿಗಳವರು (ಎರಡನೆಯವರು) (೮) ಶ್ರೀ ಚೆನ್ನಬಸವ ಸ್ವಾಮಿಗಳವರು (ಎರಡನೆಯವರು) (೯) ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು (೧೦) ಶ್ರೀ ಚೆನ್ನಬಸವಮಹಾಸ್ವಾಮಿಗಳವರು (ಮೂರನೆಯವರು) (೧೧) ಶ್ರೀ ಶಿವಲಿಂಗೇಶ್ವರ ಸ್ವಾಮಿಗಳವರು (೧೨) ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರು (೧೩) ಶ್ರೀ ಮಹಾಲಿಂಗೇಶ್ವರ ಸ್ವಾಮಿಗಳವರು (೧೪) ಶ್ರೀ ಚೆನ್ನಬಸವ ಮಹಾಸ್ವಾಮಿಗಳವರು. ಆದರೆ ಶ್ರೀ ಮುರುಘೇಂದ್ರ ಶಿವಯೋಗಿಗಳು ಕೇವಲ ಒಂದು ಮಠದ ಪೀಠಾಧಿಪತಿಗಳಾಗದೆ ಒಂದು ಧರ್ಮದ, ಅನುಯಾಯಿಗಳ ಅಧಿಪತಿಗಳೇ ಆದರು.

ಹಾಗೂ ಕೇವಲ ಒಂದು ಗ್ರಾಮಕ್ಕೆ ಬೆಳಕಾಗದೆ ಒಂದು ಜನಾಂಗಕ್ಕೆ ಹಾಗೂ ನಾಡಿಗೆ ತತ್ವಚಿಂತನೆಯ ವೀರ ವೈರಾಗ್ಯದ ಬೆಳಕನ್ನು ಇತ್ತರು.

ಶ್ರೀ ಶಿವಯೋಗಿಗಳು ೧೭೫೮ ರಲ್ಲಿ ವೈಶಾಖ ಶುಕ್ಲಪಕ್ಷದ ದಿನ ಕೃಷ್ಣಾ ನದಿ ತೀರದ ಇಂಗಳಗಾವಿ ಗ್ರಾಮದಲ್ಲಿ ರಾಚಯ್ಯ - ನೀಲಾಂಬಿಕೆ ಎಂಬ ಶರಣ ದಂಪತಿಗಳಿಗೆ ಜನಿಸಿದರು. ಬಾಲ್ಯನಾಮ"ಗುರುಲಿಂಗಯ್ಯ". ಬಾಲ್ಯದಲ್ಲಿಯೇ ಗುರುಲಿಂಗಯ್ಯನನ್ನು ತಂದೆ ತಾಯಿಗಳು ಗಚ್ಚಿನ ಮಠದ ಅಂದಿನ ಪೀಠಾಧಿಪತಿಗಳಾಗಿದ್ದ ೨ನೇ ಮರುಳಶಂಕರಸ್ವಾಮಿಗಳ ಆಶಯದಂತೆ ಶ್ರೀ ಮಠಕ್ಕೆ ಅಧ್ಯಯನ ಹಾಗೂ ಮಾರ್ಗದರ್ಶನಕ್ಕಾಗಿ ಅರ್ಪಿಸಿದರು. ಗುರುಲಿಂಗಯ್ಯನ ಪ್ರತಿಭೆಯನ್ನು ಮನಗಂಡ ಶ್ರೀ ಮರುಳಶಂಕರ ಸ್ವಾಮಿಗಳು ವಟುವಿಗೆ ಹೊಸ ಹೆಸರನ್ನು ಇತ್ತರು. "ಮುರುಘೇಂದ್ರ"ನೆಂದು ಕರೆದರು. ಬಾಲ್ಯದಿಂದಲೇ ಚುರುಕುಬುದ್ಧಿಯ ಅಧ್ಯಯನಶೀಲ, ದೈವಿಕ ಚಿಂತನೆಯ ಈ ಗುರು ಲಿಂಗಯ್ಯ ಮುರುಘೇಂದ್ರನಾಗಿ ಬೆಳೆದು ಶಿವಯೋಗಿಯಾಗಿ ಮೈ ತಳೆದು ನಿಂತರು. "ದೇಶ ನೋಡು, ಕೋಶ ಓದು" ಎಂಬ ನಾಣ್ನುಡಿ ಇದೆ. ಅದಕ್ಕೆ ಪೂರಕವಾಗಿ ಶ್ರೀ ಮುರುಘೇಂದ್ರ ಸ್ವಾಮಿಗಳು ನಾಡಿನ ಉದ್ದಗಲಕ್ಕೂ ಸಂಚಾರ ಮಾಡಿದರು. ಉತ್ತರ ಭಾರತಕ್ಕೂ ಹೋಗಿ ಬಂದರು. ಅವರ ತಪಸ್ಸಿತಿಯ ಪ್ರಭಾವದಿಂದ ಅನೇಕ ಪವಾಡ ಸದೃಶವಾದ ಕಾರ್ಯಗಳನ್ನು ಮಾಡಿದರು. ಅಂತಹ ಪವಾಡದ ಕತೆಗಳು ನೂರಾರು ಈ ನಾಡಿನಲ್ಲಿ ಹಬ್ಬಿವೆ. ಶ್ರೀ ಶಿವಯೋಗಿಗಳ ಕುರಿತ ಪುರಾಣಗಳು, ಪುಣ್ಯಕತೆಗಳು ಹೊರಬಂದಿವೆ. ಅವರ ಸ್ಮರಣೆಯಿಂದ ಪುನೀತರಾದವರ ಬಳಗವೂ ಹೆಚ್ಚಿದೆ. ಹಾಗೆಯೇ ಶ್ರೀಮಠದಲ್ಲಿ ಶಿವಯೋಗಿಗಳು ಆರಂಭಿಸಿದ ಬಸವತತ್ವಪ್ರಚಾರ, ದಾಸೋಹ, ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ನೀತಿ ಸಾರೋದ್ಧಾರವಾಗಿ ನಡೆಯುತ್ತಾ ಬಂದಿದೆ. ಅಂತೆಯೇ ೧೯೦೫ರ ಸುಮಾರಿನಲ್ಲಿ ಶ್ರೀಗಳು ಚಿತ್ರದುರ್ಗದ ಚಿನ್ಮೂಲಾದ್ರಿ ಬೃಹನ್‌ಮಠದ ಜಯದೇವ ಜಗದ್ಗುರುಗಳ ಸಹಯೋಗದೊಡನೆ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ಈ ಪಾಠಶಾಲೆಯಲ್ಲಿ ಅನೇಕರು ವಿದ್ಯಾಭ್ಯಾಸ ಪಡೆದು ನಾಡಿನ ಹಿರಿಯ ಧಾರ್ಮಿಕ ಜ್ಯೋತಿಗಳಾಗಿ ಮೂಡಿ ಬಂದರು. ಅವರಲ್ಲಿ ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲದ ಜಗದ್ಗುರುಗಳಾಗಿದ್ದ ಶ್ರೀ ವಾಗೀಶ ಪಂಡಿತಾರಾಧ್ಯರು ಒಬ್ಬರಾಗಿದ್ದರು ಎಂಬುದು ನೆನಪಿಡುವ ಸಂಗತಿಯಾಗಿದೆ.

ಇದೇ ತೆರನಲ್ಲಿಯೇ ಶ್ರೀ ಚಿತ್ರದುರ್ಗದ ಚಿನ್ಮೂಲಾದ್ರಿ ಬೃಹನ್‌ಮಠಕ್ಕೆ ಜಗದ್ಗುರುಗಳಾಗಿ ಬಂದ ಶ್ರೀ ಜಯದೇವ ಮಹಾಸ್ವಾಮಿಗಳು ಶ್ರೀ ಮಠದ ನೆರಳಿನಲ್ಲಿ ಬಂದವರೇ ಆಗಿದ್ದಾರೆ. ಅಲ್ಲದೆ ಇಡೀ ಕರ್ನಾಟಕದಲ್ಲಿ "ವಿರತಿಯ ಸಿರಿ"ಯನ್ನು ಹೆಚ್ಚಿಸಿದ "ಅಪ್ಪ"ಗಳೆಂದು ಖ್ಯಾತಿ ಪಡೆದಿದ್ದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಶ್ರೀ ಮುರುಘೇಂದ್ರ ಸ್ವಾಮಿಗಳ ಕೃಪಾಶೀರ್ವಾದದಲ್ಲಿ ಬೆಳೆದು ಬಂದವರೇ ಆಗಿದ್ದಾರೆಂಬುದು ಐತಿಹಾಸಿಕ ಸತ್ಯವಾಗಿದೆ. ಶ್ರೀಗಳ ಆಶಯದಿಂದ ಶ್ರೀ ಮೃತ್ಯುಂಜಯ ಸ್ವಾಮಿಗಳು ದಾವಣಗೆರೆ, ಮುಳುಗುಂದದ ವಿರಕ್ತಮಠಕ್ಕೆ ಪೀಠಾಧಿಪತಿಗಳಾಗಿ ತೆರಳಿ ಅಲ್ಲಿಯ ಭಕ್ತ ಜನಸ್ತೋಮದ ಮನವನ್ನು ಗೆದ್ದು, ವೈರಾಗ್ಯದ ವಿನೂತನ ಪರಂಪರೆಯನ್ನು ನಿರ್ಮಿಸಿ, ಅಥಣಿ ಶಿವಯೋಗಿಗಳ ನೆನಪನ್ನು ಮತ್ತೊಮ್ಮೆ ನಾಡಿನ ಜನರಿಗೆ ತಂದು ಕೊಟ್ಟವರೇ ಆಗಿದ್ದರು. ನಾಟಕದಲ್ಲಿ ಪಾತ್ರ ವಹಿಸುತ್ತಿದ್ದ ಬಹುರೂಪಿಯಾಗಿದ್ದ ಬಾಲ್ಯದ ಮೃತ್ಯುಂಜಯ ಸ್ವಾಮಿಗಳು ಶ್ರೀ ಶಿವಯೋಗಿಗಳ ಮಾರ್ಗದರ್ಶನದಲ್ಲಿ ನಾಡವರ ಮನ ತಿದ್ದುವ ಮಹಾಕಾಯಕ ದಲ್ಲಿ ತಮ್ಮ ಜೀವವನ್ನು ಸವೆಸಿದರು. ಹಾಗೆಯೇ ಉಚಿತ ಪ್ರಸಾದ ನಿಲಯ, ಶಿವಾನುಭವ ಪ್ರಚಾರ, ಧಾರ್ಮಿಕ ಗ್ರಂಥ ಪ್ರಕಟಣೆಗೆ ಹೊಸ ಆಯಾಮವನ್ನು ಕೊಟ್ಟು, ಗುರುವನ್ನು ಮಿಂಚುವ ಶಿಷ್ಯರಾದರು.

ಶ್ರೀ ಶಿವಯೋಗಿಗಳನ್ನು ನೋಡಲು ಹಲವಾರು ವರ್ಗದ ಜನ ಬಂದು ಹೋಗುತ್ತಿದ್ದರು. ನಾಟಕಕಾರರು, ಸಾಹಿತಿಗಳು, ಪೌರಾಣಿಕರು, ಸಂಗೀತಗಾರರು ಮೊದಲಾದವರು. ಅಂತೆಯೇ ಒಮ್ಮೆ ಸರ್ಕಸ್ ಕಂಪನಿಯ ಮಾಲೀಕರೂ ಬಂದಿದ್ದರು. ವಿಜಾಪುರ ಜಿಲ್ಲೆಯ ತಿಕೋಟಗ್ರಾಮದ ಪ್ರೊ॥ ಕಾಶಿನಾಥ್ ಛತ್ರೆ ಎಂಬುವರು ಅಂದಿನ ಕಾಲದಲ್ಲಿ ಒಂದು ಸರ್ಕಸ್ ಕಂಪನಿ ನಡೆಸುತ್ತಿದ್ದರು. ಅವರ ಸರ್ಕಸ್ ಕಂಪನಿಯು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲಿ ಹೆಸರು ಪಡೆದಿತ್ತು. ಅವರು ತಮ್ಮ ತಿರುಗಾಟದಲ್ಲಿ ಹಲವಾರು ಮನ್ನಣೆ ಗಳಿಸಿದವರೂ ಆಗಿದ್ದರು. ಅಂತೆಯೇ ಅವರು ಒಮ್ಮೆ ಶ್ರೀ ಶಿವಯೋಗಿಗಳ ದರ್ಶನವನ್ನು ಪಡೆದರು. ಶ್ರೀ ಶಿವಯೋಗಿಗಳ ನಡೆ ನುಡಿಯಿಂದ ಪ್ರಭಾವಿತರಾದರು. ಕಾಡುಮೃಗಗಳನ್ನು ಪಳಗಿಸಿ ಆ ನೈಪುಣ್ಯದಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದ ಪ್ರೊ॥ ಛತ್ರೆ ಲೌಕಿಕದಿಂದ ಪಾರಮಾರ್ಥಿಕದೆಡೆ ಸಾಗಿ ಬಂದರು. ತಮ್ಮ ಕಂಪನಿಯನ್ನು ಬೇರೆಯವರಿಗೆ ವಹಿಸಿ, ಶ್ರೀ ಶಿವಯೋಗಿಗಳ ಅವಿಚ್ಛಿನ್ನ ಭಕ್ತರಾದರು. ಇಂತಹ ಅನೇಕ ಪ್ರಕರಣಗಳನ್ನು ಅಲ್ಲಿಯ ಜನ ಇಂದೂ ಸ್ಮರಿಸುತ್ತಾರೆ.

ಇಂತಹ ಪರಂಪರೆಯಲ್ಲಿ ಅನೇಕ ಗುರುಗಳು ಹಲವಾರು ಮಠಕ್ಕೆ ಅಧ್ಯಕ್ಷರಾಗಿ ಹೋಗಿ ನಾಡಿನ ಧರ್ಮಕ್ಷೇತ್ರಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದರು. ಅವರುಗಳಲ್ಲಿ ಹಲವರನ್ನು ನೆನಪಿಸಬಹುದು. ಲಿಂಗಪುರದ ಶ್ರೀ ಗುರುಲಿಂಗ ದೇವರು, ಹಲ್ಯಾಳದ ವಿರಕ್ತ ಮಠದ ಶ್ರೀ ಗುರುಸಿದ್ಧಸ್ವಾಮಿಗಳು ತಿಕೋಟದ ಚನ್ನಬಸಪ್ಪ ಸ್ವಾಮಿಗಳು ಮುಂತಾದವರು.

ಅದೇ ತೆರನಲ್ಲಿಯೇ ಗೋಕಾಕ್‌ದ ಸಾವಳಿಗೆ ಮಠದ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು ಹಿಂದೂ - ಮುಸಲ್ಮಾನ ಧರ್ಮದ ಭಾವೈಕ್ಯದ ಪ್ರತೀಕವನ್ನು ಪ್ರಜ್ವಲಿಸಿದರು.

ಇವರಲ್ಲದೆ ಇನ್ನೂ ನಾಡಿನ ಹಲವಾರು ಸಾಂಸ್ಕೃತಿಕ ಗಣ್ಯರು ಶ್ರೀ ಶಿವಯೋಗಿಗಳ ಕೃಪೆಗೆ ಪಾತ್ರರಾದವರು. ಇಂತಹವರಲ್ಲಿ ಹರಡೇಕರ್ ಮಂಜಪ್ಪನವರು ಒಬ್ಬರು. ಕಟ್ಟಾ ಗಾಂಧಿವಾದಿ ಎನಿಸಿದ್ದ ಹರಡೇಕರ್ ಮಂಜಪ್ಪನವರು ಬಸವ ಧರ್ಮದ ಕಟ್ಟಾ ಅನುಯಾಯಿಗಳು. ಆದರೂ ಅವರ ಹಿರಿಮೆಯನ್ನು ಅರಿಯದ ಉಗ್ರಮತೀಯರು ಶ್ರೀ ಹರಡೇಕರ್ ಮಂಜಪ್ಪನವರು ಬಸವರೆಂದಾಗಲಿ, ವೀರಶೈವ ಧರ್ಮದವರೆಂದಾಗಲಿ ಇವರನ್ನು ಪರಿಗಣಿಸಲು ಸಿದ್ಧರಿರಲಿಲ್ಲ. ಅಂತಹ ವಾತಾವರಣದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರ ಹಿರಿಮೆಯನ್ನು ಅರಿತು ಅವರಿಂದ ನಾಡು ನುಡಿಗಳಿಗೆ ಆಗಬೇಕಾಗಿದ್ದ ಸೇವೆಯನ್ನು ಮನಗಂಡು, ಅವರನ್ನು ನಾಡವರಿಗೆ ಸೂಕ್ತ ರೀತಿಯಲ್ಲಿ ಪರಿಚಯಿಸಿದ ಕೀರ್ತಿಯೂ ಶ್ರೀ ಶಿವಯೋಗಿಗಳದೇ. ಶ್ರೀ ಮಠದ ಪ್ರಭಾವದಿಂದ ಶಿವಾನುಭವ, ವಚನ ಸಾಹಿತ್ಯ ಹಾಗೂ ಸಂಗೀತ ಸುಧೆಯ ಕಾರ್ಯಕ್ರಮಗಳು ನಡೆದು ಬರುವಂತಹವು, ಶ್ರೀಗಳ ಮುನ್ನೋಟದ ಫಲವಾಗಿದ್ದವು. ಈ ಹಾದಿಯಲ್ಲಿ ಬಂದು ಖ್ಯಾತರಾದವರು ಪದ್ಮವಿಭೂಷಣ ಶ್ರೀ ಮಲ್ಲಿಕಾರ್ಜುನ ಮನಸೂರ್, ಬಸವರಾಜ ರಾಜಗುರು, ಹುಕ್ಕೇರಿ ಬಾಳಪ್ಪ ಮೊದಲಾದವರು.

ಶ್ರೀಗಳು ಹಾಕಿಕೊಟ್ಟ ಪಥದಲ್ಲಿ ಶ್ರೀ ಚಿನ್ಮೂಲಾದ್ರಿ ಬೃಹನ್ಮಠದ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಗಚ್ಚಿನ ಮಠ ಇಂದು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳಗುತ್ತಾ ಬಂದಿದೆ. ಗಚ್ಚಿನ ಮಠದ ಇಂದಿನ ಪೀಠಾಧಿಪತಿಗಳು ಶ್ರೀ ಮರಳು ಶಂಕರದೇವರು. ಶ್ರೀ ಶಿವಯೋಗಿಗಳ ನಾಮಸ್ಮರಣೆಯಲ್ಲಿಯೇ ಹಲವಾರು ಸಾಂಸ್ಕೃತಿಕ ಸಭೆ ಸಮಾರಂಭಗಳನ್ನು, ದಾಸೋಹವನ್ನು ನಡೆಸುತ್ತಾ ಬಂದಿದ್ದಾರೆ. ಶ್ರೀ ಶಿವಯೋಗಿಗಳ ಆಶಯವಾದ ಶಿವಾನುಭವ ಚಿಂತನೆ, ಬಸವಾದಿ ಪ್ರಮಥರ ನುಡಿ ನಮನ ಹಾಗೂ ವೀರಶೈವ ಧರ್ಮ ಪರಂಪರೆಯನ್ನು ಉಳಿಸುವ ಕಾರ್ಯ ಶ್ರೀ ಮಠದಲ್ಲಿ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಾ ಬಂದಿದೆ. ಹಾಗೆಯೇ ನಾಡುನುಡಿಗೆ ಶ್ರೀ ಗಚ್ಚಿನ ಮಠ ತನ್ನದೇ ಆದ ಕಾಣಿಕೆಯನ್ನು ಇತ್ತಿದೆ, ಈಯುತ್ತಿದೆ.

○






ಶ್ರೀಗಳವರು ಕಾರ್ಯಾಲಯದಲ್ಲಿ ಮಗ್ನ



ಆದಿಚುಂಚನಗಿರಿ ಜಗದ್ಗುರುಗಳ ಜೊತೆ ಮಹೋತ ದರ್ಶ ಶ್ರೀಗಳು

ಮುಪ್ಪಿನ ಶ್ರೀಗಳು, ಆದಿ ಚುಂಚನಗಿರಿ ಶ್ರೀಗಳು, ತಿರುಚ್ಚಿ ಶ್ರೀಗಳು, ರಾಜ್ಯಪಾಲ ಶ್ರೀ ಖುರ್ಷಿದ್ ಆಲಂಖಾನ್ ಮತ್ತು ಸಿರಿಗೆರೆ ಜಗದ್ಗುರುಗಳು


॥ हे प्रभो प्रसीद ॐ ॥


॥ हे प्रभो प्रसीद ॐ ॥
महातपस्वी श्री कुमारस्वामीजी योग विहार.सोलापुर.
आंतरराष्ट्रीय प्रार्थना योग मंडल.शारवा सोलापुर के
तत्वावधान में निर्मित 'महातपस्वी श्री कुमारस्वामीजी
योग विहार.सोलापुर' का शिलान्यास परम पूज्य.डॉ.श्री.श्री शिवकुमारस्वामीजी.
सिद्दगंगा मठ.तुमकूरकेकर - कमलों से संपन्न हुआ.
अध्यक्ष - पद्मभूषण डॉ. एम. सी. मोदी.
उद्घाटक - पद्मश्री आर. एम. बी. आराध्य.
गुरुवार.
जेष्ट कृष्ण ३.शके १९१७.
१५ जून-१९९५.
- राजशेखर मडकी
अध्यक्ष. आंतरराष्ट्रीय प्रार्थना योग मंडळ.
शारवा-सोलापुर.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ 'ಈ ಶತಮಾನದ ಹಿರಿಯರು' ಬೆಂಗಳೂರಿನ ಸಮಾರಂಭದಲ್ಲಿ

ಎಡದಿಂದ ಬಲಕ್ಕೆ ಡಾ. ಪು.ತಿ.ನ., ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಡಾ. ಶಿವರಾಮ ಕಾರಂತ, ಪ್ರೊ. ಎ.ಎನ್. ಮೂರ್ತಿರಾಯರು, ಶ್ರೀಗಳವರು,
ಶ್ರೀ ಎಸ್. ನಿಜಲಿಂಗಪ್ಪನವರು, ಶ್ರೀ ಬದರಿ ನಾರಾಯಣ ಅವರು, ಶ್ರೀಮತಿ ವೆಂಕಟಲಕ್ಷ್ಮಮ್ಮನವರು, ಶ್ರೀ ತಿಟ್ಟೆ ಕೃಷ್ಣ ಅಯ್ಯಂಗಾರ್.



ಮದ್ರಾಸಿನ ಕನ್ನಡ ಸಂಘದಲ್ಲಿ ಶ್ರೀಗಳು



ಶರಣಬಸವೇಶ್ವರ ಮಹಾದಾಸೋಹ ಪೀಠದ ಸಾಮಾಜಿಕ ಸೇವಾಕಾರ್ಯಗಳು

ಡಾ|| ಎಸ್.ಎಂ. ಹಿರೇಮಠ

ಹದಿನೆಂಟನೆಯ ಶತಕದಾಗಸದಲ್ಲಿ ದೇದೀಪ್ಯಮಾನವಾಗಿ ಬೆಳಗಿ, ಬೆಳಗಿಸಿದ ಬೆಳಗನ್ನು ಸಮಾಜದ ಬದುಕಿನಲ್ಲಿ ಅಳವಡಿಸಿ, ಇಂದಿಗೂ ಮಹಾ ಬೆಳಕಾಗಿ ನಿಂತ ಧ್ರುವತಾರೆ ಶರಣಬಸವೇಶ್ವರರು.

ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭುಗಳು ಸಂಚಾರ ಕೈಕೊಂಡು ಅಲ್ಲಲ್ಲಿನ ಸಾಧಕರ ಸಾಧನೆಯ ಹಾದಿಯನ್ನು ಒಪ್ಪ-ಓರಣಗೊಳಿಸುತ್ತ ಕಲ್ಯಾಣಕ್ಕೆ ಬಂದು ಬಸವಾದಿ ಶಿವಶರಣರ ಅನುಭಾವಗೋಷ್ಠಿಯ ಅಧ್ವರ್ಯುತನವನ್ನು ವಹಿಸಿಕೊಂಡಂತೆ ಅರಳಗುಂಡಿಗೆಯಲ್ಲಾದ ಸಾಮಾಜಿಕ ಕ್ರಾಂತಿಯಿಂದ ಅದಕ್ಕೆ ದೊರೆತ ಅಜ್ಞರ ಪ್ರತಿಭಟನೆಯಿಂದ ಆ ಗ್ರಾಮವನ್ನೇ ಬಿಟ್ಟು, ಅಜ್ಞ ಸಮಾಜವನ್ನೇ ತಿದ್ದಲೆಂದು ಹೊರಟ ಶರಣಬಸವರು, ಮಾರ್ಗದಲ್ಲಿ ಭೇಟಿಯಾದ ಹಲವಾರು ದಾಸೋಹ ಚೇತನಗಳಿಗೆ ಮುಮ್ಮಿಗಿಲಾಗಿ ದಾಸೋಹದ ಆಚರಣೆಯನ್ನು ಅರುಹುತ್ತ ಕಲಬುರ್ಗಿಗೈತಂದು ಅಲ್ಲಿನ ಆದಿ ದೊಡ್ಡಪ್ಪ ಶರಣರ ದಾಸೋಹದ ಆಚರಣೆಗೆ ಮನಗೊಟ್ಟು, ಅಲ್ಲಿ ನಡೆಸುತ್ತಿದ್ದ ಅರ್ಚನ-ಅರ್ಪಣ-ಅನುಭಾವದ ಕಾರ್ಯಕ್ಕೆ ನೇತೃತ್ವವನ್ನು ವಹಿಸಿಕೊಂಡು ನೆಲೆನಿಂತರು. ಒಂದು ದಿನ ದಾಸೋಹ ನಿಷ್ಠೆಯನ್ನೇ ಪರೀಕ್ಷಿಸಲೆಂಬಂತೆ ಬಂದ ಸಂತಾನಾಪೇಕ್ಷನಾದ ಭಕ್ತನೊಬ್ಬನಿಗೆ ಶರಣಬಸವರು ತೊಟ್ಟಿಲಲ್ಲಾಡುತ್ತಿದ್ದ ಆದಿದೊಡ್ಡಪ್ಪ ಶರಣರ ಮಗುವನ್ನೇ ನೀಡಿದರು. ಈ ಮೂಲಕ, ಶರಣಬಸವರು ಆ ಶರಣ ದಂಪತಿಗಳ ತನುಮನಗಳನ್ನು ಒರೆಗೆ ಹಚ್ಚಿ ನೋಡಿದರು. ತಮ್ಮ ಕರುಳಿನ ಕುಡಿಯು ತಮ್ಮಿಂದ ಅಗಲಿ ಹೋಯಿತೆಂದು ಮರುಗದೆ, ದಾಸೋಹ ಸೇವೆಗೆ ಸಲ್ಲಿತೆಂದು ಅವರು ಹಿರಿಹಿರಿಹಿಗ್ಗಿದರು. ಯಾವ ಮಹಾದಾಸೋಹ ಕಾರ್ಯಕ್ಕಾಗಿ ಇಂದು ತಮ್ಮ ಮಗನು ಅರ್ಪಿತನಾದನೊ ಅಂತಹ ಸರ್ವ ಸಮರ್ಪಣೆಯ ದಾಸೋಹ ಕಾರ್ಯವೇ ನಿರಂತರವಾಗಿ ನಡೆಯಲೆಂದು ಆದಿದೊಡ್ಡಪ್ಪ ಶರಣದಂಪತಿಗಳು ಶರಣ ಬಸವರಲ್ಲಿ ಪ್ರಾರ್ಥಿಸಿದರು.

ಬೆಳಗು ಬೆಳಗಿನೊಳಗೂಡಿ ಮಹಾ ಬೆಳಗಾಗುವಂತೆ ಆದಿ ದೊಡ್ಡಪ್ಪ ಶರಣದಂಪತಿಗಳ ಮಹಾತ್ಯಾಗ ಮಹಿಮೆ, ದಾಸೋಹಂಭಾವ ಹಾಗೂ ಶರಣಬಸವರ ಅತಿಶಯವಾದ ದಾಸೋಹ ಶಕ್ತಿ-ಶಿವಭಕ್ತಿಗಳು ಸಂಗಮಿಸಿ ಮಹಾದಾಸೋಹ ಪೀಠವು ರೂಪು ತಳೆದಿದೆ.

ಹೀಗೆ ದಾಸೋಹ ಪೀಠದ ನಾಂದಿಗೆ ಅದ್ಯರಾದ ಶರಣಬಸವರ ಶರಣಜೀವನವೇ ಸಮಾಜ ಸೇವಾ ಕಾರ್ಯಗಳ ಸ್ವರೂಪಕ್ಕೆಂದು ವ್ಯಾಖ್ಯಾನವಾಗಿ ಕಂಗೊಳಿಸುತ್ತದೆ. ಅವರು ಅಡಿಯಿಟ್ಟು ಗಮಿಸಿದ ಒಂದೊಂದು ಹೆಜ್ಜೆಯ ನಿನದದಲ್ಲೂ ಮಾನವಕುಲದ ಉದ್ಧಾರ, ಆ ಮೂಲಕ ಸಕಲ ಜೀವರ ಲೇಸಿನ ಅಭೀಪ್ಸೆ ಧ್ವನಿತವಾಗುತ್ತದೆ. ಮೂಲತಃ ಶರಣಬಸವರು ಧಾರ್ಮಿಕ ಮಹಾಪುರುಷರಾಗಿ ಕಂಡರೂ ಧರ್ಮ ಸಾಧನೆಯ ಫಲವನ್ನು ದಾಸೋಹ ಲಾಭದಿಂದ ಸಮಾಜಕ್ಕೆ ಅರ್ಪಿಸಿದ ಅವರು ಸಮಾಜ ಉದ್ಧಾರಕ ಶಕ್ತಿಯಾಗಿಯೇ ಇಂದು ಕೋಟ್ಯನು ಕೋಟಿ ಜನಪದರ ಹೃದಯದಲ್ಲಿ ಸ್ಥಿರಸ್ಥಾಯಿಯಾಗಿ ನಿಂತು, ಪ್ರಾತಃಸ್ಮರಣೀಯರಾಗಿರುವರು. ಆತ್ಮವುಳ್ಳವರೆಲ್ಲರೂ ಸಮಾನರೆಂದು ಬದುಕಿದ ಶರಣಬಸವರು,''ಯತ್ರ ಜೀವಃ ತತ್ರ ಶಿವಃ'' ಎಂಬ ಶಿವಭಾವದಿಂದ 'ಪ್ರಸಾದ ಅರ್ಚನೆಯ' ಮೂಲಕವಾಗಿ ದಾಸೋಹದ ದ್ವಾರವನ್ನು ಸಕಲಜೀವಿಗಳಿಗೂ ಮುಕ್ತವಾಗಿ ತೆರೆದರು. ಶರಣಬಸವರ ಸಾನ್ನಿಧ್ಯ ಸಂಗದಿಂದ, ಅವರಿತ್ತ ದಾಸೋಹ ಪ್ರಸಾದದಿಂದ ಸಾಮಾಜಿಕವಾದ ಎಷ್ಟೋ ಅನಿಷ್ಟಗಳು ಇಲ್ಲವಾಗತೊಡಗಿದವು. ಕಳ್ಳಕಾಕರು ಶಿವ ಜೀವರಾದುದು, ಕೊಲೆಗಡುಕರು ಅಹಿಂಸಾ ಮಾರ್ಗಿಗಳಾದುದು, ಕಪಟ-ನೀಚ-ಕುಹಕಿ-ಕುಟಿಲರು ತಮ್ಮ ಹೀನಗುಣಗಳನ್ನು ಬಿಸುಟು, ಸುಗುಣಿಗಳಾದುದು; ದಲಿತ, ದುರ್ಬಲ,ದೀನ, ದುಃಖಿತರು ತಮ್ಮ ಬಾಳಿಗೆ ಸೊಗದ ಬೆಳಗನ್ನು ಕಂಡುದು, ಪಶು, ಪಕ್ಷಿಗಳಿಗೂ ಪ್ರಸಾದೋದಕವನ್ನು ನೀಡಿ, ಅವುಗಳಲ್ಲೂ ಶಿವದರ್ಶನವನ್ನು ಕಂಡು ಆನಂದಿಸಿದುದು, ಈ ತೆರನಾದ ಶಿವನಡೆಯಿಂದ ಅಂದಿನ ಕಾಲದ ಒಟ್ಟು ಸಮಾಜದಲ್ಲಿ ಸಾಮರಸ್ಯವನ್ನುಂಟುಮಾಡಿದುದು ಶರಣಬಸವರ ಸಾಮಾಜಿಕ ಸೇವಾಕಾರ್ಯದ ಪ್ರಮುಖ ವೈಶಿಷ್ಟ್ಯ.

ಶರಣಬಸವರ ಲಿಂಗೈಕ್ಯದ (ಕ್ರಿ. ಶ.೧೮೨೨) ನಂತರದಲ್ಲೂ ಮಹಾದಾಸೋಹ ಪೀಠದಲ್ಲಿ ಅವರ ದಾಸೋಹ ಸಾಧನೆ ನಿರಂತರವಾಯಿತು. ಆದಿದೊಡ್ಡಪ್ಪ ಶರಣರು ಶರಣಬಸವರು ಹಚ್ಚಿದ ದಾಸೋಹದ ನಂದದ ಜ್ಯೋತಿಗೆ ಬತ್ತಿಯಾಗಿ, ತೈಲವಾಗಿ ಸೇವೆಸಲ್ಲಿಸಿದರು. ಆದಿದೊಡ್ಡಪ್ಪ ಶರಣರ ನಂತರದಲ್ಲಿ ದಾಸೋಹ ಪೀಠ ಪರಂಪರೆಯಲ್ಲಿ ಬಂದ ಎರಡನೆಯ ಶರಣಬಸವಪ್ಪ ಅಪ್ಪ, ಬಸವಣ್ಣಪ್ಪ ಅಪ್ಪ, ಲಿಂಗಬಸವಪ್ಪ ಅಪ್ಪ, ಮೂರನೆಯ ಶರಣಬಸವಪ್ಪ ಅಪ್ಪ ಅವರು ಚ್ಯುತಿಯಿಲ್ಲದಂತೆ ತಮ್ಮ ಸೇವೆಯನ್ನು ದಾಸೋಹ ಭಾವದಿಂದ ಅರ್ಪಿಸುತ್ತ ಬಂದರು. ಏಳನೆಯ ಪೀಠಾಧಿಪತಿಗಳಾಗಿ ಬಂದ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಕಾಲದಲ್ಲಿ ಮಹಾದಾಸೋಹ ಪೀಠದ ಸಾಮಾಜಿಕ ಸೇವೆಗೆ ಹೊಸ ಮುಖವು ಮೂಡಿವಂತಾಯಿತು. ಹತ್ತು ಹಲವಾರು ಸಮಾಜೋದ್ಧಾರಕ ಕಾರ್ಯಗಳು ಈ ಸಂದರ್ಭದಲ್ಲಿ ಜರುಗುವುದರ ಮೂಲಕ, ದಾಸೋಹ ಪೀಠದ ಹೆಸರು ದೇಶದ ನಕ್ಷೆಯಲ್ಲಿ ಗುರುತಿಸುವಂತಾಯಿತು. ಅಂದಿನ ಕಾಲ ಪರಿಸರಗಳ ದೃಷ್ಟಿಯಿಂದ ಮಹಾದಾಸೋಹದ ಕಾರ್ಯಗಳು ಅತ್ಯಂತ ಮಹತ್ವದ್ದಾಗಿ ಕಾಣುತ್ತವೆ.

ಪರಕೀಯ ದಾಸ್ಯತ್ವದಲ್ಲಿ ಒಟ್ಟು ದೇಶವೇ ಸಿಕ್ಕು ಬಳಲುತ್ತಿದ್ದಾಗ, ಕನ್ನಡದ ನೆಲ ಪರದೇಶತ್ವಕ್ಕೆ ಹೊರತಾಗಿರಲಿಲ್ಲ. ನೈಜಾಮಪ್ರಭುತ್ವದ ಆಳ್ವಿಕೆಯಲ್ಲಿ ಸ್ವಸಂಸ್ಕೃತಿಯ ರಕ್ಷಣೆಯೇ ಕನ್ನಡಿಗರಿಗೊಂದು ಎತ್ತಲಾರದ ಭಾರವಾಗಿತ್ತು. ಇಂಗ್ಲೀಷ್-ಉರ್ದು-ಮರಾಠಿ-ಫೊಡಿಯಾದಿ ಪರಕೀಯ ಭಾಷೆಗಳ ದಬ್ಬಾಳಿಕೆಯಿಂದ ಕನ್ನಡದ ಭಾಷೆ-ಸಂಸ್ಕೃತಿ ನಲುಗಿ ಹೋಗಿತ್ತು. ಕನ್ನಡದ ಒಟ್ಟು ಸಮಾಜವು ತನ್ನ ನೆಲೆಯಲ್ಲಿಯೇ ತಬ್ಬಲಿಯಾಗಿ ನಿಂತಂತಾಗಿತ್ತು. ಇಂತಹ ದುರ್ಭರ ಪ್ರಸಂಗದಲ್ಲಿ ಲಿಂಗೈಕ್ಯ ಪೂಜ್ಯ ದೊಡ್ಡಪ್ಪ ಅಪ್ಪಅವರು ಕ್ರಿ. ಶ. ೧೯೧೮ರಲ್ಲಿ ಶರಣಬಸವೇಶ್ವರ ಸಾರ್ವಜನಿಕ ಗ್ರಂಥಾಲಯದ ಸ್ಥಾಪನೆಯ ಮೂಲಕ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಜನ್ಮಕ್ಕೆ ಜೋಗುಳವಾಡಿದರು. ಮಹಾದಾಸೋಹ ಪೀಠದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದ್ದ ಪ್ರಸಾದ ದಾಸೋಹದ ನದಿಗೆ ಈಗ ಜ್ಞಾನದಾಸೋಹದ ನದಿಯೊಂದು ಉಗಮಿಸಿ ಕೂಡಿಕೊಂಡಿತು.

ಪೂಜ್ಯ ಅಪ್ಪ ಅವರು ಅಂದಿನ ಸಮಾಜದ ಅಜ್ಞಾನವನ್ನು ಹರಿದೊಗೆಯಲು ಅಂಧರಂತಿದ್ದ ಜನಸಾಮಾನ್ಯರಿಗೆ ಅರಿವನ್ನುಂಟುಮಾಡಲು ಗ್ರಂಥಾಲಯದಲ್ಲಿ ಹಲವಾರು ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿ ಕೊಟ್ಟು, ಆ ಮೂಲಕ ನಾಡು ನುಡಿ ಪ್ರೇಮವನ್ನು, ರಾಷ್ಟ್ರಭಕ್ತಿಯನ್ನು ಹುಟ್ಟಿಸಲು ಯತ್ನಿಸಿದರು. ಹೆಣ್ಣುಮಕ್ಕಳು ಇನ್ನೂ 'ಘೋಷಾಪದ್ಧತಿ'ಯಲ್ಲೆ ಅವಿತು ಕುಳಿತಿದ್ದ ಸಂದರ್ಭದಲ್ಲಿ ದೊಡ್ಡಪ್ಪ ಅಪ್ಪ ಅವರು ಕ್ರಿ. ಶ. ೧೯೩೪ ರಲ್ಲಿ ಗುಲಬರ್ಗ ವಿಭಾಗದಲ್ಲಿ ಪ್ರಪ್ರಥಮವಾಗಿ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ತೆರೆದರು. ಮನೆ ಮನೆಗಳಿಗೆ ಎತ್ತಿನಬಂಡಿ, ಜಟಕಾಗಳನ್ನು ಕಳುಹಿಸಿ ಕೊಟ್ಟು ವಿದ್ಯಾರ್ಥಿನಿಯರನ್ನು ಕರೆತರುವ ವ್ಯವಸ್ಥೆ ಮಾಡಿದರು. ಬ್ರಿಟಿಷರ ರಜಾದಿನವಾದ ರವಿವಾರ ನೈಜಾಮರ ರಜಾದಿನವಾದ ಶುಕ್ರವಾರ ಇವುಗಳ ಬದಲಿಗೆ, ಭಾರತದ ಕೃಷಿಕರ ಜಾನಪದ ರಜೆಯಾದ ಸೋಮವಾರವನ್ನು ತಮ್ಮ ವಿದ್ಯಾಸಂಸ್ಥೆಗಳಿಗೆ ಬಿಡುವಿನ ದಿನವಾಗಿ ಇರಿಸಿಕೊಳ್ಳುವುದರ ಮೂಲಕ ಪರಕೀಯರ ಗುಲಾಮಗಿರಿಯನ್ನು ದಿಟ್ಟತನದಿಂದ ಪ್ರತಿಭಟಿಸಿದರು. ಸ್ತ್ರೀ ಶಿಕ್ಷಣ, ಕನ್ನಡ ಭಾಷೆ-ಸಂಸ್ಕೃತಿಯ ಬೆಳವಣಿಗೆ, ರಾಷ್ಟ್ರಪ್ರೇಮ ಇವುಗಳತ್ತ ಅಂದಿನ ಕಾಲದಲ್ಲಿ ದೃಷ್ಟಿ ಹರಿಸಿದ ಅಪ್ಪಅವರು ಆ ಮೂಲಕ ನವರಾಷ್ಟ್ರವನ್ನೂ ಜೀವಂತ ಸಮಾಜವನ್ನೂ ಕಟ್ಟುವ ಚಿರಸ್ಮರಣೀಯ ಕಾರ್ಯ ಮಾಡಿದರು. ಅಪ್ಪಅವರ ಈ ಸಮಾಜಹಿತ ಕಾರ್ಯಗಳು ಧರ್ಮಾಂಧರಾದ ಸಮಾಜಘಾತುಕರಾದ ಮೂಢರಿಗೆ ದ್ರೋಹದ ಯತ್ನಗಳಾಗಿ ಕಂಡಿರಬೇಕು. ಆದುದರಿಂದಲೇ ಅಂತಹ ಮೂಢರಿಂದ ಎರಡು ಸಲ ಮಹಾದಾಸೋಹ ಪೀಠದ ಮೇಲೆ ಹಲ್ಲೆಗಳು ನಡೆದವು. ಪೂಜ್ಯಅಪ್ಪ ಅವರು ಹಾಗೂ ಈ ನೆಲದ ರಾಷ್ಟ್ರಾಭಿಮಾನಿಗಳು ಆ ಹಲ್ಲೆಗಳನ್ನು ಧೈರ್ಯವಾಗಿ ಎದುರಿಸಿದರು. ಪೂಜ್ಯ ಅಪ್ಪಅವರ ಹಲವಾರು ಮಹತ್ವದ ಕಾರ್ಯಗಳನ್ನು ದಾಸೋಹ ಪೀಠದ ಮೇಲೆ ನಡೆದ ಹಲ್ಲೆಯನ್ನು ಕೇಳಿದ ಮಹಾತ್ಮಾಗಾಂಧೀ ಅವರು ಬೆಳಗಾವಿಯಲ್ಲಿನ ಕಾಂಗ್ರೆಸ್ ಅಧಿವೇಶನವನ್ನು ಪೂರೈಸಿಕೊಂಡು ಕ್ರಿ. ಶ. ೧೯೨೪ ರಲ್ಲಿ ಅಪ್ಪಅವರನ್ನು ಕಾಣಲೆಂದು ಕಲ್ಬುರ್ಗಿಗೆ ಬಂದರು. ದಾಸೋಹ ಪೀಠದಲ್ಲಿ ಶರಣಬಸವರ ದರ್ಶನ ಹೊಂದಿ ಅಪ್ಪಅವರಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮಾಜೀ ಅವರು ಆಡಿದ ಮಾತುಗಳು ಪೂಜ್ಯ ಅಪ್ಪ ಅವರ ರಾಷ್ಟ್ರ ಸಮಾಜ ಕಾರ್ಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. "ಕಾಯಕ, ದಾಸೋಹ, ಅಸ್ಪೃಶ್ಯತೆಯ ಬಗೆಗೆ ಈಗಾಗಲೇ ಹೆಚ್ಚಾಗಿ ಅರಿತಂಥ, ಸರ್ವರಲ್ಲೂ ಶಿವನೇ ಇರುವನೆಂದು ಬಗೆದು ಸೇವೆಯಲ್ಲಿ ತೊಡಗಿರುವಂಥ ತಮಗೆ ರಾಷ್ಟ್ರಪ್ರೇಮದ ಬಗೆಗೆ, ಸಮಾಜ ಸೇವೆಯ ಬಗೆಗೆ ತಿಳಿಯಬೇಕಿದೆ? ನನ್ನಂತೆ ನೀವೂ ದೇಶಕಟ್ಟುವ ಕಾರ್ಯದಲ್ಲಿ ತೊಡಗಿರುವುದು ಹರುಷದ ಸಂಗತಿ. ಆದುದರಿಂದಲೇ ತಮ್ಮ ದರ್ಶನಕ್ಕೆ ಬಂದೆನು" ಎಂದು ನುಡಿದರು. ಪೂಜ್ಯ ಅಪ್ಪ ಅವರು ಗಾಂಧೀ ಅವರು ಸಂಗ್ರಹಿಸುತ್ತಿದ್ದ ಟಿಳಕರ ನಿಧಿಗೆ

ದಾಸೋಹ ಭಾವದಿಂದ ಸಹಾಯ ನೀಡಿದರು. ಮಹಾತ್ಮಗಾಂಧೀ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಅಂದಿನ ಸಂದರ್ಶನ ಇಬ್ಬರು ಮಹಾವಿಭೂತಿಗಳ ಸಂಗಮವಾಗಿ ಜನರಿಗೆ ಕಂಡಿತು.

ಪೂಜ್ಯ ದೊಡ್ಡಪ್ಪ ಅಪ್ಪ ಅವರು ನೆಟ್ಟ ಶಿಕ್ಷಣದ ವೃಕ್ಷ ಇಂದು ಹಲವಾರು ಶಾಖೆಗಳನ್ನು ಚಾಚಿಕೊಂಡು, ಆಧುನಿಕ ಜ್ಞಾನ ಪೂರೈಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಎಂಟನೆಯ ಮಹಾದಾಸೋಹ ಪೀಠಾಧಿಪತಿಗಳಾಗಿರುವ ಪೂಜ್ಯ ಡಾ|| ಶರಣಬಸವಪ್ಪ ಅಪ್ಪ ಅವರು ಆಧ್ಯಾತ್ಮಿಕ ಸಾಧನೆಯೊಂದಿಗೆ ಅತ್ಯಾಧುನಿಕ ಜ್ಞಾನ ರಾಶಿಯ ಸಮನ್ವಯದಂತಿದ್ದಾರೆ. ಅವರ ನೇತೃತ್ವದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ಚೈತನ್ಯ ಶೀಲ ಸಮಾಜ ಕಟ್ಟುವುದಕ್ಕೆ ಬೇಕಾದ ಜ್ಞಾನವನ್ನು ತನ್ನ ಹಲವಾರು ಮುಖಿಗಳಿಂದ ಪೂರೈಸುತ್ತಲಿದೆ. ಆರು ಮಹಾವಿದ್ಯಾಲಯಗಳು, ಎರಡು ಪ್ರಾಥಮಿಕ ಶಾಲೆಗಳು, ಎರಡು ಪ್ರೌಢಶಾಲೆಗಳು, ಆಂಗ್ಲಮಾಧ್ಯಮದ ವಸತಿ ಸೌಕರ್ಯವುಳ್ಳ ಪಬ್ಲಿಕ್ ಶಾಲೆ (ಈಗ ಇದು ಕಿರಿಯ ಮಹಾವಿದ್ಯಾಲಯವಾಗಿದೆ). ಗ್ರಂಥ ವಿಶ್ವ ವಿದ್ಯಾಲಯ, ಮುದ್ರಣಾಲಯ, ಅನುಭವಮಂಟಪ, ಕಾಯಕ ಇಂಟರ್‌ನ್ಯಾಷನಲ್, ದಾಸೋಹ ಜ್ಞಾನರತ್ನ ಪ್ರಶಸ್ತಿ ಪ್ರತಿಷ್ಠಾನ, ಪುರಾಣ ರತ್ನ ಪ್ರಶಸ್ತ್ರಿ ಪ್ರತಿಷ್ಠಾನ, ವೀರಶೈವ ಸಂಸ್ಕೃತಿ ದರ್ಶನ ವಸ್ತು ಮಂಟಪ, ದೊಡ್ಡಪ್ಪ ಅಪ್ಪ ಆಯ್.ಎ.ಎಸ್. ತರಬೇತಿ ಕೇಂದ್ರ, ಚಿತ್ರಕಲೆಯಲ್ಲಿ ಸ್ನಾತಕೊತ್ತರ ವಿಭಾಗ ಇವೆಲ್ಲವುಗಳು ಸಮಾಜದ ಎಲ್ಲಾ ವರ್ಗದ ವಿದ್ಯಾರ್ಥಿ ಶಕ್ತಿಯನ್ನು ಸತ್ವಯುಕ್ತವಾಗಿಸುವ ಕಮ್ಮಟಗಳಾಗಿ, ಪೂಜ್ಯ ಡಾ|| ಶರಣಬಸವಪ್ಪ ಅಪ್ಪ ಅವರ ನೂತನ ಮಾರ್ಗ ದರ್ಶನದಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಲಿವೆ. ಸರಕಾರದ ಅನುದಾನವಿಲ್ಲದೆ ಶರಣಬಸವೇಶ್ವರ ರೆಸಿಡೆನ್‌ಷ್ಷಿಯಲ್ ಕಿರಿಯ ಮಹಾ ವಿದ್ಯಾಲಯಕ್ಕೆ ಪ್ರತಿವರ್ಷವೂ ಎಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚವಿದೆ. ದಕ್ಷಿಣ ಭಾರತದಲ್ಲಿಯೇ ಯಾವ ವಿಶ್ವವಿದ್ಯಾಲಯಗಳಲ್ಲೂ ಇರದೆ ಇದ್ದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ವಿಭಾಗವು ಪ್ರಥಮವಾಗಿ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಪ್ರಾರಂಭಗೊಂಡ ಶ್ರೇಯಸ್ಸು ಶರಣಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೆ ಸಲ್ಲುತ್ತದೆ. ಇಂದು ಸಂಘದ ಎಲ್ಲ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಹದಿನೈದು ಸಾವಿರ ಮೀರುತ್ತದೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ವಿದ್ಯಾಸಂಸ್ಥೆಗಳ ಸೇವಾ ಕಾರ್ಯಗಳನ್ನು ಅವಲೋಕಿಸದೆ ಹೋದಲ್ಲಿ ಒಟ್ಟು ಹೈದರಾಬಾದ್ ಕನ್ನಡ ಪ್ರದೇಶದ ಜ್ಞಾನಕ್ಷೇತ್ರದ ಪರಿವೀಕ್ಷಣೆ ಅಪೂರ್ಣವಾಗುತ್ತದೆ. ಈ ಪ್ರದೇಶದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಸ್ಥಾಪನೆಯ ಹಿನ್ನೆಲೆಯಲ್ಲಿ ಈ ಸಂಸ್ಥೆಗಳು ಇಲ್ಲಿ ಮಹತ್ವ ಪಾತ್ರವನ್ನು ನಿರ್ವಹಿಸಿವೆ. ಆ ಮುಖಾಂತರ ಈ ನೆಲದಲ್ಲಿ ಸುಜ್ಞಾನ ಸಂಯುಕ್ತ ಸಮಾಜವನ್ನು ನಿರ್ಮಿಸಿ ಜನಾಂಗಕ್ಕೆ ಮಹದುಪಕಾರ ಮಾಡಿವೆ; ಮಾಡುತ್ತಲಿವೆ.

ಮಹಾದಾಸೋಹ ಪೀಠದ ಆಶ್ರಯದಲ್ಲಿ ಸ್ಥಾಪಿತಗೊಂಡಿರುವ ವೀರಶೈವ ಸಂಸ್ಕೃತಿ ವಸ್ತು ಮಂಟಪವು ವೀರಶೈವ ಸಮಾಜಕ್ಕೆ ಪ್ರಾಚೀನ ಸಂಸ್ಕೃತಿಯೊಡನೆ ಪ್ರಸ್ತುತ ಸಂಸ್ಕೃತಿಯ ಸ್ವರೂಪವನ್ನು ಬೆರೆಸುವ ಆಕರಗಳನ್ನು ಹೊತ್ತುಕೊಂಡು ನಿಂತಿದೆ.

ಮಹಾದಾಸೋಹದ ಜ್ಞಾನ ರತ್ನ ಪ್ರಶಸ್ತಿ ಪ್ರತಿಷ್ಠಾನದ ಸ್ಥಾಪನೆಯ ಉದ್ದೇಶವು, ಜಾಗತಿಕ ಮಟ್ಟದಲ್ಲಿಶರಣಸಮಾಜ ಸಂಸ್ಕೃತಿಯನ್ನು ಪರಿಚಯಿಸುವುದಾಗಿದೆ. ಆ ದಿಶೆಯಲ್ಲಿ ಈ ವರೆಗೆ ದುಡಿದಿರುವ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವುದಾಗಿದೆ. ಸ್ತ್ರೀ ವಿಮೋಚನೆ, ಅಸ್ಪೃಶ್ಯೋದ್ಧಾರ, ಕೃಷಿ, ಸಾಮಾಜಿಕ ಸೇವೆ ಸಾಹಿತ್ಯಾದಿ ಹಲವಾರು ಕ್ಷೇತ್ರಗಳನ್ನು ಈ ಪ್ರಶಸ್ತಿಗಾಗಿ ಗಮನಿಸಲಾಗುತ್ತದೆ. ಇದು ಮಹಾದಾಸೋಹ ಪೀಠದ ವಿಶ್ವ ಸಮಾಜದ ಸೇವೆಯಾಗಿಯೇ ಕಾಣುತ್ತದೆ. ಈ ಪ್ರಶಸ್ತಿಯ ಮೌಲ್ಯ ಒಂದು ಲಕ್ಷ ರೂ.

ಜಾನಪದರ ಬದುಕಿಗೆ ಸಂಸ್ಕಾರ ನೀಡುವ, ನೈತಿಕವಾಗಿ ಅವರನ್ನು ಅಣಿಗೊಳಿಸುವ, ಸತ್ಕಾರ್ಯಗಳಿಗೆ ತೊಡಗಿಸುವ, ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಈ ದಿಶೆಯಲ್ಲಿ ಯಾವ ವಿಶ್ವವಿದ್ಯಾಲಯಕ್ಕೂ ಸಾಧ್ಯವಾಗದ ಅಗಾಧ ಕಾರ್ಯ ಪುರಾಣ ಪ್ರವಚನಗಳಿಂದ ಸಾಧ್ಯವಾದುದು ವಾಸ್ತವ ಸತ್ಯ. ಇದನ್ನು ಮನದಂಡು ಪೂಜ್ಯ ಡಾ|| ಶರಣಬಸವಪ್ಪ ಅಪ್ಪ ಅವರು 'ಪುರಾಣರತ್ನ ಪ್ರಶಸ್ತಿ'ಯನ್ನು ನೀಡುವ ಯೋಜನೆ ಹಾಕಿಕೊಂಡು ಈಗಾಗಲೇ ಅದನ್ನು ಕಾರ್ಯಗತಗೊಳಿಸುತ್ತಿರುವರು. ಈ ಪ್ರಶಸ್ತಿಯ ಮೌಲ್ಯ ಹತ್ತು ಸಾವಿರ ರೂಪಾಯಿಗಳು.

ಸಮಾಜದ ಬದುಕನ್ನು ಹಸನುಗೊಳಿಸಿ, ಸಮಾಜಿಕರನ್ನು ಶಿವಜೀವರನ್ನಾಗಿ ಮಾಡಲು ಬಸವಾದಿ ಶಿವಶರಣರು ಕೈಕೊಂಡ ಚಿಂತನ ಮಂಥನಗಳಿಗೆಲ್ಲ ಆಶ್ರಯದ ತಾಣವಾಗಿದ್ದ ಅನುಭವಮಂಟಪದ ಪರಂಪರೆಯನ್ನು ಜಾಗೃತವಾಗಿರಿಸಲು ಕ್ರಿ.ಶ. ೧೯೮೫ರಲ್ಲಿ ಅಖಿಲ ಭಾರತ ಅನುಭವ ಮಂಟಪದ ಪ್ರಥಮ ಸಮ್ಮೇಳನ ಮಹಾದಾಸೋಹ ಪೀಠದಲ್ಲಿ ನಡೆದುದನ್ನಿಲ್ಲಿ ಸ್ಮರಿಸಲೇಬೇಕು. ಅನುಭವ ಮಂಟಪದ ಮೂಲಕ ಇಲ್ಲಿ ಪ್ರತಿವರುಷ ಶ್ರಾವಣಮಾಸದಲ್ಲಿ ೪೦-೫೦ ಜನ ವಿದ್ವಾಂಸರ

ಉಪನ್ಯಾಸಗಳು ಹಾಗೂ ಮಹಾದಾಸೋಹ ಯಾತ್ರಾ ಮಹೋತ್ಸವದ ಸಂದರ್ಭದಲ್ಲಿ ಹಲವು ವಿದ್ವನ್ಮಣಿಗಳ ವಿಶೇಷ ಉಪನ್ಯಾಸಗಳು ಜರುಗಿಸುತ್ತಿರುವದಕ್ಕೆ ಕಾರಣ ದೈನಂದಿನ ಸಮಾಜದಲ್ಲಿ ಸುಜ್ಞಾನ ಸುಸಂಸ್ಕೃತಿಯ ಪ್ರಖರವಾದ ಬೆಳಕನ್ನು ಹರಡುವುದಕ್ಕಾಗಿಯೆ.

ಪ್ರತಿವರುಷವೂ ದೇಶದ ನಾನಾ ಭಾಗಗಳಿಂದ ಕೋಟಿಗಟ್ಟಲೇ ಭಕ್ತರು ಶರಣಬಸವರ ದರ್ಶನಾರ್ಥಿಗಳಾಗಿ ಬರುವಂತೆ ಪೂಜ್ಯ ಡಾ॥ ಶರಣಬಸವಪ್ಪ ಅಪ್ಪಅವರು ಪ್ರತಿವರ್ಷವೂ ಭಕ್ತರ ಮೇಲಿನ ಭಕ್ತಿಯಿಂದ ಭಕ್ತರಿಗೆ ಜ್ಞಾನದಾಸೋಹ ಮಾಡಲೆಂದು ಸುಮಾರು ೫೦ ಸಾವಿರ ಕಿ.ಮೀ.ಗಳಷ್ಟು ದೂರ ಹಳ್ಳಿ ಪಟ್ಟಣಗಳಿಗೆ ಪ್ರವಾಸ ಕೈಗೊಳ್ಳುತ್ತಾರೆ. ಇದು ಅವರಲ್ಲಿನ ಭಕ್ತ ಸಮಾಜದ ಬಗೆಗಿರುವ ಕಳಕಳಿಗೆ ಸಾಕ್ಷಿಯಾಗಿದೆ.

ಮಹಾದಾಸೋಹ ಪೀಠದಲ್ಲಿ ಸಮಾಜದ ಎಲ್ಲ ವರ್ಗದವರೂ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿರುವದು ದೈನಂದಿನದಲ್ಲಿ ಕಾಣಬಹುದಾಗಿದೆ. ಈ ನೆಲದಲ್ಲಿ ಮುಸ್ಲಿಂ ಭಕ್ತರೂ ಸಹ ಶರಣಬಸವರ ಪುರಾಣವನ್ನು ನಡೆಸುವ ಹರಕೆಯುಳ್ಳವರಾಗಿದ್ದಾರೆಂಬ ಮಾತು ಆಶ್ಚರ್ಯವಾಗಿ ಕಂಡರೂ ಸತ್ಯದ ಸಂಗತಿಯಾಗಿದೆ. ಶರಣಬಸವೇಶ್ವರರ ದಾಸೋಹ ಮಹಾಮನೆಯಲ್ಲಿ ಪ್ರಸಾದ ಸ್ವೀಕರಿಸಲು ಬ್ರಾಹ್ಮಣ ಮೊದಲಾಗಿ ಅಂತ್ಯಜರಾದಿಗಳೆಲ್ಲರಿಗೂ ಮುಕ್ತ ಅವಕಾಶವಿದೆ. ಅಲ್ಲಿ ಸಮಾನ ಸ್ಥಾನವಿದೆ.

ವೀರಶೈವಧರ್ಮದ ನೈಜತತ್ವಾನುಷ್ಠಾನದ ರಂಗವಾಗಿ ಅನುಭಾವಿ ಶರಣರ ತತ್ವಗಳ ಕಾರ್ಯಾಚರಣೆಯ ಪ್ರವೇಶಾಲಯವಾಗಿ ಮಹಾದಾಸೋಹ ಶರಣರ ಸ್ಥಲವಾಗಿ ದಿನೇ ದಿನೇ ಹೊಸ ದಿಗಂತಗಳನ್ನು ತೆರೆಯುತ್ತ ವಿಶ್ವ ಕುಟುಂಬಿ ಭಾವನೆಯಿಂದ ಸಾಮಾಜಿಕಾದಿ ಸೇವೆಯಲ್ಲಿ ತೊಡಗಿಸಿಕೊಂಡಿರುವ ಮಹಾದಾಸೋಹ ಪೀಠದ ಕರ್ಣಧಾರರು ಪೂಜ್ಯ ಡಾ॥ ಶರಣಬಸವಪ್ಪ ಅಪ್ಪಅವರು. ಮಹಾದಾಸೋಹ ಪೀಠದ ಮೂಲಕ ಬಹುಮೂಲ್ಯವಾದ ಅಪೂರ್ವ ಸಾಧನೆ ಮಾಡುತ್ತಿರುವ ಕಾರಣದಿಂದಲೇ ಕರ್ನಾಟಕ ಸರಕಾರವು ಪೂಜ್ಯ ಅಪ್ಪ ಅವರಿಗೆ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಸನ್ಮಾನಿಸಿದೆ. ಗುಲ್ಬರ್ಗ ವಿಶ್ವವಿದ್ಯಾಲಯವು 'ಗೌರವ ಡಾಕ್ಟರೇಟ್' ನೀಡಿ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ಅಖಿಲಭಾರತದ ಸಮಸ್ತ ವೀರಶೈವ ಬಾಂಧವರು.ಪೂಜ್ಯ ಅಪ್ಪಅವರನ್ನು ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುವುದರ ಮುಖಾಂತರ ತಮ್ಮ ಗೌರವವನ್ನು ಸಮರ್ಪಿಸಿದ್ದಾರೆ.

ಯಾವ ಜಂಗಮನ ದಮ್ಮುರೋಗವನ್ನು ಸ್ವೀಕರಿಸಿ ಅವನಿಗೆ ಶರಣಬಸವರು ಆರೋಗ್ಯದ ಆನಂದವನ್ನು ನೀಡುವುದರ ಮೂಲಕ ತಮ್ಮ ಪ್ರಾಣವನ್ನೇ ಜಂಗಮಾರ್ಪಣೆ ಗೈದರೋ ಆ ಜಂಗಮದ ಇನ್ನೊಂದು ಮುಖವೇ ಈ ಚೇತನದ ಸಮಾಜ. "ಸಮಾಜ ಪುರುಷನ ಸರ್ವತೋಮುಖ ಅಭಿವೃದ್ಧಿಗಾಗಿ ಸಂದರ್ಭ ಒದಗಿ ಬಂದಲ್ಲಿ ತಮ್ಮ ಪ್ರಾಣವನ್ನೆ ಅರ್ಪಿಸಿದರೂ ಹಿರಿದಲ್ಲ" ಎನ್ನುವ ತತ್ವವು ಅಂದು ಶರಣಬಸವರು ಬದುಕಿದ್ದ ಜೀವನದ ತತ್ವವಾಗಿತ್ತು. ಅದುವೇ ಅವರ ಸಂಕಲ್ಪದ ಶಕ್ತಿಯಾಗಿತ್ತು. ಆ ಸತ್ವ ಸಂಕಲ್ಪಶಕ್ತಿಗಳಿಂದು ಮಹಾದಾಸೋಹ ಪೀಠದ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಜೀವಂತವಾಗಿದೆ.

○

ಭಾಲ್ಕಿ ಹಿರೇಮಠದ ಕೊಡುಗೆ

ಪ್ರೊ. ವೀರೇಂದ್ರ ಸಿಂಪಿ

ಕರ್ನಾಟಕದ ವೀರಶೈವ ಮಠಗಳಲ್ಲೇ ಭಾಲ್ಕಿಯ ಹಿರೇಮಠಕ್ಕೆ ತುಂಬ ಮಹತ್ವದ ಸ್ಥಾನವಿದೆ. ಸಾರ್ವಜನಿಕ ಸೇವೆಗಾಗಿಯೇ ಈ ಹಿರೇಮಠ ಮೀಸಲಾಗಿದೆ. ಇಪ್ಪತ್ತನೇ ಶತಮಾನದ ಕೊನೆಯ ಅಂಚಿನಲ್ಲಿ ಕುಳಿತು ಆಲೋಚಿಸಿದಾಗ ಒಂದು ನೂರಾ ಆರುವರ್ಷಗಳ ತುಂಬು ಜೀವನ ಸಾಗಿಸಿದ ಪರಮಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರ ಜೀವನ ಬೇರೆಯಲ್ಲ; ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಜೀವನ ಬೇರೆ ಅಲ್ಲ ಎಂದೆನಿಸುತ್ತದೆ. ಅವರು ಸೇವೆ, ಸಂಯಮ, ತ್ಯಾಗಗಳ ಮೂರ್ತಿಮಂತ ಪ್ರತೀಕವಾಗಿದ್ದಾರೆ. ಇಡೀ ಕನ್ನಡನಾಡಿನಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ಅವರಂತಹ ನಿಸ್ವಾರ್ಥಿ ಸ್ವಾಮಿಗಳು ಮತ್ತೊಬ್ಬರಿಲ್ಲ. ಸ್ವಾಮಿಗಳಲ್ಲಿ ಮೂರು ವಿಧ. ಬಹಿರಂಗದಲ್ಲಿ ಕಾವಿಬಟ್ಟೆ ಧರಿಸಿ ಭೋಗಜೀವನ ನಡೆಸಿದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇನ್ನು ಕೆಲ ಸ್ವಾಮಿಗಳು ಅಲ್ಪ ಸ್ವಲ್ಪ ಶಾಸ್ತ್ರ ಪುರಾಣಗಳನ್ನು ಓದಿ ತತ್ವೋಪದೇಶ ಮಾಡುತ್ತ ತತ್ವಾನುಷ್ಠಾನಕ್ಕಾಗಿ ಕಿಂಚಿತ್ತೂ ಚಿಂತೆ ಮಾಡಲಾರದವರು. ಇನ್ನು ಮೂರನೆಯದಾಗಿ ಕೆಲ ಸ್ವಾಮಿಗಳು ಬಸವಣ್ಣನವರಂಥ ವಿಶ್ವವಿಭೂತಿಗಳ ತತ್ವಗಳನ್ನು ಅನುಷ್ಠಾನಕ್ಕೆ ತಂದವರು. ಅಂಥವರು ತುಂಬ ವಿರಳ. ಅಂಥ ವಿರಳರಲ್ಲಿಯೇ ಅಗ್ರಗಣ್ಯರಾದವರು ಪರಮಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರು. ಸಮಾಜಕ್ಕೆ, ನಾಡಿಗೆ, ದೇಶಕ್ಕೆ ಭಾಲ್ಕಿಯ ಹಿರೇಮಠದ ಕೊಡುಗೆಯೆಂದರೆ ಪೂಜ್ಯಶ್ರೀಗಳವರ ಕೊಡುಗೆಯೇ ಆಗಿದೆ.

ಬೀದರ ಜಿಲ್ಲೆಯಲ್ಲಿ ತಾಲ್ಲೂಕಾಸ್ಥಳವಾದ ಭಾಲ್ಕಿಯಲ್ಲಿರುವ ಹಿರೇಮಠದ ಮೂಲಪುರುಷರು ಚೆನ್ನಬಸವೇಶ್ವರರೇ ಆಗಿದ್ದುದು ಕೇವಲ ಆಕಸ್ಮಿಕವಲ್ಲ. ಅದೊಂದು ಅರ್ಥಪೂರ್ಣ ವಿಷಯವೇ ಆಗಿದೆ. ಜನಸೇವೆಯೇ ಈ ಮೂಲ ಪುರುಷರ ಉಸಿರಾಗಿತ್ತು. ಅವರ ಸಮಾಧಿ ಮಾಯನಳ್ಳಿಯಲ್ಲಿ ಇದೆಯೆಂದು ತಿಳಿದುಬರುತ್ತದೆ. ಭಾಲ್ಕಿಯ ಹಿರೇಮಠದ ವೈಶಿಷ್ಟ್ಯಗಳು ಎರಡು. ವಚನಸಾಹಿತ್ಯವನ್ನು ತಾಳೆಗರಿಯಲ್ಲಿ ಸಂಗ್ರಹಿಸಿ ಇಡುವ ಕಾರ್ಯ ಒಂದಾದರೆ, ಇಲ್ಲಿಯ ಪಟ್ಟದದೇವರು ಉರಿಲಿಂಗ ಪೆದ್ದಿ ಸಂಪ್ರದಾಯದ ಸ್ವಾಮಿಗಳಿಗೆ ಲಿಂಗದೀಕ್ಷೆ ಕೊಡುತ್ತ ಬಂದಿರುವುದು ಎರಡನೆಯ ವೈಶಿಷ್ಟ್ಯವಾಗಿದೆ.

ಭಾಲ್ಕಿಯ ಹಿರೇಮಠದ ಮೂಲಪುರುಷ ಪೂಜ್ಯ ಚೆನ್ನಬಸವಪಟ್ಟದದೇವರ ಜನಸೇವೆಯ ಪರಂಪರೆಯನ್ನು ಅವರ ನಂತರದ ಪೂಜ್ಯರಾದ ಶ್ರೀ ಸಿದ್ಧಲಿಂಗ ಪಟ್ಟದದೇವರು, ದೇಶಮುಖ ಪಟ್ಟದದೇವರು, ಸಿದ್ಧಬಸವ ಪಟ್ಟದ್ದೇವರು ಮುಂದುವರಿಸಿದರೆ, ಈಗಿನ ಬಚ್ಚ ಬರಿಯ ಶ್ರೀ ಚನ್ನಬಸವ ಪಟ್ಟದದೇವರು ಸೇವಾ ಪರಂಪರೆಗೆ ಕಳಸವನ್ನಿಟ್ಟಿದ್ದಾರೆ. ಈಗಿನ ಚೆನ್ನಬಸವ ಪಟ್ಟದದೇವರಿಗೆ ಕನ್ನಡ ಒಂದು ಕಣ್ಣಾದರೆ, ಬಸವತತ್ವ ಇನ್ನೊಂದು ಕಣ್ಣಾಗಿದೆ. ಭಾಲ್ಕಿಯ ಪರಂಪರೆಯ ಶ್ರೀಗಳೆಂದೂ ಸ್ಥಾವರಮೂರ್ತಿಗಳಾಗಿರದೆ, ಊರೂರಿಗೆ ಸಂಚರಿಸುತ್ತ, ಶಿಷ್ಯರ ಮನೆಮನೆಗಳಿಗೆ ಸಂದರ್ಶಿಸುತ್ತ ಧರ್ಮಬೋಧೆ ಮಾಡುತ್ತ ಶಿಷ್ಯರಿಂದ ಭಕ್ತಿಯ ಕಾಣಿಕೆಗಳನ್ನು ಸ್ವೀಕರಿಸುತ್ತ ಜಂಗಮಮೂರ್ತಿಗಳಾಗಿರುವದೊಂದು ವಿಶೇಷ. ಬಸವ ಜಯಂತಿಯ ಸುಮಾರಿಗೆ ಭಾಲ್ಕಿಗೆ ಬಂದು ಒಂದು ತಿಂಗಳಕಾಲ ಮಠದಲ್ಲಿ ಪ್ರವಚನ ಹೇಳಿ ಮುಗಿಸಿದರೋ ಮತ್ತೆ ಕಾರು ಹುಣ್ಣಿಮೆಗೆ ಸೀಮೋಲ್ಲಂಘನೆ ಮಾಡುತ್ತಿದ್ದರು. ವಾಹನ ಸೌಕರ್ಯಗಳಿಲ್ಲದ, ಸರಿಯಾದ ಮಾರ್ಗಗಳಿಲ್ಲದ ಬೀದರ ಜಿಲ್ಲೆಯಲ್ಲಿ ಒಂಟೆ, ಕುದುರೆಗಳ ಮೇಲೆ ಕುಳಿತು ಹಳ್ಳಿ-ಪಟ್ಟಣಗಳನ್ನು ಸುತ್ತುತ್ತ ಧರ್ಮಬೋಧೆ ಮಾಡಿದ ಈ ಹಿರೇಮಠದ ಪೂಜ್ಯ ಶ್ರೀಗಳ ಕಷ್ಟಸಹಿಷ್ಣುತೆ ಸಾಮಾಜಿಕ ಕಳಕಳಿಗಳನ್ನು ಎಷ್ಟು ವರ್ಣಿಸಿದರೂ ತೀರದು. ಭಾಲ್ಕಿಯ ಹಿರೇಮಠವನ್ನು ಕೇಂದ್ರಬಿಂದುವನ್ನಾಗಿರಿಸಿಕೊಂಡು ನೋಡಿದರೆ ಭಾಷಾವಾರು ಪ್ರಾಂತ ರಚನೆಯ ಮೊದಲು ಬೀದರ ಜಿಲ್ಲೆಯ ಭಾಗಗಳೇ ಆಗಿದ್ದು, ಈಗ ಮಹಾರಾಷ್ಟ್ರ ಆಂಧ್ರಗಳ ಹಳ್ಳಿಗಳಾಗಿ ಮುಂದುವರೆದಿರುವ ಕಾರಾಮುಂಗಿ, ಮೋರಗಿ, ಮಾಯನಳ್ಳಿ, ಕಮಾಲ ನಗರ, ಶಿರಾಢೋಣ, ಬೋರ್‍ಯಾಳಗಳಲ್ಲಿ ಭಾಲ್ಕಿಯ ಹಿರೇಮಠದ ಶಾಖಾಮಠಗಳಿವೆ. ಭಾಲ್ಕಿಯ ಹಿರೇಮಠದ ಮೂಲಕ ಪೂಜ್ಯ ಶ್ರೀ ಚೆನ್ನಬಸವ ಪಟ್ಟದದೇವರು ಮಾಡಿದ ಶೈಕ್ಷಣಿಕ ಧಾರ್ಮಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವೆ ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾಗಿದೆ.

ಪೂಜ್ಯ ಶ್ರೀ ಚೆನ್ನಬಸವ ಪಟ್ಟದದೇವರ ಜೀವನ:

ಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರು ಹುಟ್ಟಿದ್ದು ೧೮೯೦ರಲ್ಲಿ, ಬೀದರ ಜಿಲ್ಲೆಯ ಕಮಾಲನಗರದ ಬಡವರ ಕುಟೀರದಲ್ಲಿ. ಐದು ವರ್ಷದವರಿದ್ದಾಗ ತಾಯಿತಂದೆಗಳನ್ನು ಕಳೆದುಕೊಂಡ ಅವರ ಪೂರ್ವಾಶ್ರಮದ ಹೆಸರು ಮಾರುತೆಪ್ಪ ಬುಳ್ಳಾ ಎಂದಿತ್ತು. ಕಮಾಲನಗರದ ಶಾಖಾ ಮಠದಲ್ಲಿ ಅನಾಥ ಮಗುವಾಗಿ ಆಶ್ರಯ ಪಡೆದ ಅವರು ಅಲ್ಲಿ ಗುರುಗಳಾಗಿದ್ದ ಶಂಕರಯ್ಯನವರ ನೇತೃತ್ವದಲ್ಲಿ ಕಂತೆಭಿಕ್ಷೆ ತರುವುದು, ಹೊಲಕ್ಕೆ ಹೋಗಿ ಆಕಳುಗಳನ್ನು ಮೇಯಿಸಿಕೊಂಡು ಬರುವದು, ಪೂಜೆ ಮಾಡುವುದು ಮುಂತಾದ - ಶಾರೀರಿಕ ಶ್ರಮದ ಕೆಲಸವನ್ನು ಮಾಡಲು ಕಲಿತರು. ಕಮಾಲನಗರ ಬಿಟ್ಟು ಭಾಲ್ಕಿ ಮಠಕ್ಕೆ ಬಂದ ಅವರು ಆಗ ಅಲ್ಲಿ ಪಟ್ಟದದೇವರಾಗಿದ್ದ ಸಿದ್ಧಬಸವಸ್ವಾಮಿಗಳ ಕೃಪಾಶೀರ್ವಾದಗಳನ್ನು ಪಡೆದರಲ್ಲದೆ, ಚೆನ್ನಬಸವನೆಂಬ ಹೆಸರನ್ನು ಹೊಂದಿದರು. ಮುಧೋಳದ ಚರಮೂರ್ತಿಗಳಾದ ಶಿವಲಿಂಗಶಾಸ್ತ್ರಿಗಳ ಸೇವೆ ಮಾಡುತ್ತ ವಿದ್ಯಾಭ್ಯಾಸ ಮುಗಿಸಿದರು. ಮುಂದೆ ಔರಾದದಲ್ಲಿಯ ಗಳಂಗಳಪ್ಪ ಶಾಲೆಯಲ್ಲಿ ರಾಜಶೇಖರವಿಳಾಸ, ಶಬರಶಂಕರ ವಿಳಾಸ, ಕರ್ನಾಟಕ ಶಬ್ದಮಂಜರಿಗಳನ್ನು ಅರೆದು ಕುಡಿದರು. ಮುಂದೆ ಅವರು ಕಲಿತದ್ದು ಕರ್ನಾಟಕದ ಶಾಂತಿನಿಕೇತನವೇ ಆದ ಶಿವಯೋಗಮಂದಿರದಲ್ಲಿ. ಹಾನಗಲ್ಲ ಕುಮಾರಸ್ವಾಮಿಗಳ ನೇತೃತ್ವದಲ್ಲಿ ಆರು ವರ್ಷಗಳ ಕಾಲ ಶತಕತ್ರಯ, ಕುಮಾರ ಸಂಭವ, ರಘುವಂಶಗಳನ್ನು ಅಧ್ಯಯನಮಾಡಿದರು. ನಂತರ ೧೯೨೪ರಲ್ಲಿ ಭಾಲ್ಕಿಯ ಸ್ಥಿರಚರ ಪಟ್ಟಾಧಿಕಾರಿಗಳಾಗಿ ನಿಂತರು. ಭಕ್ತರ ಮನೆಯಲ್ಲಿ ಹುಟ್ಟಿದ ಅವರು ಭಾಲ್ಕಿಯಂಥ ಮಹತ್ವದ ಮಠದ ಪಟ್ಟದದೇವರಾದುದೊಂದು ವಿಶೇಷ.'ನೀನು ಮಠದ ಗುಲಾಮನಾಗಬಾರದು. ಕನ್ನಡ ಶಾಲೆಗಳನ್ನು ತೆರೆದು ಶಿಕ್ಷಣ ಸೇವೆ, ತತ್ವ ಪ್ರಸಾರಮಾಡು' ಎಂದು ಹಾನಗಲ್ಲು ಕುಮಾರ ಶ್ರೀಗಳು ಅಂದು ಪಟ್ಟಾಧಿಕಾರ ವಹಿಸಿಕೊಳ್ಳುವ ಕಾಲಕ್ಕೆ ಶ್ರೀ ಚೆನ್ನಬಸವರಿಗೆ ಹರಸಿದರು. ಆ ಹರಕೆಯಿಂದು ಹಣ್ಣಾಗಿ ಹೈದ್ರಾಬಾದ್-ಕರ್ನಾಟಕ ಅರ್ಥಾತ್ ಕಲ್ಯಾಣನಾಡಿಗೆಲ್ಲ ಸುಮಧುರ ಫಲಗಳನ್ನು ಇತ್ತಿದೆ.

ಶಿಕ್ಷಣ ಪ್ರಸಾರ:

ಯಾವ ಕಲ್ಯಾಣ ಕರ್ನಾಟಕದಲ್ಲಿ ಬಸವಣ್ಣನವರು ಕಾಯಕ ತತ್ವದ ಮೂಲಕ ವರ್ಗಭೇದ ಹೋಗಲಾಡಿಸಿದರೋ, ಅಂತರ್ಜಾತೀಯ ವಿವಾಹದ ಮೂಲಕ ಜಾತಿ ನಿರ್ಮೂಲನಕ್ಕೆ ನಾಂದಿ ಹಾಡಿದರೋ, ಸಮಾಜದಲ್ಲಿ ಮಲೆತುನಿಂತ ಅಂಧಶ್ರದ್ಧೆ, ಮೂಢ ನಂಬಿಕೆಗಳ ವಿರುದ್ಧ ತಮ್ಮ ಪ್ರಖರವಾದ ವೈಚಾರಿಕ ನೆಲೆಯಿಂದ ಸೆಣಸಿ ನಿಂತರೋ, ತಮ್ಮ ಅಮೃತದ ಹನಿಗಳಾಗಿರುವ ವಚನಗಳ ಮೂಲಕ ಕನ್ನಡ ಭಾಷೆಗೆ ಜೀವಕಳೆ ತುಂಬಿದರೋ, ಆ ನಾಡಿನಲ್ಲಿ ಕನ್ನಡ ಭಾಷೆ ಹೇಳ ಹೆಸರಿಲ್ಲದಂತೆ ಮೂಲೆಗುಂಪಾಗಿತ್ತು. ಆಳರಸರಾದ ಹೈದ್ರಾಬಾದ ನಿಜಾಮರ ಆಡಳಿತದಲ್ಲಿ ಉರ್ದು ಮರಾಠಿಗಳ ಪ್ರಭಾವದಡಿಯಲ್ಲಿ ಕನ್ನಡ, ಜನಸಾಮಾನ್ಯರ ಭಾಷೆಯಾಗಿ ಉಳಿದಿತ್ತು. ಆಗ ಚೆನ್ನಬಸವಪಟ್ಟದದೇವರು ೧೯೩೦ರ ಸುಮಾರಿಗೆ ಮೋರಗಿ ಗ್ರಾಮದಲ್ಲಿ (ಅಂದರೆ ಈಗ ಆಂಧ್ರರಾಜ್ಯದ ಮೇಡಕ್ ಜಿಲ್ಲೆಯ ನಾರಾಯಣ ಖೇಡ ತಾಲ್ಲೂಕಿನ ಹಳ್ಳಿಯಾಗಿರುವ) ಕನ್ನಡ ಪಾಠಶಾಲೆ ಪ್ರಾರಂಭಿಸಿದರು. ಕನ್ನಡ ಮಾತನಾಡಿದರೆ ಶಬ್ದಶಃ ಹೊಡೆಯುವ ಹೈದ್ರಾಬಾದ ನಿಜಾಮರ ದಬ್ಬಾಳಿಕೆ ಒಂದೆಡೆಯಾದರೆ ಕನ್ನಡ ಕಲಿತು ನಾವೇನು ಶಾಸ್ತ್ರ ಪುರಾಣ ಹೇಳಬೇಕಾಗಿದೆಯೇ ಎಂದು ಕೇಳುವ ಅಜ್ಞ ಜನರು ಇನ್ನೊಂದೆಡೆ, ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಮೇಲೆ ಉರ್ದು ನಾಮಫಲಕವಿರಿಸಿ ಒಳಗೆ ಕನ್ನಡ ಕಲಿಸುವ ವಿಧಾನದಿಂದ ಸರಕಾರದ ದಬ್ಬಾಳಿಕೆ ತಪ್ಪಿಸಿಕೊಂಡರಲ್ಲದೆ ನಿಮ್ಮ ಹುಡುಗರಿಗೆ ಮೋಡಿ (ಮರಾಠಿ) ಕಲಿಸುತ್ತೇವೆಂದು ಜನಸಾಮಾನ್ಯರ ಮನವೊಲಿಸಿ ಮಕ್ಕಳಿಗೆ ಕನ್ನಡವನ್ನೇ ಕಲಿಸಿವರು.

ಇಂದಿನ ಶಿಕ್ಷಣದ ವ್ಯಾಪಾರೀಕರಣದ ದಿನಗಳಲ್ಲಿ ಸ್ವಾಮಿಗಳು ಅಂದು ಮೋರಗಿಯಲ್ಲಿ ಕನ್ನಡ ಪಾಠಶಾಲೆಯನ್ನು ಪ್ರಾರಂಭಿಸಿದ್ದು ಬೀದರ ಜಿಲ್ಲೆಯಲ್ಲಿ ಒಂದು ಯುಗಾಂತರಕ್ಕೆ ನಾಂದಿ ಹಾಡಿದಂತಾಯಿತು. ಶ್ರೀ ಚೆನ್ನಬಸವ ಪಟ್ಟದದೇವರು ಆಗ ನೇಕಾರರ ಕಡೆಯಿಂದ ಹಚ್ಚಡವನ್ನು ನೇಯಿಸಿ ಅವುಗಳನ್ನು ಕತ್ತರಿಸಿ ನೂರಾರು ಸಾವಿರಾರು ಜೋಳಿಗೆಗಳನ್ನು ತಯಾರಿಸುತ್ತಿದ್ದರು. ಬೀದರ ಜಿಲ್ಲೆಯ ಪ್ರತಿ ಹಳ್ಳಿಯ ಪ್ರತಿ ಮನೆಮನೆಯಲ್ಲಿ ಜೋಳಿಗೆಯೊಂದನ್ನು ಇಡಲಾಗುತ್ತಿತ್ತು. ಮನೆಯಲ್ಲಿ ಹೆಣ್ಣುಮಕ್ಕಳು ಹಿಟ್ಟು ಬೀಸಲು ಕುಳಿತಾಗ ಒಂದನೆಯ ಮುಷ್ಟಿಯ ಜೋಳವನ್ನು ಜೋಳಿಗೆಯಲ್ಲಿ ಹಾಕಲಾಗುತ್ತಿತ್ತು. ಈ ರೀತಿ ಪ್ರತಿ ಮನೆಯಲ್ಲಿ ಸಂಗ್ರಹಿತವಾದ ಕಾಳನ್ನು ವಾರಕ್ಕೊಮ್ಮೆ ಅಥವಾ ಎರಡು ವಾರಕ್ಕೊಮ್ಮೆ ಸ್ವಾಮಿಗಳು ತಮ್ಮ ಜೊತೆಗಾರರಾದ ಹಾವಯ್ಯ ಶಿವಮೂರ್ತಿಯೆಂಬುವರೊಂದಿಗೆ ಅಶ್ವಾರೂಢರಾಗಿ ಆ ಹಳ್ಳಿಗೆ ಬಂದಾಗ ಆ ಕಾಳನ್ನು ಸಂಗ್ರಹಿಸುತ್ತಿದ್ದರು. ಇದೇ ಶ್ರೀ ಚೆನ್ನಬಸವ ಪಟ್ಟದ್ದೇವರ ಮುಷ್ಟಿಭಿಕ್ಷೆಯ ವಿಧಾನ. ಹೀಗೆ ಐದಾರು ವರ್ಷಗಳ ಕಾಲ ಮೋರಗಿಯಲ್ಲಿ ಪಾಠಶಾಲೆ ನಡೆಸಿದ ನಂತರ ಮಾಂಜರಾನದಿ ಆಗ ತುಂಬಿ ಹರಿಯುತ್ತಿದ್ದುದರಿಂದ ಮೋರಗಿ ಗ್ರಾಮದಿಂದ

೧೯೪೩-೪೪ರಲ್ಲಿ ಪಾಠಶಾಲೆಯನ್ನು ಸಂಗಮದಲ್ಲಿ ಲಾಕೆ ಸಂಗಯ್ಯನವರ ಮನೆಯಲ್ಲಿ ಪ್ರಾರಂಭಿಸಿದರು. ಆಗ ಸಿದ್ಧವೀರಸ್ವಾಮಿಗಳು ಪಾಠಶಾಲೆಯ ಹೆಡ್‌ಮಾಸ್ತರರಾಗಿದ್ದರು. ಅವರ ನಂತರ ಬಹುಕಾಲ ಬೀದರಿನ ಭೂಮರಡ್ಡಿ ಕಾಲೇಜಿನ ಆಫೀಸ ಸೂಪರಿಟೆಂಡೆಂಟರಾಗಿದ್ದ ಭಗವತಿಯವರು ಹೆಡ್‌ಮಾಸ್ತರರಾಗಿ ಬಂದರು. ಶಿಕ್ಷಕರ ಸಂಬಳಕ್ಕಾಗಿ ಊರೂರುಗಳಲ್ಲಿ ಜನರಿಂದ ದೇಣಿಗೆ ಪಡೆಯುತ್ತಿದ್ದರು. ವಿಶೇಷವಾಗಿ ಹುಲಸೂರು, ಚೌಡೇಶ್ವರ, ಹೊಳೆಸಮುದ್ರ, ತೋರ್ಣಾ, ಸಾವಳಗಿ, ಬಳಸಕೊಟ್ಯಾಳ ಗ್ರಾಮಗಳಿಂದ ವರ್ಗಣಿ ಸಂಗ್ರಹ ಮಾಡುತ್ತಿದ್ದರು. ಈ ರೀತಿ ಅತ್ಯಂತ ಕಷ್ಟದಿಂದ ಮೋರಗಿ, ನಂತರ ಸಂಗಮದಲ್ಲಿ ಕನ್ನಡ ಪಾಠಶಾಲೆಯನ್ನು ನಡೆಸಲಾಗುತ್ತಿತ್ತು. ನಂತರ ಈ ಪಾಠಶಾಲೆಯಲ್ಲಿ ಕನ್ನಡ ಐದನೆಯ ವರ್ಗದವರೆಗೆ ಕಲಿತ ಹುಡುಗರಿಗೆ ಉದ್ಗೀರ, ಜಾಹಿರಾಬಾದ, ಬೀದರದಲ್ಲಿಯ ಪ್ರೌಢ ಶಾಲೆಗಳಲ್ಲಿ ಪ್ರವೇಶ ಸಿಗದೆ ಹೋದಾಗ ಲಾತೂರಿನ ಮಾರವಾಡಿ ಸ್ಕೂಲಿನಲ್ಲಿ ಪ್ರವೇಶ ದೊರಕಿಸಿದರು. ಅಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯೆಂದು ಕಲಿಸಲಾಗುತ್ತಿತ್ತು. ಮುಂದೆ ೧೯೪೮ರಲ್ಲಿ ಹಳೆಯ ಹೈದ್ರಾಬಾದ ಸಂಸ್ಥಾನದ ಈ ಭಾಗದಲ್ಲಿ ರಜಾಕಾರ ಚಳುವಳಿ ಪ್ರಾರಂಭವಾದಾಗ ಸಂಗಮದಿಂದ ಲಾತೂರಿನಿಂದ ಪಾಠಶಾಲೆಯ, ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಸೊಲ್ಲಾಪುರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಾಡಾದಿ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಕೊಡಿಸಹಚ್ಚಿದರಲ್ಲದೆ ಕುಂಟೋಜಿ ಮಠದಲ್ಲಿ ಪ್ರಸಾದದ ವ್ಯವಸ್ಥೆಯನ್ನು ಮಾಡಿಸಿದರು. ಮುಂದೆ ರಜಾಕಾರ ಚಳುವಳಿ ಮುಗಿದಾಗ ಕಮಾಲನಗರದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಹೀಗೆ ೧೯೩೭ರಲ್ಲಿ ಸ್ವಾಮಿಗಳು ಮೋರಗಿ ಗ್ರಾಮದಲ್ಲಿ ಪಾಠಶಾಲೆ ಪ್ರಾರಂಭವಾದದ್ದು, ಶಾಂತಿವರ್ಧಕ ಶಿಕ್ಷಣ ಸಂಸ್ಥೆಯೆಂಬ ಹೆಮ್ಮರವಾಗಿ ಬೆಳೆದು ಕಮಾಲನಗರದ ಪ್ರೌಢಶಾಲೆ, ಪದವಿಪೂರ್ವ ಮಹಾವಿದ್ಯಾಲಯ, ಪದವಿ ಮಹಾವಿದ್ಯಾಲಯ, ಭಾಲ್ಕಿಯ ಅಕ್ಕಮಹಾದೇವಿ ಪದವಿಪೂರ್ವ ಮಹಾವಿದ್ಯಾಲಯ, ಬೀದರಿನ ಅಕ್ಕಮಹಾದೇವಿ ಡಿಗ್ರಿ ಕಾಲೇಜು, ಭಾಲ್ಕಿಯ ರೂರಲ್ ಇಂಜಿನಿಯರಿಂಗ್ ಮಹಾವಿದ್ಯಾಲಯಗಳನ್ನು ನಡೆಸಲಾಗುತ್ತಿದೆ. ಬೀದರ ಜಿಲ್ಲೆಯಲ್ಲಿ ಈ ರೀತಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ ಶ್ರೀಗಳವರ ಶಿಕ್ಷಣಪ್ರೇಮ ಅಸದಳವಾದುದು. ಶಿಕ್ಷಣವೆಂದರೆ ಸಾಮಾಜಿಕ ಬದಲಾವಣೆಯ ಮುಖ್ಯ ತಳಹದಿಯೆಂದು ಭಾವಿಸುವ ಇಂದಿನ ಯುಗದಲ್ಲಿ ಈ ಶತಮಾನದ ಮೂರನೇ ದಶಕದಿಂದ ಅಖಂಡವಾಗಿ ಎಪ್ಪತ್ತು ವರ್ಷಗಳ ಕಾಲ ಬೀದರ ಜಿಲ್ಲೆಯಲ್ಲಿ ಪಾಠಶಾಲೆ, ಪ್ರೌಢಶಾಲೆ, ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಜಿಲ್ಲೆಯನ್ನೇ ಕತ್ತಲೆಯುಗದಿಂದ ಬೆಳಕಿನ ಯುಗಕ್ಕೆ ಒಯ್ದು ಕೀರ್ತಿ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ ದೇವರಿಗೆ ಸಲ್ಲುತ್ತದೆ.

ಕನ್ನಡದ ಕಾಮಧೇನು:

ಯಾವ ರೀತಿ ಮುಂಬೈ ಕರ್ನಾಟಕದಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ೧೮೩೦ರ ಸುಮಾರಿಗೆ ಕನ್ನಡಶಾಲೆಗಳನ್ನು ಸ್ಥಾಪಿಸುವುದರ ಮೂಲಕ, ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಅಂದರೆ ವಿಜಾಪುರ, ಧಾರವಾಡ, ಬೆಳಗಾವಿ, ಕಾರವಾರ ಜಿಲ್ಲೆಗಳಲ್ಲಿ ಕನ್ನಡದ ಪುನರುತ್ಥಾನ ಮಾಡಿದರೋ ಅದೇ ರೀತಿ ಭಾಲ್ಕಿಯ ಚೆನ್ನಬಸವ ಪಟ್ಟದದೇವರು ಬೀದರ ಜಿಲ್ಲೆಯ ಹಳ್ಳಿ ಪಟ್ಟಣಗಳಲ್ಲಿ ೧೯೩೦ರ ಸುಮಾರಿಗೆ ಕನ್ನಡ ಮಾಧ್ಯಮದ ಪಾಠಶಾಲೆ, ಪ್ರೌಢಶಾಲೆಗಳನ್ನು ಸ್ಥಾಪಿಸುವದರ ಮೂಲಕ ಬೀದರ ಜಿಲ್ಲೆಯ ಕನ್ನಡ ಪುನರುತ್ಥಾನದ ಮೂಲ ಪುರುಷರೆನಿಸಿದರು. ಕನ್ನಡಕ್ಕಾಗಿ ದುಡಿದ ಮಹಾಪುರುಷರೆನಿಸಿದರು. ಭಾಲ್ಕಿಯ ಹಿರೇಮಠದ ಈ ಶಕಪುರುಷರಿಗೆ ಈ ಮಹರ್ಷಿಗಳಿಗೆ ಕನ್ನಡ ಬೇರೆಯಲ್ಲ, ಶಿಕ್ಷಣಸೇವೆ ಬೇರೆ ಅಲ್ಲ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಅವರು ಅಂದು ಬೀದರ ಜಿಲ್ಲೆಯಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುವಾಗ ಸೊಲ್ಲಾಪುರದ ಕನ್ನಡ ಮಹಾಕವಯಿತ್ರಿ ಜಯದೇವಿ ತಾಯಿ ಲಿಗಾಡೆಯವರ ಸಹಾಯದಿಂದ ವಿಜಾಪುರ ಜಿಲ್ಲೆಯ ಸುಶಿಕ್ಷಿತ ಪದವೀಧರರಿಗೆ ಶಿಕ್ಷಕರೆಂದು ನೇಮಿಸಿಕೊಂಡರು. ಅದೇ ರೀತಿ ಬೀದರನಗರ ಹಾಗೂ ಇತರ ಸ್ಥಳಗಳಲ್ಲಿ ಕನ್ನಡಶಾಲೆಗಳನ್ನು ಸ್ಥಾಪಿಸಲು ಪ್ರಯತ್ನಿಸಿದ ಶ್ರೀ ಪ್ರಭುರಾವ ಕಂಬಳಿವಾಲೆಯವರಿಗೆ ಬೆಂಬಲ ಕೊಟ್ಟರು. ಆಗ ರಾಜಮಾಸ್ತರರು, ಪಿ. ಎಂ. ಗಲಗಲಿ, ಮುದ್ರವಾಡಕರ ಮುಂತಾದ ಶಿಕ್ಷಕರನ್ನು ಕನ್ನಡ ಚಳುವಳಿಗಾಗಿ ಹುರಿದುಂಬಿಸಿದರು. ಶ್ರೀ ಭೀಮಣ್ಣಖಂಡ್ರೆ, ಶ್ರೀ ಆರ್.ವಿ. ಬಿಡಪ್ಪ, ಮಜ್ಜಿಗೆ ವಕೀಲರು ಮೊದಲಾದವರಿಗೆ ಕನ್ನಡಕ್ಕಾಗಿ ಹೋರಾಡಲು ಸ್ಫೂರ್ತಿಯನ್ನಿತ್ತರು. ಈ ರೀತಿ ಬೀದರದಲ್ಲಿ ಕನ್ನಡ ಪರ ಚಳುವಳಿಯ ಬೀಜವನ್ನು ಬಿತ್ತಿದವರೇ ಭಾಲ್ಕಿಯ ಶ್ರೀ ಚೆನ್ನಬಸವ ಪಟ್ಟದದೇವರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ಸ್ವಾಮಿಗಳು ಯಾವ ರೀತಿ ಪ್ರತ್ಯಕ್ಷವಾಗಿ ಚೆನ್ನಬಸವಪಟ್ಟದದೇವರು ಕಾರಣಕರ್ತರಾದರೋ ಅದೇ ರೀತಿ ಪರೋಕ್ಷವಾಗಿ ಬೀದರ ನಗರದಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸ್ಥಾಪನೆಗಾಗಿ ಸ್ವಾಮಿಗಳು ಅವಿಶ್ರಾಂತವಾಗಿ ದುಡಿದರು. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯೂ ಕೂಡ ಶ್ರೀ ಆರ್. ವಿ. ಬಿಡಪ್‌ನವರ ನೇತೃತ್ವದಲ್ಲಿ ಈ ವಿದ್ಯಾಲಯ ಮಹಾವಿದ್ಯಾಲಯಗಳ ಜಾಲವನ್ನೇ ಹರಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕನ್ನಡ ಮಾಧ್ಯಮದ ಶಾಲೆಗಳ ಸ್ಥಾಪನೆಯ ಜೊತೆಗೆ ಬೀದರದಲ್ಲಿ ಕನ್ನಡದ ಗಾಳಿ ಬೀಸಲು ಕೂಡ ಸ್ವಾಮಿಗಳು ಪಟ್ಟ ಶ್ರಮ ಸಣ್ಣದಲ್ಲ. ತಮ್ಮ ವಿದ್ಯಾಲಯಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡದಲ್ಲಿ ವಚನಗಳನ್ನು ಹಾಡಿದವರಿಗೆ, ಕನ್ನಡದಲ್ಲಿ ಸ್ಫೂರ್ತಿಪರ ಭಾಷಣ ಮಾಡಿದವರ ಹೆಸರಿನಲ್ಲಿ ಸ್ವಾಮಿಗಳು ಸ್ವತಃ ನಿಂತು ಜೈಕಾರ ಮಾಡಿದ್ದನ್ನು ಎಲ್ಲರೂ ಬಲ್ಲರು.

ಮೂರನೆಯದಾಗಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಲ್ಲಿ ಸ್ವಾಮಿಗಳ ಪಾತ್ರ ದೊಡ್ಡದು. ಏಕೀಕರಣಕ್ಕಾಗಿ ಒಂದು ಸಾರೆ ಕಮಾಲನಗರದಲ್ಲಿ ಟ್ರೇನನ್ನು ನಿಲ್ಲಿಸುವ ಚಳುವಳಿಯಲ್ಲಿ ಶ್ರೀ ಚೆನ್ನಬಸವ ಪಟ್ಟದದೇವರು ಮುಂದಾಳತ್ವವನ್ನು ವಹಿಸಿದ್ದರು. ಅದರಂತೆ ಕರ್ನಾಟಕ ಏಕೀಕರಣದ ನಂತರ ಗಡಿ ಸಂರಕ್ಷಣೆಯಲ್ಲಿ ಅವರ ಪಾತ್ರ ಹಿರಿದಾಗಿದೆ. ಏಕೀಕರಣದ ನಂತರ ಅಂದರೆ ೧೯೫೮ರಲ್ಲಿ ಕೆಲವು ಜನ ಮರಾಠಿ ಮುಖಂಡರು ಕಮಾಲನಗರದಲ್ಲಿ ಮರಾಠಿ ಅಧಿವೇಶನ ನಡೆಸಲು ಮುಂದಾದರು. ಅದಕ್ಕಾಗಿ ಮರಾಠಿ ಮುಖಂಡ ಎನ್.ಜಿ. ಗೋರೆಯವರು ಉದ್ಘಾಟಕರಾಗಿ ಬಂದರು. ಈ ಮರಾಠಿಗರ ಅಧಿವೇಶನವನ್ನು ಧಿಕ್ಕರಿಸಲು ಸಾವಿರಾರು ಜನ ಕನ್ನಡ ಯುವಕರು ಹಾಗೂ ವಿದ್ಯಾರ್ಥಿಗಳು ಕಮಾಲನಗರದಲ್ಲಿ ಸೇರಿದರು. ಆಗ ಮರಾಠಿಗರು ಅಸಹಾಯಕರಾದ ಕನ್ನಡ ವಿದ್ಯಾರ್ಥಿಗಳಿಗೆ ಕಲ್ಲು ಕಟ್ಟಿಗೆಗಳಿಂದ ಅಮಾನುಷರೀತಿಯಲ್ಲಿ ಹೊಡೆದರು. ಗಾಯಗೊಂಡ ಎಲ್ಲ ವಿದ್ಯಾರ್ಥಿಗಳಿಗೆ ಸ್ವಾಮಿಗಳು ನೈತಿಕ ಧೈರ್ಯವನ್ನು ಕೊಟ್ಟರಲ್ಲದೆ ಅವರಿಗೆಲ್ಲ ಹುಗ್ಗಿ ಮಾಡಿಸಿ ಉಣಿಸಿದರು. ಈ ರೀತಿ ಕನ್ನಡ ಚಳುವಳಿಕಾರರಲ್ಲಿಯೇ ಪೂಜ್ಯ ಶ್ರೀ ಚೆನ್ನಬಸವ ಪಟ್ಟದದೇವರು ಅಗ್ರಗಣ್ಯರಾಗಿದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಬೀದರ ಜಿಲ್ಲೆ ಕರ್ನಾಟಕಕ್ಕೆ ಸೇರಿದ್ದು, ಶಕಪುರುಷರಾದ ಪೂಜ್ಯ ಚೆನ್ನಬಸವಪಟ್ಟದದೇವರಿಂದಲೇ ಎಂದು ಹೇಳಬಹುದು. ಪ್ರಭುರಾವ್ ಕಂಬಳಿ ವಾಲೆ, ಆರ್.ವಿ. ಬಿಡಪ್, ಭೀಮಣ್ಣಖಂಡ್ರೆ ಹಾಗೂ ಕನ್ನಡ ಕವಯಿತ್ರಿ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು ಅವರಿಗೆ ಸಹಾಯಕರಾದರು. ಅದರಲ್ಲೂ ಬೀದರ ಜಿಲ್ಲೆಯ ಕವಿ ಶಿವಗಾಂಗೇಯರು ಹೇಳುವಂತೆ 'ಗಡಿನಾಡಿನಲ್ಲಿ ಕನ್ನಡದ ಬಾವುಟ ಮೆರಿಸಿದ' ಸ್ವಾಮಿಗಳು ನಿಶ್ಚಯವಾಗಿಯೂ ಮಠಾಧೀಶ್ವರರಲ್ಲಿಯೇ ಕನ್ನಡದ ಪಟ್ಟದದೇವರರಾಗಿದ್ದಾರೆ.

ಧಾರ್ಮಿಕ ಸೇವೆ:

ಬೀದರ ಜಿಲ್ಲೆಯಲ್ಲಿ ಭಾಲ್ಕಿಯ ಪಟ್ಟದದೇವರು ಮಾಡಿದ ಧಾರ್ಮಿಕ ಸೇವೆ ದೊಡ್ಡದು. ಊರೂರಿಗೆ ಹಳ್ಳಿಹಳ್ಳಿಗೆ ಹೋಗಿ ಬಸವತತ್ವ ಪ್ರಚಾರ ಮಾಡಿದರು. ಅಷ್ಟೇ ಅಲ್ಲ, ಬಸವ ತತ್ವಗಳನ್ನು ಪಾಲಿಸುವ ತರುಣಮಂಡಳಿಗಳನ್ನು ಸ್ಥಾಪಿಸಿದರು. ಅದೇ ಮುಂದೆ ರಾಷ್ಟ್ರೀಯ ಬಸವದಳವಾಗಿ ಮುಂದುವರೆದಿದೆ. ಮೊಟ್ಟಮೊದಲು ಭಾಲ್ಕಿಯ ಪಟ್ಟಣದಲ್ಲಿ ತಿಂಗಳಿಗೊಮ್ಮೆ ಭಕ್ತರ ಮನೆಗಳಲ್ಲಿ ಬಸವಜ್ಯೋತಿಯೆಂಬ ಅನುಭಾವಗೋಷ್ಠಿಗಳನ್ನು ನಡೆಸಲು ಪ್ರಾರಂಭಿಸಿದರು. ಆ ಬಸವ ಜ್ಯೋತಿ ಕಾರ್ಯಕ್ರಮಗಳೀಗ ಸಾಧಾರಣ ಬೀದರ ಜಿಲ್ಲೆಯ ಪ್ರತಿ ಹಳ್ಳಿ ಪಟ್ಟಣಗಳಲ್ಲಿ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ನಡೆಯುತ್ತಿವೆ. ಭಾಲ್ಕಿಯ ಹಿರೇಮಠದಲ್ಲಿ ಪ್ರತಿ ತಿಂಗಳ ಹುಣ್ಣಿಮೆಯಂದು ಬಸವತತ್ವದ ಜ್ಞಾನದಾಸೋಹ ನಡೆಯುತ್ತಿದ್ದು, ಮೊನ್ನೆ ಮೊನ್ನೆ ೧೨೬ನೆಯ ಬಸವಜ್ಯೋತಿ ಕಾರ್ಯಕ್ರಮ ಭಾಲ್ಕಿಯ ಹಿರೇಮಠದಲ್ಲಿ ನಡೆದಿದ್ದುದನ್ನು ನೋಡಿದರೆ ಬೀದರ ಜಿಲ್ಲೆಯಲ್ಲಿ ಬಸವತತ್ವದ ಪುನರುತ್ಥಾನ ನಡೆದಂತೆ ಕಾಣುತ್ತದೆ. ರಾಜ್ಯದ ಇಪ್ಪತ್ತು ಜಿಲ್ಲೆಗಳಲ್ಲಿ ಬಸವತತ್ವ ಇಷ್ಟು ವ್ಯಾಪಕವಾಗಿ, ಇಷ್ಟು ಸುಸಂಬದ್ಧವಾಗಿ ಇಷ್ಟು ಆಳವಾಗಿ ಬೀದರ ಜಿಲ್ಲೆಯಲ್ಲಿ ನಡೆದಷ್ಟು ಬೇರೆಲ್ಲಿಯೂ ನಡೆದಿಲ್ಲ. ಅದರ ಹೆಚ್ಚಿನ ಶ್ರೇಯ ಭಾಲ್ಕಿಯ ಹಿರೇಮಠದ ಚೆನ್ನಬಸವಪಟ್ಟದ್ದೇವರಿಗೆ ಸಲ್ಲುತ್ತದೆ.

ಅನುಭವಮಂಟಪ ಸ್ಥಾಪಕ:

ಯಾವ ರೀತಿ ಬಸವಜ್ಯೋತಿ ಕಾರ್ಯಕ್ರಮದ ಮೂಲಕ ಬೀದರ ಜಿಲ್ಲೆಗಳಲ್ಲಿ ಪೂಜ್ಯ ಚೆನ್ನಬಸವ ಪಟ್ಟದದೇವರು ಬಸವತತ್ವದ ಸಾರ್ವತ್ರಿಕ ಪ್ರಸಾರಕ್ಕೆ ಕಾರಣಕರ್ತರಾದರೋ ಅದೇ ರೀತಿ ಬಸವಕಲ್ಯಾಣದಲ್ಲಿ ಅನುಭವ ಮಂಟಪ ಕಟ್ಟಲು ಮುಂದಾದರು. ಶ್ರೀ ಭೀಮಣ್ಣಖಂಡ್ರೆಯವರ ಇಪ್ಪತ್ತೈದು ಸಾವಿರ ರೂ. ಕಾಣಿಕೆಯಿಂದ ಪ್ರಾರಂಭವಾದ ಅನುಭವ ಮಂಟಪದ ಕಟ್ಟಡ ಕಾರ್ಯಕ್ರಮಕ್ಕಾಗಿ ಪೂಜ್ಯ ಶ್ರೀಗಳು ನೂರರ ಈ ಇಳಿವಯಸ್ಸಿನಲ್ಲಿಯೂ ಕೂಡ ತಮ್ಮ ಮಠದ ಉತ್ತರಾಧಿಕಾರಿಗಳಾದ ಪೂಜ್ಯ ಶ್ರೀ ಬಸವಲಿಂಗ ಪಟ್ಟದದೇವರ ಜೊತೆ ಬೀದರ ಜಿಲ್ಲೆಯ ಹಳ್ಳಿ ಪಟ್ಟಣಗಳಿಗೆಲ್ಲ ಸಂದರ್ಶನವಿತ್ತು ಕೊಡುಗೈ ದೊರೆಗಳಿಂದ ದಾನ, ವಂತಿಗೆಗಳನ್ನು ಸ್ವೀಕರಿಸಿ ಅನುಭವ ಮಂಟಪದ ಕಟ್ಟಡ ಕಾರ್ಯ ಮುಗಿಸಿದ್ದಾರೆ. ಅವರದು ವೀರ ಸಂಕಲ್ಪ. ಕಷ್ಟಗಳನ್ನು ಎದುರಿಸಿ ನಿಂತು ಅಸಾಧ್ಯವಾದುದನ್ನು ಮಾಡಿ ತೋರಿಸುವ ಛಲದಂಕ ಮಲ್ಲರಾಗಿದ್ದಾರೆ. ಮರಳುಗಾಡಿನಲ್ಲಿ ನೀರನ್ನು ಚಿಮ್ಮಿಸಿದ ಭಗೀರಥನಂತೆ ಉಪೇಕ್ಷೆ, ಔದಾಸೀನ್ಯಗಳ ನಡುವೆ ನಿಂತು

ಅನುಭವ ಮಂಟಪ ಕಟ್ಟಿದ್ದಾರೆ. ಅನುಭವ ಮಂಟಪದ ಒಂದೊಂದು ಕಲ್ಲೂ ಕೂಡ ಪೂಜ್ಯ ಶ್ರೀಗಳವರ ದೃಢಸಂಕಲ್ಪದ, ಧೀರ ತಪಸ್ಸಿನ ಕಥೆಯನ್ನೇ ಹೇಳುತ್ತವೆ. ಅನುಭವಮಂಟಪದ ಕಟ್ಟಡದಿಂದ ತೃಪ್ತರಾಗದೆ ಅಲ್ಲಿ ವಚನಸಾಹಿತ್ಯದ ಸಂಶೋಧನ, ಅಧ್ಯಯನ ನಡೆಯಬೇಕೆಂದು ಅವರು ಒತ್ತಿ ಒತ್ತಿ ಹೇಳುತ್ತಾರೆ.

ಬಸವ ತತ್ವಾನುಯಾಯಿ : ಬಸವಣ್ಣನವರ ತತ್ವಗಳನ್ನು ನೂರಕ್ಕೆ ನೂರರಷ್ಟು ಅನುಷ್ಠಾನಕ್ಕೆ ತಂದವರು ಕರ್ನಾಟಕದಲ್ಲಿ ಯಾರಾದರೂ ಇದ್ದರೆ ಅವರು ಬೇರೆ ಯಾರೂ ಆಗಿರದೆ ಅವರು ಚೆನ್ನಬಸವ ಪಟ್ಟದದೇವರೇ ಆಗಿದ್ದಾರೆಂದರೆ ಅದೊಂದು ಅತಿಶಯೋಕ್ತಿಯ ಮಾತಲ್ಲ. ಬಸವಣ್ಣನೇ ವೀರಶೈವ ಮತದ ಧರ್ಮಗುರು, ವಚನಸಾಹಿತ್ಯವೇ ಧರ್ಮಗ್ರಂಥವೆಂದು ಅವರು ಇಂದಿಗೂ ಘಂಟಾಘೋಷವಾಗಿ ಹೇಳುತ್ತಾರೆ. ಬಸವಕಲ್ಯಾಣ ಹಾಗೂ ಭಾಲ್ಕಿಯ ಗಂಜಗಳಲ್ಲಿ ಅಶ್ವಾರೂಢ ಬಸವಣ್ಣನವರ ಮೂರ್ತಿ ಸ್ಥಾಪನೆಗಾಗಿ ಅವರು ಚಳುವಳಿಯ ಮುಖಂಡತ್ವ ವಹಿಸಿದ್ದಾರೆ.

ಪ್ರಗತಿಪರ ವಿಚಾರವಾದಿ: ಭಾಲ್ಕಿಯ ಹಿರೇಮಠ ಕರ್ನಾಟಕದಲ್ಲೇ ಅತ್ಯಂತ ಪ್ರಗತಿಪರ ವಿಚಾರಧಾರೆಯ ಮಠವಾಗಿದೆ. ಆ ಮಠದಲ್ಲಿ ಓಡಾಡುವ ಪ್ರಸಾದ ತಯಾರಿಸುವ, ಸೇವೆ ಮಾಡುವ ಭಕ್ತರು ಹೆಚ್ಚಾಗಿ ದಲಿತ ವರ್ಗಕ್ಕೆ ಸೇರಿದ್ದಾರೆನ್ನುವದು ರೋಮಾಂಚಕಾರಿ ವಿಷಯವಾಗಿದೆ. ಇಡೀ ಕರ್ನಾಟಕದಲ್ಲಿ ಬಸವಜಯಂತಿಯ ದಿನ ಬಸವಣ್ಣನವರ ಜಯಂತಿಯೊಂದಿಗೆ ಅಂಬೇಡ್ಕರರ ಜಯಂತಿಯನ್ನೂ ಆಚರಿಸುವ ಒಂದೇ ಮಠವಿರಬಹುದು. ಅದು ಬಹುಶಃ ಭಾಲ್ಕಿಯ ಹಿರೇಮಠವಾಗಿದೆ.

ಕಾಯಕ ಯೋಗಿಗಳು : ಬಹಳಷ್ಟು ಮಠಾಧೀಶ್ವರರು ಕಾಯಕತತ್ವವನ್ನು ಅರಿತಿರಬಹುದು. ಆದರೆ ಭಾಲ್ಕಿಯ ಪೂಜ್ಯ ಚೆನ್ನಬಸವ ಪಟ್ಟದದೇವರು ದಿನನಿತ್ಯದಲ್ಲಿ ಕಾಯಕ ತತ್ವವನ್ನು ಬಳಕೆಗೆ ತಂದಿದ್ದಾರೆ. ಸ್ವಾಮಿಗಳು ಸ್ವತಃ ಗುದ್ದಲಿ ಸನಿಕೆ ಹಿಡಿದು ನೆಲವನ್ನು ಅಗೆದಿದ್ದಾರೆ. ಕಟ್ಟಡ ಕಾರ್ಯ ನಡೆದಾಗ ಉಸುಕು ಹೊತ್ತಿದ್ದಾರೆ. ಯಾರೋ ಅನ್ಯಾಯವಾಗಿ ತಮ್ಮ ಮೋರಗಿ ಮಠದ ಬೇಲಿಯನ್ನು ಕಿತ್ತಿದ್ದಾರೆಂದರೆ ಸ್ವತಃ ಬೇಲಿಯನ್ನು ತಾವೇ ಹಾಕಿದ್ದಾರೆ. ಮಠದ ಸುತ್ತಲೂ ನೂರಾರು ಮಾವಿನಗಿಡಗಳನ್ನು ಹಚ್ಚಿ ಬೆಳೆಸಿದ್ದಾರೆ. ಅವರಂತಹ ಕಾಯಕ ಯೋಗಿಗಳು ದುರ್ಲಭ.

ಅಂತರ್ಜಾತಿ ವಿವಾಹದ ಪುರಸ್ಕರ್ತ : ವೀರಶೈವರಲ್ಲಿ ಒಳಪಂಗಡಗಳು ಹೋಗಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಚೆನ್ನಬಸವ ಪಟ್ಟದದೇವರು ಅದನ್ನು ಮಾಡಿ ತೋರಿಸಿದ್ದಾರೆ. ಒಬ್ಬ ಲಿಂಗಧಾರೀ ಶಿಕ್ಷಕರ ವಿವಾಹವನ್ನು ಒಬ್ಬ ಸಮಗಾರ ಹೆಣ್ಣುಮಗಳ ಜೊತೆಗೆ ಮಾಡಿ ತೋರಿಸಿದ್ದಾರೆ. ಒಬ್ಬ ಜಂಗಮರ ಹುಡುಗನ ವಿವಾಹವನ್ನು ಏರ್ಪಡಿಸಿದ್ದಾರೆ. ಡಾ॥ ವಾಘಮಾರೆ ಎಂಬ ದಲಿತನ ವಿವಾಹವನ್ನು ಒಬ್ಬ ಕ್ರಿಶ್ಚಿಯನ್ ಯುವತಿಯೊಂದಿಗೆ ಮಾಡಿ ಯಶಸ್ವಿಯಾಗಿದ್ದಾರೆ. ಬೀದರ ಜಿಲ್ಲೆಯಲ್ಲಿ ಕಹಿಕುಲವನ್ನು ನಾಶ ಮಾಡಿದ್ದಾರೆ. ಕಹಿಕುಲವೆಂದರೆ ಒಬ್ಬ ಲಿಂಗಾಯಿತ ಕೀಳುಕುಲದವಳೊಂದಿಗೆ ನಡೆಸಿದ ದಾಂಪತ್ಯದಿಂದ ಹುಟ್ಟಿದ ಈ ಸಂತಾನಕ್ಕೆ ಕಹಿಕುಲವೆಂದು ಹೆಸರಿದೆ. ಅಂಥ ನೂರಾರು ಜನರಿಗೆ ಲಿಂಗದೀಕ್ಷೆ ಕೊಟ್ಟು ಬಸವಪಥದತ್ತ ತಂದ ಕೀರ್ತಿ ಪೂಜ್ಯ ಸ್ವಾಮಿಗಳಿಗಿದೆ. ಒಂದು ಸಾರೆ ೫೦೦೦ ಜನರಿಗೆ ಲಿಂಗದೀಕ್ಷೆ ಕೊಟ್ಟು ದಾಖಲೆ ಸ್ಥಾಪಿಸಿದ್ದಾರೆ.

ದಲಿತರಿಗೆ ಲಿಂಗದೀಕ್ಷೆ : ದಲಿತರ ಉದ್ಧಾರ ಮಾಡಿದ ಮಠಾಧೀಶ್ವರರಲ್ಲಿ ಈ ಸ್ವಾಮಿಗಳು ಅಗ್ರಗಣ್ಯರಾಗಿದ್ದಾರೆ. ಮೇದಕ್ ಜಿಲ್ಲೆಯ ನಾಗೂರು ಗ್ರಾಮದಲ್ಲಿ ಸ್ವಾಮಿಗಳು ಮುಂದೆ ನಿಂತು ಸವರ್ಣೀಯರ ಸಮ್ಮುಖದಲ್ಲಿ ಹರಿಜನರಿಗೆ ಹನೂಮಾನ್ ಮಂದಿರ ಪ್ರವೇಶ ಮಾಡಿಸಿದ್ದಾರೆ. ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ನಂದಿನಾಗೂರು ಗ್ರಾಮದಲ್ಲಿ ಸವರ್ಣೀಯರ ಪ್ರಬಲ ವಿರೋಧಕ್ಕೆ ಅಂಜದೆ ವೀರಮಾಹೇಶ್ವರರ ಕೇರಿಗೆ ಹೋಗಿ ೩೦೦ ಜನ ಹರಿಜನರಿಗೆ ಲಿಂಗದೀಕ್ಷೆ ಕೊಟ್ಟಿದ್ದಾರೆ. ಅದರಂತೆ ಪೂಜ್ಯಶ್ರೀಗಳರು ಮಾಡಿದ ಬಹುದೊಡ್ಡ ಕಾರ್ಯವೆಂದರೆ ಬೆಲ್ದಾಳ ಸಿದ್ಧರಾಮರೆಂಬ ಹರಿಜನ ಯುವಕನಿಗೆ ಲಿಂಗದೀಕ್ಷೆ ಕೊಟ್ಟಿದ್ದಲ್ಲದೇ ಅವರು ಅನ್ಯರಿಗೆ ಲಿಂಗದೀಕ್ಷೆ ಕೊಡುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಆ ಹರಿಜನ ಯುವಕನಿಂದು ಪೂಜ್ಯ ಚೆನ್ನಬಸವ ಪಟ್ಟದದೇವರ ಪರುಷ ಹಸ್ತದಿಂದ ಆಧ್ಯಾತ್ಮಿಕವಾಗಿ ಬೆಳೆದುನಿಂತು ಬೆಲ್ದಾಳ ಸಿದ್ಧರಾಮ ಶರಣರೆನಿಸಿ ಕರ್ನಾಟಕದಲ್ಲೆಲ್ಲ ತಮ್ಮ ಉಜ್ವಲವಾದ ಪಾಂಡಿತ್ಯ ಅನುಭಾವಗಳಿಂದ ಪ್ರಖ್ಯಾತರಾಗಿದ್ದಾರೆ. ಪೂಜ್ಯ ಶ್ರೀಗಳವರು ಮಾಡಿದ ಅಸ್ಪೃಶ್ಯೋದ್ಧಾರದ ಜೀವಂತಸಾಕ್ಷಿ ಶ್ರೀ ಸಿದ್ಧರಾಮ ಶರಣರ ಔನ್ನತ್ಯದ ವ್ಯಕ್ತಿತ್ವವೇ ಆಗಿದೆ.

ಸ್ತ್ರೀ ಸುಧಾರಕರು : ಪೂಜ್ಯಶ್ರೀಗಳು ನಾಗರ ಪಂಚಮಿಯನ್ನು ಅಕ್ಕನಾಗಮ್ಮ ಜಯಂತಿಯೆಂದು ಆಚರಣೆಗೆ ತರಲು ಕರೆಯಿತ್ತರು. ಅದರಂತೆ ಮಹಾನವಮಿಯನ್ನು ಕಲ್ಯಾಣಕ್ರಾಂತಿಯ ದಿನವೆಂದು ಆಚರಿಸಲಾಗುತ್ತಿದೆ. ಅಲ್ಲದೆ ಅಂದು ಪುರುಷರು ಪಲ್ಲಕ್ಕಿ ಮಹೋತ್ಸವದಲ್ಲಿ ಭಾಗವಹಿಸಿದರೆ, ಅಕ್ಕ ನಾಗಮ್ಮನ ಜಯಂತಿಯ ದಿನದಿಂದು ಸ್ತ್ರೀಯರು ಪಲ್ಲಕ್ಕಿ ಮಹೋತ್ಸವದಲ್ಲಿ ಭಾಗವಹಿಸುತ್ತಾರೆ.

ಸ್ತ್ರೀಯರ ಉದ್ಧಾರಕ್ಕಾಗಿ ತರುಣಮಂಡಳಿಗಳಂತೆ ಅಕ್ಕನ ಬಳಗಗಳ ಸ್ಥಾಪನೆಯನ್ನು ಮಾಡಿದ್ದಾರೆ. ಸ್ತ್ರೀಯರಿಗೆ ಸಂಗೀತ ಕಲಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ. ಅದರಂತೆ ನೀಲಾಂಬಿಕಾ ಆಶ್ರಮದ ಮೂಲಕ, ಸ್ತ್ರೀಯರ ಆಧ್ಯಾತ್ಮಿಕ ಪ್ರಗತಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಪ್ರಕಾಶನ ಸಂಸ್ಥೆ : ಭಾಲ್ಕಿಯ ಹಿರೇಮಠ ಸಂಸ್ಥಾನದ ಮೂಲಕ 'ಶಾಂತಿ ಕಿರಣ' ವೆಂಬ ಮಾಸಪತ್ರಿಕೆಯನ್ನು ಕಳೆದ ೨೦ ವರ್ಷಗಳಿಂದ ಪ್ರಕಟಿಸಲಾಗುತ್ತಿದೆ. ಅದರ ಸಂಪಾದಕರು ಡಾ|| ಜಿ. ಬಿ. ವಿಸಾಜಿ ಹಾಗೂ ಶ್ರೀ ದೇಶಾಂಶ ಹುಡುಗಿ.

ಅದೇ ರೀತಿ ಭಾಲ್ಕಿಯ ಹಿರೇಮಠದಿಂದ ಕೆಲವು ಅಮೂಲ್ಯ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶಾಂತರಸರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಾಹಿತ್ಯದ ವಿವಿಧ ಅಂಗಗಳು, ಮುಖಿಗಳ ಕುರಿತು ಗಾತ್ರದಲ್ಲಿ, ಗುಣದಲ್ಲಿ, ಮಹತ್ತನ್ನೂ ಬೃಹತ್ತನ್ನೂ ಹೊಂದಿರುವ ಚೆನ್ನಬಸವ ಪಟ್ಟದದೇವರ ಅಭಿನಂದನಾ ಗ್ರಂಥವನ್ನೂ ಪ್ರಕಟಿಸಲಾಗಿದೆ. ಆದರಂತೆ ದೇ.ಜ.ಗೌ. ಅವರು ರಚಿಸಿದ ಬಸವಣ್ಣನವರು ಹಾಗೂ ಅಂಬೇಡ್ಕರರ ತೌಲನಿಕ ಅಧ್ಯಯನವನ್ನೊಳಗೊಂಡ ಮೌಲಿಕ ಗ್ರಂಥವನ್ನು ಭಾಲ್ಕಿಯ ಹಿರೇಮಠದಿಂದ ಹೊರತರಲಾಗಿದೆ.

ಇತರ ಪ್ರಗತಿಪರ ಕಾರ್ಯಗಳು : ಆಂಧ್ರ, ಮಹಾರಾಷ್ಟ್ರಗಳಲ್ಲಿ ಬಸವ ತತ್ವದ ಧರ್ಮಬೋಧೆ ಕಾರ್ಯಕ್ರಮವನ್ನು ಭಾಲ್ಕಿಯ ಹಿರೇಮಠ ಹಮ್ಮಿಕೊಂಡಿದೆ. ಮರಾಠಿಯಲ್ಲಿ ಶರಣತತ್ವವನ್ನು ಪ್ರಕಟಿಸಿದವರಿಗೆ ಚೆನ್ನಬಸವ ಪ್ರಶಸ್ತಿಯನ್ನು ಕೊಡಲಾಗುತ್ತಿದೆ. ಈ ರೀತಿಯಾಗಿ ಪ್ರಥಮ ಸಲ ಮಹಾಕವಯಿತ್ರಿ ಜಯದೇವಿತಾಯಿ ಲಿಗಾಡೆಯವರಿಗೆ ಈ ಪ್ರಶಸ್ತಿಯನ್ನು ಕೊಡಲಾಗಿದೆ. ಮಹಾರಾಷ್ಟ್ರ ಕರ್ನಾಟಕದ ಗಡಿಯಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಟ್ರಸ್ಟನ್ನು ಸ್ಥಾಪಿಸಲಾಗಿದೆ. ಮಕ್ಕಳಿಗೆ, ಯುವಕರಿಗೆ, ಬಸವತತ್ವದ ಅರಿವನ್ನು ಮೂಡಿಸುವ ಸಲುವಾಗಿ ಬೀದರ ಜಿಲ್ಲೆಯ ಶಾಲೆ ಕಾಲೇಜುಗಳಲ್ಲಿ ಬಸವಧರ್ಮ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದೆ.

ಗುರುಕುಲ ಸ್ಥಾಪನೆ : ಚೆನ್ನಬಸವ ಪಟ್ಟದದೇವರು ಎಷ್ಟು ದೊಡ್ಡ ತಪಸ್ವಿಗಳೋ, ಶ್ರೇಷ್ಠ ಅನುಭಾವಿಗಳೋ, ಅಷ್ಟೇ ಸುಸಂಸ್ಕೃತ, ಸಂಘಟನಾ ಚತುರ, ಶಿಸ್ತು ಸಂಯಮಗಳ ಸಾಕಾರ ಮೂರ್ತಿಗಳಾಗಿದ್ದಾರೆ. ಪ್ರವಚನ ಪಟುಗಳಾದ ಪೂಜ್ಯ ಶ್ರೀ ಬಸವಲಿಂಗ ಪಟ್ಟದದೇವರು ಅವರ ಉತ್ತರಾಧಿಕಾರಿಗಳಾಗಿದ್ದಾರೆ. ಅವರು ಮಕ್ಕಳಿಗೆ ಅಧ್ಯಾತ್ಮ ಶಿಕ್ಷಣ ನೀಡಲು, ಅವರ ಚಾರಿತ್ರ್ಯ ನಿರ್ಮಿಸಲು ಯೋಗ್ಯವಾಗುವ ಶಿಕ್ಷಣ ಒದಗಿಸಲು ೧೯೯೨ ರಲ್ಲಿ ಆದರ್ಶ ಗುರುಕುಲವನ್ನು ಪ್ರಾರಂಭಿಸಿದ್ದಾರೆ. ಅದೊಂದು ಅತ್ಯಂತ ಮಾದರಿಯ ವಸತಿ ಶಾಲೆಯಾಗಿ ರೂಪಗೊಳ್ಳುತ್ತಿದೆ. ೬೦ ಎಕರೆ ಭೂಮಿಯಲ್ಲಿ ಭವ್ಯ ಕಟ್ಟಡವೊಂದು ನಿರ್ಮಾಣಗೊಳ್ಳುತ್ತಿದೆ.

ಬಸವ ತತ್ವದ ಪ್ರಯೋಗಶಾಲೆಯಂತಿರುವ ಭಾಲ್ಕಿಯ ಹಿರೇಮಠ ಅತ್ಯಂತ ಪವಿತ್ರವಾದ, ಅಷ್ಟೇ ಪ್ರಗತಿಪರವಾದ ಮಠವಾಗಿದೆ. ಈ ಹಿರೇಮಠ ಇದೇ ರೀತಿ ದಾಖಲೆಗಳನ್ನು ನಿರ್ಮಿಸುತ್ತ ನಾಡಿನ ಜನತೆಗಾಗಿ ಒಂದು ಪುಣ್ಯಕ್ಷೇತ್ರವಾಗಿ ಬೆಳೆಯಲೆಂದು ಹಾರೈಸುವೆ.

○

ಬಂಥನಾಳ ಮಠದ ಕೊಡುಗೆ

ಈಶ್ವರಚಂದ್ರ ಚಿಂತಾಮಣಿ

ಬಂಥನಾಳ ಮಠದಾಗ ಭಜನಿ ನಡದಾವ ತಾಯಿ
ಬಂದವರಿಗೆಲ್ಲ ಪರಸಾದ ।
ಬಂದವರಿಗೆಲ್ಲ ಪರಸಾದ । ಕೊಡುವಂಥ
ತಂದಿ ಶಿವಯೋಗಿ ಕುಳಿತಾರ ॥

– ಗರತಿಯರ ಮನೆಯಿಂದ

ಸುಮಾರು ಮುನ್ನೂರು ವರುಷಗಳ ಹಿಂದೆ ಬಂಥನಾಳವೊಂದು ಕುಗ್ರಾಮ; ಸಣ್ಣಗ್ರಾಮ. ಅಜ್ಞಾನ ತುಂಬಿ ತುಳಿಕಿದ ಜನಜೀವನ. ಊರ ಮುಂದೆ ಜುಳುಜುಳು ಹರಿಯುವ ಹಳ್ಳ. ಎಡಬಲ ಫಲವತ್ತಾದ ಭೂಮಿ. ಊರ ಹಿರಿಯರೆಲ್ಲ ಉಳ್ಳವರು. ಔದಾರ್ಯದ ಬದಲು ಅಹಂಕಾರ ಅವರಲ್ಲಿ, ವೈರ, ಮತ್ಸರ, ಕೊಲೆ ಸುಲಿಗೆಗೆ ಹೆಸರಾದ ಹಳ್ಳಿ. ಬಂಥನಾಳದ ಅಜ್ಞಾನ ಅಳಿಸಲು ಶರಣರೊಬ್ಬರು ಸಂಚರಿಸುತ್ತ ದಯಮಾಡಿಸಿದರು. ಹಳ್ಳದ ದಂಡೆಯ ಮರದ ನೆರಳಿನಲ್ಲಿ ಧ್ಯಾನಾಸಕ್ತರಾಗಿ ಕುಳಿತ ಶರಣರನ್ನು ಕಂಡು ಎಲ್ಲರಿಗೂ ಅಚ್ಚರಿ, ಕುತೂಹಲ. ವಾರಗಟ್ಟಲೆ ಮೌನಧ್ಯಾನದಲ್ಲಿದ್ದ ಅವರನ್ನು ನೂರಾರು ಜನ ಮುಗ್ಧರು ದುಂಬಾಲು ಬಿದ್ದು ಊರಲ್ಲಿ ಕರೆದೊಯ್ದು ಪುಣ್ಯದ ಸಂದರ್ಭ, ಭವಿಷ್ಯದ ಭಾಗ್ಯಕ್ಕೆ ನಾಂದಿ ಹಾಡಿ ಇತಿಹಾಸ ಸೃಷ್ಟಿಸಿತು.

ಬಂಥನಾಳದಲ್ಲೊಂದು ಮಠ ಸ್ಥಾಪನೆಯಾಯಿತು. ಸ್ಥಾಪಕ ಕಾರಣರೇ ವೃಷಭಲಿಂಗ ಶಿವಯೋಗಿಗಳು. ಜನಮನ ಸೂರೆಗೊಂಡು ಬೆಳಕನ್ನು ಬೀರಿದರು. ಅವರ ನಂತರ ಬಸವಲಿಂಗ, ಶಂಕರಲಿಂಗ, ಚೆನ್ನಬಸವ ಶಿವಯೋಗಿಗಳು ಕುಗ್ರಾಮವನ್ನು ಸುಕ್ಷೇತ್ರವಾಗಿಸುವಲ್ಲಿ ಬಸವಾದಿ ಶರಣರ ದಾರಿ ಕ್ರಮಿಸಿದರು.

ಈ ಶತಮಾನದ ಆರಂಭದ ಕಾಲ, ೧೯೧೭ರಲ್ಲಿ ತಮ್ಮ ಹದಿನೇಳನೆಯ ಎಳೆವರೆಯದಲ್ಲಿ ಪೀಠಾಧಿಪತಿಗಳಾಗಿ ದಯ ಮಾಡಿಸಿದರು ಸಂಗನಬಸವ ಶಿವಯೋಗಿಗಳು. ಇವರ ಆಗಮನದೊಂದಿಗೆ ಬಂಥನಾಳದ ಭಾಗ್ಯವೇ ಬಂದಂತಾಯಿತೆಂಬುದನ್ನು ಅವರ ಜೀವನದ ಸಾಧನೆಯ ಸಂಪುಟ ಇತಿಹಾಸವಾಗಿ ದಾಖಲಿಸಿದೆ; ಸ್ಮರಣೀಯವೆನಿಸಿದೆ. ಲಿಂಗೈಕ್ಯ ಶ್ರೀ ಸಂಗನಬಸವ ಶಿವಯೋಗಿಗಳನ್ನು ಕನ್ನಡನಾಡು, ಮಹಾರಾಷ್ಟ್ರ ರಾಜ್ಯದುದ್ದಕ್ಕೂ ಕೂಡ (ಬಂಥನಾಳ) ಶಿವಯೋಗಿಗಳು ಅಂತಾ ಕರೆಯಲಾಯಿತು, ಗೌರವಿಸಲಾಯಿತು. ಬಂಥನಾಳಮಠದ ಕೊಡುಗೆಯು ಇವರ ಸ್ಮರಣೀಯ ಸಾಧನೆಯಾಗಿ ನಿಂತಿದೆ.

೧. ಶಿವಾನುಭವ ಪ್ರವಚನ

ಶಿವಯೋಗಿಗಳು ಓದುವ ಹಂಬಲವುಳ್ಳ ಸಮಯದಲ್ಲಿ ಮಠಾಧಿಪತಿಗಳಾಗಬೇಕಾಯಿತು. ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಸಮೀಪದ ಮಸೂತಿ ಗ್ರಾಮದವರಾದ ಇವರಿಗೆ ಚಿಕ್ಕಂದಿನಿಂದಲೇ ಶರಣರ ವಚನಗಳನ್ನು ಕಂಠಪಾಠಮಾಡುವ, ತಿಳಿದುಕೊಳ್ಳುವ ಪ್ರವೃತ್ತಿ. ಕನ್ನಡ ಏಳನೆಯ ತರಗತಿ ಪಾಸಾಗಿ, ಎರಡು ವರ್ಷ ಬಬಲೇಶ್ವರದ ಶಾಂತವೀರ ಸ್ವಾಮಿಗಳವರ ಅನುಗ್ರಹದಿಂದ ಸಂಸ್ಕೃತ ಅಭ್ಯಾಸ. ಅಭ್ಯಾಸದ ಹಸಿವನ್ನು ಮಠಾಧಿಪತಿಗಳಾಗಿಯೇ ಪೂರೈಸಬೇಕಾಯಿತು. ತಾವು ಅಭ್ಯಾಸದಿಂದ ಆನಂದಿಸುವ ಶರಣರ ವಿಚಾರಧಾರೆಯನ್ನು ಬಂಥನಾಳ ಮಠದ ಭಕ್ತ ಸಮುದಾಯಕ್ಕೆ ಪ್ರತಿದಿನ ಸಾಯಂಕಾಲ ಬೋಧಿಸುವ ಜ್ಞಾನ ಪ್ರಸಾರ ಆರಂಭಿಸಿದರು. ೧೯೨೦ರ ಸುಮಾರು ಅವರ ಶಿವಾನುಭವ ಪ್ರವಚನದ ಸುಧೆ ಊರೂರುಗಳಿಗೆ ಹರಡಿತು. ೧೯೨೩ರಲ್ಲಿ ಪ್ರವಚನ ಸಂಚಾರ ಶುರುವಾಯಿತು. ಮುಂದೆ ಮಠದಲ್ಲಿ ಪ್ರತಿ ಅಮಾವಾಸೆಯ ದಿವಸ ಸೇರುವ ಯಾತ್ರೆಯ ಸಮಯದಲ್ಲಿ ಮಾಸಿಕ ಶಿವಾನುಭವ ಗೋಷ್ಠಿಗೆ ನಾಂದಿ ಹಾಡಿದರು. ಎಲ್ಲಿಗೆ ಹೋದರೂ ಅಂದು ಶಿವಯೋಗಿಗಳು ಬಂಥನಾಳ ಶಿವಾನುಭವ ಪ್ರವಚನಕ್ಕೆ ಹಾಜರಾಗುವ ಸತ್‌ಸಂಪ್ರದಾಯ ರೂಢಿಸಿದರು. ಇಂದಿಗೂ ಆ ಸತ್‌ಸಂಪ್ರದಾಯ ಪ್ರತಿ ಅಮಾವಾಸೆಯ ದಿನ ಸಾಯಂಕಾಲ ಕಾರ್ಯಕ್ರಮವು ಶಿವಾನುಭವ ಗೋಷ್ಠಿಗೆ ಮೀಸಲು.

೨. ಶಿವಯೋಗಿಗೆ ರಾಷ್ಟ್ರಧರ್ಮ ದೀಕ್ಷೆ

ಸ್ವಭಾವತಃ ಸತತ ಅಭ್ಯಾಸದೊಂದಿಗೆ ಸಮಾಜ ಪ್ರೇಮ, ಜನಸಾಮಾನ್ಯರ ಕಲ್ಯಾಣ ಚಿಂತನೆಯಲ್ಲಿ ತನ್ಮಯರಾದ ತರುಣ ಶಿವಯೋಗಿಗಳವರಿಗೆ ೧೯೨೩ರ ಸುಮಾರು ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರು ಬರೆದ ಬಸವಣ್ಣನವರ ಸಂದೇಶ, ಶರಣರ ಕಾಯಕಧರ್ಮದ ಚಿಕ್ಕಚಿಕ್ಕ ಪುಸ್ತಕಗಳು ಪ್ರವಚನಕ್ಕೆ ಚೇತೋಹಾರಿ ಎನಿಸಿದವು, ಸ್ಫೂರ್ತಿಯನ್ನಿತ್ತವು. ಪೂಜ್ಯ ಮಂಜಪ್ಪನವರನ್ನು ಕಾಣುವ ಹಂಬಲವುಂಟಾಯಿತು.'ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು, ಬಯಕೆ ಬರುವುದರ ಕಣ್ಸನ್ನೆ ಕಾಣೊ'ಎಂಬ ಕವಿವಾಣಿ ಫಲಿಸಲು ಕಾಲ ಕೂಡಿಬಂದಿತು.

ವಿಜಾಪುರದ ಭಕ್ತರ ಮನೆಯಲ್ಲಿ ಮಂಗಲಕಾರ್ಯನಿಮಿತ್ತ ಆಗಮಿಸಿದ ಶಿವಯೋಗಿಗಳು ಅಲ್ಲಿಗೆ ತಾವಾಗಿಯೇ ಬಂದ ರಾಷ್ಟ್ರಧರ್ಮದ್ರಷ್ಟಾರರೆನಿಸಿದ್ದ ಹರ್ಡೇಕರ ಮಂಜಪ್ಪನವರು ಶರಣು ಶರಣಾರ್ಥಿ ಎಂದು ಕೈಮುಗಿದಾಗ ಚಿಕ್ಕವರಾದ ಶಿವಯೋಗಿಗಳು ಮಂತ್ರಮುಗ್ಧರಾಗಿ ಪ್ರತಿಶರಣು ಹೇಳುತ್ತಾ ತಲೆಬಾಗಿದರು; ಮನಸಾರೆ ತಲೆದೂಗಿ ಆಕರ್ಷಿತರಾದರು.

ಪೂಜ್ಯ ಮಂಜಪ್ಪನವರು ತಮ್ಮ ಆತ್ಮಚರಿತ್ರೆಯಲ್ಲಿ ಈ ಸಂದರ್ಭವನ್ನು ನೆನಪಿಸುತ್ತ .... ಶ್ರೀಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳವರು ಆಗಲೇ ಅಹಿಂಸಾ ವಿಚಾರವಾಗಿ ನನ್ನ ಸಂಗಡ ಪ್ರಸ್ತಾಪಿಸಿದರು. ಇದೇ ಇವರ ಪ್ರಥಮ ದರ್ಶನ. ಮಹಾತೇಜೋ ಮೂರ್ತಿಗಳೆಂದೇ ನಾನು ಗ್ರಹಿಸಿದೆನು, ಎಂದು ತಮ್ಮ ಮೆಚ್ಚುಗೆಯನ್ನು ದಾಖಲಿಸಿದ್ದಾರೆ.

೧೯೨೫ ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರ್ಯಂತರ ಬಂಥನಾಳ ಮಠದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರು 'ಬಸವಣ್ಣನವರ ಜೀವನ ಮತ್ತು ಸಂದೇಶ' ಕುರಿತು ಪ್ರವಚನ ನೀಡಿದರು. ಪ್ರತಿದಿವಸ ಸಾವಿರಾರು ಜನ ಭಕ್ತರು ದೂರದೂರದ ಗ್ರಾಮಗಳಿಂದ ಬಂದರು; ಬಸವನ ಸಂದೇಶ ಆಲಿಸಿ ಪುನೀತರಾದರು.

ಆಗಿನ ಪ್ರಸಂಗದಲ್ಲಿ ಪೂಜ್ಯ ಶಿವಯೋಗಿಗಳು ಭಕ್ತಸಮುದಾಯದ ಸಮಕ್ಷದಲ್ಲಿ ಹರ್ಡೇಕರ ಮಂಜಪ್ಪನವರಿಂದ ರಾಷ್ಟ್ರೀಯ ದೀಕ್ಷೆ ಸ್ವೀಕರಿಸಿದರು. ಅಂದಿನಿಂದ ಖಾದಿವಸ್ತ್ರಧಾರಿಗಳಾದರು, ಮಠದ ಕಾರ್ಯಕ್ರಮದ ಆರಂಭದಲ್ಲಿ ರಾಷ್ಟ್ರಧ್ವಜಾರೋಹಣಕ್ಕೆ ಪ್ರಾಶಸ್ತ್ಯವಿತ್ತರು. ಸ್ವಾತಂತ್ರ್ಯ ಚಳುವಳಿಯ ಕಾರ್ಯಕರ್ತರಿಗೆ ಬಂಥನಾಳ ಮಠದಿಂದ ನೆರವು, ಪ್ರೇರಣೆ ದೊರೆಯುವಂತಾದುದು ಉಲ್ಲೇಖನೀಯ ಇತಿಹಾಸ.

೩. ಬಸವ ಸಂದೇಶದೊಂದಿಗೆ ರಾಷ್ಟ್ರಧರ್ಮಪ್ರಚಾರ

ನಲ್ವತ್ತು ವರ್ಷ ವಯಸ್ಸಿನ ಶರಣ ಹರ್ಡೇಕರ ಮಂಜಪ್ಪನವರು ಇಪ್ಪತ್ತೈದು ವಯಸ್ಸಿನ ತೇಜೋಮೂರ್ತಿ ಬಂಥನಾಳ ಶಿವಯೋಗಿಗಳವರೊಂದಿಗೆ ವಿಜಾಪುರ ಜಿಲ್ಲೆಯ ಏಳು ತಾಲೂಕುಗಳ ಐವತ್ತೈದು (೫೫) ಹಳ್ಳಿಗಳಲ್ಲಿ ಒಟ್ಟು ಐದು ತಿಂಗಳ ಸುದೀರ್ಘಕಾಲ ಸಂಚರಿಸಿದರು.

ಹರ್ಡೇಕರರು ತದ್ರೂಪ ಮಹಾತ್ಮಾಗಾಂಧಿಯಂತೆ ಬೆಳ್ಳನ್ನ ವೇಷಧಾರಿ. ಸ್ವಾತಂತ್ರ್ಯ ಹೋರಾಟದ ಕಾಲವದು. ಅವರನ್ನು ಕಂಡರೆ ಜನಸಾಮಾನ್ಯರಿಗೆ ಭಯ, ಪೋಲೀಸರು ಬಂಧಿಸಹುದೆಂಬ ಸಂಶಯ, ಅಂತೆಯೇ ಹರ್ಡೇಕರರು ಜನರನ್ನು ಆಕರ್ಷಿಸಲು ಬಂಥನಾಳ ಶಿವಯೋಗಿಗಳವರನ್ನು ಕೂಡಿಕೊಂಡು ಜನರು ನಿರ್ಭೀತಿಯಿಂದ ಸಭೆಗೆ ಬರುವಂತೆ ಯೋಜಿಸಿದರು.

ಪ್ರತಿ ಗ್ರಾಮದಲ್ಲಿ ಶಿವಯೋಗಿಗಳ ದರ್ಶನ, ಪ್ರವಚನಕ್ಕಾಗಿ ಸಾವಿರಾರು ಜನ ಸೇರಿದಾಗ ಬಸವನ ಸಂದೇಶ ಪ್ರವಚನದೊಂದಿಗೆ ಸ್ವತಂತ್ರ ಭಾರತ ನಿರ್ಮಾಣದ ಅವಶ್ಯಕತೆ, ಶಿಕ್ಷಣದ ಮಹತ್ವ ಕುರಿತು ವೈಚಾರಿಕ ಪ್ರಚಾರ ಮಾಡಿದರು. ಜನಜೀವನದಲ್ಲಿ ಬೇರುಬಿಟ್ಟ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದುಹಾಕಲು ಕಳಕಳಿಯಿಂದ ಕರೆನೀಡಿದರು. ದುರ್ವ್ಯಸನಗಳನ್ನು ತೊರೆಯಲು ಸಾಮೂಹಿಕವಾಗಿ ಜನರು ಶಿವಯೋಗಿಗಳ ಸಮ್ಮುಖದಲ್ಲಿ ಅವರ ಪಾದ ಮುಟ್ಟಿ ಪ್ರತಿಜ್ಞೆ ಮಾಡಿದ ವಾರ್ತೆಗಳು ಊರಿಂದೂರಿಗೆ ಹರಡಿ ಸಾತ್ವಿಕಜೀವನಕ್ಕೆ ಜನತೆಯ ಒಲವು ವೃದ್ಧಿಸುವಂತಾಯಿತು.

ಉಭಯ ಶರಣರ ಬಸವ ಸಂದೇಶ, ರಾಷ್ಟ್ರೀಯ ಸೇವಾಭಾವ ಪ್ರಚಾರದಿಂದ ಜ್ಞಾನಪ್ರಸಾರಕ್ಕಾಗಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಖಾಸಗಿ ಪ್ರಾಥಮಿಕ ಶಾಲೆಗಳು ಹುಟ್ಟಿಕೊಂಡವು.

೪. ಧಾರ್ಮಿಕ ಜಾಗೃತಿಗಾಗಿ ಪುರಾಣ ಪ್ರವಚನ

ಬಂಥನಾಳ ಶಿವಯೋಗಿಗಳು ಜಿಲ್ಲೆಯ ತುಂಬ ಜೀವಂತ ದೇವರಾಗಿ ಪರಿಣಮಿಸಲು ಅವರ ನಿರಂತರ ಪುರಾಣ ಪ್ರವಚನಗಳ ಮಾಧ್ಯಮ ಪ್ರಖ್ಯಾತಿ ಪಡೆಯಿತು. ಪ್ರಭುಲಿಂಗಲೀಲೆ, ಬಸವಪುರಾಣ, ಸಿದ್ಧರಾಮ ಚರಿತೆ, ಶೂನ್ಯಸಂಪಾದನೆ, ಅಕ್ಕಮಹಾದೇವಿ ಚರಿತಾಮೃತ, ನಿಜಗುಣರ ಅನುಭಾವ – ಹೀಗೆ ಅವರ ಅಮೃತವಾಣಿ ಉತ್ತರ ಕರ್ನಾಟಕದ ತುಂಬ ಜನಾನುರಾಗ ಪಡೆಯಿತು. ಶರಣರ ಸಂದೇಶವನ್ನು ಸಾರುವ ಸಂಚಾರಿ ಬೋಧಕರೋಪಾದಿಯಲ್ಲಿ ತರುಣ ಶಿವಯೋಗಿಗಳು

ಬಿಡುವಿಲ್ಲದೆ ನಾಡಿನಾದ್ಯಂತ ಸುಳಿದಾಡಿ ಜ್ಞಾನದೀವಿಗೆ ಬೆಳಗಿಸಿದರು. ಉಳ್ಳವರಲ್ಲಿ ಉದಾರತೆಯನ್ನುಂಟುಮಾಡಿ, ದೀನ ದುರ್ಬಲರ ಪೋಷಣೆಗೆ ದತ್ತಿ ದಾನ ಧರ್ಮ ನಡೆಯುವಂತೆ ಅಲ್ಲಲ್ಲಿ ಸಮಾಜ ಕಲ್ಯಾಣ ಸಂಸ್ಥೆಗಳನ್ನು ಸ್ಥಾಪಿಸಿ ಮಾರ್ಗದರ್ಶನ ಮಾಡಿದರು. ಆಯಾ ಗ್ರಾಮದಲ್ಲಿ ಕೂಡಿದ ಸಾರ್ವಜನಿಕ ನಿಧಿಯನ್ನು ಅಲ್ಲಿಯ ಕಲ್ಯಾಣ ಕಾರ್ಯಗಳಿಗೆ ಮೀಸಲಿರಿಸಿದ ಶ್ರೇಯ ಅವರದು. ಗರಡಿ ಸಾಧನೆಗಾಗಿ 'ಗರಡಿ ಮನೆ', ಓದುಗರಿಗಾಗಿ 'ವಾಚನಾಲಯ', ಕಲಿಯುವ ಎಳೆಯರಿಗಾಗಿ 'ಪ್ರಾಥಮಿಕ ಶಾಲೆ', ಸಾರ್ವಜನಿಕ ಮಂಗಲ ಕಾರ್ಯಗಳಿಗಾಗಿ 'ಕಲ್ಯಾಣಮಂಟಪ', 'ಧರ್ಮಶಾಲೆ' ಸ್ಥಾಪಿಸಿದ ಮಹತಿ ಇಷ್ಟೆಲ್ಲ ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಂಥನಾಳ ಮಠಾಧೀಶರು ಮಾಡಿತೋರಿಸಿದ ಮಹತ್ಕಾರ್ಯ.

೫. ಸ್ವಾತಂತ್ರ್ಯಯೋಧರಿಗೆ ಆಶ್ರಯ

ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ೧೯೩೦ ರಿಂದ ೪೭ರ ವರೆಗೆ ಮುಂಬಯಿ ಕರ್ನಾಟಕದ, ಅದರಲ್ಲೂ ವಿಜಾಪುರ ಜಿಲ್ಲೆಯ ಸ್ವಾತಂತ್ರ್ಯ ಸಾಧನೆಯ ಯೋಧರಿಗೆ ಬಂಥನಾಳ ಮಠದ ಉದಾರ ಆಶ್ರಯ, ಮಾರ್ಗದರ್ಶನ, ಪ್ರೇರಣೆ ಚಿರಸ್ಮರಣೀಯ. ಭೂಗತಯೋಧರಿಗೆ ಅವರವರ ಕುಟುಂಬಗಳಿಗೆ ನೆರವನ್ನಿತ್ತರು. ಮಠದಲ್ಲಿ ಕಾಲಿರಿಸಲು ಅಂದು ಪೋಲೀಸರಿಗೆ ಭಯದ ವಾತಾವರಣ. ಕಾರಣ ಸ್ವಾಮಿಗಳ ಜನಪ್ರಿಯತೆ ಮತ್ತು ಪ್ರಭಾವವೇ ಹಾಗಿತ್ತು. ಮರುಳಾರಾಧ್ಯ ಶಾಸ್ತ್ರಿ, ಅಂಬಲಿ ಚೆನ್ನಬಸಪ್ಪ ಮೊದಲಾದ ಧುರೀಣರಿಗೆ ಮಠದ ಆಶ್ರಯವೇ ಸ್ಫೂರ್ತಿ. ಸ್ವಾತಂತ್ರ್ಯಾನಂತರ 'ಇವರು ಕಾಂಗ್ರೆಸ್ ಸ್ವಾಮಿ' ಎಂದು ಬಿರುದು ಜನಜನಿತವಾಯಿತು.

೬. ಅರವತ್ಮೂರು ಪುರಾತನರ ಮಂಟಪ ಪೂಜೆ

ತಮ್ಮ ೩೭ನೆಯ ವಯಸ್ಸಿನಲ್ಲಿ ಸುಕ್ಷೇತ್ರ ಲಚ್ಯಾಣದ ಕಮರಿಮಠದಲ್ಲಿ ಶಿವಯೋಗಿಗಳು ಆರು ತಿಂಗಳ ಅನುಷ್ಠಾನ ಕೈಕೊಂಡರು. ಲಚ್ಯಾಣವು ಬಂಥನಾಳ ಮಠದ ಶಾಖಾಮಠ. ಶಂಕರಲಿಂಗ ಶಿವಯೋಗಿಗಳ ಮಾನಸಪುತ್ರ ಸಿದ್ಧಲಿಂಗ ಮಹಾರಾಜರು ಕಟ್ಟಿದ ಮಠ; ಜಾತ್ಯತೀತ ಕೇಂದ್ರ. ಸಾಧುಸಂತರಿಗೆ ಆಶ್ರಯನೀಡುವ ಅಭಯ, ಅಕ್ಷಯ ತಾಣ. ಸ್ಮಶಾನವೇ ಸುಕ್ಷೇತ್ರವಾಗಿ ರೂಪುಗೊಂಡು ಸಿದ್ಧಲಿಂಗ ಮಹಾರಾಜರು ಬಾಳಿ ಬೆಳಗಿ ಬಂಥನಾಳ ಪೀಠಕ್ಕೆ ಸಕಲವನ್ನು ೧೯೨೫ರಲ್ಲಿಯೇ ಸಮರ್ಪಿಸಿದ ಸುಕ್ಷೇತ್ರವಿದು.

ಅನುಷ್ಠಾನವನ್ನು ಪೂರೈಸಿ ಸ್ವಯಂ ಸಿದ್ಧರಾಗಿ, ಜನಸೇವಾ ಧೀರ ಸಂಕಲ್ಪದೊಂದಿಗೆ ಕಮರಿಮಠದಿಂದ ಹೊರಬಂದ ಶಿವಯೋಗಿಗಳ ಭಕ್ತರು ೬೩ ಪುರಾತನ ಮಂಟಪ ಪೂಜಾ ಮಹೋತ್ಸವವನ್ನು (೧೯೩೯). ವಿಜೃಂಭಣೆಯಿಂದ ಸಂಘಟಿಸಿದರು.

ಮಹೋತ್ಸವದ ಪ್ರಯುಕ್ತ ಭಕ್ತರು ಮುಕ್ತಮನಸ್ಸಿನಿಂದ ನಿಧಿ ಸಂಗ್ರಹಣೆಗೆ ಹಣ, ಚಿನ್ನದೊಂದಿಗೆ ಭೂದಾನ ಕೊಡ ಮಾಡಿದ್ದರು. ಉತ್ಸವದ ನಂತರ ಶಿಲ್ಕು ಉಳಿದ ಮೊತ್ತ ಅಂದಿನ ಕಾಲದಲ್ಲಿಯೂ ಒಂದೂವರೆ ಲಕ್ಷ ರೂಪಾಯಿ. ಶ್ರೀಗಳವರ ಸಂಕಲ್ಪ ಈಡೇರಿದ ಪ್ರಥಮ ಮಹೋತ್ಸವ. ಈ ನಿಧಿಯಿಂದ ಲಚ್ಯಾಣದಲ್ಲಿ ಮಾಧ್ಯಮಿಕ ಶಾಲೆಯೊಂದಿಗೆ ಶಿಕ್ಷಕರ ತರಬೇತಿ ಕೇಂದ್ರ, ಉಚಿತ ಪ್ರಸಾದನಿಲಯ, ವಿದ್ಯಾರ್ಥಿಗಳಿಗೆ ವಸತಿಗೃಹ ನಿರ್ಮಾಣವಾದುವು. ಬಂಥನಾಳ ಶಿವಯೋಗಿಗಳವರ ಗ್ರಾಮೀಣ ಅಭಿವೃದ್ಧಿಗಾಗಿ ಮುಂಬಯಿ ಸರಕಾರ ವಿಳಂಬವಿಲ್ಲದೆ ಅನುಮತಿ ನೀಡಿತು.

೭. ವಿದ್ಯಾರ್ಥಿದೇವೋಭವ

'ವಿಜಾಪುರ ಜಿಲ್ಲಾ ಲಿಂಗಾಯುತ ವಿದ್ಯಾಭಿವೃದ್ಧಿ ಸಂಸ್ಥೆ'ಯ ರೂವಾರಿ ವಚನ ಪಿತಾಮಹ ಫ.ಗು. ಹಳಕಟ್ಟಿಯವರು. ಸ್ಥಾಪನೆ ೧೯೧೦ರಲ್ಲಿ. ಸಂಸ್ಥೆಯು ಆರಂಭಿಸಿದ ಸಿದ್ಧೇಶ್ವರ ಮಾಧ್ಯಮಿಕ ಶಾಲೆಯು ೧೫ ವರ್ಷಗಳನ್ನು ಪೂರೈಸಿದ ಹೆಮ್ಮೆಯ ವಿದ್ಯಾಕೇಂದ್ರವೆನಿಸಿದ್ದ ಕಾಲವದು; ಆರ್ಥಿಕ ಮುಗ್ಗಟ್ಟಿನಿಂದ ಅಭಿವೃದ್ಧಿ ಕುಂಠಿತವಾಗಿತ್ತು. ಸಮರ್ಥರಾದ ಸೂತ್ರಧಾರರನ್ನು ವಚನಪಿತಾಮಹರು ಗುರುತಿಸಿದರು. ಸಂಸ್ಥೆಯ ಅಧ್ಯಕ್ಷತೆಯನ್ನು ಸ್ವೀಕರಿಸಿ ಮುನ್ನೆಡೆಯಿಸಲು ಬಂಥನಾಳ ಶಿವಯೋಗಿಗಳವರಲ್ಲಿ ಪ್ರಾರ್ಥಿಸಿದರು. ಸ್ವಾಮಿಗಳ 'ಆಗಲ್ರಿಪಾ, ಶಿವನಿಚ್ಛೆ, ವಿದ್ಯಾರ್ಥಿಗಳೇ ನಮ್ಮ ದೇವರು, ವಿದ್ಯಾಕೇಂದ್ರಗಳು ಜೀವಂತ ದೇವಾಲಯಗಳು. ಇಂಥ ಸೇವೆಗೆ ಅವಕಾಶ ಕಲ್ಪಿಸಿರುವ ವಚನ ಪಿತಾಮಹರ ವಚನವನ್ನು ಶಿವನ ಅಪ್ಪಣೆಯೆಂದೇ ಗೌರವಿಸುತ್ತೇನೆ' ಹೀಗೆಂದು ಬಂಥನಾಳ ಸ್ವಾಮಿಗಳು ಸಮ್ಮತಿಸಿದರು. ೧೯೨೫ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಬಲವರ್ಧನೆಗಾಗಿ ಶಿವಯೋಗಿಗಳು ಕಂಕಣಬದ್ಧರಾದರು. ಉಚ್ಚ ಶಿಕ್ಷಣದ ಸೌಲಭ್ಯವಿಲ್ಲದ ಕಾರಣ ಜಿಲ್ಲೆಯ ವಿದ್ಯಾರ್ಥಿಗಳು ಧಾರವಾಡ, ಪುಣೆ, ಮುಂಬಯಿಗೆ ಹೋಗುತ್ತಿದ್ದರು. ಅನುಕೂಲವಂತರಿಗೆ ಮಾತ್ರ ಸಾಧ್ಯ. ಬಡವಿದ್ಯಾರ್ಥಿಗಳು ಉಚ್ಚ ಶಿಕ್ಷಣವಿಲ್ಲದೆ ಗೋಳಾಡುವ ಶೋಚನೀಯ ಸ್ಥಿತಿ.

೧೯೪೨ರ ಚಲೇಜಾವ್ ಚಳುವಳಿಯ ದಿನಮಾನಗಳು. ಈ ಚಳುವಳಿಯತ್ತ ಶಿವಯೋಗಿಗಳ ಗಮನ ಗಾಢವಾಗಿತ್ತು. ಜೊತೆಗೆ ಶಿಕ್ಷಣ ಅಭಿವೃದ್ಧಿಯ ಗುರುತರವಾದ ಜವಾಬ್ದಾರಿ, ಜನಸಮುದಾಯದ ನಿತ್ಯ ಸಂಪರ್ಕ ಸಹಯೋಗದ ಏಕಮೇವ ಮಾಧ್ಯಮ ಪುರಾಣ ಪ್ರವಚನವೆಂಬುದು ಅವರಿಗೆ ಮನದಟ್ಟಾದ ಸಂಗತಿ.

ವಿಜಾಪುರದ ಶಿವಾನುಭವ ಮಂಟಪದಲ್ಲಿ 'ಬಸವಪುರಾಣ' ಆರಂಭಿಸಿದರು. ೧೯೪೨ ಜುಲೈ ತಿಂಗಳಲ್ಲಿ ಸಂಜೆ ೬ ಗಂಟೆಯಿಂದ ೮ರ ವರೆಗೆ ಪುರಾಣ. ನಂತರ ಒಂದು ತಾಸು ಶಿಕ್ಷಣ ಕಾರ್ಯದಲ್ಲಿ ನೆರವಾಗಲು, ಸ್ವಾತಂತ್ರ್ಯ ಗಳಿಕೆಗಾಗಿ ಸಿದ್ಧರಾಗಲು ಜನತೆಯಲ್ಲಿ ಕಳಕಳಿಯ ಮನವಿ.

ಎರಡು ವಾರ ಉರುಳಿರಬಹುದು. ಶಿಕ್ಷಣ ಅಭಿವೃದ್ಧಿಗಾಗಿ ದಾನಿಗಳು ಒಬ್ಬೊಬ್ಬರಾಗಿ ಮುಂದೆ ಬಂದರು. ಮಾತೃಶ್ರೀ ಬಂಗಾರವ್ವ ಸಜ್ಜನ ಅವರು ವಿಜಾಪುರ ನಗರದ ಹೊರವಲಯಕ್ಕೆ ಸೇರಿದ ತಮ್ಮ ೫೪ ಎಕರೆ ಭೂಮಿಯನ್ನು ಶಿವಯೋಗಿಗಳ ಪಾದಕ್ಕೆ ಸಮರ್ಪಿಸಿದ ದಾನಚಿಂತಾಮಣಿ ಎನಿಸಿದರು.

ಪುರಾಣವನ್ನು ಎರಡು ತಿಂಗಳಕಾಲ ಉಪದೇಶಿಸಿದರು. ಚಲೇಜಾವ್ ಚಳವಳಿಯ ಆಂದೋಲನ ದೇಶದ ತುಂಬ. ಇಲ್ಲಿ ಶೈಕ್ಷಣಿಕ ಕ್ರಾಂತಿಯ ಕಹಳೆಯೂ ಮೊಳಗಿದ ದಾಖಲೆ. ಈ ಅವಧಿಯಲ್ಲಿ ಬಡವ ಬಲ್ಲಿದವರೆಲ್ಲರೂ ಸೇರಿ ನೀಡಿದ ಕಾಣಿಕೆ ೪,೩೭,೩೯೪ ರೂಪಾಯಿ (ನಾಲ್ಕು ಲಕ್ಷ ಮೂವತ್ತೇಳು ಸಾವಿರ ಮೂರು ನೂರಾ ತೊಂಭತ್ನಾಲ್ಕು ರೂಪಾಯಿ). ಶ್ರೀಗಳವರಿಗೆ ಸಂತೋಷವಾಯಿತು.

ಅದೇ ವರ್ಷ ಬಿಜಾಪುರದಲ್ಲಿ 'ವಿಜಯಕಾಲೇಜ' (ಕಲಾ ಮಹಾವಿದ್ಯಾಲಯ) ಆರಂಭವಾಯಿತು. ಮಾತೃಶ್ರೀ ಬಂಗಾರವ್ವ ಅವರು ನೀಡಿದ ಚಿನ್ನದಂತಹ ಭೂಮಿಯಲ್ಲಿ ನೂತನವಾಗಿ ಪ್ರಾರಂಭವಾದ ವಿದ್ಯಾಕೇಂದ್ರದ ಕಟ್ಟಡವನ್ನು ಸಂಸ್ಥೆಯು ಹೆಮ್ಮೆಯಿಂದ ನಿರ್ಮಿಸಲು ಮುಂದಾಯಿತು.

ಬಂಥನಾಳ ಮಠಾಧೀಶರು ಪರಿಶ್ರಮ, ತ್ಯಾಗ, ಸೇವಾಭಾವದಿಂದ ಆರಂಭಿಸಿದ ವಿಜಯಕಾಲೇಜು ಸಂಕೀರ್ಣವು ಇಂದು (೧೯೯೫) ವಿಜ್ಞಾನ, ವಾಣಿಜ್ಯ, ವೈದ್ಯಕೀಯ, ತಂತ್ರಜ್ಞಾನ, ಕಲೆ, ಶಿಕ್ಷಣ, ಆಡಳಿತ ವಿಷಯಗಳನ್ನೊಳಗೊಂಡ ವಿವಿಧ ವಿದ್ಯಾಲಯಗಳನ್ನು ನಡೆಸುತ್ತಿದೆ. ಮಹಿಳಾ ವಿದ್ಯಾಲಯ ಪ್ರತ್ಯೇಕವಾಗಿದೆ. ಸುಮಾರು ಹತ್ತುಸಾವಿರ ವಿದ್ಯಾರ್ಥಿಗಳು, ಇನ್ನೂರು ಜನ ಬೋಧಕರು, ಆಡಳಿತ ಸಿಬ್ಬಂದಿ ವಿಜಾಪುರ ನಗರದ ಸಂಕೀರ್ಣದಲ್ಲಿ ಬಂಥನಾಳ ಶ್ರೀಗಳವರ ಅನುಗ್ರಹದ ಪ್ರತೀಕವಾಗಿ ಕಾಣುತ್ತಲಿದ್ದಾರೆ.

೮. ಸರ್ವಧರ್ಮ ಸಮ್ಮೇಳನ

೧೯೪೭ ಆಗಸ್ಟ್ ೧೫ ಸ್ವಾತಂತ್ರ್ಯ ಸೂರ್ಯೋದಯದೊಂದಿಗೆ ದೇಶದ ಒಳಹೊರಗೆ ಜಾತಿಯ ಜಗಳ, ಕ್ಷೋಭೆ, ಹಿಂಸಾಚಾರ ನಡೆದಾಗ ಬಂಥನಾಳ ಮಠದ ರಾಷ್ಟ್ರೀಯ ಚಿಂತನೆಯ ಶ್ರೀಗಳವರಿಗೆ ತುಂಬಾ ಕಳವಳವಾಯಿತು.

ಪ್ರಥಮ ಸ್ವಾತಂತ್ರ್ಯ ಉತ್ಸವವನ್ನು ದೊಡ್ಡ ಹಬ್ಬವಾಗಿ ಬಂಥನಾಳದಲ್ಲಿ ಆಚರಿಸಿದರಲ್ಲದೆ ಶಾಖಾ ಮಠಗಳಲ್ಲೂ ಅದ್ದೂರಿಯಿಂದ ಆಚರಿಸುವಂತೆ ಯೋಜಿಸಿದ್ದರು.

ಜಾತಿಯ ಭೂತ ರಾಷ್ಟ್ರವ್ಯಾಪಿ ಹರಡಿದಾಗ ಅವರು ೧೯೫೧ರಲ್ಲಿ ಲಚ್ಯಾಣದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಸಂಘಟಿಸಿದರು. ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ ಧರ್ಮಗಳ ಮಹಿಮರನ್ನು ಆಹ್ವಾನಿಸಿ ಸರ್ವಧರ್ಮಗಳ ಮರ್ಮ ಸರ್ವೇಜನ ಸುಖಿಸುವ ಸಮನ್ವಯ ಕಹಳೆಯನ್ನು ಮೊಳಗಿಸಿದರು. ಈ ಸಮ್ಮೇಳನಕ್ಕಾಗಿ ಮಠದಿಂದ ಸಾವಿರಗಟ್ಟಲೆ ಹಣವನ್ನು ಖರ್ಚುಮಾಡಿದರು. ನೆರೆದ ಲಕ್ಷ ಜನರಿಗೆ ಜ್ಞಾನ ದಾಸೋಹ, ಶಾಂತಿಮಂತ್ರ, ಸಹಭೋಜನ ಏರ್ಪಡಿಸಿ, ಪಂಕ್ತಿಯಲ್ಲಿ ಎಲ್ಲ ಧರ್ಮಾಧೀಶರೊಂದಿಗೆ ಭಾಗವಹಿಸಿದರು. ಆರಂಭದಲ್ಲಿ "ರಘುಪತಿ ರಾಘವ ರಾಜಾರಾಮ" ಪ್ರಾರ್ಥನೆಯನ್ನು ಗಾಂಧೀ ಪ್ರಣೀತ ಸತ್ಯ ಅಹಿಂಸಾ ಪರಿಪಾಲನಾ ಸೂತ್ರಗಳನ್ನು ಸ್ವಯಂ ಬೋಧಿಸಿ ಸಕಲ ಧರ್ಮೀಯರ ಮನಸ್ಸನ್ನು ಆಕರ್ಷಿಸಿದ್ದರು.

೯. ೭೭೦ ಅಮರ ಗಣಂಗಳ ಮಂಟಪ ಪೂಜಾ ಮಹೋತ್ಸವ

ವಿಜಾಪುರದ ವಿದ್ಯಾಕೇಂದ್ರಗಳ ಅಭಿವೃದ್ಧಿಗಾಗಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುವಲ್ಲಿ ಯಶಸ್ವಿಯಾದರು. ಧಾರ್ಮಿಕ ಕ್ರಾಂತಿಯೊಂದಿಗೆ ಶೈಕ್ಷಣಿಕ ಕ್ರಾಂತಿ ಅವರ ಗುರಿ. ಭಾವುಕರಾದ ಜನಸಮುದಾಯವನ್ನು ಸಂಘಟಿಸಲು ಧರ್ಮ ಆಧಾರಿತ ಉತ್ಸವಗಳು ಪ್ರಮುಖ ಮಾಧ್ಯಮ. ೭೭೦ ಅಮರ ಗಣಾಧೀಶ್ವರ ಸ್ಮರಣೆಯ ಮಹೋತ್ಸವವನ್ನು ಸಂಭ್ರಮದಿಂದ ೭೭೦ ಮಂಟಪ ಪೂಜೆಯೊಂದಿಗೆ ನೆರವೇರಿಸಲು ನಿರ್ಧರಿಸಿದರು. ಜಿಲ್ಲೆಯ ಜನ ಗಾಬರಿಪಟ್ಟರು. ನಾಡಿನ ತುಂಬ ಹೇಗೆ ಸಾಧ್ಯವೆಂಬ ಅಚ್ಚರಿಯ ಅಲೆ ಎದ್ದಿತು. ಶ್ರೀಗಳವರು ತಮ್ಮ ಸಂಕಲ್ಪ ಈಡೇರಲು ಭಕ್ತಾದಿಗಳು ಒಂದಾಗಿ ಮುಂದೆ ಬರಲು ಕರೆ ನೀಡಿದರು. ಅವರ ಕಳಕಳಿಯ ಕರೆಯನ್ನು ವಿಜಾಪುರದ ಜನ ಸ್ವೀಕರಿಸಿದರು.

೧೯೫೪ರಲ್ಲಿ ಅವರ ಸಂಕಲ್ಪ ಯಶಸ್ವಿಯಾಗಿ ಈಡೇರಿತು. ಜಿಲ್ಲೆಯ ೭೭೦ ಜನ ಶ್ರೀಮಂತ ದಂಪತಿಗಳು ಮಂಟಪ ಪೂಜೆಗೆ ಧನಕನಕ ನೀಡಿ ಹೆಸರನ್ನು ನೋಂದಾಯಿಸಿದರು. ನಾಡಿನ ಮೂಲೆಮೂಲೆಯಿಂದ ೭೭೦ ಜನ ಮಠಾಧೀಶರು, ಶರಣರು ಸ್ವಾಮಿಗಳನ್ನು ಒಂದೊಂದು ಮಂಟಪದಲ್ಲಿ ಆಸೀನರಾಗಿ ಪೂಜೆಗೊಳ್ಳಲು, ದಂಪತಿಗಳನ್ನು ಆಶೀರ್ವದಿಸಲು ಆಹ್ವಾನಿಸಲಾಯಿತು. ೨೫ ಎಕರೆ ವಿಶಾಲ ಪ್ರದೇಶದಲ್ಲಿ ವಿಜಯ ಕಾಲೇಜ ವಿದ್ಯಾಲಯ ಸಂಕೀರ್ಣದಲ್ಲಿ ೭೭೦ ಮಂಟಪಗಳ ನಿರ್ಮಾಣ ಸಂಭ್ರಮದಿಂದ ನಡೆಯಿತು. ಸಭಾ ಮಂಟಪದ ವಿಶಾಲತೆಯನ್ನು, ನಯನ ಮನೋಹರ ಸೌಂದರ್ಯವನ್ನು ಸವಿದವರೆಲ್ಲ ಭಾಗ್ಯಶಾಲಿಗಳೆನಿಸಿದರು.

ಮಹೋತ್ಸವದಲ್ಲಿ ನೆರೆದ ಸುಮಾರು ೪ ಲಕ್ಷ ಜನ ಯಾತ್ರಿಕರಿಗೆ ಅನ್ನದಾಸೋಹ ಭರ್ಜರಿಯಾಗಿ, ಜ್ಞಾನ ದಾಸೋಹ ತನುಮನ ತಣಿಯುವಂತೆ ನಡೆದುದು ಇಂದಿಗೂ ಸಮಕಾಲೀನರು ಸ್ಮರಿಸುವ ಇತಿಹಾಸವಾಗಿ ಜನಮನದಲ್ಲಿ ಉಳಿದಿದೆ. ಮೈಸೂರು ಮಹಾರಾಜರು, ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳು ರಾಷ್ಟ್ರನಾಯಕರಾದಿಯಾಗಿ ಕರ್ನಾಟಕ ಮಹಾರಾಷ್ಟ್ರರಾಜ್ಯದ ಜಗದ್ಗುರುಗಳು, ಸಾವಿರಾರು ಜನ ಸಂತರು ವಿಜಾಪುರದಲ್ಲಿ ಐತಿಹಾಸಿಕವಾಗಿ ಜರುಗಿದ ಧಾರ್ಮಿಕ ಮಹೋತ್ಸವದಲ್ಲಿ ಭಾಗವಹಿಸಿದರು.

ತಿಂದುಂಡು ಮಿಕ್ಕ ಉಳಿದ ಲಾರಿಗಟ್ಟಲೆ 'ಸಜ್ಜಕ' (ಶಿರಾ) ಪ್ರಸಾದವನ್ನು ವಿಜಾಪುರ ನಗರದ ಮನೆ ಮನೆಗಳಿಗೆ ವಿತರಿಸಿದ ಅಪೂರ್ವ ಸಂದರ್ಭ ನನಗೆ ಈಗಲೂ ಕಣ್ಮುಂದೆ ನಡೆದಂತೆ ನೆನಪು.

ಈ ಮಹೋತ್ಸವದಲ್ಲಿ ಯಾತ್ರಿಕರು ಮಂಟಪದಲ್ಲಿ ಕೈಮುಗಿದು ಸಲ್ಲಿಸಿದ ಕಾಣಿಕೆಯ ನಾಣ್ಯಗಳನ್ನು ನೂರಾರು ಚೀಲಗಳಲ್ಲಿ ತುಂಬಿ ತುಂಬಿ ಶೇಖರಿಸುವ ದೃಶ್ಯ ಅಪರೂಪವಾಗಿತ್ತು. ಸಂದಾಯವಾದ ಲಕ್ಷಾಂತರ ರೂ.ಗಳ ನಿಧಿಯನ್ನು ಶಿವಯೋಗಿಗಳವರು ಬಿ.ಎಲ್.ಡಿ.ಇ. ಸಂಸ್ಥೆಯ ಶೈಕ್ಷಣಿಕ ಅಭಿವೃದ್ಧಿಗೆ ಸಮರ್ಪಿಸಿ ಸಂತೋಷಿಸಿದರು.

ಈ ಮಹೋತ್ಸವದ ಸ್ಮಾರಕವಾಗಿ ಆ ಪವಿತ್ರಸ್ಥಳದಲ್ಲಿ ೭೭೦ ಅಮರ ಗಣಾಧೀಶರನ್ನು ಗರ್ಭೀಕರಿಸಿಕೊಂಡಿರುವ ಮಹೋನ್ನತ ಭವ್ಯವಾದ ಶಿವಲಿಂಗವು ಬಂಥನಾಳ ಶಿವಯೋಗಿಗಳವರ ಸಂಕಲ್ಪವಾಗಿ ನಿರ್ಮಾಣಗೊಂಡಿದೆ. ಇಂದು ಯಾತ್ರಾ ಸ್ಥಳವಾಗಿ ವಿಜಾಪುರದ ಗೋಲಗುಮ್ಮಟದಷ್ಟೆ ಖ್ಯಾತಿಯನ್ನು, ಆಕರ್ಷಣೆಯನ್ನು ಪಡೆದಿದೆ. ಪಕ್ಕದಲ್ಲಿಯೇ ವಚನಪಿತಾಮಹ ಫ. ಗು. ಹಳಕಟ್ಟಿಯವರ ಮಹಾಸಮಾಧಿ ಸಾಕ್ಷಿಯಾಗಿ ನಿಂತಿದೆ.

೧೦. ವಿದ್ಯಾಪೀಠಕ್ಕೆ ಭೂದಾನ

ಬಂಥನಾಳದಲ್ಲಿ ಗ್ರಾಮೀಣ ಯುವಕರಿಗೆ ವಿವಿಧ ವೃತ್ತಿಯ ತರಬೇತಿಗಾಗಿ ವಿದ್ಯಾಪೀಠವನ್ನು ಸ್ಥಾಪಿಸುವ ವಿಚಾರವನ್ನು ಅಂದಿನ ಶಿಕ್ಷಣ ಸಚಿವರೂ, ಮಠದ ನಿಷ್ಠಾವಂತ ಭಕ್ತರೂ ಆದ ಶ್ರೀ ಎಸ್.ಆರ್. ಕಂಠಿಯವರು ಶಿವಯೋಗಿಗಳಲ್ಲಿ ಪ್ರಸ್ತಾಪಿಸಿದರು. ಯುವ ಸಮುದಾಯದ ಅಭ್ಯುದಯ ಚಿಂತಕರಾದ ಶ್ರೀಗಳವರು ಸಮ್ಮತಿಸಿದರು. ಮಠದ ಒಡೆತನದಲ್ಲಿದ್ದ ಸುಮಾರು ೫೦ ಎಕರೆ ಫಲವತ್ತಾದ ಭೂಮಿಯನ್ನು ವಿದ್ಯಾಪೀಠಕ್ಕಾಗಿ ಕೊಡಮಾಡಿದರು. ೧೯೬೦ರಲ್ಲಿ ಬಂಥನಾಳದಲ್ಲಿ ವಿದ್ಯಾಪೀಠವನ್ನು ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಿಂದ ಆರಂಭಿಸಲಾಯಿತು. ಅದರ ಅಭಿವೃದ್ಧಿಗಾಗಿ ಶಿವಯೋಗಿಗಳು ಕಾಲಕಾಲಕ್ಕೆ ಮಠದಿಂದ ಧಾರಾಳವಾದ ನೆರವನ್ನು ಕರುಣಿಸಿದರೆಂಬುದು ಸ್ಮರಣೀಯ.

೧೧. ೧,೯೬,೦೦೦ ಗಣಂಗಳ ಸಾಮೂಹಿಕ ಇಷ್ಟಲಿಂಗ ಪೂಜಾ ಮಹೋತ್ಸವ

ಈ ಶತಮಾನದ ಆರನೆಯ ದಶಕದಿಂದ ಜಾಗತಿಕ ದ್ವೇಷ, ಯುದ್ಧ, ಅಶಾಂತಿ ದಿನೇ ದಿನೇ ಹೆಚ್ಚುತ್ತಿದ್ದಾಗ ಶಿವಯೋಗಿಗಳು ವ್ಯಾಕುಲಗೊಂಡರು. ಬಸವಣ್ಣನವರು ಪ್ರತಿದಿವಸ ಲಕ್ಷದ ಮೇಲೆ ತೊಂಭತ್ತಾರು ಸಹಸ್ರ ಗಣಂಗಳೊಂದಿಗೆ ಸಾಮೂಹಿಕ ಪ್ರಾರ್ಥನೆ, ಸಹಭೋಜನ ನಡೆಯಿಸಿ ಸಾಮರಸ್ಯ, ಶಾಂತಿಯನ್ನು ಜನಜೀವನದಲ್ಲಿ ನೆಲೆಗೊಳಿಸಿದ ಮಹತಿಯನ್ನು ಕಾಲಕಾಲಕ್ಕೆ ನೆನಪಿಸುತ್ತ, ಜನರನ್ನು ಶಾಂತಿಯತ್ತ ಕ್ರಮಿಸಲು ಕರೆ ನೀಡುತ್ತಿದ್ದರು. ಮಹಾನುಭಾವ ಬಸವಣ್ಣನವರು ದಿನವೂ ಕೈಕೊಂಡು ಬಂದ ಕಾಯಕವನ್ನು ತಾವು ಒಂದು ಸಲವಾದರೂ ಜರುಗಿಸಿ ಜಾಗತಿಕ ಶಾಂತಿಗಾಗಿ ಪ್ರಾರ್ಥಿಸುವ ಬಲವಾದ ಹಂಬಲವನ್ನು ಆಗಾಗ ವ್ಯಕ್ತಪಡಿಸುತ್ತಿದ್ದರು.

ಇಂಥ ಬೃಹತ್ ಸಾಮೂಹಿಕ ಇಷ್ಟಲಿಂಗ ಪೂಜೆಯ ಮಹೋತ್ಸವವನ್ನು ಹಮ್ಮಿಕೊಳ್ಳಲು ಹಿರಿಯ ಭಕ್ತ ಮುಂದಾಳುಗಳು ಹೇಗೆ ಸಾಧ್ಯವೆಂದು ಅನುಮಾನದಿಂದ ದೂರ ಸರಿದರು. ವಿಜಾಪುರ, ಸೊಲ್ಲಾಪುರದ ಪ್ರಮುಖರು ಹಿಂಜರಿದಾಗ, ಶ್ರೀಗಳವರು ಗ್ರಾಮೀಣ ಭಾಗದ ಭಕ್ತರು ಉತ್ಸಾಹದಿಂದ ಮುಂದೆ ಬಂದಾಗ ಸುಕ್ಷೇತ್ರ ಲಚ್ಯಾಣದಲ್ಲಿ

೨-೫-೧೯೬೯ ರಂದು ೧,೯೬,೦೦೦ ಗಣಂಗಳ ಇಷ್ಟಲಿಂಗ ಪೂಜಾ ಮಹೋತ್ಸವವನ್ನು ವೈಭವದಿಂದ ಜರುಗಿಸಿ ರಾಷ್ಟ್ರಮಟ್ಟದ ಖ್ಯಾತಿಯನ್ನು, ಮೆಚ್ಚುಗೆಯನ್ನು ದಾಖಲಿಸಿದರೆಂಬುದು ಚಿರಸ್ಮರಣೀಯವಾಗಿ ಉಳಿದಿದೆ.

ಭಾರತದಾದ್ಯಂತದಿಂದ ಸುಮಾರು ೫ ಲಕ್ಷ ಜನ ಯಾತ್ರಿಕರು ಲಚ್ಯಾಣ ಮಠದಲ್ಲಿ ಸಮಾವೇಶಗೊಂಡಿದ್ದರೆಂಬುದು ಈಗಲೂ ಅಚ್ಚರಿಯನ್ನುಂಟುಮಾಡಬಹುದು. ಕರ್ನಾಟಕ, ಮಹಾರಾಷ್ಟ್ರ ರಾಜ್ಯ ಸರಕಾರಗಳ ಸಹಾಯ ಸಹಯೋಗದೊಂದಿಗೆ ಈ ಅಭೂತಪೂರ್ವ ಮಹೋತ್ಸವದ ಯಶಕ್ಕಾಗಿ ಭಾರತ ಸರಕಾರ ತನ್ನ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿತ್ತು. ಮಹೋತ್ಸವದ ಕಾರ್ಯದರ್ಶಿಯಾಗಿ ಅಧ್ಯಕ್ಷರಾಗಿದ್ದ ಸಂಸದ ಬಿ.ಕೆ. ಗುಡದಿನ್ನಿಯವರೊಂದಿಗೆ ಸೇವೆ ಸಲ್ಲಿಸಿದ ನಾನು ಕೆಲವೊಂದು ಕೌತುಕದ ಸ್ಮರಿಸಲೇ ಬೇಕಾದ ಅಂಶಗಳನ್ನಿಲ್ಲಿ ಹೇಳಬೇಕಾದುದು ಸೂಕ್ತವೆನಿಸುತ್ತದೆ:

೧. ಹುಬ್ಬಳ್ಳಿ-ಸೊಲ್ಲಾಪುರ ರೈಲ್ವೆ ಮಾರ್ಗದ ಸಣ್ಣ ನಿಲ್ದಾಣ ಲಚ್ಯಾಣ. ಯಾತ್ರಿಕರ ಸುಖಪ್ರಯಾಣಕ್ಕೆಂದು ಲಚ್ಯಾಣ-ತಡವಲ ನಿಲ್ದಾಣಗಳ ಮಧ್ಯೆ ಭೀಮಾನದಿಯ ಪಕ್ಕದಲ್ಲಿ 'ಪಡನೂರ'ರೈಲ್ವೆ ನಿಲ್ದಾಣವನ್ನು ನೂತನವಾಗಿ ಭಾರತ ಸರಕಾರ ನಿರ್ಮಿಸಿತು ಮಹೋತ್ಸವಕ್ಕಾಗಿ. ಇಂದು ಪಡನೂರ ರೈಲ್ವೆ ನಿಲ್ದಾಣ ಬೆಳೆದಿದೆ; ಸ್ಮಾರಕವಾಗಿ ನಿಂತಿದೆ.

೨. ಇಂಡಿ ತಾಲೂಕಿನಲ್ಲಿರುವ ಲಚ್ಯಾಣಕ್ಕೂ ಇಂಡಿಗೂ ಕೂಡ ವಿದ್ಯುತ್ ಸಂಪರ್ಕವಿರಲಿಲ್ಲ. ಗ್ರಾಮೀಣ ರೈತಾಪಿ ಸಮುದಾಯದ ಪರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬಂಥನಾಳ ಮಠದಿಂದ ರಾಜ್ಯ ಸರಕಾರದ ವಿದ್ಯುತ್ ನಿಗಮಕ್ಕೆ ೧೦ ಸಹಸ್ರ ರೂಪಾಯಿ ತುಂಬಲಾಯಿತು. ವಿದ್ಯುತ್ ಸಂಪರ್ಕ ಇಂಡಿಗೂ ಲಚ್ಯಾಣಕ್ಕೂ ದೊರೆಯುವಂತಾದುದು ಬಂಥನಾಳದ ಕೃಪೆಯಿಂದ.

೩. ಮಹಾಪ್ರಸಾದಕ್ಕಾಗಿ ವಿಜಾಪುರ ಜಿಲ್ಲೆಯ ಡೋಣಿಸಾಲಿನ ರೈತರು ೪೦೦ ಕ್ವಿಂಟಲ್ ಉತ್ಕೃಷ್ಟ ಮಟ್ಟದ ಗೋಧಿಯನ್ನು ನಾಲ್ಕು ಲಾರಿಗಳಲ್ಲಿ ಮೆರವಣಿಗೆಯೊಂದಿಗೆ ತಂದು ಅರ್ಪಿಸಿದರು.

೪. ಗುಲಬರ್ಗ, ರಾಯಚೂರ, ಬಳ್ಳಾರಿ ಭಾಗದ ಭಕ್ತರು ಒಟ್ಟಾಗಿ ನೀಡಿದ ಪ್ರಸಾದಕ್ಕಾಗಿ ಕಾಣಿಕೆ ೧೦೦ ಕ್ವಿಂಟಲ್ ಸಕ್ಕರೆ, ೧೦೦ ಕ್ವಿಂಟಲ್ ಮಗದುಮ ಸಕ್ಕರೆ ಮತ್ತು ೫೦೦ ಕ್ವಿಂಟಲ್ ಅಕ್ಕಿ.

೫. ಬಡವ ಬಲ್ಲಿದರೆನ್ನದೆ ಊರೂರುಗಳಿಂದ ತಳ್ಳಗೆ ಮಾಡಿ ತಂದು ಪೂರೈಸಿದ ಸಜ್ಜೆಯ ರೊಟ್ಟಿಯ ಹತ್ತಾರು ಬಣವೆಗಳನ್ನು ಒಟ್ಟಬೇಕಾದುದು ಕೌತುಕ ಮತ್ತು ಸಂತೋಷದ ದೃಶ್ಯವಾಗಿತ್ತು. ಸೇಂಗಾ, ಅಗಸಿಯಿಂದ ತಯಾರಿಸಿ ಅರ್ಪಿಸಿದ ಹಿಂಡಿ (ಚಟ್ನಿ)ಯ ನೂರಾರು ಮೂಟೆಗಳ ಸಂಭ್ರಮ.

೬. ಮಹೋತ್ಸವಕ್ಕಾಗಿ ಜನಸಾಗರದಿಂದ ತಾನಾಗಿಯೇ ಹರಿದು ಬಂದ ದೇಣಿಗೆಯ ನಿಧಿಯು ಸುಮಾರು ಮೂರು ಲಕ್ಷ ರೂಪಾಯಿಗಿಂತಲೂ ಅಧಿಕವಾಗಿತ್ತು. ಭಕ್ತ ಸಮುದಾಯದ ನಿಷ್ಠೆ, ಆದರಗಳಿಗೆ ಇದೊಂದು ನಿದರ್ಶನವಾಗಿ ಶ್ರೀಗಳಿಗೆ ಆನಂದ ತಂದಿತು.

೭. ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸಿದವರಿಗೆ ಮತ್ತು ಯಾತ್ರಿಕರಿಗೆ ಪ್ರಸಾದದ ಪುಡಿಕೆ (ಪೊಟ್ಟಣ) ಪೂರೈಸಲು ೨೫೦ ಗ್ರಾಮ್ ತೂಕದ ೭ ಲಕ್ಷ ಪ್ಲಾಸ್ಟಿಕ್ ಪುಡಿಕೆಗಳಲ್ಲಿ ಗೋಧಿ ಸಕ್ಕರೆಯಿಂದ ಸಿದ್ಧಪಡಿಸಿದ 'ಮಾದಲಿ'ಯ ವರಪ್ರಸಾದ ಗಮಗಮಿಸುತ್ತಿತ್ತು. ೪೦೦ ಕ್ವಿಂಟಲ್ ಗೋಧಿಯ ರವೆಯನ್ನು ತುಪ್ಪದಲ್ಲಿ ಹುರಿದು ಮಾದಲಿ ತಯಾರಿಸಲಾಗಿತ್ತು. ಈ ಪ್ರಸಾದ ದೇಶದಾದ್ಯಂತ ವಿತರಣೆಗೊಂಡಿತು. ಸುಮಾರು ಮೂರು ತಿಂಗಳಕಾಲ ಕಾಯ್ದಿರಿಸಬಹುದಾದ ಪ್ರಸಾದವು ಕೆಡಲಾರದೆಂದು ಆಹಾರತಜ್ಞರಿಂದ ಶಿಫಾರಸು ಪಡೆಯಲಾಗಿತ್ತು.

೮. ಮಹೋತ್ಸವದ ಅಪೂರ್ವ ಚಲನಚಿತ್ರ ಬಂಥನಾಳ ಮಠದಲ್ಲಿ ದಾಖಲೆಯಾಗಿ ಗತವೈಭವವನ್ನು ಸಾರುತ್ತಿದೆ. ಸ್ಮರಣೆಗಾಗಿ ಶಿವಯೋಗಿಗಳವರು ಗ್ರಾಮೀಣ ಭಾಗದಲ್ಲಿ ಬಡವರಾದ ವಿದ್ಯಾರ್ಥಿಗಳಿಗಾಗಿ "ವೃಷಭಲಿಂಗೇಶ್ವರ ಮಾದರಿಯ ವಸತಿ ಶಾಲೆ'ಯನ್ನು ಸ್ಥಾಪಿಸುವ ಸಂಕಲ್ಪದಿಂದ ಮಹೋತ್ಸವದಿಂದ ದೊರೆತ ನಿಧಿಯಿಂದ ೧,೯೬.೦೦೦ ರೂ. ನಿಧಿಯನ್ನು, ಸಾಕಷ್ಟು ಫಲವತ್ತಾದ ಭೂಮಿಯನ್ನು ಕೊಡಮಾಡಿದರು (೧೯೭೦). ಅವರ ಸಂಕಲ್ಪ ಈಡೇರುವ ಕಾಲಕ್ಕಾಗಿ ಕಾಯಬೇಕಾಗಿದೆ.

೧೨. ಎತ್ತ ನೋಡಿದಡತ್ತ ಬಂಥನಾಳದ ಬೆಳಕು

ವಿಜಾಪುರ ಜಿಲ್ಲೆಯಲ್ಲಿ ಅವರು ಸ್ಥಾಪಿಸಿದ ಪ್ರೌಢಶಾಲೆಗಳು ನೂರಾರು. ಉಚಿತ ಪ್ರಸಾದ ನಿಲಯಗಳು ನೂರಕ್ಕೂ ಹೆಚ್ಚು, ಮಹಾವಿದ್ಯಾಲಯಗಳು, ಮಂಗಲಕಾರ್ಯಾಲಯಗಳು ವಿಪುಲ. ವಿಜಾಪುರ, ಗುಲಬರ್ಗ, ಬಳ್ಳಾರಿ, ರಾಯಚೂರ, ಬೀದರ, ಬೆಳಗಾವಿ ಜಿಲ್ಲೆಗಳ ಗ್ರಾಮೀಣ ವಲಯಗಳಲ್ಲಿ ಶೈಕ್ಷಣಿಕ ಕ್ರಾಂತಿಗಾಗಿ ಪ್ರವಚನ, ಪುರಾಣ ಮಹೋತ್ಸವವನ್ನು ಜರುಗಿಸಿ ರಾಷ್ಟ್ರಧರ್ಮವನ್ನು, ಬಸವ ಸಂದೇಶವನ್ನು ಪರಿಪಾಲಿಸಿದ ಬಂಥನಾಳ ಶಿವಯೋಗಿಗಳವರ ಕೊಡುಗೆ ಎತ್ತ ನೋಡಿದೊಡತ್ತ ಎದ್ದು ಕಾಣುತ್ತದೆ.

○

ಮುಳುಗುಂದದ ಗವಿಮಠದ ಸಾಂಸ್ಕೃತಿಕ ಕೊಡುಗೆ

ಟಿ.ಆರ್. ಮಹಾದೇವಯ್ಯ

ಧಾರವಾಡ ಜಿಲ್ಲಾ, ಗದಗ ತಾಲ್ಲೋಕಿನ ಮುಳುಗುಂದದಲ್ಲಿರುವ ಶ್ರೀ ಬಾಲಲೀಲಾ ಮಹಂತ ಶಿವಯೋಗಿಗಳ ಗವಿ ಮಠವು ಸಮಾಜಕ್ಕೆ, ಆ ಮೂಲಕ ನಾಡಿಗೆ ನೀಡಿರುವ ಸಾಂಸ್ಕೃತಿಕ ಕಾಣಿಕೆಯು ಗಣನಾರ್ಹವಾಗಿದೆ. ಯಾವುದೇ ಮಠವಾಗಲಿ ಸಮಾಜದಿಂದ ಪಡೆಯುತ್ತದೆ; ಬೇರೆ ಮುಖವಾಗಿ ಮತ್ತೆ ಅದಕ್ಕೆ ನೀಡುತ್ತದೆ. ಉಪಕೃತವಾದ ಸಮಾಜವು ಮಠಕ್ಕೆ ತ್ರಿವಿಧವಾಗಿ (ತನು ಮನ ಧನ)ನೀಡುತ್ತದೆ; ಪ್ರತಿಫಲವಾಗಿ ಮನಸ್ಸಿಗೆ ಶಾಂತಿಯ ಸುಧೆಯನ್ನು ಪಡೆಯುತ್ತದೆ. ಒಂದು ಮತ್ತೊಂದಕ್ಕೆ ಪೂರಕ, ಪೋಷಕ. ಜಲಾಶಯಗಳಿಂದ ನೀರು ಆವಿಯಾಗಿ ಮೇಲೆ ಸಾಗಿ ಮೋಡವಾಗುತ್ತದೆ. ಮತ್ತೆ ಆ ಮೋಡ ಕರಗಿ ಮಳೆಯಾಗಿ ಸುರಿದು ಜಲಾಶಯಗಳು ತುಂಬುತ್ತವೆ. ಇದರಂತೆ ಮಠ ಮತ್ತು ಸಮಾಜದ ಸಂಬಂಧ. ಸಮಾಜಪುರುಷನ ತನು ಮನ ಧನಗಳು ಮಠದ ಸೇವೆಯಿಂದಾಗಿ ಶುದ್ಧಗೊಳ್ಳುತ್ತವೆ; ಪವಿತ್ರವಾಗುತ್ತವೆ; ದುರ್ಲಭವೆನಿಸುವ ಶಾಂತಿ-ಸಮಾಧಾನಗಳು ಕೈಸಾರುತ್ತವೆ; ಬದುಕು ಇಹ-ಪರ ಸಾಧನೆಯ ಆಡುಂಬೊಲವಾಗುತ್ತದೆ. ಈ ಕಾರಣದಿಂದಾಗಿಯೇ ಪ್ರಾಚೀನ ಕಾಲದಿಂದಲೂ ಮಠ ಮಾನ್ಯಗಳ ಪ್ರಭಾವ ಬೆಳೆದು ಬಂದಿದೆ.

ಮುಳುಗುಂದವು ಒಂದು ಕಾಲದಲ್ಲಿ ಮಾಂಡಳಿಕ ದೊರೆಗಳ ರಾಜಧಾನಿಯಾಗಿ, ದೇಸಾಯಿ ದೇಶಗತಿಯ ಪೀಠಾಸ್ಥಳವಾಗಿ ಮೆರೆದ ಪಟ್ಟಣ. ಬೆಳ್ವೊಲ ಮೂರನೂರರಲ್ಲಿ ಮುಳುಗುಂದ ಹನ್ನೆರಡಕ್ಕೆ ಮುಖ್ಯಪಟ್ಟಣವೆನಿಸಿದ್ದ ಅದು ಪೇಶ್ವೆಯರ ಕಾಲಕ್ಕೆ ತಾಸಗಾವಿ ಸರ್ಕಾರದ ವಶಕ್ಕೆ ಹೋಗಿತ್ತು. ತಾಸಗಾವಿ ಆಡಳಿತಗಾರನಿಗೆ ಮಕ್ಕಳಿಲ್ಲದ್ದರಿಂದ ಕ್ರಿ.ಶ. ೧೮೪೮ ರಲ್ಲಿ ಕಂಪನಿ ಸರ್ಕಾರವು ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಅಲ್ಲಿರುವ ಶಾಸನಗಳು, ಪಳೆಯುಳಿಕೆಗಳು ಅದರ ಗತವೈಭವದ ಕುರುಹಾಗಿವೆ.

ಒಂದು ಕಡೆ ಶಿವಸಂಸ್ಕೃತಿಯ ಪ್ರತೀಕವಾಗಿ ಬಸವೇಶ್ವರ ಗುಡ್ಡ, ಇನ್ನೊಂದು ಕಡೆ ಹಿಂದೂ-ಮುಸ್ಲಿಂ ಮೈತ್ರಿಯ ಸಂಕೇತವೆನಿಸುವ ದಾವಲ್-ಮಲ್ಲಿಕ್ ಗುಡ್ಡ, ಬೇರೊಂದೆಡೆ ಜೈನಸಂಸ್ಕೃತಿಯನ್ನು ಸಂಕೇತಿಸುವ ಗೊಮ್ಮಟನ ನೆಳಲ ಹೊಳಹಿನ ಚಿಂಚನಿಗುಡ್ಡಗಳು ಇವೆ. ಊರಿನ ತುಂಬ ಭೈರವ, ಕುಂಭೇಶ್ವರ, ನಗರೇಶ್ವರ, ಪೇಟೆ ಬಸಪ್ಪ, ಸಿದ್ಧೇಶ್ವರ, ರಾಮ ದೇವರು ಮೊದಲಾದ ದೇವಸ್ಥಾನಗಳೂ, ಅನೇಕ ಬಸದಿ, ಮಸೀದಿಗಳೂ ಇವೆ. ಈ ಸ್ಥಳವು ಅನೇಕ ವಿಭೂತಿ ಪುರುಷರ ನೆಲೆವೀಡಾಗಿ, ಕವಿ-ಕಲಾವಿದರ ತೌರೂರಾಗಿ ಮೆರೆದಿದೆ. ಜೊತೆಗೆ ಅನೇಕ ಶಿವಯೋಗಿ ಪುಂಗವರ ಸಾಧನಕ್ಷೇತ್ರವಾಗಿ ಅಗ್ಗಳಿಕೆಯನ್ನು ಪಡೆದಿದೆ.

ಮುಳುಗುಂದದ ಶ್ರೀ ಗವಿಮಠದ ಪರಂಪರೆ ಗುರುಮಹಂತರಿಂದ ಆರಂಭವಾಯಿತು. ಅವರೊಬ್ಬ ಊರಿಂದೂರಿಗೆ ಅಲೆದಾಡುವ ಸಂನ್ಯಾಸಿ. ಸಾಗಿದಲ್ಲೆಲ್ಲಾ ತಮ್ಮ ಬೋಧೆಯಿಂದ ಜನರ ಬದುಕನ್ನು ಹಸನುಗೊಳಿಸುತ್ತಾ ನಡೆದ ಮಹಾನುಭಾವಿ. ಈ ಸಾತ್ವಿಕ ಮದ್ದಾನೆಯನ್ನು ತಮ್ಮ ನಿರ್ಮಲ ಭಕ್ತಿಯೆಂಬ ಹಗ್ಗದಲ್ಲಿ ಕಟ್ಟಿಹಾಕಿದ ಕೀರ್ತಿ ಮುಳುಗುಂದದ ಭಕ್ತರದು. 'ತಮಗೆ ಗುಡಿಸಲು ಸಾಕು' ಎಂದು ಗುರುಗಳು ಹೇಳಿದರೂ 'ಹುಲ್ಲು ಮಠಕ್ಕಿಂತ ಕಲ್ಲುಮಠ ಲೇಸು' ಎಂದು ಭಕ್ತರು ಊರಾಚೆ ಪ್ರಶಾಂತ ಸ್ಥಳದಲ್ಲಿ ಕಲ್ಮಠವನ್ನು ನಿರ್ಮಿಸಿದರು.

ಮುಂದೆ ಬಂದ ಬಾಲಲೀಲೆಯ ಮಹಂತರಿಗೆ ಅವರ ಪೂಜೆ, ಧ್ಯಾನ ತಪಗಳಿಗೆ ಅನುಕೂಲವಾಗುವಂತೆ ಈಗ ಮಠ ಇರುವ ಪ್ರದೇಶದಲ್ಲಿ ನೆಲೆಮಾಳಿಗೆ(ಗವಿ)ಯೊಂದನ್ನು ನಿರ್ಮಿಸಲಾಯಿತು. ಅದರ ಮೇಲುಗಡೆ ಅವರ ವಾಸ್ತವ್ಯಕ್ಕೆ ಮೂರಂತಸ್ತಿನ ಅಂಕಣವನ್ನು ಕಟ್ಟಿದರು. ಇದೇ ಗವಿಮಠ. ಇಲ್ಲಿಯೇ ಬಾಲಲೀಲಾ ಮಹಂತ ಶಿವಯೋಗಿಗಳ ಗದ್ದಿಗೆ ಇದ್ದು ಈ ತಪೋಭೂಮಿ ಅವಿಮುಕ್ತ ಕ್ಷೇತ್ರವೆನಿಸಿದೆ. ಶ್ರೀಮಠದ ಪರಂಪರೆಯಲ್ಲಿ ಬಾಲಲೀಲಾ ಮಹಂತಶಿವಯೋಗಿಗಳ ನಂತರ ಮುಪ್ಪಿನ ಮಹಂತಸ್ವಾಮಿಗಳು, ಬಸವಲಿಂಗಸ್ವಾಮಿಗಳು, ಶಿವಲಿಂಗದೇವರು, ಮೃತ್ಯುಂಜಯ ಸ್ವಾಮಿಗಳು, ಮಹಂತ ಸ್ವಾಮಿಗಳು (ಧಾರವಾಡ) ಆಗಿ ಹೋಗಿದ್ದಾರೆ. ೧೯೭೭ರಿಂದ ಪ್ರವಚನಾಚಾರ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಠಾಧ್ಯಕ್ಷರಾಗಿದ್ದಾರೆ.

ಮುಳುಗುಂದದ ಗವಿಮಠವು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಧಾರ್ಮಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಎಂದು ವಿಂಗಡಿಸಿ ವಿವರಿಸಬಹುದಾಗಿದೆ.

ಗುರು ಮಹಂತರಾಗಲಿ, ಬಾಲ ಲೀಲಾಮಹಂತರಾಗಲಿ ಅನುಸರಿಸಿದ್ದು, ಬೋಧಿಸಿದ್ದು, ಬಸವಾದಿ ಶರಣರು ಆಚರಿಸಿ, ತೋರಿದ ಉದಾತ್ತ ಧರ್ಮವನ್ನು; ಸಕಲ ಜೀವಾವಳಿಗೆ ಲೇಸಬಯಸುವ ಉದಾರ ಧರ್ಮವನ್ನು. ಶ್ರೀಮಠದ ಆಚಾರ್ಯರು ತಮ್ಮ ಪ್ರವಚನಗಳಿಂದ ಜನರಲ್ಲಿ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನುಂಟುಮಾಡಿದ್ದಾರೆ. ಬದುಕು ಹಸನಾಗಲು ಅಗತ್ಯವಾದ ಸದ್ಗುಣಗಳನ್ನು ಹೊಂದಲು, ಆಚರಣೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡಿದ್ದಾರೆ. ತಮ್ಮ ಪ್ರಭಾವಪೂರ್ಣ ವ್ಯಕ್ತಿತ್ವದಿಂದ ದುಶ್ಯಟಗಳಿಗೆ ದಾಸರಾಗಿದ್ದ ಜನರನ್ನು ಸತ್ಪಾತ್ರರನ್ನಾಗಿ ಮಾಡಿದ್ದಾರೆ. ಜನರಲ್ಲಿ ಧರ್ಮಶ್ರದ್ಧೆ ಬೆಳೆಯಲು, ಜನರು ಮುಮುಕ್ಷುಗಳಾಗುವಂಥ ವಾತಾವರಣವನ್ನು ಅವರು ನಿರ್ಮಿಸಿದರು. ಬಾಲಲೀಲಾ ಮಹಂತರಂತೂ ತಮ್ಮ ವಿಶಿಷ್ಟವೆನಿಸುವ ವ್ಯಕ್ತಿತ್ವದಿಂದ ಜನಮನವನ್ನು ಗೆದ್ದರು. ಜೊತೆಗೆ ಅವರು ಹಾಡುಗಳನ್ನು ಕಟ್ಟಿ ತಮ್ಮ ಸುಮಧುರ ಕಂಠದಿಂದ ಹಾಡಿ ಒಂದು ಧಾರ್ಮಿಕ ಆಂದೋಲನವನ್ನೇ ಮಾಡಿದರು. ಅವರ ತತ್ವಪದಗಳು ಒಬ್ಬರ ನಾಲಗೆಯಿಂದ ಇನ್ನೊಬ್ಬರ ಕಿವಿಗೆ, ಹೀಗೆ ಸಾಗಿ ಜನಜೀವನದ ಮೇಲೆ ಸತ್ಪರಿಣಾಮವನ್ನುಂಟು ಮಾಡಿದವು. ಮುಂದೆ ಆ ಹಾಡುಗಳೆಲ್ಲವೂ 'ಕೈವಲ್ಯದರ್ಪಣ'ವೆಂಬ ಸಂಕಲನದಲ್ಲಿ ಪ್ರಕಟವಾದವು.

ಶ್ರೀಮಠದ ಧಾರ್ಮಿಕ ಚಟುವಟಿಕೆಗಳಲ್ಲಿ ಜಾತಿ ಮತ ಭೇದವಿಲ್ಲದೆ ಎಲ್ಲರೂ ಭಾಗವಹಿಸುತ್ತಿದ್ದುದು ಒಂದು ವೈಶಿಷ್ಟ್ಯ. ಬಹುಮಟ್ಟಿಗೆ ಕರ್ನಾಟಕದ ಎಲ್ಲಾ ಮಠಾಧೀಶರೂ ಇಲ್ಲಿಗೆ ಆಗಮಿಸಿದ್ದಾರೆ. ವರ್ಷಕ್ಕೊಮ್ಮೆ ನಡೆಯುವ ಪುಣ್ಯತಿಥಿ ಕಾರ್ಯಕ್ರಮವು ಜಾತ್ರೆಯಂತೆ ನಡೆಯುತ್ತದೆ. ಒಂದು ವಾರ ಕಾಲ ನಡೆಯುವ ಈ ಪುಣ್ಯಾಹದಲ್ಲಿ ಸುತ್ತ ಮುತ್ತಣ ಹಳ್ಳಿಗಳ ಜನರು ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಾರೆ. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ಹಬ್ಬ, ಹರಿದಿನ ಮೊದಲಾದ ಪುಣ್ಯ ದಿನಗಳಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ. ದೀಕ್ಷಾ ಸಂಸ್ಕಾರ ಕಾರ್ಯಕ್ರಮಗಳು, ಧರ್ಮ ಪ್ರವಚನಗಳು ನಡೆದು ಜನರಲ್ಲಿ ಧರ್ಮಶ್ರದ್ಧೆ ಬೆಳೆಯಲು ಕಾರಣವಾಗಿದೆ.

ಬಾಲಲೀಲಾ ಮಹಂತ ಶಿವಯೋಗಿಗಳ ಶತಮಾನೋತ್ಸವದ ಸಂದರ್ಭದಲ್ಲಿ (೧೯೫೫) ಮೂಡಿಬಂದ 'ವೈರಾಗ್ಯದಲರು' ಶ್ರೀಮಠ ಮತ್ತು ಅದರ ಪಾವನ ಪರಂಪರೆಯನ್ನು ಕುರಿತ, ಅನೇಕ ಧಾರ್ಮಿಕ ವಿಚಾರಗಳನ್ನು ಕುರಿತ ಲೇಖನಗಳನ್ನು ಒಳಗೊಂಡ ಗ್ರಂಥವಾಗಿದೆ. ಇದನ್ನು ಅಂದಿನ ಮೈಸೂರು ಮಹಾರಾಜರಾದ ಶ್ರೀಜಯಚಾಮರಾಜ ಒಡೆಯರು ಬಿಡುಗಡೆಮಾಡಿದ್ದಾರೆ.

ಮುಳುಗುಂದದ ಗವಿಮಠವು ಧರ್ಮಜಾಗೃತಿಗೆ ಅಪೂರ್ವ ಕೊಡುಗೆಗಳನ್ನು ನೀಡಿರುವಂತೆಯೇ ಸಾಂಸ್ಕೃತಿಕವಾಗಿ ನಾಡಿಗೆ ಅಪಾರ ಸೇವೆ ಸಲ್ಲಿಸಿದೆ. ಶ್ರೀಮಠ ಹಮ್ಮಿಕೊಳ್ಳುವ ಚಟುವಟಿಕೆಗಳು ವರ್ಷವಿಡೀ ಅಲ್ಲಿ ಸಾಂಸ್ಕೃತಿಕ ವಾತಾವರಣ ನೆಲಸುವಂತೆ ಮಾಡಿವೆ. ನಾಡಿನ ಅನೇಕ ಅನುಭಾವಿಗಳು, ಮುತ್ಸದ್ದಿಗಳು, ವಿದ್ವಾಂಸರು, ಕಲಾವಿದರು ಇಲ್ಲಿಗೆ ಬಂದು ತಮ್ಮ ಅನುಭವಗಳನ್ನು, ವಿಚಾರಗಳನ್ನು, ಕಲಾ ವೈಭವವನ್ನು ಮೆರೆಸಿದ್ದಾರೆ. ಆ ಪ್ರದೇಶದ ಜಾನಪದ ಕಲಾವಿದರಿಗೆ ಶ್ರೀಮಠ ಮುಕ್ತ ವೇದಿಕೆಯನ್ನು ಒದಗಿಸಿರುವುದರಿಂದ ಗ್ರಾಮೀಣರ ಅನೇಕ ಕಲಾ ಪ್ರತಿಭೆಗಳು ಅರಳಲು ಅವಕಾಶ ಉಂಟಾಗಿದೆ. ಒಂದು ಕಡೆ ಜ್ಞಾನದಾಸೋಹ, ಇನ್ನೊಂದು ಕಡೆ ಕಲಾರಂಜನೆ ಜನಮನವನ್ನು ತಣಿಸಿವೆ. ಕರ್ನಾಟಕದಲ್ಲಿ ಲಲಿತ ಕಲೆಗಳನ್ನು ಅರಮನೆ-ಗುರುಮನೆಗಳು ಪೋಷಿಸುತ್ತಾ ಬಂದಿವೆ ಎಂಬ ಮಾತಿಗೆ ಸಾಕ್ಷಿ ಶ್ರೀಮಠ.

ಶಿವಯೋಗಿಗಳ ಬಗ್ಗೆ ಹಾಡು ಕಟ್ಟಿ ರಾಗತಾಳಲಯಬದ್ಧವಾಗಿ ಹಾಡುವುದೇನು, ಕುಣಿಯುವುದೇನು ಅವರ ಜೀವನ-ಸಾಧನೆ ಕುರಿತು ನಾಟಕವಾಡಿ ರಂಗದ ಮೇಲೆ ಪ್ರದರ್ಶಿಸುವುದೇನು? ಹೀಗಾಗಿ ಹಿರಿಯ-ಕಿರಿಯರೆನ್ನದೆ, ಗಂಡು-ಹೆಣ್ಣೆನ್ನದೆ ಬಹಳ ಜನ ಈ ಸಾಂಸ್ಕೃತಿಕ ವಾತಾವರಣದಲ್ಲಿ ತಮ್ಮ ಅಭಿವ್ಯಕ್ತಿಗೆ ಅವಕಾಶ ದೊರಕಿಸಿಕೊಂಡರು. ಇದರಿಂದ ಜನರಿಗೆ ಒಳ್ಳೆಯ ಮನರಂಜನೆಯೂ ಒದಗಿದಂತಾಯಿತು. ನಾಡಿನ ಹೆಸರಾಂತ ಕವಿಗಳ, ವಿದ್ವಾಂಸರ ವಾಣಿಯನ್ನು ಕೇಳುವ, ಪ್ರಸಿದ್ಧ ಸಂಗೀತಗಾರರಾದ ಮನಸೂರ್, ರಾಜಗುರು, ಜಂಬಲದಿನ್ನಿ, ಹಾನಗಲ್ ಗಂಗೂಬಾಯಿ, ಪಂಚಾಕ್ಷರಿ ಗವಾಯಿಗಳ ಸಂಗೀತ ಕೇಳುವ ಪುಣ್ಯ ಜನರದಾಯಿತು.

ಜಾತ್ರೆಯ ಸಮಯದಲ್ಲಿ ನಡೆಯುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಇಲ್ಲಿ ಉಲ್ಲೇಖಿಸಬೇಕು. ಅದೇ 'ಕಡುಬಿನ ಕಾಳಗ'. ಹಳೆಯ ಮೈಸೂರು ಭಾಗಕ್ಕೆ ಇದರ ಪರಿಚಯವಿಲ್ಲ. ಉತ್ತರ ಕರ್ನಾಟಕದ ಕಡೆ ಮಠಗಳ ಮೂಲಕ ನಡೆಯುವ ರಥೋತ್ಸವಾದಿ ಸಂದರ್ಭದಲ್ಲಿ ಇದು ಆಚರಿಸಲ್ಪಡುತ್ತದೆ. ಮಠದ ಸ್ವಾಮಿಗಳು ಕುದುರೆಯನ್ನೇರಿ ರಾಜಬೀದಿಯಲ್ಲಿ ಉತ್ಸವ

ಹೊರಡುತ್ತಾರೆ. ಅವರ ದರ್ಶನಾಕಾಂಕ್ಷಿಗಳಾಗಿ ಇಕ್ಕೆಲದಲ್ಲೂ ನಿಂತ ಜನಸ್ತೋಮದತ್ತ ಸ್ವಾಮಿಗಳು ತಮ್ಮ ಜೋಳಿಗೆಯಲ್ಲಿ ತುಂಬಿದ್ದ ಕಡುಬುಗಳನ್ನು (ಈಗ ಬೆಲ್ಲದ ಚೂರು)ತೂರುತ್ತಾರೆ. ಜನರು ಅದನ್ನು ಮುಗಿಬಿದ್ದು ಆತುಕೊಂಡು ಪ್ರಸಾದವೆಂದು ಸೇವಿಸುತ್ತಾರೆ.'ಕಡುಬಿನ ಕಾಳಗ' ಪದಗಳಲ್ಲಿ 'ಕಾಳಗ' ಪದಕ್ಕೆ ಸ್ಪರ್ಧೆ, ಮೇಲಾಟ ಎಂದು ಅರ್ಥ ಮಾಡಿಕೊಳ್ಳಬೇಕು. ಅಷ್ಟೆ, ನಮ್ಮಲ್ಲಿ ವಿಜಯದಶಮಿಯ ದಿನ (ದಸರಾ) ಬನ್ನಿಪತ್ರೆಯನ್ನು ಸಿಕ್ಕಿಸಿದ ಬಾಳೆ ಕಂಬವನ್ನು ದೇವರು 'ಅಂಬಾಯ್ದು'ಮೇಲೆ ಬನ್ನಿ ಬಂಗಾರಕ್ಕಾಗಿ ಜನರು ಮುಗಿಬೀಳುವ ದೃಶ್ಯವನ್ನು ಇದು ಜ್ಞಾಪಕಕ್ಕೆ ತರುತ್ತದೆ. ಜನರ ಭಕ್ತಿಭಾವಕ್ಕೆ, ಸಡಗರ-ಸಂಭ್ರಮಗಳಿಗೆ ಇದು ಒಳ್ಳೆಯ ಅವಕಾಶ ನೀಡುತ್ತದೆ ಎನ್ನಬಹುದು.

ಜಾತ್ರೆಯ ಸಂದರ್ಭದಲ್ಲಿ ಜನರಲ್ಲಿ ಹೈನುಗಾರಿಕೆಯೇ ಮೊದಲಾದ ವಿವಿಧ ಗೃಹೋದ್ಯೋಗಗಳ ಬಗ್ಗೆ ಪರಿಚಯಿಸುವ, ಮಾಹಿತಿ ನೀಡುವ ಪ್ರದರ್ಶನಗಳು ಏರ್ಪಟ್ಟಿರುತ್ತವೆ. ಉತ್ತಮ ರಾಸುಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವ ಕಾರ್ಯಕ್ರಮಗಳು ಇರುತ್ತವೆ. ಭಿನ್ನ ಅಭಿರುಚಿಯ ಜನ ಸಮೂಹಕ್ಕೆ ತಕ್ಕಂಥ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವುದರಿಂದ ಜನರೆಲ್ಲರೂ ಆಸಕ್ತಿ ಹೊಂದಿ ಇದರಲ್ಲಿ ಭಾಗಿಯಾಗುತ್ತಾರೆ.

ಮೈಸೂರಿನ ಅರಸ ಮುಮ್ಮಡಿ ಕೃಷ್ಣ ರಾಜೇಂದ್ರ ಒಡೆಯರು ಬಾಲಮಹಂತ ಶಿವಯೋಗಿಗಳ ಪ್ರಭಾವಕ್ಕೆ ಒಳಗಾಗಿ ಅವರನ್ನು ತಮ್ಮ ಅರಮನೆಗೆ ಕರೆಸಿಕೊಂಡಿದ್ದು, ಅವರಿಗೆ ರಾಜೋಚಿತ ಉಡುಗೊರೆ ನೀಡಿದ್ದು, ಅವು ಯಾವನ್ನೂ ಒಲ್ಲದ ವಿರಾಗಿ ಅವರ ಒತ್ತಾಯಕ್ಕೆ ಕೇವಲ ಒಂದು ಕುಂಬಳ ಸೊರಟೆಯನ್ನು (ಜಲಪಾತ್ರೆ)ತಂದದ್ದು-ಇವನ್ನು ಚರಿತ್ರೆ ಹೇಳುತ್ತದೆ. ಆ ವರ್ಣಮಯ ಸೊರಟೆ ಈಗಲೂ ಮಠದಲ್ಲಿದೆ. ಅದನ್ನೂ ಮತ್ತು ಶಿವಯೋಗಿಗಳು ಬಳಸುತ್ತಿದ್ದ ಕಡಾವಿಗೆ, ಪೂಜಾ ಸಾಮಾನುಗಳ ವಸ್ತುಪ್ರದರ್ಶನವನ್ನೂ ಸಹ ಏರ್ಪಡಿಸಲಾಗುತ್ತದೆ. ಇದೂ ಕೂಡ ಜನರಿಗೆ ವಿಶೇಷ ಆಕರ್ಷಣೆಯಾಗುತ್ತದೆ.

ಹೆಣ್ಣುಮಕ್ಕಳ ಸಂಘಟನೆ ಹಾಗೂ ಪ್ರತಿಭಾ ಅಭಿವ್ಯಕ್ತಿಗಾಗಿ 'ಅಕ್ಕನ ಬಳಗ' ಸ್ಥಾಪನೆಯಾಗಿದೆ. ಅದರ ಸದಸ್ಯೆಯರು ತಮ್ಮದೇ ಆದ ಕೆಲವು ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಟೈಲರಿಂಗ್, ಕಸೂತಿ ಮೊದಲಾದ ಕರಕುಶಲ ಕಲೆಗಳ ಬಗ್ಗೆ ತರಬೇತಿಯ ಏರ್ಪಾಡೂ ಅಲ್ಲಿ ವ್ಯವಸ್ಥೆಯಾಗಿದೆ. ಮಠದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೆಲ್ಲಾ ಹೆಣ್ಣುಮಕ್ಕಳು ಸಕ್ರಿಯವಾಗಿ ಪಾಲ್ಗೊಂಡು ಅವನ್ನು ಚಂದಗಾಣಿಸುತ್ತಿರುವುದು ಮೆಚ್ಚತಕ್ಕ ವಿಷಯವಾಗಿದೆ.

ಯುವಕರ ಚಟುವಟಿಕೆಗಳಿಗೆ ಇಂಬುಗೊಡಲು ಯುವ ಸಂಘಟನೆಗೆ ಅವಕಾಶ ನೀಡಲಾಗಿದೆ. 'ಬಾಲಲೀಲಾ ಶಿವಯೋಗಿ ತರುಣಸಂಘ' ಸ್ಥಾಪನೆಯಾಗಿದೆ. ಅವರ ಕಲಾಭಿವ್ಯಕ್ತಿಗೆ, ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ನೀಡುವಂಥ ಆಟಪಾಟ ಸ್ಪರ್ಧೆಗಳನ್ನು ನಡೆಸಿ ಸೂಕ್ತ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುವ ಕೆಲವು ವಿಧಾಯಕ ಕಾರ್ಯಕ್ರಮಗಳನ್ನು ಶ್ರೀಮಠದ ವ್ಯವಸ್ಥಾಪಕ ಮಂಡಳಿ ಪೂಜ್ಯರ ಸದಿಚ್ಛೆಯಂತೆ ನಡೆಸುತ್ತಾ ಬರುತ್ತಿದೆ.

ಶ್ರೀಮಠದಲ್ಲಿ ಬಾಲಲೀಲಾ ಮಹಂತ ಶಿವಯೋಗಿಗಳ ಗ್ರಂಥಮಾಲೆಯೊಂದನ್ನು ಆರಂಭಿಸಲಾಗಿದ್ದು ಅದರ ಮೂಲಕ ಅನೇಕ ಉಪಯುಕ್ತ ಪ್ರಕಟಣೆಗಳು ಹೊರಬಂದಿವೆ. ಶ್ರೀ ಬಾಲಲೀಲಾ ಮಹಂತ ಶಿವಯೋಗಿಗಳ ಹಾಡುಗಳ ಸಂಕಲನ 'ಕೈವಲ್ಯಪದ್ಧತಿ', ಅವರನ್ನು ಕುರಿತ ಪುರಾಣ 'ಬಾಲಲೀಲಾ ಮಹಂತ ಶಿವಯೋಗಿಗಳ ಪುರಾಣ', ಅವರ ದಿವ್ಯ ನೆನಪಿನ ಸಂಪುಟ'ವೈರಾಗ್ಯದಲರು', ಅವರ ಜೀವನ ಚರಿತ್ರೆ 'ಬಾಲ ಮಹಂತ' ಮೊದಲಾದ ಕೃತಿಗಳು ಆ ಮಾಲೆಯಲ್ಲಿ ಅರಳಿವೆ. ಶಿವಯೋಗಿಗಳ ಸುಪ್ರಭಾತ, ಅದರ ಧ್ವನಿಸುರಳಿಗಳೂ ಸಹ ಹೊರಬಂದಿವೆ. ಇಂಥ ಸಾಹಿತ್ಯ ಕೃತಿಗಳ ಪ್ರಕಟಣೆಯಿಂದಾಗಿ, ಧ್ವನಿಸುರುಳಿಯಿಂದಾಗಿ ಶ್ರೀಮಠದ ಕೀರ್ತಿ ಎಲ್ಲೆಡೆ ಹಬ್ಬಿ ಅದರ ಕೀರ್ತಿ ಹೆಚ್ಚಿದೆ. ಶ್ರೀಮಲ್ಲಿಕಾರ್ಜುನ ಸ್ವಾಮಿಗಳು ಮಠಾಧ್ಯಕ್ಷರಾಗಿ ಬಂದ ನಂತರ ಶ್ರೀಮಠದ ಸೇವಾ ಆಯಾಮ ಹೆಚ್ಚಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕೊಡುಗೆಯನ್ನು ನಿರೀಕ್ಷಿಸಬಹುದಾಗಿದೆ.

ಉತ್ತರ ಕರ್ನಾಟಕದಲ್ಲಿ ಸರ್ಕಾರ ಶೈಕ್ಷಣಿಕ ಸಂಸ್ಥೆಗಳ ವ್ಯವಸ್ಥೆಗೆ ಕೈ ಹಚ್ಚಿದ್ದು ಅಪರೂಪ. ಖಾಸಗಿಯವರೇ ಇದನ್ನು ಸೇವಾಮನೋಭಾವದಿಂದ ನಡೆಸುತ್ತಾ ಬಂದಿರುವುದು ಸರ್ವವಿದಿತ. ಈ ನಿಟ್ಟಿನಲ್ಲಿ ಮಠಗಳ ಪಾತ್ರ ಅನನ್ಯವಾದುದು. ಮಠಗಳು ಜನತಾ ಶಿಕ್ಷಣ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳದಿದ್ದರೆ ಆ ಭಾಗದ ನಾಡು ಅಜ್ಞಾನದ ಕತ್ತಲಲ್ಲಿ ಮುಳುಗಿರಬೇಕಾಗುತ್ತಿತ್ತು. 'ಮಠ'ಗಳು ಓದಿಸುವ, ಬರೆಸುವ ಮಠಗಳೂ ಆಗಿದ್ದವು. ಜನರನ್ನು ಸಾಕ್ಷರರನ್ನಾಗಿ ಮಾಡುವಲ್ಲಿ ಅವು ವಹಿಸಿದ ಪಾತ್ರ ಎಷ್ಟು ಮಹತ್ತದ್ದು ಎನ್ನುವುದಕ್ಕೆ ಈ ಗವಿಮಠವೂ ಸಹ ಸಾಕ್ಷಿ ಹೇಳುತ್ತದೆ.

ಬಹು ಹಿಂದೆಯೇ ಶ್ರೀಮಠದ ಆಶ್ರಯದಲ್ಲಿ 'ಬಾಲಮಹಂತ ಶಿವಯೋಗಿ ಶಿಕ್ಷಣ ಸಮಿತಿ'ಯೊಂದು ಸ್ಥಾಪಿಸಲ್ಪಟ್ಟಿತು. ಅದು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಹರಿಸಿತು. ಗದಗ ತಾಲ್ಲೂಕಿನಲ್ಲಿಯೇ ಇದು ಮೊದಲ

ಪ್ರಯತ್ನವೆನ್ನಬಹುದು. ೧೯೪೨ರಲ್ಲೇ ಹೈಸ್ಕೂಲನ್ನು ಸ್ಥಾಪಿಸಿದ ಕೀರ್ತಿ ಶ್ರೀಮಠದ ಶಿಕ್ಷಣ ಸಂಸ್ಥೆಯದು. ಈಗ ಅಲ್ಲಿ ನರ್ಸರಿ, ಪ್ರೈಮರಿ ಶಾಲೆಗಳಿಂದ ಹಿಡಿದು ಪ್ರಥಮ ದರ್ಜೆ ಕಾಲೇಜು, ತಾಂತ್ರಿಕ ಶಿಕ್ಷಣ ಸಂಸ್ಥೆ ಮೊದಲಾದ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಸರ್ಕಾರದ ನೆರವಿಲ್ಲದ ಕಾಲದಲ್ಲಿ ಆ ಭಾಗದ ಮಕ್ಕಳ ಶಿಕ್ಷಣಕ್ಕಾಗಿ ಶ್ರೀ ಮಠವು ಕೈಕೊಂಡ ಕಾರ್ಯವು ನಿಜಕ್ಕೂ ಶ್ಲಾಘನೀಯವೇ ಸರಿ.

ವೀರಶೈವ ಮಠಗಳು ಬಡಮಕ್ಕಳ ಹೊಟ್ಟೆ-ನೆತ್ತಿಗಳ ಬಗ್ಗೆ ಕಾಳಜಿ ವಹಿಸುತ್ತಾ ಬಂದಿರುವುದು ಸರ್ವೇ ಸಾಮಾನ್ಯ. ಶ್ರೀ ಗವಿಮಠವು ಇದಕ್ಕೆ ಹೊರತಾಗಿಲ್ಲ. ಇದೂ ಒಂದು ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿದ್ದು ಅದರಲ್ಲಿ ಸುಮಾರು ೮೦ ರಿಂದ ೧೫೦ ವಿದ್ಯಾರ್ಥಿಗಳಿಗೆ ಅಶನ, ವಸತಿಗಳ ಏರ್ಪಾಟಿದೆ. ಮೇಲ್ಮಠದ ಬಳಿ ಒಂದು ಹಾಸ್ಟಲ್ ಕಟ್ಟಡ ಕೂಡ ನಿರ್ಮಾಣವಾಗಿದೆ.

ಶ್ರೀಮಠವು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ದಿಸೆಯಲ್ಲಿ ಹಲವಾರು ಸೇವೆಗಳನ್ನು ಯಶಸ್ವಿಯಾಗಿ ನಡೆಸಿದೆ. ಅದು ಅನೇಕ ವೈದ್ಯಕೀಯ ಶಿಬಿರಗಳನ್ನು ನಡೆಸಿದೆ. ಉಚಿತ ವೈದ್ಯಕೀಯ ತಪಾಸಣೆ, ಕಣ್ಣುಗಳ ಪರೀಕ್ಷೆ ಮತ್ತು ಔಷಧೋಪಚಾರ ಸೇವೆ ಒದಗಿಸಿದೆ. ಮುಳುಗುಂದದ ಸುತ್ತಮುತ್ತಣ ಹಳ್ಳಿಯ ಜನರು ಇದರ ಪ್ರಯೋಜನವನ್ನು ಪಡೆದಿದ್ದಾರೆ.

ಶ್ರೀಮಠವು ಜನರ ದೇಹಾರೋಗ್ಯದ ಬಗ್ಗೆ ಕಾಳಜಿ ವಹಿಸಿದಂತೆಯೇ ಅವರ ಒಳಗಣ್ಣು ತೆರೆಸುವ, ಅವರ ಮಾನಸಿಕ ಆರೋಗ್ಯವನ್ನು ಕಾಪಾಡುವ ಕಾಳಜಿಯನ್ನೂ ಹೊಂದಿದೆ. ಜನರ ದುಶ್ಚಟಗಳ ನಿವಾರಣೆಗಾಗಿ ಆಂದೋಲನವನ್ನು ನಡೆಸಿದೆ. ಕುಡಿತ, ಜೂಜು ಮೊದಲಾದ ಕೆಟ್ಟಚಟಗಳ ದಾಸರಾಗಿರುವ ಅನೇಕ ಜನರನ್ನು ವಿಮುಕ್ತಿಗೊಳಿಸಿದ ಕೀರ್ತಿ ಶ್ರೀಮಠದ್ದು. ಇಂಥ ಹಲವಾರು ಸಮಾಜೋ-ಧಾರ್ಮಿಕ ಕಾರ್ಯಗಳಿಂದ ಶ್ರೀ ಗವಿಮಠವು ಜನಮನದಲ್ಲಿ ಸದಾ ಹಸಿರಾಗಿ ಉಳಿಯುವಂತಾಗಿದೆ; ಆ ಭಾಗದ ಜನರಿಗೆ ವರಪ್ರದವೆನಿಸಿದೆ ಎಂದರೆ ಅತಿಶಯವೆನಿಸುವುದಿಲ್ಲ.

ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಕೊಡುಗೆ

ಡಾ. ಬಸವರಾಜ ಮಲಶೆಟ್ಟಿ

ಕರ್ನಾಟಕದ ಪ್ರಮುಖ ವೀರಶೈವ ಮಠಗಳಲ್ಲಿ ಹೊಸಪೇಟೆಯ ಶ್ರೀ ಕೊಟ್ಟೂರುಸ್ವಾಮಿ ಮಠವೂ ಒಂದು. ಈ ಮಠದ ಹೆಸರು ಕೇಳಿದಕೂಡಲೆ ಇದೇ ಬಳ್ಳಾರಿ ಜಿಲ್ಲೆಯಲ್ಲಿರುವ ಕೊಟ್ಟೂರು ಕ್ಷೇತ್ರದ ನೆನಪಾಗುವುದು ಸಹಜ. ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿದ್ದ ಬಸವೇಶ್ವರರ ಕಾರ್ಯಕ್ಷೇತ್ರವಾಗಿದ್ದ ಕೊಟ್ಟೂರಿಗೂ ಹೊಸಪೇಟೆಯ ಕೊಟ್ಟೂರು ಸ್ವಾಮಿ ಮಠಕ್ಕೂ ಯಾವುದೇ ಸಂಬಂಧವಿಲ್ಲ.

ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠಕ್ಕೆ ಹಂಪಿ ಮತ್ತು ಬಳ್ಳಾರಿಗಳಲ್ಲಿ ಪ್ರಮುಖ ಶಾಖಾಮಠಗಳಿದ್ದು - ದರೂರು, ಸಿರಿಗೆರೆ, ಕುರುಗೋಡು, ಕುಡಿತಿನಿ, ಸೋಮಸಮುದ್ರ ಮುಂತಾದೆಡೆ ಅಸ್ತಿತ್ವದಲ್ಲಿರುವ ಶಾಖಾಮಠಗಳು ಗಮನಾರ್ಹವಾಗಿವೆ. ಒಂದು ಕಾಲಕ್ಕೆ ನೂರಾರು ಶಾಖಾ ಮಠಗಳನ್ನು ಹೊಂದಿದ್ದ ಕೊಟ್ಟೂರುಸ್ವಾಮಿ ಮಠ ಈ ಪ್ರದೇಶದ ಜನತೆಯ ಕಲ್ಯಾಣಕ್ಕೆ ಯಥಾಶಕ್ತಿ ಪ್ರಯತ್ನಿಸುತ್ತಲೇ ಬಂದಿದೆ.

ಕೊಟ್ಟೂರುಸ್ವಾಮಿ ಮಠದ ಮೂಲ ಪುರುಷರು ಶ್ರೀ ಕಪ್ಪಿನ ಚೆನ್ನಬಸವ ಮಹಾಸ್ವಾಮಿಗಳವರು (ಕ್ರಿ.ಶ. ೧೫೧೮). ಇವರು ಭರತಖಂಡವನ್ನೆಲ್ಲ ಸಂಚರಿಸಿ ಧರ್ಮಜಾಗೃತಿ ಮಾಡಿದ ವಿವರಗಳು ಮಠದ ದಾಖಲೆಗಳಲ್ಲಿವೆ. ಅಂದಿನ ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ ಅವರು ಸನ್ಮಾನಿತರಾದರು. ಅವರ ಶಿಷ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಶಿವಯೋಗದ ಪ್ರಭಾವವನ್ನು ಕಂಡು ಪ್ರಭಾವಿತನಾದ ಬಳ್ಳಾರಿಯ ದೊರೆ ಬಾಲ ಹನುಮಪ್ಪನಾಯಕನು ಕೊಟ್ಟೂರುಸ್ವಾಮಿ ಮಠಕ್ಕೆ ಅನೇಕ ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ಮುಂದಿನ ಶ್ರೀ ಮರಿಕೊಟ್ಟೂರು ಸ್ವಾಮಿಗಳಿಗೆ ಕ್ರಿ.ಶ. ೧೭೧೭ರಲ್ಲಿ ಬಳ್ಳಾರಿಯ ಹಂಡೆ ಹಿರೆರಾಮಪ್ಪನಾಯಕ, ಶ್ರೀ ಮರಿ ತೋಂಟದ ಸ್ವಾಮಿಗಳಿಗೆ ಕ್ರಿ.ಶ. ೧೭೨೬ ರಲ್ಲಿ ಗುಡೇಕೋಟೆಯ ಹಿರೆಬೊಮ್ಮಪ್ಪರಾಜ ಮುಂತಾದವರು ದತ್ತಿ ನೀಡಿದ್ದಾರೆ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ವೀರಶೈವ ಧರ್ಮ ಪರಂಪರೆಯನ್ನು ಉಳಿಸಿಕೊಂಡು ಬಂದ ಶ್ರೇಯಸ್ಸು ಕೊಟ್ಟೂರು ಸ್ವಾಮಿ ಮಠಕ್ಕೆ ಸಲ್ಲುತ್ತದೆ.

ಈ ಮಠದ ೧೮ನೇ ಅಧಿಪತಿಗಳಾಗಿದ್ದ ಶ್ರೀ ಕೊಟ್ಟೂರುಸ್ವಾಮಿಗಳು ಮುಗ್ಧರೂ ಉದಾರಿಗಳೂ ವಾಕ್‌ಸಿದ್ಧಿಪುರುಷರೂ ಆಗಿದ್ದರು. ಅವರು ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ೪೬೩ ಎಕರೆ ಜಮೀನನ್ನು ದಾನವಾಗಿ ನೀಡಿ 'ಶ್ರೀ ಕೊಟ್ಟೂರುಸ್ವಾಮಿ ಶಿಕ್ಷಣ ಮಹಾವಿದ್ಯಾಲಯ'ದ ಉಗಮಕ್ಕೆ ಕಾರಣರಾದರು. ಅವರ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡ ಸ್ವಾರ್ಥಿಗಳು ಮಠದ ಆಸ್ತಿಯನ್ನು ಲಪಟಾಯಿಸಿದರು. ಆಡಳಿತದಲ್ಲಿಯ ಶಿಥಿಲತೆಯಿಂದಾಗಿ ಸಾಲಸೋಲಗಳಲ್ಲಿ ಸಿಲುಕಿ ಪರಿತಪಿಸುವಂತಾಯಿತು.

ಕೊಟ್ಟೂರುಸ್ವಾಮಿ ಮಠಕ್ಕೆ ೧೯ನೇ ಅಧಿಪತಿಗಳಾಗಿ ಇಂದಿನ ಜಗದ್ಗುರು ಶ್ರೀ ಸಂಗನಬಸವ ಮಹಾಸ್ವಾಮಿಗಳವರು ೧೯೭೨ ರಲ್ಲಿ ಅಧಿಕಾರ ವಹಿಸಿಕೊಂಡರು. ಅಂದಿನಿಂದ ಮಠದ ಸ್ವರೂಪವೇ ಬೇರೆಯಾಯಿತು. ಶಿವಯೋಗಮಂದಿರ ಹಾಗೂ ಬನಾರಸಿಗಳಲ್ಲಿ ಶಿಕ್ಷಣ ಪಡೆದಿರುವ ಶ್ರೀ ಸಂಗನಬಸವ ಮಹಾಸ್ವಾಮಿಗಳವರು ತತ್ವಶಾಸ್ತ್ರ, ಸಂಸ್ಕೃತ, ಹಿಂದಿ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ಅಪಾರ ಕರ್ತೃತ್ವಶಕ್ತಿ, ಕಾಯಕ ನಿಷ್ಠೆ, ನಿಸ್ವಾರ್ಥ ಸೇವಾಭಾವನೆ, ನಿಷ್ಠುರ ಪ್ರಾಮಾಣಿಕತೆಗಳಿಂದಾಗಿ ಅವರು ಅಪರೂಪದ ಸ್ವಾಮಿಗಳೆನಿಸಿದ್ದಾರೆ. ಅವರು ಸಮಕಾಲೀನ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ ಅಪೂರ್ವವಾದುದು.

ಶ್ರೀ ಸಂಗನಬಸವ ಮಹಾಸ್ವಾಮಿಗಳು ವಹಿಸಿಕೊಂಡ ಕೊಟ್ಟೂರುಸ್ವಾಮಿ ಮಠದ ಅಧಿಕಾರಪೀಠ ಮುಳ್ಳಿನ ಹಾಸಿಗೆಯಾಗಿತ್ತು. ಆಸ್ತಿಗೆ ಸಂಬಂಧಿಸಿದಂತೆ ನೂರೆಂಟು ತರಲೆ ತಕರಾರುಗಳು, ಕೋರ್ಟಿನಲ್ಲಿದ್ದ ಹಲವು ವ್ಯಾಜ್ಯಗಳು ಅವರ ಧೀಶಕ್ತಿಯನ್ನು ಅಲ್ಲಾಡಿಸಿದವು. ಅವರು ಪೀಠಕ್ಕೆ ಬರುವುದಕ್ಕೂ ಕರ್ನಾಟಕದಲ್ಲಿ ಭೂಸುಧಾರಣಾ ಕಾಯ್ದೆ ಜಾರಿಗೆ ಬರುವುದಕ್ಕೂ ಸರಿಯಾಯಿತು. ಮಠದ ಸಾವಿರಾರು ಎಕರೆ ಜಮೀನು ಕೈಬಿಟ್ಟುಹೋಗುವ ಪರಿಸ್ಥಿತಿಯುಂಟಾಯಿತು. ಆದರೆ ಶ್ರೀ ಸಂಗನಬಸವ ಮಹಾಸ್ವಾಮಿಗಳವರು ಧೈರ್ಯಗುಂದದೆ ಎಲ್ಲ ಸಮಸ್ಯೆಗಳನ್ನು ಒಂದು ಆಹ್ವಾನವೆಂಬಂತೆ ಎದುರಿಸಿದರು. ಜಾಣಾಕ್ಷತನ ಹಾಗೂ ಸ್ನೇಹಪರ ನಡವಳಿಕೆಗಳಿಂದ ಎಲ್ಲ ಸಮಸ್ಯೆಗಳನ್ನು ಎದುರಿಸಿ ಸೂಕ್ತ ಪರಿಹಾರ ಕಂಡುಕೊಂಡರು. ಸ್ವತಃ ಅವರೇ ತಿಂಗಳಾನುಗಟ್ಟಲೆ ಹೊಲಗಳಲ್ಲಿ ವಾಸ್ತವ್ಯ ಮಾಡಿ ನೂರಾರು ಎಕರೆ ಜೀಳು ಭೂಮಿಯನ್ನು ಕೃಷಿಗೆ ಯೋಗ್ಯವಾಗುವಂಥ ಜಮೀನಾಗಿ ಪರಿವರ್ತಿಸಿದರು.

ಈ ತರದ ನಿರಂತರ ಪ್ರಾಮಾಣಿಕ ಪ್ರಯತ್ನದಿಂದಾಗಿ ಮಠಕ್ಕೆ ನಿರ್ದಿಷ್ಟವಾದ ಆದಾಯವನ್ನು ರೂಢಿಸಿದರು.

ಶ್ರೀಸಂಗನಬಸವ ಮಹಾಸ್ವಾಮಿಗಳವರು ಅಧಿಕಾರ ವಹಿಸಿಕೊಂಡಕೂಡಲೇ ಹಲವು ಹತ್ತು ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡರು. ಮುಖ್ಯವಾಗಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಕೊಟ್ಟೂರುಸ್ವಾಮಿ ಮಠದ ಅಸ್ತಿತ್ವವನ್ನು ಸಾರ್ವಜನಿಕರಿಗೆ ಪರಿಚಯಿಸಿದರು. ಅವರು ಮೊದಲು ಕೈಕೊಂಡ ಕೆಲಸವೆಂದರೆ ಬಸವಸಂದೇಶಯಾತ್ರೆ. ಒಂದು ದಿನಕ್ಕೆ ಎರಡರಂತೆ ನೂರಾರು ಹಳ್ಳಿಗಳನ್ನು ಸಂಚರಿಸಿ ಬಸವತತ್ವವನ್ನು ಪ್ರಸಾರಮಾಡಿದರು. ಪ್ರವಚನಕಾರರ ಸಂಗೀತಗಾರರ ತಂಡದೊಂದಿಗೆ ಗ್ರಾಮಾಂತರ ಪ್ರದೇಶದಲ್ಲಿ ಬಸವತತ್ವಗಳನ್ನು ಪರಿಚಯಿಸುವ ಅರ್ಥಪೂರ್ಣ ಕಾರ್ಯಕ್ರಮ ಅದಾಗಿತ್ತು. ಪ್ರತಿಷ್ಠಿತ ಮಠದ ಮಹಾಸ್ವಾಮಿಗಳವರೊಬ್ಬರು ತಾವಾಗಿಯೇ ತಮ್ಮ ಹಳ್ಳಿಗೆ ಬಂದುದು ಹಾಗೂ ವಾತ್ಸಲ್ಯದಿಂದ ಕಷ್ಟಸುಖವಿಚಾರಿಸಿ ಉಪಯುಕ್ತ ಸಲಹೆಸೂಚನೆ ನೀಡಿದುದು ಗ್ರಾಮೀಣ ಜನತೆಗೆ ಅಪರೂಪದ ಅನುಭವ ನೀಡಿತು.

೧೯೭೩ರಲ್ಲಿ ಹಂಪಿಯ ಜಾತ್ರೆಯ ಸಂದರ್ಭದಲ್ಲಿ ಹಂಪೆಯಲ್ಲಿ ತುಂಗಭದ್ರೆಯ ದಡದಲ್ಲಿರುವ ಕೊಟ್ಟೂರುಸ್ವಾಮಿ ಮಠದಲ್ಲಿ ಮಹಾಕವಿ ಹರಿಹರನ ಬಗ್ಗೆ ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಸಿದರು. ಈ ವಿಚಾರ ಸಂಕಿರಣದಲ್ಲಿ ನಾಡಿನ ಗಣ್ಯ ವಿದ್ವಾಂಸರು ಪ್ರಬಂಧ ಮಂಡಿಸಿದರು. ಈ ಪ್ರಬಂಧಗಳನ್ನು ಒಟ್ಟುಗೂಡಿಸಿ, "ರಸಿಕಚಕ್ರಿ ಹರಿಹರ" (ಸ: ಡಾ. ಟಿ.ಸಿ. ಜವಳಿ, ಪ್ರಿ. ಶಾಂತರಸ) ಎಂಬ ಗ್ರಂಥ ಪ್ರಕಟಿಸಲಾಗಿದೆ. ಅನೇಕ ಅಧ್ಯಯನ ಪೂರ್ಣ ಪ್ರಬಂಧಗಳನ್ನೊಳಗೊಂಡಿರುವ ಈ ಗ್ರಂಥವು ಹರಿಹರ ಕವಿಯ ಅಧ್ಯಯನಕ್ಕೆ ಅಪರೂಪದ ಆಕರ ಗ್ರಂಥವಾಗಿದೆ. ಈ ವಿಚಾರ ಸಂಕಿರಣವು ಹರಿಹರನ ಕೃತಿಗಳ ಪ್ರಕಟಣೆಗೆ ಪ್ರೇರಣೆಯಾಯಿತು. ಮುಂದೆ ಪ್ರತಿವರ್ಷ ಹಂಪಿಯ ಜಾತ್ರೆಯಲ್ಲಿ ಹರಿಹರನ ರಗಳೆಗಳ ಸಂಕಲನಗಳನ್ನು ಪ್ರಕಟಿಸುವ ಪರಂಪರೆಯನ್ನು ನಡೆಸಿಕೊಂಡು ಬರಲಾಯಿತು. ಈ ಸಂಕಲನಗಳ ಪ್ರಕಟಣೆಗೆ ಪ್ರೊ.. ಸಂ.ಶಿ. ಭೂಸನೂರಮಠ ಅವರ ಮಾರ್ಗದರ್ಶನ ಲಭ್ಯವಾದುದು ಒಂದು ಯೋಗಾಯೋಗ. ಕೊಟ್ಟೂರುಸ್ವಾಮಿ ಮಠದಲ್ಲಿ ಏರ್ಪಡಿಸಿದ ಶ್ರೀ ಅರವಿಂದರ ಶತಮಾನೋತ್ಸವ ಸ್ಮರಣೆ ಹಾಗೂ ಶ್ರೀ ಜಯಪ್ರಕಾಶ ನಾರಾಯಣ ಅವರನ್ನು ಕುರಿತ ವಿಚಾರಸಂಕಿರಣಗಳು ತುಂಬಾ ಯಶಸ್ವಿಯಾಗಿ ನಡೆದು ಮಠದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದವು.

ಹಂಪಿಯ ಜಾತ್ರೆಯ ಸಂದರ್ಭದಲ್ಲಿ ಅಲ್ಲಿಯ ಮಠದಲ್ಲಿ ದಾಸೋಹದ ವ್ಯವಸ್ಥೆ ಮಾಡಲಾಯಿತು. ಪುಸ್ತಕ ಪ್ರಕಟಣೆ ವಿಚಾರ ಸಂಕಿರಣಗಳ ಜ್ಞಾನದಾಸೋಹ ಮತ್ತು ಪ್ರಸಾದ ದಾಸೋಹ ಎರಡೂ ಭರ್ಜರಿಯಾಗಿ ನಡೆಯುವಂತೆ ಶ್ರೀ ಸಂಗನಬಸವ ಮಹಾಸ್ವಾಮಿಗಳು ಪ್ರಯತ್ನಿಸಿದ್ದಾರೆ. ಇವೆರಡರ ಜೊತೆಗೆ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿದರು. ಇಲ್ಲಿಯವರೆಗೆ ಸಾವಿರಕ್ಕೂ ಮಿಕ್ಕ ಇಂಥ ಉಚಿತ ವಿವಾಹಗಳನ್ನು ನಡೆಸಿಕೊಡಲಾಗಿದೆ. ಈ ವಿವಾಹಗಳಲ್ಲಿ ವೀರಶೈವೇತರ ಪಂಗಡಗಳ ವಿವಾಹಗಳ ಸಂಖ್ಯೆಯೇ ಹೆಚ್ಚಾಗಿರುವುದು ಒಂದು ವಿಶೇಷ. ಪರಿಶಿಷ್ಟ ಜಾತಿ ಪಂಗಡಗಳನ್ನು. ಮೊದಲು ಮಾಡಿಕೊಂಡು ವೀರಶೈವರವರೆಗೆ ಎಲ್ಲ ಜಾತಿಯ ಲಗ್ನಗಳು ಇಲ್ಲಿ ನಡೆಯುತ್ತವೆ. ಎಲ್ಲರಿಗೂ ಸಮಾನ ವೇದಿಕೆ, ಸಮಾನ ವಿಧಿ ವಿಧಾನಗಳು, ಜಾತಿ ಬೇಧವಿಲ್ಲದೆ ನಡೆಯುವ ಈ ಸಾಮೂಹಿಕ ವಿವಾಹ ಮಹೋತ್ಸವ, ಮದುವೆಯ ಖರ್ಚಿಗಾಗಿ ಪರದಾಡುವಂಥ ಬಡವರಿಗೆ ಒಂದು ವರದಾನವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಈ ಸಾಮೂಹಿಕ ವಿವಾಹ ಕಾರ್ಯಕ್ರಮ ಹೊಸಪೇಟೆ ಮಠಕ್ಕೆ ವರ್ಗಾವಣೆಯಾಗಿದೆ. ಬಸವ ಜಯಂತಿಯಂದು ನಡೆಸಲಾಗುವ ಜಾತಿಬೇಧವಿಲ್ಲದ ಸಾಮೂಹಿಕ ವಿವಾಹಗಳು ಜಾತಿಯ ಕಟ್ಟಳೆಗಳನ್ನು ಕಿತ್ತೊಗೆದ ಮಹಾತ್ಮಾ ಬಸವಣ್ಣನ ಸ್ಮರಣೆಗೆ ಅರ್ಥಪೂರ್ಣ ಕೊಡುಗೆಯಾಗಿದೆ.

೧೯೭೩ ರಲ್ಲಿ ಭೀಕರ ಬರಗಾಲ ಬಿದ್ದ ಸಂದರ್ಭದಲ್ಲಿ ಶ್ರೀ ಸಂಗನಬಸವ ಮಹಾಸ್ವಾಮಿಗಳವರು ಬೀದರ ಜಿಲ್ಲೆಯ ಮಂಟಾಳ ಮತ್ತು ಹಾಲುಕೇಡು ಗ್ರಾಮಗಳಲ್ಲಿ ಗಂಜಿ ಕೇಂದ್ರ ಮತ್ತು ಮೇವಿನ ಬ್ಯಾಂಕ್ ತೆರೆದು ಮಾನವೀಯ ಅನುಕಂಪ ಮೆರೆದಿದಾ ರೆ.

'ಬಸವ ಪುರಾಣ ಪ್ರವಚನ' ಕಾರ್ಯಕ್ರಮ ವಿನೂತನವಾದುದು. ಶ್ರೀ ಸಂಗನಬಸವ ಮಹಾಸ್ವಾಮಿಗಳು ಪರಂಪರಾಗತ ಪುರಾಣ ಪ್ರವಚನ ಶ್ರವಣ ವಿಧಾನಕ್ಕೆ ಹೊಸ ಆಯಾಮ ಕಲ್ಪಿಸಿದರು. ಪುರಾಣ ಪ್ರವಚನ -ಶ್ರವಣಕ್ಕೆ ಕೇವಲ ಮುಗ್ಧ ಭಕ್ತಿಯೊಂದೇ ಸಾಲದು. ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ವೈಚಾರಿಕ ದೃಷ್ಟಿಕೋನ ಅವಶ್ಯವೆಂಬುದನ್ನು ಅವರು ಮನಗಂಡರು. ೧೯೮೩ ರಲ್ಲಿ ಮೊದಲ ಬಾರಿಗೆ ಹೊಸಪೇಟೆಯಲ್ಲಿ ಬಸವ ಪುರಾಣ ಪ್ರಾರಂಭಿಸಿದಾಗ ಜನ ಆಶ್ಚರ್ಯಚಕಿತರಾದರು. ಸುಮಾರು ಮೂರು ತಿಂಗಳ ಕಾಲ ನಡೆದ ಈ ಬಸವ ಪುರಾಣದ ಮುಖ್ಯ ವೈಶಿಷ್ಟ್ಯವೆಂದರೆ ಬಸವ ಪ್ರಸಾದ ವಿನಿಯೋಗ. ಇದೊಂದು ಅದ್ಭುತವಾದ ಕ್ರಿಯೆ. ಹೊಸಪೇಟೆಯಲ್ಲಿರುವ ಎಲ್ಲ ಜಾತಿಯವರನ್ನೂ ಮನೆ ಮನೆಗೆ ಹೋಗಿ ಮಠದ ವತಿಯಿಂದ ಆಮಂತ್ರಿಸಲಾಗುತ್ತಿತ್ತು. ಅವರು ಬಸವ ಪುರಾಣ ಕೇಳಿ ನಂತರ ಬಸವ ಪ್ರಸಾದ ಸ್ವೀಕರಿಸಿ ಹೋಗುತ್ತಿದ್ದರು. ಹೀಗೆ ಬಂದವರಲ್ಲಿ ವೀರಶೈವೇತರ

ಜನಾಂಗದವರೇ ಹೆಚ್ಚು. ಪರಿಶಿಷ್ಟ ಜಾತಿಯವರು ತಮ್ಮ ಜೀವಮಾನದಲ್ಲಿ ಪ್ರಥಮ ಬಾರಿಗೆ ಕೊಟ್ಟೂರುಸ್ವಾಮಿ ಮಠದೊಳಗೆ ಪ್ರವೇಶಿಸಿ ಸ್ವಾಮಿಗಳವರ ದರ್ಶನ ಪಡೆದು ಬಸವ ಪ್ರಸಾದ ಸ್ವೀಕರಿಸಿ ಧನ್ಯರಾದರು. ಮತೀಯ ಸೌಹಾರ್ದತೆಯನ್ನು, ಭಾವೈಕ್ಯತೆಯನ್ನು ಬೆಳೆಸುವ ಈ ಕಾರ್ಯ ಸದ್ದಿಲ್ಲದೆ ನಡೆದು ಸಾರ್ವಜನಿಕರಲ್ಲಿ ಸೋದರತ್ವದ ಭಾವನೆ ಮೂಡಿಸಿತು. ಈ ಸಂದರ್ಭದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಾಗೂ ಜಿಲ್ಲಾ ಮಟ್ಟದ ಭಜನಾ ಸ್ಪರ್ಧೆ ನಡೆಸಲಾಯಿತು. ಪುರಾಣ ಮಂಗಳಕ್ಕೆ ಹೊಂದಿಕೊಂಡಂತೆ ಕೊನೆಯ ದಿನಗಳಲ್ಲಿ ವಿವಿಧ ವಿಷಯ ಕುರಿತು ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ನಾಡಿನ ಹಲವಾರು ಗಣ್ಯ ಮಾನ್ಯರನ್ನು ಗೌರವಿಸಲಾಯಿತು. ಖ್ಯಾತ ಹಿಂದುಸ್ಥಾನಿ ಸಂಗೀತಗಾರ ಶ್ರೀ ಬಸವರಾಜ ರಾಜಗುರು ಅವರನ್ನು ಸತ್ಕರಿಸಿ ಅವರಿಗೆ 'ಇಂಚರ' ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೂರೆಗೊಂಡವು. ಒಟ್ಟಾರೆ ಇದೊಂದು ಅವಿಸ್ಮರಣೀಯ ಸಂದರ್ಭವೆನಿಸಿತು.

ಬಸವ ಪುರಾಣವನ್ನು ಶ್ರೀ ಸಂಗನಬಸವ ಮಹಾಸ್ವಾಮೀಜಿಯವರು ನಿಷ್ಠೆಯಿಂದ ಮುಂದುವರೆಸಿದರು. ನಂತರದ ವರ್ಷಗಳಲ್ಲಿ ಶ್ರೀಧರಗಡ್ಡೆ, ಹಾಲಕೆರೆ, ನರೇಗಲ್ಲ, ದರೂರು ಶಿವಯೋಗ ಮಂದಿರ, ಬಳ್ಳಾರಿ ಮುಂತಾದ ಕಡೆಗೆ ಬಸವ ಪುರಾಣ ಪ್ರವಚನ ಕಾರ್ಯಕ್ರಮಗಳು ಮೊದಲು ಹೊಸಪೇಟೆಯಲ್ಲಿ ನಡೆಸಿದಷ್ಟೇ ಅದ್ದೂರಿಯಿಂದ ನಡೆದವು. ಒಂಭತ್ತನೆಯದು ಶ್ರೀಶೈಲ ಕ್ಷೇತ್ರದಲ್ಲಿ ನಡೆಯಿತು. ಅಲ್ಲಿ ಭೀಮಕವಿಯ ಕನ್ನಡ ಬಸವ ಪುರಾಣ ಹಾಗೂ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣಗಳನ್ನು ಏಕಕಾಲಕ್ಕೆ ವ್ಯವಸ್ಥೆ ಮಾಡಲಾಯಿತು.

ಕೊಟ್ಟೂರುಸ್ವಾಮಿ ಮಠವು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ, ನೀಡುತ್ತಿರುವ ಕೊಡುಗೆ ಗಮನಾರ್ಹವಾದುದು. 'ಹೇಮಕೂಟ' ಎಂಬ ಮಾಸಿಕವನ್ನು ಈ ಮಠ ಹಲವು ವರ್ಷ ಪ್ರಕಟಿಸಿತು. ಇದಕ್ಕೆ ಮೊದಲು ಪಂ.ಜಿ.ಎಂ. ಉಮಾಪತಿ ಶಾಸ್ತ್ರಿಯವರು ನಂತರ ಶ್ರೀ ಜ್ಞಾನದೇವ ದೊಡ್ಡಮೇಟಿಯವರು ಸಂಪಾದಕರಾಗಿದ್ದರು. ಉಪಯುಕ್ತ ಸಂಶೋಧನಾತ್ಮಕ ಲೇಖನಗಳು, ವಿಮರ್ಶಾ ಲೇಖನಗಳು, ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು 'ಹೇಮಕೂಟ'ದಲ್ಲಿ ಪ್ರಕಟವಾಗಿವೆ. ಹರಿಹರನ ರಗಳೆಗಳ ಹಲವು ಸಂಕಲನಗಳನ್ನು ಪ್ರಕಟಿಸಲಾಗಿದೆ. ಪ್ರೊ. ಸಂ.ಶಿ. ಭೂಸನೂರಮಠ ಅವರ ಸಂಪಾದಕತ್ವದಲ್ಲಿ ಪ್ರಕಟಿಸಲಾಗಿರುವ 'ವಿಜಯ ಕಲ್ಯಾಣ'ವು ಮಹತ್ವದ ಆಕರ ಗ್ರಂಥವಾಗಿದೆ. ಪ್ರೌಢದೇವರಾಯನ ಆಡಳಿತ ಹಾಗೂ ಅವನ ಕಾಲಕ್ಕೆ ನಡೆದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಸಾಧನೆಗಳನ್ನು ವಿವರಿಸುವ ಹಲವು ಪ್ರೌಢ ಪ್ರಬಂಧಗಳು ಈ ಸಂಕಲನದಲ್ಲಿವೆ. ಕೊಟ್ಟೂರುಸ್ವಾಮಿ ಮಠದ ಹಂಪಿಯ ಶಾಖೆಯಲ್ಲಿ "ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ" ಸ್ಥಾಪಿಸಲಾಗಿದೆ. ಈ ಕೇಂದ್ರದ ವತಿಯಿಂದ ಪ್ರಕಟಗೊಂಡ ಡಾ. ಬಸವರಾಜ ಮಲಶೆಟ್ಟಿ ಅವರ 'ಹರಿಹರನ ಕೃತಿಗಳ ಪದಕೋಶ'ವು ಹರಿಹರನ ಅಭ್ಯಾಸಿಗಳಿಗೆ ಉಪಯುಕ್ತವೆನಿಸಿದೆ. ಈ ಕೃತಿಗೆ ಕಾವ್ಯಾನಂದ ಪ್ರಶಸ್ತಿ, ಶಿವರಾತ್ರೀಶ್ವರ ದತ್ತಿ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಪ್ರಶಸ್ತಿಗಳು ಲಭ್ಯವಾಗಿವೆ. ಇನ್ನೂ ಹಲವಾರು ಮಹತ್ವದ ಕೃತಿಗಳನ್ನು ಕೊಟ್ಟೂರುಸ್ವಾಮಿ ಮಠವು ಪ್ರಕಟಿಸಿದೆ.

ಮಠ ಮಾನ್ಯಗಳು ಉನ್ನತ ಶಿಕ್ಷಣದತ್ತ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿರುವ ಇಂದಿನ ಸಂದರ್ಭದಲ್ಲಿ ಶ್ರೀ ಸಂಗನಬಸವ ಸ್ವಾಮಿಗಳು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಗಮನ ನೀಡಿದ್ದಾರೆ. ಕೊಟ್ಟೂರುಸ್ವಾಮಿ ಶಿಕ್ಷಣ ಕೇಂದ್ರವು ನಡೆಸುತ್ತಿರುವ 'ಚೆನ್ನಮ್ಮರಾಣಿ ಪ್ರಾಥಮಿಕ ಶಾಲೆಯು' ಹೊಸಪೇಟೆಯ ಮಾದರಿ ಶಾಲೆಯೆನಿಸಿದೆ. ಗ್ರಾಮೀಣ ಯುವಕರು ಸ್ವಯಂ ಉದ್ಯೋಗಿಗಳಾಗಬೇಕೆಂಬ ಉದ್ದೇಶದಿಂದ ನರೇಗಲ್ಲ, ಶಿರಗುಪ್ಪಾ, ಸಿಂಧನೂರುಗಳಲ್ಲಿ ಐಟಿಐ ಸ್ಕೂಲುಗಳನ್ನು ತೆರೆಯಲಾಗಿದೆ.

ಕೊಟ್ಟೂರುಸ್ವಾಮಿ ಮಠದ ಇತ್ತೀಚಿನ ಒಂದು ಯೋಜನೆ ಅನುಕರಣೀಯವೆನಿಸಿದೆ. ಇದು ದತ್ತಕ ಯೋಜನೆ. ಗ್ರಾಮೀಣ ಪ್ರದೇಶದ ಎಲ್ಲ ಜಾತಿಯ ಪ್ರತಿಭಾವಂತ ಬಡ ಮಕ್ಕಳನ್ನು ಮಠಕ್ಕೆ ಸಂಪೂರ್ಣವಾಗಿ ದತ್ತಕ ತೆಗೆದುಕೊಂಡು, ಅವರ ಊಟ, ವಸತಿ ಶಿಕ್ಷಣದ ಜವಾಬ್ದಾರಿ ನಿರ್ವಹಿಸುವ ಈ ಯೋಜನೆ ಅರ್ಥಪೂರ್ಣವಾಗಿದೆ. ಪ್ರಾಥಮಿಕ ಹಂತದ ಈ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರ ಅಭಿರುಚಿ ಹಾಗೂ ಸಾಮರ್ಥ್ಯಗಳಿಗೆ ತಕ್ಕಂತೆ ಉಚ್ಚಶಿಕ್ಷಣ ನೀಡಿ ಅವರಿಗೆ ಉದ್ಯೋಗ ದೊರಕಿಸಿಕೊಡುವುದು ಈ ಯೋಜನೆಯ ಕೊನೆಯ ಗುರಿಯಾಗಿದೆ.

ಹೀಗೆ ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠವು ಶ್ರೀ ಸಂಗನಬಸವ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರಗಳಿಗೆ ತನ್ನದೇ ಆದ ವಿನೂತನ ಶೈಲಿಯ ಸೇವೆ ಸಲ್ಲಿಸುತ್ತಿದೆ.

○

ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠದ ಕೊಡುಗೆ

ಡಾ|| ಡಿ. ಪಿ. ಪರಶಿವಮೂರ್ತಿ

ಬೆಂಗಳೂರಿನ ವಾತಾವರಣವು ಇಂದು ಕಲುಷಿತಗೊಂಡಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಮ್ಮ ಸಂಸ್ಕೃತಿಯನ್ನು ಪ್ರೀತಿಸುವ ಜನರು ಬೆಂಗಳೂರಿನಲ್ಲಾಗುತ್ತಿರುವ ಇತ್ತೀಚಿನ ಬೆಳವಣಿಗೆಗಳು, ಸಂಸ್ಕೃತಿಯ ಮೇಲಾಗುತ್ತಿರುವ ಪ್ರಹಾರಗಳನ್ನು ಗಮನಿಸಿದರೆ ನಮ್ಮ ಕರ್ನಾಟಕದ ಉನ್ನತವಾದ ಸಂಸ್ಕೃತಿ ಅವನತಿಯ ಹಾದಿ ಹಿಡಿದಿರುವುದು ಸಹಿಸಲಾರದ ಸಂಕಟವಾಗಿದೆ. ಇಂತಹ ಉಸಿರು ಕಟ್ಟುವ ವಾತಾವರಣದ ಮಧ್ಯೆ ಮರಳುಗಾಡಿನಲ್ಲಿ ಓಯಸಿಸ್ ಇರುವಂತೆ ಮೆಜೆಸ್ಟಿಕ್ ಪ್ರದೇಶದಲ್ಲಿ ಸರ್ಪಭೂಷಣ ಮಠ ಇದೆ. ಮಠವು ಬಹಳ ಹಿಂದಿನಿಂದಲೂ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದೆ. ಶ್ರೀ ಮಠವು ಕೈಗೊಂಡಿರುವ ಕಾರ್ಯಗಳನ್ನು ಗಮನಿಸಿದರೆ ಎಂತಹವರ ಎದೆಯಲ್ಲೂ ಅಭಿಮಾನ ಹುಟ್ಟುತ್ತದೆ. ಸಾಹಿತ್ತಿಕ, ಧಾರ್ಮಿಕ ಚಟುವಟಿಕೆಗಳಿಂದ ಶ್ರೀಮಠವು ಸಮಾಜಕ್ಕೆ ನೀಡಿರುವ ಕಾಣಿಕೆ ಬಹಳ ವಿಶಿಷ್ಟವಾದುದಾಗಿದೆ; ಇತರೆ ಮಠಗಳಿಗೆ ಮಾದರಿಯಾಗಿ ನಿಂತಿದೆ.

ಶ್ರೀ ಮಠದ ಗುರುಪರಂಪರೆ

ಶ್ರೀ ಮಠವನ್ನು ಹಿಂದೆ ಸಪ್ಪಣ್ಣಸ್ವಾಮಿಗಳ ಮಠ ಎಂದು ಕರೆಯುತ್ತಿದ್ದರು. ದಾಖಲೆಯೊಂದರಲ್ಲಿ ಈ ಮಠವನ್ನು ಕೆರೆ ನಂಜುಂಡಯ್ಯನ ಮಠವೆಂದು ಕರೆಯುತ್ತಿದ್ದಂತೆ ತಿಳಿಸಿದೆ.[1] ಈಗ ಸರ್ಪಭೂಷಣ ಮಠವೆಂದೇ ಜನಜನಿತವಾಗಿದೆ. ಈ ಮಠದ ಸ್ಥಾಪಕರು ಸರ್ಪಭೂಷಣ ಶಿವಯೋಗಿಗಳು. ಇವರು ಸ್ವತಂತ್ರ ಸಿದ್ಧಲಿಂಗೇಶ್ವರರ ಪರಂಪರೆಯವರೆಂದು ದಾಖಲೆಯೊಂದರಿಂದ ತಿಳಿದುಬಂದಿದೆ.[2]

ಸರ್ಪಭೂಷಣರ ತಂದೆ ಮಲ್ಲಿಕಾರ್ಜನಪ್ಪ, ತಾಯಿ ಚೆನ್ನಮ್ಮ. ಇವರು ಬೆಂಗಳೂರಿಗೆ ಸಮೀಪದಲ್ಲಿರುವ ಚಿಕ್ಕಬಾಣಾವರ ಗ್ರಾಮದವರು. ಇದು ಹೆಸರಘಟ್ಟದ ರಸ್ತೆಯಲ್ಲಿ ಬರುತ್ತದೆ. ವ್ಯಾಪಾರಿಗಳಾದ ಇವರಿಗೆ ನಾಲ್ಕುಜನ ಗಂಡುಮಕ್ಕಳು. ಎರಡನೆಯ ಪುತ್ರನಾಗಿ ಸಪ್ಪಣ್ಣನವರು ಕ್ರಿ. ಶ. ೧೭೯೫ ರಲ್ಲಿ ಜನಿಸಿದರು. ಕಾಲಾನಂತರ ವ್ಯಾಪಾರದ ವೃದ್ಧಿಗಾಗಿ ಚಿಕ್ಕಬಾಣಾವರವನ್ನು ಬಿಟ್ಟು ಬೆಂಗಳೂರಿನ ಮಾಮೂಲುಪೇಟೆಗೆ ಬಂದು ನೆಲೆಸಿದರು.

ಸಪ್ಪಣ್ಣನವರಿಗೆ ತಿಪ್ಪಶೆಟ್ಟಿ ಮಠದಲ್ಲಿದ್ದ ಗುರುಸಿದ್ಧಸ್ವಾಮಿಗಳ ಬಳಿ ವಿದ್ಯೆ ಕಲಿಯುವ ಸುಯೋಗ ಪ್ರಾಪ್ತವಾಯಿತು. ಅವರ ಬಳಿ ಶಾಸ್ತ್ರ ವಿದ್ಯೆಗಳನ್ನು ಕಲಿತು ದೇಶಸಂಚಾರ ಕೈಗೊಂಡು ಬೆಂಗಳೂರಿಗೆ ಹಿಂತಿರುಗಿ ಬಂದರು. ಬರುವಾಗ ಶ್ರೀ ಶೈಲದಲ್ಲಿ ದೊರೆತ ಫಾಲಲೋಚನ ಸ್ವಾಮಿಗಳನ್ನು ಕರೆದುಕೊಂಡು ಬಂದರು. ಭಕ್ತರು ಇವರಿಗಾಗಿ ಒಂದು ಮಠವನ್ನು ಕಟ್ಟಲು ಪ್ರಾರಂಭಿಸಿದರು. ಕ್ರಿ. ಶ. ೧೮೩೬ರಲ್ಲಿ ಸರ್ಪಭೂಷಣ ಶಿವಯೋಗಿಗಳು ಲಿಂಗೈಕ್ಯವಾದಾಗ, ಭಕ್ತರು ಫಾಲಲೋಚನ ಸ್ವಾಮಿಗಳನ್ನು ನೂತನ ಮಠದ ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಶ್ರೀ ಮಠಕ್ಕೆ ಸಪ್ಪಣ್ಣನವರ ಮಠವೆಂಬ ಹೆಸರು ಹಾಗೆಯೆ ಮುಂದುವರಿದುಕೊಂಡು ಬಂದಿತು.

ಶ್ರೀಮಠದ ಮುಂದಿನ ಗುರುಪರಂಪರೆಯನ್ನು ಈ ಕೆಳಗಿನಂತೆ ಕಾಣಿಸಬಹುದು:-

ಶ್ರೀ ಸರ್ಪಭೂಷಣ ಶಿವಯೋಗಿಗಳು (೧೭೯೫-೧೮೩೬)

ಶ್ರೀ ಫಾಲಲೋಚನ ಶಿವಯೋಗಿಗಳು (೧೮೪೦ - ೧೮೭೫)

ಶ್ರೀ ಗುರುಸ್ವಾಮಿಗಳು (೧೮೭೮ - ೧೯೨೬)

ಶ್ರೀ ಚೆನ್ನಬಸವಸ್ವಾಮಿಗಳು (?)

---

1. ಶ್ರೀ ಎಸ್. ಶಿವಣ್ಣ; ಸಂಪಾದಕರ ಮಾತು ಕೈವಲ್ಯಕಲ್ಪವಲ್ಲರಿ ; 1995
2 ಶ್ರೀ ಚ ಸುಂದರೇಶನ್. ಪು ೪ ಅಭಿನವ ಅಲ್ಲಮ ; 1972.

ಶ್ರೀ ಬಸವಲಿಂಗಸ್ವಾಮಿಗಳು (೧೯೨೭-೧೯೩೧)

ಶ್ರೀ ಮಹದೇವಸ್ವಾಮಿಗಳು (೧೯೩೨ - ೧೯೬೧)

ಶ್ರೀ ಶಿವಕುಮಾರ ಸ್ವಾಮಿಗಳು (೧೯೬೩ -೧೯೮೫)

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು (೧೯೮೬ ರಿಂದ)

ಹೀಗೆ ಸರ್ಪಭೂಷಣ ಶಿವಯೋಗಿಗಳನ್ನು ಹೊರತುಪಡಿಸಿ ಎಂಟು ಜನ ಸ್ವಾಮಿಗಳ ನೇತೃತ್ವದಲ್ಲಿ ಮಠವು ಸಮಾಜಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಆ ಕೊಡುಗೆಯೇನೆಂಬುದನ್ನು ತಿಳಿಸಿಕೊಡುವ ಒಂದು ಸಣ್ಣ ಪ್ರಯತ್ನವೇ ಈ ಲೇಖನ.

ಸಮಾಜಕ್ಕೆ ಸರ್ಪಭೂಷಣ ಮಠದ ಕೊಡುಗೆಯನ್ನು ಹಲವು ರೀತಿಗಳಲ್ಲಿ ವಿಂಗಡಿಸಬಹುದು.

ವೀರಶೈವ ಸಮಾಜಕ್ಕೆ ಕೊಡುಗೆ

ಸರ್ಪಭೂಷಣ ಮಠವು ವೀರಶೈವ ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರವಾದುದು. ಬೆಂಗಳೂರಿನಲ್ಲಿ ಲಿಂಗವಂತ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಈ ಮಠವು ಅಪಾರವಾದ ಶ್ರಮವನ್ನು ವಹಿಸಿದೆ. ಈ ರೀತಿಯ ಸೇವೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು.

ಸಾಮಾನ್ಯರಿಗಾಗಿ : ಸಾಮಾನ್ಯ ಜನರಿಗಾಗಿ ಮಾಡಿರುವ ಸೇವೆಗಳೇನೆಂದು ಪರಿಶೀಲಿಸಿದಾಗ ಆಶ್ಚರ್ಯವುಂಟಾಗುತ್ತದೆ. ಸಾಮಾನ್ಯ ಜನರನ್ನು ಎಚ್ಚರಿಸಿ, ಅವರು ಮರೆತಿದ್ದ ಶಿವಪೂಜೆ, ಪೂಜಾವಿಧಾನಗಳನ್ನೆಲ್ಲ ಕಲಿಸಿತು. ವೀರಶೈವ ಮಹಾಪುರುಷರ ಬಗೆಗೆ ಸರಳ ಉಪನ್ಯಾಸಗಳನ್ನು ಏರ್ಪಡಿಸಿ, ಅವರ ಜಯಂತಿಗಳನ್ನು, ಉತ್ಸವಗಳನ್ನು ಪ್ರಾರಂಭಿಸಿತು. ಇವುಗಳ ಅಂಗವಾಗಿ ದಾಸೋಹ, ಅದರ ನೆಪದಲ್ಲಿ ಸಮಾಜದ ಎಲ್ಲ ವರ್ಗದ ಜನರನ್ನು ಒಂದುಕಡೆ ಸೇರಿಸುವುದು, ಅವರು ಮಾಡಬೇಕಾದ ನಿಜಕಾರ್ಯಗಳನ್ನು ತೋರುವುದು ಮುಂತಾದ ಅನೇಕ ಚಟುವಟಿಕೆಗಳಿಂದ ಶ್ರೀ ಮಠವು ಕಾರ್ಯಪ್ರವೃತ್ತವಾಯಿತು.

ವಿದ್ಯಾಭ್ಯಾಸ ಪ್ರೋತ್ಸಾಹ ವೀರಶೈವ ಜನಾಂಗದ ಮುಖ್ಯಕಾರ್ಯವಾಗಿದೆ. ಹೀಗೆ ವಿದ್ಯೆಗಾಗಿ ಬೆಂಗಳೂರಿಗೆ ಬರುವ ದೂರದ ಹುಡುಗರಿಗೆ ಮಠವು ವಸತಿ ನೀಡಿದ್ದಲ್ಲದೆ ಊಟದ ವ್ಯವಸ್ಥೆಯನ್ನು ಕೈಗೊಂಡಿತು. ಆರಂಭದಲ್ಲಿ ಕೆಲವರೇ ಇದ್ದರೂ, ಆನಂತರ ಒಂದು ನೂರು ಜನಕ್ಕೆ ವಸತಿ ಮತ್ತು ನಿತ್ಯ ಊಟದ ವ್ಯವಸ್ಥೆಯನ್ನು ಮಾಡಿತು. ಶ್ರೀ ಮಹದೇವಸ್ವಾಮಿಗಳ ಕಾಲದಿಂದಲೂ ಇಂದಿಗೂ ಈ ಕಾರ್ಯ ಎಡೆಬಿಡದೆ ನಡೆಯುತ್ತಿದೆ. ಹಳ್ಳಿ ಹಳ್ಳಿಗಳಲ್ಲಿಯೂ ಮಠದ ಹೆಸರು ರಾರಾಜಿಸಲು ಇದೇ ಕಾರಣ. ಶ್ರೀ ಮಠದ ಮಹಾಕಾರ್ಯ ಇದಾಗಿದೆ.

ಒಂದು ನೂರು ಜನರಿಗೆ ವಸತಿ, ಊಟದ ವ್ಯವಸ್ಥೆಯೆಂದರೆ ಸಾಮಾನ್ಯವಾದ ಮಾತಲ್ಲ. ಅದೂ ಬೆಂಗಳೂರಿನಂತಹ ಮಹಾನಗರದಲ್ಲಿ ಎಂದರೆ ಆಶ್ಚರ್ಯವೇ. ಆದರೂ ಈ ಕಾರ್ಯವನ್ನು ಎಡೆಬಿಡದೆ ಮಠವು ನಡೆಯಿಸಿಕೊಂಡು ಬರುತ್ತಿದೆ. ಇದಕ್ಕೆ ಮಠವು ಪ್ರತಿತಿಂಗಳೂ ಲಕ್ಷಾಂತರ ರೂ.ಗಳನ್ನು ವ್ಯಯಿಸುತ್ತಿದೆ. ಈ ಖರ್ಚಿಗೆ ಆಧಾರವಾಗಿ ೧೯೭೮ ರಲ್ಲಿ ಐವತ್ತು ಅಂಗಡಿಗಳನ್ನು, ೧೯೮೬ ರಲ್ಲಿ ಒಂದು ಅಂಗಡಿ ಮಳಿಗೆಯನ್ನು ಕಟ್ಟಿಸಿ, ಇವುಗಳಿಂದ ಬರುವ ಬಾಡಿಗೆಯ ಹಣದಿಂದ ಈ ಕಾರ್ಯವನ್ನು ನಡೆಸುತ್ತಿದೆ.

ಇಷ್ಟೇ ಅಲ್ಲದೆ ೧೯೯೨-೯೩ ನೇ ಸಾಲಿನಲ್ಲಿ ನಿರುದ್ಯೋಗಿ ವೀರಶೈವ ಬಡಯುವಕರಿಗೆ ವಾಹನ ಚಾಲನಾ ಕಲಿಕಾ ಶಿಬಿರಗಳನ್ನು ನಡೆಸಿತು. ಆದರೆ ಆಡಳಿತ ತೊಂದರೆಯಿಂದ ಈ ಕಾರ್ಯ ಮುಂದುವರಿಯಲಿಲ್ಲ. ಹೀಗೆ ಇನ್ನೂ ಅನೇಕ ರೀತಿಯಲ್ಲಿ ಸರ್ಪಭೂಷಣ ಮಠವು ಸಾಮಾನ್ಯ ಜನರಿಗೆ ಸೇವೆಯನ್ನು ಸಲ್ಲಿಸುತ್ತಿದೆ.

ಇಂದು ಪಿ.ಯು.ಸಿ. ಮತ್ತು ಡಿಪ್ಲೊಮೋ ಹುಡುಗರಿಗೆ ಮಾತ್ರ ಊಟ-ವಸತಿಯನ್ನು ನೀಡುತ್ತಿರುವ ಮಠವು, ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಬೆಳವಣಿಗೆಯಲ್ಲಿ ಹೆಚ್ಚಿನ ಪಾತ್ರ ವಹಿಸಿದೆ. ಈ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು ವ್ಯಾಸಂಗ ಮಾಡಿದ ನೂರಾರು ಜನರು ಇಂದು ಸಮಾಜದಲ್ಲಿ ಗಣ್ಯವ್ಯಕ್ತಿಗಳೆನ್ನಿಸಿಕೊಂಡಿದ್ದಾರೆ.

ವಿದ್ವಾಂಸರಿಗಾಗಿ : ಶ್ರೀ ಮಹದೇವ ಸ್ವಾಮಿಗಳ ಕಾಲದಿಂದಲೂ ಶ್ರೀ ಮಠವು ವಿದ್ವಾಂಸರಿಗೆ ಹೆಚ್ಚು ಗೌರವ, ಮರ್ಯಾದೆಗಳನ್ನು ನೀಡುತ್ತಾ ಬಂದಿದೆ. ಹಲವು ಹಬ್ಬಗಳಂದು, ವೀರಶೈವ ಪುಣ್ಯಪುರುಷರ ಜಯಂತಿಗಳಂದು

ವಿದ್ವಾಂಸರನ್ನು, ಸಾಹಿತಿಗಳನ್ನು ಸಮಾಜದ ನಾನಾ ಮುಖದ ಗಣ್ಯರನ್ನು ಸನ್ಮಾನಿಸುವುದರ ಮೂಲಕ ಅವರು ಕೈಗೊಂಡಿರುವ ಕಾರ್ಯಗಳನ್ನು ಪ್ರೋತ್ಸಾಹಿಸುತ್ತಾ ಬಂದಿದೆ.

ಉಪನ್ಯಾಸ ನೀಡುವ ವಿದ್ವಾಂಸರಿಗಂತೂ ಕೈತುಂಬ ಸಂಭಾವನೆ ನೀಡುವುದು, ಫಲ-ಪುಷ್ಪ ತಾಂಬೂಲ ನೀಡುವುದು, ಪುಸ್ತಕಗಳನ್ನು ಸಂಪಾದಿಸಿ ಕೊಟ್ಟ ಸಂಪಾದಕರಿಗೂ ಹೆಚ್ಚು ಸಂಭಾವನೆ ನೀಡುವುದು ಶ್ರೀಮಠದ ಉತ್ತಮ ಕಾರ್ಯಗಳಲ್ಲಿ ಒಂದಾಗಿದೆ. ಈ ರೀತಿಯ ಕಾರ್ಯದಿಂದ ಕೆಲಸ ಮಾಡುವವರಿಗೆ ಉತ್ಸಾಹ ಇಮ್ಮಡಿಸುತ್ತದೆ.

ಬಹಳಷ್ಟು ತರುಣ ವಿದ್ವಾಂಸರಿಗೆ ಶ್ರೀ ಮಠದ ಗುರು ಪರಂಪರೆ ಬೆಂಬಲವಿತ್ತು ಬೆಳೆಸಿದೆ.

ವೀರಶೈವ ಸಾಹಿತ್ಯಕ್ಕೆ ಕೊಡುಗೆ:

ವೀರಶೈವ ಸಾಹಿತ್ಯದ ಪ್ರಸರಣಕ್ಕೆ ಶ್ರೀ ಮಠವು ಬಹಳ ಕಷ್ಟಪಟ್ಟು ದುಡಿಯುತ್ತಿದೆ. ಇಂದು ಎರಡು ರೀತಿಯಿಂದ ಮಠದ ಹೆಸರು ಮನೆಮಾತಾಗಿದೆ. ಒಂದು ವಿದ್ಯಾರ್ಥಿಗಳಿಗೆ ಆಶ್ರಯ ನೀಡುವುದು, ಎರಡನೆಯದು ಸಾಹಿತ್ಯಿಕ ಚಟುವಟಿಕೆಯನ್ನು ನಡೆಸುವುದು.

ಮಠದ ಸಾಹಿತ್ಯಿಕ ಸೇವೆಯನ್ನು ಎರಡುಭಾಗ ಮಾಡಬಹುದು.

ಕಾರ್ಯಕ್ರಮಗಳು: ಶ್ರೀ ಮಹದೇವಸ್ವಾಮಿಗಳ ಕಾಲದಿಂದಲೂ ಮಠದಲ್ಲಿ ಹಲವಾರು ರೀತಿಯ ಸಾಹಿತ್ತಿಕ ಕಾರ್ಯಕ್ರಮಗಳು ಜರುಗುತ್ತಲೇ ಇವೆ. ತಿಂಗಳ ಉಪನ್ಯಾಸ ಮಾಲೆ, ಶ್ರಾವಣ ಮಾಸ ಕಾರ್ಯಕ್ರಮ, ಯುಗಾದಿ ಕಾರ್ಯಕ್ರಮ - ಹೀಗೆ ಹಲವು ಹೆಸರುಗಳ ಅಡಿಯಲ್ಲಿ ಸಾಹಿತ್ಯ ಪ್ರಿಯರಿಗೆ ರಸದೌತಣವನ್ನು ನೀಡುತ್ತ ಬಂದಿದೆ.

ಶ್ರೀ ಮಹದೇವಸ್ವಾಮಿಗಳ ಕಾಲದಲ್ಲಿ ಮಠವು ವಿದ್ವಾಂಸರಿಂದ ಸದಾಕಾಲ ತುಂಬಿರುತ್ತಿತ್ತು. ಅಕ್ಕಮಹಾದೇವಿ, ವಚನಶಾಸ್ತ್ರ, ಅಲ್ಲಮ ಪ್ರಭು, ಬಸವಣ್ಣ ಮುಂತಾದವರನ್ನು ಕುರಿತ ಉಪನ್ಯಾಸಗಳು ನಡೆಯುತ್ತಲೆ ಇದ್ದವು.

೧೯೯೦ ರಲ್ಲಿ ಶ್ರಾವಣಮಾಸದ ಕಾರ್ಯಕ್ರಮ ವಿನೂತನ ರೀತಿಯಲ್ಲಿ ನಡೆಯಿತು. ಒಂದು ತಿಂಗಳು ಪೂರ್ತಿ, ಮೂವತ್ತು ಜನ ವಿದ್ವಾಂಸರು, ಮೂವತ್ತು ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರು.

೧೯೯೨ರಲ್ಲಿ ಶ್ರಾವಣಮಾಸದಲ್ಲಿ ಒಂದೊಂದೆ ವಚನವನ್ನು ಕುರಿತು ಮೂವತ್ತು ಜನ ವಿದ್ವಾಂಸರು, ಮೂವತ್ತು ದಿನ ಉಪನ್ಯಾಸ ನೀಡಿದರು. ಇದು ವಿನೂತನ ಮಾದರಿಯ ಕಾರ್ಯಕ್ರಮವಾಗಿದ್ದು ಎಲ್ಲರಿಂದಲೂ ಪ್ರಶಂಸೆಯನ್ನು ಪಡೆಯಿತು.

೧೯೯೩ ರಲ್ಲಿ ಹದಿನಾಡು ವೀರಶೈವ ಅರಸು ಮನೆತನದ ಬಗೆಗೆ ಮೂರುದಿನದ ವಿಚಾರಗೋಷ್ಠಿಯನ್ನು ನಡೆಸಿ ಶ್ರೀ ಮಠವು ಬಹಳ ಒಳ್ಳೆಯ ಕೆಲಸವನ್ನು ಮಾಡಿತು. ಈ ಅರಸರಿಗೆ ಸಂಬಂಧಿಸಿದ ಸ್ಮಾರಕಗಳು, ದಾಖಲೆಗಳು ಮೊದಲಾದವನ್ನು ಮೂರುದಿನಗಳ ಕಾಲ ಪ್ರದರ್ಶನ ಮಾಡಿತು. ಈ ವಿಚಾರಸಂಕಿರಣದಿಂದ ಅನೇಕ ಹೊಸ ವಿಚಾರಗಳು ಬೆಳಕಿಗೆ ಬಂದು, ಇತಿಹಾಸಕಾರರಿಗೆ ನೆರವಾಯಿತು.

ಹೀಗೆ ಅನೇಕ ರೀತಿಯ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಶ್ರೀಮಠ ವೀರಶೈವ ಸಾಹಿತ್ಯಕ್ಕೆ, ಆ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟವಾದ ಸೇವೆಯನ್ನು ನೀಡುತ್ತ ಬಂದಿದೆ.

ಪ್ರಕಟಣೆಗಳು : ಶ್ರೀ ಮಠವು ಕೈಗೊಂಡ ಮತ್ತೊಂದು ಮುಖ್ಯವಾದ ಕೆಲಸವೆಂದರೆ ತಾನು ನಡೆಸಿದ ವಿಚಾರಗೋಷ್ಠಿ, ಉಪನ್ಯಾಸಕಾರ್ಯಕ್ರಮ ಮೊದಲಾದುವುಗಳನ್ನು ಪುಸ್ತಕರೂಪದಲ್ಲಿ ಮುದ್ರಿಸಿ, ಕಡಿಮೆ ಬೆಲೆಯಲ್ಲಿ ನೀಡುವುದು. ಈ ಕಾರ್ಯ ತಲೆತಲಾಂತರಗಳವರೆಗೆ ಶಾಶ್ವತವಾಗಿರುತ್ತದೆ. ಮುಂದಿನವರಿಗೆ ಇದರಿಂದ ಬಹಳ ಉಪಕಾರವಾಗುತ್ತದೆ.

ಶ್ರೀ ಮಹದೇವಸ್ವಾಮಿಗಳ ಕಾಲದಿಂದ ಇಲ್ಲಿಯವರೆಗೂ ಅತ್ಯುತ್ತಮವಾದ ಪ್ರಕಟನೆಗಳನ್ನು ಹೊರತಂದಿದೆ. ಅವು ಈ ಕೆಳಗಿನಂತಿವೆ. ಮೊಟ್ಟಮೊದಲ ಪ್ರಕಟನೆಯೆಂದರೆ ೧೯೩೫ ರಲ್ಲಿ ಟಿ. ಎನ್. ಮಹದೇವಯ್ಯನವರು ರಚಿಸಿದ ಶ್ರೀ ಮಹಾದೇವಿಯಕ್ಕನವರ ಜೀವನ ಚರಿತೆ. ಎರಡನೆಯದು ೧೯೩೬ ರಲ್ಲಿ ಬಿ. ನಂಜುಂಡಪ್ಪ ಎಂಬುವರು ರಚಿಸಿದ ಶ್ರೀ ಬಸವಣ್ಣನವರ ಅಭಯ ಸಂಪತ್ತು ಎಂಬ ಪುಸ್ತಕ. ಹೀಗೆ ಆರಂಭವಾದ ಪುಸ್ತಕಗಳ ಪ್ರಕಟನೆ ಇಲ್ಲಿಯವರೆಗೆ ಸುಮಾರು ಮೂವತ್ತೈದನ್ನು ದಾಟುತ್ತದೆ. ಆದರೆ ಎಲ್ಲ ಕೃತಿಗಳೂ ಇಂದು ನಮಗೆ ದೊರೆಯುತ್ತಿಲ್ಲ.

ಕೈವಲ್ಯ ಕಲ್ಪವಲ್ಲರಿ (ಸಂ. ಎಸ್.ಎಸ್. ಬಸವನಾಳರು, ೧೯೪೯), ಪ್ರಭುಸಂದೇಶ (ಶ್ರೀ ಮಹದೇವಸ್ವಾಮಿಗಳು, ೧೯೪೯), ಶಿವ-ಶಕ್ತಿ (೧೯೫೯), ಅಭಿನವ ಅಲ್ಲಮ, ಭಾರತೀಯ ಸಂಸ್ಕೃತಿ, ಆಡು ಮುಟ್ಟದ ಸೊಪ್ಪು, ಶ್ರೀ ಸರ್ಪಭೂಷಣ ಶಿವಯೋಗಿಗಳು, ವಚನ ವೈಭವ, ವಚನ ಚಳುವಳಿ, ಜ್ಞಾನ ಶತಕ, ಶಂಕರದೇವರ ಕಂದ, ಶ್ರೀ ಸರ್ಪಭೂಷಣ ಶಿವಯೋಗಿಗಳ

ಸುಪ್ರಭಾತ, ಶ್ರೀ ಅಕ್ಕಮಹಾದೇವಿ ಸುಪ್ರಭಾತ, ಅಭವಕಂದ ಮತ್ತು ಇಷ್ಟಲಿಂಗ ಚಾರಿತ್ರ, ಶ್ರೀ ಬಸವಾಷ್ಟೋತ್ತರ ಶತನಾಮಾವಳಿ, ಭುಜಂಗಮಾಲಾ ಶಿವ ಸಂಕೀರ್ತನಂ, ಉಪನ್ಯಾಸ ಸಂಚಯ (ಸಂ. ಟಿ. ಆರ್. ಮಹಾದೇವಯ್ಯ), ವಚನ ಚಿಂತನ (ಸಂ. ಗೊ.ರು.ಚ), ಹದಿನಾಡು ವೀರಶೈವ ಅರಸು ಮನೆತನ (ಸಂ. ಡಾ|| ಎಸ್. ವಿದ್ಯಾಶಂಕರ), ಕೈವಲ್ಯ ಕಲ್ಪವಲ್ಲರಿ (ಸಂ. ಶ್ರೀ ಎಸ್. ಶಿವಣ್ಣ), ಶ್ರೀ ಸರ್ಪಭೂಷಣರ ಜೀವನ ಚರಿತ್ರೆ (ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ), ಕೈವಲ್ಯ (ದ್ವಿತೀಯ ಶತಮಾನೋತ್ಸವ ಸಂಪುಟ).

ಹೀಗೆ ಪ್ರಕಟನೆಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಎಲ್ಲಾ ಪ್ರಕಟನೆಗಳು ಕೂಡ ಬಹಳ ಮೌಲಿಕವಾಗಿವೆ ಎಂಬುದು; ಆಕರಗ್ರಂಥಗಳಾಗಿವೆ ಎಂಬುದು.

ಕನ್ನಡನಾಡು - ನುಡಿಗೆ ಕಾಣಿಕೆ

ಉಪನ್ಯಾಸಗಳು, ವಿಚಾರಸಂಕಿರಣಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೂ ಕೂಡ ನಾಡು-ನುಡಿಯ ಸೇವೆಯ ಅಂಗವಾಗಿವೆ. ಆದರೆ ಶ್ರೀ ಮಠ ಮತ್ತೊಂದು ಹೆಜ್ಜೆ ಮುಂದುವರಿದು ಕನ್ನಡ ಚಳುವಳಿಗೂ ಕೂಡ ಅಪಾರ ಪ್ರೋತ್ಸಾಹ ಕೊಡುತ್ತಿದೆ. ಶ್ರೀ ಮಠದ ಆವರಣ ಅನೇಕ ಕನ್ನಡ ಪರ ಚಟುವಟಿಕೆಗಳಿಗೆ ಆಶ್ರಯತಾಣವಾಗಿದೆ.

ಮ. ರಾಮಮೂರ್ತಿ, ಅ.ನ. ಕೃಷ್ಣರಾಯರ ಕಾಲದಲ್ಲಿ ಶ್ರೀ ಮಠ ಕನ್ನಡ ಚಳುವಳಿಗೆ ಅಪರಿಮಿತ ಪ್ರೋತ್ಸಾಹ ನೀಡಿತ್ತು. ಇವರ ನಂತರದ ಚಳುವಳಿಕಾರರಲ್ಲಿ ಬಹಳ ಮುಖ್ಯರಾದವರು ಡಾ|| ಎಂ. ಚಿದಾನಂದ ಮೂರ್ತಿಗಳು. ಇವರು ಸಾಹಿತಿಗಳ ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರವೆಂಬ ಸಂಘಟನೆಗಳನ್ನು ವಿಸ್ತಾರವಾಗಿ ಬೆಳೆಸಿದರು.(೧೮೮೨) ಕನ್ನಡ ನಾಡಿನ ಚಳುವಳಿಗಳಲ್ಲಿ ಪ್ರಮುಖವಾದ ಗೋಕಾಕ್ ಚಳುವಳಿಯಲ್ಲಿ ಈ ಸಂಘಟನೆಯ ಪಾತ್ರ ಹಿರಿದಾದುದು. ಈ ಸಂಘಟನೆಯ ಚಟುವಟಿಕೆಗಳಿಗೆ ಆಶ್ರಯತಾಣವಾಗಿ, ಕೇಂದ್ರಸ್ಥಾನವಾಗಿ ಸರ್ಪಭೂಷಣ ಮಠ ಬೆಂಬಲವನ್ನು ನೀಡಿದೆ. ಇದು ಮಠದ ಉದಾರತೆಗೆ, ನಾಡಿನ ಒಳಿತೇ ತನ್ನ ಒಳಿತು ಎಂಬ ಧೋರಣೆಗೆ ಸಾಕ್ಷಿಯಾಗಿದೆ.

ಕನ್ನಡ ಚಳುವಳಿಯಲ್ಲಿ ಹೆಸರುಮಾಡಿದ ಮತ್ತೊಬ್ಬ ವ್ಯಕ್ತಿ ವಾಟಾಳ್ ನಾಗರಾಜ್. ಇವರೂ ಸಹ ಮಠದ ಆಶ್ರಯದಲ್ಲಿ ಬೆಳೆದು ಹೆಸರು ಪಡೆದವರು.

ಕರ್ನಾಟಕದಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರ ಸ್ಥಿತಿ ಏನಾಗಿದೆಯೆಂದು ಎಲ್ಲರಿಗೂ ತಿಳಿದಿದೆ. ಇಂತಹ ವಾತಾವರಣದಲ್ಲಿ ಕನ್ನಡವನ್ನು ಕನ್ನಡಿಗರವನ್ನು ಉಳಿಸಲು ಈ ರೀತಿ ಸ್ಥಳ ನೀಡುವುದರೊಂದಿಗೆ ಶ್ರೀಮಠ ತನ್ನ ಕಾಣಿಕೆಯನ್ನಿತ್ತಿದೆ. ಅನೇಕ ಕನ್ನಡದ ಸಮಸ್ಯೆಗಳಿಗೆ ಪರಿಹಾರಸೂತ್ರಗಳು ಇಲ್ಲಿ ದೊರೆಯುತ್ತಿದ್ದವು.

ಮೆಜೆಸ್ಟಿಕ್ ಪ್ರದೇಶ ಇಂದು ಯಾವುದರ ಕೇಂದ್ರ ಬಿಂದುವಾಗುತ್ತಿದೆ ಎಂಬುದು ಪ್ರಜ್ಞಾವಂತ ಜನರಿಗೆ ತಿಳಿದ ವಿಷಯವೆ. ಸೂಪರ್ ಸೇಲ್, ಬಂಪರ್‌ಸೇಲ್, ಅಬ್ಬರದ ಜಾಹಿರಾತುಗಳು, ನಗ್ನ, ಅರೆನಗ್ನ ಚಿತ್ರಗಳ ಫಲಕಗಳು, ನಟ-ನಟಿಯರ ಬೃಹತ್ ಪ್ರತಿಮೆಗಳು, ಇವುಗಳಿಗೆ ಪ್ರೋತ್ಸಾಹವೆಂಬಂತೆ ಮಾರಿಗೊಂದು ಬಾರ್-ಪಬ್‌ಗಳು. ತಮಿಳು, ತೆಲುಗು, ಹಿಂದಿ ಚಿತ್ರಗಳ ಆರ್ಭಟಗಳು ಕಿವಿ ಗಡಚಿಕ್ಕುತ್ತವೆ; ನೋಡಲು ಅಸಹ್ಯವಾಗುತ್ತದೆ. ಇಂತಹ ವಾತಾವರಣದ ಕೇಂದ್ರಸ್ಥಾನದಲ್ಲಿ ಧರ್ಮದ ಬಗೆಗೆ, ಸಾಹಿತ್ಯದ ಬಗೆಗೆ ಉಪನ್ಯಾಸ, ವಿಚಾರಗೋಷ್ಠಿ, ವಿಚಾರ ವಿನಿಮಯಗಳ ಒಂದೆರಡು ಬ್ಯಾನರ್‌ಗಳು ! ಜಗಮಗಿಸುವ ಮಾಯಾ ಜಗತ್ತಿನ ಬೆಳಕುಗಳ ಮಧ್ಯೆ ಮೌನವಾಗಿ ಬೆಳಗುವ ಹಣತೆಯಂತೆ ಮಠದ ಬ್ಯಾನರ್‌ಗಳು ಕಾಣುತ್ತಿದ್ದವು. ಇದು ಆ ಪ್ರದೇಶಕ್ಕೆ ಮೋಜುಮಾಡಲು ಬಂದ, ನಮ್ಮ ಉಜ್ವಲ ಸಂಸ್ಕೃತಿಯನ್ನು ಮರೆತ ಜನರ ಆತ್ಮವನ್ನು ಕೆಣಕುವಂತೆ ಕಾಣುತ್ತಿದ್ದವು.

ಬದುಕನ್ನು ಗಂಭೀರವಾಗಿ ಸ್ವೀಕರಿಸುವ ಜನರಿಗಂತೂ ಈ ಮಠವು ಕೆಸರಿನಲ್ಲಿ ಕಮಲವನ್ನು ಕಂಡಂತಾಗುತ್ತಿತ್ತು. ಉಸಿರುಕಟ್ಟಿಸುವ ವಾತಾವರಣದ ನಡುವೆಯೂ ಧಾರ್ಮಿಕ, ಸಾಹಿತ್ಯಿಕ ಸೇವೆಯನ್ನು ನಡೆಸಿಕೊಂಡು ಬಂದ ಮಠದ ಸ್ಥೈರ್ಯವನ್ನು ಎಲ್ಲರೂ ಮೆಚ್ಚಬೇಕಾಗುತ್ತದೆ.

ಇತರೆ ಕಾಣಿಕೆಗಳು

ಈ ಮೇಲಿನ ಕಾರ್ಯಗಳಲ್ಲದೆ ಇನ್ನೂ ಹಲವಾರು ರೀತಿಯ ಚಟುವಟಿಕೆಗಳಿಗೆ ಮಠವು ಆಶ್ರಯಸ್ಥಾನವಾಗಿತ್ತು. ದೂರದಿಂದ ಬಂದಂತಹ ಹಲವಾರು ಹಿರಿ, ಕಿರಿಯ ಮಠದ ಸ್ವಾಮಿಗಳಿಗೆ ಸರ್ಪಭೂಷಣ ಮಠವು ತಂಗುದಾಣವಾಗಿತ್ತು.

ಕೋರ್ಟು, ಕಛೇರಿಯ ಕೆಲಸಕ್ಕಾಗಿ ಬರುವ ಜನರುಗಳಿಗೆ ಮಲಗಲು, ಊಟಮಾಡಲು ಒಳ್ಳೆಯ ಸ್ಥಳವಾಗಿಯೂ ಇತ್ತು. ದೂರದಿಂದ ಬಂದ ವೀರಶೈವರಿಗೆ ವಿಭೂತಿ ಧರಿಸಿಕೊಳ್ಳಲು ಪೂಜೆಮಾಡಲು, ಸೂಕ್ತ ಸ್ಥಳವಾಗಿತ್ತು. ಈ ಅಂಶವನ್ನು ಪ್ರೊ|| ವೃಷಭೇಂದ್ರ ಸ್ವಾಮಿಯವರು ಇಂದಿಗೂ ಸ್ಮರಿಸುತ್ತಾರೆ. ಸಾಮಾನ್ಯ ಜನರಿಗೆ ಶಿವಪೂಜಾ ವಿಧಾನಗಳ ಪರಿಚಯದ ಆಂದೋಳನವನ್ನೇ ಶ್ರೀ ಮಠ ಕೈಗೊಂಡಿತು ಎಂದರೆ ತಪ್ಪಾಗಲಾರದು.

ಲಿಂಗಕ್ಕೆ ಕಾಂತಿ ನೀಡುವ ಕಾಯಕದವರು ಮಠದ ಆವರಣದಲ್ಲಿದ್ದು ಪ್ರತಿನಿತ್ಯ ಹಲವಾರು ಜನರಿಗೆ ಕೆಲಸ ಮಾಡಿಕೊಡುತ್ತಿದ್ದರು; ಸುತ್ತಲ ಗ್ರಾಮದವರು ಇಲ್ಲಿಗೇ ಬಂದು ಹೋಗುತ್ತಿದ್ದರು.

ವೀರಶೈವ ಜನಾಂಗದವರ ಮದುವೆ, ಹಬ್ಬ, ಮಂಗಳ ಕಾರ್ಯಗಳಿಗೆ ಅಡಿಗೆಯವರು ಬೇಕಾದರೆ ಇಲ್ಲಿಗೆ ಬರಬೇಕಿತ್ತು. ಮಠದ ಆವರಣದಲ್ಲಿ ಹತ್ತಾರು ಅಡಿಗೆತಂಡದ ಮುಖ್ಯಸ್ಥರುಗಳು ಇರುತ್ತಿದ್ದರು. ಇವರನ್ನು ಗೊತ್ತು ಪಡಿಸಿದರೆ, ಹೇಳಿದ ದಿನಾಂಕಕ್ಕೆ ಸರಿಯಾಗಿ ಬಂದು ಶಿಸ್ತಿನಿಂದ ಅಡುಗೆಕೆಲಸವನ್ನು ನಿರ್ವಹಿಸುತ್ತಿದ್ದರು. ಗುರುಸ್ವಾಮಿ ಕಂಪನಿ, ವೀರಭದ್ರಯ್ಯ ಕಂಪನಿಗಳು ಇಂದು ನಗರದಲ್ಲಿ ಹೆಸರು ಪಡೆದಿರುವ ಅಡುಗೆ ಗುಂಪಾಗಿವೆ. ಇವರ ಮೂಲಸ್ಥಾನ ಸರ್ಪಭೂಷಣ ಮಠವೇ ಆಗಿದೆ.

ಹೀಗೆ ಇನ್ನೂ ಹಲವಾರು ಸಣ್ಣ, ಸಣ್ಣ ಕಾರ್ಯಗಳಿಂದಾಗಿ ಸರ್ಪಭೂಷಣ ಮಠ ವೀರಶೈವ ಸಮಾಜದಲ್ಲಿ ಮರೆಯಲಾಗದ ಹೆಸರಾಗಿದೆ. ಆ ರೂಪದಲ್ಲಿ ಸಮಾಜಕ್ಕೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ.

ಬೆಳ್ಳಾವೆ ನರಹರಿಶಾಸ್ತ್ರಿಗಳು, ಬಿ. ಶಿವಮೂರ್ತಿ ಶಾಸ್ತ್ರಿಗಳು, ಎಚ್. ವಿ. ನಂಜುಂಡಯ್ಯನವರು, ನಿಡುಮಾಮಿಡಿ ಸಂಸ್ಥಾನದ ಶ್ರೀ ಜ. ಚ.ನಿ. ಅವರು ಹೀಗೆ ಮಠದಿಂದ ಪ್ರೇರಣೆಹೊಂದಿ ಕೀರ್ತಿಶಿಖರವನ್ನು ಮುಟ್ಟಿದ ಮಹಾಮಹಿಮರ ಸಾಲೇ ಇದೆ. ಮಠದ ಕೊಡುಗೆಗೆ ಸಾಕ್ಷಿಯಾಗಿ ಇವರೆಲ್ಲರ ಹೆಸರುಗಳು ನಿಂತಿವೆ.

○

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರದ ಸಾಮಾಜಿಕ ಕಾರ್ಯ ಚಟುವಟಿಕೆಗಳು

ಆರ್.ಎಂ. ಬಸವಲಿಂಗಯ್ಯ

ಎಡೆಯೂರು ಮತ್ತು ಸಿದ್ಧಗಂಗಾ ಕ್ಷೇತ್ರಗಳು ಚಾಮರಾಜನಗರ ತಾಲ್ಲೋಕು ಹರದನಹಳ್ಳಿ ಗೋಸಲ ಪೀಠಾಧಿಕಾರಿಗಳ ಪಾದಸ್ಪರ್ಶದಿಂದ ಪಾವನ ಹೊಂದಿದ ಅವಿಮುಕ್ತ ಕ್ಷೇತ್ರಗಳು, ಎರಡೂ ಕ್ಷೇತ್ರಗಳು ಶತಶತಮಾನಗಳ ಕಾಲದಿಂದಲೂ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ.

ಶ್ರೀ ಸಿದ್ಧಲಿಂಗೇಶ್ವರರು (೧೩೮೦ - ೧೪೭೦) ಗೋಸಲಪೀಠ ಪರಂಪರೆಯಲ್ಲಿ ೧೬ನೆಯವರು. ಕಲ್ಯಾಣದ ಶಿವಶರಣರ ತರುವಾಯ ಮುಸುಕಿ ಹೋಗಿದ್ದ ವೀರಶೈವವನ್ನು ತಮ್ಮ ವಿದ್ಯಾ ಪ್ರೌಢಿಮೆ, ವಾಕ್ಚತುರತೆ, ಅನುಷ್ಠಾನ, ತಪಸ್ಸು ಮತ್ತು ಸಂಘಟನೆಗಳಿಂದ ಮೇಲಕ್ಕೆತ್ತಿ, ಕಾಲ್ನಡಿಗೆಯಲ್ಲಿಯೇ ಬಹುಸಂಖ್ಯಾತ ವಿರಕ್ತರು ಮತ್ತು ಜಂಗಮರೊಡನೆ ದೇಶ ಸಂಚಾರ ಮಾಡಿ, ಬಸವಾದಿ ಪ್ರಮಥರ ಹಾದಿಯಲ್ಲಿಯೇ ಬೆಳೆಸಿ ಸ್ಥಿರಗೊಳಿಸಿ ಕಾರ್ಯರೂಪಕ್ಕೆ ತಂದ ಕ್ರಾಂತಿ ಪುರುಷರು. ಕದಂಬ ನದೀ ತೀರದಲ್ಲಿದ್ದ ಚಿತ್ರಮಠ ಗವಿಮಠಗಳಲ್ಲಿ ತಮ್ಮ ಕೊನೆಯ ದಿವಸಗಳನ್ನು ಕಳೆದು ಹತ್ತಿರದ ಎಡೆಯೂರಿನಲ್ಲಿಯೇ ನಿರ್ವಿಕಲ್ಪ ಶಿವಯೋಗ ಸಮಾಧಿಯನ್ನು ಹೊಂದಿ, ಜಾಗೃತರಾಗಿದ್ದುಕೊಂಡು ಭಕ್ತರ ಅಭೀಷ್ಟಗಳನ್ನು ಪೂರೈಸುತ್ತಿರುವ ಪುಣ್ಯಜೀವಿಗಳು.

ಸಮಾಧಿಯಲ್ಲಿ ಯೋಗನಿದ್ರೆಯಲ್ಲಿರುವ ಶ್ರೀ ಸಿದ್ಧಲಿಂಗೇಶ್ವರರೇ ಕ್ಷೇತ್ರದ ಅಧಿದೇವತೆ, ಸದ್ಭಕ್ತರು ಅಪೇಕ್ಷೆಯ ಮೇರೆಗೆ ಶ್ರೀ ಸ್ವಾಮಿಗೆ ಪ್ರತಿ ದಿವಸವೂ ಬೆಳಿಗ್ಗೆಯಿಂದ ಸಂಜೆಯವರೆಗೆ ಆಗಮೋಕ್ತ ಸೇವಾ ಕೈಂಕರ್ಯಗಳನ್ನು ಉತ್ಸವಾದಿ ಸೇವೆಗಳನ್ನು ಸಮರ್ಪಿಸಿ ಮನಶ್ಶಾಂತಿಯನ್ನು ಪಡೆಯುತ್ತಾರೆ ಮತ್ತು ದಾಸೋಹದಲ್ಲಿ ಪ್ರಸಾದವನ್ನು ಸ್ವೀಕರಿಸಿ ತೃಪ್ತಿ ಪಡೆಯುತ್ತಾರೆ. ಪ್ರತಿದಿವಸವೂ ರಾಜ್ಯದ ಎಲ್ಲಾ ಭಾಗಗಳಿಂದಲೂ ಮತ್ತು ನೆರೆ ರಾಜ್ಯಗಳ ಗಡಿಪ್ರದೇಶಗಳಿಂದಲೂ ಬಹುಸಂಖ್ಯೆಯಲ್ಲಿ ಭಕ್ತಾದಿಗಳು, ದರ್ಶನಾಪೇಕ್ಷಿಗಳು, ಪ್ರವಾಸಿಗರು ಮುಂತಾದವರು ಆಗಮಿಸಿ ಶ್ರೀ ಸ್ವಾಮಿಯ ದರ್ಶನವನ್ನು ಪಡೆದು ಧನ್ಯತೆಯನ್ನು ಹೊಂದುತ್ತಾರೆ.

ವ್ಯವಸ್ಥಾಪಕ ಸಮಿತಿ

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರಕ್ಕೆ ಸಂಬಂಧಪಟ್ಟ, ಎಲ್ಲಾ ಧಾರ್ಮಿಕ ಮತ್ತು ಜನೋಪಯೋಗಿ ಆಡಳಿತ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ರಾಜ್ಯ ಸರಕಾರದವರು, ವಿಶೇಷ ಅಧಿಕಾರಗಳನ್ನು ಹೊಂದಿರುವ ಒಂದು ವ್ಯವಸ್ಥಾಪಕ ಸಮಿತಿಯನ್ನು ನೇಮಕ ಮಾಡಿರುತ್ತಾರೆ. ತುಮಕೂರು ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ, ಒಬ್ಬ ಹಿರಿಯ ಶ್ರೇಣಿಯ ಅಸಿಸ್ಟೆಂಟ್ ಕಮಿಷನರ್ ಕಾರ್ಯದರ್ಶಿಯಾಗಿರುವ ಈ ಕಮಿಟಿಯಲ್ಲಿ ಐದು ವರ್ಷಗಳಿಗೊಂದು ಸಾರಿ ನೇಮಿಸಲ್ಪಟ್ಟ ರಾಜ್ಯದ ಎಲ್ಲಾ ಭಾಗಗಳ ೧೨ ಜನ ಸದಸ್ಯರಿರುತ್ತಾರೆ. ಕಗ್ಗೆರೆಯ ತಪೋಕ್ಷೇತ್ರದ ಆಡಳಿತವು ಕೂಡಾ ಈ ವ್ಯವಸ್ಥಾಪಕ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಭಕ್ತಾದಿಗಳಿಗೆ ದೊರಕಿಸಿಕೊಡುತ್ತಿರುವ ಅನುಕೂಲತೆಗಳ ಪ್ರಮಾಣದಲ್ಲಿಯೇ ಶ್ರೀ ಕ್ಷೇತ್ರದ ಆದಾಯವು ವರ್ಷ - ವರ್ಷಕ್ಕೆ ಬೆಳೆಯುತ್ತಿದೆ. ಆದಾಯದ ಪ್ರಮಾಣದ ಜತೆಜತೆಯಲ್ಲಿಯೇ ಸಾಮಾಜಿಕ ಕಾರ್ಯ ಚಟುವಟಿಕೆಗಳು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ೧೯೭೦ನೇ ವರ್ಷದ ಸುಮಾರಿಗೆ ಕೆಲವೇ ಸಾವಿರಗಳಿದ್ದ ಶ್ರೀ ಕ್ಷೇತ್ರದ ಆದಾಯವು, ಈ ತರುವಾಯ ಅಸ್ತಿತ್ವಕ್ಕೆ ಬಂದಿರುವ ವಿಶೇಷ ಅಧಿಕಾರಗಳನ್ನುಳ್ಳ ವ್ಯವಸ್ಥಾಪಕ ಸಮಿತಿಯ ಅವಧಿಯಿಂದ, ಇತ್ತೀಚಿನ ವಾರ್ಷಿಕ ಆದಾಯವು ಸುಮಾರು ೭೦ ಲಕ್ಷ ರೂಪಾಯಿಗಳು ಎಂದು ತಿಳಿದುಬರುತ್ತದೆ.

ಶ್ರೀ ಕ್ಷೇತ್ರವು ಭಕ್ತಾದಿಗಳ ಮತ್ತು ದರ್ಶನಾರ್ಥಿ ಮುಂತಾದವರ ವಾಸ್ತವ್ಯಕ್ಕಾಗಿ ೪ ಸೈಜುಗಳ ೭೭ ಸುಸಜ್ಜಿತ ಕಾಟೇಜುಗಳನ್ನು ಹೊಂದಿರುತ್ತದೆ. ಮುಂದಿನ ಹೆಚ್ಚಿನ ಆದಾಯಗಳನ್ನನುಸರಿಸಿ, ಇನ್ನೂ ಹೆಚ್ಚಿನ ಕಾಟೇಜುಗಳ, ಡಾರ್ಮಿಟರಿಗಳ, ಛತ್ರ ವಗೈರೆಗಳ ನಿರ್ಮಾಣ ಯೋಜನೆಗಳು ಕೂಡಾ ಆಡಳಿತದ ಗಮನದಲ್ಲಿವೆ.

ವಸತಿ ಮತ್ತು ನೀರಿನ ಸೌಕರ್ಯಗಳು ಹಾಗೂ ದಾಸೋಹದಲ್ಲಿ ಉಚಿತ ಊಟದ ಅನುಕೂಲತೆಗಳು ಇರುವುದರಿಂದ ಎಡೆಯೂರಿನಲ್ಲಿ ಸರಕಾರದ ಜನೋಪಯೋಗಿ ಕಾರ್ಯಕ್ರಮಗಳನ್ನು ಸಂಬಂಧಪಟ್ಟವರು ಆಗಿಂದಾಗ್ಗೆ ನಡೆಸುತ್ತಿರುತ್ತಾರೆ. ಆರೋಗ್ಯ ತಪಾಸಣೆಗಳು, ಅಕ್ಷರಕಲಿಕೆ ಕಾರ್ಯಕ್ರಮಗಳು, ಕಣ್ಣಿನ ಶಸ್ತ್ರಚಿಕಿತ್ಸೆ ಕ್ಯಾಂಪು ಮುಂತಾದವುಗಳು ಆಗಿಂದಾಗ್ಗೆ ನಡೆಯುತ್ತಿವೆ. ಹೋಬಳಿ, ತಾಲ್ಲೋಕು ಮತ್ತು ಜಿಲ್ಲಾ ಮಟ್ಟದ ಕ್ರೀಡಾಕೂಟಗಳನ್ನು ಮತ್ತು ನಿರ್ದಿಷ್ಟ ವಿಷಯಗಳಿಗೆ ಸಂಬಂಧಪಟ್ಟ ಚರ್ಚಾಗೋಷ್ಠಿಗಳನ್ನು ಸಂಬಂಧಪಟ್ಟವರು ಆಗಾಗ್ಗೆ ಏರ್ಪಾಟು ಮಾಡುತ್ತಾರೆ.

ಎಡೆಯೂರು ಗ್ರಾಮವು ತುಮಕೂರು ಜಿಲ್ಲೆಯ ಅಂಚಿನಲ್ಲಿರುವ ಒಂದು ಪುಟ್ಟ ವಾಸಸ್ಥಳವಾಗಿದ್ದರೂ, ಶ್ರೀ ಕ್ಷೇತ್ರ ಕಮಿಟಿಯು ಅಲ್ಲಿಯ ಮತ್ತು ಸುತ್ತಮುತ್ತಲ ಗ್ರಾಮಗಳ ನಿವಾಸಿಗಳ ಅನುಕೂಲಕ್ಕಾಗಿ ಬ್ಯಾಂಕು, ಟೆಲಿಫೋನು, ಹಾಲು ಸರಬರಾಜು, ಮುಂತಾದ ಸೌಕರ್ಯಗಳನ್ನು ತನ್ನ ಸ್ವಂತ ಕಟ್ಟಡಗಳಲ್ಲಿಯೇ ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟಿರುತ್ತದೆ. ಎಡೆಯೂರು ಮತ್ತು ಸುತ್ತಮುತ್ತಲಿನ ಗ್ರಾಮಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜ್ಯೂನಿಯರ್ ಕಾಲೇಜು ಮತ್ತು ಪ್ರೌಢಶಾಲೆಯನ್ನು ನಡೆಸುತ್ತಿದೆ. ಅಲ್ಲದೆ ಸಂಸ್ಕೃತ, ವೇದ, ಆಗಮ ಮತ್ತು ಜ್ಯೋತಿಷ್ಯ ವಿಷಯಗಳನ್ನು ಕಲಿಯ ಬಯಸುವವರಿಗೆ, ವೈದಿಕ ಪಾಠಶಾಲೆಯನ್ನು ಕೂಡಾ ನಡೆಸಿಕೊಂಡು ಹೋಗುತ್ತಿದೆ.

ಪ್ರತಿ ವರ್ಷವೂ ಬಸವಜಯಂತಿ ಪುಣ್ಯ ದಿವಸ ವ್ಯವಸ್ಥಾಪಕ ಸಮಿತಿಯು ಬಡಬಗ್ಗರ ಸಹಾಯಕ್ಕಾಗಿ ನೂರಾರು ಜೋಡಿಗಳ ಉಚಿತ ವಿವಾಹ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗುತ್ತಿದೆ. ವಧೂವರರಿಗೆ ತಾಳಿ ಮತ್ತು ಹೊಸಬಟ್ಟೆಗಳನ್ನು ಉಚಿತವಾಗಿ ಕೊಡಲಾಗುತ್ತಿದೆ. ಬೇರೆ ಶುಭ ದಿವಸಗಳಲ್ಲಿ ಬಹಳ ಕಡಿಮೆ ಖರ್ಚಿನಲ್ಲಿ ಎಡೆಯೂರು ಮತ್ತು ಕಗ್ಗೆರೆ ದೇವಸ್ಥಾನಗಳಲ್ಲಿಯೇ ವಿವಾಹಕಾರ್ಯಗಳನ್ನು ಪೂರೈಸಿಕೊಡುವ ಏರ್ಪಾಟು ಇರುತ್ತದೆ. ಈ ಕಾರ್ಯಗಳಿಗೆಲ್ಲಾ ದಾಸೋಹದ ಉಚಿತ ಊಟದ ಏರ್ಪಾಟು ಬಹಳ ಸಹಾಯವಾಗುತ್ತದೆ. ಎಡೆಯೂರು ಮತ್ತು ಕಗ್ಗೆರೆ ಕ್ಷೇತ್ರಗಳಲ್ಲಿ ವ್ಯವಸ್ಥಾಪಕ ಸಮಿತಿ ಆಡಳಿತಕ್ಕೆ ಒಳಪಟ್ಟ ಪ್ರತ್ಯೇಕ ಕಲ್ಯಾಣ ಮಂಟಪಗಳಿರುತ್ತವೆ.

ಎಡೆಯೂರು ಮತ್ತು ಹತ್ತಿರದ ಬೀರಗಾನಹಳ್ಳಿ ಗ್ರಾಮಗಳ ಕುಡಿಯುವ ನೀರಿನ ಸರಬರಾಜು ಮತ್ತು ರಸ್ತೆ ದೀಪಗಳ ಸೌಕರ್ಯದ ಖರ್ಚುಗಳನ್ನು ಶ್ರೀ ಕ್ಷೇತ್ರದ ಆದಾಯದಿಂದಲೇ ಭರಿಸಲಾಗುತ್ತಿದೆ.

ದಾಸೋಹ ಸಮಿತಿ

ಶ್ರೀ ಕ್ಷೇತ್ರ ವ್ಯವಸ್ಥಾಪಕ ಸಮಿತಿಯ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಬೆನ್ನೆಲುಬಾಗಿ ದಾಸೋಹ ಸಮಿತಿಯು ಅವಶ್ಯವಿದ್ದೆಡೆಗಳಲ್ಲೆಲ್ಲಾ ಎಡೆಯೂರು ಮತ್ತು ಕಗ್ಗೆರೆ ತಪೋಕ್ಷೇತ್ರಗಳಲ್ಲಿ ಉಚಿತ ಊಟ ಏರ್ಪಾಟು ಮಾಡುತ್ತಿದೆ. ದಾಸೋಹವು ಶ್ರೀ ಸಿದ್ಧಲಿಂಗೇಶ್ವರರ ಕಾಲದಿಂದಲೂ ಅಸ್ತಿತ್ವದಲ್ಲಿರುತ್ತದೆ. ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟಿರುವ ಶಿಲಾಶಾಸನದ ಪ್ರಕಾರ :

"ಯೆಂಟು ಬಗೆಯ ಜಡೆಯ ಹಿರೀರು ಚಿಟ್ಟಿಗ ದೇವರು" ದಾಸೋಹವನು ನಡೆಸುವರು. ಇವರು ಪಡೆದ "ಪುರವರ್ಗವು ಸಹ ಮುಖದಲ್ಲಿ ಬಂದ ಕಾಣಿಕೆ ದಾಸೋಹದ ದ್ರವ್ಯ. ಅದರಲ್ಲಿ ಒಡೆಯರು, ಭಕ್ತರು, ಒಪ್ಪುವ ಸತ್ಪುರುಷರು. ಈ ದಾಸೋಹವನು ಮಾಡುವರು. ಯೀ ದ್ರವ್ಯ ತೋಂಟದ ಸ್ವಾಮಿಯ ದಾಸೋಹಕ್ಕೆ ಸಲುವದು. ಅರಿಗೂ ವರ್ಗ ಪರಂಪರೆಗೆ ಸಲ್ಲದು. ಸಜ್ಜನ ಸತ್ಪುರುಷರು ಯಿ ಮಠದಲ್ಲಿ ಯಿ ಪದಾರ್ಥವ ಅನುಭವಿಸುವರು. ಈ ಮಠದಲ್ಲಿ ಕಟ್ಟಿಸಿದ ಅಡಿಗೆ ಮನೆ, ಉಗ್ರಾಣದ ಮನೆ ತೋಂಟದ ಸ್ವಾಮಿಯ ದಾಸೋಹಕ್ಕೆ ಸಲುವದು. ಶ್ರೀ ಸಿದ್ದೇಶ್ವರ".

ಐದು ಶತಮಾನಗಳಿಂದ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ನಡೆದುಕೊಂಡು ಬಂದ ದಾಸೋಹವನ್ನು ಕಾನೂನು ರೀತ್ಯಾ ನಡೆಸಿಕೊಂಡು ಹೋಗಲು ೧೯೭೧ - ೭೨ ರಲ್ಲಿ ಜರುಗಿದ ಅಷ್ಟಗ್ರಹಕೂಟ ನಿವಾರಣೆ ಸಮಯದಲ್ಲಿ ಭಕ್ತರ ಒಂದು ಸಮಿತಿಯಾಗಿ ಮಾರ್ಪಾಟಾಯಿತು. ತರುವಾಯ ೧೯೭೦ ವರ್ಷದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕೆಳಗೆ ರಾಜ್ಯದ ವಿವಿಧ ಸ್ಥಳಗಳ ೧೪೦ ಸದಸ್ಯರನ್ನುಳ್ಳ "ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ (ರಿ) ಎಡೆಯೂರು" ಎಂಬ ಹೆಸರಿನಲ್ಲಿ ನೋಂದಣಿ ಮಾಡಲ್ಪಟ್ಟಿತು. ವಾಡಿಕೆಯಲ್ಲಿ ಈ ಸಂಘವನ್ನು "ದಾಸೋಹ ಸಮಿತಿ" ಎಂತಲೇ ಕರೆಯಲಾಗುತ್ತಿದೆ.

ಶ್ರೀ ಸಿದ್ಧಲಿಂಗೇಶ್ವರ ಸಂಕಲ್ಪವೇ ಹಚ್ಚಹಸುರಾಗಿ ಬೆಳೆದು ಇಂದಿನ ದಾಸೋಹವಾಗಿರುತ್ತದೆ. ಸಂಸ್ಥೆಗೆ ಆದಾಯ ಹೊಂದಿರುವ ಯಾವ ಆಸ್ತಿಗಳೂ ಇರುವುದಿಲ್ಲ. ಸರಕಾರ ಅಥವಾ ಯಾವ ಸಂಘ ಸಂಸ್ಥೆಗಳಿಂದಲೂ ಅನುದಾನಗಳಿಲ್ಲ.

ಶಿಲಾಶಾಸನದಲ್ಲಿ ಬರೆಸಿರುವ "ಸೀಮೆ ಮೇಲೆ ತಂದ ಕಾಣಿಕೆ ದಾಸೋಹದ ದ್ರವ್ಯ" ಎಂಬ ಶ್ರೀ ಸಿದ್ಧಲಿಂಗೇಶ್ವರರ ಆಶೀರ್ವಾದ ವಾಕ್ಯವೇ ದಾಸೋಹದ ಶ್ರೀರಕ್ಷೆಯಾಗಿರುತ್ತದೆ.

೫ ಶತಮಾನಗಳ ಅವಧಿಯಲ್ಲಿ, ಶಿಲಾಶಾಸನದಲ್ಲಿ, ಕಾಣಿಸಿದ ದಾಸೋಹದ ಸ್ಥಳದಲ್ಲಿ ಕೋಟ್ಯಂತರ "ವಡೆಯರು ಭಕ್ತರು ವಪ್ಪುವ ಸತ್ಪುರುಷರು" ದಾಸೋಹವನು ಮಾಡಿ ಈ ಸ್ಥಳವು ದಾಸೋಹ ಸತ್ಕಾರ್ಯಕ್ಕೆ ಪರಮಪವಿತ್ರ ಸ್ಥಳವೆನಿಸಿದೆ. ಶಿಥಿಲವಾಗುತ್ತಿದ್ದ ಹಳೆಯ ಕಟ್ಟಡದ ಸ್ಥಳದಲ್ಲಿಯೇ ದಾಸೋಹ ಸಮಿತಿಯವರು ಸದ್ಭಕ್ತರ ಮತ್ತು ಉದಾರ ಸಹೃದಯರ ಸಹಾಯದಿಂದ ಧರ್ಮಸ್ಥಳದ "ಅನ್ನಪೂರ್ಣ" ಮಾದರಿಯ ೮೦ ಲಕ್ಷ ರೂಪಾಯಿ ಅಂದಾಜಿನ ಹೊಸ ದಾಸೋಹ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡಿರುತ್ತಾರೆ. ಮತ್ತು ಈ ಕಟ್ಟಡವು ಮುಗಿಯುವ ಹಂತದಲ್ಲಿರುತ್ತದೆ. ಕಟ್ಟಡ ಮುಗಿಯುವವರೆಗೆ ದಾಸೋಹವನ್ನು ಬೇರೆಡೆ ದೇವಸ್ಥಾನದ ಹತ್ತಿರವೇ ನಡೆಸಲಾಗುತ್ತಿದೆ. ರಾಜ್ಯದ ನಾನಾ ಕಡೆಯಿರುವ ಭಕ್ತರಿಂದ ಮತ್ತು ದಾನಿಗಳಿಂದ ಧನ - ಧಾನ್ಯ ಸಂಗ್ರಹಿಸಲು ಸಮಿತಿಯ ವಾಹನಗಳನ್ನು ಹೊಂದಿರುತ್ತದೆ. ೧೯೯೪ - ೯೫ ನೇ ವರ್ಷದ ಆಡಿಟ್ ಲೆಕ್ಕಗಳ ಪ್ರಕಾರ ಎಡೆಯೂರು ಮತ್ತು ತಪೋಕ್ಷೇತ್ರ ಕಗ್ಗೆರೆ ಇವುಗಳ ದಾಸೋಹ ಸೇವಾ ಖರ್ಚು ರೂ. ೨೫,೨೦,೬೭೬ - ೦೦ ಎಂದು ನಿರ್ಧರಿಸಲಾಗಿದ್ದು, ದಿನದ ಖರ್ಚು ಸರಾಸರಿ ಸುಮಾರು ೭ ಸಾವಿರ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ.

ಶ್ರೀ ಸಿದ್ಧಲಿಂಗೇಶ್ವರರು ದೀರ್ಘಕಾಲದವರೆಗೆ ತಪಸ್ಸು ಮಾಡಿದ ಕಗ್ಗೆರೆ ಕ್ಷೇತ್ರದಲ್ಲಿ ಕೂಡಾ ಕೆಲವು ವರ್ಷಗಳಿಂದ ಭಕ್ತಾದಿಗಳ ಮತ್ತು ಪ್ರವಾಸಿಗರ ಹಾಗೂ ದರ್ಶನಾರ್ಥಿಗಳ ಸಹಾಯಕ್ಕಾಗಿ ದಾಸೋಹವನ್ನು ನಡೆಸಲಾಗುತ್ತಿದೆ. ಈ ಕ್ಷೇತ್ರಕ್ಕಾಗಿಯೇ ದಾಸೋಹ ಕಟ್ಟಡಗಳನ್ನು ನಿರ್ಮಾಣ ಮಾಡುವ ಕಾರ್ಯವನ್ನು ಸಮಿತಿಯವರು ಪ್ರಾರಂಭ ಮಾಡಿರುತ್ತಾರೆ.

ಕಾಯಕ ಮತ್ತು ದಾಸೋಹಗಳು ವೀರಶೈವರ ವಿಶಿಷ್ಟ ಕೊಡುಗೆಗಳು. ಭಕ್ತರ ಅನುವರಿತು ಮಾಡುವುದೇ ದಾಸೋಹ ಮತ್ತು ದಾಸೋಹ ಸೇವೆಯೇ ಶಿವನ ಸೇವೆ. ಈ ಸೇವೆಯನ್ನು ದಾಸೋಹ ಸಮಿತಿಯವರು ಎರಡೂ ಕ್ಷೇತ್ರಗಳಲ್ಲಿ ದಿನದ ಮೂರು ಸಮಯಗಳಲ್ಲಿಯೂ ಉಚಿತವಾಗಿ -

೧. ಶ್ರೀ ಸ್ವಾಮಿಯ ಸೇವಾ ಕೈಂಕರ್ಯಗಳಿಗೆ ರಾಜ್ಯದ ಎಲ್ಲಾ ಭಾಗಗಳಿಂದ ಮತ್ತು ಸುತ್ತಮುತ್ತಲಿನ ರಾಜ್ಯಗಳ ಗಡಿ ಪ್ರದೇಶಗಳಿಂದ ಬರುವವರಿಗೆ,

೨. ವೇದ, ಆಗಮ, ಜ್ಯೋತಿಷ ಮತ್ತು ಸಂಸ್ಕೃತ ಪಾಠಶಾಲೆಯಲ್ಲಿ ಓದುವ ಎಲ್ಲಾ ವಿದ್ಯಾರ್ಥಿಗಳಿಗೆ,

೩. ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಧರ್ಮಸ್ಥಳ, ಮೈಸೂರು, ಬೆಂಗಳೂರು ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸುವ ಪ್ರವಾಸಿಗರಿಗೆ,

೪.. ಶಾಲೆ ಕಾಲೇಜುಗಳ ಶೈಕ್ಷಣಿಕ ಪ್ರವಾಸಿ ವಿದ್ಯಾರ್ಥಿಗಳಿಗೆ,

೫. ಹೋಬಳಿ, ತಾಲ್ಲೋಕು, ಜಿಲ್ಲಾ ಮಟ್ಟದಲ್ಲಿ ಆಗಿಂದಾಗ್ಗೆ ನಡೆಯುವ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ,

೬. ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ ವಗೈರಾದಿ ಸಮಾರಂಭಗಳಲ್ಲಿ ಭಾಗವಹಿಸುವವರಿಗೆ ಮತ್ತು ಪ್ರೇಕ್ಷಕರಿಗೆ,

೭. ಕುಟುಂಬ ಯೋಜನೆ, ನೇತ್ರ ಚಿಕಿತ್ಸಾ ಶಿಬಿರಗಳು, ರೋಗ ತಪಾಸಣಾ ಕ್ಯಾಂಪುಗಳು, ಅಕ್ಷರ ಕಲಿಕೆ ತರಬೇತಿಗಳು, ಪಶುಪಾಲನೆ ವಗೈರಾದಿ ಸಭೆಗಳು, ಸಾಮೂಹಿಕ ವಿವಾಹಗಳು, ಬಡವರ ಕಲ್ಯಾಣ ಕಾರ್ಯಗಳು ಇವುಗಳಲ್ಲಿ ಭಾಗವಹಿಸುವವರಿಗೆ, ಅಲ್ಲದೆ

೮. ಜಾತ್ರೆ, ಶ್ರಾವಣ, ಕಾರ್ತೀಕ ಮುಂತಾದ ಹಬ್ಬ ಹರಿದಿನಗಳಲ್ಲಿ ಶ್ರೀ ಕ್ಷೇತ್ರಗಳಿಗೆ ದಯಮಾಡಿಸುವ ಎಲ್ಲಾ ಭಕ್ತಾದಿಗಳಿಗೆ ವಿಶಿಷ್ಟ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಸಿದ್ಧಲಿಂಗೇಶ್ವರ ಕೃತ "ಷಟ್ಸ್ಥಲ ಜ್ಞಾನ ಸಾರಾಮೃತ " ತದನಂತರ ಅವರ ಬಗ್ಗೆ ಕವಿಗಳಿಂದ ರಚಿತವಾದ ಪುರಾಣಗಳು, ಗ್ರಂಥಗಳು ಮೊದಲಾದವುಗಳನ್ನು ಸಮಿತಿಯ ವತಿಯಿಂದಲೇ ಅಚ್ಚುಹಾಕಿಸಿ ಪ್ರಚಾರ ಮಾಡುವ ಏರ್ಪಾಡು ಇರುತ್ತದೆ.

ನಿತ್ಯ ದಾಸೋಹವು ಅಲ್ಲದೆ, ಸಮಿಯವರು, ಪ್ರತಿ ವರ್ಷ ಕಾರ್ತೀಕ ಮಾಸ ಪರ್ಯಂತ ಹೆಸರಾಂತ ವಿದ್ವಾಂಸರಿಂದ ಪುರಾಣ ಪ್ರವಚನವನ್ನು ಏರ್ಪಾಡು ಮಾಡುತ್ತಾರೆ. ಶ್ರೀ ಸಿದ್ಧಲಿಂಗೇಶ್ವರರ ಧಾರ್ಮಿಕ ಪರಂಪರೆಯಲ್ಲಿ ೧೯ ನೆಯವರಾದ ಪಂಬಳ ಗವಗ ಸಂಸ್ಥಾನ ಮಠಾಧೀಶ್ವರರಾದ ಜಗದ್ಗುರು ಶ್ರೀ ಡಾ|| ಸಿದ್ಧಲಿಂಗಮಹಾಸ್ವಾಮಿಗಳು ಮುಕ್ತಾಯ ಸಮಾರಂಭಕ್ಕೆ ದಯಮಾಡಿಸುತ್ತಾರೆ ಮತ್ತು ದಾಸೋಹಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ ಮಾಡುವ ಮಹನೀಯರನ್ನು ಸನ್ಮಾನಿಸುತ್ತಾರೆ.

ಬಳ್ಳಾರಿ ಜಿಲ್ಲೆಯ

ಕಾನಾಮಡುಗು ಶರಣಾರ್ಯ ದಾಸೋಹಮಠದ ಸಮಾಜಸೇವೆ

ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ.

ಕರ್ನಾಟಕದ ಶಿವಶರಣ ಪರಂಪರೆ ಕಂಡುಕೊಂಡ ಒಂದು ಮಹಾಸತ್ಯ - ಭಕ್ತಿ. ಪರಮಾತ್ಮನಿಗೆ ತನ್ನನ್ನು ಅರ್ಪಿಸಿಕೊಳ್ಳುವ ಭಕ್ತಿ ಪರಂಪರೆ ಶತಮಾನಗಳಿಂದ ಬೆಳೆದು ಬಂದಿದ್ದರೂ ಅದು ಜೀವನ ವಿಧಾನವಾಗಿ, ಜೀವನ ಸಾಧನೆಯ ಪರಮ ಗುರಿಯಾಗಿ, ಅಷ್ಟೇ ಅಲ್ಲ, ಅದು ಧರ್ಮ - ಅರ್ಥ - ಕಾಮ - ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಒಳಗೊಂಡ ಸಮನ್ವಯ ದೃಷ್ಟಿಯ "ಪಂಚಮ ಪುರುಷಾರ್ಥ"ವಾಗಿ ಶಿವಶರಣರಿಂದ ಪರಿಗಣಿತವಾದುದು. ಭಾರತೀಯ ತತ್ತ್ವಶಾಸ್ತ್ರ ಇತಿಹಾಸದಲ್ಲಿಯೇ ಅತ್ಯಂತ ಗಮನಾರ್ಹ ಸಂಗತಿ. ಶಿವಶರಣರ ಭಕ್ತಿಯ ಆಚರಣೆಯ ಶಿವದಾರದ ಎರಡು ಮುಖ್ಯ ಎಳೆಗಳು. ಒಂದು 'ಕಾಯಕ' ಮತ್ತೊಂದು 'ದಾಸೋಹ' - ಇವುಗಳ ಅರಿವಿನ ಆಚರಣೆಯೇ ಪರಮ ಪುರುಷಾರ್ಥ. ಭಕ್ತಿಯ ಆಚರಣೆಯೇ ಮುಕ್ತಿ, ಕಾಯಕ - ದಾಸೋಹಗಳೇ ಅದಕ್ಕೆ ದಾರಿ. ಆತ್ಮಕಲ್ಯಾಣದೊಡನೆ ಮಾನವ ಕಲ್ಯಾಣವನ್ನು, ಇಹಲೋಕದೊಡನೆ, ಪರಲೋಕವನ್ನು "ಗೆಲ್ಲುವ" ಅತ್ಯಂತ ಸುಲಭವಾದ ಆಯುಧ ಈ "ಭಕ್ತಿ". ನಾರದ ಭಕ್ತಿ ಸೂತ್ರ ಹೇಳುವ ' ಪರಮ ಪ್ರೇಮ ರೂಪವಾದ, ಅಮೃತ ಸ್ವರೂಪವಾದ' 'ಜೀವನ ಪ್ರೀತಿ'ಯ ಸಾಧನೆಯಿಂದ ಅದನ್ನು ಪಡೆದ 'ಮಾನವ ತೃಪ್ತೋ ಭವತಿ', 'ಅಮೃತೋಭವತಿಃ' ಇಂಥ ಮಹತ್ವದ ಜೀವನ ಸತ್ಯವನ್ನು, ಅರಿತು ಆಚರಿಸಿ ಬೋಧಿಸಿದ ಶರಣರ ಸಂಖ್ಯೆ ಅಪಾರ. ವೀರಶೈವ ಧರ್ಮದ ಶತಶತಮಾನಗಳ ಇತಿಹಾಸದಲ್ಲಿ ಪಶುಪತಿ - ವೀರಭದ್ರ - ಷಣ್ಮುಖರಿಂದ ಅಂಕುರವಾದ ಈ "ಭಕ್ತಿ"ಯ ಬೆಳೆ, ರೇವಣಸಿದ್ಧ, ಮರುಳಸಿದ್ಧ ಮುಂತಾದವರಲ್ಲಿ ಕುಡಿವರಿದು, ಬಸವಾದಿ ಪ್ರಮಥರಲ್ಲಿ ಹೂ ಬಿಟ್ಟು, ತೋಂಟದ ಸಿದ್ಧಲಿಂಗ, ನಿಜಗುಣ, ಅಥಣಿ ಮುರುಘೇಂದ್ರ, ಶಿವರಾತ್ರೀಶ, ಗುಬ್ಬಿಯ ಚನ್ನಬಸವ, ಕೊಟ್ಟೂರು ಬಸವೇಶ, ಮಲೆಯ ಮಹದೇಶ್ವರ ಮುಂತಾದ ಶಿವಯೋಗ ಸಿದ್ಧ ಪರಂಪರೆಯಲ್ಲಿ ಹಣ್ಣು ಬಿಟ್ಟಿದೆ. ಆ 'ಭಕ್ತಿ'ಯ 'ಬಿತ್ತ'ಗಳು ಇಂದೂ ಅನೇಕ ಕ್ಷೇತ್ರಗಳಲ್ಲಿ "ವರ ಪ್ರದಾಯಕ ಕಾಯಕ - ದಾಸೋಹ ಪತ್ರೆ ವೃಕ್ಷ"ಗಳಾಗಿ ಕಂಗೊಳಿಸುತ್ತಿವೆ. ಕಲಬುರ್ಗಿಯ ಶರಣಬಸವರಂತೆ, ಮನೆ ಮಠ ಸಂಸ್ಥಾನ ಬೆನ್ನಿಗಿರದೆ, ಗುರು ಕರುಣೆಯಿಂದ "ಸ್ವಯಂ ಭಕ್ತಿಸಾಧಕ ಶರಣರು" ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕಾನಾಮಡುವಿನ ಶ್ರೀ ಶರಣ ಚನ್ನಬಸವೇಶ್ವರರು. ಆತನ ನಾಲ್ಕು ತಲೆಮಾರುಗಳ ಭಕ್ತಿ - ದಾಸೋಹದ ಆಚರಣೆಯಿಂದಾಗಿ ಶ್ರೀ ಮಠದ ಮುಖ್ಯಸ್ಥರು "ದಾಸೋಹಮಠದ ಶರಣಾರ್ಯರು"; ಶ್ರೀಮಠ "ದಾಸೋಹಮಠ".

ಪರಂಪರೆಯ ನೆಲೆ

ಕಾನಾಮಡುಗು ದಾಸೋಹಮಠದ ಮೂಲ ಕರ್ತೃ ಶ್ರೀ ಶರಣ ಚನ್ನಬಸವೇಶ್ವರರು (ಜನನ ಸು ೧೮೨೧). ತುಮಕೂರು ಜಿಲ್ಲೆಯ 'ಅಗಳಿ'* ಗ್ರಾಮದವರು. ಹತ್ತೊಂಬತ್ತನೆಯ ಶತಮಾನದ ಮೈಸೂರಿನ ಪ್ರಭು ಕೃಷ್ಣರಾಜೇಂದ್ರ ಒಡೆಯರು ಮಧುಗಿರಿಯ ಗುರುನಂಜಾರ್ಯ, ಚಿನ್ಮೂಲಾದ್ರಿ ಪೀಠದ ಶ್ರೀ ಗುರುಶಾಂತ ಸ್ವಾಮಿಗಳು, ಶ್ರೀ ಸಿದ್ಧಗಂಗಾ ಶ್ರೀಗಳು, ಫಲಾಹಾರೇಶ್ವರ ಸ್ವಾಮಿಗಳು, ಉಜ್ಜಯನಿಯ ಜಗದ್ಗುರು ಶ್ರೀ ಗುರುಸಿದ್ಧ ದೇಶಿಕೇಂದ್ರರು, ಶ್ರೀ ನಿಡುಮಾಮಿಡಿ ಪೀಠದ ಶ್ರೀ ಕರಿಬಸವ ರಾಜೇಂದ್ರರು ಮುಂತಾದವರ ಕಾಲದಲ್ಲಿದ್ದು ಅವರ ದರ್ಶನಾಶೀರ್ವಾದಗಳ ಫಲದಿಂದ "ಕಾಯಕ - ದಾಸೋಹ" ಮಹತ್ವವನ್ನು, ಅರಿತು, ತಮ್ಮನ್ನೇ ಆ ತತ್ವಕ್ಕೆ ಅರ್ಪಣೆ ಮಾಡಿಕೊಂಡ ಶರಣರು. ಅವರ ತಂದೆ - ತಾಯಿಗಳು ಶ್ರೀ ಬಸವಪ್ಪ ಮತ್ತು ಪುಟ್ಟಮ್ಮ. ಮುಗ್ಧ ಬಾಲಕ ಚನ್ನಬಸವ ಬಾಲ್ಯದಿಂದಲೂ ಭಕ್ತಿ - ಭಜನೆ - ಸ್ವಾಮಿಗಳ ಸೇವೆಯಲ್ಲಿ ಮೈಮರೆಯುತ್ತಿದ್ದರಂತೆ. ಲೌಕಿಕ ಜೀವನಕ್ಕಿಂತ ಅಲೌಕಿಕದತ್ತ ಅವರ ದೃಷ್ಟಿ. ಅಕ್ಷರಾಭ್ಯಾಸದ ಪ್ರಾರಂಭದಲ್ಲಿ "ಓಂ ನಮಃಶಿವಾಯ" ಎಂಬ ಮಂತ್ರವನ್ನು

* ಅಗಳಿ ಗ್ರಾಮ ಇಂದು ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿಗೆ ಸೇರಿದೆ.

ಕಂಡಕೂಡಲೇ ಪೂರ್ವಜನ್ಮದ ಸಂಸ್ಕಾರ ಮೇಲೆದ್ದು ಬಂದಂತೆ ಆ 'ಮಂತ್ರ'ದಲ್ಲಿ 'ಮಗ್ನ'ರಾಗಿಬಿಟ್ಟರಂತೆ. ಮುಂದೆ ಅವರು ಸಿದ್ಧರ ಬೆಟ್ಟ, ಸಿದ್ಧಗಂಗಾ, ಮೈಸೂರು, ಮಧುಗಿರಿ, ರತ್ನಗಿರಿ, ಚಿತ್ರದುರ್ಗ, ತಳುಕು ಪುಣ್ಯಕ್ಷೇತ್ರ ದರ್ಶನಮಾಡಿ, ಅಲ್ಲಲ್ಲಿನ ಗುರುಗಳ ಸೇವೆ ಮಾಡಿ, ಆಶೀರ್ವಾದ ಪಡೆದು, ಸುಮಾರು ೧೮೪೭ ಕ್ಕೆ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕು ಕಾನಾಮಡುಗು ಗ್ರಾಮಕ್ಕೆ ದಯಮಾಡಿಸಿ, ಕಂತೇಭಿಕ್ಷ ಮಾಡಿ, ಬಂದವರಿಗೆ ದಾಸೋಹ ಮಾಡುವ ಕಾಯಕದಲ್ಲಿ ನಿರತರಾದರು. ಆ ಗ್ರಾಮದ ಗೌಡರ ಮನೆತನದವರಿಂದ ಜಮೀನು ದಾನ ಪಡೆದು ಕಲ್ಲು ಗುಡಿಸಲು ಹಾಕಿಕೊಂಡು ದಾಸೋಹ ಕಾರ್ಯ ಪ್ರಾರಂಭಿಸಿದರೆಂದು ತಿಳಿದು ಬರುತ್ತದೆ. ಶ್ರೀ ಚೆನ್ನಬಸಪ್ಪನವರು "ಭಕ್ತ"ರಾಗಿದ್ದು, ದಿನವೂ ಜಂಗಮಮೂರ್ತಿಯ ಪಾದೋದಕ - ಪ್ರಸಾದ ಪಡೆಯುತ್ತಿದ್ದರೆಂದೂ, ಉಜ್ಜಯಿನಿ ಜಗದ್ಗುರುಗಳ ಪರಮಶಿಷ್ಯರಾಗಿದ್ದರೆಂದೂ ತಿಳಿದು ಬರುತ್ತದೆ. ಕಾನಾಮಡುಗಿನಲ್ಲಿ ದಾಸೋಹಮಠ ನಿರ್ಮಾಣ ಮಾಡಿ, ಅವರಿಂದಲೇ ಅದರ ಪ್ರವೇಶೋತ್ಸವವನ್ನು ನೆರವೇರಿಸಿ, ಸಮೀಪದ ನಗರ - ಗ್ರಾಮಗಳನ್ನು ಸಂಚರಿಸಿ, ದವಸ - ಧಾನ್ಯ ಸಂಗ್ರಹಿಸಿ, ನಿತ್ಯ ದಾಸೋಹವನ್ನು ಏರ್ಪಡಿಸಿದರು. ಅಮಲಾಪುರ ಎಂಬ ಗ್ರಾಮದಲ್ಲಿ, ತಳೆ ಕಳಚಿ ಬಿದ್ದ ಬಸವಣ್ಣನ ಮೂರ್ತಿಯನ್ನು ಸರಿಪಡಿಸಿ, ಅಲ್ಲಿಯೂ ಒಂದು ದಾಸೋಹ ಮಠವನ್ನು ಸ್ಥಾಪಿಸಿದರು. ಪ್ರಥಮ ಶರಣಾರ್ಯರು (ಕ್ರಿ.ಶ. ೧೮೬೩) ಬಸವಪುರಾಣ ಪ್ರಸಾರ, ಭಕ್ತಿ ಪ್ರಸಾರ, ನೀತಿ ಪ್ರಸಾರ ಕಾರ್ಯಗಳನ್ನು ಕೈಕೊಂಡ ಶರಣ ಚೆನ್ನಬಸವಾರ್ಯರು, ತಮ್ಮ ವಂಶದ ಒಂದು "ಮರಿ"ಯನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡು, ತಮ್ಮ ಜನಸೇವಾಕಾರ್ಯ ಮುಂದುವರಿಸಿದರು. ಅವರು ಕ್ರಿ.ಶ. ೧೮೮೩ ರಲ್ಲಿ ಲಿಂಗೈಕ್ಯರಾಗಲು, ದ್ವಿತೀಯ ಚನ್ನಬಸವಾರ್ಯರು ಶ್ರೀಮಠದ ಅಧಿಕಾರ ವಹಿಸಿಕೊಂಡರು. ಅವರು, ಪ್ರಥಮ ಶರಣರ 'ಮಹಾಸಮಾಧಿ' ಮಂದಿರವನ್ನು ಕ್ರಿ.ಶ. ೧೮೮೪ ರಲ್ಲಿ ನಿರ್ಮಿಸಿ, ನಿತ್ಯಪೂಜೆ, ದೀಪೋತ್ಸವ, ಜಾತ್ರೆ ವ್ಯವಸ್ಥೆ ಮಾಡಿದರು. ಹೀಗೆ ಶರಣ ನಿಂದಲ್ಲಿ "ಸಂಸ್ಥಾನ," ಜನಮನದ ಸೇವೆ - ತ್ಯಾಗಗಳ ಫಲವಾಗಿ ಮೂಡಿನಿಂತು, ಆ ಪರಂಪರೆ ಇಂದಿನವರೆಗೂ ಮುನ್ನಡೆದಿರುವುದು ಅಭಿಮಾನದ ಸಂಗತಿ.

ಶರಣಾರ್ಯರ ವಂಶ ಪರಂಪರೆ

ಕಾನಾಮಡುಗು ದಾಸೋಹ ಶರಣ ಪರಂಪರೆಯಲ್ಲಿ, ಎರಡನೆಯ ಹಾಗೂ ಮೂರನೆಯ ಶರಣರ ಕಾಲದಲ್ಲಿ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳು ಪ್ರಾರಂಭವಾದುವು. ಮಠಗಳ ನಿರ್ಮಾಣ, ಯಾತ್ರಿಗಳಿಗೆ ವಸತಿ, ತೇರು - ಜಾತ್ರೆ ವ್ಯವಸ್ಥೆ, ಮಠಕ್ಕೆ ದಾನವಾಗಿ ದೊರೆತ ಜಮೀನಿನಲ್ಲಿ ವ್ಯವಸಾಯ, ಸಮೀಪದ ಗ್ರಾಮ - ನಗರಗಳಲ್ಲಿ ಸಂಚರಿಸಿ, ದವಸ - ಧಾನ್ಯ - ಕಾಣಿಕೆ ಸಂಗ್ರಹ ಹಾಗೂ ಅದರ ಬಳಕೆಯ ಸುವ್ಯವಸ್ಥೆ ಮಾಡಿದರು. ಶ್ರೀ ಶರಣರ ಪರಂಪರೆ, ವಂಶಪಾರಂಪರ್ಯವಾಗಿ ನಡೆದು ಬಂದಿರುವುದು ಗಮನಾರ್ಹ ವಿಶೇಷ. ಎರಡನೆಯ ಶರಣಾರ್ಯರ ಕಾಲದಲ್ಲಿ ಒಂದು ಸಂಸ್ಕೃತ ಪಾಠಶಾಲೆ ಶ್ರೀಮಠದಲ್ಲಿ ಪ್ರಾರಂಭವಾಯಿತು. ಕ್ರಿ.ಶ. ೧೯೦೭ ರಲ್ಲಿ ಅಧಿಕಾರ ವಹಿಸಿಕೊಂಡ ಮೂರನೆಯ ಶರಣಾರ್ಯರು ಕ್ರಿ.ಶ. ೧೯೩೧ ರಲ್ಲಿ ಏಡೆಡ್ ಹೈಯರ್ ಪ್ರೈಮರಿ ಶಾಲೆಯನ್ನು, ಆಂಗ್ಲ ಅಧಿಕಾರಿಗಳ ಮನವೊಲಿಸಿ ಅತ್ಯಂತ ಹಿಂದುಳಿದ ಪ್ರದೇಶವಾದ ಕೂಡ್ಲಿಗಿ ತಾಲ್ಲೂಕಿನಲ್ಲಿ ಈ ಕಾನಾಮಡುಗುನಲ್ಲಿ ಪ್ರಾರಂಭಿಸಿದುದು ಅತ್ಯಂತ ದೂರದೃಷ್ಟಿಯ ಸಾಧನೆ. ವಿಸ್ತಾರವಾದ ಬಳ್ಳಾರಿ ಜಿಲ್ಲೆಯಲ್ಲಿಯೇ ಇದು ಮೂರನೆಯದೆಂದೂ, ಅತ್ಯಂತ ಪ್ರತಿಭಾನ್ವಿತರಿಗೆ ಶಿಕ್ಷಣ ನೀಡಿದ ಶಾಲೆಯೆಂದೂ ಸುಪ್ರಸಿದ್ಧವಾಗಿದೆ.

ನಾಲ್ಕನೆಯ ಶ್ರೀ ಶರಣಾರ್ಯರು (ಜನನ ೧೯೨೮) ತಮ್ಮ ಶ್ರೀ ಮಠದ ಪರಂಪರೆಯನ್ನು ನಡೆಯಿಸುತ್ತಾ ಬಂದು, ಆಧುನಿಕ ಶಿಕ್ಷಣದ ವ್ಯವಸ್ಥೆಯ ವಿಸ್ತರಣೆಗೂ ಮುಂದಾದರು. ಸದ್ಭಕ್ತರ ಕ್ರಿಯಾಶಕ್ತಿಯಿಂದ ಶ್ರೀ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ ಸ್ಥಾಪನೆಯಾಗಿ, ತನ್ಮೂಲಕ ಒಂದು ಸುಸಜ್ಜಿತ ಪ್ರೌಢಶಾಲೆ, ಶ್ರೀ ಮಠದ ಆವರಣದಲ್ಲಿಯೇ ಪ್ರಾರಂಭವಾಯಿತು. ಪರವೂರುಗಳಿಂದ ಬರುವ ಎಲ್ಲ ವಿದ್ಯಾರ್ಥಿಗಳಿಗೆ ಶ್ರೀಮಠ ಉಚಿತ ದಾಸೋಹವನ್ನು ವ್ಯವಸ್ಥೆಗೊಳಿಸಿತ್ತು. ಹೈಯರ್ ಪ್ರೈಮರಿ ಮತ್ತು ಹೈಸ್ಕೂಲಿನ ಎಲ್ಲ ವಿದ್ಯಾರ್ಥಿಗಳಿಗೆ ವಸತಿ, ಭೋಜನದ ವ್ಯವಸ್ಥೆ ಶ್ರೀಮಠದಿಂದಲೇ ವ್ಯವಸ್ಥೆಯಾಗುತ್ತಿದ್ದುದು, ಈ ಲೇಖಕನಂಥ ಸಾವಿರಾರು ಬಡ ವಿದ್ಯಾರ್ಥಿಗಳು, ಜೀವನದ ಬೆಳಕು ಕಂಡುದು ಈ ದಾಸೋಹ ಮಠದಿಂದಲೇ ಎಂಬುದು ಅಭಿಮಾನದ ಸಂಗತಿ. ಕಾನಾಮಡುಗಿನ ಸುತ್ತ ಇಪ್ಪತ್ತು ಇಪ್ಪತ್ತೈದು ಮೈಲುಗಳ ಫಾಸಲೆಯಲ್ಲಿ ಅಂದು ಇದೊಂದೇ ಹೈಸ್ಕೂಲು. ನೂರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ. ಗ್ರಾಮೀಣ ಭಾಗದ ಅಭಿವೃದ್ಧಿಗೆ ನಾಂದಿಯಾಯಿತು. ಹೊಸ ಪ್ರಪಂಚ ತೆರೆದುಕೊಂಡಿತು. ಸ್ವಾತಂತ್ರ್ಯ ಹೋರಾಟದ ಕೇಂದ್ರವೂ ಆಯಿತು. ರಸ್ತೆಗಳು ನಿರ್ಮಾಣವಾದವು. ರೈತ ಸಮಾಜದಲ್ಲಿ ಪ್ರಗತಿ ಮೂಡಿತು. ಜಾತಿ

ಮತ - ಪಂಥ ಪಂಗಡಗಳ ಜಂಜಾಟವಿಲ್ಲದ ಸಮಾಜ ನಿರ್ಮಾಣಕ್ಕೆ ಶ್ರೀ ದಾಸೋಹಮಠದ ಶರಣ ಪರಂಪರೆ ಭಕ್ತಿ - ಸೇವೆ - ಕಾಯಕ ದಾಸೋಹ ತತ್ವಗಳ ಪ್ರಸಾರವೇ ಮುಖ್ಯ ಕಾರಣವಾಯಿತು. ಅತ್ತ ಪಂಚಗಣಾಧೀಶರಲ್ಲೊಬ್ಬ ನಾಯಕನಹಟ್ಟಿ ಶ್ರೀ ತಿಪ್ಪೇರುದ್ರ, ಇತ್ತ ಇನ್ನೊಬ್ಬ ಗಣಾಧೀಶ ಶ್ರೀ ಕೊಟ್ಟೂರು ಬಸವೇಶ್ವರ, ಜಗಲೂರಿನ ಮಹಾಮಹಿಮ ಮಹಾಸ್ವಾಮಿ ಇವರ ಮಧ್ಯೇ ಶ್ರೀ ಶರಣಪ್ಪನವರ ದಾಸೋಹ ಮಠ ! ಕಾನನದ ಮಡುವಿನಂತಿದ್ದುದು, ಜ್ಞಾನದ ಮಡುವಿನ ಮಾನವ ವಸತಿ ನಾಡಾಯಿತು. ಇಂದಿನ ಕಾನಾಮಡುಗು. ಒಬ್ಬ ಶರಣನ ಸಂಕಲ್ಪ ಅದೆಂಥ ಪವಾಡ ಮಾಡಿತು ! ಭಕ್ತಿಯೊಡನೆ ಸೇವೆಯೂ ಬೆರೆತು ಸಮಾಜ ಹದಗೊಂಡಿತು !

ಶಿಕ್ಷಣ - ಸಮಾಜ - ಧಾರ್ಮಿಕ ಸೇವಾ ಕಾರ್ಯ

ಮೂಲತಃ ಧರ್ಮಕೇಂದ್ರಿತವಾದ ಈ ದಾಸೋಹಮಠ ಕಾಲಗತಿಗನುಸರಿಸಿ, ಸಾಮಾಜಿಕ ಸ್ಪಂದನ ಪಡೆದು, ಸಮಾಜದ ಸರ್ವಾಂಗೀಣ ಪ್ರಗತಿಗೆ ದಾರಿತೋರಿತು. ಇದರ ಸಮೀಕ್ಷೆ ಒಂದು ರೋಮಾಂಚನಕಾರಿಯಾದುದು.

ಆಧುನಿಕ ರೀತಿಯ ಶಾಲೆ, ಇಂಗ್ಲೀಷ್ - ಕನ್ನಡಗಳ ಶಾಸ್ತ್ರೀಯ ಅಭ್ಯಾಸ, ವೈಜ್ಞಾನಿಕ ಶಿಕ್ಷಣ, ತರಬೇತಿ ಹೊಂದಿದ ಶಿಕ್ಷಕರು, ನೈತಿಕ ಹಾಗೂ ದೈಹಿಕ ಶಿಕ್ಷಣ, ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯತ್ವ ವಿದ್ಯಾರ್ಥಿಗಳಿಗೆ PEN - FRIENDSHIP CLUB ನಿಂದ ಬೇರೆ ದೇಶಗಳ - ಸಂಸ್ಥೆಗಳ ಮಿತ್ರರ ಪರಿಚಯ - ಸಹಕಾರ - ಸ್ನೇಹ ಸೇತುವೆ ನಿರ್ಮಾಣ, ಸ್ವಾತಂತ್ರ್ಯದ ಕಲ್ಪನೆ, ಗಾಂಧಿ ಚಳವಳಿಯ ಪ್ರಭಾವ, ವಂದೇ ಮಾತರಂ, ಪ್ರಭಾತಫೇರಿ, ಪತ್ರಿಕೆಗಳ ಪ್ರಸಾರ, ಗಾಂಧಿ ಟೋಪಿ, ಸೂಟು - ನೆಕ್‌ಟೈ, ಯೂನಿಫಾರಂ, ಮಾಸ್‌ಡ್ರಿಲ್, ಬ್ಯಾಂಡ್‌ಮಿಂಟನ್‌ನಂಥ ಆಟಗಳು, ತಲೆಯ ಮೇಲೆ ಕ್ರಾಪು, ಶಾಲೆಗೆ ಬರುವ ಹುಡುಗಿಯರು, ಶಿಕ್ಷಕಿಯರು - ಹೀಗೆ ಕಾನಾಮಡುವಿನ ಜನ ಕಾಡಿನಲ್ಲಿ ನೂತನ ಜೀವನ ಸಂಚಾರವಾಯಿತು! ನೂತನ ಶಿಕ್ಷಣ ವಿನೂತನ ಪ್ರಭಾವವನ್ನು ಬೀರಿದುದು ಅಂದು, ಅದೆಂಥ ಹೊಸದು! ಪ್ರೈಮರಿ ಶಾಲೆ, ಹೈಯರ್ ಪ್ರೈಮರಿ ಶಾಲೆ, ಹೈಸ್ಕೂಲು, ಈಚೆಗೆ ಶಿಕ್ಷಕರ ತರಬೇತಿ ಶಾಲೆ, ಶ್ರೀ ಶರಣಬಸವೇಶ್ವರರ, ಅವರ ಭಕ್ತ ಸಮುದಾಯದ ಕೊಡುಗೆ. ಇದರ ಪ್ರಭಾವದಿಂದ ಈಗ ಹಳ್ಳಿಹಳ್ಳಿಗಳಲ್ಲಿ ಶಾಲೆ, ಕಾಲೇಜುಗಳು - ಈ ೩೦ - ೪೦ ವರ್ಷಗಳಲ್ಲಿ ಮೂಡಿ ಬಂದಿರುವುದು ಆಧುನಿಕ ಪವಾಡ. ಶ್ರೀ ಶರಣಬಸವೇಶ್ವರರ ದೂರದೃಷ್ಟಿಯ ಕೊಡುಗೆ.

ಕಾನಾಮಡುವಿನ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಸ್ವತಂತ್ರ ಕಟ್ಟಡ, ಶಿಕ್ಷಕರು - ಸಿಬ್ಬಂದಿ, ಶಿಕ್ಷಣ ಸೌಕರ್ಯಗಳು, ಬೋರ್ಡಿಂಗ್ ವ್ಯವಸ್ಥೆಯಾಗಿದೆ. ಈ ಲೇಖಕನ ನೇತೃತ್ವದಲ್ಲಿ ಶ್ರೀ ಕೊ. ಚೆನ್ನಬಸಪ್ಪ, ಬಿ.ಎನ್. ವೀರಭದ್ರಪ್ಪ, ಶ್ರೀ ಹುಲಿಕೆರೆ ಶಿವಣ್ಣ, ಕೆಂಚಮಲ್ಲನಹಳ್ಳಿ ಶಾನುಭೋಗರು ಮತ್ತು ನೂರಾರು ಹಳೆಯ ವಿದ್ಯಾರ್ಥಿಗಳು ಬೇಸಿಗೆ ಶಿಬಿರ ಏರ್ಪಡಿಸಿ ಸುಮಾರು ಒಂದು ಲಕ್ಷ ಬಾಳುವ ಹೈಸ್ಕೂಲಿನ ಹೊಸ ಕಟ್ಟಡವನ್ನು ವಿದ್ಯಾರ್ಥಿಗಳೇ ಸ್ವಂತ ಕೈಗಳಿಂದ ಕಟ್ಟಿ ನಿಲ್ಲಿಸಿದುದು ಪವಾಡವಲ್ಲ, ನಿಜ ಸಂಗತಿ. ಆಧುನಿಕ ಜಗತ್ತಿನ ಸಂಪರ್ಕ ಪಡೆದ ನಾಲ್ಕನೆಯ ಶರಣಾರ್ಯರು ತಮ್ಮ ಐವತ್ತನಾಲ್ಕನೆಯ ವರ್ಷದಲ್ಲಿ ಲಿಂಗೈಕ್ಯರಾದರು. ಅವರ ಮಗ ಐದನೆ ಶರಣಾರ್ಯರು (ಕ್ರಿ. ಶ. ೧೯೭೭) ಕಿರಿಯರಾಗಿದ್ದು, ಇನ್ನೂ ಶಿಕ್ಷಣ ಸಂಸ್ಕಾರ ಪಡೆಯುತ್ತಿದ್ದಾರೆ. ಶ್ರೀ ಷ. ಬ್ರ. ಕೊಂಕಲ್ ಮಠಾಧ್ಯಕ್ಷರಾದ ಸೋಮೇಶ್ವರ ಶಿವಾಚಾರ್ಯರು ದಾಸೋಹ ಮಠದ ಆಡಳಿತಾಧಿಕಾರಿಗಳಾಗಿ, ಹಿಂದಿನ ಶರಣರ ಧರ್ಮಪತ್ನಿಯರಾದ ಪಾರ್ವತಮ್ಮ, ಲಲಿತಮ್ಮನವರ ಮೇಲ್ವಿಚಾರಣೆಯಲ್ಲಿ, ಸದ್ಭಕ್ತರ ಸೇವೆಯಲ್ಲಿ, ಶ್ರೀಮಠದ ಶಿಕ್ಷಣ ದಾಸೋಹ, ಪ್ರಸಾದ ದಾಸೋಹ ಮತ್ತು ಸಾಮಾಜಿಕ ಸೇವೆ ನಿರಂತರವಾಗಿ ನಡೆಯುತ್ತಿದೆ.

ಶ್ರೀ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರು ಸಾವಿರಾರು ಜನ ಶಿಕ್ಷಕರಾಗಿದ್ದಾರೆ. ಸುಪ್ರಸಿದ್ಧ ವಕೀಲರಾಗಿದ್ದಾರೆ. ನ್ಯಾಯಮೂರ್ತಿಗಳೂ ಆಗಿ ಕೀರ್ತಿಗಳಿಸಿರುವರು. ಒಳ್ಳೆಯ ವೈದ್ಯರಾಗಿ, ಇಂಜಿನಿಯರ್‌ಗಳಾಗಿ, ಆಳಿತಾಧಿಕಾರಿಗಳಾಗಿ ಹೆಸರು ಗಳಿಸಿರುವುದು ಹೆಮ್ಮೆಯ ಸಂಗತಿ. ಸಮಾಜ ಸೇವೆಯಲ್ಲಿ ನಿರತರಾದ ಕೆಲವರು ಶಾಸಕರಾಗಿ, ರಾಜಕೀಯ ನಾಯಕರಾಗಿ ಹೆಸರಾಗಿರುವರು.

ಕೆಲವು ಪ್ರತಿಭಾನ್ವಿತರು ಇಂದು ಪರದೇಶಗಳಲ್ಲಿಯೂ ಸೇವೆ ಸಲ್ಲಿಸುತ್ತಿರುವರು. ಈ ಎಲ್ಲ ಸಾಧನೆಗೆ ಕೇಂದ್ರ ಬಿಂದು ಕಾನಾಮಡುಗಿನ ಶ್ರೀ ಶರಣಪ್ಪ ಸ್ವಾಮಿ ಪರಂಪರೆ. ಶ್ರೀ ಮಠದ ವಿದ್ಯಾರ್ಥಿ ಹಾಗೂ ಸ್ಥಳೀಯರಾದ ಪ್ರೊ. ಎಚ್.ಎಂ.

ಮುದ್ದುಬಸಯ್ಯನವರ ಮಾತು ಇಲ್ಲಿ ಉಲ್ಲೇಖನಾರ್ಹ. "ಈ ಮಠದ ಹೆಗ್ಗಳಿಕೆಯಿರುವುದು ಒಂದು ಸಮುದಾಯದ ಅಥವಾ ಸಮಾಜದ ಸಂಘಟನೆಯಲ್ಲಿ, ಸಮಾಜ ಸೇವೆಯಲ್ಲಿ, ಕರ್ಮಯೋಗದಲ್ಲಿ, ಭಕ್ತಿಮಾರ್ಗದ ಆಚರಣೆಯಲ್ಲಿ ಬೋಧನೆಯ ಪ್ರಚಾರದಲ್ಲಿ ಅನುಸರಿಸುವ ಜೀವನ ಮಾರ್ಗದರ್ಶನದ ಆದರ್ಶದಲ್ಲಿ" (ಶ್ರೀ ಶರಣ ಚನ್ನಬಸವೇಶ್ವರ ಚರಿತ ಕಾವ್ಯದ ಪರಿಚಯದಲ್ಲಿ) ಇದು ಶ್ರೀ ಶರಣಾರ್ಯಮಠದ ಜೀವಂತಿಕೆಯ ಚಿತ್ರ.

ಕಲೆ - ಸಾಹಿತ್ಯ - ಸಂಗೀತ ಸೇವೆಯಲ್ಲಿ

ಪ್ರತಿವರ್ಷ ನಡೆಯುವ ಕಾರ್ತಿಕೋತ್ಸವ ಹಾಗೂ ವಾರ್ಷಿಕ ಜಾತ್ರೆ ಈ ನಾಡಿನ ಜನತೆಯ ಭಕ್ತಿ ಪುನರುಜ್ಜೀವಿಸುವ ಕ್ರಿಯೆ. "ಮುಡಿಪು" "ಕಾಣಿಕೆ" "ಕೊಡುಗೆ"ಗಳ ರೂಪದಲ್ಲಿ ಬರುವ ಧನ, ವಸ್ತು, ದವಸ, ಧಾನ್ಯದಿಂದ ಅವರ ನಿಷ್ಠೆ, ಭಕ್ತಿಯನ್ನು ಅಳೆಯಬೇಕು. ಯಾವ ಕೆಲಸಕ್ಕೂ ಇಲ್ಲಿ ಕೂಲಿಯಿಲ್ಲ, ಶ್ರೀ ಮಠದ ಆಶೀರ್ವಾದವೇ ಅದಕ್ಕೆ ಫಲ. ತೇರು ಜಾತ್ರೆಯ ಎಲ್ಲ ಕೆಲಸಗಳು ಸಾರ್ವಜನಿಕರಿಂದಲೇ ನಡೆಯುತ್ತವೆ. ಅಂಗಡಿ ಮುಂಗಟ್ಟುಗಳವರು ಕಾಣಿಕೆ ಸಲ್ಲಿಸುವರು. ಅಯ್ಯಾಚಾರ, ಲಿಂಗದೀಕ್ಷೆ ಪುರಾಣ ಹಾಗೂ ಪ್ರವಚನ ಮತ್ತು ಕೀರ್ತನೆಗಳು, ಜಾನಪದ ನೃತ್ಯ, ಭಜನೆ, ನಾಟಕಗಳು ತಂತಾನೇ ವ್ಯವಸ್ಥೆಯಾಗುತ್ತವೆ ! ಕಾನಾಮಡುಗು ಪರಿಸರದ ಎಲ್ಲ ಜಾತಿಯ ಜನ, ಜಾತ್ರೆಗೆ ಹೋಗುವುದೊಂದು ಕರ್ತವ್ಯವೆಂದೇ ಭಾವಿಸುತ್ತಾರೆ. ಹೊಸ ಉಡುಪು ಧರಿಸಿದ, ಆಭರಣ ಧರಿಸಿದ, ಕೂಸು ಕುನ್ನಿಗಳನ್ನು ಎತ್ತಿಕೊಂಡು ಬಂದು, ಬೆಂಡು ಬತ್ತಾಸು ದಾಣಿ ಮಂಡಾಳು ತಿನ್ನುವ, ಮನೆಗೆ ಕೊಂಡು ಹೋಗುವ ಜನರ ಉತ್ಸಾಹ ಹೇಳತೀರದು. ಶ್ರೀ ಶರಣರ ಮಠಕ್ಕೆ ಕಾಯಿ ಹೊಡೆಯಿಸುವ ಬಾಳೆಹಣ್ಣು ನೈವೇದ್ಯ ಮಾಡಿಸುವ, ಕಾಣಿಕೆ ಸಲ್ಲಿಸುವ ಕರ್ತವ್ಯ ಪ್ರಜ್ಞೆ ಈ ಜನತೆಯಲ್ಲಿ ಬೆಳೆದುಬಂದಿದೆ. ಈಗಲೂ ಪ್ರತಿದಿನ ಹೆಣ್ಣು ಗಂಡು ಮಕ್ಕಳು ಸ್ನಾನಮಾಡಿ ಭಕ್ತಿಯಿಂದ ಕೈಯಲ್ಲಿ ಊದುಬತ್ತಿ ಹಿಡಿದು, ಶರಣರ ಗದ್ದುಗೆಗಳಿಗೆ ಪ್ರದಕ್ಷಿಣೆ ಹಾಕಿ,.ಪೂಜೆ ಪ್ರಾರ್ಥನೆ ಸಲ್ಲಿಸುವ ದೃಶ್ಯ, ಈ ನಾಡಿನ ಜನಮನದಲ್ಲಿ ಮೂಡಿರುವ ಭಕ್ತಿ ಶ್ರದ್ಧೆಗಳ ಪ್ರತೀಕ. ಈ ಭಾಗದ ಎಲ್ಲ ಜಾತಿಮನೆಗಳಲ್ಲಿ ಶರಣಪ್ಪ, ಸಣ್ಣಶರಣ, ಶರಣಬಸವ ಮುಂತಾದ ಹೆಸರಿನ ಮಕ್ಕಳು ಇದ್ದೇ ಇರುತ್ತಾರೆ. ಹೀಗೆ ಶರಣ ತತ್ವ, ಶರಣತ್ತ್ವ ಇಲ್ಲಿನ ಜನಸಮುದಾಯದ ಜೀವನಸೂತ್ರವಾಗಿದೆ. ಇದು ಶ್ರೀ ಶರಣಾರ್ಯಮಠದ ನೇರ ಪ್ರಭಾವ.

ನಾಲ್ಕನೆಯ ಶರಣಾರ್ಯರು ಸ್ವಯಂ ಸಾಹಿತಿಗಳಾಗಿದ್ದರು. ಸಾಹಿತ್ಯ - ಕಲೆಗಳನ್ನು ಪೋಷಿಸಿದರು. ಶ್ರೀ ಜೋಳದರಾಶಿ ದೊಡ್ಡನಗೌಡರಂಥ ಪ್ರವಚನಕಾರರನ್ನೂ, ಶ್ರೀ ಜಂಬಲದಿನ್ನಿ ಸಿದ್ಧರಾಮರಂಥ ಸಂಗೀತಗಾರರನ್ನೂ, ವೇ. ಶಂಕರಶಾಸ್ತ್ರಿಗಳು, ಪಂಡಿತ ಬಿ.ಎಂ. ಗುರುಸಿದ್ಧ ಶಾಸ್ತ್ರಿ ಮತ್ತು ಪಂಡಿತ ಎಸ್.ಎಂ. ಚಂದ್ರಶೇಖರಯ್ಯ ಮುಂತಾದ ಕವಿ ಲೇಖಕ ಪ್ರವಚನಕಾರರನ್ನು ಸೇವೆಗೆ ಹಚ್ಚಿ, ಗೌರವಿಸಿದ ಉದಾಹರಣೆಗಳಿವೆ. ಕಾನಾಮಡುವಿನ ಶ್ರೀಮಠದ ಶರಣಾರ್ಯರ ಬಗೆಗೆ ಪುರಾಣಗಳು, ಗ್ರಂಥಗಳು ಪ್ರಕಟವಾಗಿವೆ. ಮುಖ್ಯವಾಗಿ ಇತ್ತೀಚೆಗೆ ಪ್ರಕಟವಾದ ಶ್ರೀ ಶರಣ ಚನ್ನಬಸವೇಶ್ವರ ಚರಿತ ಕಾವ್ಯಂ - ಕು.ಛ.ಮ. ಗುರುಸಿದ್ಧಯ್ಯ, ಪ್ರಕಾಶಕರು, ಪಂಡಿತ ಪ್ರಕಾಶನ, ಕೊಟ್ಟೂರು ಹಾಗೂ ಇಷ್ಟರಲ್ಲೇ ಗದುಗಿನ ತೋಂಟದಾರ್ಯ ಮಠದಿಂದ ಪ್ರಕಟವಾಗಲಿರುವ ಶ್ರೀಮಠದ ಪರಿಚಯ ಗ್ರಂಥ ಉಲ್ಲೇಖನಾರ್ಹ.

ಶಿವಶರಣರ ಭಕ್ತಿಯ ತತ್ತ್ವವನ್ನು ಆಚರಿಸಿದ ಕಾನಾಮಡುವಿನ ಶ್ರೀ ಶರಣಾರ್ಯ ಪರಂಪರೆ, ಜನತೆಯಲ್ಲಿ ಧರ್ಮಪ್ರಿಯತೆ, ದಾಸೋಹನಿಷ್ಠೆ, ಕಾಯಕದ ಮಹತ್ವವನ್ನು ಬಿತ್ತರಿಸಿ ಸಕಲ ಸಮಾಜವನ್ನು ಉದ್ಧರಿಸುವ ಶಿಕ್ಷಣ, ಸಮಾಜ ಸೇವೆ ಕೈಕೊಂಡು ಕೃತಾರ್ಥವಾದುದು ಉಲ್ಲೇಖನೀಯ. ಕರ್ನಾಟಕದ ಇಂಥ ನೂರಾರು ಮಠ - ಪೀಠ ಸಂಸ್ಥಾನಗಳ ಲೌಕಿಕ ಹಾಗೂ ಆಗಮಿಕ ಸೇವೆ ಚರಿತ್ರ ಪ್ರಸಿದ್ಧವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ, ಸ್ವಾತಂತ್ರ್ಯಾನಂತರದಲ್ಲಿ ಕಾನಾಮಡುವಿನ ಶ್ರೀ ಶರಣಾರ್ಯ ದಾಸೋಹ ಮಠ ರುದ್ರಾಕ್ಷರಾಕ್ಷರಗಳಿಂದ ಬರೆದಿಡುವ ಸೇವಾಕಾರ್ಯಕ್ಕೆ ಪ್ರಸಿದ್ಧವಾಗಿದೆ. ಪುಣ್ಯದ ಬೀಡಾಗಿದೆ.

ಶಿರಹಟ್ಟಿ ಫಕೀರೇಶ್ವರ ಮಠದ ಕೊಡುಗೆ

ಡಾ. ಬಿ.ವ್ಹಿ. ಶಿರೂರ

ಮೊದಮೊದಲು ವ್ಯಕ್ತಿಯ ಆತ್ಮೋದ್ಧಾರದ ದೃಷ್ಟಿಯನ್ನಿಟ್ಟುಕೊಂಡು ನಿರ್ಮಾಣಗೊಂಡ ಮಠಗಳು ಬರುಬರುತ್ತ ಸಮಾಜದ ಉದ್ಧಾರದತ್ತಲೂ ವಾಲಿದುದು ಐತಿಹಾಸಿಕ ಸತ್ಯ. ಅದ್ದರಿಂದಲೇ ನಿಜಗುಣರು "ಜಾಣನು ಲೌಕಿಕ ಪಾರಮಾರ್ಥ ವೆರಡನು ಕೂಡಿ ನಡೆಸುತಿಹನು" ಎಂದು ಹಾಡಿದ್ದು. ಅವರ ಲೌಕಿಕ ವ್ಯವಹಾರ ಧರ್ಮದಾಸೋಹ, ಅನ್ನದಾಸೋಹ ಮತ್ತು ಜ್ಞಾನದಾಸೋಹ ಎಂಬ ತ್ರಿವಿಧ ದಾಸೋಹಕ್ಕೆ ಸಂಬಂಧಿಸಿದ್ದು. ಸಾಮಾನ್ಯವಾಗಿ ವೀರಶೈವಮಠಗಳು ಈ ತತ್ವವನ್ನು ಪಾಲಿಸುತ್ತ ಬಂದಿವೆ. ಅವುಗಳ ಪಾಲನೆಯೊಂದಿಗೆ ತಮ್ಮದೇ ಆದ ವಿಶಿಷ್ಟತೆಯನ್ನು ಮೆರೆಯುತ್ತಿರುವ ಮಠಗಳಲ್ಲಿ ಸಾವಳಗಿಯ ಶಿವಲಿಂಗೇಶ್ವರಮಠ ಮತ್ತು ಶಿರಹಟ್ಟಿಯ ಫಕೀರೇಶ್ವರಮಠಗಳು ಪ್ರಮುಖವಾದವು. ಅವು ಹಿಂದೂ ಮುಸ್ಲಿಂ ಧರ್ಮಸಮನ್ವಯದ ವಿಶಿಷ್ಟ ಸಂಪ್ರದಾಯವನ್ನು ಪಾಲಿಸುತ್ತ ಬಂದಿವೆ.

ಅದರಲ್ಲಿ ಶಿರಹಟ್ಟಿ ಫಕೀರಸ್ವಾಮಿಮಠ ೧೬ನೆಯ ಶತಮಾನದ ಅಂತ್ಯ (ಕ್ರಿ. ಶ. ೧೫೨೦) ದಲ್ಲಿ ತನ್ನ ಅಸ್ತಿತ್ವವನ್ನು ಪಡೆಯಿತು. ಈ ಮಠದ ಮೂಲ ಕರ್ತೃಗಳು ಶ್ರೀ ಫಕೀರ ಚೆನ್ನವೀರರು. ಇವರು ಬಿಜಾಪುರದ ಖಾಜಾ ಅಮೀನದೀನರ ಆಶೀರ್ವಾದದಿಂದ ಶಿವಪ್ಪ ಗೌರಮ್ಮ ಎಂಬ ವೀರಶೈವ ದಂಪತಿಗಳ ಉದರದಲ್ಲಿ ಜನಿಸಿದರು. ಬಾಲ್ಯದಲ್ಲಿ ಉಂಟಾದ ಜ್ವರಬಾಧೆಯನ್ನು ತಪ್ಪಿಸಲು ಖಾಜಾ ಅಮೀನದೀನರ ಬಳಿಗೆ ತಂದರು. ಅವರು ಆ ಮಗುವನ್ನು ಬದುಕಿಸಿ, ಅದಕ್ಕೆ ಮೊದಲಿದ್ದ ಚೆನ್ನವೀರ ಎಂಬ ಹೆಸರಿಗೆ ಫಕೀರ ಎಂಬುದನ್ನು ಸೇರಿಸಿ 'ಫಕೀರ ಚೆನ್ನವೀರ' ಎಂದು ಕರೆದರು. ಅಲ್ಲಿಂದ ಮುಂದೆ ಶ್ರೀಮಠದ ಪೀಠಕ್ಕೆ ಬಂದ ಎಲ್ಲ ಶ್ರೀಗಳವರ ಹೆಸರಿನ ಹಿಂದೆ 'ಫಕೀರ' ಎಂಬ ಅಭಿದಾನವನ್ನು ಹಚ್ಚುತ್ತ ಬರಲಾಗಿದೆ. ಹೀಗೆ ಖಾಜಾ ಅಮೀನದೀನರು ಫಕೀರ ಚೆನ್ನವೀರರ ಬದುಕಿನುದ್ದಕ್ಕೂ ಮಾರ್ಗದರ್ಶಿಯಾಗಿ ನಿಂತರಲ್ಲದೆ ಬಿಜಾಪುರದ ಆದಿಲ್‌ಶಹಾನ ಕೋರಿಕೆಯ ಮೇರೆಗೆ ಇಬ್ಬರೂ ಸೇರಿ ನೀರಿನ ಮೇಲೆ ನಿಂತು ನಮಾಜು ಮಾಡಿದರು. ಅಲ್ಲಿಂದ ಅವಿನಾಭಾವವಾಗಿ ಬೆಳೆದು ಬಂದ ಈ ಹಿಂದೂ ಮುಸ್ಲಿಂ ಧರ್ಮಸಮನ್ವಯ ಈ ಮಠದ ಉಸಿರಾಯಿತು.

ಮುಂದೆ ಫಕೀರ ಚೆನ್ನವೀರರು ಯಾರೂ ಕಾಣದಂತೆ ಹೈದರಾಬಾದ ನಿಜಾಮನ ಅರಮನೆ ಪ್ರವೇಶಿಸಿ, ಕಠಾರಿಯಿಂದ ಇರಿಯಬಂದ ನಿಜಾಮನ ಬಂಜೆ ಮಡದಿಯ ಮಡಿಲಲ್ಲಿ ಮಗುವಾಗಿ ಕಾಣಿಸಿಕೊಂಡು ಪ್ರತ್ಯಕ್ಷರಾಗಿ, ಅವನಿತ್ತ 'ಕಠಾರಿ'ಯನ್ನು ಕಾಣಿಕೆಯಾಗಿ ಪಡೆದುಕೊಂಡು ಬಂದರು. ದೆಹಲಿಯ ಅಕ್ಬರನ ಆಸ್ಥಾನದಲ್ಲಿ ಪಂಚಗಿಣಿಯಾಗಿ ಪ್ರವೇಶಿಸಿ, ನಿಜ ನಿಲವು ತೋರಿ, ಗುರುಗಳು ಅರಮನೆಯಲ್ಲಿ ಇಟ್ಟಿದ್ದ 'ಶೈಲಸಿಕ್ಕೆ'ಯನ್ನು ಪಡೆದುಬಂದರು. ಅಲ್ಲದೆ ಅಕ್ಬರನು ಅಪಾರ ಸಂಪತ್ತಿನೊಂದಿಗೆ, ಕಾಲಿಗೆ ವೀರರು ಕಟ್ಟಿಕೊಳ್ಳುತ್ತಿದ್ದ 'ರಣಬಿಲ್ಲೆ'ಯನ್ನೂ ಕಾಣಿಕೆಯಾಗಿ ಕೊಟ್ಟನು. ಈ ರೀತಿ ಕಾಣಿಕೆಯಾಗಿ ಪಡೆದುಬಂದಿರುವ ವಸ್ತುಗಳನ್ನು ಜಾತ್ರೆಉತ್ಸವಗಳಲ್ಲಿ ಇಂದಿಗೂ ಸ್ವಾಮಿಗಳು ಧರಿಸುವುದುಂಟು.

ಫಕೀರಚೆನ್ನವೀರರು ಗದಗ ತಾಲೂಕಿನ ದುಂದೂರ ಗ್ರಾಮದಲ್ಲಿ ಜನರು ನೀರಿನ ತೊಂದರೆ ಅನುಭವಿಸುತ್ತಿರುವುದನ್ನು ನೋಡಿ, ಅಲ್ಲಿ ಒಂದು ಭಾವಿ ತೆಗೆಸಿದರು. ಸದಾ ನೀರಿನಿಂದ ತುಂಬಿರುವ ಈ ಭಾವಿಯ ಸಮೀಪ ಒಂದು ಮಲ್ಲಿಗೆ ಬಳ್ಳಿ ಹಚ್ಚಿದರು. ಅದು ಇಂದು ಅರ್ಧ ಎಕರೆಯವರೆಗೂ ವಿಸ್ತಾರವಾಗಿ ಹಬ್ಬಿಕೊಂಡು ಬೆಳೆದು ನಿಂತಿದೆ. ಕ್ರಿ. ಶ. ೧೬೦೨ರಲ್ಲಿ ಅವ್ವಲಿಂಗವ್ವನ ಮಗನಾದ ಸೋಮನಗೌಡನಿಗೆ ಬಿಜಾಪುರದ ಸುಲ್ತಾನನ ಸಮಕಾಲೀನನಾದ ಲಕ್ಷ್ಮೇಶ್ವರದ ಅಂಕುಶಖಾನನಿಂದ ಶಿರಹಟ್ಟಿ ದೇಶಗತಿಯನ್ನು ಕೊಡಿಸಿದರು. ನ್ಯಾಯವಾಗಿ ಒದಗಬೇಕಿದ್ದ ಅಧಿಕಾರವನ್ನು ಒದಗಿಸಿಕೊಟ್ಟರು.

ಇವರು ಮಾಡಿದ ಒಂದು ವಿಶಿಷ್ಟ ಕಾರ್ಯವೆಂದರೆ ಒಬ್ಬ ಡೊಂಬರಾಟದ ಹುಡುಗನಿಗೆ ಸಂಸ್ಕಾರ ಕೊಟ್ಟು ಫಕೀರ ಸಿದ್ಧರಾಮಸ್ವಾಮಿಯೆಂಬ ಹೆಸರಿಟ್ಟು ಶ್ರೀಮಠದ ಮೊದಲನೆಯ ಪೀಠಾಧಿಪತಿಯನ್ನಾಗಿ ಮಾಡಿದುದು. ಆಗ ಅವರು ಆತನಿಗೆ "ಬಂದವರಿಗೂಟವನು ಮಾಡಿಸು। ಹಿಂದಕ್ಕಟ್ಟಲು ಬೇಡ ನೀವಾ। ರೆಂದವರ ಕುಲ ಜಾತಿ ಧರ್ಮಂಗಳನು ಕೇಳದಿರು" ಎಂದು ಹೇಳಿದ ಮಾತು ಶ್ರೀಮಠಕ್ಕೆ ಮಂತ್ರ ಸ್ವರೂಪವಾಗಿದೆ. ಇಂದಿಗೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಲಾಗುತ್ತಿದೆ. ಫಕೀರ ಸಿದ್ಧರಾಮಸ್ವಾಮಿಗಳು ಶಿರಹಟ್ಟಿಯಲ್ಲಿ ನೀರಿನ ಅಭಾವವಿರುವುದನ್ನು ಕಂಡು ಮಠದ ಆವರಣದಲ್ಲಿ ಒಂದು ದೊಡ್ಡ

ಕಮಾನುಭಾವಿಯನ್ನು ಕಟ್ಟಿಸಿದರು. ಎರಡನೆಯ ಪೀಠಾಧಿಪತಿಗಳಾದ ಫಕೀರ ಶಿವಯೋಗಿಸ್ವಾಮಿಗಳು ೧೬೮೬ರಲ್ಲಿ ಅಧಿಕಾರ ಹೊಂದಿ ೧೭೫೧ರಲ್ಲಿ ಮೂಲಕರ್ತೃ ಫಕೀರಚೆನ್ನವೀರರ ಗದ್ದುಗೆ ಕಟ್ಟಿಸಲು ಪ್ರಾರಂಭಿಸಿದರು.

ಕ್ರಿ. ಶ. ೧೭೫೧ರಲ್ಲಿ ಮೂರನೆಯ ಪೀಠಾಧಿಪತಿಗಳಾಗಿ ಬಂದ ಶ್ರೀ ಫಕೀರಚೆನ್ನವೀರಸ್ವಾಮಿಗಳು ಜನಪರ ವೈದ್ಯರಾಗಿ ಜನರ ರೋಗರುಜಿನಗಳನ್ನು ನಿವಾರಣೆ ಮಾಡಿದರು. ಇವರು ಮೊದಲ ಬಾರಿಗೆ ಶಿರಹಟ್ಟಿಯಲ್ಲಿ ಕಟ್ಟಿಗೆಯ ಮಠಕಟ್ಟಿಸಿದರು. ಅದು ಸುಟ್ಟುಹೋಗಲು, ಈಗಿರುವ ಕಲ್ಲುಮಠ ಕಟ್ಟಿಸಿದರು. ೪ನೆಯ ಫಕೀರ ಸಿದ್ಧರಾಮಸ್ವಾಮಿಗಳು ಸವಣೂರ ನವಾಬರ ಮನೆಗೆ ಊಟಕ್ಕೆ ಹೋಗಿ ಅವರಿತ್ತ ಮಾಂಸಾಹಾರವನ್ನು ಹೂವನ್ನಾಗಿಸಿ, ಅವರಿಂದ ಬೃಹತ್ ನಗಾರಿಯನ್ನು ಕಾಣಿಕೆಯಾಗಿ ಪಡೆದುಕೊಂಡು ಬಂದರು. ಇದು ಇಂದೂ ಶ್ರೀಮಠದಲ್ಲಿದೆ. ೧೮೩೧ರಲ್ಲಿ ಪೀಠಕ್ಕೆ ಬಂದ ಫಕೀರ ಶಿವಯೋಗಿಸ್ವಾಮಿಗಳನ್ನು ಮೈಸೂರು ಮಹಾರಾಜರು ೧೮೫೧ರಲ್ಲಿ ಆಸ್ಥಾನಕ್ಕೆ ಬರಮಾಡಿಕೊಂಡು ಜವಾಹಿರ ಪದಕ ಮತ್ತು ಜವಾಹಿರ ಬಿಲ್ಲೆಗಳನ್ನಿತ್ತರು. ಅಲ್ಲದೆ ಮೈಸೂರಿನಲ್ಲಿ ಮಠ ಕಟ್ಟಿಸಿಕೊಟ್ಟು, ಪ್ರತಿವರ್ಷ ಶ್ರೀಮಠಕ್ಕೆ ೧೩೦೦ ರೂಪಾಯಿ ಕೊಡುವಂತೆ ಅನುಶಾಸನ ಹೊರಡಿಸಿದರು.

ಕ್ರಿ.ಶ. ೧೮೬೨ರಲ್ಲಿ ಅಂದಿನ ಸಾಂಗಲಿ ಸರಕಾರ ಜಾತ್ರೆಗೆ ಬರುವವರಿಗೆ ತಲೇಪಟ್ಟಿ ಹಾಕುವ ಹುಕುಂ ಹೊರಡಿಸಿತು. ಅದನ್ನು ವಿರೋಧಿಸಿ ಆರನೆಯ ಪೀಠಾಧಿಪತಿಗಳಾದ ಶ್ರೀಫಕೀರ ಚೆನ್ನವೀರಸ್ವಾಮಿಗಳು ಶ್ರೀಮಠದ ಜಾತ್ರೆಯನ್ನೇ ನಿಲ್ಲಿಸಿದರು. ಉಳಿದವರೆಲ್ಲ ಸೇರಿ ತೇರನ್ನು ಅಲಂಕರಿಸಿ ಎಳೆಯ ಹೋಗಲು ಅದು ಸಾಧ್ಯವಾಗಲಿಲ್ಲ. ಏಳು ವರ್ಷ ತೇರು ಇದ್ದ ಸ್ಥಳದಲ್ಲಿಯೇ ಇತ್ತು. ಸರಕಾರ ಆಜ್ಞೆಯನ್ನು ಹಿಂತೆಗೆದ ಮೇಲೆ ಉತ್ಸವ ಸಾಂಗವಾಗಿ ನೆರವೇರಿತು.

ಕ್ರಿ. ಶ. ೧೮೯೮ರಲ್ಲಿ ಪಟ್ಟಕ್ಕೆ ಬಂದ ಏಳನೆಯ ಪೀಠಾಧಿಕಾರಿ ಫಕೀರ ಸಿದ್ಧರಾಮಸ್ವಾಮಿಗಳು ಗದಗಿನಲ್ಲಿ ಶಾಖಾಮಠ ಸ್ಥಾಪಿಸಿದುದಲ್ಲದೆ, ಶ್ರೀಮಠದಲ್ಲಿದ್ದ ಸುಮಾರು ೩೦೦೦ ಗ್ರಂಥಗಳನ್ನು ೧೯೧೨ರಲ್ಲಿ ಸವಣೂರ ನವಾಬರಿಂದ ಪತ್ರತಂದ ದೀನದಾರಸಿದ್ದಕಿ ಎಂಬುವವರಿಗೆ ಕೊಟ್ಟರಂತೆ. ಈಗ ಆ ಪುಸ್ತಕಗಳು ಎಲ್ಲಿವೆಯೋ ತಿಳಿಯದು. ಇವರು ೧೯೦೦ರಲ್ಲಿ ಗಂಗಾಧರ ಜಾಧವ ಎಂಬುವವರಿಂದ ಶ್ರೀ ಮಠದ ಪುರಾಣ ಬರೆಸಿದರು. ಎಂಟನೆಯ ಪೀಠಾಧಿಪತಿಗಳಾದ ಶ್ರೀ ಫಕೀರ ಶಿವಯೋಗಿಸ್ವಾಮಿಗಳು (೧೯೩೧ರಲ್ಲಿ ಪಟ್ಟ) ನವಿಲುಗುಂದದ ನಾಗಲಿಂಗಸ್ವಾಮಿಗಳ ಆಶೀರ್ವಾದ ಪಡೆದವರಾಗಿದ್ದರು. ಯಂತ್ರಮಂತ್ರಗಳಿಂದ ರೋಗರುಜಿನ, ಭೂತಬಾಧೆ ನಿವಾರಿಸುತ್ತಿದ್ದರು. ಬೆಳಗಾವಿ ಜಿಲ್ಲೆಯ ಚಚಡಿ ದೇಸಾಯರ ವಾಡೆಯ ಬ್ರಹ್ಮರಾಕ್ಷಸ ಪೀಡೆಯನ್ನು ನಿವಾರಿಸಿದರು. ಅಣ್ಣಿಗೇರಿಯ ಸಿಕ್ಕೆದೇಸಾಯಿ ಮನೆತನಕ್ಕೆ ಪುತ್ರಸಂತಾನವನ್ನೊದಗಿಸಿದರು. ಸಂಶಿ, ಮಳಲಿಗಳಲ್ಲಿ ಶಾಖಾಮಠಗಳನ್ನು ಕಟ್ಟಿಸಿದರು. ೧೯೩೨ರಲ್ಲಿ ಶ್ರೀಮಠದ ಮುಂದೆ ಮುಸ್ಲಿಂ ವಾಸ್ತುಶಿಲ್ಪವುಳ್ಳ ಬೃಹತ್ ನಗಾರಿಖಾನೆಯನ್ನು ಕಟ್ಟಿಸಿದರು. ಇವರು ಪ್ರಾಣಿಪ್ರಿಯರಾಗಿದ್ದು ಶ್ರೀಮಠದಲ್ಲಿ ಚಿಗರಿ, ನವಿಲು, ಮೊಲ, ಗಿಳಿ, ಸಾರಂಗ ಮೊದಲಾದ ಪ್ರಾಣಿಗಳನ್ನು ಸಾಕಿದ್ದರು.

೧೯೩೯ರಲ್ಲಿ ಅಧಿಕಾರ ವಹಿಸಿಕೊಂಡ ೯ನೆಯ ಪೀಠಾಧಿಪತಿಗಳಾದ ಫಕೀರಚೆನ್ನವೀರಸ್ವಾಮಿಗಳು ಪ್ರಗತಿಪರ ವಿಚಾರಧಾರೆಯುಳ್ಳವರಾಗಿದ್ದರು. ಆದ್ದರಿಂದ ಅವರು ಶಿರಹಟ್ಟಿ, ಸಂಶಿ, ಬೆಳ್ಳಟ್ಟಿಗಳಲ್ಲಿ, ಎಣ್ಣೆ ಮಿಲ್ಲು ಗಳನ್ನು ಪತ್ತಿರಾಟೆ ಗಳನ್ನೂ ಪ್ರಾರಂಭಿಸಿ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟರು. ಅಲ್ಲದೆ ಶಿರಹಟ್ಟಿಯಲ್ಲಿ ಚಿತ್ರಮಂದಿರವೊಂದನ್ನು ಕಟ್ಟಿಸಿ, ಜನರಿಗೆ ಮನೋರಂಜನೆ ಒದಗಿಸಿದ್ದಲ್ಲದೆ ಶ್ರೀಮಠದ ಆದಾಯವನ್ನು ಹೆಚ್ಚಿಸಿದರು. ಹೀಗೆ ಬಂದ ಆದಾಯದಿಂದ ಶಿರಹಟ್ಟಿ, ಬೆಳ್ಳಟ್ಟಿ, ಸಂಶಿ, ಯಳವತ್ತಿ, ನೆಗಳೂರು, ಹುರಳಿಕುಪ್ಪೆಗಳಲ್ಲಿ ಹೈಸ್ಕೂಲ್‌ಗಳನ್ನೂ ಪ್ರಸಾದನಿಲಯಗಳನ್ನೂ ಸ್ಥಾಪಿಸಿದರು. ೧೯೪೮ರಲ್ಲಿ ದ್ಯಾಂಪುರ ಚೆನ್ನಕವಿಗಳಿಂದ ಶ್ರೀ ಫಕೀರೇಶ್ವರ ಪುರಾಣವನ್ನು ಬರೆಸಿದರು.

ಹತ್ತನೆಯ ಪಟ್ಟದ ಫಕೀರ ಸಿದ್ಧರಾಮಸ್ವಾಮಿಗಳು (ಪಟ್ಟ ೧೯೬೯) ಕಾಯಕವೇ ಕೈಲಾಸವೆಂಬ ಶರಣರ ನುಡಿಯನ್ನು ಕಾರ್ಯರೂಪಕ್ಕೆ ತಂದರು. ಶ್ರೀಮಠದ ಕೆಲಸವನ್ನೆಲ್ಲ ತಾವೇ ಮಾಡುತ್ತಿದ್ದರು. ಅನ್ನದಾಸೋಹವನ್ನು ನಿರಂತರವಾಗಿ ನಡೆಸಿದರು. ಹನ್ನೊಂದನೆಯ ಪೀಠಾಧಿಪತಿಗಳಾದ ಶ್ರೀ ಫಕೀರ ಶಿವಯೋಗಸ್ವಾಮಿಗಳೂ ಶ್ರೀಮಠದಲ್ಲಿಯ ಅನ್ನದಾಸೋಹ ವನ್ನು ಮುಂದುವರೆಸಿಕೊಂಡು ಹೋದುದಲ್ಲದೆ ಹಂದ್ರಾಳದಲ್ಲಿ ಒಂದು ಲಕ್ಷರೂಪಾಯಿ ವೆಚ್ಚದಿಂದ ಸುಂದರ ಶಾಖಾ ಮಠವನ್ನು ಕಟ್ಟಿಸಿದರು. ಹನ್ನೆರಡನೆಯ ಫಕೀರ ಚೆನ್ನವೀರಸ್ವಾಮಿಗಳು ಪ್ರತಿವರ್ಷ ಸಂಶಿ, ಶಿರಹಟ್ಟಿಯಲ್ಲಿ ಮಠದ ಜಾತ್ರೆ ಮೊದಲಾದವು ನಿರಂತರ ನಡೆದು ಬರುವಂತೆ ಮಾಡಿದರು.

ಈಗಿರುವ ಹದಿಮೂರನೆಯ ಪೀಠಾಧಿಪತಿಗಳಾದ ಫಕೀರ ಸಿದ್ಧರಾಮಸ್ವಾಮಿಗಳು (೧೯೮೫ರಲ್ಲಿ ಪಟ್ಟ)ಎಂ.ಎ. ಪದವೀಧರರು, ಒಳ್ಳೆಯ ಅಧ್ಯಾತ್ಮ ಜೀವಿಗಳು. ಮೇಲಾಗಿ ಸಾಹಿತ್ಯ ಪ್ರಿಯರು. ಹೀಗಾಗಿ ಇವರು ಗುಡ್ಡಾಪುರದ ದಾನಮ್ಮದೇವಿ, ಸದಾಚಾರ, ಸಕಲೇಶ ಮಾದರಸ, ಸಂಶಿ ಅಜ್ಜಾ ಅವರು, ಶಿರಹಟ್ಟಿಯ ಶ್ರೀಜಗದ್ಗುರು ಫಕೀರೇಶ್ವರರ ಚರಿತ್ರೆ

ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ನಾಡಿನ ಹಲವು ಭಾಗಗಳಲ್ಲಿ ಸಂಚರಿಸಿ ಪುರಾಣ ಪ್ರವಚನ ಉಪನ್ಯಾಸಗಳ ಮೂಲಕ ಜನಜಾಗ್ರತಿಯನ್ನುಂಟು ಮಾಡಿದ್ದಾರೆ. ಮೂಲಕರ್ತೃವಿನ ಗದ್ದುಗೆಯ ಜೀರ್ಣೋದ್ಧಾರ ನಡೆಸಿದ್ದಾರೆ. ಜಾತ್ರೆಗೆ ಬರುವ ಭಕ್ತರಿಗಾಗಿ ವಸತಿಗೃಹ ಕಟ್ಟಿಸುತ್ತಿದ್ದಾರೆ. ಅಲ್ಲದೆ ಫಕೀರೇಶ್ವರ ಕಲ್ಯಾಣಮಂಟಪ, ಬಯಲು ಸಭಾಮಂಟಪ, ಹೂದೋಟ ನಿರ್ಮಾಣ, ನೀರಿನ ವ್ಯವಸ್ಥೆ, ಜಮೀನು ಸುಧಾರಣೆ, ಗ್ರಂಥ ಪ್ರಕಾಶನ, ನಿರಂತರ ಪೂಜಾಯೋಜನೆ ಮೊದಲಾದವನ್ನು ಹಮ್ಮಿಕೊಂಡಿದ್ದಾರೆ. ಪ್ರತಿ ಅಮವಾಸ್ಯೆಯಲ್ಲಿ ಶಿವಾನುಭವ ಕಾರ್ಯಕ್ರಮ ನಡೆಸುತ್ತ ಬಂದು ಈಗ ೧೨೯ ಕಾರ್ಯಕ್ರಮಗಳಾಗಿವೆ. ಅಲ್ಲದೆ ಫಕೀರೇಶ್ವರರ ಕೀರ್ತನೆ, ಭಕ್ತಗೀತೆ ಮೊದಲಾದವುಗಳ ಧ್ವನಿ ಸುರಳಿಯನ್ನು ಹೊರತಂದು ಭಕ್ತರ ಮನದಲ್ಲಿ ಶ್ರೀಮಠದ ಪ್ರಭಾವ ಅಚ್ಚಳಿಯದೆ ಉಳಿಯುವಂತೆ ಮಾಡಿದ್ದಾರೆ. ನಾಡಿನ ಉದ್ದಗಲಕ್ಕೂ ಸಂಚರಿಸಿ ತಮ್ಮ ೪೩ ಶಾಖಾಮಠಗಳಲ್ಲಿ ಚೈತನ್ಯ ತುಂಬಿದ್ದಾರೆ.

ಈ ಮಠದ ಪ್ರಮುಖ ಲಕ್ಷಣ ಸರ್ವಧರ್ಮ ಸಮನ್ವಯ ದೃಷ್ಟಿ. ಇಲ್ಲಿರುವ ಸ್ವಾಮಿಗಳು ವೀರಶೈವ ನಿರಂಜನ ಮೂರ್ತಿಗಳೇ ಇರಬೇಕೆಂದಿಲ್ಲ. ಡೊಂಬರವನಿಂದ ಹಿಡಿದು ಬಣಜಿಗ, ಒಕ್ಕಲಿಗ, ಜಂಗಮ ಜಾತಿಯವರು ಈ ಪೀಠಕ್ಕೆ ಅಧಿಪತಿಗಳಾಗಿದ್ದಾರೆ. ಆದರೆ ಮುಸ್ಲೀಮರಾರೂ ಈ ಮಠದ ಸ್ವಾಮಿಗಳಾಗಿಲ್ಲ. ಸಕಲ ಜಾತಿಯವರಿಗೂ ಕರ್ತೃಗದ್ದುಗೆಯ ಸೇವೆ ಮಾಡುವ ಅವಕಾಶವಿದೆ. ಸಾಮಾನ್ಯಭಕ್ತರಲ್ಲದೆ ಮೈಸೂರು ಮಹಾರಾಜರು, ಹೈದರಾಬಾದ ನಿಜಾಮರು, ಸವಣೂರ ನವಾಬರು ಹೀಗೆ ಹಿಂದೂ ಮುಸ್ಲಿಂ ದೊರೆಗಳು ಶ್ರೀಮಠಕ್ಕೆ ಕಾಣಿಕೆ ಸಲ್ಲಿಸಿದ್ದಾರೆ. ಶ್ರೀಮಠದ ಉತ್ಸವಕ್ಕಾಗಿ ತೇರನ್ನು ಕಟ್ಟುವ, ಪಲ್ಲಕ್ಕಿ ಹೊರುವ, ವಾದ್ಯನುಡಿಸುವ ಮುಂತಾದ ಸೇವೆಗಳಲ್ಲಿ ಉಭಯ ಧರ್ಮದ ಪರಿಚಾರಕರಿದ್ದು ಅವರಿಗೆ ಜಮೀನು ಉಂಬಳಿ ಹಾಕಿಕೊಡಲಾಗಿದೆ.

ನೂತನಸ್ವಾಮಿಗಳ ಪಟ್ಟಾಭಿಷೇಕವಾಗುವಾಗ ಮೂಲಕರ್ತೃ ಖಾಜಾ ಅಮೀನದೀನರ ಪರಂಪರೆಯಂತೆ ಮೊದಲು ಬಿಜಾಪುರದ ಮೌಲ್ವಿಗಳು ಬರುತ್ತಿದ್ದರು. ಈಗ ಲಕ್ಷ್ಮೇಶ್ವರದ ಹತ್ತಿರವಿರುವ ಮಂಜಲಾಪುರದ ಅಂಕುಶಖಾನನ ವಂಶಜರಾದ ಜಹಗೀರದಾರ ಮನೆತನದವರು ಬಂದು ಪಟ್ಟಕ್ಕೆ ಕೂಡುವ ಸ್ವಾಮಿಗಳಿಗೆ ಹಸುರು ಪೋಷಾಕು ಹಾಕಿ ಕಿವಿಯಲ್ಲಿ ಖುರಾನ್ ಪಠನ ಮಾಡಿ ಫಕೀರದೀಕ್ಷೆ ಕೊಡುವರು. ಸ್ವಾಮಿಗಳು ೪೦ದಿನ ಫಕೀರ ವೃತ್ತಿಯಲ್ಲಿಯೇ ಇರಬೇಕು. ೪೦ನೆಯ ದಿನ ವೀರಶೈವ ಸ್ವಾಮಿಗಳು ಬಂದು ಸ್ಥಲದೀಕ್ಷೆಕೊಡುವರು. ಆ ಕಾಲದಲ್ಲಿ ಸ್ವಾಮಿಗಳು ದಿಲ್ಲಿ ಅಕಬರನು ಕೊಟ್ಟ 'ಶೈಲಸಿಕ್ಕೆ'ಯನ್ನು ಕೊರಳೊಳಗೆ, ಬಂಗಾರದ ರಣಬಿಲ್ಲೆಯನ್ನು ಎಡಗಾಲಲ್ಲಿ ಹಾಕಿಕೊಳ್ಳುವರು. ಹೈದರಾಬಾದ ನಿಜಾಮನು ಕೊಟ್ಟ ಕಠಾರಿಯನ್ನು ಎಡಗೈಯಲ್ಲಿ ಹಿಡಿಯುವರು. ಈ ಸಮಾರಂಭದಲ್ಲಿ ಹಿಂದುಗಳು ಕಾಯಿ ಕರ್ಪೂರ ಮಾಡಿಸಿದರೆ ಮುಸ್ಲಿಂರು ಸಕ್ಕರೆ ಊದಿಸುವರು.

ಹೀಗೆ ಪೀಠಕ್ಕಾದ ಸ್ವಾಮಿಗಳು ಮುಸ್ಲಿಂ ಫಕೀರರ ಹಾಗೆ ಕಮಾನುದಾಡಿ ಬಿಡುವರು. ಪೈಜಾಮಾ ಶೇರವಾನಿ ತೊಡುವರು. ಜಾತ್ರೆ ಉತ್ಸವಗಳಲ್ಲಿ ಹಸುರು ಪೋಷಾಕು, ವಿಭೂತಿರುದ್ರಾಕ್ಷಿ ಧರಿಸುವರು. ಅಲ್ಲದೆ ಅವರ ಒಂಟೆ, ಕುದುರೆ, ಆನೆ ಮೊದಲಾದ ವಾಹನಗಳು,ಛತ್ರಿ-ಚಾಮರ, ಆಹಾರ ಪಾನೀಯ ವ್ಯವಸ್ಥೆ, ಭಿನ್ನಾಯ ಪದ್ಧತಿ ಮುಂತಾದವುಗಳಲ್ಲಿ ಉಭಯ ಧರ್ಮದ ಸಂಸ್ಕೃತಿಯನ್ನು ಕಾಣುತ್ತೇವೆ.

ಸ್ವಾಮಿಗಳು ಲಿಂಗೈಕ್ಯರಾದಾಗ ಆ ಶವವು ಮೊದಲು ಮುಸಲ್ಮಾನರ ವಶಕ್ಕೆ ಹೋಗುವುದು. ಇಸ್ಲಾಂ ಪದ್ಧತಿಯಂತೆ ವಿಧಿವಿಧಾನಗಳನ್ನು ಪೂರೈಸಿ ನಂತರ ಲಿಂಗಾಯತರಿಗೆ ಒಪ್ಪಿಸಲಾಗುವುದು. ಆಗ ಅವರು ವೀರಶೈವರ ಆಚರಣೆಯಂತೆ ವಿಧಿ ನಡೆಸುವರು. ಸಮಾಧಿ ಮಾಡುವಾಗ ಮೊದಲು ಮಹಮ್ಮದೀಯ ಪದ್ಧತಿಯಂತೆ ಉದ್ದವಾದ ಗೋರಿಯನ್ನು ಕಟ್ಟಲಾಗುತ್ತದೆ. ೪೦ ದಿನಗಳ ನಂತರ ಅದನ್ನು ಲಿಂಗಾಯತರಂತೆ ಚೌಕ ಸಮಾಧಿ ಮಾಡಲಾಗುತ್ತಿದೆ. ಸ್ವಾಮಿಗಳ ದೇಹಾವಸಾನವಾದ ೯ನೆಯ ದಿನದ ಜಿಯಾರತ್ ಸಮಾರಂಭದಲ್ಲಿ ಮುಸ್ಲಿಮರಿಗೆ ನಗಾರಿಖಾನೆಯಲ್ಲಿ ಮಾಂಸಭೋಜನ ಮಾಡಿಸುವರು.

ಮಠದ ವಾಸ್ತುಶಿಲ್ಪವೂ ಹಿಂದೂ ಮುಸ್ಲಿಂ ಸಂಸ್ಕೃತಿಯ ಸಮನ್ವಯವನ್ನು ಸಾರುತ್ತಿದೆ. ಶ್ರೀಫಕೀರೇಶ್ವರಮಠಕ್ಕೆ ಕಾಲಿರಿಸಿದ ತಕ್ಷಣ ಮಠಕ್ಕೆ ಬಂದೆವೋ ಮಸೀದಿಗೆ ಬಂದೆವೋ ಎಂಬ ಸಂದೇಹ ಬರುವಂತಾಗುತ್ತದೆ. ಇಲ್ಲಿಯ ದಕ್ಷಿಣದ ಪ್ರವೇಶದ್ವಾರವು ಹಿಂದೂ ಶೈಲಿಯಲ್ಲಿದ್ದರೆ ಉತ್ತರ ದಿಕ್ಕಿನ ಪ್ರವೇಶದ್ವಾರವು ಇಸ್ಲಾಂ ಶೈಲಿಯಲ್ಲಿದೆ. ಕರ್ತೃ ಫಕೀರೇಶ್ವರರ ಗದ್ದುಗೆಯ ಎದುರಿಗೆ ಅರವತ್ತು ಅಡಿ ಎತ್ತರದ ಮತ್ತು ಕರಿಯ ಕಲ್ಲಿನಿಂದ ಕಟ್ಟಿದ ಮುಸ್ಲಿಂ ವಾಸ್ತುಶಿಲ್ಪದ ನಗಾರಿಖಾನೆ ಇದೆ. ಕ್ರಿ.ಶ. ೧೯೨೭ರಲ್ಲಿ ಎಂಟನೆಯ ಪೀಠಾಧಿಪತಿಗಳಾದ ಫಕೀರ ಶಿವಯೋಗಿಗಳು ಇದನ್ನು ಕಟ್ಟಿಸಿದರು. ಇದು ದಕ್ಷಿಣಾಭಿಮುಖವಾಗಿದ್ದು, ಒಂದು ಅಂತಸ್ತು ಹೊಂದಿದೆ. ಮೇಲೇರಲು ೧೧ ಮೆಟ್ಟಿಲುಗಳಿವೆ. ಕೆಳಗಿನ ಭಾಗ ಮೂರು ಕಮಾನು ಹೊಂದಿದ್ದು ಮೇಲಿನ ಭಾಗದಲ್ಲಿ ಐದು ಕಮಾನುಗಳಿವೆ. ಇದು ಎಂಟು ಮೀನಾರು ಹೊಂದಿದೆ. ಅದರಲ್ಲಿ ಎರಡು

ಅರ್ಧಚಂದ್ರಾಕೃತಿಯಲ್ಲಿವೆ. ಮೇಲೆ ಗೋಳಾಕೃತಿಯ ಗುಮ್ಮಟವಿದೆ. ಇಲ್ಲಿ ನಗಾರಿ, ಸನಾದಿ, ಟಕೂರಿ, ತಾಳ, ಕರ್ಮಣೆ ಈ ಪಂಚವಾದ್ಯಗಳ ಸೇವೆ ದಿನಕ್ಕೆರಡು ಸಲ, ಗುರುವಾರ ಮಾತ್ರ ಐದುಸಲ ನಡೆಯುತ್ತದೆ.

ಈ ನಗಾರಿಖಾನೆಗೆ ಹೊಂದಿಕೊಂಡು, ಪೂರ್ವಕ್ಕೆ ಮುಖಮಾಡಿಕೊಂಡು ನಿಂತಿರುವ ಶ್ರೀ ಫಕೀರೇಶ್ವರ ಮಠವಿದೆ. ೩ನೆಯ ಪೀಠಾಧಿಕಾರಿಗಳಾಗಿದ್ದ ಫಕೀರ ಚೆನ್ನವೀರಸ್ವಾಮಿಗಳು ಇದನ್ನು ಮೊದಲು ಕಟ್ಟಿಗೆಯಿಂದ ಕಟ್ಟಿಸಿದರು. ಅದು ರಜಪೂತ ಸರದಾರನೊಬ್ಬನಿಂದ ಸುಟ್ಟುಹೋಗಲು ಈಗಿನ ಕಲ್ಲಿನಮಠವನ್ನು ಕಟ್ಟಿಸಲಾಯಿತು. ಇದರ ಒಳಮಾಳಿಗೆ ಹಾಸುಗಲ್ಲಿನಿಂದ ಕೂಡಿದೆ. ಕಂಬಗಳೂ ಕಲ್ಲಿನವಿವೆ. ಮಠದ ಪ್ರಾಂಗಣ(ಸದರಿ)ದಲ್ಲಿ ಸ್ವಾಮಿಗಳ ಸಿಂಹಾಸನವಿದೆ. ಇದು ದಕ್ಷಿಣಾಭಿಮುಖವಾಗಿ, ಅಡ್ಡ ತೊಲೆಯ ಕೆಳಗೆ ಇರುವುದು ವಿಶೇಷ. ಎದುರಿಗೆ ಶೂಲಗಂಬವಿದೆ. ಹೀಗಿರುವುದು ಹಿಂದೂ ಸಂಸ್ಕೃತಿಯಲ್ಲಿ ಅಪರೂಪ. ಬಹುಶಃ ಕರ್ತರ ದೈವೀ ಶಕ್ತಿಯನ್ನೂ ಮತ್ತು ಎಲ್ಲ ಅನಿಷ್ಟಗಳನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯವನ್ನೂ ಸಂಕೇತಿಸುವುದಕ್ಕೆ ಈ ರೀತಿ ಇಟ್ಟಿರಬೇಕು. ಸದರನ್ನು ದಾಟಿ ಒಳಗೆ ಹೋದರೆ ಲಕ್ಷ್ಮಿಯ ಶಿಲಾವಿಗ್ರಹವಿದೆ. ಮುಂದೆ ಹೋದರೆ ಕಮಾನ್‌ಮಹಾಲ್ ಸಿಗುತ್ತದೆ. ಇಲ್ಲಿ ಬಂದವರಿಗೆ ಪ್ರಸಾದವನ್ನು ವಿತರಿಸಲಾಗುತ್ತದೆ.

ಮೂಲ ಕರ್ತೃವಿನ ಗದ್ದುಗೆಯ ವಿನ್ಯಾಸವು ಹಿಂದುಗಳ ಜಗುಲಿಯಂತಾಗಲಿ, ಮುಸ್ಲಿಮರ ಗೋರಿಯಂತಾಗಲಿ ಇರದೆ ಸುಮಾರು ೧೦ ಅಡಿ ಚಚ್ಚೌಕಾಕಾರದಲ್ಲಿದೆ. ಮೇಲ್ಭಾಗದಲ್ಲಿ ಕೊಂಚ ಉಬ್ಬಿಕೊಂಡಿದೆ. ೩ ಅಡಿ ಎತ್ತರದ ಒಂದು ಸಲಕ್ಕೆ ಒಬ್ಬರು ಮಾತ್ರ ಹೋಗಬಹುದಾದ ಬಾಗಿಲನ್ನು ಹಾಯ್ದು, ಐದು ಅಡಿ ಎತ್ತರ ಅರವತ್ತು ಅಡಿ ಚೌಕಾದ ಜಗುಲಿಗೆ ಮೆಟ್ಟಲನ್ನೇರಿ ಹೋಗಬೇಕು. ಹೀಗೆ ಮೂಲ ಕರ್ತೃಗದ್ದುಗೆಯನ್ನೊಳಗೊಂಡು ಉಳಿದ ಹನ್ನೆರಡು ಗದ್ದುಗೆಗಳೂ ದೊಡ್ಡದೊಡ್ಡ ಕರಿಯ ಕಲ್ಲುಗಳಿಂದ, ಗಚ್ಚುಗಾರೆಗಳಿಂದ ಚಚ್ಚೌಕವಾಗಿ ಕಟ್ಟಲ್ಪಟ್ಟಿವೆ. ಇವು ಒಳಗೆ ಗೋಳಾಕಾರವನ್ನು ಹೊಂದಿವೆ. ಎಲ್ಲ ಗದ್ದುಗೆಗಳಿಗೂ ಉತ್ತರಕ್ಕೆ ಪ್ರವೇಶದ್ವಾರವಿದೆ. ಯಾವುದರ ಮೇಲೂ ಗೋಪುರವಿಲ್ಲ. ಈ ಮಠದ ಅಧೀನದಲ್ಲಿ ಶಿರಹಟ್ಟಿ ಮತ್ತು ಸಂಶಿಗಳಲ್ಲಿ ಎರಡು ಮಸೀದಿಗಳಿವೆ. ಮೊಹರಂ ಹಬ್ಬದಲ್ಲಿ ಇಲ್ಲಿ ಪಂಜಾ ಇಡಲಾಗುತ್ತಿದೆ. ಆ ಮೊಹರಂ ಹಬ್ಬಕ್ಕೆ ತಗುಲುವ ಎಲ್ಲ ವೆಚ್ಚವನ್ನೂ ಶ್ರೀಮಠವೇ ಭರಿಸುತ್ತಿದೆ.

ಪ್ರತಿದಿನ, ಅಮಾವಾಸ್ಯೆ ಮತ್ತು ಶ್ರಾವಣಮಾಸದಲ್ಲಿ ಕರ್ತೃಗದ್ದುಗೆಯ ಪೂಜೆಯನ್ನು ಲಿಂಗಾಯತ ಸಂಪ್ರದಾಯದಂತೆಯೇ ಮಾಡಲಾಗುತ್ತಿದೆ. ಪ್ರತಿವರ್ಷ ಏಪ್ರಿಲ್ ಅಥವಾ ಮೇನಲ್ಲಿ (ವೈಶಾಖ ಶುಕ್ಲ ಅಗಿ ಹುಣ್ಣಿಮೆ) ನಡೆಯುವ ಜಾತ್ರೆಯಲ್ಲಿ ಮಾತ್ರ ಹಿಂದೂ ಮುಸ್ಲಿಂ ಸಂಸ್ಕೃತಿಯ ಸಾಮರಸ್ಯವನ್ನು ಕಾಣುತ್ತೇವೆ. ಅಗಿ ಹುಣ್ಣಿಮೆಗೆ ಒಂಬತ್ತು ದಿನ ಮೊದಲು ರಥಕ್ಕೆ ಕಳಸಾರೋಹಣ ಮಾಡಿದರೆ, ನಗಾರಿಖಾನೆಯ ಬಲಭಾಗಕ್ಕೆ ಹಸುರುಬಣ್ಣದ ಧ್ವಜವನ್ನು ಏರಿಸುವರು. ಆಗ ಮತ್ತು ರಥವನ್ನು ಎಳೆಯುವಾಗ ಹರಹರ ಮಹಾದೇವ, ದೀನ್‌ಫಕೀರೇಶ, ಖಾಜಾ ಅಮೀನ ದೀನ್‌ಕಿ ದೋಸ್ತರಾವೋ ದೀನ್ ಎಂಬ ಘೋಷಣೆಗಳು ಕೇಳಿಬರುವವು. ಜಾತ್ರೆಯ ದಿನ ಮುಂಜಾನೆ ಸ್ವಾಮಿಗಳ ಪಲ್ಲಕ್ಕಿ ಉತ್ಸವ ಹೊರಡುವದು. ಈ ಉತ್ಸವದ ಜೊತೆಗೆ ಆನೆ, ಕುದುರೆಗಳಿರುವವು. ಒಂಟೆಯ ಮೇಲೆ ಹೇರಿದ ನಗಾರಿಯನ್ನು ಬಾರಿಸುತ್ತ ಹೋಗುವರು. ತೇರಿಗೆ ಕಟ್ಟಿದ ಹಗ್ಗವನ್ನು ಜಾತಿ ಭೇದವಿಲ್ಲದೆ ಎಲ್ಲರೂ ಹರ್ಷೋಲ್ಲಾಸ, ಘೋಷಣೆಗಳ ಮಧ್ಯೇ ಎಳೆಯುವರು. ತೇರು ಮಠದಿಂದ ಹೊರಟು, ಪಾದಗಟ್ಟಿ ಮುಟ್ಟಿ ಮರಳಿ ಮಠಕ್ಕೆ ಬರುವವರೆಗೆ ನಗಾರಿಖಾನೆಯಲ್ಲಿ ದೊಡ್ಡಗಾತ್ರದ ನಗಾರಿಯನ್ನು ಬಾರಿಸುವುದು ಇಲ್ಲಿಯ ವೈಶಿಷ್ಟ್ಯ. ನಂತರ ನಡೆವ ಕಡುಬಿನ ಕಾಳಗದಲ್ಲಿ ಕರ್ತೃಗದ್ದುಗೆಗೆ ಹಿಂದುಗಳು ಹಣ್ಣುಕಾಯಿ ಕರ್ಪೂರ ಮಾಡಿಸಿದರೆ ಮುಸ್ಲಿಂರು ಸಕ್ಕರೆ ಊದಿಸುವರು. ಆದರೆ ನಗಾರಿಖಾನೆಯಲ್ಲಿ ಮಾತ್ರ ಹಿಂದೂ ಮುಸ್ಲಿಂರೆಲ್ಲ ಸಕ್ಕರೆ ಊದಿಸುವರು. ಅಲ್ಲದೆ ಫಕೀರರಿಗೆ ಭಿಕ್ಷೆ ನೀಡುವರು. ತೇರು ಎಳೆದ ಐದನೆಯ ದಿನಕ್ಕೆ ಕಳಸ ಇಳಿಸುವರು. ಆಗಲೂ ಗದ್ದುಗೆಗೆ ಕಾಯಿ ಕರ್ಪೂರ ಮಾಡಿಸಿದರೆ, ನಗಾರಿಖಾನೆಗೆ ಸಕ್ಕರೆ ಊದಿಸುವರು. ಆಗಲೇ ಮಠದಲ್ಲಿ ಏರಿಸಿದ ಕೇಸರೀ ಧ್ವಜವನ್ನೂ, ನಗಾರಿಖಾನೆಗೆ ಕಟ್ಟಿದ ಹಸುರು ಧ್ವಜವನ್ನೂ ಇಳಿಸುವರು. ಅಂದು ರಾತ್ರಿ ನಗಾರಿಖಾನೆಯಲ್ಲಿ ಮುಸ್ಲಿಂ ಫಕೀರರಿಗೆ ಮಾಂಸಭೋಜನ ಮಾಡಿಸುವರು. ಆ ಸಂದರ್ಭದಲ್ಲಿ ಸ್ವಾಮಿಗಳು ನಗಾರಿಖಾನೆಗೆ ಹೋಗಿ ಪಾದೋದಕ ಹಾಕಿ ಬರುವರು. ಹೀಗೆ ಹಿಂದೂ ಮುಸ್ಲಿಂ ಸಂಸ್ಕೃತಿಯ ಸಾಮರಸ್ಯದ ಪ್ರತಿರೂಪದಂತೆ ಶ್ರೀಮಠ ತೋರುತ್ತಿದೆ.

ಶ್ರೀ ಮಠದ ಕರ್ತೃಗದ್ದುಗೆ ಬಂದ ಕಷ್ಟಗಳನ್ನು ಪರಿಹರಿಸುತ್ತಿದೆ. ಬಯಸಿದ ಆಸೆಗಳನ್ನು ಈಡೇರಿಸುತ್ತಿದೆ ಎಂಬ ಅಚಲವಾದ ನಂಬುಗೆ ಈ ಭಾಗದ ಜನರಲ್ಲಿದೆ. ಹೀಗಾಗಿ ಮಕ್ಕಳಾದರೆ ಜವುಳ ತೆಗೆಸುವ, ಮದುವೆಯಾದರೆ ದೀರ್ಘದಂಡ ನಮಸ್ಕಾರ ಹಾಕುವ, ಮಗ ಖಾಯಿಲೆಯಿಂದ ಗುಣಮುಖನಾದರೆ ಅವನ ತೂಕದ ಸಕ್ಕರೆಯನ್ನೀಯುವ ಇವೇ ಮುಂತಾದ ಹರಕೆ ಹೊರುವುದುಂಟು. ಅಲ್ಲದೆ ಯಾವುದೇ ವ್ಯಕ್ತಿಯ ಮೈಯಲ್ಲಿ ಭೂತ, ದೆವ್ವದ ಬಾಧೆಯಿದ್ದರೆ ಶ್ರೀಮಠವ ನಗಾರಿಖಾನೆಯ ವಾದ್ಯದ ಧ್ವನಿ ಕೇಳಿ ಅವು ಏಳುತ್ತವೆ ಮತ್ತು ಬಿಟ್ಟೋಡುತ್ತವೆ. ಎಂಬ ನಂಬುಗೆ ಇಂದಿಗೂ ಇದೆ. ಹೀಗೆ ಅಸ್ವಾಸ್ಥ್ಯ ಮನಕ್ಕೆ ತನ್ನ ಪವಾಡಶಕ್ತಿಯಿಂದ ಸ್ವಾಸ್ಥ್ಯವನ್ನೊದಗಿಸುತ್ತ ಈ ಭಾಗದ ಜನರ ಕಷ್ಟನಷ್ಟಗಳಲ್ಲಿ ಕೈಹಿಡಿದು ನಡೆಸುತ್ತಿದೆ ಈ ಮಠ.

ಈ ಭಾಗದ ಜನರಲ್ಲಿ ಹಿಂದೂ ಮುಸ್ಲಿಂ ಧಾರ್ಮಿಕ ಸಮನ್ವಯವನ್ನಲ್ಲದೆ. ಧಾರ್ಮಿಕ ಜಾಗೃತಿಯನ್ನುಂಟು ಮಾಡಲು ಪ್ರತಿ ಅಮವಾಸ್ಯೆಗೆ ಶಿವಾನುಭವ ಕಾರ್ಯಕ್ರಮ ಹಮ್ಮಿಕೊಂಡುಬಂದಿದೆ. ಈ ವರೆಗೆ ೧೨೯ ಶಿವಾನುಭವ ಕಾರ್ಯಕ್ರಮಗಳನ್ನು ನೆರವೇರಿಸಿದೆ. ಅಲ್ಲದೆ ಶ್ರಾವಣಮಾಸ, ದಸರಾ ಹಬ್ಬಗಳಲ್ಲಿ ಪುರಾಣ ಪ್ರವಚನಗಳೊಂದಿಗೆ ವಿದ್ವದ್ಗೋಷ್ಠಿಗಳನ್ನೂ ನಡೆಸುತ್ತಿದೆ. ಕಾರ್ತಿಕೋತ್ಸವವನ್ನು ವಿಜೃಂಭಣೆಯಿಂದ ಜರುಗಿಸುತ್ತಿದೆ. ಶಿವರಾತ್ರಿ ಅಮಾವಾಸ್ಯೆಯಂದು ಶಿವಜಾಗರಣೆ ಮಾಡಲಾಗುವದು. ಅಂದು ೨ನೆಯ ಫಕೀರ ಶಿವಯೋಗಿಗಳವರ ಗದ್ದುಗೆಯ ವಿಶೇಷ ಪೂಜೆಯಾಗುವದು. ಏಕೆಂದರೆ ಅವರು ಶಿವರಾತ್ರಿಯಂದೇ ಜನಿಸಿ, ಶಿವರಾತ್ರಿಯಂದೇ ಪಟ್ಟಹೊಂದಿ ಶಿವರಾತ್ರಿಯಂದೇ ಲಿಂಗೈಕ್ಯರಾದರಂತೆ.

ವೀರಶೈವ ಮಠಗಳ ವಿಶಿಷ್ಟತೆ ಇರುವುದು ಅವು ನಡೆಸುವ ಶಿಕ್ಷಣ ಸಂಸ್ಥೆಗಳಿಂದ ಮತ್ತು ಪ್ರಸಾದ ನಿಲಯಗಳಿಂದ. ಉತ್ತರ ಕರ್ನಾಟಕದಲ್ಲಿಯಂತೂ ಪ್ರತಿಯೊಂದು ಮಠವೂ ಈ ಸತ್ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ಸಾಧ್ಯವಿರುವ ಸೇವೆ ಮಾಡುತ್ತ ಬಂದಿದೆ. ಶಿರಹಟ್ಟಿಯ ಶ್ರೀಫಕೀರೇಶ್ವರ ಮಠವೂ ೧೯೫೬ರಲ್ಲಿ ಶ್ರೀ ಜಗದ್ಗುರು ಫಕೀರೇಶ್ವರ ವಿದ್ಯಾದಾನ ಸಮಿತಿಯನ್ನು ಪ್ರಾರಂಭಿಸಿ, ಅದರ ಅಡಿಯಲ್ಲಿ ೧) ಶ್ರೀ ಜ. ಫಕೀರೇಶ್ವರ ಮಾಧ್ಯಮಿಕ ಶಾಲೆ, ಬೆಳ್ಳಟ್ಟಿ, ೨) ಶ್ರೀ ಜ. ಫಕೀರ ಶಿವಯೋಗೀಶ್ವರ ಮಾಧ್ಯಮಿಕ ಶಾಲೆ, ಸಂಶಿ, ೩) ಶ್ರೀ ಜ. ಫಕೀರ ಚನ್ನವೀರೇಶ್ವರ ಮಾಧ್ಯಮಿಕ ಶಾಲೆ, ಯಳವತ್ತಿ, ೪) ಶ್ರೀ ಜ. ಫಕೀರ ಸಿದ್ಧರಾಮೇಶ್ವರ ಮಾಧ್ಯಮಿಕ ಶಾಲೆ, ನೆಗಳೂರು, ೫) ಶ್ರೀ ಜ. ಫಕೀರೇಶ್ವರ ಮಾಧ್ಯಮಿಕ ಶಾಲೆ, ಹುರಳಿಕುಪ್ಪೆ, ೬) ಶ್ರೀ ಜ. ಫಕೀರಚೆನ್ನವೀರೇಶ್ವರ ಶಿಕ್ಷಕರ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ. ಅಲ್ಲದೆ ಶ್ರೀಮಠ ೧೯೯೨-೯೩ರಲ್ಲಿ ಶಿರಹಟ್ಟಿಯಲ್ಲಿ ಪ್ರಾರಂಭವಾದ ಸರಕಾರಿ ಪ್ರಥಮದರ್ಜೆಯ ಮಹಾವಿದ್ಯಾಲಯದ ಕಟ್ಟಡಕ್ಕಾಗಿ ೫ ಎಕರೆ ೨೬ಗುಂಟೆ ಜಮೀನನ್ನು ದಾನವಿತ್ತಿದೆ. ಈಗ ಈ ಮಹಾವಿದ್ಯಾಲಯಕ್ಕೆ ಶ್ರೀ ಜ. ಫಕೀರೇಶ್ವರ ಸರಕಾರಿ ಪ್ರಥಮದರ್ಜೆಯ ಮಹಾವಿದ್ಯಾಲಯ ಎಂಬ ನಾಮಕರಣ ಮಾಡಲಾಗಿದೆ.

ಸಾಹಿತ್ಯ ಕ್ಷೇತ್ರಕ್ಕೂ ಈ ಮಠದಿಂದ ಅಪಾರಸೇವೆ ಸಂದಿದೆ. ಈ ಮಠದಲ್ಲಿ ಮೊದಲು ಸುಮಾರು ೨೦೦೦ ಗ್ರಂಥಗಳುಳ್ಳ ಸುವ್ಯವಸ್ಥಿತವಾದ ಒಂದು ಗ್ರಂಥಾಲಯವಿದ್ದಿತು. ೧೯೩೫ರಲ್ಲಿ ಶ್ರೀಗಳವರ ಆಶ್ರಯದಲ್ಲಿ ಆಲೂರ ಮುರಗೇಂದ್ರಶೆಟ್ಟಿ ಅವರ ಸಂಪಾದಕತ್ವದಲ್ಲಿ 'ವೀರಶೈವಚಂದ್ರಿಕೆ' ಎಂಬ ಮಾಸ ಪತ್ರಿಕೆಯೂ ಪ್ರಕಟವಾಗುತ್ತಿದ್ದಿತು. ಏಳನೆಯ ಪಟ್ಟದ ಫಕೀರ ಸಿದ್ಧರಾಮಸ್ವಾಮಿಗಳು, ಗಂಗಾಧರ ಗಣೇಶ ಜಾಧವ ಅವರಿಂದ ೧೯೦೦ರಲ್ಲಿ ಶ್ರೀ ಫಕೀರೇಶ್ವರ ಪುರಾಣ ಬರೆಸಿದರು. ಒಂಬತ್ತನೆಯ ಪಟ್ಟದ ಫಕೀರ ಚೆನ್ನವೀರಸ್ವಾಮಿಗಳು ದ್ಯಾಂಪುರ ಚೆನ್ನಕವಿಗಳಿಂದ ೧೯೪೮ರಲ್ಲಿ ಶ್ರೀಫಕೀರೇಶ್ವರ ಪುರಾಣ ಬರೆಸಿದರು. ಅಲ್ಲದೆ ಹಾವೇರಿ ಮೇಟಿ ಅವರು ಫಕೀರೇಶ್ವರ ಚರಿತ್ರೆ, ಫಕೀರೇಶ್ವರ ೧೦೮ ನಾಮಾವಳಿಗಳನ್ನು ಬರೆದಿದ್ದಾರೆ. ಹದಿಮೂರನೆಯ ಪೀಠಾಧಿಕಾರಿಗಳಾದ ಈಗಿನ ಫಕೀರ ಸಿದ್ಧರಾಮಸ್ವಾಮಿಗಳು ಸಕಲೇಶ ಮಾದರಸ, ಗುಡ್ಡಾಪುರದ ದಾನಮ್ಮದೇವಿ, ಸದಾಚಾರ, ಸಂಶಿ ಅಜ್ಜಾ ಅವರು ಎಂಬ ಕೃತಿಗಳನ್ನು ಬರೆದಿದ್ದಾರೆ. 'ಶ್ರೀ ಜಗದ್ಗುರು ಫಕೀರೇಶ್ವರ ಚರಿತ್ರೆ' ಎಂಬ ಬೃಹತ್ ಕೃತಿಯನ್ನೂ ರಚಿಸಿದ್ದಾರೆ ಹಾಗೂ ಬೆಳವಡಿ ಜ್ಞಾನಯೋಗಿಶಾಸ್ತ್ರಿಗಳಿಂದ ಫಕೀರೇಶ್ವರ ಪುರಾಣ ಬರೆಸಿ ಪ್ರಕಟಿಸಿದ್ದಾರೆ. ಶ್ರೀಮಠಕ್ಕೆ ಸಂಬಂಧಿಸಿದ ಭಕ್ತಿಗೀತೆ, ಕೀರ್ತನೆಗಳು ಕ್ಯಾಸೆಟ್ಟೂ ಆಗಿದೆ.

ಶ್ರೀಮಠವು ಆಗಾಗ ಜನರ ತೊಂದರೆ ತಾಪತ್ರಯಗಳಿಗೆ ಸ್ಪಂದಿಸುತ್ತ ಬಂದಿದೆ. ಹೀಗಾಗಿ ಮೂಲ ಕರ್ತೃ ಫಕೀರ ಚೆನ್ನವೀರರು ಗದಗ ತಾಲೂಕ ದುಂದೂರಗ್ರಾಮದಲ್ಲಿ ಅಲ್ಲಿಯ ಜನರ ನೀರಿನ ಬವಣೆಯನ್ನು ಪರಿಹರಿಸಲು ಒಂದು ಭಾವಿಯನ್ನು ತೋಡಿಸಿದರು. ಅದೇ ರೀತಿ ಮೊದಲ ಪಟ್ಟದ ಫಕೀರ ಸಿದ್ಧರಾಮಸ್ವಾಮಿಗಳು ಮಠದ ಆವರಣದಲ್ಲಿ ಕಮಾನಭಾವಿ ಕಟ್ಟಿಸಿ, ಶಿರಹಟ್ಟಿ ಜನರ ನೀರಿನ ಬವಣೆಯನ್ನು ಹಿಂಗಿಸಿದರು.

ಈಗಿರುವ ಪೀಠಾಧಿಪತಿಗಳು ಜಾತ್ರೆ ಉತ್ಸವಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಮಠದ ಆವರಣದಲ್ಲಿ ವಸತಿಗೃಹ ಕಟ್ಟಿಸಿದ್ದಾರೆ ಅಲ್ಲದೆ ಸಾರ್ವಜನಿಕ ಉಪಯೋಗಕ್ಕಾಗಿ ಕಲ್ಯಾಣಮಂಟಪ, ಬಯಲು ಸಭಾಮಂಟಪ, ಹೂದೋಟ, ನೀರಿನ ವ್ಯವಸ್ಥೆ ಮಾಡಿದ್ದಾರೆ. ಶ್ರೀ ಮಠಕ್ಕೆ ಬರುವ ಭಕ್ತಾದಿಗಳಿಗೆ ಜಾತಿಮತವನ್ನೆಣಿಸದೆ ಹನ್ನೆರಡು ತಿಂಗಳೂ ದಾಸೋಹ ತೆರೆದಿರುತ್ತದೆ.

ಹೀಗೆ ಹಲವು ಹತ್ತು ಕಾರ್ಯಗಳ ಮೂಲಕ ಈ ಭಾಗದ ಜನರ ಮನೋಭಿಲಾಷೆಗಳನ್ನು ಈಡೇರಿಸುತ್ತ ಪರಸ್ಪರರಲ್ಲಿ ಸೌಹಾರ್ದಭಾವನೆಯನ್ನು ಬೆಳೆಸುತ್ತ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ಈ ಮಠ ತೊಡಗಿದೆಯೆಂದು ಹೇಳಬಹುದಾಗಿದೆ.

ಆಧಾರ:

1) ಶಿರಹಟ್ಟಿ ಫಕೀರೇಶ್ವರ ಮಠ- ಒಂದು ಅಧ್ಯಯನ (ಅಪ್ರಕಟಿತ ಎಂ. ಫಿಲ್. ಸಂಪ್ರಬಂಧ) - ಎಸ್. ಆರ್. ಶಿರಹಟ್ಟಿ - ೧೯೯೫
2) ಫಕೀರೇಶ್ವರ ಚರಿತ್ರೆ ಫಕೀರ ಮಲ್ಲಿಕಾರ್ಜುನ ದೇವರು, ಫಕೀರೇಶ್ವರ ಶಿವಾನುಭವ ಸಮಿತಿ, ಶಿರಹಟ್ಟಿ –೧೯೯೮

ಕನಕಪುರದ ದೇಗುಲಮಠದ ಕೊಡುಗೆ

ಬಿ. ಸಿ. ವೀರಪ್ಪ

ಕನ್ನಡನಾಡಿನ ಆಗ್ನೇಯ ಅಂಚಿಗಿರುವ ಕನಕಪುರ ತಾಲ್ಲೂಕು ಸುಂದರವಾದ ನೈಸರ್ಗಿಕ ಘಟ್ಟಪ್ರದೇಶ. ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮ ಸ್ಥಾನ. ವರ್ಣಾಕರ್ಷಕ ಗಿರಿ-ಝರಿಗಳಿಂದ ಆವೃತ್ತವಾದ, ನಿತ್ಯ ಹರಿದ್ವರ್ಣಮಯ ಕಾನನ. ವಿಸ್ತೀರ್ಣದಲ್ಲಿ, ಬೆಂಗಳೂರು ಜಿಲ್ಲೆಯಲ್ಲೆ ಅಗ್ರಪಂಕ್ತಿಯಲ್ಲಿರುವ ಈ ತಾಲ್ಲೂಕು ರಾಜ್ಯದ ಗಡಿಭಾಗವು ಕೂಡ. ಕೃಷಿ ಪ್ರಾಧಾನ್ಯವಾಗುಳ್ಳ ಈ ಪ್ರಾಂತ್ಯ, ಇತ್ತೀಚೆಗೆ ಕಲ್ಲುಗಣಿ ಉದ್ದಿಮೆಯಲ್ಲಿ ಸಾಕಷ್ಟು ಹೆಸರು ಮಾಡಿದೆ.

ತಾಲ್ಲೂಕು ಕೇಂದ್ರವಾದ ಕನಕಪುರ, ಬೆಂಗಳೂರಿನಿಂದ ದಕ್ಷಿಣದಿಕ್ಕಿಗೆ ಮೂವತ್ತೈದು ಮೈಲುಗಳ ಅಂತರದಲ್ಲಿದೆ. ಪಕ್ಕದಲ್ಲೆ ಹರಿಯುವ ಅರ್ಕಾವತಿಗೆ ಬಲದಂಡೆಯಲ್ಲಿದೆ. ಪಾಳೆಯಗಾರರ ಕಾಲಕ್ಕೆ ಈ ಊರಿನ ಸುತ್ತ ಸುಭದ್ರವಾದ ಕೋಟೆಯು ಇದ್ದಿತು. ಐತಿಹಾಸಿಕವಾಗಿ ಒಂದು ಸಾವಿರ ವರ್ಷಗಳಷ್ಟು ಹಿಂದಿನಿಂದಲೇ ಗುರುತಿಸಲ್ಪಡುವ ಈ ಊರು ಕ್ರಿ. ಶ. ೧೩ ರಿಂದ ೧೭ ನೆಯ ಶತಮಾನದವರೆಗೆ'ಕಾಣಿಕಾರನಹಳ್ಳಿ' ಎಂದೂ, ೧೮ರಿಂದ ೨೦ನೆಯ ಶತಮಾನದ ಪೂರ್ವಾರ್ಧದ ವರೆಗೆ 'ಕಾನಕಾನಹಳ್ಳಿ' ಎಂದೂ, ಭಾರತ ಸ್ವಾತಂತ್ರ್ಯಾನಂತರ 'ಕನಕಪುರ'ವೆಂದೂ ಹೆಸರು ಪಡೆದಿದೆ.[1] ಕನಕಪುರದಲ್ಲಿರುವ ದೇಗುಲ ಮಠದ ಕಲ್ಲಿನ ಶಾಸನದಲ್ಲಿ 'ಕಾಣಿಕಾರನ ಹಳ್ಳಿ' ಎಂಬ ಉಲ್ಲೇಖವಿದೆ.[2] 'ಕಾಣಿಕಾರ' ಎಂದರೆ ಕುಲಪರಂಪರೆಯಿಂದ ಬಂದ ಊರೊಟ್ಟಿನ ಜಮೀನಿನಲ್ಲಿ ಸಮಾನ ಹಕ್ಕು ಅಥವಾ ಪಾಲುಳ್ಳವನು[3] ಎಂಬುದಾಗಿ ಅರ್ಥೈಸುವುದುಂಟು. ಆದರೆ 'ಕಾಣಿ' ಎಂದರೆ 'ಗದ್ದೆ' ಎಂದೂ,'ಕಾಣಿಕಾರ' ಎಂದರೆ 'ಗದ್ದೆಯುಳ್ಳವನು' ಎಂದೂ ಅರ್ಥವಿದೆ.[4] ಈ ಹಿನ್ನೆಲೆಯಲ್ಲಿ ಕಾಣಿಕಾರನ ಹಳ್ಳಿ> ಕಾನಿಕಾರ್ನಹಳ್ಳಿ> ಕಾನಿಕಾನಹಳ್ಳಿ> ಕಾನಕಾನಹಳ್ಳಿ ಎಂಬ ವ್ಯತ್ಯಸ್ತ ರೂಪಗಳನ್ನು ಪಡೆದಿರಬೇಕು.[5] ಇದೀಗ ಪ್ರಜಾಪ್ರಭುತ್ವ ಪ್ರಿಯರ ಆಶಯದಂತೆ 'ಕನಕಪುರ' ಎಂಬ ಹೆಸರನ್ನು ಪಡೆದಿದೆ.

ಪ್ರಾಚೀನ ಕಾಲದಲ್ಲಿ ವಿದ್ಯಾಭ್ಯಾಸವು ಋಷ್ಯಾಶ್ರಮಗಳಲ್ಲಿ ನಡೆಯುತ್ತಿತ್ತು. ಕಾಲಕ್ರಮದಲ್ಲಿ ಇವೆ ಗುರುಕುಲಗಳೆನಿಸಿದವು. ರಾಜಮಹಾರಾಜರು, ಸ್ಥಿತಿವಂತರು ಇಂತಹ ಗುರುಕುಲಗಳ ಅನುಕೂಲಕ್ಕಾಗಿ ಮತ್ತು ಅಲ್ಲಿನ ಗುರು-ಶಿಷ್ಯರ ಅಶನ-ವಸನಗಳಿಗಾಗಿ ಅನೇಕ ಗ್ರಾಮಗಳನ್ನು ಉಂಬಳಿ ಬಿಟ್ಟಿದ್ದಾರೆ. ಇವುಗಳನ್ನೇ ಅಗ್ರಹಾರಗಳು ಎನ್ನುತ್ತಿದ್ದರು. ಕ್ರಿ.ಶ. ೫ನೆಯ ಶತಮಾನದ ನಂತರ ಈ ಅಗ್ರಹಾರಗಳ ನಡುವೆ ವೈಷ್ಣವಾಲಯ ಹಾಗೂ ಶೈವಾಲಯಗಳು ರೂಪುಗೊಂಡವು.[6] ಈ ಆಲಯಗಳೆ ಯತಿಗಳ ವಾಸಸ್ಥಳಗಳೂ, ವಿದ್ಯಾಕೇಂದ್ರಗಳೂ ಆಗಿದ್ದುದರಿಂದ, ಇವೇ ಪಾಠಶಾಲೆಗಳೂ ಆದುವು. ಇಂತಹ ಪಾಠಶಾಲೆಗಳನ್ನು ಜನಸಾಮಾನ್ಯರು ಬಹಳಷ್ಟು ಹಿಂದಿನಿಂದಲೂ 'ಮಠ', 'ಸಾಲೆಮಠ' ಎಂಬುದಾಗಿ ಗುರುತಿಸಿದ್ದಾರೆ[7]. ಈ ಹಿನ್ನೆಲೆಯಲ್ಲಿ ಕ್ರಿ. ಶ. 11ನೆಯ ಶತಮಾನದ ವೇಳೆಗೆ ಅಸ್ತಿತ್ವಕ್ಕೆ ಬಂದಿದ್ದ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯಕ್ಕೆ 'ಕೋಡಿಮಠ'ವೆಂದೆ ಹೆಸರಿದ್ದುದನ್ನು ನಾವು ಗುರುತಿಸಬಹುದಾಗಿದೆ.[8] ಕರ್ನಾಟಕದಲ್ಲಿ ಪ್ರಮುಖವಾಗಿ, ಕ್ರಿ. ಶ. 12ನೆಯ ಶತಮಾನದಲ್ಲಿ ಜರುಗಿದ ಕಲ್ಯಾಣದ ಕ್ರಾಂತಿಯ ನಂತರ ಅಸಂಖ್ಯಾತ ಗುರು-ವಿರಕ್ತ (ಜಂಗಮ)ರ ವಾಸಸ್ಥಳಗಳೆ ಮುಂದಿನ ವೀರಶೈವ ಮಠಗಳಾಗಿ ಪರಿಣಮಿಸಿದವು. ಒಟ್ಟಾರೆ 'ಮಠಃ ಛಾತ್ರಾದಿ ನಿಲಯಃ' ಎಂಬ ಅಮರಸಿಂಹನ ಉಕ್ತಿಯಂತೆ, ಮಠಗಳು ಕೇವಲ ಗುರುಗಳ ವಾಸಗೃಹಗಳು ಮಾತ್ರವಾಗಿರದೆ, ವಿದ್ಯಾರ್ಥಿ ಮಂದಿರಗಳೂ ಆಗಿದ್ದುವು.

ಕನ್ನಡನಾಡಿನ ಅನೇಕ ವೀರಶೈವ ಮಠಗಳು ಬಹಳ ಹಿಂದಿನಿಂದಲೂ ಸಾರ್ವಜನಿಕ ವಿದ್ಯಾಭ್ಯಾಸಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡು ಬಿಟ್ಟಿವೆ. ಪ್ರಸಾದ ಹಾಗೂ ಜ್ಞಾನ ದಾಸೋಹಗಳ ಸೇವೆ ಇವುಗಳ ನಿತ್ಯನೇಮವಾಗಿದೆ. ಬಹುಶಃ ಈ ನಾಡಿನಲ್ಲಿ ವೀರಶೈವರು ಕಟ್ಟಿಸಿರುವಷ್ಟು ವಿದ್ಯಾರ್ಥಿನಿಲಯಗಳೂ ಹಾಗೂ ವಿದ್ಯಾಭ್ಯಾಸಕ್ಕಾಗಿ ಇವರು ಕೊಡುವ ಪ್ರೋತ್ಸಾಹವೂ ಇನ್ನಾವ ಪಂಗಡದವರಿಂದಲೂ ಸಾಧ್ಯವಾಗಿಲ್ಲ.[9] ಇಂತಹ ಶ್ರೇಷ್ಠ ಸಮಾಜ ಸೇವೆಯಲ್ಲಿ ತೊಡಗಿರುವ ಕನಕಪುರ ತಾಲ್ಲೂಕಿನ ಮಠಗಳಲ್ಲಿ ದೇಗುಲ ಮಠ ಹಾಗೂ ಮರಳೆಗವಿ ಮಠಗಳು ಬಹಳ ಪ್ರಸಿದ್ಧಿಯಾಗಿವೆ.

ಪ್ರಸ್ತುತ ಕನಕಪುರ ತಾಲ್ಲೂಕಿನಲ್ಲಿ ಇಂದಿಗೂ ಅನೇಕ ವೀರಶೈವಮಠಗಳು ಉಳಿದುಬಂದಿವೆ. ಮೈಸೂರು ಸಂಸ್ಥಾನದ ಧಾರ್ಮಿಕ ದತ್ತಿ ಇಲಾಖಾ ದಾಖಲಾತಿ ಪ್ರಕಾರ, ೧೯೦೨ರಲ್ಲಿ ಇಲಾಖೆಗೆ ಒಳಪಟ್ಟ ಮಠಗಳ ಸಂಖ್ಯೆ ಕೇವಲ ನಾಲ್ಕು ಮಾತ್ರ[10].

೧. ದೇಗುಲ ಮಠ. ಕಾನಕಾನಹಳ್ಳಿ, ಕಸಬ.

೨. ಗವಿಮಠ, ಕಾನಕಾನಹಳ್ಳಿ, ಕಸಬ.

೩. ಶಾಂತಲಿಂಗದೇವರ ಮಠ, ಮಲ್ಲಹಳ್ಳಿ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೪. ಜಂಗಮಮಠ, ಗೊರವನ ಪುರ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

ಇದೇ ಸಂದರ್ಭದಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಒಳಪಡದ ಇನ್ನೂ ಅನೇಕ ಮಠಗಳು ಈ ತಾಲ್ಲೂಕಿನಲ್ಲಿದ್ದುವು. ಅವುಗಳಲ್ಲಿ ಎಷ್ಟೋ ಮಠಗಳು ಇಂದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ.* ಸದ್ಯಕ್ಕೆ ಈ ತಾಲ್ಲೂಕಿನಲ್ಲಿರುವ ಒಟ್ಟು ಮಠಗಳ ಸಂಖ್ಯೆ ಹದಿಮೂರು : *

೧. ದೇಗುಲಮಠ, ಕನಕಪುರ, ಕಸಬ.

೨. ಹೊರಳುಗಲ್ಲು ಮಠ, ಕನಕಪುರ, ಕಸಬ.

೩. ಮರಳೆಗವಿ ಮಠ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೪. ಸಂತೆ ಕೋಡಳ್ಳಿ ಮಠ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೫. ಬಿಲ್ವಪತ್ರೆ ಗವಿಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

೬. ಕೆರೆ ಭಿಕ್ಷದ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

೭. ತೋಟಹಳ್ಳಿ ಮಠ,ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

೮. ಹತ್ತಳ್ಳಿ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

೯. ಗುರುವಿನ ಪುರ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

೧೦ ಅಜ್ಜಬಸವನಹಳ್ಳಿ ಮಠ, ಕೋಡಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೧೧. ನೇರಳಹಟ್ಟಿ ಮಠ, ಕೋಡಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೧೨. ಚಿಕ್ಕಕಲ್ಲುಬಾಳು ಮಠ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

೧೩. ದೊಡ್ಡಮರಳವಾಡಿ ಮಠ, ಶಿವಪುರ ಹೋಬಳಿ, ಕನಕಪುರ ತಾಲ್ಲೂಕು.

ಇಲ್ಲಿನ ಒಂದೊಂದು ಮಠವೂ ಧಾರ್ಮಿಕವಾಗಿ ಹಾಗೂ ಐತಿಹಾಸಿಕವಾಗಿ ಅದ್ಭುತ ಐತಿಹ್ಯಗಳನ್ನು ಒಳಗೊಂಡಿವೆ. ಈ ಎಲ್ಲಾ ಮಠಗಳಲ್ಲೂ ಇಂದು ಮಠಾಧೀಶರಿದ್ದು ಭಕ್ತರ ಧಾರ್ಮಿಕ ಸಾಮಾಜಿಕ ವಿಧಿವಿಧಾನ ನಿರ್ವಹಣೆ ಮಾಡುತ್ತಿವೆ.

ಕನಕಪುರದ ದೇಗುಲಮಠ

ದೇಗುಲಮಠ ಕನಕಪುರ ತಾಲ್ಲೂಕಿನಲ್ಲೇ ಅತ್ಯಂತ ಪ್ರಾಚೀನವಾದ ಹಾಗೂ ಪ್ರಮುಖವಾದ ಮಠ. ಇದರ ಅಸ್ತಿತ್ವವನ್ನು ಕ್ರಿ. ಶ. ೧೪ನೆಯ ಶತಮಾನದಿಂದಲೆ ಗುರುತಿಸುವ ಪ್ರಯತ್ನನಡೆದಿದೆ.[11] ಕಾವೇರಿ ನದಿಯ ಉಪನದಿಯಾದ ಅರ್ಕಾವತಿ ಹೊಳೆಗೆ ಬಲದಂಡೆಯಲ್ಲಿರುವ ಈ ಮಠ, ಕನಕಪುರ ಪಟ್ಟಣದ ಪೂರ್ವಭಾಗದಲ್ಲಿ ಕೂಗಳತೆಯ ದೂರದಲ್ಲಿದೆ. ಮಠವಿರುವ ಪ್ರದೇಶ, ಪ್ರಾಕೃತಿಕವಾಗಿ ಪ್ರಶಾಂತ ಪರಿಸರವನ್ನು ಒಳಗೊಂಡಿದ್ದು, ಶಿವಯೋಗ ಅನುಷ್ಠಾನಕ್ಕೆ ಹೇಳಿಮಾಡಿಸಿದ ಸ್ಥಳವಿದ್ದಂತಿದೆ.

ಮಠದ ಪ್ರಾರಂಭಿಕ ವೃತ್ತಾಂತದ ಬಗೆಗೆ ಹೇಳುವುದಾದರೆ, ಇದು ಶೂನ್ಯ ಸಿಂಹಾಸನಾಧೀಶ್ವರರಾದ ಅಲ್ಲಮ ಪ್ರಭುಗಳ ಪರಂಪರೆಗೆ ಸೇರಿದ ವಿರಕ್ತ ಮಠ. ಶೂನ್ಯ ಪರಂಪರೆಯ ಏಳನೆಯ ನಿರಂಜನ ಸ್ವಾಮಿಗಳು ಕನಕಪುರಕ್ಕೆ ಸುಮಾರು ಮೂವತ್ತೈದು ಮೈಲಿಗಳ ದೂರದ ನೂರೊಂದು ಸ್ವಾಮಿ ಬೆಟ್ಟದಲ್ಲಿ ಬಂದು ನೆಲೆಸಿದ್ದರು. ಅವರೊಡನೆ ಬಂದ ವಿರಕ್ತ ಮೂರ್ತಿಗಳಲ್ಲಿ ಕೆಲವರು ತಮಿಳುನಾಡಿನ ಸೇಲಂ ಕಡೆಗೆ ತೆರಳಿದರು. ಅವರಲ್ಲೊಬ್ಬರು ಇದೇ ಸಂದರ್ಭದಲ್ಲಿ ಅರ್ಕಾವತಿ

ತೀರದಲ್ಲಿ ಬಂದು ನೆಲೆನಿಂತರು. ಆ ಮಹಾಮೂರ್ತಿಗಳೆ ಕನಕಪುರ ದೇಗುಲಮಠದ ಮೂಲಪುರುಷ ಆದ್ಯ ನಿರ್ವಾಣದೇವರು.[12]

ದೇಗುಲ ಮಠದ ಅವರಣದ ಈಶಾನ್ಯ ಮೂಲೆಯಲ್ಲಿ ಒಂದು ಕಲ್ಲಿನ ಶಾಸನವಿದೆ. ಅದು ಎರಡು ಬೇರೆ ಬೇರೆ (ಕ್ರಿ.ಶ. ೧೬೬೭ ಮತ್ತು ೧೬೭೮) ಸಂದರ್ಭಗಳಲ್ಲಿ ಕೆತ್ತಲ್ಪಟ್ಟ ಒಂದೇ ಕಲ್ಲಿನಲ್ಲಿರುವ ಎರಡು ಶಾಸನಗಳ ಕೂಟ. ಈ ಉಭಯ ಶಾಸನಗಳಲ್ಲೂ 'ನಿರುವಾಣದೇವರಮಠ' ಎಂದು ಉಲ್ಲೇಖಿಸಿರುವುದರಿಂದ ಮಠದ ಮೂಲಪುರುಷರಾದ ಆದ್ಯ ನಿರುವಾಣ ದೇವರು ಇವರೆ ಎಂದು ಊಹಿಸಲು ಯಾವ ಅಡ್ಡಿಯೂ ಇಲ್ಲ.[13] ಜೊತೆಗೆ ಇಲ್ಲಿ ಬರುವ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮಣ್ಣೆಯು ದಾನಕರ್ತಳಾದುದರಿಂದ, ಈಕೆ ಆದ್ಯ ನಿರುವಾಣದೇವರ ಭಕ್ತೆಯೂ ಹಾಗೂ ಸಮಕಾಲೀನಳೂ ಆಗಿದ್ದಳೆನ್ನಲು ಸ್ಪಷ್ಟ ಆಧಾರಗಳಿವೆ. ಈ ಎಲ್ಲಾ ಆಧಾರಗಳನ್ನು ಪುಷ್ಟೀಕರಿಸಿ ಹೇಳುವುದಾದರೆ ದೇಗುಲ ಮಠವು ಕ್ರಿ. ಶ. ೧೭ನೆಯ ಶತಮಾನದ ಆರಂಭದಲ್ಲಿ ಸ್ಥಾಪಿತವಾಗಿದ್ದಿರಬೇಕು.

ನಿರ್ವಾಣ ಸ್ವಾಮಿ(ದೇವರು)ಗಳಿಂದಲೇ ಸ್ಥಾಪಿತವಾದ ಈ ಮಠಕ್ಕೆ ಮುಂದೆ'ನಿರ್ವಾಣ ದೇವರ ಮಠ' ಎಂದು ಹೆಸರು ಬಂದಿರುವುದು ಸ್ವಾಭಾವಿಕ. ಕಾಲಾನಂತರದಲ್ಲಿ ಈ ಹೆಸರು ಮೊಟಕುಗೊಂಡು 'ದೇವರ ಮಠ' ವಾಗಿ ಈಗ 'ದೇಗುಲ ಮಠ'ವಾಗಿದೆ.[14] ಮಠದ ದಾಖಿಲಾತಿಗಳ ಪ್ರಕಾರ ಪೀಠ ಪರಂಪರೆಯನ್ನು ಹೀಗೆ ಪಟ್ಟಿಮಾಡಬಹುದು :

೧. ಆದ್ಯ ನಿರುವಾಣದೇವರು. ೨. ನಂಜಯ್ಯ ದೇವರು. ೩. ಮಹಾಲಿಂಗ ಸ್ವಾಮಿಗಳು. ೪. ಹುಚ್ಚಪ್ಪಸ್ವಾಮಿಗಳು. ೫. ಮರುಳಸಿದ್ಧ ಸ್ವಾಮಿಗಳು. ೬. ಚನ್ನಬಸವ ಸ್ವಾಮಿಗಳು. ೭. ಇಮ್ಮಡಿ ಮರುಳ ಸಿದ್ಧಸ್ವಾಮಿಗಳು. ೮. ಇಮ್ಮಡಿ ನಿರ್ವಾಣ ಸ್ವಾಮಿಗಳು. ೯. ಇಮ್ಮಡಿ ಹುಚ್ಚಪ್ಪ ಸ್ವಾಮಿಗಳು. ೧೦. ಇಮ್ಮಡಿ ಮಹಾಲಿಂಗ ಸ್ವಾಮಿಗಳು. ೧೧. ಮುಮ್ಮಡಿ ನಿರ್ವಾಣ ಸ್ವಾಮಿಗಳು (ಈಗಿರುವ ಸ್ವಾಮಿಗಳು).

ದೇಗುಲ ಮಠಕ್ಕೆ ಸೇರಿದ 'ಚಿಕ್ಕಮಠ'ವೊಂದಿದೆ. ಇದು ಅರ್ಕಾವತಿ ಹೊಳೆಗೆ ಬಹಳ ಸಾಮೀಪ್ಯದಲ್ಲಿದ್ದು 'ಗವಿಮಠ'ವೆಂದೂ ಗುರುತಿಸಲ್ಪಡುತ್ತಿತ್ತು. ಆದ್ಯ ನಿರ್ವಾಣದೇವರ ಕಾಲಕ್ಕೆ ಈ ಮಠವೂ ಇದ್ದುದಾಗಿ ತಿಳಿದುಬರುತ್ತದೆ. ಎರಡನೆಯ ಶಾಸನದಲ್ಲಿ 'ಗವಿಮಠ'ದ ಹೆಸರು ಉಲ್ಲೇಖವಾಗಿದೆ. ಪ್ರಾರಂಭದ ಕೆಲದಿನಗಳ ನಂತರ ಈ ಮಠವು ದೇಗುಲ ಮಠದೊಳಗೆ ಲೀನವಾದಂತೆ ಕಾಣುತ್ತದೆ. ದೇವಲಿಂಗಸ್ವಾಮಿಗಳು ಮತ್ತು ನಾಗಲಿಂಗಸ್ವಾಮಿಗಳು ಈ ಮಠದ ಪರಂಪರೆಯಲ್ಲಿ ಗುರುತಿಸಲ್ಪಡುತ್ತಾರೆ.[15]

ಪ್ರಸ್ತುತ ಬರವಣಿಗೆಯಲ್ಲಿ ಈ ಮಠದ ಶಾಸನಗಳ ವಿಚಾರ ಬಹಳವಾಗಿ ಬರುವುದರಿಂದ ಅವುಗಳ ಸಾರಾಂಶವನ್ನು ಇಲ್ಲಿ ಸಂಗ್ರಹಿಸಲಾಗಿದೆ.

೧ನೇ ಶಾಸನದ ಸಾರಾಂಶ

'ದೇವರಾಜ ಒಡೆಯರ ಕಾಲದಲ್ಲಿ ಶಾಲಿವಾಹನ ಶಕ ೧೫೮೯ ಪ್ಲವಂಗ ಸಂವತ್ಸರ ಭಾದ್ರಪದ ಶು.೧೫ ಕ್ರಿ.ಶ. ೧೬೬೭ನೆಯ ತಾರೀಖು ಶುಕ್ರವಾರದಲ್ಲಿ ರಾಜಾಧಿರಾಜ ರಾಜಪರಮೇಶ್ವರ ವೀರ ಪ್ರತಾಪ ಶ್ರೀ ವೀರದೇವರಾಜ ಒಡೆಯರು ಮೈಸೂರು ರಾಜ್ಯವನ್ನು ಆಳುತ್ತಿರುವಾಗ ಅವರ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹೊಂಬನಾಡ ಕಾಣಿಕಾರನಹಳ್ಳಿ ನಿರುವಾಣ ದೇವರ ಮಠವನ್ನು ಕಟ್ಟಿಸಿ ಹೊಲ ಕಂ. ಗ. ೮. ವರಹದ ಭೂ ಸ್ವಾಸ್ತೆಯನ್ನು ದಾನಮಾಡಿದಳು.*'

೨ನೇ ಶಾಸನದ ಸಾರಾಂಶ

'ಕಾಳಾಯುಕ್ತಿ ಸಂವತ್ಸರದ ವೈಶಾಖ ಬ ೧೫ರಲ್ಲು ಅಂದರೆ ಕ್ರಿ.ಶ. ೧೬೭೮ ಏಪ್ರಿಲ್ ೨೮ನೆಯ ಭಾನುವಾರ ಅಮಾವಾಸ್ಯೆಯದಿನ ಚಿಕ್ಕದೇವರಾಜ ಒಡೆಯರು ಪೃಥ್ವಿರಾಜ್ಯವಂ ಗೈಯುತ್ತಿರಲು ಅದೇ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹಿಂದೆ ಕಟ್ಟಿಸಿದ್ದ ನಿರುವಾಣದೇವರ ಮಠವು ಹುಚ್ಚುಹೊಳೆ ಬಂದು ಕೊಚ್ಚಿ ಹೋಗಲು ಕಲ್ಲುಮಂಟಪವನ್ನು ಕಟ್ಟಿಸಿ ಪ್ರತಿಷ್ಠೆ ಮಾಡಿ ಕಾಣಕಾರನಹಳ್ಳಿ ಗ್ರಾಮದ ಪಶ್ಚಿಮಕ್ಕೆ ಹೊಲ ೯. ಗ. (ಗದ್ಯಾಣ) ಭೂಮಿ ಬಿಟ್ಟು ಗವಿಮಠಕ್ಕೆ ಕಂ. ೯ ಕೂಡಾ ಒಟ್ಟು ೧೮ ಕಂ ಅಳತೆ ಭೂಮಿಯನ್ನು ಪುನಃ ಪ್ರತಿಷ್ಠೆ ಮಾಡಿಕೊಟ್ಟರು.*'

ಈ ಶಾಸನಗಳಲ್ಲಿ ಬರುವ ಕೊಮಾರಯ್ಯ ಕ್ರಿ.ಶ. ೧೬೬೭ರಿಂದ ೧೬೮೨ ರವರೆಗೆ ಮೈಸೂರಿನ ದೊರೆಗಳಿಗೆ ದಳವಾಯಿಯಾಗಿದ್ದನು. ಈತನ ಜನ್ಮಸ್ಥಳ ನಂಜನಗೂಡು ತಾಲ್ಲೂಕಿನ ಕಳಲೆಗ್ರಾಮ.[16] ಈತನ ತಾಯಿಯೆ ವೀರಮಾತೆ

ತಿಮ್ಮಮ್ಮಣ್ಣಿ. ಈಕೆಯೆ ದೇಗುಲ ಮಠದ ಎರಡೂ ಶಾಸನಗಳ ಕರ್ತೆ. ಆಗಿನ ನಿರ್ವಾಣದೇವರು ಈಕೆಗೆ ಗುರುಗಳಾಗಿದ್ದಿರಬೇಕು. ಮೊದಲು ಕ್ರಿ.ಶ. ೧೬೬೭ರಲ್ಲಿ ಕೊಮಾರಯ್ಯ ದಳವಾಯಿಯಾದಾಗ; ಮಠಕ್ಕೆ ಭೂದಾನ ನೀಡಿ, ಮಠವನ್ನು ಕಟ್ಟಿಸಿಕೊಟ್ಟ ದಾಖಲೆಯಾಗಿ ಮೊದಲನೆಯ ಶಾಸನವಿದೆ. ಮುಂದೆ ಈ ಮಠವು ಕ್ರಿ. ಶ. ೧೬೭೭ರಲ್ಲಿ ಮೂಲದ ಮಳೆ ಬಂದು ಕೊಚ್ಚಿ ಹೋದಾಗ[17] ಮತ್ತೆ ಕ್ರಿ. ಶ. ೧೬೭೮ರಲ್ಲಿ ಕಲ್ಲುಮಂಟಪವನ್ನು ಪುನರ್‌ಪ್ರತಿಷ್ಠೆ ಮಾಡಿಸಿ ಆಕೆಯೇ ಭೂದಾನ ನೀಡಿದ ಸಂಗತಿಗಳು ಎರಡನೆಯ ಶಾಸನದಲ್ಲಿದೆ.

ಮೈಸೂರಿನಲ್ಲಿ ಕಂಠೀರವ ನರಸರಾಜ ಒಡೆಯರ ನಂತರ ದೊಡ್ಡದೇವರಾಜ ಒಡೆಯರೂ (ಕ್ರಿ. ಶ. ೧೬೫೯ ರಿಂದ ೧೬೭೩ ರವರೆಗೆ); ಹಾಗೂ ಚಿಕ್ಕದೇವರಾಜ ಒಡೆಯರೂ (ಕ್ರಿ. ಶ.೧೬೭೩ ರಿಂದ ೧೭೦೪ ರವರೆಗೆ) ಆಳ್ವಿಕೆ ನಡೆಸಿದರು. ಕೊಮಾರಯ್ಯನು ಇವರಿಬ್ಬರಿಗೂ ದಳವಾಯಿಯಾಗಿದ್ದನು. ಜೊತೆಗೆ ತನ್ನ ಮಗಳಾದ ದೇವಮ್ಮಣ್ಣಿಯನ್ನು ಚಿಕ್ಕದೇವರಾಜ ಒಡೆಯರಿಗೆ ಕೊಟ್ಟು, ವಿವಾಹ ಮಾಡಿದ್ದನು.[18] ಈ ಎಲ್ಲಾ ಒಳಸುತ್ತುಗಳ ಆಧಾರದಿಂದ ಆ ಕಾಲಕ್ಕಾಗಲೇ ಮೈಸೂರಿನ ಅರಸರ ಮೇಲೆ ನಿರ್ವಾಣದೇವರು ಸಾಕಷ್ಟು ಧಾರ್ಮಿಕ ಪ್ರಭಾವ ಬೀರಿದ್ದರೆಂದು ಊಹಿಸಬಹುದಾಗಿದೆ.

ಮುಜರಾಯಿ ಇಲಾಖೆಯ ದಾಖಲಾತಿ[19]ಯೊಂದರ ಪ್ರಕಾರ ೧೯೪೭ರಲ್ಲಿ ಈ ಮಠದ ಭಕ್ತರು ಸರ್ಕಾರಕ್ಕೆ ಬರೆದುಕೊಂಡ ಅಹವಾಲಿನ ಆಯ್ದ ಭಾಗ ಈ ರೀತಿ ಇದೆ :

"ಯದುಸಂತಾನ ಶ್ರೀ ಮೈಸೂರು ಸೀಮೆಯ ವ್ಯವಸಾಯ ಮತ್ತು ಮರಾಮತ್ ಶಾಖಾ ಸಚಿವರಾದ ...., ಕಾನಕಾನಹಳ್ಳಿ ದೇಗುಲ ಮಠದ ಭಕ್ತರು ಮತ್ತು ವೀರಶೈವ ಸಮಾಜ ಬಾಂಧವರು ಅರಿಕೆ ಮಾಡಕೊಳ್ಳುವುದೇನೆಂದರೆ,

ಮೈಸೂರು ಸೀಮೆಯ ವೀರಶೈವ ಸಮಾಜ ಬಾಂಧವರಿಗೆ ಅತ್ಯಂತ ಪೂಜ್ಯಸ್ಥಾನವೆನಿಸಿರುವ ಅರ್ಕಾವತಿ ನದಿ ತೀರಸ್ಥವಾದ ಈ ದೇಗುಲ ಮಠವು ಅತ್ಯಂತ ಪುರಾತನವೂ ಪ್ರಸಿದ್ಧವೂ ಆದುದಾಗಿದೆ. ತಪಸ್ವಿಗಳೂ ಜಿತೇಂದ್ರಿಯರೂ ಆದ ಅನೇಕ ಸ್ವಾಮಿಗಳು ಶ್ರೀಮಠದ ಅಧ್ಯಕ್ಷರಾಗಿದ್ದು ಇದರ ಕೀರ್ತಿಗೌರವಗಳನ್ನು ಹೆಚ್ಚಿಸಿದ್ದಾರೆ. ಕ್ಷೇತ್ರದ ಮಹತ್ವವು ಆಳುವ ಮಹಾಪ್ರಭುಗಳ ವಂಶಸ್ಥರಾದ ಚಿಕ್ಕದೇವರಾಜ ಒಡೆಯರು, ದೊಡ್ಡದೇವರಾಜ ಒಡೆಯರುಗಳ ಗಮನಕ್ಕೆ ಬಂದು ಶ್ರೀಮಠಕ್ಕೆ ಮುವತ್ತಾರು ಎಕರೆ ಬಾಗಾಯಿತು (ತೋಟಗಳೂ) ಸುಮಾರು ಹತ್ತು ಎಕರೆ ತರಿ ಜಮೀನೂ ಇಪ್ಪತ್ತೈದು ಎಕರೆ ಖುಷ್ಕಿ ಜಮೀನೂ, ಇವುಗಳನ್ನೆಲ್ಲಾ ದೇವಾದಾಯ ಇನಾಮತಿ ಆಗಿ ದಯಪಾಲಿಸಿದ್ದಾರೆ.

ಪೂಜ್ಯರಾದ್ಯ ಶ್ರೀಮನ್ ನಿರಂಜನ ನಿರ್ವಾಣಸ್ವಾಮಿಗಳು ಶ್ರೀಮಠದ ಅಧ್ಯಕ್ಷರಾಗಿ ಸುಮಾರು ಇಪ್ಪತ್ತೆಂಟು ವರ್ಷಗಳಿಂದಲೂ ಅವಿಶ್ರಾಂತವಾಗಿ ಶ್ರಮಿಸಿ ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಮಠದಲ್ಲಿ ನಿತ್ಯವೂ ಅತಿಥಿ ಅಭ್ಯಾಗತರಿಗೆ ದಾಸೋಹವು ನಡೆಯುವಂತೆಯೂ, ಮಠದ ಆಸ್ತಿ ಪಾಸ್ತಿಗಳು ಸುವ್ಯವಸ್ಥಿತವಾಗಿ ಏಳಿಗೆಯನ್ನು ಹೊಂದುವಂತೆಯೂ ಮಾಡಿ ಶ್ರೀ ಶ್ರೀ ಗಳವರು ಭಕ್ತಕೋಟಿಯ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ.

ಚಿಕ್ಕಸ್ವಾಮಿಗಳಾದ ಶ್ರೀಮನ್ ನಿರಂಜನ ಮಹಾಲಿಂಗಸ್ವಾಮಿಗಳು ಶ್ರೀಮಠದ ಉತ್ತರಾಧಿಕಾರಿಗಳಾದ ಎಂಟು ವರ್ಷಗಳಲ್ಲಿ ಶ್ರೀಮಠದಲ್ಲಿ ಸುಮಾರು ಎಂಭತ್ತು ಮಂದಿ ಬಡ ವೀರಶೈವ ವಿದ್ಯಾರ್ಥಿಗಳಿಗೆ ನಡೆಯುತ್ತಿರುವ ಅಶನ-ವಸತಿಗಳ ಏರ್ಪಾಡು; ವಿದ್ಯಾರ್ಥಿಗಳು ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷು ಮೊದಲಾದ ವಿದ್ಯಾಭ್ಯಾಸವನ್ನು ಸುಗಮವಾಗಿ ನಡೆಯಿಸಲು ಮಾಡಿರುವ ವ್ಯವಸ್ಥೆ; ದೂರದೂರದಿಂದ ವಿದ್ವಾಂಸರನ್ನು ಕರೆಯಿಸಿ ಮಠದಲ್ಲಿ ಧರ್ಮೋಪದೇಶಕ್ಕೆ ಏರ್ಪಾಡು ಮಾಡಿರುವುದು. ಇವೆಲ್ಲವೂ ಚಿಕ್ಕಸ್ವಾಮಿಗಳವರ ಉತ್ಸಾಹದಿಂದಲೂ ಸ್ಫೂರ್ತಿಯಿಂದಲೂ ಆಗಿರತಕ್ಕವುಗಳು. ಮುಖ್ಯವಾಗಿ ಆದರ್ಶಭೂತಿಗಳಾದ ಈ ಮಠದ ಗುರುಶಿಷ್ಯರು ತಮ್ಮ ಧಾರ್ಮಿಕ ಹಾಗೂ ನೈತಿಕ ಜೀವನದಿಂದ ಸಮಸ್ತ ಭಕ್ತಮಂಡಲಿಗೆ ಮಾರ್ಗದರ್ಶಕರಾಗಿದ್ದಾರೆ. ಇಂತಹ ಮಹಿಮಾನ್ವಿತರಾದ ಗುರುಗಳನ್ನು ಪಡೆದಿರುವ ವೀರಶೈವ ಸಮಾಜವು ಸುಕೃತಶಾಲಿ. ಮೇಲಾಗಿ ಹಾಲಿ ಇರುವ ವಿದ್ಯಾರ್ಥಿಗಳ ವಾಸಕ್ಕೂ ಮತ್ತು ವ್ಯಾಸಂಗಕ್ಕೂ ಸ್ಥಳ ಸಾಲದೆ ತುಂಬಾ ತೊಂದರೆ ಇರುವುದನ್ನು ಕಂಡು ಈ ಮಠದ ಆವರಣದಲ್ಲೆ ಒಂದು ಸಂಸ್ಕೃತ ಪಾಠಶಾಲೆಯನ್ನು ಕಟ್ಟಲು ಸಂಕಲ್ಪ ಮಾಡಿ ಈಗ ಕಟ್ಟಡವು ಪೂರ್ತಿಯಾಗುತ್ತಾ ಬಂದಿದೆ. ಸದರಿ ಕಟ್ಟಡದ ಕೆಲಸಕ್ಕೆ ಮಹಾಜನಗಳಿಂದ ಇದುವರೆಗೆ ಎಂಟುಸಾವಿರ ರೂಪಾಯಿಗಳವರೆಗೂ ಭಕ್ತಿಕಾಣಿಕೆ ಬಂದದ್ದು, ಸದರಿ ಮೊಬಲಗೆಲ್ಲಾ ಖರ್ಚಾಗಿದೆ.

ಮುಖ್ಯವಾಗಿ ಶ್ರೀ ಮಠದಲ್ಲಿ ದಾಸೋಹ, ಆಶ್ರಿತರ ರಕ್ಷಣೆ, ವಿದ್ಯಾರ್ಥಿಗಳ ಪೋಷಣೆ, ಹೊಸಕಟ್ಟಡಗಳ ನಿರ್ಮಾಣ ಇತ್ಯಾದಿಗಳಿಗಾಗಿ ಮಠದ ವೆಚ್ಚವು ದಿನೇ ದಿನೇ ಹೆಚ್ಚುತ್ತಿದೆ. ಮಠದ ಜಮೀನುಗಳ ಉತ್ಪನ್ನ ಶಿಷ್ಯವರ್ಗದ ನೆರವು ಇವುಗಳಿಂದ ಮಠದ ಕಾರ್ಯಕಲಾಪಗಳು ನಡೆಯುತ್ತಿವೆ.* ಈ ಅಹವಾಲಿನ ಕೆಳಗೆ ಸುಮಾರು ನೂರು ಎಂಭತ್ತಕ್ಕೂ ಮಿಕ್ಕು ರುಜುಗಳಿವೆ. ಅರ್ಜಿ ಬರೆದ ದಿನಾಂಕ ೧೮-೨-೧೯೪೭.

ಈ ಅಹವಾಲು ಕೇವಲ ಅಹವಾಲಾಗಿರದೆ, ಶ್ರೀಮಠದ ಐತಿಹಾಸಿಕ ಪರಂಪರೆಯೊಂದಿಗೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೊಡುಗೆಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಜೊತೆಗೆ ಸ್ವಾತಂತ್ರ್ಯಪೂರ್ವದಲ್ಲಿ ಇದ್ದಿರಬಹುದಾದ ಮಠದ ಸ್ಥಿತಿಗತಿಯ ಜೊತೆಗೆ, ಮಠಾಧ್ಯಕ್ಷರುಗಳ ಸಾಮಾಜಿಕ ಕಾಳಜಿ ಹಾಗೂ ಶೈಕ್ಷಣಿಕ ಉತ್ತೇಜನಗಳನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಉಲ್ಲೇಖಿವಾಗಿರುವ ಇಮ್ಮಡಿ ನಿರ್ವಾಣಸ್ವಾಮಿಗಳು ಶತಾಯುಷಿಗಳಾಗಿದ್ದರು (ಕ್ರಿ.ಶ. ೧೮೬೯ – ೧೯೭೨) ಎಂಬುದೊಂದು ವಿಶೇಷ. ಈ ವೃದ್ಧ ಮೂರ್ತಿಗಳು ಸ್ವತಃ ತಾವೇ ಮಠದ ಸ್ವಚ್ಛತೆ ಹಾಗೂ ಬೇಸಾಯದ ಕಾರ್ಯಗಳನ್ನು ಮಾಡುತ್ತಿದ್ದುದಾಗಿ ಕಣ್ಣಾರೆ ಕಂಡಿದ್ದ ಅನೇಕ ಭಕ್ತರು ಈಗಲೂ ಹೇಳುತ್ತಾರೆ. ಮುಂದೆ ಚರಮೂರ್ತಿ ಇಮ್ಮಡಿ ಮಹಾಲಿಂಗ ಸ್ವಾಮಿಗಳಿಗೆ ೧೯೩೯ ರಲ್ಲಿ ಮಠದ ಚರಪಟ್ಟಾಧಿಕಾರವನ್ನುವಹಿಸಿದ್ದರು. ಈ ಗುರು-ಶಿಷ್ಯರಿಬ್ಬರ ಮಠಾಧಿಪತ್ಯ ಮೂವತ್ತುಮೂರು ವರ್ಷಗಳ ಕಾಲ ನಿರಾತಂಕವಾಗಿ ಸುಮಧುರವಾಗಿ ಸಾಗಿದ್ದುದು ಒಂದು ದೊಡ್ಡ ವಿಶೇಷವೆ ಸರಿ. ಇವರೀರ್ವರ ಕಾಲದಲ್ಲೂ ಮಠವು ಸರ್ವರೀತಿಯಿಂದಲೂ ಉತ್ತುಂಗ ಸ್ಥಿತಿಯನ್ನು ಮುಟ್ಟಿತ್ತು. ದೀನ ದರಿದ್ರರಿಗೆ, ಬಂದ ಭಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರಸಾದದ ವ್ಯವಸ್ಥೆ ನಿತ್ಯನೇಮವಾಗಿತ್ತು. ಧಾರ್ಮಿಕ ಆಚರಣೆಗಳು, ಶಿವಾನುಭವ ಗೋಷ್ಠಿಗಳು ಸಾಂಗವಾಗಿ ಜರುಗುತ್ತಿದ್ದವು. ಈ ಭಾಗದ ಗ್ರಾಮೀಣ ಮಕ್ಕಳಿಗೆ ಮಠವೆ ವಿದ್ಯಾರ್ಜನೆಯ ಆಶ್ರಯ ಕೇಂದ್ರವಾಗಿತ್ತು. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರು (ದಿ. ೨-೬-೧೯೫೨ ರಲ್ಲಿ) ದೇಗುಲಮಠಕ್ಕೆ ಭೇಟಿ ನೀಡಿ, ಉಭಯ ಶ್ರೀಗಳವರ ದರ್ಶನಾಶೀರ್ವಾದ ಪಡೆದಿದ್ದರು. ಚಿತ್ರದುರ್ಗ ಬೃಹನ್ಮಠದ ಶ್ರೀ ಜಯದೇವ ಜಗದ್ಗುರುಗಳು ದಯಮಾಡಿಸಿ ಶ್ರೀ ಮಠದ ದಾಸೋಹ ಸೇವೆಗೆ ಮೆಚ್ಚಿಗೆ ಸೂಚಿಸಿದ್ದರು. ಸಿದ್ಧಗಂಗಾಮಠದ ಡಾ. ಶಿವಕುಮಾರಸ್ವಾಮಿಗಳಿಗೆ ದೇಗುಲಮಠ ನೆರಮನೆ ಇದ್ದಂತೆ. ಉದ್ದಾನ ಶಿವಯೋಗಿಗಳ ಕಾಲದಿಂದಲೂ ಉಭಯ ಮಠಗಳಿಗೆ ಅವಿನಾಭಾವ ಸಂಬಂಧವಿದೆ.

ಇಮ್ಮಡಿ ನಿರ್ವಾಣ ಸ್ವಾಮಿಗಳು ಬಹಳ ಜನಾನುರಾಗಿಗಳಾಗಿದ್ದರು. ಈ ಪ್ರಾಂತ್ಯದ ರೈತಾಪಿ ಜನ ಸಮುದಾಯಕ್ಕೆ ಸಾಕ್ಷಾತ್ ಶಿವಸ್ವರೂಪಿಗಳೆ ಆಗಿದ್ದರು. ದೀನದಲಿತರ ಆಶಾಕಿರಣವಾಗಿ, ಬಯಸಿದ ಭಕ್ತರ ಬಾಳದೀವಿಗೆಯಾಗಿದ್ದರು. ಹೀಗೆ ಸರ್ವಜನಾದರಣೀಯ ಮೂರ್ತಿಸ್ವರೂಪರಾಗಿದ್ದ ಇವರು ೧೯೭೨ ರಲ್ಲಿ ಜನವರಿ ೩೦ ರಂದು ಶಿವಾಧೀನರಾದರು. ಆ ಸಂದರ್ಭದಲ್ಲಿ ಗಣಾರಾಧನೆಯ ಪ್ರಯುಕ್ತ ಕನಕಪುರದ ಸುತ್ತಮುತ್ತಲ ಗ್ರಾಮಗಳ ಶ್ರೀವೈಷ್ಣವ, ಸ್ಮಾರ್ತ, ಮಾಧ್ವ ಈ ತ್ರಿಮತಸ್ಥರೇ ಅಲ್ಲದೆ, ಉಳಿದ ಎಲ್ಲಾ ಜಾತಿ ಕೋಮುಗಳ ಭಕ್ತ ಜನರಿಗೂ ಭೂತ ತೃಪ್ತ್ಯರ್ಥವಾಗಿ ಅನ್ನಸಂತರ್ಪಣೆ ನಡೆಸಿದ ಮಹಾಕಾರ್ಯ ಇಂದಿಗೂ ಆ ಭಾಗದ ಜನರ ಮನೆಮಾತಾಗಿದೆ.

ಈ ಶತಮಾನದ ಆರಂಭದ ದಿಶೆಯಿಂದಲೂ ದೇಗುಲ ಮಠದಲ್ಲಿ ವ್ಯವಸ್ಥಿತವಾದ ವಿದ್ಯಾಭ್ಯಾಸ ಹಾಗೂ ದಾಸೋಹ ಸೇವೆಗಳು ನಿರಂತರವಾಗಿ ನಡೆದುಬಂದಿವೆ. ಇಂದು ಶ್ರೀ ನಿರ್ವಾಣಸ್ವಾಮಿ ವಿದ್ಯಾಪೀಠದ ಆಶ್ರಯದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿ ನಿಂತಿವೆ. ಕನಕಪುರದಲ್ಲಿ ಶ್ರೀ ಮಹಾಲಿಂಗೇಶ್ವರ ಪ್ರೌಢಶಾಲೆ, ಐ.ಟಿ.ಐ. ತರಬೇತಿ ಕೇಂದ್ರ, ಹಿರಿಯ ಪ್ರಾಥಮಿಕ ಶಾಲೆ, ಸಂಸ್ಕೃತ ಮತ್ತು ವೇದ ಪಾಠಶಾಲೆ, ಉಚಿತ ವಿದ್ಯಾರ್ಥಿ ನಿಲಯ, ಅನಾಥಾಶ್ರಮ ಇವೇ ಮೊದಲಾದುವು ಸಾರ್ಥಕ ಸೇವೆಗೈಯುತ್ತಿವೆ. ಗ್ರಾಮಾಂತರ ಭಾಗದ ಸಾವಿರಾರು ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇವುಗಳ ಜೊತೆಗೆ, ಮಾಗಡಿ ತಾಲ್ಲೂಕಿನ ವೀರೇಗೌಡನ ದೊಡ್ಡಿಯಲ್ಲಿ, ಮಳವಳ್ಳಿ ತಾಲೂಕಿನ ಹಲಸನಹಳ್ಳಿ ಹಾಗೂ ಕನ್ನಳ್ಳಿಗಳಲ್ಲಿ ಮತ್ತು ಮದ್ದೂರು ತಾಲ್ಲೂಕಿನ ಕೆಸ್ತೂರಿನಲ್ಲಿ ಶ್ರೀಮಠದ ವತಿಯಿಂದ ಪ್ರೌಢಶಾಲೆಗಳನ್ನು ನಡೆಸಲಾಗುತ್ತಿದೆ.

ಎಲ್ಲಾ ಜನಾಂಗದ ವಿದ್ಯಾರ್ಥಿಗಳಿಗೂ ಉಚಿತ ಊಟ ಹಾಗೂ ವಸತಿಯ ವ್ಯವಸ್ಥೆ, ವಿದ್ಯಾರ್ಜನೆಗಾಗಿ ಭವ್ಯವಾದ ಹಾಗೂ ಸುಭದ್ರವಾದ ಕಟ್ಟಡಗಳ ವ್ಯವಸ್ಥೆ, ಪ್ರತಿನಿತ್ಯ ಬರುವ ನೂರಾರು ಮಂದಿ ಪ್ರವಾಸಿಗರಿಗೆ ಹಾಗೂ ಬಡಬಗ್ಗರಿಗೆ ದಾಸೋಹದ ವ್ಯವಸ್ಥೆ, ಸ್ಥಳೀಯ ಜಾತ್ರೆ ಹಾಗೂ ವಿಶೇಷ ಧಾರ್ಮಿಕ ಕಾರ್ಯಗಳಲ್ಲಿ ಸೇರುವ ಹತ್ತಾರು ಸಾವಿರ ಮಂದಿಗೆ ಸಾಂಗವಾದ ಪ್ರಸಾದದ ವ್ಯವಸ್ಥೆ ಮತ್ತು ಆಗಾಗ ನಡೆಯುವ ಧಾರ್ಮಿಕ ಸಭೆ, ಉಪನ್ಯಾಸ ಹಾಗೂ ಶಿವಾನುಭವ ಗೋಷ್ಠಿಗಳ ವ್ಯವಸ್ಥೆ ಇವೇ ಮೊದಲಾದ ಬಹುಶ್ರುತ ಸೇವೆಗಳಿಂದಾಗಿ ಕನಕಪುರದ ದೇಗುಲ ಮಠವು ರಾಷ್ಟ್ರಮಟ್ಟದ ಶ್ರೇಷ್ಠ ಸಾಂಸ್ಕೃತಿಕ ಸೇವಾಸಂಸ್ಥೆಗಳಲ್ಲಿ ಒಂದಾಗಿದೆ. ಒಟ್ಟಾರೆ ನೂರಾರು ವರ್ಷಗಳಿಂದ ಶ್ರೀಮಠವು ಹೀಗೆ, ವಿದ್ಯಾದಾನ, ಪರೋಪಕಾರ, ಜ್ಞಾನೋಪದೇಶ ಮತ್ತು ಅಜ್ಞಾನಿಗಳಿಗೆ ಸನ್ಮಾರ್ಗದರ್ಶನ ನೀಡುತ್ತಾ ಬಂದಿರುವುದು ಸಾಮಾನ್ಯವಾದ ಕೆಲಸವೇನಲ್ಲ.

ಆಕರ ಗ್ರಂಥಗಳು :

೧. ದೇಗುಲ ಜ್ಯೋತಿ (ಸಂ. ಎನ್. ಮಹಾದೇವಪ್ಪ., ಬಿ. ನಂಜುಂಡಪ್ಪ.) ಆರ್. ಚಕ್ರವರ್ತಿ. ಪು. ೨೯
೨. ಎಪಿಗ್ರಾಫಿಕ ಕರ್ನಾಟಕ - ೯. ಬೆಂಗಳೂರು ೯೪; ೧೬೬೨.
೩. ದೇಗುಲ ಕಿರಣ, (ಸ್ಮರಣ ಸಂಚಿಕೆ- ೧೯೭೭) ಪು. ೨೩
೪. ದೇಗುಲ ಜ್ಯೋತಿ (ಸ್ಮರಣ ಸಂಪುಟ) ಆರ್. ಚಕ್ರವರ್ತಿ. ಪು. ೨೯.
೫. ದೇಗುಲ ಕಿರಣ (ಸ್ಮರಣ ಸಂಚಿಕೆ) ಹೀ. ಚಿ. ಶಾಂತವೀರಯ್ಯ. ಪು. ೨೩
೬ ದೇಗುಲ ಜ್ಯೋತಿ (ಸ್ಮರಣ ಸಂಪುಟ) ಆರ್. ಚಕ್ರವರ್ತಿ. ಪು ೧೯
೭ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಡಾ. ಎಂ. ಚಿದಾನಂದ ಮೂರ್ತಿ. ಪು. ೧೯೦.
೮. ಅದೇ.
೯. ದೇಗುಲಜ್ಯೋತಿ ಆರ್. ಚಕ್ರವರ್ತಿ ಪು. ೨೦
10. Register for Muzrai Institutions. Kanakanahalli Taluk. 1902. P 74-75

 * ಕನಕಪುರ ತಾಲ್ಲೂಕಿನ ಮಡಿವಾಳದಲ್ಲಿ ಒಂದು ಶಿಲಾ ಮಠವಿತ್ತು. ಅದು ಹೊಳೆಯ ಮಹಾಪೂರಕ್ಕೆ(ಅರ್ಕಾವತಿಯ ಉಪನದಿ) ಸಿಕ್ಕು ಕೊಚ್ಚಿಹೋಗಿದೆ. ಅದರ ಅವಶೇಷಗಳನ್ನು ಇಂದಿಗೂ ಗುರುತಿಸಬಹುದಾಗಿದೆ.

 * ಬಿಲ್ವಪತ್ರೆ ಗವಿಮಠದ ಶ್ರೀಗಳ ಹೇಳಿಕೆ ಪ್ರಕಾರ.

೧೧. ದೇಗುಲಜ್ಯೋತಿ (ಸ್ಮರಣ ಸಂಪುಟ) ಬಿ. ನಂಜುಂಡಪ್ಪ.. ಪು. ೩೪
೧೨. ಅದೇ.
೧೩. ದೇಗುಲ ಜ್ಯೋತಿ ಆರ್. ಚಕ್ರವರ್ತಿ ಪು. ೨೩, ೨೪
೧೪. ಅದೆ ಪು. ೨೯
೧೫. ದೇಗುಲಜ್ಯೋತಿ ಆರ್. ಚಕ್ರವರ್ತಿ, ಪು. ೨೧, ೨೨
*. ದೇಗುಲ ಜ್ಯೋತಿ. ಪು. ೨೫
೧೬. ದೇಗುಲ ಜ್ಯೋತಿ ಪು. ೨೭
೧೭. "ಮೂಲದ ಮಳೆ ಬಂದು ದೇಗುಲ ಕೊಚ್ಚಿ ಹೋಯ್ತು" ಎಂಬ ಜನಪದ ಹಾಡು ನುಡಿ ಆ ಪ್ರಾಂತ್ಯದಲ್ಲಿ ಈಗಲೂ ಜನಜನಿತವಾಗಿದೆ.
೧೮. ದೇಗುಲ ಜ್ಯೋತಿ ಪು.೨೭
೧೯. ಮುಜರಾಯಿ ಫೈಲ್ ನಂ ೧೯೬-೧೯೪೬, ಕ್ರಮಸಂಖ್ಯೆ ೧ - ೪

ಕೊಡಗಿನ ವೀರಶೈವ ಮಠಗಳ ಕೊಡುಗೆ

ಎಂ.ಜಿ.ನಾಗರಾಜ್

ತಾತ್ತ್ವಿಕ ಹಿನ್ನಲೆ

ಜನಜೀವನದ ಅರಳಿದ ಪದರುಗಳು ಒಂದು ಸಂಸ್ಕೃತಿಯ ಬೇರುಗಳನ್ನು ರೂಪಿಸುತ್ತದೆ. ಅದು ಪುಷ್ಟಿಗೊಳ್ಳುತ್ತ ಬಂದಂತೆ ಸಾಂಸ್ಕೃತಿಕ ಹೂಗಳು ನಳನಳಿಸುತ್ತವೆ. ಒಂದು ಸಮುದಾಯ ಅಥವಾ ಒಂದು ವ್ಯಕ್ತಿತ್ವ ವಾಸ್ತವಿಕ ತುರ್ತುಗಳ ಕಾರಣವಾಗಿ ಸಂಸ್ಕೃತಿಯ ನೆಲೆಯಲ್ಲಿ ಅರಳಿದಾಗ ಅದಕ್ಕೆ ವೈಶಿಷ್ಟ್ಯ ಒದಗುತ್ತದೆ. ಅದು ಮೊತ್ತಗೊಳ್ಳುತ್ತ ಬಂದಂತೆ ಒಂದು ವ್ಯವಸ್ಥೆ ಅಥವಾ ಸಂಸ್ಥಾರೂಪ ಮೂಡಿಬರುತ್ತದೆ. ಧರ್ಮದ ಅಂಗಳದಲ್ಲಿ ಅವುಗಳಿಗೆ'ಮಂಟಪ', ಮಠ, ಪೀಠ, ವಿಹಾರ, ಚೈತ್ಯ, ಬಸದಿ, ದೇಗುಲ, ದರ್ಗಾ, ಚರ್ಚು, ಗುರುದ್ವಾರ ಇತ್ಯಾದಿ ಯಾವುದೇ ಹೆಸರಾಗಬಹುದು. ಅದರ ಸಂಬಂಧದ ಪ್ರಮುಖರಿಗೆ ಗುರು, ಆಚಾರ್ಯ ಎಂಬ ಅರ್ಥದ ಶಬ್ದಗಳು ಭಾಷಿಕವಾಗಿ ಬೇರೆ ಬೇರೆ ರೂಪದಲ್ಲಿರಬಹುದು. ಆದರೆ ಅವುಗಳು ಧಾರ್ಮಿಕ ಅಂಕಣದಲ್ಲಿ ಬೆಳಸುಗೊಂಡಿದ್ದರೂ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಸ್ಪಂದಿಸಿದಾಗ ಜನತೆಯ ಹರವನ್ನು ಅವು ಬಾಚಿಕೊಳ್ಳುತ್ತವೆ. ಅದು ವ್ಯವಸ್ಥೆಯ ನೈತಿಕ ಹೊಣೆಯೂ ಹೌದು. ಅಂದರೆ ಆ ವ್ಯವಸ್ಥೆ ಅಥವಾ ಸಂಸ್ಥಾರೂಪಗಳ ರಾಚನಿಕ ಸ್ವರೂಪದಲ್ಲಿ ಧಾರ್ಮಿಕ ಸ್ಥಾನ-ಗೌರವಗಳ ಲಭ್ಯತೆ, ಹಕ್ಕುಗಳ ಚಾಲನೆ ಇದ್ದಂತೆಯ ಬಾಧ್ಯತೆಯ ಆಯಾಮಗಳೂ ಸ್ಪಷ್ಟವಾಗಿರಬೇಕು. ಇದರಿಂದ ಜನ ಮಾನಸ ನಿರೀಕ್ಷೆಗಳಿಗೆ ಹಿತ-ಶ್ರೇಯವೆನಿಸಿದಾಗ ತಲೆಮಾರುಗಳ ಸತತದಲ್ಲಿ ಸಂಸ್ಥೆಯ ಅಸ್ತಿತ್ವ ಸ್ಥಾಯಿಗೊಳ್ಳುತ್ತ ಹೋಗುತ್ತದೆ. ಆದರೆ ಅದು ಸ್ಥಾವರದೊಳಗಣ ಮೌನವಲ್ಲ. ವೈಜ್ಞಾನಿಕವಾಗಿ ವಿವರಣೆ ಇರುವ ಸ್ಥಾವರದೊಳಗಣ ಕಣಗಳ ಲಘುವೇಗಚಲನ ಅರ್ಥಾತ್ ಭಾವಕಣಗಳ ಚಲನ. ಇದು ಸ್ಥಿತಿಯಲ್ಲಿರುವ ಗತಿಯ ಒಂದು ಅಂಶ. ಅಂತಾಗಿ ಆಯಾ ಕಾಲದ ತಿರುವುಗಳಲ್ಲಿ ತನ್ನ ಸ್ವರೂಪದಲ್ಲಿಯೂ ತಿರುವುಗಳನ್ನು, ತರಂಗಗಳನ್ನು ಹೊಂದಿಸಿಕೊಂಡು ಬದುಕುವಂತಾಗಬೇಕು. ಆಗ ಸ್ಥಿತಿಯೊಡನೆ ಗತಿ ಸಮರಸವಾಗುತ್ತದೆ. ಸ್ಥಿತಿಬಿಂಬ ಗತಿಬಿಂಬಗಳು ಈ ಸಂಸ್ಥಾರೂಪಕ್ಕೆ ಸಾಮಾಜಿಕ ಜೀವನ ಬಿಂಬದಲ್ಲಿ ಸಾಮರಸ್ಯ ಸ್ಥಿತಿ ತರುತ್ತವೆ. ಕುರೂಪವನ್ನು ದೂರ ಸರಿಸುತ್ತವೆ.

ಇಂತಹ ಒಂದು ಹಾದಿಯಲ್ಲಿ ನಡೆದು ಬರುವಂತಹ ಮಠ, ಪೀಠಗಳ ಕೊಡುಗೆ ಯಾರಿಗೆ ? ಅದು ಸಮಾಜಕ್ಕೆ ಸಂದಾಯವಾಗಬೇಕು. ಸಮಾಜದ ನೆಲದಲ್ಲಿ ಬೆಳೆದು ಬಂದ ಈ ಸಂಸ್ಥೆ ಹೊಸ ಬೀಜಗಳನ್ನು ತನ್ನ ಅಂಕಣದಲ್ಲಿ ನೆಟ್ಟು, ಸಾಮಾಜಿಕ ಒಳಿತಿನ ಸಸಿಗಳನ್ನು ನೈತಿಕ ಫಲಗಳನ್ನು ಮೌಲಿಕವಾಗಿ ನೀಡಬೇಕು. ಆಗ ಈ ಸಂಸ್ಥೆಗಳ ಶ್ರೇಯದ ಕಳಶಗಳು ತುಂಬಿದ ಗಂಗೆಯ ತಲಕಾವೇರಿಯ ನೆಲೆ ಆಗುತ್ತವೆ. ಇದು ಸಮುದಾಯಕ್ಕೆ ಸಲ್ಲಿಸುವ ಧಾರ್ಮಿಕ ಋಣ; ನೈತಿಕ ತುತ್ತು; ಮೌಲಿಕ ದಾಸೋಹ. ಹಾಗೆಯೆ ಸಮುದಾಯಕ್ಕೆ 'ಸಾಮಾಜಿಕ' ಸಂದಾಯದ ತಲೆಮಾರುಗಳ ಕರ್ತವ್ಯ ಇದ್ದು, ಇಂತಹ ಸ್ಥಿತಿಯಲ್ಲಿ ಅದು ಜಾಗೃತಗೊಳ್ಳುತ್ತದೆ, ಜಾಗೃತಗೊಳ್ಳಬೇಕು.

ಇಲ್ಲಿ 'ಸಾಮಾಜಿಕ' ಎಂಬುದು ಇಡಿಯ ಸಮಾಜಕ್ಕೆ ಅಂದರೆ ಸಮಾಜದ ರಾಚನಿಕತೆಗೇ, ಸಾಮಾಜಿಕ ಸಂಬಂಧಗಳ ಸಂಕೀರ್ಣ ವ್ಯವಸ್ಥೆಗೇ ಸಂಬಂಧಿಸಿರುತ್ತದೆ. ಅರ್ಥಾತ್ ರಾಜಕೀಯ, ಧಾರ್ಮಿಕ, ಆರ್ಥಿಕ, ನ್ಯಾಯ ಇತ್ಯಾದಿಗಳ ರಾಸಾಯನಿಕ ಸಮ್ಮಿಳನವೇ ಸಾಮಾಜಿಕವಾಗಿರುತ್ತದೆ.[1] ಆದರೆ ಅದು ಕೇವಲ ಮಿಶ್ರಣವಲ್ಲ. ಎಲ್ಲದರ ಸಂಯೋಗದ ಹೊಸರೂಪ. ಮಠ, ಪೀಠಗಳ ದೃಷ್ಟಿಯಿಂದ ಸಾಮಾಜಿಕ, ಸಾಹಿತ್ಯಿಕ ಹಾಗು ಸಾಂಸ್ಕೃತಿಕ ನೆಲೆಗಳಲ್ಲಿ ಪ್ರಾಚೀನದಿಂದ ಹೆಪ್ಪಿಟ್ಟು ಕೊಟ್ಟ ಕೊಡುಗೆಗಳಲ್ಲಿ ಇಂತಹ 'ಸಾಮಾಜಿಕತನ'ವೂ ಇದೆ. ಹಾಗೆಯೆ ಶೋಷಕ ಮನೋಧರ್ಮಗಳು ಆ ವ್ಯವಸ್ಥೆಯಲ್ಲಿ ತೂರಿಕೊಂಡಾಗ ವಿಕೃತ'ಅಸಾಮಾಜಿಕತನ'ವನ್ನು ಸುತ್ತ ಚೆಲ್ಲಿರುವುದೂ ಉಂಟು. ವೀರಶೈವ ಮಠಗಳನ್ನೂ ಇದೇ ನಿಕಷದಲ್ಲಿ ಗಮನಿಸಿದಾಗ ಧನಾತ್ಮಕ ಗುಣಗಳು ಹೆಚ್ಚು ಕಾಣಬರುತ್ತವೆ. ಈ ದೃಷ್ಟಿಯಿಂದ ಸಾಂಪ್ರದಾಯಿಕ, ಐತಿಹಾಸಿಕ ಹಾಗೂ ಆಧುನಿಕ ನೆಲೆಗಳಲ್ಲಿ ಅವುಗಳ ಪಾತ್ರಗಳನ್ನು ಪರಿಶೀಲಿಸಬೇಕಾಗುತ್ತದೆ. ಇಲ್ಲಿ ಯಾವ ನೆಲೆಯಿಂದಲೇ ಗಮನಿಸಲಿ ಒಂದು ಮತ್ತೊಂದಕ್ಕೆ ಆದರ್ಶವಾಗಿಯೋ, ಸ್ಫೂರ್ತಿಯಾಗಿಯೋ, ಚಾಲನಶಕ್ತಿಯಾಗಿಯೋ ಪಾತ್ರಗಳನ್ನು ಪಡೆದಿವೆ ಅಥವಾ

ಪಡೆಯಬೇಕಾಗಿದೆ. ಇದಲ್ಲದೆ ಪ್ರಾದೇಶಿಕ ವೈಶಿಷ್ಟ್ಯಗಳನ್ನು ವೀರಶೈವ ಮಠಗಳು ತೋರಿಕೊಂಡಿರುವುದೂ ಕಾಣಬರುತ್ತದೆ. ಅದರ ಪರಿಶೀಲನೆಯೂ ಆಗಬೇಕಿದೆ.

ಮಠಗಳ ಕಾಯಕ, ಕೇವಲ ತಾತ್ತ್ವಿಕ ಅನುಸಂಧಾನದಲ್ಲಿ ಸ್ಥಾಯಿಗೊಳ್ಳುವ ಅನುರಕ್ತಿಯಲ್ಲಿ ಅಥವಾ ಗತಿಶೀಲತೆಯ ಹೆಸರಿನಲ್ಲಿ ಪ್ರಚಾರದ ರೋಚಕ ಬೆಳಕಿನಲ್ಲಿ (ಗ್ಲಾಮರ್) ಬೆಳಗುವುದಲ್ಲ ಮುಖ್ಯ. ತಾ ಪಡೆದ ಬುತ್ತಿಗೆ, ಸಮಾಜದ ನೆತ್ತಿಗೆ, ಎದೆಗೆ ದಾಸೋಹ ಸಲ್ಲಿಸುವ ಭಾಗ್ಯ ಅದಕ್ಕುಂಟು. ದಾಸೋಹ ಎಂದರೆ ಕೇವಲ ಅನ್ನವಿಟ್ಟು ನೆಲೆಕೊಡುವುದಲ್ಲ. ಅದು ಪ್ರಾಚೀನಕ್ಕೂ ಇದ್ದ ಸಂಗತಿಯೇ. ಹೊಟ್ಟೆಯ, ಎದೆಯ, ನೆತ್ತಿಯ ಹಸಿವುಗಳಿಗೆ, ಮಾನಸ ಸ್ಪಂದನಗಳಿಗೆ ಸರ್ವತೋಮುಖವಾಗಿ ಸಲ್ಲಿಸಬೇಕು. ಭೂತದ ಗೌರವಕ್ಕೆ, ವರ್ತಮಾನದ ಬದುಕಿಗೆ, ಭವಿಷ್ಯತ್ತಿನ ಆಶೆಗೆ, ಸಮಾಜ ಸಮುದಾಯವನ್ನು ಸಿದ್ಧಮಾಡುವುದು ದಾಸೋಹ ಮುಖಿಯೆ. ಹಾಗೆಂದು ಬದ್ಧ ಬದುಕಿನ ಅಂಗಳಕ್ಕೆ ಎತ್ತಿನಂತೆ ಕಟ್ಟಿಹಾಕುವುದಲ್ಲ. ತನ್ನ ಧರ್ಮದ ನೆಲೆಯಲ್ಲಿ ನಿಂತೂ ಅನ್ಯ ಧರ್ಮಕ್ಕೂ ಸಾಂಸ್ಕೃತಿಕ ಗೌರವಗಳನ್ನು ಸಲ್ಲಿಸುವ ಬಗೆಗಳಿಗೆ ಪ್ರೇರಣಾ ನೆಲೆಯಾಗಬೇಕು. ಅಷ್ಟೇಅಲ್ಲ. ಇಂದಿಗೂ ಅನ್ಯಧರ್ಮೀಯರನ್ನು ತನ್ನ ಸಮಾಜದ ಒಳಮಾನಸ ಸ್ತರಗಳಿಗೆ ತೆಗೆದುಕೊಂಡಿರುವಂತೆ, ತನ್ನದೇ ಸಮಾಜದ ದಲಿತ ವರ್ಗವನ್ನು ಸಮಾಜದ ಒಳ ಮಾನಸಕ್ಕೆ ಸಲ್ಲಿಸಬೇಕಾದ ದಾಸೋಹ ಇನ್ನೂ ಆಗಿಯೇ ಇಲ್ಲ. ದೂರ ಸರಿಸುವ ಜಾಯಮಾನ ಅಂತರಂಗದಲ್ಲಿ ಕಾಣುತ್ತದೆ. ಈ ದೃಷ್ಟಿಯಿಂದ ದೇವರ ದಾಸಿಮಯ್ಯನ ವಚನದ ಪರಿ ಗಮನಿಸಬೇಕು.

ಒಡಲುಗೊಂಡವ ಹಸಿವ । ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ.

ಸಾಮಾಜಿಕವಾಗಿ ಒಪ್ಪು-ತಪ್ಪುಗಳಿರುತ್ತವೆ. ಕೇವಲ ಮನುಷ್ಯನ ಲೌಕಿಕ ಗುಣಗಳನ್ನೇ, ಅಗತ್ಯಗಳನ್ನೇ ಗಮನಿಸಬಾರದು. ಆ ನೆಲೆಯಲ್ಲಿ ನಾನೇ ಇದ್ದಾಗ ಹೇಗಿರುತ್ತೇನೆ ಎಂಬ ಅರಿವಿನ ಭಾವದಲ್ಲಿ ಮನುಷ್ಯನನ್ನು ಸಮುದಾಯವನ್ನು ಪರಿಭಾವಿಸಿದಾಗ, ದೈವತ್ವಕ್ಕೂ ಮಾನುಷತೆಗೂ ನಂಟಾಗುತ್ತದೆ. ಹಾಗೆಯೇ ಮಠಗಳ ದಾಸೋಹಗಳ ನಂಟು ಸಮುದಾಯದೊಡನೆ ಇರಬೇಕು. ಅದು ಸಮುದಾಯಕ್ಕೂ ಹೊಣೆಯೆ.

ಇಂತಹ ಮಿಡಿತಗಳು ಸಮುದಾಯವನ್ನು ಮಿಡಿಸುವಂತಾಗಬೇಕು. ಈ ಮಿಡಿತ ಕೇವಲ ವಹನ ಅಲ್ಲ, ಸಂವಹನ. ಬರಿ ವರ್ಗಾವಣೆ ಅಲ್ಲ; ವಿಚಾರದ ಚೈತನ್ಯಶೀಲ ಸಹಯೋಗ. 'ಧಾರ್ಮಿಕ ನೆಲೆ' ಎಂದಷ್ಟೇ ಅಂದುಕೊಂಡರೆ, ಸಂಪ್ರದಾಯದ ಸಂಗತವೊ, ಅಸಂಗತವೋ ಆದ ಅಂಶಗಳು ಕ್ಲೀಷೆಯಾಗಿ ಅಂಟಿಕೊಳ್ಳುತ್ತವೆ. ಅದನ್ನು ಭಜಿಸುತ್ತ ಹೋಗುವ ಜಡತೆ ಬರುತ್ತದೆ. ಅಂತಹ ಭಜನೆ, ಆರಾಧನೆ, ಪ್ರವಚನ, ಕ್ರಿಯೆಗಳ ರೂಪವಲ್ಲವೆ? ಎನ್ನಬಹುದು. ಆದರೆ ಅದು ಕುದುರೆ ಮುಖಿ. ಹೊಸತುಗಳು ಅವಕ್ಕೆ ನಿಲುಕುವುದಿಲ್ಲ. ಹುಡುಕಾಟವಿದ್ದರೆ ತಾನೆ ಹೊಸತು. ಹಳೆತಿನ ಗರ್ಭದಿಂದ ಹೊಸತು ಹುಟ್ಟುತ್ತದೆ, ದಿಟ. ಆದರೆ ಹಳತಿನಿಂದ ವಿಭಿನ್ನವನ್ನು ಹುಡುಕಿದರೆ ತಾನೆ ಆವಿಷ್ಕಾರ. ಇದಾಗದಿದ್ದರೆ ಬೆಳಸೇ ಇಲ್ಲ. ಬೆಳಸಿಲ್ಲ ಎಂದರೆ ವರ್ತಮಾನದ ಹಸಿವಿಗೆ ತುತ್ತಿಲ್ಲ. ಭವಿಷ್ಯತ್ತಿನ ಕನಸಿಗೆ ಇಡುಗಂಟಿಲ್ಲ ಎನ್ನುವಂತಾಗುತ್ತದೆ. ಹೀಗಾದರೆ ನಮ್ಮ ಈ ಮಠಗಳ ಸಂರಚನೆಯ ತಾತ್ತ್ವಿಕ ಸ್ವರೂಪದ ಹೇಗೆ? ಅದು ಮಠ ಸಾಮಾಜಿಕ ಸ್ವರೂಪದ ಬಗೆಗಿನ ಪ್ರಶ್ನೆಯಾಗುತ್ತದೆ.

ಮಠ ಸಾಮಾಜಿಕಕ್ಕೆ ರೂಪ ಕೊಡುವ ಅಂಗಗಳೆಂದರೆ - ಮಠಗಳ ನಿರ್ಮಾಣೋದ್ದೇಶ, ಅಂಗರಚನೆ, ಇತಿಹಾಸ, ಚಾಲನಾತ್ಮಕ ಗುಣ, ಸಂಪನ್ಮೂಲ ಸಂಘಟನೆ, ಸಾಧನ ಮಾರ್ಗ, ಸಮುದಾಯ ಸಂದಾಯ, ಪ್ರಭಾವ, ಪರಿಣಾಮ, ಇತಿಮಿತಿ, ಸರಿ ಪರಿಹಾರ, ಮುಡಿಪು, ಸಾಂಸ್ಕೃತಿಕ ಹರಿವು ಇವುಗಳಾಗಿವೆ ಎನ್ನಬಹುದು. ಇವೆಲ್ಲವೂ ಘಟಕ ಸಂಯುಕ್ತಗಳು ಅಥವಾ ಅಂಗ ಸಂಯುಕ್ತಗಳು. ಒಂದು ಬಿಟ್ಟರೂ ಅಪೂರ್ಣವೆ. ಹೀಗೆ ಹಲವಾರು ಮುಖಿಗಳಿಂದ ನೋಡಿದರೆ ವೀರಶೈವ ಮಠಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಕೊಡುಗೆಗಳ ವಿಶ್ಲೇಷಣೆಗೆ ಅನುಕೂಲವಾಗಬಹುದು.

ಈ ನಿಕಷದ ಕೆಲವು ಅಂಗಗಳಿಗೆ ಸಾಂಪ್ರದಾಯಿಕ ನೆಲೆಗಳಲ್ಲಿಯೂ ಕೆಲವು ಉದಾಹರಣೆಗಳು ಸಿಗುತ್ತವೆ. ಮಠಗಳೇ ಸಾಂಪ್ರದಾಯಿಕ ಎಂದಮೇಲೆ ಈ ವಿಭಾಗಗಳ ಅವಶ್ಯಕತೆ ಏನು? ಎನ್ನುವ ಮಾತಿಗೆ ಕಾಲಮಾನದ ತಿಳುವಳಿಕೆ, ನಂಬುಗೆ, ಶ್ರದ್ಧೆಯ ಹಿನ್ನೆಲೆಯಲ್ಲಿ ಪರಿಶೀಲನೆ ಎಂದಷ್ಟೆ ಎನ್ನಬಹುದು.

ಸಾಂಪ್ರದಾಯಿಕ ಎಂದಾಕ್ಷಣ ಮುಖ ತಿರುಗಿಸಿದರೆ ತಿರುಗಿಸಿದವರ ಮಿತಿಗೆ ಕಾರಣವಾಗುತ್ತದೆ. ತೆರೆದುಕೊಳ್ಳುವ ಸಹನೆ ಕುಂಠಿತವಾಗುತ್ತದೆ. ತೌಲನಿಕ ಪರಾಮರ್ಶೆ ಪೇಲವವಾಗುತ್ತದೆ. ಸಮನ್ವಯ ದೃಷ್ಟಿ ಅಂತಾಗಿ ಇಲ್ಲಿ ಅಗತ್ಯವಾಗುತ್ತದೆ.

ಸಾಂಪ್ರದಾಯಿಕ ನೆಲೆ

'ಮಠ ಛ್ಛಾತ್ರಾದಿ ನಿಲಯಂ' ಎಂಬ ಅಮರಕೋಶದ ಮಾತಿನ ಅರ್ಥಕ್ಕಷ್ಟೇ ಇಂದಿನ ವೀರಶೈವ ಮಠಗಳು ಸೀಮಿತವಾಗುವಂತಿಲ್ಲ. ಕಲಿಸುವುದು ಹಾಗು ತುತ್ತಿಡುವುದು ಇಷ್ಟಕ್ಕೆ ಇಂದಿನ ಈ ಮಠಗಳ ಕಾಯಕ ನಿಲ್ಲುವುದಿಲ್ಲ. ಸಂಪ್ರದಾಯದಲ್ಲಿಯೂ ವೈಶಿಷ್ಟ್ಯಗಳಿರುವುದು ಕಾಣುತ್ತದೆ. ವೀರಾಗಮದ ಪುಟಗಳಲ್ಲಿ, ಶ್ರೀ ರೇಣುಕ, ದಾರುಕ ಶಿವಾಚಾರ್ಯರ ಶಿಷ್ಯರಾದ ಶಿಂಶುಮಾರ, ಡಿಂಡಿಮಾರರ ಮಠ ಸ್ಥಾಪನೆ, ಧರ್ಮ ಸಂಸ್ಕೃತಿಗಳ ಪ್ರಚಾರ ಹಾಗು ಆರಾಧನೆಯ ಸಂದರ್ಭಗಳ ಉಲ್ಲೇಖವಿದೆ.

ಮಠಮಧ್ಯೇ ಮಹಾಶ್ರೇಷ್ಠಾನ್ವೀರ ಮಹೇಶ್ವರಾನ್ ಪ್ರಿಯೇ
ಪೂಜ್ಯಾನ್ ಪುರಾತನಾನ್ ಪೂರ್ರ್ವಾ ಪುರುಷಾರ್ಥ ಪ್ರದಾಯಕಾನ್
ಯೇ ಪೂಜಯಂತಿ ಸತತಂ ತ ಏತೇ ಮಮಬಾಂಧವಾಃ ।
ಭೂರುದ್ರ ಜಂಗಮಾಸ್ಸರ್ವೇ ರೇಜಿರೇ ರೇಣುಕಾದಯಃ
ಮಠಮಧ್ಯೇ ಸದಾ ದೇವಾಃ ಸ್ಥಾನಾನಿ ವಿವಿಧಾನ್ಯಪಿ ।

ದಾಸೋಹಂ ಪ್ರಮಥಾ ಮೋಕ್ಷಂ ವದಂತೀತಿ ನ ಸಂಶಯಃ
ಭೂ ರುದ್ರಾಣಾಂ ಜಂಗಮಾನಾಂ ಷಟ್‌ಸ್ಥಲಬ್ರಹ್ಮಿಣಾಂ ಪ್ರಿಯೆ ।

ಬ್ರಾಹ್ಮೀ ಮಾಹೇಶ್ವರೀ ಮುಖ್ಯಾರುದ್ರಕನ್ಯಾಃ ಕಳಾಮುಖಾಃ
ತವದೂತಾಃ ಕುಲಶೀಲೇ ದಧತಿ ತ್ವಯಿ ಪಾರ್ವತಿ ।

ಮಠಗಳಲ್ಲಿ ಪೂಜ್ಯರು, ಪುರಾತನರು, ಜ್ಞಾನ ಹಾಗು ಕರ್ಮಯಜ್ಞ ನಿರತರಾದ ವೀರಮಾಹೇಶ್ವರರು[1-೮] ಪುರುಷಾರ್ಥ ಪ್ರದಾಯಕರು ಇರುತ್ತಿದ್ದರು. ರೇಣುಕರ, ಭೂರುದ್ರ ಜಂಗಮರ ವಾಸಾರ್ಚನಾದಿಗಳು ನಡೆಯುತ್ತಿದ್ದವು. ದಾಸೋಹ ನಡೆಯುತ್ತಿತ್ತು. ಶಿಂಶುಮಾರ ಡಿಂಡಿಮಾರ ಇತ್ಯಾದಿ ಎಂಟು ಜನ ಮುಖ್ಯರು ನಡೆಸುತ್ತಿದ್ದ ಧರ್ಮದಾಸೋಹದಲ್ಲಿ ಶಿವಯೋಗ, ಶಿವಧ್ಯಾನ, ಶಿವಜಪ, ಶಿವಯಜ್ಞ, ಶಿವಶೀಲಗಳ ಆಚರಣೆ, ಅನುಭಾವ ಗೋಷ್ಠಿಗಳು ನಡೆಯುತ್ತಿದ್ದುವು.

ಯೋಗಂ ಧ್ಯಾನಂ ಜಪಂ ಹೋಮಂ ಶೀಲಂ ಧರ್ಮಾರ್ಥದಾಯಕಂ
ಆತಿಥ್ಯಂ ತತ್ತ್ವಭಾವೇನ ವಹಂತಿ ವಸುಧಾತಲೇ

ಶಿಂಶುಮಾರ ಡಿಂಡಿಮಾರರ ಈ ರೀತಿಯ ದಾಸೋಹ ಧರ್ಮದಲ್ಲಿ ರುದ್ರಕನ್ಯೆಯರೆನಿಸಿದ ಸಪ್ತಮಾತೃಕೆಯರು, ಭಾಗವಹಿಸುತ್ತಿದ್ದರು. ಇದಲ್ಲದೆ ದೀನದಲಿತರ ಕುರಿತ ಕಾಳಜಿಯ ಬಗ್ಗೆಯೂ ಹೀಗೆ ಹೇಳಲಾಗಿದೆ.

ಪೂಜಯಿತ್ವಾ ಮಮಪ್ರಿತ್ಯಾ ತಚ್ಛಿಷ್ಯಾನ್ ರುದ್ರಸಂತತೀನ್
ದೀನಾಽದ್ಯಕೃಪಣಾನಾಥಾಂಸ್ತೋಪಯೇತ್ ಪುನಃ ಪುನಃ

ಅಂದರೆ ರೇಣುಕ ದಾರುಕ ಘಂಟಾಕರ್ಣ, ಗಜಕರ್ಣರ ಚೆಟ್ಟಿಗರಾದ (ದಾಸರು) ಬತ್ತರೊಡೆಯರ ಮಕ್ಕಳಾದ ಬಡವರು, ಕುರುಡರು, ಹೆಳವರು, ದಿಕ್ಕಿಲ್ಲದವರು, ಇವರೆಲ್ಲರನ್ನು ಮರಳಿ ಮರಳಿ ಪರಾಂಬರಿಸಿ ತಣಿಸಬೇಕು-ಹೀಗೆಲ್ಲ ಡಾ. ಶ್ರೀ ಜ.ಚ.ನಿ ಅವರು ಮಠ ಸಂದರ್ಭಗಳನ್ನು ಕುರಿತು ವೀರಾಗಮೋಕ್ತಿಗಳಿಂದ ವಿಶ್ಲೇಷಿಸಿದ್ದಾರೆ.[2] 'ಅಯಂ ಮೇ ಹಸ್ತೋ ಭಗವಾನ್' -ಎಡಹಸ್ತ ಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸುವ ಕಾರಣ ಎಡಹಸ್ತವು ದೇವ ಸ್ವರೂಪವನ್ನು ಪಡೆದಿದೆ. 'ಅಯಂ ಹಸ್ತೋ ಭಗವಾನಿತಿ ಮಂತ್ರೇಣ ಸರ್ವದಾ। ಪ್ರಾಣಲಿಂಗ ಧೃತರ್ವೇದ ಪುರುಷಸ್ಯ ಸಮೀರಿತಾಃ' ಎಂಬ ಕಾಮಿಕಾಗಮದ ಮಾತನ್ನು ಸದಾ ಇಷ್ಟಲಿಂಗಧಾರಿಗಳ ಕುರಿತು ಎಂ.ಜಿ. ನಂಜುಂಡಾರಾಧ್ಯರ ವಿಶ್ಲೇಷಣೆ ಹೇಳುತ್ತದೆ. ಸಂಪ್ರದಾಯದಲ್ಲಿ ಇದೆಲ್ಲ ಎಷ್ಟು ಕಾಲ ಜಾಗೃತವಾಗಿ ನಡೆದು ಬಂದಿತು ಎಂಬ ಬಗ್ಗೆ ಹೇಳಲಿಕ್ಕಾಗದಿದ್ದರೂ, ಇಂಥ ಕಲ್ಪನೆಗಳನ್ನು ದಾಖಲಾಗಿಸುವ ಪ್ರಯತ್ನವೂ ಗಮನಾರ್ಹವೆ. ಇವುಗಳಲ್ಲಿ ಸಾಕಷ್ಟು ಅಂಶಗಳು ಆಧುನಿಕ ಮನಸ್ಸಿಗೆ ಹಿಡಿಸುವಂತಹದೂ ಆಗಿವೆ. ಈಗ ಹೇಳಿರುವುದು ಒಂದು ಪ್ರಾತಿನಿಧಿಕ ಉದಾಹರಣೆ ಎನ್ನಬಹುದು. ಕೊಡಗಿನಲ್ಲಿಯೂ ಈ ಹಿನ್ನೆಲ್ಲೆಗಳುಳ್ಳ ಸಾಂಪ್ರದಾಯಿಕ ಪೀಠಗಳ ಶಾಖಾ ಮಠಗಳೂ ಇವೆ.

ಐತಿಹಾಸಿಕ ನೆಲೆ

ಕೊಡಗಿನ ವೀರಶೈವ ಮಠಗಳ ಸಂದರ್ಭವು ಇಲ್ಲಿ ಮುಖ್ಯವಾಗಿರುವ ಕಾರಣ ಕೊಡಗಿನ ಹಾಲೇರಿ ವಂಶ ಹಾಗು ಇಕ್ಕೇರಿ ವಂಶಗಳು, ಸ್ವಕೀಯರೂ ಆಗಿರುವ ಕಾರಣ, ಕೆಳದಿ ಅರಸರು ಕೊಡಗಿನಲ್ಲಿಯೂ ಮಠಗಳನ್ನು ಸ್ಥಾಪಿಸಿರುವ ಕಾರಣ, ಕೆಳದಿಯ ಮಠಗಳ ಕಾರ್ಯ-ಕಾಯಕಗಳ ಉದಾಹರಣೆಯನ್ನು ಪ್ರಾತಿನಿಧಿಕವಾಗಿ ಇಲ್ಲಿ ನೀಡಲಾಗಿದೆ.

ಕೆಳದಿ ರಾಜ್ಯದಲ್ಲಿ ವಿರಕ್ತ ಮಠಗಳು, ವಾಶೀಕೃತ ಮಠಗಳಿದ್ದವು. ಆದರೆ ಅಲ್ಲಿದ್ದ ಮಹಾಮಹತ್ತಿನ (ಸಿಂಹಾಸನ ಶಾಖೆಗಳು) ಮಠಗಳ ಸಂಖ್ಯೆಗಳಿಗೆ ಹೋಲಿಸಿದರೆ ಆ ಎರಡು ವಿಭಾಗಗಳು ಬಹಳ ಕಡಿಮೆ ಸಂಖ್ಯೆಯಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ಅವುಗಳನ್ನು ಹೊಳೆ ಹಾಗು ಕೆರೆಗಳ ದಂಡೆಗಳ ಮೇಲೆ, ಮಾರುಕಟ್ಟೆ ಜಾಗಗಳಲ್ಲಿ, ಹೆದ್ದಾರಿಗಳಲ್ಲಿ ನಿರ್ಮಿಸಲಾಗಿತ್ತು. ಈ ಮಠಗಳನ್ನು ರಾಜರು, ರಾಜಕುಟುಂಬದವರು, ಸರ್ಕಾರದ ಅಧಿಕಾರಿಗಳು ಹಾಗು ಅವರ ಕುಟುಂಬದವರು ಹಾಗು ಸಾಮಾನ್ಯ ಜನರೂ ಕಟ್ಟಿಸಿಕೊಟ್ಟಿದ್ದಾರೆ. ಜನರು ತಮ್ಮ ಆಸ್ತಿಯನ್ನೂ ಮಠದ ಗುರುಗಳಿಗೆ ಧಾರೆ ಎರೆದುಕೊಡಲು ಹಿಂಜರಿಯುತ್ತಿರಲಿಲ್ಲ. ಮಹಾ ಮಹತ್ತಿನ ಮಠಗಳ ಧಾರ್ಮಿಕ ವಕ್ತಾರರು ಹಾಗೂ ರಾಜರು ಒಂದು ಪೂರ್ಣ ಸಂಸ್ಥೆ ಎನಿಸಿದ್ದ ಮಠವ್ಯೂಹದ ಶಾಖೆಗಳ ಚಟುವಟಿಕೆಗಳನ್ನು ತಾವೇ ಹೋಗಿ ಪರಿಶೀಲಿಸುತ್ತಿದ್ದರು. ಅವರು ರಾಜರುಗಳಿಂದ ಬಹಳವಾಗಿ ಗೌರವಿಸಲ್ಪಟ್ಟು ಧಾರ್ಮಿಕ ದಿಗ್ದರ್ಶನದ ನೇತಾರರೆನಿಸಿದ್ದರು. ಯಾವುದೇ ಮಠಕ್ಕೆ ಹೊಸ ಗುರುವನ್ನು ನೇಮಿಸಬೇಕಾದರೆ ಮಹತ್ತು ('ಮಹಾಮಹತ್ತುಗಳು' ಎನಿಸಿದ ಮಠಾಧಿಪತಿಗಳು) ಹಾಗು ರಾಜರು ಪರಸ್ಪರ ಸಮಾಲೋಚಿಸಿ ನೇಮಿಸುತ್ತಿದ್ದರು. ರಾಜ ಹಾಗೂ ಮಹತ್ತುಗಳ ನಡುವೆ ಸಂಪೂರ್ಣ ಸಹಕಾರ ಹಾಗು ತಿಳಿವಳಿಕೆ ಇದ್ದುವು. ಜಂಗಮರಿಗೆ ಮಠಗಳು ಧ್ಯಾನ-ವಿಶ್ರಾಂತಿಯ ನೆಲೆಯಾಗಿದ್ದುವು. ಜನರಿಗೆ ದಾಸೋಹದ ಛತ್ರಗಳೂ ಆಗಿದ್ದವು. ಮಠಗಳ ಕಾರ್ಯ ನಿರ್ವಹಣೆಗಳಲ್ಲಿ, ಗುರು-ಶಿಷ್ಯರಿಗೆ ಆಶ್ರಯ ನೀಡಿ ಭಾರತೀಯ ಷಡ್ದರ್ಶನ ಅಧ್ಯಯನಕ್ಕೆ ಉತ್ತೇಜನ, ವೀರಶೈವ ಧರ್ಮಪ್ರಚಾರ, ಪುಣ್ಯಕ್ಷೇತ್ರಗಳಲ್ಲಿ ಜಾತ್ರೆಯ ಸಂದರ್ಭದಲ್ಲಿ ಧಾರ್ಮಿಕ ಸಮಾರಂಭಗಳನ್ನು ಏರ್ಪಡಿಸುವುದು, ಮಠದಲ್ಲಿನ ದೇವಮೂರ್ತಿಗಳ ಆರಾಧನೆಗೆ ನಿರ್ವಹಣಾ ವೆಚ್ಚ ಭರಿಸುವುದು, ಕೆಲವು ವೇಳೆ ಟ್ರಸ್ಟಿಯಂತೆ ಕಾರ್ಯ ನಿರ್ವಹಿಸುವುದು, ಚಾತುರ್ಮಾಸ್ಯ ಶಿವಾರಾಧನೆ, ಗೋ ಪೋಷಣೆ, ಕೃಷಿ ಕಾರ್ಯಗಳ ಮೇಲ್ವಿಚಾರಣೆ, ಜನರಿಂದ ಗುರು ಕಾಣಿಕೆ ಪಡೆಯುವುದು, ಭೂಮಿಯ ಬೆಳೆಗಳನ್ನು ಮಾರಿ ಧಾರ್ಮಿಕೋದ್ದೇಶಗಳಿಗೆ ಬಳಸುವುದು, ಜಂಗಮ ಹಾಗು ಇತರೆ ದಾನಾದಿಗಳನ್ನು ನೀಡುವಿಕೆ, ಇತ್ಯಾದಿಗಳೆಲ್ಲ ಸೇರಿದ್ದುವು. ಹೀಗೆ ಕಾರ್ಯ ನಿರ್ವಹಿಸುತ್ತಿದ್ದ ಮಠಗಳಿಗೆ, ಅವುಗಳ ಕಾರ್ಯ ನಿರ್ವಹಣೆಗೆ ಧಕ್ಕೆ ಬಾರದಿರುವಂತೆ, ಸಾಕಷ್ಟು ಧನ ಸಹಾಯವನ್ನು ಸಾಮಾನ್ಯ ಜನರು, ಸಂಸ್ಥೆಗಳು ಹಾಗು ಅರಸರು ನೀಡುತ್ತಿದ್ದರು. ಭೂ ದಾನವನ್ನು ಹೇರಳವಾಗಿ ನೀಡುತ್ತಿದ್ದರು. ರಾಜ್ಯದ ಸುಂಕದ ಹಣದ ಹದಿನಾರನೇ ಒಂದು ಪಾಲು ಈ ಮಠಗಳಿಗೆ ಸಂದಾಯವಾಗುತ್ತಿತ್ತು. ಅದರಿಂದ ಒಟ್ಟಾರೆ ಈ ಮಠಗಳೆಲ್ಲವೂ ಸಾಕಷ್ಟು ಸಂಪತ್ತನ್ನು ಹೊಂದಿದ್ದುವು.[3] ಅಂದರೆ ಪರಂಪರೆಯಿಂದ ರೂಢಿಗೊಂಡ ಮಠಗಳ ಕಾಯಕ ಹಾಗು ಕೊಡುಗೆಗಳ ಸಂಬಂಧಗಳು ಐತಿಹಾಸಿಕ ನೆಲೆಯಲ್ಲಿ ವಿಕಾಸಗೊಂಡಿರುವುದು ಇಲ್ಲಿ ಕಾಣಬರುತ್ತದೆ. ಆದರೂ ಇನ್ನೂ ಪ್ರಾಚೀನ ಉದಾಹರಣೆಗಳಿವೆ.

ಬಾದಾಮಿ ಚಾಲುಕ್ಯರ ಪುಲಿಕೇಶಿಯ ಸಮಕಾಲೀನ ಪಲ್ಲವ ದೊರೆ, ರಾಜಸಿಂಹ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವನನ್ನು 'ಆಗಮ ಪ್ರಮಾಣ' ಮತ್ತು 'ಆಗಮಾನುಸಾರಿ' ಎಂದು ಕಾಂಜೀಪುರದ ಕೈಲಾಸನಾಥ ದೇಗುಲದ ಶಾಸನವು ಹೇಳುತ್ತದೆ. ಶಿವಧರ್ಮವನ್ನು ೨೮ ಶಿವಾಗಮಗಳಲ್ಲಿ ವಿವರಿಸಲಾಗಿದೆ. ಸುಪ್ರಬೇಧಾಗಮದಲ್ಲಿ ವೀರಶೈವದ ಸಂಗತಿಗಳಿದ್ದು ಅದು ಮೂಲಶಿವಾಗಮವಾಗಿದೆ. ಪಲ್ಲವ ರಾಜಸಿಂಹ ಆರನೇ ಶತಮಾನದವನಾದ ಕಾರಣ ಅವನ ಕಾಲಕ್ಕೂ ವೀರಶೈವ ಮಠಗಳಿದ್ದು, ಶಂಕರಾಚಾರ್ಯರ ಮುನ್ನವೇ ಅವುಗಳ ಅಸ್ತಿತ್ವ ಕಾಣಬರುತ್ತದೆ.[3-೮] ಎಂಬ ಅಭಿಪ್ರಾಯವೂ ಇದೆ. ಜೊತೆಗೆ ಕ್ರಿ.ಶ. ೬ನೇ ಶತಮಾನದಲ್ಲಿ ಕಂಚಿಯ ರಾಜರಾಗಿದ್ದ ಅತ್ಯಂತಕಾಮ, ಗುಣಭರ ಎಂಬ ಪಲ್ಲವ ರಾಜರು ಲಿಂಗಧಾರಿಗಳಾಗಿದ್ದರೆಂದು 'ಶಿವಶಿರಸಿ ಧಾರಯತಾ' 'ಶಿರಸಿ ಶಂಕರಂ' ಎಂಬ ವಿಶೇಷಣಗಳಿಂದಾಗಿ ಸೂಚಿತವಾಗುತ್ತದೆ. ಇದು ಶಾಸನೋಕ್ತವೂ ಹೌದು (S.I.I Vol.I, No. 18, 21, 33 & 34). ಕ್ರಿ.ಶ. ೪ನೇ ಶತಮಾನದಲ್ಲಿ ಸ್ಥಾವರಲಿಂಗಪೂಜೆಯ ಜೊತೆಗೆ ಶರೀರದ ಮೇಲೆ ಲಿಂಗಧಾರಣ ಪದ್ಧತಿ ಇದ್ದ ಬಗ್ಗೆ ಕ್ರಿ.ಶ.೪೨೮ರ ವಾಕಾಟಕ ೨ನೇ ಪ್ರವರಸೇನನ ಶಿಲಾಶಾಸನದಿಂದ ವ್ಯಕ್ತಗೊಂಡಿರುವುದು. 'ಅಂಶಭಾರ ಸನ್ನಿವೇಶಿತ ಶಿವಲಿಂಗೋದ್ವಹನ ಪರಿತುಷ್ಟ ಸಮುತ್ಪಾದಿತ ರಾಜವಂಶಾನಾಂ'- ಶಿವಲಿಂಗವನ್ನು ಸದಾ ಭುಜದಲ್ಲಿ ಧರಿಸುವುದರಿಂದ ಸಂತುಷ್ಟನಾದ ಶಿವನು ಭವನಾಗರಿಗೆ ರಾಜ್ಯ ಸಂಪತ್ತಿಯನ್ನೂ ಒದಗಿಸಿದ (Fleets' Gupta Inscriptions. No.45). ಅಲ್ಲದೆ ನಂದಿಯ ಅಭಿನಯ ದರ್ಪಣದಲ್ಲಿ'ವಾಮೇರ್ಧ ಹಸ್ತೇ ವಿನ್ಯಸ್ತ ಶಿಖರಶ್ಚಿವಲಿಂಗಕಃ' ಎಂದಿದೆ. ಅಂದರೆ ಎಡಹಸ್ತದಲ್ಲಿ ಬಲಗೈ ಮುಷ್ಟಿಯನ್ನು ಇಟ್ಟರೆ 'ಶಿವಲಿಂಗ ಹಸ್ತ'ವೆನಿಸುವುದು ಎಂಬ ಲಕ್ಷಣವು. ಎಡಹಸ್ತದಲ್ಲಿ ಲಿಂಗವಿಟ್ಟು ಪೂಜಿಸುವ ಲಿಂಗವಂತ ಸಂಸ್ಕೃತಿಯ ದ್ಯೋತಕವಾಗಿದೆ ಎಂದು ಆ||ವಿ|| ಎಂ.ಜಿ. ನಂಜುಂಡಾರಾಧ್ಯರ ಅಭಿಪ್ರಾಯವಾಗಿದೆ. (ಪುಲ್ಲಕವಿ ಶ್ರೀಶೈಲ ಪಂಡಿತಾರಾಧ್ಯ ಚರಿತಮು, ಉಪೋದ್ಘಾತ, ಪು. ೯೯-೧೦೦)

ಇನ್ನು ಆಧುನಿಕ ನೆಲೆಯಲ್ಲಿ ಗಮನಿಸಿದರೆ ಮಠಗಳಲ್ಲಿ ರೂಢಿಗತ ಕಾಯಕ, ದಾಸೋಹಗಳ ಜೊತೆಗೆ ಹೊಸ ಆಯಾಮಗಳು, ಹೊಸ ಹರಹುಗಳು ಕಾಣಬರುತ್ತವೆ. ಅಧ್ಯಾತ್ಮಿಕ ಜ್ಞಾನಪ್ರಸಾರ, ದೀಕ್ಷಾ ಸಂಸ್ಕಾರ, ವಿದ್ಯಾಪ್ರಸಾರ, ವಸತಿ ಶಾಲೆ, ಸಾರ್ವಜನಿಕ ಹಾಸ್ಟೆಲು, ವೃದ್ಧಾಶ್ರಮ, ಶಿಶುವಿಹಾರ, ನಿರ್ಮಾಣ ಕಾರ್ಯಗಳನ್ನು ಅವು ಚಾಲ್ತಿಗೊಳಿಸಿವೆ. ತಾಂತ್ರಿಕ ಹಾಗು ವೈದ್ಯಕೀಯ ಶಿಕ್ಷಣ, ಗ್ರಂಥ ಪ್ರಕಟನೆ, ಗ್ರಂಥಾಲಯ ನಿರ್ವಹಣೆ, ಹಸಿರು ವಲಯ ಹಾಗೂ ಲಘು ಅರಣ್ಯ ನಿರ್ವಹಣೆ, ಮಠೋದ್ಯಾನ, ಸಸ್ಯಸಸಿ ನಿರ್ವಹಣೆ (Nursery), ಹಾಲಿನ ಡೈರಿ ನಿರ್ವಹಣೆ, ಪ್ರಚಾರೋಪನ್ಯಾಸಗಳ ಏರ್ಪಾಟು, ಸಮುದಾಯ ಸಂಪರ್ಕ ಇತ್ಯಾದಿ ಅರ್ವಾಚೀನ ಅಗತ್ಯಗಳನ್ನು ಪ್ರಾಚೀನದಲ್ಲಿನ ಸುಸಂಗತಗಳೊಡನೆ ಮೇಳೈಸಿಕೊಂಡು ಇಂದಿನ ವೀರಶೈವ ಮಠ, ಪೀಠಗಳು ಸಾಗುತ್ತಿರುವುದನ್ನು ಕಾಣಬಹುದು. ಜೊತೆಗೆ ಸ್ವಯಂ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುತ್ತಿರುವುದೂ ಕಾಣಬರುತ್ತದೆ.

ಕೊಡಗಿನಲ್ಲಿ ಅನ್ವಯಿಕ ನೆಲೆ

ಕೊಡಗಿನ ಸಂದರ್ಭದಲ್ಲಿ ಈ ಮೇಲಿನ ಅನೇಕ ಅನ್ವಯಗಳನ್ನು ಹೊಂದಿರುವ ವೀರಶೈವ ಮಠಗಳೂ ಇಂದೂ ಜೀವಂತವಿದೆ. ಪ್ರಾದೇಶಿಕ ವೈಶಿಷ್ಟ್ಯಗಳನ್ನೂ ಅವು ಹೊಂದಿವೆ. ಹಸಿರು ತುಂಬಿದ ನೆಲದಲ್ಲಿ ಅವುಗಳ ಅಸ್ತಿತ್ವ ಪ್ರಾಚೀನದಿಂದಲೂ ಇದೆ. ಮಲೆನಾಡಿನ ಈ ಮಠಗಳ ಬೆಳಸು ಒಂದುತರ. ಬಯಲು ಸೀಮೆಯ ಮಠಗಳ ಬೆಳಸು ಒಂದುತರ. ಕೊಡಗಿನ ದಕ್ಷಿಣ, ಪಶ್ಚಿಮ ಭಾಗಗಳಲ್ಲಿ ತೀರ ಮಲೆನಾಡಿನ ಪರಿಸರವನ್ನು ಅವು ಹೊಂದಿದೆ. ತೀರ ಉತ್ತರ ಭಾಗಗಳಲ್ಲಿ ಬಯಲು ಸೀಮೆಯ ಪರಿಸರವನ್ನು ಹೊಂದಿವೆ. ಇಂದಿನ ಅವುಗಳ ಪಾತ್ರಕ್ಕೆ, ಕೊಡುಗೆಗೆ, ಪರಿಸ್ಥಿತಿಗೆ ಇತಿಹಾಸದ ಹರಿವಿನಲ್ಲಿ ಅವುಗಳು ಉಗಮಿಸಿ ಬೆಳೆಗೊಂಡು, ಕಳೆಗೊಂಡು, ಅಳಿವುಗೊಂಡೂ, ಉಳಿವುಗೊಂಡಿರುವ ನೆಲೆಗಳನ್ನು ಕಂಡುಕೊಂಡರೆ ಕಾರಣಗಳು ತಿಳಿಯುತ್ತವೆ. ವಿವಿಧ ರಾಜವಂಶಗಳ ಕಾರಣ ಅವುಗಳು ಬೀರಿದ ಸಾಮಾಜಿಕ ಪ್ರಭಾವ, ಕೊಟ್ಟ ಕೊಡುಗೆ, ಪಡೆದ ಸಾಂಸ್ಕೃತಿಕ ಅಸ್ತಿತ್ವದ ಚಿತ್ರವೂ ಸಿಗುತ್ತದೆ. ಅವುಗಳ ಸ್ವರೂಪ ಹಾಗು ಆಯಾಕಾಲದ ಹೆಸರುಗಳನ್ನು, ನಿರ್ದಿಷ್ಟ ಶತಮಾನಕ್ಕೇ ಒಗ್ಗಿಸಿ ಬಗ್ಗಿಸಿ ನೋಡಿದರೆ ಅವುಗಳ ಇಡಿಯಾದ ನೋಟ ದೊರಕುವುದಿಲ್ಲ. ಅದರಿಂದಾಗಿ ವಿವಿಧ ಶತಮಾನಗಳಲ್ಲಿ, ವಿವಿಧ ರಾಜವಂಶಗಳ, ವಿವಿಧ ಜನಸುದಾಯಗಳ ನಡುವೆ ಅವುಗಳು ಬೆಳೆದು ಬಾಳಿದ ಬದುಕನ್ನು ವೀಕ್ಷಿಸಬೇಕಾಗುತ್ತದೆ.

ಗಂಗರು, ಹಾನುಗಲ್ಲು ಕದಂಬರು, ಚೋಳರ ಹಾಗು ಹೊಯ್ಸಳರ ಮಾಂಡಲಿಕರಾಗಿ ಕೊಂಗಾಳ್ವರು, ಗಂಗ, ಚೋಳ, ಹೊಯ್ಸಳ ಹಾಗು ವಿಜಯನಗರದ ಅರಸರ ಮಾಂಡಲಿಕರಾಗಿ ಚಂಗಾಳ್ವರು, ಕೇರಳದ ನಾಯಕರು, ವಿಜಯನಗರದ ಅರಸರು, ಬಲಂ ನಾಯಕರು ಕೊಡಗಿನ ಭಾಗಗಳನ್ನು ಆಳಿದರು. ಚೋಳರು ಕೊಡಗಿನ ಪೂರ್ವಗಡಿ ಪ್ರದೇಶದ (ನಂಜರಾಯ ಪಟ್ಟಣದ) ಬಳಿ ಕಾವೇರಿಯ ದಂಡೆಯಲ್ಲಿ ಚೋಳಪ್ರತಿಷ್ಠಾ ವೀರಭದ್ರನನ್ನು ಕ್ರಿ.ಶ. ೧೦೦೪ರ ನಂತರ ಸ್ಥಾಪಿಸಿದ ಸಂಗತಿ[4] ಬಿಟ್ಟರೆ ಕ್ರಿ.ಶ ೧೧೦೭ರಲ್ಲಿ ಹೊಯ್ಸಳರಿಂದ ಸೋಲುಣ್ಣುವವರೆವಿಗೂ ಕೊಡಗಿನ ಶಾಸನಗಳಲ್ಲಿ ಅವರ ನೇರ ಆಳ್ವಿಕೆ ಹಾಗು ಅರಸರ ಪ್ರಸ್ತಾಪವಾಗಲಿ ಕಾಣಬರುವುದಿಲ್ಲ. ಅವರ ಮಾಂಡಲಿಕರಾಗಿದ್ದ ಕೊಂಗಾಳ್ವ ಹಾಗು ಚಂಗಾಳ್ವರ ಕೊಡಗಿನ ಶಾಸನಗಳಲ್ಲಿಯೂ ಹೆಸರಿನ ಜೊತೆಗೆ 'ಚೋಳ' ಎಂಬ ಉಪಾಧಿ ಬಿಟ್ಟರೆ ಚೋಳ ಅರಸರ ಪ್ರಸ್ತಾಪವೇ ಕಾಣಬರದು. ಆದರೆ ಕೊಡಗನ್ನು ಸಂಸ್ಥಾನವಾಗಿ, ಇಡಿಯಾಗಿ ಅದನ್ನು ಆಳಿದವರು ಹಾಲೇರಿಯ ವೀರಶೈವ ಅರಸರು. ಮೈಸೂರು ಸಂಸ್ಥಾನದ ಹೆಸರಿನಲ್ಲಿ ಹೈದರ್, ಟಿಪ್ಪು ಸುಲ್ತಾನರು ಕೊಡಗನ್ನು ಕೆಲವಾರು ವರ್ಷಗಳ ಕಾಲ ತಮ್ಮ ವಶದಲ್ಲಿಟ್ಟುಕೊಂಡಿದ್ದರು ಜನತೆಯ ವಿರೋಧವೂ ಚಳುವಳಿಯ ರೂಪದಲ್ಲಿ ಆ ಅವಧಿಯಲ್ಲಿ ಆಗಾಗ ನಡೆಯುತ್ತಲೇ ಇದ್ದವು. ನಂತರ ಆಂಗ್ಲರು ಕೊಡಗಿನಲ್ಲಿ ಕಮಿಷನರ್‌ಗಳ ಮೂಲಕ ಆಳ್ವಿಕೆ ನಡೆಸಿದರು. ಆದರೆ ವೀರಶೈವ ಮಠಗಳ ದೃಷ್ಟಿಯಿಂದ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಕೊಡಗಿನ ಆಳ್ವಿಕೆಯಲ್ಲಿ ಪಾಲುದಾರರಾದ ಚೋಳರ ವೀರಭದ್ರ ಪ್ರತಿಷ್ಠಾ ಪ್ರಕರಣ ಹಾಗು ಅಲ್ಲಿಂದ ಸುದೂರದಲ್ಲಿ ಪಂಚಲಿಂಗೇಶ್ವರ ಗುಡಿ ನಿರ್ಮಾಣದ ಸಂಗತಿಯ ಜೊತೆಗೆ, ಹಾನುಗಲ್ಲು ಕದಂಬರು, ಚಂಗಾಳ್ವರು ಹಾಗು ಮುಖ್ಯವಾಗಿ ಹಾಲೇರಿ ಅರಸರ ಅವಧಿಗಳು ಗಮನಾರ್ಹವಾಗುತ್ತವೆ.

ಗಂಗರಲ್ಲಿ ನಾಲ್ಕು ಜನ ರಾಚಮಲ್ಲ ಎಂಬ ಹೆಸರಿನವರು ೮ ರಿಂದ ೧೧ನೆಯ ಶತಮಾನದವರೆವಿಗೆ ಕಾಣಬರುತ್ತಾರೆ. 'ರಾಚಮಲ್ಲ' ಎಂಬ ಹೆಸರಿನಲ್ಲಿಯ 'ರಾಚ' ಎಂಬ ಶಬ್ದಕ್ಕೆ 'ಶುಭ-ಮಂಗಳ-ಭದ್ರ' ಎಂಬ ಅರ್ಥಗಳಿವೆ; 'ಮಲ್ಲ' ಎಂಬ ಶಬ್ದ 'ವೀರ' ಎಂಬ ಶಬ್ದಕ್ಕೆ ಸಂವಾದಿ ಆಗಿದೆ ಎಂದು ಡಾ. ಶ್ರೀ ಜಚನಿ ಅವರು ಅಭಿಪ್ರಾಯ ಪಡುತ್ತಾರೆ. ಹಾಗಿದ್ದರೆ 'ರಾಚಮಲ್ಲ' ಎಂಬ ಶಬ್ದ 'ವೀರಭದ್ರ' ಕಲ್ಪನೆಯೂ ಹೊಂದಾಣಿಕೆ ಆಗುತ್ತದೆ. ಗುಂಡ್ಲುಪೇಟೆ ಕಡೆಯ ಶಾಸನಗಳಲ್ಲಿನ ವೀರಭದ್ರನ ಕುರಿತ ಉಕ್ತಿಗಳೂ ಇದಕ್ಕೆ ಪೂರಕವಾಗುವಂತೆ ಕಾಣುತ್ತವೆ. ಇದರಿಂದ ಗಂಗರಲ್ಲಿಯೂ ಶಿವಾನುಸಾರಿ ಅಥವಾ

ಶಿವಧರ್ಮಿಗಳೂ ಇದ್ದಿರುವುದು ಸಹಜವೆನ್ನುವಂತಾಗುತ್ತದೆ.[4-೮] ಶೈವ ಬ್ರಾಹ್ಮಣನಾದ ಛಂದೋಂಬುಧಿಯ ನಾಗವರ್ಮನೂ ಕೊಡಗಿನ ಗಂಗರಸರಲ್ಲಿ ಇದ್ದಿರುವ ಸಂದರ್ಭಕ್ಕೆ ಪೂರಕ ಪುರಾವೆಗಳು ಕಾಣಬರುತ್ತವೆ. ಆದರೆ ಆ ಕಾಲಕ್ಕೆ ಶಿವಧರ್ಮದ ಮಠಗಳು ಇದ್ದ ಬಗ್ಗೆ ಸ್ಪಷ್ಟ ಸಾಕ್ಷಿಗಳಿಲ್ಲ. ಶಿವಸಂಬಂಧದ ಆಚರಣೆಗಳು ಹಾಗು ಪರಂಪರೆ ಇದ್ದುದು ಸಾಂಸ್ಕೃತಿಕ ಹಾಗು ಪೌರಣಿಕ ವಿಷಯಗಳಿಂದ ಮಾತ್ರ ವೇದ್ಯ.

ಸೋಮವಾರಪೇಟೆ ತಾಲ್ಲೂಕು ಬಿಳುಗುಂದದ ಕ್ರಿ.ಶ. ೧೧ನೆಯ ಶತಮಾನದ ಹೊಸ ಶಾಸನದಲ್ಲಿ ಶಿವಪರ ಸಂದರ್ಭಗಳು ಉಕ್ತವಾಗಿದೆ. ಅದೊಂದು ಕೈಲಾಸದ ಶಿವಲಿಂಗ ಶಿಲ್ಪದ ಬಿಡಾವಣೆಯ ವೀರಶಾಸನವೂ ಆಗಿದೆ. ಅದರಲ್ಲಿ ಗುರುಸ್ತುತಿಯಂತೆ ಕಾಣಬರುವ ಸಾಲುಗಳೂ ಇವೆ (ತ್ರುಟಿತ ಅಕ್ಷರಗಳೂ ಇವೆ):

"...ದೋರ ಭಚ್ಛಳ್ದೋಸ ಸ[ಂ]ಕಾಗಲಿ ತಾರ [ನ]ನ್ದೀಸನನಾ... ಮದಕಂತಕ
ಗೊರುಣ ಭ[ದ್ರ] ಗುರೋಪಿ ಮಾರತಿಂಬ ನಿಂಣಗಣ ಗೋಪತಿ ಕೋಕ್ಷ
ಶ್ರೀ ಬುವಿಯನರತಿ ಯಘ್ನ ಮಾಡಿದ ಭದ್ರಗೋತ್ರಾ ಶಿಕ್ಷರ್..."

ಇಲ್ಲಿನ 'ಗೋಪತಿ' ಶಬ್ದವು ಶ್ರೀಶೈಲ ಮಠದ ಜ॥ ಚಂದ್ರಗುಂಡ ಶಿವಾಚಾರ್ಯರಿಗೂ ಪೂವಾಶ್ರಮದ ಹೆಸರಾಗಿದ್ದ ಕಾರಣ, ಗುರು ಸಂಬಂಧದ ಉಲ್ಲೇಖವಾಗಿ ಇಲ್ಲಿ ಅನ್ವಯವಾಗಿರಬಹುದು ! ೧೧ನೇ ಶತಮಾನದ ರಾಜೇಂದ್ರ ಚೋಳನಿಗೆ ತಮ್ಮ ಚೋಳಮಂಡಲ ಸಂಚಾರದಲ್ಲಿ ಶಿವದೀಕ್ಷೆ ಇತ್ತು ವೀರಭದ್ರ ಮೂರ್ತಿಗಳನ್ನು ಸ್ಥಾಪಿಸಿದವರು ಹಾಗು ಅನೇಕ ಚೋಳ ಅರಸು ವಂಶೀಯರನ್ನು ಈ ಗುರುಗಳು ವೀರಶೈವಕ್ಕೆ ಆಕರ್ಷಿಸಿದರು ಎಂಬ ಮಾತನ್ನು[5] ಹೇಳಲಾಗಿದೆ. ಶ್ರೀಶೈಲ ಪೀಠಕ್ಕೆ 'ಪರ್ವತದ ಪೀಠ' ಎಂಬ ಹೆಸರಿದೆ. 'ಮಾಣಿಕ್ಯ' ಎಂಬ ಶಬ್ದಕ್ಕೆ ಅನ್ವಯವಾಗುವಂತೆ 'ಮುಕ್ತಗುಚ್ಛಸೂತ್ರವು' ಪೀಠದ ಗೋತ್ರ ಪ್ರವರದಲ್ಲಿ ಉಕ್ತವಾಗಿದೆ.[6] ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೦೪೯-೫೨ರ ಒಂದನೇ ರಾಜಾಧಿರಾಜ ಚೋಳನ ತಮಿಳುನಾಡಿನ ಮಹಾದೇವರ್ ದೇಗುಲದ ಮಠದ ಶಾಸನದಲ್ಲಿ 'ಪರ್ವತ್ತಿರ ಮಾಣಿಕ ಮಡಂ' ಎಂದಿರುವುದು[7], ಜ॥ ಚಂದ್ರಗುಂಡ ಶಿವಾಚಾರ್ಯರ ಸಂಬಂಧಕ್ಕೆ ಪೋಷಕವಾಗಿರಬಹುದೆನಿಸುತ್ತದೆ. ಸಾಂಪ್ರದಾಯಿಕ ಹಾಗು ಶಾಸನೋಕ್ತ ಸಂಗತಿಗಳನ್ನು ಲಕ್ಷಿಸಿದರೆ ಕೊಡಗಿನ ಕಾವೇರಿ ದಂಡೆಯಲ್ಲಿನ 'ವೀರಭದ್ರ ಪ್ರತಿಷ್ಠಾ' ಪ್ರಕರಣ ಹಾಗು ಪಂಚಲಿಂಗೇಶ್ವರ ಗುಡಿ ನಿರ್ಮಾಣಗಳು, ಚೋಳರಿಗೆ ತಮ್ಮ ಈ ಗುರು ಪ್ರೇರಣೆಯ ಕಾರ್ಯವಾಗಿರಬಹುದು. ಆ ಕಾಲಕ್ಕೆ ಚಾಲುಕ್ಯರ ಪ್ರಸಿದ್ಧ ಪಂಚಲಿಂಗೇಶ್ವರ ಗುಡಿ ನಿರ್ಮಾಣದ[8] ಪ್ರಭಾವವೂ ಚೋಳರ ಮೇಲೆ ಆಗಿರುವ ಸಂಭವವೂ ಇದೆ. ಇನ್ನು ಬಿಳುಗುಂದದ ಸನಿಹದ ಗುಡಗೂರಿನಲ್ಲಿ ಶ್ರೀಶೈಲ ನಿಡುಮಾಮಿಡಿ ಪೀಠದ ಶಾಖೆಯ ಕೆಲಗಣ ಹಾಗು ಮೇಗಣ ಮಠಗಳೂ ಇದ್ದುದು ಈ ಸಂದರ್ಭಕ್ಕೆ ಒಂದು ಸ್ಥೂಲ ಸಾಕ್ಷಿಯಾಗಿ ಇರುವಂತಿದೆ. ಈ ದೃಷ್ಟಿಯಿಂದ ನೆರೆಯ ೧೧-೧೨ನೇ ಶತಮಾನಗಳವರೆಗಿನ ಚೌಡ್ಲು ಹಾಗು ಉಲುಗಲಿಯ ಶಾಸನ ಶಿಲ್ಪಗಳಲ್ಲಿ ಶಿವಪರವಾದ ಕೈಲಾಸದ ದೃಶ್ಯಗಳ ಬಿಡಾವಣೆ ಗಮನಾರ್ಹ. ಹೀಗಾಗಿ ಧಾರ್ಮಿಕ ಹಾಗು ಸಾಂಸ್ಕೃತಿಕ ಕೊಡುಗೆಗಳನ್ನು ಪ್ರಾಚೀನದಿಂದಲೂ ಕೊಡಗಿನ ಮಠಗಳು ನೀಡಿವೆ ಎಂದಾಗುತ್ತದೆ.

ಹಾನುಗಲ್ಲು ಕದಂಬರ ಇಲ್ಲಿನ ಕ್ರಿ.ಶ. ೧೦೫೨ರ ಯಡೂರು ಶಾಸನವೂ ಗಮನಾರ್ಹವಾಗಿದೆ. ಅದರಲ್ಲಿ ಮಹಾ ಮಾಂಡಲೇಶ್ವರ ದುದ್ದರಸ ದೊರೆಯನ್ನು ಕುರಿತು 'ಅಯ್ಯನಂಕಕಾರ ಶಿವಪಾದಸೇಖರಂ', 'ಶಿವಲೋಕಪ್ರಾಪ್ತನಾಗಲ್' ಎಂದಿರುವಲ್ಲಿ[9] ಶಿವಧರ್ಮದ ಮಾಹೇಶ್ವರ ಪ್ರಭಾವವನ್ನು ಸೂಚಿಸುವಂತಿದೆ. ಇಲ್ಲಿ ಬಳಕೆಯಾಗಿರುವ ಪದಪುಂಜಗಳು ದುದ್ದರಸನಿಗೆ ಅನ್ವಯವಾಗಿ ಅವನು ಮಾಹೇಶ್ವರ ಸಂಪ್ರದಾಯದ ಶಿವಭಕ್ತನಾಗಿ ಶಿವಾಚಾರಸ್ಥನಾಗಿದ್ದನೆಂಬ ಸೂಚನೆ ಒದಗುತ್ತದೆ. ಆ ಕಾಲದ ಮಹಾ ಮಾಂಡಲೇಶ್ವರರು, ಸಾಮಂತರು, ದಂಡನಾಯಕರಲ್ಲಿ ಅನೇಕರು ಮಾಹೇಶ್ವರ ಸಂಪ್ರದಾಯದಲ್ಲಿ ಶಿವಾಚಾರಕ್ಕೆ ಸದುಭಕ್ತರಾಗಿದ್ದುದು[10] ಕೊಡಗಿಗೆ ತಾಗಿರುವ ಹಾಸನ ಜಿಲ್ಲೆಯ ಅನೇಕ ಶಾಸನಗಳಿಂದ ಕಾಣಬರುತ್ತದೆ. ಅಂದರೆ ವೀರಶೈವರಾಗಿದ್ದ ಬಗ್ಗೆ ತಿಳಿಯುತ್ತದೆ. ಕನ್ನಡ ನಿಘಂಟುವಿನ ಶಬ್ದಾರ್ಥಗಳನ್ನು ಅನ್ವಯಮಾಡಿದರೆ'ಅಯ್ಯನಂಕಕಾರ' ಶಬ್ದಕ್ಕೆ[11] ಅಯ್ಯನ=ವೀರಶೈವ ಗುರುವಿನ, ಅಂಕಕಾರ=ಆಶ್ರಯದಲ್ಲಿರುವ ಎಂದು ಅರ್ಥೈಸಬಹುದು. ಅಲ್ಲಿ 'ಬೂತುಗನಂಕಕಾಱ' ಎಂಬುದಕ್ಕೆ 'ಬೂತುಗ ಎಂಬ ಒಡೆಯನ ಆಸರೆಯಲ್ಲಿದ್ದವ' ಎಂದಿದೆ. ದುದ್ದರಸ ಮಹಾಮಂಡಲೇಶ್ವರ, ಗುರುವಿನ ಆಸರೆಯಲ್ಲಿದ್ದನು ಎಂದರೆ 'ಶಿವಪಾದ ಸೇಖರಂ' ಆಗಿರುವಲ್ಲಿ ವೀರಶೈವ ಗುರುವಿನ ಕರಕಮಲ ಸಂಜಾತ ಎಂಬ ಅರ್ಥವೇ ಹೆಚ್ಚು ಸೂಚನೆ ಆಗುತ್ತದೆ. ಈ ದೃಷ್ಟಿಯಿಂದ ಕೊಡಗಿನ ಈ ಭಾಗದ ಹಾನುಗಲ್ಲು ಕದಂಬವಂಶದ ದುದ್ದರಸನು ಶಿವಾಚಾರವನ್ನು ಅನುಸರಿಸಿದವನಾಗಿದ್ದು ಯಡೂರಿನ ನೆರೆಯಲ್ಲಿ ಗುರುಮಠವನ್ನೂ ಹೊಂದಿದ್ದಿರಬೇಕೆನಿಸುತ್ತದೆ. ಅಂದರೆ ಕ್ರಿ.ಶ. ೧೪೬೪ರ ಹೊಸ ಶಾಸನದಲ್ಲಿ ಉಕ್ತವಾಗಿರುವ ಅಬ್ಬಿಮಠದ ಬಳಿಯ ಜಯಮಲ್ಲಿಕಾರ್ಜುನ ದೇಗುಲಕ್ಕೆ ಸಂಬಂಧಿಸಿದಂತೆ ೧೧ನೆಯ ಶತಮಾನದಲ್ಲಿಯೆ ಒಂದು ಶಿವಾಚಾರದ ಗುರುವಿನ

ಮಠದ ಅಸ್ತಿತ್ವವು ಅರಿವಿಗೆ ಬಂದಂತಾಗುತ್ತದೆ. ಮೊದಲನೇ ಇದ್ದ ಈ ದೇಗುಲಕ್ಕೆ ಕ್ರಿ.ಶ. ೧೪೬೪ರ ಶಾಸನದಲ್ಲಿ ಅಂಗರಂಗ ಭೋಗಕ್ಕೆ ಗ್ರಾಮದಾನದ ಸಂಗತಿ ವಿನಾ ಪ್ರತಿಷ್ಠಾಪನೆ ಎಂದಿಲ್ಲ. ದುದ್ದರಸನ ಶಾಸನದಲ್ಲಿ ಕುಲಸ್ತ್ರೀ ಚಿಕಲದೇವಿಯ ಆಶಯದಂತೆ ಕೆರೆಕಟ್ಟಿಸಿ, ಛತ್ರವಿಟ್ಟು, ತೂರೆಗದ್ದೆ ಮಾಡಿಸಿ ಹಾಗು ಸುಗ್ಗಿಸ್ತಂಭ(!)ವನ್ನು ಸ್ಥಾಪಿಸಿರುವ ಸಂಗತಿ ಇದೆ. ತೊರೆಗದ್ದೆ ಇಂದಿಗೂ ಗುಡಿಯ ಎದುರಿನ ಬಯಲಿನಲ್ಲಿ ಇದ್ದು 'ತೇರುಗದ್ದೆ ಬಯಲು' ಎಂಬ ಹೆಸರನ್ನು ಪಡೆದು ಇದೆ. ವೀರಭದ್ರ ಶಿಲ್ಪವಿರುವ ನಂದಿಸ್ತಂಭದ ಅವಶೇಷವೂ ಅಲ್ಲಿ ಬಿದ್ದಿದೆ. ಅಂದರೆ ಇಲ್ಲಿನ ಮಠದ ಗುರುಗಳ ಪ್ರೇರಣೆ ಒದಗಿಯೋ, ಏನೋ ಈ ಕಾರ್ಯಗಳೆಲ್ಲ ನಡೆದಿವೆ. ಈ ಗುಡಿಯ ಬದಿಯ ತಲೆತೊರೆ(ಅಬ್ಬಿ)ಯ ಬುಡದ ಮುಂದಿನ ಬಯಲಲ್ಲಿ ವೀರಶೈವ ಗುರುಗಳು'ಪರ'ವನ್ನು ಇಲ್ಲಿನ ಪ್ರಾಚೀನ ರೂಢಿ ಎಂದು, 'ಮಲ್ಲಿಕಾರ್ಜುನ ಪರ' ಎಂಬ ಹೆಸರಿನಲ್ಲಿ ಆಚರಿಸುತ್ತಿದ್ದುದು, ಯಡೂರಿನ ಪ್ರಾಚೀನ ಶಿವಾಲಯದ ಇರವು, ಸುಗ್ಗಿಕಟ್ಟೆ ಸಬತಾಯಿ(ಪಾರ್ವತಿ) ಹಬ್ಬ, ವೀರಭದ್ರನಿಗೆ ಹರಸೇವೆ ಹಾಗು ಅಬ್ಬಿಮಠದ ಎಡ ಪಕ್ಕದ ಕಾಡಿನಲ್ಲಿ ಕ್ರಿ.ಶ.೧೪೬೪ರಲ್ಲಿಯೂ ಶಾಸನೋಕ್ತ ದಾನಪಡೆದ ಈ ಜಯಮಲ್ಲಿಕಾಜುನ ದೇವರ ಗುಡಿಯ ಮತ್ತೂ ಹಿಂದಿನ ಪ್ರಾಚೀನ ಅಸ್ತಿತ್ವ[12] ಇವೆಲ್ಲವೂ ಮೇಲಿನ ಅಂಶಗಳಿಗೆ ಒತ್ತುಕೊಡುವಂತಿವೆ. ಈ ಗುಡಿಯ ನೆರೆಗೆ ಮಲ್ಲಣ್ಣನ (ಮಲ್ಲಪ್ಪನ) ಉಡುವೆ ಎಂದು ಆಳಿದ ನಾಯಕನ ಹೆಸರಿನ ಪ್ರಾಚೀನ ಗ್ರಾಮವೂ ಇತ್ತು ಎಂಬುದು ಇಂದಿಗೂ ಜನಪದದಲ್ಲಿ ಆ ಹೆಸರು ಉಳಿದಿರುವಲ್ಲಿ ತಿಳಿಯುತ್ತದೆ. ಹಾಲೇರಿ ಅರಸರ ಕಾಲದ 'ಅಬ್ಬಿಮಟ್ಟಿ ಗ್ರಾಮ' ಎಂಬ ಹೆಸರು ಇದಕ್ಕೆ ಅನ್ವಯವಿದೆ ಎನ್ನಬಹುದು.[12ಅ] ಬಹುಶಃ ಕ್ರಿ.ಶ. ೧೨೭೮ರ ನಿಡುತ ಶಾಸನದಲ್ಲಿ ಉಕ್ತವಾದ 'ಗಡಿನಾಡು' ಮಲಪನಹಳ್ಳಿಯ ಮಲ್ಲಿಕಾರ್ಜುನ ದೇವರ ಗುಡಿಗೆ ಆದ ದಾನದ ಸಂದರ್ಭಗಳು ಯಡವನಾಡು-ಗಡಿನಾಡಿನ ಊರಾದ ಈ ನೆಲೆಗೆ ಸಲ್ಲುವಂತಿವೆ. ಇದು ಗುಡಿಯ ಸಾಂಸ್ಕೃತಿಕ ಅಸ್ತಿತ್ವವನ್ನು ಪೂರ್ವ ಚಂಗಾಳ್ವರ ಕಾಲಕ್ಕೆ ಒಯ್ಯುವಂತಿದೆ. ಅಂದರೆ ೧೧ನೆಯ ಶತಮಾನದ ಶಿವಪರ ಸಂದರ್ಭಗಳಿಗೆ ಹೀಗೆ ಮುಂದಿನ ಸಾಕ್ಷಿಗಳೂ ಒದಗಿವೆ. ಇದಲ್ಲದೆ ಕ್ರಿ.ಶ. ೧೧೭೫ರ ಸಿರಹದ್ ಶಾಸನರೀತ್ಯಾ ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯಲ್ಲಿ ಸಿರಹದ ಮಲ್ಲಿಕಾರ್ಜುನ ದೇವರಿಗೆ ದಾನಗಳಿವೆ.

ಚೋಳರಲ್ಲಿ ಕುಲೋತ್ತುಂಗ ಚೋಳನು ಶ್ರೀಗಿರಿ ಎಂದು ಹೆಸರಾಗಿದ್ದ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರ ಭಕ್ತನಾಗಿದ್ದುದು ೧೦ನೆಯ ಶತಮಾನದ ಶಾಸನಗಳಿಂದ ಗೋಚರವಾಗುತ್ತದೆ. ಆ ಕಾಲಕ್ಕೆ ಬೆಟ್ಟದಪುರ, ರಾಮನಾಥಪುರ, ಸಕಲೇಶಪುರ ಪ್ರದೇಶಗಳು ಕೊಡಗಿನ ಭಾಗಗಳೇ ಆಗಿದ್ದುವು.[13] ಈ ಹಿನ್ನೆಲೆಯಲ್ಲಿ ಚೋಳರು ಚಂಗಾಳ್ವರನ್ನು ಪನಸೋಗೆ ಯುದ್ಧದಲ್ಲಿ ಸೋಲಿಸಿದ ಮೇಲೆ ಚೋಳರಂತೆಯೇ ಮುಂದೆ ಅನ್ನದಾನಿ ಮಲ್ಲಿಕಾರ್ಜುನ ದೇವರನ್ನು ಕುಲದೇವರನ್ನಾಗಿಸಿಕೊಂಡು, ಕೊಡಗಿನ ಭಾಗದ ಚಂಗಾಳ್ವರು ವೀರಶೈವರಾದರು. ಅದರಿಂದ ಅವರ ಅಗತ್ಯದ ಧಾರ್ಮಿಕ ಹಾಗು ಸಾಂಸ್ಕೃತಿಕ ಆಚರಣೆಗಳಿಗಾಗಿ ಮಠಗಳನ್ನು ನಿರ್ಮಿಸಿರುವುದು ಸಹಜ. ಕ್ರಿ.ಶ.೧೧೭೫ರ ನಂದಿಗುಂದ ಶಾಸನದಲ್ಲಿ 'ಗಣಹೂರು'ಗ್ರಾಮದ ಉಲ್ಲೇಖವಿದ್ದು ವೀರಶೈವ ಗಣಚಾರದ ಮಠದ ಸಂದರ್ಭವನ್ನು ಸೂಚಿಸುವಂತಿದೆ. ಇದು ಕೊಡಗಿನ 'ಪೂರ್ವ ಚಂಗಾಳ್ವ'ರ ಕಾಲದ ಸಂಗತಿ. ಕ್ರಿ.ಶ. ೧೨೪೫ರ ಸಮಯದಲ್ಲಿ ಅವರ ರಾಜಧಾನಿಗಳಾಗಿದ್ದ ಪಾಲ್ಪರೆ (ಪಾಲುಪುರ) ಹಾಗು ಕೊಡಗು ಶ್ರೀರಂಗಪಟ್ಟಣಗಳಲ್ಲಿ ವೀರಶೈವ ಮಠಗಳು ಸ್ಥಾಪಿತಗೊಂಡವು. ಕ್ರಿ.ಶ. ೧೨೯೮ರ ಅಲ್ಲಿನ ಹೊಸ ಶಾಸನದ ರೀತ್ಯಾ ಆ ಪ್ರದೇಶವನ್ನು ಆಳುತ್ತಿದ್ದವ ವೀರಚೋಳ ಚಂಗಾಳ್ವ. ಆ ಅರಸರ ಶಿವಾಚಾರದ ಅಗತ್ಯಕ್ಕಾಗಿ ಮಠವೊಂದಿದ್ದು ಅದಕ್ಕೆ ಶಿವಾನಂದಸ್ವಾಮಿ ಮಠ ಎಂದು ಕಾಲಾಂತರದಲ್ಲಿ ಹೆಸರಾದಂತಿದೆ.'ನಂತರದ ಚಂಗಾಳ್ವರು' ಕಾಲದಲ್ಲಿ ಕ್ರಿ.ಶ. ೧೫೪೪ರ ಚೇರಲಸಿರಿಮಂಗಲ ಶಾಸನ, ಕ್ರಿ.ಶ.೧೫೯೭ ಗಣಗೂರು ಶಾಸನಗಳಲ್ಲಿ[14] ಮಠೀಯ ಸಂದರ್ಭಗಳ ಸೂಚನೆ ಕಾಣಬರುತ್ತದೆ. ಚೇರಲ ಸಿರಿಮಂಗಲದಲ್ಲಿ 'ಲಿಂಗಂಡೋಡೇರು ದೇವರು' ಎಂಬ ಮಠದ ಗುರುಗಳಿದ್ದ ಸೂಚನೆ ದೊರಕುತ್ತದೆ. ೧೫ನೆ ಶತಮಾನದ ದೊಡ್ಡಮಳತೆ ಶಾಸನದಲ್ಲಿ 'ನಂನ ಗಉಡನ' ಗುರುಗಳಾಗಿ ಬಸಲಿಂಗ ದೇವರು ಎಂಬವರು ಅಲ್ಲಿನ ಮಠದಲ್ಲಿದ್ದಂತ ಸೂಚನೆ ದೊರಕುತ್ತದೆ.[15] ಕ್ರಿ.ಶ. ೧೪೦೦ರ ಸುಮಾರಿನಲ್ಲಿ ನಾಗರಹೊಳೆ ಪ್ರದೇಶದ ಕುಂತೂರನ್ನು ಆಳುತ್ತಿದ್ದ ಚಂಗಾಳ್ವರ ನಾಗರಾಜನ ಪಂಚಲೋಹಶಿಲ್ಪವು ನಾಗರಹೊಳೆ ಅಮ್ಮಾಳೆಗುಡಿಯಲ್ಲಿದೆ. ಸ್ಪಷ್ಟವಾಗಿ ಕರಡಿಗೆ ಬಿಡಾವಣೆ ಇದೆ. ಈ ವೀರಶೈವ ಅರಸುವನ್ನು ಅಮ್ಮಾಳೆ ಗುಡಿಯಲ್ಲಿಟ್ಟು ನಾಗರಹೊಳೆಯ ಜೇನುಕುರುಬರು ಇಂದಿಗೂ ವಾರ್ಷಿಕವಾಗಿ ಪೂಜೆ, ಉತ್ಸವಗಳನ್ನು ಆ ಅರಣ್ಯದಲ್ಲಿಯೇ ನಡೆಸುತ್ತಾರೆ. 'ನಾಗರಹೊಳೆ' ಎಂಬ ಹೆಸರು ಅಲ್ಲಿ ಹರಿವ ನದಿಗೆ ಬರಲು ನಾಗರಾಜನೂ ಕಾರಣನಾಗಿದ್ದು, ಅಲ್ಲಿ 'ನಾಗರಾಜರಸ್ತೆ' ಎಂಬ ಹೆಸರಿರಲು ಅವನೇ ಸ್ಫೂರ್ತಿಕಾರಣ ನಾಗಿದ್ದಾನೆ. ಈ ಅರಣ್ಯ ಪ್ರದೇಶಕ್ಕೆ ತಾಗಿದಂತೆಯೆ ಒಂದು ಕಾಲಕ್ಕೆ 'ನಾಣಚ್ಚಿ ಮಠ' ಎಂಬ ವೀರಶೈವ ಮಠವಿತ್ತು. ಇಮ

ಚಂಗಾಳ್ವ ವೀರಶೈವ ಅರಸು ನಾಗರಾಜನ ಗುರುಮಠವಾಗಿ ಅಂದರೆ ಅವನ ಮನೆತನದ ಗುರುಮಠವಾಗಿದ್ದಿರಬೇಕೆನಿಸುತ್ತದೆ. ಇದು ಅಲ್ಲಿನ ಗಿರಿಜನರಾದ ಬೆಟ್ಟಕುರುಬರಿಗೂ ಗುರುನೆಲೆ ಆಗಿತ್ತು. ನಾಗರಾಜನ ಕಾರಣ ಜೇನುಕುರುಬರಿಗೂ ಗುರುಸ್ಥಾನದಲ್ಲಿತ್ತೆನ್ನಬೇಕು. ಇಂದು ವೀರಶೈವ ಅರಸು ನಾಗರಾಜನನ್ನು ಜೇನುಕುರುಬರು ಮಾತ್ರ ಸ್ಮರಿಸಿ ಐನೂರು ವರ್ಷ ಕಳೆದರೂ ಅವನನ್ನು ನಾಡಿನ ಜೀವಂತ ನೆನಪಿಗಿಟ್ಟಿದ್ದಾರೆ. ಒಂದು ಕಾಲಕ್ಕೆ ಅದು ಜೊಂಡು, ಜೌಗುಗಳ ನಡುವೆ ಇದ್ದ ಗುಹ್ಯ ಮಠವಾಗಿತ್ತು ಎನಿಸುತ್ತದೆ. ಆದರೆ ಅದು ರಾಜಗುರು, ಕುಲಗುರು ಮಠವಾಗಿ ಚಂಗಾಳ್ವರ ಕಾಲಕ್ಕೆ ಇದ್ದು ಗಿರಿಜನರನ್ನು ಶಿವಪ್ರಭಾವದ ತೆಕ್ಕೆಗೆ ತೆಗೆದುಕೊಂಡಿತ್ತು ಎನ್ನಬಹುದು. ಮುಂದೆ ಮಲೆಯಾಳಿ ಪ್ರಭಾವಕ್ಕೆ ವೈನಾಡಿನಿಂದ ಬಂದ ಗಿರಿಜನರ ಕಾರಣ ಅದು ತನ್ನತನ ಕಳೆದುಕೊಂಡರೂ ಶಿವಪ್ರಭಾವದಿಂದ ಮುಕ್ತವಾಗಲಿಲ್ಲ. ಒಟ್ಟಾರೆ ಈ ಮಠದ ಕೊಡುಗೆ ಎಂದರೆ ಗಿರಿಜನರನ್ನು ಹೀನಾಯಿಸದೆ ಶಿವಕ್ಕೆ ತೆರೆದುಕೊಟ್ಟಿದ್ದು ಆಗಿದೆ. ಅಲ್ಲದೆ 'ಜನಪದ ಪ್ರಾಮುಖ್ಯ'ವನ್ನು ಹೊಂದಿತ್ತು ಎನ್ನಲು ಕುಟ್ಟದ ಗ್ರಾಮದೇವತೆ ಕುಟ್ಟಾಲಮ್ಮನ ಜಾತ್ರೆಯಲ್ಲಿ ಕೇರಳದ ಮುನ್ನೂಟ ಜನಾಂಗದವರು ಈ ಮಠದ ಗುರುಗಳನ್ನು ಸ್ಮರಿಸಿಯೇ, ಜನಪದ ಆಚರಣೆ ಆರಂಭಿಸುವುದು ಇಂದಿಗೂ ಕಾಣುತ್ತದೆ. ಇದು ಮಠವು ಸಮುದಾಯದ ಮೇಲೆ ಬೀರಿದ ಸಾಂಸ್ಕೃತಿಕ ಪ್ರಭಾವವೂ ಆಗಿದೆ.

ಚಂಗಾಳ್ವರ ಕಾಲದ ವೀರಶೈವ ಮಠಗಳಿಗೆ ಭೂದಾನಗಳನ್ನು ನಿರ್ವಹಣೆಗಾಗಿ, ಗಣಾಚಾರಕ್ಕಾಗಿ ನೀಡಲಾಗಿದೆ. ದೇವರ ಪ್ರತಿಷ್ಠೆಯ ಸಂದರ್ಭಗಳಲ್ಲಿ, ರಾಜರ ತಂದೆ ತಾಯಿಗಳಿಗೆ 'ಕೈಲಾಸ ಪದವಿ' ಒದಗಲೆನ್ನುವ ಆಶಯಕ್ಕಾಗಿ ಕೆರೆತೂಬು ನಿರ್ಮಾಣದ ಸಂದರ್ಭದ ಒಳಿತಿಗಾಗಿ ಹರಕೆಯ ದಾನಗಳಾಗಿ ಒದಗಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಇದರಿಂದ ಆಗಿನ ಮಠೀಯ ವ್ಯವಸ್ಥೆಯಲ್ಲಿ ಧಾರ್ಮಿಕ ಹಾಗು ಸಾಂಸ್ಕೃತಿಕ ಕೊಡುಗೆಗಳ ಪ್ರತೀಕವಾಗಿ ಮಠಗಳು ಕಾಣಬರುತ್ತವೆ. ಈ ಮಠಗಳು ಹಾಲೇರಿ ಅರಸರ ಕಾಲಕ್ಕೂ ಮುಂದುವರೆದ ಅಸ್ತಿತ್ವನ್ನು ಪಡೆದಿದ್ದುವು. ಇದರಿಂದ ಅವುಗಳು ಸಮುದಾಯದ ಬದುಕಿನಲ್ಲಿಯೂ ಬೆರೆತುಕೊಂಡಿದ್ದವು ಎಂದಾಗುತ್ತವೆ. ಕೇವಲ ಹಾವೇರಿ ಅರಸರ ಕಾಲದಲ್ಲಿ ರೂಪುಗೊಂಡವಾಗಿದ್ದರೆ ಸಾಂಸ್ಕೃತಿಕ ಪರಂಪರೆಯನ್ನು ಅವು ಹೊಂದಲು ಆಗುತ್ತಿರಲಿಲ್ಲ. ಚಂಗಾಳ್ವರ ಮೊದಲ ಇಳಿಗಾಲದ ಅವಧಿ ಅಂದರೆ ಕ್ರಿ.ಶ.೧೩೦೦-೧೪೦೦ರ ಸಮಯದಲ್ಲಿ ಹಾಗು ಹಾಲೇರಿ ಅರಸರು ಬರುವ ಮುನ್ನಿನ ಕೊಡಗಿನ ಭಾಗಗಳ ನಾಯಕರಾಳ್ವಿಕೆಯ ಅವಧಿಯಲ್ಲಿ(ಕ್ರಿ.ಶ.೧೫೮೫-೧೫೯೦) ಶಿವಪರ ನಿಷ್ಠೆಯನ್ನು ಜನತೆಯಲ್ಲಿ ಜಾಗೃತವಿರಿಸಿದವೇ ಈ ವೀರಶೈವ ಮಠಗಳೆನ್ನಬೇಕು; ಜೊತೆಗೆ ಹಾಲೇರಿ ಅರಸರ ರಾಜ್ಯಸ್ಥಾಪನೆಗೆ ಅನುಕೂಲವಾದ ಶಿವಧರ್ಮಪ್ರಭಾವದ ವಾತಾವರಣವನ್ನು ಜನರ ನಡುವೆ ಪ್ರಚಲಿತಗೊಳಿಸಿದ್ದುವು ಎನ್ನಬೇಕು. ಇಲ್ಲವಾಗಿದ್ದರೆ ಜಂಗಮ ವೇಷದಲ್ಲಿ ಬಂದ ಹಾಲೇರಿ ವಂಶದ ಮೊದಲರಸನಿಗೆ ಆತ್ಮೀಯ ಭಕ್ತಿಗೌರವದ ಸ್ವಾಗತ ಸಿಗುತ್ತಿರಲಿಲ್ಲವೆನಿಸುತ್ತದೆ. ಈ ದೃಷ್ಟಿಯಿಂದ ಆ ಹೊತ್ತಿನ ಶಿವಚಾರದ ಮಠಗಳು ಕೊಡಗಿಗೆ ಕೊಟ್ಟ ಶಿವಸಂಸ್ಕೃತಿಯ ಚಾರಿತ್ರಿಕ ಹಾಗು ರಾಜಕೀಯ ಕೊಡುಗೆ 'ಹಾಲೇರಿ ಅರಸುವಂಶ'ಎನ್ನಬೇಕು. ಉತ್ತರಕೊಡಗಿನಲ್ಲಿಯಾದರೂ ಇಂದಿಗೂ ವೀರಶೈವ ಮಠಗಳ ಸಂಖ್ಯಾ ಹೆಚ್ಚಳ ಹಾಗು ಆ ಜನಾಂಗದ ಅಸ್ತಿತ್ತ್ವ, ಪ್ರಭಾವವಿದೆ. ಇದಕ್ಕೆ ಕಾರಣ ಚಂಗಾಳ್ವರ ಏಳುಸಾವಿರ ಸೀಮೆಯ ಬಹುಕಾಲದ ಆಡಳಿತದಲ್ಲಿ ಕೊಡಗಿನ ಈ ಮಠಗಳು ಜನಸಮುದಾಯದಲ್ಲಿ ಶೈಕ್ಷಣಿಕ, ಧಾರ್ಮಿಕ ಹಾಗು ಸಾಂಸ್ಕೃತಿಕ ಎಚ್ಚರಗಳನ್ನು ಮೂಡಿಸಿದ್ದುದೇ ಆಗಿರಬೇಕು.

ಹಾಲೇರಿಯ ಮೊದಲರಸ ವೀರರಾಜ (ವೀರೊಡೆಯ, ವೀರಪ್ಪನಾಯಕ, ವೀರರಾಜೇಂದ್ರ, ಒಡೆಯ) ಪ್ರಾಯಶಃ ಚಂಗಾಳ್ವ ರಾಜರ ಸಂತಾನದವನಾಗಿರಬಹುದು.[15ಅ] ಎಂಬ ಪಟ್ಟೋಲೆಪಳಮೆಯ ಮಾತು ಕೆಳದಿ ಹಾಗು ಚಂಗಾಳ್ವರ ವಂಶಿಕ ಸಂಬಂಧದ ದೃಷ್ಟಿಯಿಂದ ಗಮನಾರ್ಹವೆ. ಕ್ರಿ.ಶ. ೧೪೫೦ರ ಸುಮಾರಿನಲ್ಲಿ ಪೂರ್ವ ಚಂಗಾಳ್ವರ ಒಂದು ಶಾಖೆ ಕೊಡಗಿನಿಂದ ವಲಸೆಹೋಗಿ ಕೆಳದಿಯಲ್ಲಿ ವಂಶಸ್ಥಾಪನೆ ಮಾಡಿರುವಂತಿದೆ. ಕೆಳದಿರಾಜ್ಯ ರೂಪುಗೊಂಡಮೇಲೆ ಆ ಅರಸರು ತಮ್ಮ ಪೂರ್ವ ವಂಶಿಕರ ನೆಲೆಯಾಗಿದ್ದ ಕೊಡಗಿನಲ್ಲಿಯೂ ವೀರಶೈವ ಮಠಗಳನ್ನು ಸ್ಥಾಪಿಸಿದರು. ಕ್ರಿ.ಶ. ೧೫೮೨ರ ನಂತರ ಇಕ್ಕೇರಿಯಿಂದ ಅಲ್ಲಿನ ದೊರೆ ರಾಮರಾಜ ನಾಯಕ ತೀರಿದ ಮೇಲೆ ಅವನ ಹಿರಿಯ ಮಗನಾದ ವೀರರಾಜ ಕೊಡಗಿಗೆ ಬಂದು ಹಾಲೇರಿಯಲ್ಲಿ ಹಾಲೇರಿ ವಂಶ ಸ್ಥಾಪಕನಾದ. ಅವನು ಜಂಗಮ ವೇಷಧಾರಿಯಾಗಿ ಬಂದವನು ಹಾಲೇರಿಯಲ್ಲಿಯೂ ಮಠ ಸ್ಥಾಪಿಸಿದ. ಅಲ್ಲಿಯ ಜನರೇ ಅವನಿಗೊಂದು ಗುರುಮಠ ಕಟ್ಟಿಕೊಟ್ಟರು. ಅಲ್ಲಿ ಮಕ್ಕಳಿಗೆ ವಿದ್ಯಾದಾನವಾಗುತ್ತಿತ್ತು. ಕೆಳದಿಯಂತೆಯೆ ಇಲ್ಲಿಯ ಮಹತ್ತಿನ, ಮಹಾಮತ್ತಿನ ಹಾಗು ವಾಶೀಕೃತ ಮಠಗಳ ಜೊತೆಗೆ ವಿರಕ್ತ ಜಂಗಮ ಮಠಗಳನ್ನೂ ನೇರ್ಪುಗೊಳಿಸಿದ.

ಕೆಳದಿ ಅರಸರು ಹಾಗು ಹಾಲೇರಿ ಅರಸರು ಇಲ್ಲಿ ಕೆಲವು ವಿರಕ್ತ ಸಮಯದ ಮಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಮುರುಘಾ, ಚಿಲಾಳ ಹಾಗು ಲೀಲಾಖ್ಯ ಸಮಯದವು ಸೇರಿವೆ. ಹಾಲೇರಿ ಮೊದಲರಸನ ಕಾಲಕ್ಕೆ ಕೊಡಗಿನ ಸ್ಥಳೀಯ ಹೆಣ್ಣುಗಳನ್ನು ರಾಜಕುಟುಂಬಗಳಿಗೆ ತೆಗೆದುಕೊಂಡ ಕಾರಣ ಪಟ್ಟದ ಗುರುಮಠಗಳನ್ನು ಸ್ಥಾಪಿಸಿ ಲಿಂಗದೀಕ್ಷೆ ನೀಡಿದಂತಿದೆ. ದೊಡ್ಡಕೊಡ್ಲಿಕಲ್ಲುಮಠವು ಒಂದು ಪ್ರಾಚೀನ ನಿರಂಜನ ಪೀಠವೆಂದಿರುವ ಕಾರಣ, ವಿರಕ್ತ ಮಠಗಳಿಗೂ ಹಾಲೇರಿ ವಂಶ ಆರಂಭದಿಂದಲೇ ಉತ್ತೇಜನ ದೊರೆತಿರಬೇಕು. ಸುತ್ತೂರು ಮಠಪರಂಪರೆಯೂ ಇಲ್ಲುಂಟು.

ಹಾಲೇರಿ ವಂಶದ ಮೂರನೆಯ ಅರಸ ಮುದ್ದುರಾಜ. ಇವನು ತನ್ನ ಮಗಳಿಗೆ ಉತ್ತುನಾಯಕ ಎಂಬ ತರುಣನಿಗೆ ಲಿಂಗಧಾರಣೆಯನ್ನು ತನ್ನ ಗುರುಗಳಿಂದ ಮಾಡಿಸಿ ಚನ್ನಬಸಪ್ಪ ಎಂಬ ಹೆಸರಿಟ್ಟು ಮದುವೆ ಮಾಡಿದ ಸಂಗತಿ ಇದೆ. ಇವನ ಕಾಲದ ಮಠಗಳು ಇಂತಹ ಸಾಂಸ್ಕೃತಿಕ ಚರ್ಯೆಗಳಿಗೆ ನೆರವಾಗಿದ್ದವು ಎನಿಸುತ್ತದೆ. ಆದರೆ ಈ ಚನ್ನಬಸಪ್ಪ ವಿದ್ರೋಹವೊಂದರಲ್ಲಿ ಭಾಗಿ ಆಗಿ ಬೈತೂರಿನಲ್ಲಿ ತೀರಿದ. ಇವನ ಹೆಂಡತಿ ಗಂಡ ತೀರಿದ ಮೇಲೆ ಅರಮನೆಯಲ್ಲಿ ಉಳಿಯಲು ಒಪ್ಪದೆ ಹೋದಕಾರಣ, ಗಂಡನ ಊರಾದ ಅರಮೇರಿಯಲ್ಲಿ ಮಠಕಟ್ಟಿಸಿ ಅವಳ ಸದ್ಬೋಧೆಗೆ ಅನುಕೂಲ ಮಾಡಲಾಯಿತು. ಅಂದರೆ ರಾಜಕುಟುಂಬದ ಪ್ರಾಯದ ವಿಧವೆ ಹೆಣ್ಣುಮಕ್ಕಳಿಗೆ ಮಾನಸಿಕ, ನೈತಿಕ ನೆಮ್ಮದಿಗೆ ಹೀಗೆ ಮಠಗಳ ವ್ಯವಸ್ಥೆಯಾಗುತ್ತಿತ್ತು. ನಂತರ ದೊಡ್ಡವೀರರಾಜೇಂದ್ರ ಒಡೆಯನ ಕಾಲದಲ್ಲಿ ಸೋದೆ ಬಸವಲಿಂಗರಾಜನಿಗೆ ಮಗಳನ್ನು ಮದುವೆ ಮಾಡಿ ಕೊಡುವ ಸಂದರ್ಭದಲ್ಲಿ ಬಹುಶಃ ರಾಜಮನೆತನದ ಮಠದ ಗುರುವೇ ಆಗಿದ್ದ ಸಿದ್ಧಲಿಂಗದೇವರು ತಮ್ಮ ಮಠದ ಮರಿಗಳಾದ ಕಂಟ್ಲೆ ಬಸವ ಲಿಂಗೈಯ ಸಹಿತವಾಗಿ ಮದುವೆಯ ವ್ಯವಹಾರಗಳನ್ನು ನಿರ್ವಹಿಸಿದ ಸಂಗತಿ ರಾಜೇಂದ್ರ ನಾಮೆಯಲ್ಲಿದೆ.[15ಅ] ದೊಡ್ಡವೀರರಾಜೇಂದ್ರ ಹೈದರ್‌ನಿಂದ ಸೆರೆಗೆ ಹೋದಾಗ, ಮಾದಾಪುರದ ಗದ್ದುಗೆ ನಿರ್ಮಾಣವನ್ನು ರಾಜಕುಮಾರನ ಪರವಾಗಿ ನಿರ್ವಹಿಸಿದವರು ಮಠದ ಚರಮೂರ್ತಿ ಸಿದ್ಧಲಿಂಗಪ್ಪನವರಾಗಿದ್ದಾರೆ. ಅಂದರೆ ರಾಜರ ಅಥವಾ ಗುರುಗಳ ಗದ್ದುಗೆಯಂತಹ ಧಾರ್ಮಿಕ ಸ್ಮಾರಕ ನಿರ್ಮಾಣ ಕಾರ್ಯಗಳು ಮಠಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತೆಂದಾಗುತ್ತದೆ.

ಅರಮನೆಯ ಹವ್ಯಕವ್ಯಕರ್ಮಾದಿಗಳಿಗೆ ಮಡಿಕೇರಿಯ ರಾಜರ ಗದ್ದುಗೆ ಸನಿಹದಲ್ಲಿ ಮಠಗಳಿದ್ದವು. ಜಂಗಮರು ಬಂದಾಗ ರಾಜನು ಆಸ್ಥಾನದಲ್ಲಿದ್ದರೂ ಬಹಳ ಗೌರವ ತೋರಿ ಆದರಿಸುತ್ತಿದ್ದ ಉದಾಹರಣೆ ಲಿಂಗರಾಜ ಒಡೆಯ ಹಾಗೂ ಚಿಕ್ಕವೀರರಾಜೇಂದ್ರ ಒಡೆಯರ ಕಾಲದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಆದರೆ ಹಾಗೆ ಬಂದ ಜಂಗಮರು ರಾಜಕಾರಣಕ್ಕೆ ಕೈ ಹಾಕದೆ, ಆಡಳಿತದ ಬಗ್ಗೆ ಎಚ್ಚರಿಕೆಗಳನ್ನು ನೀಡಿ ಹೋಗಿರುವುದು ಕಾಣಬರುತ್ತದೆ.

ಕೊಡಗಿನಂತಹ ಪುಟ್ಟ ಜಿಲ್ಲೆಯಲ್ಲಿ ೧೦೮ ಮಠಗಳಿದ್ದುವು. ಅವುಗಳಲ್ಲಿ ಇಂದು ೧೦೦ ಮಠಗಳ ಹಾಗು ಆವಿದ್ದ ನೆಲೆಗಳ ಹೆಸರುಗಳು ಸಿಗುತ್ತವೆ. ಅವುಗಳು ಹಾಗು ಅವುಗಳ ಆಸ್ತಿ ಎಷ್ಟೋ ಕಡೆ ಅನ್ಯಾಕ್ರಮಣವಾಗಿ ಭೌತಿಕ ಸ್ವರೂಪದಲ್ಲಿ ಅವು ಕಾಣದಿದ್ದರೂ ಜನರ ಸ್ಮರಣೆಯಲ್ಲಿ ಅವುಗಳ ಹೆಸರಾದರೂ ಉಳಿದುಬಂದಿದೆ. ಹಾಲೇರಿ ಅರಸರಲ್ಲಿ ವೀರರಾಜೇಂದ್ರ ಒಡೆಯ ೬೩ ಜಂಗಮ ಪುರೋಹಿತರನ್ನು ನೇಮಿಸಿದರೆ ಲಿಂಗರಾಜೇಂದ್ರ ಒಡೆಯ ೬೩ ಜಂಗಮ ಮತ್ತು ಪಟ್ಟದ ಮಠಗಳನ್ನು ನಿರ್ಮಿಸಿದ[16] ಎನ್ನಲಾಗಿದೆ. ಕೊಡಗಿನಲ್ಲಿ ೧೦೮ ಮಠಗಳಿದ್ದುವು. ಅಂದರೆ ಚಂಗಾಳ್ವರು ನಿರ್ಮಿಸಿಕೊಟ್ಟ ಮಠಗಳು ಹಾಲೇರಿ ಅರಸರ ಮುನ್ನವೂ ಇದ್ದವು. ಕೆಳದಿ ಅರಸರು ನಿರ್ಮಿಸಿಕೊಟ್ಟ ಕೆಲವು ಮಠಗಳು ಹಾಲೇರಿ ಅರಸರ ಕಾಲದಲ್ಲಿ ಆದಂತಹವು. ಇವೆರಡೂ ಸೇರಿ ೪೫ ಮಠಗಳಿದ್ದ ಸಂದರ್ಭದಲ್ಲಿ ಹಾಲೇರಿ ಅರಸರು ೬೩ ಹೊಸ ಮಠಗಳನ್ನು ಬಹುಶಃ ೬೩ ಪುರಾತನರ ಶೀಲಗಳ ಹಾಗು ಸಂಖ್ಯೆಗೆ ರೂಢಿ ಸಂಕೇತವಾಗಿ ರೂಪಿಸಿರಬಹುದು. ಅಥವಾ ಹಿಂದಿನ ಕೆಲವಷ್ಟನ್ನೂ ಸೇರಿಸಿ ಜೀರ್ಣೋದ್ಧಾರ ಮಾಡಿರಬಹುದು. ಈ ಕೆಲಸ ಮುದ್ದುರಾಜನ ಹಾಗು ಸಿರಿಬಾಯಿ ದೊಡ್ಡ ವೀರಪ್ಪನ ಕಾಲದಲ್ಲಿ ಆರಂಭವಾಗಿ ೨ನೇ ಲಿಂಗರಾಜೇಂದ್ರ ಒಡೆಯ ಹಾಗೂ ಚಿಕ್ಕವೀರರಾಜೇಂದ್ರ ಒಡೆಯನ ಕಾಲದಲ್ಲಿಯೂ ನೇರ್ಪುಗೊಂಡಿದೆ ಎನ್ನಬೇಕು. ಒಂದು ಕೊಂಬು ಕೂಗುವ ಶಬ್ದ ಕೇಳಿಸುವಷ್ಟು ದೂರಕ್ಕೆ ಒಂದೊಂದರಂತೆ ಅನುಕ್ರಮವಾಗಿ ಮಠಗಳು ಸಿಗಬೇಕು ಎಂಬುದು ಹಾಲೇರಿ ಅರಸರ ಇಚ್ಛೆ ಆಗಿತ್ತು ಎಂಬುದು ಮಠದ ಗುರುಗಳು ಹೇಳುವ ಮಾತು. ಅದು ಜನ ಪ್ರತೀತಿಯಲ್ಲಿಯೂ ಇದೆ. ಈ 'ಕೊಂಬು'ವಿನ ಲೆಖ್ಖದಲ್ಲಿ ಹೋದರೆ 'ನಾಡ್‌ಕಟ್ಟ್‌ಪಾಟ್'ನ ರೀತ್ಯಾ ೧೨ ಕೊಂಬಿನಷ್ಟು ಮಾತ್ರ ಪ್ರದೇಶ ಹೊಂದಿದ್ದ ಕೊಡಗಿನಲ್ಲಿ ೧೨ ಮಠಗಳು ಮಾತ್ರ ಇರಬೇಕಿತ್ತು ಮುದ್ದುರಾಜ ಮತ್ತು ದೊಡ್ಡ ವೀರಪ್ಪನ ಕಾಲದಲ್ಲಿ ಈ ೧೨ ಕೊಂಬುಗಳೇ ೨೮ ನಾಡುಗಳಾಗಿ ಮತ್ತೆ ೭ ನಾಡುಗಳನ್ನೂ ಸೇರಿಸಿ ೩೫ ನಾಡುಗಳ ದೇಶ ಕೊಡಗು ಆಯಿತು. ೨೮ ನಾಡುಗಳ ದೃಷ್ಟಿಯಿಂದ

ಒಂದು ಕೊಂಬಿನ ಕೂಗಿನ ಕೇಳಿಕೆಯ ವಿಸ್ತಾರ, ದೂರದ ಪ್ರದೇಶಕ್ಕೆ ೯ ಮಠಗಳಿರಬೇಕೆಂದಾಗುತ್ತದೆ. ಇದು ವಾಸ್ತವವೆನಿಸುವುದಿಲ್ಲ. ಬದಲು ನಾಡಿಗೆ ನಾಲ್ಕು ಕೇರಿಗಳು ಇದ್ದು ನಾಲ್ದೆಸೆಗೆ ನಾಲ್ಕು ಮಠಗಳಿರುವಂತೆ ಮಠಗಳ ಇರುವಿಕೆಯ ವ್ಯವಸ್ಥೆಯನ್ನೂ ಮಾಡಿರಬೇಕು.[16-ಅ] ಆದರೆ ಒಟ್ಟು ೧೦೮ ಮಠಗಳ ಸಂಖ್ಯೆಗೆ ಹೊಂದಿಗೆ ಆಗುವಂತಲ್ಲ ಕೆಲವು ನಾಡುಗಳ ವಿಸ್ತಾರಕ್ಕನುಸಾರಗುಣವಾಗಿ ಸಂಖ್ಯಾವ್ಯತ್ಯಾಸ ಮಾಡಿ ವಿಂಗಡಿಸಿ, ಪುನರ್‌ವ್ಯವಸ್ಥೆಯನ್ನು ಹಾಲೇರಿ ಅರಸರು ಮಾಡಿರುವಂತಿದೆ. ಅನುಗುಣವಾಗಿ ದಾನ, ದತ್ತಿ, ಉಂಬಳಿ, ಜಹಗೀರುಗಳನ್ನು ಈ ಮಠಗಳಿಗೆ ನೀಡಲಾಗಿದೆ.[17] ವೈಶಿಷ್ಟ್ಯವೆಂದರೆ ಕೆಲವು ಮಠಗಳ ಮಾಹಿತಿಯನ್ನು ಗಮನಿಸಿದರೆ, ಮಠದ ಗುರುಗಳು 'ದಾನದ ಭೂಮಿ ನಮಗೆ ಬೇಡ, ನಮ್ಮ ದಾಸೋಹಕ್ಕೆ, ನಮ್ಮ ಕಾಯಕವೇ ಸಾಕು' ಎಂದಿರುವುದು. ಆದರೂ ರಾಜರು ಜಂಗಮಭಕ್ತಿ ತೋರಿಸಿ ತಮ್ಮ ಔದಾರ್ಯ, ಗೌರವವನ್ನೂ ಸಲ್ಲಿಸಿದ್ದಾರೆ. ಈ ಅಂಶಗಳು ಕೊಡಗಿನ ಮಠಗಳ ವ್ಯಾಪಕತೆ, ಧರ್ಮ ಸೌಹಾರ್ದ, ಜನರಾಚರಣೆಗಳಲ್ಲಿ ಸ್ವಂತಿಕೆಗೆ ಮಾನ್ಯತೆ ನೀಡಿರುವ ಸೂಚನೆ ಆಗುತ್ತದೆ. ಅಷ್ಟೆಲ್ಲ ಹರಡಿಕೊಂಡಿದ್ದರೂ ಮತೀಯ ದಬ್ಬಾಳಿಕೆಯ, ಶೋಷಣೆಯ ಕೇಂದ್ರಗಳಾಗಲಿಲ್ಲ ಆ ಮಠಗಳು ಎಂಬುದು ಸ್ಪಷ್ಟವಾಗುತ್ತದೆ.

ರಿಕ್ಟರನು ಈ ಮಠಗಳ ಪಾತ್ರದ ಬಗ್ಗೆ ತನ್ನ ಅಭಿಪ್ರಾಯವನ್ನೂ ಹೀಗೆ ಮಂಡಿಸಿದ್ದಾನೆ:

'These 57 Mattas or Jangamas are religious institutions originated and endowed by coorg Rajas ..... evidently of greater importance to the shivachara priests who desire an easy living from the rich endowments than of any practical use for the Coorg people amongst whom this sect inspite of its royal patronage never struck any root.'[18]

ಅಲ್ಲದೆ ಈ ೫೭ ಮಠಗಳಿಗೆ ೩೧೫೫೭ ಭಟ್ಟಿ ದತ್ತಿ ನೀಡಲಾಗಿತ್ತು. ಅವುಗಳಲ್ಲಿ ಮುಖ್ಯವಾಗಿ ಬಸವನ ಹಳ್ಳಿ ಮಠಕ್ಕೆ ೪೧೦೫ ಭಟ್ಟಿ, ಅಬ್ಬಿ ಮಠಕ್ಕೆ ೪೦೦೫ ಭಟ್ಟಿ, ಮಾದಾಪುರ ಮಠಕ್ಕೆ ೨೬೪೩ ಭಟ್ಟಿ, ಸಿದ್ದಾಪುರ ಮಠಕ್ಕೆ ೨೩೭೦.೩೩ ಭಟ್ಟಿ, ಅಮ್ಮತ್ತಿನಾಡಿನ ತಾನಡಿ ಮಠಕ್ಕೆ ೧೧೮೨ ಭಟ್ಟಿ, ಚಡದರಹಳ್ಳ ಮಠಕ್ಕೆ ೧೪೩೦ ಭಟ್ಟಿ, ಜಪದ ಕಟ್ಟೆ ಮಠಕ್ಕೆ ೧೧೮೩ ಭಟ್ಟಿ, ತೊರೆನೂರು ಮಠಕ್ಕೆ ೧೧೦೦ ಭಟ್ಟಿ ಸೇರಿದಂತೆ ಒಟ್ಟು ೧೮೩೩೦ ಭಟ್ಟಿ ಭೂಮಿಯನ್ನು ಶ್ರೀಮಂತ ಬಳುವಳಿಯಾಗಿ ನೀಡಲಾಗಿತ್ತು. ಎಂದು ರಿಕ್ಟರನು ತನ್ನ ಟೀಕೆಯನ್ನು ಮುಂದುವರಿಸಿ ಹೇಳಿದ್ದಾನೆ. (ನೂರು ಭಟ್ಟಿ ಭೂಮಿ ಎಂದರೆ ಸುಮಾರು ಮೂರುವರೆ ಎಕರೆ. ಒಂದು ಭಟ್ಟಿ ಭೂಮಿ ಎಂದರೆ ಸುಮಾರು ೮೦ ಸೇರು ಭತ್ತ ಬೆಳೆವ ಭೂಮಿ). ರಿಕ್ಟರನ ಈ ಹೇಳಿಕೆಯಲ್ಲಿ ೫೭ ಮಠಗಳು ಹಾಲೇರಿ ಅರಸರಿಂದ ಸ್ಥಾಪಿತಗೊಂಡವು ಎಂದಿದೆ. ಅದರಿಂದ ಉಳಿದ ೫೩ ಮಠಗಳು ಮೊದಲೇ ವಾಸ್ತವ್ಯದಲ್ಲಿದ್ದುವೇ ಎಂಬುದು ಸ್ಪಷ್ಟವಾಗುವುದಿಲ್ಲ. ೫೭ ಮಠಗಳು ಒಟ್ಟಾರೆ ರಿಕ್ಟರನು ಗಮನಿಸಿದಾಗ ಜೀವಂತವಾಗಿದ್ದುವು ಎನ್ನಬಹುದು. ಕ್ರಿ.ಶ. ೧೮೭೦ರಲ್ಲಿ ಈ ಮಠಗಳ ಬಗ್ಗೆ ಅವನು ಗ್ರಹಿಸಿದಷ್ಟು ಮಾತ್ರ ಬರೆದಿದ್ದಾನೆ. ಅವನು ಮಾಡಿರುವ ಟೀಕೆ ಪೂರ್ವಗ್ರಹ, ಪಾಕ್ಷಿಕ ಹಾಗು ಶೋಧನೆ ರಹಿತ ಟೀಕೆಗಳ ಕಲಸುಮೇಲೋಗರ ಎಂಬುದು ಮುಂದಿನ ವಿವೇಚನೆಯಿಂದ ತಿಳಿದುಕೊಳ್ಳಬಹುದು.

ರಿಕ್ಟರ್ ಒಬ್ಬ ಸರ್ಕಾರಿ ನೌಕರನಾಗಿದ್ದ. ಸರ್ಕಾರಿ ದಾಖಲೆಯಾಗಿ ಗ್ಯಾಸೆಟಿಯರ್ ಬರೆಯಬೇಕಿದ್ದ ಹೊಣೆ ಅವನದಾಗಿತ್ತು. ಆದರೆ ಅವನು ಕೊಡಗಿನವರ ಕುರಿತಾಗಿ ಒಬ್ಬ ಪಾದ್ರಿಯಂತೆ ಗ್ಯಾಸೆಟಿಯರ್‌ನಲ್ಲಿ ಬರೆದದ್ದು ಹೀಗೆ:[19]

'When coorgs once embraced the truth of christianity and placed themselves under the regenerating influence of the gospel they will become a noble race' - ಕೊಡಗಿನ ಜನತೆ ಒಮ್ಮೆಗೆ ಕ್ರೈಸ್ತಮತವನ್ನು ಅವಲಂಬಿಸಿದರೆ, ಅದರ ಸಂದೇಶದ ಪ್ರಭಾವಕ್ಕೆ ಈಡಾದರೆ ಅವರು ಶ್ರೇಷ್ಠ ಜನಾಂಗವಾಗುತ್ತಾರೆ.

ಇಂತಹ ಮತಾಂತರ ಮನೋಧರ್ಮದ ರಿಕ್ಟರನ ಮಾತನ್ನು, ರಾಜಪೋಷಿತವಾದರೂ ಶಿವಾಚಾರದ ಧರ್ಮವು ಕೊಡಗಿನ ಜನರಲ್ಲಿ (ಕೊಡವ) ಬೇರುಗಳನ್ನು ಹೊಂದಲಿಲ್ಲ ಎಂಬ ಅವನದೇ ಮಾತಿಗೆ ಹೋಲಿಸಿ ನೋಡಬೇಕು. ಅದರಿಂದ ವೀರಶೈವ ಮಠಗಳು ಮಾತಿನಲ್ಲಿಯಾಗಲಿ, ಕೃತಿಯಲ್ಲಿಯಾಗಲಿ ಹಿಂದೂಧರ್ಮದ ಕಕ್ಷೆಯೊಳಗಿದ್ದೂ ತಮ್ಮ ಮತದ ಕಕ್ಷೆಗೇ ಜನತೆ ಬರಲೆಂದು ಬಲಾತ್ಕಾರದ ಅಥವಾ ಆಮಿಷದ ಮತಾಂತರದ ಮುಳ್ಳಾಗಿ ಕಾಡಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಈಸಾಯಿ ಹಾಗು ಮುಸ್ಲಿಂ ಧರ್ಮಕ್ಕೆ ಮತಾಂತರಿಸುವ ಹುನ್ನಾರಕ್ಕೆ ಸಾಂಸ್ಕೃತಿಕ ಒಡ್ಡುಗಳನ್ನು ನಿರ್ಮಿಸಿ ವೀರಶೈವ ಮಠಗಳು ಹಿಂದೂ ಧರ್ಮಕ್ಕೆ ಪೂರಕ ಬೆಂಬಲವನ್ನು ನೀಡಿದುವೆನ್ನಬೇಕು. ಜನತೆಯ ಇಚ್ಛೆ. ಒಲವುಗಳಿಗನುಗುಣ ನಡೆ ಆ ಮಠಗಳಲ್ಲಿ ಸಾಮರಸ್ಯವಾಗಿತ್ತೇ ವಿನಾ ಧರ್ಮದ ಹೇರಿಕೆ ಅನ್ಯರ ಮೇಲಲ್ಲ. ಅವು ಪಡೆದಂತಹ ದಾನಗಳು ಬಲವಂತವಾಗಿ,

ಹಕ್ಕಾಗಿ ಕೇಳಿ ಪಡೆದಂತಹವಲ್ಲ. ವೀರಶೈವ ಧರ್ಮದ ಸಾಂಸ್ಕೃತಿಕ ನಡಾವಳಿಗಳಾಗಿದ್ದ ದಾಸೋಹ, ಗೋಪೋಷಣೆ, ಚಾತುರ್ಮಾಸ್ಯ ಶಿವರಾಧನೆ ಬಿನ್ನಹ, ಬಿಡುಗಡೆ ಆಚಾರ ನಿರ್ವಹಣೆ, ಕೃಷಿಕಾರ್ಯ ನಿರ್ವಹಣೆ, ವಸತಿ ನೀಡಿಕೆ, ಅಧ್ಯಯನ, ಅಧ್ಯಾಪನ, ಧಾರ್ಮಿಕ ಸಂಸ್ಕಾರದ ನೀಡಿಕೆ, ದಾನ ಇತ್ಯಾದಿಗಳಲ್ಲಿ ಅವು ನಿರತವಾಗಿದ್ದವು. ರಾಜ ಕೊಡಲುಬಂದ, ಕೊಟ್ಟದ್ದನ್ನೂ ನಿರ್ಲಿಪ್ತವಾಗಿ ಬೇಡ ಅಂದ ಮಠದ ಗುರುಗಳೂ ಇದ್ದರು. ವೀರಶೈವ ಧರ್ಮವನ್ನು ಅವರು ಹೇರದೆ, ಅದರ ಮಂಗಳಕರ ಪ್ರೇರಣೆಗಳಿಗೆ ಜನತೆಯ ವೀರಶೈವರಾಗದಿದ್ದರೂ ಸ್ಪಂದಿಸುವಂತೆ ಪ್ರಭಾವಿಸಿದ್ದರು.

ಇವುಗಳಲ್ಲದೆ ಸಾಹಿತ್ಯಿಕವಾಗಿ ಓಲೆ ಪ್ರತಿಸಂಗ್ರಹ, ತಯಾರಿಕೆ, ಹಾಗೂ ಕೃತಿ ರಚನೆ ಹಾಗು ಅವುಗಳ ವಿವೇಚನೆಯ ಕಾರ್ಯವೂ ಮಾದಾಪುರ ಮಠ, ಅಬ್ಬಿಮಠ ಮುಂತಾದ ಕಡೆ ನಡೆಯುತ್ತಿತ್ತು. ಇದಕ್ಕೆ ತಾರ್ಕಣೆ ಆಗಿ ನಾಗವರ್ಮನ ಛಂದೋಂಬುಧಿಯ 'L' ಓಲೆ ಪ್ರತಿ ಮಾದಾಪುರ ಮಠದಲ್ಲಿ, 'O' ಓಲೆಯ ಪ್ರತಿ ಮಡಿಕೇರಿಯಲ್ಲಿ ಲಭ್ಯವಾಗಿದೆ. ಈಚೆಗಿನ ಶೋಧನೆಯಲ್ಲಿ ಇದು ತಿಳಿದುಬಂದ ವಿಷಯವಾಗಿದೆ.[20] ಇದರ ಜೊತೆಗೆ ಪಾಲ್ಬರೆಯ ಶಿವದೇವಾಲಯದ (ಸೋಮೇಶ್ವರ !) ಭಿತ್ತಿಯ ಮೇಲೆ ೧೭ನೆಯ ಶತಮಾನದ ಶಾಸನವಾಗಿ ನಾಲ್ಕು ಸಾಲುಗಳ ಶಾಸನಾಕ್ಷರಗಳ ಬಿಡಾವಣೆ ಆಗಿದೆ.

ಶಾಸನರೀತ್ಯಾ : ಪಡುಬರ ಜೋಗಿ ಸಿಲಾಗೋಲಾ
ಪಡುವರಾಯಾ ಸಿಲಾ
ಪಡುಬರ ಜೋಗಿ ನಮಃ ॥

ಕನ್ನಡದ 'ಏಳೆ' ಛಂದಸ್ಸಿನ ರೀತ್ಯಾ ಇದನ್ನು ಹೀಗೆ ನಿರೂಪಿಸಬಹುದು :

ಪಡುಬರ ಜೋ । ಗಿ ಸಿಲಾಗೊಲಾ ।
ಪಡುವರಾ । ಯಾಸಿಲಾ ।
ಪಡುಬರ । ಜೋಗಿ । ನಮಃ

ಈ ಪದ್ಯ ನಾಗವರ್ಮನ 'ಛಂದೋಂಬುಧಿ'ಯಲ್ಲಿನ 'ಏಳೆ' ಛಂದಸ್ಸಿಗೆ ಸರಿಹೋಗುತ್ತದೆ.[21] ಅಂಶಗಣದ ಬಂಧವಾದ ಏಳೆಯ ಹೆಚ್ಚಿನ ಎಲ್ಲ ಲಕ್ಷಣಗಳು ಇಲ್ಲಿಗೆ ಸರಿಹೋದರೂ, ಕೊನೆಯಲ್ಲಿ 'ನಮಃ' ಎಂಬ ಪದ ಯಾವುದೇ ಅಂಶಗಣಕ್ಕೆ ಸರಿಹೊಂದದು. ಈ ಲೋಪ ಬಿಟ್ಟರೆ ಶಾಸನಪದ್ಯ ಶುದ್ಧ ಏಳೆ ಛಂದಸ್ಸಿನಲ್ಲಿದೆ.[22] ೧೬ನೇ ಶತಮಾನದ ಪತ್ರವೊಂದರಲ್ಲಿ ಶ್ರೀಮನ್ನಿಡುಮಾಮಿಡಿ ಮಣಿವಿಚಿತ ಕನಕ ಸಿಂಹಾಸನರೂಢರಾದ ಶ್ರೀ ಪಟ್ಟದ ಮರಿಕರಿಬಸವ ಸ್ವಾಮಿಗಳ ಸನ್ನಿಧಾನಕ್ಕೆಂದು ಬರೆದ ಸಾಲುಗಳಲ್ಲಿ ಹೀಗಿದೆ[23] : 'ವೀರಶೈವ ಸಂಸ್ಥಾಪನರಾದ' 'ಷಣ್ಮತ ಸ್ಥಾಪನಾಚಾರ್ಯ' 'ಯೋಗಿ, ಜೋಗಿ ಶ್ರವಣ, ಸಂನ್ಯಾಸಿ, ಕಾಳಾಮುಖಿ, ಪಾಶುಪತ ಮುಖ್ಯವಾದ ಷಡ್ದರುಶನಕ ಗೋಚರಿಸಿ ಬರುವಂತ ಧರ್ಮ ಸಿಂಹಾಸನಾಧ್ಯಕ್ಷ.'

ಈ ಎರಡೂ ಸಂದರ್ಭಗಳನ್ನು ಹೋಲಿಸಿದರೆ 'ಪಡುಬರ ಜೋಗಿ'ಯ 'ಸಿಲಾಗೊಲಾ'ವು, ಶಿವಯೋಗಿಯ ಮಠವೊಂದು ಶಿವಾಲಯಕ್ಕೆ ಹೊಂದಿಕೊಂಡಿದ್ದ ಸಂದರ್ಭವನ್ನು ಸ್ಫುರಿಸುತ್ತದೆ.'ಪಡುಬರ' ಎಂಬ ಶಬ್ದ ಶಿವನಿಗೆ ಸಂಬಂಧಿಸಿದುದಾಗಿದೆ.[24] ಪಾಲ್ಬರೆಯಲ್ಲಿ ಒಂದು ವೀರಶೈವ ಮಠವಿದ್ದು ಅಲ್ಲಿ ಛಂದೋಕೃತಿಗಳ ಅಧ್ಯಯನ ಹಾಗು ಓಲೆ ಪ್ರತಿಗಳ ಸಂಗ್ರಹವಿದ್ದ ಬಗ್ಗೆ ಸೂಚನೆ ನೀಡುತ್ತದೆ. ಅಂದರೆ ೧೦ನೆಯ ಶತಮಾನದ 'ಛಂದೋಂಬುಧಿ'ಯ ಪರಂಪರೆಯ ಪ್ರತಿಕಾರನೊಬ್ಬ, ೧೭ನೆಯ ಶತಮಾನದಲ್ಲಿ ಈ ಮಠದಲ್ಲಿದ್ದು ಮಾಡಿದ ಸಾಹಿತ್ಯ ಕಾಯಕವನ್ನು ಇಲ್ಲಿನ ಶಾಸನ ಸೂಚಿಸುವಂತಿದೆ.[25] ಈ ಛಂದೋಂಬುಧಿಯ ಓಲೆ ಪ್ರತಿಗಳನ್ನು ಸಿರಿಬಾಯಿ ದೊಡ್ಡ ವೀರಪ್ಪನ ಕಾರಣದಿಂದಾಗಿ ರಕ್ಷಣೆಯ ದೃಷ್ಟಿಯಿಂದ ಮಡಿಕೇರಿಗೆ ಕ್ರಿ.ಶ. ೧೬೯೦ರ ಸುಮಾರಿನಲ್ಲಿ ಸಾಗಿಸುವಾಗ, ಭಿತ್ತಿಯ ಮೇಲೆ ಶಾಸನವನ್ನು ಕಂಡರಿಸಿರಬೇಕು.[26] 'ಛಂದೋಂಬುಧಿ'ಯ 'O' ಮತ್ತು 'L' ಪ್ರತಿಗಳಲ್ಲಿ ದೊಡ್ಡವೀರರಾಜೇಂದ್ರ ಒಡೆಯನ ಕಾಲದಲ್ಲಿ 'L' ಪ್ರತಿಯನ್ನು ಮಾದಾಪುರ ಮಠದ ಚರಮೂರ್ತಿ ಸಿದ್ಧಲಿಂಗಪ್ಪನವರು ಮಠದ ಓಲೆ ಪ್ರತಿಸಂಗ್ರಹಕ್ಕೆ ಸೇರಿಸಿರಬೇಕು ಅಥವಾ ಪ್ರತಿ ಮಾಡಿಸಿರಬೇಕು. ಈ ದೃಷ್ಟಿಯಿಂದ ಕೊಡಗಿನ ಮಠಗಳು ಚಂಗಾಳ್ವರ ಕಾಲದಿಂದಲೂ ಓಲೆ ಪ್ರತಿ ಭಂಡಾರವನ್ನು ನಿರ್ವಹಿಸಿ ಪ್ರಾಚೀನ ಸಾಹಿತ್ಯದ ಅಮೂಲ್ಯ ಓಲೆ ಪ್ರತಿಗಳನ್ನು, ಕೃತಿಗಳನ್ನು ಹಾಲೇರಿ ಅರಸರ ಕಾಲದವರೆಗೂ ರಕ್ಷಿಸಿ, ಅವರ ಕಾಲದ ಮಠಗಳ ಹೊಣೆಗೆ ವರ್ಗಾಯಿಸಿದ ಕಾರ್ಯ ಮಾಡಿದುವೆನ್ನಬೇಕು. ಇಂತಹ ಸಾಹಿತ್ಯಿಕ, ಸಾಂಸ್ಕೃತಿಕ ನಡಾವಳಿಯ ಬಗ್ಗೆ 'ಮೂಢನಂಬಿಕೆ' ಎಂಬ ಕನ್ನಡಿಯಲ್ಲಿಯೆ ಮಠಗಳ ಕಾರ್ಯ ಎಂಬ ಹಿನ್ನೆಲೆಯಲ್ಲಿ ನೋಡಿದ ರಿಕ್ಟರಿನಿಗೆ ಈ ಸಂಸ್ಕೃತಿಯ ಒಳನೋಟವನ್ನು ಗ್ರಹಿಸುವುದು ಕಷ್ಟವೇ ಆಗಿತ್ತು. ಅಂತಾಗಿ ಅವನ ಅಸಮಂಜಸ ಟೀಕೆ.

ಇನ್ನು ಕೊಡಗಿನ ಜನಜೀವನಕ್ಕೆ ಸ್ಪಂದಿಸಿ ಹೊಸ ವಿನಿಮಯ ಆಯಾಮಗಳನ್ನು ತಂದುಕೊಟ್ಟವು ಈ ಮಠಗಳೇ. ಸ್ಥಗಿತವಾಗದಂತೆ ಪರಂಪರೆಯನ್ನು ಚಲಿಸುವಂತೆ ಮಾಡಿದ ಕಾರ್ಯವೂ ಇವುಗಳ ಪಾಲಿಗಿದೆ. ಆ ಕಾಲಕ್ಕೆ ಆಂಗ್ಲರ ಕಾಲದ

(ಹೇರಿದ) ಶಿಕ್ಷಣವಿರಲಿಲ್ಲ. ಅದೊಂದು ಮಿತಿ ಇರಬಹುದು. ಆದರೆ ಓದಿನ ವ್ಯವಸ್ಥೆ ಇರಲಿಲ್ಲವೆಂದಲ್ಲ. ಹಾಲೇರಿ ಅರಸರು ಮಠಗಳನ್ನು ನಾಡ ನಾಡುಗಳಲ್ಲಿ ಕೊಂಬುಕೋವುಗಳಲ್ಲಿ ನಿರ್ಮಿಸಿದ್ದು ಕೇವಲ ಧರ್ಮಪ್ರಸಾರಕ್ಕಲ್ಲ. ಅಲ್ಲದೆ ೯೦ ಮೈಲು ಉದ್ದ ೪೦ ಮೈಲು ಅಗಲದ ಬೆಟ್ಟಗುಡ್ಡಗಳ ಅರಣ್ಯದ ನಾಡಿನಲ್ಲಿ ೧೦೮ ಮಠಗಳನ್ನು ನಿರ್ವಹಿಸಬೇಕಾದ ಅಗತ್ಯವೇನಿತ್ತು ? ಆ ಗುರುಮಠಗಳು ನಾಡಿನ ಮಕ್ಕಳಿಗೆ ಓದುಬರಹ ಕಲಿಸುವ 'ಜಂಗಮ ಐಗಳ(ಅಯ್ಯೋರ)ಮಠ'ಗಳೂ ಆಗಿದ್ದುವು. ಹಾಲೇರಿ ಮೊದಲ ಅರಸನೆ ಓದು ಬರಹ ಕಲಿಸುವ ಕೈಮಠದ ಐಯ್ಯನಾಗಿದ್ದುದು ಹಾಗು ಅಲ್ಲಿನ ಜನರೂ ಮಕ್ಕಳಿಗೆ ಕಲಿಸಿದುದು, ಅರಸ-ಜನತೆಯ ಆಸಕ್ತಿಯೆ. ಇದರ ಪ್ರಭಾವದ ಕಾರಣವೇ ಒಂದು ಕಾಲಕ್ಕೆ ಕೊಡಗಿನ ಕೈಮಡ=ಕೈಮಠ (ಹಿರಿಯರ ಸ್ಮಾರಕ ಕಟ್ಟಡ)ಗಳಲ್ಲಿ ಓದು ಬರಹ ಕಲಿಸುವ ಪದ್ಧತಿ ಇತ್ತು. ಬೇತು ಗ್ರಾಮದ ಕಲ್ಯಾಟಜ್ಜಪ್ಪನ ಕೈಮಠದಲ್ಲಿ ಇಂತಹ ವ್ಯವಸ್ಥೆ ಇದ್ದುದು ಒಂದು ಸ್ಪಷ್ಟ ಉದಾಹರಣೆ. ಇಲ್ಲವಾಗಿದ್ದರೆ ಕೃಷಿಯೇ ಮುಖ್ಯ ಕಸುಬಾಗಿದ್ದವರ ಮಕ್ಕಳಿಗೆ ಸಾಮಾನ್ಯ ಕಲಿಕೆಗಾಗಿಯಾದರೂ ಅಷ್ಟೊಂದು ಮಠಗಳು ಮೂರೇ ತಾಲ್ಲೂಕಿನ ಪುಟ್ಟ ವಿಸ್ತಾರದ ಪುಟ್ಟ ಜಿಲ್ಲೆಗೆ ಅಗತ್ಯವೇ ಇರಲಿಲ್ಲ. ಕೊಡಗಿನಲ್ಲಿ ಇಂದು ವಿದ್ಯಾವಂತ ಸಂಖ್ಯೆ ಗರಿಷ್ಠಮಟ್ಟದಲ್ಲಿರಲು ಕೇವಲ ಆಂಗ್ಲರು ಕಾರಣರಲ್ಲ. ಮೊದಲಿನಿಂದ ಕಲಿಯುತ್ತಿದ್ದ ಪರಂಪರೆಯೂ ಅಂತಹ ಮಾನಸಿಕ ಒಲವಿಗೆ ಕಾರಣ ಎಂಬುದನ್ನೂ ಮರೆಯುವಂತಿಲ್ಲ. ಕೇರಳದಿಂದ ಕೊಡಗಿಗೆ ಬಂದ ದೇವರುಗಳ ಕುರಿತ ಜನಪದ ಹಾಡುಗಳಲ್ಲಿ ಇಲ್ಲಿ ನೆಲೆಸುವಲ್ಲಿ 'ಪಟ್ಟಮ ಮಠ'(ಇಲ್ಲಿ ಕೇವಲ ಬ್ರಾಹ್ಮಣನ ಮನೆ ಎಂದರ್ಥವಲ್ಲ. ಓದು ಬರಹ ತಿಳಿಸುವ ನೆಲೆ ಇಂದೂ ಅರಿವಿಗೆ ತಂದುಕೊಳ್ಳುವುದು ಉಚಿತ)ವೂ ಸೇರಿದಾಗ ಎಲ್ಲ ಕೂಡಿ ಬರುತ್ತದೆ ಎಂಬ ಅಂಶವನ್ನು ಧ್ವನಿಗೋಳಿಸಲಾಗಿದೆ.[27] (ಕಾಲಾಂತರದಲ್ಲಿ ಈ ಎಲ್ಲ ಮಠಗಳಿಗೆ ಮೌಲ್ಯ ಕಡಿಮೆಯಾಗುತ್ತ ಬಂದಿದ್ದರೆ ಅದಕ್ಕೆ ಐತಿಹಾಸಿಕ ಹಾಗು ರಾಜಕೀಯ ಕಾರಣಗಳೂ ಇವೆ.) ಕೊಡಗಿನ ಮನೆತನಗಳ ಮೇಲೆ ಮಠಗಳು ಬೀರಿರುವ ಪರಿಣಾಮ ಗಣನೀಯ. ಸದ್ಬೋಧೆಗಾಗಿ, ನೆಮ್ಮದಿಗಾಗಿ, ಹುಟ್ಟು, ಸಾವು, ಸಮಾಧಿ ಸಂಸ್ಕಾರಗಳಲ್ಲಿ, ಹಬ್ಬ ಉತ್ಸವಗಳಲ್ಲಿ ದಲಿತರ ಕುರಿತ ಕಾಳಜಿಯಲ್ಲಿ, ಮುಖ್ಯವಾಗಿ ಕನ್ನಡತನವನ್ನು ಉಳಿಸುವಲ್ಲಿ, ಸಾಂಸ್ಕೃತಿಕ ಪಾಲುಗಾರಿಕೆಗಳಲ್ಲಿ ಇವುಗಳ ಕೊಡುಗೆ ಬಹು ಗಮನಾರ್ಹ. ತಮ್ಮದೇ ಧರ್ಮದ ಅರಸರು ನಾಡಿನಲ್ಲಿ ಆಳುತ್ತಿದ್ದರೂ, ಈ ಮಠಗಳು ಮತೀಯ ನಿಷ್ಠೆಯನ್ನೇ ಪಾಲಿಸಬೇಕೆಂದು ಮತೀಯ ದುರಾಗ್ರಹವನ್ನಾಗಲಿ, ಒತ್ತಡವನ್ನಾಗಲಿ ಹಾಕಲಿಲ್ಲ. ಬದಲು ವಿನಿಮಯದ ಧಾರ್ಮಿಕ ಸಾಮರಸ್ಯದ ಸಂಗತಿಗಳನ್ನೇ ಮಠಗಳು ಉತ್ತೇಜಿಸಿದುವು. ಇದಕ್ಕೆ ಸಾಕ್ಷಿಯಾಗಿ ರಾಜರು ಶೃಂಗೇರಿ ಜಗದ್ಗುರು ಪೀಠಕ್ಕೆ ಬೆಂಗಳೂರಿನ ಮುಂಜಿ ಸೋಮೇಶ್ವರನಿಗೆ, ಧರ್ಮಸ್ಥಳದ ಮಂಜುನಾಥನಿಗೆ, ಸ್ಥಳೀಯ ದೇಗುಲಗಳಿಗೆ ದಾನ ದತ್ತಿ ನೀಡಿದ್ದು; ಮಾದಾಪುರ ಮಠ, ಅಬ್ಬಿಮಠ, ನೂರಂಬಾಡಿ ಮಠ, ರಾಜರ ಗದ್ದುಗೆ, ಓಂಕಾರೇಶ್ವರ ದೇಗುಲಗಳ ವಾಸ್ತುಗಳು ಇಂಡೋ-ಇಸ್ಲಾಮಿಕ್ ಶೈಲಿಯವಾಗಿರುವುದು; ವೀರರಾಜಪೇಟೆಯಲ್ಲಿ ಚರ್ಚ್ ಕಟ್ಟಿಸಿ, ಭೂಮಿದಾನ ನೀಡಿದ್ದು, ಆಚಾರ ವಿಧಿಗಳಿಗೆ ಗೋವೆಯ ಪಾದ್ರಿಯನ್ನು ಕರೆಸಿ ನೇಮಿಸಿದ್ದು, ಟೀಪುವಿನಿಂದ ಮತಾಂತರಗೊಂಡು ಮತ್ತೆ ಕೊಡಗಿಗೆ ಬಂದ ಕೊಡಗಿನ ಜಮ್ಮಮಾಪಿಳ್ಳೆ ಜನಕ್ಕೆ ಜಮ್ಮ ಜಹಗೀರು ನೀಡಿದ್ದು; ಅವರು ಆಡುತ್ತಿದ್ದ 'ದಪ್ಪು ಆಟ್' ಜನಪದ ಕಲೆಗೆ ಮಠಗಳಿಂದ ಉತ್ತೇಜನ ದೊರೆತದ್ದು ಇತ್ಯಾದಿಗಳಿವೆ. ಈ ದೃಷ್ಟಿಯಿಂದ ಸಾಂಪ್ರದಾಯಿಕ, ಐತಿಹಾಸಿಕ ಹಾಗು ಆಧುನಿಕ ಪಾತ್ರಗಳು ಕೊಡಗಿನ ಮಠಗಳಲ್ಲಿ ಅನ್ವಯವಾಗಿದ್ದು, ಅವುಗಳು ಕೊಡಗಿನ ಜನಸಂಸ್ಕೃತಿಯಲ್ಲಿ ಬೇರು ಬಿಟ್ಟಿರುವ ಬಗೆಗಳನ್ನು ಹಾಗು ಮುಖ್ಯವೆನಿಸುವ ಕೆಲವು ಮಠಗಳ ಸಂಕ್ಷಿಪ್ತ ವಿವರಗಳನ್ನು ತಿಳಿಯುವುದು ಅಗತ್ಯ.

ಪರಿಣಾಮಿ ನೆಲೆ

ಕೊಡಗಿನಲ್ಲಿ ಗುರಸ್ಥಲ ಪೀಠ (ಸಿಂಹಾಸನ)ಕ್ಕೆ ಸಂಬಂಧಿಸಿದಂತೆ ಬಾಳೆಹೊನ್ನೂರು(ರಂಭಾಪುರಿ), ಶ್ರೀಶೈಲ, ಉಜ್ಜಯಿನಿ, ಶ್ರೀಶೈಲ ನಿಡುಮಾಮಿಡಿ ಹಾಗು ಸುತ್ತೂರು ಸಂಪ್ರದಾಯದ ಶಾಖಾಮಠಗಳು ಇವೆ. ವಿರಕ್ತ ಸಂಪ್ರದಾಯದ ಅಲ್ಲಮಪ್ರಭು ಶಿಷ್ಯ ಪರಂಪರೆಯ ಮುರುಘಾ, ಚೀಲಾಳ, ಲೀಲಾಖ್ಯ ಸಮಯದ ಮಠಗಳೂ ಇವೆ. ಈಚೆಗೆ ಚೀಲಾಳ ಸಮಯದ ಒಂದು ಮಠವನ್ನು ಶ್ರೀ ಸಿದ್ಧಗಂಗಾ ಕ್ಷೇತ್ರದ ನಿರ್ವಹಣೆಗೆ ಬಿಟ್ಟುಕೊಡಲಾಗಿರುವುದು ತಿಳಿದುಬಂದಿದೆ. ಈ ಎರಡೂ ಸಂಪ್ರದಾಯದಲ್ಲಿ ಸಂಸಾರಿ ಮಠಗಳಾಗಿ ಪರಿವರ್ತನೆಗೊಂಡಿರುವ ಮಠಗಳೂ ಇಂದಿವೆ. (ಬಹುಶಃ ವಾಶೀಕೃತ ಮಠಗಳ ಮೂಲದವಾಗಿ ಅವುಗಳಲ್ಲಿ ಕೆಲವು ಇದ್ದಿರಬೇಕು.) ಶರಣಸ್ಥಲದ ಮಠಗಳಾಗಲಿ, ಉತ್ತರ ಕರ್ನಾಟಕದ ಹಿರೇಮಠಗಳಂತಹ ಮಠಗಳಾಗಲಿ ಇಲ್ಲಿ ಕಾಣಬಂದಿಲ್ಲ. ಸದ್ಯಕ್ಕೆ ೧೦೮ ಮಠಗಳಲ್ಲಿ ಲಭ್ಯವಾಗಿರುವ ೧೦೦ ಮಠಗಳ ಹೆಸರಿನಲ್ಲಿ ಆ ಎರಡು ಬಗೆಗಳಿಲ್ಲ. ಉಳಿದ ೮ ಮಠಗಳ ವಿವರ ದೊರಕಿದಾಗ ಆ ಬಗೆಗೆ ಹೇಳಬಹುದೆನಿಸುತ್ತದೆ.

ಲಿಂಗಾಯಿತರ ಕಾಲದಲ್ಲಿ ಕೊಡಗಿನ ೫೭ ಲಿಂಗಾಯಿತ ಮಠಗಳ ಗುರುಗಳ ನಿರ್ದೇಶನದ ಕೆಳಗೆ ಕೊಡವರು ಬರಲಿಲ್ಲ. ತಮ್ಮ ಸ್ವತಂತ್ರತೆ ಕಾಪಾಡಿಕೊಂಡು ಬಂದರು. ವೈದಿಕ ದೇವತೆಗಳ ಬಗ್ಗೆ ಜನರಿಗೆ ನಂಬಿಕೆ ಇದೆ. ಹೀಗೆ ಯಾವ ಮಠ ಹಾಗು

ಗುರುಗಳ ಕೆಳಗೆ ಇವರು ಬರಲಿಲ್ಲ. ಅಂದರೆ ಈ ಪದ್ಧತಿ ಹುಟ್ಟುವ ಮುನ್ನ ವೈದಿಕ ಕ್ಷತ್ರಿಯ ಪದ್ಧತಿ ಇವರಲ್ಲಿ ಇರುವಂತೆ ತೋರುತ್ತದೆ[28] ಎಂಬ ಅಭಿಪ್ರಾಯವಿದೆ. ಆದರೆ ಕೊಡವರಲ್ಲಿ ವರ್ಣಾಶ್ರಮದ ಅನುಸರಣೆಯಿಲ್ಲ. ಬದಲು ವೀರಶೈವ ತತ್ತ್ವದಂತೆ ಅವರು ಅತಿ ವರ್ಣಾಶ್ರಮಿಗಳು. ಇವರ 'ಗುರುಕಾರೊಣ'ನೆ ಇವರಿಗೆ ಗುರು. ಅವನ ಸ್ಮಾರಕ ನೆಲೆಯ 'ಕೈಮಡ' (=ಕೈಮಠ=ಸಣ್ಣಮಠ). ಒಂದು ರೀತಿಯಲ್ಲಿ ಕೆಲವೆಡೆ ತೋರುಗದ್ದುಗೆಯೂ ಹೌದು. ವೀರಶೈವರಲ್ಲಿಯೂ ಪೀಠದ ಮೂಲಗುರುವೆ ಮುಖ್ಯಗುರು ಅಥವಾ ಮಠದ ಮೂಲ ಕರ್ತೃವೆ ಕುಲಗುರು. ಅದಾಗಿ ಕೊಡವರು ದ್ರಾವಿಡ ಮೂಲದ ಶಿವಾಚಾರ್ಯರ ಕ್ಷತ್ರಿಯ ಕರ್ಮಿಗಳು. ಹಾಲೇರಿ ಮೊದಲ ಅರಸನೂ 'ಕ್ಷಾತ್ರ ಜಂಗಮನೆ' ಇದಲ್ಲದೆ ಕೊಡವರಲ್ಲಿ ಹರಿಹರ ಭೇದವಿಲ್ಲದಿದ್ದರೂ ಮೂಲತಃ ಶಿವಾರಾಧನೆಯ ಪರಂಪರೆಯವರು. ಅವರ ಜನಪದ ಗೀತೆಗಳಲ್ಲಿ, ಕುಲದೇವತೆ ಕಾವೇರಿ, ಇಗ್ಗುತಪ್ಪನ ಆರಾಧನೆಯಲ್ಲಿ, ಜನಪದ ದೇವತೆಗಳಲ್ಲಿ ಶಿವಗಣ ದೇವತೆಗಳ ಪ್ರಭಾವವೇ ಹೆಚ್ಚು. ಕೆಳದಿ ಅರಸರಲ್ಲಿ ವಂಶವೃಕ್ಷ ಹೇಳುವ ಸಂಚಾರಿ ಜಂಗಮರು ಆಗಾಗ ಗ್ರಾಮಗಳಲ್ಲಿನ ಮನೆಗಳಿಗೆ ಹೋಗುತ್ತಿದ್ದರು.[29] ಹಾಲೇರಿ ಅರಸರೂ ಇಕ್ಕೇರಿ ಮೂಲದವರಾಗಿ ಅಂತಹ ಸಂದರ್ಭಗಳನ್ನು ಕೊಡಗಿನಲ್ಲಿಯೂ ಸಂಚಾರಿ ಜಂಗಮರ ಮೂಲಕ ನೇರ್ಪುಗೊಳಿಸಿರುವಂತಿದೆ. ಬಹುಶಃ ಇದರ ಪ್ರಭಾವ ಕೊಡವರ ಮೇಲೂ ಆಗಿದೆ. ಅಂತಾಗಿ ಅವರ ವಂಶಿಕ ಹಿರಿಯರ ಕುರಿತಾದ'ಕಾರೊಣಪಾಟ್' ಜನಪದ ಗೀತೆಯನ್ನು 'ಮನೆ ಮನೆ ಹಾಡುವ'ಲ್ಲಿ ಗ್ರಮದ ಓಣಿಓಣಿ ಮನೆಗಳಿಗೂ ಹೋಗಿ ಹಾಡುತ್ತಾರೆ. ಅವರು ಕೊಡಗಿಗೆ ಬಂದಂದಿನಿಂದಲೂ ಅವರೊಡನೆ, ಚಂಗಾಳ್ವ, ಕೊಂಗಾಳ್ವ ಹಾಗು ಹಾನುಗಲ್ಲು ಕದಂಬರ ಆಳಿದುಳಿದ ಅರಸು ವಂಶೀಕರು ಐಕ್ಯವಾಗಿ ಒಂದು ಸಮ್ಮಿಶ್ರ ಸಂಸ್ಕೃತಿ ಮೇಳೈಸಿ ಶಿವಪರವಾಗಿರುವುದನ್ನೇ ಕಾಣಬಹುದು. ಇದು ಚೋಳ ಚಂಗಾಳ್ವರ, ಹಾನುಗಲ್ಲು ಕದಂಬರ ಕಾಲದಿಂದಲೂ ಸಂಘಟನೆಯಾದ ಸ್ವರೂಪ. ಅಂತಾಗಿ ವೀರಶೈವ ಮಠ ಹಾಗು ಗುರುಗಳ ಪ್ರಭಾವ ಪರಂಪರೆಯಿಂದ ಕೊಡಗಿನ ಈ ಜನತೆಯ ಮೇಲೆ ಆಗಿದೆ.

ವೀರಶೈವ ಮಠಗಳಿಗೆ ಪ್ರಸಿದ್ಧ ಕೊಡವ ಮನೆತನಗಳು ನಡೆದುಕೊಳ್ಳುತ್ತಿದ್ದುವು. ಕೇಟೋಳಿರ, ಅಪ್ಪಾರಂಡ ಮತ್ತು ಬಿದ್ದಾಟಂಡ ಮನೆತನಗಳು ನಾಪೋಕ್ಲು ಹಳೆ ತಾಲ್ಲೂಕು ನುರಂಬಾಡಿ ಮಠಕ್ಕೆ ನಡೆದುಕೊಳ್ಳುತ್ತಿದ್ದುವು. ಹಾಲೇರಿ ಅರಸರು ತಮ್ಮ ಹೆಣ್ಣು, ಗಂಡುಗಳಿಗೆ ಕೊಡಗಿನ ಕೊಡವ ಮನೆತನಗಳಿಂದ ಗೌಡ ಹಾಗು ಬ್ರಾಹ್ಮಣ ಮನೆತನಗಳಿಂದ ಗಂಡು, ಹೆಣ್ಣುಗಳನ್ನು ಆರಿಸಿ ಲಿಂಗಧಾರಣೆ ಮಾಡಿಸಿ ವಿವಾಹ ಕಾರ್ಯ ನೆರವೇರಿಸುತ್ತಿದ್ದರು. ಇಂತಹ ವಿವಾಹ ಸಂಬಂಧಗಳಲ್ಲಿ ಕೊಡಗಿನ ಪ್ರತಿಷ್ಠಿತ ಕುಟುಂಬಗಳು ಸಂತೋಷದಿಂದ ರಾಜ ಕುಟುಂಬದವರೊಡನೆ ವಿವಾಹ ಸಂಬಂಧವನ್ನು ಮಾಡಿಕೊಂಡಂತೆ ತೋರುತ್ತದೆ.[30] ಪ್ರತಿಷ್ಠಿತ ಕುಟುಂಬಗಳಲ್ಲದೆ, ಸಾಮಾನ್ಯ ಕುಟುಂಬಗಳಲ್ಲಿನ ಸದೃಢ ಸೂಕ್ತ ಗಂಡುಗಳಿಗೆ ಶ್ರೀಗುರುಗಳಿಂದ ಲಿಂಗದೀಕ್ಷೆ ನೀಡಿಸಿ ರಾಜಕುಮಾರಿಯರನ್ನು ಮದುವೆ ಮಾಡಿಕೊಟ್ಟವರು ಮುದ್ದುರಾಜ ಮತ್ತು ಲಿಂಗರಾಜೇಂದ್ರ ಒಡೆಯ.[30-ಅ] ಅಂದರೆ ಸಾಮಾನ್ಯ ಬದುಕಿನ ವ್ಯಕ್ತಿಗಳಲ್ಲಿ ಅರ್ಹತೆ ಇದ್ದಾಗ ಮಾನಿಸುವ ಹಾಗು ಅವರಲ್ಲಿ ವಿಶ್ವಾಸ ತುಂಬುವ ರಾಜರ ಕಾರ್ಯಗಳಿಗೆ ಮಠದ ಗುರುಗಳ ಸಕ್ರಿಯಾವಂತಿಕೆ ಇರುತ್ತಿದ್ದ ಉದಾಹರಣೆಗಳಿವಾಗಿವೆ. ಇನ್ನೂ ಗಮನಾರ್ಹ ವಿಷಯವೆಂದರೆ ಕೊಡವ ಬಿದ್ದಾಟಂಡ ಮನೆಯ ಹೆಣ್ಣು ಮದೆನಾಡಿನ ಓಣಿಪುರ ಮಠಕ್ಕೆ ಹಾಗು ಮೂಡೇರ ಮನೆಯ ಹೆಣ್ಣು ನಾಪೋಕ್ಲು ಹಳೆತಾಲ್ಲೂಕು ನೂರಂಬಾಡಿ ಮಠಕ್ಕೆ ಲಿಂಗವಂತೆಯರಾಗಿ ಸ್ವೀಕೃತರಾಗಿ ಹೋಗಿದ್ದಾರೆ ಎನ್ನಲಾಗಿದೆ. ಇಂದು ಇವೆರಡೂ ಮಠಗಳೂ ಸಂಸಾರಿ ಮಠಗಳಿಂತಿವೆ. ಆಚಾರಗಳನ್ನು ನಿರ್ವಹಿಸುತ್ತಿವೆ.

ಕೊಡಗಿನ ಜನ ಆರಾಧಿಸುವ ಶಿವಪರ ಹಾಗು ಶಿವಗುಣ ದೇವತೆಗಳಲ್ಲಿ ಮುಖ್ಯವಾಗಿ ಈಶ್ವರ ಇಗುತಪ್ಪ, ಭಗಂಡೇಶ್ವರ, ಅಗಸ್ತ್ಯೇಶ್ವರ, ರಾಮೇಶ್ವರ, ಉಮಾಮಹೇಶ್ವರ, ಪಂಚಲಿಂಗೇಶ್ವರ, ಬಸವೇಶ್ವರ, ನಂಜುಂಡೇಶ್ವರ, ಸೋಮೇಶ್ವರ, ಗೆಜ್ಜೇಶ್ವರ, ಕನ್ನೇಶ್ವರ, ಕಲ್ಲುಗುಡ್ಡೇಶ್ವರ, ಕುಮಾರಲಿಂಗೇಶ್ವರ, ಮಹಾದೇವ, ಮಲ್ಲಿಕಾರ್ಜುನ, ಸಿದ್ದೇಶ್ವರ, ವೀರಭದ್ರ ಗಣಪತಿ, ಭೈರವ, ಕಾವೇರಮ್ಮ, ಪಾರ್ವತಿ, ಭಗವತಿ, ಭದ್ರಕಾಳಿ, ಚೌಡಮ್ಮ, ಚಾಮುಂಡಿ, ದೇವೀರಮ್ಮ, ಮಂದತಪ್ಪೆ (ಪಾರ್ವತಿ ಅಂಶ) ದಬ್ಬಚ್ಚವ್ವೆ, ಮಾರಮ್ಮ, ಅಯ್ಯಪ್ಪ ಇತ್ಯಾದಿಗಳಿವೆ. ಜನಪದ ಹಾಗು ಪರಿಶಿಷ್ಟಗಣದಲ್ಲಿ ಹೊಲೆ ಅಯ್ಯಪ್ಪ, ಚಾವುಂಡಿ ನೀಲಿದೇವತೆ, ಭದ್ರಮೂರ್ತಿ, ಕಾಕೋಟಚ್ಚ, ಕಾಲಭೈರವ, ಅಂಜುಕೂಟ ಪಾತಾಳ, ಪತ್ತುಕೂಟ ಪಾತಾಳ ದೈವಗಳಲ್ಲದೆ[31] ನಾತ(ಸುಬ್ರಮಣ್ಯ, ನಾಗ) ಕೂಡ ಉಂಟು. ನಾಟಿ ಹಾಡುಗಳಲ್ಲಿ 'ಹೋ ವಯ್ಯಾ ನಂಜುಂಡದೇವಾ' ಎನ್ನುವಲ್ಲಿ ಕಾವೇರಿಸ್ತುತಿ, ದಂಪತಿ ಮುಹೂರ್ತ ಹಾಗು ದೇಶಕಟ್ಟ್‌ಪಾಟ್‌ಗಳಲ್ಲಿ ಶಿವಗಣಗಳ ಸ್ಮರಣೆಯೆ ಹೆಚ್ಚು. ಸುಗ್ಗಿಕಟ್ಟೆ ಹಬ್ಬಗಳಲ್ಲಿ, ಸಬತಾಯಿ (ಪಾರ್ವತಿ-ಸಪ್ತಮಾತೃಕೆಯರ ಗ್ರಾಮೀಣ ಕಲ್ಪನೆ) ದೇವೀರಮ್ಮನ ಮುಖವಾಡಗಳನ್ನು ಬಳಸಿ ಆರಾಧನೆ ನಡೆಸುತ್ತಾರೆ. ಈ ಹಬ್ಬಗಳಲ್ಲಿ ವೀರಭದ್ರನ ವಡಬುಗಳನ್ನು ಹೇಳುತ್ತ 'ಮಣೇವು' ಹಾಕಿ 'ಹರಸೇವೆ' ಎನ್ನುತ್ತಾರೆ. ಗೌಡ ಜನಾಂಗದವರಿಗೆ ಮುಖ್ಯ ಹಬ್ಬವಾದ ಹರಿಸೇವೆ ವೆಂಕಟರಮಣನ ಹಾಡಿನಲ್ಲಿ ಬರುವ ಸಾಲುಗಳು ಹೀಗಿವೆ.[32].

'ವಜ್ರದ ಬಿಂದಿಗೆ ರುದ್ರಾಕ್ಷಿ ವಸ್ತ್ರ ಬಗ್ಗಿ ಬನ್ನಿರೇ ಮುಗಿಲ್ಬಾಬಲೆ । ಜಯ ಮಂಗಳಂ ನಿತ್ಯ ಶುಭ ಮಂಗಳಂ । ಬಗ್ಗಿ ಬನ್ನಿರೇ ಮುಗಿಲ್ಬಾಲೆ ಗಿರಿಜೆಯ ಕಂಡು । ಶ್ರೀ ವೆಂಕಟೇಶ ಜವವ ಮುಗಿಸ್ಕಾರು ॥ ಜಯ..... ಯಾವ ರಾಯರವರ ಮಗಣ್ಣೆಣ್ಣೆ ॥ ಜಯ ॥ ಹಾರವರ ಹರದರ ಸೊಸೆಯಲ್ಲ । ಲಿಂಗಜಂಗಮರ ಕಿರು ತಂಗಿ ॥ ಜ ॥ ಲಿಂಗಜಂಗಮರ ಕಿರುತಂಗಿ ಮಹಾಸ್ವಾಮಿ । ನೀವು ನಮ್ಮ ಮಠಕ್ಕೆ ದಯಮಾಡಿ.....'

ಇಲ್ಲಿನ ಶಿವಪರ ಪ್ರಭಾವವನ್ನು, ಹಾಡಿನ ಕೊನೆಗೆ ಹರಿಯ ಸನ್ನಿವೇಶಕ್ಕೆ ಮುಂದೆ ಪರಿವರ್ತಿಸಿಕೊಂಡ ಸಂದರ್ಭದ ಸಾಲುಗಳಿದ್ದರೂ ಮೂಲಭೂತವಾಗಿ ಶಿವಧರ್ಮದ ಪ್ರಭಾವ ಈ ಮೊದಲು ಹರಡಿದ್ದ ಸಂಗತಿಯಾಗಿ ಕಾಣುತ್ತದೆ. ಅಲ್ಲದೆ ಇಡೀ ಕೊಡಗಿನಲ್ಲಿ ಕೊಡವರ ಐತಿಹಾಸಿಕ ಆರಾಧ್ಯವ್ಯಕ್ತಿ ಕಲ್ಯಾಟಜ್ಜಪ್ಪ, ಈಶ್ವರನ ಪ್ರಸಾದದಿಂದ ಜನಿಸಿದವನಾಗಿದ್ದಾನೆ. ಕೊಡಗಿನಲ್ಲಿ 'ನಾಡಕೋರ್ ಮಹಾದೇವ, ಊರಕೋರ್ ಭಗವತಿ, ಕೇರಿಕೋರ್ ಅಯ್ಯಪ್ಪ, ಓಣಿಕೋರ್ ನಾತನ್ (ನಾಗ)' ಎಂಬ ವ್ಯವಸ್ಥೆ ಇದ್ದು ಗಾದೆಯ ರೂಪದಲ್ಲಿ ಪ್ರಚಲಿತವಾಗಿದೆ.(ನಾಡಿಗೊಂಡು ಮಹಾದೇವರು, ಊರಿಗೊಂದು ಭಗವತಿ, ಕೇರಿಗೊಂದು ಅಯ್ಯಪ್ಪ, ಓಣಿಗೊಂದು ನಾಗನ ನೆಲೆಗಳಿರಬೇಕು) ಹೀಗಿದ್ದರೂ ಹರಿಹರ ಭೇದವಿಲ್ಲದೆ ನಾಡಿನ ಜನತೆ ನಡೆದುಕೊಂಡು ಬಂದಿದೆ. ಅಂದರೆ ವೀರಶೈವ ಧರ್ಮವನ್ನೇ ನಾಡವರು ಅನುಸರಿಸಬೇಕೆಂದಿರಲಿಲ್ಲ. ಅದನ್ನು ಅನುಸರಿಸಿದ ರಾಜರು ಹಾಗು ಸಾಂಸ್ಕೃತಿಕ ಚಾಲನೆ ನೀಡಿದ ವೀರಶೈವ ಮಠಗಳಿಂದಾದ ಶಿವಸಂಸ್ಕೃತಿಯ ಪ್ರಭಾವವು ಕೊಡಗಿನ ಜನ ಬದುಕಿನಲ್ಲಿ ಅಂತರ್‌ವಾಹಿನಿಯಾಗಿ ಹರಿಯಿತು ಎಂಬುದು ಇಲ್ಲಿ ಗಮನಿಸಬೇಕಾದ ವಿಷಯವಾಗಿದೆ.

ತಲ್ತರೆ ಶೆಟ್ಟಿಹಳ್ಳಿಯಲ್ಲಿ ಗೌಡ ಜನಾಂಗದ 'ಕುರಾದ' ಮನೆತನದವರಿದ್ದಾರೆ. ಇವರ ವಂಶದ ಹಿರಿಯ ಬಸವೇಗೌಡ ವೀರಶೈವನಂತೆ. ಇವನ ಹೆಸರನ್ನು ಆ ಹಳ್ಳಿಯ ಸುಮಾರು ೧೬ನೆಯ ಶತಮಾನದ ವೀರಗಲ್ಲಿನ ವೀರನಿಗೆ ಆರೋಪಿಸಿ 'ಬಸವೇಗೌಡನ ಕಲ್ಲು' ಎಂದು ಕರೆಯುತ್ತಾರೆ. ಆ ಕಲ್ಲಿಗೆ ವಾರ್ಷಿಕ ಪೂಜೆ ಸಂಸ್ಕಾರಗಳು ಹಿಂದೆ ಮಠದ ಗುರುಗಳಿಂದ ನಡೆಯುತ್ತಿದ್ದು ಇಂದು ವೀರಶೈವ ಅರ್ಚಕರಿಂದ ನಡೆಯುತ್ತಿದೆ. ಅಂದಗೋವೆಯಲ್ಲಿ ಕೊಡವ ಮುಳ್ಳೇರ ಮನೆತನದವರಿಗೆ ಮನೆದೇವರು ನಂಜುಂಡೇಶ್ವರ. ಹಾಗು ಅವನು ಮೈಮೇಲೆ ಬರುವ ದೇವರಾಗಿದ್ದಾನೆ. ಅಂದಗೋವೆಯವನಾದ ಹಾಗು ಚಿಕ್ಕವೀರರಾಜೇಂದ್ರ ಒಡೆಯನ ಮುಖ್ಯ ದಿವಾನನಾಗಿದ್ದ ಬಸವಯ್ಯನ ವಂಶೀಕರು ಕೊಡವರಾಗಿ ಈಗ 'ಕೆಚೇರ' ಎಂಬ ಮನೆಪದವನ್ನು ಹೊಂದಿದ್ದಾರೆ.[33] ಅವರು ಊರಿನ ದೇವರಾದ ಬಸವೇಶ್ವರನ ದೇವತಕ್ಕ ಹಾಗೂ ಭಂಡಾರ ತಕ್ಕರಾಗಿದ್ದಾರೆ. (ದೇಗುಲದ ಆಚಾರ ಹಾಗು ಆದಾಯ, ವೆಚ್ಚಗಳ ನಿರ್ವಹಣಾ ಮುಖ್ಯಸ್ಥರು). ಅವರಿಗೆ ಬಸವೇಶ್ವರ ಮೈಮೇಲೆ ಬರುತ್ತಾನೆ. ಕುಂದ ಬೆಟ್ಟದ ಬಳಿಯ ಪ್ರಸಿದ್ಧ ಕೊಡವ ಮನೆತನವಾದ ಮನಿಯಪಂಡ ಮನೆತನದ ಹಿರಿಯರು ಶಿವಾಚಾರವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು. ಹಾಗೆಯೆ ಅಲ್ಲಿನ ಕೊಡವ ಸಣ್ಣುಂಡ್ರ ಮನೆತನದಲ್ಲಿ ಇಂದಿಗೂ ಶಿವಲಿಂಗವನ್ನು ಬೆಳ್ಳಿಯ ಕರಡಿಗೆಯಲ್ಲಿರಿಸಿ, ದಿನವೂ ಬೆಳಗ್ಗೆ, ಸಂಜೆ ತೆಗೆದು ಪೂಜಿಸಿ ಮತ್ತೆ ಕರಡಿಗೆಯಲ್ಲಿಯೆ ಇಡಿಸುತ್ತಾರೆ.[34] ಇದೇ ಕುಂದಬೆಟ್ಟದ ಪಶ್ಚಿಮ ಬುಡದಲ್ಲಿನ ಫೀಲ್ಡ್ ಮಾರ್ಷಲ್ ಕೊಡಂದೇರ ಎಂ. ಕಾರ್ಯಪ್ಪನವರ ಐನ್ ಆರ್ವಾಡು (ಮೂಲ ಹಿರಿಯರ ಮನೆ) ಇದೆ. ಆ ಮನೆಯ ಮುಂದಿರುವ ಮನೆತನದ ಗದ್ದುಗೆಗಳ ಮೇಲೆ ವೃಷಭಗಳ ದೊಡ್ಡ ಗಾರೆ ವಿಗ್ರಹಗಳನ್ನು ಹೊಂದಿಸಿಡಲಾಗಿದೆ. ಹೀಗೆಯೆ ಮಡಿಕೇರಿಯ ರಾಜರ ಗದ್ದುಗೆಯ ಬಳಿಯಲ್ಲಿ ಕೊಡವ ಸರಕಾರ್ರೆಕಾರ ಬಿದ್ದಂಡ್ರ ಬೋಪು ಹಾಗು ಸಿರೆಕಾರೇಕಾರ್ ಬಿದ್ದಂಡ್ರ ಸೋಮಯ್ಯ ಅವರ ಸಮಾಧಿಗಳ ಮೇಲೆಯೂ ಬಸವನ ಗಾರೆ ವಿಗ್ರಹಗಳನ್ನು ಹೊಂದಿಸಲಾಗಿದೆ. ಈ ರೀತಿಯ ಸಮಾಧಿ, ಗದ್ದುಗೆ ಸಂಸ್ಕಾರಗಳಿಗೆ ವೀರಶೈವ ಮಠದ ಗುರುಗಳೇ ಆಗಬೇಕು. ಸಾಮಾನ್ಯವಾಗಿ ಕೊಡವರ ಎಲ್ಲ ಐನ್‌ಮನೆಗಳಲ್ಲಿ (ಮನೆತನದ ಹಿರಿಯ ಕಟ್ಟಿದ ಮನೆ, ಅಯ್ಯನ ಮನೆ) ಮರದ ಕರಂಡವಾದ ಭಸ್ಮ ಸಂಪುಟಗಳು (ತೆರೆದ ಬೋರಲು ಗೋಪುರಾಕಾರದವು) ಕಾಣಬರುತ್ತವೆ. ಈ ಉದಾಹರಣೆಗಳಿಂದ ವೀರಶೈವ ಮಠಗಳು ಜನರ ಸಾಮಾನ್ಯ ಬದುಕಿನಲ್ಲಿ ಸಾಂಸ್ಕೃತಿಕ ಬೇರುಗಳನ್ನು ಹೊಂದಿದ್ದುದಕ್ಕೆ ತಾರ್ಕಣೆ ಸಿಗುತ್ತದೆ. ಮಠಗಳ ಕೆಲಸ ಮತಾಂತರಗೊಳಿಸುವ ಕಾರ್ಯವಾಗಿರಲಿಲ್ಲ. ಮಂಗಳಕರ ಪ್ರವೃತ್ತಿ, ಪ್ರೇರಣೆಗಳನ್ನು ನೀಡುವುದಾಗಿತ್ತು. ಯಾವುದೇ ಜನಾಂಗವಾಗಲಿ ವೀರಶೈವಕ್ಕೆ ಮತಾಂತರವಾಗಿಯೆ ಇಂತಹ ಸಾಂಸ್ಕೃತಿಕ ಕಾರ್ಯಗಳನ್ನು ನಡೆಸಬೇಕಾದ ಸ್ಥಿತಿಯನ್ನು ಮಠಗಳು ನಿರ್ಮಾಣ ಮಾಡಿರಲಿಲ್ಲ ಎಂಬುದೂ ವಿದಿತವಾಗುತ್ತದೆ. ಈ ಮಠಗಳ ಗುರುಗಳ ಪೈಕಿ ಹಾಲೇರಿ ಅರಸರ ರಾಜಗುರು ಹಾಗು ಕುಲಗುರುಗಳಾಗಿಯೂ ಬೆಟ್ಟದ ಸಿದ್ದೇಶ್ವರ ಮಠ, ಸಿದ್ದಾಪುರ ಮಠ, ತೊರೆನೂರು ಮಠ, ಅರಮೇರಿ ಮಠ, ಹೆಗ್ಗಡೆಹಳ್ಳಿ ಮಠ, ಸೋಮವಾರಪೇಟೆ ಮಠ, ಅಬ್ಬಿಮಠ, ಮಾದಾಪುರ ಮಠದ ಗುರುಗಳು, ಚರಮೂರ್ತಿ ಸಿದ್ಧಲಿಂಗ ದೇವರು, ರುದ್ರಸ್ವಾಮಿಗಳು ಮುಂತಾದವರು ಮಾರ್ಗದರ್ಶನ ಮಾಡಿದ್ದಾರೆ.[35] ಕ್ರಿ.ಶ. ೧೮೦೮ರಲ್ಲಿ ದೊಡ್ಡವೀರರಾಜೇಂದ್ರ ಒಡೆಯನಿಂದ ಮಾನಿತರಾಗಿದ್ದ ಅಮ್ಮತ್ತಿ ಬೆಟ್ಟೇರಿಯ ಕನ್ನಡಮಠದ ಗುರು ಶ್ರೀ ರುದ್ರಸ್ವಾಮಿಗಳಿದ್ದರು. ಆ ಮಠದ

ಪಂರಪರಂಯಲ್ಲಿ ಬಂದವರು ಶ್ರೀ ರುದ್ರ ದೇಶೀಕೇಂದ್ರ ಸ್ವಾಮಿಗಳು. ೧೫.೩.೧೯೩೧ರಲ್ಲಿ ವೀರರಾಜೇಂದ್ರಪೇಟೆಯ ಸಂತ ಅನ್ನಮ್ಮ ದೇಗುಲದಲ್ಲಿ ನಡೆದ ಸಿ.ಜಿ. ರೊಡ್ರಿಗೆಸ್ ಅವರ ಮಗಳ ವಿವಾಹಕ್ಕೆ ಬಂದು ಆಶೀರ್ವದಿಸಲು ಬಿನ್ನಹವನ್ನು ಈ ಸ್ವಾಮಿಗಳಿಗೆ ಹಾಕಿದ್ದರು. ತದನುಗುಣವಾಗಿ ಚಿತ್ರೈಸಿ ಗುರುಗಳು ಆಶೀರ್ವದಿಸಿ ಹೋದ ಬಗ್ಗೆ ಮಠದ ದಾಖಲೆಯಲ್ಲಿ ಕಾಣಬರುತ್ತದೆ.[36] ಅನ್ಯಧರ್ಮೀಯರ ಸಾಂಸ್ಕೃತಿಕ ಸಂದರ್ಭಗಳಿಗೆ ಬಿನ್ನಹಗೊಳ್ಳುವಷ್ಟು ಪ್ರಭಾವ ಹಾಗು ಗೌರವಾದರಗಳನ್ನು ರಾಜರ ನಂತರ ಬಹುಕಾಲದವರೆವಿಗೂ ಕೊಡಗಿನ ಹಲವಾರು ಮಠಗಳು ಹೊಂದಿದ್ದುದಕ್ಕೆ ಇದೂ ಒಂದು ಸಾಕ್ಷಿಯಾಗಿದೆ.

ಚಂಗಾಳ್ವರ ಕಾಲದ ಮಠಗಳ ಹೆಸರನ್ನು ಶಾಸನಗಳಿಂದ ಪರೋಕ್ಷವಾಗಿ ಹೆಕ್ಕಬಹುದಷ್ಟೆ. ಅವುಗಳ ಹೆಸರು ನೇರವಾಗಿ ಅವುಗಳಲ್ಲಿ ಉಲ್ಲೇಖವಾಗಿಲ್ಲ. ಆ ದೃಷ್ಟಿಯಿಂದ ಯಡೂರು, ಹುಲುಕೋಡು ಪಾಲ್ಪರೆ, ಕೊಡಗುಶ್ರೀರಂಗಪಟ್ಟಣ ಹಾಗು ನಂಜರಾಯಪಟ್ಟಣಗಳಲ್ಲಿದ್ದ ಮಠಗಳೇ ಸದ್ಯಕ್ಕೆ ಬಹುಪ್ರಾಚೀನವೆಂದುಕೊಳ್ಳಬೇಕಾಗಿದೆ. ‘ಅಬ್ಬಿಮಟ್ಟಗ್ರಾಮ’ ಎಂದು ಹಾಲೇರಿ ಅರಸರ ಗ್ರಾಮದಾಖಲೆಗಳಲ್ಲಿರುವ ಕಾರಣ ಚಂಗಾಳ್ವರ ಕಾಲದ ಅಬ್ಬಿ ಮಲ್ಲಿಕಾರ್ಜುನ ಮಠ (!)ದ ಬಗ್ಗೆಯೂ ಹೇಳಬಹುದು. ದೊಡ್ಡ ಕೊಡ್ಲಿ ಕಲ್ಲುಮಠವನ್ನೂ ಈ ದಿಸೆಯಲ್ಲಿ ಗಮನಿಸಬಹುದು. ಹಾಲೇರಿ ಅರಸರ ಕಾಲದ ಶಾಸನಗಳಲ್ಲಿ ಕೆಲವಾರು ಮಠಗಳ ಹೆಸರು ಸ್ಪಷ್ಟವಾಗಿದೆ.

ಅಬ್ಬಿಮಠ

ದೊಡ್ಡ ವೀರಪ್ಪ ಒಡೆಯನು ಕ್ರಿ.ಶ. ೧೭೨೮ರಲ್ಲಿ ‘ಯಡವನಾಡು ಅಬ್ಬಿಮಠಕ್ಕೆ ಪ್ರಾರು ನಡೆದು ಬರುತ್ತಿದ್ದ ಗ್ರಾಮ ಹೊಸಳ್ಳಿ ಗ್ರಾಮವಂದು ಜಿಗಟ್ಟಳ್ಳಿ ಗ್ರಾಮ ಪಂದು[37] (ಚಿಗಟಳ್ಳಿ[38])ವುಭಯ ಗ್ರಾಮ’ಗಳನ್ನು ದೊಡ್ಡ ವಿರೂಪಾಕ್ಷ ಸ್ವಾಮಿಗೆ ನೀಡಿದ ಸಂಗತಿ ಇದೆ. ಅದರ ಜೊತೆಗೆ, ಗಣಾರಾಧನೆ, ಶಿವಪೂಜೆಗಾಗಿ ಹಿಂದಿನ ಗ್ರಾಮಗಳ ಜೊತೆಗೆ ಹೊಸಗ್ರಾಮಗಳು ಹಾಗು ಅವುಗಳ ಸ್ಥಿರಚರ ಆದಾಯಗಳನ್ನು ಅಬ್ಬಿಮಠದ ನಿರಂಜನದೇವರ ಪಾದಕ್ಕೆ ಹೊಸದಾದ, ಜೀರ್ಣೋದ್ಧಾರದ ಸಂಗತಿಯ ದಾನ ಶಾಸನದಲ್ಲಿ ಕ್ರಿ.ಶ.೧೭೯೬ರಲ್ಲಿ ನಮೂದಿಸಿ ದೊಡ್ಡವೀರರಾಜೇಂದ್ರ ಒಡೆಯನು ಮುರುಘಾಸ್ವಾಮಿಗಳನ್ನು ಸ್ಮರಿಸಿ ನೀಡಿದ್ದಾನೆ. ಈ ಅಂಶಗಳು ಕ್ರಿ.ಶ.೧೭೯೮ರ ಮುನ್ನವೇ ಅಬ್ಬಿಮಠದ ಅಸ್ತಿತ್ವವನ್ನು ಸೂಚಿಸುತ್ತದೆ. ಈ ಹಿಂದಿನ ಪುಟಗಳಲ್ಲಿ ಈ ಪ್ರಾಚೀನತೆ ಬಪಗ್ಗೆ ವಿವೇಚಿಸಿದೆ. ಕ್ರಿ.ಶ. ೧೭೯೦ರ ಸುಮಾರಿನ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಮುರುಘ ಸ್ವಾಮಿಗಳ ಶಿಷ್ಯ ಎಂದು ಹಲಸೇ ಗ್ರಾಮದ ಜಂಗಮ ಈಶ್ವರಯ್ಯ ತನ್ನ ‘ಅಬ್ಬಿಮಠ ವೃತ್ತಾಂತ’ದಲ್ಲಿ ಬರೆದಿದ್ದಾನೆ.[39] ಇವರೇ ಇಲ್ಲಿ ಮಠದ ಚೌಕಿಯನ್ನು ಕಟ್ಟಿಸಿದರಂತೆ. ಇವರು ತಲೆತೂರೆ (ಅಬ್ಬಿ ಜಲಪಾತ) ಪಕ್ಕ ಇರುವ ಜಯ ಮಲ್ಲಿಕಾರ್ಜುನ ಗುಡಿಯ ಬಲ ತಗ್ಗಿನಲ್ಲಿರುವ ಗುಹೆಯಲ್ಲಿ ವಾಸವಿರುತ್ತ ಗದ್ದುಗೆ ಪೂಜೆಗೆ ಮಾತ್ರ ಮೇಲೆ ಬರುತ್ತಿದ್ದರಂತೆ. ತಲ್ತರೆ ಶೆಟ್ಟಳ್ಳಿ ಗ್ರಾಮಕ್ಕೆ ಗುಡಿ ಸೇರುತ್ತದೆ. ‘ಅಬ್ಬಿ’ ಎನ್ನುವ ಶಬ್ದಕ್ಕೆ ಸುಂದರ ಹಾಗು ಅರ್ಥವತ್ತಾದ ಇನ್ನೊಂದು ಕನ್ನಡ ರೂಪ, ‘ತಲೆತೂರೆ’ ಇಲ್ಲಿ ಬಳಕೆ ಆಗಿರುವುದು ಗಮನಾರ್ಹ. ಶಿವರಾತ್ರಿ ಇಲ್ಲಿ ಮುಖ್ಯ ಹಬ್ಬ. ದೀಪಾವಳಿಯಲ್ಲಿ ಸಾಲುದೀಪವಿರಿಸುತ್ತಾರೆ. ಈ ಗುಡಿ ಮಠಕ್ಕೆ ‘ಜೋಗಿ ಮನೆ’ ಎಂದು ಗೌಡ ಜನಾಂಗದವರು, ದಲಿತರು ಕರೆಯುತ್ತಾರೆ. ಗ್ರಾಮಸ್ಥರು ಮಠದ ಗುರುಗಳಿದ್ದಾಗಲಿಂದ ಅವರೊಡನೆ ಸೇರಿ ಕಡೆಕಾರ್ತೀಕದಲ್ಲಿ ‘ಮಲ್ಲಿಕಾರ್ಜುನ ಪರ್ವ’ (ಪರ), ‘ಮಾದೇಶ್ವರ ಪರ್ವ’ ಮಾಡುತ್ತಾರೆ. ಶಿವರಾತ್ರಿ, ದೀಪಾವಳಿ, ಸಂಕ್ರಾಂತಿಯಲ್ಲಿ ಕಡ್ಲೆಪಾಯಿಸಿದ ಹಬ್ಬ ಮಾಡುತ್ತ ಬಂದಿದ್ದಾರೆ. ಹುತ್ತರಿಯಲ್ಲಿ ಗದ್ದುಗೆಗಳ ಬಳಿ ಭತ್ತದ ಕದಿರನ್ನು ಕೊಡಗಿನ ರೂಢಿಯಂತೆ ತಂದಿಡುತ್ತಾರೆ. ದಲಿತರ ಸಂಬಂಧ ಈ ಗುಡಿಗೆ ಬರಲು ಐತಿಹ್ಯವಿದೆ. ತನ್ನ ಹಸು ಗುರುಗಳಿದ್ದ ನೆಲೆಗೆ ಹೋಗಿ ಹಾಲು ಕರೆಯುತ್ತಿದ್ದುದನ್ನು ಕಂಡ ಹರಿಜನ ಕೇರಿಯ ‘ಜೋಗಿ’ ಪ್ರಭಾವಿತನಾಗಿ ಗುರುಗಳಿಗೆ ಗೋವನ್ನು ಅರ್ಪಿಸಿದ. ಗುರುಗಳ ಇಷ್ಟಲಿಂಗ ಪೂಜೆಗೆ ಚೌಕಿಯನ್ನು ಕಟ್ಟಿಕೊಟ್ಟ. ಆ ಗುರುಗಳು ಶಾಂತಮಲ್ಲಿಕಾರ್ಜುನ ಸ್ವಾಮಿಗಳೆನ್ನಲಾಗಿದೆ. ಅವರು ಇಲ್ಲಿನ ಜನರಕಷ್ಟ ಕಾರ್ಪಣ್ಯಗಳಿಗೆ ನೆರವಾಗುತ್ತಿದ್ದರಂತೆ. ನಂತರ ಪುಷ್ಪಗಿರಿಗೆ ತಪಸ್ಸಿಗೆ ಹೋದರಂತೆ. ಈ ಸಂದರ್ಭದ ಕತೆ ಎಂದರೆ ಅವರು ತಪಸ್ಸಿಗೆ ಹೊರಟಾಗ ಮಠದ ಸೇವೆಯಲ್ಲಿದ್ದ ಪಟ್ಟೆಪಾರಿ ಎಂಬ ಶಿವಶರಣೆ ಅವರನ್ನು ಹಿಂಬಾಲಿಸಿದಳಂತೆ (ಈಕೆಗೆ ಪಂಡರಬಾಯಿ ಎಂಬ ಹೆಸರು ಇತ್ತು). ಆಗ ಹಾದಿಯ ಹೊಳೆಯವರೆಗೆ ಬಂದದ್ದು ಸಾಕು. ಅಲ್ಲಿ ಲಿಂಗಪೂಜೆ ಮಾಡಿಕೊಂಡಿರು ಎಂದು ಆದೇಶಿಸಿದರಂತೆ. ಅವಳು ಅಲ್ಲೇ ನಿಂತು ಪೂಜಿಸಿದ ಕಾರಣ ಆಕೆಯಿಂದಾಗಿ ‘ಲಿಂಗದ ಹೊಳೆ’ ಎಂಬ ಹೆಸರು ಹೊಳೆಗೆ ನಿಂತಿತಂತೆ. ಆದರೆ ಕತ್ತಿನ ಕರೀಮಣಿಗೆ ಏರಿ ಬರುವ ಶಕ್ತಿ ಇದೆ ಎಂದು ಪುಷ್ಪಗಿರಿಯಲ್ಲಿ ಗುರುಗಳ ಪಾದದ ಬಳಿ ಬೀಳುವಂತೆ ಎಸೆದಳಂತೆ. ಪುಷ್ಪಗಿರಿಯ ಮೇಲೆ ಇಂದಿಗೂ ಸಿಗುವ ಭೂ ವೈಜ್ಞಾನಿಕ ಬದಲಾವಣೆಗಳಿಂದ ರೂಪುಗೊಂಡ ಷಡ್ಭುಜಾಕಾರದ ಹರಳುಗಳಿಗೆ ‘ಷಣ್ಮುಖೇಶ್ವರ’ ಎಂದು ಕರೆದು ಜನಪದ, ಪಟ್ಟೆಪಾರಿಯ ಕರೀಮಣಿಯ ಪ್ರತೀಕ ಎಂದು ಅರಿಸಿ ತರುತ್ತವೆ. ಈ ಪಟ್ಟೆಪಾರಿ, ಹರಿಜನ ಹೆಣ್ಣು ಎಂಬ ಪ್ರತೀತಿ ಇದೆ. ಬಹುಶಃ ಹರಿಜನಜೋಗಿಯ ಮಗಳೇ ಮಠದ ಸೇವೆಗೆ ನಿಂತ

ತೆಣ್ಣಾಗಿರುವಂತಿದೆ. ಈ ಶಾಂತಮಲ್ಲಿಕಾರ್ಜುನಸ್ವಾಮಿಗಳು ಹಾಗು ಮಠದ ಮಹಿಳೆ(ಪಟ್ಟೆಪಾರಿ)ಬರೆದಿದ್ದ ಗ್ರಂಥದ ಓಲೆಗರಿ ಪ್ರತಿಗಳು ಅಬ್ಬಿಮಠದಲ್ಲಿತ್ತೆಂದು ಹೇಳಲಾಗಿದೆ.[40] 'ಪಟ್ಟೆಪಾರಿಕಲ್ಲು' ಎಂಬ ಪೇರಿಸಿದ ಕಲ್ಲುಗಳ ಸ್ತಂಭರೂಪಗಳು ಪುಷ್ಪಗಿರಿ ಬೆಟ್ಟದ ಬುಡದ ಹೆಗ್ಗಡೆ ಮನೆ ಗ್ರಾಮದ ಬಳಿ ಬಂಡೆಗಳ ಮೇಲೆ ಆಕೆಯ ಹೆಸರಿನಲ್ಲಿದೆ.

ಅಬ್ಬಿಮಠಕ್ಕೆ ಹುತ್ತರಿದಿನ ವಾದ್ಯಸಮೇತ ಭತ್ತದ ಕದಿರು ತಂದು ಮಠಕ್ಕೆ ಮುಟ್ಟಿಸಿ ಗುದ್ದುಗೆ ಪೂಜೆ ಮಾಡಿ ಕೊಡವರು, ಗೌಡರು, ಹರಿಜನರಾದಿಯಾಗಿ ಎಲ್ಲರೂ ಕದಿರನ್ನು ಮನೆಗೆ ಒಯ್ಯುತ್ತಿದ್ದರು. ಕೊಡವರಿಗಂತು ಆ ಕಾಲಕ್ಕೆ ವೀರಶೈವ ಮಠಗಳನ್ನು ಕಂಡರೆ ಬಹಳ ಭಕ್ತಿ ಇತ್ತು. ಹುಟ್ಟು, ಸಾವುಗಳ ಸಂದರ್ಭದ ಸೂತಕ ಕಳೆದುಕೊಳ್ಳಲು ಈ ಮಠಕ್ಕೆ ಬಂದು ತೀರ್ಥ ತೆಗೆದುಕೊಂಡು ಹೋಗುತ್ತಿದ್ದರು, ಎಂದು ೬೦ ವರ್ಷಗಳ ಹಿಂದೆ ಈ ಮಠದ ಗುರುಗಳಾಗಿದ್ದು, ನಂತರ ವೀರಸಿಂಹಾಸನ ಹಾಗು ಶೂನ್ಯಸಿಂಹಾಸನ ಒಂದಾಗಿ'ವೀರಸಿಂಹಾಸನ-ಮುರುಘ ಬ್ರಹ್ಮತರ್ಕ', ಎಂಬ 'ಎರಡು ಹೆಸರಿರುವ ನೆಲೆ' ಎಂದು ಪ್ರತೀತಿ ಹೊಂದಿರುವ ಪೆರಿಯಮಠಕ್ಕೆ ಪೀಠಾಧಿಕಾರಿಗಳಾಗಿ ಹೋದ ಶ್ರೀ ಜ॥ ಶಾಂತದೇವ ಸಾರಂಗ ದೇಶೀಕೇಂದ್ರರು ಹೇಳಿದ್ದಾರೆ.[41] ಇವರ ಕಾಲದಲ್ಲಿ ಮೈಸೂರಿನ ಮಹಾರಾಜರು (ಕ್ರಿ.ಶ.೧೯೩೦) ಅಬ್ಬಿಮಠಕ್ಕೆ ಬಂದು ಗೌರವಿಸಿ, ನಂತರ ಪಟ್ಟೆಪಾರಿ ಬಂಡೆಯ ಮೇಲೆ ಹರಕೆಯ ಕಲ್ಲುಗುಡ್ಡೆ ಸ್ತಂಭವನ್ನು ನಿಲ್ಲಿಸಿದರಂತೆ. ಈ ಗುರುಗಳ ಮಾತಿನಿಂದ ವ್ಯಕ್ತವಾದ ಇನ್ನೊಂದು ಮುಖ್ಯ ಅಂಶವಿದೆ. 'ವೀರಸಿಂಹಾಸನ-ಮುರುಘ ತರ್ಕದ' ನೆಲೆ ಎಂಬ ಸಂಗತಿ ಅಬ್ಬಿಮಠ ಶಾಸನ ೬೩ದಲ್ಲಿ ಬರುವ ಶಬ್ದಗಳಲ್ಲಿ ಅಭಿವ್ಯಕ್ತಿ ಪಡೆದಿದ್ದರೆ, ನಿಜಕ್ಕೂ ಕೊಡಗಿನ ವೀರಶೈವ 'ಗುರು-ವಿರಕ್ತ' ಮಠಗಳ ಒಂದು ಪ್ರಾಚೀನ ಸಾಂಸ್ಕೃತಿಕ ಸಮನ್ವಯದ ಕೊಡುಗೆ ಎಂದಾಗುತ್ತದೆ. ಈ ಮಠದ 'ಜೋಗಿ' ಕತೆ ಹಾಲೇರಿ ಅರಸರ ಮುನ್ನಿನ ಕಾಲದಿಂದಲೂ ರೂಢಿಗಿದ್ದ ದಲಿತರ ಕುರಿತ ಕಾಳಜಿಯ ಸಾಂಕೇತಿಕ ಕತೆ ಎನಿಸುತ್ತದೆ. ಇಂದು ಅಬ್ಬಿಮಠವು ಚಿತ್ರದುರ್ಗದ ಬೃಹನ್ಮಠದ ನೇರ ನಿರ್ವಹಣೆಗಿರುವ ಸೋಮವಾರಪೇಟೆ ತಾಲೂಕಿನ ಪ್ರಸಿದ್ಧ ಮಠವಾಗಿದೆ. ಹಿಂದೂಇಸ್ಲಾಮಿಕ್ ಶೈಲಿಯ ಕಟ್ಟಡ ಹೊಂದಿದೆ.

ತೊರೆನೂರು ಮಠ

ಮರುಳ ಸಿದ್ದೇಶ್ವರ ಗದ್ದುಗೆಯನ್ನು ಹೊಂದಿ ಚೀಲಾಳಸಮಯಕ್ಕೆ ಸೇರಿದ ಈ ವಿರಕ್ತ ಮಠ ತೊರೆನೂರು ಪಂಚಮಠ ಎಂದು ಪ್ರಸಿದ್ಧವಾಗಿದೆ. ಮಠದ ಗೋವುಗಳನ್ನೂ ಕೆಲವರು ದೊಡ್ಡಿಗೆ ಕೂಡಿದ ಸಂಗತಿ ವೀರರಾಜೇಂದ್ರ ಒಡೆಯನಿಗೆ ತಿಳಿಯಿತು. ಗೋವುಗಳು ಮೇವು ತಿನ್ನದೆ, ಹಾಲು ಕರೆಯದೆ ನಿಂತುವಂತೆ. ರಾಜನಿಗೆ ಅಚ್ಚರಿಯಾಗಿ ಅವುಗಳನ್ನು ಬಿಡಿಸಿ ಗುರುಗಳನ್ನು ಕರೆಕಳುಹಿಸಿದನಂತೆ. ಅವರು ತಪದಲ್ಲಿ ಕುಳಿತು ಹೋಗದಿದ್ದಾಗ ರಾಜನೇ ದರುಶನಕ್ಕೆ ಬಂದಾಗ ಕಾವೇರಿ ನದಿಯಲ್ಲಿ ಬಾಲೆಎಲೆ ಮೇಲೆ ಕುಳಿತು ಹೋಗುತ್ತಿದ್ದ ಪವಾಡ ಕಂಡನಂತೆ ಆಗ ಗುರುಗಳ ಮಹಿಮೆಗೆ ಬಾಗಿ ದಾನಕೊಡುವೆ ಎಂದ. ಆದರೆ ಗುರುಗಳು ಸ್ವೀಕರಿಸಲು ಒಪ್ಪಲಿಲ್ಲವಂತೆ. ಕೊನೆಗೆ ರಾಜನು ಕುದುರೆ ಏರಿ ಹೋದ ೭೦ ಜಾಗದ ಪ್ರದೇಶಗಳು, ಅಂದರೆ ಕಣಿವೆ, ಹೆಗ್ಗಡಹಳ್ಳಿ-ಕೂಡಿಗೆ, ಮಾಯಮುಡಿ, ಶಿರಂಗಾಲ ಇತ್ಯಾದಿ ಗ್ರಾಮಗಳನ್ನು ಸ್ವೀಕರಿಸಲು ಮತ್ತೆ ಬಿನ್ನಹ ಮಾಡಿದ. ಗುರುಗಳು ಆಗ ಸ್ವೀಕರಿಸಿದರಂತೆ. ಈ ಬಗ್ಗೆ ರಾಜನ ಖಾಸಾ ರಹಸ್ಯದ ಶಂಭಾಚಾರಿ ಬರೆದ ನಿರೂಪವಿದೆಯಂತೆ. ಬಹುಶಃ ಈ ಮುನ್ನವೆ ಕುಡುಮದ ಮಂಜುನಾಥ ದೇವರಿಗೆ (ಮಂಜುನಾಥ) ಕಾಂಜೋಡು ಗ್ರಾಮದಲ್ಲಿ ಪ್ರತೀಕ ಮಂಜುನಾಥ ದೇಗುಲ ಕಟ್ಟಿ ಶಾಸನೋಕ್ತ ದಾನ ನೀಡಿದಂತೆ, ಹೆಗ್ಗಡಹಳ್ಳಿಯಲ್ಲಿಯೂ ಕುಡುಮ ಮಂಜುನಾಥನ ಸಾಕ್ಷಿದೇಗುಲವನ್ನು ಕ್ರಿ.ಶ.೧೭೩೦ರಲ್ಲಿ ಕಟ್ಟಿ ಶಾಸನೋಕ್ತ ಭೂದಾನ ನೀಡಿದವನು ದೊಡ್ಡವೀರಪ್ಪ.ಒಂದು ಕಾಲಕ್ಕೆ ಈ ಭೂಮಿಯ ಉಸ್ತುವಾರಿ ಸಹಿತ ಗುಡಿಯ ನಿರ್ವಹಣೆ ಈ ಮಠಕ್ಕೆ ಇತ್ತೆನ್ನಲಾಗಿದೆ. ಇಲ್ಲಿ ದೇಗುಲದ ಅವಶೇಷಗಳು ಇನ್ನೂ ಉಳಿದಿವೆ.

ಇಲ್ಲಿನ ಮರುಳಸಿದ್ದೇಶ್ವರ ಸ್ವಾಮಿಗಳ ದನದ ಕೊಟ್ಟಿಗೆಯ ಕಾಯಕವನ್ನು ಹರಿಜನ ಹೆಣ್ಣುಮಗುಳು ಮಾಡುತ್ತಿದ್ದಳಂತೆ. ಅವರು ಲಿಂಗೈಕ್ಯರಾಗುವ ಮುನ್ನ ತನಗೆ'ಅನುಗ್ರಹ'ದೀಕ್ಷೆ ಬೇಡಿದಳಂತೆ. ಆಗ ಅವರು ಮಠದ ಶರಣೆ ಆಗಿರುವ ನೀನು ಎಲ್ಲ ಮಠದಲ್ಲೂ 'ಚೌಡಿ' ಆಗಿರು ಎಂದು ಆಶೀರ್ವದಿಸಿದರಂತೆ. ಇಂದಿಗೂ ಅವಳ ಹೆಸರಿನಲ್ಲಿ ಗುರುಗಳ ಗದ್ದುಗೆ ಬಳಿ 'ಮಠದ ಶರಣೆ' ಎಂದು ಕಳಶ ಇಡುತ್ತಾರೆ. ಸೀರೆ ಇಟ್ಟು ಮಠದ ವತಿಯಿಂದ ವೀರಶೈವ ಹೆಣ್ಣು ಮಕ್ಕಳು ಕಳಶ ಪೂಜೆ ಮಾಡುತ್ತಾರೆ. ಇಡೀ ಕೊಡಗಿನ ಎಲ್ಲ ವೀರಶೈವ ಮಠಗಳಲ್ಲಿ ವೀರಭದ್ರನ ಸೋದರಿ ಚೌಡೇಶ್ವರಿ ಪೂಜೆಯನ್ನು ಹೀಗೆ ಸಮೀಕರಿಸಿದ ಕಾರಣವೆ ಚೌಡಿ ಪೂಜೆ ಇದೆ ಎನ್ನಬೇಕು. ಅಂದರೆ ದಲಿತ ಹೆಣ್ಣು ಮಗಳಿಗೆ ಮಠಗಳು ತೋರಿರುವ ಭಕ್ತಿ ಗೌರವದ ಸಂಕೇತವಾಗಿ ಈ ಪೂಜೆ ಇದೆ ಎಂದಾಗುತ್ತದೆ. ಇದು ಅಸ್ಪೃಶ್ಯ ಭಾವವನ್ನು ಸಮಾಜದಲ್ಲಿ ತೊಲಗಿಸಿ ಸ್ಪರ್ಶಭಾವ

ತರುವಂತಹ ಸಾಮಾಜಿಕ ಕೊಡುಗೆ ಎನಿಸುತ್ತದೆ. ಈ ಮಠಕ್ಕೆ ಕೊಡವರು ಗೌಡರು ಹಾಗು ದಲಿತರು ಮುಂತಾದ ಎಲ್ಲ ಜನಾಂಗದವರೂ ಬಂದು ನಡೆದುಕೊಳ್ಳುತ್ತಾರೆ. ಕ್ರಿ.ಶ. ೧೯೩೫ರಲ್ಲಿ ಕೊಡವರಾದ ರಾ॥ ಬಾ॥ ಕೇಟೋಳಿರ ಚಂಗಪ್ಪನವರು ಮಠದ ಮೇಲಿದ್ದ ಭಕ್ತಿಗೌರವದ ಸಂಕೇತವಾಗಿ ಮಠದ ನಿರೂಪಗಳನ್ನು ನೋಡಿ ಮಠದ ಜಮೀನು ಪರಾಕ್ರಮಣವಾಗದಂತೆ ತಡೆಯಲು, ಜಮಾಬಂದಿಯ ೬ನೇ ಕಾಲಂಗೆ ಸೇರಿಸಿ ಆಧುನಿಕ ನಿಯಮಗಳಿಗನುಸಾರವಾಗಿ ಬಿಗಿ ಮಾಡಿದರಂತೆ. ಮಠದ ವತಿಯಿಂದ ವಿದ್ಯಾಸಂಸ್ಥೆಗಳಿಗೆ ಧನಸಹಾಯ, ಶಾಲಾನಿರ್ವಹಣೆ, ಎಲ್ಲ ಜನಾಂಗದ ವಿದ್ಯಾರ್ಥಿಗಳಿಗೆ ಅನ್ನದಾನ, ಪುಸ್ತಕ, ಬಟ್ಟೆಗಳನ್ನು ವಿತರಣೆ ಮಾಡಲಾಗಿದೆ; ನೌಕರರ ಸಂಘದ ಕಟ್ಟಡಕ್ಕೆ ಬೋರ್‌ವೆಲ್ ನಿರ್ಮಾಣಕ್ಕೆ ಬಡವರಿಗೆ ಮನೆ ಕಟ್ಟಿಕೊಳ್ಳಲು ಜಮೀನು ನೀಡಲಾಗಿ; ಹನುಮಂತನ ದೇಗುಲ ನಿರ್ಮಾಣಕ್ಕೆ ಧನಸಹಾಯ ಮಾಡಲಾಗಿದೆ ಎಂದು ತೊರೆನೂರು ಮಠದ ಅಧ್ಯಕ್ಷರಾದ ಶ್ರೀ ಮಹಂತ ಸ್ವಾಮಿಗಳು ಸೋದಾಹರಣವಾಗಿ ತಿಳಿಸಿದ್ದಾರೆ. ಈಚೆಗೆ ಈ ಮಠದ ಒಂದು ಶಾಖೆಯನ್ನು ಕ್ಯಾತ್ಸಂದ್ರದ ಶ್ರೀ ಸಿದ್ಧಗಂಗಾ ಕ್ಷೇತ್ರದ ವತಿಗೆ ಬಿಟ್ಟುಕೊಡಲಾಗಿದೆ. ಪೆಗ್ಗಡೆ, ಮಾಪಿಳ್ಳೆ, ಕ್ರೈಸ್ತ, ಬ್ರಾಹ್ಮಣ ವಧೂವರರು ಈ ಮಠಕ್ಕೆ ಬಂದು ದೀಕ್ಷೆ ಪಡೆದು ವೀರಶೈವ ಹೆಣ್ಣು ಗಂಡುಗಳೊಡನೆ ಮದುವೆ ಆಗಿದ್ದಾರೆ. ಈ ಮಠಕ್ಕೆ 'ಪಚ್ಚೆಕಂತೆ ಬುಡಕಟ್ಟು' ಸಮಯದ್ದು ಎನ್ನುವುದೂ ಉಂಟು. ಇದು ಬೇಡುಜಂಗಮ ಗುರು ಸಂಬಂಧವೋ ಏನೋ ಗೊತ್ತಿಲ್ಲ.

ಆರಮೇರಿ ಮಠ

ಕಳಂಚೇರಿ ಮಠ, ಬೆಪ್ಪುನಾಡು ಮಠ ಎಂದೂ ಹೆಸರಿರುವ ಈ ಮಠವನ್ನು ಸಿರಿಬಾಯಿ ದೊಡ್ಡವೀರಪ್ಪನು ತಂಗಿ ನೀಲಮ್ಮಾಜಿಯ ಸದ್ಬೋಧೆಗಾಗಿ ಕ್ರಿ.ಶ. ೧೬೯೦ರ ಸುಮಾರಿನಲ್ಲಿ ಕಟ್ಟಿಸಿ ಗುರುಗಳನ್ನು ನೇಮಿಸಿದ. ಈಗಿನ ಹಿರಿಯ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲ ಸ್ವಾಮಿಗಳು ಈ ಮಠದ ಪರಂಪರೆಯಲ್ಲಿ ೯ನೆಯವರಾಗಿದ್ದಾರೆ. ಅರಮೇರಿಯ ಉತ್ತುನಾಯಕ ಎಂಬ ಗಂಡಿಗೆ ಲಿಂಗದೀಕ್ಷೆಮಾಡಿಸಿ ಚನ್ನಬಸವ ಎಂಬ ಹೆಸರಿಟ್ಟು ರಾಜಕುಮಾರಿ ನೀಲಮ್ಮಾಜಿಯನ್ನು ಮದುವೆ ಮಾಡಿತ್ತು. ಇವನು ರಾಜನ ವಿರುದ್ಧ ವಿದ್ರೋಹವೊಂದರಲ್ಲಿ ಕೋಟಿಂಗಡಿ ವೀರವರ್ಮನೊಡನೆ ಸೇರಿದ. ಆ ರಾಜನಿಗೆ ಕೊಡಗಿನೆದುರು ಸೋಲಾದಾಗ ಚನ್ನಬಸವ ಕೇರಳದ ಬೈತೂರಿಗೆ ಹೋಗಿ ತೀರಿದ. ನೀಲಮ್ಮಾಜಿಗೆ ಮಕ್ಕಳಿರಲಿಲ್ಲ. ದೊಡ್ಡವೀರಪ್ಪ ತಂಗಿಯನ್ನು ಅರಮನೆಯಲ್ಲಿರಲು ಹೇಳಿದರೂ ಒಪ್ಪದೆ ಅರಮೇರಿಯ ಗಂಡನ ಮನೆಯಲ್ಲಿ ನಿಂತಳು. ಅಂತಾಗಿ ರಾಜ ಸ್ಥಾಪಿಸಿದ ಈ ಮಠದ ಗುರುಗಳಲ್ಲಿಗೆ ಬಂದು ಉಪದೇಶ ಪಡೆದು ಹೋಗುತ್ತಿದ್ದಳು. ಅವಳು ಲಿಂಗೈಕ್ಯಳಾದ ಮೇಲೆ ಅರಮೇರಿಯ ನಾಯಕಂಡ ಐನ್‌ಮನೆ ಎದುರು ಕೈಮಡಕಟ್ಟಿ, ವಾರ್ಷಿಕವಾಗಿ ಇಂದಿಗೂ ಆಕೆಗೆ ಸಿಹಿ ಮೀದಿ (ಎಡೆ) ಮಾತ್ರ ಇಟ್ಟು ಆ ಮನೆತನದವರು ಪೂಜಾರಾಧನೆ ನಡೆಸುತ್ತಾರೆ. ಬಹುಶಃ ಆಕೆಗೆ ಈ ಮಠದ ಮೊದಲ ಗುರು ಪುಟ್ಟಯ್ಯಸ್ವಾಮಿಗಳು. ಕ್ರಿ.ಶ. ೧೮೧೨ರಲ್ಲಿದ್ದ ಶಿವಾನಂದಸ್ವಾಮಿಗಳು ರಾಣಿ ದೇವಮ್ಮಾಜಿಗೂ ಕುಲಗುರುಗಳಾಗಿದ್ದಂತೆ ತೋರುತ್ತದೆ. ಈ ಮಠ ಶಿವಾನಂದ ಸ್ವಾಮಿಗಳ ನಂತರ ಚೀಲಾಳ ಶಾಖೆಯ ಗುರುಗಳ ವಶಕ್ಕೆ ಬಂದಿತೆಂದು ಅರಮೇರಿಯ ಸ್ವಾಮಿಗಳು ಹೇಳುತ್ತಾರೆ.

ಶಿವರಾತ್ರಿ, ಬಸವ ಜಯಂತಿ, ಶಿವಾನುಭವ ಗೋಷ್ಠಿ, ಹುತ್ತರಿ ಹಬ್ಬದಾಚರಣೆ ಇದೆ. ಮೊದಲು ಹುತ್ತರಿ ಸಮಯದಲ್ಲಿ ಕೊಡವರು ಈ ಮಠಕ್ಕೆ ಬರುತ್ತಿದ್ದಾಗ ದಾಸೋಹ ವ್ಯವಸ್ಥೆ ಮಾಡುತ್ತಿದ್ದರು. ದಲಿತ ವರ್ಗದ ಕೆಂಬಟ್ಟಿಗಳು ಈ ಮಠಕ್ಕೆ ಉಭ-ಶುಭ, ಕಷ್ಟ-ಸುಖದ ವಿಷಯಗಳಿಗೆ ಬರುವ ಪದ್ಧತಿ ಇಂದಿಗೂ ಇದೆ. ಜಮ್ಮ ಮಾಪಿಳ್ಳೆಗಳ ಜನಪದ ಕಲೆ 'ದಪ್ಪು ಆಟ್' ಪ್ರದರ್ಶನವು ಮಠದ ಉತ್ಸವ ಸಮಾರಂಭಗಳಲ್ಲಿ ಅವಿಭಾಜ್ಯ ಅಂಗವಾಗಿದೆ. ಈ ಮಠ ವೀರರಾಜೇಂದ್ರ ಪೇಟೆಯ ಕರ್ನಾಟಕ ಸಂಘದ ಕಟ್ಟಡಕ್ಕೆ ದೇಣಿಗೆ ನೀಡಿದೆ. ಪ್ರೈಮರಿ, ಹಾಗು ಟಿ.ಸಿ.ಎಚ್ ಮುಂತಾದ ಶಿಕ್ಷಾರ್ಥಿಗಳಿಗೆ ಊಟ, ವಸತಿ, ವಿದ್ಯಾರ್ಥಿ ವೇತನದ ವ್ಯವಸ್ಥೆಯನ್ನು ಮಾಡಿರುವುದುಂಟು. ಹಾಲೇರಿ ಅರಸರ ಬಪಗ್ಗೆಯ ಕುರಿತ ವಿಚಾರಗೋಷ್ಠಿಯನ್ನು ವೀರರಾಜಪೇಟೆ ಕರ್ನಾಟಕ ಸಂಘದಲ್ಲಿ ಮಠದವರು, ಸ್ಥಳೀಯರ ಸಹಕಾರದಿಂದ ನಡೆಸಿದ್ದಾರೆ. ೮೦ ಕಳೆದ ಈ ಸ್ವಾಮಿಗಳು ವೃದ್ಧನನ್ನು ಮದುವೆಯಾಗಿದ್ದ ಕನ್ಯೆಯ ಸೆರೆ ಬಿಡಿಸಿ, ಸೂಕ್ತ ತರುಣನಿಗೆ ಮದುವೆ ಮಾಡಿಸಿ ಕ್ರಾಂತ ಮನೋಭಾವವನ್ನು ಉಳಿಸಿಕೊಂಡಿದ್ದಾರೆ. ಲಿಂಗವಂತ ಹುಡುಗಿ ಹಾಗು ಅನ್ಯ (ಮಾಪಿಳ್ಳೆ) ಧರ್ಮೀಯ ಹುಡುಗನ ಇಚ್ಛೆಗೆ ಅನುಗುಣವಾಗಿ ದೀಕ್ಷೆ ನೀಡಿ ಮದುವೆ ಮಾಡಿಸಿದ್ದಾರೆ. ಹೀಗೆಯೇ ಎಷ್ಟೋ ವಿವಾಹ ಕಾರ್ಯ ಮಾಡಿಸಿದ್ದು ಅವರ ಸಂಸಾರಗಳು ಸುಖವಾಗಿರುವುದು ಇಂದಿಗೂ ಕಾಣಬರುತ್ತದೆ. ಆದರೆ ವೀರರಾಜೇಂದ್ರ ಪೇಟೆಯಲ್ಲಿ ಅದನ್ನು ಕಟ್ಟಿದ ವೀರರಾಜೇಂದ್ರ ಒಡೆಯನ ಸ್ಮಾರಕ ಪ್ರತಿಮೆಯನ್ನೂ ಸ್ಥಾಪಿಸಬೇಕೆಂಬ ಈ ಮಠದ ಆಶಯ ಮಾತ್ರ ಕೆಲವು ರಾಜಕೀಯಸ್ತರ ಕಾರಣಗಳಿಂದ ಈಡೇರಿಲ್ಲ.

ಸೋಮವಾರಪೇಟೆ ಮಠ

ಜಮಾಬಂದಿಯಲ್ಲಿ 'ನಗರೂರು ಮಠ' ಎಂದೇ ದಾಖಲಾಗಿರುವ ಈ ಮಠವನ್ನು ಕೆಳದಿಯ ಕಿರಿಯ ಬಸಪ್ಪನಾಯಕನು (ಕ್ರಿ.ಶ. ೧೭೪೦-೫೫) ಕಟ್ಟಿಸಿಕೊಟ್ಟನೆಂದು ತೋರುತ್ತದೆ. ನಗರದ ಶಾಸನದಲ್ಲಿ 'ಶ್ರೀಮತ್ಕೆಳದಿ ಬಸಪ್ಪನಾಯಕರು... ಬಿದರೂರು ತಳವಾರಿಕೆ ಸಿಸ್ತಿನಲ್ಲು, ಸೋಮವಾರಪೇಟೆಯಲ್ಲು ಮುರಿಗೆ ಸ್ವಾಮಿಯವರ ಸಂಪ್ರದಾಯದ ಶಾಂತವೀರ ಸ್ವಾಮಿಗಳಿಗೆ ಕಟ್ಟಿಸಿಕೊಟ್ಟ ವಿರಕ್ತ ಮಠ' ಎಂದಿದೆ.[42] ಇದು ಕ್ರಿ.ಶ. ೧೭೪೦ರ ಘಟನೆ. 'ಕೊಡಗಿನ ಸೋಮವಾರಪೇಟೆ'ಗೇ ಈ ಶಾಸನೋಕ್ತ ಸಂಗತಿ ಅನ್ವಯವೆಂದರೆ, 'ನಗರೂರು ಮಠ' ಎಂಬ ಹೆಸರಿರುವುದಕ್ಕೆ ತಾರ್ಕಣೆ ಒದಗಬಹುದು. 'ಊರುಮಠ' ಎಂ ದೂ ಕರೆವ ರೂಢಿ ಇತ್ತು. ೧೯೩೫ರಲ್ಲಿ ಮಠಾಧಿಪತಿಗಳಾಗಿ ಬಂದ ಲಿಂ॥ ಗುರುಸಿದ್ಧಸ್ವಾಮಿಗಳು ಧಾರ್ಮಿಕ ಸಾಂಸ್ಕೃತಿಕ ಸೇವೆಯಲ್ಲಿ ತೊಡಗಿದರು. ಶಿವಾನುಭವಗೋಷ್ಠಿ ಶಿವಾನುಭವ ಪರೀಕ್ಷೆ, ಸಾಮೂಹಿಕ ವಿವಾಹ, ದಾಸೋಹ ನಿಲಯ ನಿರ್ಮಾಣ ಕಾರ್ಯಗಳನ್ನು ವ್ಯವಸ್ಥೆ ಮಾಡಿದರು. ಮಹಿಳಾ ಪ್ರೌಢಶಾಲೆಯನ್ನು ತೆರೆದರು.

ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ವಿದ್ಯಾಪೀಠಕ್ಕೆ ದಾನ ನೀಡಲಾಗಿದೆ. ಉಚಿತ ಸಾರ್ವಜನಿಕ ಹಾಸ್ಟೆಲ್ ಮಠದ ವತಿಯಿಂದ ನಡೆಸಲಾಗುತ್ತಿದೆ. ೧೯೪೨ ರಿಂದಲೇ ದಲಿತ ವರ್ಗದ ಮಕ್ಕಳನ್ನು ಈ ಮಠದಲ್ಲಿ ಸಾಕಿ ಮಠದ ಬಳಿಯೆ ಅವರಿಗೆ ವಸತಿಗಳನ್ನು ನಿರ್ಮಿಸಿ ಕೊಡಲಾಗಿದೆ. ಕೊಡವ ಹಾಗು ಗೌಡ ಜನಾಂಗದವರು ತಮ್ಮಲ್ಲಿನ ದೇಗುಲ ಉದ್ಘಾಟನೆ ಹಾಗು ಇತರೆ ಸಾಂಸ್ಕೃತಿಕ ಸಮಾರಂಭಗಳಿಗೆ ಇವರಿಗೆ ಬಿನ್ನಹವಿಟ್ಟು ಕರೆಸುತ್ತಿದ್ದರು. ಇದು ಮಠದ ಸಾಮಾಜಿಕ ಪ್ರಭಾವದ ಕುರುಹಾಗಿದೆ. ಹಾಲಿ ಮಠಾಧಿಪತಿಗಳಾದ ಶ್ರೀ ವಿಶ್ವೇಶ್ವರ ಸ್ವಾಮಿಗಳವರು ಈ ಮಣೆಹವನ್ನು ಸಮರ್ಪಕವಾಗಿ ಮುಂದುವರಿಸಿದ್ದಾರೆ. ವಿಶೇಷ ಗ್ರಂಥ ಭಂಡಾರವನ್ನು ರೂಪಿಸಿದ್ದಾರೆ. ಹುತ್ತರಿ ಆಚರಣೆ, ಚೌಡಮ್ಮನ ಪೂಜೆ, ಜಾತಿ ಭೇದವಿಲ್ಲದೆ ವಿವಾಹಾದಿ ಕಾರ್ಯಗಳನ್ನು, ಶಿವಾನುಭವಗೋಷ್ಠಿ, ಶಿಕ್ಷಣ ಸಂಸ್ಥೆಗಳ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ಕೊಡಗಿಗೆ ವಿಶಿಷ್ಟವಾದ 'ಮಠದ ದೇವರ ಕಾಡು' - ಸುಮಾರು ಎರಡು ಎಕರೆಯಷ್ಟು ಇದ್ದ ಆ ಜಾಗವನ್ನು ಬಡಜನರಿಗೆ ನಿವೇಶನ ಮಾಡಿ ಉಚಿತವಾಗಿ ಹಂಚಿಕೊಟ್ಟಿದ್ದಾರೆ.

ಮಾದಾಪುರ ಮಠ

೨ನೇ ಲಿಂಗರಾಜೇಂದ್ರ ಒಡೆಯನ ಗದ್ದುಗೆ, ಬಸವೇಶ್ವರ ಇರುವ ಈ ಮುರುಘಾ ಸಂಪ್ರದಾಯದ ಮಠವನ್ನು ಕ್ರಿ.ಶ. ೧೭೮೦-೮೨ರ ಅವಧಿಯಲ್ಲಿ ಚರಮೂರ್ತಿ ಸಿದ್ಧಲಿಂಗಪ್ಪನವರು ಕಟ್ಟಿ ಪೂರ್ಣಗೊಳಿಸದರೆನ್ನಲಾಗಿದೆ. ಶಾಸನ ರೀತ್ಯಾ ಕ್ರಿ.ಶ. ೧೭೯೯ರಲ್ಲಿ ದೊಡ್ಡವೀರರಾಜೇಂದ್ರ ಒಡೆಯನು ಕಟ್ಟಿಸಿದನೆಂದಿದೆ.[43] ರಾಜೇಂದ್ರನಾಮೆಯ ರೀತ್ಯಾ ಕ್ರಿ.ಶ. ೧೮೦೪ರ ಸುಮಾರಿನಲ್ಲಿ ಈ ಮಠದ ಗದ್ದುಗೆ ಮಂಟಪವು 'ಹೊಸ್ತಾಗಿ' ಕಟ್ಟಲ್ಪಟ್ಟುದುದಾಗಿದೆ.[44] ವಾಸ್ತವಿಕವಾಗಿ ಕ್ರಿ.ಶ.೧೭೯೯ರಲ್ಲಿ ದೊಡ್ಡವೀರರಾಜೇಂದ್ರನು ಹೈದರ್, ಟಿಪ್ಪುಗಳಿಂದಾಗಿ ಗೊರೂರು ಪಿರಿಯಾಪಟ್ಟಣಕ್ಕೆ ಸೆರೆಯಾಗಿ ಹೋಗುವ ಮುನ್ನಾ ಆರಂಭವಾದ ಕಾರ್ಯವು ಸಿದ್ಧಲಿಂಗಪ್ಪನವರಿಂದ ತತ್ಕಾಲಕ್ಕೆ ಪೂರ್ಣಗೊಂಡಿತ್ತು. ಅವನು ಸೆರೆಯಿಂದ ಬಂದು ರಾಜ್ಯದ ವ್ಯವಸ್ಥೆ ಮಾಡಿ ನಂತರ ಈ ಕಾರ್ಯವನ್ನು ಪೂರ್ಣಗೊಳಿಸಿದುದು ಕ್ರಿ.ಶ.೧೮೦೪ರಲ್ಲಿ ಆಗಿದ್ದು ೨೪ ವರ್ಷಗಳ ಅವಧಿಯಲ್ಲಿ ಅದು ಪೂರ್ಣಗೊಂಡಿತು ಎನ್ನಬೇಕು. ಈ ಮಠದ ಬಗ್ಗೆ ಇಷ್ಟೆಲ್ಲ ಹೇಳುವ ಕಾರಣ ಇಲ್ಲಿ ರಾಜಗದ್ದುಗೆ, ಗುರುಗಳಾದ ಸೋಮೇಶ್ವರ ಶಿವಯೋಗಿ ಹಾಗು ಅವರ ಕರಕಮಲ ಸಂಜಾತ ಶ್ರೀ ಗುರುಪಾದ ಸ್ವಾಮಿಗಳ ಗದ್ದುಗೆಗಳಿವೆ ಎಂದಷ್ಟೆ ಕಾರಣವಲ್ಲ. ಈ ಮಠದಲ್ಲಿ ಓಲೆಪ್ರತಿ ಸಂಗ್ರಹ ಹಾಗು ಅಧ್ಯಯನ ಇದ್ದು ಅದಕ್ಕೆ ಅನುಗುಣವಾದ ಕಟ್ಟಡವನ್ನು ವೀರರಾಜೇಂದ್ರ ಒಡೆಯ ಕಟ್ಟಿಸಿದ ಎಂಬುದೂ ಆಗಿದೆ. ಕಾರಣ ರಾಜ ಗದ್ದುಗೆಯಿಂದಾಗಿ ಜನ ಗೌರವ, ಸಾಹಿತ್ಯಿಕನೆಲೆಯಾಗಿ ವಿದ್ವಾಂಸರಿಗೆ ಆಸರೆ ಇತ್ತು ಎಂದಾಗುತ್ತದೆ. ಇದರ ಫಲವೇನೋ ನಾಗವರ್ಮನ ಛಂದೋಂಬುಧಿಯ ಪ್ರತಿ ಇಲ್ಲಿ ದೊರಕಲು ಆಧಾರವಾಗಿರಬೇಕು. ಇದರ ವಾಸ್ತು ಇಂಡೋ ಇಸ್ಲಾಮಿಕ್ ಶೈಲಿಯಲ್ಲಿದ್ದು ಸುಂದರವಾದ ಕಟ್ಟಡವಾಗಿದೆ. ಅಂದರೆ ಆದಿಲ್ ಶಾಹಿ ವಾಸ್ತು ಪ್ರಭಾವಿತ ಮಡಿಕೇರಿಯ ರಾಜರ ಗದ್ದುಗೆ ಹಾಗು ಓಂಕಾರೇಶ್ವರ ದೇಗುಲದ ವಾಸ್ತುವನ್ನು[45] ಇದು ಹೋಲುತ್ತದೆ. ಇಂದು ಚಿತ್ರದುರ್ಗ ಬೃಹನ್ಮಠದ ನೇರ ನಿರ್ವಹಣೆಗಿದೆ. ಪ್ರೌಢಶಾಲೆ ಇದೆ. ಮಠದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದೆ.

ಮೊದಲಿಗೆ ಮಠದ ಸ್ವಾಮಿಗಳು ವಾಸ್ತವ್ಯವಿದ್ದಾಗ ಮಳೆಗಾಲದಲ್ಲಿ, ನಾಟಿಯ ಜನಪದ ಹಾಡು'ಒಯ್ಯಕಾರುವ' ಓಟ್‌ನಾಟಿ (ತರುಣರ ಕೆಸರುಗದ್ದೆ ಓಟ) ಸ್ಪರ್ಧೆಗಳು ಮಠದ ಗದ್ದೆಗಳಲ್ಲಿ ನಡೆಯುತ್ತಿತ್ತು. ಸ್ವಾಮಿಗಳು ಕುಪ್ಪಸದಟ್ಟಿ



ಶ್ರೀ ಜಿ.ಎಸ್. ಮುದ್ದಪ್ಪನವರು, ಬೇಲಿ ಮಠದ ಶ್ರೀಗಳು, ಶ್ರೀ ಮಠದ ಉತ್ತರಾಧಿಕಾರಿ ಶ್ರೀಗಳು, ಶ್ರೀ ಪುಟ್ಟಸ್ವಾಮಿಗೌಡರು, ಡಾ. ಎಂ.ಸಿ. ಮೋದಿ ಅವರು



ಶ್ರೀಗಳವರಿಂದ ವಜ್ರಮಹೋತ್ಸವ ಸ್ಮಾರಕ ವಿದ್ಯಾರ್ಥಿನಿಲಯಕ್ಕೆ ಗುದ್ದಲಿಪೂಜೆ.



ವಜ್ರಮಹೋತ್ಸವ ಸ್ಮಾರಕ ವಿದ್ಯಾರ್ಥಿನಿಲಯಕ್ಕೆ ಶ್ರೀಮಠದ ಉತ್ತರಾಧಿಕಾರಿ ಕಿರಿಯ ಶ್ರೀಗಳಿಂದ ಗುದ್ದಲಿಪೂಜೆ



ವಿದ್ಯಾರ್ಥಿನಿಲಯ, ಪ್ರಸಾದ ನಿಲಯಗಳ ಶಂಕುಸ್ಥಾಪನೆ.



ವಜ್ರಮಹೋತ್ಸವ ಸ್ಮಾರಕ ವಿದ್ಯಾರ್ಥಿನಿಲಯ - ಪ್ರಾರಂಭಿಕ ಹಂತದ ಚಿತ್ರ



ವಿದ್ಯಾರ್ಥಿನಿಲಯ - ಪ್ರಾರಂಭಿಕ ಹಂತ - ಬೆಟ್ಟದ ಹಿನ್ನೆಲೆ



ವಿದ್ಯಾರ್ಥಿನಿಲಯದ ಕಟ್ಟಡದ ಪ್ರಾರಂಭದ ಚಿತ್ರ



ವಿದ್ಯಾರ್ಥಿನಿಲಯದ ಕಟ್ಟಡದ ಮೂರನೇ ಹಂತಕ್ಕೆ ಕಬ್ಬಿಣ ಕಟ್ಟಿರುವ ಚಿತ್ರ



ವಿದ್ಯಾರ್ಥಿನಿಲಯದ ಮೇಲ್ಛಾವಣಿ ದೃಶ್ಯ



ಪ್ರಸಾದನಿಲಯದ ಮೇಲ್ಛಾವಣಿ ದೃಶ್ಯ



ವಜ್ರಮಹೋತ್ಸವ ಸ್ಮಾರಕ ಕಟ್ಟಡಗಳ ಪರಿಶೀಲನೆಯಲ್ಲಿ ಶ್ರೀಗಳವರು ಸಮಿತಿಯ ಪದಾಧಿಕಾರಿಗಳೊಡನೆ





ವಜ್ರಮಹೋತ್ಸವ ಸ್ಮಾರಕ ವಿದ್ಯಾರ್ಥಿನಿಲಯ




ವಜ್ರಮಹೋತ್ಸವ ಸ್ಮಾರಕ ಪ್ರಸಾದ ನಿಲಯ - ಮುಂಭಾಗದಲ್ಲಿ ನಿರ್ಮಲ ಕಲ್ಯಾಣಿ



ಶ್ರೀಗಳು - ಶ್ರೀ ವೀರೇಂದ್ರ ಹೆಗ್ಗಡೆ
ಧರ್ಮಸ್ಥಳ





ಶ್ರೀಗಳು - ಶ್ರೀ ಶಿವರಾಮ ಕಾರಂತರು
ಮತ್ತು ಶ್ರೀ ಸಿದ್ಧಲಿಂಗಸ್ವಾಮಿಗಳು

ಶ್ರೀಗಳು - ಎ.ಎನ್. ಮೂರ್ತಿರಾವ್






ಶ್ರೀ ಉದ್ದಾನೇಶ್ವರ ಚರಿತ್ರೆಯ ಬಿಡುಗಡೆ -
ಡಾ. ಎಲ್. ಬಸವರಾಜು ಅವರಿಂದ

ಶ್ರೀಗಳು, ಡಾ. ಎಂ.ಸಿ. ಮೋದಿ, ಶ್ರೀ
ಬಿ.ಎಸ್. ಮುದ್ದಪ್ಪನವರು





ಶ್ರೀಗಳವರಿಂದ ಶ್ರೀಮತಿ ಕಸ್ತೂರಿ ಶಂಕರ್
ಅವರಿಗೆ ಸನ್ಮಾನ

ಶ್ರೀಗಳವರಿಗೆ ಹಾಸನದ ವೀರಶೈವ
ಪ್ರಮುಖರಾದ ಶ್ರೀ ಶಿವಕುಮಾರ್
ಅವರಿಂದ ಭಕ್ತಿ ಸಮರ್ಪಣೆ





ಶ್ರೀಗಳು, ಶ್ರೀ ಗೊ.ರು. ಚೆನ್ನಬಸಪ್ಪ,
ಶ್ರೀ ಡಿ.ಎಂ. ಚಂದ್ರಶೇಖರ್,
ಶ್ರೀ ಬೇಲಿಮಠದ ಶ್ರೀಗಳು



ಶ್ರೀಗಳು - ಕಿರಿಯ ಶ್ರೀಗಳು, ಮಾಜಿ ರಾಜ್ಯಪಾಲ ಶ್ರೀ ವೆಂಕಟಸುಬ್ಬಯ್ಯನವರು



ಶ್ರೀಗಳು - ಬೇಲಿ ಮಠದ ಶ್ರೀಗಳು, ಕನಕಪುರದ ದೇಗುಲ ಶ್ರೀಗಳು, ಶ್ರೀ ಬಿ.ಎಂ. ಚಂದ್ರಶೇಖರ್, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಶ್ರೀ ಚೆನ್ನಪ್ಪ ಎರೆಸೀಮೆ



ಶ್ರೀಮಠದ ಹಳೆ ವಿದ್ಯಾರ್ಥಿ ಸಂಘದ ಸಭೆ



ಶ್ರೀಗಳು, ಶ್ರೀ ಹೆಚ್.ಎಂ. ಗಂಗಾಧರಯ್ಯ, ಶ್ರೀ ಎಸ್.ಆರ್. ಜಗದೀಶ್, ಶ್ರೀ ಆದಿರಾಜಯ್ಯನವರು



ಶ್ರೀಗಳು, ಶ್ರೀ ವಿ.ಎಸ್. ಕೃಷ್ಣ ಅಯ್ಯರ್



ಶ್ರೀಗಳವರಿಂದ ಪದ್ಮಶ್ರೀ ಆರ್.ಎಂ.ಪಿ. ಆರಾಧ್ಯರಿಗೆ ಸನ್ಮಾನ



ಶ್ರೀಗಳು - ಶ್ರೀ ಚಂದ್ರಕಾಂತ ಬೆಲ್ಲದ ಶಾಸಕರು



ಶ್ರೀಗಳು - ಉಜಿರೆಯಲ್ಲಿ



ಶ್ರೀಗಳು - ತರಳಬಾಳು ಹುಣ್ಣಿಮೆಯಲ್ಲಿ



ಶ್ರೀಗಳವರಿಗೆ ಸಾರ್ವೆ ಶ್ರೀ ಮಹಾಂತಪ್ಪ ಗೌಡರಿಂದ ಭಕ್ತಿ ಕಾಣಿಕೆ ಸಮರ್ಪಣೆ



ಶ್ರೀಗಳು - ಆನಂದಪುರದ ಶ್ರೀಗಳು



ಶ್ರೀಗಳು - ಸಾಲೂರು ಶ್ರೀಗಳು



ಶ್ರೀಗಳು, ಶ್ರೀಮಠದ ಹಳೆಯ ವಿದ್ಯಾರ್ಥಿ ಶ್ರೀ ಎಲ್. ರೇವಣ್ಣ ಸಿದ್ದಯ್ಯನವರು ವಜ್ರಮಹೋತ್ಸವದ ಸ್ಮಾರಕ ಬೃಹತ್ ಪ್ರಸಾದ ನಿಲಯಕ್ಕೆ ಗುದ್ದಲಿ ಪೂಜೆಯಲ್ಲಿ



ಕನಕಪುರದ ದೇಗುಲಮಠದ ಸಮಾರಂಭದಲ್ಲಿ ಶ್ರೀಗಳು





ಶ್ರೀಮಠದ ಗ್ರಾಮಾಂತರ ಬಸವ ಜಯಂತಿ ನಾಟಕ 'ಅನುಭವ ಮಂಟಪ'

ವಜ್ರ ಮಹೋತ್ಸವ ಸಮಿತಿ ಪದಾಧಿಕಾರಿಗಳು



ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು
ಕಿರಿಯ ಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠ
ಗೌರವಾಧ್ಯಕ್ಷರು



ಡಾ. ಎಂ.ಸಿ. ಮೋದಿ
ಅಧ್ಯಕ್ಷರು



ಶ್ರೀ ಬಿ.ಎಸ್. ಮುದ್ದಪ್ಪ
ಕಾರ್ಯಾಧ್ಯಕ್ಷರು



ಶ್ರೀ ಎಸ್.ಎಸ್. ಹಸಬಿ
ಕಾರ್ಯದರ್ಶಿಗಳು



ಶ್ರೀ ಟಿ.ಕೆ. ನಂಜುಂಡಪ್ಪ
ಕೋಶಾಧ್ಯಕ್ಷರು

ಹಾಕಿಕೊಂಡು ವಿಜೇತ ಸ್ಪರ್ಧಿಗಳಿಗೆ ಬಹುಮಾನ ನೀಡುತ್ತಿದ್ದರು. ಹುತ್ತರಿಯಲ್ಲಿ ಮಠದ ಗದ್ದೆಯಿಂದ ಭತ್ತದ ಕದಿರು ತಂದು ಗದ್ದುಗೆ ಬಸವೇಶ್ವರನ ಬಳಿ ಪೂಜೆಗಿಡುತ್ತಿದ್ದರು. ನಂತರ ಗ್ರಾಮದ ಎಲ್ಲರೂ ಕದಿರುಗಳನ್ನು ಪಡೆದು ಮನೆಗೆ ಒಯ್ದು ಅಸ್ತಿ ಸರಕುಗಳಿಗೆ ಸಿಗಿಸುತ್ತಿದ್ದರು. ಮಠದ ಮುಂದೆ ಹುತ್ತರಿ ಕೋಲಾಟ ನಡೆಯುತ್ತಿತ್ತು. ಗುರುಗಳು ಹುತ್ತರಿ ಕೋಲಾಟಕ್ಕೆ ಆಶೀರ್ವಾದದ ಕೋಲು ಹೊಡೆದ ಮೇಲೆ ಕೊಡವರು ಕೋಲಾಟ ಆರಂಭಿಸುತ್ತಿದ್ದರು. ಹಾಲೇರಿ ಅರಸರು ದಸರೆ ಆಚರಣೆಯಲ್ಲಿ ಜಂಬೂಸವಾರಿಯನ್ನು ಇಲ್ಲಿ ನಡೆಸುತ್ತಿದ್ದರು. ದೀಪಾವಳಿಯಲ್ಲಿ ಕಾರ್ತೀಕೋತ್ಸವನ್ನು ಈ ಮಠದಲ್ಲಿ ಅವರು ನಡೆಸುತ್ತಿದ್ದರು. ವಿವಿಧ ದೈವಗಳ ತೆರೆ, ಕೋಲಗಳಾದ 'ಪತ್ತು ಕೂಟ ಪಾತಾಳ'ವನ್ನು[46] ಜನತೆ ಮಠದ ಮುಂದೆ ಕಟ್ಟಿಸುತ್ತಿತ್ತು. ಇಂದಿಗೂ ಕೇರಳ, ದ. ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಿಂದ ಭಕ್ತರು ವಾರ್ಷಿಕ ಪೂಜೆಗಾಗಿ ಇಲ್ಲಿಗೆ ಬರುತ್ತಾರೆ. ಕೊಡಗಿನ ಉತ್ತರ ಭಾಗಗಳಿಗೆ ಹೋಗಿ ಬರುವವರಿಗೆ ಇದು ಆಸರೆ ಹಾಗು ದಾಸೋಹ ನೆಲೆ ಆಗಿತ್ತು. ಇದೆಲ್ಲ ಜನಸಂಸ್ಕೃತಿಯಲ್ಲಿ ಕೊಡಗಿನ ವೀರಶೈವ ಮಠಗಳ ಪಾತ್ರವನ್ನು ತೋರಿಸುತ್ತದೆ. ಈ ಮಠದಲ್ಲಿ ವೀರರಾಜೇಂದ್ರ ಒಡೆಯನ ರಾಜಗುರುಗಳ ವಾಸ್ತವ್ಯವೂ ಇತ್ತು.

ಹೆಗ್ಗಡೆಹಳ್ಳಿಮಠ

ಶನಿವಾರಸಂತೆಗೆ ಸುಮಾರು ೩-೪ ಮೈಲಿಗಳ ದೂರದಲ್ಲಿರುವ ಈ ಮಠ ಮೊದಲಿಗೆ ಕೊಡಗಿಗೆ ಸೇರಿದ ಮಠ ಆಗಿತ್ತು. ಶ್ರೀಶೈಲ ಶಾಖಾನುವರ್ತಿಯಾದ ಈ ಮಠದ ಜಾತ್ರೆಯ ಸಂದರ್ಭಗಳು ಇಂದಿಗೂ ಕೊಡಗಿನ ಅವರದಾಳು ಗ್ರಾಮದಲ್ಲಿ ಹುಲುಕೋಡಯ್ಯನಿಗೆ ಹಾಗು ಹಾಸನ ಜಿಲ್ಲೆ ಗೊದ್ದುಗ್ರಾಮದ ದೊಡ್ಡಯ್ಯನ ಜಾತ್ರೆಗೆ ಸಂಬಂಧಿಸಿದುದಾಗಿವೆ. ಮಕರ ಸಂಕ್ರಾಂತಿಯ ಮರು ಎರಡು ದಿನ ಅನುಕ್ರಮವಾಗಿ ನಡೆಯುವ ದೊಡ್ಡಯ್ಯ ಮತ್ತು ಹುಲುಕೋಡಯ್ಯ (ಕುಮಾರ ಲಿಂಗೇಶ್ವರರು) ಜಾತ್ರೆಗಳಿಗೆ ಸಾಂಸ್ಕೃತಿಕವಾಗಿ ಸಂಬಂಧವಿದೆ. ಮಠದ ಗುರುಗಳು ಸುಮಾರು ೧೦ ಮೈಲಿಗಳ ಅಂತರದಲ್ಲಿ ಈ ಎರಡೂ ಗ್ರಾಮದ ಜಾತ್ರೆಗಳಿಗೆ 'ಕೊಟವಳಿ-ಕಣಿಯರ' ಸಹವಾಗಿ ಜನತೆಯೊಡನೆ ಹೋಗಿ ಆಶೀರ್ವದಿಸಿ ಬರುವುದು ಪ್ರಾಚೀನದಿಂದ ಬಂದ ಪದ್ಧತಿ. ಈ ಜನಪದ ಜಾತ್ರೆಯ ಈ ವ್ಯಕ್ತಿಗಳು ಶನಿವಾರ ಸಂತೆಯ ಬಳಿಯ ಬೆಂಬಳೂರಿನ ಗ್ರಾಮದೇವತೆ ಬಾಣತಮ್ಮ (ಪಾರ್ವತಿ ಅವತಾರ)ನ ಏಳು ಮಕ್ಕಳಲ್ಲಿ ಇವರು ಮೊದಲಿನವರು. ಇಬ್ಬರು ಐತಿಹಾಸಿಕ ವ್ಯಕ್ತಿಗಳೆ. ದೊಡ್ಡಯ್ಯ ಹಾಲೇರಿ ಅರಸನ ಕಾಲದವ. ಅವನು ವೀರ. ಜಾನಪದದಲ್ಲಿ ಸಮೀಕರಣವಾಗಿಬಿಟ್ಟಿದ್ದಾನೆ. ಹುಲುಕೋಡಯ್ಯ ದಲಿತ ಹೆಣ್ಣೊಂದನ್ನು ಪ್ರೀತಿಸಿ ಅವಳನ್ನು ಮದುವೆಯಾಗಿ, ಅವಳಿಗೊಂದು ಪೂಜಾಸ್ಥಾನವನ್ನು ಗಳಿಸಿಕೊಟ್ಟಿದ್ದಾನೆ. ಆ ಬಗ್ಗೆ ಜನಪದ ಗೀತೆಯ ಇದೆ.[47] ಜಾತ್ರೆಯಲ್ಲಿ ಅವಳ ಗದ್ದುಗೆಗೆ ವೀರಶೈವರು ಪೂಜೆ ಇಡುತ್ತಾರೆ. ಈ ಮಠದಲ್ಲಿನ ಮುಖ್ಯವಾಗಿ ದಲಿತವರ್ಗದ ಕಾಳಜಿಯ ಸಂಕೇತವಾಗಿ ಕೊಟವಳಿ-ಕಣಿಯ ದೀಕ್ಷೆ ಕೊಡಲಾಗುತ್ತದೆ. 'ಕೊಡವಳಿ'ಗೆ ಪಟ್ಟದ ಸ್ವಾಮಿಯ ಸ್ಥಾನ. ಕಣಿಯನಿಗೆ ಚರಮೂರ್ತಿಯ ಸ್ಥಾನ. ದೀಕ್ಷೆ ಪಡೆದ ಮೇಲೆ ಇವರು ಸಸ್ಯಾಹಾರಿಗಳಾಗಿಬಿಡುತ್ತಾರೆ. ಮಠದ ಗುರುಗಳೊಡನೆ ಸನಿಹವಾಗಿ ಜಾತ್ರೆಗೆ ಇವರು ಸಾಗಿಬರಬೇಕು. ಜಾತ್ರೆಯಲ್ಲಿ ದಲಿತವರ್ಗದ ನವ ವಧೂವರರಿಗೆ ಗುರುಗಳ ಸಹಿತವಾಗಿ ಆಶೀರ್ವಚನ ಹಾಗೂ ಆ ಜನರ ಕಷ್ಟನಿಷ್ಠುರಗಳ ಬಗ್ಗೆ ಪರಿಹಾರೋಪಾಯ, ಸಮಾಲೋಚನೆಯ ವ್ಯವಸ್ಥೆಯನ್ನು ಇವರಿಬ್ಬರೂ ಮಾಡುತ್ತಾರೆ. ಕೊಟವಳಿಯು ಹಾಕುವ ಕ್ರಿ.ಶ.೧೮೭೭೮ರ ಡವಾಲಿಯ ಮುದ್ರಾದಂಡಕೆ ತಗುಲಿಸಿರುವ ಹಿತ್ತಾಳೆ ಫಲಕದಲ್ಲಿ ಹೀಗಿದೆ-[48] 'ಕಳಗಳಲೆ ಗ್ರಾಮದಲ್ಲಿ ಇರುವ ಆದಿಕರ್ನಾಟಕ ಲಿಂಗನ ಮಗ ಕೊಟವಳಿ ಹೆಗ್ಗಡೆಗೆ ಶ್ರೀ ಗುರು ಹಂಡ್ರಂಗಿ ಮಠದ ಪಟ್ಟದ ಸನ್ನಿಧಿಯಿಂದ ಅಪ್ಪಣೆ ದಯಪಾಲಿಸಿದ ಮುದ್ರೆ ಬೆತ್ತ'. ಮಠದಲ್ಲಿ ಈ ಕೊಟವಳಿ-ಕಣಿಯರಿಗೆ ತರಬೇತಿ ನೀಡಲಾಗುತ್ತದೆ. ಮಠದಿಂದ ಕಣಿಯ ಆದವನು, ತನ್ನ ಸಮಾಜದ ಧಾರ್ಮಿಕ ವ್ಯವಹಾರಗಳನ್ನು ಕೊಟವಳಿ ಹಾಜರಾತಿಯಲ್ಲಿ ಆಯಾ ಗ್ರಾಮಗಳಲ್ಲಿ ನಿಭಾಯಿಸುತ್ತಾನೆ. ಹೆಚ್ಚಿನ ಸಂದರ್ಭಗಳಲ್ಲಿ ಮಠದ ಗುರುಗಳೇ ದಯಮಾಡಿಸುತ್ತಾರೆ. ಈ ದಲಿತಪರ ಕಾಳಜಿಗಳ ಫಲವಾಗಿ ಈ ಮಠದ ಗುರುಗಳ ಸಂಬಂಧದಲ್ಲಿ ಜನಪದಗೀತೆಗಳು ಹುಟ್ಟಿವೆ.[49] ಸುಗ್ಗಿಕಟ್ಟೆ ಹಬ್ಬಗಳಲ್ಲಿ ಈ ಮಠದ ಗುರುಗಳು ಹೋಗಿ ಜನಪದ ಆಚರಣೆಗಳನ್ನು ಉದ್ಘಾಟಿಸುತ್ತಿದ್ದರು. ಹಾಲೇರಿ ಅರಸ (ದೊಡ್ಡ) ವೀರರಾಜೇಂದ್ರ ಒಡೆಯನು ಈ ಮಠಕ್ಕೆ ಜಹಗೀರು ನೀಡಿದ್ದ. ಅವನ ಕಾಲದಲ್ಲಿ ಈ ಮಠ ಕೊಡಗಿನ ಪ್ರದೇಶದಲ್ಲಿತ್ತು. ಕೊಡವರು, ಗೌಡರು, ವೀರಶೈವರು, ದಲಿತರು ಇತ್ಯಾದಿಯಾದ ಜನತೆ ವಿಶೇಷತಃ ಮಕರ ಸಂಕ್ರಾಂತಿಯಂದು ಮಠಕ್ಕೆ ಬಂದು ಭಕ್ತಿಗೌರವಗಳನ್ನು ಅರ್ಪಿಸಿ ಹೋಗುತ್ತಾರೆ. ಮಠದಲ್ಲಿ ಮೂಲಕ ಕರ್ತೃಗಳಾದ ಶಾಂತಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆ ಇದ್ದು, ಹಂಡ್ರಂಗಿ ಮಠವೂ ಇದರ ವ್ಯಾಪ್ತಿಗೆ ಬರುತ್ತದೆ. ಇಂದಿನ ಗುರುಗಳಾದ ಶ್ರೀ ಶಿವಶಂಕರ ಶಿವಾಚಾರ್ಯರು ಮಠದ ಮೇಲ್ಸೂಚಿತ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. 'ಕೊಟವಳಿ' ಶಬ್ದವು ಕುಱಿಂಮ್ಬಿಡಿ=ಕುಳುಮ್ಬಿಡಿ=ಕುಳಂವಿಡಿ ಹಾಗೂ 'ಕುಳವಾಡಿ'

ಶಬ್ದಗಳ ನಡುವಣ ರೂಪವಿರಬಹುದೆ? ಡಾ. ಜಿ.ಎಸ್. ಗಾಯಿ ಅವರು 'ಕುಟುಂಬ ವೃತ್ತಿ' ಶಬ್ದದ ಕನ್ನಡ ಭಾಷಿಕ ರೂಪ 'ಕುತ್ತುಂಬತಿ' ಎಂದಿದ್ದಾರೆ. ಅಂದರೆ 'ಕುಳವಾಡಿಕೆ'ಯು ಕುಟುಂಬ ವೃತ್ತಿಯಾಗಿರುವ ಸಂದರ್ಭಕ್ಕೆ ಅನ್ವಯಿಸಿ ಹೇಳುವಾಗ ಇಲ್ಲಿಯೂ 'ಕೊಟವಳಿ' ಶಬ್ದವೂ 'ಕುಳವಾಡಿ' ಶಬ್ದದ ಒಂದು ರೂಪವಿರಬಹುದೆ! ಹಾಗಿದ್ದರೆ 'ಕುಳವಾಡಿ' ಎಂಬ ಶಬ್ದದ ಪ್ರಾಚೀನ ರೂಪ'ಕುಳುಂಮ್ಬಿಡಿ' ಆಗಿರಬಹುದೆ! ಎನಿಸುತ್ತದೆ. ಹಾಗಿದ್ದರೆ ಪ್ರಾಚೀನ (ಹಲ್ಮಿಡಿ) ಶಾಸನದ ಶಬ್ದಕ್ಕೆ ಆಧುನಿಕ ರೂಪವನ್ನು ಚಾಲ್ತಿಗೊಳಿಸಿದ ಕೀರ್ತಿ ಈ ಮಠಕ್ಕೆ ಒದಗುತ್ತದೆ.

ಚಂಗಡಹಳ್ಳಿ ಮಠ

ಹೆಗ್ಗಡೆ ಹಳ್ಳಿ ಮಠ ಉತ್ತರ ಸನಿಹಕ್ಕೆ ಇದ್ದು ಮುರಘಾ ಸಂಪ್ರದಾಯದ ಮಠವಾಗಿದೆ. ಕ್ರಿ.ಶ.೧೭೩೦-೫೦ರ ಕಾಲದ ಈ ಮಠವು ಚಿತ್ರದುರ್ಗದ ೧೧ನೆಯ ಜ॥ ಶಿರಹಟ್ಟಿ ಸಿದ್ಧಲಿಂಗ ಸ್ವಾಮಿಗಳ ಖಾಸಾ ಮಠವಾಗಿದ್ದು ಅವರ ಗದ್ದುಗೆ ಇಲ್ಲಿದೆ. ಇವರು ಕೊಯಮತ್ತೂರು ಮಲ್ಲಮ್ಮ ದೇಸಾಯಿಣೆಯನ್ನು ದಾರಿಗೆ ತಂದರು. ಹಾಲೇರಿ ಅರಸರಿಂದ ಮಾನಿತರಾದರು. ಕೊಡಗಿನಲ್ಲಿ ಭೂಮಿಯನ್ನು ಮಠಕ್ಕೆ ಪಡೆದರು. ಈಗ ಹಾಸನ ಜಿಲ್ಲೆಗೆ ಸೇರಿದ್ದರೂ ಕೊಡಗಿನ ಸಂಪರ್ಕವಿದೆ. ಇಲ್ಲಿನ ಮಠದ ವಾಸ್ತುಶಿಲ್ಪ ಬಹಳ ಸುಂದರವಾಗಿದೆ. ಇಲ್ಲಿನ ಸ್ವಾಮಿಗಳು ಈ ಶತಮಾನದ ಆರಂಭದಲ್ಲಿಯೆ ರಾಜಶೇಖರ ವಿಲಾಸ, ವೃಷಭೇಂದ್ರ ವಿಜಯ, ರಾಘವಾಂಕನ ಸಿದ್ಧರಾಮ ಚರಿತ್ರೆ, ಶೂನ್ಯ ತತ್ತ್ವ, ಇತ್ಯಾದಿಗಳ ಓಲೆ ಪ್ರತಿಗಳು ಹಾಗು ಹಸ್ತಲಿಖಿತ ಕೃತಿಗಳನ್ನು ಬರೆದು ರಕ್ಷಿಸಿದ್ದಾರೆ. ಹಾಲಿ ಶ್ರೀ ಚಂದ್ರಶೇಖರ ಸ್ವಾಮಿಗಳು ಈ ಮಠದ ನಿರ್ವಹಣೆಗಿದ್ದಾರೆ ಇಲ್ಲಿ ಕ್ರಿ.ಶ. ೧೮೫೦ರ ಸುಮಾರಿನ ಸ್ತಂಭ ಶಾಸನವಿದೆ.

ನೂರಂಬಾಡಿ ಮಠವು ನಾಪೋಕ್ಲು ಹಳೆ ತಾಲ್ಲೂಕು ಬಳಿ ಇದೆ. ದೊಡ್ಡ ವೀರರಾಜೇಂದ್ರ ಒಡೆಯನು ಅರಮನೆಗೆಂದು ಕಟ್ಟಿಸಿದ ಕಟ್ಟಡವನ್ನು ರಕ್ಷಣೆ ಸಾಲದು ಎಂದು ಮಠವಾಗಿ ಮಾರ್ಪಡಿಸಿದಂತೆ ತೋರುತ್ತದೆ. ಇಂಡೋ ಇಸ್ಲಾಮಿಕ್ ಶೈಲಿಯ ಈ ಕಟ್ಟಡ ರಾಜಗೃಹದ ಮುಖ ಹೊತ್ತು ಒಳಭಾಗ, ಕೊಡಗಿನ ಪ್ರಾಚೀನ ಐನ್‌ಮನೆ (ಅಯ್ಯನ ಮನೆ)ಗಳಂತೆ ರಚನೆ ಹೊಂದಿದೆ. ಇಲ್ಲಿ ದೇವರ ದಾಸಿಮಯ್ಯನ ಜಯಂತಿಯನ್ನೂ ವಾರ್ಷಿಕವಾಗಿ ಆಚರಿಸುತ್ತಾರೆ. ಹಾಲೇರಿ ಅರಸರು ವೀರಭದ್ರ ವಿಗರಹ (ಹಲಗೆ)ವನ್ನೂ ಈ ಮಠಕ್ಕೆ ಅರ್ಪಿಸಿದ್ದಾರೆ. ದಲಿತ ವರ್ಗದ ಕೆಂಬಟ್ಟಿ ಕುಡಿಗಳು ಈ ಮಠಕ್ಕೆ ಇದ್ದವು. ಅವುಗಳಲ್ಲಿ ಕೆಲವು ಇಂದಿಗೂ ಮಠದ ಆವರಣದಲ್ಲಿದ್ದು 'ಮಠತ್‌ಕುಡಿ' ಎಂದೇ ಹೆಸರುಗೊಂಡಿವೆ.50 ಪ್ರಸಿದ್ಧ ಕೊಡವ ಮನೆತನಗಳು ಈ ಮಠಕ್ಕೆ ನಡೆದುಕೊಳ್ಳುತ್ತಿದ್ದುವು. ಈ ಮಠದ ಮುಖ್ಯಸ್ಥರು ಇಂದು ಶ್ರೀ ಜೆ.ಸಿ. ನಂಜಪ್ಪನವರಾಗಿದ್ದಾರೆ.

ಕಿರಿಕೊಡ್ಲಿ ಮಠಕ್ಕೆ ರಾಜರ ಕಾಲದಿಂದ ಜಹಗೀರು ಇದೆ. ಕೊಡಗಿನ ಹುತ್ತರಿ ಸಮಯದ ಬದಲಿಗೆ ದೀಪಾವಳಿಯಲ್ಲಿ ಭತ್ತದ ತೆನೆ ತಂದು ಉರಿಬಸವಸ್ವಾಮಿಗಳ ಕರ್ತಗದ್ದುಗೆ ಬಳಿ ಇಟ್ಟು ತೆನೆಪೂಜೆ ನಡೆಸುತ್ತಾರೆ. ದೊಡ್ಡಕೊಡ್ಲಿ ಊರುಮಠದಲ್ಲಿ ಇದೇ ರೀತಿ ಸಿದ್ದೇಶ್ವರ ಕರ್ತೃಗದ್ದುಗೆ ಬಳಿ ತೆನೆಪೂಜೆ ನಡೆಸುತ್ತಾರೆ. ಇಲ್ಲಿ ಸುಗ್ಗಿಸ್ತಂಭವು ಮೊದಲಿಗಿದ್ದಾಗ'ದೇವಿರಮ್ಮನ ಸುಗ್ಗಿ' ಹಬ್ಬದ ಜನಪದ ಆಚರಣೆ ನಡೆಸಲಾಗುತ್ತಿತ್ತು. ಕ್ರಿ.ಶ.೧೭೫೦-೧೮೧೧ರ ಅವಧಿಯಲ್ಲಿ ಈ ಮಠದ ಜೀರ್ಣೋದ್ಧಾರವಾದ ಬಗ್ಗೆ ಮರದ ತೊಲೆಯ ಮೇಲೆ ಕಂಡರಣೆಯಾದ ಶಾಸನವಿದೆ. ವಿಶೇಷವೆಂದರೆ ಈ ಮಠದ ಸನಿಹದಲ್ಲಿ ಪರಶುರಾಮೇಶ್ವರ ಗುಡಿ ಇದೆ. ಇಲ್ಲಿ ಶಿವನಲಿಂಗವು ಚಿದ್ರುಸ ಹಾಕಿ ಕಂತೆಕಟ್ಟಿದ ಇಷ್ಟಲಿಂಗದ ಸ್ವರೂಪದಲ್ಲಿದೆ. ಈ ಗುಡಿಯಲ್ಲಿ ಕಪಾಲಭೈರವ ಹಾಗು 'ನಗ್ನ ವೀರಭದ್ರ'ನ ಮೂರ್ತಿಗಳಿವೆ. ದೊಡ್ಡಕೊಡ್ಲಿ ಕಲ್ಲು ಮಠವನ್ನು ಒಂದು 'ನಿರಂಜನ ಪೀಠ'ವೆಂದು ಕರೆದು ಕೊಡಗಿನ ಮೊದಲ ಮಠವೆಂದು ಹೇಳುವ ಮಾತಿದೆ. ಇಲ್ಲಿನ ಮಠಾಂತರ್ಗತ ದೇಗುಲವು ದ್ರಾವಿಡ ಶೈಲಿಯದಾಗಿದೆ. ಬೇಡರ ಕಣ್ಣಪ್ಪ, ವೀರಭದ್ರ, ಕಾಮಧೇನು, ಆನೆ ಇತ್ಯಾದಿ ಸ್ತಂಭಶಿಲ್ಪಗಳ ಜೊತೆಗೆ ಆನೆ ಮರಿಗಳನ್ನು ಕೊಕ್ಕಿನಲ್ಲಿ ಹಿಡಿದ ಗಂಡಭೇರುಂಡ ಶಿಲ್ಪವು ವಿಶಿಷ್ಟವಾಗಿ ಕಾಣುತ್ತದೆ. ದೀಪಾವಳಿಯಲ್ಲಿ ಬೆಳಗುಂಬಳ ಬಳ್ಳಿಯನ್ನು ಬಿದಿರಿಗೆ ಸಿಗಿಸಿ 'ಮುದ್ದಿನ ತೆಕ್ಕೆ'ಯಾಗಿ (ಬೆಚ್ಚಿಕುತ್) ತುಲಾ ಸಂಕ್ರಮಣದ'ಬೊತ್ತು' ಇಡುವ ಪದ್ಧತಿಯು ಇಲ್ಲಿ ರೂಪಾಂತರಗೊಂಡು ಗದ್ದುಗೆ ಸನಿಹ ಇಡುವ ಪದ್ಧತಿ ಆಗಿದೆ. ಅದೇ ಕಲ್ಲಹಳ್ಳಿ ಮಠದಲ್ಲಿನ ಗದ್ದೆಯಲ್ಲಿ, ಗೌರಿಹಬ್ಬದಲ್ಲಿ ಕಾವೇರಿ ಸಂಕ್ರಮಣದ'ಬೊತ್ತಲೆ'ಯಂತೆ 'ಕರಕೊಳ್ಳಿ' ಅಂಟು ಇಡುತ್ತಾರೆ. ಈ ಮಠಗಳಲ್ಲೆಲ್ಲ ಚೌಡಮ್ಮನ ಪೂಜೆ ಸಾಮಾನ್ಯ.

ಬೇಳೂರು ಮಠವು ಚಿತ್ರದುರ್ಗದ ನೇರ ನಿರ್ವಹಣೆಗೆ ೮೦॥ ಜಯಾನಂದ ಸ್ವಾಮಿಗಳ ಕಾಲದಿಂದಲೂ ಇದ್ದು, ಇಲ್ಲಿ ಮುರುಘ ರಾಜೇಂದ್ರ ಪ್ರೌಢಶಾಲೆ. ದಲಿತರ ಕಾಲೋನಿಯ ನಿರ್ವಹಣೆಯೂ ಇದೆ. ಸನಿಹದ ಗುಡಗೂರು ಮಠವು ಶ್ರೀಶೈಲ ಸಿಡುಮಾಮಿಡಿ ಶಾಖಾನುವರ್ತಿಯಾಗಿ ಎರಡೂ ಭಾಗದ ಮಠಗಳನ್ನು ಹೊಂದಿತ್ತೆನಿಸುತ್ತದೆ. ಹುತ್ತರಿಯಲ್ಲಿ ಗದ್ದುಗೆ ಹಾಗು

ಬಸವಣ್ಣನಿಗೆ ಕದಿರು ಇಡುವ ಪದ್ಧತಿ ಇದೆ. 'ಚೌಡಮ್ಮನ ಅಡ್ಡು' ಎಂಬ ನೆಲೆಯಲ್ಲಿ ಚೌಡಮ್ಮನ ಆರಾಧನೆ ನಡೆಯುತ್ತದೆ. ಮುದ್ದಿನ ಕಟ್ಟೆ ಮಠದ ವಿಶೇಷವೆಂದರೆ, ಚಿಕ್ಕವೀರರಾಜೇಂದ್ರ ಕೊಡಲು ಬಂದ ಜಹಗೀರನ್ನೂ ಸ್ವೀಕರಿಸದೆ ಮಠದ ಶಿಷ್ಯರು ನೀಡಿರುವ ಜಮೀನಿನ ಉತ್ಪತ್ತಿಯೆ ನಿರ್ವಹಣೆಗೆ ಸಾಕು ಎಂದದ್ದು. ದೀಪಾವಳಿಯಲ್ಲಿ ಇಲ್ಲಿ ಮದ್ದಿನ ತೆರ್ಕೆ ಇಡುತ್ತಾರೆ. ಇಲ್ಲಿ ಬಿಳಿ ಚೌಡಿ, ಕರೆ ಚೌಡಿ ಎಂದು ಚೌಡಮ್ಮನ ಆರಾಧನೆ ಇದೆ.

ಕೆಲವು ಕಡೆಗಳಲ್ಲಿ ಚೌಡಮ್ಮನನ್ನು ಮಠದ ಅಮ್ಮ ಎಂದು ಪೂಜಿಸುವುದುಂಟು. ಮಾಯಮುಡಿಯಲ್ಲಿ ಶಾಸನವಿದ್ದು ಮಠವು ಕ್ರಿ.ಶ. ೧೮೦೮ರಲ್ಲಿ ವೀರರಾಜೇಂದ್ರ ಒಡೆಯನಿಂದ ಜೀರ್ಣೋದ್ಧಾರವಾದಂತಿದೆ. ಈ ಮಠದ ಗುರುಗಳಾಗಿದ್ದ ಗಂಗಾಧರ ದೇವರು, ಹುತ್ತರಿ ಕೋಲಾಟದ ಸಮಯದಲ್ಲಿ ಕುಪ್ಪಸದಟ್ಟಿ ಉಟ್ಟು ಕುದುರೆ ಹತ್ತಿಹೋಗಿ ಆಶೀರ್ವಾದದ ಕೋಲು ಹೊಡೆದ ಮೇಲೆ ಮಾಯಮುಡಿ, ಮಡಕೆಬೀಡಿನಲ್ಲಿ ಕೋಲಾಟ ಆರಂಭವಾಗುತ್ತಿತ್ತು. ವೀರಶೈವರೂ ಈ ಕೋಲಾಟದಲ್ಲಿ ಭಾಗವಹಿಸುತ್ತಿದ್ದರು. ಕೊಡಗಿನ ಅಮ್ಮ ಕೊಡವರಾದ ಹೆಮ್ಮಚಿ ಮನೆತನದವರು ಉಗಾದಿಯ ಸಮಯದಲ್ಲಿ ಈ ಮಠದ ಗುರುಗಳನ್ನು ಕರೆಸಿ ತಮ್ಮ ಹಿರಿಯರ ಸ್ಮಾರಕ ಕಟ್ಟಡಗಳಾದ ಕೈಮಡಕ್ಕೆ, ಸಮಾಧಿಗೆ ವಾರ್ಷಿಕ ಸಂಸ್ಕಾರ ನಡೆಸುತ್ತಿದ್ದರು. ನಾಣಚ್ಚಿ ಮಠದ ಸಂಬಂಧವು ಕುಟ್ಟದ ಜಾನಪದ ದೇವತೆ ಕರಿಂಗಾಳಿ ಅವ್ವೆ ಹಬ್ಬಕ್ಕಿದೆ. ದಲಿತವರ್ಗದ ಮುನ್ನೂಟರಿಗೆ ಈ ಹಬ್ಬದ ಸಮಯದಲ್ಲಿ 'ತೆರೆ' ಕಟ್ಟಿ ಆಕೆಯ ಆವೇಶ ಬಂದಾಗ, ಇಂದಿಗೂ ಕೇಳುವುದು : 'ನಾಣಚ್ಚಿ ಮಠತ್ತುಳ್ಳ ಗುರುಗಳು ಉಂಡೋ' - ನಾಣಚ್ಚಿ ಮಠದ ಗುರುಗಳು ದಯಮಾಡಿಸಿರುವರೆ? ಎಂದಿದೆ. ಮೈಲಾತಪುರದ ಮಠದ ಸ್ವಾಮಿಗಳು, ಆಂಗ್ಲರೆಸೆದ ಸವಾಲನ್ನು ಸ್ವೀಕರಿಸಿ, ತಮ್ಮ ಕತ್ತಿವರಸೆಯಿಂದ ೪೦೦ ನಿಂಬೆಹಣ್ಣುಗಳ ಎಸೆತವನ್ನು ಕತ್ತರಿಸಿದರಂತೆ. ಅದರಿಂದ ೭ ಖಂಡುಗ ಗದ್ದೆ ಉಂಬಳಿ ಜಮೀನು ಇವರಿಗೆ ದಕ್ಕಿತಂತೆ, ಬಹುಶಃ ಈ ಕತ್ತಿ ವರಸೆಯ ಕ್ರೀಡೆಯು ಇದರ ಸನಿಹದ ಕಿತ್ತೂರು ಇತ್ಯಾದಿ ಕಡೆ ಹೆಚ್ಚು ಪ್ರಚುರಗೊಳ್ಳಲು ಈ ಸ್ವಾಮಿಗಳ ಕಾರಣವಾಗಿಯೂ ಇರಬೇಕು. ಹಾಲೇರಿ ಅರಸರ ಕಾಲದ ಚೌಡ್ಲುವಿನ ಸುಗ್ಗಿಕಟ್ಟೆ ಹಬ್ಬದ ಹಾಡಿನಲ್ಲಿಯೇ ಈ ಕತ್ತಿವರಸೆ ಕ್ರೀಡೆಯ ಸೂಚನೆ ಇದೆ. ಈ ಮಠದ ಬಳಿ ಪ್ರಾಚೀನದಿಂದಲೂ ವಿಶಾಲವಾದ ಬಿಲ್ಪತ್ರೆ ವನವಿದ್ದು ಪರಿಸರ, ಮೂಲಿಕಾವನದ ನಿರ್ವಹಣೆಯ ಸಂಕೇತವಾಗಿದೆ. ಮಠದ ಆವರಣದಲ್ಲಿಯೇ ದಲಿತರ ಒಕ್ಕಲುಗಳಿದ್ದು 'ಗಣ' ಅವರ ಮೇಲೆ ಬರುತ್ತದೆ. ನಂದಿನಿಪುರದ ಮಠವು ಗೋಸಂಪತ್ತಿಗೆ ಹೆಸರಾದ ಮಠವಾಗಿತ್ತು. ಇಲ್ಲಿ ವಿಶಾಲವಾದ ಬಿಲ್ಪತ್ರೆವನವಿತ್ತು. ಚಿಕ್ಕವೀರರಾಜೇಂದ್ರ ಒಡೆಯನ ಮುಖ್ಯ ದಿವಾನನಾಗಿದ್ದ ಬಸವಯ್ಯನು ಈ ಮಠದ ಶಿಷ್ಯನಾಗಿದ್ದನೆನ್ನಲಾಗಿದೆ. ಅವನೊಬ್ಬ ಅಜ್ಞಾತ ಜಟ್ಟಿಯಾಗಿದ್ದ. ಮೈಸೂರರಸನ ಜಟ್ಟಿಯನ್ನು ೨ನೇ ಲಿಂಗರಾಜ ಒಡೆಯನ ಕಾಲದಲ್ಲಿ ಸೋಲಿಸಿ ಬೆಳಕಿಗೆ ಬಂದು, ಹಂತ ಹಂತವಾಗಿ ಸ್ವಸಾಮರ್ಥ್ಯದಿಂದ ದಿವಾನ ಪದವಿಗೇರಿದ್ದ. ಇದು ಇಲ್ಲಿನ ಮಠದ ಉತ್ತೇಜನವೂ ಅವನನ್ನು ಸೂಕ್ತಹಾದಿಗಿರಿಸಲು ಮಾರ್ಗದರ್ಶನ ಮಾಡಿರುವಂತಿದೆ.

ಬಡ ಮಕ್ಕಳಲ್ಲದೆ ಶ್ರೀ ಕ್ಷೇತ್ರಕ್ಕೆ ಪ್ರತಿನಿತ್ಯ ಬರುವ ಭಕ್ತರು, ಪ್ರವಾಸಿಗರ ಸಂಖ್ಯೆ ಐನೂರು ದಾಟುತ್ತದೆ. ಮಂಗಳವಾರ, ಶುಕ್ರವಾರ ಹಾಗೂ ವಿಶೇಷ ದಿನಗಳಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚಿರುತ್ತದೆ. ಎಲ್ಲ ಜನರಿಗೂ ಪ್ರತಿದಿನ ದಾಸೋಹ ಇರುತ್ತದೆ.

ಶ್ರೀ ಮಠದಲ್ಲಿ ಪ್ರತಿದಿನದ ದಾಸೋಹಕ್ಕೆ ಕನಿಷ್ಠ ೩೦ ಸಾವಿರ ರೂ.ಗಳು ವೆಚ್ಚವಾಗುತ್ತದೆ. ೧೯ ಕ್ವಿಂಟಾಲ್ ಅಕ್ಕಿ, ೧೧ ಕ್ವಿಂಟಾಲ್ ರಾಗಿ ಹಿಟ್ಟು, ಒಂದೂವರೆ ಕ್ವಿಂಟಾಲ್ ತೊಗರಿಬೇಳೆ, ೪ ಕ್ವಿಂಟಾಲ್ ತರಕಾರಿ, ೧ ಕ್ವಿಂಟಾಲ್ ಈರುಳ್ಳಿ, ೨೦೦ ಲೀಟರ್ ಹಾಲು ಬೇಕಾಗುತ್ತದೆ.

ಬೆಲೆಗಳು ಗಗನಕ್ಕೆ ಏರುತ್ತಿರುವ ಇಂದಿನ ದಿನಗಳಲ್ಲಿ ವಿದ್ಯಾಭ್ಯಾಸ ಮಾಡಲಾಗದ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡಲಾಗುತ್ತಿದೆ. ಒಂದು ರೀತಿಯಲ್ಲಿ ಶ್ರೀ ಮಠವು ಬಡ ಮಕ್ಕಳಿಗಾಗಿ ವರದಾನವಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿರುವ ಶ್ರೀ ಸ್ವಾಮಿಗಳು ನಾಡಿನ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಸಲ್ಲಿಸಿರುವ ಅಸಾಧಾರಣ ಸೇವೆಯನ್ನು ಮನ್ನಿಸಿ ಕರ್ನಾಟಕ ವಿಶ್ವವಿದ್ಯಾಲಯ ೧೯೬೫ ರಲ್ಲಿ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದೆ.


ದೇಶದಲ್ಲೇ ಪ್ರಥಮ: ಜಾತಿಮತ ಭೇದವಿಲ್ಲದೆ ಸಂಸ್ಕೃತ ಅಧ್ಯಯನಕ್ಕೆ ಅವಕಾಶ ನೀಡಲು ಶ್ರೀ ಮಠದಲ್ಲಿ ೧೯೧೭ ರಲ್ಲಿ ಸಂಸ್ಕೃತ ಪಾಠಶಾಲೆ ಆರಂಭವಾಗಿದೆ. ಇದು ಇಂದು ರಾಷ್ಟ್ರದಲ್ಲೇ ದೊಡ್ಡ ಕಾಲೇಜೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶ್ರೀ ಮಠವು ಜನಸಾಮಾನ್ಯರಿಗೆ ವಿವಿಧ ವಿಷಯಗಳ ಬಗ್ಗೆ ಅರಿವು ಮೂಡಿಸುವಲ್ಲಿಯೂ ಮುನ್ನಡೆದಿದೆ. ಪ್ರಕಟಣಾ ವಿಭಾಗ ಹೊಂದಿರುವ ಶ್ರೀ ಮಠವು 'ಸಿದ್ಧಗಂಗಾ' ಮಾಸ ಪತ್ರಿಕೆಯನ್ನು ಕಳೆದ ೨೦ ವರ್ಷಗಳಿಂದ ಹೊರ ತರುತ್ತಿದೆ. ನಾಡಿನ ಹೆಸರಾಂತ ಲೇಖಕರು ವಿವಿಧ ವಿಷಯಗಳ ಬಗ್ಗೆ ಬರೆದ ಲೇಖನ-ಬರಹಗಳು ಇದರಲ್ಲಿ ಇರುತ್ತವೆ.

'ಕರ್ತಾರನ ಕಮ್ಮಟ', 'ಸಿದ್ಧಗಂಗಾ ಶ್ರೀ', 'ಸಮರ್ಪಣೆ', ಅಂಕುರಾರ್ಪಣ ಮುಂತಾದ ಕೃತಿಗಳನ್ನು ಕೂಡ ಮಠ ಹೊರ ತಂದಿದೆ.

ಇಲ್ಲಿ ಜಾತ್ರೆಯ ಸಮಯದಲ್ಲಿ ಒಂದು ತಿಂಗಳ ಕಾಲ ನಡೆಯುವ ಕೃಷಿ ಪ್ರಧಾನ ವಸ್ತು ಪ್ರದರ್ಶನ ತುಂಬ ಜನಪ್ರಿಯವಾಗಿದೆ.

ಕರ್ನಾಟಕ ದರ್ಶನ



ದಾಸೋಹ ಮಂದಿರದ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ

ಶ್ರೀ ಸಿದ್ದಗಂಗಾ ಮಠಕ್ಕೆ ಭಕ್ತ

ಅರ್ಥಪೂರ್ಣ ಕಾಣಿಕೆ

ಕಾಣಿಕೆಯಾಗಿ ಶಿಷ್ಯನ ಮೆಚ್ಚುಗೆ ಪಡೆದ ಗುರುಗಳ ಇತಿಹಾಸ ಸಮೃದ್ಧಿದೆ. ಕಾಲ ಬದಲಾದಂತೆ ಕಾಣಿಕೆಯ ರೂಪ ಬದಲಾಗಿ ಅದು ಧನ — ಕನಕ ಅಥವಾ ಇನ್ನಾವುದೋ ಸಂಪತ್ತಿನ ರೂಪ ಪಡೆದಿರಬಹುದು. ಆದರೆ ತುಮಕೂರಿನ ಶ್ರೀ ಸಿದ್ಧಗಂಗಾ ಸ್ವಾಮಿಗಳು ವರ್ತಮಾನಗಳಿಗೆ ಮಾದರಿಯಾದ ಕಾಣಿಕೆ ಪಡೆದರು. ಅದು ನಾಲ್ಕು ಕೋಟಿ ರೂ. ವೆಚ್ಚದ ವಿದ್ಯಾರ್ಥಿ ನಿಲಯ ಹಾಗೂ ಸುಮಾರು ಎರಡು ಕೋಟಿ ರೂ. ವೆಚ್ಚದ ದಾಸೋಹ ಮಂದಿರ ಮಠದ ಆವರಣದಲ್ಲಿ ನಿರ್ಮಾಣವಾಗುತ್ತಿದೆ.

ಸ್ವಾಮಿಗಳ ಶಿರಕ್ಕಾರ್ಯಮದ ವಜ್ರ ಮಹೋತ್ಸವ ಆಚರಿಸಲು ನಿರ್ಧರಿಸಿದ ಭಕ್ತಸಮೂಹ ಗುರುಗಳಲ್ಲಿ ತಮ್ಮ ಅಪೇಕ್ಷೆಯನ್ನು ತಿಳಿಸಿದಾಗ ವೃಥಾ ಸಭೆ — ಸಮಾರಂಭ, ಉತ್ಸವ ಕಾಣಿಕೆ ಬೇಡ. ಏನಾದರೂ ಅರ್ಥಪೂರ್ಣವಾದುದನ್ನು ಮಾಡಿ ಎಂದು ಉಪದೇಶಿಸಿದರು. ಆ ಅರ್ಥಪೂರ್ಣ ಕೆಲಸವನ್ನು ಕೂಡಾ ಅವರೇ ಸೂಚಿಸಿದರು. ತಾನು ಸಾಕುತ್ತಿರುವ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಿದ್ಯಾರ್ಥಿ ನಿಲಯ ಹಾಗೂ ದಾಸೋಹಕ್ಕಾಗಿ ... ವರ್ಷಗಳ ಕ್ಷಿಪ್ರ ಅವಧಿಯಲ್ಲಿ ಸುಮಾರು ಒಂದು ಲಕ್ಷ ಚದರ ಅಡಿ ವಿಸ್ತಾರದ 200 ಕೊಠಡಿಗಳ ವಿದ್ಯಾರ್ಥಿನಿಲಯ ಹಾಗೂ ಸುಮಾರು 44.000 ಚದರ ಅಡಿ ವಿಸ್ತಾರದ ದಾಸೋಹ ಮಂದಿರವನ್ನು ವಜ್ರಮಹೋತ್ಸವದ ಕಾಣಿಕೆಯಾಗಿ ಮುಂದಿನ ವರ್ಷದ ಮಾರ್ಚ್ ತಿಂಗಳಲ್ಲಿ ಗುರುಗಳಿಗೆ ಕಾಣಿಕೆಯಾಗಿ ಅರ್ಪಿಸಲು ನಿರ್ಧರಿಸಿದ ಈ ಭಕ್ತ—ಶಿಷ್ಯ ಸಮೂಹ ಈಗ ಆ ಕಾರ್ಯದ ಕೊನೆಯ ಹಂತದಲ್ಲಿದ್ದಾರೆ.

ಸಿದ್ಧಗಂಗಾ ಮಠದ ಇತಿಹಾಸವನ್ನು ಗಮನಿಸಿದರೆ ಡಾ.ಶಿವಯೋಗಿ ಸ್ವಾಮಿಗಳ ಈ ನಿಶ್ಚಯವೇನೂ ಅಪೇಕ್ಷೆ ಆಶ್ಚರ್ಯ ಮೂಡಿಸುವುದಿಲ್ಲ. ಈ ಮಠಕ್ಕೆ ಭೇಟಿ ನೀಡಿದ ಯಾರ ಗಮನವನ್ನಾದರೂ ಇಡೀ ಮಠ ... ವ ವಿದ್ಯಾರ್ಥಿ ... ಶತಮಾನದ ಸ್ವಾಮಿಗಳಾಗಿದ್ದ ಅಟವಿ ಸ್ವಾಮಿಗಳು ಮೊದಲು ದಾಸೋಹವನ್ನು ಪ್ರಾರಂಭಿಸಿ ಅನಂತರ ಬಂದ ಭಕ್ತರಿಂದ ಬಡಮಕ್ಕಳನ್ನು ಸಾಕುವ ಪರಂಪರೆಯನ್ನು ಪ್ರಾರಂಭಿಸಿದರು. ಅನಂತರ ಬಂದ ಉದ್ದಾನ ಸ್ವಾಮಿಗಳು ಅವನ್ನು ಮುಂದುವರಿಸಿಕೊಂಡು ಹೋದರು.

1941ರಲ್ಲಿ ಲಿಂಗೈಕ್ಯರಾದ ಗುರುಗಳ ಅಂತಿಮಕಾರ್ಯ ಮುಗಿಸಲೂ ಹಣವಿಲ್ಲದಂತಹ ಪರಿಸ್ಥಿತಿಯಲ್ಲಿ ಮಠದ ಜವಾಬ್ದಾರಿಯನ್ನು ಹೊತ್ತ ಶಿವಕುಮಾರ ಸ್ವಾಮಿಗಳು ಕಳೆದ 50 ವರ್ಷಗಳಲ್ಲಿ ಮಠವನ್ನು ಮುನ್ನಡೆಸಿ ಅನ್ನದಾಸೋಹ ಮತ್ತು ಜ್ಞಾನದಾಸೋಹಗಳೆರಡನ್ನೂ ಇಂದಿನ ಬೃಹತ್ ಪ್ರಮಾಣಕ್ಕೆ ತಂದು ನಿಲ್ಲಿಸಿದ್ದಾರೆ. ಇಂದಿನ ದಿನಮಾನದಲ್ಲಿ ಇದೊಂದು ಪವಾಡ ಸದೃಶ ಸಾಧನೆ. ಈ ಸಾಧನೆಯ ಮುಖ್ಯ ಕೊಡುಗೆ ಇಲ್ಲಿರುವ ಉಚಿತ ವಿದ್ಯಾರ್ಥಿ ನಿಲಯ. 1940—41ರ ಅವಧಿಯಲ್ಲಿ ಕೇವಲ 50—60 ವಿದ್ಯಾರ್ಥಿಗಳಿದ್ದ ವಿದ್ಯಾರ್ಥಿ ನಿಲಯ ಈಗ 4.000 ಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಆಶ್ರಯಸ್ಥಾನ. ಇವರಲ್ಲಿ ಅರ್ಧದಷ್ಟು ತಂದೆ—ತಾಯಿಗಳಿಲ್ಲದ ಅನಾಥರಾದರೆ, ಉಳಿದವರು ಬಡತನದ ಬೇಗೆಯಿಂದ ತಂದೆ—ತಾಯಿಗಳಿದ್ದೂ ಅನಾಥರು.

ಇವರೆಲ್ಲರ ಪೋಷಣೆ ಹಾಗೂ ಶಿಕ್ಷಣದ ಭಾರ ಹೊತ್ತವರು ಡಾ.ಶಿವಕುಮಾರ ಸ್ವಾಮಿಗಳು. ಸ್ವಾಮಿಗಳು ಈ ಮಕ್ಕಳಲ್ಲಿ ದೇವರನ್ನು ಕಂಡರೆ ಮಕ್ಕಳಿಗೆ ಸ್ವಾಮಿಗಳೇ ಸಾಕ್ಷಾತ್ ದೇವರು. ಬಹು ವಿದ್ಯಾರ್ಥಿಗಳಲ್ಲಿ ಅರ್ಧದಷ್ಟು ಲಿಂಗಾಯತ ಕೋಮಿಗೆ ಸೇರಿದವರಾಗಿದ್ದರೆ ಉಳಿದವರು ವಿವಿಧ ಜಾತಿ—ಧರ್ಮಗಳಿಗೆ ಸೇರಿದವರು.

35 ಮುಸ್ಲಿಮ್ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 85 ಕ್ಕೂ ಹೆಚ್ಚು ಜಾತಿಗಳ ವಿದ್ಯಾರ್ಥಿಗಳು ಇಲ್ಲಿ ಆಶ್ರಯ ಪಡೆದಿದ್ದಾರೆ. ಇವರಲ್ಲಿ ಹಿಂದುಳಿದ ಉತ್ತರ ಕರ್ನಾಟಕದ ಜಿಲ್ಲೆಗಳ ವಿದ್ಯಾರ್ಥಿಗಳೇ ಬಹುಸಂಖ್ಯಾತರು.

ವಸತಿ: ಈ ವಿದ್ಯಾರ್ಥಿಗಳಿಗೆ ತಮ್ಮ ಅಪೇಕ್ಷೆಯಂತೆ ಸರಿಯಾದ ವಸತಿ ಸೌಕರ್ಯ ಕಲ್ಪಿಸಲು ಸಾಧ್ಯವಾಗದಿರುವ ಕೊರಗು ಬಹಳದಿನಗಳಿಂದ ಸ್ವಾಮಿಗಳನ್ನು ಕಾಡುತ್ತಿದ್ದಿರಬೇಕು. ನೂತನ ವಿದ್ಯಾರ್ಥಿ ನಿಲಯದಿಂದ ಈ ಸಮಸ್ಯೆ ಕೂಡಾ ನಿವಾರಣೆಗೊಂಡಿದೆ. ಈಗ ಸುಮಾರು ನಾಲ್ಕು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ವಿದ್ಯಾರ್ಥಿ ನಿಲಯದಲ್ಲಿ ಒಂದೂವರೆ ಸಾವಿರ ವಿದ್ಯಾರ್ಥಿಗಳ ವಸತಿಗೆ ಅವಕಾಶವಿದೆ.

ದ್ರಾವಿಡ ಶಿಲ್ಪಶೈಲಿಯ ಈ ಕಟ್ಟಲ್ಪಟ್ಟ ಈ ವಿದ್ಯಾರ್ಥಿ ನಿಲಯದಲ್ಲಿರು ಅಂತರರಾಷ್ಟ್ರೀಯ ಪ್ರಮಾಣಕ್ಕನುಗುಣವಾಗಿ ವಿದ್ಯಾರ್ಥಿಗಳ ಬಳಕೆಗಾಗಿ 144 ಶೌಚಾಲಯಗಳು ಹಾಗೂ 108 ಸ್ನಾನದ ಮನೆಗಳಿವೆ. ಇದರ ಜತೆ ಸ್ನಾನಕ್ಕೆ ಪವರ್. ನಿರಾಳವಾದ ಹಜಾರ.

ಡಾ|| ಶಿವಕುಮಾರಸ್ವಾಮೀಜಿ ವಜ್ರ ಮಹೋತ್ಸವ

ಸಿದ್ಧಗಂಗಾ ಕ್ಷೇತ್ರಾಭಿವೃದ್ಧಿಗೆ ಸರ್ಕಾರದ ನೆರವು

ಬೆಂಗಳೂರು, ಡಿ. ೧೨- ಸಿದ್ಧಗಂಗಾ ಮಠಾಧ್ಯಕ್ಷರಾದ ಶಿವಕುಮಾರ ಸ್ವಾಮಿಗಳು ...

... ಸಲಹೆಯ ಮೇರೆಗೆ ಯೋಜನೆಗಳನ್ನು ...

ಶ್ರೀಗಳವರ ಜೀವನ ಚರಿತ್ರೆ ಕುರಿತ ಗ್ರಂಥ ...

ನಕ ದೇಶದ ಬಹುಪ್ಪ, ... ರರು ಈ ವಿಷಯದಲ್ಲಿ ... ಮಾಡಬೇಕು ...

SIDDHA GANGA MUTT'S GIANT STRIDES IN EDUCATIONAL FIELD

B.M. Chandrasekharaiah

"Let the hearth that burns in this Holy Mutt be never extinguished;" blessed by the great saint Sri Ataviswamiji the authorities of Siddhaganga Mutt are still continuing the stupendous task of 'Dashoa' or free-feeding of not only the student community but also the pilgrims who throng this Holy Centre.

There are at present more than three thousand students of various castes and communities in the free hostel maintained by the Mutt. The Mutt affording equal opportunity under its fold to the poor and the destitutes of the country, has rightly and legitimately stood as a symbol of National and religious unity and a model to be emulated by one and all.

Sixty Centres

The Mutt is running as many as sixty educational institutions starting from Primary School to first grade College besides an institute of Technology. There are many Sanskrit Pathasalas and a College also. These institutions are spread out in and around the district.

Siddhaganga situated about 5 K.Ms. east of the Tumkur has now developed into a famous centre of education and a pilgrimage. At the foot of the hill, amidst beautiful natural surroundings, is a celebrated Veerasaiva monastry and close to it there are some schools and colleges including a Sanskirt College, a general hostel and a pond. The residential educational centre with the Swamiji of the Mutt as its head reminds the visitors of the ancient Indian Gurukulas. The students in the hostel here are being provided with free-boarding and lodging facilities irrespective of caste or creed.

Gift of God


Siddhaganga Mutt which is held in high esteem by the Veerasaivas and also by others belong tothe Virakta (one who renounced the worldly affairs) tradition. It is learnt that some six hundred years ago Sri Gosala Siddheswara who renowned for his austerities and spiritual attainments founded this monastery. The legend goes that he had a call from the Almighty to break open a slit in the mighty rock adjoining the place and this act of his created a perennial water source, which was hailed as a gift of God and this water source (the Ganga) gave the place the name of *'Siddhaganga'*. Close to this spring Sri Siddhalingeswara temple was built in 1660 by Chikkadevaràja Wodeyar of Mysore in commemoration of the visit of the great saint, Thontada Siddalingeswara to the place.

Subsequent to the saint Gosala Siddheswara among the galaxy of the saints who reigned this Mutt Sri Uddana Shivayogiswamiji was remarkable. Swamiji, in addition to mass-feeding, by starting a Sanskrit Patasala way back in 1917, gave fillip to the dissemination and propagation of education in general and revival Sanskrit learning in particular. In 1932 the Sanskrit Pathasala was upgraded into Sanskrit College. The courses offered in the College are Alankara, Vyakarana, Tarka and Shakti Vishishtadwaita.

Colleges and Hostels

Sir Sivakumara Swamiji, the senior head of the Mutt at present realising the importance of modern educational setup has started number of educational institutions including an Engineering College. Under its aegis the mutt is also running High Schools in far-flung rural areas. In addition the mutt is running general hostels also wherever they are feasible.

Siddalingeswara temple at Siddaganga with hill for a back drop



ಪುಟ ೨ ಸಂಯುಕ್ತ ಕರ್ನಾಟಕ ೧೧-೫-೧೯೯೫



ತುಮಕೂರಿನಲ್ಲಿ ರಾಷ್ಟ್ರೀಯ ಬಸವದಳ. ಬುಧವಾರ ಏರ್ಪಡಿಸಿದ್ದ ಬಸವಜಯಂತಿ ಸಮಾರಂಭವನ್ನು ಸಿದ್ಧಗಂಗಾ ಮಠಾಧ್ಯಕ್ಷರಾದ
. ಶಿವಕುಮಾರ ಮಹಾಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಮಾಜಿ ಸಚಿವ ಲಕ್ಷ್ಮೀನರಸಿಂಹಯ್ಯ, ಮಧುಗಿರಿ ಶಾಸಕ
ಗಡಹನುಮಯ್ಯ ವೀರಶೈವ ಸಮಾಜದ ಉಪಾಧ್ಯಕ್ಷ ಸಿ.ಪಿ. ರಾಜಪ್ಪ ಮೊದಲಾದವರಿದ್ದಾರೆ

೨೪-೮-೧೯೯೩ ಸಂಯುಕ್ತ ಕರ್ನಾಟಕ ಪುಟ ೩

ಪತ್ರಿಕೆಗಳಿಗೆ ಸಿದ್ಧಗಂಗಾ ಮಠಾಧೀಶರ ಕಿವಿಮಾತು

ತುಮಕೂರು, ಆ. ೨೩- ಇಂದು ದೇಶವನ್ನು ಕಾಡುತ್ತಿರುವ ಸಾರ್ವತ್ರಿಕ ನೈತಿಕ ಪತನವನ್ನು ತಡೆಹಿಡಿದು ಜನ ಸಾಮಾನ್ಯರ ಬದುಕನ್ನು ಹಸನುಮಾಡುವ ಕೆಲಸವನ್ನು ಪತ್ರಿಕೆಗಳು ಮಾಡಬೇಕು ಎಂದು ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ. ಶ್ರೀ ಶಿವಕುಮಾರಸ್ವಾಮಿಗಳು ಕರೆ ನೀಡಿದರು.

ಅವರು ಇತ್ತೀಚೆಗೆ ನಗರದ ಪುರಭವನದ ಸಭಾಂಗಣದಲ್ಲಿ "ತುಮಕೂರು ಮಾಧ್ಯಮ" ಎಂಬ ಕನ್ನಡ ವಾರಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಆರ್ಯ ವೈಶ್ಯ ಜನಾಂಗದ ಯುವ ಮುಖಂಡ ಮೋಹನ್‌ಕುಮಾರ್ ನೆರವೇರಿಸಿಕೊಟ್ಟರು. ರೋಟೇರಿಯನ್ ಪಿ. ಶಾಂತಿಲಾಲ್, ನಗರಸಭಾ ಯುಕ್ತ ಗುರುಲಿಂಗಪ್ಪ, ಸಿದ್ದಗಂಗಾ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಜಿ.ಎಸ್. ಸೋಮಶೇಖರ್ (ಸೋಮಣ್ಣ) ಹಾಗೂ ಸಂಚಾರಿ ಪಿ.ಎಸ್.ಐ. ನಾಗರಾಜು ಇವರುಗಳು ಪತ್ರಿಕೆ ಕುರಿತು ಮಾತನಾಡಿದರು.

ಸಾಹಿತಿ ಕವಿತಾಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಸಾಗರ ಕಾರ್ಯಕ್ರಮ ನಿರೂಪಿಸಿದರು. ಸುವಾಸ್ ಆರಾಧ್ಯ ಸ್ವಾಗತಿಸಿದರು. ಪ್ರಕಾಶ್ ಶಿವಾಜಿ ವಂದನಾರ್ಪಣೆ ಮಾಡಿದರು.

"...ಕೃತಿಗಿಳಿವ ಕಾಯಕವೇ ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಬುನಾದಿ"

ಮಕೂರು: ...ಮೇ ೧೧- ...ಬ್ರಾಹ್ಮಣ ಕುಟುಂ ...ಯೇ ಜನಿಸಿದರೂ, ಅಲ್ಲಿನ ಅರ್ಥಹೀನ ...ಯಗಳ ವಿರುದ್ಧ ಪ್ರತಿಭಟಿಸಿ, ...ದೇ ಜಾತಿ, ವರ್ಣ, ವರ್ಗಕ್ಕೆ ಸೀಮಿತ ... ಸಕಲ ಜೀವಾತ್ಮರಿಗೆ ಲೇಸನೇ ಬಯ ... ಕಾಯಕದಿಂದ ಗಳಿಸಿ, ದಾಸೋಹದ ...ನ ವಿನಿಯೋಗಿಸಿ ೧೨ನೇ ಶತಮಾನ ...ಕಲ್ಯಾಣ ರಾಜ್ಯವನ್ನು ಕಟ್ಟಿದ ಮಹಾನ್ ...

ಪಾವನವಾಗಿಸಿಕೊಳ್ಳಬೇಕೆಂದು ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ. ಶಿವಕುಮಾರ ಸ್ವಾಮಿಗಳು ಜನತೆಗೆ ಕರೆಕೊಟ್ಟರು.

ಶ್ರೀಗಳವರು ತುಮಕೂರಿನ ರಾಷ್ಟ್ರೀಯ ಬಸವದಳ ಏರ್ಪಡಿಸಿದ್ದ "ಬಸವಜಯಂತಿ" ಸಮಾರಂಭ ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಮಂತ್ರಿ ಲಕ್ಷ್ಮೀನರಸಿಂಹಯ್ಯನ ...

ರಾಜಬೀದಿಗಳಲ್ಲಿ ಬಂದ ಬಸ... ಚಿತ್ರದ ಮೆರವಣಿಗೆ, ಪಥಸಂ... ಟನೆಯನ್ನು ಬಸವದಳದ ... ಕೆ.ಎಸ್. ಮಂಜುನಾಥ್ ನೆರವ... ಕಾರ್ಯದರ್ಶಿ ಸಿ.ಎನ್ ಪ್ರ... ಸತ್ಯಮೂರ್ತಿಯವರು ಮೆರವ... ವಹಿಸಿದ್ದರು.

ತುಮಕೂರಿನ ಖ್ಯಾತ ...

ಪ್ರಗತಿ ದಿನಪತ್ರಿಕೆ ತುಮಕೂರು ೧೨ ಸೆಪ್ಟೆಂಬರ್ ೧೯೯೫

...ಶಸ್ತಿ ಬೇಡವೆಂದ ಸಿದ್ಧಗಂಗಾ ಶ್ರೀಗಳು

ತುಮಕೂರು

...ಗತ ಡಿ. ದೇವರಾಜು ಅರಸು ...ನೇ ಜನ್ಮದಿನೋತ್ಸವದ ಅಂಗ ...ಉಳಿದ ವರ್ಗಗಳ ಕ್ಷೇಮಾಭಿ ...ಮಿಸುವ ವ್ಯಕ್ತಿಗಳಿಗೆ ನೀಡುವ ...ನ್ನು ಸಿದ್ಧಗಂಗಾ ಮಠಾಧ್ಯಕ್ಷರಾದ ... ಶಿವಕುಮಾರಸ್ವಾಮಿಗಳು ...ದ್ದರೆ.

...ಉಳಿದ ವರ್ಗಗಳ ವಿದ್ಯಾರ್ಥಿ ...ಯ ನೀಡುತ್ತಿರುವ ಡಾ|| ಶ್ರೀ ...ರಸ್ವಾಮೀಜಿಯವರ ಸೇವೆ ...ಗಣಿಸಿ ಕರ್ನಾಟಕ ಸರ್ಕಾರವು ...ಲಿಗೆ 'ದೇವರಾಜ ಅರಸು' ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು.

ಪ್ರಶಸ್ತಿ ತಿರಸ್ಕರಿಸಿರುವ ಸ್ವಾಮೀಜಿಯವರು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೊಂದು ಪತ್ರ ಬರೆದು ದೀರ್ಘಾವಧಿಯಿಂದ ಸಂಸ್ಥೆಯು ಬಡ ಮಕ್ಕಳ ಅಭಿವೃದ್ಧಿಗಾಗಿ ಯಥಾಶಕ್ತಿ ಸೇವೆ ಸಲ್ಲಿಸುತ್ತಿದೆ. ದಾನಿಗಳ, ಒತ್ತೆಪಿಗಳ, ಅಭಿಮಾನಿ...ಗಳ, ಸಾರ್ವಜನಿಕರ ಮತ್ತು ಘನ ಸರ್ಕಾರದವರ ಸಹಾಯ ಸಹಕಾರಗಳಿ ಈ ಸೇವೆ ನಡೆಯುತ್ತಿದೆ. ವೈಂ...ವಾಗಿ ಯಾವ ಫಲಾಪೇಕ್ಷೆ ...ಇ. ಎಗಲಿ ಸನ್ಯಾಸ ಪಡೆಯುವ ಅಭಿಲಾಷೆಯಿಂದಾಗಲಿ ಸೇವೆ ಸಲ್ಲಿಸುತ್ತಿಲ್ಲ ಎಂದು ತಿಳಿಸಿದ್ದಾರೆ

ಬಸವಣ್ಣನವರ ಮಹಾತತ್ವ ಪ... ಪಾಲನೆಯೇ ಸೇವೆಗೆ ಪ್ರೇರಕ ಶ... ಯಾಗಿದ್ದು, ಆಧ್ಯಾತ್ಮಿಕ ಉನ್ನತಿ, ಲೋ... ಸಂಗ್ರಹ ಕಾರ್ಯ, ಅದರಲ್ಲಿಯೂ ದೀ... ದಲಿತರ ಉದ್ಧಾರವೇ ಅವರ ಸಂದೇಶ... ಮೂಲ ತತ್ವಗಳಾಗಿದ್ದು, ಅಂತೆಯೇ ಈ ಸೇವೆಗೋಸ್ಕರ ವೈಯುಕ್ತಿಕವಾಗಿ ಪ್ರಶ... ಯನ್ನಾಗಲಿ, ಪ್ರತಿಫಲವನ್ನಾಗಿ ಪಡೆಯ... ವುದು ಉಚಿತವಲ್ಲವೆಂದು ಬರೆ... ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ ಈ ಪ್ರಶಸ್ತಿ ತಿರಸ್ಕರಿಸ... ದೃಷ್ಟಿಯಲ್ಲಿ ಅನ್ಯಥಾ ಭಾವಿಸಬಾರದೆಂ... ಅವರು ಸಚಿವರಿಗೆ ಮನವಿ ಮಾಡಿದ್ದಾ...

ಕನ್ನಡಪ್ರಭ ಗುರುವಾರ 7 ಮಾರ್ಚ್ 1996 5

ಎಲ್ಲರೂ ಕನ್ನಡ ಕಲಿಯಬೇಕೆಂದು ಸಿದ್ಧಗಂಗಾ ಶ್ರೀ

ಕನ್ನಡಪ್ರಭ ವಾರ್ತೆ
ಬೆಂಗಳೂರು, ಮಾ. 6

ಕರ್ನಾಟಕದಲ್ಲಿ ನೆಲೆಸಿರುವವರೆಲ್ಲ ಕನ್ನಡವನ್ನು ಕಲಿತು ಮುಖ್ಯವಾಹಿನಿಯಲ್ಲಿ ಮಿಳಿತವಾಗಬೇಕು ಎಂದು ಸಿದ್ದಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮಿಗಳು ಬುಧವಾರ ಇಲ್ಲಿ ಕರೆ ನೀಡಿದರು.

ನಗರದ ಯವನಿಕಾ ಸಭಾಂಗಣದಲ್ಲಿ ನಡೆದ ಕರ್ನಾಟಕ ಪ್ರೌಢ ಶಿಕ್ಷಣ ...

ಹಿಂದಿ, ಕೇಂದ್ರ ಸರ್ಕಾರದ ವಿಶ್ವಾಸಗಳಿಸಿ ಇತರ ಭಾಷೆಗಳ ಮೇಲೆ ಆಡಳಿತ ನಡೆಸಲು ಹೊರಟಿದೆ. ಆದರೆ, ಅದು ಇನ್ನೂ ಇಂಗ್ಲೀಷಿನ ಸ್ಥಾನಕ್ಕೆ ಬಂದಿಲ್ಲ ಎಂದ ಅವರು, ಹಿಂದಿ ಮತ್ತು ಇಂಗ್ಲೀಷಿನ ಪರ ವಿರೋಧಗಳು ಜೀವಂತವಾಗಿ ಇರುವುದರಿಂದ ವಿವೇಚನಾ ಪರವಾಗಿ ತಾಳ್ಮೆಯಿಂದ ವರ್ತಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಧರ್ಮ –ಭಾಷೆ ತಕರು ಸಲ್ಲ

ಧರ್ಮಕ್ಕೂ ಭಾಷೆಗೂ ತಳಕು ... ಭಾಷೆಯಾಗಿ ಆಡುನುಡಿಯಾದಾಗ ಮಾತ್ರ ಸಂಸ್ಕೃತ ಭಾಷೆಯ ವರ್ಚಸ್ಸು ನೈಜವಾಗಿ ಉಳಿದು ಬೆಳೆಯಲು ಸಾಧ್ಯ ಎಂದವರು ಅಭಿಪ್ರಾಯಪಟ್ಟರು.

ಸಂಸ್ಕೃತ ಭಾಷೆ ಎಲ್ಲಾ ಭಾಷೆಗಳಲ್ಲೂ ದೈನಂದಿನ ಪದಗಳಲ್ಲಿ ಬೆರತಿದೆ. ಆದ್ದರಿಂದ, ಈ ಭಾಷೆ ಸಾಮಾನ್ಯ ಜನರ ಭಾಷೆಯಾಗಲು ತೊಡಕಿಲ್ಲ. ನಮ್ಮದಲ್ಲದ ಆಂಗ್ಲ ಭಾಷೆ, ನಮ್ಮೆಲ್ಲರಿಗೂ ತಲುಪುವಂತಾಗಿರುವಾಗ ನಮ್ಮದೇ ಆದ ಸಂಸ್ಕೃತ ಏಕೆ ನಮ್ಮನ್ನು ತಲುಪಲು ...

ಶನಿವಾರ ಮೇ 16, 1992 ಬೆಂಗಳೂರು, ಕನ್ನಡಪ್ರಭ



ದೊಡ್ಡಬಳ್ಳಾಪುರ ತಾಲ್ಲೂಕು ವೀರಶೈವ ಸಂಘದ ಉದ್ಘಾಟನಾ ಸಮಾರಂಭ ಬುಧವಾರ ನಡೆಯಿತು. ಸಮಾರಂಭದಲ್ಲಿ ಸಿದ್ಧಗಂಗಾ ಶ್ರೀಗಳು ಮಾತನಾಡುತ್ತಿರುವುದನ್ನು ಕಾಣಬಹುದು. ಶಾಸಕ ಆರ್. ಎಲ್. ಜಾಲಪ್ಪ ಅವರೂ ಇದ್ದಾರೆ.

ಬಸವಣ್ಣನ ಎತ್ತರಕ್ಕೆ ಏರಲು ಕರೆ

೨೪-೫-೧೯೯೩ ಸಂಯುಕ್ತ ಕರ್ನಾಟಕ ಪುಟ ೫



ಸಿದ್ಧಗಂಗಾಮಠದ ಡಾ. ಶಿವಕುಮಾರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಭಾನುವಾರ ಬೆಂಗಳೂರಿನಲ್ಲಿ ಏರ್ಪಾಡಾಗಿದ್ದ ಬಸವಜಯಂತಿ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯನ್ಯಾಯಾಧೀಶ ಡಿ.ಎಂ. ಚಂದ್ರಶೇಖರ್, ಸಾರಿಗೆ ಸಚಿವ ಭೀಮಣ್ಣ ಖಂಡ್ರೆ ಮತ್ತು ಆರ್.ಎಂ.ಬಿ. ಆರಾಧ್ಯ ಭಾಗವಹಿಸಿದ್ದರು. ಮೈಸೂರು ಲ್ಯಾಂಪ್ಸ್ ಬಸವ ಸಮಿತಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಸಹಬಾಳ್ವೆಯೇ ಬಸವಸಿದ್ಧಾಂತದ ಸಾರ

ಬೆಂಗಳೂರು, ಮೇ ೨೩- ತತ್ವಗಳು ಸೈದ್ಧಾಂತಿಕವಾಗಿ ಶ್ರೇಷ್ಠವಾಗಿದ್ದರೂ, ನೈತಿಕವಾಗಿ ಶಕ್ತಿ ಹೊಂದಿರದಿದ್ದರೆ ಅಂತಹ ತತ್ವಗಳು ಬೆಳೆಯಲು ಸಾಧ್ಯವಿಲ್ಲ ಎಂದು ಸಾರಿಗೆ ಸಚಿವ ಭೀಮಣ್ಣ ಖಂಡ್ರೆ ಇಂದು ಇಲ್ಲಿ ನುಡಿದರು.

ಎನ್ನುವ ಕುರಿತೇ ಚಿಂತಿಸಬೇಕಾದ ಕಾಲ ಬಂದಿದೆ ಎಂದು ಅವರು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಶ್ರೇಷ್ಠ ನ್ಯಾಯಾಲಯದ ನಿವೃತ್ತ ಮುಖ್ಯನ್ಯಾಯಾಧೀಶ ಡಿ.ಎಂ. ಚಂದ್ರಶೇಖರ್, ಎಲ್ಲಾ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೇಲಿ ಮಠದ ಶ್ರೀಶಿವರುದ್ರಸ್ವಾಮಿಗಳು ಮಾತನಾಡುತ್ತಾ, ಭಕ್ತಿಪಥದ ಮೂಲಕ ಇಹವನ್ನೇ ಕೈಲಾಸವನ್ನಾಗಿಸುವ ಭಕ್ತಿ ಪಕ್ಷವನ್ನು ರೂಪಿಸಿದ ಬಸವಣ್ಣನ ತತ್ವವನ್ನು ನಾವು ಪಾಲಿಸ

మార్చిలో సిద్ధగంగ మఠం మహాస్వామి వజ్రోత్సవాలు

(ఆంధ్రప్రభ ప్రతినిధి)

అన్నదానానికి రోజూ రూ. 50 వేల ఖర్చు

సిద్ధగంగ మఠంలో జరిగే రోజువా
అన్నదానానికి రూ. 50 వేలు ఖర్చవుతోంది
విద్యాభ్యాసం అనేది ఎంతో వ్యయంత
జరుగుతున్న ఈ రోజుల్లో కులమత భేదాల
లేకుండా సిద్ధగంగ మఠం కొన్నివే
మందికి ఉచిత భోజన, వసతి, వస్త్ర సౌ
ర్యం కల్పిస్తున్నది.

వచ్చే మార్చిలో జరిగే శ్రీ శ్రీ శివకు
మార మహాస్వామి వారి సన్యాసదీక్ష
స్వీకార వజ్రోత్సవాలలో రాష్ట్రపతి డాక్టర్
శంకర్ దయాళ్ శర్మ సహా అనేకమంది
ప్రముఖులు, విద్వాంసులు పాల్గొనన
న్నారు. ఈ సందర్భంగా రూ. 4 కోట్లతో
200 గదులతో నిర్మిస్తున్న విద్యార్థుల
హాస్టల్, రూ. 2 కోట్ల వ్యయంతో నిర్మిస్తున్న
ఉచిత భోజన వసతి గృహాన్ని రాష్ట్రపతి శ్రీ

ఆంధ్రప్రభ




1.5 కోట్ల రూపాయల వ్యయంతో నిర్మిస్తున్న హాస్టల్ భవనం.

పేదవిద్యార్థుల పెన్నిధి సిద్ధగంగమఠం సన్నిధి

(న్యూస్‌టుడే, తుముకూరు)

విద్యాభివృద్ధికి ప్రత్యేకించి పేద విద్యార్థుల ...ద్యున్నతికి సిద్ధగంగా మఠం ఎంతో కృషి చే...ంది. ఈ మఠం ఆధ్యాత్మిక కేంద్రంగా, విద్యా ...ద్రంగా వెలుగొందుతోంది. బెంగుళూరుకు 63 ...మీటర్ల దూరంలో సిద్ధ గంగామఠం వెలసింది. ...వ్యవస్థాపకులు గోసల సిద్ధేశ్వర శివయోగి. ఈయన ...రువాత బాధ్యతలు చేపట్టిన వారు కూడా ఎంతో ...శ్రద్ధలతో క్రమశిక్షణతో మఠం అభివృద్ధికి గురిచే...రు. ఇక్కడ చదువుకుంటున్న విద్యార్థులలో ను...రు నాలుగువేల మంది విద్యార్థులకు ఉచిత ...జన సౌకర్యం, వసతి కల్పించారు. ఇందులో ...డా గ్రామీణ ప్రాంతాల్లోని నిరుపేద విద్యార్థులే ...క సంఖ్యలో ఉన్నారు. వేదాలు మొదలుకొని ...ధునిక సాంకేతిక విజ్ఞానం వరకూ విద్యార్థులకు ...డ బోధిస్తారు. దీంతోపాటు చుట్టుపక్కల ...ంతాల్లోని పేద ప్రజలకు వైద్య సేవలను అందించటంలో కూడా ఎనలేని కృషి చేస్తున్నారు. తుముకూరుకు తొమ్మిది కిలోమీటర్ల దూరంలో సువిశాలమైన ప్రాంతంలో విద్యాలయాలను, ఆసుపత్రులను నిర్మించారు. ఇది ఒక పవిత్ర యాత్రా స్థలం కూడా. ఇక్కడికి ప్రతిరోజూ అధిక సంఖ్యలో భక్తులు వచ్చి దేవుడిని దర్శించటంతోపాటు శివకుమార స్వామిని కూడా దర్శించి ఆయన ఆశీర్వాదాలు పొందుతుంటారు. ఇక్కడ ప్రారంభంలో కేవలం 80 మంది విద్యార్థులతో వేద, సంస్కృత పాఠశాల మాత్రమే ఉండేది. ప్రస్తుతం పాఠశాలలు, కళాశాలలు కలసి సుమారు 90 వరకు వీరి ఆధ్వర్యంలో నడుస్తున్నాయి. ప్రతిరోజూ ఆరు వేల మందికి చొప్పున సంవత్సర పొడవునా భక్తులకు భోజన వసతి ఏర్పాటు చేశారు. మహాశివరాత్రి సందర్భంగా జరిగే ఉత్సవాల్లో రోజుకు లక్ష మందికి భోజన సౌకర్యం కల్పిస్తారు. ఇంతమందికి ఉచితంగా భోజన సదుపాయాలు కల్పించడం ఆశ్చర్యకరమైన విషయం. సిద్ధ గంగా మఠం ప్రజల సంక్షేమానికి గత 60 సంవత్సరాల నుంచి చేస్తున్న నిస్వార్థ సేవలకు గుర్తుగా వజ్రోత్సవాలను నిర్వహించాలని భక్తులు, పాత విద్యార్థులు నిర్ణయించారు. ఈ ఉత్సవాలకు గుర్తుగా సుమారు అయిదు కోట్ల రూపాయలతో వివిధ కార్యక్రమాలు చేపట్టారు. 1500 మంది విద్యార్థులు ఉండేందుకు వీలుగా ఒక ప్రత్యేక హాస్టల్, ఒకేసారి రెండు వేల మంది భోజనం చేయడానికి హాలు నిర్మిస్తున్నారు. ఈ మఠాధిపతుల జన్మస్థలమైన (మిగతా 7వ పేజీలో)



రెండువేల మంది కూర్చునేందుకు వీలుగా నిర్మిస్తున్న కమ్యూనిటీ హాలు భవనం.

శనివారం 21 ఆగస్టు 1993
ఈనాడు

వీరాపురంలో వృత్తి శిక్షణ కేంద్రాన్ని స్థాపించబోతున్నారు. ఇందుకోసం అవసరమయ్యే నిధులను భక్తులు, అభిమానులు ఇస్తున్నట్లు తెలిసింది. బెంగుళూరులోని పద్మవిభూషణ్ డాక్టర్ ఎం.సి.మోది ఆధ్వర్యంలో మఠం అభివృద్ధికి అనేక కార్యక్రమాలు జరుగుతున్నాయి. గత 60 ...

ప్రజాసేవే ధ్యేయంగా సిద్ధగంగ క్షేత్రం



మఠంలోని విద్యార్థులతో ప్రార్థన చేయిస్తున్న సిద్ధగంగమఠ అధిపతులు శివకుమారస్వామి

ಉಪಕೃತರಾದ
...ಳೆಯ ವಿದ್ಯಾರ್ಥಿಗಳ
ದೃಷ್ಟಿಯಲ್ಲಿ



...ಪ್ರಾತಃಸ್ಮರಣೀಯರಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ...ತ ವಾತ್ಸಲ್ಯಭಾವದಿಂದ ವಿದ್ಯಾರ್ಥಿಗಳನ್ನು ಸಾಕಿ ಸಲಹಿದುದು ಅನೇಕ ...ಗಳಲ್ಲಿ. ತಾಯಿಯಾಗಿ ಹೊತ್ತುಹೊತ್ತಿಗೆ ಅನ್ನ ನೀರು ಇತ್ತಿದ್ದಾರೆ; ...ಯಾಗಿ ಸಲಹಿ ರಕ್ಷಿಸಿದ್ದಾರೆ. ಆಚಾರ್ಯರಾಗಿ ನೀತಿಕ್ರಿಯಾಚಾರ ...ದಮಾಡಿ ತಿದ್ದಿ ತೀಡಿದ್ದಾರೆ. ಗುರುವಾಗಿ ಪಾಠಪ್ರವಚನ ಮಾಡಿ ಬೌದ್ಧಿಕ ...ತ್ತನ್ನು ಬೆಳೆಸಿದ್ದಾರೆ: ವಿವಿಧ ವಿದ್ಯಾಪ್ರಮುಖ್ಯಗಳ ವಿದ್ಯಾಮಂದಿರಗಳನ್ನು ಕಟ್ಟಿ ...ನಮ್ಮ ಮನಸ್ಸಿಗೆ ಸ್ಪಷ್ಟವ ವಿದ್ಯಾಭ್ಯಾಸಂಗಗಳಿಗೆ ಅನುವುಮಾಡಿಕೊಟ್ಟು ನಮ್ಮ ...ನ ಸಾಕಾರರೇ ಆಗಿದ್ದಾರೆ ಕೊನೆಗೆ ಸಂತೋಷದಿಂದ ಚೆನ್ನಾಗಿ ...ಬದುಕಲಿ ಬಾಳಬೇಕೆಂದು ಹರಸಿ ಬೀಳ್ಕೊಟ್ಟಿದ್ದಾರೆ. ...ಮಿತ್ರಬಂಧುಗಳೂ, ಪ್ರತ್ಯಕ್ಷದೇವತೆಯೂ ಆದ ಅವರ ಈ ಕಾರುಣ್ಯದ ...ವಾಗಿ ಅವರು ನಮ್ಮ ಹೃದಯಕಮಲಮಧ್ಯದ ಆರಾಧ್ಯಮೂರ್ತಿಗಳಾಗಿ ...ವಸ್ಥಿತರಾಗಿ ರಾರಾಜಿಸುತ್ತಿದ್ದಾರೆ.

...ಂಬಹಿಂದಿನಿಂದ ನಡೆದುಬಂದ ಶ್ರೀಕ್ಷೇತ್ರದ ಮೂಲಧ್ಯೇಯವಾದ ...ದಾಸೋಹವ್ರತವನ್ನು ಲೋಪವಿಲ್ಲದೆ ಪಾಲಿಸಿಕೊಂಡು, ಸಾವಿರಸಾವಿರ ...ಸ್ತುಯ ವಿದ್ಯಾರ್ಥಿಪಾಲನ ಪೋಷಣೆಯ ಹೊಣೆಗಾರಿಕೆಯನ್ನು ...ಹೊರಲಿಕ್ಕೊಂಡು ಕಾರ್ಯನಿರ್ವಹಣೆ ಮಾಡುವುದರ ಹಿನ್ನೆಲೆಯ ಶ್ರೀಗಳವರ ...ನಾಥ ಪರಿಶ್ರಮ ಅಗಾಧವಾಗಿತ್ತು. ಈ ಕಾರ್ಯವನ್ನೊಂದು ಲೀಲೆಯಂತೆ ಕಳೆದ 50 ...ರ್ಷಗಳಿಂದ ಶ್ರೀಗಳವರು ಎಂಥ ದುರ್ಧರ ಪ್ರಸಂಗದಲ್ಲೂ ನಡೆಸಿಕೊಂಡು ...ದ್ದಾರೆ. ತಮ್ಮ ಈ ಸಂಕಲ್ಪದ ಆದೇಶಕ್ಕೆ ಎಲ್ಲರೂ ಕಂಡಂತೆ ಕಲ್ಲುಹೊತ್ತು ...ವ ಕಟ್ಟಿದ್ದಾರೆ: ಅಡಿಗೆ ಮನೆಯಲ್ಲಿ ಮುದ್ದೆ ತಿರುವಿ, ಅನ್ನ ಬಸಿದಿದ್ದಾರೆ; ...ಲ ಗದ್ದೆ ಕಣಕಟ್ಟೆಗಳಲ್ಲಿ ಶ್ರಮವಹಿಸಿ ಕೆಲಸಮಾಡಿ ಶ್ರಮಬಲ ಸುರಿಸಿದ್ದಾರೆ. ...ಗ ಕೊಡಲಿಯಿಂದ ಸೌದೆಸೀಳಿಗಾಗಿ ಬೆಟ್ಟ ಗುಡ್ಡಗಳನ್ನು ಸುತ್ತಿದ್ದಾರೆ; ...ಯ ನೀರು ಸಿಗದ ಗಿಡ್ಡಗಳ್ಳಿಗೆ ಹೊತ್ತು ಬೆಳಸಿದ್ದಾರೆ. ಅವರ ಈ ಕಾರ್ಯಫಲ ...ವಿರಸಾವಿರ ವಿದ್ಯಾರ್ಥಿಗಳ ರಕ್ಷಣೆ, ಬಡವಬಲ್ಲಿದರ, ಹಸಿದವರ, ಅತಿಥಿ ...ಭ್ಯಾಗತರ ಯೋಗಕ್ಷೇಮಕ್ಕೆ ಸಂದಿದೆ. ಅವರ ಸಮಸ್ತಾಂತಃಕರಣವನ್ನು ...ವ್ಯಾಪಿಸಿಂತ ಪೂರ್ಣಲಕ್ಷ್ಯ 'ಯತ್ರ ಜೀವಸ್ತತ್ರ ಶಿವ' ಆಗಿದೆ. ಅವರೊಂದು ...ದತೇಜವೇ ಎನಿಸಿದ್ದಾರೆ. ಆ ತೇಜ ರಕ್ತಿಯಾಗಿ ಕ್ರಿಯಾಮುಖಗೊಂಡರೆ ಸುತ್ತಣ ...ಲೋಕವನ್ನು ಹೇಗೆ ಬದುಕಿಸಬಲ್ಲುದು, ಎಂಬುದಕ್ಕೆ ಶ್ರೀಗಳವರು ಪ್ರತ್ಯಕ್ಷ ...ದರ್ಶನ.

ಸುವರ್ಣ ಮಹೋತ್ಸವ ಸಂದರ್ಭ

ಸಿದ್ಧಗಂಗೆಯ ಹಳೆಯ ವಿದ್ಯಾರ್ಥಿಗಳು 1981ರಲ್ಲಿ ಡಾ। ಶ್ರೀ ಶ್ರೀ ಶಿವಕುಮಾರ ...ಮಿಗಳಿಗೆ ಅರ್ಪಿಸಿದ "ಸಿದ್ಧಗಂಗಾಶ್ರೀ" ಸಂಭಾವನಾ ಸುವರ್ಣ ಸಂಪುಟದ ...ಸಾದಕರ ನುಡಿಯ ಒಂದು ಭಾಗ



ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ರಜತ ಮಹೋತ್ಸವ ಆಚರಿಸಿರುವ ಸಿದ್ಧಗಂಗಾ ತಾಂತ್ರಿಕ ಮಹಾ ವಿದ್ಯಾಲಯ

ಇಂದಿನ ಬುನಾದಿ.........

ಸಿದ್ಧಗಂಗೆಯಲ್ಲಿ

ಮತ್ತೊಂದು ಸೋಜಿಗಕ್ಕೆ ನಾಂದಿ

ಸೋಜಿಗಗಳ ಮೇಲೆ ಸೋಜಿಗ:

ಇದು ಸಿದ್ಧಗಂಗೆಯ ಐತಿಹ್ಯ




ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು
ಗೌರವಾಧ್ಯಕ್ಷರು

ಸರ್ವರಿಗೂ ಹಾರ್ದಿಕ

ಸ್ವಾಗತ ಬಯಸುವ

ವಜ್ರ ಮಹೋತ್ಸವ
ಸಮಿತಿ.



ಪದ್ಮಭೂಷಣ ಡಾ. ಎಂ.ಸಿ.ಮೋದಿ
ಅಧ್ಯಕ್ಷರು



ಶ್ರೀ ಬಿ.ಎಸ್. ಮುದ್ದಪ್ಪ
ಕಾರ್ಯಾಧ್ಯಕ್ಷರು



ಶ್ರೀ ಎಸ್.ಎಸ್. ಹಸಬಿ.
ಕಾರ್ಯದರ್ಶಿಗಳು



ಶ್ರೀ ಟಿ.ಕೆ. ನಂಜುಂಡಪ್ಪ,
ಖಜಾಂಚಿಗಳು

ಶ್ರೀ ಸಿದ್ಧಗಂಗಾಕ್ಷೇತ್ರ




ಸದ್ದುಗದ್ದಲವಿರದ ಸಾಧನೆ

●ಡಾ. ಜಿ.ಎಸ್. ಶಿವರುದ್ರಪ್ಪ

ವರ್ಣಚಿತ್ರ: ಕೆ.ಜಿ. ಶಿವಯೋಗಿ

ಇದ್ದಕ್ಕಿದ್ದಂತೆ ಯಾವುದೋ ಅಸ್ಪಷ್ಟವಾದ ಸದ್ದಿನಿಂದ ನನಗೆ ಎಚ್ಚರವಾಯಿತು. ಅರೆತೆರೆದ ಕಣ್ಣುಗಳಿಗೆ ಗೋಚರವಾದದ್ದು ಮಬ್ಬುಗತ್ತಲು. ಆ ಕತ್ತಲಿಗೆ ಒಂದು ಕಂಡಿ ಹೊಡೆದಂತಿದ್ದ ಒಂದೆರಡು ಕಿಟಕಿಗಳ ಚೌಕಟ್ಟುಗಳ ಆಕಾರಗಳು. ಅದರಾಚೆಗೆ ಎತ್ತರವಾಗಿ ಬೆಳೆದು ಕೊಂಬೆಗಳನ್ನು ಚಾಚಿಕೊಂಡ ಮರ. ಮರದ ಕೊಂಬೆ–ರೆಂಬೆಗಳಲ್ಲಿ ಗಾಳಿಗೆ ಅಲುಗಾಡುವ ಎಲೆಗಳ ತುರುಗಲು. ಆ ಮರದ ಸಮೀಪದಲ್ಲಿಯೇ, ಕೆಳಗೆ ಯಾರದೋ ಹಜ್ಜೆಗಳ

ಸಿದ್ಧಗಂಗಾಕ್ಷೇತ್ರದ ಒಂದು ನೋಟ



ಯಾವ ಶ್ರಮದಾನ. ಸೇವೆ. ತ್ಯಾಗ. ಜಾತ್ಯಾತೀತತೆ ಇತ್ಯಾದಿ ಮೌಲ್ಯಗಳನ್ನು ಇತ್ತೀಚೆಗೆ ನಮ್ಮ ನಾಯಕರು ದೊಡ್ಡ ಗಂಟಲಿನಲ್ಲಿ ಘೋಷಿಸುತ್ತಾರೋ ಅವೆಲ್ಲವನ್ನೂ ಸ್ವಾತಂತ್ರ್ಯಪೂರ್ವ ಕಾಲದಿಂದಲೂ ನಿಶ್ಯಬ್ದವಾಗಿ ಆಚರಿಸಿ ತೋರಿಸಿದವರು ಹಾಗೂ ತೋರಿಸುತ್ತಿರುವವರು ಶಿವಕುಮಾರ ಸ್ವಾಮಿಗಳು. ಈ ಕಾರಣದಿಂದ ಈ ಹೊತ್ತಿಗೂ ಈ ಸ್ವಾಮಿಗಳು ನಿರಂತರವಾದ ಗೌರವಕ್ಕೆ ಪಾತ್ರರಾಗಿದ್ದಾರೆ. 1965ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಿ.ಲಿಟ್ ಪದವಿಯನ್ನು ಕೊಟ್ಟು ಗೌರವಿಸಿದೆ. ಆದರೆ ತಾವು ಇಂಥ ಮಹತ್ವಾದ ಸಾಧನೆಗಳನ್ನು ಸಾಧಿಸಿದ್ದೇವೆ ಎಂಬ ಯಾವ ಅರಿವೂ ಇಲ್ಲದವರೆಂಬಂತೆ, ಸ್ವಾಮಿಗಳ ನಿರಾಡಂಬರವಾದ ಹಾಗೂ ಸದ್ದಿಲ್ಲದ ಕಾಯಕ. ನಿಸರ್ಗ ಸಹಜವಾದ ವ್ಯಾಪಾರಗಳಂತೆ ನಿರಪೇಕ್ಷಕ ಭಾವದಲ್ಲಿ ಇಂದಿಗೂ ಕ್ರಿಯಾಶೀಲವಾಗಿದೆ.

ನನ್ನ ಚಿಕ್ಕಂದಿನ ದಿನಗಳಲ್ಲಿ ಇಂಥ ವ್ಯಕ್ತಿತ್ವದ, ಹಾಗೂ ಇಂಥ ಪರಿಸರದ ಪ್ರಭಾವದಲ್ಲಿ ನಾನು ಬೆಳೆದದ್ದು ನನ್ನ ಸುದೈವವೆಂದೇ ತಿಳಿದಿದ್ದೇನೆ. ನನ್ನ ಕವಿತೆಯ ಹಕ್ಕಿ ಮೊದಲು ರೆಕ್ಕೆ ಬಿಚ್ಚಿದ್ದು. ಈ ಬೆಟ್ಟ ಬಂಡೆಗಳ. ಸಸ್ಯ ನಿಬಿಡವಾದ. ಗುಡಿ–ಗೋಪುರಗಳ. ಸರಳ ಸಾಧಾರಣ ಸಂಗಾತಿಗಳ, ಹಾಗೂ ಸಾಧು ಸಂತರ ನೆನಪನ್ನು ತರುವ ಸ್ವಾಮಿಗಳ. ಶ್ರಮಜೀವಿಗಳ. ಈ ಪ್ರಶಾಂತ ಪರಿಸರದಲ್ಲಿ. ಈ ಪರಿಸರಕ್ಕೆ ನಾನೆಷ್ಟು ಋಣಿ ಎಂಬುದನ್ನು ನೆನೆದರೆ. ಧನ್ಯತೆಯ ಹಾಗೂ ಕೃತಜ್ಞತೆಯ ಭಾವವೊಂದು ನನ್ನನ್ನು ತುಂಬಿಕೊಳ್ಳುತ್ತದೆ:


'ಎನಿತು ಜನ್ಮದಲಿ ಎನಿತು ಜೀವರಿಗೆ
ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನಗಣಿಯೋ!

ಅವಿಸ್ಮರಣೀಯ

ಸುಮಾರು ಅರ್ಧ ಶತಮಾನದಷ್ಟು ಹಿಂದಿನ ಒಂದು ಮುಂಬೆಳಗಿನ ಈ ಚಿತ್ರ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ಅಂದು ಸಿದ್ಧಗಂಗೆಯ ಮಠದಲ್ಲಿ ವಿದ್ಯಾರ್ಥಿಯಾಗಿ ನಾನು ಇದ್ದ ಮೂರು ವರ್ಷಗಳ ಕಾಲಮಾನದಲ್ಲಿ. ಈ ಋಷ್ಯಾಶ್ರಮ ಸದೃಶವಾದ ಈ ಕ್ಷೇತ್ರದ ವಾತಾವರಣ ನನ್ನ ಎಳೆಯಂದಿನ ಬದುಕಿನ ಮೇಲೆ ಮಾಡಿದ ಪ್ರಭಾವ ಅವಿಸ್ಮರಣೀಯವಾದದ್ದು. ಅಂದೊಂದು ದಿನ ಬೆಳಗಿನ ಝಾವ— ವಿದ್ಯಾರ್ಥಿನಿಲಯದ ಕೊಠಡಿಯೊಂದರಲ್ಲಿ ಮಲಗಿದಾಗ— ಕೇಳಿದ ಟಕ್— ಟಕ್—ಟಕ್ ಎಂಬ ಅನುಕರಣನ. ದಿನವೂ ತನ್ನ ಛಂದೋಬದ್ಧವಾದ ಗತಿಯಿಂದ ನನಗೆ ಅಭ್ಯಾಸವಾಯಿತು ಆ ಸದ್ದು ಬೇರೆ ಯಾವುದೂ ಅಲ್ಲ. ದಿನವೂ ಬೆಳಗಿನ ಝಾವ ನಾಲ್ಕು ಗಂಟೆಗೆ ಎದ್ದು. ತಮ್ಮ ಸ್ನಾನ–ಧ್ಯಾನಾದಿಗಳಿಗೆ ಹಳೆಯ ಮಠದ ಕಡೆ ಹೋಗುವ. ಸಿದ್ಧಗಂಗಾ ಮಠಾಧ್ಯಕ್ಷ ಶ್ರೀ ಶಿವಕುಮಾರ ಸ್ವಾಮಿಗಳ ಪಾದುಕೆಯ ಸದ್ದು.

ಸಿದ್ಧಗಂಗೆ: 200 ಕೊಠಡಿ ಉಚಿತ ವಿದ್ಯಾರ್ಥಿನಿಲಯ ಮಾರ್ಚ್‌ಗೆ ಸಿದ್ಧ

ಕನ್ನಡಪ್ರಭ ವಾರ್ತೆ
ಬೆಂಗಳೂರು, ಡಿ. 12



ಸಿದ್ಧಗಂಗಾ ಶ್ರೀಗಳ ವಜ್ರಮಹೋತ್ಸವದ ಸವಿನೆನಪಾಗಿ ನಿರ್ಮಾಣಗೊಳ್ಳುತ್ತಿರುವ ನಾಲ್ಕು ಕೋಟಿ ರೂ. ವೆಚ್ಚದ ವಿದ್ಯಾರ್ಥಿನಿಲಯ.

ಶಿಕ್ಷಣ ದುಬಾರಿಯಾಗಿರುವ ಈ ಕಾಲದಲ್ಲಿ ಬಡವರಿಗೆ ಊಟ, ಬಟ್ಟೆ, ಮಲಗಲು ಸ್ಥಳ ಕೊಟ್ಟು ಉಚಿತ ವಿದ್ಯಾಭ್ಯಾಸ ಕೊಡುವ ಸಂಸ್ಥೆ ಎಂದರೆ ತುಮಕೂರಿನ ಸಿದ್ಧಗಂಗಾ ಕೇಂದ್ರ. ಇಲ್ಲಿ ಜಾತಿಮತಗಳ ಜಂಜಾಟವಿಲ್ಲ. ಮುಸ್ಲಿಮರು, ಕ್ರೈಸ್ತರೂ ಸೇರಿದಂತೆ 85ಕ್ಕೂ ಹೆಚ್ಚು ಜಾತಿಯ ಮಕ್ಕಳು ಓದುತ್ತಿದ್ದಾರೆ.

ನಾಲ್ಕು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದು, ಇದರಲ್ಲಿ 2233 ಅನಾಥ ಮಕ್ಕಳು. ಇದರಲ್ಲಿ ಉತ್ತರ ಕರ್ನಾಟಕದವರೇ ಹೆಚ್ಚು. ಹಿಂದೆ ಹಳೇ ಮೈಸೂರಿನವರೇ ಹೆಚ್ಚಾಗಿದ್ದರು. ಈಗ ಎಲ್ಲಾ ಕಡೆ ಶಾಲೆಗಳಾದ ಮೇಲೆ ಉಚಿತ ವಿದ್ಯಾಭ್ಯಾಸಕ್ಕೆ ಹಳೇ ಮೈಸೂರಿನವರು ಬರುವುದು ಕಡಿಮೆ. ಈ ಮಕ್ಕಳಿಗೆ ಉಚಿತ ಊಟದ ವ್ಯವಸ್ಥೆ ಮಾಡಲು ಪ್ರತಿದಿನ ಸಾವಿರಾರು ರೂ.ಗಳು ವೆಚ್ಚವಾಗುತ್ತಿದೆ. ಹಿಂದೆ ಕಾಲ ಚೆನ್ನಾಗಿತ್ತು. ಜನ ತಾವಾಗಿಯೇ ದವಸ ಧಾನ್ಯಗಳನ್ನು ತಂದು ಕೊಡುತ್ತಿದ್ದರು. ಕಳೆದ 54 ವರ್ಷಗಳಿಂದ ಉಚಿತ ವಿದ್ಯಾಭ್ಯಾಸ ನೀಡುತ್ತಾ ಬಂದಿರುವ ಶ್ರೀ ಶಿವ ಕುಮಾರ ಸ್ವಾಮಿಗಳು ಈಗಲೂ ಅದೇ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಅನಾಥ ಮಕ್ಕಳಿಗೆ ಸರ್ಕಾರ ತಿಂಗಳಿಗೆ 50 ರೂ.ಗಳನ್ನು ನೀಡುತ್ತದೆ. ಉಳಿದವರ ವೆಚ್ಚವನ್ನು ಮಠವೇ ಭರಿಸಬೇಕು. ಇಲ್ಲಿಯ ಸಂಸ್ಕೃತ ಪಾಠಶಾಲೆ 1917 ರಲ್ಲೇ ಆರಂಭವಾದದ್ದು. ಜಾತಿಮತ ಭೇದವಿಲ್ಲದೆ ಸಂಸ್ಕೃತ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟದ್ದೇ ಅಲ್ಲದೆ ಕನ್ನಡ ಪಂಡಿತರಿಗೆ ಸಂಸ್ಕೃತ ಪಂಡಿತರೊಂದಿಗೆ ಬೆರೆಯಲು ಅವಕಾಶ ಮಾಡಿಕೊಟ್ಟರು. ಈಗಲೂ ಇದು ಉತ್ತಮ ಪಾಠಶಾಲೆಯಾಗಿದೆ.

ಶಿಶು ವಿಹಾರದಿಂದ ಹಿಡಿದು ಎಂಜನಿಯರಿಂಗ್ವರೆಗೆ ಎಲ್ಲಾ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಓದಿ ಉದ್ಯೋಗದಲ್ಲೂ ಕೆಲಸದಲ್ಲಿದ್ದಾರೆ. ಈ ವಿದ್ಯಾರ್ಥಿಗಳು ಸೇರಿ ಈಗ ಸ್ವಾಮಿಗಳ ವಜ್ರ ಮಹೋತ್ಸವದ ಅಂಗವಾಗಿ 200 ಕೊಠಡಿಗಳ ಉಚಿತ ವಿದ್ಯಾರ್ಥಿ ನಿಲಯವನ್ನು ನಿರ್ಮಿಸುತ್ತಿದ್ದಾರೆ. ಒಂದು ಕೊಠಡಿಯಲ್ಲಿ 6 ಜನ ವಿದ್ಯಾರ್ಥಿಗಳು ವಾಸಿಸುವರು. 4 ಕೋಟಿ ರೂ ಗಳಲ್ಲಿ ಈ ಬೃಹತ್ ಕಟ್ಟಡ ಮಾರ್ಚ್ ವೇಳೆಗೆ ಮುಗಿಯಲಿದೆ. ಕಲ್ಲಿನಲ್ಲಿ ನಿರ್ಮಿಸಿರುವ ಈ ಕಟ್ಟಡ ಅತ್ಯಾಧುನಿಕವಾಗಿದ್ದು 144 ಶೌಚಾಲಯಗಳನ್ನು 108 ಸ್ನಾನದ ಮನೆಗಳನ್ನು ಹೊಂದಿದೆ. ಇದೇ ರೀತಿ 2 ಕೋಟಿ ರೂ. ವೆಚ್ಚದಲ್ಲಿ ದಾಸೋಹ ಮಂದಿರವನ್ನು ಬೃಹತ್ ಪ್ರಮಾಣದಲ್ಲಿ ನಿರ್ಮಿಸಲಾಗುತ್ತಿದೆ. ಈ ಎರಡೂ ಕಟ್ಟಡವನ್ನು ಸಾರ್ವಜನಿಕರ ಹಣದಿಂದಲೇ ನಿರ್ಮಿಸಲಾಗಿದೆ.

ಇವುಗಳನ್ನು ಮಾರ್ಚ್‌ನಲ್ಲಿ ರಾಷ್ಟ್ರಪತಿಗಳು ಉದ್ಘಾಟಿಸುವರು. ಈ ಕಟ್ಟಡಗಳನ್ನು ಮಠಕ್ಕೆ ಅರ್ಪಿಸುತ್ತೇವೆ ಎಂದು ವಜ್ರ ಮಹೋತ್ಸವ ಸಮಿತಿ ಕಾರ್ಯಾಧ್ಯಕ್ಷ ಬಿ.ಎಸ್. ಮುದ್ದಪ್ಪ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇದಲ್ಲದೆ ವಜ್ರ ಮಹೋತ್ಸವದ ಸವಿನೆನಪಿಗಾಗಿ 'ಸಿದ್ಧಗಂಗಾಶ್ರೀ–2' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಲಾಗುತ್ತಿದೆ ಎಂದರು.

ಲೋಕಸಭೆಯಲ್ಲಿ ಉಪ ಸಭಾಪತಿಯಾಗಿರುವ ಎಸ್. ಮಲ್ಲಿಕಾರ್ಜುನಯ್ಯ ನವರು ತಮ್ಮ ಪಾಲಿನ ಹಣದಲ್ಲಿ 10 ಲಕ್ಷ ರೂಗಳನ್ನು ರಸ್ತೆ ದುರಸ್ತಿಗಾಗಿ ಜಿಲ್ಲಾ ಪರಿಷತ್ತಿಗೆ ನೀಡಿದ್ದಾರೆ. ಇದಲ್ಲದೆ ರಾಜ್ಯ ಸರ್ಕಾರವು 1.90 ಕೋಟಿರೂ. ಗಳನ್ನು ಮಂಜೂರು ಮಾಡಿದ್ದು ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯಾಗಲು ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಬೇಕಿದೆ ಎಂದರು.



BANGALORE EVENINGER
Tuesday, December 12, 1995,
THE ONLY ENGLISH EVENING DAILY FROM BANGALORE

DIAMOND JUBILEE CELEBRATIONS OF H H SREE SHIVAKUMARA SWAMIJ

Sree Siddaganga Math: font of compassion and service to poor

Sree Siddaganga Math is one the famous and biggest igious, social and educational ntres in Karnataka, having a rious heritage of more than hundred years, starting from H. Sree Gosal Siddeswara, a nowned 'Yathi' who perrmed penance in the hillock ere the Math is situated. Since beginning, there is a big eage of holy saints who have dered valuable services to the ople of the land.

It is H.H. Sree Atavi Swamy this holy lineage who started ASOHA' (free food service) he poor, which is actually the ic principle of the Math. H.H. e Uddana Shivayogi who ceeded Sree Atavi Swamiji, ended the service of the Math various sorrounding villages. also started sanskrit educan and provided opportunities all, irrespective of caste and ed to learn sanskrit. The small skrit patashala started by H. in the year 1917, has now wn into a college and it is v the biggest sanskrit educan centre in the country having re than 3000 students.

Sree Sree Shivakumara haswamiji who was initiated H.H. Sree Uddana Shivayogi he year 1930 as an anchorat, ame the head of Sri Sidganga Math in the year 1941. s during his period, the sere activities of the Math have n extended in various forms ering the whole of Karaka. Being a staunch follower Basava philosophy, Sree akumara Swamiji is workday and night for the cause



HH Dr Sree Sree Shiva kumaraswami

of poor and down-trodden since last 54 years.

With his unbounded compassion towards common people, incomparable self-subjection, unique creativity and incessant austerity, Sree Shivakumara Swamiji has acquired an abounding glory among devotees, throughout the country. Today, Siddaganga Math has grown itself into a large service Institution. Nearly 98 educational institutions and 21 public service organisations are working under the auspices of the Math, most of which are located in rural area, serving the cause of poor villagers. If otherwise, the future of lakhs of rural children would have been left under complete darkness.

Sree Shivakumara Swamiji has established hostels for the poor students, not only in the Math itself, but also at Hindupur in Andhra Pradesh, Sakaleshpur, Belur, Nagavalli and other places.

The main hostel situated at the Math itself has given shelter to more than 4100 poor students studying from primary school to the level of Engineering college. There is some wrong opinion among some people, that the Math is devoted to only particular community. But that is not the truth.

In addition to providing free boarding and lodging to four thousand and odd number of students, the Math provides free food to an average of 500 visiting devotees daily irrespective of caste. The number of visiting devotees will be even more on Tuesdays and Fridays.

It is a matter of astonishment that, even today in spite of the alarming price-rise, the 'DASOHA' service of the Math is managed without any break. Actually the Dasoha at the Math is considered as a marvellous miracle; The daily expenditure on Dasoha amounts to more than Rs.50,000/-. This has been possible only by the gracious will power of H.H. Sree Shivakumara Swamiji.

H.H. Sree Shivakumara Swamiji himself is a great scholar, both in Kannada, Sanskrit and English. He is a great exponent of Sharana philosophy, a progressive thinker and a glorious percipient. In recognition of his yeoman services in the field of religion, education, social and cultural activities, the Karnataka University conferred honorary doctorate on him in the year 1965.

In addition to this unparal-



The Diamond Jubilee commeration dir struction by Sree Siddaganga Math, Tumkur

lelled 'Anna Dasoha', Sri Siddaganga Math is carrying out 'Jnana Dasoha' also. The Math is now a reputed cultural centre too. Programmes relating to literature and culture are being conducted regularly throughout the year; These programmes attended by eminent scholars and famous artists provide an inspiring platform to the up-coming young writers and artists.

With these immense and commendable service activities of Sree Siddaganga Math in the background, the devotees of the Math have decided now to celebrate the Diamond Jubilee of H.H. Dr. Sree Sree Shivakumara Swamiji's renunciation, for which necessary preparations are going on. The President of India and other dignitaries are expected to participate in the celebrations.

One c features dedicating which are of constr Sree Shiv his devote tribute. monumen hostel ac 1500 st

Math's E This is or stone bu area of 1 rooms, 1 bathroo standard

know th quired t these (hos buildings from do is grateful

ಸಮಾರಂಭ

ಕನ್ನಡಪ್ರಭ ವಾರ್ತೆ
ತುಮಕೂರು, ಫೆ. 15

ಸಿದ್ಧಗಂಗಾ ಮಠಾಧ್ಯಕ್ಷ ಡಾ। ಶ್ರೀ ಶಿವಕುಮಾರ ಸ್ವಾಮಿಗಳ ವಿರಕ್ತಾಶ್ರಮ ಸ್ವೀಕಾರದ ವಜ್ರ ಮಹೋತ್ಸವದ ನೆನಪಿನ ವಿದ್ಯಾರ್ಥಿನಿಲಯ ಹಾಗೂ ಭೋಜನ ಶಾಲೆಯ ಕಟ್ಟಡಗಳಿಗೆ 16ರಂದು ಉಪರಾಷ್ಟ್ರಪತಿ ಶಂಕರದಯಾಳ್ ಶರ್ಮ ಅವರು ಮತ್ತು ಲೋಕಸಭಾಧ್ಯಕ್ಷ ಶಿವರಾಜ ಪಾಟೀಲ್ ಅವರು ಶಂಕುಸ್ಥಾಪನೆ ನೆರವೇರಿಸುವರು.

ಈ ಕಟ್ಟಡಗಳ ನಿರ್ಮಾಣಕ್ಕೆ ಮೂರೂವರೆ ಕೋಟಿ ರೂ.ಗಳ ಯೋಜನೆ ಸಿದ್ಧಪಡಿಸಲಾಗಿದೆ.

ವಿದ್ಯಾರ್ಥಿ ನಿಲಯದಲ್ಲಿ 1500 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲು, ಭೋಜನ ಶಾಲೆಯಲ್ಲಿ ಒಂದೇ ಬಾರಿಗೆ 2500 ಜನ ಊಟಕ್ಕೆ ಕೂರುವ ಸೌಲಭ್ಯ ಇರುತ್ತದೆ.

ಶ್ರೀ ಸಿದ್ಧಗಂಗಾ ಮ

ಡಾ ॥ ಶ್ರೀ ಶ್ರೀ ಶಿವಕುಮ

ವಿರಕ್ತಾಶ್ರಮ ಸ್ವೀಕಾರದ **ವಜ್ರಮ**

3.50 ಕೋಟಿ ರೂಪಾಯಿಗಳ ವೆಚ್ಚದ

ಪ್ರಸಾದ ನಿಲಯದ **ಶಿಲಾನ**

ಇಂದು **16-2-1992**ರ ಭಾನುವಾರ ಅ


ಶ್ರೀ ಸಿದ್ಧಗಂಗಾ ಮಠದ

ಪರಮ ಪೂಜ್ಯ **ಡಾ ॥ ಶ್ರೀ ಶ್ರೀ** ಶಿವಕುಮಾರ ಸ

ಒಂದೂವರೆ ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಬಲ್ಲ ವಜ್ರಮಹೋತ್ಸವ ಸ್ಮಾರಕ ವಿದ್ಯಾರ್ಥಿ ನಿಲಯದ ಶಿಲಾನ್ಯಾಸವನ್ನು ನಮ್ಮ ರಾಷ್ಟ್ರಪತಿ ಘನವೆತ್ತ **ಡಾ।। ಶಂಕರ ದಯಾಳ್ ಶರ್ಮ** ಅವರು ನೆರವೇರಿಸುವರು.



ಘನತೆವೆತ್ತ ರಾಜ್ಯಪಾಲರಾದ
ಶ್ರೀ ಖುರ್ಷಿದ್ ಆಲಂಖಾನ್‌ರವರು
ಅಧ್ಯಕ್ಷತೆ ವಹಿಸುವರು.



ಡಾ।। ಶಂಕರ ದಯಾಳ್ ಶರ್ಮ



ಶ್ರೀ ಶ್ರೀ ಶಿವಕುಮಾರಸ

...ಧ್ಯಕ್ಷ
...ರ ಸ್ವಾಮಿಗಳವರ
...ೋತ್ಸವದ ನೆನಪಿನ
...ವಿದ್ಯಾರ್ಥಿ ನಿಲಯ ಮತ್ತು
...ಸ ಸಮಾರಂಭ
...ರಾಹ್ನ 3 ಗಂಟೆಗೆ
...ವರಣದಲ್ಲಿ
...ಗಳ ದಿವ್ಯ ಸನ್ನಿಧಿಯಲ್ಲಿ ನೆರವೇರುವುದು

...ಕ್ರಾಂತಿ

ಶ್ರೀ. ಸಿದ್ದಗಂಗಾ ಕನ್ನಡ ನಾಡಿನ ಪ್ರಸಿದ್ಧ ಕ್ಷೇತ್ರಗಳಲ್ಲಿ ಒಂದು. ಇದಕ್ಕೆ ಪ್ರಾಚೀನ ಪರಂಪರೆಯಿದೆ. ಈ ಪರಂಪರೆಯನ್ನು ಗೋಸಲ ಸಿದ್ಧೇಶ್ವರರಿಂದ (ಸುಮಾರು 1350) ಗುರುತಿಸಲು ಸಾಧ್ಯ. ಇವರು ಮಹಾತಪಸ್ವಿಗಳು. ಇವರ ನಂತರ ಬಂದ ಶ್ರೀ. ಶಂಕರಸ್ವಾಮಿಗಳು ದೊಡ್ಡ ಕ್ರಾಂತಿಯನ್ನೆಸಗಿದ ಶಿವಯೋಗಿಗಳು. ಇವರು ವಿಜಯನಗರದ ಪ್ರೌಢದೇವರಾಯನಿಗೆ ಉಪದೇಶ ಮಾಡಿದರೆಂದೂ, ಅಲ್ಲಿನ 101 ವಿರಕ್ತರ ಪರಂಪರೆಗೆ ಇವರೇ ಕಾರಣರೆಂದೂ ಹೇಳುವರು. ಇವರ ನಂತರ ಪ್ರಸಿದ್ಧರಾದವರೆಂದರೆ ಗುಬ್ಬಿಯ ಗೋಸಲ ಚೆನ್ನಬಸವೇಶ್ವರರು. ಅವರ ಶಿಷ್ಯರೇ ದ್ವಿತೀಯ ಪ್ರಭುದೇವರೆಂದು ಖ್ಯಾತಿವೆತ್ತ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರರು. 18ನೇ ಶತಮಾನದ ಆದಿಭಾಗದಲ್ಲಿ ಶ್ರೀ. ಅಟವೀ ಸ್ವಾಮಿಗಳು ಶ್ರೀ. ಕ್ಷೇತ್ರದಲ್ಲಿದ್ದುಕೊಂಡು ದಾಸೋಹವನ್ನು ಆರಂಭಿಸಿದರು. ಕಂತೆಭಿಕ್ಷೆಯಿಂದ ಬಡ ಮಕ್ಕಳನ್ನು ಸಾಕಿ ಓದಿಸುತ್ತಿದ್ದರು. ಅವರೇ ಉದ್ಧಾನ ಸ್ವಾಮಿಗಳನ್ನು ಗುರುತಿಸಿ ಸಂನ್ಯಾಸ ದೀಕ್ಷೆ ಕೊಟ್ಟು ಶ್ರೀ. ಕ್ಷೇತ್ರದ ಅಧಿಕಾರ ವಹಿಸಿದರು. ನಿತ್ಯ ದಾಸೋಹ, ಬಡ ಮಕ್ಕಳ ಕಲ್ಯಾಣ ಕಾರ್ಯ, ಸಂಸ್ಕೃತ ಪಾಠಶಾಲೆ ಮೊದಲಾದವು ಅವರು 1941ರಲ್ಲಿ [illegible] ನಂತರ ಶ್ರೀ. [illegible] ಮಹಾಸ್ವಾಮಿಗಳು ಶ್ರೀ. ಕ್ಷೇತ್ರದ ಜವಾಬ್ದಾರಿ ಹೊತ್ತು 54 ವರ್ಷಗಳಿಂದ ಬಡ ಮಕ್ಕಳಿಗಾಗಿ, ದೀನ ದಲಿತರಿಗಾಗಿ, ಸಾಧಕರಿಗಾಗಿ ಅವಿರತ ದುಡಿಯುತ್ತ ಬಂದಿದ್ದಾರೆ.

ಶ್ರೀ. ಶಿವಕುಮಾರ ಮಹಾಸ್ವಾಮಿಗಳು ಲೋಕಕಾರುಣ್ಯ, ದಾಸೋಹಂಭಾವ, ಕತೃತ್ವಶಕ್ತಿ, ಲಿಂಗ ತಪಸ್ಸುಗಳಿಂದ ಅಖಿಲ ಭಾರತ ವ್ಯಾಪ್ತಿಯಲ್ಲಿ ಅಮಿತ ಕೀರ್ತಿಗೆ ಪಾತ್ರರಾಗಿದ್ದಾರೆ. ಇಂದು ಸಿದ್ಧಗಂಗಾ ಸಂಸ್ಥೆ ಬೃಹತ್ ಸಂಸ್ಥೆಯಾಗಿ ಬೆಳೆದಿದೆ. ಇದರ ಆಶ್ರಯದಲ್ಲಿ 96 ವಿದ್ಯಾ ಸಂಸ್ಥೆಗಳು ಮತ್ತು 21 ಇತರ ಸಾರ್ವಜನಿಕ ಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲೇ ಹೆಚ್ಚಾಗಿ ಇರುವ ಈ ಸಂಸ್ಥೆಗಳು ಬಡವರ ಕಾಮಧೇನುಗಳಾಗಿವೆ. ಇವು ಇಲ್ಲದಿದ್ದರೆ ಹಳ್ಳಿಯ ಬಡ ಮಕ್ಕಳ ಭವಿಷ್ಯ ಎಷ್ಟು ಕತ್ತಲಾಗುತ್ತಿತ್ತು ಎಂಬುದನ್ನು ಊಹಿಸಲೂ ಆಗದು.

ಸಿದ್ದಗಂಗಾ ಕ್ಷೇತ್ರದ ಇತಿಹಾಸ... ಸ್ಮರಣೀಯ ದಾಖಲೆಗಳಾಗಿ ಉಳಿ... 1,00,000 ಚದರ ಅಡಿ ವಿಸ್ತಾರದ ... ಕೊಠಡಿಗಳ ಈ ಬೃಹತ್ ವಿದ್ಯಾ... ನಿಲಯದ ಅಂದಾಜು ವೆಚ್ಚ ಸು... 4.00 ಕೋಟಿ ರೂ.ಗಳು. 44... ಚದರ ಅಡಿ ವಿಸ್ತಾರವಾದ ದಾಸೋ... ಮಂದಿರ ನಿರ್ಮಾಣದ ಅಂದಾಜು... 2.00 ಕೋಟಿ ರೂ.ಗಳು.


ಮಹತ್ವದ ಕೊಡುಗೆ

ಪ್ರಸಿದ್ಧ ಕವಿ ಜಿ.ಎಸ್. ಶಿವರುದ್ರ... ಪದ್ಮಶ್ರೀ ಪ್ರಶಸ್ತಿ ವಿಜೇತ ಸಮಾಜ ... ಆರ್.ಎಂ.ಪಿ. ಆರಾಧ್ಯ, ಹಿರಿಷ್ಠ ಪೊಲೀಸ್ ಅಧಿ... ಎಂದು ಹೆಸರಾಗಿರುವ ಎಲ್. ರೇವಣ ಸಿದ್ದ... ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಉಪಕುಲ... ಡಾ. ಎಸ್. ರುದ್ರಯ್ಯ.... ಹೀಗೆ ನೂರಾ... ಪ್ರತಿಭಾವಂತರು, ಹಿರಿಯ ಅಧಿಕಾರಿ... ರಾಜಕಾರಣಿಗಳು ಹಾಗೂ ವಿಜ್ಞಾನಿಗಳನ್ನು ... ಸಂಸ್ಥೆ ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ.


ಈ ಎಲ್ಲಾ ಸಾಧನೆಗಳ ಹಿಂದಿರುವ ಮ... ಚೇತನ 86 ವರ್ಷದ ವಯೋ... ಸ್ವಾಮಿಗಳಾದ ಶ್ರೀ ಶಿವಕುಮಾರ ಸ...

ಏಕ ಕಾಲದಲ್ಲಿ ಎರಡುವರೆ ಸಾವಿರ ಜನರು ಉಣಬಲ್ಲ ವಜ್ರಮಹೋತ್ಸವ ಸ್ಮಾರಕ ಪ್ರಸಾದ ನಿಲಯದ ಶಂಕುಸ್ಥಾಪನೆಯನ್ನು ನಮ್ಮ ಲೋಕಸಭಾಧ್ಯಕ್ಷರಾದ ಸನ್ಮಾನ್ಯ **ಶ್ರೀ ಶಿವರಾಜ ಪಾಟೀಲ್‌ರವರು** ನೆರವೇರಿಸುವರು.





ಶ್ರೀ ಶಿವರಾಜ ಪಾಟೀಲ್



ಸಮಾರಂಭಕ್ಕೆ ಶುಭ ಹಾರೈಸಿರುವ
ಕರ್ನಾಟಕ ರಾಜ್ಯದ ಮುಖ್ಯಮಂತ್ರಿ
ಸನ್ಮಾನ್ಯ ಎಸ್. ಬಂಗಾರಪ್ಪನವರು

...ಳಂ

ದೊಡ್ಡ ಕಾ[illegible] ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗಷ್ಟೇ ... ಪ್ರತಿನಿತ್ಯ ಒಂದೆರಡು ಸಾವಿರ ಭಕ್ತ... ದಾಸೋಹ ಸಿದ್ಧವಾಗುತ್ತದೆ ಬೆಳಗ್ಗೆ ... ಅನ್ನ, ಸಾರು ಮಧ್ಯಾಹ್ನ ಊಟಕ್ಕೆ ... ರಾತ್ರಿ ಅನ್ನ ಸಾರು–ಇಷ್ಟು ... ಊಟವಾದರೂ ದಿನವೊಂದಕ್ಕೆ ... ವಲ್ಲ ರಾಗಿ, 15 ವಲ್ಲ ಅಕ್ಕಿ ... ಉಪ್ಪು, ಕಾರ ಬೇಳೆ ಬೇಳೆ ... ದಿನವೊಂದಕ್ಕೆ 60 ಸಾವಿರ ... ವೆಚ್ಚವಾಗುತ್ತದೆ

ಸಿದ್ಧಗಂಗೆಯ ಸ್ವಾಮಿಗಳು

ಬರುವ ಏಪ್ರಿಲ್ ಒಂದರಂದು ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು ಎಂಬತ್ತೆಂಟರಲ್ಲಿ ಕಾಲಿಡುತ್ತಿದ್ದಾರೆ. ಈ ಸಂದರ್ಭಕ್ಕೆ ಒಂದು ವಿಶೇಷ ಲೇಖನ

ಬೆಂಗಳೂರಿನ ಸಮೀಪ ತುಮಕೂರಿನ ಹೊರವಲಯದಲ್ಲಿರುವ ಶ್ರೀ ಸಿದ್ಧಗಂಗಾಕ್ಷೇತ್ರ ನಮ್ಮ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ಕ್ರಾಂತಿಯ ಒಂದು ಮಹಾ ಪ್ರಯೋಗ ಕೇಂದ್ರ. ಶೂನ್ಯಸಿಂಹಾಸನ ಪರಂಪರೆಗೆ ಸೇರಿದ ಗೋಸಲ ಸಿದ್ಧೇಶ್ವರರು ಇಲ್ಲಿಯ ನಿಸರ್ಗ ಸೌಂದರ್ಯಕ್ಕೂ ಪ್ರಶಾಂತ ವಾತಾವರಣಕ್ಕೂ ಮಾರು ಹೋಗಿ ಇಲ್ಲೇ ನೆಲಸಿ ತಪಸ್ಸು ಮಾಡಿದರೆಂದು ಪ್ರತೀತಿ. ಅವರು ಸ್ಥಾಪಿಸಿದ ಸಿದ್ಧಗಂಗಾ ಮಠದ ಈಗಿನ ಪೀಠಾಧಿಪತಿಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಈ ಮಹಾ ಪ್ರಯೋಗದ ಹಿಂದಿನ ಸ್ಫೂರ್ತಿ. ಚಾಲಕ ಶಕ್ತಿ.

ಇವರಿಗೆ ಹಿಂದೆ ಈ ಪೀಠವನ್ನಲಂಕರಿಸಿದ್ದ ಶ್ರೀ ಉದ್ಧಾನ ಶಿವಯೋಗಿಗಳ ಕಾಲಕ್ಕೆ ಈ ಕೇಂದ್ರ ಅಷ್ಟೇನೂ ದೊಡ್ಡದಾಗಿರಲಿಲ್ಲ. ಜಾತಿ ಮತ ಭೇದವಿಲ್ಲದೆ ಎಲ್ಲ ಜನಕ್ಕೂ ವೇದ ಸಂಸ್ಕೃತ ಕಲಿಸಿ ಕೊಡಬೇಕೆಂಬ ಮಹದಾಕಾಂಕ್ಷೆಯಿಂದ ಒಂದು ಪಾಠ ಶಾಲೆಯನ್ನೂ ವಿದ್ಯಾರ್ಥಿನಿಲಯವನ್ನೂ ಅವರು ಸ್ಥಾಪಿಸಿದರು. ಆ ಕಾಲಕ್ಕೆ ಅದೊಂದು ಮಹಾಸಾಧನೆಯೇ.

ತಮ್ಮ ಅನಂತರ ಈ ಕೆಲಸ ಮುಂದುವರಿಯಬೇಕು. ಹಲವು ಮಡಿ ವಿಕಾಸಗೊಳ್ಳಬೇಕು— ಎಂಬುದು ಅವರ ಆಸೆ. ತಮಗೆ ಉತ್ತರಾಧಿಕಾರಿಯಾಗಲು ಯೋಗ್ಯತೆ ಇರುವವರ ಅನ್ವೇಷಣೆ ಆರಂಭ. ಆಗ ಕಣ್ಣಿಗೆ ಬಿದ್ದವರು ಶ್ರೀ ಶಿವಕುಮಾರ ಸ್ವಾಮಿಗಳು. ತೋಟದ ಜನವರ ಛತ್ರದಲ್ಲಿ ವಾಸ. ಬಿ.ಎಸ್‌ಸಿ. ವ್ಯಾಸಂಗ. ಹೆಸರು ಶಿವಣ್ಣ.

ಸ್ವಾಮಿಗಳ ಆಜ್ಞೆಯ ಮೇರೆಗೆ ಅವರು ಕಾಲೇಜು ವಿದ್ಯಾಭ್ಯಾಸ ಬಿಟ್ಟು ಮಠಕ್ಕೆ ಬಂದರು. ವಿರಕ್ತಾಶ್ರಮವನ್ನು ಸ್ವೀಕರಿಸಿದರು. ಹಲವು ವರ್ಷ ಎಡೆಬಿಡದ ಅಧ್ಯಯನ. ಕಟ್ಟುನಿಟ್ಟಿನ ಬದುಕು. ಮಿತಾಹಾರ.

ಸಂಸ್ಕೃತ. ವೇದಾಂತ. ಸಾಹಿತ್ಯ. ವೀರಶೈವ ಧರ್ಮ— ಇವಿಷ್ಟಕ್ಕೇ ಅವರ ಅಭ್ಯಾಸ ಸೀಮಿತವಾಗಲಿಲ್ಲ. ಮೌಲ್ವಿಗಳಿಂದ ಕುರಾನ್ ಪಾಠ. ಪಾದ್ರಿಗಳಿಂದ ಬೈಬಲ್ ಕಲಿಕೆ. ಶ್ರೀ ರಾಮಕೃಷ್ಣ ವಿವೇಕಾನಂದರ ಕೃತಿಗಳ ಓದು. ಜೊತೆಗೆ ಬರ್ನಾರ್ಡ್ ಷಾ, ಬರ್ಟ್ರೆಂಡ್ ರಸೆಲ್ ಮುಂತಾದವರ ಒಳಜಗತ್ತಿನ ಪ್ರವೇಶ. ಎಲ್ಲ ಕಟ್ಟುಗಳನ್ನೂ ಹರಿದು ವಿಕಾಸಗೊಂಡ ವ್ಯಕ್ತಿತ್ವ. ಇಂದಿಗೂ ಅವರ ಮಾತು— ಭಾಷಣಗಳಲ್ಲಿ ಹಲವಾರು ವಿಚಾರಗಳ ತಾಕಲಾಟ. ಎಲ್ಲವನ್ನೂ ಅರಗಿಸಿಕೊಂಡು ರೂಪುಗೊಂಡ ಸಮ್ಯಗ್ದರ್ಶನ.

ಅಂತರಂಗದ ಲೋಕಕ್ಕಷ್ಟೇ ಅವರ ಬದುಕು ಸೀಮಿತವಾಗಲಿಲ್ಲ. ಯಾವ ವಿದ್ಯೆಯೇ ಆಗಲಿ ವ್ಯವಹಾರದಲ್ಲಿ ಪ್ರಕಟವಾಗದಿದ್ದರೆ ಅದರಿಂದ ಸಾಮಾನ್ಯ ಜನಕ್ಕೇನು ಪ್ರಯೋಜನ? ವ್ಯಾಯಾಮ ಯೋಗಾಸನಗಳನ್ನೂ ಮಾಡಿ ಗಟ್ಟಿ ಮುಟ್ಟಾದ ದೇಹವನ್ನು ಬಡ ವಿದ್ಯಾರ್ಥಿಗಳಿಗಾಗಿ ಸಮಾಜ ಸೇವೆಗಾಗಿ ತೊಡಗಿಸುವ ಸಂಕಲ್ಪ. ವಿದ್ಯಾರ್ಥಿಗಳೊಂದಿಗೆ ದುಡಿಮೆ. ಅವರೊಂದಿಗೆ ಕಪಿಲೆಯಿಂದ ನೀರು ಹೊಡೆಯುವ ಕೆಲಸ. ಅಡಿಗೆಗೆ ಬೇಕಾದ ಸೌದೆ ಒಡೆಯಲೂ ಹಿಂದೆಗೆಯದ ಮನಸ್ಸು. ವಿದ್ಯಾರ್ಥಿಗಳಿಗೆ ವೇಳೆಗೆ ಸರಿಯಾಗಿ ಅಡಿಗೆಯಾಗದಾಗ ತಾವೇ ಪಾಕಶಾಲೆ ಹೊಕ್ಕು ಸೌಟು ಹಿಡಿದು ಒಲೆ ಊದಿ ರಸಗವಳ ತಯಾರಿಸಲೂ ಸಿದ್ಧ. ಮುದ್ದೆ ಬಡಿಸಲು ಮುಂದಾಗುವ ಉತ್ಸಾಹ.

ಊಟಕ್ಕೆ ಬೇಕಾದ ಪರಿಕರಗಳು ಲಭ್ಯವಿದ್ದರೆ ಹೇಗೋ ಅಡಿಗೆ ಮಾಡಿ ಬಡಿಸಬಹುದು. ಆದರೆ ಅದೂ ಇಲ್ಲದಾಗ ಏನು ಮಾಡುವುದು? ಉಣ್ಣುವ ಬಾಯಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ವೃದ್ಧಿ. ಜೊತೆಗೆ ಬೆಳೆಯುತ್ತಿದ್ದ ಶಾಲೆಗಳು. ಮಠದ ಆಸ್ತಿ ಹೇಳಿಕೊಳ್ಳುವಂಥದಲ್ಲ. ಕ್ಷೇತ್ರದ ಸುತ್ತಮುತ್ತಣ ಊರುಗಳಿಗೆ ಖುದ್ದಾಗಿ ಭೇಟಿ ನೀಡಿ ಕಾಳುಕಡಿ ಸಂಗ್ರಹಿಸತೊಡಗಿದ ಸ್ವಾಮಿಗಳೊಬ್ಬ ಭವ್ಯ ಭಿಕ್ಷುಕರು. ಗಾಡಿಯಲ್ಲಿ ಊರೂರು ಪ್ರಯಾಣ. ಎಡೆ ದೊರಕಿದಲ್ಲಿ ಠಿಕಾಣಿ. ಇಷ್ಟು ಕೊಡಿ. ಅಷ್ಟು ಕೊಡಿ ಎಂದು ಕೇಳುವ ಪದ್ಧತಿಯಿಲ್ಲ. ಸುತ್ತಾಟ ಮುಗಿಸಿ ಕ್ಷೇತ್ರಕ್ಕೆ ಮರಳುವ ವೇಳೆಗೆ ಗಾಡಿ ಗಾಡಿ ಧಾನ್ಯ ರಾಶಿ. ಬಗೆಬಗೆಯ ಪರಿಕರ. ಕೃಷ್ಣನ ಭೇಟಿ ಮಾಡಿ ಮನೆಗೆ ಹಿಂದಿರುಗಿದ ಕುಚೇಲನಿಗೆ ಆದ ಅನುಭವ. ಆದರೆ ಈ

ಎಚ್ಚೆಸ್ಕೆ

ಸಂಪತ್ತಿನ ರಾಶಿಯಲ್ಲ ಬಡ ವಿದ್ಯಾರ್ಥಿಗಳಿಗಾಗಿ. ದಾಸೋಹಕ್ಕಾಗಿ. ಕಾಯಕದ ಮೂರ್ತರೂಪ ಸ್ವಾಮಿಗಳು. 'ಗುರುವಾಗಿದ್ದರೂ ಕಾಯಕದಿಂದಲೇ ಜೀವನ್ಮುಕ್ತಿ. ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು. ಜಂಗಮನಾದರೂ ಕಾಯಕದಿಂದಲೇ ತನ್ನ ವೇಷದ ಪಾಶ ಹರಿವುದು' ಎಂಬುದನ್ನರಿತ ನಡೆ.

ಉದ್ಧಾನ ಸ್ವಾಮಿಗಳ ಅನಂತರ ಎಲ್ಲ ಹೊಣೆಯೂ ಈ ಸ್ವಾಮಿಗಳ ಮೇಲೆ. ಸದಾ ವಿಸ್ತರಿಸುತ್ತಿದ್ದ ಭಕ್ತವೃಂದ. ಹುಟ್ಟುತ್ತಿದ್ದ ವಿದ್ಯಾಸಂಸ್ಥೆಗಳ ಸಮೂಹ. ಬಡ ಹುಡುಗ ಎಲ್ಲಿಂದ ಬಂದರೂ ಅವನಿಗೆ ಕ್ಷೇತ್ರದಲ್ಲಿ ಆಸರೆ. ಇಲ್ಲಿಯ ಪ್ರಾಥಮಿಕ ಶಾಲೆಯಲ್ಲಾರಂಭಿಸಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ವರೆಗೂ ಓದಿ ಬದುಕಿನಲ್ಲಿ ಗೆದ್ದ ಪ್ರವೀಣರೂ ಪರಂಪರಾಗತ ಸಂಸ್ಕೃತ ಶಿಕ್ಷಣದ ವಿವಿಧ ಶಾಖೋಪಶಾಖೆಗಳಲ್ಲಿ ಪಾರಂಗತರಾದ ವಿದ್ವಾಂಸರೂ ಇಂದು ನಾಡಿನ ಉದ್ದಗಲಕ್ಕೂ ಹರಡಿದ್ದಾರೆ. ಅವರದೊಂದು ವಿಶಾಲ ಕುಟುಂಬ. ಸ್ವಾಮಿಗಳ ನೇತೃತ್ವದಲ್ಲಿ ಇಂದು ಕ್ಷೇತ್ರದ ಹೊರಗಡೆಯೂ ಅನೇಕ ಕಡೆಗಳಲ್ಲಿ ಶಾಲೆ ಕಾಲೇಜುಗಳೂ ವಿವಿಧ ವೃತ್ತಿ ಶಿಕ್ಷಣ ಸಂಸ್ಥೆಗಳೂ ಬೆಳೆದು ದಾಂಗುಡಿಯಿಟ್ಟಿವೆ.

ಶ್ರೀ ಸಿದ್ಧಗಂಗಾ ಕ್ಷೇತ್ರ ಸದಾ ಜಗಜಗಿಸುವ ಜೇನುಗೂಡು. ಇಲ್ಲಿ ಹಲವಾರು ಕಟ್ಟಡಗಳು ಎದ್ದಿವೆ. ಯಾವುದಕ್ಕೂ ಯಾರನ್ನೂ ಕೇಳದಿರುವುದು ಇಲ್ಲಿಯ ಪರಂಪರೆ. 'ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ. ಚಿತ್ತಶುದ್ಧನಾಗಿ ಕಾಯಕವ ಮಾಡುವ ಸದ್ಭಕ್ತರಿಗೆ ಎತ್ತನೋಡಿದರತ್ತ ಲಕ್ಷ್ಮೀ ತಾನಾಗಿಪ್ಪಳು' ಎಂಬ ವಚನದಲ್ಲಿ ಅವರಿಗೆ ಅಚಲ ನಂಬಿಕೆ. ಪುಟ್ಟ ಹುಡುಗರಿಂದ ಹಿಡಿದು ಪ್ರೌಢ ವಯಸ್ಕರ ವರೆಗೆ ಏಳು ಸಾವಿರಕ್ಕೂ ಹೆಚ್ಚು ಮಂದಿ ಬಗೆಬಗೆಯ ಶಿಕ್ಷಣಾರ್ಥಿಗಳು ಇಲ್ಲಿದ್ದಾರೆ. ಸಂಜೆಯಾದೊಡನೆ ಅವರೆಲ್ಲ ಶ್ರೀಕ್ಷೇತ್ರದ ನಡುವಣ ವಿಶಾಲ ಅಂಗಳದಲ್ಲಿ ಶಿಸ್ತಿನಿಂದ ಸೇರುತ್ತಾರೆ. ಅವರೆಲ್ಲ ಪ್ರಾರ್ಥನೆಯಲ್ಲಿ ತೊಡಗುತ್ತಾರೆ. ಅನಂತರ ಸ್ವಾಮಿಗಳಿಂದ ಹತ್ತು ನಿಮಿಷಗಳ ಭಾಷಣ. ಲಿಂಗಪೂಜೆಯಂತೆಯೇ ಇದೂ ಅವರಿಗೆ ಕಡ್ಡಾಯ. ಪ್ರಾಚೀನ ಭಾರತದ ವಿದ್ಯಾಕೇಂದ್ರಗಳನ್ನು ನೆನಪಿಗೆ ತರುವ ಸನ್ನಿವೇಶ. ಆದರೆ ಇಲ್ಲಿ ಎಲ್ಲ ಸ್ತರದ ಎಲ್ಲ ತೆರದ ವಿದ್ಯಾರ್ಥಿಗಳಿಗೂ ಅವಕಾಶ. ಇದು ಆಧುನಿಕ ಭಾರತದ ಒಂದು ಕ್ರಾಂತಿಯೋಗ.

ಸ್ವಾಮಿಗಳದು ನಿಗರ್ವ. ನಿರಾಡಂಬರ. ನಸುಕು ಹರಿಯುವ ಮುನ್ನ ಎಚ್ಚರ. ಸ್ನಾನ ಪೂಜೆ ಪ್ರಸಾದ. ಭಕ್ತ ಜನಕ್ಕೆ ಅನುಗ್ರಹ. ರಾತ್ರಿಯ ಕಪ್ಪು ದಟ್ಟವಾಗಿ ಹಬ್ಬುವವರೆಗೆ ಎಡೆಬಿಡದ ಚಟುವಟಿಕೆ. ಬಂದವರೆಲ್ಲರ ಕಷ್ಟ ಸುಖ ವಿಚಾರಿಸಿ ಪರಿಹಾರ ಸೂಚಿಸುವ ತಾಳ್ಮೆ. ಅವರ ಮಾತು ಕೇಳಿ ಬದುಕಿನಲ್ಲಿ ನೆಮ್ಮದಿ ಪಡೆದವರು ಎಷ್ಟೋ ಮಂದಿ. ಅವರ ಕಾಲು ಮುಟ್ಟಿ ಪುಳಕಿತರಾಗಿ ಧನ್ಯರಾದೆವೆಂಬವರು ಅಸಂಖ್ಯಾತ. ಅವರದು ತೆರೆದ ಬದುಕು. ಅತುಲ ನಿಷ್ಠೆ.

ಸಿದ್ಧಗಂಗಾ ಕ್ಷೇತ್ರಕ್ಕೆ ಯಾರು ಎಷ್ಟು ಹೊತ್ತಿನಲ್ಲಿ ಬಂದರೂ ಅಲ್ಲಿ ಪ್ರಸಾದ ಸ್ವೀಕರಿಸದೆ ಹೋಗುವಂತಿಲ್ಲ. ಬೆಳಗ್ಗೆ ಹೊತ್ತಿಸಿದ ಅಡಿಗೆಯೊಲೆ ದಿನವೆಲ್ಲಾ ಆರುವುದೇ ಇಲ್ಲ. ವಿದ್ಯಾರ್ಥಿನಿಲಯಗಳಿಗಾಗಿಯೇ ಬೇಕು. ತಿಂಗಳಿಗೆ ಎಳೆಂಟು ಲಕ್ಷ ರೂಪಾಯಿ! ದಿನಕ್ಕೆ ಇಪ್ಪತ್ತು ಕ್ವಿಂಟಾಲ್ ಅಕ್ಕಿ. ನಾಲ್ಕೈದು ಕ್ವಿಂಟಾಲ್ ರಾಗಿ. ಜೊತೆಗೆ ಬೇಳೆ ಇತ್ಯಾದಿ. ಇನ್ನೂರು ಕೊಠಡಿಗಳ ಇನ್ನೊಂದು ವಿದ್ಯಾರ್ಥಿನಿಲಯ. ಎರಡು ಸಾವಿರ ಮಂದಿ ಊಟ ಮಾಡಬಹುದಾದ ಭೋಜನಗೃಹ ನಿರ್ಮಾಣವಾಗುತ್ತಿವೆ.

28.3.1995

ದಕ್ಷತೆಯ ಪ್ರತೀಕ

ಹಿರಿಯ ಐ.ಪಿ.ಎಸ್. ಅಧಿಕಾರಿಯಾಗಿರುವ ಎಲ್. ರೇವಣಸಿದ್ದಯ್ಯನವರು ತಮಗೆ ದಕ್ಷ ಅಧಿಕಾರಿಯಾಗಿ ಆಡಳಿತದಲ್ಲಿ ಯಾವುದೇ ಒತ್ತಡಗಳಿಗೆ ಮಣಿಯದಂತೆ ಇರುವ ದೃಢ ಸಂಕಲ್ಪ ನೀಡಿದ್ದು ಶ್ರೀ ಸಿದ್ದಗಂಗಾಮಠ ಎಂದು ಪ್ರೀತಿಯಿಂದ ನೆನೆಯುತ್ತಾರೆ.

1955ರಲ್ಲಿ ಹನ್ನೊಂದು ವರ್ಷದ ಪುಟ್ಟ ಬಾಲಕ ರೇವಣಸಿದ್ದಯ್ಯನವರು ಎಂಟನೇ ತರಗತಿ ಸೇರಲು ಮಠಕ್ಕೆ ಬಂದಾಗ ಎಲ್ಲಾ ಹಳ್ಳಿ ರೈತರ ಮಕ್ಕಳಂತೆ ಹಿಂಜರಿಕೆ ಸ್ವಭಾವದ, ಮುಗ್ಧ ಕೆರೆಯ ಮೀನಿನಂತಿದ್ದರು. ಮಠದ ಎಂಟುನೂರು ವಿದ್ಯಾರ್ಥಿಗಳ ವಿಶಾಲ ಸಾಗರದಲ್ಲಿ ತಿಮಿಂಗಿಲದಂತೆ ಬೃಹದಾಕಾರ ತಾಳಲು ಅವರ ಮೇಲೆ ಪ್ರಭಾವ ಬೀರಿದವರು ಮಠಾಧ್ಯಕ್ಷ ಶ್ರೀ ಶಿವಕುಮಾರ ಸ್ವಾಮಿಗಳು.

ಸ್ವಾಮಿಗಳೇ ಮಾಡುತ್ತಿದ್ದ ಸಂಸ್ಕೃತ, ಇಂಗ್ಲಿಷ್ ಪಾಠ, ಹಿತೋಪದೇಶ ಜೊತೆಗೆ ಏರ್ಪಡಿಸುತ್ತಿದ್ದ ಆಶುಭಾಷಣ, ಚರ್ಚೆ, ಕ್ರೀಡೆ ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸುವುದರ ಮೂಲಕ ಬದುಕಿನಲ್ಲಿ ಮೇಲೆ ಬರಬೇಕೆಂಬ ಛಲ ಮತ್ತು ಅದಕ್ಕೆ ವಿದ್ಯಾಭ್ಯಾಸ ಹಾಗೂ ಪ್ರತಿಭೆ ಎಷ್ಟು ಮುಖ್ಯ ಎಂದು ರೇವಣಸಿದ್ಧಯ್ಯನವರು ಅರಿತರು.

'ಕಾಯಕವೇ ಕೈಲಾಸ', 'ದುಡಿಮೆಯ ಘನತೆ' (*Dignity of Labour*) [illegible] ಮಾತುಗಳಿಗೆ ಹಾಗೂ ಕಾರುಣ್ಯ, ಮ[illegible] ಪಾಂಡಿತ್ಯಕ್ಕೆ ಜೀವಂತ ಉದಾಹರಣೆಯ[illegible] ಸ್ವಾಮೀಜಿಯವರಿಂದ ರೇ[illegible]ಣ ಸಿದ್ಧಯ್ಯನವರು ಕಷ್ಟಪಟ್ಟು [illegible]ಸ ಮಾಡುವುದನ್ನು ರಕ್ತಗತ ಮಾಡಿಕೊಂಡರು.

ಅವರಿಂದಾಗೇ ಚಿಕ್ಕವನೆಂಬ ವಿಧೇಯತೆ ಜೊತೆಗೆ ಎಷ್ಟು ಮಹತ್ತರವಾದುದನ್ನು ಬೇಕಾದರೂ ಸಾಧಿಸಬಲ್ಲ ಸಾಮರ್ಥ್ಯ ತಮಗಿದೆ ಎಂಬ ನಂಬಿಕೆ. ಭರವಸೆ ಮೂಡಿ ಸಾಮಾನ್ಯ ರೈತನ ಮಗನಾದ ರೇವಣಸಿದ್ಧಯ್ಯನವರು ದೊಡ್ಡ ಮನುಷ್ಯರ ಸೊತ್ತಂತಿದ್ದ ಐ.ಪಿ.ಎಸ್. ಪರೀಕ್ಷೆಗೆ ಕುಳಿತರು.

"ಸಿದ್ಧಗಂಗೆಯ ಆ ಮೂರು ವರ್ಷಗಳ ಚಿತ್ರ ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿವೆ. ಅಲ್ಲಿ ನನಗೆ ದೊರೆತ ಜೀವನ ಮೌಲ್ಯಗಳೆಂಬ ಟ್ರಿಪಲ್ ಆಂಟಿಜನ್‌ನಿಂದಾಗಿ ಜೀವನದಲ್ಲಿ ನಾನೆಂದಿಗೂ ಸೋತಿಲ್ಲ, ನಿರಾಶನಾಗಿಲ್ಲ" ಎಂದು ನುಡಿಯುವ ರೇವಣಸಿದ್ಧಯ್ಯನವರಿಗೆ 'ಭಯ' ಎಂದರೇನೆಂದೇ ಗೊತ್ತಿಲ್ಲ.

ಸುಧಾ, 13 ಮಾರ್ಚ್ 1994

ಜ್ಞಾನಾನ್ನ ದಾಸೋಹಗಳ ಸಂಗಮ

ಜಾತಿ ಮತ ಧರ್ಮಗಳ ಎಲ್ಲೆ ಮೀರಿ ಅನ್ನ ಹಾಗೂ ಜ್ಞಾನ ದಾಸೋಹಗಳನ್ನು ನಡೆಸುತ್ತಿರುವುದು ಸಿದ್ಧಗಂಗಾಕ್ಷೇತ್ರದ ವೈಶಿಷ್ಟ್ಯ. ಕಳೆದ 75 ವರ್ಷಗಳಿಂದಲೂ ನಡೆದು ಬಂದಿರುವ ಈ ಪವಿತ್ರ ದಾಸೋಹದ ಪ್ರಯೋಜನ ಪಡೆದಿರುವವರ ಸಂಖ್ಯೆ ಸಾವಿರಾರು. ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದಿರುವ ಸಾಧನೆ–ಸಿದ್ಧಿಗಳ ಮೇಲೆ ಬೆಳಕು ಚೆಲ್ಲುವ ಕೆಲವು ಅಂಶಗಳು ಇಲ್ಲಿವೆ.

● ರಮಾದೇವಿ ಕೆ.ಆರ್.

'ಸಿದ್ಧಗಂಗೆ' ಬೆಂಗಳೂರಿನಿಂದ 63 ಕಿ.ಮೀ. (ತುಮಕೂರಿಗೆ 4 ಕಿ.ಮೀ.) ದೂರದಲ್ಲಿರುವ ಪವಿತ್ರಯಾತ್ರಾಸ್ಥಳ. ಆರುನೂರು ವರ್ಷಗಳಿಗೂ ಹಿಂದೆ ಅಲ್ಲಿನ ಬೆಟ್ಟದ ಗುಹೆಗಳಲ್ಲಿ ತಪೋನಿರತರಾಗಿದ್ದ 108 ಜನ ಋಷಿಗಳಲ್ಲಿ ವೃದ್ಧ ಮುನಿಯೊಬ್ಬ ಬಾಯಾರಿ ಬಳಲಿದಾಗ 'ಗೋಸಲ ಸಿದ್ಧೇಶ್ವರ'ರೆಂಬ ತಪಸ್ವಿ ಕೈಯಿಂದ ಬಂಡೆಯನ್ನು ಸೀಳಿ ಗಂಗೆಯನ್ನು ಹೊರತೆಗೆದು ನೀಡಿದರಂತೆ. ಅಂದಿನಿಂದ ಆ ಕ್ಷೇತ್ರ 'ಸಿದ್ಧಗಂಗಾ' ಎಂದು ಪ್ರಖ್ಯಾತಿ ಪಡೆದಿದೆ. ಮುಂದೆ ಎಡೆಯೂರು ಸಿದ್ಧಲಿಂಗೇಶ್ವರರೆಂದು ಪ್ರಸಿದ್ಧರಾದ ತೋಂಟದ ಲಿಂಗೇಶ್ವರರೂ ಇಲ್ಲಿ ತಪೋನಿರತರಾಗಿದ್ದರೆಂಬುದು ಪೌರಾಣಿಕ ಹಿನ್ನೆಲೆ.

ಗಿರಿವನಸಿರಿಗಳಿಂದಾವೃತವಾದ ಪರಿಸರದಲ್ಲಿ ನೆಲೆಯಾಗಿರುವ ಶ್ರೀ ಸಿದ್ಧಗಂಗಾಮಠಕ್ಕೆ 19ನೇ ಶತಮಾನದಲ್ಲಿ ಭೇಟಿ ನೀಡಿದ್ದ ಉತ್ತರ ಕರ್ನಾಟಕದ ಮುಕ್ಬಿನ ಸ್ವಾಮಿಗಳು ಹಾಗೂ ಅಟವಿ ಸ್ವಾಮಿಗಳು ಭಕ್ತಾದಿಗಳಿಗಾಗಿ ಅನ್ನ ದಾಸೋಹ ಪ್ರಾರಂಭಿಸಲು ಪ್ರೇರಣೆ ನೀಡಿದರು. ಅಂದು ಹಚ್ಚಿದ ಒಲೆಯು ಕಿಚ್ಚಿಂದಿಗೂ ಆರಿಲ್ಲ. ಪ್ರತಿನಿತ್ಯ ಸಾವಿರಾರು ಭಕ್ತಾದಿಗಳ ಹಸಿವನ್ನು ತಣಿಸುವ ತಾಣವಾಗಿದೆ ಈ ಕ್ಷೇತ್ರ.

ಇಷ್ಟೇ ಆದರೆ ಅನ್ನಸಂತರ್ಪಣೆಗೆ ಹೆಸರಾದ ಹಲವಾರು ದೈವ ಸನ್ನಿಧಿಗಳಲ್ಲಿ ಇದೂ ಒಂದು ಎನ್ನಬೇಕಾಗುತ್ತಿತ್ತು. ಆದರೆ ಸಿದ್ಧಗಂಗಾದ ಹೆಗ್ಗಳಿಕೆಯೇ ಬೇರೆ. ರಾಷ್ಟ್ರಪತಿ ಶಂಕರ ದಯಾಳಶರ್ಮ ಹೇಳಿದ ಹಾಗೆ "ಇಡೀ ವಿಶ್ವದಲ್ಲೇ ಸಾವಿರಾರು ಬಡಮಕ್ಕಳಿಗೆ ಉಚಿತವಾಗಿ ಊಟ. ವಸತಿ. ವಿದ್ಯಾಭ್ಯಾಸ ನೀಡುತ್ತಿರುವ ಏಕೈಕ ಸಂಸ್ಥೆಯೆಂದರೆ ಶ್ರೀ ಸಿದ್ಧಗಂಗಾಮಠ ಒಂದೇ."

ಭದ್ರ ಬುನಾದಿ

75 ವರ್ಷದ ಹಿಂದೆ ವಿದ್ಯಾಭ್ಯಾಸ ಅದರಲ್ಲೂ ಸಂಸ್ಕೃತಾಧ್ಯಯನ ಕೇವಲ ಒಂದು ವರ್ಗಕ್ಕೆ ಮೀಸಲಾಗಿದ್ದ ಸಮಯದಲ್ಲಿ ಶ್ರೀ ಉದ್ದಾನ ಶಿವಯೋಗಿಗಳು ಇಲ್ಲಿ ಒಂದು ಜಾತ್ಯತೀತ. ಸಮಾಜವಾದಿ ಹಾಗೂ ಒಂದು ರೀತಿಯಲ್ಲಿ ಕ್ರಾಂತಿಕಾರಿ ಎನ್ನಿಸಿದ ಸಂಸ್ಕೃತ ಪಾಠಶಾಲೆ ಆರಂಭಿಸಿದರು.

ಬ್ರಾಹ್ಮಣ. ಲಿಂಗಾಯಿತ. ಗೌಡ. ಹರಿಜನ. ಮುಸ್ಲಿಂ ಇತ್ಯಾದಿ ಎಲ್ಲಾ ಜಾತಿ. ಧರ್ಮ. ಪಂಗಡಗಳಿಗೆ ಸೇರಿದ 53 ಜನ ಬಡ ವಿದ್ಯಾರ್ಥಿಗಳೊಂದಿಗೆ 1917ರಲ್ಲಿ ಸಂಸ್ಕೃತ ಪಾಠಶಾಲೆ ಆರಂಭವಾದಾಗ ಉದ್ದಾನ ಶಿವಯೋಗಿಗಳು ಸುತ್ತಮುತ್ತಲ ಹಳ್ಳಿಗಳಲ್ಲಿ ಜೋಳಿಗೆಯೊಡ್ಡಿ ಭಿಕ್ಷೆ ತಂದು ತಮ್ಮ ಶಿಷ್ಯರಿಗೆ ಉಚಿತ ಊಟ. ವಸತಿ. ವಿದ್ಯೆ ನೀಡಿ ಈ ವಿಶಿಷ್ಟ ಗುರುಕುಲಕ್ಕೆ ಭದ್ರವಾದ ಬುನಾದಿ ಹಾಕಿದರು.

ಪ್ರಸ್ತುತ ಶ್ರೀ ಸಿದ್ಧಗಂಗಾ ಮಠದಲ್ಲಿ 4.800 ಜನ ಬಡ ವಿದ್ಯಾರ್ಥಿಗಳು ಒಂದನೇ

ಸುಧಾ. 13 ಮಾರ್ಚ್ 1994

சாதி, மதம் பாராமல் இலவசக் கல்விச் சேவையில் சித்தகங்கா மடம்

பெங்களூர், டிச.12— கர்நாடக மாநிலத்தில் சித்தகங்கா மடத்தின் சார்பாக தும்கூரில் எழுப்பப்பட்டுவரும் புதிய மாணவர் விடுதி மற்றும் விருந்து உபசரிப்பு அரங்கம் ஆகியவை மார்ச் மாதத்தில் நிறைவுறும். இதன் திறப்பு விழாவில் குடியரசுத் தலைவர் சங்கர் தயாள்சர்மா பங்கேற்பார் என எதிர்பார்க்கப்படுகிறது.

இத்தகவலை சித்தகங்கா மடத்தின் சிவகுமார சுவாமிஜி வைரவிழா ஆண்டு அறக்கட்டளையின் உழைக்கும் தலைவர் பி.எஸ்.முத்தப்பா செய்தியாளர்களிடம் தும்கூரில் தெரிவித்தார்.

1992-ஆம் ஆண்டில் மாணவர் விடுதிக்கு அப்போதைய துணைக் குடியரசுத் துணைத்தலைவர் சங்கர் தயாள் சர்மா அடிக்கல் நாட்டினார். ரூ. 4 கோடி செலவில் மாணவர் விடுதியும், ரூ. 2 கோடி செலவில் விருந்து உபசரிப்பு விடுதியும் கட்டப்பட்டு அவை அனைத்தும் நிறைவுறும் நிலையில் உள்ளன.

1 லட்சம் சதுர அடிப் பாப்பில் விடுதி அமைந்துள்ளது. இதில் 200 அறைகளும், 162 தனியல் அறைகளும், 144 கழிப்பறைகளும் சர்வதேச தரத்தில் அமைக்கப்பட்டு வருகின்றன. இதில் 1200 மாணவர்கள் தங்க வசதி உள்ளது.

14000 சதுர அடிப்பரப்பளவில் அமையும் விருந்து உபசரிப்பு அரங்கில் ஒரே நேரத்தில் 3000 பேர் உணவருந்த முடியும். தர்மஸ்தலாவில் உள்ள விருந்து உபசரிப்பு அரங்கின் மேம்படுத்தப்பட்ட வடிவமைப்பு கட்டடமாகும் இது.

இதைச் சுற்றி குடிநீர் வினியோகம், மற்றும் வடிகால் வசதி ஏற்படுத்த மாநில அரசு ரூ. 1.90 லட்சம் அனுமதித்துள்ளது.

மடத்தின் சார்பாக 98 கல்வி நிலையங்களும், 21 பொதுச் சேவை நிறுவனங்களும் இயங்கி வருகின்றன. இதில் சேரும் குழந்தைகள் முதுகலை வகுப்பு வரை இலவச அடிப்படையில் பயிலலாம். கிராமப்பகுதிகளில் இவை பெரும்பாலும் அமைந்துள்ளன. விடுதி முதல் அனைத்து வசதிகளும் இலவசமாகும். ஆண்டு தோறும் இந்த கல்வி நிலையங்களில் சேர்ந்து சுமார் 30000 பேர் பலனடைகின்றனர். மாணவர்கள் தவிர தினந்தோறும் 500 பக்தர்களுக்கு அன்னதானம் அளிக்கப்படுகிறது.

இந்த கல்வி நிலையம் சேவையை நோக்கமாகக் கொண்டது. மடத்தின் கீழ் இயங்கும் ஆசிரியர் பயிற்சி பள்ளியில் ஆண்டு தோறும் 500 பேர் பலனடைகின்றனர்.


நாட்டிலேயே மிகப்பெரிய சமஸ்கிருத கல்லூரி இங்கு உள்ளது. சித்தகங்கா தொழில்நுட்பக் கல்லூரி 1963 ஆம் ஆண்டில் துவக்கப்பட்டது. இது சுமார் 65 ஏக்கர் பரப்பளவில் அமைந்துள்ளது. மெகானிக்கல், சிவில், எலக்ட்ரிக்கல், வேதியியல், கம்ப்யூட்டர் அறிவியல் பொறியியல், தொழில் மற்றும் உற்பத்தி சார்ந்த பொறியியல், வடிவமைப்புக் கல்வி என பல்வேறு துறைகளில் இங்கு மாணவர்கள் பயிலலாம்.

ஏழ்மை நிலையில் உள்ள மாணவர்களும், தாய், தந்தை இழந்தவர்களும் இங்கு சேர்ந்து பயன்பெறலாம். சாதி, மதம் நிபந்தனைகள் ஏதும் இல்லை. பிராமணர்கள் முதல் முஸ்லீம் வரை இதில் சேர்ந்து பயிலலாம். கர்நாடகத்தின் வடபகுதியிலிருந்து அதிக அளவில் கிராமப் பகுதி மாணவர்கள் இதில் சேர்ந்து பயின்று வருகின்றனர். தமிழகம், ஆந்திரம் ஆகிய மாநிலத்தைச் சேர்ந்தவர்களும் இதில் சேர்ந்துள்ளனர்.

இங்கு கட்டப்பட்டுவரும் விடுதியும், மற்றும் விருந்து உபசரிப்பு அரங்கமும் பொதுமக்களும், நிறுவனங்களும் மற்றும் வெளிநாட்டில் தங்கியுள்ள இந்த மடத்தின் முன்னாள் மாணவர்களும் அளித்த நன்கொடை மூலம் கட்டப்பட்டு வருகின்றன. இரண்டும் நிறைவுற்றதும் சுவாமிகளிடம் ஒப்படைக்கப்படும் என முத்தப்பா மேலும் சொன்னார்.

புதன்கிழமை, டிசம்பர் 13, 1995

13 ಮಾರ್ಚ್ 1994 ಬೆಲೆ: ರೂ. 4.50



ಸದ್ದು ಗದ್ದಲವಿಲ್ಲದ ಸಾಧನೆ

ಶ್ರೀ ಸಿದ್ಧಗಂಗಾಕ್ಷೇತ್ರ

ಕವಿ ಕಂಡಂತೆ

